ಪತ್ರವ್ಯವಹಾರ

ಮೈಸೂರ್ ಸ್ಟಾರ್ ಪತ್ರಕರ್ತರಿಗೆ.

ಏ॥ ಏ॥ ತಾರೀಖು ೨೮ ೧೪ ನೆ ಸೋಮವಾರ ದಿವಸ ರಾವ್‌ಸಾಹೇಬ ಶಿವಮೂರ್ತಿಸ್ವಾಮಿ ಕಣಬರಗಿ ಮಠ ಗೋಕಾಕಫಾಲ್ಸ್ ಇವರ ಮನೆಯಲ್ಲಿ ಶ್ರೀಯುತ ಮಲ್ಲಪ್ಪಾ ಗಂಗರಪ್ಪ ಅಂಗಡಿ ಸಿಂತ್ರಿ ತುಂಬಕಣ್ಣಿ ಇವರಿಗೆ ನಮ್ಮ ದಯಾಳು ಸರಕಾರದವರಿಂದ "ರಾವ್‌ಸಾಹೇಬ" ಎಂಬ ಬಹುಮಾನದ ಪದವಿಯು ದೊರೆತ ಬಗ್ಗೆ ರಾವ್‌ಸಾಹೇಬ್ ಬಿ. ಕೆ. ಕುರ್ತಕೋಟಿ ಮಾಮಲೇದಾರ್ ಗೋಕಾಕ ಇವರ ಅಧ್ಯಕ್ಷತೆಯ ಕೆಳಗೆ ಸಭೆಗೂಡಿತ್ತು. ರಾವ್ ಸಾ॥ ವರ್ಕಟ್ಸ್ ಮಾಮಲೇದಾರ್ ದಕ್ಷಿಣಭಾಗ ವಾ ಶ್ರೀಮಂತ ಸಿದ್ಧರಾಮಪ್ಪ ಅಣ್ಣಾ ಮಾಸ್ತಿ, ಹಾಗೂ ಗೋಕಾಕದ ಏ॥ ಬಂಟಿಕ ಪೆಡ್ ಮಾಸ್ತರ ಬಿ ಎ ಭಸ್ಮೇ ವಕೀಲ ಏಫೂಕಿರಪ್ಪ ವಿ. ಶರಣಶೆಟ್ಟಿ ಅಣ್ಣಾ ಪಾಟೀಲ ವಗೈರೆ ಸ್ಥಳ ಪರಸ್ಥಳದ ಅನೇಕ ಜನ ಸದ್ಗೃಹಸ್ಥರಿಂದ ಸಭೆಯು ಶೋಭಾಯಮಾನವಾಗಿತ್ತು. ಸದರೀ ಶ್ರೀಮಂತ ಮಲ್ಲಪ್ಪಣ್ಣನವರ ಮನೆತನದ ಹಾಗೂ ಅವರಲ್ಲಿರುವ ಔದಾರ್ಯ ಪರೋಪಕಾರ ಬುದ್ಧಿ, ಸಹನಶೀಲತೆ, ದಯಾರ್ದ್ರ ಹೃದಯತೆ, ಪ್ರಾಮಾಣಿಕತನ, ರಾಜಭಕ್ತಿ, ಮೊದಲಾದ ಮೇಲಾದ ಗುಣಗಳ ಬಗ್ಗೆ ರಾವ ಸಾ॥ ಅಧ್ಯಕ್ಷರೂ ಮತ್ತು ರಾವ ಸಾ॥ ಶಿವಮೂರ್ತಿಸ್ವಾಮಿಯವರೂ, ಪಂಡಿತ ಪಾಸ್ತರರೂ ಯಾವತ್ತು ಸಭಿಕರಿಗೆ ಚೆನ್ನಾಗಿ ಬೋಧವಾಗುವಂತೆ ತಮ್ಮ ತಮ್ಮ ಗಂಭೀರವಾಣಿಗಳಿಂದ ಹೇಳಿದರು. ಅನಂತರ ಅಧ್ಯಕ್ಷರ ಹಾಗೂ ಶ್ರೀಮಂತರ ವ ಯಾವತ್ತು ಸಭಿಕರ ಆಭಾರ ಮನ್ನಿಸಿ ಸದರೀ ಶ್ರೀಮಂತರ ಅನುಕರಣವನ್ನು ನಮ್ಮಲ್ಲಿಯ ಶ್ರೀಮಂತ ಬಾಂಧವರು ತೆಗೆದುಕೊಳ್ಳಬೇಕೆಂದು ಹೇಳಿ ಶ್ರೀ ಉಮಾಪತಿಯು ಹಾಗೂ ನಮ್ಮ ಪರಮಪೂಜ್ಯ ದಯಾಳು ಸರಕಾರದವರ ಹೆಸರಿಂದ ಜಯ ಘೋಷಗಳಾಗಿ ಯಾವತ್ತರಿಗೂ ಹಾರ, ತುರಾಯಿ, ಗಂಧ, ಪರಿಮಳ ದ್ರವ್ಯಗಳಿಂದ ಮನ್ನಿಸಿ ಸಭೆಯು ವಿಸರ್ಜಿಸಲ್ಪಟ್ಟಿತು.

ಗೋಕಾಕಫಾಲ್ಸ್. ಓರ್ವ ಪ್ರೇಕ್ಷಕ.

ಬೀರೂರು ನೋಟ್ಸ್

ಈ ಊರಿನಲ್ಲಿ ಪ್ಲೇಗು ಉಪಾಧಿಯು ಶಾಂತವಾಗಿ ಸುಮಾರು ೨ ತಿಂಗಳಾಯಿತು. ಈ ಭೀತಿಯಿಂದ ಚದರಿಹೋಗಿದ್ದ ಜನರು ಊರನ್ನು ಬಂದು ಸೇರುತ್ತಿದ್ದಾರೆ. ವರ್ಷೇ ವರ್ಷ ಇಲ್ಲಿ ಪ್ಲೇಗ್‌ಹಾವಳಿ ತಪ್ಪಲಿಲ್ಲವಾದುದರಿಂದ ಪುನಃ ಸ್ಥಿತಿಯು ಹೇಗಾಗುವದೋ ಎಂಬ ಶಂಕೆಯು ಜನರಿಗೆ ಇದ್ದೇ ಇದೆ. ಅಸಿಸ್ಟೆಂಟ್ ಕಮಿಷನರ್ ಸಾಹೇಬರವರೂ ಅಮಲ್‌ದಾರ್‌ರವರೂ ಇಲ್ಲಿಗೆ ಬಂದಿದ್ದು ಜಮಾಬಂದಿ ಕೆಲಸವನ್ನು ಪೂರೈಸಿಕೊಂಡು ದಯಮಾಡಿಸಿದರು. ಕಡೂರು ಸಂಪಾಗ ಸ್ಥಳಾಂತರಗಳಿಂದ ಲೋಯರ್ ಸೆಕೆಂಡರಿ ಪರೀಕ್ಷೆಗೆ ಬಂದಿದ್ದ ವೀರಶೈವ ವಿದ್ಯಾರ್ಥಿಗಳಿಗೂ ಇವರಲ್ಲಿ ಊಟವಾಸಕ್ಕೆ ಇತರ ಸ್ಥಳಗಳಿಂದ ವಿದ್ಯಾರ್ಥಿಗಳಿಗೂ ಈ ಊರ ಎಸ್. ಎಸ್. ಶಿವಲಿಂಗಪ್ಪನವರು ತಾಲೂಕಿಗೆ ಭೇಟಿ ಕೊಟ್ಟು ಮುಂತಾದವುಗಳಿಗೆ ತಕ್ಕ ಏರ್ಪಾಡುಗಳನ್ನು ಮಾಡಿ ತುಂಬಾ ಉಪಕಾರವನ್ನು ಮಾಡಿದ್ದು ಶ್ಲಾಘನೀಯವಾದುದು. ಇದು ವಿದ್ಯಾರ್ಥಿಗಳಿಗೆ ಮಾಡುವ ಉಪಕಾರವಾದುದಲ್ಲ ಇಂಥ ರಸ್ಥಳಗಳು ರಾಜಭಕ್ತಿಗೆ ಪರೋಕ್ಷವಾಗಿ ಸಂಬಂಧಪಟ್ಟವುಗಳೆಂದು ಸಾ॥ ರಾ॥ ಶಿವಲಿಂಗಪ್ಪನವರು ಈ ಮಾತಿನ ರಾಜಭಕ್ತಿಯನ್ನು ಪ್ರದರ್ಶಿಸಿದಂತಾಯಿತು. ಈ ವಿಷಯವನ್ನು ಇವರು ಪ್ರತಿವರ್ಷವೂ ನಡೆಸಿ ಪುಣ್ಯವಂತಗಳಾಗುತ್ತಾರೆಂಬುದರಲ್ಲಿ ಸಂದೇಹವಿಲ್ಲ. ಇಲ್ಲಿ ವಿಷಯ ಹವೆಯು ದಿನೇ ದಿನೇ ಹೆಚ್ಚುತ್ತಾ ಇದೆ. ಒಂದರಾ ಹದ ಮಳೆ ಬಂದರೆ ಉಪಕಾರವಾಗುತ್ತಿತ್ತು. ಈ ಊರಿನಲ್ಲಿ ಪ್ರತಿವರ್ಷವೂ ರಾಮನವಮಿ ದಿವಸದಲ್ಲಿ ನಡೆಯುತ್ತಿದ್ದ ರಥೋತ್ಸವವು ಯಾವ ಕಾರಣದಿಂದಲೋ ನಿಲ್ಲಿಸಲ್ಪಟ್ಟಂತೆ ತಿಳಿಯಬರುತ್ತದೆ. ಅಡಿಕೆ ಧಾರಣೆ ಏರುತ್ತಾ ಇದೆ.

ಪ್ರತ್ಯಕ್ಷದರ್ಶಿ.

ತಾರೀಖು ೨೦-೪-೧೯೧೪ ಈ॥ ದಿವಸ ನಮ್ಮ ದಕ್ಷಿಣಭಾಗದ ಕಮಿಷನರರಾದ ಮಿ॥ ನಾಮದಾರ ಡಬ್ಲ್ಯೂ. ಶೆಫರ್ಡ್ ಸಾ॥ ಬ॥ ರವರ ಸ್ವಾರಿಯು ಈ ಹೊತ್ತು ಸಂಜೆಯ ಮೇಲ್ ಗಾಡಿಯಿಂದ ಮುಂಬಯಿಗೆ ದಯಮಾಡಿಸಿತು. ಆ ಕಾಲಕ್ಕೆ ಗೋಕಾಕ ಸ್ಟೇಷನದಮೇಲೆ ಅವರಿಗೆ ತಾಂಬೂಲ ವಿಹಾರ ಸಂತರ್ಪಣೆಯು ಸಮಾರಂಭವು ಒಳ್ಳೇ ವಿಜೃಂಭಣೆಯಿಂದ ನೆರವೇರಿತು. ಗಾಡಿಯು ಆಗಮಿಸುವ ವೇಳೆಯು ಹದಿನೈದು ಮಿನೀಟು ಮುಂಚಿತವಾಗಿ ಗೋಕಾಕ ತಾಲ್ಲೂಕಿನ ಮಾಮಲೇದಾರರಾದ "ರಾವಸಾಹೇಬ" ಬಿ. ಕೆ. ಕುರ್ತಕೋಟಿ, ಹಾಗೂ ರಾವಸಾಹೇಬ ಶಿವಮೂರ್ತಿಸ್ವಾಮಿ ಕಣಬರಗಿಮಠ ಗೋಕಾಕಫಾಲ್ಸ್ ಮತ್ತು ಭಸ್ಮೇ ವಕೀಲಕೋರ್ಟ ಗೋಕಾಕ ವಗೈರೆ ಸದ್ಗೃಹಸ್ಥರು ಬಂದು ಪಿಯರ್, ಟೇಬಲ್, ಹಾರ, ತುರಾಯಿ ವಗೈರೆಗಳ ಪೂರ್ವಸಿದ್ಧತೆಯನ್ನು ಸ್ವಚ್ಛವಾದ ಹವೆಯುಳ್ಳ ಪ್ಲಾಟಫಾರ್ಮಿನ ಮೇಲೆ ತಯಾರಿಸಿ ಮೇಹರ್ಬಾನರವರ ಮಾರ್ಗ ನಿರೀಕ್ಷಣೆಮಾಡುವಷ್ಟರಲ್ಲಿ ಗಾಡಿಯು ಬರಲು ಕೊಡಿದಂಥ ಯಾವತ್ತೂ ಜನರು ಆನಂದಭರಿತ ಕರತಾಡನದ ಗರ್ಜನೆಯಿಂದ ತಮಗಾದ ಆನಂದವನ್ನು ವ್ಯಕ್ತಗೊಳಿಸಿದರು. ಬಳಿಕ ದೊರೆಗಳವರು ಮೊದಲನೇ ತರಗತಿ ಡಬ್ಬಿಯಿಂದ ಇಳಿದು ಬಂದು ಸದರಿ ಮಂಡಲಿಯವರು ಶೃಂಗರಿಸಿದ ಆಸನದ ಮೇಲೆ ಅಲಂಕೃತರಾದರು. ಅನಂತರ ರಾವಸಾಹೇಬ ಶಿವಮೂರ್ತಿಸ್ವಾಮಿ ಕಣಬರಗಿ ಮಠದವರ ಜ್ಯೇಷ್ಠ ಚಿ॥ ಶಿವಲಿಂಗಸ್ವಾಮಿಗಳವರು ದೊರೆಗಳವರ ಕೊರಳಲ್ಲಿ ಪೂನಾಲೆಗಳನ್ನು ಹಾಕಿ, ಗಂಧ, ತಾಂಬೂಲಾದಿ ಪರಿಮಳ ದ್ರವ್ಯಗಳಿಂದ ಅತ್ಯಾನಂದಗೊಳಿಸಿದರು. ಮತ್ತು ಗದಗ ಶ್ರೀಮಂತರಾದ ಮಾನಿವಿ ಸಿದ್ರಾಮಪ್ಪನವರೂ ಗೋಕಾಕದ ಕಸ್ತೂರಿ ಕಲ್ಪವೃಕ್ಷ "ವಿಭೂತಿಪಂಡಿತ ಪರಮಶೆಟ್ಟಿ" ಇತ್ಯಾದಿ ಅನೇಕ ಶ್ರೀಮಂತ ಸಾಹುಕಾರ ಅಧಿಕಾರಸ್ಥ ಮಂಡಲಿಯವರೂ ಮೇಹರ್ಬಾನರವರನ್ನು ಪೂಮಾಲೆಗಳಿಂದ ಸುಶೋಭಿಸಿ ಪರಿತೋಷಿಸಿದರು. ಈ ಸಂಭ್ರಮಕ್ಕೆ ೧೦೦-೧೫೦ ಜನರು ಕೂಡಿದ್ದರು. ನಂತರ ಮೇಹರ್ಬಾನರವರು ತಮಗಾದ ಸಂತೋಷವನ್ನು ಭಾಷಾಣದ್ವಾರಾ ವ್ಯಕ್ತಪಡಿಸಿ ಸಮಸ್ತರ ಷೇಕ್‌ಹ್ಯಾಂಡನ್ನು ಮಾಡಿದರು. ಮುಂದೆ ಮೇಹರ್ಬಾನರವರ ಹೆಸರಿಂದ ತ್ರಿವಾರ ಜಯಘೋಷವನ್ನು ಮಾಡಿದ ಬಳಿಕ ದೊರೆಗಳವರು ದಯಮಾಡಿಸಿದರು. ಇದೇಪ್ರಕಾರ ಚಿಕ್ಕೋಡಿ ಸ್ಟೇಷನದಮೇಲೆ ಶ್ರೀಮಂತ ರಾವ ಸಾ॥ ಮಲ್ಲಪ್ಪ ಅಂಣಾ ಶಿಂತ್ರೀ, ಚೆಂಣ, ಕರಾಳೇ, ವಗೈರೆರ ಮಾನಸುಮಾರಿಯೂ, ಕೇಡಬಾಳದಮೇಲೆ ರಾ॥ರಾ॥ ಮಂಗಸೂಳಿ ವಕೀಲಹಾಗೂ ಹಿಪ್ಪರಿಗಿಯವರ ಮಾನಸುಮಾರಿಗಳೂ, ಮತ್ತಿಷ್ಟೋ ಸ್ಟೇಷನಗಳಮೇಲೆ ಹೀಗೇ ಸಮಾರಂಭವು ನಡೆಯಿತೆಂದು ತಿಳಿಸಲು ತುಂಬಾ ಆನಂದಪಡುತ್ತೇನೆ.

ಓರ್ವಪ್ರೇಕ್ಷಕ.

ನೋಟೀಸ್.

ರಾವ್‌ಬಹದ್ದೂರ್ ಧರ್ಮಪ್ರವೃತ್ತ ಗುಬ್ಬಿ ತೋಟದಪ್ಪನವರ ಧರ್ಮಸತ್ರದಲ್ಲಿ ಬಡ ವೀರಶೈವ ವಿದ್ಯಾರ್ಥಿಗಳಿಗೆ ಉಚಿತವಾಗಿ ಭೋಜನಕ್ಕೆ ಏರ್ಪಾಟಾಗಿದೆ. ವಿದ್ಯಾರ್ಥಿಗಳು, ಮೈಸೂರ್ ದೇಶೀಯರಾಗಿಯೂ, ಇಂಗ್ಲೀಷ್ ಲೋವರ್ ಸೆಕಂಡರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಾಗಿಯೂ ಇರಬೇಕು. ಮತ್ತು ಪ್ರೌಢ ವಿದ್ಯಾಭ್ಯಾಸಮಾಡಲು ಬೈತನ್ನವಿಲ್ಲದವರಿಗೆ ಮಾತ್ರ ಅವಕಾಶದೊರೆಯುವುದು. ಬೈತನ್ನವಿಲ್ಲವೆಂಬುದಕ್ಕೆ ಸ್ಥಳೀಯ ಪ್ರಮುಖರಿಂದ ಸರ್ಟಿಫಿಕೇಟ್ ತರಬೇಕಲ್ಲದೆ ತಾವು ಹಿಂದೆ ಓದಿದ ಸ್ಕೂಲ್ ಯಾ, ಕಾಲೇಜಿನ ಮುಖ್ಯೋಪಾಧ್ಯಾಯರಿಂದಲೂ ನಿಜ ತಮ್ಮ ಯೋಗ್ಯತಾವಿಚಾರವಾಗಿ ಸರ್ಟಿಫಿಕೇಟ್ ತರತಕ್ಕದ್ದು. ಗತವರ್ಷದಲ್ಲಿ ಇದ್ದ ವಿದ್ಯಾರ್ಥಿಗಳ ಪೈಕಿ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದರೆ ಅವರಿಗೆ ಮೊದಲು ಅವಕಾಶಕೊಟ್ಟ ನಂತರ ಇತರರಿಗೆ ಅವರ ಯೋಗ್ಯತಾನುಸಾರ ಸಾಧ್ಯವಾದಷ್ಟು ಕ್ಲುಪ್ತವಾಗಿ ಸ್ಥಳದೊರೆಯುತ್ತದೆ. ಇಚ್ಛೆಯುಳ್ಳವರು ಈ ಕೆಳಗಿನ ವಿಳಾಸಕ್ಕೆ ೧೯೧೪ ನೇ ಮೇ, ಅಪ್ರೈಲ್‌ಪ್ರಾಂಗಿ ಅಪ್ಲೀಕೇಷನ್ ಹಾಕತಕ್ಕದ್ದು.

ಹೆಚ್. ಕೆ. ವೀರಬಸವಯ್ಯ, ಬಿ. ಎ. ಬಿ. ಎಲ್.

ಆನರರಿ ಸೆಕ್ರೆಟರಿ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನು ಉಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹಳ ಸುಲಭವಾದ ಧಾರಣೆಯಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಇಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೪-೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧ ರೂ. ಕೊಡಬೇಕಾಗುವುದು. ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೩-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦-೮-೦ ಆಣೆಯಂತೆ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚು ಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ವಿಶೇಷ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,

ಸ್ಟಾರ್ ಪ್ರೆಸ್, ಮೈಸೂರ್.

೫೦೦ ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರೀ ಮುರಬ್ಬಾ.

2

ಈ ಮುರಬ್ಬಾವು "ಪಂಜಾಬ್ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂಪಾಯಿಗಳು ಬಹುಮಾನ ಕೊಡಲ್ಪಡುವುದು.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯಕೋಶವು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣಪರಿಯಂತರವೂ ದುಃಖಪಡುವರು. ಈ "ಪಂಜಾಬ್ ಸಾಲಾಮಿಸ್ರೀಮುರಬ್ಬಾ" ದಿನ ಸೇವನೆಯಿಂದ—

ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲ ವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಕ್ಷಣಕ್ಷಣಕ್ಕೂ ಮೂತ್ರವಾಗುತ್ತಿದ್ದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ದೂರ ನಡೆಯುವುದರಿಂದ ಮೇಲುಬ್ಬಸ ಬರುವುದು ತಲೆನೋವು ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರಿಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು ರಕ್ತವನ್ನು ಹೆಚ್ಚಿಸಿ ವೀರ್ಯವನ್ನು ವೃದ್ಧಿಪಡಿಸುವುದರಲ್ಲಿ ಪಂಜಾಬ್ ಸಾಲಾಮಿಸ್ರೀ ಮುರಬ್ಬಾವಿನ ಹೊರತು ಇದಕ್ಕೆ ಸಮಾನವಾದ ಔಷಧವು ಬೇರೆ ಯಾವುದೂ ಇಲ್ಲವು.

ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ತಾಂಬ್ರದ ಮತ್ತು ಭಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು. ಹೊಟ್ಟೆಯಲ್ಲಿರುವ ಜ್ವರದ ಗಡ್ಡೆಯನ್ನು ನಾಶಪಡಿಸುವುದು ಶ್ವಾಸ ಖಾಸ ರೋಗಗಳನ್ನು ನಿರ್ಮೂಲಪಡಿಸುವುದು.

ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲ್ ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳೆಗಡ್ಡೆ, ಶಾಮುಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರಿ ಎಂದು ಹೇಳಿ ಮೋಸಪಡಿಸುವರು. ಈ ಮುರಬ್ಬಾವನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾಬ್ ಸಾಲಾಮಿಸ್ರಿಯೋ ಅಥವ ಬೇರೇ ತರಹಾದ್ದೋ ಎಂಬುವುದು ಚೆನ್ನಾಗಿ ತಿಳಿದುಬರುತ್ತೆ. ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧೫ ತೋಲಾ ಮುರಬ್ಬಾವಿರುವ ಡಬ್ಬಾ ೧ಕ್ಕೆ ರೂ ೧-೮-೦; ಟಪಾಲ್ ಖರ್ಚು ನಾಲ್ಕು ಆಣೆ ಅನುಪಾನಪತ್ರಿಕೆ ಔಷಧದ ಸಂಗಡ ಇರುತ್ತೆ.

ಅತ್ಯುತ್ತಮವಾದ ವನೌಷಧಗಳು.

೧. ಧಾತುಪುಷ್ಟಿಚೂರ್ಣ— ಕ್ರಯ ೫ ಆಣೆ.

೨. ರೋಮನಾಶಕ ಮತ್ತು ವೃಶ್ಚಿಕದಂಷ್ಟ್ರ ತೈಲವು ಚೇಳಿನ ಹೊಡತಕ್ಕೂ ಮತ್ತು ಕೂದಲು ತೆಗೆಯುವುದಕ್ಕೂ ಬಹಳ ಒಳ್ಳೆಯದು ಕ್ರಯ ೨ ಆಣೆ.

೩. ಮಂತ್ರವಾರಣೆ ತೈಲವು ಕ್ರಯ ೪ ಆಣೆ.

೪. ಹೊಟ್ಟೆನೋವಿಗೆ ಔಷಧ ಕ್ರಯ ೨ ಆಣೆ ೬ ಪೈ.

೫. ಕೆಮ್ಮಲು ರೋಗಕ್ಕೆ ಔಷಧ ೪ ಆಣೆ.

೬. ವ್ರಣಕ್ಕೆ ಔಷಧ ೪ ಆಣೆ.

೭. ಆಶ್ಚರ್ಯಕರವಾದ ವೀರ್ಯಸ್ಥಂಬದ ಗುಳಿಗೆ ೪ ಆಣೆ.

೮. ತಲೆನೋವಿಗೆ ತೈಲವು ೨ ಆಣೆ ೬ ಪೈ.

೯. ಪ್ರಮೇಹ ನಿವಾರಣ ಭಸ್ಮವು-೮ ಆಣೆ.

೧೦. ಉಷ್ಣಕಾರಕಕ್ಕೆ ಮಾತ್ರೆಗಳು-ರೂ. ೧.

೧೧. ಮೂಲವ್ಯಾಧಿಗೆ ಔಷಧ-೮ ಆಣೆ.

೧೨. ಕಣ್ಣಿಗೆ ಸುರ್ಮಾ-೪ ಆಣೆ.

೧೩. ದಂತಚೂರ್ಣವು-೧ ಆಣೆ ೩ ಪೈ.

೧೪. ಕೂದಲು ಬೆಳೆಯುವ ಎಣ್ಣೆ (ಪಂಟೋಲ ತೈಲ) ೪ ಆಣೆ.

ವಿಳಾಸ:— ಡಿ. ಮನ್ನಾಲಾಲ್, ದಿಲ್ಲಿ ವೈದ್ಯರು, ೧೩, ಹಳೇ ಸಿದ್ದಿಕಟ್ಟೆ, ಬೆಂಗಳೂರು ಸಿಟಿ.

ಫಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

22

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ಪೇಶಿ! (ಗುಣವಾಗದಿದ್ದರೆ ಹಣ ಪರತ !!) ಪೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪಿತ್ತ ಉದ್ರೇಕವಾದವರು, ತೃಷೆಯುಳ್ಳವರು, ದಮ್ಮಿನವರು, ಕೆಮ್ಮಿನವರ ಕಫ, ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧನ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟುಗುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೋಲೆಯವರಿಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ ೩-೮-೦. ೮೦ ತೋಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ:—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,

ಪೋಸ್ಟ್ ಬನವಾಸಿ. ಜಿಲ್ಲ ಉತ್ತರಕನಡಾ

32

S.U.N.&Co. BENARES CITY. KASHI VISHWESHWAR.

ದೊಡ್ಡ ಕಂಪೆನಿ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯೂ. ಎನ್. ಮತ್ತು ಕಂಪೆನಿ,

ಬನಾರಿಸ್ ಸಿಟಿ. (ಕಾಶೀ)

ಅಗ್ಗವಾದ ಮಾಲುಗಳು.

S.N.RUDRAKSHA & CO. BENARES CITY.

ನಮ್ಮಲ್ಲಿ ಉತ್ತಮವಾದ ನೇಪಾಳ ರುದ್ರಾಕ್ಷಿ ಉತ್ತಮವಾಗಿಯೂ ಗಟ್ಟಿಯಾಗಿಯೂ ೪ ಮುಖದಿಂದ ೧೪ ಮುಖದ ವರೆಗೆ ಸಣ್ಣದು ದೊಡ್ಡದು ಸಹ ಈ ಎರಡು ನಮೂನೆಯಲ್ಲಿ ದೊರೆಯುವುದು. ಮತ್ತು ಇವುಗಳಲ್ಲದೆ ರೇಷ್ಮೆ ಮಗುಟ, ಕಾಶ್ಮೀರ ಶಾಲು, ರೇಷ್ಮೆ ಜರಿ ಸೀರೆ, ಜರಿಕಣ, ಪೇಟ, ಮೊಳಕಾಲ್ಮರು ನಮೂನೆ ವಸ್ತ್ರ ಜಗನ್ನಾಥ ಜಾಗಂಟೆ, ನೇಪಾಳ ಕಸ್ತೂರಿ, ಉತ್ತಮವಾದ ಜರೀ ಛಾದರ್ ಮೊದಲಾದ ಅಮೂಲ್ಯವಾದ ಸಾಮಾನು ಎಲ್ಲವರಿಗಿಂತಲೂ ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಇಚ್ಛಿಸಿದವರಿಗೆ ವಿ. ಪಿ ಮೂಲಕ ಕಳುಹಿಸಲಾದೀತು.

ರುದ್ರಾಕ್ಷಿಗಳ ವಿವರ:—

೪ ಮುಖದ ರುದ್ರಾಕ್ಷಿ ಕಂಠಿ ಅಂದರೆ ೩೨ ಮಣಿಗಳಿರುವ ಸರ ೧ ಕ್ಕೆ ೧೨ ಆಣೆಯಿಂದ ೩೦ ರೂಪಾಯಿವರೆಗೆ. ೫ ಮುಖದ ಕಂಠಿ ೧ಕ್ಕೆ ೮ ಆಣೆಯಿಂದ ೨೦ ರೂಪಾಯಿವರೆಗೆ. ೬ ಮುಖದ ಕಂಠಿ ೧ಕ್ಕೆ ೧೨ ಯಿಂದ ೧೦೦ ರೂ. ವರೆಗೆ. ೭ ಮುಖದ ಕಂಠಿ ೧ಕ್ಕೆ ೧೦ ರೂ. ಯಿಂದ ೧೫೦ ರೂ. ವರೆಗೆ. ಇದರಂತೆ ೮, ೯, ೧೦, ೧೧, ೧೨, ೧೩, ೧೪, ಈ ಮುಖಗಳ ಮಣಿ ೧ಕ್ಕೆ ೫ ರೂ. ಯಿಂದ ೩೦ ರೂ. ವರೆಗೆ. ಇದರಲ್ಲಿಯೇ ಕಂಠಿ ಬೇಕಾದರೆ ಸಹ ದೊರೆಯುವುದು. ಸಣ್ಣ ರುದ್ರಾಕ್ಷಿ ಸರ ಅಂದರೆ ೧೦೮ ಮಣಿಯಿರುವ ತೊಗರಿಯು, ಉದ್ದಿನಕಾಳು ಪ್ರಮಾಣದ ಸರ ೧ಕ್ಕೆ ರೂ. ೫ ರಿಂದ ರೂ. ೩೦ ವರೆಗೆ. ಕಡಲೆ ಕಾಳು ಪ್ರಮಾಣದ ೧೦೮ ಮಣಿಯಿರುವ ಸರ ೧ಕ್ಕೆ ರೂ ೨-೮-೦ ಲಾಗಾಯಿತು ರೂ. ೧೦ ವರೆಗೆ. ಜಪಮಾಲೆ ನೆಲ್ಲಿಕಾಯಿಯಿಂದ ಅವರೇ ಬೀಜದ ಪ್ರಮಾಣದ ೧೦೮ ಇರುವ ಸರ ೧ಕ್ಕೆ ೧೨ ಆಣೆಯಿಂದ ರೂ ೧೦ ವರೆಗೆ. ಸಾಧಾರಣ ತರ ೬ ಆಣೆಯಿಂದ ರೂ. ೩ ವರೆಗೆ. ಗೌರೀಶಂಕರ ರುದ್ರಾಕ್ಷಿ— ಈ ರುದ್ರಾಕ್ಷಿಯು ರುದ್ರಾಕ್ಷಿಗಳಲ್ಲೆಲ್ಲಾ ಶ್ರೇಷ್ಠವೆಂದು ಹೇಳುವರು. ರುದ್ರಾಕ್ಷಿ ಮಣಿ ೧ಕ್ಕೆ ರೂ. ೫ ಲಾಗಾಯಿತು ರೂ. ೫೦ ವರೆಗೆ. ಇಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ವಿಳಾಸ— ಎಸ್. ನೇಪಾಳ ರುದ್ರಾಕ್ಷಿ ಅಂಡ್ ಕಂಪೆನಿ,

16 ಬನಾರಸ್ ಸಿಟಿ.

ದಿ ಜನರಲ್ ಏಜನ್ಸಿ, ಮೈಸೂರು.

ಕಾದಂಬರಿಗಳು:— ಚಂಡಮಾರುತ ೦-೨-೦; ಚರಿತಾಮೃತಂ ೦-೫-೦; ರಾಜಕಥಾವಲ್ಲರಿ ೦-೫-೦; ಪೀಟರಿನಚರಿತ್ರೆ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೬-೬; ಸೀತೆ ೦-೫-೦; ಸಾಹಸಿಕೆ, ಕಲಾನಾಥ ೦-೮-೦; ಮಹಾಲಕ್ಷ್ಮಿ ೦-೨-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ರತ್ನಸಂಜೀವಿನಿ ೦-೮-೦; ಕೊಹಿನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೨-೦. 34

ಬಿಸಿಲುಕಾಲದ ಆಯಾಸವನ್ನೂ ಬಾಯಾರಿಕೆಯನ್ನೂ ಪರಿಹರಿಸಿ ಮನಸ್ಸಿಗೆ ಅಪೂರ್ವವಾದ ಆನಂದವನ್ನುಂಟು

32 ಮಾಡುವುದರಲ್ಲಿ ಪ್ರಖ್ಯಾತಿಹೊಂದಿರುವ

ಬಿ. ವಿ. ಪಂಡಿತರ

ಆಮೋದಿನಿ

ವಿದ್ಯಾರ್ಥಿಗಳು, ಪ್ರಯಾಣಿಕರು, ಬೈಸಿಕಲ್‌ಸ್ವಾರಿ ಮಾಡುವವರು, ಉಪನ್ಯಾಸಕರೇ ಮೊದಲಾಗಿ ಸರ್ವರೂ ಅಮೋಘವಾದ ಸುವಾಸನೆಯುಳ್ಳ ಈ ಮಾತ್ರೆಗಳ ಗುಣಾತಿಶಯಗಳನ್ನು ತಮ್ಮ ಮಿತ್ರರಲ್ಲಿ ಪ್ರಚಾರಪಡಿಸುತ್ತಲಿದ್ದಾರೆ. ಸಂಗೀತಗಾರರು ಇದರಿಂದ ತಮಗುಂಟಾಗಿರುವ ಪ್ರಯೋಜನವನ್ನು ವ್ಯಕ್ತಪಡಿಸಿದ್ದಾರೆ.

ಶುದ್ಧವಾದ ವನಸ್ಪತಿಗಳಿಂದಲೇ ತಯಾರಿಸಲ್ಪಟ್ಟಿರುವ ಈ ಮಾತ್ರೆಗಳು ಸಮಸ್ತರಿಗೂ ಮಲಬಂಧ, ಹೊಟ್ಟೆನೋವು, ನಾನಾ ತರಹ ಕೆಮ್ಮು, ದಮ್ಮು, ಉಬ್ಬಸ, ಅಗ್ನಿಮಾಂದ್ಯ, ಅರೋಚಕ, ತಲೆನೋವು, ವಾಂತಿ, ವಾಕರಿಕೆ, ಪಿತ್ಥಸಂಕಟ, ಜಲದೋಷಗಳನ್ನು ಖಾತರಿ ಗುಣಪಡಿಸಿ ರಕ್ತಶುದ್ಧಿಯನ್ನುಂಟುಮಾಡುತ್ತವೆ. ೧೫೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಅನುಪಾನಪತ್ರಸಹಿತ ೦-೪-೦.

ಶ್ರೀಕರ ಕಸ್ತೂರಿಮಾತ್ರೆ.

ಈ ಮಾತ್ರೆಗಳನ್ನು ಒಂದೇವೇಳೆ ಪರೀಕ್ಷಿಸಿರಿ. ಇದರ ಗುಣ ಮತ್ತೂ ಸುವಾಸನೆಗಳು ನಿಮಗೆ ಅನುಭವವಾಗುವುವು. ಮನೆಯಲ್ಲಿ ಸಣ್ಣಮಕ್ಕಳುಗಳನ್ನುಳ್ಳವರು, ಪ್ರಯಾಣಿಕರು ಮಲೆನಾಡು ವಾಸಸ್ಥರು ಮತ್ತೂ ಸಾಂಕರೋಗಸ್ಥಳದಲ್ಲಿರುವವರಿಗೆ ಈ ಮಾತ್ರೆಗಳು ಅಮೃತವೇಸರಿ. ಶೀತವಾಯು, ವಿಷಮಜ್ವರಗಳು, ನಡುನೋವು, ಕೆಮ್ಮು, ಅಗ್ನಿಮಾಂದ್ಯ, ಅರೋಚಕ, ಹಲ್ಲುನೋವು, ಅಜೀರ್ಣಭೇದಿ, ಮಲಬಂಧ, ಮೈಕೈ ನೋವು ಮತ್ತೂ ಭಾರಗಳನ್ನು ಅತಿಜಾಗ್ರತೆ ಗುಣಪಡಿಸುತ್ತವೆ. ವಿಶದವಾದ ಅನುಪಾನ ಪತ್ರಸಹಿತ ೫೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ೦-೪-೦ ನಾಲ್ಕಾಣೆ ಬೆಲೆ ಬಾಳುವ ಐದು ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಒಂದು ಇನಾಮು. ಟ. ಖ. ಪ್ರತ್ಯೇಕ. ಕ್ಯಾಟಲಾಗನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ— ಕೆ. ವಿ. ನಾರಾಯಣರಾವ್,

ಮ್ಯಾನೇಜರ್, ಸದ್ವೈದ್ಯಶಾಲಾ,

ಸಂಜನಗೂಡು, ಮೈಸೂರ್ ಪ್ರಾಂ

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕಯ್ಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡ ಪಲ್ಲಕ್ಕಿ ಉತ್ಸವದ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸನತೊಳಸಹಿತ ಆದ ಸಮಾರಂಭದ ಫೋಟೋ ೧ ಕ್ಕೆ ಕ್ರಯ ೧ ರುಪಾಯಿ

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಾವಮಾದಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ಒಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೊ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೊ ೧ ಕ್ಕೆ ಕ್ರಯ ಫುಲ್ಲಸೈಜು ೧ ರುಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀ ಜಗದ್ಗುರು ತೋಂಟದಾರ್ಯ ಗದಗ, ಶ್ರೀ ಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ಸತ್ಪುರುಷಮಾಲಾ, ಹಾಳಕೇರಿ ಆನಂದಸ್ವಾಮಿಯ ಫೋಟೊ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೊ ಸಿಗುತ್ತವೆ ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ

ಹೊಸಫ್ಯಾಷನ್— ಸದ್ಗೃಹಸ್ಥರು ಗಡಿಯಾರ ಸರ್ಪಳಿಗೆ ಹಚ್ಚುವ ಲಾಕೇಟುಗಳೂ, ಯದರಲ್ಲಿ ಹಿಂದೆ ಮುಂದೆ ಇಪ್ಪತ್ತಾರ ೨ ಫೋಟೊ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು ಕ್ರಯ ಗಿಲ್ಟದೂ ॥, ॥।=, ೧, ೧।, ಪ್ರಕಾರ, ಮತ್ತೂ ಬೆಳ್ಳೀದು ರು ೧॥ ರೋಲ್ಡ್ ಗೋಲ್ಡ್ ಭಂಗಾರದ್ದು ದುರ್ಬೀನದ ಗ್ಲಾಸದೂ ಕ್ರಯ ೭॥, ೭॥। ರೂ.

ಪರೂರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ಧಾಣೆ ಟಿಕೀಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿರಿ.

ನಮ್ಮವಿಳಾಸ— ಗಂಗಪ್ಪಾ ಜೇರಿಗೆ,

9 ಆರ್ಟಿಸ್ಟ ಸೊಲ್ಲಾಪುರ.

ಊದುಬತ್ತಿಗಳು.

3

ವಿಧವಿಧವಾದ ಊದುಬತ್ತಿಗಳು ಸೇರು ೧ ಕ್ಕೆ ೧-೨-೦-೦, ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪ ಟಿನ್ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ ಎಲ್. ಉಪಾಧ್ಯಾಯ,

ಸುಗಂಧಗಾರಿ, ಮೈಸೂರು.

ಓದಿನೋಡಿರಿ!! ಓದಿನೋಡಿರಿ!!!

೧೨ ತಿಂಗಳ ಭವಿಷ್ಯತ್ಫಲ.

ಅಯ್ಯಾ ಲೋಕಾಭಿಮಾನಿಗಳೆ! ಪ್ರತಿಯೊಂದು ತಿಂಗಳಲ್ಲಿ ಜರುಗುವ ಭವಿಷ್ಯತ್ಫಲವನ್ನು ತಿಳಿದುಕೊಳ್ಳಬೇಕೆಂಬ ಅಪೇಕ್ಷೆಯುಳ್ಳವರು ತಮ್ಮ ವಯಸ್ಸು ಹೆಸರನ್ನು ಮಾತ್ರ ಬರೆದು ಕಳುಹಿಸಿದರೆ ನಾವು ತಮ್ಮ ಪತ್ರ ಬಂದ ದಿನದಿಂದ ಒಂದು ವರ್ಷದವರೆಗೂ ಪ್ರತಿತಿಂಗಳಲ್ಲಿಯೂ ಉಂಟಾಗುವ ಲಾಭ-ಸುಖ-ದುಃಖ-ಕಷ್ಟ-ನಷ್ಟ-ದೇಹಪೀಡೆ- ಗ್ರಹಚಾರ ಪೀಡೆ ಪರಿಹಾರವಾಗುವುದಕ್ಕೆ ಮಾಡುವ ಶಾಂತಿಕ್ರಮವನ್ನು ಸಹ ಚೆನ್ನಾಗಿ ಒಂದು ಬುಕ್ಕಿನಲ್ಲಿ ಬರೆದು ಕಳುಹಿಸುತ್ತೇವೆ. ಇಷ್ಟವುಳ್ಳವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ. ನಿಮ್ಮ ಅಡ್ರೆಸ್ಸು ಪೂರ್ಣವಿರಲಿ. ಟಪಾಲ್ ಹಾಸಲು ಪ್ರತ್ಯೇಕ. ೧೨ ತಿಂಗಳ ಭವಿಷ್ಯತ್ಫಲ ಕಿಮ್ಮತು ರೂ. ೧-೦-೦ ನಮ್ಮಲ್ಲಿ ಜ್ಯೋತಿಷಸಂಬಂಧವಾದ ಪುಸ್ತಕಗಳೆಲ್ಲವೂ ದೊರೆಯುತ್ತವೆ.

ಎಚ್. ಎಂ. ಸಿದ್ಧಾಂತಿಗಳು,

21 ಗಣೇಶಪೇಟ, ಬಳ್ಳಾರಿ.

ಸಮಸ್ತ ವೀರಶೈವಬಾಂಧವರಿಗೆ ವಿದಿತಪಡಿಸುವುದೇನೆಂದರೆ- ಕಳೆದವರ್ಷ ನಿಪ್ಪಾಣಿಯಲ್ಲಿ ಕೂಡಿದ ೩ ನೆಯ ವೀರಶೈವಮಹಾಸಭೆಯ ರಿಪೋರ್ಟು ಬುಕ್ಕುಗಳು ಮುದ್ರಿತವಾಗಿ ಕ್ರಯಕ್ಕೆ ಸಿದ್ಧವಾಗಿರುವವು ಈ ಸಭೆಯ ಬುಕ್ಕುಗಳು ಒಳ್ಳೆಯ ಅಪ್ರತಿಮವಾಗಿಯೂ, ಅಚ್ಚುಕಟ್ಟಾಗಿಯೂ ಬರೆದಿದ್ದು, ಅದರಲ್ಲಿ ನಮ್ಮ ಸಮಾಜದ ಆಧಾರಸ್ತಂಭಗಳಂತಿರುವ ಪ್ರತಿಯೊಬ್ಬ ಮುಖಂಡರ ಭಾಷಣಗಳೂ ಪ್ರತ್ಯೇಕವಾಗಿ ಸೇರಿಸಲ್ಪಟ್ಟಿರುವವು. ಮೇಲಾಗಿ ಪ್ರತಿಗಳು ವಿಕ್ರಯಕ್ಕೆ ಒಂದೇ ನೂರು ಇರುವುದರಿಂದ ಹಿಂದಿನಿಂದ ಬೇಡುವವರಿಗೆ ಪ್ರತಿಗಳು ನಿಶ್ಚಯವಾಗಿ ಸಿಗಲಾರವು ಕಾರಣ, ಇಷ್ಟುಳ್ಳವರು ಮುಂಚಿತವಾಗಿಯೇ ಸ್ಪಷ್ಟವಾದ ಪತ್ರಿಯಿಂದ ಆರ್ಡರು ಕಳುಹಿಸಬಹುದು.

ಶಿವಮೂರ್ತಿಸ್ವಾಮಿ ಕಣಬರಗಿಮಠ,
ಚೇರ್ಮನ್, ಸ್ವಾಗತಕಮಿಟಿ,
೩ ನೆಯ ಮಹಾಸಭೆ ನಿಪ್ಪಾಣಿ

ಪರಿಮಳದ್ರವ್ಯಗಳು.

ನಮ್ಮಲ್ಲಿ ಬಹುಕಾಲದಿಂದಲೂ ಅತ್ಯುತ್ತಮವಾಗಿ ತಯಾರಾಗುತ್ತಿರುವ ಊದುಬತ್ತಿಗಳು ಸೇರು ೧ ಕ್ಕೆ ೪ ಆಣೆಯಿಂದ ೧೦ ರೂ. ವರೆಗೂ ದೊರೆಯುವುವಲ್ಲದೆ, ನಾನಾತರದ ಗಂಧದಬಿಲ್ಲೆಗಳು, ಜವಾಜಿಗಂಧ ಅಥವಾ ಅರಗಜ, ಪುನಗು, ಜವಾಜಿ, ದಶಾಂಗ, ಧೂಪದಕಡ್ಡಿ ಮೊದಲಾದ ಸುಗಂಧದ್ರವ್ಯಗಳೂ, ಮಲ್ಲಿಗೆ-ಸಂಪಗೆ-ರೋಜಾ ಮೊದಲಾದ ಅತ್ತರುಗಳೂ ಮತ್ತೂ ಭೃಂಗಾಮಲಕತೈಲ ಮೊದಲಾದುವುಗಳೂ ಬಿಕರಿಗೆ ಸಿದ್ಧವಾಗಿರುವುವು. ಅಪೇಕ್ಷಕರು ೫ ರೂ. ಗೆ ಕಡಿಮೆಯಿಲ್ಲದಂತೆ ಆರ್ಡರನ್ನು ಕೊಡಬೇಕು. ಇನ್ನೂ ಹೆಚ್ಚು ವಿಷಯಗಳನ್ನು ತಿಳಿಯತಕ್ಕವರು ನಮ್ಮ ಕ್ಯಾಟಲಾಗನ್ನು ತರಿಸಿ ನೋಡಬಹುದು. 34

ವಿಳಾಸ- ಎಸ್. ಕಳ್ಳೆಪ್ಪ, ಊದುಬತ್ತಿಷಾಪ್,
ದೊಡ್ಡಪೇಟೆ, ಬೆಂಗಳೂರು ಸಿಟಿ.

ನ್ಯಾಯದರ್ಪಣ. 15

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯು, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸೀಫ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸೂ, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆಚರಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ವಗೈರೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯು ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರುತ್ತವೆ.

ಬೆಲೆ ರೂ. 1—8—0. ವಿ. ಪಿ. ಮೂಲ್ಯ 1—12—0.

ಎಂ. ಎಸ್. ನಂಜಪ್ಪನವರು,
ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

22 ಸಚಿತ್ರ ಶುಕಸಪ್ತತಿ ಕಥೆಗಳು ರೂ. ೧-೮-೦ (೫೧೨ ಪುಟ) ಟಪಾಲು ಹಾಸಲು ೪ ಆಣೆ. ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ ರೂ ೧-೮-೦. (೫೩೩ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ! ಮಾನ್ಯತೆಯು ಬೇಕಾದರೆ, ವಾಕ್ಚಾತುರಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಬೇಕೆಂದಿದ್ದರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯಿಲ್ಲಾಕೆಯಿದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೩೦ ಪುಟಗಳಿಂದ ಕೂಡಿದ ೬೮ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ ೧-೪-೦ ಟಪಾಲ್ ಹಾಸಲು ೩ ಆಣೆ. ಅಗಲೇ ಬರೆ ನಿಮ್ಮ.ನಮ್ಮಲ್ಲಿ ಇನ್ನೂ ಅನೇಕಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸಚಿತ್ರ ಶುಕಸಪ್ತತಿ ಕಥೆಗಳು

ಶುಕಮಹರ್ಷಿಗಳು ಲೋಕದಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತಭಾಷೆಯಲ್ಲಿ ಹೇಳಿರುವರು. ಈ ಕಥೆಗಳನ್ನು ಭಾಷಾಂತರ ಮಾಡಿ ಕನ್ನಡದಲ್ಲಿ ರಚಿಸಿದೆ. (1) ಗೃಹಸ್ಥಾಶ್ರಮದಲ್ಲಿ ಆವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವುದು. (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತರಹಸ್ಯಗಳನ್ನೂ, ಬುದ್ಧಿಚಾಂಚಲ್ಯನಿವಾರಣೆ ಮುಂತಾದ್ದನ್ನೂ ತಿಳಿಸುವುದು. (3) ಸ್ತ್ರೀ ಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ ವಿವಿಧನೀತಿ ಮುಂತಾದುವುಗಳನ್ನು ಬೋಧಿಸುವುದು. (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವುದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವುದು. (5) ಅಲ್ಲಲ್ಲಿ ಕಥಾಸಂದರ್ಭಾನುಸಾರ ಭಾವಸೂಚಕ ಚಿತ್ರಗಳನ್ನು ಇಟ್ಟಿರುವುದರಿಂದ ಓದುಬಾರದವರಿಗೂ ಮನೋರಂಜಿತವಾಗಿರುವುದು ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ, ಇದರ ಕ್ರಯ ಪ್ರತಿ ೧ಕ್ಕೆ ೧-೮-೦; ಟಪ್ಪಾಲು ಹಾಸಲು ೪ ಆಣೆ.

(೩೪ ಸಂಧಿಗಳು) ಸಟೀಕಾ ತಾತ್ಪರ್ಯ ಜೈಮಿನೀ ಭಾರತವು. (೯೩೦ ಪುಟಗಳು)

ಇದರ ಕ್ರಯ ಪ್ರತಿ ೧ ಕ್ಕೆ ರೂ. ೪-೦-೦; ಟಪಾಲು ಹಾಸಲು ೧೦ ಆಣೆ.

ಇವಲ್ಲದೆ ಇನ್ನೂ ಅನೇಕ ಕನ್ನಡಗ್ರಂಥಗಳು ದೊರೆಯುತ್ತವೆ ಪುಸ್ತಕಗಳ ಪಟ್ಟಿಗೆ ಬರೆದರೆ ಉಚಿತವಾಗಿ ಕಳಿಸುವೆವು

39 ನಮ್ಮ ವಿಳಾಸ- ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ.

ಶಾಸ್ತ್ರೀಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು 50

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ

ಸಂದುಗಳ ನೋವು ಮೈ ಕಾಲು ಊತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಆಗ, ನಪ್ಪು, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚು ಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾಔಷಧಿ)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈ ಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇಒಂದು ಬುದ್ದಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತವಿದೊಂದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುದ್ದಿಯ ಬೆಲೆ ೧—೦—೦.
ಟಪಾಲ್‌ಖರ್ಚ ಬೇರೆ.
ವಿಳಾಸ — ಶ್ರೀ ಶಿಂಕಾಮಾಕ್ಷಿ ವೈದ್ಯಶಾಲಾ, ಮೈಸೂರು

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ) ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾಗಿದ್ದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚುಟಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡರ್ಜ ಡಬ್ಬಿಗೆ ೧-೧೪-೦

ಉತ್ತಮವಾದ ನಶ್ಯದಪುಡಿ.

ಭಾಷು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗನಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಬೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವವು. ನೀವುಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡರ್ಜ ಡಬ್ಬಿಗಳಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,
ಗೋಪಸೆಟ್ಟಿಮೂಗು, ಹನೂರು ಪೋಸ್ಟ್
11 ಕೊಳ್ಳೇಗಾಲದ ತಾಲ್ಲೂಕು.

೧೯೧೪ ನೆಯ ಇಸವಿ ಮೇ ತಾ॥ ೪ ರಿಂದ ೧೯೧೪ ನೆಯ ಮೇ ತಾ॥ ೧೦ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ ನೆಯ ಆನಂದನಾಮ ಸಂ॥ ದ ವೈಶಾಖ ಶು॥ ನವಮಿಯಿಂದ ವೈಶಾಖ ಬ॥ ಪಾಡ್ಯಮಿವರೆಗಿನ ಪಂಚಾಂಗ.

ತಾ॥	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ತೇದಿ ಮೇ
4	[1] ಸೋ	ನ	26-26	ಮಖ	47-7	22
5	[2] ಮಂ	ದ	21-31	ಹುಬ್ಬ	43-45	23
6	[3] ಬುಧ	ಏ	16- 0	ಉತ್ತರ	40- 0	24
7	[4] ಗುರು	ದ್ವಾ	10-5	ಹಸ್ತ	35-52	25
8	[5] ಶುಕ್ರ	ತ್ರ	4-1	ಉಪರಿ	58-50	26
9	[6] ಶನಿ	ಅ	51-49	ಸ್ವಾತಿ	27-31	27
10	[7] ಭಾ	ಪಾ	46-13	ವಿಶಾಖ	23-42	28

(1) ಸೌರಶ್ರೀರಾಮನವಮಿ, (2) ಮಂಡ್ಯದ ಜನಾರ್ದನಸ್ವಾಮಿ ರಥಃ. (3) ಸರ್ವತ್ರೈಕಾದಶಿ. (4) ಪರಶುರಾಮದ್ವಾದಶಿ, ಮಳೂರು ಅಪ್ರಮೇಯಸ್ವಾಮಿ ರಥಃ. (5) ಶ್ರೀ ನೃಸಿಂಹಜಯಂತಿ, ಬಿಳಿಗಿರಿರಂಗಸ್ವಾಮಿರಥಃ. (6) ಅರ್ಧನಾರೀಶ್ವರವ್ರತಂ. (7) ಶ್ರೀರಂಗನಾಥ ಬ್ರಹ್ಮತಂತ್ರ ಪರಕಾಲಸ್ವಾಮಿಗಳ ತಿರುನಕ್ಷತ್ರ

ಮೈಸೂರು ಶ್ರೀ ವೈ ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED M NO124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ವಾರ್ಷಿಕ ಚಂದಾ ೧-೦-೦ } ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತ್ರೌ ಘನಪಥಕೃತಾವತಾರಾ ಪಕ್ಷೈಜ್ಞನಕ್ಷತ್ರಮೋಹರಾಜೀಯಾತ್ । ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಪ್ಸಿತದಶೀಲ ನಾಕಲಿತಸಾದ್ಗುಣ್ಯಾಲವಾಲಂ ಮಲಂ । ಸೀಮಾತೀತಯಶಃಪ್ರತಾಪವಿಪುಲಂಸದ್ವೃತ್ತಮಾಲಾಕುಲಂ । ಪ್ರೇಮಂಬಿತ್ತಿಕೀಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ॥ { ಅಂಚೆವೆಚ್ಚ ಸೇರಿ ೧-೪-೦

REGISTERED M NO. 124

ಸಂಪುಟ ೨೩) ಮೈಸೂರ್ ಸ್ಟಾರ್ ಸೆ ೧೯೧೪ ನೆಯ ಇಸವಿ ಮೇ ತಾರೀಖು ೧೧ ನೆಯ ಸೋಮವಾರ. (ಸಂಚಿಕೆ ೧೯

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಈ ಪತ್ರಿಕೆಯ ಚಂದಾದಾರರೆಲ್ಲರಿಗೂ ಅಚ್ಚಬೆಳ್ಳಿಯ ಸರಪಣಿ ಬಹುಮಾನ ಕೊಡಲಾಗುತ್ತೆ.

15 ಈ ಲಾಗಾಯಿತು ೨ ತಿಂಗಳುಮಾತ್ರ.

ಪದ್ಧತಿಯಮೇರೆ ಹೊಸವರ್ಷದ ಯುಗಾದಿಹಬ್ಬದಲ್ಲಿ ಬಹುಮಾನಿಸುವುದಕ್ಕಾಗಿ 2000 ಅಚ್ಚಬೆಳ್ಳಿಯ ಕೊರಳ ಸರಪಣಿಗಳನ್ನು ಸೀದಾ ಸೀಮೆಯಿಂದ ತರಿಸಿರುತ್ತೇವೆ.

ಪ್ಯಾನ್ಸಿಡೈಲ್ ಲೈಪ್ವೆ ರೆಗ್ಯುಲೇಟರ್ ವಾಚ್ ೧ಕ್ಕೆ ಕ್ರಯ 3-8 0 ಪೋಸ್ಟೇಜು 0-4-0

ಈ ಲಾಗಾಯಿತು ೨ ತಿಂಗಳೊಳಗಾಗಿ ಮೇಲ್ಕಂಡ ಒಂದು ವಾಚ್ ತರಿಸತಕ್ಕವರಿಗೆ ಒಂದು ಅಚ್ಚಬೆಳ್ಳಿಯ ಕೊರಳ ಸರಪಣಿ ಬಹುಮಾನಕೊಡಲಾಗುತ್ತೆ.

ಮುಗಿದನಂತರ ಸಿಕ್ಕದೇ ವ್ಯಸನಪಡುವುದಕ್ಕಿಂತಲೂ ಈ ದಿವಸನೇ ಆರ್ಡರ್ ಕೊಟ್ಟು ತರಿಸಿಕೊಳ್ಳುವುದುತ್ತಮ.

ತಯಾರಿ ಹೊಸತರಹ! ಪದಾರ್ಥ ಅತ್ಯುತ್ತಮ!! ಬೆಲೆ ಬಹಳಸುಲಭ!!!

ಬಜಾರಿನಲ್ಲಿ ಸಿಕ್ಕಿದ ಶಾಯಿಪುಡಿಯನ್ನು ಅಗ್ಗವಾಗಿ ಸಿಕ್ಕುತ್ತೆಂದು ಉಪಯೋಗಿಸಿ ನಿಮ್ಮ ಬರವಣಿಗೆಯನ್ನು ಕೆಡಿಸಿಕೊಳ್ಳಬೇಡಿರಿ. ಈ ಕೆಳಭಾಗದಲ್ಲಿ ಕಂಡ ನಮ್ಮ ಶಾಯಿಪುಡಿಯನ್ನು ಒಂದುಸಾರಿ ಪರೀಕ್ಷಿಸಿರಿ.

"ನ್ಯಾಷನಲ್ ಬ್ಲ್ಯೂಬ್ಲ್ಯಾಕ್ ಇಂಕ್‌ಪೌಡರ್" ೧ ಪೊಟ್ಟಣ ಪುಡಿಯಲ್ಲಿ ೨೦ ಔನ್ಸು ಅಂದರೆ ॥ ಸೀಸೆ ಅತ್ಯುತ್ತಮವಾದ ಬ್ಲ್ಯೂಬ್ಲ್ಯಾಕ್ ಶಾಯಿಯಾಗುತ್ತೆ. ಪೊಟ್ಟಣ ೧ ಕ್ಕೆ ಕ್ರಯ ೦-೨-೦. ಒಂದು ಡರ್ಜ ಪೊಟ್ಟಣಗಳಿಗೆ ೧-೫-೦ ಪ್ಯಾಕಿಂಗ್ ಪೋಸ್ಟೇಜು ಮಾಫ. ಪರಸ್ಥಳಕ್ಕೆ ಒಂದು ಡರ್ಜ ಪೊಟ್ಟಣಗಳಿಗಿಂತಲೂ ಕಡಮೆ ರವಾನಿಸಲಾಗುವುದಿಲ್ಲಾ.

ಜುಮಲೆ ಇದೊಂದು ಅತ್ಯಾಶ್ಚರ್ಯಕರವಾದ ಹೊಸ ಕಾದಂಬರಿ (ಬಂಗಾಳಿ ನಾವೆಲ್) ಓದುವುದಕ್ಕೆ ಕುಳಿತರೆ ಮುಗಿಸುವವರಿಗೂ ಮನಸ್ಸು ನಿಲ್ಲುವುದಿಲ್ಲ. ಓದುತ್ತ ಓದುತ್ತಾ ಹೊಸಹೊಸ ಭಾವಗಳು ತಲೆದೋರಿ ರೋಮಾಂಚವುಂಟಾಗುವುದು.

ವಾಚಕರೆ! ಗೋರಿಯಲ್ಲಿದ್ದ ಹೆಂಗಸಿನ ಶವಕ್ಕೆ ಪ್ರತಿಯಾಗಿ ಗಂಡುಸಿನ ಶವವಿರುವುದನ್ನು ನೋಡುತ್ತಲೇ ಆಶ್ಚರ್ಯಸಮುದ್ರದಲ್ಲಿ ಮುಳುಗಿಹೋಗುವಿರಿ. ಕ್ರಯ ಪ್ರತಿ ೧ ಕ್ಕೆ ೦-೬-೦ ಪೋಸ್ಟೇಜು ಅಲಾಯಿದಾ.

ವೇ॥ ತಿಪ್ಪಯ್ಯಶಾಸ್ತ್ರಿಗಳಿಂದ ವಿರಚಿತವಾದ ೪ ಹೊಸಪುಸ್ತಕಗಳು.

ವೀರಶೈವರಿಗೂ ಇತರರಿಗೂ ಸಹ ಅತ್ಯವಶ್ಯಕಬೇಕಾದ್ದು.

(೧) ಶತಕಪಂಚಕ— ಈ ಪುಸ್ತಕದಲ್ಲಿ ೫ ಶತಕಗಳಿವೆ. ನಿರಂಜನಶತಕ, ಸಿದ್ಧಲಿಂಗೇಶ್ವರಶತಕ, ನಿಷ್ಕಲಶತಕ, ಉಮಾಮಹೇಶ್ವರ ಶತಕ, ಸಂಗಮೇಶ್ವರ ಶತಕ, ೧-೨-೩ ನೇ ಶತಕಗಳು ವೀರಶೈವಪರಮರಹಸ್ಯ ಶಿವರಹಸ್ಯ ಮುಂತಾದುವುಗಳಿಂದಲೂ ೪-೫ ನೇ ಶತಕಗಳು ಪಾರಾಯಣಕ್ಕೆ ಯೋಗ್ಯವಾಗಿಯೂ ಇವೆ. ಇಷ್ಟು ಸೌಖರ್ಯವುಳ್ಳ ಪುಸ್ತಕ ೧ ಕ್ಕೆ ಕ್ರಯ ೦-೬-೦.

(೨) ಮನೋವಿಜಯ— ಸರ್ವರಿಗೂ ಅತ್ಯವಶ್ಯಕವಾದ ಪುಸ್ತಕ ಕ್ರಯ ೦-೮-೦.

(೩) ಬಸವೇಶ್ವರಸ್ತೋತ್ರ— ಕ್ರಯ ಪ್ರತಿ ೧ ಕ್ಕೆ ೦-೩-೦.

(೪) ಮುಕ್ತ್ಯಾಂಗನಕಂಠಮಾಲೆ— ಕ್ರಯ ಪ್ರತಿ ೧ಕ್ಕೆ ೦-೪-೦ ಪೋಸ್ಟೇಜು ಅಲಾಯಿದಾ.

ಈಗತಾನೇ ಸೀಮೆಯಿಂದ ಬಂದಿರತಕ್ಕ ಟೇಬಿಲ್ ಗಡಿಯಾರಗಳು.

ಸರ್ವರೂ ತರಿಸಿಕೊಳ್ಳಲು ಇದು ಒಳ್ಳೆಸಮಯ.

ಈ ಪಕ್ಕದ ಚಿತ್ರದಲ್ಲಿ ಕಾಣಿಸಿರುವ ಟೇಬಿಲ್ ಗಡಿಯಾರವು ಬಲವಾದ ಯಂತ್ರೋಪಕರಣಗಳಿಂದಲೂ ಒಳಭಾಗದ ಸಾಮಾನು ಕಾಣುವಂತೆ ೨ ಪಕ್ಕದಲ್ಲಿಯೂ ಕನ್ನಡಿಗಳನ್ನಿಟ್ಟು ಗಟ್ಟಿಯಾದ ನಿಕ್ಕಲ್ ಲೋಹದಿಂದ ಥಳಥಳಿಸುವಂತೆ ಖಚಿತವಾಗಿ ತಯಾರ್ಮಾಡಿರುವುದಲ್ಲದೆ ಮೇಲುಭಾಗದಲ್ಲಿ ಬಂದೋಬಸ್ತಾದ ಹಿಡಿಯನ್ನೂ ಸಹ ಇಟ್ಟಿರುತ್ತೆ.

(೧) ಘಂಟೆ ಅರ್ಧಘಂಟೆ ಹೊಡೆಯತಕ್ಕ ಕ್ಲಾಕ್ ೧ ಕ್ಕೆ ೪-೮-೦
(೨) ಘಂಟೆ ಅರ್ಧಘಂಟೆ ಹೊಡೆದು ಅಲಾರಂ ಸಹ ಇರತಕ್ಕ ಕ್ಲಾಕ್ ೫-೪-೦
(೩) ಘಂಟೆ ಹೊಡೆಯುವುದಕ್ಕೆ ಪ್ರತಿಯಾಗಿ ಪ್ರತಿಘಂಟೆಗೂ ಮೃದುಮಧುರಗಾನಮಾಡತಕ್ಕ ಕ್ಲಾಕ್ ೧ ಕ್ಕೆ ೫-೮-೦
(೪) ತಾವಿಷ್ಟಪಟ್ಟ ಘಂಟೆಗೆ ಸರಿಯಾಗಿ ಕರ್ಣಾನಂದವಾಗುವಂತೆ ಮೃದುಮಧುರಗಾನಮಾಡತಕ್ಕ ಕ್ಲಾಕ್ ೫-೮-೦

ಕಾಗದ ಬರೆಯತಕ್ಕವರು ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕಾಗಿ ಕೋರಿಕೆ. ತಿಳಿಯದೇ ಇರತಕ್ಕ ವಿಳಾಸಗಳಿಗೆ ನಾವು ನಿಗಾಕೊಡುವುದಿಲ್ಲವೆಂಬಂಶವನ್ನು ಸರ್ವರೂ ಗಮನಿಸತಕ್ಕದ್ದು.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧-೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಶಿವಪೂಜಾವಿಧಿಃ	೦-೮-೦
ಚಾರುಶೀಲೆಚರಿತ್ರೆ	೦-೫-೦
ಸಟೀಕ ನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೬-೦
ವಿವೇಕಮಂಜರಿ [೨ನೆಯ ಭಾಗ]	೦-೩-೦
ವ್ರತಪಂಚಕ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆಯವೆಚ್ಚ ಬೇರೆ.

ಹೊಸಪುಸ್ತಕಗಳು.

134

ಬಸವರಾಜವಿಜಯಂ— ಬೆಲೆ ೧ ೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಸಂಬೋಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧ ೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ- ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸೂಕ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ—ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ ವರ್ಷದ ಚಂದಾ ೨-೮-೦.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕಮಂಡಲಿ, ಮೈಸೂರು.

ಸಮಸ್ತ ವೀರಶೈವಬಾಂಧವರಿಗೆ ವಿದಿತಪಡಿಸುವುದೇನೆಂದರೆ- ಕಳೆದವರ್ಷ ನಿಪ್ಪಾಣಿಯಲ್ಲಿ ಕೂಡಿದ ೩ ನೆಯ ವೀರಶೈವಮಹಾಸಭೆಯ ರಿಪೋರ್ಟು ಬುಕ್ಕುಗಳು ಮುದ್ರಿತವಾಗಿ ಕ್ರಯಕ್ಕೆ ಸಿದ್ಧವಾಗಿರುವವು ಈ ಸಭೆಯ ಬುಕ್ಕುಗಳು ಒಳ್ಳೆಯ ಅಪ್ರತಿಮವಾಗಿಯೂ, ಅಚ್ಚುಕಟ್ಟಾಗಿಯೂ ಬರೆದಿದ್ದು, ಅದರಲ್ಲಿ ನಮ್ಮ ಸಮಾಜದ ಆಧಾರ ಸ್ತಂಭಗಳಂತಿರುವ ಪ್ರತಿಯೊಬ್ಬ ಮುಖಂಡರ ಭಾಷಣಗಳೂ ಪ್ರತ್ಯೇಕವಾಗಿ ಸೇರಿಸಲ್ಪಟ್ಟಿರುವವು. ಮೇಲಾಗಿ ಪ್ರತಿಗಳು ವಿಕ್ರಯಕ್ಕೆ ಒಂದೇ ನೂರು ಇರುವುದರಿಂದ ಹಿಂದಿನಿಂದ ಬೇಡುವವರಿಗೆ ಪ್ರತಿಗಳು ನಿಶ್ಚಯವಾಗಿ ಸಿಗಲಾರವು ಕಾರಣ, ಇಷ್ಟವುಳ್ಳವರು ಮುಂಚಿತವಾಗಿಯೇ ಸ್ಪಷ್ಟವಾದ ಪತ್ರದಿಂದ ಆರ್ಡರು ಕಳುಹಿಸಬಹುದು.

ಶಿವಮೂರ್ತಿಸ್ವಾಮಿ ಕಣಬರಗಿಮಠ,
ಚೇರ್ಮನ್, ಸ್ವಾಗತಕಮಿಟಿ,
೩ ನೆಯ ಮಹಾಸಭೆ ನಿಪ್ಪಾಣಿ

ಪರಿಮಳದ್ರವ್ಯಗಳು.

ನಮ್ಮಲ್ಲಿ ಬಹುಕಾಲದಿಂದಲೂ ಅತ್ಯುತ್ತಮವಾಗಿ ತಯಾರಾಗುತ್ತಿರುವ ಊದುಬತ್ತಿಗಳು ಸೇರು ೧ ಕ್ಕೆ ೪ ಆಣೆಯಿಂದ ೧೦ ರೂ. ವರೆಗೂ ದೊರೆಯುವುವಲ್ಲದೆ, ನಾನಾತರದ ಗಂಧದಬಿಲ್ಲೆಗಳು, ಜವಾಜಿಗಂಧ ಅಥವಾ ಅರಗಜ, ಪುನಗು, ಜವಾಜಿ, ದಶಾಂಗ, ಧೂಪದಕಡ್ಡಿ ಮೊದಲಾದ ಸುಗಂಧದ್ರವ್ಯಗಳೂ, ಮಲ್ಲಿಗೆ-ಸಂಪಗೆ-ರೋಜಾ ಮೊದಲಾದ ಅತ್ತರುಗಳೂ ಮತ್ತೂ ಭೃಂಗಾಮಲಕತೈಲ ಮೊದಲಾದುವುಗಳೂ ಬಿಕರಿಗೆ ಸಿದ್ಧವಾಗಿರುವುವು. ಅಪೇಕ್ಷಕರು ೫ ರೂ. ಗೆ ಕಡಿಮೆಯಿಲ್ಲದಂತೆ ಆರ್ಡರನ್ನು ಕೊಡಬೇಕು. ಇನ್ನೂ ಹೆಚ್ಚು ವಿಷಯಗಳನ್ನು ತಿಳಿಯತಕ್ಕವರು ನಮ್ಮ ಕ್ಯಾಟಲಾಗನ್ನು ತರಿಸಿ ನೋಡಬಹುದು. 34

ವಿಳಾಸ- ಎಸ್. ಕಳ್ಳೆಪ್ಪ, ಊದುಬತ್ತಿಷಾಪ್,
ದೊಡ್ಡಪೇಟೆ, ಬೆಂಗಳೂರು ಸಿಟಿ.

ನ್ಯಾಯದರ್ಪಣ. 15

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯೂ, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಪ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸೂ, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆಚರಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ವಗೈರೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯೂ ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿಇರುತ್ತವೆ.

ಬೆಲೆ ರೂ. 1—8—0. ವಿ. ಪಿ. ಮೂಲ್ಯ 1—12—0.

ಎಂ. ಎಸ್. ನಂಜಪ್ಪನವರು,
ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

22 ಸಚಿತ್ರ ಶುಕಸಪ್ತತಿ ಕಥೆಗಳು ಸಚಿತ್ರ ಭಟ್ಟಿವಿಕ್ರಮಾದಿತ್ಯರಾಯನ ಚರಿತ್ರೆ
ರೂ. ೧-೪-೦ (೫೧೦ ಪುಟ) ಟಪಾಲು ಹಾಸಲು ೪ ಆಣೆ. ರೂ ೧-೪-೦. (೫೭೩ ಪುಟ)

ಸಚಿತ್ರ ವಿದ್ಯಾಮಂಜರಿಕಥೆಗಳು

ವಾಚಕ ಮಹಾಶಯರುಗಳೇ! ಮಾನ್ಯತೆಯು ಬೇಕಾದರೆ, ವಾಗ್ವೈಖರಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಬೇಕೆಂಬಿಚ್ಛೆಯಿದ್ದರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯುಲ್ಲಾಸಯಿದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೩೦ ಪುಟಗಳಿಂದ ಕೂಡಿದ ೭೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ ೧-೪-೦ ಟಪಾಲ್ ಹಾಸಲು ೩ ಆಣೆ.

ಈಗಲೇ ಬರೆ ನಿಮ್ಮ. ನಮ್ಮಲ್ಲಿ ಇನ್ನೂ ಅನೇಕ ಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸಚಿತ್ರ ಶುಕಸಪ್ತತಿ ಕಥೆಗಳು

ಶುಕಮಹರ್ಷಿಗಳು ಲೋಕದಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತಭಾಷೆಯಲ್ಲಿ ಹೇಳಿರುವರು. ಈ ಕಥೆಗಳನ್ನು ಭಾಷಾಂತರ ಮಾಡಿ ಕನ್ನಡದಲ್ಲಿ ರಚಿಸಿದೆ. (1) ಗೃಹಸ್ಥಾಶ್ರಮದಲ್ಲಿ ಆವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವುದು. (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತರಹಸ್ಯಗಳನ್ನೂ, ಬುದ್ಧಿಚಾಂಚಲ್ಯನಿವಾರಣೆ ಮುಂತಾದ್ದನ್ನೂ ತಿಳಿಸುವುದು. (3) ಸ್ತ್ರೀ ಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ ವಿವಿಧನೀತಿ ಮುಂತಾದುವುಗಳನ್ನು ಬೋಧಿಸುವುದು. (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವುದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವುದು. (5) ಅಲ್ಲಲ್ಲಿ ಕಥಾಸಂದರ್ಭಾನುಸಾರ ಭಾವಸೂಚಕ ಚಿತ್ರಗಳನ್ನು ಇಟ್ಟಿರುವುದರಿಂದ ಓದುಬಾರದವರಿಗೂ ಮನೋರಂಜಿತವಾಗಿರುವುದು. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ, ಇದರ ಕ್ರಯ ಪ್ರತಿ ೧ಕ್ಕೆ ೧-೪-೦; ಟಪ್ಪಾಲು ಹಾಸಲು ೪ ಆಣೆ.

(೩೪ ಸಂಧಿಗಳು) ಸಟೀಕಾತಾತ್ಪರ್ಯ ಜೈಮಿನೀ ಭಾರತವು. (೯೩೦ ಪುಟಗಳು)

ಇದರ ಕ್ರಯ ಪ್ರತಿ ೧ ಕ್ಕೆ ರೂ. ೪-೦-೦; ಟಪಾಲು ಹಾಸಲು ೧೦ ಆಣೆ.

ಇವಲ್ಲದೆ ಇನ್ನೂ ಅನೇಕ ಕನ್ನಡಗ್ರಂಥಗಳು ದೊರೆಯುತ್ತವೆ ಪುಸ್ತಕಗಳ ಪಟ್ಟಿಗೆ ಬರೆದರೆ ಉಚಿತವಾಗಿ ಕಳಿಸುವೆವು

39 ನಮ್ಮ ವಿಳಾಸ- ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು 50

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ



ಸಂದುಗಳ ನೋವು ಮೈ ಕಾಲು ಊತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಜಿಗಿ, ನಪ್ಪ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾಔಷಧಿ)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈ ಮೀರಿತೆಂದು ತೋರಿದಾಗಲೂ, ಆಶ್ಚರ್ಯಪಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇಯೊಂದು ಬುದ್ದಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತವಿದೊಂದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುದ್ದಿಯ ಬೆಲೆ ೧—೦—೦.
ಟಪಾಲ್‌ಖರ್ಚ ಬೇರೆ.
ವಿಳಾಸ — ಶ್ರೀ ಚಿಂತಾಮಣಿ ವೈದ್ಯಶಾಲಾ, ಮೈಸೂರು

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವದು (ಪೀನಸಿ) ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾಗಿದ್ದನೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚಿಟಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜನ್ ಡಬ್ಬಿಗೆ ೧-೧೪-೦

ಉತ್ತಮವಾದ ನಶ್ಯದಪುಡಿ.

ಘಾಟು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೪-೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವವು. ನೀವು ಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೨-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,
ಗೋಪಸೆಟ್ಟಿಮೂಗು, ಹನೂರು ಪೋಸ್ಟ್
11 ಕೊಳ್ಳೇಗಾಲದ ತಾಲ್ಲೂಕು.

೧೯೧೪ ನೆಯ ಇಸವಿ ಮೇ ತಾ॥ ೪ ರಿಂದ ೧೯೧೪ ನೆಯ ಮೇ ತಾ॥ ೧೦ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ ನೆಯ ಆನಂದನಾಮ ಸಂ॥ ದ ವೈಶಾಖ ಶು॥ ನವಮಿಯಿಂದ ವೈಶಾಖ ಬ॥ ಪಾಡ್ಯಮಿವರೆಗಿನ ಪಂಚಾಂಗ.

ತಾ॥	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ತೇದಿ ಮೇ
4	1 ಸೋ	ನ	26-26	ಮಖ	47-7	22
5	2 ಮಂ	ದ	21-31	ಹುಬ್ಬ	43-45	23
6	3 ಬುಧ	ಏ	16- 0	ಉತ್ತರ	40- 0	24
7	4 ಗುರ	ದ್ವಾ	10-5	ಹಸ್ತ	35-52	25
8	5 ಶುಕ್ರ	ತ್ರ	4-1	ಉಪರಿ	53-50	26
9	6 ಶನಿ	ಅ	51-49	ಸ್ವಾತಿ	27-31	27
10	7 ಭಾ	ಪಾ	46-13	ವಿಶಾಖ	23-42	28

(1) ಸೌರಶ್ರೀರಾಮನವಮಿ, (2) ಮಂಡ್ಯದ ಜನಾರ್ದನಸ್ವಾಮಿ ರಥ. (3) ಸರ್ವತ್ರೈಕಾದಶಿ. (4) ಪರಶುರಾಮದ್ವಾದಶಿ, ಮಳೂರು ಅಪ್ರಮೇಯಸ್ವಾಮಿ ರಥ. (5) ಶ್ರೀ ನೃಸಿಂಹಜಯಂತಿ, ಬಿಳಿಗಿರಿರಂಗಸ್ವಾಮಿಯ ರಥ. (6) ಅರ್ಧನಾರೀಶ್ವರವ್ರತಂ. (7) ಶ್ರೀರಂಗನಾಥ ಬ್ರಹ್ಮತಂತ್ರ ಪರಕಾಲಸ್ವಾಮಿಗಳ ತಿರುನಕ್ಷತ್ರ

ಮೈಸೂರು ಶ್ರೀ ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED M NO124

ಮೈಸೂರ್ ಸ್ಟಾರ್

REGISTERED M NO. 124

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ವಾರ್ಷಿಕ ಚಂದಾ ೧—೦—೦ } ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಿ ಘನಪಥಕೃತಾವತಾರಾ ಪಕ್ಷ್ಯದ್ಧನಕ್ಷತ್ರಮೋಹರಾಜೀಯಾತ್ । ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ । ಸೀಮಾತೀತಯಶಃಪ್ರತಾಪವಿಪುಲಂಸದ್ವೃತ್ತಮಾಲಾಕುಲಂ । ಪ್ರೇಮಂಬಿತ್ತಿಳಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥ { ಅಂಚೆವೆಚ್ಚ ಸೇರಿ ೧—೧೪—೦

ಸಂಪುಟ ೨೩) ಮೈಸೂರ್ ಸ್ಟಾರ್ ಸರ್ಗ ೧೯೧೪ ನೆಯ ಇಸವಿ ಮೇ ತಾರೀಖು ೧೧ ನೆಯ ಸೋಮವಾರ. (ಸಂಚಿಕೆ ೧೯

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಈ ಪತ್ರಿಕೆಯ ಚಂದಾದಾರರೆಲ್ಲರಿಗೂ ಅಚ್ಚಬೆಳ್ಳಿಯ ಸರಪಣಿ ಬಹುಮಾನ ಕೊಡಲಾಗುತ್ತೆ.

15 ಈ ಲಾಗಾಯಿತು ೨ ತಿಂಗಳುಮಾತ್ರ.

ಪದ್ಧತಿಯಮೇರೆ ಹೊಸವರ್ಷದ ಯುಗಾದಿಹಬ್ಬದಲ್ಲಿ ಬಹುಮಾನಿಸುವುದಕ್ಕಾಗಿ 2000 ಅಚ್ಚಬೆಳ್ಳಿಯ ಕೊರಳ ಸರಪಣಿಗಳನ್ನು ಸೀದಾ ಸೀಮೆಯಿಂದ ತರಿಸಿರುತ್ತೇವೆ.

ಪ್ಯಾನ್ಸಿಸ್ಟೈಲ್ ಟೈಮ್ ರೆಗ್ಯುಲೇಟರ್ ವಾಚ್ ೧ಕ್ಕೆ ಕ್ರಯ 3-8 0 ಪೋಸ್ಟೇಜು 0-4-0

ಈ ಲಾಗಾಯಿತು ೨ ತಿಂಗಳೊಳಗಾಗಿ ಮೇಲ್ಕಂಡ ಒಂದು ವಾಚ್ ತರಿಸತಕ್ಕವರಿಗೆ ಒಂದು ಅಚ್ಚಬೆಳ್ಳಿಯ ಕೊರಳ ಸರಪಣಿ ಬಹುಮಾನಕೊಡಲಾಗುತ್ತೆ.

ಮುಗಿದನಂತರ ಸಿಕ್ಕದೇ ವ್ಯಸನಪಡುವುದಕ್ಕಿಂತಲೂ ಈ ದಿವಸವೇ ಆರ್ಡರ್ ಕೊಟ್ಟು ತಳಸಿಕೊಳ್ಳುವುದುತ್ತಮ.

ತಯಾರಿ ಹೊಸತರಹ! ಪದಾರ್ಥ ಅತ್ಯುತ್ತಮ!! ಬೆಲೆ ಬಹಳಸುಲಭ!!!

ಬಜಾರಿನಲ್ಲಿ ಸಿಕ್ಕಿದ ಶಾಯಿಪುಡಿಯನ್ನು ಅಗ್ಗವಾಗಿ ಸಿಕ್ಕುತ್ತೆಂದು ಉಪಯೋಗಿಸಿ ನಿಮ್ಮ ಬರವಣಿಗೆಯನ್ನು ಕೆಡಿಸಿಕೊಳ್ಳಬೇಡಿರಿ. ಈ ಕೆಳಭಾಗದಲ್ಲಿ ಕಂಡ ನಮ್ಮ ಶಾಯಿಪುಡಿಯನ್ನು ಒಂದುಸಾರಿ ಪರೀಕ್ಷಿಸಿರಿ.

"ನ್ಯಾಷನಲ್ ಬ್ಲ್ಯೂಬ್ಲ್ಯಾಕ್ ಇಂಕ್‌ಪೌಡರ್" ೧ ಪೊಟ್ಟಣ ಪುಡಿಯಲ್ಲಿ ೨೦ ಔನ್ಸು ಅಂದರೆ ॥ ಸೀಸೆ ಅತ್ಯುತ್ತಮವಾದ ಬ್ಲ್ಯೂಬ್ಲ್ಯಾಕ್ ಶಾಯಿಯಾಗುತ್ತೆ. ಪೊಟ್ಟಣ ೧ ಕ್ಕೆ ಕ್ರಯ ೦-೨-೦. ಒಂದು ಡಜನ್ ಪೊಟ್ಟಣಗಳಿಗೆ ೧-೫-೧ ಪ್ಯಾಕಿಂಗ್ ಪೋಸ್ಟೇಜು ಮಾಫಿ. ಪರಸ್ಥಳಕ್ಕೆ ಒಂದು ಡಜನ್ ಪೊಟ್ಟಣಗಳಿಗಿಂತಲೂ ಕಡಮೆ ರವಾನಿಸಲಾಗುವುದಿಲ್ಲಾ.

ಜುಮಲೆ ಇದೊಂದು ಅತ್ಯಾಶ್ಚರ್ಯಕರವಾದ ಹೊಸ ಕಾದಂಬರಿ (ಬಂಗಾಳಿ ನಾವೆಲ್) ಓದುವುದಕ್ಕೆ ಕುಳಿತರೆ ಮುಗಿಸುವವರಿಗೂ ಮನಸ್ಸು ನಿಲ್ಲುವುದಿಲ್ಲಾ. ಓದುತ್ತಓದುತ್ತಾ ಹೊಸಹೊಸ ಭಾವಗಳು ತಲೆದೋರಿ ರೋಮಾಂಚವುಂಟಾಗುವುದು.

ವಾಚಕರೆ! ಗೋರಿಯಲ್ಲಿದ್ದ ಹೆಂಗಸಿನ ಶವಕ್ಕೆ ಪ್ರತಿಯಾಗಿ ಗಂಡಸಿನ ಶವವಿರುವುದನ್ನು ನೋಡುತ್ತಲೇ ಆಶ್ಚರ್ಯಸಮುದ್ರದಲ್ಲಿ ಮುಳುಗಿಹೋಗುವಿರಿ. ಕ್ರಯ ಪ್ರತಿ ೧ ಕ್ಕೆ ೦-೬-೦ ಪೋಸ್ಟೇಜು ಅಲಾಯಿದಾ.

ವೇ॥ ತಿಪ್ಪಯ್ಯಶಾಸ್ತ್ರಿಗಳಿಂದ ವಿರಚಿತವಾದ ೪ ಹೊಸಪುಸ್ತಕಗಳು.

ವೀರಶೈವರಿಗೂ ಇತರರಿಗೂ ಸಹ ಅತ್ಯವಶ್ಯಕಬೇಕಾದ್ದು.

(೧) ಶತಕಪಂಚಕ— ಈ ಪುಸ್ತಕದಲ್ಲಿ ೫ ಶತಕಗಳಿವೆ. ನಿರಂಜನಶತಕ, ಸಿದ್ಧಲಿಂಗೇಶ್ವರಶತಕ, ನಿಷ್ಕಲಶತಕ, ಉಮಾಮಹೇಶ್ವರ ಶತಕ, ಸಂಗಮೇಶ್ವರ ಶತಕ, ೧-೨-೩ ನೇ ಶತಕಗಳು ವೀರಶೈವಪರಮರಹಸ್ಯ ಶಿವರಹಸ್ಯ ಮುಂತಾದುವುಗಳಿಂದಲೂ ೪-೫ ನೇ ಶತಕಗಳು ಪಾರಾಯಣಕ್ಕೆ ಯೋಗ್ಯವಾಗಿಯೂ ಇವೆ. ಇಷ್ಟು ಸೌಕರ್ಯವುಳ್ಳ ಪುಸ್ತಕ ೧ ಕ್ಕೆ ಕ್ರಯ ೦-೬-೦.

(೨) ಮನೋವಿಜಯ— ಸರ್ವರಿಗೂ ಅತ್ಯವಶ್ಯಕವಾದ ಪುಸ್ತಕ ಕ್ರಯ ೦-೪-೦.

(೩) ಬಸವೇಶ್ವರಸ್ತೋತ್ರ— ಕ್ರಯ ಪ್ರತಿ ೧ ಕ್ಕೆ ೦-೩-೦.

(೪) ಮುಕ್ತ್ಯಾಂಗನಕಂಠಮಾಲೆ— ಕ್ರಯ ಪ್ರತಿ ೧ಕ್ಕೆ ೦-೪-೦ ಪೋಸ್ಟೇಜು ಅಲಾಯಿದಾ.

ಈಗತಾನೇ ಸೀಮೆಯಿಂದ ಬಂದಿರತಕ್ಕ ಟೇಬಿಲ್ ಗಡಿಯಾರಗಳು.

ಸರ್ವರೂ ತರಿಸಿಕೊಳ್ಳಲು ಇದು ಒಳ್ಳೆಸಮಯ.

ಈ ಪಕ್ಕದ ಚಿತ್ರದಲ್ಲಿ ಕಾಣಿಸಿರುವ ಟೇಬಲ್ ಗಡಿಯಾರವು ಬಲವಾದ ಯಂತ್ರೋಪಕರಣಗಳಿಂದಲೂ ಒಳಭಾಗದ ಸಾಮಾನು ಕಾಣುವಂತೆ ೨ ಪಕ್ಕದಲ್ಲಿಯೂ ಕನ್ನಡಿಗಳನ್ನಿಟ್ಟು ಗಟ್ಟಿಯಾದ ನಿಕ್ಕಲ್ ಲೋಹದಿಂದ ಥಳಥಳಿಸುವಂತೆ ಖಚಿತವಾಗಿ ತಯಾರ್ಮಾಡಿರುವುದಲ್ಲದೆ ಮೇಲುಭಾಗದಲ್ಲಿ ಬಂದೋಬಸ್ತಾದ ಹಿಡಿಯನ್ನೂ ಸಹ ಇಟ್ಟಿರುತ್ತೆ.

(೧) ಘಂಟೆ ಅರ್ಧಘಂಟೆ ಹೊಡೆಯತಕ್ಕ ಕ್ಲಾಕ್ ೧ ಕ್ಕೆ ೪-೪-೦
(೨) ಘಂಟೆ ಅರ್ಧಘಂಟೆ ಹೊಡೆದು ಅಲಾರಂ ಸಹ ಇರತಕ್ಕ ಕ್ಲಾಕ್ ೫-೪-೦
(೩) ಘಂಟೆ ಹೊಡೆಯುವುದಕ್ಕೆ ಪ್ರತಿಯಾಗಿ ಪ್ರತಿಘಂಟೆಗೂ ಮೃದುಮಧುರಗಾನಮಾಡತಕ್ಕ ಕ್ಲಾಕ್ ೧ ಕ್ಕೆ ೫-೪-೦
(೪) ತಾವಿಷ್ಟಪಟ್ಟ ಘಂಟೆಗೆ ಸರಿಯಾಗಿ ಕರ್ಣಾನಂದವಾಗುವಂತೆ ಮೃದುಮಧುರಗಾನಮಾಡತಕ್ಕ ಕ್ಲಾಕ್ ೫-೪-೦

ಕಾಗದ ಬರಿಯತಕ್ಕವರು ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರಿಯಬೇಕಾಗಿ ಕೋರಿಕೆ. ತಿಳಿಯದೇ ಇರತಕ್ಕ ವಿಳಾಸಗಳಿಗೆ ನಾವು ನಿಗಾಕೊಡುವುದಿಲ್ಲವೆಂಬಂಶವನ್ನು ಸರ್ವರೂ ಗಮನಿಸತಕ್ಕದ್ದು.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿಗಜಾಂಕುಶತಾರಾವಳಿ	೦—೪—೦
ಶಿವಪೂಜಾವಿಧಿಃ	೦—೪—೦
ಚಾರುಶೀಲೆಚರಿತ್ರೆ	೦—೫—೦
ಸಟೀಕ ನಂದೀವ್ರತ	೦—೪—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸಪುಸ್ತಕಗಳು.

134

ಬಸವರಾಜವಿಜಯಂ— ಬೆಲೆ ೧ ೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧-೪-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಬಂಚೇಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥವಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧ ೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ- ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸುತ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ—ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ ವರ್ಷದ ಚಂದಾ ೨-೪-೦.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ವೀರಶೈವಾಶ್ರಮ.

ಈ ಮೇಲ್ಕಂಡ ವೀರಶೈವಾಶ್ರಮವು ಯಾ ವಿದ್ಯಾರ್ಥಿಗಳ ನಿಲಯವು ಬೆಂಗಳೂರು ಸಿಟಿಗೆ ಮಧ್ಯರಾಷ್ಟ್ರವಾದ ಚಿಕ್ಕಪೇಟೆಯಲ್ಲಿ ಮುನಿಸಿಪಲ್ ಡೋರ್ ನಂಬರು ೧೪೧ನೆ ಮಹಡಿ ಮನೆಗೆ ಬದಲಾಯಿಸಲ್ಪಟ್ಟಿರುತ್ತೆ. ಈ ನಿವಾಸವು ಬಂಧುರವಾದ ಕಟ್ಟಡವಾಗಿಯೂ, ವಿಶಾಲವಾಗಿಯೂ ಅನಾರೋಗ್ಯಕ್ಕೆ ಅವಕಾಶವಿಲ್ಲದೆ ರಾಜವೀಧಿಯಲ್ಲಿ ಇರುತ್ತದಲ್ಲದೆ ಮುನಿಸಿಪಲ್ ಗಾರ್ಡ್ (ಉದ್ಯಾನವನ)ಕ್ಕೆ ಬಹಳ ಸಮೀಪವಾಗಿರುತ್ತದೆ. ಇದರಲ್ಲಿ ಸುಮಾರು ೩೦ ಜನ ವಿದ್ಯಾರ್ಥಿಗಳಿಗಿಂತಲೂ ಮೇಲ್ಪಟ್ಟಿರುವಷ್ಟು ವಸತಿಯಿರುತ್ತದೆ. ಸದರಿ ಸಂಸ್ಥೆಗೆ ಸೇರಬೇಕೆಂದು ಅಪೇಕ್ಷಿಸುವ ವಿದ್ಯಾರ್ಥಿಗಳು ಈ ಕೆಳಗಿನ ವಿಳಾಸಕ್ಕೆ ೧೯೧೪ ನೇ ಮೇ ತಾ॥ ೧೪ ರ ಒಳಗಾಗಿ ತಲ್ಪುವಂತೆ ಅಪ್ಲಿಕೇಷನ್ ಹಾಕಿಕೊಳ್ಳತಕ್ಕದ್ದು. ಸದರಿ ಆಶ್ರಮವು ೧೯೧೪ ನೇ ಜೂನ್ ೧ ನೇ ತಾ॥ ಲಾಗಾಯ್ತು ಆರಂಭಿಸಲ್ಪಡುತ್ತದೆ.

ಎಚ್. ಕೆ. ವೀರಬಸವಯ್ಯ ಬಿ. ಎ ಬಿ. ಎಲ್.
ಸೆಕ್ರಟರಿ.
ಬೆಂಗಳೂರು.

ಅರಕಲಗೂಡು.

ಬಿಸಿಲುತಾಪ ಬಹಳ ಜಾಸ್ತಿ. ಈಗ್ಗೆ ೪-೧೦ ದಿವಸದಲ್ಲಿ ಮಾತ್ರ ಸ್ವಲ್ಪ ಮಳೆಯಾಗಿ ತಾಪವನ್ನು ಇನ್ನೂ ಜಾಸ್ತಿ ಮಾಡಿತು. ಈಗ ಮಳೆ ಬರುವ ಸೂಚನೆಯಂಟೇ ವಿನಾ ಮಳೆ ಬೀರಿ ಬರುವುದಿಲ್ಲ. ಜನಗಳೆಲ್ಲ ಈ ವರುಷ ಮಳೆ ಬಂದು ಪೈರಾದೀತೆ ಎಂದು ಮಾತನಾಡಿಕೊಳ್ಳುತ್ತಿದ್ದಾರೆ. ಇಲ್ಲಿ ನೀರಿನ ಕಷ್ಟ ಬಹಳವಾಗಿದೆ. ಪೇಟೆಗೂ ಕೋಟೆಗೂ ಮಧ್ಯೆ ಇರುವ ಕೆರೆಯಲ್ಲಿ ನೀರು ಬಹಳ ಇಂಗಿಹೋಗಿ ಈಗ ಜನಗಳು ಒಳ್ಳೆ ನೀರನ್ನು ಕುಡಿಯಲು ಸಿಕ್ಕುವುದಿಲ್ಲ. ಮನುಷ್ಯನಿಗೆ ತಿನ್ನುವುದಕ್ಕೆ ಒಳ್ಳೇ ಆಹಾರ ಕುಡಿಯಲು ಒಳ್ಳೇ ನೀರು ಇರಬೇಕು. ಇಲ್ಲಿ ಒಳ್ಳೇ ನೀರೆಂಬುದೇ ಇಲ್ಲ. ಪ್ರಜಾಹಿತೈಷಿಗಳಾದ ನಮ್ಮ ದಿವಾನರು ಈ ಕಡೆ ಸವಾರಿ ಬಂದಿದ್ದಾಗ ಇಲ್ಲಿ ಜನರ ನೀರಿನ ಕಷ್ಟವನ್ನು ನೋಡಿದಾಗ್ಯೂ ಇನ್ನೂ ಏನೂ ನಿವಾರಣೆಯನ್ನು ಮಾಡದೆ ಇರುವುದು ಬಹಳ ವ್ಯಸನಕರವಾದ ಸಂಗತಿಯಾಗಿದೆ. ಕೆರೆಯಲ್ಲಿ ಸತ್ತಿಸೀರಿ ಕೊಳೆತು ನೀರನ್ನು ಎಷ್ಟುಸಲ ಸೋಸಿ ಕಾಸಿದರೂ ನೀರು ನಿರ್ಮಲವಾಗುವುದಿಲ್ಲ. ಇಲ್ಲಿ ಧಾರಣೆವಾಸಿಗಳು ಸುಮಾರಾಗಿವೆ. ಅವಲ್ ಅಕ್ಕಿ ರೂಪಾಯಿಗೆ ೭॥ ಸೇರು, ದುಂಡು ಅಕ್ಕಿ ೯ ಸೇರು, ರಾಗಿ ರೂಪಾಯಿಗೆ ೧೪ ಸೇರು ಸಿಕ್ಕುತ್ತದೆ. ಇಲ್ಲಿ ನೀರಿನ ಕಷ್ಟ ಜೋರಾಗಿ ದನಗಳಿಗೆಲ್ಲ ಕಾಲುಜ್ವರ ಬಾಯಿಜ್ವರವೆಂಬ ರೋಗಬಂದು ಕರಾವಿಗೆ ಬಹಳ ಕಷ್ಟವಾಗಿದೆ. ರಾತ್ರಿಹೊತ್ತು ಬೀದಿಗಳಲ್ಲಿ ಕತ್ತೆಗಳ ಹಿಂಡುಗಳು ಸೇರಿ ಜನಗಳಿಗೆ ಬಹಳ ತೊಂದರೆಯನ್ನುಂಟುಮಾಡುತ್ತಿವೆ. ಬೀದಿಯ ಲಾಂದ್ರಕಂಬಗಳಿಗೆ ಸರಿಯಾಗಿ ಎಣ್ಣೆ ಹಾಕದೆ ಅವುಗಳು ಬಹಳ ಹೊತ್ತು ಉರಿಯುವುದೇ ಇಲ್ಲ. ಅಮಲ್ದಾರರವರ ಮನೆ ಮುಂದಿರುವ ಕಂಬವೊಂದು ಮಾತ್ರ ಬೆಳಗೂ ಪ್ರಕಾಶಮಾನವಾಗಿ ಉರಿಯುತ್ತದೆ. ಮಿಕ್ಕವುಗಳು ರಾತ್ರಿ ೯ ಗಂಟೆಗೆ ಮುಂಚೆ ಆರಿಹೋಗುತ್ತವೆ. ಈ ಊರು ಕೆರೆಏರಿಗೆ ಎರಡು ಕಡೆಗೂ ಕಟಕಟೆಗಳನ್ನು ಕಟ್ಟದಿರುವುದರಿಂದ ಆಗಾಗ್ಗೆ ಬಂಡಿಗಳು ಏರಿಕೆಳಕ್ಕೆ ಬಿದ್ದು ಅನಾಹುತವಾಗುತ್ತದೆ. ಈಗ್ಗೆ ೪-೩ ದಿವಸದಲ್ಲಿ ಊರಿನಲ್ಲಿ ಒಂದು ನೀರನ್ನು ಹೇರುವ ಗಾಡಿ ಕೆಳಕ್ಕೆ ಬೀಳುವ ಸಂದರ್ಭದಲ್ಲಿದ್ದು ಅನಂತರ ದಾರಿಕಾರರಿಂದ ಮೇಲಕ್ಕೆ ಎಳೆಯಲ್ಪಟ್ಟಿತು. ಸರ್ಕಾರದವರು ಈ ಕಷ್ಟವನ್ನು ತಪ್ಪಿಸಿಯಾರೆಂದು ನಂಬಿರುತ್ತೇನೆ. ಈ ಏರಿಯಮೇಲೆ ಪ್ರತಿದಿನವೂ ಅನೇಕ ಗಾಡಿಗಳು ತಿರುಗುತ್ತವೆ. ಆದ್ದರಿಂದ ಸರ್ಕಾರದವರು ಇಲ್ಲಿ ಜನರನ್ನೇ ನಂಬದೆ ಮೇಲೆ ಹೇಳಿದ ಕಷ್ಟಗಳನ್ನು ನಿವಾರಣೆಮಾಡುತ್ತಾರೆಂದು ನಂಬಿರುತ್ತೇನೆ.

ಪುರನಿವಾಸಿ.

ತುಂಕೂರು ತಾಲ್ಲೂಕು ಕೋರದ ಗೌರ್ನಮೆಂಟ್ ವಿ. ಇ. ಬಾಯ್ಸ್ ಸ್ಕೂಲಿನಲ್ಲಿ ನಡೆದ ವಿದ್ಯಾಭಿವೃದ್ಧಿ ವಿಷಯವಾದ ಸಂಘ.

ತಾ॥ ೩-೪-೧೯೧೪ ನೇ ಭಾನುವಾರ ಸಾಯಂಕಾಲ ೬ ಘಂಟೆಗೆ ತಾಲ್ಲೂಕು ಅಮಲ್ದಾರ್ ಮಿ॥ ಎಂ ಎಸ್. ರಾಮಚಂದ್ರರಾಯರವರ ಸವಾರಿಯು ಇಲ್ಲಿಗೆ ದಯಮಾಡಿಸಿ, ಸರ್ಕಾರದವರು ಕಟ್ಟಿಸಿಕೊಟ್ಟಿರುವ ಹೊಸಸ್ಕೂಲ್ ಕಟ್ಟಡದಲ್ಲಿ ಗ್ರಾಮಸ್ಥರನ್ನೆಲ್ಲಾ ಸೇರಿಸಿ ಸಂಪದಭ್ಯುದಯ ಸಂಘದ ಮತ್ತು ವಿದ್ಯಾಭಿವೃದ್ಧಿ ವಿಷಯವಾದ ಉಪನ್ಯಾಸವನ್ನು ಸರಳವಾಗಿ ವಿವರಿಸಿ ಅಪ್ಪಣೆಕೊಡಿಸಿ ತಿಳುವಳಿಕೆಯನ್ನುಂಟುಮಾಡಿದ ಮಹೋಪಕಾರಕ್ಕಾಗಿ ತುಂಬಾ ಕೃತಜ್ಞರಾಗಿರುತ್ತೇವೆ. ಅಲ್ಲದೆ ಸ್ವಾಮಿಯವರು ವಾರಕ್ಕೆ ಒಂದಾವೃತ್ತಿ ನೀವೆಲ್ಲಾ ಸೇರಿ ಹೀಗೆ ಯಾವುದಾದರೂ ವಿಷಯವನ್ನು ಕುರಿತು ಪ್ರಸ್ತಾಪಿಸಿ ಗ್ರಾಮಕ್ಕೆ ಏಳಿಗೆಯನ್ನುಂಟು ಮಾಡಿಕೊಳ್ಳಬೇಕೆಂದು ಅಪ್ಪಣೆಕೊಡಿಸಿರುವ ಮೇರೆ, ಇಲ್ಲಿನ ಬಾಯ್ಸ್ ಸ್ಕೂಲ್ ಮಾಸ್ಟರ್ ಮ॥ ರಾ॥ ಡಿ. ಎಂ. ರಾಮೇಗೌಡರವರಿಂದ ತಾ॥ ೬-೪-೧೪ ರಲ್ಲು ಒಂದು ಸಭೆಯು ಸೇರಿಸಲ್ಪಟ್ಟಿತು. ಗ್ರಾಮದ ಮುಖಂಡ ಮನುಷ್ಯರೆಲ್ಲಾ ಹಾಜರಾಗಿದ್ದರು. ಈ ಊರಲ್ಲಿ ಮುಕ್ಕಾಲು ಮೂರು ವೀಸಪಾಲು ಜನ ವೀರಶೈವರು, ಪಾಟೀಲ್ ಶಾನುಭೋಗರು ಮಾಸ್ಟರೂ ಸಹಾ ವೀರಶೈವರೇ, ಸ್ಕೂಲಿಗೆ ಬರತಕ್ಕ ೪೦ ಮಂದಿ ಬಾಲಕ ಬಾಲಕಿಯರಲ್ಲಿ ೩೦ಮಂದಿ ಬಾಲಕರು ವೀರಶೈವರೇ ಆಗಿರುವರು. ಎಲ್ಲರೂ ಏಕಮತ್ಯದಿಂದ ಸಭೆಯು ಸೇರಿದ್ದಾಗ ಮಾಸ್ಟರ್ ಮ॥ ರಾ॥ ಗೌಡರು ವಿದ್ಯಾಭ್ಯಾಸದ ವಿಷಯದಲ್ಲಿ ಸ್ವಶಿಕ್ಷಣೆ ಎಂಬುದನ್ನು ಕುರಿತು ಉಪನ್ಯಾಸ ಮಾಡಿದ್ದು ಬಹಳ ಸ್ತೋತ್ರಾರ್ಹವಾಗಿತ್ತು. ಈ ಊರಲ್ಲಿ ಬಹು ದಿನಗಳಿಂದ ಸ್ಕೂಲ್ ಇದ್ದಾಗ್ಯೂ ಇಂತಹ ಅಪೂರ್ವನಾದ ಸಮಾಜವೇ ಆಗಲಿ ಇಷ್ಟು ಬಾಲಕರೇ ಆಗಲಿ ಸೇರಿ ಇರಲಿಲ್ಲ, ಇಷ್ಟು ಮಕ್ಕಳನ್ನೂ ಇವರೊಬ್ಬರೇ ನಿಭಾಯಿಸತಕ್ಕದ್ದು ಶ್ಲಾಘನೀಯವಾಗಿದೆ. ಸಧ್ಯದಲ್ಲಿಯೇ ಇನ್ನೊಬ್ಬ ಮಾಸ್ಟರೂ ಒಂದು ಗರ್ಲ್ಸ್ ಸ್ಕೂಲೂ ಬರಬಹುದು. ವಿದ್ಯಾಭ್ಯಾಸದ ಇಲಾಖಾ ಹ॥ ಅ॥ ಡೆ॥ ಇ॥ ಸಾಹೇಬರವರು ೩೦-೯-೧೩ ರಲ್ಲಿ ಈ ಸ್ಕೂಲನ್ನು ಇ॥ ಮಾಡಿ ಬಹಳ ಸಂತೋಷಪಟ್ಟು ಮೇಲೆ ಕಂಡ ನಮ್ಮ ಹರಕೆಯನ್ನು ನೆರವೇರಿಸಿಕೊಡುತ್ತೇವೆಂದು ವಾಗ್ದಾನಮಾಡಿದ್ದಾರೆ. ಅಂದರೆ ನಮ್ಮ ಹರಕೆಯೂ ಕ್ಷಿಪ್ರದಲ್ಲಿಯೇ ನೆರವೇರಬಹುದಾಗಿ ಕಾಣುತ್ತದೆ. ನಮ್ಮ ಸ್ಕೂಲು ದಿನೇ ದಿನೇ ಹೆಚ್ಚುತ್ತಿದ್ದು ಸ್ಥಳವೇ ಸಾಲದಂತಾಗುತ್ತಾ ಇದೆ. ಸಭೆಯು ಆ ದಿನರಾತ್ರಿ ೧೦ ಘಂಟೆಗೆ ಪೂರೈಸಿತು. ನಮ್ಮ ಮಾಸ್ಟರು ಎಲ್ಲಾ ಗ್ರಾಮಸ್ಥರನ್ನೂ ಏಕಮತ್ಯದಿಂದ ಸೇರಿಸಿ ಹೀಗೆ ಮಾಡುವುದರಿಂದ ನಮಗೆಲ್ಲಾ ಬಹಳ ಸಂತೋಷವುಂಟಾಗಿದೆ.

ಪ್ರಜಾಹಿತೈಷಿ.

ತುಮಕೂರು ತಾಲ್ಲೂಕು ತೊಟ್ಲಕೆರೆ ವಿ॥ ಎ॥ ಸ್ಕೂಲಿನಲ್ಲಿ ತಾ॥ ೧೧-೪-೧೪ ರ ಮಧ್ಯಾಹ್ನ ೪ ಗಂಟೆಯಲ್ಲಿ ನಡೆದ ವಿದ್ಯಾವಿದ ಸಂತೋಷಸೂಚಕವಾದ ವಿಷಯ:-ಈ ಗ್ರಾಮದಲ್ಲಿ ಈಗ್ಗೆ ೨೦-೩೦ ವರ್ಷಗಳಿಂದಲೂ ಬಾಲಕ ಬಾಲಕಿಯರಿಗೆ ಸರಿಯಾದ ಸ್ಕೂಲ್ ಕಟ್ಟಡವಿಲ್ಲದ ವಿಷಯದಲ್ಲಿ ಲೇಟ್ ಹ॥ ಅ॥ ಡೆ॥ ಇ॥ ಸಾಹೇಬರವರಾದ ಮ॥ ಎಂ. ಮಾಧವರಾಯರವರು ವಿಷಾದಪಟ್ಟು ಇದಕ್ಕಾಗಿ ಇಲ್ಲಿನ ಮ॥ ಶಾಮಣ್ಣನವರು, ರಾಮಯ್ಯನವರು, ಸಾ॥ ಲಕ್ಷ್ಮೀನರಸೇಗೌಡರವರು, ಶಾ॥ ಭೀಮಣ್ಣನವರು, ಗಾ॥ ಗಂಗಪ್ಪನವರು, ಸೆ॥ ಮಲ್ಲಪ್ಪನವರು, ಜ॥ ಮಲ್ಲಪ್ಪನವರು, ಯ॥ ಹೊನ್ನಪ್ಪನವರು, ಸೀ॥ ಹುಚ್ಚೀರಪ್ಪನವರು, ಪುಟ್ಟಾಚಾರ್ಯರವರು ಓದೋಬಾಲಯ್ಯನವರು, ಬಾವಿಮನೆ ತಿಮ್ಮಪ್ಪನವರು ಇನರೇ ಮುಂತಾದ ಗ್ರಾಮ ಮುಖಂಡರಿಂದ ಚಂದಾ ವಸೂಲ್ಮಾಡಿ ಈ ಕಟ್ಟಡಕ್ಕೆ ಸರಿಯಾದ ಪಾಯವೆಂಬ ಸಸಿಯನ್ನು ಹಾಕಿದರು. ಇದನ್ನು ಸರ್ಕಾರ ದ್ರವ್ಯಸಹಾಯದೊಡನೆ ಲೇಟ್ ಹ॥ ಡೆ॥ ಇ॥ ಸಾಹೇಬರವರಾದ ಮ॥ ಹೆಚ್ ರ್ಯ. ವೆಂಕಟರಮಣಯ್ಯನವರು ಮತ್ತು ಹಾಲಿಯಿರುವ ತಾಲ್ಲೂಕ್ ಅಮಲ್ದಾರ್ ಸಾಹೇಬರವರು ಪ್ರಜೆಗಳಮೇಲೆ ಅಭಿಮಾನವಿಟ್ಟು ಪೂರ್ಣ ಫಲಕೊಡುವಂತೆ ಮಾಡಿಸಿಕೊಟ್ಟದ್ದಕ್ಕಾಗಿ ಇವರುಗಳನ್ನು ಸದಾ ವಂದಿಸುತ್ತೇನಲ್ಲದೆ ಈ ರೀತಿ ಮಾಡಿಸಿಕೊಟ್ಟ ಈ ಹೊಸ ಕಟ್ಟಡದಲ್ಲಿ ಈ ದಿವಸ ಈ ಗ್ರಾಮದ ಪ॥ ಲಕ್ಷ್ಮೀನರಸೇಗೌಡರೇ ಮೊದಲಾದ ಗ್ರಾಮ ಮುಖಂಡರಿಂದ ನಡೆಯುವ ಶ್ರೀ ಲಕ್ಷ್ಮೀನರಸಿಂಹಸ್ವಾಮಿಯ ಹೊಸರಥೋತ್ಸವ ಸೂಚಕವಾದ ಒಂದನೆ ಸಭೆಯು ಈ ಸ್ಕೂಲಿನಲ್ಲಿ ಸೇರಲ್ಪಟ್ಟು ಅಗ್ರಾಸನಾಧಿಕಾರವನ್ನು ಮ॥ ತುಮಕೂರು ಕರಣೀಕ ನಲ್ಲಪ್ಪನವರು ವಹಿಸಿ ವಿದ್ಯಾ ವಿಷಯವಾಗಿಯೂ ಗ್ರಾಮದ ಸಂಘಗಳ ವಿಷಯವಾಗಿಯೂ ಇವುಗಳನ್ನು ಕುರಿತು ಪ್ರಜೆಗಳಿಗೆ ಬಹಳ ಉತ್ಸಾಹದಿಂದಲೂ, ಪ್ರೀತಿಯಿಂದಲೂ ಉದಾಹರಿಸಿದರು. ಹಿರಿತೊಟ್ಲಕೆರೆ ಮ॥ ಸ್ಕೂಲ್‌ಮಾಸ್ಟರ್ ಷಣ್ಮುಖ ದೀಕ್ಷಿತರು ವ್ಯವಸಾಯ ವಿಷಯವನ್ನು ಕುರಿತು ಪ್ರಜೆಗಳಿಗೆ ತಿಳಿಸಿದರು. ಕೋರದ ಸಮ್ಮತು ಶೇಕದಾರ್ರವರು ಗ್ರಾಮಪಂಚಾಯಿತಿ ಮೊದಲಾದ ವಿಷಯವನ್ನು ಓದಿ ತಿಳಿಸಿದರು. ಈ ಮೇಲ್ಕಂಡ ಸಭಿಕರಾದ ಮಹನೀಯರನ್ನೂ ಸ್ಕೂಲ್ ವಿದ್ಯಾರ್ಥಿಗಳನ್ನೂ ತಾಂಬೂಲವೇ ಮೊದಲಾದ ಅಲ್ಪಾಹಾರದಿಂದ ತೃಪ್ತಿಪಡಿಸಲು ಸಾ॥ ಗಂಗಪ್ಪನವರು, ಜ॥ ಮಲ್ಲಪ್ಪನವರು ಸೀ॥ ಹುಚ್ಚೀರಪ್ಪನವರು ಇವರುಗಳ ಧರ್ಮಸೂಚಕವಾದ ಕರ್ತವ್ಯವು ಮಾಡಲ್ಪಟ್ಟಿತು. ಅಲ್ಲದೆ ವಿದ್ಯಾರ್ಥಿಗಳ ಉತ್ಸಾಹಕ್ಕೋಸ್ಕರ ಹ॥ ಅ॥ ಡೆ॥ ಇ॥ ಸಾಹೇಬರವರಾದ ತಿರುನಾರಣಯ್ಯಂಗಾರ್ರವರು ದಯಪಾಲಿಸಿದ್ದ ಇನಾಂ ಪುಸ್ತಕಗಳನ್ನು ಅಗ್ರಾಸನಾಧಿಪತಿಗಳು ಕೆಲವು ವಿದ್ಯಾರ್ಥಿಗಳಿಗೆ ಕೊಟ್ಟು ಅವರುಗಳಿಗೆ ವಿದ್ಯಾ ವಿಷಯದಲ್ಲಿ ಉತ್ಸಾಹವನ್ನೂ ಪ್ರಯೋಜನವನ್ನೂ ಬೋಧಿಸಿದರು. ಉಪಯುಕ್ತವಾದ ಧರ್ಮಮಾರ್ಗಗಳನ್ನು ಬಹಳವಾಗಿ ಉಪದೇಶಮಾಡಿದರು. ಈಗ್ಗೆ ಸುಮಾರು ೪-೧೦ ವರ್ಷಗಳ ಕೆಳಗೆ ಈ ಸ್ಕೂಲು ಬಹಳ ಹೀನಸ್ಥಿತಿಯಲ್ಲಿದ್ದು ಈಗ ಇಷ್ಟು ಅಭಿವೃದ್ಧಿಗೆ ಬಂದದ್ದು ಇಲ್ಲಿನ ಹಾಲಿಯಿರುವ ಅ॥ ಮಾ॥ ಗಿರಿಯಾಚಾರ್ಯರವರು ಹ॥ ಮಾ॥ ಚೆಂದಗಿರಯ್ಯನವರು ಇವರುಗಳ ಉತ್ಸಾಹಾಭಿವೃದ್ಧಿಯೇ ಕಾರಣವಾಗಿರುತ್ತದೆ. ಅಲ್ಲದೆ ಈ ಸ್ಕೂಲನ್ನು ಹಾಲಿಯಿರುವ ಹ॥ ಡೆ॥ ಇ॥ ಸಾಹೇಬರವರಾದ ಮ॥ ಮ॥ ಗೋಪಾಲ್‌ರಾಯರವರು ಮತ್ತು ಹ॥ ಅ॥ ಡೆ॥ ಇ॥ ಸಾಹೇಬರವರಾದ ಮ॥ ತಿರುನಾರಣಯ್ಯಂಗಾರ್ರವರು ಈ ಸ್ಕೂಲನ್ನು ಇನ್ನೂ ಪುರೋಭಿವೃದ್ಧಿಗೆ ತರಲು ಮಾಸ್ಟರುಗಳಿಗೆ ತುಂಬಾ ಶ್ರದ್ಧೆಯಿರುವಂತೆ ಮಾಡಿಸಿಕೊಟ್ಟಾರೆಂದು ಬೇಡುವ

ವಿದ್ಯಾಭಿಮಾನಿ.

ಬರ್ಮಾದೇಶದ ತೆಂಗಿನ ವ್ಯವಸಾಯ.

ಹಿಂದಿನ ಶೇಷ.

ಸಸಿಗಳನ್ನು ನೆಟ್ಟತರುವಾಯ ಮಾಡಬೇಕಾದ ಕಾರ್ಯಗಳು:-ಸಸಿಗಳನ್ನು ಚನ್ನಾಗಿ ಬೇರುಗಳು ಬಿಟ್ಟುಕೊಳ್ಳುವವರಿಗೆ ಪ್ರತಿ ವರುಷವೂ ಬೇಸಗೆಯಲ್ಲಿ ನೀರನ್ನು ಹಾಕುತ್ತಿರಬೇಕು. ಮೂರು ನಾಲ್ಕು ವರ್ಷಗಳ ಕಾಲ ನೀರು ಹಾಕಿದರೆ ಸಾಕೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಆದರೆ ಗಿಡಗಳ ಜೀವಿತಕಾಲದಲ್ಲೆಲ್ಲಾ ಬೇಸಿಗೆಯಲ್ಲಿ ನೀರನ್ನು ಹಾಕುತ್ತಲೇ ಇದ್ದರೆ ಹೀಚುಗಳು ಉದುರುವುದು ಕಡಿಮೆಯೆಂದು ಕೆಲವು ಅನುಭವದಾರರು ಹೇಳುತ್ತಾರಾದ್ದರಿಂದ ಸಾಧ್ಯವಾದರೆ ನೀರನ್ನು ಹಾಕುತ್ತಲೇ ಇರುವುದು ಉತ್ತಮ ಪಕ್ಷವೆಂದು ತೋರುತ್ತದೆ. ಬೇಸಿಗೆಯಲ್ಲಿ ಸಸಿಗಳಿಗೆ ವಾರಕ್ಕೆ ಎರಡಾವರ್ತಿಯೂ ಸ್ವಲ್ಪ ದೊಡ್ಡವುಗಳಿಗೆ ಒಂದಾವರ್ತಿಯೂ ನೀರನ್ನು ಹಾಕಿದರೆ ಸಾಕಾಗಿರುತ್ತದೆ. ಆದರೆ ದೊಡ್ಡವಾಗಿ ಫಲಬಿಡುವ ಗಿಡಗಳಿಗೆ ತಿಂಗಳಿಗೊಂದಾವರ್ತಿ ಹೇರಳವಾಗಿ ನೀರನ್ನು ಹಾಕಬೇಕು.

ದುರ್ಬಲವಾಗಿರುವಂತೆ ಕಂಡುಬರುವ ಗಿಡಗಳ ಬೇರಿನ ಸುತ್ತಲೂ ಅಗತೆಮಾಡಿ ಇತರ ಕಸ ಕಡ್ಡಿಗಳಿಲ್ಲದ ಹಳೇದಾದ ಪಳಗಿದ ಸಗಣಿ ಗೊಬ್ಬರ ಅಥವಾ ಮೂಳೆ ಪುಡಿಯನ್ನು ಹಾಕಬೇಕು ಬೇರುಗಳ ಮೇಲ್ಭಾಗದಲ್ಲಿ ಸ್ವಲ್ಪ ಬೂದಿ ಮತ್ತು ಉಪ್ಪನ್ನು ಹಾಕಬೇಕು ಆರೋಗ್ಯವಾಗಿ ಬಲವಾಗಿ ಬೆಳೆದಿರುವ ಮರಗಳಿಗೆ ಮೇಲೆ ಹೇಳಿದ ವ್ಯವಸಾಯವೇನೂ ಅವಶ್ಯಕವಾಗಿರುವುದಿಲ್ಲ.

ಸಸಿಗಳನ್ನು ನೆಟ್ಟನಂತರ ಒಂದು ವರ್ಷಕಾಲ ಅವುಗಳ ಪಕ್ಕಗಳಿಂದ ಅವುಗಳಿಗೆ ಮರೆಮಾಡುವುದು ಒಳ್ಳೇದು ಆದರೆ ಸಸಿಗಳ ಮೇಲ್ಭಾಗಕ್ಕೆ ಮಾತ್ರ ಮರೆಮಾಡಬಾರದು.

ಮರಗಳು ಫಲಕ್ಕೆ ಬರುವವರೆಗೂ ಅವುಗಳ ಮಧ್ಯೆ ಇತರ ಬೆಳೆಗಳನ್ನಿಡಬಹುದು. ಆದರೆ ಬುಡಗಳ ಸುತ್ತ ಮಾತ್ರ ಪೈರು ಬರಕೂಡದು. ಹಸುರು ಗೊಬ್ಬರದ ಪೈರನ್ನಿಡಬೇಕು. ಇವುಗಳನ್ನು ಮಳೆಗಾಲದಲ್ಲಿ ಜಮೀನಿನಲ್ಲಿ ಉತ್ತುಬಿಡಬೇಕು. ಸಸಿಗಳು ಬೆಳೆದು ಗರಿಗಳು ದನಗಳಿಗೆ ನಿಲುಕಿಸದಿರುವಷ್ಟು ಎತ್ತರಕ್ಕೆ ಬಂದಾಗ್ಯೆ ರಾತ್ರಿಕಾಲದಲ್ಲಿ ಗಿಡಗಳಿ[ಗೆ] ಹಸು, ಎಮ್ಮೆ, ಕುದುರೆ, ಹಂದಿ ಇವುಗಳನ್ನು ಕಟ್ಟಿಹಾ[ಕ]ಬೇಕು. ಕಟ್ಟುವುದಕ್ಕೆ ಮೊದಲು ಕೆಳಕ್ಕೆ ಹುಲ್ಲು, ತರಗು ಕಸ ಕಡ್ಡಿ ಇವುಗಳನ್ನೆಲ್ಲಾ ಹಾಸಿರಬೇಕು. ಹಾಗೆ ಮಾ[ಡಿ]ದಲ್ಲಿ ದನಗಳ ಸಗಣಿ ಗಂಜಲ ಇವುಗಳೆಲ್ಲವೂ ಅಲ್ಲೇ ನಿ[ಂ]ತು ತೆಂಗಿನ ಮರಗಳಿಗೆ ಬಹಳ ಉತ್ತಮವಾದ ಗೊಬ್ಬ[ರ]ವಾಗಿ ಪರಿಣಮಿಸುವುದು. ಅಲ್ಲದೆ ತೆಂಗಿನ ತೋಟಗಳ[ಲ್ಲಿ] ರಾತ್ರಿಕಾಲದಲ್ಲಿ ಕುರಿಗಳ ಮಂದೆಯನ್ನು ತಡೆದಿರಬಹುದು ಇವುಗಳನ್ನು ಪ್ರತಿ ರಾತ್ರಿಯೂ ಒಂದೇ ಸ್ಥಳದಲ್ಲಿ ನಿಲ್ಲಿಸ[ದೆ] ಒಂದೊಂದು ರಾತ್ರಿ ಒಂದೊಂದು ಭಾಗದಲ್ಲಿ ತಡೆದರೆ ಪೂರ್ತಿ ತೋಟಕ್ಕೆ ಇವುಗಳ ಹಿಕ್ಕೆ ಮತ್ತು ಗಂಜಲವು ಬೀಳುವ[ವು] ಹೀಗೆ ಕುರಿಗಳನ್ನು ತಡೆಯುವುದಕ್ಕೆ ಮೊದಲು ಮತ್ತು ನ[ಂ]ತರದಲ್ಲಿ ಸ್ವಲ್ಪ ಮಟ್ಟಿಗೆ ಕುಂಟೆ ಹೊಡೆದರೆ ಬಹಳ ಪ್ರಯೋ[ಜ]ನವುಂಟು ಅಲ್ಲದೆ ಮರಗಳ ಬುಡದ ಸುತ್ತಲೂ ಸುಮಾರು ಐದು ಅಡಿ ದೂರ ಬೇರುಗಳ ಸುತ್ತಲ ಮಣ್ಣನ್ನೆಲ್ಲಾ ಅಗೆದು ಮಳೆಗಾಲದ ಪೂರ್ತಿ ಬೇರುಗಳೆಲ್ಲವೂ ಮೇಲ[ಕ್ಕೆ] ಕಾಣುವಂತಿಟ್ಟದ್ದು ಮಳೆಗಾಲವು ತೀರಿದೊಡನೆಯೇ ಸು[ಮಾ]ರು ನಾಲ್ಕು ಅಂಗುಲ ಪ್ರಮಾಣ ಬೂದಿ, ಮೂಳೆ ಪು[ಡಿ] ಬತ್ತದ ಹೊಟ್ಟು, ಗೋಡುಮಣ್ಣು, ದನದ ಸಗಣಿ ಇ[ವೇ] ಮೊದಲಾದ ಗೊಬ್ಬರಗಳನ್ನು ಬೇರುಗಳ ಮೇಲೆ ಹ[ರಡಿ] ಗೊಬ್ಬರದ ಮೇಲೆ ಮಣ್ಣನ್ನು ಹಾಕಿ ಸ್ವಲ್ಪಮಟ್ಟಿಗೆ ದಮ್ಮ[ಸ್] ಮಾಡಿದರೆ ಬಹಳ ಪ್ರಯೋಜನವುಂಟು. ಹುರಿಯನ್ನು ಹೊಸೆಯುವ ಕೆಲಸಕ್ಕೆ ಬಾರದ ತೆಂಗಿನ ಮೊಟ್ಟೆ ಬಾನೆ[ಗಳ]ನ್ನು ಹೆಣೆಯುವ ಕೆಲಸಕ್ಕಾಗದ ಗರಿ, ಒಲೆಗೆ ಹಾಕು[ವು]ದಕ್ಕೆ ಬಾರದ ಮೊಟ್ಟೆ, ಗೊದಮಟ್ಟೆ ಮತ್ತು ಸಿದರೆ ಇ[ವುಗ]ಳೆಲ್ಲವನ್ನೂ ಮರಗಳ ಮಧ್ಯೆ ರಾಶಿಮಾಡಿ ಸೂರ್ಯಾಸ್ತ[ಮಾನ]ವಾದ ನಂತರದಲ್ಲಿ ಬೆಂಕಿಹಾಕಿ ಉರಿಸಿ ಬೂದಿಯೊ[ಡನೆ] ದನದ ಸಗಣಿಯನ್ನು ಬೆರಸಿ ಬೇರುಗಳ ಸುತ್ತಲೂ ಅಗತೆ ಮಾಡಿದರೆ ಚಿಕ್ಕ ವಯಸ್ಸಿನ ಗಿಡಗಳಲ್ಲಿ ಬಹಳ ಜಾಗ್ರತೆಯಾಗಿ ಹುವ್ವು ಬಿಡುವುದೆಂದೂ, ಫಲಬಿಡುತ್ತಿರುವ ಮರಗಳಲ್ಲಿ ಹೇರಳವಾಗಿ ಫಲಬಿಡುವುದೆಂದೂ ಹೇಳುತ್ತಾರೆ. ತೆಂಗಿನ ಮರಗಳಿಗೆ ಸುಣ್ಣವು ಅತ್ಯವಶ್ಯಕವಾಗಿದೆ. ಒಂದು ವರುಷ ಹಸುರು ಸೊಪ್ಪಿನ ಗೊಬ್ಬರವನ್ನು ಹಾಕುವುದು ಮುಂದಲ ವರುಷ ಸುಣ್ಣವನ್ನು ಹಾಕುವುದು ಈ ಕ್ರಮವರಿತು ವ್ಯವಸಾಯ ಮಾಡುವುದು ಉತ್ತಮವಾಗಿದೆ. ಎಕರೆಗೆ ಹತ್ತು ಹನ್ನೆರಡು ಕೊಳಗ ಸುಣ್ಣವು ಸಾಕಾಗುವುದು.

ಉತ್ಪತ್ತಿ:-ಮೇಲೆ ಹೇಳಿದ ಕ್ರಮವರಿತು ವ್ಯವಸಾಯ ಮಾಡಿದರೆ ಸಸಿಗಳನ್ನು ನೆಟ್ಟ ಆರು ಅಥವಾ ಏಳನೆ ವರುಷದಲ್ಲಿ ಫಲ ಬಿಡಲು ಆರಂಭವಾಗುವುದು. ಪೂರ್ಣ ಫಲ ಬಿಡುವಾಗ್ಯೆ ಒಂದೊಂದು ಗಿಡಕ್ಕೆ ೪೦ರಿಂದ ೧೦೦ರ ವರಿಗೂ ಕಾಯಿಬಿಡುವುದು. ಮಧ್ಯವಯಸ್ಸಿನ ಮರಗಳಲ್ಲಿ ೧೫೦-೨೦೦ ಕಾಯಿಗಳು ಬಿಡುವುವೆಂದು ಹೇಳುತ್ತಾರೆ. ಎಳನೀರಿಗೆ ಬಹಳವಾಗಿ ಗಿರಾಕಿ ಇದ್ದ ಹೊರ್ತು ಕಾಯಿಗಳು ಚನ್ನಾಗಿ ಬಲಿಯುವವರಿವಿಗೂ ಕೀಳಬಾರದು. ಕೆಳಭಾಗದ ಗೊನೆಯಲ್ಲಿ ಒಂದೆರಡು ಕಾಯಿಗಳು ತಳಲುಗಳಾಗಿರುವುವೆಂದು ಕಂಡುಬಂದಾಗ್ಯೆ ಅದರ ಮತ್ತು ಅದರ ಮೇಲ್ಭಾಗದ ಗೊನೆಗಳ ಕಾಯಿಗಳನ್ನು ಕೀಳಬೇಕು. ಕಾಯಿಗಳನ್ನು ಕೀಳುವಾಗ್ಯೆ ಗಿಡಗಳ ಮೊಟ್ಟೆಗಳ ಮಧ್ಯೆ ಇರಬಹುದಾದ ಕಚರಾಗಳು, ಒಣಗಿದ ಗರಿಗಳು ಇವುಗಳೆಲ್ಲವನ್ನೂ ಕಿತ್ತುಹಾಕಿ ಇರುವೆ ಅಳಲು ಮತ್ತು ಇಲಿ ಇವುಗಳ ಗೂಡುಗಳಿದ್ದರೆ ನೋಡಿ ತೆಗೆದುಹಾಕಬೇಕು. ಸುಮಾರು ೯೦ ಮಣ ಕೊಪ್ಪರಿಗೆ ೪೦೦ ರೂಪಾಯಿನವರಿವಿಗೂ ಅಷ್ಟೇ ಕೊಪ್ಪರಿ ಎಣ್ಣೆಗೆ ೬೫೦ ರೂಪಾಯಿನವರಿವಿಗೂ ಬೆಲೆ ಸಿಕ್ಕುವದು. ತೆಂಗಿನ ಕಾಯಿನ ಮೇಲಿನ ಮೊಟ್ಟೆಯನ್ನು ನೀರಿನಲ್ಲಿ ನೆನಿಸಿ ಕಿದವೆಯನ್ನು ತೆಗೆದು ಅದರಿಂದ ಹುರಿ, ಹಗ್ಗ ಮೊದಲಾದವುಗಳನ್ನು ತಯಾರಿಸುವುದು. ಕದವೆಯು ಮಣಕ್ಕೆ ೧-೮-೦ ಮೊದಲ್ಗೊಂಡು ೪-೪-೦ ರೂಪಾಯಿಗಳವರಿವಿಗೂ ಬೆಲೆಯಾಗುವುದು.

ಕೆ. ಗೆ

ದಕ್ಷಿಣಾಫ್ರಿಕಾ ವಿಚಾರಕ ಸಂಘದವರು ಮಾಡಿರುವ ತೀರ್ಮಾನದ ಮುಖ್ಯಭಾಗಗಳು.

ದಕ್ಷಿಣಾಫ್ರಿಕಾದಲ್ಲಿ ೩ ವರ್ಷಗಳ ಕಾಲ ಅಥವಾ ಅದಕ್ಕಿಂತ ಹೆಚ್ಚಿನ ಕಾಲ ವಾಸಮಾಡಿಕೊಂಡಿದ್ದ ದೇಶೀಯರು ಎಂದರೆ ಈಗಲಾಗಲಿ ಅಥವಾ ಪೂರ್ವದಲ್ಲಾಗಲಿ ದಕ್ಷಿಣಾಫ್ರಿಕಾದಲ್ಲಿ ಒಬ್ಬಳಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವವರು ಅಂಥ ಪತ್ನಿಯರ ಹೆಸರುಗಳನ್ನೆಲ್ಲಾ ರಿಜಿಸ್ಟರ್ ಮಾಡಿಸುವುದಲ್ಲದೆ, ಅವರು ಭರತಖಂಡದಿಂದ ತಮ್ಮ ಮಕ್ಕಳುಮರಿಗಳನ್ನು ಕರೆದುಕೊಂಡು ದಕ್ಷಿಣಾಫ್ರಿಕಾಕ್ಕೆ ಹೋಗಿರುವುದಕ್ಕೆ ಅವಕಾಶವಾಗಬೇಕು.

ಅವರವರ ಮತಧರ್ಮಾನುಸಾರವಾಗಿ ಮದುವೆಯಾಗುವುದಕ್ಕೆ ಕೇಪ್ ಕಾಲನಿಯ ೧೯೦೬ ನೇ ವರ್ಷದ ೧೩ ನೇ ನಂ॥ ಆಕ್ಟನ್ನನುಸರಿಸಿ ಪುರೋಹಿತರನ್ನು ನಿಯಮಿಸಿಕೊಳ್ಳುವುದಕ್ಕಾಗಿ ಒಂದು ಶಾಸನವು ಏರ್ಪಡಬೇಕು.

ಒಬ್ಬ ಮನುಷ್ಯನು ಅನೇಕ ಮಂದಿ ಪತ್ನಿಯರನ್ನು ಮಾಡಿಕೊಳ್ಳುವ ಆಚಾರವನ್ನು ಹೊಂದಿದ್ದರೂ ಸಧ್ಯಃ ಒಬ್ಬಳೇ ಪತ್ನಿಯೊಡನೆ ವಾಸಮಾಡುತ್ತಿರುವಾಗ ಅಂಥ ಮದುವೆಯು ಅವರವರ ಮತಪದ್ಧತಿಪ್ರಕಾರ ಜರುಗಿದ್ದರೂ ಅದು ಸಲ್ಲತಕ್ಕದ್ದೇ ಎಂದು ರಿಜಿಸ್ಟರ್ ಮಾಡಲು ಶಾಸನವಾಗಬೇಕು.

ನೆಟಾಲು ದೇಶದಲ್ಲಿ ೧೯೯೫ನೇ ವರ್ಷದ ೧೭ ನೇ ನಂ॥ ಆಕ್ಟಿನ ೬ ನೆ ಪ್ರಕರಣದ ಪ್ರಕಾರ ಕೆಲವರು ದೇಶೀಯರು ಅಲ್ಲಿ ವಾಸಮಾಡಬೇಕಾಗಿದ್ದರೆ ವರ್ಷ ೧ ಕ್ಕೆ ೪೫ ರೂ. ತಲೆಗಂದಾಯವನ್ನು ತೆತ್ತು ಅಪ್ಪಣೆ ಚೀಟಿಯನ್ನು ಪಡೆಯಬೇಕೆಂದಿರುವ ನಿರ್ಬಂಧವನ್ನು ತಪ್ಪಿಸಿಬಿಡಬೇಕು

೧೯೧೩ನೇ ವರ್ಷದ ಇಮಿಗ್ರೇಷನ್ ಶಾಸನವನ್ನನುಸರಿಸಿ ಕೈಗುರ್ತಿನ ಅಪ್ಪಣೆ ಚೀಟಿಯನ್ನು ಕೊಡಬೇಕೆಂದಿರುವ ಏರ್ಪಾಟಿನ ವಿಷಯದಲ್ಲಿ ಸ್ವಲ್ಪ ಸುಧಾರಣೆಮಾಡಬೇಕು. ಈ ಸರಟಿಫಿಕೇಟುಗಳು ೩ ವರ್ಷಗಳವರೆಗೆ ಮಾತ್ರ ವ್ಯವಹಾರದಲ್ಲಿರಬೇಕು.

ಕೇಪ್ ಟೌನಿನಲ್ಲಿ ಇಮಿಗ್ರೇಷನ್ ಶಾಖಾ ಕಾರ್ಯಾಲಯದಲ್ಲಿ ಒಬ್ಬ ಭಾಷಾಂತರಕಾರಿಯು ಏರ್ಪಡಿಸಲ್ಪಡಬೇಕು.

ಕೆಲ ಸಮಯದಲ್ಲಿ ಕೇಪ್ ಟೌನ್ ಅಧಿಕಾರಿಗಳು ದೇಶೀಯರಿಂದ ಹೆಬ್ಬೆಟ್ಟಿನ ಗುರ್ತನ್ನು ತೆಗೆದುಕೊಳ್ಳುವುದಕ್ಕೆ ಪ್ರತಿಯಾಗಿ ಹತ್ತು ಬೆರಲುಗಳನ್ನೂ ಒತ್ತಿಸಿಕೊಳ್ಳುತ್ತಿದ್ದ ಪದ್ಧತಿಯನ್ನು ತಪ್ಪಿಸಿಬಿಡಬೇಕು.

ಒಂದು ರಾಷ್ಟ್ರಭಾಗದಿಂದ ಮತ್ತೊಂದು ರಾಷ್ಟ್ರಕ್ಕೆ ಹೋಗುವಾಗ ತಾತ್ಕಾಲಿಕವಾದ ಅಪ್ಪಣೆ ಚೀಟಿಯನ್ನು ಕೊಡುವುದಕ್ಕೆ ಎಮಿಗ್ರೇಷನ್ ಅಧಿಕಾರಿಗಳು ಇಲ್ಲದಿರುವ ಸ್ಥಲದಲ್ಲಿ ದಂಡಾಧಿಕಾರಿಗಳಿಗೆ ಅಧಿಕಾರವಿರುವಂತೆ ಮಾಡಬೇಕು.

ಗುರುತಿನ ಅಪ್ಪಣೆ ಚೀಟಿಕೊಡುವುದಕ್ಕೂ, ತಾತ್ಕಾಲಿಕವಾದ ರಸೀದಿಯನ್ನು ಕೊಡುವುದಕ್ಕೂ ಸಹ ೧೩ ರೂ. ನಂತೆ ಇರುವ ಫೀಯನ್ನು ಕಡಿಮೆಮಾಡಬೇಕು. ದೀರ್ಘಕಾಲಕ್ಕೆ ಅಪ್ಪಣೆ ಚೀಟಿಯು ಬೇಕಾಗಿದ್ದರೆ ಆ ಫೀಯು ಹೆಚ್ಚಾಗಿರಬಹುದು.

ಒಂದು ರಾಷ್ಟ್ರದಿಂದ ಮತ್ತೊಂದು ರಾಷ್ಟ್ರಕ್ಕೆ ಹೋಗುವುದಕ್ಕಾಗಿ ಕೇಳಿಕೊಂಡಾಗ, ಅವನು ಹೋಗತಕ್ಕ ಊರಿನಲ್ಲಿರುವ ಎಮಿಗ್ರೇಷನ್ ಅಧಿಕಾರಿಗಳಿಗೆ ತಂತಿವಾರ್ತೆಯನ್ನು ಕಳುಹಿಸಬೇಕಾಗಿರುವ ಪದ್ಧತಿಯನ್ನು ತಪ್ಪಿಸಿಬಿಡಬೇಕು.

ನೇಟಾಲಿನಲ್ಲಿ ವಾಸಮಾಡುವುದಕ್ಕೆ ಇಮಿಗ್ರೇಷನ್ ಅಧಿಕಾರಿಗಳು ಅಪ್ಪಣೆ ಚೀಟಿಯನ್ನು ಕೊಟ್ಟ ಬಳಿಕಲೂ ಆ ಚೀಟಿಯು ಯಜಮಾನನ ಹೆಬ್ಬೆಟ್ಟಿನ ಗುರ್ತು ಹಾಕಲ್ಪಟ್ಟಿರುವಾಗಲೂ ಯೂನಿಯನ್ ಪ್ರಭುತ್ವದ ಪ್ರದೇಶದಲ್ಲಿ ಪ್ರವೇಶಿಸುವುದಕ್ಕೆ ದೇಶೀಯರಿಗೆ ಸಂಪೂರ್ಣಾಧಿಕಾರವಿರುವಂತೆ ಭಾವಿಸಲ್ಪಡಬೇಕು.

ಭರತಖಂಡದಿಂದ ದಕ್ಷಿಣಾಫ್ರಿಕಾದಲ್ಲಿರುವ ತಮ್ಮ ಪತಿಗಳ ಬಳಿಗೆ ಮಕ್ಕಳುಗಳ ಸಮೇತ ಹೋಗುವ ಸ್ತ್ರೀಯರ ವಿಷಯವನ್ನು ಕುರಿತು ವಿಚಾರಮಾಡುವುದಕ್ಕಾಗಿ ಭರತಖಂಡದ ಸರ್ಕಾರದವರೊಡನೆ ಒಂದು ಏರ್ಪಾಟುಮಾಡಬೇಕು. ಈ ಸ್ತ್ರೀಯರ ವಿಷಯಕವಾಗಿ ವಿಚಾರಮಾಡಲು ಏರ್ಪಡುವ ಅಧಿಕಾರಿಗೆ ಈ ಸ್ತ್ರೀಯರು ನಿಜವಾಗಿ ಇಂಥವನ ಹೆಂಡತಿಯೇ ಎಂದು ತೋರಿಬಂದರೆ ಒಂದು ಸರ್ಟಿಫಿಕೇಟನ್ನು ಕೊಡುವಂತಾಗಬೇಕು. ಇದನ್ನು ಇಮಿಗ್ರೇಷನ್ ಆಫೀಸರು ಸಪ್ರಮಾಣವಾದುದೆಂದು ಭಾವಿಸಬೇಕು. ಇತ್ಯಾದಿ.

ಈ ಮೇಲೆ ಕಂಡ ತೀರ್ಪುಗಳಲ್ಲಿ ತಲೆಗಂದಾಯವನ್ನು ತಪ್ಪಿಸಿದುದು, ವಿವಾಹ ವಿಷಯದಲ್ಲಿದ್ದ ನಿರ್ಬಂಧ ಇವೆರಡು ಮುಖ್ಯ ವಿಷಯಗಳಲ್ಲಿ ಭಾರತೀಯರಿಗೆ ಸೌಕರ್ಯವು ಉಂಟಾಗುವಂತಿರುವುದು ಉಳಿದ ವಿಷಯಗಳು ಸಾಮಾನ್ಯವಾದುವುಗಳು ಇಷ್ಟು ತೀರ್ಮಾನವಾಗಬೇಕಾದರೂ, ದಕ್ಷಿಣಾಫ್ರಿಕಾದಲ್ಲಿರುವ ಭಾರತೀಯರು ತೋರಿಸಿದ ಒಗ್ಗಟ್ಟೂ ಸಾತ್ವಿಕ ನಿರೋಧಮೂಲಕವಾದ ತಪಸ್ಸೂ, ಅದಕ್ಕೆ ಭರತಖಂಡದ ಸಹೋದರರೆಲ್ಲಾ ತೋರಿಸಿದ ಸಹಾನುಭೂತಿಯೂ ಮುಖ್ಯವಾಗಿ ನಮ್ಮ ವೈಸ್‌ರಾಯರು ತೋರಿದ ಅನುತಾಪ ಸಹಾಯಗಳೂ ಮುಖ್ಯ ಕಾರಣಗಳು. ಹಿಡಿದ ಕಾರ್ಯವು ಇಷ್ಟು ಮಟ್ಟಿಗಾದರೂ ಅನುಕೂಲವಾದುದು ಸ್ವಲ್ಪ ಸಮಾಧಾನಕರವೆಂದೇ ಹೇಳಬಹುದು ಈ ತೀರ್ಮಾನವನ್ನು ಅಲ್ಲಿನ ಪ್ರಭುತ್ವದವರು ಎಷ್ಟುಮಟ್ಟಿಗೆ ಅನುಮೋದಿಸಿ ವ್ಯವಹಾರಕ್ಕೆ ತರುವರೆಂಬುದು ನಿರೀಕ್ಷಿತವಾಗಿದೆ.

ಪ್ರಚಂಡವಾದ ಹಡಗುಗಳು.

ಪ್ರಪಂಚದಲ್ಲಿ ಬರಬರುತ್ತ ಆಕಾಶಯಾನದ ನವನವ ಸುಧಾರಣೆಯು ಒತ್ತಟ್ಟಿಗೆ ಪ್ರಬಲಿಸುತ್ತಿರುವಲ್ಲಿ ಕೈಗೂಡಿಬಂದಿರುವ ಜಲಯಾನ ಸಾಧನಗಳಲ್ಲಿ ಒಬ್ಬರನ್ನೊಬ್ಬರು ಮೀರಿಸುವ ಕೌತೂಹಲವು ರಾಷ್ಟ್ರರಾಷ್ಟ್ರಗಳಲ್ಲಿ ಹೆಚ್ಚಾಗಿರುವುದು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಜಲಯಾನ ಸಂಪತ್ತಿನಲ್ಲಿ ಆಂಗ್ಲರೂ ಜರ್ಮನರೂ ಅತ್ಯಂತ ಪ್ರಬಲರು. ಇವರೀರ್ವರಲ್ಲಿ ತಂತಮ್ಮೊಳಗೆ ೧೦೦೦ ಅಡಿಯುದ್ದವಾದ ಹಡಗನ್ನು ಮೊಟ್ಟಮೊದಲು ನಿರ್ಮಿಸಿ ಸಮುದ್ರಯಾನವನ್ನು ಮಾಡಬೇಕೆಂಬ ವಿಷಯದಲ್ಲಿ ವಿಶೇಷವಾದ ಸ್ಪರ್ಧೆಯಿರುತ್ತಿದೆ. ಕೆಲವು ಕಾಲದ ಹಿಂದೆ ಇವರೀರ್ವರಲ್ಲಿ ಯಾರಲ್ಲೂ ೯೦ ಅಡಿ ಯುದ್ದಕ್ಕೆ ಮೀರಿದ ಅಳತೆಯ ಹಡಗು ಇರಲಿಲ್ಲ ಈಚೆಗೆ ೯೦೦॥ ಅಡಿ ಯುದ್ದವೂ ೯೪ ಅಡಿಯಗಲವೂ ೫೦ ಸಾವಿರ ಟನ್ ತೂಕವುಳ್ಳ "ಇಂಪರೇಟರ್" ಎಂಬ ದೊಡ್ಡ ಹಡಗನ್ನು ಜರ್ಮನಿಯನೇಕ ಸಂಘದವರು ನಿರ್ಮಿಸಿದರು. ಪ್ರಪಂಚದಲ್ಲೆಲ್ಲಾ ಇದಕ್ಕೆ ಮಿಂಚಿದ ಹಡಗು ಮತ್ತೊಂದಿಲ್ಲವೆಂಬ ಖ್ಯಾತಿಯು ಇದಕ್ಕುಂಟಾಯಿತು. ಇದರ ಮೇಲೆ ಅದೇ ಜರ್ಮನಿಯವರೇ ೯೫೫ ಅಡಿಗಳ ಉದ್ದವೂ ೧೦೦ ಅಡಿಗಳ ಅಗಲವೂ ಉಳ್ಳ "ವಾಟರ್‌ಲ್ಯಾಂಡ್" ಎಂಬ ಹಡಗನ್ನು ನಿರ್ಮಿಸುತ್ತಿರುವರು. ಇದು ಬರುವ ಜೂನ್ ತಿಂಗಳಲ್ಲಿ ಸಿದ್ಧವಾಗುವುದು. ಈಗ ಆಂಗ್ಲ ಜನರ ನೌಕಾಸಂಘದಲ್ಲಿ "ಅಕ್ವಿಟಾನಿಯಾ" ಎಂಬ ಒಂದು ದೊಡ್ಡ ಹಡಗು ಕಟ್ಟಲ್ಪಡುತ್ತಿದೆ. ಇದು ೯೦೩ ಅಡಿಗಳ ಉದ್ದವಾಗಿದೆ. ಆಂಗ್ಲ ಜನರ ಹಡಗುಗಳಲ್ಲೆಲ್ಲಾ ಇದೇ ದೊಡ್ಡದು ಎಂದ ಬಳಿಕ ಇದುವರೆಗಿನ ಸ್ಪರ್ಧೆಯಲ್ಲಿ ಜರ್ಮನಿಯವರೇ ನೌಕಾ ನಿರ್ಮಿತಿಯಲ್ಲಿ ಪ್ರಮುಖರೆನಿಸಿಕೊಂಡಿದ್ದಾರೆ. ಆದರೆ ಕೆಲ ಆಂಗ್ಲ ಸಂಘದವರು ಈಗತಾನೇ ಇನ್ನು ಕೆಲವು ಬಲು ದೊಡ್ಡ ಹಡಗುಗಳನ್ನು ಕಟ್ಟುತ್ತಿದ್ದಾರೆ. ಅವುಗಳ ಘನತೆಯನ್ನು ಮುಂದೆ ಅರಿಯಬೇಕು.

ಮೇಲೆ ಹೇಳಿದ ಜರ್ಮನಿಯವರ "ಇಂಪರೇಟರ್" ಎಂಬ ಹಡಗಿನ ಘನತೆಯು ಎಷ್ಟಿರುವುದೆಂದರೆ-ಅದು ಅಟ್ಲಾಂಟಿಕ್ ಮಹಾಸಾಗರದಲ್ಲಿ ಏಳಾವೃತ್ತಿ ಸಂಚರಿಸಿ ಬಂದಿರುವುದರಲ್ಲಿ ೫೩ ಸಾವಿರ ಮಂದಿ ಪ್ರಯಾಣಿಕರನ್ನು ಸಾಗಿಸಿಕೊಂಡು ಹೋಗಿಬಂದಿದೆ. ಅವರಲ್ಲಿ ೨೬೦೦ ಜನರು ಮೊದಲನೆ ತರಗತಿಯ ಪ್ರಯಾಣಿಕರು. ಉಳಿದವರು ಮಧ್ಯದ ಹಾಲಿನಲ್ಲಿ ಕುಳಿತು ಪ್ರಯಾಣಮಾಡಿದರು. ಈ ಪ್ರಯಾಣಿಕರೆಲ್ಲರೂ ಒಟ್ಟಿಗೆ ೧ ಕೋಟಿ ರೂ.ಗಳನ್ನು ಚಾರ್ಜಾಗಿ ಕೊಟ್ಟಿರುತ್ತಾರೆ. ಇದರಲ್ಲಿ ವೆಚ್ಚ ಕಳೆದು ನೌಕಾಸಂಘದವರಿಗೆ ೩೭ ಲಕ್ಷ ರೂ.ಗಳ ಲಾಭವು ಬಂದಿದೆ. ಈ ಹಡಗನ್ನು ನಿರ್ಮಿಸುವುದಕ್ಕೆ ೨ ಕೋಟಿಯೂ ೫೫ಲಕ್ಷ ರೂ.ಗಳು ಮುಟ್ಟಿವೆಯಂತೆ. ಈ ಹಡಗಿನಲ್ಲಿ ಒಂದಾವೃತ್ತಿಗೆ ೩೦೦ ಮಂದಿಗಳು ಮೊದಲನೆಯ ತರಗತಿಯಲ್ಲೂ, ೬೦೦ ಮಂದಿಗಳು ೨ ನೆ ತರಗತಿಯಲ್ಲೂ, ೯೦೦ ಮಂದಿಗಳು ೩ ನೆ ತರಗತಿಯಲ್ಲೂ, ೧೪೦೦ ಮಂದಿಗಳು ಮಧ್ಯದ ಸಾಲಿನಲ್ಲೂ, ಹಡಗಿನ ಕೆಲಸಗಾರರಾಗಿ ೧೧೪೦ ಮಂದಿಯೂ ಎಂದರೆ ಒಟ್ಟು ೫೦೦೦ ಮಂದಿಗಳು ಕುಳಿತು ಪ್ರಯಾಣಮಾಡಬಹುದು. ಈ ಹಡಗು ಕಟ್ಟಲ್ಪಡುವುದಕ್ಕೆ ಮುಂಚೆ ಮತ್ತಿನ್ನಾವ ಹಡಗೂ ಒಂದಾವೃತ್ತಿಗೆ ೨೩೦೦ ಮಂದಿಗಳಿಗಿಂತ ಹೆಚ್ಚಾಗಿ ಕುಳ್ಳಿರಿಸಿಕೊಂಡು ಹೋದುದಿಲ್ಲ. ಮತ್ತೂ ಗಂಟೆಗೆ ೨೩ ಮೈಲಿಗಳಂತೆ ಸಾಗಿಸುವ ೬೦ ಸಾವಿರ ಕುದುರೆಗಳ ಬಲವುಳ್ಳ ಎಂಜಿನ್ನುಗಳು ಈ ಹಡಗಿನಲ್ಲಿರುವುವು. ಇವುಗಳಲ್ಲಿ. ದಿನ ೧ಕ್ಕೆ ೧ ಸಾವಿರ ಟನ್ನು ಕಲ್ಲಿದ್ದಲು ಬೆಯ್ಯುವುದು. ಈ ಹಡಗಿನಲ್ಲಿ ಸ್ನಾನಮಾಡುವುದಕ್ಕಾಗಿ ೬೫ ಅಡಿಗಳ ಉದ್ದವೂ ೪॥ ಅಡಿಗಳ ಅಗಲವೂ ೩ ಅಡಿಗಳ ಆಳವೂ ಉಳ್ಳ ನೀರಿನ ಕೊಳವು ಕೂಡ ನಿರ್ಮಿಸಲ್ಪಟ್ಟಿರುವುದು. ಅದರಲ್ಲಿ ಪ್ರಯಾಣಿಕರು ಸ್ವೇಚ್ಛೆಯಿಂದ ಈಸಾಡಬಹುದು. ಇದಲ್ಲದೆ ಅದೇ ಹಡಗಿನಲ್ಲಿಯೇ ನಾಟಕಶಾಲೆಯೂ ಜನರು ಓಡಾಡುವುದಕ್ಕೆ ಬೀದಿಗಳೂ, ಬಡವರಿಗೂ ಭಾಗ್ಯವಂತರಿಗೂ ಬೇಕಾದ ಪದಾರ್ಥಗಳನ್ನು ಮಾರುವ ಅಂಗಡಿಗಳು ಸಹ ಇರುವುವು. ಈ ವಿವರಣವನ್ನೆಲ್ಲಾ ಕೇಳಿದರೆ ಅದು ಒಂದು ಊರೇ ಆಗಿರುವುದೆಂದು ಹೇಳಲು ಅಭ್ಯಂತರವಿರುವುದಿಲ್ಲ ಆದರೆ ಹಡಗಿನ ಸ್ವರೂಪವನ್ನೇ ಎಂದು ನೋಡದಿರುವ ಜನರಿಗೆ ಇದು ಒಂದು ಅದ್ಭುತವಾದ ಕಥೆಯಂತೆ ತೋರಬಹುದು. ಆದರೂ ಇದರಲ್ಲಿ ಉತ್ಪ್ರೇಕ್ಷೆ ಯಾವುದೂ ಇಲ್ಲದೆ ಎಲ್ಲವೂ ನಿಜಸ್ಥಿತಿಯೇ ಆಗಿರುತ್ತದೆ.

ಒಬ್ಬ ಭಾರತೀಯ ಮಹಾಶಿಲ್ಪಿ.

ಸಧ್ಯಃಕಾಲದಲ್ಲಿ ಭರತಖಂಡದೊಳಗೆಲ್ಲಾ ಬೊಂಬಾಯಿಯ ವಿ॥ ಮಾತ್ರೆಯವರನ್ನು ಮೀರಿದ ಶಿಲ್ಪಿಯು ಮತ್ತಾರೂ ಇರುವುದಿಲ್ಲ. ಇವರು ನಮ್ಮ ದೇಶದಲ್ಲಿ ಮಾತ್ರವೇ ಅಲ್ಲ, ಪಾಶ್ಚಾತ್ಯರಲ್ಲೂ ವಿಶೇಷ ಪ್ರಖ್ಯಾತಿಯನ್ನು ಪಡೆದುಕೊಂಡಿದ್ದಾರೆ. ಇವರು ದೇವಾಲಯಕ್ಕೆ ಎಂಬ ಹೆಸರಿನಿಂದ ನಿರ್ಮಿಸಿರುವ ವಿಗ್ರಹವು ಜಗತ್ಪ್ರಸಿದ್ಧವಾಗಿರುವುದು. ಇದು ಒಬ್ಬ ಭಾರತೀಯ ಮಹಿಳೆಯು ದೇವಾಲಯಕ್ಕೆ ಹೋಗುತ್ತಿರುವಂತೆ ಕಲ್ಲಿನ ಮೇಲೆ ಕೆತ್ತಲ್ಪಟ್ಟ ವಿಗ್ರಹವಾಗಿದೆ. ಸ್ವೀನ್ಬರ್ನ್-ಸ್ಪಿಫಿರ್-ಒರ್ಡ್‌ವುಡ್ ಮೊದಲಾದ ಆಂಗ್ಲ ಪ್ರಮುಖರು ಈ ಮಾತ್ರೆಯವರನ್ನೂ ಇವರಿಂದ ನಿರ್ಮಿತವಾಗಿರುವ ವಿಗ್ರಹಗಳನ್ನೂ ಅತ್ಯಂತವಾಗಿ ಶ್ಲಾಘಿಸಿರುವರು. ಚಿತ್ರಲೇಖನದಲ್ಲಿ ಜಗತ್ಪ್ರಖ್ಯಾತರಾದ ರಾಜಾರವಿವರ್ಮರವರು ಈ ಮಾತ್ರೆಯವರನ್ನು ಸಣ್ಣವಯಸ್ಸಿನಲ್ಲೇ ನೋಡಿ, ಸ್ವಲ್ಪ ದಿನಗಳಲ್ಲೇ ಈತನು ಮಹಾಪುರುಷನಾಗುವನೆಂದು ನುಡಿದಿದ್ದರು. ಅದು ನಿಜವಾಯಿತು. ಈ ಮಾತ್ರೆಯವರು ವಿ॥ ವಾಡಿಯಾ, ರಾನಡೆ, ರುಸ್ತುಂಜಿ, ನಾಡಲಿಕ್, ವಿಕ್ಟೋರಿಯಾ ರಾಣಿ, ಗ್ವಾಲಿಯರ್ ಮೈಸೂರು ಮೊದಲಾದ ಕೆಲವು ಸಂಸ್ಥಾನದ ಮಹಾರಾಜರುಗಳು, ಇವರ ಶಿಲಾಮೂರ್ತಿಗಳನ್ನು ನಿರ್ಮಿಸಿ ಬಹಳ ಮೆಚ್ಚುಗೆಯನ್ನು ಪಡೆದಿರುವರು. ಚಿತ್ರಲೇಖನದಲ್ಲಿ ರಾಜಾರವಿವರ್ಮರವರೂ ಕವಿತ್ವದಲ್ಲಿ ರವೀಂದ್ರನಾಥ ಟಾಗೂರ್‌ರವರೂ ಪ್ರಸಿದ್ಧರಾಗಿ ಭರತಖಂಡದ ರವಿಗಳಾಗಿಯೇ ಪರಿಣಮಿಸಿದರು. ಈ ಮಾತ್ರೆಯವರು ಶಿಲ್ಪಕರ್ಮದಲ್ಲಿ ಅವರಂತೆಯೇ ವಿಖ್ಯಾತಿಪಡೆದು ದೇಶಕ್ಕೆ ಗೌರವವನ್ನು ತರುತ್ತಲಿದ್ದಾರೆ. ಇಂಥ ರತ್ನಗಳೇ ಭರತಖಂಡದ ಪ್ರಾಚೀನ ಗೌರವವನ್ನು ಈಗಲೂ ಉಳಿಸತಕ್ಕ ಭಾಗ್ಯಗಳಲ್ಲವೆ?

ಸಿಕಿಂ ಸಂಸ್ಥಾನದಲ್ಲಿ ಆಂಗ್ಲವರ್ತಕ ಸಂಘ.

ಹಿಮವತ್ಪರ್ವತಕ್ಕೆ ಸೇರಿದಂತೆ ಇರುವ ನೇಪಾಳ ಸಂಸ್ಥಾನ ಭೂತಾನ ಸಂಸ್ಥಾನಗಳ ಮಧ್ಯದಲ್ಲಿ ಸಿಕಿಂ ಎಂಬ ಸಣ್ಣ ಸಂಸ್ಥಾನವು ವರ್ಷ ೧ಕ್ಕೆ ೭॥ ಲಕ್ಷ ರೂ.ಗಳ ವರಮಾನವುಳ್ಳದಾಗಿ ಒಬ್ಬ ಮಹಾರಾಜನಿಂದ ಆಳಲ್ಪಡುತ್ತಿದೆ ಇದಕ್ಕೆ ಗಾಂಗಟಾಕು ಎಂಬುದು ರಾಜಧಾನಿಯು. ಈ ದೇಶವು ಹಿಮಾಲಯ ಪರ್ವತದಲ್ಲೇ ಇರುವುದರಿಂದ ಇದರಲ್ಲಿ ಅರಣ್ಯಪ್ರದೇಶವು ಹೆಚ್ಚಾಗಿರುವುದು. ಭೂಗರ್ಭದಲ್ಲಿ ತಾಮ್ರವು ವಿಶೇಷವಾಗಿ ಸಿಕ್ಕುವುದು. ಈಗ ಅಲ್ಲಿನ ಮಹಾರಾಜರು ತಮ್ಮ ದೇಶದಲ್ಲಿ ವ್ಯಾಪಾರವು ವೃದ್ಧಿಯಾಗಲಿ ಎಂಬ ಆಶೆಯಿಂದ ಬರ್ಡ ಅಂಡ್ ಕೊ ಎಂಬ ಆಂಗ್ಲ ವರ್ತಕ ಸಂಘಕ್ಕೆ

ವೀರಶೈವಾಶ್ರಮ.

ಈ ಮೇಲ್ಕಂಡ ವೀರಶೈವಾಶ್ರಮವು ಯಾ ವಿದ್ಯಾರ್ಥಿಗಳ ನಿಲಯವು ಬೆಂಗಳೂರು ಸಿಟಿಗೆ ಮಧ್ಯಸ್ಥಾನವಾದ ಚಿಕ್ಕಪೇಟೆಯಲ್ಲಿ ಮುನಿಸಿಪಲ್ ಡೋರ್ ನಂಬರು ೧೫೯ನೆ ಮಹಡಿ ಮನೆಗೆ ಬದಲಾಯಿಸಲ್ಪಟ್ಟಿರುತ್ತೆ. ಈ ನಿವಾಸವು ಬಂಧುರವಾದ ಕಟ್ಟಡವಾಗಿಯೂ, ವಿಶಾಲವಾಗಿಯೂ ಅನಾರೋಗ್ಯಕ್ಕೆ ಅವಕಾಶವಿಲ್ಲದೆ ರಾಜಬೀದಿಯಲ್ಲಿ ಇರುತ್ತದಲ್ಲದೆ ಮುನಿಸಿಪಲ್ ಗಾರ್ಡ್ (ಉದ್ಯಾನವನ)ಕ್ಕೆ ಬಹಳ ಸಮೀಪವಾಗಿರುತ್ತದೆ. ಇದರಲ್ಲಿ ಸುಮಾರು ೩೦ ಜನ ವಿದ್ಯಾರ್ಥಿಗಳಿಗಿಂತಲೂ ಮೇಲ್ಪಟ್ಟಿರುವಷ್ಟು ವಸತಿಯಿರುತ್ತದೆ. ಸದರಿ ಸಂಸ್ಥೆಗೆ ಸೇರಬೇಕೆಂದು ಅಪೇಕ್ಷಿಸುವ ವಿದ್ಯಾರ್ಥಿಗಳು ಈ ಕೆಳಗಿನ ವಿಳಾಸಕ್ಕೆ ೧೯೧೪ ನೇ ಮೇ ತಾ|| ೧೫ ರ ಒಳಗಾಗಿ ತಲ್ಪುವಂತೆ ಅಪ್ಲಿಕೇಷನ್ ಹಾಕಿಕೊಳ್ಳತಕ್ಕದ್ದು. ಸದರಿ ಆಶ್ರಮವು ೧೯೧೪ ನೇ ಜೂನ್ ೧ ನೇ ತಾ|| ಲಾಗಾಯ್ತು ಆರಂಭಿಸಲ್ಪಡುತ್ತದೆ.

ಎಚ್. ಕೆ. ವೀರಬಸವಯ್ಯ ಬಿ. ಎ ಬಿ. ಎಲ್.
ಬೆಂಗಳೂರು. ಸೆಕ್ರಟರಿ.

ಅರಕಲಗೂಡು.

ಬಿಸಿಲು ತಾಪ ಬಹಳ ಜಾಸ್ತಿ. ಈಗ್ಗೆ ೮-೧೦ ದಿವಸದಲ್ಲಿ ಮಾತ್ರ ಸ್ವಲ್ಪ ಮಳೆಯಾಗಿ ತಾಪವನ್ನು ಇನ್ನೂ ಜಾಸ್ತಿ ಮಾಡಿತು. ಈಗ ಮಳೆ ಬರುವ ಸೂಚನೆಯಂಟೇ ವಿನಾ ಮಳೆ ಮೇರೆ ಬರುವುದಿಲ್ಲ. ಜನಗಳೆಲ್ಲ ಈ ವರುಷ ಮಳೆ ಬಂದು ಪೈರಾದೀತೆ ಎಂದು ಮಾತನಾಡಿಕೊಳ್ಳುತ್ತಿದ್ದಾರೆ. ಇಲ್ಲಿ ನೀರಿನ ಕಷ್ಟ ಬಹಳವಾಗಿದೆ. ಪೇಟೆಗೂ ಕೋಟೆಗೂ ಮಧ್ಯೆ ಇರುವ ಕೆರೆಯಲ್ಲಿ ನೀರು ಬಹಳ ಇಂಗಿಹೋಗಿ ಈಗ ಜನಗಳು ಒಳ್ಳೇ ನೀರನ್ನು ಕುಡಿಯಲು ಸಿಕ್ಕುವುದಿಲ್ಲ. ಮನುಷ್ಯನಿಗೆ ತಿನ್ನುವುದಕ್ಕೆ ಒಳ್ಳೇ ಆಹಾರ ಕುಡಿಯಲು ಒಳ್ಳೇ ನೀರು ಇರಬೇಕು. ಇಲ್ಲಿ ಒಳ್ಳೇ ನೀರೆಂಬುದೇ ಇಲ್ಲ. ಪ್ರಜಾಹಿತೈಷಿಗಳಾದ ನಮ್ಮ ದಿವಾನರು ಈ ಕಡೆ ಸವಾರಿ ಬಂದಿದ್ದಾಗ ಇಲ್ಲಿ ಜನರ ನೀರಿನ ಕಷ್ಟವನ್ನು ನೋಡಿದಾಗ್ಯೂ ಇನ್ನೂ ಏನೂ ನಿವಾರಣೆಯನ್ನು ಮಾಡದೆ ಇರುವುದು ಬಹಳ ವ್ಯಸನಕರವಾದ ಸಂಗತಿಯಾಗಿದೆ. ಕೆರೆಯಲ್ಲಿ ಸತ್ತ ನೀರಿ ಕೊಳೆತು ನೀರನ್ನು ಎಷ್ಟುಸಲ ಸೋಸಿ ಕಾಸಿದರೂ ನೀರು ನಿರ್ಮಲವಾಗುವುದಿಲ್ಲ. ಇಲ್ಲಿ ಧಾರಣೆವಾಸಿಗಳು ಸುಮಾರಾಗಿವೆ. ಅವಲ್ ಅಕ್ಕಿ ರೂಪಾಯಿಗೆ ೬|| ಸೇರು, ದುಂಡು ಅಕ್ಕಿ ೯ ಸೇರು, ರಾಗಿ ರೂಪಾಯಿಗೆ ೧೮ ಸೇರು ಸಿಕ್ಕುತ್ತದೆ. ಇಲ್ಲಿ ನೀರಿನ ಕಷ್ಟ ಜೋರಾಗಿ ದನಗಳಿಗೆಲ್ಲ ಕಾಲುಜ್ವರ ಬಾಯಿಜ್ವರವೆಂಬ ರೋಗಬಂದು ಕರಾವಿಗೆ ಬಹಳ ಕಷ್ಟವಾಗಿದೆ. ರಾತ್ರಿಹೊತ್ತು ಬೀದಿಗಳಲ್ಲಿ ಕತ್ತೆಗಳ ಹಿಂಡುಗಳು ಸೇರಿ ಜನಗಳಿಗೆ ಬಹಳ ತೊಂದರೆಯನ್ನುಂಟುಮಾಡುತ್ತಿವೆ. ಬೀದಿಯ ಲಾಂದ್ರಕಂಬಗಳಿಗೆ ಸರಿಯಾಗಿ ಎಣ್ಣೆ ಹಾಕದೆ ಅವುಗಳು ಬಹಳ ಹೊತ್ತು ಉರಿಯುವುದೇ ಇಲ್ಲ. ಅಮಲ್ದಾರ್ರವರ ಮನೆ ಮುಂದಿರುವ ಕಂಬವೊಂದು ಮಾತ್ರ ಬೆಳಗೂ ಪ್ರಕಾಶಮಾನವಾಗಿ ಉರಿಯುತ್ತದೆ. ಮಿಕ್ಕವುಗಳು ರಾತ್ರಿ ೯ ಗಂಟೆಗೆ ಮುಂಚೆ ಆರಿಹೋಗುತ್ತವೆ. ಈ ಊರು ಕೆರೆ ಏರಿಗೆ ಎರಡು ಕಡೆಗೂ ಕಟಕಟೆಗಳನ್ನು ಕಟ್ಟದಿರುವುದರಿಂದ ಆಗಾಗ್ಗೆ ಬಂಡಿಗಳು ಏರಿಕೆಳಕ್ಕೆ ಬಿದ್ದು ಅನಾಹುತವಾಗುತ್ತದೆ. ಈಗ್ಗೆ ೫-೬ ದಿವಸದಲ್ಲಿ ಊರಿನಲ್ಲಿ ಒಂದು ನೀರನ್ನು ಹೇರುವ ಗಾಡಿ ಕೆಳಕ್ಕೆ ಬೀಳುವ ಸಂದರ್ಭದಲ್ಲಿದ್ದು ಅನಂತರ ದಾರಿಕಾರರಿಂದ ಮೇಲಕ್ಕೆ ಎಳೆಯಲ್ಪಟ್ಟಿತು. ಸರ್ಕಾರದವರು ಈ ಕಷ್ಟವನ್ನು ತಪ್ಪಿಸಿಯಾರೆಂದು ನಂಬಿರುತ್ತೇನೆ. ಈ ಏರಿಯಮೇಲೆ ಪ್ರತಿದಿನವೂ ಅನೇಕ ಗಾಡಿಗಳು ತಿರುಗುತ್ತವೆ. ಆದ್ದರಿಂದ ಸರ್ಕಾರದವರು ಇಲ್ಲಿ ಜನರನ್ನೇ ನಂಬದೆ ಮೇಲೆ ಹೇಳಿದ ಕಷ್ಟಗಳನ್ನು ನಿವಾರಣೆಮಾಡುತ್ತಾರೆಂದು ನಂಬಿರುತ್ತೇನೆ.

ಪುರನಿವಾಸಿ.

ತುಂಕೂರು ತಾಲ್ಲೂಕು ಕೋರದ ಗೌರ್ನಮೆಂಟ್ ವಿ. ಇ. ಬಾಯ್ಸ್ ಸ್ಕೂಲಿನಲ್ಲಿ ನಡೆದ ವಿದ್ಯಾಭಿವೃದ್ಧಿ ವಿಷಯವಾದ ಸಂಘ.

ತಾ|| ೨೬-೪-೧೯೧೪ನೇ ಭಾನುವಾರ ಸಾಯಂಕಾಲ ೬ ಘಂಟೆಗೆ ತಾಲ್ಲೂಕು ಅಮಲ್ದಾರ್ ಮೆ|| ಎಂ ಎಸ್. ರಾಮಚಂದ್ರರಾಯರವರ ಸವಾರಿಯು ಇಲ್ಲಿಗೆ ದಯಮಾಡಿಸಿ, ಸರ್ಕಾರದವರು ಕಟ್ಟಿಸಿಕೊಟ್ಟಿರುವ ಹೊಸಸ್ಕೂಲ್ ಕಟ್ಟಡದಲ್ಲಿ ಗ್ರಾಮಸ್ಥರನ್ನೆಲ್ಲಾ ಸೇರಿಸಿ ಸಂಪದಭ್ಯುದಯ ಸಂಘದ ಮತ್ತು ವಿದ್ಯಾಭಿವೃದ್ಧಿ ವಿಷಯವಾದ ಉಪನ್ಯಾಸವನ್ನು ಸರಳವಾಗಿ ವಿವರಿಸಿ ಅಪ್ಪಣೆಕೊಡಿಸಿ ತಿಳುವಳಿಕೆಯನ್ನುಂಟುಮಾಡಿದ ಮಹೋಪಕಾರಕ್ಕಾಗಿ ತುಂಬಾ ಕೃತಜ್ಞರಾಗಿರುತ್ತೇವೆ. ಅಲ್ಲದೆ ಸ್ವಾಮಿಯವರು ವಾರಕ್ಕೆ ಒಂದಾವೃತ್ತಿ ನೀವೆಲ್ಲಾ ಸೇರಿ ಹೀಗೆ ಯಾವುದಾದರೂ ವಿಷಯವನ್ನು ಕುರಿತು ಪ್ರಸ್ತಾಪಿಸಿ ಗ್ರಾಮಕ್ಕೆ ಏಳಿಗೆಯನ್ನುಂಟುಮಾಡಿಕೊಳ್ಳಬೇಕೆಂದು ಅಪ್ಪಣೆಕೊಡಿಸಿರುವ ಮೇರೆ, ಇಲ್ಲಿನ ಬಾಯ್ಸ್ ಸ್ಕೂಲ್ ಮಾಸ್ಟರ್ ಮ|| ರಾ|| ಡಿ. ಎಂ. ರಾಮೇಗೌಡರವರಿಂದ ತಾ|| ೩-೫-೧೪ ರಲ್ಲು ಒಂದು ಸಭೆಯು ಸೇರಿಸಲ್ಪಟ್ಟಿತು. ಗ್ರಾಮದ ಮುಖಂಡ ಮನುಷ್ಯರೆಲ್ಲಾ ಹಾಜರಾಗಿದ್ದರು. ಈ ಊರಲ್ಲಿ ಮುಕ್ಕಾಲು ಮೂರು ವೀಸಪಾಲು ಜನ ವೀರಶೈವರು, ಪಾಟೀಲ್ ಶಾನುಭೋಗರು ಮಾಸ್ಟರೂ ಸಹಾ ವೀರಶೈವರೇ, ಸ್ಕೂಲಿಗೆ ಬರತಕ್ಕ ೮೦ ಮಂದಿ ಬಾಲಕ ಬಾಲಕಿಯರಲ್ಲಿ ೩೦ಮಂದಿ ಬಾಲಕರು ವೀರಶೈವರೇ ಆಗಿರುವರು. ಎಲ್ಲರೂ ಏಕಮತ್ಯದಿಂದ ಸಭೆಯು ಸೇರಿದ್ದಾಗ ಮಾಸ್ಟರ್ ಮ|| ರಾ|| ಗೌಡರು ವಿದ್ಯಾಭ್ಯಾಸದ ವಿಷಯದಲ್ಲಿ ಸ್ವಶಿಕ್ಷಣೆ ಎಂಬುದನ್ನು ಕುರಿತು ಉಪನ್ಯಾಸ ಮಾಡಿದ್ದು ಬಹಳ ಸ್ತೋತ್ರಾರ್ಹವಾಗಿತ್ತು. ಈ ಊರಲ್ಲಿ ಬಹು ದಿನಗಳಿಂದ ಸ್ಕೂಲ್ ಇದ್ದಾಗ್ಯೂ ಇಂತಹ ಅಪೂರ್ವವಾದ ಸನ್ನಾಹವೇ ಆಗಲಿ ಇಷ್ಟು ಬಾಲಕರೇ ಆಗಲಿ ಸೇರಿ ಇರಲಿಲ್ಲ, ಇಷ್ಟು ಮಕ್ಕಳನ್ನೂ ಇವರೊಬ್ಬರೇ ನಿಭಾಯಿಸತಕ್ಕದ್ದು ಶ್ಲಾಘನೀಯವಾಗಿದೆ. ಸಧ್ಯದಲ್ಲಿಯೇ ಇನ್ನೊಬ್ಬ ಮಾಸ್ಟರೂ ಒಂದು ಗರ್ಲ್ಸ್‌ಸ್ಕೂಲೂ ಬರಬಹುದು. ವಿದ್ಯಾಭ್ಯಾಸದ ಇಲಾಖಾ ಹ|| ಅ|| ಡೆ|| ಇ|| ಸಾಹೇಬರವರು ೨೦-೯-೧೩ ರಲ್ಲಿ ಈ ಸ್ಕೂಲನ್ನು ಇ|| ಮಾಡಿ ಬಹಳ ಸಂತೋಷಪಟ್ಟು ಮೇಲೆ ಕಂಡ ನಮ್ಮ ಹರಕೆಯನ್ನು ನೆರವೇರಿಸಿಕೊಡುತ್ತೇವೆಂದು ವಾಗ್ದಾನಮಾಡಿದ್ದಾರೆ. ಅಂದರೆ ನಮ್ಮ ಹರಕೆಯೂ ಕ್ಷಿಪ್ರದಲ್ಲಿಯೇ ನೆರವೇರಬಹುದಾಗಿ ಕಾಣುತ್ತದೆ. ನಮ್ಮ ಸ್ಕೂಲು ದಿನೇ ದಿನೇ ಹೆಚ್ಚುತ್ತಿದ್ದು ಸ್ಥಳವೇ ಸಾಲದಂತಾಗುತ್ತಾ ಇದೆ. ಸಭೆಯು ಆ ದಿನರಾತ್ರಿ ೧೦ ಘಂಟೆಗೆ ಪೂರೈಸಿತು. ನಮ್ಮ ಮಾಸ್ಟರು ಎಲ್ಲಾ ಗ್ರಾಮಸ್ಥರನ್ನೂ ಏಕಮತ್ಯದಿಂದ ಸೇರಿಸಿ ಹೀಗೆ ಮಾಡುವುದರಿಂದ ನಮಗೆಲ್ಲಾ ಬಹಳ ಸಂತೋಷವುಂಟಾಗಿದೆ.

ಪ್ರಜಾಹಿತೈಷಿ.

ತುಮ್ಕೂರು ತಾಲ್ಲೂಕು ತೊಟ್ಲಕೆರೆ ವಿ|| ವಿ|| ಸ್ಕೂಲಿನಲ್ಲಿ ತಾ|| ೧೦-೫-೧೪ ರ ಮಧ್ಯಾಹ್ನ ೫ ಗಂಟೆಯಲ್ಲಿ ನೆರೆದ ವಿದ್ಯಾವಿದ ಸಂಘ ಸೂಚಕವಾದ ವಿಷಯ:–ಈ ಗ್ರಾಮದಲ್ಲಿ ಈಗ್ಗೆ ೨೦-೩೦ ವರ್ಷಗಳಿಂದಲೂ ಬಾಲಕ ಬಾಲಕಿಯರಿಗೆ ಸರಿಯಾದ ಸ್ಕೂಲ್ ಕಟ್ಟಡವಿಲ್ಲದ ವಿಷಯದಲ್ಲಿ ಲೇಟ್ ಹ|| ಅ|| ಡೆ|| ಇ|| ಸಾಹೇಬರವರಾದ ಮ|| ಎಂ. ಮಾಧವರಾಯರವರು ವಿಷಾದಪಟ್ಟು ಇದಕ್ಕಾಗಿ ಇಲ್ಲಿನ ಮ|| ಶಾನುಣ್ಣನವರು, ರಾಮಯ್ಯನವರು, ಸಾ|| ಲಕ್ಷ್ಮೀನರಸೇಗೌಡರವರು, ಕಾ|| ಭೀಮಣ್ಣನವರು, ಗಾ|| ಗಂಗಪ್ಪನವರು, ಸೆ|| ಮಲ್ಲಪ್ಪನವರು, ಜ|| ಮಲ್ಲಪ್ಪನವರು, ಯ|| ಹೊನ್ನಪ್ಪನವರು, ಸೀ|| ಹುಚ್ಚೀರಪ್ಪನವರು, ಪುಟ್ಟಾಚಾರ್ಯರವರು ಓದೋಬಾಲಯ್ಯನವರು, ಭಾವಿಮನೆ ತಿಮ್ಮಪ್ಪನವರು ಇವರೇ ಮುಂತಾದ ಗ್ರಾಮ ಮುಖಂಡರಿಂದ ಚಂದಾ ವಸೂಲ್ಮಾಡಿ ಈ ಕಟ್ಟಡಕ್ಕೆ ಸರಿಯಾದ ಪಾಯವೆಂಬ ಸಸಿಯನ್ನು ಹಾಕಿದರು. ಇದನ್ನು ಸರ್ಕಾರ ದ್ರವ್ಯಸಹಾಯದೊಡನೆ ಲೇಟ್ ಹ|| ಡೆ|| ಇ|| ಸಾಹೇಬರವರಾದ ಮ|| ಹೆಚ್ ಯಸ್. ವೆಂಕಟರಮಣಯ್ಯನವರು ಮತ್ತು ಹಾಲಿಯಿರುವ ತಾಲ್ಲೂಕ್ ಅಮಲ್ದಾರ್ ಸಾಹೇಬರವರು ಪ್ರಜೆಗಳಮೇಲೆ ಅಭಿಮಾನವಿಟ್ಟು ಪೂರ್ಣ ಫಲಕೊಡುವಂತೆ ಮಾಡಿಸಿಕೊಟ್ಟದ್ದಕ್ಕಾಗಿ ಇವರುಗಳನ್ನು ಸದಾ ವಂದಿಸುತ್ತೇನಲ್ಲದೆ ಈ ರೀತಿ ಮಾಡಿಸಿಕೊಟ್ಟ ಈ ಹೊಸ ಕಟ್ಟಡದಲ್ಲಿ ಈ ದಿವಸ ಈ ಗ್ರಾಮದ ಪಾ|| ಲಕ್ಷ್ಮೀನರಸೇಗೌಡರೇ ಮೊದಲಾದ ಗ್ರಾಮ ಮುಖಂಡರಿಂದ ನಡೆಯುವ ಶ್ರೀ ಲಕ್ಷ್ಮೀನರಸಿಂಹಸ್ವಾಮಿಯ ಹೊಸರಥೋತ್ಸವ ಸೂಚಕವಾದ ಒಂದನೆ ಸಭೆಯು ಈ ಸ್ಕೂಲಿನಲ್ಲಿ ಸೇರಲ್ಪಟ್ಟು ಅಗ್ರಾಸನಾಧಿಕಾರವನ್ನು ಮ|| ತುಮಕೂರು ಕರಣೀಕ ನಲ್ಲಪ್ಪನವರು ವಹಿಸಿ ವಿದ್ಯಾ ವಿಷಯವಾಗಿಯೂ ಗ್ರಾಮದ ಸಂಘಗಳ ವಿಷಯವಾಗಿಯೂ ಇವುಗಳನ್ನು ಕುರಿತು ಪ್ರಜೆಗಳಿಗೆ ಬಹಳ ಉತ್ಸಾಹದಿಂದಲೂ, ಪ್ರೀತಿಯಿಂದಲೂ ಉದಾಹರಿಸಿದರು. ಹಿರಿತೊಟ್ಲಕೆರೆ ಮ|| ಸ್ಕೂಲ್‌ಮಾಸ್ಟರ್ ಷಣ್ಮುಖ ದೀಕ್ಷಿತರು ವ್ಯವಸಾಯ ವಿಷಯವನ್ನು ಕುರಿತು ಪ್ರಜೆಗಳಿಗೆ ತಿಳಿಸಿದರು. ಕೋರದ ಸಮ್ಮತು ಶೇಕದಾರ್ರವರು ಗ್ರಾಮಪಂಚಾಯಿತಿ ಮೊದಲಾದ ವಿಷಯವನ್ನು ಓದಿ ತಿಳಿಸಿದರು. ಈ ಮೇಲ್ಕಂಡ ಸಭಿಕರಾದ ಮಹನೀಯರನ್ನೂ ಸ್ಕೂಲ್ ವಿದ್ಯಾರ್ಥಿಗಳನ್ನೂ ತಾಂಬೂಲವೇ ಮೊದಲಾದ ಅಲ್ಪಾಹಾರದಿಂದ ತೃಪ್ತಿಪಡಿಸಲು ಸಾ|| ಗಂಗಪ್ಪನವರು, ಜ|| ಮಲ್ಲಪ್ಪನವರು ಸೀ|| ಹುಚ್ಚೀರಪ್ಪನವರು ಇವರುಗಳ ಧರ್ಮಸೂಚಕವಾದ ಕರ್ತವ್ಯವು ಮಾಡಲ್ಪಟ್ಟಿತು. ಅಲ್ಲದೆ ವಿದ್ಯಾರ್ಥಿಗಳ ಉತ್ಸಾಹಕ್ಕೋಸ್ಕರ ಹ|| ಅ|| ಡೆ|| ಇ|| ಸಾಹೇಬರವರಾದ ತಿರುನಾರಣಯ್ಯಂಗಾರ್ರವರು ದಯಪಾಲಿಸಿದ್ದ ಇನಾಂ ಪುಸ್ತಕಗಳನ್ನು ಅಗ್ರಾಸನಾಧಿಪತಿಗಳು ಕೆಲವು ವಿದ್ಯಾರ್ಥಿಗಳಿಗೆ ಕೊಟ್ಟು ಅವರುಗಳಿಗೆ ವಿದ್ಯಾ ವಿಷಯದಲ್ಲಿ ಉತ್ಸಾಹವನ್ನೂ ಪ್ರಯೋಜನವನ್ನೂ ಬೋಧಿಸಿದರು. ಉಪಯುಕ್ತವಾದ ಧರ್ಮಮಾರ್ಗಗಳನ್ನು ಲಘುವಾಗಿ ಉಪದೇಶಮಾಡಿದರು. ಈಗ್ಗೆ ಸುಮಾರು ೮-೧೦ ವರ್ಷಗಳ ಕೆಳಗೆ ಈ ಸ್ಕೂಲ್ ಬಹಳ ಹೀನಸ್ಥಿತಿಯಲ್ಲಿದ್ದು ಈಗ ಇಷ್ಟು ಅಭಿವೃದ್ಧಿಗೆ ಬಂದದ್ದು ಇಲ್ಲಿನ ಹಾಲಿಯಿರುವ ಅ|| ಮಾ|| ಗಿರಿಯಾಚಾರ್ಯರವರು ಹೆ|| ಮಾ|| ಚೆಂದಗಿರಯ್ಯನವರು ಇವರುಗಳ ಉತ್ಸಾಹಾಭಿವೃದ್ಧಿಯೇ ಕಾರಣವಾಗಿರುತ್ತದೆ. ಅಲ್ಲದೆ ಈ ಸ್ಕೂಲನ್ನು ಹಾಲಿಯಿರುವ ಹ|| ಡೆ|| ಇ|| ಸಾಹೇಬರವರಾದ ಮ|| ವೆ|| ಗೋಪಾಲ್‌ರಾಯರವರು ಮತ್ತು ಹ|| ಅ|| ಡೆ|| ಇ|| ಸಾಹೇಬರವರಾದ ಮ|| ತಿರುನಾರಣಯ್ಯಂಗಾರ್ರವರು ಈ ಸ್ಕೂಲನ್ನು ಇನ್ನೂ ಪುರೋಭಿವೃದ್ಧಿಗೆ ತರಲು ಮಾಸ್ಟರುಗಳಿಗೆ ತುಂಬಾ ಶ್ರದ್ಧೆಯಿರುವಂತೆ ಮಾಡಿಸಿಕೊಟ್ಟಾರೆಂದು ಬೇಡುವ

ವಿದ್ಯಾಭಿಮಾನಿ.

ಬರ್ಮಾದೇಶದ ತೆಂಗಿನ ವ್ಯವಸಾಯ.

ಹಿಂದಿನ ಶೇಷ.

ಸೊಸಿಗಳನ್ನು ನೆಟ್ಟತರುವಾಯ ಮಾಡಬೇಕಾದ ಕಾರ್ಯಗಳು:–ಸೊಸಿಗಳನ್ನು ಚೆನ್ನಾಗಿ ಬೇರುಗಳು ಬಿಟ್ಟುಕೊಳ್ಳುವವರಿಗೆ ಪ್ರತಿ ವರುಷವೂ ಬೇಸಗೆಯಲ್ಲಿ ನೀರನ್ನು ಹಾಕುತ್ತಿರಬೇಕು. ಮೂರು ನಾಲ್ಕು ವರ್ಷಗಳ ಕಾಲ ನೀರು ಹಾಕಿದರೆ ಸಾಕೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಆದರೆ ಗಿಡಗಳ ಜೀವಿತಕಾಲದಲ್ಲೆಲ್ಲಾ ಬೇಸಿಗೆಯಲ್ಲಿ ನೀರನ್ನು ಹಾಕುತ್ತಲೇ ಇದ್ದರೆ ಹೀಚುಗಳು ಉದುರುವುದು ಕಡಿಮೆಯೆಂದು ಕೆಲವು ಅನುಭವದಾರರು ಹೇಳುತ್ತಾರಾದ್ದರಿಂದ ಸಾಧ್ಯವಾದರೆ ನೀರನ್ನು ಹಾಕುತ್ತಲೇ ಇರುವುದು ಉತ್ತಮ ಪಕ್ಷವೆಂದು ತೋರುತ್ತದೆ. ಬೇಸಿಗೆಯಲ್ಲಿ ಸೊಸಿಗಳಿಗೆ ವಾರಕ್ಕೆ ಎರಡಾವರ್ತಿಯೂ ಸ್ವಲ್ಪ ದೊಡ್ಡವುಗಳಿಗೆ ಒಂದಾವರ್ತಿಯೂ ನೀರನ್ನು ಹಾಕಿದರೆ ಸಾಕಾಗಿರುತ್ತದೆ. ಆದರೆ ದೊಡ್ಡವಾಗಿ ಫಲಬಿಡುವ ಗಿಡಗಳಿಗೆ ತಿಂಗಳಿಗೊಂದಾವರ್ತಿ ಹೇರಳವಾಗಿ ನೀರನ್ನು ಹಾಕಬೇಕು.

ದುರ್ಬಲವಾಗಿರುವಂತೆ ಕಂಡುಬರುವ ಗಿಡಗಳ ಬೇರಿನ ಸುತ್ತಲೂ ಅಗತೆಮಾಡಿ ಇತರ ಕಸ ಕಡ್ಡಿಗಳಿಲ್ಲದ ಹಳೇದಾದ ಹಳಗಿದ ಸಗಣಿ ಗೊಬ್ಬರ ಅಥವಾ ಮೂಳೆ ಪುಡಿಯನ್ನು ಹಾಕಬೇಕು ಬೇರುಗಳ ಮೇಲ್ಭಾಗದಲ್ಲಿ ಸ್ವಲ್ಪ ಬೂದಿ ಮತ್ತು ಉಪ್ಪನ್ನು ಹಾಕಬೇಕು ಆರೋಗ್ಯವಾಗಿ ಬಲವಾಗಿ ಬೆಳೆದಿರುವ ಮರಗಳಿಗೆ ಮೇಲೆ ಹೇಳಿದ ವ್ಯವಸಾಯವೇನೂ ಅವಶ್ಯಕವಾಗಿರುವುದಿಲ್ಲ.

ಸೊಸಿಗಳನ್ನು ನೆಟ್ಟನಂತರ ಒಂದು ವರ್ಷಕಾಲ ಅವುಗಳ ಪಕ್ಕಗಳಿಂದ ಅವುಗಳಿಗೆ ಮರೆಮಾಡುವುದು ಒಳ್ಳೇದು. ಆದರೆ ಸೊಸಿಗಳ ಮೇಲ್ಭಾಗಕ್ಕೆ ಮಾತ್ರ ಮರೆಮಾಡಬಾರದು.

ಮರಗಳು ಫಲಕ್ಕೆ ಬರುವವರೆಗೂ ಅವುಗಳ ಮಧ್ಯೆ ಇತರ ಬೆಳೆಗಳನ್ನಿಡಬಹುದು. ಆದರೆ ಬಾತಗಳ ಸುತ್ತ ಮಾತ್ರ ಪೈರು ಬರಕೂಡದು. ಹಸುರು ಗೊಬ್ಬರದ ಪೈರನ್ನಿಡಬೇಕು. ಇವುಗಳನ್ನು ಮಳೆಗಾಲದಲ್ಲಿ ಜಮೀನಿನಲ್ಲಿ ಉತ್ತುಬಿಡಬೇಕು. ಸೊಸಿಗಳು ಬೆಳೆದು ಗರಿಗಳು ದನಗಳಿಗೆ ನಿಲುಕಿಸದಿರುವಷ್ಟು ಎತ್ತರಕ್ಕೆ ಬಂದಾಗ್ಯೆ ರಾತ್ರಿಕಾಲದಲ್ಲಿ ಗಿಡಗಳಿಗೆ ಹಸು, ಎಮ್ಮೆ, ಕುದುರೆ, ಹಂದಿ ಇವುಗಳನ್ನು ಕಟ್ಟಿಹಾಕಬೇಕು. ಕಟ್ಟುವುದಕ್ಕೆ ಮೊದಲು ಕೆಳಕ್ಕೆ ಹುಲ್ಲು, ತರಗು, ಕಸ ಕಡ್ಡಿ ಇವುಗಳನ್ನೆಲ್ಲಾ ಹಾಸಿರಬೇಕು. ಹಾಗೆ ಮಾಡಿದಲ್ಲಿ ದನಗಳ ಸಗಣಿ ಗಂಜಲ ಇವುಗಳೆಲ್ಲವೂ ಅಲ್ಲೇ ಬಿದ್ದು ತೆಂಗಿನ ಮರಗಳಿಗೆ ಬಹಳ ಉತ್ತಮವಾದ ಗೊಬ್ಬರವಾಗಿ ಪರಿಣಮಿಸುವುದು. ಅಲ್ಲದೆ ತೆಂಗಿನ ತೋಟಗಳಲ್ಲಿ ರಾತ್ರಿಕಾಲದಲ್ಲಿ ಕುರಿಗಳ ಮಂದೆಯನ್ನು ತಡೆದಿರಬಹುದು. ಇವುಗಳನ್ನು ಪ್ರತಿ ರಾತ್ರಿಯೂ ಒಂದೇ ಸ್ಥಳದಲ್ಲಿ ನಿಲ್ಲಿಸದೆ ಒಂದೊಂದು ರಾತ್ರಿ ಒಂದೊಂದು ಭಾಗದಲ್ಲಿ ತಡೆದರೆ ಪೂರ್ತಿ ತೋಟಕ್ಕೆ ಇವುಗಳ ಹಿಕ್ಕೆ ಮತ್ತು ಗಂಜಲವು ಬೀಳುವುದು. ಹೀಗೆ ಕುರಿಗಳನ್ನು ತಡೆಯುವುದಕ್ಕೆ ಮೊದಲು ಮತ್ತು ನಂತರದಲ್ಲಿ ಸ್ವಲ್ಪ ಮಟ್ಟಿಗೆ ಕುಂಟೆ ಹೊಡೆದರೆ ಬಹಳ ಪ್ರಯೋಜನವುಂಟು ಅಲ್ಲದೆ ಮರಗಳ ಬುಡದ ಸುತ್ತಲೂ ಸುಮಾರು ಐದು ಅಡಿ ದೂರ ಬೇರುಗಳ ಸುತ್ತಲ ಮಣ್ಣನ್ನೆಲ್ಲಾ ಅಗೆದು ಮಳೆಗಾಲದ ಪೂರ್ತಿ ಬೇರುಗಳೆಲ್ಲವೂ ಮೇಲಕ್ಕೆ ಕಾಣುವಂತಿಟ್ಟದ್ದು ಮಳೆಗಾಲವು ತೀರಿದೊಡನೆಯೇ ಸುಮಾರು ನಾಲ್ಕು ಅಂಗುಲ ಪ್ರಮಾಣ ಬೂದಿ, ಮೂಳೆ ಪುಡಿ, ಬತ್ತದ ಜೊಟ್ಟು, ಗೋಡುಮಣ್ಣು, ದನದ ಸಗಣಿ ಇವೇ ಮೊದಲಾದ ಗೊಬ್ಬರಗಳನ್ನು ಬೇರುಗಳ ಮೇಲೆ ಹರಡಿ ಗೊಬ್ಬರದ ಮೇಲೆ ಮಣ್ಣನ್ನು ಹಾಕಿ ಸ್ವಲ್ಪಮಟ್ಟಿಗೆ ದಮ್ಮಸ್ ಮಾಡಿದರೆ ಬಹಳ ಪ್ರಯೋಜನವುಂಟು. ಹುರಿಯನ್ನು ಹೊಸೆಯುವ ಕೆಲಸಕ್ಕೆ ಬಾರದ ತೆಂಗಿನ ಮೊಟ್ಟೆ ಚಾಪೆಗಳನ್ನು ಹೆಣೆಯುವ ಕೆಲಸಕ್ಕಾಗದ ಗರಿ, ಒಲೆಗೆ ಹಾಕುವುದಕ್ಕೆ ಬಾರದ ಮೊಟ್ಟೆ, ಗೊಡಮಟ್ಟೆ ಮತ್ತು ಸಿದರೆ ಇವುಗಳೆಲ್ಲವನ್ನೂ ಮರಗಳ ಮಧ್ಯೆ ರಾಶಿಮಾಡಿ ಸೂರ್ಯಾಸ್ತಮಯವಾದ ನಂತರದಲ್ಲಿ ಬೆಂಕಿಹಾಕಿ ಉರಿಸಿ ಬೂದಿಯೊಡನೆ ದನದ ಸಗಣಿಯನ್ನು ಬೆರಸಿ ಬೇರುಗಳ ಸುತ್ತಲೂ ಹಾಕಿ ಅಗತೆ ಮಾಡಿದರೆ ಚಿಕ್ಕ ವಯಸ್ಸಿನ ಗಿಡಗಳಲ್ಲಿ ಬಹಳ ಜಾಗ್ರತೆಯಾಗಿ ಹುವ್ವು ಬಿಡುವುದೆಂದೂ, ಫಲಬಿಡುತ್ತಿರುವ ಮರಗಳಲ್ಲಿ ಹೇರಳವಾಗಿ ಫಲಬಿಡುವುದೆಂದೂ ಹೇಳುತ್ತಾರೆ. ತೆಂಗಿನ ಮರಗಳಿಗೆ ಸುಣ್ಣವು ಅತ್ಯವಶ್ಯಕವಾಗಿದೆ. ಒಂದು ವರುಷ ಹಸುರು ಸೊಪ್ಪಿನ ಗೊಬ್ಬರವನ್ನು ಹಾಕುವುದು ಮುಂದಲ ವರುಷ ಸುಣ್ಣವನ್ನು ಹಾಕುವುದು ಈ ಕ್ರಮವರಿತು ವ್ಯವಸಾಯ ಮಾಡುವುದು ಉತ್ತಮವಾಗಿದೆ. ಎಕರೆಗೆ ಹತ್ತು ಹನ್ನೆರಡು ಕುಳ್ಗ ಸುಣ್ಣವು ಸಾಕಾಗುವುದು.

ಉತ್ಪತ್ತಿ:–ಮೇಲೆ ಹೇಳಿದ ಕ್ರಮವರಿತು ವ್ಯವಸಾಯ ಮಾಡಿದರೆ ಸೊಸಿಗಳನ್ನು ನೆಟ್ಟ ಆರು ಅಥವಾ ಏಳನೆ ವರುಷದಲ್ಲಿ ಫಲ ಬಿಡಲು ಆರಂಭವಾಗುವುದು. ಪೂರ್ಣ ಫಲ ಬಿಡುವಾಗ್ಯೆ ಒಂದೊಂದು ಗಿಡಕ್ಕೆ ೫೦ರಿಂದ ೧೦೦ರ ವರಿಗೂ ಕಾಯಿಬಿಡುವುದು. ಮಧ್ಯವಯಸ್ಸಿನ ಮರಗಳಲ್ಲಿ ೧೫೦-೨೦೦ ಕಾಯಿಗಳು ಬಿಡುವುವೆಂದು ಹೇಳುತ್ತಾರೆ. ಎಳನೀರಿಗೆ ಬಹಳವಾಗಿ ಗಿರಾಕಿ ಇದ್ದ ಹೊರತು ಕಾಯಿಗಳು ಚನ್ನಾಗಿ ಬಲಿಯುವವರಿವಿಗೂ ಕೀಳಬಾರದು. ಕೆಳಭಾಗದ ಗೊನೆಯಲ್ಲಿ ಒಂದೆರಡು ಕಾಯಿಗಳು ತಳಲುಗಳಾಗಿರುವುವೆಂದು ಕಂಡುಬಂದಾಗ್ಯೆ ಅದರ ಮತ್ತು ಅದರ ಮೇಲ್ಭಾಗದ ಗೊನೆಗಳ ಕಾಯಿಗಳನ್ನು ಕೀಳಬೇಕು. ಕಾಯಿಗಳನ್ನು ಕೀಳಿಸುವಾಗ್ಯೆ ಗಿಡಗಳ ಮೊಟ್ಟೆಗಳ ಮಧ್ಯೆ ಇರಬಹುದಾದ ಕಚರಾಗಳು, ಒಣಗಿದ ಗರಿಗಳು ಇವುಗಳೆಲ್ಲವನ್ನೂ ಕಿತ್ತು ಹಾಕಿ ಇರುವೆ ಅಳಲು ಮತ್ತು ಇಲಿ ಇವುಗಳ ಗೂಡುಗಳಿದ್ದರೆ ನೋಡಿ ತೆಗೆದುಹಾಕಬೇಕು. ಸುಮಾರು ೯೦ ಮಣ ಕೊಪ್ಪರಿಗೆ ೩೦೦ ರೂಪಾಯಿನವರಿವಿಗೂ ಅಷ್ಟೇ ಕೊಪ್ಪರಿ ಎಣ್ಣೆಗೆ ೬೫೦ ರೂಪಾಯಿನವರಿವಿಗೂ ಬೆಲೆ ಸಿಕ್ಕುವುದು. ತೆಂಗಿನ ಕಾಯಿನ ಮೇಲಿನ ಮೊಟ್ಟೆಯನ್ನು ನೀರಿನಲ್ಲಿ ನೆನಿಸಿ ಕದಮೆಯನ್ನು ತೆಗೆದು ಅದರಿಂದ ಹುರಿ, ಹಗ್ಗ ಮೊದಲಾದವುಗಳನ್ನು ತಯಾರಿಸುವುದು. ಕದಮೆಯು ಮಣಕ್ಕೆ ೧-೫-೦ ಮೊದಲ್ಗೊಂಡು ೩-೩ ೦ ರೂಪಾಯಿಗಳವರಿವಿಗೂ ಬೆಲೆಯಾಗುವುದು.

ಕೆ. ಗೆ

ದಕ್ಷಿಣಾಫ್ರಿಕಾ ವಿಚಾರಕ ಸಂಘದವರು ಮಾಡಿರುವ ತೀರ್ಮಾನದ ಮುಖ್ಯಭಾಗಗಳು.

ದಕ್ಷಿಣಾಫ್ರಿಕಾದಲ್ಲಿ ೩ ವರ್ಷಗಳ ಕಾಲ ಅಥವಾ ಅದಕ್ಕಿಂತ ಹೆಚ್ಚಿನ ಕಾಲ ವಾಸಮಾಡಿಕೊಂಡಿದ್ದ ದೇಶೀಯರು ಎಂದರೆ ಈಗಲಾಗಲಿ ಅಥವಾ ಪೂರ್ವದಲ್ಲಾಗಲಿ ದಕ್ಷಿಣಾಫ್ರಿಕಾದಲ್ಲಿ ಒಬ್ಬಳಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವವರು ಅಂಥ ಪತ್ನಿಯರ ಹೆಸರುಗಳನ್ನೆಲ್ಲಾ ರಿಜಿಸ್ಟರ್ ಮಾಡಿಸುವುದಲ್ಲದೆ, ಅವರು ಭರತಖಂಡದಿಂದ ತಮ್ಮ ಮಕ್ಕಳುಮರಿಗಳನ್ನು ಕರೆದುಕೊಂಡು ದಕ್ಷಿಣಾಫ್ರಿಕಾಕ್ಕೆ ಹೋಗಿರುವುದಕ್ಕೆ ಅವಕಾಶವಾಗಬೇಕು.

ಅವರವರ ಮತಧರ್ಮಾನುಸಾರವಾಗಿ ಮದುವೆಯಾಗುವುದಕ್ಕೆ ಕೇಪ್ ಕಾಲನಿಯು ೧೮೬೦ ನೇ ವರ್ಷದ ೧೬ ನೇ ನಂ|| ಆಕ್ಟನ್ನನುಸರಿಸಿ ಪುರೋಹಿತರನ್ನು ನಿಯಮಿಸಿಕೊಳ್ಳುವುದಕ್ಕಾಗಿ ಒಂದು ಶಾಸನವು ಏರ್ಪಡಬೇಕು.

ಒಬ್ಬ ಮನುಷ್ಯನು ಅನೇಕ ಮಂದಿ ಪತ್ನಿಯರನ್ನು ಮಾಡಿಕೊಳ್ಳುವ ಆಚಾರವನ್ನು ಹೊಂದಿದ್ದರೂ ಸದ್ಯಃ ಒಬ್ಬಳೇ ಪತ್ನಿಯೊಡನೆ ವಾಸಮಾಡುತ್ತಿರುವಾಗ ಅಂಥ ಮದುವೆಯು ಅವರವರ ಮತಪದ್ಧತಿಪ್ರಕಾರ ಜರುಗಿದ್ದರೂ ಅದು ಸಲ್ಲತಕ್ಕುದೇ ಎಂದು ರಿಜಿಸ್ಟರ್ ಮಾಡಲು ಶಾಸನವಾಗಬೇಕು.

ನೆಟಾಲು ದೇಶದಲ್ಲಿ ೧೮೯೫ನೇ ವರ್ಷದ ೧೭ ನೇ ನಂ|| ಆಕ್ಟಿನ ೬ ನೆ ಪ್ರಕರಣದ ಪ್ರಕಾರ ಕೆಲವರು ದೇಶೀಯರು ಅಲ್ಲಿ ವಾಸಮಾಡಬೇಕಾಗಿದ್ದರೆ ವರ್ಷ ೧ ಕ್ಕೆ ೩೫ ರೂ. ತಲೆಗಂದಾಯವನ್ನು ತೆತ್ತು ಅಪ್ಪಣೆ ಚೀಟಿಯನ್ನು ಪಡೆಯಬೇಕೆಂದಿರುವ ನಿರ್ಬಂಧವನ್ನು ತಪ್ಪಿಸಿಬಿಡಬೇಕು.

೧೯೧೩ನೇ ವರ್ಷದ ಇಮಿಗ್ರೇಷನ್ ಶಾಸನವನ್ನನುಸರಿಸಿ ಕೈಗುರ್ತಿನ ಅಪ್ಪಣೆ ಚೀಟಿಯನ್ನು ಕೊಡಬೇಕೆಂದಿರುವ ಏರ್ಪಾಟಿನ ವಿಷಯದಲ್ಲಿ ಸ್ವಲ್ಪ ಸುಧಾರಣೆಮಾಡಬೇಕು. ಈ ಸರಟಿಫಿಕೇಟುಗಳು ೩ ವರ್ಷಗಳವರೆಗೆ ಮಾತ್ರ ವ್ಯವಹಾರದಲ್ಲಿರಬೇಕು.

ಕೇಪ್ ಟೌನಿನಲ್ಲಿ ಇಮಿಗ್ರೇಷನ್ ಶಾಖಾ ಕಾರ್ಯಾಲಯದಲ್ಲಿ ಒಬ್ಬ ಭಾಷಾಂತರಕಾರಿಯು ಏರ್ಪಡಿಸಲ್ಪಡಬೇಕು.

ಕೆಲ ಸಮಯದಲ್ಲಿ ಕೇಪ್ ಟೌನ್ ಅಧಿಕಾರಿಗಳು ದೇಶೀಯರಿಂದ ಹೆಬ್ಬೆಟ್ಟಿನ ಗುರ್ತನ್ನು ತೆಗೆದುಕೊಳ್ಳುವುದಕ್ಕೆ ಪ್ರತಿಯಾಗಿ ಹತ್ತು ಬೆರಳುಗಳನ್ನೂ ಒತ್ತಿಸಿಕೊಳ್ಳುತ್ತಿದ್ದ ಪದ್ಧತಿಯನ್ನು ತಪ್ಪಿಸಿಬಿಡಬೇಕು.

ಒಂದು ರಾಷ್ಟ್ರಭಾಗದಿಂದ ಮತ್ತೊಂದು ರಾಷ್ಟ್ರಕ್ಕೆ ಹೋಗುವಾಗ ತಾತ್ಕಾಲಿಕವಾದ ಅಪ್ಪಣೆ ಚೀಟಿಯನ್ನು ಕೊಡುವುದಕ್ಕೆ ಎಮಿಗ್ರೇಷನ್ ಅಧಿಕಾರಿಗಳು ಇಲ್ಲದಿರುವ ಸ್ಥಲದಲ್ಲಿ ದಂಡಾಧಿಕಾರಿಗಳಿಗೆ ಅಧಿಕಾರವಿರುವಂತೆ ಮಾಡಬೇಕು.

ಗುರುತಿನ ಅಪ್ಪಣೆ ಚೀಟಿಕೊಡುವುದಕ್ಕೂ, ತಾತ್ಕಾಲಿಕವಾದ ರಸೀದಿಯನ್ನು ಕೊಡುವುದಕ್ಕೂ ಸಹ ೧೩ ರೂ. ನಂತೆ ಇರುವ ಫೀಯನ್ನು ಕಡಿಮೆಮಾಡಬೇಕು. ದೀರ್ಘಕಾಲಕ್ಕೆ ಅಪ್ಪಣೆ ಚೀಟಿಯು ಬೇಕಾಗಿದ್ದರೆ ಆ ಫೀಜು ಹೆಚ್ಚಾಗಿರಬಹುದು.

ಒಂದು ರಾಷ್ಟ್ರದಿಂದ ಮತ್ತೊಂದು ರಾಷ್ಟ್ರಕ್ಕೆ ಹೋಗುವುದಕ್ಕಾಗಿ ಕೇಳಿಕೊಂಡಾಗ, ಅವನು ಹೋಗತಕ್ಕ ಊರಿನಲ್ಲಿರುವ ಎಮಿಗ್ರೇಷನ್ ಅಧಿಕಾರಿಗಳಿಗೆ ತಂತೀವಾರ್ತೆಯನ್ನು ಕಳುಹಿಸಬೇಕಾಗಿರುವ ಪದ್ಧತಿಯನ್ನು ತಪ್ಪಿಸಿಬಿಡಬೇಕು.

ನೇಟಾಲಿನಲ್ಲಿ ವಾಸಮಾಡುವುದಕ್ಕೆ ಇಮಿಗ್ರೇಷನ್ ಅಧಿಕಾರಿಗಳು ಅಪ್ಪಣೆ ಚೀಟಿಯನ್ನು ಕೊಟ್ಟ ಬಳಿಕಲೂ ಆ ಚೀಟಿಯು ಯಜಮಾನನ ಹೆಬ್ಬೆಟ್ಟಿನ ಗುರ್ತು ಹಾಕಲ್ಪಟ್ಟಿರುವಾಗಲೂ ಯೂನಿಯನ್ ಪ್ರಭುತ್ವದ ಪ್ರದೇಶದಲ್ಲಿ ಪ್ರವೇಶಿಸುವುದಕ್ಕೆ ದೇಶೀಯರಿಗೆ ಸಂಪೂರ್ಣಾಧಿಕಾರವಿರುವಂತೆ ಭಾವಿಸಲ್ಪಡಬೇಕು.

ಭರತಖಂಡದಿಂದ ದಕ್ಷಿಣಾಫ್ರಿಕಾದಲ್ಲಿರುವ ತಮ್ಮ ಪತಿಗಳ ಬಳಿಗೆ ಮಕ್ಕಳುಗಳ ಸಮೇತ ಹೋಗುವ ಸ್ತ್ರೀಯರ ವಿಷಯವನ್ನು ಕುರಿತು ವಿಚಾರಮಾಡುವುದಕ್ಕಾಗಿ ಭರತಖಂಡದ ಸರ್ಕಾರದವರೊಡನೆ ಒಂದು ಏರ್ಪಾಡುಮಾಡಬೇಕು. ಈ ಸ್ತ್ರೀಯರ ವಿಷಯಕವಾಗಿ ವಿಚಾರಮಾಡಲು ಏರ್ಪಡುವ ಅಧಿಕಾರಿಗೆ ಈ ಸ್ತ್ರೀಯರು ನಿಜವಾಗಿ ಇಂಥವನ ಹೆಂಡತಿಯೇ ಎಂದು ತೋರಿಬಂದರೆ ಒಂದು ಸರ್ಟಿಫಿಕೇಟನ್ನು ಕೊಡುವಂತಾಗಬೇಕು. ಇದನ್ನು ಇಮಿಗ್ರೇಷನ್ ಆಫೀಸರು ಸಪ್ರಮಾಣವಾದುದೆಂದು ಭಾವಿಸಬೇಕು. ಇತ್ಯಾದಿ.

ಈ ಮೇಲೆ ಕಂಡ ತೀರ್ಪುಗಳಲ್ಲಿ ತಲೆಗಂದಾಯವನ್ನು ತಪ್ಪಿಸಿದುದು, ವಿವಾಹ ವಿಷಯದಲ್ಲಿದ್ದ ನಿರ್ಬಂಧ ಇವೆರಡು ಮುಖ್ಯ ವಿಷಯಗಳಲ್ಲಿ ಭಾರತೀಯರಿಗೆ ಸೌಕರ್ಯವು ಉಂಟಾಗುವಂತಿರುವುದು ಉಳಿದ ವಿಷಯಗಳು ಸಾಮಾನ್ಯವಾದುವುಗಳು ಇಷ್ಟು ತೀರ್ಮಾನವಾಗಬೇಕಾದರೂ, ದಕ್ಷಿಣಾಫ್ರಿಕಾದಲ್ಲಿರುವ ಭಾರತೀಯರು ತೋರಿಸಿದ ಒಗ್ಗಟ್ಟೂ ಸಾತ್ವಿಕ ನಿರೋಧಮೂಲಕವಾದ ತಪಸ್ಸೂ, ಅದಕ್ಕೆ ಭರತಖಂಡದ ಸಹೋದರರೆಲ್ಲಾ ತೋರಿಸಿದ ಸಹಾನುಭೂತಿಯೂ ಮುಖ್ಯವಾಗಿ ನಮ್ಮ ವೈಸ್‌ರಾಯರು ತೋರಿದ ಅನುತಾಪ ಸಹಾಯಗಳೂ ಮುಖ್ಯ ಕಾರಣಗಳು. ಹಿಡಿದ ಕಾರ್ಯವು ಇಷ್ಟು ಮಟ್ಟಿಗಾದರೂ ಅನುಕೂಲವಾದುದು ಸ್ವಲ್ಪ ಸಮಾಧಾನಕರವೆಂದೇ ಹೇಳಬಹುದು ಈ ತೀರ್ಮಾನವನ್ನು ಅಲ್ಲಿನ ಪ್ರಭುತ್ವದವರು ಎಷ್ಟುಮಟ್ಟಿಗೆ ಅನುಮೋದಿಸಿ ವ್ಯವಹಾರಕ್ಕೆ ತರುವರೆಂಬುದು ನಿರೀಕ್ಷಿತವಾಗಿದೆ.

ಪ್ರಚಂಡವಾದ ಹಡಗುಗಳು.

ಪ್ರಪಂಚದಲ್ಲಿ ಬರಬರುತ್ತ ಆಕಾಶಯಾನದ ನವನವ ಸುಧಾರಣೆಯು ಒತ್ತಟ್ಟಿಗೆ ಪ್ರಬಲಿಸುತ್ತಿರುವಲ್ಲಿ ಕೈಗೂಡಿಬಂದಿರುವ ಜಲಯಾನ ಸಾಧನಗಳಲ್ಲಿ ಒಬ್ಬರನ್ನೊಬ್ಬರು ಮೀರಿಸುವ ಕುತೂಹಲವು ರಾಷ್ಟ್ರರಾಷ್ಟ್ರಗಳಲ್ಲಿ ಹೆಚ್ಚಾಗಿರುವುದು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಜಲಯಾನ ಸಂಪತ್ತಿನಲ್ಲಿ ಆಂಗ್ಲರೂ ಜರ್ಮನರೂ ಅತ್ಯಂತ ಪ್ರಬಲರು. ಇವರೀರ್ವರಲ್ಲಿ ತಂತಮ್ಮೊಳಗೆ ೧೦೦೦ ಅಡಿಯುದ್ದವಾದ ಹಡಗನ್ನು ಮೊಟ್ಟಮೊದಲು ನಿರ್ಮಿಸಿ ಸಮುದ್ರಯಾನವನ್ನು ಮಾಡಬೇಕೆಂಬ ವಿಷಯದಲ್ಲಿ ವಿಶೇಷವಾದ ಸ್ಪರ್ಧೆಯಿರುತ್ತಿದೆ. ಕೆಲವು ಕಾಲದ ಹಿಂದೆ ಇವರೀರ್ವರಲ್ಲಿ ಯಾರಲ್ಲೂ ೯೦ ಅಡಿ ಯುದ್ದಕ್ಕೆ ಮೀರಿದ ಅಳತೆಯ ಹಡಗು ಇರಲಿಲ್ಲ ಈಚೆಗೆ ೯೧೯ ಅಡಿ ಉದ್ದವೂ ೯೮ ಅಡಿಯಗಲವೂ ೫೦ ಸಾವಿರ ಟನ್ ತೂಕವುಳ್ಳ “ಇಂಪರೇಟರ್” ಎಂಬ ದೊಡ್ಡ ಹಡಗನ್ನು ಜರ್ಮನಿಯನೇಕ ಸಂಘದವರು ನಿರ್ಮಿಸಿದರು. ಪ್ರಪಂಚದಲ್ಲೆಲ್ಲಾ ಇದಕ್ಕೆ ಮಿಂಚಿದ ಹಡಗು ಮತ್ತೊಂದಿಲ್ಲವೆಂಬ ಖ್ಯಾತಿಯು ಇದಕ್ಕುಂಟಾಯಿತು. ಇದರ ಮೇಲೆ ಅದೇ ಜರ್ಮನಿಯವರೇ ೯೫೦ ಅಡಿಗಳ ಉದ್ದವೂ ೧೦೦ ಅಡಿಗಳ ಅಗಲವೂ ಉಳ್ಳ “ವಾಟರ್‌ಲ್ಯಾಂಡ್” ಎಂಬ ಹಡಗನ್ನು ನಿರ್ಮಿಸುತ್ತಿರುವರು. ಇದು ಬರುವ ಜೂನ್ ತಿಂಗಳಲ್ಲಿ ಸಿದ್ಧವಾಗುವುದು. ಈಗ ಆಂಗ್ಲ ಜನರ ನೌಕಾಸಂಘದಲ್ಲಿ “ಅಕ್ವಿಟಾನಿಯಾ” ಎಂಬ ಒಂದು ದೊಡ್ಡ ಹಡಗು ಕಟ್ಟಲ್ಪಡುತ್ತಿದೆ. ಇದು ೯೦೨ ಅಡಿಗಳ ಉದ್ದವಾಗಿದೆ. ಆಂಗ್ಲಜನರ ಹಡಗುಗಳಲ್ಲೆಲ್ಲಾ ಇದೇ ದೊಡ್ಡದು ಎಂದ ಬಳಿಕ ಇದುವರೆಗಿನ ಸ್ಪರ್ಧೆಯಲ್ಲಿ ಜರ್ಮನಿಯವರೇ ನೌಕಾ ನಿರ್ಮಿತಿಯಲ್ಲಿ ಪ್ರಮುಖರೆನಿಸಿಕೊಂಡಿದ್ದಾರೆ. ಆದರೆ ಕೆಲ ಆಂಗ್ಲ ಸಂಘದವರು ಈಗತಾನೇ ಇನ್ನು ಕೆಲವು ಬಲು ದೊಡ್ಡ ಹಡಗುಗಳನ್ನು ಕಟ್ಟುತ್ತಿದ್ದಾರೆ. ಅವುಗಳ ಘನತೆಯನ್ನು ಮುಂದೆ ಅರಿಯಬೇಕು.

ಮೇಲೆ ಹೇಳಿದ ಜರ್ಮನಿಯವರ “ಇಂಪರೇಟರ್” ಎಂಬ ಹಡಗಿನ ಘನತೆಯು ಎಷ್ಟಿರುವುದೆಂದರೆ–ಅದು ಅಟ್ಲಾಂಟಿಕ್ ಮಹಾಸಾಗರದಲ್ಲಿ ಏಳಾವೃತ್ತಿ ಸಂಚರಿಸಿ ಬಂದಿರುವುದರಲ್ಲಿ ೫೬ ಸಾವಿರ ಮಂದಿ ಪ್ರಯಾಣಿಕರನ್ನು ಸಾಗಿಸಿಕೊಂಡು ಹೋಗಿಬಂದಿದೆ. ಅವರಲ್ಲಿ ೨,೩೦೦ ಜನರು ಮೊದಲನೆ ತರಗತಿಯ ಪ್ರಯಾಣಿಕರು. ಉಳಿದವರು ಮಧ್ಯದ ಹಾಲಿನಲ್ಲಿ ಕುಳಿತು ಪ್ರಯಾಣಮಾಡಿದರು. ಈ ಪ್ರಯಾಣಿಕರೆಲ್ಲರೂ ಒಟ್ಟಿಗೆ ೧ ಕೋಟಿ ರೂ.ಗಳನ್ನು ಚಾರ್ಜಿಗಾಗಿ ಕೊಟ್ಟಿರುತ್ತಾರೆ. ಇದರಲ್ಲಿ ವೆಚ್ಚ ಕಳೆದು ನೌಕಾಸಂಘದವರಿಗೆ ೩೬ ಲಕ್ಷ ರೂ.ಗಳ ಲಾಭವು ಬಂದಿದೆ. ಈ ಹಡಗನ್ನು ನಿರ್ಮಿಸುವುದಕೆ, ೨ ಕೋಟಿಯೂ ೫೫ಲಕ್ಷ ರೂ.ಗಳು ಮುಟ್ಟಿವೆಯಂತೆ. ಈ ಹಡಗಿನಲ್ಲಿ ಒಂದಾವೃತ್ತಿಗೆ ೩೦೦ ಮಂದಿಗಳು ಮೊದಲನೆಯ ತರಗತಿಯಲ್ಲೂ, ೬೦೦ ಮಂದಿಗಳು ೨ ನೆ ತರಗತಿಯಲ್ಲೂ, ೯೦೦ ಮಂದಿಗಳು ೩ ನೆ ತರಗತಿಯಲ್ಲೂ, ೧೮೦೦ ಮಂದಿಗಳು ಮಧ್ಯದ ಸಾಲಿನಲ್ಲೂ, ಹಡಗಿನ ಕೆಲಸಗಾರರಾಗಿ ೧೧೮೦ ಮಂದಿಯೂ ಎಂದರೆ ಒಟ್ಟು ೫೦೦೦ ಮಂದಿಗಳು ಕುಳಿತು ಪ್ರಯಾಣಮಾಡಬಹುದು. ಈ ಹಡಗು ಕಟ್ಟಲ್ಪಡುವುದಕ್ಕೆ ಮುಂಚೆ ಮತ್ತಿನ್ನಾವ ಹಡಗೂ ಒಂದಾವೃತ್ತಿಗೆ ೨೬೦೦ ಮಂದಿಗಳಿಗಿಂತ ಹೆಚ್ಚಾಗಿ ಕುಳ್ಳಿರಿಸಿಕೊಂಡು ಹೋದುದಿಲ್ಲ. ಮತ್ತೂ ಗಂಟೆಗೆ ೨೩ ಮೈಲಿಗಳಂತೆ ಸಾಗಿಸುವ ೬೨ ಸಾವಿರ ಕುದುರೆಗಳ ಬಲವುಳ್ಳ ಎಂಜಿನ್ನುಗಳು ಈ ಹಡಗಿನಲ್ಲಿರುವುವು. ಇವುಗಳಲ್ಲಿ, ದಿನ ೧ಕ್ಕೆ ೧ ಸಾವಿರ ಟನ್ನು ಕಲ್ಲಿದ್ದಲು ಬೇಯುವುದು. ಈ ಹಡಗಿನಲ್ಲಿ ಸ್ನಾನಮಾಡುವುದಕ್ಕಾಗಿ ೬೫ ಅಡಿಗಳ ಉದ್ದವೂ ೩|| ಅಡಿಗಳ ಅಗಲವೂ ೩ ಅಡಿಗಳ ಆಳವೂ ಉಳ್ಳ ನೀರಿನ ಕೊಳವು ಕೂಡ ನಿರ್ಮಿಸಲ್ಪಟ್ಟಿರುವುದು. ಅದರಲ್ಲಿ ಪ್ರಯಾಣಿಕರು ಸ್ವೇಚ್ಛೆಯಿಂದ ಈಜಾಡಬಹುದು. ಇದಲ್ಲದೆ ಅದೇ ಹಡಗಿನಲ್ಲಿಯೇ ನಾಟಕಶಾಲೆಯೂ ಜನರು ಓಡಾಡುವುದಕ್ಕೆ ಬೀದಿಗಳೂ, ಬಡವರಿಗೂ ಭಾಗ್ಯವಂತರಿಗೂ ಬೇಕಾದ ಪದಾರ್ಥಗಳನ್ನು ಮಾರುವ ಅಂಗಡಿಗಳು ಸಹ ಇರುವುವು. ಈ ವಿವರಣವನ್ನೆಲ್ಲಾ ಕೇಳಿದರೆ ಅದು ಒಂದು ಊರೇ ಆಗಿರುವುದೆಂದು ಹೇಳಲು ಅಭ್ಯಂತರವಿರುವುದಿಲ್ಲ ಆದರೆ ಹಡಗಿನ ಸ್ವರೂಪವನ್ನೇ ಎಂದು ನೋಡದಿರುವ ಜನರಿಗೆ ಇದು ಒಂದು ಅದ್ಭುತವಾದ ಕಥೆಯಂತೆ ತೋರಬಹುದು. ಆದರೂ ಇದರಲ್ಲಿ ಉತ್ಪ್ರೇಕ್ಷೆ ಯಾವುದೂ ಇಲ್ಲದೆ ಎಲ್ಲವೂ ನಿಜಸ್ಥಿತಿಯೇ ಆಗಿರುತ್ತದೆ.

ಒಬ್ಬ ಭಾರತೀಯ ಮಹಾಶಿಲ್ಪಿ.

ಸದ್ಯಃಕಾಲದಲ್ಲಿ ಭರತಖಂಡದೊಳಗೆಲ್ಲಾ ಬೊಂಬಾಯಿಯ ವಿ|| ಮಾತ್ರೆಯವರನ್ನು ಮೀರಿದ ಶಿಲ್ಪಿಯು ಮತ್ತಾರೂ ಇರುವುದಿಲ್ಲ ಇವರು ನಮ್ಮ ದೇಶದಲ್ಲಿ ಮಾತ್ರವೇ ಅಲ್ಲ, ಪಾಶ್ಚಾತ್ಯರಲ್ಲೂ ವಿಶೇಷ ಪ್ರಖ್ಯಾತಿಯನ್ನು ಪಡೆದುಕೊಂಡಿದ್ದಾರೆ. ಇವರು ದೇವಾಲಯಕ್ಕೆ ಎಂಬ ಹೆಸರಿನಿಂದ ನಿರ್ಮಿಸಿರುವ ವಿಗ್ರಹವು ಜಗತ್ಪ್ರಸಿದ್ಧವಾಗಿರುವುದು. ಇದು ಒಬ್ಬ ಭಾರತೀಯ ಮಹಿಳೆಯು ದೇವಾಲಯಕ್ಕೆ ಹೋಗುತ್ತಿರುವಂತೆ ಕಲ್ಲಿನ ಮೇಲೆ ಕೆತ್ತಲ್ಪಟ್ಟ ವಿಗ್ರಹವಾಗಿದೆ. ಸ್ವೀನ್ಸ್ವಡ್-ಸ್ಪಿಸಿಲ್-ಒರ್ಡ್ವತ್ ಮೊದಲಾದ ಆಂಗ್ಲ ಪ್ರಮುಖರು ಈ ಮಾತ್ರೆಯವರನ್ನೂ ಇವರಿಂದ ನಿರ್ಮಿತವಾಗಿರುವ ವಿಗ್ರಹಗಳನ್ನೂ ಅತ್ಯಂತವಾಗಿ ಶ್ಲಾಘಿಸಿರುವರು. ಚಿತ್ರಲೇಖನದಲ್ಲಿ ಜಗತ್ಪ್ರಖ್ಯಾತರಾದ ರಾಜಾರವಿವರ್ಮರವರು ಈ ಮಾತ್ರೆಯವರನ್ನು ಸಣ್ಣವಯಸ್ಸಿನಲ್ಲೇ ನೋಡಿ, ಸ್ವಲ್ಪ ದಿದಗಳಲ್ಲೇ ಈತನು ಮಹಾಪುರುಷನಾಗುವನೆಂದು ನುಡಿದಿದ್ದರು. ಅದು ನಿಜವಾಯಿತು. ಈ ಮಾತ್ರೆಯವರು ವಿ|| ವಾಡಿಯಾ, ರಾನಡೆ, ರುಸ್ತುಂಜಿ, ನಾಡಕರ್, ವಿಕ್ಟೋರಿಯಾ ರಾಣಿ, ಗ್ವಾಲಿಯರ್ ಮೈಸೂರು ಮೊದಲಾದ ಕೆಲವು ಸಂಸ್ಥಾನದ ಮಹಾರಾಜರುಗಳು, ಇವರ ಶಿಲಾಮೂರ್ತಿಗಳನ್ನು ನಿರ್ಮಿಸಿ ಬಹಳ ಮೆಚ್ಚುಗೆಯನ್ನು ಪಡೆದಿರುವರು. ಚಿತ್ರಲೇಖನದಲ್ಲಿ ರಾಜಾರವಿವರ್ಮರವರೂ ಕವಿತ್ವದಲ್ಲಿ ರವೀಂದ್ರನಾಥ ಟಾಗೂರ್‌ರವರೂ ಪ್ರಸಿದ್ಧರಾಗಿ ಭರತಖಂಡದ ರವಿಗಳಾಗಿಯೇ ಪರಿಣಮಿಸಿದರು. ಈ ಮಾತ್ರೆಯವರು ಶಿಲ್ಪಕರ್ಮದಲ್ಲಿ ಅವರಂತೆಯೇ ವಿಖ್ಯಾತಿಪಡೆದು ದೇಶಕ್ಕೆ ಗೌರವವನ್ನು ತರುತ್ತಲಿದ್ದಾರೆ. ಇಂಥ ರತ್ನಗಳೇ ಭರತಖಂಡದ ಪ್ರಾಚೀನ ಗೌರವವನ್ನು ಈಗಲೂ ಉಳಿಸತಕ್ಕ ಭಾಗ್ಯಗಳಲ್ಲವೆ?

ಸಿಕಿಂ ಸಂಸ್ಥಾನದಲ್ಲಿ ಆಂಗ್ಲ ವರ್ತಕ ಸಂಘ.

ಹಿಮವತ್ಪರ್ವತಕ್ಕೆ ಸೇರಿದಂತೆ ಇರುವ ನೇಪಾಳ ಸಂಸ್ಥಾನ ಭೂತಾನ ಸಂಸ್ಥಾನಗಳ ಮಧ್ಯದಲ್ಲಿ ಸಿಕಿಂ ಎಂಬ ಸಣ್ಣ ಸಂಸ್ಥಾನವು ವರ್ಷ ೧ಕ್ಕೆ ೭|| ಲಕ್ಷ ರೂ.ಗಳ ವರಮಾನವುಳ್ಳುದಾಗಿ ಒಬ್ಬ ಮಹಾರಾಜನಿಂದ ಆಳಲ್ಪಡುತ್ತಿದೆ ಇದಕ್ಕೆ ಗಾಂಗಟಾಕು ಎಂಬುದು ರಾಜಧಾನಿಯು. ಈ ದೇಶವು ಹಿಮಾಲಯ ಪರ್ವತದಲ್ಲೇ ಇರುವುದರಿಂದ ಇದರಲ್ಲಿ ಅರಣ್ಯ ಪ್ರದೇಶವು ಹೆಚ್ಚಾಗಿರುವುದು. ಭೂಗರ್ಭದಲ್ಲಿ ತಾಮ್ರವು ವಿಶೇಷವಾಗಿ ಸಿಕ್ಕುವುದು. ಈಗ ಅಲ್ಲಿನ ಮಹಾರಾಜರು ತಮ್ಮ ದೇಶದಲ್ಲಿ ವ್ಯಾಪಾರವು ವೃದ್ಧಿಯಾಗಲಿ ಎಂಬ ಆಶೆಯಿಂದ ಬರ್ನ್ ಅಂಡ್ ಕೋ ಎಂಬ ಆಂಗ್ಲ ವರ್ತಕ ಸಂಘಕ್ಕೆ

ತಮ್ಮ ಸಂಸ್ಥಾನದಲ್ಲಿರ ಗಿರಿವನ ಬಲವನ್ನುಪಯೋಗಿಸಿಕೊಂಡು ವಿದ್ಯುಚ್ಛಕ್ತಿಯನ್ನುತ್ಪಾದನಮಾಡಿಕೊಳ್ಳಲಿಕ್ಕೂ, ಆಶಕ್ತಿಯನ್ನು ಅಸಂಖ್ಯವನರು ಸ್ಥಾಪಿಸಲಿಚ್ಛಿಸಿರುವ ಯಂತ್ರಗಳಿಗೆ ಉಪಯೋಗಿಸಿಕೊಳ್ಳಲಿಕ್ಕೂ, ಕಾಡುಗಳಲ್ಲಿರುವ ಮರಗಳನ್ನು ಕಡಿದು ಮುಟ್ಟುಗಳನ್ನು ಮಾಡಿಕೊಳ್ಳುದಕ್ಕೂ ಕಾಗದವನ್ನು ನಿರ್ಮಿಸುವುದಕ್ಕೂ, ಬಿದಿರ ಕಾಡನ್ನು ಕಡಿದು ಅದರ ಸಾಮಾನುಗಳನ್ನು ನಿರ್ಮಿಸುವುದಕ್ಕೂ, ಈ ಕೆಲಸಗಳಿಗೆಲ್ಲಾ ಬೇಕಾದ ಸುಣ್ಣವನ್ನು ಗಣಿಗಳನ್ನಿಟ್ಟು ಸುಟ್ಟುಕೊಳ್ಳುವುದಕ್ಕೂ, ಬೇಕಾದ ಕಡೆಯಲ್ಲಿ ಮಾರ್ಗಗಳನ್ನು ಹೊಸದಾಗಿ ಹಾಕಿಕೊಳ್ಳುವುದಕ್ಕೂ ಅಪ್ಪಣೆಯನ್ನು ಕೊಟ್ಟಿದ್ದಾರಂತೆ. ಇವಕ್ಕೆ ಸಂಬಂಧಪಟ್ಟ ನಿಬಂಧನೆಗಳುಳ್ಳ ಒಪ್ಪಂದದ ಪತ್ರಿಕೆಯು ಬರೆದು ಹಸ್ತಾಕ್ಷರ ಮಾಡಿಕೊಡಲ್ಪಟ್ಟಿರುವುದು. ಭರತಖಂಡವು ಸಂಪತ್ತಿನಾಭಿವೃದ್ಧಿಗಾಗಿ ತಹತಹ ಪಡುತ್ತಿರುವುದೆಂಬ ಸಂಗತಿಯು ಉಪನ್ಯಾಸ ಮಂಟಪಸಮರಂಗದಲ್ಲೂ ಪತ್ರಿಕೆಗಳ ಲೇಖನ ವಿಜೃಂಭಣೆಯಲ್ಲೂ ತೋರುತ್ತಿರುವ ಮಟ್ಟಿಗೆ ಕಾರ್ಯರೂಪದಲ್ಲಿ ತೋರುತ್ತಿರುವುದು ಕಡಿಮೆ. ಸಿಕಿಂ ರಾಜರು ಇಂಥ ಕಾರ್ಯಗಳಲ್ಲಿ ಸ್ವತಃ ಸಾಹಸವನ್ನು ತೋರಿಸಿದ್ದರೆ ದೇಶದ ಸಂಪತ್ತಿಯ ಅಭಿವೃದ್ಧಿಗೆ ವಿಶೇಷ ಸಾಧಕವಾಗುತ್ತಿದ್ದಿತು. ಅಥವಾ ಸಂಘವನ್ನೇರ್ಪಡಿಸಿ, ದೇಶೀಯರಿಂದ ಹಣಗಳನ್ನು ಸಾಲವಾಗಿ ಭಾಗದ ರೂಪದಿಂದ ತೆಗೆದು ಕೂಡಿಸಿ, ಕಾರ್ಯಾರಂಭಮಾಡಿಸಿದ್ದರೆ ಸ್ವದೇಶಭಾಗ್ಯಾಭಿವೃದ್ಧಿಗೆ ಸಹಾಯಕವಾಗುತ್ತಿದ್ದಿತು. ಅದನ್ನು ಬಿಟ್ಟು ಹೊರಗಣ ಸಂಪತ್ತಿಯೇ ಅಲ್ಲದೆ ಭೂಗರ್ಭದ ಸಂಪತ್ತಿಯನ್ನೂ ಕೂಡ ಅನ್ಯದೇಶೀಯರ ಹಸ್ತಗತವನ್ನು ಮಾಡುವ ಕಾರ್ಯದಲ್ಲಿ ಮೆದಸ್ಸುಗೊಡುತ್ತ ಬರುವುದರಲ್ಲಿ ಜಾಣ್ಮತನವೇನುಂಟು?

ಮೈಸೂರ್ ಸ್ಟಾರ್

ಸ. ೧೯೧೪ ನೆಯ ಮೇ ತಾ|| ೧೧ ನೆಯ ಸೋಮವಾರ.

ಐರ್ಲಾಂಡಿನ ಸ್ವರಾಜ್ಯ.

ಐರ್ಲಂಡ್ ಎಂಬ ಭೂಭಾಗವು ಗ್ರೇಟ್‌ಬ್ರಿಟನ್ನಿನ ಪಶ್ಚಿಮದಲ್ಲಿದೆ. ಇದರಲ್ಲಿ ಆ ದೇಶದ ಮೂಲನಿವಾಸಿಗಳು-ಆ ದೇಶದವರೂ ಇಂಗ್ಲೆಂಡಿನವರೂ ಸೇರಿದ ಮಿಶ್ರಜನರು-ಇಂಗ್ಲೆಂಡಿನಿಂದ ಅಲ್ಲಿಗೆ ವಲಸೆಹೋಗಿ ಅಲ್ಲಿನ ಜನರೊಡನೆ ಸಂಬಂಧವನ್ನಿಟ್ಟುಕೊಳ್ಳದೆ ಇರತಕ್ಕವರು- ಎಂದು ಮೂರು ತೆರದ ಪ್ರಜೆಗಳಿದ್ದಾರೆ. ಮೊದಲನೆಯ ೨ ತೆರದವರೂ ಕ್ರೈಸ್ತಮತದೊಳಗಿನ ರೋಮನ್ ಕೆಥೋಲಿಕ್ ಪಂಥದವರು. ೩ ನೆಯ ತರದವರು ಪ್ರಾಟೆಸ್ಟೆಂಟ್ ಪಂಥದವರು. ಇವರೇ ಆಲ್‌ಸ್ಟರ್ ಎಂಬ ಜಿಲ್ಲೆಯಲ್ಲಿ ನೆಲಸಿರುವವರು. ಇಂಗ್ಲೆಂಡಿಗೂ, ಐರ್ಲೆಂಡಿಗೂ ಸಂಬಂಧವುಂಟಾದಾರಭ್ಯ ಆಂಗ್ಲರು ವಿದೇಶೀಯರಂತೆಯೇ ಐರ್ಲಾಂಡಿನಲ್ಲಿ ರಾಜ್ಯಭಾರಮಾಡುತ್ತ ಬಂದರು. ೧೭ ನೆಯ ಶತಮಾನದ ಆರಂಭದಲ್ಲಿ ಎಂದರೆ ಮೊದಲನೆಯ ಜೇಮ್ಸ್ ಪ್ರಭುವಿನ ಕಾಲದಲ್ಲಿ ಐರ್ಲಾಂಡಿನ ಒಂದು ಭಾಗವಾದ ಆಲ್ಸ್ಟರ್ ಎಂಬುದು ಆಂಗ್ಲಜನರಿಗೇ ಅಧಿನಿವೇಶನವಾಯಿತು. ಆಂಗ್ಲಪ್ರಭುತ್ವವು ಪ್ರಾಟೆಸ್ಟೆಂಟ್ ಪಂಥಕ್ಕೆ ಸೇರಿದುದಾದುದರಿಂದ ಅಲ್ಲಿನ್ದ ಅವರ ದೇವಾಲಯಕ್ಕೇ ಪ್ರಾಶಸ್ತ್ಯವೂ, ಆ ಪಂಥದ ಆಲ್‌ಸ್ಟರ್ ನಿವಾಸಿಗಳಾದ ಆಂಗ್ಲಜನರಿಗೇ ಸರ್ವಾಧಿಕಾರವೂ ದೊರೆತುದರಿಂದ ಅಲ್ಲಿನ ಇನ್ನೆರಡುತೆರದ ಜನರಲ್ಲಿ ಅಸಮಾಧಾನಗಳು ಹೆಚ್ಚುತ್ತ ಬಂದುವು. ಮತವೈಷಮ್ಯದಿಂದಲೇ ಆಗ ನಡೆದ ಹೋರಾಟ ಕಡಿದಾಟಗಳು ಅಪರಿಮಿತವಾಗಿದ್ದುವು. ಅಲ್ಲಿ ೫/೬ ಭಾಗದಷ್ಟು ಪ್ರಜೆಗಳು ಕೆಥೋಲಿಕ್ ಪಂಥದವರಾಗಿಯೂ ೧/೬ ಭಾಗದವರುಮಾತ್ರ ಪ್ರಾಟೆಸ್ಟೆಂಟರಾಗಿಯೂ ಇದ್ದರೂ, ರಾಜ್ಯಾದಾಯದಲ್ಲಿ ಬಹುಭಾಗವು ಪ್ರಾಟೆಸ್ಟೆಂಟ್ ಧಾರ್ಮಿಕ ಕಾರ್ಯಗಳಿಗೆ ರಾಜ್ಯಕರ್ತರಿಂದ ಉಪಯೋಗಿಸಲ್ಪಡುತ್ತಿದ್ದುದೂ, ಮತ್ತೂ ಆ ದೇಶದಲ್ಲಿ ಮುಖ್ಯೋದ್ಯೋಗವಾಗಿದ್ದ ವ್ಯವಸಾಯದ ವಿಷಯದಲ್ಲಿ ಭೂಸ್ವಾಮಿಗಳ ಕೈಹಿಡಿತಕ್ಕೆ ಸಿಕ್ಕಿದ ಬೇಸಾಯಗಾರರು ಅನಿರ್ವಾಚ್ಯವಾದ ತೊಂದರೆಯನ್ನು ಅನುಭವಿಸುತ್ತಿದ್ದುದೂ, ವಿದ್ಯಾಭ್ಯಾಸ ವಿಷಯದಲ್ಲಿ ಧಾರ್ಮಿಕಬೋಧಾ ಸಂಬಂಧದಿಂದ ಅಸಮಾಧಾನಗಳಿದ್ದುದೂ ಸಹ ಆ ದೇಶದಲ್ಲಿನ ಶಾಂತಿಗೆ ವಿಶೇಷ ಭಂಗಕಾರಿಯಾಗಿ ಪರಿಣಮಿಸಿದ್ದಿತು. ದಯಾರ್ದ್ರ ಹೃದಯನೂ ಸುಪ್ರಖ್ಯಾತ ರಾಜತಂತ್ರಜ್ಞನೂ ಆದ ಗ್ಲಾಡ್‌ಸ್ಟನ್ ಪ್ರಭುವು ವಿಕ್ಟೋರಿಯಾ ಮಹಾರಾಣಿಯವರ ಕಾಲದಲ್ಲಿ ಮುಖ್ಯಮಂತ್ರಿಯಾಗಿದ್ದಾಗ್ಗೆ ಐರ್ಲಾಂಡಿನ ಉದ್ಧಾರಕ್ಕಾಗಿ ತನ್ನ ಉದಾರಚಿತ್ತವನ್ನಿತ್ತು ದೃಢಸಂಕಲ್ಪಗೊಂಡನು. ಲೋಕಾಕರ್ಷಕವಾದ ತನ್ನ ಅನುಪಮ ವಾಗ್ಮಿತ್ವದಿಂದ ಪಾರ್ಲಿಮೆಂಟಿನ ಮಹಾಜನರ ಮನಸ್ಸನ್ನು ದ್ರವಿಸುವಂತೆ ಮಾಡಿ, ೧೮೬೮ ನೆಯ ಇಸವಿಯಿಂದ ೨-೩ ವರ್ಷಗಳೊಳಗಾಗಿ ಅಲ್ಲಿನ ಜನರಿಗೆ ಧಾರ್ಮಿಕಸಭೆ, ವ್ಯವಸಾಯಸಭೆ, ವಿದ್ಯಾಭ್ಯಾಸಸಭೆಯೊಳಗಿನ ಏರ್ಪಾಡುಗಳಲ್ಲಿದ್ದ ತೊಂದರೆಯನ್ನು ಪರಿಹರಿಸುವ ಕಾರಣವನ್ನು ಸ್ಥಾಪಿಸಿಕೊಟ್ಟನು. ಬಳಿಕ ಆ ದೇಶದ ಆಡಳಿತವನ್ನು ತಾವೇ ಸಾಗಿಸಿಕೊಂಡು ಹೋಗುವುದಕ್ಕೆ ಸಾಧಕವಾಗುವಂತೆ ಒಂದು ಸ್ವತಂತ್ರವಾದ ಪಾರ್ಲಿಮೆಂಟನ್ನು ತಮಗೆ ಕೊಡಿಸಿಕೊಡಬೇಕೆಂದು ಐರ್ಲಂಡಿನವರು ಒಂದು ಠರಾವುಮೂಲಕವಾಗಿ ಪಾರ್ಲಿಮೆಂಟಿನವರನ್ನು ಕೇಳಿಕೊಂಡರು. ಅದಕ್ಕೆ ಪಾರ್ಲಿಮೆಂಟಿನ ಬಹುಜನರು ವಿರೋಧಿಸಿದರು. ಆದರೂ ಮುಖ್ಯಮಂತ್ರಿಯಾದ ಗ್ಲಾಡ್‌ಸ್ಟನ್ನಿಗೆ ಅದು ಸೂಕ್ತವೆಂದೇ ತೋರಿತು. ತನ್ನ ಮನಸ್ಸಿಗೆ ನ್ಯಾಯವೆಂದು ತೋರಿ ಒಪ್ಪಿದ ಕಾರ್ಯವನ್ನು ಸಾಧಿಸುವಲ್ಲಿ ಪ್ರಾಣವನ್ನಾದರೂ ಅರ್ಪಿಸಲು ಹಿಂದೆಗೆಯದ ಆ ಮಹಾನುಭಾವನು ಅದನ್ನು ಸಾಧಿಸಿಕೊಡುವುದರಲ್ಲಿ ದೃಢಸಂಕಲ್ಪನಾದನು. ಆ ವಿಷಯದಲ್ಲಿ ಒಂದು "ಮಸೂದೆ" ಯನ್ನು ಪಾರ್ಲಿಮೆಂಟಿನ ಮುಂದಕ್ಕೆ ೧೮೮೬ ನೆಯ ವರ್ಷದಲ್ಲಿ ತಾನೇ ಇಟ್ಟನು. ಅದಕ್ಕೆ ಅನುಕೂಲ ಮತಗಳು ೩೧೧, ಪ್ರತಿಕೂಲ ಮತಗಳು ೩೪೩ ಬಿದ್ದು, ಅದು ವಿಧಿಯಾಗಲವಕಾಶವಿಲ್ಲದೆ ಹೋಯಿತು. ಗ್ಲಾಡ್‌ಸ್ಟನ್ನನು ಮುಖ್ಯ ಮಂತ್ರಿತ್ವವನ್ನು ಬಿಟ್ಟನು. ಆಬಳಿಕ ಮತ್ತೊಂದು ವೇಳೆ ತಾನು ಮಂತ್ರಿಯಾದಾಗ್ಗೆ ಇದೇ ವಿಷಯವನ್ನು ೧೮೯೩ ರಲ್ಲಿ ಪಾರ್ಲಿಮೆಂಟಿಗೆ ಗ್ಲಾಡ್‌ಸ್ಟನ್ನನು ತರಲು ಕಾಮನ್ಸ್ ಸಭೆಯಲ್ಲಿ ಅದು ಅನುಮೋದಿತವಾದರೂ ಲಾರ್ಡ್ಸ್ ಸಭೆಯವರಿಂದ ನಿರಾಕೃತವಾಯಿತು.

ಹೀಗೆ ಕಳೆದ ೨೮ ವರ್ಷದಲ್ಲಿಯೇ ಬೀಜಾವಾಪನಗೊಂಡಿರುವ ಈ ಸ್ವರಾಜ್ಯವಿಧಿಯು ಈಗಿನ ಲಿಬರಲ್ ಪಕ್ಷದ ಪ್ರಭುತ್ವದಲ್ಲಿ ಮತ್ತೆ ತಲೆಯೆಕ್ಕಿತು. ಈಗಿನ ಮುಖ್ಯಮಂತ್ರಿಯವರಾದ ಮಿ|| ಆಸ್ಕ್ವಿತ್‌ರವರು ಲಾರ್ಡ್ ಗ್ಲಾಡ್‌ಸ್ಟನ್‌ರವರ ಉದಾರಮತದಲ್ಲೇ ಹೆಜ್ಜೆಯಿಟ್ಟು ಇದನ್ನು ವಿಧಿಯನ್ನಾಗಿ ಮಾಡಿರಲು ಸಾಹಸಪಟ್ಟರು. ಈ ಕಾರ್ಯದಲ್ಲಿ ಅವರಿಗೆ ತುಂಬಾ ಜಯವಾಗುವ ಚಿಹ್ನೆಗಳೇ ಗೋಚರವಾಗುತ್ತ ಬಂದುವು. ಕಾಮನ್ಸ್ ಸಭೆಯಲ್ಲಿ ಇದು ಅನುಮೋದಿತವಾಯಿತು, ಲಾರ್ಡ್ಸ್‌ಗಳ ಸಭೆಯಲ್ಲಿ ಇದು ಅನುಮೋದಿತವಾಗದಿದ್ದರೂ ವಿಧಿಯಾಗಿ ಪರಿಣಮಿಸುವುದಕ್ಕೆ ಈಗ ಅವಕಾಶವಾಗಿರುವುದು.

ಕೆಥೋಲಿಕ್‌ಪಂಥದವರೇ ಹೆಚ್ಚಾಗುಳ್ಳ ಐರ್ಲಾಂಡಿಗೆ ಸ್ವರಾಜ್ಯದ ಅಧಿಕಾರವು ಸಿಕ್ಕಿ ಸ್ವತಂತ್ರವಾದ ಪಾರ್ಲಿಮೆಂಟು ದೊರೆವುದಾದರೆ, ಅಲ್ಪಸಂಖ್ಯಾಕರಾದ ತಾವುಗಳು ಅದಕ್ಕೇ ಅಂಕಿತರಾಗಿ ಬಾಳಬೇಕಾಗುವುದಲ್ಲಾ ಎಂಬ ಚಿಂತೆಯು ಆಲ್ಸ್ಟರ್‌ಜಿಲ್ಲೆಯ ಆಂಗ್ಲಜನರಿಗೆ ಹತ್ತಿ, ಆ ಪಕ್ಷದವರು ಇದನ್ನು ನಿರೋಧಿಸುವುದಕ್ಕಾಗಿ ಕಳೆದ ೨-೩ ವರ್ಷಗಳಿಂದಲೂ ಅಸಮಸಾಹಸ ಮಾಡುತ್ತಿರುವರು. ಸರ್ ಎಡ್ವರ್ಡ್ ಕಾರ್ಸನ್‌ರವರೇ ಮೊದಲಾದ ಈ ಪಕ್ಷದ ಮುಂದಾಳುಗಳು ಪಾರ್ಲಿಮೆಂಟಿನಲ್ಲಿ ಎಷ್ಟೋ ವಾದಾನುವಾದಗಳನ್ನು ಸಾಗಿಸಿದರು. ಅವೆಲ್ಲ ನಿಷ್ಫಲವಾದುವು. ಮಾತಿನಲ್ಲಿ ಇದು ಕಡೆತೊಲಗದಿದ್ದರೆ ಆಯುಧದಿಂದಲಾದರೂ ಇದನ್ನು ಹಿಮ್ಮೆಟ್ಟಿಸಬೇಕೆಂದು ಆಲ್‌ಸ್ಟರಿನವರು ಮಹಾಪ್ರಯತ್ನವನ್ನು ಮಾಡಿರುವರು. ತಾವು ಒಳಸೊಳಗೆ ಸರ್ಕಾರದಮೇಲೆ ಕೈಮಾಡುವುದಕ್ಕಾಗಿ ಸೈನಿಕರನ್ನು ಕೂಡಿಸುತ್ತಲೂ ಮದ್ದುಗುಂಡು ಮೊದಲಾದುವುಗಳನ್ನು ಜತೆಗೊಳಿಸುತ್ತಲೂ ಇರುವರು. ಪ್ರಭುತ್ವದವರಲ್ಲಿರುವ ಸೈನಿಕರಿಗೆ ಸ್ವಜನರಮೇಲೆ ನೀವು ಕೈಮಾಡುವುದು ಅಧರ್ಮವಲ್ಲವೆ? ಎಂದು ಬೋಧಿಸಿ, ಈ ಭೇದೋಪಾಯದಿಂದ ಸೇನಾಧಿಕಾರಿಗಳು ಕೆಲಸವನ್ನು ಬಿಟ್ಟುಬಿಡುವಂತೆಯೂ ಮಾಡಿದರು. ಈ ಗೊಡ್ಡು ಬೆದರಿಕೆಗೆ ಮಂತ್ರಿಮಂಡಲದವರ ಗುಂಡಿಗೆಯು ಲೇಶವೂ ನಡುಗಲಿಲ್ಲ. ಮುಖ್ಯಸೈನ್ಯಾಧಿಪತಿಯು ಕೆಲಸವನ್ನು ಬಿಟ್ಟುಬಿಡಲು, ಆ ಅಧಿಕಾರವನ್ನು ಮುಖ್ಯಮಂತ್ರಿಯವರೇ ವಹಿಸಿಕೊಂಡುಬಿಟ್ಟರು. ಕಡಿದಾಟದ ಪ್ರಸಕ್ತಿಯಿಲ್ಲದೆ ಈ ವಿಧಿಯನ್ನು ಶಾಂತಿಯಿಂದಲೇ ಅನುಷ್ಠಾನಕ್ಕೆ ಬರುವಂತೆ ಮಾಡಬೇಕೆಂಬುದು ಮಂತ್ರಿಮಂಡಲದವರ ಘನತರೋದ್ದೇಶವಾಗಿದೆ. ಆದುದರಿಂದ ಆಲ್ಸ್ಟರಿನವರ ಮನಸ್ಸಿಗೆ ವಿರೋಧವಿಲ್ಲದಂತೆ ಇದನ್ನು ವಿಧಿಗೊಳಿಸಬೇಕೆಂದು ಬೇಕಾದಷ್ಟು ಸಾಮೋಪಾಯಗಳನ್ನು ಅವರು ನಡೆಯಿಸಿರುವರು. "ಈಗ ನಾವು ಐರ್ಲಾಂಡಿಗೆ ಕೊಡುವ ಸ್ವರಾಜ್ಯದ ಕಾರ್ಯಕ್ರಮಗಳನ್ನು ನೀವು ನೋಡುತ್ತಿರಿ; ಇಂದಿನಿಂದ ೬ ವರ್ಷಗಳವರೆಗೂ ನೀವುಗಳು ಅದಕ್ಕೆ ಅಧೀನರಾಗಿರಬೇಕಾದುದಿಲ್ಲ. ತದನಂತರ ಮುಂದೆ ಹೇಗೆ ನಡೆಯಬೇಕೆಂಬುದನ್ನು ಗೊತ್ತುಮಾಡುವಣ"ವೆಂದು ಕೂಡ ಮಂತ್ರೀಶರು ತಿಳಿಯಪಡಿಸಿದರು. ಅಷ್ಟಕ್ಕೂ ಆಲ್ಸ್ಟರಿನವರು ಒಡಂಬಡಲಿಲ್ಲ. ಎಂದೆಂದಿಗೂ ಆ ಪಾರ್ಲಿಮೆಂಟಿಗೆ ತಮ್ಮನ್ನು ಅಧೀನಗೊಳಿಸದಿರುವಂತೆ ಆದರೆ ಮಾತ್ರ ಆಗಬಹುದೆಂದು ಆ ಪಕ್ಷದವರು ಹೇಳುತ್ತಿರುವರು. ಮಂತ್ರಿಪಕ್ಷದವರೂ ಪ್ರತಿಪಕ್ಷದವರೂ ಈ ಸಂದರ್ಭದಲ್ಲಿ ನಡೆಯಿಸುತ್ತಿರುವ ವಾದಾನುವಾದಗಳೂ ಸಾಹಸಗಳೂ ಸಹ ಆಂಗ್ಲರಾಜ್ಯಾಂಗದ ಘನತೆಯನ್ನೂ ದರ್ಪವನ್ನೂ ಬಿಗಿಪಟ್ಟನ್ನೂ ಜಗತ್ತಿಗೆ ತೋರಿಸುತ್ತಲಿರುವುವು. ಒಂದು ಪಕ್ಷದವರ ಕೈಮುಂದಾದಾಗ ಪ್ರತಿಪಕ್ಷದವರು ತಗ್ಗಿಹೋಗುವುದೂ, ಇವರು ಮುಂದಾದಾಗ ಅವರು ಇಳಿದುಹೋಗುವುದೂ ಸಹ ಅತ್ಯಂತ ವಿಸ್ಮಯವನ್ನುಂಟುಮಾಡುತ್ತಿರುವುವು. ದೇಶಪ್ರತಿಷ್ಠೆಗೂ ಕೀರ್ತಿಗೂ ಕಳಂಕತರದಂತೆ ಸ್ವಪಕ್ಷಸಾಧನವನ್ನು ಮಾಡಲು ಅವರು ತೋರಿಸುತ್ತಿರುವ ಉಪಾಯಗಳು ಗಮನೀಯವಾಗಿರುವುವು. ಕಳೆದೆರಡು ವಾರಗಳಲ್ಲಿ ಆಲ್‌ಸ್ಟರಿನ ಜನರು ಸೇನಾಸಿದ್ಧತೆಯನ್ನು ವಿಶೇಷವಾಗಿ ನಡೆಯಿಸಿದರು. ಪ್ರಭುತ್ವದವರೂ ಮುಂದಾಲೋಚನೆಯಿಂದ ತಮ್ಮ ಸನ್ನಾಹವನ್ನು ನಡೆಯಿಸಿರುವರು. ಆಲ್‌ಸ್ಟರಿನವರು ಮೊನ್ನೆಯ ವಾರದಲ್ಲಿ ನೂರಾರು ಮೊಟಾರುಗಳನ್ನು ಕಲ್ಲಿದ್ದಲನ್ನು ಸಾಗಿಸುವ ವ್ಯಾಜದಿಂದ ಸಮುದ್ರತೀರಕ್ಕೆ ಕಳುಹಿಸಿ, ಅಲ್ಲಿ ಕಾವಲಿದ್ದ ಸರ್ಕಾರದ ಪೋಲೀಸಾಳುಗಳನ್ನು ಅಲ್ಲಾಡಗೊಡದಂತೆ ಬೆದರಿಸಿಟ್ಟು, ೩೦ ಸಾವಿರ ಕೋವಿಗಳನ್ನೂ ಲಕ್ಷಾಂತರ ತೋಟಾಗಳನ್ನೂ ಬಂಡಿಗಳಲ್ಲಿ ತುಂಬಿಕೊಂಡು ಒಬ್ಬರ ಕೈಗೂ ಸಿಕ್ಕದಂತೆ ತಮಗೆ ಬೇಕಾದ ಸ್ಥಲಗಳಿಗೆ ಅವನ್ನು ಸಾಗಿಸಿರುವರು. ಈ ಕೆಲಸವನ್ನು ವಿಶ್ವಾಸಘಾತಕತನವೆಂದು ಮುಖ್ಯಮಂತ್ರಿಯವರು ಪಾರ್ಲಿಮೆಂಟಿನಲ್ಲಿ ಜರೆದಿರುವರು. ಆಲ್ಸ್ಟರಿನವರು ಮೊದಲು ಸರ್ಕಾರದ ಮೇಲೆ ಕೈಮಾಡಿದಹೊರತು ತಮ್ಮ ಆಯುಧವನ್ನೆತ್ತುವುದಿಲ್ಲವೆಂಬುದು ಮಂತ್ರಿಮಂಡಲದವರ ಸಂಕಲ್ಪವಾಗಿದೆ. ಈಬಗೆ ಮಂತ್ರಿಮಂಡಲದವರು ಇದೇ ವಿಷಯವನ್ನು ಕುರಿತು ಒಂದು ಪರಿಮಿತಸಂಘದಲ್ಲಿ ಆಲೋಚಿಸುತ್ತಿದ್ದಾರೆ. ಈಗ ಜರುಗುತ್ತಿರುವ ಪಾರ್ಲಿಮೆಂಟು ಮುಚ್ಚಲ್ಪಡುವುದರೊಳಗೆ ಈ ಐರ್ಲಾಂಡು ಸ್ವರಾಜ್ಯ ವಿಷಯಕವಾದ ತೀರ್ಮಾನವನ್ನು ಹೇಗೆ ನಡೆಸಬೇಕೋ ಅದನ್ನು ನಿರ್ಧರಿಸುವುದಕ್ಕಾಗಿ ಮುಖ್ಯಮಂತ್ರಿಯವರು ಒಂದು "ಬಿಲ್ಲನ್ನು" ಪಾರ್ಲಿಮೆಂಟಿಗೆ ತರುವವರಾಗಿದ್ದಾರೆ. ಹೇಗೂ ಈ ಸ್ವರಾಜ್ಯವಿಧಿಯು ಶಾಸನವಾಗಿ ಏರ್ಪಡುವುದೇ ಸಿದ್ಧವೆಂದೂ, ಅದರಲ್ಲೂ ಅದು ಯುದ್ಧಪ್ರಸಕ್ತಿಯಿಲ್ಲದೆ ಶಾಂತರೀತಿಯಿಂದಲೇ ಅನುಷ್ಠಾನಕ್ಕೆ ಬರುವುದೆಂದೂ ದೀರ್ಘದರ್ಶಿಗಳೆಲ್ಲರೂ ನಿರೀಕ್ಷಿಸುತ್ತಿದ್ದಾರೆ. ಹಾಗಾಗುವುದೇ ಆಂಗ್ಲಪ್ರಭುತ್ವದ ಕೀರ್ತಿಪ್ರತಿಷ್ಠೆಗಳಿಗೆ ಯುಕ್ತವಾದುದು.

ಒಳದೇಶದ ವೃತ್ತಾಂತವು.

ಕಳೆದ ಸೋಮವಾರ ಮತ್ತೂ ಮಂಗಳವಾರ ಬೆಂಗಳೂರಲ್ಲಿ ಒಳ್ಳೆಯಮಳೆಯಾಯಿತು.

ನಮ್ಮ ಸಂಸ್ಥಾನದ ಚೀಫ್ ಎಲೆಕ್ಟ್ರಿಕ್ ಇಂಜನಿಯರಾದ ಮಿ|| ಗಿಬ್ಸ್‌ರವರು ಉದ್ಯೋಗವನ್ನು ಬಿಟ್ಟು ಹೋಗುವುದಾಗಿ ವರ್ತಮಾನವಿದೆ.

ಜ್ಯೇಷ್ಠಮಾಸದಲ್ಲಿ ನಡೆಯುವ ಶ್ರೀಮನ್ಮಹಾರಾಜರ ವರ್ಧಂತಿ ಮಹೋತ್ಸವ ಸಮಯದ ಕುದುರೆ ಪೂಜೆಗಾಗಿ ಈಗಿನಿಂದಲೂ ಸನ್ನಾಹಗಳು ನಡೆಯುತ್ತಿವೆ.

ತುಮಕೂರ ಡಿ|| ಕಮಿಷನರ್ ಮ|| ಬಿ. ಜಿ. ಕುಮಾರಸ್ವಾಮಿ ನಾಯಕ್, ಬಿ.ಎ, ಯವರು ಮೈಸೂರ ನಿಯಮನಿರ್ಮಾಣ ಸಭೆಯ ಔದ್ಯೋಗಿಕ ಸಭಾಸದರಾಗಿ ನಿಯಮಿಸಲ್ಪಟ್ಟಿರುವರು.

ಮೈಸೂರು ಡಿಸ್ಟ್ರಿಕ್ಟಿನಲ್ಲಿ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರಾಗಿರುವ ಮಿ|| ಗುಲಾಂ ಮಹಮದ್ ಮೇಕ್ರಿ, ಬಿ. ಎ., ಎಲ್. ಎಲ್. ಬಿ, ಯವರಿಗೆ ೨ ನೇ ತರಗತಿಯ ಮ್ಯಾಜಿಸ್ಟ್ರೇಟ್ ಅಧಿಕಾರವು ಕೊಡಲ್ಪಟ್ಟಿದೆ.

ಶಿಕಾರಿಪುರ ತಾ|| ಬೆಕ್ಕರಪುರ ಗ್ರಾಮದಲ್ಲಿ ಒಂದು ಕುಡಿಯುವ ನೀರಿನ ಬಾವಿಯನ್ನು ತೋಡಿಸಲು ತಗಲುವ ೧೬೪೮ ರೂ.ಗಳಲ್ಲಿ ಅರ್ಧಹಣವನ್ನು ಗ್ರಾಮದವರು ಕೊಡಲೊಪ್ಪಿದುದರಿಂದ ಸರ್ಕಾರದವರು ಉಳಿದ [illegible] ರೂ. ಗಳನ್ನು ಕೊಡಲಪ್ಪಣೆಮಾಡಿರುತ್ತಾರೆ.

೨ ನೆಯ ಕೌನ್ಸಿಲರಾದ ಸರ್ದಾರ್ ಎಂ. ಕಾಂತರಾಜ ಅರಸಿನವರು ನಿನ್ನೆಯದಿನ ಪಬ್ಲಿಕ್‌ಆಫೀಸ್ ಕಟ್ಟಡದಲ್ಲಿ ಪುರಪ್ರಮುಖರನ್ನು ಕೂಡಿಸಿ ಒಂದು ಸಭೆಮಾಡಿ ವ್ಯಾಪಾರವೃದ್ಧಿ ಶಿಲ್ಪಾಭಿವೃದ್ಧಿ ಮೊದಲಾದ ವಿಷಯಗಳನ್ನು ಕುರಿತು ಚರ್ಚಿಸಿ, ಜನಾಭಿಪ್ರಾಯವನ್ನು ತಿಳಿದುಕೊಂಡರು.

ಶ್ರೀಮನ್ಮಹಾರಾಜರವರು ಹುಜೂರುಸೆಕ್ರಟರಿಯವರೊಡನೆ ಕಳೆದ ತಾ|| ೭ ರ ಬೆಳಿಗ್ಗೆ ಉದಕಮಂಡಲದಿಂದ ರಾಜಧಾನಿಗೆ ದಯಮಾಡಿಸಿ, ತಾ|| ೯ ರಲ್ಲಿ ನಂಜನಗೂಡಿಗೆ ಚಿತ್ತೈಸಿ ಶ್ರೀನಂಜುಂಡೇಶ್ವರಸ್ವಾಮಿಯ ಪೂರ್ಣಿಮೆಯ ಸೇವೆಯನ್ನು ತೀರಿಸಿಕೊಂಡು ಬಂದು ಅದೇ ರಾತ್ರಿ ೧೧ ಗಂಟೆಯೊಳಗೆ ಬಗ್ಗಿಗಳಲ್ಲಿ ಉದಕಮಂಡಲಕ್ಕೆ ಪ್ರಯಾಣಮಾಡಿದರು.

ಕೊಪ್ಪ ತಾಲ್ಲೋಕು ಹೊಸಕೊಪ್ಪದ ನಿವಾಸಿಗಳು ಒಂದು ಸ್ಕೂಲ್ ಕಟ್ಟಡವನ್ನು ಕಟ್ಟಲು ೧೦೦೦ ರೂ ಗಳ ಚಂದಾಹಣವನ್ನು ಕೂಡಿಸಿರುವುದರಿಂದ ಸರ್ಕಾರದವರು ೧೦೦೦ ರೂ ಗಳನ್ನು ಕೊಡಲಪ್ಪಣೆಮಾಡಿರುವರು. ವಿದ್ಯಾಭ್ಯಾಸ ಶಾಖೆಯ ಇ|| ಜನರಲ್‌ರವರಿಂದ ಈ ಹೊಸ ಕಟ್ಟಡದ ಶಂಕುಸ್ಥಾಪನೆಯು ಈ ತಾ|| ೧೮ ರಲ್ಲಿ ನೆರವೇರಿಸಲ್ಪಡುವುದು.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಭೆಯ ಜನರಲ್ ಕಮಿಟಿ ಮೀಟಿಂಗ್ ೧೯೧೪ ನೆ ಇಸವಿ ಮೆ ತಾ|| ೨೦ ನೆಯ ಬುಧವಾರ ಸಾಯಂಕಾಲ ೪ ಘಂಟೆಗೆ ಸರಿಯಾಗಿ ಮ|| ದಿವಾನ್‌ಬಹದ್ದೂರ್ ರಾಜಸಭಾಭೂಷಣ, ಕೆ. ಪಿ. ಪುಟ್ಟಣ್ಣಶೆಟ್ಟರವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನ ರಾವ್‌ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪನವರ ಧರ್ಮಸತ್ರದ ಮಹಡಿಯಲ್ಲಿ ನಡೆಯುವುದೆಂದು ನಿರ್ಧರವಾಗಿರುವುದು.

ಶ್ರೀರಂಗಪಟ್ಟಣದ ಜಮೀನ್ದಾರರೂ ಮ್ಯುನಿಸಿಪಲ್ ಕೌನ್ಸಿಲರೂ ಆದ ಮ|| ಎನ್. ಸಿದ್ಧಲಿಂಗದೇವರು ಹರಿಹರದಲ್ಲಿ ನಡೆದ ಬೇಸಾಯ ಮತ್ತೂ ಕೈಗಾರಿಕೆಯ ವಸ್ತುಗಳ ಮತ್ತೂ ದನಗಳ ಪ್ರದರ್ಶನಕಾಲದಲ್ಲಿ ಸುಧಾರಿಸಿದ ಪಾಶ್ಚಾತ್ಯ ವ್ಯವಸಾಯಕ್ರಮವನ್ನು ಕುರಿತು ರೈತರ ಮನಸ್ಸಿಗೆ ಹತ್ತುವಂತೆ ಬಹು ರಸವತ್ತಾದ ಉಪನ್ಯಾಸಮಾಡಿದುದನ್ನು ಪ್ರದರ್ಶನದ ಕಮಿಟಿಯವರು ಮೆಚ್ಚಿ ಅವರಿಗೆ ಒಂದನೆ ತರಗತಿಯ ಬಹುಮಾನದ ಪತ್ರಿಕೆಯನ್ನು ಕೊಟ್ಟರು. ಈ ದೊಡ್ಡ ಮನುಷ್ಯರೇ ಬೀರೂರು, ದಾವಣಗೆರೆ ಮತ್ತೂ ಚಿತ್ರಕಲ್‌ದುರ್ಗ ಈ ಸ್ಥಳಗಳಲ್ಲಿ ರೈತರ ಪ್ರಾರ್ಥನೆಯಂತೆ ವ್ಯವಸಾಯಕ ವಿಷಯವಾಗಿ ಉಪನ್ಯಾಸಗಳನ್ನು ಮಾಡಿದರು.

ಹಾಸನದ ಡಿ|| ಟ್ರಷರಿಆಫೀಸರಾದ ಅ|| ಕಮಿಷನರು ಮ|| ಪಿ. ಗೋಪಾಲರಾಜ ಅರಸ್, ಬಿ. ಎ. ಬಿ. ಎಲ್., ರವರಿಗೆ ಕೋಲಾರದ ಡಿ|| ಟ್ರಷರರಾದ ಮ|| ಬಂಕಸಾಲೆ ಸುಬ್ಬರಾಜಅರಸಿನವರ ಕುಮಾರ್ತಿ ಚಿ|| ಸೌ|| ಸುಬ್ಬಮ್ಮಣ್ಣಿಯವರನ್ನು ಕೊಟ್ಟು ಕಳೆದ ತಾ|| ೭ ರಲ್ಲಿ ವಿವಾಹಮಹೋತ್ಸವವು ಬಹು ವಿಜೃಂಭಣೆಯಿಂದ ಜರುಗಿತು. ಅಮೃತಮಹಲ್ ಶಾಖಾಸೂಪರಿಂಟೆಂಡೆಂಟರಾದ ಮ|| ನಂಜುಂಡರಾಜಅರಸಿನವರೇ ಮೊದಲಾದ ರಾಜಬಂಧುಗಳೂ, ಡೆ|| ಕಮಿಷನರು ಮೊದಲಾಗಿ ಸರ್ಕಾರಿಯಧಿಕಾರಿಗಳೂ, ವಕೀಲರುಗಳೂ, ಮೊದಲಾದವರುಗಳು ದಯಮಾಡಿದ್ದರು. ಅರಮನೆಯಿಂದ ರಾಜಮರ್ಯಾದೆಗಳೆಲ್ಲವೂ, ಉಡುಗೆರೆಯೂ ಕಳುಹಲ್ಪಟ್ಟಿದ್ದುವು. ಆನೇಕಲ್ ತಾಲ್ಲೋಕಿನಿಂದ ಅತ್ತಿಬೆಲೆ ಶ್ರೀಮಂತ ಸಿದ್ಧಬಸಪ್ಪನವರು ಮೊದಲಾದವರೂ, ಬೆಂಗಳೂರು ಹಾಸನಗಳಿಂದ ಕೆಲ ದೊಡ್ಡ ಮನುಷ್ಯರುಗಳೂ ದಯಮಾಡಿಸಿದ್ದರು. ಈ ನೂತನದಂಪತಿಗಳಿಗೆ ಸಕಲ ಸುಖಸಂಪತ್ತನ್ನೂ ದೀರ್ಘಾಯುಷ್ಯವನ್ನೂ ಜಗದೀಶನು ದಯಪಾಲಿಸಲಿ.

ವರ್ತಮಾನಸಂಗ್ರಹ.

ಅನ್ನೆಂತ್ ಮೆಕೆಂಜಿಯೆಂಬಾತನು ಕಿವುಡನೂ ಮೂಗನೂ ಆಗಿದ್ದಾನೆ. ಈತನು ಕೇಂಬ್ರಿಜ್ ವಿದ್ಯಾಪೀಠದಲ್ಲಿ ಎಂ. ಎ. ಪರೀಕ್ಷೆಯನ್ನು ಕೊಟ್ಟಿದ್ದಾನೆ. ಇಂಥ ವಿಕಲಾಂಗರಲ್ಲಿ ಇಷ್ಟು ದೊಡ್ಡ ಪರೀಕ್ಷೆಯನ್ನು ಕೊಟ್ಟವರಲ್ಲಿ ಈತನೇ ಮೊದಲನೆಯವನಂತೆ.

ಪ್ರಪಂಚದೊಳಗೆಲ್ಲಾ ಇದುವರೆಗೆ ನಿರ್ಮಿತವಾಗಿ ಕೆಲಸಮಾಡುತ್ತಿರುವ ಮೋಟಾರು ಬಂಡಿಗಳು ಒಟ್ಟು ೨೪ ಲಕ್ಷವಾಗಿರುವುವು. ಪ್ರತಿಯೊಂದು ಬಂಡಿಯೂ ೪ ಗಜದುದ್ದವಿದೆಯೆಂದು ಲೆಕ್ಕಹಾಕಿಕೊಂಡರೂ, ಇವುಗಳನ್ನೆಲ್ಲಾ ಸಾಲಾಗಿ ನಿಲ್ಲಿಸಿದರೆ ೫೦೦೦ ಮೈಲಿಗಳ ದೂರ ನಿಂತುಕೊಳ್ಳುವುವು. ಈ ಬಂಡಿಗಳನ್ನೆಲ್ಲಾ ಯೂರೋಪು ದೇಶದಲ್ಲೆಲ್ಲಾ ಪೂರ್ವದಿಂದ ಪಶ್ಚಿಮಕ್ಕೆ ೨ ಸಾಲಾಗಿ ನಿಲ್ಲಿಸಬಹುದು. ಈ ಬಂಡಿಗಳೆಲ್ಲಾ ಓಡುವ ಪರಿಮಿತಿಯು ಗಂಟೆಯೊಂದಕ್ಕೆ ೪ ಕೋಟಿ ಮೈಲಿಗಳಷ್ಟಾಗುವುದು. ಎಂದರೆ ಪ್ರಪಂಚದ ಸುತ್ತಲೂ ೨ ಸಾವಿರ ಪ್ರದಕ್ಷಿಣೆಯನ್ನು ಮಾಡಿದಷ್ಟಾಗುವುದು.

ಮಧ್ಯಹಿಂದೂಸ್ಥಾನಕ್ಕೆ ಸೇರಿದ ಬರ್ವಾನಿಯೆಂಬಲ್ಲಿ ಕಳೆದ ಮಂಗಳವಾರ ಬಿಸಿಲಿನ ತಾಪವು ಅತ್ಯಂತ ಹೆಚ್ಚಾಗಿದ್ದು ಧೂಳಿಮಿಶ್ರವಾದ ಗಾಳಿಯೂ ೧ ಗಂಟೆಯವರೆಗೆ ಬೀಸಿ ಅನಂತರ ಗುಡುಗು ಮಿಂಚೂ ಮತ್ತೂ ಸಿಡಿಲುಗಳಿಂದ ಕೂಡಿ ದೊಡ್ಡ ಮಳೆಯೂ ಬಂದಿತು. ಇದರಿಂದ ಮನೆಗಳ ಮೇಲು ಹೊದ್ದಿಕೆಗೆ ಹಾಕಿದ್ದ ತಗಡುಗಳೂ ಕಬ್ಬಿಣದ ತೊಲೆಗಳೂ ಕಾಗದದೋಪಾದಿಯಲ್ಲಿ ಹಾರಾಡಿದುವು, ಅನೇಕ ಮರಗಳು ಬೇರುಸಹಿತ ಕೆಳಗುರುಳಿದುವು. ಮತ್ತೂ ಮಾರ್ಗದಲ್ಲಿ ತಿರುಗಾಡುತ್ತಿದ್ದ ಬಂಡಿಗಳೂ ತಲೆಕೆಳಗಾದುವು. ಈ ಅನಾಹುತದಿಂದ ಬಹಳ ಪದಾರ್ಥಗಳ ನಷ್ಟವಾಗಿರುವುದಲ್ಲದೆ ಪ್ರಾಣನಷ್ಟವೇನೂ ಆಗಲಿಲ್ಲ.

ಎನಾಮಲ್ಡ್ ಪಾತ್ರೆಗಳನ್ನುಪಯೋಗಿಸುವುದರಿಂದ ನರಗಳ ಪೀಡೆಯ ಸಂಬಂಧವಾದ ವ್ಯಾಧಿಗಳು ಹುಟ್ಟುವುವೆಂದು ವೈದ್ಯಶಾಸ್ತ್ರವಿಶಾರದರು ಅಭಿಪ್ರಾಯಪಟ್ಟಿದ್ದಾರೆ. ನಮ್ಮ ದೇಶದ ಪ್ರತಿಯೊಂದು ಗ್ರಾಮಗಳಲ್ಲೂ ಕಡಿಮೆಯ ಬೆಲೆಯಿಂದ ದೊರೆಯುವ ಈ ಪಾತ್ರೆಗಳೇ ತುಂಬಿಕೊಂಡಿವೆ. ಕಬ್ಬಿಣದ ತಗಡಿನ ಮೇಲೆ ಒಂದು ತೆರದ ಮಣ್ಣಿನ ಲೇಪನೆಯಿಂದ ಇವುಗಳನ್ನು ನಿರ್ಮಿಸುತ್ತಾರೆ. ಇವುಗಳಲ್ಲಿ ಆಹಾರ್ಯ ಪದಾರ್ಥವನ್ನಿಟ್ಟು ಉಪಯೋಗಿಸುವುದರಿಂದ ಅದರ ಮಣ್ಣಿನ ರೇಣುಗಳು ಹೊಟ್ಟೆಗೆ ಹೋಗಿ ಜೀರ್ಣಕೋಶಕ್ಕೆ ಉತ್ತೇಜನವನ್ನುಂಟುಮಾಡುವುದೆಂದೂ ಅದರಿಂದ ನರಗಳ ದೌರ್ಬಲ್ಯಾದಿರೂಪ ವ್ಯಾಧಿಗಳು ಹುಟ್ಟುವುವೆಂದೂ ಶಾಸ್ತ್ರಜ್ಞರ ಅಭಿಪ್ರಾಯವಾಗಿದೆ. ಈ ಪಾತ್ರೆಗಳನ್ನು ಉಪಯೋಗಿಸುತ್ತಿರುವ ಜನರು ಇದನ್ನು ಗಮನಿಸಬೇಕು.

ಹೈದರಾಬಾದು ಸೀಮೆಗೆ ಸೇರಿದ ಔರಂಗಾಬಾದು ಡಿಸ್ಟ್ರಿಕ್ಟಿನ ಒಂದು ಗ್ರಾಮವಾಸಿಯಾದ ನಾರಾಯಣ ರಾಘು ಎಂಬ ಮರಾಟಾ ಜಾತಿಯ ಬೇಸಾಯಗಾರನು ದತ್ತೂರಿ ಬೀಜದ ಹೊಗೆಯನ್ನು ಸೇದುವುದರಿಂದಲೂ, ಅದನ್ನು ಸೇವಿಸುವುದರಿಂದಲೂ ಉಂಟಾಗುವ ಫಲವನ್ನು ಗುಣವನ್ನು ಒಬ್ಬ ಸಾಧುವಿನಿಂದ ತಿಳಿದುಕೊಂಡು, ದೊಡ್ಡಪಟ್ಟಣಗಳಲ್ಲಿ ವಾರಗಟ್ಟಲೆ ಆಗುವ ಸಂತೆಗಳಿಗೆ ಬಂದು, ೩೦-೪೦ ಮೈಲಿ ದೂರ ಪ್ರಯಾಣಮಾಡಬೇಕೆಂದು ಬಂಡಿಯವರಿಗೆ ಹೇಳಿ ಬಾಡಿಗೆಗೆ ಗೊತ್ತುಮಾಡಿ ಹೋಗುತ, ಮಾರ್ಗದಲ್ಲಿ ಬಂಡಿಯವನು ತಿನ್ನುವ ಅನ್ನಕ್ಕೆ ದತ್ತೂರೀ ಬೀಜದ ಪುಡಿಯನ್ನು ಹಾಕಿ ಅವನು ಅದನ್ನು ತಿಂದು ಮೃತಿಯನ್ನುಹೊಂದುತಲೇ ಅವನ ಶವವನ್ನು ತೆಗೆದು ಒಂದು ಕೊಳಕ್ಕೋ, ನದಿಗೋ, ಕಾಡಿನ ನಿರ್ಜನ ಪ್ರದೇಶದಲ್ಲೋ ಬಿಸಾಡಿ, ಬಂಡಿಯನ್ನು ಜೊತೆದುಕೊಂಡು ಹೋಗಿ ಎತ್ತು ಬಂಡಿಗಳನ್ನು ವಿಕ್ರಯಿಸಿ ಬಿಡುತ್ತಿದ್ದನು. ಇವನು ಈ ರೀತಿಯಾಗಿ ಕಳೆದ ೯ ವರ್ಷಗಳಿಂದಲೂ ಈವರೆಗೆ ೩೦ ಕೊಲೆಗಳನ್ನು ಮಾಡಿರುವನು. ಸತ್ತವರ ಗುರುತು ಸಿಕ್ಕದೆ ಇದ್ದುದರ ಮೇಲೆ ಈವರೆಗೆ ಪೋಲೀಸರಿಗೆ ಸಿಕ್ಕದಿದ್ದ ಈಗ ಅಹಮದ್‌ನಗರ ಮತ್ತೂ ನಾಸಿಕ ಡಿ||ಗಳಲ್ಲಿ ಕಳೆದ ೬ ತಿಂಗಳಲ್ಲಿ ಅನೇಕ ಕೊಲೆಗಳನ್ನು ಮಾಡಿದುದರ ಮೇಲೆ ಪೋಲೀಸರು ಈ ನಾರಾಯಣನನ್ನು ಕಂಡು ಹಿಡಿದು ಅವನು ಮಾರಿದ್ದ ಬಂಡಿ ಎತ್ತುಗಳನ್ನು ಹಿಂದಕ್ಕೆ ಬರಮಾಡಿಕೊಂಡಿರುವರು.

ಗ್ರೇಟ್ ಬ್ರಿಟನ್ನಿನಲ್ಲಿ ಪ್ರತಿ ವರ್ಷವೂ ೨೫|| ಕೋಟಿ ಟನ್ನುಗಳಷ್ಟು ಕಲ್ಲಿದ್ದಲು ಸಕಲಕಾರ್ಯಗಳಿಗೂ ಸುಡಲ್ಪಡುತ್ತಿರುವುದು. ಅದರಲ್ಲಿ ೬ ಕೋಟಿ ಟನ್ನು ಕಾರ್ಖಾನೆಯಂತ್ರಾಲಯಗಳಲ್ಲಿ ಆವಿಯನ್ನು ಹುಟ್ಟಿಸುವುದಕ್ಕೂ, ೩ ಕೋಟಿ ಟನ್ನು ಕಬ್ಬಿಣದ ಕುಲುಮೆಗೆಲಸಕ್ಕೂ, ೨ ಕೋಟಿ ಟನ್ನು ಗಣಿಗಳ ಕೆಲಸಕ್ಕೂ, ೧|| ಕೋಟಿ ಟನ್ನು ದೀಪದ ಗ್ಯಾಸನ್ನು ಹುಟ್ಟಿಸುವುದಕ್ಕೂ, ೧ ಕೋಟಿಯೂ ೫೦ ಲಕ್ಷ ಟನ್ನು ಹೊಗೆ ಬಂಡಿಗಳಿಗೂ ಉಪಯೋಗಿಸಲ್ಪಡುವುದು. ಇದಷ್ಟು ಗ್ರೇಟ್ ಬ್ರಿಟನ್ನೊಂದರಲ್ಲಿ ಉಪಯೋಗಿಸಲ್ಪಡತಕ್ಕದು. ಪ್ರಪಂಚದಲ್ಲೆಲ್ಲಾ ಇದನ್ನುಪಯೋಗಿಸುವ ವಾಡಿಕೆಯಿರುತ್ತಿರುವುದರಿಂದ ವರ್ಷ ೧ ಕ್ಕೆ ವೆಚ್ಚವಾಗುವ ಅದರ ಪರಿಮಾಣವನ್ನು ಇಷ್ಟೆಂದು ಊಹಿಸುವುದೇ ಅಸಾಧ್ಯವಾಗಿದೆ. ಹೀಗೆ ಇದು ಉಪಯೋಗಿಸಲ್ಪಡುತ್ತ ಬಂದರೆ ಕೆಲ ಕಾಲಾನಂತರ ಭೂಗರ್ಭದಲ್ಲಿರುವ ಕಲ್ಲಿದ್ದಲೆಲ್ಲಾ ಮುಗಿದೇ ಹೋಗಬಹುದು. ಅಂಥ ಕಾಲಕ್ಕೆ ಸರ್ವದಾಚ್ಯುತಿಯಿಲ್ಲದಂತೆ ದೊರೆಯುವ ಸಾಧನವೊಂದನ್ನು ಗೊತ್ತುಮಾಡಿರುವುದು ಆವಶ್ಯಕವೆಂದು ಶೋಧಕರು ಯೋಚಿಸಿ, ವಿದ್ಯುಚ್ಛಕ್ತಿಯೇ ಅಂಥಸಾಧನವೆಂದು ಗೊತ್ತುಮಾಡಿದ್ದಾರೆ. ನೀರು ಪ್ರಪಂಚದ ಎಲ್ಲಾ ಭಾಗದಲ್ಲೂ ಸದಾ ದೊರೆಯುವುದರಿಂದಲೂ, ಅದರ ಪ್ರಪಾತದಿಂದ ವಿದ್ಯುಚ್ಛಕ್ತಿಯನ್ನು ಸುಲಭವಾಗಿ ಹುಟ್ಟಿಸಬಹುದೆಂಬುದು ಈ ಮೊದಲೇ ಸಿದ್ಧವಾಗಿರುವುದರಿಂದಲೂ ಅದರಭಿವೃದ್ಧಿಯೇ ಪ್ರಪಂಚದ ಮುಂದಿನ ಪರಿಶ್ರಮಾಭಿವೃದ್ಧಿಗೆ ಅತ್ಯುತ್ತಮವಾದ ಸಾಧನವೆಂದು ಸಿದ್ಧಾಂತಮಾಡಿದ್ದಾರೆ.

ಅದ್ಭುತವಾದ ನವೀನಶೋಧನಗಳು.

ಹೊಗೆಬಂಡಿಗಳು ಹೋಗುತ್ತಿರುವಾಗ ಅವುಗಳ ಬಾಗಿಲು ತೆರೆದುಹೋಗದಿರುವಂತೆ ಮಾಡುವ ಯುಕ್ತಿಯೊಂದನ್ನು ಹೊಸದಾಗಿ ಜಾರ್ಜಿ ಕಾಸ್ವೆಲ್ ಎಂಬ ಸಿಗ್ನಲರ್ ಒಬ್ಬನು ಕಂಡುಹಿಡಿದಿದ್ದಾನೆ. ಇದಕ್ಕಾಗಿ ಈತನಿಗೆ ಬ್ರಿಟಿಷ್‌ರೈಲ್ವೆಕಂಪೆನಿಯವರು ೨೫೦೦೦ ರೂ. ಗಳ ಬಹುಮಾನವನ್ನು ಕೊಟ್ಟರು. ಇವನು ಗೊತ್ತುಮಾಡಿರುವುದರ ಫಲವೇನೆಂದರೆ-ಬಂಡಿಯು ಹೋಗುತ್ತಿರುವಾಗ ಅದರ ಕದಗಳನ್ನು ತೆಗೆಯುವುದಕ್ಕೂ ಮುಚ್ಚುವುದಕ್ಕೂ ಎಂಜಿನ್ನಿನ ಡ್ರೈವರಿಗೂ ಗಾರ್ಡಿಗೂ ಮಾತ್ರವೇ ಸಾಧ್ಯವಾಗುವುದು. ಗಾರ್ಡ್ ಇರುವ ಬಂಡಿಗೂ ಎಂಜನ್ನಿಗೂ ಪ್ರಯಾಣಿಕರು ಇರುವ ಬಂಡಿಗಳಿಗೂ ಒಂದು ಸರಪಣಿಯ ದ್ವಾರಾಸಂಬಂಧವಿರುವುದು. ಅದಕ್ಕೆ ಸಂಬಂಧಿಸಿದಂತೆ ಎಂಜಿನ್‌ಬಂಡಿಯಲ್ಲೂ ಗಾರ್ಡ್‌ಬಂಡಿಯಲ್ಲೂ ಒಂದೊಂದು ಚಕ್ರಗಳಿರುವುವು. ಕದಗಳನ್ನು ತೆಗೆಯಬೇಕಾದರೂ ಮುಚ್ಚಬೇಕಾದರೂ ಆ ಚಕ್ರಗಳನ್ನು ತಿರುಗಿಸದಿದ್ದರೆ ಯಾವಬಾಗಿಲನ್ನೂ ತೆಗೆಯಲೂ ಮುಚ್ಚಲೂ ಆಗುವುದಿಲ್ಲ. ಈ ಸಾಧನದಿಂದ ಕಳ್ಳಕಾಕರು ಮಧ್ಯಮಾರ್ಗದಲ್ಲಿ ಬಾಗಿಲನ್ನು ತೆರೆದು ನುಗ್ಗಿ ಕಳವು ಕೊಲೆಗಳನ್ನು ಮಾಡುತ್ತಿದ್ದುದಕ್ಕೆ ಪ್ರತಿಬಂಧವುಂಟಾಗುವುದು.

ಅಮೇರಿಕಾದ ನ್ಯೂಯಾರ್ಕ್ ಪಟ್ಟಣದಲ್ಲಿರುವ ಸುಪ್ರಸಿದ್ಧ ಎಡಿಸನ್ ಕಾರ್ಯಾಲಯದವರು ಯಂತ್ರಾಲಯಗಳ ಚಿಮ್ನಿಗಳಿಂದ ಹೊರಡುವ ಕಲ್ಲಿದ್ದಲ ಹೊಗೆಯನ್ನು ಅಣಗಿಸುವುದಕ್ಕೆ ಒಂದು ಉಪಾಯವನ್ನು ಈಗತಾನೇ ಕಂಡುಹಿಡಿದಿದ್ದಾರೆ. ದೊಡ್ಡದೊಡ್ಡ ಯಂತ್ರಾಲಯಗಳು ತುಂಬಿರುವ ಮಹಾಪಟ್ಟಣಗಳಲ್ಲಿ ಹೊಗೆಯ ಅವಾಂತರವು ಎಷ್ಟಿರುವುದೆಂಬುದು ಬೊಂಬಾಯಿಯಂಥ ಪಟ್ಟಣಗಳನ್ನು ನೋಡಿರುವವರಿಗೆ ಸ್ವಲ್ಪಮಟ್ಟಿಗೆ ಗೊತ್ತುಂಟು. ಇಂಥ ಹೊಗೆಯನ್ನೆಲ್ಲಾ ಆ ಕಾರ್ಯಾಲಯದವರು ಒಂದು ದೊಡ್ಡ ಯಂತ್ರದ ಸಹಾಯದಿಂದ ಆಕರ್ಷಿಸಿ ಒಂದು ಸರೋವರದ ನೀರಿನ ಅಡಿಗೆ ಅದನ್ನು ಸೇರಿಸಿಬಿಡುವರು. ಅಲ್ಲಿಂದ ಹೊಗೆಯು ನೀರಿನ ಮೇಲಕ್ಕೆ ಏಳುವುದರೊಳಗಾಗಿ ಅದರೊಳಗಿರುವ ಮಷ್ಯವೆಲ್ಲವೂ ನೀರಿನತಡಿಯಲ್ಲೇ ನಿಂತುಹೋಗುವುದು. ಹೀಗೆ ಹೋಗುವ ಕಶ್ಮಲವು ೧೦೦ಕ್ಕೆ ೯೯ರಷ್ಟು ಭಂಗವಾಗುವುದು. ಆ ಬಳಿಕ ನಿರ್ಮಲವಾದ ವಾಯುವು ಮಾತ್ರ ನೀರಿನ ಹೊರಕ್ಕೆ ಬರುವುದು. ಇದರಿಂದ ಪಟ್ಟಣಗಳಲ್ಲಿ ಹೊಗೆಯಿಂದುಂಟಾಗುವ ಮಾಲಿನ್ಯಾದಿಗಳು ಸಂಪೂರ್ಣವಾಗಿ ನಿವಾರಿತವಾಗಲು ಸಾಧಕವಾಯಿತು.

ಸೂರ್ಯಕಿರಣದಲ್ಲಿರುವ ಉಷ್ಣವನ್ನು ಒಂದುಕಡೆಗೆ ಕೂಡಿಸಿ, ಅದರಿಂದ ಆವಿಯನ್ನು ಹುಟ್ಟಿಸಿ, ಅದರಿಂದ ಯಂತ್ರಗಳನ್ನು ನಡೆಯಿಸುವುದಕ್ಕಾಗಿ ಈಜಿಪ್ಟ್ ದೇಶದಲ್ಲಿ ಮಹಾಪ್ರಯತ್ನಗಳು ನಡೆಯುತ್ತಿವೆ. ಸೂರ್ಯಕಿರಣವನ್ನು ದೊಡ್ಡ ಗಾಜಿನಮೇಲೆ ಬೀಳುವಂತೆ ಮಾಡಿ, ಆ ಗಾಜಿನ ಕೆಳಗಿಂದ ಸೂರ್ಯಕಿರಣದ ಉಷ್ಣವು ನೀರು ತುಂಬಿರುವ ಬಾಯಿಲರ ಮೇಲೆ ಬೀಳುವಂತೆ ಮಾಡುವರು. ಅದರಿಂದ ಬಾಯ್ಲರಿನಲ್ಲಿರುವ ನೀರು ಕಾದು ಆವಿಯು ಹುಟ್ಟುವುದು. ಆ ಆವಿಯ ಶಕ್ತಿಯಿಂದ ಯಂತ್ರಗಳು ನಡೆಯುವುವು. ಈಗ ಇಂಥ ಯಂತ್ರಗಳ ನಿರ್ಮಾಣವು ಈಜಿಪ್ಟಿನಲ್ಲಿ ನಡೆಯುತ್ತಿದೆ. ನೂತನ ರೀತಿಯಿಂದ ನಾನಾತೆರದ ಯಂತ್ರಗಳನ್ನು ಹೀಗೆಯೇ ನಿರ್ಮಿಸಿ, ಬಿಸಿಲಿನ ಹೊತ್ತಿನಲ್ಲಿ ಬಿಸಿಲಿನ ಉಷ್ಣವನ್ನೆಲ್ಲಾ ಆ ಯಂತ್ರದಲ್ಲಿ ಆಕರ್ಷಿಸಿ, ಅದರ ಸಹಾಯದಿಂದ ಮೇಲೆ ಹೇಳಿದಮೇರೆಗೆ ಯಂತ್ರಗಳನ್ನು ನಡೆಯಿಸುವಂತೆ ಮಾಡಬಹುದೆಂದು ಶಾಸ್ತ್ರಜ್ಞರು ಹೇಳುತ್ತಿದ್ದಾರೆ. ಒಂದು ದೊಡ್ಡ ಯಂತ್ರಕ್ಕೆ ಕಲ್ಲಿದ್ದಲನ್ನು ಉಪಯೋಗಿಸಿ ಕೆಲಸವನ್ನು ಮಾಡಿಸುವಾಗ ೮೯೦ ರೂ ಗಳ ವೆಚ್ಚವು ಹಿಡಿಯುತ್ತಿದ್ದರೆ ಅಷ್ಟೇ ಕೆಲಸವನ್ನು ಬಿಸಿಲಿನಿಂದ ಹುಟ್ಟುವ ಆವಿಯಿಂದ ಮಾಡಿಸುವುದಕ್ಕೆ ೨೩೦ ರೂ. ಗಳ ವೆಚ್ಚವು ಮಾತ್ರ ಹಿಡಿಯುವುದಂತೆ.

ಅಮೇರಿಕಾದ ಶಸ್ತ್ರಚಿಕಿತ್ಸಕಸಂಘದ ಸಭೆಯಲ್ಲಿರುವ ಡಾ|| ಕಾರಲ್ ಎಂಬುವರು ಒಂದು ಪ್ರಾಣಿಯ ಹೃದಯಚಲನೆಯನ್ನು ನಿಲ್ಲಿಸಿಬಿಟ್ಟ ಬಳಿಕ ಸ್ವಲ್ಪಕಾಲದಮೇಲೆ ಅದಕ್ಕೆ ಶಸ್ತ್ರಚಿಕಿತ್ಸೆಯನ್ನು ಮಾಡಿ ಮರಳಿ ಬದುಕಿಸಿದರು. ಆ ಮಧ್ಯಕಾಲದಲ್ಲಿ ಆ ಪ್ರಾಣಿಗೆ ೩ ನಿಮಿಷಗಳಕಾಲ ರಕ್ತಪ್ರಸರಣೆಯು ನಿಂತುಹೋಗಿದ್ದಿತು. ಹೃದಯಚಲನೆಯು ನಿಂತುಹೋದರೆ ಥಟ್ಟನೆ ಮರಣಸಂಭವಿಸುವುದೆಂದೂ ಅಂಥ ಪ್ರಾಣಿಯು ಮತ್ತೆ ಬದುಕುವುದಿಲ್ಲವೆಂದೂ ಇದುವರೆಗೆ ವೈದ್ಯರುಗಳು ನಂಬಿದ್ದರು. ಕಾರಲ್‌ರವರು ಅದನ್ನು ಸುಳ್ಳೆಂದು ಸಿದ್ಧಾಂತಪಡಿಸಿರುವರು. ಮತ್ತೂ ಇವರು ನಡೆಯಿಸಿರುವ ಶೋಧನದಲ್ಲಿ ಅನೇಕ ನೂತನವಿಷಯಗಳು ಹೊರಪಟ್ಟಿರುತ್ತವೆ. ಕೆಟ್ಟುಹೋದ ಪ್ರತಿಯೊಂದು ಅಂಗದಲ್ಲೂ ಹೊಸದಾಗಿ ರಕ್ತಪ್ರಸಾರಣವನ್ನು ಮಾಡಿಸುವುದರಿಂದ ಪ್ರಾಣವನ್ನು ಬರಿಸಬಹುದೆಂದು ಇವರು ದೃಷ್ಟಾಂತಪುರಸ್ಸರವಾಗಿ ಸ್ಥಾಪಿಸಿದ್ದಾರೆ. ಅಮೇರಿಕಾದೊಳಗಿನ ಕಾರ್ನಿಗಿ ವಿದ್ಯಾಲಯದಲ್ಲಿರುವ ಇವರ ಶೋಧನಾಲಯದೊಳಗೆ ಕಣ್ಣು ಶ್ವಾಸಕೋಶ ಮೊದಲಾದ ಅಂಗಗಳು ರಕ್ತಪ್ರಸಾರದಿಂದ ಕೂಡಿ ಬೇರೆಬೇರೆ ಯಾವಾಗಲೂ ಸಿದ್ಧಮಾಡಿ ಇಟ್ಟಲ್ಪಟ್ಟಿರುವುವಂತೆ. ರೋಗಗಳು ಬಂದರೆ ಅವರ ದೇಹದಲ್ಲಿ ಕೆಟ್ಟುಹೋಗಿರುವ ಅಂಗವನ್ನು ತೆಗೆದುಬಿಟ್ಟು ಆ ಸ್ಥಲಕ್ಕೆ ತಮ್ಮಲ್ಲಿ ಸಿದ್ಧವಾಗಿರುವ ಅಂಗಭಾಗವನ್ನು ಸೇರಿಸಿ ಬಿಡುವರು. ಮರಣವೆಂಬುದು ಸ್ವಾಭಾವಿಕವಾಗಿ ಇಲ್ಲವೇ ಇಲ್ಲವೆಂದು ಈ ಡಾಕ್ಟರ ಅಭಿಪ್ರಾಯವಂತೆ! ಆಯಾಕಾಲಕ್ಕೆ ಅವಶ್ಯಕವಾದ ಅಂಗಭಾಗಗಳು ಸಿದ್ಧವಾಗಿದ್ದರೆ ಸತ್ತುಹೋದವರನ್ನು ಮರಳಿ ಬದುಕಿಸಬಹುದೆಂದು ಇವರು ಹೇಳುತ್ತಾರೆ. ಈ ತತ್ತ್ವದಮೇಲೆ ಶರೀರತತ್ತ್ವವನ್ನು ಕುರಿತ ಅಭಿಪ್ರಾಯಗಳೇ ಬಲುಮಟ್ಟಿಗೆ ವ್ಯತ್ಯಸ್ತವಾಗಿ ಹೋಗುವಂತಿವೆ.

ತನ್ನ ಸಂಸ್ಥಾನದಲ್ಲಿನ ಗಿರಿನದೀ ಬಲವನ್ನುಪಯೋಗಿಸಿಕೊಂಡು ವಿದ್ಯುಚ್ಛಕ್ತಿಯನ್ನುತ್ಪಾದನಮಾಡಿಕೊಳ್ಳಲಿಕ್ಕೂ, ಆಶಕ್ತಿಯನ್ನು ಆಸಂಘದವರು ಸ್ಥಾಪಿಸಲಿಕ್ಕಿರುವ ಯಂತ್ರಗಳಿಗೆ ಉಪಯೋಗಿಸಿಕೊಳ್ಳಲಿಕ್ಕೂ, ಕಾಡುಗಳಲ್ಲಿರುವ ಮರಗಳನ್ನು ಕಡಿದು ಮುಚ್ಚುಗಳನ್ನು ಮಾಡಿಕೊಳ್ಳುವದಕ್ಕೂ ಕಾಗದವನ್ನು ನಿರ್ಮಿಸುವುದಕ್ಕೂ, ಬಿದಿರ ಕಾಡನ್ನು ಕಡಿದು ಅದರ ಸಾಮಾನುಗಳನ್ನು ನಿರ್ಮಿಸುವುದಕ್ಕೂ, ಈ ಕೆಲಸಗಳಿಗೆಲ್ಲಾ ಬೇಕಾದ ಸುಣ್ಣವನ್ನು ಗಣಿಗಳನ್ನಿಟ್ಟು ಸುಟ್ಟುಕೊಳ್ಳುವುದಕ್ಕೂ, ಬೇಕಾದ ಕಡೆಯಲ್ಲಿ ಮಾರ್ಗಗಳನ್ನು ಹೊಸದಾಗಿ ಹಾಕಿಕೊಳ್ಳುವುದಕ್ಕೂ ಅಪ್ಪಣೆಯನ್ನು ಕೊಟ್ಟಿದ್ದಾರಂತೆ. ಇದಕ್ಕೆ ಸಂಬಂಧಪಟ್ಟ ನಿಬಂಧನೆಗಳುಳ್ಳ ಒಪ್ಪಂದದ ಪತ್ರಿಕೆಯು ಬರೆದು ಹಸ್ತಾಕ್ಷರ ಮಾಡಿಕೊಡಲ್ಪಟ್ಟಿರುವುದು. ಭರತಖಂಡವು ಸಂಪತ್ತಿನಾಭಿವೃದ್ಧಿಗಾಗಿ ತಳತಳ ಹದಿಯುತ್ತಿರುವುದೆಂಬ ಸಂಗತಿಯು ಉಪನ್ಯಾಸ ಮಂಟಪಪದರಂಗದಲ್ಲೂ ಪತ್ರಿಕೆಗಳ ಲೇಖನ ವಿಜೃಂಭಣೆಯಲ್ಲೂ ತೋರುತ್ತಿರುವ ಮಟ್ಟಿಗೆ ಕಾರ್ಯರೂಪದಲ್ಲಿ ತೋರುತ್ತಿರುವುದು ಕಡಿಮೆ. ಸಿಕಿಂ ರಾಜರು ಇಂಥ ಕಾರ್ಯಗಳಲ್ಲಿ ಸ್ವತಃ ಸಾಹಸವನ್ನು ತೋರಿಸಿದ್ದರೆ ದೇಶದಸಂಪತ್ತಿಯು ಅಭಿವೃದ್ಧಿಗೆ ವಿಶೇಷ ಸಾಧಕವಾಗುತ್ತಿದ್ದಿತು. ಅಥವಾ ಸಂಘವನ್ನೇರ್ಪಡಿಸಿ, ದೇಶೀಯರಿಂದ ಹಣಗಳನ್ನು ಸಾಲವಾಗಿ ಭಾಗದಾರರಿಂದತೆಗೆದು ಕೂಡಿಸಿ, ಕಾರ್ಯಾರಂಭಮಾಡಿಸಿದ್ದರೆ ಸ್ವದೇಶಭಾಗ್ಯಾಭಿವೃದ್ಧಿಗೆ ಸಹಾಯಕವಾಗುತ್ತಿದ್ದಿತು. ಅದನ್ನು ಬಿಟ್ಟು ಬೀರಗಣ ಸಂಪತ್ತಿಯೇ ಅಲ್ಲದೆ ಭೂಗರ್ಭದ ಸಂಪತ್ತಿಯನ್ನೂ ಕೂಡ ಅನ್ಯದೇಶೀಯರ ಹಸ್ತಗತವನ್ನು ಮಾಡುವ ಕಾರ್ಯದಲ್ಲಿ ಮೊದಲ್ಗೊಡುತ್ತ ಬರುವುದರಲ್ಲಿ ಜಾಣ್ತನವೇನುಂಟು?

ಮೈಸೂರ್ ಸ್ಟಾರ್

೧೯೧೪ ನೆಯ ಮೇ ತಾ॥ ೧೧ ನೆಯ ಸೋಮವಾರ.

ಐರ್ಲೆಂಡಿನ ಸ್ವರಾಜ್ಯ.

ಐರ್ಲೆಂಡ್ ಎಂಬ ಭೂಭಾಗವು ಗ್ರೇಟ್‌ಬ್ರಿಟನ್ನಿನ ಪಶ್ಚಿಮದಲ್ಲಿದೆ. ಇದರಲ್ಲಿ ಆ ದೇಶದ ಮೂಲನಿವಾಸಿಗಳು-ಆ ದೇಶದವರೂ ಇಂಗ್ಲೆಂಡಿನವರೂ ಸೇರಿದ ಮಿಶ್ರಜನರು-ಇಂಗ್ಲೆಂಡಿನಿಂದ ಅಲ್ಲಿಗೆ ವಲಸೆಹೋಗಿ ಅಲ್ಲಿನ ಜನರೊಡನೆ ಸಂಬಂಧವನ್ನಿಟ್ಟುಕೊಳ್ಳದೆ ಇರತಕ್ಕವರು- ಎಂದು ಮೂರು ತೆರದ ಪ್ರಜೆಗಳಿದ್ದಾರೆ. ಮೊದಲನೆಯ ೨ ತೆರದವರೂ ಕ್ರೈಸ್ತಮತದೊಳಗಿನ ರೋಮನ್ ಕೆಥೋಲಿಕ್ ಪಂಥದವರು. ೩ ನೆಯ ತರದವರು ಪ್ರಾಟೆಸ್ಟೆಂಟ್ ಪಂಥದವರು. ಇವರೇ ಆಲ್‌ಸ್ಟರ್ ಎಂಬ ಜಿಲ್ಲೆಯಲ್ಲಿ ನೆಲಸಿರುವವರು. ಇಂಗ್ಲೆಂಡಿಗೂ, ಐರ್ಲೆಂಡಿಗೂ ಸಂಬಂಧವುಂಟಾದಾರಭ್ಯ ಆಂಗ್ಲರು ವಿದೇಶೀಯರಂತೆಯೇ ಐರ್ಲೆಂಡಿನಲ್ಲಿ ರಾಜ್ಯಭಾರಮಾಡುತ್ತ ಬಂದರು. ೧೭ ನೆಯ ಶತಮಾನದ ಆರಂಭದಲ್ಲಿ ಎಂದರೆ ಮೊದಲನೆಯಜೇಮ್ಸ್ ಪ್ರಭುವಿನ ಕಾಲದಲ್ಲಿ ಐರ್ಲೆಂಡಿನ ಒಂದು ಭಾಗವಾದ ಅಲ್ಸ್ಟರ್ ಎಂಬುದು ಆಂಗ್ಲ ಜನರಿಗೇ ಅಭಿನಿವೇಶನವಾಯಿತು. ಆಂಗ್ಲಪ್ರಭುತ್ವವು ಪ್ರಾಟೆಸ್ಟೆಂಟ್ ಪಂಥಕ್ಕೆ ಸೇರಿದುದಾದುದರಿಂದ ಅಲ್ಲಿನ್ದ ಅವರ ದೇವಾಲಯಕ್ಕೇ ಪ್ರಾಶಸ್ತ್ಯವೂ, ಆ ಪಂಥದ ಆಲ್‌ಸ್ಟರ್ ನಿವಾಸಿಗಳಾದ ಆಂಗ್ಲಜನರಿಗೇ ಸರ್ವಾಧಿಕಾರವೂ ದೊರೆದುದರಿಂದ ಅಲ್ಲಿನ ಇನ್ನೆರಡುತೆರದ ಜನರಲ್ಲಿ ಅಸಮಾಧಾನಗಳು ಹೆಚ್ಚುತ್ತ ಬಂದು. ಮತವೈಷಮ್ಯದಿಂದಲೇ ಆಗ ನಡೆದ ಹೋರಾಟ ಕಡಿದಾಟಗಳು ಅಪರಿಮಿತವಾಗಿದ್ದುವು. ಅಲ್ಲಿ ೫ ಭಾಗದಷ್ಟು ಪ್ರಜೆಗಳು ಕೆಥೋಲಿಕ್ ಪಂಥದವರಾಗಿಯೂ ೧ ಭಾಗದವರುಮಾತ್ರ ಪ್ರಾಟೆಸ್ಟೆಂಟರಾಗಿಯೂ ಇದ್ದರೂ, ರಾಜ್ಯಾದಾಯದಲ್ಲಿ ಬಹುಭಾಗವು ಪ್ರಾಟೆಸ್ಟೆಂಟ್ ಧಾರ್ಮಿಕ ಕಾರ್ಯಗಳಿಗೆ ರಾಜ್ಯಕರ್ತರಿಂದ ಉಪಯೋಗಿಸಲ್ಪಡುತ್ತಿದ್ದುದೂ, ಮತ್ತೂ ಆ ದೇಶದಲ್ಲಿ ಮುಖ್ಯೋದ್ಯೋಗವಾಗಿದ್ದ ವ್ಯವಸಾಯದ ವಿಷಯದಲ್ಲಿ ಭೂಸ್ವಾಮಿಗಳ ಕೈಹಿಡಿತಕ್ಕೆ ಸಿಕ್ಕಿದ ಬೇಸಾಯಗಾರರು ಅನಿರ್ವಾಚ್ಯವಾದ ತೊಂದರೆಯನ್ನು ಅನುಭವಿಸುತ್ತಿದ್ದುದೂ, ವಿದ್ಯಾಭ್ಯಾಸ ವಿಷಯದಲ್ಲಿ ಧಾರ್ಮಿಕಬೋಧಾ ಸಂಬಂಧದಿಂದ ಅಸಮಾಧಾನಗಳಿದ್ದುದೂ ಸಹ ಆ ದೇಶದಲ್ಲಿನ ಶಾಂತಿಗೆ ವಿಶೇಷ ಭಂಗಕಾರಿಯಾಗಿ ಪರಿಣಮಿಸಿದ್ದಿತು. ದಯಾರ್ದ್ರ ಹೃದಯನೂ ಸುಪ್ರಖ್ಯಾತ ರಾಜತಂತ್ರಜ್ಞನೂ ಆದ ಗ್ಲಾಡ್‌ಸ್ಟನ್ ಪ್ರಭುವು ವಿಕ್ಟೋರಿಯಾ ಮಹಾರಾಣಿಯವರ ಕಾಲದಲ್ಲಿ ಮುಖ್ಯಮಂತ್ರಿಯಾಗಿದ್ದಾಗ್ಗೆ ಐರ್ಲೆಂಡಿನ ಉದ್ಧಾರಕ್ಕಾಗಿ ತನ್ನ ಉದಾರಚಿತ್ತವನ್ನಿತ್ತು ದೃಢಸಂಕಲ್ಪಗೊಂಡನು. ಲೋಕಾಕರ್ಷಕವಾದ ತನ್ನ ಅನುಪಮ ವಾಗ್ಮಿತ್ವದಿಂದ ಪಾರ್ಲಿಮೆಂಟಿನ ಮಹಾಜನರ ಮನಸ್ಸನ್ನು ದ್ರವಿಸುವಂತೆ ಮಾಡಿ, ೧೮೬೯ ನೆಯ ಇಸವಿಯಿಂದ ೨-೩ ವರ್ಷಗಳೊಳಗಾಗಿ ಅಲ್ಲಿನ ಜನರಿಗೆ ಧಾರ್ಮಿಕಶಾಖೆ, ವ್ಯವಸಾಯಶಾಖೆ, ವಿದ್ಯಾಭ್ಯಾಸಶಾಖೆಯೊಳಗಿನ ಏರ್ಪಾಟುಗಳಲ್ಲಿದ್ದ ತೊಂದರೆಯನ್ನು ಪರಿಹರಿಸುವ ಕಾನೂನನ್ನು ಸ್ಥಾಪಿಸಿಕೊಟ್ಟನು. ಬಳಿಕ ಆ ದೇಶದ ಆಡಳಿತವನ್ನು ತಾವೇ ನಡೆಸಿಕೊಂಡು ಹೋಗುವುದಕ್ಕೆ ಸಾಧಕವಾಗುವಂತೆ ಒಂದು ಸ್ವತಂತ್ರವಾದ ಪಾರ್ಲಿಮೆಂಟನ್ನು ತಮಗೆ ಕೊಡಿಸಿಕೊಡಬೇಕೆಂದು ಐರ್ಲೆಂಡಿನವರು ಬಂದು ಅಭಿಮಾನಪೂರ್ವಕವಾಗಿ ಪಾರ್ಲಿಮೆಂಟಿನವರನ್ನು ಕೇಳಿಕೊಂಡರು. ಅದಕ್ಕೆ ಪಾರ್ಲಿಮೆಂಟಿನ ಬಹುಜನರು ವಿರೋಧಿಸಿದರು. ಆದರೂ ಮುಖ್ಯಮಂತ್ರಿಯಾದ ಗ್ಲಾಡ್‌ಸ್ಟನ್ನಿಗೆ ಅದು ಸೂಕ್ತವೆಂದೇ ತೋರಿತು. ತನ್ನ ಮನಸ್ಸಿಗೆ ನ್ಯಾಯವೆಂದು ತೋರಿ ಒಪ್ಪಿದ ಕಾರ್ಯವನ್ನು ಸಾಧಿಸುವಲ್ಲಿ ಪ್ರಾಣವನ್ನಾದರೂ ಅರ್ಪಿಸಲು ಹಿಂದೆಗೆಯದ ಆ ಮಹಾನುಭಾವನು ಅದನ್ನು ಸಾಧಿಸಿಕೊಡುವುದರಲ್ಲಿ ದೃಢಸಂಕಲ್ಪನಾದನು. ಆ ವಿಷಯದಲ್ಲಿ ಒಂದು "ಮಸೂದೆ" ಯನ್ನು ಪಾರ್ಲಿಮೆಂಟಿನ ಮುಂದಕ್ಕೆ ೧೮೮೬ ನೆಯ ವರ್ಷದಲ್ಲಿ ತಾನೇ ಇಟ್ಟನು. ಅದಕ್ಕೆ ಅನುಕೂಲ ಮತಗಳು ೩೧೧, ಪ್ರತಿಕೂಲ ಮತಗಳು ೩೪೩ ಬಿದ್ದು, ಅದು ವಿಧಿಯಾಗಲವಕಾಶವಿಲ್ಲದೆ ಹೋಯಿತು. ಗ್ಲಾಡ್‌ಸ್ಟನ್ನನು ಮುಖ್ಯ ಮಂತ್ರಿತ್ವವನ್ನು ಬಿಟ್ಟನು. ಆಬಳಿಕ ಮತ್ತೊಂದು ವೇಳೆ ತಾನು ಮಂತ್ರಿಯಾದಾಗ್ಗೆ ಇದೇ ವಿಷಯವನ್ನು ೧೮೯೩ ರಲ್ಲಿ ಪಾರ್ಲಿಮೆಂಟಿಗೆ ಗ್ಲಾಡ್‌ಸ್ಟನ್ನನು ತರಲು ಕಾಮನ್ಸ್ ಸಭೆಯಲ್ಲಿ ಅದು ಅನುಮೋದಿತವಾದರೂ ಲಾರ್ಡ್ ಸಭೆಯವರಿಂದ ನಿರಾಕೃತವಾಯಿತು.

ಹೀಗೆ ಕಳೆದ ೩೪ ವರ್ಷದಲ್ಲಿಯೇ ಬೀಜಾವಾಪನಗೊಂಡಿರುವ ಈ ಸ್ವರಾಜ್ಯವಿಧಿಯು ಈಗಿನ ಲಿಬರಲ್ ಪಕ್ಷದ ಪ್ರಭುತ್ವದಲ್ಲಿ ಮತ್ತೆ ತಲೆಯೆತ್ತಿತು. ಈಗಿನ ಮುಖ್ಯಮಂತ್ರಿಯವರಾದ ಮಿ॥ ಆಸ್ಕ್ವಿತ್‌ರವರು ಲಾರ್ಡ್ ಗ್ಲಾಡ್‌ಸ್ಟನ್‌ರವರ ಉದಾರಮತದಲ್ಲೇ ಹಜ್ಜೆಯಿಟ್ಟು ಇದನ್ನು ವಿಧಿಯನ್ನಾಗಿ ಮಾಡಿರಲು ಸಾಹಸಪಟ್ಟರು. ಈ ಕಾರ್ಯದಲ್ಲಿ ಅವರಿಗೆ ತುಂಬಾ ಜಯವಾಗುವ ಚಿಹ್ನೆಗಳೇ ಗೋಚರವಾಗುತ್ತ ಬಂದುವು. ಕಾಮನ್ಸ್ ಸಭೆಯಲ್ಲಿ ಇದು ಅನುಮೋದಿತವಾಯಿತು, ಲಾರ್ಡುಗಳ ಸಭೆಯಲ್ಲಿ ಇದು ಅನುಮೋದಿತವಾಗದಿದ್ದರೂ ವಿಧಿಯಾಗಿ ಪರಿಣಮಿಸುವುದಕ್ಕೆ ಈಗ ಅವಕಾಶವಾಗಿರುವುದು.

ಕೆಥೋಲಿಕ್‌ಪಂಥದವರೇ ಹೆಚ್ಚಾಗಿಗುಳ್ಳ ಐರ್ಲೆಂಡಿಗೆ ಸ್ವರಾಜ್ಯದ ಅಧಿಕಾರವು ಸಿಕ್ಕಿ ಸ್ವತಂತ್ರವಾದ ಪಾರ್ಲಿಮೆಂಟು ದೊರೆವುದಾದರೆ, ಅಲ್ಪಸಂಖ್ಯಾಕರಾದ ತಾವುಗಳು ಅದಕ್ಕೇ ಅಂಕಿತರಾಗಿ ಬಾಳಬೇಕಾಗುವದಲ್ಲಾ ಎಂಬ ಚಿಂತೆಯು ಆಲ್ಸ್ಟರ್‌ಜಿಲ್ಲೆಯ ಆಂಗ್ಲಜನರಿಗೆ ಹತ್ತಿ, ಆ ಪಕ್ಷದವರು ಇದನ್ನು ನಿರೋಧಿಸುವುದಕ್ಕಾಗಿ ಕಳೆದ ೨-೩ ವರ್ಷಗಳಿಂದಲೂ ಅಸಮಸಾಹಸ ಮಾಡುತ್ತಿರುವರು. ಸರ್ ಎಡ್ವರ್ಡ್ ಕಾರ್ಸನ್‌ರವರೇ ಮೊದಲಾದ ಈ ಪಕ್ಷದ ಮುಂದಾಳುಗಳು ಪಾರ್ಲಿಮೆಂಟಿನಲ್ಲಿ ಎಷ್ಟೋ ವಾದಾನುವಾದಗಳನ್ನು ನಡೆಸಿದರು. ಅವೆಲ್ಲ ನಿಷ್ಫಲವಾದುವು. ಮಾತಿನಲ್ಲಿ ಇದು ಕಡೆತೊಲಗದಿದ್ದರೆ ಆಯುಧದಿಂದಲಾದರೂ ಇದನ್ನು ಹಿಮ್ಮೆಟ್ಟಿಸಬೇಕೆಂದು ಆಲ್‌ಸ್ಟರಿನವರು ಮಹಾಪ್ರಯತ್ನವನ್ನು ಮಾಡಿರುವರು. ತಾವು ಒಳಗೊಳಗೆ ಸರ್ಕಾರದಮೇಲೆ ಕೈಮಾಡುವುದಕ್ಕಾಗಿ ಸೈನಿಕರನ್ನು ಕೂಡಿಸುತ್ತಲೂ ಮದ್ದುಗುಂಡು ಮೊದಲಾದುವುಗಳನ್ನು ಜತೆಗೊಳಿಸುತ್ತಲೂ ಇರುವರು. ಪ್ರಭುತ್ವದವರಲ್ಲಿರುವ ಸೈನಿಕರಿಗೆ ಸ್ವಜನರಮೇಲೆ ನೀವು ಕೈಮಾಡುವುದು ಅಧರ್ಮವಲ್ಲವೆ? ಎಂದು ಬೋಧಿಸಿ, ಈ ಭೇದೋಪಾಯದಿಂದ ಸೇನಾಧಿಕಾರಿಗಳು ಕೆಲಸವನ್ನು ಬಿಟ್ಟುಬಿಡುವಂತೆಯೂ ಮಾಡಿದರು. ಈ ಗೊಡ್ಡುಬೆದರಿಕೆಗೆ ಮಂತ್ರಿಮಂಡಲದವರ ಗುಂಡಿಗೆಯು ಲೇಶವೂ ನಡುಗಲಿಲ್ಲ. ಮುಖ್ಯಸೈನ್ಯಾಧಿಪತಿಯು ಕೆಲಸವನ್ನು ಬಿಟ್ಟುಬಿಡಲು, ಆ ಅಧಿಕಾರವನ್ನು ಮುಖ್ಯಮಂತ್ರಿಯವರೇ ವಹಿಸಿಕೊಂಡುಬಿಟ್ಟರು. ಕಡಿದಾಟದ ಪ್ರಸಕ್ತಿಯಿಲ್ಲದೆ ಈ ವಿಧಿಯನ್ನು ಶಾಂತಿಯಿಂದಲೇ ಅನುಷ್ಠಾನಕ್ಕೆ ಬರುವಂತೆ ಮಾಡಬೇಕೆಂಬುದು ಮಂತ್ರಿಮಂಡಲದವರ ಘನತರೋದ್ದೇಶವಾಗಿದೆ. ಆದುದರಿಂದ ಆಲ್ಸ್ಟರಿನವರ ಮನಸ್ಸಿಗೆ ವಿರೋಧವಿಲ್ಲದಂತೆ ಇದನ್ನು ವಿಧಿಗೊಳಿಸಬೇಕೆಂದು ಬೇಕಾದಷ್ಟು ಸಾಮೋಪಾಯಗಳನ್ನು ಅವರು ನಡೆಯಿಸಿರುವರು. "ಈಗ ನಾವು ಐರ್ಲೆಂಡಿಗೆ ಕೊಡುವ ಸ್ವರಾಜ್ಯದ ಕಾರ್ಯಕ್ರಮಗಳನ್ನು ನೀವು ನೋಡುತ್ತಿರಿ; ಇಂದಿನಿಂದ ೬ ವರ್ಷಗಳವರೆಗೂ ನೀವುಗಳು ಅದಕ್ಕೆ ಅಧೀನರಾಗಿರಬೇಕಾದುದಿಲ್ಲ, ತದನಂತರ ಮುಂದೆ ಹೇಗೆ ನಡೆಯಬೇಕೆಂಬುದನ್ನು ಗೊತ್ತುಮಾಡುವಣ"ವೆಂದು ಕೂಡ ಮಂತ್ರೀಶರು ತಿಳಿಯಪಡಿಸಿದರು. ಅಷ್ಟಕ್ಕೂ ಆಲ್ಸ್ಟರಿನವರು ಒಡಂಬಡಲಿಲ್ಲ. ಎಂದೆಂದಿಗೂ ಆ ಪಾರ್ಲಿಮೆಂಟಿಗೆ ತಮ್ಮನ್ನು ಅಧೀನಗೊಳಿಸದಿರುವಂತೆ ಆದರೆ ಮಾತ್ರ ಆಗಬಹುದೆಂದು ಆ ಪಕ್ಷದವರು ಹೇಳುತ್ತಿರುವರು. ಮಂತ್ರಿಪಕ್ಷದವರೂ ಪ್ರತಿಪಕ್ಷದವರೂ ಈ ಸಂದರ್ಭದಲ್ಲಿ ನಡೆಯಿಸುತ್ತಿರುವ ವಾದಾನುವಾದಗಳೂ ಸಾಹಸಗಳೂ ಸಹ ಆಂಗ್ಲರಾಜ್ಯಾಂಗದ ಘನತೆಯನ್ನೂ ದರ್ಪವನ್ನೂ ಬಿಗಿಪಟ್ಟನ್ನೂ ಜಗತ್ತಿಗೆ ತೋರಿಸುತ್ತಲಿರುವುವು. ಒಂದು ಪಕ್ಷದವರ ಕೈಮುಂದಾದಾಗ ಪ್ರತಿಪಕ್ಷದವರು ತಗ್ಗಿಹೋಗುವುದೂ, ಇವರು ಮುಂದಾದಾಗ ಅವರು ಇಳಿದುಹೋಗುವುದೂ ಸಹ ಅತ್ಯಂತ ವಿಸ್ಮಯವನ್ನುಂಟುಮಾಡುತ್ತಿರುವುವು. ದೇಶಪ್ರತಿಷ್ಠೆಗೂ ಕೀರ್ತಿಗೂ ಕಳಂಕತರದಂತೆ ಸ್ವಪಕ್ಷಸಾಧನವನ್ನು ಮಾಡಲು ಅವರು ತೋರಿಸುತ್ತಿರುವ ಉಪಾಯಗಳು ಗಮನೀಯವಾಗಿರುವುವು. ಕಳೆದೆರಡು ವಾರಗಳಲ್ಲಿ ಆಲ್‌ಸ್ಟರಿನ ಜನರು ಸೇನಾಸಿದ್ಧತೆಯನ್ನು ವಿಶೇಷವಾಗಿ ನಡೆಯಿಸಿದರು. ಪ್ರಭುತ್ವದವರೂ ಮುಂದಾಲೋಚನೆಯಿಂದ ತಮ್ಮ ಸನ್ನಾಹವನ್ನು ನಡೆಯಿಸಿರುವರು. ಆಲ್‌ಸ್ಟರಿನವರು ಮೊನ್ನೆಯ ವಾರದಲ್ಲಿ ನೂರಾರು ಮೋಟಾರುಗಳನ್ನು ಕಲ್ಲಿದ್ದಲನ್ನು ಸಾಗಿಸುವ ವ್ಯಾಜದಿಂದ ಸಮುದ್ರತೀರಕ್ಕೆ ಕಳುಹಿಸಿ, ಅಲ್ಲಿ ಕಾವಲಿದ್ದ ಸರ್ಕಾರದ ಪೋಲೀಸಾಳುಗಳನ್ನು ಅಲ್ಲಾಡಗೊಡದಂತೆ ಬೆದರಿಸಿಟ್ಟು, ೫೦ ಸಾವಿರ ಕೋವಿಗಳನ್ನೂ ಲಕ್ಷಾಂತರ ತೋಟಾಗಳನ್ನೂ ಬಂಡಿಗಳಲ್ಲಿ ತುಂಬಿಕೊಂಡು ಒಬ್ಬರ ಕೈಗೂ ಸಿಕ್ಕದಂತೆ ತಮಗೆ ಬೇಕಾದ ಸ್ಥಳಗಳಿಗೆ ಅವನ್ನು ಸಾಗಿಸಿರುವರು. ಈ ಕೆಲಸವನ್ನು ವಿಶ್ವಾಸಘಾತಕತನವೆಂದು ಮುಖ್ಯಮಂತ್ರಿಯವರು ಪಾರ್ಲಿಮೆಂಟಿನಲ್ಲಿ ಜರೆದಿರುವರು. ಆಲ್ಸ್ಟರಿನವರು ಮೊದಲು ಸರ್ಕಾರದ ಮೇಲೆ ಕೈಮಾಡಿದಹೊರತು ತಮ್ಮ ಆಯುಧವನ್ನೆತ್ತುವುದಿಲ್ಲವೆಂಬುದು ಮಂತ್ರಿಮಂಡಲದವರ ಸಂಕಲ್ಪವಾಗಿದೆ. ಈಬಗೆ ಮಂತ್ರಿಮಂಡಲದವರು ಇದೇ ವಿಷಯವನ್ನು ಕುರಿತು ಒಂದು ಪರಿಮಿತಸಂಘದಲ್ಲಿ ಆಲೋಚಿಸುತ್ತಿದ್ದಾರೆ. ಈಗ ಜರುಗುತ್ತಿರುವ ಪಾರ್ಲಿಮೆಂಟು ಮುಚ್ಚಲ್ಪಡುವುದರೊಳಗೆ ಈ ಐರ್ಲೆಂಡು ಸ್ವರಾಜ್ಯ ವಿಷಯಕವಾದ ತೀರ್ಮಾನವನ್ನು ಹೇಗೆ ನಡೆಯಿಸಬೇಕೋ ಅದನ್ನು ನಿರ್ಧರಿಸುವುದಕ್ಕಾಗಿ ಮುಖ್ಯಮಂತ್ರಿಯವರು ಒಂದು "ಬಿಲ್ಲನ್ನು" ಪಾರ್ಲಿಮೆಂಟಿಗೆ ತರುವವರಾಗಿದ್ದಾರೆ. ಹೇಗೂ ಈ ಸ್ವರಾಜ್ಯವಿಧಿಯು ಶಾಸನವಾಗಿ ಏರ್ಪಡುವುದೇ ಸಿದ್ಧವೆಂದೂ, ಅದರಲ್ಲೂ ಅದು ಯುದ್ಧಪ್ರಸಕ್ತಿಯಿಲ್ಲದೆ ಶಾಂತರೀತಿಯಿಂದಲೇ ಅನುಷ್ಠಾನಕ್ಕೆ ಬರುವುದೆಂದೂ ದೀರ್ಘದರ್ಶಿಗಳೆಲ್ಲರೂ ನಿರೀಕ್ಷಿಸುತ್ತಿದ್ದಾರೆ. ಹಾಗಾಗುವುದೇ ಆಂಗ್ಲಪ್ರಭುತ್ವದ ಕೀರ್ತಿಪ್ರತಿಷ್ಠೆಗಳಿಗೆ ಯುಕ್ತವಾದುದು.

ಒಳದೇಶದ ವೃತ್ತಾಂತವು.

ಕಳೆದ ಸೋಮವಾರ ಮತ್ತೂ ಮಂಗಳವಾರ ಬೆಂಗಳೂರಲ್ಲಿ ಒಳ್ಳೆಯಮಳೆಯಾಯಿತು.

ನಮ್ಮ ಸಂಸ್ಥಾನದ ಚೀಫ್ ಎಲೆಕ್ಟ್ರಿಕ್ ಇಂಜನಿಯರಾದ ಮಿ॥ ಭಿಮ್ಸ್‌ರವರು ಉದ್ಯೋಗವನ್ನು ಬಿಟ್ಟು ಹೋಗುವುದಾಗಿ ವರ್ತಮಾನವಿದೆ.

ಜ್ಯೇಷ್ಠಮಾಸದಲ್ಲಿ ನಡೆಯುವ ಶ್ರೀಮನ್ಮಹಾರಾಜರ ವರ್ಧಂತಿ ಸುಮಹೋತ್ಸವ ಸಮಯದ ಕುದುರೆ ಜೂಜಿಗಾಗಿ ಈಗಿನಿಂದಲೂ ಸನ್ನಾಹಗಳು ನಡೆಯುತ್ತಿವೆ.

ತುಮಕೂರ ಡಿ॥ ಕಮಿಷನರ್ ಮಿ॥ ಬಿ. ಜೆ. ಕುಮಾರಸ್ವಾಮಿ ನಾಯಕ್, ಬಿ.ಎ, ಯವರು ಮೈಸೂರ ನಿಯಮನಿರ್ಮಾಣ ಸಭೆಯ ಔದ್ಯೋಗಿಕ ಸಭಾಸದರಾಗಿ ನಿಯಮಿಸಲ್ಪಟ್ಟಿರುವರು.

ಮೈಸೂರು ಡಿಸ್ಟ್ರಿಕ್ಟಿನಲ್ಲಿ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರಾಗಿರುವ ಮಿ॥ ಗುಲಾಂ ಮಹಮದ್ ಮೋಕ್ರಿ, ಬಿ. ಎ., ಎಲ್ ಎಲ್. ಬಿ, ಯವರಿಗೆ ೨ ನೇ ತರಗತಿಯ ಮ್ಯಾಜಿಸ್ಟ್ರೇಟ್ ಅಧಿಕಾರವು ಕೊಡಲ್ಪಟ್ಟಿದೆ.

ಶಿಕಾರಿಪುರ ತಾ॥ ಚಿಕ್ಕಾರಪುರ ಗ್ರಾಮದಲ್ಲಿ ಒಂದು ಕುಡಿಯುವ ನೀರಿನ ಬಾವಿಯನ್ನು ತೋಡಿಸಲು ತಗಲುವ ೧೦೬೦ ರೂ.ಗಳಲ್ಲಿ ಅರ್ಧಹಣವನ್ನು ಗ್ರಾಮದವರು ಕೊಡಲೊಪ್ಪಿದುದರಿಂದ ಸರ್ಕಾರದವರು ಉಳಿದ ೫೩೦ ರೂ. ಗಳನ್ನು ಕೊಡಲಪ್ಪಣೆಮಾಡಿರುತ್ತಾರೆ.

೨ ನೆಯ ಕೌನ್ಸಿಲರಾದ ಸರ್ದಾರ್ ಎಂ. ಕಾಂತರಾಜ ಅರಸಿನವರು ನಿನ್ನೆಯದಿನ ಪಬ್ಲಿಕ್‌ಆಫೀಸ್ ಕಟ್ಟಡದಲ್ಲಿ ಪುರಪ್ರಮುಖರನ್ನು ಕೂಡಿಸಿ ಒಂದು ಸಭೆಮಾಡಿ ವ್ಯಾಪಾರವೃದ್ಧಿ ಶಿಲ್ಪಾಭಿವೃದ್ಧಿ ಮೊದಲಾದ ವಿಷಯಗಳನ್ನು ಕುರಿತು ಚರ್ಚಿಸಿ, ಜನಾಭಿಪ್ರಾಯವನ್ನು ತಿಳಿದುಕೊಂಡರು.

ಶ್ರೀಮನ್ಮಹಾರಾಜರವರು ಹುಜೂರುಸೆಕ್ರಟರಿಯವರೊಡನೆ ಕಳೆದ ತಾ॥ ೭ ರ ಬೆಳಗ್ಗೆ ಉದಕಮಂಡಲದಿಂದ ರಾಜಧಾನಿಗೆ ದಯಮಾಡಿಸಿ, ತಾ॥ ೯ ರಲ್ಲಿ ನಂಜನಗೂಡಿಗೆ ಚಿತ್ತೈಸಿ ಶ್ರೀನಂಜುಡೇಶ್ವರಸ್ವಾಮಿಯ ಪೂರ್ಣಿಮಾ ಸೇವೆಯನ್ನು ತೀರಿಸಿಕೊಂಡು ಬಂದು ಅದೇ ರಾತ್ರಿ ೧೧ ಗಂಟೆಯೊಳಗೆ ಬಿದ್ದಿಗೆಗಳಲ್ಲಿ ಉದಕಮಂಡಲಕ್ಕೆ ಪ್ರಯಾಣಮಾಡಿದರು.

ಕೊಪ್ಪ ತಾಲ್ಲೋಕು ಹೊಸಕೊಪ್ಪದ ನಿವಾಸಿಗಳು ಒಂದು ಸ್ಕೂಲ್ ಕಟ್ಟಡವನ್ನು ಕಟ್ಟಲು ೧೦೦೦ ರೂ ಗಳ ಚಂದಾಹಣವನ್ನು ಕೂಡಿಸಿರುವುದರಿಂದ ಸರ್ಕಾರದವರು ೧೦೦೦ ರೂ ಗಳನ್ನು ಕೊಡಲಪ್ಪಣೆಮಾಡಿರುವರು. ವಿದ್ಯಾಭ್ಯಾಸ ಶಾಖೆಯ ಇ॥ ಜನರಲ್‌ರವರಿಂದ ಈ ಹೊಸ ಕಟ್ಟಡದ ಶಂಕುಸ್ಥಾಪನೆಯು ಈ ತಾ॥ ೧೮ ರಲ್ಲಿ ನೆರವೇರಿಸಲ್ಪಡುವುದು.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಭೆಯ ಜನರಲ್ ಕಮಿಟಿ ಮೀಟಿಂಗ್ ೧೯೧೪ ನೆ ಇಸವಿ ಮೆ ತಾ॥ ೨೦ ನೆಯ ಬುಧವಾರ ಸಾಯಂಕಾಲ ೫ ಘಂಟೆಗೆ ಸರಿಯಾಗಿ ಮಿ॥ ದಿವಾನ್‌ಬಹದ್ದೂರ್ ರಾಜಸಭಾಭೂಷಣ, ಕೆ. ಪಿ. ಪುಟ್ಟಣ್ಣಶೆಟ್ಟರವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನ ರಾವ್‌ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪನವರ ಧರ್ಮಸತ್ರದ ಮಹಡಿಯಲ್ಲಿ ನಡೆಯಬೇಕೆಂದು ನಿರ್ಧರವಾಗಿರುವುದು.

ಶ್ರೀರಂಗಪಟ್ಟಣದ ಜಮೀನ್ದಾರರೂ ಮ್ಯುನಿಸಿಪಲ್ ಕೌನ್ಸಿಲರೂ ಆದ ಮಿ॥ ಎನ್. ಸಿದ್ಧಲಿಂಗದೇವರು ಹರಿಹರದಲ್ಲಿ ನಡೆದ ಬೇಸಾಯ ಮತ್ತೂ ಕೈಗಾರಿಕೆಯ ವಸ್ತುಗಳ ಮತ್ತೂ ದನಗಳ ಪ್ರದರ್ಶನಕಾಲದಲ್ಲಿ ಸುಧಾರಿಸಿದ ಪಾಶ್ಚಾತ್ಯ ವ್ಯವಸಾಯಕ್ರಮವನ್ನು ಕುರಿತು ರೈತರ ಮನಸ್ಸಿಗೆ ಹತ್ತುವಂತೆ ಬಹು ರಸವತ್ತಾದ ಉಪನ್ಯಾಸಮಾಡಿದುದನ್ನು ಪ್ರದರ್ಶನದ ಕಮಿಟಿಯವರು ಮೆಚ್ಚಿ ಅವರಿಗೆ ಒಂದನೆ ತರಗತಿಯ ಬಹುಮಾನದ ಪತ್ರಿಕೆಯನ್ನು ಕೊಟ್ಟರು. ಈ ದೊಡ್ಡ ಮನುಷ್ಯರೇ ಬೀರೂರು, ದಾವಣಗೆರೆ ಮತ್ತೂ ಚಿತ್ರಕಲ್‌ದುರ್ಗ ಈ ಸ್ಥಳಗಳಲ್ಲಿ ರೈತರ ಪ್ರಾರ್ಥನೆಯಂತೆ ವ್ಯವಸಾಯಕ ವಿಷಯವಾಗಿ ಉಪನ್ಯಾಸಗಳನ್ನು ಮಾಡಿದರು.

ಹಾಸನದ ಡಿ॥ ಟ್ರಜರಿಆಫೀಸರಾದ ಅ॥ ಕಮಿಷನರು ಮಿ॥ ಪಿ ಗೋಪಾಲರಾಜಅರಸ್, ಬಿ ಎ ಬಿ.ಎಲ್., ರವರಿಗೆ ಕೋಲಾರದ ಡಿ॥ ಟ್ರಜರರಾದ ಮಿ॥ ಬಾಗಸಾಲಿ ಸುಬ್ಬರಾಜಅರಸಿನವರ ಕುಮಾರಿ ಚಿ॥ ಸೌ॥ ಸುಬ್ಬಮ್ಮಣ್ಣಿಯವರನ್ನು ಕೊಟ್ಟು ಕಳೆದ ತಾ॥ ೭ ರಲ್ಲಿ ವಿವಾಹಮಹೋತ್ಸವವು ಬಹು ವಿಜೃಂಭಣೆಯಿಂದ ಜರುಗಿತು. ಅಮೃತಮಹಲ್ ಶಾಖಾಸೂಪರಿಂಟೆಂಡೆಂಟರಾದ ಮಿ॥ ನಂಜುಂಡರಾಜ ಅರಸಿನವರೇ ಮೊದಲಾದ ರಾಜಬಂಧುಗಳೂ, ಡೆ॥ ಕಮಿಷನರು ಮೊದಲಾಗಿ ಸರ್ಕಾರಿಯಧಿಕಾರಿಗಳೂ, ವಕೀಲರುಗಳೂ, ಮೊದಲಾದವರುಗಳು ದಯಮಾಡಿದ್ದರು. ಅರಮನೆಯಿಂದ ರಾಜಮರ್ಯಾದೆಗಳೆಲ್ಲವೂ, ಉಡುಗೆರೆಯೂ ಕಳುಹಲ್ಪಟ್ಟದ್ದುವು. ಆನೆಕಲ್ ತಾಲ್ಲೋಕಿನಿಂದ ಅತ್ತಿಬೆಲೆ ಶ್ರೀಮಂತ ಸಿದ್ದಬಸಪ್ಪನವರು ಮೊದಲಾದವರೂ, ಬೆಂಗಳೂರು ಹಾಸನಗಳಿಂದ ಕೆಲ ದೊಡ್ಡಮನುಷ್ಯರುಗಳೂ ದಯಮಾಡಿಸಿದ್ದರು. ಈ ನೂತನದಂಪತಿಗಳಿಗೆ ಸಕಲ ಸುಖಸಂಪತ್ತನ್ನೂ ದೀರ್ಘಾಯುಷ್ಯವನ್ನೂ ಜಗದೀಶನು ದಯೆಪಾಲಿಸಲಿ.

ವರ್ತಮಾನಸಂಗ್ರಹ.

ಅನ್ನೆಂತ್ ಮೆಕೆಂಜಿಯೆಂಬಾತನು ಕಿವುಡನೂ ಮೂಗನೂ ಆಗಿದ್ದಾನೆ. ಈತನು ಕೇಂಬ್ರಿಡ್ಜ್ ವಿದ್ಯಾಪೀಠದಲ್ಲಿ ಎಂ. ಎ. ಪರೀಕ್ಷೆಯನ್ನು ಕೊಟ್ಟಿದ್ದಾನೆ. ಇಂಥ ವಿಕಲಾಂಗರಲ್ಲಿ ಇಷ್ಟು ದೊಡ್ಡ ಪರೀಕ್ಷೆಯನ್ನು ಕೊಟ್ಟವರಲ್ಲಿ ಈತನೇ ಮೊದಲನೆಯವನಂತೆ.

ಪ್ರಪಂಚದೊಳಗೆಲ್ಲಾ ಇದುವರೆಗೆ ನಿರ್ಮಿತವಾಗಿ ಕೆಲಸಮಾಡುತ್ತಿರುವ ಮೋಟಾರು ಬಂಡಿಗಳು ಒಟ್ಟು ೨೫ ಲಕ್ಷವಾಗಿರುವುವು. ಪ್ರತಿಯೊಂದು ಬಂಡಿಯೂ ೫ ಗಜದುದ್ದವಿದೆಯೆಂದು ಲೆಕ್ಕಹಾಕಿಕೊಂಡರೂ, ಇವುಗಳನ್ನೆಲ್ಲಾ ಸಾಲಾಗಿ ನಿಲ್ಲಿಸಿದರೆ ೭೦೦೦ ಮೈಲಿಗಳ ದೂರ ನಿಂತುಕೊಳ್ಳುವುವು. ಈ ಬಂಡಿಗಳನ್ನೆಲ್ಲಾ ಯೂರೋಪು ದೇಶದಲ್ಲೆಲ್ಲಾ ಪೂರ್ವದಿಂದ ಪಶ್ಚಿಮಕ್ಕೆ ೨ ಸಾಲಾಗಿ ನಿಲ್ಲಿಸಬಹುದು. ಈ ಬಂಡಿಗಳೆಲ್ಲಾ ಓಡುವ ಪರಿಮಿತಿಯು ಗಂಟೆಯೊಂದಕ್ಕೆ ೫ ಕೋಟಿ ಮೈಲಿಗಳಷ್ಟಾಗುವುದು. ಎಂದರೆ ಪ್ರಪಂಚದ ಸುತ್ತಲೂ ೨ ಸಾವಿರ ಪ್ರದಕ್ಷಿಣೆಯನ್ನು ಮಾಡಿದಷ್ಟಾಗುವುದು.

ಮಧ್ಯಹಿಂದೂಸ್ಥಾನಕ್ಕೆ ಸೇರಿದ ಬರ್ವಾನಿಯೆಂಬಲ್ಲಿ ಕಳೆದ ಮಂಗಳವಾರ ಬಿಸಿಲಿನ ತಾಪವು ಅತ್ಯಂತ ಹೆಚ್ಚಾಗಿದ್ದು ಧೂಳಿಮಿಶ್ರವಾದ ಗಾಳಿಯೂ ೧ ಗಂಟೆಯವರೆಗೆ ಬೀಸಿ ಅನಂತರ ಗುಡುಗು ಮಿಂಚೂ ಮತ್ತೂ ಸಿಡಿಲುಗಳಿಂದ ಕೂಡಿ ದೊಡ್ಡ ಮಳೆಯೂ ಬಂದಿತು. ಇದರಿಂದ ಮನೆಗಳ ಮೇಲು ಹೊದ್ದಿಕೆಗೆ ಹಾಕಿದ್ದ ತಗಡುಗಳೂ ಕಬ್ಬಿಣದ ತೊಲೆಗಳೂ ಕಾಗದದೋಪಾದಿಯಲ್ಲಿ ಹಾರಾಡಿದುವು, ಅನೇಕ ಮರಗಳು ಬೇರುಸಹಿತ ಕೆಳಗುರುಳಿದುವು. ಮತ್ತೂ ಮಾರ್ಗದಲ್ಲಿ ತಿರುಗಾಡುತ್ತಿದ್ದ ಬಂಡಿಗಳೂ ತಲೆಕೆಳಗಾದುವು. ಈ ಅನಾಹುತದಿಂದ ಬಹಳ ಪದಾರ್ಥಗಳ ನಷ್ಟವಾಗಿರುವುದಲ್ಲದೆ ಪ್ರಾಣನಷ್ಟವೇನೂ ಆಗಲಿಲ್ಲ.ವು

ಎನಾಮಲ್ಡ್ ಪಾತ್ರೆಗಳನ್ನುಪಯೋಗಿಸುವುದರಿಂದ ನರಗಳ ಪೀಡೆಯ ಸಂಬಂಧವಾದ ವ್ಯಾಧಿಗಳು ಹುಟ್ಟುವುವೆಂದು ವೈದ್ಯಶಾಸ್ತ್ರವಿಶಾರದರು ಅಭಿಪ್ರಾಯಪಟ್ಟಿದ್ದಾರೆ. ನಮ್ಮ ದೇಶದ ಪ್ರತಿಯೊಂದು ಗ್ರಾಮಗಳಲ್ಲೂ ಕಡಿಮೆಯ ಬೆಲೆಯಿಂದ ದೊರೆಯುವ ಈ ಪಾತ್ರೆಗಳೇ ತುಂಬಿಕೊಂಡಿವೆ. ಕಬ್ಬಿಣದ ತಗಡಿನ ಮೇಲೆ ಒಂದು ತೆರದ ಮಣ್ಣಿನ ಲೇಪನೆಯಿಂದ ಇವುಗಳನ್ನು ನಿರ್ಮಿಸುತ್ತಾರೆ. ಇವುಗಳಲ್ಲಿ ಆಹಾರ್ಯ ಪದಾರ್ಥವನ್ನಿಟ್ಟು ಉಪಯೋಗಿಸುವುದರಿಂದ ಅದರ ಮಣ್ಣಿನ ರೇಣುಗಳು ಹೊಟ್ಟೆಗೆ ಹೋಗಿ ಜೀರ್ಣಕೋಶಕ್ಕೆ ಉತ್ತೇಜನವನ್ನುಂಟುಮಾಡುವುವೆಂದೂ ಅದರಿಂದ ನರಗಳ ದೌರ್ಬಲ್ಯಾದಿರೂಪ ವ್ಯಾಧಿಗಳು ಹುಟ್ಟುವುವೆಂದೂ ಶಾಸ್ತ್ರಜ್ಞರ ಅಭಿಪ್ರಾಯವಾಗಿದೆ. ಈ ಪಾತ್ರೆಗಳನ್ನು ಉಪಯೋಗಿಸುತ್ತಿರುವ ಜನರು ಇದನ್ನು ಗಮನಿಸಬೇಕು.

ಹೈದರಾಬಾದು ಸೀಮೆಗೆ ಸೇರಿದ ಔರಂಗಾಬಾದು ಡಿಸ್ಟ್ರಿಕ್ಟಿನ ಒಂದು ಗ್ರಾಮವಾಸಿಯಾದ ನಾರಾಯಣ ರಾಘು ಎಂಬ ಮರಾಟಾ ಜಾತಿಯ ಬೇಸಾಯಗಾರನು ದತ್ತೂರಿ ಬೀಜದ ಹೊಗೆಯನ್ನು ಸೇದುವುದರಿಂದಲೂ, ಅದನ್ನು ಸೇವಿಸುವುದರಿಂದಲೂ ಉಂಟಾಗುವ ಫಲವನ್ನು ಗುಣವನ್ನು ಒಬ್ಬ ಸಾಧುವಿನಿಂದ ತಿಳಿದುಕೊಂಡು, ದೊಡ್ಡಪಟ್ಟಣಗಳಲ್ಲಿ ವಾರಗಟ್ಟಲೆ ಆಗುವ ಸಂತೆಗಳಿಗೆ ಬಂದು, ೩೦-೪೦ ಮೈಲಿ ದೂರ ಪ್ರಯಾಣಮಾಡಬೇಕೆಂದು ಬಂಡಿಯವರಿಗೆ ಹೇಳಿ ಬಾಡಿಗೆಗೆ ಗೊತ್ತುಮಾಡಿ ಹೋಗುತ, ಮಾರ್ಗದಲ್ಲಿ ಬಂಡಿಯವನು ತಿನ್ನುವ ಅನ್ನಕ್ಕೆ ದತ್ತೂರೀ ಬೀಜದ ಪುಡಿಯನ್ನು ಹಾಕಿ ಅವನು ಅದನ್ನು ತಿಂದು ಮೃತಿಯನ್ನುಹೊಂದುತಲೇ ಅವನ ಶವವನ್ನು ತೆಗೆದು ಒಂದು ಕೊಳಕ್ಕೋ, ನದಿಗೋ, ಕಾಡಿನ ನಿರ್ಜನ ಪ್ರದೇಶದಲ್ಲೋ ಬಿಸಾಡಿ, ಬಂಡಿಯನ್ನು ಹೊಡೆದುಕೊಂಡು ಹೋಗಿ ಎತ್ತು ಬಂಡಿಗಳನ್ನು ವಿಕ್ರಯಿಸಿ ಬಿಡುತ್ತಿದ್ದನು. ಇವನು ಈ ರೀತಿಯಾಗಿ ಕಳೆದ ೯ ವರ್ಷಗಳಿಂದಲೂ ಈವರೆಗೆ ೩೦ ಕೊಲೆಗಳನ್ನು ಮಾಡಿರುವನು. ಸತ್ತವರ ಗುರುತು ಸಿಕ್ಕದೆ ಇದ್ದುದರ ಮೇಲೆ ಈವರೆಗೆ ಪೊಲೀಸರಿಗೆ ಸಿಕ್ಕದಿದ್ದು ಈಗ ಅಹಮದ್‌ನಗರ ಮತ್ತೂ ನಾಶಿಕ ಡಿ॥ಗಳಲ್ಲಿ ಕಳೆದ ೬ ತಿಂಗಳಲ್ಲಿ ಅನೇಕ ಕೊಲೆಗಳನ್ನು ಮಾಡಿದುದರ ಮೇಲೆ ಪೊಲೀಸರು ಈ ನಾರಾಯಣನನ್ನು ಕಂಡುಹಿಡಿದು ಅವನು ಮಾರಿದ್ದ ಬಂಡಿ ಎತ್ತುಗಳನ್ನು ಹಿಂದಕ್ಕೆ ಬರಮಾಡಿಕೊಂಡಿರುವರು.

ಗ್ರೇಟ್ ಬ್ರಿಟನ್ನಿನಲ್ಲಿ ಪ್ರತಿ ವರ್ಷವೂ ೨೮॥ ಕೋಟಿ ಟನ್ನುಗಳಷ್ಟು ಕಲ್ಲಿದ್ದಲು ಸಕಲಕಾರ್ಯಗಳಿಗೂ ಸುಡಲ್ಪಡುತ್ತಿರುವುದು. ಅದರಲ್ಲಿ ೬ ಕೋಟಿ ಟನ್ನು ಕಾರ್ಖಾಲಯಗಳಲ್ಲಿ ಆವಿಯನ್ನು ಹುಟ್ಟಿಸುವುದಕ್ಕೂ, ೩ ಕೋಟಿ ಟನ್ನು ಕಬ್ಬಿಣದ ಕುಲುಮೆಗೆಲಸಕ್ಕೂ, ೨ ಕೋಟಿ ಟನ್ನು ಗಣಿಗಳ ಕೆಲಸಕ್ಕೂ, ೧॥ ಕೋಟಿ ಟನ್ನು ದೀಪದ ಗ್ಯಾಸನ್ನು ಹುಟ್ಟಿಸುವುದಕ್ಕೂ, ೧ ಕೋಟಿಯೂ ೩೦ ಲಕ್ಷ ಟನ್ನು ಹೊಗೆ ಬಂಡಿಗಳಿಗೂ ಉಪಯೋಗಿಸಲ್ಪಡುವುದು. ಇದಿಷ್ಟು ಗ್ರೇಟ್ ಬ್ರಿಟನ್ನೊಂದರಲ್ಲಿ ಉಪಯೋಗಿಸಲ್ಪಡತಕ್ಕದು. ಪ್ರಪಂಚದಲ್ಲೆಲ್ಲಾ ಇದನ್ನುಪಯೋಗಿಸುವ ವಾಡಿಕೆಯಿರುತ್ತಿರುವುದರಿಂದ ವರ್ಷ ೧ ಕ್ಕೆ ವೆಚ್ಚವಾಗುವ ಅದರ ಪರಿಮಾಣವನ್ನು ಇಷ್ಟೆಂದು ಊಹಿಸುವುದೇ ಅಸಾಧ್ಯವಾಗಿದೆ. ಹೀಗೆ ಇದು ಉಪಯೋಗಿಸಲ್ಪಡುತ್ತ ಬಂದರೆ ಕೆಲ ಕಾಲಾನಂತರ ಭೂಗರ್ಭದಲ್ಲಿರುವ ಕಲ್ಲಿದ್ದಲೆಲ್ಲಾ ಮುಗಿದೇ ಹೋಗಬಹುದು. ಅಂಥ ಕಾಲಕ್ಕೆ ಸರ್ವದಾಚ್ಯುತಿಯಿಲ್ಲದಂತೆ ದೊರೆಯುವ ಸಾಧನವೊಂದನ್ನು ಗೊತ್ತುಮಾಡಿರುವುದು ಆವಶ್ಯಕವೆಂದು ಶೋಧಕರು ಯೋಚಿಸಿ, ವಿದ್ಯುಚ್ಛಕ್ತಿಯೇ ಅಂಥಸಾಧನವೆಂದು ಗೊತ್ತುಮಾಡಿದ್ದಾರೆ. ನೀರು ಪ್ರಪಂಚದ ಎಲ್ಲಾ ಭಾಗದಲ್ಲೂ ಸದಾ ದೊರೆಯುವುದರಿಂದಲೂ, ಅದರ ಪ್ರಪಾತದಿಂದ ವಿದ್ಯುಚ್ಛಕ್ತಿಯನ್ನು ಸುಲಭವಾಗಿ ಹುಟ್ಟಿಸಬಹುದೆಂಬುದು ಈ ಮೊದಲೇ ಸಿದ್ಧವಾಗಿರುವುದರಿಂದಲೂ ಅದರಭಿವೃದ್ಧಿಯೇ ಪ್ರಪಂಚದ ಮುಂದಿನ ಪರಿಶ್ರಮಾಭಿವೃದ್ಧಿಗೆ ಅತ್ಯುತ್ತಮವಾದ ಸಾಧನವೆಂದು ಸಿದ್ಧಾಂತಮಾಡಿದ್ದಾರೆ.

ಅದ್ಭುತವಾದ ನವೀನಶೋಧನಗಳು.

ಹೊಗೆಬಂಡಿಗಳು ಹೋಗುತ್ತಿರುವಾಗ ಅವುಗಳ ಬಾಗಿಲು ತೆರೆದುಹೋಗದಿರುವಂತೆ ಮಾಡುವ ಯುಕ್ತಿಯೊಂದನ್ನು ಹೊಸದಾಗಿ ಜಾರ್ಜ್ ಕಾಸ್ವೆಲ್ ಎಂಬ ಸಿಗ್ನಲರ್ ಒಬ್ಬನು ಕಂಡುಹಿಡಿದಿದ್ದಾನೆ. ಇದಕ್ಕಾಗಿ ಈತನಿಗೆ ಬ್ರಿಟಿಷ್‌ರೈಲ್ವೆಕಂಪೆನಿಯವರು ೨೮೦೦೦ ರೂ. ಗಳ ಬಹುಮಾನವನ್ನು ಕೊಟ್ಟರು. ಇವನು ಗೊತ್ತುಮಾಡಿರುವುದರ ಫಲವೇನೆಂದರೆ-ಬಂಡಿಯು ಹೋಗುತ್ತಿರುವಾಗ ಅದರ ಕದಗಳನ್ನು ತೆಗೆಯುವುದಕ್ಕೂ ಮುಚ್ಚುವುದಕ್ಕೂ ಎಂಜಿನ್ನಿನ ಡ್ರೈವರಿಗೂ ಗಾರ್ಡಿಗೂ ಮಾತ್ರವೇ ಸಾಧ್ಯವಾಗುವುದು. ಗಾರ್ಡು ಇರುವ ಬಂಡಿಗೂ ಎಂಜನ್ನಿಗೂ ಪ್ರಯಾಣಿಕರು ಇರುವ ಬಂಡಿಗಳಿಗೂ ಒಂದು ಸರಪಣಿಯ ದ್ವಾರಾಸಂಬಂಧವಿರುವುದು. ಅದಕ್ಕೆ ಸಂಬಂಧಿಸಿದಂತೆ ಎಂಜಿನಬಂಡಿಯಲ್ಲೂ ಗಾರ್ಡನಬಂಡಿಯಲ್ಲೂ ಒಂದೊಂದು ಚಕ್ರಗಳಿರುವುವು. ಕದಗಳನ್ನು ತೆಗೆಯಬೇಕಾದರೂ ಮುಚ್ಚಬೇಕಾದರೂ ಆ ಚಕ್ರಗಳನ್ನು ತಿರುಗಿಸದಿದ್ದರೆ ಯಾವಬಾಗಿಲನ್ನೂ ತೆಗೆಯಲೂ ಮುಚ್ಚಲೂ ಆಗುವುದಿಲ್ಲ. ಈ ಸಾಧನದಿಂದ ಕಳ್ಳಕಾಕರು ಮಧ್ಯಮಾರ್ಗದಲ್ಲಿ ಬಾಗಿಲನ್ನು ತೆರೆದು ನುಗ್ಗಿ ಕಳವು ಕೊಲೆಗಳನ್ನು ಮಾಡುತ್ತಿದ್ದುದಕ್ಕೆ ಪ್ರತಿಬಂಧವುಂಟಾಗುವುದು.

ಅಮೇರಿಕಾದ ನ್ಯೂಯಾರ್ಕ್ ಪಟ್ಟಣದಲ್ಲಿರುವ ಸುಪ್ರಸಿದ್ಧ ಎಡಿಸನ್ ಕಾರ್ಖಾಲಯದವರು ಯಂತ್ರಾಲಯಗಳ ಚಿಮ್ನಿಗಳಿಂದ ಹೊರಡುವ ಕಲ್ಲಿದ್ದಲ ಹೊಗೆಯನ್ನು ಅಣಗಿಸುವುದಕ್ಕೆ ಒಂದು ಉಪಾಯವನ್ನು ಈಗತಾನೇ ಕಂಡುಹಿಡಿದಿದ್ದಾರೆ. ದೊಡ್ಡದೊಡ್ಡ ಯಂತ್ರಾಲಯಗಳು ತುಂಬಿರುವ ಮಹಾಪಟ್ಟಣಗಳಲ್ಲಿ ಹೊಗೆಯ ಅವಾಂತರವು ಎಷ್ಟಿರುವುದೆಂಬುದು ಬೊಂಬಾಯಿಯಂಥ ಪಟ್ಟಣಗಳನ್ನು ನೋಡಿರುವವರಿಗೆ ಸ್ವಲ್ಪಮಟ್ಟಿಗೆ ಗೊತ್ತುಂಟು. ಇಂಥ ಹೊಗೆಯನ್ನೆಲ್ಲಾ ಆ ಕಾರ್ಖಾಲಯದವರು ಒಂದು ದೊಡ್ಡ ಯಂತ್ರದ ಸಹಾಯದಿಂದ ಆಕರ್ಷಿಸಿ ಒಂದು ಸರೋವರದ ನೀರಿನ ಅಡಿಗೆ ಅದನ್ನು ಸೇರಿಸಿಬಿಡುವರು. ಅಲ್ಲಿಂದ ಹೊಗೆಯು ನೀರಿನ ಮೇಲಕ್ಕೆ ಏಳುವುದರೊಳಗಾಗಿ ಅದರೊಳಗಿರುವ ಮಷ್ಯವೆಲ್ಲವೂ ನೀರಿನಡಿಯಲ್ಲೇ ನಿಂತುಹೋಗುವುದು. ಹೀಗೆ ಹೋಗುವ ಕಶ್ಮಲವು ೧೦೦ಕ್ಕೆ ೯೫ರಷ್ಟು ಭಾಗವಾಗುವುದು. ಆ ಬಳಿಕ ನಿರ್ಮಲವಾದ ವಾಯುವು ಮಾತ್ರ ನೀರಿನ ಹೊರಕ್ಕೆ ಬರುವುದು. ಇದರಿಂದ ಪಟ್ಟಣಗಳಲ್ಲಿ ಹೊಗೆಯಿಂದುಂಟಾಗುವ ಮಾಲಿನ್ಯಾದಿಗಳು ಸಂಪೂರ್ಣವಾಗಿ ನಿವಾರಿತವಾಗಲು ಸಾಧಕವಾಯಿತು.

ಸೂರ್ಯಕಿರಣದಲ್ಲಿರುವ ಔಷ್ಣ್ಯವನ್ನು ಒಂದುಕಡೆಗೆ ಕೂಡಿಸಿ, ಅದರಿಂದ ಆವಿಯನ್ನು ಹುಟ್ಟಿಸಿ, ಅದರಿಂದ ಯಂತ್ರಗಳನ್ನು ನಡೆಯಿಸುವುದಕ್ಕಾಗಿ ಈಜಿಪ್ಟ್ ದೇಶದಲ್ಲಿ ಮಹಾಪ್ರಯತ್ನಗಳು ನಡೆಯುತ್ತಿವೆ. ಸೂರ್ಯಕಿರಣವನ್ನು ದೊಡ್ಡ ಗಾಜಿನಮೇಲೆ ಬೀಳುವಂತೆ ಮಾಡಿ, ಆ ಗಾಜಿನ ಕೆಳಗಿಂದ ಸೂರ್ಯಕಿರಣದ ಔಷ್ಣ್ಯವು ನೀರು ತುಂಬಿರುವ ಬಾಯಿಲರ ಮೇಲೆ ಬೀಳುವಂತೆ ಮಾಡುವರು. ಅದರಿಂದ ಬಾಯ್ಲರಿನಲ್ಲಿರುವ ನೀರು ಕಾದು ಆವಿಯು ಹುಟ್ಟುವುದು. ಆ ಆವಿಯ ಶಕ್ತಿಯಿಂದ ಯಂತ್ರಗಳು ನಡೆಯುವುವು. ಈಗ ಇಂಥ ಯಂತ್ರಗಳ ನಿರ್ಮಾಣವು ಈಜಿಪ್ಟಿನಲ್ಲಿ ನಡೆಯುತ್ತಿದೆ. ನೂತನ ರೀತಿಯಿಂದ ನಾನಾತೆರದ ಯಂತ್ರಗಳನ್ನು ಹೀಗೆಯೇ ನಿರ್ಮಿಸಿ, ಬಿಸಿಲಿನ ಹೊತ್ತಿನಲ್ಲಿ ಬಿಸಿಲಿನ ಔಷ್ಣ್ಯವನ್ನೆಲ್ಲಾ ಆ ಯಂತ್ರದಲ್ಲಿ ಆಕರ್ಷಿಸಿ, ಅದರ ಸಹಾಯದಿಂದ ಮೇಲೆ ಹೇಳಿದಮೇರೆಗೆ ಯಂತ್ರಗಳನ್ನು ನಡೆಯಿಸುವಂತೆ ಮಾಡಬಹುದೆಂದು ಶಾಸ್ತ್ರಜ್ಞರು ಹೇಳುತ್ತಿದ್ದಾರೆ. ಒಂದು ದೊಡ್ಡ ಯಂತ್ರಕ್ಕೆ ಕಲ್ಲಿದ್ದಲನ್ನು ಉಪಯೋಗಿಸಿ ಕೆಲಸವನ್ನು ಮಾಡಿಸುವಾಗ ೪೯೦ ರೂ ಗಳ ವೆಚ್ಚವು ಹಿಡಿಯುತ್ತಿದ್ದರೆ ಅಷ್ಟೇಕೆಲಸವನ್ನು ಬಿಸಿಲಿನಿಂದ ಹುಟ್ಟುವ ಆವಿಯಿಂದ ಮಾಡಿಸುವುದಕ್ಕೆ ೨೩೦ ರೂ. ಗಳ ವೆಚ್ಚವು ಮಾತ್ರ ಹಿಡಿಯುವುದಂತೆ.

ಅಮೇರಿಕಾದ ಶಸ್ತ್ರಚಿಕಿತ್ಸಕಸಂಘದ ಸಭೆಯಲ್ಲಿರುವ ಡಾ॥ ಕಾರಲ್ ಎಂಬುವರು ಒಂದು ಪ್ರಾಣಿಯ ಹೃದಯಚಲನೆಯನ್ನು ನಿಲ್ಲಿಸಿಬಿಟ್ಟು ಬಳಿಕ ಸ್ವಲ್ಪಕಾಲದಮೇಲೆ ಅದಕ್ಕೆ ಶಸ್ತ್ರಚಿಕಿತ್ಸೆಯನ್ನು ಮಾಡಿ ಮರಳಿ ಬದುಕಿಸಿದರು. ಆ ಮಧ್ಯಕಾಲದಲ್ಲಿ ಆ ಪ್ರಾಣಿಗೆ ೩ ನಿಮಿಷಗಳಕಾಲ ರಕ್ತಪ್ರಸರಣೆಯು ನಿಂತುಹೋಗಿದ್ದಿತು. ಹೃದಯಚಲನೆಯು ನಿಂತುಹೋದರೆ ಥಟ್ಟನೆ ಮರಣಸಂಭವಿಸುವುದೆಂದೂ ಅಂಥ ಪ್ರಾಣಿಯು ಮತ್ತೆ ಬದುಕುವುದಿಲ್ಲವೆಂದೂ ಇದುವರೆಗೆ ವೈದ್ಯರುಗಳು ನಂಬಿದ್ದರು. ಕಾರಲ್‌ರವರು ಅದನ್ನು ಸುಳ್ಳೆಂದು ಸಿದ್ಧಾಂತಪಡಿಸಿರುವರು. ಮತ್ತೂ ಇವರು ನಡೆಯಿಸಿರುವ ಶೋಧನದಲ್ಲಿ ಅನೇಕ ನೂತನವಿಷಯಗಳು ಹೊರಪಟ್ಟಿರುತ್ತವೆ. ಕೆಟ್ಟುಹೋದ ಪ್ರತಿಯೊಂದು ಅಂಗದಲ್ಲೂ ಹೊಸದಾಗಿ ರಕ್ತಪ್ರಸಾರಣವನ್ನು ಮಾಡಿಸುವುದರಿಂದ ಪ್ರಾಣವನ್ನು ಬರಿಸಬಹುದೆಂದು ಇವರು ದೃಷ್ಟಾಂತಪುರಸ್ಸರವಾಗಿ ಸ್ಥಾಪಿಸಿದ್ದಾರೆ. ಅಮೇರಿಕಾದೊಳಗಿನ ಕಾರ್ನಿಗಿ ವೈದ್ಯಾಲಯದಲ್ಲಿರುವ ಇವರ ಶೋಧನಾಲಯದೊಳಗೆ ಕಣ್ಣು ಶ್ವಾಸಕೋಶ ಮೊದಲಾದ ಅಂಗಗಳು ರಕ್ತಪ್ರಸಾರದಿಂದ ಕೂಡಿ ಬೇರೆಬೇರೆ ಯಾವಾಗಲೂ ಸಿದ್ಧಮಾಡಿ ಇಟ್ಟಲ್ಪಟ್ಟಿರುವುವಂತೆ. ರೋಗಿಗಳು ಬಂದರೆ ಅವರ ದೇಹದಲ್ಲಿ ಕೆಟ್ಟುಹೋಗಿರುವ ಅಂಗವನ್ನು ತೆಗೆದುಬಿಟ್ಟು ಆ ಸ್ಥಲಕ್ಕೆ ತಮ್ಮಲ್ಲಿ ಸಿದ್ಧವಾಗಿರುವ ಅಂಗಭಾಗವನ್ನು ಸೇರಿಸಿ ಬಿಡುವರು. ಮರಣವೆಂಬುದು ಸ್ವಾಭಾವಿಕವಾಗಿ ಇಲ್ಲವೇ ಇಲ್ಲವೆಂದು ಈ ಡಾಕ್ಟರ್ ಅಭಿಪ್ರಾಯವಂತೆ! ಆಯಾಕಾಲಕ್ಕೆ ಅವಶ್ಯಕವಾದ ಅಂಗಭಾಗಗಳು ಸಿದ್ಧವಾಗಿದ್ದರೆ ಸತ್ತುಹೋದವರನ್ನು ಮರಳಿ ಬದುಕಿಸಬಹುದೆಂದು ಇವರು ಹೇಳುತ್ತಾರೆ. ಈ ತತ್ತ್ವದಮೇಲೆ ಶರೀರತತ್ತ್ವವನ್ನು ಕುರಿತ ಅಭಿಪ್ರಾಯಗಳೇ ಬಲುಮಟ್ಟಿಗೆ ವ್ಯತ್ಯಸ್ತವಾಗಿ ಹೋಗುವಂತಿವೆ.

ಪತ್ರವ್ಯವಹಾರ

ಧಾರವಾಡಜಿಲ್ಲಾ ಅರಟಾಳ ಗ್ರಾಮದಲ್ಲಿ ತಾ॥೬-೪-೧೮ ಇಸವಿಯ ದಿವಸ ತಾಂಬೂಲ ಸಮಾರಂಭ ಎದ್ದುದರಿಂದ ರಾ॥ಬ॥ ರುದ್ರಗೌಡ, ಚನ್ನವೀರಗೌಡ ಅರಟಾಳ ಆಯ್. ಎಸ್. ಓ. ರಿ. ಡಿ ಡಿ ಕಲೆಕ್ಟರ ಬೆಳಗಾವ ಇವರು ಶಿತಿ, ರ ಮಾರ್ಗವಾಗಿ ಬೆಳಗಾವಿಯಿಂದ ಮೋಟಾರಗಾಡಿಯು ಮೇಲೆ ಅರಟಾಳಕ್ಕೆ ಹೋಗುವಾಗ ದಾರಿಯಲ್ಲಿ ಶಿತಿ ಗ್ರಾಮದ ಶಾಲಾ ವಿದ್ಯಾರ್ಥಿಗಳೂ ಕೆಲ ಪುರಪ್ರಮುಖರೂ ಕಾದು ಕೊಂಡಿದ್ದ ಗನ್ನೆಯ ಮೇಳಿರುವ ಧರ್ಮಶಾಲೆಯಲ್ಲಿ ಈ ಹೊತ್ತು ಮಧ್ಯಾಹ್ನದ ೧೧ ಘಂಟೆಗೆ ರಾ॥ ಬ॥ ರವರಿಗೆ ಬಾ ನಸುಪಾರಿ ಮಾಡಿದರು. ಆ ವೇಳೆಯಲ್ಲಿ ಪಿಯಾನೋ ಪೆಟ್ಟಿಗೆಯ ಸ್ವರದಲ್ಲಿ ವಿದ್ಯಾರ್ಥಿಗಳು ಅಂದ ಸ್ವಾಗತಪದವೂ ರಾಷ್ಟ್ರಗೀತವೂ ಶ್ರೋತ್ರಿಯವಾಗಿದ್ದವು. ಈ ಸಮಯದಲ್ಲಿ ವೆ॥ ಇನಾಕ್ಸ್ಪೆಕ್ಟರ್ ತಾಕ್ಟರ ವಲಿವರಾ ಇವರೂ ಪೋಸ್ಟ್‌ಮಾಸ್ತರರೂ ಶಾಳಾಮಾಸ್ತರ ಜನರೂ ಗ್ರಾಮಸ್ಥರೂ ಮಿ ವಳಸಂಗ, ಬಾವಿ, ನಾಗಲಾಪುರ ಮೊದಲಾದ ಮುಖಂತ ಜನರೂ ಹಾಜರಿದ್ದರು. ವಿದ್ಯಾರ್ಥಿಗಳ ಮಂಜುಳವಾದ ಗಾನರಸದಲ್ಲಿ ರಾ॥ಬ॥ ರವರು ಅರ್ಧತಾಸು ವಿಶ್ರಾಂತಿಯನ್ನು ಹೊಂದಿ ಆಭಾರ ಮನ್ನಿಸಿ ೧೧॥ ಘಂಟೆಗೆ ರಥಾರೂಢರಾಗಿ ಅರಟಾಳಾಭಿಮುಖರಾದರು.

ತಮ್ಮ ಚಂದಾದಾರ್,
೨೧-೪-೧೮. ಮಹಾಂತಪ್ಪ ಸಂಗೋಜಿ.

ಶ್ರೀ ಬಸವೇಶ್ವರ ಜಯಂತ್ಯೋತ್ಸವ.

ದಾವಣಗೆರೆ ತಾಲ್ಲೂಕು ಅಣಜಿಗ್ರಾಮದಲ್ಲಿ ಇದೇ ವೈಶಾಖಶುದ್ಧ ತೃತೀಯ (ತಾ॥ ೨೩-೪-೧೮) ಮಂಗಳವಾರದಲ್ಲು ಶ್ರೀ ಬಸವೇಶ್ವರ ಹುಟ್ಟಿದ ಹಬ್ಬವನ್ನು ಸರ್ವರೂ ಮಾತಿಪೇ ಕೆಂಬುದಾಗಿ ಮ॥ ರಾ॥ ಶ್ರೀ ಪಟೇಲ್ ಜತಿಮುದ್ರಿವವರು ತಂಗೂರಿ ಮಲ್ಲಿ ಪ್ರಸಿದ್ಧಪಡಿಸಿದ ಮೇರೆಗೆ ತಮ್ಮ ತಮ್ಮ ಮನೆಗಳಲ್ಲಿ ಅತಿ ಉತ್ಸಾಹದಿಂದ ಮಾಡಿದ್ದಲ್ಲದೆ ಪದ್ಧತಿ ಮೇರೆಗೆ ಶ್ರೀ ಬ್ಯಾಟಿ ನಂದೀಶ್ವರ ದೇವಾಲಯದಲ್ಲಿ ಚಪ್ಪರ ತಳಿರು ತೋರಣಗಳಿಂದಲಂಕರಿಸಿ, ಶ್ರೀ ಮರಡಿ ಬಸವೇಶ್ವರ ಸ್ವಾಮಿಯನ್ನು ಮಧ್ಯಾಹ್ನದಲ್ಲಿ ಕರೆದುತಂದು ಮುಹೂರ್ತ ಗೊಳಿಸಿ, ಪೂಜಾದಿಗಳಿಂದುಪಚರಿಸಿ ನಿತ್ಯಕಟ್ಟಲೆ ಪೂರೈಸಿ ದೊತನೆ ಸಾಯಂಕಾಲದಲ್ಲಿ ಶ್ರೀ ಮರಡಿ ಬಸವೇಶ್ವರ ದೇವರನ್ನು ಶ್ರೀಬಸವೇಶ್ವರ ಫೋಟೋವನ್ನು ಸಹ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಮದ್ದು ಬಿರಸು ಮುಂತಾದ ವಿನೋದಕರವಾದ ನಾಟ್ಯ ವಾದ್ಯಘೋಷದೊಡನೆ ಮೆರೆವಣಿಗೆ ನಡಸಿ, ಆನಂದದಿಂದ ಪೂರೈಸಿದರು. ಈ ಕಾರ್ಯದಲ್ಲಿ ಮುಂದಾಳುಗಳಾಗಿದ್ದ ಮ॥ ರಾ॥ ಶ್ರೀಗಳಾದ, ಎ ಎ ಸಿದ್ಧಲಿಂಗಪ್ಪನವರು, ಮಠದ ತಿಪ್ಪಯ್ಯನವರು, ಕುರುವಹಳ್ಳಿ ಶಿವಲಿಂಗಪ್ಪನವರು ಎಚ್. ಸಿದ್ಧಯ್ಯನವರು, ಗೌಡನಾಗಪ್ಪನವರು, ಹ್ಯಾಳೇದ ಗುರುಶಾಂತಪ್ಪ, ಸೆಪ್ಪಕೊಟ್ರಪ್ಪ, ಕೆರಬಗೆರೆ ನಾರಪ್ಪನವರು, ಘಟಿಯಾಳ ಚನ್ನವೀರಪ್ಪನವರು, ಮಹೇಹಳ್ಳಿ ಮಹದೇವಪ್ಪ, ಕೆಂಚಿಕೆರೆ ಸಿದ್ಧನಿಂಗಪ್ಪ, ಕೆರದ್ದುರು ಶಾಂತವೀರಪ್ಪ, ಕಿರದ್ದುರು ಕಿದ್ದಪ್ಪ, ಮುಂತಾದವರಿಗೆ ಆಯುರಾರೋಗ್ಯವನ್ನು ಸದಾಶಿವನು ಸದಾ ಕೊಡಲಿ ಎಂದು ಬೇಡುತ್ತೇವೆ. ಈ ಸತ್ಪ್ರವೃತ್ತಿಯನ್ನು ಅನುಸರಿಸಿ ಕತ್ತಿರು ಗ್ರಾಮದಲ್ಲಿ ವೆ॥ ಕೊಟ್ರಯ್ಯನವರು, ಸ್ಕೂಲ್‌ಮಾಸ್ಟರ್ ಇವರ ಪ್ರೋತ್ಸಾಹದಿಂದಲು ತಂಪರಕೋಡಿಯಲ್ಲಿ ವೆ॥ ರಾ॥ ಸಾಹುಕಾರ ಬೆಳ್ಳುಡಿ ಗುರುಸಿದ್ಧಪ್ಪನವರ ಪ್ರೋತ್ಸಾಹದಿಂದಲು, ಹುಲಿಕಟ್ಟೆಯಲ್ಲಿ ವೆ॥ ಬಸಪ್ಪ, ಮಹದೇವಪ್ಪ, ಮಾಗಪ್ಪ ಇವರ ಪ್ರೋತ್ಸಾಹದಿಂದಲು ಹಬ್ಬವನ್ನು ಮಾಡಿರುವುದಾಗಿ ಕೇಳಿರುತ್ತೇವೆ. ಪ್ರತ್ಯಕ್ಷದರ್ಶಿ.

ಶ್ರೀಬಸವೇಶ್ವರ ಜಯಂತ್ಯುತ್ಸವ. ದಾವಣಗೆರೆ.

ಕಳೆದ ತಾ॥ ೨೮ ನೆಯ ಮಂಗಳವಾರ ಗ್ರಾಮವು ತಳಿರು ತೋರಣಗಳಿಂದ ಶೃಂಗರಿಸಲ್ಪಟ್ಟಿತ್ತು. ಈ ಜಯಂತ್ಯುತ್ಸವವನ್ನು ಆಚರಿಸಲು ಜನಗಳು ಬಹು ಉತ್ಸಾಹಿಗಳಾಗಿದ್ದರು. ಪ್ರಾತಃಕಾಲ ೫ ಘಂಟೆಯಿಂದ ೯ ಘಂಟೆಯವರಿವಿಗೆ ಇಲ್ಲಿನ "ಶ್ರೀಜಗದ್ಗುರು ಮುರಘರಾಜೇಂದ್ರ" ಭಜನಾ ಸಂಘದವರು ಊರಲ್ಲಿ ಶಿವಕೀರ್ತನವನ್ನು ಮಾಡುತ್ತ ಸಂಚರಿಸಿ ಕೊನೆಗೆ ವಿರಕ್ತಮಠವನ್ನು ಸೇರಿದರು. ಅನಂತರ ಇಲ್ಲಿನ "ಯಂಗ್‌ಮೆನ್ಸ್ ಸೊಸೈಟಿಯವರು" ಈ ವರ್ಷ ಈ ಜಯಂತಿಯ ದಿವಸ ಸ್ಥಾಪಿಸಿದ "ಶ್ರೀಬಸವೇಶ್ವರಜಯಂತಿ ಸ್ಕಾಲರ್‌ಷಿಪ್" ಎಂಬ ಧನರಾಶಿಗೆ ಚಂದಾಕೇಳಿಸಲು ಊರಲ್ಲಿ ಸಂಚರಿಸಿ ಸಾಧಾರಣ ೧೫೫ ರೂ ಗಳನ್ನು ಕೂಡಿಸಿದರು. ಈ ದ್ರವ್ಯವನ್ನು ನಮ್ಮ ಮಠದ ನಮ್ಮ ದಿಸ್ಟ್ರಿಕ್ಟಿನ ಯಾವ ವಿದ್ಯಾರ್ಥಿಯು ಮೆಟ್ರಿಕ್ ಅಥವ ಇದರ ಹೆಚ್ಚಿನ ಪರೀಕ್ಷೆಯಲ್ಲಿ ಉತ್ತಮಸ್ಥಿತಿಯಲ್ಲಿ ಉತ್ತೀರ್ಣನಾಗುತ್ತಾನೆಯೋ ಆತನಿಗೆ ಕೊಡಲ್ಪಡುವುದೆಂದು ಇಲ್ಲಿನ ವೀರಶೈವ ಹಿತೋಪದೇಶಕ ಸಂಘದವರು ಯೋಚಿಸಿರುತ್ತಾರೆ. ಈ ಸಂಘದವರು ಸೂಚಿಸಿದ ಈ ಜಯಂತ್ಯುತ್ಸವವನ್ನು ಹೀಗೆ ಅನೇಕ ಗ್ರಾಮದವರು ಅನುಸರಿಸಿದರೋ ಅದರಂತೆ ಹೀಗೆ ಈ ಅತ್ಯಂತ ಪ್ರಯೋಜನವಾದ ಧನರಾಸಿಯನ್ನೂ ವೃದ್ಧಿಪಡಿಸಬಹುದಾಗಿತ್ತು. ಸಾಯಂಕಾಲ ೩ ಘಂಟೆಗೆ ಇ

ನ ವಿರಕ್ತಮಠದ ಶ್ರೀ॥ ಶ್ರೀ॥ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಮಹಾಸಭೆ ನೆರೆದಿತ್ತು. ದೇವಾಪುರದ ವೇ॥ ಬಸವಲಿಂಗಶಾಸ್ತ್ರಿಗಳವರು ಶಿವಭಕ್ತಿಪರಾಯಣಯಾದ ಬಾಣಾಸುರನ ಕಥೆಯನ್ನು ಕೀರ್ತನರೂಪವಾಗಿ ೩ ತಾಸುಗಳವರಿವಿಗೆ ಬಹುಬೆನ್ನಾಗಿ ವಿವರಿಸಿದನಂತರ ಶ್ರೀರಂಗಪಟ್ಟಣದ ವೆ॥ ಸಿದ್ಧಲಿಂಗದೇವರವರು ವ್ಯವಸಾಯದ ವಿಷಯದಲ್ಲಿ ಬಹು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದಬಳಿಕ ವೆ॥ ಚತುರ್ಥರಿ ಎಡಿಟರವರು ಸಮಯೋಚಿತವಾದ ವಿಷಯಗಳನ್ನೂ, ನೂತನವಾಗಿ ಸ್ಥಾಪಿಸಿದ "ಶ್ರೀಬಸವೇಶ್ವರಜಯಂತಿ ಸ್ಕಾಲರ್‌ಷಿಪ್ಪಿನ" ಶ್ಲಾಘ್ಯವಾದ ಪ್ರಯೋಜನವನ್ನೂ, ಸಭಿಕರಿಗೆ ತಿಳಿಸಿದನಂತರ ಸಭೆಯು ಮುಕ್ತಾಯವಾಯಿತು.

"ಓರ್ವಪ್ರೇಕ್ಷಕ"

ನೋಟೀಸ್.

ರಾ॥ ರಾ॥ ಕಾಂತಪ್ಪಾ ಬಿನ್ನಗುರಬಸಪ್ಪಾ ಸೊಪ್ಪಣ್ಣನವರ ಸಾ॥ ಬಂಕಾಪೂರ ಯಿವರಿಗೆ—ಕೆಳಗೆ ಸಹಿಮಾಡಿದವನ ಕಡೆಯಿಂದಾ ತಿಳಿಯಬರುವದೇನಂದರೆ—ಮುರಗೆಪ್ಪಾ ಚೆಕ್ಕೇರಿ ಬಂಕಾಪೂರ ಇವರ ಸಾಲದ ಫೇಡೀಗೆ ಮತ್ತು ಸಂದಿಮಕ್ಕಾ ಸಂಬಂಧಿ ಹಸ್ತೆತೀರಿಲೋ ಅಡಚಣಿಗೆ ಬಂಕಾಪೂರ ತಾಲ್ಲೂ ಬಾಜಾಪೂರಗ್ರಾಮದ ರಿವಿಜನ್ನ ಸರ್ವೆನಂಬರ ೬೩ ನೇ ಪೈಕಿ ಚಕ್ಕರಿ ಜಮೀನು ನಿಮಗೆ ಖಬ್ಬಜಾವತ್ತಿ ಕೋರ್ಟೋರಾಜಿಸಾತ ಕರಾರವಮಾಡಿ ತೋರಕೇಗೆ ೨೦೦೦ ರೂಪಾಯಕ್ಕೆ ನಿಮ್ಮ ಅನುಮತಿಯಂತೆ ನಿಮ್ಮ ವಿಶ್ವಾಸ ನನಗೆ ಇದ್ದದರಿಂದಾ ತಾ॥ ೧೪-೩-೧೯೧೪ ನೇ ಇಸ್ವಿದಿವಸ ನಿಮ್ಮ ಹ್ಸೆರ್ ಕರ್ತ ಖರೀದಿ ಅಂದರೆ ಹಣಾ ಕೊಟ್ಟಾಗ್ಗೆ ಜಮೀನು ಪರತ ಬಿಕೋ ಕರಾರಿನಿಂದಾ ಬರಕೊಟ್ಟು ಅದು ನಿಮ್ಮ ಕಚ್ಚೆಪ್ರಕಾರಾ ನೊಂದಣಿಮಾಡ್ಸಿ ಕೊಟ್ಟು ಅದರ ಬಾಬತ್ತ ಹಣಾ ನಿಮ್ಮ ಕಡೆಗೆ ಬಿಟ್ಟಿರುತ್ತೇನಷ್ಟೆ.

ಸದ್ರಿಮುರಗೆಪ್ಪಾ ಚೆಕ್ಕೇರಿ ಯಿವರು ತಮ್ಮ ಸಾಲಾ ತೀರಿಸಿಕೊಳ್ಳಲಿಕ್ಕೆ ಈ ದಿವಸ ವಪ್ಪಿದರು. ಅಂದರೆ ಈವತ್ತಿನಿಂದಾ ೧೫ ದಿನ್ನದಲ್ಲಿ ಅವರ ಸಾಲಾ ಚುಕ್ತಾ ಮಾಡಿದರೆ ಜಮೀನವನ್ನು ಕಬ್ಜಾ ಬಿಡಲಿಕ್ಕೂ ವ ಹಣಾಚುಕ್ತಾ ಅಂದ ಬಗ್ಗೆ ದಾವತಿಕೊಡಲಿಕ್ಕೂ ಮತ್ತು ಖಬ್ಬಜಾವತ್ತಿ ಪತ್ರದ ಮೇಲೆ ಬರ್ರ್ಹಾಯಿ ಹಾಕಿ ಕೊಡಲಿಕ್ಕೂ ತಿರಾಯುತ್ತದ್ದಾರರು ಅವರಿಂದಾ ನನಗೆ ವಪ್ಪಿಗೆ ಕೊಡಿಸಿರುತ್ತಾರೆ. ಅದ್ದರಿಂದಾ ನಿಮಗೆ ಈ ನೋಟೀಸು ಕೊಡೋಭಾಗದಿತ್ತು.

ಸದರಹೂ ನಾನು ನಿಮಗೆ ತಾ॥ ೧೪-೩-೧೯೧೪ ನೇ ದಿವ್ಸ ನೊಂದಾಯಿಸಿ ಕೊಟ್ಟ ಕರ್ತ ಖರೀದಿ ಖತ್ತಿನಬಾಬತ್ತ ಹಣಾ ನಿಮ್ಮಕಡೆ ೧೮೨೦ ರೂಪಾಯಿ ಅಕ್ಷರದಲ್ಲಿ ಹದಿನೆಂಟನೂರಾಯಿಪ್ಪತ್ತು ರೂಪಾಯಿಗಳು ಬಿಟ್ಟಿರೋವು ಈವತ್ತಿನಿಂದಾ ಎಂಟುದಿವ್ಸದೊಳಗಾಗಿ ನನಗೆ ತಂದುಕೊಡಬೇಕು. ನಾನು ನಿಮ್ಮ ಸಮಕ್ಷಮಾ ಆಹಣೀದಿಂದಲೇ ಸದ್ರಿ ಮುರಗೆಪ್ಪನವರ ಸಾಲ ಫೇಡಮಾಡಿ ನಿಮ್ಮ ಇಚ್ಛಾ ಪ್ರಕಾರ ಅವರಿಂದಾ ಹಣಾ ಫೇಡಾದ ಬಗ್ಗೆ ಕಾಗದ ಪತ್ರಗಳಮೇಲೆ ಭರ್ರ್ಹಾಯಿತಗೊಂಡು ಅವು ದಾಖಲೇದ ಬಗ್ಗೆ ನಿಮಗೆ ಕೊಡುತ್ತೇನೆ ಮತ್ತು ನಿಮಗೆ ವತ್ತಿ ಬರಕೊಟ್ಟ ಜಮೀನವನ್ನು ಬಲ್ಲವರಿಂದಾ ಅಳತಿಮಾಡ್ಸಿ ಹದ್ದು ಕಾಯಿಮ್ಮ ಮಾಡ್ಸಿ ಕೊಡುತ್ತೇನೆ. ಮತ್ತು ನಮ್ಮ ರೈತರಿಗೆ ಸಮಜೂತಿ ಹೇಳಿ ಅವರ ಜೋಳಿತೀರೋವರಿಗೆ ನಿಮಗೆ ಆ ಜಮೀನುಹುಟ್ಟಿಗೆ ಅವರಿಂದಾ ಲಾವಣಿಚೀಟಿರಹಾ ಬರ್ಸಿಕೊಡುತ್ತೇನೆ. ಪರಂತು ಈವತ್ತಿನಿಂದಾ ಎಂಟು ದಿವಸದೊಳಗಾಗಿ ನೀವು ಜಾವತ್ತ ಹಣಾ ಕಟ್ಟಿಕೊಂಡು ಬಂದು ನನಗೆ ಕೊಟ್ಟ ಸದರಿ ಪ್ರಕಾರ ಯಾವತ್ತ ಕೆಲಸಗಳು ಚುಕ್ತಾ ಮಾಡಿಕೊಂಡು ಹೋಗದೇಕು. ನೀವು ಎಂಟು ದಿವಸದಲ್ಲಿ ಬಾರದೆ ಸುಸ್ತಿಮಾಡಿದರೆ ಮುರಗೆಪ್ಪನವರು ಹಣಾ ತರೊಸ್ಕೊಳಿಕ್ಕಿಲ್ಲಾ. ಮುಂದಿನ ಸಾಲ ಆಟ್ಪೆರವರಿಗೆ ಮುರಗೆಪ್ಪನವರು ನನ್ನ ಜಮೀನು ಬಿಡಲಿಕ್ಕಿಲ್ಲಾ. ಅದರಿಂದಾ ನನಗೆ ಭಾರಿ ಲುಕ್ಸಾನ ಆದೀತು. ಮುಖ್ಯ ನಿಮ್ಮಲ್ಲಿ ನಾನು ಸಾಲಾ ಮಾಡೋ ಇರಾದೆಮಾಡಿದ್ದು ಮುರಿಗಪ್ಪನವರ ಹಣಾ ತೀರಿಸಿ ಅವರ ಕಾಬಾಯಿದ್ದ ಜಮೀನು ಬಿಡಿಸೋ ಅಂಶ್ಯಾದಿಂದಲೇ ಮಾಡಿರುತ್ತೇನೆ. ಈ ನನ್ನ ಆಶ್ಯಾ ಈ ಕಾಲಕ್ಕೆ ಪೂರ್ಣ ಆಗದಿದ್ದರೆ ಮುಂದೆ ನನಗೆ ಈ ಕರ್ತ ಖರೀದಿ ಸಂಬಂಧಿ ನಿಮ್ಮಲ್ಲಿ ಹಣಾ ತಕೊಸ್ಕೊಳ್ಳುವದು ಗರ್ಜಯಿಲ್ಲಾ. ಸದರಿ ಖತ್ತಿನಬಾಬತ್ತ ಸೆಂದಿ ಕಂಟ್ರಾಕ್ಟಿಗೆ ಅಂತಾ ತಗೊಂಡ ವಂದನೂರ ವೊಂಭತ್ತುರೂಪಾಯಿ ನಾನು ನಿಮಗೆ ವಾಪಸು ಕೊಟ್ಟು ಬಿಡುತ್ತೇನೆ. ಅವು ತಕೊಂಡು ಆಕರ್ತ ಖರೀದಿದದ್ದಿ ಬಗ್ಗೆ ಬಾಯಿದೆ ಸೀರ ಲೇಖಾ ಬರಕೊಟ್ಟು ಅದು ವಾಪ್ಸ ನನ್ನದು ನನಗೆ ಕೊಟ್ಟುಬಿಡಬೇಕು. ಜರ ಈರೀತಿ ನೀವು ವರ್ತಿಸದಿದ್ದರೆ ಸದರಿ ಕರ್ತಖರೀದಿ ಫೋಕಳವೆಂತಲೇ ವ ಬಿನ್ನ ಮುಬಾದಲೆಪುಕ್ಕಳದ್ದಂತಲೇ ತಿಳಕೊಳ್ಳತಕ್ಕದ್ದು. ಮುಂದೆ ಆ ಖರೀದಿ ಪತ್ರದಮೇಲಿಂದಾ ಸದರಹೂ ಜಮೀನಿನ ಮೇಲಿನಿಮ್ಮ ಯಾವತರಹದ ಹಕ್ಕುಪುಂಟಾಗಲಾರದು. ಅದು ರದ್ದುವ ಬಾತಿಲ್ಲಾ ಅದೆ. ಇಲ್ಲಿ ಅಬ್ಬುಮಿಯ್ಯಾ ವಲ್ಲದಹುಸೇಮಿಯ್ಯಾಅಸಾರ ಮಹಾಲ ಇವರ ಯಾದಗ್ಯೆ ಹೆಬ್ಬೆಟ್ಟಿನ ಗುರ್ತಿನ ರುಜು ಇದೆ. ಬಂಕಾಪೂರ, ತಾ॥ ೧೩-೪-೧೯೧೪.

ಶ೨೦ ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರೀ ಮುರಬ್ಬಾ.

3

ಈ ಮುರಬ್ಬಾವು "ಪಂಜಾಬ್ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂಪಾಯಿಗಳು ಬಹುಮಾನ ಕೊಡಲ್ಪಡುವುದು.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯಕೋಶವು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣಪರಿಯಂತರವೂ ದುಃಖಪಡುವರು. ಈ "ಪಂಜಾಬ್ ಸಾಲಾಮಿಸ್ರೀಮುರಬ್ಬಾ" ದ ಸೇವನೆಯಿಂದ—

ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಕ್ಷಣಕ್ಷಣಕ್ಕೂ ಮೂತ್ರವಾಗುತ್ತಿದ್ದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ದೂರ ನಡೆಯುವುದರಿಂದ ಮೇಲುಬ್ಬಸ ಬರುವುದು ತಲೆಯ ನೋವೂ ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರಿಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ರಕ್ತವನ್ನು ಹೆಚ್ಚಿಸಿ ವೀರ್ಯವನ್ನು ವೃದ್ಧಿಪಡಿಸುವುದರಲ್ಲಿ ಪಂಜಾಬ್ ಸಾಲಾಮಿಸ್ರೀ ಮುರಬ್ಬಾವಿನ ಹೊರತು ಇದಕ್ಕೆ ಸಮಾನವಾದ ಔಷಧವು ಬೇರೆ ಯಾವುದೂ ಇಲ್ಲವು.

ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ತಾಂಬ್ರದ ಮತ್ತು ಭಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು. ಹೊಟ್ಟೆಯಲ್ಲಿರುವ ಜ್ವರದ ಗಡ್ಡೆಯನ್ನು ನಾಶಪಡಿಸುವುದು. ಶ್ವಾಸ ಖಾಸ ರೋಗಗಳನ್ನು ನಿರ್ಮೂಲಪಡಿಸುವುದು.

ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲ್ ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗಡ್ಡೆ, ಶಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರಿ ಎಂದು ಹೇಳಿ ಮೋಸಪಡಿಸುವರು. ಈ ಮುರಬ್ಬಾವನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾಬ್ ಸಾಲಾಮಿಸ್ರಿಯೋ ಅಥವ ಬೇರೇ ತರಹದ್ದೋ ಎಂಬುವುದು ಚೆನ್ನಾಗಿ ತಿಳಿದು ಬರುತ್ತೆ. ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧೫ ತೋಲಾ ಮುರಬ್ಬಾವಿರುವ ಡಬ್ಬಾ ೧ಕ್ಕೆ ರೂ ೧-೮-೦; ಟಪಾಲ್ ಖರ್ಚು ನಾಲ್ಕು ಆಣೆ ಅನುಪಾನಪತ್ರಿಕೆ ಔಷಧದ ಸಂಗಡ ಇರುತ್ತೆ.

ಅತ್ಯುತ್ತಮವಾದ ವನೌಷಧಗಳು.

೧. ಧಾತುಪುಷ್ಟಿಚೂರ್ಣ— ಕ್ರಯ ೫ ಆಣೆ.
೨. ರೋಮನಾಶಕ ಮತ್ತು ವೃಶ್ಚಿಕದಂಷ್ಟ್ರ ತೈಲವು ಬೇಳಿನ ಹೊಡತಕ್ಕೂ ಮತ್ತು ಕೂದಲು ತೆಗೆಯುವುದಕ್ಕೂ ಬಹಳ ಒಳ್ಳೆಯದು ಕ್ರಯ ೨ ಆಣೆ.
೩. ವಾತನಿವಾರಣೆ ತೈಲವು ಕ್ರಯ ೪ ಆಣೆ.
೪. ಹೊಟ್ಟೆನೋವಿಗೆ ಔಷಧ ಕ್ರಯ ೨ ಆಣೆ ೬ ಪೈ.
೫. ಕೆಮ್ಮಲು ರೋಗಕ್ಕೆ ಔಷಧ ೪ ಆಣೆ.
೬. ವ್ರಣಕ್ಕೆ ಔಷಧ ೪ ಆಣೆ.
೭. ಆಶ್ಚರ್ಯಕರವಾದ ವೀರ್ಯಸ್ತಂಭದ ಗುಳಿಗೆ ೪ ಆಣೆ.
೮. ತಲೆನೋವಿಗೆ ತೈಲವು ೨ ಆಣೆ ೬ ಪೈ.
೯. ಪ್ರಮೇಹ ನಿವಾರಣ ಭಸ್ಮವು-೮ ಆಣೆ.
೧೦. ಉಷ್ಣಕಾರಕಕ್ಕೆ ಮಾತ್ರೆಗಳು—ರೂ. ೧.
೧೧. ಮೂಲವ್ಯಾಧಿಗೆ ಔಷಧ-೮ ಆಣೆ.
೧೨. ಕಣ್ಣಿಗೆ ಸುರ್ಮಾ–೪ ಆಣೆ.
೧೩. ದಂತಚೂರ್ಣವು-೧ ಆಣೆ ೩ ಪೈ.
೧೪. ಕೂದಲು ಬೆಳೆಯುವ ಎಣ್ಣೆ (ಒಂಬೋಲ ತೈಲ) ೪ ಆಣೆ.

ವಿ.ಳಾಸ:— ಡಿ. ಮನ್ನಾಲಾಲ್, ದಿಲ್ಲಿ ವೈದ್ಯರು, ೧೩, ಹಳೇ ಸಿದ್ಧಿಕಟ್ಟ, ಬೆಂಗಳೂರು ಸಿಟಿ.

ಕೇವಲ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

23

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪುದ್ರೇಕವಾದವರು, ತೃಷೆವುಳ್ಳವರು, ದಮ್ಮಿನವರು, ಕೆಮ್ಮಿನವರ ಕಫ, ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿಗುವ ಎಲ್ಲಾ ತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ:—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ, ಪೋಸ್ಟ್ ಬನವಾಸಿ. ಜಿಲ್ಲ ಉತ್ತರಕನಡಾ

33

ದೊಡ್ಡ ಕಂಪೆನಿ ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟಿ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯೂ. ಎನ್. ಮತ್ತು ಕಂಪೆನಿ, ಬನಾರಿಸ್ ಸಿಟಿ. (ಕಾಶೀ)

ಅಗ್ಗವಾದ ಮಾಲುಗಳು.

ನಮ್ಮಲ್ಲಿ ಉತ್ತಮವಾದ ನೇಪಾಳ ರುದ್ರಾಕ್ಷಿ ಉತ್ತಮವಾಗಿಯೂ ಗಟ್ಟಿಯಾಗಿಯೂ ೪ ಮುಖದಿಂದ ೧೪ ಮುಖದ ವರೆಗೆ ಸಣ್ಣದು ದೊಡ್ಡದು ಸಹ ಈ ಎರಡು ನಮೂನೆಯಲ್ಲಿ ದೊರೆಯುವುದು. ಮತ್ತು ಇವುಗಳ್ಲದೆ ರೇಷ್ಮೆ ಮುಗುಟ, ಕಾಶ್ಮೀರ ಶಾಲು, ರೇಷ್ಮೆ ಜರೀಸೀರೆ, ಜರಿಕಣ, ಪೇಟ, ಮೊಳಕಾಲ್ಮರು ನಮೂನೆ ವಸ್ತ್ರ ಜಗನ್ನಾಥ ಜಾಗಂಟೆ, ನೇಪಾಳ ಕಸ್ತೂರಿ, ಉತ್ತಮವಾದ ಜರೀ ಛಾದರ್ ಮೊದಲಾದ ಅಮೂಲ್ಯವಾದ ಸಾಮಾನು ಎಲ್ಲವರಿಗಿಂತಲೂ ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಇಚ್ಛಿಸಿದವರಿಗೆ ವಿ. ಪಿ. ಮೂಲಕ ಕಳುಹಿಸಲಾದೀತು.

ರುದ್ರಾಕ್ಷಿಗಳ ವಿವರ:—

೪ ಮುಖದ ರುದ್ರಾಕ್ಷಿ ಕಂಠಿ ಅಂದರೆ ೩೨ ಮಣಿಗಳಿರುವ ಸರ ೧ ಕ್ಕೆ ೧೨ ಆಣೆಯಿಂದ ೬೦ ರೂಪಾಯಿವರೆಗೆ. ೫ ಮುಖದ ಕಂಠಿ ೧ಕ್ಕೆ ೮ ಆಣೆಯಿಂದ ೩೦ ರೂಪಾಯಿವರೆಗೆ. ೬ ಮುಖದ ಕಂಠಿ ೧ಕ್ಕೆ ೧೨ ಯಿಂದ ೧೦೦ ರೂ. ವರೆಗೆ. ೭ ಮುಖದ ಕಂಠಿ ೧ಕ್ಕೆ ೧೦ ರೂ. ಯಿಂದ ೧೫೦ ರೂ. ವರೆಗೆ. ಇದರಂತೆ ೮, ೯, ೧೦, ೧೧, ೧೨, ೧೩, ೧೪, ಈ ಮುಖಗಳ ಮಣಿ ೧ಕ್ಕೆ ೫ ರೂ. ಯಿಂದ ೩೦ ರೂ. ವರೆಗೆ. ಇದರಲ್ಲಿಯೇ ಕಂಠಿ ಬೇಕಾದರೆ ಸಹ ದೊರೆಯುವುದು. ಸಣ್ಣ ರುದ್ರಾಕ್ಷಿ ಸರ ಅಂದರೆ ೧೦೮ ಮಣಿಯಿರುವ ತೊಗರಿಯ, ಉದ್ದಿನಕಾಳು ಪ್ರಮಾಣದ ಸರ ೧ಕ್ಕೆ ರೂ. ೫ ರಿಂದ ರೂ. ೩೦ ವರೆಗೆ. ಕಡಲೆ ಕಾಳು ಪ್ರಮಾಣದ ೧೦೮ ಮಣಿಯಿರುವ ಸರ ೧ಕ್ಕೆ ರೂ. ೨-೮-೦ ಲಾಗಾಯಿತು ರೂ. ೧೦ ವರೆಗೆ. ಜಪಮಾಲೆ ನೆಲ್ಲಿಕಾಯಿಯಿಂದ ಅವರೇ ಬೀಜದ ಪ್ರಮಾಣದ ೧೦೮ ಇರುವ ಸರ ೧ಕ್ಕೆ ೧೨ ಆಣೆಯಿಂದ ರೂ. ೧೦ ವರೆಗೆ. ಸಾಧಾರಣ ತರ ೬ ಆಣೆಯಿಂದ ರೂ. ೩ ವರೆಗೆ. ಗೌರೀಶಂಕರ ರುದ್ರಾಕ್ಷಿ— ಈ ರುದ್ರಾಕ್ಷಿಯು ರುದ್ರಾಕ್ಷಿಗಳಲ್ಲೆಲ್ಲಾ ಶ್ರೇಷ್ಠವೆಂದು ಹೇಳುವರು. ರುದ್ರಾಕ್ಷಿ ಮಣಿ ೧ ಕ್ಕೆ ರೂ. ೫ ಲಾಗಾಯಿತು ರೂ. ೫೦ ವರೆಗೆ. ಇಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ವಿಳಾಸ– ಎಸ್. ನೇಪಾಳ ರುದ್ರಾಕ್ಷಿ ಅಂಡ್ ಕಂಪೆನಿ, ಬನಾರಸ್ ಸಿಟಿ.

17

ದಿ ಜನರಲ್ ಏಜನ್ಸಿ, ಮೈಸೂರು.

ಕಾದಂಬರಿಗಳು:— ಚಂಡಮಾರುತ ೦-೨-೦; ಚರಿತಾಮೃತಂ ೦-೫-೦; ರಾಜಕಥಾವಲ್ಲರಿ ೦-೫-೦; ಪೀಟರಿನಚರಿತ್ರೆ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೨-೬; ಸೀತೆ ೦-೫-೦; ಸಾಹಸಿಕೆ, ಕಲಾನಾಥ ೦-೮-೦; ಮಹಾಲಕ್ಷ್ಮಿ ೦-೨-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸತ್ಯಸಂಜೀವಿನಿ ೦-೮-೦; ಕೊಹಿನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೨-೦. 35

ಬಿಸಿಲುಕಾಲದ ಆಯಾಸವನ್ನೂ ಬಾಯಾರಿಕೆಯನ್ನೂ ಪರಿಹರಿಸಿ ಮನಸ್ಸಿಗೆ ಅಪೂರ್ವವಾದ ಆನಂದವನ್ನುಂಟು ಮಾಡುವುದರಲ್ಲಿ ಪ್ರಖ್ಯಾತಿಹೊಂದಿರುವ

33

ಬಿ. ವಿ. ಪಂಡಿತರ

ಆಮೋದಿನಿ

ವಿದ್ಯಾರ್ಥಿಗಳು, ಪ್ರಯಾಣಿಕರು, ಬೈಸಿಕಲ್‌ಸ್ವಾರಿ ಮಾಡುವವರು, ಉಪನ್ಯಾಸಕರೇ ಮೊದಲಾಗಿ ಸರ್ವರೂ ಅಮೋಘವಾದ ಸುವಾಸನೆಯುಳ್ಳ ಈ ಮಾತ್ರೆಗಳ ಗುಣಾತಿಶಯಗಳನ್ನು ತಮ್ಮ ಮಿತ್ರರಲ್ಲಿ ಪ್ರಚಾರಪಡಿಸುತ್ತಲಿದ್ದಾರೆ. ಸಂಗೀತಗಾರರು ಇದರಿಂದ ತಮಗುಂಟಾಗಿರುವ ಪ್ರಯೋಜನವನ್ನು ವ್ಯಕ್ತಪಡಿಸಿದ್ದಾರೆ.

ಶುದ್ಧವಾದ ವನಸ್ಪತಿಗಳಿಂದಲೇ ತಯಾರಿಸಲ್ಪಟ್ಟಿರುವ ಈ ಮಾತ್ರೆಗಳು ಸಮಸ್ತರಿಗೂ ಮಲಬಂಧ, ಹೊಟ್ಟೆನೋವು, ನಾನಾತರಹ ಕೆಮ್ಮು, ದಮ್ಮು, ಉಬ್ಬಸ, ಅಗ್ನಿಮಾಂದ್ಯ, ಅರೋಚಕ, ತಲೆನೋವು, ವಾಂತಿ, ವಾಕರಿಕೆ, ಪಿತ್ಥಸಂಕಟ, ಜಲದೋಷಗಳನ್ನು ಖಾತರಿ ಗುಣಪಡಿಸಿ ರಕ್ತಶುದ್ಧಿಯನ್ನುಂಟುಮಾಡುತ್ತವೆ. ೧೫೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಅನುಪಾನಪತ್ರಸಹಿತ ೦-೪-೦.

ಶ್ರೀ ಕರ ಕಸ್ತೂರಿ ಮಾತ್ರೆ.

ಈ ಮಾತ್ರೆಗಳನ್ನು ಒಂದೇವೇಳೆ ಪರೀಕ್ಷಿಸಿರಿ. ಇದರ ಗುಣ ಮತ್ತೂ ಸುವಾಸನೆಗಳು ನಿಮಗೆ ಅನುಭವವಾಗುವುವು. ಮನೆಯಲ್ಲಿ ಸಣ್ಣಮಕ್ಕಳುಗಳನ್ನುಳ್ಳವರು, ಪ್ರಯಾಣೀಕರು ಮಲೆನಾಡು ವಾಸಸ್ಥರು ಮತ್ತೂ ಸೋಂಕುರೋಗಸ್ಥಳದಲ್ಲಿರುವವರಿಗೆ ಈ ಮಾತ್ರೆಗಳು ಅಮೃತವೇಸರಿ. ಶೀತವಾಯು, ವಿಷಮಜ್ವರಗಳು, ನಡುನೋವು, ಕೆಮ್ಮು, ಅಗ್ನಿಮಾಂದ್ಯ, ಅರೋಚಕ, ಹಲ್ಲುನೋವು, ಅಜೀರ್ಣಭೇದಿ, ಮಲಬಂಧ, ಮೈಕೈ ನೋವು ಮತ್ತೂ ಭಾರಗಳನ್ನು ಅತಿಜಾಗ್ರತೆ ಗುಣಪಡಿಸುತ್ತವೆ. ವಿಶದವಾದ ಅನುಪಾನ ಪತ್ರಸಹಿತ ೨೫೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೦-೪-೦ ನಾಲ್ಕಾಣೆ ಬೆಲೆ ಬಾಳುವ ಐದು ಸೀಸೆಗಳನ್ನು ಪಟ್ಟಿಗೆ ತರಿಸಿದರೆ ಒಂದು ಇನಾಮು. ಟ. ಖ. ಪ್ರತ್ಯೇಕ. ಕ್ಯಾಟಲಾಗನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ— ಕೆ. ವಿ. ನಾರಾಯಣರಾವ್,
ಮ್ಯಾನೇಜರ್, ಸದ್ವೈದ್ಯಶಾಲಾ,
ಸಂಜನಗೂಡು, ಮೈಸೂರ್ ಡಿ॥

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕೆಯ್ಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡ ಪಲ್ಲಕ್ಕಿ ಉತ್ಸವದ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸನಗೊಳಸಹಿತ ಆದ ಸಮಾರಂಭದ ಫೋಟೋ ೧ ಕ್ಕೆ ಕ್ರಯ ೧ ರುಪಾಯಿ

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಾಮಾದಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲಸ್ಯೆಜು ಬಣ್ಣದ್ದು ೧॥ ರೂ. ಸಾದಾ ೧ ರೂ ಕ್ಯಾಬಿನೇಟ್ ಸ್ಯೆಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೋ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೋ ೧ ಕ್ಕೆ ಕ್ರಯ ಫುಲ್ಲಸ್ಯೆಜು ೧ ರುಪಾಯಿ ಕ್ಯಾಬಿನೇಟ್ ಸ್ಯೆಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀ ಜಗದ್ಗುರು ತೋಂಟದಾರ್ಯ ಗದಗ, ಶ್ರೀ ಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ಸತ್ಪುರುಷಮಾಲಾ, ಹಾಳಕೇರಿ ಆನಂದಸ್ವಾಮಿಯ ಫೋಟೋ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೋ ಸಿಗುತ್ತವೆ. ಫುಲ್ಲಸ್ಯೆಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸ್ಯೆಜು ೮ ಆಣೆ

ಹೊಸಫ್ಯಾಷನ್—ಸದ್ಗೃಹಸ್ಥರು ಗಡಿಯಾರ ಸರ್ವಳಿಗೆ ಹಚ್ಚುವಲಾಕೇಟುಗಳೂ, ಯಿದರಲ್ಲಿ ಹಿಂದೆ ಮುಂದೆ ಇ ಪ್ರಕಾರ ೨ ಫೋಟೋ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ॥, ॥=, ೧, ೧।, ಪ್ರಕಾರ, ಮತ್ತೂ ಬೆಳ್ಳಿಯದು ರು ೧॥ ರೋಲ್ಡ್ ಗೋಲ್ಡ್ ಭಂಗಾರದ್ದು ದುರ್ಬಿಣದ ಗ್ಲಾಸದೂ ಕ್ರಯ ೨॥, ೨॥। ರೂ

ಪರೂರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ಧಾಣೆ ಟಿಕೇಟು ಕಳುಹಿಸಿ ಕ್ಯಾಟಲಾಕು ಬೇಕಾದವರು ತರಿಸಿಕೊಳ್ಳಿರಿ. ನಮ್ಮವಿಳಾಸ – ಗಂಗಪ್ಪಾ ಜೇರಿಗೆ.
10 ಆರ್ಟಿಸ್ಟ್ ಸೊಲ್ಲಾಪುರ

ಊದಬತ್ತಿಗಳು.

4

ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ ೧೨-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪ ಟಿನ್ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಸುಗಂಧಕಾರಿ, ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಸ್ವಲ್ಪ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚೆನ್ನದ ಎಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೪-೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧ ರೂ. ಕೊಡಬೇಕಾಗುವುದು. ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೬-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦-೮-೦ ಆಣೆಯಂತೆ ಕಳುಹಬೇಕು. ಸ್ವಲ್ಪ ಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ವಿಶೇ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರ್ ಪ್ರೆಸ್, ಮೈಸೂರ್.

ವರ್ತಮಾನ

ಧಾರವಾಡಜಿಲ್ಲಾ ಅರಟಾಳ ಗ್ರಾಮದಲ್ಲಿ ತಾ|| ೬-೩-೧೮ ಇಸವಿಯ ದಿವಸ ತಾಂಬೂಲ ಸಮಾರಂಭ ವಿದ್ದುದರಿಂದ ರಾ|| ಬ|| ರುದ್ರಗೌಡ, ಚನ್ನವೀರಗೌಡ ಆರಟಾಳ ಆಯ್. ಎಸ್. ಓ. ಡಿ. ಡಿ. ಡಿ. ಕಲೆಕ್ಟರ ಬೆಳಗಾವ ಇವರು ಚಿತಂ. ರ ಮಾರ್ಗವಾಗಿ ಬೆಳಗಾವಿಯಿಂದ ಮೋಟಾರಗಾಡಿಯ ಮೇಲೆ ಆರಟಾಳಕ್ಕೆ ಹೋಗುವಾಗ ದಾರಿಯಲ್ಲಿ ಚಿತ್ತೂರ ಶಾಲಾ ವಿದ್ಯಾರ್ಥಿಗಳೂ ಕೆಲ ಪುರಪ್ರಮುಖರೂ ಕಾದು ಕೊಂಡಿದ್ದು ಗಸ್ತಿಯ ಮೇಲಿರುವ ಧರ್ಮಶಾಲೆಯಲ್ಲಿ ಈ ಹೊತ್ತು ಮಧ್ಯಾಹ್ನದ ೧೧ ಘಂಟೆಗೆ ರಾ|| ಬ|| ರವರಿಗೆ ಪಾನಸುಪಾರಿ ಮಾಡಿದರು. ಆ ವೇಳೆಯಲ್ಲಿ ಪಿಯಾನೋ ಪೆಟ್ಟಿಗೆಯ ಸ್ವರದಲ್ಲಿ ವಿದ್ಯಾರ್ಥಿಗಳು ಅಂದ ಸ್ವಾಗತಪದವೂ ರಾಷ್ಟ್ರಗೀತವೂ ಶ್ರೋತ್ರೀಯವಾಗಿದ್ದುವು. ಈ ಸಮಯದಲ್ಲಿ ವೆ|| ಇನಾಕ್ಸಲೇಸ್ಪರ್ ತಾಕ್ಟರ ವಲಿವತಾ ಇವರೂ ಪೋಸ್ಟ್ ಮಾಸ್ತರರೂ ಶಾಲಾಮಾಸ್ತರ ಜನರೂ ಗ್ರಾಮಸ್ಥರೂ ವಿ ವಳಸಂಗ, ಬಾವಿ, ನಾಗಲಾಪುರ ಮೊದಲಾದ ಮುಖಂತ ಜನರೂ ಹಾಜರಿದ್ದರು. ವಿದ್ಯಾರ್ಥಿಗಳ ಮಂಜುಳವಾದ ಗಾನರಸದಲ್ಲಿ ರಾ|| ಬ|| ರವರು ಅರ್ಧತಾಸು ವಿಶ್ರಾಂತಿಯನ್ನು ಹೊಂದಿ ಆಭಾರ ಮನ್ನಿಸಿ ೧೧|| ಘಂಟೆಗೆ ರಥಾರೂಢರಾಗಿ ಅರಟಾಳಾಭಿಮುಖರಾದರು.

ತಮ್ಮ ಚಂದಾದಾರ್,
ಮಹಾಂತಪ್ಪ ಸಂಗೋಜಿ.

೨೧-೪-೧೮.

ಶ್ರೀ ಬಸವೇಶ್ವರ ಜಯಂತ್ಯೋತ್ಸವ.

ದಾವಣಗೆರೆ ತಾಲೂಕು ಅಣಜಿಗ್ರಾಮದಲ್ಲಿ ಇದೇ ವೈಶಾಖಶುದ್ಧ ತೃತೀಯ (ತಾ|| ೨೩-೪-೧೮) ಮಂಗಳವಾರದಲ್ಲು ಶ್ರೀ ಬಸವೇಶ್ವರ ಹುಟ್ಟಿದ ಹಬ್ಬವನ್ನು ಸರ್ವರೂ ಮಾಡಬೇಕೆಂಬುದಾಗಿ ಮ|| ರಾ|| ಶ್ರೀ ಪಟೇಲ್ ಜವಿಯಪ್ಪನವರು ಡಂಗೂರಿ ಮೂಲಕ ಪ್ರಸಿದ್ಧಪಡಿಸಿದ ಮೇರೆಗೆ ತಮ್ಮ ತಮ್ಮ ಮನೆಗಳಲ್ಲಿ ಅತಿ ಉತ್ಸಾಹದಿಂದ ಮಾಡಿದ್ದಲ್ಲದೆ ಪದ್ಧತಿ ಮೇರೆಗೆ ಶ್ರೀ ಕ್ಯಾಟ ನಂದೀಶ್ವರ ದೇವಾಲಯದಲ್ಲಿ ಚಪ್ಪರ ತಳಿರು ತೋರಣಗಳಿಂದಲಂಕರಿಸಿ, ಶ್ರೀ ಮರಡಿ ಬಸವೇಶ್ವರ ಸ್ವಾಮಿಯನ್ನು ಮಧ್ಯಾಹ್ನದಲ್ಲಿ ಕರೆದುತಂದು ಮುಹೂರ್ತಗೊಳಿಸಿ, ಪೂಜಾದಿಗಳಿಂದುರಚರಿಸಿ ನಿತ್ಯಕಟ್ಟಳೆ ಪೂರೈಸಿದೊಡನೆ ಸಾಯಂಕಾಲದಲ್ಲಿ ಶ್ರೀ ಮರಡಿ ಬಸವೇಶ್ವರ ದೇವರನ್ನು ಶ್ರೀಬಸವೇಶ್ವರ ಫೋಟೋವನ್ನು ಸಹ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಮದ್ದು ಬಿರುಸು ಮುಂತಾದ ವಿನೋದಕರವಾದ ಮತ್ತು ವಾದ್ಯಘೋಷದೊಡನೆ ಮೆರವಣಿಗೆ ಮಾಡಿ, ಆನಂದದಿಂದ ಪೂರೈಸಿದರು. ಈ ಕಾರ್ಯದಲ್ಲಿ ಮುಂದಾಳುಗಳಾಗಿದ್ದ ಮ|| ರಾ|| ಶ್ರೀಗಳಾದ, ಎ. ಎ. ಸಿದ್ಧಲಿಂಗಪ್ಪನವರು, ಮಠದ ತಿಪ್ಪಯ್ಯನವರು, ಕುರುವಹಳ್ಳಿ ಶಿವಲಿಂಗಪ್ಪನವರು ಎಚ್. ಸಿದ್ಧಯ್ಯನವರು, ಗೌಡನಾಗಪ್ಪನವರು, ಹ್ಯಾಳೇದ ಗುರುಶಾಂತಪ್ಪ, ಕೆಪ್ಪಕೊಟ್ರಪ್ಪ, ಕಡಬಗೆರೆ ನಾರಪ್ಪನವರು, ಫಣಿಯರ ಚನ್ನವೀರಪ್ಪನವರು, ಮಡೇರಹಳ್ಳಿ ಮಹದೇವಪ್ಪ, ಕಂಬೆಕೆರೆ ಸಿದ್ಧಲಿಂಗಪ್ಪ, ಶಿದ್ದೂರು ಶಾಂತವೀರಪ್ಪ, ಶಿದ್ದೂರು ಶಿದ್ದಪ್ಪ, ಮುಂತಾದವರಿಗೆ ಆಯುರಾರೋಗ್ಯವನ್ನು ಸದಾಶಿವನು ಸದಾ ಕೊಡಲಿ ಎಂಬುದಾಗಿ ಬೇಡುತ್ತೇವೆ. ಈ ಪ್ರೇಪ್ಪಂಕ್ತಿಯನ್ನು ಅನುಸರಿಸಿ ಚಿತ್ತೂರು ಗ್ರಾಮದಲ್ಲಿ ಮ|| ಕೊಟ್ಟಯ್ಯನವರು, ಸ್ಕೂಲ್‌ಮಾಸ್ಟರ್ ಇವರ ಪ್ರೋತ್ಸಾಹದಿಂದಲು ತಂದರಕೋವಿಯಲ್ಲಿ ಮ|| ರಾ|| ಸಾಹುಕಾರ ಬೆಳ್ಳುಡಿ ಗುರುಶಿದ್ದಪ್ಪನವರ ಪ್ರೋತ್ಸಾಹದಿಂದಲು, ಹುಲಿಕಟ್ಟಿಯಲ್ಲಿ ಮ|| ಬಸಪ್ಪ, ಮಹದೇವಪ್ಪ. ಮಾಗಪ್ಪ ಇವರ ಪ್ರೋತ್ಸಾಹದಿಂದಲು ಹಬ್ಬವನ್ನು ಮಾಡಿರುವದಾಗಿ ಕೇಳಿರುತ್ತೇವೆ. ಪ್ರತ್ಯಕ್ಷದರ್ಶಿ.

ಶ್ರೀಬಸವೇಶ್ವರ ಜಯಂತ್ಯುತ್ಸವ. ದಾವಣಗೆರೆ.

ಕಳೆದ ತಾ|| ೧೪ ನೆಯ ಮಂಗಳವಾರ ಗ್ರಾಮವು ತಳಿರು ತೋರಣಗಳಿಂದ ಶೃಂಗರಿಸಲ್ಪಟ್ಟಿತ್ತು. ಈ ಜಯಂತ್ಯುತ್ಸವವನ್ನು ಆಚರಿಸಲು ಜನಗಳು ಬಹು ಉತ್ಸಾಹಿಗಳಾಗಿದ್ದರು. ಪ್ರಾತಃಕಾಲ ೫ ಘಂಟೆಯಿಂದ ೯ ಘಂಟೆಯವರಿವಿಗೆ ಇಲ್ಲಿನ «ಶ್ರೀಜಗದ್ಗುರು ಮುರಘರಾಜೇಂದ್ರ" ಭಜನಾ ಸಂಘದವರು ಊರಲ್ಲಿ ಶಿವಕೀರ್ತನವನ್ನು ಮಾಡುತ್ತ ಸಂಚರಿಸಿ ಕೊನೆಗೆ ವಿರಕ್ತಮಠವನ್ನು ಸೇರಿದರು. ಅನಂತರ ಇಲ್ಲಿನ «ಯಂಗ್‌ಮೆನ್ಸ್ ಸೊಸೈಟಿಯವರು" ಈ ವರ್ಷ ಈ ಜಯಂತಿಯ ದಿವಸ ಸ್ಥಾಪಿಸಿದ «ಶ್ರೀಬಸವೇಶ್ವರಜಯಂತಿ ಸ್ಕಾಲರ್‌ಷಿಪ್" ಎಂಬ ಧನರಾಸಿಗೆ ಚಂದಾಶೇಖರಿಸಲು ಊರಲ್ಲಿ ಸಂಚರಿಸಿ ಸಾಧಾರಣ ೧೫೫ ರೂ ಗಳನ್ನು ಕೂಡಿಸಿದರು. ಈ ದ್ರವ್ಯವನ್ನು ನಮ್ಮ ಮಠದ ನಮ್ಮ ಡಿಸ್ಟ್ರಿಕ್ಟಿನ ಯಾವ ವಿದ್ಯಾರ್ಥಿಯು ಮೆಟ್ರಿಕ್ ಅಥವ ಇದರ ಹೆಚ್ಚಿನ ಪರೀಕ್ಷೆಯಲ್ಲಿ ಉತ್ತಮಸ್ಥಿತಿಯಲ್ಲಿ ಉತ್ತೀರ್ಣನಾಗುತ್ತಾನೆಯೋ ಆತನಿಗೆ ಕೊಡಲ್ಪಡುವುದೆಂದು ಇಲ್ಲಿನ ವೀರಶೈವ ಹಿತೋಪದೇಶಕ ಸಂಘದವರು ಯೋಚಿಸಿರುತ್ತಾರೆ. ಈ ಸಂಘದವರು ಸೂಚಿಸಿದ ಈ ಜಯಂತ್ಯುತ್ಸವವನ್ನು ಹೀಗೆ ಅನೇಕ ಗ್ರಾಮದವರು ಅನುಸರಿಸಿದರೋ ಅದರಂತೆಯೇ ಈ ಅತ್ಯಂತ ಪ್ರಯೋಜನವಾದ ಧನರಾಸಿಯನ್ನೂ ವೃದ್ಧಿಪಡಿಸದಿರಲಾರರು. ಸಾಯಂಕಾಲ ೩ ಘಂಟೆಗೆ ಇನ ವಿರಕ್ತಮಠದ ಶ್ರೀ|| ಶ್ರೀ|| ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಮಹಾಸಭೆ ಸೇರಿದ್ದಿತು. ದೇವಾಪುರದ ವೇ|| ಬಸವಲಿಂಗಶಾಸ್ತ್ರಿಗಳವರು ಶಿವಭಕ್ತಿಪರಾಯಣಯನಾದ ಬಾಣಾಸುರನ ಕಥೆಯನ್ನು ಕೀರ್ತನರೂಪವಾಗಿ ೩ ತಾಸುಗಳವರಿವಿಗೆ ಬಹುಚೆನ್ನಾಗಿ ವಿವರಿಸಿದನಂತರ ಶ್ರೀರಂಗಪಟ್ಟಣದ ಮ|| ಸಿದ್ಧಲಿಂಗದೇವರವರು ವ್ಯವಸಾಯದ ವಿಷಯದಲ್ಲಿ ಬಹು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದಬಳಿಕ ಮ|| ಧನುರ್ಧಾರಿ ಎಡಿಟರವರು ಸಮಯೋಚಿತವಾದ ವಿಷಯಗಳನ್ನೂ, ನೂತನವಾಗಿ ಸ್ಥಾಪಿಸಿದ «ಶ್ರೀಬಸವೇಶ್ವರ ಜಯಂತಿ ಸ್ಕಾಲರ್‌ಷಿಪ್ಪಿನ" ಶ್ಲಾಘ್ಯವಾದ ಪ್ರಯೋಜನವನ್ನೂ, ಸಭಿಕರಿಗೆ ತಿಳಿಸಿದನಂತರ ಸಭೆಯು ಮುಕ್ತಾಯವಾಯಿತು.

«ಓರ್ವಪ್ರೇಕ್ಷಕ"

ನೋಟೀಸ್.

ರಾ|| ರಾ|| ಶಾಂತಪ್ಪಾ ಬಿನ್ನಗುರುಬಸಪ್ಪಾ ಸೊಪ್ಪಣ್ಣನವರ ಸಾ|| ಬಂಕಾಪುರ ಯವರಿಗೆ—ಕೆಳಗೆ ಸಹಿಮಾಡಿದವನ ಕಡೆಯಿಂದಾ ತಿಳಿಸುವದೇನಂದರೆ—ಮುರಗೆಪ್ಪಾ ಚಿಕ್ಕೇರಿ ಬಂಕಾಪುರ ಇವರ ಸಾಲದ ಫೇಡೀಗೆ ಮತ್ತು ಸಂದಿಮ ಕಾಸಂಬಂಧಿ ಹುಪ್ತೆತೀರಿಸೋ ಅಡಚಣಿಗೆ ಬಂಕಾಪೂರ ತಾಲ್ಲೂಕು ಬಾಜಾಪುರಗ್ರಾಮದ ರಿವಿಜನ್ನ ಸರ್ವೆನಂಬರ ೨೩ ನೇ ಪೈಕಿ ಚ್ಚಕರೆ ಜಮೀನು ನಿಮಗೆ ಖಬ್ಬಜಾವತ್ತಿ ಕೋಡೋರಾಪಸಾತ ಕರಾರವಮಾಡಿ ತೋರಕೀಗೆ ೨೦೦೦ ರೂಪಾಯಕ್ಕೆ ನಿಮ್ಮ ಅನುಮತಿಯಂತೆ ನಿಮ್ಮ ವಿಶ್ವಾಸ ನನಗೆ ಇದ್ದದರಿಂದಾ ತಾ|| ೧೪-೩-೧೯೧೪ ನೇ ಇಸ್ವಿದಿವಸ ನಿಮ್ಮ ಪ್ಸರ್ಲಿ ಶರ್ತ ಖರೀದಿ ಅಂದರೆ ಹಣಾ ಕೊಟ್ಟಾಗ್ಗೆ ಜಮೀನು ಪರತ ಬಿಡೋ ಕರಾರಿನಿಂದಾ ಬರಕೊಟ್ಟು ಅದು ನಿಮ್ಮ ಸಲ್ಲಿಪ್ರಕಾರಾ ನೊಂದಣಿಮಾಡ್ಸಿ ಕೊಟ್ಟು ಅದರ ಬಾಬತ್ತ ಹಣಾ ನಿಮ್ಮ ಕಡೆಗೆ ಬಿಟ್ಟಿರುತ್ತೇನಷ್ಟೆ.

ಸದ್ರಿಮುರಗೆಪ್ಪಾ ಚಿಕ್ಕೇರಿ ಯವರು ತಮ್ಮ ಸಾಲಾ ತೀರಿಸಿಕೊಳ್ಳಲಿಕ್ಕೆ ಈ ದಿವಸ ವಪ್ಪಿದರು. ಅಂದರೆ ಈವತ್ತಿನಿಂದಾ ೧೫ ದಿನ್ನದಲ್ಲಿ ಅವರ ಸಾಲಾ ಚುಕ್ತಾಮಾಡಿದರೆ ಜಮೀನನ್ನು ಕಬ್ಜಾ ಬಿಡಲಿಕ್ಕೂ ವ ಹಣಾಚುಕ್ತಾ ಅಂದ ಬಗ್ಗೆ ಪಾವತಿಕೊಡಲಿಕ್ಕೂ ಮತ್ತು ಖಬ್ಬಜಾವತ್ತಿ ಪತ್ರದ ಮೇಲೆ ಭರ್ತಿಯ ಹಾಕಿ ಕೊಡಲಿಕ್ಕೂ ತಿರಾಯತ್ತದ್ದಾರರು ಅವರಿಂದಾ ನನಗೆ ವಪ್ಪಿಗೆ ಕೊಡಿಸಿರುತ್ತಾರೆ. ಆದ್ದರಿಂದಾ ನಿಮಗೆ ಈ ನೋಟೀಸು ಕೊಡೋಭಾಗಬಿತ್ತು.

ಸದರಹೂ ನಾನು ನಿಮಗೆ ತಾ|| ೧೪-೩-೧೯೧೪ ನೇ ದಿವ್ನ ನೊಂದಾಯಿಸಿ ಕೊಟ್ಟ ಶರ್ತ ಖರೀದಿ ಖತ್ತಿನಬಾಬತ್ತ ಹಣಾ ನಿಮ್ಮಕಡೆ ೧೯೨೦ ರೂಪಾಯಿ ಅಕ್ಷರದಲ್ಲೂ ಹದಿನೆಂಬನೂರಾಯಿಪ್ಪತ್ತು ರೂಪಾಯಿಗಳು ಬಿಟ್ಟಿರೋವು ಈವತ್ತಿನಿಂದಾ ಎಂಟುದಿವ್ನದೊಳಗಾಗಿ ನನಗೆ ತಂದುಕೊಡಬೇಕು. ನಾನು ನಿಮ್ಮ ಸಮಕ್ಷಮಾ ಆಹಣದಿಂದಲೇ ಸದ್ರಿ ಮುರಗೆಪ್ಪನವರ ಸಾಲ ಫೇಡಮಾಡಿ ನಿಮ್ಮ ಇಚ್ಛಾಪ್ರಕಾರ ಅವರಿಂದಾ ಹಣಾ ಫೇಡಾದ ಬಗ್ಗೆ ಕಾಗದ ಪತ್ರಗಳಮೇಲೆ ಭರ್ತಿಯಿತಗೊಂಡು ಅವು ದಾಖಲೇದ ಬಗ್ಗೆ ನಿಮಗೆ ಕೊಡುತ್ತೇನೆ ಮತ್ತು ನಿಮಗೆ ವತ್ತಿ ಬರಕೊಟ್ಟ ಜಮೀನನನ್ನು ಬಲ್ಲವರಿಂದಾ ಅಳತಿಮಾಡ್ಸಿ ಹದ್ದುಕಾಯಿಮ್ಮ ಮಾಡ್ಸಿ ಕೊಡುತ್ತೇನೆ. ಮತ್ತು ನಮ್ಮ ರೈತರಿಗೆ ಸಮಜೂತಿ ಹೇಳಿ ಅವರ ಜೋಲಿತೀರೋವರಿಗೆ ನಿಮಗೆ ಆ ಜಮೀನುವುಟ್ಟಿಗೆ ಅವರಿಂದಾ ಲಾವಣಿಚೀಟಿರಹಾ ಬರ್ಸಿಕೊಡುತ್ತೇನೆ. ಪರಂತು ಈವತ್ತಿನಿಂದಾ ಎಂಟು ದಿವಸದೊಳಗಾಗಿ ನೀವು ಯಾವತ್ತು ಹಣಾ ಕಟ್ಟಿಕೊಂಡು ಬಂದು ನನಗೆ ಕೊಟ್ಟು ಸದರಿ ಪ್ರಕಾರ ಯಾವತ್ತು ಕೆಲಸಗಳು ಚುಕ್ತಾ ಮಾಡಿಕೊಂಡು ಹೋಗಬೇಕು. ನೀವು ಎಂಟು ದಿವಸದಲ್ಲಿ ಬಾರದೆ ಸುಸ್ತಿಮಾಡಿದರೆ ಮುರಗೆಪ್ಪನವರು ಹಣಾ ತಗೊಳ್ಳಲಿಕ್ಕಿಲ್ಲಾ. ಮುಂದಿನ ಸಾಲ ಆಪ್ಪರವರಿಗೆ ಮುರಗೆಪ್ಪನವರು ನನ್ನ ಜಮೀನು ಬಿಡಲಿಕ್ಕಿಲ್ಲಾ. ಅದರಿಂದಾ ನನಗೆ ಭಾರಿ ಲುಕ್ಸಾನ ಆದೀತು. ಮುಖ್ಯ ನಿಮ್ಮಲ್ಲಿ ನಾನು ಸಾಲಾ ಮಾಡೋ ಇರಾದೆಮಾಡಿದ್ದು ಮುರಿಗಪ್ಪನವರ ಹಣಾ ತೀರಿಸಿ ಅವರ ಕಾಬಾಯಿದ್ದ ಜಮೀನು ಬಿಡಿಸೋ ಅಂಶ್ಯಾದಿಂದಲೇ ಮಾಡಿರುತ್ತೇನೆ. ಈ ನನ್ನ ಆಶ್ಯಾ ಈ ಕಾಲಕ್ಕೆ ಪೂರ್ಣ ಆಗದಿದ್ದರೆ ಮುಂದೆ ನನಗೆ ಈ ಶರ್ತ ಖರೀದಿ ಸಂಬಂಧಿ ನಿಮ್ಮಲ್ಲಿ ಹಣಾ ತಗೊಳ್ಳುವದು ಗರ್ಜಯಿಲ್ಲಾ. ಸದರಿ ಖತ್ತಿನಬಾಬತ್ತ ನಂದಿ ಕಂಟ್ರಾಕ್ಟಿಗೆ ಅಂತಾ ತಗೊಂಡ ಮಂದನೂರ ಹೊಂಭತ್ತುರೂಪಾಯಿ ನಾನು ನಿಮಗೆ ವಾಪಸು ಕೊಟ್ಟು ಬಿಡುತ್ತೇನೆ. ಅವು ತಗೊಂಡು ಆಶರ್ತ ಖರೀದಿರದ್ದಿ ಬಗ್ಗೆ ಬಾಯಿದೆ ಸೀರ ಲೇಖಾ ಬರಕೊಟ್ಟು ಅದು ವಾಪ್ಸ ನನ್ನದು ನನಗೆ ಕೊಟ್ಟುಬಿಡಬೇಕು. ಜರ ಈರೀತಿ ನೀವು ವರ್ತಿಸದಿದ್ದರೆ ಸದರಿ ಶರ್ತಖರೀದಿ ಫೋಕಳೆವಿಂತಲೇ ವ ಬಿನ್ನ ಮುಬಾದಲೆವುಳ್ಳದ್ದಂತಲೇ ತಿಳಿಕೊಳ್ಳತಕ್ಕದ್ದು. ಮುಂದೆ ಆ ಖರೀದಿ ಪತ್ರದಮೇಲಿಂದಾ ಸದರಹೂ ಜಮೀನಿನ ಮೇಲಿನಿನ್ಮ ಯಾವತರಹದ ಹಕ್ಕುವುಂಟಾಗಲಾರದು. ಅದು ರದ್ದುವ ಬಾತಿಲ್ಲಾ ಅದೆ. ಇಲ್ಲಿ ಅಬ್ಬುಮಿಯ್ಯಾ ವಲ್ದಹುಸೇಮಿಯ್ಯಾಅಸಾರ ಮಹಾಲ ಇವರ ಯಾದಗ್ಗೆ ಹೆಬ್ಬೆಟ್ಟಿನ ಗುರ್ತಿನ ರುಜು ಇದೆ.

ಬಂಕಾಪುರ, ತಾ|| ೧೪-೪-೧೯೧೮.

೫೦೦ ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರೀ ಮುರಬ್ಬಾ.

3

ಈ ಮುರಬ್ಬಾವು «ಪಂಜಾಬ್ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂಪಾಯಿಗಳು ಬಹುಮಾನ ಕೊಡಲ್ಪಡವುದು.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯಕೋಶವು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣ ಪರಿಯಂತರವೂ ದುಃಖಪಡುವರು. ಈ «ಪಂಜಾಬ್ ಸಾಲಾಮಿಸ್ರೀಮುರಬ್ಬಾ" ವಿನ ಸೇವನೆಯಿಂದ—

ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಕ್ಷಣಕ್ಷಣಕ್ಕೂ ಮೂತ್ರವಾಗುತ್ತಿದ್ದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ದೂರ ನಡೆಯುವುದರಿಂದ ಮೇಲುಬ್ಬಸ ಬರುವುದು ತಲೆಯ ನೋವೂ ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರಿಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ರಕ್ತವನ್ನು ಹೆಚ್ಚಿಸಿ ವೀರ್ಯವನ್ನು ವೃದ್ಧಿಪಡಿಸುವುದರಲ್ಲಿ ಪಂಜಾಬ್ ಸಾಲಾಮಿಸ್ರೀ ಮುರಬ್ಬಾವಿನ ಹೊರತು ಇದಕ್ಕೆ ಸಮಾನವಾದ ಔಷಧವು ಬೇರೆ ಯಾವುದೂ ಇಲ್ಲವು.

ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ತಾಂಬ್ರದ ಮತ್ತು ಭಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು. ಹೊಟ್ಟೆಯಲ್ಲಿರುವ ಜ್ವರದ ಗಡ್ಡೆಯನ್ನು ನಾಶಪಡಿಸುವುದು. ಶ್ವಾಸ ಖಾಸ ರೋಗಗಳನ್ನು ನಿರ್ಮೂಲಪಡಿಸುವುದು.

ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲ್ ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗಡ್ಡೆ, ಶಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರಿ ಎಂದು ಹೇಳಿ ಮೋಸಪಡಿಸುವರು. ಈ ಮುರಬ್ಬಾವನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾಬ್ ಸಾಲಾಮಿಸ್ರಿಯೋ ಅಥವ ಬೇರೇ ತರಹಾದ್ದೋ ಎಂಬುವುದು ಚೆನ್ನಾಗಿ ತಿಳಿದು ಬರುತ್ತೆ. ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧೫ ತೋಲಾ ಮುರಬ್ಬಾವಿರುವ ಡಬ್ಬಾ ೧ಕ್ಕೆ ರೂ ೧-೪-೦; ಟಪಾಲ್ ಖರ್ಚು ನಾಲ್ಕು ಆಣೆ ಅನುಪಾನಪತ್ರಿಕೆ ಔಷಧದ ಸಂಗಡ ಇರುತ್ತೆ.

ಅತ್ಯುತ್ತಮವಾದ ವನೌಷಧಗಳು.

೧. ಧಾತುಪುಷ್ಟಿಚೂರ್ಣ— ಕ್ರಯ ೫ ಆಣೆ.

೨. ರೋಮನಾಶಕ ಮತ್ತು ವೃಶ್ಚಿಕದಂಷ್ಟ್ರ ತೈಲವು ಚೇಳಿನ ಹೊಡತಕ್ಕೂ ಮತ್ತು ಕೂದಲು ತೆಗೆಯುವುದಕ್ಕೂ ಬಹಳ ಒಳ್ಳೆಯದು ಕ್ರಯ ೨ ಆಣೆ.

೩. ವಾತನಿವಾರಣೆ ತೈಲವು ಕ್ರಯ ೪ ಆಣೆ.

೪ ಹೊಟ್ಟೆನೋವಿಗೆ ಔಷಧ ಕ್ರಯ ೨ ಆಣೆ ೬ ಪೈ.

೫ ಕೆಮ್ಮಲು ರೋಗಕ್ಕೆ ಔಷಧ ೪ ಆಣೆ.

೬ ವ್ರಣಕ್ಕೆ ಔಷಧ ೪ ಆಣೆ.

೭ ಆಶ್ಚರ್ಯಕರವಾದ ವೀರ್ಯಸ್ಥಂಭದ ಗುಳಿಗೆ ೪ ಆಣೆ.

೮ ತಲೆನೋವಿಗೆ ತೈಲವು ೨ ಆಣೆ ೬ ಪೈ.

೯ ಪ್ರಮೇಹ ನಿವಾರಣ ಭಸ್ಮವು—೮ ಆಣೆ.

೧೦ ಉಷ್ಣಕಾರಕಕ್ಕೆ ಮಾತ್ರೆಗಳು—ರೂ. ೧.

೧೧ ಮೂಲವ್ಯಾಧಿಗೆ ಔಷಧ—೮ ಆಣೆ.

೧೨ ಕಣ್ಣಿಗೆ ಸುರ್ಮಾ—೪ ಆಣೆ.

೧೩ ದಂತಚೂರ್ಣವು—೧ ಆಣೆ ೩ ಪೈ.

೧೪ ಕೂದಲು ಬೆಳೆಯುವ ಎಣ್ಣೆ (ಒಂಬೋಲ ತೈಲ) ೪ ಆಣೆ.

ವಿಳಾಸ:— ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
೧೩, ಹಳೇ ಸಿದ್ದಿಕಟ್ಟೆ, ಬೆಂಗಳೂರು ಸಿಟಿ.

ಫಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

23

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತವುದ್ರೇಕವಾದವರು, ತೃಷೆವುಳ್ಳವರು, ದಮ್ಮಿನವರು, ಕೆಮ್ಮಿನವರ ಕಫ, ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧಿ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ:—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ

33

ದೊಡ್ಡ ಕಂಪೆನಿ ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟಿ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯು. ಎನ್. ಮತ್ತು ಕಂಪೆನಿ,
ಬನಾರಸ್ ಸಿಟಿ. (ಕಾಶೀ)

ಅಗ್ಗವಾದ ಮಾಲುಗಳು.

S.N.RUDRAKSHA & CO.
BENARES CITY.

ನಮ್ಮಲ್ಲಿ ಉತ್ತಮವಾದ ನೇಪಾಳ ರುದ್ರಾಕ್ಷಿ ಉತ್ತಮವಾಗಿಯೂ ಗಟ್ಟಿಯಾಗಿಯೂ ೪ ಮುಖದಿಂದ ೧೪ ಮುಖದ ವರೆಗೆ ಸಣ್ಣದು ದೊಡ್ಡದು ಸಹ ಈ ಎರಡು ನಮೂನೆಯಲ್ಲಿ ದೊರೆಯುವುದು. ಮತ್ತು ಇವುಗಳಲ್ಲದೆ ರೇಷ್ಮೆ ಮುಗುಟ, ಕಾಶ್ಮೀರ ಶಾಲು, ರೇಷ್ಮೆ ಜರೀಸೀರೆ, ಜರಿಕಣ, ಪೇಟ, ಮೊಳಕಾಲ್ಮುರು ನಮೂನೆ ವಸ್ತ್ರ ಜಗನ್ನಾಥ ಜಾಗಂಟೆ, ನೇಪಾಳ ಕಸ್ತೂರಿ, ಉತ್ತಮವಾದ ಜರೀ ಛಾದರ್ ಮೊದಲಾದ ಅಮೂಲ್ಯವಾದ ಸಾಮಾನು ಎಲ್ಲವರಿಗಿಂತಲೂ ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಇಚ್ಛಿಸಿದವರಿಗೆ ವಿ. ಪಿ. ಮೂಲಕ ಕಳುಹಿಸಲಾದೀತು.

ರುದ್ರಾಕ್ಷಿಗಳ ವಿವರ:—

೪ ಮುಖದ ರುದ್ರಾಕ್ಷಿ ಕಂಠಿ ಅಂದರೆ ೩೨ ಮಣಿಗಳುಳ್ಳ ಸರ ೧ ಕ್ಕೆ ೧೨ ಆಣೆಯಿಂದ ೬೦ ರೂಪಾಯಿವರೆಗೆ. ೫ ಮುಖದ ಕಂಠಿ ೧ಕ್ಕೆ ೮ ಆಣೆಯಿಂದ ೩೦ ರೂಪಾಯಿವರೆಗೆ. ೬ ಮುಖದ ಕಂಠಿ ೧ಕ್ಕೆ ೧೨ ಯಿಂದ ೧೦೦ ರೂ. ವರೆಗೆ. ೭ ಮುಖದ ಕಂಠಿ ೧ಕ್ಕೆ ೧೦ ರೂ. ಯಿಂದ ೧೫೦ ರೂ. ವರೆಗೆ. ಇದರಂತೆ ೮, ೯, ೧೦, ೧೧, ೧೨, ೧೩, ೧೪, ಈ ಮುಖಗಳ ಮಣಿ ೧ಕ್ಕೆ ೫ ರೂ. ಯಿಂದ ೩೦ ರೂ. ವರೆಗೆ. ಇದರಲ್ಲಿಯೇ ಕಂಠಿ ಬೇಕಾದರೆ ಸಹ ದೊರೆಯುವುದು. ಸಣ್ಣ ರುದ್ರಾಕ್ಷಿ ಸರ ಅಂದರೆ ೧೦೮ ಮಣಿಯಿರುವ ತೊಗರಿಯ, ಉದ್ದಿನಕಾಳು ಪ್ರಮಾಣದ ಸರ ೧ಕ್ಕೆ ರೂ. ೫ ರಿಂದ ರೂ. ೩೦ ವರೆಗೆ. ಕಡಲೆ ಕಾಳು ಪ್ರಮಾಣದ ೧೦೮ ಮಣಿಯಿರುವ ಸರ ೧ಕ್ಕೆ ರೂ. ೨-೮-೦ ಲಾಗಾಯಿತು ರೂ. ೧೦ ವರೆಗೆ. ಜಪಮಾಲೆ ನೆಲ್ಲಿಕಾಯಿಯಿಂದ ಅವರೇ ಬೀಜದ ಪ್ರಮಾಣದ ೧೦೮ ಇರುವ ಸರ ೧ಕ್ಕೆ ೧೨ ಆಣೆಯಿಂದ ರೂ. ೧೦ ವರೆಗೆ. ಸಾಧಾರಣ ತರ ೬ ಆಣೆಯಿಂದ ರೂ. ೩ ವರೆಗೆ. ಗೌರೀಶಂಕರ ರುದ್ರಾಕ್ಷಿ— ಈ ರುದ್ರಾಕ್ಷಿಯು ರುದ್ರಾಕ್ಷಿಗಳೆಲ್ಲೆಲ್ಲಾ ಶ್ರೇಷ್ಠವೆಂದು ಹೇಳುವರು. ರುದ್ರಾಕ್ಷಿ ಮಣಿ ೧ ಕ್ಕೆ ರೂ. ೫ ಲಾಗಾಯಿತು ರೂ. ೫೦ ವರೆಗೆ. ಇಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ವಿಳಾಸ— ಎಸ್. ನೇಪಾಳ ರುದ್ರಾಕ್ಷಿ ಅಂಡ್ ಕಂಪೆನಿ,
17 ಬನಾರಸ್ ಸಿಟಿ.

ದಿ ಜನರಲ್ ಏಜನ್ಸಿ, ಮೈಸೂರು.

ಕಾದಂಬರಿಗಳು :— ಚಂಡಮಾರುತ ೦-೨-೦; ಚರಿತಾಮೃತಂ ೦-೫-೦; ರಾಜಕಥಾವಲ್ಲರಿ ೦-೫-೦; ಪೀಟರಿನಚರಿತ್ರೆ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೨-೬; ಸೀತೆ ೦-೫-೦; ಸಾಹಸಿಕೆ, ಕಲಾನಾಥ ೦-೮-೦; ಮಹಾಲಕ್ಷ್ಮಿ ೦-೨-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸತ್ಯಸಂಜೀವಿನಿ ೦-೮-೦; ಕೊಹಿನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೨-೦. 35

ಬಿಸಿಲುಕಾಲದ ಆಯಾಸವನ್ನೂ ಬಾಯಾರಿಕೆಯನ್ನೂ ಪರಿಹರಿಸಿ ಮನಸ್ಸಿಗೆ ಅಪೂರ್ವವಾದ ಆನಂದವನ್ನುಂಟು

33 ಮಾಡುವುದರಲ್ಲಿ ಪ್ರಖ್ಯಾತಿಪೊಂದಿರುವ

ಬಿ. ವಿ. ಪಂಡಿತರ

ಆಮೋದಿನಿ

ವಿದ್ಯಾರ್ಥಿಗಳು, ಪ್ರಯಾಣಿಕರು, ಬೈಸಿಕಲ್‌ಸ್ವಾರಿ ಮಾಡುವವರು, ಉಪನ್ಯಾಸಕರೇ ಮೊದಲಾಗಿ ಸರ್ವರೂ ಅವಿರೋಧವಾದ ಸುವಾಸನೆಯುಳ್ಳ ಈ ಮಾತ್ರೆಗಳ ಗುಣಾತಿಶಯಗಳನ್ನು ತಮ್ಮ ಮಿತ್ರರಲ್ಲಿ ಪ್ರಚಾರಪಡಿಸುತ್ತಲಿದ್ದಾರೆ. ಸಂಗೀತಗಾರರು ಇದರಿಂದ ತಮಗುಂಟಾಗಿರುವ ಪ್ರಯೋಜನವನ್ನು ವ್ಯಕ್ತಪಡಿಸಿದ್ದಾರೆ.

ಶುದ್ಧವಾದ ವನಸ್ಪತಿಗಳಿಂದಲೇ ತಯಾರಿಸಲ್ಪಟ್ಟಿರುವ ಈ ಮಾತ್ರೆಗಳು ಸಮಸ್ತರಿಗೂ ಮಲಬಂಧ, ಹೊಟ್ಟೆನೋವು, ನಾನಾತರಹ ಕೆಮ್ಮು, ದಮ್ಮು, ಉಬ್ಬಸ, ಅಗ್ನಿಮಾಂದ್ಯ, ಅರೋಚಕ, ತಲೆನೋವು, ವಾಂತಿ, ವಾಕರಿಕೆ, ಪಿತ್ಥಸಂಕಟ, ಜಲದೋಷಗಳನ್ನು ಖಾತರಿ ಗುಣಪಡಿಸಿ ರಕ್ತಶುದ್ಧಿಯನ್ನುಂಟುಮಾಡುತ್ತವೆ. ೧೫೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಅನುಪಾನಪತ್ರಸಹಿತ ೦-೪-೦.

ಶ್ರೀಕರಕಸ್ತೂರಿಮಾತ್ರೆ.

ಈ ಮಾತ್ರೆಗಳನ್ನು ಒಂದೇವೇಳೆ ಪರೀಕ್ಷಿಸಿರಿ. ಇದರ ಗುಣ ಮತ್ತೂ ಸುವಾಸನೆಗಳು ನಿಮಗೆ ಅನುಭವವಾಗುವುವು. ಮನೆಯಲ್ಲಿ ಸಣ್ಣಮಕ್ಕಳುಗಳನ್ನುಳ್ಳವರು, ಪ್ರಯಾಣಿಕರು ಮಲೆನಾಡು ವಾಸಸ್ಥರು ಮತ್ತೂ ಸೋಂಕುರೋಗಸ್ಥಳದಲ್ಲಿರುವವರಿಗೆ ಈ ಮಾತ್ರೆಗಳು ಅಮೃತಪ್ರಾಸರಿ. ಶೀತವಾಯು, ವಿಷಮಜ್ವರಗಳು, ನಡುನೋವು, ಕೆಮ್ಮು, ಅಗ್ನಿಮಾಂದ್ಯ, ಅರೋಚಕ, ಹಲ್ಲುನೋವು, ಅಜೀರ್ಣಭೇದಿ, ಮಲಬಂಧ, ಮೈಕೈ ನೋವು ಮತ್ತೂ ಭಾರಗಳನ್ನು ಅತಿಜಾಗ್ರತೆ ಗುಣಪಡಿಸುತ್ತವೆ. ವಿಶದವಾದ ಅನುಪಾನ ಪತ್ರಸಹಿತ ೨೫೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೦-೪-೦ ನಾಲ್ಕಾಣೆ ಬೆಲೆ ಬಾಳುವ ಐದು ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಒಂದು ಇನಾಮು. ಟ. ಖ. ಪ್ರತ್ಯೇಕ. ಕ್ಯಾಟಲಾಗನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ— ಕೆ. ವಿ. ನಾರಾಯಣರಾವ್,
ಮ್ಯಾನೇಜರ್, ಸದ್ವೈದ್ಯಶಾಲಾ,
ಸಂಜನಗೂಡು, ಮೈಸೂರ್ ಡಿ

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕಯ್ಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡ ಪಲ್ಲಕ್ಕಿ ಉತ್ಸವದ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸನತೊಳುಸಹಿತ ಆದ ಸಮಾರಂಭದ ಫೋಟೋ ೧ ಕ್ಕೆ ಕ್ರಯ ೧ ರುಪಾಯಿ

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಾವಮಾದಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲಸೈಜು ಬಣ್ಣದ್ದು ೧|| ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೋ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೋ ೧ ಕ್ಕೆ ಕ್ರಯ ಫುಲ್ಲಸೈಜು ೧ ರುಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀ ಜಗದ್ಗುರು ತೋಂಟದಾರ್ಯ ಗದಗ, ಶ್ರೀ ಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ಸತ್ಪುರುಷಮಾಲಾ, ಹಾಳಕೇರಿ ಆನಂದಸ್ವಾಮಿಯ ಫೋಟೊ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೊ ಸಿಗುತ್ತವೆ. ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ

ಹೊಸಫ್ಯಾಷನ್—ಸಭ್ಯಗೃಹಸ್ಥರು ಗಡಿಯಾರ ಸರ್ಪಳಿಗೆ ಹಚ್ಚುವಲಾಕೇಟುಗಳೂ, ಯಿದರಲ್ಲಿ ಹಿಂದೆ ಮುಂದೆ ಇಪ್ರಕಾರ ೨ ಫೋಟೊ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ||, |||=, ೧, ೧|, ಪ್ರಕಾರ, ಮತ್ತೂ ಬೆಳ್ಳಿದು ರು ೧|| ರೋಲ್ಡ್ ಗೋಲ್ಡು ಭಂಗಾರದ್ದು ದುರ್ಬಿಣದ ಗ್ಲಾಸದೂ ಕ್ರಯ ೨||, ೨||| ರೂ

ಪ್ರತಿಊರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ಧಾಣೆ ಟಿಕೀಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿರಿ. ನಮ್ಮವಿಳಾಸ – ಗಂಗಪ್ಪಾ ಜೇರಿಗೆ.

10 ಆರ್ಟಿಸ್ಟ್, ಸೊಲ್ಲಾಪುರ

ಊದಬತ್ತಿಗಳು.

4

ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ ೧೨-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪ ಟಿನ್ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಸುಗಂಧಕಾರಿ, ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚೆನ್ನದ «ಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೪-೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧ ರೂ. ಕೊಡಬೇಕಾಗುವುದು. ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೬-೦ ಯನ್ನೂ, ೧೦೦ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦-೮-೦ ಆಣೆಯಂತೆ ಕಳುಹಬೇಕು. ಕ್ಲಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ವಿಶೇಷ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರ್ ಪ್ರೆಸ್, ಮೈಸೂರ್.

ಸಮಸ್ತ ವೀರಶೈವಬಾಂಧವರಿಗೆ ವಿದಿತಪಡಿಸುವುದೇನೆಂದರೆ— ಕಳೆದವರ್ಷ ನಿಪ್ಪಾಣಿಯಲ್ಲಿ ಕೂಡಿದ್ದ ೩ ನೆಯ ವೀರಶೈವಮಹಾಸಭೆಯ ರಿಪೋರ್ಟು ಬುಕ್ಕುಗಳು ಮುದ್ರಿತವಾಗಿ ಕ್ರಯಕ್ಕೆ ಸಿದ್ಧವಾಗಿರುವುವು ಈ ಸಾರೆಯ ಬುಕ್ಕುಗಳು ಒಳ್ಳೆಯ ಅಚ್ಚುಕಟ್ಟಾಗಿಯೂ ಬರೆದಿದ್ದು, ಅದರಲ್ಲಿ ನಮ್ಮ ಸಮಾಜದ ಆಧಾರಸ್ತಂಭಗಳಂತಿರುವ ಪ್ರತಿಯೊಬ್ಬ ಮುಖಂಡರ ಭಾವಚಿತ್ರಗಳೂ ಪ್ರತ್ಯೇಕವಾಗಿ ಸೇರಿಸಲ್ಪಟ್ಟಿರುವುವು. ಮೇಲಾಗಿ ಪ್ರತಿಗಳು ವಿಕ್ರಯಕ್ಕೆ ಒಂದೇ ನೂರು ಇರುವುದರಿಂದ ಹಿಂದಿನಿಂದ ಬೇಡುವವರಿಗೆ ಪ್ರತಿಗಳು ನಿಶ್ಚಯವಾಗಿ ಸಿಗಲಾರವು. ಕಾರಣ, ಇಷ್ಟವುಳ್ಳವರು ಮುಂಚಿತವಾಗಿಯೇ ಸ್ಪಷ್ಟವಾದ ಪತ್ರಿಯಿಂದ ಆರ್ಡರು ಕಳುಹಿಸಬಹುದು.

ಶಿವಮೂರ್ತಿಸ್ವಾಮಿ ಕಣಬರಗಿಮಠ,
ಚೇರ್ಮನ್, ಸ್ವಾಗತಕಮಿಟಿ,
೩ ನೆಯ ಮಹಾಸಭೆ ನಿಪ್ಪಾಣಿ.

ಪರಿಮಳದ್ರವ್ಯಗಳು.

ನಮ್ಮಲ್ಲಿ ಬಹುಕಾಲದಿಂದಲೂ ಅತ್ಯುತ್ತಮವಾಗಿ ತಯಾರಾಗುತ್ತಿರುವ ಊದುಬತ್ತಿಗಳು ಸೇರು ೧ ಕ್ಕೆ ೪ ಆಣೆಯಿಂದ ೧೦ ರೂ. ವರೆಗೂ ದೊರೆಯುವುವಲ್ಲದೆ, ನಾನಾತರದ ಗಂಧದಬಿಲ್ಲೆಗಳು, ಜವಾಜಿಗಂಧ ಅಥವಾ ಅರಗಜ, ಪುನುಗು, ಜವಾಜಿ, ದಶಾಂಗ, ಧೂಪದಕಡ್ಡಿ ಮೊದಲಾದ ಸುಗಂಧದ್ರವ್ಯಗಳೂ, ಮಲ್ಲಿಗೆ-ಸಂಪಗೆ-ರೋಜಾ ಮೊದಲಾದ ಅತ್ತರುಗಳೂ ಮತ್ತೂ ಭೃಂಗಾಮಲಕತೈಲ ಮೊದಲಾದುವುಗಳೂ ಬಿಕರಿಗೆ ಸಿದ್ಧವಾಗಿರುವುವು. ಅಪೇಕ್ಷಕರು ೫ ರೂ. ಗೆ ಕಡಿಮೆಯಿಲ್ಲದಂತೆ ಆರ್ಡರನ್ನು ಕೊಡಬೇಕು. ಇನ್ನೂ ಹೆಚ್ಚು ವಿಷಯಗಳನ್ನು ತಿಳಿಯತಕ್ಕವರು ನಮ್ಮ ಕ್ಯಾಟಲಾಗನ್ನು ತರಿಸಿ ನೋಡಬಹುದು. 35

ವಿಳಾಸ— ಎಸ್. ಕಳ್ಳೆಪ್ಪ, ಊದುಬತ್ತಿಷಾಪ್,
ದೊಡ್ಡಪೇಟೆ, ಬೆಂಗಳೂರು ಸಿಟಿ

23 ಸಚಿತ್ರ ಶುಕಸಪ್ತತಿ ಕಥೆಗಳು ರೂ. ೧-೮-೦ (೫೧೨ ಪುಟ) ಟಪಾಲು ಹಾಸಲು ೪ ಆಣೆ. ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ ರೂ ೧-೮-೦. (೫೭೩ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ! ಮಾನ್ಯತೆಯು ಬೇಕಾದರೆ, ವಾಗ್ವೈಖರಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಬೇಕೆಂದಿದ್ದರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಅತ್ಯಾನುಕಶಕ್ತಿಯುಲ್ಲಾಸವಿದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೩೦ ಪುಟಗಳಿಂದ ಕೂಡಿದ ೬೮ ಕಥೆಗಳುಳ್ಳ ನೋಡಲು ಸೊಗಸಾದ ದೈಂಡಿನ ಪುಸ್ತಕವಾಗಿದೆ. ಬೆಲೆ ರೂ ೧-೪-೦ ಟಪಾಲ್ ಹಾಸಲು ೩ ಆಣೆ.

ಅಗಲೇ ಬರೆ ನಿಮ್ಮಲ್ಲಿ ಇನ್ನೂ ಅನೇಕಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸಚಿತ್ರ ಶುಕಸಪ್ತತಿ ಕಥೆಗಳು

ಶುಕಮಹರ್ಷಿಗಳು ಲೋಕದಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತಭಾಷೆಯಲ್ಲಿ ಹೇಳಿರುವರು ಈ ಕಥೆಗಳನ್ನು ಭಾಷಾಂತರ ಮಾಡಿ ಕನ್ನಡದಲ್ಲಿ ರಚಿಸಿದೆ. (1) ಗೃಹಸ್ಥಾಶ್ರಮದಲ್ಲಿ ಆವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವುದು. (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತರಹಸ್ಯಗಳನ್ನೂ, ಬುದ್ಧಿಚಾಂಚಲ್ಯನಿವಾರಣೆ ಮುಂತಾದ್ದನ್ನೂ ತಿಳಿಸುವುದು. (3) ಸ್ತ್ರೀ ಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ ವಿವಿಧನೀತಿ ಮುಂತಾದುವುಗಳನ್ನು ಬೋಧಿಸುವುದು. (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವುದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವುದು. (5) ಅಲ್ಲಲ್ಲಿ ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುವುದರಿಂದ ಓದುಬಾರದವರಿಗೂ ಮನೋರಂಜಿತವಾಗಿರುವುದು. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ, ಇದರ ಕ್ರಯ ಪ್ರತಿ ೧ಕ್ಕೆ ೧-೮-೦; ಟಪ್ಪಾಲು ಹಾಸಲು ೪ ಆಣೆ.

(೩೪ ಸಂಧಿಗಳು) ಸಟೀಕಾ ತಾತ್ಪರ್ಯ ಜೈಮಿನೀ ಭಾರತವು. (೯೩೦ ಪುಟಗಳು)

ಇದರ ಕ್ರಯ ಪ್ರತಿ ೧ ಕ್ಕೆ ರೂ. ೪-೦-೦; ಟಪಾಲು ಹಾಸಲು ೧೦ ಆಣೆ.

ಇವಲ್ಲದೆ ಇನ್ನೂ ಅನೇಕ ಕನ್ನಡಗ್ರಂಥಗಳು ದೊರೆಯುತ್ತವೆ ಪುಸ್ತಕಗಳ ಪಟ್ಟಿಗೆ ಬರೆದರೆ ಉಚಿತವಾಗಿ ಕಳಿಸುವೆವು

40 ನಮ್ಮ ವಿಳಾಸ— ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ.

ಶಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು 1

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೊತೆತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಉಗ್ಗು, ನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ— ೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾಔಷಧಿ.)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈವಿಟ್ಟಾರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇನ್ನೊಂದು ಬುದ್ದಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತವಿದೊಂದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುದ್ದಿಯ ಬೆಲೆ ೧—೦—೦.
ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ. ಮೈಸೂರು

ನ್ಯಾಯದರ್ಪಣ. 16

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯು, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಫ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸೂ, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆಚರಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ವಗೈರೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯು ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿಇರುತ್ತವೆ.

ಬೆಲೆ ರೂ. 1—8—0. ವಿ. ಪಿ. ಮೂಲ್ಯ 1—12—0.

ಎಂ. ಎಸ್. ನಂಜಪ್ಪನವರು,
ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ)ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾಗಿದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚಿಟಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜನ್ ಡಬ್ಬಿಗೆ ೧-೧೪-೦

ಉತ್ತಮವಾದ ನಶ್ಯದಪುಡಿ.

ಘಾಟು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಲ್ಲ ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವೆ. ನೀವುಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,
ಗೋಪನಸೆಟ್ಟಿಪೂರು, ಹನೂರು ಪೋಸ್ಟ್
12 ಕೊಳ್ಳೇಗಾಲದ ತಾಲ್ಲೂಕು.

೧೯೧೪ ನೆಯ ಇಸವಿ ಮೇ ತಾ॥ ೧೧ ರಿಂದ ೧೯೧೪ ನೆಯ ಮೇ ತಾ॥ ೧೭ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೩೬ ನೆಯ ಆನಂದನಾಮ ಸಂ॥ ದ ವೈಶಾಖ ಬ॥ ಬಿದಿಗೆಯಿಂದ ವೈಶಾಖ ಬ॥ ಅಷ್ಟಮಿವರೆಗಿನ ಪಂಚಾಂಗ.

ತಾ॥	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ತೇದಿ ಮೇ
11	ಸೋ	ಬಿ	41-15	ಅನೂ	20-26	29
12	[1] ಮಂ	ತ	37- 4	ಜ್ಯೇ	17-53	30
13	ಬುಧ	ಚ	33-48	ಮೂ	16- 9	31
14	[2] ಗುರು	ಪಂ	31-37	ಪೂಷಾ	15-27	1
15	ಶುಕ್ರ	ಷ	30-37	ಉತ್ತಷಾ	15-52	2
16	[3] ಶನಿ	ಸ	30-54	ಶ್ರ	17-34	3
17	ಭಾ	ಅ	32-24	ಧ	20-32	4

(1) ಸಂಕಟಹರ ಚತುರ್ಥಿ. (2) ಮೇ॥ ನೃಸಿಂಹಸ್ವಾಮಿ ರಥ. (3) ಮೇಲುಕೋಟೆಯಲ್ಲಿ ಪಲ್ಲಕ್ಕೋತ್ಸವಾರಂಭ

ಮೈಸೂರ್ ಮೈ ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED M NO124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ವಾರ್ಷಿಕ ಚಂದಾ ೧—೦—೦ } ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತ್ಯಾ ಘನಪಥಕೃತಾವತಾರಾ ಪಶ್ಯಜ್ಜನಪ್ರವೃತ್ತಿಮೋಹರಾಜೇಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಳಿತಸಾದ್ಗುಣ್ಯಾಲವಾಲಂವಲಂ॥
ಸೀಮಾತೀತಯಶಃಪ್ರತಾಪವಿಪುಲಂಸದ್ವೃತ್ತಮಾಲಾಕುಲಂ । ಪ್ರೇಮಂಪೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ॥ { ಅಂಚೆವೆಚ್ಚ ಸೇರಿ ೧—೧೪—೦

REGISTERED M NO. 124

ಸಂಪುಟ ೨೩) ಮೈಸೂರ್ ಸ್ಟಾರ್ ಸರ್ ೧೯೧೪ ನೆಯ ಇಸವಿ ಮೇ ತಾರೀಖು ೧೮ ನೆಯ ಸೋಮವಾರ. (ಸಂಚಿಕೆ ೨೦

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಈ ಪತ್ರಿಕೆಯ ಚಂದಾದಾರರೆಲ್ಲರಿಗೂ ಅಚ್ಚಬೆಳ್ಳಿಯ ಸರಪಣಿ ಬಹುಮಾನ ಕೊಡಲಾಗುತ್ತೆ.



16 ಈ ಲಾಗಾಯಿತು ೨ ತಿಂಗಳುಮಾತ್ರ.

ಪದ್ಧತಿಯಮೇರೆ ಹೊಸವರ್ಷದ ಯುಗಾದಿಹಬ್ಬದಲ್ಲಿ ಬಹುಮಾನಿಸುವುದಕ್ಕಾಗಿ 2000 ಅಚ್ಚಬೆಳ್ಳಿಯ ಕೊರಳ ಸರಪಣಿಗಳನ್ನು ಸೀದಾ ಸೀಮೆಯಿಂದ ತರಿಸಿರುತ್ತೇವೆ.

ಪ್ಯಾನ್ಸಿಡೈಲ್ ಲೈವ್ ರೆಗ್ಯುಲೇಟರ್ ವಾಚ್ ೧ಕ್ಕೆ ಕ್ರಯ 3-8-0 ಪೋಸ್ಟೇಜು 0-4-0

ಈ ಲಾಗಾಯಿತು ೨ ತಿಂಗಳೊಳಗಾಗಿ ಮೇಲ್ಕಂಡ ಒಂದು ವಾಚ್ ತರಿಸತಕ್ಕವರಿಗೆ ಒಂದು ಅಚ್ಚಬೆಳ್ಳಿಯ ಕೊರಳ ಸರಪಣಿ ಬಹುಮಾನಕೊಡಲಾಗುತ್ತೆ.

ಮುಗಿದನಂತರ ಸಿಕ್ಕದೇ ವ್ಯಸನಪಡುವುದಕ್ಕಿಂತಲೂ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳುವುದುತ್ತಮ.

ತಯಾರಿ ಹೊಸತರಹ! ಪದಾರ್ಥ ಅತ್ಯುತ್ತಮ!! ಬೆಲೆ ಬಹಳಸುಲಭ!!!

ಬಜಾರಿನಲ್ಲಿ ಸಿಕ್ಕಿದ ಶಾಯಿಪುಡಿಯನ್ನು ಅಗ್ಗವಾಗಿ ಸಿಕ್ಕುತ್ತೆಂದು ಉಪಯೋಗಿಸಿ ನಿಮ್ಮ ಬರವಣಿಗೆಯನ್ನು ಕೆಡಿಸಿಕೊಳ್ಳಬೇಡಿರಿ. ಈ ಕೆಳಭಾಗದಲ್ಲಿ ಕಂಡ ನಮ್ಮ ಶಾಯಿಪುಡಿಯನ್ನು ಒಂದುಸಾರಿ ಪರೀಕ್ಷಿಸಿರಿ.

"ನ್ಯಾಷನಲ್ ಬ್ಲೂಬ್ಲಾಕ್ ಇಂಕ್‌ಪೌಡರ್" ೧ ಪೊಟ್ಟಣ ಪುಡಿಯಲ್ಲಿ ೨೦ ಔನ್ಸು ಅಂದರೆ ॥ ಸೇರು ಅತ್ಯುತ್ತಮವಾದ ಬ್ಲೂಬ್ಲಾಕ್ ಶಾಯಿಯಾಗುತ್ತೆ. ಪೊಟ್ಟಣ ೧ ಕ್ಕೆ ಕ್ರಯ ೦-೨-೦. ಒಂದು ಡಜನ್ ಪೊಟ್ಟಣಗಳಿಗೆ ೧-೫-೦ ಪ್ಯಾಕಿಂಗ್ ಪೋಸ್ಟೇಜು ಮಾಫಿ. ಪರಸ್ಥಳಕ್ಕೆ ಒಂದು ಡಜನ್ ಪೊಟ್ಟಣಗಳಿಗಿಂತಲೂ ಕಡಿಮೆ ರವಾನಿಸಲಾಗುವುದಿಲ್ಲ

ಜುಮಲೆ ಇದೊಂದು ಆಶ್ಚರ್ಯಕರವಾದ ಹೊಸ ಕಾದಂಬರಿ (ಬಂಗಾಳಿ ನಾವೆಲ್) ಓದುವುದಕ್ಕೆ ಕುಳಿತರೆ ಮುಗಿರುವವರೆಗೂ ಮನಸ್ಸು ನಿಲ್ಲುವುದಿಲ್ಲ. ಓದುತ್ತ ಓದುತ್ತಾ ಹೊಸಹೊಸ ಭಾವಗಳು ತಲೆದೋರಿ ರೋಮಾಂಚವುಂಟಾಗುವುದು.

ವಾಠಕರೆ! ಗೋರಿಯಲ್ಲಿದ್ದ ಹೆಂಗಸಿನ ಶವಕ್ಕೆ ಪ್ರತಿಯಾಗಿ ಗಂಡುಸಿನ ಶವವಿರುವುದನ್ನು ನೋಡುತ್ತಲೇ ಆಶ್ಚರ್ಯಸಮುದ್ರದಲ್ಲಿ ಮುಳುಗಿಹೋಗುವಿರಿ. ಕ್ರಯ ಪ್ರತಿ ೧ ಕ್ಕೆ ೦-೬-೦ ಪೋಸ್ಟೇಜು ಅಲಾಯಿದಾ.

ವೇ॥ ತಿಪ್ಪಯ್ಯಶಾಸ್ತ್ರಿಗಳಿಂದ ವಿರಚಿತವಾದ ೪ ಹೊಸಪುಸ್ತಕಗಳು.
ವೀರಶೈವರಿಗೂ ಇತರರಿಗೂ ಸಹ ಅತ್ಯವಶ್ಯಕಬೇಕಾದ್ದು

(೧) ಶತಕಪಂಚಕ— ಈ ಪುಸ್ತಕದಲ್ಲಿ ೫ ಶತಕಗಳಿವೆ. ನಿರಂಜನಶತಕ, ಸಿದ್ಧಲಿಂಗೇಶ್ವರಶತಕ, ನಿಷ್ಕಲಶತಕ, ಉಮಾಮಹೇಶ್ವರ ಶತಕ, ಸಂಗಮೇಶ್ವರ ಶತಕ, ೧-೨-೩ ನೇ ಶತಕಗಳು ವೀರಶೈವಪರಮರಹಸ್ಯ ಶಿವರಹಸ್ಯ ಮುಂತಾದುವುಗಳಿಂದಲೂ ೪-೫ ನೇ ಶತಕಗಳು ಪಾರಾಯಣಕ್ಕೆ ಯೋಗ್ಯವಾಗಿಯೂ ಇವೆ. ಇಷ್ಟು ಸೌಖ್ಯವುಳ್ಳ ಪುಸ್ತಕ ೧ ಕ್ಕೆ ಕ್ರಯ ೦-೬-೦.
(೨) ಮನೋವಿಜಯ— ಸರ್ವರಿಗೂ ಅತ್ಯವಶ್ಯಕವಾದ ಪುಸ್ತಕ ಕ್ರಯ ೦-೮-೦.
(೩) ಬಸವೇಶ್ವರಸ್ತೋತ್ರ— ಕ್ರಯ ಪ್ರತಿ ೧ ಕ್ಕೆ ೦-೩-೦.
(೪) ಮುಕ್ತ್ಯಾಂಗನಕಂಠಮಾಲೆ— ಕ್ರಯ ಪ್ರತಿ ೧ಕ್ಕೆ ೦-೪-೦ ಪೋಸ್ಟೇಜು ಅಲಾಯಿದಾ.

ಈಗತಾನೇ ಸೀಮೆಯಿಂದ ಬಂದಿರತಕ್ಕ ಟೇಬಿಲ್ ಗಡಿಯಾರಗಳು.

ಸರ್ವರೂ ತರಿಸಿಕೊಳ್ಳಲು ಇದು ಒಳ್ಳೆಸಮಯ.

ಈ ಪಕ್ಕದ ಚಿತ್ರದಲ್ಲಿ ಕಾಣಿಸಿರುವ ಟೇಬಿಲ್ ಗಡಿಯಾರವು ಬಲವಾದ ಯಂತ್ರೋಪಕರಣಗಳಿಂದಲೂ ಒಳಭಾಗದ ಸಾಮಾನು ಕಾಣುವಂತೆ ೨ ಪಕ್ಕದಲ್ಲಿಯೂ ಕನ್ನಡಿಗಳನ್ನಿಟ್ಟು ಗಟ್ಟಿಯಾದ ನಿಕ್ಕಲ್ ಲೋಹದಿಂದ ಥಳಥಳಿಸುವಂತೆ ಖಚಿತವಾಗಿ ತಯಾರ್ಮಾಡಿರುವುದಲ್ಲದೆ ಮೇಲುಭಾಗದಲ್ಲಿ ಬಂದೋಬಸ್ತಾದ ಹಿಡಿಯನ್ನೂ ಸಹ ಇಟ್ಟಿರುತ್ತೆ.

(೧) ಘಂಟೆ ಅರ್ಧಘಂಟೆ ಹೊಡೆಯತಕ್ಕ ಕ್ಲಾಕ್ ೧ ಕ್ಕೆ ೪-೮-೦
(೨) ಘಂಟೆ ಅರ್ಧಘಂಟೆ ಹೊಡೆದು ಅಲಾರಂ ಸಹ ಇರತಕ್ಕ ಕ್ಲಾಕ್ ೫-೪-೦
(೩) ಘಂಟೆ ಹೊಡೆಯುವುದಕ್ಕೆ ಪ್ರತಿಯಾಗಿ ಪ್ರತಿಘಂಟೆಗೂ ಮೃದುಮಧುರಗಾನಮಾಡತಕ್ಕ ಕ್ಲಾಕ್ ೧ ಕ್ಕೆ ೫-೮-೦
(೪) ತಾವಿಷ್ಟಪಟ್ಟ ಘಂಟೆಗೆ ಸರಿಯಾಗಿ ಕರ್ಣಾನಂದವಾಗುವಂತೆ ಮೃದುಮಧುರಗಾನಮಾಡತಕ್ಕ ಕ್ಲಾಕ್ ೫-೮-೦

ಕಾಗದ ಬರಿಯತಕ್ಕವರು ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರಿಯಬೇಕಾಗಿ ಕೋರಿಕೆ. ತಿಳಿಯದೇ ಇರತಕ್ಕ ವಿಳಾಸಗಳಿಗೆ ನಾವು ನಿಗಾಕೊಡುವುದಿಲ್ಲವೆಂಬಂಶವನ್ನು ಸರ್ವರೂ ಗಮನಿಸತಕ್ಕದ್ದು.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್. ಕೃಷ್ಣರಾಜಮೊಹಲ್ಲಾ. ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೫—೦
ಸಟೀಕ ನಂದೀವ್ರತ	೦—೪—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್‌ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸಪುಸ್ತಕಗಳು.

185

ಬಸವರಾಜವಿಜಯಂ— ಬೆಲೆ ೧ ೪-೦. ಬಾಲಕರು ಕೂಡ ಸುಲಭವಾಗಿ ತಿಳಿದುಕೊಳ್ಳುವಂತೆ ವಿಷಯಗನ್ನಡ ರೀತಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲಕ್ರಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧ ೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿ.— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಕಸ್ಸೋತ್ರಿ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ ೧ ನೆ ಪ್ರಕರಣಕ್ಕೆ ೧-೩-೦ ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸೂಕ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ ವರ್ಷದ ಚಂದಾ ೨-೮-೦.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸಮಸ್ತ ವೀರಶೈವಬಾಂಧವರಿಗೆ ವಿದಿತಪಡಿಸುವುದೇನೆಂದರೆ... [illegible] ... ಶಿವಮೂರ್ತಿಸ್ವಾಮಿ ಕಣಬರಗಿಮಠ, ಬೆಳಗಾಂ ... ೭ ನೆಯ ಮಹಾಸಭೆ ನಿಬ್ಬಣಿ.

ವರಿ ಮು ಳ ದ ದ್ರ ವ್ಯ ಗ ಳು.

ನಮ್ಮಲ್ಲಿ ... [illegible] ... ವಿಳಾಸ— ಎಸ್. ಕಳ್ಳಪ್ಪ, ಉದಬತ್ತಿ ಷಾಪ್, ದೊಡ್ಡಪೇಟೆ, ಬೆಂಗಳೂರು ಸಿಟಿ.

35

ನ್ಯಾಯದರ್ಪಣ. 16

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯೂ, ಹಿಂದೂಲಾ ವಿಷಯವಾದ ಸಮಸ್ತ ... [illegible] ... ಬೆಲೆ ರೂ. 1—8—0. ವಿ. ಪಿ. ಮೂಲ್ಯ 1—12—0.

ಎಂ. ಎಸ್. ನಂಜಪ್ಪನವರು, ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

23 ಸಚಿತ್ರ ಶುಕಸಪ್ತತಿ ಕಥೆಗಳು ... ರೂ. ೧—೪—೦ ... ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ ... ರೂ ೧—೪—೦.

ಸಚಿತ್ರ ವಿದ್ಯಾಮಂಜರಿ ಕಥೆಗಳು

[illegible] ... ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸಚಿತ್ರ ಶುಕಸಪ್ತತಿ ಕಥೆಗಳು

[illegible] ... ನಮ್ಮ ವಿಳಾಸ— ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಸ್ ಪಬ್ಲಿಷರ್ಸ್, ಬೆಂಗಳೂರು ಸಿಟಿ.

40

ಗಂಧರಾಜ ನಸ್ಯದಪುಡಿ.

[illegible]

ಉತ್ತಮವಾದ ನಶ್ಯದಪುಡಿ.

[illegible] ... ಗೆ ೧—೧೪—೦ ಟಪಾಲ್‌ಖರ್ಚ ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ, ಗೋಪಸೆಟ್ಟಿಪುರ, ಹನೂರು ಪೋಸ್ಟ್, ಕೊಳ್ಳೇಗಾಲದ ತಾಲ್ಲೂಕು.

12

೧೯೧೪ ನೆಯ ಇಸವಿ ಮೇ ತಾ॥ ೧೧ ರಿಂದ ೧೯೧೪ ನೆಯ ಮೇ ತಾ॥ ೧೭ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ ನೆಯ ಆನಂದನಾಮ ಸ॥ ದ ವೈಶಾಖ ಬ॥ ಬಿದಿಗೆಯಿಂದ ವೈಶಾಖ ಬ॥ ಅಷ್ಟಮಿವರೆಗಿನ ಪಂಚಾಂಗ.

ತಾ॥	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ಸೌರಿ ಮೇ
11	ಸೋ	ಬಿ	41-15	ಅನೂ	20-26	29
12	[1] ಮಂ	ತ	37- 4	ಜ್ಯೇ	17-53	30
13	ಬುಧ	ಚ	33-48	ಮೂ	16- 9	31
14	[2] ಗುರ	ಪಂ	31-37	ಪೂಷಾ	15-27	1
15	ಶುಕ್ರ	ಷ	30-37	ಉತ್ತಷಾ	15-52	2
16	[3] ಶನಿ	ಸ	30-54	ಶ್ರ	17-34	3
17	ಭಾ	ಅ	32-24	ಧ	20-32	4

(1) ಸಂಕಟಹರ ಚತುರ್ಥಿ. (2) ಮ॥ ನೃಸಿಂಹಸ್ವಾಮಿ ರಥ. (3) ಮೇಲುಕೋಟೆಯಲ್ಲಿ ಪಲ್ಲಕ್ಕಿ ಉತ್ಸವಾರಂಭ.

ಮೈಸೂರ್ ... ವೈ ವಿರೂಪಾಕ್ಷಯ್ಯನವರಿಂದ ಸ್ಟಾರ್ ... ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಬಳ್ಳಾರಿ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು 1



[illegible]

ವೈಶ್ವಾನರಾಸವ (ಕಾಲರಾಔಷಧಿ)

[illegible] ... ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

REGISTERED M NO124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ವಾರ್ಷಿಕ ಚಂದಾ ೧—೦—೦ } ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತ್ರೈ ಘನಪಥಕೃತಾವತಾರಾ ಪಕ್ಷ್ಯಾಣಸಪ್ತತ್ತ್ವೋಹರಾಜೇಯಾತ್ । ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಬಾಧ್ವಕ್ಕಾಲಪಾಲಂಮಲಂ॥ ಸೀಮಾತೀತಯಶಃಪ್ರತಾಪವಿಪುಲಂಸದ್ವೃತ್ತಮಾಲಾಕುಲಂ । ಪ್ರೇಮಂಬಿತ್ತಿಕೆಯಂಸದಾಪೊರೆಗೆ ಗೌರೀಕಾನುಕಂಪೋಜ್ವಲಂ॥ { ಅಂಚೆವೆಚ್ಚ ಸೇರಿ ೧—೧೪—೦

REGISTERED M NO. 124

ಸಂಪುಟ—೨೩) ಮೈಸೂರ್ ಸ್ಟಾರ್ ಸರ್ ೧೯೧೪ ನೆಯ ಇಸವಿ ಮೇ ತಾರೀಖು ೧೮ ನೆಯ ಸೋಮವಾರ. (ಸಂಚಿಕೆ ೨೦

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಈ ಪತ್ರಿಕೆಯ ಚಂದಾದಾರರೆಲ್ಲರಿಗೂ ಅಚ್ಚ ಬೆಳ್ಳಿಯ ಸರಪಣಿ ಬಹುಮಾನ ಕೊಡಲಾಗುತ್ತೆ.

16

ಈ ಲಾಗಾಯಿತು ೨ ತಿಂಗಳುಮಾತ್ರ.

ಪದ್ಧತಿಯಮೇರೆ ಹೊಸವರ್ಷದ ಯುಗಾದಿಹಬ್ಬದಲ್ಲಿ ಬಹುಮಾನಿಸುವುದಕ್ಕಾಗಿ 2000 ಅಚ್ಚಬೆಳ್ಳಿಯ ಕೊರಳ ಸರಪಣಿಗಳನ್ನು ಸೀದಾ ಸೀಮೆಯಿಂದ ತರಿಸಿರುತ್ತೇವೆ.

ಪ್ರ್ಯಾನ್ಸಿಫೈಲ್ ಲೈಫ್ ರೆಗ್ಯುಲೇಟರ್ ವಾಚ್ ೧ಕ್ಕೆ ಕ್ರಯ 3-8-0 ಪೋಸ್ಟೇಜು 0-4-0

ಈ ಲಾಗಾಯಿತು ೨ ತಿಂಗಳೊಳಗಾಗಿ ಮೇಲ್ಕಂಡ ಒಂದು ವಾಚ್ ತರಿಸತಕ್ಕವರಿಗೆ ಒಂದು ಅಚ್ಚ ಬೆಳ್ಳಿಯ ಕೊರಳ ಸರಪಣಿ ಬಹುಮಾನಕೊಡಲಾಗುತ್ತೆ.

ಮುಗಿದನಂತರ ಸಿಕ್ಕದೇ ವ್ಯಸನಪಡುವುದಕ್ಕಿಂತಲೂ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳುವುದುತ್ತಮ.

ತಯಾರಿ ಹೊಸತರಹ! ಪದಾರ್ಥ ಅತ್ಯುತ್ತಮ!! ಬೆಲೆ ಬಹಳಸುಲಭ!!!

ಬಜಾರಿನಲ್ಲಿ ಸಿಕ್ಕಿದ ಶಾಯಿಪುಡಿಯನ್ನು ಅಗ್ಗವಾಗಿ ಸಿಕ್ಕುತ್ತೆಂದು ಉಪಯೋಗಿಸಿ ನಿಮ್ಮ ಬರವಣಿಗೆಯನ್ನು ಕೆಡಿಸಿಕೊಳ್ಳಬೇಡಿರಿ. ಈ ಕೆಳಭಾಗದಲ್ಲಿ ಕಂಡ ನಮ್ಮ ಶಾಯಿಪುಡಿಯನ್ನು ಒಂದುಸಾರಿ ಪರೀಕ್ಷಿಸಿರಿ.

"ನ್ಯಾಷನಲ್ ಬ್ಲ್ಯೂಬ್ಲ್ಯಾಕ್ ಇಂಕ್‌ಪೌಡರ್" ... [illegible]

ಜೂಮಲೆ ... [illegible]

ವಾಚಕರೇ! ... [illegible]

ವೇ॥ ತಿಪ್ಪಯ್ಯಶಾಸ್ತ್ರಿಗಳಿಂದ ವಿರಚಿತವಾದ ೪ ಹೊಸಪುಸ್ತಕಗಳು.

(೧) ಶತಕಪಂಚಕ— ... [illegible]

(೨) ಮನೋವಿಜಯ— ಸರ್ವರಿಗೂ ಅತ್ಯಾವಶ್ಯಕವಾದ ಪುಸ್ತಕ ಕ್ರಯ ೦—೪—೦.

(೩) ಬಸವೇಶ್ವರಸ್ತೋತ್ರ— ಕ್ರಯ ಪ್ರತಿ ೧ಕ್ಕೆ ೦—೩—೦.

(೪) ಮುಕ್ತ್ಯಾಂಗನಾಕಲಿಮಾಲೆ— ಕ್ರಯ ಪ್ರತಿ ೧ಕ್ಕೆ ೦—೨—೦ ಪೋಸ್ಟೇಜು ಅಲಾಯಿದಾ.

ಈಗತಾನೇ ಸೀಮೆಯಿಂದ ಬಂದಿರತಕ್ಕ ಟೇಬಲ್ ಗಡಿಯಾರಗಳು.

ಸರ್ವರೂ ತರಿಸಿಕೊಳ್ಳಲು ಇದು ಒಳ್ಳೆ ಸಮಯ.

[illegible]

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿ	೦—೮—೦
ಚಾರುಶೀಲೆಚರಿತ್ರೆ	೦—೫—೦
ಸಟೀಕ ನಂದಿವ್ರತ	೦—೪—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸಪುಸ್ತಕಗಳು.

135

ಬಸವರಾಜವಿಜಯಂ— ಬೆಲೆ ೧ ರೂ. ಬಾಲಕರು ಕೂಡ ಸುಲಭವಾಗಿ ಓದಿತಿಳಿಯುವಂತೆ ... ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧—೮—೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶನ ಚರಿತ್ರೆ, ಶಿವನ ಲೀಲೆಗಳು, ಅನೇಕ ಶಿವಶರಣರ ಚರಿತ್ರೆಗಳು, ಷಟ್ಸ್ಥಲ-ಕರಣ-ಹಸುಗೆ-ಪಂಚಾಕ್ಷರ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಬಳಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ. ... [illegible] ... ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧—೨—೦ ಪಾಲ್ಕುರಿಕೆ ಸೋಮನಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿ— ಬೆಲೆ ೧—೩—೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ ೧ ನೆ ಪ್ರಕರಣಕ್ಕೆ ೧—೩—೦ ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧—೩—೦

ಸೌಂದರಪುರಾಣಂ— ೧—೩—೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೦ ಆಣೆ; ಸೂಕ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ ವರ್ಷದ ಚಂದಾ ೨—೮—೦.

ಎಂ. ಆರ್. ಕರಿಬಸವಶಾಸ್ತ್ರಿ, ಗ್ರಂಥಪ್ರಕಾಶಕಮಂಡಳಿ, ಮೈಸೂರು.

ತುಂಕೂರು ತಾಲ್ಲೋಕು ಹಿರೇತೊಟ್ಲುಕೆರೆ.

ಮಳೆ ಇಲ್ಲ; ಬಿಸಲಿನ ತಾಪ ಹೆಚ್ಚು, ಕುಡಿಯಲು ನೀರೇ ಇಲ್ಲ; ಜನಗಳು ಹೊಟ್ಟೆಗಿಲ್ಲದೆ ತೊಂದರೆಪಡುತ್ತಾರೆ. ಪರೀಲು ಆಡುವದು ಹೆಚ್ಚಾಗಿದೆ. ಅಧಿಕಾರಿಗಳ ನಿಗಾ ಕಡಿಮೆ. ಈ ಊರಿನಲ್ಲಿ ಈ ತಿಂಗಳು ೧೫ರ ಆರಭ್ಯ ಒಂದು ನೈಟ್ ಸ್ಕೂಲ್ ಸ್ಥಾಪಿತವಾಗಿರುತ್ತೆ. ಒಂದು ರೀಡಿಂಗ್ ರೂಂ ಸಹಾ ಸ್ಥಾಪಿತವಾಗುವದರಲ್ಲಿದೆ. ಸೊಸೈಟಿಯು ಮುಂದು ವರಿಯುವ ಸ್ಥಿತಿಯಲ್ಲಿದೆ. ಇಲ್ಲಿಗೆ ವರ್ಗವಿಟ್ಟು ಬಂದಿರುವ ಸ್ಕೂಲ್ ಮಾಸ್ಟರ್ ಟಿ ವಿ. ಷಣ್ಮುಖ ದೀಕ್ಷಿತರೆಂಬುವರು ಬಂದಲಾಗಾಯ್ತು ಮುತುವರ್ಜಿಯಿಂದ ಕೆಲಸಮಾಡುತ್ತಿರುವರಲ್ಲದೆ ಜನಗಳಿಗೆ ಪ್ರೋತ್ಸಾಹಪಡಿಸಿ ಒಂದು ನೈಟ್‌ಸ್ಕೂಲ್ ಸ್ಥಾಪಿಸಿರುತ್ತಾರೆ. ಇವರಿಗೆ ವಾಸಕ್ಕೆ ಮನೆಯಿಲ್ಲದೆ ಬಹಳ ತೊಂದರೆಯನ್ನು ಪಡುತ್ತಾ ಇದಾರೆ. ಗ್ರಾಮಸ್ಥರು ಇದನ್ನು ಸರಿಮಾಡಿಕೊಟ್ಟಾರೆಂದು ನಂಬಿರುತ್ತೇನೆ. ಈ ಗ್ರಾಮಸ್ಥರಲ್ಲಿ ಎರಡು ಪಾರ್ಟಿಯಾಗಿರುತ್ತೆ. ಇದನ್ನು ಹೇಗಾದರೂ ಮಾಡಿ ಒಂದಾಗಿ ಸೇರಿಸಬೇಕೆಂದು ಸದರಿಯವರು ಬಹಳವಾಗಿ ಪ್ರಯತ್ನಮಾಡುತ್ತಾ ಇರುತ್ತಾರೆ. ಗ್ರಾಮಾಭಿವೃದ್ಧಿಯ ವಿಷಯದಲ್ಲಿ ತಮ್ಮ ಮನಗಳನ್ನೆಲ್ಲಾ ಉಪಯೋಗಿಸುತ್ತಾ ಇದ್ದಾರೆ. ಬಾಲಕರ ಸಂಖ್ಯೆ ಕಡಿಮೆಯಾದುದರಿಂದ ಹತ್ತಿರದ ಹಳ್ಳಿಗೆ ವಿರಾಮಕಾಲದಲ್ಲಿ ಹೋಗಿ ವಿದ್ಯೆಯ ಪ್ರಯೋಜನವನ್ನು ತಿಳಿಸುತ್ತಾ ಇದ್ದಾರೆ. ಜನಗಳು ಇವರನ್ನೇ ಬಹಳವಾಗಿ ಕೊಂಡಾಡುತ್ತಾರೆ. ದೇವರು ಇವರ ಕೋರಿಕೆಯನ್ನು ನೆರವೇರಿಸಲೆಂದು ಕೋರುತ್ತೇನೆ.

ಚಿರತೆಯನ್ನು ಕೊಂದುದು.

ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೆಂಕೆರೆ ಗ್ರಾಮಕ್ಕೆ ಸೇರಿದ ಪಾಳ್ಯದಲ್ಲಿ ವಾಸವಾಗಿರುವ ಹುಚ್ಚಣ್ಣನವರ ದನವಿನ ಕೊಟ್ಟಿಗೆಯೊಳಕ್ಕೆ ನಿನ್ನೆ ಏಪ್ರಿಲ್ ತಾರೀಖು ೨೪ ನೇ ಶುಕ್ರವಾರ ರಾತ್ರಿ ೯ ಘಂಟೆ ಸಮಯದಲ್ಲಿ ೧ ಚಿರುಬನು ನುಗ್ಗಿ ದನಗಳನ್ನು ಬೆದರಿಸಲು, ಕೂಡಲೆ ಅಲ್ಲಿ ಮಲಗಿದ್ದ ತಿಮ್ಮಯ್ಯನೆಂಬವನು ದೀಪವನ್ನು ಹೊತ್ತಿಸಿ ಬೆಳಕುಮಾಡಿ ಹೊರಗೆ ಬಂದನಂತರ ಚಿಕ್ಕ ವೀರಯ್ಯನೆಂಬುವ ಮುದುಕನು ಒಳಗೆ ಹೋಗಿ ಹುಡುಕುವಲ್ಲಿ ಸಂದಿಯಲ್ಲಿ ಇದ್ದ ಚಿರತೆಯು ಕೂಡಲೆ ಈತನ ತಲೆಯನ್ನು ಹಿಡಿದುಕೊಂಡಿತು. ಈತನ ಮಗ ಮರುಳಯ್ಯನೆಂಬುವನು ಇದನ್ನು ಕಂಡಕೂಡಲೆ ಓಡಿಹೋಗಿ ಆ ಚಿರತೆಯ ಬಾಲವನ್ನು ಹಿಡಿದು ಭದ್ರವಾಗಿ ಹಿಂದಕ್ಕೆ ಎಳೆಯಲು, ಅದು ಮುದುಕನನ್ನು ಬಿಟ್ಟು ಇವನನ್ನು ಪರಚಿತು. ಹೀಗೆ ೨-೩ ಸಾರಿ ಹಿಂದಕ್ಕೂ ಮುಂದಕ್ಕೂ ನೂಕಲು ಒಂದು ಕೊರಕಲಿಗೆ ಬಿದ್ದಿತು. ಆಗ ಮರುಳಯ್ಯನು ಆ ಚಿರತೆಯ ಎದೆಯಮೇಲೆ ಕುಳಿತು ಭದ್ರವಾಗಿ ಹಿಡಿದುಕೊಂಡಿರುವಲ್ಲಿ ತಿಮ್ಮಯ್ಯನೆಂಬುವನೂ ಚಿಕ್ಕ ವೀರಯ್ಯನೆಂಬುವನು ಸಹ ಕೊಡಲಿ ಮಚ್ಚಿನಿಂದ ಅದರ ಕಣ್ಣು ಮೂಗು ತಲೆಗಳನ್ನು ಚಚ್ಚಿ ಪ್ರಾಣವನ್ನು ಕಳೆದುಬಿಟ್ಟರು. ಇವರಲ್ಲಿ ಚಿಕ್ಕ ವೀರಯ್ಯನೆಂಬುವನಿಗೆ ತಲೆಬುರುಡೆಯಲ್ಲಿ ೩ ಹಲ್ಲುಗಳು ನಟ್ಟು ಗಾಯವಾಗಿರುತ್ತೆ. ಮರುಳಯ್ಯನೆಂಬುವನ ಮೈ ಕೈಕಾಲುಗಳಲ್ಲಿ ಪರಚಿರುತ್ತೆ. ತಿಮ್ಮಯ್ಯನಿಗೆ ಏನೂ ಅಪಾಯವಾಗಿಲ್ಲ ಇವರುಗಳು ಹುಳಿಯಾರು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಾ ಇದ್ದಾರೆ ಮರುಳಯ್ಯನಿಗೇನೂ ಬಾಧೆಯಿಲ್ಲದೆ ಚೆನ್ನಾಗಿದ್ದಾನೆ, ಚಿಕ್ಕ ವೀರಯ್ಯನಿಗೆ ಮಾತ್ರ ಇನ್ನೂ ಗುಣವಾಗಿಲ್ಲ.

ಸುಧಾರಿಸಿದ ವ್ಯವಸಾಯ ಪದ್ಧತಿಯಮೇಲೆ ಶ್ರೀರಂಗಪಟ್ಟಣದ ಒಬ್ಬ ಸ್ವಂತ ಬೇಸಾಯಗಾರರ ಭಾಷಣ.

ಮೊನ್ನೆ ತಾನೇ ಹರಿಹರದಲ್ಲಿ ನಡೆದ ದನಗಳ ವ್ಯವಸಾಯದ ಮತ್ತು ಕೈಗಾರಿಕೆಯ ಪ್ರದರ್ಶನಕ್ಕೆ ಚಿತ್ರದುರ್ಗ ಡಿಸ್ಟ್ರಿಕ್ಟಿನ ಮೆಹರ್ಬಾನ್ ಡೆಪ್ಯುಟಿಕಮಿಷನರ್ ಸಾಹೇಬರವರು ಆದಿಯಾಗಿ ಸರ್ಕಾರದ ದೊಡ್ಡ ದೊಡ್ಡ ಅಧಿಕಾರಿಗಳೂ ಮತ್ತು ಈ ಪ್ರಾಂತದ ಅನೇಕ ಸಹಸ್ರ ರೈತರು ಸಹ ಸೇರಿದ್ದರು ಅಲ್ಲಿ ಕೂಡಿದ ಈ ಸಭೆಯ ಅಗ್ರಾಸನವನ್ನು ಚಿತ್ರದುರ್ಗದ ಸಬ್ ಡಿವಿಜನ್ ಆಫೀಸರವರಾದ ಮೆ॥ ರಾಮಚಂದ್ರರಾಯರವರು ವಹಿಸಿದ್ದರು. ಆಗ್ಗೆ ಶ್ರೀರಂಗಪಟ್ಟಣದ ಮ್ಯುನ್ಸಿಪಲ್ ಕೌನ್ಸಿಲರ್ ಮತ್ತು ಜಮೀನ್ದಾರರಾದ ಮೆ॥ ಎನ್. ಸಿದ್ಧಲಿಂಗಯ್ಯ ದೇವರವರು ಸುಧಾರಿಸಿದ ವ್ಯವಸಾಯ ಪದ್ಧತಿಯಮೇಲೆ ಒಂದು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು.

ಮೆ॥ ದೇವರವರು ಬೋಧಪ್ರದವಾದ ತಮ್ಮ ಭಾಷಣದಲ್ಲಿ ಹನ್ನೆರಡು ವರುಷದ ತಮ್ಮ ಸ್ವಂತ ಬೇಸಾಯದ ಕಸಬಿನ ಅನುಭವದ ಫಲರೂಪವಾದ ಅನೇಕ ಅಮೂಲ್ಯವಾದ ಸೂಚನೆಗಳನ್ನು ಮಾಡಿದರು.

ವ್ಯವಸಾಯವು ಇತರ ಎಲ್ಲಾ ಕಸಬುಗಳಿಗಿಂತಲೂ ಸರ್ವಶ್ರೇಷ್ಠವಾದದ್ದು ಮತ್ತು ನಮ್ಮ ದೇಶದ ಏಳಿಗೆಗೆ ನಮ್ಮ ರೈತ ಪ್ರಜೆಗಳೇ ಮೂಲಾಧಾರರಾಗಿರುತ್ತಾರೆ ಎಂಬುವದನ್ನು ಸಿದ್ಧಾಂತಪಡಿಸಿದರು. ಆದರೆ ನಮ್ಮ ರೈತರು ವ್ಯವಸಾಯದ ಪ್ರಾಥಮಿಕ ಜ್ಞಾನದಲ್ಲಿ ಸಹ ಅಜ್ಞರಾಗಿರುವರೆಂಬ ವ್ಯಸನಕರವಾದ ಅವರ ಸದ್ಯಸ್ಥಿತಿಯನ್ನು ಸಹ ವಿವರಿಸಿ ಹೇಳಿದರು. ನಮಗಿಂತಲೂ ಎಲ್ಲಾ ವಿಧದಲ್ಲೂ ನಮ್ಮ ಕಸಬಿನಲ್ಲಿ ಮುಂದೆವರಿದಿರುವ ಪಾಶ್ಚಾತ್ಯರ ಸುಧಾರಿಸಿದ ಶಾಸ್ತ್ರೀಯವಾದ ವ್ಯವಸಾಯ ಪದ್ಧತಿಯನ್ನೂ ಉಳುವದರ ಮುಖ್ಯ ಉದ್ದೇಶವನ್ನೂ, ಹೊಸತರಹೆಯ ಇಂಗ್ಲೀಷ್ ನೇಗಲಿಗೂ ನಮ್ಮ ನಾಡು ನೇಗಲಿಗೂ ಇರುವ ವ್ಯತ್ಯಾಸ ಮತ್ತು ಅವುಗಳಿಂದ ಆಗುವ ಕೆಲಸಗಳನ್ನೂ ವಿವರಿಸಿದ್ದಲ್ಲದೆ ರೈತರ ಪುರೋಭಿವೃದ್ಧಿಯ ಸಲುವಾಗಿ ಅವರು ಉಳುವ ನೇಗಲನ್ನಾದರೂ ಬದಲಾಯಿಸಿಕೊಂಡೇ ತೀರಬೇಕೆಂದು ಸಾಧಿಸಿದರು. ಗೊಬ್ಬರದ ಸಾರವು ಕೆಡದಂತೆ ಕೂಡಿ ಹಾಕುವ ವಿಧಾನವನ್ನೂ, ಅದನ್ನು ಉಪಯೋಗಿಸುವ ಸಂಗತಿಯನ್ನೂ, ದನಗಳ ಗಂಜಳದ ಶ್ರೇಷ್ಠಗುಣವನ್ನೂ, ಅದನ್ನು ಶೇಖರಿಸುವ ವಿಧಾನವನ್ನೂ ಬಿತ್ತುವ ಬೀಜಗಳನ್ನು ಚುನಾವಣೆಮಾಡುವ ಪದ್ಧತಿಯನ್ನೂ ಬೆಳೆಗಳನ್ನು ಬದಲಾಯಿಸುವುದರ ಉಪಯೋಗ, ಕಬ್ಬನ್ನು ಹೊರುವಾಗಿ ಬೆಳೆದು ಬೆಲ್ಲವನ್ನು ಉತ್ತಮವಾದ ರೀತಿಯಲ್ಲಿ ಮಾಡುವ ವಿಧಾನ, ಭತ್ತವನ್ನು ಹುಲುಸಾಗಿ ಬೆಳೆಯಬೇಕಾದರೆ ಅನುಸರಿಸಬೇಕಾದ ಕ್ರಮಗಳು ಮತ್ತು ಅಲ್ಲಲ್ಲೇ ವ್ಯವಸಾಯದ ಸಂಘಗಳನ್ನು ಸ್ಥಾಪಿಸುವದರ ಅವಶ್ಯಕತೆ ಇವೇ ಮೊದಲಾದ ವ್ಯವಸಾಯ ಸುಧಾರಣೆಯಮೇಲೆ ಬಹು ಸ್ವಾರಸ್ಯವಾಗಿ ಸಭಿಕರ ಮನ ಮುಟ್ಟುವಂತೆ ಮುಕ್ಕಾಲು ಗಂಟೆಯ ಪರ್ಯಂತವೂ ಒಂದು ದೀರ್ಘವಾದ ಭಾಷಣವನ್ನು ಮಾಡಿದರು.

ವಿದ್ಯದ ಕೊರತೆಯೂ, ನಿರುತ್ಸಾಹವೂ, ದಾರಿದ್ರ್ಯವೂ ಮತ್ತು ಐಕಮತ್ಯದ ಅಭಾವವೂ ಸಹ ನಮ್ಮ ರೈತರ ಅವನತಿಗೆ ಮುಖ್ಯ ಕಾರಣಗಳೆಂದು ಉಪನ್ಯಾಸಕರು ಸೂಚಿಸಿದರು.

ಇವರ ಉಪನ್ಯಾಸವು ಸುಬೋಧವಾಗಿಯೂ, ಸಭಿಕರ ಮನಸ್ಸಿಗೆ ಚೆನ್ನಾಗಿ ನಾಟುವಂತೆಯೂ ಇದ್ದುದರಿಂದ ಈ ಪ್ರದರ್ಶನದ ಕಮಿಟಿಯ ಪ್ರೆಸಿಡೆಂಟರವರಾದ ಮೆಹರ್ಬಾನ್ ಡೆಪ್ಯುಟಿಕಮಿಷನರ್ ಸಾಹೇಬರವರು ಈ ಉಪನ್ಯಾಸಕರಿಗೆ ಮೊದಲನೆಯ ಬಹುಮಾನಪತ್ರಿಕೆಯನ್ನು ಬಹು ಸಂತೋಷದಿಂದ ದಯಪಾಲಿಸಿದರು.

ಅನಂತರ ಮೆ॥ ದೇವರವರು ಪ್ರಮುಖ ರೈತರ ಪ್ರಾರ್ಥನೆಯ ಪ್ರಕಾರ ಬೀರೂರಿನಲ್ಲಿ ಕಡೂರ್ ಡಿಸ್ಟ್ರಿಕ್ಟ್ ಸಬ್ ಡಿವಿಜನ್ ಆಫೀಸರವರಾದ ಮೆ॥ ಬಿ. ಟಿ. ಕೇಶವಯ್ಯಂಗಾರ್ರವರ ಅಧ್ಯಕ್ಷತೆಯಲ್ಲಿ ಈ ವಿಷಯದ ಮೇಲೆಯೇ ಒಂದು ಶ್ಲಾಘ್ಯವಾದ ಮತ್ತೊಂದು ಭಾಷಣವನ್ನು ಮಾಡಿದರು ಮತ್ತು ಚಿತ್ರದುರ್ಗ, ದಾವಣಗೆರೆ ಜವರ್ಗಳಲ್ಲಿ ಸಹ ತಮ್ಮ ಉಪನ್ಯಾಸದಿಂದ ವ್ಯವಸಾಯಗಾರರ ಅಜ್ಞಾನವನ್ನು ಹೋಗಲಾಡಿಸಿ ಅವರ ಪೂರ್ಣ ಪ್ರೀತಿಗೆ ಪಾತ್ರರಾದರು.

ನಮ್ಮ ವ್ಯವಸಾಯಗಾರರ ಪುರೋಭಿವೃದ್ಧಿಗಾಗಿಯೇ ಈ ಪ್ರಕಾರ ಉಪನ್ಯಾಸಗಳನ್ನು ಮಾಡುತ್ತಾ ತಮ್ಮ ಅಮೌಲ್ಯವಾದ ಕಾಲವನ್ನು ಕಳೆಯಲು ಸಿದ್ಧರಾಗಿರುವ ಅತ್ಯಂತ ನಿಪುಣ ರೈತರಾದ ಮೆ॥ ದೇವರವರ ಶ್ಲಾಘ್ಯವಾದ ಉದ್ದೇಶವನ್ನು ಶ್ರೀ ಜಗದೀಶನು ನೆರವೇರಿಸಲೆಂದೂ ಅಪ್ರಾರ್ಥಿತವಾಗಿ ದೊರೆತಿರುವ ಈ ಸುಸಮಯವನ್ನು ನಮ್ಮ ರೈತರು ಸಾರ್ಥಕಮಾಡಿಕೊಳ್ಳದಿರಲಾರರೆಂತಲೂ ಮನಃಪೂರ್ವಕವಾಗಿ ಆಶಿಸುತ್ತೇನೆ. ಪ್ರತ್ಯಕ್ಷದರ್ಶಿ.

ಕೋಲಾರ್ ಚಿನ್ನದ ಗಣಿಗಳು.

೩೩ ವರುಷಗಳ ಕಾರುಕಿರ್ದಿಗಳು.

ಕೋಲಾರ್ ಚಿನ್ನದ ಗಣಿಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿರುವ ಬೋರ್ಡಿನವರು ಕಳೆದ ೧೯೧೩ ನೇ ಡಿಸೆಂಬರ್ ತಾ. ೩೧ ಕ್ಕೆ ಪೂರೈಸಿದ ೩೩ ಸಂವತ್ಸರಗಳಲ್ಲಿ ಆ ಗಣಿಗಳ ಕೆಲಸ ನಡೆದಿರುವ ವಿಚಾರಗಳನ್ನು ಕುರಿತು ಒಂದು ರಿಪೋರ್ಟನ್ನು ಬರೆದು ಪ್ರಕಟಮಾಡಿದ್ದಾರೆ. ಈ ಗಣಿಗಳ ಪೂರ್ವಚರಿತ್ರೆಯು ಅನೇಕರಿಗೆ ತಿಳಿಯದೆ ಇಲ್ಲ. ಹಲವು ಕಂಪನಿಗಳು ಮೊದಲು ಚಿನ್ನ ತೆಗೆಯುತ್ತೇವೆಂದು ಏರ್ಪಾಟಾಗಿ ಬಂದು, ಕೆಲವು ಹಣ ಖರ್ಚುಮಾಡಿ ಕೆಲಸವನ್ನು ಮುಂದರಿಸಲು ದ್ರವ್ಯಾದಿಗಳ ಸಹಾಯ ಒದಗದೆ ಹಾಗೇ ನಿಂತುಹೋಗಿ ತುಂಬಾ ನಷ್ಟಪಟ್ಟವು. ಈಗಲಾದರೋ ಪ್ರಪಂಚದಲ್ಲಿ ಚಿನ್ನವು ವಿಶೇಷವಾಗಿ ಉತ್ಪತ್ತಿಯಾಗುವ ಭಾರೀ ಗಣಿಗಳೊಳಗೆ ನಮ್ಮ ಸಂಸ್ಥಾನದ ಗಣಿಗಳೂ ಹೆಸರುಗೊಂಡಿರುತ್ತವೆ. ಚಿನ್ನ ತೆಗೆಯುವುದಕ್ಕೆ ೧೮೮೦ ಇನೇ ಇಸವಿಯಲ್ಲಿ ಮೈಸೂರು, ಊರಿಗ, ನಂದಿದುರ್ಗ, ಮೈಸೂರು ರೀಫ್ ಎಂಬ ಕಂಪನಿಗಳೂ; ಆ ಮೂರನೇ ವರುಷ ಬಾಲಘಾಟ್, ನೈನ್ ರೀಫ್ ಕಂಪನಿಗಳೂ; ೧೮೮೯ ರಲ್ಲಿ ಛಾಂಪಿಯನ್ ರೀಫ್ ಕಂಪನಿಯೂ ಏರ್ಪಾಡಾದುವು. ಇವುಗಳಲ್ಲದೆ ಇನ್ನೂ ಕೆಲವು ಕಂಪನಿಗಳು ಹುಟ್ಟಿ ಕೆಲವು ಕಾಲ ಶೋಧನೆಯ ಕಾಮಗಾರಿಯನ್ನು ನಡಿಸಿ ನಿಂತುಹೋದುವು. ೧೮೯೮ ನೇ ಇಸವಿಯಲ್ಲಿ ಜಾನ್ ಟೆಯಿಲರ್ ಸನ್ಸ್ ಎಂಬವರ ಮೇಲ್ವಿಚಾರಣೆಯಲ್ಲಿ ೧೮ ಚಿನ್ನ ತೆಗೆಯುವ ಕಂಪನಿಗಳಿದ್ದು ಕೆಲಸ ಮಾಡುತ್ತಿದ್ದವು. ಈ ಪೈಕಿ ಹಲವು ಕಂಪನಿಗಳು ಚಿನ್ನವು ಮೇಲ್ಗಡೆ ದೊರಕದೆ ಬಹಳ ಆಳವಾಗಿ ಅಗೆದು ಭೂಮಿಯನ್ನು ಶೋಧಿಸಲು ಚೈತನ್ಯವೂ ಮುತುವರ್ಜಿಯೂ ಸಾಧನೆಯೂ ಇಲ್ಲದೆ ದಿವಾಳಿಯಾದವು

ಈಗಲಾದರೋ ಆರು ಕಂಪನಿಗಳು ಭಂಗಾರವನ್ನು ತೆಗೆಯುತ್ತಿವೆ. ಇವುಗಳ ಮೂಲಧನ ೨೧,೯೧,೦೦೦ ಪೌಂಡುಗಳು; ಈ ಷೇರುಗಳ ಬೆಲೆಯು ಈಗ ಹೆಚ್ಚಿರುವುದರಿಂದ ಅವುಗಳನ್ನು ಬಿಕರಿಮಾಡಿದ ಪಕ್ಷದಲ್ಲಿ ೫೯,೭೩,೭೮ ಪೌಂಡು ಉತ್ಪತ್ತಿಯಾದೀತು. ೧೮೮೦ ನೇ ಇಸವಿಯಿಂದ ಕೋಲಾರ್ ಗಣಿಗಳಿಂದ ಎಲ್ಲಾ ಕಂಪನಿಗಳವರೂ ೧೧೩೦೪೪೩ ಟನ್‌ಗಳಷ್ಟು (ಟನ್ ೧ಕ್ಕೆ ಸುಮಾರು ೯೩॥ ಮಣಗಳು) ಭಂಗಾರದ ಬರಕು ಬೆರಕೆಯಾದ ಕಲ್ಲುಗಳನ್ನು ಗಣಿಗಳಿಂದ ಮೇಲಕ್ಕೆ ತಂದು ಪುಡಿಮಾಡಿ ಅವರಿಂದ ೧,೦೩೧೧,೪೮೪ ಔನ್ಸ್‌ಗಳಷ್ಟು (ಔನ್ಸ್ ೧ಕ್ಕೆ ೭೦ ರೂಪಾಯಿ ತೂಕ) ಚಿನ್ನದ ಗಟ್ಟಿಗಳನ್ನು ಉತ್ಪತ್ತಿಮಾಡಿದ್ದಾರೆ. ಈ ಭಂಗಾರಕ್ಕೆ ೬೦,೪೭,೮೮,೪೧೦ ರೂಪಾಯಿ ಕ್ರಯವಾಗುತ್ತದೆ. ಗಣಿಗಳವರು ಅಷ್ಟು ಹಣವನ್ನು ಉತ್ಪತ್ತಿಮಾಡಿಕೊಂಡು, ಅದರಲ್ಲಿ ಮೈಸೂರು ಗವರ್ನಮೆಂಟಿಗೆ ೩,೧೧,೭೩,೬೩೦ ರೂಪಾಯನ್ನು ರಾಜಭಾಗವಾಗಿಯೂ, ಕಂಪನಿಗಳ ಷೇರುದಾರರಿಗೆ ೨೧,೯೩,೧೬,೯೩೦ ರೂಪಾಯನ್ನು ಲಾಭವಾಗಿಯೂ ಹಂಚಿಕೊಟ್ಟಿದ್ದಾರೆ.

ಕೋಲಾರದಲ್ಲಿ ಚಿನ್ನ ತೆಗೆಯುವ ಗಣಿಗಳ ಪ್ರದೇಶವು ಸುಮಾರು ೧೧,೮೫೦ ಎಕರೆಗಳಾಗುತ್ತವೆ. ಆ ಗಣಿಗಳಲ್ಲಿ ೫೦೦ ಜನ ಯೂರೋಪ್ಯಿಯನ್ನರೂ, ೪೦೦ ಜನ ಆಂಗ್ಲೋ ಇಂಡಿಯನ್ನರೂ, ೭೩,೦೦೦ ದೇಶೀಯ ಜನರೂ ತಮ್ಮ ಸಂಸಾರಗಳ ಸಮೇತ ಚಿನ್ನ ತೆಗೆಯುವ ಬೇರೆಬೇರೆ ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಒಟ್ಟು ಪ್ರಜಾ ಸಂಖ್ಯೆಯು ೫೦,೦೦೦ ಕ್ಕೆ ಕಡಮೆಯಾಗಿಲ್ಲವೆಂದು ಹೇಳಬಹುದು. ಇವರಲ್ಲದೆ ಈ ಕೆಲಸಗಾರರ ಸೌಕರ್ಯಗಳ ನಿಮಿತ್ತ ಅಲ್ಲಿ ಹೋಗಿ ನೆಲಸಿರುವ ಇತರ ಕಸಬುಗಳ ಪ್ರಜೆಗಳು ಬೇರೆ ಕೆಲವು ಸಾವಿರವಾಗಬಹುದು. ಗಣಿಗಳಲ್ಲಿ ಚಿನ್ನ ತೆಗೆಯುವ ನಾನಾ ಕೆಲಸಗಳನ್ನು ಮಾಡಿದವರಿಗೆ ೧೮೯೮ ನೇ ಇಸವಿ ಆಖೈರುವರೆಗೆ ೧೧,೧೩,೬೮,೮೩೫ ರೂಪಾಯಿ ಸಂಬಳ ಮತ್ತೂ ಕೂಲಿ ಹಣ ಪಾವತಿ ಮಾಡಲಾಗಿದೆ.

ಮೈಸೂರು ಗವರ್ನಮೆಂಟಿನವರು ಶಿವಸಮುದ್ರದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಿ ಗಣಿಯವರಿಗೆ ಬಿಕರಿ ಮಾಡುತ್ತಿದ್ದಾರಷ್ಟೆ. ೧೯೦೩ ನೇ ಇಸವಿಯಿಂದ ಗಣಿಗಳ ಕಂಪನಿಯವರು ವಿದ್ಯುಚ್ಛಕ್ತಿಗಾಗಿ ಮೈಸೂರು ಸರ್ಕಾರಕ್ಕೆ ೧,೬೭,೭೧,೩೩೦ ರೂಪಾಯಿ ಕೊಟ್ಟಿದ್ದಾರೆ. ಆದರೆ ಬೇತಮಂಗಲದ ಕೆರೆಯ ನೀರನ್ನು ಉಪಯೋಗಿಸಿಕೊಂಡಿರುವುದಕ್ಕೆ ಗಣಿಗಳ ಕಂಪನಿಯವರು ಮೈಸೂರು ಗವರ್ನಮೆಂಟಿಗೆ ಹತ್ತು ವರುಷದಿಂದ ಒಟ್ಟು ಎಷ್ಟು ಹಣ ಪಾವತಿ ಮಾಡಿದಾರೆಂದು ಲೆಕ್ಕಾಚಾರ ಮಾಡಲಿಲ್ಲ ಇದೂ ಕೆಲವು ಲಕ್ಷ ರೂಪಾಯಿಗಳಾಗಿರಬೇಕೆಂದು ಹೇಳಬಹುದು. ಯಾಕೆಂದರೆ ಗಣಿಗಳ ಕಂಪನಿಯವರು ಪ್ರತಿ ದಿನವೂ ಹತ್ತು ಲಕ್ಷ ಗ್ಯಾಲನ್‌ನಂತೆ ನೀರು ಉಪಯೋಗಿಸಿಕೊಳ್ಳುತ್ತಿರುವರು ವೈ ಪ.

ಭರತಖಂಡದ ನೂತನ ರಾಜಧಾನಿ.

ವಂಗವಿಭಾಗವನ್ನು ಮಾಡಿ ವಂಗೀಯರಲ್ಲಿ ಅಸಂತುಷ್ಟಿ ಬೀಜಾವಾಪನವನ್ನು ಮಾಡಿ ಸೀಮೆಗೆ ತೆರಳಿದ ಲಾರ್ಡ್ ಕರ್ಜನ್‌ರವರು ಈಗ ಪಾರ್ಲಿಮೆಂಟಿನ ಸಭ್ಯರಾಗಿರುವರಷ್ಟೆ. ಈಚೆಗೆ ದೇಶದೊಳಗೆ ಶಾಂತಿಯನ್ನುಂಟುಮಾಡುವುದಕ್ಕಾಗಿ ಲಾರ್ಡ್ ಮಿಂಟೋರವರೂ, ಲಾರ್ಡ್ ಹಾರ್ಡಿಂಜ್‌ರವರೂ ಎಷ್ಟೋ ಪಾಡುಪಟ್ಟು ಕೆಲ ನೂತನ ರಾಜಕೀಯ ಸುಧಾರಣೆಗಳನ್ನು ಕೊಡಿ ಮಾಡಿದ ಸಂಗತಿಯು ವಾಚಕರಿಗೆಲ್ಲಾ ವಿದಿತವಾಗಿಯೇ ಇದೆ. ಇಂಥ ನೂತನ ಸುಧಾರಣೆಗಳೊಳಗೆ ಭರತಖಂಡದ ರಾಜಧಾನಿಯನ್ನು ಕಲ್ಕತ್ತಾದಿಂದ ದಿಲ್ಲಿಗೆ ವರ್ಗಾಯಿಸಿದುದು ಒಂದಾಗಿರುತ್ತದೆ. ಇಂಥ ವ್ಯತ್ಯಾಸವನ್ನು ಮಾಡಿದುದೂ ಅದರ ಜತೆಗೆ ತಾವು ಮಾಡಿದ್ದ ವಂಗವಿಭಾಗವನ್ನು ತಪ್ಪಿಸಿದುದೂ ಸಹ ಲಾರ್ಡ್ ಕರ್ಜನ್‌ರವರ ಮನಸ್ಸಿಗೆ ಸರಿಬಿದ್ದಿಲ್ಲ. ಈ ವಿಷಯದಲ್ಲಿ ಅವರು ಹಲವುಬಾರಿ ಪಾರ್ಲಿಮೆಂಟಿನಲ್ಲಿ ಈ ಪ್ರಸ್ತಾಪವನ್ನೆತ್ತಿ ವಾದಾನುವಾದಗಳನ್ನು ನಡೆಯಿಸಿ, ಕಡೆಗೆ ಇದು ಚಕ್ರವರ್ತಿಯವರು ಸ್ವತಃ ಹೋಗಿ ನಡೆಯಿಸಿದ ಏರ್ಪಾಟಾದುದರಿಂದ ಅದರ ವಿಷಯದಲ್ಲಿ ಇನ್ನೂ ಯಾವ ವ್ಯತ್ಯಾಸವನ್ನೂ ಮಾಡಲಾಗುವುದಿಲ್ಲವೆಂಬ ಉತ್ತರವು ಕೆಳಗಿನ ಸಭೆಯಲ್ಲಿ ಹಿಂದೆ ತಿಳಿಯಿಸಲ್ಪಟ್ಟಿದ್ದರೂ ಲಾರ್ಡ್ ಕರ್ಜನ್‌ರವರು ಗಜಮತ್ಸರದಂತೆ ಇನ್ನೂ ತಮ್ಮ ಹಠವನ್ನು ಬಿಡದೆಯೇ ಇರುತ್ತಾರೆ. ಕಳೆದ ತಾ॥ ೧೧ ನೆಯ ದಿನ ಪಾರ್ಲಿಮೆಂಟಿನಲ್ಲಿ ಇವರು ಮತ್ತೆ ದಿಲ್ಲಿಯ ವಿಷಯವನ್ನು ಪ್ರಸಂಗಿಸಿದರು. ಆ ಸಮಯದಲ್ಲಿ ನೂತನ ರಾಜಧಾನಿ ನಿರ್ಮಾಣದಿಂದ ಆಗುವ ವ್ಯಯಭಾರವನ್ನು ವಿವರಿಸುವಾಗ್ಗೆ, "ಗೌರ್ನಮೆಂಟಿನವರು ಇದೆಲ್ಲಾ ಕಾರ್ಯಕ್ಕೂ ೬ ಕೋಟಿ ರೂ.ಗಳು ವೆಚ್ಚವಾಗುವುದೆಂದು ನಿರೀಕ್ಷಿಸಿದ್ದಾರೆ ಆದರೆ ಅದು ಹಾಗಲ್ಲ. ಇದುವರೆಗೆ ಆಗಿರುವ ವೆಚ್ಚವನ್ನೇ ನಾನು ಸ್ಥೂಲವಾಗಿ ಲೆಕ್ಕಹಾಕಿರುವುದರಲ್ಲಿ ೪ ಕೋಟಿ ೫೦ ಲಕ್ಷ ರೂಗಳಾಗಿರುತ್ತವೆ. ಅದುಕಾರಣ ಮುಂದೆ ಎಲ್ಲಾ ಕೆಲಸವೂ ಸಾಂಗವಾಗುವವರೆಗೆ ಅವರ ನಿರೀಕ್ಷಣೆಗಿಂತ ಎಷ್ಟೋ ಹೆಚ್ಚಿನ ಹಣವು ಹಿಡಿಯುತ್ತದೆ. ಭರತಖಂಡದಲ್ಲಿ ಲೋಹಮಾರ್ಗಾಭಿವೃದ್ಧಿ ವ್ಯಾಪಾರಾಭಿವೃದ್ಧಿಗೂ ಇತರ ಸೌಖ್ಯಾಭಿವೃದ್ಧಿಗೂ ಎಷ್ಟೋ ಹಣವನ್ನು ವೆಚ್ಚಮಾಡಬೇಕಾದ ಅವಶ್ಯಕತೆಯುಳ್ಳ ಈ ಸಮಯದಲ್ಲಿ ಅನವಶ್ಯಕವಾದ ಈ ನೂತನ ರಾಜಧಾನಿ ಕಲ್ಪನೆಗೆಂದು ಹೀಗೆ ಕೋಟ್ಯಂತರ ರೂಗಳನ್ನು ವ್ಯಯಮಾಡುವುದು ಯೋಗ್ಯವೆ? ಈ ವರ್ಷ ಅಲ್ಲಿನ ಲೋಹಮಾರ್ಗಾಭಿವೃದ್ಧಿಗಾಗಿ ೬೬ ಲಕ್ಷ ಪೌನುಗಳನ್ನು ಮಾತ್ರವೇ ವ್ಯಯಮಾಡಲು ನಿರ್ಧರಿಸುವುದು ಸಾಕೆ? ಪ್ರಭುತ್ವದವರು ಸಂಕಲ್ಪಿಸಿರುವ ಏರ್ಪಾಡು ಉಚಿತವಾದುದಲ್ಲವೆಂದು ಭಾರತೀಯರೆಲ್ಲರೂ ತಿಳಿಯುವರೆಂಬ ವಿಷಯದಲ್ಲಿ ಸಂಶಯವಿಲ್ಲ. ದಿಲ್ಲಿಪಟ್ಟಣವು ರಾಜಧಾನಿಯಾಗುವುದಕ್ಕೆ ತಕ್ಕ ಪಟ್ಟಣವೆಂದೂ, ಅದು ಮೊದಲಿನ ರಾಜಧಾನಿಗಿಂತಲೂ ಹೆಚ್ಚು ಉಪಯುಕ್ತವಾಗಿಯೂ ಸಾನುಭೂತಿಯಿಂದಲೂ ರಾಜ್ಯಪರಿಪಾಲನೆಮಾಡಲು ಅನುಕೂಲವಾದುದೆಂದೂ ನನಗೆ ಒಪ್ಪಿಸುವ ಪಕ್ಷದಲ್ಲಿ ಇದಕ್ಕಾಗಿ ಎಷ್ಟು ವೆಚ್ಚವಾದರೂ ನಾನು ಮಾತನಾಡುವುದಿಲ್ಲ. ಇದು ಕಪಟತನವಾಗಿ ನಿರ್ಮಿಸುವ ರಾಜಧಾನಿಯಾಗಿರುವುದರಿಂದ ಇದು ಯಂತ್ರದಂತೆ ಕೆಲ ದಿನ ಮಾತ್ರ ನಡೆಯಬಹುದು. ಅಷ್ಟೇ ಹೊರತು ಸಜೀವವಾಗಿ ಚಿರಕಾಲವಿರತಕ್ಕದ್ದಲ್ಲ. ಆದುದರಿಂದ ಇದಕ್ಕಾಗಿ ವೆಚ್ಚಮಾಡುವ ಹಣವು ಪ್ರಯೋಜನಕಾರಿಯಾದುದಲ್ಲ. ಕೆಲಕಾಲದೊಳಗೆ ಈ ಹೊಸ ಏರ್ಪಾಟೆಲ್ಲಾ ಧ್ವಂಸವಾಗದೆ ಹೋಗುವುದಿಲ್ಲ. ಆಗ ಕಂದಾಯದ ರೂಪವಾಗಿ ಬಂದ ಪ್ರಜೆಗಳ ಹಣವನ್ನು ನಾವು ಹೀಗೆ ವ್ಯರ್ಥವಾಗಿ ವೆಚ್ಚಮಾಡಿದೆವಲ್ಲಾ ಎಂದು ನಾವೇ ಎಂದುಕೊಳ್ಳುವ ಸ್ಥಿತಿಯು ಬರುವುದು" ಎಂದು ಮೊದಲಾಗಿ ಉಪನ್ಯಾಸಮಾಡಿ ತಮ್ಮ ಅಸಂತುಷ್ಟಿಯನ್ನು ಕಾರಿದರು.

ಇದಕ್ಕೆ ಸ್ಟೇಟ್‌ಸೆಕ್ರೆಟರಿಯವರು ಕೊಟ್ಟ ಉತ್ತರವು ಅವರ ಹಾರಾಟವನ್ನೆಲ್ಲಾ ಅಡಗಿಸಿತು. ಏನೆಂದರೆ–ರಾಜಧಾನಿಯನ್ನು ವ್ಯತ್ಯಾಸಗೊಳಿಸುವುದು ಉತ್ತಮವೆ? ಅಲ್ಲವೆ? ಎಂಬ ವಿಷಯವನ್ನು ಕುರಿತು ಮರಳಿ ಚರ್ಚಿಸಲು ನಾನು ಇಷ್ಟಪಡುವುದಿಲ್ಲ. ಬೇರೆ ಕೆಲ ಮಾರ್ಪಾಟುಗಳಿಂದ ಆಗಿರುವ ವೆಚ್ಚವನ್ನೂ ರಾಜಧಾನಿಯ ವ್ಯತ್ಯಾಸದಿಂದಲೇ ಆದ ವೆಚ್ಚವೆಂದು ಇದಕ್ಕೆ ಸೇರಿಸಿ ಹೇಳುವುದು ಯುಕ್ತವಲ್ಲ. ರಾಜಧಾನಿಯು ಕಲ್ಕತ್ತಾವೇ ಆಗಿದ್ದರೂ ಆ ಕೆಲವೆಚ್ಚಗಳು ಸಂಭವಿಸುತ್ತಲೇ ಇದ್ದುವು. ನೂತನ ನಗರ ನಿರ್ಮಾಣಕ್ಕೇ ೬ ಕೋಟಿ ರೂ.ಗಳಾಗುವುವೆಂದು ಸರ್ಕಾರದವರು ನಿರೀಕ್ಷಿಸಿರುವರೆಂದು ಲಾರ್ಡ್ ಕರ್ಜನ್‌ರವರು ಹೇಳುತ್ತಾರೆ. ಅದಕ್ಕಾಗಿಯೇ ಇಷ್ಟು ಹಣವನ್ನು ವೆಚ್ಚಮಾಡಲು ಇಂಡ್ಯಾ ಗೌರ್ನಮೆಂಟಿನವರು ಯಾವಾಗಲೂ ಲೆಕ್ಕ ಹಾಕಿರುವುದಿಲ್ಲ. ಅದಕ್ಕಾಗಿ ಪ್ರತಿ ವರ್ಷವೂ ಎಷ್ಟು ವೆಚ್ಚವಾಗುವುದೋ ಅದನ್ನು ಪ್ರಕಟಿಸುವುದೊಳ್ಳೆಯದು. ಅದನ್ನು ಸ್ಪಷ್ಟವಾಗಿ ವಿವರಿಸುವದಕ್ಕೆ ಎಷ್ಟು ಮಟ್ಟಿಗೆ ಅವಕಾಶವಾಗುವುದೋ ನಾನು ಆ ಗೌರ್ನಮೆಂಟಿನವರೊಡನೆ ಆಲೋಚಿಸುತ್ತೇನೆ. ವೈಸ್‌ರಾಯರವರು ಪ್ರತಿ ವರ್ಷವೂ ಇಷ್ಟು ದಿನ ಕಲ್ಕತ್ತಾದಲ್ಲಿ ಇದ್ದೇತೀರಬೇಕೆಂದು ನಿರ್ಬಂಧಪಡಿಸುವುದು ಕಷ್ಟವು. ಶೀತಕಾಲದೊಳಗೆ ಯಾವ ವೈಸ್ರಾಯಿಯೂ ಕಲ್ಕತ್ತಾಕ್ಕೆ ಹೋಗಿ ಕೆಲಕಾಲ ವಾಸಮಾಡುವರು. ವೈಸ್‌ರಾಯರು ದಿಲ್ಲಿಯಲ್ಲಿ ೫ ತಿಂಗಳು ಮಾತ್ರವೇ ಇರಬೇಕೆಂದು ಕರ್ಜನ್‌ರವರು ಹೇಳುತ್ತಾರೆ. ೧೦ ತಿಂಗಳಿರಬೇಕೆಂಬುದು ನನ್ನಭಿಪ್ರಾಯವು. ಈ ವಿಷಯವಾಗಿ ಭರತಖಂಡದಲ್ಲಿರುವ ಸರ್ಕಾರಿ ಉದ್ಯೋಗಸ್ಥರೇ ಆಗಲಿ ಪ್ರಜೆಗಳೇ ಆಗಲಿ ಯಾವ ಆಕ್ಷೇಪವನ್ನೂ ಮಾಡಿರುವುದಿಲ್ಲ. ಕಲ್ಕತ್ತಾವನ್ನು ಬಿಟ್ಟು ಹೊರಕ್ಕೆ ಹೋಗುವುದು ಎಂದರೆ–ಅಲ್ಲಿನ ಪ್ರಜೆಗಳ ಸಂಬಂಧವನ್ನೆಲ್ಲಾ ಕಳೆದುಕೊಂಡು ಹೋಗುವುದೇ ಎಂದು ಲಾರ್ಡ್ ಕರ್ಜನ್‌ರವರು ಹೇಳುತ್ತಾರೆ. ಈ ಮಾತಿನೊಡನೆ ವೈಸ್‌ರಾಯರು ಏಕೀಭವಿಸುವರೆಂದು ನಾನು ನಂಬಲಾರೆ. ಕಲ್ಕತ್ತಾದ ಮೇಲೆ ನನಗೆ ತುಂಬಾ ಅಭಿಮಾನವೂ ಪೂಜ್ಯಭಾವವೂ ಇರುವುದು. ಆದರೆ ಪ್ರಜಾಭಿಪ್ರಾಯವೆಲ್ಲಾ ಕಲ್ಕತ್ತಾದಲ್ಲೇ ಇರುವುದೆಂದೂ, ಇದೇ ಶಾಶ್ವತವೂ ಕಲ್ಪಿತವಲ್ಲದೆ ಸ್ವತಸ್ಸಿದ್ಧವೂ ಆದ ರಾಜಧಾನಿಯೇ ಹೊರತು ಉಳಿದ ಯಾವ ಪಟ್ಟಣವೂ ಆಗತಕ್ಕುದಲ್ಲವೆಂದೂ ಹೇಳಿದರೆ ನಾನು ಅದನ್ನೊಪ್ಪಲಾರೆನು. ರಾಜಧಾನಿಯನ್ನು ದಿಲ್ಲಿಗೆ ವರ್ಗಾಯಿಸಿದುದರಿಂದ ಇದುವರೆಗೂ ಯಾವ ವಿಷಯದಲ್ಲೂ ಚಿಂತೆಯನ್ನುಂಟುಮಾಡತಕ್ಕ ಮನಹರಣೆಯೊಂದೂ ನನಗೆ ಗೋಚರಿಸಿರುವುದಿಲ್ಲ. ಇಂಡ್ಯಾ ಗೌರ್ನಮೆಂಟಿನವರು ಕೂಡ ಈ ಮಾರ್ಪಾಟಿನಿಂದ ಯಾವ ತೊಂದರೆಯನ್ನೂ ಹೊಂದದೆ ತೃಪ್ತಿಯಿಂದ ಕೆಲಸವನ್ನು ಸಾಗಿಸಿಕೊಂಡೇ ಹೋಗುತ್ತಿದ್ದಾರೆ" ಎಂದು ಮೊದಲಾಗಿ ನುಡಿಯಲು, ಲಾರ್ಡ್ ಕರ್ಜನ್‌ರವರು ಆ ತಮ್ಮ ತೀರ್ಮಾನವನ್ನು ಹಿಂದಕ್ಕೆ ತೆಗೆದುಕೊಂಡುದಲ್ಲದೆ, "ನಾನು ಲಾರ್ಡ್ ಕ್ರೂರವರನ್ನು ಎಷ್ಟುಮಟ್ಟಿಗೆ ಒಡಂಬಡಿಸಬೇಕೆಂದು ಪ್ರಯತ್ನಿಸಿದೆನೋ ನನ್ನನ್ನು ಅವರು ಅಷ್ಟು ಒಡಂಬಡಿಸಿಬಿಟ್ಟರು" ಎಂದು ಹೇಳಿಬಿಟ್ಟರು.

ಸಿಂಹಳದ್ವೀಪದಲ್ಲಿ ಸ್ವದೇಶೀಯ ಕೋಲಾಹಲ.

ಲಂಕಾದ್ವೀಪಕ್ಕೆ ಸಿಂಹಳವೆಂದೂ ಹೆಸರುಂಟು. ಇದು ಆಂಗ್ಲ ಜನರ ವಶವರ್ತಿಯಾದೀಚೆಗೆ ಅದರಲ್ಲಿನ ಜನರ ನಡೆನುಡಿಗಳೆಲ್ಲಾ ವಿಶೇಷವಾಗಿ ಪಾಶ್ಚಾತ್ಯರ ಅನುಸರಣೆಯಲ್ಲೇ ಬರುತ್ತಿದ್ದಿತು. ಇತ್ತೀಚೆಗೆ ಭರತಖಂಡದಲ್ಲೂ ಪ್ರಪಂಚದ ಆ ಮೂಭಾಗದಲ್ಲೂ ತಲೆಯೆತ್ತುತ್ತಿರುವ ಸ್ವಾಭಿಮಾನತೇಜಸ್ಸು ಲಂಕಾದ್ವೀಪದಲ್ಲೂ ಒಂದುತೆರದ ಪ್ರೇರಣೆಯನ್ನು ಮಾಡಿದಂತೆ ಕಾಣುತ್ತಿದೆ. ಆ ದ್ವೀಪದ ಯಾವುದೊಂದು ಪತ್ರಿಕೆಯಲ್ಲೂ ಸ್ವದೇಶೋದ್ಯಮಾದಿ ವಿಷಯಗಳೇ ತುಂಬಿರುತ್ತಿವೆ. ಕಳೆದ ತಿಂಗಳು ಅಲ್ಲಿನ ವಿಕ್ಟೋರಿಯಾ ಉಪವನದಲ್ಲಿ ಸಿಂಹಳೀಯರ ಒಂದು ಮಹಾಸಭೆ ಕೂಡಿದ್ದಿತು. ಜಾತಿಮತಭೇದಗಳ ತಾರತಮ್ಯವಿಲ್ಲದೆ ದೇಶೀಯತೆಯೇ ಒಂದು ಜಾತಿಯಾಗಿರುವುದೆಂಬ ಭಾವದಿಂದ ೫೦ ಸಾವಿರ ಮಂದಿಗಳು ಒಂದೇ ಮನಸ್ಸಿನಿಂದ ಆ ಸಭೆಗೆ ಸೇರಿದ್ದರು. ಇದುವರೆಗಿದ್ದ ಪಾಶ್ಚಾತ್ಯ ಪದ್ಧತಿಯ "ಗುಡ್ ಮಾರ್ನಿಂಗ್" ಮೊದಲಾದ ವಂದನೋಕ್ತಿಗಳೂ ಅನ್ಯಭಾಷೆಗಳೂ ಸಹ ಬಿಡಲ್ಪಟ್ಟು, ಪೂರ್ವಪದ್ಧತಿಯ ನಮಸ್ಕಾರಗಳೂ ಉಡಿಗೆತೊಡಿಗೆಗಳೂ ಸಭಿಕರಲ್ಲಿ ತೋರುತ್ತಿದ್ದುವು. ಆಹಾರ ಸ್ವೀಕಾರದಲ್ಲೂ ರೊಟ್ಟಿ ಸೋಡಾ, ಲೆಮನೇಡ್ ಮೊದಲಾದುವುಗಳೆಲ್ಲಾ ಬಿಡಲ್ಪಟ್ಟು ಅನ್ನ ನೀರು ಮೊದಲಾದ ಪೂರ್ವಿಕ ಆಹಾರಗಳೇ ಸಂತೋಷದಿಂದಲೂ ಸ್ವೀಕರಿಸಲ್ಪಟ್ಟುವು. ಸಭೆಯಲ್ಲಿ ಉಪಯೋಗಿಸಿದ ಭಾಷೆಯೆಲ್ಲಾ ಸಿಂಹಳೀಯ ಭಾಷೆಯೇ ಆಗಿದ್ದಿತು. ಇನ್ನು ಮುಂದೆ ತಾವೆಲ್ಲರೂ ಪೂರ್ವಾಚಾರಗಳನ್ನೇ ಅನುಸರಿಸಿ ನಡೆಯಬೇಕೆಂತಲೂ, ಅನ್ಯದೇಶೀಯ ಪದ್ಧತಿಗಳನ್ನವಲಂಬಿಸಕೂಡದೆಂತಲೂ, ಅನ್ಯರಪದ್ಧತಿಯನ್ನನುಸರಿಸುವುದರಿಂದ ಸಿಂಹಳೀಯ ಜಾತಿನಾಶನವೇ ಕಾಲಾನುಕಾಲದಲ್ಲಿ ಸಂಭವಿಸುವುದೆಂತಲೂ, ಸಿಂಹಳೀಯರ ಪೂರ್ವಚರಿತ್ರವು ಕೀರ್ತಿಕರವಾಗಿಯೂ ಅವರ ಪೂರ್ವಾಚಾರವು ಶ್ರೇಯಸ್ಕರವಾಗಿಯೂ ಇರುವುವೆಂತಲೂ, ಅವರ ದುಷ್ಪಾನಪರಿತ್ಯಾಗಶೀಲವೂ ನಿರಾಡಂಭಿಕವೃತ್ತಿಯೂ ಅಪೂರ್ವಗುಣಗಳಾಗಿರುವುವೆಂತಲೂ, ಅವನ್ನೆಲ್ಲಾ ಬಿಡದೆ ಮುಂದೆ ಕಾಪಾಡಿಕೊಂಡು ಬರಬೇಕೆಂತಲೂ ಭಾಷಣಗಳಾದುದಲ್ಲದೆ ಆ ಅರ್ಥಕ್ಕೆ ಸಭೆಯ ನಿರ್ಧಾರಗಳೂ ಆದುವು.

ಮದ್ರಾಸುಪಟ್ಟಣದ ದಾನಶಾಸನ

ಈಗ ಭರತಖಂಡದ ಪ್ರಸಿದ್ಧ ಪಟ್ಟಣಗಳಲ್ಲಿ ಒಂದಾಗಿರುವ ಮದ್ರಾಸು ನಗರವು ಈಗ್ಗೆ ೩೦೦ ವರ್ಷಗಳ ಕೆಳಗೆ ೫-೬ ಗುಡಿಸಲುಗಳುಳ್ಳ ಒಂದು ಬೆಸ್ತರ ಹಳ್ಳಿಯಾಗಿದ್ದಿತು. ಆಗ ವಿಜಯನಗರವು ಹಾಳಾಗಿ ಅಲ್ಲಿನ ಅರಸರ ಪರಂಪರೆಯ ಶ್ರೀರಂಗರಾಯನು ಚಂದ್ರಗಿರಿಯಲ್ಲಿ ಆಳುತ್ತಿದ್ದನು. ಈ ಮದ್ರಾಸುಪಟ್ಟಣದ ಭಾಗವು ಆತನಿಗೇ ಅಧೀನವಾಗಿತ್ತು ಅದರ ನೆರೆಹೊರೆಯ ಭೂಮಿಯು ಪೊಂದಮಲ್ಲಿಯ ನಾಯಕನ ವಶದಲ್ಲಿದ್ದಿತು. ರಾಯನು ಈಗಿನ ಮದ್ರಾಸುಪಟ್ಟಣದ ಸ್ಥಲವನ್ನೂ ಆ ನಾಯಕನಿಗೇ ವಹಿಸಿ ಇದಕ್ಕೆ ತನ್ನ ಹೆಸರನ್ನು ಎಂದರೆ "ಶ್ರೀರಂಗರಾಯಪಟ್ಟಣ" ವೆಂದು ಪರಿಡಬೇಕೆಂದು ಹೇಳಿದ್ದನು. ಆದರೆ ನಾಯಕನು ಹಾಗೆ ಮಾಡದೆ ತನ್ನ ತಂದೆಯ ಹೆಸರನ್ನಿಟ್ಟು "ಚೆನ್ನಪಟ್ಟಣ" ವೆಂದು ಕರೆದನು, ಈಗಲೂ ಅದಕ್ಕೆ ಚೆನ್ನಪಟ್ಟಣವೆಂದು ರೂಢಿಯುಂಟು. ಇದರ ಮೇಲೆ ಶ್ರೀರಂಗರಾಯನು ಮುಳಿಸುಗೊಂಡಿದ್ದು ಆಂಗ್ಲವರ್ತಕರಿಗೆ ಸಹಾಯಕವಾಗಿ ನಿಂತು ಅವರಿಗೆ ಪಟ್ಟಣದ ಜಾಗವನ್ನು ವಹಿಸಿಕೊಟ್ಟನು.

ಶ್ರೀರಂಗರಾಜನು ೧೬೪೩ ನೆ ಇಸವಿ ನವೆಂಬರ್ ತಾ॥ ೧೫ ರಲ್ಲಿ ಈ ವಿಷಯವಾಗಿ ಬರೆದುಕೊಟ್ಟ ದಾನಶಾಸನದ ಪ್ರತಿಯು ಮದ್ರಾಸಿನ ಆಂಧ್ರಪ್ರಕಾಶಿಕೆಯಲ್ಲಿ ಪ್ರಕಟವಾಗಿದೆ. ಅದರ ಅಭಿಪ್ರಾಯವನ್ನು ಈ ಕೆಳಗೆ ನಾವು ಮುದ್ರಿಸಿದ್ದೇವೆ.

ಶ್ರೀಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಪ್ರತಾಪ ಶ್ರೀರಂಗರಾಯರವರು ಇಂಗ್ಲೀಷ್ ಕಂಪನಿಯವರ ಮುಖ್ಯ ಸೇನಾಪತಿಯಾದ ಆಗಸ್ಟಸ್ ಥಾಮಸ್‌ರವರಾದ ನಿಮಗೆ ಬರೆದುಕೊಟ್ಟ ಕೌಲೇನೆಂದರೆ–ನೀವು ಆರುಮೊಗಮ್ಮನ್ನು ಬಿಟ್ಟು ನನ್ನ ಹೆಸರಿನ ಶ್ರೀರಂಗರಾಯಪಟ್ಟಣಕ್ಕೆ ಬಂದು ವ್ಯಾಪಾರವನ್ನು ವೃದ್ಧಿಗೊಳಿಸಿ, ಚಿಕ್ಕದಾಗಿದ್ದ ರೇವೆಯನ್ನು ಬಳೆಯಿಸಿದಿರಿ. ಕೋಟೆಯನ್ನು ಕಟ್ಟಿರುವಿರಿ. ಆದುದರಿಂದ ವ್ಯಾಪಾರದಲ್ಲಿ ನಿಮಗೆ ಪ್ರೋತ್ಸಾಹವನ್ನುಂಟುಮಾಡುವುದಕ್ಕೂ ನನ್ನ ಹೆಸರಿನಲ್ಲಿರುವ ಪಟ್ಟಣವನ್ನು ಇನ್ನೂ ವೃದ್ಧಿಪಡಿಸುವುದಕ್ಕೂ ಸಹ ನಿಮ್ಮ ಕಂಪೆನಿಗೆ ಸಂಬಂಧಪಟ್ಟ ಕ್ರಯವಿಕ್ರಯದ ವಸ್ತುಗಳ ಮೇಲಿನ ಸುಂಕವನ್ನು ತೆಗೆದುಬಿಟ್ಟಿರುತ್ತೇನೆ ನಮಗೆ ನೀವು ಸಲ್ಲಿಸಬೇಕಾದ ಪೇಷ್ಕಷ್ ವೆಚ್ಚವನ್ನು ತುಂಬಿಕೊಳ್ಳುವುದಕ್ಕಾಗಿ ರೇವೆಯಲ್ಲಿ ಬರುವ ಸುಂಕದಲ್ಲಿ ಸ್ವಲ್ಪ ಭಾಗವನ್ನೂ ಈ ಪಟ್ಟಣದ ಸುತ್ತಣ ಭೂಮಿಯ ಮೇಲಣ ಕಂದಾಯವನ್ನೂ ಬೆಸ್ತರ ಹಳ್ಳಿಯನ್ನೂ ನಿಮಗೆ ಕೊಟ್ಟಿರುತ್ತೇನೆ. ನಿಮ್ಮ ವ್ಯಾಪಾರವು ಚೆನ್ನಾಗಿ ಜರುಗುವುದಕ್ಕಾಗಿ ಪಟ್ಟಣದ ಪರಿಪಾಲನೆಯ ಭಾರವನ್ನು ನಿಮಗೇ ವಹಿಸಿಕೊಡುವೆನಾಗಿದ್ದೇನೆ. ನಿಮ್ಮ ನೆರೆಹೊರೆಯಲ್ಲಿರುವ ಪೊಂದಮಲ್ಲಿಯವರು ನಿಮಗೆ ತೊಂದರೆಯನ್ನು ಮಾಡಿದರೆ ನಿಮಗೆ ಸಹಾಯಮಾಡುವುದಕ್ಕೆ ಸಿದ್ಧರಾಗಿದ್ದೇವೆ. ನೀವು ಈ ರೇವೆಯಿಂದ ಹೊರಕ್ಕೆ ಸಾಗಿಸಿಕೊಂಡು ಹೋಗುವ ಪದಾರ್ಥಗಳ ಮೇಲೆ ತೆರುಗೆಯನ್ನು ಹಾಕುವುದಿಲ್ಲ. ನಿಮ್ಮ ಕಂಪೆನಿಯ ಹಡಗುಗಳು ದೈವವಶಾತ್‌ಗಾಳಿಯಿಂದ ಹೊಡೆದುಕೊಂಡು ಬಂದು ರೇವೆಗೆ ಸೇರಿದರೆ ಅವುಗಳಲ್ಲಿರುವ ವಸ್ತುಗಳನ್ನು ನೀವೇ ತೆಗೆದುಕೊಳ್ಳಬಹುದು. ಅಂಥ ಹಡಗುಗಳು ಇತರ ವರ್ತಕರದಾಗಿದ್ದರೆ ಅದರ ಕರ್ತರು ಬಂದು ಕೇಳಿದಾಗ ಅವುಗಳನ್ನು ಅವರಿಗೆ ಕೊಟ್ಟುಬಿಡಬೇಕು. ಹಾಗೆ ಅದರ ಕರ್ತರಾರೂ ಬರದಿದ್ದರೆ ಆ ಹಡಗುಗಳೂ ಅವುಗಳಲ್ಲಿನ ವಸ್ತುಗಳೂ ನಮಗೇ ಸೇರಬೇಕು. ಪಟ್ಟಣದ ಮೇಲುರಕ್ಷಣೆಯನ್ನು ನಮ್ಮ ವಶದಲ್ಲೇ ಇಟ್ಟುಕೊಳ್ಳುವೆವು. ಪೊಂದಮಲ್ಲಿ ನಾಯಕನಿಗೇ ಆಗಲಿ ಇನ್ನಾವ ನಾಯಕನಿಗೇ ಆಗಲಿ ಆ ಅಧಿಕಾರವನ್ನು ಕೊಡುವವರಲ್ಲ. ನಿಮ್ಮ ವಸ್ತುಗಳು ಪೊಂದಮಲ್ಲಿಯ ಪ್ರಾಂತದಲ್ಲಿ ಹಾದುಹೋದರೆ ಅದಕ್ಕೆ ಸ್ವಲ್ಪ ಸುಂಕವನ್ನು ಕೊಡಬೇಕು. ಈ ಕೌಲನ್ನು ನಂಬಿ ನೀವು ವ್ಯಾಪಾರವನ್ನು ಸಂತೋಷದಿಂದ ಮಾಡಿಕೊಂಡು ಹೋಗಬಹುದು. ನಮ್ಮ ಕಡೆಯ ಮನುಷ್ಯರಾರಾದರೂ ನಿಮಗೆ ತೊಂದರೆಕೊಟ್ಟರೆ ಅವರನ್ನಡಗಿಸಿ ನಿಮಗೆ ಸಹಾಯಮಾಡಲು ನಾವು ಬದ್ಧರಾಗಿದ್ದೇವೆ. ನಮ್ಮ ಕೌಲೂ ಈ ರೇವೆಯೂ ಆ ಚಂದ್ರಾರ್ಕವಾಗಿ ನಿಲ್ಲಲಿ" ಎಂಬುದಾಗಿ.

ಈ ಕೌಲನ್ನು ದಾಮೇರ್ಲ ವೆಂಕಪ್ಪನಾಯಕನು ಮೊದಲು ಬರೆದುಕೊಟ್ಟಿದ್ದನಂತೆ, ಅದನ್ನೇ ಶ್ರೀರಂಗರಾಯನು ಸ್ಥಿರಪಡಿಸಿದನು. ಹೀಗೆ ಸ್ಥಿರಪಡಿಸಿ ಕೊಟ್ಟುದಕ್ಕಾಗಿ ಇಂಗ್ಲೀಷರು ಆ ಶ್ರೀರಂಗರಾಯನಿಗೆ ೭ ಗಜ ಕೆಂಪು ಮಲ್‌ಬಟ್ಟೆಯನ್ನೂ ೧೬ಗಜ ಹಸುರು ಮಲ್‌ಬಟ್ಟೆಯನ್ನೂ ೧೦ಮಣ ಶ್ರೀಗಂಧದ ಚಕ್ಕೆಯನ್ನೂ ೭ನಿಲುಗನ್ನಡಿಗಳನ್ನೂ ಒಂದು ಗುಲಾಬಿ ಅತ್ತರಿನ ಶೀಸೆಯನ್ನೂ ಕಾಣಿಕೆಯಾಗಿ ಕೊಟ್ಟರಂತೆ.

ತೆಂಗಿನ ವ್ಯವಸಾಯಾಭಿವೃದ್ಧಿ.

ಈಗ ತೆಂಗಿಗೆ ಬಂದಿರುವ ಪ್ರಾಶಸ್ತ್ಯವು ಹಿಂದೆ ಯಾವಾಗಲೂ ಬಂದಿರಲಿಲ್ಲವೆಂದು ಹೇಳಬಹುದು. ಪ್ರಪಂಚದಲ್ಲಿ ಎಲ್ಲೆಲ್ಲಿ ಇದರ ಬೆಳಸನ್ನುಮಾಡಬಹುದೋ ಅಲ್ಲೆಲ್ಲಾ ಇದನ್ನು ವೃದ್ಧಿಪಡಿಸಬೇಕೆಂಬ ಯೋಚನೆಯು ಸಾಹಸಿಗರಿಗೆ ಉಂಟಾಗಿದೆ. ಕೊಬ್ಬರಿಯಿಂದ ಅನೇಕ ಉಪಯುಕ್ತ ವಸ್ತುಗಳನ್ನು ನಿರ್ಮಿಸಬಹುದೆಂದೂ ಅದರ ನಾರು ಬಹೂಪಯುಕ್ತವಾದುದೆಂದೂ ಮೊದಲಾಗಿ ಲಂಡನ್ ಪಟ್ಟಣದಲ್ಲಿ ಗನ್ಮಾಜ್ ಎಂಬುವರು ಒಂದು ಉಪನ್ಯಾಸವನ್ನು ಮಾಡಿ ಮಲಬಾರಿನಲ್ಲಿ ತೆಂಗಿನ ತೋಟವನ್ನು ಮಾಡುವುದಕ್ಕೆ ಅತ್ಯುಪಯುಕ್ತವಾದ ಭೂಮಿಯು ವಿಸ್ತಾರವಾಗಿರುವುದೆಂದು ಬೋಧಿಸಿದರು. ಮತ್ತೂ ೩ ಲಕ್ಷ ರೂ ಗಳ ಮೂಲದ್ರವ್ಯವನ್ನು ಹಾಕಿಕೊಂಡು ೧ ಸಾವಿರ ಎಕರೆ ಭೂಮಿಯಲ್ಲಿ ಶಾಸ್ತ್ರೀಯ ಪದ್ಧತಿಯ ಪ್ರಕಾರ ಇದರ ಬೆಳಸನ್ನು ಮಾಡಿದರೆ ಆರಂಭಿಸಿದ ೭ ವರ್ಷಗಳಲ್ಲಿ ಅವು ಫಲಕ್ಕೆ ಬಂದು, ವರ್ಷ ೧ ಕ್ಕೆ ೧ ಲಕ್ಷದ ೮೦ ಸಾವಿರ ರೂ.ಗಳ ಪ್ರಕಾರ ಉತ್ಪತ್ತಿಯನ್ನು ಕೊಡುವುವೆಂತಲೂ, ಕೆಲ ವರ್ಷಗಳಲ್ಲಿ ಅವು ವರ್ಷ ೧ಕ್ಕೆ ೪॥ ಲಕ್ಷ ರೂ.ನಷ್ಟು ಉತ್ಪತ್ತಿಯನ್ನು ಕೊಡಲು ಅರ್ಹವಾಗುವುವೆಂತಲೂ ಧೈರ್ಯವನ್ನು ಹೇಳಿ ಪ್ರೋತ್ಸಾಹಿಸಿದರು. ಮತ್ತು ಕೊಬ್ಬರಿಯಿಂದ ಉತ್ತಮವಾದ ಬೆಣ್ಣೆಯನ್ನು ಹಸ್ತಸ್ಪರ್ಶವಿಲ್ಲದಂತೆ ತೆಗೆಯಬಹುದೆಂತಲೂ, ಕೊಬ್ಬರಿಯೆಣ್ಣೆಯು ನಾನಾವಿಧದ ಕೆಲಸಗಳಿಗೆ ಉಪಯೋಗಿಸುವುದೆಂತಲೂ, ಇದರ ಬೆಣ್ಣೆಯು ಹಾಲಿನಿಂದ ತೆಗೆದ ಬೆಣ್ಣೆಗಿಂತ ರುಚಿ ಮೊದಲಾದ ಗುಣಗಳಲ್ಲಿ ಕಡಿಮೆಯಾಗದಿರುವುದು ಮಾತ್ರವೇ ಅಲ್ಲದೆ, ಹಾಲಿನ ಬೆಣ್ಣೆಗಿಂತಲೂ ಬೇಗನೆ ಸುಲಭವಾಗಿ ಜೀರ್ಣಿಸತಕ್ಕುದಾಗಿರುವುದೆಂತಲೂ, ಮತ್ತು ಬೆಲೆಯಲ್ಲೂ ಕೂಡ ಅದಕ್ಕಿಂತಲೂ ಸುಲಭವಾಗುವುದೆಂತಲೂ, ಅದುಕಾರಣ ಇದು ಸರ್ವೋತ್ಕೃಷ್ಟವಾದ ಬೆಣ್ಣೆಯೆಂತಲೂ ದೃಷ್ಟಾಂತಪಡಿಸಿ ಹೇಳಿದರು. ಅದರ ಮೇಲೆ ಲಂಡನ್ ಪಟ್ಟಣದಲ್ಲಿರುವ ವರ್ತಕ ಸಂಘದವರು ಭರತಖಂಡದ ದಕ್ಷಿಣ ಭಾಗಗಳಲ್ಲೂ ಸಿಂಹಳದ್ವೀಪದಲ್ಲೂ ತೆಂಗಿನ ತೋಟಗಳನ್ನು ಸ್ಥಾಪಿಸಲು ಪ್ರಯತ್ನಪಟ್ಟಿದ್ದಾರೆ. ಪರದೇಶದ ಸಾಹಸಿಗರು ಬಂದು ನಮ್ಮ ಪ್ರತ್ಯಕ್ಷ ಕಾಮಧೇನುವಾದ ಭಾರತ ಭೂಮಿಯಲ್ಲಿ ನೆಲಸಿ ಕಾಮಿತಾರ್ಥವನ್ನು ಹೇಗೆ ಹೊಂದುತ್ತಿರುವರೆಂಬುದನ್ನು ಅದೇ ಭಾರತ ಭೂಮಿಯಲ್ಲಿ ಹುಟ್ಟಿ ತೊಗಡಿಸುತ್ತಿರುವವರು ಕಣ್ತೆರೆದು ನೋಡಬೇಕು.

[illegible]

ಪ್ರಕಟಣೆ.

ರಾಜಧಾನಿಯಲ್ಲಿ ಮುದ್ರಣ ಕೆಲಸವನ್ನು ಬಹು ಅಂದವಾಗಿ ಮಾಡುವುದರಲ್ಲಿ ಪ್ರಸಿದ್ಧಿಯನ್ನು ಹೊಂದಿರುವ ಕರ್ಜನ್ ಪ್ರೆಸ್ಸನ್ನು ನಾವು ಕ್ರಯಕ್ಕೆ ತೆಗೆದುಕೊಂಡಿರುವೆವು. ಇಲ್ಲಿ ಇಂಗ್ಲೀಷು ಮತ್ತೂ ಕನ್ನಡದ ಭಾಷೆಗಳಲ್ಲಿ ಮುದ್ದಾದ ಅಕ್ಷರಗಳಿಂದ ವಿಜಿಟಿಂಗ್ ಕಾರ್ಡ್, ಲಗ್ನಪತ್ರಿಕೆಗಳು ಪಂಚಾಂಗಗಳು ಮೊದಲಾಗಿ ಪುಸ್ತಕಗಳವರೆಗೆ ಎಲ್ಲಾ ಮುದ್ರಣಕಾರ್ಯವೂ ಬಹು ಅಂದವಾಗಿಯೂ ಕ್ಲುಪ್ತಕಾಲದಲ್ಲೂ ನಾನಾ ಬಣ್ಣಗಳಲ್ಲಿ ಮಾಡಿ ಕೊಡಲ್ಪಡುವುವಲ್ಲದೆ ಎಲ್ಲ ವಿಧವಾದ ಬೈಂಡಿಂಗ್ ಕಾರ್ಯವೂ ಮಾಡಲ್ಪಡುವುದು. ಈಗ ವಿವಾಹ ಲಗ್ನಕಾಲವಾದುದರಿಂದ ಲಗ್ನಪತ್ರಿಕೆಗಳನ್ನು ಕಪ್ಪು ಕೆಂಪು, ಹಸರು ಮೊದಲಾದ ಬಣ್ಣದ ಶಾಯಿನಲ್ಲಿ ಕಾಲಕ್ಕೆ ಸರಿಯಾಗಿ ಮಾಡಿಕೊಡಲೇರ್ಪಡಿಸಿರುತ್ತೇವೆ. ಅವಶ್ಯವುಳ್ಳವರು ನಮಗೆ ಬರೆದು ಬೇಕಾದ ವಿಷಯವನ್ನು ತಿಳಿಯಬಹುದು.

ವೈ. ವಿರೂಪಾಕ್ಷಯ್ಯ,
ಪ್ರೊಪ್ರೈಟರ್
ಕರ್ಜನ್ ಪ್ರೆಸ್, ಮೈಸೂರು.

ಮೈಸೂರ್ ಸ್ಟಾರ್

೧೯೧೪ನೆಯ ಮೇ ತಾ॥ ೧೮ ನೆಯ ಸೋಮವಾರ.

ಕಾಲಸ್ಥಿತಿ.

ಮೈಸೂರು ಸಂಸ್ಥಾನದಲ್ಲಿ ಈ ಆನಂದಸಂವತ್ಸರಾರಂಭದಿಂದ ಇದುವರೆಗಿನ ಕಾಲಸ್ಥಿತಿಯು ಜನಗಳಿಗೆ ಹರ್ಷಕರವಾಗಿಲ್ಲ. ಕಳೆದ ವರ್ಷ ಹಿಂಗಾರಿನ ಮಳೆಗಳು ಆಗದೆ ಹೋದುದರಿಂದ ಬೆಳಸಿನಲ್ಲಿ ತುಂಬಾ ನಷ್ಟವಾಯಿತು. ಈ ವರ್ಷದ ಮುಂಗಾರು ಮಳೆಗಳಾದರೂ ಬೇಗನೆ ಸಂಧಿಸಿ ನಡೆಯಿಸಿದ್ದರೆ ಜನರಿಗೂ ದನಕರುಗಳಿಗೂ ನೀರಿಗೂ ಆಹಾರಕ್ಕೂ ಇರುವ ತೊಂದರೆಯು ಕಡಿಮೆಯಾಗುತ್ತಿದ್ದಿತು. ಹಾಗಿಲ್ಲದೆ ಹೋಗಿರುವುದರಿಂದ ಬೇಸಾಯಗಾರರ ಹಾಹಾಕಾರವು ಹೆಚ್ಚುತ್ತಲಿದೆ. ಮುಂಗಾರು ಬಿತ್ತನೆಯ ಕಾಲವು ಮುಗಿಯುತ್ತ ಬಂದಿತು. ಹಲವು ಗ್ರಾಮಗಳಲ್ಲಿ ನೀರಿಗಾಗಿ ಪಡುವ ತಾಪತ್ರಯವು ಕೇಳಿದವರಿಗೆಲ್ಲಾ ಸಂಕಟಕರವಾಗಿದೆ. ಸಂಸ್ಥಾನದಲ್ಲಿ ಬೆಂಗಳೂರು ಕೋಲಾರದ್ವಿಗಳ ಹೊರತು ಉಳಿದ ಯಾವ ಡಿಸ್ಟ್ರಿಕ್ಟಿನಲ್ಲೂ ಜನವರಿಯಿಂದ ಇದುವರೆಗೆ ಬಿದ್ದಿರುವ ಮಳೆಯು ಸರಾಸರಿ ೧ ಅಂಗುಲದಷ್ಟೂ ಆಗಿರುವುದಿಲ್ಲ; ಮೊನ್ನೆಯ ವಾರದಲ್ಲಿ ಮಾತ್ರ ಮಲೆನಾಡಿನ ೨-೪ ತಾಲ್ಲೂಕುಗಳಲ್ಲಿ ೧-೩ ಅಂಗುಲದ ಮಳೆಗಳಾಗಿವೆ. ಬೆಂಗಳೂರು ಕೋಲಾರಗಳ ಹೊರತು ಉಳಿದ ಬಯಲು ಸೀಮೆಯಲ್ಲಿ ಬಹು ಭಾಗದ ಭೂಮಿಯು ಬಿತ್ತನೆಯನ್ನೇ ಕಾಣದು. ಈ ಕಾರಣದಿಂದ ಆಹಾರ್ಯ ವಸ್ತುಗಳ ಬೆಲೆಯು ಏರುತ್ತಲಿದೆ. ಈಗಿಂತಲೂ ಮುಂದಿನ ಕಾಲಸ್ಥಿತಿಯು ಎಷ್ಟು ಭಯಂಕರವಾಗುವುದೋ ಎಂದು ಪ್ರಜೆಗಳು ಯೋಚಿಸುತ್ತಿದ್ದಾರೆ.

ಆದರೆ ದೈವಾನುಗ್ರಹದಿಂದ ಇನ್ನು ಮುಂದಿನ ಕಾಲಸ್ಥಿತಿಯು ಅಷ್ಟು ಭಯಂಕರವಾಗಲಾರದೆಂದು ಹೇಳಲು ಅವಕಾಶವಿದೆ. ಏಕೆಂದರೆ ಈ ವಾರದಲ್ಲಿ ಬಂದಿರುವ ತಂತ್ರೀವಾರ್ತೆಗಳನ್ನು ನೋಡುವಲ್ಲಿ ಬರ್ಮಾ-ಬಂಗಾಳಗಳಲ್ಲೂ ಬಂಗಾಳಕೊಲ್ಲಿಯಲ್ಲೂ ಮದ್ರಾಸಿನ ಉತ್ತರಕ್ಕೂ ಮಳೆಗಳಾಗುತ್ತಿವೆ. ಕಳೆದ ೧ ವಾರದಲ್ಲಿ ಭರತಖಂಡದ ದಕ್ಷಿಣ ಭಾಗದಲ್ಲಿರುವ ಕೊಲಂಬೋವಿನಲ್ಲಿ ೧೪॥ ಅಂಗುಲ ಮಳೆಯಾಗಿದೆ. ಕೊಚ್ಚಿ ತಿರವಾಂಕೂರುಗಳ ಕಡೆಯೂ ಹಾಗೆಯೇ ಮಳೆಯಾಗಿದೆ. ಕಲ್ಲಿಕೋಟೆ ಮಂಗಳೂರು ಕಡೆಯೂ ಮಳೆಯಾಗುತ್ತಿದೆ. ನೀಲಗಿರಿ ಕೊಡೆಕೆನಾಲಿನ ಕಡೆಯೂ ಬಲವಾದ ಮಳೆಯಾಗುತ್ತಿವೆ. ಶಾಲ್ಯ ತಿರುಚನಾಪಳ್ಳಿ ಮಧುರೆಗಳ ಕಡೆಯೂ ಕಳೆದವಾರ ಮಳೆಗಾರಂಭವಾಗಿದೆ. ಹೀಗೆ ನಮ್ಮ ದೇಶದ ಸುತ್ತಲೂ ಮಳೆಗಳಿಗೆ ಆರಂಭವಾಗಿರುವುದರಿಂದ ಈ ವಾರದೊಳಗಾಗಿ ನಮ್ಮಲ್ಲೂ ಮಳೆಗಾರಂಭವಾಗಬಹುದೆಂದು ಊಹಿಸಬಹುದಾಗಿದೆ. ನಿನ್ನೆ ಮೊನ್ನೆಯಿಂದ ಇತ್ತಲೂ ಕಾಣಿಸುತ್ತಿರುವ ಮೋಡಬೆಸ್ನವು ಸುಮುಖವಾಗಿದೆ. ದೈವಾನುಗ್ರಹದಿಂದ ಬೇಗನೆ ಸಂಸ್ಥಾನದಲ್ಲಿ ಮಳೆಗಳು ಬಿದ್ದು ಪ್ರಜೆಗಳ ಒಳಹೊರಗಿನ ತಾಪಗಳು ಶಾಂತವಾಗುವ ಸ್ಥಿತಿಯುಂಟಾಗಲೆಂದು ಕೋರುತ್ತೇವೆ.

ಭಾರತೀಯ ನಾರೀಮಣಿಯರು.

ಸಂಯುಕ್ತ ಅಧಿಪತ್ಯಕ್ಕೆ ಸೇರಿದ ಮುಸ್ಸೂರೀಪಟ್ಟಣದ ಮ್ಯುನ್ಸಿಪಲ್ ಕೌನ್ಸಿಲರ್ ಪದವಿಯನ್ನು ಪಡೆಯಲು ಒಬ್ಬ ಆಂಗ್ಲಸ್ತ್ರೀಯು ಪ್ರಯತ್ನಪಟ್ಟು ಜಯಶೀಲಳಾಗಿರುತ್ತಾಳೆ. ಹೀಗೆ ನಮ್ಮ ಭರತಖಂಡದ ಮ್ಯುನ್ಸಿಪಾಲಿಟಿಯಲ್ಲಿ ಸ್ತ್ರೀಸಭಿಕಳು ಆರಿಸಲ್ಪಟ್ಟುದಕ್ಕೆ ಇದೇ ಮೊದಲೆಂದು ಹೇಳಬಹುದು. ಇದಕ್ಕೆ ಮೊದಲು ೧೯೧೧ನೆಯ ವರ್ಷದಲ್ಲಿ ಅಲಹಾಬಾದಿನ ಮ್ಯುನ್ಸಿಪಾಲಿಟಿಗೆ ಸಭಿಕಳಾಗಿ ಸೇರಲು ಒಬ್ಬಾಕೆಯು ಪ್ರಯತ್ನಪಟ್ಟಿದ್ದು ತಪಸ್ಥಳಾಗಿದ್ದಳು. ಆದರೆ ಭಾರತೀಯಸ್ತ್ರೀಯರಾರೂ ಇಂಥ ಸಾಹಸದ ಕಾರ್ಯಕ್ಕೆ ಇದುವರೆಗೂ ಮುಂದೆ ಬಂದುದಿಲ್ಲ. ಬಂಗಾಳಾ ನಾರೀಮಣಿಯರು ಮೊದಲು ಇಂಥ ವಿಷಯದಲ್ಲಿ ಪ್ರಯತ್ನಶೀಲರಾಗಬಹುದು. ಆದರೆ ಕಲ್ಕತ್ತಾಪಟ್ಟಣದೊಳಗೆ ಮೊನ್ನೆತಾನೇ ಅಲ್ಲಿನ ಪೌರಕಾರ್ಯನಿರ್ವಾಹಕ ಸಭೆಯೊಳಗೆ ಒಂದು ವಿಷಯವು ಚರ್ಚೆಗೆ ಬಂದು ಪರಾಜಿತವಾಗಿ ಹೋದುದನ್ನು ನೋಡಿದರೆ ನಮ್ಮದೇಶದ ನಾರೀಮಣಿಗಳು ಇಂಥ ಕಾರ್ಯದಲ್ಲಿ ತೊಡಗುವ ಕಾಲವು ಇನ್ನೂ ಬಹುದೂರದಲ್ಲಿರುವುದೆಂದೋ ಅಥವಾ ಅಸಂಭವವೆಂದೋ ಹೇಳಬೇಕಾಗುತ್ತದೆ. ಆ ಸಂಗತಿಯೇನೆಂದರೆ–ಕಲ್ಕತ್ತಾಪಟ್ಟಣದ ಸಾರ್ವಜನಿಕೋದ್ಯಾನ ವನವನ್ನು ವಾರಕ್ಕೆ ಒಂದೆರಡುದಿನಗಳ ಮಟ್ಟಿಗಾದರೂ ಹೆಂಗುಸರ ಉಪಯೋಗಕ್ಕಾಗಿಯೇ ಕಾದಿಡುವಂತೆ ಮಾಡಲ್ಪಡಬಹುದೆ? ಎಂಬ ವಿಷಯವು ಅಲ್ಲಿನ ಪೌರಕಾರ್ಯ ನಿರ್ವಾಹಕಸಭೆಯ ಚರ್ಚೆಗೆ ಬಂದಿತು. ಸಭಿಕರಲ್ಲಿ ಪೂರ್ವಾಚಾರಪರಾಯಣರು ನಮ್ಮ ಹೆಂಗುಸರು ಇಂಥ ಬಹಿರಂಗ ಪ್ರದೇಶಗಳಿಗೆ ಬರುವುದು ಪಾಪಕಾರ್ಯವೆಂತಲೂ, ಅವರನ್ನು ಹಾಗೆ ಹೊರಕ್ಕೆ ಬರಗೊಟ್ಟರೆ ಇಂಗ್ಲಾಂಡಿನ ಸ್ತ್ರೀಯರು ಸ್ತ್ರೀಸ್ವಾತಂತ್ರ್ಯವಾದಿಗಳಾಗಿ ಮಾಡುತ್ತಿರುವಂತಹ ಅನರ್ಥವೇ ನಮಗೂ ಸಂಭವಿಸುವುದೆಂತಲೂ ಹೇಳಿ ನಿಷೇಧಿಸಿದರು. ಸಂಸ್ಕಾರಕ ಪಕ್ಷದ ಸಭಿಕರು ಸಹ ನಮ್ಮ ಹೆಂಗುಸರಿಗೆ ಗೃಹಕೃತ್ಯಕ್ಕೇ ವೇಳೆಯು ಸಾಲದಿರುವಾಗ ಇಂಥ ಬಹಿರ್ವಿಹಾರಕ್ಕೆ ಅವಕಾಶ ವೆಲ್ಲಿರುವುದೆಂದು ಹೇಳಿ ಅನವಶ್ಯಕತೆಯನ್ನು ಸೂಚಿಸಿಬಿಟ್ಟರು ಅಂತೂ ಇಂತೂ ಸ್ತ್ರೀರಿಗೆ ಮನೆಯೇ ಸ್ವರ್ಗವಾಗಿರಬೇಕೆಂದು ಸ್ಥಿರಪಟ್ಟಿತು. ಬಂಗಾಳದಂತಹ ಮುಂದಡಿಯಿಟ್ಟ ದೇಶದ ನಾರೀಮಣಿಯರು ಇನ್ನೂ ಹಾಗಿರುವಾಗ ಹಿಂದುಳಿದ ದೇಶದವರಪಾಡನ್ನೇನುಹೇಳುವುದು? ಆದರೆ ಅತಿ ಸ್ವಾತಂತ್ರ್ಯವು ಸ್ತ್ರೀಯರಿಗೆ ಕೊಡದೆಂಬ ವಿಷಯವನ್ನು ದೀರ್ಘಾಲೋಚನೆಯುಳ್ಳವರೆಲ್ಲರೂ ಒಪ್ಪಬೇಕಾಗುವುದು.

ಪಾರ್ಸಿಯವರ ಆರೋಗ್ಯ.

ಭರತಖಂಡದ ಜನರಲ್ಲಿ ಪಾರ್ಸಿಯವರು ವ್ಯಾಪಾರದಲ್ಲೂ ನಾಗರಿಕತೆಯಲ್ಲಿಯೂ ಇತರ ರಾಜಕೀಯಾದಿವಿಷಯಗಳಲ್ಲೂ ವ್ಯಾಪಕತೆಯನ್ನು ಸಂಪಾದಿಸಿಕೊಂಡಿದ್ದಾರೆ. ಅವರಲ್ಲಿ ಸ್ತ್ರೀಪುರುಷರು ಸೌಂದರ್ಯಕ್ಕೂ ಹೆಸರಾದವರು. ಆದರೂ ಆ ಜನರ ಸಂತತಿಯಲ್ಲಿ ಬರಬರುತ್ತ ನಿಶ್ಶಕ್ತರೂ ರೋಗಿಗಳೂ ಹೆಚ್ಚುತ್ತಿರುವರು. ಮುಂದಾಲೋಚನೆಯುಳ್ಳ ಆ ಜನರು ಈ ಪ್ರಗತಿಯನ್ನು ನೋಡಿ ಬೆದರಿ, ಅದರ ಪರಿಹಾರೋಪಾಯವನ್ನು ಮಾಡಲು ಸಂಕಲ್ಪಿಸಿ ಈಗ ಪರಿಶೋಧನೆಗಾಗಿ ಒಂದು ಸಂಘವನ್ನೇರ್ಪಡಿಸಿದ್ದಾರೆ. ಅದರಲ್ಲಿ ೩೪ ಮಂದಿ ಪುರುಷವೈದ್ಯರೂ ೮ ಮಂದಿ ಸ್ತ್ರೀವೈದ್ಯೆಯರೂ ಇದ್ದಾರೆ. ಇವರು ಪಾರ್ಸಿ ಪಾಠಶಾಲೆಗಳಲ್ಲಿರುವ ಬಾಲಬಾಲಿಕೆಯರನ್ನೆಲ್ಲಾ ಪರೀಕ್ಷೆ ಮಾಡುತ್ತಿದ್ದಾರೆ. ಇದುವರೆಗೆ ೧೩೬೪ ಮಂದಿಬಾಲಬಾಲಿಕೆಯರನ್ನು ಪರೀಕ್ಷಿಸಿದುದರಲ್ಲಿ ೧೯೪ ಮಂದಿಗೆ ಮಾಲೇರಿಯಾಜ್ವರದಿಂದ ಗಡ್ಡೆ ಕಟ್ಟಿದೆಯೆಂದೂ, ೩೯೧ ಮಂದಿಗೆ ನೇತ್ರಬಾಧವು ಸರಿಯಾಗಿಲ್ಲವೆಂದೂ ಗೊತ್ತಾಯಿತು. ಕೇವಲ ಕಿವಿ ಮೂಗು ಈ ಅವಯವಗಳಿಗೆ ಸಂಬಂಧಪಟ್ಟ ರೋಗಗಳುಳ್ಳವರು ೧೦೦ ಕ್ಕೆ ೫೦ ರಷ್ಟು ಇರುವರೆಂದು ಗೊತ್ತಾಯಿತು. ಹಲ್ಲಿನ ರೋಗವುಳ್ಳವರು ವಿಶೇಷವಾಗಿರುವರು. ಪಾರ್ಸಿ ಹುಡುಗರಿಗಾಗಿಯೇ ಉತ್ತಮವಾದ ಉಪವನವೊಂದನ್ನು ಅಂಧೇರಿಯಲ್ಲಿ ನಿರ್ಮಿಸಿದ್ದಾರೆ. ಶಾಲೆಗಳ ವಿಶ್ರಾಂತಿಯ ಕಾಲದಲ್ಲಿ ಇವರುಗಳು ಅಲ್ಲಿಗೆ ಹೋಗಿ ಸುಖವಾಗಿ ಕಾಲವನ್ನು ಕಳೆದು ಆರೋಗ್ಯವನ್ನು ಪಡೆದು ಬರುವಂತೆ ಏರ್ಪಡಿಸಿದ್ದಾರೆ. ಮುಂದೆ ಇನ್ನೂ ಇತರ ಆರೋಗ್ಯವೃದ್ಧ್ಯುಪಾಯಗಳನ್ನು ಸ್ಥಾಪಿಸುವುದರಲ್ಲಿದ್ದಾರೆ. ಕಾರ್ಯಪಟುಗಳ ಸ್ವಭಾವವು ಹೀಗಿರುವುದು.

ಒಳದೇಶದ ವೃತ್ತಾಂತವು.

ರಾಜಧಾನಿಯ ಪೋಲೀಸಿನವರು ಬೀದಿ ಸಿಗರೇಟನ್ನು ಸೇದುವ ಅಲ್ಪವಯಸ್ಸಿನ ಹುಡುಗರನ್ನೂ, ಅವರಿಗೆ ಆ ಪದಾರ್ಥಗಳನ್ನು ಮಾರುವ ಅಂಗಡಿಯವರನ್ನೂ ಹಿಡಿದು ದಂಡನೆಗೆ ಗುರಿಮಾಡುತ್ತಿರುವರು. ಈಗ ಅಂಥವರಲ್ಲಿ ೩-೪ ಜನರಿಗೆ ೪ ಆಣೆಯಿಂದ ಅರ್ಧದಂಡನೆಯಾಗಿರುವುದು. ಇದು ಅತ್ಯವಶ್ಯಕವಾದ ವಿಚಾರವಾದುದರಿಂದ ಪೋಲೀಸರು ಹೆಚ್ಚು ಶ್ರದ್ಧೆಯನ್ನು ವಹಿಸಬೇಕಾಗಿ ಸೂಚಿಸುವೆವು.

ಕನ್ನಂಬಾಡಿಯ ಕಟ್ಟೆಗಾಗಿ ನೆಲವನ್ನು ಅಗೆಯುತ್ತಿರುವಾಗ ಕೆಲವು ಪಚ್ಚೆಯ ಕಲ್ಲುಗಳು ಭೂಗರ್ಭದಲ್ಲಿ ಕಂಡು ಬಂದವೆಂದು ಕೇಳುತ್ತೇವೆ.

ಬೊಂಬಾಯಿ ಗೌರ್ನರವರಾದ ಲಾರ್ಡ್ ವಿಲ್ಲಿಂಗ್‌ಡನ್‌ರವರು ತಮ್ಮ ಪತ್ನಿಯ ಸಮೇತ ಜೂನ್ ತಾ॥ ೨ ರಲ್ಲಿ ಮಹಾಬಲೇಶ್ವರದಿಂದ ನೀಲಗಿರಿಗೆ ಹೋಗಿ ಅಲ್ಲಿರುವ ಮದ್ರಾಸು ಗೌರ್ನರಾದ ಲಾರ್ಡ್ ಪೆಂಟ್ಲಾಂಡ್‌ರವರ ಅತಿಥಿಗಳಾಗಿರುವರು. ಅಲ್ಲಿಗೆ ಹೋಗುವಾಗ್ಗೆ ಮದ್ರಾಸಿನಲ್ಲಿ ಒಂದುದಿನ ನಿಲ್ಲುವರು. ನೀಲಗಿರಿಯಿಂದ ಬೊಂಬಾಯಿಗೆ ಹಿಂದಿರುಗಿ ಹೋಗುವಾಗ್ಗೆ ನಮ್ಮ ಶ್ರೀಮನ್ಮಹಾರಾಜರ ಪ್ರಾರ್ಥನೆಯ ಪ್ರಕಾರ ರಾಜಧಾನಿಗೆ ಸಂದರ್ಶನವನ್ನಿತ್ತು ಇಲ್ಲಿನ ವರ್ಧಂತ್ಯುತ್ಸವಾದಿಗಳನ್ನು ಸಂದರ್ಶಿಸಿಕೊಂಡು ಬೆಂಗಳೂರಿಗೆ ಹೋಗಿ, ಅಲ್ಲಿ ರೆಸಿಡೆಂಟರ ಅತಿಥಿಗಳಾಗಿದ್ದು ಜೂನ್ ತಾ॥ ೧೪ ರಲ್ಲಿ ಪೂನಾಪಟ್ಟಣವನ್ನು ಸೇರುವರು.

ಕಳೆದ ಶುಕ್ರವಾರ ಸಾಯಂಕಾಲ ಬೆಂಗಳೂರಲ್ಲಿ ಬಹಳ ದೊಡ್ಡ ಮಳೆಯಾಗಿ ವಾಯುಗುಣದಲ್ಲಿ ಉಷ್ಣಾಂಶವು ಅಡಗಿ ತಂಪುಂಟಾಗಿರುವುದು. ಹೆಚ್ಚು ಗಾಳಿ ಬೀಸುತ್ತಿದ್ದುದರಿಂದ ಅನೇಕ ಮರಗಳ ಕೊಂಬೆಗಳು ಮುರಿದುಹೋದುವಲ್ಲದೆ ಟೆಲಿಗ್ರಾಫಿನ ಮತ್ತು ವೈದ್ಯುತ್ ದೀಪದ ತಂತಿಗಳಿಗೆ ಅಪಾಯವಾಗಿ ಆ ರಾತ್ರಿ ದೀಪದ ಬೆಳಕೇ ಇಲ್ಲದೆ ಕತ್ತಲೆಯಾಗಿದ್ದಿತು. ರಾಜಧಾನಿಯಲ್ಲೂ ಆರಾತ್ರಿ ದೀಪವು ಆರಿಹೋಗಿ ಹಾಗೇ ಆಯಿತಲ್ಲದೆ, ಗುಡುಗು ಸಿಡಿಲಿನ ಆರ್ಭಟವು ಹೆಚ್ಚಾಗಿದ್ದರೂ ೨ ಸೆಂಟು ಮಳೆ ಮಾತ್ರವಾಗಿ ಬಿಸಿಲಿನ ತಾಪವನ್ನು ಇನ್ನೂ ಹೆಚ್ಚು ಮಾಡಿತು. ನಿತ್ಯದಲ್ಲೂ ಮೋಡವು ಕಟ್ಟಿ ಹಾಗೆಯೇ ಮಾಯವಾಗುತ್ತಿರುವುದು.

ರಾಜಧಾನಿಯ ಶ್ರೀಮಂತ ನೀಲಗಿರಿ ಮದ್ದಣ್ಣನವರ ಪತ್ನಿಯವರು ಕೆಲ ವರ್ಷಗಳಿಂದ ಕ್ಷಯರೋಗ ಪೀಡಿತರಾಗಿದ್ದು ಎಷ್ಟು ಚಿಕಿತ್ಸೆಯನ್ನು ಮಾಡಿಸಿದಾಗ್ಯೂ ಗುಣವನ್ನು ಹೊಂದದೆ ಕಳೆದ ತಾ॥ ೧೦ ರಲ್ಲಿ ವಿಧಿವಶರಾದರೆಂದು ತಿಳಿಸಲು ವಿಷಾದವಾಗುತ್ತದೆ. ಈಕೆಯವರು ೩೮ ವರ್ಷ ವಯಸ್ಸಿನವರಾಗಿದ್ದರಲ್ಲದೆ ವಿಶೇಷ ದಯಾಪರರಾಗಿಯೂ ಗುರುದೈವ ಭಕ್ತಿಯುತರಾಗಿಯೂ ದಾನಧರ್ಮಪರೋಪಕಾರ ನಿರತರಾಗಿಯೂ ಇದ್ದರು ಮ॥ ಮದ್ದಣ್ಣನವರಿಗೆ ಈ ಮಧ್ಯವಯಸ್ಸಿನಲ್ಲಿ ಪತ್ನೀವಿಯೋಗವು ಪ್ರಾಪ್ತವಾದುದಕ್ಕಾಗಿ ನಾವು ಈ ಮೂಲಕ ನಮ್ಮ ಅನುತಾಪವನ್ನು ಪ್ರದರ್ಶಿಸುತ್ತೇವಲ್ಲದೆ ಇವರಿಗೂ ಇವರ ಕುಟುಂಬದವರಿಗೂ ದುಃಖಸಮಾಧಾನವಾಗಲೆಂದು ಕೋರುತ್ತೇವೆ.

ಬೆಂಗಳೂರಿನಲ್ಲಿ ಆರಣಿಜಹಗೀರ್ದಾರರ ಮೋಟಾರಿನಿಂದ ಒಬ್ಬ ಬಾಡಿಗೆಬಂಡಿಯ ಮಹಮ್ಮದೀಯನು ಸತ್ತುಹೋದನಷ್ಟೆ. ಈ ವಿಷಯವನ್ನು ಜಹಗೀರ್ದಾರರು ಪೋಲೀಸಿಗೆ ತಿಳಿಯಿಸಲಿಲ್ಲ. ಈಗ ಪೋಲೀಸಿನವರು ಅವರಮೇಲೆ ಇ. ಪಿ. ಕೋಡು ೩೦೪ ಎ. ೧೫೬ ಸೆಕ್ಷನ್ನುಗಳ ಪ್ರಕಾರ ಅಭಿಯೋಗವನ್ನು ತಂದಿರುತ್ತಾರೆ. ಇದರ ವಿಚಾರಣೆಯು ಬೆಂಗಳೂರು ದಂಡಿನಜಿಲ್ಲಾ ಮೇಜಸ್ಟ್ರೇಟರಾದ ಮ॥ ಕಾರ್ಸ್ಸರವರಲ್ಲಿ ನಡೆಯುತ್ತಿದೆ. ಬ್ಯಾರಿಸ್ಟರಾದ ಮೆಸರ್ಸ್ ಲೂವಿಕ್‌ರವರೂ ಲಾರನ್ಸ್‌ರವರೂ ಅಡ್ವೋಕೇಟ್ ಮ॥ ರಾಮರಾವ್‌ರವರೂ ಅಪರಾಧಿಯ ಪಕ್ಷದಲ್ಲೂ, ಪೋಲೀಸ್ ಇನ್ಸ್‌ಪೆಕ್ಟರ್ ಮಿ॥ ಸ್ಮಿತ್‌ರವರು ಫಿರ್ಯಾದಿ ಪಕ್ಷದಲ್ಲೂ ಇದ್ದಾರೆ ವಿಚಾರ ಎಲ್ಲಾ ಮುಗಿದಿತು. ತೀರ್ಮಾನವು ಈ ದಿನ ಹೇಳಲ್ಪಡುವುದರಲ್ಲಿದೆ.

ವಿದೇಶವೃತ್ತಾಂತಗಳು.

ಕ್ರಿಕೆಟ್ ಆಟದಲ್ಲಿ ಜಗತ್ಪ್ರಸಿದ್ಧನಾಗಿದ್ದ ರೆಜಿನಾಲ್ಡ್ ಫಾಸ್ಟರ್ ಎಂಬಾತನು ಮೃತನಾದನು

ನ್ಯೂ ಅರ್ಲಿಯನ್ಸ್ ಜಿಲ್ಲೆಯೊಳಗಿನ ಸೆಂಟ್ ಲ್ಯೂಕ್ಸ್ ದೇವಾಲಯದಲ್ಲಿ ಒಂದು ಅಪೂರ್ವ ವಿವಾಹವಾಯಿತು. ಇದರಲ್ಲಿ ವಿಲ್ಲಿಸ್‌ವೆಸ್ಟ್ ಎಂಬ ವರನ ವಯಸ್ಸು ೯೨. ಮಾರ್ಗರೆಟ್ ಬ್ರೆಟ ಎಂಬ ವಧುವಿನ ವಯಸ್ಸು ೧೦೨. ಇವರಿಬ್ಬರೂ ಅಡುಗೆ ಕೆಲಸದಲ್ಲಿದ್ದಾಗ ಪರಸ್ಪರ ಪ್ರೇಮಬದ್ಧರಾಗಿದ್ದರಂತೆ.

ಜರ್ಮನ್ ದೇಶದ ಪ್ರತಿ ಪಾಠಶಾಲೆಯಲ್ಲೂ ಆಸ್ಟ್ರಿಯಾದ ಭೂಪಟವೊಂದನ್ನು ತಗುಲಿಹಾಕಿ, ಉಪಾಧ್ಯಾಯರು ಅದನ್ನು ವಿದ್ಯಾರ್ಥಿಗಳಿಗೆ ತೋರಿಸಿ, ಬೇಗನೆ ಜರ್ಮನರ ಕೈವಶವಾಗುವುದರಲ್ಲಿರುವ ದೇಶವು ಇದೇ ಎಂದು ಹೇಳುತ್ತಿರುವರಂತೆ. ಈ ಸುದ್ದಿಯನ್ನು ಕೇಳಿ ಆಸ್ಟ್ರಿಯಾದವರು ಭಯಪಡುತ್ತಿರುವರಂತೆ.

ಫ್ರೆಂಚ್ ದೇಶದಲ್ಲಿ ಸಣ್ಣ ವಯಸ್ಸಿನ ಬಾಲಬಾಲಿಕೆಯರು ತಪ್ಪಿತವನ್ನು ಮಾಡಿದರೆ ಅವರನ್ನು ವಿಚಾರಿಸುವುದಕ್ಕಾಗಿಯೇ ಬೇರೆ ಕೋರ್ಟನ್ನು ಮಾಡಿದ್ದಾರೆ. ಅವರು ವಿಧಿಸುವ ಶಿಕ್ಷೆಯೂ ಆ ವಯಸ್ಸಿನವರಿಗೆ ತಕ್ಕಂತೆ–ಉತ್ತಮ ಮಾರ್ಗದಲ್ಲಿ ನಡೆಯಿಸುವುದಕ್ಕೆ ಸಜ್ಜನರ ವಶಕ್ಕೊಪ್ಪಿಸುವುದು, ಅಥವಾ ಪಾಠಶಾಲೆಗೆ ಸೇರಿಸುವುದು, ಇಲ್ಲವೆ ಯಾವುದಾದರೊಂದು ಉದ್ಯೋಗದಲ್ಲಿ ತೊಡಗಿಸುವುದೇ ಆಗಿರುತ್ತದೆ.

ಗತಿಸಿದ ಎಡ್ವರ್ಡ್ ಚಕ್ರವರ್ತಿಯವರ ಗೌರವಾರ್ಥವಾಗಿ ಲಂಡನ್ನಿನಲ್ಲಿರುವ ಆಂಗ್ಲ ವಸ್ತುಪ್ರದರ್ಶನಾಲಯದಲ್ಲಿ ೫೦ ಲಕ್ಷ ರೂ.ಗಳನ್ನು ವೆಚ್ಚಮಾಡಿ ಒಂದು ಪ್ರದರ್ಶನಾಲಯವನ್ನು ನಿರ್ಮಿಸಿದ್ದಾರೆ. ಜಾರ್ಜ್ ಸಾರ್ವಭೌಮರು ಪತ್ನೀಸಮೇತರಾಗಿ ಹೋಗಿ ಕಳೆದವಾರ ಅದರ ಪ್ರವೇಶ ಮಹೋತ್ಸವವನ್ನು ನೆರವೇರಿಸಿ, ಅದರ ನಿರ್ಮಾಣದ ವಿಷಯದಲ್ಲಿ ತಮಗುಂಟಾದ ವಿಶೇಷಾನಂದವನ್ನು ವ್ಯಕ್ತಪಡಿಸಿದರು.

ಪತ್ರಿಕಾಸಂಪಾದಕ ಸಾರ್ವಭೌಮನೆಂದು ಖ್ಯಾತಿಗೊಂಡಿದ್ದು ಟಿಟಾನಿಕ್ ಹಡಗಿನಲ್ಲಿ ಮುಳುಗಿ ಹೋದ ವಿಲಿಯಂ ಸ್ಟೆಡ್‌ರವರ ಜ್ಞಾಪನಾರ್ಥವಾಗಿ ಅವರ ಊರ್ಧ್ವಾಂಗದ (ಬಸ್ಟ್) ಪ್ರತಿಮೆಯು ಹೇಗ್ ಪಟ್ಟಣದ ಶಾಂತಿಪ್ರಾಸಾದದಲ್ಲಿ ಕಳೆದ ಏಪ್ರಿಲ್ ತಾ॥ ೧೫ ರಲ್ಲಿ ಪ್ರತಿಷ್ಠಾಪಿಸಲ್ಪಟ್ಟಿತು. ಅಮೇರಿಕದ ಮಂತ್ರಿಯವರು, ಆಂಗ್ಲರ ವಿದೇಶಾಂಗ ಮಂತ್ರಿಯವರು ಮೊದಲಾದ ಅನೇಕ ಮಹನೀಯರು ಆ ಕಾಲಕ್ಕೆ ಬಂದಿದ್ದರು. ಕೀರ್ತಿಶೇಷರಾದ ಸ್ಟೆಡ್‌ರವರ ಗುಣಕಥನವು ವಿಶೇಷವಾಗಿ ನಡೆದಿತು.

ಹಿಂದೆ ನಡೆದ ಬಾಲ್ಕನ್ ಯುದ್ಧದಲ್ಲಿ ಬಲ್ಗೇರಿಯಾದವರೊಬ್ಬರಿಗೇ ಎಷ್ಟು ನಷ್ಟವಾಗಿರುವುದೆಂಬುದನ್ನು ಈ ಕೆಳಗಿನ ವಿವರಣದಿಂದ ತಿಳಿಯುವಲ್ಲಿ ಪ್ರಾಯಶಃ ಪ್ರಪಂಚದೊಳಗೆ ಯುದ್ಧಮಾಡುವವರ ಲಾಭವೆಲ್ಲಾ ಇದೇರೀತಿ ಯಾದುದೆಂದು ಹೇಳಬೇಕಾಗುತ್ತದೆ. ಇವರಿಗೆ ಆ ಯುದ್ಧದಿಂದೆಲ್ಲಾ ಆದ ಧನವ್ಯಯ ೩೫ ಕೋಟಿ ರೂ.ಗಳು. ರೋಮೇನಿಯಾದವರಿಗೆ ಇವರು ಬಿಟ್ಟುಕೊಡಬೇಕಾದ ದೇಶವು ೯೦ ಕೋಟಿ ರೂ. ಗಳ ಬೆಲೆಬಾಳತಕ್ಕುದು. ಇದೆಲ್ಲಕ್ಕಿಂತಲೂ ಹೆಚ್ಚಿನ ನಷ್ಟವಾವುದೆಂದರೆ–ಒಳ್ಳೆಯ ಹರೆಯದ ಗಂಡಾಳುಗಳು ೧೦೦ ಕ್ಕೆ ೭ ರಂತೆ ಯುದ್ಧದಲ್ಲಿ ಮಡಿದಿರುವುದು.

ದೇಶೀಯ ಮಹಾಸಭಾ ಪ್ರತಿನಿಧಿಗಳಾಗಿ ಸೀಮೆಗೆ ಹೋಗಿರುವ ಮಹಾಜನರಿಗೆ ಸ್ಟೇಟ್ ಸೆಕ್ರೆಟರಿಯವರು ಸಂದರ್ಶನವನ್ನಿತ್ತರು. ಆಗ ಇಂಡ್ಯಾ ಕೌನ್ಸಿಲಿನಲ್ಲಿ ಮಾಡಬೇಕಾದ ಸುಧಾರಣೆ ಮೊದಲಾದ ವಿಷಯಗಳನ್ನೆಲ್ಲಾ ಇವರು ನಿವೇದಿಸಿದರು. ಕಳೆದ ತಾ॥ ೧೪ರ ಬೆಳಿಗ್ಗೆ ಸರ್ ವಿಲಿಯಂ ವೆಡರ್ಬರ್ನ್‌ರವರು ಇವರಿಗೆಲ್ಲಾ ಒಂದು ಔತಣವನ್ನು ಮಾಡಿಸಿದರು. ಆಗ್ಗೆ ಅನೇಕ ಮಂದಿ ಲಾರ್ಡುಗಳೂ ಇತರ ಅಭಿಮಾನಿಗಳೂ ದಯಮಾಡಿಸಿದ್ದರು. ಇಂಡ್ಯಾ ಕೌನ್ಸಿಲ್ ಸಂಸ್ಕರಣವನ್ನು ಕುರಿತ ಒಂದು ಬಿಲ್ಲನ್ನು ಬರುವ ತಾ॥ ೨೫ ರಲ್ಲಿ ಪಾರ್ಲಿಮೆಂಟಿನ ಮುಂದೆ ತರುತ್ತೇವೆಂದು ಸ್ಟೇಟ್ ಸೆಕ್ರೆಟರಿಯವರು ಲಾರ್ಡುಗಳ ಸಭೆಯಲ್ಲಿ ನುಡಿದಿರುತ್ತಾರೆ.

ಭರತಖಂಡದ ವೃತ್ತಾಂತಗಳು.

ಕಳೆದ ತಾ॥ ೮ ರಲ್ಲಿ ಲಾಹೋರುಪಟ್ಟಣದಲ್ಲಿ ಬೆಳಗಿನಜಾವಕ್ಕೆ ದೊಡ್ಡಮಳೆಯು ಆರಂಭವಾಗಿ ಹಗಲು ೮ ಗಂಟೆಯೊಳಗಾಗಿ ೬ ಅಂಗುಲ ಮಳೆಯಾಯಿತು.

ಕಳ್ಳರನ್ನು ಹಿಡಿಯುವ ತಂತ್ರವನ್ನು ಕಲಿತುಕೊಂಡು ಬರುವುದಕ್ಕಾಗಿ ಬೀಹಾರಿನ ಮತ್ತೂ ಕಲ್ಕತ್ತಾದ ಪೋಲೀಸಿನ ಇನ್ಸ್‌ಪೆಕ್ಟರೊಬ್ಬೊಬ್ಬರು ಇಂಗ್ಲೆಂಡಿಗೆ ಕಳುಹಿಸಲ್ಪಡುವುದರಲ್ಲಿದ್ದಾರೆ.

ಹಿಂದೂ ವಿಶ್ವವಿದ್ಯಾಲಯಕ್ಕಾಗಿ ಕಳೆದ ಏಪ್ರಿಲ್ ತಿಂಗಳೊಂದರಲ್ಲೇ ೧೮೯೨೪ ರೂ.ಗಳು ಚಂದಾ ಕೊಡಿರುವುದು. ಅದರಲ್ಲಿ ಜೋಧಪುರದ ಸಂಸ್ಥಾನದವರು ಕೊಟ್ಟ ರೂ.ಗಳೇ ೧ ಲಕ್ಷವಾಗಿರುವುದು.

ಪ್ಲೇಗ್ ರೋಗದ ವ್ಯಾಪನೆಯಿಂದ ಹಂಪೆಯ ವಿರೂಪಾಕ್ಷ ರಥೋತ್ಸವವು ಕಳೆದ ೧೦ ವರ್ಷಗಳಿಂದಲೂ ನಡೆಯದೆ ನಿಂತುಹೋಗಿದ್ದಿತು. ಈ ವರ್ಷ ಅದು ಜರುಗಿತು. ಬಹುಶಃ ೬೦ ಸಾವಿರ ಜನರು ಯಾತ್ರೆಗೆ ಬಂದಿದ್ದರು.

ಕಳೆದ ತಾ॥ ೧೦ ರಲ್ಲಿ ಕಲ್ಕತ್ತಾಕ್ಕೆ ಸೇರಿದ ಭವಾನೀಪುರದಲ್ಲಿ ೧೫ ವರ್ಷ ವಯಸ್ಸಿನ ದೇವಿ ಎಂಬ ಬ್ರಾಹ್ಮಣಬಾಲಿಕೆಯೊಬ್ಬಳು ತನ್ನ ಬಟ್ಟೆಗೆ ಸೀಮೆಯೆಣ್ಣೆಯನ್ನು ಸುರಿದು ಬೆಂಕಿಯನ್ನಿಕ್ಕಿಕೊಂಡು ಸುಟ್ಟು ಭಸ್ಮವಾದಳು. ಇದಕ್ಕೂ ಲಗ್ನಸಂಬಂಧದ ಕೋಟಲೆಯೇ ಕಾರಣವಂತೆ.

ಸರ್ಪದಷ್ಟರಾದವರಿಗೆ ಮೆಸ್ಮರಿಜಂಕ್ರಿಯೆಯನ್ನು ಮಾಡುವುದರಿಂದ ಗುಣವಾಗುವುದೆಂದು ಪ್ರಕಟವಾಗಿದೆ. ಸೇಲಂ ಡಿಸ್ಟ್ರಿಕ್ಟಿನಲ್ಲಿ ಒಬ್ಬ ಪೋಲೀಸ್ ಇನ್ಸ್‌ಪೆಕ್ಟರು ಸರ್ಪದಷ್ಟನಾದವನೊಬ್ಬನಿಗೆ ಇದೇ ಚಿಕಿತ್ಸೆಯನ್ನು ಮಾಡಲು ಒಂದು ಗಂಟೆ ಹೊತ್ತಿನೊಳಗಾಗಿ ಸ್ಮೃತಿಗೊಂಡನಂತೆ.

ಅನಿಬೆಸಂಟಮ್ಮನವರು ಜಿಡ್ಡು ನಾರಣಯ್ಯರ್‌ರವರ ಮಕ್ಕಳ ಸಂಬಂಧದಲ್ಲಿ ಪ್ರಿವಿಕೌನ್ಸಿಲಿಗೆ ಅಪೀಲ್ ಮಾಡಿಕೊಂಡಿದ್ದರಷ್ಟೆ. ಅವರು ಕೆಳಕೋರ್ಟಿನ ಚರ್ಚೆಗಳು ಕ್ರಮವಾಗಿಲ್ಲವೆಂದು ಹೇಳಿ ಅನಿಬೆಸಂಟಮ್ಮನವರ ಪಕ್ಷದಲ್ಲಿ ತೀರ್ಮಾನವನ್ನು ಕೊಟ್ಟರೆಂದು ಪ್ರಕಟವಾಗಿದೆ.

ಒಂದೇಸಮನೆ ೩ ರಾತ್ರಿ ನಿದ್ರೆಗೆಡುವುದರಿಂದ ಮನುಷ್ಯನ ಶರೀರಕ್ಕೆ ಉಂಟಾಗುವ ನಷ್ಟವನ್ನು ಪರಿಹರಿಸಿಕೊಳ್ಳುವುದಕ್ಕೆ ಸಾಧಾರಣವಾಗಿ ೧೫ ದಿನಗಳು ಹಿಡಿಯುವುವಂತೆ.

ಬೊಂಬಾಯಿಯಲ್ಲಿ ಒಬ್ಬ ಹಿಂದೂ ಹುಡುಗಿಯು ತನ್ನ ತಂದೆಗೋಸ್ಕರ ತಂದಿಟ್ಟಿದ್ದ ಕ್ವಿನೈನ್ ಮಾತ್ರೆಗಳನ್ನೆಲ್ಲಾ ತಾನು ತಿಂದುಬಿಟ್ಟುದರಿಂದ ಅಸ್ವಸ್ಥಳಾಗಿ, ವೈದ್ಯಶಾಲೆಯಲ್ಲಿ ಚಿಕಿತ್ಸೆಮಾಡಿಸಿದರೂ ಗುಣವಾಗದೆ ಸತ್ತಳು. ಅನ್ನವು ಕೂಡ ಮಿತಿಮೀರಿದರೆ ಪ್ರಾಣವನ್ನು ತೆಗೆಯುವಾಗ ಔಷಧದ ಮಾತನ್ನೇನು ಹೇಳುವುದು

ಕೊಲಂಬೆನದಲ್ಲಿ ಬುದ್ಧನ ಜನ್ಮದಿನೋತ್ಸವಕ್ಕೆ ಸಂಬಂಧಿಸಿದ ಉತ್ಸವಗಳನ್ನು ನಡೆಯಿಸಲು ಹೋಗುತ್ತಿದ್ದ ಒಂದು ಜನರಗುಂಪು ತಂತಿಯನ್ನು ನೇತುಗಟ್ಟಿ ನಿರ್ಮಿಸಿದ್ದ ಒಂದು ಸೇತುವಿನಮೇಲೆ ಹೋಗುತ್ತಿದ್ದಾಗ ಅದು ಕಿತ್ತುಹೋಗಿ ಬಹುಶಃ ೧೦೦ ಜನರು ನದಿಯಲ್ಲಿ ಬಿದ್ದರು. ೯ ಮಂದಿ ಸತ್ತರು, ೩೦ ಜನಕ್ಕೆ ಗಾಯಗಳಾದುವು. ಉಳಿದವರಿಗೆ ಯಾವ ಹಾನಿಯೂ ಆಗಲಿಲ್ಲ.

ಪೂನಾ ನಗರದ ಸುಪಾರಿವಾಲಾ ಎಂಬ ೧೯ ವರ್ಷ ವಯಸ್ಸಿನ ಪಾರ್ಸಿತರುಣನು ಕೊತ್ವಾಲ್‌ಯವರ ಮನೆಯ ೧೬ ವರ್ಷದ ಯುವತಿಯನ್ನು ವರಿಸಿ ಮದುವೆಯಾಗುವುದರಲ್ಲಿದ್ದನು. ಆದರೆ ೪ ದಿನಗಳ ಕೆಳಗೆ ಆಕೆಗೆ ವಿಷಮಜ್ವರವು ಬಂದು ಮೃತಳಾಗಲು, ಯುವಕನು ಆಕೆಯ ವಿಯೋಗವನ್ನು ಸೈರಿಸದೆ ತುಪಾಕಿಯನ್ನು ಹೊಡೆದುಕೊಂಡು ಮೋಹದೇವತೆಗೆ ತನ್ನನ್ನೇ ಬಲಿಮಾಡಿದನು.

ಪೌರೋಹಿತ್ಯ ವೃತ್ತಿಯನ್ನವಲಂಬಿಸುವವರೆಲ್ಲರೂ ಒಂದು ಪರೀಕ್ಷೆಯಲ್ಲುತ್ತೀರ್ಣರಾಗಿರಬೇಕೆಂಬ ವಿಷಯಕ್ಕೆ ಬರೋಡಾ ಸಂಸ್ಥಾನದವರು ಒಂದು ವಿಧಿಯನ್ನೇರ್ಪಡಿಸಲು ನಿಯಮನಿರ್ಮಾಣಸಭೆಯ ಚರ್ಚೆಗೆ ತರಬೇಕೆಂದಿದ್ದರು. ಬಹುಮಂದಿ ಇದರ ವಿಷಯದಲ್ಲಿ ಆಕ್ಷೇಪಿಸುತ್ತಿರುವುದರಿಂದ ಸಂಪೂರ್ಣವಾಗಿ ಆ ವಿಷಯದಲ್ಲಿ ಚರ್ಚೆ ನಡೆದು ಕೊನೆಮುಟ್ಟುವವರೆಗೆ ಅದನ್ನು ನಿಲ್ಲಿಸಿಬಿಟ್ಟಿದ್ದಾರೆ.

ಮಧ್ವಸಂಪ್ರದಾಯದ ಉತ್ತರಾದಿಮಠದ ಸ್ವಾಮಿಗಳು ಮದ್ರಾಸಿನಿಂದ ಮೊನ್ನೆಯವಾರ ಕಾಂಚೀಪಟ್ಟಣಕ್ಕೆ ಹೋಗಿ ಅಲ್ಲಿನ ತಮ್ಮ ಮಠದಲ್ಲಿ ನಾಲ್ಕುದಿನ ಇದ್ದರು. ಆನೆಯಮೇಲಣ ಅಂಬಾರಿಯಮೇಲೆ ಕುಳಿತು ವರದರಾಜ ದೇವಾಲಯದ ಸುತ್ತಲೂ ಮೆರವಣಿಗೆ ಮಾಡಿಸಿಕೊಂಡು ಬಳಿಕ ದೇವತಾಸೇವೆಯನ್ನು ನಡೆಯಿಸಿಬಂದರು. ಅಲ್ಲಿನ ವಿದ್ವತ್ಸಮೂಹಕ್ಕೆ ಉಚಿತವಾದ ಸಂಭಾವನೆಗಳನ್ನು ನಡೆಯಿಸಿದರು.

ಒಬ್ಬ ಮಹಮ್ಮದೀಯ ಮುಲ್ಲಾನೂ ಅವನ ಕುಟುಂಬದವರೂ ಸಹ ಕ್ರೈಸ್ತ ಮತವನ್ನಂಗೀಕರಿಸಿದರು. ಆ ಮುಲ್ಲಾನ ಮಗಳ ಗಂಡನು ತನ್ನ ಹೆಂಡತಿಯನ್ನು ಕರೆದುಕೊಂಡು ಹೋಗಿ ಅವಳಿಗೆ ಮರಳಿ ಮಹಮ್ಮದೀಯ ಮತದೀಕ್ಷೆಯನ್ನು ಕೊಡಿಸಿದನು. ಆದರೆ ಮುಲ್ಲಾನು ತನ್ನ ಮಗಳಿಗೆ ತಾನೇ ಪೋಷಕನೆಂತಲೂ, ತಾವೆಲ್ಲಾ ಕ್ರೈಸ್ತಮತಕ್ಕೆ ಸೇರಿದ ಬಳಿಕ ಆಕೆಯ ವಿವಾಹ ಬಂಧವು ಮುಕ್ತವಾಗಿ ಹೋಯಿತೆಂತಲೂ ಹೇಳಿ ತನ್ನ ಅಳಿಯನ ಮೇಲೆ ಜಿಸ್ಸೂರು ಜಿಲ್ಲಾ ಜಡ್ಜಿಯವರಲ್ಲಿ ವ್ಯಾಜ್ಯವನ್ನು ಹೂಡಿದ್ದಾನೆ,

ಸಿನಿಮಟೋಗ್ರಾಫಿನಿಂದ ಚಲಿಸುವ ಚಿತ್ರಗಳು ಪ್ರದರ್ಶಿಸಲ್ಪಡುತ್ತಿವೆಯಷ್ಟೆ. ಇದರ ನಿರ್ಮಾಣದಿಂದ ಇಂಗ್ಲೆಂಡಿನಲ್ಲಿ ಬಹು ವ್ಯಾಪಾರವು ಸಾಗುತ್ತಿದೆ. ಆ ಚಿತ್ರಗಳನ್ನು ಉಷ್ಣದೇಶಗಳಲ್ಲಿ ನಿರ್ಮಿಸುವುದು ಅಸಾಧ್ಯವೆಂದೂ, ಇಲ್ಲಿನ ವಾಯುಗುಣಕ್ಕೆ ಅದು ಕರಗಿಹೋಗಿ ರಾಸಾಯನಿಕ ಸಂಯೋಗವು ಕೆಡುವುದೆಂದೂ ಹೇಳಲ್ಪಡುತ್ತಿದ್ದಿತು. ಈಗ ಅದರ ನಿವಾರಣೋಪಾಯವು ಕಂಡು ಹಿಡಿಯಲ್ಪಟ್ಟಿರುವುದರಿಂದ ಭರತಖಂಡದಲ್ಲೇ ಇದರ ನಿರ್ಮಾಣವು ಈಗ ನಡೆಯುವುದಕ್ಕು ಪಕ್ರಮವಾಗಿದೆ. ಕಲ್ಕತ್ತಾಪ್ರಾಂತದ ಸುಭಗ್ರವಾದ ಸೃಷ್ಟಿವಿಶೇಷಗಳ ಚಿತ್ರವು ಆಗಲೇ ಎತ್ತಲ್ಪಟ್ಟಿದೆ.

ತಿರುವಾಂಕೂರು ಸಂಸ್ಥಾನಕ್ಕೆ ಇದುವರೆಗೆ ಮಂತ್ರಿಯವರಾಗಿದ್ದ ದಿ॥ಬ॥ ರಾಜಗೋಪಾಲಾಚಾರ್ಯರು ಕೆಲಸವನ್ನು ಬಿಟ್ಟುದರಿಂದ ಆ ಸ್ಥಲಕ್ಕೆ ಅಲ್ಲಿನ ಚೀಫ್‌ಕೋರ್ಟು ಜಡ್ಜಿಯವರಾಗಿದ್ದ ಮ॥ ಎಂ. ಕೃಷ್ಣನ್ ನಾಯರ್ ಬಿ.ಎ. ಬಿ.ಎಲ್. ರವರು ಕಳೆದ ತಾ॥ ೧೧ ರಲ್ಲಿ ನಿಯುಕ್ತರಾದರು. ಆ ಸಂಸ್ಥಾನಕ್ಕೆ ೨೨ ವರ್ಷಗಳ ಹಿಂದೆ ಮಾತ್ರ ನಾಯರ್‌ಜಾತಿಯವರು ದಿವಾನಗಿರಿಗೆ ಬಂದಿದ್ದರು. ಹಾಗೆ ಬಂದವರಲ್ಲಿ ಇವರು ೩ ನೆಯವರು. ಇವರಿಗೆ ದಿವಾನಗಿರಿ ಯುಂಟಾದುದು ಆ ದೇಶೀಯರಿಗೆಲ್ಲಾ ಸಂತೋಷವನ್ನುಂಟುಮಾಡಿದೆ. ಹಿಂದಿನ ದಿವಾನರು ೭ ವರ್ಷಕಾಲ ಅಧಿಕಾರಮಾಡಿ ಸಂಸ್ಥಾನವನ್ನು ಉತ್ತಮಸ್ಥಿತಿಗೆ ತಂದರು.

ಅಲ್ವಾರ್ ಮಹಾರಾಜರು ತಮ್ಮ ಕುಮಾರರಿಗೆ ವಿವಾಹವನ್ನು ಮಾಡಿದ ಶುಭಸಂದರ್ಭದಲ್ಲಿ ತಮ್ಮ ಪ್ರಜೆಗಳಿಗೆ ಯಾವುದಾದರೂ ಹಿತವನ್ನುಂಟುಮಾಡಬೇಕೆಂಬ ಸಂಕಲ್ಪದಿಂದ ತಮ್ಮಲ್ಲಿನ ಜಾಗೀರ್ದಾರರಿಂದ ಸರ್ಕಾರಕ್ಕೆ ಬರಬೇಕಾಗಿದ್ದ ೫೦ ಸಾವಿರ ರೂ.ಗಳ ಸಾಲವನ್ನು ಮನ್ನಿಸಿ ಬಿಟ್ಟುಬಿಟ್ಟರು. ರೆವಿನ್ಯೂ ಮತ್ತು ಫಾರೆಸ್ಟ್ ಶಾಖೆಗಳಲ್ಲಿ ಪ್ರಜೆಗಳಿಂದ ಬರಬೇಕಾಗಿದ್ದ ೧ ಲಕ್ಷ ರೂ.ಗಳನ್ನು ಮನ್ನಿಸಿಬಿಟ್ಟರು. ಕ್ಷಾಮಕಾಲದಲ್ಲಿ ರೈತರ ದನಕರುಗಳಿಗೆ ಒದಗಿಸಿಕೊಟ್ಟ ಮೇವಿಗಾಗಿ ಅವರಿಂದ ಬರಬೇಕಾಗಿದ್ದ ೨೫ ಸಾವಿರ ರೂ.ಗಳನ್ನು ಮನ್ನಿಸಿಬಿಟ್ಟರು. ಕಾರಾಗೃಹದಿಂದ ೫೦೦ ಮಂದಿಗಳನ್ನು ಬಿಡಿಸಿಬಿಟ್ಟರು. ಬ್ರಹ್ಮಚಾರ್ಯಾಶ್ರಮವೊಂದನ್ನು ಸ್ಥಾಪಿಸುವುದಕ್ಕಾಗಿ ಹತ್ತು ಸಾವಿರ ರೂ.ಗಳನ್ನು ದಾನಮಾಡಿದರು.

ಸೇಬು-ಕಿತ್ತಲೆ-ನಿಂಬೆ ಮೊದಲಾದ ರಸಭರಿತವಾದ ಹಣ್ಣುಗಳನ್ನು ತಿನ್ನುತ್ತಿದ್ದರೆ ಮುಖದ ಮೇಲಿರುವ ಸೋಂಬೇರಿತನವು ಹೋಗಿ, ಕಳಿತನವೂ ಕಾಂತಿಯೂ ಉಂಟಾಗುವುವೆಂದು ಹೇಳುತ್ತಾರೆ.

ಪೂನಾಪ್ರಾಂತದಲ್ಲಿನ ಬೋರೀಜಾತಿಯ ಕಳ್ಳರ ವಿಷಯವು ಹಿಂದೆ ಪ್ರಸ್ತಾಪಿಸಲ್ಪಟ್ಟಿದ್ದಿತಷ್ಟೆ. ಇವರ ವಿಚಾರಣೆಯು ಖಾಂದಿಷ್ ಜಿಲ್ಲಾ ಜಡ್ಜರಲ್ಲಿ ಕಳೆದ ೧॥ ವರ್ಷದಿಂದಲೂ ನಡೆಯುತ್ತಿದ್ದು ಕಳೆದ ತಾ॥ ೯ ರಲ್ಲಿ ತೀರ್ಮಾನವು ಹೇಳಲ್ಪಟ್ಟಿತು. ಅಪರಾಧಿಗಳಲ್ಲಿ ೨೫ ಜನಕ್ಕೆ ಮರಣಾಂತದ್ವೀಪಾಂತರವಾಸಶಿಕ್ಷೆಯೂ, ಮೂವರಿಗೆ ೧೦ ವರ್ಷ ನಾಲ್ವರಿಗೆ ೭ ವರ್ಷ ೧೫ ಮಂದಿಗೆ ೫ ವರ್ಷ ಇಬ್ಬರಿಗೆ ೩ ವರ್ಷ ಈರ್ವರಿಗೆ ಕಠಿನಕಾರಾಗೃಹವಾಸಶಿಕ್ಷೆಯೂ ವಿಧಿಸಲ್ಪಟ್ಟಿತು ಇವರೆಲ್ಲರೂ ಅಹಮ್ಮದ್‌ನಗರ ನಾಸಿಕಾಜಿಲ್ಲೆಗಳೊಳಗೆ ಬ್ರಾಹ್ಮಣಸಾಧುಗಳಂತೆ ವೇಷವನ್ನು ಹಾಕಿಕೊಂಡು ಕನ್ನಕಳುವು ಸುಲಿಗೆ ತಲೆಬಡಿಕತನ ಮೊದಲಾದ ತಪ್ಪಿತಗಳನ್ನು ನಡೆಯಿಸಿದ್ದವರು. ವಿಚಾರಣಕಾಲದಲ್ಲಿ ಇವರ ಮೇಲೆ ೧೫೦ ಅಪರಾಧಗಳು ಹೊರಿಸಲ್ಪಟ್ಟಿದ್ದುವು.

ಕೊಲೆ ಸುಲಿಗೆ ಮೊದಲಾದ ಘೋರಾಪರಾಧಮಾಡಿದವರು ಅಂಡಮಾನ್ ದ್ವೀಪಕ್ಕೆ ಕಳುಹಿಸಲ್ಪಡುವರಷ್ಟೆ. ಇವರಿಗೆ ಅಲ್ಲಿ ವಸತಿ ಮೊದಲಾದುವುಗಳು ಚೆನ್ನಾಗಿ ಏರ್ಪಡಿಸಲ್ಪಟ್ಟಿವೆ ನಿಯತಕಾಲವನ್ನು ಕಳೆದ ಬಳಿಕ ಅಲ್ಲೇ ಯಾವುದಾದರೂ ಸೇವಕಾವೃತ್ತಿಯಲ್ಲಿ ಅವರು ಇರಬಹುದಾದಂತೆ ಈಗ ಮಾಡಿದ್ದಾರೆ. ತಮ್ಮ ಇಷ್ಟಬಂದಾಗ ಅವರು ಸ್ವದೇಶಕ್ಕೂ ಬರಬಹುದಾಗಿದೆ. ಹೀಗೆ ಶಿಕ್ಷೆಯನ್ನನುಭವಿಸಿದವರಲ್ಲಿ ೫೬ ಮಂದಿ ಪುರುಷರೂ ೩ ಮಂದಿ ಸ್ತ್ರೀಯರೂ ಕಳೆದವಾರ ಕಲ್ಕತ್ತಾಕ್ಕೆ ಬಂದಿಳಿದರು. ಇವರೊಳಗೆ ಬಹು ಜನರು ಧನಶೇಖರವನ್ನು ಮಾಡಿಕೊಂಡಿರುವರು. ಕೊಲೆಯನ್ನು ಮಾಡಿ ದ್ವೀಪಾಂತರವಾಸ ಶಿಕ್ಷೆಯನ್ನನುಭವಿಸಿ ಹಿಂದಿರುಗಿ ಬಂದ ಒಬ್ಬ ಮಹಮ್ಮದೀಯನು ಅಂಡಮಾನ್ ಡಿ॥ ಕಮಿಷನರಲ್ಲಿ ಸೇವಕನಾಗಿದ್ದು ಬಂದಿರುವನು. ಇವನ ಬಳಿಯಲ್ಲಿ ೧ ಸಾವಿರ ರೂ.ಗಳಿದ್ದುವು.

ನಮ್ಮದೇಶದ ಪಾಂಚಾಲದವರು ಕೂಪಕೂರ್ಮಗಳಾಗಿ ವೃದ್ಧಿ ಪ್ರಯತ್ನವಿಲ್ಲದೆ ಇದ್ದಾರೆ. ಆದರೆ ಪೂರ್ವಾತ್ಯರೂ ಬ್ರಿತ್ತರೇಯರೂ ಆದ ಅವರ ಜಾತಿಯವರು ತಮ್ಮ ಜನದ ವಿದ್ಯಾವಿವೇಕಾದಿಗಳಿಗಾಗಿ ಚೆನ್ನಾಗಿ ಸಾಹಸಪಡುತ್ತಿದ್ದಾರೆ. ಮದ್ರಾಸು ಅಧಿಪತ್ಯದಲ್ಲಿ ಈ ಜನರು ಒಂದು ಸಂಘವನ್ನೇರ್ಪಡಿಸಿ, ಊರೂರಿಗೆ ಬೋಧಕರನ್ನು ಕಳುಹಿಸಿ, ಸ್ವಜನರನ್ನು ಎಚ್ಚರಿಸುತ್ತಿದ್ದಾರೆ. ವಿದ್ಯಾಪ್ರಸಾರಕ್ಕಾಗಿ ಫಂಡನ್ನು ಕೂಡಿಸುತ್ತಿದ್ದಾರೆ. « ವಿಶ್ವಕರ್ಮ » ಎಂಬ ಪತ್ರಿಕೆಯು ಮದ್ರಾಸಿನಿಂದ ಅರವಭಾಷೆಯಲ್ಲಿ ಪ್ರಕಟಿಸಲ್ಪಡುತ್ತಿದೆ. ಸಿಂಹಳದ್ವೀಪದಲ್ಲಿ « ವಿಶ್ವಕರ್ಮಸಂಘವು » ಸ್ಥಾಪಿಸಲ್ಪಟ್ಟಿದೆ. ತಮ್ಮ ಪೂರ್ವಗ್ರಂಥಗಳನ್ನು ಮುದ್ರಿಸುತ್ತಿದ್ದಾರೆ. ತಿರುಚನಾಪಳ್ಳಿಯಲ್ಲಿಯೂ ಒಂದುಸಂಘವು ಸ್ಥಾಪಿತವಾಗಿದೆ. ಬೊಂಬಾಯಿಯಲ್ಲಿ « ದೈವಮಾಸಿಕ » ಎಂಬ ಪತ್ರಿಕೆಯು ಪ್ರಕಟಿಸಲ್ಪಡುತ್ತಿದೆ. ತಮ್ಮ ಜನರ ಶಿಲ್ಪವಿದ್ಯೆಯನ್ನು ಪೂರ್ವದ ಮುನ್ನತಸ್ಥಿತಿಗೆ ತರಲು ಪ್ರೋತ್ಸಾಹಿಸುವುದಕ್ಕಾಗಿ ಡಾಕ್ಟರ್ ಆನಂದಕುಮಾರ ಸ್ವಾಮಿಯೆಂಬುವರು ಲಂಡನ್ ಪಟ್ಟಣದಿಂದ « ವಿಶ್ವಕರ್ಮ » ಎಂಬ ಪತ್ರಿಕೆಯನ್ನು ಪ್ರಕಟಿಸುತ್ತಿದ್ದಾರೆ. ಪೂನಾಪಟ್ಟಣದಿಂದ « ವಿಶ್ವಬ್ರಹ್ಮವೃತ್ತಿ » ಎಂಬ ಪತ್ರಿಕೆಯು ಪ್ರಕಟಗೊಳ್ಳುತ್ತಿದೆ. ಎ. ನಿರಂಜನಶಾಸ್ತ್ರಿಯವರು « ಪ್ರಬೋಧಿನಿ » ಎಂಬ ಮಾಸಪತ್ರಿಕೆಯನ್ನು ಪ್ರಕಟಿಸುತ್ತಿದ್ದಾರೆ.

ಪತ್ರವ್ಯವಹಾರ

ಶ್ರೀ ಬಸವೇಶ್ವರ ಜಯಂತಿ.

ಶಿಕಾರಿಪುರ.

ಪದ್ಧತಿಯನ್ನನುಸರಿಸಿ ಇದೇ ವೈಶಾಖ ಶು॥ ೩ ಮಂಗಳವಾರ ಪ್ರಾತಃಕಾಲ ೬ ಘಂಟೆಯೊಳಗಾಗಿ ಶ್ರೀ ಬಸವೇಶ್ವರ ದೇವರಿಗೆ ರುದ್ರಾಭಿಷೇಕವು ನಡೆದು ನಂತರ ವೀರಶೈವ ಮಂಡಳಿಯೊಂದಿಗೆ ವಾದ್ಯಘೋಷದೊಡನೆ ಉತ್ಸವ ಹೊರಟು ದಿವಿ ೧೧ ಘಂಟೆಗೆ ದೇವಸ್ಥಾನವನ್ನು ಸೇರಿ ಮಧ್ಯಾಹ್ನ ೩ಗಂಟೆಗೆ ಸರಿಯಾಗಿ ಫಲಾಹಾರ ಸಮಾರಾಧನೆಯು ನಡೆಸಲ್ಪಟ್ಟು ೫ ಗಂಟೆ ಲಾಗಾಯ್ತು ೭ ಗಂಟೆವರೆಗೆ ಮೀಟಿಂಗ್ ನಡೆದು ಪ್ರತಿ ವರ್ಷವೂ ಇದೇ ರೀತಿ ನಡೆಯಿಸಬೇಕೆಂದು ತೀರ್ಮಾನಿಸಲ್ಪಟ್ಟು ಸಭೆಯು ವಿರಮಿಸಲ್ಪಟ್ಟಿತು.

ಸುತಾಭಿಮಾನಿ.

ದಳವಾಯಿ ಕೋಡಿಹಳ್ಳಿ.

ಇದೇ ವೈಶಾಖ ಶು॥ ೩ ಮಂಗಳವಾರ ಮಳವಳ್ಳಿ ತಾ॥ ಹಲಗೂರು ಹೋ॥ ದಳವಾಯಿಕೋಡಿಹಳ್ಳಿಯ ವ॥ ಹಲಗೂರು ಚಿಕ್ಕ ಮಲ್ಲಣ್ಣನವರು ವೀರಶೈವ ಭಕ್ತಮಹೇಶ್ವರರುಗಳನ್ನು ಅಲಂಕೃತವಾದ ತಮ್ಮ ಮನೆಗೆ ಬರಮಾಡಿಕೊಂಡು ಭೋಜನ ದಕ್ಷಿಣ ತಾಂಬೂಲಗಳಿಂದೆಲ್ಲರನ್ನೂ ಉಪಚರಿಸಿ ಶರಣಲೀಲಾಮೃತ ಪುರಾಣಶ್ರವಣವನ್ನು ಮಾಡಿಸಿ ಶ್ರೀ ಬಸವೇಶ್ವರ ಜಯಂತ್ಯುತ್ಸವವನ್ನು ಬಹು ಭಕ್ತಿಯಿಂದ ನೆರವೇರಿಸಿದರು. ಈ ಉತ್ಸವಕ್ಕೆ ದನಗೂರು ಕೆಂಪೂರು, ನಿಡಗಟ್ಟ, ಹಲಗೂರು ಮೊದಲಾದ ಮಠಗಳ ಪಟ್ಟದ ಸ್ವಾಮಿಗಳು ದಯಮಾಡಿಸಿದ್ದರು. ಮನುಷ್ಯನು ಸರ್ವಕಾಲದಲ್ಲಿಯೂ ಸತ್ಯವಾಗಾಚರಿಸಬೇಕೆಂಬುದನ್ನು ಬೋಧಿಸುವ ತಿರುಕನೊಳನಾಚೆ ಕಥೆಯನ್ನು ದನಗೂರು ಮಠದ ಶ್ರೀ॥ ಮುದ್ವೀರಸ್ವಾಮಿಗಳು ಬಹು ಶ್ಲಾಘ್ಯವಾಗೋದಿದರು. ಮತ್ತೂ ಇದರರ್ಥವನ್ನು ದಳವಾಯಿಕೋಡಿಹಳ್ಳಿಯ ಉಪಾಧ್ಯಾಯ ಚಿಕ್ಕ ಬಸಪ್ಪನವರು ಮೂಢರಿಗೂ ತಿಳಿಯುವಂತೆ ಹೇಳಿದರು. ತರುವಾಯ ಶ್ರೀಮುದ್ವೀರಸ್ವಾಮಿಗಳು ಈ ಜಯಂತ್ಯುತ್ಸವವನ್ನು ಪ್ರತಿವರ್ಷದಲ್ಲಿಯೂ ನಡೆಸಬೇಕೆಂದೂ ನಮ್ಮ ಸಮಾಜಕ್ಕುಪಕಾರಕವಾಗಿರುವ ಸ್ಟಾರ್ ಪತ್ರಿಕೆಯ ಮರ್ಯಾದಾರ್ಥವಾಗಿ ಒಂದು ರೂಪಾಯಿ ಕಾಣಿಕೆಯನ್ನು ತೆಗೆಯಬೇಕೆಂದೂ ಅಪ್ಪಣೆಕೊಡಿಸಿದುದನ್ನು ಸಭಿಕರೆಲ್ಲರೂ ಅನುಮೋದಿಸಿದರು. ಅನಂತರ ಸಭೆಯು ವಿಸರ್ಜಿಸಲ್ಪಟ್ಟಿತು.

ಒಬ್ಬ ಪ್ರತ್ಯಕ್ಷದರ್ಶಿ.

ನೆಲಬಾವಿಯ ಅಪಾಯದ ಸಂಗತಿ.

ಹುಣಸೂರು ತಾ॥ ಹಳ್ಳಿಕೆರೆಗ್ರಾಮಕ್ಕೆ ಸ್ವಲ್ಪ ದೂರದಲ್ಲಿ ಅಂದರೆ ಗ್ರಾಮದ ಪೂರ್ವಪಕ್ಕಕ್ಕೆ ಸುಮಾರು ೧-೨ ಪರಲಂಗದೂರದಲ್ಲಿ ಒಂದು ನೆಲಬಾವಿ ಪುರಾತನವಾಗಿರುತ್ತದೆ. ಈ ಹಳ್ಳಿಕೆರೆ ಗ್ರಾಮದವರಿಗೆ ಈ ನೆಲಬಾವಿಯ ನೀರೇ ಹೊರತು ಬೇರೆಕಡೆ ನೀರು ದೊರೆಯುವಿಲ್ಲ. ಹೀಗಿರುವಲ್ಲಿ ತಾ॥ ೮-೫-೧೪ ನೆ ಶುಕ್ರವಾರ ದಿವಸ ನೆಲಬಾವಿಯಲ್ಲಿ ನೀರುಸೇದುತ್ತಾ, ಇದ್ದ ಗ್ರಾಮದ ದೊಡ್ಡಮನೆತನಸ್ಥರ ಹೆಂಗಸೊಬ್ಬಳು ಆಕಸ್ಮಿಕವಾಗಿ ಕಾಲುಜಾರಿ ಬಾವಿಯೊಳಗೆ ಬಿದ್ದುಬಿಟ್ಟು ಬಾವಿಯ ಅರ್ಧಭಾಗದಲ್ಲಿ ಒಂದು ಕಲ್ಲನ್ನು ಭದ್ರವಾಗಿ ಹಿಡಿದು ಕೂಗಿಕೊಂಡಳು. ಸಮೀಪದ ನೆರೆಹೊರೆ ಹೊಲಗಳಲ್ಲಿ ಉಳುತ್ತಿದ್ದ ಜನಗಳು ಬರುವಷ್ಟರಲ್ಲಿ ಅಲ್ಲೇ ಪಂಜೆಗಳನ್ನು ಮಡಿಮಾಡುತ್ತಿದ್ದ ಒಬ್ಬ ದೊಡ್ಡಮನುಷ್ಯರು ತತ್‌ಕ್ಷಣವೇ ನೀರುಸೇದುವ ಹಗ್ಗವನ್ನು ಆ ಹೆಂಗಸಿನ ಕೈಗೆ ಕೊಟ್ಟು ತಮ್ಮ ಶಕ್ತಿಸಾಹಸಗಳನ್ನೆಲ್ಲಾ ಕರ್ಚುಮಾಡಿ ಆ ಹೆಂಗುಸನ್ನು ಮೇಲಕ್ಕೆ ತೆಗೆಯುತ್ತಿರುವಷ್ಟರಲ್ಲಿ ಜನಗಳು ಬಂದು ಮೇಲಕ್ಕೆ ತೆಗೆದರು. ಜಗದ್ರಕ್ಷಕನ ಅನುಗ್ರಹದಿಂದ ಪ್ರಾಣಾಪಾಯವಾಗದೆ ಸ್ವಲ್ಪ ನೋವಾಗಿದೆ. ಈ ಗ್ರಾಮದಲ್ಲಿ ರಾಟಿಭಾವಿ ಇಲ್ಲದಿರುವುದರಿಂದ ಇಂಥ ಅಪಾಯಕ್ಕೆ ಕಾರಣವಾಗಿದೆ. ಈ ವಿಷಯವಾಗಿ ನಮ್ಮ ಮೈಸೂರು ಸರ್ಕಾರದವರನ್ನು ಬೇಡಿಕೊಳ್ಳುವುದೇನೆಂದರೆ-ಈ ಗ್ರಾಮದವರಿಗೆ ನೀರು ತರುವುದಕ್ಕೂ ದನಕರುಗಳ ನೀರಿಗೂ ಈ ನೆಲಭಾವಿ ವಿನಾ ಮತ್ತೆ ಬೇರೆಭಾವಿಯೇ ಆಗಲಿ ಕೊಳಗಳೇ ಆಗಲಿ ಕೆರೆಗಳೇ ಆಗಲಿ ಇಲ್ಲ. ವಾದ್ದರಿಂದ ನಮ್ಮ ಸರ್ಕಾರದವರು ಪ್ರಜೆಗಳ ಮೇಲೆ ಕರುಣವಿಟ್ಟು ತಮ್ಮ ಸ್ವಂತ ಖರ್ಚಿನಿಂದಲೆ ಈ ನೆಲಭಾವಿಗೆ ಗಾರೆಕಟ್ಟಡ ರಾಟೆ ಇವುಗಳನ್ನು ಹಾಕಿಸಿ ಸಮಯಾನುಸಾರ ಅಪಾಯಕ್ಕೆ ಗುರಿಯಾಗುವುದನ್ನು ತಪ್ಪಿಸಿ ಕಾಪಾಡಬೇಕೆಂದು ಈ ಮೂಲಕ ನಮ್ಮ ಸರ್ಕಾರದವರನ್ನು ಬಹುವಾಗಿ ಸರ್ವರೂ ಬೇಡಿಕೊಳ್ಳುತ್ತೇವೆ.

[ಗ್ರಾಮಸ್ಥರಿಗೆಲ್ಲಾ ಬೇಕಾದ ಈ ಸಣ್ಣ ಕೆಲಸವನ್ನು ಮಾಡಿಕೊಳ್ಳಲು ಸರ್ಕಾರವನ್ನೇ ಕಾಯುವುದು ವ್ಯರ್ಥ. ಆಯಾ ಗ್ರಾಮದ ಜನರೇ ಸೇರಿ ಸುಲಭವಾಗಿ ಮಾಡಿಕೊಳ್ಳುವಂತೆ ತಿಳಿದ ಜನರು ಪ್ರೇರಿಸಬೇಕು. ಪ. ಪ್ರ.

ಪುಂಗನೂರು.

ಬಸವ ಜಯಂತಿಯು ದಾವಣಗೆರೆ ವೀರಶೈವ ಹಿತೋಪದೇಶಕ ಸಂಘದವರಿಂದಲೂ ಇನ್ನೂ ಇತರ ವೀರಶೈವರಿಂದಲೂ ಕಳೆದ ವರ್ಷ ಆಚರಿಸಲ್ಪಟ್ಟಿತಷ್ಟೆ. ಅದೇ ಪದ್ಧತಿಯನ್ನೇ ಅನುಸರಿಸಿ ಶ್ರೀ ಮ॥ ಮ॥ ರಾ॥ ರಾ॥ ರಾಜಾಸುಗಟೂರು ಇಮ್ಮಡಿ ಸಾಂಬಸದಾಶಿವ ಚಿಕ್ಕರಾಯಲ್‌ಯಶೋವಂತ ಬಹದೂರ್ ಸಂಸ್ಥಾನ ಪುಂಗನೂರು ಇವರಿಂದಲೂ ಈ ವರ್ಷ ಆಚರಿಸಲ್ಪಟ್ಟಿತು. ಇದೇ ವೈ॥ ಶು॥ ತದಿಗೆಯಲ್ಲಿ ಅರಮನೆಯೊಳಗಿರುವ ನೆಲ್ಲಿಕಾಯಿ ಬಸವೇಶ್ವರನಿಗೆ ಬೆಳಗಿನ ೫ ಗಂಟೆಯಲ್ಲಿ ಪ್ರಾರಂಭಮಾಡಿದ ರುದ್ರಾಭಿಷೇಕವು ಮುಗಿಯುವುದರೊಳಗಾಗಿ ಪ್ರಭುಗಳು ನಿತ್ಯಾನುಷ್ಠಾನಗಳನ್ನು ತೀರಿಸಿಕೊಂಡು ತಮ್ಮ ಚಿಕ್ಕತಂದೆಗಳಾದ ಮುಮ್ಮಡಿ ಕುಮಾರ ಚಿಕ್ಕರಾಯಲ್‌ರವರಿಂದಲೂ ತಮ್ಮ ಸಹೋದರರಿಂದಲೂ ಕೂಡಿ ಬಸವಾಲಯಕ್ಕೆ ದಯಮಾಡಿಸಿ ಬಸವೇಶ್ವರನಿಗೆ ರುದ್ರಾಭಿಷೇಕವನ್ನು ವೇದೋಕ್ತಮಂತ್ರ ಪುರಸ್ಸರ ಸಾಂಗಾರಾಧನೆಯನ್ನು ಮಾಡಿಸಿದ ಮೇಲೆ ಶಿವಪೂಜಾಗಾರದಲ್ಲಿ ಕ್ರಿಯಾಮೂರ್ತಿಗಳಿಂದ ಸಿದ್ಧಪಡಿಸಲ್ಪಟ್ಟಿದ್ದ ತೀರ್ಥಪ್ರಸಾದ ಸ್ವೀಕರಣಾನಂತರ ಆಹ್ವಾನಿಸಲ್ಪಟ್ಟಿದ್ದ ಸಮಸ್ತ ಭಕ್ತಮಹೇಶ್ವರರಿಗೂ ಮೃಷ್ಟಾನ್ನ ಭೋಜನದಿಂದಲೂ ಗಂಧ ಪುಷ್ಪ ತಾಂಬೂಲಾದಿಗಳಿಂದಲೂ ತೃಪ್ತಿಪಡಿಸಿದರು. ಶೃಂಗಾರದ ತೋಟದಲ್ಲಿ ಬಸವ ಜಯಂತಿಗೆಂದು ಸಂಕಲ್ಪ ಪೂರ್ವಕವಾಗಿ ಕಟ್ಟಿಸಲ್ಪಟ್ಟಿರುವ ಮಂದಿರಕ್ಕೆ ಎಲ್ಲರ ಸಹಿತ ಹೋಗಿ "ಬಸವೇಶ್ವರ ಜನ್ಮದಿನೋತ್ಸವ ಮಂದಿರ" ವೆಂದು ನಾಮಕರಣವನ್ನು ಮಾಡಿ ಮೇಲುಭಾಗದಲ್ಲಿಯೂ ಸಹ ಧನುರಾಕೃತಿಯಾಗಿ ದೊಡ್ಡ ದೊಡ್ಡ ಅಕ್ಷರಗಳಿಂದ ತನ್ನಾಮವನ್ನು ಬರೆದು, ಒಳಕ್ಕೆ ಹೋಗಿ ಕುಳಿತುಕೊಂಡು ಬಸವಕಥಾಶ್ರವಣದಿಂದ ಮೂರು ಗಂಟೆಯವರೆಗೂ ಕಾಲಕ್ಷೇಪಮಾಡಿ, ತರುವಾಯ ಬೇಸಗೆಯ ಕಾಲಕ್ಕೆ ತಕ್ಕ ಅಲ್ಪಾಹಾರಗಳಿಂದ ಸಮಸ್ತರೂ ಆನಂದಹೊಂದಿದಮೇಲೆ ವೀರಶೈವೇತರರಿಗೂ ಸಹ ತದಾಹಾರ ಗಂಧ ಪುಷ್ಪ ತಾಂಬೂಲಗಳು ಹಂಚಲ್ಪಟ್ಟುವು. ಬಳಿಕ ರಾಜರ ಸ್ವಂತ ಪೋಷಣೆಯಲ್ಲಿರುವ ಇಂಗ್ಲೀಷ್ ಮತ್ತು ಸಂಸ್ಕೃತ ಶಾಲಾ ವಿದ್ಯಾರ್ಥಿಗಳಾದ ವೀರಶೈವ ಬಾಲಕರಿಗೆ ವಸ್ತ್ರರೂಪವಾದ ಪಾರಿತೋಷಕಗಳು ಕೊಡಲ್ಪಟ್ಟನಂತರ ಸಭೆಯು ಮುಗಿಸಲ್ಪಟ್ಟಿತು. ೬॥ ಗಂಟೆಯ ಮೇಲೆ ಅರಮನೆಯಲ್ಲಿಯೂ ಶೃಂಗಾರದ ತೋಟದಲ್ಲಿಯೂ ಅಲಂಕರಿಸಲ್ಪಟ್ಟ ನಕ್ಷತ್ರದೀಪಗಳೂ ಪೆಟ್ರೋಲ್ ದೀಪಗಳೂ ನೋಡತಕ್ಕವರಿಗೆ ಬಹಳ ಆನಂದವನ್ನುಂಟುಮಾಡುತ್ತಿದ್ದುವು. ಮತ್ತು ಸಾಯಂಕಾಲ ಶಿವಪೂಜಾಕರ್ಮಾದಿಗಳನ್ನು ತೀರಿಸಿಕೊಂಡು ಭೋಜನಾನಂತರ ಒಂಭತ್ತು ಗಂಟೆಗೆ ತಜ್ಜಯಂತಿ ಮಂದಿರದಲ್ಲಿ ಸಮಸ್ತರೂ ಸೇರಿ ವೀಣೆಯೇ ಮೊದಲಾದ ಸಂಗೀತ ಗಾನ ವಿನೋದದಿಂದ ಹನ್ನೆರಡು ಗಂಟೆಯವರೆಗೂ ಕಾಲಯಾಪನ ಮಾಡಿ ತಂತಮ್ಮ ಸ್ಥಾನಗಳಿಗೆ ತೆರಳಿದರು.

ತು॥ ಡಿ॥ ಶಿರಾ.

ಸೆ ೧೯೧೪ ನೆ ಇಸವಿ ಏಪ್ರೀಲ್ ತಾರೀಖು ೨೯ ರ ಸ್ಟಾರ್‌ಪತ್ರಿಕೆಯಲ್ಲಿ ನಮೂದಿಸಿರುವ ಶ್ರೀಬಸವೇಶ್ವರಜಯಂತಿಯಹಬ್ಬವನ್ನು ನಡೆಸುವುದಕ್ಕಾಗಿ ಶಿರಾ ತಾ॥ ಮದಲೂರುಖಾಸೇದಮಠದ ಶ್ರೀಪಟ್ಟಾಧ್ಯಕ್ಷರುದ್ರದೇವರು ಶಿರಾಕಸಬಾ ಕೋಟೆಯಲ್ಲಿ ಭಕ್ತಮಾಹೇಶ್ವರರನ್ನು ವರ್ಷಾವಧಿಹಬ್ಬದ ದಿವಸ ಬರಮಾಡಿಕೊಂಡು ಪ್ರೋತ್ಸಾಹಗೊಳಿಸಿ ಪ್ರಸಿದ್ಧಪತ್ರಿಕೆಗಳನ್ನು ಅನೇಕಕಡೆ ರವಾನಿಸಿದರು. ಅದರಂತೆ ತಾ॥ ೨೮-೪-೧೪ ನೆ ಆನಂದ ಸಂ॥ ವೈಶಾಖ ಶುದ್ಧ ೩ ಮಂಗಳವಾರ ಬೆಳಗಿನ ೯ ಘಂಟೆಗೆ ಸರ್ವರೂ ಸೇರಿ ಶ್ರೀಫಾಲೇಶ್ವರಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಚಪ್ಪರವನ್ನು ಹಾಕಿ ತಳಿರುತೋರಣಗಳಿಂದಲಂಕರಿಸಿ ಮೇಲೆ ನಮೂದಿರುವ ಮ॥ ರುದ್ರದೇವರು ಸೊನ್ನಲಾಪುರದಿಂದ ತರಿಸಿದ್ದ ಶ್ರೀಕಲ್ಯಾಣದ ಬಸವೇಶ್ವರಸ್ವಾಮಿ ಭಾವಚಿತ್ರವನ್ನು ಕೋಡಿಗುಣಿಮಠದಿಂದ ಪದ್ಧತಿಪ್ರಕಾರ ಮಂಗಳವಾದ್ಯಗಳಿಂದಲೂ ವೇದಘೋಷಗಳಿಂದಲೂ ಬಹಳ ವಿಜೃಂಭಣೆಯಿಂದ ಉತ್ಸವ ಪೂರ್ವಕವಾಗಿ ಶ್ರೀಫಾಲೇಶ್ವರ ದೇವಸ್ಥಾನಕ್ಕೆ ೧೦ ಘಂಟೆಗೆ ಬಿಜಯಂಗೈಸಿ ಪೂಜಾದಿಗಳನ್ನಾಚರಿಸಿ ತಮ್ಮತಮ್ಮ ಮನೆಗಳಿಗೆ ತೆರಳಿದರು. ಆ ರಾತ್ರಿಗೆ ಶ್ರೀಬಸವೇಶ್ವರ ಜನನದ ೨ ನೆ ರಾತ್ರಿ ಬ್ರಹ್ಮಾಂಡಸೃಷ್ಟಿಯು ೩-೪ ನೆ ರಾತ್ರಿ ಮಾರ್ಕಂಡೇಯನಚರಿತ್ರೆಯು ಪುರಾಣವು ನಡಸಲ್ಪಟ್ಟಿತು. ಇನೆಯ ಕಡೇದಿನ ಸ್ಥಿರವಾರ ಪ್ರಾತಃಕಾಲ ೮ ಘಂಟೆ ಲಾಗಾಯ್ತು ೧೨ ಘಂಟೆ ವರೆಗೆ ಪಟ್ಟಾಭಿಷೇಕ ಸಹಸ್ರನಾಮ ಪೂಜಾಮಹಾಮಂಗಳವು ಪೂರೈಸಿ, ಸೇರಿದ್ದ ಭಕ್ತಮಾಹೇಶ್ವರರಿಗೆ ಭೋಜನೋಪಚಾರಗಳು ನಡೆಸಲ್ಪಟ್ಟು ತಾಂಬೂಲಸಮಾರಂಭವು ನಡೆಯುವ ಕಾಲದಲ್ಲಿ ಡಿಟೋ ಕೋಟೆಯಲ್ಲಿರುವ ಗೌ॥ ಕರಿಬಸಪ್ಪನವರು ಮೇಲೆ ನಮೂದಿರುವ ಪಟ್ಟಾಧ್ಯಕ್ಷರು ಈ ಕಾರ್ಯವನ್ನು ಬಹಳ ಶ್ರದ್ಧೆಯಿಂದ ನಡೆಸಿದ್ದಕ್ಕಾಗಿ ಈ ಸಭಾದಲ್ಲಿ ಒಂದು ಅಡ್ರಸ್ಸನ್ನು ಒಪ್ಪಿಸಿದರು. ಪುನಃ ರಾತ್ರಿ ೮ ಘಂಟೆಗೆ ಸಮಸ್ತರೂ ಶ್ರೀಫಾಲೇಶ್ವರಸ್ವಾಮಿ ದೇವಸ್ಥಾನದಲ್ಲಿ ಸಭೆ ಸೇರಿ ಸ್ವಲ್ಪಹೊತ್ತು ಸಂಗೀತವನ್ನು ನಡೆಸಿ ಪಟ್ಟಾಧ್ಯಕ್ಷ ರುದ್ರದೇವರು ವೀರಶೈವಮತೋತ್ಪತ್ತಿ ವಿಷಯವನ್ನು ಬೆಂಗಳೂರು ಲಾ॥ ಬ॥ ಧ॥ ತೋಟದಪ್ಪನವರ ಸತ್ರದಲ್ಲಿ ಓದುತ್ತಿರುವ ಶಿರಾ॥ ಕೋ॥ ಮ॥ ಚಿಕ್ಕರುದ್ರಯ್ಯನು ಸ್ತ್ರೀಪುರುಷರ ವಿದ್ಯಾಪ್ರಯೋಜನವನ್ನು ಕುರಿತು ಉಪನ್ಯಾಸಗಳನ್ನು ಮಾಡಿದನಂತರ ಶ್ರೀಚಕ್ರವರ್ತಿಯವರ ಮತ್ತೂ ಶ್ರೀಮನ್ಮಹಾರಾಜರ ಶ್ರೇಯಃಪ್ರಾರ್ಥನೆಯು ಮಾಡಲ್ಪಟ್ಟು ಕೂಡಿದ್ದ ಸಭಾಜನರಿಗೆ ಗಂಧಪುಷ್ಪಫಲಾಹಾರ ತಾಂಬೂಲ ವಿನಿಯೋಗದಿಂದ ಸ್ವಾಮಿಯುತ್ಸವವುಮಂಗಳವಾದ್ಯಗಳೊಡನೆ ಪೂರೈಸಲ್ಪಟ್ಟಿತು. ಈ ಕಾರ್ಯವನ್ನು ಪ್ರತಿವರ್ಷವೂ ಇದೇರೀತಿ ನಡೆಯುವಂತೆ ಶ್ರೀಬಸವೇಶ್ವರನು ಸಮಸ್ತರಿಗೂ ಆಯುರಾರೋಗ್ಯವನ್ನು ಕೊಟ್ಟು ಕಾಪಾಡಲಿ ಎಂಬದಾಗಿ ಕರತಾಡನಗಳಿಂದ ಸಭೆಯು ವಿಸರ್ಜಿಸಲ್ಪಟ್ಟಿತು.

೫೦೦ ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರೀ ಮುರಬ್ಬಾ.

4

ಈ ಮುರಬ್ಬಾವು "ಪಂಜಾಬ್ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂಪಾಯಿಗಳು ಬಹುಮಾನ ಕೊಡಲ್ಪಡವುದು.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯಕೋಶವು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣ ಪರಿಯಂತರವೂ ದುಃಖಪಡುವರು. ಈ "ಪಂಜಾಬ್ ಸಾಲಾಮಿಸ್ರೀಮುರಬ್ಬಾ" ವಿನ ಸೇವನೆಯಿಂದ—

ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಕ್ಷಣಕ್ಷಣಕ್ಕೂ ಮೂತ್ರವಾಗುತ್ತಿದ್ದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ದೂರ ನಡೆಯುವುದರಿಂದ ಮೇಲುಬ್ಬಸ ಬರುವುದು ತಲೆಯ ನೋವೂ ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರಿಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ರಕ್ತವನ್ನು ಹೆಚ್ಚಿಸಿ ವೀರ್ಯವನ್ನು ವೃದ್ಧಿಪಡಿಸುವುದರಲ್ಲಿ ಪಂಜಾಬ್ ಸಾಲಾಮಿಸ್ರೀ ಮುರಬ್ಬಾವಿನ ಹೊರತು ಇದಕ್ಕೆ ಸಮಾನವಾದ ಔಷಧವು ಬೇರೆ ಯಾವುದೂ ಇಲ್ಲವು.

ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ತಾಂಬ್ರದ ಮತ್ತು ಭಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು. ಹೊಟ್ಟೆಯಲ್ಲಿರುವ ಜ್ವರದ ಗಡ್ಡೆಯನ್ನು ನಾಶಪಡಿಸುವುದು. ಶ್ವಾಸ ಖಾಸ ರೋಗಗಳನ್ನು ನಿರ್ಮೂಲಪಡಿಸುವುದು.

ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲ್ ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳಿಗಡ್ಡೆ, ಶಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರಿ ಎಂದು ಹೇಳಿ ಮೋಸಪಡಿಸುವರು. ಈ ಮುರಬ್ಬಾವನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾಬ್ ಸಾಲಾಮಿಸ್ರಿಯೋ ಅಥವ ಬೇರೇ ತರಹಾದ್ದೋ ಎಂಬುವುದು ಚೆನ್ನಾಗಿ ತಿಳಿದು ಬರುತ್ತೆ. ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧೫ ತೋಲಾ ಮುರಬ್ಬಾವಿರುವ ಡಬ್ಬಾ ೧ಕ್ಕೆ ರೂ ೧-೮-೦; ಟಪಾಲ್ ಖರ್ಚು ನಾಲ್ಕು ಆಣೆ ಅನುಪಾನಪತ್ರಿಕೆ ಔಷಧದ ಸಂಗಡ ಇರುತ್ತೆ.

ಅತ್ಯುತ್ತಮವಾದ ವನೌಷಧಗಳು.

೧. ಧಾತುಪುಷ್ಟಿಚೂರ್ಣ– ಕ್ರಯ ೫ ಆಣೆ.
೨ ರೋಮನಾಶಕ ಮತ್ತು ವೃಶ್ಚಿಕದಂಷ್ಟ್ರ ತೈಲವು ಚೇಳಿನ ಹೊಡತಕ್ಕೂ ಮತ್ತು ಕೂದಲು ತೆಗಿಯುವುದಕ್ಕೂ ಬಹಳ ಒಳ್ಳೆಯದು ಕ್ರಯ ೨ ಆಣೆ.
೩ ವಾತನಿವಾರಣೆ ತೈಲವು ಕ್ರಯ ೪ ಆಣೆ.
೪ ಹೊಟ್ಟೆನೋವಿಗೆ ಔಷಧ ಕ್ರಯ ೨ ಆಣೆ ೬ ಪೈ.
೫ ಕೆಮ್ಮಲು ರೋಗಕ್ಕೆ ಔಷಧ ೪ ಆಣೆ.
೬ ವ್ರಣಕ್ಕೆ ಔಷಧ ೪ ಆಣೆ.
೭ ಆಶ್ಚರ್ಯಕರವಾದ ವೀರ್ಯಸ್ತಂಭದ ಗುಳಿಗೆ ೪ ಆಣೆ.
೮ ತಲೆನೋವಿಗೆ ತೈಲವು ೨ ಆಣೆ ೬ ಪೈ.
೯ ಪ್ರಮೇಹ ನಿವಾರಣ ಭಸ್ಮವು–೮ ಆಣೆ.
೧೦ ಉಷ್ಣಕಾರಕಕ್ಕೆ ಮಾತ್ರೆಗಳು–ರೂ. ೧.
೧೧ ಮೂಲವ್ಯಾಧಿಗೆ ಔಷಧ–೮ ಆಣೆ.
೧೨ ಕಣ್ಣಿಗೆ ಸುವರ್ಮ–೪ ಆಣೆ.
೧೩ ದಂತಚೂರ್ಣವು–೧ ಆಣೆ ೩ ಪೈ.
೧೪ ಕೂದಲು ಬೆಳೆಯುವ ಎಣ್ಣೆ (ಬಂಟೋಲ ತೈಲ) ೪ ಆಣೆ.

ವಿಳಾಸ:— ಡಿ. ಮನ್ನಾಲಾಲ್, ದಿಲ್ಲಿ ವೈದ್ಯರು,
೧೩, ಹಳೇ ಪಿಕ್ಕಿಕಟ್ಟೆ, ಬೆಂಗಳೂರು ಸಿಟಿ.

ಶಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

24

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ವಪತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗಪೀಡಿತರು, ರಕ್ತಪುದ್ರೇಕವಾದವರು, ತೃಷೆಪುಳ್ಳವರು, ದಮ್ಮಿನವರು, ಕೆಮ್ಮಿನವರ ಕಫ, ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟುಗುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ:—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲಾ ಉತ್ತರಕನಡಾ.

34

ದೊಡ್ಡಕಂಪೆನಿ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯು. ಎನ್. ಮತ್ತು ಕಂಪೆನಿ,
ಬನಾರಿಸ್ ಸಿಟಿ. (ಕಾಶೀ)

ಅಗ್ಗವಾದ ಮಾಲುಗಳು.

S.N.RUDRAKSHA & CO.
BENARES CITY.

ನಮ್ಮಲ್ಲಿ ಉತ್ತಮವಾದ ನೇಪಾಳ ರುದ್ರಾಕ್ಷಿ ಉತ್ತಮವಾಗಿಯೂ ಗಟ್ಟಿಯಾಗಿಯೂ ೪ ಮುಖದಿಂದ ೧೪ ಮುಖದ ವರೆಗೆ ಸಣ್ಣದು ದೊಡ್ಡದು ಸಹ ಈ ಎರಡು ನಮೂನೆಯಲ್ಲಿ ದೊರೆಯುವುದು. ಮತ್ತು ಇವುಗಳಲ್ಲದೆ ರೇಷ್ಮೆ ಮಗುಟ, ಕಾಶ್ಮೀರ ಶಾಲು, ರೇಷ್ಮೆ ಜರೀಸೀರೆ, ಜರಿಕಣ, ಪೇಟ, ಮೊಳಕಾಲ್ಮುರು ನಮೂನೆ ವಸ್ತ್ರ ಜಗನ್ನಾಥ ಜಾಗಂಟೆ, ನೇಪಾಳ ಕಸ್ತೂರಿ, ಉತ್ತಮವಾದ ಜರೀ ಛಾದರ್ ಮೊದಲಾದ ಅಮೂಲ್ಯವಾದ ಸಾಮಾನು ಎಲ್ಲವರಿಗಿಂತಲೂ ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಇಚ್ಛಿಸಿದವರಿಗೆ ವಿ. ಪಿ. ಮೂಲಕ ಕಳುಹಿಸಲಾದೀತು.

ರುದ್ರಾಕ್ಷಿಗಳ ವಿವರ:—

೪ ಮುಖದ ರುದ್ರಾಕ್ಷಿ ಕಂಠಿ ಅಂದರೆ ೩೨ ಮಣಿಗಳಿರುವ ಸರ ೧ ಕ್ಕೆ ೧೨ ಆಣೆಯಿಂದ ೬೦ ರೂಪಾಯಿವರೆಗೆ. ೫ ಮುಖದ ಕಂಠಿ ೧ಕ್ಕೆ ೮ ಆಣೆಯಿಂದ ೩೦ ರೂಪಾಯಿವರೆಗೆ. ೬ ಮುಖದ ಕಂಠಿ ೧ಕ್ಕೆ ೧೨ ಯಿಂದ ೧೦೦ ರೂ. ವರೆಗೆ. ೭ ಮುಖದ ಕಂಠಿ ೧ಕ್ಕೆ ೧೦ ರೂ. ಯಿಂದ ೧೫೦ ರೂ. ವರೆಗೆ. ಇದರಂತೆ ೮, ೯, ೧೦, ೧೧, ೧೨, ೧೩, ೧೪, ಈ ಮುಖಗಳ ಮಣಿ ೧ಕ್ಕೆ ೫ ರೂ. ಯಿಂದ ೩೦ ರೂ. ವರೆಗೆ. ಇದರಲ್ಲಿಯೇ ಕಂಠಿ ಬೇಕಾದರೆ ಸಹ ದೊರೆಯುವುದು. ಸಣ್ಣ ರುದ್ರಾಕ್ಷಿ ಸರ ಅಂದರೆ ೧೦೮ ಮಣಿಯಿರುವ ತೊಗರಿಯ, ಉದ್ದಿನಕಾಳು ಪ್ರಮಾಣದ ಸರ ೧ಕ್ಕೆ ರೂ. ೫ ರಿಂದ ರೂ. ೩೦ ವರೆಗೆ. ಕಡಲೆ ಕಾಳು ಪ್ರಮಾಣದ ೧೦೮ ಮಣಿಯಿರುವ ಸರ ೧ಕ್ಕೆ ರೂ. ೨-೮-೦ ಲಾಗಾಯಿತು ರೂ. ೧೦ ವರೆಗೆ. ಜಪಮಾಲೆ ನೆಲ್ಲಿಕಾಯಿಯಿಂದ ಅವರೇ ಬೀಜದ ಪ್ರಮಾಣದ ೧೦೮ ಇರುವ ಸರ ೧ಕ್ಕೆ ೧೨ ಆಣೆಯಿಂದ ರೂ. ೧೦ ವರೆಗೆ. ಸಾಧಾರಣ ತರ ೬ ಆಣೆಯಿಂದ ರೂ. ೩ ವರೆಗೆ. ಗೌರೀಶಂಕರ ರುದ್ರಾಕ್ಷಿ– ಈ ರುದ್ರಾಕ್ಷಿಯು ರುದ್ರಾಕ್ಷಿಗಳಲ್ಲೆಲ್ಲಾ ಶ್ರೇಷ್ಠವೆಂದು ಹೇಳುವರು. ರುದ್ರಾಕ್ಷಿ ಮಣಿ ೧ ಕ್ಕೆ ರೂ. ೫ ಲಾಗಾಯಿತು ರೂ. ೫೦ ವರೆಗೆ. ಇಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ವಿಳಾಸ– ಎಸ್. ನೇಪಾಳ ರುದ್ರಾಕ್ಷಿ ಅಂಡ್ ಕಂಪೆನಿ,
18 ಬನಾರಸ್ ಸಿಟಿ.

ದಿ ಜನರಲ್ ಏಜನ್ಸಿ, ಮೈಸೂರು.

ಕಾದಂಬರಿಗಳು: — ಚಂಡಮಾರುತ ೦-೨-೦; ಚರಿತಾಮೃತಂ ೦-೫-೦; ರಾಜಕಥಾವಲ್ಲರಿ ೦-೫-೦; ಪೀಟರಿನಚರಿತ್ರ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೨-೬; ಸೀತೆ ೦-೫-೦; ಸಾಹಸಿಕೆ, ಕಲಾನಾಥ ೦-೮-೦; ಮಹಾಲಕ್ಷ್ಮಿ ೦-೨-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸತ್ಯಾಸಂಜೀವಿನಿ ೦-೮-೦; ಕೊಹಿನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೨-೦. 36

34

ಬಿಸಿಲುಕಾಲದ ಆಯಾಸವನ್ನೂ ಬಾಯಾರಿಕೆಯನ್ನೂ ಪರಿಹರಿಸಿ ಮನಸ್ಸಿಗೆ ಅಪೂರ್ವವಾದ ಆನಂದವನ್ನುಂಟು ಮಾಡುವುದರಲ್ಲಿ ಪ್ರಖ್ಯಾತಿಹೊಂದಿರುವ ಬಿ. ವಿ. ಪಂಡಿತರ

ಆಮೋದಿನಿ

ವಿದ್ಯಾರ್ಥಿಗಳು, ಪ್ರಯಾಣಿಕರು, ಬೈಸಿಕಲ್‌ಸ್ವಾರಿ ಮಾಡುವವರು, ಉಪನ್ಯಾಸಕರೇ ಮೊದಲಾಗಿ ಸರ್ವರೂ ಅಮೋಘವಾದ ಸುವಾಸನೆಯುಳ್ಳ ಈ ಮಾತ್ರೆಗಳ ಗುಣಾತಿಶಯಗಳನ್ನು ತಮ್ಮ ಮಿತ್ರರಲ್ಲಿ ಪ್ರಚಾರಪಡಿಸುತ್ತಲಿದ್ದಾರೆ. ಸಂಗೀತಗಾರರು ಇದರಿಂದ ತಮಗುಂಟಾಗಿರುವ ಪ್ರಯೋಜನವನ್ನು ವ್ಯಕ್ತಪಡಿಸಿದ್ದಾರೆ.

ಶುದ್ಧವಾದ ವನಸ್ಪತಿಗಳಿಂದಲೇ ತಯಾರಿಸಲ್ಪಟ್ಟಿರುವ ಈ ಮಾತ್ರೆಗಳು ಸಮಸ್ತರಿಗೂ ಮಲಬಂಧ, ಹೊಟ್ಟೆನೋವು, ನಾನಾತರಹ ಕೆಮ್ಮು, ದಮ್ಮು, ಉಬ್ಬಸ, ಅಗ್ನಿಮಾಂದ್ಯ, ಅರೋಚಕ, ತಲೆನೋವು, ವಾಂತಿ, ವಾಕರಿಕೆ, ಪಿತ್ಥಸಂಕಟ, ಜಲದೋಷಗಳನ್ನು ಖಾತರಿ ಗುಣಪಡಿಸಿ ರಕ್ತಶುದ್ಧಿಯನ್ನುಂಟುಮಾಡುತ್ತವೆ. ೧೫೦ ಮಾತ್ರೆಗಳುಳ್ಳ ಸೀಸ ೧ ಕ್ಕೆ ಅನುಪಾನಪತ್ರಸಹಿತ ೦-೪-೦.

ಶ್ರೀ ಕರ ಕಸ್ತೂರಿ ಮಾತ್ರೆ.

ಈ ಮಾತ್ರೆಗಳನ್ನು ಒಂದೇವೇಳೆ ಪರೀಕ್ಷಿಸಿರಿ. ಇದರ ಗುಣ ಮತ್ತೂ ಸುವಾಸನೆಗಳು ನಿಮಗೆ ಅನುಭವವಾಗುವುವು. ಮನೆಯಲ್ಲಿ ಸಣ್ಣಮಕ್ಕಳುಗಳನ್ನುಳ್ಳವರು, ಪ್ರಯಾಣಿಕರು ಮಲೆನಾಡು ವಾಸಸ್ಥರು ಮತ್ತೂ ಸೋಂಕುರೋಗಸ್ಥಳದಲ್ಲಿರುವವರಿಗೆ ಈ ಮಾತ್ರೆಗಳು ಅಮೃತವೇಸರಿ. ಶೀತವಾಯು, ವಿಷಮಜ್ವರಗಳು, ನಡುನೋವು, ಕೆಮ್ಮು, ಅಗ್ನಿಮಾಂದ್ಯ, ಅರೋಚಕ, ಹಲ್ಲುನೋವು, ಅಜೀರ್ಣಭೇದಿ, ಮಲಬಂಧ, ಮೈಕೈ ನೋವು ಮತ್ತೂ ಭಾರಗಳನ್ನು ಅತಿಜಾಗ್ರತೆ ಗುಣಪಡಿಸುತ್ತವೆ. ವಿಶದವಾದ ಅನುಪಾನ ಪತ್ರಸಹಿತ ೫೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೦-೪-೦ ನಾಲ್ಕಾಣೆ ಬೆಲೆ ಬಾಳುವ ಐದು ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಒಂದು ಇನಾಮು. ಪ. ಖ. ಪ್ರತ್ಯೇಕ. ಕ್ಯಾಟಲಾಗನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ— ಕೆ. ವಿ. ನಾರಾಯಣರಾವ್,
ಮ್ಯಾನೇಜರ್, ಸದ್ವೈದ್ಯಶಾಲಾ,
ನಂಜನಗೂಡು, ಮೈಸೂರ್ ಸಿ

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕಯ್ಯಿಂದ ಬಣ್ಣ ಕೊಟ್ಟಿರುವ ಫೋಟೊ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡ ಪಲ್ಲಕ್ಕಿ ಉತ್ಸವದ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸನತೊಳುಸಹಿತ ಆದ ಸಮಾರಂಭದ ಫೋಟೊ ೧ ಕ್ಕೆ ಕ್ರಯ ೧ ರುಪಾಯಿ

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಾಮಾಡಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೊ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೊ ೧ ಕ್ಕೆ ಕ್ರಯ ಫುಲ್ಲಸೈಜು ೧ ರುಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀ ಜಗದ್ಗುರು ತೋಂಟದಾರ್ಯ ಗದಗ, ಶ್ರೀ ಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ಸತ್ಪುರುಷಮಾಲಾ, ಹಾಳಕೇರಿ ಆನಂದಸ್ವಾಮಿಯ ಫೋಟೊ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೊ ಸಿಗುತ್ತವೆ. ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ

ಜೊಸಫ್ಯಾಷನ್—ಸದ್ಗೃಹಸ್ಥರು ಗಡಿಯಾರ ಸರ್ಪಳಿಗೆ ಹಚ್ಚುವ ಲಾಕೇಟುಗಳೂ, ಯದರಲ್ಲಿ ಹಿಂದೆ ಮುಂದೆ ಇಪ್ರಕಾರ ೨ ಫೋಟೊ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ॥, ॥।=, ೧, ೧।, ಪ್ರಕಾರ, ಮತ್ತೂ ಬೆಳ್ಳಿದು ರು ೧॥ ರೋಲ್ಡ್ ಗೋಲ್ಡು ಭಂಗಾರದ್ದು ದುರ್ಬಿಣದ ಗ್ಲಾಸದೂ ಕ್ರಯ ೨॥, ೨॥। ರೂ

ಪೊರೂರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ಧಾಣೆ ಟಿಕೀಟು ಕಳುಹಿಸಿ ಕ್ಯಾಟಲಾಕು ಬೇಕಾದವರು ತರಿಸಿಕೊಳ್ಳಿರಿ. ನಮ್ಮವಿಳಾಸ — ಗಂಗಪ್ಪಾ ಜೇರಿಗೆ.

11 ಆರ್ಟಿಸ್ಟ್ ಸೊಲ್ಲಾಪುರ

ಊದಬತ್ತಿಗಳು.

5

ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ ೧೨-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪ ಚೂರ್ಣ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಸುಗಂಧಕಾರಿ, ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚೆನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೪-೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧ ರೂ. ಕೊಡಬೇಕಾಗುವುದು. ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೬-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦-೮-೦ ಆಣೆಯಂತೆ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ಮಿಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರ್ ಪ್ರೆಸ್, ಮೈಸೂರ್.

ಸಮಸ್ತ ವೀರಶೈವಬಾಂಧವರಿಗೆ ವಿದಿತಪಡಿಸುವುದೇನೆಂದರೆ— ಕಳೆದವರ್ಷ ನಿಪ್ಪಾಣಿಯಲ್ಲಿ ಕೂಡಿದ್ದ ೩ ನೆಯ ವೀರಶೈವಮಹಾಸಭೆಯ ರಿಪೋರ್ಟು ಬುಕ್ಕುಗಳು ಮುದ್ರಿತವಾಗಿ ಕ್ರಯಕ್ಕೆ ಸಿದ್ಧವಾಗಿರುವುವು. ಈ ಸೂಚನೆಯು ಬುಕ್ಕುಗಳು ಒಳ್ಳೆಯ ಅನ್ವರ್ತಿವುವಾಗಿಯೂ, ಅಚ್ಚುಕಟ್ಟಾಗಿಯೂ ಬರೆದಿದ್ದು, ಅದರಲ್ಲಿ ನಮ್ಮ ಸಮಾಜದ ಆಧಾರಸ್ತಂಭಗಳಂತಿರುವ ಪ್ರತಿಯೊಬ್ಬ ಮುಖಂಡರ ಛಾಯಾಚಿತ್ರಗಳೂ ಪ್ರತ್ಯೇಕವಾಗಿ ಸೇರಿಸಲ್ಪಟ್ಟಿರುವುವು. ಮೇಲಾಗಿ ಪ್ರತಿಗಳು ವಿಕ್ರಯಕ್ಕೆ ಒಂದೇ ನೂರು ಇರುವುದರಿಂದ ಹಿಂದಿನಿಂದ ಬೇಡುವವರಿಗೆ ಪ್ರತಿಗಳು ನಿಶ್ಚಯವಾಗಿ ಸಿಗಲಾರವು. ಕಾರಣ, ಇಷ್ಟವುಳ್ಳವರು ಮುಂಚಿತವಾಗಿಯೇ ಸ್ಪಷ್ಟವಾದ ಪತ್ರಿಯಿಂದ ಆರ್ಡರು ಕಳುಹಿಸಬಹುದು.

ಶಿವಮೂರ್ತಿಸ್ವಾಮಿ ಕಣಬರಗಿಮಠ,
ಚೇರ್ಮನ್, ಸ್ವಾಗತಕಮಿಟಿ,
೩ ನೆಯ ಮಹಾಸಭೆ ನಿಪ್ಪಾಣಿ

ಪರಿಮಳದ್ರವ್ಯಗಳು.

ನಮ್ಮಲ್ಲಿ ಬಹುಕಾಲದಿಂದಲೂ ಅತ್ಯುತ್ತಮವಾಗಿ ತಯಾರಾಗುತ್ತಿರುವ ಊದುಬತ್ತಿಗಳು ಸೇರು ೧ ಕ್ಕೆ ೪ ಆಣೆಯಿಂದ ೧೦ ರೂ. ವರೆಗೂ ದೊರೆಯುವುವಲ್ಲದೆ, ನಾನಾತರದ ಗಂಧದಬಿಲ್ಲೆಗಳು, ಜವಾಜಿಗಂಧ ಅಥವಾ ಅರಗಜ, ಪುನಗು, ಜವಾಜಿ, ದಶಾಂಗ, ಧೂಪದಕೊಂಡ ಮೊದಲಾದ ಸುಗಂಧದ್ರವ್ಯಗಳೂ, ಮಲ್ಲಿಗೆ-ಸಂಪಗೆ-ರೋಜಾ ಮೊದಲಾದ ಅತ್ತರುಗಳೂ ಮತ್ತೂ ಭೃಂಗಾಮಲಕತೈಲ ಮೊದಲಾದುವುಗಳೂ ಬಿಕರಿಗೆ ಸಿದ್ಧವಾಗಿರುವುವು. ಅಪೇಕ್ಷಕರು ೫ ರೂ. ಗೆ ಕಡಿಮೆಯಿಲ್ಲದಂತೆ ಆರ್ಡರನ್ನು ಕೊಡಬೇಕು. ಇನ್ನೂ ಹೆಚ್ಚು ವಿಷಯಗಳನ್ನು ತಿಳಿಯತಕ್ಕವರು ನಮ್ಮ ಕ್ಯಾಟಲಾಗನ್ನು ತರಿಸಿ ನೋಡಬಹುದು. 36

ವಿಳಾಸ— ಎಸ್. ಕಳ್ಳೆಪ್ಪ, ಊದುಬತ್ತಿಷಾಪ್,
ದೊಡ್ಡಪೇಟೆ, ಬೆಂಗಳೂರು ಸಿಟಿ.

ನ್ಯಾಯದರ್ಪಣ. 17

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯು, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಫ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸೂ, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆಚರಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ವಗೈರೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯು ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿಇರುತ್ತವೆ.

ಬೆಲೆ ರೂ. 1—8—0. ವಿ. ಪಿ. ಮೂಲ್ಯ 1—12—0.

ಎಂ. ಎಸ್. ನಂಜಪ್ಪನವರು,
ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ)ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾಗಿದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚಿಟಿಕೆ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜನ್ ಡಬ್ಬಿಗೆ ೧—೧೪—೦

ಉತ್ತಮವಾದ ನಶ್ಯದಪುಡಿ.

ಘಾಟು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೆಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವೆ. ನೀವು ಉಪಯೋಗಿಸುವ ಬರೀ ಹೊಗೆಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೆಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೧—೧೪—೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,
ಗೋಪಸೆಟ್ಟಿಪುರ, ಹನೂರು ಪೋಸ್ಟ್
13 ಕೊಳ್ಳೇಗಾಲದ ತಾಲ್ಲೂಕು.

೧೯೧೪ ನೆಯ ಇಸವಿ ಮೇ ತಾ॥ ೧೮ ರಿಂದ ೧೯೧೪ ನೆಯ ಮೇ ತಾ॥ ೨೪ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ ನೆಯ ಆನಂದನಾಮ ಸಂ॥ ದ ವೈಶಾಖ ಬ॥ ನವಮಿಯಿಂದ ವೈಶಾಖ ಬ॥ ಅಮಾವಾಸ್ಯೆವರೆಗಿನ ಪಂಚಾಂಗ.

ತಾ॥	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ತೇದಿ ವೃಷ
18	ಸೋ	ನ	55-11	ಶತ	24-35	5
19	ಮಂ	ದ	38-57	ಪೂಭಾ	29-45	6
20	¹ಬುಧ	ಏ	43-21	ಉಭಾ	35-45	7
21	ಗುರ	ದ್ವಾ	48-46	ರೇ	42-18	8
22	²ಶುಕ್ರ	ತ್ರ	53-51	ಅಶ್ವಿ	48-59	9
23	³ಶನಿ	ಚ	58-51	ಭ	55-18	10
24	⁴ಭಾ	ಅ	60	ಕೃ	60	11

(1) ಸರ್ವತ್ರ್ಯೇಕಾದಶಿ. (2) ಪ್ರದೋಷಃ. (3) ಮಾಸಶಿವರಾತ್ರಿಃ. (4) ಸರ್ವತ್ರ ಅಮಾವಾಸ್ಯಾ

ಮೈಸೂರು ನ್ಯೂ ಎರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

21 ಸಚಿತ್ರ ಶುಕಸಪ್ತತಿ ಕಥೆಗಳು ರೂ. ೧-೮-೦ (೫೧೦ ಪುಟ) ಟಪಾಲು ಹಾಸಲು ೪ ಆಣೆ. ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ ರೂ ೧-೮-೦. (೫೭೩ ಪುಟ)

ಸಚಿತ್ರ ವಿದ್ಯಾಮಂಜರಿಕಥೆಗಳು

ವಾಚಕ ಮಹಾಶಯರುಗಳೇ! ಮಾನ್ಯತೆಯು ಬೇಕಾದರೆ, ವಾಗ್ವೈಖರಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಬಿಚ್ಛಿಸಿದ್ದರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯುಲ್ಲಾಸವಿದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೩೦ ಪುಟಗಳಿಂದ ಕೂಡಿದ ೬೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ ೧-೪-೦ ಟಪಾಲ್ ಹಾಸಲು ೩ ಆಣೆ. ಈಗಲೇ ಬರೆ ನಿರಿ. ನಮ್ಮಲ್ಲಿ ಇನ್ನೂ ಅನೇಕಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸಚಿತ್ರ ಶುಕಸಪ್ತತಿ ಕಥೆಗಳು

ಶುಕಮಹರ್ಷಿಗಳು ಲೋಕದಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತಭಾಷೆಯಲ್ಲಿ ಹೇಳಿರುವರು. ಈ ಕಥೆಗಳನ್ನು ಭಾಷಾಂತರ ಮಾಡಿ ಕನ್ನಡದಲ್ಲಿ ರಚಿಸಿದೆ. (1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವುದು. (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತರಹಸ್ಯಗಳನ್ನೂ, ಬುದ್ಧಿಚಾಂಚಲ್ಯನಿವಾರಣೆ ಮುಂತಾದ್ದನ್ನೂ ತಿಳಿಸುವುದು. (3) ಸ್ತ್ರೀ ಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ ವಿವಿಧನೀತಿ ಮುಂತಾದುವುಗಳನ್ನು ಬೋಧಿಸುವುದು. (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವುದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವುದು. (5) ಅಲ್ಲಲ್ಲಿ ಕಥಾಸಂದರ್ಭಾನುಸಾರ ಭಾವನಕ್ಕೆ ಚಿತ್ರಗಳನ್ನು ಇಟ್ಟಿರುವುದರಿಂದ ಓದುಬಾರದವರಿಗೂ ಮನೋರಂಜಿತವಾಗಿರುವುದು. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ, ಇದರ ಕ್ರಯ ಪ್ರತಿ ೧ಕ್ಕೆ ೧-೮-೦; ಟಪ್ಪಾಲು ಹಾಸಲು ೪ ಆಣೆ.

(೩೪ ಸಂಧಿಗಳು) **ಸಟೀಕಾ ತಾತ್ಪರ್ಯ ಜೈಮಿನೀಭಾರತವು.** (೯೩೦ ಪುಟಗಳು)

ಇದರ ಕ್ರಯ ಪ್ರತಿ ೧ ಕ್ಕೆ ರೂ. ೪—೦—೦; ಟಪಾಲು ಹಾಸಲು ೧೦ ಆಣೆ.

ಇವಲ್ಲದೆ ಇನ್ನೂ ಅನೇಕ ಕನ್ನಡಗ್ರಂಥಗಳು ದೊರೆಯುತ್ತವೆ ಪುಸ್ತಕಗಳ ಪಟ್ಟಿಗೆ ಬರೆದರೆ ಉಚಿತವಾಗಿ ಕಳಿಸುವೆವು

41 ನಮ್ಮ ವಿಳಾಸ— ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ.

ಬಿ. ಶ್ರೀ. ದ. ವೆಂಕಟಾಚಲ ಪಂಡಿತರ ಸಿದ್ಧೌಷಧಗಳು 2

ಲೋಕಾಮೃತ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂಬಂಗಳ ನೋವು ಮೈ ಕಾಲು ಜೋಡಿತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿಸಪ್ಪ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ— ೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.



ವೈಶ್ವಾನರಾಸವ (ಕಾಲರಾ ಔಷಧಿ.)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈ ಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇಪೊಂದು ಬುಡ್ಡಿಯು ನಿಮ್ಮಲ್ಲಿರಲಿ. ವೈದ್ಯರಿಂದು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತವಿದೊಂದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧—೦—೦.
ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ. ಮೈಸೂರು

REGISTERED M NO124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ವಾರ್ಷಿಕ ಚಂದಾ ೧—೦—೦ } ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತ್ವಾ ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ | ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತಸಾದ್ವ್ಯಗ್ರಾಲವಾಲಂವಲಂ | ಸೀಮಾತೀತಯಶಃಪ್ರತಾಪವಿಪುಲಂಸದ್ವೃತ್ತಮಾಲಾಕುಲಂ | ಪ್ರೇಮಂಬಿತ್ತಿಕೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ॥ { ಅಂಚೆವೆಚ್ಚ ಸೇರಿ ೧—೧೪—೦

REGISTERED M NO. 124

ಸಂಪುಟ ೨೩) ಮೈಸೂರ್ ಸ್ಟಾರ್ ಸರ್ ೧೯೧೪ ನೆಯ ಇಸವಿ ಮೇ ತಾರೀಖು ೨೫ ನೆಯ ಸೋಮವಾರ. (ಸಂಚಿಕೆ ೨೧

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಈ ಪತ್ರಿಕೆಯ ಚಂದಾದಾರರೆಲ್ಲರಿಗೂ ಅಚ್ಚಬೆಳ್ಳಿಯ ಸರಪಣಿ ಬಹುಮಾನ ಕೊಡಲಾಗುತ್ತೆ.

17 ಈ ಲಾಗಾಯಿತು ೨ ತಿಂಗಳುಮಾತ್ರ.

ಪದ್ಧತಿಯಮೇರೆ ಹೊಸವರ್ಷದ ಯುಗಾದಿಹಬ್ಬದಲ್ಲಿ ಬಹುಮಾನಿಸುವುದಕ್ಕಾಗಿ 2000 ಅಚ್ಚಬೆಳ್ಳಿಯ ಕೊರಳ ಸರಪಣಿಗಳನ್ನು ಸೀದಾ ಸೀಮೆಯಿಂದ ತರಿಸಿರುತ್ತೇವೆ.

ಪ್ಯಾನ್ಸಿವೈಲ್ ರೈಲ್ವೆ ರೆಗ್ಯುಲೇಟರ್ ವಾಚ್ ೧ಕ್ಕೆ ಕ್ರಯ 3-8 0 ಪೋಸ್ಟೇಜು 0-4-0

ಈ ಲಾಗಾಯಿತು ೨ ತಿಂಗಳೊಳಗಾಗಿ ಮೇಲ್ಕಂಡ ಒಂದು ವಾಚ್ ತರಿಸತಕ್ಕವರಿಗೆ ಒಂದು ಅಚ್ಚಬೆಳ್ಳಿಯ ಕೊರಳ ಸರಪಣಿ ಬಹುಮಾನಕೊಡಲಾಗುತ್ತೆ.

ಮುಗಿದನಂತರ ಸಿಕ್ಕದೇ ವ್ಯಸನಪಡುವುದಕ್ಕಿಂತಲೂ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳುವುದುತ್ತಮ.

ತಯಾರಿ ಹೊಸತರಹ! ಪದಾರ್ಥ ಅತ್ಯುತ್ತಮ!! ಬೆಲೆ ಬಹಳಸುಲಭ!!!

ಬಜಾರಿನಲ್ಲಿ ಸಿಕ್ಕಿದ ಶಾಯಿಪುಡಿಯನ್ನು ಅಗ್ಗವಾಗಿ ಸಿಕ್ಕುತ್ತೆಂದು ಉಪಯೋಗಿಸಿ ನಿಮ್ಮ ಬರವಣಿಗೆಯನ್ನು ಕೆಡಿಸಿಕೊಳ್ಳಬೇಡಿರಿ. ಈ ಕೆಳಭಾಗದಲ್ಲಿ ಕಂಡ ನಮ್ಮ ಶಾಯಿಪುಡಿಯನ್ನು ಒಂದುಸಾರಿ ಪರೀಕ್ಷಿಸಿರಿ.

"ನ್ಯಾಷನಲ್ ಬ್ಲೂಬ್ಲಾಕ್ ಇಂಕ್‌ಪೌಡರ್" ೧ ಪೊಟ್ಣ ಪುಡಿಯಲ್ಲಿ ೨೦ ಔನ್ಸು ಅಂದರೆ ॥। ಶೀಷೆ ಅತ್ಯುತ್ತಮವಾದ ಬ್ಲೂಬ್ಲಾಕ್ ಶಾಯಿಯಾಗುತ್ತೆ. ಪೊಟ್ಣ ೧ ಕ್ಕೆ ಕ್ರಯ ೦-೨-೦. ಒಂದು ಡಜನ್ ಪೊಟ್ಣಗಳಿಗೆ ೧-೫-೦ ಪ್ಯಾಕಿಂಗ್ ಪೋಸ್ಟೇಜು ಮಾಫಿ. ಪರಸ್ಥಳಕ್ಕೆ ಒಂದು ಡಜನ್ ಪೊಟ್ಣಗಳಿಗಿಂತಲೂ ಕಡಮೆ ರವಾನಿಸಲಾಗುವುದಿಲ್ಲಾ

ಜುಮಲೆ ಇದೊಂದು ಅತ್ಯಾಶ್ಚರ್ಯಕರವಾದ ಹೊಸ ಕಾದಂಬರಿ (ಬಂಗಾಳಿ ನಾವೆಲ್) ಓದುವುದಕ್ಕೆ ಕುಳಿತರೆ ಮುಗಿಸುವವರೆಗೂ ಮನಸ್ಸು ನಿಲ್ಲುವುದಿಲ್ಲಾ. ಓದುತ್ತಓದುತ್ತಾ ಹೊಸಹೊಸ ಭಾವಗಳು ತಲೆದೋರಿ ರೋಮಾಂಚವುಂಟಾಗುವುದು.

ವಾಚಕರೆ! ಗೋರಿಯಲ್ಲಿದ್ದ ಹೆಂಗಸಿನ ಶವಕ್ಕೆ ಪ್ರತಿಯಾಗಿ ಗಂಡುಸಿನ ಶವವಿರುವುದನ್ನು ನೋಡುತ್ತಲೇ ಆಶ್ಚರ್ಯಸಮುದ್ರದಲ್ಲಿ ಮುಳುಗಿಹೋಗುವಿರಿ. ಕ್ರಯ ಪ್ರತಿ ೧ ಕ್ಕೆ ೦-೬-೦ ಪೋಸ್ಟೇಜು ಅಲಾಯಿದಾ.

ವೇ॥ ತಿಪ್ಪಯ್ಯಶಾಸ್ತ್ರಿಗಳಿಂದ ವಿರಚಿತವಾದ ೪ ಹೊಸಪುಸ್ತಕಗಳು.

ವೀರಶೈವರಿಗೂ ಇತರರಿಗೂ ಸಹ ಅತ್ಯವಶ್ಯಕಬೇಕಾದ್ದು

(೧) ಶತಕಪಂಚಕ— ಈ ಪುಸ್ತಕದಲ್ಲಿ ೫ ಶತಕಗಳಿವೆ. ನಿರಂಜನಶತಕ, ಸಿದ್ಧಲಿಂಗೇಶ್ವರಶತಕ, ನಿಷ್ಕಲಶತಕ, ಉಮಾಮಹೇಶ್ವರ ಶತಕ, ಸಂಗಮೇಶ್ವರ ಶತಕ, ೧-೨-೩ ನೇ ಶತಕಗಳು ವೀರಶೈವಪರಮರಹಸ್ಯ ಶಿವರಹಸ್ಯ ಮುಂತಾದುವುಗಳಿಂದಲೂ ೪-೫ ನೇ ಶತಕಗಳು ಪಾರಾಯಣಕ್ಕೆ ಯೋಗ್ಯವಾಗಿಯೂ ಇವೆ. ಇಷ್ಟು ಸೌಖರ್ಯವುಳ್ಳ ಪುಸ್ತಕ ೧ ಕ್ಕೆ ಕ್ರಯ ೦-೬-೦.
(೨) ಮನೋವಿಜಯ— ಸರ್ವರಿಗೂ ಅತ್ಯವಶ್ಯಕವಾದ ಪುಸ್ತಕ ಕ್ರಯ ೦-೮-೦.
(೩) ಬಸವೇಶ್ವರಸ್ತೋತ್ರ— ಕ್ರಯ ಪ್ರತಿ ೧ ಕ್ಕೆ ೦-೩-೦.
(೪) ಮುಕ್ತ್ಯಾಂಗನಕಂಠಮಾಲೆ— ಕ್ರಯ ಪ್ರತಿ ೧ಕ್ಕೆ ೦-೪-೦ ಪೋಸ್ಟೇಜು ಅಲಾಯಿದಾ.

ಈಗತಾನೇ ಸೀಮೆಯಿಂದ ಬಂದಿರತಕ್ಕ ಟೇಬಿಲ್ ಗಡಿಯಾರಗಳು.

ಸರ್ವರೂ ತರಿಸಿಕೊಳ್ಳಲು ಇದು ಒಳ್ಳೆಸಮಯ.

ಈ ಪಕ್ಕದ ಚಿತ್ರದಲ್ಲಿ ಕಾಣಿಸಿರುವ ಟೇಬಲ್ ಗಡಿಯಾರವು ಬಲವಾದ ಯಂತ್ರೋಪಕರಣಗಳಿಂದಲೂ ಒಳಭಾಗದ ಸಾಮಾನು ಕಾಣುವಂತೆ ೨ ಪಕ್ಕದಲ್ಲಿಯೂ ಕನ್ನಡಿಗಳನ್ನಿಟ್ಟು ಗಟ್ಟಿಯಾದ ನಿಕ್ಕಲ್ ಲೋಹದಿಂದ ಥಳಥಳಿಸುವಂತೆ ಖಚಿತವಾಗಿ ತಯಾರ್ಮಾಡಿರುವುದಲ್ಲದೆ ಮೇಲುಭಾಗದಲ್ಲಿ ಬಂದೋಬಸ್ತಾದ ಹಿಡಿಯನ್ನೂ ಸಹ ಇಟ್ಟಿರುತ್ತೆ.

(೧) ಘಂಟೆ ಅರ್ಧಘಂಟೆ ಹೊಡೆಯತಕ್ಕ ಕ್ಲಾಕ್ ೧ ಕ್ಕೆ ೪-೮-೦
(೨) ಘಂಟೆ ಅರ್ಧಘಂಟೆ ಹೊಡೆದು ಅಲಾರಂ ಸಹ ಇರತಕ್ಕ ಕ್ಲಾಕ್ ೫-೪-೦
(೩) ಘಂಟೆ ಹೊಡೆಯುವುದಕ್ಕೆ ಪ್ರತಿಯಾಗಿ ಪ್ರತಿಘಂಟೆಗೂ ಮೃದುಮಧುರಗಾನಮಾಡತಕ್ಕ ಕ್ಲಾಕ್ ೧ ಕ್ಕೆ ೫-೮-೦
(೪) ತಾವಿಷ್ಟಪಟ್ಟ ಘಂಟೆಗೆ ಸರಿಯಾಗಿ ಕರ್ಣನಂದವಾಗುವಂತೆ ಮೃದುಮಧುರಗಾನಮಾಡತಕ್ಕ ಕ್ಲಾಕ್ ೫-೮-೦

ಕಾಗದ ಬರಿಯುತಕ್ಕವರು ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರಿಯಬೇಕಾಗಿ ಕೋರಿಕೆ. ತಿಳಿಯದೇ ಇರತಕ್ಕ ವಿಳಾಸಗಳಿಗೆ ನಾವು ನಿಗಾಕೊಡುವುದಿಲ್ಲವೆಂಬಂಶವನ್ನು ಸರ್ವರೂ ಗಮನಿಸತಕ್ಕದ್ದು.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೫—೦
ಸಟೀಕ ನಂದೀವ್ರತ	೦—೪—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸಪುಸ್ತಕಗಳು.

136

ಬಸವರಾಜವಿಜಯಂ— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧-೮-೦ ದ್ವಿತೀಯಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧ ೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸುತ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ ವರ್ಷದ ಚಂದಾ ೨-೮-೦.

ಎ. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕಮಂಡಲಿ, ಮೈಸೂರು.

ಸಮಸ್ತ ವೀರಶೈವಬಾಂಧವರಿಗೆ ವಿದಿತಪಡಿಸುವುದೇನೆಂದರೆ— ಕಳೆದವರ್ಷ ನಿಪ್ಪಾಣಿಯಲ್ಲಿ ಕೂಡಿದ ೩ ನೆಯ ವೀರಶೈವಮಹಾಸಭೆಯ ರಿಪೋರ್ಟು ಬುಕ್ಕುಗಳು ಮುದ್ರಿತವಾಗಿ ಕ್ರಯಕ್ಕೆ ಸಿದ್ಧವಾಗಿರುವವು ಈ ಸಾರೆಯ ಬುಕ್ಕುಗಳು ಒಳ್ಳೆಯ ಆಕೃತಿಯವಾಗಿಯೂ, ಅಚ್ಚುಕಟ್ಟಾಗಿಯೂ ಬರೆದಿದ್ದು, ಅದರಲ್ಲಿ ನಮ್ಮ ಸಮಾಜದ ಆಧಾರಸ್ತಂಭಗಳಂತಿರುವ ಪ್ರತಿಯೊಬ್ಬ ಮುಖಂಡರ ಭಾವಚಿತ್ರಗಳೂ ಪ್ರತ್ಯೇಕವಾಗಿ ಸೇರಿಸಲ್ಪಟ್ಟಿರುವವು. ಮೇಲಾಗಿ ಪ್ರತಿಗಳು ವಿಕ್ರಯಕ್ಕೆ ಒಂದೇ ನೂರು ಇರುವುದರಿಂದ ಹಿಂದಿನಿಂದ ಬೇಡುವವರಿಗೆ ಪ್ರತಿಗಳು ನಿಶ್ಚಯವಾಗಿ ಸಿಗಲಾರವು. ಕಾರಣ, ಇಷ್ಟವುಳ್ಳವರು ಮುಂಚಿತವಾಗಿಯೇ ಸ್ಪಷ್ಟವಾದ ಪತ್ರದಿಂದ ಆರ್ಡರು ಕಳುಹಿಸಬಹುದು.

ಶಿವಮೂರ್ತಿಸ್ವಾಮಿ ಕಣಬರಗಿಮಠ,
ಶೇರ್ಕ್ರ, ಸ್ವಾಗತಕಮಿಟಿ,
೩ ನೆಯ ಮಹಾಸಭೆ ನಿಪ್ಪಾಣಿ

ಪರಿಮಳದ್ರವ್ಯಗಳು.

ನಮ್ಮಲ್ಲಿ ಬಹುಕಾಲದಿಂದಲೂ ಅತ್ಯುತ್ತಮವಾಗಿ ತಯಾರಾಗುತ್ತಿರುವ ಊದುಬತ್ತಿಗಳು ಸೇರು ೧ ಕ್ಕೆ ೪ ಆಣೆಯಿಂದ ೧೦ ರೂ. ವರೆಗೂ ದೊರೆಯುವುವಲ್ಲದೆ, ನಾನಾತರದ ಗಂಧದಬಿಲ್ಲೆಗಳು, ಜವಾಜಿಗಂಧ ಅಥವಾ ಅರಗಜ, ಪುನುಗು, ಜವಾಜಿ, ದಶಾಂಗ, ಧೂಪದಕಡ್ಡಿ ಮೊದಲಾದ ಸುಗಂಧದ್ರವ್ಯಗಳೂ. ಮಲ್ಲಿಗೆ-ಸಂಪಗೆ-ರೋಜಾ ಮೊದಲಾದ ಅತ್ತರುಗಳೂ ಮತ್ತೂ ಭೃಂಗಾಮಲಕತೈಲ ಮೊದಲಾದವುಗಳೂ ಬಿಕರಿಗೆ ಸಿದ್ಧವಾಗಿರುವವು. ಅಪೇಕ್ಷಕರು ೫ ರೂ. ಗೆ ಕಡಿಮೆಯಿಲ್ಲದಂತೆ ಆರ್ಡರನ್ನು ಕೊಡಬೇಕು. ಇನ್ನೂ ಹೆಚ್ಚು ವಿಷಯಗಳನ್ನು ತಿಳಿಯತಕ್ಕವರು ನಮ್ಮ ಕ್ಯಾಟಲಾಗನ್ನು ತರಿಸಿ ನೋಡಬಹುದು. 36

ವಿಳಾಸ— ಎಸ್. ಕಳ್ಳಪ್ಪ, ಊದುಬತ್ತಿಷಾಪ್,
ದೊಡ್ಡಪೇಟೆ, ಬೆಂಗಳೂರು ಸಿಟಿ.

ನ್ಯಾಯದರ್ಪಣ. 17

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯು, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಪ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸೂ, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆಚರಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ವಗೈರೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯು ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿಇರುತ್ತವೆ.

ಬೆಲೆ ರೂ. 1—8—0. ವಿ. ಪಿ. ಮೂಲ್ಯ 1—12—0.

ಎಂ. ಎಸ್. ನಂಜಪ್ಪನವರು,
ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

21 ಸಚಿತ್ರ ಶುಕಸಪ್ತತಿ ಕಥೆಗಳು ರೂ. ೧-೮-೦ (೫೧೨ ಪುಟ) ಟಪಾಲು ಹಾಸಲು ೪ ಆಣೆ. ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ ರೂ ೧-೮-೦. (೫೩೬ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ! ಮಾನ್ಯತೆಯು ಬೇಕಾದರೆ, ವಾಕ್ಚಾತುರಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಲಿಷ್ಟಪಟ್ಟರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯುಳ್ಳವರೆನ್ನಿಸಬೇಕೆಂಬ ಯೋಚನೆಯಿದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೩೦ ಪುಟಗಳಿಂದ ಕೂಡಿದ ೬೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ ೧-೪-೦ ಟಪಾಲ್ ಹಾಸಲು ೩ ಆಣೆ.

ಈಗಲೇ ಬರೆ ನಿಮ್ಮಲ್ಲಿ ಇನ್ನೂ ಅನೇಕ ಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸಚಿತ್ರ ಶುಕಸಪ್ತತಿ ಕಥೆಗಳು

ಶುಕಮಹರ್ಷಿಗಳು ಲೋಕದಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತಭಾಷೆಯಲ್ಲಿ ಹೇಳಿರುವರು. ಈ ಕಥೆಗಳನ್ನು ಭಾಷಾಂತರ ಮಾಡಿ ಕನ್ನಡದಲ್ಲಿ ರಚಿಸಿದೆ. (1) ಗೃಹಸ್ಥಾಶ್ರಮದಲ್ಲಿ ಆವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವುದು. (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತರಹಸ್ಯಗಳನ್ನೂ, ಬುದ್ಧಿಚಾಂಚಲ್ಯನಿವಾರಣೆ ಮುಂತಾದ್ದನ್ನೂ ತಿಳಿಸುವುದು. (3) ಸ್ತ್ರೀ ಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ ವಿವಿಧನೀತಿ ಮುಂತಾದವುಗಳನ್ನು ಬೋಧಿಸುವುದು. (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವುದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವುದು. (5) ಅಲ್ಲಲ್ಲಿ ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುವುದರಿಂದ ಓದುಬಾರದವರಿಗೂ ಮನೋರಂಜಿತವಾಗಿರುವುದು. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ, ಇದರ ಕ್ರಯ ಪ್ರತಿ ೧ಕ್ಕೆ ೧-೮-೦; ಟಪ್ಪಾಲು ಹಾಸಲು ೪ ಆಣೆ.

(೩೬ ಸಂಧಿಗಳು) ಸಟೀಕಾ ತಾತ್ಪರ್ಯ ಜೈಮಿನೀ ಭಾರತವು. (೯೩೦ ಪುಟಗಳು)

ಇದರ ಕ್ರಯ ಪ್ರತಿ ೧ ಕ್ಕೆ ರೂ. ೪-೦-೦; ಟಪಾಲು ಹಾಸಲು ೧೦ ಆಣೆ.

ಇವಲ್ಲದೆ ಇನ್ನೂ ಅನೇಕ ಕನ್ನಡಗ್ರಂಥಗಳು ದೊರೆಯುತ್ತವೆ ಪುಸ್ತಕಗಳ ಪಟ್ಟಿಗೆ ಬರೆದರೆ ಉಚಿತವಾಗಿ ಕಳಿಸುವೆವು

41 ನಮ್ಮ ವಿಳಾಸ— ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ)ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾಗಿದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚಿಟಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜನ್ ಡಬ್ಬಿಗೆ ೧-೧೪-೦

ಉತ್ತಮವಾದ ನಶ್ಯದಪುಡಿ.

ಘಾಟು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಖರೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವವು. ನೀವು ಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,
ಗೋಪಸೆಟ್ಟಿಪುರ, ಹನೂರು ಪೋಸ್ಟ್
13 ಕೊಳ್ಳೇಗಾಲದ ತಾಲ್ಲೂಕು.

೧೯೧೪ ನೆಯ ಇಸವಿ ಮೇ ತಾ|| ೧೮ ರಿಂದ ೧೯೧೪ ನೆಯ ಮೇ ತಾ|| ೨೪ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ ನೆಯ ಆನಂದನಾಮ ಸಂ|| ದ ವೈಶಾಖ ಬ|| ನವಮಿಯಿಂದ ವೈಶಾಖ ಬ|| ಅಮಾವಾಸ್ಯೆವರೆಗಿನ ಪಂಚಾಂಗ.

ತಾ||	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ತೇದಿ ವೃಷ
18	ಸೋ	ನ	55-11	ಶತ	24-35	5
19	ಮಂ	ದ	38-57	ಪೂಭಾ	29-45	6
20	[1]ಬುಧ	ಏ	43-21	ಉಭಾ	35-45	7
21	ಗುರು	ದ್ವಾ	48-46	ರೇ	42-18	8
22	[2]ಶುಕ್ರ	ತ್ರ	53-51	ಅಶ್ವಿ	48-59	9
23	[3]ಶನಿ	ಚ	58-51	ಭ	55-18	10
24	[4]ಭಾ	ಅ	60	ಕೃ	60	11

(1) ಸರ್ವತ್ರ್ಯೇಕಾದಶಿ. (2) ಪ್ರದೋಷಃ. (3) ಮಾಸಶಿವರಾತ್ರಿಃ. (4) ಸರ್ವತ್ರ ಅಮಾವಾಸ್ಯಾ.

ಮೈಸೂರು ವೈ ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಬಿಷಗ್ವರ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು 2

ಲೋಕೋಪಕಾರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ

ಸಂಬಂಧಗಳ ನೋವು ಮೈಕಾಲು ಜೋಹಿತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿಸಪ್ಪ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಹುತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ— ೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾಔಷಧಿ.)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈ ಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇಒಂದು ಬುದ್ದಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತವಿದೊಂದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುದ್ದಿಯ ಬೆಲೆ ೧—೦—೦.
ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ. ಮೈಸೂರು

REGISTERED M NO124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ವಾರ್ಷಿಕ ಚಂದಾ } ೧—೦—೦

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತ್ಯಾ ಘನಪಥಕೃತಾವತಾರಾ ಪಶ್ಯಜ್ಞಸಹೃತ್ತಮೋಹರಾಜೀಯಾತ್,
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ, ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ{ ಅಂಚೆವೆಚ್ಚ ಸೇರಿ
ಸೀಮಾತೀತಯಶಃಪ್ರತಾಪವಿಪುಲಂಸದ್ವೃತ್ತಮಾಲಾಕುಲಂ / ಪ್ರೇಮಂಬಿತ್ತಿಕೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ{ ೧—೧೪—೦

REGISTERED M NO. 124

ಸಂಪುಟ-೨೩) ಮೈಸೂರ್ ಸ್ಟಾರ್ ಸರ್ ೧೯೧೪ ನೆಯ ಇಸವಿ ಮೇ ತಾರೀಖು ೨೫ ನೆಯ ಸೋಮವಾರ. (ಸಂಚಿಕೆ ೨೧

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಈ ಪತ್ರಿಕೆಯ ಚಂದಾದಾರರೆಲ್ಲರಿಗೂ ಅಚ್ಚಬೆಳ್ಳಿಯ ಸರಪಣಿ ಬಹುಮಾನ ಕೊಡಲಾಗುತ್ತೆ.

17 ಈ ಲಾಗಾಯಿತು ೨ ತಿಂಗಳುಮಾತ್ರ.

ಪದ್ಧತಿಯಮೇರೆ ಹೊಸವರ್ಷದ ಯುಗಾದಿಹಬ್ಬದಲ್ಲಿ ಬಹುಮಾನಿಸುವುದಕ್ಕಾಗಿ 2000 ಅಚ್ಚಬೆಳ್ಳಿಯ ಕೊರಳ ಸರಪಣಿಗಳನ್ನು ಸೀದಾ ಸೀಮೆಯಿಂದ ತರಿಸಿದ್ದೇವೆ.

ಪ್ಯಾನ್ಸಿಪ್ಯೆಲ್ ರೈಲ್ವೆ ರೆಗ್ಯುಲೇಟರ್ ವಾಚ್ ೧ಕ್ಕೆ ಕ್ರಯ 3-8 0 ಪೋಸ್ಟೇಜು 0-4-0

ಈ ಲಾಗಾಯಿತು ೨ ತಿಂಗಳೊಳಗಾಗಿ ಮೇಲ್ಕಂಡ ಒಂದು ವಾಚ್ ತರಿಸತಕ್ಕವರಿಗೆ ಒಂದು ಅಚ್ಚಬೆಳ್ಳಿಯ ಕೊರಳ ಸರಪಣಿ ಬಹುಮಾನಕೊಡಲಾಗುತ್ತೆ.

ಮುಗಿದನಂತರ ಸಿಕ್ಕಲಿಲ್ಲವೇ ವ್ಯಸನಪಡುವುದಕ್ಕಿಂತಲೂ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳುವುದುತ್ತಮ.

ತಯಾರಿ ಹೊಸತರಹ! ಪದಾರ್ಥ ಅತ್ಯುತ್ತಮ!! ಬೆಲೆ ಬಹಳಸುಲಭ!!!

ಬಜಾರಿನಲ್ಲಿ ಸಿಕ್ಕಿದ ಶಾಯಿಪುಡಿಯನ್ನು ಅಗ್ಗವಾಗಿ ಸಿಕ್ಕುತ್ತೆಂದು ಉಪಯೋಗಿಸಿ ನಿಮ್ಮ ಬರವಣಿಗೆಯನ್ನು ಕೆಡಿಸಿಕೊಳ್ಳಬೇಡಿರಿ. ಈ ಕೆಳಭಾಗದಲ್ಲಿ ಕಂಡ ನಮ್ಮ ಶಾಯಿಪುಡಿಯನ್ನು ಒಂದುಸಾರಿ ಪರೀಕ್ಷಿಸಿರಿ.

"ನ್ಯಾಷನಲ್ ಬ್ಲ್ಯೂಬ್ಲ್ಯಾಕ್ ಇಂಕ್‌ಪೌಡರ್" ೧ ಪೊಟ್ಟಣ ಪುಡಿಯಲ್ಲಿ ೨೦ ಔನ್ಸು ಅಂದರೆ ||| ಸೀಸೆ ಅತ್ಯುತ್ತಮವಾದ ಬ್ಲ್ಯೂಬ್ಲ್ಯಾಕ್ ಶಾಯಿಯಾಗುತ್ತೆ. ಪೊಟ್ಟಣ ೧ ಕ್ಕೆ ಕ್ರಯ ೦-೨-೦. ಒಂದು ಡಜನ್ ಪೊಟ್ಟಣಗಳಿಗೆ ೧-೫-೦ ಪ್ಯಾಕಿಂಗ್ ಪೋಸ್ಟೇಜು ಮಾಫಿ. ಪರಸ್ಥಳಕ್ಕೆ ಒಂದು ಡಜನ್ ಪೊಟ್ಟಣಗಳಿಗಿಂತಲೂ ಕಡಮೆ ರವಾನಿಸಲಾಗುವುದಿಲ್ಲಾ

ಜುಮಲೆ ಇದೊಂದು ಅತ್ಯಾಶ್ಚರ್ಯಕರವಾದ ಹೊಸ ಕಾದಂಬರಿ (ಬಂಗಾಳಿ ನಾವೆಲ್) ಓದುವುದಕ್ಕೆ ಕುಳಿತರೆ ಮುಗಿಸುವವರೆಗೂ ಮನಸ್ಸು ನಿಲ್ಲುವುದಿಲ್ಲ. ಓದುತ್ತಓದುತ್ತಾ ಹೊಸಹೊಸ ಭಾವಗಳು ತಲೆದೋರಿ ರೋಮಾಂಚವುಂಟಾಗುವುದು.

ವಾಚಕರೆ! ಗೋರಿಯಲ್ಲಿದ್ದ ಹೆಂಗಸಿನ ಶವಕ್ಕೆ ಪ್ರತಿಯಾಗಿ ಗಂಡುಸಿನ ಶವವಿರುವುದನ್ನು ನೋಡುತ್ತಲೇ ಆಶ್ಚರ್ಯಸಮುದ್ರದಲ್ಲಿ ಮುಳುಗಿಹೋಗುವಿರಿ. ಕ್ರಯ ಪ್ರತಿ ೧ ಕ್ಕೆ ೦-೩-೦ ಪೋಸ್ಟೇಜು ಅಲಾಯಿದಾ.

ವೇ|| ತಿಪ್ಪಯ್ಯಶಾಸ್ತ್ರಿಗಳಿಂದ ವಿರಚಿತವಾದ ೪ ಹೊಸಪುಸ್ತಕಗಳು.

ವೀರಶೈವರಿಗೂ ಇತರರಿಗೂ ಸಹ ಅತ್ಯವಶ್ಯಕಬೇಕಾದ್ದು

(೧) ಶತಕಪಂಚಕ— ಈ ಪುಸ್ತಕದಲ್ಲಿ ೫ ಶತಕಗಳಿವೆ. ನಿರಂಜನಶತಕ, ಸಿದ್ಧಲಿಂಗೇಶ್ವರಶತಕ, ನಿಷ್ಕಲಶತಕ, ಉಮಾಮಹೇಶ್ವರ ಶತಕ, ಸಂಗಮೇಶ್ವರ ಶತಕ, ೧-೨-೩ ನೇ ಶತಕಗಳು ವೀರಶೈವಪರಮರಹಸ್ಯ ಶಿವರಹಸ್ಯ ಮುಂತಾದುವುಗಳಿಂದಲೂ ೪-೫ ನೇ ಶತಕಗಳು ಪಾರಾಯಣಕ್ಕೆ ಯೋಗ್ಯವಾಗಿಯೂ ಇವೆ. ಇಷ್ಟು ಸೌಖರ್ಯವುಳ್ಳ ಪುಸ್ತಕ ೧ ಕ್ಕೆ ಕ್ರಯ ೦-೬-೦.

(೨) ಮನೋವಿಜಯ— ಸರ್ವರಿಗೂ ಅತ್ಯವಶ್ಯಕವಾದ ಪುಸ್ತಕ ಕ್ರಯ ೦-೮-೦.

(೩) ಬಸವೇಶ್ವರಸ್ತೋತ್ರ— ಕ್ರಯ ಪ್ರತಿ ೧ ಕ್ಕೆ ೦-೩-೦.

(೪) ಮುಕ್ತ್ಯಾಂಗನಕಂಠಮಾಲೆ— ಕ್ರಯ ಪ್ರತಿ ೧ಕ್ಕೆ ೦-೪-೦ ಪೋಸ್ಟೇಜು ಅಲಾಯಿದಾ.

ಈಗತಾನೇ ಸೀಮೆಯಿಂದ ಬಂದಿರತಕ್ಕ ಟೇಬಿಲ್ ಗಡಿಯಾರಗಳು.

ಸರ್ವರೂ ತರಿಸಿಕೊಳ್ಳಲು ಇದು ಒಳ್ಳೆಸಮಯ.

ಈ ಪಕ್ಕದ ಚಿತ್ರದಲ್ಲಿ ಕಾಣಿಸಿರುವ ಟೇಬಲ್ ಗಡಿಯಾರವು ಬಲವಾದ ಯಂತ್ರೋಪಕರಣಗಳಿಂದಲೂ ಒಳಭಾಗದ ಸಾಮಾನು ಕಾಣುವಂತೆ ೨ ಪಕ್ಕದಲ್ಲಿಯೂ ಕನ್ನಡಿಗಳನ್ನಿಟ್ಟು ಗಟ್ಟಿಯಾದ ನಿಕ್ಕಲ್ ಲೋಹದಿಂದ ಥಳಥಳಿಸುವಂತೆ ಖಚಿತವಾಗಿ ತಯಾರ್ಮಾಡಿರುವುದಲ್ಲದೆ ಮೇಲುಭಾಗದಲ್ಲಿ ಬಂದೋಬಸ್ತಾದ ಹಿಡಿಯನ್ನೂ ಸಹ ಇಟ್ಟಿರುತ್ತೆ.

(೧) ಘಂಟೆ ಅರ್ಧಘಂಟೆ ಹೊಡೆಯತಕ್ಕ ಕ್ಲಾಕ್ ೧ ಕ್ಕೆ	೪-೮-೦
(೨) ಘಂಟೆ ಅರ್ಧಘಂಟೆ ಹೊಡೆದು ಅಲಾರಂ ಸಹ ಇರತಕ್ಕ ಕ್ಲಾಕ್	೫-೪-೦
(೩) ಘಂಟೆ ಹೊಡೆಯುವುದಕ್ಕೆ ಪ್ರತಿಯಾಗಿ ಪ್ರತಿಘಂಟೆಗೂ ಮೃದುಮಧುರಗಾನಮಾಡತಕ್ಕ ಕ್ಲಾಕ್ ೧ ಕ್ಕೆ	೫-೮-೦
(೪) ತಾವಿಷ್ಟಪಟ್ಟ ಘಂಟೆಗೆ ಸರಿಯಾಗಿ ಕರ್ಣಾನಂದವಾಗುವಂತೆ ಮೃದುಮಧುರಗಾನಮಾಡತಕ್ಕ ಕ್ಲಾಕ್	೫-೮-೦

ಕಾಗದ ಬರೆಯುತಕ್ಕವರು ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕಾಗಿ ಕೋರಿಕೆ. ತಿಳಿಯದೇ ಇರತಕ್ಕ ವಿಳಾಸಗಳಿಗೆ ನಾವು ನಿಗಾಕೊಡುವುದಿಲ್ಲವೆಂಬಂಶವನ್ನು ಸರ್ವರೂ ಗಮನಿಸತಕ್ಕದ್ದು.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೫—೦
ಸಟೀಕ ನಂದೀವ್ರತ	೦—೪—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಹಾಸಿಗೆ ಬೇರೆ.

ಹೊಸಪುಸ್ತಕಗಳು.

136

ಬಸವರಾಜವಿಜಯಂ— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧ ೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸುತ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ ವರ್ಷದ ಚಂದಾ ೨-೮-೦.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕಮಂಡಲಿ, ಮೈಸೂರು.

ಪ್ರಕಟಣೆ.

ರಾಜಧಾನಿಯಲ್ಲಿ ಮುದ್ರಣ ಕೆಲಸವನ್ನು ಬಹು ಅಂದವಾಗಿ ಮಾಡುವುದರಲ್ಲಿ ಪ್ರಸಿದ್ಧಿಯನ್ನು ಹೊಂದಿರುವ ಕಾರ್ಕ್ ಪ್ರೆಸ್ಸನ್ನು ನಾವು ಕ್ರಯಕ್ಕೆ ತೆಗೆದುಕೊಂಡಿರುವೆವು. ಇಲ್ಲಿ ಇಂಗ್ಲೀಷು ಮತ್ತು ಕನ್ನಡದ ಭಾಷೆಗಳಲ್ಲಿ ಮುದ್ದಾದ ಅಕ್ಷರಗಳಿಂದ ವಿಸಿಟಿಂಗ್ ಕಾರ್ಡ್, ಲಗ್ನಪತ್ರಿಕೆಗಳು ಪಂಚಾಂಗಗಳು ಮೊದಲಾಗಿ ಪುಸ್ತಕಗಳವರೆಗೆ ಎಲ್ಲಾ ಮುದ್ರಣಕಾರ್ಯವೂ ಬಹು ಅಂದವಾಗಿಯೂ ಕ್ಲುಪ್ತಕಾಲದಲ್ಲೂ ನಾನಾ ಬಣ್ಣಗಳಲ್ಲಿ ಮಾಡಿ ಕೊಡಲ್ಪಡುವುವಲ್ಲದೆ ಎಲ್ಲ ವಿಧವಾದ ಬೈಂಡಿಂಗ್ ಕಾರ್ಯವೂ ಮಾಡಲ್ಪಡುವುದು. ಈಗ ವಿವಾಹ ಲಗ್ನಕಾಲವಾದುದರಿಂದ ಲಗ್ನಪತ್ರಿಕೆಗಳನ್ನು ಕಪ್ಪು, ಕೆಂಪು, ಹಸರು ಮೊದಲಾದ ಬಣ್ಣದವಾಯಿನಲ್ಲಿ ಕಾಲಕ್ಕೆ ಸರಿಯಾಗಿ ಮಾಡಿಕೊಡಲೇರ್ಪಡಿಸಿರುತ್ತೇವೆ. ಇಷ್ಟವುಳ್ಳವರು ನಮಗೆ ಬರೆದು ಬೇಕಾದ ವಿಷಯವನ್ನು ತಿಳಿಯಬಹುದು.

ವೈ. ವಿರೂಪಾಕ್ಷಯ್ಯ,
ಪ್ರೊಪ್ರೈಟರ್
ಕಾರ್ಕ್ ಪ್ರೆಸ್, ಮೈಸೂರು.

ಮ॥ ರಾ॥ ಮೈಸೂರು ಸ್ಟಾರ್ ಎಡಿಟರ್‌ರವರಿಗೆ.

ಸ್ವಾಮಿ, ನೆನ್ನೆದಿವಸ ಬೆಳಿಗ್ಗೆ ನಮ್ಮ ರೈತರು ತನ್ನ ಜಮೀನಿನಿಂದ ಈ ಊರಿಗೆ ತಂದ ಸವಾರಿಮಾಡುವ ಎತ್ತಿನ ಗಾಡಿಯನ್ನು ಮೈಸೂರು ತಾಲ್ಲೂಕು ಅಮಲ್ದಾರರ ಅಪ್ಪಣೆಮೇರೆಗೆ ತಾಲ್ಲೂಕು ಪೋಲೀಸಿನವರು ಬಲಾತ್ಕಾರದಿಂದ ಹಿಡಿದು ಅಕ್ರಮವಾಗಿ ರೈಲ್ವೆ ಸ್ಟೇಷನ್‌ಗೆ ಸಾಗಿಸಿ, ಸದರಿ ಎತ್ತುಗಳು ಬಹಳ ಬಲಹೀನವಾಗಿದ್ದದ್ದನ್ನು ಲಕ್ಷ್ಯಮಾಡದೆ, ಅವುಗಳು ಎಳೆಯಲಾರದಷ್ಟು ಭಾರವಾದ ಕಬ್ಬಿಣದ ಕಂಭಗಳನ್ನು ಗಾಡಿಯಲ್ಲಿ ತುಂಬಿಸಿ ಏಕಾಏಕೀ ಹಾಸನಕ್ಕೆ ಸಾಗಿಸುತ್ತಿದ್ದರು. ಅಷ್ಟರಲ್ಲಿಯೇ ನಮಗೆ ಈ ಸಮಾಚಾರವು ತಿಳಿದು ಡೆಪ್ಯುಟಿಕಮಿಷನರವರ ಬಳಿಗೆ ಹೋಗಿ ವಿಜ್ಞಾಪಿಸಿಕೊಳ್ಳಲು ಸದರಿ ಗಾಡಿಯನ್ನು ಕೊಟ್ಟು ಬಿಡಬೇಕೆಂದು ಅಮಲ್ದಾರವರಿಗೆ ಹುಕುಂಬರೆದು ನಮ್ಮ ವಶಕ್ಕೆ ಕೊಟ್ಟರು. ನಂತರ ಕೊಟ್ಟು ಅಮಲ್ದಾರವರು ಕೊತ್ವಾಲನಿಗೆ ಅದೇರೀತಿ ಹುಕುಂ ಕೊಟ್ಟಾಗ್ಯೂ ಸಹ, ಕೊತ್ವಾಲನು ಬಂದು ಗಾಡಿಯನ್ನು ಬಿಡಿಸುವದಕ್ಕೆ ೩-೪ ಗಂಟೆ ಹೊತ್ತು ಹಿಡಿಯಿತು.

ಈ ರೀತಿಯಾಗಿ ಅತಿಪ್ರಯಾಸದಿಂದ ಅದೃಷ್ಟವಶಾತ್ ನಮ್ಮದೊಂದು ಗಾಡಿಯು ಬಿಡಲ್ಪಟ್ಟಾಗ್ಯೂ, ಅದೇ ರೀತಿ [illegible] ಗಾಡಿಗಳ ಮಾಲೀಕರು ಸರ್ಕಾ[illegible] ಇನ್ನೂ ಪೇಚಾಡುತ್ತಲಿದ್ದಾರೆ. [illegible] ಲ್ಲಿಯೂ ಅಂಥಾದ್ದರಲ್ಲಿಯೂ [illegible] ವಿರುವದನ್ನು ಹೊಂದಿರುವ ಈ [illegible] ತವಳಿಕೆಗಳು ನಡೆಯುವದನ್ನು [illegible] ನೀಯವಾಗಿದೆ. ಈ ವಿಷಯ [illegible] ಸ್ವರಾದ ಮತ್ತು ಪ್ರಜೆಗಳ ಹಿತಚಿಂತಕರೊಳ್ಳವರೂ ರವೂ ಆಸಕ್ತರಾದ ನಮ್ಮ ದಿವಾನ್‌ಸಾಹೇಬರವರು ತಮ್ಮ ಘನವಾದ ಚಿತ್ತಕ್ಕೆ ತಂದುಕೊಂಡು ಮುಂದೆ ಯಾವಾಗ್ಯೂ ಇಂಥಾ ಅಕೃತ್ಯಗಳು ಉಂಟಾಗದಂತೆ ಶಾಶ್ವತವಾದ ಏರ್ಪಾಡನ್ನು ಮಾಡುವರೆಂದು ಆಶಿಸುತ್ತೇವೆ. ಎಲ್. ರಾಮಚಂದ್ರರಾವ್ ಪ್ರೊಪ್ರೈಟರ್, ಜಿ. ಜನರಲ್ ಏಜನ್ಸಿ, ಮೈಸೂರು.

ಮುಳ್ಳುಗಳಿಲ್ಲದ ಪಾಪಾಸುಗಳ್ಳಿ.

ಆಸ್ಟ್ರೇಲಿಯಾ ದೇಶದ ಬರ್ರಿಂಗ್‌ಬಾರ್ ಎಂಬ ಸ್ಥಳದ ರಾದ ಮಿ॥ ಬಿ. ಹ್ಯಾರಿಸನ್ (Mr. B. Harrison, E. L. S.) ರವರು ಮುಳ್ಳುಗಳಿಲ್ಲದ ಒಂದು ಜಾತಿಯ ಪಾಪಾಸುಗಳ್ಳಿಯ ಗಿಡವನ್ನು ಕುರಿತು ಬರೆಯುವುದೇನೆಂದರೆ:—"ಈ ಜಾತಿಯ ಪಾಪಾಸುಗಳ್ಳಿ ಗಿಡಗಳ ಪ್ರಯೋಜನಗಳು ಇನ್ನೂ ಜನಗಳ ತಿಳುವಳಿಕೆಗೆ ಬಂದಿರುವುದಿಲ್ಲ: ಉಷ್ಣದೇಶಗಳಲ್ಲಿ ಮತ್ತು ಪೈರುಗಳು ಚೆನ್ನಾಗಿ ಬಳಿಯದ ಬೆಂಗಾಡು ಪ್ರದೇಶಗಳಲ್ಲಿಯೂ ಇವು ದನಕರುಗಳ ಮೇವಿಗಿಯೇ ಮನುಷ್ಯರ ಆಹಾರಕ್ಕೂ ಪದಾರ್ಥಗಳನ್ನು ಒದಗಿಸಿಕೊಡುವುವು. ಮಳೆಯಿಲ್ಲದ ಕಾಲಗಳಲ್ಲೂ ಮತ್ತು ಬೇಸಿಗೆಯಲ್ಲೂ ಇತರ ಗಿಡಗಳೆಲ್ಲವೂ ಬತ್ತಿಹೋಗುತ್ತಿರುವಾಗ್ಯೂ ಈ ಪಾಪಾಸುಗಳ್ಳಿಯ ಗಿಡಗಳು ಬಹಳ ಸೊಂಪಾಗಿ ಬೆಳೆದು ಹೇರಳವಾಗಿ ಫಲಬಿಡುವುವು. ಈ ಗಿಡಗಳನ್ನು ಇತರ ಯಾವ ಪೈರುಗಳೂ ಬೆಳೆಯದಿರುವ ಜಮೀನುಗಳಲ್ಲಿ ನೆಟ್ಟಾಗ್ಯೂ ಇವು ಬಹಳ ಚೆನ್ನಾಗಿ ಬೆಳೆದು ಬಂದುವರುಷ ನಂತರ ಎಕರೆಗೆ ಸುಮಾರು ೧೦೦ ಟನ್ ತೂಕ ರುಚಿಯಾದ ಮತ್ತು ಪುಷ್ಟಿಕರವಾದ ದನದಿನ ಮೇವು ಸಿಕ್ಕುವುದು. ಇದರ ಹಣ್ಣು, ಎಲೆ, ಆಡು, ಕುರಿ ಇವುಗಳೆಲ್ಲವಕ್ಕೂ ತಿನ್ನಿಸಬಹುದು. ಇವುಗಳಲ್ಲಿ ಎಕರೆಗೆ ಸುಮಾರು ೪ ಟನ್ ತೂಕ ರುಚಿಯಾದ ಮತ್ತು ಪುಷ್ಟಿಕರವಾದ ಹಣ್ಣುಗಳು ಸಿಗುವುವು. ಇವುಗಳಲ್ಲಿ ಹೇರಳವಾಗಿ ಸಕ್ಕರೆಯೂ ಮತ್ತು ಆರೋಗ್ಯಕರವಾದ ಇತರ ಆಹಾರ ಪದಾರ್ಥಗಳೂ ಇರುವುವು. ಮತ್ತು ಇವುಗಳಿಂದ ಉಪ್ಪಿನಕಾಯಿ ಅಥವಾ ಜಾಮ್‌ಗಳನ್ನು ಮಾಡಿ ಬಹಳ ಕಾಲವಿಟ್ಟಿರಬಹುದು. ಒಂದೊಂದು ಮಾದರಿ ಗಿಡದ ಹಣ್ಣು ಒಂದೊಂದು ಪ್ರಮಾಣದಲ್ಲಿರುವುದು. ಕ್ಯಾಂಗರೂ, ಹಣ್ಣುಗಳು ಒಂದು ನೆಲಗಡಲೆ ಬಿತ್ತದ ಗಾತ್ರ ಮೊದಲ್ಗೊಂಡು ಒಂದು ದೊಡ್ಡ ಮಧುರ ಗದ ಬಾಳೆಕಾಯಿನ ಗಾತ್ರದವರೆವಿಗೂ ಇರುವುವು. ಅಚ್ಚ ಕೆಂಪು, ಮಧ್ಯಸ್ತವಾದ ಕೆಂಪು, ಕಿತ್ತಳೆ, ಹಳದಿ ಮತ್ತು ಬಿಳುಪು ಬಣ್ಣದವುಗಳಾಗಿರುವುವು. ಗಿಡವೊಂದಕ್ಕೆ ೨ ಮಣ ಮೊದಲ್ಗೊಂಡು ೪ ಮಣವರೆಗೂ ಹಣ್ಣು ಬಿಡುವುವು. ಬೇರೆ ಬೇರೆ ಜಾತಿಯ ಪಾಪಾಸುಗಳ್ಳಿಯ ಗಿಡಗಳನ್ನು ಒಂದೇ ಹೊಲದಲ್ಲಿ ನೆಟ್ಟರೆ ವರುಷದ ಸದಾಕಾಲದಲ್ಲಿಯೂ ಫಲ ಸಿಕ್ಕುವಂತೆ ಮಾಡಿಕೊಳ್ಳಬಹುದು. ಈ ಗಿಡದ ಎಲೆಗಳನ್ನು ಕೆಲವು ದೇಶಗಳಲ್ಲಿ ತರಕಾರಿಯಾಗಿ ಉಪಯೋಗಿಸುವರು. ಪ್ರಜಾಸಂಖ್ಯೆಯು ಹೆಚ್ಚಾಗಿ ಕೆಲವರಿಗೆ ಹೊಟ್ಟೆ ತುಂಬಾ ಆಹಾರವು ಸಿಕ್ಕದೆ ಕಷ್ಟವಾಗಿರುವ ಇಂಡಿಯಾ ದೇಶದಲ್ಲಿ ಈ ಗಿಡವು ಬಹಳ ಪ್ರಯೋಜನಕಾರಿಯಾದದ್ದೆಂದು ಹೇಳಬಹುದು. ಹಾಗೆ ಇಂಡಿಯಾದೇಶೀಯರು ಇದರ ವ್ಯವಸಾಯಕ್ಕೆ ಗಮನ ಕೊಡಬೇಕೆಂಬ ಉದ್ದೇಶದಿಂದಲೇ ನಾನು ಈ ವಿಷಯವನ್ನು ಪ್ರಚಾರ ಗೊಳಿಸುತ್ತೇನೆ. ಮತ್ತು ಇದುವರೆಗಿನ ಅನುಭವದಲ್ಲಿ ಈ ಜಾತಿಯ ಪಾಪಾಸುಗಳ್ಳಿಯಂತೆ ಮಳೆಯಿಲ್ಲದ ಮತ್ತು ಕ್ಷಾಮಗಾಲಗಳಲ್ಲಿ ಮನುಷ್ಯರಿಗೆ ಆಹಾರ ಮತ್ತು ದನಕರುಗಳಿಗೆ ಮೇವನ್ನು ಒದಗಿಸಿಕೊಡತಕ್ಕ ಗಿಡವು ಸಸ್ಯವರ್ಗದಲ್ಲಿ ಮತ್ತಾವುದೂ ಇಲ್ಲವೆಂದು ತಿಳಿಯಬರುತ್ತದೆ." ಮೇಲೆ ಹೇಳಲ್ಪಟ್ಟ ಮುಳ್ಳಿಲ್ಲದ ಈ ಜಾತಿಯ ಪಾಪಾಸುಗಳ್ಳಿಯನ್ನು ಬೆಳೆಯಲಪೇಕ್ಷಿಸುವವರು ಮದರಾಸಾಧಿಪತ್ಯದಲ್ಲಿ ಗುಂಟೂರು ಡಿಸ್ಟ್ರಿಕ್ಟ್ ಬಾಪಟ್ಲಾ ಎಂಬ ಸ್ಥಳದಲ್ಲಿ ಬಾಯ್ಸ್ ಇಂಡಸ್ಟ್ರಿಯಲ್ ಹೋಂ ಭಾರ್ಜಿನಲ್ಲಿರುವ (Officer in charge of the Boys Industrial Home, Bapatla Guntur District, Madras Presidency) ರಿಗೆ ಬರೆದರೆ ಅವರು ಈ ಗಿಡದ ಎಲೆಗಳನ್ನು ಕಳುಹಿಸಿ ಕೊಡುವರು. ಅವುಗಳನ್ನು ನೆಟ್ಟರೆ ಬೇರೊಡೆದು ಗಿಡಗಳಾಗುವುವು. ಸಾಲ್ವೇಷನ್ ಆರ್ಮಿ (Salvation Army) ಯವರು ಕಳೆದ ಎರಡು ವರುಷಗಳಿಂದೀಚೆಗೆ ಇಂಡಿಯಾದೇಶದಲ್ಲಿ ಇದರ ವ್ಯವಸಾಯವನ್ನು ಬಹಳ ಪ್ರೋತ್ಸಾಹಗೊಳಿಸುತ್ತಿರುವುದಾಗಿ ತಿಳಿಯಬರುತ್ತದೆ.

ಪರಸ್ಪರ ಸಹಾಯ ಹೈನದ ಮನೆಗಳನ್ನು ಸ್ಥಾಪಿಸುವಿಕೆ.

ಸಂಯುಕ್ತ ಸಂಸ್ಥಾನಗಳ (United Provinces) ಪರಸ್ಪರ ಸಹಾಯಸಂಘಗಳ ರಿಜಿಸ್ಟ್ರಾರಾದ ಮಿ॥ ಎ. ಸಿ. ಚಾಟರ್ಜಿ ಐ. ಸಿ. ಎಸ್. ಯವರು ಸಿಮ್ಲಾ ಸಮ್ಮೇಳನದಲ್ಲಿ ಓದಿದ ಉಪನ್ಯಾಸದ ಸಾರಾಂಶ.

ಸಂಯುಕ್ತ ಸಂಸ್ಥಾನಗಳ (United Provinces) ಎಲ್ಲಾ ದೊಡ್ಡ ಪಟ್ಟಣಗಳಲ್ಲಿ ಹಾಲಿನ ವಿಷಯದಲ್ಲಿ ಜನಗಳಿಗೆ ತುಂಬಾ ಯೋಚನೆಯಾಗಿದೆ. ಸಾಧಾರಣ ಜನಗಳಿಗೆ ಒಳ್ಳೇ ಹಾಲು ದೊರೆಯುವುದೇ ಇಲ್ಲ. ಅಲ್ಲಿನ ಅನೇಕ ಪಟ್ಟಣಗಳಲ್ಲಿ ಬೇಕಾದಷ್ಟು ಸಾಧಾರಣವಾದ ಹಾಲೂ ಕೂಡ ದೊರೆಯುವುದು ದುರ್ಲಭ. ಈ ಕೊರತೆಯನ್ನು ತಪ್ಪಿಸುವ ಉದ್ದೇಶ್ಯ ಮಾಜಿ ರಿಜಿಸ್ಟ್ರಾರ್ ಮಿ॥ ಫ್ರಿಮಾಂಟಲ್ ಎಂಬವರು ೧೯೧೧ ನೇ ಜನ್ ಮಾಹೆಯಲ್ಲಿ ವಿಶ್ವೇಶ್ವರ ಪರಸ್ಪರ ಸಹಾಯ (ಡೈರಿ) ಹೈನದ ಮಳಿಗೆಯನ್ನು ಕಾಶಿಯಲ್ಲಿ ಸ್ಥಾಪಿಸಿದರು. ಕಾಶಿಪಟ್ಟಣದ ಸುಮಾರು ನಾಲ್ಕು ಮೈಲಿ ದೂರದಲ್ಲಿರುವ ಪಹೇರಿಯಾ ಎಂಬ ಉಪನಗರದ ಕವಾಡಿಗರು ತಮ್ಮ ಜವಾಬ್ದಾರಿ ಮೇಲೆ ಇತರ ಮೆಂಬರುಗಳಿಗೆ ಹಣವನ್ನು ತಾವಾಗಿ ಕೊಡುವ ಸಂಘವನ್ನು ಸ್ಥಾಪಿಸಿರುವರು. ಈ ಸಂಘದ ಹಣದ ಸಹಾಯ ಮತ್ತು ಮೇಲ್ವಿಚಾರಣೆ ಇವುಗಳು ಕಾಶೀಪಟ್ಟಣದ ಕೋ-ಆಪರೇಟಿವ್ ಸೊಸೈಟಿಯ ಅಧೀನವಾಗಿವೆ. ಮೇಲ್ಕಂಡ ಹೊಸಸಂಘವು ಮೆಂಬರುಗಳಿಗೆ ಜಾನುವಾರುಗಳನ್ನು ಕೊಳ್ಳುವುದಕ್ಕೂ, ಹುಲ್ಲು ಮುಸ್ಕರೆ ಹಿಂಡಿಗಳನ್ನು ಕೊಳ್ಳುವುದಕ್ಕೂ ಸಾಲವನ್ನು ಕೊಡುವುದು. ಇದಲ್ಲದೆ ಮೆಂಬರುಗಳು ಇನ್ನೊಂದು ಡೈರಿ ಸೊಸೈಟಿ ಎಂಬ ಹೈನದ ಮಳಿಗೆಯನ್ನು ಸ್ಥಾಪಿಸಿರುವರು. ಇದಕ್ಕೋಸ್ಕರ ವಿಸ್ತಾರವಾದ ಭೂಪ್ರದೇಶ, ದನಗಳ ಕೊಟ್ಟಿಗೆ, ಆಫೀಸು ಕಟ್ಟಡ ಇವುಗಳನ್ನು ಪಹೇರಿಯಾದಲ್ಲಿಯೇ ಸಿದ್ಧಪಡಿಸಿಕೊಂಡಿರುವರಲ್ಲದೆ, ಕಾಶೀಪಟ್ಟದಲ್ಲಿ ಜನಗಳಿಗೆ ಹಾಲನ್ನು ಮಾರುವುದಕ್ಕೆ ಕೆಲವು ಅಂಗಡಿಗಳನ್ನು ಬಾಡಿಗೆಗೆ ಗೊತ್ತುಮಾಡಿರುತ್ತಾರೆ. ಮೆಂಬರುಗಳು ತಮ್ಮ ಕರೆಯುವ ಹಸುಗಳನ್ನು ಸಂಘದ ಕೊಟ್ಟಿಗೆಗಳಲ್ಲೇ ಇಟ್ಟು ಮೇಯಿಸಬೇಕು. ಹುಲ್ಲು ಮುಸ್ಕರೆ ಆಗಾಗ್ಗೆ ಅಜಮಾಯಿಷಿ ಮಾಡಲ್ಪಡುವುದು. ಒಬ್ಬ ಮೇಲ್ವಿಚಾರಕರ ಮುಖಾಂತ್ರ ಹಾಲು ಕರೆದು, ತಂಬಿಗೆಗಳಲ್ಲಿ ತುಂಬಿಸಿ, ಬೀಗಗಳಿಂದ ಭದ್ರಪಡಿಸಿ, ಪಟ್ಟಣಗಳಲ್ಲಿರುವ ಅಂಗಡಿಗಳಿಗೆ ರವಾನಿಸುತ್ತಾರೆ. ಅಲ್ಲಿ ರೂಪಾಯಿಗೆ ೪ ಸೇರು ಪ್ರಕಾರ ಮಾರಿ ಬಂದ ಮೊತ್ತದಲ್ಲಿ ಮೆಂಬರುಗಳಿಗೆ ರೂಪಾಯಿಗೆ, ೧೧ ಸೇರು ಮೇರೆಗೆ ಎಷ್ಟು ಬೆಲೆ ಬೀಳುವುದೋ ಅಷ್ಟು ಹಣವನ್ನು ಕೊಟ್ಟು, ಉಳಿಯುವ ಹಣವು ಸಂಘದ ಖರ್ಚು, ಬಡ್ಡಿ, ರಿಸರ್ವ್‌ಫಂಡು ಮುಂತಾದವುಗಳಿಗೆ ವಿನಿಯೋಗಿಸಲ್ಪಡುವುದು. ಆದರೆ ಹೈನದ ಮನೆಯಿಂದ ಪಟ್ಟಣಕ್ಕೆ ರವಾನಿಸಲು ಬಾಡಿಗೆ ಬಹಳವಾಗಿ ಬೀಳುವುದರಿಂದ ಈ ಸಂಘಕ್ಕೆ ತುಂಬಾ ತೊಂದರೆಯಾಗಿದೆ. ದನಗಳನ್ನು ಇಡಲು ಕೊಟ್ಟಿಗೆ, ಭೂಪ್ರದೇಶ ಇವುಗಳಿಗಾಗಿ ಬಂಡವಾಳದಿಂದ ಬಹಳ ಖರ್ಚಾಗಿದೆ. ಇವುಗಳಲ್ಲದೆ ಬಡ್ಡಿ, ಬಂಡವಾಳದ ಸಾಲವನ್ನು ತೀರಿಸುವಿಕೆ, ಇವುಗಳು ಮತ್ತಷ್ಟು ಕಷ್ಟಗಳನ್ನುಂಟುಮಾಡಿವೆ. ಆದರೆ ಈ ಸಂಘವು ಕಷ್ಟಪಟ್ಟು ಮುಂದಕ್ಕೆ ಕೆಲಸಗಳನ್ನು ನಡೆಸುತ್ತಾ ಇದ್ದರೆ, ಏಳಿಗೆಗೆ ಬರಲು ಸುಲಭ. ಏಕೆಂದರೆ ಪಟ್ಟಣಗಳಲ್ಲಿ ಹಾಲಿನ ಮಾರಾಟವು ಹೆಚ್ಚುತ್ತಲಿದೆ. ಸಂಘಕ್ಕೆ ಬಂಡವಾಳವನ್ನು ಒದಗಿಸಲು ಸಾಲವಮಾಡಲು ಸಾಮರ್ಥ್ಯವಿಲ್ಲ.

ಇಲ್ಲಿ ಮೇಲ್ಕಂಡ ಸಂಘಕ್ಕೆ ಬಹಳ ಅನಾನುಕೂಲವಿರುವುದರಿಂದ ಅಲಹಾಬಾದ್ ಡಿಸ್ಟ್ರಿಕ್ಟಿನ ಕಾಂತ್ರ ಎಂಬ ಸ್ಥಳದಲ್ಲಿ ಹೊಸತರಹೆಯ ಹಾಲಿನ ಸೊಸೈಟಿಯನ್ನು ಸ್ಥಾಪಿಸಬೇಕಾಯಿತು. ಈ ಡಿಸ್ಟ್ರಿಕ್ಟಿನ ಕಲೆಕ್ಟರಾದ ಮಿ॥ ಫ್ರಿಮಾಂಟಲ್ ಸಾಹೇಬರವರ ಉದಾರ ಸಹಾಯದಿಂದ ಒಂದು ಅನ್ ಲಿಮಿಟೆಡ್ ಪರಸ್ಪರ ಸಹಾಯ ಸಾಲ ಸಂಘ ಮತ್ತು ಡೈರಿ ಸಂಘ ಇವೆರಡೂ ಸೇರಿ ಒಂದು ಯೂನಿಯನ್ ಸಂಘವನ್ನು ಆ ಪಟ್ಟಣದ ಸಮೀಪದಲ್ಲಿರುವ ಬೇಲಿ ಎಂಬ ಸ್ಥಳದಲ್ಲಿ ವಾಸವಾಗಿರುವ ಕವಾಡಿಗರು ಸ್ಥಾಪಿಸಿರುತ್ತಾರೆ. ಇಲ್ಲಿ ದನಗಳ ಕೊಟ್ಟಿಗೆಗಳನ್ನು ಕಟ್ಟಬೇಕಾದ ಅವಶ್ಯವಿಲ್ಲ. ಅಂಗಡಿಗಳ ಸಮೀಪದಲ್ಲಿರುವ ಒಂದು ಮಧ್ಯಸ್ಥಾನದಲ್ಲಿ ಮೆಂಬರುಗಳು ದನಗಳನ್ನು ಹೊಡೆದುಕೊಂಡು ಬಂದು ಅಲ್ಲಿ ಒಬ್ಬ ಮೇಲ್ವಿಚಾರಕರ ರೂಬರೂಬು ಹಾಲು ಕರೆಯಬೇಕು. ನಂತರ ಹಾಲನ್ನೆಲ್ಲಾ ತಂಬಿಗೆಗಳಲ್ಲಿ ತುಂಬಿಸಿ, ಬೀಗಗಳಿಂದ ಬದ್ರಪಡಿಸಿ ಹತ್ತಿರದಲ್ಲಿರುವ ಅಂಗಡಿಗಳಿಗೆ ರವಾನಿಸುತ್ತಾರೆ. ಅಲ್ಲಿ ಗಿರಾಕಿಗಳಿಗೆ ನಗದಾಗಿ ಮಾರಿಬಿಡುತ್ತಾರೆ. ಜಾನುವಾರುಗಳನ್ನು ಇಟ್ಟಿರತಕ್ಕ ಮೆಂಬರುಗಳ ಕೊಟ್ಟಿಗೆ, ಮೇವು ಮುಸ್ಕರೆಗಳು ಆಗಾಗ್ಗೆ ಅಜಮಾಯಿಷಿ ಮಾಡಲ್ಪಡುತ್ತೆ. ಕಳೆದವರುಷ ಜುಲೈ ತಿಂಗಳಿಂದ ಈ ಕೆಲಸವು ನಡೆಯುತ್ತಾ ಇದೆ.

ಲಕ್ನೋ ಪಟ್ಟಣದಲ್ಲಿ ಅನ್ ಲಿಮಿಟೆಡ್ ಸಾಲದ ಸೊಸೈಟಿಯು ಗೋಷಾ ಕವಾಡಿಗರಿಂದ ಸ್ಥಾಪಿಸಲ್ಪಟ್ಟಿರುತ್ತೆ. ಅದರ ಮೆಂಬರುಗಳು ಈ ಕೆಲಸದಲ್ಲಿ ಬಹಳ ಶ್ರದ್ಧೆಯುಳ್ಳವರಾಗಿದ್ದಾರೆ. ಪಟ್ಟಣದಲ್ಲಿ ಹಾಲಿನ ಕೆನೆ, ಬೆಣ್ಣೆ, ಮತ್ತು ಆರೋಗ್ಯಶಾಸ್ತ್ರಕ್ಕನುಸಾರವಾಗಿ ತಯಾರ್ಮಾಡಿರುವ ಹಾಲು, ಇವೇ ಮೊದಲಾದವುಗಳಿಗೆ ಹೆಚ್ಚು ಗಿರಾಕಿಗಳಿರುವುದರಿಂದ ಗೋಷಾ ಸಾಲದ ಸಂಘವು ಈಗ ಹೈನದಮನೆಯಾಗಿ ಬದಲಾಯಿಸಲ್ಪಟ್ಟಿದೆ. ಡೆಪ್ಯುಟಿ ಕಮಿಷನರ್ ಮಿ॥ ಫೋರ್ಡ್ ಸಾಹೇಬರು ಇದರಲ್ಲಿ ಬಹಳ ಗಮನಕೊಟ್ಟಿರುತ್ತಾರೆ. ಈ ಸಂಘದ ಮೆಂಬರುಗಳು ನಾಹಲ್ ಎಂಬ ಭೂಪ್ರದೇಶವನ್ನು ಬಾಡಿಗೆಗೆ ಗೊತ್ತುಮಾಡಿ, ಅಲ್ಲಿ ದನಗಳಿಗೆ ಕೊಟ್ಟಿಗೆಗಳನ್ನೂ, ಬೆಣ್ಣೆ ತಯಾರ್ಮಾಡುವುದಕ್ಕೆ ಹೈನದ ಮನೆಯನ್ನೂ ಕಟ್ಟಿಸಿರುವರಲ್ಲದೆ, ಮ್ಯಾನೇಜರರವರು ವಾಸಿಸುವದಕ್ಕೆ ತಕ್ಕ ವಸತಿಯನ್ನೂ ಕಲ್ಪಿಸಿರುತ್ತಾರೆ. ಇವುಗಳಿಗಾಗುವ ಕಟ್ಟಡದ ಪ್ಲಾನುಗಳು ಮ್ಯುನಿಸಿಪಾಲಿಟಿಯ ಹೆಲ್ತ್ ಆಫೀಸರವರಿಂದ ತಯಾರಿಸಲ್ಪಟ್ಟವು. ಇವುಗಳ ಖರ್ಚಿಗಾಗಿ ಸೆಂಟ್ರಲ್ ಬ್ಯಾಂಕಿಂಗ್ ಯೂನಿಯನ್ ಸಂಘವು ಸಾಲವನ್ನು ಒದಗಿಸುತ್ತಿದೆ. ಮೆಂಬರುಗಳು ಬಹಳ ಚುರುಕಾಗಿರುತ್ತಾರೆ, ಹೈನದಮನೆಯು ಕಟ್ಟಡವು ಉತ್ತಮವಾಗಿದೆ. ಅಂಗಡಿಗಳು ಸಮೀಪದಲ್ಲಿರುವುದರಿಂದ ರವಾನೆಗೆ ಬಹಳ ಖರ್ಚು ಬೀಳುವುದಿಲ್ಲ. ಹಾಲು, ಬೆಣ್ಣೆ ಇವುಗಳಿಗೆ ಪಟ್ಟಣದಲ್ಲಿಲ್ಲಾ ಅನೇಕ ಗಿರಾಕಿಗಳುಂಟು. ಇಷ್ಟು ಅನುಕೂಲಗಳಿದ್ದು, ಸಂಘದ ಆಡಳಿತಗಳನ್ನು ಮಿತವ್ಯಯದಿಂದ ನಡೆಸುತಿದ್ದರೂ, ಬಂಡವಾಳದಲ್ಲಿ ಖರ್ಚು ಬಹಳವಾಗಿ ಬಿದ್ದಿರುತ್ತೆ. ಆದರೂ ಸಂಘವು ಏಳಿಗೆಗೆ ಬರಲೆಂದು ನಾವು ಹಾರೈಸುತ್ತೇವೆ. ಲಕ್ನೋಪಟ್ಟಣದ ಕೆಲವೆಡೆಗಳಲ್ಲಿ ಹೈನದ ಮನೆಗೆ ಸಂಬಂಧಪಟ್ಟ ಪರಸ್ಪರ ಸಹಾಯ ಸಂಘವನ್ನು ಸ್ಥಾಪಿಸಲು ಸಾಧ್ಯವಲ್ಲ:—ಏಕೆಂದರೆ ಅಲ್ಲಿನ ಜನರು ಕವಾಡಿಗರಲ್ಲ ಮತ್ತು ಈ ಕೆಲಸದಲ್ಲಿ ಕೈಹಾಕುವವರಲ್ಲ. ಬಾಸ್ತಿ ಎಂಬ ಊರಿನಲ್ಲಿ ಹಾಲು ದೊರೆಯುವುದು ಕಷ್ಟವಾದ್ದರಿಂದ, ಹಾಲನ್ನು ಉಪಯೋಗಿಸುವವರು ತಮ್ಮೊಳಗೆ ತಾವೇ ಒಂದು ಲಿಮಿಟೆಡ್ ಪರಸ್ಪರ ಸಹಾಯ ಸಂಘವನ್ನು ಸ್ಥಾಪಿಸಿ, ಹೈನದ ಕೆಲಸವನ್ನು ಪ್ರಾರಂಭಿಸಿರುತ್ತಾರೆ. ಇತರ ಸ್ಥಳಗಳಿಂದ ದನಗಳನ್ನು ತರಿಸಿಕೊಂಡು ಅವುಗಳ ಹಾಲನ್ನು ಮೆಂಬರುಗಳಿಗೆ ಮಾತ್ರವೇ ಮಾರುತ್ತಾರೆ.

ಬೆಣ್ಣೆ ತಯಾರ್ಮಾಡಿಸುವುದರಲ್ಲಿ ಮೇಲೆ ನಮೂದಿಸಿರುವ ಎರಡು ವಿಧದಲ್ಲಿ ಯಾವುದು ಉತ್ತಮವೋ ಹೇಳಲಸಾಧ್ಯ. ಪ್ರಾಯಶಃ ಅಲಹಾಬಾದಿನಲ್ಲಿ ತೋರಿಸಿರುವ ಮಾದರಿ ಉತ್ತಮವೆಂದು ತಿಳಿಯಬಹುದು. ದನಗಳನ್ನು ಮೆಂಬರುಗಳ ಮನೆಯಲ್ಲೇ ಇಟ್ಟುಕೊಳ್ಳುವುದು ಆರೋಗ್ಯಶಾಸ್ತ್ರಕ್ಕೆ ವಿರುದ್ಧವೆಂದು ಕೆಲವರು ಆಕ್ಷೇಪಿಸುತ್ತಾರೆ, ಆದರೆ ನಮ್ಮ ಅಭಿಪ್ರಾಯದಲ್ಲಿ ಕಂಡು ಬರುವುದೇನೆಂದರೆ ಸಾಧಾರಣ ಮನುಷ್ಯನು ತಾನು ಸಂಪಾದಿಸುವುದರಲ್ಲಿ ಹೆಚ್ಚು ಬೆಲೆಯನ್ನು ಕೊಟ್ಟು ಉತ್ತಮವಾದ ಹಾಲನ್ನು ಪಡೆಯುವುದಕ್ಕಿಂತ ಸುಲಭ ಖರೀದಿಗೆ ಒಳ್ಳೇ ಹಾಲು ದೊರಕುವಂತೆ ಏರ್ಪಾಡು ಮಾಡುವದು ಶ್ರೇಷ್ಠ. ಅಲಹಾಬಾದ್ ಮಾದರಿಯ ಮೇರೆ ಹೈನದ ಮನೆಯನ್ನು ಕಟ್ಟಿಸಿ, ಅದರ ಉಪಯೋಗವನ್ನು ಕವಾಡಿಗರು ಚೆನ್ನಾಗಿ ತಿಳಿದವರಾದರೆ ಮುಂದಕ್ಕೆ ಕೊಟ್ಟಿಗೆಗಳನ್ನು ಕಟ್ಟಿ, ತಕ್ಕ ಸಾಮಾನು ಮುಸ್ಕರೆಗಳನ್ನು ತರಿಸಿ ಉಪಯೋಗಿಸಲು ಸುಲಭ ಸಾಧ್ಯವೆಂದು ತಿಳಿಯಬಹುದು.

ವ್ಯವಸಾಯದ ಕೆಲಸಗಳಿಗೆ ಸುಣ್ಣದ ಉಪಯೋಗ.

(ವ್ಯವಸಾಯ ರಸಾಯನ ಶಾಸ್ತ್ರಜ್ಞರಾದ ಹೆಚ್. ಜಿ. ಕೋಲ್ಮನ್‌ರವರಿಂದ)

ವ್ಯವಸಾಯೋದ್ದೇಶಗಳಿಗೋಸ್ಕರ ಸಾಮಾನ್ಯವಾಗಿ ಸುಣ್ಣವನ್ನು ಅದನ್ನು ಉಪಯೋಗಿಸಬೇಕಾಗಿರುವ ಜಮೀನಿನ ಮೇಲೆ ಅಥವಾ ಸಾಧ್ಯವಾದ ಮಟ್ಟಿಗೂ ಅದರ ಸಮೀಪದಲ್ಲಿ ಗಾಡಿಗಳಲ್ಲಿ ಸಾಗಿಸಿ, ಅಲ್ಲಿ ರಾಸಿ ರಾಸಿಗಳಾಗಿ ಹಾಕಿ ಅದರ ಮೇಲೆ ಒಂದು ಪದರ ಮಣ್ಣನ್ನು ಹೊದ್ದಿಸುವರು. ಕೊಡಲಿ ಸುಣ್ಣವು ಗಾಳಿಯ ಸ್ಪರ್ಶದಿಂದ ಶೀಘ್ರವಾಗಿ ಅರಳುತ್ತದೆ. ರಾಶಿಯೊಳಕ್ಕೆ ಒಂದು ಕಟ್ಟಿಗೆಯನ್ನು ಸುಲಭವಾಗಿ ದೂರಿಸುವುದಕ್ಕಾದಾಗ ಸುಣ್ಣವನ್ನು ಕಡೆಗೆ ಎಲ್ಲಿ ಹಾಕಬೇಕೆಂದು ಉದ್ದೇಶಿಸಿರುವುದೋ ಆ ಸ್ಥಳದಲ್ಲಿ ಹರಡಬಹುದು. ಸುಣ್ಣವು ಪುಡಿಯಾಗುವುದರಿಂದ ಮೂರರಷ್ಟು ಅಧಿಕವಾಗುವುದು. ಬೆರಕೆ ಸುಣ್ಣಕ್ಕಿಂತಲೂ ಶುದ್ಧವಾದ ಸುಣ್ಣವು ನೀರನ್ನು ಹೆಚ್ಚಾಗಿ ಹೀರುವುದಲ್ಲದೆ ಅರಳುವುದಕ್ಕೆ ಹೆಚ್ಚು ಕಾಲವನ್ನೂ ತೆಗೆದುಕೊಳ್ಳುತ್ತದೆ. ಸ್ವಭಾವವಾಗಿ ಸುಣ್ಣವು ನೀರನ್ನು ಹೀರಿಕೊಳ್ಳುವಾಗ ನೀರಿನಲ್ಲಿ ಕೂಡಿಕೊಂಡಿರುವ ಇಂಗಾಲಾಮ್ಲ (ಕಾರ್ಬನ್‌ಡೈಆಕ್ಸೈಡ್) ವಾಯುವು ಅದಕ್ಕೆ ಸುಲಭವಾಗಿ ಒದಗುವುದರಿಂದ, ಎಚ್ಚರಿಕೆಯಿಂದ ಜಾಗ್ರತೆಯಾಗಿ ಈ ಪದಾರ್ಥದೊಂದಿಗೆ ಸೇರಿಹೋಗುವುದು. ಈ ರೀತಿ ತಯಾರಾದ ಕಾರ್ಬನೇಟ್ ಆಫ್ ಲೈಮ್ ಪದಾರ್ಥವು ಸಣ್ಣಗೆ ಪುಡಿ ಪುಡಿಯಾಗಿರುವುದರಿಂದ, ಸಸ್ಯಾದಿಗಳ ಅವಶ್ಯಕತೆಗಳಿಗೆ ಸರ್ವ ರೀತಿಗಳಲ್ಲಿಯೂ ಕೇವಲ ತಕ್ಕದ್ದಾಗಿರುವುದು. ಸುಣ್ಣವನ್ನು ಎಕರೆಯೊಂದಕ್ಕೆ ||| ಟನ್ನಿನಿಂದ ಒಂದು ಟನ್ನಿಗೆ ಕಡಮೆಯಿಲ್ಲದಂತೆ ಉಪಯೋಗಿಸಬೇಕು. ಮೂರು ಅಥವಾ ನಾಲ್ಕು ವರ್ಷಗಳಿಗೆ ಒಂದು ಸಾರಿ ಮಿತವಾಗಿ ಉಪಯೋಗಿಸುವುದು, ಹೆಚ್ಚು ವಿರಾಮಗಳಲ್ಲಿ ವಿಶೇಷವಾಗಿ ಉಪಯೋಗಿಸುವುದಕ್ಕಿಂತಲೂ ಉತ್ತಮವಾಗಿರುತ್ತದೆ. ಪ್ರೊಫೆಸ್ಸರ್ ರೈಟ್‌ಸನ್‌ರವರು ತಮ್ಮ "ಹ್ಯಾಂಡ್ ಬುಕ್ ಆಫ್ ಆಗ್ರಿಕಲ್ಚರ್" ಎಂಬ ಪುಸ್ತಕದಲ್ಲಿ, ಎಕರೆಯೊಂದಕ್ಕೆ ಮೂರು ಟನ್‌ಗಳ ಸುಣ್ಣವು ಸಾಮಾನ್ಯವಾದದ್ದೆಂದೂ, ಆರು ಟನ್‌ಗಳು ಸಮೃಥಾತುವಾದುದೆಂದೂ ಮತ್ತು ಒಂಭತ್ತು ಟನ್‌ಗಳು ಬಹಳ ಹೆಚ್ಚಾಗುವುದೆಂದೂ ಮತ್ತು ಅದರ ವ್ಯಾಪನೆಯು ಸುಮಾರು ೧೨ ವರುಷಗಳ ವರೆಗೂ ಇರುವುದೆಂದೂ ಹೇಳಿರುತ್ತಾರೆ.

ಕೇವಲ ವ್ಯತಿರಿಕ್ತವಾದ ಗುಣವುಳ್ಳ ಜಮೀನುಗಳಲ್ಲಿ ಸುಣ್ಣವು ಸಂದರ್ಭಾನುಸಾರ ಬೇರೆ ಬೇರೆ ವಿಧಗಳಲ್ಲಿ ಪರಿಣಮಿಸುವುದು. ಹೇಗೆಂದರೆ-ಬಹಳ ಬಿಗಿಯಾದ ಜಿಗಟು ಮಣ್ಣನ್ನು ಸಡಿಲವಾಗಿಯೂ ಕೆಲಸಕ್ಕೆ ಸುಲಭವಾಗಿಯೂ, ಮತ್ತು ಹಗುರವಾದ ಜಮೀನುಗಳನ್ನು ಒತ್ತಾಗಿಯೂ ತೇವವನ್ನುಳಿಸಿಕೊಳ್ಳುವಂತೆಯೂ ಮಾಡುವುದು. ಈ ಕಾರಣದಿಂದ ಅದು ಭೂಮಿಯಲ್ಲುಂಟುಮಾಡುವ ಪರಿಣಾಮಗಳು ವಿಶೇಷಪ್ರಾಮುಖ್ಯವಾದವುಗಳಾಗಿರುತ್ತವೆಯಾಗಿ, ವ್ಯವಸಾಯಕ್ಕೆ ಕಷ್ಟಸಾಧ್ಯವಾದ ಜಮೀನುಗಳಿಗೆಲ್ಲಾ ಸುಣ್ಣವನ್ನು ಹಾಕಿ ಅವುಗಳ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಬೇಕು. ಸಸ್ಯಾದಿಗಳ ಬೆಳವಳಿಕೆಗೂ ಭೂಮಿಯಲ್ಲಿರುವ ಪದಾರ್ಥಗಳನ್ನು ಗೊಬ್ಬರ ರೂಪಕ್ಕೆ ಮಾರ್ಪಡಿಸುವುದಕ್ಕೂ ಇದರಿಂದುಂಟಾಗುವ ಫಲಗಳು ಪರ್ಯಾಲೋಚನೆಗೆ ಕಡಿಮೆಯಾದ ವಿಷಯಗಳೇನೂ ಅಲ್ಲ. ಭೂಮಿಯಲ್ಲಿ ಮೂಲರೂಪದಲ್ಲಿರುವ ನೈಟ್ರೋಜನ್ ಪದಾರ್ಥವನ್ನು (ಯವ ಕ್ಷಾರ) ಸಸಿಗಳಿಗೊದಗುವ ರೂಪಕ್ಕೆ ತಿರುಗಿಸುವುದಕ್ಕೆ ಅದು ಅತ್ಯಂತ ಉಪಯುಕ್ತವಾದ ಆಧಾರವಾಗೇರ್ಪಡುತ್ತದೆ. ಭೂಮಿಯಲ್ಲಿರುವ ಒಂದು ಬಗೆಯ ಕ್ರಿಮಿಗಳ ಮೂಲಕ ನೈಟ್ರೇಟ್ ಆಫ್ ಲೈಮ್ ಎಂಬ ಒಂದು ಅಮೂಲ್ಯವಾದ ಗೊಬ್ಬರವನ್ನುಂಟುಮಾಡುವುದಕ್ಕೆ ಇದು ಸಾಧನವಾಗಿ ಪರಿಣಮಿಸುವುದು.

ಸುಣ್ಣವು ಭೂಮಿಯಲ್ಲಿ ಶೇಖರವಾಗಿ ಅಡಗಿರುವ ಪೋಟಾಷ್ ಎಂಬ ವಸ್ತುವನ್ನು ಸಸಿಗಳಿಗೆ ಒದಗುವಂತೆ ಬಿಡುಗಡೆ ಮಾಡುತ್ತದೆಂಬುದು ಚೆನ್ನಾಗಿ ಗೊತ್ತೇ ಇದೆ. ಮತ್ತು ಈ ವಿಷಯದಲ್ಲಿ ಹೆಚ್ಚಾಗಿ ಹೇಳಬೇಕಾದದ್ದೇ ಇಲ್ಲ. ಇದು ಈ ಪದಾರ್ಥದ ಮತ್ತೊಂದು ಕೇವಲ ಮುಖ್ಯವಾದ ಉಪಕಾರವಾಗಿರುವುದು. ಭೂಮಿಯಲ್ಲಿ ಸಸ್ಯ ಪದಾರ್ಥವು ವಿಶೇಷವಾಗಿರುವಾಗ ಅವಕಾಶವಾಗಬಹುದಾದ ಜಮೀನಿನಲ್ಲಿರುವ ಹುಳಿಯನ್ನು ತಿದ್ದುವುದಕ್ಕೆ ಸುಣ್ಣವು ಬಹಳ ಸಾಧಕವಾಗಿರುತ್ತದೆ. ಹಸರು ಗೊಬ್ಬರಗಳನ್ನು ಹಾಕುವ ಪದ್ಧತಿ ಇದ್ದಲ್ಲಿ ಅದನ್ನು ಜಮೀನಿನಲ್ಲಿ ಉತ್ತುಬಿಡುವ ಕಾಲದಲ್ಲಿ ಸುಣ್ಣವನ್ನು ಹಾಕಬೇಕು. ಇದರಿಂದ ಹುಳಿಯು ಹೆಚ್ಚುವುದರಿಂದಾಗುವ ಕೆಡಕುಗಳು ತಪ್ಪುವುವು. ಕೊ. ಜ.

ಟಿಟಾನಿಕ್ಕನ್ನೆತ್ತುವುದು.

ಹಿಂದೆ ಇಂಗ್ಲಾಂಡಿನಿಂದ ಅಮೇರಿಕಕ್ಕೆ ಪ್ರಯಾಣಿಕರನ್ನು ಸಾಗಿಸಿಕೊಂಡು ಹೋಗುತ್ತಿದ್ದ ಟಿಟಾನಿಕ್ಕೆಂಬ ದೊಡ್ಡ ಹಡಗು ಅಮೇರಿಕಾದ ಸಮೀಪದಲ್ಲಿ ಸಮುದ್ರದೊಳಗೆ ಒಂದು ದೊಡ್ಡ ಮಂಜಿನ ಗಡ್ಡೆಗೆ ಬಡಿದು ಒಡೆದು ಹೋದುದರಿಂದ ಅದರಲ್ಲಿ ಅನೇಕರು ಮೃತರಾಗಿ ಆ ಹಡಗು ಮುಳುಗಿ ಹೋಯಿತೆಂಬುದನ್ನು ವಾಚಕರೆಲ್ಲರೂ ತಿಳಿದಿರುವರಷ್ಟೆ. ಆ ಹಡಗನ್ನು ಕಟ್ಟುವುದಕ್ಕೆ ಮೂರು ಕೋಟಿ ರೂ.ಗಳು ಮುಟ್ಟಿದ್ದುವು. ಅದರೊಳಗೆ ಪ್ರಯಾಣಿಕರ ಕೋಟ್ಯಂತರ ದ್ರವ್ಯವಿದ್ದಿತು. ಆ ಹಡಗು ನೀರಿನಲ್ಲಿ ಮುಳುಗಿ ಎಲ್ಲೋ ಅಡಗಿಕೊಂಡಿರುವುದು. ಈಗ ಒಬ್ಬಾನೊಬ್ಬ ಇಂಜನಿಯರು ಅದನ್ನು ಕಂಡು ಹಿಡಿದು ಹೊರಕ್ಕೆ ತೆಗೆಯಬಹುದೆಂದು ನಿರ್ಧರಿಸಿ ದೊಡ್ಡ ಆಲೋಚನೆಯನ್ನು ಮಾಡುತ್ತಿದ್ದಾನೆ. ಅವನ ಉಪಾಯವೇನೆಂದರೆ—ಈಗಿನ ಕಾಲದಲ್ಲಿ ದೊಡ್ಡ ದೊಡ್ಡ ಕಾರ್ಖಾನೆಯಗಳೊಳಗೆ ದೊಡ್ಡ ದೊಡ್ಡ ತೂಕದ ಎಂದರೆ ಬಹುಶಃ ೧೫೦ ಟನ್ನುಗಳ ತೂಕವುಳ್ಳ ಸಾಮಾನುಗಳನ್ನು ಕೂಡ ಅಯಸ್ಕಾಂತ (ಸೂಜಿಗಲ್ಲು) ಗಳ ಗ್ರಹಣ ಶಕ್ತಿಯ ಮೂಲಕವಾಗಿ ಮೇಲಕ್ಕೆ ಎತ್ತಿಸುತ್ತಲಿದ್ದಾರೆ. ಅದೇ ರೀತಿಯಿಂದ ಈ ಹಡಗನ್ನೂ ಮೇಲಕ್ಕೆತ್ತಿಸಬಹುದೆಂದು ಈ ಇಂಜನಿಯರು ಯೋಚಿಸಿದ್ದಾನೆ. ಚಿಕ್ಕಚಿಕ್ಕ ಹಡಗುಗಳನೇಕವನ್ನು ತಂದು ಬಹು ಶಕ್ತಿಯುಳ್ಳ ಅಯಸ್ಕಾಂತಗಳನ್ನು ಕಬ್ಬಿಣದ ಹಗ್ಗಗಳ ತುದಿಗೆ ಕಟ್ಟಿ, ಅವುಗಳನ್ನು ಆ ಸಣ್ಣ ಹಡಗುಗಳಿಂದ ಟಿಟಾನಿಕ್ಕು ಮುಳುಗಿಹೋಗಿರುವ ಸ್ಥಳದಲ್ಲಿ ಹಾಕಿ, ಅದಕ್ಕೆ ವಿದ್ಯುಚ್ಛಕ್ತಿಯನ್ನುಪಯೋಗಿಸಿದರೆ ಅವು ಒಳಗೆ ಸುತ್ತಾಡಿ, ಲೋಹಮಯವಾದ ಆ ಹಡಗನ್ನು ಹಿಡಿದುಕೊಳ್ಳಬಹುದೆಂದೂ, ನೀರಿನೊಳಗಿರುವ ವಸ್ತುಗಳನ್ನು ನೀರಿನ ಮೇಲ್ಮಟ್ಟಕ್ಕೆ ಹಗುರವಾಗಿ ಸೆಳೆಯಬಹುದಾದ ಕಾರಣ, ಈ ಅಯಸ್ಕಾಂತಗಳಿಂದ ಹಿಡಿಯಲ್ಪಟ್ಟ ಆ ಹಡಗನ್ನು ನೀರಿನ ಮಟ್ಟಕ್ಕೆ ಸುಲಭವಾಗಿ ಸೆಳೆಯಬಹುದೆಂದೂ, ಬಳಿಕ ಆ ಹಡಗಿನಲ್ಲಿ ಒಡೆದುಹೋಗಿರುವ ಭಾಗವನ್ನು ನೀರಿನೊಳಗೆ ಮುಳುಗಿ ಸರಿಮಾಡಬಹುದೆಂದೂ, ಬಳಿಕ ಆ ಹಡಗಿನೊಳಗೆಲ್ಲಾ ತುಂಬಿರುವ ನೀರನ್ನು ಯಂತ್ರಗಳ ದ್ವಾರಾ ಹೊರಕ್ಕೆ ಹೊರಡಿಸಬಹುದೆಂದೂ, ಆಗ ಹಡಗು ತಾನಾಗಿ ನೀರಿನಮೇಲೆ ತೇಲಾಡುವಂತೆ ಆಗುವುದೆಂದೂ ಆತನು ಸಿದ್ಧಾಂತಮಾಡಿರುತ್ತಾನೆ. ಶೋಧಕರೂ ಸಾಧಕರೂ ಆದ ಪಾಶ್ಚಾತ್ಯರಿಗೆ ಇದು ಸಾಧ್ಯವೆಂದು ತೋರುವುದೂ, ಅದರಂತೆ ಒಂದುವೇಳೆ ಸಾಧ್ಯವಾಗುವುದೂ ಆಶ್ಚರ್ಯವಲ್ಲ; ಆದರೆ ಅದು ನೆರವೇರಿತೆಂದು ಕೇಳುವವರೆಗೂ ನಮ್ಮವರಿಗೆ ಅದು ಕಥೆಯಂತೆಯೇ ಇರುವುದು.

ಕುಲವೃತ್ತಿ.

ನಮ್ಮ ಭಾರತೀಯರಲ್ಲಿ ವೃತ್ತಿಯು ಕುಲಕ್ರಮಾಗತವಾಗಿರಬೇಕೆಂಬ ವಿಧಿಯು ಪ್ರಾಚೀನ ಕಾಲದಿಂದ ಸ್ಥಾಪಿತವಾಗಿ ನಡೆದು ಬಂದಿದೆ. ವೇದದ ಕಾಲದಲ್ಲಿಲ್ಲದಿದ್ದ ವರ್ಣಾಶ್ರಮವಿಭಾಗಗಳು ಪೌರಾಣಿಕ ಕಾಲದಲ್ಲಿ ಅವತರಿಸುವುದಕ್ಕೆ "ವರ್ಣಾಶ್ರಮ ವಿಭಾಗೋಯಂವೃತ್ತಿತೋನತುಜಾತಿತಃ" ಎಂಬ ಗೀತಾವಚನದಂತೆ ಈ ವೃತ್ತಿಯ ಅನುಸರಣೆಯೇ ಮುಖ್ಯ ಲಕ್ಷ್ಯವಾಗಿದ್ದಿತು. ಮನುಷ್ಯನ ಇಹಪರಗತಿಗೆಲ್ಲಾ ದೇಹವು ಮುಖ್ಯಸಾಧನವಾಗಿದೆ. ಆ ದೇಹದ ರಕ್ಷಣೆಗೆ ಅನ್ನಬಟ್ಟೆಗಳು ಅವಶ್ಯಕವಾಗಿವೆ. ಅದುಕಾರಣ ಮಾನಜೀವಿತಕಾಲದಲ್ಲೆಲ್ಲಾ ಹೊಟ್ಟೆ ಬಟ್ಟೆಗೆ ಮೊದಲು ದಾರಿಯನ್ನು ಮಾಡಿಕೊಂಡು ಬಳಿಕ ಮುಂದಣ ಯೋಚನೆಯನ್ನು ಮಾಡಬೇಕಾಗಿರುತ್ತದೆ. ಅಶನವಸನಗಳ ಅರ್ಜನೆಗೆ ವೃತ್ತಿಗಳು ಸಾಧನಗಳು. ಯಾವುದೊಂದು ಉದ್ಯೋಗವನ್ನೂ ಮಾಡದಿರುವವರಿಗೆ ಅಶನವಸನಗಳು ಎಲ್ಲಿ ದೊರೆಯುವುವು? ಅದುಕಾರಣ, ಪ್ರತಿಯೊಬ್ಬನಲ್ಲೂ ಒಂದೊಂದು ತೆರದ ಉದ್ಯೋಗವಿದ್ದರೆ ಅವರವರ ಜೀವಿತವು ಸುಲಭವಾಗಿ ನಡೆಯುವುದೆಂದೂ, ಅಶನವಸನಾದಿಗಳ ಅಭಾವವು ಪ್ರಜೆಗಳಲ್ಲಿದ್ದರೆ ದೇಶದಲ್ಲಿ ಅಸಂತುಷ್ಟಿ ಅಪರಾಧಕೃತ್ಯಗಳು ನಡೆಯುವುದಕ್ಕವಕಾಶವಾಗುವುದರಿಂದ ಉದ್ಯೋಗತತ್ಪರತೆಯು ಪ್ರಜೆಗಳಲ್ಲಿ ಅವಿಚ್ಛಿನ್ನವಾಗಿರಬೇಕೆಂದೂ ಯೋಚಿಸಿ, ಪೂರ್ವದ ಮಹನೀಯರು ವೃತ್ತಿಗಳ ಪುರೋವೃದ್ಧಿಗಾಗಿ ದೀರ್ಘವಾದ ಪರ್ಯಾಲೋಚನೆಯಿಂದಬಲವಾದ ಹದಿಗಳನ್ನು ಹಾಕಿದರು. ಆ ಹದಿಗಳೇ ವರ್ಣಾಶ್ರಮವಿಭಾಗರೂಪವಾದುವುಗಳು.

ಈ ವಿಭಾಗದಿಂದ ಒಂದೊಂದು ತೆರದ ವೃತ್ತಿಯು ಒಂದೊಂದು ವರ್ಣದವರಲ್ಲಿರಬೇಕೆಂದೂ, ಹಾಗೆ ಸಂಪ್ರದಾಯವಾಗಿರುವುದಾದರೆ ತಮ್ಮ ಪಿತೃಪಿತಾಮಹಾದಿಗಳಿಂದ ಅನುಸರಿಸಲ್ಪಟ್ಟ ಆಯಾ ವೃತ್ತಿಯ ಸಂಸ್ಕಾರಗಳು ಆಯಾ ಪೀಳಿಗೆಯವರಲ್ಲಿ ಗರ್ಭಾದಿಯಾಗಿ ಜ್ಞಾನಕರ್ಮೇಂದ್ರಿಯಗಳ ದ್ವಾರದಿಂದೆಲ್ಲಾ ಅನುಸರಿಸಿಬಂದು, ಉತ್ತರೋತ್ತರಕ್ಕೆ ಅವರಲ್ಲಿ ಆ ವೃತ್ತಿಯೊಳಗೆ ವಿಶೇಷಕೌಶಲ್ಯವುಂಟಾಗುವುದಕ್ಕೂ, ಒಂದೊಂದು ವರ್ಗದವರ ವೃತ್ತಿಗಳನ್ನು ಮತ್ತೊಂದು ವರ್ಗದವರು ಅನುಸರಿಸಲವಕಾಶವಿಲ್ಲದುದರಿಂದ ಪರಸ್ಪರ ಮಾತ್ಸರ್ಯಕ್ಕೆ ಅನವಕಾಶವು ಉಂಟಾಗುವುದೆಂದೂ ಭಾವಿಸಿ ಈ ಪದ್ಧತಿಯನ್ನು ಸ್ಥಾಪಿಸಿದರು. ಅಗಸರು ನಾಯಿಂದರು, ಕಮ್ಮಾರರು, ಕುಂಬಾರರು, ಚಿತ್ರಕರು ಮೊದಲಾದ ಜನರಿಗೆಲ್ಲಾ ಈ ಪದ್ಧತಿಯಿಂದಲೇ ಅವರವರ ವೃತ್ತಿಗಳು ನಡೆದು ಬಂದಿರುತ್ತವೆ. ಪೂರ್ವದ ಪ್ರಭುಗಳೆಲ್ಲರಿಗೂ ತಮ್ಮ ರಾಜ್ಯರಕ್ಷಣಕಾರ್ಯದಲ್ಲಿ ಆಯಾ ವರ್ಗದ ಜನರು ಅವರವರವೃತ್ತಿಗಳನ್ನು ಅವಲಂಬಿಸಿಕೊಂಡು ಹೋಗುತ್ತಾರೆಯೋ ಅಥವಾ ಆ ವಿಷಯದಲ್ಲಿ ವ್ಯಭಿಚರಿಸುತ್ತಾರೆಯೋ ಎಂಬುದನ್ನು ಪರಿಶೀಲಿಸುತ್ತ ದಂಡನಾದಿ ಭೀತಿಯಿಂದ ಅವರವರು ಅವರವರ ಕುಲಕ್ರಮಾಗತ ವೃತ್ತಿಯಲ್ಲಿರುವಂತೆ ಮಾಡುವುದೂ ಒಂದು ಕರ್ತವ್ಯವಾಗಿದ್ದಿತು. ಈ ಏರ್ಪಾಟಿನಿಂದ ಆಯಾ ವರ್ಗದ ಜನರಲ್ಲಿ ಬಾಲ್ಯಾರಭ್ಯ ತಮ್ಮ ತಾಯ್ತಂದೆಗಳ ಶಿಕ್ಷೆಯಿಂದಲೂ, ಚಿಕ್ಕಂದಿನಿಂದ ಅವ್ಯಭಿಚಂತವಾಗಿ ಒಂದೇ ವೃತ್ತಿಯಲ್ಲಿ ತಗುಲಿಕೊಂಡು ಅಭ್ಯಾಸಮಾಡುತ್ತಾ ಬರುವುದರಿಂದಲೂ, ತಮಗೆ ಯುಕ್ತ ವಯಸ್ಸು ಬರುವುದರೊಳಗಾಗಿ ಪ್ರತಿಯೊಬ್ಬರೂ ಜೀವಿತಸಾಧಕವಾದ ಒಂದೊಂದು ವಿದ್ಯೆಯಲ್ಲಿ ನಿಪುಣರಾಗುತ್ತಿದ್ದರು. ಅವರಲ್ಲೂ ಕುಶಾಗ್ರಮತಿಗಳಾಗಿ ಹುಟ್ಟಿದವರೊಬ್ಬೊಬ್ಬರು ಜಕಣಾಚಾರಿಯಂತೆ ಜಗತ್ಪ್ರಸಿದ್ಧರಾಗಿ ಪರಿಣಮಿಸುತ್ತಿದ್ದರು. ಈ ಪದ್ಧತಿಯಿಂದ ಕುಲಕ್ರಮಾಗತ ವಾದವಿದ್ಯೆಯನ್ನು ಅವರವರು ಅವಲಂಬಿಸಿ ಕಲಿಯುವುದಕ್ಕೆ ಅವರಿಗೆ ಬೇರೆ ಹಣದ ವೆಚ್ಚವೇನೂ ತಗುಲುತ್ತಿರಲಿಲ್ಲ. ಎದೆ ಹಾಲನ್ನು ಕುಡಿವಾಗಳಿಂದಲೂ ತಮ್ಮಹಿರಿಯರು ಮಾಡುವ ಉದ್ಯೋಗದರೀತಿಗಳನ್ನೆಲ್ಲಾ ಕಣ್ಣಿನಿಂದನೋಡಿ ಬುದ್ಧಿಯಿಂದ ಗ್ರಹಿಸಿಕೊಳ್ಳುವುದಕ್ಕೆ ತಮ್ಮತಮ್ಮ ಮನೆಯಲ್ಲೇ ಅವಕಾಶವಿರುತ್ತಿದ್ದಿತು. ಅದುಕಾರಣ, ಈ ಕುಲಕ್ರಮಾಗತ ವೃತ್ತಿವರ್ತನದಿಂದ ಆಯಾವಿದ್ಯಾಭ್ಯಾಸವು ಅತ್ಯಂತ ಸುಲಭವಾಗಿ ತನ್ನಷ್ಟಕ್ಕೆ ತಾನೇ ಸಾಗಿಹೋಗುತ್ತಿದ್ದಿತು. ಸಂಘಸಮಷ್ಟಿಜೀವನಕ್ಕೆ ಅವಶ್ಯಕವಾದ ಬೇರೆಬೇರೆ ವೃತ್ತಿಗಳನ್ನು ಬೇರೆ ಬೇರೆ ಗೊತ್ತಾದಜನರೇ ಹೀಗೆ ಅವಲಂಬಿಸಿ ನಡೆಯಿಸಿಕೊಂಡು ಬರುತ್ತಿದ್ದುದರಿಂದ ಒಬ್ಬರ ಅವಶ್ಯಕವಾದ ಕಾರ್ಯಕ್ಕೆ ಆಯಾವೃತ್ತಿಯ ಬೇರೆಬೇರೆ ಜನರೆಲ್ಲಾ ಬಂದು ತಮ್ಮತಮ್ಮ ಕೆಲಸಗಳನ್ನು ಸಾಗಿಸಿಕೊಟ್ಟು ಹೋಗುತ್ತಿದ್ದರು. ಒಂದು ವರ್ಗದವರಮೇಲೆ ಮತ್ತೊಂದುವರ್ಗದವರ ಮೇಲಾಟಕ್ಕೆ ಅವಕಾಶವೇ ಇರುತ್ತಿರಲಿಲ್ಲ. ಇದರಿಂದ ಸಂಘಜೀವನವು ಗದ್ದಲವಿಲ್ಲದೆ ಸಾಗಿಹೋಗುವುದಕ್ಕೂ ಎಲ್ಲ ವರ್ಗದವರಲ್ಲೂ ಐಕಮತ್ಯವು ವೃದ್ಧಿಯಾಗುವುದಕ್ಕೂ ಚೆನ್ನಾಗಿ ಅವಕಾಶವಾಯಿತು. ಸಂಘಕಾರ್ಯನಿರ್ವಾಹಾರ್ಥವಾಗಿ ಒಂದೊಂದು ಉದ್ಯೋಗವನ್ನು ಒಂದೊಂದು ವರ್ಗದವರು ಮಾಡಲು ಹೊತ್ತುಕೊಂಡುದರಿಂದ ಆಯಾವರ್ಗದವರಲ್ಲಿ ಕೀಳುಮೇಲೆಂಬ ಭಾವನೆಯಿರಲು ಅವಕಾಶವೇ ಇರಲಿಲ್ಲ. ಒಬ್ಬರ ಉದ್ಯೋಗದ ಸಹಾಯವು ಬೇರೊಬ್ಬರಿಗೆ ಬೇಕಾಗುತ್ತಿದ್ದುದರಿಂದ ಪರಸ್ಪರ ಪ್ರೀತಿ ವಿಶ್ವಾಸಗಳನ್ನು ಶಾಶ್ವತಗೊಳಿಸಿಕೊಳ್ಳಬೇಕಾದ ಆವಶ್ಯಕತೆಯು ಎಲ್ಲರಿಗೂ ಇದ್ದೇ ಇರುತ್ತಿದ್ದಿತು. ಕೀಳ್ಮೇಲಿನ ಸ್ಥಾಪನೆಗಾಗಿ ವರ್ಣಾಶ್ರಮ ವಿಭಾಗಕಲ್ಪನೆಯು ಏರ್ಪಟ್ಟಿದ್ದರೆ ಅದು ಹುಟ್ಟಿದಾಗಲೇ ಅಳಿದುಹೋಗುತ್ತಿದ್ದಿತು. ಉಭಯಕಾಲದಲ್ಲಿ ಉದಾತ್ತವಿಚಾರದಿಂದ ಅದು ಮೂಡಿದುದರಿಂದಲೇ ಆಗಿನವರು ಯಾವುದೊಂದು ಅಸಮಾಧಾನವೂ ಇಲ್ಲದೆ ಮನಃಪೂರ್ವಕವಾಗಿ ಒಂದೊಂದು ವೃತ್ತಿಗಳನ್ನು ವಿಶ್ವಾಸದಿಂದ ಕುಲವೃತ್ತಿಯನ್ನಾಗಿ ಅಂಗೀಕರಿಸಿದರು. ಮತ್ತೂ ಸ್ವಕುಲಾಭಿಮಾನಿಗಳಾದ ಆ ಪೂರ್ವಿಕರು ತಮ್ಮ ಕುಲದಂತೆಯೇ ತಮ್ಮ ವೃತ್ತಿಯಲ್ಲೂ ಗೌರವಾಭಿಮಾನಗಳನ್ನು ಹೊಂದಿ ಅದನ್ನೇ ತಮ್ಮ ಉಪಾಸ್ಯದೇವತೆಗೆ ೨ ನೆಯದನ್ನಾಗಿ ಭಾವಿಸಿಕೊಂಡು ಬರುತ್ತಿದ್ದರೇ ಹೊರತು ಬೇರೆ ಬೇರೆ ವರ್ಗದವರ ವೃತ್ತಿಗಳನ್ನವಲಂಬಿಸುವ ವ್ಯಭಿಚಾರಣೆಗೆ ಎಂದಿಗೂ ಪ್ರವರ್ತಿಸುತ್ತಿರಲಿಲ್ಲ. ಈಗಿನಂತೆ ಅವರವರು ಅವರವರ ಮನಸ್ಸಿಗೆ ರುಚಿಸಿದ ವೃತ್ತಿಗೆ ಕೈಹಾಕಲು ಇಷ್ಟಪಡುತ್ತಿರಲಿಲ್ಲ. ಈ ಏರ್ಪಾಟಿನಿಂದ ಸಿಐವಾಗಿಯೂ ಹಿಂದೂಸಂಘದ ಸಮಷ್ಟಿಜೀವನಕ್ಕೆ ಅತ್ಯುತ್ತಮವಾದ ಸಾಧನವು ದೃಢಪಟ್ಟಿತೆಂದು ಹೇಳಲು ಅಭ್ಯಂತರವಿಲ್ಲ. ಆದರೂ ಈ ಏರ್ಪಾಟಿನಲ್ಲಿಯೂ ಸ್ವಲ್ಪ ದೋಷವಿಲ್ಲದೆ ಹೋಗಲಿಲ್ಲ.

ಆ ಲೋಪವು ವಿಚಾರಪರಿಣಾಮವಿಲ್ಲದೆ ಹುಟ್ಟಿದ್ದರೂ ವಿಚಾರಪೂರ್ವಕವಾಗಿಯೇ ಹುಟ್ಟಿದ್ದರೂ ಇರಲಿ, ಅದು ಭಾರತೀಯ್ಯೋಕ್ತವಾದ ವರ್ಣಾಟಂಬ ಉತ್ತಮವಾದ ಸೈನ್ಯದ ತೆಗೆ ಒಂದು ಬಲವಾದ ಪೆಟ್ಟು ಕಳೆಯನ್ನು ಬಳೆಯುವಂತೆ ಮಾಡಿತೆಂದು ಹೇಳಲು ಅಭ್ಯಂತರವಿಲ್ಲ. ಅದೇನೆಂದರೆ- ಒಂದೊಂದು ವೃತ್ತಿಯು ಒಂದೊಂದು ವರ್ಗದವರಿಗೆ ಸಂಪ್ರದಾಯವಾಗಿರುತ್ತಿದ್ದರೂ ಸರ್ವವೃತ್ತಿಗೂ ಮುಖ್ಯಾಧಾರಕವಾದ ವಿದ್ಯೆಯು ಸರ್ವರ ಸೊತ್ತಾಗಿಯೂ ಇರಬೇಕೆಂದು ಕಲ್ಪಿಸದೆಹೋದುದೇ ಆ ದೊಡ್ಡಲೋಪವಾಗಿರುತ್ತದೆ. ಅದೊಂದು ಲೋಪದಿಂದ ನಮ್ಮ ದೇಶದ ಎಲ್ಲಾ ತೆರದ ಉದ್ಯೋಗಗಳಲ್ಲಿಯೂ ಹೀನಸ್ಥಿತಿಯುಂಟಾಗುವುದಕ್ಕೆ ಎಷ್ಟು ಅವಕಾಶವಾಯಿತೆಂಬುದನ್ನೂ ಅದರಿಂದ ದೇಶವೇ ಕ್ಷೀಣಸ್ಥಿತಿಗೆ ಬರಲು ಹೇಗೆ ಮಾರ್ಗವಾಯಿತೆಂಬುದನ್ನೂ ಇಲ್ಲಿ ವಿವರಿಸಿ ಹೇಳಬೇಕಾಗಿಲ್ಲ. ಅದನ್ನು ವಿವರಿಸುತ್ತ ಕುಳಿತುಕೊಂಡರೆ ದೊಡ್ಡ ಪುರಾಣವಾಗುವುದು. ಯುಕ್ತವೇ ಆಗಲಿ ಅಯುಕ್ತವೇ ಆಗಿರಲಿ ಪೂರ್ವಪದ್ಧತಿಯೇ ಶರಣವೆಂಬ ಭಾವವು ಪಾಲಕರಲ್ಲಿಯೂ ಬಾಲ್ಯದಲ್ಲಿಯೂ ದೃಢವಾಗಿರುವವರೆಗೂ ನಮ್ಮ ದೇಶದ ಕಸಬುಗಾರರನ್ನು ದೈನ್ಯಕೂಪದಿಂದ ಉದ್ಧರಿಸಲು ಸಾಧಕವಾದ ನಿಜಪ್ರಯತ್ನಗಳು ನಡೆಯಲು ಅವಕಾಶವೇ ಇರುತ್ತಿರಲಿಲ್ಲ. ದೈವಗತಿಯಿಂದ ಆಂಗ್ಲಪ್ರಭುಗಳ ಕೈಗೆ ಭರತಖಂಡವು ಸೇರಿತು. ಸೂರ್ಯೋದಯವಾಗಿ ಕತ್ತಲೆ ಹರಿಯುವಂತಾಯಿತು. ಸಕಲಪ್ರಾಣಿವರ್ಗಕ್ಕೂ ಆರೋಗ್ಯಚೈತನ್ಯಶಕ್ತಿಗಳು ದೊರೆಯಲು ಅವಕಾಶವಾಯಿತು. ಕತ್ತಲೆಯಲ್ಲಿ ಕಾಣದಂತೆ ತಮ್ಮ ತಮ್ಮ ತಲೆ ಮೈ ಕೈಗಳಮೇಲೆ ಕುಳಿತಿದ್ದ ಕಟುಕಂಪದಿಂದ ಮೊದಲಾದವುಗಳನ್ನೆಲ್ಲಾ ಪ್ರತಿಯೊಬ್ಬರೂ ಝಾಡಿಸಿಕೊಂಡು ಶುಭವಾಗುವ ಯೋಗವು ಸಮನಿಸಿತು. ವಿದ್ಯೆಯು ಸಕಲಜನವರ್ಗಕ್ಕೂ ಸಾಮಾನ್ಯವಾಗಿ ದೊರೆಯಬೇಕೆಂಬ ತತ್ವವು ತಾನೇ ತಾನಾಗಿ ಮೆರೆಯುವಂತಾಗಿ, ಆ ತತ್ವಪ್ರಭೆಯು ದೇಶವನ್ನೆಲ್ಲಾ ಬೆಳಗುವಂತಾಯಿತು. ಇದೊಂದು ಸಂತೋಷಸ್ಥಾನವು. ಅಂತಿರಲಿ.

ಈಗಿನ ಸ್ಥಿತಿಯಲ್ಲಿ ವೃತ್ತಿಯು ಅವಲಂಬನೆಯು ಸಂಪ್ರದಾಯಸಿದ್ಧವಾಗಿರಬೇಕೆಂಬುದು ಸಂಪೂರ್ಣವಾಗಿ ವಿಚಾರಸ್ಪದವಾಗುತ್ತಿದೆ. ಇದು ಸಾಮಾನ್ಯವಾಗಿ ಪೂರ್ವಾಚಾರಗಳನ್ನು ಮೂಲೆಗೊತ್ತುವ ಕಾಲವಾಗಿಯೇ ಪರಿಣಮಿಸಿದೆ. ಅದರಲ್ಲೂ ವೃತ್ತಿವಿಷಯಕವಾದ ವ್ಯಭಿಚಾರಣೆಯನ್ನು ಈಗ ಅವಶ್ಯಕವಾಗಿ ಮಾಡಿಯೇ ತೀರಬೇಕಾದ ಹೊತ್ತು ಪ್ರಾಪ್ತವಾಗಿರುತ್ತದೆ. ಇಂಥ ಸ್ಥಿತಿಯು ಹಿಂದೆ ಯಾವಾಗಲೂ ಹುಟ್ಟಿರಲಿಲ್ಲವೆಂದು ತೋರುತ್ತದೆ. ಈಗ ವಿಶ್ವವಿದ್ಯಾಲಯದ ಪರೀಕ್ಷೆಗಳಲ್ಲಿ ಕೃತಾರ್ಥರಾಗಿ ಬಂದವರೂ ಕೂಡ ಹಣವನ್ನು ಗಳಿಸುವುದಕ್ಕೆ ಯಾವ ವೃತ್ತಿಯನ್ನವಲಂಬಿಸಬೇಕೆಂದು ಆಲೋಚಿಸುವಂತಾಗಿರುತ್ತದೆ. ಪೂರ್ವದಲ್ಲಾದರೋ ಇಂಥ ವಿಚಾರಕ್ಕೆ ಅವಕಾಶವೇ ಇರುತ್ತಿರಲಿಲ್ಲ. ಅವನವನ ಕರ್ತವ್ಯವು ಅವನ ಜನ್ಮದ ಜತೆಗೇ ಸಿದ್ಧವಾಗಿರುತ್ತಿದ್ದಿತು. ಆಯಾ ವೃತ್ತಿಯು ಅವರವರಿಗೆ ಬಾಡಿಗೆಯಿಲ್ಲದ ಸ್ವವಾಸ್ತವ್ಯದ ಮನೆಯು ಹಾಗಿರುತ್ತಿದ್ದಿತು. ಅವರವರ ವೃತ್ತಿಯಲ್ಲಿರುವುದು ಅವರವರಿಗೆ ಗೌರವಸಂತುಷ್ಟಿಗಳನ್ನುಂಟುಮಾಡುತ್ತಿದ್ದುದರಿಂದ ದೇಶದಲ್ಲಿ ಅಸಂತುಷ್ಟಿಗಳಿಗವಕಾಶವಿರಲಿಲ್ಲ. ಈಗ ವೃತ್ತಿಗಳ ವಿಷಯದಲ್ಲಿ ವ್ಯಭಿಚರಣವು ಹೆಚ್ಚಿದುದರಿಂದ ಒಂದುತೆರದ ಉಲ್ಲೋಲಕಲ್ಲೋಲವು ಪ್ರಬಲಿಸುತ್ತಿದೆ. ಈ ಮಧ್ಯೆ ವಿದ್ಯಾಶಕ್ತಿಯುಳ್ಳವರು ಆದಿಕಾಲಕಲ್ಪನೆಗೆ ವಿರುದ್ಧವಾಗಿ, ವೃತ್ತ್ಯಂತರದವರನ್ನೆಲ್ಲಾ ಹೀನರನ್ನಾಗಿ ಕಾಣುವುದಕ್ಕುಪಕ್ರಮಿಸಿದುದರಿಂದ ಅವರುಗಳಲ್ಲಿ ಪೂರ್ವದಿಂದಲೂ ರೂಢಮೂಲವಾಗಿ ಬಂದಿದ್ದ ಸಂತುಷ್ಟಿಸಮಾಧಾನಾದಿಗಳು ಸಡಿಲುವುದಕ್ಕುಪಕ್ರಮವಾಯಿತು. ಪರಸ್ಪರಮಾತ್ಸರ್ಯಗಳಿಗೆ ಅವಕಾಶವುಂಟಾಯಿತು. ವರ್ಣಾಶ್ರಮಭೇದರಚನೆಯು ಜಾತಿಜಾತಿಕುಲಕುಲಗಳ ವೈಷಮ್ಯಕ್ಕೆ ತಾಯಾದುದೆಂದು ನಿಂದಿಸಲ್ಪಡಲೂ ಪ್ರಾರಂಭವಾಯಿತು. ಯಾರು ಲೋಕಕಲ್ಯಾಣೋದ್ದೇಶದಿಂದ ವರ್ಣವೃತ್ತಿವಿಭಾಗಗಳಿಗೆ ಮೂಲಭೂತರಾಗಿದ್ದರೋ ಅವರೇ ಈಗಿನವರ ದೃಷ್ಟಿಯಲ್ಲಿ ವೈಷಮ್ಯವನ್ನು ತಂದು ಅಸಮಾಧಾನವನ್ನು ಹುಟ್ಟಿಸಿ, ಕಡೆಗೆ ವೃತ್ತಿವ್ಯಭಿಚರಣೆಯಿಂದ ಮೂಲತೋಹಾನಿಗೇ ಅವಕಾಶವನ್ನು ಕಲ್ಪಿಸುವಂತಾದುದು ಶೋಚನೀಯಸ್ಥಿತಿಯು.

ಕಾಲಗತಿಯು ವಿಚಿತ್ರವು. ಸದ್ಯಸ್ಥಿತಿಯಲ್ಲಿ ವೃತ್ತಿಗಳ ವಿಷಯದಲ್ಲಿಮಾತ್ರ ವ್ಯಭಿಚರಣೆಯುಂಟಾಗಿಲ್ಲ. ವರ್ಣಾಶ್ರಮಾದಿ ಧರ್ಮಕರ್ಮಗಳ ವಿಷಯದಲ್ಲಿಯೂ ಸಂಪೂರ್ಣವ್ಯಭಿಚರಣೆಯು ಉಂಟಾಗಿರುವುದು. ವರ್ಣಕುಲಾದಿಗಳೆಲ್ಲಾ ಬಹುಮಟ್ಟಿಗೆ ಬಾಹ್ಯವೇಷದಲ್ಲೇ ಸ್ಥಾಯಿಯಾಗಿರುತ್ತಿವೆ. ಕಾಲಸ್ಥಿತಿಯನ್ನು ಪರಿಭಾವಿಸಿ ವೃತ್ತಿವ್ಯಭಿಚರಣೆಯೇ ಈಗಿಗೆ ಅತ್ಯವಶ್ಯಕವೆಂಬ ಸಿದ್ಧಾಂತವು ಮಾತಲ್ಪಡುತ್ತಿದೆ. ಆದರೆ ಒಬ್ಬ ಬ್ರಾಹ್ಮಣನು ಅಂತ್ಯಜನ ವೃತ್ತಿಯನ್ನು ಅವಲಂಬಿಸಿದರೂ ಸಾಧುವಾಗಿ, ಒಬ್ಬ ಅಂತ್ಯಜನು ಬ್ರಾಹ್ಮಣ ವೃತ್ತಿಯನ್ನು ಅವಲಂಬಿಸಕೂಡದಂಗಿರುವುದು ಮಾತ್ರ ಕಲಿಗಾಲದ ವಿಶೇಷವೈಚಿತ್ರ್ಯವಾಗಿರುವುದು.

ಎಸ್. ಪಿ.

ಮೈಸೂರ್ ಸ್ಟಾರ್

ಸೆ ೧೯೧೪ ನೆಯ ಮೇ ತಾ॥ ೨೫ ನೆಯ ಸೋಮವಾರ.

ಕನ್ನಂಬಾಡಿಯ ಅಣೆಕಟ್ಟೆ.

ಈ ಕಟ್ಟೆಯನ್ನು ೧ನೆಯ ಪರಿಮಿತಿಯಾದ ೮೦ ಅಡಿ ಯೆತ್ತರಕ್ಕೆ ಕಟ್ಟುವಲ್ಲಿ ಇಂಡಿಯಾಗೌರ್ನ್ಮೆಂಟಿನ ಅಪ್ಪಣೆ ದೊರೆತಿರುವುದರಿಂದ ಅದು ನಿರ್ವಿಘ್ನವಾಗಿ ಸಾಗುತ್ತಿರುವಲ್ಲಿ, ಅದರ ಮೇಲೆ ೧೨೦ ಅಡಿ ಯೆತ್ತರಕ್ಕೆ ೨ನೆಯ ಪರಿಮಿತಿಯನ್ನು ಕಟ್ಟಲು ನಮ್ಮ ಗೌರ್ನ್ಮೆಂಟಿನವರು ಮಾಡಿದ ಪ್ರಯತ್ನವನ್ನು ಕುರಿತು ಮದ್ರಾಸು ಸರ್ಕಾರದವರು ಆಕ್ಷೇಪವನ್ನು ತೆಗೆದರು. ಅವರ ಆಕ್ಷೇಪವೇನೆಂದರೆ– "೧೮೯೨ನೆಯ ವರ್ಷದಲ್ಲಿ ಮದ್ರಾಸು-ಮೈಸೂರು ಸರ್ಕಾರದ ಮಧ್ಯದಲ್ಲಿ ಹುಟ್ಟಿರುವ ಒಪ್ಪಂದದ ನಿಯಮಗಳಿಗೆ ಈಗಿನ ಯತ್ನವು ವಿರುದ್ಧವಾಗಿದೆ. ಆ ಒಪ್ಪಂದದ ಪ್ರಕಾರ ತಮಗೆ ಸಿದ್ಧವಾಗಿರುವ "ಹಕ್ಕಿಗೆ" ಭಂಗವುಂಟಾಗುತ್ತದೆ. ತಂಜಾವೂರು ಜಿಲ್ಲೆಯೊಳಗಿನ ನೀರಾವರಿಯ ವ್ಯವಸಾಯಕ್ಕೆ ನೀರು ಸಾಲದೆ ಹೋಗುತ್ತದೆ. ಆ ನೀರಿಗೆ ಕೊರತೆ ಬರದಂತೆ ಕನ್ನಂಬಾಡಿಯ ಕಟ್ಟೆಯ ೨ನೆಯ ಪರಿಮಿತಿಯನ್ನು ನಿರ್ಮಿಸುವುದು ಸಾಧ್ಯವಲ್ಲ. ಕಾವೇರೀ ನದಿಗೆ ಸಂಬಂಧಪಟ್ಟಂತೆ ಯಾವುದಾದರೊಂದು ಮುಖ್ಯವಾದ ಏರ್ಪಾಟನ್ನು ಮೈಸೂರು ಗೌರ್ನ್ಮೆಂಟಿನವರು ಮಾಡಲು ಸಂಕಲ್ಪಿಸಿದರೆ, ಮೊದಲು ಆ ವಿಷಯವಾಗಿ ಮದ್ರಾಸು ಗೌರ್ನ್ಮೆಂಟಿನವರಿಗೆ ತಿಳಿಯಿಸಿ, ಅವರ ಅನುಮತಿಯನ್ನು ಪಡೆಯಬೇಕು" ಇತ್ಯಾದಿಯಾಗಿ ಆಕ್ಷೇಪಿಸಿದರು. ಇವರ ಜತೆಗೆ ಇನ್ನು ಕೆಲ ಆಕ್ಷೇಪಗಳನ್ನೂ ಸೇರಿಸಿ ತಂಜಾವೂರು ಜಿಲ್ಲೆಯ ಜನಗಳು ಗದ್ದಲವನ್ನೆಬ್ಬಿಸಿದರು. ಇಂಡಿಯಾಗೌರ್ನ್ಮೆಂಟಿನವರು, ಈ ವಿಷಯದಲ್ಲಿ ಮೈಸೂರು ಮದ್ರಾಸು ಸರ್ಕಾರದವರಿಬ್ಬರ ಹೇಳಿಕೆಗಳನ್ನೂ ಕೇಳಿ ತೀರ್ಪನ್ನು ಮಾಡುವುದಕ್ಕೋಸುಗ ಅಲಹಾಬಾದ್ ಹೈಕೋರ್ಟು ನ್ಯಾಯಾಧಿಪತಿಗಳಾದ ಸರ್ ಹೆನ್ರಿ ಗ್ರಿಫಿತರವರು ಅಧ್ಯಕ್ಷರಾಗಿಯೂ ನೀರಾವರಿ ಶಾಖೆಯ ಇನ್ಸ್‌ಪೆಕ್ಟರ್ ಜನರಲ್‌ರವರಾದ ಮಿ॥ ಎಂ. ನೆವಿಲ್‌ಸೋಲ್‌ರವರು ಅನುಸರಿರಾಗಿಯೂ ಇರುವ ಒಂದು ಪಂಚಾಯತಿಯ ಕೋರ್ಟನ್ನು ಏರ್ಪಡಿಸಿದರು. ಅವರು ಈ ವಿವಾದದಲ್ಲಿ–೧೮೯೨ನೆಯ ವರ್ಷದಲ್ಲಿ ಹುಟ್ಟಿರುವ ಒಪ್ಪಂದದ ಪ್ರಕಾರ ಮದ್ರಾಸು ಸರ್ಕಾರದವರಿಗೆ ಇರುವ "ಹಕ್ಕು"ಗಳಾವುವು? ಮದ್ರಾಸು ಸರ್ಕಾರದವರಿಗೆ ಸಲ್ಲಬೇಕಾಗಿರುವ ನೀರಿನ ಪರಿಮಿತಿಯೆಷ್ಟು? ಅಂಥ ಜಲಪರಿಮಿತಿಗೆ ಅಪೋಹವಿಲ್ಲದಂತೆ ಮೈಸೂರು ಸರ್ಕಾರದವರು ಯಾವ ರೀತಿಯಿಂದ ಈ ಜಲಾಶಯವನ್ನು ನಿರ್ಮಿಸಬೇಕು? ಈಗಿನ ಜಲಾಶಯನಿರ್ಮಿತಿಯಿಂದ ಮದ್ರಾಸಿನವರಿಗಿರತಕ್ಕ ಸ್ವಾತಸ್ಸಿದ್ಧವಾದ "ಹಕ್ಕಿಗೆ" ಭಂಗವುಂಟಾಗುವುದೇ ಎಂಬ ಮುಖ್ಯ ವಿಷಯಗಳನ್ನು ಪರಿಷ್ಕರಣೀಯವಾದ ಅಂಶಗಳನ್ನಾಗಿ ನಿರ್ಧರಿಸಿ, ಇದುವರೆಗೆ ತತ್ಸಂಬಂಧವಾದ ವಿಚಾರಣೆಗಳನ್ನೆಲ್ಲಾ ನಡೆಯಿಸಿ, ಮೊನ್ನೆ ತಾನೇ ಊಟಕಮಂಡಲದಲ್ಲಿ ತೀರ್ಪನ್ನು ಬರೆದಿರುವರು. ಆ ತೀರ್ಮಾನವು ಇನ್ನೂ ಸರ್ಕಾರದಿಂದ ಪ್ರಕಟಗೊಳಿಸಲ್ಪಟ್ಟಿಲ್ಲ.

ಆದರೆ, ಆ ತೀರ್ಮಾನವು ಮೈಸೂರಿನವರಿಗೆ ಅನುಕೂಲವಾಗಿರುವುದೆಂದು ಮದ್ರಾಸಿನವರೂ, ಮದ್ರಾಸಿನವರಿಗೆ ಅನುಕೂಲವಾಗಿರುವುದೆಂದು ಮೈಸೂರಿನವರೂ ಈಗ ಆಡಿಕೊಳ್ಳುತ್ತಿರುವರು. ೨ನೆಯ ಪರಿಮಿತಿಯನ್ನೂ ಕಟ್ಟಿಕೊಳ್ಳಲು ಪಂಚಾಯತರ ತೀರ್ಪು ಆಗಿರುವುದರಿಂದ ಮೈಸೂರಿನವರಿಗೆ ಅನುಕೂಲವಾಯಿತೆಂದು ಕೆಲವು ಪತ್ರಿಕೆಗಳು ಹೇಳುತ್ತಿರುವುವು. ೨ನೆಯ ಪರಿಮಿತಿಯನ್ನು ಕಟ್ಟಿಕೊಳ್ಳಲು ಈ ತೀರ್ಮಾನದಿಂದ ಅವಕಾಶವುಂಟಾಗಿದ್ದರೂ ಇರಬಹುದು. ಆದರೆ ಅದರೊಳಗೆ ಒಂದು ದೊಡ್ಡ ಸಿಕ್ಕಿರುವುದೆಂದು ಪ್ರಮಾದವಿರುವ ಕಾರಣ, ಅದು ಅಷ್ಟೇನೂ ಮೈಸೂರಿನವರ ಹರ್ಷಕ್ಕೆ ಅವಕಾಶವನ್ನು ಕೊಡುವುದಿಲ್ಲ. ಅದೇನೆಂದರೆ–೩॥ ಅಡಿ ಯುದ್ದಕ್ಕೆ ಕಡಿಮೆಯಿಲ್ಲದೆ ನದಿಯಲ್ಲಿ ನೀರು ಹರಿಯುವ ವಿಷಯದಲ್ಲಿ ಮೈಸೂರು ಸರ್ಕಾರದವರು ಹೊಣೆಯಾಗಿರಬೇಕೆಂಬುದು. ಈ ಕಟ್ಟು ಸಾಮಾನ್ಯವಾದುದಲ್ಲ. ಬೇಸಿಗೆ ಕಾಲದಲ್ಲಿ ತತ್ರಾಪಿ ಮಳೆಯು ಹಿಂಬಿದ ವರ್ಷ ಕಾವೇರಿಯಲ್ಲಿ ಎಷ್ಟು ಅಲ್ಪವಾಗಿ ನೀರು ಹರಿಯುತ್ತಿರುವುದೆಂಬುದನ್ನು ತಿಳಿದವರು, ಅಂಥ ದೊಡ್ಡ ಉತ್ತರವಾದಿತ್ವಕ್ಕೆ ಬದ್ಧರಾಗಿ ನಿಲ್ಲುವುದು ಹೇಗೆಂದು ಭಯಪಡದೆ ಇರುವುದಕ್ಕಾಗುವುದಿಲ್ಲ. ತಾತ್ಕಾಲದಲ್ಲಿ ಸಂಕಲ್ಪಿಸಿದ ಕಾರ್ಯವು ಹೇಗಾದರೂ ನಡೆದುಬಿಟ್ಟರಾಯಿತೆಂದು ದುಡಿಕಿ ಇದು ಮಾಡಲ್ಪಡತಕ್ಕ ಕೆಲಸವಾಗಿಲ್ಲ. ಸರ್ವದಾ ಅಂಥ ನದಿಯ ನೀರಿನ ನಿರ್ಬಂಧಕ್ಕೆ ಒಳಪಟ್ಟು ಮೈಸೂರು ಗೌರ್ನ್ಮೆಂಟಿನವರು ನಡೆಯುವುದೂ, ಪರಿಮಿತಿಯಷ್ಟು ನೀರು ನದಿಯಲ್ಲಿ ಹರಿಯದಿದ್ದರೆ ನಷ್ಟವನ್ನು ಕಟ್ಟಿಕೊಡುತ್ತೇವೆಂದು ಒಪ್ಪಿಕೊಂಡು ಹಾಗೆ ನಡೆಯಿಸಿಕೊಡುವುದೂ ಸಹ ನಿಶ್ಚಿಂತೆಯಾದ ಕೆಲಸವಲ್ಲ. ಅದುಕಾರಣ, ಆ ನಿರ್ಬಂಧವು ಈಗಿನ ತೀರ್ಪಿನಲ್ಲಿ ಕಂಡಿರುವುದಾದರೆ ಅದು ಮೈಸೂರಿಗೆ ಶುಭಕರವಲ್ಲವೆಂದು ತೋರುವುದು.

ಮುಖ್ಯವಾಗಿ ಈ ಜಲಾಶಯದ ಪ್ರಥಮಕಲ್ಪನೆಯ ಉದ್ದೇಶವು ವಿದ್ಯುಚ್ಛಕ್ತಿಯ ಉತ್ಪಾದನಕ್ಕೆ ತಕ್ಕಷ್ಟು ನೀರನ್ನು ಬೇಸಗೆಯಲ್ಲಿಯೂ ಒದಗಿಸಿಕೊಳ್ಳಬೇಕೆಂಬುದೇ ಆಗಿದ್ದಿತು. ಮೈಸೂರು ಸಂಸ್ಥಾನದಲ್ಲಿ ಕಾವೇರಿಯಿಂದ ವಿದ್ಯುಚ್ಛಕ್ತಿಯನ್ನು ಹುಟ್ಟಿಸುವಂತಾದ ಬಳಿಕ ಸರ್ಕಾರಕ್ಕೆ ಲಕ್ಷಾಂತರ ರೂ.ಗಳು ಪ್ರತಿ ವರ್ಷವೂ ಹುಟ್ಟುವಂತಾಯಿತೇ ಹೊರತು, ಪ್ರಜೆಗಳಿಗೆ ನೀರಾವರಿ ವ್ಯವಸಾಯಕ್ಕೆ ಅದರಿಂದ ಎಷ್ಟೋ ಹಾನಿತಟ್ಟಿತು. ಬೇಸಗೆಯಲ್ಲಿ ಕಾಲ್ವೆಗಳೊಳಗೆ ನೀರನ್ನು ಬಿಡಲು ಸಾಧ್ಯವಿಲ್ಲದೆ ಕಬ್ಬಿನ ಬೇಸಾಯವು ಕ್ಷೀಣವಾಗುತ್ತ ಬಂದಿತು. ಕಟ್ಟೆಗಳ ಮೇಲೆ ಮಳಲು ಚೀಲ ಮೊದಲಾದುವುಗಳನ್ನು ಹೇರಿ ನೀರನ್ನು ತಡೆಯುತ್ತ ಬಂದುದರಿಂದ ಕಟ್ಟೆಗಳು ಅಲ್ಲಲ್ಲಿ ಶಿಥಿಲವಾಗುತ್ತ ಬಂದುವು. ಇತ್ಯಾದಿ ಲೋಪಗಳನ್ನೆಲ್ಲಾ ಹೋಗಲಾಡಿಸಿಕೊಳ್ಳಲು ಸರ್ಕಾರದವರಿಗೆ ಅವಶ್ಯಕತೆಯು ಹೆಚ್ಚಿ ಈ ನೂತನ ಜಲಾಶಯದ ಕಲ್ಪನೆಗೆ ಪ್ರಯತ್ನಿಸಿದರು. ಆದರೇನು? ಒಂದನೆ ಪರಿಮಿತಿಯ ಕಟ್ಟೆಯಿಂದ ವಿದ್ಯುಚ್ಛಕ್ತಿಯ ಉತ್ಪಾದನಕ್ಕೆ ಸಹಾಯವಾಗಬಹುದು. ಮೈಸೂರು ಡಿಸ್ಟ್ರಿಕ್ಟಿನ ಹಳೆಯ ಕಾಲ್ವೆಗಳಲ್ಲಿ ನೀರನ್ನು ಪೂರ್ವದಂತೆ ಒದಗಿಸಲೂ ಸಾಧ್ಯವಾಗಬಹುದು. ಆದರೆ ೨ನೆ ಪರಿಮಿತಿಯ ಕಾರ್ಯವೂ ಸಾಗಿದ್ದರೆ ವಿಸ್ತಾರವಾದ ಹೊಸ ಕಾಲ್ವೆಗಳನ್ನು ತೆಗೆದು ನೂತನವಾಗಿ ಕೆಲ ತಾಲ್ಲೂಕುಗಳಲ್ಲಿ ನೀರಾವರಿಯನ್ನು ಹೆಚ್ಚಿಸಲು ಅವಕಾಶವಾಗುತ್ತಿದ್ದಿತು. ಆಗ್ಗೆ ಸರ್ಕಾರದ ಮತ್ತೂ ಪ್ರಜೆಗಳ ಹಿತಗಳೆರಡೂ ಸಾಧಿಸಲ್ಪಡುತ್ತಿದ್ದುವು. ಈಗಿನ ತೀರ್ಪಿನ ಪ್ರಕಾರ ೩॥ ಅಡಿಯ ನೀರನ್ನು ನದಿಯಲ್ಲಿ ತೋರಿಸಬೇಕಾದ ನಿರ್ಬಂಧಕ್ಕೆ ನಮ್ಮ ಸರ್ಕಾರದವರು ಸದಾ ಬದ್ಧರಾಗಿರುವುದಾದರೆ ನದಿಯಲ್ಲಿ ನೀರು ಕಡಿಮೆಯಾದ ವರ್ಷದಲ್ಲಿ ನಮ್ಮ ದೇಶದ ಕಾಲ್ವೆಗಳನ್ನೆಲ್ಲಾ ಮುಚ್ಚಿ ಕಣಿವೆ ಕೆಳಗಿನವರ ಹೊಟ್ಟೆಯನ್ನು ತುಂಬಿಸುವ ಹೊತ್ತು ಬಂದೇಬರಬಹುದು. ಆಗ್ಗೆ ನಮ್ಮ ದೇಶದ ಬೇಸಾಯದ ಅವಸ್ಥೆಯು ಅತ್ಯಂತ ಪರಿಶೋಚನೀಯವಾಗುವುದು. ಅದುಕಾರಣ, ನಿರ್ಬಂಧಕ್ಕೆ ಒಳಪಡಿಸುವ ತೀರ್ಪು ಮೈಸೂರು ದೇಶದವರಿಗೆ ಎಂದಿಗೂ ಕ್ಷೇಮಕರವಲ್ಲವೆಂದೇ ಯೋಚಿಸಬೇಕು. ಕೋಟ್ಯಂತರ ದ್ರವ್ಯವ್ಯಯದಿಂದ ಈ ಕಟ್ಟೆಯನ್ನು ನಿರ್ಮಿಸಿ, ತಲೆಯಮೇಲೆ ನಿರ್ಬಂಧರೂಪವಾದ ಚಕ್ರಾಯುಧವನ್ನು ನೇತುಗಟ್ಟಿಸಿಕೊಂಡಿರುವುದಕ್ಕಿಂತಲೂ ಅದೇ ಕೋಟ್ಯಂತರ ರೂ.ಗಳನ್ನು ಮೈಸೂರು ಸಂಸ್ಥಾನದ ಎಲ್ಲಭಾಗಗಳಲ್ಲೂ ವ್ಯಾಪಿಸಿರುವ ಹಳೆಯ ಕೆರೆ ಕಟ್ಟೆ ಮೊದಲಾದ ಜಲಾಶಯಗಳನ್ನೆಲ್ಲಾ ಜೀರ್ಣೋದ್ಧಾರಮಾಡಿಸಿದರೆ, ನೀರಾವರಿಯ ವ್ಯವಸಾಯವು ಕಾವೇರೀತೀರದವರ ಭಾಗಕ್ಕೆ ಮಾತ್ರವೇ ಇರದೆ ದೇಶದ ಸಕಲ ಪ್ರಜೆಗಳಿಗೂ ಲಭಿಸಿ, ನೀರಾವರಿಯ ವ್ಯವಸಾಯವು ಅಭಿವೃದ್ಧಿಗೊಂಡಂತಾಗುವುದು. ಅದುಕಾರಣ, ನಮ್ಮ ಶ್ರೀಮನ್ಮಹಾರಾಜರವರೂ ಅವರ ಸರಕಾರದವರೂ ಸಹ ದೀರ್ಘವಾದ ಪರ್ಯಾಲೋಚನೆಯಿಂದ ಸದ್ಯದ ಸಮಸ್ಯೆಯನ್ನು ಇತ್ಯರ್ಥಮಾಡದೆ ಇರಲಾರರೆಂದು ನಂಬುತ್ತೇವೆ.

ಬಿರುಗಾಳಿ ಮಳೆಗಳ ಹಾವಳಿ.

ಈ ವರ್ಷದಲ್ಲಿ ಕಳೆದ ತಿಂಗಳಿಂದ ಭರತಖಂಡದೊಳಗೆ ಬಿರುಗಾಳಿ ಸುಳಿಗಾಳಿಗಳು ಹಲವು ಕಡೆ ನಾನಾ ಅನರ್ಥವನ್ನುಂಟುಮಾಡಿವೆ. ಪೂರ್ವದಿಕ್ಕಿನಲ್ಲಿ ಎಂದರೆ ಬರ್ಮಾದಲ್ಲೂ ಬಂಗಾಳ ಸಮುದ್ರ ತೀರದಲ್ಲೂ ಮೊದಲು ಬಿರುಗಾಳಿಯು ಬೀಸಿ ಅನರ್ಥವನ್ನುಂಟುಮಾಡಿತು. ಈ ಕಾರಣ ಬರ್ಮಾಕ್ಕೂ ಭರತಖಂಡಕ್ಕೂ ಮಧ್ಯೆ ಇರುವ ತಂತೀವಾರ್ತೆಯ ಸಾಧನಗಳು ಕಿತ್ತು ಹೋಗಿ ಇನ್ನೂ ಸರಿಮಾಡಲ್ಪಡುತ್ತಿವೆ. ಅಲ್ಲಿಗೆ ಆರ್ಡಿನರಿಟೆಲಿಗ್ರಾಮುಗಳನ್ನು ತೆಗೆದುಕೊಳ್ಳುವುದನ್ನೇ ನಿಲ್ಲಿಸಿಬಿಟ್ಟಿದ್ದಾರೆ. ಕಲ್ಕತ್ತಾ ಪ್ರಾಂತದಲ್ಲಿ ಮನೆಗಳ ಛಾವಣಿಗಳು ಹಾರಿಹೋಗಿ ಪ್ರಾಣನಷ್ಟವು ಆಗಿ ಪೈರುಪಚ್ಚೆಗಳೂ ಹಾಳಾದುವು. ದೋಣಿಗಳು ಮಗುಚಿ ಅದರಲ್ಲಿದ್ದ ವಸ್ತುಗಳೂ ಪ್ರಯಾಣಿಕರೂ ಸಹ ನೀರಿನ ಪಾಲಾಗಿರುವರು. ಲೋಹಮಾರ್ಗಗಳಲ್ಲಿ ತಂತಿಕಂಬಗಳು ಕಿತ್ತುರುಳಿ ಬಂಡಿಗಳು ಪಟ್ಟಿಯಿಂದ ಜಾರಿ, ಹೋಗಿಬರುವ ಬಂಡಿಗಳ ಕಾಲದಲ್ಲಿ ಸಾವಕಾಶವಾಗುವುದಕ್ಕವಕಾಶವಾಯಿತು. ಮಾಣಿಕ್‌ಗಂಜಿನ ಹತ್ತಿರ ೨೦ ಮೈಲಿಗಳ ದೂರದವರೆಗೂ ಸುಳಿಗಾಳಿಯು ಬಲು ವೇಗವಾಗಿ ಬೀಸಿ ಹಲವು ಮರಗಳನ್ನು ಉರುಳಿಸಿಬಿಟ್ಟಿರುವುದು. ಹಲವರು ಭೂಮಿಗೆ ಅಪ್ಪಳಿಸಲ್ಪಟ್ಟು ಬಿದ್ದು ಗಾಯಗೊಂಡರು. ಢಾಕ್ಕಾಪಟ್ಟಣದಲ್ಲೂ ಅದರ ಸುತ್ತಲೂ ಬಿರುಗಾಳಿ ಮಳೆಯಿಂದ ಮನೆಗಳು ಕುಸಿದು ಬಿದ್ದುವು. ೩-೪ ಮಂದಿಗಳು ಸತ್ತರು. ಅಸ್ಸಾಮಿನಲ್ಲೂ ಪೂರ್ವಬಂಗಾಳದಲ್ಲೂ ಅತಿ ವೃಷ್ಟಿಯಿಂದ ಬಹಳ ನಷ್ಟವಾಗಿರುವುದು. ಗಂಜಾಂ ಜಿಲ್ಲೆಯ ನೌಪಡಾವಿಲ್ಲಾಣದಲ್ಲಿ ಹೊಗೆಬಂಡಿಗಳು ಪಟ್ಟಿಯಮೇಲೆ ಬಹು ದೂರ ಕೊಚ್ಚಿ ಹೋದುವು. ಮಾರ್ಗಗಳು ಅಲ್ಲಲ್ಲಿ ಕೆಟ್ಟು ಸಂಚಾರಕ್ಕೆ ಅಡಚಣೆಯಾಗಿರುವುದು. ಈಸ್ಟಿಂಡಿಯಾ ರೇಲ್ವೆಯಲ್ಲಿ ಬಿರುಗಾಳಿ ಮಳೆಯಿಂದ ಅಜಾಮುಗಂಜಿ, ಕಾರ್ವಾರ್ ಮಾರ್ಗದಲ್ಲಿ ಲೋಹಮಾರ್ಗವು ಸ್ವಲ್ಪ ದೂರ ಕೊಚ್ಚಿ ಹೋಗಿ ೨ ದಿನಗಳವರೆಗೆ ಬಂಡಿಗಳ ತಿರುಗಾಟವೇ ನಿಂತಿತು. ಬಂಗಾಳದ ಚಿತ್ತಗಂಗಾ-ಚಿರಪುಂಜಿಗಳ ಸುತ್ತ ೧-೨ ದಿನಗಳೊಳಗೆ ೧೦-೨೦ ಅಂಗುಲದಷ್ಟು ಮಳೆಯಾಗಿರುವುದು. ಕಲ್ಕತ್ತಾ ಮದ್ರಾಸುಗಳ ಮಧ್ಯದಲ್ಲಿ ಹೊಗೆ ಬಂಡಿಗಳ ತಿರುಗಾಟಕ್ಕೆ ತೊಂದರೆಯಾಗಿ, ಹಗಲಿನ ವೇಳೆ ಜನರು ತಿರುಗಾಡುವುದೊಳ್ಳೆಯದೆಂದು ಜನರು ಎಚ್ಚರಿಸಲ್ಪಟ್ಟಿರುವರು. ಪಶ್ಚಿಮದ ಕರಾಚಿಯ ರೇವಿನಲ್ಲೂ ಕೂಡ ಬಿರುಗಾಳಿ ಬೀಸುವುದೆಂಬ ಚಿಹ್ನೆಯು ಮೊದಲೇ ತಿಳಿದಿದ್ದುದರಿಂದ ತೀರದಲ್ಲಿರತಕ್ಕವರು ಎಚ್ಚರಿಕೆಯಿಂದ ಸಾಮಾನುಗಳನ್ನೂ ದೋಣಿಗಳನ್ನೂ ಭದ್ರಪಡಿಸಿದುದರಿಂದ ವಿಶೇಷ ನಷ್ಟಕ್ಕವಕಾಶವಾಗಲಿಲ್ಲ. ನಮ್ಮ ಮೈಸೂರ ದೇಶದಲ್ಲೂ ಈ ಬಿರುಗಾಳಿಯ ಹಾವಳಿಯು ತಪ್ಪಲಿಲ್ಲ. ಬೆಂಗಳೂರಿನಲ್ಲಿ ಮೊನ್ನೆಯ ವಾರದಲ್ಲಿ ಮಹಾರಭಸದಿಂದ ಗಾಳಿಯು ಬೀಸಿ ಮಳೆ ಸುರಿದು ಕೆಲಮನೆಗಳ ಹೊದಿಕೆಗಳು ಹಾರಾಡಿ ಮರಗಳು ಮುರಿದುಬಿದ್ದು ವಿದ್ಯುಚ್ಛಕ್ತಿಯ ಕಂಬಗಳು ಉರುಳಿ ೧-೨ ಪ್ರಾಣಹಾನಿಯೂ ಆಗಿರುವುದು. ಮೈಸೂರಿನಲ್ಲೂ ಬಿರುಗಾಳಿಯು ಬೀಸಿ ಕೆಲ ಮರಗಳನ್ನುರುಳಿಸಿರುವುದು. ವಿಶೇಷ ಹಾನಿಯೇನೂ ಇಲ್ಲ. ಸುತ್ತಮುತ್ತಣ ತಾಲ್ಲೂಕುಗಳಲ್ಲೂ ಇಂಥ ಬಿರುಗಾಳಿ ಬೀಸಿ ಮರಗಳು ಬುಡಸಹಿತ ಉರುಳಿರುವುವೆಂದು ಸುದ್ದಿ ಬಂದಿದೆ.

ಒಳದೇಶದ ವೃತ್ತಾಂತವು.

ಕೋಲಾರದ ಮುನಸೀಫರಾದ ಮಿ॥ ಎನ್. ನರಸಿಂಹಯ್ಯಂಗಾರರು ಈ ತಾ॥ ೨೫ ರಿಂದ ೩ ತಿಂಗಳ ಖಾಯಿಲೆ ರಜವನ್ನು ತೆಗೆದುಕೊಂಡಿರುವರು.

ಈ ಪತ್ರಿಕೆಯಲ್ಲಿ ಗರ್ಭಿತವಾಗಿರುವ ಹರಪನಹಳ್ಳಿಯ ಲಾರ್ಡ್‌ಹಾರ್ಡಿಂಜ್‌ಫ್ರೀಡಿಸ್ಪೆನ್ಸರಿಯ ಪ್ರಕಟನಪತ್ರಿಕೆಯನ್ನು ವಾಚಕರು ಗಮನಿಸುವರಾಗಲಿ.

ಮೈಸೂರ ಚೀಫ್ ಕೋರ್ಟಿನಲ್ಲೊಬ್ಬ ಜಡ್ಜಿಯವರಾಗಿರುವ ಮಿ॥ ಇ. ಎಚ್. ವಾಲಿಸ್‌ರವರು ಮದ್ರಾಸು ಸರ್ಕಾರದಲ್ಲಿ ಡಿಸ್ಟ್ರಿಕ್ಟ್ ಜಡ್ಜಿಯಾಗಿ ಹೋಗುವರೆಂದು ವರ್ತಮಾನವಿದೆ.

ಸರ್ಕಾರದಿಂದ ಸಹಾಯದ್ರವ್ಯವನ್ನು ಹೊಂದುತಲಿರುವ ಸ್ಕೂಲಿನಲ್ಲಿ ೧೦ ರೂ. ನಿಂದ ಮೇಲ್ಪಟ್ಟು ತಿಂಗಳ ಸಂಬಳವುಳ್ಳ ಉಪಾಧ್ಯಾಯರುಗಳು ಜೀವವಿಮೆಮಾಡಿಸಬಹುದೆಂದು ಸರ್ಕಾರದಪ್ಪಣೆಯಾಗಿರುವುದು.

ಬೇರೆ ಉದ್ಯೋಗದ ಮೇಲಿದ್ದ ಮಿ॥ ಕರ್ಪೂರ ಶ್ರೀನಿವಾಸರಾಯರು ಕಳೆದ ತಾ॥ ೧೮ ರಲ್ಲಿ ಚೀಫ್ ಇಂಜನಿಯರುದ್ಯೋಗದಮೇಲೆ ಬಂದುದರಿಂದ ಮಿ॥ ಕೆ. ಕೃಷ್ಣಯ್ಯಂಗಾರರು ಡೆಪ್ಯುಟಿ ಚೀಫ್ ಇಂಜನಿಯರುದ್ಯೋಗಕ್ಕೆ ಬಂದರು.

ರಾಜಧಾನಿಯಲ್ಲಿ ಶುಕ್ರವಾರ ಮತ್ತೂ ಶನಿವಾರ ಸಾಯಂಕಾಲಗಳಲ್ಲಿ ಕೊಂಚ ಮಳೆಯಾಯಿತು. ಸಂಸ್ಥಾನದ ಹಲವುಕಡೆಗಳಲ್ಲಿ ಮಳೆಯು ಚೆನ್ನಾಗಿ ಕೆರೆಕಟ್ಟೆಗಳಿಗೆ ೩-೪ ತಿಂಗಳ ನೀರು ಬಂದಿರುವುದಾಗಿ ತಿಳಿಯಬರುತ್ತದೆ.

ಬೆಂಗಳೂರ ಸಿಟಿ ರೈಲ್ವೆಸ್ಟೇಷನ್ನಿನಲ್ಲಿ ಕಳುವಾಗಿದ್ದ ಜವಳಿಯಲ್ಲಿ ೯೯ ಸೀರೆಗಳನ್ನು ಜವಳಿವ್ಯಾಪಾರಿ ಗೋಪಾಲಸೆಟ್ಟಿಯೆಂಬಾತನು ತೆಗೆದುಕೊಂಡಿದ್ದುದಕ್ಕಾಗಿ ಸಿಟಿಮ್ಯಾಜಿಸ್ಟ್ರೇಟರು ಅವನಿಗೆ ೫೦ ರೂ. ಅರ್ಥದಂಡವನ್ನು ತಪ್ಪಿದಲ್ಲಿ ೧ ತಿಂಗಳ ಕಠಿಣಕಾರಾಗೃಹವಾಸದ ಶಿಕ್ಷೆಯನ್ನು ವಿಧಿಸಿದರು.

ಬೆಂಗಳೂರ ಸೆಂಟ್ರಲ್ ಜೈಲಿನಲ್ಲಿ ೬ ತಿಂಗಳ ಕಾರಾಗೃಹವಾಸಶಿಕ್ಷೆಯನ್ನನುಭವಿಸುತ್ತಿದ್ದ ಮದಾರ್ ಎಂಬುವನು ಕಳೆದ ತಾ॥ ೧೫ ರಲ್ಲಿ ಒಂದು ಬಂಗಲೆಯಬಳಿ ಕೆಲಸವನ್ನು ಮಾಡುತ್ತಿರುವಾಗ್ಗೆ ತಪ್ಪಿಸಿಕೊಂಡೋಡಿಹೋಗಿದ್ದ ತಪ್ಪಿತಕ್ಕಾಗಿ ಸಿಟಿಮ್ಯಾಜಿಸ್ಟ್ರೇಟರು ಅವನಿಗೆ ಒಂದುತಿಂಗಳ ಕಠಿಣ ಕಾರಾಗೃಹವಾಸದ ಶಿಕ್ಷೆಯನ್ನು ವಿಧಿಸಿದರು.

ಬೆಂಗಳೂರು ದಂಡಿನಲ್ಲಿ ದೊಡ್ಡ ವರ್ತಕರೂ ಮದ್ರಾಸ್ ಲೆಜಿಸ್ಲೇಟೀವ್ ಕೌನ್ಸಿಲಿನ ಮೆಂಬರೂ ಆಗಿರುವ ಮಿ॥ ಹಾಜಿ ಇಸ್ಮಾಯಿಲ್ ಸೇಟ್‌ರವರು ಯೂರೋಪು ಮತ್ತೂ ಅಮೇರಿಕಾರಾಜ್ಯಗಳಲ್ಲಿ ಸಂಚರಿಸಿಕೊಂಡು ಬರಲು ಈ ತಿಂಗಳ ಕಡೆಯಲ್ಲಿ ಪ್ರಯಾಣಮಾಡುವರು. ಇವರು ತಮ್ಮ ಸಂಚಾರವನ್ನು ಮುಗಿಸಿಕೊಂಡು ಬರುವ ನವಂಬರ್ ತಿಂಗಳಲ್ಲಿ ಹಿಂದಿರುಗುವಾಗ್ಗೆ ಮಹಮ್ಮದೀಯರಿಗೆ ಪವಿತ್ರಸ್ಥಾನಗಳಾದ ಮೆಕ್ಕಾಮದೀನಾಗಳಿಗೆ ಹೋಗಿ ಬರುವರು.

ಮೈಸೂರ ಅರಮನೆಯ ಶಿಖರದಮೇಲೆ ಕಳಶವು ಕಳೆದ ತಾ॥ ೨೧ ರಲ್ಲಿ ಸ್ಥಾಪಿಸಲ್ಪಟ್ಟಿತು. ಈ ಕಳಶಪ್ರತಿಷ್ಠೆಯನ್ನು ವಿಧ್ಯುಕ್ತವಾಗಿ ಮಾಡಲು ಶ್ರೀ ಪರಕಾಲಸ್ವಾಮಿಗಳು ಬರಬೇಕೆಂದೂ, ಒಂದೊಂದು ದಿಕ್ಕಿಗೆ ೧೦೦೦ ರೂ. ನಂತೆ ಅಷ್ಟದಿಕ್ಪಾಲಕರಿಗೂ ೮೦೦೦ ರೂ. ಗಳನ್ನು ಮತಗಲೂ ಹೋತಕಮಹಾದಾನ ಮಹಾಸಂತರ್ಪಣೆಗಳನ್ನು ಮಾತ್ರ ೨೫ ಸಾವಿರ ರೂ ಗಳ ವ್ಯಯವಾಗಬೇಕೆಂದು ಅರಮನೆಯ ಪುರೋಹಿತರುಗಳು ಪಟ್ಟಿಯನ್ನು ಹಾಕಿಕೊಟ್ಟಿದ್ದರೆಂದು ಕೇಳುತ್ತೇವೆ. ಆದರೆ ಈ ಆಡಂಬರವೊಂದೂ ನಡೆದಂತೆ ಕಾಣಲಿಲ್ಲ.

ಬೆಂಗಳೂರ ದಂಡಿನ ಪ್ರದೇಶದ ಉತ್ಪನ್ನದಲ್ಲಿ ವೆಚ್ಚವು ಹೋಗುತ ಉಳಿಯುವ ಹಣವು ಮೈಸೂರು ಸರ್ಕಾರಕ್ಕೆ ಕೊಡಲ್ಪಡಬೇಕೆಂಬ ಒಪ್ಪಂದದ ಮೇಲೆ ಆಳೆ ವರ್ಷದವರೆಗೆ ಬರಬೇಕಾಗಿದ್ದ ಹಣದಲ್ಲಿ ೮೦ ಲಕ್ಷ ರೂ. ಮಾತ್ರ ಕೊಡಲ್ಪಟ್ಟಿತಷ್ಟೆ. ಆದರೆ ಈ ರೀತಿಯಾಗಿ ಹಣವುಳಿದರೆ ಮೈಸೂರಿನವರಿಗೆ ಕೊಡಬೇಕಾಗುವುದೆಂಬ ಅಭಿಪ್ರಾಯದಿಂದಲೋ ಮತ್ತಾವ ಕಾರಣದಿಂದಲೋ ಅಲ್ಲಿಯ ಸರ್ಕಾರದವರು ೧೯೧೩ನೆಯ ಮಾರ್ಚಿ ತಾ॥ ೩೧ ರ ವರೆಗೆ ಕಡೆಯಾಗುವ ಒಂದು ವರ್ಷದಲ್ಲಿ ೧೧೧೩೮೦೧ ರೂ. ವ್ಯಯವಾಗಿರುವುದೆಂದು ಲೆಕ್ಕವನ್ನು ಕಾಣಿಸಿರುತ್ತಾರೆ. ಇದರ ಹಿಂದಣವರ್ಷದಲ್ಲಿ ೫೩೩೩೩೦ ರೂ. ಮಾತ್ರ ವ್ಯಯವಾಗಿದ್ದಿತು.

ಸಿವಿಲ್ ಕೋರ್ಟುಗಳಲ್ಲಿ ಸಾಕ್ಷಿಗಳ ಹೇಳಿಕೆಯನ್ನು ಮುನಸೀಫರವರು ಕನ್ನಡದಲ್ಲೂ ಜಡ್ಜಿಯವರು ಇಂಗ್ಲೀಷಿನಲ್ಲೂ ತೆಗೆದುಕೊಳ್ಳಲ್ಪಡುತ್ತಿದ್ದುದು ಈಗ ತಪ್ಪಿಸಲ್ಪಟ್ಟು ಹೇಳಿಕೆಗಳೆಲ್ಲವನ್ನೂ ಜಡ್ಜಿಯವರೇ ಇಂಗ್ಲೀಷಿನಲ್ಲಿ ತೆಗೆದುಕೊಳ್ಳುವುದರಿಂದ ಬಹಳ ತೊಂದರೆಯಾಗಿರುವ ಪ್ರಯುಕ್ತ ಪೂರ್ವಪದ್ಧತಿಯನ್ನೇ ಆಚರಣೆಗೆ ತರಬೇಕೆಂದು ಪ್ರಜಾಪ್ರತಿನಿಧಿಸಭೆಯಲ್ಲಿ ಪ್ರಾರ್ಥಿಸಲ್ಪಟ್ಟಿದ್ದುದರ ಮೇಲೆ ಸರ್ಕಾರದವರು ಈ ರೀತಿಯಾಗಿ ಕನ್ನಡದಲ್ಲೂ ಇಂಗ್ಲೀಷಿನಲ್ಲೂ ತೆಗೆದುಕೊಳ್ಳುವುದರಿಂದ ಬಹಳ ಉಪಯೋಗವುಂಟೆಂದು ಪರ್ಯಾಲೋಚಿಸಿ ಮುನಸೀಫ್ ಕೋರ್ಟುಗಳಲ್ಲಿ ಪೂರ್ವದಂತೆ ೨ ಭಾಷೆಯಲ್ಲೂ ಸಾಕ್ಷಿಯ ಹೇಳಿಕೆಯು ತೆಗೆದುಕೊಳ್ಳಲ್ಪಡತಕ್ಕದೆಂದು ಅಪ್ಪಣೆಮಾಡಿರುವರು.

ಬಾಗೆಪಲ್ಲಿಯಲ್ಲಿ ಈಗ್ಗೆ ೪ ವರ್ಷಗಳ ಹಿಂದೆ ಒಂದು ಪಂಚಮರ ಸ್ಕೂಲು ಸರ್ಕಾರದವರಿಂದ ಸ್ಥಾಪಿಸಲ್ಪಟ್ಟಿತು. ಈಗ ಈ ಸ್ಕೂಲಿನಲ್ಲಿ ಹೊಲೆಯರ ಮತ್ತೂ ಮಾದಿಗರ ಬಾಲಕಬಾಲಿಕೆಯರು ಸೇರಿ ಒಟ್ಟು ೧೬ ಜನರು ಓದುತ್ತಲಿರುವರು. ಇವರಲ್ಲಿ ಇಬ್ಬರು ಹುಡುಗರೂ ಒಬ್ಬ ಹುಡುಗಿಯೂ ಈ ಸಲ ನಡೆದ ಮೈಸೂರು ಲೋವರ್ ಸೆಕೆಂಡರಿ ಪರೀಕ್ಷೆಗೆ ಹೋಗಿರುತ್ತಾರಲ್ಲದೆ ಪರೀಕ್ಷೆಯಲ್ಲಿ ಉತ್ತೀರ್ಣರಾಗುತ್ತಾರೆಂದು ನಿರೀಕ್ಷಿಸಲ್ಪಟ್ಟಿದ್ದಾರೆ. ಈ ಹೊಲೆಯರ ಹುಡುಗಿಯು ಬಹು ಬುದ್ಧಿವಂತಳಾಗಿರುತ್ತಾಳೆ. ಮತ್ತೂ ಲೋವರ್ ಸೆಕೆಂಡರಿ ಪರೀಕ್ಷೆಯನ್ನು ಕೊಟ್ಟು ಚಿಕ್ಕಬಳ್ಳಾಪುರದ ಪಂಚಮರ ಸ್ಕೂಲಿನಲ್ಲಿ ಉಪಾಧ್ಯಾಯನಾಗಿರುವ ಪಂಚಮ ಯುವಕನನ್ನು ವಿವಾಹಮಾಡಿಕೊಳ್ಳತಕ್ಕವಳಾಗಿರುತ್ತಾಳೆ.

ಹಿಂದೆ ಸೆಷನ್ಸ್ ಜಡ್ಜರಾಗಿದ್ದ ಮಿ॥ ತಿರುಮಲಾಚಾರರ ಮಕ್ಕಳಾದ ಅಡ್ವೋಕೇಟ್ ಮಿ॥ ರಾಘವಾಚಾರ್ ಬಿ. ಎ., ಬಿ. ಎಲ್., ರವರು ಸಾಗರದ ಪ್ರಬೇಷನರಿ ಮುನಸೀಫರಾಗಿಯೂ, ಬೆಂಗಳೂರು ಡಿಸ್ಟ್ರಿಕ್ಟ್ ಕೋರ್ಟಿನ ಶಿರಸ್ತೇದಾರರಾದ ಮಿ॥ ರಾಮಸ್ವಾಮಯ್ಯರ್, ಬಿ. ಎ., ಬಿ.ಎಲ್., ರವರು ಕೋಲಾರದ ಆಕ್ಟಿಂಗ್ ಮುನಸೀಫರಾಗಿಯೂ, ನಿಯಮಿಸಲ್ಪಟ್ಟಿರುವರು. ಮುನಸೀಫರುಗಳಾದ ಮಿ॥ ಲಕ್ಷ್ಮೀನರಸಿಂಹಯ್ಯಂಗಾರರು ಚಿಕ್ಕಮಗಳೂರಿನಿಂದ ಚಿತ್ರದುರ್ಗಕ್ಕೂ, ಮಿ॥ ಅಳಸಿಂಗರಾಚಾರರು ಸಾಗರದಿಂದ ಚಿಕ್ಕಮಗಳೂರಿಗೂ ಮಿ॥ ಶ್ರೀಕಂಠೇಶ್ವರಗೌಡರು ಶಿವಮೊಗ್ಗೆಯಿಂದ ಮಧುಗಿರಿಗೂ, ಮಿ॥ ಎಚ್. ಎಂ. ಕೃಷ್ಣಸ್ವಾಮಿಯವರು ಮಧುಗಿರಿಯಿಂದ ಶಿವಮೊಗ್ಗೆಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಅರಮನೆಯ ಗಜಶಾಲೆಯಲ್ಲಿ ಖಾಸಾ ಅಂಬಾರಿಯಾನೆಯನ್ನೂ ಮತ್ತೆ ೩-೪ ಆನೆಗಳನ್ನೂ ಮಾತ್ರ ಇಟ್ಟುಕೊಂಡು ಉಳಿದಾನೆಗಳನ್ನು ಅರಮನೆಯ ಹುಲ್ಲುಗಾವಲಿಗೆ ಕಳುಹಿಸಿದ್ದು ದಸರಾ ವರ್ಧಂತಿ ಮೊದಲಾದುತ್ಸವ ಕಾಲಗಳಲ್ಲಿ ರಾಜಧಾನಿಗೆ ತರಿಸಿಕೊಳ್ಳುವಂತೆಯೂ, ಎತ್ತಿನ ಮತ್ತೂ ಹಸುಗಳ ಕರುವಿನ ಹಟ್ಟಿಗಳನ್ನು ಒಟ್ಟುಗೂಡಿಸಿ ಬಿಡದಿಯ ಮೊಕ್ತೇಸರರಾದ ಮಿ॥ ಮುದ್ದುರಾಜ ಅರಸಿನವರನ್ನು ಅದರ ಭಕ್ಷಿಯವರನ್ನಾಗಿಯೂ, ಖಾಸಾ ಬಿಡದಿ-ಚಾಮುಂಡಿತೊಟ್ಟಿ-ಮತ್ತೂ ಜನಾನಾ ಸಮ್ಮುಖದ ಇಲಾಖೆಗಳಲ್ಲಿನ ದೊಡ್ಡ ಮೊಕ್ತೇಸರುಗಳ ಆಡಳಿತದಿಂದ ತಪ್ಪಿಸಿ ಸಾಮಾನ್ಯ ಉದ್ಯೋಗಸ್ಥರನ್ನು ನಿಯಮಿಸಿ, ಭಕ್ಷಿ ಮಿ॥ ಚಿಕ್ಕಲಿಂಗಪ್ಪಾಜಿಯವರ ಮೇಲ್ವಿಚಾರಣೆಗೆ ಅವನ್ನು ಒಳಪಡಿಸುವುದಾಗಿಯೂ, ಈಗ ಬಿಡದಿಯಲ್ಲಿ ಖಾಸಾ ಮತ್ತೂ ತೊಂಬಾರದಡಿಗೆಯು ಒಂದೇ ಕಡೆಯಾಗುತ್ತಿದ್ದುದನ್ನು ತಪ್ಪಿಸಿ ಬಿಡದಿಯಲ್ಲಿ ಖಾಸಾ ಅಡಿಗೆ ಮಾತ್ರವನ್ನಿಟ್ಟುಕೊಂಡು, ತೊಂಬಾರದಡಿಗೆಯನ್ನು ಬೇರೆ ಕಡೆ ನಡೆಯುವಂತೇರ್ಪಡಿಸುವುದಾಗಿಯೂ, ಜಿಲ್ಲೋಕಚೇರಿಯ ಕಮ್ಯಾಂಡೆಂಟರುದ್ಯೋಗಕ್ಕೆ ಒಬ್ಬ ಅರಸು ಮಕ್ಕಳು ೩೦ ರೂ. ಸಂಬಳದ ಮೇಲೆ ನಿಯಮಿಸಲ್ಪಡುವುದಾಗಿಯೂ ತಿಳಿಯುತ್ತೇವೆ.

ಬೆಂಗಳೂರು ಅಡ್ವೋಕೇಟ್ ಮಿ॥ ಡಿ. ವೆಂಕಟರಾಮಯ್ಯನವರ ತಮ್ಮಂದಿರಾದ ಮಿ॥ ಗರಿಯೆಂಬುವರು ಸೀಮೆಗೆ ಹೋಗಿ ಎಫ್. ಆರ್. ಸಿ. ಎಸ್. ಮೊದಲಾದ ಪರೀಕ್ಷೆಗಳನ್ನು ಕೊಟ್ಟು ಬಂದಿರುವರು. ಇವರಂತೆಯೇ ಪರೀಕ್ಷಾಯೋಗ್ಯತೆಯನ್ನುಳ್ಳ ಮಿ॥ ಆಚಾರ್ಯ, ಮಿ॥ ಕರ್ಮ, ಮಿ॥ ಎಸ್. ಸುಬ್ಬರಾವ್ ಮೊದಲಾದವರು ಪ್ರಥಮತಃ ೨೫೦ ರೂ. ಸಂಬಳದ ಮೇಲೆ ಸರ್ಕಾರಿಯ ಕೆಲಸಕ್ಕೆ ತೆಗೆದುಕೊಳ್ಳಲ್ಪಟ್ಟಿರುವಾಗ್ಗೆ ಮಿ॥ ಗರಿಯವರು ಈಗ ೪೦೦ ರೂ. ಸಂಬಳದ ಮೇಲೆ ಉದ್ಯೋಗಕ್ಕೆ ತೆಗೆದುಕೊಳ್ಳಲ್ಪಟ್ಟು ಕ್ರಮೇಣ ೬೦೦ ರೂ.ಗೆ ಹೆಚ್ಚಿಸಲ್ಪಡುವುದು ಅನ್ಯಾಯವೆಂದು ಮೊದಲಾಗಿ ಪತ್ರಿಕೆಗಳಲ್ಲಿ ವಾದಾನುವಾದಗಳು ನಡೆದು ಅನೇಕರ ಮನಸ್ಸಿಗೆ ವಿಶೇಷ ಅಸಮಾಧಾನವನ್ನುಂಟುಮಾಡಿದ್ದಿತು. ಆದರೆ ನಮ್ಮ ಸರ್ಕಾರದವರು ಈ ವಿಚಾರವನ್ನು ಚೆನ್ನಾಗಿ ಪರಿಶೀಲಿಸಿ ಮಿ॥ ಗರಿಯವರಿಗೆ ೨೫೦ ರೂ. ಸಂಬಳದ ಮೇರೆ ಉದ್ಯೋಗವು ಕೊಡಲ್ಪಡಬೇಕೆಂದು ನಿರ್ಧರಿಸಿರುವರು. ಇದರಿಂದ ಮಿ॥ ಗರಿಯವರಂತೆ ಯೋಗ್ಯತೆಯನ್ನುಳ್ಳವರಿಗೆಲ್ಲಾ ಉಂಟಾಗಿದ್ದ ಅಸಮಾಧಾನವು ಶಾಂತವಾಗಲು ಕಾರಣವಾಯಿತು. ಮಿ॥ ಡಿ. ವೆಂಕಟರಾಮಯ್ಯನವರು ಮಿ॥ ವಿಶ್ವೇಶ್ವರಯ್ಯನವರ ಮಿತ್ರರಾಗಿರುವುದರಿಂದ ಅವರ ತಮ್ಮನವರಿಗೆ ಪ್ರಾರಂಭದಲ್ಲೇ ದೊಡ್ಡ ಕೆಲಸವು ಕೊಡಲ್ಪಡುವುದೆಂದು ಜನರು ಊಹಿಸಿ ದೊಡ್ಡ ಕೋಲಾಹಲವನ್ನು ಮಾಡಲು ಕಾರಣವಾಯಿತೆಂದು ನಮಗೆ ತೋರುತ್ತದೆ. ಆದರೆ ಮಿ॥ ವಿಶ್ವೇಶ್ವರಯ್ಯನವರು ತಮ್ಮ ಒಡಹುಟ್ಟಿದವರ ವಿಚಾರದಲ್ಲೂ ನಿಷ್ಪಕ್ಷಪಾತಿಗಳಾಗಿರುವರೆನ್ನುವುದಕ್ಕೆ ಈಗ ಮಾಡಿರುವ ಏರ್ಪಾಟೇ ನಿದರ್ಶನವಾಗಿರುವುದು.

ಹಾಸನದ ಡಿ॥ ಟ್ರಜರಿ ಆಫೀಸರಾದ ಅಸಿ ಕಮಿಷನರ್ ಮಿ॥ ಪಿ. ಗೋಪಾಲರಾಜ ಅರಸಿನವರು ತಮಗೆ ವಿವಾಹವಾದ ಸಂತೋಷಾರ್ಥವಾಗಿ ಸಿಟಿ ಮ್ಯಾಜಿಸ್ಟ್ರೇಟ್ ಮಿ॥ ಬಿ. ಬಸರಾರಾಧ್ಯರು, ಅಡ್ವೋಕೇಟ್ ಮಿ॥ ಯು. ಡಿ. ನಾರಾಯಣಮೂರ್ತಿಯವರು, ವೃತ್ತಾಂತಪತ್ರಿಕೆಯ ಸಬ್ ಎಡಿಟರ್ ಮಿ॥ ಟಿ. ಕೃಷ್ಣರಾಯರು, ರೆವಿನ್ಯೂ ಪ್ರಬೇಷನರ್ ಮಿ॥ ಜೆ. ಮಲ್ಲಿಕಾರ್ಜುನಯ್ಯನವರು ಸ್ಕೂಲುಗಳ ಅಸಿ॥ ಡೆಪ್ಯುಟಿ ಇನ್ಸ್‌ಪೆಕ್ಟರ್ ಮಿ॥ ಪಿ. ನರಸಿಂಹಯ್ಯನವರು ಮೊದಲಾದ ತಮ್ಮ ಮಿತ್ರಮಂಡಲಿಯನ್ನು ಕಳೆದ ತಾ॥ ೧೭ ರ ಮಧ್ಯಾಹ್ನ ತಮ್ಮ ಬಿಡಾರವಾದ ಲೇಟ್ ದರ್ಬಾರ್ ಭಕ್ಷಿ ಮಿ॥ ಲಿಂಗರಾಜಅರಸಿನವರ ಮನೆಗೆ ಬರಮಾಡಿಕೊಂಡು ಪಿಟೀಲನ್ನು ನುಡಿಸುವುದರಲ್ಲಿ ಅದ್ವಿತೀಯರೆಂದು ಪ್ರಖ್ಯಾತರಾದ ಬೆಂಗಳೂರ ಮಿ॥ ತಾಯಪ್ಪನವರ ಹಾಡುಗಾರಿಕೆಯಿಂದಲೂ, ಪಿಟೀಲುವಾದನದಿಂದಲೂ ಅತ್ಯಾನಂದಗೊಳಿಸಿ ಮಿತ್ರಮಂಡಲಿಯೊಡನೆ ಭಾವಚಿತ್ರವನ್ನು ತೆಗೆಸಿ, ಅನಂತರ ಸುಖವಾದ ಅಲ್ಪಾಹಾರದಿಂದ ತೃಪ್ತಿಯನ್ನು ಪಡಿಸಿದರು. ಮಿ॥ ತಾಯಪ್ಪನವರ ಹಾಡುಗಾರಿಕೆಯಿಂದಲೂ ಪಿಟೀಲುವಾದನದಿಂದಲೂ ಸಭಿಕರು ಆನಂದಪರವಶರಾಗಿ ಮಿ॥ ತಾಯಪ್ಪನವರ ಅದ್ವಿತೀಯವಾದ ಪಾಂಡಿತ್ಯವನ್ನು ಕೊಂಡಾಡಿದರು. ಮಿ॥ ಗೋಪಾಲರಾಜ ನೂತನ ದಂಪತಿಗಳ ಶ್ರೇಯಃಪ್ರಾರ್ಥನಾಪರವಾದ ವೃತ್ತ ಕಂದಗಳನ್ನು ರಚಿಸಿ ಸಭೆಯಲ್ಲೋದಿದ ಪುರಾಣಿಕ ಮಿ॥ ಎಸ್. ಶ್ರೀಕಂಠಶಾಸ್ತ್ರಿಯವರನ್ನೂ, ಮಿ॥ ತಾಯಪ್ಪನವರನ್ನೂ ಶಾಲುಪೀತಾಂಬರಗಳಿಂದಲೂ ದ್ರವ್ಯಗಳಿಂದಲೂ ವಿಶೇಷವಾಗಿ ಸನ್ಮಾನಿಸಿದರು. ಮಿತ್ರಮಂಡಲಿಯವರೆಲ್ಲರೂ ಮಿ॥ ಅರಸಿನವರ ವಿಶೇಷವಾದ ಆತಿಥ್ಯವನ್ನು ಶ್ಲಾಘಿಸಿ ಆ ನೂತನ ದಂಪತಿಗಳಿಗೆ ಸುಖಸಂಪತ್ತನ್ನು ಬಯಸಿ ತೆರಳಿದರು.

ಪತ್ರವ್ಯವಹಾರ

ರಾಯಚೂರು ಜಿಲ್ಲೆ ಗೆಜ್ಜಲಗಟ್ಟೆ ಶ್ರೀ ಅಮರೇಶ್ವರ ಪ್ರಾಸಾದಿತ ಸಂ॥ ಪಾಠಶಾಲೆಯ ವ್ಯವಸ್ಥಾಪಕರು ಇದೇ ವೈಶಾಖ ಶು॥ ೧೨ ರಲ್ಲಿ ತಮ್ಮೂರಲ್ಲಿ ನಡೆದ ಶ್ರೀಬಸವೇಶ್ವರ ಜಯಂತಿಮಹೋತ್ಸವ ಸಂಬಂಧವಾಗಿ ಮೈಸೂರ್ ಸ್ಟಾರ್ ಪತ್ರಿಕೆಯ ಸಹಾಯಾರ್ಥವಾಗಿ ಕಳುಹಿದ ೧ ರೂ.ಯನ್ನು ಸ್ವೀಕರಿಸಿರುತ್ತೇವೆ.— ಪ. ಪ್ರ.

ಶಾಶ್ವತದಾನ.

ಮೈಸೂರು ಅರಮನೆ ಅವಸರದ ಗುರುಕಾರ್ ಶೇಷಯ್ಯನವರ ಕುಮಾರರಾದ ಗತಿಸಿದ ಬಸವಲಿಂಗಪ್ಪನವರ ಧರ್ಮಪತ್ನಿ ಗುರುಬಸವಮ್ಮಯ್ಯನವರು ಕಾನಕಾನಹಳ್ಳಿ ತಾಲ್ಲೂಕಿನಲ್ಲಿರುವ ಮರಳೇಬೇಕುಪ್ಪೆ ಮೊದಲಾದ ಗ್ರಾಮಗಳ ಇನಾಮತಿಯುಳ್ಳವರಾಗಿದ್ದಾರೆ. ಇವರು ತಮ್ಮ ಸಂತಾನಾಭಿವೃದ್ಧಿಗಾಗಿ ಸ್ವೀಕರಿಸಿಕೊಂಡಿದ್ದ ಕುಮಾರಸ್ವಾಮಿ

ಯೆಂಬ ಪುತ್ರನಿಗೆ ತಮ್ಮ ಆಸ್ತಿಯನ್ನೆಲ್ಲಾ ವಹಿಸಿಕೊಡುವ ಸಮಾರಂಭವನ್ನು ತಮ್ಮ ನಿವಾಸಸ್ಥಲವಾದ ತಾ॥ ನರಸಿಪುರದ ತಾ॥ ನಿಲಸೋಗೆಯಲ್ಲಿ ಕಳೆದ ಫಾಲ್ಗುಣಮಾಸದಲ್ಲಿ ನೆರವೇರಿಸಿದರು. ಆಗ ನೆರೆದಿದ್ದ ಸಕಲ ಭಕ್ತಮಾಹೇಶ್ವರರ ಮಧ್ಯದಲ್ಲಿ ಮುದುಕುದೊರೆಯ ವೀರಶೈವ ಮತಸಂವರ್ಧನೀಸಭೆಗಾಗಿ ಪ್ರತಿವರ್ಷವೂ ತಮ್ಮ ಇನಾಮತಿಯಿಂದ ಆಗುವ ಉತ್ಪತ್ತಿಯ ಹಣದಲ್ಲಿ ಸೇಕಡಾ ೧ ರೂ. ನಂತೆ ಧನಸಹಾಯವನ್ನು ಮಾಡಲು ವಾಗ್ದಾನಮಾಡಿದುದಲ್ಲದೆ ಆ ಅರ್ಥಕ್ಕೆ ಕ್ರಮವಾದ ಪತ್ರವನ್ನು ಮಾಡಿಸಿಕೊಡಲು, ಸಭೆಯವರ ಹೆಸರಿಗೆ ಪತ್ರಿಕೆಯನ್ನೂ ಬರೆದಿರುವರು. ಇವರು ಹೆಂಗುಸಾಗಿದ್ದರೂ ಮತಧರ್ಮಾಚಾರೋದ್ಧಾರಕವಾದ ಪ್ರಯತ್ನಕ್ಕೆ ಹೀಗೆ ಶಾಶ್ವತವಾದ ದಾನವನ್ನು ಮಾಡಿದುದು ಶ್ಲಾಘ್ಯವಾಗಿ ಅವರ ವಂಶಕ್ಕೆ ಕೀರ್ತಿಯನ್ನೂ ಪುಣ್ಯವನ್ನೂ ಉಂಟುಮಾಡತಕ್ಕುದಾಗಿದೆ. ಜಗದೀಶನು ಇವರಿಗೂ ಇವರ ಸಂತತಿಯವರಿಗೂ ಸನ್ಮಂಗಳವನ್ನುಂಟುಮಾಡಬೇಕು.

ಪ್ರತ್ಯಕ್ಷದರ್ಶಿ.

ಚಿತ್ರದುರ್ಗ ತಾಲ್ಲೂಕು ಬ್ಯಾಲಾಳು.

ಚಿತ್ರದುರ್ಗದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರಸ್ವಾಮಿಗಳವರ ಬೃಹನ್ಮಠ ಮಾ॥ ಸಂಸ್ಥಾನದಲ್ಲಿ ತಾ॥ ೨೦-೪-೧೪ರಲ್ಲು ನಡೆದ ಶ್ರೀಮದ್ವೀರಶೈವ ಧರ್ಮಬೋಧಿನೀಸಭೆಯಲ್ಲಿ ಮಹಾಸ್ಥಾನದ ಪ್ರಣಮಸ್ವರೂಪಿಗಳಾದ ಗುರುಶಾಂತಸ್ವಾಮಿಗಳು ದಾವಣಗೆರೆ ವಿರಕ್ತಮಠದ ಶ್ರೀ ಮೃತ್ಯುಂಜಯಸ್ವಾಮಿಗಳು ಭಕ್ತಾದಿಗಳಿಗೆ ನಿರೂಪಿಸಿದ ಅಪ್ಪಣೆಪ್ರಕಾರ ಈ ಊರಿನಲ್ಲಿ ತಾ॥ ೨೮-೪-೧೪ರಲ್ಲು ಶ್ರೀಬಸವೇಶ್ವರ ಜಯಂತ್ಯುತ್ಸವವು ಜಂಗಮಾರಾಧನೆ ಶಿವಭಜನೆ ಶಿವಕೀರ್ತನೆ ಈ ಸತ್ಕಾರ್ಯ ಸೇವಾಗಳೆಲ್ಲ ನಡೆದ ನಂತರ ಶ್ರೀ ಬಸವೇಶ್ವರನ ಉತ್ಸವವು ಅನೇಕ ವಾದ್ಯಘೋಷದಿಂದಲೂ, ಮದ್ದು ಬಿರುಸುಗಳಿಂದಲೂ ಬಹಳ ವಿಜೃಂಭಣೆಯಿಂದ ಉತ್ಸವವು ಊರೊಳಗಿನಿಂದ ಕಲ್ಲೇಶ್ವರ ದೇವಸ್ಥಾನದವರೆಗೂ ನಡೆಯಿತು. ಅಲ್ಲದೆ ಮರುದಿವಸ ಈ ಊರಿನ ಮಾ॥ ಗೌತರ ಗುರುನಂಜಪ್ಪ, ಮ॥ ಗೌತರ ಗುರುಸಿದ್ಧಪ್ಪ, ಮ॥ ಉಚ್ಚಂಗಿದುರ್ಗದ ಕರಿಯಪ್ಪ ಇವರ ಅಧ್ಯಕ್ಷತೆಯಿಂದ ಒಂದು ಸಭೆ ಸೇರಿ ಮಾ॥ ಗೌತರ ಗುರುನಂಜಪ್ಪನವರು ಶ್ರೀಮದ್ವೀರಶೈವಾಚಾರ ವಿಷಯವಾಗಿ ಉಪನ್ಯಾಸಮಾಡಿದರು. ಇವರ ಭಾಷಣಕ್ಕೆ ಸಭೆಯವರು ಬಹಳ ಆನಂದಪಟ್ಟರು. ಈ ಮಹಾಸಭೆಗೆ ಮಾ॥ ಉಚ್ಚಂಗಿದುರ್ಗ ಕರಿಯಪ್ಪನವರಿಂದ ಹೂವು ಗಂಧ ಕೊಟ್ಟು ಸಭೆಯು ಮುಕ್ತಾಯವಾಯಿತು. ಈ ಮಹಾಜನಂಗಳಿಗೆ ಜಗದೀಶನು ಆಯುರಾರೋಗ್ಯ ಐಶ್ವರ್ಯವನ್ನು ಕೊಡಲೆಂದು ನನ್ನ ಪ್ರಾರ್ಥನೆ

ಸಭಿಕ.

ಕೃಷ್ಣರಾಜಪೇಟೆ.

ಕೃಷ್ಣರಾಜಪೇಟೆ ತಾಲ್ಲೂಕು ಬೂಕಿನಕೆರೆಯಲ್ಲಿರುವ ಮಠದ ಗುರುಬಸವಶಾಸ್ತ್ರಿಗಳು ಚನ್ನಪ್ಪಶಾಸ್ತ್ರಿಗಳು ಸಹ ಈ ಗ್ರಾಮದ ವೀರಶೈವ ಮತಸ್ಥರುಗಳಿಗೆ ಮತಸಂಬಂಧವಾದ ವಿಷಯಗಳನ್ನು ಬೋಧಿಸಿ ಈ ಗ್ರಾಮದಲ್ಲಿ ನಡೆಯುವ ವಿವಾಹಾದಿ ಶುಭಶೋಭನಾದಿ ಕಾರ್ಯಗಳಲ್ಲಿ ಮೈಸೂರು ವೀರಶೈವ ಮತಾಭಿವೃದ್ಧಿ ಫಂಡಿಗೂ, ಮುದುಕುದೊರೆ ವೀರಶೈವ ಮತಸಂವರ್ಧನೀ ಸಭೆಗೂ, ಮತ್ತು ವೀರಶೈವ ಮತೋದ್ಧಾರಕರಾದ ಕೈ॥ ವೈ. ವೀರಸಂಗಪ್ಪನವರ ಸ್ಮರಣಾರ್ಥವಾಗಿಯೂ ಸಹ ತೆಗೆಯುತ್ತಿರುವ ಸಹಾಯದ್ರವ್ಯವನ್ನು ಪದ್ಧತಿಯಂತೆ ಇದೇ ವೈಶಾಖಮಾಸದಲ್ಲಿ ಬೂಕಿನಕೆರೆ ಅಂಗಡಿ ಕಾಳಶೆಟ್ಟರಮಗ ಬಸವಣ್ಣನಿಗೂ, ಇದೇ ಬೂಕಿನಕೆರೆಯಲ್ಲಿರುವ ಮಠವಿನಕೋಡಿ ಬಸವಲಿಂಗಪ್ಪನವರ ಕುಮಾರ್ತಿ ಪುಟ್ಟಮ್ಮನಿಗೂ ಸಹ ನಡೆದ ವಿವಾಹದಲ್ಲಿ ವಧೂವರರ ಕಡೆಯಿಂದ ಮೈಸೂರು ವೀ॥ ಮಾ॥ ಫಂಡಿಗೆ ೧ ರೂ. ಮುದುಕುದೊರೆ ವೀ॥ ಮಾ॥ ಸಭೆಗೆ ೧ ರೂ. ವೀರಸಂಗಪ್ಪನವರ ಸ್ಮರಣಾರ್ಥವಾಗಿ ೧ ರೂ. ಸರ್ವಮಾನ್ಯ ಅಂಚನಹಳ್ಳಿ ತೊಣಕೆರೆಮಠದ ಏಜಂಟ್ ಸ್ವತಂತ್ರಯ್ಯನವರ ತಂಗಿ ತೋಟಮ್ಮನಿಗೂ, ತೊಣಕೆರೆ ಮಲ್ಲಯ್ಯನವರ ಕುಮಾರ ಚನ್ನಬಸವಯ್ಯನಿಗು ಸಹ ಇದೇ ವೈಶಾಖಮಾಸದಲ್ಲಿ ನಡೆದ ವಿವಾಹದಲ್ಲಿ ವಧೂವರರ ಕಡೆಯಿಂದ ಮೈಸೂರು ವೀ॥ ಮಾ॥ ಫಂಡಿಗೆ ೩ ರೂ. ಮುದುಕುದೊರೆ ವೀ॥ ಮಾ॥ ಸಭೆಗೆ ೧ ರೂ. ವೀರಸಂಗಪ್ಪನವರ ಸ್ಮರಣಾರ್ಥವಾಗಿ ೧ ರೂ. ಸಹ ತೆಗೆಸಿ ಆಯಾಯ ಸಂಬಂಧದ ಅಧಿಕಾರಿಗಳ ಹೆಸರಿಗೆ ಮಣಿಯಾರ್ಡರ್ ಮಾಡಿ ವೀರಸಂಗಪ್ಪನವರ ಜ್ಞಾಪಕಾರ್ಥವಾದ ಸಹಾಯದ್ರವ್ಯವನ್ನು ಸ್ಟಾರಾಫೀಸಿಗೆ ಮಣಿಯಾರ್ಡರ್ ಮಾಡಿದೆ.

ಪ್ರತ್ಯಕ್ಷದರ್ಶಿ.

[ಕಡೆಯಲ್ಲಿ ಕಂಡ ೨ ರೂ. ನಮಗೆ ಸಂದಿದೆ. ಪ. ಪ್ರ.]

ಇದೇ ವೈಶಾಖ ಬ॥ ೬ ರಲ್ಲಿ ಕ್ಯಾತ್ಸಂದ್ರದಲ್ಲಿರುವ ಮಾ॥ ಸಿದ್ಧಬಸಪ್ಪನವರ ಪುತ್ರ ಜಿ. ಕೆ ಯಸ್. ವೀರಭದ್ರಪ್ಪನವರಿಗೂ ಗುಬ್ಬಿಯಲ್ಲಿರುವ ಮಾ॥ ಸಿ. ವೀರಭದ್ರಪ್ಪನವರ ಪುತ್ರಿ ಚಿ॥ ಸೌ॥ ಪಾರ್ವತಮ್ಮನಿಗೂ ಕ್ಯಾತಸಂದ್ರದಲ್ಲಿ ಚಿಕ್ಕಹಳ್ಳಿ ಆರ್ ಕಪ್ಪಣ್ಣಶಾಸ್ತ್ರಿಗಳು, ಅರಲಗಟ್ಟದ ಮಠದ ವೇ. ಸಿದ್ಧಲಿಂಗಾರಾಧ್ಯರು ಹಿರೆಹಳ್ಳಿ ಮಠದ ಶ್ರೀ. ಸಿದ್ದಪ್ಪದೇವರು–ಇವರುಗಳ ಪೌರೋಹಿತ್ಯದಿಂದ ನಡೆದ ವಿವಾಹಕಾಲದಲ್ಲಿ ಮಹಾಸಭಾನಿರ್ಣಯ ಪ್ರಕಾರ ವರನ ಅಪೇಕ್ಷೆಯಂತೆ ಮೇಲ್ಕಂಡ ವೇ. ಆರ್. ಕಪ್ಪಣ್ಣಶಾಸ್ತ್ರಿಗಳು ಇಂಥ ಶುಭಶೋಭನಾದಿಕಾರ್ಯಗಳಲ್ಲಿ ಪ್ರತಿಯೊಬ್ಬ ವೀರಶೈವರೂ ಮಹಾಸಭಾ ವಿದ್ಯಾವರ್ಧಕಫಂಡಿಗೂ, ಮುದುಕುತೊರೆ ಮತಸಂವರ್ಧನೀಸಭೆಗೂ, ಶಿವಯೋಗಮಂದಿರಕ್ಕೂ ಮತ್ತು ಈ ಮತಕ್ಕೆ ಉಂಟಾಗಿದ್ದ ನ್ಯೂನತೆಗಳನ್ನು ಪರಿಹರಿಸುವ ವಿಷಯದಲ್ಲಿ ತನ್ನ ತನುಮನಧನಗಳನ್ನರ್ಪಿಸಿ ಮತಸೇವೆಯನ್ನು ಮಾಡಿ ಪ್ರತಿಯೊಬ್ಬ ವೀರಶೈವರಿಗೂ ಮಾರ್ಗದರ್ಶಕವಾಗಿ ಕೀರ್ತಿಪಡೆದಿರತಕ್ಕ ವೈ ವೀರಸಂಗಪ್ಪನವರ ಜ್ಞಾಪನಾರ್ಥ ಅಗ್ರತಾಂಬೂಲ, ಸ್ಟಾರ್‌ಪತ್ರಿಕಾ ಚಿರಜೀವಿತೆಯ ಫಂಡಿಗೂ, ತಮ್ಮ ತಮ್ಮ ಶಕ್ತ್ಯನುಸಾರ ಕಾಣಿಕೆಯನ್ನು ತೆಗೆಯುವಂತೆ ಉಪನ್ಯಾಸಮಾಡಿದ ಕೂಡಲೆ ವರನ ಕಡೆಯಿಂದ ಬೆಂಗಳೂರು ಮಹಾಸಭಾ ಫಂಡಿಗೆ ೨ ರೂ. ವಧುವಿನ ಕಡೆಯಿಂದ ೧ ರೂ. ಶಿವಯೋಗಮಂದಿರಕ್ಕೆ ೧ ರೂ. ವೈ. ವೀರಸಂಗಪ್ಪನವರ ಅಗ್ರತಾಂಬೂಲದ ಬಾಬತು ಸ್ಟಾರ್‌ಪತ್ರಿಕಾ ಚಿರಜೀವಿತೆಯ ಫಂಡಿಗೆ ೧ ರೂ. ತೆಗೆದು ವರನಿಂದ ಮಣಿಯಾರ್ಡರ್ ಮಾಡಲ್ಪಟ್ಟು ಮುದುಕುತೊರೆ ಮತಸಂವರ್ಧನಿಸಭಾ ಬಾಬ್ತು ೧ ರೂ. ಸದರಿ ಉಪನ್ಯಾಸಕರಾದ ವೇ. ಆರ್. ಕಪ್ಪಣ್ಣಶಾಸ್ತ್ರಿಗಳ ವಶಕ್ಕೆ ಕೊಡಲ್ಪಟ್ಟಿತು. ಇದೇ ರೀತಿಯಾಗಿ ಪ್ರತಿಯೊಬ್ಬರೂ ತಪ್ಪದೆ ಆಚರಿಸಿ ಮತಸೇವೆಯನ್ನು ಮಾಡಬೇಕೆಂಬದಾಗಿ ಪ್ರಾರ್ಥಿಸುವ,

ಪ್ರತ್ಯಕ್ಷದರ್ಶಿ.

[ಅಗ್ರತಾಂಬೂಲದ ೧ ರೂ. ನಮಗೆ ಸಂದಿದೆ. ಪ. ಪ್ರ]

ರಾಯಚೂರು ಜಿಲ್ಲಾ ಸಂಸ್ಥಾನ ಗೆಜ್ಜಲಗಟ್ಟೆಯ ವೀರಶೈವರು ಶ್ರೀ ಬಸವೇಶ್ವರ ಜಯಂತಿ ಮಹೋತ್ಸವವನ್ನು ವೈಶಾಖ ಶು॥ ೩ ಮಂಗಳವಾರ ಶ್ರೀ ಶಿವಲಿಂಗ ಮಹಾಸ್ವಾಮಿಯವರ ಮಠದಲ್ಲಿ ಅತಿ ವಿಜೃಂಭಣೆಯಿಂದ ನಡೆಸಿ ಗಣಾರಾಧನ ದಕ್ಷಿಣಾತಾಂಬೂಲಗಳಿಂದ ಭಕ್ತಮಾಹೇಶ್ವರರನ್ನು ತೃಪ್ತಿಪಡಿಸಿದರು. ಸಾಯಂಕಾಲದಲ್ಲಿ ಒಂದು ದೊಡ್ಡ ಸಭೆಕೂಡಿ ಶ್ರೀಮತ್ ಮಹಾರಾಜರವರ ನಾಯಬಸಾಹೇಬರಾಗಿದ್ದ ವಿ॥ ಅಪ್ಪಾಚಾರ್ಯ ಅಗ್ನಿಹೋತ್ರಿ ಸುರಪುರ ಇವರು, ವೀರಶೈವ ಮತೋದ್ಧಾರವನ್ನು ಮಾಡಿ ಶಿವನವತಾರಗೊಂಡಿದ್ದ ಶ್ರೀ ಬಸವೇಶ್ವರನ ಜನ್ಮದಿನೋತ್ಸವವನ್ನು ನಡೆಸಲು ನೆನಪಿಗೆ ತಂದುಕೊಟ್ಟ ಮಹನೀಯರುಪಕಾರಸ್ಮರಣೆಯನ್ನು ಮಾಡಬೇಕು. ಈ ಮಹಿಮನ ಇತಿಹಾಸವೆಂಬ ಸಮುದ್ರವನ್ನು ಮಥನಮಾಡುವಲ್ಲಿ ಮನುಷ್ಯನು ತಾನು ಕಳೆದುಕೊಂಡ ಜ್ಞಾನರೂಪ ಮತ್ತು ಮೋಕ್ಷಪ್ರದವಾದ ವಸ್ತುವು ನಿಶ್ಚಯವಾಗಿ ದೊರೆತು ಧನ್ಯನಾಗುವುದರಲ್ಲಿ ಸಂದೇಹವಿಲ್ಲವು ಎಂದು ಮೊದಲಾಗಿ ಬಸವೇಶ್ವರನ ಸಂಕ್ಷಿಪ್ತ ಚರಿತ್ರೆಯನ್ನು ಸಭಿಕರ ಮನಸ್ಸಿನಲ್ಲಿ ನಾಟುವಂತೆ ಮಧುರವಾಣಿಯಿಂದ ಹೇಳಿ ಎಲ್ಲರಿಗೂ ಪರಮಾನಂದವನ್ನುಂಟುಮಾಡಿದರು. ಇವರಂತೆ ಮತಭೇದವನ್ನೆಣಿಸದೆ ಹಿಂದುಳಿದ ಮತದವರನ್ನು ಪ್ರೋತ್ಸಾಹಿಸುವುದು ಸತ್ಪುರುಷರ ಲಕ್ಷಣವು. ಇಲ್ಲಿಯ ಶ್ರೀ ಶಿವಲಿಂಗದೇಶಿಕೇಂದ್ರ ಮಹಾಸ್ವಾಮಿಯವರು ಬಸವೇಶ್ವರನ ಜನನಾದಿಸಂಕ್ಷಿಪ್ತ ಇತಿಹಾಸಗಳನ್ನು ಜನರ ಹೃತ್ಪಟಲದಲ್ಲಿ ಬಿಂಬಿಸುವಂತೆ ಸುರಸವಾಗಿ ಹೇಳಿದ ತರುವಾಯ ಅಮರನಾಥಶರ್ಮ ಹಿರೇಮಠ ಬನ್ನಿಕೊಪ್ಪ ಇವರು ಜಯಂತ್ಯುತ್ಸವವನ್ನು ವಿಸ್ತಾರಗೊಳಿಸಿ ತಾವು ರಚಿಸಿದ್ದ ಪದ್ಯಗಳನ್ನು ಪಾಠಶಾಲಾ ವಿದ್ಯಾರ್ಥಿಗಳಿಂದ ಹೇಳಿಸಿದರು. ಶಿವಯ್ಯಶಾಸ್ತ್ರಿ ನಿಲವುಗಲ್ಲ ಇವರು ಬಸವೇಶ್ವರನ ಕೆಲ ಮಹಿಮೆಗಳನ್ನು ತಿಳಿಸಿದ ಮೇಲೆ ಸಂಗೀತ ನೃತ್ಯವಾಗಿ ಸಭಿಕರಿಗೆ ಪುಷ್ಪಮಾಲಿಕೆಗಳೂ ಪರಿಮಳದ್ರವ್ಯವೂ ತಾಂಬೂಲವೂ ಕೊಡಲ್ಪಟ್ಟು ಜಯಘೋಷದಿಂದ ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಹೊಳಲ್ಕೆರೆ ತಾಲ್ಲೋಕು ರಾಮಗಿರಿ ಶ್ರೀಮಜ್ಜಯದೇವ ಭಜನಾಮಂದಿರದಲ್ಲಿ ನಡೆದ ವೀರಶೈವರ ೨ನೆ ಸಭೆ.

ತಾರೀಖು ೪-೫-೧೪ ನೆ ಸೋಮವಾರ ಸಾಯಂಕಾಲ ೬ ಘಂಟೆಗೆ ಸರಿಯಾಗಿ ಶ್ರೀಭಜನಾಮಂದಿರದಿಂದ ಹೊರಟು ಪದ್ಧತಿಯಪ್ರಕಾರ ಊರಲ್ಲಿ ಶಿವಭಜನೆ ಮಾಡಿಕೊಂಡು ೭ ಘಂಟೆಗೆ ಸರಿಯಾಗಿ ಶ್ರೀಭಜನಾಮಂದಿರಕ್ಕೆ ಬಂದು ಅಲ್ಲಿ ಅರ್ಧ ಘಂಟೆಯವರೆಗೂ ಶಿವಭಜನೆ ನಡೆಸಲ್ಪಟ್ಟಿತು. ತರುವಾಯ ಗ್ರಾಮದಶೆಟ್ಟರು ಯಜಮಾನರು ಮುಂತಾದ ವೀರಶೈವಮಹನೀಯರು ಸಕಾಲಕ್ಕೆ ದಯಮಾಡಿಸಿದರು. ಮತ್ತು ಆ ಕಾಲಕ್ಕೆ ಸರಿಯಾಗಿ ಶ್ರೀವಿರಕ್ತಸ್ವಾಮಿಗಳವರು ದಯಮಾಡಿಸಿ ಆ ದಿವಸ ನಡೆದ ಮೀಟಿಂಗಿನ ಅಭಿಪ್ರಾಯಗಳನ್ನು ಸರ್ವರಿಗೂ ಸೂಚಿಸಿದರಲ್ಲದೆ, ಅಧ್ಯಕ್ಷರು, ಕಾರ್ಯದರ್ಶಿಗಳು, ಈ ಮಂದಿರದ ಸ್ಥಾಪಕರಾದ ಶ್ರೀ ಪಟ್ಟಾಧ್ಯಕ್ಷರು ಊರಲ್ಲಿಲ್ಲವಾದಕಾರಣ ಈ ದಿವಸ ನಡೆಯಬೇಕಾದ ಮತ ಮತ್ತೂ ವಿದ್ಯಾಸಂಬಂಧವಾದ ಉಪನ್ಯಾಸಗಳು ತತ್ಸಂಬಂಧವಾದ ಮುಂದಿನ ಉಪನ್ಯಾಸದ ಜೊತೆಗೆ ನಡೆಯಬೇಕೆಂದು ಅಪ್ಪಣೆಮಾಡಿ ಅಲ್ಲಿಬಂದಿದ್ದ ಸರ್ವರ ಜ್ಞಾನೋದಯಕ್ಕೆ ಬೇಕಾದ ಕೆಲವು ಅಂಶಗಳನ್ನು ಬೋಧಿಸಿದ ತರುವಾಯ, ಶ್ರೀಬಸವೇಶ್ವರನ ಜನ್ಮದಿವಸ ಅಂದರೆ ಇದೇ ವೈಶಾಖ ಶುದ್ಧ ೩ ಮಂಗಳವಾರ ಸರ್ವರೂ ಸೇರಿದ್ದಾಗ ಈ ಶ್ರೀಭಜನಾಮಂದಿರದ ಕರ್ಚಿಗಾಗಿ ಊರಿನಲ್ಲಿ ಪ್ರತಿಯೊಂದು ವ್ಯಾಪಾರಕ್ಕೂ ಒಂದೊಂದುರೀತಿಯಾಗಿ ತೆರಿಗೆಯನ್ನು ಏರ್ಪಡಿಸಿಮಾಡಿ ಅದು ಸಾರೋದ್ಧಾರ ನಡೆಯುವಂತೆ ಮಾಡಬೇಕೆಂದು ಕೆಲವರು ಚರ್ಚಿಸಿದ್ದರು. ಈ ಸಲದ ಮೀಟಿಂಗಿನಲ್ಲಿ ಪುನಃ ಆ ವಿಷಯದಲ್ಲಿ ಪ್ರಶ್ನೆ ಹಾಕಲು ಅದಕ್ಕೆ ಗ್ರಾಮಸ್ಥರಾದ ಕೆಲವರ್ತಕರು ಕೆಲಸಕ್ಕೆಬಾರದ ಮಾತುಗಳಿಂದ ಅದನ್ನು ತಿರಸ್ಕಾರಮಾಡಿದರು. ಅನಂತರ ಶ್ರೀಸ್ವಾಮಿಗಳವರು ಯೋಚನೆಮಾಡಿ, ಸರ್ವರನ್ನೂ ಸಮಾಧಾನಪಡಿಸಿ ಐಕಮತ್ಯವನ್ನುಂಟುಮಾಡಿ ಅನಂತರ ಈ ವಿಷಯವನ್ನು ಮುಂದಿನ ಮೀಟಿಂಗಿನಲ್ಲಿ ಯೋಚಿಸೋಣವೆಂದು ಅಪ್ಪಣೆ ಮಾಡಿದರು. ಮಂಗಳವಾದ ನಂತರ ಸಭಾ ಮುಕ್ತಾಯವಾಯ್ತು.

ಓರ್ವ ಅಭಿಮಾನಿ.

ಊದಬತ್ತಿಗಳು.

5

ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ ೧೨-೦-೦ ೫-೦-೦; ೩-೧-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪ ಟಿನ್ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಸುಗಂಧಶಾರಿ, ಮೈಸೂರು.

ಚಂದ್ರೋದಯ.

(ಇಂಗ್ಲಿಷು ಕನ್ನಡ ಸಾಪ್ತಾಹಿಕವರ್ತಮಾನಪತ್ರ)

ಇದು ಧಾರವಾಡದಲ್ಲಿ ಜೂನ ತಿಂಗಳಿಂದ ಪ್ರತಿ ಸೋಮವಾರ ಪ್ರಸಿದ್ಧವಾಗುವದು. ಇದರಲ್ಲಿ ರಾಜಕೀಯ, ಸಾಮಾಜಿಕ ಮೊದಲಾದ ಮಹತ್ವವಾದ ವಿಷಯಗಳು ಬರುವವು. ಹಾಗೂ ಹೊಸ ಹೊಸ ಸ್ಥಾನಿಕ ಮತ್ತು ವಿವಿಧವರ್ತಮಾನಗಳು ಬರುವವು. ಇದರ ವಾರ್ಷಿಕ ಚಂದಾಯವು ಎರಡು ರೂಪಾಯಿ. ಪರಸ್ಥಳದವರಿಗೆ ಅಂಚೆಯವೆಚ್ಚವು ಹದಿಮೂರು ಆಣೆ ಬೀಳುವದು. ಇದರ ಆಕಾರವು ಸುಪರರಾಯಲ್. ಚಂದಾದಾರರಾಗಲಪೇಕ್ಷಿಸುವವರೂ ನೋಟೀಸು ಇಲ್ಲವೆ ಜಾಹೀರಾತುಗಳನ್ನು ಪ್ರಸಿದ್ಧಪಡಿಸಲಪೇಕ್ಷಿಸುವವರೂ ಕೆಳಗೆ ಸಹಿಮಾಡಿದವರ ಸಂಗಡ ಪತ್ರವ್ಯವಹಾರವನ್ನು ಮಾಡತಕ್ಕದ್ದು. ಗದಗೆಯ್ಯಾ ಹುಚ್ಚಯ್ಯಾ ಹೊನ್ನಾಪುರಮಠ ಸಂಪಾದಕ « ಚಂದ್ರೋದಯ »

ಧಾರವಾಡ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೪-೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧ ರೂ. ಕೊಡಬೇಕಾಗುವುದು. ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೬-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦-೮-೦ ಆಣೆಯಂತೆ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರ್ ಪ್ರೆಸ್, ಮೈಸೂರ್.

ಶಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

25

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಗು ಮೇಲೆ ಅತಿಉತ್ತಮ ಲೇಹ! (ಗುಣವಾಗದಿದ್ದರೆ ಹಣ ಮರತ !!) ಲೇಹ !!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗಪೀಡಿತರು, ರಕ್ತವೃದ್ಧಿ ಬೇಕಾದವರು, ತೃಷೆಪೀಡಿತರು, ದಮ್ಮಿನವರು, ಕೆಮ್ಮಿನವರ ಕಫ, ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹರಂಬಂಧ ರೋಗಪೀಡಿತರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶ ಮೇಲೆ ಹುಟ್ಟಿಗುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತವೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೋಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ:—ವೈದ್ಯ, ಜಿ. ಎಲ್ ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲಾ ಉತ್ತರಕನ್ನಡ.

35

ದೊಡ್ಡ ಕಂಪೆನಿ! ಕೊಗಸಾದ ಸರಕುಗಳು!!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಶೆಲ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟಿ, ರುದ್ರಾಕ್ಷಿ ಮುಂತಾದ ಅನುಕೂಲ್ಯವಾದ ಸರಕುಗಳ ಕ್ಯಾಟ್‌ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯು. ಎನ್. ಮತ್ತು ಕಂಪೆನಿ
ಬನಾರಿಸ್ ಸಿಟಿ. (ಕಾಶೀ)

ಅಗ್ಗವಾದ ಮಾಲುಗಳು.

S.N.RUDRAKSHA & CO.
BENARES CITY.

ನಮ್ಮಲ್ಲಿ ಉತ್ತಮವಾದ ನೇಪಾಳ ರುದ್ರಾಕ್ಷಿ ಉತ್ತಮವಾಗಿಯೂ ಗಟ್ಟಿಯಾಗಿಯೂ ೪ ಮುಖದಿಂದ ೧೪ ಮುಖದ ವರೆಗೆ ಸಣ್ಣದು ದೊಡ್ಡದು ಸಹ ಈ ಎರಡು ನಮೂನೆಯಲ್ಲಿ ದೊರೆಯುವುದು. ಮತ್ತು ಇವುಗಳಲ್ಲದೆ ರೇಷ್ಮೆ ಮಗುಟ, ಕಾಶ್ಮೀರ ಶಾಲು, ರೇಷ್ಮೆ ಜರೀಸೀರೆ, ಜರಿಕಣ, ಪೇಟ, ಪೊಳಕಾಲ್ಮರು ನಮೂನೆ ವಸ್ತ್ರ, ಜಗನ್ನಾಥ ಜಾಗಂಟಿ, ನೇಪಾಳ ಕಸ್ತೂರಿ, ಉತ್ತಮವಾದ ಜರೀ ಛಾದರ್ ಮೊದಲಾದ ಅಮೂಲ್ಯವಾದ ಸಾಮಾನು ಎಲ್ಲವರಿಗಿಂತಲೂ ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಇಚ್ಛಿಸಿದವರಿಗೆ ವಿ. ಪಿ. ಮೂಲಕ ಕಳುಹಿಸಲಾದೀತು.

ರುದ್ರಾಕ್ಷಿಗಳ ವಿವರ:—

೪ ಮುಖದ ರುದ್ರಾಕ್ಷಿ ಕಂಠಿ ಅಂದರೆ ೩೨ ಮಣಿಗಳಿರುವ ಸರ ೧ ಕ್ಕೆ ೧೨ ಆಣೆಯಿಂದ ೬೦ ರೂಪಾಯಿವರೆಗೆ. ೫ ಮುಖದ ಕಂಠಿ ೧ಕ್ಕೆ ೮ ಆಣೆಯಿಂದ ೩೦ ರೂಪಾಯಿವರೆಗೆ. ೬ ಮುಖದ ಕಂಠಿ ೧ಕ್ಕೆ ೧೨ ಯಿಂದ ೧೦೦ ರೂ. ವರೆಗೆ. ೭ ಮುಖದ ಕಂಠಿ ೧ಕ್ಕೆ ೧೦ ರೂ. ಯಿಂದ ೧೫೦ ರೂ. ವರೆಗೆ ಇದರಂತೆ ೮, ೯, ೧೦, ೧೧, ೧೨, ೧೩, ೧೪, ಈ ಮುಖಗಳ ಮಣಿ ೧ಕ್ಕೆ ೫ ರೂ. ಯಿಂದ ೩೦ ರೂ ವರೆಗೆ. ಇದರಲ್ಲಿಯೇ ಕಂಠಿ ಬೇಕಾದರೆ ಸಹ ದೊರೆಯುವುದು. ಸಣ್ಣ ರುದ್ರಾಕ್ಷಿ ಸರ ಅಂದರೆ ೧೦೮ ಮಣಿಯಿರುವ ತೊಗರಿಯ, ಉದ್ದಿನಕಾಳು ಪ್ರಮಾಣದ ಸರ ೧ಕ್ಕೆ ರೂ. ೫ ರಿಂದ ರೂ. ೩೦ ವರೆಗೆ. ಕಡಲೆ ಕಾಳು ಪ್ರಮಾಣದ ೧೦೮ ಮಣಿಯಿರುವ ಸರ ೧ಕ್ಕೆ ರೂ ೨-೮-೦ ಲಾಗಾಯಿತು ರೂ. ೧೦ ವರೆಗೆ. ಜಪಮಾಲೆ ಬಿಲ್ಲಕಾಯಿಯಿಂದ ಅವರೇ ಬೀಜದ ಪ್ರಮಾಣದ ೧೦೮ ಇರುವ ಸರ ೧ಕ್ಕೆ ೧೨ ಆಣೆಯಿಂದ ರೂ ೧೦ ವರೆಗೆ. ಸಾಧಾರಣ ತರ ೬ ಆಣೆಯಿಂದ ರೂ. ೩ ವರೆಗೆ. ಗೌರೀಶಂಕರ ರುದ್ರಾಕ್ಷಿ– ಈ ರುದ್ರಾಕ್ಷಿಯು ರುದ್ರಾಕ್ಷಿಗಳಲ್ಲೆಲ್ಲಾ ಶ್ರೇಷ್ಠವೆಂದು ಹೇಳುವರು. ರುದ್ರಾಕ್ಷಿ ಮಣಿ ೧ಕ್ಕೆ ರೂ ೫ ಲಾಗಾಯಿತು ರೂ. ೫೦ ವರೆಗೆ. ಇಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ವಿಳಾಸ– ಎಸ್. ನೇಪಾಳ ರುದ್ರಾಕ್ಷಿ ಅಂಡ್ ಕಂಪೆನಿ,
19 ಬನಾರಸ್ ಸಿಟಿ.

ದಿ ಜನರಲ್ ಏಜನ್ಸಿ, ಮೈಸೂರು.

ಕಾದಂಬರಿಗಳು :— ಚಂಡಮಾರುತ ೦-೨-೦; ಚರಿತಾಮೃತಂ ೦-೫-೦; ರಾಜಕಥಾವಲ್ಲರಿ ೦-೫-೦; ಪೀಟರಿನಚರಿತ್ರೆ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೨-೬; ಪ್ರೀತಿ ೦-೫-೦; ಸಾಹಸಿಕೆ, ಕಲಾನಾಥ ೦-೮-೦; ಮಹಾಲಕ್ಷ್ಮಿ ೦-೨-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸತ್ಯಸಂಜೀವಿನಿ ೦-೮-೦; ಕೊಹಿನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೨-೦.

36

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕಯ್ಯಿಂದ ಬಣ್ಣ ಕೊಟ್ಟಿರುವ ಫೋಟೊ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡ ಪಲ್ಲಕ್ಕಿ ಉತ್ಸವದ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸನತೊಳಸಹಿತ ಆದ ಸಮಾರಂಭದ ಫೋಟೊ ೧ ಕ್ಕೆ ಕ್ರಯ ೧ ರುಪಾಯಿ

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಾಮಾದಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೊ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೊ ೧ ಕ್ಕೆ ಕ್ರಯ ಫುಲ್ಲಸೈಜು ೧ ರುಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀ ಜಗದ್ಗುರು ತೋಂಟದಾರ್ಯ ಗದಗ, ಶ್ರೀ ಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ಸತ್ಪುರುಷಮಾಲಾ, ಹಾಳಕೇರಿ ಆನಂದಸ್ವಾಮಿಯ ಫೋಟೊ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೊ ಸಿಗುತ್ತವೆ. ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ

ಹೊಸಫ್ಯಾಷನ್—ಸಭ್ಯಗೃಹಸ್ಥರು ಗಡಿಯಾರ ಸರ್ಪಳಿಗೆ ಹಚ್ಚುವಲಾಕೇಟುಗಳೂ, ಯದರಲ್ಲಿ ಹಿಂದೆ ಮುಂದೆ ಇಪ್ರಕಾರ ೨ ಫೋಟೊ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ।।।, ।।।=, ೧, ೧।, ಪ್ರಕಾರ, ಮತ್ತೂ ಬೆಳ್ಳಿಯದು ರು ೧।। ರೋಲ್ಡ್ ಗೋಲ್ಡ್ ಭಂಗಾರದ್ದು ದುರ್ಬಿಣದ ಗ್ಲಾಸದೂ ಕ್ರಯ ೨।।, ೨।।। ರೂ.

ಪರೂರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ಧಾಣೆ ಟಿಕೀಟು ಕಳುಹಿಸಿ ಕ್ಯಾಟಲಾಕು ಬೇಕಾದವರು ತರಿಸಿಕೊಳ್ಳಿರಿ. ನಮ್ಮವಿಳಾಸ— ಗಂಗಪ್ಪಾ ಜೇರಿಗೆ.
12 ಆರ್ಟಿಸ್ಟ್ ಸೊಲ್ಲಾಪುರ

೫೦೦ ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರೀ ಮುರಬ್ಬಾ.

5

ಈ ಮುರಬ್ಬಾವು « ಪಂಜಾಬ್ ಸಾಲಾಮಿಸ್ರಿ » ಅಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂಪಾಯಿಗಳು ಬಹುಮಾನ ಕೊಡಲ್ಪಡುವುದು.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯಕೋಶವು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣಪರಿಯಂತರವೂ ದುಃಖಪಡುವರು. ಈ «ಪಂಜಾಬ್ ಸಾಲಾಮಿಸ್ರೀಮುರಬ್ಬಾ » ವಿನ ಸೇವನೆಯಿಂದ—

ಶುಕ್ಲವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಕ್ಷಣಕ್ಷಣಕ್ಕೂ ಮೂತ್ರವಾಗುತ್ತಿದ್ದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ದೂರ ನಡೆಯುವುದರಿಂದ ಮೇಲುಬ್ಬುಸ ಬರುವುದು ತಲೆಯ ನೋವೂ ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರಿಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ರಕ್ತವನ್ನು ಹೆಚ್ಚಿಸಿ ವೀರ್ಯವನ್ನು ವೃದ್ಧಿಪಡಿಸುವುದರಲ್ಲಿ ಪಂಜಾಬ್ ಸಾಲಾಮಿಸ್ರೀ ಮುರಬ್ಬಾವಿನ ಜೊತೆಯ ಇದಕ್ಕೆ ಸಮಾನವಾದ ಔಷಧವು ಬೇರೆ ಯಾವುದೂ ಇಲ್ಲವು.

ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ತಾಂಬ್ರದ ಮತ್ತು ಭಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು. ಹೊಟ್ಟೆಯಲ್ಲಿರುವ ಜ್ವರದ ಗಡ್ಡೆಯನ್ನು ನಾಶಪಡಿಸುವುದು ಶ್ವಾಸ ಕಾಸ ರೋಗಗಳನ್ನು ನಿರ್ಮೂಲವಡಿಸುವುದು.

ಈ ಸಾಲಾಮಿಸ್ರೀ ಎಂಬ ದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲ್ ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ ಅಲ್ಲಿನ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳಿಗಡ್ಡೆ, ಶಾವಂಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರಿ ಎಂದು ಹೇಳಿ ಮೋಸಪಡಿಸುವರು. ಈ ಮುರಬ್ಬಾವನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾಬ್ ಸಾಲಾಮಿಸ್ರಿಯೋ ಅಥವ ಬೇರೇ ತರಹಾದ್ದೋ ಎಂಬುವುದು ಚೆನ್ನಾಗಿ ತಿಳಿದು ಬರುತ್ತೆ. ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧೫ ತೋಲಾ ಮುರಬ್ಬಾವಿರುವ ಡಬ್ಬಾ ೧ಕ್ಕೆ ರೂ ೧-೮-೦; ಟಪಾಲ್ ಖರ್ಚು ನಾಲ್ಕು ಆಣೆ ಅನುಪಾನಪತ್ರಿಕೆ ಔಷಧದ ಸಂಗಡ ಇರುತ್ತೆ.

ಅತ್ಯುತ್ತಮವಾದ ವನೌಷಧಗಳು.

೧. ಧಾತುಪುಷ್ಟಿಚೂರ್ಣ– ಕ್ರಯ ೫ ಆಣೆ.

೨ ರೋಮನಾಶಕ ಮತ್ತು ವೃಶ್ಚಿಕದಂಷ್ಟ್ರ ತೈಲವು ಚೇಳಿನ ಹೊಡತಕ್ಕೂ ಮತ್ತು ಕೂದಲು ತೆಗೆಯುವುದಕ್ಕೂ ಬಹಳ ಒಳ್ಳೆಯದು ಕ್ರಯ ೨ ಆಣೆ.

೩ ವಾಂತಿನಿವಾರಣೆ ತೈಲವು ಕ್ರಯ ೪ ಆಣೆ.

೪ ಹೊಟ್ಟೆನೋವಿಗೆ ಔಷಧ ಕ್ರಯ ೨ ಆಣೆ ೬ ಪೈ.

೫ ಕೆಮ್ಮಲು ರೋಗಕ್ಕೆ ಔಷಧ ೪ ಆಣೆ.

೬ ವ್ರಣಕ್ಕೆ ಔಷಧ ೪ ಆಣೆ.

೭ ಆಶ್ಚರ್ಯಕರವಾದ ವೀರ್ಯಸ್ಥಂಭದ ಗುಳಿಗೆ ೪ ಆಣೆ.

೮ ತಲೆನೋವಿಗೆ ತೈಲವು ೨ ಆಣೆ ೬ ಪೈ.

೯ ಪ್ರಮೇಹ ನಿವಾರಣ ಭಸ್ಮವು–೮ ಆಣೆ.

೧೦ ಉಷ್ಣಕಾರಕಕ್ಕೆ ಮಾತ್ರೆಗಳು–ರೂ. ೧.

೧೧ ಮೂಲವ್ಯಾಧಿಗೆ ಔಷಧ–೮ ಆಣೆ.

೧೨ ಕಣ್ಣಿಗೆ ಸುರ್ಮಾ–೪ ಆಣೆ.

೧೩ ದಂತಚೂರ್ಣವು–೧ ಆಣೆ ೩ ಪೈ.

೧೪ ಕೂದಲು ಬೆಳೆಯುವ ಎಣ್ಣೆ (ಬಂಬೋಲ ತೈಲ) ೪ ಆಣೆ.

ವಿಳಾಸ:— ಡಿ. ಮನ್ನಾಲಾಲ್, ದಿಲ್ಲಿ ವೈದ್ಯರು,
೧೩, ಹಳೇ ಸಿದ್ದಿಕಟ್ಟೆ, ಬೆಂಗಳೂರು ಸಿಟಿ.

ಸಮಸ್ತ ವೀರಶೈವಬಾಂಧವರಿಗೆ ವಿದಿತಪಡಿಸುವುದೇನೆಂದರೆ— ಕಳೆದವರ್ಷ ನಿಪ್ಪಾಣಿಯಲ್ಲಿ ಕೂಡಿದ್ದ ೬ ನೆಯ ವೀರಶೈವಮಹಾಸಭೆಯ ರಿಪೋರ್ಟು ಬುಕ್ಕುಗಳು ಮುದ್ರಿತವಾಗಿ ಕ್ರಯಕ್ಕೆ ಸಿದ್ಧವಾಗಿರುವುವು ಈ ಸಾರೆಯ ಬುಕ್ಕುಗಳು ಒಳ್ಳೆಯ ಅಪ್ರತಿಮವಾಗಿಯೂ, ಅಚ್ಚುಕಟ್ಟಾಗಿಯೂ ಬರೆದಿದ್ದು, ಅದರಲ್ಲಿ ನಮ್ಮ ಸಮಾಜದ ಆಧಾರಸ್ತಂಭಗಳಂತಿರುವ ಪ್ರತಿಯೊಬ್ಬ ಮುಖಂಡರ ಭಾವಚಿತ್ರಗಳು ಪ್ರತ್ಯೇಕವಾಗಿ ಸೇರಿಸಲ್ಪಟ್ಟಿರುವುವು. ಮೇಲಾಗಿ ಪ್ರತಿಗಳು ವಿಕ್ರಯಕ್ಕೆ ಒಂದೇ ನೂರು ಇರುವುದರಿಂದ ಹಿಂದಿನಿಂದ ಬೇಡುವವರಿಗೆ ಪ್ರತಿಗಳು ನಿಶ್ಚಯವಾಗಿ ಸಿಗಲಾರವು. ಕಾರಣ, ಇಷ್ಟವುಳ್ಳವರು ಮುಂಚಿತವಾಗಿಯೇ ಸ್ಪಷ್ಟವಾದ ಪತ್ರಿಯಿಂದ ಆರ್ಡರು ಕಳುಹಿಸಬಹುದು.

ಶಿವಮೂರ್ತಿಸ್ವಾಮಿ ಕಣಬರಗಿಮಠ,
ಚೇರ್ಮನ್, ಸ್ವಾಗತಕಮಿಟಿ,
೬ ನೆಯ ಮಹಾಸಭೆ ನಿಪ್ಪಾಣಿ

ಪರಿಮಳದ್ರವ್ಯಗಳು.

ನಮ್ಮಲ್ಲಿ ಬಹುಕಾಲದಿಂದಲೂ ಅತ್ಯುತ್ತಮವಾಗಿ ತಯಾರಾಗುತ್ತಿರುವ ಊದುಬತ್ತಿಗಳು ಸೇರು ೧ ಕ್ಕೆ ೪ ಆಣೆಯಿಂದ ೧೦ ರೂ. ವರೆಗೂ ದೊರೆಯುವುವಲ್ಲದೆ, ನಾನಾತರದ ಗಂಧದಬಿಲ್ಲೆಗಳು, ಜವಾಜಿಗಂಧ ಅಥವಾ ಅರಗಜ, ಪುನುಗು, ಜವಾಜಿ, ದಶಾಂಗ, ಧೂಪದಕಡ್ಡಿ ಮೊದಲಾದ ಸುಗಂಧದ್ರವ್ಯಗಳೂ, ಮಲ್ಲಿಗೆ-ಸಂಪಗೆ-ರೋಜಾ ಮೊದಲಾದ ಅತ್ತರುಗಳೂ ಮತ್ತೂ ಭೃಂಗಾಮಲಕತೈಲ ಮೊದಲಾದುವುಗಳೂ ಬಿಕರಿಗೆ ಸಿದ್ಧವಾಗಿರುವುವು. ಅಪೇಕ್ಷಕರು ೫ ರೂ. ಗೆ ಕಡಿಮೆಯಿಲ್ಲದಂತೆ ಆರ್ಡರನ್ನು ಕೊಡಬೇಕು. ಇನ್ನೂ ಹೆಚ್ಚು ವಿಷಯಗಳನ್ನು ತಿಳಿಯತಕ್ಕವರು ನಮ್ಮ ಕ್ಯಾಟಲಾಗನ್ನು ತರಿಸಿ ನೋಡಬಹುದು. 37

ವಿಳಾಸ— ಎಸ್. ಕಳ್ಳಪ್ಪ, ಊದುಬತ್ತಿಷಾಪ್,
ದೊಡ್ಡಪೇಟೆ, ಬೆಂಗಳೂರು ಸಿಟಿ.

ನ್ಯಾಯದರ್ಪಣ. 18

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯು, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಫ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸೂ, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆಚರಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ವಗೈರೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯು ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರುತ್ತವೆ.

ಬೆಲೆ ರೂ. 1—8—0. ವಿ. ಪಿ. ಮೂಲ್ಯ 1—12—0.

ಎಂ. ಎಸ್. ಸಂಜಪ್ಪನವರು,
ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

25 ಸಚಿತ್ರ ಶುಕಸಪ್ತತಿ ಕಥೆಗಳು
ರೂ. ೧—೮—೦ (೫೧೨ ಪುಟ) ಟಪಾಲು ಹಾಸಲು ೪ ಆಣೆ.

ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ
ರೂ ೧—೮—೦. (೫೭೬ ಪುಟ)

ಸಚಿತ್ರ ವಿದ್ಯಾಮಂಜರಿಕಥೆಗಳು

ವಾಚಕ ಮಹಾಶಯರುಗಳೇ! ಮಾನ್ಯತೆಯು ಬೇಕಾದರೆ, ವಾಕ್ಚಾತುರಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಬೇಕೆಂಬಿಷ್ಟವಿದ್ದರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯುಳ್ಳಾತರಾಗಬೇಕೆಂದಿದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೩೦ ಪುಟಗಳಿಂದ ಕೂಡಿದ ೬೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ ೧-೪-೦ ಟಪಾಲ್ ಹಾಸಲು ೩ ಆಣೆ. ಈಗಲೇ ಬರೆ ನಿಮ್ಮ. ನಮ್ಮಲ್ಲಿ ಇನ್ನೂ ಅನೇಕ ಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸಚಿತ್ರ ಶುಕಸಪ್ತತಿ ಕಥೆಗಳು

ಶುಕಮಹರ್ಷಿಗಳು ಲೋಕದಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತಭಾಷೆಯಲ್ಲಿ ಹೇಳಿರುವರು. ಈ ಕಥೆಗಳನ್ನು ಭಾಷಾಂತರ ಮಾಡಿ ಕನ್ನಡದಲ್ಲಿ ರಚಿಸಿದೆ. (1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವುದು. (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತರಹಸ್ಯಗಳನ್ನೂ, ಬುದ್ಧಿಚಾಂಚಲ್ಯನಿವಾರಣೆ ಮುಂತಾದ್ದನ್ನೂ ತಿಳಿಸುವುದು. (3) ಸ್ತ್ರೀ ಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ ವಿವಿಧನೀತಿ ಮುಂತಾದುವುಗಳನ್ನು ಬೋಧಿಸುವುದು. (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವುದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವುದು. (5) ಅಲ್ಲಲ್ಲಿ ಕಥಾಸಂದರ್ಭಾನುಸಾರ ಭಾವಸಹಿತ ಚಿತ್ರಗಳನ್ನು ಇಟ್ಟಿರುವುದರಿಂದ ಓದುಬಾರದವರಿಗೂ ಮನೋರಂಜಕವಾಗಿರುವುದು. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ, ಇದರ ಕ್ರಯ ಪ್ರತಿ ೧ಕ್ಕೆ ೧-೮-೦; ಟಪ್ಪಾಲು ಹಾಸಲು ೪ ಆಣೆ.

(೩೪ ಸಂಧಿಗಳು) ಸಟೀಕಾ ತಾತ್ಪರ್ಯ ಜೈಮಿನೀ ಭಾರತವು. (೯೩೦ ಪುಟಗಳು)

ಇದರ ಕ್ರಯ ಪ್ರತಿ ೧ ಕ್ಕೆ ರೂ. ೪—೦—೦; ಟಪಾಲು ಹಾಸಲು ೧೦ ಆಣೆ.

ಇವಲ್ಲದೆ ಇನ್ನೂ ಅನೇಕ ಕನ್ನಡಗ್ರಂಥಗಳು ದೊರೆಯುತ್ತವೆ ಪುಸ್ತಕಗಳ ಪಟ್ಟಿಗೆ ಬರೆದರೆ ಉಚಿತವಾಗಿ ಕಳಿಸುವೆವು

42 ನಮ್ಮ ವಿಳಾಸ— ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಸ್ ಪಬ್ಲಿಷರ್ಸ್, ಬೆಂಗಳೂರು ಸಿಟಿ.

ಶ್ರೀ ಕೃಷ್ಣದ ವೆಂಕಟಾಚಲ ಪಂಡಿತರ ಸಿದ್ಧಾಷಧಗಳು 8

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ



ಸಂದುಗಳ ನೋವು ಮೈ ಕಾಲು ಜೋಡಿತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾಔಷಧಿ)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇಒಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತವಿದೊಂದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧—೦—೦.
ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ. ಮೈಸೂರು

ಗಂಧರಾಜ ನಸ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ)ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾಗಿದ್ದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚಿಟಿಕೆ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜ಼ನ್ ಡಬ್ಬಿಗೆ ೧—೧೪—೦

ಉತ್ತಮವಾದ ನಸ್ಯದಪುಡಿ.

ಘಾಟು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗಂಧ... ನಲ್ಲ ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೭೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಬೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವೆ. ನೀವುಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜ಼ನ್ ಡಬ್ಬಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,
ಗೋಪಸೆಟ್ಟಿಪುರ, ಹನೂರು ಪೋಸ್ಟ್
14 ಕೊಳ್ಳೇಗಾಲದ ತಾಲ್ಲೂಕು.

೧೯೧೪ ನೆಯ ಇಸವಿ ಮೇ ತಾ॥ ೨೫ ರಿಂದ ೧೯೧೪ ನೆಯ ಮೇ ತಾ॥ ೩೧ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ ನೆಯ ಆನಂದನಾಮ ಸಂ॥ ದ ವೈಶಾಖ ಬ॥ ಅಮಾವಾಸ್ಯೆಯಿಂದ ಜ್ಯೇಷ್ಠ ಶು॥ ಷಷ್ಠಿವರೆಗಿನ ಪಂಚಾಂಗ.

ತಾ॥	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	[illegible]
25	ಸೋ	ಅ	2-31	ಕೃ	0-30	12
26	[1]ಮಂ	ಪಾ	5-23	ರೋ	5- 1	13
27	ಬುಧ	ಬಿ	7- 0	ಮೃ	8-22	14
28	[2]ಗುರು	ತದಿ	7-25	ಆದ್ರಾ	10-26	15
29	ಶುಕ್ರ	ಚ	6-34	ಪುನ	11-17	16
30	[3]ಶನಿ	ಪಂ	4-30	ಪುಷ್ಯ	10-58	17
31	[4]ಭಾ	ಷ	1-18	ಉಪರಿ	56-24	18

(1) ಪುನ್ನಾಗಗೌರೀವ್ರತಂ, ಚಂದ್ರೋದಯಃ, ರ... ಚಂದ್ ೧. (2) ಕದಳೀಗೌರೀವ್ರತಂ. (3) ಸ್ಕಂದಪಂಚಮೀ (4) ಶ್ರೀರಂಗದಲ್ಲಿ ವಸಂತೋತ್ಸವಾರಂಭಃ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಸ್ಟಾ... ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED M NO124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ವಾರ್ಷಿಕ ಚಂದಾ ೧—೦—೦

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈ ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂ ವಲಂ ।
ಸೀಮಾತೀತಯಶಃಪ್ರತಾಪವಿಪುಲಂಸದ್ವೃತ್ತಮಾಲಾಕುಲಂ । ಪ್ರೇಮಂದೇತ್ತಿಶ್ರೀಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ॥

ಅಂಚೆವೆಚ್ಚ ಸೇರಿ ೧—೧೪—೦

REGISTERED M NO. 124

ಸಂಪುಟ ೨) ಮೈಸೂರ್ ಸ್ಟಾರ್ ಸೆ ೧೯೧೪ ನೆಯ ಇಸವಿ ಜೂನ್ ತಾರೀಖು ೧ ನೆಯ ಸೋಮವಾರ. (ಸಂಚಿಕೆ ೨೨)

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಈಗತಾನೆ ಶೀಮೆಯಿಂದ ಬಂದಿರತಕ್ಕ ರಖಂವಾರ್ ಹೊಸ ಬೈಸ್ಕಲ್‌ಗಳು.



ಪ್ರತಿಯೊಂದು ಬೈಸ್ಕಲಿನ ಸಂಗಡಲೂ ಅತ್ಯವಶ್ಯಕವಾಗಿ ರಿಪೇರಿಮಾಡಿಕೊಳ್ಳಲು ಬೇಕಾದ ಆಯುಧಗಳೂ ಮತ್ತೂ ಆಯುಧಗಳನ್ನಿಡತಕ್ಕ ಶೀಮೆಚರ್ಮದ ಚೀಲ ೧. ಗಾಳಿ ತುಂಬುವ ಪಂಪ್ ೧. ಸುಂದರವಾದ ಬೆಲ್ ೧. ಇಷ್ಟು ಸಾಮಾನುಗಳನ್ನೂ ಮುಫತ್ತು ಕೊಡಲಾಗುತ್ತೆ.

ರಾಯಲ್ ಮೇಲ್ ಬೈಸ್ಕಲ್—ಕೇಂಬ್ರಿಡ್ಜ್ ಟೈರ್, ಡನ್‌ಲಪ್‌ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೮೫-೦-೦.
ಬ್ರಿಟಾನಿಕ್ ಬೈಸ್ಕಲ್—ಡನ್‌ಲಪ್ ಟೈರ್, ಡನ್‌ಲಪ್ ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೯೦-೦-೦.
ರಾಯಲ್‌ಕಿಂಗ್ ಬೈಸ್ಕಲ್—ಕೇಂಬ್ರಿಡ್ಜ್ ಟೈರ್, ಡನ್‌ಲಪ್ ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೮೦-೦-೦.
ರಾಯಲ್ ನೈಟ್ ಬೈಸ್ಕಲ್—ಪಾಮರ್ ಟೈರ್, ಪಾಮರ್ ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೯೨-೦-೦.
ರಾಯಲ್ ಆರ್ಚರ್ ಬೈಸ್ಕಲ್—ಬ್ರಿಟಾನಿಯರ್ ಟೈರ್ ಬ್ರಿಟಾನಿಯರ್ ಟ್ಯೂಬ್ ಹಾಕಿದ್ದು ೬೦-೦-೦.
ಬಿ. ಎಸ್. ಎ. ಫಿಟಿಂಗ್ ಬೈಸ್ಕಲ್, ಡನ್‌ಲಪ್‌ಟೈರ್, ಡನ್‌ಲಪ್‌ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೧೩೫-೦-೦.

ಬೈಸ್ಕಲ್ ಬಿಡಿಸಾಮಾನುಗಳೂ ಸದಾ ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿವೆ. ಬೈಸ್ಕಲ್ಲಿಗೆ ಆರ್ಡರ್‌ಮಾಡತಕ್ಕವರು ೧೦-೦-೦ ರೂಪಾಯಿ ಅಡ್ವಾನ್ಸು ಕಳುಹಿಸಬೇಕು. ಬಾಕಿ ಮೊಬಲಗ ರೈಲ್ವೇ ರಶೀದಿಯನ್ನು ವಿ.ಪಿ.ಮಾಡಲಾಗುತ್ತೆ.

"ಜುಮಲೆ" ಇದೊಂದು ಅತ್ಯಾಶ್ಚರ್ಯಕರವಾದ ಹೊಸಕಾದಂಬರಿ (ಬಂಗಾಳಿ ನಾವೆಲ್) ಓದುವುದಕ್ಕೆ ಕುಳಿತರೆ ಮುಗಿಸುವವರೆಗೂ ಮನಸ್ಸು ನಿಲ್ಲುವುದಿಲ್ಲ. ಓದುತ್ತಓದುತ್ತಾ ಹೊಸಹೊಸ ಭಾವಗಳು ತಲೆದೋರಿ ರೋಮಾಂಚವುಂಟಾಗುವುದು. ವಾಚಕರೆ! ಗೋರಿಯಲ್ಲಿದ್ದ ಹೆಂಗಸಿನ ಶವಕ್ಕೆ ಪ್ರತಿಯಾಗಿ ಗಂಡಸಿನ ಶವವಿರುವುದನ್ನು ನೋಡುತ್ತಲೇ ಆಶ್ಚರ್ಯಸಮುದ್ರದಲ್ಲಿ ಮುಳುಗಿಹೋಗುವಿರಿ. ಕ್ರಯ ಪ್ರತಿ ೧ ಕ್ಕೆ ೦-೬-೦ ಪೋಸ್ಟೇಜು ೦-೨-೦.

ಹೊಸಪುಸ್ತಕಗಳು.

ವೀರಶೈವರಿಗೂ ಇತರರಿಗೂ ಸಹ ಅತ್ಯವಶ್ಯಕವೇ ಕಾದ್ದು.

ಮನೋವಿಜಯ—ವೇದವೇದಾಂಗ ವೇದಾಂತ ಪುರಾಣ ಇತಿಹಾಸಾದಿಗಳಲ್ಲಿ ಬಹು ಪ್ರವೀಣರಾಗಿಯೂ ಅನೇಕ ಮತಸಿದ್ಧಾಂತದಲ್ಲಿ ಕುಶಲರಾಗಿಯೂ ಇದ್ದ ಶ್ರೀ ಗುರುಸ್ವಾಮಿಗಳವರಿಂದ ವೀರಶೈವರಿಗೂ ಅನ್ಯಮತಸ್ಥರಿಗೂ ಬಹು ಪ್ರಯೋಜನವಾಗಿರುವಂತೆ ಮನೋಹರವಾಗಿ ರಚಿಸಲ್ಪಟ್ಟಿದೆ. ಇದಕ್ಕೆ ಪರಮಪೂಜ್ಯರಾದ ಶ್ರೀ ತೋಂಟದ ಸಿದ್ಧಲಿಂಗಸ್ವಾಮಿಗಳು ಸಮಸ್ತರಿಗೂ ಸುಲಭವಾಗಿ ತಿಳಿಯುವಂತೆ ತಾತ್ಪರ್ಯವನ್ನು ಸ್ವಾರಸ್ಯವಾಗಿ ಬರೆದಿದ್ದಾರೆ. ಸರ್ವರೂ ಅತ್ಯವಶ್ಯಕ ಓದಬೇಕಾದ್ದು. ಇದರ ಕ್ರಯ ಪ್ರತಿ ೧ ಕ್ಕೆ ೦-೮-೦ ವಿ.ಪಿ. ಮೂಲಕ ೧೧ ಆಣೆ.

ಶತಕಪಂಚಕ—ಇದರಲ್ಲಿ ನಿರಂಜನಶತಕ, ಸಿದ್ಧಲಿಂಗೇಶ್ವರಶತಕ, ನಿಷ್ಕಲಶತಕ, ಉಮಾಮಹೇಶ್ವರಶತಕ, ಸಂಗಮೇಶ್ವರ ಶತಕಗಳೆಂಬ ೫ ಶತಕಗಳಿವೆ. ೪-೫ ನೇ ಶತಕಗಳು ಶಿವಪೂಜಾಕಾಲದಲ್ಲಿ ಪಾರಾಯಣಕ್ಕೆ ಯೋಗ್ಯವಾಗಿವೆ. ಈ ಗ್ರಂಥವನ್ನು ಶ್ರೀ ತೋಂಟದಾರ್ಯರು ಚೆನ್ನಾಗಿ ತಿಳಿಯುವಂತೆ ರಚಿಸಿರುವರು. ಇದರ ಕ್ರಯ ಪ್ರತಿ ೧ ಕ್ಕೆ ೦-೬-೦ ವಿ.ಪಿ. ಮೂಲ್ಯ ೦-೮-೦.

ಮುಕ್ತ್ಯಂಗನ ಕಂಠಮಾಲೆ ಮತ್ತು ಜ್ಯೋತಿರ್ಮಯಶಾಂಭವಿ ಎಂಬೀವಚನ ಗ್ರಂಥಗಳು ವೀರಶೈವಸಿದ್ಧಾಂತವನ್ನು ಸುಲಭವಾಗಿ ಅಬಾಲವೃದ್ಧರಿಗೂ ಬೋಧಿಸತಕ್ಕವುಗಳಾಗಿವೆ. ಇವೆರಡೂ ಇರುವ ಪ್ರತಿ ೧ಕ್ಕೆ ೦-೪-೦ ವಿ.ಪಿ. ಮೂಲ್ಯ ೦-೬-೦.

ಶ್ರೀ ಬಸವೇಶ್ವರ ಸ್ತೋತ್ರಶತಕ—ಗುರುಬೋಧೆ, ಮನೋಬೋಧೆ, ಲಿಂಗತ್ರಿವಿಧಿ, ಶ್ರೀಬಸವೇಶ್ವರ ಸ್ತೋತ್ರ ಎಂಬೀನಾಲ್ಕು ಒಂದೇ ಪುಸ್ತಕದಲ್ಲಿ ಮುದ್ರಿತವಾಗಿವೆ. ಶಿವಪೂಜಾಕಾಲದಲ್ಲಿ ಪಾರಾಯಣಕ್ಕೆ ಯೋಗ್ಯವಾಗಿವೆ. ಕ್ರಯ ಪ್ರತಿ ೧ ಕ್ಕೆ ೦-೩-೦ ವಿ.ಪಿ. ಮೂಲಕ ೦-೫-೦.

ಮೇಲ್ಕಂಡ ನಾಲ್ಕು ಪುಸ್ತಕಗಳನ್ನು ಒಂದೇಸಾರಿ ತರಿಸಿಕೊಳ್ಳುವವರಿಗೆ ಟಪಾಲ್ ಖರ್ಚು ಸಹ ಸೇರಿ ೧-೧೦-೧.

ರಖಂವಾರ್ ವಾಚ್‌ಗಳ ಕ್ರಯದ ತಪ್ಸೀಲ್.

ರಾಸ್ಕೋಪ್ ಸಿಸ್ಟಂವಾಚ್ ೧ ಕ್ಕೆ ೨-೮-೦ ಗನ್‌ಟೈಂ ವಾಚ್ ೧ಕ್ಕೆ ೩-೮-೦, ಡಿಟೋ ನಮೂನೆ ಚಿಕ್ಕಸೈಜ್ ವಾಚ್ ೧ ಕ್ಕೆ ೪-೪-೦, ಸ್ಪೆಷಲ್ ಸ್ವಿಸ್ ಚಿಕ್ಕ ಸೈಜ್ ವಾಚ್ ೧ ಕ್ಕೆ ೫-೪-೦, ಬರ್ಮಾ ಟೈಂಪೀಸ್ ೧ ಕ್ಕೆ ೧-೪-೦ ಡಿಟೋ ಅಲಾರಂ ಇರತಕ್ಕದ್ದು ೨-೪-೦ ಡಿಟೋ ರಖಂಮಿನಲ್ಲಿ ಘಂಟೆ ನಿಮಿಷ ಸೆಕೆಂಡ್ ತೋರಿಸಿ ಅಲಾರಂ ಸಹ ಇದ್ದು ತಾರೀಖು ಕೂಡ ತೋರಿಸತಕ್ಕ ದೊಡ್ಡ ಟೈಂಪೀಸ್ ೧ ಕ್ಕೆ ೩-೪-೦, ಅನಸೋದಿಯಾ "ಬಿ" ಟೈಂಪೀಸ್ ೧ ಕ್ಕೆ ೨-೮-೦.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೫—೦
ಸಟೀಕ ನಂದೀವ್ರತ	೦—೪—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸಪುಸ್ತಕಗಳು.

137

ಬಸವರಾಜವಿಜಯಂ— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಮಂತ್ರಗೋಪ್ಯ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸೂಕ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ ವರ್ಷದ ಚಂದಾ ೨-೮-೦.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕಮಂಡಲಿ, ಮೈಸೂರು.

ಪ್ರಕಟಣೆ.

ರಾಜಧಾನಿಯಲ್ಲಿ ಮುದ್ರಣ ಕೆಲಸವನ್ನು ಬಹು ಅಂದವಾಗಿ ಮಾಡುವುದರಲ್ಲಿ ಪ್ರಸಿದ್ಧಿಯನ್ನು ಹೊಂದಿರುವ ಕ್ರೌನ್ ಪ್ರೆಸ್ಸನ್ನು ನಾವು ಕ್ರಯಕ್ಕೆ ತೆಗೆದುಕೊಂಡಿರುವೆವು. ಇಲ್ಲಿ ಇಂಗ್ಲೀಷು ಮತ್ತು ಕನ್ನಡದ ಭಾಷೆಗಳಲ್ಲಿ ಮುದ್ದಾದ ಅಕ್ಷರಗಳಿಂದ ವಿಸಿಟಿಂಗ್ ಕಾರ್ಡು, ಲಗ್ನಪತ್ರಿಕೆಗಳು ಪಂಚಾಂಗಗಳು ಮೊದಲಾಗಿ ಪುಸ್ತಕಗಳವರೆಗೆ ಎಲ್ಲಾ ಮುದ್ರಣಕಾರ್ಯವೂ ಬಹು ಅಂದವಾಗಿಯೂ ಕ್ಲುಪ್ತಕಾಲದಲ್ಲೂ ನಾನಾ ಬಣ್ಣಗಳಲ್ಲಿ ಮಾಡಿಕೊಡಲ್ಪಡುವುದಲ್ಲದೆ ಎಲ್ಲ ವಿಧವಾದ ಬೈಂಡಿಂಗ್ ಕಾರ್ಯವೂ ಮಾಡಲ್ಪಡುವುದು. ಈಗ ವಿವಾಹ ಲಗ್ನಕಾಲವಾದುದರಿಂದ ಲಗ್ನಪತ್ರಿಕೆಗಳನ್ನು ಕಪ್ಪು ಕೆಂಪು, ಹಸುರು ಮೊದಲಾದ ಬಣ್ಣದ ಶಾಯಿನಲ್ಲಿ ಮತ್ತು ಗಿಲೀಟಿನಲ್ಲಿ ಕಾಲಕ್ಕೆ ಸರಿಯಾಗಿ ಮಾಡಿಕೊಡಲೇರ್ಪಡಿಸಿರುತ್ತೇವೆ. ಇಷ್ಟವುಳ್ಳವರು ನಮಗೆ ಬರೆದು ಬೇಕಾದ ವಿಷಯವನ್ನು ತಿಳಿಯಬಹುದು.

ವೈ. ವಿರೂಪಾಕ್ಷಯ್ಯ,
ಪ್ರೊಪ್ರೈಟರ್
ಕ್ರೌನ್ ಪ್ರೆಸ್, ಮೈಸೂರು.

ಮುಜರಾಯಿ ಇಲಾಖೆ.

ಘನತೆಯನ್ನು ಹೊಂದಿದ ದಿವಾನ್ ವಿಶ್ವೇಶ್ವರಯ್ಯನವರು ಕಳೆದ ಅಕ್ಟೋಬರಿನಲ್ಲಿ ಪ್ರಜಾಪ್ರತಿನಿಧಿಸಭೆಯಲ್ಲಿ ಮಾಡಿದ ಉಪನ್ಯಾಸದಲ್ಲಿ "ಸತ್ರ, ದೇವಸ್ಥಾನ ಮೊದಲಾದ ಧರ್ಮಾಲಯಗಳ ಸ್ಥಿತಿಯನ್ನು ವಿಚಾರಮಾಡಿ ಅವುಗಳ ಆಡಳಿತದ ವಿಷಯದಲ್ಲಿಯೂ, ಕಾರ್ಯಕ್ರಮದ ಏರ್ಪಾಟಿನ ವಿಷಯದಲ್ಲಿಯೂ, ತನಿಖೆಯಿಂದ ರಿಪೋರ್ಟುಮಾಡತಕ್ಕ ಬಗ್ಗೆ ಸರ್ಕಾರದವರು ಹುಕುಂಮಾಡಿರುತ್ತಾರೆ. ಇದಕ್ಕಾಗಿ ಏರ್ಪಡಿಸಿರುವ ಕಮಿಟಿಯವರು ತಮ್ಮ ಕಾರ್ಯವನ್ನು ಉಪಕ್ರಮಿಸಿರುತ್ತಾರೆ" ಎಂದು ಅಪ್ಪಣೆಕೊಡಿಸಿರುತ್ತಾರಷ್ಟೆ.

ಆದರೆ ಮೇಲ್ಕಂಡ ಕಮಿಟಿಯವರು ಈ ವರೆಗೆ ಅಂದರೆ ಕಳೆದ ಎಂಟುತಿಂಗಳಿಂದ ಯಾವ್ಯಾವಭಾಗಗಳಲ್ಲಿ ಸಂಚರಿಸಿದರು, ಯಾವ್ಯಾವ ದೇವಾಲಯ ಸತ್ರಗಳ ಸ್ಥಿತಿಯನ್ನು ತನಿಖೆಮಾಡಿದರು, ಈ ಸಂದರ್ಭದಲ್ಲಿ ಪ್ರಜಾಭಾಗದ ಯಾವ್ಯಾವಸ್ಥಳಿಕ ದೊಡ್ಡಮನುಷ್ಯರನ್ನು ವಿಚಾರಿಸಿದರು, ಮತ್ತು ಈ ಕಮಿಟಿಯಲ್ಲಿರುವ ಮೆಂಬರುಗಳಲ್ಲಿ ಉದ್ಯೋಗಿಗಳೆಷ್ಟುಮಂದಿ ಪ್ರಜಾಪ್ರತಿನಿಧಿಗಳೆಷ್ಟುಮಂದಿ ಎಂಬುದು ಈವರೆಗೆ ಹೊರಪಡಲಿಲ್ಲ. ಬ್ರಿಟಿಷ್‌ಇಂಡಿಯಾದಲ್ಲಿ ಯಾವಬಾಬಿನಲ್ಲಿ ಪರಿಷ್ಕಾರಕಕಮಿಟಿಗಳು ಏರ್ಪಟ್ಟಾಗ್ಯೂ ಸದರಿ ಕಮಿಟಿಯವರು ಕಾರ್ಯೋಪಕ್ರಮಕ್ಕೆ ಮುಂಚೆ ಮುಖ್ಯಭಾಗಗಳಲ್ಲಿ ಯಾವಾಗ್ಗೆ ಸಂಚರಿಸುತ್ತಾರೆಂಬುದಕ್ಕೂ, ಯಾವ್ಯಾವ ವಿಷಯದಲ್ಲಿ ವಿಚಾರಣೆಯಾಗುತ್ತೆಂಬುದಕ್ಕೂ, ಇಷ್ಟವುಳ್ಳವರು ತಮ್ಮ ವಾಜಿಮ್ಮಲಗಳನ್ನು ಕೊಡಬಹುದೆಂಬುದಕ್ಕೂ ಸರ್ಕಾರಿ ಗೆಜೆಟ್ ಮತ್ತು ವೃತ್ತಪತ್ರಗಳಮೂಲಕ ಪ್ರಕಟಿಸುತ್ತಾರೆ. ಅದರಂತೆ ಮುಖ್ಯಭಾಗಗಳಲ್ಲಿ ಸಂಚರಿಸಿ ಬೇಕಾದ ವಿಷಯಗಳನ್ನು ದೊಡ್ಡಮನುಷ್ಯರ ಹೇಳಿಕೆಯಿಂದಲೂ, ಪ್ರತ್ಯಕ್ಷಪರಾಂಬರಿಕೆಯಿಂದಲೂ ಸಂಗ್ರಹಿಸಿ ದೀರ್ಘಾಲೋಚನೆಯಿಂದ ಇರತಕ್ಕ ನ್ಯೂನತೆಗಳನ್ನೂ ಅವುಗಳನ್ನು ಪರಿಹರಿಸಲು ಮಾಡಬೇಕಾದ ಪರಿಷ್ಕಾರಗಳನ್ನೂ ಘಂಟಾಘೋಷವಾಗಿ ವಿಶದೀಕರಿಸಿ ಗೌರ್ನ್ಮೆಂಟಿಗೆ ರಿಪೋರ್ಟು ಮಾಡುತ್ತಾರೆ. ಅದರಮೇಲೆ ಸರ್ಕಾರದವರು ಚೆನ್ನಾಗಿ ಪರ್ಯಾಲೋಚಿಸಿ ಮಾಡುವ ತೀರ್ಮಾನವು ಎಲ್ಲರತಿಳುವಳಿಕೆಗೆ ಬರುತ್ತದೆ. ಮತ್ತು ಕಮಿಟಿಯವರು ವಿಷಯಸಂಗ್ರಹಕ್ಕಾಗಿ ಮಾಡುವ ಸಂಚಾರ-ಅಲ್ಲಲ್ಲಿ ನಡೆದ ತನಿಖೆವಿಷಯ-ಇವುಗಳೆಲ್ಲವೂ ವೃತ್ತಪತ್ರಗಳಮೂಲಕ ಸಕಲರಿಗೂ ಆಗಾಗ್ಗೆ ತಿಳಿದು ಅಭಿಜ್ಞರು ತಕ್ಕ ಸೂಚನೆಗಳನ್ನು ಸಿದ್ಧಪಡಿಸಿಕೊಳ್ಳುವುದಕ್ಕೂ ಸಂಧರ್ಭವಾಗಿರುತ್ತದೆ. ಇಂತಹ ಆಧುನಿಕಪದ್ಧತಿಯನ್ನು ಈ ಸಂಸ್ಥಾನದ ಮುಜರಾಯಿ ಇಲಾಖಾ ಕಮಿಟಿಯವರು ಏತಕ್ಕಾಗಿ ಈವರೆಗೆ ಅನುಸರಿಸಲಿಲ್ಲವೋ, ಮತ್ತು ಹಾಗೆ ಆಚರಿಸಬೇಕೆಂದು ಗೌರ್ನ್ಮೆಂಟಿನವರಾಗಲೀ ಪ್ರಜಾಪ್ರತಿನಿಧಿಸಭೆಯವರಾಗಲೀ ಯಾತಕ್ಕೆ ಕಮಿಟಿಯವರಿಗೆ ಸೂಚನೆ ಕೊಡಲಿಲ್ಲವೋ ತಿಳಿಯದು. ಮುಂದಾದರೂ ಇಂತಹ ಕ್ರಮವನ್ನು ಕಮಿಟಿಮೆಂಬರುಗಳಲ್ಲಿ ಹೆಚ್ಚುಭಾಗದವರು ಪ್ರಜಾಪ್ರತಿನಿಧಿಗಳಾಗಿರಬೇಕೆಂಬುದನ್ನೂ ಅನುಸರಿಸಿದರೆ ಪ್ರಜೆಗಳಿಗೆ ಸಂತೋಷವೂ ಅಭಿಜ್ಞರಾದವರಿಗೆ ತಕ್ಕ ಸೂಚನೆಗಳನ್ನು ಕೊಟ್ಟು ಕೃತಕೃತ್ಯರಾಗಬೇಕೆಂಬ ಲವಲವಿಕೆಯೂ ಉಂಟಾಗಿ ಪ್ರಾಲ್ಯಪಾಲಕಸಂಬಂಧವುಚೆನ್ನಾಗಿ ಬೆಳೆಯುವದರಲ್ಲಿ ಸಂಶಯವಿಲ್ಲ.

ಇನ್ನು ಮುಜರಾಯಿ ಇಲಾಖಾ ದೇವಾಲಯಗಳ ಪ್ರಕೃತಸ್ಥಿತಿಯನ್ನು ತಿಳಿದಮಟ್ಟಿಗೆ ಉದಹರಿಸುತ್ತೇನೆ. ಮಾಗಡಿ ತಾಲ್ಲೂಕಿನ ಅನೇಕ ದೇವಾಲಯಗಳಲ್ಲಿ ಪೂಜಾಭಾವವೂ ದೇವಾಲಯಗಳು ಮತ್ತು ಪೌಳಿಗೋಡೆಗಳು ಶಿಥಿಲವಾಗಿರುವುದೂ, ಭಕ್ತರಮನಸ್ಸಿಗೆ ಬಹು ಸಂಕಟವನ್ನುಂಟುಮಾಡತಕ್ಕವುಗಳಾಗಿವೆ. ೩-೪ ಗ್ರಾಮಗಳ ದೇವಾಲಯಗಳಿಗೆ ಒಬ್ಬ ಅರ್ಚಕನಿರುವುದೂ, ಧರ್ಮಶಾಲೆಯಲ್ಲಿ ವಾಸಮಾಡುತ್ತಿರುವುದೂ, ಪಶ್ಯದಾರಿಕೆ ಇದೆ ಎಂಬ ಬರವಣಿಯಿಂದ ಸ್ವೇಚ್ಛಾಪ್ರವರ್ತಕರಾಗಿರುವುದೂ ಎಲ್ಲರಿಗೂ ತಿಳಿದ ಅಂಶವಾಗಿದೆ. ಶಾಸ್ತ್ರರೀತ್ಯಾ ಪ್ರತಿಷ್ಠೆಯಾಗಿರುವ ದೇವಾಲಯಗಳಲ್ಲಿ ಹಿಂದುಮೊತ್ತ ಪೂಜಾನಂತರವೂ ಅದರಿಂದ ಎಷ್ಟೋ ದೋಷವುಂಟುಮಾಡುವುದನ್ನಾಗಲೀ, ಸಂಪ್ರೋಕ್ಷಣಾದಿಗಳನ್ನು ಮಾಡಿಸದೆ ಅರ್ಚಕ ಕರ್ತವ್ಯವುಂಟಾಗಲಾರದೆಂದಾಗಲೀ ಈ ಅರ್ಚಕರು ತಿಳಿದವರಾಗಿಲ್ಲ. ಇದಕ್ಕಾಗಿ ಎಷ್ಟು ಕನು ಮತ್ತು ಧನವ್ಯಯವಾಗಬೇಕೆಂಬುದು ಇವರಿಗೆ ತಿಳಿಯದು. ಸ್ಥಳ ಮತ್ತು ತಾಲ್ಲೂಕು ಅಧಿಕಾರಿಗಳು ಕಾರ್ಯಬಾಹುಳ್ಯದಿಂದಲೂ, ಶಾಸ್ತ್ರಸಂಪ್ರದಾಯಗಳು ತಿಳಿಯದುದರಿಂದಲೂ ಗಮನಿಸಿರುವುದಿಲ್ಲ. ಮತ್ತು ಇವರುಗಳು ಕಮಿಟಿಯವರ ಪೈಕಿಗಳಲ್ಲಿ ಇವರು ಸಂಚರಿಸಿದ ಪ್ರತಿಗ್ರಾಮದ ಸತ್ರ ದೇವಾಲಯಗಳ ವಿಷಯದಲ್ಲಿ ಮಾಡಿದ ತನಿಖೆ ವಿಷಯ ಪ್ರಮಾಣಿಸಬೇಕೆಂಬ ನಿರ್ಬಂಧವಿರುವಂತೆಯೂ ತೋರುವುದಿಲ್ಲ. ಅರ್ಚಕನು ತಿಂಗಳಿಗೊಂದುಸಾರಿಯಾದರೂ ಅರ್ಚಿಸದೆ ಅಧಿಕಾರಿಗಳು ೩ ತಿಂಗಳಿಗೊಂದುಬಾರಿಯಾದರೂ ವಿಚಾರಿಸದಿದ್ದರೆ ದೇವಸ್ಥಾನಗಳಗತಿ ಏನು? ಕಮಿಟಿಯವರ ತಿಳುವಳಿಕೆಗಾಗಿ ಪ್ರಕೃತಶೋಚನೀಯಾವಸ್ಥೆಯಲ್ಲಿರುವ ಕೆಲವನ್ನು ತಿಳಿಸುತ್ತೇನೆ. ಪತ್ರವಿಸ್ತಾರಕ್ಕೆ ಕ್ಷಮಿಸಿ.

ಹೆಬ್ಬಳಲುಗ್ರಾಮದ ಚಂದ್ರಮೌಳೀಶ್ವರನ ಅರ್ಚನಾಭಾವವಿಷಯದಲ್ಲಿ ಹಿಂದೆಯೇ ತಿಳಿಸಿರುತ್ತೇನೆ. ಇದರ ಅರ್ಚಕನ ವಾಸ ಬಗನಿಗೆರೆಯಲ್ಲಿ. ಈತನೇ ಅಲ್ಲಿನ ಮಾರಮ್ಮ, ಸಂಕೀಘಟ್ಟದ ಕಲ್ಲೇಶ್ವರ, ಕಾಶಿವಿಶ್ವೇಶ್ವರ, ಮತ್ತು ಬಸವಣ್ಣ, ಈ ದೇವಾಲಯಗಳಿಗೂ ಅರ್ಚಕನಾಗಿರುತ್ತಾನೆ. ೬ ಬ್ರಾಂಚಿಗನಾದ ಅರ್ಚಕನಿಗೆ ಇಷ್ಟುಕಡೆಗಳಲ್ಲಿ ಎರಡುವೇಳೆಗಳಲ್ಲಿ ಅರ್ಚಿಸಲು ಸಾಧ್ಯವೆ ಎಂಬುದು ಪರ್ಯಾಲೋಚನೀಯವಾದದ್ದು. ಹೆಬ್ಬಳಲುಗ್ರಾಮದ ಚಂದ್ರಮೌಳೀಶ್ವರ ದೇವಾಲಯದ ಪ್ರಾಕಾರದ ಒಂದು ಮೂಲೆ ಬಿದ್ದು ೧೦ ವರುಷಗಳಾದುವು. ಬಿದ್ದಕಲ್ಲುಗಳನ್ನು ಬೇಕಾದವರು ಸಾಗಿಸಿದರೂ ಕೇಳುವವರಿಲ್ಲ. ಇತರ ಗೋಡೆಗಳೂ ಬಿರುಕುಬಿಟ್ಟಿವೆ. ಅರ್ಚಕನಾದರೂ ಸರ್ಕಾರದ ಅಧಿಕಾರಿಗಳಾದರೂ ಈ ವರೆಗೆ ರಿಪೇರಿಗೆ ಗಮನಕೊಡಲಿಲ್ಲ. ಪ್ರಾಕಾರದ ಸುತ್ತಲೂ ತಿಪ್ಪೆ ಹಳ್ಳಗಳ ದುರ್ವಾಸನೆ ಬರೆದು ತೀರದು. ಬಿರುಕುಬಿಟ್ಟಿರುವ ಗೋಡೆಗಳನ್ನೂ ಬಿದ್ದಿರುವ ಭಾಗವನ್ನೂ ತತ್‌ಕ್ಷಣ ರಿಪೇರಿಮಾಡದೆ ಇದ್ದರೆ ಇತರಭಾಗಗಳೂ ಬಿದ್ದು ದುಬಾರಿಖರ್ಚಿಗೆ ಕಾರಣವಾಗುತ್ತದೆ.

ಕೆಲವುದಿನಗಳ ಕೆಳಗೆ ಮಾಗಡಿ ಸೋಮೇಶ್ವರ ದೇವಾಲಯದ ಲಿಂಗವನ್ನು ಯಾರೋ ದುರಾತ್ಮರು ಕಿತ್ತುಕೊಂಡು ಹೋದಂತೆಯೂ, ಇದಕ್ಕೆ ಕಾರಣ ಲಿಂಗದ ಕೆಳಗೆ ನಿಧಿಯುಂಟೆಂಬ ಆಶೆಯೆಂತಲೂ, ಪತ್ತೆಯಲ್ಲಿ ಸಿಕ್ಕಿರುವ ಕಳ್ಳನು ಕಾರ ಅರಿಯುವುದಕ್ಕೆ ಕಿತ್ತುಕೊಂಡು ಹೋದುದಾಗಿ ಹೇಳಿದ್ದಾಗಿಯೂ ತಿಳಿಯಬರುತ್ತದೆ. ಇದು ನಿಜವಾಗಿದ್ದರೆ ಇದಕ್ಕಿಂತಲೂ ವಿಷಾದಕರವಾದುದು ಯಾವುದು? ತಾಲ್ಲೂಕು ಕಸಬಾದಲ್ಲಿಯೇ ಇಂತಹ ಅಶ್ರುತಪೂರ್ವವಾದ ಕೃತ್ಯ ನಡೆದಿರುವಲ್ಲಿ ಗ್ರಾಮಾಂತರಗಳ ಸ್ಥಿತಿ ಹೇಳಬೇಕಾದುದೇನು?

೨. ತಿಪ್ಪಸಂದ್ರದ ಕಾಶಿವಿಶ್ವೇಶ್ವರನ ದೇವಾಲಯಕ್ಕೆ ಬರಾಮದ್ದಾರನಾದ ಅರ್ಚಕನಿದ್ದರೂ ಪೂಜೆಮಾಡದೆ ಉದಾಸೀನನಾಗಿದ್ದುದರಿಂದ ಆ ದೇವಾಲಯವನ್ನು ಧರ್ಮದ ಮೇಲೆ ದೃಷ್ಟಿಯುಳ್ಳ ಜೀರ್ಣೋದ್ಧಾರ ಮಾಡಿದ ಚೌಡಂಬಣ್ಣರ ಮನೆಯವರೇ ಪೂಜಿಸುತ್ತಿದ್ದಾರೆ. ಮತ್ತು ತಿಪ್ಪಸಂದ್ರದಲ್ಲಿರುವ ಮಠದ ಈಶ್ವರ, ಮತ್ತು ವಿಘ್ನೇಶ್ವರ ಈ ದೇವಾಲಯಗಳಲ್ಲಿ ಪೂಜೆ ಸರಿಯಾಗಿ ನಡೆಯುವುದಿಲ್ಲ.

೩. ಮುದಿಗೆರೆ ರಂಗನಾಥ ದೇವಾಲಯಕ್ಕೆ ಭಾರಿಮಾನ್ಯ ತಸ್ತೀಕು ವಗೈರೆ ಇದ್ದರೂ ರಥೋತ್ಸವ ನಿಂತು ಬಹುಕಾಲವಾಯಿತು. ದೇವಾಲಯವೂ ಶಿಥಿಲವಾಗಿದೆ. ಅದೇಗ್ರಾಮದ ಆಂಜನೇಯ, ಬೆಗಳೂರ ಆಂಜನೇಯ, ಬಿಸ್ಕೂರು ಶಿವಾಲಯಗಳು ೨, ಸಣ್ಣೇನಹಳ್ಳಿ ಚೆನ್ನಿಗರಾಯ, ತಾವರೆಕೆರೆ ಆಂಜನೇಯ, ಗಂಗೇನಹಳ್ಳಿ ಆಂಜನೇಯ, ಮುತ್ತುಗದಹಳ್ಳಿ ತೊಳಸಮ್ಮ, ನೇರ್ಲಕೆರೆ ನರಸಿಂಹಸ್ವಾಮಿ, ತಾಳೆಕೆರೆ ಚೆನ್ನಿಗರಾಯ, ನಾರಾಯಪುರದ ಆಂಜನೇಯ, ಈ ದೇವಾಲಯಗಳಿಗೆಲ್ಲಾ ಮಾನ್ಯಜಮೀನು ವಗೈರೆ ಇದ್ದರೂ ಬಹಳ ಶಿಥಿಲವಾಗಿ ರಿಪೇರಿಯಿಲ್ಲದೆಯೂ ಪೂಜೆಯಿಲ್ಲದೆಯೂ ಇವೆ. ಇನ್ನೂ ವಿಚಾರಮಾಡಿದರೆ ಶತಶಃಕಂಡು ಬರಬಹುದು. ಸ್ಥಳದ ಜನರಿಗೆ ಭಕ್ತಿಕಡಮೆ. ಕೆಲವರಿಗೆ ಅರ್ಚಕರ ದಾಕ್ಷಿಣ್ಯ ಮತ್ತು ಸರ್ಕಾರಕ್ಕೆ ತಿಳಿಸಿದರೆ ತಮಗೇನು ಬಂದೀತೊ ಎಂಬ ಭೀತಿ. ತಾಲ್ಲೂಕು ಅಮಲ್‌ದಾರರೇ ಮೊದಲಾದ ದೊಡ್ಡ ಅಧಿಕಾರಿಗಳು ಸರ್ಕ್ಯೂಟ್ ಕಾಲದಲ್ಲಿ ಅಕಸ್ಮಾತ್ ದೇವಾಲಯಗಳನ್ನು ಪ್ರವೇಶಿಸಿ ಪರಾಂಬರಿಸುತ್ತಾ ಬಂದರೇ ವಿನಾ ಈ ನ್ಯೂನತೆಗಳು ಕಡಿಮೆಯಾಗುವಹಾಗಿಲ್ಲ. ಮತ್ತು ನಿಯಮನಿರ್ಮಾಣಸಭಾಸದರಲ್ಲಿ ಕೆಲವರಾದರೂ ತಮ್ಮ ಡಿಸ್ಟ್ರಿಕ್ಟುಗಳಲ್ಲಿ ವಿಚಾರಿಸಿ ಸಾಲ್‌ಸಾಲ್‌ಮೀಟಿಂಗುಗಳಲ್ಲಿ ಪ್ರಶ್ನೆಮಾಡಿ ಲೋಪಗಳನ್ನು ಸರ್ಕಾರದವರ ಗಮನಕ್ಕೆ ತಂದರೂ ಒಳ್ಳೆಯದು. ಬ್ರಿಟಿಷ್‌ಇಂಡಿಯಾದ ಕೌನ್ಸಿಲ್‌ಗಳಲ್ಲಿ ವೃತ್ತಪತ್ರಗಳಲ್ಲಿ ಪ್ರಕಟವಾದ ವಿಷಯಗಳು ಮೆಂಬರುಗಳಿಂದ ಉದಹರಿಸಲ್ಪಟ್ಟು ತಕ್ಕ ಫಲಗಳನ್ನು ಹೊಂದುತ್ತಿರುವುದು ಎಲ್ಲರಿಗೂ ತಿಳಿದೇ ಇರುವುದರಿಂದ ಅದನ್ನೇ ಇಲ್ಲಿಯೂ ಅನುಸರಿಸುವುದು ಯುಕ್ತವೆಂದು ಸೂಚಿಸಿದರೆ ಅತ್ಯುಕ್ತಿಯಾಗಲಾರದು.

ಸಕಲಬಾಬುಗಳನ್ನು ಪರಿಷ್ಕರಿಸಿ ಮೈಸೂರ ರಾಜ್ಯವನ್ನು ಅತ್ಯುತ್ತಮದ ದೆಸೆಗೆ ತರಬೇಕೆಂಬ ದೃಢಸಂಕಲ್ಪದಿಂದ ಮಹಸತ್ತ್ವ ಮಾಡುತ್ತಿರುವ ಶ್ರೀದಿವಾನರವರು ಮುಖ್ಯಬಾಬುಗಳಲ್ಲಿ ಬಲವಾದ ಮುಜರಾಯಿ ಇಲಾಖಾ ವಿಷಯದಲ್ಲಿಯೂ ಸ್ವಲ್ಪ ಗಮನವಿಟ್ಟರೆ ಸಕಲ ನ್ಯೂನತೆಗಳೂ ಪರಿಹಾರವಾಗುವುದರಲ್ಲಿ ಸಂಶಯವಿಲ್ಲ. ಅಂತಹ ಸಮಯವು ಆದಷ್ಟುಬೇಗನೆ ಒದಗಲೆಂದು ಆದರದಿಂದ ನಿರೀಕ್ಷಿಸುತ್ತಿರುವ

ಸತ್ಯವಾದಿ

ಜೋಳದ ಪೈರಿಗೆ ತಗಲುವ ಕಾಡಿಗೆ ರೋಗ.

ಕೆಲವು ಪ್ರಾಂತ್ಯಗಳಲ್ಲಿ ಜೋಳದ ಫಸಲಿಗೆ ಕಾಡಿಗೆ ರೋಗದಿಂದ ಬಹಳಮಟ್ಟಿಗೆ ಲುಕ್ಸಾನು ಉಂಟಾಗುತ್ತೆ. ಇದು ಪ್ರಾಯಶಃ ಪೈರು ತೆನೆಯೊಡೆದು ಬಲಿಯುತ್ತಿರುವಾಗ ಕಾಳುಗಳಿಗೆ ತಗಲುತ್ತೆ. ಇದಕ್ಕೆ ಪೂರ್ವ ರೋಗ ತಗಲದ ಗಿಡಕ್ಕೂ ತಗಲದಿರುವ ವ್ಯತ್ಯಾಸ ತಿಳಿಯುವದಿಲ್ಲ. ಹೂವು ಬಿಡುವಾಗ ರೋಗವು ತಲೆದೋರುತ್ತೆ. ಪೈರು ಕಾಳಾಗದೆ ಕಪ್ಪು ಪುಡಿಯಿಂದ ಕೂಡಿದ್ದಾಗುವದು. ರೋಗ ತಗಲಿದ ಕಾಳುಗಳುರುವಾಗ ಬೆಳೆದು ಬಿಳಿದು ಬಣ್ಣದಿಂದ ಕೂಡಿರುತ್ತೆ. ಕೆಲವು ತೆನೆಗಳಲ್ಲಿ ಒಂದೇ ಕಾಳು ಮತ್ತೆ ಕೆಲವು ತೆನೆಗಳಲ್ಲಿ ಅರ್ಧದಾಲು ಕಾಳುಗಳು ರೋಗ ತಗಲಿದ್ದಾಗಿರುತ್ತವೆ. ಈ ಕಾಳುಗಳು ಬಲಿತ ನಂತರ ಒಡೆದು ಒಳಗೆ ಅಡಗಿರುವ ಕಪ್ಪುಪುಡಿಯು ಇತರ ಕಡೆಗಳಿಗೆ ವ್ಯಾಪಿಸುತ್ತದೆ. ಜೋಳವನ್ನು ಬಡಿಯುವಾಗ ರೋಗದ ಕಾಳುಗಳಲ್ಲಿರುವ ಕಪ್ಪುಪುಡಿಯು ಧೂಳಿಗೆ ಅಂಟಿಕೊಳ್ಳುವದಲ್ಲದೆ ಇತರ ಕಾಳುಗಳಿಗೂ ವ್ಯಾಪಿಸುತ್ತದೆ. ಈ ಕಾಳುಗಳನ್ನು ಬಿತ್ತನೆಗೆ ಉಪಯೋಗಿಸುವದರಿಂದ ಫಸಲು ಕೆಡಲು ಅವಕಾಶವಾಗುತ್ತೆ.

ಸಸಿಗಳಿಗೆ ತಗಲುವ ಸಸ್ಯಾಣುಜಾಡ್ಯಗಳಲ್ಲಿ ಇದು ಒಂದಾಗಿರುತ್ತೆ. ಸಾಧಾರಣವಾಗಿ ಇದು ಕಣ್ಣಿಗೆ ಗೋಚರವಾಗುವದಿಲ್ಲ. ತೆನೆ ಬಿಡುವಾಗ ಕಾಣಿಸಿಕೊಳ್ಳುತ್ತದೆ. ರೋಗ ತಗಲಿದ ಕಾಳುಗಳನ್ನು ಬಿತ್ತನೆ ಚೆಲ್ಲಿದರೆ ಜೋಳದ ಪೈರಿನ ಜೊತೆಗೆ ಸಣ್ಣ ಸಣ್ಣ ಕಳೆಗಳು ಮೊಳೆಯುತ್ತವೆ. ಈ ಕಳೆಗಳು ಜೋಳದ ಸಸಿಗಳಲ್ಲಿ ಸೇರಿ ತೆನೆ ಬಿಡುವಾಗ ಕಾಣಿಸಿಕೊಳ್ಳುತ್ತವೆ. ಇವು ಪೈರಿಗೆ ಬರತಕ್ಕ ಸಸ್ಯಾಹಾರವನ್ನು ಅಪಹರಿಸಿ ಫಸಲನ್ನು ನಾಶಪಡಿಸುತ್ತವೆ.

ಆದಕಾರಣ ಕಾಳುಗಳನ್ನು ಮೈಲುತುತ್ತದ ನೀರಿನಲ್ಲಿ ೧೫ ನಿಮಿಷಗಳ ಕಾಲ ಊನಿಹಾಕಬೇಕು. ಒಂದು ತೊಲಾ ಮೈಲುತುತ್ತಕ್ಕೆ ಒಂದು ಸೀರೆ ನೀರು ಪ್ರಕಾರ ಸೇರಿಸಿ ದ್ರಾವಕವನ್ನು ಮಾಡಿ ಒಂದು ಮರದ ತೊಟ್ಟಿಯಲ್ಲಾಗಲೀ ಮಣ್ಣಿನ ಪಾತ್ರೆಯಲ್ಲಾಗಲಿ ಇಟ್ಟು ಕಾಳುಗಳನ್ನು ಊನಿಹಾಕಬೇಕು. ಮೇಲೆ ತೇಲತಕ್ಕ ಕಾಳುಗಳನ್ನು ಬಿಸಾಡತಕ್ಕದ್ದು. ನಂತರ ಕಾಳುಗಳನ್ನು ತೆಗೆದು ಗೋಣೀಚೀಲದ ಮೇಲಾಗಲೀ ಅಥವಾ ನೆಲದ ಮೇಲಾಗಲೀ ಹರಹಾಕಬೇಕು. ಈ ಪ್ರದೇಶವನ್ನು ದ್ರಾವಕದಿಂದ ತೊಳೆದು ನಂತರ ಒಣಹಾಕುವುದು ಒಳ್ಳೇದು. ಬಿತ್ತನೆ ಚೆಲ್ಲುವದಕ್ಕೆ ಸುಮಾರಾಗಿ ಒಣಗಿದ್ದರೆ ಸಾಕು. ಕೂರಿಗೆಯಿಂದ ಬಿತ್ತನ ಹಾಕುವಾಗ ಕಾಳುಗಳು ತೇವವಿಲ್ಲದ ಹಾಗೆ ಚೆನ್ನಾಗಿ ಒಣಗಿಸಬೇಕು.

ಒಂದು ಎಕರೆಗೆ ೬ ರಿಂದ ೯ ಪೌಂಡು ಬಿತ್ತನೆ ಬೇಕಾಗುವದು. ಇದಕ್ಕೆ ಸುಮಾರು ೨ ಸೀಸೆ ದ್ರಾವಕ ನೀರು ಬೇಕಾಗುತ್ತೆ. ಒಂದು ಎಕರೆ ಬಿತ್ತನೆಗೆ ಇದರ ಲಾಗುವದು ಸುಮಾರು ಒಂದಾಣೆ ಆಗುತ್ತೆ.

ಬಾವಲಿಗಳನ್ನು ಸಾಕುವದರಿಂದ ಎರಡು ತರಹೆಯ ಉಪಯೋಗಗಳುಂಟು. ಇದರಿಂದ ಉತ್ಪತ್ತಿಯಾಗುವ ಗೊಬ್ಬರವು ಅಮೌಲ್ಯವಾದದ್ದು. ಇದಕ್ಕೆ ಟನ್ ಒಂದಕ್ಕೆ ಸಾಧಾರಣವಾಗಿ ೯೦ ರೂಪಾಯಿ ಬೆಲೆ ಸಿಕ್ಕುತ್ತೆ. ಬಾವಲಿಗಳನ್ನು ಸೊಳ್ಳೆಗಳು ಕಡಿಯುವದಿಲ್ಲ. ಇದರ ದೇಹಪ್ರಕೃತಿಯೂ ಮತ್ತು ದುರ್ವಾಸನೆಯೂ ಇದಕ್ಕೆ ಕಾರಣವಾಗಿರಬಹುದು. ೫೦ ಸಾವಿರ ಬಾವಲಿಗಳನ್ನು ಸಾಕಲು ಸುಮಾರು ೩೫,೦೦೦ ರೂಪಾಯಿನ ಕಟ್ಟಡವು ಬೇಕಾಗುತ್ತೆ. ಇದರಿಂದ ವರ್ಷಕ್ಕೆ ಸುಮಾರು ೩,೦೦೦ ರೂಪಾಯಿನಷ್ಟು ಗೊಬ್ಬರ ದೊರೆಯುತ್ತೆ. ಮತ್ತು ಸುತ್ತುಮುತ್ತ ಪ್ರದೇಶಗಳಲ್ಲಿ ಸೊಳ್ಳೆಗಳು ಕಮ್ಮಿಯಾಗಿ ಆರೋಗ್ಯವು ಹೆಚ್ಚುವುದೆಂದು ತಿಳಿಯಬಂದಿದೆ.

ಅ. ಗ.

ಗೃಹಕೃತ್ಯದ ನೋಟೀಸ್.

ತುಂಕೂರು ತಾಲ್ಲೋಕು ಕೋರದ ಸಮ್ಮತು ಬ್ರಹ್ಮಸಂದ್ರದಲ್ಲಿರುವ ಚೆನ್ನಬಸವೇಗೌಡರ ಮಕ್ಕಳು ಚಿಕ್ಕಣ್ಣಗೌಡನಾದ ನಾನು ಈ ಮೂಲಕ ತಿಳಿಸುವುದೇನೆಂದರೆ— ನನಗೆ ಐದುಜನ ಗಂಡುಮಕ್ಕಳಿರುತ್ತಾರೆ, ಹಿರೀಮಗನಾದ ವೀರಪ್ಪನು ಕೋರದ ಕಸಬಾ ಶಾನುಭೋಗನಾಗಿ ಮನೆಯ ಆಡಳಿತಗಳನ್ನು ನೋಡಿಕೊಳ್ಳುತ್ತಾನೆ, ಒಂದುನೂರೆಂಭತ್ತು ಕಂದಾಯ ಕೊಡತಕ್ಕ ರೈತನಾಗಿರುತ್ತಾನೆ. ನನ್ನ ಎರಡನೇಮಗ ಚೆನ್ನಬಸವಯ್ಯ ಎಂಬವನಿಗೆ ಲಗ್ನ ವಗೈರೆ ಆಗಿದೆ, ಆದಾಗ್ಯೂ ಸಂಸಾರತರದಲ್ಲಿರದೆ ದುಸ್ಸಂಗದಿಂದ ಸಾಲ ವಗೈರೆ ಮಾಡುತ್ತಾ ಇರುವಂತೆ ಕಂಡುಬಂದಿದೆ. ಇವನಿಗೆ ಸಾಲಾ ವಗೈರೆಗಳನ್ನು ಯಾರೂ ಕೊಡಕೂಡದು, ಕೊಟ್ಟಲ್ಲಿ ಮುಂದೆ ಖಂಡಿತ ಲುಕ್ಸಾನಿಗೆ ಗುರಿಯಾಗುತ್ತಾರೆ. ಎಂಬ ಅಂಶವನ್ನು ಈ ಮೂಲಕ ತಿಳಿಸಿರುತ್ತೇನೆ.

ತಾ॥ ೧೯-೫-೧೯೧೪ ಚಿಕ್ಕಣ್ಣಗೌಡನರುಜು.

ಸ್ಕೂಲ್ ಫೈನಲ್ ಪರೀಕ್ಷೆ.

ಮೆಟ್ರಿಕ್ಯುಲೇಷನ್ ಪರೀಕ್ಷೆಯು ಕಠಿನವಾಗಿದೆಯೆಂಬ ಕಾರಣದಿಂದ ಅದರ ಸ್ಥಾನಕ್ಕೆ ಸ್ಕೂಲ್ ಫೈನಲ್ ಪರೀಕ್ಷೆಯು ಈಗ ಏರ್ಪಟ್ಟಿದೆಯಷ್ಟೆ. ಇದರಂತೆಯೇ ತಮ್ಮಲ್ಲೂ ಏರ್ಪಡಿಸಿಕೊಡಬೇಕೆಂದು ಪಾಯಮ್ನ್ಯಪ್ರಾಂತದ ಜನರು ಪಂಜಾಬು ವಿಶ್ವವಿದ್ಯಾಲಯದವರನ್ನು ಕೋರಿದರು. ಅದಕ್ಕೆ "ಇದರ ವಿಷಯವಾಗಿ ವಿಶೇಷವಾದ ಚರ್ಚೆಯು ನಡೆದು ಕಡೆಗೆ ಇದರಿಂದ ಉಪಾಧ್ಯಾಯರ ಅಧಿಕಾರವು ಹೆಚ್ಚಿಹೋಗಿ, ಇತರರ ಪ್ರೋತ್ಸಾಹಾದಿಗಳಿಂದ ಪರೀಕ್ಷಕರ ನ್ಯಾಯಬುದ್ಧಿಯು ವ್ಯತ್ಯಾಸಗೊಳ್ಳುವುದಾದಕಾರಣ, ಸ್ಕೂಲ್ ಫೈನಲ್ ಪರೀಕ್ಷೆಯನ್ನು ನಾವು ಅಂಗೀಕರಿಸುವುದಿಲ್ಲ" ವೆಂದು ವಿಶ್ವವಿದ್ಯಾಲಯದವರು ಉತ್ತರವನ್ನಿತ್ತುದಲ್ಲದೆ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲೇ ಕೆಲ ವ್ಯತ್ಯಾಸಗಳನ್ನು ಮಾಡಿಕೊಡುವೆವೆಂದು ಹೇಳಿರುತ್ತಾರೆ. ಸ್ಕೂಲ್ ಫೈನಲ್ ಪರೀಕ್ಷಾಪದ್ಧತಿಯೊಳಗಣ ದೋಷಗಳು ಇತರ ವಿದ್ಯಾಪೀಠದವರಿಗೂ ಈಗ ಗೊತ್ತಾಗುತ್ತಿವೆ. ಅವುಗಳೆಲ್ಲಾ ಮಾರ್ಪಾಡಾಗುವ ಸಂಭವವು ಉಂಟಾಗದೆ ಹೋಗುವುದಿಲ್ಲ.

ಅದ್ಭುತ ದೀಪ.

ಮಾರ್ಕೋನಿಯವರು ತಂತಿಯಿಲ್ಲದೆ ವಾರ್ತೆಯನ್ನು ಕಳುಹಿಸುವ ಉಪಾಯವನ್ನು ವಿದ್ಯುಚ್ಛಕ್ತಿಯ ಸಾಧನದಿಂದ ಕಂಡುಹಿಡಿದಿರುವುದು ಜಗತ್ಪ್ರಸಿದ್ಧವಾಗಿರುವುದಷ್ಟೆ. ಆದರೆ ವಿದ್ಯುಚ್ಛಕ್ತಿನಿಂದ ದೀಪವನ್ನು ಹತ್ತಿಸಬೇಕಾದರೆ ಇದುವರೆಗೆ ತಂತಿಯ ಸಾಧನವು ಅವಶ್ಯಕವಾಗಿದ್ದುದನ್ನು ತಪ್ಪಿಸಿ ತಂತಿ ಮೊದಲಾದ ಯಾವ ಸಾಧನವೂ ಇಲ್ಲದೆ ೬ ಮೈಲಿಗಳ ದೂರದಲ್ಲಿರುವ ದೀಪವನ್ನು ವಿದ್ಯುಚ್ಛಕ್ತಿ ಪ್ರಯೋಗದಿಂದ ಹತ್ತಿಸುವ ಅದ್ಭುತವಾದ ಉಪಾಯವನ್ನು ಈಗ ಕಂಡುಹಿಡಿದಿರುವರು. ಅಮೇರಿಕಾದೇಶದ ವಿದ್ಯುಚ್ಛಾಸ್ತ್ರ ಪಂಡಿತನೊಬ್ಬನು ಇದಕ್ಕೆ ಮುಂಚೆಯೇ ಇಂಥ ಅದ್ಭುತ ದೀಪ ಪ್ರಕಾಶನವು ಕೆಲಕಾಲದೊಳಗಾಗಿ ಸಾಧಿಸಲ್ಪಡುವುದೆಂದು ಹೇಳಿದ್ದನು. ಅದು ಈಗ ಸಾಧಿತವೇ ಆಯಿತು. ಮನೆಯ ಮೇಲಿನ ಹೊದಿಕೆಯ ಮೇಲಿರುವ ಯಾವುದಾದರೊಂದು ವಸ್ತುವನ್ನು ಆಧಾರಗೊಳಿಸಿಕೊಂಡು ವಿದ್ಯುಚ್ಛಕ್ತಿಯಂತ್ರಾಲಯದಿಂದ ಶಕ್ತಿಯನ್ನು ಪ್ರಯೋಗಿಸಿ ಪ್ರತಿಯೊಂದು ಮನೆಗೂ ದೀಪಾರಾಧನೆಯನ್ನು ಮುಂದೆ ಮಾಡುವರಂತೆ! ಈ ಅದ್ಭುತವಾದ ವಿದ್ಯುಚ್ಛಕ್ತಿಯಿಂದ ಜಗತ್ತಿನಲ್ಲಿ ಮುಂದೆ ಇನ್ನೆಷ್ಟು ವಿಚಿತ್ರಗಳು ಸಂಭವಿಸುವವೋ!

ದೇಶಭಾಷಾಪ್ರೋತ್ಸಾಹ.

ಭರತಖಂಡದಲ್ಲಿ ಭಾರತೀಯರ ದೇಶಭಾಷೆಗಳ ಅಭ್ಯಾಸಕ್ಕೆ ತಕ್ಕ ಪ್ರೋತ್ಸಾಹವಿಲ್ಲದೆ ಅದು ಉದಾಸೀನಮಾಡಲ್ಪಡುತ್ತಿದೆ ಆದರೆ ಇವೇ ನಮ್ಮ ದೇಶಭಾಷೆಗಳ ಅಭ್ಯಾಸಕ್ಕೆ ಸೀಮೆಯಲ್ಲಿ ವಿಶೇಷಪ್ರೋತ್ಸಾಹವು ಈಗ ಕಲ್ಪಿಸಲ್ಪಡುತ್ತಿದೆ. ಈ ಭಾರತೀಯ ಭಾಷೆಗಳ ಅಭ್ಯಾಸಕ್ಕಾಗಿಯೇ ಅಲ್ಲಿ ಒಂದು ದೊಡ್ಡ ಕಲಾಶಾಲೆಯು ಸ್ಥಾಪಿಸಲ್ಪಡುವುದರಲ್ಲಿದೆ. ಇದರ ಸ್ಥಾಪನಾರ್ಥವಾಗಿ ಅಲ್ಲಿನ ಗೌರ್ನ್ಮೆಂಟಿನವರು ವರ್ಷ ೧ ಕ್ಕೆ ೬ ಲಕ್ಷ ರೂ.ಗಳನ್ನೂ ಇಂಡಿಯಾಗೌರ್ನ್ಮೆಂಟಿನವರು ೧೮೫೦೦ ರೂ.ಗಳನ್ನೂ ಲಂಡನ್ನಿನ ಸ್ಥಾನಿಕಸಭೆಯವರು ೨೦ ಸಾವಿರ ರೂ.ಗಳನ್ನೂ ಕೊಡಲು ಒಪ್ಪಿಕೊಂಡಿದ್ದಾರೆ. ಆದರೆ ಆ ಕಲಾಶಾಲಾಸ್ಥಾಪಕರು ಇನ್ನೂ ವರ್ಷ ೧ ಕ್ಕೆ ೯೫೦೦ ರೂ.ಗಳು ಆಗಬೇಕೆಂದು ಹೇಳುತ್ತಿದ್ದಾರೆ. ಇದರಮೇಲೆ ಇದರ ಮೂಲಧನವು ಕನಿಷ್ಠಪಕ್ಷ ೧೫ ಲಕ್ಷ ರೂ.ಗಳಾದರೂ ಇರಬೇಕೆಂಬುದು ಅವರಭಿಪ್ರಾಯವು. ಉಪಯೋಗಿಸಿದಂತೆ ಕ್ಷೀಣಿಸುತ್ತ ಬರುವ ಭೂಗರ್ಭಾದಿಸಂಪತ್ತಿಗಳನ್ನೆಲ್ಲಾ ವಿದೇಶೀಯರ ಬೊಕ್ಕಸಕ್ಕೆ ತುಂಬುತ್ತಿರುವ ಸಹನಶೀಲೆಯಾದ ಭಾರತಮಾತೆಯು ಅಕ್ಷಯವಾದ ತನ್ನ ಭಾಷಾಸಂಪತ್ತಿಯು ಪರರಿಂದ ಉಪಯುಕ್ತವಾಗುತ್ತ ಬಂದರೆ ಅದನ್ನು ನೋಡಿ ಅಸಹನೆಪಡುವಳೆ?

ಕ್ಷಾಮ.

ಸೊಲ್ಲಾಪುರ ಪ್ರಾಂತದಲ್ಲಿ ಕಳೆದ ೨ ವರ್ಷಗಳಿಂದಲೂ ಸರಿಯಾಗಿ ಮಳೆಯಾಗದೆ ಕ್ಷಾಮವುಂಟಾಗಿದೆ. ದನಕರುಗಳಿಗೆ ಮೇವೇ ಇಲ್ಲದೆ ರೈತರು ಬಹು ಚಿಂತಾಕ್ರಾಂತರಾಗಿದ್ದಾರೆ. ಪ್ರಜೆಗಳು ಕ್ಷಾಮನಿವಾರಣಾರ್ಥವಾದ ಫಂಡನ್ನೇರ್ಪಡಿಸಿದ್ದಾರೆ. ಹಲವುಕಡೆ ಕುಡಿಯುವ ನೀರಿಗೆ ತುಂಬಾ ಅಭಾವವಾಗಿದೆ. ಆಹಾರದ ಕೊರತೆಯಿಂದ ಬಡಜನರು ಸತ್ವಗುಂದಿದ್ದಾರೆ. ಇದರ ವಿಷಯವಾಗಿ ಸರ್ಕಾರದವರು ಪ್ರಕಟಿಸಿರುವುದೇನೆಂದರೆ—ಬಹುಶಃ ೮೦೦ ಚದರ ಮೈಲಿಯವರೆಗೆ ಈ ಕ್ಷಾಮಬಾಧೆಯು ವ್ಯಾಪಿಸಿದೆ. ಪಶುಗಳಿಗ ಮೇವು ಬಹಳ ಕಡಿಮೆಯಾಗಿದೆ. ಈಗ್ಗೆ ೧೫ ವರ್ಷಗಳ ಕೆಳಗೆ ಇಂಥ ಸ್ಥಿತಿಗತಿಗಳೇ ಸಂಭವಿಸಿ ಜನರು ಕುರಿಯಹಿಂಡಿನಂತೆ ಕ್ಷಾಮನಿವಾರಣೆಯ ಕೂಲಿಗೆಲಸಕ್ಕೆ ಹೋಗಿ ಸೇರಿಕೊಳ್ಳುತ್ತಿದ್ದರು. ಆದರೆ ಈಗ ಬೇಸಾಯಗಾರರೂ, ಕಸಬುಗಾರರೂ ಸಹ ಮೇವು ನೀರು ದೊರೆವ ಸ್ಥಲಗಳಿಗೋ ಅಥವಾ ಕೂಲಿ ದೊರಕುವ ಸ್ಥಲಗಳಿಗೋ ಹೋಗುತ್ತಿದ್ದಾರೆ. ಸರ್ಕಾರದಿಂದ ಹೊರಬುಬರುತ್ತಿರುವವರಿಗೆ ನೀರಾನದಿಯ ಕಾಲ್ವೆಯ ಕೆಲಸದಲ್ಲಿ ಕೂಲಿಯು ದೊರೆಯುತ್ತಿದೆ. ಜನರು ತಮಗೆ ತಾವೇ ಕೂಲಿಯನ್ನು ಹುಡುಕಿಕೊಂಡು ಹೋಗುತ್ತಿರುವುದರಿಂದಲೂ, ಇವರಿಗೆ ಸುಲಭವಾಗಿ ಕೂಲಿಯು ದೊರೆಯುವಂತೆ ಮಾಡಬೇಕಾದುದು ಅವಶ್ಯಕವಾದುದರಿಂದಲೂ ಕ್ಷಾಮನಿವಾರಣ ಕಾರ್ಯವನ್ನು ಆರಂಭಿಸುವುದು ಅವಶ್ಯಕವಾಗಿದೆ. ಗೆಯ್ಯಲು ಅಶಕ್ತರಾದವರಿಗೆ ಉಚಿತವಾದ ಆಹಾರಸಹಾಯವನ್ನು ಮಾಡಬೇಕಾಗಿದೆ. ಮತ್ತು ರೈತರಿಗೆ ತಕ್ಕಾವಿ ಸಾಲಗಳನ್ನು ಕೊಡುವುದು, ಕಂದಾಯದ ವಸೂಲಿಯನ್ನು ನಿಲ್ಲಿಸಿರುವುದು ಹೀಗೆ ಆಗಬೇಕಾದ ಸಹಾಯಗಳೆಲ್ಲಾ ಮಾಡಲ್ಪಡುತ್ತಿವೆ. ಈ ಸಂದರ್ಭದಲ್ಲಿ ಪ್ಲೇಗಿನಿಂದ ಹೊರತು ಇತರ ಕಾರಣದಿಂದ ಆಗಿರುವ ಮರಣಗಳ ಸಂಖ್ಯೆಯು ಕಡಿಮೆಯಾಗಿಯೇ ಇದೆ. ಬೇಸಗೆಕಾಲದಲ್ಲಿ ಸರ್ಕಾರದಿಂದ ಉಚಿತಸಹಾಯವನ್ನು ಹೊಂದುವವರ ಸಂಖ್ಯೆಯು ಪದ್ಧತಿಯಂತೆ ಹೆಚ್ಚುವುದಕ್ಕೆ ಪ್ರತಿಯಾಗಿ ಜನರು ಬೇರೆಬೇರೆ ಸ್ಥಲಗಳಿಗೆ ಹೋಗುತ್ತಿರುವುದರಿಂದ ಆ ಸಂಖ್ಯೆಯು ಕಡಿಮೆಯಾಗಿದೆ ಎಂದು ತಿಳಿಯಿಸಿರುತ್ತಾರೆ.

ಬೊಂಬಾಯಿಯಲ್ಲಿ ಅಗ್ನಿಯ ಅನಾಹುತ.

ಈ ವರ್ಷ ಬೊಂಬಾಯಿಯೊಳಗೆ ಇದುವರೆಗೆ ಬೆಂಕಿಯಿಂದುಂಟಾದ ಅನಾಹುತಗಳ ಸಂಖ್ಯೆಯು ೩೩ ಆಗಿರುತ್ತಿವೆ. ಇವುಗಳಿಂದೆಲ್ಲಾ ಉಂಟಾಗಿರುವ ನಷ್ಟವು ೮೯೩೦೦ ರೂ.ಗಳಾಗುವುವು. ಮಾರ್ಚಿ ತಾ॥ ೨ ರೊಳಗೆ ೬ ಆವೃತ್ತಿ ಅಗ್ನಿಯಾಪತ್ತು ಸಂಭವಿಸಿ ೫೦ ಲಕ್ಷ ರೂ.ಗಳ ಸೊತ್ತಿನ ನಷ್ಟವಾಗಿದ್ದಿತು. ಕಳೆದ ಮೇ ತಾ॥ ೨೬ ರಲ್ಲಿ ಬೆಳಗಿನಜಾವ ೩ ಗಂಟೆ ಹೊತ್ತಿನಲ್ಲಿ ಕೊಲಾಬಾದ ಹತ್ತಿಯ ಉಗ್ರಾಣಕ್ಕೆ ಬೆಂಕಿಬಿದ್ದು ಭಯಂಕರವಾಗಿ ಉರಿದಿತು. ಬೆಂಕಿಯನ್ನಾರಿಸುವುದಕ್ಕೆ ೮ ಜಲ ಯಂತ್ರಗಳನ್ನು ತಂದಿದ್ದರು. ಆ ಉಗ್ರಾಣದಲ್ಲಿದ್ದ ಹತ್ತಿಯಲ್ಲಿ ೧೬೩೦೦ ಬೇಲುಗಳು ಸುಟ್ಟುಹೋದುವು. ಇದರಿಂದ ೧೫ ಲಕ್ಷ ರೂ.ಗಳವರೆಗೆ ನಷ್ಟವಾಗಿರುವುದು. ಈ ವರ್ಷದಲ್ಲಿ ಸಂಭವಿಸಿದ ದೊಡ್ಡ ಅಗ್ನಿವಿಪತ್ತುಗಳಲ್ಲಿ ಇದು ೨ ನೆಯದು.

ಮಾಪಿನ ಓಟಿಗಳೊಳಗೆ ಬತ್ತದಹೊಟ್ಟನ್ನು ತುಂಬಿ ಅದಕ್ಕೆ ಸ್ವಲ್ಪ ಬೆಂಕಿಯನ್ನು ಹಚ್ಚಿ ಮೂಟೆಗಳೊಳಗೆ ಯಾರೋ ಬಚ್ಚಿಡುತ್ತಿರುವರೆಂದೂ, ಆ ಬೆಂಕಿಯು ಹೊಗೆಯಾಡದಂತೆ ಕಿವರುತ್ತಿದ್ದು ಸ್ವಲ್ಪ ಕಾಲಾನಂತರ ಓಟಿಯನ್ನೆಲ್ಲಾ ಸುಟ್ಟು ಬಳಿಕ ಹತ್ತಿಗೆ ಅಂಟಿಕೊಳ್ಳುತ್ತಿರುವುದೆಂದೂ ಊಹಿಸಲ್ಪಡುತ್ತಿದೆ.

ಹೀಗೆ ಅಗ್ನಿಯಾಪತ್ತುಗಳು ಬೊಂಬಾಯಿಯಲ್ಲಿ ವಿಶೇಷವಾಗಿ ಆಗುತ್ತಿರುವುದರಿಂದ ಸರ್ಕಾರದವರು ಹತ್ತಿಯ ಉಗ್ರಾಣಗಳ ಬಳಿಯಲ್ಲಿ ಪೋಲೀಸು ಕಾವಲನ್ನು ಏರ್ಪಡಿಸಿದ್ದಾರೆ. ಆದರೂ ಅಲ್ಲಲ್ಲಿ ಇಂಥ ವಿಪತ್ತುಗಳು ಸಂಭವಿಸುತ್ತಲೇ ಇರುವುದು ಆಶ್ಚರ್ಯಕರವಾಗಿದೆ. ಈ ವಿಷಯವಾಗಿ ವಿಚಾರನಡೆಯಿಸುವುದಕ್ಕಾಗಿ ಒಂದು ಸಂಘವು ಏರ್ಪಟ್ಟು ವಿಚಾರಣೆ ನಡೆಯುತ್ತಿದೆ. ಪೋಲೀಸು ಸೂಪರಿಂಟೆಂಡೆಂಟರು ಕೊಟ್ಟ ವಾಜಿಮ್ಮಲದಲ್ಲಿ-ಸುಟ್ಟುಹೋದ ಉಗ್ರಾಣಗಳ ಬಳಿಯಲ್ಲಿ ಸಂಶಯಕ್ಕಾಸ್ಪದರಾದ ಮನುಷ್ಯರ ಸುಳಿದಾಟವೇನೂ ಇರಲಿಲ್ಲವೆಂದು ಹೇಳುತ್ತಾರೆ. ಮಾರ್ವಾಡಿ ವರ್ತಕಸಂಘದವರೊಬ್ಬರು ಕೊಟ್ಟ ವಾಜಿಮ್ಮಲದಲ್ಲಿ-ವಿಮೆಯ ಕಂಪೆನಿಯವರಿಂದ ಹೆಚ್ಚು ಹಣವನ್ನು ಪಡೆದುಕೊಳ್ಳಬೇಕೆಂಬ ದುರುದ್ದೇಶದಿಂದ ಆಯಾ ಉಗ್ರಾಣದ ಕರ್ತರೇ ಇಂಥ ಕೃತ್ಯವನ್ನು ಮಾಡುವರೆಂದು ಹೇಳಲಾಸ್ಪದವಿಲ್ಲವೆಂದೂ, ಬೇರಾರು ಮೊದಲಾದ ಕಡೆಯಿಂದ ಬರುತ್ತಿರುವ ಹತ್ತಿಯ ಮೂಟೆಗಳೊಳಗೇ ಒಂದು ತೆರದ ಸೀಕವು ಹುಟ್ಟಿ ಅದೇ ಇಂತಹವಿಪತ್ತನ್ನುಂಟುಮಾಡುತ್ತಿರುವುದೆಂತಲೂ ಹೇಳಿರುವರು. ಇನ್ನೂ ವಿಚಾರಣೆಯು ನಡೆಯುತ್ತಿದೆ.

ಐರ್ಲ್ಯಾಂಡಿನ ಸ್ವರಾಜ್ಯ.

ಐರ್ಲ್ಯಾಂಡಿನ ಸ್ವರಾಜ್ಯದ ಬಿಲ್ಲು ಕಾಮನ್ಸ್‌ಸಭೆಯಲ್ಲಿಗೆ ೩ ನೆಯಾವೃತ್ತಿ ವಾಚನಕ್ಕಾಗಿ ಕಳೆದ ತಾ॥ ೨೧ ರಲ್ಲಿ ಬಂದಿತು. ಅಲ್ಸ್ಟರ್ ಪಕ್ಷದ ಮುಂದಾಳುಗಳಾದ ಬೋನರ್‌ಲಾರವರು—ಸರ್ಕಾರದವರು ಈ ಬಿಲ್ಲಿನ ವಿಷಯದಲ್ಲಿ ಮಾಡುವ ಸುಧಾರಣೆಗಳನ್ನು ಮೊದಲು ತಿಳಿಯಿಸದೆ ಸುಮ್ಮನೆ ಅದನ್ನು ಸಭೆಯಲ್ಲಿರಿಸುವುದರಿಂದ ಪ್ರಯೋಜನವಿಲ್ಲ. ಎಂದು ಹೇಳಿದರು. ಮುಖ್ಯ ಮಂತ್ರಿಯವರು ಅದನ್ನು ಅನಂತರ ತಿಳಿಸುತ್ತೇವೆಂದರು. ಬಳಿಕ ಸೆಸಿಲ್‌ರವರು-ಗೌರ್ನ್ಮೆಂಟಿನವರ ಅಭಿಪ್ರಾಯವನ್ನು ಮೊದಲು ಪ್ರಕಟಪಡಿಸದರೆ ಅವರ ಪಕ್ಷಕ್ಕೆ ಪ್ರಜಾಭಿಪ್ರಾಯವು ತಕ್ಕಷ್ಟು ಬರುವ ಸಂಭವವಿಲ್ಲ. ಅದುಕಾರಣ ಅವರು ಅಭಿಪ್ರಾಯವನ್ನು ಹೊರಪಡಿಸುವವರೆಗೂ ಈ ಬಿಲ್ಲಿನ ವಾಚನವನ್ನು ನಿಲ್ಲಸಬೇಕು ಎಂದು ವಾದಿಸಿದರು. ಬಿಲ್ಲನ್ನು ನಿಲ್ಲಿಸಿರಬೇಕೆ? ಬೇಡವೆ? ಎಂಬ ವಿಷಯಕ್ಕೆ ಸಭಿಕರ ಅಭಿಪ್ರಾಯವನ್ನು ಕೇಳುವಲ್ಲಿ ಕೂಡದೆಂಬುದಕ್ಕೆ ೨೮೬ ಮತಗಳೂ, ನಿಲ್ಲಸಬೇಕೆಂಬುದಕ್ಕೆ ೧೯೬ ಮತಗಳೂ ಬಿದ್ದುದರಿಂದ ವಿರೋಧಪಕ್ಷವು ಪರಾಜಿತವಾಗಿ ಬಿಲ್ಲನ್ನು ಓದುವುದಕ್ಕೆ ಆರಂಭವಾಯಿತು. ಆದರೆ "ನಿಲ್ಲಿಸಿ, ನಿಲ್ಲಿಸಿ" ಎಂಬ ಕೂಗು ಸಭೆಯ ತುಂಬಾ ತುಂಬಿತು. ಈ ಗದ್ದಲವನ್ನು ಯುಕ್ತವೆಂದು ನೀವು ಅಂಗೀಕರಿಸುವಿರಾ? ಎಂದು ಉಪನ್ಯಾಸಕರು ಬೋನರ್‌ಲಾರವರನ್ನು ಕೇಳಲು, ಅದಕ್ಕೆ ಅವರು ಉತ್ತರವನ್ನು ಕೊಡಲು ತಿರಸ್ಕರಿಸಿದರು. ವಿರೋಧಪಕ್ಷದವರು ಸಂತೋಷದಿಂದ ಕೋಲಾಹಲವನ್ನು ಮಾಡುತ್ತಲೇ ಇದ್ದರು. ಬೋನರ್‌ಲಾರವರು ಈ ಗದ್ದಲವನ್ನಡಗಿಸದಿದ್ದರೆ ಸದ್ಯಃ ಸಭೆಯನ್ನು ನಿಲ್ಲಿಸದೆ ಇರುವುದಕ್ಕಾಗುವದಿಲ್ಲ, ಎಂದು ಮಂತ್ರಿಮಂಡಲದವರು ನುಡಿಯಲು, ಸಭಿಕರು ಕೋಲಾಹಲವನ್ನು ಮಾಡುತ್ತ ಸಭೆಯನ್ನು ಬಿಟ್ಟು ತೆರಳಿದರು. ಈ ಸಭೆಯು ೧ ದಿನದ ಮಟ್ಟಿಗೆ ನಿಲ್ಲಿಸಲ್ಪಟ್ಟಿತು.

ಕಡೆಗೆ ಈ ವಿಧಿಯ ೩ ನೆಯಾವೃತ್ತಿಯ ವಾಚನವು ಕಾಮನ್ಸ್ ಸಭೆಯೊಳಗೆ ಕಳೆದ ತಾ॥ ೨೫ ನೆಯ ಸಾಯಂಕಾಲದಲ್ಲಿ ಆಯಿತು. ಆ ದಿನ ಸಭಾಮಂಟಪವು ಜನಸಂದಣಿಯಿಂದ ತುಂಬಿಹೋಗಿದ್ದಿತು. ೩೫೮ ಮಂದಿ ಅನುಕೂಲವಾಗಿಯೂ ೨೭೪ ಮಂದಿ ಪ್ರತಿಕೂಲವಾಗಿಯೂ ಅಭಿಪ್ರಾಯಕೊಟ್ಟುದರಿಂದ ಆ ವಿಧಿಯು ಅನುಮೋದಿತವಾಯಿತು. ಬಳಿಕ ಲಾರ್ಡುಗಳಸಭೆಯಲ್ಲೂ ಕೂಡ ಇದರ ಮೊದಲನೆಯಾವೃತ್ತಿಯ ವಾಚನವು ನಡೆದು ಅಂಗೀಕೃತವಾಯಿತು. ೨ ನೆಯಾವೃತ್ತಿಯ ವಾಚನವು ಜೂನ್ ತಾ॥ ೨೩ಕ್ಕೆ ಇಡಲ್ಪಟ್ಟಿದೆ. ಪ್ರಜಾಪ್ರತಿನಿಧಿ ಸಭೆಯಲ್ಲಿ ೩ ಆವೃತ್ತಿ ಅನುಮೋದಿತವಾದ ವಿಧಿಯನ್ನು ತಿರಸ್ಕರಿಸಲು ಲಾರ್ಡುಗಳ ಸಭೆಗೆ ಅವಕಾಶವಿಲ್ಲವಾದುದರಿಂದ ಅಲ್ಲೂ ಕೂಡ ಈ ವಿಧಿಯು ಅನುಮೋದಿತವಾಗಿಯೇ ತೀರುವುದು. ಇಂಥ ಸಂದರ್ಭದಲ್ಲಿ ದೊರೆಯವರೂ ಕೂಡ ಇದನ್ನು ತಿರಸ್ಕರಿಸಲಾರರಾದುದರಿಂದ ಅವರಿಂದಲೂ ಇದು ಅಂಗೀಕೃತವಾಗಿ ಶಾಶ್ವತವಾದ ವಿಧಿಯಾಗಿ ಏರ್ಪಡುವುದೇ ಸಿದ್ಧವಾಯಿತು. ಆದರೂ ರಾಜರು ತಮಗೆ ಅನಾದಿಯಾಗಿರುವ ಅಧಿಕಾರವನ್ನು ವಿನಿಯೋಗಿಸಿ ಇದನ್ನು ವಿಧಿಯಾಗಗೊಡಿಸದೆ ತಿರಸ್ಕರಿಸಿ, ಆಂಗ್ಲಪ್ರಜೆಗಳೊಳಗೆ ಹುಟ್ಟಿರುವ ಅಂತಃಕಲಹವನ್ನು ನಿವಾರಣಮಾಡಬೇಕೆಂದು ಕೆಲರು ಆಡಿಕೊಳ್ಳುತ್ತಿದ್ದಾರೆ. ಬಹುಶಃ ಪ್ರಭುಗಳು ತಮ್ಮ ಅನಾದಿಯಾದ ರಾಜ್ಯತಂತ್ರಸದ್ಧರ್ಮಗಳಿಗೂ ಮಂಡಲದ ಅಭಿಪ್ರಾಯಕ್ಕೂ ವಿರುದ್ಧವಾಗಿ ತಮ್ಮ ಅಧಿಕಾರವನ್ನು ವಿನಿಯೋಗಿಸುವರೆಂದು ಹೇಳಲಾಗುವುದಿಲ್ಲ ಅದುಕಾರಣ, ಐರ್ಲ್ಯಾಂಡಿಗೆ ಸ್ವರಾಜ್ಯಪರಿಪಾಲನವು ದೊರೆದು ಅರ್ಧಶತಮಾನದಿಂದ ನಡೆಯುತ್ತಿದ್ದ ಈ ವಿಷಯವು ಆಸ್ಕ್ವಿತ್ ಮಂತ್ರಿವರ್ಯರ ಕಾಲದಲ್ಲಿ ಇತ್ಯರ್ಥವಾಗುವಂತಾಯಿತೆಂದು ನಿರ್ಧರವಾಗಿ ಹೇಳಬಹುದಾಗಿದೆ.

ಪ್ರಜಾಪ್ರತಿನಿಧಿಸಭೆಯೊಳಗೆ ೩ ನೆಯಾವೃತ್ತಿಯ ವಾಚನವಾಗುವುದರೊಳಗಾಗಿ ಮಂತ್ರಿಮಂಡಲದಲ್ಲಿ ಅನೇಕರು ಕೆಲಸವನ್ನೇ ಬಿಟ್ಟುಬಿಡುವರೆಂದೂ, ಅಲ್‌ಸ್ಟರಿನಲ್ಲಿ ರಕ್ತಪಾತವಾಗುವುದೆಂದೂ ಮೊದಲಾಗಿ ನಾನಾವಿಧವಾದ ಕೂಗಾಟಗಳು ಇದಕ್ಕೆ ಮುಂಚೆ ಹುಟ್ಟಿದ್ದವು. ಆದರೆ ವಿಷಯಪರಿಣಾಮವು ಯಾವುದೊಂದು ಗದ್ದಲವೂ ಇಲ್ಲದೆ ನಡೆದುಹೋಯಿತು. ಅಲ್‌ಸ್ಟರ್ ಜಿಲ್ಲೆಗೆ ಸೇರಿದ ನಾನಾಭಾಗಗಳಲ್ಲಿ ಸರ್ಕಾರದವರು ಬಲವಾದ ಸೈನ್ಯದ ಕಾವಲನ್ನು ಇಟ್ಟಿದ್ದರು. ಅಲ್ಲಿನ ಬೆಲ್‌ಫಾಸ್ಟ್-ಲಂಡನ್ ಡರಿ-ಮೊದಲಾದ ಪಟ್ಟಣಗಳಲ್ಲಿ ಎಲ್ಲವೂ ಶಾಂತಸ್ಥಿತಿಯಲ್ಲೇ ಇದ್ದಿತು. ರೋಮನ್ ಕೆಥೋಲಿಕ್ ಪಂಗಡದವರು ತಮ್ಮತಮ್ಮ ಮನೆಗಳನ್ನು ಬಿಟ್ಟು ಹೊರಕ್ಕೆ ಕದಲಲಿಲ್ಲ. ಒಂದೊಂದೂರಿನವರು ಬೇರೊಂ

ದೂರಿಗೆ ಹೋಗಲು ಅವಕಾಶಕೊಡಲ್ಪಟ್ಟಿರಲಿಲ್ಲ. ಅಲ್ಸ್ಟರಿನವರಿಗೆ ಇದಿರುಪಕ್ಷದವರಾದ ಐರ್ಲಂಡಿನ ಇತರ ಪ್ರಜೆಗಳೆಲ್ಲಾ ಆ ದಿನ ಬಹುಸಂತೋಷೋತ್ಸವಗಳನ್ನು ನಡೆಯಿಸಿದರು. ಬೆಲ್ಫಾಸ್ಟ್ ಪಟ್ಟಣದಲ್ಲಿ ೧೪೦೦ ಮಂದಿ ಸ್ವಯಂಸೇವಕರು ವಾದ್ಯಗಳನ್ನು ಬಾಜಿಸಿಕೊಂಡು ಬೀದಿಬೀದಿಗಳಲ್ಲಿ ಉತ್ಸವಗೊಂಡು ಬಂದುದಲ್ಲದೆ ರಾತ್ರಿಗೆ ಊರನ್ನೆಲ್ಲಾ ದೀಪಾವಳಿಯಿಂದ ಅಲಂಕರಿಸಿದ್ದರು. ಅದರಂತೆಯೇ ಐರ್ಲೆಂಡಿನ ದಕ್ಷಿಣಭಾಗದ ಲಿಮೇರಿಕ್-ಕಾರ್ಕ್ ಮೊದಲಾದ ಪಟ್ಟಣಗಳಲ್ಲೆಲ್ಲಾ ಪ್ರಜೆಗಳು ದೀಪೋತ್ಸವ ಮದ್ದುಗಾರಿಕೆ ಮೊದಲಾದ ನಾನಾಸಂತೋಷೋತ್ಸವಗಳನ್ನು ಆಚರಿಸಿದರು. ಅಲ್ಸ್ಟರ್‌ಜಿಲ್ಲೆಯ ಪಟ್ಟಣಗಳು ಮಾತ್ರ ದುಃಖದಿಂದ ಹಾಳು ಸುರಿಯುವಂತಿದ್ದುವು. ಸ್ವರಾಜ್ಯವನ್ನು ಕೋರುತ್ತಿದ್ದ ನೇಷನಲಿಸ್ಟ್ ಪಕ್ಷದ ಪ್ರಮುಖರಾದ ರೆಡ್ಮಂಡ್‌ರವರಿಗೆ ಅಮೇರಿಕಾ ಸಂಯುಕ್ತರಾಷ್ಟ್ರ ಮೊದಲಾದ ಕಡೆಗಳಿಂದ ಅಭಿನಂದನಪರವಾದ ತಂತಿವಾರ್ತೆಗಳು ವಿಶೇಷವಾಗಿ ಬರುತ್ತಿರುವುವು. ಶಾಂತರೀತಿಯಿಂದ ಈ ಕಾರ್ಯವು ನೆರವೇರಿದುದರಿಂದ ಅಲ್ಸ್ಟರಿಗೆ ಹೋಗಿದ್ದ ಪೋಲೀಸರೆಲ್ಲರೂ ಲಂಡನ್ನಿಗೆ ಹಿಂದಿರುಗಿ ಹೋದರು.

ಮೈಸೂರ್ ಸ್ಟಾರ್

ಸನ್ ೧೯೧೮ ನೆಯ ಜುಲೈ ತಾ|| ೧ ನೆಯ ಸೋಮವಾರ.

ವೈಶ್ಯಮಹಾಸಭೆ.

ಈ ಸಭೆಯ ೭ ನೆಯ ಅಧಿವೇಶನವು ಕೃಷ್ಣಾ ಜಿಲ್ಲೆಗೆ ಸೇರಿದ ಏಲೂರಿನಲ್ಲಿ ಮದ್ರಾಸಿನ ಹೈಕೋರ್ಟ್ ವಕೀಲ್ ಮ|| ನಲ್ಲಾಗುರುಸ್ವಾಮಿಶೆಟ್ಟಿ ಬಿ. ಎ. ಬಿ. ಎಲ್. ರವರ ಅಧ್ಯಕ್ಷತೆಯಿಂದ ಮೇ ತಾ|| ೨೦-೨೧-೨೨ ರಲ್ಲಿ ಸಾಂಗವಾಗಿ ನಡೆಯಿತು. ಅಧ್ಯಕ್ಷರು ಆನೆಯಂಬಾರಿಯ ಮೇಲಣ ಉತ್ಸವದಿಂದ ಪುರಪ್ರವೇಶ ಮಾಡಿಸಲ್ಪಟ್ಟರು. ೧೦೦೦ ಮಂದಿ ಪ್ರೇಕ್ಷಕರೂ ೮೦೦ ಮಂದಿ ಪ್ರತಿನಿಧಿಗಳೂ ದೇಶದ ನಾನಾ ಭಾಗಗಳಿಂದ ಬಂದು ಸಭೆಯನ್ನಲಂಕರಿಸಿದ್ದರು. ಸತ್ಕಾರಕಸಂಘಾಧ್ಯಕ್ಷರಾದ ಮ|| ಮೋತೆಗಂಗರಾಜುಯವರು ಸ್ವಾಗತಪರವಾದ ಭಾಷಣವನ್ನು ಮಾಡಿದಬಳಿಕ, ಅಧ್ಯಕ್ಷರು ರಸವತ್ತಾದ ತಮ್ಮ ಭಾಷಣವನ್ನು ಮಾಡಿದರು. ಅದರೊಳಗೆ-ಭಿನ್ನಭಿನ್ನವರ್ಗದ ಜನರು ಹೀಗೆ ಬೇರೆಬೇರೆ ಸಭೆಗಳನ್ನು ನಡೆಯಿಸುವುದರಿಂದ ಪರಿಣಾಮದಲ್ಲಿ ಉಂಟಾಗುವ ಹಿತವನ್ನು ಮೊದಲು ನಿರೂಪಿಸಿ, ತಮ್ಮ ವೈಶ್ಯಬಾಲಕರ ವಿದ್ಯಾಭಿವೃದ್ಧಿಗೂ ಸ್ವಜನರ ಸಾಂಪತ್ತಿಕಾಭಿವೃದ್ಧಿಗೂ ಮಾಡಬೇಕಾದ ಪ್ರಯತ್ನಗಳನ್ನು ಕುರಿತು ವಿಸ್ತಾರವಾಗಿ ಪ್ರತಿಪಾದನ ಮಾಡುವಾಗ ಸಮುದ್ರಯಾನದ ಅವಶ್ಯಕತೆಯನ್ನು ಕುರಿತು ವಿಮರ್ಶಿಸುತ್ತ, ಅವಶ್ಯಕವಾದ ಸಂಘಸಂಸ್ಕರಣಗಳ ಕಡೆಗೆ ಉತ್ತರಜಿಲ್ಲೆಯ ಜನಗಳು ಉದಾರಮನಸ್ಸಿನಿಂದ ಪುರಸ್ಕಾರವನ್ನು ತೋರಿಸುತ್ತಿರುವರೆಂದೂ ದಕ್ಷಿಣಜಿಲ್ಲೆಯವರು ಪುರಾತನಪದ್ಧತಿಗಳಿಗೇ ಅಂಟಿಕೊಂಡು ಸಂಕುಚಿತಮನಸ್ಸಿನಿಂದ ಆ ಸಂಸ್ಕರಣಗಳಿಗೆ ವಿರೋಧಿಸುತ್ತಿರುವರೆಂದೂ ಹೇಳಿ, ಇದುವರೆಗೆ ಪರದೇಶಗಮನಮಾಡಿ ಬಂದಿರುವವರ ಸಂಸರ್ಗವನ್ನು ಮಾಡುವ ವಿಷಯದಲ್ಲಿ ಈ ಮೊದಲೇ ತಮ್ಮ ಮಹಾಸಭೆಯಲ್ಲಿ ನಿರ್ಧಾರವಾಗಿರುವುದನ್ನೂ, ಅದರಂತೆ ಗುಂಟೂರು ಕಾಶಿನಾಥ ಮೊದಲಾದ ಸ್ಥಲಗಳಲ್ಲಿ ಅನುಷ್ಠಾನಗೊಳಿಸುತ್ತಿರುವುದನ್ನೂ ಆದರೆ ಹಲವು ಕಡೆ ಈ ವಿಷಯದಲ್ಲಿ ಭಿನ್ನಾಭಿಪ್ರಾಯಗಳು ಹುಟ್ಟಿ ಕಕ್ಷಿಗಳೇರ್ಪಟ್ಟು ತೊಂದರೆಪಡುತ್ತಿರುವುದನ್ನು ವಿವರಿಸಿ ವಿಷಾದವನ್ನು ವ್ಯಕ್ತಪಡಿಸಿದುದಲ್ಲದೆ, ಸಮುದ್ರಯಾನಮಾಡಿ ಬರುವವರನ್ನು ಸಂಘದಲ್ಲಿ ಸವ್ಯವಹಾರಗೊಳಿಸಿಕೊಳ್ಳುವಲ್ಲಿ ಶ್ರೀಪುಷ್ಪಗಿರಿಮಠದ ಶಂಕರಾಚಾರ್ಯರಿಂದ ಹೊಂದಿರುವ ಶ್ರೀಮುಖದ ವಿಷಯವನ್ನು ಪ್ರಸ್ತಾಪಿಸಿ, ಈಗ ಯೂರೋಪಿನಲ್ಲೂ ಅಮೇರಿಕಾದಲ್ಲೂ ತಮ್ಮ ಜಾತಿಯ ೭ ಮಂದಿ ವಿದ್ಯಾರ್ಥಿಗಳು ಅಭ್ಯಾಸಮಾಡುತ್ತಿರುವುದನ್ನು ವಿವರಿಸಿ, ಅದರಂತೆ ಇನ್ನೂ ಹಲವುಮಂದಿಗಳನ್ನು ವಿದೇಶಗಳಿಗೆ ಕಳುಹಿಸಿಕೊಡಲು ಧನಾದಿಸಹಾಯವನ್ನು ಮಾಡುತ್ತ ಬರುವುದು ಅವಶ್ಯಕವೆಂದು ಸಭಿಕರಿಗೆ ಶ್ರುತಪಡಿಸಿದರು. ವಿದ್ಯಾಪ್ರಸಾರಾದಿಧರ್ಮಕಾರ್ಯಗಳಿಗೆ ಧರ್ಮನಿಧಿಗಳನ್ನು ಸ್ಥಾಪಿಸಿಯೂ ವಾರ್ಷಿಕಸಹಾಯವನ್ನು ಮಾಡುತ್ತಲೂ ಇರುವ ಸ್ವಜನರ ಔದಾರ್ಯವನ್ನು ಶ್ಲಾಘಿಸಿದರು.

ಬಳಿಕ, ವರ್ತಕತನವೇ ಕುಲಕಸುಬಾಗಿ ಉಳ್ಳ ತಮ್ಮ ಜನರು ಈಗ ಪ್ರಬಲವಾದ ದೇಶೀಯವ್ಯಾಪಾರವನ್ನೆಲ್ಲಾ ಇತರರ ಪಾಲುಮಾಡಿ, ತಾವು ಸಣ್ಣ ಪುಟ್ಟವ್ಯಾಪಾರದಲ್ಲಿ ನಾಮಮಾತ್ರಕ್ಕೆ ತಗುಲಿಕೊಂಡಿರುವುದರ ಸ್ವರೂಪವನ್ನು ವಿವರಿಸಿ, ಇನ್ನು ಮುಂದಾದರೂ ಕಾಲಸ್ಥಿತಿಯನ್ನು ಗಮನಿಸಿ ಸ್ವಜನರನ್ನು ಪರದೇಶಗಳಿಗೆ ಕಳುಹಿಸಿ, ಶಿಲ್ಪವಿದ್ಯೆಗಳಲ್ಲೂ ವ್ಯಾಪಾರಕಲೆಯಲ್ಲೂ ನಿಪುಣರನ್ನಾಗಿ ಮಾಡಿಸಿ, ಕರೆತರಿಸಿ, ಸ್ವದೇಶದಲ್ಲಿ ಅವರ ಸಹಾಯದಿಂದ ದೊಡ್ಡದೊಡ್ಡ ವ್ಯಾಪಾರಸಂಘಗಳನ್ನೂ ಶಿಲ್ಪಾಲಯಗಳನ್ನೂ ಸ್ಥಾಪಿಸುವುದಕ್ಕೆ ಸರ್ವರೂ ಗಮನಕೊಟ್ಟು ಕೆಲಸಮಾಡಿದರೆ ವಿಂತನ್ನಯದಕ್ಷರೆಂದು ಕುಶಲಮತಿಗಳೂ ಎಂದು ಹೆಸರುಗೊಂಡ ತಮ್ಮವರು ತಮ್ಮ ಕುಲವೃತ್ತಿಯಲ್ಲಿ ವ್ಯಾಪಕತೆಯನ್ನು ಪಡೆದುಕೊಂಡು ಜಯಶೀಲರಾಗುವ ವಿಷಯದಲ್ಲಿ ಸಂಶಯವಿಲ್ಲವೆಂದು ಪ್ರೋತ್ಸಾಹಿಸಿದರು.

ಬಳಿಕ, ತಮ್ಮ ಜನರ ಪುರೋಭಿವೃದ್ಧಿಯ ಉಪಾಯಗಳನ್ನು ಚರ್ಚಿಸಿ ಕರ್ತವ್ಯಜಾಗರೂಕತೆಯನ್ನುಂಟುಮಾಡಲು ಸಾಧಕವಾದ ಒಂದು ವೃತ್ತಪತ್ರಿಕೆಯು ತಮ್ಮ ವರ್ಗದ ಪಕ್ಷದಿಂದ ಹೊರಡುವುದು ಅವಶ್ಯಕವೆಂದು ಎಚ್ಚರಿಸಿ, ಬಳಿಕ ಸಂಘೈಕಮತ್ಯದ ಫಲವನ್ನೂ ಸಂಘಸೇವೆಯ ಪ್ರಯೋಜನವನ್ನೂ ವಿಶದಪಡಿಸಿ, ಕಡೆಗೆ ವೈಶ್ಯಬಾಲಕರ ವಿದ್ಯಾಪ್ರೋತ್ಸಾಹಕ್ಕಾಗಿ ಒಂದು ಶಾಶ್ವತವಾದ ನಿಧಿಯನ್ನು ಸರ್ವರೂ ಸಹಾಯಮಾಡಿ ಸ್ಥಾಪಿಸಬೇಕೆಂದೂ, ಇದುವರೆಗೇ ಈ ಪ್ರಯತ್ನವನ್ನು ಮಾಡಿದ್ದು ಕುಂಭಕೋಣದಲ್ಲಿ ನಡೆದ ಸಭೆಯೊಳಗೆ ಈ ಫಂಡಿಗೆ ೫೦,೦೦೦ ರೂ.ಗಳ ವಾಗ್ದಾನವು ಜನರಿಂದ ಮಾಡಲ್ಪಟ್ಟಿದ್ದರೂ, ಅದಕ್ಕಾಗಿ ೧೭೦೦೦ಯನ್ನಾದರೂ ಸಲ್ಲಿಸಲ್ಪಟ್ಟಿಲ್ಲವೆಂದೂ, ಇದೇ ಉದ್ದೇಶದಿಂದ ಅಲ್ಲಲ್ಲಿ ಉಪಸಂಘಗಳು ಸ್ಥಾಪಿಸಲ್ಪಟ್ಟಿದ್ದರೂ ಅವು ಆಗಾಗ್ಗೆ ಕೂಡಿ ಕೆಲಸವನ್ನು ಸರಿಯಾಗಿ ನಡೆಯಿಸಲಿಲ್ಲವೆಂದೂ ಹೇಳಿ ತಮ್ಮ ಜನರ ಔದಾಸೀನ್ಯವನ್ನು ಕುರಿತು ಪರಿತಪಿಸಿದರು. ಮತ್ತೂ ವೈಶ್ಯರಲ್ಲಿ ಧನವಂತರು ವಿಶೇಷವಾಗಿರುವುದರಿಂದ ಅವರು ತಮ್ಮ ಬಾಲಕರ ಪುರೋಭಿವೃದ್ಧಿಕಾರ್ಯಗಳಿಗೆ ಮನಸ್ಸು ಕೊಟ್ಟು ಕೆಲಸಮಾಡಲು ಸಿದ್ಧರಾದರೆ, ಅವರಿಗೆ ಯಾವುದೂ ಅಸಾಧ್ಯವಾಗುವುದಿಲ್ಲವೆಂದೂ, ಶಾಶ್ವತವಾದನಿಧಿಗಳನ್ನು ಸುಲಭವಾಗಿ ಸೇರಿಸಬಹುದೆಂದೂ, ನಾಟುಕೋಟೆಶೆಟ್ಟಿಗಳು ಲಕ್ಷಾಂತರ ದ್ರವ್ಯವನ್ನು ಸುಲಭವಾಗಿ ಸೇರಿಸಿ ದೇವಾಲಯ ಧರ್ಮಸತ್ರಾದಿಗಳನ್ನುದ್ಧರಿಸಿ ಶ್ರೇಯೋವಂತರಾಗುತ್ತಿರುವಂತೆಯೇ ನಮ್ಮವರೂ ಸುಲಭವಾಗಿ ಧರ್ಮದ್ರವ್ಯವನ್ನು ಶೇಖರಿಸಿ, ವಿದ್ಯಾಪ್ರಸರಣಾದಿಕಾರ್ಯಗಳಿಗೆ ವಿನಿಯೋಗಿಸಲು ಬದ್ಧಸಂಕಲ್ಪರಾಗಬೇಕೆಂದೂ, ಪ್ರಯತ್ನಿಸಿಬಿಟ್ಟರೆ ಮಾಡಬೇಕಾದ ಉಪಾಯಗಳೆಲ್ಲಾ ತಾವಾಗಿ ತೋರುತ್ತ ಬರುವುವೆಂದೂ ಹೇಳಿ ತಮ್ಮ ಭಾಷಣವನ್ನು ಮುಗಿಸಿದರು.

ಇವರ ಭಾಷಣದಲ್ಲೆಲ್ಲಾ ಸ್ವಜನಾಭಿಮಾನವೂ, ಅವರ ಏಳ್ಗೆಯ ಕುತೂಹಲವೂ ತಾನೇತಾನಾಗಿ ತುಂಬಿತುಳುಕುತ್ತಿದ್ದಿತು. ವಿದೇಶಯಾನದ ಅವಶ್ಯಕತೆಯನ್ನು ಕುರಿತು ಒತ್ತಿಒತ್ತಿ ಹೇಳಿರುವ ಅವರ ಮಾತು ಅವರ ಜನವರ್ಗಕ್ಕೆಲ್ಲಾ ಅತ್ಯಂತ ಹಿತವಾದ ಉಪದೇಶವಾಗಿದ್ದಿತು. ನಮ್ಮ ದೇಶದಲ್ಲಿ ಅಗ್ರವರ್ಣೀಯರಿಗಿಂತಲೂ ವ್ಯಾಪಾರ ಶಿಲ್ಪಾದಿಗಳೇ ಕಸುಬಾಗುಳ್ಳ ಇತರ ವರ್ಣದವರು ಸಮುದ್ರಯಾನವನ್ನು ಮಾಡಿ ತಮ್ಮತಮ್ಮ ಕಸಬುಗಳಿಗೆ ಪುರೋಭಿವೃದ್ಧಿಯನ್ನುಂಟುಮಾಡಿಕೊಳ್ಳುವ ಅವಶ್ಯಕತೆಯು ಹೆಚ್ಚಾಗಿರುತ್ತದೆ. ಹೀಗಿರುವಲ್ಲಿ ದೇಶದ ಎಲ್ಲಭಾಗಗಳಲ್ಲಿರುವ ಅಗ್ರವರ್ಣೀಯರು ವಿದೇಶಯಾತ್ರೆಯನ್ನು ಸಾಧಾರಣವಾಗಿ ಮಾಡುತ್ತ ತಮಗೆ ಸಂಪ್ರದಾಯಸಿದ್ಧವಲ್ಲದ ಕಸಬುಗಳಿಗೂ ಅವರು ತಲೆಯಿಕ್ಕಿ ಪುರೋಭಿವೃದ್ಧಿಗೆ ಬರುತ್ತಿರುವಾಗ, ಅನಾದಿಯಾಗಿ ಆ ಯಾ ಕಸುಬಿನಲ್ಲಿ ತಗುಲಿಬಂದಿರುವ ಜನರು ಸದ್ಯಃಕಾಲಕ್ಕೆ ನಿರುಪಯುಕ್ತವಾದ ಶುಷ್ಕವಾದಾನುವಾದಗಳಲ್ಲಿ ತಮ್ಮ ಬುದ್ಧಿಸಾಹಸಗಳನ್ನೆಲ್ಲಾ ವಿನಿಯೋಗಿಸಿ ತಮ್ಮ ಕಾಲಮೇಲೆ ತಾವೇ ಕಲ್ಲನ್ನು ಹಾಕಿಕೊಳ್ಳುವುದು ಅತ್ಯಂತ ವಿಷಾದಸ್ಥಾನವು. ತತ್ಕಾಲಾನುಸಾರವಾಗಿ ನಡೆನುಡಿಗಳನ್ನು ತಿದ್ದಿಕೊಂಡು ನಡೆಯುತ್ತ ಬಂದುದರಿಂದಲೇ ನಮ್ಮ ದೇಶದ ಅಗ್ರವರ್ಣೀಯರು ಸಕಲಭೋಗಭಾಗ್ಯ ಗೌರವಾದಿಗಳನ್ನು ವಿಶೇಷವಾಗಿ ಪಡೆದುಕೊಂಡಿರುವರು. ಇತರರೆಲ್ಲರೂ ಈಗಲಾದರೂ ಎಚ್ಚತ್ತು ಅವರ ಮಾರ್ಗವನ್ನು ಅನುಸರಿಸಿ ನಡೆದು ಉದ್ಧಾರವಾಗಬಾರದೆ? ಹಿಂದುಳಿದ ಜನಾಂಗದವರೆಲ್ಲರೂ ಇದನ್ನು ಚೆನ್ನಾಗಿ ಪರ್ಯಾಲೋಚಿಸಬೇಕು.

ಜುಡಿಯಿಷಲ್ ಕಾನ್ಫರೆನ್ಸು.

ಸಿವಿಲ್ ಮತ್ತೂ ಕ್ರಿಮಿನಲ್ ಕೋರ್ಟುಗಳ ಕಾರ್ಯಕ್ರಮದಲ್ಲಿ ಈಗಿರತಕ್ಕ ನ್ಯೂನತೆಗಳನ್ನು ಹೋಗಲಾಡಿಸಿ ನೂತನ ಸುಧಾರಣೆಯನ್ನು ಮಾಡುವ ಬಗೆಗೆ ಒಂದನೆಯ ಕೌನ್ಸಿಲರ್ ರಾಜಮಂತ್ರಪ್ರವೀಣ ಮ|| ಎಚ್. ವಿ. ನಂಜುಂಡಯ್ಯ, ಎಂ. ಎ., ಎಂ. ಎಲ್., ಸಿ. ಐ. ಇ., ಯವರ ಅಧ್ಯಕ್ಷತೆಯಲ್ಲಿ ಈ ಜುಲೈ ತಾ||೧೦ ಮತ್ತೂ ೧೧ರ ಮಧ್ಯಾಹ್ನ ೧.೨ ಘಂಟೆಯಿಂದ ರಾಜಧಾನಿಯಲ್ಲಿನ ರಂಗಾಚಾರ್ಲುಯವರಮೆಮೋರಿಯಲ್ ಹಾಲಿನಲ್ಲಿ ಒಂದು ಸಭೆಯು ನಡೆಯತಕ್ಕುದೆಂದು ಸರ್ಕಾರದಪ್ಪಣೆಯಾಗಿದೆ. ಲೆಜಿಸ್ಲೇಟಿವ್ ಮತ್ತೂ ಜುಡಿಷಿಯಲ್ ಅ|| ಸೆಕ್ರೆಟರಿಯವರಾದ ಮ||ಎಸ್. ಪಿ. ರಾಜಗೋಪಾಲಾಚಾರಿ, ಬಿ.ಎ., ಬಿ.ಎಲ್., ರವರು ಈ ಕಾನ್ಫರೆನ್ಸಿನ ಸೆಕ್ರೆಟರಿಯಾಗಿ ನಿಯಮಿಸಲ್ಪಟ್ಟಿರುವರು. ಈಸಭೆಗೆ ಚೀಫ್‌ಕೋರ್ಟಿನ ಇಬ್ಬರು ಜಡ್ಜರು, ಎಲ್ಲಾ ಕಾಬಾಧಿಕಾರಿಗಳು, ಗವರ್ನಮೆಂಟ್ ಸೆಕ್ರೆಟರಿಗಳು, ಡಿಸ್ಟ್ರಿಕ್ಟ್ ಮತ್ತೂ ಸೆಷನ್ಸ್ ಜಡ್ಜಿಯವರುಗಳು, ೮ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರುಗಳು, ನಿಯಮನಿರ್ಮಾಣ ಸಭೆಯ ಸಭಿಕರುಗಳು, ಉದ್ಯೋಗದಿಂದ ನಿವೃತ್ತರಾಗಿರುವ ಮ|| ಗಳಾದ ಎಂ. ರಾಮಸ್ವಾಮಯ್ಯರ್, ಬಿ.ಎ., ಬಿ.ಎಲ್., ರವರು, ಎಸ್. ವೆಂಕಟವರದ ಅಯ್ಯಂಗಾರರು, ಎಂ. ಎಸ್. ನಾರಾಯಣರಾಯರು, ಎಂ. ಚೆಂಗಯ್ಯಶೆಟ್ಟಿ, ಬಿ. ಎ., ಯವರು, ಕೆ ಶ್ರೀನಿವಾಸರಾಯರು, ರಾಜಧಾನಿಯಲ್ಲಿರುವ ಸಬ್ ಜಡ್ಜಿಯರು, ಮುನಸೀಫರುಗಳು ಸಿಟಿ ಮ್ಯಾಜಿಸ್ಟ್ರೇಟರು, ಮೈಸೂರ ಸಬ್ ಡಿವಿಜನ್ ಮ್ಯಾಜಿಸ್ಟ್ರೇಟರು ಪಬ್ಲಿಕ್ ಪ್ರಾಸಿಕ್ಯುಟರು, ಅನಧಿಕಾರಗಳು ಮ|| ಗಳಾದ ಅಂಬಳೆ ಅಣ್ಣಯ್ಯ ಪಂಡಿತರು, ಮಿ| ದರ್ವೇಷ್‌ಪೀರ್‌ರವರು, ಸಾಹುಕಾರ್ ವರ್ಧಮಾನಯ್ಯನವರು, ಚಿಕ್ಕಮಗಳೂರಿನ ಕಾಫಿಪ್ಲಾಂಟರ್ ಸಿ. ಶ್ರೀನಿವಾಸರಾಯರು, ಹಾಸನದ ಜಮೀನ್‌ದಾರ್ ಎಚ್. ವಿ. ರಂಗಸ್ವಾಮಿ, ಬಿ.ಎ.,ಯವರು, ಶ್ರೀರಂಗಪಟ್ಟಣದ ಜಮೀನ್‌ದಾರ್ ವೇಣಿ ರಂಗಸ್ವಾಮಯ್ಯಂಗಾರರು, ೧೫ ವರ್ಷಕ್ಕೆ ಕಡಿಮೆಯಿಲ್ಲದೆ ಅಡ್ವೋಕೇಟರಾಗಿರುವವರುಗಳು ಇವರೆಲ್ಲಾ ಸಭೆಗೆ ಕರೆಯಲ್ಪಟ್ಟಿರುವರು. ಈ ಸಭೆಯಲ್ಲಿ (೧) ಸಿವಿಲ್ ಮತ್ತೂ ಕ್ರಿಮಿನಲ್ ಕೋರ್ಟುಗಳಿಗೆ ನ್ಯಾಯಾಧಿಪತಿಗಳನ್ನು ನಿಯಮಿಸುವುದು, (೨) ಎಕ್ಸಿಕ್ಯೂಟಿವ್ ಅಧಿಕಾರಿಗಳಿಗೆ ಕ್ರಿಮಿನಲ್ ಅಧಿಕಾರವನ್ನು ಕೊಡುವುದು, (೩) ಸಮ್ಮರಿ ವಿಚಾರಣೆ, (೪) ವಕೀಲರುಗಳು ಮತ್ತೂ ಮೊಖ್ತಿಯಾರರು, (೫) ಕೋರ್ಟುಗಳಲ್ಲಿ ವಿವಾದಗಳನ್ನು ಬೇಗಬೇಗನೆ ಬಗೆಹರಿಸಲು ಮತ್ತೂ ಡಿಕ್ರಿಗಳನ್ನು ಕೂಡಲೆ ಜಾರಿಮಾಡಲು ತಕ್ಕ ಏರ್ಪಾಟನ್ನು ಮಾಡುವುದು, (೬) ಅವಶ್ಯಕವಾದ ಹೊಸ ನಿಯಮಗಳ ನಿರ್ಮಾಣವು, (೭) ಸಿವಿಲ್ ಮತ್ತೂ ಕ್ರಿಮಿನಲ್ ಕೋರ್ಟುಗಳ ಪದ್ಧತಿ ಮತ್ತೂ ಆಚಾರ, (೮) ಸರ್ಕಾರಿಯ ನ್ಯಾಯಾಧಿಕಾರಿಗಳು, (೯) ಕಾನ್ಫರೆನ್ಸಿನ ಕಾರ್ಯಕ್ರಮ, (೧೦) ಸಿವಿಲ್ ಮತ್ತೂ ಕ್ರಿಮಿನಲ್ ಕೋರ್ಟುಗಳಲ್ಲಿನ ನ್ಯಾಯವಿಮರ್ಶೆಯ ಕ್ರಮದಲ್ಲಿ ಆವಶ್ಯಕವಾದ ಸುಧಾರಣೋಪಾಯಗಳು— ಈ ವಿಷಯಗಳೆಲ್ಲಾ ಚರ್ಚಿಸಲ್ಪಟ್ಟು ನಿರ್ಧಾರಗಳು ಮಾಡಲ್ಪಡುವುವು.

ಒಳದೇಶದ ವೃತ್ತಾಂತವು.

ಡಾ|| ಇ. ಎಸ್. ಕೃಷ್ಣಸ್ವಾಮಯ್ಯರ್‌ರವರು ಸ್ಪೆಷಲ್ ಡ್ಯೂಟಿಯು ತೀರಿದಮೇಲೆ ವಿಕ್ಟೋರಿಯಾ ಆಸ್ಪತ್ರೆಯ ಇನ್‌ಛಾರ್ಜ್ ಮೆಡಿಕಲಾಫೀಸರಾಗಿರತಕ್ಕುದೆಂದು ಗೆಜಿಟ್ಟಿನಲ್ಲಿ ಪ್ರಕಟವಾಗಿದೆ.

ವರ್ಧಂತಿಯ ಮಹೋತ್ಸವಕಾಲದಲ್ಲಿ ರಾಜಧಾನಿಯಲ್ಲಿ ಕೂಡುವ ಸಂಪದಭ್ಯುದಯ ಮಹಾಸಭೆಯು ಈ ಸಲ ಈ ಜುಲೈ ತಾ|| ೫ ನೆಯ ಶುಕ್ರವಾರ ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ನಡೆಯಲು ಗೊತ್ತಾಗಿರುವುದು.

ದಿವಾನರು ತಮ್ಮ ಪ್ರೈವೇಟ್ ಸೆಕ್ರೆಟರಿಯವರೊಡನೆ ಕಡೆಳೆ ತಾ|| ೨೮ ರಲ್ಲಿ ಉದಕಮಂಡಲದಿಂದ ಬೆಂಗಳೂರಿಗೆ ಹಿಂದಿರುಗಿ ದಯಮಾಡಿಸಿದರು. ಮತ್ತೂ ಈ ತಾ|| ೨ ರಲ್ಲಿ ರಾಜಧಾನಿಗೆ ಬರುವವರಾಗಿರುವರು.

ಹಾಸನದಲ್ಲಿರುವ ರಿಟೈರ್ಡ್ ಅಸಿಸ್ಟೆಂಟ್ ಕಮಿಷನರ್ ಮಿ|| ಅಬ್ದುಲ್‌ರಜಾಯವರು ಹಾಸನದ ಆನರರಿ ಸಿಟಿ ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟರಾಗಿ ನಿಯಮಿಸಲ್ಪಡಬೇಕೆಂದು ಡೆ|| ಕಮಿಷನರು ಗೌರ್ನಮೆಂಟಿಗೆ ಬರೆದಿರುವುದಾಗಿ ತಿಳಿಯುತ್ತೇವೆ.

ಬೊಂಬಾಯಿಗೌರ್ನರು ಪತ್ನೀಸಮೇತರಾಗಿ ತಾ|| ೨ರಲ್ಲಿ ಮಹಾಬಲೇಶ್ವರದಿಂದ ಹೊರಟು ಮದ್ರಾಸ್ ಮಾರ್ಗವಾಗಿ ತಾ|| ೩ ರಲ್ಲಿ ಉದಕಮಂಡಲವನ್ನು ಸೇರಿ, ಅಲ್ಲಿಂದ ೧೧ ನೇತಾ|| ಸಾಯಂಕಾಲ ಮೋಟಾರಿನಮೇಲೆ ಮೈಸೂರಿಗೆ ಬರುವರು ಇಲ್ಲಿ ಒಂದುದಿನವಿದ್ದು ಬೆಂಗಳೂರಿಗೆ ತೆರಳುವರು.

ಶ್ರೀಮನ್ ಮಹಾರಾಜರವರು ಪರಿವಾರ ಸಮೇತ ನಿನ್ನೆಯ ದಿನ ರಾಜಧಾನಿಗೆ ಚಿತ್ತೈಸಿದರು. ಈ ತಾ|| ೪ ನೆಯ ಗುರುವಾರ ಶ್ರೀಯುವರ ೩೦ ನೆಯ ವರ್ಷದ ವರ್ಧಂತ್ಯುತ್ಸವದ ಬಗೆಗೆ ಬೆಳಿಗ್ಗೆ ಅರಮನೆಯಲ್ಲಿ ದರ್ಬಾರೂ ಸಾಯಂಕಾಲ ಅಶ್ವಾರೋಹಣದಿಂದ ಸಹೋದರರಾದ ಶ್ರೀಮದ್ಯುವರಾಜರ ಕೂಡ ಉತ್ಸವವೂ ಜರುಗುವುವು.

ಕೋಲಾರ ಡಿ|| ಮಾಲೂರಲ್ಲಿ ಕೆರೆಗಳೂ ಬಾವಿಗಳೂ ಒಣಗಿಹೋಗಿ ಕುಡಿಯುವ ನೀರಿಗೆ ತೊಂದರೆಯಾಗಿರುವುದರಿಂದ ಜನರು ನಿತ್ಯದಲ್ಲೂ ಬಹುದೂರ ಹೋಗಿ ನೀರನ್ನು ತೆಗೆದುಕೊಂಡು ಬರಬೇಕಾಗಿದೆಯಂತೆ. ಇದರಂತೆ ಇನ್ನೂ ಅನೇಕ ಗ್ರಾಮಗಳಲ್ಲಿ ಜನರು ಮತ್ತು ದನಕರುಗಳು ಕುಡಿಯುವ ನೀರಿಗೆ ಅತ್ಯಂತ ಕಷ್ಟಪಡುತ್ತಿರುವುದಾಗಿ ಕೇಳುತ್ತೇವೆ.

ರಾಜಧಾನಿಯ ಶ್ರೀಮಂತ ನೀಲಗಿರಿ ಮದ್ದಣ್ಣನವರಿಗೆ ಪ್ರಾಪ್ತವಾಗಿರುವ ಪತ್ನೀವಿಯೋಗದುಃಖಕ್ಕಾಗಿ ಅನುತಾಪ

ಪ್ರದರ್ಶಕ ಪತ್ರಗಳೂ ಟೆಲಿಗ್ರಾಮುಗಳೂ ಮಿತ್ರಮಂಡಲಿಯಿಂದಲೂ ಬಂಧುಗಳಿಂದಲೂ ವಿಶೇಷವಾಗಿ ಬಂದಿರುವುದರಿಂದ ಅವುಗಳೆಲ್ಲಕ್ಕೂ ಪ್ರತ್ಯೇಕವಾಗಿ ಉತ್ತರವನ್ನು ಕೊಡಲು ಸಾಧ್ಯವಿಲ್ಲವಾದಪ್ರಯುಕ್ತ ಈ ಪತ್ರಿಕಾಮೂಲಕ ಅವರೆಲ್ಲರಿಗೂ ತಮ್ಮ ವಂದನೆಗಳನ್ನು ತಿಳಿಸಬೇಕೆಂದು ನಮ್ಮನ್ನು ಪ್ರಾರ್ಥಿಸಿರುತ್ತಾರೆ.

ಬೆಂಗಳೂರದಂಡಿನ ಲಾರ್ಡ್ ಮಿರ್ಷನ್‌ಸ್ಕೂಲ್ ವಿದ್ಯಾರ್ಥಿಗಳಲ್ಲಿ ಕೆಲರು ಕಳೆದ ಮಂಗಳವಾರ ಶೇಷಾದ್ರಿ ರೋಡಿನಲ್ಲಿರುವಬಂದುಕೊಳದಲ್ಲಿ ಈಸುತ್ತಿರುವಾಗ್ಗೆ ೧೩ವರ್ಷದವಯಸ್ಸಿನ ಅರ್ಚಿಬಾಲ್ಡ್ ವಿಬ್ರಾಹಾಂ ಎಂಬ ಹುಡುಗನು ಆಯತಪ್ಪಿ ೧೮ ಅಡಿ ನೀರಿನ ಕೆಳಗೆ ಮುಳುಗಿಹೋಗಲು ಅವರ ಕೂಡ ಇದ್ದ ಸಾರ್ಜೆಂಟನು ನೀರಿನಲ್ಲಿ ಮುಳುಗಿ ಹುಡುಕಿದಾಗ್ಯೂ ಹುಡುಗನು ಸಿಕ್ಕಲಿಲ್ಲವಾಗಿ, ಸ್ಕೂಲಿನ ಮುಖ್ಯೋಪಾಧ್ಯಾಯರಿಗೆ ಇತರರು ವರ್ತಮಾನವನ್ನು ಕೊಡಲು ಅವರು ಈಸುವುದರಲ್ಲಿ ಸಮರ್ಥರಾದುದರಿಂದ ಕೂಡಲೆ ನೀರಿನಲ್ಲಿ ಮುಳುಗಿ ಹುಡುಗನನ್ನು ತಡಕಿ ಬಡಿಗೆ ಕಚ್ಚಿಕೊಂಡಿದ್ದ ಶವವನ್ನು ಹೊರಗಡೆಗೆ ತಂದುಹಾಕಿದರು.

ರಾಜಧಾನಿಯಲ್ಲಿ ಮಳೆಯಿಲ್ಲದೆ ಹಗಲು ಬಿಸಿಲಿನ ಜಳವು ವಿಪರೀತವಾಗಿರುವುದಾದರೂ ರಾತ್ರಿ ವೇಳೆಯಲ್ಲಿ ಮಾತ್ರ ತಂಗಾಳಿಯು ಬೀಸುತ್ತಿರುವುದರಿಂದ ಕೊಂಚ ಸಮಾಧಾನಕರವಾಗಿದೆ ಕಳೆದ ವರ್ಷ ಮುಂಗಾರು ಮಳೆಯು ಮೇ ತಿಂಗಳ ಕಡೆಯವರೆಗೆ ೯ ಅಂಗುಲ ಆಗಿದ್ದಿತು. ಈಗ ೧.೨ ಅಂಗುಲವು ಸಹ ಆಗಿರುವಂತೆ ತೋರುವುದಿಲ್ಲವು. ಡೆಂಗ್ಯು ಅಂದರೆ ಕೈಕಾಲುಗಳು ಹಿಡಿದುಕೊಂಡು ಜ್ವರ ಬರುವುದು. ಇಲ್ಲಿ ಪ್ರಾರಂಭವಾಗಿ ಅನೇಕರು ನರಳುತ್ತಿರುವರು. ಇದರಿಂದ ಪ್ರಾಣಾಪಾಯವೇನೂ ಇಲ್ಲದಿದ್ದಾಗ್ಯೂ ಒಂದೊಂದು ಕುಟುಂಬದಲ್ಲಿ ಜನರೆಲ್ಲರೂ ಒಟ್ಟಿಗೆ ರೋಗಪೀಡಿತರಾಗಿ ಅನ್ನವನ್ನು ಬೇಯಿಸಲು ಸಹ ಮಾರ್ಗವಿಲ್ಲದಂತಾಗಿರುತ್ತದೆ.

ಚಾಮರಾಜನಗರದ ಶ್ರೀ ಚಾಮರಾಜೇಶ್ವರ ಸ್ವಾಮಿಯ ಬೆಳ್ಳಿಯ ಮಂಟಪವನ್ನು ಸರಿಪಡಿಸುವುದಕ್ಕಾಗಿ ಅರಮನೆಗೆ ತಂದಿದ್ದು ಕಳೆದವಾರ ಸಾಮಗ್ರಿಗಳನ್ನು ಸಾಗಿಸುವ ಲಾರಿ ಎಂಬ ಮೋಟಾರು ಬಂಡಿಯಲ್ಲಿಟ್ಟುಕೊಂಡು ನಾರಾಯಣಶಾಸ್ತ್ರಿಗಳೂ, ಇಬ್ಬರು ವಾಲೇಕಾರರು ಒಬ್ಬ ಸಿಪಾಯಿ ಮತ್ತೆ ಕೆಲರು ಸಹ ಚಾಮರಾಜನಗರಕ್ಕೆ ಹೋಗುತಿರುವಾಗ್ಗೆ ದಳವಾಯಿ ಕೆರೆಯ ಬಳಿ ಬಂಡಿಯು ಇಳಿಜಾರಿನಲ್ಲಿ ಆಯತಪ್ಪಿ ಮಗುಚಿಕೊಳ್ಳಲು ಮಂಟಪವು ಬಿದ್ದು ಶಾಸ್ತ್ರಿಗಳಿಗೂ ಮತ್ತೊಬ್ಬಬ್ಬರಿಗೂ ಅಪಾಯವಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದಿ ಗುಣಪಟ್ಟಿರುವುದಾಗಿಯೂ, ರಾಜಧಾನಿಗೆ ವರ್ತಮಾನವು ಬಂದ ಮೇಲೆ ಅರಮನೆಯ ಕಂಟ್ರೋಲರು ಕೆಲ ಆಳುಗಳನ್ನು ಕಳುಹಿಸಿ ಆ ಮಂಟಪವನ್ನು ಹಿಂದಕ್ಕೆ ತರಿಸಿಕೊಂಡುದಾಗಿಯೂ ಕೇಳುತ್ತೇವೆ.

ಆರಣಿಜಾಗೀರ್ದಾರರಮೇಲೆ ಮೋಟಾರಿನಸಂಬಂಧವಾಗಿ ಬಂದಿದ್ದ ವ್ಯಾಜ್ಯದಲ್ಲಿ ದಂಡಿನ ದಂಡಾಧಿಕಾರಿಯು ೮೦೦ರೂ ಅರ್ಥದಂಡವನ್ನು ತಪ್ಪಿದರೆ ೨ ತಿಂಗಳ ಕಾರಾಗೃಹಶಿಕ್ಷೆಯನ್ನು ವಿಧಿಸಿ ಅರ್ಥದಂಡದಲ್ಲಿ ಬಂದ ೩ ನೂರು ರೂ. ಗಳನ್ನು ಸತ್ತವನ ಹೆಂಡತಿಗೆ ಕೊಡುವಂತೆ ವಿಧಿಸಿದುದಲ್ಲದೆ, ೧ ವರ್ಷದವರೆಗೆ ಬಂಡಿಯ ಲೈಸನ್ಸನ್ನು ತಪ್ಪಿಸಿಬಿಟ್ಟಿರುತ್ತಾರೆ. ಅಪರಾಧಿಯು ತನ್ನ ಅಪರಾಧವನ್ನು ಮುಚ್ಚುವುದಕ್ಕಾಗಿ ಸುಳ್ಳಾದ ವಾಜ್ಮೂಲವನ್ನು ಕೊಟ್ಟರೆಂದೂ, ಮೋಟಾರಿನಲ್ಲಿರುವ ವೇಗದರ್ಶಕಯಂತ್ರದ ಮುಳ್ಳನ್ನು ಹಿಂದಕ್ಕೆ ತಿರುಗಿಸಿದ್ದರೆಂದೂ, ಇವರ ಜತೆಯಲ್ಲಿದ್ದ ಪೋಕ್‌ರವರ ಮತ್ತೂ ಇವರ ನಡತೆಗಳೆಲ್ಲಾ ದೋಷಯುಕ್ತವಾಗಿದ್ದವೆಂದೂ, ತಮ್ಮ ಮೋಟಾರಿನಬಡಿತದಿಂದ ಒಬ್ಬ ಮನುಷ್ಯನು ಸಾಯುತ್ತಿದ್ದರೂ ತಾವು ಏನನ್ನೂ ಕಾಣದವರಂತೆ ನಟಿಸಿರುವರೆಂದೂ ತೀರ್ಮಾನದಲ್ಲಿ ಬರೆದಿರುತ್ತಾರೆ.

ಒಕ್ಕಲಿಗರ ಪತ್ರಿಕೆಯಮೇಲೆ ಬೆಂಗಳೂರ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ನಡೆಯುತ್ತಿರುವ ಮಾನನಷ್ಟದ ವಿವಾದದ ವಿಚಾರಣೆಯು ಕಳೆದ ತಿಂಗಳ ತಾ|| ೨೩ ರಲ್ಲಿ ನಡೆದಿತು. ಫಿರ್ಯಾದಿಯ ಕಡೆ ಮದ್ರಾಸಿನ ದಿವಾನ್ ಬಹದ್ದೂರ್ ಎಲ್. ಎ. ಗೋವಿಂದ ರಾಘವಯ್ಯರ್‌ರವರು ಮತ್ತೂ ಮ|| ಸಿ. ವಿ. ನರಸಿಂಹಯ್ಯಂಗಾರರು, ಅಪರಾಧಿಗಳ ಕಡೆ ಮ|| ಗಳಾದ ಟಿ. ಬಿ. ತಿರುಮಲರಾಯರು, ಕೆ ಎಸ್. ಶೇಷಯ್ಯಂಗಾರರು, ಸಿ. ಶೇಷಾಚಾರ್ರು ಮತ್ತೂ ಬಿ. ಕೆಂಪಣ್ಣನವರು ವಕೀಲರುಗಳಾಗಿ ಬಂದಿದ್ದರು. ಫಿರ್ಯಾದಿಪರ ಸಾಕ್ಷಿಗಳ ವಿಚಾರಣೆಯು ನಡೆದ ಮೇಲೆ ೩ ಜನ ಅಪರಾಧಿಗಳು ತಮ್ಮ ರಿರ್ಟ ಸ್ಟೇಟ್‌ಮೆಂಟನ್ನು ಕೊಟ್ಟರು. ಫಿರ್ಯಾದಿಪರ ಮ|| ಗೋವಿಂದರಾಘವಯ್ಯರವರು ದೊಡ್ಡ ಆರ್ಗ್ಯುಮೆಂಟ್ ಮಾಡಿ, ವಿಲೋಮ ಮತ್ತೂ ಸಂಕರ ಶಬ್ದಗಳ ಪ್ರಯೋಗವು ಸಮಂಜಸವಾದುವಲ್ಲವೆಂಬುದನ್ನು ಅಪರಾಧಿಗಳೇನೂ ನಿಷೇಧಿಸಲಿಲ್ಲವು. ಈ ಶಬ್ದಗಳು ಕುರುಬರ ಜಾತಿಯ ಜನರಿಗೆ ಬಹು ಅಪಮಾನಕರವಾಗಿವೆ. ಒಬ್ಬ ಬಿಳೀ ತೊಗಲಿನ ಮನುಷ್ಯನನ್ನು ಒಬ್ಬ ಬಣ್ಣದ ಮನುಷ್ಯನೆಂದು ಕರೆದರೆ ಅದು ಅಪಮಾನಕರವಾದುದೆಂಬ ಬಗೆಗೆ ಅಮೇರಿಕಾದ ಎನ್ಸೈಕ್ಲೋಪೀಡಿಯಾ ಎಂಬ ಸರ್ವ ಶಬ್ದಾರ್ಥದ ಬುಕ್ಕಿನಲ್ಲಿದೆ. ವಿಲೋಮ ಶಬ್ದವು ಧರ್ಮರಹಿತರ ವಿಷಯದಲ್ಲಿ ಪ್ರಯೋಗಿಸಲ್ಪತತಕ್ಕುದು ಎಂದು ಫಿರ್ಯಾದಿಪರ ಸಾಕ್ಷಿಯಾದ ನಾರಾಯಣ ಶಾಸ್ತ್ರಿಗಳು ಹೇಳಿರುತ್ತಾರೆ. ಅಪರಾಧಿಗಳು ಕೊಟ್ಟಿರುವ ರಿರ್ಟ ಸ್ಟೇಟ್‌ಮೆಂಟಿನಲ್ಲಿ ವಿಲೋಮ ಶಬ್ದ ಪ್ರಯೋಗಕ್ಕಾಗಿ ತಮ್ಮ ಅನುತಾಪವನ್ನು ತಿಳಿಸುವುದಕ್ಕೆ ಬದಲು ಅದರ ಪ್ರಯೋಗವು ಯುಕ್ತವಾದುದೆಂದು ವಾದಿಸುತ್ತಾರೆ. ಮೊದಲನೆಯಪರಾಧಿಯು ಈ ಲೇಖನಕ್ಕೆ ತಾನು ಸಂಬಂಧಪಟ್ಟವನಲ್ಲವೆಂದು ಹೇಳುತ್ತಾನೆ. ೪ ನೆಯ ಅಪರಾಧಿಯ ವಿನಾ ಉಳಿದವರು ಈ ಲೇಖನದ ಪ್ರಕಟನೆಗೆ ತಾವು ಉತ್ತರವಾದಿಗಳಲ್ಲವೆಂದು ಹೇಳುವರು. ಫಿರ್ಯಾದಿಪರ ೫-೬ ಮತ್ತೂ ೯ನೆಯ ಸಾಕ್ಷಿಗಳು-ಈ ಲೇಖನವು ಒಕ್ಕಲಿಗರ ಪತ್ರಿಕೆಯಲ್ಲಿ ಪ್ರಕಟವಾದಂದಿಗೆ ಕುರುಬರ ಕೂಡ ತಾವು ಊಟಮಾಡುವುದಿಲ್ಲವೆಂದು ಹೇಳಿರುತ್ತಾರೆ. ಈ ಒಕ್ಕಲಿಗರು ತಮ್ಮ ಸ್ಥಿತಿಯನ್ನುತ್ತಮಪಡಿಸಿಕೊಳ್ಳುವ ಪ್ರಯತ್ನದಲ್ಲಿ ಇತರರನ್ನು ನೀಚವಾಗಿ ಕಾಣುತ್ತಿಸಿರುವರು. ಅಪರಾಧಿಗಳ ಮೇಲೆ ಛಾರ್ಜುಮಾಡಲ್ಪಡಬೇಕು." ಎಂದು ಹೇಳಿದರು. ಅಪರಾಧಿಗಳ ಕಡೆಯ ವಕೀಲರಾದ ಮ|| ತಿರುಮಲರಾಯರು-ಆ ಲೇಖನದಲ್ಲಿ ಅಪಮಾನಕರವಾದ ಭಾಷೆಯೇನೂ ಇಲ್ಲವು. ಅಗಸ ಹಜಾಮ ಕುರುಬರು ಎಂಬುವರಿಗು ಮತ್ತೂ ಕುಂಬಾರ, ಬೆಸ್ತ, ಬೇಡ ಎಂಬುವರಿಗು ಇರುವ ವ್ಯತ್ಯಾಸವನ್ನು ಹೇಳುವುದಕ್ಕಾಗಿ ಮುಂತಾದ ಎಂಬ ಶಬ್ದವು ಬಿದ್ದಿದ್ದದಕ್ಕೆ ಬದಲು ಮತ್ತೂ ಎಂಬ ಶಬ್ದವು ತಿದ್ದಲ್ಪಟ್ಟಿರುವುದು. ವಿಲೋಮರುಗಳಲ್ಲಿ ವ್ಯತ್ಯಾಸವು ಹೇಳಲ್ಪಟ್ಟಿಲ್ಲವು, ಆದರೆ ಒಕ್ಕಲಿಗರ ಮನೆಯಲ್ಲಿ ಕೆಲಸಕ್ಕೆ ಹೋಗುವವರಿಗೂ ಹೋಗದಿರುವವರಿಗೂ ವ್ಯತ್ಯಾಸವು ಹೇಳಲ್ಪಟ್ಟಿದೆ. ಇತರ ೩ ಜಾತಿಯ ಜನರನ್ನೂ ವಿಲೋಮರಿಂದ ಬೇರ್ಪಡಿಸುವುದಕ್ಕಾಗಿ ಆರೀತಿ ಪ್ರಯೋಗಿಸಲ್ಪಟ್ಟಿರುವುದು ಎಂದು ಹೇಳಿದರು.

ವರ್ತಮಾನಸಂಗ್ರಹ.

ಪೂನಾಪಟ್ಟಣದಲ್ಲಿ ಸೈನ್ಯವಿರುವ ಸ್ಥಲದ ಹತ್ತಿರ ದೂಳಿಯಿಂದ ಬೆರೆದ ಬಿರುಗಾಳಿಯು ಕಳೆದ ತಾ|| ೨೫ ರಲ್ಲಿ ಬೀಸುತ್ತಿರುವಾಗ ಒಂದು ಸಿಡಿಲುಬಡಿದುನಾಯಕ ಮಹಾದೇವ ಮಲ್ಹಾರ ಎಂಬ ಸಿಪಾಯಿಯು ಸತ್ತನು. ಅರ್ಧ ಗಂಟೆ ಹೊತ್ತು ಗಾಳಿ ಬೀಸುತ್ತಿದ್ದಿತು ಮಳೆಯಿರಲಿಲ್ಲ.

ಅನೇಕ ವರ್ಷಗಳಿಂದ ತಾಲಗಂಜಿನಲ್ಲಿ ಸುಲಿಗೆ ಕೊಲೆ ಮೊದಲಾದ ಅಪರಾಧಗಳನ್ನು ನಡೆಯಿಸುತ್ತಿದ್ದ ಕಳ್ಳರ ಗುಂಪಿಗೆ (೫೦ ಮಂದಿ) ಅಧಿಪತಿಯಾಗಿದ್ದ ರಾಮಲಾಲ್ ಮಂಡಲ ಎಂಬುವವನನ್ನು ಪೋಲೀಸರು ಹಿಡಿದಿರುತ್ತಾರೆ. ಅವನ ಮತ್ತೂ ಅವನ ಅನುಯಾಯಿಗಳಾದ ೧೮ಮಂದಿಗಳ ವಿಚಾರಣೆಯು ಈಗ ನಡೆಯುತ್ತಿದೆ.

ಕಳೆದವಾರದಲ್ಲಿ ಲಂಡನ್ನಿನೊಳಗೆ ಆಕಾಶವಿಮಾನಗಳ ಜೂಜು ಒಂದು ನಡೆಯುವುದಕ್ಕೆ ಏರ್ಪಾಟಾಗಿತ್ತು. ಆದರೆ ಅದಕ್ಕಾಗಿ ಪ್ಯಾರಿಸ್ಸಿನಿಂದ ವಿಮಾನದಮೇಲೆ ಹೊರಟುಬರುತ್ತಿದ್ದ ಗೆಸ್ಟಿಹಾಮೆಲ್ ಎಂಬ ಸಮರ್ಥನು ಮಧ್ಯದಾರಿಯವರೆಗೆ ಬಂದು ಮುಂದಕ್ಕೆ ಕಾಣದಂತಾಗಿದ್ದಾನೆ. ಅದರಿಂದ ಯೋಚನೆಯುಂಟಾಗಿ ಜೂಜು ನಿಂತುಹೋಯಿತು.

ಜಾರ್ಜ್‌ಚಕ್ರವರ್ತಿಯವರು ಅಲ್ಡರ್‌ಷಾಟಿಗೆ ಹೋಗಿ ಸೇನಾವಿನ್ಯಾಸವನ್ನು ಪರಾಮರಿಸಿಕೊಂಡು ಲಂಡನ್‌ಪಟ್ಟಣದ ಬಕಿಂಗ್‌ಹ್ಯಾಂಅರಮನೆಗೆ ಹೋಗುತ್ತಿರುವಾಗ ಸ್ತ್ರೀಸ್ವಾತಂತ್ರ್ಯವಾದಿನಿಯರಾದ ಕೆಲಹೆಂಗುಸರು ಚಕ್ರವರ್ತಿಯವರನ್ನು ಕಂಡು ಮಾತನಾಡಬೇಕೆಂದು ಪ್ರಯತ್ನಿಸಿದರು. ಆಗ ಪೋಲೀಸರೂ ಸೈನಿಕರೂ ಬಂದು ಅವರ ಗುಂಪನ್ನು ಚದರಿಸಿ, ಮುಖ್ಯಳಾದ ಪಾಂಕ್‌ಹರ್ಸ್ಟ್‌ದೊರೆಸಾನಿ ಮೊದಲಾದ ಕೆಲವರನ್ನು ಹಿಡಿದು ಬಂಧನದಲ್ಲಿಟ್ಟರು.

ಜಪಾನಿಗೆ ಸೇರಿದ ಕಿಡಮಿಟೋಕೈಡೋದ್ವೀಪದ ಕಾಡುಗಳಿಗೆ ಬೆಂಕಿಬಿದ್ದು ಬೇಯುತ್ತಿದೆ. ಈಗ ಉರಿಯುತ್ತಿರುವ ಪ್ರದೇಶವು ಆರುಮೈಲಿಗಳಗಲವೂ ೩೦ ಮೈಲಿಗಳ ಉದ್ದವೂ ಉಳ್ಳುದಾಗಿದೆ. ಆರಿಸುವುದಕ್ಕೆ ತಕ್ಕಷ್ಟು ನೀರು ದೊರೆಯದೆ ಇರುವುದರಿಂದ ಬೆಂಕಿಯನ್ನಣಗಿಸುವುದು ಕಷ್ಟವಾಗಿದೆ. ಆದರೂ ಪ್ರಜೆಗಳು ಶಕ್ತಿವಂಚನೆಯಿಲ್ಲದೆ ಅದನ್ನಾರಿಸಲು ಸಾಹಸಪಡುತ್ತಿದ್ದಾರೆ. ಈ ಪ್ರಯತ್ನದಲ್ಲಿ ೧೩ ಮಂದಿಗಳು ಸತ್ತಿರುವರು.

ಕಳೆದ ಮೇ ತಾ|| ೨೧ ರಲ್ಲಿ ಬೆಳ್ಗಾವಿನಿಂದ ಮಿರಜಿಗೆ ಹೊಗೆಬಂಡಿಯಲ್ಲಿ ಪ್ರಯಾಣಮಾಡುತ್ತಿದ್ದ ಪ್ರಯಾಣಿಕರಲ್ಲಿ ಒಬ್ಬ ಹೆಂಗುಸೂ ಒಂದು ಮಗುವೂ ಸತ್ತರು. ಇನ್ನು ೫ ಮಂದಿಗೆ ಏಟುಗಳು ಬಿದ್ದುವು. ೩ ನೆ ತರಗತಿಯ ಬಂಡಿಯಲ್ಲಿ ಬೆಂಕಿಬಿದ್ದುದರಿಂದ ಈ ವಿಪತ್ತು ಸಂಭವಿಸಿತು. ಬೆಂಕಿಬಿದ್ದುದರ ಕಾರಣವು ಗೊತ್ತಾಗಲಿಲ್ಲ. ಪ್ರತಿಯೊಂದು ಬಂಡಿಯಲ್ಲೂ ಅಪಾಯಸೂಚಕವಾದ ತಂತಿಯಿದ್ದರೂ ಅಷ್ಟೊಂದು ಅನರ್ಥವಾಗುವವರೆಗೆ ಸಂಗತಿಯು ಯಾರಿಗೂ ಗೊತ್ತಾಗದೆಹೋದುದು ಆಶ್ಚರ್ಯವಾಗಿದೆ.

ಚೀನಾಕ್ಕೂ ಟಿಬೆಟ್ಟಿಗೂ ಇರುವ ಮನಸ್ತಾಪವನ್ನು ಬಗೆಹರಿಸಿಕೊಳ್ಳುವ ಸಂಧಿಗಾಗಿ ಸಿಮ್ಲಾಪಟ್ಟಣದಲ್ಲಿ ಅವೆರಡುದೇಶದ ಪ್ರತಿನಿಧಿಗಳೂ ಸೇರಿದ್ದರು. ಈ ಸಂಧಿಪತ್ರದಲ್ಲಿ ಬರೆಯಲ್ಪಟ್ಟಿರುವ ಮುಖ್ಯನಿಬಂಧನೆಗಳೇನೆಂದರೆ—ಟಿಬೆಟ್ಟಿನ ರಾಜಧಾನಿಯಾದ ಲಾಸಾನಗರದಲ್ಲಿ ಆಂಗ್ಲರ ಮತ್ತೂ ಚೀನಾದವರ ಪ್ರತಿನಿಧಿಗಳು ಇರಬೇಕು. ಚೀನಾದೇಶದ ಮತ್ತೂ ಟಿಬೆಟ್ಟಿನ ಎಲ್ಲೆಯಪ್ರದೇಶದಲ್ಲಿ ಚೀನಾದವರಿಗೆ ನಿರ್ವಿವಾದವಾದ ಅಧಿಕಾರವು ಇರಬೇಕು. ಕೋಕೋನಾರು ಸಹಿತ ಚೀನಾದ ಅಧಿಕಾರಕ್ಕೇ ಒಳಪಟ್ಟಿರಬೇಕು, ಎಂಬುದಾಗಿ.

ಮದರಾಸು ಆಧಿಪತ್ಯವು ಸೇರಿಕೊಂಡು ದಕ್ಷಿಣಹಿಂದೂಸ್ಥಾನದೊಳಗೆಲ್ಲಾ ಬರುವ ೧೯೧೫ ನೆಯ ವರ್ಷದಲ್ಲಿ ಹಿಂದೆ ಧಾತು ಈಶ್ವರಸಂವತ್ಸರದಲ್ಲಿ ಉಂಟಾಗಿದ್ದಂತಹ ಘೋರಕ್ಷಾಮವು ಸಂಭವಿಸುವುದೆಂದೂ, ಬಳಿಕ ೪೦ ವರ್ಷಗಳವರೆಗೆ ಕ್ಷಾಮೋಪದ್ರವವು ಸಂಭವಿಸುವುದಿಲ್ಲವೆಂದೂ ಸೀಮೆಯಲ್ಲಿರುವ ಹ್ಯೂಕ್ಲೆಮೆಂಟ್ಸ್‌ರವರು ಭವಿಷ್ಯತ್ತನ್ನು ಬರೆದಿರುತ್ತಾರೆ. ೧೮೭೬-೭೭ ರಲ್ಲಿ ಕ್ಷಾಮವುಂಟಾಗುವುದಕ್ಕಿಂತ ಹಿಂದೆ ರೂ. ಗೆ ೨೦ ಸೇರು ಅಕ್ಕಿ ೫೦ ಸೇರು ರಾಗಿ ಮಾರುತ್ತಿದ್ದಿತು. ಕ್ಷಾಮಕಾಲದಲ್ಲಿ ರೂ ಗೆ ೪ ಸೇರು ಅಕ್ಕಿಯಾಯಿತು. ಈಗ ಸಾಮಾನ್ಯದಿನಗಳಲ್ಲೇ ರೂ.ಗೆ ೬ ಸೇರು ಅಕ್ಕಿ ಮಾರುತ್ತಿರುವಲ್ಲಿ ಹಿಂದಿನಂಥ ಘೋರಕ್ಷಾಮವು ಬಂದರೆ ರೂ.ಗೆ ೧-೨ ಸೇರು ಅಕ್ಕಿಯೇ ಮಾರುವುದೋ ಹೇಗೋ ತಿಳಿಯಲಿಲ್ಲ. ಈ ವರ್ಷದ ಮುಂಗಾರುಮಳೆಯ ಸ್ಥಿತಿಯನ್ನು ನೋಡಿದರೆ ಮುಂದಣ ಕ್ಷಾಮಕ್ಕೆ ಸ್ವಾಗತವನ್ನು ಮಾಡುವಂತಿದೆ. ಭಗವದನುಗ್ರಹದಿಂದ ಅದು ತಪ್ಪಿಹೋಗಬೇಕು.

ವಾಷಿಂಗ್‌ಟನ್ ಪಟ್ಟಣದಲ್ಲಿ ಎಳೆಮಕ್ಕಳ ಪ್ರದರ್ಶನವೊಂದು ನಡೆಯಿತು. ಅಲ್ಲಿ ೩ ವಾರಗಳ ಮೊದಲು ೪ ವರ್ಷವಯಸ್ಸಿನೊಳಗಣ ಮಕ್ಕಳು ಪ್ರದರ್ಶನಕ್ಕೆ ಇಡಲ್ಪಟ್ಟಿದ್ದುವು. ಅವುಗಳನ್ನು ನಾನಾವಿಚಿತ್ರವಾದ ಉಡುಪುಗಳಿಂದ ಅಲಂಕರಿಸಿದ್ದರು. ಆಗ ಅಮೇರಿಕಾದ ಶ್ರೀಮಂತನೊಬ್ಬನು ಪ್ರದರ್ಶಿತವಾಗಿದ್ದ ಮಕ್ಕಳೊಳಗೆ ಒಂದನ್ನು ನೋಡಿ, ಅದು ತನ್ನ ಪೂರ್ವಿಕರಲ್ಲಿ ಒಬ್ಬನನ್ನು ಹೋಲುತ್ತಿರುವುದೆಂದೂ ಅದನ್ನು ತನಗೆ ಕೊಟ್ಟರೆ ೧೫ ಲಕ್ಷ ರೂ.ಗಳನ್ನು ಕೊಡುತ್ತೇನೆಂದೂ ಕೇಳಿದನು. ಪ್ರದರ್ಶನಾಲಯದ ಅಧಿಕಾರಿಯಾದರೊ ಆ ಮಗುವನ್ನು ಮಾರುವುದಕ್ಕೆ ತನಗೆ ಅಧಿಕಾರವಿಲ್ಲವೆಂದು ಹೇಳಿ, ಸಂಗತಿಯನ್ನು ಆ ಮಗುವಿನ ತಾಯಿಗೆ ತಿಳಿಯಿಸಿದನು. ಆಕೆಯು ಬಲುಬಡವೆ; ಆದರೂ ಅವಳು ಕೊಟ್ಟ ಉತ್ತರವು ಪುತ್ರಮೋಹದ ಬೆಲೆಯನ್ನು ಜಗತ್ತಿಗೆ ವ್ಯಕ್ತಪಡಿಸಿರುತ್ತದೆ. ಏನೆಂದರೆ—"ನನ್ನ ಮಗುವು ನನಗೆ ಸ್ವರ್ಗವು; ಪ್ರಪಂಚದಲ್ಲಿರುವ ಹಣವನ್ನೆಲ್ಲಾ ನನಗೆ ಕೊಟ್ಟರೂ ನನ್ನ ಮಗುವನ್ನು ಕೊಡಲಾರೆ" ಎಂಬುದಾಗಿ.

ನಾರಾಯಣಯ್ಯರ ಮತ್ತೂ ಆನಿಬೆಸೆಂಟಮ್ಮನವರ ಸಂಬಂಧದ ವ್ಯಾಜ್ಯದಲ್ಲಿ ಪ್ರಿವಿಕೌನ್ಸಿಲ್‌ನವರು ಕಳೆದ ತಾ|| ೨೫ ರಲ್ಲಿ ಸಂಪೂರ್ಣವಾದ ತೀರ್ಮಾನವನ್ನು ಹೇಳಿರುವರು. ಅದರಲ್ಲಿ ಕಂಡಿರುವ ಮುಖ್ಯಾಂಶವೇನೆಂದರೆ—"ನಾರಾಯಣಯ್ಯರು ಮಾಡಿರುವ ದಾವಾವು ಅಪಾರ್ಥದಿಂದ ಕೂಡಿದೆ. ಚೆಂಗಲ್ಪಟ್ಟು ಕೋರ್ಟಿನವರಿಗೆ ಆ ಜಿಲ್ಲಾದಲ್ಲಿ ವಾಸಿಸುವ ಬಾಲಕರಮೇಲೆ ಮಾತ್ರ ಹಕ್ಕಿರುವುದು. ಅನೇಕದಿನಗಳಿಂದ ವಿದ್ಯಾಭ್ಯಾಸಕ್ಕಾಗಿ ಇಂಗ್ಲಂಡಿನಲ್ಲಿರುವ ಬಾಲಕರ ಸ್ಥಿತಿಗೂ, ಪೂರ್ವದಲ್ಲಿ ಚೆಂಗಲ್ಪಟ್ಟು ಜಿಲ್ಲೆಯಲ್ಲಿದ್ದಾಗಿನ ಸ್ಥಿತಿಗೂ ವ್ಯತ್ಯಾಸವಿಲ್ಲವೆಂದು ಹೇಳುವುದು ಅಸಮಂಜಸವು. ಹುಡುಗರ ಸಮ್ಮತಿಯಿಲ್ಲದೆ ಅವರನ್ನು ನಾರಾಯಣಯ್ಯನವರು ಭರತಖಂಡಕ್ಕೆ ಕರೆಯಿಸಿಕೊಳ್ಳಬಹುದೆಂದು ಮದರಾಸು ಹೈಕೋರ್ಟಿನವರು ಮಾಡಿರುವ ತೀರ್ಮಾನವು ಸಲ್ಲತಕ್ಕುದಲ್ಲ. ಆ ಹುಡುಗರು ಕೂಡ ಇಂಗ್ಲಾಂಡಿನಿಂದ ಭರತಖಂಡಕ್ಕೆ ಕರೆಯಿಸಿಕೊಂಡು ಹೋಗಲು ಸಮ್ಮತಿಸುವುದಿಲ್ಲ. ಅದುಕಾರಣ, ನಾರಾಯಣಯ್ಯರು ತನಗೆ ಆ ಮಕ್ಕಳಮೇಲೆ ಇರುವ ಪೋಷಕತ್ವದ ವಿಷಯವಾಗಿಯೂ, ಸ್ವಾಧೀನಗೊಳಿಸಿಕೊಳ್ಳುವ ವಿಷಯವಾಗಿಯೂ, ತಾನೇ ಅವರನ್ನು ಪರಿಪಾಲನೆಮಾಡಿಕೊಳ್ಳುವ ವಿಷಯದಲ್ಲಿಯೂ ಇಂಗ್ಲೆಂಡಿನಲ್ಲಿರುವ ಹೈಕೋರ್ಟಿನಲ್ಲಿ ವಿಜ್ಞಾಪಿಸಿಕೊಳ್ಳಬಹುದು ಎಂಬುದಾಗಿ.

ಜಾಹೀರ—ವಿನಂತಿ.

ನಮ್ಮ ಜಿಲ್ಲೆಯಲ್ಲಿಯೂ ಇನ್ನೂ ಇತರ ಪ್ರಾಂತಗಳಲ್ಲಿಯೂ ಪ್ರೀತಿಗೋಸ್ಕರ ಬಲವಾದ ಎತ್ತುಗಳನ್ನು ಕಲ್ಲುದಿಂಡುಗಳಿಗೆ ಕಟ್ಟಿ ಎಳೆಯಿಸುತ್ತಾರೆ. ಆದರೂ ಹಾಗೆ ಎಳೆಸತಕ್ಕ ದಿಂಡು ಎತ್ತಿನ ಬಲಕ್ಕಿಂತಲೂ ಮೀರಿದುದಾಗಿ ಇದ್ದರೇನೇ ಜನರಿಗೆ ಆಶ್ಚರ್ಯವೆಂದೆನಿಸುವದು.

ನಾವು ಜುಲೈ ೯ನೇ ತೇದಿ ಜ್ಯೇಷ್ಠ ಬ|| ೧ ಮಂಗಳವಾರ ಹಗಲು ೩ ಗಂಟೆಯಿಂದ ನಮ್ಮ ಎತ್ತನ್ನು ಕಲ್ಲುದಿಂಡಿಗೆ ಕಟ್ಟಿ ಎಳೆಸುತ್ತೇವೆ. ನೋಡಲಪೇಕ್ಷೆಯುಳ್ಳವರು ಬರುವದಾಗಿ ಮಿತ್ರಭಾವದಿಂದ ಕೋರುವ, ತಮ್ಮ

ಕಂಪ್ಲಿ; ಬಳ್ಳಾರಿ ಜಿಲ್ಲೆ ಬುರಡ್ಡಿ ವೀರಪ್ಪ.

ಪತ್ರವ್ಯವಹಾರ

ಹಾಸನದ ೮॥ ಬೆಳಗೋಡಿನ ಮ॥ ರಾ॥ ಯಜಮಾನರು ಬಸವಲಿಂಗಪ್ಪನವರ ಮನೆಯಲ್ಲಿ ನಡೆದ ವಿವಾಹ ಲಗ್ನದಲ್ಲಿ ಹಾಸನದ ಶ್ರೀಮಂತ ಕೇಶಿ ಮಹದೇವಪ್ಪನವರು ಮತ್ತೂ ಶ್ರೀ ಹಿರೇಮಠದ ಪುರೋಹಿತ ಪುಟ್ಟಸ್ವಾಮಯ್ಯನವರು ಮೈಸೂರು ಕೈ॥ ವೈ. ವೀರಸಂಗಪ್ಪನವರು ತಮ್ಮ ತನು ಮನಧನವನ್ನು ಈ ಮತಸೇವೆಗಾಗಿ ವ್ಯಯಮಾಡಿ ಕೀರ್ತಿಶೇಷರಾಗಿರುವ ವಿಷಯವನ್ನು ಸಭಿಕರಿಗೆ ಚೆನ್ನಾಗಿ ತಿಳಿಯ ಹೇಳಿ ಅವರ ಜ್ಞಾಪನಾರ್ಥವಾಗಿ ಈ ಪ್ರಾಂತದಲ್ಲಿ ನಡೆಯುವ ವಿವಾಹ ಮೊದಲಾದ ಶುಭಕಾರ್ಯಗಳಲ್ಲಿ ಅಗ್ರತಾಂಬೂಲವನ್ನು ತೆಗೆಯಬೇಕೆಂದು ಸೂಚಿಸಲು ಸಭಿಕರೆಲ್ಲರೂ ಸಮ್ಮತಿಸಿದರು. ಮತ್ತೂ ಮ॥ ಯ. ಬಸವಲಿಂಗಪ್ಪನವರು ಅಗ್ರತಾಂಬೂಲದ ಬಗೆಗೆ ೨ ರೂ.ಗಳನ್ನು ಆ ಕೂಡಲೆ ಮೈಸೂರ ಸ್ಟಾರಾಫೀಸಿಗೆ ಮನಿಯಾರ್ಡರು ಮಾಡಿದರು.

ಒಬ್ಬ ಸಭಿಕ.

[ಈ ಮೊಬಲಗನ್ನು ನಾವು ವಿಶ್ವಾಸದಿಂದ ಸ್ವೀಕರಿಸಿರುತ್ತೇವೆ. ಪ. ಪ್ರ.]

ತರೀಕೆರೆ ವರ್ತಮಾನ.

ತರೀಕೆರೆ ತಿಪ್ಪೆಮನೆ ಬಿ. ಚೆಂದಪ್ಪನವರ ಮನೆಯಲ್ಲಿ ಅವರ ಮಕ್ಕಳ ವಿವಾಹವು ಕಳೆದ ವೈಶಾಖ ಶು॥ ೧೨ ರಲ್ಲಿ ಬೀರೂರು ಪುರೋಹಿತ ಎನ್. ಬಾಲಾರಾಧ್ಯರಿಂದ ಆಗಮೋಕ್ತವಾಗಿ ನಡೆಸಲ್ಪಟ್ಟುದಲ್ಲದೆ ಸಂಗೀತ ವಿಶಾರದ ವಿದ್ವಾನ್ ಆರ್. ಮಹದೇವಯ್ಯನವರ ಸಂಗೀತದಿಂದಲೂ ಜಲತರಂಗು ಕೊಳಲು ವಾದ್ಯಗಳಿಂದ ಅಮಲ್‌ದಾರರೇ ಮೊದಲಾದ ಪುರಪ್ರಮುಖರು ಆನಂದಗೊಳಿಸಲ್ಪಟ್ಟರು. ಮತ್ತೂ ಪುರೋಹಿತ ಎನ್. ಬಾಲಾರಾಧ್ಯರು ಕೆಲವು ವಿಷಯವಾಗಿ ಉಪನ್ಯಾಸಮಾಡಿ, ಮೈಸೂರು ವೀರಸಂಗಪ್ಪನವರ ಹೆಸರಿನ ಮೇಲೆ ಅಗ್ರತಾಂಬೂಲಕ್ಕಾಗಿ ೧ ರೂ. ವಿದ್ಯಾವರ್ಧಕ ಫಂಡಿಗಾಗಿ ೫ ರೂ. ಈ ರೀತಿ ತೆಗೆಸಿ ಸ್ಟಾರಾಫೀಸಿಗೆ ಮಣಿಯಾರ್ಡರ್ ಮಾಡಿಸಿದರು. ಈ ರೀತಿಯಾಗಿ ಸರ್ವತ್ರ ಆಚರಣೆಗೆ ತರಬೇಕೆಂಬುದೇ ನನ್ನ ಕೋರಿಕೆಯಾಗಿದೆ.

ಟಿ. ಎನ್. ಆರ್. ರುದ್ರಯ್ಯ ಮಾನೆ ಪುಟ್ಟಸ್ವಾಮಯ್ಯ.

ಈ ೧ ರೂ.ಯನ್ನೂ ನಾವು ಆದರದಿಂದ ಸ್ವೀಕರಿಸಿರುವೆವು.

ಶಿಕಾರಿಪುರ ತಾ॥ ಹಿತ್ತಲುಗ್ರಾಮವಾಸಿ ಮಾದ್ರವಳ್ಳಿ ಪಟೇಲ್ ಮ॥ ಚೆಂಪಿ ಪುಟ್ಟಮಲ್ಲಪ್ಪನವರ ಮನೆಯಲ್ಲಿ ಕಳೆದ ವೈಶಾಖ ಬ॥ ೯ ರಲ್ಲಿ ನಡೆದ ಅವರ ಮಕ್ಕಳ ವಿವಾಹ ಮಹೋತ್ಸವದಲ್ಲಿ ಶಾಲೂರು ಹೊಸಕೊಪ್ಪದ ಮ॥ ಗಲ್ಲ ಬಸಪ್ಪನವರು ಸಕಲ ವೀರಶೈವರೂ ದೀಕ್ಷೆಯನ್ನು ಹೊಂದಬೇಕೆಂದೂ ಇದರಲ್ಲಿರತಕ್ಕ ಆವಶ್ಯಕತೆಯನ್ನೂ ಹೇಳಿ ಮತದೇಳ್ಗೆಗೆ ಮೂಲಪುರುಷರಾಗಿದ್ದ ಕೈ॥ ವೈ. ವೀರಸಂಗಪ್ಪನವರ ಹೆಸರಿನ ಮೇಲೆ ಅಗ್ರತಾಂಬೂಲಕ್ಕಾಗಿ ೧ ರೂ.ಯನ್ನೂ ಬೆಂಗಳೂರ ಲಿಂಗಾಯತ ವಿದ್ಯಾವರ್ಧಕ ಫಂಡಿಗೆ ೨ ರೂ. ಗಳನ್ನೂ ಶಿಕಾರಿಪುರದ ಸಂಸ್ಕೃತ ಪಾಠಶಾಲೆಗೆ ೨ ರೂ. ಯನ್ನೂ ತೆಗೆಯಿಸಿದರು. ಅದೇ ಸಾಯಂಕಾಲ ಓಂಕಾರಶಾಸ್ತ್ರಿಗಳವರಿಂದ ರಾಜಶೇಖರವಿಲಾಸವು ಓದಿಸಲ್ಪಟ್ಟಿತು.

ಹಿತ್ತಲುಮನೆಯ ಪುರೋಹಿತ ಚನ್ನಪ್ಪಯ್ಯ.

[ಇದರಲ್ಲಿ ಕಂಡ ಅಗ್ರತಾಂಬೂಲದ ಬಗೆಗೆ ೧ ರೂ. ವೀರಶೈವ ವಿದ್ಯಾವರ್ಧಕ ಫಂಡಿಗೆ ೨ ರೂ.ಗಳನ್ನು ವಿಶ್ವಾಸದಿಂದ ಸ್ವೀಕರಿಸಿ ಫಂಡಿನ ಸೆಕ್ರೆಟರಿಯವರಿಗೆ ೨ ರೂ.ಯನ್ನು ಕಳುಹಿಸಿದೆ. ಪ. ಪ್ರ.]

ಜಗಲೂರ ತಾ॥ ಹಿರೇ ಅರಕೇರಿಗ್ರಾಮದ ಗೌಡರು ಭೋಗಪ್ಪಶೆಟ್ಟರ ಮಕ್ಕಳ ವಿವಾಹವು ವೈಶಾಖ ಬ॥ ೧೨ ರಲ್ಲಿ ಕೆ. ಯಂ. ಕರಿಬಸವಾರಾಧ್ಯರ ಪೌರೋಹಿತ್ಯದಿಂದ ನಡೆದಿತು. ಈ ಸಮಯದಲ್ಲಿ ಮ॥ ಬಿ. ಕೆ. ಪಾಪಣ್ಣನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಪ್ರತಿಯೊಬ್ಬ ವೀರಶೈವನೂ ವಿವಾಹ ಕರ್ಮವನ್ನು ವಿಧ್ಯುಕ್ತವಾಗಿ ಮಾಡಬೇಕೆಂದು ಸ್ಟಾಂಪು ವೆಂಡರ್ ಶೆಟ್ಟರು ರುದ್ರಪ್ಪನವರು ಉಪನ್ಯಾಸಮಾಡಿದ ಮೇಲೆ ಅಧ್ಯಕ್ಷರು ಈ ಮತಾಭಿವೃದ್ಧಿಗಾಗಿ ಮಹೋಪಕಾರವನ್ನು ಮಾಡಿರುವ ಕೈ॥ ವೈ. ವೀರಸಂಗಪ್ಪನವರ ಹೆಸರಿನಲ್ಲಿ ಅಗ್ರತಾಂಬೂಲಕ್ಕಾಗಿ ೧ ರೂ.ಯನ್ನು ಮೈಸೂರು ವೀರಶೈವ ವಿದ್ಯಾವರ್ಧಕ ಫಂಡಿಗೆ ೪ ರೂ.ಗಳನ್ನು ತೆಗೆದು ಕಳುಹಿಸಬೇಕೆಂದು ಸೂಚಿಸಿದ ಪ್ರಕಾರ ೫ ರೂ.ಗಳು ಸ್ಟಾರಾಫೀಸಿಗೆ ಕಳುಹಲ್ಪಟ್ಟಿತು. ಪ್ರತ್ಯಕ್ಷದರ್ಶಿ.

[ಇದರಲ್ಲಿ ಕಂಡ ಅಗ್ರತಾಂಬೂಲದ ಬಗೆಗೆ ೧ ರೂ. ವೀರಶೈವ ವಿದ್ಯಾವರ್ಧಕ ಫಂಡಿಗೆ ೪ ರೂ.ಗಳನ್ನು ವಿಶ್ವಾಸದಿಂದ ಸ್ವೀಕರಿಸಿ ಫಂಡಿನ ಸೆಕ್ರೆಟರಿಯವರಿಗೆ ೪ ರೂ.ಗಳನ್ನು ಕಳುಹಿಸಿದೆ. ಪ. ಪ್ರ.]

ಚಿತ್ರದುರ್ಗ ಮಹಾಸಂಸ್ಥಾನದ ಬೃಹನ್ಮಠದಲ್ಲಿ ನಡೆದ ಶ್ರೀಮದ್ವೀರಶೈವ ಧರ್ಮಬೋಧಿನೀಸಭೆ.

ಈ ಸಭೆಯು ಕಳೆದ ಏಪ್ರಿಲ್ ತಾ॥ ೨೦ ರಲ್ಲಿ ಮಹಾಸಂಸ್ಥಾನದ ಚರಮೂರ್ತಿ ಶ್ರೀಶಾಂತಸ್ವಾಮಿಗಳವರ ಅಧ್ಯಕ್ಷತೆಯುಲ್ಲಾರಂಭವಾಗಿ ೩ ದಿವಸ ನಡೆದಿತು. ದಾವಣಗೆರೆ, ಹಾವೇರಿ ಹೊಳಲಕೆರೆಸ್ವಾಮಿಗಳು ಆಗಮಿಸಿದ್ದರಲ್ಲದೆ, ಈ ಊರುಗಳಿಂದಲೂ ಭೀಮಸಮುದ್ರ ಮೊದಲಾದ ನೆರೆಗ್ರಾಮಗಳಿಂದಲೂ ೫೦೦ ಜನರವರೆಗೆ ಬಂದಿದ್ದರು. ಸಂಸ್ಥಾನದ ಖಾರುವತ್ತೇಗಾರ್ ಮ॥ ಲಿಂಗಪ್ಪನವರು ಹಳೆಕೋಟೆಮೊಕ್ಕಾಮಿರುವ ಶ್ರೀಮಗದ್ಗುರುಗಳವರೂ ಮನವನ್ನೂ ದಿವೇಳದನಿಂದ ಬಂದಿದ್ದ ಶ್ರೀಜಗದ್ಗುರುಗಳವರ ಭಾಷಣವನ್ನು ಓದಿದರು. ಮೇಲೆ ಸತ್ಕಾರಕಸಂಘಾಧ್ಯಕ್ಷರ ಭಾಷಣವನ್ನು ನಾವೇರಿ ಹಾ॥ ಮತರುವಾಯ ಸಭಾಧ್ಯಕ್ಷರ ಭಾಷಣವನ್ನು ನಾವೇರಿ ಹಾ॥ ಮ ಶ್ರೀಗಳೋದಿದಮೇಲೆ ದೇವಾಪುರದ ವೇ॥ ಬಸವಲಿಂಗಶಾಸ್ತ್ರಿಗಳಿಂದ ಶಿವಕಥಾಕಾಲಕ್ಷೇಪವು ನಡೆಸಲ್ಪಟ್ಟಿತು. ತಾ॥ ೨೧ ರಲ್ಲಿ ವೀರಶೈವಸಮಾಜ ಸುಧಾರಣೆಯಮೇಲೆ ಭೀಮಸಮುದ್ರದ ಪ॥ ಮಲ್ಲಪ್ಪನವರು, ಎಂ. ಮಲ್ಲಯ್ಯನವರು, ಡಿ. ಸಂಜೀವಪ್ಪನವರು ಆರ್. ಸಿದ್ಧಯ್ಯನವರು ಮತ್ತೆ ಕೆಲವರೂ, ವೀರಶೈವಮತ ಸನಾತನತ್ವದಮೇಲೆ ದಾವಣಗೆರೆಯ ವೇ॥ ರುದ್ರಶಾಸ್ತ್ರಿಗಳೂ, ಗೃಹಸ್ಥಾಶ್ರಮದ ಮೇಲೆ ದಾವಣಗೆರೆಯ ರಿಟೈರ್ಡ್ ಹೆ॥ ಮಾಸ್ಟರು ಮ॥ ಗುರುಶಾಂತಪ್ಪನವರೂ ಯುಕ್ತಿಯುಕ್ತವಾಗಿಯೂ ಶಾಸ್ತ್ರಾಧಾರದಿಂದಲೂ ಶ್ರೋತೃಜನರ ಮನಸ್ಸಿನಲ್ಲಿ ನಾಟುವಂತೆ ಉಪನ್ಯಾಸಗಳನ್ನು ಮಾಡಿದುದಲ್ಲದೆ ಸಭೆಗೆ ಬರಲವಕಾಶವಿಲ್ಲದೆ ಬರೆದು ಕಳುಹಿಸಿದ್ದ ಬಳಿಬೋಡು ರುದ್ರಶಾಸ್ತ್ರಿಗಳ, ನೇಪಂತಿ ಮಳೆಮಠದ ಜೋಳಿಬಸವಶಾಸ್ತ್ರಿಗಳ ಉಪನ್ಯಾಸಗಳೋದಲ್ಪಟ್ಟವು. ತಾ॥ ೨೨ ರಲ್ಲಿ ವೀರಶೈವಾಚಾರ ಧರ್ಮವಿಚಾರದಲ್ಲಿ ಜೆ. ಮರುಳಾರಾಧ್ಯರೂ, ಯಾದವಾಡದ ಗುರುಸಿದ್ಧದೇವರೂ, ಬಾಲ್ಯವಿವಾಹನಿಷೇಧದಮೇಲೆ ಜಯದೇವಶರ್ಮ ಎಂಬ ವಿದ್ಯಾರ್ಥಿಯು ಇಂಗ್ಲೀಷಿನಲ್ಲೂ, ಆಚಾರ್ಯಕರೂಪತೆಯಮೇಲೆ ವೇ॥ ರುದ್ರಶಾಸ್ತ್ರಿಗಳೂ, ಬ್ರಹ್ಮಚರ್ಯದಮೇಲೆ ಮ॥ ಗಳಾದ ವೈ. ವೀರಪ್ಪನವರೂ, ಧರ್ಮಾಧಿಕಾರಿ ಎಡಿಬರೂ, ವಿಶ್ವಬಂಧುತ್ವದ ಮೇಲೆ ಎಸ್. ಗಿರಿಯಪ್ಪನವರೂ, ವ್ಯಸನಾಯದಮೇಲೆ ಶ್ರೀರಂಗಪಟ್ಟಣದ ಸಿದ್ಧಲಿಂಗದೇವರೂ ಬಹುಸ್ವಾರಸ್ಯವಾಗಿ ಉಪನ್ಯಾಸಗಳನ್ನು ಮಾಡಿದರು. ತರುವಾಯ ಗೊತ್ತಾದ ವಿಷಯಗಳಮೇಲೆ ನಡೆದಿರುವ ನಿರ್ಧಾರಗಳನ್ನೂ, ಇಲ್ಲಿ ಬೋರ್ಡಿಂಗ್‌ಹೌಸ್ ಸ್ಥಾಪಿಸಲ್ಪಡುವ ಆಲೋಚನೆಯನ್ನೂ ಮ॥ ಪ್ಲೀಡರ್ ಸಿದ್ಧನಂಜಪ್ಪನವರು ತಿಳಿಸಿದರು.

ಪ್ರತ್ಯಕ್ಷದರ್ಶಿ.

ಹುಣಸೂರು ತಾ॥ ಹಳ್ಳಿಕೆರೆ ಗ್ರಾಮದಲ್ಲಿ ತಾ॥ ೩೦-೩-೧೪ ನೆ ಸೋಮವಾರ ಗ್ರಾಮಪಟೇಲ್ ವೀರಪ್ಪನವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಶ್ರೀಬಸವೇಶ್ವರ ದೇವಸ್ಥಾನದ ಮುಂಗಡೆ ತಳಿರುತೋರಣಾದಿಗಳಿಂದ ಅಲಂಕರಿಸಿ ಶ್ರೀಬಸವೇಶ್ವರದೇವರ ಪೂಜಾಕಾಲದಲ್ಲಿ ಈ ಗ್ರಾಮದಲ್ಲಿರುವ ಇಬ್ಬಾಲುಮಠದ ನೀ॥ ಶೆ॥ ಯನ॥ ಶ್ರೀಕಂಠಾರಾಧ್ಯಸ್ವಾಮಿಗಳವರನ್ನು ಬರಮಾಡಿಕೊಂಡು ಶ್ರೀಬಸವೇಶ್ವರದೇವರಿಗೆ ಪಂಚಾಮೃತಸ್ನಾನವೂ ಶ್ರೀರುದ್ರಪುರುಷಸೂಕ್ತಾದಿಗಳಿಂದ ಮಹಾಭಿಷೇಕವೂ ಸಹಸ್ರನಾಮಾದಿಗಳಿಂದ ಪುಷ್ಪಾರ್ಚನಾದಿಗಳೂ ನಡೆದನಂತರ ಶಿವಕಥಾಶ್ರವಣವೂ ಶಿವಕೀರ್ತನೆಗಳೂ ಬಹಳ ಆನಂದವನ್ನು ಉಂಟುಮಾಡಿದವು ನಂತರ ಶ್ರೀಬಸವೇಶ್ವರಸ್ವಾಮಿಗೆ ಅಗ್ನಿಕುಂಡ ಮೊದಲಾದುವುಗಳನ್ನು ನೆರವೇರಿಸಿ ತರುವಾಯ ಶ್ರೀಬಸವೇಶ್ವರಸ್ವಾಮಿಯನ್ನು ಸಕಲ ಬಿರುದಾವಳಿಗಳಿಂದೊಡಗೂಡಿ ವಾದ್ಯವೈಭವದೊಡನೆ ತಳಿರುತೋರಣಾದಿಗಳಿಂದ ಅಲಂಕೃತಮಾದ ಗ್ರಾಮವೀಧಿಯೊಳ್ ಹೊರಟು ಭಕ್ತರಭಕ್ತಿಯು ಕೈಕೊಳ್ಳುತ್ತಾ ಬಿಜಯಂಗೈಸಿ ಅಲ್ಲಿನ ಕಾರ್ಯಗಳು ಜರಗಿಸಲ್ಪಟ್ಟವು ಈ ಮಹೋತ್ಸವಕ್ಕಾಗಿ ಸುತ್ತಮುತ್ತಣ ಗ್ರಾಮಗಳಿಂದ ಅನೇಕಜನಗಳು ಬಂದಿದ್ದರು. ಮತ್ತು ಈ ದೇವತಾಕಾರ್ಯದಲ್ಲಿ ಪ್ರೋತ್ಸಾಹಕಗಳಾಗಿದ್ದವರನ್ನು ಶ್ಲಾಘಿಸಿ ನಮ್ಮ ಈಗಿನ ಮಂತ್ರಿವರ್ಯರ ಸಂಚಾರಕ್ರಮವನ್ನು ತಿಳುಹಿಸಿದ್ದಲ್ಲದೆ ಮುಖ್ಯವಾಗಿ ಮನುಷ್ಯರಿಗೆ ವಿದ್ಯೆಯೇ ಕಾರಣ ವಿದ್ಯೆಯಿಲ್ಲದಿರುವ ಮನುಷ್ಯನು ಪಶುವಿಗೆ ಸಮಾನ. ವಿದ್ಯೆ ಐಕಮತ್ಯ ಇವುಗಳಿಂದ ಒಳ್ಳೇ ನಾಗರಿಕತೆಯನ್ನು ಹೊಂದಲು ಅಭ್ಯಂತರವಿಲ್ಲ. ನಮ್ಮ ಮೈಸೂರು ಸರ್ಕಾರದವರು ಹಿಂದುಳಿದಿರುವ ನಮ್ಮಗಳನ್ನು ಕಾಪಾಡುವುದಕ್ಕೋಸುಗವೇ ಬಲಾತ್ಕಾರ ಬಾಲ್ಯವಿದ್ಯಾಭ್ಯಾಸದ ಕ್ರಮವನ್ನು ಜಾರಿಯಲ್ಲಿ ತಂದಿರುತ್ತಾರೆ, ಇಂಥ ಸಮಯವನ್ನು ಕಳೆದುಕೊಳ್ಳದೆ ನಮ್ಮನ್ನಾಳುವ ಪ್ರಭುಗಳವರು ಹಾಕಿರುವ ಮೇಲ್ಪಂಕ್ತಿಯನ್ನು ಅನುಸರಿಸಿ ಗ್ರಾಮಕ್ಕೆ ಒಂದು ಪಾಠಶಾಲೆಯನ್ನು ಏರ್ಪಡಿಸಬೇಕು. ಇಲ್ಲವೆ ಈಗ ನಮ್ಮನಮ್ಮ ಗ್ರಾಮದಲ್ಲಿರುವ ಪ್ರೈವೇಟ್‌ಪಾಠಶಾಲೆಗಳನ್ನೇಯಾದರೂ ಊರ್ಜಿತಪಡಿಸಿ ಬಾಲಕರಿಗೆ ಪಾಠವನ್ನು ತಪ್ಪದೆ ಹೇಳಿಸಬೇಕಲ್ಲದೆ ವರ್ತಮಾನ ಪತ್ರಿಕೆಗಳನ್ನು ಓದುವದು ಗ್ರಾಮವನ್ನು ಪಾಕಾಗಿಡುವುದು ಆರೋಗ್ಯಕರವಾದ ಕುಡಿಯುವ ನೀರನ್ನು ಒದಗಿಸಿಕೊಳ್ಳುವುದು ಐಕಮತ್ಯ ವಿದ್ಯಾಭಿವೃದ್ಧಿ ಇವುಗಳನ್ನು ನಮ್ಮನಮ್ಮ ಗ್ರಾಮಗಳಲ್ಲಿ ತಪ್ಪದೆ ನಡಿಸಬೇಕೆಂದು ಕಟ್ಟುಪ್ಪಣೆಮಾಡಿ ನೆರೆದಿದ್ದ ಸಭೆಯವರಿಗೆಲ್ಲಾ ಗಂಧತಾಂಬೂಲಾದಿಗಳನ್ನ ಹಂಚಿ ಜಯಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ದೊಡ್ಡ ಪುಟ್ಟಣ್ಣ.

ಊದಬತ್ತಿಗಳು.

6

ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ ೧-೨-೦-೦ ೫-೦-೦; ೩-೯-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪ ಟಿನ್ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಸುಗಂಧಕಾರಿ, ಮೈಸೂರು.

ಬಿಸಿಲುಕಾಲದ ಆಯಾಸವನ್ನೂ ಬಾಯಾರಿಕೆಯನ್ನೂ ಪರಿಹರಿಸಿ ಮನಸ್ಸಿಗೆ ಅಪೂರ್ವವಾದ ಆನಂದವನ್ನುಂಟು ಮಾಡುವುದರಲ್ಲಿ ಪ್ರಖ್ಯಾತಿಹೊಂದಿರುವ

35

ಬಿ. ವಿ. ಪಂಡಿತರ

ಮನೋಧ್ವನಿ

ವಿದ್ಯಾರ್ಥಿಗಳು, ಪ್ರಯಾಣಿಕರು, ಬೈಸಿಕಲ್‌ಸ್ವಾರಿ ಮಾಡುವವರು, ಉಪನ್ಯಾಸಕರೇ ಮೊದಲಾಗಿ ಸರ್ವರೂ ಅಮೋಘವಾದ ಸುವಾಸನೆಯುಳ್ಳ ಈ ಮಾತ್ರೆಗಳ ಗುಣಾತಿಶಯಗಳನ್ನು ತಮ್ಮ ಮಿತ್ರರಲ್ಲಿ ಪ್ರಚಾರಪಡಿಸುತ್ತಲಿದ್ದಾರೆ. ಸಂಗೀತಗಾರರು ಇದರಿಂದ ತಮಗುಂಟಾಗಿರುವ ಪ್ರಯೋಜನವನ್ನು ವ್ಯಕ್ತಪಡಿಸಿದ್ದಾರೆ.

ಶುದ್ಧವಾದ ವನಸ್ಪತಿಗಳಿಂದಲೇ ತಯಾರಿಸಲ್ಪಟ್ಟಿರುವ ಈ ಮಾತ್ರೆಗಳು ಸಮಸ್ತರಿಗೂ ಮಲಬಂಧ, ಹೊಟ್ಟೆನೋವು, ನಾನಾತರಹ ಕೆಮ್ಮು, ದಮ್ಮು, ಉಬ್ಬಸ, ಅಗ್ನಿಮಾಂದ್ಯ, ಅರೋಚಕ, ತಲೆನೋವು, ವಾಂತಿ, ವಾಕರಿಕೆ, ಪಿತ್ಥಸಂಕಟ, ಜಲದೋಷಗಳನ್ನು ಖಾತರಿ ಗುಣಪಡಿಸಿ ರಕ್ತಶುದ್ಧಿಯನ್ನುಂಟುಮಾಡುತ್ತವೆ. ೧೫೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಅನುಪಾನಪತ್ರಸಹಿತ ೦-೪-೦.

ಶ್ರೀ ಕ ರ ಕ ಸ್ತೂ ರಿ ಮಾ ತ್ರೆ .

ಈ ಮಾತ್ರೆಗಳನ್ನು ಒಂದೇವೇಳೆ ಪರೀಕ್ಷಿಸಿರಿ. ಇದರ ಗುಣ ಮತ್ತೂ ಸುವಾಸನೆಗಳು ನಿಮಗೆ ಅನುಭವವಾಗುವುವು. ಮನೆಯಲ್ಲಿ ಸಣ್ಣಮಕ್ಕಳುಗಳನ್ನುಳ್ಳವರು, ಪ್ರಯಾಣಿಕರು ಮಲೆನಾಡು ವಾಸಸ್ಥರು ಮತ್ತೂ ಸೋಂಕುರೋಗಸ್ಥಳದಲ್ಲಿರುವವರಿಗೆ ಈ ಮಾತ್ರೆಗಳು ಅಮೃತವೇಸರಿ. ಶೀತವಾಯು, ವಿಷಮಜ್ವರಗಳು, ನಡುನೋವು, ಕೆಮ್ಮು, ಅಗ್ನಿಮಾಂದ್ಯ, ಅರೋಚಕ, ಹಲ್ಲುನೋವು, ಅಜೀರ್ಣಭೇದಿ, ಮಲಬಂಧ, ಮೈಕೈನೋವು ಮತ್ತೂ ಭಾರಗಳನ್ನು ಅತಿಜಾಗ್ರತೆ ಗುಣಪಡಿಸುತ್ತವೆ. ವಿಶದವಾದ ಅನುಪಾನ ಪತ್ರಸಹಿತ ೨೫೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೦-೪-೦ ನಾಲ್ಕಾಣೆ ಬೆಲೆ ಬಾಳುವ ಐದು ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಒಂದು ಇನಾಮು. ಟ. ಖ. ಪ್ರತ್ಯೇಕ. ಕ್ಯಾಟಲಾಗನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ— ಕೆ. ವಿ. ನಾರಾಯಣರಾವ್,
ಮ್ಯಾನೇಜರ್, ಸದ್ವೈದ್ಯಶಾಲಾ,
ನಂಜನಗೂಡು, ಮೈಸೂರ್ ಸಿ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನು ಉಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚೆನ್ನಾದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೪-೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧ ರೂ. ಕೊಡಬೇಕಾಗುವುದು. ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೬-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦-೮-೦ ಆಣೆಯಂತೆ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚು ಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ಖಿಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರ್ ಪ್ರೆಸ್, ಮೈಸೂರ್.

ಶಕ್ತಿ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

26

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ಬೇಕಿ! (ಗುಣವಾಗದಿದ್ದರೆ ಹಣ ವಪಸ !!) ಬೇಕಿ !!! ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಅಂಗನರು, ವಾತರೋಗಪೀಡಿತರು, ರಕ್ತಪಿತ್ತದ್ರೇಕವಾದವರು, ತೃಷೆಯುಳ್ಳವರು, ದಮ್ಮಿನವರು, ಕೆಮ್ಮಿನವರ ಕಫ, ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದಲ್ಲಿ ಹುಟ್ಟುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಮೂತ್ರದ ಬಾಧೆಗಳು, ಕಟಿಶೂಲಿ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುವುದು. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೋಲೆವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ೪-೦. ೮೦ ತೋಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡ ರವಾನಿಸುವೆವು.

ವಿಳಾಸ:—ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪೆನಿ, ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ

ವ ಸರ ೧ ಕ್ಕೆ ೧೨ ಆಣೆಯಿಂದ ೬೦ ರೂಪಾಯಿವರೆಗೆ. ೫ ಮುಖದ ಕಂಠಿ ೧ಕ್ಕೆ ೮ ಆಣೆಯಿಂದ ೭೦ ರೂಪಾಯಿವರೆಗೆ. ೬ ಮುಖದ ಕಂಠಿ ೧ಕ್ಕೆ ೧೨ ಯಿಂದ ೧೦೦ ರೂ. ವರೆಗೆ. ೭ ಮುಖದ ಕಂಠಿ ೧ಕ್ಕೆ ೧೦ ರೂ. ಯಿಂದ ೧೫೦ ರೂ. ವರೆಗೆ. ಇದರಂತೆ ೮, ೯, ೧೦, ೧೧, ೧೨, ೧೩, ೧೪, ಈ ಮುಖಗಳ ಮಣಿ ೧ಕ್ಕೆ ೫ ರೂ. ಯಿಂದ ೩೦ ರೂ. ವರೆಗೆ. ಇದರಲ್ಲಿಯೇ ಕಂಠಿ ಬೇಕಾದರೆ ಸಹ ದೊರೆಯುವುದು. ಸಣ್ಣ ರುದ್ರಾಕ್ಷಿ ಸರ ಅಂದರೆ ೧೦೮ ಮಣಿಯಿರುವ ತೊಗರಿಯು, ಉದ್ದಿನಕಾಳು ಪ್ರಮಾಣದ ಸರ ೧ಕ್ಕೆ ರೂ. ೫ ರಿಂದ ರೂ. ೩೦ ವರೆಗೆ. ಕಡಲೆ ಕಾಳು ಪ್ರಮಾಣದ ೧೦೮ ಮಣಿಯಿರುವ ಸರ ೧ಕ್ಕೆ ರೂ. ೨-೮-೦ ಲಾಗಾಯಿತು ರೂ. ೧೦ ವರೆಗೆ. ಜಪಮಾಲೆ ನೆಲ್ಲಿಕಾಯಿಯಿಂದ ಅವರೇ ಬೀಜದ ಪ್ರಮಾಣದ ೧೦೮ ಇರುವ ಸರ ೧ಕ್ಕೆ ೧೨ ಆಣೆಯಿಂದ ರೂ. ೧೦ ವರೆಗೆ. ಸಾಧಾರಣ ತರ ೬ ಆಣೆಯಿಂದ ರೂ. ೩ ವರೆಗೆ. ಗೌರೀಶಂಕರ ರುದ್ರಾಕ್ಷಿ– ಈ ರುದ್ರಾಕ್ಷಿಯು ರುದ್ರಾಕ್ಷಿಗಳಲ್ಲೆಲ್ಲಾ ಶ್ರೇಷ್ಠವೆಂದು ಹೇಳುವರು. ರುದ್ರಾಕ್ಷಿ ಮಣಿ ೧ ಕ್ಕೆ ರೂ. ೫ ಲಾಗಾಯಿತು ರೂ. ೫೦ ವರೆಗೆ. ಇಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ವಿಳಾಸ– ಎಸ್. ನೇಪಾಳಿ ರುದ್ರಾಕ್ಷಿ ಅಂಡ್ ಕಂಪನಿ,
20 ಬನಾರಸ್ ಸಿಟಿ.

ದಿ ಜನರಲ್ ಏಜನ್ಸಿ, ಮೈಸೂರು.

ಕಾದಂಬರಿಗಳು:— ಚಂಡಮಾರುತ ೦-೨-೦; ಚರಿತಾಮೃತಂ ೦-೫-೦; ರಾಜಕಥಾವಲ್ಲರಿ ೦-೫-೦; ಪೀಜರಿನಚರಿತ್ರೆ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೨-೬; ಸೀತೆ ೦-೫-೦; ಸಾಹಸಿಕೆ, ಕೈಲಾಸನಾಥ ೦-೮-೦; ಮಹಾಲಕ್ಷ್ಮಿ ೦-೭-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸಂಜೀವನಿ ೦-೮-೦; ಕೊಹಿನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೨-೦.

37

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕೈಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಳಸ ಯುಕ್ತ ಅಡ್ಡ ಪಲ್ಲಕ್ಕಿ ಉತ್ಸವದ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸನತೊಳುಸಹಿತ ಆದ ಸಮಾರಂಭದ ಫೋಟೋ ೧ ಕ್ಕೆ ಕ್ರಯ ೧ ರುಪಾಯಿ

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಾಮಾದಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೋ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೋ ೧ ಕ್ಕೆ ಕ್ರಯ ಫುಲ್ಸೈಜು ೧ ರುಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀ ಜಗದ್ಗುರು ತೋಂಟದಾರ್ಯ ಗದಗ, ಶ್ರೀ ಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ಸತ್ಪುರುಷಮಾಲಾ, ಹಾಳಕೇರಿ ಆನಂದಸ್ವಾಮಿಯ ಫೋಟೋ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೋ ಸಿಗುತ್ತವೆ. ಫುಲ್ಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ

ಹೊಸಫ್ಯಾಷನ್—ಸದ್ಗೃಹಸ್ಥರು ಗಡಿಯಾರ ಸರ್ಪಳಿಗೆ ಹಚ್ಚುವ ಲಾಕೇಟುಗಳೂ, ಯಿದರಲ್ಲಿ ಹಿಂದೆ ಮುಂದೆ ಇಪ್ರಕಾರ ೨ ಫೋಟೋ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ॥।, ॥।=, ೧, ೧।, ಪ್ರಕಾರ, ಮತ್ತೂ ಬೆಳ್ಳೀದು ರು ೧॥ ರೋಲ್ಡ್ ಗೋಲ್ಡು ಭಂಗಾರದ್ದು ದುರ್ಬಿಣದ ಗ್ಲಾಸದೂ ಕ್ರಯ ೨॥, ೨॥। ರೂ.

ಪೂರಊರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ಧಾಣೆ ಟಿಕೀಟು ಕಳುಹಿಸಿ ಕ್ಯಾಟಲಾಕು ಬೇಕಾದವರು ತರಿಸಿಕೊಳ್ಳಿರಿ. ನಮ್ಮವಿಳಾಸ— ಗಂಗಪ್ಪಾ ಜೇರಿಗೆ.

13 ಆರ್ಟಿಸ್ಟ್ ಸೊಲ್ಲಾಪುರ

36

ಕಂಪೆನಿ ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಶಾಲ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅನುಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗ ಮತ್ತೂ ವಿಶ್ವೇಶ್ವರನ ೨ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯೂ. ಎನ್. ಮತ್ತು ಕಂಪೆನಿ,
ಬನಾರಿಸ್ ಸಿಟಿ. (ಕಾಶೀ)

ಅ ಗ್ಗ ವಾ ದ ಮಾ ಲು ಗ ಳು .

ನಮ್ಮಲ್ಲಿ ಉತ್ತಮವಾದ ನೇಪಾಳ ರುದ್ರಾಕ್ಷಿ ಉತ್ತಮವಾಗಿಯೂ ಗಟ್ಟಿಯಾಗಿಯೂ ೧ ಮುಖದಿಂದ ೧೪ ಮುಖದ ವರೆಗೆ ಸಣ್ಣದು ದೊಡ್ಡದು ಸಹ ಈ ಎರಡು ನಮೂನೆಯಲ್ಲಿ ದೊರೆಯುವುದು. ಮತ್ತು ಇವುಗಳ ರೇಷ್ಮೆ ಮಗುಟ, ಕಾಶ್ಮೀರ ಶಾಲು, ರೇಷ್ಮೆ ಜರೀ, ಜರಿಕಣ, ಪೇಟ, ಪೊಳಕಾಲ್ಮರು ನಮೂನೆ ವಸ್ತ್ರ, ಜಗನ್ನಾಥ ಜಾಗಂಟೆ, ನೇಪಾಳ ಕಸ್ತೂರಿ, ಉತ್ತಮವಾದ ಭಾದರ್ ಮೊದಲಾದ ಅಮೂಲ್ಯವಾದ ಸಾಮಾನುಗಳನ್ನು ಇತರರಿಗಿಂತಲೂ ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಇಚ್ಛಿಸಿದವರಿಗೆ ವಿ. ಪಿ. ಮೂಲಕ ಕಳುಹಿಸಲಾದೀತು.

ರುದ್ರಾಕ್ಷಿಗಳ ವಿವರ:—

೧ ಮುಖದ ರುದ್ರಾಕ್ಷಿ ಕಂಠಿ ಅಂದರೆ ೩೨ ಮಣಿಗಳಿರು

೫೦೦ ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರೀ ಮುರಬ್ಬಾ.

6

ಈ ಮುರಬ್ಬಾವು "ಪಂಜಾಬ್ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂಪಾಯಿಗಳು ಬಹುಮಾನ ಕೊಡಲ್ಪಡವುದು.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯಕೋಶವು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣ ಪರಿಯಂತರವೂ ದುಃಖಪಡುವರು. ಈ "ಪಂಜಾಬ್ ಸಾಲಾಮಿಸ್ರೀಮುರಬ್ಬಾ" ವಿನ ಸೇವನೆಯಿಂದ—

ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಕ್ಷಣಕ್ಷಣಕ್ಕೂ ಮೂತ್ರವಾಗುತ್ತಿದ್ದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ದೂರ ನಡೆಯುವುದರಿಂದ ಮೇಲುಬ್ಬಸ ಬರುವುದು ತಲೆಯ ನೋವೂ ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರಿಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ರಕ್ತವನ್ನು ಹೆಚ್ಚಿಸಿ ವೀರ್ಯವನ್ನು ವೃದ್ಧಿಪಡಿಸುವುದರಲ್ಲಿ ಪಂಜಾಬ್ ಸಾಲಾಮಿಸ್ರೀ ಮುರಬ್ಬಾವಿನ ಹೊರತು ಇದಕ್ಕೆ ಸಮಾನವಾದ ಔಷಧವು ಬೇರೆ ಯಾವುದೂ ಇಲ್ಲವು.

ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ತಾಂಬ್ರದ ಮತ್ತು ಭಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು. ಹೊಟ್ಟೆಯಲ್ಲಿರುವ ಜ್ವರದ ಗಡ್ಡೆಯನ್ನು ನಾಶಪಡಿಸುವುದು. ಶ್ವಾಸ ಖಾಸ ರೋಗಗಳನ್ನು ನಿರ್ಮೂಲಪಡಿಸುವುದು.

ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲ್ ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ ಅಲ್ಲಿನ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗಡ್ಡೆ, ಕಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರಿ ಎಂದು ಹೇಳಿ ಮೋಸಪಡಿಸುವರು. ಈ ಮುರಬ್ಬಾವನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾಬ್ ಸಾಲಾಮಿಸ್ರಿಯೋ ಅಥವ ಬೇರೇ ತರಹದ್ದೋ ಎಂಬುವುದು ಚೆನ್ನಾಗಿ ತಿಳಿದು ಬರುತ್ತೆ. ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧೫ ತೋಲಾ ಮುರಬ್ಬಾವಿರುವ ಡಬ್ಬಾ ೧ಕ್ಕೆ ರೂ ೧-೮-೦; ಟಪಾಲ್ ಖರ್ಚು ನಾಲ್ಕು ಆಣೆ ಅನುಪಾನಪತ್ರಿಕೆ ಔಷಧದ ಸಂಗಡ ಇರುತ್ತೆ.

ಅತ್ಯುತ್ತಮವಾದ ವನೌಷಧಗಳು.

೧. ಧಾತುಪುಷ್ಟಿಚೂರ್ಣ– ಕ್ರಯ ೫ ಆಣೆ.
೨ ರೋಮನಾಶಕ ಮತ್ತು ವೃಶ್ಚಿಕದಂಷ್ಟ್ರ ತೈಲವು ಚೇಳಿನ ಹೊಡತಕ್ಕೂ ಮತ್ತು ಕೂದಲು ತೆಗಿಯುವುದಕ್ಕೂ ಬಹಳ ಒಳ್ಳೆಯದು ಕ್ರಯ ೨ ಆಣೆ.
೩ ವಾತನಿವಾರಣೆ ತೈಲವು ಕ್ರಯ ೪ ಆಣೆ.
೪ ಹೊಟ್ಟೆನೋವಿಗೆ ಔಷಧ ಕ್ರಯ ೨ ಆಣೆ ೬ ಪೈ.
೫ ಕೆಮ್ಮಲು ರೋಗಕ್ಕೆ ಔಷಧ ೪ ಆಣೆ.
೬ ವ್ರಣಕ್ಕೆ ಔಷಧ ೪ ಆಣೆ.
೭ ಆಶ್ಚರ್ಯಕರವಾದ ವೀರ್ಯಸ್ತಂಭದ ಗುಳಿಗೆ ೪ ಆಣೆ.
೮ ತಲೆನೋವಿಗೆ ತೈಲವು ೨ ಆಣೆ ೬ ಪೈ.
೯ ಪ್ರಮೇಹ ನಿವಾರಣ ಭಸ್ಮವು–೮ ಆಣೆ.
೧೦ ಉಷ್ಣ ಕಾರಕಕ್ಕೆ ಮಾತ್ರೆಗಳು–ರೂ. ೧.
೧೧ ಮೂಲವ್ಯಾಧಿಗೆ ಔಷಧ–೮ ಆಣೆ.
೧೨ ಕಣ್ಣಿಗೆ ಸುರ್ಮಾ–೪ ಆಣೆ.
೧೩ ದಂತಚೂರ್ಣವು–೧ ಆಣೆ ೩ ಪೈ.
೧೪ ಕೂದಲು ಬೆಳೆಯುವ ಎಣ್ಣೆ (ಬಂಟೋಲ ತೈಲ) ೪ ಆಣೆ.

ವಿಳಾಸ:— ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
೧೩, ಹಳೇ ಸಿದ್ದಿ ಕಟ್ಟೆ, ಬೆಂಗಳೂರು ಸಿಟಿ.

[illegible]

ಕೆ. ವಿ. ಸುಬ್ಬಣ್ಣ... ಶೀರ್ಷಿಕೆ: [illegible]
ತೀರ್ಥಹಳ್ಳಿ, ಶ್ಯಾಗುಡಗುಡಿ...
೩ ನೇ ಮುಖ್ಯ ರಸ್ತೆ, ಬೆಂಗಳೂರು.

ಮಹಿಮಾ ಪುಸ್ತಕಗಳು.

[illegible]

ವಿಳಾಸ— ಎಸ್. ಕಲ್ಲಣ್ಣ, ಉಮಾಮಹೇಶ್ವರ್,
ದೊಡ್ಡಪೇಟೆ, ಬೆಂಗಳೂರು ಸಿಟಿ.

ನ್ಯಾಯದರ್ಪಣ. 119

[illegible]

ಬೆಲೆ ರೂ. ೧—೮—೦. ವಿ. ಪಿ. ಮೂಲ್ಯ ೧—೧೨—೦.

ಎಂ. ಎಸ್. ನಂಜುಂಡಪ್ಪನವರು,
ಪ್ರಿಂಟರ್, ಪಬ್ಲಿಷರ್, ಚಿಕ್ಕಪೇಟೆ ಬಜಾರ್, ಮೈಸೂರು.

26 ಸಚಿತ್ರ ಶುಕಸಪ್ತತಿ ಕಥೆಗಳು. ಅಂಚೆ ಖರ್ಚು ಪ್ರತ್ಯೇಕ ೪ ಆಣೆ. ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಜನ ಚರಿತ್ರೆ
ರೂ. ೧—೮—೦ (೪೦೦ ಪುಟ) ರೂ. ೧—೮—೦ (೫೦೦ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ! ಮೋಕ್ಷವೇನು ಬೇಕಾದರೆ, ವಾಕ್ಚಾತುರ್ಯ ಬರಬೇಕಾದರೆ, ವಿದ್ವಾಂಸರೆನಿಸಬೇಕಾದರೆ, ಲೋಕರೀತಿಯನ್ನು ತಿಳಿಯಬೇಕಾದರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನು ಬಯಸಿದರೆ, ಉತ್ಸಾಹಶಕ್ತಿಯುಳ್ಳವರಾಗಬೇಕಾದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೫೦ ಪುಟಗಳಿಂದ ಕೂಡಿದ ೬೬ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ. ೧—೮—೦ ಟಪಾಲ್ ಹಾಸಲು ೩ ಆಣೆ. ಈಗಲೇ ಬರೆ ನಿಮ್ಮ ಬಳಿ ಅನೇಕ ಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸಚಿತ್ರ ಬೃಹಸ್ಪತಿ ಕಥೆಗಳು

ಶುಕಮಹರ್ಷಿಗಳು ಲೋಕದಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತಭಾಷೆಯಲ್ಲಿ ಹೇಳಿರುವರು. ಈ ಕಥೆಗಳನ್ನು ಭಾಷಾಂತರ ಮಾಡಿ ಕನ್ನಡದಲ್ಲಿ ರಚಿಸಿದೆ. (1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವುದು. (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತರಹಸ್ಯಗಳನ್ನೂ, ಬುದ್ಧಿಚಾಂಚಲ್ಯನಿವಾರಣೆ ಮುಂತಾದ್ದನ್ನೂ ತಿಳಿಸುವುದು. (3) ಸ್ತ್ರೀ ಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ ವಿವಿಧನೀತಿ ಮುಂತಾದುವುಗಳನ್ನು ಬೋಧಿಸುವುದು. (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವುದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವುದು. (5) ಅಲ್ಲಲ್ಲಿ ಕಥಾಸಂದರ್ಭಾನುಸಾರ ಭಾವವನ್ನೆ ಚಿತ್ರಗಳನ್ನು ಇಟ್ಟಿರುವುದರಿಂದ ಓದುಬಾರದವರಿಗೂ ಮನೋರಂಜಿತವಾಗಿರುವುದು. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ, ಇದರ ಕ್ರಯ ಪ್ರತಿ ೧ಕ್ಕೆ ೧—೮—೦; ಟಪ್ಪಾಲು ಹಾಸಲು ೪ ಆಣೆ.

(೩೪ ಸಂಧಿಗಳು) ಸಟೀಕಾ ತಾತ್ಪರ್ಯ ಜೈಮಿನೀ ಭಾರತವು. (೯೩೦ ಪುಟಗಳು)

ಇದರ ಕ್ರಯ ಪ್ರತಿ ೧ಕ್ಕೆ ರೂ. ೪—೦—೦; ಟಪಾಲು ಹಾಸಲು ೧೦ ಆಣೆ.

ಇವಲ್ಲದೆ ಇನ್ನೂ ಅನೇಕ ಕನ್ನಡಗ್ರಂಥಗಳು ದೊರೆಯುತ್ತವೆ ಪುಸ್ತಕಗಳ ಪಟ್ಟಿಗೆ ಬರೆದರೆ ಉಚಿತವಾಗಿ ಕಳಿಸುವೆವು
43 ನಮ್ಮ ವಿಳಾಸ— ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ.

ಬಾಲ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು. 4

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ [illegible]

[illegible]

ಪ್ರಶ್ನಾವಳಿ... [illegible]

ವಿಳಾಸ— ಶ್ರೀ ನೀಲಕಂಠ... ಮೈಸೂರು.

ಗಂಧರಾಜ ನಸ್ಯವಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚೆಕ್ಕೆ ಕಟ್ಟುವುದು... [illegible]

ಬೆಲೆ ೧—೧೪—೦ ಟಪಾಲ್ ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,
ಗೋಪಸೆಟ್ಟಿಪುರ, ಹನೂರು ಪೋಸ್ಟ್,
15 ಕೊಳ್ಳೇಗಾಲದ ತಾಲ್ಲೂಕು.

೧೯೧೬ ನೇ ಇಸವಿ ಜೂನ್ ತಾ॥ ೧ ರಿಂದ ೧೯೧೬ ನೇ ಜೂನ್ ತಾ॥ ೭ರ ವರೆಗೆ ಸಲ್ಲುವ ಕಾಲಿವಾಹನಶಕ ೧೮೩೮ ನೇ ಆನಂದನಾಮ ಸಂ॥ ದ ಜ್ಯೇಷ್ಠ ಶು॥ ಅಷ್ಟಮಿಯಿಂದ ಜ್ಯೇಷ್ಠ ಶು॥ ಚತುರ್ದಶಿವರೆಗಿನ ಪಂಚಾಂಗ.

ತಾ॥	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	[illegible]
1	ಸೋ	ಅ	52-35	ಮಖಾ	7-13	[illegible]
2	ಮಂ	ನ	46-54	ಪುಬ್ಬಾ	4-9	[illegible]
3	ಬುಧ	ದ	41-13	ಹ	0-31	[illegible]
4	ಗುರು	ಏ	34-45	ಚಿತ್ತಾ	52-32	[illegible]
5	ಶುಕ್ರ	ದ್ವಾ	28-31	ಸ್ವಾ	48-13	[illegible]
6	ಶನಿ	ತ್ರ	22-30	ವಿಶಾ	44-19	[illegible]
7	ಭಾ	ಚ	16-53	ಅನೂ	40-51	[illegible]

(1) [illegible] (2) [illegible] (3) [illegible] (4) [illegible] (5) [illegible]

[illegible]

ಮೈಸೂರ್ ಸ್ಟಾರ್

ಮೈಸೂರು ರಾಜ್ಯದ ವಾರಪತ್ರಿಕೆ.

REGISTERED M NO. 18[illegible]

[illegible]

ಮೈಸೂರ್ ಸ್ಟಾರ್ ಸೆಪ್ಟೆಂಬರ್ ೧೯೧೬ ನೇ ಇಸವಿ ಜೂನ್ ತಾರೀಖು ೧೮ ನೇ ಸೋಮವಾರ. (ಸಂಚಿಕೆ [illegible])

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಈಗತಾನೆ ಸೀಮೆಯಿಂದ ಬಂದಿರತಕ್ಕ ರೂಯಲ್ ಹೊಸ ಬೈಸ್ಕಲ್‌ಗಳು. 191

ಪ್ರತಿಯೊಂದು ಬೈಸ್ಕಲಿನ ಸಂಗಡಲೂ ಅತ್ಯವಶ್ಯಕವಾಗಿ ರಿಪೇರಿಮಾಡಿಕೊಳ್ಳಲು ಬೇಕಾದ ಆಯುಧಗಳೂ ಮತ್ತು ಆಯುಧಗಳನ್ನಿಡತಕ್ಕ ಶೀವೇತಯಾರಿ ಚರ್ಮದ ಚೀಲ ೧. ಗಾಳಿ ತುಂಬುವ ಪಂಪ್ ೧. ಸುಂದರವಾದ ಬೆಲ್ ೧. ಇಷ್ಟು ಸಾಮಗ್ರಿಗಳನ್ನೂ ಮುಫತ್ತು ಕೊಡಲಾಗುತ್ತೆ.

ರಾಯಲ್ ವೇಗ್ ಬೈಸ್ಕಲ್—ಡೇಂಜಿಟ್ ಟೈರ್, ಡನ್‌ಲಪ್‌ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೭೫—೦—೦.
ಬ್ರಿಟಾನಿಕ್ ಬೈಸ್ಕಲ್—ಡನ್‌ಲಪ್ ಟೈರ್, ಡನ್‌ಲಪ್ ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೯೦—೦—೦.
ರಾಯಲ್‌ಕಿಂಗ್ ಬೈಸ್ಕಲ್—ಡೇಂಜಿಟ್ ಟೈರ್, ಡನ್‌ಲಪ್ ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೭೦—೦—೦.
ರಾಯಲ್ ನೈಟ್ ಬೈಸ್ಕಲ್—ಪಾಮರ್ ಟೈರ್, ಪಾಮರ್ ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೯೨—೦—೦.
ರಾಯಲ್ ಆರ್ಚರ್ ಬೈಸ್ಕಲ್—ಬುಕಾನಿಯರ್ ಟೈರ್ ಬುಕಾನಿಯರ್ ಟ್ಯೂಬ್ ಹಾಕಿದ್ದು ೩೦—೦—೦.
ಬಿ. ಎಸ್. ಎ. ಫಿಟಿಂಗ್ ಬೈಸ್ಕಲ್, ಡನ್‌ಲಪ್‌ಟೈರ್, ಡನ್‌ಲಪ್‌ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೧೩೫—೦—೦.
ಬೈಸ್ಕಲ್ ಬಿಡಿಸಾಮಗ್ರಿಗಳೂ ಸದಾ ನಮ್ಮಲ್ಲಿ ವಿಕರಿಗೆ ಸಿದ್ಧವಾಗಿವೆ. ಬೈಸ್ಕಲ್ಲಿಗೆ ಆರ್ಡರ್‌ಮಾಡತಕ್ಕವರು ೧೦—೦—೦ ರೂಪಾಯಿ ಅಡ್ವಾನ್ಸು ಕಳುಹಿಸಬೇಕು. ಬಾಕಿ ಮೊಬಲಿಗೆ ರೈಲ್ವೆ ರಶೀದಿಯನ್ನು ವಿ.ಪಿ.ಮಾಡಲಾಗುತ್ತೆ.

"ಜುಮಲೆ" ಇದೊಂದು ಅತ್ಯಾಶ್ಚರ್ಯಕರವಾದ ಹೊಸಕಾದಂಬರಿ (ಬಂಗಾಳಿ ನಾವೆಲ್) ಓದುವುದಕ್ಕೆ ಕುಳಿತರೆ ಮುಗಿಸುವವರೆಗೂ ಮನಸ್ಸು ನಿಲ್ಲುವುದಿಲ್ಲ. ಓದುತ್ತ ಓದುತ್ತಾ ಹೊಸಹೊಸ ಭಾವಗಳು ತಲೆದೋರಿ ರೋಮಾಂಚವುಂಟಾಗುವುದು. ವಾಚಕರೆ! ಗೋರಿಯಲ್ಲಿದ್ದ ಹೆಂಗಸಿನ ಶವಕ್ಕೆ ಪ್ರತಿಯಾಗಿ ಗಂಡಸಿನ ಶವವಿರುವುದನ್ನು ನೋಡುತ್ತಲೇ ಆಶ್ಚರ್ಯಸಮುದ್ರದಲ್ಲಿ ಮುಳುಗಿಹೋಗುವಿರಿ. ಕ್ರಯ ಪ್ರತಿ ೧ಕ್ಕೆ ೦—೩—೦ ಪೋಸ್ಟೇಜು ೦—೨—೦.

ಹೊಸಪುಸ್ತಕಗಳು.

ವೀರಶೈವರಿಗೂ ಇತರರಿಗೂ ಸಹ ಅತ್ಯವಶ್ಯಕವೇಬೇಕಾದ್ದು.

ಮನೋವಿಜಯ.—ವೇದವೇದಾಂಗ ವೇದಾಂತ ಪುರಾಣ ಇತಿಹಾಸಾದಿಗಳಲ್ಲಿ ಬಹು ಪ್ರವೀಣರಾಗಿಯೂ ಅನೇಕ ಮತಸಿದ್ಧಾಂತದಲ್ಲಿ ಕುಶಲರಾಗಿಯೂ ಇದ್ದ ಶ್ರೀ ಗುರುಸ್ವಾಮಿಗಳವರಿಂದ ವೀರಶೈವರಿಗೂ ಅದ್ವೈತ ಮತಸ್ಥರಿಗೂ ಬಹು ಪ್ರಯೋಜನವಾಗಿರುವಂತೆ ಮನೋಹರವಾಗಿ ರಚಿಸಲ್ಪಟ್ಟಿದೆ. ಇದಕ್ಕೆ ಪರಮಪೂಜ್ಯರಾದ ಶ್ರೀ ತೋಂಟದ ಸಿದ್ಧಲಿಂಗಸ್ವಾಮಿಗಳು ಸಮಸ್ತರಿಗೂ ಸುಲಭವಾಗಿ ತಿಳಿಯುವಂತೆ ತಾತ್ಪರ್ಯವನ್ನು ಸ್ವಾರಸ್ಯವಾಗಿ ಬರೆದಿದ್ದಾರೆ. ಸರ್ವರೂ ಅತ್ಯವಶ್ಯಕ ಓದಬೇಕಾದ್ದು. ಇದರ ಕ್ರಯ ಪ್ರತಿ ೧ಕ್ಕೆ ೦—೮—೦ ವಿ.ಪಿ. ಮೂಲಕ ೧೧ ಆಣೆ.

ಶತಕಪಂಚಕ.—ಇದರಲ್ಲಿ ನಿರಂಜನಶತಕ, ಸಿದ್ಧಲಿಂಗೇಶ್ವರಶತಕ, ಸದ್ಗುರುಶತಕ, ಉಮಾಮಹೇಶ್ವರಶತಕ, ಸಂಗಮೇಶ್ವರ ಶತಕಗಳೆಂಬ ೫ ಶತಕಗಳಿವೆ. [illegible] ಯೋಗ್ಯವಾಗಿವೆ. ಈ ಗ್ರಂಥವನ್ನು ಶ್ರೀ ತೋಂಟದಾರ್ಯರು ಚೆನ್ನಾಗಿ ತಿಳಿಯುವಂತೆ ರಚಿಸಿರುವರು. ಇದರ ಕ್ರಯ ಪ್ರತಿ ೧ಕ್ಕೆ ೦—೩—೦ ವಿ.ಪಿ. ಮೂಲ್ಯ ೦—೫—೦.

[illegible]

ರಾಖಿಯವಾಚ್ ವಾಚ್‌ಗಳ ಕ್ರಯದ ಪಟ್ಟೀಲಿಸ್ಟ್.

[illegible]

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ವರವಾದಿಗಜಾಂಕುಶತಾರಾವಳಿ	೦—೪—೦
ಶಿವಪೂಜಾವಿಧಿ	೦—೪—೦
ಚಾರುಶೀಲೆಚರಿತ್ರೆ	೦—೫—೦
ಸಟೀಕ ನಂದೀವ್ರತ	೦—೩—೦
ಸಟೀಕ ವಿವಾಹವಿಧಿ	೦—೩—೦
ವಿವೇಕಮಂಜರಿ [೧ನೇಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಚನ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸಪುಸ್ತಕಗಳು.

138

ಬಸವರಾಜವಿಜಯಂ— ಬೆಲೆ ೧—೩—೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧—೪—೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೇಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧—೩—೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡ ಗ್ರಂಥ.

[illegible]

ಎಸ್. ಆರ್. [illegible]
[illegible], ಮೈಸೂರು.

ಪ್ರಕಟಣೆ.

ರಾಜಧಾನಿಯಲ್ಲಿ ಮುದ್ರಣ ಕೆಲಸವನ್ನು ಬಹು ಅಂದವಾಗಿ ಮಾಡುವುದರಲ್ಲಿ ಪ್ರಸಿದ್ಧಿಯನ್ನು ಹೊಂದಿರುವ ಕಾರ್ಲ್ಲ ಪ್ರೆಸ್ಸನ್ನು ನಾವು ಕ್ರಯಕ್ಕೆ ತೆಗೆದುಕೊಂಡಿರುವೆವು. ಇಲ್ಲಿ ಇಂಗ್ಲೀಷು ಮತ್ತೂ ಕನ್ನಡದ ಭಾಷೆಗಳಲ್ಲಿ ಮುದ್ದಾದ ಅಕ್ಷರಗಳಿಂದ ವಿಜಿಟಿಂಗ್ ಕಾರ್ಡು, ಲಗ್ನಪತ್ರಿಕೆಗಳು ಪಂಚಾಂಗಗಳು ಮೊದಲಾಗಿ ಪುಸ್ತಕಗಳವರೆಗೆ ಎಲ್ಲಾ ಮುದ್ರಣಕಾರ್ಯವೂ ಬಹು ಅಂದವಾಗಿಯೂ ಕ್ಲಪ್ತಕಾಲದಲ್ಲೂ ನಾನಾ ಬಣ್ಣಗಳಲ್ಲಿ ಮಾಡಿ ಕೊಡಲ್ಪಡುವುವಲ್ಲದೆ ಎಲ್ಲ ವಿಧವಾದ ಬೈಂಡಿಂಗ್ ಕಾರ್ಯವೂ ಮಾಡಲ್ಪಡುವುದು. ಈಗ ವಿವಾಹ ಲಗ್ನಕಾಲವಾದುದರಿಂದ ಲಗ್ನಪತ್ರಿಕೆಗಳನ್ನು ಕಪ್ಪು ಕೆಂಪು, ಹಸರು ಮೊದಲಾದ ಬಣ್ಣದಶಾಯಿನಲ್ಲಿ ಮತ್ತೂ ಗಿಲೀಟಿನಲ್ಲಿ ಕಾಲಕ್ಕೆ ಸರಿಯಾಗಿ ಮಾಡಿ ಕೊಡಲೇರ್ಪಡಿಸಿರುತ್ತೇವೆ. ಇಷ್ಟವುಳ್ಳವರು ನಮಗೆ ಬರೆದು ಬೇಕಾದ ವಿಷಯವನ್ನು ತಿಳಿಯಬಹುದು.

ವೈ. ವಿರೂಪಾಕ್ಷಯ್ಯ,
ಪ್ರೊಪ್ರೈಟರ್
ಕಾರ್ಲ್ಲ ಪ್ರೆಸ್, ಮೈಸೂರು.

ಯೋಗ್ಯ ಗೌರವವು.

ಏಪ್ರಿಲ್ ತಿಂಗಳಿನ ಪುಣೆಯ "ಚಿತ್ರಮಯ ಜಗತ್" ಎಂಬ ಮಹಾರಾಷ್ಟ್ರ ಮಾಸಿಕ ಪುಸ್ತಕದಲ್ಲಿ ಧಾರವಾಡದ ವಕೀಲ ಶ್ರೀಯುತ ರಾ. ಬಾ. ಗದಿಗೆಯ್ಯಾ ಹುಚ್ಚಯ್ಯಾ ಹೊನ್ನಾಪುರ ಮಠ (ಹಾಯುಕು ಸೆಕ್ರೆಟರಿ, ಧಾರವಾಡ ಔದ್ಯೋಗಿಕ ಪ್ರದರ್ಶನ) ಇವರ ಭಾವಚಿತ್ರವು ಬಂದಿರುತ್ತಿದ್ದು ಇವರ ಸಂಕ್ಷಿಪ್ತ ಚರಿತ್ರವು ಕೆಳಗೆ ಬರೆದಂತೆ ಬರೆಯಲ್ಪಟ್ಟಿರುತ್ತದೆ:—

"ಶ್ರೀಯುತ ಹೊನ್ನಾಪುರಮಠ ಇವರು ಧಾರವಾಡ ರಹಿವಾಸಿಗಳಿರುತ್ತಿದ್ದು ಅಲ್ಲಿಯ ಒಬ್ಬ ಪ್ರಮುಖ ವಕೀಲರಿರುತ್ತಾರೆ. ಇವರು ಕಳೆದ ೧೪ ವರ್ಷಗಳಿಂದ ಮುನಿಸಿಪಾಲಿಟಿಯ ಮೆಂಬರರಾಗಿರುವರಲ್ಲದೆ ಕೆಲವು ವರ್ಷ ಮ್ಯಾನೇಜಿಂಗ್ ಕಮಿಟಿಯ ಮತ್ತು ಸ್ಕೂಲ್ ಬೋರ್ಡಿನ ಚೇರಮನ್ನರಾಗಿದ್ದರು. ಇವರು ಸ್ಕೂಲ್ ಬೋರ್ಡಿನ ಚೇರಮನ್ನರಿದ್ದಾಗ ಶಾಲೆಗಳಲ್ಲಿಯ ಹುಡುಗರ ಹುಡುಗಿಯರ ಶಿಕ್ಷಣದ ಕಡೆಗೆ ವಿಶೇಷ ಲಕ್ಷವನ್ನು ತೆಗೆದುಕೊಳ್ಳುತ್ತಿದ್ದರು ಇವರ ಕಾಲಕ್ಕೆ ಶಾಲೆಗಳ ಸಂಖ್ಯೆಯು ಬೆಳೆಯಿತು. ಮತ್ತು ಇವರು ಹೊರ ಟ್ರೇಂಡ್ ಮಾಸ್ತರರನ್ನೂ ಮಾಸ್ತರಿಣಿಯರನ್ನೂ ತರಿಸಿ ವಿಶೇಷ ಸುಧಾರಣೆಯನ್ನು ಮಾಡಿದರು. "ಟೀಚರ್ಸ ಕಾನ್ಫರನ್ಸು" ಮತ್ತು "ನೀಡಲ್ ವರ್ಕ್ಸ್‌ಎಗ್ಜಿಬಿಷನ" ಗಳು ಇವರ ಕಾಲಕ್ಕೆ ಮೊದಲಿಗೆ ಪ್ರಚಾರದಲ್ಲಿ ಬಂದವು.

"ಶ್ರೀರಾಮದಾಸಸ್ವಾಮಿಗಳ ಚರಿತ್ರ, ನೀತಿಮಂಜರಿ, ಬಾಲಭಾರತ ಮೊದಲಾದ ಉಪಯುಕ್ತ ಪುಸ್ತಕಗಳನ್ನು ಇವರು ಕನ್ನಡ ಭಾಷೆಯಲ್ಲಿ ಬರೆದಿರುವರು. ಇವರು, ಕೆಲವು ವರ್ಷಗಳ ಹಿಂದೆ ಹೊರಡುತ್ತಿದ್ದ ವಾಗ್ದೇವಿ ಎಂಬ ಮಾಸಿಕಪುಸ್ತಕದ ಸಂಪಾದಕರಿದ್ದರು. ಇವರು ಕರ್ನಾಟಕದೊಳಗೆ ಚನ್ನಾಗಿ ನುರಿತ ಲೇಖಕರಲ್ಲಿ ಒಬ್ಬರಾಗಿರುವರು. "ಒಕ್ಕಲಿಗನು" ಎಂಬ ಮಾಸಿಕ ಪುಸ್ತಕದ ಸಂಪಾದಕರಲ್ಲಿ ಇವರೊಬ್ಬರು ಇರುತ್ತಾರೆ. ಹಾಗೂ ಹೊಸದಾಗಿ ಸ್ಥಾಪಿತವಾಗಿರುವ ಧಾರವಾಡ ಸ್ಯಾನಿಟರಿ ಅಸೋಸಿಯೇಶನ ಸೆಂಟ್ರಲ್ ಕಮಿಟಿಯ ಮೆಂಬರರಾಗಿದ್ದು ಟ್ರಾನ್ಸಲೇಶನ ಕಮಿಟಿ (ಭಾಷಾಂತರ ಕಮಿಟಿ) ಯ ಮೆಂಬರರು ಸಹ ಇರುತ್ತಾರೆ. ಇದೇ ಪ್ರಕಾರ ಕನ್ನಡ ಭಾಷೆಯ ಅಭಿವೃದ್ಧಿಗೋಸ್ಕರ ಬಹಳ ದಿವಸಗಳಿಂದ ಇರುತ್ತಿರುವ "ಕರ್ನಾಟಕ ವಿದ್ಯಾವರ್ಧಕ ಸಂಘ" ವೆಂಬ ಉಪಯುಕ್ತ ಸಂಸ್ಥೆಯ ಮೆಂಬರರಿರುವರು.

"ಇದಲ್ಲದೆ ಇವರು ಸದರ್ನ ಮರಾಠಾ ಅರ್ಬನ ಕೋಆಪರೇಟಿವ್ ಕ್ರೆಡಿಟ್ ಸೊಸಾಯಿಟಿ, ಲಿಂಗಾಯತ ಎಜ್ಯುಕೇಶನಫಂಡ್ ಕಮಿಟಿ, ನರ್ಸಿಂಗಫಂಡ್ ಅಸೋಸಿಯೇಶನ, ಎಂಬ ಸಂಸ್ಥೆಗಳ ಮೆಂಬರರಿರುವರು. ಇವರು ಲಿಂಗಾಯತರಿದ್ದು ಉದಾರಮತವಾದಿಗಳಿರುತ್ತಾರೆ. ಹಾಗೂ ಇವರು ಯಾವತ್ತು ಧರ್ಮಗಳ ಮತ್ತು ಜಾತಿಗಳ ಅಭಿಮಾನವನ್ನು ಸಮವಾಗಿ ಹಿಡಿಯುತ್ತಾರೆ. ಸಾರ್ವಜನಿಕ ಕೆಲಸಗಳಲ್ಲಿ ಸ್ವಾರ್ಥತ್ಯಾಗಮಾಡಲಿಕ್ಕೆ ಇವರು ಯಾವಾಗಲೂ ಸಿದ್ಧರಿರುವರು.

"ಇವರು ಧಾರವಾಡದಲ್ಲಿ ಈಗೀಗ ಆದ ಔದ್ಯೋಗಿಕ ಪ್ರದರ್ಶನದ ಜಾಯಿಂಟ್ ಸೆಕ್ರೆಟರಿ ಇದ್ದರು. ಪ್ರದರ್ಶನದ ಯಶಸ್ಸು ಇವರ ಮತ್ತು ವಿ. ಗೋಪಾಳರಾವ ಬಾಳೇಕುಂದ್ರಿ, ಅನರೇಬಲ್ ರಾ. ಬಾ. ರೊದ್ದ, ವಿ. ಶ್ರೀನಿವಾಸರಾವ ಕಾಮಲಾಪುರ, ವಿ. ವಿಶ್ವನಾಥರಾವ ಹೆರ್ಲೆಕರ ಮೊದಲಾದವರ ಅವಿಶ್ರಾಂತ ಶ್ರಮದ ಫಲವಾಗಿರುತ್ತದೆ."

ನಾವು ಶಿರೋಲೇಖದಲ್ಲಿ ಕಾಣಿಸಿದಂತೆ ಚಿ. ಪ. ಕಾರರು ನಮ್ಮ ಮಿತ್ರರಿಗೆ ಯೋಗ್ಯಗೌರವ ಮಾಡಿದ್ದನ್ನು ನೋಡಿ ನಾವು ಬಹಳ ಸಂತೋಷಪಡುತ್ತೇವೆ. ಲೀ. ಬ.

ಹೊಸತರದ ನೇಗಿಲುಗಳು ಮತ್ತು ಅವುಗಳ ಹೆಚ್ಚು ಅನುಕೂಲತೆಗಳು.

ಈ ವಿಷಯದಲ್ಲಿ ಮೈಸೂರು ವ್ಯವಸಾಯ ಇಲಾಖೆಯವರು ಬರೆದಿರುವ ಲೇಖನದ ಮುಖ್ಯಾಂಶಗಳನ್ನು ಸಂಕ್ಷೇಪವಾಗಿ ವಿವರಿಸಿರುತ್ತೆ.

ನಾಡು ನೇಗಲಿನ ಕೆಲಸದ ರೀತಿ:—ಇದರಲ್ಲಿ ಮುಖ್ಯವಾಗಿ ಕೆಲಸಮಾಡುವ ಭಾಗವು ಒಂದು ಮರದ ಬಾಳು ಮತ್ತು ಅದಕ್ಕೆ ಜಂಟಿಸಿರುವ ಕಬ್ಬಿಣದ ಗುಳ. ಇದರಿಂದ ಉಳುಮೆ ಮಾಡುವದರಲ್ಲಿ ಮಧ್ಯೆ ದಿಂಡು ನಿಲ್ಲುತ್ತವೆ. ಕೂಲಿ ಆಳುಗಳನ್ನು ಇಟ್ಟು ಕೆಲಸಮಾಡಿಸಿದಾಗ ಹೀಗೆ ದಿಂಡು ನಿಲ್ಲುವುದು ಬಹಳ ಹೆಚ್ಚಾಗಿರುತ್ತೆ. ಸ್ವಂತ ಆರಂಭಮಾಡಿದಾಗಲೂ ಕೂಡ ಕೊಂಚ ಮಟ್ಟಿಗೆ ದಿಂಡು ನಿಲ್ಲದೆ ಇರುವದಿಲ್ಲ. ಇದನ್ನು ತೆರಗಿಸಬೇಕಾದರೆ ಭೂಮಿಯನ್ನು ಎರಡನೆಯಸಲ ಅಡ್ಡತ್ತವಾಗಿ ಉಳಬೇಕು. ಇದರಿಂದಲೂ ಕೂಡ ಭೂಮಿಯು ಸಂಪೂರ್ಣವಾಗಿ ಹಸನಾಗುವದಿಲ್ಲ. ಯಾಕೆಂದರೆ, ಚಿಕ್ಕ ಚಿಕ್ಕ ಚದರಗಳಾಗಿ ದಿಂಡುಗಳು ಮಧ್ಯೆಮಧ್ಯೆ ನಿಲ್ಲುತ್ತವೆ. ಆದ್ದರಿಂದ ಮೂಲೆಯಾಗಿಯೊ ಅಥವಾ ವಕ್ರಮಾರ್ಗವಾಗಿ ಮತ್ತೊಂದು ಸಲ ಉಳಬೇಕು. ಇಲ್ಲದಿದ್ದರೆ ಕುಂಟೆ ಹೊಡೆದು ದಿಂಡುಗಳನ್ನು ಕಮ್ಮಿಮಾಡಬೇಕು. ಹೀಗೆ ಮೂರು ನಾಲ್ಕು ಸಲ ಉಳುಮೆ ಮಾಡುವುದರಲ್ಲಿ ಭೂಮಿಯು ಕೊಂಚದಮಟ್ಟಿಗೆ ಹಸನಾಗಿರುತ್ತೆ. ಈ ರೀತಿ ಮಾಡಲು ಹೆಚ್ಚು ಕಾಲವು ಬೇಕಾಗಿರುವದರಿಂದ ರೈತನಿಗೆ ತನ್ನ ಜಮೀನುಗಳನ್ನೆಲ್ಲಾ ಹೀಗೆ ಹಸನು ಮಾಡುವದಕ್ಕಾಗುವದಿಲ್ಲ. ಹಸನಾಗಿ ಉಳುಮೆ ಮಾಡುವುದಕ್ಕೆ ಸಾಧ್ಯವಾಗದೆ ಇರತಕ್ಕ ಜಮೀನುಗಳಿಗೆ ಕೂಡ ಬಿತ್ತನೆ ಕಾಲವು ಮೀರಿಹೋದೀತೆಂಬ ಭಯದಿಂದ ಬಿತ್ತನೆ ಹಾಕಬೇಕಾಗುತ್ತೆ ಮತ್ತು ಉಳುಮೆ ಆಗದೆ ನಿಂತುಹೋದ ಭೂಮಿಗಳಿಗೆ ಹಿಂಗಾರು ಮಳೆಗಳಲ್ಲಿ ಮೇಲೆ ಮೇಲೆ ಉತ್ತು ಹುರಳಿಯನ್ನು ಚೆಲ್ಲುತ್ತಾರೆ

ಹೀಗೆ ಹಸನಾಗದೆ ಇರುವ ಜಮೀನುಗಳಲ್ಲಿ ಫಸಲು ಉತ್ಪತ್ತಿಯು ಕಮ್ಮಿಯಾಗುವದು ಸ್ವಭಾವವಾಗಿರುತ್ತೆ. ಈ ಅನನುಕೂಲತೆಗಳನ್ನು ಸೀಮೆ ನೇಗಿಲುಗಳ ಉಪಯೋಗದಿಂದ ಕೊಂಚದಮಟ್ಟಿಗೆ ಹೋಗಲಾಡಿಸಬಹುದು. ಈ ಹೊಸ ತರದ ನೇಗಿಲುಗಳನ್ನು ವ್ಯವಸಾಯದ ಇಲಾಖೆಯವರು ವಿಶೇಷವಾಗಿ ವಿಕ್ರಯಿಸುತ್ತಿರುವರು.

ಇದರಿಂದ ಉಂಟಾಗತಕ್ಕ ಹೆಚ್ಚು ಅನುಕೂಲತೆಗಳು:— ಇದರಿಂದ ಉತ್ತ ಸಾಲುಗಳು ಸಮಕೋಣಾಕಾರವುಳ್ಳದ್ದಾಗಿರುವುದಲ್ಲದೆ ಸಡಲಿಸಲ್ಪಟ್ಟ ಮಣ್ಣು ಹೆಂಟೆಯು ತಿರುಗಿಸಲ್ಪಡುವುದು. ಉತ್ತುಕೊಂಡು ಹೋದಹಾಗೆಲ್ಲಾ ಮಣ್ಣು ಸಡಲಿಸಲ್ಪಟ್ಟ ಪಕ್ಕದ ಸಾಲಿನಲ್ಲಿ ಮೇಲಕ್ಕೆ ಮಗುಚಿ ಹಾಕಲ್ಪಡುತ್ತೆ. ಆದುದರಿಂದ ಕಣಿಕೆಯಿಂದ ಅಗೆದಹಾಗೆ ಭೂಮಿಯು ಹಸನಾಗುತ್ತೆ. ನಾಡು ನೇಗಿಲುಗಳಲ್ಲಿ ಇಷ್ಟು ಕೆಲಸ ನಡೆಸಬೇಕಾದರೆ ೩-೪ ಸಾರಿ ಉಳಬೇಕು. ನಾಡು ನೇಗಿಲಿನಲ್ಲಿ ಉಳುವುದಕ್ಕೆ ಎಷ್ಟು ಕಾಲ ಹಿಡಿಯುತ್ತಿತ್ತೊ ಅದರಲ್ಲಿ ನಾಲ್ಕರಲ್ಲಿ ಒಂದು ಭಾಗದಲ್ಲಿ ಭೂಮಿಯೆಲ್ಲವನ್ನೂ ಉಳಬಹುದು. ಹೀಗೆ ಭೂಮಿಯನ್ನು ಹಸನುಮಾಡಿ ಬೀಜವನ್ನು ಸಕಾಲದಲ್ಲಿ ಹಾಕಬಹುದು. ಇದೂ ಅಲ್ಲದೆ ನಾಡು ನೇಗಲಿನಿಂದ ಉಳುತ್ತಿದ್ದುದಕ್ಕೆ ಮೂರರಷ್ಟು ಭೂಮಿಯನ್ನು ಸುಲಭವಾಗಿ ಸಾಗುವಳಿ ಮಾಡಬಹುದು. ಮತ್ತು ಭೂಮಿಯನ್ನು ಈ ನೇಗಲಿನಿಂದ ಆಳವಾಗಿ ಉಳಬಹುದು. ಹೆಚ್ಚು ಆಳವಾಗಿ ಉತ್ತಹಾಗೆಲ್ಲಾ ಫಸಲ ಉತ್ಪತ್ತಿ ಹೆಚ್ಚುವದು. ಸಾಧಾರಣವಾಗಿ ರೈತರು ತೋಟಗಳನ್ನು ಉಳುಮೆಮಾಡದೆ ಅಗತೆ ಮಾಡುತ್ತಾರೆ. ಮಿಕ್ಕ ಭೂಮಿಗಳನ್ನೂ ಹೀಗೆ ಅಗತೆ ಮಾಡುವದು ಒಳ್ಳೇದು. ಆದರೆ ಇದು ಸಾಧ್ಯವಲ್ಲ. ಆದ್ದರಿಂದ ಕೊಂಚದಮಟ್ಟಿಗೆ ಆಳವಾಗಿ ಉಳುಮೆಮಾಡುವದು ಒಳ್ಳೇದು. ಇದು ಸೀಮೆ ನೇಗಲಿನ ಉಪಯೋಗದಿಂದ ಸುಲಭವಾಗಿ ಆಗುತ್ತೆ.

ಆಳವಾಗಿ ಉಳುವುದರಿಂದ ಭೂಮಿಯು ಮಳೆಯ ನೀರನ್ನು ಹೆಚ್ಚಾಗಿ ಹೀರುವದು. ಹೀಗೆ ಹೀರಿ ಕೂಡಿಟ್ಟ ನೀರು ಮುಂದೆ ಒಂದೆರಡು ಮಳೆಗಳು ಬಾರದಿದ್ದರೂ ಪೈರಿಗೆ ಒದಗಿ ಬಹಳ ಉಪಯೋಗಪಡುತ್ತೆ. ಹೆಬ್ಬಾಳದ ಪರೀಕ್ಷಾಕ್ಷೇತ್ರದಲ್ಲಿ ಕಳೆದ ವರುಷ ಅನಾವೃಷ್ಟಿ ಮಾಡಿದ್ದರಲ್ಲಿ ನಾಡು ನೇಗಲಿನಿಂದ ಉಳುಮೆಮಾಡಿ ಬಿತ್ತನೆ ಹಾಕಿದ್ದ ಸುತ್ತಮುತ್ತ ಪ್ರದೇಶಗಳಲ್ಲಿನ ಪೈರು ಒಣಗಿರಲು, ಈ ಕ್ಷೇತ್ರದ ಪೈರುಗಳು ಮಾತ್ರ ಒಣಗದೆ ಇದ್ದವು.

ಸೀಮೆ ನೇಗಿಲು ಉತ್ತ ಮಣ್ಣನ್ನು ಚೆನ್ನಾಗಿ ಮಗುಚಿ ಹಾಕುವದು ಇದು ನಾಡು ನೇಗಲಿನಿಂದ ಆಗುವದಿಲ್ಲ. ಆದುದರಿಂದ ಹೀಗೆ ಉಳಲ್ಪಟ್ಟ ಭೂಮಿಯಲ್ಲಿರುವ ಕಳೆಗಳ ಬೇರುಗಳು ಬಿಸಲಿಗೆ ಬಿದ್ದು ಒಣಗುವದಲ್ಲದೆ ಒಳಗೆ ಅಡಗಿರುವ ಹುಳ ಮೊಟ್ಟೆ ಮುಂತಾದವುಗಳು ಹೊರಕ್ಕೆ ಹಾಕಲ್ಪಟ್ಟು ಪಕ್ಷಿಗಳಿಂದ ನಾಶಹೊಂದುವವು. ಮಣ್ಣೆಲ್ಲಾ ಬಿಸಿಲು ಗಾಳಿಯಿಂದ ಹಸನು ಮಾಡಲ್ಪಡುವದು.

ಮೇಲೆಕಂಡ ಕಾರಣಗಳಿಗೆ ಸೀಮೆ ನೇಗಲಿನಿಂದ ಉಳುಮೆ ಮಾಡುವದು ಲಾಭಕರ. ಆದುದರಿಂದ ಈ ಹೊಸ ತರದ ನೇಗಿಲುಗಳನ್ನು ಪ್ರಚುರಪಡಿಸತಕ್ಕದ್ದು ಅವಶ್ಯಕವಾಗಿದೆ.

ಕೆಲವು ಸೀಮೆಯ ನೇಗಿಲುಗಳು ನಮ್ಮ ಎತ್ತುಗಳಿಗೆ ಬಹಳ ಭಾರವೆಂದು ಹೇಳುವರು. ಹೀಗಿರುವದು ಸೀಮೆಯ ನೇಗಿಲುಗಳಲ್ಲಿ ಮಾತ್ರವೇ ಅಲ್ಲ. ನಾಡು ನೇಗಿಲುಗಳಲ್ಲಿಯೂ ಉಂಟು. ಬತ್ತವನ್ನು ಬೆಳೆಯತಕ್ಕ ಜಮೀನುಗಳನ್ನು ಚಿಕ್ಕ ಚಿಕ್ಕ ಹಗುರವಾದ ನೇಗಿಲುಗಳಿಂದ ಉಳುಮೆ ಮಾಡುತ್ತಾರೆ. ಶುಷ್ಕ ಜಮೀನುಗಳನ್ನು ಸ್ವಲ್ಪ ಭಾರವಾದ ನೇಗಿಲುಗಳಿಂದಲೂ ಎರೆ ಜಮೀನುಗಳನ್ನು ಇನ್ನೂ ಹೆಚ್ಚು ಭಾರದ ನೇಗಿಲುಗಳಿಂದಲೂ ಉಳುಮೆಮಾಡುತ್ತಾರೆ ಮತ್ತು ಗರಿಕೆಗಳನ್ನು ಹೋಗಲಾಡಿಸುವುದಕ್ಕೆ ಎರೆ ಜಮೀನುಗಳಲ್ಲಿ ೪-೬ ಜೊತೆ ಎತ್ತುಗಳನ್ನು ಕಟ್ಟಿ ಕೆಲಸಮಾಡುವ ಭಾರಿ ನೇಗಿಲುಗಳೂ ಇವೆ. ಹೀಗೆಯೇ ಸೀಮೆ ನೇಗಿಲುಗಳಲ್ಲಿಯೂ ಅನೇಕ ತರಹೆಗಳುಂಟು. ಯಾವ ಕೆಲಸಕ್ಕೆ ನೇಗಿಲು ಬೇಕಾಗಿರುತ್ತೊ ಆ ಕೆಲಸಕ್ಕೆ ಸರಿಯಾಗಿ ನೇಗಿಲುಗಳು ಇವೆ. ಬತ್ತದ ಭೂಮಿಗಳಿಗೆ ಹಗುರವಾದ ನೇಗಿಲುಗಳು ಸಾಕು. ಶುಷ್ಕ ಭೂಮಿಗಳಿಗೆ ಕೊಂಚ ಭಾರವಾದ ನೇಗಿಲುಗಳು ಅವಶ್ಯಕ. ಇದಕ್ಕೆ ಕೋಲಾರದ ಮಿಷನ್ ನೇಗಿಲುಗಳು ಸರಿಹೋಗುವವು. ಇವುಗಳನ್ನು ರೈತರು ವಿಶೇಷವಾಗಿ ಅಪೇಕ್ಷಿಸುತ್ತಾರೆ. ಎರೆ ಜಮೀನುಗಳನ್ನು ಉಳತಕ್ಕ ಭಾರಿ ನೇಗಿಲುಗಳೂ ಸಹ ವ್ಯವಸಾಯದ ಇಲಾಖೆಯವರಲ್ಲಿ ಸಿಕ್ಕುತ್ತವೆ.

ಸೀಮೆ ನೇಗಲಿನಲ್ಲಿ ಸವೆಯಬಹುದಾದ ಭಾಗಗಳು ಬಹಳ ಚೆನ್ನಾಗಿ ಹದಮಾಡಿದ ಉಕ್ಕಿನಿಂದ ಮಾಡಿಸಲ್ಪಟ್ಟಿವೆ. ಆದ್ದರಿಂದ ಇವುಗಳು ಬಹಳ ದಿವಸಗಳು ಬಾಳಿಕೆ ಬರುವುದಲ್ಲದೆ ಉಳುಮೆ ಮಾಡುವಾಗ ಮಣ್ಣು ನೇಗಲಿಗೆ ಹತ್ತಿಕೊಳ್ಳದೆ ಚೆನ್ನಾಗಿ ಮಗುಚಿ ಹಾಕಲ್ಪಡುವದು. ಈ ನೇಗಲಿನಿಂದ ಸಾಧಾರಣವಾಗಿ ೮ ಅಂಗುಲ ಆಳ ಉಳಬಹುದು. ಕೆಲವು ವೇಳೆ ೧೪ ಅಂಗುಲವೂ ಉಳಬಹುದು. ಆದ್ದರಿಂದ ಉಳುಮೆ ಮಾಡಿದ ಸಾಲುಗಳು ೧೪ ರಿಂದ ೭ ಅಂಗುಲಗಳಷ್ಟು ಅಗಲವಾಗಿರುವವು.

ಇದೂ ಅಲ್ಲದೆ ಈ ನೇಗಿಲುಗಳ ರಚನೆಯು ಸುಲಭವಾಗಿಯೇ ಇದೆ. ಇದರ ಈಚು ಮರದಿಂದ ಮಾಡಿರುವದರಿಂದ ಅಕಸ್ಮಾತ್ತಾಗಿ ಮುರಿದರೂ ಹಳ್ಳಿಯ ಬಡಗಿಯು ಸುಲಭವಾಗಿ ಸರಿಮಾಡಲು ಸಾಧ್ಯ. ಹೆಚ್ಚಾದ ಉಪಯೋಗದಿಂದ ಸವೆದು ಹೋಗುವವುಗಳನ್ನು ಆಗಾಗ್ಗೆ ಬದಲಾಯಿಸಬೇಕು. ನೇಗಿಲನ್ನು ಕೊಂಡುಕೊಳ್ಳುವವರೆಲ್ಲರೂ ಒಂದೆರಡು ಗುಳಗಳನ್ನು ಹೆಚ್ಚಾಗಿ ಕೊಂಡುಕೊಳ್ಳುವದು ಅನುಕೂಲ. ಈ ಗುಳಗಳನ್ನು ನೇಗಲಿಗೆ ಹಾಕುವದು ಸುಲಭ. ಸವೆದುಹೋದ ಗುಳವನ್ನು ನೇಗಲಿಗೆ ತೊಡಿಸಿರುವ ತಿರುಪು ಸಡಲಿಸಿ ತೆಗೆದು ಹೊಸಗುಳವನ್ನು ಸುಲಭವಾಗಿ ಜಂಟಿಸಬಹುದು.

ಈಚೆಗೆ ಗುಳಗಳ ಮೊನೆಯನ್ನು ಮಾತ್ರ ಬೇರೆ ತೆಗೆಯುವಹಾಗೆ ಮಾಡಿರುತ್ತಾರೆ. ಒಂದು ಮೊನೆಯು ಸವೆದುಹೋದರೆ ಬೇರೊಂದುಮೊನೆಯನ್ನು ಸುಲಭವಾಗಿ ಹಾಕಬಹುದು. ಈ ಮೊನೆಗಳಿಗೆ ಒಂದೊಂದಕ್ಕೆ ಸುಮಾರು ೭ ಆಣೆಗಳಾಗುವವು.

ನೇಗಿಲೆಲ್ಲವೂ ಸೇರಿ ಒಬ್ಬ ರೈತನು ಹೆಗಲಿನಮೇಲೆ ಇಟ್ಟುಕೊಂಡು ಹೋಗುವಷ್ಟು ಹಗುರವಾಗಿ ಇರುವದು. ನಾಡು ನೇಗಲಿಗೆ ಇರುವಂತೆ ಇದಕ್ಕೆ ಒಂದೇ ಹಿಡಿಯಲ್ಲ ಎರಡು ಹಿಡಿಗಳು ಇರುತ್ತೆ. ಇದರಲ್ಲಿ ಕೆಲಸಮಾಡುವದರಲ್ಲಿ ಆಯಾಸಕಡಿಮೆ ಎಂದು ಹೇಳುತ್ತಾರೆ ಉಳುಮೆ ಮಾಡುವುದರಲ್ಲಿ ಕೆಳಗೆ ಹೇಳುವ ಸಂಗತಿಗಳು ಉಪಯೋಗಪಡುತ್ತವೆ.

"ಉಳಬೇಕಾದ ಜಮೀನೆಲ್ಲಾ ಎಷ್ಟೆಷ್ಟು ಅಗಲವಾಗಿದ್ದರೆ ಅನುಕೂಲವೋ ಆ ರೀತಿ ವಿಂಗಡಿಸಿಕೊಂಡನಂತರ ಉಳುಮೆ ಕೆಲಸವನ್ನು ಎರಡು ವಿಧವಾಗಿ ಮಾಡಬಹುದು. ನೇಗಿಲನ್ನು ಬಲಸುತ್ತಾಗಲಿ ಎಡಸುತ್ತಾಗಲಿ ತಿರುಗಿಸಿಕೊಂಡು ಅನುಕೂಲವಿದ್ದಂತೆ ಜಮೀನನ್ನು ಎರಡು ವಿಧವಾಗಿ ಉಳಬಹುದು. ತುಂಡಿನ ಮಧ್ಯದಲ್ಲಿ ಒಂದು ಸಾಲನ್ನು ಮೊದಲು ಹೊಡೆದುಕೊಂಡು ಎತ್ತುಗಳನ್ನು ಯಾವಾಗಲೂ ಬಲಕ್ಕೇ ತಿರಿಗಿಸುತ್ತಾ ಮೊದಲನೇ ಸಾಲನ್ನು ಸುತ್ತಿಕೊಂಡು ಉಳುತ್ತಾ ಹೋಗುವದೊಂದು ವಿಧ. ತುಂಡನ್ನೆಲ್ಲಾ ಈ ರೀತಿಯಾಗಿ ಉತ್ತನಂತರ ತುಂಡಿನ ಮಧ್ಯದಲ್ಲಿ ಒಂದು ದಿಬ್ಬವೂ ಆಚೀಚೆ ತೆರೆಗಳಲ್ಲಿ ಸಾಲುತೆಗೆದ ಹಳ್ಳಗಳೂ ನಿಲ್ಲುವವು. ಎತ್ತುಗಳನ್ನು ಎಡಸುತ್ತು ತಿರುಗಿಸಿಕೊಂಡು ಉಳಬೇಕಾದರೆ ತುಂಡಿನ ಮಧ್ಯದಲ್ಲಿ ಮೊದಲನೇ ಸಾಲನ್ನು ಹೊಡೆಯಕೂಡದು. ಜಮೀನಿನ ಒಂದು ಕೊನೆಯಲ್ಲಿ (ಬಲಗೈ ಕೊನೆಯಲ್ಲಿ) ಒಂದು ಸಾಲನ್ನು ಹೊಡೆದು ಎತ್ತುಗಳನ್ನು ಎಡಕ್ಕೆ ತಿರುಗಿಸಿಕೊಂಡು ಇನ್ನೊಂದು ಕೊನೆಯವರೆಗೂ ಬಂದು ಆ ಕೊನೆಯಲ್ಲಿ ಒಂದು ಸಾಲನ್ನು ಹೊಡೆದು ತಿರುಗಿ ಮೊದಲು ಹೊಡೆದ ಸಾಲಿನ ಪಕ್ಕಕ್ಕೆ ಬಂದು ಇನ್ನೊಂದು ಸಾಲನ್ನು ಹೊಡೆಯಬೇಕು. ಹೀಗೆಯೇ ಸಾಲಿನ ಪಕ್ಕದಲ್ಲಿ ಸಾಲನ್ನು ಹೊಡೆಯುತ್ತಾ ಹೋದರೆ ತಾಕಿನ ಮಧ್ಯಕ್ಕೆ ಸರಿಯಾಗಿ ಕೊನೇಸಾಲು ಬರುವುದು.

ಈ ರೀತಿಯಾಗಿ ನೇಗಿಲನ್ನು ಎಡಕ್ಕೆ ತಿರುಗಿಸಿಕೊಂಡು ಉಳ್ಮೆಯನ್ನು ಹೊಡೆದಾಗ ತಾಕಿನ ಮಧ್ಯದಲ್ಲಿ ಒಂದುಸಾಲೂ ಕೊನೆಗಳಲ್ಲಿ ಎರಡು ದಿಬ್ಬಗಳೂ ಕಾಣುವುವು. ನೇಗಲಿನಿಂದಾಗುವ ಸಾಲಿನ ಹಳ್ಳಗಳನ್ನೂ ದಿಬ್ಬಗಳನ್ನೂ ಜಮೀನಿನಲ್ಲಿ ಖಾಯಂ ಆಗಿ ನಿಲ್ಲಿಸದೆ ಇರಬೇಕಾದ ಜಮೀನನ್ನು ಒಂದು ವರುಷ ಬಲಗೈಚಾರಿಯಾಗಿ ಉಳಬೇಕು. ಎರಡನೇ ವರುಷ ಎಡಗೈಚಾರಿಯಾಗಿ ಉಳಬೇಕು." ರೆ. ಗೆ.

ಭಯಂಕರವಾದ ಹಡಗಿನ ಸುಲಿಗೆ.

(೭೦೦ ಮಂದಿಗಳ ನಾಶ.)

ಕಳೆದ ಏಪ್ರಿಲ್ ತಾ॥ ೨೨ ರಲ್ಲಿ ಚೀನಾದೇಶದವರ ಒಂದು ಹಡಗಿನಲ್ಲಿ ನಡೆದ ಸುಲಿಗೆಗಳ್ಳರ ಅವಾಂತರವು ಅಭೂತಪೂರ್ವವೆಂದು ತಿಳಿಯಲ್ಪಟ್ಟಿದೆ. ಹಾಂಗ್‌ಕಾಂಗಿನ ಉತ್ತರದಲ್ಲಿ ತೈಯಾನ್ ಎಂಬ ಹಡಗು ಪದ್ಧತಿಯಂತೆ ಸಾಮಾನನ್ನೂ ೩೩೩ ಮಂದಿ ಪ್ರಯಾಣಿಕರನ್ನೂ ಏರಿಸಿಕೊಂಡು ಹೋಗುತ್ತಿದ್ದಿತು. ಅದರಲ್ಲಿ ಆ ಹಡಗಿನ ಕಂಪೆನಿಯ ಯಜಮಾನನೂ ಮುಖ್ಯರಾದ ಇಂಜನಿಯರುಗಳೊ ಕೂಡ ಇದ್ದರು. ಅದು ಸೋಮವಾರ ರಾತ್ರಿ ೭ ಗಂಟೆಗೆ ಹೊರಟಿತು. ರಾತ್ರಿ ೧೧ ಗಂಟೆಯ ಹೊತ್ತಾದಕೂಡಲೇ ಒಳಗಿದ್ದ ಪ್ರಯಾಣಿಕರ ಮಧ್ಯದಿಂದ ಕೆಲಜನರು ಎದ್ದರು. ಅವರೆಲ್ಲಾ ಆಯುಧಪಾಣಿಗಳಾಗಿದ್ದರು. ಅವರನ್ನು ಕಂಡಕೂಡಲೆ ಪ್ರಯಾಣಿಕರು ಸಂಖ್ಯೆಯಲ್ಲಿ ಹೆಚ್ಚಾಗಿದ್ದರೂ ನಿರಾಯುಧರಾಗಿದ್ದುದರಿಂದ ಕಳ್ಳರಿಗೆ ಹೆದರಿ ಚದರಿಹೋದರು. ಅಷ್ಟರಲ್ಲಿ ಹಡಗನ್ನು ನಡೆಯಿಸುವವರಿಗೆ ತಮ್ಮ ಜತೆಯಲ್ಲೇ ಕಳ್ಳರು ಬಂದಿರುವರೆಂಬ ಸಂಶಯವುಂಟಾಯಿತು. ಆಗ ಹಡಗನ್ನು ನಡೆಯಿಸುತ್ತಿದ್ದವನು ಕೈಗೆ ಒಂದು ತುಪಾಕಿಯನ್ನು ತಗೆದುಕೊಂಡು ಹಡಗಿನ ಮೇಲ್ಭಾಗಕ್ಕೆ ಬಂದುನಿಂತನು ಅಷ್ಟರಲ್ಲಿ ಕಳ್ಳರಲ್ಲೊಬ್ಬನು ಮೇಲಕ್ಕೆ ಹತ್ತಿಬರುತ್ತಿದ್ದನು. ಅವನಮೇಲೆ ಹಡಗಿನವನು ತುಪಾಕಿಯನ್ನು ಹಾರಿಸಲು ಅವನ ಹೊಟ್ಟೆಗೆ ಗುಂಡುನುಗ್ಗಿ ಅವನು ಅಲ್ಲೇ ಸತ್ತುಬಿದ್ದನು. ಅಷ್ಟರಲ್ಲಿ ಇಬ್ಬರು ಯುರೋಪ್ಯರೂ ಇಬ್ಬರು ಪೋರ್ಚುಗಲ್ ಸೈನಿಕರೂ ಸಹ ಹಡಗನ್ನು ನಡೆಯಿಸುವವನ ಸಹಾಯಕ್ಕೆ ಹೋದರು. ಕಳ್ಳರು ಗುಂಪುಕೂಡಿ ಅವರಮೇಲೆ ಬಿದ್ದರು. ಎರಡು ಪಕ್ಷದವರಿಗೂ ಸ್ವಲ್ಪಹೊತ್ತು ದೊಡ್ಡ ಕಾಳಗವಾಯಿತು. ಕಳ್ಳರು ಪರಾಜಿತರಾದರು. ಹಡಗು ಕಳ್ಳರ ವಶವಾಗಲವಕಾಶವಿಲ್ಲದೆಹೋಯಿತು. ಅಷ್ಟರಲ್ಲಿ ಒಬ್ಬ ಕಳ್ಳನು ಹೇಗೋ ನುಸುಳಿಕೊಂಡು ಮೇಲಕ್ಕೆ ಹತ್ತಿ ಅಲ್ಲಿದ್ದ ಚೀಫ್ ಇಂಜನಿಯರ ಕತ್ತನ್ನು ಮಿಸುಕುತ್ತಿರಲು, ಕ್ಯಾಪ್ಟನ್ನು ತುಪಾಕಿಯಿಂದ ಆ ಕಳ್ಳನನ್ನು ಹೊಡೆದು ಸಾಯಿಸಿದನು. ಆಬಳಿಕ ಕಳ್ಳರು ಮೇಲಕ್ಕೇರುವ ವಿಷಯದಲ್ಲಿ ನಿರಾಶೆಗೊಂಡು ಹಡಗಿನ ಕೆಳಅಂತಸ್ತಿಗೆ ನುಗ್ಗಿ ನಡೆಯಿಸುವ ಯಂತ್ರಗಳನ್ನು ಸ್ವಾಧೀನಪಡಿಸಿಕೊಂಡರು. ದೀಪದ ತಂತಿಗಳನ್ನು ಕಿತ್ತು ಹಡಗನ್ನೆಲ್ಲಾ ಕತ್ತಲೆಗವಿಸಿದರು. ಹಡಗನ್ನು ನಿಲ್ಲಿಸಿಬಿಟ್ಟರು. ಇದರಿಂದ ಹಡಗನ್ನು ನಡೆಯಿಸುವ ಜನರು ಬೆದರಿ ನಿಶ್ಚೇಷ್ಟಿತರಾದರು. ಮತ್ತು, ಹಡಗು ಕಳ್ಳರ ವಶವಾಯಿತೆಂದೂ ಒಳಗಿನ ಸಾಮಾನನ್ನೆಲ್ಲಾ ಅವರು ದೋಚಿಕೊಂಡು ದೋಣಿಗಳಮೇಲೆ ಸಾಗಿಸಿಕೊಂಡು ಹೋಗಬಹುದೆಂದೂ ಯೋಚಿಸಿದರು. ಆದರಿಂದ ಮುಂದಿನಯೋಚನೆಯಲ್ಲಿ ತೊಡಗಿ ಯಾವಹಡಗಾದರೂ ಸಹಾಯಕ್ಕೆ ಬಂದೀತೆಂಬ ಆಸೆಯಿಂದ ಆಪತ್ಕಾಲದಲ್ಲಿ ಅಂತರಿಕ್ಷಕ್ಕೆ ಹಾರಿಸುವ ಮದ್ದುಗಳನ್ನು ಹಾರಿಸಿದರು. ಇದನ್ನು ಕಳ್ಳರು ಕಂಡು ರೇಗಿ, ತಮ್ಮ ನಾಶವನ್ನೂ ಕೂಡ ಲಕ್ಷಿಸದೆ ಹಡಗನ್ನೇ ಹಾಳುಮಾಡುವುದಕ್ಕೆ ಸಿದ್ಧರಾದರು. ಒಳಗೆ ತುಂಬಿದ್ದ ಸಾಮಾನುಗಳಲ್ಲಿದ್ದ ಸೀಮೆಯೆಣ್ಣೆಯ ಡಬ್ಬಗಳನ್ನೊಡೆದು ಉಳಿದ ಸಾಮಾನುಗಳಮೇಲೆಲ್ಲಾ ಎಣ್ಣೆಯನ್ನು ಸುರಿದು ಹಡಗಿನ ಮುಂಗಡೆಯೂ ಹಿಂಗಡೆಯೂ ಬೆಂಕಿಯನ್ನು ಹೊತ್ತಿಸಿದರು. ಕೂಡಲೇ ಬೆಂಕಿಯ ಜ್ವಾಲೆಯು ಎಲ್ಲಕಡೆಗೂ ಪ್ರಸರಿಸಿ ಹಡಗಿನಲ್ಲಿದ್ದವರೆಲ್ಲರೂ ಅಗ್ನಿಗಾಹುತಿಯಾಗುವ ಹೊತ್ತುಬಂದಿತು. ಆಪತ್ಕಾಲದಲ್ಲಿ ರಕ್ಷಣೆಗಾಗಿ ಹಡಗಿನಲ್ಲಿ ಇಟ್ಟಿರುವ ಸಣ್ಣ ದೋಣಿಗಳು ಕೂಡ ಸುಟ್ಟುಹೋದುವು. ಅನೇಕಮಂದಿ ಪ್ರಯಾಣಿಕರೂ ಹಡಗಿನ ಉದ್ಯೋಗಿಗಳು ಕೂಡ ಬೆಂಕಿಯ ಉರಿಯನ್ನು ತಾಳಲಾರದೆ ನೀರಿಗೆ ದುಮಿಕಿ ಒದ್ದಾಡುತ್ತಿದ್ದರು. ಕೆಲರು ಹಡಗಿನ ಪಕ್ಕದ ತಗಡುಗಳನ್ನು ಹಿಡಿದುಕೊಂಡು ನೇತಾಡುತ್ತಿದ್ದರು. ಎಷ್ಟೋಜನರಿಗೆ ಸ್ವಲ್ಪಹೊತ್ತಿನೊಳಗಾಗಿ ದಹನವೋ ಅಥವಾ ಜಲಸಮಾಧಿಯೋ ಆಗಿಹೋಯಿತು. ರಾತ್ರಿ ೧೧ ಘಂಟೆ ೫೦ ನಿಮಿಷಗಳ ಹೊತ್ತಿನಲ್ಲಿ ಆ ಮಾರ್ಗದಲ್ಲಿ ಹೋಗುತ್ತಿದ್ದ ಷಾನ್ಲಿ ಎಂಬ ಹಡಗಿನವರಿಗೆ ತೈಯಾನ್ ಹಡಗಿನಿಂದ ಆಕಾಶದಲ್ಲಿ ಹಾರುತ್ತಿದ್ದ ಮದ್ದುಗಳೊ ತುತೂರಿಯ ಶಬ್ದವೂ ಗೋಚರಿಸಲು, ಅವರು ತಮ್ಮ ಹಡಗನ್ನು ತೈಯಾನು ನಿಂತಿದ್ದ ಬಳಿಗೆ ನಡೆಯಿಸಿಕೊಂಡು ಬಂದರು. ತಮ್ಮ ಬಳಿಯಲ್ಲಿದ್ದ ಸಣ್ಣ ದೋಣಿಗಳನ್ನು ತೈಯಾನಿನಬಳಿಗೆ ಸಾಗಿಸಿ ಹತಶೇಷರಾಗಿಯು ನೀರಿನಲ್ಲಿ ತೇಲುತ್ತಲೂ ಇದ್ದ ಜನರನ್ನು ರಕ್ಷಿಸುವುದರಲ್ಲಿ ಬೆಳಗಿನವರೆಗೂ ತತ್ಪರರಾಗಿದ್ದರು. ಇನ್ನೂ ಮೂರು ಹಡಗಿನವರು ಹಾಗೆಯೇ ಬಂದು ಬೋಣಿಗಳ ಸಹಾಯವನ್ನು ಮಾಡಿದರು. ಆಗ ತೈಯಾನಿನಲ್ಲಿ ಅಗ್ನಿಜ್ವಾಲೆಯಿಂದ ಜನರು ಪಡುತ್ತಿದ್ದ ಸಂಕಟಗಳನ್ನೂ ನಾಲ್ಕುದಿಕ್ಕನಲ್ಲೂ ಪ್ರತಿಧ್ವನಿ ಕೊಡುವಂತೆ ಮಾಡುತ್ತಿದ್ದ ರೋದನಧ್ವನಿಯನ್ನೂ ನೋಡಿ ಕೇಳಿದವರು ಅಂಥ ಭಯಂಕರವಾದ ದೃಶ್ಯವನ್ನು ತಾವು ಎಂದಿಗೂ ಮರೆಯಲಾಗಿಲ್ಲವೆಂದು ಹೇಳುತ್ತಿರುವರು. ಇನ್ನು ಹಡಗು ಉಳಿಯುವಹಾಗಿಲ್ಲವೆಂದು ತೋರುವ ಕೊನೆಯಕ್ಷಣದವರೆಗೂ ಹಡಗಿನ ಕ್ಯಾಪ್‌ಟನ್ನೂ ಚೀಫ್ ಇಂಜನಿಯರೂಸಹ ಅಲ್ಲೇಇದ್ದು ಕಡೆಗೆ ನೀರಿಗೆದುಮಿಕಿ ಈಜಿಕೊಂಡು ದೋಣಿಯನ್ನು ಸೇರಿದರು. ಆದರೆ ಹಡಗಿನ ಮುಖ್ಯೋದ್ಯೋಗಿಯು ಮಾತ್ರ ಏನಾದನೋ ತಿಳಿಯಲಿಲ್ಲ. ಮೃತಶೇಷರಾಗಿದ್ದ ೧೨೦ ಮಂದಿಗಳನ್ನು ಷಾನ್ಲಿ ಹಡಗು ಮಂಗಳವಾರ ಬೆಳಿಗ್ಗೆ ಹಾಂಕಾಂಗಿಗೆ ತಂದಿತು. ಹೋಸಾಂಗ್ ಎಂಬ ಹಡಗು ೪೦ ಮಂದಿಯನ್ನು ರಕ್ಷಿಸಿ ತಂದಿತು. ಅಂತೂ ೭೦೦ ಮಂದಿಗಳು ಹತರಾದರೆಂದು ಸಿದ್ಧವಾಯಿತು. ಉಳಿದು ಬಂದವರಲ್ಲಿ ಕೆಲಕಳ್ಳರೂ ಇರುವರೆಂಬ ಸಂಶಯವಿದೆ. ತೈಯಾನಿಗೆ ಕಳೆದವರ್ಷ ಇದೇ ಕಾಲದಲ್ಲಿ ಅದೇ ಸ್ಥಲದಲ್ಲಿ ಕಳ್ಳರು ಬಿದ್ದಿದ್ದರಂತೆ. ಆದರೆ ಅನರ್ಥವೇನೂ ಆಗಿರಲಿಲ್ಲ. ಒಂದುತಿಂಗಳ ಕೆಳಗೆ ಇದೇ ಸ್ಥಲದಲ್ಲಿ ಸಮುದ್ರದ ಕಳ್ಳರು ಮತ್ತೊಂದು ಹಡಗನ್ನು ತಡೆದು ನಿಲ್ಲಿಸಿದ್ದರಂತೆ. ಈ ತೈಯಾನ್ ಎಂಬ ಹಡಗು ೭೩೪ ಟನ್ನುಗಳ ಭಾರವನ್ನು ಹೊರಬಲ್ಲುದಾಗಿದ್ದಿತು. ಇದು ಕ್ಯಾಂಟನ್ ನಾವಿಕಾಸಂಘದವರದು, ಇದರಮೇಲೆ ಆಂಗ್ಲರ ಧ್ವಜಪಟವಿದ್ದಿತು.

ಮತ್ತೊಂದುಹಡಗಿನ ಮಹಾವಿಪತ್ತು.

(೧೦೩೨ ಮಂದಿಗಳ ನಾಶ)

ಮೊನ್ನೆಯವರ್ಷ ಅಮೇರಿಕಾಕ್ಕೆ ಹೋಗುತ್ತಿದ್ದ ಟಿಟಾನಿಕ್ ಎಂಬ ಹಡಗು ಮುಳುಗಿಹೋದಂದಿನಿಂದೀಚೆಗೆ ಅದಕ್ಕೆರಡನೆಯ ತೆರದ ಮಹಾವಿಪತ್ತೊಂದು ಅಮೇರಿಕಾಖಂಡದ ಪೆಸಿಫಿಕ್ ಮಹಾಸಾಗರದಲ್ಲಿ ಕಳೆದತಿಂಗಳ ಕೊನೆಯೊಳಗೆ ಸಂಭವಿಸಿ, ಅದರಿಂದ ೧೦೩೨ ಮಂದಿಗಳು ಮೃತರಾದರೆಂಬ ಭಯಂಕರವಾದ ಸುದ್ದಿಯು ಬಂದಿರುತ್ತದೆ. ಅದರ ವಿವರವೇನೆಂದರೆ—ಕೆನಡಾಸಂಸ್ಥಾನದಲ್ಲಿರುವ ಪೆಸಿಫಿಕ್ ನೌಕಾಸಂಘದವರಿಗೆ ಸೇರಿದ "ಎಂಪ್ರೆಸ್ ಆಫ್ ಐರ್ಲಾಂಡ್" ಎಂಬಹಡಗು ಬಹುಶಃ ೧೩೭೨ ಜನ ಪ್ರಯಾಣಿಕರನ್ನು ಕೂಳ್ಳಿರಿಸಿಕೊಂಡು ಕಳೆದ ತಿಂಗಳು ತಾ॥ ೨೭ ರಲ್ಲಿ ಲಿವರ್ಪೂಲಿಗೆ ಪ್ರಯಾಣಮಾಡಿತು. ತಾ॥ ೨೯ ರಲ್ಲಿ ಕ್ವಿಬೆಕ್‌ಪಟ್ಟಣದಿಂದ ಬಂದ ತಂತಿಯಿಲ್ಲದ ಆಕಾಶವಾರ್ತೆಯಲ್ಲಿ ಎಂಪ್ರೆಸ್‌ಆಫ್‌ಐರ್ಲಾಂಡ್‌ಯೆಂಬ ಹಡಗು ಮಂಜಿನಂತೆ ಗುದ್ದಿಗೆ ಡಿಕ್ಕಬಡಿದು ಮುಳುಗಿಹೋಯಿತೆಂದು ತಿಳಿಯಬಂದಿತು. ಫಾದರ್‌ಪಾಯಿಂಟ್‌ನಿಂದ ಬಂದ ಆಕಾಶವಾರ್ತೆಯಿಂದ ಈ ಹಡಗು ಮತ್ತೊಂದುಹಡಗಿನಬಡಿತದಿಂದ ಮುಳುಗಿಹೋಯಿತೆಂದು ಗೊತ್ತಾಯಿತು. ಈಚೆಗೆ ಬಂದ ತಂತ್ರೀವಾರ್ತೆಗಳಿಂದಲೂ ಆಕಾಶವಾರ್ತೆಗಳಿಂದಲೂ ಸಹ ಗೊತ್ತಾಗುವುದೇನೆಂದರೆ—ಐರ್ಲಾಂಡಿನಿಂದ ಪದೇಪದೇ ವಾರ್ತೆಯನ್ನು ಕಳುಹಿಸುತ್ತಲೇ ಇದ್ದ ಥಟ್ಟನೆ ನಿಲ್ಲಿಸಿಬಿಟ್ಟಿತು. ಕಾರಣವೇನೆಂದರೆ—ಸ್ಟಾರ್‌ಸ್ಟಾಡ್ ಎಂಬ ಹಡಗು ೩೫೬೧ ಟನ್ನುಗಳಭಾರವನ್ನು ಹೊರುವ ಬಲವುಳ್ಳುದಾಗಿ ಕಲ್ಲಿದ್ದಲನ್ನುತುಂಬಿಕೊಂಡು ಹೋಗುತ್ತಿದ್ದಿತು. ಇದು ಮಂಜುಕವಿದದ್ದಾಗ ಎಂ॥ ಐರ್ಲಾಂಡ್‌ಯೆಂಬ ಹಡಗಿಗೆ ಬಡಿಯಲಾಗಿ ಅದಕ್ಕೆ ತೂತುಬಿದ್ದು ನೀರುತುಂಬಿ ಯಂತ್ರಗಳು ಕೆಟ್ಟು ಹಡಗು ಸ್ವಲ್ಪಕಾಲದೊಳಗೆ ಮುಳುಗಿಹೋಯಿತು. ಆಕಾಶವಾರ್ತೆಗಳು ತಮಗೆ ಸೇರಿದ ಕೂಡಲೇ ಸರ್ಕಾರದ ಹಡಗುಗಳೆರಡು ಸಹಾಯಕ್ಕೆ ಹೋದುವು. ಅಷ್ಟರಲ್ಲಿ ಹಡಗು ಮುಳುಗಿಹೋಗಿದ್ದಿತು. ೩೯೯ ಮಂದಿಗಳನ್ನು ಮಾತ್ರ ಬದುಕಿಸಲು ಸಾಧ್ಯವಾಯಿತು ಆಗ ಮಂಜುಕವಿದ ಕಾಳರಾತ್ರಿಯಾಗಿದ್ದುದರಿಂದ ಸಮುದ್ರದಲ್ಲಿ ಏನೊಂದೂ ಕಾಣುತ್ತಿರಲಿಲ್ಲ. ನೀರಿನ ಮೇಲೆ ತೇಲಾಡುತ್ತಿದ್ದವರನ್ನು ಮಾತ್ರ ಈ ಹೊಸ ಹಡಗುಗಳು ರಕ್ಷಿಸಿದುವು. ಹೀಗೆ ರಕ್ಷಿಸಲ್ಪಟ್ಟವರಲ್ಲಿ ಹಡಗಿನ ಉದ್ಯೋಗಿಗಳೇ ವಿಶೇಷವಾಗಿರುವರು. ಪ್ರಯಾಣಿಕರೆಲ್ಲಾ ೨ ನೇ ಅಂತಸ್ತಿನೊಳಗೆ ಕುಳಿತಿದ್ದು ನಿದ್ರಿಸುತ್ತಿದ್ದುದರಿಂದಲೂ ವಿಪತ್ತು ಆಕಸ್ಮಿಕವಾಗಿ ಸಂಭವಿಸಿದುದರಿಂದಲೂ ರಕ್ಷಣೆಯ ದೋಣಿಗಳನ್ನು ಬಿಡದೆಯಿದ್ದುದರಿಂದಲೂ ಅವರಲ್ಲಿ ಹೆಚ್ಚು ಜನರು ಉಳಿದುಕೊಳ್ಳಲು ಅವಕಾಶವಾಗಲಿಲ್ಲ. ಏಟುಬಡಿದ ೧೦ ನಿಮಿಷಗಳೊಳಗಾಗಿ ಹಡಗು ಸಂಪೂರ್ಣವಾಗಿ ಮುಳುಗಿಹೋಯಿತು. ಬಡಿತದಿಂದ ಹೊರಗಿನ ಹೊದಿಕೆಯತಗಡಿನಲ್ಲಿ ತೂತುಬೀಳಲು ನೀರು ರಭಸದಿಂದ ಒಳಕ್ಕೆ ನುಗ್ಗಿತು. ಎಂಜಿನ್ನು ಭಯಂಕರವಾದ ಶಬ್ದದಿಂದ ಒಡೆದು ಹಾರಿತು. ಆಗ ಕೆಲ ಜನರು ಹೆದರಿ ನೀರಿಗೆ ದುಮಿಕಿದರು. ಈ ಹಡಗಿನಲ್ಲಿ ಬೆಳ್ಳಿಯೇ ೩೦ ಲಕ್ಷ ರೂಪಾಯಿನಷ್ಟಿದ್ದಿತು. ಮೃತರಾದವರಲ್ಲಿ ೧೩೦ ಮಂದಿಗಳು ಮುಕ್ತಿಸೈನ್ಯಕ್ಕೆ ಸೇರಿದ ಜನರಾಗಿದ್ದು, ಅವರು ಲಂಡನ್‌ಪಟ್ಟಣದಲ್ಲಿ ನಡೆಯುವ ಒಂದಾನೊಂದು ಸಭೆಗೆ ಹೋಗುತ್ತಿದ್ದರು. ಮೃತಶೇಷರಾಗಿ ಬಂದಿರುವವರಲ್ಲಿ ೨೯ ಮಂದಿ ೧ನೆಯ ತರಗತಿಯ ಪ್ರಯಾಣಿಕರಾಗಿಯೂ, ೨೯ ಮಂದಿ ೨ನೆ ತರಗತಿಯ ಪ್ರಯಾಣಿಕರಾಗಿಯೂ, ೧೧೧ ಮಂದಿ ಹಡಗನ್ನು ನಡೆಯಿಸುವ ಜನರಾಗಿಯೂ, ೭೩ ಮಂದಿ ಕಲಾಸಿಗಳಾಗಿಯೂ ಇದ್ದರು. ಮುಳುಗಿಹೋದ ಹಡಗಿನಲ್ಲಿ ಒಳಗಿದ್ದ ಪ್ರಯಾಣಿಕರೆಲ್ಲರನ್ನೂ ಆಪತ್ಕಾಲದಲ್ಲಿ ರಕ್ಷಿಸಲು ಸಾಕಾಗುವಷ್ಟು ದೋಣಿಗಳು ಇಡಲ್ಪಟ್ಟಿದ್ದುವು. ಮತ್ತೂ ಅದರ ಸುರಕ್ಷಿತತೆಗೆತಕ್ಕ ಉಪಕರಣಗಳೆಲ್ಲವೂ ಸಜ್ಜಾಗಿದ್ದುವು ಅದರೊಳಗೂ ಟಿಟಾನಿಕ್ಕು ಮುಳುಗಿದೀಚೆಗೆ ಹಡಗುಗಳ ಸುರಕ್ಷಣೆಗೆ ವಿಶೇಷವಾದ ಸಾಧನಗಳು ಕಲ್ಪಿಸಲ್ಪಟ್ಟಿರುವುವು ಇಷ್ಟೆಲ್ಲಾ ಇದ್ದರೂ ಅನಿರ್ವಚನೀಯವಾದ ವಿಪತ್ತು ಕ್ಷಣಮಾತ್ರದಲ್ಲಿ ಈ ದೊಡ್ಡ ಹಡಗಿಗೆ ಸಂಭವಿಸಿ ಭಯಂಕರವಾದ ವಿಶೇಷ ಪ್ರಾಣನಾಶವಾಗಿರುವುದು ದೈವಿಕವಿಲಾಸವಲ್ಲವೆ?

ಈ ಮಹಾ ವಿಪತ್ತಿನಸುದ್ದಿಯು ಪ್ರಪಂಚದ ಎಲ್ಲಭಾಗಕ್ಕೂ ಹರಡಿಕೊಂಡು ದುಃಖವನ್ನುಂಟುಮಾಡಿರುವುದು. ಸಕಲ ದೇಶಾಧಿಪತಿಗಳೂ ತಮ್ಮ ಅನುತಾಪವನ್ನು ತಿಳಿಯಪಡಿಸಿರುವರು. ನಮ್ಮ ಚಕ್ರವರ್ತಿಯವರು ಸಹ ಆ ಹಡಗಿನ ಯಜಮಾನರಾದ ನೌಕಾಸಂಘದವರಿಗೆ ತಮ್ಮ ಸಾನುಭೂತಿಯನ್ನು ತಂತ್ರಿಯ ದ್ವಾರಾ ತಿಳಿಸಿರುವರು. ಈ ಹಡಗಿನಲ್ಲಿ ಮುಳುಗಿಹೋದ ಜನರ ಕುಟುಂಬದವರಿಗೆ ಸಹಾಯಮಾಡುವುದಕ್ಕಾಗಿ ಲಂಡನ್ ಪಟ್ಟಣದಲ್ಲಿ ಲಾರ್ಡ್ ಮೇಯರ್‌ರವರು ಒಂದು ಸಹಾಯಕನಿಧಿಯನ್ನು ಏರ್ಪಡಿಸಿರುವರು. ಇದಕ್ಕೆ ನಮ್ಮ ಚಕ್ರವರ್ತಿಯವರು ೧೦೦ ಪೌನುಗಳನ್ನೂ, ಚಕ್ರವರ್ತಿನಿಯವರು ೫೦ ಪೌನುಗಳನ್ನೂ ಸಹಾಯಮಾಡಿರುವರು. ಹೀಗೆಯೇ ಅನೇಕ ಧರ್ಮಾತ್ಮರು ಸಹಾಯಮಾಡುತ್ತಿರುವರು. ಈ ಹಡಗು ಮುಳುಗಿಹೋದುದರ ಕಾರಣವನ್ನು ವಿಚಾರಮಾಡುವುದಕ್ಕಾಗಿ ಕೆನಡಾದೇಶದ ಪಾರ್ಲಿಮೆಂಟಿನವರು ಒಂದು ಸಭೆಯನ್ನು ಏರ್ಪಡಿಸಿದ್ದಾರೆ. ಇದರಲ್ಲಿ ಕೆನಡಾ ದೇಶದ ನ್ಯಾಯಾಧಿಪತಿಗಳು ಇಬ್ಬರು, ಆಂಗ್ಲ ಪ್ರಭುತ್ವದ ಪಕ್ಷದವರೊಬ್ಬರು ಸಭಿಕರಾಗಿದ್ದಾರೆ.

ಮುಳುಗಿಹೋದ ಹಡಗಿನ ಕ್ಯಾಪ್ಟನ್‌ರಾದ ಕೆಂಡಾಲ್‌ರವರು ನೀರಿನಲ್ಲಿ ಬಿದ್ದು ಮಂಜಿನ ಬಾಧೆಯಿಂದ ಮರಣಾವಸ್ಥೆಯಲ್ಲಿ ದೋಣಿಗೆ ಸೆಳೆದುಹಾಕಲ್ಪಟ್ಟಿದ್ದು ಬದುಕಿ, ಈಗ ವಿಚಾರಕಸಂಘದ ಮುಂದೆ ತಮ್ಮ ವಾಙ್ಮೂಲವನ್ನು ಕೊಟ್ಟಿರುವುದರಲ್ಲಿ ಹೀಗೆ ಹೇಳಿರುತ್ತಾರೆ:—ಸ್ಟಾರ್‌ಸ್ಟಾಡ್ ಹಡಗು ೨ ಮೈಲಿ ದೂರದಲ್ಲೇ ಕಂಡಿತು. ಆಗ ನಾನು ನನ್ನ ಹಡಗಿನಿಂದ ಕೂಗನ್ನು ಹಾಕಿಸಿದೆನು. ಆ ಹಡಗು ನಮ್ಮ ಹಡಗನ್ನು ದಾಟಿ ಮುಂದಕ್ಕೆ ಹೋಗಬೇಕೆಂಬ ಉದ್ದೇಶದಿಂದ ಬೇಗನೆ ಹೋಗುತ್ತ ನಮ್ಮ ಹಡಗಿಗೆ ಬಡಿದಿತು. ಅದು ಕೇವಲ ಸಮೀಪಕ್ಕೆ ಬರುತ್ತಿರಲು ನಾನು ಮೆಗಾಫೋನ್ ಎಂಬ ಯಂತ್ರದ ಮೂಲಕ ಅದನ್ನು ಹಿಂದಕ್ಕೆ ಸಾಗಿಹೋಗುವಂತೆ ಸಂಜ್ಞೆಯ ಕೂಗನ್ನು ಹಾಕಿಸಿದೆನು. ಆದರೆ ಅದು ಹಾಗೆ ಮಾಡಲಿಲ್ಲ. ನನ್ನ ಹಡಗನ್ನು ಮಗ್ಗುಲುಮಾಡಲು ಪ್ರಯತ್ನಿಸಿದೆನು. ಆದರೆ ಇಂಜನ್ನಿನಲ್ಲಿ ಕೆಲಸವು ಸಾಗಲಿಲ್ಲ. ಸ್ಟಾರ್‌ಸ್ಟಾಡ್ ಹಡಗು ಮಗ್ಗುಲಲ್ಲಿ ಬಂದು ನಮ್ಮ ಹಡಗಿಗೆ ಬಡಿದ ೭ ನಿಮಿಷಗಳೊಳಗಾಗಿ ನಮ್ಮ ಹಡಗಿಗೆ ನೀರು ನುಗ್ಗುವುದಕ್ಕೆ ಆರಂಭಿಸಿತು. ಹೀಗೆ ನೀರು ತುಂಬುತ್ತಿರುವುದನ್ನು ಕಂಡು ರಕ್ಷಣೆಯದೋಣಿಗಳನ್ನು ಸಮುದ್ರಕ್ಕೆ ಬಿಡುವುದಕ್ಕಾಗಿ ಅಪ್ಪಣೆಮಾಡಿದೆನು. ಹಡಗು ನೀರಿನಲ್ಲಿ ಮುಳುಗಿಹೋಗುತ್ತಿರುವಾಗ ನಾನು ಸಮುದ್ರಕ್ಕೆ ಹಾರಿಬಿದ್ದೆನು. ಒಂದು ಮರದ ಹಲಗೆಯನ್ನು ಹಿಡಿದುಕೊಂಡೆನು. ದೋಣಿಯಲ್ಲಿದ್ದವರು—ಅದೋ ಕ್ಯಾಪ್ಟನ್, ಅವನನ್ನು ರಕ್ಷಿಸಿರಿ ಎಂದು ಕೂಗಿಕೊಂಡರು. ಆ ದೋಣಿಯಲ್ಲಿ ೩೦ ಮಂದಿ ತುಂಬಿದ್ದರು. ನೀರಿನಲ್ಲಿ ೫೪ ಮಂದಿಯಷ್ಟು ತೇಲಾಡುತ್ತಿದ್ದರು. ೧೦ ಮಂದಿಗಳು ತಮ್ಮ ನಡುವಿಗೆ ಹಗ್ಗವನ್ನು ಬಿಗಿದುಕೊಂಡು ಹಡಗಿನ ಸುತ್ತಲೂ ನೇತಾಡುತ್ತಿದ್ದರು. ಇವರೆಲ್ಲರನ್ನೂ ಸ್ಟಾರ್‌ಸ್ಟಾಡ್ ಹಡಗು ತನ್ನಲ್ಲಿಗೆ ಹತ್ತಿಸಿಕೊಂಡಿತು. ಒಟ್ಟು ಹತಶೇಷರಾದವರೆಲ್ಲರೂ ರಕ್ಷಣೆಯ ದೋಣಿಗಳನ್ನು ಏರಿಯೋ ಅಥವಾ ಒಡೆದಿದ್ದ ಹಡಗಿನ ಹಲಗೆಗಳನ್ನು ತಬ್ಬಿಕೊಂಡೊ ಬದುಕಿದವರು" ಎಂಬುದಾಗಿ.

ಸ್ಟಾರ್‌ಸ್ಟಾಡ್ ಹಡಗಿನ ಕ್ಯಾಪ್ಟನ್ ಆದ ಅಂಡರ್‌ಸನ್ ಕೊಟ್ಟಿರುವ ವರದಿಯು ಇದಕ್ಕೆ ವಿರುದ್ಧವಾಗಿದೆ. ಅವರು ಹೇಳಿರುವುದೇನೆಂದರೆ-ಎಂಪ್ರೆಸ್ ಆಫ್ ಐರ್ಲ್ಯಾಂಡ್ ಹಡಗಿನ

ದೀಪವನ್ನು ನಾನು ದೂರದಲ್ಲೇ ಕಂಡೆನು, ನಮ್ಮ ಹಡಗು ಹೋಗುವುದಕ್ಕೆ ದಾರಿಯಿದ್ದಿತು. ಆ ಹಡಗು ನೇರೆ ದಾರಿಯಲ್ಲಿ ಹೋಗುತ್ತಿರುವಾಗ ದೊಡ್ಡ ಮಂಜು ಆವರಿಸಿ ಅದಕ್ಕೆ ದಾರಿಯನ್ನು ಕಾಣದಂತೆ ಮಾಡಿತು. ಇಲ್ಲದಿದ್ದರೆ ಅದು ಸುರಕ್ಷಿತವಾಗಿ ಹೋಗುತ್ತಿದ್ದಿತು. ಅಷ್ಟರಲ್ಲಿ ನಮಗೆ ಸಂಜ್ಞೆಯನ್ನು ಮಾಡಲು, ನಮ್ಮ ಹಡಗು ನಿಲ್ಲಿಸಲ್ಪಟ್ಟಿತು. ಅಷ್ಟರಲ್ಲಿ ಆ ಹಡಗು ಸಮೀಪಕ್ಕೆ ಬಂದಿತು. ಆಗ ನಮ್ಮ ಹಡಗು ಅದಕ್ಕೆ ಬಡಿದುಕೊಂಡು ಮುಂದಕ್ಕೆ ಹೋಯಿತು. ಎಂದು ಹೇಳಿರುತ್ತಾರೆ.

ಹಡಗಿನಲ್ಲಿ ಮುಳುಗಿಹೋದವರ ಶವಗಳನ್ನು ಆಂಗ್ಲಸರ್ಕಾರದವರು ಹುಡುಕಿಸಿ ತೆಗೆಯಿಸುವುದಕ್ಕಾಗಿ ಒಂದು ಯುದ್ಧದ ಹಡಗನ್ನು ಕಳುಹಿಸಿರುತ್ತಾರೆ. ಕೆಲಶವಗಳು ಸಿಕ್ಕಿ ಗುರುತು ಹಿಡಿಯಲ್ಪಟ್ಟಿವೆ.

ಸ್ಟೋರ್‌ಸ್ಟಾಡ್ ಹಡಗಿನ ಕ್ಯಾಪ್ಟನ್ ಅಂಡರ್‌ಸನ್‌ರವರಿಗೆ ಕೆನೆಡಿಯನ್ ನೌಕಾಸಂಘದವರು ತಮಗೆ ೨೦ ಲಕ್ಷ ಡಾಲರ್‌ಗಳ ನಷ್ಟವನ್ನು ಕೊಡಬೇಕೆಂದು ನೋಟೀಸನ್ನು ಕೊಟ್ಟಿದ್ದಾರೆ. ಇವರು ಪ್ರತಿಯಾಗಿ ೫೦ ಸಾವಿರ ಡಾಲರ್‌ಗಳ ನಷ್ಟಕ್ಕೆ ನೋಟೀಸನ್ನು ಅವರಿಗೆ ಕೊಟ್ಟಿದ್ದಾರೆ.

ಮೈಸೂರ್ ಸ್ಟಾರ್

ಸೆ ೧೯೧೪ ನೆಯ ಜೂನ್ ತಾ॥ ೮ ನೆಯ ಸೋಮವಾರ.

ಮೈಸೂರು ಸಂಪದಭ್ಯುದಯ ಸಮಾಜವು.

ಬರಿಯ ಉತ್ಸವಮಾತ್ರದಲ್ಲಿ ಪರ್ಯವಸಾನಗೊಳ್ಳುತ್ತಿದ್ದ ವರ್ಧಂತಿಯ ಮಹೋತ್ಸವದ ಸಮಯವನ್ನು ದೇಶಹಿತಕಾರ್ಯ ಸಾಧನಾಲೋಚನೆಯಿಂದಲೂ ಸಾರ್ಥಕಗೊಳಿಸಬೇಕೆಂದು ನಮ್ಮ ಶ್ರೀಮನ್ಮಹಾರಾಜರವರು ಕಳೆದ ೪ ವರ್ಷಗಳಲ್ಲಿ ಈ ಸಮಾಜವನ್ನು ಸ್ಥಾಪಿಸಿದರು. ಆದರೆ ಈ ಸಮಾಜದವರು ಇದುವರೆಗಿನ ತಮ್ಮ ಪರಿಶೋಧನಕಾರ್ಯಗಳಿಗಾಗಿಯೇ ಲಕ್ಷಾಂತರ ರೂ.ಗಳ ವ್ಯಯವನ್ನು ಮಾಡುತ್ತಾ ಬಂದು ಕಾರ್ಯವಾವುದನ್ನೂ ಕಣ್ಣಿಗೆ ಕಾಣುವಂತೆ ನಿರವೇರಿಸಲಿಲ್ಲವೆಂಬ ಕಾರಣದಿಂದ ಕೆಲರು ಇದು ಬರಿಯ ಆಡಂಬರದಲ್ಲೇ ಪರ್ಯವಸನ್ನವಾಗಿ ಹೋಗುವುದೋ ಏನೋ ಎಂದು ಚಿಂತಿಸುತ್ತಿರುವರು. ಆದರೆ ಅಂತಹ ಚಿಂತೆಗೆ ಕಾರಣವಿರುವುದಿಲ್ಲ. ಏಕೆಂದರೆ-ಸಾವಧಾನದಿಂದ ವಿಚಾರಪೂರ್ವಕವಾಗಿ ನೆರವೇರುವ ಕಾರ್ಯವೇ ಶಾಶ್ವತವಾದ ಫಲವನ್ನು ಕೊಡುವ ಸಾಧನವಾಗಿ ಪರಿಣಮಿಸತಕ್ಕುದಾಗಿದೆ. ಅನನುಭವದಲ್ಲಿರುವ ನಾನಾ ವಿಷಯವನ್ನು ಪರಿಶೋಧಿಸಿ, ದೇಶಕ್ಕೆ ಲಾಭಕರವಾದ ಉದ್ಯೋಗಗಳಾವುವು? ನಿಷ್ಫಲವಾದ ಉದ್ಯೋಗಗಳಾವುವು? ಎಂಬುದನ್ನು ಸಿದ್ಧಾಂತಪಡಿಸಿಕೊಳ್ಳದೆ ಸರ್ಕಾರದವರೇ ಆಗಲಿ ಪ್ರಜೆಗಳೇ ಆಗಲಿ ಹಣವನ್ನು ಅವುಗಳಿಗೆ ವ್ಯಯಮಾಡುವುದು ವಿಹಿತವಾಗುವುದಿಲ್ಲ. ಅದು ಕಾರಣ, ದೇಶದ ಆರ್ಥಿಕವೃದ್ಧಿಯ ವಿಷಯದಲ್ಲಿ ಪ್ರಯತ್ನಶೀಲರಾದ ನಮ್ಮ ಸರ್ಕಾರದವರು ಇಷ್ಟು ದೀರ್ಘಕಾಲ ಪರ್ಯಾಲೋಚಿಸಬೇಕಾದುದು ಅವರ ಮೇಲೆ ಹೊತ್ತಿರುವ ಉತ್ತರವಾದಿತ್ವಕ್ಕೆ ತಕ್ಕುದಾಗಿರುತ್ತದೆಂದು ಹೇಳಬಹುದು.

ಗೊತ್ತಾಗಿದ್ದ ಮೇರೆ ಈ ಸಮಾಜದ ೫ ನೆಯ ಅಧಿವೇಶನವು ಕಳೆದ ತಾ॥ ೫ ರ ಮಧ್ಯಾಹ್ನ ೧೨ ಗಂಟೆಗೆ ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದ ಸಭಾಂಗಣದಲ್ಲಿ ಸಂಸ್ಥಾನದ ಮಂತ್ರಿವರ್ಯರ ಅಧ್ಯಕ್ಷತೆಯಲ್ಲಿ ನೆರೆವಿದ್ದಿತು. ಮೊದಲನೆಯದಿನ ಶ್ರೀಯುವರಾಜರು ಸಭೆಗೆ ದಯಮಾಡಿಸಿದ್ದುದು ದೇಶದ ಅಭ್ಯುದಯ ಸಾಧಕ ಕಾರ್ಯಗಳಲ್ಲಿ ಅವರಿಗೆ ಎಷ್ಟುಮಟ್ಟಿಗೆ ಅಭಿಮಾನವಿರುವುದೆಂಬುದನ್ನು ವ್ಯಕ್ತಪಡಿಸಿದುದಲ್ಲದೆ ಈ ಸಮಾಜದ ಕಾರ್ಯಕಾರಿಗಳಿಗೆ ವಿಶೇಷ ಪ್ರೋತ್ಸಾಹಕಾರಿಯಾಗಿದ್ದಿತು. ಅಧ್ಯಕ್ಷರು ಮಾಡಿದ ಉಪಕ್ರಮಣ ಭಾಷಣವು ಕಳೆದ ೪ ವರ್ಷಗಳಿಂದಲೂ ಈ ಸಮಾಜದವರ ಪ್ರಯತ್ನದಿಂದ ಎಷ್ಟು ಮಟ್ಟಿನ ಕೆಲಸಗಳು ಕಾರ್ಯೋನ್ಮುಖಕ್ಕೆ ತಿರುಗಿರುತ್ತವೆಯೆಂಬುದನ್ನು ಚೆನ್ನಾಗಿ ವ್ಯಕ್ತಪಡಿಸಲು ಸಾಧಕವಾಗಿದ್ದಿತು. ಅದರಲ್ಲಿ ವರ್ಣಿತವಾಗಿದ್ದ ಮುಖ್ಯಭಾಗಗಳಾವುವೆಂದರೆ:- " ಈ ಸಭಾಸ್ತಾರರ ಸಂಖ್ಯೆಯು ೪೦ ರಿಂದ ೪೮ ಕ್ಕೆ ಹೆಚ್ಚಿಸಲ್ಪಟ್ಟಿದೆ. ಶ್ರೀಮನ್ಮಹಾರಾಜರವರು ತಮ್ಮ ನೈಜಸ್ವಭಾವವಾದ ಔದಾರ್ಯದಿಂದಲೂ ಪ್ರಜೆಗಳಲ್ಲಿರುವ ನಂಬುಗೆಯಿಂದಲೂ ಅನೌದ್ಯೋಗಿ ಜನರನ್ನು ಸಭಾಸ್ತಾರರನ್ನಾಗಾರಿಸುವ ಹಕ್ಕನ್ನು ತಮ್ಮ ಪ್ರಜೆಗಳಿಗೆ ದಯಪಾಲಿಸಿರುವುದರ ಮೇಲೆ ೮ ಡಿಸ್ಟ್ರಿಕ್ಟುಗಳಿಂದ ೮ ಜನರೂ, ಪ್ರಜಾಪ್ರತಿನಿಧಿಸಭೆಯಿಂದ ೮ ಜನರೂ ಇದಕ್ಕೆ ಮೆಂಬರುಗಳಾಗಾರಿಸಲ್ಪಟ್ಟಿರುವರು. ಈ ಸಮಾಜದ ಕಾರ್ಯವು ಎಷ್ಟರಮಟ್ಟಿಗೆ ನಡೆದಿರುವುದೆಂಬುದು ಅದರ ವರದಿಯಿಂದ ನಿಮಗೆ ಗೊತ್ತಾಗುವುದು. ವಿದ್ಯಾಶಾಖೆಯಲ್ಲಿ ಪ್ರಾಥಮಿಕ ಶಿಕ್ಷಣ, ಕೈಗಾರಿಕೆಯ ವಿದ್ಯಾಭಿವೃದ್ಧಿಗೆ ಬೇಕಾದಷ್ಟು ಕೌಶಲ್ಯವನ್ನುಂಟುಮಾಡಿದೆ. ಸ್ತ್ರೀ ವಿದ್ಯಾಭಿವೃದ್ಧಿಗೂ ಬೆಂಗಳೂರು ಮತ್ತೂ ಮೈಸೂರು ಪಟ್ಟಣಗಳಲ್ಲಿ ಪುಸ್ತಕ ಭಾಂಡಾಗಾರಗಳನ್ನು ಸ್ಥಾಪಿಸಲಿಕ್ಕೂ ಏರ್ಪಾಡು ನಡೆಯುತ್ತಿರುವುದು. ಈ ಸೀಮೆಯಲ್ಲಿ ಒಂದು ಯೂನಿವರ್ಸಿಟಿಯನ್ನು ಸ್ಥಾಪಿಸಲು ಬ್ರಿಟಿಷ್ ಸ್ಟೇಟ್ಸ್‌ಗಳಲ್ಲಿಯ ಮತ್ತೂ ಇತರ ಕಡೆಯ ಸಣ್ಣ ಯೂನಿವರ್ಸಿಟಿಗಳ ಕಾರ್ಯಕ್ರಮವು ಎಷ್ಟರಮಟ್ಟಿಗೆ ನಡೆಯುತ್ತಿರುವುದೆಂಬ ಸಂಗತಿಯನ್ನು ವಿಚಾರಿಸುತ್ತಿದ್ದೇವೆ. ವಿದ್ಯಾಭಿವೃದ್ಧಿ ಕಾರ್ಯವು ಬಹಳ ಮುಖ್ಯವೆಂದು ಸರ್ಕಾರಕ್ಕೆ ತೋರಿರುವುದರಿಂದ ತತ್ಸಂಬಂಧವಾದ ವಿಷಯಗಳಿಗೆ ವಿಶೇಷ ಗಮನವು ಕೊಡಲ್ಪಡುವುದು. ವ್ಯವಸಾಯ ಶಾಖೆಯಲ್ಲಿ ಕರ್ಷಕ ಜನರಿಗುಪಯುಕ್ತವಾಗುವಂತೆ ದೊಡ್ಡ ಪರೀಕ್ಷಾಕ್ಷೇತ್ರಗಳನ್ನು ನಿರ್ಮಿಸುವುದು, ಕೆರೆಗಳ ಮತ್ತೂ ಕಬ್ಬಿನ ವ್ಯವಸಾಯದ ಅಭಿವೃದ್ಧಿ ಮಾಡುವುದು, ರೈತರ ಸ್ಥಿತಿಗತಿಯನ್ನು ವಿಚಾರಿಸುವುದು-ಇವುಗಳಿಗೆ ವಿಶೇಷ ಗಮನವು ಕೊಡಲ್ಪಟ್ಟಿವೆ. ಹೈನದ ಮನೆ (ಡೈರಿ)ಗಳೇರ್ಪಡಿಸುವ ಸಾಲವನ್ನು ಕೊಡಲು ವಿಧಿಗಳೇರ್ಪಡಿಸಲ್ಪಟ್ಟಿವೆ. ರೇಷ್ಮೆಯ ವ್ಯವಸಾಯಾಭಿವೃದ್ಧಿಗಾಗಿ ಒಂದು ಕ್ಷೇತ್ರವು ಏರ್ಪಡಿಸಲ್ಪಟ್ಟು ಇಬ್ಬರು ನಿಪುಣರು ನೇಮಿಸಲ್ಪಟ್ಟಿರುವರು. ರೇಷ್ಮೆ ಬೆಳೆಯ ಅಭಿವೃದ್ಧಿಗಾಗಿ ಒಂದು ಸಂಘವೇರ್ಪಡಿಸಲ್ಪಟ್ಟಿದೆ. ರೈತರು ರೇಷ್ಮೆಹುಳುವನ್ನು ಸಾಕಿ ದಾರವನ್ನು ತೆಗೆಯುವ ಕ್ರಮವನ್ನು ಬೋಧಿಸುವ ಆಲೋಚನೆಯು ನಡೆಯುತ್ತಿದೆ. ಕೈಗಾರಿಕೆಯ ಮತ್ತೂ ವ್ಯಾಪಾರದ ಶಾಖೆಗಳಲ್ಲಿ ನೀರನ್ನೆತ್ತುವ ೧೧ ಯಂತ್ರಗಳೂ, ೫-೬ ಮರಕೊಯ್ಯುವ ಮತ್ತು ಇತರ ಮಿಲ್ಲುಗಳೂ ಸ್ಥಾಪಿತವಾಗಿವೆ. ಯಂತ್ರಗಳ ಉಪಯೋಗವನ್ನು ಜನಗಳು ವಿಶೇಷವಾಗಿ ಹೊಂದುವಬಗೆಗೆ ತಕ್ಕಾವಿಸಾಲವನ್ನು ಕೊಡಲೇರ್ಪಡಿಸಿದೆ. ಬೆಂಗಳೂರ ಸರ್ಕಾರಿ ಯಾನೇಯ್ಗೆಯ ಕಾರ್ಖಾನೆಯಲ್ಲೂ ಹೊರಗಡೆಯ ನೇಯ್ಗೆಯ ವಿಚಾರವು ಹೇಳಿಕೊಡಲ್ಪಡುತ್ತಿರುವುದು. ಈಗ ಸ್ಥಾಪಿತವಾಗಿರುವ ಕಬ್ಬಿನ ಹಾಲನ್ನು ತೆಗೆಯುವ ೨ ಯಂತ್ರಗಳಲ್ಲಿ ಕೆಲಸವು ಸಮರ್ಪಕವಾಗಿ ನಡೆಯುತ್ತಿದೆ. ಮರದೆಣ್ಣೆಯನ್ನು ತೆಗೆಯುವ ಯಂತ್ರದ ಸ್ಥಾಪನೆಗಾಗಿ ಯೋಚನೆಯು ನಡೆಯುತ್ತಿದೆ. ಮತ್ತು ಕ್ರೋಮೋಲಿಥೊಗ್ರಾಫಿಕ್ ಪ್ರೆಸ್ಸೊಂದನ್ನು ಸ್ಥಾಪಿಸಲು ಅಪ್ಪಣೆಯಾಗಿದೆ. ಹಂಚು, ಬೀಪದಕಡ್ಡಿ, ಕಾಗದ ಮೊದಲಾದವುಗಳ ಕಾರ್ಖಾನೆಯನ್ನು ಸ್ಥಾಪಿಸುವುದರ ಲಾಭಾಲಾಭಗಳನ್ನು ತಿಳಿಯಲು ಅನುಭವಸ್ಥರು ನಿಯಮಿಸಲ್ಪಟ್ಟಿರುವರು. ಈ ಸಂಪದಭ್ಯುದಯ ಸಮಾಜದವರ ಸಹಾಯದಿಂದ ಈಗ್ಗೆ ೮ ತಿಂಗಳ ಕೆಳಗೆ ಏರ್ಪಟ್ಟಿರುವ ಮೈಸೂರ ಬ್ಯಾಂಕು ೨೬ ಲಕ್ಷ ರೂ. ವರೆಗೂ ಲೇವಾದೇವಿಯನ್ನು ನಡೆಸುತ್ತಿರುವುದು. ಕಮಿಟಿಯವರಿಂದ ಹೊಸದಾಗೇರ್ಪಟ್ಟಿರುವ ಸ್ಟ್ಯಾಂಡಿಂಗ್ ಕಮಿಟಿಗಳಲ್ಲದೆ ೨ ಸೆಂಟ್ರಲ್ ಕಮಿಟಿಗಳೂ ೮ ಡಿಸ್ಟ್ರಿಕ್ಟ್ ಕಮಿಟಿಗಳೂ ಮತ್ತು ೯ತಾಲ್ಲೋಕ್ ಕಮಿಟಿಗಳೂ ಏರ್ಪಟ್ಟಿರುತ್ತವೆ. ಎಂದು ಮೊದಲಾಗಿ ಅಪ್ಪಣೆಕೊಡಿಸಿದರು. ಅನಂತರ ಆ ಆ ಶಾಖೆಗಳ ವರದಿಗಳು ಸಕ್ರೆಟರಿಗಳಿಂದ ಓದಲ್ಪಟ್ಟು ಮೊದಲನೆ ದಿನದ ಕಾರ್ಯಗಳು ಮುಗಿದುವು. ಈ ಸಭಾಕಾರ್ಯವು ನಾಳೆಯವರೆಗೂ ನಡೆವುದಾಗಿದೆ.

ವಂಗಕನ್ಯಾಹತ್ಯಗಳು.

ಬಂಗಾಳದ ಪತ್ರಿಕೆಗಳಲ್ಲಿ ಪ್ರತಿವಾರವೂ ಒಂದೆರಡಾದರೂ ಯುವತಿಯರ ಆತ್ಮಹತ್ಯೆಯ ಸುದ್ದಿಗಳು ಬರುತ್ತಲೇ ಇವೆ. ಸ್ನೇಹಲತೆಯು ವರಶುಲ್ಕದ ಹಾವಳಿಯನ್ನು ತಡೆಯಲಾರದೆ ಮಾಡಿಕೊಂಡ ಆತ್ಮಹತ್ಯೆಯು ಭರತಖಂಡದಲ್ಲೆಲ್ಲಾ ಹೊಗಳಲ್ಪಡುವುದಕ್ಕುಪಕ್ರಮವಾಗಲು, ದೆವ್ವಕ್ಕೆ ಧೂಪವನ್ನು ಹಾಕಿದಂತೆ ತಲೆತಿರುಗಿದ ನವಯುವತಿಯರಿಗೆ ಇದೊಂದು ಹುಡುಗಾಟಿಕೆಯಾಗಿ ಪರಿಣಮಿಸಿರುವುದು ಅತ್ಯಂತ ಶೋಚನೀಯವಾಗಿದೆ. ಸ್ತ್ರೀಯರಲ್ಲಿ ಸ್ವಭಾವತಃ ಕಠಿನಚಿತ್ತೆಯರು ಹೆಚ್ಚಾಗಿರುವರು. ಅವರು ಪ್ರಾಣಹತ್ಯೆಗೆ ಸ್ವಲ್ಪವೂ ಹಿಂದುಮುಂದೆ ನೋಡತಕ್ಕವರಲ್ಲ. ಅಂಥವರಿಗೆ ಆತ್ಮಹತ್ಯೆಯ ಪುರಸ್ಕಾರದ ಸಂಧಿಯು ದೊರೆತರೆ ಕೇಳುವುದೇನು? ಈಗಿನ ಕನ್ಯಾಹತ್ಯಗಳೆಲ್ಲಾ ವಿಶೇಷವಾಗಿ ಬಂಗಾಳದಲ್ಲೇ ನಡೆಯುತ್ತಿವೆ. ವರಶುಲ್ಕದ ಹಾವಳಿಯನ್ನು ನಿಲ್ಲಿಸುವ ಉಪಾಯದಲ್ಲಿ ಕನ್ಯಾಹತ್ಯದ ಪರಂಪರೆಯನ್ನು ಈ ಸಮಯದಲ್ಲಿ ವಂಗೀಯರು ತಂದುಕೊಂಡಿರುವುದು ಬೇಳಿನ ಭಯದಿಂದ ಓಡಿಹೋಗಿ ಹಾವಿನ ಹುತ್ತನ್ನು ಸೇರಿದಂತಾಗಿದೆ. ಕಳೆದ ತಾ॥ ೩೧ ರಲ್ಲಿ ಕಲ್ಕತ್ತಾದ ಬಾರ್‌ಪೂಲಾದಲ್ಲಿ ೧೬ ವರ್ಷ ವಯಸ್ಸಿನ ಒಬ್ಬ ಹಿಂದೂಬಾಲಿಕೆಯು ತನ್ನಿಂದ ಕೋರಲ್ಪಟ್ಟ ವರನು ಕೇಳಿದಷ್ಟು ಶುಲ್ಕವನ್ನು ತನ್ನ ತಂದೆಯು ಕೊಡಲು ಅಸಮರ್ಥನಾದ ಕಾರಣದಿಂದ ಲೇತಾನುಟ್ಟಿದ್ದ ಸೀರೆಗೆ ಸೀಮೆಯೆಣ್ಣೆಯನ್ನು ಸುರಿದು ಬೆಂಕಿಯನ್ನು ಹೊತ್ತಿಸಿಕೊಂಡು ಸತ್ತಳು. ವಿಷ್ಣುಚರಣರಾಯಿಯೆಂಬ ವೈದ್ಯನ ಮಗಳಾದ ೧೫ ವರ್ಷ ವಯಸ್ಸಿನ ದೇವಪ್ರಭಾ ಎಂಬ ಕುಮಾರಿಗೆ ಒಬ್ಬ ವರನು ಕುದುರಿದ್ದು, ಯಾವ ಕಾರಣದಿಂದಲೋ ಆ ಸಂಬಂಧವಾಗದೆ ತಪ್ಪಿಹೋಗಿ, ಬೇರೊಬ್ಬ ವರನನ್ನು ಹರಿಸಬೇಕಾಗಿ ಬಂದುದರಿಂದಲೂ, ಈ ೨ ನೆಯ ವರನು ವಿದ್ಯಾವಂತನೂ ಆಗದೆ ಧನವಂತನೂ ಆಗದೆ ಇದ್ದುದರಿಂದಲೂ, ಕನ್ಯೆಯ ಮನಸ್ಸಿಗೆ ಅವನ ಸಂಬಂಧವು ರುಚಿಸದೆ ಹೋಗಿ, ತನ್ನ ಜೀವಿತದಲ್ಲಿ ಜುಗುಪ್ಸೆಗೊಂಡು ಸೀಮೆಯೆಣ್ಣೆಯನ್ನು ಬಟ್ಟೆಗೆ ಸುರಿದುಕೊಂಡು ಬೆಂಕಿಹೊತ್ತಿಸಿಕೊಂಡಳು. ಬೆಂಕಿಯ ಹೊಗೆಯನ್ನು ಕಂಡು ನೆರೆಹೊರೆಯವರು ಕೂಗಿಕೊಂಡು ಓಡಿಬಂದು ಮನೆಯವರೆಲ್ಲಾ ಆಕೆಯ ನೆತ್ತಿಯಮೇಲೆ ನೀರನ್ನು ಸುರಿದು ಬೆಂಕಿಯನ್ನಾರಿಸಿದರು. ಆದರೆ ಗೋಣಿಪಟ್ಟೆಯನ್ನು ಮೈಗೆಲ್ಲಾ ಸುತ್ತಿಕೊಂಡು ಬೆಂಕಿಹೊತ್ತಿಸಿಕೊಂಡು ಬಿದ್ದಿದ್ದ ಆಕೆಯು ಸತ್ತೇಹೋದಳು. ಮತ್ತೂ ಕಲ್ಕತ್ತಾದಲ್ಲಿ ಕಳೆದ ತಾ॥ ೫ ರಲ್ಲಿ ಭಗವದ್ದಾಸಿಯೆಂಬ ೧೪ ವರ್ಷದ ಯುವತಿಯು ತನ್ನ ಉಡುಪಿನ ಮೇಲೆ ಸೀಮೆಯೆಣ್ಣೆಯನ್ನು ಸುರಿದುಕೊಂಡು ಬೆಂಕಿಯನ್ನು ಹೊತ್ತಿಸಿ ಸುಟ್ಟುಕೊಂಡು ಸತ್ತಳು, ಈಕೆಗೆ ೧ ವರ್ಷದ ಕೆಳಗೆ ವಿವಾಹವಾಗಿದ್ದಿತು. ಗೃಹಛಿದ್ರದಿಂದ ದೇಹಧಾರಣೆಯಲ್ಲಿ ಜುಗುಪ್ಸೆಗೊಂಡು ಹೀಗೆ ಆತ್ಮಹತ್ಯೆಯನ್ನು ಮಾಡಿಕೊಂಡಳು. ಈಕೆಯ ದೇಹವು ದಹಿಸುತ್ತಿರುವಾಗ ಮನೆಯವರು ಕಂಡು ಓಡಿಬಂದು ಬೆಂಕಿಯನ್ನಾರಿಸಿ, ವೈದ್ಯವಿದ್ಯಾಲಯದ ಚಿಕಿತ್ಸಾಶಾಲೆಗೆ ಸಾಗಿಸಿ ಚಿಕಿತ್ಸೆಮಾಡಿಸಿದರು. ಆದರೂ ಬದುಕದೆ ಸತ್ತಳು. ಹೀಗೆ ಸದ್ಯಃ ನಡೆಯುತ್ತಿರುವ ಕನ್ಯಾಹತ್ಯೆಯನ್ನು ತಡೆಯುವುದಕ್ಕೆ ವಂಗದೇಶೀಯರು ಮೊದಲು ತಕ್ಕ ಉಪಾಯವನ್ನು ಯೋಚಿಸಬೇಕಾಗಿ ಬಂದಿರುತ್ತದೆ.

ಸ್ವಾತಂತ್ರ್ಯವಾದಿನಿಯರ ಹಾವಳಿ.

ಪಾರ್ಲಿಮೆಂಟಿಗೆ ಸಭಿಕರನ್ನಾರಿಸುವ ಅಧಿಕಾರವನ್ನು ತಮಗೂ ಕೊಡಬೇಕೆಂದು ಹೋರಾಡುವ ಸ್ತ್ರೀಯರ ಉಪಟಲವು ಸೀಮೆಯಲ್ಲಿ ವಾಚಾಮಗೋಚರವಾಗಿದೆ. ಅವರು ವಿಧೇಯತೆಯಿಂದ ತಮ್ಮ ಇಷ್ಟಾರ್ಥಪ್ರಾಪ್ತಿಯನ್ನು ಹೊಂದಲಾರದೆ ಈಗ ದುರ್ವರ್ತಿಗೆ ನಡುಕಟ್ಟಿದ್ದಾರೆ. ಪ್ರದರ್ಶನಾಲಯಗಳೊಳಗೆ ಅಲಂಕಾರಪ್ರಾಯವಾಗಿದ್ದ ಚಿತ್ರಪಟಗಳನ್ನೂ ವಿಗ್ರಹಗಳನ್ನೂ ನಾಶಮಾಡಿರುತ್ತಾರೆ. ಇನ್ನು ಕೆಲವನ್ನು ನಾಶಮಾಡುವರೆಂದು ಕಂಡುಬಂದಾಗ ಕಾವಲುಗಾರರಿಂದ ತಡೆಯಲ್ಪಟ್ಟಿದ್ದಾರೆ. ಪ್ರದರ್ಶನಾಲಯಗಳಿಗೆ ಇನ್ನು ಮುಂದೆ ಸ್ತ್ರೀಯರನ್ನು ನಿರಾಟಂಕವಾಗಿ ಬಿಡಕೂಡದೆಂದು ಸರ್ಕಾರದವರಿಂದ ಆಜ್ಞೆ ಮಾಡಲ್ಪಟ್ಟಿದೆ. ಪ್ರಮಾಣ ಪತ್ರಿಕೆಯನ್ನು ಬರೆದುಕೊಟ್ಟವರನ್ನು ಮಾತ್ರ ಪ್ರವೇಶಗೊಳಿಸುತ್ತಾರೆ. ಹಾವಳಿಮಾಡಿದ ಹೆಂಗುಸರನ್ನು ಪೊಲೀಸರು ಹಿಡಿದು ದಂಡಾಧಿಕಾರಿಯೆಡರಿಗೆ ವಿಚಾರಣೆಗೊಳಪಡಿಸಿದಾಗ ಕೆಲರು ನ್ಯಾಯಾಧಿಪತಿಯ ಮುಖದ ಮೇಲೆ ಮಣ್ಣು ಹಿಂಟೆಯನ್ನೂ ಹಿಟ್ಟಿನ ಚೀಲವನ್ನೂ ಎಸೆದರು. ಅವರು ಕೋರ್ಟು ಕೆಲಸವನ್ನೇ ನಿಲ್ಲಿಸಬೇಕಾಯಿತು. ೩೩ ಮಂದಿ ಹೆಂಗುಸರಿಗೆ ೧-೨ ತಿಂಗಳ ಕಾರಾಗೃಹವಾಸ ಶಿಕ್ಷೆಯಾಯಿತು. ಮೆಡಾನಾ ಎಂಬ ಹೆಂಗುಸೊಬ್ಬಳನ್ನು ಪೊಲೀಸರು ಹಿಡಿಯಲು ಹೋದಾಗ ಬಹಳ ಗದ್ದಲವಾಯಿತು. ಸಣ್ಣ ತೋಟಾಗಳನ್ನು ಅಧಿಕಾರಿಗಳ ಮೇಲೆ ಬಿಸುಡುವರು. ಒಂದು ನಾಟಕವನ್ನು ನೋಡುವುದಕ್ಕಾಗಿ ಚಕ್ರವರ್ತಿಯವರು ಪತ್ನೀಸಮೇತರಾಗಿ ಹೋಗಿರುವಲ್ಲಿ ಅಲ್ಲಿ ಕೆಲ ಸ್ತ್ರೀಯರು ವಿಜ್ಞಾಪನ ರೂಪವಾದ ಉಪನ್ಯಾಸವೊಂದನ್ನು ಉಚ್ಚಸ್ವರದಿಂದ ಮಾಡುವುದಕ್ಕುಪಕ್ರಮಿಸಿದರು. ಆದರೆ ಪೊಲೀಸರು ನುಗ್ಗಿ ಅದನ್ನು ನಿಲ್ಲಿಸಿದರು. ಕೆಲಸ್ತ್ರೀಯರು ಸಿಡಿಮದ್ದುಗಳನ್ನು ದೇವಾಲಯಗಳಿಗೂ ಅಧಿಕಾರಿಗಳ ಮನೆಗೂ ಉಪಯೋಗಿಸುತ್ತಿದ್ದಾರೆ. ಹೀಗೆಯೇ ಪ್ರತಿದಿನವೂ ವಿಧವಿಧವಾಗಿ ಅವರ ಹಾವಳಿಯು ಪ್ರಬಲಿಸುತ್ತಿದೆ. ಥೇಮ್ಸ್‌ನದಿಯ ಮೇಲಿರುವ ವಾರ್‌ಗ್ರೇಂಪಟ್ಟಣದ ಒಂದಾನೊಂದು ದೇವಾಲಯವನ್ನು ನಿನ್ನೆ ತಾನೇ ಸುಟ್ಟುಬಿಟ್ಟರು. ಒಬ್ಬ ಕಾರಾಗೃಹಾಧಿಕಾರಿಯನ್ನು ಚಾಟಿಯಿಂದ ಹೊಡೆದರು. ಮನೆಮನೆಯ ಕಿಟಕಿಯ ಗಾಜಿನ ಕದಗಳನ್ನೆಲ್ಲಾ ಸುತ್ತಿಗೆಯಿಂದ ಹೊಡೆದು ಪುಡಿಮಾಡುತ್ತಿರುವರು. ಈ ಹೆಂಗುಸರಲ್ಲಿ ಅಗ್ರೇಸರಳಾಗಿರುವ ಪಾಂಕ್‌ಹರ್ಸ್ಟ್ ಎಂಬಾಕೆಯು ಬಾಡಿಗೆಗೆ ತೆಗೆದುಕೊಂಡು ವಾಸವಾಗಿರುವ ಮನೆಯ ಮಾಡದಮೇಲೆ ನಿಂತರೆ ಬಕಿಂಗ್‌ಹ್ಯಾಂ ಎಂಬ ಅರಮನೆಯು ಚೆನ್ನಾಗಿ ಕಾಣುವುದು. ಈಕೆಯಿಂದ ಏನು ಅನಾಹುತವಾಗುವುದೋ ಎಂದು ಪೋಲೀಸರು ಹಗಲೂ ರಾತ್ರಿ ಕಾಯುತ್ತಿರುವರು. ಚಕ್ರವರ್ತಿಯವರ ಕುಮಾರರಲ್ಲೊಬ್ಬರಾದ ಹೆನ್ರಿಯೆಂಬ ಬಾಲಕನು ಈಟನ್ನಿನಲ್ಲಿ ವಿದ್ಯಾಭ್ಯಾಸಮಾಡುತ್ತಿರುವನು. ಈತನಿಗೆ ಏನೋ ಹಾನಿಯನ್ನುಂಟುಮಾಡಲು ಸ್ತ್ರೀಸ್ವಾತಂತ್ರ್ಯವಾದಿನಿಯರು ಆಲೋಚಿಸುತ್ತಿರುವರೆಂದು ಕಂಡುಬಂದುದರಿಂದ ಅತನ ರಕ್ಷಣಾರ್ಥವಾಗಿ ಗೂಢಚಾರರನ್ನು ಕಳುಹಿಸಿರುವರಂತೆ. ಮುಂದೆ ಈ ಹೆಂಗುಸರ ಹಾವಳಿಯು ಇನ್ನೂ ಕೋಪಕ್ಕೆ ಬರುವಂತೆ ಕಾಣುತ್ತಿದೆ.

ಕಾಲಮಾನ.

ಈ ವಿಷಯವಾಗಿ ಕಳೆದ ವಾರದಲ್ಲಿ ಭರತಖಂಡದ ವಾತಾವರಣ ಶಾಸ್ತ್ರಜ್ಞರು ಸಿಮ್ಲಾಪಟ್ಟಣದಿಂದ ಪ್ರಕಟಿಸಿರುವ ವರದಿಯು ಸ್ವಲ್ಪ ಸಮಾಧಾನಕರವಾಗಿದೆ. ಕಳೆದೆರಡು ವಾರಗಳಲ್ಲಿ ಯಾವಕಡೆಯೂ ಮಳೆಯಾಗದೆ ಕೆಲಕಡೆ ೧೨೬ ಡಿಗ್ರಿಯವರೆಗೂ ಔಷ್ಣ್ಯವು ಹೆಚ್ಚಿಕೊಂಡು ಕಾಲಸ್ಥಿತಿಯು ಬಹು ಭೀಕರವಾಗಿ ಸಂತಾಪವನ್ನು ಹುಟ್ಟಿಸಿದ್ದಿತು. ಕಳೆದ ತಾ॥ ೨-೩-೪ ರಲ್ಲಿನ ವರದಿಗಳನ್ನು ನೋಡುವಲ್ಲಿ ಮಲಬಾರುತೀರದಲ್ಲಿ ಮಳೆ ಬರುವುದಕ್ಕೆ ಮುಂಚೆ ಉಂಟಾಗತಕ್ಕ ಚಿಹ್ನಗಳು ಈಗ ಕಂಡುಬರುತ್ತಿವೆಯೆಂದೂ, ದೇಶದ ನಾನಾಭಾಗಗಳಲ್ಲಿ ಮಳೆಯು ಆಗುತ್ತಲಿರುವುದೆಂದೂ, ಭರತಖಂಡದ ಉತ್ತರಭಾಗದಲ್ಲಿರುವ ಬೆಟ್ಟಗಳ ಮೇಲಿನ ವಾಯುಮಂಡಲದಲ್ಲಿ ಮಳೆಗೆ ದಾರಿಯನ್ನು ಮಾಡುವ ಸಂಕ್ಷೋಭವುಂಟಾಗಿದೆಯೆಂದೂ ಅದರಿಂದ ಕಾಶ್ಮೀರದಲ್ಲೂ ಬರ್ಮಾದಲ್ಲೂ ಒರಿಸ್ಸಾ ಚೋಟಾನಾಗಪುರ ಕಾಶಿ ಮಧ್ಯಪ್ರಾಂತ ಹೈದರಾಬಾದು ಬೊಂಬಾಯಿ ಮಲಬಾರು ಮದ್ರಾಸಿನ ಉತ್ತರದಿಕ್ಕು ಅಗ್ನಿದಿಕ್ಕುಗಳಲ್ಲೂ ದಕ್ಷಿಣದಲ್ಲೂ ಮಳೆಯು ಹೆಯ್ದು ಹುಯ್ಯುತ್ತಲೂ ಇರುವುದೆಂದು ಗೊತ್ತಾಗಿರುವುದು. ಬಂಗಾಳದ ದಕ್ಷಿಣಭಾಗದಲ್ಲಿ ವಿಶೇಷವಾದ ಮಳೆಯಾಗುವ ಚಿಹ್ನವಿರುವುದು. ಕಳೆದ ತಾ॥೪ರಲ್ಲಿ ಬೊಂಬಾಯಿಯಲ್ಲಿ ಬಿದ್ದಮಳೆಯು ವರ್ಷಾರಂಭದ ಸೂಚಿಹ್ನವಾಗಿದ್ದಿತು. ಈಗ ವಾಯುಮಂಡಲದಲ್ಲಿ ಶೈತ್ಯವು ಹೆಚ್ಚುತ್ತಿದೆ. ಈ ಕಾರಣಗಳಿಂದಲೇ ನಮ್ಮಲ್ಲೂ ಕಳೆದ ೨-೩ ದಿನಗಳಿಂದ ಮೋಡವು ಕವಿದು ತುಂತುರುಮಳೆಯಾಗುವುದಕ್ಕಾರಂಭವಾಗಿದೆ. ಆದರೆ ದೊಡ್ಡ ಮಳೆಗಳು ಆಗಿಲ್ಲ. ಕೆರೆಕಟ್ಟೆಗಳಿಗೂ ಬೇಸಾಯಕ್ಕೂ ತಕ್ಕಷ್ಟು ನೀರಾಗುವ ಮಳೆಗಳು ೧-೨ ವಾರಗಳಲ್ಲಿ ಸರ್ವತ್ರ ಆಗಬೇಕಾಗಿದೆ. ಹಾಗೆ ಆದಹೊರತು ಈ ವರ್ಷದ ಕಾಲಸ್ಥಿತಿಯಲ್ಲಿ ತೋರುತ್ತಿರುವ ಕ್ಷಾಮಸೂಚನೆಯು ಅಡಗುವಹಾಗಿಲ್ಲ.

ಸ್ವದೇಶದ ವೃತ್ತಾಂತವು.

ಕಳೆದ ಶುಕ್ರವಾರ ರಾಜಧಾನಿಯಲ್ಲಿ ೪೦ ಸೆಂಟು ಮಳೆಯಾಗಿ ಋತುಮಾನವನ್ನನುಸರಿಸಿ ವಾಯುಗುಣದಲ್ಲಿ ಕೊಂಚ ತನುವುಂಟಾಗಿದೆ.

ತಿಪ್ಟೂರಿನಲ್ಲಿ ಕೆಂಪಮ್ಮನ ದೇವಸ್ಥಾನಕ್ಕೆ ಬೆಸ್ತರವನು ಪೂಜಾರಿಯಾಗಿರುವನು. ಆದರೆ ದೇವರಿಗೆ ಪಕ್ವಾನ್ನವು ಅವನ ಕೈಯಿಂದ ನಿವೇದನೆಮಾಡಲ್ಪಡದೆ ಬ್ರಾಹ್ಮಣ ಅಥವಾ ಲಿಂಗಾಯತರಿಂದ ಮಾಡಲ್ಪಡುವುದಂತೆ.

ದಿವಾನರು ಪದ್ಧತಿಯಪ್ರಕಾರ ವರ್ಧಂತಿಯ ಮಹೋತ್ಸವಕ್ಕೆ ಬಂದಿರುವ ಸರ್ಕಾರಿಯ ದೊಡ್ಡಧಿಕಾರಿಗಳಿಗೂ ಸಂಪದಭ್ಯುದಯಸಮಾಜದ ಮೆಂಬರುಗಳು ಮೊದಲಾದ ಅತಿಥಿಗಳಿಗೂ ನಿನ್ನೆಯರಾತ್ರಿ ದಿವ್ಯವಾದ ಔತಣವನ್ನು ಮಾಡಿಸಿದರು.

ಡಾಕ್ಟರ್ ಇ ಎಸ್. ಕೃಷ್ಣಸ್ವಾಮಯ್ಯರ್‌ರವರು ಬೆಂಗಳೂರ ವಿಕ್ಟೋರಿಯಾ ಆಸ್ಪತ್ರೆಯ ಇನ್‌ಛಾರ್ಜ್ ಮೆಡಿಕಲ್ ಆಫೀಸ್ ಉದ್ಯೋಗವನ್ನು ಡಾ॥ ಸಿ. ಎ. ನಂಜಪ್ಪನವರಿಂದ ಕಳೆದ ಗುರುವಾರ ವಹಿಸಿಕೊಂಡುದರಿಂದ ಡಾ॥ ನಂಜಪ್ಪನವರು ರೆಸಿಡೆಂಟ್ ಮೆಡಿಕಲಾಫೀಸರ್ ಸ್ಥಾನಕ್ಕೆ ಹಿಂದಿರುಗಬೇಕಾಗಿಬಂದಿತು.

ಹೆಗ್ಗಡದೇವನಕೋಟೆಯಲ್ಲಿ ಒಂದು ದೊಡ್ಡ ಆಂಜನೇಯ ವಿಗ್ರಹವಿರುವುದು. ಇದರ ಮುಖವು ಎಡದ ಕಡೆಗೆ ತಿರುಗಿರುವುದಲ್ಲದೆ ಅದರ ಎಡದ ತೊಡೆಯಿಂದ ಕೆಂಪಗಿರುವ ನೀರು ಕೊಂಚವಾಗಿ ದ್ರವಿಸುತ್ತಿರುವುದಾಗಿಯೂ ಅಲ್ಲಿಟ್ಟಿದ್ದ ಬಟ್ಟೆಯು ಕೊಂಚ ದಿವಸದಲ್ಲಿ ಕೆಂಪಗಾಗಿರುವುದಾಗಿಯೂ ವದಂತಿಯು ಹುಟ್ಟಿದೆ.

ಬೆಟ್ಟದಪುರದ ಸಮೀಪದ ಗುಡ್ಡದ ಮೇಲಿರುವ ಮಂಟಪಗಳೊಂದರಲ್ಲಿರುವ ಬಸವೇಶ್ವರನ ವಿಗ್ರಹವನ್ನು ಕುರಿತು ಹಳ್ಳಿಯ ಜನರು ತಪ್ಪಿಸಿಕೊಂಡು ಹೋಗಿರುವ ದನಗಳು ತಮ್ಮ ಮನೆಗೆ ಹಿಂದಿರುಗಿ ಬಂದಲ್ಲಿ ಮೊಸರಿನಿಂದ ಅಭಿಷೇಕವನ್ನು ಮಾಡಿಸುತ್ತೇವೆಂದು ಹರಕೆಯನ್ನು ಮಾಡಿಕೊಂಡರೆ ಹೋಗಿದ್ದ ದನಗಳು ಮನೆಗೆ ಬರುತ್ತವೆಂಬ ಪ್ರತೀತಿ ಆ ಪ್ರಾಂತ ಬಹಳವಾಗಿದೆ.

ಶ್ರೀಮನ್ಮಹಾರಾಜರವರವರಿಗೆ ಕಳೆದ ತಾ॥ ೪ ರಲ್ಲಿ ೩೦ ನೆಯ ವರ್ಷವು ತುಂಬಿದುದರಿಂದ ಆ ದಿನದ ಪ್ರಾತಃಕಾಲ ಅರ್ಕಕ್ಷತೆಯು ನಡೆದು ಅಭ್ಯಂಗಸ್ನಾನವಾದ ಬಳಿಕ ೩೧ ಗುಂಡುಗಳು ಹಾರಿಸಲ್ಪಟ್ಟವು. ೯-೧೦ ಗಂಟೆಯ ಸಮಯದಲ್ಲಿ ಶ್ರೀಮನ್ಮಹಾರಾಜರವರು ಸರ್ವಾಲಂಕಾರಭೂಷಿತರಾಗಿ ತಮ್ಮಂತೆಯೇ ಅಲಂಕೃತರಾದ ಶ್ರೀಯುವರಾಜರೊಡನೆ ಅಂಬಾವಿಳಾಸಕ್ಕೆ ಚಿತ್ತೈಸಿ ಶ್ರೀಪರಕಾಲಸ್ವಾಮಿಗಳ ಪಾದಪೂಜೆಯನ್ನು ಮಾಡಿ ಕಾಣಿಕೆಯನ್ನೊಪ್ಪಿಸಿ ಭದ್ರಾಸನಾರೋಹಣ ಮಾಡಿದರು. ಶ್ರೀಯುವರಾಜರು ಪಕ್ಕದಲ್ಲಿ ಕುಳಿತಿದ್ದರು. ದಿವಾನರು ಅಳಿಯಂದಿರುಗಳು ಕೌನ್ಸಿಲರುಗಳು ಅಧಿಕಾರಿಗಳು ಮೊದಲಾದ ಸಮಸ್ತ ಸಭಾಸದರ ನಜರ್‌ಮುಜರೆಯಾದ ಮೇಲೆ ವೈಣಿಕಶಿಖಾಮಣಿ ಶೇಷಣ್ಣನವರ ವೀಣಾವಾದನವು ನಡೆದು ಸಭಿಕರಿಗೆ ಹೂವಿನಹಾರ ತಾಂಬೂಲಗಳ ವಿನಿಯೋಗದಿಂದ ಸಭೆಯು ವಿಸರ್ಜಿಸಲ್ಪಟ್ಟಿತು. ಮಧ್ಯಾಹ್ನ ೫ ಗಂಟೆಗೆ ಶ್ರೀಮನ್ಮಹಾರಾಜಸಹೋದರರು ದಿವ್ಯವಸ್ತ್ರಾಭರಣ ಭೂಷಿತರಾಗಿ ೨ ದಿವ್ಯಾಶ್ವಗಳ ಮೇಲೆ ಕುಳಿತು ಸಮಸ್ತ ಬಿರುದಾವಳಿಗಳಿಂದಲೂ ಸೇನೆಯಿಂದಲೂ ಕೂಡಿ ಅರಮನೆಯಿಂದ ದೊಡ್ಡಪೇಟೆಯ ಮಾರ್ಗ ಹೊರಟು ಬಾಡಿಗಾರ್ಡ್ ಲಾಯದಬಳಿ ತಿರುಗಿಕೊಂಡು ದೊಡ್ಡಬಂಗಲೆಯನ್ನು ಸೇರಿ ಅಲ್ಲಿಯ ಬಯಲಿನಲ್ಲಿ ಸೈನಿಕರ ವಿನ್ಯಾಸವನ್ನು ಪರಾಮರ್ಶಿಸಿ, ಕೊಂಚ ವಿಶ್ರಮಿಸಿಕೊಂಡು ರಾತ್ರಿ ೮॥ ಗಂಟೆಯಲ್ಲಿ ಯಥಾರೀತಿಯಾಗಿ ಉತ್ಸವದಿಂದ ಹಿಂದಿರುಗಿ ಅರಮನೆಗನ್ನು ತಲುಪುವ ಹೊತ್ತಿಗೆ ೯ ಗಂಟೆಯು ಮೇಲಾಗಿದ್ದಿತು. ಪರಸ್ಥಳದಿಂದ ಪ್ರೇಕ್ಷಕರಾಗಿ ಬಂದಿದ್ದ ಜನರು ಬಹಳ ಸ್ವಲ್ಪವಾಗಿದ್ದರು. ಶುಕ್ರವಾರ ಮತ್ತೂ ಶನಿವಾರಗಳಲ್ಲಿ ಅಂಬಾವಿಳಾಸದಲ್ಲಿ ದರ್ಬಾರು ನಡೆದು ಸಭಿಕರ ನಜರ್‌ಮುಜರೆಯಾಯಿತು. ಬೆಂಗಳೂರು ಇಂಪೀರಿಯಲ್ ಲ್ಯಾನ್ಸರ್ ಮತ್ತು ರಾಜಧಾನಿಯ ಸಿಲೆದಾರ್ ಕುದುರೆಗಳು ಏನೋ ರೋಗಪೀಡಿತವಾಗಿರುವುದರಿಂದ ಈ ಯಾತ್ರೆಗೆ ಅಶ್ವಸೇನೆಯು ಉತ್ತರದಲ್ಲಿರದೆ ಸ್ವಾರರು ಮಾತ್ರ ನಡೆದುಬರುತ್ತಿದ್ದರು.

ಭರತಖಂಡದ ವೃತ್ತಾಂತಗಳು.

ಬರೋಡಾ ಸಂಸ್ಥಾನದಲ್ಲಿ ಕಳೆದ ೧೯೧೨-೧೩ ನೆಯ ವರ್ಷದ ಉತ್ಪತ್ತಿಯು ೨ ಕೋಟಿ ೨೦ ಲಕ್ಷವಾಗಿರುತ್ತದೆ.

ಭಾರತ ಸ್ತ್ರೀಯರ ತಲೆಯ ಕೂದಲು, ಬೈನಾದೇಶದ ಸ್ತ್ರೀಯರ ತಲೆಯ ಕೂದಲಿಗಿಂತಲೂ ಉತ್ಕೃಷ್ಟವಾಗಿರುವುದರಿಂದ ಪ್ರತಿ ವರ್ಷದಲ್ಲೂ ಸಾವಿರಾರು ಪೌಂಡು ಕೂದಲು ಇಂಗ್ಲೆಂಡು ಜರ್ಮನಿ ಮೊದಲಾದ ರಾಜ್ಯಗಳಿಗೆ ಸಾಗಿಸಲ್ಪಡುತ್ತಿರುವುದು.

ಕಲ್ಕತ್ತಾಕ್ಕೆ ಸೇರಿದ ಹೌರಾದಲ್ಲಿನ ಒಂದು ಬೀದಿಯೊಳಗೆ ಗುಟ್ಟಾಗಿ ಅಫೀಮು ಮೊದಲಾದ ಮಾದಕವಸ್ತುಗಳನ್ನು ಮಾರುತ್ತಿರುವರೆಂಬ ಸಂಶಯದಿಂದ ಒಂದು ಮನೆಯನ್ನು ಶೋಧಿಸುವಾಗ ಅದರೊಳಗಿದ್ದ ಗುಹೆಯಲ್ಲಿ ೩೩ ಸಾವಿರ ಪೊಟ್ಟಣಗಳ ಕೊಕೇನೆಂಬ ಅಫೀಮು ದೊರೆತಿತು. ಅದರ ಸಂಬಂಧದಲ್ಲಿ ೧೦ ಮಂದಿಗಳನ್ನು ಪೋಲೀಸರು ಹಿಡಿದರು.

ಮಿಥಿಲಾಪುರದಲ್ಲಿ ಸಂತಾನವಿಲ್ಲದವನೊಬ್ಬನು ತನಗೆ ಸಂತಾನವಾದರೆ ಒಂದು ಕುರಿಮರಿಯನ್ನು ಒಪ್ಪಿಸುವೆನೆಂದು ಗಂಗಾಭವಾನಿಗೆ ಹರಕೆ ಕಟ್ಟಿಕೊಂಡನು. ಅದರಂತೆ ಗಂಡುಮಗುವು ಹುಟ್ಟಲು, ತನ್ನ ಪ್ರಾರ್ಥನೆಯನ್ನು ಸಲ್ಲಿಸುವುದಕ್ಕಾಗಿ ಗಂಗಾತೀರಕ್ಕೆ ಬಂದು ಬಲಕಾಂಕುಳಲ್ಲಿದ್ದ ಕುರಿಮರಿಯನ್ನು ಗಂಗೆಗೆ ಬಿಡುವ ಸಂರಂಭದಲ್ಲಿ ಎಡಕಾಂಕುಳಲ್ಲಿದ್ದ ಗಂಡುಮಗುವನ್ನೇ ಬೀಳಿಸಿಕೊಂಡನು. ಮಗುವಿನ ಪ್ರಾಣವು ಗಂಗೆಗೆ ಅರ್ಪಿತವಾದುದೇ ಫಲವಾಯಿತು.

ದಿಲ್ಲಿಯ ಮಹಾಮಹೋಪಾಧ್ಯಾಯ ಪಂಡಿತ ಬಂಕೆರಾಯಿನವಲಿಗೋಸ್ವಾಮಿಯವರು ದಿಲ್ಲಿಪಟ್ಟಣದ ಸಮೀಪದಲ್ಲಿ ಯಮುನಾನದಿಯ ದಡದಮೇಲೆ ಬುರಾರಿ ಎಂಬ ಗ್ರಾಮದ ದಕ್ಷಿಣಕ್ಕಿರುವ ಒಂದು ಗುಡ್ಡದ ಮೇಲೆ ಒಂದು ಹಜ್ಜೆಯ ಗುರುತಿರುವುದನ್ನು ಕಂಡುಹಿಡಿದಿರುವರು. ಇದು ೩೨ ಅಂಗುಲ ಉದ್ದವೂ ೧೦ ಅಂಗುಲ ಅಗಲವೂ ಇರುವುದಲ್ಲದೆ ಈಗ್ಗೆ ೨೦೦೦ ವರ್ಷಗಳ ಹಿಂದಿನದಾಗಿರುವುದೆಂದೂ ಇದು ಚಿತ್ರಕೋಟೆಯಲ್ಲಿರುವ ಕೃಷ್ಣಪಾದದ ಮತ್ತೂ ಗಯೆಯಲ್ಲಿರುವ ವಿಷ್ಣುಪಾದದ ಗುರ್ತುಗಳನ್ನು ಹೋಲಿರುತ್ತದೆಂದೂ ಗೋಸ್ವಾಮಿಯವರು ಹೇಳುವರು.

ಸರ್ಪದಂಶನದಿಂದುಂಟಾದ ವಿಷಬಾಧೆಗೆ ಸರ್ಪದ ವಿಷವೇ ಉತ್ತಮವಾದ ಔಷಧವೆಂಬುದನ್ನು ಈಗ ಪರಿಶೋಧಕರು ಗೊತ್ತುಮಾಡಿದ್ದಾರೆ. ಇದರ ಪ್ರಯೋಗಪರೀಕ್ಷೆಯು ಬೊಂಬಾಯಿಪಟ್ಟಣದಲ್ಲಿನ ವೈದ್ಯಾಲಯದಲ್ಲಿ ನಡೆಯುತ್ತಿದೆ. ಆರೋಗ್ಯವಾಗಿರುವ ಕುದುರೆಯ ರಕ್ತಕ್ಕೆ ಹಾವಿನ ವಿಷವನ್ನು ಸ್ವಲ್ಪಸ್ವಲ್ಪವಾಗಿ ಪ್ರಯೋಗಿಸುವರು. ಬಳಿಕ ಆ ಕುದುರೆಯ ದೇಹದಿಂದ ರಕ್ತವನ್ನು ತೆಗೆದುಕೊಂಡು ಪರಿಶುಭ್ರಗೊಳಿಸಿ, ಹಾವುಕಡಿದ ಜನರಿಗೆ ಉಪಯೋಗಿಸುವರು. ಇದರಿಂದ ಉತ್ತಮವಾದ ಫಲಪ್ರಾಪ್ತಿಯಾಗಿರುವುದಂತೆ. ಬೊಂಬಾಯಿಯಲ್ಲಿ ಈ ಮಧ್ಯೆ ಒಬ್ಬನು ಸರ್ಪದಂಶನದಿಂದ ಮೂರ್ಛಿತನಾಗಿರುವಲ್ಲಿ ಮೇಲೆಕಂಡ ಪ್ರಯೋಗವನ್ನೇ ಅತನಿಗೆ ಮಾಡಿದರು. (ಎಂದರೆ ಕುದುರೆಯ ಆ ರಕ್ತವನ್ನು ಅವನ ದೇಹದ ರಕ್ತನಾಳಕ್ಕೆ ಪ್ರಯೋಗಿಸಿದರು.) ೨೦ ನಿಮಿಷಗಳೊಳಗಾಗಿ ಅವನು ಎದ್ದು ಕುಳಿತು ಎಲ್ಲಾ ಕೆಲಸಗಳನ್ನೂ ಮಾಡಲು ಸಮರ್ಥನಾದನು. ಹೀಗೆಯೇ ಇನ್ನೊಬ್ಬನಿಗೂ ಈ ಚಿಕಿತ್ಸೆಯು ಫಲವನ್ನು ಮಾಡಿರುವುದು. ಈಗ ಬೊಂಬಾಯಿ ವೈದ್ಯಶಾಲೆಯಲ್ಲಿ ಹಾವುಗಳನ್ನು ಹಿಡಿಯಿಸಿ ಅವುಗಳ ಕೋರೆಯಲ್ಲಿರುವ ವಿಷವನ್ನು ಕೂಡಿಡುತ್ತಿದ್ದಾರೆ ಮೇಲೆಕಂಡ ರೀತಿಯಲ್ಲಿ ಸಿದ್ಧವಾದ ಔಷಧವು ಕೂಡ ಇದೆ. ಈ ಔಷಧವು ಎಲ್ಲಕಡೆಗೂ ಇಷ್ಟರಲ್ಲೇ ವ್ಯಾಪಿಸುವುದೆಂದು ಕಾಣುತ್ತದೆ. ಅಮೇರಿಕಾ ಜರ್ಮನಿ-ಮೊದಲಾದ ದೇಶಗಳಿಗೂ ಸಹ ಪರೀಕ್ಷಾರ್ಥವಾಗಿ ಈ ಔಷಧವನ್ನು ಕಳುಹಿಸುತ್ತಿದ್ದಾರೆ. ವಿಷಕ್ಕೆ ವಿಷವೇ ಮದ್ದು ಎಂಬುದು ಸುಳ್ಳಲ್ಲ.

ವಿದೇಶವೃತ್ತಾಂತಗಳು.

ದಕ್ಷಿಣಾಫ್ರಿಕದಿಂದ ಭರತಖಂಡಕ್ಕೆ ಬರುವವರಾಗಿರುವ ಶ್ರೀಯುತ ಗಂಧಿಯವರನ್ನು ಈ ವರ್ಷ ದೇಶೀಯ ಮಹಾಸಭೆಗೆ ಅಧ್ಯಕ್ಷರನ್ನಾಗಿ ಆರಿಸಬೇಕೆಂದು ಯೋಚಿಸಲ್ಪಟ್ಟಿದೆ.

ಎಂಪ್ರೆಸ್ ಆಫ್ ಐರ್ಲ್ಯಾಂಡು ಕೂಡ ಮುಳುಗಿ ನೀರಿನಲ್ಲಿ ಬಿದ್ದು ಹೇಗೋ ಬದುಕಿ ಬಂದಿರುವವಳಾಗಿರಬಹುದೆಂದು ಊಹಿಸಲ್ಪಡುತ್ತಿರುವ ಒಬ್ಬ ಸ್ತ್ರೀಯು ರೊಮೆಸ್ಕಿಪಟ್ಟಣದ ಸಮುದ್ರತೀರದಲ್ಲಿ ಹುಚ್ಚು ಹಿಡಿದು ಬತ್ತಲೆಯಾಗಿ ತಿರುಗುತ್ತಿದ್ದಾಳೆ.

ಪ್ಯಾರಿಸ್‌ಪಟ್ಟಣದಲ್ಲಿನ ಮುತ್ತಿನ ವ್ಯಾಪಾರಿಗಳಲ್ಲಿ ಕೆಲರು ದಿವಾಳಿಯಾದರು. ಇನ್ನೊಬ್ಬ ದೊಡ್ಡ ವ್ಯಾಪಾರಿಯು ಕಳೆದ ತಾ॥ ೩೦ ರಲ್ಲಿ ೯ ಲಕ್ಷ ರೂ.ಗೆ ದಿವಾಳಿಯಾದನು. ಇದರಿಂದ ಆ ವ್ಯಾಪಾರಿಗಳಿಗೆ ಸಾಲಕೊಟ್ಟಿದ್ದ ಬ್ಯಾಂಕುಗಳಿಗೆಲ್ಲಾ ತುಂಬಾ ನಷ್ಟವುಂಟಾಗಿದೆ.

ದಕ್ಷಿಣಾಫ್ರಿಕಾದ ಪ್ರಭುತ್ವದವರು ಅಲ್ಲಿ ಏರ್ಪಟ್ಟಿದ್ದ ವಿಚಾರಕಸಂಘದವರು ಕೊಟ್ಟಿರುವ ತೀರ್ಪನ್ನನುಸರಿಸಿ ಭಾರತೀಯರ ಸಂಕಷ್ಟಗಳನ್ನು ಕಡಿಮೆಮಾಡಲು ಸಾಧಕವಾದ ಬಿಲ್ಲಿನ ಮಸೂದೆಯನ್ನು ಅಲ್ಲಿನ ಪಾರ್ಲಿಮೆಂಟಿನ ಮುಂದಕ್ಕೆ ತಂದರು. ಮೊದಲನೆಯಾವೃತ್ತಿ ಅದು ಅನುಮೋದಿತವಾಯಿತೆಂದು ಸುದ್ದಿಬಂದಿದೆ.

ಮಾಲಿಕುಲಾ ಎಂಬ ದ್ವೀಪದಲ್ಲಿ ನರಮಾಂಸಭಕ್ಷಕರಾದ ಕಾಡುಜನರಿದ್ದಾರೆ. ಇವರಲ್ಲಿ ಸತ್ಪ್ರವರ್ತನೆಯನ್ನುಂಟುಮಾಡಬೇಕೆಂದು ಕ್ರೈಸ್ತರು ಪ್ರಯತ್ನಿಸಿದರು. ಆದರೆ ಅವರ ಉಪಾಯಗಳೊಂದೂ ಸಫಲವಾಗಲಿಲ್ಲ. ಮತಬೋಧನಾರ್ಥವಾಗಿ ಹೋದ ಕ್ರೈಸ್ತರಲ್ಲಿ ಆರು ಮಂದಿಯನ್ನು ಆ ಜನರು ಕೊಂದು ತಿಂದುಬಿಟ್ಟರು. ಇನ್ನೊಬ್ಬ ಕ್ರೈಸ್ತನನ್ನು ತಮ್ಮ ಊಟದ ಸಮಯದವರೆಗೂ ಮರಕ್ಕೆ ನೇತುಗಟ್ಟಿದ್ದರು. ಇನ್ನಿಬ್ಬರು ಕ್ರೈಸ್ತರು ತಪ್ಪಿಸಿಕೊಂಡು ಸಮುದ್ರತೀರಕ್ಕೆ ಓಡಿಹೋದರು

ಚೀನಾದೇಶದಲ್ಲಿ ಈಗಿನ ಪರಿಪಾಲನ ಕ್ರಮಕ್ಕೆ ಅನುಗುಣವಾಗಿ ಒಂದು ಮಂತ್ರಾಲೋಚನ ಸಭೆಯು ಏರ್ಪಡಿಸಲ್ಪಟ್ಟಿದೆ. ಇದರಲ್ಲಿ ೫೦ ಮಂದಿ ಸಭಿಕರಿರುವರು. ಇವರಲ್ಲಿ ಬಹು ಜನರು ಮಂಚೂಪರಿಪಾಲನದಲ್ಲಿ ಬಹುಕಾಲ ಉದ್ಯೋಗಮಾಡಿದವರಾಗಿರುವರು. ಇದುವರೆಗೆ ವೈಸ್ರಾಯಿಗಿರಿಯನ್ನು ಮಾಡಿದವರು ೩ ಮಂದಿಗಳಿರುವರು. ಮಂತ್ರಿಗಳಾಗಿದ್ದವರು ನಾಲ್ವರಿರುವರು. ಪೆಕಿಂಗಿನಲ್ಲಿ ವಾಸಮಾಡುತ್ತಿರುವ ಗೋಲಿಯಾ ದೇಶದ ರಾಜನೂ ತಿಬೆಟ್ಟಿನ ಲಾಮಾನೂ ಸಹ ಇದರ ಸಭ್ಯರಾಗಿರುವರು.

ತಂದೆಗಳು ತಾವು ದುರ್ವ್ಯತ್ತನದಲ್ಲಿದ್ದು ತಮ್ಮ ಮಕ್ಕಳನ್ನು ಸತ್ಪ್ರವರ್ತಕರನ್ನಾಗಿ ಮಾಡಬೇಕೆಂದು ಅಪೇಕ್ಷಿಸುತ್ತಾರೆ. ಆದರೆ ಈ ಕೆಳಗಿನ ವರ್ತಮಾನವು ಅದಕ್ಕಿಂತಲೂ ವಿಚಿತ್ರವಾಗಿದೆ. ಏನೆಂದರೆ—ಒಬ್ಬ ತಂದೆಯು ಬಲುಕುಡಿಕನಾಗಿದ್ದನು. ಆದುರಭ್ಯಾಸವನ್ನು ತಂದೆಗೆ ತಪ್ಪಿಸಬೇಕೆಂದು ಹಲವುಬಗೆಯಾಗಿ ಮಗನು ಪ್ರಾರ್ಥಿಸಿಕೊಳ್ಳಲು, ಅದನ್ನು ಒಂದೇಆವೃತ್ತಿ ಬಿಡುವುದು ಅಸಾಧ್ಯವೆಂದೂ, ಸ್ವಲ್ಪಸ್ವಲ್ಪವಾಗಿ ಕಡಿಮೆಮಾಡುತ್ತ ತಪ್ಪಿಸಿಬಿಡುವೆನೆಂದೂ ತಂದೆಯು ಮಗನಿಗೆ ಸಮಾಧಾನ ಹೇಳಿದುದಲ್ಲದೆ, ತಾನು ಹಾಗೆ ಮಾಡಬೇಕಾದರೆ ನೀನೂ ಕೂಡ ನನ್ನ ಜತೆಗೆ ಸ್ವಲ್ಪಸ್ವಲ್ಪವಾಗಿ ಕುಡಿಯುತ್ತ ಬರಬೇಕೆಂದು ಮಗನಿಗೆ ಹೇಳಿದನು. ಹೇಗಾದರೂ ತಂದೆಗೆ ಆ ದುರಭ್ಯಾಸವು ತಪ್ಪಿದರೆ ಸಾಕೆಂದು ಅದಕ್ಕೆ ಮಗನು ಒಪ್ಪಿಕೊಂಡು, ಸ್ವಲ್ಪಸ್ವಲ್ಪವಾಗಿ ಕುಡಿಯುತ್ತ ಬಂದನು. ದಿನಕ್ರಮೇಣ ತಂದೆಗೆ ಆ ದುರಭ್ಯಾಸವು ಬಿಟ್ಟುಹೋಯಿತು. ಆದರೆ ಹೊಸದಾಗಿ ಮದ್ಯಪಾನದ ರುಚಿಯನ್ನು ಕಂಡ ಮಗನಲ್ಲಿ ಅದರ ಭ್ರಾಂತಿಯು ಪ್ರಬಲಿಸಿ, ಅವನು ತಂದೆಯ ಸ್ಥಾನಕ್ಕೇ ಬಂದನು.

ನೋಟೀಸು.

ಲೇಟ್‌ಸಬ್‌ಅಸಿಸ್ಟೆಂಟ್ ಸರ್ಜನ್ ಸಿ. ನರಸಿಂಹಶೆಟ್ಟರ ಮಗ ಲೇಟ್ ಎನ್. ವೆಂಕಟಾಚಲಂಸೆಟ್ಟರ ಹೆಂಡತಿ ಅಲವೇಲಮ್ಮನು ಇದರಿಂದ ಸಮಸ್ತಜನರಿಗೂ ತಿಳಿಯಪಡಿಸುವದೇನೆಂದರೆ-ನನ್ನ ಗಂಡನ ಚಿರಸ್ಥಿರಾಸ್ತಿಗಳಿಗೆ ನಾನು ಬಾಧ್ಯಳಾಗಿರುವುದರಿಂದ ಅವುಗಳನ್ನು ಬೇರೆಯವರಿಂದ ಯಾರಾದರೂ ಕ್ರಯಭೋಗ್ಯಾಧಾರವಮಾಡಿಕೊಂಡಲ್ಲಿ ಅದು ಊರ್ಜಿತವಾಗುವುದಿಲ್ಲ.

೮-೬-೧೪. ರುಜು ಅಲಮೇಲಮ್ಮ

ಪತ್ರವ್ಯವಹಾರ

ಮೈಸೂರ ವೇ॥ ರೂಹತ್ತೂರು ಶಾಂತವೀರಶಾಸ್ತ್ರಿಗಳು ಈ ಜ್ಯೇಷ್ಠ ಶುದ್ಧದಲ್ಲಿ ಜರುಗಿಸಿದ ತಮ್ಮ ಪುತ್ರನ ವಿವಾಹ ಮಹೋತ್ಸವಕಾಲದಲ್ಲಿ ಕೈ ವೀರಸಂಗಪ್ಪನವರ ಉಭಯರ ಸ್ಮರಣಾರ್ಥವಾಗಿ ಅಗ್ರತಾಂಬೂಲವನ್ನು ತೆಗೆದು ಅವರ ಬಗೆಗೆ ನಮ್ಮಲ್ಲಿಗೆ ಕಳುಹಿಸಿಕೊಟ್ಟ ೧ ರೂ.ಯನ್ನು ನಾವು ವಿಶ್ವಾಸದಿಂದ ಸ್ವೀಕರಿಸಿದೆವು. ಪ. ಪ್ರ.

ಕಳೆದ ವೇ॥ ತಾ॥ ೧೧ನೆಯ ಸ್ಟಾರ್ ಪತ್ರದ ೬ನೆಯ ಪುಟದಲ್ಲಿ ಪ್ರಕಟವಾಗಿರುವ ನೋಟೀಸಿನ ೧ನೆಯ ಪಙ್ತಿಯ ೭ ಶ್ಯಾಂತಪ್ಪ ಎಂಬುವದಕ್ಕೆ ಬದಲು ಬಂಕಪ್ಪ ಎಂತಲೂ ೭ನೆಯ ಪಙ್ತಿಯಲ್ಲಿ ಚ್ಯಾಕರೆ ಎಂಬುವದಕ್ಕೆ ಬದಲು ಎಕರೆ ೮ ಎಂತಲೂ, ೮ನೆಯ ಪಙ್ತಿಯಲ್ಲಿ ರಾಘರಾತ ಎಂಬುವದರ ಬದಲು ಆಪಸಾತಾ ಎಂತಲೂ ತಿದ್ದಿಕೊಳ್ಳತಕ್ಕದ್ದು. ಪ.ಪ್ರ.

ಹುಣಸೂರು ತಾಲೋಕು ಪ್ರಾಂತ್ಯ ಬಿಸಲಿನತಾಪವು ಸಹಿಸಲಶಕ್ಯವಾಗಿದೆ. ಇಷ್ಟರವರೆಗೆ ಈ ಹಿಂದೆ ಯಾವಾಗಲೂ ಅನುಭವಿಸಲಿಲ್ಲವೆಂದು ಹಿರಿಯರು ಹೇಳುತ್ತಾರೆ. ನೆನ್ನೆ ಮೊನ್ನೆಯಿಂದ ಬೆಳಗಿನಹೊತ್ತು ಸಾಯಂಕಾಲವೋ ದವು ವಿಶೇಷವಾಗಿ ಕವಿದುಕೊಂಡು ದೊಡ್ಡ ಮಳೆ ಬರುವಂತೆ ಗುಡುಗು ಮಿಂಚುಗಳಿಂದಾರ್ಭಟಿಸುತ್ತಿದ್ದು ಕಡೆಯಲ್ಲಿ ಮಳೆಯು ಬಾರದೆ ಬಹಳ ತೊಂದರೆಯಾಗಿದೆ. ಜನಗಳೆಂತು ಮೇಘವನ್ನೇ ನೋಡುತ್ತಾ ಹಾಹಾಕಾರಧ್ವನಿಗಳನ್ನು ಮಾಡುತ್ತಲಿದ್ದಾರೆ. ಬಡಬಗ್ಗರ ಕಷ್ಟಗಳಂತು ಪರಮೇಶ್ವರನಿಗೆ ಪ್ರೀತಿಯಾಗಬೇಕು. ಧಾಣ್ಯಾಸಿಗಳು ಏರುತ್ತಲೇ ಇವೆ ದನಗಳು ಕಾಲುಬಾಯಿಜ್ವರದಿಂದಲೂ ನೀರಿನ ಹಂಗಾಮಿಯಿಂದಲೂ ದಿನಂಪ್ರತಿ ಎರಡು ಮೂರು ಪ್ರಾಣಬಿಡುತ್ತಲಿವೆ ಅಲ್ಲದೆ ಉಣ್ಣೆಗಳ ಕಾಟವಂತು ಹೇಳಲು ಅಸಾಧ್ಯವಾಗಿದೆ. ಸ್ಥಳಿಕ.

ಸುಧಾರಿಸಿದ ವಿವಾಹವು.

ಚಿತ್ರದುರ್ಗದ ಸಾಹುಕಾರ್ ಮ॥ ಕಾಡಪ್ಪನವರು ಈ ಜ್ಯೇಷ್ಠ ಮಾಸದಲ್ಲಿ ತಮ್ಮ ಸೊಸೆಯಾದ ಚಿ॥ ಸೌ॥ ರುದ್ರಮ್ಮನನ್ನು ಮ॥ ಹಾವೇರಿ ಹಾಲಪ್ಪ. ಬಿ. ಎ., ಬಿ. ಎಲ್., ಅಡ್ವೋಕೇಟರಿಗೂ, ತಮ್ಮ ಮೊಮ್ಮಗಳು ಚನ್ನಬಸಮ್ಮನನ್ನು ಜಂಬಿಗಿ ಸಾಹುಕಾರ್ ಮ॥ ಸಂಗಪ್ಪನವರಿಗೂ ಕೊಟ್ಟು ಕನ್ಯಾದಾನಮಾಡಿ ಈ ಮಹೋತ್ಸವಕ್ಕೆ ಸಾವಿರಾರು ರೂಪಾಯಿಗಳನ್ನು ವ್ಯಯಮಾಡಲುಶಕ್ತರಾಗಿದ್ದರೂ, ಅದೆಲ್ಲವೂ ದುಂದುವೆಚ್ಚವೆಂದು ತಿಳಿದು, ವೇಶ್ಯೆಯರ ನರ್ತನ ಮದ್ದು ಮೊದಲಾದ ದುಂದುಗಾರಿಕೆಯ ಸಂದರ್ಭಗಳನ್ನು ಬಿಟ್ಟು ವಿಧ್ಯುಕ್ತವಾಗಿ ಮಿತವ್ಯಯದಿಂದ ಮಾಡಿ ಇತರರೆಲ್ಲರಿಗೂ ಮೇಲುಪಂಕ್ತಿಯನ್ನು ಹಾಕಿಕೊಟ್ಟರೆಂದು ತಿಳಿಸಲು ಸಂತೋಷವಾಗುತ್ತದೆ. ಇಂತಹ ಶುಭಕಾಲಗಳಲ್ಲಿ ವೀರಶೈವಧರ್ಮದಫಂಡಿಗೆ ದ್ರವ್ಯಸಹಾಯಮಾಡುವುದು ಆವಶ್ಯಕವೆಂದು ಪ್ಲೀಡರ್ ಮ॥ ಸಿದ್ಧನಂಜಪ್ಪನವರುಪನ್ಯಾಸ ಮಾಡಿದ ಮೇಲೆ ಮ॥ ಕಾಡಪ್ಪನವರು ವಧೂಗಳಿಗಾಗಿ ೧೦ ರೂ.ಗಳನ್ನು ಮ॥ ಅಡ್ವೋಕೇಟ್ ಹಾಲಪ್ಪನವರು ೫ ರೂ. ಮ॥ ಸಂಗಪ್ಪನವರು ೫ ರೂ.ಯನ್ನು ಧರ್ಮಫಂಡಿಗೆ ಕೊಟ್ಟರು. ಬಂದಿದ್ದ ಭಕ್ತಮಾಹೇಶ್ವರರಿಗೆ ಮೃಷ್ಟಾನ್ನ ಭೋಜನವೂ ದಕ್ಷಿಣೆಯೂ ಕೊಡಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಷಟ್‌ಸ್ಥಲಬೋಧಾಶ್ರಮ.

ಬೆಂಗಳೂರು ಶ್ರೀಶಂಕರದೇವರಮಠದ ಶ್ರೀ॥ ಗಳವರು ಷಟ್‌ಸ್ಥಲಬೋಧಾಶ್ರಮವೆಂಬುದನ್ನು ಬೆಂಗಳೂರಿನಲ್ಲಿ ಸ್ಥಾಪಿಸುವವರಾಗಿರುವರು. ಬೆಂಗಳೂರಿನಲ್ಲಿರುವ ಮೂರ್ತಿಗಳೆಲ್ಲರೂ ವಾರ ಪಕ್ಷ ಅಥವಾ ಮಾಸಕ್ಕೊಂದಾವೃತ್ತಿ ಸೇರಿ ಅವರ ಆಚಾರವಿಚಾರಗಳ ವಿಷಯದಲ್ಲಿ ಕಟ್ಟುಮಾಡಿಕೊಳ್ಳಬೇಕೆಂಬುದೇ ಇದರ ಮುಖ್ಯೋದ್ದೇಶ. ಇದೊಂದೇ ಅಲ್ಲದೆ ಭಕ್ತರ ನ್ಯೂನಾತಿರೇಕಗಳೆಲ್ಲವನ್ನೂ ತಿದ್ದಿ ಅವರ ಆಚಾರಾದಿಗಳನ್ನು ಕ್ರಮಪಡಿಸುವದೂ ಇದರ ಉದ್ದೇಶವಾಗಿದೆ. ಇದಕ್ಕೆ ಶ್ರೀಗಳವರು ಬೇಕಾದ ಸಹಾಯಗಳನ್ನು ಮಾಡುವೆವೆನ್ನುತ್ತಿರುವರು. ಬೆಂಗಳೂರಿನ ಮೂರ್ತಿಗಳೆಲ್ಲರೂ ಸೇರಿ ಈ ವಿಧವಾದುದೊಂದು ಆಶ್ರಮಸ್ಥಾಪನೆ ಮಾಡಿದುವಾದರೆ ಅನೇಕ ಗುರುಗಳೆನ್ನಿಸಿಕೊಂಡಿರುವವರ ಮತ್ತು ಅತ್ಯಾಚಾರ ಅನಾಚಾರಗಳು ಬಹುಮಟ್ಟಿಗೆ ಕಡಮೆಯಾಗಿ ಮಠೋದ್ಧಾರಕ್ಕೆ ಅದೊಂದು ಭೂಷಣವನ್ನು ಕೊಟ್ಟಂತಾಗುವುದೆಂಬುದರಲ್ಲಿ ಸಂಶಯವೇನು? ಈ ಮೇಲಿನ ಶ್ರೀ॥ ಗಳವರು ತಮ್ಮ ಮಠದ ಪೂರ್ವಭಾಗಕ್ಕೆ ನವೀನವಾದ ಕಟ್ಟಡವನ್ನು ಪರೋಪಕಾರಾರ್ಥವಾಗಿಮಾಡಿಸಬೇಕೆಂಬ ಉದ್ದಿಶ್ಯ ತಮ್ಮ ದೇಹಶ್ರಮದ ಕಡೆಗೆ ಲಕ್ಷ್ಯತಾರದೆ ಶಿವಮೊಗ್ಗಾ ಡಿಸ್ಟ್ರಿಕ್ಟ ಕಡೆಸಂಚಾರ ದಯಮಾಡಿದಕಾಲದಲ್ಲಿ ಕೆಳದೀಸಂಸ್ಥಾನ ಮಠದ ಶ್ರೀ ಪಟ್ಟಾಧ್ಯಕ್ಷರು ಮೊದಲಾದವರು ಉದಾರವಾದ ಸಹಾಯಮಾಡಿರುವರೆಂದು ಕೇಳಿ ಹರ್ಷಿಸುತ್ತೇವೆ. ಅಲ್ಲದೆ ಬೆಂಗಳೂರು ಮ॥ ಶಂಕರಣ್ಣನವರ ಶಿವಪ್ಪ ಮತ್ತು ಬಸಪ್ಪನವರುಗಳು ಪೂರ್ವ ಶ್ರೀ॥ ಗಳವರಿಂದಿನಿಂದಲೂ ಈವರೆಗೂ ನಾಳಿಗೂ ಅಭಿಮಾನಶಾಲಿಗಳಾಗಿ ಮಠ ಜೀರ್ಣೋದ್ಧಾರವಾಡಿದ್ದಲ್ಲದೆ ಈಗಿನ ಸ್ವಾಮಿಯವರ ಬಾದಲೇಪಾಸಕ್ತರಾಗಿರುವುದು ಸರ್ವರಿಗೂ ತಿಳಿದ ವಿಷಯವೇ ಆಗಿದೆ.

ಸತ್ಯಪ್ರಿ.

ವೀರಶೈವ ಮಹಾಸಭಾ.

ವೀರಶೈವ ಮಹಾಸಭೆಯ ಬಗ್ಗೆ ತಮ್ಮ ತಾರೀಖು ೩೦ ನಾರ್ಚ್ ೧೯೧೪ನೆ ಸ್ಟಾರ್ ಪತ್ರದಲ್ಲಿ ಒಬ್ಬ ಸಮಾಜ ಸೇವಕ ಎಂಬುವರು ಮಹಾಸಭಾ ಕೊಡಿಸಬೇಕು; ಮತ್ತು ಅದು ಧಾರವಾಡದಲ್ಲಿ ಆಗಬೇಕೆಂದು ಸೂಚನೆ ಮಾಡಿದ್ದಾರೆ. ಆದರೆ ಮದ್ರಾಸ್ ಪ್ರೆಸಿ ಬಳ್ಳಾರಿ, ಮೈಸೂರು ಪ್ರೆಸಿ ಬೆಂಗಳೂರು, ಕರ್ನಾಟಕ ಪ್ರೆಸಿ ಧಾರವಾಡ, ಬಾಗಲಕೋಟ, ಬೆಳಗಾಂ ಮತ್ತು ಮಹಾರಾಷ್ಟ್ರ ಪ್ರೆಸಿ ಕೊಲ್ಹಾಪುರ ಮತ್ತು ನಿಪ್ಪಾಣಿ, ಪಸ್ಥಳ ಊರುಗಳಲ್ಲಿ ಆಗಿರುತ್ತವೆ. ಆದ್ದರಿಂದ ಆಯಾ ಪ್ರಾಂತಗಳಲ್ಲಿ ಶಿಕ್ಷಣದ ಮಹತ್ವವು ಜನರಿಗೆ ತಿಳಿದು ಅಲ್ಲಲ್ಲಿ ಬೋರ್ಡಿಂಗ್‌ಗಳೂ, ಮಠಗಳೂ, ವಾಠಶಾಲೆಗಳೂ, ಸ್ಥಾಪಿಸಿರುತ್ತವೆ. ಪರಂತು ನೈಜಾಮಪ್ರಾಂತದಲ್ಲಿ ಇರುವ ನಮ್ಮ ವೀರಶೈವ ಬಾಂಧವರು ಮಾತ್ರ ಇನ್ನೂ ಅಜ್ಞಾನದಲ್ಲಿ ಮುಳುಗಿದ್ದಾರೆ. ನೈಜಾಮಪ್ರಾಂತದ ಪ್ರೆಸಿ ಹೈದರಾಬಾದು ಅಥವಾ ಕಲಬುರ್ಗಿಯಲ್ಲಿ ಮಹಾಸಭೆಯು ನೆರವೇರಿದರೆ ಬಹಳ ಉತ್ತಮವು ಆಗುವದು. ಹ್ಯಾಗೆ ನಿಪ್ಪಾಣಿ ಮಹಾಸಭೆಯನ್ನು ಶ್ರೀಮಂತ ರಾವಸಾಹೇಬ ಸಿಂತ್ರೆಕರ್ ಯವರು ತಮ್ಮ ಸ್ವಂತ ಖರ್ಚಿನಿಂದ ನೆರವೇರಿಸಿದರೋ ಅದೇ ಪ್ರಕಾರ ಮೊಗಲಾಯಿ ಪ್ರಾಂತಕ್ಕೆ ಪ್ರಸಿದ್ಧರಾಗಿರುವ ದಾನಶೂರ ಶ್ರೀಮಂತ ಮ॥ ರುದ್ರಪ್ಪ ಅಣ್ಣಾಸಾಹೇಬ ಬೇಣಿಯವರು ಸೋಲಾಪುರ ಮಹಾಸಭೆಯಲ್ಲಿ ಮುಂದಿನಸಾರಿ ಮಹಾಸಭೆಯು ಹೈದರಾಬಾದಿನಲ್ಲಿ ಮಾಡುವದಕ್ಕೆ ವಿನಂತಿಮಾಡಿದ್ದರು. ಹೋದ ವರ್ಷ ಇವರು ಲಕ್ಷಗಟ್ಟಲೆ ರೂ.ಗಳನ್ನು ಖರ್ಚುಮಾಡಿ ಸಾವಿರಾರು ವೀರಶೈವರ ಮತ್ತು ವೀರಶೈವೇತರರ ಧರ್ಮಲಗ್ನವನ್ನು ಮಾಡಿಕೊಟ್ಟು ಬಹು ಕೀರ್ತಿಹೊಂದಿದ್ದಾರೆ. ಆದ್ದರಿಂದ ಇನ್ನಾದರೂ ಸ್ಟ್ಯಾಂಡಿಂಗ ಕಮಿಟಿಯವರು ಕೇಳಿದರೆ ಶ್ರೀಮಂತ ಅಣ್ಣಾಸಾಹೇಬ ಬೇಣಿ ಇವರು ಮಹಾಸಭೆಯ ಪವಿತ್ರ ಕೆಲಸವನ್ನು ಮಾಡುವದಕ್ಕೆ ಸಹ ಒಪ್ಪಬಹುದು. ಆದರೆ ಸ್ಟ್ಯಾಂಡಿಂಗ ಕಮಿಟಿಯವರು ಈ ಬಗೆಗೆ ವಿಚಾರಮಾಡಬೇಕೆಂದು ನನ್ನ ವಿನಂತಿ.

ಶಿವಶಂಕರಪ್ಪ ಜೇರಗೆ, ಸೋಲಾಪುರ.

ವೀರಶೈವ ಕನ್ಯೆಯು ಬೇಕು.

ಶೀಲವಂತ, ದೀಕ್ಷಾವಂತ, ಅಥವಾ ಪಂಚಮರಪೈಕಿ ಸುಸ್ವರೂಪ, ಕುಲೀನ, ಸುಶೀಲ, ೧೪ ವರ್ಷದ ಮೇಲಿನ ವಯಸ್ಸಾಗಿರಬೇಕು. ಶಿಕ್ಷಣವಾಗಿ ಇದ್ದರೆ ಬಹಳ ಉತ್ತಮ. (ಪಂಚಮರಿಗೆ ದೀಕ್ಷೆಯು ಕೊಡುವೆವು) ಕನ್ಯೆಯ ಫೋಟೋ ಕಳುಹಿಸಬೇಕು.

ವರನು ಶೀಲವಂತ ಶಾಖೆಯಪೈಕಿ ಇದ್ದು ವಕೀಲರು ಇದ್ದಾರೆ. ಮತ್ತು ಒಕ್ಕಲತನದ ಉತ್ಪನ್ನ ವರ್ಷಕ್ಕೆ ೪೦೦೦ ಸಾವಿರ ಇರುತ್ತದೆ. ವಿಶೇಷ ಖುಲಾಸಾ ಪತ್ರದ್ವಾರದಿಂದ,

ಅಪ್ಪಣ್ಣಪ್ಪ ಶೀಲವಂತ ಶುಕ್ರವಾರಪೇಟೆ ಸೋಲಾಪುರ.

ಜಾಹೀರ—ವಿನಂತಿ.

ನಮ್ಮ ಜಿಲ್ಲೆಯಲ್ಲಿಯೂ ಇನ್ನೂ ಇತರ ಪ್ರಾಂತಗಳಲ್ಲಿಯೂ ಪ್ರೀತಿಗೋಸ್ಕರ ಬಲವಾದ ಎತ್ತುಗಳನ್ನು ಕಲ್ಲುದಿಂಡುಗಳಿಗೆ ಕಟ್ಟಿ ಎಳಿಯಿಸುತ್ತಾರೆ. ಆದರೂ ಹಾಗೆ ಎಳಿಸತಕ್ಕ ದಿಂಡು ಎತ್ತಿನ ಬಲಕ್ಕಿಂತಲೂ ಮಿಗಿಲಾದುದಾಗಿ ಇದ್ದರೇನೇ ಜನರಿಗೆ ಆಶ್ಚರ್ಯವೆಂದನಿಸುವದು.

ನಾವು ಜೂನ್ ೯ನೇ ತೇದಿ ಜ್ಯೇಷ್ಠ ಬ ೧ ಮಂಗಳವಾರ ಹಗಲು ೩ ಗಂಟೆಯಿಂದ ನಮ್ಮ ಎತ್ತನ್ನು ಕಲ್ಲುದಿಂಡಿಗೆ ಕಟ್ಟಿ ಎಳಿಸುತ್ತೇವೆ. ನೋಡಬೇಕೆನ್ನುವವರು ಬರುವದಾಗಿ ಮಿತ್ರಭಾವದಿಂದ ಕೋರುವ, ತಮ್ಮ

ಕಂಪ್ಲಿ: ಬಳ್ಳಾರಿ ಜಿಲ್ಲಾ ಬುರಡ್ಡಿ ವೀರಪ್ಪ.

ಚಂದ್ರೋದಯ.

(ಇಂಗ್ಲೀಷು ಕನ್ನಡ ಸಾಪ್ತಾಹಿಕವರ್ತಮಾನಪತ್ರ)

ಇದು ಧಾರವಾಡದಲ್ಲಿ ಜೂನ ತಿಂಗಳಿಂದ ಪ್ರತಿ ಸೋಮವಾರ ಪ್ರಸಿದ್ಧವಾಗುವದು. ಇದರಲ್ಲಿ ರಾಜಕೀಯ, ಸಾಮಾಜಿಕ ಮೊದಲಾದ ಮಹತ್ವವಾದ ವಿಷಯಗಳು ಬರುವವು. ಹಾಗೂ ಹೊಸ ಹೊಸ ಸ್ಥಾನಿಕ ಮತ್ತು ವಿವಿಧವರ್ತಮಾನಗಳು ಬರುವವು. ಇದರ ವಾರ್ಷಿಕ ಚಂದಾಯು ಎರಡು ರೂಪಾಯಿ. ಪರಸ್ಥಳದವರಿಗೆ ಅಂಚೆಯವೆಚ್ಚವು ಹದಿಮೂರು ಆಣೆ ಬೀಳುವದು. ಇದರ ಆಕಾರವು ಸುಪರರಾಯಲ್. ಚಂದಾದಾರರಾಗಲಪೇಕ್ಷಿಸುವವರೂ ನೋಟೀಸು ಇಲ್ಲವೆ ಜಾಹೀರಾತುಗಳನ್ನು ಪ್ರಸಿದ್ಧಪಡಿಸಲಪೇಕ್ಷಿಸುವವರೂ ಕೆಳಗೆ ಸಹಿಮಾಡಿದವರ ಸಂಗಡ ಪತ್ರವ್ಯವಹಾರವನ್ನು ಮಾಡತಕ್ಕದ್ದು. ಗಡಿಗೆಯ್ಯಾ ಹುಚ್ಚಯ್ಯಾ ಹೊನ್ನಾಪುರಮಠ ಸಂಪಾದಕ "ಚಂದ್ರೋದಯ"

ಧಾರವಾಡ.

ಊದಬತ್ತಿಗಳು.

7

ವಿಧವಿಧವಾದ ಊದುಬತ್ತಿಗಳು ಸೇರು ೧ ಕ್ಕೆ ೨-೦-೦ ೫-೦-೦; ೩-೧೨-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಸುಗಂಧಕಾರಿ, ಮೈಸೂರು.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೊಂಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನು

36 ಕಾಪಾಡುವುದರಲ್ಲಿ ಶ್ರೇಷ್ಠನವಾದ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ-ಚಿನ್ನದ ರೇಕು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘುಮಘುಮಿಸುವಂತೆ ಮಾಡುವುವು.

ಶೀತವಾಯು—ಕೆಮ್ಮು-ನೆಗಡಿ—ದಿನಜ್ವರ—ಮೂರರಜ್ವರ ನಾಲ್ಕರಜ್ವರ— ಮಲೇರಿಯಾಜ್ವರ— ತಲೆನೋವು— ಪ್ರೈರ್ಯನೋವು ಮತ್ತು ಭಾರ—ಅರೋಚಕ ಹಲ್ಲುನೋವು-ಹೊಟ್ಟೆನೋವು—ಮಲಬಂಧ-ಅಜೀರ್ಣಭೇದಿ—ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಶೆಳೆತ-ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ೫೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ. ಪಿ ಛಾರ್ಜು ಪ್ರತ್ಯೇಕ.

ಆಮೋದಿನಿ:— ಅಮೋಘವಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರವಮಾಡುವದಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷ ಕೀರ್ತಿಯನ್ನು ಸಂಪಾದಿಸಿ ನಾನಾತರಹ ಕೆಮ್ಮು, ದಮ್ಮು ಉಬ್ಬಸ, ವಾಂತಿ, ವಾಕರಿಗೆ, ಮಲಬಂಧ, ಅಗ್ನಿಮಾಂದ್ಯ, ಪಿತ್ತಸಂಕಟ, ಅರೋಚಕ, ಬಾಯಾರಿಕೆಗಳನ್ನು ತತ್ಷಣ ಗುಣಪಡಿಸಿ ಶರೀರಕ್ಕೆ ತೇಜಸ್ಸನ್ನುಂಟುಮಾಡುವ ಧಾತುವೃದ್ಧಿಯನ್ನುಂಟುಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆ ಬಾಲವೃದ್ಧರಿಂದಲೂ ಉಪಯೋಗಿಸಲ್ಪಡುತ್ತಲಿರುವುದು. ೫೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ.ಪಿ. ಛಾರ್ಜು ಪ್ರತ್ಯೇಕ.

ವಿಳಾಸ— ಕೆ. ಎ. ನಾರಾಯಣರಾವ್,
ಪ್ರೊಪ್ರೈಟರು, ಸದ್ವೈದ್ಯಶಾಲಾ,
ಸಂತೆಪೇಟೆ, ಮೈಸೂರ್ ಸಿಟಿ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ವಿಘ್ನೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಇಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೩-೪-೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೆ ರೂ.ಕೊ ೧ ಕೊಡಬೇಕಾಗುವುದು. ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೬-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೆ ೦-೮-೦ ಆಣೆಯಂತೆ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ಮಿಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರ್ ಪ್ರೆಸ್, ಮೈಸೂರ್.

ಶಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

27

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಮರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪ್ರಕೋಪವಾದವರು, ತೃಷೆಯುಳ್ಳವರು, ದಮ್ಮಿನವರು, ಕೆಮ್ಮಿನವರ ಕಫು, ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ,ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿಗುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರಿತ ಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರಕ್ತಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧ ಸಂಗಡಲೇ ರವಾನಿಸುವೆವು.

ವಿಳಾಸ:—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋ॥ ಸನವಾಸಿ. ಜಿಲ್ಲ ಉತ್ತರಕನ್ನಡಾ.

37

ದೊಡ್ಡ ಕಂಪನಿ ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯೂ. ಎನ್. ಮತ್ತು ಕಂಪನಿ,
ಬನಾರಿಸ್ ಸಿಟಿ. (ಕಾಶೀ)

ಅಗ್ಗವಾದ ಮಾಲುಗಳು.

S.N.RUDRAKSHA & CO.
BENARES CITY.

ನಮ್ಮಲ್ಲಿ ಉತ್ತಮವಾದ ನೇಪಾಳ ರುದ್ರಾಕ್ಷಿ ಉತ್ತಮವಾಗಿಯೂ ಗಟ್ಟಿಯಾಗಿಯೂ ೪ ಮುಖದಿಂದ ೧೪ ಮುಖದ ವರೆಗೆ ಸಣ್ಣದು ದೊಡ್ಡದು ಸಹ ಈ ಎರಡು ನಮೂನೆಯಲ್ಲಿ ದೊರೆಯುವುದು. ಮತ್ತು ಇವುಗಳಲ್ಲದೆ ರೇಷ್ಮೆ ಮುಗುಟ, ಕಾಶ್ಮೀರ ಶಾಲು, ರೇಷ್ಮೆ ಜರಿಸೀರೆ, ಜರಿಕಣ, ಪೇಟ, ಪೊಳಕಾಲ್ಮುರು ನಮೂನೆ ವಸ್ತ್ರ ಜಗನ್ನಾಥ ಜಾಗಂಟೆ, ನೇಪಾಳ ಕಸ್ತೂರಿ, ಉತ್ತಮವಾದ ಜರೀ ಛಾದರ್ ಮೊದಲಾದ ಅಮೂಲ್ಯವಾದ ಸಾಮಾನು ಎಲ್ಲವರಿಗಿಂತಲೂ ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಇಚ್ಛಿಸಿದವರಿಗೆ ವಿ. ಪಿ. ಮೂಲಕ ಕಳುಹಿಸಲಾದೀತು.

ರುದ್ರಾಕ್ಷಿಗಳ ವಿವರ:—

೪ ಮುಖದ ರುದ್ರಾಕ್ಷಿ ಕಂಠಿ ಅಂದರೆ ೩೨ ಮಣಿಗಳುಳ್ಳ ಸರ ೧ ಕ್ಕೆ ೧೨ ಆಣೆಯಿಂದ ೬೦ ರೂಪಾಯಿವರೆಗೆ. ೫ ಮುಖದ ಕಂಠಿ ೧ಕ್ಕೆ ೮ ಆಣೆಯಿಂದ ೭೦ ರೂಪಾಯಿವರೆಗೆ. ೬ ಮುಖದ ಕಂಠಿ ೧ಕ್ಕೆ ೧೨ ಯಿಂದ ೧೦೦ ರೂ. ವರೆಗೆ. ೭ ಮುಖದ ಕಂಠಿ ೧ಕ್ಕೆ ೧೦ ರೂ. ಯಿಂದ ೧೫೦ ರೂ. ವರೆಗೆ. ಇದರಂತೆ ೮, ೯, ೧೦, ೧೧, ೧೨, ೧೩, ೧೪, ಈ ಮುಖಗಳ ಮಣಿ ೧ಕ್ಕೆ ೫ ರೂ. ಯಿಂದ ೩೦ ರೂ. ವರೆಗೆ. ಇದರಲ್ಲಿಯೇ ಕಂಠಿ ಬೇಕಾದರೆ ಸಹ ದೊರೆಯುವುದು. ಸಣ್ಣ ರುದ್ರಾಕ್ಷಿ ಸರ ಅಂದರೆ ೧೦೮ ಮಣಿಯಿರುವ ತೊಗರಿಯ, ಉದ್ದಿನಕಾಳು ಪ್ರಮಾಣದ ಸರ ೧ಕ್ಕೆ ರೂ. ೫ ರಿಂದ ರೂ. ೩೦ ವರೆಗೆ. ಕಡಲೆ ಕಾಳು ಪ್ರಮಾಣದ ೧೦೮ ಮಣಿಯಿರುವ ಸರ ೧ಕ್ಕೆ ರೂ. ೨-೮-೦ ಲಾಗಾಯಿತು ರೂ. ೧೦ ವರೆಗೆ. ಜಪಮಾಲೆ ನೆಲ್ಲಿಕಾಯಿಯಿಂದ ಅವರೇ ಬೀಜದ ಪ್ರಮಾಣದ ೧೦೮ ಇರುವ ಸರ ೧ಕ್ಕೆ ೧೨ ಆಣೆಯಿಂದ ರೂ. ೧೦ ವರೆಗೆ. ಸಾಧಾರಣ ತರ ೬ ಆಣೆಯಿಂದ ರೂ. ೩ ವರೆಗೆ. ಗೌರೀಶಂಕರ ರುದ್ರಾಕ್ಷಿ— ಈ ರುದ್ರಾಕ್ಷಿಯು ರುದ್ರಾಕ್ಷಿಗಳೆಲ್ಲೆಲ್ಲಾ ಶ್ರೇಷ್ಠವೆಂದು ಹೇಳುವರು. ರುದ್ರಾಕ್ಷಿ ಮಣಿ ೧ ಕ್ಕೆ ರೂ. ೫ ಲಾಗಾಯಿತು ರೂ. ೫೦ ವರೆಗೆ. ಇಚ್ಛೆಸುವವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ವಿಳಾಸ— ಎಸ್. ನೇಪಾಳ ರುದ್ರಾಕ್ಷಿ ಅಂಡ್ ಕಂಪನಿ,
21 ಬನಾರಸ್ ಸಿಟಿ.

ದಿ ಜನರಲ್ ಏಜನ್ಸಿ, ಮೈಸೂರು.

ಕಾದಂಬರಿಗಳು :— ಚಂಡಮಾರುತ ೦-೨-೦; ಚರಿತಾಮೃತಂ ೦-೫-೦; ರಾಜಕಥಾವಲ್ಲರಿ ೦-೫-೦; ಪೀಟರಿನಚರಿತ್ರೆ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೨-೬; ಸೀತೆ ೦-೫-೦; ಸಾಹಸಿಕೆ, ಕೈಲಾಸನಾಥ ೦-೮-೦; ಮಹಾಲಕ್ಷ್ಮಿ ೦-೨-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸತ್ಯಸಂಜೀವಿನಿ ೦-೮-೦; ಕೇಶವನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೨-೦. 38

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕೈಯ್ಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಳಸ ಯುಕ್ತ ಅಡ್ಡ ಪಲ್ಲಕ್ಕಿ ಉತ್ಸವದ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಹಾಪುರದಲ್ಲಿ ವ್ಯಾಸನತೊಳುಸಹಿತ ಆದ ಸಮಾರಂಭದ ಫೋಟೋ ೧ ಕ್ಕೆ ಕ್ರಯ ೧ ರುಪಾಯಿ

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಾಮಾಡಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೋ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೋ ೧ ಕ್ಕೆ ಕ್ರಯ ಫುಲ್ಲಸೈಜು ೧ ರುಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀ ಜಗದ್ಗುರು ತೋಂಟದಾರ್ಯ ಗದಗ, ಶ್ರೀ ಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ಸತ್ಪುರುಷಮಾಲಾ, ಹಾಳಕೇರಿ ಆನಂದಸ್ವಾಮಿಯ ಫೋಟೋ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೋ ಸಿಗುತ್ತವೆ. ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ

ಹೊರಫ್ಯಾಷನ್—ಸತ್ಪುರುಷರು ಗಡಿಯಾರ ಸರ್ಪಳಿಗೆ ಹಚ್ಚುವಲಾಕೇಟುಗಳೂ, ಯದರಲ್ಲಿ ಹಿಂದೆ ಮುಂದೆ ಇಪ್ರಕಾರ ೨ ಫೋಟೋ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ॥, ॥=, ೧, ೧।, ಪ್ರಕಾರ, ಮತ್ತೂ ಬೆಳ್ಳೀದು ರು ೧॥ ರೋಡ್ ಗೋಲ್ಡು ಭಂಗಾರದ್ದು ದುರ್ಬಿಣದ ಗ್ಲಾಸದೂ ಕ್ರಯ ೨॥, ೨॥ ರೂ.

ಪರೂರಿಗೆ ಏಜಂಟರು ಬೇಕಾಗಿರುತ್ತಾರೆ ಆರ್ಡಾಸ ಟಿಕೀಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿರಿ. ನಮ್ಮವಿಳಾಸ— ಗಂಗಪ್ಪಾ ಜೀರಿಗೆ.

14 ಆರ್ಟಿಸ್ಟ ಸೊಲ್ಲಾಪುರ

೫೦ ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರೀ ಮುರಬ್ಬಾ.

7

ಈ ಮುರಬ್ಬಾವು "ಪಂಜಾಬ್ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ ೫೦ ರೂಪಾಯಿಗಳು ಬಹುಮಾನ ಕೊಡಲ್ಪಡುವುದು.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯಕೋಶವು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣ ಪರಿಯಂತರವೂ ದುಃಖಪಡುವರು. ಈ "ಪಂಜಾಬ್ ಸಾಲಾಮಿಸ್ರೀಮುರಬ್ಬಾ" ವಿನ ಸೇವನೆಯಿಂದ—



ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಕ್ಷಣಕ್ಷಣಕ್ಕೂ ಮೂತ್ರವಾಗುತ್ತಿದ್ದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ದೂರ ನಡೆಯುವುದರಿಂದ ಮೇಲುಬ್ಬಸ ಬರುವುದು ತಲೆಯ ನೋವೂ ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರಿಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ರಕ್ತವನ್ನು ಹೆಚ್ಚಿಸಿ ವೀರ್ಯವನ್ನು ವೃದ್ಧಿಪಡಿಸುವುದರಲ್ಲಿ ಪಂಜಾಬ್ ಸಾಲಾಮಿಸ್ರೀ ಮುರಬ್ಬಾವಿನ ಹೊರತು ಇದಕ್ಕೆ ಸಮಾನವಾದ ಔಷಧವು ಬೇರೆ ಯಾವುದೂ ಇಲ್ಲವು.

ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ತಾಂಬ್ರದ ಮತ್ತು ಭಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು. ಹೊಟ್ಟೆಯಲ್ಲಿರುವ ಜ್ವರದ ಗಡ್ಡೆಯನ್ನು ನಾಶಪಡಿಸುವುದು. ಶ್ವಾಸ ಖಾಸ ರೋಗಗಳನ್ನು ನಿರ್ಮೂಲಪಡಿಸುವುದು.

ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲ್ ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳಿಗಡ್ಡೆ, ಶಾವಂಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರಿ ಎಂದು ಹೇಳಿ ಮೋಸಪಡಿಸುವರು. ಈ ಮುರಬ್ಬಾವನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾಬ್ ಸಾಲಾಮಿಸ್ರಿಯೋ ಅಥವ ಬೇರೇ ತರಹಾದ್ದೋ ಎಂಬುವುದು ಚೆನ್ನಾಗಿ ತಿಳಿದು ಬರುತ್ತೆ. ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ ೫೦ ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧೫ ತೋಲಾ ಮುರಬ್ಬಾವಿರುವ ಡಬ್ಬಾ ೧ಕ್ಕೆ ರೂ ೧-೮-೦; ಟಪಾಲ್ ಖರ್ಚು ನಾಲ್ಕು ಆಣೆ ಅನುಪಾನಪತ್ರಿಕೆ ಔಷಧದ ಸಂಗಡ ಇರುತ್ತೆ.

ಅತ್ಯುತ್ತಮವಾದ ವನೌಷಧಗಳು.

೧. ಧಾತುಪುಷ್ಟಿಚೂರ್ಣ— ಕ್ರಯ ೫ ಆಣೆ.
೨ ರೋಮನಾಶಕ ಮತ್ತು ವೃಶ್ಚಿಕದಂಷ್ಟ್ರ ತೈಲವು ಚೇಳಿನ ಹೊಡತಕ್ಕೂ ಮತ್ತು ಕೂದಲು ತೆಗಿಯುವುದಕ್ಕೂ ಬಹಳ ಒಳ್ಳೆಯದು ಕ್ರಯ ೨ ಆಣೆ.
೩ ವಾತನಿವಾರಣ ತೈಲವು ಕ್ರಯ ೪ ಆಣೆ.
೪ ಹೊಟ್ಟೆನೋವಿಗೆ ಔಷಧ ಕ್ರಯ ೨ ಆಣೆ ೬ ಪೈ.
೫ ಕೆಮ್ಮಲು ರೋಗಕ್ಕೆ ಔಷಧ ೪ ಆಣೆ.
೬ ವ್ರಣಕ್ಕೆ ಔಷಧ ೪ ಆಣೆ.
೭ ಆಶ್ಚರ್ಯಕರವಾದ ವೀರ್ಯಸ್ಥಂಭದ ಗುಳಿಗೆ ೪ ಆಣೆ.
೮ ತಲೆನೋವಿಗೆ ತೈಲವು ೨ ಆಣೆ ೬ ಪೈ.
೯ ಪ್ರಮೇಹ ನಿವಾರಣ ಭಸ್ಮವು—೮ ಆಣೆ.
೧೦ ಉಷ್ಣಕಾರಕಕ್ಕೆ ಮಾತ್ರೆಗಳು—ರೂ. ೧.
೧೧ ಮೂಲವ್ಯಾಧಿಗೆ ಔಷಧ—೮ ಆಣೆ.
೧೨ ಕಣ್ಣಿಗೆ ಸುರ್ಮಾ—೪ ಆಣೆ.
೧೩ ದಂತಚೂರ್ಣವು—೧ ಆಣೆ ೩ ಪೈ.
೧೪ ಕೂದಲು ಬೆಳೆಯುವ ಎಣ್ಣೆ (ಪಿಂಟೋಲಿ ತೈಲ ೪ ಆ॥)

ವಿಳಾಸ:— ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
೧೩, ಹಳೇ ಪಿಲ್ಲಿ ಕಟ್ಟ, ಬೆಂಗಳೂರು ಸಿಟಿ.

ಸಮಸ್ತ ವೀರಶೈವಬಾಂಧವರಿಗೆ ವಿದಿತಪಡಿಸುವುದೇನೆಂದರೆ— ಕಳೆದವರ್ಷ ನಿಪ್ಪಾಣಿಯಲ್ಲಿ ಕೂಡಿದ್ದ ೬ ನೆಯ ವೀರಶೈವಮಹಾಸಭೆಯ ರಿಪೋರ್ಟು ಬುಕ್ಕುಗಳು ಮುದ್ರಿತವಾಗಿ ಕ್ರಯಕ್ಕೆ ಸಿದ್ಧವಾಗಿರುವುವು. ಈ ಸಾರೆಯ ಬುಕ್ಕುಗಳು ಒಳ್ಳೆಯ ಅಪ್ರತಿಮವಾಗಿಯೂ, ಅಚ್ಚುಕಟ್ಟಾಗಿಯೂ ಬರೆದಿದ್ದು, ಅದರಲ್ಲಿ ನಮ್ಮ ಸಮಾಜದ ಆಧಾರ ಸ್ತಂಭಗಳಂತಿರುವ ಪ್ರತಿಯೊಬ್ಬ ಮುಖಂಡರ ಭಾವಚಿತ್ರಗಳೂ ಪ್ರತ್ಯೇಕವಾಗಿ ಸೇರಿಸಲ್ಪಟ್ಟಿರುವುವು. ಮೇಲಾಗಿ ಪ್ರತಿಗಳು ವಿಕ್ರಯಕ್ಕೆ ಒಂದೇ ನೂರು ಇರುವುದರಿಂದ ಹಿಂದಿನಿಂದ ಬೇಡುವವರಿಗೆ ಪ್ರತಿಗಳು ನಿಶ್ಚಯವಾಗಿ ಸಿಗಲಾರವು. ಕಾರಣ, ಇಷ್ಟವುಳ್ಳವರು ಮುಂಚಿತವಾಗಿಯೇ ಸ್ಪಷ್ಟವಾದ ಪತ್ರದಿಂದ ಆರ್ಡರು ಕಳುಹಿಸಬಹುದು.

ಶಿವಮೂರ್ತಿಸ್ವಾಮಿ ಕಣಬರಗಿಮಠ,
ಚೇರ್ಮನ್, ಸ್ವಾಗತಕಮಿಟಿ,
೬ ನೆಯ ಮಹಾಸಭೆ ನಿಪ್ಪಾಣಿ

ಪರಿಮಳದ್ರವ್ಯಗಳು.

ನಮ್ಮಲ್ಲಿ ಬಹುಕಾಲದಿಂದಲೂ ಅತ್ಯುತ್ತಮವಾಗಿ ತಯಾರಾಗುತ್ತಿರುವ ಊದುಬತ್ತಿಗಳು ಸೇರು ೧ ಕ್ಕೆ ೪ ಆಣೆಯಿಂದ ೧೦ ರೂ. ವರೆಗೂ ದೊರೆಯುವುವಲ್ಲದೆ, ನಾನಾತರದ ಗಂಧದಬಿಲ್ಲೆಗಳು, ಜವಾಜಿಗಂಧ ಅಥವಾ ಅರಗಜ, ಪುನಗು, ಜವಾಜಿ, ಪಚ್ಚೆಕರ್ಪೂರ, ಧೂಪದರಂಗ ಮೊದಲಾದ ಸುಗಂಧದ್ರವ್ಯಗಳೂ, ಮಲ್ಲಿಗೆ-ಸಂಪಗೆ-ರೋಜಾ ಮೊದಲಾದ ಅತ್ತರುಗಳೂ ಮತ್ತೂ ಭೃಂಗಾಮಲಕತೈಲ ಮೊದಲಾದುವುಗಳೂ ಬಿಕರಿಗೆ ಸಿದ್ಧವಾಗಿರುವುವು. ಅಪೇಕ್ಷಕರು ೫ ರೂ. ಗೆ ಕಡಿಮೆಯಿಲ್ಲದಂತೆ ಆರ್ಡರನ್ನು ಕೊಡಬೇಕು. ಇನ್ನೂ ಹೆಚ್ಚು ವಿಷಯಗಳನ್ನು ತಿಳಿಯತಕ್ಕವರು ನಮ್ಮ ಕ್ಯಾಟಲಾಗನ್ನು ತರಿಸಿ ನೋಡಬಹುದು. 39

ವಿಳಾಸ— ಎಸ್. ಕಳ್ಳಪ್ಪ, ಊದುಬತ್ತಿಷಾಪ್,
ದೊಡ್ಡಪೇಟೆ, ಬೆಂಗಳೂರು ಸಿಟಿ.

ನ್ಯಾಯದರ್ಪಣ. 20

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯು, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಫ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸೂ, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆಚರಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ವಗೈರೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯು ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿಇರುತ್ತವೆ.

ಬೆಲೆ ರೂ. 1—8—0. ವಿ. ಪಿ. ಮೂಲ್ಕ 1—12—0.

ಎಂ. ಎಸ. ನಂಜಪ್ಪನವರು,
ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

27 ಸಚಿತ್ರ ಶುಕಸಪ್ತತಿ ಕಥೆಗಳು
ರೂ. ೧-೮-೦ (೫೧೨ ಪುಟ) ಟಪಾಲು ಹಾಸಲು ೪ ಆಣೆ.
ಸಚಿತ್ರ ಭಟ್ಟಿವಿಕ್ರಮಾದಿತ್ಯರಾಯನ ಚರಿತ್ರೆ
ರೂ ೧-೮-೦. (೫೩೬ ಪುಟ)

ಸಚಿತ್ರ ವಿದ್ಯಾಮಂಜರಿಕಥೆಗಳು

ವಾಚಕ ಮಹಾಶಯರುಗಳೇ! ಮಾನ್ಯತೆಯು ಬೇಕಾದರೆ, ವಾಕ್ಚಾತುರಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಲಿಚ್ಛೆಪಟ್ಟರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯಲ್ಲಾಶೆಯಿದ್ದರೆ ದಯಮಾಡಿ ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೬೦ ಪುಟಗಳಿಂದ ಕೂಡಿದ ೬೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ. ೧-೪-೦ ಟಪಾಲ್ ಹಾಸಲು ೩ ಆಣೆ.

ಈಗಲೇ ಬರೆ ನಿಮ್ಮಾ.ನಮ್ಮಲ್ಲಿ ಇನ್ನೂ ಅನೇಕಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಕನ್ನಡ ಇಂಡಿಯನ್ ಪೆನಲ್ ಕೋಡ್

ಇದರಿಂದ ಮೈಸೂರ್, ಮದ್ರಾಸ್, ಬೊಂಬಾಯಿಜಿಲ್ಲಾ ಕನ್ನಡಭಾಷಾ ವಾಚಕಮಹಾಶಯರಿಗೆ ತಿಳಿಸುವದೇನೆಂದರೆ—

ಶ್ರೀಮಂತಿಯಾ ಗೌರ್ನರ್ ಜನರಲ್‌ರವರ ಅನುಮತಿ ಪ್ರಕಾರ ಸನ್ ೧೮೬೦ನೇ ಇಸವಿಯಲ್ಲಿ ನಿರ್ಮಿತವಾದ "ಇಂಡಿಯನ್ ಪೆನಲ್ ಕೋಡ್" ಎಂಬ ಆಕ್ಟನ್ನು ಈಗ ಅನೇಕ ಜಡ್ಜಿಗಳ ಟಿಪ್ಪಣಿಗಳೊಡನೆಯೂ, ಅಮೆಂಡ್‌ಮೆಂಟುಗಳೊಡನೆಯೂ ಅಂದವಾದ ಕಾಗದದಲ್ಲಿ ಸ್ಪುಟವಾದ ಅಕ್ಷರಗಳಿಂದ ಮುದ್ರಣವಾಗಿ ಮಾರಾಟಕ್ಕೆ ಸಿದ್ಧವಾಗಿದೆ. ಈ ಆಕ್ಟಿನಲ್ಲಿ ಪ್ರತಿ ಸೆಕ್ಷನಿಗೂ ಫಿರ್ಯಾದಿಗಳೂ, ಅಪರಾಧಿಗಳೂ, ಪೋಲೀಸ್ ಅಧಿಕಾರಿಗಳೂ, ಮ್ಯಾಜಿಸ್ಟ್ರೇಟರುಗಳೂ ನಡಿಸಬೇಕಾದ ಆಚರಣೆಗಳೆಂದರೆ:-ನಡೆಯುವ ಮೊಕದ್ದಮೆಯನ್ನು ಯಾವ ಕೋರ್ಟಿನಲ್ಲಿ ವಿಚಾರಣೆ ಮಾಡಬೇಕು? ವಾರಂಟಿಲ್ಲದೆ ಹಿಡಿಯಬಹುದೇ, ಹಿಡಿಯಕೂಡದೇ? ಸಮನ್ ಕೊಡತಕ್ಕದ್ದೇ, ವಾರಂಟು ಕೊಡತಕ್ಕದ್ದೇ? ಜಾಮೀನಾ ತೆಗೆದುಕೊಂಡು ಬಿಡಬಹುದೇ? ರಾಜಿಯಾಗಬಹುದೇ, ರಾಜಿಯಾಗತಕ್ಕದ್ದಲ್ಲವೇ? ಎಂಬ ತಪ್ಸೀಲುಗಳನ್ನು ವಿವರಿಸಲ್ಪಟ್ಟಿರುವುದು. ಈ ಪುಸ್ತಕವು ಸರ್ಕಾರಿ ಅಧಿಕಾರಿಗಳಿಗೂ, ಪೋಲೀಸಿನವರಿಗೂ, ಪಟೇಲ್ ಶ್ಯಾನುಭೋಗರುಗಳಿಗೂ, ವರ್ತಕರುಗಳಿಗೂ, ಜಮೀನ್ದಾರರುಗಳಿಗೂ ಇತರ ಸಮಸ್ತ ಕಸಬುದಾರರಿಗೂ, ಮಿಡ್ಲ್‌ಕ್ಲಾಸ್ ಜನಗಳಿಗೂ ಉಪಯೋಗಕರವಾದದ್ದು.

ಈ ಪುಸ್ತಕದಲ್ಲಿ ಚೋರಿ, ಕಳವು, ಡಕಾಯಿತಿ, ಅತಿಕ್ರಮಪ್ರವೇಶ, ಸ್ತ್ರೀಗೆ ಮಾನಭಂಗಪಡಿಸುವುದು, ಸ್ತ್ರೀಯರನ್ನು ದುರಾಚಾರಕ್ಕೆಳೆಯುವದು, ಅಸಾಮಿ ಚೋರಿ, ಗಂಡನು ಹೆಂಡತಿ ೧೨ ವರುಷಗಳಿಗೆ ಕಡಿಮೆ ವಯಸ್ಸಿನವಳಾಗಿರುವಾಗ್ಗೆ ಸ್ತ್ರೀಸಂಗ ಮಾಡಬಹುದೇ? ಮುಂತಾದ ಮೊಕದ್ದಮೆಗಳಲ್ಲಿ ಜಡ್ಜಿಗಳು ಕೊಟ್ಟಿರತಕ್ಕ ಅಭಿಪ್ರಾಯಗಳು ಸೂಚಿಸಲ್ಪಟ್ಟಿರುವವು. ಕನ್ನಡದಲ್ಲಿ ಇದುವರೆಗೆ ಇಂಥಾ ಪುಸ್ತಕವು ಇನ್ನೆಲ್ಲಿಯೂ ಇಲ್ಲವು.

ಕ್ರಯ ಪ್ರತಿ ೧ ಕ್ಕೆ ೨ ರೂಪಾಯಿ; ಟಪಾಲ್ ಛಾರ್ಜ್ ೪ ಆಣೆ.

ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ. ಪುಸ್ತಕಗಳ ಕ್ರಯ ಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು

41 ನಮ್ಮ ವಿಳಾಸ— ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಸ್ ಪಬ್ಲಿಷರ್ಸ್, ಬೆಂಗಳೂರು ಸಿಟಿ.

ಶಾಸ್ತ್ರೀಯ ಪಂಚಾಯುಧ ಪಂಡಿತರ ಸಿದ್ಧೌಷಧಗಳು 5

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲಿ



ಸಂದುಗಳ ನೋವು ಮೈ ಕಾಲು ಜೋಕತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಶಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಂಜು ಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾಔಷಧಿ.)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇವೊಂದು ಬುದ್ದಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತವಿದೊಂದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುದ್ದಿಯ ಬೆಲೆ ೧—೧—೦.
ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ)ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾಗಿದ್ದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮಿದುಳಿಗಾಗಲಿ ಕೇಡಿಲ್ಲ. ಒಂದು ಚಿಟಿಕೆ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜನ್ ಡಬ್ಬಿಗೆ ೧-೧೪-೦

ಉತ್ತಮವಾದ ನಶ್ಯದಪುಡಿ.

ಘಂಟು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ದುರ್ವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವೆ. ನೀವುಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,
ಗೋಪಿಸೆಟ್ಟಿಪುರ, ಹನೂರು ಪೋಸ್ಟ್
16 ಕೊಳ್ಳೇಗಾಲದ ತಾಲ್ಲೂಕು.

೧೯೧೪ ನೆಯ ಇಸವಿ ಜೂನ್ ತಾ॥ ೮ ರಿಂದ ೧೯೧೪ ನೆಯ ಜೂನ್ ತಾ॥ ೧೪ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೬ ನೆಯ ಆನಂದನಾಮ ಸಂ॥ ದ ಜ್ಯೇಷ್ಠ ಶು॥ ಪೌರ್ಣಮಿಯಿಂದ ಜ್ಯೇಷ್ಠ ಬ॥ ಷಷ್ಠಿವರೆಗಿನ ಪಂಚಾಂಗ.

ತಾ॥	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ತೇದಿ ವೃಷ
8	[1] ಸೋ	ಪೌ	11-57	ಜ್ಯೆ	38-4	26
9	ಮಂ	ಪಾ	7-41	ಮೂ	36-8	27
10	[2] ಬುಧ	ಬಿ	4-20	ಪೂಷಾ	35-10	28
11	ಗುರು	ತ	2-2	ಉತ್ತಷಾ	35-19	29
12	[3] ಶುಕ್ರ	ಚ	0-55	ಶ್ರ	36-48	30
13	ಶನಿ	ಪಂ	1-2	ಧ	39-19	31
14	[4] ಭಾ	ಷ	2-25	ಶ್ರ	43-11	1

(1) ಸಾವಿತ್ರೀವ್ರ॥ ಭೂಪೂರ್ಣಿಮಾ, (2) ಮಾರಹಳ್ಳಿ ನೃಸಿಂಹಸ್ವಾಮಿರಥ॥ ಕಂಚಿ ವರದರಾಜಸ್ವಾಮಿರಥ॥ (3) ಶ್ರೀ ಕೃಷ್ಣ ಬ್ರಹ್ಮತಂತ್ರ ಪರಕಾಲಸ್ವಾಮಿಗಳ ತಿರುನಕ್ಷತ್ರಂ. (4) ರಾಕ್ಷಾಂಷಡಶೀತಿ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED M NO 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ವಾರ್ಷಿಕ ಚಂದಾ ೧—೦—೦ } ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈ ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್, ಶ್ರೀಮತ್ಕೃಷ್ಣನೃಪಾಲನುತ್ತಮಶಿಲಾಲೀಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ| ಸೀಮಾತೀತಯಶಃಪ್ರತಾಪವಿಪುಲಂಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ|| { ಅಂಚೆವೆಚ್ಚ ಸೇರಿ ೧—೧೪—೦

REGISTERED, M NO 124

ಸಂಪುಟ ೨೬) ಮೈಸೂರ್ ಸ್ಟಾರ್ ಸೆ ೧೯೧೪ ನೆಯ ಇಸವಿ ಜೂನ್ ತಾರೀಖು ೧೫ ನೆಯ ಸೋಮವಾರ. (ಸಂಚಿಕೆ ೨೪

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.
ಈಗತಾನೆ ಶೀಮೆಯಿಂದ ಬಂದಿರತಕ್ಕ ರಖಂವಾರ್ ಹೊಸ ಬೈಸ್ಕಲ್‌ಗಳು. 20



ಪ್ರತಿಯೊಂದು ಬೈಸ್ಕಲಿನ ಸಂಗಡಲೂ ಅತ್ಯವಶ್ಯಕವಾಗಿ ರಿಪೇರಿಮಾಡಿಕೊಳ್ಳಲು ಬೇಕಾದ ಆಯುಧಗಳೂ ಮತ್ತೂ ಆಯುಧಗಳನ್ನಿಡತಕ್ಕ ಶೀಮೆತಯಾರಿ ಚರ್ಮದ ಚೀಲ ೧. ಗಾಳೀ ತುಂಬುವ ಪಂಪ್ ೧. ಸುಂದರವಾದ ಬೆಲ್ ೧. ಇಷ್ಟು ಸಾಮಾನುಗಳನ್ನೂ ಮುಫತ್ತು ಕೊಡಲಾಗುತ್ತೆ.

ರಾಯಲ್ ಮೇಲ್ ಬೈಸ್ಕಲ್—ಕೇಂಬ್ರಿಡ್ಜ್ ಟೈರ್, ಡನಲಪ್‌ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೮೫-೦-೦.
ಬ್ರಿಟಾನಿಕ್ ಬೈಸ್ಕಲ್—ಡನಲಪ್ ಟೈರ್, ಡನಲಪ್ ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೯೦-೦-೦.
ರಾಯಲ್‌ಕಿಂಗ್ ಬೈಸ್ಕಲ್—ಕೇಂಬ್ರಿಡ್ಜ್ ಟೈರ್, ಡನಲಪ್ ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೮೦-೦-೦.
ರಾಯಲ್ ನೈಟ್ ಬೈಸ್ಕಲ್—ಪಾಮರ್ ಟೈರ್, ಪಾಮರ್ ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೯೨-೦-೦.
ರಾಯಲ್ ಆರ್‌ಚರ್ ಬೈಸ್ಕಲ್—ಬುಕಾನಿಯರ್ ಟೈರ್ ಬುಕಾನಿಯರ್ ಟ್ಯೂಬ್ ಹಾಕಿದ್ದು ೭೦-೦-೦.
ಬಿ ಎಸ್. ಎ. ಫಿಟಿಂಗ್ ಬೈಸ್ಕಲ್, ಡನಲಪ್‌ಟೈರ್, ಡಂಲಪ್‌ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೧೩೫-೦-೦.

ಬೈಸ್ಕಲ್ ಬಿಡಿಸಾಮಾನುಗಳೂ ಸದಾ ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿವೆ. ಬೈಸ್ಕಲ್ಲಿಗೆ ಆರ್ಡರ್‌ಮಾಡತಕ್ಕವರು ೧೦-೦-೦ ರೂಪಾಯಿ ಅಡ್ವಾನ್ಸು ಕಳುಹಿಸಬೇಕು. ಬಾಕಿ ಮೊಬಲಿಗೆ ರೈಲ್ವೆ ರಶೀದಿಯನ್ನು ವಿ.ಪಿ.ಮಾಡಲಾಗುತ್ತೆ.

"ಜುಮಲೆ" ಇದೊಂದು ಅತ್ಯಾಶ್ಚರ್ಯಕರವಾದ ಹೊಸಕಾದಂಬರಿ (ಬಂಗಾಳಿ ನಾವೆಲ್) ಓದುವುದಕ್ಕೆ ಕುಳಿತರೆ ಮುಗಿಸುವವರೆಗೂ ಮನಸ್ಸು ನಿಲ್ಲುವುದಿಲ್ಲ. ಓದುತ್ತಓದುತ್ತಾ ಹೊಸಹೊಸ ಭಾವಗಳು ತಲೆದೋರಿ ರೋಮಾಂಚವುಂಟಾಗುವುದು. ಪಾಠಕರೆ! ಗೋರಿಯಲ್ಲಿದ್ದ ಹೆಂಗಸಿನ ಶವಕ್ಕೆ ಪ್ರತಿಯಾಗಿ ಗಂಡುಸಿನ ಶವವಿರುವುದನ್ನು ನೋಡುತ್ತಲೇ ಆಶ್ಚರ್ಯಸಮುದ್ರದಲ್ಲಿ ಮುಳುಗಿಹೋಗುವಿರಿ. ಕ್ರಯ ಪ್ರತಿ ೧ ಕ್ಕೆ ೦-೬-೦ ಪೋಸ್ಟೇಜು ೦-೨-೦.

ಹೊಸಪುಸ್ತಕಗಳು.

ವೀರಶೈವರಿಗೂ ಇತರರಿಗೂ ಸಹ ಅತ್ಯವಶ್ಯಕಬೇಕಾದ್ದು.

ಮನೋವಿಜಯ— ವೇದವೇದಾಂಗ ವೇದಾಂತ ಪುರಾಣ ಇತಿಹಾಸಾದಿಗಳಲ್ಲಿ ಬಹು ಪ್ರವೀಣರಾಗಿಯೂ ಅನೇಕ ಮತಸಿದ್ಧಾಂತದಲ್ಲಿ ಕುಶಲರಾಗಿಯೂ ಇದ್ದ ಶ್ರೀ ಗುರುಸ್ವಾಮಿಗಳವರಿಂದ ವೀರಶೈವರಿಗೂ ಅದ್ವೈತಮತಸ್ಥರಿಗೂ ಬಹು ಪ್ರಯೋಜನವಾಗಿರುವಂತೆ ಮನೋಹರವಾಗಿ ರಚಿಸಲ್ಪಟ್ಟಿದೆ. ಇದಕ್ಕೆ ಪರಮಪೂಜ್ಯರಾದ ಶ್ರೀ ತೋಂಟದ ಸಿದ್ಧಲಿಂಗಸ್ವಾಮಿಗಳು ಸಮಸ್ತರಿಗೂ ಸುಲಭವಾಗಿ ತಿಳಿಯುವಂತೆ ತಾತ್ಪರ್ಯವನ್ನು ಸ್ವಾರಸ್ಯವಾಗಿ ಬರೆದಿದ್ದಾರೆ. ಸರ್ವರೂ ಅತ್ಯವಶ್ಯಕ ಓದಬೇಕಾದ್ದು. ಇದರ ಕ್ರಯ ಪ್ರತಿ ೧ ಕ್ಕೆ ೦-೮-೦ ವಿ.ಪಿ. ಮೂಲಕ ೧೧ ಆಣೆ.

ಶತಕಪಂಚಕ— ಇವರಲ್ಲಿ ನಿರಂಜನಶತಕ, ಸಿದ್ಧಲಿಂಗೇಶ್ವರಶತಕ, ನಿಷ್ಕಲಶತಕ, ಉಮಾಮಹೇಶ್ವರಶತಕ, ಸಂಗಮೇಶ್ವರ ಶತಕಗಳೆಂಬ ೫ ಶತಕಗಳಿವೆ. ೪-೫ ನೇ ಶತಕಗಳು ಶಿವಪೂಜಾಕಾಲದಲ್ಲಿ ಪಾರಾಯಣಕ್ಕೆ ಯೋಗ್ಯವಾಗಿವೆ. ಈ ಗ್ರಂಥವನ್ನು ಶ್ರೀ ತೋಂಟದಾರ್ಯರು ಚೆನ್ನಾಗಿ ತಿಳಿಯುವಂತೆ ರಚಿಸಿರುವರು. ಇದರ ಕ್ರಯ ಪ್ರತಿ ೧ ಕ್ಕೆ ೦-೬-೦ ವಿ ಪಿ. ಮೂಲ್ಕ ೦-೮-೦.

ಮುಕ್ತ್ಯಂಗನ ಕಂಠಮಾಲೆ ಮತ್ತು ಜ್ಯೋತಿರ್ಮಯಶಾಂಭವಿ ಎಂಬೀವಚನ ಗ್ರಂಥಗಳು ವೀರಶೈವಸಿದ್ಧಾಂತವನ್ನು ಸುಲಭವಾಗಿ ಅಬಾಲವೃದ್ಧರಿಗೂ ಬೋಧಿಸತಕ್ಕವುಗಳಾಗಿವೆ. ಇವೆರಡೂ ಇರುವ ಪ್ರತಿ ೧ಕ್ಕೆ ೦-೪-೦ ವಿ.ಪಿ. ಮೂಲ್ಕ ೦-೬-೦.

ಶ್ರೀ ಬಸವೇಶ್ವರ ಸ್ತೋತ್ರಶತಕ—ಗುರುಬೋಧೆ, ಮನೋಬೋಧೆ, ಲಿಂಗತ್ರಿವಿಧಿ, ಶ್ರೀಬಸವೇಶ್ವರ ಸ್ತೋತ್ರ ಎಂಬೀನಾಲ್ಕು ಒಂದೇ ಪುಸ್ತಕದಲ್ಲಿ ಮುದ್ರಿತವಾಗಿವೆ. ಶಿವಪೂಜಾಕಾಲದಲ್ಲಿ ಪಾರಾಯಣಕ್ಕೆ ಯೋಗ್ಯವಾಗಿವೆ. ಕ್ರಯ ಪ್ರತಿ ೧ ಕ್ಕೆ ೦-೩-೦ ವಿ.ಪಿ ಮೂಲಕ ೦-೫-೦.

ಮೇಲ್ಕಂಡ ನಾಲ್ಕು ಪುಸ್ತಕಗಳನ್ನು ಒಂದೇಸಾರಿ ತರಿಸಿಕೊಳ್ಳುವವರಿಗೆ ಟಪಾಲ್ ಖರ್ಚು ಸಹ ಸೇರಿ ೧-೧೦-೦.

ರಖಂವಾರ್ ವಾಚ್‌ಗಳ ಕ್ರಯದ ತಪ್ಸೀಲ್.

ರಾಸ್ಕೋಪ್ ಸಿಸ್ಟಂವಾಚ್ ೧ ಕ್ಕೆ ೨-೮-೦ ಗನ್‌ಮೆಟಲ್ ವಾಚ್ ೧ಕ್ಕೆ ೩-೮-೦, ಡಿಟೋ ನಮೂನೆ ಚಿಕ್ಕಸೈಜ್ ವಾಚ್ ೧ ಕ್ಕೆ ೪-೪-೦, ಸ್ಪೆಷಲ್ ಸರ್ವಿಸ್ ಚಿಕ್ಕ ಸೈಜ್ ವಾಚ್ ೧ ಕ್ಕೆ ೫-೪-೦, ಬರ್ಮಾ ಟೈಂಪೀಸ್ ೧ ಕ್ಕೆ ೧-೪-೦ ಡಿಟೋ ಅಲಾರಂ ಇರತಕ್ಕದ್ದು ೨-೪-೦ ಡಿಟೋ ರಖಂವಿನಲ್ಲಿ ಘಂಟೆ ನಿಮಿಷ ಸೆಕೆಂಡ್ ತೋರಿಸಿ ಅಲಾರಂ ಸಹ ಇದ್ದು ತಾರೀಖು ಕೂಡ ತೋರಿಸತಕ್ಕ ದೊಡ್ಡ ಟೈಂಪೀಸ್ ೧ ಕ್ಕೆ ೩-೪-೦, ಅನಸೋನಿಯಾ "ಬಿ" ಟೈಂಪೀಸ್ ೧ ಕ್ಕೆ ೨-೮-೦.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್. ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೫—೦
ಸಟೀಕ ನಂದೀವ್ರತ	೦—೪—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸಪುಸ್ತಕಗಳು.

139

ಬಸವರಾಜವಿಜಯಂ— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ- ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸೂಕ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ ವರ್ಷದ ಚಂದಾ ೨-೮-೦.

ಎಂ. ಆರ್. ಕರಿಬಸವಶಾಸ್ತ್ರಿ

ಸಮಸ್ತ ವೀರಶೈವಬಾಂಧವರಿಗೆ ವಿದಿತಪಡಿಸುವುದೇನೆಂದರೆ– ಕಳೆದವರ್ಷ ನಿಪ್ಪಾಣಿಯಲ್ಲಿ ಕೂಡಿದ್ದ ೩ ನೆಯ ವೀರಶೈವಮಹಾಸಭೆಯ ರಿಪೋರ್ಟು ಬುಕ್ಕುಗಳು ಮುದ್ರಿತವಾಗಿ ಕ್ರಯಕ್ಕೆ ಸಿದ್ಧವಾಗಿರುವುವು. ಈ ಸಾರೆಯ ಬುಕ್ಕುಗಳು ಒಳ್ಳೆಯ ಅಪ್ರತಿಮವಾಗಿಯೂ, ಅಚ್ಚುಕಟ್ಟಾಗಿಯೂ ಬರೆದಿದ್ದು, ಅದರಲ್ಲಿ ನಮ್ಮ ಸಮಾಜದ ಆಧಾರಸ್ತಂಭಗಳಂತಿರುವ ಪ್ರತಿಯೊಬ್ಬ ಮುಖಂಡರ ಭಾವಚಿತ್ರಗಳೂ ಪ್ರತ್ಯೇಕವಾಗಿ ಸೇರಿಸಲ್ಪಟ್ಟಿರುವುವು. ಮೇಲಾಗಿ ಪ್ರತಿಗಳು ವಿಕ್ರಯಕ್ಕೆ ಒಂದೇ ನೂರು ಇರುವುದರಿಂದ ಹಿಂದಿನಿಂದ ಬೇಡುವವರಿಗೆ ಪ್ರತಿಗಳು ನಿಶ್ಚಯವಾಗಿ ಸಿಗಲಾರವು. ಕಾರಣ, ಇಷ್ಟವುಳ್ಳವರು ಮುಂಚಿತವಾಗಿಯೇ ಸ್ಪಷ್ಟವಾದ ಪತ್ರದಿಂದ ಆರ್ಡರು ಕಳುಹಿಸಬಹುದು.

ಶಿವಮೂರ್ತಿಸ್ವಾಮಿ ಕಣಬರಗಿಮಠ,
ಚೇರ್ಮನ್, ಸ್ವಾಗತಕಮಿಟಿ,
೩ ನೆಯ ಮಹಾಸಭೆ ನಿಪ್ಪಾಣಿ

ಪರಿಮಳದ್ರವ್ಯಗಳು.

ನಮ್ಮಲ್ಲಿ ಬಹುಕಾಲದಿಂದಲೂ ಅತ್ಯುತ್ತಮವಾಗಿ ತಯಾರಾಗುತ್ತಿರುವ ಊದುಬತ್ತಿಗಳು ಸೇರು ೧ ಕ್ಕೆ ೪ ಆಣೆಯಿಂದ ೧೦ ರೂ. ವರೆಗೂ ದೊರೆಯುವುವಲ್ಲದೆ, ನಾನಾತರದ ಗಂಧದಎಣ್ಣೆಗಳು, ಜವಾಜಿಗಂಧ ಅಥವಾ ಅರಗಜ, ಪುನುಗು, ಜವಾಜಿ, ಪಚ್ಚಾಂಗ, ಧೂಪದರೂಪ ಮೊದಲಾದ ಸುಗಂಧದ್ರವ್ಯಗಳೂ, ಮಲ್ಲಿಗೆ-ಸಂಪಗೆ-ರೋಜಾ ಮೊದಲಾದ ಅತ್ತರುಗಳೂ ಮತ್ತೂ ಶೃಂಗಾರಮಲಕಪೈಲ ಮೊದಲಾದುವುಗಳೂ ವಿಕರಿಗೆ ಸಿದ್ಧವಾಗಿರುವುವು. ಅಪೇಕ್ಷೆಯುಳ್ಳವರು ೫ ರೂ. ಗೆ ಕಡಿಮೆಯಿಲ್ಲದಂತೆ ಆರ್ಡರನ್ನು ಕೊಡಬೇಕು. ಇನ್ನೂ ಹೆಚ್ಚು ವಿಷಯಗಳನ್ನು ತಿಳಿಯತಕ್ಕವರು ನಮ್ಮ ಕ್ಯಾಟಲಾಗನ್ನು ತರಿಸಿ ನೋಡಬಹುದು. 39

ವಿಳಾಸ– ಎಸ್. ಕಳ್ಳಪ್ಪ, ಊದುಬತ್ತಿಷಾಪ್,
ದೊಡ್ಡಪೇಟೆ, ಬೆಂಗಳೂರು ಸಿಟಿ.

ನ್ಯಾಯದರ್ಪಣ. 20

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲಾಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯು, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಫ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸೂ, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಅಚರ ಸೆಯುಳ್ಳಿರತಕ್ಕ ನಾನಾವಿಧಗಳಾದ ದಸ್ತೈವಜು ವಗೈರೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯು ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿಇರುತ್ತವೆ.

ಬೆಲೆ ರೂ. 1—8—0. ವಿ. ಪಿ. ಮೂಲ್ಕ 1—12—0.
ಎಂ. ಎಸ್. ನಂಜಪ್ಪನವರು,
ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

27 ಸಚಿತ್ರ ಶುಕಸಪ್ತತಿ ಕಥೆಗಳು ರೂ. ೧–೮–೦ (೫೧೨ ಪುಟ) ಟಪಾಲು ಹಾಸಲು ೪ ಆಣೆ. ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ ರೂ ೧–೮–೦. (೫೭೩ ಪುಟ)

ಸಚಿತ್ರ ವಿದ್ಯಾಮಂಜರಿಕಥೆಗಳು

ವಾಚಕ ಮಹಾಶಯರುಗಳೇ! ಮೊನ್ನತಿಯು ಬೇಕಾದರೆ, ವಾಗ್ವೈಖರಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಬಿಚ್ಛೆಪಟ್ಟರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯುಳ್ಳಾಶೆಯಿದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೩೦ ಪುಟಗಳಿಂದ ಕೂಡಿದ ೬೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ ೧–೪–೦ ಟಪಾಲ್ ಹಾಸಲು ೩ ಆಣೆ.
ಈಗಲೇ ಬರೆ ನಿಮ್ಮ.ನಮ್ಮಲ್ಲಿ ಇನ್ನೂ ಅನೇಕಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.
ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಕನ್ನಡ ಇಂಡಿಯನ್ ಪೀನಲ್ ಕೋಡ್

ಇದರಿಂದ ಮೈಸೂರ್, ಮದ್ರಾಸ್, ಬೊಂಬಾಯಿಜಿಲ್ಲಾ ಕನ್ನಡಭಾಷಾ ವಾಚಕಮಹಾಶಯರಿಗೆ ತಿಳಿಸುವದೇನೆಂದರೆ–

ಶ್ರೀಮಂತ ಮೈಸೂರ್ ಗೌರ್ನರ್ ಜನರಲ್‌ರವರ ಅನುಮತಿ ಪ್ರಕಾರ ಸರ್ಕಾರ ೧೮೬೦ನೇ ಇಸವಿಯಲ್ಲಿ ಮುಂಜೂರಾದ "ಇಂಡಿಯನ್ ಪೀನಲ್ ಕೋಡ್" ಎಂಬ ಆಕ್ಟನ್ನು ಈಗ ಅನೇಕ ಜಡ್ಜಿಗಳ ಟಿಪ್ಪಣಿಗಳೊಡನೆಯೂ, ಅಪೆಂಡಿಕ್ಸುಗಳೊಡನೆಯೂ ಅಂದವಾದ ಕಾಗದದಲ್ಲಿ ಸ್ಪುಟವಾದ ಅಕ್ಷರಗಳಿಂದ ಮುದ್ರಣವಾಗಿ ಮಾರಾಟಕ್ಕೆ ಸಿದ್ಧವಾಗಿದೆ. ಈ ಆಕ್ಟಿನಲ್ಲಿ ಪ್ರತಿ ಶೇಕ್‌ಮನಿಗೂ ಫಿರ್ಯಾದಿಗಳೂ, ಅಪರಾಧಿಗಳೂ, ಪೋಲೀಸ್ ಅಧಿಕಾರಿಗಳೂ, ಮ್ಯಾಜಿಸ್ಟ್ರೇಟರುಗಳೂ ನಡಿಸಬೇಕಾದ ಆಚರಣೆಗಳೆಂದರೆ:-ನಡೆಯುವ ಮೊಕದ್ದಮೆಯನ್ನು ಯಾವ ಕೋರ್ಟಲ್ಲಿ ವಿಚಾರಣೆ ಮಾಡಬೇಕು? ವಾರಂಟಿಲ್ಲದೆ ಹಿಡಿಯಬಹುದೇ, ಹಿಡಿಯಕೂಡದೇ? ಸಮನ್ ಕೊಡತಕ್ಕದ್ದೇ, ವಾರಂಟು ಕೊಡತಕ್ಕದ್ದೇ? ಜಾಮೀನ್ ತೆಗೆದುಕೊಂಡು ಬಿಡಬಹುದೇ? ರಾಜಿಯಾಗಬಹುದೇ, ರಾಜಿಯಾಗತಕ್ಕದ್ದಲ್ಲವೇ? ಎಂಬ ತಖ್ತೆಗಳನ್ನು ವಿವರಿಸಲ್ಪಟ್ಟಿರುವುದು. ಈ ಪುಸ್ತಕವು ಸರ್ಕಾರಿ ಅಧಿಕಾರಿಗಳಿಗೂ, ಪೋಲೀಸಿನವರಿಗೂ, ಪಟೇಲ್ ಶ್ಯಾನುಭೋಗರುಗಳಿಗೂ, ವರ್ತಕರುಗಳಿಗೂ, ಜಮೀನ್ದಾರರುಗಳಿಗೂ ಇತರ ಸಮಸ್ತ ಕಸಬುದಾರರಿಗೂ, ಮಿಸ್‌ಲೇನಿಯಸ್ ಜನಗಳಿಗೂ ಉಪಯೋಗಕರವಾದದ್ದು.

ಈ ಪುಸ್ತಕದಲ್ಲಿ ಚೋರಿ, ಕಳವು, ದರೋಡೆ, ಅತಿಕ್ರಮಪ್ರವೇಶ, ಸ್ತ್ರೀಗೆ ಮಾನಭಂಗಪಡಿಸುವುದು, ಸ್ತ್ರೀಯರನ್ನು ದುರಾಚಾರಕ್ಕೆಳೆಯುವುದು, ಅಸಾಮಿ ಚೋರಿ, ಗಂಡನು ಹೆಂಡತಿ ೧೨ ವರುಷಗಳಿಗೆ ಕಡಮೆ ಪ್ರಾಯಸ್ಥಳಾಗಿರುವಾಗ್ಗೆ ಸ್ತ್ರೀಸಂಗ ಮಾಡಬಹುದೇ? ಮುಂತಾದ ಮೊಕದ್ದಮೆಗಳಲ್ಲಿ ಜಡ್ಜಿಗಳು ಕೊಟ್ಟಿರತಕ್ಕ ಅಭಿಪ್ರಾಯಗಳು ಸೂಚಿಸಲ್ಪಟ್ಟಿರುವವು. ಕನ್ನಡದಲ್ಲಿ ಇದುವರೆಗೆ ಇಂಥಾ ಪುಸ್ತಕವು ಇನ್ನೆಲ್ಲಿಯೂ ಇಲ್ಲವು.

ಕ್ರಯ ಪ್ರತಿ ೧ ಕ್ಕೆ ೨ ರೂಪಾಯಿ; ಟಪಾಲ್ ಛಾರ್ಜ್ ೪ ಆಣೆ.

ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ. ಪುಸ್ತಕಗಳ ಕ್ರಯ ಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು.

41 ನಮ್ಮ ವಿಳಾಸ– ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ.

ಕಾಶ್ಯಪ ಪಂಡಿತ ಹುಂಡಿತರ ಸಿದ್ಧೌಷಧಗಳು 5

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಊತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಕೆಮ್ಮು, ನಪ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಂಜುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ.)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈ ಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಹೇಚಾಡಬೇಡಿರಿ. ಒಂದೇಒಂದು ಬುದ್ದಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತವಿದೊಂದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುದ್ದಿಯ ಬೆಲೆ ೧—೧—೧.
ಟಪಾಲ್‌ಖರ್ಚು ಬೇರೆ.
ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ. ಮೈಸೂರು

ಗಂಧರಾಜ ನಸ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ) ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾಗಿದನ್ನೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮಿದುಳಿಗಾಗಲಿ ಕೆಡುಕಿಲ್ಲ. ಒಂದು ಚುಟಿಕೆ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜನ್ ಡಬ್ಬಿಗೆ ೧–೧೪–೦

ಉತ್ತಮವಾದ ನಸ್ಯದಪುಡಿ.

ಘಮಘಮಿಸುವ ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨–೮–೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವೆ. ನೀವುಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೧–೧೪–೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಸೆಟ್ಟಿ,
ಗೋಪಸೆಟ್ಟಿಪುರ, ಹನೂರು ಪೋಸ್ಟ್
16 ಕೊಳ್ಳೇಗಾಲದ ತಾಲ್ಲೂಕು.

೧೯೧೪ ನೆಯ ಇಸವಿ ಜೂನ್ ತಾ॥ ೮ ರಿಂದ ೧೯೧೪ ನೆಯ ಜೂನ್ ತಾ॥ ೧೪ರವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ ನೆಯ ಆನಂದನಾಮ ಸಂ॥ ದ ಜ್ಯೇಷ್ಠ ಶು॥ ಪೌರ್ಣಮಿಯಿಂದ ಜ್ಯೇಷ್ಠ ಬ॥ ಷಷ್ಠಿವರೆಗಿನ ಪಂಚಾಂಗ.

ತಾ॥	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ತೇದಿ ವೃಷ
8	೧ಸೋ	ಚ	11-57	ಜ್ಯೇ	38-4	26
9	ಮಂ	ಪಾ	7-41	ಮೂ	36-8	27
10	೨ಬುಧ	ಬಿ	4-20	ಪೂಷಾ	35-10	28
11	ಗುರು	ತ	2-2	ಉ॥ಷಾ	35-19	29
12	೩ಶುಕ್ರ	ಚ	0-55	ಶ್ರ	36-48	30
13	ಶನಿ	ಪಂ	1-2	ಧ	39-19	31
14	೪ಭಾ	ಷ	2-25	ಶ	48-11	1

(1) ಸಾವಿತ್ರೀವ್ರ॥ ಭೂಮಪೂರ್ಣಿಮಾ, (2) ಮಾರಹಳ್ಳಿ ನೃಸಿಂಹಸ್ವಾಮಿರಥ॥ ಕಂಚಿ ವರದರಾಜಸ್ವಾಮಿರಥ॥ (3) ಶ್ರೀ ಕೃಷ್ಣ ಬ್ರಹ್ಮತಂತ್ರ ಪರಕಾಲಸ್ವಾಮಿಗಳ ತಿರುನಕ್ಷತ್ರಂ. (4) ರಾಕ್ಯಾಂಮದಶೀತಿ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED M NO 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ವಾರ್ಷಿಕ ಚಂದಾ ೧–೦–೦ } ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈ ಘನಪಥಕೃತಾನತಾರಾ ಪಕ್ಷ್ಯಜ್ಞನಹೃತ್ತಮೋಹರಾಜೀಯಾತ್, ಶ್ರೀಮತ್ಕೃಷ್ಣನೃಪಾಲನುತ್ತಮಪಶಲಾಲೋಲಂಸುಧೀಪುಂಗವ, ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ। ಸೀಮಾತೀತಯಶಃಪ್ರತಾಪವಿಪುಲಂಸದ್ವೃತ್ತಮಾಲಾಕುಲಂ। ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ। { ಅಂಚೆವೆಚ್ಚ ಸೇರಿ ೧–೧೪–೦

REGISTERED, M NO 124

ಸಂಪುಟ ೨೩) ಮೈಸೂರ್ ಸ್ಟಾರ್ ಸೆ ೧೯೧೪ ನೆಯ ಇಸವಿ ಜೂನ್ ತಾರೀಖು ೧೫ ನೆಯ ಸೋಮವಾರ. (ಸಂಚಿಕೆ ೨೫

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.
ಈಗತಾನೆ ಶೀಮೆಯಿಂದ ಬಂದಿರತಕ್ಕ ರಖಂವಾರ್ ಹೊಸ ಬೈಸ್ಕಲ್‌ಗಳು. 20

ಪ್ರತಿಯೊಂದು ಬೈಸ್ಕಲಿನ ಸಂಗಡಲೂ ಅತ್ಯವಶ್ಯಕವಾಗಿ ರಿಪೇರಿಮಾಡಿಕೊಳ್ಳಲು ಬೇಕಾದ ಆಯುಧಗಳೂ ಮತ್ತೂ ಆಯುಧಗಳನ್ನಿಡತಕ್ಕ ಶೀಮೇತಯಾರಿ ಚರ್ಮದ ಚೀಲ ೧. ಗಾಳಿ ತುಂಬುವ ಪಂಪ್ ೧. ಸುಂದರವಾದ ಬೆಲ್ ೧. ಇಷ್ಟು ಸಾಮಾನುಗಳನ್ನೂ ಮುಫತ್ತು ಕೊಡಲಾಗುತ್ತೆ.

ರಾಯಲ್ ಮೇಲ್ ಬೈಸ್ಕಲ್—ಕೇಂಬ್ರಿಡ್ಜ್ ಟೈರ್, ಡನ್‌ಲಪ್‌ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೮೫–೦–೦.
ಬ್ರಿಟಾನಿಕ್ ಬೈಸ್ಕಲ್—ಡನ್‌ಲಪ್ ಟೈರ್, ಡನ್‌ಲಪ್ ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೬೦–೦–೦.
ರಾಯಲ್‌ಕಿಂಗ್ ಬೈಸ್ಕಲ್—ಕೇಂಬ್ರಿಡ್ಜ್ ಟೈರ್, ಡನ್‌ಲಪ್ ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೮೦–೦–೦.
ರಾಯಲ್ ನೈಟ್ ಬೈಸ್ಕಲ್—ಪಾಮರ್ ಟೈರ್, ಪಾಮರ್ ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೬೨–೦–೦.
ರಾಯಲ್ ಆರ್‌ಚರ್ ಬೈಸ್ಕಲ್—ಬುಕಾನಿಯರ್ ಟೈರ್ ಬುಕಾನಿಯರ್ ಟ್ಯೂಬ್ ಹಾಕಿದ್ದು ೩೦–೦–೦.
ಬಿ. ಎಸ್. ಎ. ಫಿಟಿಂಗ್ ಬೈಸ್ಕಲ್, ಡನ್‌ಲಪ್‌ಟೈರ್, ಡನ್‌ಲಪ್‌ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೧೩೫–೦–೦.
ಬೈಸ್ಕಲ್ ಬಿಡಿಸಾಮಾನುಗಳೂ ಸದಾ ನಮ್ಮಲ್ಲಿ ವಿಕರಿಗೆ ಸಿದ್ಧವಾಗಿವೆ. ಬೈಸ್ಕಲ್ಲಿಗೆ ಆರ್‌ಡರ್‌ಮಾಡತಕ್ಕವರು ೧೦–೦–೦ ರೂಪಾಯಿ ಅಡ್ವಾನ್ಸು ಕಳುಹಿಸಬೇಕು. ಬಾಕಿ ಮೊಬಲಿಗೆ ರೈಲ್ವೆ ರಶೀದಿಯನ್ನು ವಿ.ಪಿ.ಮಾಡಲಾಗುತ್ತೆ.

"ಜುಮಲೆ" ಇದೊಂದು ಅತ್ಯಾಶ್ಚರ್ಯಕರವಾದ ಹೊಸಕಾದಂಬರಿ (ಬಂಗಾಳಿ ನಾವೆಲ್) ಓದುವುದಕ್ಕೆ ಕುಳಿತರೆ ಮುಗಿಸುವವರೆಗೂ ಮನಸ್ಸು ನಿಲ್ಲುವುದಿಲ್ಲಾ. ಓದುತ್ತಓದುತ್ತಾ ಹೊಸಹೊಸ ಭಾವಗಳು ತಲೆದೋರಿ ರೋಮಾಂಚವುಂಟಾಗುವುದು. ವಾಚಕರೆ! ಗೋರಿಯಲ್ಲಿದ್ದ ಹೆಂಗಸಿನ ಶವಕ್ಕೆ ಪ್ರತಿಯಾಗಿ ಗಂಡುಸಿನ ಶವವಿರುವುದನ್ನು ನೋಡುತ್ತಲೇ ಆಶ್ಚರ್ಯಸಮುದ್ರದಲ್ಲಿ ಮುಳುಗಿಹೋಗುವಿರಿ. ಕ್ರಯ ಪ್ರತಿ ೧ ಕ್ಕೆ ೦–೬–೦ ಪೋಸ್ಟೇಜು ೦–೨–೦.

ಹೊಸ ಪುಸ್ತಕಗಳು.

ವೀರಶೈವರಿಗೂ ಇತರರಿಗೂ ಸಹ ಅತ್ಯವಶ್ಯಕಬೇಕಾದ್ದು.

ಮನೋವಿಜಯ—ವೇದವೇದಾಂಗ ವೇದಾಂತ ಪುರಾಣ ಇತಿಹಾಸಾದಿಗಳಲ್ಲಿ ಬಹು ಪ್ರವೀಣರಾಗಿಯೂ ಅನೇಕ ಮತಸಿದ್ಧಾಂತದಲ್ಲಿ ಕುಶಲರಾಗಿಯೂ ಇದ್ದ ಶ್ರೀ ಗುರುಸ್ವಾಮಿಗಳವರಿಂದ ವೀರಶೈವರಿಗೂ ಅದ್ವೈತಮತಸ್ಥರಿಗೂ ಬಹು ಪ್ರಯೋಜನವಾಗಿರುವಂತೆ ಮನೋಹರವಾಗಿ ರಚಿಸಲ್ಪಟ್ಟಿದೆ. ಇದಕ್ಕೆ ಪರಮಪೂಜ್ಯರಾದ ಶ್ರೀ ತೋಂಟದ ಸಿದ್ಧಲಿಂಗಸ್ವಾಮಿಗಳು ಸಮಸ್ತರಿಗೂ ಸುಲಭವಾಗಿ ತಿಳಿಯುವಂತೆ ತಾತ್ಪರ್ಯವನ್ನು ಸ್ವಾರಸ್ಯವಾಗಿ ಬರೆದಿದ್ದಾರೆ. ಸರ್ವರೂ ಅತ್ಯವಶ್ಯಕ ಓದಬೇಕಾದ್ದು. ಇದರ ಕ್ರಯ ಪ್ರತಿ ೧ ಕ್ಕೆ ೦–೮–೦ ವಿ.ಪಿ. ಮೂಲಕ ೧೧ ಆಣೆ.

ಶತಕಪಂಚಕ—ಇದರಲ್ಲಿ ನಿರಂಜನಶತಕ, ಸಿದ್ಧಲಿಂಗೇಶ್ವರಶತಕ, ನಿಷ್ಕಲಶತಕ, ಉಮಾಮಹೇಶ್ವರಶತಕ, ಸಂಗಮೇಶ್ವರ ಶತಕಗಳೆಂಬ ೫ ಶತಕಗಳಿವೆ. ೪-೫ ನೇ ಶತಕಗಳು ಶಿವಪೂಜಾಕಾಲದಲ್ಲಿ ಪಾರಾಯಣಕ್ಕೆ ಯೋಗ್ಯವಾಗಿವೆ. ಈ ಗ್ರಂಥವನ್ನು ಶ್ರೀ ತೋಂಟದಾರ್ಯರು ಚೆನ್ನಾಗಿತಿಳಿಯುವಂತೆ ರಚಿಸಿರುವರು. ಇದರ ಕ್ರಯ ಪ್ರತಿ ೧ ಕ್ಕೆ ೦–೬–೦ ವಿ ಪಿ. ಮೂಲ್ಕ ೦–೮–೦.

ಮುಕ್ತ್ಯಂಗನ ಕಂಠಮಾಲೆ ಮತ್ತು ಜ್ಯೋತಿರ್ಮಯಶಾಂಭವಿ ಎಂಬೀವಚನ ಗ್ರಂಥಗಳು ವೀರಶೈವಸಿದ್ಧಾಂತವನ್ನು ಸುಲಭವಾಗಿ ಅಬಾಲವೃದ್ಧರಿಗೂ ಬೋಧಿಸತಕ್ಕವುಗಳಾಗಿವೆ. ಇವೆರಡೂ ಇರುವ ಪ್ರತಿ ೧ಕ್ಕೆ ೦-೪-೦ ವಿ.ಪಿ. ಮೂಲ್ಕ ೦-೬-೦.

ಶ್ರೀ ಬಸವೇಶ್ವರ ಸ್ತೋತ್ರಶತಕ–ಗುರುಬೋಧೆ, ಮನೋಬೋಧೆ, ಲಿಂಗತ್ರಿವಿಧಿ, ಶ್ರೀಬಸವೇಶ್ವರ ಸ್ತೋತ್ರ ಎಂಬೀನಾಲ್ಕು ಒಂದೇ ಪುಸ್ತಕದಲ್ಲಿ ಮುದ್ರಿತವಾಗಿವೆ. ಶಿವಪೂಜಾಕಾಲದಲ್ಲಿ ಪಾರಾಯಣಕ್ಕೆ ಯೋಗ್ಯವಾಗಿವೆ. ಕ್ರಯ ಪ್ರತಿ ೧ಕ್ಕೆ ೦-೩-೦ ವಿ.ಪಿ ಮೂಲಕ ೦-೫-೦.

ಮೇಲ್ಕಂಡ ನಾಲ್ಕು ಪುಸ್ತಕಗಳನ್ನು ಒಂದೇಸಾರಿ ತರಿಸಿಕೊಳ್ಳುವವರಿಗೆ ಟಪಾಲ್ ಖರ್ಚೂ ಸಹ ಸೇರಿ ೧-೧೦-೦.

ರಖಂವಾರ್ ವಾಚ್‌ಗಳ ಕ್ರಯದ ತಪ್ಸೀಲ್.

ರಾಸ್ಕೋಪ್ ಸಿಸ್ಟಂವಾಚ್ ೧ ಕ್ಕೆ ೨-೮-೦ ಗನ್‌ಟೈಂ ವಾಚ್ ೧ಕ್ಕೆ ೩-೮-೦, ಡಿಟೋ ನಮೂನೆ ಚಿಕ್ಕಸೈಜ್ ವಾಚ್ ೧ ಕ್ಕೆ ೪–೪-೦, ಸ್ಪೆಷಲ್ ಸರ್ವಿಸ್ ಚಿಕ್ಕ ಸೈಜ್ ವಾಚ್ ೧ ಕ್ಕೆ ೫-೪-೦, ಬರ್ಮಾ ಟೈಂಪೀಸ್ ೧ ಕ್ಕೆ ೧-೪-೦ ಡಿಟೋ ಅಲಾರಂ ಇರತಕ್ಕದ್ದು ೨-೪-೦ ಡಿಟೋ ರಖಂಮಿನಲ್ಲಿ ಘಂಟೆ ನಿಮಿಷ ಸೆಕೆಂಡ್ ತೋರಿಸಿ ಅಲಾರಂ ಸಹ ಇದ್ದು ತಾರೀಖು ಕೂಡ ತೋರಿಸತಕ್ಕ ದೊಡ್ಡ ಟೈಂಪೀಸ್ ೧ ಕ್ಕೆ ೩-೪–೦, ಅನ್‌ಸೋನಿಯಾ "ಬಿ" ಟೈಂಪೀಸ್ ೧ ಕ್ಕೆ ೨-೮-೦.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್. ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧–೦–೦
ಪರವಾದಿಗಜಾಂಕುಶತಾರಾವಳಿ	೦–೮–೦
ಶಿವಪೂಜಾವಿಧಿಃ	೦–೮–೦
ಚಾರುಶೀಲೆಚರಿತ್ರೆ	೦–೫–೦
ಸಟೀಕ ನಂದೀವ್ರತ	೦–೪–೦
ಸಟೀಕ ವಿವಾಹವಿಧಿ	೦–೬–೦
ವಿವೇಕಮಂಜರಿ [೨ನೆಯ ಭಾಗ]	೦–೩–೦
ವ್ರತಪಂಚಕ	೦–೨–೦
ಷಟ್‌ಸ್ಥಲವಿದ್ಯಾ (ಮುಕ್ತಿಸಾಧನ)	೦–೨–೦
ಗುರುಶಂಕರೇಶ್ವರಶತಕಂ	೦–೧–೦

ಅಂಚೆಯವೆಚ್ಚ ಬೇರೆ.

ಹೊಸ ಪುಸ್ತಕಗಳು.

139

ಬಸವರಾಜವಿಜಯಂ— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ- ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸೂಕ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ ವರ್ಷದ ಚಂದಾ ೨-೮-೦.

ಎ. ಆರ್. ಕರಿಬಸವಶಾಸ್ತ್ರಿ

ಪ್ರ ಕ ಟ ಣೆ.

ರಾಜಧಾನಿಯಲ್ಲಿ ಮುದ್ರಣ ಕೆಲಸವನ್ನು ಬಹು ಅಂದವಾಗಿ ಮಾಡುವುದರಲ್ಲಿ ಪ್ರಸಿದ್ಧಿಯನ್ನು ಹೊಂದಿರುವ ಕಾರ್ಕ್ ಪ್ರೆಸ್ಸನ್ನು ನಾವು ಕ್ರಯಕ್ಕೆ ತೆಗೆದುಕೊಂಡಿರುವೆವು. ಇಲ್ಲಿ ಇಂಗ್ಲೀಷು ಮತ್ತು ಕನ್ನಡದ ಭಾಷೆಗಳಲ್ಲಿ ಮುದ್ದಾದ ಅಕ್ಷರಗಳಿಂದ ವಿಜಿಟಿಂಗ್ ಕಾರ್ಡ್, ಲಗ್ನಪತ್ರಿಕೆಗಳು ಪಂಚಾಂಗಗಳು ಮೊದಲಾಗಿ ಪುಸ್ತಕಗಳವರೆಗೆ ಎಲ್ಲಾ ಮುದ್ರಣಕಾರ್ಯವೂ ಬಹು ಅಂದವಾಗಿಯೂ ಕ್ಲಪ್ತಕಾಲದಲ್ಲೂ ನಾನಾ ಬಣ್ಣಗಳಲ್ಲಿ ಮಾಡಿ ಕೊಡಲ್ಪಡುವುವಲ್ಲದೆ ಎಲ್ಲ ವಿಧವಾದ ಬೈಂಡಿಂಗ ಕಾರ್ಯವೂ ಮಾಡಲ್ಪಡುವುದು. ಈಗ ವಿವಾಹ ಲಗ್ನಕಾಲವಾದುದರಿಂದ ಲಗ್ನಪತ್ರಿಕೆಗಳನ್ನು ಕಪ್ಪು, ಕೆಂಪು, ಹಸರು ಮೊದಲಾದ ಬಣ್ಣದಶಾಯಿನಲ್ಲಿ ಮತ್ತು ಗಿಲೀಟನಲ್ಲಿ ಕಾಲಕ್ಕೆ ಸರಿಯಾಗಿ ಮಾಡಿಕೊಡಲೇರ್ಪಡಿಸಿರುತ್ತೇವೆ. ಇಷ್ಟವುಳ್ಳವರು ನಮಗೆ ಬರೆದು ಬೇಕಾದ ವಿಷಯವನ್ನು ತಿಳಿಯಬಹುದು.

ವೈ. ವಿರೂಪಾಕ್ಷಯ್ಯ,
ಪ್ರೊಪ್ರೈಟರ್
ಕಾರ್ಕ್ ಪ್ರೆಸ್, ಮೈಸೂರು.

ಉಪಯುಕ್ತವಿಷಯ.

(ಹುಚ್ಚುನಾಯಿ ಕಡಿಯುವುದು.)

ಹುಚ್ಚುನಾಯಿಯಿಂದ ಕಡಿಯಲ್ಪಟ್ಟ ಜನರ ಸಂಖ್ಯೆಯು ದಿನೇದಿನೆ ಹೆಚ್ಚುತ್ತಿದೆ. ಇದರಿಂದ ಅನೇಕ ಜನರು ಮತ್ತು ಪ್ರಾಣಿಗಳು ಪ್ರಾಣವನ್ನು ಕಳೆದುಕೊಳ್ಳುತ್ತಿರುವರು. ಅದು ಕಾರಣ ಇದರವಿಚಾರವಾಗಿ ಸ್ವಲ್ಪಮಟ್ಟಿಗಾದರೂ ಸಾಧಾರಣ ಜನರಿಗೂ ತಿಳಿಯುವಂತೆ ಕೆಲ ಸಂಗತಿಗಳನ್ನು ಇಲ್ಲಿ ವ್ಯಕ್ತಪಡಿಸಬೇಕೆಂಬುದೇ ನನ್ನ ಅಭಿಲಾಷೆ. ಈ ವಿಷಯವು ಸೂಕ್ಷ್ಮವಾದುದಾದರೂ ಪ್ರಾಣಾಪಾಯವನ್ನು ಬಹುಮಟ್ಟಿಗೆ ಹೋಗಲಾಡಿಸತಕ್ಕುದಾದ ಪ್ರಯುಕ್ತ ಎಲ್ಲರೂ ಲಕ್ಷ್ಯದಲ್ಲಿಡಬೇಕೆಂದು ಬೇಡುತ್ತೇನೆ.

ಕೆಲವುಮಂದಿಗಳು ಸಾಧಾರಣ ನಾಯಿಯಿಂದ ಕಡಿಯಲ್ಪಟ್ಟರೂ ಹುಚ್ಚುನಾಯಿಯಿಂದ ಕಡಿಯಲ್ಪಟ್ಟಿರಬಹುದೆಂಬ ಶಂಕೆಯಿಂದ ಬಹಳ ತಸ್ತರಿಸುವರು. ಮತ್ತೂ ಇದಕ್ಕಾಗಿ ಎಲ್ಲವಿಧದ ಚಿಕಿತ್ಸೆಗಳನ್ನೂ ಪಡೆಯುವರು. ಆದರೆ ಇನ್ನು ಅನೇಕಜನರು ಹುಚ್ಚುನಾಯಿಯಿಂದ ಕಡಿಯಲ್ಪಟ್ಟರೂ ಕೂಡ ಸಾಧಾರಣವಾದ ನಾಯಿಯಿಂದ ಕಡಿಯಲ್ಪಟ್ಟಿರಬಹುದೆಂದು ಅಲಕ್ಷಿಸಿ, ಕಡಿದ ಜಾಗಕ್ಕೆ ಕೊಂಚ ಹಸುರಿನ ರಸ ಅಥವಾ ಕಾದ ಕಬ್ಬಿಣದ ಬರೆ—ಇತ್ಯಾದಿ ಚಿಕಿತ್ಸೆಗಳನ್ನು ಮಾಡಿ ತತ್ಕಾಲದಲ್ಲಿ ವ್ಯಾಧಿಯು ತೊಲಗಿತೆಂದು ನಿರ್ಭಯದಿಂದ ಸುಮ್ಮನಿರುವರು. ಕೆಲತಿಂಗಳ ತರುವಾಯ ಪ್ರಾಣಾಪಾಯಸ್ಥಿತಿಯು ಬಂದಾಗ್ಗೆ ಕಾರಣವನ್ನು ತಿಳಿಯದೆ ಮುಗ್ಧರಾಗಿ ಪ್ರಾಣವನ್ನೀಗುವರು. ಈ ತೊಂದರೆಗಳನ್ನು ನಿವಾರಿಸಿಕೊಳ್ಳುವುದಕ್ಕಾಗಿ ಹಾಗೆ ಕಚ್ಚಿದ ನಾಯಿಯು ಹುಚ್ಚು ಹಿಡಿದುದೆ? ಇಲ್ಲವೆ? ಎಂಬುದನ್ನು ತಿಳಿಯಬೇಕಾದುದು ಮುಖ್ಯವಿಷಯವು. ಹೇಗೆಂದರೆ:—

ಒಂದು ಹುಚ್ಚುನಾಯಿಯು ಮತ್ತೊಂದು ನಾಯಿಯನ್ನು ಈ ದಿನ ಕಡಿದಿತೆಂದು ಭಾವಿಸೋಣ; ಹೀಗೆ ಕಡಿಯಲ್ಪಟ್ಟ ನಾಯಿಯಲ್ಲಿ ರೋಗದ ಚಿಹ್ನೆಯು ತೋರಬೇಕಾದರೆ ೩ ರಿಂದ ೬ ವಾರಗಳವರೆಗೆ ಹಿಡಿಯುವುದು. ರೋಗದ ಮೊದಲನೆ ಚಿಹ್ನೆ ಯೇನೆಂದರೆ—ಇತರ ನಾಯಿಗಳನ್ನಾಗಲಿ, ಪ್ರಾಣಿಗಳನ್ನಾಗಲಿ, ಜನರನ್ನಾಗಲಿ ಕಡಿಯಲಾರಂಭಿಸುವುದು ಹೀಗೆ ಕಡಿದನಂತರ ೪—೫ ದಿನಗಳಲ್ಲಿ ಕಂಡಕಂಡಜನಗಳ ಮೇಲೂ ಪ್ರಾಣಿಗಳ ಮೇಲೂ ಬೀಳುವುದು ಬಹು ಗಟ್ಟಿಯಾಗಿ ಅರಚಿಕೊಳ್ಳುವುದು, ನೀರನ್ನು ಕಂಡರೆ ಭಯಪಡುವುದು, ವಿಪರೀತವಾಗಿ ಬಾಯಿನಿಂದ ಜೊಲ್ಲನ್ನು ಸುರಿಸುವುದು, ಕೆಳದವಡೆಯನ್ನು ಜೋತುಬಿಡುವುದು ಇತ್ಯಾದಿಚೇಷ್ಟೆಗಳು ಕೆಲನಾಯಿಗಳಲ್ಲಿ ಕಂಡುಬರುವುವು. ಕೆಲನಾಯಿಗಳಲ್ಲಿ ಮೂಕರಾಗಿ ಒಂದುಕಡೆ ಬಿದ್ದಿರುವುದು, ವಾಯುವಿನ ಚಿಹ್ನೆ, ಅಂಗಗಳ ಸೆಳೆತ, ಜ್ಞಾನಶೂನ್ಯತೆ, ಮತ್ತೂ ನೀರಿಗೆ ಭೀತಿಯನ್ನು ತೋರಿಸುವುದು—ಇವುಗಳು ಗೋಚರಿಸುವುವು. ಇವೆರಡು ತೆರದವೂ ಕೂಡ ಕೊನೆಕೊನೆಗೆ ಆಹಾರ್ಯಪದಾರ್ಥಗಳನ್ನು ತೆಗೆದುಕೊಳ್ಳುವುದಕ್ಕೂ ಕೂಡ ಶಕ್ತಿಯಿಲ್ಲದಂತಾಗುವುವು.

ಮತ್ತು ೧—೨ ನೆ ದಿನ ಅಥವಾ ೫—೬—೭ ನೆ ದಿನಗಳಲ್ಲಿ ಸಾಯುವುವು ಅಥವಾ ೧೦ ದಿನಗಳೊಳಗೆ ಯಾವದಿನವಾದರೂ ಸಾಯುವುವು. ಅಂತೂ ೧೦ ದಿನಗಳ ವರೆಗೆ ಬದುಕೆವುದು ಬಹು ಅಪರೂಪ. ಹಾಗೆ ಮನುಷ್ಯರನ್ನಾಗಲೀ ಅಥವಾ ಪ್ರಾಣಿಗಳನ್ನಾಗಲಿ ಕಡಿದ ನಂತರ ೧೦ ದಿನಗಳಿಗಿಂತಲೂ ಹೆಚ್ಚಾಗಿ ಯಾವ ನಾಯಿಯು ಬದುಕಿರುವುದೋ ಅದನ್ನು ಖಂಡಿತವಾಗಿಯೂ ಹುಚ್ಚುನಾಯಿಯಲ್ಲವೆಂದು ತಿಳಿಯಬೇಕು. ಈ ವಿಷಯವು ಬಹು ವರ್ಷಗಳಿಂದ ಶಾಸ್ತ್ರಜ್ಞರಿಂದ ಪರೀಕ್ಷಿಸಲ್ಪಟ್ಟದ್ದಾಗಿದೆ.

ಮನುಷ್ಯರಲ್ಲೂ ಕೂಡ ಹುಚ್ಚುನಾಯಿಯಿಂದ ಕಡಿಯಲ್ಪಟ್ಟು ೧೫ ದಿನಗಳಾದ ಬಳಿಕ ೭—೮ ತಿಂಗಳವರೆಗೆ (ವಿಶೇಷವಾಗಿ ಸುಮಾರು ೪೦ ದಿನಗಳಲ್ಲಿ) ರೋಗದ ಚಿಹ್ನೆಗಳು ತಲೆದೋರುವುವು. ಈ ರೋಗದ ಹೆಸರನ್ನು ಇಂಗ್ಲಿಷ್‌ನಲ್ಲಿ ಹೈಡ್ರೋಫೋಬಿಯಾ (Hydrophobia) ನೀರನ್ನು ದೃಷ್ಟಿಸಲಾಗದಿರುವುದು ಎಂದು ಕರೆಯುವರು. ರೋಗವು ಒಂದುಸಾರಿ ತಲೆದೋರಿದರೆ ಮರಣವೇ ಕೊನೆಯು. ಮತ್ತೆ ಬೇರೆ ಉಪಾಯವಿಲ್ಲ. ಮನುಷ್ಯರಲ್ಲೂ ಕೂಡ ಮೇಲೆ ಹೇಳಲ್ಪಟ್ಟ ಚಿಹ್ನೆಗಳೇ ಕಾಣಿಸಿಕೊಳ್ಳುವುವು. ಅದುಕಾರಣ, ಯಾರಾದರೂ ನಾಯಿಯಿಂದ ಕಡಿಯಲ್ಪಟ್ಟರೆ, ಆ ನಾಯಿಯನ್ನು (ಸಾಕಿದನಾಯಿ ಬೀದಿನಾಯಿ ಎಂಬ ವ್ಯತ್ಯಾಸವಿಲ್ಲದೆ) ಹಿಡಿದು, ಪ್ರತ್ಯೇಕವಾಗಿ ೧೦ ದಿನಗಳವರೆಗೆ ಕಟ್ಟಿರಬೇಕು. ಎಂದಿನಂತೆ ಅದಕ್ಕೆ ಆಹಾರೋಪಚಾರವನ್ನು ಬಹಳ ಎಚ್ಚರಿಕೆಯಿಂದ ಮಾಡಬೇಕು. ಜನಗಳಾಗಲಿ ಮಕ್ಕಳಾಗಲಿ, ಇತರ ಪ್ರಾಣಿಗಳಾಗುವೇ ಆಗಲಿ ಅದರ ಹತ್ತಿರಕ್ಕೆ ಖಂಡಿತವಾಗಿ ಹೋಗಕೊಡದು. ೧೦ ದಿನಗಳೊಳಗೆ ಆ ನಾಯಿಯು ರೋಗದ ಚಿಹ್ನೆಗಳನ್ನು ತೋರಿಸಿದರಾಗಲಿ ಮೃತಿಯನ್ನೊಂದಿದರಾಗಲೀ ಒಡನೆಯೇ ಆ ನಾಯಿಯಿಂದ ಕಡಿಯಲ್ಪಟ್ಟ ಮನುಷ್ಯನನ್ನು ಕಸೌಲಿಗೆ ಅಥವಾ ಕೂನ್ನೂರಿನಲ್ಲಿರುವ ವೈದ್ಯಾಲಯಕ್ಕೆ ಚಿಕಿತ್ಸೆಗಾಗಿ ತಾತ್ಸಾರಮಾಡದೆ ಕಳುಹಿಸಬೇಕು. ಮತ್ತು ಇದಕ್ಕಾಗಿ ಸರ್ಕಾರದವರೂ ಕೂಡ ತಕ್ಕ ಸಹಾಯವನ್ನು ಒದಗಿಸಿಕೊಡುವರು. ನಾಯಿಯಿಂದ ಕಡಿಯಲ್ಪಟ್ಟ ಒಡನೆಯೇ ಆ ಗಾಯವನ್ನು ಕಾಸಿದ ಕಬ್ಬಿಣದಿಂದ ಸುಡಬೇಕು. ಅಥವಾ ಕಾರ್ಬಾಲಿಕ್ ದ್ರಾವಕವನ್ನು ಹಚ್ಚಬೇಕು. ಹಾಗೆ ಒಂದುವೇಳೆ ನಾಯಿಯನ್ನು ಪ್ರತ್ಯೇಕವಾದ ಜಾಗದಲ್ಲಿಡಲು ಅನುಕೂಲವಿಲ್ಲವಿದ್ದರೆ ಆ ನಾಯಿಯನ್ನು ದನಗಳ ವೈದ್ಯಶಾಲೆಯಲ್ಲಿಡುವುದುತ್ತಮ. ಈ ವಿಷಯವನ್ನು ಪೊಲೀಸಿನ ಇಲಾಖೆಯವರೂ, ಮತ್ತು ಗ್ರಾಮಾಧಿಕಾರಿಗಳಾದ ಪಟೇಲರೇ ಮೊದಲಾದವರೂ ನೆನಪಿನಲ್ಲಿಡಬೇಕಾದುದು ಅತ್ಯಂತಾವಶ್ಯಕವು.

ಬೆಂಗಳೂರು
6-6-14

ವೈ. ವಿಶ್ವನಾಥಯ್ಯ,
ಎಲ್. ಎಮ್. ಅಂಡ್ ಎಸ್.

ದಕ್ಷಿಣಾಫ್ರಿಕಾದಲ್ಲಿ ಭಾರತೀಯರಿಗೆ ಹಿತವಾದ "ಬಿಲ್ಲು"

ವಿಚಾರಕಸಂಘದವರ ತೀರ್ಮಾನದ ಮೇಲೆ ಅಲ್ಲಿನ ಪ್ರಭುತ್ವದವರು ಭಾರತೀಯರಿಗೆ ಹಿಂಸಾಕರವಾಗಿದ್ದ ೩೫ ರೂ. ತೆರಿಗೆಯನ್ನು ತಪ್ಪಿಸುವುದು, ವಿವಾಹವಿಷಯಕ ನಿರ್ಬಂಧವನ್ನು ತೊಲಗಿಸುವುದು ಇತ್ಯಾದಿ ಕೆಲ ವಿಷಯಗಳ ಸಂಬಂಧದ "ಬಿಲ್ಲನ್ನು" ಅಲ್ಲಿನ ಪ್ರಜಾಪ್ರತಿನಿಧಿಸಭೆಯ ಅನುಮತಿಗಾಗಿ ತಂದು, ಅದರ ಮೊದಲನೆಯ ವಾಚನವು ಕಳೆದ ತಾ॥ ೨ ರಲ್ಲಿ ನಡೆದು ಅನುಮೋದಿತವಾಯಿತು. (ಈ ಬಿಲ್ಲಿನಲ್ಲಿ ಕಂಡಿರುವ ವಿಷಯಗಳೆಲ್ಲಾ ಶ್ರೀ॥ ಗಂಧಿಯವರಿಗೆ ಸಮ್ಮತವಾಗಿರುವುವಂತೆ) ಆದರೆ ಇದನ್ನು ವಿಧಿಯಾಗಗೊಡಿಸುವ ವಿಷಯದಲ್ಲಿ ನೆಟಾಲಿನ ಬಹುಜನ ತೋಟಗಾರರಾದ ಯೂರೋಪ್ಯರು ವಿರುದ್ಧವಾಗಿರುವರು. ಅವರೆಲ್ಲರೂ ಬಿಲ್ಲಿನ ೨ನೆಯ ವಾಚನದಸಮಯದಲ್ಲಿ ವಿರೋಧಿಸುವರೆಂದು ಭಾವಿಸಲ್ಪಟ್ಟಿದ್ದಿತು. ಅದರಂತೆಯೇ ಇದರ ೨ನೆಯ ವಾಚನವು ಕಳೆದ ತಾ॥ ೮ ರಲ್ಲಿ ನಡೆದಾಗ ಪ್ರತಿಭಟನವು ಪೂರ್ಣವಾಗಿ ನಡೆದಿತು. ಮೊಟ್ಟಮೊದಲು ಜನರಲ್ ಸ್ಮಟ್ಸ್‌ರವರು ಆ "ಬಿಲ್ಲಿನ" ವಿಷಯವನ್ನು ಕುರಿತು ಸಭಿಕರಿಗೆ ಶ್ರುತಪಡಿಸುವಾಗ—ವಿಚಾರಕಸಂಘದವರು ಕೊಟ್ಟಿರುವ ಸೂಚನೆಗಳೊಳಗೆ ಕೆಲವು ಶಾಸನರೂಪವನ್ನೈದುವುವು, ಕೆಲವು ಪರಿಪಾಲನಕ್ರಮದಲ್ಲಿ ಅನುಸರಿಸಲ್ಪಡುವುವು, ಎಂದು ಹೇಳಿ, ಭರತಖಂಡದಿಂದ ಅಲ್ಲಿಗೆ ಹೋಗಿದ್ದ ಬೆಂಜಮಿನ್ ರಾಬರ್ಟ್‌ಸನ್‌ರವರು ತಮಗೆ ಅನೇಕ ವಿಷಯಗಳಲ್ಲಿ ತಿಳಿವಳಿಕೆ ಕೊಟ್ಟರೆಂಬುದಾಗಿಯೂ, ಅವರು ಬಂದು ಹಾಗೆ ಮಾತಾಡಿದ್ದರೆ ಅನೇಕ ವಿಷಯಗಳಲ್ಲಿ ಮುಖ್ಯವಾಗಿ ಭಾರತೀಯರ ವಿವಾಹವಿಷಯದಲ್ಲಿ ತಮಗೇನೂ ತಿಳಿಯದೆ ಹೋಗುತ್ತಿದ್ದಿತೆಂತಲೂ ಹೇಳಿ, ರಾಬರ್ಟ್‌ಸನ್‌ರವರನ್ನು ಕೊಂಡಾಡಿದರು. ಬಳಿಕ—ಈಗ ತಾವು ಮಾತನಾಡಿದೆಂದಿರುವ ವಿವಾಹವಿಷಯಕವಾದ ಮಾರ್ಪು ಮಹಮ್ಮದೀಯರಿಗೆ ತೃಪ್ತಿಕರವಾಗಿಲ್ಲವೆಂದೂ, ಮಾರಿಷಸ್‌ದ್ವೀಪದಲ್ಲಿ ಮಹಮ್ಮದೀಯರಿಗೆ ೪ ಮಂದಿ ಹೆಂಗುಸರನ್ನು ಮದುವೆಯಾಗಲು ಅವಕಾಶವಿರುವುದಾದಕಾರಣ ಈ ವಿಷಯವಾಗಿ ಇನ್ನು ಕೆಲಸಂಗತಿಗಳನ್ನು ನಾವು ವಿಚಾರಮಾಡುತ್ತಲಿದ್ದೇವೆಂತಲೂ, ಹೇಳಿದರು. (ಈಗಿನ ಹೊಸಬಿಲ್ಲಿನಪ್ರಕಾರ ಅಲ್ಲಿನ ಭಾರತೀಯರ ಪತ್ನಿಯರು ಇನ್ನು ಮುಂದೆ ಭರತಖಂಡಕ್ಕೆ ನಿರಾತಂಕವಾಗಿ ಹೋಗಿಬರಬಹುದಾಗಿದೆ. ಹಾಗೆ ಹೋಗುವ ಕಾಲದಲ್ಲಿ ತಾವು ಆ ದೇಶದಲ್ಲಿ ಸಂಪಾದಿಸಿದ್ದ ಹಣಕಾಸುಗಳನ್ನೂ ತೆಗೆದುಕೊಂಡು ಹೋಗಬಹುದಾಗಿದೆ.) ಈ ಏರ್ಪಾಟಿನಿಂದ ಹಲವು ತೊಂದರೆಗಳು ಸಂಭವಿಸುವುವೆಂದು ನೆಟಾಲಿನ ಪ್ರತಿನಿಧಿಗಳನೇಕರು ನುಡಿಯುತ್ತಿರುವರೆಂದು ಹೇಳಿದುದಲ್ಲದೆ, ಈಗಿನ ಸಭೆಯು ಮುಗಿಯುವುದರೊಳಗಾಗಿ ಈ "ಬಿಲ್ಲನ್ನು" ಅನುಮೋದಿಸುವುದಕ್ಕೆ ಸಭಿಕರೆಲ್ಲರೂ ಮುಖ್ಯವಾಗಿ ನೆಟಾಲಿನ ಪ್ರತಿನಿಧಿಗಳು ತಕ್ಕ ಸಹಾಯವನ್ನು ಮಾಡಬೇಕೆಂದು ಜನರಲ್‌ಸ್ಮಟ್ಸ್‌ರವರು ಕೋರಿಕೊಂಡರು. ಮತ್ತೂ ಇದುವರೆಗೆ ದಕ್ಷಿಣಾಫ್ರಿಕಾದಲ್ಲಿ ಭಾರತೀಯರಿಗೆ ಉಂಟಾಗುತ್ತಿದ್ದ ತೊಂದರೆಗಳೇ ಈಗ ಕೆನಡಾದಲ್ಲಿ ಸಂಭವಿಸುತ್ತಿರುವುದಕ್ಕಾಗಿ ನಾನು ವಿಷಾದಿಸುತ್ತೇನೆ ಎಂದು ಕೂಡ ಹೇಳಿದರು.

ಬಳಿಕ ವಿರುದ್ಧಪಕ್ಷದವರ ವಾದಾನುವಾದಗಳು ಆರಂಭಿಸಿದುವು. ಅವರ ಹೇಳಿಕೆಗಳ ಮುಖ್ಯಾಂಶವೇನಾಗಿದ್ದಿತೆಂದರೆ—೩೫ ರೂ.ನ ತಲೆಗಂದಾಯವನ್ನು ತೆಗೆದುಬಿಡುವುದರಿಂದ ಭಾರತೀಯರು ನಮ್ಮಮೇಲೆ ಸ್ಪರ್ಧಿಸುವುದು ಹೆಚ್ಚಾಗುವುದು. ನೆಟಾಲೆಲ್ಲಾ ಭಾರತೀಯರಿಂದಲೇ ತುಂಬಿಹೋಗುವುದು. ಈ ನೂತನವಿಧಿಯಿಂದ ಆಂಗ್ಲಸಾಮ್ರಾಜ್ಯಕ್ಕೆ ಯಾವವಿಧವಾದ ಪ್ರಯೋಜನವೂ ಇಲ್ಲ. ಇದುವರೆಗಿದ್ದ ೩೫ ರೂ.ನ ಕಂದಾಯದ ಭಾರದಿಂದ ದಿನಕ್ರಮೇಣ ಅವರ ಸಂಖ್ಯೆಯು ಇಲ್ಲಿ ಕಡಿಮೆಯಾಗಲು ಅವಕಾಶವಿರುತ್ತಿದ್ದಿತು. ಇನ್ನು ಅದು ತಪ್ಪಿಹೋಗುವುದು. ಈಗ ಅವರ ಪ್ರಾರ್ಥನೆಯಂತೆ ಈ ಸೌಕರ್ಯವನ್ನು ಕಲ್ಪಿಸಿಕೊಟ್ಟರೆ, ಇನ್ನು ಮುಂದೆ ಇದಕ್ಕೂ ಹೆಚ್ಚಿನ ಸೌಕರ್ಯಗಳನ್ನು ಅವರು ಕೋರುವರು. ಭಾರತೀಯರು ರಾಜಕೀಯೋದ್ದೇಶದಿಂದ ಗುಂಪುಕಟ್ಟಿ ಕೆಲಸಮಾಡುತ್ತಿದ್ದಾರೆ. ಸರ್ಕಾರದಮೇಲೆ ಕತ್ತಿಕಟ್ಟಿ ತಾವು ಅಧಿಕಾರವನ್ನು ಸಂಪಾದಿಸಬೇಕೆನ್ನುತ್ತಿರುವಾಗ ಅಂಥ ಕಪ್ಪುಜನರಿಗೆ ಬಗ್ಗಿಹೋಗುವುದು ಅನುಚಿತವು. ನಾವು ಈಗ ೩೫ ರೂ.ನ ತಲೆಗಂದಾಯವನ್ನು ತೆಗೆದುಬಿಟ್ಟರೆ, ಪ್ರಭುತ್ವದವರು ಇದುವರೆಗೆ ಆ ಕಂದಾಯದಿಂದ ಭಾರತೀಯರಿಗೆ ಅನ್ಯಾಯವನ್ನು ಮಾಡಿದರೆಂದು ಅರ್ಥವಾಗುವುದು, ಮತ್ತೂ ಭಾರತೀಯರಿಗೆ ನಾವು ಹೀಗೆ ಸೌಕರ್ಯವನ್ನು ಮಾಡಿದರೆ, ಇಲ್ಲಿನ ಅನಾದಿನಿವಾಸಿಗಳಾದ ನೀಗ್ರೋಗಳು ನಮ್ಮ ಸರ್ಕಾರವನ್ನು ಬಲಹೀನವಾದುದೆಂದು ತಿಳಿದುಕೊಂಡು, ನಾಳೆಯಿಂದ ಅವರೂ ಕೂಡ ತಮ್ಮ ಮೇಲಣ ಕಂದಾಯವನ್ನು ತಪ್ಪಿಸಿಕೊಡಬೇಕೆಂದು ಕೇಳುವರು. ಇಲ್ಲಿರುವ ಭಾರತೀಯಪ್ರಮುಖರು ಭಯಂಕರವಾದ ವಿಪ್ಲವವನ್ನುಂಟುಮಾಡತಕ್ಕವರು; ಅದುಕಾರಣ, ಅವರನ್ನು ಗಡೀಪಾರುಮಾಡಬೇಕಲ್ಲದೆ ಈಗ ನೂತನವಿಧಿಯನ್ನು ಮಾಡಬೇಕಾದುದಿಲ್ಲ. ಮುಂದೆ ಭಾರತೀಯ ಕೂಲಿಗಾರರು ಇಲ್ಲಿಗೆ ಬರದಂತೆಯೂ, ಈಗ ಇಲ್ಲಿರತಕ್ಕವರು ಹೊರಟುಹೋಗುವಂತೆಯೂ ನಾವು ಪ್ರಯತ್ನಮಾಡಬೇಕೇಹೊರತು ಅವರಿಗೆ ಇಲ್ಲಿ ಸೌಕರ್ಯವನ್ನು ಕಲ್ಪಿಸಕೂಡದು. ಇತ್ಯಾದಿಯಾಗಿ ವಾದಿಸಿ ನಿಷೇಧಿಸಿದರು. ಇದಕ್ಕೆ ಜನರಲ್ ಬೋಥಾರವರು ಉತ್ತರವನ್ನು ಹೇಳುವಾಗ್ಗೆ—

ಈ ವಿಧಿಯು ಉಂಟಾಗತಕ್ಕುದು ನೆಟಾಲಿನವರಿಗೆ ಇಷ್ಟವಲ್ಲವೆಂಬುದು ನನಗೆ ಗೊತ್ತುಂಟು; ಆದರೆ ಮಾಡತಕ್ಕುದೇನು? ಈ ಅನಿಷ್ಟವನ್ನು ಅವರೇ ಬರಮಾಡಿಕೊಂಡಿದ್ದಾರೆ. ದಕ್ಷಿಣಾಫ್ರಿಕಾವು ಯಾವಾಗಲೂ ಶಾಂತಿಯನ್ನೂ ನ್ಯಾಯವನ್ನೂ ಸ್ಥಾಪಿಸುವುದಕ್ಕೆ ಪ್ರಯತ್ನಿಸಬೇಕು. ಇಲ್ಲಿನ ಅನಾದಿನಿವಾಸಿಗಳಾದ ನೀಗ್ರೋಗಳ ಮಾತಿಗೂ ಭಾರತೀಯರ ಮಾತಿಗೂ ಬಹಳ ವ್ಯತ್ಯಾಸವುಂಟು. ಇವೆರಡನ್ನೂ ಒಂದಕ್ಕೊಂದಕ್ಕೆ ಹೋಲಿಸುವುದು ಯುಕ್ತವಲ್ಲ. ಪೂರ್ವದಲ್ಲಿ ನೆಟಾಲಿನ ಹೆಚ್ಚುಪ್ರಜೆಗಳ ಅನುಮತಿಯಿಂದಲೇ ಭಾರತೀಯರು ಇಲ್ಲಿಗೆ ಬರಮಾಡಲ್ಪಟ್ಟಿರುವರು. ಅದುಕಾರಣ ನೆಟಾಲಿನ ಪ್ರಭುತ್ವದವರೇ ದಕ್ಷಿಣಾಫ್ರಿಕಾದ ಸಂಯುಕ್ತಪ್ರಭುತ್ವದವರಿಗೆ ಈ ವಿಷಯದಲ್ಲಿ ಉತ್ತರವಾದಿಗಳಾಗಿರಬೇಕಾಗಿದೆ. ಈ ಬಿಲ್ಲನ್ನು ಅನುಮೋದಿಸುವುದಕ್ಕೆ ಪ್ರಭುತ್ವದವರೂ ಸಭಿಕರೂ ಸಹ ಸಕಲವಿಧದ ಸಹಾಯವನ್ನೂ ಮಾಡಬೇಕಾಗಿದೆ.

ಮೆರ್ರಿಮೆನ್ ಎಂಬ ಸಭಿಕರು ಹೇಳಿದುದೇನೆಂದರೆ— ಈ ಬಿಲ್ಲನ್ನು ನಾನು ಅನುಮೋದಿಸುತ್ತೇನೆ. ಚೀನಾದೇಶೀಯರನ್ನಂತೆಯೇ ಭಾರತೀಯರನ್ನು ಕೂಡ ದಕ್ಷಿಣಾಫ್ರಿಕಾಕ್ಕೆ ಬಲವಂತವಾಗಿ ಮೊಟ್ಟಮೊದಲು ತಂದರು. ಭರತಖಂಡದ ಪ್ರಜಾಭಿಪ್ರಾಯವನ್ನು ಕೂಡ ತೃಣೀಕರಿಸಿ ಭಾರತೀಯರನ್ನು ಆವಾಗ ತಂದರು. ಹೀಗಿರುವುದರಿಂದ ಈಗ ಇಂಥ ವಿಧಿಯನ್ನು ಆ ಭಾರತೀಯರ ಕಷ್ಟನಿವಾರಣೆಗಾಗಿ ನಿರ್ಮಿಸಬೇಕಾದುದು ಅನಿವಾರ್ಯವೇ ಆಗಿದೆ. ಅದುಕಾರಣ ಇದುವರೆಗೇ ಉರಿಯುತ್ತಿರುವ ಬೆಂಕಿಗೆ ಮತ್ತಷ್ಟು ಕಟ್ಟಿಗೆಯನ್ನು ಹಾಕದೆ ಆಂಗ್ಲಸಾಮ್ರಾಜ್ಯ ಪ್ರಭುತ್ವಕ್ಕೆ ದಕ್ಷಿಣಾಫ್ರಿಕಾದ ಮಹಾಸಭೆಯವರು ತಾವು ಮಾಡಲು ಸಾಧ್ಯವಾದ ಸಹಾಯಗಳನ್ನೆಲ್ಲಾ ಮಾಡಿಯೇ ತೀರಬೇಕು.

ಜನರಲ್ ಸ್ಮಟ್ಸ್‌ರವರು—ಬಹುಕಾಲದಿಂದ ಜರುಗುತ್ತಿದ್ದ ಹೋರಾಟವನ್ನು ಈಗಿನ "ಬಿಲ್ಲು" ಮರ್ಯಾದೆಯಿಂದ ಪರಿಷ್ಕರಿಸುತ್ತಲಿರುವುದೆಂದು ಭಾರತೀಯ ವಾರ್ತಾಪತ್ರಿಕೆಗಳು ಹೇಳುತ್ತಲಿವೆ; ಭಾರತೀಯರನ್ನು ನೆಟಾಲಿನಿಂದ ಕಳುಹಿಸಿಬಿಟ್ಟು ನೆಟಾಲನ್ನು ಅವರ ವ್ಯಾಪನೆಯಿಂದ ತಪ್ಪಿಸುವುದಕ್ಕೆ ಇಲ್ಲಿನ ಸಂಯುಕ್ತಪ್ರಭುತ್ವದವರು ಸಕಲವಿಧದಿಂದಲೂ ಪ್ರಯತ್ನಿಸುವರು; ಅವಶ್ಯಕವಾದರೆ ಭಾರತೀಯರು ನೆಟಾಲಿನಿಂದ ಹೊರಕ್ಕೆ ಸಾಗಿಹೋಗುವಂತೆ ತಕ್ಕ ಪ್ರೇರೇಪಣಗಳು ಮಾಡಲ್ಪಡುವುವು; ಎಂದು ಹೇಳಿ ನೆಟಾಲ್ ಪ್ರತಿನಿಧಿಗಳ ಮನಸ್ಸನ್ನು ಶಾಂತಿಗೆ ತಂದರು.

ಕಡೆಗೆ ಮತಗಳನ್ನು ತೆಗೆಯಲು, ಬಿಲ್ಲಿಗೆ ಅನುಕೂಲವಾದ ಮತಗಳು ೬೦, ವಿರುದ್ಧಮತಗಳು ೨೪ ಬೀಳಲು, ೨ನೆಯಾವೃತ್ತಿಯೂ ಈ ಬಿಲ್ಲು ಅನುಮೋದಿತವಾಯಿತು. ಇನ್ನು ೩ ನೆಯಾವೃತ್ತಿಯೂ ಇದು ಅನುಮೋದಿತವಾಗುವ ವಿಷಯದಲ್ಲಿ ಸಂಶಯವಿಲ್ಲ. ಆಗ್ಗೆ ಇದು ವಿಧಿಯಾಗಿ ಏರ್ಪಟ್ಟು ಭಾರತೀಯರ ಸಂಕಷ್ಟಗಳು ಬಹುಮಟ್ಟಿಗೆ ದಕ್ಷಿಣಾಫ್ರಿಕಾದಲ್ಲಿ ತೊಲಗುವುವೆಂದೂ, ಸಾತ್ವಿಕವಾದ ಹೋರಾಟದಿಂದ ಶ್ರೀಯುತ ಗಂಧಿಯವರು ನಡೆಯಿಸಿದ ಪ್ರಯತ್ನವು ಪ್ರಪಂಚದ ಮೇಲಣ ಸಕಲ ಭಾರತೀಯರಿಗೂ ಸಮಾಧಾನಕರವಾಗಿ ಪರಿಣಮಿಸುವಂತಾಗುವುದೆಂದೂ, ಲಾರ್ಡ್ ಹಾರ್ಡಿಂಜ್‌ರವರು ಏತತ್ಸಂಬಂಧದಲ್ಲಿ ತೋರ್ಪಡಿಸಿದ ಸಹಾನುಭೂತಿಯು ಭಾರತೀಯರಿಗೆ ಚಿರಸ್ಮರಣೀಯವಾಗುವಂತಾಯಿತೆಂದೂ ಹೇಳಬಹುದಾಗಿದೆ.

ಈಗಿನ ಆಂಗ್ಲ ಮುಖ್ಯ ಮಂತ್ರಿಯವರು.

ಧೀರೋದಾತ್ತರಾದ ಮಹಾಪುರುಷರಲ್ಲಿ ಪರ್ವತದಂತೆ ಅಚಲವಾದ ಧೈರ್ಯಗುಣವು ನಿಸರ್ಗವಾಗಿರುವುದೆಂಬಸಂಗತಿಗೆ ಈಗಿನ ಆಂಗ್ಲಮುಖ್ಯಮಂತ್ರಿಯಾದ ಮಿ॥ ಆಸ್ಕ್ವಿತ್‌ರವರು ದೃಷ್ಟಾಂತರೂಪವಾಗಿರುವರು. ಈಗಿನ ಐರ್ಲಂಡ್ ಸ್ವರಾಜ್ಯವಿಧಿಯ ಕಲ್ಪನೆಯ ಸಂದರ್ಭದಲ್ಲಿ ಅವರು ತೋರಿಸಿದ ಧೈರ್ಯಸ್ಥೈರ್ಯಗಾಂಭೀರ್ಯ ಕೌಶಲ್ಯಾದಿಗಳು ಅವರ ಖ್ಯಾತಿಯನ್ನು ಜಗತ್ತಿಗೆಲ್ಲಾ ವಿಶೇಷವಾಗಿ ವಿಸ್ತಾರಗೊಳಿಸಿ ಅಪರಾಮರವಾದ ಯಶಸ್ಸನ್ನು ಅವರಿಗೆ ತಂದಿರುವುವು. ಈ ಮಹಾಪುರುಷರ ಜೀವಿತಚರಿತ್ರೆಯು ವರ್ಧಿಷ್ಣುಗಳಾದವರಿಗೆಲ್ಲಾ ಆದರ್ಶಪ್ರಾಯವಾಗಿರುವುದರಿಂದ ಸಂಕ್ಷೇಪವಾಗಿ ಅದನ್ನಿಲ್ಲಿ ನಿರೂಪಿಸುತ್ತೇನೆ:—

ಈ ಆಸ್ಕ್ವಿತ್‌ರವರು, ಆಂಗ್ಲ ಪ್ರಜೆಗಳಲ್ಲಿ ಮುಖ್ಯ ಪಿತಾಮಹನೆಂದೂ ಉದಾರ ಮತವಾದ (ಲಿಬರಲ್‌ಪಕ್ಷ) ಗಳಿಗೆ ಮುಖ್ಯೋಪದೇಶಕನೆಂದೂ ಪ್ರಸಿದ್ಧವಾಗಿದ್ದು ದಿಗಂತವಿಶ್ರಾಂತ ಕೀರ್ತಿಯಾಗಿ ಗತಿಸಿದ ಲಾರ್ಡ್ ಗ್ಲಾಡ್‌ಸ್ಟನ್‌ರವರ ಪ್ರಿಯಶಿಷ್ಯರು. ಆ ಗುರುವಿನ ಉದಾರಭಾವಗಳೇ ಇವರಿಗೂ ಆದರ್ಶವಾಗಿಯೂ ಕಾರ್ಯನಿಯಾಮಕವಾಗಿಯೂ ಇರುವುವು. ದೇಶದ ಸ್ವಾತಂತ್ರ್ಯಕ್ಕೂ, ದೇಶಾಭಿವೃದ್ಧಿಗೂ, ವಾಕ್ಸ್ವಾತಂತ್ರ್ಯವೂ ಪತ್ರಿಕಾಸ್ವಾತಂತ್ರ್ಯವೂ ಸಂಘಸ್ವಾತಂತ್ರ್ಯವೂ ಮುಖ್ಯ ಸಾಧನಗಳೆಂಬುದೂ, ರಾಜ್ಯದ ಶಾಸನಗಳು ಅಂತಹ ಸ್ವಾತಂತ್ರ್ಯವನ್ನು ಉಂಟುಮಾಡಿಕೊಡತಕ್ಕುವುಗಳಾಗಿರಬೇಕೆಂಬುದೂ, ಜನರಲ್ಲಿ ತಮ್ಮ ವಿದ್ಯಾಶಕ್ತಿಯನ್ನೂ ಸ್ವಾತಂತ್ರ್ಯವನ್ನೂ ಇತರ ಸದುಪಾಯಗಳನ್ನೂ ದೇಶಾಭಿವೃದ್ಧಿಗೂ ಜಾತೀಯಾಭಿವೃದ್ಧಿಗೂ ನಿರಾತಂಕವಾಗಿ ಉಪಯೋಗಿಸಿಕೊಳ್ಳಲು ಅವರಿಗೆ ಅವಕಾಶವಿದ್ದರೇನೆಯೇ ಅವರು ಸ್ವತಂತ್ರರೆಂದು ಹೇಳಿಸಿಕೊಳ್ಳಲ್ಪಡುವರೆಂಬುದೂ ಇವರ ಆಶಯವು. ಹೀಗೆ ಸ್ವಾತಂತ್ರ್ಯವೇ ಜೀವನ್ಮುಕ್ತಿಯೆಂದು ಸಿದ್ಧಾಂತಪಡಿಸಿರುವ ಈ ಮಹನೀಯರು ೧೮೫೨ ನೆ ಸೆಪ್ಟಂಬರ್ ತಾ॥ ೧೨ ರಲ್ಲಿ ಇಂಗ್ಲೆಂಡಿಗೆ ಸೇರಿದ ಯಾರ್ಕ್‌ಷೈರಿನಲ್ಲಿರುವ ಮಾರ್ಲಿಯೆಂಬಲ್ಲಿ ಜನಿಸಿದರು. ಇವರಿಗೆ ಚಿಕ್ಕಂದಿನಿಂದಲೂ ಜ್ಞಾನಸಂಪಾದನೆಯಲ್ಲಿ ವಿಶೇಷ ಕುತೂಹಲವೂ, ಬುದ್ಧಿಕೌಶಲ್ಯವೂ ವಿರಾಜಿಸುತ್ತಿದ್ದುವು. ನಾನು ದೊಡ್ಡವನಾದ ಬಳಿಕ ತಪ್ಪದೆ ಒಂದು ದೊಡ್ಡ ಪದವಿಯನ್ನು ಹೊಂದುತ್ತೇನೆಂಬ ದೃಢನಿಶ್ಚಯವುಳ್ಳವರಾಗಿ ಬಾಲ್ಯದಿಂದಲೂ ತಕ್ಕ ಕೃಷಿಯನ್ನು ಮಾಡುತ್ತ ಜ್ಞಾನಾಭಿವೃದ್ಧಿಯನ್ನು ಮಾಡಿಕೊಳ್ಳುತ್ತಿದ್ದರು. ಇವರಿಗೆ ಪಾಠಶಾಲೆಯಲ್ಲಿ ಕಲಿಯುವುದಕ್ಕಿಂತಲೂ ಸ್ವತಂತ್ರವಾಗಿ ಓದಿಕೊಳ್ಳುವುದರಲ್ಲಿಯೇ ಹೆಚ್ಚು ಅಪೇಕ್ಷೆಯಿದ್ದಿತು. ಆ ಕಾಲದಲ್ಲಿ ಇವರು ಪಾರ್ಲಿಮೆಂಟಿನ ಸಭಿಕರನ್ನು ನೋಡಿದಾಗಳೆಲ್ಲಾ ನಾನುಕೂಡ ಇಂತಹ ಮಹನೀಯರಲ್ಲೊಬ್ಬನಾಗಬೇಕೆಂದು ಇವರಲ್ಲಿ ಆಸೆಯು ಹುಟ್ಟುತ್ತಿದ್ದಿತಂತೆ. ಇವರು ತಮ್ಮ ಪ್ರೌಢವಿದ್ಯಾಭ್ಯಾಸಕ್ಕಾಗಿ ಆಕ್ಸ್‌ಫರ್ಡಿನ ಬೇಲಿಯಲ್ ಕಾಲೇಜಿಗೆ ಸೇರಿದರು. ಇದರ ಅಧಿಪತಿಯಾಗಿದ್ದ ಬೆಂಜಮಿನ್ ಜೋವೆಟ್‌ರವರು ತಮ್ಮ ಶಿಷ್ಯರುಗಳಲ್ಲಿ ಪಾಂಡಿತ್ಯವುಂಟುಮಾಡುವುದನ್ನೇ ಮುಖ್ಯವನ್ನಾಗಿ ಗಮನಿಸದೆ ಅವರನ್ನು ಇಂಗ್ಲೆಂಡಿನ ಉತ್ತಮಪರಿಪಾಲಕರನ್ನಾಗಿ ಮಾಡಬೇಕೆಂಬ ಸಂಕಲ್ಪವುಳ್ಳವರಾಗಿ, ಅದಕ್ಕೆ ತಕ್ಕ ಪ್ರಪಂಚಜ್ಞಾನವನ್ನು ಅವರುಗಳಿಗೆ ಉಂಟುಮಾಡಿಕೊಡುತ್ತ ಬಂದರು. ಅದುಕಾರಣ, ಆ ಗುರುವಿನ ಶಾಂತಿ—ವಿಮರ್ಶೆ—ಸ್ಥೈರ್ಯ ಮೊದಲಾದ ಸದ್ಗುಣಗಳೆಲ್ಲಾ ಆಸ್ಕ್ವಿತ್‌ರವರಲ್ಲಿಯೂ ಪ್ರತಿಫಲಿಸಿದುವು. ಸ್ತ್ರೀಸ್ವಾತಂತ್ರ್ಯವಾದಿನಿಯರಿಗೆ ಅಧಿಕಾರವನ್ನು ಕೊಡುವಲ್ಲಿ ಜೋವೆಟ್‌ರವರಿಗೆ ಇಷ್ಟವಿಲ್ಲ. "ಇಂಗ್ಲಾಂಡಿನಲ್ಲಿರುವ ಮೊನಚಾದಮುಖದ ಸ್ತ್ರೀಲ್ಲಾ ಅಧಮಾಧಮರಾದ ೫ ಮಂದಿ ಪುರುಷರಿಂದ ಪರಿಪಾಲಿಸಲ್ಪಟ್ಟರೂ ಸರಿಯೆ, ಉತ್ತಮೋತ್ತಮರಾದ ಹೆಂಗುಸರಿಂದ ಪರಿಪಾಲಿಸಲ್ಪಡುವಂತಾಗುವುದು ನನಗಿಷ್ಟವಲ್ಲ" ಎಂದು ಅವರು ನುಡಿಯುತ್ತಿದ್ದರು. ಅವರ ಶಿಷ್ಯರಾದ ಈ ಆಸ್ಕ್ವಿತ್‌ರವರಲ್ಲಿಯೂ ಅದೇ ತೆರದ ಅಭಿಪ್ರಾಯಗಳಿರುವುವೆಂಬುದಾಗಿಯೇ ಈಗಿನ ಇವರ ಮಂತ್ರಿತ್ವದಲ್ಲಿ ಸ್ತ್ರೀಸ್ವಾತಂತ್ರ್ಯವಾದಿನಿಯರು ವಿಪರೀತವಾದ ಹಾವಳಿಯನ್ನು ಮಾಡುತ್ತಿರಬಹುದು. ಆಸ್ಕ್ವಿತ್‌ರವರು ಆಕ್ಸ್‌ಫರ್ಡನಲ್ಲಿ ಓದುತ್ತಿರುವಾಗಲೇ ಉಪನ್ಯಾಸಕೊಡುವುದನ್ನೂ ವಾದಾನುವಾದದಲ್ಲಿ ಜಯಶೀಲರಾಗುವುದರ ಮರ್ಮವನ್ನೂ ಕಲಿತುಕೊಂಡು ಅಲ್ಲಿನ ಪಾಂಡಿತ್ಯಪಟ್ಟವನ್ನು ಹೊಂದಿದ ಬಳಿಕ ನ್ಯಾಯಶಾಸ್ತ್ರವನ್ನು ಕಲಿಯುವುದಕ್ಕಾಗಿ ಲಂಡನ್ನಿಗೆ ಬಂದರು. ಬಳಿಕ ೧೮೭೬ ನೆಯ ವರ್ಷದಲ್ಲಿ ವಕೀಲತನಕ್ಕೆ ಪ್ರವರ್ತಿಸಿದರು. ನಾನು ಉನ್ನತಾಧಿಕಾರಿಯಾಗುವುದಕ್ಕಿಂತಲೂ ವಕೀಲತನದಲ್ಲಿದ್ದರೆ ಉತ್ತಮಪದವಿಗೇರಿ ದೇಶೋಪಕಾರವನ್ನು ಮಾಡಲು ಅವಕಾಶವಾಗುವುದೆಂದು ಯೋಚಿಸಿ ಈ ವೃತ್ತಿಗೆ ತೊಡಗಿದರು. ಆಗ ಚೇಂಬರ್ಲೇನ್‌ರವರು ಇವರ ಬುದ್ಧಿಕುಶಲತೆಯನ್ನು ಮೆಚ್ಚಿಕೊಂಡು, ತಮ್ಮ ಬ್ಯಾರಿಸ್ಟರಾದ ರೈಟ್‌ರವರಿಗೆ ಹೇಳಿ, ಅವರ ಕೈಕೆಳಗೆ ಕೆಲಸಮಾಡಲು ಇವರನ್ನು ಸೇರಿಸಿಕೊಳ್ಳುವಂತೆ ಮಾಡಿದರು. ಆಗ ಆಸ್ಕ್ವಿತ್‌ರವರು ತಮ್ಮಲ್ಲಿಗೆ ಬಂದ ವ್ಯಾಜ್ಯಗಳನ್ನು ಬಹಳ ಜಾಣ್ಮೆಯಿಂದಲೂ ಚುರುಕಾಗಿಯೂ ನಡೆಯಿಸಿ ಜಯವನ್ನು ಪಡೆಯುತ್ತ ಖ್ಯಾತಿಗೊಂಡರು. ಪತ್ರಿಕಾ ಸಂಪಾದಕ ಸಾರ್ವಭೌಮರೆನಿಸಿಕೊಂಡಿದ್ದ ವಿಲಿಯಂ ಟೀಡ್‌ರವರು ಈ ಆಸ್ಕ್ವಿತ್‌ರವರ ಕೌಶಲ್ಯವನ್ನು ನೋಡಿ, "ಪ್ರಪಂಚದಲ್ಲಿರುವವರಲ್ಲೆಲ್ಲಾ ಈತನು ದೊಡ್ಡ ಪ್ರಖ್ಯಾತಪುರುಷನಾಗುವನು" ಎಂದು ಹೇಳಿದ್ದರಂತೆ. ಒಂದಾನೊಂದು ಮುಖ್ಯವಾದ ವ್ಯಾಜ್ಯದಲ್ಲಿನ ಜಯಕ್ಕೆ ಅದರಲ್ಲಿನ ಸಾಕ್ಷ್ಯವನ್ನು ಸಮರ್ಥತೆಯಿಂದ ಕ್ರಾಸ್ ಎಗ್ಜಾಮಿನೇಷನ್ನನ್ನು ನಡೆಯಿಸುವುದೇ ಮುಖ್ಯಾಧಾರವಾಗಿದ್ದ ಸಂದರ್ಭದಲ್ಲಿ ಮಿ॥ ರೈಟ್‌ರವರು ತಾವು ಆಯಾಸಪಟ್ಟಿದ್ದುದರಿಂದ ಅದನ್ನು ನಡೆಯಿಸುವ ಭಾರವನ್ನು ಆಸ್ಕ್ವಿತ್‌ರವರಿಗೇ ವಹಿಸಲಾಗಿ, ಇವರು ಆ ಕ್ರಾಸ್‌ಪರೀಕ್ಷೆಯನ್ನು ಅತ್ಯುತ್ತಮವಾಗಿ ನೆರವೇರಿಸಿದುದರಿಂದ ಆಗ ಇವರಿಗೆ ನ್ಯಾಯವಾದಿಗಳ ಮಧ್ಯದಲ್ಲಿ ಘನತರವಾದ ಶಾಶ್ವತ ಕೀರ್ತಿಯುಂಟಾಯಿತು. ಆದರೂ ಆ ವೃತ್ತಿಯಕೀರ್ತಿಯೇ ಇವರಿಗೆ ಗಮ್ಯಫಲವಾಗಿರಲಿಲ್ಲವಾದಕಾರಣ, ಅದರಿಂದ ತೃಪ್ತಿಯುಂಟಾಗಲಿಲ್ಲ. ತಮ್ಮ ಹೃದಯದಲ್ಲಿದ್ದ ಉನ್ನತಾದರ್ಶದ ಸಿದ್ಧಿಗಾಗಿ ರಾಜಕೀಯ ವಿಷಯದಲ್ಲಿ ಪ್ರವೇಶಿಸಬೇಕೆಂದು ನಿರ್ಧರಿಸಿ, ಪ್ರಯತ್ನಪಟ್ಟು, ಕಡೆಗೆ ಪಾರ್ಲಿಮೆಂಟಿನಲ್ಲಿ ಪ್ರವೇಶಿಸಿ ಉದಾರಪಕ್ಷವನ್ನು ಸೇರಿ ಉತ್ಸಾಹದಿಂದ ಕೆಲಸಮಾಡತೊಡಗಿದರು.

ಹೀಗಿರುವಲ್ಲಿ ೧೮೯೨ನೆಯ ವರ್ಷದಲ್ಲಿ ಇವರಿಗೆ ಹೋಮ್ ಸೆಕ್ರಟರಿಯ ಕೆಲಸವು ಕೊಡಲ್ಪಟ್ಟಿತು. ಆಗ ಇಂಗ್ಲಾಂಡಿಗೆ ಸಂಬಂಧಿಸಿದ ಅಂತರ್ವಿಷಯಗಳನ್ನೆಲ್ಲಾ ಇವರು ಪರಿಶೀಲಿಸಿ ನಿರ್ವಹಿಸಬೇಕಾಯಿತು. ಈ ಘನಪದವಿಯನ್ನು ಲಾರ್ಡ್ ಗ್ಲಾಡ್‌ಸ್ಟನ್‌ರವರು ಇವರಿಗೆ ಕೊಟ್ಟುದನ್ನು ಕಂಡು ಜನರು ಆಶ್ಚರ್ಯಪಟ್ಟರು. ಆದರೆ ಇವರು ಆ ಕೆಲಸವನ್ನು ಕೈಕೊಂಡ ೬ ತಿಂಗಳೊಳಗಾಗಿ ರಾಜಕೀಯವಿಷಯಗಳಲ್ಲೂ ವ್ಯಾಪಾರವಿಷಯಗಳಲ್ಲೂ ಅನೇಕ ಸುಧಾರಣೆಗಳನ್ನು ಮಾಡಿ ವೃದ್ಧಿಗೆ ತಂದರು. ಮುಖ್ಯವಾಗಿ ಯಂತ್ರಾಲಯಗಳ ಸಂಬಂಧದಲ್ಲಿ ಇವರು ಪ್ರಶಸ್ತವಾದ ಸುಧಾರಣೆಗಳನ್ನು ಮಾಡಿದರು. ಕಾರಾಗೃಹನಿವಾಸಿಗಳಿಗೆ ಉಪಯುಕ್ತವಾದ ಉಪಾಯಗಳನ್ನು ಸ್ಥಾಪಿಸಿದರು. ಭ್ರೂಣಹತ್ಯೆ ಮಾಡಿದವರು ಯಾವಜ್ಜೀವ ಶಿಕ್ಷೆಯನ್ನನುಭವಿಸುತ್ತಿದ್ದ ಪದ್ಧತಿಯನ್ನು ತಪ್ಪಿಸಿ ಆ ಶಿಕ್ಷೆಯ ಕಾಠಿನ್ಯವನ್ನು ತಪ್ಪಿಸಿ ಸೌಮ್ಯವನ್ನಾಗಿ ಮಾಡಿಸಿದರು. ಹೀಗೆಯೇ ಕೋಶಾಧಿಕಾರಿಯ ಪದವಿಯು ಲಭಿಸಿದಾಗಲೂ ಅನೇಕ ಉಪಯುಕ್ತಸುಧಾರಣೆಗಳನ್ನು ಮಾಡಿದರು. ಆಗ ಆಂಗ್ಲಸಾಮ್ರಾಜ್ಯಕ್ಕೆ ಮುಖ್ಯಮಂತ್ರಿಯಾಗಿದ್ದ ಸರ್. ಹೆನ್ರಿ. ಕೆಂಬಲ್ ಬ್ಯಾನರ್ಮನ್‌ರವರು ತಮ್ಮ ಪದವಿಯಿಂದ ವಿಶ್ರಾಂತಿಯನ್ನು ಪಡೆದುಕೊಳ್ಳಲು, ೧೯೦೮ ನೆಯ ವರ್ಷದಲ್ಲಿ ಇವರು ಉದಾರಮತವಾದಿಗಳ ಮುಖ್ಯನಾಯಕರಾಗಿ ಆಂಗ್ಲಪ್ರಭುತ್ವದ ಮುಖ್ಯಮಂತ್ರಿ ಪದವಿಯನ್ನಡರಿದರು. ಆಗಿನಿಂದ ಇದುವರೆಗೂ ಅದೇ ಪದವಿಯಲ್ಲೇ ಇರುವರು. ಈಗ ಇಂಗ್ಲಾಂಡಿನಲ್ಲಿ ಇದಿರುಪಕ್ಷದ ಕನ್‌ಸರ್ವೇಟಿವುಗಳು ಈ ಪಕ್ಷದವರ ಪ್ರಭುತ್ವವನ್ನು ತಪ್ಪಿಸಬೇಕೆಂದು ಎಷ್ಟೋತೆರದ ಸಾಹಸಗಳನ್ನು ಮಾಡುತ್ತಿರುವರು. ಸ್ತ್ರೀಸ್ವಾತಂತ್ರ್ಯವಾದಿನಿಯರು ವಿಚಿತ್ರವಾದ ಉಪಟಲಗಳನ್ನು ಮಾಡುತ್ತಿರುವರು. ಐರ್ಲಾಂಡ್‌ಸ್ವರಾಜ್ಯಶಾಸನದ ವಿಷಯದಲ್ಲಿ ಅಲ್ಸ್ಟರ್ ಜಿಲ್ಲೆಯವರು ವಾಚಾಮಗೋಚರವಾದಷ್ಟು ಭಯೋತ್ಪಾದನವನ್ನು ಮಾಡುತ್ತಿರುವರು. ಆದರೂ ಈ ಮಹಾಪುರುಷರು ಅದೊಂದಕ್ಕೂ ತಲ್ಲಣಿಸದವರಾಗಲಿಲ್ಲ. ಈಮಧ್ಯೆ ಅಲ್ಸ್ಟರಿನವರ ಭೇದೋಪಾಯದಿಂದ ಆಂಗ್ಲಪ್ರಭುತ್ವದ ಮುಖ್ಯಸೇನಾಧಿಪತಿಯು ಕೆಲಸವನ್ನು ಬಿಟ್ಟುಕೊಡಲಾಗಿ, ಆಸ್ಕ್ವಿತ್‌ರವರು ಅದಕ್ಕೂ ಹೆದರದೆ, ತಾವೇ ತಮ್ಮ ಕೆಲಸದಜತೆಗೆ ಆ ಸೇನಾಧಿಪಾಧಿಕಾರವನ್ನೂ ವಹಿಸಿಕೊಂಡು ಲೋಕಾಶ್ಚರ್ಯಕರವಾದ ಧೀರತೆಯನ್ನು ಅಭೂತಪೂರ್ವವಾಗಿ ತೋರಿಸಿಕೊಟ್ಟರು. ಇವರು ಯಾವಾಗಲೂ ನಿಷ್ಪ್ರಯೋಜಕವಾದ ಆಡಂಬರವನ್ನು ಮಾಡದೆ, ಮನೋಧೈರ್ಯದಿಂದ ಕಾರ್ಯಶೂರರಾಗಿದ್ದುಕೊಂಡು, ತಮ್ಮ ಉದ್ದೇಶಸಾಧನೋಪಾಯದಲ್ಲಿ ಮಾತ್ರ ತತ್ಪರರಾಗಿ, ತಮ್ಮ ನಿಂದಾಸ್ತುತಿಗಳನ್ನು ಇತರರು ಮಾಡುವುದರ ಕಡೆಗೆ ಸ್ವಲ್ಪವೂ ಲಕ್ಷಿಸದೆ ಇರುವರು. ಆಂಗ್ಲಸಾಮ್ರಾಜ್ಯದ ಪುರೋಭಿವೃದ್ಧಿಗೆ ಸಾಧಕವಾದ ಕಾರ್ಯಗಳನ್ನು ಇವರು ಶಾಂತವೃತ್ತಿಯಿಂದ ನೆರವೇರಿಸುತ್ತಿರುವರು. ಇವರ ಕಾರ್ಯಭಾಗವು ಪ್ರಜಾಮಂಡಲಕ್ಕೆ ಹಿತವಾಗಿದೆ. ಲಿಬರಲ್ ಪಕ್ಷದವರ ವಿಶ್ವಾಸವು ಇವರಮೇಲೆ ಪೂರ್ಣವಾಗಿದೆ. ಅದುಕಾರಣವೇ ತಮ್ಮ ಗುರುವಾದ ಗ್ಲಾಡ್‌ಸ್ಟನ್‌ರವರಿಂದ ಆರಂಭಿಸಲ್ಪಟ್ಟ ಐರ್ಲಾಂಡ್ ಸ್ವರಾಜ್ಯಪರಿಪಾಲನವನ್ನು ಇವರು ತಮ್ಮ ಕಾಲದಲ್ಲಿ ಶಾಸನವಾಗುವಂತೆ ಮಾಡಲು ಸಮರ್ಥರಾದರು. ಕಾರ್ಯಶೂರತೆಗೆ ಯಾವಯಾವ ಸದ್ಗುಣಗಳು ಮುಖ್ಯಾಧಾರಗಳೆಂಬ ಸಂಗತಿಯನ್ನು ಈ ಆಸ್ಕ್ವಿತ್‌ಮಹನೀಯರ ಚರಿತೆಯಿಂದ ಚೆನ್ನಾಗಿ ತಿಳಿದುಕೊಳ್ಳಬಹುದು.

ಮೈಸೂರು ಸಂಪದಭ್ಯುದಯ ಸಮಾಜದಲ್ಲಿ ಚರ್ಚೆನಡೆದು ತೀರ್ಮಾನವಾಗಿರುವ ಸಂಗತಿಗಳು.

೧. ಕನ್ನಡಭಾಷೆಯ ಅಭಿವೃದ್ಧಿಗಾಗಿ ಒಂದು ಸಂಘಸ್ಥಾಪನೆಯನ್ನು ಮಾಡಬೇಕು. ಇದನ್ನನುಮೋದಿಸಿ ತಕ್ಕ ಧನಸಹಾಯವನ್ನು ಮಾಡಲು ಸರ್ಕಾರವನ್ನು ಪ್ರಾರ್ಥಿಸಬೇಕು.

೨. ಬಾಲಬಾಲಿಕೆಯರಿಗೆ ಉಪಯುಕ್ತವಾಗುವಂತಹ ಪತ್ರಿಕೆಯು ಪ್ರಕಟಿತವಾಗುವುದಾದರೆ ಅದು ಸ್ವಯಂಶಕ್ತವಾಗುವವರೆಗೆ ತಾವು ಧನಸಹಾಯ ಮಾಡುವುದಾಗಿ ವಿದ್ಯಾಭ್ಯಾಸಶಾಖೆಯವರು ಅಭಿಜನವನ್ನಿತ್ತಿರುವ ಕಾರಣ, ಕನ್ನಡದಲ್ಲಿ ಒಂದು ಸಚಿತ್ರಮಾಸಪತ್ರವನ್ನು ಪ್ರಕಟಿಸಬೇಕು.

೩. ಮುಂದೆ ೫ ವರ್ಷಗಳವರೆಗೆ ಪ್ರತಿಸಂವತ್ಸರವೂ ೬೦೦ ಮಂದಿ ಉಪಾಧ್ಯಾಯರುಗಳನ್ನು ನಾರ್ಮಲ್‌ಸ್ಕೂಲಿನಲ್ಲಿ ಶಿಕ್ಷಣವನ್ನು ಪಡೆಯುವುದಕ್ಕಾಗಿ ಕಳುಹಬೇಕು. ಇದಕ್ಕಾಗಿ ಈಗಿನ ನಾರ್ಮಲ್‌ಸ್ಕೂಲುಗಳನ್ನು ಎಲ್ಲತೆರದಲ್ಲೂ ಅಭಿವೃದ್ಧಿಗೊಳಿಸಬೇಕು. ಮತ್ತೂ ಅನುಕೂಲವೆಂದು ತೋರುವ ಇನ್ನು ಕೆಲಸ್ಥಳಗಳಲ್ಲಿ ನಾರ್ಮಲ್‌ಸ್ಕೂಲುಗಳನ್ನು ಸ್ಥಾಪಿಸಬೇಕು.

೪. ಪಾಠಶಾಲೆಗಳಿಗಾಗಿಯೂ ಉಪಾಧ್ಯಾಯರು ವಾಸಿಸುವುದಕ್ಕಾಗಿಯೂ ಅನುಕೂಲಿಸುವ ಕಟ್ಟಡಗಳನ್ನು ಏರ್ಪಡಿಸಬೇಕು.

೫. ಪ್ರತಿಯೊಂದು ಗ್ರಾಮದಲ್ಲಿ ಅಥವಾ ೨-೩ ಗ್ರಾಮಗಳಿಗೆ ಒಂದು ಕಡೆಯಲ್ಲಿ ಪ್ರಾರಂಭ ವಿದ್ಯಾಶಾಲೆಗಳನ್ನು ಸ್ಥಾಪಿಸಬೇಕು.

೬. ಸಾಮಾನ್ಯ ವಿದ್ಯಾಪ್ರಸಾರಕ್ಕೂ, ವೃತ್ತಪತ್ರಿಕೆಗಳ ವ್ಯಾಪನೆಗೂ ಸಹ ಆವಶ್ಯಕವಾದ ಧನಸಹಾಯವನ್ನು ವ್ಯವಸಾಯ ಸಂಘದವರೇ ಆಗಲಿ ಅಥವಾ ಈ ಕೆಲಸಗಳಿಗಾಗಿಯೇ ಪ್ರತ್ಯೇಕವಾಗಿ ಏರ್ಪಟ್ಟಿರುವ ಕಮಿಟಿಯವರೇ ಆಗಲಿ ಮಾಡಬೇಕು.

-(ಈ ಮೇಲೆಕಂಡ ತೀರ್ಮಾನಗಳಾಗುವುದರೊಳಗೆ ಮಧ್ಯೇ ಮಧ್ಯೆ, ಅನೇಕ ಚರ್ಚೆಗಳು ನಡೆದುವು. ಬಾಲವಿದ್ಯಾಭ್ಯಾಸಕ್ರಮವನ್ನರಿತುಕೊಂಡು ಬರುವುದಕ್ಕಾಗಿ ಬರೋಡಾ ಸಂಸ್ಥಾನಕ್ಕೆ ಒಬ್ಬ ವಿದ್ಯಾಶಾಖಾಧಿಕಾರಿಯನ್ನು ಕಳುಹಿಸಬೇಕೆಂಬ ಚರ್ಚೆಯು ನಡೆದು ಅನಂಗೀಕೃತವಾಯಿತು. ಪ್ರಾರಂಭವಿದ್ಯಾಶಾಲೆಗಳ ಯಾಜಮಾನ್ಯವನ್ನೆಲ್ಲಾ ಲೋಕಲ್ ಬೋರ್ಡುಗಳಿಗೂ ಮ್ಯುನ್ಸಿಪಾಲಿಟಿಗಳಿಗೂ ವಶಪಡಿಸಬೇಕೆಂಬ ವಿಷಯವು ಎಜ್ಯುಕೇಷನ್ ಕಮಿಟಿಯವರ ಆಲೋಚನೆಗೆ ಇಡಲ್ಪಟ್ಟಿತು. ಕೈಗಾರಿಕೆ—ವ್ಯಾಪಾರ—ಸಂಪದ್ವೃದ್ಧಿ—ಈ ಮೊದಲಾದ ವಿಷಯಗಳನ್ನು ಪ್ರಕಟಗೊಳಿಸುವ ವೃತ್ತಪತ್ರಿಕೆಗಳನ್ನು ಅಗ್ಗವಾಗಿ ಹೊರಡಿಸುವ ವಿಷಯವು ಎಜ್ಯುಕೇಷನ್ ಕಮಿಟಿಯವರ ಪರ್ಯಾಲೋಚನೆಗೆ ಕಳುಹಿಸಲ್ಪಟ್ಟಿರುತ್ತದೆ. ಬಲಾತ್ಕಾರ ಬಾಲವಿದ್ಯಾಭ್ಯಾಸ ಪದ್ಧತಿಯು ಈ ತಿಂಗಳಲ್ಲೇ ಆರಂಭಿಸಲ್ಪಡುವುದಾಗಿದೆ.)

೭. ಪ್ರಜೆಗಳಲ್ಲಿ ಉದ್ಯೋಗಶೀಲತೆಯನ್ನು ಹೆಚ್ಚಿಸುವುದಕ್ಕಾಗಿ ದೇಶದೊಳಗೆ ಅಲ್ಲಲ್ಲಿ ಕೈಗಾರಿಕೆಯ ಸಂಘಗಳನ್ನು ಸ್ಥಾಪಿಸಬೇಕು. ಈ ಸ್ಥಾಪನೆಗಾಗಿ ಆಯಾಪ್ರದೇಶದ ಜನಸಂಖ್ಯೆಯನ್ನನುಸರಿಸಿ ನೂರಕ್ಕೆ ಇಷ್ಟು ಎಂಬ ಕ್ಲುಪ್ತಿಯಿಂದ ಧನಸಹಾಯವನ್ನು ಮಾಡಲು ಸರ್ಕಾರವನ್ನು ಪ್ರಾರ್ಥಿಸಬೇಕು.

೮. ವ್ಯವಸಾಯಾನುಕೂಲ್ಯಕ್ಕಾಗಿಯೂ, ದನಕರುಗಳ ಪಾನೀಯಜಲ ಸಮೃದ್ಧಿಗಾಗಿಯೂ ಅಲ್ಲಲ್ಲಿ ಕೆರೆಗಳ ಜೀರ್ಣೋದ್ಧಾರವನ್ನೂ ಹೊಸಬಾವಿಗಳ ತೋಡಿಸುವು

ನ್ನು ಮಾಡುವುದಕ್ಕಾಗಿಯೂ ಪ್ರತ್ಯೇಕವಾದ ಅಧಿಕಾರಿಗಳನ್ನೇರ್ಪಡಿಸಬೇಕು. ಇದಕ್ಕೆ ಬೇಕಾದ ಉಪಕರಣಗಳನ್ನೊದಗಿಸಿಕೊಡಬೇಕು.

೯. ಮೈಸೂರು ರೇಶ್ಮೆ ಕೈಗಾರಿಕೆ ಸಂಘದವರಿಗೆ ಸರ್ಕಾರದವರು ಸ್ವಲ್ಪ ದ್ರವ್ಯಸಹಾಯವನ್ನು ಮಾಡಬೇಕು. ರೇಶ್ಮೆಯ ಅಭಿವೃದ್ಧಿಗೆ ತಕ್ಕ ಕೆಲ ಏರ್ಪಾಟುಗಳು ಮಾಡಲ್ಪಡಬೇಕು (ಇವು ವಿವರವಾಗಿ ಸೂಚಿಸಲ್ಪಟ್ಟಿರುವುವು)

೧೦. ಮಾರಿಕಣಿವೆ ಜಲಾಶಯ ಕಲ್ಪನೆಗೆ ೪೦ ಲಕ್ಷ ರೂ.ಗಳ ವ್ಯಯವಾಗಿರುವುದು. ಅದರ ಕೆಳಗೆ ಭೂಮಿಯು ಹೆಚ್ಚಾಗಿ ವ್ಯವಸಾಯಕ್ಕೆ ಅನುಕೂಲಿಸುವಂತೆ ಮಾಡಲು ಪ್ರಯತ್ನಿಸಬೇಕು.

೧೧. ಮೈಸೂರು ಸಂಸ್ಥಾನದ ಕೆರೆಗಳಲ್ಲಿ "ಮೇಜರು-ಮೈನರು" ಎಂಬ ಭೇದಗಳನ್ನು ಮಾಡಿರುವುದನ್ನು ತಪ್ಪಿಸಬೇಕು. ಈ ಭೇದದಿಂದ ಮೈನರ್ ಕೆರೆಗಳ ಜೀರ್ಣೋದ್ಧಾರವು ಸಾಗದೆ ಹೋಗಿರುವುದು, ರೈತರು ಇವರ ಕೆಲಸವನ್ನು ಶ್ರದ್ಧೆಯಿಂದ ಮಾಡುವುದಿಲ್ಲ.

೧೨. ಉತ್ತಮವಾದ ಹಾಲು ಬೆಣ್ಣೆಗಳನ್ನು ಮಾರುವ ಅಂಗಡಿಗಳನ್ನು ಸ್ಥಾಪಿಸಲು ಜನರಿಗೆ ಪ್ರೋತ್ಸಾಹಿಸಿ ತಕ್ಕ ತಿಳುವಳಿಕೆ ಕೊಡುವುದಕ್ಕೂ, ಪಟ್ಟಣಗಳಲ್ಲಿ ಉತ್ತಮವಾದ ಹಾಲು ಬೆಣ್ಣೆ ಮೊದಲಾದುವುಗಳು ಮಾರಲ್ಪಡುವಂತೆ ಮಾಡುವುದಕ್ಕೂ, ಸರ್ಕಾರದ ಸಹಾಯದಿಂದ ಸ್ಥಾಪಿಸಲ್ಪಡುವ ಕ್ಷೀರಶಾಲೆಗಳನ್ನು ಮೇಲ್ವಿಚಾರಣೆ ಮಾಡುವುದಕ್ಕೂ, ಉತ್ತಮವಾದ ಹೈನದ ದನಕರುಗಳನ್ನು ವೃದ್ಧಿಪಡಿಸುವುದಕ್ಕೂ ಸಹ ಒಬ್ಬ ಶಾಸ್ತ್ರಜ್ಞನನ್ನು ಅಧಿಕಾರಿಯನ್ನಾಗಿ ೫ ವರ್ಷಗಳವರೆಗೆ ನಿಯಮಿಸಬೇಕು. (ವ್ಯವಸಾಯ ಶಾಖಾಧಿಕಾರಿಯ ಯಜಮಾನ್ಯದ ಕೆಳಗೆ ಇಂಥ ಶಾಲೆಯೊಂದನ್ನು ಬೆಂಗಳೂರಿನಲ್ಲಿ ಸ್ಥಾಪಿಸುವುದಕ್ಕಾಗಿ ಸರ್ಕಾರದವರು ೧೯೫೦೦ ರೂ.ಗಳನ್ನು ಅಪ್ಪಣೆಮಾಡಿರುವರೆಂಬ ಸಂಗತಿಯು ಆಗಲೇ ಸರ್ಕಾರದ ಪಕ್ಷದಿಂದ ಓದಿ ತಿಳಿಯಿಸಲ್ಪಟ್ಟಿತು.)

೧೩. ಕಬ್ಬು-ಬತ್ತ-ತೆಂಗು-ಇವುಗಳ ವ್ಯವಸಾಯಾದಿ ವಿಷಯವನ್ನು ಸಮಗ್ರವಾಗಿ ತಿಳಿದುಕೊಂಡು ಬರುವುದಕ್ಕಾಗಿ ಸರ್ಕಾರದವರು ಒಬ್ಬರನ್ನು ಜಾವಾದ್ವೀಪಕ್ಕೆ ಕಳುಹಿಸಿಕೊಡಬೇಕು. (ಕರ್ಪೂರ, ಟೀ, ಇತ್ಯಾದಿಗಳ ವ್ಯವಸಾಯಕ್ಕಾಗಿಯೇ ಜಾಗರ ಕಣಿವೆಯನ್ನು ಗೊತ್ತುಮಾಡಿ ಬಿಟ್ಟಿರಬೇಕು ಎಂಬ ವಿಷಯವು ಮಲೆನಾಡು ಪುರೋಭಿವೃದ್ಧಿಯ ಸಂಘದವರ ಪರ್ಯಾಲೋಚನೆಗೆ ತೆಗೆಯಲ್ಪಟ್ಟಿತು.)

೧೪. ಯಂತ್ರಾದಿಗಳ ಉಪಯೋಗವಿಧಾನವನ್ನು ಕಲಿತು ಬರುವುದಕ್ಕಾಗಿ ೩ ಮಂದಿ ವಿದ್ಯಾರ್ಥಿಗಳನ್ನು ಸೀಮೆಗೆ ಕಳುಹಿಸಬೇಕು.

೧೫. ಮೈಸೂರು ಕೈಗಾರಿಕೆಯ ಹೆಂಚಿನ ಸಂಘದವರಿಗೆ ೩ ವರ್ಷದವರೆಗೆ ಸಹಾಯಮಾಡುವುದಕ್ಕಾಗಿ ಆ ವಿಷಯಜ್ಞಾನವುಳ್ಳವರೊಬ್ಬರನ್ನು ಸರ್ಕಾರದವರು ಒದಗಿಸಿಕೊಡಬೇಕು.

೧೬. ಕಬ್ಬಿನ ಗಾಣವನ್ನುಪಯೋಗಿಸುವ ರೀತಿಯನ್ನೂ ಬೆಲ್ಲವನ್ನು ಉತ್ತಮತರವಾಗಿ ಇಳಿಸುವ ಪದ್ಧತಿಯನ್ನೂ ರೈತರಿಗೆ ತಿಳಿಯಿಸಿ ಕೊಡುವುದಕ್ಕಾಗಿ ಸರ್ಕಾರದವರು ಒಂದು ದೊಡ್ಡ ಬೆಲ್ಲದ ಯಂತ್ರವನ್ನು ಸ್ಥಾಪಿಸಬೇಕು.

೧೭. ಕಬ್ಬಿಣವನ್ನು ತೆಗೆಯಿಸುವುದು ಕರಗುವುದು, ಇದ್ದಲನ್ನು ತಯಾರಿಸುವುದು, ಮರದೆಣ್ಣೆಯನ್ನು ತೆಗೆಯಿಸುವುದು ಈ ಕೆಲಸಗಳಿಗಾಗಿ ಅದನ್ನು ತಿಳಿದ ಪ್ರಾಜ್ಞರನ್ನು ಕೆಲಸಕ್ಕೆ ನಿಯಮಿಸಿಕೊಳ್ಳುವಂತೆ ಸರ್ಕಾರದವರನ್ನು ಪ್ರಾರ್ಥಿಸಬೇಕು.

ಮೈಸೂರ್ ಸ್ಟಾರ್

ಸೆ ೧೯೧೪ ನೆಯ ಜೂನ್ ತಾ॥ ೧೫ ನೆಯ ಸೋಮವಾರ.

"ಜುಡಿಷಿಯಲ್ ಕಾನ್ಫರೆನ್ಸ್"

ಪ್ರಜೆಗಳ ಪ್ರಾಣಮಾನಧನಗಳನ್ನು ರಕ್ಷಿಸಿ ದೇಶದಲ್ಲಿ ಸ್ವಸ್ಥತೆಯನ್ನು ನೆಲೆಗೊಳಿಸುವ ಕಾರ್ಯಭಾರವನ್ನು ಹೊತ್ತಿರುವ ನ್ಯಾಯಶಾಖೆಯು ಪ್ರಭುತ್ವಕ್ಕೆ ಮುಖ್ಯಾಂಗವಾದ ಹೃದಯದಂತಿರುವುದು. ಈ ಮುಖ್ಯಾಂಗಕ್ಕೆ ಸತ್ಯ ನಿಷ್ಪಕ್ಷಪಾತತೆ ನಿಸ್ಪೃಹತ್ವಗಳೇ ಆಧಾರಭೂತವಾದ ಧರ್ಮಗಳಾಗಿರುವುವು. ಈ ಸದ್ಧರ್ಮದಿಂದ ಈ ಶಾಖೆಯು ಚ್ಯುತವಾಗುವುದಾದರೆ ರಾಜ್ಯದ ಮುಖ್ಯಾಂಗವೇ ಕಲುಷಿತವಾಗಿ ಹೋಗುವುದು. ಹೃದಯವು ಕೆಟ್ಟರೆ ದೇಹಕ್ಕೆ ಅಪಾಯವು ಹೇಗೆ ಸಿದ್ಧವೋ ಹಾಗೆ ನ್ಯಾಯಶಾಖೆಯ ಕಾರ್ಯಗಳು ದೋಷಯುಕ್ತಗಳಾಗುತ್ತ ಬಂದರೆ ರಾಜ್ಯಕ್ಕೆ ಅಶ್ರೇಯಸ್ಸು ಕಾದಿಕ್ಕುವುದು. ಈ ಉತ್ಕೃಷ್ಟವಾದ ತತ್ತ್ವಕ್ಕೆ ಗಮನವಿತ್ತು ನಮ್ಮ ಸಾರ್ವಭೌಮಪ್ರಭುತ್ವದವರು ನ್ಯಾಯಶಾಖೆಯ ಮುಖ್ಯಾಧಿಕಾರಿಗಳಿಗೆ ಕೊಟ್ಟಿರುವ ಗೌರವವೂ, ಆ ಶಾಖೆಯ ಉತ್ತಮಸ್ಥಾನಗಳನ್ನೇರುವ ಮಹನೀಯರು ತೋರುತ್ತಿರುವ ಸತ್ಯಪ್ರಿಯತೆಯೂ ಸಹ ಸದ್ಧರ್ಮೋದ್ಧಾರಕವಾಗಿ, ಅವರ ಪ್ರಭುತ್ವವನ್ನು ಪ್ರಪಂಚದಮೇಲೆ ಚಿರಕಾಲಿಕವನ್ನಾಗಿಯೂ ಪ್ರಜಾರಂಜಕವನ್ನಾಗಿಯೂ ಮಾಡಿಟ್ಟಿರುವುವು. ಆಂಗ್ಲ ಸಾಮ್ರಾಜ್ಯ ಛತ್ರಛಾಯೆಯೊಳಗಿರುವ ಇತರ ಪ್ರಭುತ್ವದವರೂ ಸಹ ಈ ಶಾಖೆಯ ಕಾರ್ಯಗಳನ್ನು ಅವರ ಮಾರ್ಗವನ್ನನುಸರಿಸಿಯೇ ನಡೆಯಿಸುತ್ತಿರುವರು.

ಆದರೆ ಕಾಲಸ್ಥಿತಿಯ ವೈಚಿತ್ರ್ಯದಿಂದ ನ್ಯಾಯಶಾಖೆಯ ಕಾರ್ಯಗಳೆಲ್ಲವೂ ನಿರ್ದುಷ್ಟಗಳಾಗಿರುವುದಿಲ್ಲ. ನ್ಯಾಯಸ್ಥಾನಗಳಿಗೆ ಪ್ರಜೆಗಳು ಹೋಗದಿದ್ದರೆ ತೀರದು. ಹೋದರೆ ಅನೇಕ ಸಂದರ್ಭಗಳಲ್ಲಿ ಗೆದ್ದು ಬಂದವನು ಸೋತುಬಂದಂತೆಯೂ, ಸೋತುಬಂದವನು ಸತ್ತುಬಂದಂತೆಯೂ ಆಗುತ್ತಿರುವುದು, ಈಗಿನ ಕಾಲದಲ್ಲಿ ನ್ಯಾಯಸ್ಥಾನಗಳಲ್ಲಿ ಅಡ್ಡಾಡಿಬರುವವರಿಗೆಲ್ಲಾ ಗೊತ್ತೇ ಇರುವಾಗ ಅದರ ವಿವರಣವನ್ನು ವಿಸ್ತಾರವಾಗಿ ಹೇಳಬೇಕಾಗಿಲ್ಲ. ಮುಖ್ಯವಾಗಿ ಪ್ರಜೆಗಳಲ್ಲಿ ಅನ್ಯಾಯ ಅಸತ್ಯ ಅಧರ್ಮಗಳು ಸುಳಿಗೆಟ್ಟು ಹೋಗುತ್ತ ಬಂದರೆ ಈ ನ್ಯಾಯಸ್ಥಾನಗಳ ಬಾಗಿಲೇ ಮುಚ್ಚಿಹೋಗಬಹುದು. ಆದರೆ ಅಂಥ ಕಾಲವು ಬರುವುದೆಂದಿಗೆ? ಪ್ರಜೆಗಳ ಶಿಕ್ಷಾರಕ್ಷೆಯನ್ನು ಮಾಡುವ ಪವಿತ್ರಸ್ಥಾನಗಳಾದ "ಕೋರ್ಟು ಕಚೇರಿಗಳೇ" ಕಂಬಕಂಬಕ್ಕೂ ಲಂಚ ರಕ್ಕುತಾಳಿ ವಂಚನೆ ಪಕ್ಷಪಾತ ಮೊದಲಾದ ದೋಷಗಳಿಗೆ ನೆಲೆಮನೆಯಾಗುತ್ತ ಬಂದರೆ ಅಂತಹ ನ್ಯಾಯಸ್ಥಾನಗಳಿಂದ ಪ್ರಜೆಗಳಿಗೆ ಎಷ್ಟು ಹಿತವಾದೀತು? ಈಗಿನ ಹಲವು ಕೋರ್ಟು ಕಚೇರಿಗಳಲ್ಲಿ ಲಂಚ ಮೊದಲಾದುವುಗಳು ವೃದ್ಧಿಯಾಗುತ್ತಿರುವ ಸಂಗತಿಯು ಪ್ರತಿಯೊಬ್ಬರಿಗೂ ಗೊತ್ತಾಗಿರುತ್ತ ಅದು ಬಹಿರಂಗವಾದ ಗುಟ್ಟೆನಿಸಿಕೊಂಡಿದೆ. ನ್ಯಾಯಸ್ಥಾನಗಳಲ್ಲಿ ತೀರ್ಪನ್ನು ಪಡೆದುಕೊಳ್ಳುವವರೆಗೆ ಆಗತಕ್ಕ ಕಾಲವಿಳಂಬವೂ, ತೀರ್ಮಾನದನಂತರ ಫಲವನ್ನು ಕೈಗೆ ಬರಮಾಡಿಕೊಳ್ಳಲು ಉಂಟಾಗುತ್ತಿರುವ ನಾನಾವಿಘ್ನಗಳೂ ವಾಚಾಮಗೋಚರವಾಗಿರುತ್ತವೆ. ಇನ್ನು ಕ್ರಿಮಿನಲ್ ಕೇಸುಗಳ ವಿಷಯದಲ್ಲೂ, ಲಂಚ ಮೊದಲಾದುವುಗಳ ಹಾವಳಿಯು ಬಿಟ್ಟದ್ದೇನಿಲ್ಲ. ಸಣ್ಣ ಉದ್ಯೋಗಗಳ ಜತೆಗೆ ದೊಡ್ಡದೊಡ್ಡ ಅಧಿಕಾರಿಗಳೂ ಆತರದವರಾಗಿ ಬಿಟ್ಟರೆ, ಅವರಿದ್ದ ಸ್ಥಳದ ಪ್ರಜೆಗಳ ಕಷ್ಟವನ್ನು ಹೇಳಬೇಕಾಗಿಯೇ ಇರುವುದಿಲ್ಲ, ಅದುಕಾರಣ, ಸಾಂಕ್ರಾಮಿಕ ಜಾಡ್ಯದಂತೆ ಈ ಶಾಖೆಗಳಲ್ಲಿ ಪ್ರಬಲಿಸುತ್ತಿರುವ ಅನ್ಯಾಯಾದಿಗಳನ್ನು ಪರಿಶೀಲಿಸಿ ನಿವರ್ತಿಸಬೇಕಾದುದು ಈಗ ಅತ್ಯವಶ್ಯಕವಾಗಿದೆ.

ಈಚೀಚೆಗೆ ನಮ್ಮ ಸಂಸ್ಥಾನದಲ್ಲಿ ನ್ಯಾಯಸ್ಥಾನಗಳಿಗೆ ಸಮರ್ಥರಾದ ನ್ಯಾಯಾಧಿಪತಿಗಳೇನೋ ದೊರೆದಿರುತ್ತಾರೆ. ಕಾರ್ಯಗಳು ಪಟುತೆಯಿಂದ ನೆರವೇರುವುದಕ್ಕೆ ತಕ್ಕ ಎಚ್ಚರಿಕೆಯು ತೆಗೆದುಕೊಳ್ಳಲ್ಪಡುತ್ತಿದೆ. ಆದರೂ ಪರಿಹಾರ್ಯವಾದ ದೋಷಗಳು ಅನೇಕವಿವೆ. ಇದರಲ್ಲಿರುವ ನ್ಯೂನಾತಿರೇಕಗಳನ್ನೂ ಅವುಗಳ ಪರಿಹಾರೋಪಾಯವನ್ನೂ ಕುರಿತು ಸಭಾಮುಖದಲ್ಲಿ ಚರ್ಚಿಸಿ ನಿರ್ಧರಿಸುವುದಕ್ಕಾಗಿ ನಮ್ಮ ಸಂಸ್ಥಾನದಲ್ಲಿ ಅಭೂತಪೂರ್ವವಾದ ನ್ಯಾಯಸಭೆಯು ಇದೇ ತಿಂಗಳು ತಾ॥ ೧೦-೧೧ ರಲ್ಲಿ ರಾಜಧಾನಿಯ ಟವುನ್ ಹಾಲಿನಲ್ಲಿ ೧ನೆಯ ಕೌನ್ಸಿಲರಾದ ರಾಜಮಂತ್ರಪ್ರವೀಣ ಎಚ್. ವಿ. ನಂಜುಂಡಯ್ಯ ಎಂ. ಎ. ಎಂ. ಎಲ್. ಸಿ. ಐ. ಇ ಯವರ ಅಧ್ಯಕ್ಷತೆಯಿಂದ ನೆರವೇರಿತು. ಸಭೆಗೆ ಶ್ರೀಮದ್ಯುವರಾಜರೂ ದಿವಾನರೂ ಮ್ಯಾ॥ ರಾ॥ ಕೇಂಬಲ್‌ರವರೂ, ಕೌನ್ಸಿಲರೂ, ಚೀಫ್‌ಕೋರ್ಟು ಜಡ್ಜಿಗಳೂ, ಸ್ಥಳದ ಸಕಲ ನ್ಯಾಯಾಧಿಪತಿಗಳೂ, ದಂಡಾಧಿಕಾರಿಗಳೂ ನ್ಯಾಯವಾದಿಗಳೂ ಪುರಪ್ರಮುಖರೂ ಬಂದು ನೆರೆದಿದ್ದರು. ಅಧ್ಯಕ್ಷರು ಆಂಗ್ಲಭಾಷೆಯಲ್ಲಿ ೨೦ ಪುಟಗಳಷ್ಟು ವಿಸ್ತಾರವಾದ ತಮ್ಮ ಭಾಷಣವನ್ನು ಪ್ರಥಮತಃ ಮಾಡಿದರು. ಅದರಲ್ಲಿ ಅವರಿಗೆ ನ್ಯಾಯಶಾಖಾ ಸಂಬಂಧವಾದ ಪೂರ್ಣಾನುಭವವು ಎಷ್ಟಿರುವುದೆಂಬುದು ವಿದಿತವಾಗುತ್ತಿದ್ದಿತು. ಪ್ರಜೆಗಳ ಪ್ರಾಣವಿತ್ತಮಾನಗಳ ರಕ್ಷಣೆಗಾಗಿ ಈ ಶಾಖೆಯಲ್ಲಿನ ಕೆಲಸಗಳು ನ್ಯೂನಾತಿರೇಕವಿಲ್ಲದೆ ಹೇಗೆ ನಡೆಯಬೇಕೆಂಬುದು ವಿಸ್ತಾರವಾಗಿ ವಿಮರ್ಶಿಸಲ್ಪಟ್ಟಿದ್ದಿತು. ಬಳಿಕ ಸಭಿಕರಿಂದ ನ್ಯಾಯಶಾಖೆಯ ಈಗಿನ ಕೆಲಸದಲ್ಲಿರತಕ್ಕ ತೊಂದರೆಗಳೂ ಅಧಿಕಾರಿಗಳನ್ನು ನಿಯಮಿಸುವರೀತಿ ಮೊದಲಾದ ಅನೇಕ ವಿಷಯಗಳೂ ಚರ್ಚಿಸಲ್ಪಟ್ಟುವು. ಬಳಿಕ ಎರಡುದಿನಗಳಲ್ಲೂ ಆದ ತೀರ್ಮಾನಗಳೊಳಗೆ-ಚೀಫ್‌ಕೋರ್ಟಿನ ಮೂರುಮಂದಿ ನ್ಯಾಯಾಧಿಪತಿಗಳೊಳಗೆ ಒಂದುಸ್ಥಾನಕ್ಕೆ ೨೦ವರುಷಗಳವರೆಗೆ ಆ ಶಾಖೆಯ ಕೆಲಸದಲ್ಲಿ ಅನುಭವವಿರುವಂಥ ಸ್ವದೇಶೀಯರಾದವರನ್ನು ನಿಯಮಿಸಬೇಕು. ಡಿಸ್ಟ್ರಿಕ್ಟ್‌ಜಡ್ಜಿಗಳು ಮೂವರೊಳಗೆ ಒಬ್ಬರಸ್ಥಾನಕ್ಕೆ ೧೫ ವರ್ಷಗಳ ಅನುಭವವುಳ್ಳ ಸ್ವದೇಶದನ್ಯಾಯವಾದಿಗಳೊಬ್ಬರನ್ನು ಆರಿಸಿಕೊಳ್ಳಬೇಕು. ಸಬ್‌ಜಡ್ಜಿಗಳಲ್ಲೊಂದುಸ್ಥಾನಕ್ಕೆ ೧೦ವರ್ಷಗಳಅನುಭವವುಳ್ಳ ಸ್ವದೇಶದ ನ್ಯಾಯವಾದಿಗಳಲ್ಲೊಬ್ಬರನ್ನು ಆರಿಸಿಕೊಳ್ಳಬೇಕು. ನ್ಯಾಯವಾದವೃತ್ತಿಯಲ್ಲಿ ೫ ವರ್ಷಗಳ ಅನುಭವವುಳ್ಳವರನ್ನೇ ಮುನ್ಸೀಫ್ ಕೆಲಸಕ್ಕೆ ಆರಿಸಿಕೊಳ್ಳಬೇಕು. ಈ ನ್ಯಾಯವಾದಿಗಳನ್ನು ನ್ಯಾಯಾಧಿಪತಿಯ ಕೆಲಸಕ್ಕೆ ಆರಿಸಿಕೊಳ್ಳುವಾಗ್ಗೆ ವಯೋನಿರ್ಬಂಧವನ್ನು ತಪ್ಪಿಸಬೇಕು. ೩ ನೆ ತರಗತಿಯಲ್ಲಿ ೩ ವರ್ಷ ಕಾಲವಾದರೂ ತೃಪ್ತಿಕರವಾಗಿ ಕೆಲಸಮಾಡದೆ ಇರುವ ದಂಡಾಧಿಕಾರಿಯನ್ನು ೨ನೆ ತರಗತಿಗೆ ಹೆಚ್ಚಿಸಕೊಡದು. ೫ವರ್ಷವಾದರೂ ೨ ನೆಯ ತರಗತಿಯಲ್ಲಿ ಕೆಲಸಮಾಡದವರನ್ನು ೧ನೆ ತರಗತಿಗೆ ಹೆಚ್ಚಿಸಕೂಡದು. ಅಮಲ್ದಾರರು ತಮ್ಮ ತಾಲ್ಲೂಕಿನ ಪೊಲೀಸರು ಕಂಡುಹಿಡಿದ ಕೇಸನ್ನು ವಿಚಾರಿಸಕೂಡದು. ನ್ಯಾಯಶಾಖೆಯ, ಕಾರ್ಯನಿರ್ವಾಹಕಶಾಖೆಯ ಅಧಿಕಾರವನ್ನು ಬೇರೆಬೇರೆ ಮಾಡಬೇಕು. ನ್ಯಾಯಶಾಖೆಯ ಸರ್ವೀಸನ್ನು ವೈದ್ಯ ಇಂಜನಿಯರಿಂಗ್ ಮೊದಲಾದ ಶಾಖೆಗಳ ಸರ್ವೀಸಿನಂತೆ "ಟೆಕ್ನಿಕಲ್" ಶಾಖೆಯಂತೆ ಪರಿಭಾವಿಸಬೇಕು. ಈ ಸಭೆಯು ಪ್ರತಿವರ್ಷವೂ ಸೇರಬೇಕು. ಎಂದುಮೊದಲಾದ ವಿಷಯಗಳಿರುವುವು.

ಅಂತು ಈ ಸಭೆಯು ನ್ಯಾಯಶಾಖೆಗೆ ಸಂಬಂಧಿಸಿದ ಅವಶ್ಯಕವಾದ ವಿಷಯಗಳನ್ನು ಹಿಡಿದು ಚರ್ಚಿಸುವುದಕ್ಕಾಗಿ ಏರ್ಪಟ್ಟುದು ಸಂತೋಷವೇ ಸರಿ. ಈಗಿನ ಕೋರ್ಟು ಕಚೇರಿಗಳಲ್ಲಿ ಪ್ರಜೆಗಳಿಗಿರುವ ಅನ್ಯಾಯವಾದ ತೊಂದರೆಗಳೆಲ್ಲಾ ತಪ್ಪುವುದಕ್ಕೂ ನ್ಯಾಯಸ್ಥಾನಗಳು ಸಾರ್ಥಕವಾದ ಹೆಸರುಳ್ಳವುಗಳಾಗುವುದಕ್ಕೂ ತಕ್ಕ ಕೆಲಸವನ್ನು ಮಾಡಿಸಲು ಸಾಧಕವಾದರೆ ಮಾತ್ರ ಪ್ರಜೆಗಳು ವಿಶೇಷವಾಗಿ ಸಂತೋಷಿಸುವರು. ಹಾಗಲ್ಲದೆ ಇದ್ದರೆ ಸಭೆಯ ಉದ್ದೇಶವೇ ಬೇರೆ ಫಲವೇ ಬೇರೆ ಆಗುವುದು.

ಒಳದೇಶದ ವೃತ್ತಾಂತವು.

ರಾಜಧಾನಿಯಲ್ಲಿ ಕುದುರೆಯ ಜೂಜುಗಳು ಇದೇ ತಿಂಗಳು ತಾ॥ ೨೩-೨೫-೨೭ ರಲ್ಲಿ ನಡೆಯುವುವು.

ದಾವಣಗೆರೆ ತಾ॥ ಅಣಜಿಯಲ್ಲಿ ಹೊಸದಾಗಿ ಒಂದು ಬ್ರಾಂಚ್‌ಪೋಸ್ಟಾಫೀಸು ಸ್ಥಾಪಿಸಲ್ಪಟ್ಟಿದೆ.

ಚೀಫ್‌ಕೋರ್ಟಿನ ಜಡ್ಜಿ ಕೆಲಸಕ್ಕೆ ಮ॥ ಸಿ. ಶ್ರೀಕಂಠೇಶ್ವರಯ್ಯರ್‌ರವರೂ ಅವರ ಈಗಿನ ಪೊಲೀಸ್ ಇ॥ ಜನರಲ್ ಕೆಲಸಕ್ಕೆ ಮಿ॥ ಆರ್. ಬಿ. ಪ್ಲುಮರ್‌ರವರೂ ನಿಯಮಿಸಲ್ಪಡುವರೆಂದು ಸುದ್ದಿಯಿದೆ.

ಸಂಪದಭ್ಯುದಯ ಸಮಾಜದ ಸಭಿಕರು ಮೊದಲಾದವರಿಗೆ ಶ್ರೀಮದ್ಯುವರಾಜರು ಕಳೆದ ತಾ॥ ೭ ರ ಸಾಯಂಕಾಲ ಕುದುರೆಜೂಜಿನ ಬಯಲಿನಲ್ಲಿ ಒಂದು ಔತಣವನ್ನೂ ವಿನೋದದ ಆಟಗಳನ್ನೂ ಮಾಡಿಸಿದರು.

ರಾಜಧಾನಿಯಲ್ಲಿ ಕಳೆದವಾರ ೧ ಹನಿ ಮಳೆಯೂ ಬೀಳಲಿಲ್ಲ. ಸುತ್ತಮುತ್ತಲೂ ಹಾಗೆಯೇ ಇದೆ. ದವಸದಬೆಲೆಯು ಏರುತ್ತಲಿದೆ. ಮುಂಗಾರಿನ ಬೆಳಸಿನ ಆಶೆಯು ತಪ್ಪಿಹೋಯಿತು. ಕಾಲಸ್ಥಿತಿಯು ಭೀಕರವಾಗಿದೆ.

ಕುರುಬರ ಜಾತಿಯವರು ಒಕ್ಕಲಿಗರ ಪತ್ರಿಕೆಯವರಮೇಲೆ ತಂದಿರುವ ಮಾನನಷ್ಟದ ವ್ಯಾಜ್ಯದಲ್ಲಿ ಅಪರಾಧಿಗಳ ಮೇಲೆಲ್ಲಾ ದಂಡಾಧಿಕಾರಿಗಳು ಛಾರ್ಜುಮಾಡಿರುವರು. ಮುಂದಣ ವಿಚಾರಣೆಯು ತಾ॥ ೨೦ ಕ್ಕೆ ಇಡಲ್ಪಟ್ಟಿದೆ.

ಬೆಂಗಳೂರಿನಲ್ಲಿ ಒಬ್ಬಾನೊಬ್ಬ ಸೋಲ್ಜರು ಬಾಡಿಗೆಗೆ ತೆಗೆದುಕೊಂಡು ಬಂದಿದ್ದ ಸೈಕಲ್ ಬಂಡಿಯನ್ನು ದೊಡ್ಡಬಳ್ಳಾಪುರದ ಸ್ಟೇಷನ್‌ಮ್ಯಾಸ್ಟರಿಗೆ ಮಾರಿಕೊಂಡ ತಪ್ಪಿಗಾಗಿ ೨ ತಿಂಗಳ ಕಠಿನ ಕಾರಾಗೃಹವಾಸ ಶಿಕ್ಷೆಯಾಯಿತು.

ಬೆಂಗಳೂರಿನಲ್ಲಿ ದೊರಸಾಮಿಯೆಂಬ ಮರಗೆಲಸದವನೊಬ್ಬನು ಒಂದು ದಿನ ೨ ರೂ.ಗಳನ್ನು ಸಂಪಾದಿಸಿ ಯಥೇಚ್ಛವಾಗಿ ಮದ್ಯಪಾನಮಾಡಿ ಬುದ್ಧಿಕೆಟ್ಟು ಹೆಂಡತಿಯೊಡನೆ ಜಗಳವಾಡಿ ಇನ್ನು ಪ್ರಾಣಸಮೇತ ಇರುವುದು ವ್ಯರ್ಥವೆಂದು ನೆನೆಸಿ, ಆತ್ಮಹತ್ಯಮಾಡಿಕೊಳ್ಳಲು ಪ್ರಯತ್ನಿಸಿದ ತಪ್ಪಿಗಾಗಿ ೧ ತಿಂಗಳ ಕಾರಾಗೃಹವಾಸ ಶಿಕ್ಷೆಯನ್ನು ಹೊಂದಿದನು.

ನಮ್ಮ ಚೀಫ್‌ಕೋರ್ಟಿನಲ್ಲಿ ಮುಖ್ಯ ನ್ಯಾಯಾಧೀಶರಾಗಿದ್ದು ವಿಶ್ರಾಂತಿವೇತನವನ್ನು ಪಡೆಯುತ್ತಲಿದ್ದ ಸರ್. ಸ್ಟಾನ್ಲೆ ಇಸ್ಮೆಯವರು ಕಳೆದ ತಾ॥ ೨ ರಲ್ಲಿ ಉದಕಮಂಡಲದೊಳಗೆ ವಿಧಿವಶರಾದರು. ಅವರ ಉತ್ತರಕ್ರಿಯೆಗೆ ಅಲ್ಲಿನ ಸಿವಿಲ್ ಮಿಲಟರಿಯ ಎಲ್ಲ ಮುಖ್ಯಾಧಿಕಾರಿಗಳೂ ಮದ್ರಾಸ್‌ಗೌರ್ನರವರೂ ಸಹ ದಯಮಾಡಿಸಿದ್ದರು. ತಾ॥ ೯ ದಿವಸ ಮೃತರ ಗೌರವಾರ್ಥವಾಗಿ ಮಧ್ಯಪ್ರಾಂತದ ಎಲ್ಲ ಕೋರ್ಟುಗಳೂ ಮುಚ್ಚಲ್ಪಟ್ಟಿದ್ದುವು

ಜೂನ್ ತಾ॥ ೧೦ರಿಂದ ಕಾಲ್ವೆಗಳಲ್ಲಿ ವ್ಯವಸಾಯಕ್ಕೆ ನೀರು ಬಿಡಲ್ಪಡಬೇಕಾಗಿದ್ದಿತು. ಆದರೆ ಈ ವರ್ಷ ಇನ್ನೂ ಮಳೆಯಾಗದೆ ಕಾವೇರಿ ಕಪಿನಿ ನದಿಗಳೆರಡರಲ್ಲೂ ಸ್ವಲ್ಪಮಾತ್ರವೇ ನೀರು ಹರಿಯುತ್ತಿರುವುದರಿಂದಲೂ, ವಿದ್ಯುಚ್ಛಕ್ತಿಯ ಉತ್ಪಾದನಕ್ಕೇ ನೀರು ಸಾಲದೆ ಇರುವುದರಿಂದಲೂ, ಕಾಲ್ವೆಗಳಲ್ಲಿ ನೀರು ಬಿಡಲ್ಪಟ್ಟಿಲ್ಲ. ಕಾರು ಬೆಳಸಿನ ಆಸೆಯೇ ತಪ್ಪಿ ಬೇಸಾಯಗಾರರು ಪರಿತಪಿಸುತ್ತಿರುವಾಗ ಕಾಲ್ವೆಯ ನೀರಿನ ಅವಸ್ಥೆಯೂ ಹೀಗಾಗಿರುವುದನ್ನು ಕಂಡು ತತ್ತರಿಸುತ್ತಿದ್ದಾರೆ.

ಬೊಂಬಾಯಿ ಗೌರ್ನರಾದ ಲಾರ್ಡ್ ವೆಲ್ಲಿಂಗ್ಡನ್‌ರವರೂ ಅವರ ಪತ್ನಿಯವರೂ ಸಹ ೫ ದಿನಗಳವರೆಗೆ ನೀಲಗಿರಿಯಲ್ಲಿದ್ದು ಕಳೆದ ತಾ॥ ೧೦ ರ ಮಧ್ಯಾಹ್ನ ೨ ಗಂಟೆಗೆ ಬೆಟ್ಟವನ್ನು ಬಿಟ್ಟು ಸಾಯಂಕಾಲ ೩ ಗಂಟೆಗೆ ಮೈಸೂರನ್ನು ಸೇರಿದರು. ಅವರ ಜತೆಯಲ್ಲಿ ವಾಟ್ಸನ್‌ರವರು, ಕೇಪ್ಟನ್ ಗೋಲ್ಡಿಯವರು, ಕೇಪ್ಟನ್ ವಾಗ್ನರ್‌ರವರು ಬಂದರು. ಬ್ರಿಟಿಷ್ ರೆಸಿಡೆಂಟರಾದ ಸರ್ ಹ್ಯೂ-ಡಾಲಿಯವರೂ, ಕರ್ನಲ್, ಎ. ಜೋನ್ಸ್‌ರವರೂ ಸಹ ಪುರಬಹಿರ್ಭಾಗದಲ್ಲಿ ಇದಿರ್ಗೊಂಡು ಕರತಂದು ದೊಡ್ಡಬಂಗಲೆಯಲ್ಲಿಳಿಯಿಸಿದರು. ರಾತ್ರಿ ಶ್ರೀಮನ್ಮಹಾರಾಜರು ಸಂದರ್ಶನಕ್ಕೆ ಹೋಗಿದ್ದರು. ತಾ॥ ೧೧ ರಲ್ಲಿ ಪುರವನ್ನು ಸಂದರ್ಶಿಸಿ ಮಧ್ಯಾಹ್ನ ಶ್ರೀರಂಗಪಟ್ಟಣಕ್ಕೂ ಶಿವನಸಮುದ್ರಕ್ಕೂ ಹೋಗಿಬಂದರು. ಆ ರಾತ್ರಿ ಅರಮನೆಯಲ್ಲಿ ಸಂಗೀತ ಶ್ರವಣಾದಿ ಸತ್ಕಾರಗಳು ನಡೆದುವು. ತಾ॥ ೧೨ ರ ಹಗಲು ೧೦ ಗಂಟೆಗೆ ಮೋಟಾರಿನಮೇಲೆ ಬೆಂಗಳೂರಿಗೆ ಪ್ರಯಾಣಮಾಡಿದರು. ಮರುದಿನ ಬೆಳಿಗ್ಗೆ ಮ॥ ಬ॥ ಕೆ. ಪಿ. ಪುಟ್ಟಣ್ಣಚೆಟ್ಟರು ರೆಸಿಡೆನ್ಸಿಯಲ್ಲಿ ಗೌರ್ನರ ಸಂದರ್ಶನವನ್ನು ಮಾಡಿ ಮೋಟಾರಿನಲ್ಲಿ ಅವರನ್ನು ಕುಳ್ಳಿರಿಸಿಕೊಂಡು ಪಟ್ಟಣದಲ್ಲಿ ನೋಡತಕ್ಕ ಭಾಗಗಳನ್ನೆಲ್ಲಾ ತೋರಿಸಿಕೊಂಡು ಬಂದರು.

ಭರತಖಂಡದ ವೃತ್ತಾಂತಗಳು.

ಮದ್ರಾಸಿನಲ್ಲಿ ರೋಮನ್‌ಕೆಥೋಲಿಕ್ ಕ್ರಿಸ್ತರ ಪರವಾದ ಒಂದು ಆಂಗ್ಲ ದಿನಪತ್ರಿಕೆಯು ಪ್ರಕಟಿಸಲ್ಪಡಲು ಸನ್ನಾಹವಾಗುತ್ತಿದೆ.

ಬರ್ಮಾದಲ್ಲಿರುವ ಮ್ಯಾಡ್‌ನದಿ ಮಾಲ್ವನದಿಗಳಲ್ಲಿ ವಿಪರೀತಪ್ರವಾಹವು ಬಂದು ಕಾಲ್ವೆಗಳು ಒಡೆದು ೧-೨ ಜಿಲ್ಲೆಗಳಲ್ಲಿನ ಬತ್ತದ ಪೈರಿಗೆ ತುಂಬಾ ನಷ್ಟವುಂಟಾಗಿದೆ.

ಬೊಂಬಾಯಿಯ ಲಕ್ಷ್ಮಿಹತ್ತಿಕಾರ್ಯಾಲಯಕ್ಕೆ ಬೆಂಕಿಬಿದ್ದು ೪೦ ಸಾವಿರ ರೂ.ಗಳ ನಷ್ಟವಾಯಿತು. ಘುರಿಕೋಡಿನಲ್ಲಿ ೨ ಅಂತಸ್ತಿನ ಮತ್ತೊಂದು ಕೋಠಿಗೆ ಬೆಂಕಿಬಿದ್ದು ೩॥ ಸಾವಿರ ಬೇಲುಗಳ ಹತ್ತಿಯು ಸುಟ್ಟುಹೋಯಿತು.

ಬೊಂಬಾಯಿಪ್ರಾಂತದಲ್ಲಿ ಬೆಹರಾಂಜಿ ಸೀರವಾಯಿ ಎಂಬ ಪಾರ್ಸಿಯಾತನೊಬ್ಬನು ಈಗತಾನೇ ಮೃತನಾದನು. ಇವನ ವಯಸ್ಸು ೯೧ ಆಗಿದ್ದಿತು. ಈತನ ತಂದೆಯು ೧೭೭೪ ನೆಯ ವರ್ಷದಲ್ಲಿ ಹುಟ್ಟಿ ೧೮೭೩ ನೆ ವರ್ಷದಲ್ಲಿ ಮೃತನಾಗಿದ್ದನಂತೆ.

ಭರತಖಂಡದಲ್ಲಿ ಕಾಗದವನ್ನು ಮಾಡುವ ಯಂತ್ರಾಲಯಗಳು ೩ ಮಾತ್ರವೇ ಇವೆ. ಇವುಗಳಲ್ಲಿ ಕಳೆದ ೫ ವರ್ಷದಿಂದಲೂ ವೃದ್ಧಿಕ್ಷಯವಾವುದೂ ತೋರುವುದಿಲ್ಲ. ಇಲ್ಲಿ ನಿರ್ಮಿತವಾಗುವ ಕಾಗದವು ಒರಟಾಗಿಯೂ ಬೆಲೆಯಲ್ಲಿ ತಗ್ಗಾಗಿಯೂ ಇರುವುದರಿಂದ ಇದರ ಕೈಗಾರಿಕೆಗೆ ಪ್ರೋತ್ಸಾಹವಿಲ್ಲ. ಸೀಮೆಯಿಂದ ವರ್ಷೇ ವರ್ಷೇ ಬರುತ್ತಿರುವ ಕಾಗದದ ಪರಿಮಿತಿಯು ಹೆಚ್ಚುತ್ತಲೇ ಇದೆ.

ದಿಲ್ಲಿ ಪಟ್ಟಣವನ್ನು ಭರತಖಂಡದ ರಾಜಧಾನಿಯನ್ನಾಗಿ ಮಾಡಿ ಪ್ರಕಟಿಸಿದಾಗ "ದಿಲ್ಲಿ" ಎಂಬ ಹಡಗು ಸಮುದ್ರದಲ್ಲಿ ಮುಳುಗಿಹೋಯಿತಂತೆ. ಈಗ ಐರ್ಲ್ಯಾಂಡಿನ ಸ್ವರಾಜ್ಯ ಶಾಸನವನ್ನೇರ್ಪಡಿಸಿದ ದಿವಸ "ಎಂಪ್ರೆಸ್ ಆಫ್ ಐರ್ಲ್ಯಾಂಡ್" ಎಂಬ ಹಡಗು ಮುಳುಗಿ ಹೋಯಿತಂತೆ. ಇದು ಯಾವ ಫಲವನ್ನು ಸೂಚಿಸುವುದು ಎಂಬುದನ್ನು ಶಕುನಶಾಸ್ತ್ರಜ್ಞರು ಗೊತ್ತುಮಾಡಿ ತಿಳಿಸಬೇಕು.

ಭಾರತ ಸಂಗೀತಶಾಸ್ತ್ರವನ್ನು ಕಲಿತು ಅದರಲ್ಲಿ ಒಂದು ನವೀನಪದ್ಧತಿಯನ್ನು ಪರಿಕಲ್ಪಿಸಿ ಮಹಾಪ್ರಸಿದ್ಧಿಯನ್ನು ಪಡೆದು ಅಮೇರಿಕಾದ ಫಿಲಡೆಲ್ಫಿಯಾ ಸರ್ವಕಲಾಶಾಲೆಯಲ್ಲಿ ಸಂಗೀತ ವಿದ್ಯಾಪಾಂಡಿತ್ಯಪಟ್ಟವನ್ನು ಪಡೆದು, ಆಂಗ್ಲಪ್ರಭುತ್ವದವರಿಂದ ನೈಟ್‌ಬ್ಯಾಚುಲರ್ ಎಂಬ ಬಿರುದನ್ನು ಹೊಂದಿದ್ದ ರಾಜಾ ಸರ್. ಶೌರೀಂದ್ರಮೋಹನ ಠಾಕೂರ್‌ರವರು ಕಳೆದ ತಾ॥ ೫ ರಲ್ಲಿ ವಿಧಿವಶರಾದರೆಂದು ಕೇಳಿ ವಿಷಾದಿಸುತ್ತೇವೆ.

ಖಗೋಳಶಾಸ್ತ್ರಜ್ಞರಾದ ಡಾಕ್ಟರ್ ಗಿಲ್ಬರ್ಟ್‌ರವರು ಈ ವರ್ಷದ ಕಾಲಮಾನವನ್ನು ಕುರಿತು ಹೇಳುವುದರಲ್ಲಿ-ಈ ಸಲ ಭರತಖಂಡದಲ್ಲಿ ಮಳೆಯು ಕಡಿಮೆಯೇ ಆಗುವುದು. ದೊಡ್ಡ ದೊಡ್ಡ ಮಳೆಗಳೂ ಸಹ ಸಣ್ಣವಾಗಿ ಹುಯ್ಯುವುವು. ಮಲಬಾರಿನಲ್ಲಿ ಉತ್ತಮವಾದ ಮಳೆಯಾಗುವ ಲಕ್ಷಣವು ಚೆನ್ನಾಗಿದೆ. ಪಂಜಾಬು ಸಂಯುಕ್ತರಾಷ್ಟ್ರ-ರಾಜಪುತ್ರಸ್ಥಾನ-ಮಧ್ಯಹಿಂದೂಸ್ಥಾನ-ಈ ಕಡೆಗಳಲ್ಲಿ ಮಳೆಯ ಸ್ಥಿತಿಗತಿಗಳು ಅನುಕೂಲವಾಗಿಲ್ಲ.

ಸೋಲಾಪುರ ಜಿಲ್ಲೆಗೆ ಸೇರಿದ ಬಾರ್ಸಿಯಲ್ಲಿ ಹಿಂದೂ ಮಹಮ್ಮದೀಯರ ಮಧ್ಯದಲ್ಲಿ ಗಣಪತಿಯುತ್ಸವ ಸಮಯದಲ್ಲಿ ೨ ಪಕ್ಷಗಳಾಗಿ, ಕಳೆದ ಮ್ಯುನ್ಸಿಪಲ್ ಕೌನ್ಸಿಲರನ್ನಾರಿಸುವಾಗ್ಗೆ ಮತ್ತಷ್ಟು ವೈಮನಸ್ಯವು ಹೆಚ್ಚಿ, ರಸೂಲ್ ಎಂಬ ಪ್ರತಿಪಕ್ಷ ಪ್ರಮುಖನಾದ ಶ್ರೀಮಂತನನ್ನು ಮತ್ತೊಂದು ಪಕ್ಷದವರು ಕೊಲ್ಲಿಸಿದರೆಂದು ಈಗ ಸೊಲ್ಲಾಪುರದ ಅಡಿಷನಲ್ ಜಡ್ಜ್‌ರವರ ಕೋರ್ಟಿನಲ್ಲಿ ವ್ಯಾಜ್ಯವು ಬಂದು ಕಳೆದ ಸೋಮವಾರದಿಂದ ವಿಚಾರಣೆ ನಡೆಯುತ್ತಿರುವುದು. ಇದರಲ್ಲಿ ಒಟ್ಟು ೫೫ ಮಂದಿ ಅಪರಾಧಿಗಳಿರುವರು.

ಘರೀದಪುರದಲ್ಲಿ ಕನ್ಯಾವರನ ಕಡೆಯವರಿಬ್ಬರೂ ಶ್ರೀಮಂತರಾಗಿದ್ದರೂ ೧ ಕಾಸೂ ವರಶುಲ್ಕವನ್ನು ಕೇಳದೆ ೧ ಮದುವೆಯಾಯಿತೆಂಬ ವರ್ತಮಾನವು ಬಂದಿದೆ. ವಧುವಿನ ತಂದೆಯು ಕುಚ್‌ಬಿಹಾರ್ ಸಂಸ್ಥಾನದ ಒಂದಾನೊಂದು ಜಮೀನ್ದಾರಿಯ ಮ್ಯಾನೇಜರು. ವರನು ಶ್ರೀಮಂತರಾದ ಬಾಬುಹರೇಂದ್ರ ನಾರಾಯಣಚೌಧರಿಯವರ ಜ್ಯೇಷ್ಠಪುತ್ರನೂ ಬಿ. ಎಸ್. ಸಿ. ಎಂಬ ಇಂಜನೀಯರಪರೀಕ್ಷೆಗೆ ಓದುವವನೂ ಆಗಿದ್ದಾನೆ. ಇಂಥ ವರರನ್ನು ಕೊಂಡಾಡಿ ಪ್ರೋತ್ಸಾಹಿಸುತ್ತ ಬಂದರೆ ವರಶುಲ್ಕದ ಹಾವಳಿಯು ಕಡಿಮೆಯಾದೀತು.

ಕಾಶ್ಮೀರದ ಮಹಾರಾಜರು ಗತಿಸಿದ ಪ್ರಭುವರರಾದ ರಾಜಾಸರ್ ರಾಜಾ ಶೂರಸಿಂಗ್‌ರವರ ಹೆಸರಿನಿಂದ ರಾಜಧಾನಿಯಾದ ಶ್ರೀನಗರದಲ್ಲಿ ಒಂದು ಕೈಗಾರಿಕೆಯ ಶಾಲೆಯನ್ನು ಹೊಸದಾಗಿ ಕಟ್ಟಿಸಿದರು. ಅದಕ್ಕೂ ಬೇಕಾದ ಸಾಮಾನುಗಳಿಗೂ ೩೨ ಸಾವಿರ ರೂ.ಗಳನ್ನು ವ್ಯಯಮಾಡಿದರು. ಮತ್ತೂ ಇದಕ್ಕೆ ಅವಶ್ಯಕವಾದ ಇನ್ನೂ ಕೆಲ ಕಟ್ಟಡಗಳಿಗಾಗಿ ೩೮ ಸಾವಿರ ರೂ.ಗಳನ್ನೂ ಈ ಆಲಯದ ಪೋಷಣೆಗೆ ೩೦ ಸಾವಿರ ರೂ.ಗಳನ್ನೂ ಕೊಟ್ಟಿರುತ್ತಾರೆ. ಇದರ ಆರಂಭಮಹೋತ್ಸವವು ಅಲ್ಲಿನ ಬ್ರಿಟಿಷ್ ರೆಸಿಡೆಂಟರಿಂದ ಮಾಡಿಸಲ್ಪಟ್ಟಿತು.

ಕೃಷ್ಣಾಪಟ್ಟಣದಲ್ಲಿ ಒಬ್ಬ ಕಾಲೇಜ್ ಪ್ರೊಫೇಸರು ತನ್ನ ೩೦ ನೆಯ ವಯಸ್ಸಿನಲ್ಲಿ ೨ ನೆಯ ಮದುವೆಯನ್ನು ಮಾಡಿಕೊಂಡನಂತೆ. ಈ ಮದುವೆಗೆ ಊರಿನ ಪ್ರಮುಖರನೇಕರು ಬಂದಿದ್ದರಂತೆ. ಮದುವೆಯಾದ ಹೆಂಡತಿಯು ಆತನ ಮಮ್ಮಗಳ ಹಾಗೆ ಕಾಣಿಸುತ್ತಿದ್ದಳಂತೆ. ಈ ಭಾರ್ಯೆಯನ್ನು ಸಂಪಾದಿಸುವುದಕ್ಕೆ ವರನಿಗೆ ೩೦ ಸಾವಿರ ರೂ.ಗಳವರೆಗೆ ವೆಚ್ಚವಾಗಿದೆಯಂತೆ. ಮೆರೆವಣಿಗೆಯ ದಿನ ೨ ಸಾವಿರ ಜನರು ಸಂಗಡ ಹೋಗಿದ್ದರಂತೆ. ಉತ್ಸವದ ಜತೆಯಲ್ಲಿ ಊರಿನ ದೊಡ್ಡ ಮನುಷ್ಯರೆಲ್ಲರೂ ೨೦೦ ಕುದುರೆ ಬಂಡಿಗಳಲ್ಲಿ ಕುಳಿತು ಬಂದಿದ್ದರಂತೆ! ವಿದ್ಯಾವಿವೇಕ ಬೋಧಕನಾದ ಒಬ್ಬ ಪ್ರೊಫೇಸರೇ ಹೀಗೆ ನಡೆಯುತ್ತಿರುವಾಗ ಭರತಖಂಡದಲ್ಲಿನ ಸಾಂಘಿಕ ದುರಾಚಾರಗಳು ತೊಲಗಿಹೋಗುವುದೆಂದಿಗೆ?

ಹೊಸದಾಗಿ ಭರತಖಂಡಕ್ಕೆ ಬರುವ ಆಂಗ್ಲಾಧಿಕಾರಿಗಳು ನಮ್ಮ ದೇಶಭಾಷೆಗಳನ್ನು ಓದಿಕೊಂಡು ಪರೀಕ್ಷೆಕೊಟ್ಟರೆ ಸ್ವಲ್ಪ ಬಹುಮಾನವನ್ನು ಕೊಡುವ ಪದ್ಧತಿಯನ್ನು ಗೌರ್ನಮೆಂಟಿನವರು ಇದಕ್ಕೆ ಮುಂಚೆಯೇ ಏರ್ಪಡಿಸಿದ್ದರು. ಈಗ ಅದನ್ನು ಸ್ವಲ್ಪ ಹೆಚ್ಚಿಸಿರುತ್ತಾರೆ. ಹೇಗೆಂದರೆ-ಪರ್ಷಿಯನ್ ಭಾಷೆಯಲ್ಲಿ ಉತ್ತಮಪರೀಕ್ಷೆಯನ್ನು ಕೊಟ್ಟವರಿಗೆ ೫೦೦೦ ರೂ.ಗಳ ಬಹುಮಾನವು ಈಗ ನಿರ್ಧರಿಸಲ್ಪಟ್ಟಿದೆ. ಮೊದಲು ೪ ಸಾವಿರ ಇದ್ದಿತು. ಮತ್ತೂ ಈ ಪರೀಕ್ಷೆಯನ್ನು ಕಾಲಕ್ಲ್ಪ್ತಿಯಿಲ್ಲದೆ ಅವರು ಯಾವಾಗ ಬೇಕಿದ್ದರೂ ಕೊಡಬಹುದು. ಎಂದರೆ ಕೆಲಸವನ್ನು ಬಿಟ್ಟು ವಿಶ್ರಾಂತಿಯನ್ನು ಪಡೆದುಕೊಳ್ಳುವಾಗಲಾದರೂ ಪರೀಕ್ಷೆ ಕೊಡಬಹುದಾಗಿದೆ. ಸಾಮಾನ್ಯವಾದ ಪರೀಕ್ಷೆಯ ಕಾಲವು ೧೦ ರಿಂದ ೧೫ ವರ್ಷಗಳ ಕಾಲಕ್ಲ್ಪ್ತಿಯುಳ್ಳುದಾಗಿದೆ.

ಮಹಮ್ಮದೀಯರು ವಿದ್ಯಾವಿಷಯದಲ್ಲಿ ತಮ್ಮೊಳಗೆ ಉತ್ತಮವಾದ ಅಭಿವೃದ್ಧಿಯನ್ನು ತೋರ್ಪಡಿಸಿರುವರಾದಕಾರಣ ಢಕ್ಕಾ-ಚಿತ್ತಗಂಗಾ- ರಾಜಷಾಯಿ ಜಿಲ್ಲಾಗಳೊಗಿನ ಸರ್ಕಾರಿ ಅಧಿಕಾರಸ್ಥಾನಗಳೊಳಗೆ ಮೂರನೇ ಒಂದು ಭಾಗದಷ್ಟನ್ನು ಅವರಿಗಾಗಿ ಕಾದಿಟ್ಟಿರಬೇಕೆಂದು ಬಂಗಾಳಾ ಗೌರ್ನರಾದ ಲಾರ್ಡ್ ಕಾರ್ಮೈಕೇಲ್‌ರವರು ಅಪ್ಪಣೆಮಾಡಿದ್ದಾರೆ. ಸರ್ವಪ್ರಜೆಗಳೂ ಸಮನಾಗಿ ಸರ್ಕಾರದಧಿಕಾರದಲ್ಲಿರುವಂತಾಗುವುದರ ಪ್ರಯೋಜನಾವಶ್ಯಕತೆಗಳು ಇದಕ್ಕೆ ಮುಂಚೆಯೇ ಬೊಂಬಾಯಿ ಗೌರ್ನಮೆಂಟಿನವರಿಗೆ ತಿಳಿದು ಅದರ ಸಾಧನೆಗಾಗಿ ತಕ್ಕ ಅಪ್ಪಣೆಯನ್ನು ೪-೫ ವರ್ಷಗಳ ಹಿಂದೆಯೇ ಅವರು ಮಾಡಿರುವರು. ಬಂಗಾಳಾ ಗೌರ್ನಮೆಂಟಿನವರು ಈಗ ತಿಳಿದು ಮಹಮ್ಮದೀಯರಿಗೆ ಮಾತ್ರ ಕಲ್ಪಿಸಿದರು. ಅದನ್ನು ಹಿಂದುಳಿದವರೆಲ್ಲರಿಗೂ ಅನ್ವಯಿಸುವಂತೆ ಮಾಡುವುದು ಅವಶ್ಯಕವಾಗಿದ್ದಿತು. ಎಲ್ಲ ಪ್ರಭುತ್ವದವರೂ ದಿನಕ್ರಮೇಣ ಇದನ್ನು ಅನುಸರಿಸಲೇಬೇಕಾಗುವುದು.

ಮಹಮ್ಮದ್‌ಮತಕ್ಕೂ ಕ್ರೈಸ್ತಮತಕ್ಕೂ ಸೇರಿ ಹೋಗಿದ್ದ ಹಿಂದೂಗಳನ್ನು ಪ್ರಾಯಶ್ಚಿತ್ತದಿಂದ ಹಿಂದೂಮತಕ್ಕೆ ಮರಳಿ ಸೇರಿಸಿಕೊಳ್ಳುವ ಏರ್ಪಾಟನ್ನು ಉತ್ತರ ಹಿಂದೂಸ್ಥಾನದಲ್ಲಿ ಆರ್ಯಸಮಾಜದವರು ವಿಶೇಷವಾಗಿ ನಡೆಯಿಸುತ್ತಿದ್ದರು. ಈಗ ದಕ್ಷಿಣಹಿಂದೂಸ್ಥಾನದಲ್ಲಿಯೂ ಈ ಪದ್ಧತಿಯು ಕಾಲಿಕ್ಕಿದೆ. ಕ್ರೈಸ್ತಮತಕ್ಕೆ ಸೇರಿ ಹೋಗಿದ್ದ ಕೀಳುಜಾತಿಯ ಜನರನ್ನು ಮರಳಿ ಹಿಂದೂಮತಕ್ಕೆ ಸೇರಿಸಿಕೊಳ್ಳುವುದು ಕೃಷ್ಣಾಜಿಲ್ಲೆಯಲ್ಲಿ ಪ್ರಬಲಿಸುತ್ತಿದೆ. ಉತ್ತಮವರ್ಣೀಯರೇ ನಿಂತು ಕನಿಕರದಿಂದ ಈ ಕೆಲಸವನ್ನು ಮಾಡುತ್ತಿದ್ದಾರೆ. ಇಂಥ ಪ್ರಾಯಶ್ಚಿತ್ತವೊಂದು ನಡೆಯುವ ಸಮಯದಲ್ಲಿ ಆ ಕೀಳ್ಜನರಲ್ಲಿ ಕೆಲರು ತಾವು ಅನ್ಯಮತಕ್ಕೆ ಸೇರಿಕೊಂಡುವದರ ಕಾರಣವನ್ನು ಹೀಗೆ ಹೇಳಿದರಂತೆ:- "ನಮಗೆ ಹಿಂದೂಮತದಲ್ಲಿ ಅಸ್ವಾರಸ್ಯವೂ ಕ್ರೈಸ್ತಮತದಲ್ಲಿ ಸಾರಸ್ಯವೂ ತೋರಿ ಮತಭ್ರಷ್ಟರಾಗಲಿಲ್ಲ; ಮತ್ತೇನೆಂದರೆ- ನಮ್ಮುಮ್ಮರಿಗೆ ಮಾರ್ಗವನ್ನು ಹಾಕಿಸಿಕೊಡುವ ಬರವಸೆಯನ್ನು ಪಾದ್ರಿಸಾಹೇಬರು ಕೊಟ್ಟುದರಿಂದಲೇ ನಾವು ಹಾಗಾದೆವು" ಎಂಬುದಾಗಿ.

ಜಿ. ಐ. ಪಿ. ರೈಲ್ವೆಕಂಪನಿಯವರು ಈಗ ಬೊಂಬಾಯಿಯಲ್ಲಿ ಕಟ್ಟಿರುವ ವಿಕ್ಟೋರಿಯಾ ಟರ್ಮಿನಸ್ ಎಂಬ ನಿಲ್ದಾಣವು ಭರತಖಂಡದಲ್ಲಿ ಅದ್ವಿತೀಯವಾಗಿದೆ. ಆದರೂ ಅದರಲ್ಲಿರುವ ಇನ್ನು ಕೆಲಕೊರತೆಗಳನ್ನು ದೂರಮಾಡಬೇಕೆಂದು ಆ ಕಂಪೆನಿಯವರು ಅದನ್ನು ಇನ್ನಷ್ಟು ವೃದ್ಧಿಪಡಿಸಬೇಕೆಂದು ಅದರ ನಕ್ಷೆಯನ್ನು ಎತ್ತಿಸಿರುತ್ತಾರೆ. ಇದುವರೆಗೆ ಹಡಗಿನಿಂದ ಇಳಿದುಬಂದ ಪ್ರಯಾಣಿಕರು ಈ ನಿಲ್ದಾಣಕ್ಕೆ ಬಂದು ಬಂಡಿಯನ್ನು ಹತ್ತಲೂ ಸಾಮಾನನ್ನು ಸಾಗಿಸಲೂ ದೂರವಾಗಿದ್ದುದರಿಂದ ಅಂತಹ ಅನನುಕೂಲತೆಯನ್ನು ತಪ್ಪಿಸುವುದಕ್ಕಾಗಿ, ಈಗ ನಿರ್ಮಿಸುತ್ತಿರುವ ಹೊಸದಡ (ಡಾಕು) ದಲ್ಲಿ ದೊಡ್ಡದೊಡ್ಡ ಹಡಗುಗಳೂ ಯುದ್ಧದ ಹಡಗುಗಳೂ ಸಹ ಬಂದು ನಿಲ್ಲುವಂತೆ ಏರ್ಪಡಿಸುತ್ತಿರುವುದರಿಂದ ಆ ತೀರಕ್ಕೇ ಹೊಗೆಬಂಡಿಗಳು ಹೋಗುವಂತೆಯೂ, ಅಲ್ಲೇ ಸಾಮಾನುಗಳೂ ಜನರೂ ಸಹ ಬಂಡಿಯನ್ನೇರಲು ಅನುಕೂಲಿಸುವಂತೆಯೂ, ಮಾಡಲ್ಪಡುವುದು. ಎಲ್ಲಾ ಆಫೀಸುಗಳನ್ನೂ ಅಲ್ಲಿಡುವುದಕ್ಕೆ ೩ ಅಂತಸ್ತಿನ ಮಾಡವೊಂದು ನಿರ್ಮಿಸಲ್ಪಡುವುದು. ಪ್ರಯಾಣಿಕರು ಕಾದು ಕುಳಿತಿರಲು ಅನುಕೂಲವಾದ ಮತ್ತೊಂದು ಭವನವು ಕಟ್ಟಲ್ಪಡುವುದು. ಈ ಕಟ್ಟಡಗಳೆಲ್ಲಾ ಬಹಳ ಸುಂದರವಾಗಿಯೂ ಅನುಕೂಲವಾಗಿಯೂ ಇರುವಂತೆ ಮಾಡಲ್ಪಡುವುವು.

ವಿದೇಶವೃತ್ತಾಂತಗಳು.

ಚೀನಾದವರೂ ಬೆಲ್ಜಿಯಮ್ಮಿನವರೂ ಸೇರಿ ಚೀನಾದೇಶದಲ್ಲಿರುವ ಗಣಿಗಳನ್ನು ರೂಢಿಸುವುದಕ್ಕೆ ಒಂದು ಸಂಘವನ್ನು ಸ್ಥಾಪಿಸಲು ಪ್ರಯತ್ನವು ಪೂರ್ಣವಾಗಿದೆ. ಈ ಸಂಘಕ್ಕೆ ೩ ಕೋಟಿ ರೂ.ಗಳ ಮೂಲಧನವು ಬೇಕಾಗಿದೆ.

ಈ ತಿಂಗಳು ತಾ॥ ೨೩ ರಲ್ಲಿ ಲಂಡನ್‌ಪಟ್ಟಣದೊಳಗೆ ಉಷ್ಣದೇಶದ ಹತ್ತಿ-ರಬ್ಬರು-ಹೊಗೇಸೊಪ್ಪು-ಕೋಕೊ-ಗೋಣಿನಾರು-ಮೊದಲಾದುವುಗಳ ವ್ಯವಸಾಯವನ್ನೂ, ಉಷ್ಣದೇಶರೋಗಗಳ ನಿದಾನವನ್ನೂ ಪರಿಹಾರೋಪಾಯವನ್ನೂ ಕುರಿತು ಚರ್ಚಿಸುವ ದೊಡ್ಡಸಭೆಯು ನಡೆಯುವುದು.

ಇಟಲಿಯಲ್ಲಿ ಕೂಲಿಕಾರರು ಗುಂಪುಕಟ್ಟಿ ಕೆಲಸಕ್ಕೆಹೋಗದೆ ನಿಂತು ಗೌರ್ನಮೆಂಟಿನವರ ಕಾರ್ಯಗಳನ್ನು ಖಂಡಿಸುತ್ತಿದ್ದಾರೆ. ರಾಜಕೀಯಪಕ್ಷದವರು ಇವರಮೇಲೆ ತುಪಾಕಿಯನ್ನು ಹಾರಿಸಿ ಇಬ್ಬರನ್ನು ಕೊಲ್ಲಲು, ದೇಶದ ಎಲ್ಲಭಾಗದ ಕೂಲಿಗಾರರೂ ರೋಷಗೊಂಡು ಪ್ರತಿಭಟಿಸುವುದರಲ್ಲಿದ್ದಾರೆ. ಪೋಲೀಸರಿಗೂ ಈ ಜನರಿಗೂ ಬಡಿದಾಟವಾಗಿದೆ. ಗುಂಪಿನವರ ಹಾವಳಿಯು ಹೆಚ್ಚುವಂತಿದೆ.

ಸ್ತ್ರೀ ಸ್ವಾತಂತ್ರ್ಯವಾದಿನಿಯರು ಕಳೆದ ತಾ॥ ೧೦ ರಲ್ಲಿ ಈಸ್ಟ್ ಎಂಡಿನಲ್ಲಿ ಒಂದು ದೊಡ್ಡ ಮೆರವಣಿಗೆಯನ್ನು ಮಾಡಿಕೊಂಡರು. ತಮ್ಮ ಪ್ರಮುಖಳಾದ ಪಾಂಕ್‌ಹರ್ಸ್ಟಮ್ಮನನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಮುಂದುಗಡೆ ಬಿಟ್ಟುಕೊಂಡಿದ್ದರು. ಇವರು ಪಾರ್ಲಿಮೆಂಟಿಗೆ ಈ ಉತ್ಸವಪೂರ್ವಕವಾಗಿಯೇ ಪ್ರವೇಶಿಸಬೇಕೆಂದಿದ್ದರು. ಆದರೆ ೧ ಮೈಲಿ ದೂರ ಹೋಗುವುದರೊಳಗಾಗಿ ಪೊಲೀಸರು ಬಂದು ಪಾಂಕ್‌ಹರ್ಸ್ಟಮ್ಮನನ್ನು ಹಿಡಿದರು. ಅಷ್ಟರಲ್ಲಿ ಅವರಿಗೂ ಹೆಂಗುಸರಿಗೂ ಜಗಳವಾಯಿತು. ಬಳಿಕ ೧೦-೧೨ ಮಂದಿ ಸ್ತ್ರೀಯರು ಹೊಗೆಬಂಡಿಯನ್ನೇರಿ ಪಾರ್ಲಿಮೆಂಟಿಗೆ ಹೋದರು. ಅಲ್ಲಿ ಸ್ವಲ್ಪಹೊತ್ತು ಕುಳಿತಿದ್ದು ಮೆಲ್ಲಗೆ ಎದ್ದುಹೋದರು.

ಅನಿಬೆಸೆಂಟಮ್ಮನವರ ಶಕ್ತಿಸಾಮರ್ಥ್ಯಗಳು ಅದ್ಭುತವಾದುವು. ನಾರಾಯಣಯ್ಯರ ಸಂಬಂಧದ ವ್ಯಾಜ್ಯದಲ್ಲಿ ಆಕೆಯು ಪ್ರಿವಿಕೌನ್ಸಿಲಿನಲ್ಲಿ ಜಯಶೀಲೆಯಾದರು. ಈ ವ್ಯಾಜ್ಯದ ಸಂದರ್ಭದಲ್ಲಿ ಭರತಖಂಡದೊಳಗೆ ಅವರನ್ನು ನಾನಾವಿಧವಾಗಿ ಹೀಯಾಳಿಸುವವರು ಹೆಚ್ಚಿದ್ದರು. ಆದರೂ ಆಕೆಯು ಎದೆಗುಂದಲಿಲ್ಲ. ಕಾಮನ್‌ವೀಲ್ ಎಂಬ ಪತ್ರಿಕೆಯನ್ನು ಕಳೆದ ಜನವರಿ ತಿಂಗಳಲ್ಲಿ ಆರಂಭಿಸಿದರು. ಅದು ವಿಶಾಲವಾಗಿ ವ್ಯಾಪಿಸಿ ಪ್ರಬಲಿಸುತ್ತಿದೆ. ಈಗ ಇವರು ಇಂಗ್ಲ್ಯಾಂಡಿನಲ್ಲಿರುತ್ತ ಅಲ್ಲಿ ಒಂದು ಬ್ರಹ್ಮಜ್ಞಾನಮಂದಿರವನ್ನು ೧೫ ಲಕ್ಷ ರೂ.ಗಳ ವ್ಯಯದಿಂದ ಕಟ್ಟಿಸುವುದರಲ್ಲಿದ್ದಾರೆ. ಈಗ ಗ್ರೇಟ್‌ಬ್ರಿಟನ್ನಿನಲ್ಲಿ ಇವರ ಬ್ರಹ್ಮಜ್ಞಾನ ಸಮಾಜದ ಸಭಿಕರಾಗಿ ೨೫೦೦ ಮಂದಿಗಳು ಸೇರಿದ್ದಾರಂತೆ.

ಅತ್ತಿಗಿರಿಪುರ.

ಇದೇ ವೈಶಾಖ ಬ॥ ೪ ಬುಧವಾರ ಕಡೂರ್ ತಾಲ್ಲೂಕು ಅತ್ತಿಗಿರಿಪುರದಲ್ಲಿ ಕಳಸೇಗೌಡರ ಮಕ್ಕಳು ಮ॥ ರಾ॥ ನಂಜೇಗೌಡರು ವೀರಶೈವ ಭಕ್ತಮಾಹೇಶ್ವರರುಗಳನ್ನು ಅಲಂಕೃತವಾದ ತಮ್ಮ ಮನೆಗೆ ಬರಮಾಡಿಕೊಂಡು ಅವರ ಅಣ್ಣಂದಿರಾದ ಮಲ್ಲೇಗೌಡರ ೬೦ನೆಯ ವರ್ಷದ ಉಗ್ರ ಶಾಂತಿಯನ್ನು ವಿಧಿವತ್ತಾಗಿ ನಡೆಯಿಸಿ ಭೋಜನ ದಕ್ಷಿಣಾ ತಾಂಬೂಲಗಳಿಂದೆಲ್ಲರನ್ನೂ ಉಪಚರಿಸಿ, ಇದೇ ಬ॥ ೭ ಶನಿವಾರ ಸದರಿ ಗೌಡರ ಮಕ್ಕಳ ವಿವಾಹಮಹೋತ್ಸವವನ್ನು ಸಕ್ರಮವಾಗಿ ನಡೆಯಿಸಿದರು.

ಈ ಉತ್ಸವಕ್ಕೆ ಹಾಸನ, ತರೀಕೆರೆ, ಬಿದರೆ, ತಾವರೆಕೆರೆ ಮೊದಲಾದ ಮಠಗಳ ನಿರಂಜನಸ್ವಾಮಿಗಳು ಪಟ್ಟದ ಸ್ವಾಮಿಗಳು ದಯಮಾಡಿಸಿದ್ದರು. ಆಹ್ವಾನಿಸಲ್ಪಟ್ಟಿದ್ದ ಸಮಸ್ತ ಭಕ್ತಮಾಹೇಶ್ವರರಿಗೂ ಮೃಷ್ಟಾನ್ನಭೋಜನದಿಂದಲೂ ಗಂಧಪುಷ್ಪ ತಾಂಬೂಲಾದಿಗಳಿಂದಲೂ ತೃಪ್ತಿಪಡಿಸಿದರು. ನಂತರ ಮಧ್ಯಾಹ್ನ ೩ ಘಂಟೆಯಲ್ಲಿ ಹಾಸನದ ಶ್ರೀಗಳವರ ಅಧ್ಯಕ್ಷತೆಯಲ್ಲಿ ಸಭೆಯನ್ನೇರ್ಪಡಿಸಲು ಗಿರಿಜಾ ಕಲ್ಯಾಣ ಕಥಾಕಾಲಕ್ಷೇಪವು ಬೀರೂರಿಂದ ಬಂದಿದ್ದ ಕೀರ್ತನಕಾರರಿಂದ ಅತ್ಯಾನಂದಕರವಾಗಿ ನಡೆಯಿತು. ತರುವಾಯ ಅಧ್ಯಕ್ಷರಾದ ಮಹಾಸ್ವಾಮಿಗಳವರು— ನಂಜಪ್ಪಗೌಡರು ಬಹು ಚಿಕ್ಕವಾದ ಈ ಹಳ್ಳಿಯಲ್ಲಿ ಸ್ಥಳ ಪರಸ್ಥಳಗಳಿಂದ ಇಷ್ಟು ಭಕ್ತಮಾಹೇಶ್ವರರನ್ನು ಬರಮಾಡಿಕೊಂಡು ಸತ್ಕರಿಸಿದ ವಿಷಯವನ್ನು ಕುರಿತು ಶ್ಲಾಘಿಸಿದರು. ಬಳಿಕ ಕೈ॥ ಮ॥ ವೀರಸಂಗಪ್ಪಣ್ಣನವರ ಸ್ಮರಣಾರ್ಥವಾಗಿ ಸಭೆಯಲ್ಲಿ ಅಗ್ರತಾಂಬೂಲವನ್ನು ತೆಗೆಯಿಸಿ ಅವರ ವಿದ್ಯಾಫಂಡಿಗೋಸ್ಕರ ೪ ರೂಪಾಯಿ ಕಾಣಿಕೆಯನ್ನು ತೆಗೆಯಬೇಕೆಂದು ಅಪ್ಪಣೆಕೊಡಿಸಿದುದನ್ನು ಸಭಿಕರೆಲ್ಲರೂ ಅನುಮೋದಿಸಿ ತೆಗೆಸಿದರು. ಅನಂತರ ಕಾರ್ಯದರ್ಶಿಗಳಾದ ಮ॥ ರಾ॥ ನಂಜಪ್ಪಗೌಡರಿಗೂ ಅವರ ವರ್ಗದವರಿಗೂ ದೀರ್ಘಾಯುರಾರೋಗ್ಯವನ್ನು ಕೊಡಬೇಕಾದುದೆಂದು ಪ್ರಾರ್ಥಿಸಿ ಕರತಾಡನಗಳಿಂದ ಸಭೆಯನ್ನು ವಿಸರ್ಜಿಸಲ್ಪಟ್ಟಿತು.

ಈ ಸಂಬಂಧದ ೪ ರೂ.ಗಳು ನಮ್ಮಲ್ಲಿಗೆ ಬಂದಿರುವುದನ್ನು ವಿಶ್ವಾಸದಿಂದ ಸ್ವೀಕರಿಸಿದ್ದೇವೆ. ವ.ಪ.]

ಸಂಪಗಾವಕ್ಕೆ ಇತ್ತೀಚೆ ಶ್ರೀಮನ್ನಿರಂಜನ ಕ್ಷೇತ್ರ ಅರಬಾವಿ ಮಠದ ದುರದುಂಡೀಶ್ವರಸ್ವಾಮಿಗಳ ಆಗಮನವಾಗಿದ್ದು ಊರಲ್ಲಿಯ ವೀರಶೈವ ಭಕ್ತವೃಂದವು ಹಾಗೂ ಬ್ರಾಹ್ಮಣ ಮತ್ತು ಇತರ ಜನಾಪತ್ತು ಸಮೂಹವು ತಮ್ಮ ತನು ಮನ ಧನದಿಂದ ಮಹಾಸನ್ನಿಧಿಗೆ ಕಪ್ಪಕಾಣಿಕೆಯನ್ನಿತ್ತು ಆ ಕಾರ್ಯವನ್ನು ಸಾಂಗಗೊಳಿಸಿದರು. ಈ ಕಾರ್ಯಕ್ಕಿಂತಲೂ ಮಹತ್ವದ ಸುಧಾರಣೆಯಲ್ಲಿ ಜರುಗಿರತಕ್ಕಂಥ ಶ್ರೀ ಶಿವಯೋಗಮಂದಿರದ ನಡೆಯುವ ವರ್ಷದ ಮಹಾಶಿವರಾತ್ರಿಯ ಶಿವಯೋಗದ ಕಾಲಕ್ಕೆ ನಡೆಯತಕ್ಕ ವಾರ್ಷಿಕಪರೀಕ್ಷೆಗೆ ಇಷ್ಟ ವಿಷಯಗಳಲ್ಲಿ ಪಾಸಾದವರಿಗೆ ಇನಾಮು ಹಂಚಲಿಕ್ಕೂ ಶಿವಯೋಗಸಾಧಕರಿಗೆ ಬೇಕಾದ ಗ್ರಂಥಭಾಂಡಾರಕ್ಕೂ ಸಹಾಯವಾಗಬೇಕೆಂದು ಇಲ್ಲಿಯ ವೀರಶೈವ ಮತೋತ್ಕರ್ಷಕ ಸಭೆಯವರು ಆಲೋಚನೆ ಮಾಡಿ ಸಭೆಯಲ್ಲಿ ಜನರಿಗೆ ಬೋಧಿಸಲು ಸಭಿಕರು ತಮ್ಮ ಸ್ವಸಂತೋಷದಿಂದ ಕೊಟ್ಟ ಧನಸಂಗ್ರಹದ ಯಾದಿಯು ಕೆಳಗೆ ಬರೆದಂತೆ:—

೧ ಬಾಳಪ್ಪ ಸಿದ್ಧಪ್ಪ ಬೆಲ್ಲದ ರೂ ೧೧. ೨ ರಾಜಶೇಖರ ಶಿವಲಿಂಗಪ್ಪ ನಂದಿ ಪಾಟೀಲ ರೂ ೧೦. ೩ ಲಕ್ಷ್ಮೇಶ್ವರ ಚನ್ನಮಲ್ಲಪ್ಪ ಸೆಟ್ಟಿ ರೂ ೧೦. ೪ ಚಂದ್ರಶೇಖರ ಶಿವಪ್ಪ ತೆಲಸಂಗ ರೂ ೫. ೫ ಗುರಪ್ಪ ಶಿವಬಸಪ್ಪ ಬಾಗಿಹಳ್ಳಿ ರೂ ೫. ೬ ಚನ್ನಪ್ಪ ಮೇಲಿಗಿರಪ್ಪ ಪಟ್ಟೇದ ರೂ ೪. ೭ ಚನ್ನಬಸಯ್ಯ ಶಿವಲಿಂಗಯ್ಯ ವಸ್ತ್ರದ ರೂ ೩. ೮ ಶ್ರೀಶೈಲಪ್ಪ ಬಸವಪ್ರಭಪ್ಪ ಬೋಡವಲದ ರೂ ೨. ೯ ಮಲ್ಲಪ್ಪ ಬಸಪ್ಪ ಹಲಿಕಿ ರೂ ೪. ೧೦ ಸಿದ್ಧಪ್ಪ ಬಸಪ್ಪ ಉಳ್ಳಿಗಡ್ಡಿ ರೂ ೪. ೧೧ ಗುರುಪಾದಪ್ಪ ಗಂಗಪ್ಪ ಬೊಣ್ಸೆ ರೂ ೪. ೧೨ ಈಶ್ವರಪ್ಪ ಚನ್ನಬಸಪ್ಪ ಬೋಡನವರ ರೂ ೨. ೧೩ ಮಲ್ಲೇಶಪ್ಪ ಕರಿಬಸಪ್ಪ ಪುಟ್ಟಿ ರೂ ೩. ೧೪ ವೀರಪ್ಪ ಶಿವರುದ್ರಪ್ಪ ಬೆಳವಡಿ ರೂ ೩. ೧೫ ಶಿವಲಿಂಗಪ್ಪ ಶಿವರುದ್ರಪ್ಪ ಬೆಳಬಾಕಿ ರೂ ೧. ೧೬ ಗಂಗಪ್ಪ ಅಡಿವೆಪ್ಪ ಪುಟ್ಟಿ ರೂ ೧. ೧೭ ದುಂಡಪ್ಪ ಫಕೀರಪ್ಪ ನಂಬೆಣ್ಣನವ ರೂ ೨. ೧೮ ಚನ್ನಪ್ಪ ಚನ್ನಮಲ್ಲಪ್ಪ ಯಕ್ಕುಂಡಿ ರೂ ೩೦. ೧೯ ವಿರುಪಾಕ್ಷಪ್ಪ ಶಾಂತವೀರಪ್ಪ ಸೆಟ್ಟಿ ರೂ ೨. ೨೦ ಮಲ್ಲಪ್ಪ ವೀರಪ್ಪ ಕೊರಂದವಾಡ ರೂ ೨. ೨೧ ಬಸಲಿಂಗಪ್ಪ ಚನ್ನಬಸಪ್ಪ ವಾಲಿ ರೂ ೧. ೨೨ ಬಸಪ್ಪ ಬೈಲಪ್ಪ ನಂಬೆಣ್ಣನವರ ರೂ ೧. ೨೩ ಬಸವಪ್ರಭಪ್ಪ ಚನ್ನಬಸಪ್ಪ ಧಾರವಾಡ ಆ ೮. ಅಂತು ಒಟ್ಟು ರೂ. ೧೧೦-೮-೦.

ಖರ್ಚಿನ ತಪ್ಸೀಲು— ಮಣಿಯಾರ್ಡರು ಖರ್ಚು ೧ ರೂ. ೨ ಆ, ಶಿವಯೋಗಮಂದಿರಕ್ಕೆ ೧ ಆ.

ಖರ್ಚು ಜಾತಾ ಉಳಿದ ೧೦೯ ರೂ. ೫ ಆ. ಗಳನ್ನು ಮಣಿಯಾರ್ಡರು ಮೂಲಕ ಕಳಿಸಿದೆ. ಓರ್ವ ಅಭಿಮಾನಿ.

ತಾಲ್ಲೂಕು ಹೊಸಕೋಟೆ.

ಇದೇ ಜ್ಯೇಷ್ಠ ಶುದ್ಧ ದಶಮಿಯ ಬುಧವಾರದಲ್ಲಿ ತಾಲ್ಲೂಕು ಹೊಸಕೋಟೆಯಲ್ಲಿರುವ ಮ॥ ರಾ॥ ಚಟ್ಟಿ ಬಸವಪ್ಪನವರು ತಮ್ಮ ತಮ್ಮಂದಿರ ಮಕ್ಕಳಾದ ಮ॥ ರಾ॥ ಚಟ್ಟಿ ಕರಿಬಸವಪ್ಪನವರ ಲಗ್ನವನ್ನು ಬಹಳ ವಿಜೃಂಭಣೆಯಿಂದ ನಡಿಸಿದರು. ಬೆಂಗಳೂರಿಂದಲೂ ಮತ್ತು ಸುತ್ತುಮುತ್ತಣ ಪ್ರಾಂತಗಳಿಂದಲೂ ಬಹಳ ಜನ ದೊಡ್ಡ ಮನುಷ್ಯರುಗಳು ಬಂದಿದ್ದರು. ಬೆಂಗಳೂರಿಂದ ನರಗುಂದದೇವರ ಮಠದ ಶ್ರೀ॥ ಕರಿಬಸವಸ್ವಾಮಿಗಳು ಮತ್ತು ಶಂಕರದೇವರಮಠದ ವೇ॥ ಮಹದೇವಸ್ವಾಮಿಗಳು ದಯಮಾಡಿಸಿದ್ದರು. ಸಿದ್ಧಗಟ್ಟದಿಂದ ಪುರೋಹಿತರು ವೇ॥ ರುದ್ರಾರಾಧ್ಯರು ದಯಮಾಡಿಸಿದ್ದರು. ವಿವಾಹಕಾರ್ಯವೆಲ್ಲವೂ ಹೊಸಕೋಟೆಯ ಮಹಂತಿನಮಠದ ವೇ॥ ಚನ್ನವೀರದೇವರಿಂದ ಮೇಲೆ ಹೇಳಿದ ವೇ॥ ಕರಿಬಸವಸ್ವಾಮಿಗಳ ಸಹಾಯದಿಂದ ವಿಧ್ಯುಕ್ತವಾಗಿ ನಡಿಸಲ್ಪಟ್ಟಿತು. ಮುಹೂರ್ತಕಾಲದಲ್ಲಿ ತಾಂಬೂಲ ಹಂಚಲ್ಪಡುವ ವೇಳೆಯೊಳಗೆ ನರಗುಂದದೇವರ ಮಠದ ವೇ॥ ಕರಿಬಸವಸ್ವಾಮಿಗಳವರು ಕೇವಲ ಅಭಿಮಾನಪೂರ್ವಕವಾಗಿ ಬೆಂಗಳೂರು ಮ॥ ರಾ॥ ಎಲೆ ಸಿದ್ಧಲಿಂಗಸೆಟ್ಟರು ಮೊದಲಾದವರಲ್ಲಿ ಆಲೋಚನೆಮಾಡಿ ಸೂಚಿಸಿದ ಪ್ರಕಾರ ವೀರಶೈವಮತಕ್ಕೆ ಬಹುತರವಾದ ಉಪಕಾರವನ್ನು ಮಾಡಿ ಶರೀರವನ್ನು ಬಿಟ್ಟುಹೋದಂಥ ಕೈ॥ ವೀರಸಂಗಪ್ಪನವರ ಹೆಸರಿಗೆ ಜ್ಞಾಪಕಾರ್ಥವಾದ ತಾಂಬೂಲವು ತೆಗೆಯಲ್ಪಟ್ಟು ನೆರೆದಿದ್ದ ಸಭೆಯಲ್ಲಿ ತದ್ವಿಷಯವು ಹೇಳಲ್ಪಟ್ಟಿತು. ಸ್ಮರಣಾರ್ಥಸಂಬಂಧ ಐದುರೂಪಾಯಿಗಳು ತೆಗೆದಿಡಲ್ಪಟ್ಟವು. ಮತ್ತು ಪೂರ್ವೋಕ್ತ ಶ್ರೀಸ್ವಾಮಿಗಳ ಸೂಚನೆಯ ಮೇರೆ ಮೈಸೂರು ವೀರಶೈವ ವಿದ್ಯಾವರ್ಧಕ ಫಂಡಿಗಾಗಿ ಐದು ರೂಪಾಯಿಗಳು ತೆಗೆದಿಡಲ್ಪಟ್ಟವು. ಇದಾದಮೇಲೆ ಕೆಲ ಮುಯ್ಯಿಗಳು ಒದಲ್ಪಟ್ಟು ತದನಂತರ ಬಂದಿದ್ದ ಭಕ್ತಮಾಹೇಶ್ವರರಿಗೆಲ್ಲ ಸ್ನಾನಭೋಜನಾದಿಗಳು ನಡೆದವು. ಮೇಲೆ ಕಂಡ ಮ॥ ರಾ॥ ಚಟ್ಟಿಬಸವಪ್ಪನವರು ನಡಿಸಿದ ಲಗ್ನದಲ್ಲಿ ದುಂದುವೆಚ್ಚಗಳಾವವೂ ನಡೆಯದೆ ಎಲ್ಲ ಕಾರ್ಯಗಳೂ ವಿಧ್ಯುಕ್ತವಾಗಿ ನಡೆದು ಕೈ॥ ವೀರಸಂಗಪ್ಪನವರ ಸ್ಮರಣಾರ್ಥವಾಗಿಯೂ ವಿದ್ಯಾವರ್ಧಕಫಂಡಿನ ಸಹಾಯಾರ್ಥವಾಗಿಯೂ ಕೊಂಚ ಹಣವು ಕೊಡಲ್ಪಟ್ಟುದು ಅತ್ಯಂತಸಾರ್ಥಕವಾದ ಕೆಲಸವಾಗಿರುತ್ತದೆ. ಈ ಭಾಗದಲ್ಲಿ ನಿರಾಭಾರಿಗಳಾದ ಶ್ರೀ॥ ವೇ॥ ಕರಿಬಸವಸ್ವಾಮಿಗಳವರು ಶ್ರದ್ಧೆ ವಹಿಸಿದ್ದು ಬಹಳ ಸ್ತುತ್ಯವಾದಂಶವಾಗಿರುತ್ತದೆ. ಎಲ್ಲಾ ವಿರಕ್ತಸ್ವಾಮಿಗಳೂ ಈ ರೀತಿ ಮತಾಭಿವೃದ್ಧಿ ಶ್ರದ್ಧೆಯನ್ನು ವಹಿಸಿ ಮತೋಪಕಾರವನ್ನು ಮಾಡುತ್ತ ಬಂದರೆ ವೀರಶೈವಮತವು ಕೇವಲ ತೀವ್ರವಾಗಿ ಏಳ್ಗೆಗೆ ಬರುವದು. ಈ ವಿಚಾರದಲ್ಲಿ ಶ್ರೀಸ್ವಾಮಿಗಳವರಿಗೆ ನಾನು ಕೇವಲ ಕೃತಜ್ಞನಾಗಿರುತ್ತೇನೆ.

ಜೇರಿಗೆ ಬಸವಲಿಂಗಪ್ಪ

---

2 ವೀರಶೈವ ಕನ್ಯೆಯು ಬೇಕು.

ಶೀಲವಂತ, ದೀಕ್ಷಾವಂತ, ಅಥವಾ ಪಂಚಮಶೈವಕಿ ಸುಸ್ವರೂಪ, ಕುಲೀನ, ಸುಶೀಲ, ೧೪ ವರ್ಷದ ಮೇಲಿನ ವಯಸ್ಸಾಗಿರಬೇಕು. ಶಿಕ್ಷಣವಾಗಿ ಇದ್ದರೆ ಬಹಳ ಉತ್ತಮ. (ಪಂಚಮರಿಗೆ ದೀಕ್ಷೆಯು ಕೊಡುವೆವು) ಕನ್ಯೆಯ ಫೋಟೋ ಕಳುಹಿಸಬೇಕು.

ವರನು ಶೀಲವಂತ ಶಾಖೆಯವೈಕಿ ಇದ್ದು ವಕೀಲರು ಇದ್ದಾರೆ. ಮತ್ತು ಒಕ್ಕಲತನದ ಉತ್ಪನ್ನ ವರ್ಷಕ್ಕೆ ೪೦೦೦ ಸಾವಿರ ಇರುತ್ತದೆ. ವಿಶೇಷ ಖುಲಾಸಾ ಪತ್ರದ್ವಾರದಿಂದ,

ಅಣ್ಣಪ್ಪ ಶೀಲವಂತ ಶುಕ್ರವಾರಪೇಟಿ

ಸೋಲಾಪುರ.

ಚಂದ್ರೋದಯ.

(ಇಂಗ್ಲಿಷು ಕನ್ನಡ ಸಾಪ್ತಾಹಿಕವರ್ತಮಾನಪತ್ರ)

ಇದು ಧಾರವಾಡದಲ್ಲಿ ಜೂನತಿಂಗಳ ತಾ॥ ೨೨ ರಿಂದ ಪ್ರತಿ ಸೋಮವಾರ ಪ್ರಸಿದ್ಧವಾಗುವದು. ಇದರಲ್ಲಿ ರಾಜಕೀಯ, ಸ್ಥಾಮಾಜಿಕ ಮೊದಲಾದ ಮಹತ್ವವಾದ ವಿಷಯಗಳು ಬರುವವು. ಹಾಗೂ ಹೊಸ ಹೊಸ ಸ್ಥಾನಿಕ ಮತ್ತು ವಿವಿಧವರ್ತಮಾನಗಳು ಬರುವವು. ಇದರ ವಾರ್ಷಿಕ ಚಂದಾಯವು ಎರಡು ರೂಪಾಯಿ. ಪರಸ್ಥಳದವರಿಗೆ ಅಂಚೆಯವೆಚ್ಚವು ಹದಿನಾರು ಆಣೆ ಬೀಳುವದು. ಇದರ ಆಕಾರವು ಸುಪರ ರಾಯಲ್. ಚಂದಾದಾರರಾಗಲಪೇಕ್ಷಿಸುವವರೂ ನೋಟೀಸು ಇಲ್ಲವೆ ಜಾಹೀರಾತುಗಳನ್ನು ಪ್ರಸಿದ್ಧಪಡಿಸಲಪೇಕ್ಷಿಸುವವರೂ ಕೆಳಗೆ ಸಹಿಮಾಡಿದವರ ಸಂಗಡ ಪತ್ರವ್ಯವಹಾರವನ್ನು ಮಾಡತಕ್ಕದ್ದು. ಗಂಗೆಯ್ಯಾ ಹುಚ್ಚಯ್ಯಾ ಹೊನ್ನಾಪುರಮಠ ಸಂಪಾದಕ “ಚಂದ್ರೋದಯ.”

ಧಾರವಾಡ.

ಊದಬತ್ತಿಗಳು.

8

ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧; ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ... ಣೆ ಬಾಲಗ್ರಹದೂಪ ಚೂರ್ಣ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,

ಸುಗಂಧಕಾರಿ, ಮೈಸೂರು.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೂ... ಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು

37 ಕಾಪಾಡುವುದರಲ್ಲಿ ಶ್ರೇಷ್ಠವಾದ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ-ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು.

ಶೀತವಾಯು-ಕೆಮ್ಮು-ನೆಗಡಿ-ದಿನಜ್ವರ-ಮೂರರಜ್ವರ ನಾಲ್ಕರಜ್ವರ- ಮಲೇರಿಯಾಜ್ವರ- ತಲೆನೋವು- ಮೈಕೈನೋವು ಮತ್ತು ಭಾರ-ಅರೋಚಕ ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣಭೇದಿ-ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಶೆಳತ ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ೫೦ ಮಾತ್ರೆ ೪ ಆಣೆ. ಇದಕ್ಕೆ ಒಂದು ಇನಾಮು. ವಿ. ಪಿ ಛಾರ್ಜು ಪ್ರತ್ಯೇಕ.

ಆಮೋದಿನಿ:— ಅಮೋಘವಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರಮಾಡುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷ ಕೀರ್ತಿಯನ್ನು ಸಂಪಾದಿಸಿ ನಾನಾತರಹಾ ಕೆಮ್ಮು, ದಮ್ಮು ಉಬ್ಬಸ, ವಾಂತಿ, ವಾಕರಿಕೆ, ಮಲಬಂದ, ಅಗ್ನಿಮಾಂದ್ಯ, ಪಿತ್ತಸಂಕಟ, ಅರೋಚಕ, ಬಾಯಾರಿಕೆಗಳನ್ನು ತಕ್ಷಣ ಗುಣಪಡಿಸಿ ಶರೀರಕ್ಕೆ ತೀಕ್ಷ್ಣಮಾಡದೆ ಧಾತುವೃದ್ಧಿಯುಂಟುಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೧೫೦ ಮಾತ್ರೆ ೪ ಆಣೆ. ಇದಕ್ಕೆ ಒಂದು ಇನಾಮು. ವಿ.ಪಿ. ಛಾರ್ಜು ಪ್ರತ್ಯೇಕ.

ವಿಳಾಸ— ಕೆ. ವಿ. ನಾರಾಯಣರಾವ್,

ಮ್ಯಾನೇಜರ್, ಸದ್ವೈದ್ಯಶಾಲಾ,

ನಂಜನಗೂಡು. ಮೈಸೂರ್ ಇ

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೪-೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರ್ಕ್ಕರೂ. ಕೂ ೧ ಕೊಡಬೇಕಾಗುವುದು. ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೬-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦-೮-೦ ಆಣೆಯಂತೆ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚು ಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ವಿಶೇಷ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,

ಸ್ಟಾರ್ ಪ್ರೆಸ್, ಮೈಸೂರ್.

ಶುದ್ಧ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

28

...ಷ್ಟಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. (ಗುಣವಾಗದಿದ್ದರೆ ಹಣ ಪರತ !!) ದೇಶಿ !!! ...ಹವನ್ನು ವೃದ್ಧರು, ಬಾಲಕರು, ಮುಟ್ಟಾಗದವರು, ವಾತರೋಗವುಳ್ಳವರು, ರಕ್ತಪಿತ್ತರೋಗವಾದವರು, ...ವೃಷವುಳ್ಳವರು, ದಮ್ಮನವರು, ಕೆಮ್ಮನವರ ಕಫ, ...ದವರು, ಮೂಲವ್ಯಾಧಿಯವರು, ವಾಂತಿಯಾಗುವ ...ಸಂಬಂಧದ ರೋಗವಿದ್ದವರು, ಧಾತುಹೋಗುವ ... ಉಷ್ಣಹೋಗುವವರು, ಸೇವಿಸಬೇಕು. ಇದರಿಂ... ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂ...ವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ... ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾ...ಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇ...ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ... ಹುಟ್ಟಿಗುವ ಎಲ್ಲಾ ತರದ ಬಕ್ಕೆಗಳು, ಹುಣ್ಣುಗಳು, ... ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದ... ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ...ಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗು... ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆ...ವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ... ೮೦ ತೊಲೆಗೆ ರೂಪಾಯಿ ೬ ಬೀಳುವದು. ...ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡ ರವಾನಿಸುವೆವು.

...ಸ:— ವೈದ್ಯ, ಬಿ. ಎಲ್. ಜೋಶಿ ಮತ್ತು ಕಂಪೆನಿ,

ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

38

...ತ್ತ ಕಂಪೆನಿ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರಿಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟಿ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯೂ. ಎನ್. ಮತ್ತು ಕಂಪೆನಿ,

ಬನಾರಿಸ್ ಸಿಟಿ. (ಕಾಶೀ)

ಅಗ್ಗವಾದ ಮಾಲುಗಳು.

S.N.RUDRAKSHA & CO.
BENARES CITY.

ನಮ್ಮಲ್ಲಿ ಉತ್ತಮವಾದ ನೇಪಾಳ ರುದ್ರಾಕ್ಷಿ ಉತ್ತಮವಾಗಿಯೂ ಗಟ್ಟಿಯಾಗಿಯೂ ೪ ಮುಖದಿಂದ ೧೪ ಮುಖದ ವರೆಗೆ ಸಣ್ಣದು ದೊಡ್ಡದು ಸಹ ಈ ಎರಡು ನಮೂನೆಯಲ್ಲಿ ದೊರೆಯುವುದು. ಮತ್ತು ಇವುಗಳಲ್ಲದೆ ರೇಷ್ಮೆ ಮುಗುಟ, ಕಾಶ್ಮೀರ ಶಾಲು, ರೇಷ್ಮೆ ಜರೀಸೀರೆ, ಜರಿಕಣ, ಪೇಟ, ಜೊಳಕಾಲ್ಮರು ನಮೂನೆ ವಸ್ತ್ರ ಜಗನ್ನಾಥ ಜಾಗಂಟೆ, ನೇಪಾಳ ಕಸ್ತೂರಿ, ಉತ್ತಮವಾದ ಜರೀ ಛಾದರ್ ಮೊದಲಾದ ಅಮೂಲ್ಯವಾದ ಸಾಮಾನು ಎಲ್ಲವರಿಗಿಂತಲೂ ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಇಚ್ಛಿಸಿದವರಿಗೆ ವಿ. ಪಿ ಮೂಲಕ ಕಳುಹಿಸಲಾದೀತು.

ರುದ್ರಾಕ್ಷಿಗಳ ವಿವರ:—

೪ ಮುಖದ ರುದ್ರಾಕ್ಷಿ ಕಂಠಿ ಅಂದರೆ ೩೦ ಮಣಿಗಳಿರು...ವ ಸರ ೧ ಕ್ಕೆ ೧೨ ಆಣೆಯಿಂದ ೬೦ ರೂಪಾಯಿವರೆಗೆ. ೫ ಮುಖದ ಕಂಠಿ ೧ಕ್ಕೆ ೮ ಆಣೆಯಿಂದ ೩೦ ರೂಪಾಯಿವರೆಗೆ ೬ ಮುಖದ ಕಂಠಿ ೧ಕ್ಕೆ ೧೨ ಯಿಂದ ೧೦೦ ರೂ. ವರೆಗೆ. ೭ ಮುಖದ ಕಂಠಿ ೧ಕ್ಕೆ ೧೦ ರೂ ಯಿಂದ ೧೫೦ ರೂ. ವರೆಗೆ. ಇದರಂತೆ ೮, ೯, ೧೦, ೧೧, ೧೨, ೧೩, ೧೪, ಈ ಮುಖಗಳ ಮಣಿ ೧ಕ್ಕೆ ೫ ರೂ. ಯಿಂದ ೩೦ ರೂ ವರೆಗೆ. ಇದರಲ್ಲಿಯೇ ಕಂಠಿ ಬೇಕಾದರೆ ಸಹ ದೊರೆಯುವುದು. ಸಣ್ಣ ರುದ್ರಾಕ್ಷಿ ಸರ ಅಂದರೆ ೧೦೮ ಮಣಿಯಿರುವ ತೊಗರಿಯ, ಉದ್ದಿನಕಾಳು ಪ್ರಮಾಣದ ಸರ ೧ಕ್ಕೆ ರೂ. ೫ ರಿಂದ ರೂ. ೩೦ ವರೆಗೆ. ಕಡಲೆ ಕಾಳು ಪ್ರಮಾಣದ ೧೦೮ ಮಣಿಯಿರುವ ಸರ ೧ಕ್ಕೆ ರೂ ೨-೮-೦ ಲಾಗಾಯಿತು ರೂ. ೧೦ ವರೆಗೆ. ಜಪಮಾಲೆ ನೆಲ್ಲಿಕಾಯಿಯಿಂದ ಅವರೇ ಬೀಜದ ಪ್ರಮಾಣದ ೧೦೮ ಇರುವ ಸರ ೧ಕ್ಕೆ ೧೨ ಆಣೆಯಿಂದ ರೂ. ೧೦ ವರೆಗೆ. ಸಾಧಾರಣ ತರ ೬ ಆಣೆಯಿಂದ ರೂ. ೩ ವರೆಗೆ. ಗೌರೀಶಂಕರ ರುದ್ರಾಕ್ಷಿ— ಈ ರುದ್ರಾಕ್ಷಿಯು ರುದ್ರಾಕ್ಷಿಗಳಲ್ಲೆಲ್ಲಾ ಶ್ರೇಷ್ಠವೆಂದು ಹೇಳುವರು. ರುದ್ರಾಕ್ಷಿ ಮಣಿ ೧ ಕ್ಕೆ ರೂ ೫ ಲಾಗಾಯಿತು ರೂ. ೫೦ ವರೆಗೆ. ಇಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ವಿಳಾಸ— ಎಸ್. ನೇಪಾಳ ರುದ್ರಾಕ್ಷಿ ಅಂಡ್ ಕಂಪೆನಿ,

22 ಬನಾರಸ್ ಸಿಟಿ.

ದಿ ಜನರಲ್ ಏಜನ್ಸಿ, ಮೈಸೂರು.

ಕಾದಂಬರಿಗಳು:— ಚಂಡಮಾರುತ ೦-೨-೦; ಚರಿತಾಮೃತಂ ೦-೫-೦; ರಾಜಕಥಾವಲ್ಲರಿ ೦-೫-೦; ಪೀಟರಿನಚರಿತ್ರೆ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೨-೬; ಸೀತೆ ೦-೫-೦; ಸಾಹಸಿಕೆ, ಕಲಾನಾಥ ೦-೮-೦; ಮಹಾಲಕ್ಷ್ಮಿ ೦-೨-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸತ್ಯಸಂಜೀವಿನಿ ೦-೮-೦; ಕೊಹಿನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೨-೦. 39

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕೈಯಿಂದ ಬಣ್ಣ ಕೊಟ್ಟಿರುವ ಫೋಟೊ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡಪಲ್ಲಕ್ಕಿ ಉತ್ಸವದ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸನತೋಳುಸಹಿತ ಆದ ಸಮಾರಂಭದ ಫೋಟೊ ೧ ಕ್ಕೆ ಕ್ರಯ ೧ ರುಪಾಯಿ

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಾಮಾದಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೊ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೊ ೧ ಕ್ಕೆ ಕ್ರಯ ಫುಲ್ಲಸೈಜು ೧ ರುಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀ ಜಗದ್ಗುರು ತೋಂಟದಾರ್ಯ ಗದಗ, ಶ್ರೀ ಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ಸತ್ಪುರುಷಮಾಲಾ, ಹಾಳಕೇರಿ ಆನಂದಸ್ವಾಮಿಯ ಫೋಟೊ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಸ್ಯೆರೆ ಫೋಟೊ ಸಿಗುತ್ತವೆ. ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ

ಜೋಕಫ್ಯಾಷನ್— ಪಟ್ಟಗ್ರಸ್ಥರು ಗಡಿಯಾರ ಸರ್ಪಳಿಗೆ ಹಚ್ಚುವಲಾಕೇಟುಗಳೂ, ಯಿದರಲ್ಲಿ ಹಿಂದೆ ಮುಂದೆ ಇಪ್ರಕಾರ ೨ ಫೋಟೊ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ॥, ॥=, ೧, ೧।, ಪ್ರಕಾರ, ಮತ್ತೂ ಬೆಳ್ಳಿಯದು ರು ೧॥ ರೋಡ್ ಗೋಲ್ಡ ಭಂಗಾರದ್ದು ದುರ್ಬೀಣದ ಗ್ಲಾಸದೂ ಕ್ರಯ ೨॥, ೨॥। ರೂ

ಪರೂರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ಡಾ ಟಿಕೀಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿರಿ. ನಮ್ಮವಿಳಾಸ— ಗಂಗಪ್ಪಾ ಜೇರಿಗೆ.

14 ಆರ್ಟಿಸ್ಟ ಸೊಲ್ಲಾಪುರ

---

8 ೫೦೦ ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರೀಮುರಬ್ಬ

ಈ ಮುರಬ್ಬಾವು “ಪಂಜಾಬ್ ಸಾಲಾಮಿಸ್ರಿ” ಅಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂಪಾಯಿಗಳು ಬಹುಮಾನ ಕೊಡಲ್ಪಡವುದು.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯಕೋಶವು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣಪರಿಯಂತರವೂ ದುಃಖಪಡುವರು. ಈ “ಪಂಜಾಬ್ ಸಾಲಾಮಿಸ್ರೀಮುರಬ್ಬಾ” ವಿನ ಸೇವನೆಯಿಂದ—

ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಕ್ಷಣಕ್ಷಣಕ್ಕೂ ಮೂತ್ರವಾಗುತ್ತಿದ್ದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ದೂರ ನಡೆಯುವುದರಿಂದ ಮೇಲುಬ್ಬಸ ಬರುವುದು ತಲೆಯ ನೋವೂ ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರಿಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ರಕ್ತವನ್ನು ಹೆಚ್ಚಿಸಿ ವೀರ್ಯವನ್ನು ವೃದ್ಧಿಪಡಿಸುವುದರಲ್ಲಿ ಪಂಜಾಬ್ ಸಾಲಾಮಿಸ್ರೀ ಮುರಬ್ಬಾವಿನ ಹೊರತು ಇದಕ್ಕೆ ಸಮಾನವಾದ ಔಷಧವು ಬೇರೆ ಯಾವುದೂ ಇಲ್ಲವು.

ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ತಾಂಬ್ರದ ಮತ್ತು ಭಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು. ಹೊಟ್ಟೆಯಲ್ಲಿರುವ ಜ್ವರದ ಗಡ್ಡೆಯನ್ನು ನಾಶಪಡಿಸುವುದು. ಶ್ವಾಸ ಖಾಸ ರೋಗಗಳನ್ನು ನಿರ್ಮೂಲಪಡಿಸುವುದು.

ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲ್ ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗಡ್ಡೆ, ಶಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರಿ ಎಂದು ಹೇಳಿ ಮೋಸಪಡಿಸುವರು. ಈ ಮುರಬ್ಬಾವನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾಬ್ ಸಾಲಾಮಿಸ್ರಿಯೋ ಅಥವ ಬೇರೇ ತರಹದ್ದೋ ಎಂಬುವುದು ಚೆನ್ನಾಗಿ ತಿಳಿದು ಬರುತ್ತೆ. ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧೫ ತೋಲಾ ಮುರಬ್ಬಾವಿರುವ ಡಬ್ಬಾ ೧ಕ್ಕೆ ರೂ ೧-೮-೦; ಟಪಾಲ್ ಖರ್ಚು ನಾಲ್ಕು ಆಣೆ ಅನುಪಾನಪತ್ರಿಕೆ ಔಷಧದ ಸಂಗಡ ಇರುತ್ತೆ.

ಅತ್ಯುತ್ತಮವಾದ ವನೌಷಧಗಳು.

೧. ಧಾತುಪುಷ್ಟಿಚೂರ್ಣ— ಕ್ರಯ ೫ ಆಣೆ.
೨. ರೋಮನಾಶಕ ಮತ್ತು ವೃಶ್ಚಿಕದಂಷ್ಟ್ರ ತೈಲವು ಚೇಳಿನ ಹೊಡತಕ್ಕೂ ಮತ್ತು ಕೂದಲು ತೆಗಿಯುವುದಕ್ಕೂ ಬಹಳ ಒಳ್ಳೆಯದು ಕ್ರಯ ೨ ಆಣೆ.
೩. ವಾತನಿವಾರಣ ತೈಲವು ಕ್ರಯ ೪ ಆಣೆ.
೪. ಹೊಟ್ಟೆನೋವಿಗೆ ಔಷಧ ಕ್ರಯ ೨ ಆಣೆ ೬ ಪೈ
೫. ಕೆಮ್ಮಿನ ರೋಗಕ್ಕೆ ಔಷಧ ೪ ಆಣೆ.
೬. ವ್ರಣಕ್ಕೆ ಔಷಧ ೪ ಆಣೆ.
೭. ಆಶ್ಚರ್ಯಕರವಾದ ವೀರ್ಯಸ್ತಂಭದ ಗುಳಿಗೆ ೪ ಆಣೆ.
೮. ತಲೆನೋವಿಗೆ ತೈಲವು ೨ ಆಣೆ ೬ ಪೈ.
೯. ಪ್ರಮೇಹ ನಿವಾರಣ ಭಸ್ಮವು—೮ ಆಣೆ.
೧೦. ಉಷ್ಣಕಾರಕಕ್ಕೆ ಮಾತ್ರೆಗಳು—ರೂ. ೧.
೧೧. ಮೂಲವ್ಯಾಧಿಗೆ ಔಷಧ—೮ ಆಣೆ.
೧೨. ಕಣ್ಣಿಗೆ ಸುರ್ಮಾ—೪ ಆಣೆ.
೧೩. ದಂತಚೂರ್ಣವು—೧ ಆಣೆ ೩ ಪೈ.
೧೪. ಕೂದಲು ಬೆಳೆಯುವ ಎಣ್ಣೆ (ಬಂಬೋಲಕ್ಸ್) ೪ ಆ.

ವಿಳಾಸ:— ಡಿ. ಮನ್ನಾಲಾಲ್, ದಿಲ್ಲಿ ವೈದ್ಯರು,

೧೩. ಇಳೇ ಸಿದ್ದಿ ಕಟ್ಟೆ. ಬೆಂಗಳೂರು ಸಿಟಿ.

ನಮ್ಮ ಏಜಂಟರು:—

5. ಹಾಜಿಸಾಹೇಬ್ ಮಾಹತಿ ಅವೆನ್ಯೂರೋಡು ಬೆಂಗಳೂರು ಸಿಟಿ.

ಡಿ. ಸೆವಯುವ್ ಉಸ್ಮಾನ್ ಅಂಡ್ ಕೊ ದೊಡ್ಡಪೇಟೆ, ಬೆಂಗಳೂರು ಸಿಟಿ.

ಸಮಸ್ತ ವೀರಶೈವಬಾಂಧವರಿಗೆ ವಿದಿತಪಡಿಸುವುದೇನೆಂದರೆ– ಕಳೆದವರ್ಷ ನಿಪ್ಪಾಣಿಯಲ್ಲಿ ಕೂಡಿದ್ದ ೭ ನೆಯ ವೀರಶೈವಮಹಾಸಭೆಯ ರಿಪೋರ್ಟು ಬುಕ್ಕುಗಳು ಮುದ್ರಿತವಾಗಿ ಕ್ರಯಕ್ಕೆ ಸಿದ್ಧವಾಗಿರುವುವು. ಈ ಸಾರೆಯ ಬುಕ್ಕುಗಳು ಒಳ್ಳೆಯ ಅಪ್ರತಿಮವಾಗಿಯೂ, ಅಚ್ಚುಕಟ್ಟಾಗಿಯೂ ಬರೆದಿದ್ದು, ಅದರಲ್ಲಿ ನಮ್ಮ ಸಮಾಜದ ಆಧಾರಸ್ತಂಭಗಳಂತಿರುವ ಪ್ರತಿಯೊಬ್ಬ ಮುಖಂಡರ ಭಾವಚಿತ್ರಗಳೂ ಪ್ರತ್ಯೇಕವಾಗಿ ಸೇರಿಸಲ್ಪಟ್ಟಿರುವುವು. ಮೇಲಾಗಿ ಪ್ರತಿಗಳು ವಿಕ್ರಯಕ್ಕೆ ಒಂದೇ ನೂರು ಇರುವುದರಿಂದ ಹಿಂದಿನಿಂದ ಬೇಡುವವರಿಗೆ ಪ್ರತಿಗಳು ನಿಶ್ಚಯವಾಗಿ ಸಿಗಲಾರವು. ಕಾರಣ, ಇಷ್ಟವುಳ್ಳವರು ಮುಂಚಿತವಾಗಿಯೇ ಸ್ಪಷ್ಟವಾದ ಪತ್ತೆಯಿಂದ ಆರ್ಡರು ಕಳುಹಿಸಬಹುದು.

ಶಿವಮೂರ್ತಿಸ್ವಾಮಿ ಕಣಬರಗಿಮಠ,
ಚೇರ್ಮನ್, ಸ್ವಾಗತಕಮಿಟಿ,
೭ ನೆಯ ಮಹಾಸಭೆ ನಿಪ್ಪಾಣಿ

ಪರಿಮಳದ್ರವ್ಯಗಳು.

ನಮ್ಮಲ್ಲಿ ಬಹುಕಾಲದಿಂದಲೂ ಅತ್ಯುತ್ತಮವಾಗಿ ತಯಾರಾಗುತ್ತಿರುವ ಊದುಬತ್ತಿಗಳು ಸೇರು ೧ ಕ್ಕೆ ೪ ಆಣೆಯಿಂದ ೧೦ ರೂ. ವರೆಗೂ ದೊರೆಯುವುವಲ್ಲದೆ, ನಾನಾತರದ ಗಂಧದಬಿಲ್ಲೆಗಳು, ಜವಾಜಿಗಂಧ ಅಥವಾ ಅರಗಜ, ಪುನಗು, ಜವಾಜಿ, ದಶಾಂಗ, ಧೂಪದಕಡ್ಡಿ ಮೊದಲಾದ ಸುಗಂಧದ್ರವ್ಯಗಳೂ, ಮಲ್ಲಿಗೆ-ಸಂಪಗೆ-ರೋಜಾ ಮೊದಲಾದ ಅತ್ತರುಗಳೂ ಮತ್ತೂ ಭೃಂಗಾಮಲಕತೈಲ ಮೊದಲಾದುವುಗಳೂ ವಿಕರಿಗೆ ಸಿದ್ಧವಾಗಿರುವುವು. ಅಪೇಕ್ಷಕರು ೫ ರೂ. ಗೆ ಕಡಿಮೆಯಿಲ್ಲದಂತೆ ಆರ್ಡರನ್ನು ಕೊಡಬೇಕು. ಇನ್ನೂ ಹೆಚ್ಚು ವಿಷಯಗಳನ್ನು ತಿಳಿಯತಕ್ಕವರು ನಮ್ಮ ಕ್ಯಾಟಲಾಗನ್ನು ತರಿಸಿ ನೋಡಬಹುದು. 40

ವಿಳಾಸ– ಎಸ್. ಕಳ್ಳಪ್ಪ, ಊದುಬತ್ತಿಷಾಪ್,
ದೊಡ್ಡಪೇಟೆ, ಬೆಂಗಳೂರು ಸಿಟಿ.

ನ್ಯಾಯದರ್ಪಣ. 21

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯೂ, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಫ್ ಕೋರ್ಟಿನ ಕಾನೂನೂ ಮತ್ತೂ ರೂಲು, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆ... ಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ವಗೈರೆ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯೂ ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರುತ್ತವೆ.

ಬೆಲೆ ರೂ. 1—8—0. ವಿ. ಪಿ. ಮೂಲ್ಕ 1—12—0.
ಎಂ. ಎಸ್. ನಂಜಪ್ಪನವರು,
ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

28 ಸಚಿತ್ರ ಶುಕಸಪ್ತತಿ ಕಥೆಗಳು
ರೂ. ೧-೮-೦ (೫೧೨ ಪುಟ) ಟಪಾಲು ಹಾಸಲು ೪ ಆಣೆ.
ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ
ರೂ ೧-೮-೦. (೫೭೬ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ! ಮಾನ್ಯತೆಯು ಬೇಕಾದರೆ, ವಾಗ್ವೈಖರಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಬಿಚ್ಚೈಪಟ್ಟರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯುಲ್ಲಾಸವಿದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೬೦ ಪುಟಗಳಿಂದ ಕೂಡಿದ ೬೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ ೧-೪-೦ ಟಪಾಲ್ ಹಾಸಲು ೨ ಆಣೆ. ಈಗಲೇ ಬರೆ ನಿಮ್ಮ. ನಮ್ಮಲ್ಲಿ ಇನ್ನೂ ಅನೇಕ ಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

ಕನ್ನಡ ಇಂಡಿಯನ್ ಪೆನಲ್ ಕೋಡ್

ಇದರಿಂದ ಮೈಸೂರ್, ಮದ್ರಾಸ್, ಬೊಂಬಾಯಿಜಿಲ್ಲಾ ಕನ್ನಡಭಾಷಾ ವಾಚಕಮಹಾಶಯರಿಗೆ ತಿಳಿಸುವದೇನೆಂದರೆ- ಶ್ರೀಮದಿಂಡಿಯಾ ಗೌರ್ನರ್ ಜನರಲ್‌ರವರ ಅನುಮತಿ ಪ್ರಕಾರ ಸನ್ ೧೮೬೦ನೇ ಇಸವಿಯಲ್ಲಿ ಮಂಜೂರಾದ "ಇಂಡಿಯನ್ ಪೆನಲ್ ಕೋಡ್" ಎಂಬ ಆಕ್ಟನ್ನು ಈಗ ಅನೇಕ ಜಡ್ಜಿಗಳ ಟಿಪ್ಪಣಿಗಳೊಡನೆಯೂ, ಅಮೆಂಡ್‌ಮೆಂಟುಗಳೊಡನೆಯೂ ಅಂದವಾದ ಕಾಗದದಲ್ಲಿ ಸ್ಫುಟವಾದ ಅಕ್ಷರಗಳಿಂದ ಮುದ್ರಣವಾಗಿ ಮಾರಾಟಕ್ಕೆ ಸಿದ್ಧವಾಗಿದೆ. ಈ ಆಕ್ಟಿನಲ್ಲಿ ಪ್ರತಿ ಸೆಕ್ಷನಿಗೂ ಫಿರ್ಯಾದಿಗಳೂ, ಅಪರಾಧಿಗಳೂ, ಪೋಲೀಸ್ ಅಧಿಕಾರಿಗಳೂ, ಮ್ಯಾಜಿಸ್ಟ್ರೇಟರುಗಳೂ ನಡಿಸಬೇಕಾದ ಆಚರಣೆಗಳೆಂದರೆ:-ನಡೆಯುವ ಮೊಕದ್ದಮೆಯನ್ನು ಯಾವ ಕೋರ್ಟಿನಲ್ಲಿ ವಿಚಾರಣೆ ಮಾಡಬೇಕು? ವಾರಂಟಿಲ್ಲದೆ ಹಿಡಿಯಬಹುದೇ, ಹಿಡಿಯಕೂಡದೇ? ಸಮನ್ ಕೊಡತಕ್ಕದ್ದೇ, ವಾರಂಟು ಕೊಡತಕ್ಕದ್ದೇ? ಜಾಮೀನ್ ತೆಗೆದುಕೊಂಡು ಬಿಡಬಹುದೇ? ರಾಜಿಯಾಗಬಹುದೇ, ರಾಜಿಯಾಗತಕ್ಕದ್ದಲ್ಲವೇ? ಎಂಬ ತಪ್ಸೀಲುಗಳನ್ನು ವಿವರಿಸಲ್ಪಟ್ಟಿರುವುದು. ಈ ಪುಸ್ತಕವು ಸರ್ಕಾರಿ ಅಧಿಕಾರಿಗಳಿಗೂ, ಪೋಲೀಸಿನವರಿಗೂ, ಪಟೇಲ್ ಶ್ಯಾನುಭೋಗರುಗಳಿಗೂ, ವರ್ತಕರುಗಳಿಗೂ, ಜಮೀನ್ದಾರರುಗಳಿಗೂ ಇತರ ಸಮಸ್ತ ಕಸಬುದಾರರಿಗೂ, ಖುಷ್‌ಬಾಷ್ ಜನಗಳಿಗೂ ಉಪಯೋಗಕರವಾದದ್ದು.

ಈ ಪುಸ್ತಕದಲ್ಲಿ ಚೋರಿ, ಕಳವು, ಡಕಾಯತಿ, ಅತಿಕ್ರಮಪ್ರವೇಶ, ಸ್ತ್ರೀಗೆ ಮಾನಭಂಗಪಡಿಸುವದು, ಸ್ತ್ರೀಯರನ್ನು ದುರಾಚಾರಕ್ಕೆ ಕೆಯುವದು, ಅಸಾಮಿ ಚೋರಿ, ಗಂಡನು ಹೆಂಡತಿ ೧೨ ವರುಷಗಳಿಗೆ ಕಡಮೇ ವಯಸ್ಸಿನವಳಾಗಿರುವಾಗ್ಗೆ ಸ್ತ್ರೀಸಂಗ ಮಾಡಬಹುದೇ? ಮುಂತಾದ ಮೊಕದ್ದಮೆಗಳಲ್ಲಿ ಜಡ್ಜಿಗಳು ಕೊಟ್ಟಿರತಕ್ಕ ಅಭಿಪ್ರಾಯಗಳು ಸೂಚಿಸಲ್ಪಟ್ಟಿರುವವು. ಕನ್ನಡದಲ್ಲಿ ಇದುವರೆಗೆ ಇಂಥಾ ಪುಸ್ತಕವು ಇನ್ನೆಲ್ಲಿಯೂ ಇಲ್ಲವು.

ಕ್ರಯ ಪ್ರತಿ ೧ ಕ್ಕೆ ೨ ರೂಪಾಯಿ; ಟಪಾಲ್ ಛಾರ್ಜು ೪ ಆಣೆ.

ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ. ಪುಸ್ತಕಗಳ ಕ್ರಯ ಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು.

45 ನಮ್ಮ ವಿಳಾಸ– ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು 6

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊಚಿತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಯಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಂಜು ಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈ ಮಾರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ ಮತ್ತೊಂದು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾನ್ನಮೃತವಿದೊಂದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧—೦—೦.
ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ. ಮೈಸೂರು

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ)... ಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾ... ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವು... ಗಿದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚಿ... ಟಿಕೆ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿ... ರೆ ವಾಸನೆಯು ಘುಮಘುಮಿಸುತ್ತದೆ. ೧ ಡಬ್ಬಿಯ ಬೆಲೆ ... ಆಣೆ. ೧ ಡಜನ್ ಡಬ್ಬಿಗೆ ೧-೧೪-೦

ಉತ್ತಮವಾದ ನಶ್ಯದಪುಡಿ.

ಘಾಟು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಬೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವೆ. ನೀವುಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋತಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,
ಗೋಪಸೆಟ್ಟಿಪುರ, ಹನೂರು ಪೋಸ್ಟ್
17 ಕೊಳ್ಳೇಗಾಲದ ತಾಲ್ಲೂಕು

೧೯೧೪ ನೆಯ ಇಸವಿ ಜೂನ್ ತಾ॥ ೧೫ರಿಂದ ೧೯೧೪ನೆಯ ಜೂನ್ ತಾ॥ ೨೧ರವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ ನೆಯ ಆನಂದನಾಮ ಸಂ॥ ದ ಜ್ಯೇಷ್ಠ ಬ॥ ಸಪ್ತಮಿಯಿಂದ ಜ್ಯೇಷ್ಠ ಬ॥ ತ್ರಯೋದಶಿವರೆಗಿನ ಪಂಚಾಂಗ.

ತಾ॥	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ತೇದಿ ವಿಂಥು
15	[1] ಸೋ	ಸ	5-1	ಪೂಭಾ	48-6	2
16	ಮಂ	ಅ	8-43	ಉತ್ತಭಾ	54-2	3
17	ಬುಧ	ನ	13-9	ರೆ	60	4
18	[2] ಗುರ	ದ	18-6	ರೆ	0-36	5
19	[3] ಶುಕ್ರ	ಏ	23- 0	ಅ	7-15	6
20	[4] ಶನಿ	ದ್ವಾ	27-52	ಭ	13-35	7
21	[5] ಭಾ	ತ್ರ	31-49	ಕೃ	19-15	8

(1) ವಾಣೀವಿಲಾಸದವರ ವರ್ಧಂತೀ, (2) ಏಕಾದಶೀ ತಿಥಿಃ, (3) ಶೂನ್ಯತಿಥಿಃ ಸರ್ವಸಾರ್ವೈಕಾದಶಿ, (4) ಕೂರ್ಮದ್ವಾದಶಿ ತಿಥಿಃ, (5) ಶಿವ ಪ್ರದೋಷಃ, ನಂಜನಗೂಡು ವಿಜಯೇಂದ್ರಸ್ವಾಮಿಗಳ ಪುಣ್ಯದಿನ, ಮಾಸಶಿವರಾತ್ರಿ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED M NO 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ವಾರ್ಷಿಕ ಚಂದಾ ೧—೦—೦ } ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈ ಘನಪಥಕೃತಾವತಾರಾ ಪಕ್ಷೈಕ್ಷನಿಹೃತ್ತಮೋಹರಾಜೀಯಾತ್, ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ! ಸೀಮಾತೀತಯಶಃಪ್ರತಾಪವಿಪುಲಂಸದ್ವೃತ್ತಮಾಲಾಕುಲಂ | ಶ್ರೀಮಂಬೆತ್ತಿಕೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ! { ಅಂಚೆವೆಚ್ಚ ಸೇರಿ ೧—೧೪—೦

REGISTERED, M NO 124

ಸಂಪುಟ ೨೩) ಮೈಸೂರ್ ಸ್ಟಾರ್ ಸರ್ ೧೯೧೪ ನೆಯ ಇಸವಿ ಜೂನ್ ತಾರೀಖು ೨೨ ನೆಯ ಸೋಮವಾರ. (ಸಂಚಿಕೆ ೨೫

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಈಗತಾನೆ ಶೀಮೆಯಿಂದ ಬಂದಿರತಕ್ಕ ರಖಂವಾರ್ ಹೊಸ ಬೈಸ್ಕಲ್‌ಗಳು. 21

ಪ್ರತಿಯೊಂದು ಬೈಸ್ಕಲಿನ ಸಂಗಡಲೂ ಅತ್ಯವಶ್ಯಕವಾಗಿ ರಿಪೇರಿಮಾಡಿಕೊಳ್ಳಲು ಬೇಕಾದ ಆಯುಧಗಳೂ ಮತ್ತೂ ಆಯುಧಗಳನ್ನಿಡತಕ್ಕ ಶೀಮೆತಯಾರಿ ಚರ್ಮದ ಚೇಲ ೧. ಘಾಳೀ ತುಂಬುವ ಪಂಪ್ ೧. ಸುಂದರವಾದ ಬೆಲ್ ೧. ಇಷ್ಟು ಸಾಮಾನುಗಳನ್ನೂ ಮುಫತ್ತು ಕೊಡಲಾಗುತ್ತೆ.

ರಾಯಲ್ ಮೇಲ್ ಬೈಸ್ಕಲ್—ಕೇಂಬ್ರಿಡ್ಜ್ ಟೈರ್, ಡನ್‌ಲಪ್‌ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೮೫-೦-೦.
ಬ್ರಿಟಾನಿಕ್ ಬೈಸ್ಕಲ್—ಡನ್‌ಲಪ್ ಟೈರ್, ಡನ್‌ಲಪ್ ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೯೦-೦-೦.
ರಾಯಲ್‌ಕಿಂಗ್ ಬೈಸ್ಕಲ್—ಕೇಂಬ್ರಿಡ್ಜ್ ಟೈರ್, ಡನ್‌ಲಪ್ ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೮೦-೦-೦.
ರಾಯಲ್ ನೈಟ್ ಬೈಸ್ಕಲ್—ಪಾಮರ್ ಟೈರ್, ಪಾಮರ್ ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೯೨-೦-೦.
ರಾಯಲ್ ಆರ್‌ಚರ್ ಬೈಸ್ಕಲ್—ಬುಕಾನಿಯರ್ ಟೈರ್ ಬುಕಾನಿಯರ್ ಟ್ಯೂಬ್ ಹಾಕಿದ್ದು ೭೦-೦-೦.
ಬಿ. ಎಸ್. ಎ. ಫಿಟಿಂಗ್ ಬೈಸ್ಕಲ್, ಡನ್‌ಲಪ್‌ಟೈರ್, ಡಂಲಪ್‌ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೧೩೫-೦-೦.
ಬೈಸ್ಕಲ್ ಬಿಡಿಸಾಮಾನುಗಳೂ ಸದಾ ನಮ್ಮಲ್ಲಿ ವಿಕರಿಗೆ ಸಿದ್ಧವಾಗಿವೆ. ಬೈಸ್ಕಲ್ಲಿಗೆ ಆರ್‌ಡರ್‌ಮಾಡತಕ್ಕವರು ೧೦-೦-೦ ರೂಪಾಯಿ ಅಡ್ವಾನ್ಸು ಕಳುಹಿಸಬೇಕು. ಬಾಕಿ ಮೊಬಲಿಗೆ ರೈಲ್ವೆ ರಶೀದಿಯನ್ನು ವಿ.ಪಿ.ಮಾಡಲಾಗುತ್ತೆ.

"ಜಮಲೆ"ಇ ದೊಂದು ಅತ್ಯಾಶ್ಚರ್ಯಕರವಾದ ಹೊಸಕಾದಂಬರಿ (ಬಂಗಾಳಿ ನಾವೆಲ್) ಓದುವುದಕ್ಕೆ ಕುಳಿತರೆ ಮುಗಿಸುವವರಿಗೂ ಮನಸ್ಸು ನಿಲ್ಲುವುದಿಲ್ಲ. ಓದುತ್ತ ಓದುತ್ತಾ ಹೊಸಹೊಸ ಭಾವಗಳು ತಲೆದೋರಿ ರೋಮಾಂಚವುಂಟಾಗುವುದು. ಪಾಠಕರೆ! ಗೋರಿಯಲ್ಲಿದ್ದ ಹೆಂಗಸಿನ ಶವಕ್ಕೆ ಪ್ರತಿಯಾಗಿ ಗಂಡುಸಿನ ಶವವಿರುವುದನ್ನು ನೋಡುತ್ತಲೇ ಆಶ್ಚರ್ಯಸಮುದ್ರದಲ್ಲಿ ಮುಳುಗಿಹೋಗುವಿರಿ. ಕ್ರಯ ಪ್ರತಿ ೧ ಕ್ಕೆ ೦-೬-೦ ಪೋಸ್ಟೇಜು ೦-೨-೦.

ಹೊಸಪುಸ್ತಕಗಳು.

ವೀರಶೈವರಿಗೂ ಇತರರಿಗೂ ಸಹ ಅತ್ಯವಶ್ಯಕವೇ ಕಾದ್ದು.

ಮನೋವಿಜಯ— ವೇದವೇದಾಂಗ ವೇದಾಂತ ಪುರಾಣ ಇತಿಹಾಸಾದಿಗಳಲ್ಲಿ ಬಹು ಪ್ರವೀಣರಾಗಿಯೂ ಅನೇಕ ಮತಸಿದ್ಧಾಂತದಲ್ಲಿ ಕುಶಲರಾಗಿಯೂ ಇದ್ದ ಶ್ರೀ ಗುರುಸ್ವಾಮಿಗಳವರಿಂದ ವೀರಶೈವರಿಗೂ ಅದ್ವೈತಮತಸ್ಥರಿಗೂ ಬಹು ಪ್ರಯೋಜನವಾಗಿರುವಂತೆ ಮನೋಹರವಾಗಿ ರಚಿಸಲ್ಪಟ್ಟಿದೆ. ಇದಕ್ಕೆ ಪರಮಪೂಜ್ಯರಾದ ಶ್ರೀ ತೋಂಟದ ಸಿದ್ಧಲಿಂಗಸ್ವಾಮಿಗಳು ಸಮಸ್ಥರಿಗೂ ಸುಲಭವಾಗಿ ತಿಳಿಯುವಂತೆ ತಾತ್ಪರ್ಯವನ್ನು ಸ್ವಾರಸ್ಯವಾಗಿ ಬರೆದಿದ್ದಾರೆ. ಸರ್ವರೂ ಅತ್ಯವಶ್ಯಕ ಓದಬೇಕಾದ್ದು. ಇದರ ಕ್ರಯ ಪ್ರತಿ ೧ ಕ್ಕೆ ೦-೮-೦ ವಿ.ಪಿ. ಮೂಲಕ ೧೧ ಆಣೆ.

ಶತಕಪಂಚಕ— ಇದರಲ್ಲಿ ನಿರಂಜನಶತಕ, ಸಿದ್ಧಲಿಂಗೇಶ್ವರಶತಕ, ನಿಷ್ಕಲಶತಕ, ಉಮಾಮಹೇಶ್ವರಶತಕ, ಸಂಗಮೇಶ್ವರ ಶತಕಗಳೆಂಬ ೫ ಶತಕಗಳಿವೆ. ೪-೫ ನೇ ಶತಕಗಳು ಶಿವಪೂಜಾಕಾಲದಲ್ಲಿ ಪಾರಾಯಣಕ್ಕೆ ಯೋಗ್ಯವಾಗಿವೆ. ಈ ಗ್ರಂಥವನ್ನು ಶ್ರೀ ತೋಂಟದಾರ್ಯರು ಚೆನ್ನಾಗಿತಿಳಿಯುವಂತೆ ರಚಿಸಿರುವರು. ಇದರ ಕ್ರಯ ಪ್ರತಿ ೧ ಕ್ಕೆ ೦-೬-೦ ವಿ ಪಿ. ಮೂಲ್ಕ ೦-೮-೦.

ಮುಕ್ತ್ಯಂಗನ ಕಂಠಮಾಲೆ ಮತ್ತು ಜ್ಯೋತಿರ್ಮಯಶಾಂಭವಿ ಎಂಬೀವಚನ ಗ್ರಂಥಗಳು ವೀರಶೈವಸಿದ್ಧಾಂತವನ್ನು ಸುಲಭವಾಗಿ ಅಬಾಲವೃದ್ಧರಿಗೂ ಬೋಧಿಸತಕ್ಕವುಗಳಾಗಿವೆ. ಇವೆರಡೂ ಇರುವ ಪ್ರತಿ ೧ಕ್ಕೆ ೦-೪-೦ ವಿ.ಪಿ ಮೂಲ್ಕ ೦-೬-೦.

ಶ್ರೀ ಬಸವೇಶ್ವರ ಸ್ತೋತ್ರಶತಕ–ಗುರುಬೋಧೆ, ಮನೋಬೋಧೆ, ಲಿಂಗತ್ರಿವಿಧಿ, ಶ್ರೀಬಸವೇಶ್ವರ ಸ್ತೋತ್ರ ಎಂಬೀನಾಲ್ಕು ಒಂದೇ ಪುಸ್ತಕದಲ್ಲಿ ಮುದ್ರಿತವಾಗಿವೆ. ಶಿವಪೂಜಾಕಾಲದಲ್ಲಿ ಪಾರಾಯಣಕ್ಕೆ ಯೋಗ್ಯವಾಗಿವೆ. ಕ್ರಯ ಪ್ರತಿ ೧ ಕ್ಕೆ ೦-೩-೦ ವಿ.ಪಿ ಮೂಲಕ ೦-೫-೦.

ಮೇಲ್ಕಂಡ ನಾಲ್ಕು ಪುಸ್ತಕಗಳನ್ನು ಒಂದೇಸಾರಿ ತರಿಸಿಕೊಳ್ಳುವವರಿಗೆ ಟಪಾಲ್ ಖರ್ಚ ಸಹ ಸೇರಿ ೧-೧೦-೦.

ರಖಂವಾರ್ ವಾಚ್‌ಗಳ ಕ್ರಯದ ತಪ್ಸೀಲ್.

ರಾಸ್ಕೋಪ್ ಸಿಸ್ಟಂವಾಚ್ ೧ ಕ್ಕೆ ೨-೮-೦ ಗನ್‌ಮೆಟಲ್ ವಾಚ್ ೧ಕ್ಕೆ ೩-೮-೦, ಡಿಟೋ ನಮೂನೆ ಚಿಕ್ಕಸೈಜ್ ವಾಚ್ ೧ ಕ್ಕೆ ೪–೪–೦, ಸ್ಪೆಷಲ್ ಸರ್ವಿಸ್ ಚಿಕ್ಕ ಸೈಜ್ ವಾಚ್ ೧ ಕ್ಕೆ ೫-೪-೦, ಬರ್ಮಾ ಟೈಂಪೀಸ್ ೧ ಕ್ಕೆ ೧-೪-೦ ಡಿಟೋ ಅಲಾರಂ ಇರತಕ್ಕದ್ದು ೨-೪-೦ ಡಿಟೋ ರಖಂಮಿನಲ್ಲಿ ಘಂಟೆ ನಿಮಿಷ ಸೆಕೆಂಡ್ ತೋರಿಸಿ ಅಲಾರಂ ಸಹ ಇದ್ದು ತಾರೀಖು ಕೂಡ ತೋರಿಸತಕ್ಕ ದೊಡ್ಡ ಟೈಂಪೀಸ್ ೧ ಕ್ಕೆ ೩–೪–೦, ಅಸೋಡಿಯಾ "ಬಿ" ಟೈಂಪೀಸ್ ೧ ಕ್ಕೆ ೨-೮-೦.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್. ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲಿಚರಿತ್ರೆ	೦—೫—೦
ಸಟೀಕ ನಂದೀವ್ರತ	೦—೪—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ

ಹೊಸಪುಸ್ತಕಗಳು.

140

ಬಸವರಾಜವಿಜಯಂ— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧ ೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ– ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ಚೇಮಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸೂಕ್ತಿಮುಕ್ತಾವಳಿ ೩ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ—ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ ವರ್ಷದ ಚಂದಾ ೨-೮-೦.

ಎಂ. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕಮಂಡಲಿ, ಮೈಸೂರು.

ಶ್ರೀರಸ್ತು.
(ಮುಜರಾಯಿನಾಟಕ.)
ಒಂದನೇಅಂಕ.

ಬೆಂಗಳೂರು ಡಿಸ್ಟ್ರಿಕ್ಟು ಮಾಗಡಿ ತಾಲ್ಲೂಕು ಜೋಡಿ ಹೆಬ್ಬಳಲುಗ್ರಾಮದ ಆಂಜನೇಯ ಚಂದ್ರಮೌಳೀಶ್ವರ ಸಂವಾದ.

ಆಂ–ಸ್ವಾಮಿನ್, ಚಂದ್ರಮೌಳೀಶ್ವರ ನಮೋನಮಃ

ಚಂ–ಹನೂಮನ್! ಚಿರಂಜೀವ; ಕ್ಷೇಮವೆ? ನುತ್ತೇನು ವಿಶೇಷ?

ಆಂ–ಸ್ವಾಮಿನ್, ಏನುಹೇಳಲಿ ಜೋಡೀಗ್ರಾಮದ ವೈಖರಿಯನ್ನು

ಚಂ–ಏನಯ್ಯಾ, ಹೀಗೆ ಹೇಳುತ್ತೀ?

ಆಂ–ಏನುಸ್ವಾಮಿ, ಏನೂ ತಿಳಿಯದವರಂತೆ ಕೇಳುತ್ತೀರಿ? ತಿಂಗಳಿಗೊಂದುದಿನವಾದರೂ ಅನ್ನ ನೀರು ದೊರೆಯದಿದ್ದರೂ ಧರ್ಮರಾಯನಂತೆ ಪ್ರಸನ್ನರಾಗಿ ಮೌನದಿಂದಿರುತ್ತೀರಿ?

ಚಂ–ಆಗಲಿ, ಇದು ಸ್ವಲ್ಪವಿಷಯ; ಮತ್ತೆ ಕೆರ್ನ್ಯಾಸಾರಿ, ನಿನ್ನ ಸ್ಥಿತಿ ಹೇಗಿದೆ ಹೇಳಪ್ಪ?

ಆಂ–ನನಗೂ ಕೆಲವು ದಿನಗಳವರೆಗೆ ಗ್ರಹಬಂಧಿತ್ವ, ಈಗ ಸ್ವಲ್ಪ ಕಾಲದಿಂದ ಹೊಸದಾಗಿ ಬಂದಿರುವ ಅರ್ಚಕನು ತಕ್ಕಮಟ್ಟಿಗೆ ಅಕ್ಕರೆಯಿಂದ ಅರ್ಚಿಸುತ್ತಿದ್ದಾನೆ. ಸದ್ಯಃ ಅನ್ನೋದಕಗಳಿಗೆ ಕೊರತೆಯಿಲ್ಲವಾದರೂ ಬಹುಕಾಲ ಉಪವಾಸ ಮಾಡಿದ ಬಳಲಿಕೆ ಇನ್ನೂ ತೀರಲಿಲ್ಲ

ಚಂ–ಸಂತೋಷ, ನಿನ್ನ ಗೃಹಸ್ಥಿತಿ ಒಳ್ಳೆಯದಾಗಿದೆ

ಆಂ–ಸ್ವಾಮಿ, ಈ ಗೊಡ್ಡುವೇದಾಂತದಿಂದಲೇ ನಿಮಗೆ ಹೀಗೆ ಆದುದು. ಇನ್ನಾದರೂ ಎಚ್ಚರಿಕೆ ತಂದುಕೊಳ್ಳದಿದ್ದರೆ ನಿಮ್ಮ ಕಷ್ಟ ನಿವೃತ್ತಿಯಾಗುವುದೇ ಇಲ್ಲ

ಚಂ–ಏನುಮಾಡಲಪ್ಪ? ನೀನೇ ಸೂಚಿಸು

ಆಂ–ನಾನು ಕೈಯೆತ್ತಿ ಹೊಡೆಯುವುದಕ್ಕೆ ಸಿದ್ಧನಾಗಿರುವುದರಿಂದಲೇ ನನಗೆ ಅಂಜಿ ಅರ್ಚಕನು ಅರ್ಚಿಸುತ್ತಿದ್ದಾನೆ. ನೀವು ಕಣ್ಣು ಮುಚ್ಚಿಕೊಂಡು ಕುಳಿತಿರುವುದರಿಂದ ಯಾರಿಗೂ ಲಕ್ಷ್ಯವಿಲ್ಲ ಮಂತ್ರಿಸಿದರೆ ಮಾವಿನಕಾಯಿ ಎಂದಿಗೂ ಬೀಳುವುದಿಲ್ಲ ಸ್ವಾಮಿ.

ಚಂ–ಸರಿ, ಸರಿ, ಈ ಸ್ವಲ್ಪ ವಿಷಯಕ್ಕಾಗಿ ನಾನಿನ್ನು ಫಾಲನೇತ್ರವನ್ನು ತೆರೆಯಬೇಕೆ? ಸರ್ಕಾರಿ ತಸ್ತೀಕೂ ಮತ್ತೂ ಮಾನ್ಯದ ಜಮೀನೂ ಇದ್ದರೂ ಪೂಜಾರಿಯು ದಯಬರದಿದ್ದರೆ ಸರ್ಕಾರದ ಅಧಿಕಾರಿಗಳು ಸುಮ್ಮನಿರುವರೆ?

ಆಂ–ಹಾಗೆ ಗಮನಿಸುವ ಅಧಿಕಾರಿಗಳಿದ್ದರೆ, ತಮ್ಮ ಆಲಯದ ಪೌಳಿಗೋಡೆ ಬಿದ್ದು ಎಷ್ಟು ವರುಷಗಳಾದುವು, ಆಲಯದ ಸುತ್ತಲೂ ಎಮ್ಮೆ ತಿಪ್ಪೆ ಹಳ್ಳಗಳಾಗಿ ಎಂತಹ ದುರ್ಗಂಧಭೂಯಿಷ್ಠವಾಗಿದೆ, ಪೌಳಿಕಲ್ಲುಗಳೆಷ್ಟು ಕಳವಾಗಿವೆ, ತಮ್ಮ ಅರ್ಚಕನ ವಾಸವೆಲ್ಲಿ ಇನ್ನು ಎಷ್ಟು ಗ್ರಾಮಗಳಲ್ಲಿ ಅರ್ಚಕನಾಗಿರುತ್ತಾನೆ? ಅನೇಕ ಗ್ರಾಮಗಳ ದೇವಾಲಯಗಳ ಅರ್ಚನೆ ತನ್ನ ವಹಿಸಿರುವಲ್ಲಿ ನೈವೇದ್ಯ ದೀಪಾರಾಧನೆ ಇವುಗಳನ್ನರ್ಪಿಸಲು ಸಾಧ್ಯವೆ? ಎಂಬ ವಿಷಯಗಳನ್ನು ವಿಚಾರಿಸದೆ ಇರುವರೆ? ದಯವಿಟ್ಟು ಸಾವಧಾನದಿಂದ ಯೋಚಿಸಿದರೆ ತಮಗೆ ವೇದ್ಯವಾಗುತ್ತದೆ

ಎರಡನೆ ಅಂಕ.

ಸಂಕೇಘಟ್ಟದಲ್ಲಿ ಕಾಶೀವಿಶ್ವೇಶ್ವರ, ಕಲ್ಲೇಶ್ವರ, ಮತ್ತೂ ಬಸವಣ್ಣ–ಇವರು ಸೇರಿದ್ದಾರೆ.

ವಿಶ್ವೇಶ್ವರ–ಮಿತ್ರರೆ! ನಮ್ಮಗಳ ಅನ್ನೋದಕಗಳಿಗೆ ಇಷ್ಟು ಕಷ್ಟಬಂದಿತಲ್ಲ, ಎಷ್ಟುದಿನ ಸಹಿಸೋಣ?

ಕ–ತಮಗೇನು ಕಡಮೆ ಸ್ವಾಮಿ ಕಾಶೀವಿಶ್ವೇಶ್ವರನೆ! ತಾವು ಕಾಶಿಯಲ್ಲಿ ಪ್ರತಿನಿತ್ಯ ಅಸಂಖ್ಯಾತಭಕ್ತರು ಮಾಡುವ ಪೂಜಾನೈವೇದ್ಯಗಳೆಲ್ಲ ತಮಗೆ ನಿತ್ಯವಾಗಿ ಸಲ್ಲುತಿರುವಲ್ಲಿ, ಬಗನಿಗೆರೆ ಅಣ್ಣಯ್ಯನ ಅನ್ನೋದಕಗಳನ್ನು ಬಯಸಿದರೆ, ಲಭ್ಯವಾಗಿರುವ ಕ್ಷೀರಸಾಗರವಂ ಬಿಟ್ಟು ಹಾಲಿಗೋಸ್ಕರ ಗೊಲ್ಲನಮನೆಗೆ ಹೋದಂತಾಗುವುದಿಲ್ಲವೆ? ಮತ್ತೂ ಹಿಂದಿನ ಜನ್ಮದಲ್ಲಿ ತಾವು ಅಣ್ಣಯ್ಯನಿಗೆ ಅನ್ನದಾನಮಾಡಿದ್ದರೆ ಅವನೂ ನಿಮಗೆ ಈಗ ಮಾಡುತ್ತಿದ್ದನು ಇದಕ್ಕಿಂತಲೂ ಹೆಚ್ಚಾಗಿ ಯೋಚಿಸಬಾರದು ಸ್ವಾಮಿ

ಬ–ಏನು ಸ್ವಾಮಿ, ಹೀಗೆ ಹೇಳುವಿರಿ. ಕಾಶಿಯಲ್ಲಿ ಭಕ್ತರು ಕೊಟ್ಟಮಾತ್ರಕ್ಕೇ ಸರ್ಕಾರದ ತಸ್ತೀಕು ಮತ್ತೂ ಮಾನ್ಯಜಮೀನುಗಳನ್ನು ಅನುಭವಿಸುವುದಕ್ಕೆ ಮಾತ್ರ ಅಣ್ಣಯ್ಯನಿಗೆ ಹಕ್ಕು, ನಮ್ಮಗಳನ್ನು ಸೇವಿಸುವುದಕ್ಕೆ ಅಲ್ಲವೋ? ನೀವಂತೂ ಕಲ್ಲೇಶ್ವರರು ಅದರಿಂದಲೇ ಕಲ್ಲಿನಂತಹ ಹೃದಯ, ಕಲ್ಲಿನಂತಹ ಮಾತು, ಕಲ್ಲಿನಂತಹ ಕ್ಷಮಾ, ಇವೆಲ್ಲ ನಿಮ್ಮಲ್ಲಿ ಅನ್ವರ್ಥಗಳಾಗಿಯೇ ಇವೆ.

ಕ–ಏನು ಬಸವಣ್ಣ, ನೀನೂ ಹೀಗೆ ಹೇಳುತ್ತೀಯೆ? ನಿನಗೇನು ಕಡಿಮೆ? ಜಗತ್ತಿನಲ್ಲಿ ಬೆಳೆಯುವ ಹುಲ್ಲೆಲ್ಲ ನಿನ್ನದು. ಮತ್ತೂ ಆಸೇತುಹಿಮಾಚಲಪರ್ಯಂತ ನಿನ್ನನ್ನು ಅರ್ಚಿಸುವವರೂ, ಹೊಗಳುವವರೂ, ಅಸಂಖ್ಯಾತರು ನೀನೂ ಹೀಗೆ ಹೇಳಬಹುದೆ?

ವಿ–ಅಯ್ಯಾ ಈ ವಿನೋದ ಪ್ರಸ್ತಾಪ ಹಾಗಿರಲಿ ಹೊಟ್ಟೆ ತುಂಬಿದನಂತರ ವಿನೋದ “ಶತಂವಿಹಾಯಭೋಕ್ತವ್ಯಂ” ಎಂದು ಕೇಳಿಲ್ಲವೆ? ಮುಂದಾದರೂ ನಮ್ಮಗಳ ಆರಾಧನೆ ಸರಿಯಾಗಿ ನಡೆಯಲು ಏನು ಮಾಡಬೇಕೆಂಬುದನ್ನ ದೀರ್ಘಾಲೋಚನೆಯಿಂದ ಸೂಚಿಸಿ.

ಬ–ಸ್ವಾಮಿ! ಅಪ್ಪಣೆಯಾದರೆ ಅಜ್ಞನಾದ ನನಗೆ ತೋರಿದುದನ್ನು ಹೇಳುವೆನು.

ವಿ–ಆಗಲಿ ಅವಶ್ಯವಾಗಿ ಹೇಳಯ್ಯ.

ಬ–ನ್ಲೋಟೀ ಕೇಶವಾರರು ವರ್ಗವಾದನಂತಲೂ ಅವರಿಗೆ ಬದಲು ಬಂದಿರುವವರು ದೇವಭಕ್ತರೂ ಮತ್ತೂ ಚತುರರಿಕೆಯುಳ್ಳವರೂ ಎಂದು ವರ್ತಮಾನ. ಇದರಿಂದ ನಮ್ಮ ದುರವಸ್ಥೆ ಸ್ವಲ್ಪ ಕಡಿಮೆಯಾಗಬಹುದು. ಆದರೆ ನಮ್ಮ ಸೋಸ್ಕರ ಏನನ್ನಾದರೂ ಸರ್ಕಾರಕ್ಕೆ ತಿಳಿಸಿ ಸಹಾಯಮಾಡುವವರಾರೆಂದು ಯೋಚಿಸುವುದರಲ್ಲಿ ನಮ್ಮ ಗ್ರಾಮದಲ್ಲಿ ಯಾರೂ ಇರುವಂತೆ ತೋರಲಿಲ್ಲ. ಸಹಾಯ ಜೋಡಿ ಹೆಬ್ಬಳಲ ಲ್ಲಿ ನನ್ನ ಸ್ನೇಹಿತನಾದ ಹನುಮಂತಣ್ಣನಿದ್ದಾನೆ ಅವನಲ್ಲಿ ಯೋಚಿಸಿದರೆ ಯಾವುದಾದರೂ ಉಪಾಯವನ್ನು ಹೇಳುವನು

ಕ–ಅಯ್ಯೊ, ಅವನ ಪಾಡು ನಮಗಿಂತ ಕಡೆ, ಕಿಷ್ಕಿಂಧೆಯಲ್ಲಿದ್ದಾಗ ಅವನಿಗೆ ಕಾಡುಕಾಯಿಗಳಿಗೂ ತುಂಗಭದ್ರಾಜಲಕ್ಕೂ ಕೊರತೆಯಿರಲಿಲ್ಲ. ಈ ಜೋಡಿಗ್ರಾಮಕ್ಕೆ ಬಂದ ಮೇಲೆ ಎಲ್ಲಕ್ಕೂ ಕಷ್ಟವಾಗಿ ಹೊರಗೆ ಹೇಳಿಕೊಳ್ಳುವುದಕ್ಕೂ ಬಾಯಿಯಿಲ್ಲದವನಾಗಿರುತ್ತಾನೆ. ಏತಕ್ಕೆಂದರೆ–ಅವನು ತನ್ನ ಕಷ್ಟವನ್ನು ಹೇಳಿದರೂ ಗ್ರಾಮಸ್ಥರಲ್ಲಿ ಕೆಲವರು ಅವನು ಹೇಳುವುದೆಲ್ಲ ಸುಳ್ಳು ಎಂದು ಬೆದರಿಸಿ ಬಾಯಿ ಮುಚ್ಚಿಸಲು ಸಿದ್ಧರಾಗಿರುವರು.

ಬ–ಏನು ಸ್ವಾಮಿ, ಸದ್ಯದ ಸ್ಥಿತಿ ತಿಳಿಯದೆ ಹೀಗೆ ಹೇಳುವಿರಿ. ಮೊದಲು ಹಾಗಿದ್ದುದೇನೋ ನಿಜ. ಮೊನ್ನೆತಾನೇ ಹೋಗಿದ್ದೆನು. ಅವನ ಕಷ್ಟವೆಲ್ಲ ತೊಲಗಿ ಕ್ರಮವಾಗಿ ಈಗ ಪೂಜೆ ಸರಿಯಾಗಿ ನಡೆಯುತ್ತಿರುವುದಾಗಿ ಹನುಮಂತಣ್ಣನೇ ಹೇಳಿದನು ಅವನಂತಹ ರಾಜಮಂತ್ರಪ್ರವೀಣನಲ್ಲಿ ಯೋಚಿಸಿದರೆ ಅನುಕೂಲವಾದೀತು. ಅವನು ರಾಮನಿಗೆ ಎಷ್ಟು ಸಹಾಯಮಾಡಿದನು. ಅಂತಹ ಶಕ್ತನು ನಮಗೆ ತಕ್ಕಮಟ್ಟಿಗಾದರೂ ಸಹಾಯಮಾಡಲಾರನೆ?

ವಿ–ಹಾಗಾದರೆ ನಾವೆಲ್ಲರೂ ಅಲ್ಲಿಗೆ ಹೋಗೋಣ. ಎಂದೆಲ್ಲರೂ ಹೊರಟು ಹೆಬ್ಬಳಲು ಚಂದ್ರಮೌಳೀಶ್ವರನ ದೇವಾಲಯದ ಮುಂದೆ ಬರುತ್ತಲೇ

ಬ–ಸ್ವಾಮಿನಃ, ನೋಡಿರಿ. ನಮ್ಮ ಹನುಮಂತಣ್ಣನು ಇಲ್ಲಿಯೇ ಇದ್ದಾನೆ. ಇದೇ ಸುಸಮಯ. ಮಾತನಾಡೋಣ. ನಡೆಯಿರಿ ಎಂದೆಲ್ಲರೂ ಚಂದ್ರಮೌಳೀಶ್ವರ ಸನ್ನಿಧಿಯನ್ನು ಸೇರಿದರು.

ಮೂರನೆಯ ಅಂಕ.

ಆಂ–ಓಹೊ, ದಯಮಾಡಿರಿ ಎಲ್ಲರೂ.

ಚಂ–ಎಲ್ಲರೂ ಕ್ಷೇಮವೆ?

ಕಾಶೀವಿಶ್ವೇಶ್ವರ–ಅನ್ನೋದಕಗಳ ವಿನಾ ಇತರ ಭಾಗದಲ್ಲಿ ಕ್ಷೇಮವೇ. ತಮ್ಮಗಳ ಸ್ಥಿತಿ ಹೇಗಿದೆ?

ಚಂ–ನಮ್ಮ ಸ್ಥಿತಿಯೂ ಹಾಗೆಯೇ. ಜೋಡಿಗ್ರಾಮದ ಸುಬ್ಬ ಅರ್ಚಕ ಅರ್ಚಿಸದಿದ್ದರೂ ಅರ್ಚನೆಮಾಡಿದನೆಂದು ಹೇಳುವವರೂ ಅನೇಕರಿದ್ದಾರೆ.

ಕ–ಸರಿ; ಸರಿ; ಚೆನ್ನಾಗಿದೆ. ನಮಗೆಲ್ಲ ಮಾರಮ್ಮನೇ ಮೃತ್ಯು

ವಿ–ಇದೇನು ಹೀಗೆ ಹೇಳುವಿರಿ? ಶಿವಪೂಜೆಯಲ್ಲಿ ಕರಡೀ ಬಿಟ್ಟಂತೆ

ಕ–ಬಗನಿಗೆರೆ ಮಾರಮ್ಮ ಭಾಗ್ಯಶಾಲಿ. ಮತ್ತೂ ಶಾಪಾನುಗ್ರಹ ಸಮರ್ಥಳು. ಅದರಿಂದ ಅರ್ಚಕನು ಅಲ್ಲಿ ವಾಸಮಾಡಿಕೊಂಡು ನಮ್ಮಗಳನ್ನು ಮರೆತಿದ್ದಾನೆ.

ಆಂ–ತಾವೆಲ್ಲರೂ ಬಂದ ವಿಶೇಷವೇನು?

ಬ–ನಿಮ್ಮ ಸಹಾಯಕ್ಕಾಗಿಯೇ. ಅನ್ನೋದಕಗಳ ಕೊರತೆ ಬಹಳವಾಗಿ ನಿಮ್ಮಲ್ಲಿ ನಿವೃತ್ತಿಮಾರ್ಗವನ್ನು ತಿಳಿದುಕೊಳ್ಳಲು ಬಂದಿರುವೆವು.

ಆಂ–ಸರಿ; ಸರಿ; ಇದೇ ವಿಷಯವನ್ನೇ ನಾವೂ ಯೋಚಿಸುತ್ತಿದ್ದೆವು. ಕಾಲ ಕೆಟ್ಟುಹೋಯಿತು. ಯಾರಿಗೂ ದೈವಭಕ್ತಿಯಿಲ್ಲ. ಸಾಮದಾನ ಭೇದಗಳಿಂದ ಫಲವಿಲ್ಲ ದಂಡೋಪಾಯ ಮಾತ್ರ ಬಾಕಿ. ಇಷ್ಟಾದರೂ ನಮ್ಮ ಯಜಮಾನರಾದ ಚಂದ್ರಮೌಳೀಶ್ವರರು ಧರ್ಮರಾಯನಂತೆ ಮೌನವಾಗಿದ್ದಾರೆ. ನೀವಾದರೂ ಹೇಳಿರಿ.

ವಿ–ಈ ಕಾಲದಲ್ಲಿ ಸಂಘದಲ್ಲಿ ಮಾತ್ರ ಶಕ್ತಿ; ಧರ್ಮರಕ್ಷಣಾಬದ್ಧರಾದ ಮುಜರಾಯಿ ಇಲಾಖಾದವರಿಗೆ ಕರುಣವಿಲ್ಲ. ನಾವೆಲ್ಲರೂ ಒಗ್ಗಟ್ಟಾಗಿ ಪ್ರಯತ್ನಿಸದಿದ್ದರೆ ಮಾರ್ಗಾಂತರವಿಲ್ಲ.

ಚಂ–ಅಹುದು. ಅಹುದು. ನಮ್ಮಂತೆ ದುಃಖಿಸುವವರು ಇನ್ನೂ ಅನೇಕರಿದ್ದಾರೆ. ತಿಪ್ಪಸಂದ್ರದಲ್ಲಿ ಕಾಶೀವಿಶ್ವೇಶ್ವರ, ಮಠದ ಈಶ್ವರ, ಈಶ್ವರ ಮತ್ತು ವಿಘ್ನೇಶ್ವರ. ಮಾಗಡಿ ಸೋಮೇಶ್ವರ ಇವರುಗಳ ಪಾಡೂ ಹೀಗೆಯೇ ಆಗಿದೆ. ಸೋಮೇಶ್ವರ ಲಿಂಗವನ್ನೇ ಯಾರೊ ಕಿತ್ತುಕೊಂಡು ಹೋದರಂತೆ. ಇವರಿಗೆಲ್ಲ ತಸ್ತೀಕು ಮತ್ತು ಮಾನ್ಯ ಜಮೀನುಗಳು ಇದ್ದರೂ ಬರಾವರ್ದಾರನೊಬ್ಬ; ಅನುಭವಿಸುವವನು ಮತ್ತೊಬ್ಬ. ಅರ್ಚನೆಗೆ ಮಾತ್ರ ಸೌತೇಕಾಯಿ ಸೊನ್ನೆ ಅಮಲ್ದಾರರೇ ಮೊದಲಾದವರು ಸಂಚಾರಬಂದಾಗಲಾದರೂ ಅರ್ಚನೆ ವಿಷಯ ವಿಚಾರಿಸುವುದಿಲ್ಲ. ಅರ್ಜಿಗಳು ಬಂದರೂ ನ್ಯಾಯವಾಗಿ ವಿಚಾರಿಸುವುದಿಲ್ಲ ಇಂತಹ ದುರವಸ್ಥೆಯು ರಾಜ್ಯದ ಧುರಂಧರರಾದ ಈಗಿನ ಮಂತ್ರಿವರ್ಯರ ಗಮನಕ್ಕಾದರೂ ಬಂದು ಪರಿಹಾರವಾಗಲೆಂದು ವೃತ್ತಪತ್ರಗಳ ಮೂಲಕ ಪ್ರಕಾಶಪಡಿಸುವುದು ಯುಕ್ತವಾಗಿದೆ.

ವಿ–ಹೀಗೆನಾಕೋಣದರಿಂದ ಉದ್ದಿಷ್ಟಫಲಸಾಧನೆಯಾಗುವುದಾದರೆ ಅದರಂತೆ ಮಾಡುವದು ನಮಗೂ ಸಮ್ಮತ.

ಓಲ್ಡ್ ಸ್ಟುಡೆಂಟ್ಸ್ ಅಸೋಸಿಯೇಷನ್
ನಗರ.

ಸನ್ ೧೯[illegible]ನೇ ಮೇ ತಾರೀಖು ೩೧ ರಲ್ಲಿ ಇಲ್ಲಿನ ಬಾಯ್ಸ್ ಸ್ಕೂಲಿನಲ್ಲಿ ಮುಂಚೆ ಕಲಿತ ಮಹನೀಯರು ಸೇರಿ ಮೇಲೆ ಕಂಡ ಸಂಘವನ್ನು ಸ್ಥಾಪಿಸಿ ತಾವು ಮುಂಚೆ ಕಲಿತಿದ್ದ ಶಾಲೆಯ ಜ್ಞಾಪಕಾರ್ಥವಾಗಿ ವರುಷಕ್ಕೊಮ್ಮೆ ಸ್ಪೋರ್ಟ್ಸ ಮತ್ತು ಸಂಘದ ಮೆಂಬರುಗಳ ಜನರಲ್ ಮೀಟಿಂಗು ಮಾಡಬೇಕಾಗಿ ಈ ಮುಂಚೆ ನಿರ್ಧರಿಸಿದ ಮೇರೆ ನಡೆಯಿತು. ಸ್ಕೂಲಿನಲ್ಲಿ ಈಗ ಕಲಿಯುವ ವಿದ್ಯಾರ್ಥಿಗಳು ಉಪಾಧ್ಯಾಯರೊಂದಿಗೂ ಸ್ಕೂಲಿನಿಂದ ಪತಾಕೆಗಳೊಡನೆ ಓಲಗದಿಂದ ದೇವಡಿ ಬೈಲಿನಲ್ಲಿ ಪತಾಕಿಗಳಿಂದಲೂ ಸುಬಾಗಮನ ಲೇಖನಗಳಿಂದಲೂ ಅಲಂಕರಿಸಿದ ಸ್ಥಳಕ್ಕೆ ಬಂದರು. ಅವರೊಡನೆ ಊರಿನ ಮುಖಂಡರೂ ಮತ್ತು ತಾಲ್ಲೂಕು ಹೆಡ್ ಕ್ವಾರ್ಟರಿನಿಂದ ಬರಮಾಡಿಕೊಂಡವರು ಬಂದರು. ಅವರನ್ನು ಸತ್ಕಾರಕಸಂಘದವರು ಸ್ವಾಗತಮಾಡಿದರು. ಶಿರಸ್ತೆದಾರರನ್ನು ಪ್ರೆಸಿಡೆಂಟರಾಗಿ ಮಾಡಿದನಂತರ ಸಂಘದಸೆಕ್ರಿಟರಿಯವರಾದ ಮೆ॥ ಸಿ. ಕೃಷ್ಣರಾಯರವರು ಈ ಸಂಘವನ್ನು ಸ್ಥಾಪಿಸಿದ ಉದ್ದೇಶವನ್ನು ವಿವರಿಸಿದರು. ನಂತರ ಹೈಜಂಪ್, ಲಾಂಗ್ ಜಂಪ್, ಚೀಲಕಟ್ಟಿ ಹಾರುವುದು, ಯಾನೆಸ್ಪ್ಯಾಕರೇಸ್, ಚಟ್ಟಿರೇಸ್, ಅಬ್ಸ್ಟಕಲ್ ರೇಸ್, (ಅಪಗಡದ ಓಟ, ಟಗ್ ಆಫ್ ವಾರ್) (ಹಗ್ಗ ಎಳೆಯುವುದು,) ಪುಟ್ ಬಾಲ್ ಮ್ಯಾಚ್. ಮುಂತಾದವು ನಡೆದವು, ಆಮೇಲೆ ಇಂಗ್ಲೀಷಿನಲ್ಲಿ ಪದ್ಯಗಳು ಹಾಡಲ್ಪಟ್ಟವು. ಆರೋಗ್ಯಸೂತ್ರಸಂಗ್ರಹ ಎಂಬ ಪುಸ್ತಕದಿಂದ ಆರೋಗ್ಯಶಾಸ್ತ್ರವನ್ನು ತಿಳಿಯಬೇಕಾದ ಆವಶ್ಯಕತೆಯೂ ಅದರ ಪ್ರಯೋಜನವೂ ಮತ್ತು ಅವುಗಳನ್ನು ತಿಳಿಯದೆ ಇರುವುದರಿಂದ ಸಂಭವಿಸುವ ಹಾನಿಗಳ ವಿಷಯವಾಗಿ ಮೆ॥ ಸಿ. ವೆಂಕಟರಾಯರು ಪ್ರಸ್ತಾಪಿಸಿದರು. ಇಂಗ್ಲೀಷ್ ವಿದ್ಯಾಭ್ಯಾಸದ ವಿಷಯವಾಗಿ ಮೆ॥ ಸಿ. ಕೃಷ್ಣರಾಯರವರು ಉಪನ್ಯಾಸಮಾಡಿದರು. ಪ್ರೆಸಿಡೆಂಟರವರು ಇನಾಂಗಳನ್ನು ಗೆದ್ದವರಿಗೆ ಕೊಟ್ಟನಂತರ ಮಿಠಾಯಿ ಎಲ್ಲರಿಗೂ ಹಂಚಲ್ಪಟ್ಟಿತು. ನಂತರ ಸಂಗೀತವು ನಡೆಯಿತು. ಪ್ರೆಸಿಡೆಂಟರು ಇಂಥಾ ಸಂಘವನ್ನು ಮಾಡಿದ್ದಕ್ಕೋಸ್ಕರ ಶ್ಲಾಘಿಸಿದರು. ಆಗಂತುಕರಿಗೆ ಮೆ॥ ಶ್ರೀನಿವಾಸಉಡುಪರವರವರು ವಂದಿಸಿದರು. ಪ್ರೆಸಿಡೆಂಟರನ್ನು ಸೆಕ್ರಿಟರಿಯವರಾದ ಮೆ॥ ಸಿ. ಕೃಷ್ಣರಾಯರವರು ವಂದಿಸಿ ಬಾಯ್ಸ್ ಸ್ಕೂಲ್ ಹೆಡ್ಮಾಸ್ಟರವರು ಸಹಕಾರಿಗಳಾಗಿ ಕೆಲಸ ನಿರ್ವಹಿಸಿದ್ದಕ್ಕೆ ಬಹಳ ಸಂತೋಷಪಟ್ಟರು. ಚಕ್ರವರ್ತಿಯವರಿಗೂ, ಮಹಾರಾಜರವರಿಗೂ ಶ್ರೇಯಃ ಪ್ರಾರ್ಥನೆಯಾದನಂತರ ಮೀಟಿಂಗು ಬರಕಾಸ್ತು ಆಯಿತು.

ಈ ಸಂಘಕ್ಕೆ ಮುಪ್ಪತ್ತರ ಮೇಲೆ ಮೆಂಬರುಗಳು ಇದ್ದಾರೆ. ಮುಖ್ಯವಾಗಿ ಮೆಸರ್ಸ್ ಸಿ. ವೆಂಕಟರಾಯರು, ಕೃಷ್ಣರಾಯರು, ಶ್ರೀನಿವಾಸಉಡುಪರು, ವೆಂಕಟರಮಣಭಟ್ಟರು, ಶಂಕರನಾರಾಯಣಉಡುಪರು, ಮೋಳಿಗೆ ಸುಬ್ಬಣ್ಣನವರು, ಬಿ. ಪಾಂಡುರಂಗರಾಯರು, ವೆಂಕಟರಮಣಯ್ಯನವರು, ತ್ರಿವಿಕ್ರಮರಾಯರು, ನಾಡಿಗ ಸುಬ್ರಾಯರು, ತೋಟಪ್ಪನವರು, ಎ. ನರಸಿಂಹಭಟ್ಟರು, ಬೊಮ್ಮಯ್ಯನವರು ನಿಂತಿರುತ್ತಾರೆ.

ಸಿ. ಕೆ. ರಾವ್,
ಸೆಕ್ರಿಟರಿ.

ಭಾರತೀಯ ವೈಜ್ಞಾನಿಕ ಶಕ್ತಿ.

ಭರತಖಂಡವು ಪ್ರಾಚೀನಕಾಲದಲ್ಲಿ ಜ್ಞಾನವಿಜ್ಞಾನಾದಿಗಳ ತವರ್ಮನೆಯಾಗಿದ್ದಿತೆಂಬುದನ್ನು ನಮ್ಮ ಪ್ರಾಚೀನಪುರಾಣೇತಿಹಾಸಗಳು ದೃಢಪಡಿಸುತ್ತಿರುವುದಂತಿರಲಿ. ಸದ್ಯಃ ಕಾಲದಲ್ಲೂ ಭಾರತೀಯ ರತ್ನಗಳೊಂದೊಂದು ಈ ಭೂಖಂಡದ ಗೌರವವನ್ನು ಜಗತ್ತಿಗೆಲ್ಲಾ ತಮ್ಮ ಮೇಧಾಶಕ್ತಿಯಿಂದ ಬೆಳಗಿಸುತ್ತಿರುವುದು ಭಾರತೀಯರನ್ನೆಲ್ಲಾ ಹಿಗ್ಗಿ ಕೊಳ್ಳುವಂತೆ ಮಾಡುತ್ತಿರುವುದು. ಸದ್ಯಃ ಕಾಲದಲ್ಲಿ ಪ್ರಪಂಚದ ಮೇಲಿರುವ ವೈಜ್ಞಾನಿಕ ಪಂಡಿತರಲ್ಲಿ ಪ್ರೊಫೆಸರ್ ಜಗದೀಶ ಚಂದ್ರಬೋಸ್‌ರವರು ತುಂಬಾ ಪ್ರಖ್ಯಾತರಾಗಿರುವರು. ಇವರು ನಮ್ಮ ಭರತಖಂಡದ ವಂಗದೇಶೀಯರು. ಇವರ ವೈಜ್ಞಾನಿಕಶಕ್ತಿಯು ಪ್ರಪಂಚದವರನ್ನೆಲ್ಲಾ ಬೆರಗುಗೊಳಿಸುತ್ತಿರುವುದು ಇವರು ವಿದ್ಯುಚ್ಛಕ್ತಿಯ ಸಹಾಯದಿಂದ ಒಂದು ನೂತನಯಂತ್ರವನ್ನು ಸ್ವತಂತ್ರವಾಗಿ ರಚಿಸಿರುವರು. ಇದರ ಪ್ರಯೋಗವೂ ಇದರಿಂದಾಗುವ ಫಲವೂ ಅತ್ಯದ್ಭುತವು. ಈ ಯಂತ್ರವನ್ನಿಟ್ಟುಕೊಂಡು ಅವರು ಕಳೆದ ಮೇ ತಾ॥ ೨೦ ರಲ್ಲಿ ಇಂಗ್ಲಾಂಡಿನ ಸೇರಿದ ಆಕ್ಸ್‌ಫರ್ಡಿನಲ್ಲಿ “ವೃಕ್ಷಜಾತಿಗಳಿಗೆ ಸ್ಪರ್ಶಜ್ಞಾನವಿರುವುದೆಂಬುದನ್ನು ವಿದ್ಯುಚ್ಛಕ್ತಿ ಪರೀಕ್ಷೆಯಿಂದರಿಯುವುದು” ಎಂಬ ವಿಷಯವನ್ನು ಕುರಿತು ಘನತರವಾದ ಉಪನ್ಯಾಸವನ್ನು ಮಾಡಿದರು. ಆ ದಿನದ ಸಭೆಗೆ ಆಕ್ಸ್‌ಫರ್ಡಿನ ವಿಶ್ವವಿದ್ಯಾಲಯದಲ್ಲಿ ಓದುತ್ತಲಿರುವ ಎಲ್ಲಾ ಪ್ರೌಢವಿದ್ಯಾರ್ಥಿಗಳೂ, ಶಾರೀರಕಶಾಸ್ತ್ರಜ್ಞಪ್ರಮುಖರೂ, ಬಂದಿದ್ದರು. ಉಪನ್ಯಾಸವನ್ನೆಲ್ಲಾ ಕೇಳಿದ ನಂತರ ಆ ಶಾರೀರಕ ಶಾಸ್ತ್ರವೇತ್ತರುಗಳೆಲ್ಲಾ–ಈ ಬೋಸ್‌ರವರು ಮಾಡಿದ ಉಪನ್ಯಾಸದ ಫಲವು ಅತ್ಯಂತ ಮುಖ್ಯವಾದುದೆಂದೂ, ಜೀವತತ್ವವನ್ನು ಕುರಿತು ನಾನಾವಿಧವಾದ ಸಿದ್ಧಾಂತಗಳನ್ನು ಇವರಿಂದ ಸ್ಥಾಪಿಸಬಹುದೆಂದೂ ಏಕಕಂಠ್ಯದಿಂದ ಹೇಳಿ ತಮಗುಂಟಾದ ಆಶ್ಚರ್ಯವನ್ನು ವ್ಯಕ್ತಪಡಿಸಿದರು. ಈ ಬೋಸ್‌ರವರ ಸಿದ್ಧಾಂತವೇನೆಂದರೆ–ಪಶು ಪಕ್ಷಿ ಮನುಷ್ಯ ಮೃಗಾದಿ ಜಂಗಮಪ್ರಾಣಿಗಳಿಗೆ ಇರುವಂತೆಯೇ ಕಲ್ಲು ಮರ ಮೊದಲಾದ ಸ್ಥಾವರವಸ್ತುಗಳಿಗೂ ಕೂಡ ಪ್ರಾಣವು ಇರುವುದೆಂಬುದೇ ಆಗಿರುತ್ತದೆ. ನಮ್ಮ ಭಾರತೀಯ ಪ್ರಾಚೀನಸಿದ್ಧಾಂತವೆಲ್ಲಾ ತರುಗುಲ್ಮಶಿಲಾದಿ ಸ್ಥಾವರವಸ್ತುಗಳೆಲ್ಲಾ ಪ್ರಾಣಿಗಳೇ ಎಂಬುದಾಗಿರುತ್ತದೆ. ಆದರೆ ಪಾಶ್ಚಾತ್ಯಶಾಸ್ತ್ರಜ್ಞರು ಇದನ್ನು ಒಪ್ಪುವುದಿಲ್ಲ, ಮರಗಳಲ್ಲಿ ಜೀವವಿರುವುದು ಸಂಶಯವೆಂತಲೂ, ಲೋಹಶಿಲಾದಿಗಳೆಲ್ಲಾ ನಿರ್ಜೀವವೆಂತಲೂ ಅವರಭಿಪ್ರಾಯವು. ಈ ನಮ್ಮ ಬೋಸ್‌ರವರು ತಮ್ಮ ಉಪನ್ಯಾಸಕಾಲದಲ್ಲಿ ತಮ್ಮ ಯಂತ್ರವಿಶೇಷ ಸಾಹಾಯ್ಯದಿಂದ ಪರೀಕ್ಷೆಮಾಡಿ ತೋರಿಸಿ ಲೋಹಶಿಲಾದಿಗಳಲ್ಲೆಲ್ಲಾ ತೋರುತ್ತಿರುವ ಅಣುಗಳ ಸಂಕೋಚವಿಕಾಸ ಚಲನಾದಿರೂಪಚೈತನ್ಯವ್ಯಕ್ತಿಯನ್ನು ಪ್ರತ್ಯಕ್ಷಮಾಡಿಕೊಟ್ಟರು. ವೃಕ್ಷಜಾತಿಯೂ ಖನಿಜವರ್ಗವೂ ಸಹ ಜಂತುಗಳಂತೆಯೇ ವೃದ್ಧಿಕ್ಷಯವನ್ನು ಹೊಂದುತ್ತಿರುವುದು ಮಾತ್ರವೇ ಅಲ್ಲದೆ ಲೋಹವು ಕೆಲವಸ್ತುಗಳನ್ನು ಆಕರ್ಷಿಸುವುದೂ, ಕೆಲವಸ್ತುಗಳನ್ನು ತಿರಸ್ಕರಿಸುವುದೂ ಕೂಡ ಉಂಟೆಂಬುದನ್ನು ಇವರು ಪರೀಕ್ಷೆಮಾಡಿ ತೋರಿಸಿದುದರಿಂದ, ಈಗ ಪ್ರಪಂಚದಲ್ಲಿರುವ ಸಕಲ ವಸ್ತುಗಳಲ್ಲೂ ಪ್ರಾಣವಿರುವುದೆಂದೂ, ಆದರೆ ಆ ಜೀವಶಕ್ತಿಗಳೊಳಗೆ ತಾರತಮ್ಯವಿರುವುದೇ ಹೊರತು, ಸಂಪೂರ್ಣವಾಗಿ ನಿರ್ಜೀವವಾದ ಯಾವುದೊಂದು ಪದಾರ್ಥವೂ ಪ್ರಕೃತಿಯಲ್ಲಿ ಕಾಣಿಸುವುದಿಲ್ಲವೆಂದೂ ವೈಜ್ಞಾನಿಕರು ಸಿದ್ಧಾಂತಪಡಿಸಿರುವರು. ಇದನ್ನೇ ಕೆಲತಿಂಗಳ ಕೆಳಗೆ ಅಮೇರಿಕಾದಲ್ಲಿರುವ ದೊಡ್ಡ ಜಂತುಶಾಸ್ತ್ರಜ್ಞರಾದ ಡಾಕ್ಟರ್ ಕಾರಲ್‌ರವರು ಮತ್ತೊಂದುವಿಧದಿಂದ ಪರಿಶೋಧಿಸಿ ಸಿದ್ಧಾಂತಪಡಿಸಿರುವರು. ಈ ಜಗದೀಶ ಚಂದ್ರಬೋಸ್‌ರವರು ಸ್ವತಃ ಈ ಪರೀಕ್ಷೆಗಾಗಿ ನಿರ್ಮಿಸಿರುವ ಯಂತ್ರೋಪಕರಣಗಳನ್ನೂ ಆ ಪರೀಕ್ಷಾಕಾಲದಲ್ಲಿ ಅವರು ತೋರಿಸುವ ವಿಚಿತ್ರವಿಧಾನಗಳನ್ನೂ ಸಹ ಆ ಸಭೆಗೆ ಬಂದಿದ್ದ ಶಾಸ್ತ್ರಜ್ಞರೆಲ್ಲಾ ನೋಡಿ ಅತ್ಯಂತ ಶ್ಲಾಘನೆ ಮಾಡಿದರು. ಈಗ ಯೂರೋಪುಖಂಡದ ಬೇರೆಬೇರೆದೇಶದ ಶಾಸ್ತ್ರಜ್ಞರುಗಳು ಕೂಡ ಈ ಬೋಸ್‌ರವರ ಉಪನ್ಯಾಸವನ್ನು ಕೇಳುವುದಕ್ಕಾಗಿ ಆಹ್ವಾನಮಾಡುತ್ತಿದ್ದಾರೆ. ಇದೇ ನಮ್ಮ ಬೋಸ್‌ರವರು ಹಿಂದೆ ಪಂಜಾಬು ವಿಶ್ವವಿದ್ಯಾಲಯದವರ ಪ್ರಾರ್ಥನೆಯ ಪ್ರಕಾರ ಒಂದು ಉಪನ್ಯಾಸ ಮಾಡಿದಾಗ್ಗೆ ಅವರು ಕೊಟ್ಟ ಬಹುಮಾನದ್ರವ್ಯವನ್ನು ಬೋಸ್‌ರವರು ಆ ಕೂಡಲೇ ವಿದ್ಯಾಭಿವೃದ್ಧಿ ಕಾರ್ಯಕ್ಕಾಗಿ ದಾನಮಾಡಿದರು ಇಂಥ ಪುತ್ರರತ್ನಗಳಿಗೆ ಭಾರತಮಾತೆಯು ಚಿರಾಯುರಾರೋಗ್ಯಭಾಗ್ಯಗಳನ್ನು ದಯಪಾಲಿಸಬೇಕು.

ಫ್ರಾನ್ಸ್‌ದೇಶದ ಬಾಲ್ಯವಿದ್ಯಾಭ್ಯಾಸಪದ್ಧತಿ.

ಎಚ್ಚೆ ಎಚ್ಚೆ ಯೆಂಬುದಾಗಿ ಕನವರಿಸುತ್ತಿರುವ ನಮಗೆ ವಿದ್ಯಾಪ್ರಸಾರದಲ್ಲಿ ಮುಂದಾಗಿರುವ ದೇಶೀಯರ ಪದ್ಧತಿಗಳನ್ನು ತಿಳಿದುಕೊಳ್ಳಲು ಅಪೇಕ್ಷೆಯಿರುವುದು ಸಹಜವಾಗಿದೆ. ಪಶ್ಚಿಮದೇಶೀಯರು ಬಾಲ್ಯವಿದ್ಯೆಯನ್ನು ಪ್ರಸಾರಮಾಡಿಸಲು ಬಲಾತ್ಕಾರಪ್ರಯತ್ನವನ್ನೇ ಅವಶ್ಯ ಸಾಧನವೆಂಬುದನ್ನು ಸಿದ್ಧಾಂತಪಡಿಸಿರುವರು. ಅಂಥ ಬಲಾತ್ಕಾರವಿದ್ಯಾಪದ್ಧತಿಯನ್ನಿಟ್ಟಿರುವ ದೇಶಗಳಲ್ಲಿ ಫ್ರಾನ್ಸುದೇಶವೂ ಒಂದಾಗಿದೆ ವಿದ್ಯಾಭ್ಯಾಸಕ್ಕಾಗಿ ಫ್ರಾನ್ಸಿಗಿಂತಲೂ ಆಂಗ್ಲದೇಶದವರು ಹೆಚ್ಚು ಹಣವನ್ನು ವೆಚ್ಚಮಾಡುತ್ತಾರೆ. ಸರ್ಕಾರಕ್ಕೆ ಬರುವ ಆದಾಯದಲ್ಲಿ ಹೆಚ್ಚು ಭಾಗವನ್ನು ಪ್ರಜೆಗಳ ವಿದ್ಯಾಭಿವೃದ್ಧಿಗಾಗಿಯೇ ಉಪಯೋಗಿಸುತ್ತಾರೆ. ಇದಲ್ಲದೆ ಪ್ರಜೆಗಳೂ ಕೂಡ ತಮ್ಮ ಮಕ್ಕಳಿಗೆ ಪ್ರೌಢವಿದ್ಯೆಯನ್ನಾಗಲಿ ಶಿಲ್ಪವಿದ್ಯೆಯನ್ನೇ ಆಗಲಿ ಕಲಿಸಬೇಕಾಗಿದ್ದರೆ ಅವರೂ ಹೆಚ್ಚಾಗಿ ಹಣವನ್ನು ವೆಚ್ಚಮಾಡಬೇಕಾಗುತ್ತದೆ ಇಷ್ಟಾದರೂ ಆಂಗ್ಲದೇಶದಲ್ಲಿ ಓದುವ ವಿದ್ಯಾರ್ಥಿಗಳಿಗೆ ಫ್ರಾನ್ಸು ಜರ್ಮನಿ ದೇಶಗಳಲ್ಲಿ ಉಂಟಾಗುವಷ್ಟು ಜ್ಞಾನವು ಹುಟ್ಟುವುದಿಲ್ಲವೆಂಬ ಪ್ರಥೆಯಿರುತ್ತಿದೆ. ಹೀಗಿರುವುದರಿಂದ ವಿಶೇಷಜ್ಞಾನಸಾಧನೆಗೆ ಆಕಾರವಾಗಿರುವ ಫ್ರಾನ್ಸಿನ ವಿದ್ಯಾಭ್ಯಾಸಪದ್ಧತಿಯು ತಿಳಿಯಲ್ಪಡತಕ್ಕದ್ದಲ್ಲವೆ?

ಆ ಫ್ರಾನ್ಸ್‌ದೇಶದಲ್ಲಿ ವಿದ್ಯಾಲಯಗಳನ್ನು ಯಾರಾದರೂ ನೋಡಬೇಕಾಗಿದ್ದರೆ ಅವರು ಆ ದೇಶದ ವಿದ್ಯಾಶಾಖಾಮಂತ್ರಿಯಿಂದಲೂ ವ್ಯಾಪಾರಶಾಖಾಮಂತ್ರಿಯಿಂದಲೂ ಲಿಖಿತಮೂಲಕವಾದ ಅಪ್ಪಣೆಯನ್ನು ಪಡೆಯಬೇಕು ಹೀಗೆ ವಿದ್ಯಾಶಾಖೆಗೆ ವ್ಯಾಪಾರಶಾಖಾಮಂತ್ರಿಯ ಸಂಬಂಧವಿರುವುದನ್ನು ಕೇಳಿದರೆ ಅಸ್ಮದಾದಿಗಳಿಗೆ ವಿಚಿತ್ರವಾಗಿ ತೋರಬಹುದು ಆದರೆ ಅಲ್ಲಿನ ಶಾಲೆಗಳಲ್ಲಿ ಮುಖ್ಯವಾಗಿ ವರ್ತಕವಿಷಯವನ್ನು ಬೋಧಿಸುವ ಪದ್ಧತಿಯನ್ನಿಟ್ಟುಕೊಂಡಿರುತ್ತಾರೆ ಅದರಿಂದ ಅಲ್ಲಿ ಉತ್ತಮವಾದ ಅಭಿವೃದ್ಧಿಯು ತೋರಿಬಂದಿದೆ ಅದುಕಾರಣವೇ ವ್ಯಾಪಾರಶಾಖಾಧಿಕಾರಿಯು ಕೈಕೆಳಗೆ ಅಲ್ಲಿನ ವಿದ್ಯಾಲಯಗಳು ಇಡಲ್ಪಟ್ಟಿವೆ. ಈ ಪದ್ಧತಿಯನ್ನು ಜರ್ಮನಿಯವರೂ ಕೂಡ ಅಂಗೀಕರಿಸಿದ್ದಾರೆ.

(ಪಾಶ್ಚಾತ್ಯರಲ್ಲಿ ಎಲ್ಲಕ್ಕೂ ವ್ಯಾಪಾರದ ಕೈಯೇ ಮುಂದಾಗಿರುತ್ತದೆ. ರಾಜ್ಯಪಾಲಕರ ಮುಖ್ಯಲಕ್ಷ್ಯವು ತಮ್ಮವರ ವ್ಯಾಪಾರಪ್ರಸಾರವೇ ಆಗಿರುತ್ತದೆ. ಅದು ವ್ಯಾಪಾರಿಗಳ ರಾಜ್ಯವಾಗಿದೆ. ಅದುಕಾರಣವೇ ಅಲ್ಲಿನ ಸಂಪತ್ತಿಯೂ ಇತರ ವಿಧವಾದ ಏಳ್ಗೆಯೂ ಲೋಕೋತ್ತರವೆನಿಸಿಕೊಂಡಿವೆ ನಮ್ಮ ದೇಶವು ಅಧಿಕಾರಿಗಳ ರಾಜ್ಯವಾಗಿದೆ. ನಾಲ್ಕು ರೂ.ಸಂಬಳದ ಸರ್ಕಾರದ ಉದ್ಯೋಗಿಯು ದರ್ಪಕ್ಕೆ ನೂರಾರನ್ನು ಸಂಪಾದಿಸುವ ಕರ್ಮಕ ವರ್ತಕ ಶಿಲ್ಪಕಾದಿಗಳೆಲ್ಲಾ ಹಮಗಿಹೋಗುತ್ತಾರೆ. ಪಾಶ್ಚಾತ್ಯರಂತೆ ನಮ್ಮ ದೇಶದ ಸಂಪತ್ತಿಯೂ ಬೆಳೆಯಬೇಕಾದರೆ ಶಿಲ್ಪಕೃಷಿವಾಣಿಜ್ಯವೃತ್ತಿಗಳ ಪ್ರಾಶಸ್ತ್ಯವು ಹೆಚ್ಚಬೇಕು. ಅದಕ್ಕೆ ತಕ್ಕ ಸಾಧನವು ಪ್ರಜೆಗಳಿಂದಲೂ ಪ್ರಭುತ್ವದವರಿಂದಲೂ ಸ್ಥಾಪಿಸಲ್ಪಡಬೇಕಲ್ಲವೆ?)

ಆ ಫ್ರಾನ್ಸ್ ದೇಶದಲ್ಲಿ ಪ್ರಾರಂಭ ವಿದ್ಯಾಲಯ ಮೊದಲುಗೊಂಡು ವಿಶ್ವವಿದ್ಯಾಲಯದವರೆಗಿನ ಸಾಮಾನ್ಯ ವಿದ್ಯಾಶಾಲೆಗಳೆಲ್ಲಾ ವಿದ್ಯಾಶಾಖಾ ಮಂತ್ರಿಯ ಅಧೀನದಲ್ಲಿರುವುವು. ನೆಕೆಂಡರಿ ಶಾಲೆಗಳಿಗೋಸ್ಕರಲೇ ೧೭ ಸಂಘಗಳು ಸ್ಥಾಪಿಸಲ್ಪಟ್ಟು ಪ್ರತಿಯೊಂದರ ಅಧ್ಯಕ್ಷತೆಗೂ ಒಬ್ಬೊಬ್ಬರು ಫ್ರಾನ್ಸದೇಶದ ಸರ್ವಾಧ್ಯಕ್ಷನಿಂದ ಆರಿಸಿ ನಿಯಮಿಸಲ್ಪಟ್ಟಿರುವರು. ಅಧ್ಯಕ್ಷರ ಸಹಾಯಕ್ಕಾಗಿ ಒಂದೊಂದು ಕಾರ್ಯಕಾರಿ ಸಂಘಗಳಿರುವುವು. ಅಲ್ಲಿನ ವಿದ್ಯಾಭ್ಯಾಸ ಪದ್ಧತಿಯು ಮ್ಯುನಿಸಿಪಲ್ ಪರಿಪಾಲನೆಯಂತೆಯೇ ಕೆಲಶಾಖಾ ಸಂಘಗಳ ಪರಿಪಾಲನೆಗೆ ವಿಂಗಡಿಸಲ್ಪಟ್ಟು, ಅವುಗಳಿಗೆ ಹಲವು ಅಂತಶ್ಶಾಖೆಗಳು ಸೇರಿರುವುವು. ಈ ಶಾಖಾ ಸಂಸ್ಥೆಗಳಲ್ಲಿ ಬೋಧನ ಕೆಳಶಾಖಾಧಿಕಾರಿಗಳೂ, ಪರೀಕ್ಷಕರೂ, ವಿದ್ಯಾಲಯಗಳ ಪ್ರಧಾನೋಪಾಧ್ಯಾಯರೂ, ಉಪಾಧ್ಯಾಯಕರೂ, ಸ್ವತಂತ್ರ ಶಾಲೆಗಳ ಅಧಿಕಾರಿಗಳೂ ಕೂಡ ಪ್ರತಿನಿಧಿಗಳಾಗಿರುವರು ಯಾವ ದೇಶಭಾಗಕ್ಕೆ ಎಷ್ಟು ವಿದ್ಯಾಲಯಗಳಿರಬೇಕು, ಆ ವಿದ್ಯಾಲಯಗಳ ಸ್ವಭಾವವು ಎಂತಹುದಾಗಿರಬೇಕು, ಅವುಗಳಿಗೆ ಸಂಬಂಧಪಟ್ಟ ನಿಯಮಗಳೇನು ಎಂಬುದನ್ನೆಲ್ಲಾ ಆ ಶಾಖಾ ಸಂಸ್ಥೆಗಳವರು ನಿರ್ಧರಿಸಿರುವರು ಅವುಗಳ ಉಪಾಧ್ಯಾಯರನ್ನು ಶಾಖಾ ಸಂಘಾಧ್ಯಕ್ಷನು ನಿಯಮಿಸುವನು ಆದರೆ ಈ ಉದ್ಯೋಗಸ್ಥರ ಸಂಬಳಗಳನ್ನೆಲ್ಲಾ ಸರ್ಕಾರದವರೇ ಕೊಡುವರು.

ಫ್ರಾನ್ಸ್ ದೇಶದೊಳಗೆ ವಿದ್ಯಾಭ್ಯಾಸವು ಉಚಿತವಾಗಿ ಮಾಡಿಸಲ್ಪಡುವುದಕ್ಕೆ ೧೮೮೧ ನೆ ಇಸವಿಯಲ್ಲಿ ಮೊದಲಾಯಿತು. ೧೮೮೨ ನೆಯ ವರ್ಷದಲ್ಲಿ ಆ ಅಭ್ಯಾಸವನ್ನು ಬಲಾತ್ಕಾರವಾಗಿ ಮಾಡಿರುವುದಕ್ಕುಪಕ್ರಮಿಸಿದರು. ೧೮೮೬ನೆಯ ವರ್ಷದಲ್ಲಿ ಅಲ್ಲಿನ ವಿದ್ಯಾಲಯಗಳೊಳಗಿದ್ದ ಮತಸಂಬಂಧದ ಪಾಠಗಳ ಪರ್ಯಾಯವನ್ನು ತಪ್ಪಿಸಿಬಿಟ್ಟರು. ೬ ವರ್ಷ ಮೊದಲುಗೊಂಡು ೧೩ ವಯಸ್ಸಿನೊಳಗಿನ ಬಾಲಕರು ತಪ್ಪದೆ ಶಾಲೆಗಳಿಗೆ ಬಂದು ಓದಬೇಕೆಂದು ಏರ್ಪಡಿಸಿದರು. ಆದರೆ ಆ ಪದ್ಧತಿಯು ಅಲ್ಲಿ ವಿಶೇಷವಾಯುಕ್ತವಾಗಲಿಲ್ಲ. ಎರಡು ವರ್ಷ ಮೊದಲುಗೊಂಡು ೬ ವರ್ಷಗಳ ವಯಸ್ಸಿನವರೆಗಿನ ಮಕ್ಕಳುಗಳಿಗಾಗಿಯೇ ಅಲ್ಲಿ ಶಿಶುವಿದ್ಯಾಲಯವನ್ನು ಸ್ಥಾಪಿಸಿರುವರು ಅಲ್ಲಿಂದಾಚೆಗಿನ ಬಾಲಕರ ಶಾಲೆಗಳಲ್ಲಿ ವಿದ್ಯಾಭ್ಯಾಸವು ೩ ಭಾಗಗಳಾಗಿ ಮಾಡಲ್ಪಟ್ಟು, ಅವುಗಳಲ್ಲಿ ಆರೋಗ್ಯವ್ಯಾಯಮ, ಸೈನಿಕವಿನ್ಯಾಸ, ವಾಚಕಲೇಖನ, ಅಕ್ಷರೋಚ್ಚಾರಣ, ವ್ಯಾಕರಣ, ವಾಗ್ಧಾಟಿ, ಉಕ್ತಲೇಖನ ವ್ಯಾಕರಣಚಕ, ಚರಿತ್ರಭೂಗೋಳ, ನೀತಿಪ್ರವರ್ತನ, ಪರಿಪೌಲನವಿಷಯ, ಗಣಿತ, ಆಕೃತಿಲೇಖನ, ಪ್ರಕೃತಿಶಾಸ್ತ್ರ, ವ್ಯವಸಾಯ, ವೃಕ್ಷಪೋಷಣೆ, ಸಂಗೀತ–ಇವಿಷ್ಟು ವಿಷಯಗಳಿಗೆ ಸಂಬಂಧಿಸಿದ ಪಾಠಗಳು ಹೇಳಿಕೊಡಲ್ಪಡುವುವು ಈ ಮೂರು ಭಾಗಗಳಲ್ಲೂ ಪರೀಕ್ಷೆಕೊಟ್ಟವರು ಉನ್ನತ ವಿದ್ಯಾಲಯಗಳಿಗೆ ಸೇರುವುದಾದರೆ ಅದಕ್ಕೆ ತಕ್ಕ ವ್ಯವಸಾಯ ಇಂಜನಿಯರಿಂಗು ಶಿಲ್ಪ ಮೊದಲಾದ ಬೇರೆಬೇರೆ ವಿದ್ಯೆಗಳಿಗೆ ಸಂಬಂಧಿಸಿದ ಪ್ರೌಢ ವಿದ್ಯಾಲಯಗಳು ಇರುವುವು ಅಲ್ಲಿ ಲೌಕಿಕವಾರಿಶ್ರಾಮಿಕ ವಿದ್ಯೆಗಳನ್ನೆಲ್ಲಾ ಅಭ್ಯಸಿಸಬಹುದು.

ಆ ಫ್ರಾನ್ಸಿನಲ್ಲಿ ಬಾಲವಿದ್ಯಾಭ್ಯಾಸಕ್ಕಾಗಿ ನಮ್ಮದೇಶಕ್ಕಿಂತಲೂ ಹೆಚ್ಚು ವೆಚ್ಚವು ಹಿಡಿಯುವುದಾದರೂ ಇಂಗ್ಲಾಂಡಿನಷ್ಟು ಹೆಚ್ಚು ವೆಚ್ಚವಾಗುವುದಿಲ್ಲ ಅಲ್ಲಿನ ವಿದ್ಯಾಲಯಗಳು ಇಂಗ್ಲಾಂಡಿನಲ್ಲಿರುವಷ್ಟು ವಿಶಾಲವಾಗಿಯೂ ಅಂದವಾಗಿಯೂ ಇರುವುದಿಲ್ಲ. ಆದರೆ ಬೋಧನೆಗೆ ಅವಶ್ಯಕವಾದ ಉಪಕರಣಗಳೆಲ್ಲಾ ಸಮಗ್ರಗಳಾಗಿರುವುವು ಅಮಿನ್ಸ್ ಎಂಬ ಪಟ್ಟಣವು ವಿದ್ಯಾಬೋಧನೆಗೆ ಅವಶ್ಯಕವಾದ ಅನೇಕ ಸೌಕರ್ಯಗಳನ್ನು ಹೊಂದಿರುವುದು. ಇದರೊಳಗೆ ಪ್ರಭುತ್ವದವರಿಂದ ಏರ್ಪಡಿಸಲ್ಪಟ್ಟಿರುವ ವಿದ್ಯಾಲಯಗಳು ೪೦ ಇರುವುವು ಅಲ್ಲಿನಪುರನಿವಾಸಿಯೊಬ್ಬನು ಮರಣಶಾಸನದಿಂದ ಕೊಟ್ಟದ್ರವ್ಯಸಹಾಯದಿಂದ ೧೯೦೪ ನೆಯ ವರ್ಷದಲ್ಲಿ ಒಂದು ಪ್ರೌಢ ವಿದ್ಯಾಲಯವು ಸಕಲೋಪಕರಣಗಳಿಂದಲೂ ಸಮಗ್ರವಾಗಿ ಸ್ಥಾಪಿಸಲ್ಪಟ್ಟಿರುವುದು. ಅಲ್ಲಿ ಪ್ರತಿಯೊಂದು ಪರಿಶ್ರಮ ವಿದ್ಯೆಗಳೂ ಕಲಿಸಲ್ಪಡುವುವು. ಇಲ್ಲಿ ಹೇಳಲ್ಪಡುವ ವಿದ್ಯೆಯು ಮುಖ್ಯವಾಗಿ ವರ್ತಕವ್ಯವಹಾರಕ್ಕೆ ಅತ್ಯುಪಯುಕ್ತವಾಗುವುದು. ಪ್ಯಾರಿಸ್ ಎಂಬ ರಾಜಧಾನಿಯಲ್ಲಿ ಇಂಥ ಶಾಲೆಯು ಬಾಲಕರಿಗೊಂದು, ಬಾಲೆಯರಿಗೊಂದು ಸ್ಥಾಪಿಸಲ್ಪಟ್ಟಿರುವುವು. ಬಾಲಿಕಾಶಾಲೆಗಳಲ್ಲಿ ಉಪಾಧ್ಯಾಯಿನಿಯರೇ ಪಾಠಗಳನ್ನು ಹೇಳಿ ಕೊಡುವರು–ಅಲ್ಲಿ ಓದುವ ಬಾಲೆಯರಿಗೆ ೧೩ ವರ್ಷಗಳಿಗೆ ಮೇಲ್ಪಟ್ಟು ವಯಸ್ಸಾಗಿರುವುದು ಅಲ್ಲಿ ಓದಿ ತೇರ್ಗಡೆಯಾದ ಬಾಲೆಯರು ಅಂಚೆ ತಂತಿ–ಈ ಶಾಖೆಗಳ ಉದ್ಯೋಗಕ್ಕೆ ಮುಖ್ಯವಾಗಿ ಸೇರಿಕೊಳ್ಳುವರು. ಕೆಲರು ದೊಡ್ಡದೊಡ್ಡ ಅಂಗಡಿಗಳಲ್ಲಿ “ಗುಮಾಸ್ತೆ” ಕೆಲಸಕ್ಕೆ ಸೇರುವರು. ಉಳಿದವರು ಸ್ವತಂತ್ರ ವ್ಯಾಪಾರಿಗಳೂ ಅಥವಾ ಬೇರೆಬೇರೆ ಕಾರ್ಯಾಲಯಾದಿಗಳ ಕಾರ್ಯನಿರ್ವಾಹಕರು ಆಗಿ ನಿಲ್ಲುವರು. ವರ್ತಕ ವ್ಯವಹಾರಗಳಿಗೆ ಅನುಕೂಲವಾದ ಶಿಕ್ಷಣೆಯನ್ನು ಕೊಡುವ ನಾನಾ ವಿಧವಾದ ಉನ್ನತ ವಿದ್ಯಾಲಯಗಳೇ ಫ್ರಾನ್ಸ್ ದೇಶದಲ್ಲಿ ೩೦ಕ್ಕೆ ಮೇಲ್ಪಟ್ಟಿರುವುವು. ಈ ವಿದ್ಯಾಲಯಗಳಲ್ಲಿ ಕೈಗಾರಿಕೆಯ ಪಾಠಗಳು ಯಾವಯಾವಭಾಗಕ್ಕೆ ಯಾವಯಾವ ತೆರದ ಕೈಗಾರಿಕೆಯು ಅನುಕೂಲವೋ ಅದನ್ನನುಸರಿಸಿ ಹೇಳಿಕೊಡಲ್ಪಡುವುವು. ವ್ಯವಸಾಯವು ಹೆಚ್ಚಾಗಿರುವ ಜಿಲ್ಲೆಯಲ್ಲಿ ಕೃಷಿಪಾಠಗಳು, ನೆಯ್ಗೆಗೆ ಅನುಕೂಲವಿರುವ ಕಡೆಯಲ್ಲಿ ಅದರಪಾಠಗಳು, ರಸಾಯನವಿದ್ಯೆ–ಅಚ್ಚು–ಚಿತ್ರ–ಮರಗೆಲಸ ಮೊದಲಾದವುಗಳಿಗೆ ಅನುಕೂಲವಿರುವಲ್ಲಿ ಅವಕ್ಕೆ ಸಂಬಂಧಿಸಿದಪಾಠಗಳು ಅಲ್ಲಲ್ಲಿಗೆ ತಕ್ಕಂತೆ ಕಲಿಸಲ್ಪಡುವುವು. ಅನೇಕ ವಿದ್ಯಾಲಯಗಳಲ್ಲಿ ಶಿಕ್ಷಣವು ಉಚಿತವಾಗಿಯೇ ಕೊಡಲ್ಪಡುವುದು ಮತ್ತು ಬಡವಿದ್ಯಾರ್ಥಿಗಳ ಸಹಾಯಕ್ಕಾಗಿ ದೊಡ್ಡದೊಡ್ಡ ಫಂಡುಗಳು ಸ್ಥಾಪಿಸಲ್ಪಟ್ಟು, ಅದರ ಬಡ್ಡಿಯಿಂದ ಶಾಲೆಗಳಲ್ಲಿ ಓದುವ ರಿಕ್ತ ವಿದ್ಯಾರ್ಥಿಗಳಿಗೆ ಬಟ್ಟೆಬರೆಗಳನ್ನೂ ಪುಸ್ತಕಗಳನ್ನೂ ತೆಗೆದುಕೊಡುವರು. ಬಾಲವಿದ್ಯಾಭ್ಯಾಸಮಾಡುವ ಹಲವು ಬಡಹುಡುಗರಿಗೆ ಅನ್ನವನ್ನು ಕೂಡ ಪಾಠಶಾಲೆಗಳಲ್ಲೇ ಧರ್ಮಾರ್ಥವಾಗಿ ಕೊಡುವುದಕ್ಕೆ ಏರ್ಪಡಿಸಿರುವರು. ಇಂಥ ಧರ್ಮಕಾರ್ಯಕ್ಕೆ ಧನ ಸಹಾಯ ಮಾಡುವುದು ಫ್ರೆಂಚ್ ಜನಗಳಿಗೆ ಬಹು ಇಷ್ಟವಾಗಿರುವುದು. ಇಂಗ್ಲಾಂಡಿನಲ್ಲೂ ಕೂಡ ಈ ಪದ್ಧತಿಯೇ ಅನುಸರಿಸಲ್ಪಡುತ್ತಿದೆ. ಇನ್ನು ಕೆಲಶಾಲೆಗಳ ಬಾಲರಿಂದ ದಿನ೧ಕ್ಕೆ ೧ಆಣೆಯನ್ನೂ ದೊಡ್ಡವರಿಂದ ೨ಆಣೆಯನ್ನೂ ತೆಗೆದುಕೊಂಡು ಊಟಕ್ಕಿಕ್ಕುವರು. ಉಪಾಧ್ಯಾಯರ ಸಂಬಳವನ್ನೆಲ್ಲಾ ಸರ್ಕಾರದವರೇ ಕೊಡುವರು. ಆಂಗ್ಲದೇಶದ ಉಪಾಧ್ಯಾಯರ ಸಂಬಳಕ್ಕಿಂತ ಇವರ ಸಂಬಳವು ಕಡಿಮೆಯಾಗಿದ್ದರೂ ಅವರಿಗಿಂತ ಇವರು ಬಹಳ ಶಾಂತರಾಗಿರುವರು. ಶಾಲೆಗಳು ಮುಚ್ಚಿರುವ ಕಾಲದಲ್ಲಿ ಈ ಉಪಾಧ್ಯಾಯರುಗಳು ತಮ್ಮ ವಿದ್ಯಾರ್ಥಿಗಳನ್ನು ಸಂಗಡ ಕರೆದುಕೊಂಡು ಬೇರೆಬೇರೆ ಸ್ಥಳಗಳಿಗೆ ಹೋಗಿ ಅಲ್ಲಿನ ವಿಶೇಷಗಳನ್ನು ತೋರಿಸಿಕೊಡುವರು. ಬೇಸಗೆಯ ಕಾಲದಲ್ಲೂ ಹೀಗೆಯೇ ಸಂಚಾರಗಳನ್ನು ನಡೆಯಿಸುವರು. ಇದರಿಂದ ವಿದ್ಯಾರ್ಥಿ ದಶೆಯು ಮುಗಿಯುವುದರೊಳಗಾಗಿ ಅಲ್ಲಿನ ಬಾಲಕರಿಗೆ ವಿಷ್ಣೋದೇಶಾಂತರ ಸಂಚಾರದ ವಿಶೇಷಜ್ಞಾನವು ಲಭಿಸಿರುವುದು.

ನಾಗರಿಕ ಜೀವನಕ್ಕೆ ಮತವೂ ಕೂಡ ಅವಶ್ಯಕವೆಂದು ಫ್ರೆಂಚ್ ಅಧಿಕಾರಿಗಳು ತಿಳಿದಿರುವರು. ಆದರೂ ಕೆಲಕಾರಣಗಳಿಂದ ಅವರು ಆ ದೇಶದ ಶಾಲೆಗಳಿಂದ ಕ್ರೈಸ್ತಮತಬೋಧೆಯನ್ನು ತೊಲಗಿಸಿರುವರು. ಆದರೆ ಅಲ್ಲಿ

ಪ್ರತಿಯಾಗಿ ನೀತಿಪ್ರಧಾನವಾದ ಒಂದು ಬೋಧೆಯನ್ನು ಮಾತ್ರ ನಿಷ್ಪಕ್ಷಪಾತವಾಗಿರುವಂತೆ ಮಾಡಿರುವರು. ಇದು ವಸ್ತುತಃ ಒಂದು ತತ್ತ್ವ ಶಾಸ್ತ್ರಬೋಧೆಯಾಗಿರುವುದೇ ಹೊರತು ಒಂದು ಮತಬೋಧೆಯಾಗಿರುವುದಿಲ್ಲ.

ಕ್ಯಾಪ್ಟನ್ ಪ್ರೆಸ್.

ಈ ಪತ್ರಿಕೆಯ ೬-೫ ನೆಯ ಪುಟಗಳಿಗುಪಯೋಗಿಸಿರುವಂತಹ ೧೪ ಪಾಯಿಂಟ್ ಅಕ್ಷರಗಳು ನಮ್ಮಲ್ಲಿ ಕ್ರಯಕ್ಕೆ ದೊರೆಯುತ್ತವೆ. ಇಷ್ಟವುಳ್ಳವರು ಬೆಲೆ ಮೊದಲಾದ ವಿಚಾರವಾಗಿ ನಮಗೆ ಬರೆದು ತಿಳಿದುಕೊಳ್ಳಬಹುದು.

ವೈ. ವಿರೂಪಾಕ್ಷಯ್ಯ,
ಪ್ರೊಪ್ರೈಟರ್.

ಮೈಸೂರ್ ಸ್ಟಾರ್.

ಸನ್ ೧೯೧೪ ನೆಯ ಜುಲೈ ತಾ|| ೨೦ ನೆಯ ಸೋಮವಾರ.

ಮೈಸೂರು "ರೆವಿನ್ಯೂ" ಶಾಖೆಯ ಆಡಳಿತ.

ಮೈಸೂರು ಸಂಸ್ಥಾನದ ರೆವಿನ್ಯೂ ಶಾಖೆಯಲ್ಲಿ ಕಳೆದ ೧೯೧೨-೧೩ನೆಯ ವರ್ಷಕ್ಕೆ ಸಂಬಂಧಪಟ್ಟ ವರದಿಯನ್ನು ನೋಡಿ ಗೌರ್ನಮೆಂಟಿನವರು ತಮ್ಮ ಅಭಿಪ್ರಾಯವನ್ನು ಪ್ರಕಟಿಸಿದ್ದಾರೆ. ಆ ವರದಿಯನ್ನು ನೋಡುವಲ್ಲಿ ಆ ವರ್ಷದ ಸಂಸ್ಥಾನದ ಭೂಕಂದಾಯವು [illegible] ರೂ.ನಷ್ಟು ಬಂದು, ೧೪ ಲಕ್ಷದಷ್ಟು ರೂ ಬಾಕಿಯು ಮಾತ್ರ ಉಳಿದುಹೋಗಿರುವುದು. ಕಂದಾಯದ ವಸೂಲಿನ ಕಾಲದಲ್ಲಿ ಮೈಸೂರು ಡಿಸ್ಟ್ರಿಕ್ಟು ಹಾಸನ ಡಿಸ್ಟ್ರಿಕ್ಟುಗಳಲ್ಲಿ [illegible] ಪ್ರಬಲಿಸಿದ್ದುದರಿಂದ, ಇಷ್ಟು [illegible] ಉಳಿದಿದೆಯೆಂದು ಕಾರಣವು ಹೇಳಲ್ಪಟ್ಟಿದೆ. ಆ ವರ್ಷಕ್ಕೆ ಹಿಂದೆಯೂ ಆ ವರ್ಷವೂ ಮಳೆ ಬೆಳೆ ಚೆನ್ನಾಗಿ ಆಗಿದ್ದಿತು. [illegible] ಅದರ ಹಿಂದಿನ ವರ್ಷಕ್ಕಿಂತಲೂ [illegible] ಎಕರೆ ಭೂಮಿಯು ಹೆಚ್ಚಾಗಿ ಸಾಗುವಳಿಯಾಯಿತು. ಬೇರೆ ಧಾನ್ಯದ ಬೆಳೆಯು ಅದರ ಹಿಂದಿನ ವರ್ಷಕ್ಕಿಂತ ೧೦೦ಕ್ಕೆ ೭ ರಷ್ಟು ಹೆಚ್ಚಿದ್ದಿತು. ಹತ್ತಿಯ ಬೇಸು ಅದರ ಹಿಂದಿನ ವರ್ಷದಲ್ಲಿ [illegible] ಎಕರೆಗಳಲ್ಲಿ ಮಾಡಲ್ಪಟ್ಟಿರುವಲ್ಲಿ ಈ ವರ್ಷದೊಳಗೆ [illegible] ಎಕರೆಗಳಲ್ಲಿ ಇಡಲ್ಪಟ್ಟಿದ್ದಿತು. ಇವೆಲ್ಲಾ ಮಳೆಬೆಳೆಗಳ ಸೌಕರ್ಯವೂ ಬೇಸಾಯಗಾರರ ಪ್ರಯತ್ನವಿಶೇಷಗಳೂ ಸಂಸ್ಥಾನದಲ್ಲಿ ಅಭಿವೃದ್ಧಿಮುಖದಲ್ಲಿವೆ ಯೆಂಬುದನ್ನು ತಿಳಿಯಿಸುತ್ತ ಸಂತೋಷಪ್ರದವಾಗಿವೆ.

ಆದರೆ ರೆವಿನ್ಯೂ ಶಾಖೆಯಲ್ಲಿ ಸರ್ಕಾರದಧಿಕಾರಿಗಳು ನಡೆಯಿಸಿರುವ ಕಾರ್ಯಭಾಗಗಳು ಮಾತ್ರ ಸಂತೋಷಪ್ರದವಾಗಿಲ್ಲ. ಬರಬರುತ್ತ ಸಂಸ್ಥಾನದಲ್ಲಿ ರೆವಿನ್ಯೂ ಶಾಖೆಯು ವೆಚ್ಚವು ಹೆಚ್ಚುತ್ತಿದೆ. ಅದರ ಆಡಳಿತಕ್ಕೆ ನಿಯಮಿಸಲ್ಪಟ್ಟಿರುವ ಅಧಿಕಾರಿಗಳ ಸಂಖ್ಯೆಯೂ ಹೆಚ್ಚಾಗಿದೆ. ಆದರೂ ಕಾರ್ಯಗಳು ಚಟುವಟಿಕೆಯಿಂದ ಸಾಗದೆಯಿರುವುದು ತುಂಬಾ ಅನ್ಯಾಯವಾಗಿದೆ. ಕಂದಾಯವನ್ನೆತ್ತುವುದರಲ್ಲಿ ರೆವಿನ್ಯೂ ಅಧಿಕಾರಿಗಳು ಮುತುವರ್ಜಿಯನ್ನು ಮಾಡುವಷ್ಟು ಪ್ರಜೆಗಳ ಹಿತಾರ್ಥವಾಗಿ ಸರ್ಕಾರದವರು ಮಾಡಬೇಕಾದ ಕರ್ತವ್ಯವನ್ನು ನೆರವೇರಿಸುವಲ್ಲಿ ಮಾಡುತ್ತಲ್ಲಿಲ್ಲವೆಂದು ಹೇಳಬೇಕಾಗುತ್ತದೆ. ಏಕೆಂದರೆ—ಗೌರ್ನಮೆಂಟಿನವರು ಬೇಸಾಯಗಾರರ ಏಳ್ಗೆಯನ್ನು ಬಯಸಿ ಅವರ ಭೂಮಿಗಳನ್ನು ಹಸಗೊಳಿಸುವುದಕ್ಕೂ, ಬೇಸಾಯದ ಸಾಮಗ್ರಿಗಳನ್ನು ಕೊಳ್ಳುವುದಕ್ಕೂ ಅವರಿಗೆ ಹಣವನ್ನು ಸಾಲವಾಗಿ ಕೊಡುವುದು ಅವಶ್ಯಕವೆಂದು ನಿರ್ಧರಿಸಿ ಆ ವರ್ಷದಲ್ಲಿ ಅದಕ್ಕಾಗಿ ೯೦ ಸಾವಿರ ರೂ.ಗಳನ್ನು ವಿನಿಯೋಗಿಸಬಹುದೆಂದು ಅಪ್ಪಣೆಮಾಡಿರುವಲ್ಲಿ ರೆವಿನ್ಯೂ ಅಧಿಕಾರಿಗಳು ಅದರಲ್ಲಿ ಅರ್ಧವನ್ನೂ ವಿನಿಯೋಗಿಸಿರುವುದಿಲ್ಲ. ಬೇಸಾಯಗಾರರು ಈ ಹಣವನ್ನು ಸಾಲವಾಗಿ ಪಡೆಯುವುದಕ್ಕೆ ವರ್ಷಗಟ್ಟಲೆ ಕಚೇರಿಗಳ ಬಾಗಿಲಿಗೆ ಅಲೆದು ಸಾಕಾಗುತ್ತಿದ್ದಾರೆ. ದೇವರು ವರಕೊಟ್ಟರೂ ಪೂಜಾರಿ ವರಕೊಡನೆಂಬ ಗಾಥೆಯಂತೆ ರೆವಿನ್ಯೂ ಅಧಿಕಾರಿಗಳು ಈ ಸಂಬಂಧದಲ್ಲಿ ನಡೆದುಕೊಳ್ಳುತ್ತಿದ್ದಾರೆ. ಇದರಂತೆ ರೆವಿನ್ಯೂ ಶಾಖೆಯ ಉದ್ಯೋಗಿಗಳು ತಮ್ಮ ಕರ್ತವ್ಯದಲ್ಲಿ ತೋರ್ಪಡಿಸಿಕೊಂಡಿರುವ ನ್ಯೂನತೆಗಳು ಇನ್ನೂ ಕೆಲವಿವೆ. ಅವರು ಗೊತ್ತಾದಷ್ಟು ಕಾಲ ತಮ್ಮ ಎಲ್ಲೆಗಳಲ್ಲಿ ಸಂಚಾರಗಳನ್ನು ನಡೆಯಿಸಿಲ್ಲ. "ಜಮಾಬಂದಿ" ಗಳನ್ನು ಉಪಯುಕ್ತವಾಗಿ ನಡೆಯಿಸಿಲ್ಲ. ಜಲಾಶಯಗಳ ಮೇಲ್ವಿಚಾರಣೆಯ ಕೆಲಸವು ಸಮರ್ಪಕವಾಗಿ ನಡೆಯಲಿಲ್ಲ. ಇತ್ಯಾದಿಗಳು. ಇದನ್ನು ಕುರಿತು ಗೌರ್ನಮೆಂಟಿನವರು ತಮ್ಮ ವಿಷಾದವನ್ನು ವ್ಯಕ್ತಪಡಿಸಿ ಆ ಶಾಖೆಯ ಮುಖ್ಯಾಧಿಕಾರಿಗಳನ್ನು ಎಚ್ಚರಿಸಿರುತ್ತಾರೆ. ಇಂಥ ಎಚ್ಚರಿಕೆಗಳು ಎಷ್ಟುಮಟ್ಟಿಗೆ ಫಲವನ್ನು ಕೊಡುವುವೋ ಕಾಣೆವು. ಇದರಂತೆ ಸರ್ಕಾರದ ಹಲವು ಶಾಖೆಗಳಲ್ಲಿ ಕಾರ್ಯಗಳು ಬೇಕಾಬಟ್ಟೆಯಾಗಿರುವುವು. ನಮ್ಮ ಸಂಸ್ಥಾನದಲ್ಲಿ ಮುಖ್ಯಾಧಿಕಾರಿಗಳ ದರ್ಪವು ಕೆಲಕಾಲದಿಂದ ಕಡಿಮೆಯಾಗಿರುವುದು. ಇದನ್ನು ಹೀಗೆಯೇ ಬಿಡುತ್ತ ಬಂದರೆ ನಿರಂಕುಶತ್ವವು ಹೆಚ್ಚಿ ಸರ್ಕಾರದ ಬಿಗಿಯು ತಪ್ಪಿ, ಪ್ರಜೆಗಳ ತೊಂದರೆಗಳು ಮಿತಿಮೀರುವುವು. ನಮ್ಮ ಈಗಿನ ಮಂತ್ರಿವರ್ಯರಲ್ಲಿ ತಾವು ಮೈಮರೆಯದೆ ಕೆಲಸಮಾಡುವ ಚಟುವಟಿಕೆಯಿರುವಂತೆ ನಿರ್ದಾಕ್ಷಿಣ್ಯವಾಗಿ ತಮ್ಮ ಕೈಕೆಳಗಿನ ಅಧಿಕಾರಿಗಳಿಂದ ಕೆಲಸವನ್ನು ಮಾಡಿಸಬೇಕೆಂಬ ಕಾಠಿಣ್ಯವು ಇರುವುದಿಲ್ಲ. ಅದನ್ನು ಅವರು ಸುಪಡಿಸಿಕೊಳ್ಳದಿದ್ದರೆ ಅವರೂ ಶ್ರೀಮನ್ಮಹಾರಾಜರೂ ಸಂಸ್ಥಾನದ ಶ್ರೇಯಸ್ಸಿಗಾಗಿ ಅಹರ್ನಿಶಿಯೂ ಪಡುವ ಶ್ರಮಸಾಹಸಗಳು ನಿರಂಕುಶರಾದ ಅಧಿಕಾರಿಗಳ ಪ್ರಮತ್ತತೆಯಿಂದ ಹೊಳೆಯಲ್ಲಿ ಹುಣಿಸೆಹಣ್ಣನ್ನು ತೇಯ್ದಂತಾಗುವುದು.

ಶ್ರೀಯುತ ಬಾಲಗಂಗಾಧರತಿಲಕರವರ ಬಂಧವಿಮೋಚನೆ.

ತಮ್ಮ ಕೇಸರಿಪತ್ರದಲ್ಲಿ ರಾಜದ್ರೋಹಪ್ರೇರಕವಾದ ಲೇಖನವನ್ನು ಬರೆದರೆಂಬ ಕಾರಣದಿಂದ ತಾ|| ೨೨-೭-೧೯೦೮ ರಲ್ಲಿ ೬ ವರ್ಷಗಳ ಕಾರಾಗೃಹವಾಸಶಿಕ್ಷೆ ವಿಧಿಸಲ್ಪಟ್ಟು ಬರ್ಮಾಕ್ಕೆ ಸೇರಿದ ಮಾಂಡಲೆಯ ಕಾರಾಗೃಹದಲ್ಲಿಡಲ್ಪಟ್ಟಿದ್ದ ಶ್ರೀಯುತ ಬಾಲಗಂಗಾಧರ ತಿಲಕರವರು ಈಗತಾನೇ ಬಿಡಲ್ಪಟ್ಟಿರುವರು. ಹೀಗೆ ಇವರ ಬಂಧವಿಮೋಚನವಾಗುವುದೆಂಬ ಸಂಗತಿಯು ಅದಕ್ಕೆ ಮುಂಚೆ ಯಾರಿಗೂ ತಿಳಿಯದೆ ರಹಸ್ಯವಾಗಿದ್ದಿತು. ಆದರೂ ೧-೨ ತಿಂಗಳ ಹಿಂದೆ ಕೆಲ ವೃತ್ತಪತ್ರಿಕೆಗಳು ಇವರ ಶಿಕ್ಷಾವಧಿಯು ತುಂಬುತ್ತಾ ಬಂದುದರಿಂದ ಬಂಧವಿಮೋಚನವಾಗಬಹುದೆಂದು ಹೇಳುತ್ತಿದ್ದುವು. ಕಳೆದ ತಾ|| ೮ನೇ ಸೋಮವಾರದಿನ ತಾವು ಮಾಂಡಲೆಯಿಂದ ಹೊರಟು, ಮರುದಿನ ಬೆಳಿಗ್ಗೆ ರಂಗೂನನ್ನು ಸೇರಿದೆನೆಂದೂ, ಆ ಕೂಡಲೇ ತಮ್ಮನ್ನು ಆರ್. ಐ. ಎಂ. ಹಡಗಿನಲ್ಲಿ ಹತ್ತಿಸಿದರೆಂದೂ, ಆ ಹಡಗು ಆ ದಿನವೇ ಮದ್ರಾಸನ್ನು ಕುರಿತು ಪ್ರಯಾಣಮಾಡಿತೆಂದೂ ತಿಲಕರು ಹೇಳುವರು. ಆ ಹಡಗು ೧ ವಾರದಕಾಲ ನಡೆದು ತಾ|| ೧೫ ರ ರಾತ್ರಿ ಮದ್ರಾಸನ್ನು ಸೇರಿತು. ಆ ಕೂಡಲೇ ದಡದಲ್ಲಿ ಸಿದ್ಧವಾಗಿದ್ದ ಮೋಟಾರಿನ ಮೇಲೆ ಅವರನ್ನು ಕುಳ್ಳಿರಿಸಿ ಪೋಲೀಸರ ಕಾವಲಿನಿಂದ ಹೊಗೆಬಂಡಿಯನ್ನೇರಿಸಿ ಪೂನಾಪಟ್ಟಣಕ್ಕೆ ಸಾಗಿಸಿದರು. ಆ ಹೊಗೆ ಬಂಡಿಯು ಪೂನಾಕ್ಕೆ ಸೇರುವುದಕ್ಕೆ ಮುಂಚೆಯೇ ೨ ಮೈಲಿ ದೂರದಲ್ಲಿರುವ ಹಡಿದಾಸಪುರವೆಂಬ ಸ್ಟೇಷನ್ನಿನಲ್ಲಿ ತಾ|| ೧೬ ರ ರಾತ್ರಿ ಅವರನ್ನಿಳಿಸಿದರು. ಅಲ್ಲಿ ಅಸಿಸ್ಟೆಂಟ್ ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್‌ರವರೂ, ಇನ್ನೊಬ್ಬ ಅಧಿಕಾರಿಯೂ ಕಾದಿದ್ದು ತಿಲಕರವರನ್ನು ಮೋಟಾರಿನಲ್ಲಿ ಹತ್ತಿಸಿ, ರಾತ್ರಿ ೧ ಗಂಟೆಯ ಹೊತ್ತಿಗೆ ಪೂನಾಪಟ್ಟಣದಲ್ಲಿರುವ ಅವರ ಮನೆಗೆ ಸೇರಿಸಿದರು. ತಾ|| ೧೭ ನೆ ಬುಧವಾರ ಬೆಳಿಗ್ಗೆ ಅವರು ಪೂನಾಕ್ಕೆ ಸೇರಿದರೆಂಬ ಸುದ್ದಿಯು ಊರಿನಲ್ಲೆಲ್ಲಾ ಹರಡಿತು. ಆ ದಿನ ಪಟ್ಟಣದಲ್ಲಿ ಗದ್ದಲವೇನಾದರೂ ಆಗುವುದೋ ಎಂದು ಪೋಲೀಸರು ಎಚ್ಚರಿಕೆಯಿಂದ ನೋಡುತ್ತಿದ್ದರು. ಅಂತಹುದೇನೂ ಆಗಲಿಲ್ಲ. ಆ ದಿನ ಬೆಳಗಿನಿಂದಲೂ ಪಟ್ಟಣದ ಜನರು ಗುಂಪುಗುಂಪಾಗಿ ತಿಲಕರ ಸಂದರ್ಶನಕ್ಕಾಗಿ ಅವರ ಮನೆಗೆ ಹೋಗಿ ಬರುತ್ತಿದ್ದರು. ಹಲವುಮಂದಿ ಪತ್ರಿಕಾ ಪ್ರತಿನಿಧಿಗಳು ಅವರನ್ನು ಕಂಡು ಕೆಲಪ್ರಶ್ನೆಗಳನ್ನು ಮಾಡಲು ತೊಡಗಿದರು. ಅದಾವುದಕ್ಕೂ ತಿಲಕರು ಉತ್ತರವನ್ನು ಕೊಡಲು ನಿರಾಕರಿಸಿದರು.

ಇವರು ತಾಯಿ ಮಹಾರಾಜಾ ಎಂಬುವರ ಆಸ್ತಿಯ ರಕ್ಷಣೆಯ ಟ್ರಸ್ಟಿಯಲ್ಲಿ ಒಬ್ಬರಾಗಿರುತ್ತಾರೆ. ಅವರ ದತ್ತಕಸಂಬಂಧದ ವಿವಾದವು ಈಗ ಪ್ರಿವಿಕೌನ್ಸಿಲಿನಲ್ಲಿ ಜರುಗುತ್ತಿದೆ. ಇದರ ಸಂಬಂಧವಾಗಿ ಬ್ಯಾರಿಸ್ಟರಿಗೆ ವ್ಯಾಜ್ಯದ ವಿದ್ಯಮಾನವನ್ನು ತಿಳಿಯಿಸಿ ಕೊಡುವುದಕ್ಕಾಗಿ ತಿಲಕರವರು ಕೆಲದಿನಗಳಲ್ಲಿ ಇಂಗ್ಲೆಂಡಿಗೆ ಹೋಗುವುದರಲ್ಲಿದ್ದಾರೆಂದು ಅಡ್ವೋಕೇಟ್ ಆಫ್ ಇಂಡಿಯಾ ಎಂಬ ಪತ್ರಿಕೆಯು ಹೇಳಿರುತ್ತದೆ. ಇವರು ಜರ್ಮನಿಗೆ ಹೋಗಿ ತಮ್ಮ ಉಳಿದ ಕಾಲವನ್ನು ಗ್ರಂಥರಚನೆಯಲ್ಲಿ ಕಳೆಯುವುದಕ್ಕೆ ಆಲೋಚಿಸುತ್ತಿರುವರೆಂದೂ, ಇವರು ಕಾರಾಗೃಹದಲ್ಲಿದ್ದಾಗ ಮೂರುಗ್ರಂಥಗಳನ್ನು ರಚಿಸಿರುವರೆಂದೂ, ಅವು ಇಷ್ಟರಲ್ಲೇ ಪೂನಾದಲ್ಲಿ ಪ್ರಕಟಿಸಲ್ಪಡುವುವೆಂದೂ ಸುದ್ದಿಯುಂಟಾಗಿದೆ.

ಶ್ರೀವಿಷ್ಣುವಿಗೆ ಉಂಟಾದ ದಶಾವತಾರಗಳು ಲೋಕಹಿತಕ್ಕಾಗಿ ಹೇಗೆ ಪರಿಣಮಿಸಿದುವೋ ಹಾಗೆ ಇವರಿಗೆ ವಿಧಿವಿಲಾಸದಿಂದ ಉಂಟಾದ ಕಾರಾಗೃಹವಾಸವು ಲೋಕಹಿತಕ್ಕೆ ಸಾಧಕವಾದ ಉದ್ಗ್ರಂಥಗಳ ರಚನೆಗೆ ಕಾರಣವಾಯಿತು. ಇವರು ಮೊದಲಾವೃತ್ತಿಯ ಕಾರಾಗೃಹವಾಸದಲ್ಲಿ ವೇದದ ವಿಷಯವಾಗಿ ಆಶ್ಚರ್ಯಜನಕವಾದ ವಿಷಯ ಪ್ರತಿಪಾದನೆಯಿಂದ ಬರೆದಿರುವ ಗ್ರಂಥವು ಈ ಮೊದಲೇ ಪ್ರಕಟಿತವಾಗಿದೆ. ಈಗಲೂ ಭಗವದ್ಗೀತಾ ವಿಷಯವಾಗಿ ನೂತನಗ್ರಂಥವನ್ನು ಇವರು ರಚಿಸಿರುವರೆಂದು ವಾರ್ತೆಯಿದೆ. ಇಷ್ಟರಲ್ಲೇ ಅದು ಹೊರಬೀಳಬಹುದು.

ಒಳದೇಶದ ವೃತ್ತಾಂತವು.

ಬೆಂಗಳೂರು ಲಾಲ್‌ಬಾಗಿನಲ್ಲಿ ಫಲಪುಷ್ಪಪ್ರದರ್ಶನವು ಬರುವ ಆಗಸ್ಟ್ ತಾ|| ೮ ರ ಮಧ್ಯಾಹ್ನ ೩ ಗಂಟೆಯಲ್ಲಿ ನಡೆಯುವುದು.

ಕಳೆದವಾರ ಉದಕಮಂಡಲಕ್ಕೆ ದಯಮಾಡಿದ್ದ ಶ್ರೀಮನ್ಮಹಾರಾಜರವರ ಸ್ವಾರಿಯು ನಿನ್ನೆಯದಿನ ಹಿಂದಿರುಗಿ ರಾಜಧಾನಿಗೆ ಚಿತ್ತೈಸುವುದಾಗಿದ್ದಿತು.

ಈದಿವಸ ಚಕ್ರವರ್ತಿಯವರ ಜನ್ಮದಿನವಾದುದರಿಂದ ಸರ್ಕಾರಿಯ ಎಲ್ಲಾ ಕೋರ್ಟುಗಳೂ, ಕಚೇರಿಗಳೂ, ಪಾಠಶಾಲೆಗಳೂ ಮುಚ್ಚಲ್ಪಡುವುವು.

ಈ ಸಂಚಿಕೆಯಲ್ಲಿ ಗರ್ಭಿತವಾಗಿರುವ ಕೂಸನೂರ ವಾಗ್ವಿಲಾಸ ಬುಕ್‌ಡಿಪೋ ಪ್ರಕಟನಪತ್ರಿಕೆಯನ್ನು ವಾಚಕರು ದಯಮಾಡಿ ಗಮನಿಸುವವರಾಗಲಿ.

ಹೊಳೆಗಳಲ್ಲಿ ನೀರು ಬಂದಿಲ್ಲವಾದಕಾರಣ, ಮತ್ತೊಂದು ಅಪ್ಪಣೆಯನ್ನು ಕೊಡುವವರೆಗೂ ತಲೀವ್ಯವಸಾಯಗಾರರು ಬಿತ್ತನೆಯ ಒಟ್ಟಲನ್ನು ಹೊಯ್ಯಕೂಡದೆಂದು ಸರ್ಕಾರದವರು ಪ್ರಕಟಿಸಿದ್ದಾರೆ.

ಬಲಾತ್ಕಾರ ಬಾಲವಿದ್ಯಾಭ್ಯಾಸವಿಧಿಯು ಬರುವ ಜುಲೈ ತಾ||೧೮ರಿಂದ ೮ ಡಿಸ್ಟ್ರಿಕ್ಟು ಹೆಡ್‌ಕ್ವಾರ್ಟರುಗಳಲ್ಲೂ, ದೊಡ್ಡಬಳ್ಳಾಪುರ-ನಂಜನಗೂಡು-ಶ್ರೀರಂಗಪಟ್ಟಣ-ಹೊಳೆನರಸೀಪುರ-ದಾವಣಗೆರೆ, ಮಧುಗಿರಿ ಮತ್ತೂ ಚಿಕ್ಕಬಳ್ಳಾಪುರ ಈಸ್ಥಳಗಳಲ್ಲೂ ಆಚರಣೆಗೆ ತರಲ್ಪಡತಕ್ಕುದೆಂದು ಸರ್ಕಾರದಪ್ಪಣೆಯಾಗಿರುತ್ತದೆ.

ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವ ಸಂಬಂಧವಾಗಿ ರಾಜಧಾನಿಯಲ್ಲಿ ತಾ|| ೨೨, ೨೪ ಮತ್ತೂ ೨೬ ರ ಮಧ್ಯಾಹ್ನ ಪೋಲೋ ಚಂಡಾಟವೂ, ತಾ|| ೨೩, ೨೫ ಮತ್ತೂ ೨೭ ರ ಮಧ್ಯಾಹ್ನ ಕುದುರೆಯ ಜೂಜುಗಳೂ ನಡೆಯುವುದರಿಂದ ಬ್ರಿಟಿಷ್ ರೆಸಿಡೆಂಟರೇ ಆದಿಯಾಗಿ ಐರೋಪ್ಯಾತಿಥಿಗಳು ನಿನ್ನೆಯದಿನ ಹೆಚ್ಚುಗಟ್ಟಲೆಯ ಹೊಗೆಬಂಡಿಯಲ್ಲಿ ರಾಜಧಾನಿಗೆ ಬಂದು ರೆಸಿಡೆನ್ಸಿ ಬಂಗಲೆಯಲ್ಲಿಳಿದಿರುವರು. ಮತ್ತೂ ತಾ|| ೨೯ ರಲ್ಲಿ ಹಿಂದಿರುಗಿ ಪ್ರಯಾಣಮಾಡುವವರಾಗಿರುವರು.

ಚೀಫ್ ಕೋರ್ಟಿನಲ್ಲೊಬ್ಬ ಜಡ್ಜರಾದ ಮಿ||ವಾಲೆಸ್‌ರವರು ರಜದಮೇಲೆ ಸೀಮೆಗೆ ಹೋಗಿರುವುದರಿಂದ, ಬೆಂಗಳೂರು ಡಿ|| ಜಡ್ಜರಾಗಿದ್ದು ೨ ವರ್ಷಗಳ ರಜದಮೇಲಿದ್ದ ಮ|| ಟಿ. ಪರಮಶಿವಯ್ಯರ್‌ರವರು ಚೀಫ್ ಕೋರ್ಟಿನ ಜಡ್ಜಿಯ ಕೆಲಸಕ್ಕೆ ಬರಮಾಡಲ್ಪಟ್ಟಿರುವರು. ಮಿ|| ವಾಲೆಸ್‌ರವರು ಮದ್ರಾಸ್ ಸರಕಾರದಲ್ಲಿ ಹಚ್ಚಿನ ಉದ್ಯೋಗದಮೇಲೆ ಹೋಗುವರೆಂಬ ಪ್ರವಾದವು ಪ್ರಬಲವಾಗಿರುವುದರಿಂದ ಮ|| ಅಯ್ಯರ್‌ರವರು ಪ್ರಸಕ್ತ ಉದ್ಯೋಗದಲ್ಲಿ ಸ್ಥಿರಗೊಳಿಸಲ್ಪಡುವ ಸಂಭವವಿರುವುದು.

ಬೆಂಗಳೂರಲ್ಲಿ ಅಡ್ವೋಕೇಟರಾಗಿರುವ ಮ||ಎಂ. ಬಸವಯ್ಯ, ಬಿ. ಎ., ಬಿ.ಎಲ್., ರವರು ಬರುವ ಪ್ರಜಾಪ್ರತಿನಿಧಿಸಭೆಗೆ ಮೈಸೂರ ವೀರಶೈವ ವಿದ್ಯಾವರ್ಧಕ ಫಂಡ್ ಅಸೋಸಿಯೇಷನ್ನಿನಿಂದ ಒಬ್ಬ ಮೆಂಬರಾಗಿ ಆರಿಸಲ್ಪಟ್ಟಿರುವರು. ಮತ್ತೂ ಇದೇ ಅಸೋಸಿಯೇಷನ್ನಿನ ಸೆಕ್ರೆಟರಿಯಾದ ಅಡ್ವೋಕೇಟ್ ಮ|| ಎಚ್. ಕೆ. ವೀರಬಸವಯ್ಯ, ಬಿ. ಎ., ಬಿ.ಎಲ್., ರವರು, ಸಂಪದಭ್ಯುದಯ ಸಮಾಜದ ಜನರಲ್ ಮೆಂಬರಾಗಿರುವರಲ್ಲದೆ ಎಕ್ಸಿಕ್ಯೂಟಿವ್ ಕಮಿಟಿಯ ಮೆಂಬರಾಗಿ ಈ ವೇಳೆ ನಿಯಮಿಸಲ್ಪಟ್ಟಿರುವರು.

ಮೈಸೂರ ಅರಣ್ಯಶಾಖೆಯ ಕನ್ಸರ್ವೇಟರಾದ ರಾ||ಬ||ರಾಜಕಾರ್ಯಪ್ರಸಕ್ತ ಎಂ. ಮುತ್ತಣ್ಣನವರು ಬರುವ ಜುಲೈ ತಾ||೧೮ ರಲ್ಲಿ ಉದ್ಯೋಗದಿಂದ ನಿವೃತ್ತಿಗೊಳಿಸಲ್ಪಡುವರೆಂದು ತಿಳಿಯುತ್ತೇವೆ. ಇವರು ೧೮೬೫ನೆಯ ಅಕ್ಟೋಬರ್ ತಾ|| ೨ರಲ್ಲಿ ಕೊಡಗಿನ ಒಂದು ದೊಡ್ಡಮನೆತನದಲ್ಲಿ ಜನಿಸಿ ಬೆಂಗಳೂರ ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾಭ್ಯಾಸಂಗವನ್ನು ಮಾಡಿ ೧೮೭೮ ರಲ್ಲಿ ಕೊಡಗಿನ ಕಾಡಿನ ಶಾಖೆಯಲ್ಲುದ್ಯೋಗಕ್ಕೆ ಸೇರಿ ೧೯೦೧ರಲ್ಲಿ ಡೆಪ್ಯುಟಿ ಕನ್ಸರ್ವೇಟರ ತರಗತಿಗೆ ಬಂದು, ಮೈಸೂರ ಸರ್ಕಾರದಲ್ಲಿ ಡೆಪ್ಯುಟಿ ಕನ್ಸರ್ವೇಟರಾಗಿ ತೆಗೆದುಕೊಳ್ಳಲ್ಪಟ್ಟು, ಕೆಲಕಾಲದಲ್ಲಿ ಅರಣ್ಯಶಾಖೆಯ ಕನ್ಸರ್ವೇಟರಾಗಿಯೂ, ಈ ಶಾಖೆಯ ಸೆಕ್ರೆಟರಿಯಾಗಿಯೂ ಅಭಿವೃದ್ಧಿಗೊಳಿಸಲ್ಪಟ್ಟರು. ಇವರು ಬ್ರಿಟಿಷ್ ಸರ್ಕಾರದಲ್ಲಿ ಪ್ರಶಂಸನೀಯವಾದ ಕೆಲಸವನ್ನು ಮಾಡಿದುದಕ್ಕಾಗಿ ೧೮೯೯ ರಲ್ಲಿ "ರಾವ್‌ಬಹದ್ದೂರ್" ಪ್ರಶಸ್ತಿಯೂ, ಈ ಮೈಸೂರ ಸೀಮೆಯ ಅರಣ್ಯಶಾಖೆಯಲ್ಲಿ ಅನೇಕ ಸುಧಾರಣೆಗಳನ್ನು ಮಾಡಿ ಶ್ರೀಮನ್ಮಹಾರಾಜರವರ ಮೆಚ್ಚುಗೆಗೆ ಪಾತ್ರರಾದುದಕ್ಕಾಗಿ "ರಾಜಕಾರ್ಯಪ್ರಸಕ್ತ" ಎಂಬ ಪ್ರಶಸ್ತಿಯೂ ಬಿಲ್ಲತ್ತುಗಳೊಡನೆ ಈಚೆಗೆ ದಯಪಾಲಿಸಲ್ಪಟ್ಟುವು. ಇವರು ಒಳ್ಳೆಯ ದಯಾಳುಗಳೂ ಹಿಂದುಳಿದ ಜನರ ಪುರೋವೃದ್ಧಿಯಲ್ಲಿ ಕಾಂಕ್ಷೆಗಳೂ ಆಗಿದ್ದುದರಿಂದ ಇವರ ಉದ್ಯೋಗನಿವೃತ್ತಿವಾರ್ತೆಯು ಅನೇಕರಿಗೆ ಖೇದಕರವಾಗಿದೆ. ಇವರು ದೀರ್ಘಕಾಲವಿದ್ದು ವಿಶ್ರಾಂತಿಸುಖವನ್ನನುಭವಿಸಲೆಂದು ಹಾರೈಸುತ್ತೇವೆ.

ಭರತಖಂಡದ ವೃತ್ತಾಂತಗಳು.

ನೂತನ ದಿಲ್ಲೀನಗರದ ಪ್ರತಿಷ್ಠಾಪನೆಯ ವೆಚ್ಚಕ್ಕಾಗಿ ೯೨೭೫೦೦೦೦ ರೂ. ಗಳನ್ನು ಸ್ಟೇಟ್ ಸೆಕ್ರೆಟರಿಯವರು ಅಪ್ಪಣೆಮಾಡಿದ್ದಾರೆ.

೧೦೦ ಕ್ಕೆ ೩|| ರೂ. ಬಡ್ಡಿಯಮೇರೆ ೫ ಕೋಟಿ ರೂ. ಗಳ ಸಾಲವನ್ನು ಇಂಡ್ಯಾ ಗೌರ್ನಮೆಂಟಿನವರು ತೆಗೆಯಲು ಸಿದ್ಧರಾಗಿ, ಕೊಡಲುಅಪೇಕ್ಷಿಸುವವರಿಗಾಗಿ ಪ್ರಕಟನೆಮಾಡಿದ್ದಾರೆ.

ದೊಡ್ಡದೊಡ್ಡ ಪಟ್ಟಣಗಳಲ್ಲಿ ಪರಿಶುಭ್ರವಾದ ವಾಯುವು ಭೂಮಟ್ಟಕ್ಕೆ ೨೫ ಅಡಿಗಳ ಮೇಲೆ ಮಾತ್ರವೇ ದೊರೆಯಲವಕಾಶವಿರುವುದರಿಂದ ಮನೆಗಳ ೨ ಅಥವಾ ೩ ನೆ ಯಂತಸ್ತಿನಲ್ಲಿ ವಾಸಿಸುವುದೇ ಆರೋಗ್ಯಕರವೆಂದು ಶಾಸ್ತ್ರಜ್ಞರು ಹೇಳುತ್ತಾರೆ.

ಮೋಟಾರುಬಂಡಿಗಳಲ್ಲಿ ರಾತ್ರಿಯಹೊತ್ತು ಕೆಲರು ಹೊತ್ತಿಸುವ ದೀಪಗಳು ನೋಡತಕ್ಕವರ ಕಣ್ಣನ್ನು ಕುಕ್ಕುವಂತೆ ಇರುವುದುಂಟಷ್ಟೆ. ಇಂಥ ಅತಿತೇಜಸ್ಸಿನ ದೀಪಗಳನ್ನು ಬಂಡಿಗಳಿಗೆ ಉಪಯೋಗಿಸುವವರು ಅರ್ಥದಂಡಕ್ಕೆ ಗುರಿಯಾಗುವರೆಂದು ಲಾಹೋರಿನ ಪೋಲೀಸಿನವರು ಪ್ರಕಟಿಸಿದ್ದಾರೆ.

ಸಣ್ಣವಯಸ್ಸಿನ ಬಾಲಕರು ಕ್ರಿಮಿನಲ್ ತಪ್ಪಿತಗಳನ್ನು ಮಾಡಿದರೆ ಅವರನ್ನು ವಿಚಾರಿಸಿ, ಅವರ ಸತ್ಪ್ರವರ್ತನೆಗೆ ಸಾಧಕವಾಗುವಂತಹ ಶಿಕ್ಷೆಯನ್ನು ವಿಧಿಸುವುದಕ್ಕಾಗಿಯೇ ಬಂಗಾಳಾಸರ್ಕಾರದವರು ಈಗ ಹೊಸದಾಗಿ ಕಲ್ಕತ್ತಾದಲ್ಲಿ ಒಂದು ಮ್ಯಾಜಿಸ್ಟ್ರೇಟ್ ಕೋರ್ಟನ್ನು ಪ್ರತ್ಯೇಕವಾಗಿ ಸ್ಥಾಪಿಸಿದ್ದಾರೆ.

ಬಂಗಾಳಕ್ಕೆ ಸೇರಿದ ಸಿಲ್‌ಹಟ್ ಜಿಲ್ಲೆಯಲ್ಲಿಯೂ ಅಸ್ಸಾಮಿನಲ್ಲೂ ಕಳೆದವಾರ ಅತಿವೃಷ್ಟಿಯಾಗಿ ಇದರಿಂದ ಅನೇಕಗ್ರಾಮಗಳಲ್ಲಿನ ಮನೆಮಠಗಳು ನೀರಿನಲ್ಲಿ ಮುಳುಗಿ ಪೈರುಗಳು ಹಾಳಾಗಿ ಬಹಳ ನಷ್ಟವನ್ನುಂಟುಮಾಡಿದೆ; ಲೋಹಮಾರ್ಗಗಳು ಕುಸಿದುಹೋಗಿವೆ. ಕೆಲರು ನೀರಿನಲ್ಲಿ ಕೊಚ್ಚಿಹೋಗುತ್ತಲಿದ್ದು ಕಾಪಾಡಲ್ಪಟ್ಟರು.

ಈ ಭೂಮಂಡಲದಲ್ಲಿ ಪ್ರತಿವರ್ಷವೂ ೩೬೦೦೦೦೦೦ ಮಕ್ಕಳುಗಳು ಹುಟ್ಟುವುವೆಂದು ಲೆಕ್ಕಹಾಕಲ್ಪಟ್ಟಿದೆ. ಎಂದರೆ—ಪ್ರತಿಯೊಂದು ರೆಪ್ಪೆ ಮುಚ್ಚುವಷ್ಟು ಹೊತ್ತಿಗೂ ಒಂದೊಂದು ಮಕ್ಕಳು ಹುಟ್ಟುತ್ತಿರುವುವೆಂದು ಹೇಳಬಹುದಾಯಿತು. ಈ ಮಕ್ಕಳನ್ನೆಲ್ಲಾ ವರಸೆಯಿಂದ ಒಂದರ ಪಕ್ಕದಲ್ಲೊಂದನ್ನು ಕುಳ್ಳಿರಿಸಿದರೆ ಆ ಸಾಲು ಭೂಗೋಳದ ಒಂದು ಸುತ್ತಾಗುವುದಂತೆ.

ಕಳೆದ ತಾ|| ೧೮ ರಲ್ಲಿ ಬಂಗಾಳಕ್ಕೆ ಸೇರಿದ ಸಿಬ್‌ಪೂರಿನಲ್ಲಿ ೧೭ ವರ್ಷ ವಯಸ್ಸಿನ ಒಬ್ಬ ಬಾಂಗಾಳಿ ಯುವತಿಯು ಆತ್ಮಹತ್ಯಮಾಡಿಕೊಂಡಳು. ಈಕೆಯ ಗಂಡನು ವಿದ್ಯಾರ್ಥಿಯಾಗಿರುವನು. ಈಕೆಯು ೪ ದಿನಕ್ಕೆ ಮುಂಚೆ ಅತ್ತೆಯಮನೆಗೆ ಹೋಗಿದ್ದಳು. ಅತ್ತೆಯು ಏನೋಕೆಲಸದಲ್ಲಿರುವಾಗ ಈಕೆಯು ಮೈಬಟ್ಟೆಗೆ ಸೀಮೆಯೆಣ್ಣೆಯನ್ನು ಸುರಿದುಕೊಂಡು ಬೆಂಕಿಯಿಂದ ಸುಟ್ಟುಕೊಂಡು ಸತ್ತಳು.

ಕಳೆದ ತಾ|| ೧೮ ರೊಳಗೆ ಬಂದಿರುವ ವರ್ತಮಾನದಿಂದ ಬರ್ಮಾ-ಅಸ್ಸಾಂ-ಬಂಗಾಳಾ-ರಾಜಪುತ್ರಸ್ಥಾನ-ಮಧ್ಯಹಿಂದೂಸ್ಥಾನಗಳಲ್ಲೆಲ್ಲಾ ಚೆನ್ನಾಗಿ ಮಳೆಯಾಗಿರುವುದೆಂದೂ ಬೊಂಬಾಯಿ-ಮದ್ರಾಸು-ಮೈಸೂರುದೇಶ-ಹೈದರಾಬಾದು-ಮದ್ರಾಸಿನ ಉತ್ತರಭಾಗ-ದಕ್ಷಿಣಪಂಜಾಬು ಇಲ್ಲಿ ಸ್ವಲ್ಪ ಮಳೆಯಾಗಿರುವುದೆಂದೂ ಮರ್ಮಗೋವ-ಕಾರ್ವಾರ-ಮಂಗಳೂರು-ಕೊಚ್ಚಿ-ರತ್ನಾಗಿರಿ-ಈ ಪಶ್ಚಿಮತೀರಗಳಲ್ಲಿ ಬಲವಾದ ಮಳೆಯಾಗಿರುವುದೆಂದೂ ಗೊತ್ತಾಗುತ್ತದೆ.

ದಿಯೋಘರಿನಲ್ಲಿ ಬಾಬುಹರಿದಾಸ ಘೋಸ್ ಎಂಬ ಬಂಗಾಳಿಯ ವಕೀಲನಿಗೆ ೧೪ ವರ್ಷದ ಮಗಳಿದ್ದಳು. ಈಕೆಯನ್ನು ಲಾಕಾಲೇಜಿನಲ್ಲಿ ಓದುತ್ತಿದ್ದ ಒಬ್ಬನಿಗೆ ಕೊಟ್ಟು ಮದುವೆಮಾಡಲು ಗೊತ್ತಾಯಿತು. ವರನು ಶುಲ್ಕವನ್ನೇನೂ ಕೇಳಲಿಲ್ಲ. ಆದರೆ ವರನ ಪೋಷಕನು ಮಾತ್ರ ೬೦೦೦ ರೂ.ನ ಶುಲ್ಕವನ್ನು ಕೇಳಿದನು. ವಧುವಿನ ತಂದೆಯಾದರೊ ೪ ಸಾವಿರಕ್ಕಿಂತ ಮೀರಿ ಶುಲ್ಕವನ್ನು ಕೊಡಲಾರೆನೆಂದನು. ಇದನ್ನೆಲ್ಲಾ ಮಗಳು ಕೇಳಿಕೊಂಡು ತನ್ನ ಮದುವೆಯಿಂದ ತಂದೆಗೆ ಇಷ್ಟು ದ್ರವ್ಯಹಾನಿಯೂ ಮನೋವ್ಯಥೆಯೂ ಉಂಟಾಗಬಹುದೆ! ಎಂದು ಚಿಂತಿಸಿ, ಸೀಮೆಯೆಣ್ಣೆಯನ್ನು ಮೈಗೆ ಸುರಿದುಕೊಂಡು ಬೆಂಕಿಹೊತ್ತಿಸಿಕೊಂಡು ಸತ್ತಳು.

ಢಕ್ಕಾಜಿಲ್ಲೆಗೆ ಸೇರಿದ ಧೋಯರ್ ಎಂಬ ಗ್ರಾಮದಲ್ಲಿರುವ ಜಾಮಿರ್ ಮುಲ್ಲಾ ಎಂಬ ಮಹಮ್ಮದೀಯ ಧನಿಕನ ಮನೆಗೆ ಪಂಜಿನಕಳ್ಳರು ಆಯುಧಪಾಣಿಗಳಾಗಿ ಬಂದು ಹೊರಬಾಗಿಲನ್ನು ಒಡೆಯುತ್ತಿರಲು, ಮನೆಯವರು ಬೇರೆಕಡೆಯಿಂದ ಪ್ರಾಣರಕ್ಷಣಾರ್ಥವಾಗಿ ಹೊರಬಿದ್ದರು. ಕಳ್ಳರು ಪಂಜನ್ನು ಹೊತ್ತಿಸಿ ಮನೆಯನ್ನೆಲ್ಲಾ ಶೋಧಿಸಿ, ಕಬ್ಬಿಣದ ಪೆಟ್ಟಿಗೆಗಳನ್ನೊಡೆದು ೨ ಸಾವಿರ ರೂ.ಬೆಲೆಯ ನಗಗಳನ್ನು ಅಪಹರಿಸಿಕೊಂಡು ಹೋದರು. ಅಡ್ಡವಾಗಿ ಬಂದ ಒಬ್ಬ ಆಳನ್ನು ಕಳ್ಳರು ತುಪಾಕಿಯಿಂದ ಸುಟ್ಟರು. ಅಷ್ಟರಲ್ಲಿ ಸುತ್ತಮುತ್ತಲಿನವರು ಬಂದು ಸೇರುತ್ತಿರಲು, ಕಳ್ಳರು ತುಪಾಕಿಗಳ ಗುಂಡನ್ನು ಹಾರಿಸುತ್ತ ತಲೆತಪ್ಪಿಸಿಕೊಂಡು ಹೋದರು. ಒಬ್ಬರೂ ಸಿಕ್ಕಿಲ್ಲ.

ಬೊಂಬಾಯಿಯ ಕೊಲಾಬಾದಲ್ಲಿ ಹತ್ತಿಮೂಟೆಗಳಿಗೆ ಬೆಂಕಿಹೊತ್ತಿಸುತ್ತಿದ್ದರೆಂಬುದಾಗಿ ೫||-೧೦-೧೨ ವಯಸ್ಸಿನ ಮೂವರು ಯೂರೋಪ್ಯಬಾಲರನ್ನೂ ಒಬ್ಬ ಹಿಂದೂಬಾಲಕನನ್ನೂ ಭಾನುವಾರ ರಾತ್ರಿ ಪೋಲೀಸರು ಹಿಡಿದರು. ಅವರ ಬಳಿಯಲ್ಲಿ ಬೆಂಕಿಕಡ್ಡಿಯೂ, ಸೀಮೆಯೆಣ್ಣೆ ಅದ್ದಿದ್ದ ಹತ್ತಿಯೂ ದೊರೆದಿದ್ದಿತು. ದಂಡಾಧಿಕಾರಿಯ ಇದಿರಿನಲ್ಲಿ ವಿಚಾರಣೆಯಾದಾಗ್ಗೆ ಅವರು ಇದಕ್ಕೆ ಮುಂಚೆ ಯಾವಾಗಲೂ ಇಂಥ ಕೆಲಸವನ್ನು ಮಾಡಿದವರಲ್ಲವೆಂದೂ ಹತ್ತಿಮೂಟೆಗಳಿಗೆ ಬೆಂಕಿಯಿಕ್ಕುವವರನ್ನು ಹಿಡಿದುಕೊಟ್ಟವರಿಗೆ ಬಹುಮಾನ ಸಿಕ್ಕುವುದೆಂಬುದನ್ನು ಕೇಳಿ, ಈ ರೀತಿಯಾಗಿ ಮಾಡಿ ಬಹುಮಾನವನ್ನು ಪಡೆಯಲು ಪ್ರಯತ್ನಿಸಿದರೆಂದೂ ಗೊತ್ತಾಯಿತು. ಅವರಲ್ಲಿ ೫|| ವರ್ಷದ ಹುಡುಗನನ್ನು ಬಹಳ ಚಿಕ್ಕವನೆಂದು ಬಿಡಿಸಿಬಿಟ್ಟು, ಇಬ್ಬರು ಹುಡುಗರ ತಂದೆಗಳಿಂದ ೨೫೦ ರೂ.ಹೊಣೆಯಪತ್ರವನ್ನೂ ಮತ್ತೊಬ್ಬನ ಜನಕನಿಂದ ೧೦೦ ರೂ.ನ ಹೊಣೆಯಪತ್ರವನ್ನೂ ಹುಡುಗರ ಸತ್ಪ್ರವರ್ತನೆಗಾಗಿ ಬರೆಯಿಸಿಕೊಂಡು ಬಿಡಿಸಿಬಿಟ್ಟರು.

ಬಂಗಾಳಾಗೌರ್ನರಾದ ಲಾರ್ಡ್‌ಕಾರ್ಮೈಕೇಲ್‌ರವರು ಕಲ್ಕತ್ತಾಪಟ್ಟಣದಲ್ಲಿರುವ ವಿಶುದ್ಧಾನಂದಸರಸ್ವತೀ ವಿದ್ಯಾಲಯದ ಹೊಸಕಟ್ಟಡದ ಭಾಗದ ಪ್ರವೇಶಮಹೋತ್ಸವವನ್ನು ಕಳೆದವಾರ ನೆರವೇರಿಸಿದರು. ಈ ನಿಲಯವು ಹಿಂದೀಭಾಷೆಯನ್ನುಪಯೋಗಿಸುವ ಮಾರ್ವಾಡಿ ಬಾಲಕರಿಗಾಗಿ ೧೯೦೧ ರಲ್ಲಿ ಸ್ಥಾಪಿಸಲ್ಪಟ್ಟುದು. ಆದಿಯಲ್ಲಿ ಸ್ವಲ್ಪ ಹುಡುಗರೇ ಸೇರಿದ್ದರು. ತಿಂಗಳೊಂದಕ್ಕೆ ೨೫೦ ರೂ.ಮಾತ್ರವೇ ಆದಾಯವಿದ್ದಿತು. ಇದುವರೆಗೆ ನಡೆದು ೩ ವರ್ಷ ಕಾಲದೊಳಗಾಗಿ ಈ ಶಾಲೆಗೆ ೮ ಲಕ್ಷ ರೂ.ಗಳ ಮೂಲಧನವನ್ನು ಆ ಮಾರ್ವಾಡಿಜನರು ಕೂಡಿಸಿರುವರು. ಇಲ್ಲಿ ೯೦೦ ಮಂದಿ ವಿದ್ಯಾರ್ಥಿಗಳು ಈಗ ಓದುತ್ತಿರುವರು. ಇಲ್ಲಿ ಸರ್ಕಾರದ ಅಂಗೀಕಾರದ ಮೇರೆಗೆ ಮೆಟ್ರಿಕ್ಯುಲೇಷನ್ನಿನ ವರೆಗೆ ವಿದ್ಯಾಭ್ಯಾಸವು ನಡೆಯುತ್ತಿದೆ. ಧನವೇ ಬ್ರಹ್ಮವಾಗಿ ವರ್ತಕತನದಲ್ಲಿ ನಮ್ಮ ದೇಶದವರಲ್ಲೆಲ್ಲಾ ಮುಂದಾಗಿರುವ ಮಾರ್ವಾಡಿಯವರು ಹೀಗೆ ವಿದ್ಯಾಭ್ಯಾಸದ ಕಡೆಗೂ ಗಮನವಿತ್ತುದು ಅವರ ಏಳ್ಗೆಗೆ ಮತ್ತಷ್ಟು ಸಹಾಯಕವೇಸರಿ.

ವಿದೇಶವೃತ್ತಾಂತಗಳು.

ಫ್ರಾನ್ಸ್‌ದೇಶದ ಅಧ್ಯಕ್ಷರಿಗೆ ಚೀನಾಪ್ರಭುತ್ವದವರು ಒಂದು ಬಿರುದನ್ನು ಈಗತಾನೇ ಕೊಟ್ಟಿದ್ದಾರೆ.

ಲಂಡನ್ ಪಟ್ಟಣದೊಳಗಿನ ಸ್ಥಲಕ್ಕೆ ಒಂದು ಚದರಮೈಲಿನ ವಿಸ್ತಾರಕ್ಕೆ ೩೬೫ಕೋಟಿ ರೂ. ಗಳ ಬೆಲೆಯಾಗಿರುವುದಂತೆ.

ದಕ್ಷಿಣಾಫ್ರಿಕಾ ಭಾರತೀಯರ ಸಂಬಂಧದ ನೂತನ ವಿಧಿಯ ೩ ನೆಯಾವೃತ್ತಿಯ ವಾಚನವು ಅಲ್ಲಿನ ಪ್ರಜಾಪತಿನಿಧಿಸಭೆಯಲ್ಲಿ ಆಯಿತು.

ಕಳೆದ ತಿಂಗಳಲ್ಲಿ ನಮ್ಮ ಜಾರ್ಜ್ ಸಾರ್ವಭೌಮರು ಫ್ರಾನ್ಸ್‌ದೇಶಕ್ಕೆ ಹೋಗಿಬಂದರಷ್ಟೆ. ಅವರು ಸಮುದ್ರದಮೇಲೆ ಹೋಗುತ್ತಿರುವಾಗ ಅವರಿಗೆ ಕಾವಲಾಗಿ ಅಂತರಿಕ್ಷದಲ್ಲಿ ಕೆಲವಿಮಾನಗಳು ಜತೆಗೇ ಹೋಗುತ್ತ ಅಲ್ಲಲ್ಲಿಗೆ ಫೋಟೋಗಳನ್ನೆತ್ತುತ್ತಿದ್ದುವಂತೆ.

ಒಬ್ಬ ಹಂಗೇರಿ ದೇಶದ ಶಾಸ್ತ್ರಜ್ಞನು ಜೇಬು ಗಡಿಯಾರದಷ್ಟು ಸಣ್ಣನಾದ ಒಂದು ಯಂತ್ರವನ್ನು ಕಂಡುಹಿಡಿದಿರುವನು. ಬೇಕಾದಾಗ ಅದರ ಮುಳ್ಳನ್ನು ತಿರುಗಿಸಿದರೆ ಇಷ್ಟು ರೂ. ಗೆ ಇಷ್ಟು ದಿನಕ್ಕೆ ಇಷ್ಟು ಬಡ್ಡಿಯಾಗುವುದೆಂಬ ಲೆಕ್ಕವನ್ನು ಅದು ಸೂಚಿಸುವುದು.

ಅಲ್ಬೇನಿಯಾದಲ್ಲಿ ಸ್ವತಂತ್ರರಾಜ್ಯಸ್ಥಾಪನವಾದರೂ ದೇಶದಲ್ಲಿ ಶಾಂತಿಯು ನೆಲಸಿಲ್ಲ. ಅಲ್ಲಿನ ಆದಿನಿವಾಸಿಗಳು ಪ್ರಭುತ್ವದವರಮೇಲೆ ಪ್ರತಿಭಟಿಸಿ ಕಾದಾಡುತ್ತಿದ್ದಾರೆ. ೨ ಪಕ್ಷಗಳಲ್ಲೂ ಹಲವರು ಮೃತರಾಗಿದ್ದಾರೆ. ನೂತನ ಪ್ರಭುವಿಗೆ ಪ್ರಾಣರಕ್ಷಣೆಯ ಭಯವೇ ಹಿಡಿದಿದೆ.

ಐರ್ಲಂಡ್ ಸ್ವರಾಜ್ಯಶಾಸನ ವಿಷಯದಲ್ಲಿ ಕೆಲಸುಧಾರಣೆಗಳನ್ನು ಮಾಡಿ ಅಲ್ಸ್ಟರ್ ಪ್ರಜೆಗಳನ್ನು ಸಮಾಧಾನಪಡಿಸುವ ವಿಷಯದಲ್ಲಿ ಮಂತ್ರಿಮಂಡಲದವರು ವಾಗ್ದಾನಮಾಡಿದ್ದರಷ್ಟೆ. ಆ ಸುಧಾರಣೆಯ "ಬಿಲ್ಲನ್ನು" ಮೊದಲು ಹೊರಹಾಕಬೇಕೆಂದು ಅಲ್ಸ್ಟರ್ ಪಕ್ಷದವರು ಮರಳಿ ಪಾರ್ಲಿಮೆಂಟಿನಲ್ಲಿ ವಾದಗಳನ್ನು ಮಾಡುತ್ತಿದ್ದಾರೆ.

ಒಬ್ಬ ಜರ್ಮನೀದೇಶದ ಶಾಸ್ತ್ರಜ್ಞನು ಹೆಣಗಳಿಗೆ ಬೆಳ್ಳಿಯ ಅಥವಾ ಚಿನ್ನದ ಮುಲಾಮು ಮಾಡುವುದನ್ನು ಕಂಡುಹಿಡಿದಿದ್ದಾನೆ. ಆ ಮುಲಾಮು ಮಾಡಿದ ಬಳಿಕ ಹೆಣದ ಆಕಾರವೇನೂ ಕೆಡದೆ ಬೆಳ್ಳಿಯಿಂದ ಮಾಡಿದ ವಿಗ್ರಹದಂತೆ ಕಾಣುವುದಂತೆ. ಒಂದು ಶವಕ್ಕೆ ಬೆಳ್ಳಿಯ ಮುಲಾಮನ್ನು ಮಾಡುವುದಕ್ಕೆ ೩೭|| ಸಾವಿರ ರೂ. ಗಳು ಹಿಡಿಯುವುವು.

ಪ್ಯಾರಿಸ್ಸಿನಲ್ಲಿ ಕಳೆದವಾರ ವಿಪರೀತ ವೃಷ್ಟಿಯಾಗಿ ಬೀದಿಗಳಲ್ಲಿ ಹೊಳೆಗಳಂತೆ ನೀರು ಹರಿದಾಡಿತು. ಹಲವು ಮನೆಗಳು ಕುಸಿದುಬಿದ್ದುವು. ಜನರು ಕೊಚ್ಚಿಹೋಗಿ ಅನೇಕರ ಹೆಣಗಳು ಸಿಕ್ಕಿರುವುವು. ಇನ್ನು ಕೆಲರ ಸುಳಿವೇ ಇಲ್ಲವಾಗಿದೆ. ಊರಿನೊಳಗೆ ಲೋಹಮಾರ್ಗಗಳಿಗಾಗಿ ಮಾಡಿದ್ದ ಸುರಂಗಗಳಲ್ಲೆಲ್ಲಾ ನೀರು ತುಂಬಿ ಕುಸಿದು ಬಹಳ ನಷ್ಟವಾಗಿದೆ.

ತುರ್ಕಿಯ ಜನರು ಗ್ರೀಕ್ ಪ್ರಜೆಗಳಿಗೆ ಪ್ರಾಣಹಾನಿ ಮಾನಹಾನಿ ಮೊದಲಾದುವುಗಳನ್ನು ಮಾಡುತ್ತಲಿರುವುದರಿಂದ ಗ್ರೀಕ್ ತುರ್ಕಿಗಳಮಧ್ಯದಲ್ಲಿ ಮರಳಿ ಯುದ್ಧಾರಂಭವಾಗುವಚಿಹ್ನೆಗಳು ಕಾಣುತ್ತಿವೆ. ಆದರೆ ತುರ್ಕಿಯ ಸರ್ಕಾರದವರು ಇದಕ್ಕಾಗಿ ತಮ್ಮ ಕಡೆಯ ಕೆಲ ಗೌರ್ನರುಗಳನ್ನು ಕೆಲಸದಿಂದ ತೆಗೆದುಹಾಕಿದುದಲ್ಲದೆ ಇಷ್ಟರಲ್ಲೇ ದೇಶದಲ್ಲಿ ಸ್ವಸ್ಥತೆಯನ್ನುಂಟುಮಾಡುವೆವೆಂದು ಹೇಳಿರುತ್ತಾರೆ.

ಅಮೇರಿಕಾದ ಹಿಂದಿನ ಪ್ರೆಸಿಡೆಂಟರಾದ ರೂಸ್‌ವೆಲ್ಟ್‌ರವರು ತಾವು ಹೊಸದೊಂದು ನದಿಯನ್ನೂ ಭೂಭಾಗವನ್ನೂ ಕಂಡುಹಿಡಿದಿದ್ದೇವೆಂದೂ ಇದುವರೆಗೂ ಅದು ಯಾರಿಗೂ ಗೋಚರಿಸಿಲ್ಲವೆಂದೂ, ಈಗಿನ ಭೂಗೋಳಚಿತ್ರವನ್ನು ತಿದ್ದಬೇಕಾಗಿರುವುದೆಂದೂ ಹೇಳುತ್ತಿರುವರು. ಕಳೆದ ತಾ|| ೧೭ರಲ್ಲಿ ಇವರು ಲಂಡನ್ನಿನ ರಾಜಕೀಯ ಭೂಗೋಳಶಾಸ್ತ್ರಿಗಳ ಸಂಘದವರಿದಿರಿಗೆ ತಮ್ಮ ಶೋಧನೆಯನ್ನು ಕುರಿತು ಉಪನ್ಯಾಸಮಾಡಿದರು.

ಕಳೆದ ವರ್ಷ ಪ್ಯಾರಿಸ್ಸಿನ ಮೇಯರ್ ಎಂಬ ಮುತ್ತಿನ ವ್ಯಾಪಾರಿಯು ೧೫ ಲಕ್ಷ ರೂ. ಬೆಲೆಯ ೧ ಮುತ್ತಿನಹಾರವನ್ನು ಲಂಡನ್ನಿಗೆ ಕಳುಹಿಸಿದಾಗ ಅದು ಕಳುವಾಗಿದ್ದಿತಷ್ಟೆ. ಈಗ ಆತನು ಇದುವರೆಗಿರುವ ಮುತ್ತಿನಹಾರಗಳಲ್ಲೆಲ್ಲಾ ಶ್ರೇಷ್ಠವಾದ ೪೫ ಲಕ್ಷ ರೂ. ಬೆಲೆಯ ಹಾರವೊಂದನ್ನು ಸಿದ್ಧಪಡಿಸಬೇಕೆಂದು ವಿಶ್ವಪ್ರಯತ್ನಮಾಡುತ್ತಿರುವನು. ಆ ಹಾರದಲ್ಲಿರಬೇಕಾದ ೨೦೦ ಮುತ್ತುಗಳೊಳಗೆ ಇನ್ನು ೧೨ ಮುತ್ತು ಮಾತ್ರ ಸಾಲದೆ ಇವೆಯಂತೆ.

ಫ್ರಾಂಕ್‌ಫರ್ಟ್‌ಜೂ ಎಂಬ ಪಟ್ಟಣದಲ್ಲಿ ಒಬ್ಬ ಮುದುಕಿಯ ದವಡೆಗೆ ಏಟುಬಿದ್ದು ಅದು ಮುರಿದುಹೋಗಲು, ಅನೇಕ ವೈದ್ಯರು ಪ್ರಯತ್ನಪಟ್ಟಾಗ್ಗೂ ಆಮೂಳೆಯು ಸರಿಹೋಗದೆಯಿರಲಾಗಿ ಸರ್ಜನ್ ಮೇಜರ್ ಮಾರ್ಕ್ಸ್ ಎಂಬ ವೈದ್ಯನು ಆ ದವಡೆಯಲ್ಲಿ ಮುರಿದುಹೋಗಿದ್ದ ಮೂಳೆಯನ್ನು ತೆಗೆದುಬಿಟ್ಟು ಆ ಸ್ಥಲಕ್ಕೆ ಅಲ್ಯೂಮಿನಿಯಂ ಲೋಹದಿಂದ ಮಾಡಿದ ದವಡೆಯನ್ನು ಸೇರಿಸಿ ಹೊಲೆದನಂತೆ. ಈಗ ಆಕೆಯ ದವಡೆಯು ನಿರಾಯಾಸವಾಗಿ ಪೂರ್ವದಂತೆ ಕೆಲಸಮಾಡುತ್ತಿರುವುದು.

ಉಷ್ಣರಾಜ್ಯದ ವ್ಯವಸಾಯದ ವಿಷಯಗಳನ್ನು ಚರ್ಚಿಸಲು ಪ್ಯಾರಿಸ್ಸಿನಲ್ಲಿ ಇಂಡ್ಯಾ ಜಪಾನು ಮೊದಲಾದ ೧೭ ದೇಶದ ಪ್ರತಿನಿಧಿಗಳು ಸೇರಿರುವ ಸಭೆಯಮುಂದೆ ಪ್ಯಾರಿಸ್ಸಿನ ಇಂಟರ್‌ನ್ಯಾಷನಲ್ ಕಾಟನ್ ಫೆಡರೇಷನ್ ಸಂಘದ ಕಾರ್ಯದರ್ಶಿಯು ತಾನು ಭರತಖಂಡಕ್ಕೆ ಬಂದು ಅಲ್ಲಿನ ವಿದ್ಯಮಾನಗಳನ್ನು ತಿಳಿದುಕೊಂಡು ಹೋಗಿರುವುದರ ವರದಿಯನ್ನು ಹೇಳುವಾಗ್ಗೆ "ತಕ್ಕ ಪದ್ಧತಿಯನ್ನನುಸರಿಸಿ ಭರತಖಂಡದಲ್ಲಿ ಹತ್ತಿಯ ವ್ಯವಸಾಯವನ್ನು ಮಾಡಿದರೆ ವರ್ಷ ೧ಕ್ಕೆ ೧ ಕೋಟಿ ಬೇಲುಗಳ ಹತ್ತಿಯನ್ನು ಆ ದೇಶವು ಉತ್ಪತ್ತಿ ಮಾಡಬಲ್ಲುದು" ಎಂದು ಹೇಳಿದರು. ಹತ್ತಿಯ ಬಿತ್ತಗಳಲ್ಲಿ ಬೇರೆಬೇರ ಜಾತಿಯವು ಮಿಶ್ರವಿಲ್ಲದೆ ಶುದ್ಧವಾದ ಒಂದೊಂದೇಜಾತಿಯ ಬಿತ್ತಗಳನ್ನು ವಿಂಗಡಿಸಿ ಬಿತ್ತಿಸುವುದಕ್ಕೂ, ಅಂಥ ಶುದ್ಧವಾದ ಬಿತ್ತಗಳನ್ನು ಬೇಸಾಯಗಾರರಿಗೆ ಮಾರಿಸುವುದಕ್ಕೂ ಬೇಕಾಗುವಷ್ಟು ಮಂದಿ ಉದ್ಯೋಗಿಗಳನ್ನು ಒದಗಿಸಿಕೊಡಬೇಕೆಂದು ಇಂಡಿಯಾ ಗೌರ್ನಮೆಂಟಿಗೆ ತಿಳಿಯಪಡಿಸಬೇಕೆಂದು ಆ ವಿಚಾರಕ ಸಂಘದವರು ತೀರ್ಮಾನಿಸಿರುವರು. ತಾ|| ೧೭ ನೆ ದಿನದ ಸಭೆಗೆ ಅಧ್ಯಕ್ಷರಾಗಿದ್ದ ಸರ್ ಚಾರ್ಲೆಸ್ ಮೆಕರಾರವರು ಮಾತನಾಡುವಾಗ್ಗೆ-ನೂತನ ಪದ್ಧತಿಯನ್ನನುಸರಿಸಿ ಹತ್ತಿಯ ಬೆಳಸನ್ನು ಮಾಡುವುದಕ್ಕೆ ಪಂಜಾಬು ಗೌರ್ನಮೆಂಟಿನವರು ಇಂಟರ್‌ನ್ಯಾಷನಲ್ ಫೆಡರೇಷನ್ನಿನವರಿಗೆ ಉಚಿತವಾಗಿ ೭|| ಸಾವಿರ ಎಕರೆಯ ಭೂಮಿಯನ್ನು ಕೊಟ್ಟಿರುವರೆಂದು ತಿಳಿಯಿಸಿದರು. ಅದರಮೇಲೆ ಆ ಭೂಮಿಯೊಳಗೆ ವ್ಯವಸಾಯವನ್ನು ಮಾಡುವುದಕ್ಕೆ ೯ ಲಕ್ಷ ರೂ. ಮೂಲಧನವುಳ್ಳ ಒಂದು ಸಂಘವನ್ನು ಸ್ಥಾಪಿಸಬೇಕೆಂದು ಆ ಕಮಿಟಿಯವರು ಯೋಚಿಸುತ್ತಿರುವರು. ಆದರೆ ಈ ವ್ಯವಸಾಯವು ಭರತಖಂಡದ ಹತ್ತಿಯ ವ್ಯವಸಾಯದ ಲಾಭವನ್ನು ಪ್ರಪಂಚಕ್ಕೆ ತೋರಿಸಿಕೊಡುವುದಕ್ಕೆ ಮಾತ್ರವೇಹೊರತು ಲಾಭವನ್ನು ಸಂಪಾದಿಸುವುದಕ್ಕಲ್ಲವೆಂದು ಆ ಕಮಿಟಿಯವರು ಹೇಳುತ್ತಾರೆ. ಈ ಕಮಿಟಿಯಲ್ಲಿ ಚರ್ಚೆಗೆ ಸೇರಿದ್ದ ದೇಶದವರೆಲ್ಲರೂ ಈ ವ್ಯವಸಾಯ ಸಂಘಕ್ಕೆ ಭಾಗಸ್ಥರಾಗಿ ಸೇರುವರಂತೆ.

ಈಗ ಪಾಶ್ಚಾತ್ಯರಲ್ಲಿ ವಾಯುವಿಮಾನಗಳ ಸಂಚಾರವು ಬಹುಮಟ್ಟಿಗೆ ಅವರಧೀನವಾಗಿರುವುದರಿಂದ ಅದರ ವ್ಯಾಪನೆಯು ಹೆಚ್ಚುತ್ತಿದೆ. ರಷ್ಯಾದೇಶದಲ್ಲಿ ಒಬ್ಬ ಧನಿಕನ ಶವವನ್ನು ಸಮಾಧಿಮಾಡುವ ಸ್ಥಲಕ್ಕೆ ವಾಯುವಿಮಾನದಿಂದ ತೆಗೆದುಕೊಂಡು ಹೋದುದಕ್ಕಾಗಿ ಆ ಧನಿಕನ ಕಡೆಯವರು ವಿಮಾನಿಕನಿಗೆ ೩ ಲಕ್ಷ ರೂ. ಗಳ ಬಹುಮಾನವನ್ನಿತ್ತರು. ಸಂಯುಕ್ತರಾಷ್ಟ್ರದಲ್ಲಿನ ಮಾಂಸಮಾರುವ ಅಂಗಡಿಯವರು ಮನೆಮನೆಗೂ ಈ ವಿಮಾನಗಳ ಮೂಲಕವಾಗಿಯೇ ಮಾಂಸವನ್ನು ಕಳುಹಿಸಿಕೊಡುತ್ತಿರುವರು. ಜರ್ಮನಿ-ಫ್ರಾನ್ಸು-ಮೊದಲಾದ ಕಡೆಗಳಲ್ಲಿ ಅಂಚೆಯನ್ನು ಈ ವಿಮಾನಗಳಿಂದಲೇ ಸಾಗಿಸುವ ಏರ್ಪಾಟು ಮಾಡಲ್ಪಟ್ಟಿದೆ. ಪೂರ್ವದಲ್ಲಿ ವಿಸ್ತಾರವಾದ ಮಳಲ ಕಾಡುಗಳನ್ನು ಒಂಟೆಗಳಗಳಮೇಲೆ ಕುಳಿತು ದಾಂಟುತ್ತಿದ್ದರು. ಈಗಲಾದರೋ ಮಳಲಕಾಡನ್ನು ಸುಲಭವಾಗಿ ದಾಟುವುದಕ್ಕಾಗಿ ಈ ತುರ್ಕಿ ಸರ್ಕಾರದವರು ಆಕಾಶವಿಮಾನಗಳನ್ನು ಬಾಡಿಗೆಗೆ ಇಡಿಸುವವರಾಗಿದ್ದಾರೆ. ಪಶ್ಚಿಮ ಆಫ್ರಿಕಾದ ರಬ್ಬರ್ ಕಂಪೆನಿಯವರು ಕೀಕಾರಣ್ಯದಲ್ಲಿರುವ ರಬ್ಬರ್ ಗಿಡಗಳನ್ನು ಕಾಲ್ನಡಗೆಯಿಂದ ಹೋಗಿ ಹುಡುಕುವುದು ಕಷ್ಟವಾಗಿದ್ದಿತು. ಆದುಕಾರಣ ಆಕಾಶವಿಮಾನದಿಂದಲೇ ಸಂಚರಿಸಿ ಆ ಗಿಡಗಳನ್ನು ತಡಕುವ ಏರ್ಪಾಟನ್ನು ಮಾಡುತ್ತಿದ್ದಾರೆ. ನಮ್ಮ ನೀಲಗಿರಿಗಳಿಗಿಂತಲೂ ಎತ್ತರವಾದಷ್ಟು ಮೇಲಕ್ಕೆ ಈ ವಿಮಾನಗಳಲ್ಲಿ ಕುಳಿತು ನಿಮಿಷ ಮಾತ್ರದಲ್ಲಿ ಏರಿಹೋಗಬಹುದಾಗಿರುವುದರಿಂದಲೂ ಕ್ಷಯರೋಗಿಗಳಿಗೆ ಪರಿಶುದ್ಧವಾದ ವಾಯುವುಳ್ಳ ಉನ್ನತಭಾಗಗಳ ವಾಸವು ಪ್ರಶಸ್ತವಾದ ಚಿಕಿತ್ಸೆಯಾಗಿರುವುದರಿಂದಲೂ, ಅಂಥ ಕ್ಷಯರೋಗಿಗಳನ್ನು ಆಕಾಶವಿಮಾನಗಳಲ್ಲಿ ಕುಳ್ಳಿರಿಸಿ ಸಂಚಾರಮಾಡಿಸುವುದು ಪ್ರಯೋಜನಕಾರಿಯೆಂದು ಗೊತ್ತುಮಾಡಿ, ಅದರಂತೆ ಆಚರಿಸುತ್ತಿದ್ದಾರೆ. ಅಮೇರಿಕಾದವರು ಅರಣ್ಯಗಳಲ್ಲಿ ಕಾಳ್ಗಿಚ್ಚನ್ನು ಪರೀಕ್ಷಿಸುವುದಕ್ಕೂ ಅದನ್ನು ನಿವಾರಿಸುವುದಕ್ಕೂ ವಾಯುವಿಮಾನಗಳನ್ನು ಉಪಯೋಗಿಸುತ್ತಿದ್ದಾರೆ. ಫ್ರಾನ್ಸ್ ಸರ್ಕಾರದವರು ಸೇಕಡಾ ೩|| ರೂ. ಬಡ್ಡಿಯಿಂದ ೫೪ ಕೋಟಿ ರೂ. ಗಳನ್ನು ಸಾಲ ತೆಗೆಯುವುದರಲ್ಲಿದ್ದಾರೆ. ಅಮೇರಿಕಾದ ನ್ಯೂಯಾರ್ಕ್ ಪಟ್ಟಣದಲ್ಲಿರುವ ಮಾರ್ಕ್ಸ್‌ಲೋ ಎಂಬ ಧನಿಕನಿಗೆ ಇರುವಷ್ಟು ನಾಟಕಶಾಲೆಗಳು ಪ್ರಪಂಚದಲ್ಲಿ ಮತ್ತಾರಿಗೂ ಇಲ್ಲ. ಆತನು ಮೊನ್ನೆತಾನೇ ೧ ಕೋಟಿಯು ೫೦ ಲಕ್ಷ ರೂ. ಗಳಿಗೆ ೧೩೭ ನಾಟಕಶಾಲೆಗಳನ್ನು ಕೊಂಡುಕೊಂಡನು. ಒಟ್ಟು ಈಗ ಅವನಧೀನದಲ್ಲಿ ೨೫೦ ನಾಟಕಶಾಲೆಗಳು ಇರುವುವು. ಇದರಿಂದ ಅಮೇರಿಕನ್ನರಿಗೆ ನಾಟಕಗಳ ಅಭಿರುಚಿಯು ಎಷ್ಟಿರುವುದೆಂಬುದು ಗೊತ್ತಾಗುವುದು.

ಪತ್ರವ್ಯವಹಾರ.

ಬಗಲೂರು ತಾಲ್ಲೂಕು ಮೆಡ್ಲೇರಹಳ್ಳಿ ಬೋರಾಪುರದ ಸಿದ್ದಪ್ಪನವರ ಮಗ ಮಹದೇವಪ್ಪನಿಗೆ ಚಿತ್ರದುರ್ಗದ ತಾ|| ಕೋಗುಂಡೆ ಬೊಮ್ಮನಪುರದ ಬಸಪ್ಪನವರ ಮಗಳು ನಂಜಮ್ಮನನ್ನು ಕೊಟ್ಟು ಈ ಜ್ಯೇಷ್ಠ ಶು|| ೩ ಶುಕ್ರವಾರ ಸದರಿ ಕೋಗುಂಡೆ ಗ್ರಾಮದಲ್ಲಿ ವೇ. ಬಳಿಬೋಡು ಕೆ ಯಂ. ಕರಿಬಸವಾರಾಧ್ಯರ ಪೌರೋಹಿತ್ಯದಿಂದ ವಿಧಿವತ್ತಾಗಿ ಪಾಣಿಗ್ರಹಣವು ಮಹೋತ್ಸವದಿಂದ ನಡಿಸಲ್ಪಟ್ಟಿತು. ಆ ಕಾಲದಲ್ಲಿ ಬಳಿಬೋಡು ಶೆಟ್ಟರ ಪಾಪಣ್ಣನವರ ಅಧ್ಯಕ್ಷತೆಯಲ್ಲಿ ಒಂದು ಸಭೆಸೇರಿ ಪ್ರತಿಯೊಬ್ಬ ವೀರಶೈವನೂ ವಿವಾಹಾದಿ ಕಾರ್ಯಗಳನ್ನು ಸಕ್ರಮವಾಗಿ ನಡಿಸಬೇಕೆಂಬ ವಗ್ಯರೆ ವಿಷಯವನ್ನು ಕುರಿತು ಬಳಿಬೋಡುಶೆಟ್ಟರ ಸಣ್ಣರುದ್ರಪ್ಪನವರು ಸರಸವಾಗಿ ಭಾಷಣಮಾಡಿದರು. ಕೈಲಾಸವಾಸಿಗಳಾದ ವೈ. ವೀರಸಂಗಪ್ಪನವರ ಅಗ್ರ ತಾಂಬೂಲದ ಬಗೆಗೆ ೧ ರೂ.ಮೈಸೂರು ವೀರಶೈವ ವಿದ್ಯಾವರ್ಧಕ ಫಂಡಿಗೆ ೩ ರೂ. ಗಳನ್ನು ಕೊಡಲ್ಪ

ಕೆಂದು ಅಧ್ಯಕ್ಷ ಮಹಾಶಯರು ಸೂಚಿಸಿದ ಪ್ರಕಾರ ಆ ಕೊಡಲೇ ವರನ ಚಿಕ್ಕಪ್ಪನಿಂದ ೫ ರೂ ಅಧ್ಯಕ್ಷರ ವಶಕ್ಕೆ ಪಾವತಿಮಾಡಲ್ಪಟ್ಟವು. ಹೀಗೆಯೇ ಪ್ರತಿಯೊಬ್ಬ ವೀರಶೈವರೂ ಅನುವರ್ತಿಸುವರಾಗಲೆಂದು ಕೋರುವ,

ನಾನಾಭಿಮಾನಿ

[ಈ ಹಣವು ನಮಗೆ ಸಂದಿದೆ. ಪ ಪ್ರ]

ಶಿಕಾರಿಪುರ ತಾಲ್ಲೋಕು ಗಾಮಗಾ್ರಮದಲ್ಲಿ ಈ ಆನಂದನಾಮಸಂವತ್ಸರದ ಜ್ಯೇಷ್ಠ ಶುಕ್ಲಪಕ್ಷ ೧೦ ಬುಧವಾರ ಈಸೂರು ಹಿರೇಮಠದ ತೋಟಪ್ಪಯ್ಯನವರ ಪುತ್ರ ಸಂಗಪ್ಪಯ್ಯನಿಗೂ ಗಾಮಗ್ರಾಮದಲ್ಲಿರುವ ಮುಗಳಗೇರಿಮಠದ ಶ್ರೀ ವೀರಬಸವಯ್ಯನವರ ಪುತ್ರಿ ಚಿ ಗಂಗಮ್ಮನಿಗೂ ರಾ॥ ಬೆಂಕಿಶೆಟ್ಟಿ ಹಾಲಪ್ಪನವರ ಪುತ್ರ ಬಸವಪ್ಪನಿಗೂ ರಾ॥ ಗಾಮದ ವೀರಬಸವಪ್ಪನ ಪುತ್ರಿ ಚಿ ವೀರಮ್ಮನಿಗೂ ವಿವಾಹಮಹೋತ್ಸವವು ಈ ಗ್ರಾಮದ ಆರಾಧ್ಯಮಠದ ವೇ॥ ಚನ್ನಬಸವಯ್ಯನವರ ಪೌರೋಹಿತ್ಯದಿಂದ ವಿಧ್ಯುಕ್ತವಾಗಿ ನಡೆದು ವೀರಶೈವಮತದೇಳಿಗೆಗೆ ಮಹಾಪುರುಷರಾದ ಕೈ॥ ವೈ ವೀರಸಂಗಪ್ಪನವರ ಅಗ್ರತಾಂಬೂಲಕ್ಕೋಸ್ಕರ ೧ ರೂ ಬೆಂಗಳೂರಲ್ಲಿರುವ ವೀರಶೈವ ವಿದ್ಯಾವರ್ಧಕ ಫಂಡಿಗೆ ವಧೂವರರಿಂದ ತೆಗೆಸಿದ್ದ ೪ ರೂ ಕಲಕಾರ್ಜನೆ ಬಗ್ಗೆ ೧ ರೂ. ಒಟ್ಟು ೫ ರೂಗಳನ್ನು ಕಳುಹಿಸಬೇಕೆಂದು ಈ ಗ್ರಾಮದ ಮ॥ ಆರಾಧ್ಯಮಠದ ವೇ॥ ನಾಗಲಿಂಗಪ್ಪಯ್ಯನವರು ಅಪ್ಪಣೆಕೊಡಿಸಿದ ಮೇರೆಗೆ ಸರ್ವಸಂಮತದಿಂದ ಕಳುಹಿಸಲಾಯ್ತು.

ಜಿ. ಚನ್ನಬಸವಯ್ಯ
ಆರಾಧ್ಯಮಠ.

ಈ ಬಾಬತು ಅಗ್ರತಾಂಬೂಲದ ಬಗೆಗೆ ೧ ರೂ.ವಿದ್ಯಾವರ್ಧಕಫಂಡಿಗೆ ೪ ರೂ. ಒಟ್ಟು ೬ ರೂ ನಮ್ಮಲ್ಲಿಗೆ ಬಂದಿದೆ.

[ಪ. ಪ್ರ]

ಕೊಳ್ಳೇಗಾಲದ ಶ್ರೀಮಂತ ಗಂಡಿಗವುಟ್ಟಣ್ಣನವರ ಮಲ್ಲಪ್ಪನವರು ತಮ್ಮ ಚಿಕ್ಕತಂದೆಯವರ ಕುಮಾರ ಚಿ ಷಣ್ಮುಖಪ್ಪನವರ ವಿವಾಹಮಹೋತ್ಸವವನ್ನು ಇದೇ ಜೂನ್ ತಾ॥ ೧೨ ರಲ್ಲಿ ಬಹಳ ವಿಜೃಂಭಣೆಯಿಂದಲೂ, ವಿಚಕ್ಷಣೆಯಿಂದಲೂ ನಡೆಯಿಸಿದರು. ಪೌರೋಹಿತ್ಯಕ್ಕೆ ಮೈಸೂರ ಶಿರ್ಶಿವೇ॥ ಗುರುಶಾಂತಶಾಸ್ತ್ರಿಗಳು ದಯಮಾಡಿದ್ದು ವಿವಾಹಕರ್ಮಗಳೆಲ್ಲವನ್ನೂ ವಿಧ್ಯುಕ್ತವಾಗಿ ನೆರವೇರಿಸಿದರು. ಈ ಮಹೋತ್ಸವಕ್ಕೆ ಹೆಂಕಣಿಕೋಟೆ, ಕೆಲಮಂಗಲ, ಬೆಂಗಳೂರು, ಚೆನ್ನಪಟ್ಟಣ, ಮೈಸೂರು, ಮಧುವಿನಹಳ್ಳಿ, ಮುಡಿಗೊಂಡ, ತಲಕಾಡು, ಸೋಸಲೆ, ಕೋಡಿಹಳ್ಳಿ, ಮೊದಲಾದ ಸ್ಥಳಗಳಿಂದ ಬಂಧುಮಿತ್ರರೂ, ಸ್ಥಳದ ತಹಸೀಲ್ದಾರರು, ಡಾಕ್ಟರು, ಶಿರಸ್ತೇದಾರರು ಮೊದಲಾದ ಸರ್ಕಾರದ ಉದ್ಯೋಗಿಗಳೂ ಬಹಳವಾಗಿ ಬಂದಿದ್ದರು. ನೇತ್ರಾನಂದ ನರ್ತನ ಮತ್ತು ಮೊದಲಾದ ಅನವಶ್ಯಕವಾದ ದುಂದುವೆಚ್ಚಗಳಿಗವಕಾಶವಿಲ್ಲದೆ ಪುರುಷರ ಶಾಸ್ತ್ರೋಕ್ತ, ಶ್ಲಾಘ್ಯವಾದ ನಾಗಸ್ವರ ಮತ್ತೂ ವೀಣಾವಾದನಗಳಿಂದಲೂ, ದಿವ್ಯವಾದ ಭೋಜನದಿಂದಲೂ ಬಂದಿದ್ದ ಅತಿಥಿಗಳ ಮನಸ್ಸಿಗಾನಂದವನ್ನುಂಟುಮಾಡಿಸಿದರು. ಅಲ್ಲದೆ ಈ ಪ್ರಾಂತ ಬಹಳ ರೂಢಿಯಲ್ಲಿರುವ ವೇಶ್ಯರ ನರ್ತನಕ್ಕೆ ಮುಂದೆ ಅವಕಾಶಕೊಡದಂತೆಯೂ, ವೀರಶೈವಮತಕ್ಕೆ ಮಹೋಪಕಾರವನ್ನು ಮಾಡಿರುವ ಕೈ॥ ವೈ. ವೀರಸಂಗಪ್ಪನವರ ಹೆಸರಿನ ಮೇಲೆ ಅಗ್ರತಾಂಬೂಲವನ್ನು ೩ ರೂ.ಸಹಿತತೆಗೆದೂ ಮೇಲು ಪಂಕ್ತಿಯನ್ನು ಹಾಕಿಕೊಟ್ಟುದಕ್ಕಾಗಿ ನಾವುಗಳು ಅವರನ್ನು ವಂದಿಸುತ್ತೇವಲ್ಲದೆ ನೂತನದಂಪತಿಗಳಿಗೆ ಈಶ್ವರನು ಸುಖಸಂಪತ್ತನ್ನು ಕೊಡಲೆಂದು ಬೇಡುತ್ತೇವೆ. ಪ್ರತ್ಯಕ್ಷದರ್ಶಿ. [ಅಗ್ರತಾಂಬೂಲದ ಬಗೆಗೆ ೩ ರೂಗಳನ್ನು ಸ್ವೀಕರಿಸಿರುತ್ತೇವೆ.

[ಪ. ಪ್ರ]

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರಘರಾಜೇಂದ್ರ ಮಹಾಸ್ವಾಮಿಗಳವರ ಶ್ರೀಮಚ್ಛಿನ್ಮೂಲಾದ್ರಿ ಬೃಹನ್ಮಠ ಮಹಾ॥ ಸಂಸ್ಥಾನ ಕಚೇರಿಯಿಂದ.

ಮಹಾ॥ ಸನ್ನಿಧಿಯಾಜ್ಞಾಧಾರಕರಾದ ಕಾರವಾರಜಿಲ್ಲೆಯ ಮಹಾಂತು ದೇಶಾಯಿ ಪಾಟೀಲ್, ಕುಲಕರಣಿ, ಶೆಟ್ಟಿ, ಯಜಮಾನ ಮೊದಲಾದ ಸಕಲವೀರಶೈವ ಮಹಾನುಭಾವ ಭಕ್ತಮಂಡಳಿಗೂ ಮತ್ತು ಅರ್ಜಿದಾರ್ ವಗೈರೆಯವರಿಗೂ ಮಹಾ॥ ಸನ್ನಿಧಿ ಹುಕುಂ ಏನಂದರೆ:—

ಶ್ರೀಧರ್ಮಮಹಾ॥ ಖಾಸಸ್ವಾರಿಯು ನೈಜಾಂ ಇಲಾಖೆಗೆ ಚಿತ್ತೈಸಿರುವ ವಿಷಯವು ಸರ್ವರಿಗೂ ಶ್ರುತವಾಗಿದೆಯಷ್ಟೆ. ಆದರೆ ಕಾರವಾರಜಿಲ್ಲೆ ಪೈಕಿ ಕೆಲವು ಸ್ಥಳಗಳಿಂದ ಧರ್ಮಸಂಬಂಧವಾದ ಅನೇಕ ಅರ್ಜಿಗಳು ಬಂದಿರುವುದರಿಂದ ಅವುಗಳ ವಿಚಾರಣೆನಡೆಯತಕ್ಕ ವಿಷಯದಲ್ಲಿ ಇಲ್ಲಿಂದ ನೋಟೀಸ್ ವಗೈರೆ ಕೊಟ್ಟು ಪದ್ಧತಿಪ್ರಕಾರ ಸ್ಥಲವಿಚಾರಣೆ ನಡೆಸುವುದಕ್ಕೆ ದೂರಫಾಸಲೆಯಾದುದರಿಂದ ಅಡಚಣೆಯಾಗಿದೆ. ಈ ಮೊದಲು ವೇಲ್ಮಕೊಂಡ ಜಿಲ್ಲಾದ ಧರ್ಮಸಂಬಂಧ ವಗೈರೆ ವಿಚಾರಣೆ ಮಾಡುವುದಕ್ಕೆ ನೇಮಿಸಲ್ಪಟ್ಟಿದ್ದ ಇಲಾಖಾ ಅಧಿಕಾರಿಗಳು ರಜಾದಲ್ಲಿದ್ದು ಇವರಿಗೂ ಕೆಲಸಕ್ಕೆ ಹಾಜರಾಗದೆ ಇದ್ದುದರಿಂದ ಮೇಲೆಸುವರಿಗೆ ಸದರಿ ಜಿಲ್ಲಾಗ ಇಲಾಖಾ ಅಧಿಕಾರವನ್ನು ದಯಮಾಲಿಸಿ ಕಳುಹಿಸುತ್ತಿರಲ್ಲಿ ಬರುತ್ತೆ. ಇವರು ಇಷ್ಟರಲ್ಲಿಯೇ ಕಾರವಾರ ಜಿಲ್ಲೆಗೆ ಸರ್ಕ್ಯೂಟ್ ಕೈಕೊಳ್ಳತಕ್ಕವರಿರುತ್ತಾರೆ. ಆದ್ದರಿಂದ ಇವರಿಂದ ಈಗ ಬಂದಿರುವ ವಿಷಯ ಮುಂದೆ ಬರತಕ್ಕ ಅರ್ಜಿಗಳ ಬಗ್ಗೆ ಸ್ಥಲವಿಚಾರಣೆ ನಡೆಸಲ್ಪಟ್ಟ ನಂತರ ಇತ್ಯರ್ಥಮಾಡಲ್ಪಡುವ ವಿವರವನ್ನು ಈ ಮೂಲಕ ಜಾಹೀರ್ ಮಾಡುವುದರಲ್ಲಿ ಬಂದಿದೆ.

ತಾ॥ 3-6-1914
ಕೊಕ್ಕಾಂ ರಾಮದುರು
ಜಿಲ್ಲ ಬಿದರ್.

ಶ್ರೀ ಸನ್ನಿಧಿ ಅಪ್ಪಣೆಮೇರೆ
ಚೆನ್ನಬಸವಯ್ಯ ಹೇಮ
ಸಿಂಪ್ತ ಕಾರಭಾರಿ—

ಜಗಲೂರು ತಾಲ್ಲೂಕು ತೋಣಿಹಳ್ಳಿ

ಇದೇ ಜ್ಯೇಷ್ಠ ಶುದ್ಧ ೪ ರಲ್ಲಿ ರಾ॥ ಜೋಗಿಹಳ್ಳಿ ವೀರಣ್ಣನವರು, ಮ॥ ರಾ॥ ದೇವರಣ್ಣ ಜಜ್ಜಪ್ಪನವರು, ಮ॥ ರಾ॥ ತೇಂಲ್ಲಹಳ್ಳಿ ಗಿರಿಯಪ್ಪನವರು, ಮ॥ ರಾ॥ ದೊಡ್ಡಯ್ಯನವರ ತಿಪ್ಪಯ್ಯನವರು, ಇವರ ಕುಮಾರ್ತಿ ಮದುಗಳ ವಿವಾಹಕಾರ್ಯಕ್ಕಾಗಿ ಸುತ್ತುಮುತ್ತಣ ಗ್ರಾಮಾಂತರಗಳಿಂದ ಪಟ್ಟಚರಮೂರ್ತಿಗಳು ಮಠಸ್ಥರುಗಳು ಇನ್ನೂ ಇತರ ಭಕ್ತಮಹೇಶ್ವರರುಗಳು ದಯಮಾಡಿಸಿದ್ದರು. ವಿವಾಹಕಾರ್ಯಗಳು ವಿಧಿವತ್ತಾಗಿ ಈ ಗ್ರಾಮದ ಮಠದ ಮೂರ್ತಿಗಳಿಂದಲೂ ಶ್ರೀತಿಪ್ಪೆರುದ್ರಸ್ವಾಮಿಯವರಿಂದಲೂ ಕೋನಸಾಗರದ ಹಿರೇಮಠದ ಮುಪ್ಪೀರಪ್ಪಯ್ಯನವರಿಂದಲೂ ವಿಧ್ಯುಕ್ತವಾಗಿ ನಡೆಯಿಸಲ್ಪಟ್ಟವು. ವಿಧಿವತ್ತಾಗಿ ವಿವಾಹಕಾರ್ಯಗಳನ್ನು ಈ ಪ್ರಾಂತ್ಯ ಮಾಡಿರುವದಕ್ಕೆ ಮ॥ರಾ॥ ಜೋಗಿಹಳ್ಳಿ ವೀರಣ್ಣನವರೇ ಮಾರ್ಗದರ್ಶಕರಾಗಿರುವರು. ಕಳೆದ ತಾ॥೩ರಲ್ಲಿ ಈ ಗ್ರಾಮದ ಶ್ರೀ ಬಸವೇಶ್ವರ ದೇವಾಲಯದಲ್ಲಿ ಧರ್ಮೋದಕಸಭೆಯು ನೆರೆದು ಮ॥ ರಾ॥ ಮಠದ ತಿಪ್ಪೆಸ್ವಾಮಿಯವರು ವೀರಶೈವ ಸನಾತನತ್ವದ ಮೇಲೂ ಮ॥ ರಾ॥ ಜೋಗೀಹಳ್ಳಿ ವೀರಣ್ಣನವರು ವೀರಶೈವ ನಿಜತತ್ವದ ಮೇಲೂ, ಮ॥ ರಾ॥ ಚೀಳ್ಳೆದ ಮಲ್ಲಪ್ಪನವರು ಕನ್ಯಾಶುಲ್ಕನಿಷೇಧದಮೇಲೂ, ಮ॥ ರಾ॥ ಸಣ್ಣಜಜ್ಜಪ್ಪನವರು ವಿಧಿವತ್ತಾಗಿ ವಿವಾಹಾದಿ ಕಾರ್ಯಗಳನ್ನು ಜರಿಗಿಸುವದರ ಮೇಲೂ, ಮ॥ ರಾ॥ ನೀರುಭಾವಿ ಗುರಪ್ಪನವರು ದುಂದು ವೆಚ್ಚ ನಿಲ್ಲಿಸುವುದರಮೇಲೂ, ಮ॥ ರಾ॥ ಸಾಹುಕಾರ ತುಡುಮಾ ವೀರಭದ್ರಪ್ಪನವರು ಕನ್ಯಾದಾನದ ಪ್ರಯೋಜನದ ಮೇಲೂ, ಮ॥ ರಾ॥ ಬಾಗೇನಾಳು ಮಠದ ತಿಪ್ಪಯ್ಯನವರು ವಿದ್ಯಾಭಿವೃದ್ಧಿಯ ಮೇಲೂ, ಉಪನ್ಯಾಸಗಳನ್ನು ತಂದರು. ಈ ಮೇಲೆ ಕಂಡ ಪ್ರಸ್ತಗಳಿಗೆಲ್ಲಾ ವೇ॥ ಬೇಣಕಲ್ಲುಗುಡ್ಡದ ಪಟ್ಟದ ದೇವರವರಿಂದಲು ಶ್ರೀ ತೋಣಿಹಳ್ಳಿ ಮಠದ ತಿಪ್ಪೆಸ್ವಾಮಿಯವರಿಂದಲೂ, ಸಮನಾಂಜನಾದ ಉಪನ್ಯಾಸಗಳು ಮಾಡಲ್ಪಟ್ಟವು. ವಿದ್ಯಾಭಿವೃದ್ಧಿಗಾಗಿ ವೀರಶೈವಧರ್ಮ ಫಂಡು ಕೂಡಿಸುವ ವಿಷಯವನ್ನೂ ಅದಕ್ಕೆ ಕಾರಣಭೂತರಾದ ಧರ್ಮಪುರುಷರ ಹೆಸರುಗಳನ್ನೂ ಮೈಸೂರು ದೇಶದಲ್ಲಿ ರಾವ್‌ಬಹದ್ದೂರ್ ಶ್ರೀಮಂತ ಗುಬ್ಬಿ ತೋಟದಪ್ಪನವರು ಮಠಕ್ಕೆ ಮಾಡಿರುವ ಮಹೋಪಕಾರವನ್ನು ಸ್ಮರಿಸಿ ತಮ್ಮ ಕೈಲಾದ ಮಟ್ಟಿಗೆ ಪ್ರತಿಯೊಬ್ಬ ವೀರಶೈವನೂ ಸಹಾಯ ಮಾಡತಕ್ಕದ್ದೆಂತ ನಿರ್ಧರಿಸಲ್ಪಟ್ಟು ಆನೇತು ಹಿಮಾಚಲಾಂತವಾದ ವೀರಶೈವರ ಉತ್ತೇಜನಕ್ಕಾಗಿ ಸಹಾನುಭೂತಿಯಾಗಿರುವ ಮೈಸೂರು ಸ್ಟಾರ್‌ಪತ್ರಿಕಾ ಸ್ಥಾಪಕರಾದ ಕೈ॥ ವೈ. ವೀರಸಂಗಪ್ಪನವರ ಬಗೆ ಅಗ್ರತಾಂಬೂಲ ತೆಗೆಯಬೇಕೆಂತ ತೆಗೆಯಿಸಿ ಜಯನಮಃ ಪಾರ್ವತೀಪತೆ ಎಂಬ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

[ಈ ಬೊಬಲಗನ್ನು ನಾವು ಸ್ವೀಕರಿಸಿರುತ್ತೇವೆ ಪ. ಪ್ರ]

ಸಮ್ಮೂರ (ಅದರಗುಂಚಿಯ) ಶಾಲೆಯು ಕೆಲವು ಕಾರಣಗಳಿಂದ ಕಳೆದ ಎರಡು ವರ್ಷಗಳಿಂದ ಕೇವಲ ಹೀನಸ್ಥಿತಿಗೆ ಬಂದು, ಕಡೆಗೆ ೧೫-೨೦ ಹುಡುಗರು ಹೆಸರಿಗೆ ಮಾತ್ರ ಉಳಿದಿದ್ದರು. ಇಷ್ಟರಲ್ಲಿ ಚ-ವೀ-ಮಹಪತಿ ಎಂಬವರು ಮುಖ್ಯಾಧ್ಯಾಪಕರಾಗಿ ಬಂದು ಬಹು ವಿಧದಿಂದ ಶ್ರಮಪಟ್ಟು ಶಾಲೆಯ ಸ್ಥಿತಿಯನ್ನು ಪೂರ್ವದಶೆಗೆ ತಂದಿರುವರೆಂಬದನ್ನು ತಿಳಿಸಲು ತುಂಬಾ ಸಂತೋಷಪಡುವೆನು. ಈಗ ಈ ಶಾಲೆಯಲ್ಲಿ ೯೦ ಹುಡುಗರೂ ಮೂವರು ಅಧ್ಯಾಪಕರೂ, ಇರುವರು. ಈ ಊರ ಶಾಲೆಯು ಫುಲ್‌ಪ್ರಾಯಮರಿ ಶಾಲೆಯಾದಲ್ಲಿ ಇದಕ್ಕೂ ಹೆಚ್ಚಿಗೆ ಹುಡುಗರು ಕೂಡುವರೆಂಬದಕ್ಕೆ ಸಂದೇಹವಿಲ್ಲ. ಈ ಪ್ರಕಾರದ ಶಾಲೆಯ ಉರ್ಜಿತ ಸ್ಥಿತಿಯನ್ನು ಕಂಡು ಇಲ್ಲಿಯ ಶ್ರೀಮಂತ ರಾಘವೇಂದ್ರರಾವ ಅಪ್ಪಾಸಾಹೇಬ ಜಹಾಗೀರದಾರ ಗಂಜೀಹಾಳ ಎಂಬ ಉದಾರ ಮತಿಗಳವರು ವಿದ್ಯಾರ್ಥಿಗಳ ಕಲ್ಯಾಣದ ಕೋರಿಕೆಗಳಿಂದ "ಎಲ್ಲ ಹುಡುಗರ ಫೀಯನ್ನು ಆ ಜನ್ಮವಾಗಿ, ತಾವೇ ಕೊಡುವೆವೆಂದು ಮ॥ ಕಲೆಕ್ಟರ ಸಾಹೇಬ ಬಹದ್ದೂರವರ ರ॥ ಳ ಅರ್ಜಿ ಮಾಡಿದ್ದಕ್ಕೆ ಕೆಲಸ ನಡೆದು, ಕೊನೆಗೆ ರಾವಸಾಹೇಬ ಡಿ. ಎ ಇ, ಧಾರವಾಡ ಇವರ ಕಡೆಯಿಂದ ಮಂಜೂರಿ ದೊರೆತ ಮೇರೆಗೆ, ಇಲ್ಲಿಯ ಶಾಲಾ ಮುಖ್ಯಾಧ್ಯಾಪಕರೂ, ಮತ್ತು ಸ್ಕೂಲ ಮೆಂಬರಾದ ಮರಿತಮ್ಮಪ್ಪ ಅಣ್ಣಾ ಅಂಗಡಿ ಮೊದಲಾದವರೂ, ಸದರೀ ಶಾಲೆಯಲ್ಲಿ ತಾರೀಖು ೨೮-೫-೧೪ ಇಸ್ವಿಯ ದಿವಸ ಸಾಯಂಕಾಲ ೫ ಗಂಟೆಗೆ ಶಿ. ರಾ. ರಾ. ಪಟ್ಟದ ಸ್ವಾಮಿಗಳು ಅದರ ಗುಂಜಿ ಇವರ ಅಧ್ಯಕ್ಷತೆಯ ಕೆಳಗೆ ಸಭೆಯನ್ನು ನೆರೆಯಿಸಿದರು.

ವಿದ್ಯಾರ್ಥಿಗಳು ಮೊದಲು ಅಧ್ಯಕ್ಷರ ಸ್ವಾಗತವನ್ನು ಮಾಡಿದ ಬಳಿಕ ಶಾಲೆಯ ಮುಖ್ಯಾಧ್ಯಾಪಕರು ಸಭೆಯ ಕಾರಣವರತ್ವವನ್ನೂ, ಜಹಾಗೀರದಾರರವರ ಉದಾರ ವೃತ್ತಿಯನ್ನೂ ಸರಸವಾಗಿ ಬಣ್ಣಿಸಿ, ತಮ್ಮ ಆಸನದಲ್ಲಿ ಮಂಡಿಸಿದವೇಲೆ ಈಶಾಲಾ ಮುಖ್ಯಾಧ್ಯಾಪಕರಾದ ಮಿ. ನಂದೀಹಳ್ಳಿಯವರು "ವಿದ್ಯಾಭಿವೃದ್ಧಿ" ಎಂಬ ವಿಷಯಕ್ಕೆ ಪ್ರತಿಯೊಬ್ಬರ ಮನಸ್ಸಿನಮೇಲೆ ಬಿಂಬಿಸುವಂತೆ ಸರಸಭಾಷಣದಿಂದ ಹೇಳಿದರು. ಬಳಿಕ ರಾ. ರಾ. ಶಿವನಗೌಡ ಪಾಟೀಲ ಬ. ಬ ಅಂಗಡಿ, ಮೊದಲಾದವರು. ಜಹಾಗೀರದಾರರ ಗುಣಕಥನಮಾಡಿದ ನಂತರ ಅಧ್ಯಕ್ಷರು ಶಾಲೆಯ ಸಾಂಪ್ರತಸ್ಥಿತಿಯನ್ನೂ, ಮುಖ್ಯಾಧ್ಯಾಪಕರ ಪರಿಶ್ರಮವನ್ನೂ ಹೇಳಿ, ಕೊನೆಗೆ ಶ್ರೀಮಂತ ಜಹಾಗೀರದಾರರವರಿಗೆ ರಾ. ಸಾ. ಡೆಪ್ಯೂಟಿ ದೊರೆಗಳ ಆನಂದವನ್ನೂ ಆಭಾರವನ್ನೂ ಅರುಹಿದರು. ಕಡೆಯಲ್ಲಿ ವಿದ್ಯಾರ್ಥಿಗಳಿಗೆ ಮಿಠಾಯಿ, ಸಭಿಕರಿಗೆ ಹಾರ ತುರಾಯಿ, ಅತ್ತರು, ವೀಳೆಯ ಮೊದಲಾದವುಗಳನ್ನು ಅರ್ಪಿಸಿ ಸಭೆಯ ಕಾರ್ಯಗಳನ್ನು ಮುಗಿಸಿದರು. ಆ ಮೇಲೆ ನೆರೆದವರೆಲ್ಲರೂ, ಜಹಾಗೀರದಾರರಿಗೆ ಜಗದೀಶನು ದೀರ್ಘಾಯುವನ್ನೂ, ಆರೋಗ್ಯೈಶ್ವರ್ಯಾಭಿವೃದ್ಧಿಯನ್ನು ಕರುಣಿಸಲೆಂದು ಜಯಘೋಷವನ್ನು ಮಾಡಿ ತಮ್ಮತಮ್ಮ ಆವಾಸಗಳಿಗೆ ತೆರಳಿದರು. ಜಹಾಗೀರದಾರರವರು ಅಲ್ಪವಯಸ್ಸಿನವರೂ, ಅಗ್ರಜರ ಆಜ್ಞಾಸೂತ್ರದಲ್ಲಿ ಸಿಲ್ಕಿದವರೂ ಇದ್ದು, ಇಂಥ ಮಹತ್ಕಾರ್ಯಕ್ಕೆ ಆಶ್ರಯಕೊಟ್ಟದ್ದು ಸರಮಾಶ್ಚರ್ಯವು. ಇಂಥವರು ಕರ್ನಾಟಕದಲ್ಲಿ ದೊರೆಯುವದು ದುರ್ಲಭವೆಂದು ಹೇಳಿ ಲೇಖವನ್ನು ಮುಗಿಸುವ

ತಮ್ಮ ವಿಧೇಯ, ಅಭಿಮಾನಿ

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೋಂಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು ಕಾಪಾಡುವುದರಲ್ಲಿ ಶ್ರೇಷ್ಠವಾದ

38

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ—ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು.

ಶೀತವಾಯು—ಕೆಮ್ಮು—ನೆಗಡಿ—ದಿನಜ್ವರ—ಮೂರರಜ್ವರ ನಾಲ್ಕರಜ್ವರ— ಮಲೇರಿಯಾಜ್ವರ— ತಲೆನೋವು— ಮೈಕೈನೋವು ಮತ್ತು ಭಾರ—ಅರೋಚಕ ಹಲ್ಲುನೋವು—ಹೊಟ್ಟೆನೋವು—ಮಲಬಂಧ—ಅಜೀರ್ಣ ಭೇದಿ—ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಶೆಳತ ಹೊಟ್ಟೆಯುಬ್ಬರ—ಮಂದಜ್ವರ—ಭೇದಿ ಮುಂತಾದುವುಗಳನ್ನು ನಂಬಿಕೆಯಾಗ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ೫೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ. ಪಿ ಛಾರ್ಜು ಪ್ರತ್ಯೇಕ.

ಆಮೋದಿನಿ:— ಅಮೋಘವಾದ ಸುವಾಸನೆಯಿಂದ

ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರವಾಡುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷ ಕೀರ್ತಿಯನ್ನು ಸಂಪಾದಿಸಿ ನಾನಾತರಹ ಕೆಮ್ಮು, ದಮ್ಮು ಉಬ್ಬಸ, ವಾಂತಿ, ವಾಕರಿಕೆ, ಮಲಬಂಧ, ಅಗ್ನಿಮಾಂದ್ಯ, ಪಿತ್ತಸಂಕಟ, ಅರೋಚಕ, ಬಾಯಾರಿಕೆಗಳನ್ನು ತಕ್ಷಣ ಗುಣಪಡಿಸಿ ಶರೀರಕ್ಕೆ ತೀಕ್ಷ್ಣಮಾಡದೆ ಧಾತುವೃದ್ಧಿಯುಂಟುಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೧೫೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ.ಪಿ. ಛಾರ್ಜು ಪ್ರತ್ಯೇಕ.

ವಿಳಾಸ— ಬಿ ವಿ. ಪಂಡಿತ್,
ಸದ್ವೈದ್ಯಶಾಲಾ, ನಂಜನಗೂಡು,
ಮೈಸೂರ್ ೫

ಥಕ್ತ ವನಸ್ಪತಿಯಿಂದಲೇ ತಯಾರಿಸಿದ
ಧಾತುಪೌಷ್ಟಿಕ ಲೇಹವು.

29

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಮರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಮದ್ರೇಕವಾದವರು, ತೃಷೆಯುಳ್ಳವರು, ದಮ್ಮಿನವರು, ಕೆಮ್ಮಿನವರ ಕಫು, ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ. ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನಿರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು ಕಿಮ್ಮತು ೪೦ ತೋಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ: —ವೈದ್ಯ. ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

39

ರೊಡ್ಡ ಕಂಪೆನಿ ! ಹೊಸಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅನುಪಾಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನು, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯೂ. ಎನ್. ಮತ್ತು ಕಂಪೆನಿ,
ಬನಾರಿಸ್ ಸಿಟಿ. (ಕಾಶೀ)

ಅಗ್ಗವಾದ ಮಾಲುಗಳು.

S.N.RUDRAKSHA & CO.
BENARES CITY.

ನಮ್ಮಲ್ಲಿ ಉತ್ತಮವಾದ ನೇಪಾಳ ರುದ್ರಾಕ್ಷಿ ಉತ್ತಮವಾಗಿಯೂ ಗಟ್ಟಿಯಾಗಿಯೂ ೪ ಮುಖದಿಂದ ೧೪ ಮುಖದ ವರೆಗೆ ಸಣ್ಣದು ದೊಡ್ಡದು ಸಹ ಈ ಎರಡು ನಮೂನೆಯಲ್ಲಿ ದೊರೆಯುವುದು. ಮತ್ತು ಇವುಗಳಲ್ಲದೆ ರೇಷ್ಮೆ ಮುಗುಟ, ಕಾಶ್ಮೀರ ಶಾಲು, ರೇಷ್ಮೆ ಜರೀಸೀರೆ, ಜರಿಕಣ, ಪೇಟ, ನೂಳಕಾಲ್ಮರು ನಮೂನೆ ವಸ್ತ್ರ ಜಗನ್ನಾಥ ಜಾಗಂಟೆ, ನೇಪಾಳ ಕಸ್ತೂರಿ, ಉತ್ತಮವಾದ ಜರೀ ಖಾದರ್ ಮೊದಲಾದ ಅಮೂಲ್ಯವಾದ ಸಾಮಾನು ಎಲ್ಲವರಿಗಿಂತಲೂ ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಇಚ್ಛೆಸಿದವರಿಗೆ ವಿ. ಪಿ ಮೂಲಕ ಕಳುಹಿಸಲಾದೀತು.

ರುದ್ರಾಕ್ಷಿಗಳ ವಿವರ:—

೪ ಮುಖದ ರುದ್ರಾಕ್ಷಿ ಕಂಠಿ ಅಂದರೆ ೩೨ ಮಣಿಗಳಿರುವ ಸರ ೧ ಕ್ಕೆ ೧೨ ಆಣೆಯಿಂದ ೩೦ ರೂಪಾಯಿವರೆಗೆ. ೫ ಮುಖದ ಕಂಠಿ ೧ಕ್ಕೆ ೮ ಆಣೆಯಿಂದ ೩೦ ರೂಪಾಯಿವರೆಗೆ ೬ ಮುಖದ ಕಂಠಿ ೧ಕ್ಕೆ ೧೨ ಯಿಂದ ೧೦೦ ರೂ. ವರೆಗೆ. ೭ ಮುಖದ ಕಂಠಿ ೧ಕ್ಕೆ ೧೦ ರೂ. ಯಿಂದ ೫೦೦ ರೂ. ವರೆಗೆ. ಇದರಂತೆ ೮, ೯, ೧೦, ೧೧, ೧೨, ೧೩, ೧೪, ಈ ಮುಖಗಳ ಮಣಿ ೧ಕ್ಕೆ ೫ ರೂ. ಯಿಂದ ೩೦ ರೂ. ವರೆಗೆ. ಇದರಲ್ಲಿಯೇ ಕಂಠಿ ಬೇಕಾದರೆ ಸಹ ದೊರೆಯುವುದು. ಸಣ್ಣ ರುದ್ರಾಕ್ಷಿ ಸರ ಅಂದರೆ ೧೦೮ ಮಣಿಯಿರುವ ತೊಗರಿಯ, ಉದ್ದಿನಕಾಳು ಪ್ರಮಾಣದ ಸರ ೧ಕ್ಕೆ ರೂ. ೫ ರಿಂದ ರೂ. ೩೦ ವರೆಗೆ. ಕಡಲೆ ಕಾಳು ಪ್ರಮಾಣದ ೧೦೮ ಮಣಿಯಿರುವ ಸರ ೧ಕ್ಕೆ ರೂ ೨-೮-೦ ಲಾಗಾಯತು ರೂ. ೧೦ ವರೆಗೆ. ಜಪಮಾಲೆ ನೆಲ್ಲಿಕಾಯಿಯಿಂದ ಅವರೇ ಬೀಜದ ಪ್ರಮಾಣದ ೧೦೮ ಇರುವ ಸರ ೧ಕ್ಕೆ ೧೨ ಆಣೆಯಿಂದ ರೂ ೧೦ ವರೆಗೆ. ಸಾಧಾರಣ ತರ ೬ ಆಣೆಯಿಂದ ರೂ. ೩ ವರೆಗೆ. ಗೌರೀಶಂಕರ ರುದ್ರಾಕ್ಷಿ— ಈ ರುದ್ರಾಕ್ಷಿಯು ರುದ್ರಾಕ್ಷಿಗಳಲ್ಲೆಲ್ಲಾ ಶ್ರೇಷ್ಠವೆಂದು ಹೇಳುವರು. ರುದ್ರಾಕ್ಷಿ ಮಣಿ ೧ಕ್ಕೆ ರೂ ೫ ಲಾಗಾಯತು ರೂ. ೫೦ ವರೆಗೆ. ಇಚ್ಛೆಸುವವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ವಿಳಾಸ— ಎಸ್. ನೇಪಾಳ ರುದ್ರಾಕ್ಷಿ ಅಂಡ್ ಕಂಪೆನಿ,
23 ಬನಾರಸ್ ಸಿಟಿ.

ದಿ ಜನರಲ್ ಏಜನ್ಸಿ, ಮೈಸೂರು.

ಕಾದಂಬರಿಗಳು:— ಚಂಡಮಾರುತ ೦-೨-೦; ಚರಿತಾಮೃತಂ ೦-೫-೦; ರಾಜಕಥಾವಲ್ಲರಿ ೦-೫-೦; ಪೀಟರಿನಚರಿತ್ರೆ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೨-೬; ಸೀತೆ ೦-೫-೦; ಸಾಹಸಿಕೆ, ಕಲಾನಾಥ ೦-೮-೦; ಮಹಾಲಕ್ಷ್ಮಿ ೦-೭-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸತ್ಯಸಂಜೀವಿನಿ ೦-೮-೦; ಕೊಪಿನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೨-೦.

40

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕೆಯ್ಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡ ಪಲ್ಲಕ್ಕಿ ಉತ್ಸವದ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸನತೊಳೆಸಹಿತ ಆದ ಸಮಾರಂಭದ ಫೋಟೋ ೧ ಕ್ಕೆ ಕ್ರಯ ೧ ರುಪಾಯಿ

ಶ್ರೀಬಸವೇಶ್ವರ

ಇವರ ಬಾಸಾ ಫೋಟೋ (ರಾಮವಾದಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೋ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೋ ೧ ಕ್ಕೆ ಕ್ರಯ ಫುಲ್ಲಸೈಜು ೧ ರುಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀ ಜಗದ್ಗುರು ತೋಂಟದಾರ್ಯ ಗದಗ, ಶ್ರೀ ಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ಸತ್ಪುರುಷನೂಲಾ, ಹಾಳಕೇರಿ ಅನಂದಸ್ವಾಮಿಯ ಫೋಟೋ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೋ ಸಿಗುತ್ತವೆ. ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ

ಹೊಸಫ್ಯಾಷನ್—ಸದ್ಗೃಹಸ್ಥರು ಗಡಿಯಾರ ಸರ್ಪಳಿಗೆ ಹಚ್ಚುವಲಾಕೇಟುಗಳೂ, ಯಿದರಲ್ಲಿ ಹಿಂದೆ ಮುಂದೆ ಇ ಪ್ರಕಾರ ೨ ಫೋಟೋ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ।॥, ।॥=, ೧, ೧।, ಪ್ರಕಾರ, ಮತ್ತೂ ಬೆಳ್ಳಿಯದು ರು ೧॥ ರೋಲ್ಡ್ ಗೋಲ್ಡ ಭಂಗಾರದ್ದು ದುರ್ಬಿಣದ ಗ್ಲಾಸದೂ ಕ್ರಯ ೨॥, ೨॥। ರೂ.

ಪರೂರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ಧಾಣೆ ಟಿಕೀಟು ಕಳುಹಿಸಿ ಕ್ಯಾಟಲಾಕು ಬೇಕಾದವರು ತರಿಕೊಳ್ಳಿರಿ. ನಮ್ಮವಿಳಾಸ— ಗಂಗಪ್ಪಾ ಜೀರಿಗೆ.

15 ಆರ್ಟಿಸ್ಟ್ ಸೊಲ್ಲಾಪುರ

9 ೫೦೦ ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರೀಮುರಬ್ಬ

ಈ ಮುರಬ್ಬಾವು "ಪಂಜಾಬ್ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂಪಾಯಿಗಳು ಬಹುಮಾನ ಕೊಡಲ್ಪಡುವುದು.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯಕೋಶವು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣಪರಿಯಂತರವೂ ದುಃಖಪಡುವರು. ಈ "ಪಂಜಾಬ್ ಸಾಲಾಮಿಸ್ರೀಮುರಬ್ಬಾ" ವಿನ ಸೇವನೆಯಿಂದ—

ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಕ್ಷಣಕ್ಷಣಕ್ಕೂ ಮೂತ್ರವಾಗುತ್ತಿದ್ದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ದೂರ ನಡೆಯುವುದರಿಂದ ಮೇಲುಬ್ಬುಸ ಬರುವುದು ತಲೆಯ ನೋವೂ ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರಿಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ರಕ್ತವನ್ನು ಹೆಚ್ಚಿಸಿ ವೀರ್ಯವನ್ನು ವೃದ್ಧಿಪಡಿಸುವುದರಲ್ಲಿ ಪಂಜಾಬ್ ಸಾಲಾಮಿಸ್ರೀ ಮುರಬ್ಬಾವಿನ ಹೊರತು ಇದಕ್ಕೆ ಸಮಾನವಾದ ಔಷಧವು ಬೇರೆ ಯಾವುದೂ ಇಲ್ಲವು.

ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ತಾಂಬ್ರದ ಮತ್ತು ಭಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು. ಹೊಟ್ಟೆಯಲ್ಲಿರುವ ಜ್ವರದ ಗಡ್ಡೆಯನ್ನು ನಾಶಪಡಿಸುವುದು. ಶ್ವಾಸ ಖಾಸ ರೋಗಗಳನ್ನು ನಿರ್ಮೂಲಪಡಿಸುವುದು.

ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲ್ ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ ಅಲ್ಲಿನ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳೆಗಡ್ಡೆ, ಶಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರಿ ಎಂದು ಹೇಳಿ ಮೋಸಪಡಿಸುವರು. ಈ ಮುರಬ್ಬಾವನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾಬ್ ಸಾಲಾಮಿಸ್ರಿಯೋ ಅಥವ ಬೇರೇ ತರಹಾದ್ದೋ ಎಂಬುವುದು ಚೆನ್ನಾಗಿ ತಿಳಿದು ಬರುತ್ತೆ. ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧೫ ತೋಲಾ ಮುರಬ್ಬಾವಿರುವ ಡಬ್ಬಾ ೧ಕ್ಕೆ ರೂ ೨-೦-೦; ಟಪಾಲ್ ಖರ್ಚು ನಾಲ್ಕು ಆಣೆ ಅನುಪಾನಪತ್ರಿಕೆ ಔಷಧದ ಸಂಗಡ ಇರುತ್ತೆ.

ಅತ್ಯುತ್ತಮವಾದ ವನೌಷಧಗಳು.

೧. ಧಾತುಪುಷ್ಟಿಚೂರ್ಣ— ಕ್ರಯ ೫ ಆಣೆ.

೨ ರೋಮನಾಶಕ ಮತ್ತು ವೃಶ್ಚಿಕದಂಷ್ಟ್ರ ತೈಲವು ಚೇಳಿನ ಹೊಡತಕ್ಕೂ ಮತ್ತು ಕೂದಲು ತೆಗೆಯುವುದಕ್ಕೂ ಬಹಳ ಒಳ್ಳೆಯದು ಕ್ರಯ ೨ ಆಣೆ.

೩ ವಾತನಿವಾರಣ ತೈಲವು ಕ್ರಯ ೪ ಆಣೆ.

೪ ಹೊಟ್ಟೆನೋವಿಗೆ ಔಷಧ ಕ್ರಯ ೨ ಆಣೆ ೬ ಪೈ.

೫ ಕೆಮ್ಮಲು ರೋಗಕ್ಕೆ ಔಷಧ ೪ ಆಣೆ.

೬ ವ್ರಣಕ್ಕೆ ಔಷಧ ೪ ಆಣೆ.

೭ ಆಶ್ಚರ್ಯಕರವಾದ ವೀರ್ಯಸ್ತಂಭದ ಗುಳಿಗೆ ೪ ಆಣೆ.

೮ ತಲೆನೋವಿಗೆ ತೈಲವು ೨ ಆಣೆ ೬ ಪೈ.

೯ ಪ್ರಮೇಹ ನಿವಾರಣ ಭಸ್ಮವು—೮ ಆಣೆ.

೧೦ ಉಷ್ಣಕಾರಕಕ್ಕೆ ಮಾತ್ರೆಗಳು—ರೂ. ೧.

೧೧ ಮೂಲವ್ಯಾಧಿಗೆ ಔಷಧ—೮ ಆಣೆ.

೧೨ ಕಣ್ಣಿಗೆ ಸುರ್ಮಾ—೪ ಆಣೆ.

೧೩ ದಂತಚೂರ್ಣವು—೧ ಆಣೆ ೩ ಪೈ.

೧೪ ಕೂದಲು ಬೆಳೆಯುವ ಎಣ್ಣೆ(ಪಿಂಡೋಲಕ್ಷ್ಮಿ [illegible]

ವಿಳಾಸ:— ಡಿ. ಮುನ್ನಾಲಾಲ್, ದಿಲ್ಲಿ ವೈದ್ಯರು,
೨೩. ಹಳೇ ಸಿದ್ದಿಕಟ್ಟೆ. ಬೆಂಗಳೂರು ಸಿಟಿ.

ನಮ್ಮ ಏಜಂಟರು:—

5. ಹಾಜಿಸಾಹೇಬ್‌ಮಹಮದ್ ಅಬೀಬ್ಜಾಕೋಬ್
ಬೆಂಗಳೂರು ಸಿಟಿ.

ಡಿ. ಸೈಯದ್ ಉಸ್ಮಾನ್ ಅಂಡ್‌ಕೊ ದೊಡ್ಡಪೇಟೆ,
ಬೆಂಗಳೂರು ಸಿಟಿ.

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ ೦-೧೨-೦; ೫-೦-೦; ೩-೯-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪ ಟಿನ್ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು. ಟಿ. ಎಲ್. ಉಪಾಧ್ಯಾಯ,

9 ಸುಗಂಧಶಾರಿ, ಮೈಸೂರು

ವೀರಶೈವ ಕನ್ಯೆಯು ಬೇಕು.

3

ಶೀಲವಂತ, ವಿರಕ್ತವಂತ, ಅಥವಾ ಪಂಚಮಶಾಲೆ ಸುಸ್ವರೂಪ, ಕುಲೀನ, ಸುಶೀಲ, ೧೪ ವರ್ಷದ ಮೇಲಿನ ಕನ್ಯಾಗಿರಬೇಕು. ಶಿಕ್ಷಣವಾಗಿ ಇದ್ದರೆ ಬಹಳ ಉತ್ತಮ. (ಸಂಬಂಧದವರಿಗೆ ವಿಶ್ವಾಸದ ಕೊಡುವವರು) ಕನ್ಯೆಯು ಫೋಟೋ ಕಳುಹಿಸಬೇಕು.

ವರನು ಶೀಲವಂತ ಶಾಖೆಯವನು ಇದ್ದು ವಕೀಲರು ಇದ್ದಾರೆ. ಮತ್ತು ಚಿಕ್ಕಲತನದ ಉತ್ಪನ್ನ ವರ್ಷಕ್ಕೆ ೪೦೦೦ ಸಾವಿರ ಇರುತ್ತದೆ. ವಿಶೇಷ ಖುಲಾಸಾ ಪತ್ರದ್ವಾರದಿಂದ,

ಅಯ್ಯನಪ್ಪ ಶೀಲವಂತ ಶುಕ್ರವಾರಪೇಟ ಸೋಲಾಪುರ.

29 ಸಚಿತ್ರ ಶುಕಸಪ್ತತಿ ಕಥೆಗಳು ರೂ. ೧-೮-೦ (೫೧೨ ಪುಟ) ಟಪಾಲು ಹಾಸಲು ೪ ಆಣೆ. ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ ರೂ ೧-೮-೦. (೫೩೩ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ! ನೂತನತೆಯು ಬೇಕಾದರೆ, ವಾಕ್ಚಾತುರಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಲಿಚ್ಛೆಪಟ್ಟರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯುಲ್ಲಾಸಯಿದ್ದರೆ ದಯುವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೬೦ ಪುಟಗಳಿಂದ ಕೂಡಿದ ೩೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ ೧-೪-೦ ಟಪಾಲ್ ಹಾಸಲು ೩ ಆಣೆ.

ಈಗಲೇ ಬರೆ ನಿವಾ..ಮ್ಮಲ್ಲಿ ಇನ್ನೂ ಅನೇಕ ಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

ಕನ್ನಡ ಇಂಡಿಯನ್ ಪೆನಲ್ ಕೋಡ್

ಇದರಿಂದ ಮೈಸೂರ್, ಮದ್ರಾಸ್, ಬೊಂಬಾಯಿ ಜಿಲ್ಲಾ ಕನ್ನಡಭಾಷಾ ವಾಚಕಮಹಾಶಯರಿಗೆ ತಿಳಿಸುವದೇನೆಂದರೆ-

ಶ್ರೀಮದಿಂಡಿಯಾ ಗೌರ್ನರ್ ಜನರಲ್‌ರವರ ಅನುಮತಿ ಪ್ರಕಾರ ಸನ್ ೧೮೬೦ನೇ ಇಸವಿಯಲ್ಲಿ ಮುಂಜೂರಾದ "ಇಂಡಿಯನ್ ಪೆನಲ್ ಕೋಡ್" ಎಂಬ ಆಕ್ಟನ್ನು ಈಗ ಅನೇಕ ಜಡ್ಜಿಗಳ ಟಿಪ್ಪಣಿಗಳೊಡನೆಯೂ, ಅಮೆಂಡ್‌ಮೆಂಟುಗಳೊಡನೆಯೂ ಅಂದವಾದ ಕಾಗದದಲ್ಲಿ ಸ್ಪುಟವಾದ ಅಕ್ಷರಗಳಿಂದ ಮುದ್ರಣವಾಗಿ ಮಾರಾಟಕ್ಕೆ ಸಿದ್ಧವಾಗಿದೆ. ಈ ಆಕ್ಟಿನಲ್ಲಿ ಪ್ರತಿ ಸೆಕ್ಷನಿಗೂ ಫಿರ್ಯಾದಿಗಳೂ, ಅಪರಾಧಿಗಳೂ, ಪೋಲೀಸ್ ಅಧಿಕಾರಿಗಳೂ, ಮ್ಯಾಜಿಸ್ಟ್ರೇಟರುಗಳೂ ನಡಿಸಬೇಕಾದ ಆಚರಣೆಗಳೆಂದರೆ: ನಡೆಯುವ ಮೊಕದ್ದಮೆಯನ್ನು ಯಾವ ಕೋರ್ಟಲ್ಲಿ ವಿಚಾರಣೆ ಮಾಡಬೇಕು? ವಾರಂಟಿಲ್ಲದೆ ಹಿಡಿಯಬಹುದೇ, ಹಿಡಿದು ಕೊಡಬೇಕೆ? ಸಮನ್ ಕೊಡತಕ್ಕದ್ದೇ, ವಾರಂಟು ಕೊಡತಕ್ಕದ್ದೇ? ಜಾಮೀನ್ ತೆಗೆದುಕೊಂಡು ಬಿಡಬಹುದೇ? ರಾಜಿಯಾಗಬಹುದೇ, ರಾಜಿಯಾಗತಕ್ಕದ್ದಲ್ಲವೇ? ಎಂಬ ತಪ್ಸೀಲುಗಳನ್ನು ವಿವರಿಸಲ್ಪಟ್ಟಿರುವುದು. ಈ ಪುಸ್ತಕವು ಸರ್ಕಾರಿ ಅಧಿಕಾರಿಗಳಿಗೂ, ಪೋಲೀಸಿನವರಿಗೂ, ಪಟೇಲ್ ಶ್ಯಾನುಭೋಗರುಗಳಿಗೂ, ವರ್ತಕರುಗಳಿಗೂ, ಜಮೀನ್ದಾರರುಗಳಿಗೂ ಇತರ ಸಮಸ್ತ ಕಸಬುದಾರರಿಗೂ, ಖುಷ್‌ಬಾಷ್ ಜನಗಳಿಗೂ ಉಪಯೋಗಕರವಾದದ್ದು.

ಈ ಪುಸ್ತಕದಲ್ಲಿ ಚೋರಿ, ಕಳವು, ತಕರಾರು, ಅತಿಕ್ರಮಪ್ರವೇಶ, ಸ್ತ್ರೀಗೆ ಮಾನಭಂಗಪಡಿಸುವದು, ಸ್ತ್ರೀಯರನ್ನು ದುರಾಚಾರಕ್ಕೆ ಸೆಳೆಯುವದು, ಆಸಾಮಿ ಚೋರಿ, ಗಂಡನು ಹೆಂಡತಿ ೧೨ ವರುಷಗಳಿಗೆ ಕಡಮೆ ವಯಸ್ಸಿನವಳಾಗಿರುವಾಗ್ಗೆ ಸ್ತ್ರೀಸಂಗ ಮಾಡಬಹುದೇ? ಮುಂತಾದ ಮೊಕದ್ದಮೆಗಳಲ್ಲಿ ಜಡ್ಜಿಗಳು ಕೊಟ್ಟಿರತಕ್ಕ ಅಭಿಪ್ರಾಯಗಳು ಸೂಚಿಸಲ್ಪಟ್ಟಿರುವವು. ಕನ್ನಡದಲ್ಲಿ ಇದುವರೆಗೆ ಇಂಥಾ ಪುಸ್ತಕವು ಇನ್ನೆಲ್ಲಿಯೂ ಇಲ್ಲವು.

ಕ್ರಯ ಪ್ರತಿ ೧ ಕ್ಕೆ ೨ ರೂಪಾಯಿ; ಟಪಾಲ್ ಛಾರ್ಜು ೪ ಆಣೆ.

ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ. ಪುಸ್ತಕಗಳ ಕ್ರಯ ಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು.

46 ನಮ್ಮ ವಿಳಾಸ— ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ.

ಕಾಲ್ಯದ ವೆಂಕಟಾಚಲ ಪಂಡಿತರ ಸಿದ್ಧ ಔಷಧಗಳು

7

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ



ಸಂದುಗಳ ನೋವು ಮೈ ಕಾಲು ಹೊತೆ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ...ನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾಕೆ ಮದ್ದು)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ; ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇ ಒಂದು ಬುದ್ದಿಯು ನಿಮ್ಮಬಳಿ ಇದ್ದರೆ ಮತ್ತೊಂದು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತವಿದೊಂದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುದ್ದಿಯ ಬೆಲೆ ೧ ೦-೦.

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ನ್ಯಾಯದರ್ಪಣ. 22

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯು, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ್ಯ ಮುನಸಿಫ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸೂ, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆಚರಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ವಗೈರೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯು ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರುತ್ತವೆ.

ಬೆಲೆ ರೂ. 1—8—0. ವಿ. ಪಿ. ಮೂಲ್ಕ 1—12—0.

ಎಂ. ಎಸ್. ನಂಜಪ್ಪನವರು,

ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಗಂಧರಾಜ ನಸ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ) ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾಗಿದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚಿಟಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜನ್ ಡಬ್ಬಿಗೆ ೧-೧೪-೦

ಉತ್ತಮವಾದ ನಶ್ಯದಪುಡಿ.

ಘಾಟು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವೆ. ನೀವುಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,

ಗೋಪಸೆಟ್ಟಿಪುರ, ಹನೂರು ಪೋಸ್ಟ್

18 ಕೊಳ್ಳೇಗಾಲದ ತಾಲ್ಲೂಕು

೧೯೧೪ ನೆಯ ಇಸವಿ ಜೂನ್ ತಾ॥ ೨೨ರಿಂದ ೧೯೧೪ನೆಯ ಜೂನ್ ತಾ॥ ೨೮ರವರೆಗೆ ಸಲ್ಲುವ ಶಾಲೀವಾಹನಶಕೆ ೧೮೩೬ ನೆಯ ಆನಂದನಾಮ ಸಂ॥ ದ ಜ್ಯೇಷ್ಠ ಬ॥ ಚತುರ್ದಶಿಯಿಂದ ಆಷಾಢ ಶು॥ ಪಂಚಮಿವರೆಗಿನ ಪಂಚಾಂಗ.

ತಾ॥	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ಶೇದಿ ಮಿಥು
22	ಸೋ	ಚ	34-47	ರೋ	24-0	9
23	[1] ಮಂ	ಅ	36-28	ಮೃ	27-36	10
24	ಬುಧ	ಪಾ	36-56	ಆದ್ರಾ	30-1	11
25	[2] ಗುರು	ಬಿ	36-5	ಪು	31-5	12
26	[3] ಶುಕ್ರ	ತ	34-	ಪುಷ್ಯ	31-2	13
27	[4] ಶನಿ	ಚ	30-53	ಆಶ್ಲೇ	29-47	14
28	[5] ಭಾ	ಪಂ	26-39	ಮಖಾ	27-37	15

(1) ಶತಾಬ್ದಂ ಸರ್ವತ್ರಾ ಅಮಾವಾಸ್ಯ, ಪದ್ಮಕಃ, (2) ಚಂದ್ರೋದಯಃ ಶಾಬಾನ್ ಚಂ ೧, (3) ನಂಜನಗೂಡಿನಲ್ಲಿ ಮಾರ್ಕಂಡೇಯೋತ್ಸವಃ, (4) ತಿರುವನಂದಾಳ್ವಾರ್ ತಿರುನಕ್ಷತ್ರಂ ಸೋಸಲೆ, ಶೇಷಚಂದ್ರಿಕಾಚಾರರ ಪುಂ, ದೇಶರಾಜೇ ಅರಸಿನವರ ಕುಮಾರರ ವರ್ಧಂತಿ, (5) ಕುಮಾರ ಪಂಚಮೀ ತಿಥಿಃ

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED M NO 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ವಾರ್ಷಿಕ ಚಂದಾ ೧-೦-೦

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈ ಘನಪಥಕೃತಾವತಾರಾ ಪಕ್ಷ್ಯಜನಹೃತ್ತಮೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಧೀಪ್ಸದಶೀಲ ನಾಕಲಿತಸಾದ್ಗುಣ್ಯಾಲಪಾಲಂವಲಂ॥
ಸಿನಾತೀತಯಶಃಪ್ರತಾಪವಿಪುಲಂಸದ್ವೃತ್ತಮಾಲಾಕುಲಂ । ಶ್ರೀಮಂಬಿತ್ತಿಳೆಯುಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ॥

ಅಂಚೆವೆಚ್ಚ ಸೇರಿ ೧-೧೪-೦

REGISTERED, M NO 124

ಸಂಪುಟ ೨೩) ಮೈಸೂರ್ ಸ್ಟಾರ್ ಸನ್ ೧೯೧೪ ನೆಯ ಇಸವಿ ಜೂನ್ ತಾರೀಖು ೨೨ ನೆಯ ಸೋಮವಾರ. (ಸಂಚಿಕೆ ೨೬

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಈಗತಾನೆ ಶೀಮೆಯಿಂದ ಬಂದಿರತಕ್ಕ ರಬ್ಬರ್ ಹೊಸ ಬೈಸ್ಕಲ್‌ಗಳು. 22



ಪ್ರತಿಯೊಂದು ಬೈಸ್ಕಲಿನ ಸಂಗಡಲೂ ಅತ್ಯವಶ್ಯಕವಾಗಿ ರಿಪೇರಿಮಾಡಿಕೊಳ್ಳಲು ಬೇಕಾದ ಆಯುಧಗಳೂ ಮತ್ತೂ ಆಯುಧಗಳನ್ನಿಡತಕ್ಕ ಶೀಮೆತಯಾರಿ ಚರ್ಮದ ಚೀಲ ೧. ಗಾಳೀ ತುಂಬುವ ಪಂಪ್ ೧. ಸುಂದರವಾದ ಬೆಲ್ ೧. ಇಷ್ಟು ಸಾಮಾನುಗಳನ್ನೂ ಮುಫತ್ತು ಕೊಡಲಾಗುತ್ತೆ.

ರಾಯಲ್ ಮೇಲ್ ಬೈಸ್ಕಲ್—ಕೇಂಬ್ರಿಡ್ಜ್ ಟೈರ್, ಡನ್‌ಲಪ್‌ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೮೫-೦-೦.
ಬ್ರಿಟಾನಿಕ್ ಬೈಸ್ಕಲ್—ಡನ್‌ಲಪ್ ಟೈರ್, ಡನ್‌ಲಪ್ ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೯೦-೦-೦.
ರಾಯಲ್‌ಕಿಂಗ್ ಬೈಸ್ಕಲ್—ಕೇಂಬ್ರಿಡ್ಜ್ ಟೈರ್, ಡನ್‌ಲಪ್ ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೮೦-೦-೦.
ರಾಯಲ್ ನೈಟ್ ಬೈಸ್ಕಲ್—ಪಾಮರ್ ಟೈರ್, ಪಾಮರ್ ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೯೨-೦-೦.
ರಾಯಲ್ ಆರ್‌ಚರ್ ಬೈಸ್ಕಲ್—ಬುಕಾನಿಯರ್ ಟೈರ್ ಬುಕಾನಿಯರ್ ಟ್ಯೂಬ್ ಹಾಕಿದ್ದು ೩೦-೦-೦.
ಬಿ. ಎಸ್. ಎ. ಫಿಟಿಂಗ್ ಬೈಸ್ಕಲ್, ಡನ್‌ಲಪ್‌ಟೈರ್, ಡನ್‌ಲಪ್‌ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೧೩೫-೦-೦.
ಬೈಸ್ಕಲ್ ಬಿಡಿಸಾಮಾನುಗಳೂ ಸದಾ ನಮ್ಮಲ್ಲಿ ವಿಕರಿಗೆ ಸಿದ್ಧವಾಗಿವೆ. ಬೈಸ್ಕಲ್ಲಿಗೆ ಆರ್ಡರ್‌ಮಾಡತಕ್ಕವರು ೧೦-೦-೦ ರೂಪಾಯಿ ಅಡ್ವಾನ್ಸು ಕಳುಹಿಸಬೇಕು. ಬಾಕಿ ಮೊಬಲಿಗೆ ರೈಲ್ವೆ ರಶೀದಿಯನ್ನು ವಿ.ಪಿ.ಮಾಡಲಾಗುತ್ತೆ.

"ಜಮಲೆ ಇ ಜೊಂದು ಅತ್ಯಾಶ್ಚರ್ಯಕರವಾದ ಹೊಸ ಕಾದಂಬರಿ (ಬಂಗಾಳಿ ನಾವೆಲ್) ಓದುವುದಕ್ಕೆ ಕುಳಿತರೆ ಮುಗಿಸುವವರೆಗೂ ಮನಸ್ಸು ನಿಲ್ಲುವುದಿಲ್ಲಾ. ಓದುತ್ತ ಓದುತ್ತಾ ಹೊಸಹೊಸ ಭಾವಗಳು ತಲೆದೋರಿ ರೋಮಾಂಚವುಂಟಾಗುವುದು. ಪಾಠಕರೆ! ಗೋರಿಯಲ್ಲಿದ್ದ ಹೆಂಗಸಿನ ಶವಕ್ಕೆ ಪ್ರತಿಯಾಗಿ ಗಂಡುಸಿನ ಶವವಿರುವುದನ್ನು ನೋಡುತ್ತಲೇ ಆಶ್ಚರ್ಯ ಸಮುದ್ರದಲ್ಲಿ ಮುಳುಗಿಹೋಗುವಿರಿ. ಕ್ರಯ ಪ್ರತಿ ೧ ಕ್ಕೆ ೦-೬-೦ ಪೋಸ್ಟೇಜು ೦-೨-೦.

ಹೊಸಪುಸ್ತಕಗಳು.

ವೀರಶೈವರಿಗೂ ಇತರರಿಗೂ ಸಹ ಅತ್ಯವಶ್ಯಕಬೇಕಾದ್ದು.

ಮನೋವಿಜಯ— ವೇದವೇದಾಂಗ ವೇದಾಂತ ಪುರಾಣ ಇತಿಹಾಸಾದಿಗಳಲ್ಲಿ ಬಹು ಪ್ರವೀಣರಾಗಿಯೂ ಅನೇಕ ಮತಸಿದ್ಧಾಂತದಲ್ಲಿ ಕುಶಲರಾಗಿಯೂ ಇದ್ದ ಶ್ರೀ ಗುರುಸ್ವಾಮಿಗಳವರಿಂದ ವೀರಶೈವರಿಗೂ ಅದ್ವೈತಮತಸ್ಥರಿಗೂ ಬಹು ಪ್ರಯೋಜನವಾಗಿರುವಂತೆ ಮನೋಹರವಾಗಿ ರಚಿಸಲ್ಪಟ್ಟಿದೆ. ಇದಕ್ಕೆ ಪರಮಪೂಜ್ಯರಾದ ಶ್ರೀ ತೋಂಟದ ಸಿದ್ಧಲಿಂಗಸ್ವಾಮಿಗಳು ಸನುಸ್ಥರಿಗೂ ಸುಲಭವಾಗಿ ತಿಳಿಯುವಂತೆ ತಾತ್ಪರ್ಯವನ್ನು ಸ್ವಾರಸ್ಯವಾಗಿ ಬರೆದಿದ್ದಾರೆ. ಸರ್ವರೂ ಅತ್ಯವಶ್ಯಕ ಓದಬೇಕಾದ್ದು. ಇದರ ಕ್ರಯ ಪ್ರತಿ ೧ ಕ್ಕೆ ೦-೮-೦ ವಿ.ಪಿ. ಮೂಲಕ ೧೧ ಆಣೆ.

ಶತಕಪಂಚಕ— ಇದರಲ್ಲಿ ನಿರಂಜನಶತಕ, ಶಿದ್ಧಲಿಂಗೇಶ್ವರಶತಕ, ನಿಷ್ಕಲಶತಕ, ಉಮಾಮಹೇಶ್ವರಶತಕ, ಸಂಗಮೇಶ್ವರ ಶತಕಗಳೆಂಬ ೫ ಶತಕಗಳಿವೆ. ೪-೫ ನೇ ಶತಕಗಳು ಶಿವಪೂಜಾಕಾಲದಲ್ಲಿ ಪಾರಾಯಣಕ್ಕೆ ಯೋಗ್ಯವಾಗಿವೆ. ಈ ಗ್ರಂಥವನ್ನು ಶ್ರೀ ತೋಂಟದಾರ್ಯರು ಚೆನ್ನಾಗಿತಿಳಿಯುವಂತೆ ರಚಿಸಿರುವರು ಇದರ ಕ್ರಯ ಪ್ರತಿ ೧ ಕ್ಕೆ ೦-೬-೦ ವಿ.ಪಿ. ಮೂಲ್ಕ ೦-೮-೦.

ಮುಕ್ತ್ಯಂಗನ ಕಂಠಮಾಲೆ ಮತ್ತು ಜ್ಯೋತಿರ್ಮಯಶಾಂಭವಿ ಎಂಬೀವಚನ ಗ್ರಂಥಗಳು ವೀರಶೈವಸಿದ್ಧಾಂತವನ್ನು ಸುಲಭವಾಗಿ ಅಬಾಲವೃದ್ಧರಿಗೂ ಬೋಧಿಸತಕ್ಕವುಗಳಾಗಿವೆ. ಇವೆರಡೂ ಇರುವ ಪ್ರತಿ ೧ಕ್ಕೆ ೦-೪-೦ ವಿ.ಪಿ. ಮೂಲ್ಕ ೦-೬-೦.

ಶ್ರೀ ಬಸವೇಶ್ವರ ಸ್ತೋತ್ರಶತಕ—ಗುರುಬೋಧೆ, ಮನೋಬೋಧೆ, ಲಿಂಗತ್ರಿವಿಧಿ, ಶ್ರೀಬಸವೇಶ್ವರ ಸ್ತೋತ್ರ ಎಂಬೀನಾಲ್ಕು ಒಂದೇ ಪುಸ್ತಕದಲ್ಲಿ ಮುದ್ರಿತವಾಗಿವೆ. ಶಿವಪೂಜಾಕಾಲದಲ್ಲಿ ಪಾರಾಯಣಕ್ಕೆ ಯೋಗ್ಯವಾಗಿವೆ. ಕ್ರಯ ಪ್ರತಿ ೧ ಕ್ಕೆ ೦-೩-೦ ವಿ.ಪಿ. ಮೂಲಕ ೦-೫-೦.

ಮೇಲ್ಕಂಡ ನಾಲ್ಕು ಪುಸ್ತಕಗಳನ್ನು ಒಂದೇಸಾರಿ ತರಿಸಿಕೊಳ್ಳುವವರಿಗೆ ಟಪಾಲ್ ಖರ್ಚು ಸಹ ಸೇರಿ ೧-೧೦-೦.

ರಬ್ಬರ್ ವಾಚ್‌ಗಳ ಕ್ರಯದ ತಪ್ಸೀಲ್.

ರಾಸ್ಕೋಪ್ ಸಿಸ್ಟಂವಾಚ್ ೧ ಕ್ಕೆ ೨-೮-೦ ಗನ್‌ಟೈಂ ವಾಚ್ ೧ಕ್ಕೆ ೩-೮-೦, ಡಿಟೋ ನಮೂನೆ ಚಿಕ್ಕಸೈಜ್ ವಾಚ್ ೧ ಕ್ಕೆ ೪-೪-೦, ಸ್ಪೆಷಲ್ ಸರ್ವಿಸ್ ಚಿಕ್ಕ ಸೈಜ್ ವಾಚ್ ೧ ಕ್ಕೆ ೫-೪-೦, ಬರ್ಮಾ ಟೈಂಪೀಸ್ ೧ ಕ್ಕೆ ೧-೪-೦ ಡಿಟೋ ಅಲಾರಂ ಇರತಕ್ಕದ್ದು ೨-೪-೦ ಡಿಟೋ ರಬ್ಬರಿನಲ್ಲಿ ಘಂಟೆ ನಿಮಿಷ ಸೆಕೆಂಡ್ ತೋರಿಸಿ ಅಲಾರಂ ಸಹ ಇದ್ದು ತಾರೀಖು ಕೂಡ ತೋರಿಸತಕ್ಕ ದೊಡ್ಡ ಟೈಂಪೀಸ್ ೧ ಕ್ಕೆ ೩-೪-೦, ಅನ್‌ಸೋನಿಯಾ "ಬಿ" ಟೈಂಪೀಸ್ ೧ ಕ್ಕೆ ೨-೮-೦.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್. ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲಿಚರಿತ್ರೆ	೦—೫—೦
ಸಟೀಕ ನಂದೀವ್ರತ	೦—೪—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸಪುಸ್ತಕಗಳು.

141

ಬಸವರಾಜವಿಜಯಂ— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸೂಕ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ ವರ್ಷದ ಚಂದಾ ೨-೮-೦.

ಎಚ್. ಆರ್. ಕರಿಬಸವಶಾಸ್ತ್ರಿ,

ಗ್ರಂಥಪ್ರಕಾಶಕಮಂಡಲಿ, ಮೈಸೂರು.

ಪ್ರಕಟನೆ.

ಪ್ರಿಂಟಿಂಗಾಫೀಸಿನವರು ಅಗತ್ಯವಾಗಿ ಗಮನಿಸತಕ್ಕದು.

ನಮ್ಮಲ್ಲಿ ಈ ಸ್ಟಾರ್ ಪತ್ರಿಕೆಯ ೧, ೨, ೩, ೪, ೭ ಮತ್ತೂ ೮ನೇ ಪುಟಗಳಲ್ಲುಪಯೋಗಿಸಲ್ಪಟ್ಟಿರುವ ಪೈಕ ಅಥವಾ ೧೨ ಪಾಯಿಂಟ್ ಅಕ್ಷರಗಳ ಮತ್ತೂ ಈ ಪ್ರಕಟನೆಗುಪಯೋಗಿಸಲ್ಪಟ್ಟಿರುವ ಬೂರ್ಜೈಸ್ ಮಿನಿಯನ್ ಅಥವಾ ೧೪ ಪಾಯಿಂಟ್ ಅಕ್ಷರಗಳ ಮ್ಯಾಟ್ರಿಕ್ಸುಗಳೂ, ಅವುಗಳ ಮೌಲ್ಡುಗಳೂ ಇವನ್ನು ಎರಕವೆರೆಯುವ ಯಂತ್ರವೂ ಅದಕ್ಕೆ ಸಂಬಂಧಪಟ್ಟ ಲೈನ್ ಗೇಜ್ ಪೇಪರ್ ಗೇಜ್ ಹೈಟ್ ಗೇಜ್ ಡ್ರೆಸ್ಸಿಂಗ್ ಟೇಬಲ್ ಕರ್ನಿಂಗ್ ಮಿಷನ್ನು ಮುಂತಾದ ಸಾಮಾಗ್ರಿಗಳೂ ಸೂಪರ್ ರಾಯಲ್ ಸೈಜನ್ನು ಪ್ರಿಂಟ್ ಮಾಡುವ ಸಿಲಿಂಡರ್ ಮಿಷನ್ನು ಸಹ ಮಾರಾಟಕ್ಕೆ ಸಿದ್ಧವಾಗಿವೆ. ಈ ಮಿಷನ್ನಿನಲ್ಲೇ ಈ ಸ್ಟಾರ್ ಪತ್ರಿಕೆಯು ಪ್ರಿಂಟುಮಾಡಲ್ಪಡುತ್ತಿರುವುದು. ಎರಕವೆರೆಯುವ ಮಿಷನ್ನು ಬಹಳ ಸ್ವಲ್ಪ ಕೆಲಸವನ್ನು ಮಾತ್ರ ಮಾಡಿ ಹೊಸದಾಗಿಯೇ ಯಿರುವುದು. ಇಷ್ಟವುಳ್ಳವರು ಇವುಗಳ ಬೆಲೆ ಮೊದಲಾದವನ್ನು ನಮಗೆ ಬರೆದು ತಿಳಿದುಕೊಳ್ಳಬಹುದಲ್ಲದೆ ಪ್ರತ್ಯಕ್ಷದಲ್ಲಿ ಬಂದು ನೋಡಬಹುದು.

ವೈ. ವಿರೂಪಾಕ್ಷಯ್ಯ,
ಪ್ರೊಪ್ರೈಟರ್
ಕ್ಯಾಕ್ಸ್ಟನ್ ಪ್ರೆಸ್, ಮೈಸೂರು.

ಮೈಸೂರು ವೀರಶೈವ ವಿದ್ಯಾಭಿವೃದ್ಧಿಫಂಡ್ ಸಭೆಯಿಂದ ಸ್ಕಾಲರ್‌ಶಿಪ್ ಯಾ ವಿದ್ಯಾರ್ಥಿವೇತನ ಪಡೆಯಲಪೇಕ್ಷಿಸುವ ಮೈಸೂರು ಲೋವರ್‌ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ಪ್ರೌಢವಿದ್ಯಾಭ್ಯಾಸಮಾಡಲು ದ್ರವ್ಯವಿಲ್ಲದಿರುವ ವೀರಶೈವ ಬಡವಿದ್ಯಾರ್ಥಿಗಳು ತಮ್ಮ ಸ್ಥಳದಲ್ಲಿನ ದೊಡ್ಡಮನುಷ್ಯರಿಂದಲೂ, ಅಭ್ಯಾಸಮಾಡಿದ ಸ್ಕೂಲಿನ ಹೆಡ್‌ಮಾಸ್ಟರಿಂದಲೂ ಸರ್ಟಿಫಿಕೇಟುಗಳನಿಸಿ ಅಪ್ಲಿಕೇಷನನ್ನು 1914 ನೇ ಜುಲೈ 15ನೇ ತಾ॥ ನೊಳಗೆ ಈ ಕೆಳಗಿನ ವಿಳಾಸಕ್ಕೆ ತಲ್ಪುವಂತೆ ಹಾಕಿಕೊಳ್ಳತಕ್ಕದ್ದು.

ಎಚ್. ಕೆ. ವೀರಬಸವಯ್ಯ, ಬಿ. ಎ. ಬಿ. ಎಲ್.
ಆನರೆರಿ ಸೆಕ್ರೆಟರಿ.
ಮೈಸೂರು ವೀರಶೈವ ವಿದ್ಯಾಭಿವೃದ್ಧಿಫಂಡ್ ಸಭೆ,
ತಾ॥ 20-6-1914 ಬೆಂಗಳೂರು.

ಜಾಹೀರ ನೋಟೀಸು

ಇದರಿಂದ ತಿಳಿಸುವದರಲ್ಲಿ ಬರುವದೇನಂದರೆ:—ಧಾರವಾಡ ಜಿಲ್ಲಾ ಕೆರ್ಜಗಿ ತಾಲೂಕಿನಲ್ಲಿರುವ ದೇವಿಹೊಸೂರವೆಂಬ ಗ್ರಾಮದಲ್ಲಿ ಕನ್ನಡಭಾಷೆಯಲ್ಲಿ ಒಂದು ಒಕ್ಕಲತನದ ಶಾಲೆಯು ಆರಂಭವಾಗಿರುವದು. ಇಲ್ಲಿ ಒಕ್ಕಲಿಗರ ೧೬—೧೭ ವರ್ಷದ ವಯಸ್ಸಿನ ಹುಡುಗರನ್ನು ಕರಕೊಂಡು ಎರಡು ವರ್ಷಗಳವರೆಗೆ ಸರಕಾರೀ ಖರ್ಚಿನಿಂದ ಅಭ್ಯಾಸಮಾಡಿಸುವದರಲ್ಲಿ ಬರುವದು. ಶಾಲೆಯ ಸಂಬಂಧಿನಿಯಮಗಳನ್ನು ಈ ಮೊದಲೇ ಪ್ರಸಿದ್ಧಮಾಡಿದ್ದೇವೆ.

ಈ ಶಾಲೆಯು ಇಮಾರತು ಇನ್ನೂ ತಯಾರಾಗಿಲ್ಲವಾದುದರಿಂದ ಶಾಲೆಯು ಆರಂಭವಾಗಿರುವದಿಲ್ಲೆಂಬ ತಪ್ಪು ಸಮಜೂತಿಯಿಂದಲೂ ಇಲ್ಲಿ ಊಟದವ್ಯವಸ್ಥೆಯು ಇರಲಿಕ್ಕಿಲ್ಲೆಂಬ ಭಯದಿಂದಲೂ ಚಿಕ್ಕಹುಡುಗರನ್ನು ಹೇಗೆ ಎರಡನೇಊರಲ್ಲಿ ಡಬೇಕೆಂಬ ಮನಸ್ಸಿನ ಸಂಕೋಚದಿಂದಲೂ ಮೊದಲು ನೋಟೀಸಿನಲ್ಲಿ ಕೊಟ್ಟ ಪ್ರಕಾರ ಮೇ॥ ೧ ನೇ ತಾರೀಖಿನನಂತರ ಅರ್ಜಿಗಳನ್ನು ಹಿಡಿಯಲಿಕ್ಕಿಲ್ಲೆಂಬ ಸಮಜೂತಿಯಿಂದಲೂ, ಎಷ್ಟೋಜನರು ಅರ್ಜಿಮಾಡಬೇಕೆಂಬುದು ಮನಸ್ಸಿನಲ್ಲಿದ್ದಾಗ್ಯೂ ಅರ್ಜಿಮಾಡುವದನ್ನು ಬಿಟ್ಟಿದ್ದಾರೆಂದು ಕೇಳುತ್ತೇವೆ ಈಗ ಶಾಲೆಯು ಸುರುವಾಗಿ ಹುಡುಗರ ಊಟದ (ಬೋರ್ಡಿಂಗಿನ) ವ್ಯವಸ್ಥೆ ಸಹ ಆರಂಭವಾಗಿದೆ ಬ್ರಾಹ್ಮಣ ವ ಲಿಂಗಾಯತ ಎರಡುಬೋರ್ಡಿಂಗಗಳು ಆರಂಭವಾಗಿವೆ. ಆದುದರಿಂದ ತಮ್ಮ ಮಕ್ಕಳನ್ನು ಈಶಾಲೆಗೆ ಕಳುಹಿಸಲಿಚ್ಛಿಸುವ ರೈತ ವ ವತನದಾರಗೌಡ ಕುಲಕರ್ಣಿಯವರು ತೀವ್ರವಾಗಿ ತಮ್ಮ ಮಕ್ಕಳಕಡೆಯಿಂದಾ ಅರ್ಜಿಮಾಡಿಸಿದ ಪಕ್ಷದಲ್ಲಿಯೋಗ್ಯವಿಚಾರಮಾಡಿ ಹುಡುಗರನ್ನು ಶಾಲೆಯಲ್ಲಿತಕ್ಕೊಳ್ಳುವದರಲ್ಲಿ ಬರುವದು. ಅರ್ಜಿಕಳುಹಿಸುವ ಮುಂದೆ ಜಮೀನ ಸಂಬಂಧ ಗ್ರಾಮಸ್ಥರ ದಾಖಲೆ ವ ಶಾಲೆಯಲ್ಲಿ ಕಲಿತಸಂಬಂಧ ಶಾಲೆಯ ಹೆಡ್ಮಾಸ್ತರ ದಾಖಲೆ ಇವೆರಡನ್ನೂ ಕಳಿಸತಕ್ಕದ್ದು ತಿಳಿಯುವದು. ತಾ॥ ೧೮-೬-೧೯೧೪.

P. Gilbert Deputy, Director of Agriculture S. D. R. G. S. Dharwar.

ಸ್ಕಾಟ್ಲೆಂಡ್ ಮುಂತಾದ ದೇಶಗಳಲ್ಲಿ ಈಚೆಗೆ ಬೇಸರ್ ಮಿಲ್ಲಿನಲ್ಲಿ ಉಪಯೋಗವಿಲ್ಲದೆ ಬಿಸಾಡುತ್ತಿದ್ದ ಸೀಮೆಸುಣ್ಣದ ಪುಡಿಯನ್ನು ಫಲಸಾರವನ್ನು ಹೆಚ್ಚು ಮಾಡಲು ಜಮೀನುಗಳಿಗೆ ಉಪಯೋಗಿಸುತ್ತಾರೆ. ಇದು ಒಣಗಿದ್ದಾಗಿರುವಾಗ ೧೦೦ ರಲ್ಲಿ ೩೯ ಅಂಶ ಕ್ಯಾಲ್ಸಿಯಂ ಕಾರ್ಬೊನೇಟ್ (Calcium Carbonate)ನ್ನು ಹೊಂದಿರುತ್ತದೆ. ಒಣಗಿದನಂತರ ಸೇಕಡಾ ೯೦ ಅಂಶವನ್ನು ಉಂಟಾಗಿರುತ್ತದೆ ಸುಣ್ಣವನ್ನು ಜಮೀನುಗಳಿಗೆ ಉಪಯೋಗಿಸುವದರಿಂದ ಭೂಮಿಯಲ್ಲಿ ಹುಳಿಯುಂಟಾಗದೆ ಫಲಸಾರವು ವೃದ್ಧಿಯಾಗುತ್ತದೆ, ಮತ್ತೂ ಇಟ್ಟ ಪೈರು ಕೆಡದೆ ಇರುತ್ತದೆ. ಗೂಡಿನಲ್ಲಿ ಸುಟ್ಟ ಚೂರುಸುಣ್ಣವನ್ನೇ ಉಪಯೋಗಿಸಬೇಕೆಂದು ವಿಧಿಯೇನೂ ಇಲ್ಲ. ಸೀಮೆಸುಣ್ಣವನ್ನು ಕೂಡ ಉಪಯೋಗಿಸಬಹುದು.

ಮೂಲಂಗಿ ವ್ಯವಸಾಯದಲ್ಲಿ ಜಮೀನಿಗೆ ಹೊಸ ಸುಣ್ಣಕ್ಕೆ ಬದಲಾಗಿ ಸೀಮೆಸುಣ್ಣದ ಪುಡಿಯನ್ನು ಹಾಕಲು ಫಸಲಿಗೆ ರೋಗ ತಗಲದೆ ಹುಲುಸಾಗಿ ಆಯಿತು.

ಬಂಗಾಳದಲ್ಲಿ ಗೋಣೀನಾರಿನ ವ್ಯವಸಾಯ.

ಇದರ ವ್ಯವಸಾಯವು ಬಂಗಾಳದಲ್ಲಿ ಎಲ್ಲಾ ಇನ್ನೆಲ್ಲೂ ಇರುವದಿಲ್ಲ. ಇದನ್ನು ಬಹಳ ದಿನಗಳ ಹಿಂದೆಯೇ ಅಂದರೆ ೧೮೨೮ ನೆ ಇಸವಿಯಲ್ಲಿ ಇಂಗ್ಲೆಂಡಿಗೆ ರಫ್ತು ಮಾಡಿರುವದಾಗಿ ತಿಳಿಯಬಂದಿದೆ. ಇತರ ದೇಶಗಳಿಗೆ ಹೇರಳವಾಗಿ ರಫ್ತಾಗುವದಲ್ಲದೆ ಈ ದೇಶದಲ್ಲೇ ಗೋಣಿಚೀಲ, ಹಗ್ಗ ಮುಂತಾದುವನ್ನು ತಯಾರಿಸುವದಕ್ಕೆ ಉಪಯೋಗಿಸುತ್ತಾರೆ.

ಭೂಮಿಯನ್ನು ಹಸನುಮಾಡಿಕೊಂಡು ಕಾಳನ್ನು ಮಾರ್ಚಿ ತಿಂಗಳಲ್ಲಿ ಬಿತ್ತನೆ ಹಾಕುತ್ತಾರೆ. ಮಳೆಗಳು ಸರಿಯಾಗದ್ದಲ್ಲಿ ಜೂನ್ ತಿಂಗಳವರೆಗೂ ಬಿತ್ತನೆ ಹಾಕುವದುಂಟು. ಕಾಳುಗಳನ್ನು ಸಾಧಾರಣವಾಗಿ ಚೆಲ್ಲುವದೇಹೊರ್ತು ಕೂರಿಗೆಯಿಂದ ಬಿತ್ತನೆ ಮಾಡುವದಿಲ್ಲ. ಎಕರೆಗೆ ೪ ಸೇರು ಬಿತ್ತನೆ ಬೇಕಾಗುತ್ತದೆ. ಪೈರು ಆರುಅಂಗುಲ ಎತ್ತರ ಬೆಳೆಹೊಂದಿದಾಗ ಕಳೆಗಳನ್ನು ತೆಗೆದು ಹಾಕಬೇಕು. ಈ ಕಾಲದಲ್ಲಿ ಮಳೆಗಳು ಬಂದಲ್ಲಿ ಗಿಡವು ಜಾಗ್ರತೆ ಬೆಳೆದು ಫಸಲು ಜಾಗ್ರತೆಬರುತ್ತದೆ. ಗಿಡಗಳು ಒತ್ತಾಗಿದ್ದರೆ ಪಕ್ಕಲುಮಾಡಬೇಕು. ಪೈರನ್ನು ಆಗಸ್ಟು ತಿಂಗಳಲ್ಲಿ ಅಂದರೆ ಹೂವ್ವು ಬಿಟ್ಟು ಕಾಯಿಗೆ ಬರುವಾಗ ಕಟಾವು ಮಾಡತಕ್ಕದ್ದು. ಇದಕ್ಕೆ ಮುಂದಾಗಿ ಕಟಾವು ಮಾಡಿದರೆ ಫಸಲುತ್ಪತ್ತಿಯು ಕಮ್ಮಿಯಾಗುತ್ತದೆ. ಆದರೆ ನಾರು ಬೆಳ್ಳಗೆ ಇರುತ್ತದೆ. ಹಿಂದಾಗಿ ಕಟಾವು ಮಾಡಿದರೆ ನಾರು ಒರಟಾಗುತ್ತದೆ.

ಪೈರನ್ನು ಕೊಯ್ದು ಪಿಂಡಿಗಳಾಗಿ ಮಾಡಿ ಜಮೀನಿನಲ್ಲೇ ಇಟ್ಟಿರಬೇಕು. ಹೀಗೆ ಮಾಡುವದರಿಂದ ಎಲೆಗಳೆಲ್ಲಾ ಒಣಗಿ ಉದುರಿಹೋಗುತ್ತವೆ. ನಂತರ ಕೊನೆಯ ಭಾಗವನ್ನು ಸುಮಾರು ಒಂದು ಅಡಿಯಷ್ಟು ಕತ್ತರಿಸಿ ಪಿಂಡಿಗಳಾಗಿ ಕಟ್ಟಿ ನದಿಯ ನೀರಿನಲ್ಲಿ ಊನಿಹಾಕುತ್ತಾರೆ. ಚೆನ್ನಾಗಿ ನೆನೆಯುವದಕ್ಕೋಸ್ಕರ ಈ ಪಿಂಡಿಗಳಮೇಲೆ ಭಾರವನ್ನು ಇಡುತ್ತಾರೆ. ಕೆಲವರು ಹತ್ತಿರವಿರುವ ಕುಂಟೆಗಳಲ್ಲಿ ಈ ನಾರನ್ನು ಊನಿಹಾಕುತ್ತಾರೆ. ಆದರೆ ನಾರಿನ ಗುಣವು ಊನಿಹಾಕುವ ನೀರಿನ ಗುಣದಪ್ರಕಾರ ಇರುತ್ತದೆ. ಹೀಗೆ ನೀರಿನಲ್ಲಿ ಸುಮಾರು ೧೦ ರಿಂದ ೧೫ ದಿನಗಳವರೆಗೆ ಇಡಬೇಕು. ಬುಡಗಳಲ್ಲಿ ಚೆನ್ನಾಗಿ ಊರಿದನಂತರ ನಾರಿನ ಕಂತೆಗಳನ್ನು ತೆಗೆದು ಒಗೆಯಬೇಕು ನೀರಿನಲ್ಲಿ ನಿಂತು ಬುಡಗಳನ್ನು ಚಚ್ಚಿ ಮೇಲಿನ ತೊಗಟೆಗಳನ್ನು ತೆಗೆದು ನಾರನ್ನು ಮಾತ್ರ ತೆಗೆಯಬೇಕು. ಈ ನಾರನ್ನು ಸುಗಳಿಯಾಗಿ ಸುತ್ತಿ ಇಡುತ್ತಾರೆ ನಂತರ ಬೊಂಬುಗಳ ಮೇಲೆ ಹಾಕಿ ಬಿಸಲಿನಲ್ಲಿ ಒಣಗಿಸುತ್ತಾರೆ. ನಂತರ ಇದನ್ನು ಮಾರುತ್ತಾರೆ. ಎಕರೆ ಒಂದಕ್ಕೆ ಸುಮಾರು ೧೦ ಮಣ ನಾರು ಉತ್ಪತ್ತಿಯಾಗುತ್ತೆ.

ಮಲಬಾರಿನಲ್ಲಿ ತೆಂಗಿನಗಿಡಗಳಿಗೆ ತಗಲುವ ಸುಳಿರೋಗ.

ಮಲಬಾರ್, ದಕ್ಷಿಣಕನಡಾ, ಕೊಚ್ಚಿ, ತಿರುವಾಂಕೂರು ಮುಂತಾದ ದೇಶಗಳಲ್ಲಿ ತೆಂಗಿನ ವ್ಯಾಪಾರವು ವಿಶೇಷವಾಗಿದೆ. ಇಲ್ಲಿನ ರೈತರ $\frac{9}{10}$ ಬಂಡವಾಳ ಮತ್ತು ಶ್ರಮೆಯು ಈ ವ್ಯವಸಾಯದಲ್ಲಿಯೇ ಅಡಗಿವೆ. ತೆಂಗಿನ ಫಸಲಿನಿಂದ ದೊರೆಯುವ ಆದಾಯವೇ ಈ ದೇಶಗಳ ಸಂಪತ್ತಿಗೆ ಕಾರಣವಾಗಿದೆ. ಆದುದರಿಂದ ತೆಂಗಿನ ಗಿಡಗಳಿಗೆ ಯಾವ ತರಹ ವ್ಯಾಧಿಯೂ ಉಂಟಾಗದ ಹಾಗೆ ಕಾಪಾಡುವುದು ಅಲ್ಲಿನವರ ಕರ್ತವ್ಯವಾಗಿದೆ. ಗೋದಾವರಿ ಮತ್ತು ಕೃಷ್ಣಾಜಿಲ್ಲೆಗಳಲ್ಲಿ ತಾಳೇಗಿಡಗಳಿಗೆ ಕೆಲವು ವರ್ಷಗಳಿಂದೀಚೆಗೆ ಉಂಟಾಗುತ್ತಿರುವ ರೋಗವೂ ಅದರಿಂದ ಲುಕ್ಸಾನೂ ವಿಶೇಷವಾಗಿದೆ. ಈ ರೋಗಕ್ಕೆ ಸುಳಿರೋಗವೆಂದು ಹೇಳುತ್ತಾರೆ. ಇದು ಒಂದು ತರದ ಕ್ರಿಮಿಯಿಂದ ಉಂಟಾಗುತ್ತದೆ. ಇದು ಎಳೆದಾದ ಸುಳಿಗೆ ತಗುಲಿ ಅದನ್ನು ತಿಂದು ಸುಳಿಯು ಬಾಡಿಹೋಗಿ ಗಿಡವನ್ನೇ ನಾಶಪಡಿಸುತ್ತದೆ ಈ ಕ್ರಿಮಿಗಳು ಗಿಡಕ್ಕೆ ತಗುಲಿರುವಾಗ ಇತರ ಗಿಡಗಳಿಗೆ ವ್ಯಾಪಿಸುತ್ತವೆ ಆದುದರಿಂದ ರೋಗತಗಲಿದ ಗಿಡಗಳನ್ನು ಕಡಿದು ಹಾಕುವುದರಿಂದ ರೋಗವು ವ್ಯಾಪಿಸದಹಾಗೆ ಮಾಡಬಹುದು. ಮದ್ರಾಸ್ ಸರ್ಕಾರದವರು ಇದೇರೀತಿ ಕೆಲವು ವರ್ಷಗಳಿಂದ ಮಾಡಿರುತ್ತಾರೆ. ೧೯೦೭-೦೮ ನೆ ವರ್ಷದಿಂದ ೧೯೧೨-೧೩ ನೇ ಸಾಲಿನವರೆಗೆ ಸುಮಾರು ೪ ಲಕ್ಷ ಮರಗಳನ್ನು ಕಡಿದು ಹಾಕಿರುತ್ತಾರೆ

ಮಲಬಾರ್ ಪ್ರಾಂತದಲ್ಲಿ ತೆಂಗಿನ ಗಿಡಗಳಿಗೆ ಕೆಲವು ವರ್ಷಗಳಿಂದೀಚೆಗೆ ಇದೇತರದ ಸುಳಿರೋಗವು ತಗಲುತ್ತಿದೆ. ಇದು ಎಳೇಗಿಡಗಳಿಗೂ ತಗಲುತ್ತದೆ. ೪೦ ರಿಂದ ೫೦ ಅಡಿ ಉದ್ದ ಬೆಳೆದಿರುವ ಗಿಡಗಳಿಗೆ ತಗಲಿ ಅವುಗಳು ಒಣಗಿ ಕಡ್ಡಿಯಾಗಿ ನಿಂತಿರುವದೂ ಉಂಟು! ಸುಳಿಗರಿಯು ಒಣಗಿ ಸುತ್ತಮುತ್ತಣಗರಿಗಳು ಹಳದಿಬಣ್ಣವಾಗಿರುವದೂಉಂಟು ಮತ್ತೆ ಕೆಲವು ಸುಳಿಗರಿ ಇಲ್ಲದೇನೇ ಹಸರು ಗರಿಗಳಿಂದ ಕೂಡಿದ್ದಾಗಿರುವದು. ವಿಚಾರ ಮಾಡಿದ್ದರಲ್ಲಿ ೧೦ ವರ್ಷಗಳಿಂದೀಚೆಗೆ ಈ ರೋಗವು ಕಂಡು ಬಂದಿರುವಹಾಗೂ ವರ್ಷಕ್ಕೆ ಸುಮಾರು ೨ ಅಥವಾ ೩ ಗಿಡಗಳು ಒಣಗಿ ಹೋಗುವ ಹಾಗೂ ತಿಳಿದುಬಂದಿತು ರೈತರು ಇದರಿಂದ ವಿಶೇಷ ಎದೆಗುಂದಿರಲಿಲ್ಲ. ಮೊದಲು ಅಜಮಾಯಿಷಿ ಮಾಡಿದ್ದರಲ್ಲಿ ಕಾರಣವು ಗೊತ್ತಾಗಲಿಲ್ಲ ಮಳೆಗಳು ಆರಂಭವಾದ ಕೂಡಲೇ ಅಂದರೆ ಸುಮಾರು ಜುಲೈ ತಿಂಗಳಲ್ಲಿ ಅಜಮಾಯಿಷಿ ಮಾಡಿದ್ದರಲ್ಲಿ ರೋಗದ ತರಹೆಯು ತಿಳಿದುಬಂದಿತು. ರೋಗತಗಲಿದ ಸಣ್ಣ ಗಿಡಗಳ ಅಜಮಾಯಿಷಿಯಿಂದ ರೋಗದ ಸ್ವಭಾವವು ಜಾಗ್ರತೆ ತಿಳಿದುಬಂದಿತು.

ಸುಳಿಗರಿಯು ಬೂದುಬಣ್ಣಕ್ಕೆತಿರುಗಿ ಒಣಗಿಹೋಗಿದ್ದರೆ ಗಿಡಕ್ಕೆ ರೋಗ ತಗುಲಿದೆ ಎಂದು ತಿಳಿಯತಕ್ಕದ್ದು. ಸುಳಿಗರಿಯು ಸುರಳಿಯಹಾಗೆ ಸುತ್ತಿಕೊಂಡಿರುವದು ಸ್ವಭಾವ. ಇದನ್ನು ತೆಗೆದುಬಿಟ್ಟು ನೋಡಿದರೆ ರೋಗತಗುಲಿದ ಪ್ರದೇಶವು ಚೆನ್ನಾಗಿ ಕಾಣುತದೆ. ರೋಗತಗಲಿದ ಭಾಗವು ಒಂದುತರದ ಕ್ರಿಮಿಯಿಂದ ತಿನ್ನಲ್ಪಟ್ಟು ಬೆಳ್ಳಗೆ ಇರುತ್ತದೆ. ಈ ಕ್ರಿಮಿಯು ಗರಿಯ ಒಂದುಭಾಗವನ್ನು ತಿನ್ನಲು ಆರಂಭಿಸಿ ಗರಿಯನ್ನು ಮೊತ್ತವುಮಾಡಿ ಕೊನೆಗೆ ಒಣಗಿಸುವುದು. ಗರಿಗಳಿಗೆ ರೋಗದಿಂದ ಬೂದುಬಣ್ಣ ಬರುವುದಕ್ಕೆ ಮುಂದೆ ಸಣ್ಣ ಸಣ್ಣ ಚುಕ್ಕೆಗಳು ಬಂದಿರುವುದನ್ನು ನೋಡಬಹುದು. ಮಳೆಗಾಲದಲ್ಲಿ ಗಿಡಗಳಿಗೆ ಸೇರುವ ತನುವಿನಿಂದ ರೋಗದ ಕ್ರಿಮಿಗಳು ಇತರ ಗಿಡಗಳಿಗೆ ವ್ಯಾಪಿಸುತ್ತವೆ. ಸುಳಿ ರೋಗದಲ್ಲಿ ಸುಳಿ ಗರಿಯು ಕಿತ್ತರೆ ಬಂದುಬಿಡುತ್ತದೆ ಗಿಡಕ್ಕೆ ಹುಳು ಹೊಕ್ಕಿದಿರುವಾಗ ಹೀಗಾಗುವದಿಲ್ಲ. ರೋಗ ತಗಲಿದ ಗಿಡಗಳಿಂದ ಇತರ ಗಿಡಗಳಿಗೆ ರೋಗವು ನಾನಾವಿಧದಿಂದ ಹರಡುತ್ತದೆ. ಮಳೆಗಾಲದಲ್ಲಿ ಗಿಡದಲ್ಲಿ ಸೇರುವ ನೀರಿನ ಹನಿಗಳು ರೋಗದ ಕ್ರಿಮಿಗಳನ್ನು ಗಾಳಿಯಮೂಲಕ ಒಂದು ಗಿಡದಿಂದ ಮತ್ತೊಂದು ಗಿಡಕ್ಕೆ ಹರಡುತ್ತದೆ. ಅಲ್ಲದೆ ಮರವನ್ನು ಹತ್ತುವವರು ರೋಗವನ್ನು ಒಂದು ಗಿಡದಿಂದ ಮತ್ತೊಂದು ಗಿಡಕ್ಕೆ ಹರಡುತ್ತಾರೆ.

ಈ ರೋಗವು ಅದೃಷ್ಟವಶಾತ್ ಮಲಬಾರಿನಲ್ಲಿ ವಿಶೇಷ ಪ್ರಾಬಲ್ಯದಲ್ಲಿಲ್ಲ ರೋಗ ತಗುಲಿದ ಗಿಡಗಳನ್ನು ಕಂಡು ತಿಳಿದು ನಾಶಮಾಡುವುದೇ ಇದಕ್ಕೆ ಪರಿಹಾರ. ಇದುವರೆಗೆ ಮಲಬಾರಿನಲ್ಲಿ ೭೦೦ ಗಿಡಗಳನ್ನು ಹೀಗೆ ನಾಶಪಡಿಸಿರುತ್ತಾರೆ. ಗಿಡಗಳಲ್ಲಿ ನೀರು ನಿಂತು ರೋಗವನ್ನು ವ್ಯಾಪನೆ ಮಾಡಲು ಮಳೆಗಾಲವು ಅನುಕೂಲಕಾಲವಾದುದರಿಂದ ಮಳೆಗಳು ನಿಂತಬಡನೆ ರೋಗದ ಗಿಡಗಳನ್ನು ಕಡಿದುಹಾಕಲು ಪ್ರಯತ್ನಮಾಡುವದು ಒಳ್ಳೇದು. ರೆ ಗೆ.

ಕರ್ನಾಟಕ ಸುದ್ದಿಪವು.

ರಾಣೀಬೆನ್ನೂರು, ತಾ॥ ೨೪ ೬-೧೪

ಕೊಣ್ಣೂರ ಕರ್ನಾಟಕ ಸಂಗೀತನಾಟಕ ಮಂಡಳಿಯು ಈ ಊರಿಗೆ ಬಂದು ಅಜಮಾಸು ೨೦ದಿನಗಳಾದವು. ಈ ಕಂಪನಿಯವರ ನಾಟಕಗಳು ಒಳ್ಳೇ ಪ್ರೇಕ್ಷಣೀಯವಾಗಿರುವವು. ಇವರು ಮಾಡುವ ಪ್ರಯೋಗಗಳಲ್ಲಿ ಶನಿಪ್ರಭಾವ ಬಸವವಿಜಯ ಮನೋವಿಜಯನಾಟಕಗಳು ಚೆನ್ನಾಗಿ ಆಗುತ್ತವೆ. ಇದುವರೆಗೆ ಈ ಊರಿಗೆ ಅನೇಕ ಕನ್ನಡಕಂಪನಿಗಳು ಬಂದು ಹೋದವು ಆದರೆ ಈ ಕಂಪನಿಯಂಥ ಚಿತ್ತಾಕರ್ಷಕ ಕಂಪನಿಗಳು ಯಾವೂ ಬಂದಿದ್ದಿಲ್ಲಾ ಪ್ರತಿಗುರುವಾರ ರವಿವಾರ ದಿವಸ ಥೇಟರದಲ್ಲಿ ಪ್ರೇಕ್ಷಕರು ಸ್ಥಳ ದೊರೆಯದೆ ಮರಳಿ ಹೋಗುತ್ತಾರೆ. ಈಗಿನ ದಾಟಿ ನೋಡಲಾಗಿ ಕಂಪನಿ ಇನ್ನೂ ೨ ತಿಂಗಳವರಿಗೂ ಊರಬಿಡಲಿಕ್ಕಿಲ್ಲ. ಈ ಕಂಪನಿಯವರ ಸಾಹಸವು ಅವರ್ಣನೀಯವಾಗಿರುತ್ತೆ. ಸದ್ಯಕ್ಕೆ ಇದೇಊರಲ್ಲಿ ಇಲೆಕ್ಟ್ರಿಕ್ ಲಾಯಿಟ್ (ಮೀಜಜೀವಿಗೆ) ಸಲುವಾಗಿ ಸಾಮಾನು ತರಿಸಿದ್ದು ಈ ತಿಂಗಳ ಒಳಗಾಗಿ ಸುರು ಆಗಬಹುದು. ಆ ಮೇಲೆ ಕಂಪನಿಯು ಎಳ್ಳಷ್ಟು ಎಣೆಯಿಲ್ಲದಾಗುವದು ಕನ್ನಡದಲ್ಲಿ ೧೪ ವರ್ಷ ಲಾಗಾಯ್ತು ನಡೆಯುತ್ತ ಬಂದು, ಇದುವರೆಗೂ ಉರ್ಜಿತಾವಸ್ಥೆಯಲ್ಲಿದ್ದದ್ದು ಯಾವತ್ತೂ ಕನ್ನಡಿಗರ ಸುದೈವವೆನ್ನಲಿಕ್ಕೆ ಸಂದೇಹವಿಲ್ಲ. "ಶನಿಪ್ರಭಾವ" ವೆಂಬ ನಾಟಕದಲ್ಲಿಯ ಟ್ರಾನ್ಸರ ಸೀನರಿಗಳು ಫಾರ್ಸಿ ಗುಜರಾಥಿ ನಾಟಕಗಳಂತೆ ಆಶ್ಚರ್ಯಕರವಾಗಿರುವವು ಯಾವತ್ತೂ ಕನ್ನಡ ಅಭಿಮಾನಿಗಳು ಇಂಥ ಕಂಪನಿಯವರಿಗೆ ಚನ್ನಾಗಿ ಉತ್ತೇಜನಕೊಟ್ಟು ಪ್ರೋತ್ಸಾಹಪಡಿಸಬೇಕು.

ಒಬ್ಬ ಪ್ರೇಕ್ಷಕ.

ಲಾರ್ಡ್ ಹಾರ್ಡಿಂಜ್‌ರವರ ಜನ್ಮದಿನೋತ್ಸವ.

ಪ್ರಪಂಚದಲ್ಲಿ ಶ್ರೀರಾಮಾದಿಗಳಂತಹ ಮಹಾನುಭಾವರ ಮತ್ತೂ ತಾತ್ಕಾಲಿಕರಾದ ಪ್ರಜಾಪಾಲಕರ ಜನ್ಮದಿನೋತ್ಸವಗಳು ನಡೆಯಿಸಲ್ಪಡುವುದು ವಾಡಿಕೆಯಾಗಿದೆ. ಆದರೆ ಪ್ರಭುವಿನ ಪ್ರತಿನಿಧಿಯಾದ ಅಧಿಕಾರಿಯ ಜನ್ಮದಿನೋತ್ಸವವು ಪ್ರಜಾಸಮುದಾಯದಿಂದ ನಡೆಯಿಸಲ್ಪಡುವುದು ಅಭೂತಪೂರ್ವವಾದ ವಿಷಯವಲ್ಲವೆ? ನಮ್ಮ ಈಗಿನ ವೈಸ್ರಾಯರಾದ ಲಾರ್ಡ್ ಹಾರ್ಡಿಂಜ್‌ರವರು ಜಾರ್ಜ್ ಸಾರ್ವಭೌಮರ ಪ್ರತಿನಿಧಿಗಳಾಗಿದ್ದರೂ, ಭರತಖಂಡವಾದ್ಯಂತವೂ ಅವರ ವಿಷಯದಲ್ಲಿ ಗೌರವಬುದ್ಧಿಯನ್ನು ವಹಿಸಿ, ಅವರ ಜನ್ಮದಿನೋತ್ಸವವನ್ನು (ಜೂನ್ ತಾ॥ ೨೦) ರದಿವಸ ಅನೇಕ ಪಟ್ಟಣಗಳ ಜನರು ನಾನಾವಿಧದಿಂದ ಆಚರಿಸಿರುವರು. ಇದುವರೆಗೆ ಬಂದಿದ್ದ ಯಾವೊಬ್ಬ ವೈಸ್ರಾಯರ ವಿಷಯದಲ್ಲಿಯೂ ಆಚರಿಸಲ್ಪಡದಿದ್ದ ಇಂಥ ಉತ್ಸವವು ಇವರವಿಷಯದಲ್ಲಿ ಮಾತ್ರ ಆಚರಿಸಲ್ಪಡುವಂತಾದುದಕ್ಕೆ ಈ ಮಹಾನುಭಾವರ ಗುಣಾತಿಶಯಗಳೇ ಕಾರಣವಲ್ಲದೆ ಮತ್ತೇನೂ ಅಲ್ಲ.

ಲಾರ್ಡ್ ಕರ್ಜನ್‌ರವರು ವೈಸ್‌ರಾಯರಾಗಿದ್ದಾಗ್ಗೆ ಭರತಖಂಡದ ಏಳ್ಗೆಗೆ ಸಾಧಕವಾದ ಅನೇಕಸ್ಥಾಪನೆಗಳನ್ನು ಮಾಡಿ ಸರ್ಕಾರದ ಹಣವನ್ನು ಅದಕ್ಕಾಗಿ ಉದಾರವಾಗಿ ವೆಚ್ಚಮಾಡಿದರೂ ತಾತ್ಕಾಲಿಕವಾದ ಪ್ರಜಾಭಿಪ್ರಾಯವನ್ನೂ ಅವರ ಉನ್ನತ್ಯಾಕಾಂಕ್ಷೆಯ ಸತ್ವವನ್ನೂ ಮುರಿದೊತ್ತರಿಸುವಲ್ಲಿ ತೊಡಗಿದುದರಿಂದ, ಅವರ ಕಾರ್ಯವು ಭರತಖಂಡದಲ್ಲಿ ಒಂದು ನೂತನೋತ್ಸಾಹವನ್ನೇ ಹುಟ್ಟಿಸಿದುದಲ್ಲದೆ, ಅದರ ಜತೆಗೆ ಒಂದು ಅರಿಷ್ಟವೂ ಸಂಜನಿಯಿಸಲು ಆಸ್ಪದವನ್ನು ಮಾಡಿ ಹೋದರು. ಅಂಥ ಸಮಯದಲ್ಲಿ ಲಾರ್ಡ್ ಮಿಂಟೋರವರು ಇಲ್ಲಿನ ವೈಸ್ರಾಯರಾಗಿ ಬಂದರು. ಲಾರ್ಡ್ ಮಾರ್ಲೆಯವರು ಸ್ಟೇಟ್ ಸೆಕ್ರೆಟರಿಸ್ಥಾನಕ್ಕೆ ಬಂದರು. ಅಸ್ವಸ್ಥತೆಯುಂಟಾಗಿದ್ದ ಭರತಖಂಡದಲ್ಲಿ ಅವರುಗಳು ಪ್ರಜಾಭಿಪ್ರಾಯಕ್ಕೆ ಗೌರವವನ್ನಿತ್ತು ಅವರ ಇಷ್ಟಾರ್ಥಗಳನ್ನು ತಕ್ಕಮಟ್ಟಿಗಾದರೂ ನೆರವೇರಿಸಿ ಕೊಡುತ್ತ ಬಂದುದರಿಂದ ಪ್ರಜಾಪ್ರಭುಗಳ ಮಧ್ಯದಲ್ಲಿ ಪರಸ್ಪರಪ್ರೀತಿಗಳು ಬಳೆದು ಐಕಮತ್ಯವು ವೃದ್ಧಿಯಾಗುವಂತಾಯಿತು. ಆದರೂ ಹಿಂದೆಹುಟ್ಟಿದ ಅರಿಷ್ಟಬೀಜವು ನಿಶ್ಶೇಷವಾಗಿರಲಿಲ್ಲ ಆ ಸಮಯದಲ್ಲಿ ಈ ನಮ್ಮ ಹಾರ್ಡಿಂಜ್‌ಪ್ರಭುಗಳು ವೈಸ್‌ರಾಯರಾಗಿ ಬಂದರು. ಇವರು ಇಲ್ಲಿಗೆ ಬರುವುದಕ್ಕೆ ಸಿದ್ಧರಾಗುವಾಗ ಸೀಮೆಯಲ್ಲಿ ಭಾಷಣಮಾಡುವಾಗ್ಗೆ-ಭರತಖಂಡದಲ್ಲಿರುವ ಸಕಲ ಮತಜಾತಿಯವರಿಗೂ ಸಖ್ಯವನ್ನುಂಟುಮಾಡುವುದೇ ನನ್ನ ಉದ್ದೇಶವಾಗಿರುವುದು ಎಂದು ಹೇಳಿದ್ದರು. ಇಲ್ಲಿಗೆ ಬಂದಮೇಲೆ ಆ ತಮ್ಮ ನುಡಿಯಂತೆಯೇ ಹಜ್ಜೆಹಜ್ಜೆಗೂ ನಡೆದು ತೋರಿಸಿದರು. ಈ ದೇಶದ ವಿದ್ಯಾಪ್ರಸಾರ ಆರೋಗ್ಯಾಭಿವೃದ್ಧಿ ಕಾರ್ಯಗಳಿಗಾಗಿ ನೀರಿನಂತೆ ಹಣವನ್ನು ವೆಚ್ಚಮಾಡಿಸಿದರು. ಪ್ರಜೆಗಳ ಹಿತಕ್ಕೆ ಸಾಧಕವಾದ ಪ್ರತಿಯೊಂದು ಕಾರ್ಯದಲ್ಲೂ ಇವರು ಉದಾರಹಸ್ತವನ್ನು ತೋರಿಸುತ್ತಿರುವರು. ಉಚಿತವಾದ ಪ್ರಜಾಭಿಪ್ರಾಯಕ್ಕೆ ಯಾವಾಗಲೂ ತಿರಸ್ಕಾರವನ್ನು ತೋರಿಸಿದವರಲ್ಲ. ಇಂಥ ಮಹಾನುಭಾವರ ಮೇಲೆ ದಿಲ್ಲಿಯಪುರಪ್ರವೇಶ ಸಮಯದಲ್ಲಿ ಯಾರೋ ದುರಾತ್ಮರು ಸಿಡಿಮದ್ದನ್ನೆಸೆದು ಭೀಕರವಾದ ಗಾಯವನ್ನೆಸಗಿದರೂ ಅಂಥ ಸಮಯದಲ್ಲಿಯೂ ಭಾರತೀಯರ ಮೇಲೆ ಇವರಿಗಿದ್ದ ಘನತರವಾದ ಪ್ರೀತಿಯಲ್ಲಿ ಲೇಶಮಾತ್ರವೂ ಕುಂದಲಿಲ್ಲ "ನಮಗೆ ಭಾರತೀಯರ ಮೇಲೆ ಇದುವರೆಗೆ ಇದ್ದಂತೆಯೇ ಮುಂದೆಯೂ ನಂಬಿಗೆ ಇರುವುದು. ಅದು ಸ್ವಲ್ಪವೂ ಕಡಿಮೆಯಾಗಲಿಲ್ಲ. ಈ ದೇಶದ ಪರಿಪಾಲನೆಯ ವಿಷಯದಲ್ಲಿ ಇದಕ್ಕೆ ಹಿಂದೆ ನಾನು ಯಾವ ನೀತಿಯನ್ನವಲಂಬಿಸಿದ್ದೆನೋ ಮುಂದೆಯೂ ಅದನ್ನೇ ಅವಲಂಬಿಸಿರುವೆನು." ಎಂದು ಅಪ್ಪಣೆಕೊಡಿಸಿ, ಈ ಅಭಯದಾನದ ಮೂಲಕ ಭಾರತೀಯರಿಗೆಲ್ಲಾ ಅಮಂದಾನಂದವನ್ನುಂಟುಮಾಡಿದರು. ಯಾವನೋ ಒಬ್ಬ ದುರಾತ್ಮನು ತಮ್ಮ ವಿಷಯದಲ್ಲಿ ಇಂಥ ಅಪಚಾರವನ್ನು ನಡೆಯಿಸಿದರೂ ಅದರಿಂದ ದುಸ್ಸಹವಾದವೇಧೆಯು ಇವರಿಗುಂಟಾದರೂ ಅದರಿಂದ ಇವರ ಶಾಂತಿಪ್ರೀತಿಗಳಲ್ಲಿ ಸ್ವಲ್ಪವೂ ವ್ಯತ್ಯಯವುಂಟಾಗದಿದ್ದುದನ್ನು ಕಂಡು ಜಗತ್ತೇ ಆಶ್ಚರ್ಯಪಡುವಂತಾಯಿತು ಅದೊಂದು ಕಾರ್ಯವೇ ಇವರ ವಿಷಯದಲ್ಲಿ ಭಾರತೀಯರನ್ನು ಅರ್ಧದಮಟ್ಟಿಗೆ ಕೃತಜ್ಞತಾಬದ್ಧರನ್ನಾಗಿ ಮಾಡಿದ್ದಿತು. ಇದರಮೇಲೆ ಇನ್ನೂ ಇವರ ಸಾದ್ಗುಣ್ಯಸುವರ್ಣರಾಶಿಯನ್ನು ಒರೆಹಚ್ಚುವುದಕ್ಕೋ ಏನೋ ಎಂಬಂತೆ ದಕ್ಷಿಣಾಫ್ರಿಕಾದ ಭಾರತೀಯರ ಸಂಕಷ್ಟವಿಷಯವೊಂದು ತಟಸ್ಥವಾಯಿತು. ಅದರವಿಷಯದಲ್ಲಿ ಸ್ಟೇಟ್ ಸೆಕ್ರೆಟರಿಯವರೂ ಭರತಖಂಡದ ಹಿಂದಣ ವೈಸ್ರಾಯರುಗಳೊ ಎಷ್ಟೋಪತ್ರವ್ಯವಹಾರಗಳನ್ನು ಹಿಂದೆ ನಡೆಯಿಸುತ್ತಾ ಬಂದಿದ್ದರು ಆದರೂ ಈ ಫಲವಾಗಿರಲಿಲ್ಲ. ಸಮಯದಲ್ಲಿ ಇವರು ಒಬ್ಬಾನೊಬ್ಬ ಆಂಗ್ಲಮನುಷ್ಯನಂತಲ್ಲದೆ ಸಂಪೂರ್ಣವಾಗಿ ಒಬ್ಬಾನೊಬ್ಬ ಭಾರತೀಯಪ್ರಮುಖನಾಗಿದ್ದರೆ ಹೇಗೋ ಹಾಗೆ ಧೈರ್ಯದಿಂದಲೂ ದರ್ಪದಿಂದಲೂ ಭಾರತೀಯರಪಕ್ಷವಾಗಿ ಹೋರಾಡಿದರು. ಅದರಿಂದಲೇ ಭಾರತೀಯರ ಕಷ್ಟನಿವಾರಕವಾದ ವಿಧಿಯು ದಕ್ಷಿಣಾಫ್ರಿಕಾದಲ್ಲಿ ಹುಟ್ಟುವಂತಾಯಿತು. ಇದು ಅವಸೋಲಂತೂ ಇವರ ಗುಣಾತಿಶಯವು ಭಾರತೀಯರನ್ನು ಸಂಪೂರ್ಣಕೃತಜ್ಞತಾಬದ್ಧರನ್ನಾಗಿ ಮಾಡಿತು. ಇದರಮಧ್ಯೆ ಕಾನ್ಪುರದ ಮಸ್ಜಿದ್ದಿಯ ವ್ಯಾಜ್ಯದಲ್ಲಿ ಇವರು ಅಪರಾಧಿಗಳಿಗೆಲ್ಲಾ ಕ್ಷಮಾಪಣೆಯನ್ನಿತ್ತು, ಪ್ರಬಲವಾಗಿದ್ದ ಪ್ರಜಾವೈಮನಸ್ಯವನ್ನು ನಿರ್ಮೂಲಗೊಳಿಸಿದುದೂ, ಅದರಂತೆಯೇ ಜೈನರ ಹಿಂದೂಗಳ ಧಾರ್ಮಿಕವಿಷಯಗಳಲ್ಲಿ ಉಂಟಾಗಿದ್ದ ಮನೋವ್ಯಥೆಗಳನ್ನು ನಿವಾರಿಸಿದುದೂ ಸಹ ಭಾರತೀಯ ಪ್ರಪಂಚದ ಪ್ರೀತಿಯನ್ನೆಲ್ಲಾ ಸೂರೆಗೊಳ್ಳುವಂತೆ ಮಾಡಿತು. ಮತ್ತೂ ಈದೇಶದ ಸ್ವದೇಶೀಯಸಂಸ್ಥಾನಾಧಿಪರ ವಿಷಯದಲ್ಲಿ ಇವರು ತೋರಿಸಿರುವ ಸಹಾನುಭೂತಿಯೂ ಸ್ನೇಹಗೌರವಗಳೂ ಸಹ ಘನತರವಾಗಿರುವುವು. ನಮ್ಮ ಮೈಸೂರುಸಂಸ್ಥಾನಕ್ಕೆ ಇವರುದಯಮಾಡಿಸಿ, ಇಲ್ಲಿನ ಪ್ರಭುತ್ವನೀತಿಯನ್ನು ಕಣ್ಣಾರ ಪರಾಮರಿಸಿ ಮೆಚ್ಚಿಕೊಂಡುದೂ, ನಮ್ಮ ಪ್ರಭುತ್ವದವರ ಘನತೆಗೆ ತಕ್ಕಂತೆ "ತಹನಾಮೆ" ಯನ್ನು ಸಂಸ್ಕರಿಸಿ ಕೊಟ್ಟುದೂ ಸಹ ಎಲ್ಲರಿಗೂ ಇನ್ನೂ ಮರೆಯದವಿಷಯವಾಗಿಯೇ ಇದೆ. ಇವೆಲ್ಲಕಾರಣದಿಂದಲೂ ಇವರು ಭಾರತೀಯರಿಂದ ಸಂಪೂರ್ಣವಾಗಿ ಸ್ವಜನರಂತೆ ಪ್ರೀತಿಸಲ್ಪಡುತ್ತಲೂ, ಪ್ರತ್ಯಕ್ಷಪ್ರಭುವಿನಂತೆ ಗೌರವಿಸಲ್ಪಡುತ್ತಲೂ ಇದ್ದಾರೆ. ಅದರಿಂದಲೇ ಇವರ ಜನ್ಮದಿನೋತ್ಸವವನ್ನು ನಡೆಯಿಸಲು ಪ್ರಜೆಗಳು ತಾವು ತಾವೇ ಕುತೂಹಲಪಟ್ಟರು. ಮತ್ತೂ ಆ ಪ್ರಜೆಗಳಲ್ಲಿ ಇವರ ವಿಷಯವಾಗಿ ಹುಟ್ಟಿರುವ ಸದಭಿಪ್ರಾಯವು ಇಷ್ಟುಮಾತ್ರದಿಂದಲೇ ತೃಪ್ತವಾಗಿಲ್ಲ. ಇವರು ಈ ದೇಶದ ಅಧಿಕಾರಕ್ಕೆ ಬಂದು ಈಗ್ಗೆ ೩॥ ವರ್ಷಗಳಿಗೆ ಸ್ವಲ್ಪ ಹೆಚ್ಚಾಗಿದೆ. ಇವರ ಅಧಿಕಾರದವಧಿಯು ಇನ್ನೂ ೧ ವರ್ಷಕ್ಕೆ ಮೇಲ್ಪಟ್ಟಿದೆ. ಆದರೂ ಇವರನ್ನು ಅವಧಿಯು ಮುಗಿದಮೇಲೂ ಮತ್ತೆರಡು ವರ್ಷಕಾಲವಾದರೂ ಈ ಅಧಿಕಾರದಲ್ಲೇ ಇರಿಸಿಕೊಡುವಂತೆ ಅನುಗ್ರಹಿಸಬೇಕೆಂದು ಸಾರ್ವಭೌಮರವರನ್ನು ಪ್ರಾರ್ಥಿಸಿಕೊಳ್ಳುತಲಿದ್ದಾರೆ. ಲಾರ್ಡ್ ಹಾರ್ಡಿಂಜ್‌ರವರು ಭಾರತೀಯರ ನೇಲಿಟ್ಟಿರುವ ಪ್ರೀತಿಯ ಫಲಗಳನ್ನು ಇನ್ನೂ ಕೆಲಕಾಲ ಇನ್ನು ಕೆಲವಿಧದಿಂದ ಪಡೆದುಕೊಳ್ಳಬೇಕೆಂದು ಪ್ರಜೆಗಳಿಗೆ ಉಂಟಾಗಿರುವ ಅಪೇಕ್ಷೆಯೇ ಈ ವಿಧವಾದ ಪ್ರಾರ್ಥನೆಗೆ ಕಾರಣವಾಗಿದೆ. ಇಂಥ ಪ್ರಾರ್ಥನೆಯನ್ನು ಪ್ರಜೆಗಳು ಸಭೆಗಳ ನಿರ್ಧಾರದ ರೂಪದಿಂದಲೂ ಪತ್ರಿಕಾಪ್ರಸಂಗಗಳಿಂದಲೂ ಹಲವುಕಡೆ ಐಕಕಂಠ್ಯದಿಂದ ಮಾಡುತ್ತಲಿದ್ದಾರೆ ಈ ಪ್ರಾರ್ಥನೆಯು ಸಮುಚಿತವಾಗಿರುತ್ತದೆ. ಏಕೆಂದರೆ—ಲಾರ್ಡ್ ಹಾರ್ಡಿಂಜ್‌ರವರೇ ಇದ್ದು ಬಗೆಹರಿಸಬೇಕಾದ ಘನತರವಾದ ಕಾರ್ಯಗಳು ಇನ್ನು ಕೆಲವಿವೆ. ದಕ್ಷಿಣಾಫ್ರಿಕಾಸಮಸ್ಯದಂತೆಯೇ ಈಗ ಕೆನಡಾರಾಜ್ಯದಸಮಸ್ಯೆಯೂ ಪ್ರಾಪ್ತವಾಗಿದೆ. ಆಂಗ್ಲಸ್ವಾಸ್ಥ್ಯಗಳೊಳಗೆ ಒಂದಾದರೊಂದುಕಡೆ ಭಾರತೀಯರಿಗೆ ಬಹಿಷ್ಕಾರವನ್ನು ಹಾಕುವ ಯೋಚನೆಗಳು ಹುಟ್ಟುತ್ತಲೇ ಇವೆ- ಆಂಗ್ಲಸಾರ್ವಭೌಮರ ಮಾನನೀಯ ಪ್ರಜೆಗಳಾಗಿರುವ ಭಾರತೀಯರಿಗೆ ಈ ವಿಧದಿಂದುಂಟಾಗುತ್ತಿರುವ ಅಗೌರವಗಳೂ ಹಿಂಸೆಗಳೂ ತಪ್ಪುವುದಕ್ಕೆ ಲಾರ್ಡ್ ಹಾರ್ಡಿಂಜ್‌ರಂಥ ಅಭಿಮಾನಿಮಹಾಪುರುಷರ ಬೆಂಬಲವು ಅತ್ಯವಶ್ಯಕವಾದುದು. ಮತ್ತೂ ರಾಜಕೀಯೋದ್ಯೋಗನಿರ್ಣಾಯಕ ಸಭೆಯವರ ಕಾರ್ಯಗಳು ಈಗ ಅರ್ಧಾಂತವಾಗಿವೆ ಅದರ ವರದಿಯು ಬಂದು ಅದರ ಫಲಿತಾಂಶವು ವ್ಯಕ್ತವಾಗುವ ಕಾಲಕ್ಕೂ ಇವರಂಥ ಅಧಿಕಾರಿಗಳಿರುವುದು ಭಾರತೀಯರಿಗೆ ಹಿತಪ್ರದವಾದುದು. ಮತ್ತೂ ವೈಸ್‌ರಾಯರ ಕಾರ್ಯನಿರ್ವಾಹಕಸಭೆಯವಿಸ್ತಾರ, ಜುಡಿಷಿಯಲ್ ಎಗ್ಸಿಕ್ಯೂಟೀವ್ ಶಾಖಾಧಿಕಾರ ವಿಭಜನೆ-ಇತ್ಯಾದಿಕಾರ್ಯಗಳನೇಕವು ಪರ್ಯಾಲೋಚನೆಯಲ್ಲಿವೆ. ಅವೆಲ್ಲಾ ಇವರ ಕಾಲದಲ್ಲೇ ಕೊನೆಮುಟ್ಟಿದರೆ ಅನುಕೂಲ, ಮತ್ತೂ ಆಂಗ್ಲರಾಜ್ಯದ ಬಲದವಿಷಯದಲ್ಲೂ ಶಾಶ್ವತಸ್ಥಿತಿಯ ವಿಷಯದಲ್ಲೂ ಭರತಖಂಡವು ಆಧಾರವಾಗಿರುತ್ತದೆ. ಹಿಂದಿನ ಕೆಲಕಾರಣಗಳಿಂದ ಪ್ರಜೆಗಳಲ್ಲಿ ಶಿಥಿಲವಾಗುತ್ತ ಬಂದಿದ್ದ ಪ್ರಭುವಿಶ್ವಾಸವನ್ನು ಈ ಹಾರ್ಡಿಂಜ್ ಪ್ರಭುಗಳು ಮರಳಿ ಸ್ಥಿತಿಸ್ಥಾಪನೆಗೆ ತಂದು ಮತ್ತಷ್ಟು ದೃಢಪಡಿಸುತ್ತಿದ್ದಾರೆ. ಇದು ಘನತರವಾದ ಕಾರ್ಯವು. ಪ್ರಾಚ್ಯಪಾಶ್ಚಾತ್ಯದೇಶಗಳ ಪರಸ್ಪರಸಂಬಂಧವು ಬಳೆಯುವುದೂ ಉಭಯದೇಶಗಳಲ್ಲೂ ಸಾನುಭೂತಿಯು ಹೆಚ್ಚುವುದೂ ಕೂಡ ಆಂಗ್ಲಸಾಮ್ರಾಜ್ಯದ ಶಾಶ್ವತತೆಗೆ ಆಧಾರವಾಗಿರುತ್ತದೆ. ಅದನ್ನು ಲಾರ್ಡ್ ಹಾರ್ಡಿಂಜ್‌ರವರು ತಮ್ಮ ದೀರ್ಘದರ್ಶಿತೆಯಿಂದ ಚೆನ್ನಾಗಿ ಪರಿಭಾವಿಸಿ, ತತ್ಸಾಧನಸಾಮಗ್ರಿಯನ್ನು ಪುಷ್ಟಿಗೊಳಿಸುತ್ತಿದ್ದಾರೆ. ಆದುಕಾರಣ, ಇವುಗಳನ್ನೆಲ್ಲಾ ಪರ್ಯಾಲೋಚಿಸಿ, ಭಾರತೀಯಪ್ರಜೆಗಳು ಮಾಡುತ್ತಿರುವ ಪ್ರಾರ್ಥನೆಯನ್ನು ಭಾರತೀಯರ ಹಿತಚಿಂತನೆಯಲ್ಲಿ ವಿಶೇಷತತ್ಪರರಾದ ನಮ್ಮ ಸಾರ್ವಭೌಮರು ನಡೆಯಿಸಿಕೊಡದೆ ತಪ್ಪಲಾರರೆಂದೂ, ನಮ್ಮ ಲಾರ್ಡ್ ಹಾರ್ಡಿಂಜ್ ಪ್ರಭುರವರೂ ಅವರ ಧರ್ಮಪತ್ನಿಯವರೂ ಸಹ ಈ ಪ್ರಜೆಗಳ ಪ್ರಾರ್ಥನೆಯನ್ನು ಒತ್ತರಿಸದೆ ತಮ್ಮ ನಿಸರ್ಗಕೃಪಾತಿಶಯದಿಂದ ಪುರಸ್ಕರಿಸಿ, ಇನ್ನು ಕೆಲಕಾಲ ನಮ್ಮ ದೇಶದಲ್ಲಿದ್ದುಕೊಂಡು ಇಲ್ಲಿನ ಪ್ರಜೆಗಳ ಶಾಶ್ವತಹಿತಕ್ಕೆ ಸಾಧಕವಾದ ಕಾರ್ಯಗಳನ್ನು ಪೂರಯಿಸಿಕೊಟ್ಟು, ಇತೋಪ್ಯತಿಶಯವಾದ ಕೀರ್ತಿಪ್ರತಿಷ್ಠೆಗಳನ್ನು ಪಡೆದುಕೊಳ್ಳುವವರಾಗಲೆಂದೂ, ಅದಕ್ಕೆ ತಕ್ಕ ಆರೋಗ್ಯಾದಿಭಾಗ್ಯಗಳನ್ನೂ ಸನ್ಮತಿಯನ್ನೂ ಜಗದೀಶ್ವರನು ಅವರಿಗೆ ಅನುಗ್ರಹಿಸಲೆಂದೂ ಕೋರುವೆವು.

ವಿದ್ಯುತ್ತಿನ ತೆರೆಗಳು

ಲೋಕದಲ್ಲಿ ವಿದ್ಯುಚ್ಛಕ್ತಿಯನ್ನು ಮೊಟ್ಟಮೊದಲು ಬೆಂಜಮಿನ್ ಫ್ರಾಂಕ್ಲಿನ್‌ರವರು ಕಂಡುಹಿಡಿದರು. ಅದರ ಪ್ರಯೋಗವು ಈಚೆಗೆ ನಾನಾಮುಖದಿಂದ ಹೆಚ್ಚುತ್ತ ಅದರ ಫಲವು ಅನಂತವಿಧವಾಗಿ ಲೋಕಾಶ್ಚರ್ಯವನ್ನು ಮಾಡುತ್ತಿರುವುದು. ಇನ್ನೂ ಈ ವಿದ್ಯುಚ್ಛಕ್ತಿಯ ಪ್ರಯೋಜನಗಳು ಜಗತ್ತಿಗೆ ಯಾವಯಾವ ವಿಧದಿಂದ ಆಗಿ ಲೋಕದಲ್ಲಿ ಯಾವ ತೆರದ ಪರಿವರ್ತನಗಳುಂಟಾಗುವುವೋ ಹೇಳಲಾಗುವುದಿಲ್ಲ. ಪೂರ್ವದಲ್ಲಿ ಕಂಬಗಳಿಗೆ ತಂತಿಯನ್ನು ಕಟ್ಟಿ ಅವುಗಳ ಮೇಲೆ ವಿದ್ಯುಚ್ಛಕ್ತಿಯನ್ನು ಹರಿಯುವಂತೆ ಮಾಡಿ, ಅದರ ಮೂಲಕ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸುದ್ದಿಗಳು ಸಾಗುವಂತೆ ಏರ್ಪಡಿಸಿದ್ದರು. ಈಚೆಗೆ ತಂತಿಯ ಸಹಾಯವಿಲ್ಲದೇನೆಯೇ ಸುದ್ದಿಗಳನ್ನು ಕಳುಹಿಸುವ ಏರ್ಪಾಡಾಗಿರುವುದೆಂಬುದನ್ನು ನಮ್ಮ ವಾಚಕರು ಕೇಳಿ ಬಲ್ಲರಷ್ಟೆ. ಈ ಉಪಾಯವನ್ನು ಕಂಡುಹಿಡಿದವನು ಮಾರ್ಕೋನಿ ಎಂಬ ಶಾಸ್ತ್ರಜ್ಞನು. ಆದುಕಾರಣ, ಈ ಪದ್ಧತಿಗೆ ಅವನ ಹೆಸರೇ ಇಡಲ್ಪಟ್ಟಿದೆ. ಹೀಗೆ ತಂತಿಯಿಲ್ಲದೆ ವಾರ್ತೆಯನ್ನು ಕಳುಹಿಸುವ ಉಪಾಯದಲ್ಲಿ ವಿದ್ಯುಚ್ಛಕ್ತಿಯೇ ಸಾಧನವಾಗಿದೆ. ಹೇಗೆಂದರೆ:—ನೀರಿನ ಮಧ್ಯದಲ್ಲಿ ಒಂದು ಕಲ್ಲನ್ನಿಟ್ಟರೆ ಅದರಿಂದ ತೆರೆಗಳು ವಲಯಾಕಾರವಾಗಿ ಒಂದರ ಮಗ್ಗುಲಲ್ಲಿ ಮತ್ತೊಂದುಹುಟ್ಟಿ ನೀರನ್ನೆಲ್ಲಾ ವ್ಯಾಪಿಸುವಂತೆ, ಆಕಾಶದಲ್ಲಿ ತೆರೆತೆರೆಯಾಗಿ ವ್ಯಾಪಿಸುವ ಶಕ್ತಿಯುಳ್ಳ ವಿದ್ಯುತ್ತರಂಗದ ಮೂಲಕವಾಗಿ ಈ ಸುದ್ದಿಗಳನ್ನು ಕಳುಹಿಸುತ್ತಿರುವರು. ಈ ವಿದ್ಯುತ್ತರಂಗವು ಆಕಾಶದಲ್ಲೆಲ್ಲಾ ತುಂಬಿರುವ "ಈಥರ್" ಎಂಬ ಪದಾರ್ಥದ ದ್ವಾರಾ ಎಲ್ಲಾ ದಿಕ್ಕುಗಳಿಗೂ ಥಟ್ಟನೆ ಗೋಳಾಕೃತಿಯಲ್ಲಿ ವ್ಯಾಪಿಸುವುದು. ಹೀಗೆ ಆಕಾಶದಲ್ಲೆಲ್ಲಾ ವ್ಯಾಪಿಸುವ ತೆರೆಗಳನ್ನು ಗುರ್ತುಹಿಡಿಯುವುದಕ್ಕೆ ಬೇರೆ ಯಂತ್ರಗಳಿರುವುವು. ಅಲ್ಲಲ್ಲಿಗೆ ಬೇಕಾದ ಕಡೆಯಲ್ಲಿ ಎತ್ತರವಾದ ಶಿಖರಗಳನ್ನು ಕಟ್ಟಿ, ಅಲ್ಲಿ ವಿದ್ಯುತ್ತರಂಗೋತ್ಪತ್ತಿಯನ್ನು ಮಾಡುವ ಯಂತ್ರಗಳನ್ನಿಟ್ಟಿರುವರು. ಮತ್ತೂ ಅಲ್ಲಿ ವಿದ್ಯುತ್ತರಂಗವನ್ನು ಗ್ರಹಿಸುವ ಯಂತ್ರಗಳನ್ನೂ ಇಟ್ಟಿರುವರು. ಉತ್ಪತ್ತಿಸ್ಥಾನದಲ್ಲಿ ತರಂಗಗಳ ಜತೆಗೆ ವಾರ್ತೆಯು ಪ್ರೇರಿಸಲ್ಪಡುವುದು. ಕೂಡಲೇ ಅದು ತರಂಗಗ್ರಾಹಿಯಂತ್ರಗಳಿರುವ ಕಡೆಯಲ್ಲೆಲ್ಲಾ ಸೂಚಿತವಾಗುವುದು. ತಂತಿಗಳಲ್ಲಾದರೋ ಇಂಥಸುದ್ದಿಗಳು ನಿಯಮಿತವಾದ ಸ್ಥಳಕ್ಕೆ ಮಾತ್ರ ಹೋಗುವುವು. ಏಕೆಂದರೆ-ಅಲ್ಲಿನ ವಿದ್ಯುತ್ಪ್ರವಾಹಕ್ಕೆ ತಂತಿಯೇ ಮಾರ್ಗವಾಗಿರುತ್ತ ಬೇರೆಕಡೆ ಹೋಗಲು ಯತ್ನವಿರುವುದಿಲ್ಲ. ಈ ತರಂಗಕ್ಕಾದರೋ ಆಕಾಶವನ್ನೆಲ್ಲಾ ವ್ಯಾಪಿಸುವ ಶಕ್ತಿಯಿರುತ್ತದೆ ಅಲ್ಲಿ ತನ್ನನ್ನು ಗ್ರಹಿಸುವ ಯಂತ್ರವಿರುವ ಕಡೆ ಕಾಣಿಸಿಕೊಳ್ಳುವ ಸ್ವಭಾವವಿರುವುದು. ಆದುಕಾರಣ, ಒಂದುಕಡೆಯಲ್ಲಿ ಕೊಡಲ್ಪಟ್ಟ ಮಾರ್ಕೋನಿ ವಿಧಾನದ ವಾರ್ತೆಯು ಆತೆರದ ಯಂತ್ರಗಳಿರುವ ಕಡೆಯಲ್ಲೆಲ್ಲಾ ಒಂದೇವೇಳೆ ಸೂಚಿತವಾಗುವುದು. ಸಮುದ್ರದಲ್ಲಿ ಅಪಾಯಕ್ಕೆ ಗುರಿಯಾದ ಹಡಗುಗಳಲ್ಲಿ ಇಂಥ ಯಂತ್ರವು ಇರುತ್ತಿದ್ದು, ಅದರಿಂದ ಕೊಡಲ್ಪಟ್ಟ ವಾರ್ತೆಗಳು ಅಂಥ ಯಂತ್ರವಿರುವ ಹಡಗುಗಳಲ್ಲೆಲ್ಲಾ ಏಕಕಾಲದಲ್ಲಿ ಸೂಚಿತವಾಗುತ್ತಿರುವ ರೀತಿಯನ್ನೂ ಅದರ ಸಹಾಯದಿಂದ ಹಡಗಿನ ರಕ್ಷಣೆಗಳಾಗುತ್ತಿರುವುದನ್ನೂ ನಾವು ಕೇಳುತ್ತಿರುವೆವು. ಈ ವಿದ್ಯುತ್ತರಂಗಗಳು ಸೂರ್ಯ ಕಿರಣದಿಂದ ವ್ಯಾಪ್ತವಾಗಿರುವ ಆಕಾಶವನ್ನೂ ಆ ಕಿರಣವಿಲ್ಲದಿರುವ ಆಕಾಶವನ್ನೂ ಹಾದುಹೋಗುವುದರಲ್ಲಿ ವಿಶೇಷಭೇದವಿರುವುದೆಂಬುದನ್ನು ಈಚೀಚೆಗೆ ಮಾಡಿದ ಪರಿಶೋಧನೆಯಿಂದ ಶಾಸ್ತ್ರಜ್ಞರು ಗೊತ್ತುಮಾಡಿರುವರು. ಸ್ವಲ್ಪವಾಗಿಯಾಗಲಿ ವಿಶೇಷವಾಗಿಯಾಗಲಿ ಸೂರ್ಯಕಿರಣವೇ ಇಲ್ಲದಿರುವ ಆಕಾಶವು ದೊರೆಯುವುದು ದುರ್ಲಭವು. ಏಕೆಂದರೆ-ಸೂರ್ಯರಶ್ಮಿಯು ಭೂಮಂಡಲದ ಒಂದು ಕಡೆಯಲ್ಲಿಲ್ಲದಿದ್ದರೆ ಮತ್ತೊಂದುಕಡೆಯಲ್ಲಾದರೂ ಇದ್ದೇಇರುವುದು ಮತ್ತು ಚಂದ್ರನ ಬೆಳ್ದಿಂಗಳೊಕೂಡ ಸೂರ್ಯರಶ್ಮಿಯಿಂದ ಹುಟ್ಟಿದುದೇ ಆಗಿರುತ್ತದೆ. ಆದುಕಾರಣ ಅದೂಕೂಡ ವಿದ್ಯುತ್ತರಂಗಪ್ರಸಾರಕ್ಕೆ ಸ್ವಲ್ಪಮಟ್ಟಿಗೆ ಬಾಧಕವಾಗಿಯೇ ಇರುತ್ತದೆ. ಈವರ್ಷ ಬರುವ ಆಗಸ್ಟ್ ತಿಂಗಳಲ್ಲಿ ೨೧ನೆಯ ತಾರೀಖಿನ ದಿನ ಕೆಲಕೆಲವು ಗಳೊಳಗೆ ಸಂಪೂರ್ಣ ಸೂರ್ಯಗ್ರಹಣವಾಗುವುದರಲ್ಲಿ ಆ ಕಾಲದಲ್ಲಿ ಸೂರ್ಯನ ಕಿರಣಕ್ಕೆ ತುಂಬಾ ಅಡ್ಡ [illegible]

ಟಾಗುವುದರಿಂದ ಅಂಥ ಆಚ್ಛಾದನೆಯುಳ್ಳ ಭಾಗದಲ್ಲಿ ಆಕಾಶದೊಳಗೆ ಈ ವಿದ್ಯುತ್ತರಂಗವನ್ನು ಹರಿಯಿಸಿ ಆಗಾಗುವ ಫಲಿತಾಂಶವನ್ನು ಚೆನ್ನಾಗಿ ಪರೀಕ್ಷಿಸಿ ತಿಳಿಯಬೇಕೆಂದು ಈಗಿನಿಂದಲೂ ಯುರೋಪ್‌ಖಂಡದ ಶಾಸ್ತ್ರಜ್ಞರು ನಿರೀಕ್ಷಿಸಿಕೊಂಡು ಮಹಾಪ್ರಯತ್ನವನ್ನು ಮಾಡುತ್ತಿದ್ದಾರೆ.

ಮೈಸೂರ್ ಸ್ಟಾರ್.

ಸನ್ ೧೯೧೪ನೆಯ ಇಸವಿ ಜೂನ್ ತಾ|| ೨೯ನೆಯ ಸೋಮವಾರ.

ಕಳೆದವರ್ಷದ ಪ್ರಜಾಪ್ರತಿನಿಧಿಸಭೆಯ ವರದಿ.

ಪದ್ಧತಿಯಂತೆ ೧೯೧೩ನೆಯ ವರ್ಷದಲ್ಲಿ ನಡೆದ ಈ ಮಹಾಸಭೆಯ ನಡವಳಿಕೆಯನ್ನು ವಿವರಿಸುವ ವರದಿಯು ಅಚ್ಚಾಗಿ ಈಗತಾನೇ ನಮ್ಮ ಹಸ್ತಗತವಾಗಿರುವುದು. ಇದರಲ್ಲಿ ಕಂಡಮೇರೆಗೆ ಆ ವರ್ಷದ ಸಭೆಯಕಾರ್ಯಗಳು ೮ ದಿನಗಳು ನಡೆದಿರುವುವು. ಸಭೆಗೆ ಆರಿಸಲ್ಪಟ್ಟಿದ್ದ ಪ್ರತಿನಿಧಿಗಳು ೨೭೭ ಮಂದಿಗಳು. ಅವರಲ್ಲಿ ೨೩೮ ಮಂದಿಗಳು ಸಭೆಗೆ ಬಂದಿದ್ದರು. ಸಭಾಚರ್ಚೆಗೆ ಗೊತ್ತಾಗಿದ್ದ ವಿಷಯಗಳು ೮೨೭. ಆದರೆ ಸಭೆಯಲ್ಲಿ ಚರ್ಚೆ ನಡೆದ ವಿಷಯಗಳು ಮಾತ್ರ ಅರ್ಧಕ್ಕೆ ಸ್ವಲ್ಪ ಹೆಚ್ಚಾಗಿದ್ದುವು. ಸಭೆಯಲ್ಲಿ ದಿವಾನರು ಅಧ್ಯಕ್ಷರಾಗಿ ಮಾಡಿದ ಭಾಷಣವೂ, ನಡೆದ ಪ್ರಶ್ನೋತ್ತರಗಳೂ ಇದರಲ್ಲಿ ಮುದ್ರಿಸಲ್ಪಟ್ಟಿವೆ. ಈ ಸಭೆಯಿಂದ ನಿಯಮನಿರ್ಮಾಣಸಭೆಗೂ ಸಂಪದಭಿವೃದ್ಧಿ ಸಮಾಜಕ್ಕೂ ಆರಿಸಲ್ಪಟ್ಟಿರುವ ಪ್ರತಿನಿಧಿಗಳ ಹೆಸರು ವಿವರಿಸಲ್ಪಟ್ಟಿವೆ. ಅವನ್ನೆಲ್ಲಾ ತತ್ಕಾಲದಲ್ಲೇ ನಾವು ಪತ್ರಿಕೆಯಲ್ಲಿ ಮುದ್ರಿಸಿರುತ್ತೇವೆ. ಈ ಸಭೆಯು ಮೈಸೂರು ಸಂಸ್ಥಾನಕ್ಕೆ ಅಸದೃಶವಾದ ಗೌರವವನ್ನೇನೋ ಹೊರಗೆ ತಂದಿರುವುದು. ಇದರ ಕಾರ್ಯದಿಂದ ದೇಶಕ್ಕೂ ವಿಶೇಷವಾದ ಪ್ರಯೋಜನವಾಗಿರುವುದು ಮತ್ತೂ ಇನ್ನೂ ಆಗತಕ್ಕುದಾಗಿರುವುದು. ಅದು ಕಾರಣ ಇದಕ್ಕಾಗಿ ವರ್ಷೇವರ್ಷೇ ಆಗುತ್ತಿರುವ ಧನವ್ಯಯವೂ, ಸರ್ಕಾರದ ಕಾಲವ್ಯಯವೂ ಉಪಯುಕ್ತವೆಂದೇ ಹೇಳಬಹುದು. ಆದರೆ, ಇದಕ್ಕೆ ೩೦ ವರ್ಷ ವಯಸ್ಸು ತುಂಬಿದ್ದರೂ ಇದರ ಕಾರ್ಯಕ್ರಮವು ಇನ್ನೂ ಒಂದು ಸ್ಥಿತಿಗೆ ಬಂದಿಲ್ಲವೆಂಬುದು ವಿಷಾದಕರವಾಗಿದೆ. ಪ್ರತಿನಿಧಿಗಳಲ್ಲಿ ಈಗಿನ ಕಾಲದ ಪಾರ್ಲಿಮೆಂಟು-ನಿಯಮನಿರ್ಮಾಣಸಭೆ-ಮೊದಲಾದುವುಗಳ ನಡವಳಿಕೆಯ ಕ್ರಮವನ್ನು ಅರಿತವರು ವಿಶೇಷವಾಗಿಲ್ಲ. ಸಭೆಗೆ ಬಂದಮೇಲೆ ಯಾವುದಾದರೂ ಹೊಸಹೊಸ ಅರಿಕೆಗಳನ್ನು ತಾವು ಮಾಡದಿದ್ದರೆ ಗೌರವವಲ್ಲವೆಂದು ತಿಳಿದುಕೊಂಡಿರುವವರು ಅನೇಕರಿದ್ದಾರೆ. ಅದಕ್ಕಾಗಿ ಇತರರಾರನ್ನಾದರೂ ಕೇಳಿ ಏನಾದರೊಂದು ವಿಷಯವಾಗಿ ಬರೆಯಿಸಿಕೊಂಡು ಸರ್ಕಾರಕ್ಕೆ ಒಪ್ಪಿಸಿ ಕೃತಾರ್ಥಂಮನ್ಯರಾಗತಕ್ಕವರೂ ಕೆಲರಿದ್ದಾರೆ. ಸೂಚಿಸಿದ ವಿಷಯದಲ್ಲಿ ಸಭೆಯೊಳಗೆ ಏನಾದರೂ ಪ್ರಶ್ನೆಮಾಡಿದರೆ ಅದಕ್ಕೆ ತಕ್ಕ ಸಮಾಧಾನವನ್ನು ಹೇಳಿ ಕೂಲಂಕಷವಾಗಿ ಚರ್ಚಿಸತಕ್ಕ ಸಾಮರ್ಥ್ಯವುಳ್ಳವರು ಬಹುಜನರಿಲ್ಲ. ಹಲವರು ವಿಷಯಗಳನ್ನೇನೋ ಬರೆದುಕೊಟ್ಟು, ಸಭೆಗೆ ಒಂದೆರಡು ದಿನ ಬಂದಿದ್ದು ತಮ್ಮ ವಿಷಯಗಳು ಚರ್ಚೆಗೆ ಬರುವುದಕ್ಕೆ ಮುಂಚೆಯೇ ತಂತಮ್ಮ ಸ್ಥಲಗಳಿಗೆ ಹೊರಟುಹೋಗಿಬಿಡುತ್ತಾರೆ. ಪ್ರತಿನಿಧಿಗಳಲ್ಲೇ ಕೆಲರು ಪ್ರತಿಯೊಂದು ವಿಷಯಕ್ಕೂ ತಾವು ದೊಡ್ಡ ಬಾಯಿಯನ್ನು ಹಾಕುತ್ತ, ಸರ್ವವಿಷಯಗಳಿಗೂ ತಮ್ಮ ತಿಳುವಳಿಕೆಯೇ ಮುಂದೆಂಬುದನ್ನು ತೋರಿಸುತ್ತ ಗದ್ದಲವನ್ನು ಮಾಡುವುದರಿಂದ ಸೌಮ್ಯರಾದ ಜನರು ಅವರಮುಂದೆ ಬಾಯಲಾರದೆ ತಟಸ್ಥರಾಗಿ ಹೋಗುತ್ತಾರೆ. ಇವೆಲ್ಲ ಕಾರಣಗಳಿಂದ ಗೊತ್ತುಗುರಿಯಿಲ್ಲದನ್ನು ವಿಷಯಗಳು ಪಟ್ಟಿಯಲ್ಲಿ ಬೀಳುವುದಕೂ ಎಲ್ಲವನ್ನೂ ಸಾವಧಾನವಾಗಿ ಚರ್ಚಿಸುವುದಕ್ಕೆ ಕಾಲವು ಸಾಲದುದರಿಂದ ಅವಸರಕ್ಕೆ ಮೂರುಮೊಳವನ್ನು ನೆಯ್ದಂತೆ ವಿಷಯಚರ್ಚೆಗಳನ್ನು ಸಭೆಯಲ್ಲಿ ಮುಗಿಸುವುದಕ್ಕೂ ಅವಕಾಶವಾಗಿದೆ. ಸಭೆಯಲ್ಲಿನ ಕೆಲ ಸಂದರ್ಭದ ನಡವಳಿಕೆಗಳು ಎಂಥ ತಾಳ್ಮೆಯುಳ್ಳ ಅಧ್ಯಕ್ಷರಿಗೂ ಬೇಸರವನ್ನು ಹುಟ್ಟಿಸುವಂತಿರುತ್ತದೆ. ಈ ಸಭೆಯ ಬಾಲ್ಯಸ್ಥಿತಿಯಲ್ಲಿ ಇದೇ ಕಾರಣದಿಂದ ಸರ್ ಕೆ. ಶೇಷಾದ್ರಿ ಅಯ್ಯರು ಪ್ರತಿನಿಧಿಗಳ ಮೇಲೆ ರೇಗಿಬೀಳುತ್ತಿದ್ದರು. ಇದರ ಕಾರ್ಯಕ್ರಮವನ್ನು ಒಂದು ಸುರೂಪಕ್ಕೆ ತರಬೇಕೆಂದು ಮ|| ಮಾಧವರಾಯರು ಕೆಲ ವಿಧಿಗಳನ್ನೇರ್ಪಡಿಸಿದರು. ಆದರೂ ಪರಿಹರಣೀಯವಾದ ಲೋಪಗಳು ಇನ್ನೂ ಇವೆ. ಆಂಗ್ಲಭಾಷೆಯನ್ನೂ ಈಗಿನಕಾಲದ ಮಹಾಸಭೆಗಳ ನಡವಳಿಕೆಯನ್ನೂ ತಿಳಿದು, ಗ್ರಾಮಾಂತರದ ಜನರೊಡನೆ ಬೆರೆದು ಅವರ ಕಷ್ಟಸುಖಗಳನ್ನು ತಿಳಿದಿರತಕ್ಕವರು ಮಾತ್ರವೇ ಈ ಸಭೆಗೆ ಬರುವಂತಿದ್ದರೆ ಇದರ ಸ್ಥಿತಿಯು ಇನ್ನೂ ಬಹು ಫಲದಾಯಕವಾಗಿಯೂ ಗೌರವಾವಹವಾಗಿಯೂ ಇರುತ್ತಿದ್ದಿತು. ಆದರೆ ಅಂಥವರು ಬಹು ವಿರಳ. ನಮ್ಮ ದೇಶದ ಪ್ರಜೆಗಳಲ್ಲಿ ರಾಜಭಾಷೆಯನ್ನು ತಿಳಿದವರು ಸ್ವಲ್ಪವೇ ಇದ್ದಾರೆ. ಅವರಿಗೂ ಗ್ರಾಮಾಂತರದ ಜನರಿಗೂ ಬಳಕೆಯು ಸೇರುವುದಿಲ್ಲ. ಹೀಗಿರುವುದರಿಂದ ಪ್ರತಿನಿಧಿಗಳಾಗಿ ಈಗೆ ಬರತಕ್ಕವರೇ ತಮ್ಮ ಲೋಪಗಳನ್ನು ತಾವು ಸರಿಪಡಿಸಿಕೊಂಡರೆ, ತಮ್ಮನ್ನಾರಿಸಿದ ಪ್ರಜೆಗಳಿಗೆ ತಾವು ಹಿತವನ್ನುಂಟುಮಾಡಿ, ದೇಶಕ್ಕೆ ಗೌರವವನ್ನೂ ಸರ್ಕಾರಕ್ಕೆ ಸಂತೃಪ್ತಿಯನ್ನೂ ಉಂಟುಮಾಡಬಹುದು. ನಮ್ಮ ಪ್ರತಿನಿಧಿಗಳು ವರ್ಷಕ್ಕೆ ೧ ತಿಂಗಳನ್ನಾದರೂ ಈ ಕಾರ್ಯಕ್ಕೆ ವಿನಿಯೋಗಿಸಿ ತಮ್ಮನ್ನಾರಿಸುವ ಪ್ರಜೆಗಳ ಹಿತದ ಕಾರ್ಯಗಳೇನೇನೆಂಬುದನ್ನು ಕಣ್ಣಾರ ನೋಡಿ ತಿಳಿದು ಚರ್ಚಿಸಿ ತಾವುತಾವೇ ಚೆನ್ನಾಗಿ ನಿರ್ಧರಿಸಿಕೊಳ್ಳಲು ಪ್ರಯತ್ನಪಡಬೇಕು. ಸರ್ಕಾರದಿಂದ ಬರುವ "ಅವಾಜನೆ" ಯನ್ನು ಉಪಯೋಗಿಸಿಕೊಂಡು ೧ ವಾರದ ಮಟ್ಟಿಗೆ ಸಭೆಯಲ್ಲಿ ಬಂದು ಕುಳಿತಿದ್ದು ಹೋದರೆ ಪ್ರಯೋಜನವಿಲ್ಲ. ಸ್ವಾರ್ಥಪರಿತ್ಯಾಗವನ್ನಾದರೂ ಮಾಡಿ ದೇಶಸೇವೆಯನ್ನು ಮಾಡಬೇಕೆನ್ನುವವರು ಪ್ರಜಾಪ್ರತಿನಿಧಿಗಳಾಗಲು ಅರ್ಹರೇ ಹೊರತು ಸ್ವಾರ್ಥವೇ ಮುಖ್ಯವಾಗುಳ್ಳವರಿಂದ ಇಂಥ ಕೆಲಸವು ಸಮರ್ಪಕವಾಗಿ ಆಗತಕ್ಕುದಲ್ಲ. ಪಾರ್ಲಿಮೆಂಟು ಮೊದಲಾದುವುಗಳಲ್ಲಿ ಪ್ರತಿನಿಧಿತ್ವವನ್ನು ಪಡೆಯತಕ್ಕವರು ತಮ್ಮ ಯೋಗ್ಯತೆಯನ್ನು ಪ್ರಜೆಗಳಲ್ಲಿ ತೋರಿಸಿ ಅವರ ಮನಸ್ಸನ್ನೊಲಿಯಿಸಿ, ಪ್ರತಿನಿಧಿಗಳಾಗಿ ಆರಿಸಲ್ಪಡುವುದಕ್ಕಾಗಿ ಆಯಾ ಭಾಗಗಳಲ್ಲಿ ತಿಂಗಳುಗಟ್ಟಲೆ ಸಂಚರಿಸಿ ಸಹಸ್ರಾವಧಿ ಧನವ್ಯಯವನ್ನು ಮಾಡಿ ದೇಹಶ್ರಮಗಳನ್ನು ಪಡುತ್ತಿರುತ್ತಾರೆ. ನಿಜವಾಗಿ ದೇಶಹಿತಕ್ಕಾಗಿ ಹೋರಾಡತಕ್ಕವರಲ್ಲದ ಸ್ವಾರ್ಥಪರರಿಗೆ ಅಲ್ಲಿ ಪ್ರತಿನಿಧಿತ್ವವೇ ದೊರೆಯುವುದಿಲ್ಲ. ಅದನ್ನು ಕೇಳಿ ತಿಳಿದುಕೊಂಡು ನಮ್ಮ ಪ್ರತಿನಿಧಿಗಳು ತಾವು ಸಾಧ್ಯವಾದ ಮಟ್ಟಿಗೂ ತಮ್ಮ ಪ್ರತಿನಿಧಿತ್ವವನ್ನು ಸಾರ್ಥಕಪಡಿಸಿಕೊಳ್ಳಲು ಯತ್ನಿಸಬೇಕು. ಸಭೆಯ ಕಾಲವು ಅಮೌಲ್ಯವಾದುದರಿಂದ ವಿಷಯಬಾಹುಳ್ಯದ ಕಡೆಗೇ ಗಮನಿಸದೆ, ಸಂಖ್ಯೆಯಲ್ಲಿ ಅಲ್ಪವಾಗಿದ್ದರೂ ಅವುಗಳ ಘನತೆಯ ಕಡೆಗೆ ಗಮನವಿತ್ತು ವರ್ಷಕ್ಕೆ ೪೦-೫೦ ಆದರೂ ದೇಶಸಾಮಾನ್ಯವಿಷಯಗಳು ಕೂಲಂಕಷವಾಗಿ ಇತ್ಯರ್ಥವಾಗುವಂತೆ ಮಾಡಿಸಬೇಕೆಂದು ಸಂಕಲ್ಪಿಸಿಕೊಂಡರೆ ಸಾಕು. ಅದಕ್ಕೆ ಪ್ರತಿನಿಧಿಗಳಲ್ಲಿ ಐಕಮತ್ಯವು ಬೇಕು. ಸಭಾಕಾಲಕ್ಕೆ ನಾಲ್ಕೈದುದಿನ ಮುಂಚಿತವಾಗಿ ಬಂದು ಒಂದುಕಡೆ ಸೇರಿ ವಿಚಾರಮಾಡಿ ಇಂತಿಂತಹ ವಿಷಯಗಳನ್ನು ಇಂತಿಂಥವರೇ ಮಾತನಾಡತಕ್ಕುದೆಂಬುದನ್ನೂ ಅದರ ಸಾಧಕಬಾಧಕಗಳು ಈ ರೀತಿಯವೆಂಬುದನ್ನೂ ನಿರ್ಧರಿಸಿಕೊಳ್ಳಬೇಕು. ಹೀಗೆಲ್ಲಾ ಅವರು ಪ್ರಯತ್ನಪಡದೆ ಈಗಿನಂತೆಯೇ ಸಭಾಕಾರ್ಯಗಳನ್ನು ಸಾಗಿಸುತ್ತ ಬರುವುದು ಅವರಿಗೆ ಕೃತಕೃತ್ಯತೆಯನ್ನುಂಟುಮಾಡುವುದಿಲ್ಲ.

ಒಳದೇಶದ ವೃತ್ತಾಂತಗಳು.

ಈದಿವಸ ನಿಯಮನಿರ್ಮಾಣಸಭೆಯು ಬೆಂಗಳೂರ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ನಡೆಯುವುದರಿಂದ ರಾಜಧಾನಿಗೆ ಬಂದಿದ್ದ ದಿವಾನರೂ, ಕೌನ್ಸಿಲರುಗಳೂ ನಿನ್ನೆಯದಿನ ಬೆಂಗಳೂರಿಗೆ ಹಿಂದಿರುಗಿ ಪ್ರಯಾಣಮಾಡಿದರು.

ಈದಿವಸ ಕೂಡುವ ನಿಯಮನಿರ್ಮಾಣಸಭೆಯಲ್ಲಿ ೧೯೧೪-೧೯೧೫ ನೆಯ ವರ್ಷದ ಸಂಸ್ಥಾನದ ಆಯವ್ಯಯದ ಲೆಕ್ಕದ ಪಟ್ಟಿಯು ಅರ್ಥಶಾಖಾ ಸೆಕ್ರೆಟರಿಯವರಿಂದ ಸಭಾಸ್ತಾರರ ಪರ್ಯಾಲೋಚನೆಗೆ ತರಲ್ಪಡುವುದು.

ರಾ||ಬ|| ಮುತ್ತಣ್ಣನವರು ಈ ಜುಲೈ ತಾ||೧ರಲ್ಲಿ ಉದ್ಯೋಗದಿಂದ ನಿವೃತ್ತರಾಗುತ್ತಾರಾದಪ್ರಯುಕ್ತ, ಬೆಂಗಳೂರ ಡಿ|| ಡೆಪ್ಯುಟಿ ಕನ್ಸರ್ವೇಟರಾದ ಮ||ಎಂ.ಜಿ. ರಾಮರಾವ್, ಬಿ.ಎ., ಯವರು ಅಫಿಸಿಯೇಟಿಂಗ್ ಕನ್ಸರ್ವೇಟರಾಗಿ ನಿಯಮಿಸಲ್ಪಟ್ಟಿರುವರು.

ಕುದುರೆಯ ಮತ್ತೂ ಪೋಲೋಪಂದ್ಯಗಳಿಗಾಗಿ ಬಂದಿದ್ದ ರೆಸಿಡೆಂಟರು ಮೊದಲಾದ ಐರೋಪ್ಯಾತಿಥಿಗಳೆಲ್ಲಾ ಕಳೆದ ತಾ|| ೨೫ರಲ್ಲಿ ಗೌರ್ನಮೆಂಟ್ ಹೌಸಿನಲ್ಲಿ ರಾಜರೌತಣವು ನಡೆದು ಅವರೆಲ್ಲರೂ ನಿನ್ನೆ ಮತ್ತೂ ಈ ದಿನಗಳಲ್ಲಿ ಹಿಂದಿರುಗಿ ಪ್ರಯಾಣಮಾಡಿದರು.

ಮೈಸೂರ ಡಿ|| ಹೆಲ್ತಾಫೀಸರಾದ ಮ|| ಬಿ. ಕೃಷ್ಣರಾಯರು ಪಡೆದುಕೊಂಡಿರುವ ಪ್ರಿವಿಲೇಜ್ ರಜವು ಇನ್ನೂ ೧ ತಿಂಗಳಿಗೆ ಹೆಚ್ಚಿಸಲ್ಪಟ್ಟಿರುವುದರಿಂದ ಅವರು ಬರುವವರೆಗೆ ಡಾ|| ಜಗನ್ನಾಥಂಪಿಳ್ಳೆಯವರು ಡಿ|| ಹೆಲ್ತಾಫೀಸರಾಗಿರಬೇಕೆಂದು ಸರ್ಕಾರದಪ್ಪಣೆಯಾಗಿದೆ.

ಚಿತ್ರಕಲ್‌ದುರ್ಗದ ಡಿ|| ಎಕ್ಸೈಸ್‌ಆಫೀಸರಾಗಿ ವರ್ಗಪಟ್ಟಿರುವ ಮ|| ಎಸ್. ವೆಂಕಟರಂಗಂಯವರು ೬ ವಾರಗಳ ಪ್ರಿವಿಲೇಜ್ ರಜವನ್ನು ಪಡೆದುಕೊಂಡಿರುವುದರಿಂದ ಅವರು ಬರುವವರೆಗೆ ಅ|| ಕಮಿಷನರ್ ಮ|| ಜಿ. ಹನುಮಂತರಾಯರು ಡಿ|| ಎಕ್ಸೈಸ್‌ಆಫೀಸರಾಗಿ ನಿಯಮಿಸಲ್ಪಟ್ಟಿರುವರು.

ಬ್ರಿಟಿಷ್ ರೆಸಿಡೆಂಟರಾದ ಸರ್ ಅಫ್‌ಡಾಲೆಯವರು ಬರುವ ಮಾರ್ಚಿತಿಂಗಳಲ್ಲಿಯೂ ಮತ್ತೂ ಶ್ರೀಮನ್ಮಹಾರಾಜರವರ ಮಿಲ್ಟರಿಸೆಕ್ರೆಟರಿಯವರಾದ ಕರ್ನಲ್ ಎ.ಎ. ಜೋನ್ಸ್‌ರವರು ಆಗಸ್ಟ್ ತಿಂಗಳಲ್ಲಿಯೂ ಉದ್ಯೋಗದಿಂದ ನಿವೃತ್ತರಾಗುವುದಾಗಿಯೂ, ಮಿಲ್ಟೆರಿ ಸೆಕ್ರೆಟರಿಯ ಸ್ಥಾನವು ಇತಃಪರಃ ತಪ್ಪಿಸಲ್ಪಡುವುದಾಗಿಯೂ ಅರಿಯುತ್ತೇವೆ.

ಶಿಕಾರಿಪುರ ತಾ|| ಆಕ್ಟಿಂಗ್ ಅಮಲ್ದಾರ್ ಮ|| ಜಿ. ಶಾಂತವೀರಪ್ಪ, ಬಿ. ಎ., ಯವರು ೩ ತಿಂಗಳ ಪ್ರಿವಿಲೆಜ್‌ರಜವನ್ನು ಪಡೆದುಕೊಂಡಿರುವುದರಿಂದ, ಅವರು ಬರುವವರೆಗೆ ಶಿವಮೊಗ್ಗ ಡಿ|| ಆಫೀಸ್ ಅ|| ಹೆಡ್ ಅಕೌಂಟೆಂಟರಾದ ಮ|| ಎಸ್. ನಾರಾಯಣರಾಯರು ಶಿಕಾರಿಪುರದ ತಾ|| ಆಕ್ಟಿಂಗ್ ಅಮಲ್ದಾರರಾಗಿ ನಿಯಮಿಸಲ್ಪಟ್ಟಿರುವರು.

ರಾಜಧಾನಿಯ ಹಳೇಅಗ್ರಹಾರದ ವರ್ತಕಮಂಡಲಿಯವರು ದೊಡ್ಡಬಳ್ಳಾಪುರದಿಂದ ಇಲ್ಲಿಗೆ ಬಂದಿರುವ ನವರಸಶಿವಕಥಾ ಪಂಡಿತರಾದ ವೇ|| ಶಿವದೇವಶಾಸ್ತ್ರಿಗಳಿಂದ ಬರುವ ತಾ|| ೩ ರ ರಾತ್ರಿ ಕಳೂರು ಮಠದಲ್ಲಿ ಶಿವಕಥಾಕಾಲಕ್ಷೇಪವನ್ನು ಮಾಡಿಸುವವರಾಗಿರುವುದರಿಂದ ದೈವಭಕ್ತರು ದಯಮಾಡಿ ಪ್ರೋತ್ಸಾಹಿಸಬೇಕೆಂದು ಅಪೇಕ್ಷಿಸುತ್ತಾರೆ.

ಗ್ರಾಮೋಫೋನಿನಲ್ಲಿ ಕಿರಾತಾರ್ಜುನೀಯ-ಉತ್ತರನಪೌರುಷ-ನೀಗರಪಾಡು ಮೊದಲಾದ ಪದ್ಯಗಳನ್ನು ಹಾಡಿ ಪ್ರಸಿದ್ಧೆಯಾಗಿರುವ-ಮೈಸೂರ ರಾಣಿವಾಸದಲ್ಲಿ ಭಾರತವನ್ನೋದಲು ನಿಯಮಿತೆಯಾಗಿರುವ ಮೈಸೂರಿನ ಸಣ್ಣವಯಸ್ಸಿನ ನಾಗಮ್ಮನೆಂಬಾಕೆಯು ಬೆಂಗಳೂರ ರತ್ನಾವಳಿ ನಾಟಕಶಾಲಾಮಂದಿರದಲ್ಲಿ ನಿನ್ನೆಯದಿನ ತನ್ನ ಓದುಗಾರಿಕೆಯನ್ನು ಪ್ರದರ್ಶಿಸತಕ್ಕವಳಾಗಿದ್ದಳು.

ಬರುವ ಜುಲೈ ತಿಂಗಳಲ್ಲಿ ಅರಮನೆಯ ಕಂಟ್ರೋಲರಾದ ಮ|| ಬಿ. ರಾಮಕೃಷ್ಣರಾಯರು ಉದ್ಯೋಗದಿಂದ ನಿವೃತ್ತಿಗೊಳಿಸಲ್ಪಟ್ಟು ಅವರ ಸ್ಥಾನದಲ್ಲಿ ಮೈಸೂರ ಡಿ|| ಡಿಪ್ಯುಟಿಕಮಿಷನರಾದ ಮ|| ಎ. ಸುಬ್ರಹ್ಮಣ್ಯಯ್ಯರ್‌ರವರು ನಿಯಮಿಸಲ್ಪಡುವುದಾಗಿಯೂ, ರಾಜಧಾನಿಯ ಮುನಸೀಫರಾದ ಮ|| ಶ್ರೀನಿವಾಸಯರ್‌ರವರು ಅ|| ಕಮಿಷನರಾಗಿ ನಿಯಮಿಸಲ್ಪಟ್ಟು ಸೆಕ್ರೆಟರಿಯಟ್ಟಿಗೆ ತೆಗೆದುಕೊಳ್ಳಲ್ಪಡುವುದಾಗಿಯೂ, ತಿಳಿಯುತ್ತೇವೆ.

ಬೆಂಗಳೂರ ಸಿಟಿ ಪೋಲೀಸ್ ಇನ್‌ಸ್ಪೆಕ್ಟರಾದ ಮ|| ಸಿ. ಕೃಷ್ಣರಾವ್, ಬಿ. ಎ., ಯವರು ವೈಸ್‌ರಾಯರು ದಯಮಾಡಿದ್ದಾಗ್ಗೆ ಬಹಳ ಶ್ರದ್ಧೆಯಿಂದ ಕೆಲಸಮಾಡಿದುದರಮೇಲೂ ಬೆಂಗಳೂರಲ್ಲಿ ತುಂಟರನ್ನು ಹಿಡಿದು ಕಳ್ಳತನ ಮೊದಲಾದ ದುರ್ವರ್ತನವನ್ನು ಬಹುಮಟ್ಟಿಗೆ ಕಡಿಮೆಮಾಡಿರುವುದರಮೇಲೂ ಸರ್ಕಾರದವರು ಮೆಚ್ಚಿ ಬರುವ ತಾ|| ೧ ರಲ್ಲಿ ಉದ್ಯೋಗದಿಂದ ನಿವೃತ್ತರಾಗುವ ಪಿರಿಯೂರು ತಾ|| ಅಮಲ್ದಾರರಾದ ಮ|| ಕೆ. ನರಸಿಂಹಯ್ಯಂಗಾರರ ಬದಲು ಆಕ್ಟಿಂಗ್ ಅಮಲ್ದಾರರನ್ನಾಗಿಯೂ ೩ ನೆಯ ತಾ|| ಮ್ಯಾಜಿಸ್ಟ್ರೇಟರನ್ನಾಗಿಯೂ ನಿಯಮಿಸಿರುವರು.

ಶ್ರೀಮನ್ಮಹಾರಾಜರವರು ಐರೋಪ್ಯಾತಿಥಿಗಳನ್ನೆಲ್ಲಾ ಕಳೆದ ಗುರುವಾರ ರಾತ್ರಿ ಅರಮನೆಗೆ ಬರಮಾಡಿಕೊಂಡು ವಿದ್ಯುಚ್ಛಕ್ತಿಯಿಂದ ನಡೆಯುವ ಗಾಯನಯಂತ್ರವಾದನಾದಿಗಳಿಂದ ರಾತ್ರಿ ೧೨ಗಂಟೆಯವರೆಗೂ ಸತ್ಕರಿಸಿ ಕಳುಹಿಸಿಕೊಟ್ಟರು. ಅರಮನೆಯ ಮಾಡವೆಲ್ಲವೂ ಸಾವಿರಾರು ದೀಪಾವಳಿಗಳಿಂದಲಂಕರಿಸಲ್ಪಟ್ಟಿದ್ದು ನೋಟಕರಕಣ್ಣುಗಳನ್ನು ಸೆಳೆಯುತ್ತಿದ್ದಿತು. ಶ್ರೀಮದ್ಯುವರಾಜರು ಕಳೆದ ಶನಿವಾರ ರಾತ್ರಿ ಐರೋಪಾತಿಥಿಗಳನ್ನೆಲ್ಲಾ ಟವರ್ ಹಾಲಿಗೆ ಬರಮಾಡಿಕೊಂಡು ಚಾಮರಾಜೇಂದ್ರನಾಟಕಸಂಘದವರಿಂದ ಕೆಲ ನಾಟಕಗಳ ಭಾಗಗಳನ್ನು ಅಭಿನಯಿಸಿಸಿ ಸಂತೋಷಪಡಿಸಿದರು.

ಬೆಂಗಳೂರ ರೇವಣ್ಣಸೆಟ್ಟಿ ಪೇಟೆಯ ವಾಸಸ್ಥಳಾದ ಚಿನ್ನಮ್ಮನ ೯ ವರ್ಷದ ಮಗುವನ್ನು ೨೫ ವರ್ಷ ವಯಸ್ಸಿನ ರಂಗಪ್ಪನೆಂಬುವನು ಉಪಾಯದಿಂದ ಕೊರಚರಪಾಳ್ಯಕ್ಕೆ ಕರೆದುಕೊಂಡು ಹೋಗಿ ಹೈದರ್ ಸಾಬಿಯ ತೋಟದಲ್ಲಿ ಆ ಹುಡುಗನ ಮೈಮೇಲಿದ್ದ ನಗಗಳನ್ನು ಕಿತ್ತುಕೊಂಡು ಬಾವಿಯೊಳಕ್ಕೆ ಅವನನ್ನು ನೂಕಿಬಿಟ್ಟನು. ಆ ಹುಡುಗನ ಶವವು ತೇಲುತ್ತಿದ್ದುದನ್ನು ಜನರು ಕಂಡು ಪೋಲೀಸಿಗೆ ತಿಳುಪಲು ಅವರು ತಡಕಿ ಆ ಘಾತುಕನನ್ನು ಹಿಡಿದು ವಿಚಾರಿಸುವಲ್ಲಿ ಅವನು ಅವರನ್ನು ತೋಟಕ್ಕೆ ಕರೆದುಕೊಂಡು ಹೋಗಿ ಶವವನ್ನು ತೋರಿಸಿದನು. ಪೊಲೀಸರು ಆ ಕೊಲೆಪಾತಕನಲ್ಲಿದ್ದ ಆಭರಣಗಳನ್ನು ಕಿತ್ತುಕೊಂಡು ಅವನನ್ನು ಸೆರೆಯಲ್ಲಿಟ್ಟಿರುವರು.

ಬೆಂಗಳೂರ ದೊಡ್ಡಪೇಟೆಯ ಮಾರ್ಗವಾಗಿ ಟ್ರಾಂಬಂಡಿಯೋಡಾಡಲು ಕಂಬಿಗಳನ್ನು ಹಾಕಲು ಬೀದಿಯು ವಿಸ್ತರಿಸಲ್ಪಡುವುದೆಂದು ಬಹುದಿನದಿಂದಲೂ ಜನರ ನಿರೀಕ್ಷೆಯಿದ್ದಿತು. ಈಗ ಪುರಾಭಿವೃದ್ಧಿಯ ಸಂಘದವರು ದೊಡ್ಡಪೇಟೆಯಲ್ಲಿ ಪಶ್ಚಿಮಾಭಿಮುಖವಾಗಿರುವ ಅಂದರೆ ಮ|| ಜಿ. ಪಾಪಣ್ಣನವರ ಅಂಗಡಿಯ ಸಾಲನ್ನೊತ್ತರಿಸಿ ದೊಡ್ಡದನ್ನಾಗಿ ಮಾಡಲು ೨೦ ಲಕ್ಷ ರೂಪಾಯಿಗಳ ವೆಚ್ಚವಾಗುವುದೆಂದು ಗೊತ್ತುಮಾಡಿ ಸರ್ಕಾರದವರ ಅನುಮತಿಯ ಬಗೆಗೆ ಕಳುಹಿರುವುದಾಗರಿಯುತ್ತೇವೆ. ಚಿಕ್ಕಪೇಟೆ ಮೊದಲಾದ ಸ್ಥಳಗಳಲ್ಲಿ ೨-೩ ಅಂತಸ್ತಿನ ಮನೆಗಳು ನಿರ್ಮಿತವಾಗಿ ಪಟ್ಟಣವು ಎಷ್ಟೋ ಶೋಭಾಯಮಾನವಾಗುತ್ತಿರುವಾಗ್ಗೆ ಮುಖ್ಯಬೀದಿಯಾದ ದೊಡ್ಡಪೇಟೆಯಲ್ಲಿ ಗಿಡ್ಡನಾದ ಮತ್ತೂ ಹೆಂಚು ಹೊದ್ದಿಸಲ್ಪಟ್ಟಿರುವ ಸಾಮಾನ್ಯವಾದ ಅಂಗಡಿಗಳೆಲ್ಲವು ಟ್ರಾಂಬಂಡಿ ಮಾರ್ಗದೇರ್ಪಾಟಿನಿಂದಾದರೂ ಒಡೆದುಹಾಕಲ್ಪಟ್ಟು ದೊಡ್ಡದೊಡ್ಡ ಅಂತಸ್ತಿನ ಮನೆಗಳೂ, ಅಂಗಡಿಗಳೂ ಕಟ್ಟಲ್ಪಡಲವಕಾಶವಾಗುವುದೆಂದು ನಿರೀಕ್ಷಿಸುತ್ತೇವೆ.

ಚಕ್ರವರ್ತಿಯವರ ಜನ್ಮದಿನೋತ್ಸವದ ಸಂದರ್ಭದಲ್ಲಿ ಪ್ರತಿವರ್ಷದಲ್ಲಿಯೂ ಇಂಗ್ಲೆಂಡಿನವರಿಗೂ, ಭಾರತೀಯರಿಗೂ ಪ್ರಶಸ್ತಿಯು ಕೊಡಲ್ಪಡುವ ಪದ್ಧತಿಯಂತೆ ಈ ವರ್ಷದ ವರ್ಧಂತ್ಯುತ್ಸವದಲ್ಲಿ ಭಾರತೀಯರಿಗೆ ಲಭ್ಯವಾದ ಪ್ರಶಸ್ತಿಗಳಲ್ಲಿ ನಮ್ಮ ಮೈಸೂರ ಸೀಮೆಯವರಲ್ಲಿ ಶ್ರೀಮನ್ಮಹಾರಾಜರವರ ಭಾವಂದಿರೂ, ೨ ನೆಯ ಕೌನ್ಸಿಲರೂ ಆದ ಸರದಾರ್ ಎಂ. ಕಾಂತರಾಜಅರಸ್, ಬಿ. ಎ., ಯವರಿಗೆ ಸಿ. ಎಸ್. ಐ. ಅಂದರೆ ಕಂಪ್ಯಾನಿಯನ್ ಆಫ್ ದಿ ಆರ್ಡರ್ ಆಫ್ ದಿ ಸ್ಟಾರ್ ಆಫ್‌ಇಂಡ್ಯಾಎಂಬ ಪ್ರಶಸ್ತಿಯೂ, (ಈ ಬಿರುದು ಈಗಿರುವ ಮೈಸೂರ ಅಧಿಕಾರಿಗಳಾರಿಗೂ ಇರಲಿಲ್ಲ.) ರಿಟೈರ್ಡ್‌ಕೌನ್ಸಿಲರೂ, ಬೆಂಗಳೂರ ಮುನಿಸಿಪಲ್ ಆನರರಿ ಪ್ರೆಸಿಡೆಂಟರೂ ಆದ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಸೆಟ್ಟರಿಗೆ ಕೇಸರಿಹಿಂದ್ ಎಂಬ ಭಂಗಾರದ ಪದಕವೂ, ಈ ಸೀಮೆಯ ಪೊಲೀಸು ಇನ್‌ಸ್ಪೆಕ್ಟರ್ ಜನರಲ್ ರವರಾದ ಮ|| ಸಿ. ಶ್ರೀಕಂಠೇಶ್ವರ ಅಯ್ಯರ್, ಬಿ. ಎ., ಯವರಿಗೂ ಮತ್ತೂ ರಿಟೈರ್ಡ್‌ಕೌನ್ಸಿಲರಾದ ಮ|| ಸಿ. ಶ್ರೀನಿವಾಸಯ್ಯಂಗಾರರಿಗೂ ದಿವಾನ್ ಬಹದ್ದೂರ್ ಪ್ರಶಸ್ತಿಗಳೂ, ಬೆಂಗಳೂರ ಪೋಸ್ಟ್‌ಮಾಸ್ಟರಾದ ಕೆ. ಶ್ರೀನಿವಾಸ ರಂಗಾಚಾರಿಯವರಿಗೆ ರಾವ್‌ಬಹದ್ದೂರ್ ಪ್ರಶಸ್ತಿಯೂ ಲಾಭ್ಯವಾಗಿರುವುವೆಂದು ತಿಳುಹಲು ಆನಂದಿಸುವೆವು. ರಾಜಧಾನಿಯ ನಿವಾಸಿಗಳು ಸರ್ದಾರ್ ಕಾಂತರಾಜೆಅರಸಿನವರಿಗೆ ಈ ಸಂದರ್ಭದಲ್ಲಿ ತಮಗುಂಟಾದ ಆನಂದವನ್ನು ತಿಳಿಯಿಸಲು ಒಂದು ಎಂಟರ್ಟೇನ್‌ಮೆಂಟನ್ನು ಕೊಡುವುದರಲ್ಲಿದ್ದಾರೆ.

ಭರತಖಂಡದ ವೃತ್ತಾಂತಗಳು.

ಬೊಂಬಾಯಿನಲ್ಲಿ ಮೊನ್ನೆಯವಾರ ಬಲವಾದ ಮಳೆಯಾಯಿತು. ೩ ದಿನಗಳೊಳಗೆ ೧೦ ಅಂಗುಲ ಮಳೆಯಾಗಿರುವುದು.

ಧಾರ್ವಾಡದ ವಾಸಸ್ಥರಾದ ಮಿ|| ಬುರಾಜಿ ಮಾಣಿಕಜಿ ಪಟೇಲ್‌ರವರಿಗೆ ಖಾನ್‌ಸಾಹೇಬ್ ಪ್ರಶಸ್ತಿಯು ಕೊಡಲ್ಪಟ್ಟಿರುವುದು.

ಜೈಸಲ್ಮೀರ್ ಮಹಾರಾಜರಿಗೆ ಸಮೀಪದ ವಾರಸ್‌ದಾರರಿಲ್ಲದುದರಿಂದ ರಾಜವಂಶದಲ್ಲಿ ದೊಡ್ಡವರಾಗಿದ್ದ ಮಾನಸಿಂಗ್‌ರವರ ದತ್ತುಪುತ್ರರಾದ ಜೋವಾಹಿರ್‌ಸಿಂಗ್‌ರವರು ರಾಜಕಾರ್ಯವನ್ನು ವಹಿಸಿಕೊಳ್ಳುವುದಕ್ಕೆ ಇಂಡ್ಯಾಸರ್ಕಾರದವರು ಅಪ್ಪಣೆ ಮಾಡಿದ್ದಾರೆ.

ಬಂಕಿಂಚಂದ್ರಬೆನರ್ಜಿ ಯೆಂಬ ಒಬ್ಬ ಬಂಗಾಳಿ ವಿದ್ಯಾರ್ಥಿಯು ತಾನು ಸೈನ್ಸ್‌ಪರೀಕ್ಷೆಗೆ ಹೋಗಿದ್ದು ಮೂರಾವೃತ್ತಿಯೂ ತೇರ್ಗಡೆಹೊಂದದೆಹೋದುದರಿಂದ ಬದುಕುವಿಕೆಯಲ್ಲಿ ಜುಗುಪ್ಸೆಗೊಂಡು ಆ ವಿಷಯದಲ್ಲಿ ಪೊಲೀಸರಿಗೆ ಒಂದು ಕಾಗದವನ್ನು ಬರೆದಿಟ್ಟು ವಿಷಪ್ರಾಶನಮಾಡಿ ಪ್ರಾಣಬಿಟ್ಟನು.

ಬರ್ಮಾದ ಮಿಂಜೂಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಹೊಳೆಗಳಲ್ಲಿ ವಿಪರೀತ ಪ್ರವಾಹವು ಬಂದು, ಆ ಜಿಲ್ಲೆಗೆ ಜಿಲ್ಲೆಯೇ ನೀರಿನಲ್ಲಿ ಮುಳುಗಿತು. ನೀರಿನ ಕಾಲ್ವೆಗಳು ಕಿತ್ತುಹೋಗಿವೆ. ಸೇತುಗಳು ಮುರಿದುಬಿದ್ದಿವೆ. ಹಲವು ಗ್ರಾಮಗಳು ನಿರ್ನಾಮವಾದವು. ಮನೆಮಠಗಳೂ, ದನಕರುಗಳೂ, ದವಸದ ಕಣಜಗಳೂ ಕೊಚ್ಚಿಹೋಗಿರುವುವು. ೨೫ ಅಡಿಗಳುದ್ದದ ನೀರು ಅಖಂಡವಾಗಿ ಪ್ರವಹಿಸಿರುವುದು. ಇಂಥಾ ಅದ್ಭುತವಾದ ಪ್ರವಾಹವನ್ನು ಯಾವಾಗಲೂ ಕಂಡಿದ್ದಿಲ್ಲವೆಂದು ಅಲ್ಲಿನ ಜನರು ಹೇಳುವರು. ನಷ್ಟವು ಅಮಿತವಾಗಿದೆ.

ಢಕ್ಕಾದ ರಹಸ್ಯಕೂಟದ ವ್ಯಾಜ್ಯದಲ್ಲಿ ಅಪ್ರೂವರಾಗಿದ್ದ ನರೇಂದ್ರನಾಥ ಸೇನನನ್ನು ಕೊಲೆಮಾಡಬೇಕೆಂಬ ಪ್ರಯತ್ನವು ಮೊದಲೊಂದಾವೃತ್ತಿ ನಡೆದು ವಿಫಲವಾಗಿದ್ದಿತು. ಈಗ ಕಳೆದ ತಾ|| ೧೯ರಲ್ಲಿ ಮತ್ತೊಂದು ಸಲ ಘಾತುಕರಿಂದ ಪ್ರಯತ್ನಮಾಡಲ್ಪಟ್ಟಿತು. ಈ ನರೇಂದ್ರನಿಗೆ ಪ್ರಾಣಭೀತಿ ಇದ್ದೇಇದ್ದಿತು. ಈತನು ಇನ್ನಿಬ್ಬರು ಮಿತ್ರರೊಡನೆ ಕೂಡಿ ಆದಿನ ಚಿತ್ತಗಂಗಾದಲ್ಲಿರುವ ಒಂದು ಅಂಗಡಿಯಿಂದ ಹೊರಟು ಸಾಥಕಹಾಟ್ ಬೀದಿಯಲ್ಲಿ ಹೋಗುತ್ತಿದ್ದರು. ಪೋಸ್ಟಾಫೀಸಿನ ಬಳಿಯಲ್ಲಿ ನರೇಂದ್ರನನ್ನು ಯಾರೋ ಅನುಸರಿಸಿಬರುತ್ತಿರುವಂತೆ ಸದ್ದುಕೇಳಿಸಿತು. ಆಗ ಅವನು ತಿರುಗಿನೋಡುವಷ್ಟರಲ್ಲಿ ಯಾರೋ ತನಗೆ ಗುರಿಕಟ್ಟಿ ತುಪಾಕಿಯನ್ನು ಹಾರಿಸುವಂತೆಕಂಡು ಮಗ್ಗುಲಾದನು. ಆದರೆ ಹಾರಿದ ಗುಂಡು ಅವನ ಜತೆಯಲ್ಲಿದ್ದ ಸತ್ಯೇಂದ್ರನಾಥಸೇನ್ ಎಂಬುವನಿಗೆ ತಗುಲಲು ಅವನು ಕೂಡಲೇ ಬಿದ್ದು ಸತ್ತನು. ನರೇಂದ್ರನಾಥನು ಮಗ್ಗುಲಲ್ಲೇ ಇದ್ದ ಒಂದು ರೊಟ್ಟಿಯಂಗಡಿಯೊಳಕ್ಕೆ ದೂರಿದನು. ಆಗಲೂ ಅವನಮೇಲೆ ಗುಂಡು ಹಾರಿಸಲ್ಪಟ್ಟಿತು, ಅದು ಅಂಗಡಿಗೆ ಬಡಿದಿತು. ಆಗ ಬೀದಿಯಲ್ಲಿದ್ದ ಜನರು ಭಯಪಟ್ಟು ಆ ಹಂತಕರನ್ನು ಹಿಡಿಯಲಾರದೆ ಹೋದರು. ಆದರೆ ಉತ್ತರದಿಕ್ಕಿಗೆ ೩ ಮಂದಿಗಳು ಓಡಿಹೋದರೆಂಬುದು ಗೊತ್ತಾಯಿತು. ತನ್ನ ಅನುಮಾನದಲ್ಲಿರುವವರ ಹೆಸರನ್ನು ನರೇಂದ್ರನು ಪೊಲೀಸಿಗೆ ತಿಳಿಯಿಸಿರುವನು. ಅಪರಾಧಿಗಳನ್ನು ಪೊಲೀಸರು ತಡಕುತ್ತಿರುವರು.

ನಮ್ಮ ಭರತಖಂಡದ ದಕ್ಷಿಣಭಾಗದ ದೇಶದಲ್ಲಿ ಅತಿಮೂತ್ರವ್ಯಾಧಿಯು ಪ್ರಬಲಿಸುತ್ತಿದೆ. ಅದನ್ನು ತಡೆಯುವುದಕ್ಕೆ ಉಪಾಯವಾವುದು ಎಂಬುದನ್ನು ಮದ್ರಾಸ್ ಸರ್ಕಾರದವರು ಪರೀಕ್ಷಿಸಬೇಕೆಂದು ಯೋಚಿಸುತ್ತಿದ್ದರು. ಈ ಮಧ್ಯದಲ್ಲಿ ಯಾರೋ ಧರ್ಮಾತ್ಮರು ಈಕಾರ್ಯಕ್ಕಾಗಿ ೫೦ ಸಾವಿರ ರೂ.ಗಳನ್ನು ಕೊಡುವೆನೆಂದು ವಾಗ್ದಾನಮಾಡಿರುವರಂತೆ. ಅದನ್ನು ಆಧಾರಮಾಡಿಕೊಂಡು ಮದ್ರಾಸ್ ಸರ್ಕಾರದವರು ಬೆಯಿಟ್ ಮೆಮೋರಿಯಲ್ ಫೆಲ್ಲೋ ಷಿಪ್ಸ್ ಎಂಬ ವೈದ್ಯಶಾಸ್ತ್ರಶೋಧಕಸಂಘದವರೊಡನೆ ಪತ್ರವ್ಯವಹಾರವನ್ನು ನಡೆಯಿಸಿ, ಡಾ|| ಎಸ್. ಡಬ್ಲ್ಯು. ಪ್ಯಾಟರ್‌ಸನ್ ಎಂ.ಬಿ. ಬಿ.ಎಸ್. ಎಂಡಿ., ಎಂಬುವರನ್ನು ಇದಕ್ಕಾಗಿ ನಿಯಮಿಸಿಕೊಂಡು, ಅವರಿಗೆ ವರ್ಷ ೧ ಕ್ಕೆ ೧೨ ಸಾವಿರ ರೂ. ಸಂಬಳದಂತೆ ೩ ವರ್ಷಗಳ ಕಾಲದವರೆಗೆ ಕೊಟ್ಟು, ಅಷ್ಟರೊಳಗೆ ಈ ರೋಗದ ವಿಷಯವಾಗಿ ಪರಿಶೋಧನವನ್ನು ನಡೆಯಿಸುವವರಾಗಿದ್ದಾರೆ. ಡಾಕ್ಟರರ ಸಂಬಳದಲ್ಲಿ ಸ್ವಲ್ಪವನ್ನು ಮೇಲೆಕಂಡ ಸಂಘದವರು ವಹಿಸಿಕೊಳ್ಳುತ್ತಾರೆ. ಮತ್ತೂ ಈ ಡಾಕ್ಟರು ಸೀಮೆಯಿಂದ ಇಲ್ಲಿಗೆ ಬಂದುಹೋಗುವ ವೆಚ್ಚವನ್ನು ಅವರೇ ವಹಿಸಿಕೊಳ್ಳಲು ಒಪ್ಪಿದ್ದಾರೆ. ಮದ್ರಾಸು ಸರ್ಕಾರದವರು ಇದಕ್ಕೆ ತಕ್ಕ ಶೋಧಶಾಲೆಯನ್ನೂ ಸಹಾಯೋದ್ಯೋಗಿಗಳನ್ನೂ ಒದಗಿಸಿಕೊಡುವರು. ಈ ರೋಗದ ಶೋಧನೆಯ ಕಾರ್ಯಕ್ಕಾಗಿ ಬೇಕಾಗುವ ಹಣ ಮೊದಲಾದುವುಗಳ ಮೇಲ್ವಿಚಾರಣೆಗೆ ಗೌರ್ನಮೆಂಟ್ ಚೀಫ್ ಸೆಕ್ರೆಟರಿಯೂ ಸರ್ಜನ್ ಜನರಲ್‌ರವರೂ ಮತ್ತೊಬ್ಬ ಅನಧಿಕಾರಿ ಸಭ್ಯರೂ ಇರುವ ಸಂಘವೊಂದನ್ನೇರ್ಪಡಿಸಿರುವರು.

ಇಟಾವಾಪಟ್ಟಣದ ಹೀರಾ ಎಂಬ ಮನುಷ್ಯನು ಟ್ರಿನಿಡಾಡಿಗೆ ಹೋಗಿದ್ದು ಕೂಲಿನಾಲಿಯನ್ನು ಮಾಡಿ ಕೆಲಕಾಲದಮೇಲೆ ೪೦೦ ರೂ. ಗಳನ್ನು ಸಂಪಾದಿಸಿಕೊಂಡು ತನ್ನ ಹೆಂಡತಿಯ ಸಮೇತ ತನ್ನ ಮನೆಗೆ ಬಂದು ಇಳಿದನು. ಇವರು ಬಂದ ಕೂಡಲೇ ಪೋಲೀಸ್ ಸಬ್ ಇನ್‌ಸ್ಪೆಕ್ಟರ್ ಮಹಮ್ಮದ್ ಜಾಫರ್ ಖಾನ್ ಎಂಬುವನು ಇನ್ನಮೂವರು ಪೊಲೀಸಾಳುಗಳೊಡನೆ ಅವನ ಮನೆಗೆ ಬಂದು ಗಂಡಹೆಂಡಿರನ್ನು ಹಿಡಿದು ಹೊಡೆದು ಅವರಲ್ಲಿದ್ದ ಹಣವನ್ನು ಕಳುವಿನಿಂದ ಬಂದುದೆಂದು ಹೇಳಿ ಗದರಿಸಿ, ಆತನು ಅದು ಕದ್ದದ್ದಲ್ಲವೆಂದೂ ಟ್ರಿನಿಡಾಡಿಗೆ ಹೋಗಿ ಕೂಲಿಯಿಂದ ಸಂಪಾದಿಸಿ ತಂದುದೆಂದೂ ಎಷ್ಟುಬಗೆಯಾಗಿ ಹೇಳಿಕೊಂಡರೂ ಕೇಳದೆ, ಆತನ ಅತ್ತೆ ಮಾವಂದಿರು ತಡೆದರೂ ಕೇಳದೆ ಹೊಡೆದು ಬಡಿದು, ಅವರನ್ನು ಒಂದು ಕೋಣೆಯಲ್ಲಿ ಬಂಧನದಲ್ಲಿಟ್ಟು ಅವರಲ್ಲಿದ್ದ ಗಂಟನ್ನೆಲ್ಲಾ ಅಪಹರಿಸಿಕೊಂಡುಹೋದರು. ಬಳಿಕ ೨೦ ರೂ. ಗಳ ಲಂಚವನ್ನು ತೆಗೆದುಕೊಂಡು ಅವನನ್ನು ಬಂಧನದಿಂದ ಬಿಟ್ಟುಬಿಟ್ಟರು. ಬಳಿಕ ಹೀರಾನು ಎಲ್ಲೋ ೧೮ ರೂ. ಗಳ ಸಾಲವನ್ನುಮಾಡಿ ಕಲ್ಕತ್ತಾಕ್ಕೆ ಹೋಗಿ ಸರ್ಕಾರಕ್ಕೆ ಹೇಳಿಕೊಳ್ಳಲು, ಪೊಲೀಸು ಸೂಪರಿಂಟೆಂಡೆಂಟರಿಂದಲೂ ಜಿಲ್ಲಾ ಕಲೆಕ್ಟರವರಿಂದಲೂ ಸೆಷನ್ ಕೋರ್ಟಿನವರಿಂದಲೂ ವಿಚಾರಿಸಲ್ಪಟ್ಟಿತು. ಇಟಾವಾಜಿಲ್ಲಾ ಜಡ್ಜಿಯವರು ಆ ಸಬ್‌ಇನ್‌ಸ್ಪೆಕ್ಟರಿಗೆ ೫ವರ್ಷ ಕಾರಾಗೃಹವಾಸ ಶಿಕ್ಷೆಯನ್ನೂ ೨೦೦ರೂ. ಅರ್ಥದಂಡವನ್ನೂ ಉಳಿದ ಮೂವರಿಗೂ ತಲಾ ೫ ವರ್ಷ ಕಾರಾಗೃಹವಾಸದ ಶಿಕ್ಷೆಯನ್ನೂ ೫೦ ಅರ್ಥದಂಡವನ್ನೂ ವಿಧಿಸಿ, ಅರ್ಥದಂಡದ ಹಣದಲ್ಲಿ ೩೦೦ ರೂ. ಗಳನ್ನು ಹೀರಾನಿಗೆ ಕೊಡುವಂತೆ ತೀರ್ಮಾನಮಾಡಿದರು.

ವಿದೇಶವೃತ್ತಾಂತಗಳು.

ಒಬ್ಬ ಮನುಷ್ಯನು ನೀರಿನೊಳಗೆ ಮುಳುಗಿ ಎಷ್ಟುಕಾಲವಿರಬಹುದೆಂಬುದನ್ನು ಪರೀಕ್ಷೆಮಾಡುವ ಕೆಲಸವು ೧೯೧೨ ನೆಯ ವರ್ಷದಿಂದ ಫ್ರೆಂಚ್ ದೇಶದಲ್ಲಿ ನಡೆಯುತ್ತಿದೆ. ಜಾರ್ಜ್ ಪೌಲಿಕ್ವೆನ್ ಎಂಬಾತನು ನೀರಿನೊಳಗೆ ಮುಳುಗಿ ೬ ನಿಮಿಷವೂ ೨೯ ಸೆಕೆಂಡ್‌ಗಳ ವರೆಗಿದ್ದನು.

ಮಾಂಚಸ್ಟರ್ ಪಟ್ಟಣದಲ್ಲಿ ಹೊಸದಾಗಿ ಒಂದು ನೆಯ್ಗೆಯಂತ್ರವನ್ನು ಸ್ಥಾಪಿಸುವುದರಲ್ಲಿದ್ದಾರೆ. ಈ ಯಂತ್ರಾಲಯದಲ್ಲಿ ೧ ಲಕ್ಷ ಕದರುಗಳು ಕೆಲಸಮಾಡುವುವು. ಇದನ್ನು ಸ್ಥಾಪಿಸುವುದಕ್ಕೆ ೩||| ಕೋಟಿ ರೂಪಾಯಿಗಳು ವೆಚ್ಚವಾಗುವುವು. ಇದರಲ್ಲಿ ೩ ಸಾವಿರ ಮಂದಿಗೆ ಕೆಲಸಸಿಕ್ಕುವುದು.

ಮುಳುಗಿಹೋದ ಎಂಪ್ರೆಸ್ ಆಫ್ ಐರ್ಲಾಂಡ್ ಹಡಗಿನಲ್ಲಿ ನೂರುಮಂದಿಯವರೆಗೆ ಮುಕ್ತಿಸೈನ್ಯದ ಜನರು ಇದ್ದರಷ್ಟೆ. ಅವರುಗಳ ಪ್ರಾಣರಕ್ಷಣೆಗೆ ಅನುಕೂಲವಾಗಿ ರಕ್ಷಣೆಯ ದೋಣಿಯು ಅವರಿಗೆ ಸಿಕ್ಕಿದ್ದರೂಕೂಡ ಅದನ್ನು ಅವರು ಇತರ ಪ್ರಯಾಣಿಕರಿಗಾಗಿ ಒಪ್ಪಿಸಿ ತಾವು ಸಮುದ್ರದ ಪಾಲಾದರಂತೆ. ಎಂತಹ ಭೂತದಯೆ!

ದೊಡ್ಡ ಚುಟ್ಟಾಗಳನ್ನು ಸೇದುವವರಲ್ಲಿ ಸ್ಪೈಯಿನ್ ದೇಶದ ರಾಜರು ಅಗ್ರೇಸರರು. ಇವರು ಸೇದುವ ಚುಟ್ಟಾವು ೧೪ ಅಂಗುಲದುದ್ದವಿರುವುದು. ಅದರ ಮಧ್ಯಭಾಗದಲ್ಲಿ ೧|| ಅಂಗುಲ ಮಂದವಿರುವುದು. ಅದು ಉತ್ತಮವಾದ ಹವಾನಾ ಹೊಗೆಸೊಪ್ಪಿನಿಂದ ಮಾಡಲ್ಪಟ್ಟಿರುವುದು. ಇತರರಾರಾದರೂ ಅದನ್ನು ಮೂರುನಾಲ್ಕು ಸಲ ಸೇದಿದರೆ ತಲೆತಿರುಗಿ ಬಿದ್ದುಹೋಗುವರಂತೆ.

ಬ್ರೈಟನ್ ಎಂಬ ಪಟ್ಟಣದಲ್ಲಿ ಸರ್ಕಾರದ ಪುಸ್ತಕದ ಭಾಂಡಾಗಾರದಲ್ಲಿರುವ ಯಾವುದಾದರೂ ಪುಸ್ತಕವು ಯಾರಿಗಾದರೂ ಬೇಕಿದ್ದರೆ ಅವರು ಅಲ್ಲಿಗೆ ಹೋಗಬೇಕಾದುದಿಲ್ಲ. ೧ ಆಣೆಯನ್ನು ಕಳುಹಿಸಿಕೊಟ್ಟರೆ ಸಾಕು. ಪುಸ್ತಕವು ಟ್ರಾಂಬಂಡಿಯ ಮೂಲಕ ಅವರ ಮನೆಗೆ ಕಳುಹಿಸಲ್ಪಡುವುದು. ಹಿಂದಿರುಗಿ ಕಳುಹಿಸಬೇಕಾದರೆ ಮತ್ತೆ ೧ ಆಣೆಯನ್ನು ಟ್ರಾಂಬಂಡಿಯವರಿಗೆ ಕೊಟ್ಟರೆ ಅವರೇ ಅದನ್ನು ಭಾಂಡಾಗಾರಕ್ಕೆಮುಟ್ಟಿಸಿಬಿಡುವರು.

ಜರ್ಮನೀದೇಶದ ವಿಶ್ವವಿದ್ಯಾಲಯದಲ್ಲಿ ೧೯೧೧-೧೨ ನೆಯ ವರ್ಷದೊಳಗೆ ೪೪೫೪ ಮಂದಿಗಳಿಗೆ ಮಹೋಪಾಧ್ಯಾಯ (ಡಾಕ್ಟರ್) ಬಿರುದುಗಳೂ, ವೇದಾಂತಶಾಸ್ತ್ರದಲ್ಲಿ ೫೫ ಮಂದಿಗೆ ಧರ್ಮರಾಜನೆಂಬ ಬಿರುದುಗಳೂ, ೧೨೬೫ ಮಂದಿಗೆ ನೀತಿಶಾಸ್ತ್ರವಿಶಾರದ ಬಿರುದುಗಳೂ, ೧೩೪೩ ಮಂದಿಗೆ ವೈದ್ಯಶಾಸ್ತ್ರವಿಶಾರದ ಬಿರುದುಗಳೂ, ೧೭೯೭ ಮಂದಿಗಳಿಗೆ ನ್ಯಾಯಶಾಸ್ತ್ರಪ್ರಕೃತಿಶಾಸ್ತ್ರವಿಶಾರದ ಬಿರುದುಗಳೂ ಕೊಡಲ್ಪಟ್ಟಿವೆ.

ಸರ್ ಜಾನ್ ಹರ್‌ಶೆಲ್ ಎಂಬ ಭೂಗೋಳಶಾಸ್ತ್ರಜ್ಞನು ಈ ಭೂಗೋಳದ ತೂಕವು 5852000000000000000000 ಟನ್ನುಗಳ ತೂಕವಿರುವುದೆಂದು ನಿರ್ಧಾರಮಾಡಿದನಂತೆ. ಇದನ್ನು ಕೇಳಿ ಚಮತ್ಕಾರಿಯಾದ ಒಬ್ಬ ಪತ್ರಸಂಪಾದಕನು ಆತನ ಬಳಿಗೆ ಹೋಗಿ, ಹಾಗಾದರೆ ಈ ಗೋಳವನ್ನು ಮತ್ತೊಂದುಕಡೆಗೆ ಬಾಂಗಿಯಾಗಿ ಅಂಚೆಯಮೇಲೆ ಕಳುಹಿಸಬೇಕಾದರೆ ಎಷ್ಟು ಛಾರ್ಜಾಗುವುದು? ಎಂದು ಪ್ರಶ್ನೆಮಾಡಿದನಂತೆ. ಮತ್ತೊಬ್ಬನು ಹೋಗಿ ಈ ಗೋಳದ ಸೃಷ್ಟಿಯಾಗಿ ಎಷ್ಟು ವರ್ಷಗಳಾದುವೆಂದು ಕೇಳುವಲ್ಲಿ ಬೈಬಿಲ್ಲನ್ನು ಆಧಾರಮಾಡಿಕೊಂಡು ಕ್ರಿಸ್ತ ಪೂರ್ವ ೪೦೦೪ ವರ್ಷಗಳಲ್ಲಿ ಇದರ ಸೃಷ್ಟಿಯಾಗಿರುವುದೆಂದೂ, ಇನ್ನು ಕೆಲರ ಅಭಿಪ್ರಾಯದ ಪ್ರಕಾರ ೬೯೮೪ ವರ್ಷಗಳಾಗಿರಬಹುದೆಂದೂ ಹೇಳಿದನಂತೆ.

ಉಷ್ಣದೇಶದ ವ್ಯವಸಾಯಾಭಿವೃದ್ಧಿಯನ್ನು ಕುರಿತು ಆಲೋಚಿಸುವುದಕ್ಕೆ ಲಂಡನ್ ಪಟ್ಟಣದಲ್ಲಿ ಎಲ್ಲದೇಶದ ಪ್ರತಿನಿಧಿಗಳೂ ೧೦೦ ಮಂದಿಯವರೆಗೆ ಸಭೆಸೇರಿದ್ದರು. ಆ ಸಭೆಗೆ ಜಾರ್ಜ್‌ಸಾರ್ವಭೌಮರು ಪೋಷಕರಾಗಿರುವೆನೆಂದು ಒಪ್ಪಿಕೊಂಡರು. ನೂತನಪದ್ಧತಿಯಮೇರೆಗೆ ವ್ಯವಸಾಯವನ್ನು ಬೋಧಿಸುವುದಕ್ಕೆ ಪಶ್ಚಿಮದೇಶಕ್ಕೊಂದು ಪೂರ್ವದೇಶಕ್ಕೊಂದು ದೊಡ್ಡದೊಡ್ಡ ಕೃಷಿಕಲಾಶಾಲೆಗಳನ್ನು ಸ್ಥಾಪಿಸಬೇಕೆಂದು ಯೋಚನೆ ನಡೆದಿರುವುದು. ಉಷ್ಣದೇಶದ ಕಲಾಶಾಲೆಯನ್ನು ಸಿಂಹಳದ್ವೀಪದಲ್ಲಿ ಸ್ಥಾಪಿಸಬೇಕೆಂದಿದ್ದಾರೆ. ಇದಕ್ಕೆ ೬|| ಲಕ್ಷ ರೂ.ಗಳ ವೆಚ್ಚವಾಗುವುದಂತೆ, ಗೊತ್ತಾದ ಯೋಗ್ಯತೆಯುಳ್ಳ ವಿದ್ಯಾರ್ಥಿಗಳು ಇಲ್ಲಿಗೆ ಸೇರಿ ೧ ವರ್ಷದವರೆಗೆ ಅಭ್ಯಾಸಮಾಡಬಹುದು. ಭೋಜನ ವಸತಿ ಫೀಜು ಮೊದಲಾದುವುಗಳಿಗೆಲ್ಲಾ ಒಬ್ಬೊಬ್ಬ ವಿದ್ಯಾರ್ಥಿಗೆ ಒಂದು ವರ್ಷಕ್ಕೆ ೨೨೫೦ ರೂ.ಗಳಾಗುವುವು.

ಮಾಡ್ರಿಡ್‌ಪಟ್ಟಣದಲ್ಲಿ ನಡೆದ ಪ್ರದರ್ಶನಕ್ಕೆ ಯೂಜೆನ್ ಆರ್ರೊ ಎಂಬ ಒಬ್ಬ ಫ್ರೆಂಚ್‌ಮನುಷ್ಯನು ಬಂದಿದ್ದನು. ಅವನ ವಯಸ್ಸು ೧೯. ಅವನ ಎತ್ತರವು ೭ ಅಡಿ ೬| ಅಂಗುಲ ವಿದ್ದಿತು. ಪ್ರದರ್ಶನಕ್ಕೆ ಬಂದಿದ್ದ ಸ್ಪೈಯಿನ್ ದೇಶದ ಅಲ್‌ಫಾನ್ಸೊರಾಜರು ಆ ಬಲಾಢ್ಯನ ದೇಹವನ್ನು ನೋಡಿ ಆಶ್ಚರ್ಯಪಟ್ಟು ತನ್ನ ಸಮೀಪಕ್ಕೆ ಕರೆದು ಅವನ ಎರಡು ತೋಳುಗಳನ್ನೂ ಎರಡುಕಡೆಗೆ ನೀಡಿಸಿ ಅದರಕೆಳಗೆ ತಾವು ನಿಂತುಕೊಳ್ಳಲು, ತೋಳುಗಳು ಇವರತಲೆಗೆ ಸೋಂಕದೆ ಇನ್ನೂ ಮೇಲೆಯೇ ಇದ್ದುವು, ಅದನ್ನುಕಂಡು ರಾಜರು- ಅಯ್ಯಾ ನಿನ್ನ ಮಗ್ಗುಲಲ್ಲಿ ನಿಂತಿರುವ ನಾನು ಒಂದು ಸಣ್ಣ ಹುಡುಗನಂತೆ ಇರುವೆನಲ್ಲವೆ? ನೀನು ಸ್ಪೈಯಿನ್ ದೇಶದವನಾಗಿದ್ದರೆ ನಿನ್ನನ್ನು ನನ್ನ ಅಂಗರಕ್ಷಕನನ್ನಾಗಿ ಮಾಡಿಕೊಳ್ಳುತ್ತಿದ್ದೆನೆಂದು ಹೇಳಿದರು. ಈ ಆರ್ರೊ ಎಂಬಾತನು ಒಂದೊಂದು ಸಮಯದಲ್ಲಿ ಮಲಗಿಕೊಂಡರೆ ಅಖಂಡವಾಗಿ ೩೬ ಗಂಟೆಗಳ ಹೊತ್ತು ನಿದ್ರಿಸುತ್ತಿರುವನಂತೆ. ಈತನಿಗೆ ೨೩ ವರ್ಷ ತುಂಬುವುದರೊಳಗೆ ಇವನು ೯ ಅಡಿ ಯೆತ್ತರದವನಾಗುವನೆಂದು ಹಲವು ಮಂದಿ ವೈದ್ಯರು ಹೇಳುತ್ತಿರುವರು. ಇವನೊಬ್ಬ ಕಲಿಯುಗದ ಭೀಮ!

ಈಗ ಲಂಡನ್ನಿನಲ್ಲಿ ಎಲ್ಲಾ ದೇಶದ ರಬ್ಬರುಗಳನ್ನೂ ತರಿಸಿ ಒಂದು ಪ್ರದರ್ಶನವನ್ನು ನಡೆಯಿಸುತ್ತಿದ್ದಾರೆ. ಇದುವರೆಗೆ ಇಂಥ ಪ್ರದರ್ಶನಗಳು ಮೂರು ನಡೆದಿವೆ. ಇದು ೪ ನೆಯದು. ಕಳೆದ ತಾ|| ೨೪ರಲ್ಲಿ ಕನ್ನಾಟ್‌ಪ್ರಭುಗಳು ಇದರ ಆರಂಭೋತ್ಸವವನ್ನು ನಡೆಯಿಸಿದರು. ನಾನಾಪ್ರಭುತ್ವದ ಪ್ರತಿನಿಧಿಗಳಾಗಿ ೫೪ ಮಂದಿಗಳು ಬಂದಿದ್ದರು. ಕನ್ನಾಟ್‌ರವರು ಆರಂಭೋಪನ್ಯಾಸವನ್ನು ಮಾಡುವಾಗ್ಗೆ-ಇನ್ನು ಕೆಲವುಕಾಲದವರೆಗೆ ರಬ್ಬರು ಭಂಗಾರದಷ್ಟು ಲಾಭವನ್ನು ಕೊಡುತ್ತಿರುವುದು, ಎಂದು ಹೇಳಿದರು. ೧೯೧೩ನೆಯ ವರ್ಷದಲ್ಲಿ ಸಿಂಹಳದ್ವೀಪ ಸ್ಟ್ರೇಟ್ ಸೆಟಲ್ಮೆಂಟುಗಳಿಂದಲೇ ೧೬|| ಕೋಟಿ ರೂಪಾಯಿ ಬೆಲೆಬಾಳುವ ೭೦ಲಕ್ಷ ಪೌಂಡು ತೂಕದ ರಬ್ಬರು ಹೊರಕ್ಕೆ ಹೋಗಿರುವುದು. ೧೯೧೪ನೆಯ ವರ್ಷದ ಮೊದಲಿನ ೫ ತಿಂಗಳಲ್ಲಿ ಸಾಗುವಳಿಯಾಗಿರುವಷ್ಟು ರಬ್ಬರು ಮತ್ತಿನ್ನಾವವರ್ಷದಲ್ಲೂ ಆಗಿಲ್ಲವೆಂದು ಮತ್ತೊಬ್ಬರು ಹೇಳಿದರು. ರಬ್ಬರಿನಿಂದಲೇ ಮಾಡಿದ ಚಿತ್ರವಿಚಿತ್ರವಾದ ಅನೇಕ ವಸ್ತುಗಳು ಪ್ರದರ್ಶನಕ್ಕೆ ಬಂದಿದ್ದುವು. ಒಂದು ಮನೆಯೊಳಗೆ ಇಡಲ್ಪಟ್ಟಿದ್ದ ಕುರ್ಚಿ ಬೆಂಚು ಮೇಜ ಸೋಫ ಮೊದಲಾದುವುಗಳೆಲ್ಲಾ ಬರಿಯ ರಬ್ಬರಿನಿಂದಲೇ ಮಾಡಲ್ಪಟ್ಟವುಗಳಾಗಿದ್ದುವು. ರಬ್ಬರಿನಿಂದಲೇ ಟೆನ್ನಿಸ್ ಕೋರ್ಟನ್ನೂ ತಿರುಗುವ ಮಾರ್ಗವನ್ನೂ ಕೂಡ ಏರ್ಪಡಿಸಿದ್ದರು. ಪ್ರದರ್ಶನಕ್ಕೆ ಬಂದಿದ್ದ ಕೆಲರು ಆ ಟೆನ್ನೀಸ್‌ಕೋರ್ಟಿನಲ್ಲೇ ಚಂಡಾಟವನ್ನಾಡಿದರು. ಇನ್ನುಕೆಲಕಾಲದಲ್ಲಿ ಈಗಿನ ಮಾರ್ಗಗಳ ಮೇಲೆ ರಬ್ಬರೇ ಹಾಸಲ್ಪಡುವ ಸ್ಥಿತಿಯು ಬರುವುದೆಂದು ಆ ಪ್ರದರ್ಶನದ ಅಧ್ಯಕ್ಷರಾದ ಸರ್ ಹೆನ್ರಿ ಬ್ಲಾಕ್‌ರವರು ನುಡಿದರು.

ಅಮೇರಿಕಾದ ನ್ಯೂಯಾರ್ಕ್ ಪಟ್ಟಣದಲ್ಲಿ ಒಂದು ಹೊಸ ಪೋಸ್ಟಾಫೀಸನ್ನು ಕಟ್ಟಿಸಿರುವರು. ಇದು ಪ್ರಪಂಚದೊಳಗೆಲ್ಲಾ ಸೊಗಸಾದ ಕಟ್ಟಡವೆಂದೂ ಎಲ್ಲಾ ವಿಧವಾದ ಸೌಕರ್ಯವೂ ಇದರಲ್ಲಿರುವುದೆಂದೂ ಹೇಳಲ್ಪಡುತ್ತಿದೆ. ನಿಜವಾಗಿಯೂ ಇದಕ್ಕೆ ಸಮನಾದ ಬೇರೊಂದು ಕಟ್ಟಡವಿಲ್ಲ. ಈ ಮನೆಯ ಇದಿರಿಗೆ ೨೦ ದೊಡ್ಡ ಕಂಬಗಳುಳ್ಳ ಮಂಟಪವೊಂದಿರುವುದು. ಈ ಕಂಬಗಳು ೫ ಅಡಿಗಳ ಮಂದವೂ ೩೫ ಅಡಿಗಳ ಎತ್ತರವೂ ಉಳ್ಳುವಾಗಿ ಮನೋಹರವಾದ ಗುಲಾಬಿಬಣ್ಣದಿಂದಕೂಡಿದ ಕಲ್ಲಿನಿಂದ ಕಟ್ಟಲ್ಪಟ್ಟಿವೆ. ಇದು ಮಳೆ ಬಿಸಿಲು ಮಂಜುಗಳ ಏಟಿಗೆ ಕೆಡತಕ್ಕುದಾಗಿಲ್ಲ. ಈ ಭವನವನ್ನು ಕಟ್ಟುವುದಕ್ಕೆ ೬೫,೦೦೦ ಘನಅಡಿಗಳುಳ್ಳ ಕಲ್ಲೂ, ೧೮೦೦೦ ಟನ್ನುಗಳ ಕಬ್ಬಿಣವೂ, ೭೦ ಲಕ್ಷ ಇಟ್ಟಿಗೆಗಳೂ, ೨ ಲಕ್ಷ ಚದರಡಿಯ ಕನ್ನಡಿಗಳೂ ಉಪಯೋಗಿಸಲ್ಪಟ್ಟಿವೆ. ಈಕಟ್ಟಡದಲ್ಲಿ ವಿಶೇಷವೇನೆಂದರೆ—ಇದಕ್ಕೆ ಯಾವತರದ ಹದಿಯೂ ಹಾಕಲ್ಪಟ್ಟಿಲ್ಲ. ಕಂಕರ್ ಹಾಕಿ ಸುತ್ತಲೂ ಬಿಗಿದ ೧೨ ಅಡಿಗಳ ಎತ್ತರವೂ ೪ ಅಡಿಗಳ ಅಗಲವೂ ಇರುವ ಕಬ್ಬಿಣದ ತೊಲೆಗಳಮೇಲೆ ಕಂಬಗಳು ನಿಲ್ಲಿಸಲ್ಪಟ್ಟು ಅದರಮೇಲೆ ಭವನವು ಕಟ್ಟಲ್ಪಟ್ಟಿದೆ. ಇದರ ಎಲ್ಲಕಡೆಯೂ ಬರಿಯ ಕಿಟಕಿಗಳೇ ತುಂಬಿರುವುವು. ಸಿಂಹದ್ವಾರದ ಹಿಂದೆ ೨೦೬ ಅಡಿಗಳ ಉದ್ದವೂ ೧೬೦ ಅಡಿ ಅಗಲವೂ ಇರುವ ದೊಡ್ಡ ಹಾಲು ಇರುವುದು. ಇಷ್ಟು ದೊಡ್ಡ ಹಾಲಿನಲ್ಲಿ ಒಂದಾದರೂ ಕಂಬವಿರುವುದಿಲ್ಲ. ಆ ದೇಶದೊಳಗೆ ಯಾವ ಕಟ್ಟಡದಲ್ಲೂ ಇಷ್ಟು ದೊಡ್ಡ ಹಾಲು ಇರುವುದಿಲ್ಲನಂತೆ. ಅಲ್ಲಿನ ಗೌರ್ನಮೆಂಟಿನವರು ಅನೇಕ ವರ್ಷಗಳಿಂದಲೂ ಶ್ರದ್ಧೆಯಿಂದ ಕೆಲಸಮಾಡಿಸಿ ಇದನ್ನು ಸಿದ್ಧಪಡಿಸಿರುವರು.

ಪತ್ರವ್ಯವಹಾರ

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿನ ಸಭೆ.

ರಾವ್‌ಬಹದ್ದೂರ್ ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರ ಧರ್ಮಸತ್ರದಲ್ಲಿ ೧೯೧೩-೧೪ ನೇ ಸಾಲಿನಲ್ಲಿ ಸ್ಥಳವಿಲ್ಲದೆ ವಜಾ ಆದ ಬಿ. ಯಸ್. ಸದಾಶಿವಪ್ಪ, ಎಚ್. ಕಗ್ಗೆರಯ್ಯ, ಜಿ. ವೈ. ಮಲ್ಲಪ್ಪ, ಕೆ. ಹನುಮಪ್ಪ ಈ ವಿದ್ಯಾರ್ಥಿಗಳಿಗೆ ಈ ಕೆಳಗೆ ನಮೂದಿಸಿರುವ ದೊಡ್ಡ ಮನುಷ್ಯರು ಸಹಾಯಮಾಡಿದ ತಪ್ಸೀಲು:-

ಬೆಂಗಳೂರಿನಲ್ಲಿ ಮ|| ರಾ|| ಗಳಾದ ಶಂಕರಣ್ಣನವರ ಶಿವಪ್ಪನವರು ರೂ. ೧೫-೦-೦. ಗ್ರಂಧಿಗೆ ಅಂಗಡಿ ವೀರಣ್ಣನವರು ರೂ. ೧೦-೦-೦. ಗ್ರಂ|| ಗಾಡದ ವೀರಭದ್ರಪ್ಪನವರು ರೂ. ೫-೦-೦. ಎಲೆ. ಸಿದ್ಧಲಿಂಗಪ್ಪ ಶೆಟ್ಟರು ೧-೦-೦. ಸೂಲಬೆಲೆ ಮಲ್ಲೇಶಣ್ಣನವರು ರೂ. ೨-೦-೦ ಗಡಿಯಾರದ ಚನ್ನಬಸಪ್ಪನವರು ರೂ. ೫-೦-೦. ಮೋಟಗಾನಹಳ್ಳಿ ಚನ್ನವೀರಪ್ಪನವರು ರೂ. ೩-೦-೦. ಉದಯತ್ತಿ ಪಾಪ್ ಶೆಟ್ಟಪ್ಪನವರು ರೂ. ೧-೦-೦. ನಕ್ಕದಂಗಡಿ ಸಿದ್ದಾನಮಲ್ಲನವರು ರೂ. ೧-೦-೦. ತ್ಯಾಮಗೊಂಡ್ಲುನಲ್ಲಿ ಸದ ಗೌಡದ ಮಠದ ಅಂಗಡಿ ಯಜಮಾನ್ ಹುಚ್ಚಪ್ಪನವರು ರೂ. ೫-೦-೦. ಜುಮ್ಲಾ—೩೪-೦-೦.

ಎಚ್. ಕೆ. ವೀರಬಸವಪ್ಪ, ಬಿ.ಎ. ಬಿ.ಎಲ್. ಸೆಕ್ರಟರಿ.

ಬಗಲೂರು ತಾಲ್ಲೂಕ್ ಸಲ್ಲಗಲ್ಲು ಗ್ರಾಮದ ಬಿನಕಾರ ಮ|| ರಾ|| ತರಕಲ್ ಚನ್ನಬಸಪ್ಪನವರ ತಮ್ಮ ಬಸಪ್ಪನವರ ಮನೆಯಲ್ಲಿ ಇದೇ ಜೈಷ್ಠ ಶುದ್ಧ ೧೦ ಬುಧವಾರ ಇವರ ಮಗನಿಗೂ ಶ್ರೀ ಚನ್ನಬಸವಯ್ಯನವರಿಂದ ವಿದ್ಯುಕ್ತವಾಗಿ ನಡೆಸಲ್ಪಟ್ಟ ವಿವಾಹಕಾರ್ಯ ನಡೆದ ಸಂದರ್ಭದಲ್ಲಿ ಬಿಳಿಗೋಡುಮಠದ ರುದ್ರಾರಾಧ್ಯರವರು ಸಂತಾಪಕಾರ ವಿದು ಯವಾದ ಉಪನ್ಯಾಸಮಾಡಿ ಮ|| ರಾ|| ಕೈ. ವೀರಸಂಗಪ್ಪನವರ ಅಗ್ರತಾಂಬೂಲಕ್ಕಾಗಿ ೧ ರೂ.ಯನ್ನು ವಿದ್ಯಾವರ್ಧಕಫಂಡಿಗಾಗಿ ೨ ರೂ.ಗಳನ್ನು ಸದರಿ ಮ|| ರಾ|| ಬಸಪ್ಪ ಮ|| ರಾ|| ಹುಚ್ಚೀರೇಹಳ್ಳಿ ನುರಿಯಪ್ಪ, ದೇವೀಕೆರೆವಾಸಿ ಬೋರಿಸಾಸಹಳ್ಳಿ ಪಟೇಲ್ ಮ|| ರಾ|| ಗುರುಸಿದ್ದಪ್ಪ ಇವರುಗಳಿಂದ ತೆಗೆಸಿ ನಿಮ್ಮ ಆಫೀಸಿಗೆ ಕಳುಹಿಸಿದೆ. ತಲುಪಿ ಸ್ವೀಕರಿಸಿದ್ದಕ್ಕೂ ನಿಮ್ಮ ರಿಜಿಸ್ಟರಿಗೆ ದಾಖಲಾದ್ದಕ್ಕೂ ಸ್ಟಾರ್ ಮುಖಾಂತರ ಪ್ರಚಾರಗೊಳಿಸಬೇಕಾಗಿ ಕೋರುವ,

ಒಬ್ಬ ಮತಸೇವಕ.

[ಈ ಬಾಬ್ತು ರೂಪಾಯಿಗಳು ಬಂದಿವೆ. ಪ. ಪ್ರ.]

ಗುಬ್ಬಿ ತಾಲ್ಲೂಕು ನಾಗಲಾಪುರ ನಿವಾಸಿ ಹೊಸಕೆರೆಯಲ್ಲಿ ಮ|| ರಾ|| ಸರ್ವತಪ್ಪನವರ ಮನೆಯಲ್ಲಿ ನಡೆದ ಎರಡು ವಿವಾಹಕಾಲದಲ್ಲಿ ಕೆಲವು ವಿಷಯಗಳ ಉಪನ್ಯಾಸ ಮಾಡಿದ್ದರಲ್ಲಿ ಮೈಸೂರು ಶ್ರೀ. ವೀರಸಂಗಪ್ಪನವರ ಹೆಸರಿನಲ್ಲಿ ಅಗ್ರತಾಂಬೂಲಕ್ಕಾಗಿ ೧ ರೂ. ವಿದ್ಯಾವರ್ಧಕ ಫಂಡಿಗಾಗಿ ೪ ರೂ.ಗಳನ್ನು ಪುಟ್ಟಣ್ಣಯ್ಯನ ಲಗ್ನದಲ್ಲಿ ೩|| ಅಗ್ರತಾಂಬೂಲಕ್ಕಾಗಿ ೧ ರೂ.ಯನ್ನು ೩|| ಫಂಡಿಗಾಗಿ ೨ ರೂ.ಗಳನ್ನು ಸಿದ್ಧವೀರಪ್ಪನವರ ಮನೆ ಲಗ್ನದಲ್ಲಿ ೩|| ಅಗ್ರತಾಂಬೂಲಕ್ಕಾಗಿ ೧ ರೂಯನ್ನು ೩|| ಫಂಡಿಗಾಗಿ ೨ ರೂ.ಗಳನ್ನು ಈ ರೀತಿ ತೆಗೆಸಿ ಸ್ಟಾರ್ ಆಫೀಸಿಗೆ ವಿದ್ಯಾವರ್ಧಕಫಂಡಿನ ಸೆಕ್ರೆಟರಿ ಆಫೀಸಿಗೂ ಕೂಡಲೆ ಮನಿಯಾರ್ಡರ್ ಮಾಡಿದೆ. ಈ ರೀತಿಯಾಗಿ ಸರ್ವತ್ರಬಂಧುಗಳಿಗೆ ತರಬೇಕೆಂಬುವದೇ ನನ್ನ ಕೋರಿಕೆಯಾಗಿದೆ.

ಹೊಸಮಠದ ಉಜ್ಜಿನಯ್ಯಾಚಿಕ್ಕಿಪ್ಪಿ.

[ಇದರಲ್ಲಿ ಕಂಡ ಅಗ್ರತಾಂಬೂಲದ ೩ ರೂ.ಗಳು ಬಂದಿವೆ. ಪ. ಪ್ರ.]

ಶ್ರೀಮನ್ನಿಜಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರ ಶ್ರೀಮಚ್ಛಿನ್ಮೂಲಾದ್ರಿಸ್ವಸ್ಥಾನದ ಸುಬಾಗ ಸಂಸ್ಥಾನ ಕಚೇರಿಯಿಂದ;

ಮಹಾ ಸನ್ನಿಧಿಶಿಷ್ಯರಾದ ಶ್ರೀ ಕರ್ನಾಟಕ ಮಹಾರಾಷ್ಟ್ರ ತೈಲಂಗದೇಶಗಳಲ್ಲಿರುವ ಸಮಸ್ತ ವೀರಶೈವ ಮಹಾಜನರಿಗೆ ಸೂಚಿಸುವುದೇನೆಂದರೆ;

೧. ನಿಜಾಂಜಿಲ್ಲಾ ಬೀದರಜಿಲ್ಲೆ ಬಿಡಿತಕಿಹಳ ನಿವಾಸಿ ಪುರಾಣದ ವೀರಶೈವದೀಕ್ಷಾವಂತ ಇವರ ಪುತ್ರ ದಗಡು ಅಪ್ಪ ಎಂಬುವನು ವಿದ್ಯಾಭ್ಯಾಸದ ನಿಮಿತ್ತ ಆರ್ಯಸಮಾಜದಲ್ಲಿ ಪ್ರವಿಷ್ಟನಾಗಿಯೂ ವೇದ ಪ್ರಚಾರಕನಾಗಿದ್ದರಿಂದ ಸುಮಾರು ಹತ್ತು ವರ್ಷವಾಗಿದೆ. ಈತನು ಆರ್ಯಸಮಾಜದಲ್ಲಿದ್ದು ವೇದಾಧ್ಯಯನ, ವೈಶೇಷಿಕದರ್ಶನಾದಿ ಶಾಸ್ತ್ರಾಧ್ಯಯನ ಮಾಡಿ ಪಂಡಿತಜ್ಞಾನೇಶ್ವರನೆಂಬ ನಾಮ ಸಂಪಾದಿಸಿಕೊಂಡನು.

೨. ಈಗ ಈತನು ವೀರಶೈವರ ಧರ್ಮವನ್ನು ಬಿಟ್ಟಿದ್ದಕ್ಕಾಗಿ ಬಹಳ ಪಶ್ಚಾತ್ತಾಪಪಟ್ಟು ಪವಿತ್ರವಾದ ವೀರಶೈವ

[illegible] ಮಾಡಬೇಕೆಂದು ತಪ್ಪೊಪ್ಪಿಕೊಂಡಿರುವ ಬಳಿಕ ಆರ್ಯ ಸಮಾಜದ ಕೆಲವರು ಇವನನ್ನು ಪುನಃ ತಮ್ಮಲ್ಲಿ ಸೇರಿಸಿಕೊಳ್ಳುವುದಕ್ಕೆ ಪ್ರಯತ್ನಿಸಿದರು. ಆರ್ಯಸಮಾಜದ ಮಾರ್ಗಾನುಸಾರಿಗಳಾಗಿರುವ ಲಿಂಗಧಾರಿಗಳಿಗೆ ಈ ವಿಷಯದಲ್ಲಿ ಕರ್ತವ್ಯವೇನು ಎಂದು ತಿಳಿಸಬೇಕಾಗಿದೆ. ಮತ್ತು ಇವನ ದುರ್ವ್ಯಸನಗಳು ಏನೂ ಇಲ್ಲವೆಂದು ತಿಳಿಯುತ್ತದೆ.

೩. ಕಾಶಿ ಜ್ಞಾನೇಶ್ವರಶರ್ಮ ಈತನ ಮನೆತನವು ಪಾವಿತ್ರ್ಯವಾದುದೆಂದು ಈತನ ವಂಶದವರು ಈಗಲೂ ಇದ್ದಾರೆ.

೪. ಅದುದರಿಂದ ಪಂಡಿತಜ್ಞಾನೇಶ್ವರಶರ್ಮ ಈತನನ್ನು ಶುದ್ಧೀಕರಿಸಿ ವೀರಶೈವದೀಕ್ಷೆಯ ಮೂಲಕ ವೀರಶೈವಸಮಾಜಕ್ಕೆ ತೆಗೆದುಕೊಳ್ಳಬೇಕೆಂದು ಯಾರಾದರೂ ತಕರಾರು ಸೂಚಿಸುವದಿದ್ದರೆ ಈ ತಿಂಗಳ ಕಡೆಯವರೆಗೆ ಇರುವ ಅಗಸ್ಟ್ ತಾರೀಖು ೧೦ರೊಳಗಾಗಿ ಶ್ರೀಯವರ ಸನ್ನಿಧಾನಕ್ಕೆ ಅರಿಕೆಮಾಡಿಕೊಳ್ಳತಕ್ಕದ್ದು. ಈ ವಿಷಯದ ಮುದ್ರಿತವಾದುದರಿಂದ ಸಮಸ್ತ ವೀರಶೈವ ಮಹಾಜನರಿಗೆ ಪ್ರಸಿದ್ಧಪಡಿಸಲಾಗುವುದಾಗಿದೆ. ಇಂದಿಗೆ ಯಾವ ತಕರಾರೂ ಬಾರದೆ ಇದ್ದರೆ ಈ ವಿಷಯವನ್ನು ಯೋಗ್ಯತಕರಾರು ಬರುವದಿಲ್ಲವೆಂದು ತಿಳಿದು ಮುಂದಿನ ಕಾರ್ಯವು ನಡೆಯಲ್ಪಡುವುದು.

ಶ್ರೀಮುರುಘರಾಜೇಂದ್ರಮಠ, ಚಿತ್ರದುರ್ಗ, ತಾ|| ೧-೬-೧೯೧೪.

ಚೆನ್ನಬಸವಯ್ಯ ಮ್ಯಾನೇಜರು ಮಠ, ಕಾರಭಾರಿ.

೧. ತಾಡಪತ್ರಿ [illegible]

ಮೇಲ್ಕಂಡ ವಿಷಯದಲ್ಲಿ ಪತ್ರವ್ಯವಹಾರಮಾಡತಕ್ಕವರು ಸ್ವಾಮಿವರ್ಯರ ಜೋತೆ ಜೀವನಿ ಜವಾಬ್ದಾರ್; ಲಾತೂರ್; ಪೋಷ್ಟ್, ಲಾತೂರ್ ಇವರ ವಿಳಾಸಕ್ಕೆ ಬರೆಯಬಹುದು. ಈ ಕಾರ್ಯಕ್ಕಾಗಿ ಆಶ್ರಯಗಳನ್ನು ನೀಡಬಹುದು.

ಶ್ರೀ ಬಸವೇಶ್ವರಜಯಂತ್ಯುತ್ಸವ.

ಈ ಆನಂದನಾಮಸಂವತ್ಸರದ ವೈಶಾಖ ಶುದ್ಧ ತದಿಗೆ ಮಂಗಳವಾರ ತಾ|| 28-4-914 ರಲ್ಲಿ ಶ್ರೀ ಬಸವೇಶ್ವರ ಜಯಂತ್ಯುತ್ಸವವನ್ನು ನಮ್ಮ ಗ್ರಾಮದ ಪ್ರತಿಯೊಬ್ಬ ವೀರಶೈವ ಬ್ರಾಹ್ಮಣರು ತಮ್ಮತಮ್ಮ ಗೃಹಗಳನ್ನು ತಳಿರು ತೋರಣಾದಿಗಳಿಂದ ಅಲಂಕರಿಸಿ ವೀರಮಾಹೇಶ್ವರರ ಸಂತರ್ಪಣೆಯನ್ನು ಪ್ರತಿಮನೆಗಳಲ್ಲಿಯೂ ತಪ್ಪದೆ ನಡೆಸಿ ಆ ದಿವಸ ರಾತ್ರಿ ವೃಷಭೇಂದ್ರವಿಜಯದಲ್ಲಿ ಬಸವೇಶ್ವರಜನನವಾದ ವಿಷಯವನ್ನು ಬಾರಿಸಿದನಂತರ ಅರುಣೋದಯದ ನಂತರ ವಾದ್ಯವೈಭವ ಉತ್ಸಾಹಗಳಿಂದಲೂ ಮತ್ತು ಪುಷ್ಪ ಗಂಧ ತಾಂಬೂಲಾದಿಗಳಿಂದಲೂ ಸರ್ವರ ಮನಸ್ಸಿಗೂ ಹರುಷವನ್ನುಂಟುಮಾಡಿ ಶ್ರೀ ಬಸವೇಶ್ವರನ ಪುರಾಣವನ್ನು ಸರ್ವರಿಗೂ ವಿನಿಯೋಗಿಸಿ ಮತ್ತೋದ್ದಾರಕರಾದ ಕೈ|| ವೈ|| ಯಜಮಾನ ವೀರಸಂಗಪ್ಪನವರ ಜನನದವರೆಗೆ ಅಗ್ರತಾಂಬೂಲವು ತೆಗೆಯಲ್ಪಟ್ಟನಂತರ ಸಭೆಕರೆದು ಹಂಚಲ್ಪಟ್ಟಿತು. ಅನಂತರ ನಮ್ಮೆಲ್ಲರನ್ನು ಶ್ರೀಬಸವೇಶ್ವರಜಯಂತ್ಯುತ್ಸವವಿಲ್ಲದ ನಮ್ಮ ಗ್ರಾಮದ ಶ್ರೀ ವೀರಶೈವ ಮಹಾಜನಂಗಳು ಶ್ರೀ ಬಸವೇಶ್ವರಸ್ವಾಮಿ ಹೆಸರಿನಿಂದ ಹೊಸದಾಗಿ ಮನೆಗೆಳೆದು ಕಟ್ಟುವುದಕ್ಕಾಗಿ ತೆಗೆದುಕೊಂಡಿರುವ ಜಾಗದಲ್ಲಿ ಶ್ರೀಬಸವೇಶ್ವರನಿಂದದ್ದನ್ನು ತಕ್ಕುದೆಂದು ಕೆಲವು ಮಹನೀಯರು ವಾಗ್ದಾನಮಾಡಿದಂತೆ ಕಟ್ಟಲು ಆಲೋಚಿಸಿದ್ದು, ಸರ್ಕಾರದವರನ್ನು ಎಮ್ಮ ಪ್ರಾರ್ಥಿಸಿಕೊಂಡಾಗ್ಗೂ ಹುಕುಂ ದಯಪಾಲಿಸಲ್ಲಿಲ್ಲವಾಗಿ ಕಟ್ಟಲು ಅನಾನುಕೂಲವಾದೀರಿರುವುದರಿಂದ [illegible] ಇಗ್ಗಡದ ನುಂಟಿಯಾದರೂ ಜಾಗೃತಿಯಾಗಿ ಹುಕುಂ ದಯಪಾಲಿಸುವರೆಂದು ನಿರೀಕ್ಷಿಸಲಾಗಿದೆ. ನಮ್ಮ ಸಿದ್ಧರಹಳ್ಳಿ ಶ್ರೀ ಗವಿಮಠದ ಶ್ರೀ ಶಿವರುದ್ರಸ್ವಾಮಿಗಳು ವಿದ್ವಾಂಸರು ಮಾಡುವ ಉಪನ್ಯಾಸವನ್ನು ಮಾಡಿ ವಿದ್ಯೆಯ ಸದ್ಗುಣಾದರಣೆಯ ವಿಷಯವು ಸರ್ವರ ಮನಸ್ಸಿಗೆ ಹಿಡಿಸುವಂತೆ ಬೋಧಿಸಿದ್ದರು. ಮೇಲೆ ಈ ಗ್ರಾಮದಲ್ಲೊಂದು ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಬೇಕೆಂತಲೂ ಇದಕ್ಕಾಗಿ ಮಾಜಿಯಾಗಿ ಐದು ರೂಪಾಯಿಯನ್ನು ಶ್ರೀಗಳು ಒಬ್ಬರೇ ಕೊಡುವರೆಂದೂ ಅರಿಕೆ ಪಡಿಸುತ್ತ ಇಗದವರ ಸಹಾಯದಿಂದ ಸ್ಥಳದ ಮೂಲಕ ವಿದ್ಯಾರ್ಥಿಗಳಿಗೆ ಅಶನವಸನ್ನು ಗ್ರಾಮದ ಭಕ್ತ ಮಾಹೇಶ್ವರ ವರ್ಗದವರೆಲ್ಲರೂ ಕೊಡುವರೆಂತಲೂ ತೀರ್ಮಾನಮಾಡಿಕೊಂಡಿರುವುದಲ್ಲದೆ ಈ ಗ್ರಾಮದಲ್ಲಿ ನೀರಿರುವದು ಸ್ವಲ್ಪ ದೂರವಾದ್ದರಿಂದ ಪಾಠಶಾಲೆ ಕಟ್ಟುವದಲ್ಲ ನೀರಿರುವದು ಅತ್ಯವಶ್ಯಕವಾದ್ದರಿಂದ ಭಾವಿಯನ್ನು ತೆಗೆಯುವದಕ್ಕೆ ಆಗಲೇ ಇಂದಿವರೆಗೂ ರೂಪಾಯಿಗಳನ್ನು ಶ್ರೀ ಶ್ರೀಗಳವರು ಸಭೆಯವರ ವಶಕ್ಕೆ ಒಪ್ಪಿಸಿರುವರು ಇದು ಸಂತೋಷವಾದ ವಾರ್ತೆಯಾಗಿದೆ. ಶ್ರೀ ಸ್ವಾಮಿಗಳವರ ಸಣ್ಣವಯಸ್ಸಿನ ವಿದ್ಯಾರ್ಥಿಗಳಾಗಿರುವವಾಗಲೂ ಈ ರೀತಿ ಬಿಡಾರವನ್ನು ತೋರಿಸಿರುವುದನ್ನು ನೋಡಿದರೆ ಈ ಗುರುಶಿಷ್ಯರ ಪಾರಂಪರ್ಯವು ಭಾವವೆಂತಲೇ ಭಾವಿಸಬೇಕಾಗಿದೆ. ಇದೇ ಪುರಾಣ ಬಾರಿಸಿದಾಗ ಮತ್ತೊಂದು ದಿವಸ ಮೈಸೂರಿನಲ್ಲಿರುವ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು ನಮ್ಮ ಗ್ರಾಮಕ್ಕೆ ದಯಮಾಡಿಸಿ, ಪ್ರತಿಯೊಬ್ಬ ವೀರಶೈವ ಸ್ತ್ರೀಪುರುಷರೂ ಶಿವದೀಕ್ಷೆಯನ್ನು ಹೊಂದಬೇಕೆಂದೂ ಶಾಸ್ತ್ರಾಧಾರ

ದಿಂದ ಯುಕ್ತಿಯುಕ್ತವಾಗಿಬೋಧಿಸಿ ಸರ್ವರ ಮನಸ್ಸಿಗೆ ಆನಂದವನ್ನುಂಟುಮಾಡಿ ಸರ್ವರಿಗೂ ದೀಕ್ಷೆಯಾಗಬೇಕೆಂಬ ಕುತೂಹಲವನ್ನುಂಟುಮಾಡಿದರು. ಈ ವಿಷಯವನ್ನೆಲ್ಲಾ ಬರೆಯುವದು ಅಪ್ರಸಂಗವಾಗಲಾರದು. ಈ ರೀತಿ ವಿದ್ಯೆ ಮತ್ತು ದೀಕ್ಷಾ ವಿಷಯವಾಗಿಬೋಧಿಸಿ ಸರ್ವರ ಮನಸ್ಸಿನ ಅಭಿಪ್ರಾಯವನ್ನು ಹೋಗಲಾಡಿಸಿದ ವೇ|| ಶಾಸ್ತ್ರಿಗಳಿಗೂ ಶ್ರೀ|| ಗಳವರಿಗೂ ಶ್ರೀಬಸವೇಶ್ವರನು ಆಯುರಾರೋಗ್ಯ ಭಾಗ್ಯಗಳನ್ನು ಕೊಡಲೆಂದು ಪ್ರಾರ್ಥಿಸುವ, ಮತಸೇವಕ

ನಿ. ಮಲ್ಲಪ್ಪ.

ಕೈ|| ವೈ|| ಯಜಮಾನ್ ವೀರಸಂಗಪ್ಪನವರ ಹೆಸರಿನಿಂದ ತಾಂಬೂಲವನ್ನು ತೆಗೆಯುವವೇಳೆ ವಸೂಲಾದ

ದಕ್ಷಿಣೆ ತಪಶೀಲ್.

ಅಗ್ರತಾಂಬೂಲ ಸಿದ್ಧವ್ವನ ಮಗ ಬಸವಯ್ಯನಲಗ್ನದಲ್ಲಿ ೧ ರೂ. ಬಸವೇಶ್ವರಜಯಂತಿ ಬಾಬ್ತು ೧ ರೂ. ಯಜಮಾನ ಸುಬ್ಬಣ್ಣನವರವರುಗಳ ಮಹಾದೇವವ್ವನ ಲಗ್ನದ ಬಾಬ್ತು ೧ ರೂ. ರಾ|| ಸದಾಶಿವಪ್ಪನವರ ಮಗಳ ಪಾರ್ವತವ್ವನ ಲಗ್ನದ ಬಾಬ್ತು ೧ ರೂ. ಯ|| ವೀರಪ್ಪನವರ ಸುಬ್ಬಣ್ಣನ ಲಗ್ನದ ಬಾಬ್ತು ೧ ರೂ. ಕೊಳ್ಳೇಗಾಲದ ಪುಟ್ಟಪ್ಪನವರ ಮಗಳು ಬಸವನ್ನನ ಲಗ್ನದ ಬಾಬ್ತು ೧ ರೂ. ಕೆಪ್ಪರು ಸುಬ್ಬಣ್ಣನವರ ಮಗಳು ಮಲ್ಲಪ್ಪನವರ ಗೃಹಪ್ರವೇಶದ ಬಾಬ್ತು ೦-೮-೩ ರೂ. ಕಾಡಪ್ಪನವರ ಬಾಬ್ತು ೧-೦-೦ ರೂ. ಯಜಮಾನ ಬಸಪ್ಪನವರ ಬಾಬ್ತು ೧-೦-೦. ಯಜಮಾನ ಸುಬ್ಬಣ್ಣನವರ ಮಗಳು ನಾಗಮ್ಮನ ಮದುವೆ ವಧೂಗೃಹಪ್ರವೇಶದ ಬಾಬ್ತು ೦-೪-೦ ಕಾಡಪ್ಪನವರ ಹಲಗಪ್ಪನವರ ಮಗಳು ಬಸವಣ್ಣನ ಲಗ್ನದ ರೂ. ೧-೦-೩. ಯಜಮಾನ ಸುಬ್ಬಣ್ಣನವರ ತಮ್ಮ ಹಲಗಪ್ಪನವರ ಮಗಳು ಮಾದವ್ವನ ಲಗ್ನದ ಬಾಬತು ರೂ ೧-೦-೩. ಮದ್ದೂರು ಮಾದಪ್ಪನವರ ಮಗ ಸುಬ್ಬಣ್ಣನವರ ತಂಗಿ ಬಸವನ್ನನ ಲಗ್ನದ ಬಾಬ್ತು ವಧುಗೃಹಪ್ರವೇಶದ ಬಾಬತು ೦-೮-೩.

ಜುಮ್ಲಾ...೧೧—೧೩—೩.

ಟಿ. ನರಸೀಪುರದ ತಾಲ್ಲೂಕ್ ಸಿದ್ಧರಳ್ಳಿ ಗ್ರಾಮದವರ ಬಾಬತು ಮೇಲ್ಕಂಡ ರೂಪಾಯಿಗಳು ನಮಗೆ ಬಂದಿವೆ.

[ಪ. ಪ್ರ.]

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೂಂಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು ಕಾಪಾಡುವುದರಲ್ಲಿ ಶ್ರೇಷ್ಠತಮವಾದ

39

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ—ಚಿನ್ನದ ರೇಖು ಮೊದಲಾದವುಗಳಿಂದ ಕರಿಸಿದ ಕಾಂತಿಯಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸುವ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವುದು ಮಾಡುವುವು.

ಶೀತವಾಯು—ಕೆಮ್ಮು—ನೆಗಡಿ—ದಿನಜ್ವರ—ಮೂರರಜ್ವರ—ನಾಲ್ಕರಜ್ವರ— ಮಲೇರಿಯಾಜ್ವರ— ತಲೆನೋವು—ಮೈಕೈನೋವು—ಮಲಬಂಧ—ಅಜೀರ್ಣಭೇದಿ—ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಶಳಿತ—ಹೊಟ್ಟೆಯುಬ್ಬರ—ಮಲಜ್ವರ—ಭೇದಿ ಮುಂತಾದರೋಗಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದ ಯಾವಾಗಲೂ ಮನೆಯಲ್ಲಿ ಇಟ್ಟುಕೊಳ್ಳದೆ ತರಿಸುವರೆಂದು ನಾವು ಸ್ಥಿರವಾಗಿ ಹೇಳಬಲ್ಲೆವು. ೫೦ ಮಾತ್ರೆ ೪ ಆಣೆ, ಐದಕ್ಕೆ ಒಂದು ಇನಾಮು. ವಿ. ಪಿ ಛಾರ್ಜ್ ಪ್ರತ್ಯೇಕ.

ಆಮೋದಿನಿ:— ಅಪೇಕ್ಷಾಪಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರವಾಗುವುದರಲ್ಲಿ ಪ್ರಖ್ಯಾತಿಯೊಂದಿ ಸಂಗೀತಗಾರರಿಂದ ವಿಶೇಷ ಕೀರ್ತಿಯನ್ನು ಸಂಪಾದಿಸಿ ನಾನಾತರಹ ಕೆಮ್ಮ, ದಮ್ಮು, ಉಬ್ಬಸ, ವಾಂತಿ, ವಾಕರಿಕೆ, ಮಲಬಂಧ, ಅಗ್ನಿಮಾಂದ್ಯ ಪಿತ್ತಸಂಕಟ, ಅರೋಚಿಕ, ಬಾಯಾರಿಕೆಗಳನ್ನು ತಕ್ಷಣ ಗುಣಪಡಿಸಿ ಶರೀರಕ್ಕೆ ತೀಕ್ಷ್ಣ ಮಾಡಬೀ ಧಾತುವೃದ್ಧಿ ಉಂಟುಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೫೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ.ಪಿ. ಛಾರ್ಜ್ ಪ್ರತ್ಯೇಕ.

ವಿಳಾಸ— ಬಿ. ವಿ. ಪಂಡಿತ್, ಸದ್ವೈದ್ಯಶಾಲಾ, ಚಂಚಗಲೂರು, ಮೈಸೂರ್ ಸಿಟಿ.

ಫಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

30

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ನೋಡಿ! (ಗುಣವಾಗದಿದ್ದರೆ ಹಣ ವಾಪಸ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗಪೀಡಿತರು, ರಕ್ತಪಿತ್ತವುದ್ರೇಕವಾದವರು, ತೃಷೆಪೀಡಿತರು, ದಮ್ಮಿನವರು, ಕೆಮ್ಮಿನವರ ಕಫು, ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವರು, ಉಷ್ಣ ಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಹ್ಲಾದಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟುಗುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರಿತಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆ ಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ೨-೮-೦ ತೊಲೆಗೆ ರೂಪಾಯಿ ೩ ಬೀಳುವದು. ಪ ರ್ಚಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡ ಲೇ ರವಾನಿಸುವೆವು.

ವಿಳಾಸ:—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ, ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡ.

40

ನೋಡ್ಜ್ ಕೇವಲಿ!

ನೋಡ್ಜ್ ಕೇವಲಿ! ಸೋಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರಿಸೀರೆ, ಕಣ, ಪೇಟ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟಲಾಗನ್ನು ಅಪೇಕ್ಷಿಸುವವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಲಾಗ ನ್ನು, ವಿಶ್ವೇಶ್ವರನ ೧ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಡಿ. ಎನ್. ಮತ್ತು ಕಂಪನಿ, ಬನಾರಿಸ್ ಸಿಟಿ. (ಕಾಶಿ)

ಅಗ್ಗವಾದ ಮಾಲುಗಳು.

S.N.RUDRAKSHA & CO. BENARES CITY.

ನಮ್ಮಲ್ಲಿ ಉತ್ತಮವಾದ ನೇಪಾಳ ರುದ್ರಾಕ್ಷಿ ಉತ್ತಮವಾಗಿಯೂ ಗಟ್ಟಿಯಾಗಿಯೂ ಮುಖದಿಂದ ೧೪ ಮುಖದ ವರೆಗೆ ಸಣ್ಣದು ದೊಡ್ಡದು ಸಹ ಈ ಎರಡು ನಮೂನೆಯಲ್ಲಿ ದೊರೆಯುವುದು. ಮತ್ತು ಇತರ ಶ್ರೀ ರೇಷ್ಮೆ ಮುಗಟ, ಕಾಶ್ಮೀರ ಶಾಲು, ರೇಷ್ಮೆ ಜರಿ, ಪೇಟ, ಜರಿಕಣ, ಪೇಟ, ಕೋರಿಶಾಲ್ಗಳು ನಮೂನೆ ವಸ್ತ್ರ ಜಗನ್ನಾಥ ಜಾಗಂಟಿ, ನೇಪಾಳ ಕಸ್ತೂರಿ, ಉತ್ತಮ ಮೈಸೂರು ಕೇಸರಿ ಮೊದಲಾದ ಅಮೂಲ್ಯವಾದ ಸಾಮಾನು ಎಲ್ಲ ತರಗಳಿಂತಲೂ ಸಹಜರೀತಿ ಯೋಗ್ಯವಾದ ಕ್ರಯದಿಂದ ಸಿಗುವರೆಗೆ ವಿ ಪಿ ಮೂಲಕ ಕಳುಹಿಸಲಾಗುವುದು.

ರುದ್ರಾಕ್ಷಿಗಳ ವಿವರ:—

೪ ಮುಖದ ರುದ್ರಾಕ್ಷಿ ಕಂಠಿ ಅಂತರೆ ೨ ಮಣಿಗಳಿಗೆ

ವ ಸರ ೧ಕ್ಕೆ ೧೨ ಆಣೆಯಿಂದ ೩೦ ರೂಪಾಯಿವರೆಗೆ. ೫ ಮುಖದ ಕಂಠಿ ೧ಕ್ಕೆ ೮ ಆಣೆಯಿಂದ ೩೦ ರೂಪಾಯಿವರೆಗೆ ೬ ಮುಖದ ಕಂಠಿ ೧ಕ್ಕೆ ೧೨ ಯಿಂದ ೧೦೦ ರೂ. ವರೆಗೆ. ೭ ಮುಖದ ಕಂಠಿ ೧ಕ್ಕೆ ೧೦ ರೂ. ಯಿಂದ ೧೫೦ ರೂ. ವರೆಗೆ. ಇದರಂತೆ ೮, ೯, ೧೦, ೧೧, ೧೨, ೧೩, ೧೪, ಈ ಮುಖಗಳ ಮಣಿ ೧ಕ್ಕೆ ೫ ರೂ. ಯಿಂದ ೩೦ ರೂ. ವರೆಗೆ. ಇದರಲ್ಲಿಯೇ ಕಂಠಿ ಬೇಕಾದರೆ ಸಹ ದೊರೆಯುವುದು. ಸಣ್ಣ ರುದ್ರಾಕ್ಷಿ ಸರ ಅಂದರೆ ೧೦೮ ಮಣಿಯಿರುವ ತೊಗರಿಯು, ಉದ್ದಿನಕಾಳು ಪ್ರಮಾಣದ ಸರ ೧ಕ್ಕೆ ರೂ. ೫ ರಿಂದ ರೂ. ೩೦ ವರೆಗೆ. ಕಡಲೆ ಕಾಳು ಪ್ರಮಾಣದ ೧೦೮ ಮಣಿಯಿರುವ ಸರ ೧ಕ್ಕೆ ರೂ. ೨-೮-೦ ಲಾಗಾಯಿತು ರೂ. ೧೦ ವರೆಗೆ. ಜಪಮಾಲೆ ನೆಲ್ಲಿಕಾಯಿಯಿಂದ ಅವರೇ ಬೀಜದ ಪ್ರಮಾಣದ ೧೦೮ ಇರುವ ಸರ ೧ಕ್ಕೆ ೧೨ ಆಣೆಯಿಂದ ರೂ. ೧೦ ವರೆಗೆ. ಸಾಧಾರಣ ತರ ೬ ಆಣೆಯಿಂದ ರೂ. ೩ ವರೆಗೆ. ಗೌರೀಶಂಕರ ರುದ್ರಾಕ್ಷಿ— ಈ ರುದ್ರಾಕ್ಷಿಯು ರುದ್ರಾಕ್ಷಿಗಳಲ್ಲೆಲ್ಲಾ ಶ್ರೇಷ್ಠವೆಂದು ಹೇಳುವರು. ರುದ್ರಾಕ್ಷಿ ಮಣಿ ೧ಕ್ಕೆ ರೂ. ೫ ಲಾಗಾಯಿತು ರೂ. ೫೦ ವರೆಗೆ. ಇಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ವಿಳಾಸ— ಎಸ್. ನೇಪಾಳ ರುದ್ರಾಕ್ಷಿ ಅಂಡ್ ಕಂಪನಿ, ಬನಾರಸ್ ಸಿಟಿ.

24

ದಿ ಜನರಲ್ ಏಜನ್ಸಿ, ಮೈಸೂರು.

ಕಾದಂಬರಿಗಳು:— ಚಂದ್ರಮಾರುತ ೦-೨-೦; ಚರಿತಾಮೃತಂ ೦-೫-೦; ರಾಜಕಥಾವಳಿ ೦-೫-೦; ಪಿಟಬಿನಚರಿತ್ರೆ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೨-೬; ಸೀತೆ ೦-೫-೦; ಸಾಕುಮಗಳು, ಕಲಾವಿದಾ ೦-೮-೦; ಮಹಾಲಕ್ಷ್ಮಿ ೦-೨-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸತ್ಯಸಂಜೀವಿನಿ ೦-೮-೦; ಕೊಹಿನೂರು ೦-೧೨-೦; ಅನಂದಮಠ ೦-೧-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೨-೦.

41

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕೆಯ್ಯಿಂದ ಬಣ್ಣ ಕೊಟ್ಟಿರುವ ಫೋಟೋ ೧ಕ್ಕೆ ಕ್ರಯ ೧೦ ಆಣೆ; ಶ್ರೀಗಳ ಸೊಲ್ಲಾಪುರದ ಪಂಕ್ತಿಗಳ ಯುಕ್ತ ಅಡ್ಡಪಲ್ಲಕ್ಕಿ ಉತ್ಸವದ ಫೋಟೋ ೧ಕ್ಕೆ ಕ್ರಯ ೧ ರೂಪಾಯಿ ಸೊಲ್ಲಾಪುರದಲ್ಲಿ ವ್ಯಾಸನತೊಡಿಸಿದ ಸಹಿತ ಆದ ಸಮಾರಂಭದ ಫೋಟೋ ೧ಕ್ಕೆ ಕ್ರಯ ೧ ರುಪಾಯಿ

ಶ್ರೀಬಸವೇಶ್ವರ

ಇವರ ಬಾಸ್ ಫೋಟೋ (ರಾವಮಾಡಿಕರ ಚಿತ್ರದಂತೆ, ಕಪ್ಪಿತವಲ್ಲಾ) ಕ್ರಯ ಫುಲ್ಸೈಜು ಬಣ್ಣದ್ದು ೧|| ರೂ. ಸಾದಾ ೧ ರೂ. ಕ್ಯಾಬಿನೇಟ್ ಸೈಜು ಬಣ್ಣದ್ದು ೧೦ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರದಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಿಸಿದಾಗುತ್ತಿರುವ ಫೋಟೋ ಕ್ರಯ ೧ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೋ ೧ಕ್ಕೆ ಕ್ರಯ ಫುಲ್ಸೈಜು ೧ ರುಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೦ ಆಣೆ ಸಾದಾ ೮ ಆಣೆ

ಶ್ರೀ ಜಗದ್ಗುರು ತೋಂಟದಾರ್ಯ ಗದಗ, ಶ್ರೀ ಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ಸತ್ಸಂಗ ಮಠ, ಹಾವೇರಿ ಆನಂದಸ್ವಾಮಿ ಫೋಟೋ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ಪಸ್ತುರೆ ಫೋಟೋ ಸಿಗುತ್ತವೆ. ಫುಲ್ಸೈಜು ಕ್ರಯ ೧ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ

ಹೊಳಪನ್ನಾ—ಸಿದ್ಧಗಿರೀಶ್ವರರು ಗದಿಯಾರ ಸರ್ಪಗಳ ಹಚ್ಚು ಪಲಾಕಿಟಗಳೂ, ಯಿದರಲ್ಲಿ ಹಿಂದೆ ಮುಂದೆ ಇಪ್ಪತ್ತು ೨ ಫೋಟೋ ಬೇಕಾದ ಸತ್ಸಂಗಮಠ ದೇವರದರ್ಶನ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದಾ ||, |||, ೧, ೧|, ಪ್ರಕಾರ, ಮತ್ತೂ ಬೆಳ್ಳಿಯರು ರು ೧|| ರೋಡ್ ಗೋಲ್ಡು ಭಂಗಾರದ ದುರ್ಬೀನು ಗ್ಲಾಸಿನ ಕ್ರಯ ೨||, ೩||ರೂ

ಪರೂರಿಗೆ ಏಜಂಟರು ಬೇಕಾಗಿರುತ್ತಾರೆ ಆರ್ಡರ್ ಟಿಕೀಟು ಕಳುಹಿಸಿ ಗ್ಯಾರಿಲಾಕು ಬೇಕಾದವರು ತರಿ: ಕೊಳ್ಳಿರಿ. ನಮ್ಮ ವಿಳಾಸ— ಗಂಗಪ್ಪ ಬೇರಗಿ, ಆರ್ಟಿಸ್ಟ ಸೊಲ್ಲಾಪುರ

16

---

10 ೫೦೦ ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದಸಾಲಾಮಿಸ್ರೀಮುರಬ್ಬ

ಈ ಮುರಬ್ಬಾವು "ಪಂಜಾಬ್ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂಪಾಯಿಗಳು ಬಹುಮಾನ ಕೊಡಲ್ಪಡುವುದು.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯಕೋಶವು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣ ಪರಿಯಂತರವೂ ದುಃಖಪಡುವರು. ಈ "ಪಂಜಾಬ್ ಸಾಲಾಮಿಸ್ರೀಮುರಬ್ಬಾ" ವಿನ ಸೇವನೆಯಿಂದ—

ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲ ವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಕ್ಷಣಕ್ಷಣಕ್ಕೂ ಮೂತ್ರವಾಗುತ್ತಿದ್ದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ದೂರ ನಡೆಯುವುದರಿಂದ ಮೇಲುಬ್ಬಸ ಬರುವುದು ತಲೆಯ ನೋವೂ ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರಿಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ರಕ್ತವನ್ನು ಹೆಚ್ಚಿಸಿ ವೀರ್ಯವನ್ನು ವೃದ್ಧಿಪಡಿಸುವುದರಲ್ಲಿ ಪಂಜಾಬ್ ಸಾಲಾಮಿಸ್ರೀ ಮುರಬ್ಬಾವಿನ ಹೊರತು ಇದಕ್ಕೆ ಸಮಾನವಾದ ಔಷಧವು ಬೇರೆ ಯಾವುದೂ ಇಲ್ಲವು.

ಈ ಪಂಜಾಬ್ ಸಾಲಾಮಿಸ್ರಿಯು ಮುರಬ್ಬಾಕ್ಕೆ ತಾಂಬ್ರದ ಮತ್ತು ಭಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು. ಹೊಟ್ಟೆಯಲ್ಲಿರುವ ಜ್ವರದ ಗಡ್ಡೆಯನ್ನು ನಾಶಪಡಿಸುವುದು. ಜ್ವರ ಖಾಸ ರೋಗಗಳನ್ನು ನಿರ್ಮೂಲಪಡಿಸುವುದು.

ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲ್ ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಅಂಗಡಿಯಿಂದ ಅನ್ನ ಕಾಯಿಗಳನ್ನು ಕೊಂಡು ಇವುಗಳನ್ನು ಪಕ್ವಮಾಡಿ ಕೊಟ್ಟು ಸಾಲಾಮಿಸ್ರಿ ಎಂದು ಜನರನ್ನು ಮೋಸಗೊಳಿಸುವರು. ಈ ಮುರಬ್ಬಾವನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾಬ್ ಸಾಲಾಮಿಸ್ರಿಯೇ ಅಥವ ಬೇರೆ ತರಹದ್ದೋ ಎಂಬುದು ಚೆನ್ನಾಗಿ ತಿಳಿದು ಬರುತ್ತೆ. ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾವು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೫೪ ತೋಲಾ ಮುರಬ್ಬಾವಿರುವ ಡಬ್ಬಾ ೧ಕ್ಕೆ ರೂ ೨-೦-೦; ಟಪಾಲ್ ಖರ್ಚು ನಾಲ್ಕು ಆಣೆ ಅನುಪಾನಪತ್ರಿಕೆ ಔಷಧದ ಸಂಗಡ ಇರುತ್ತೆ.

ಅತ್ಯುತ್ತಮವಾದ ವನೌಷಧಗಳು.

೧. ಧಾತುಪುಷ್ಟಿಚೂರ್ಣ— ಕ್ರಯ ೫ ಆಣೆ.
೨. ಶ್ವೇತಕುಷ್ಠ ನಾಶಕ ಮತ್ತು ವೃಷ್ಟಿ ಕಡಿಮೆ ತೈಲವು ಬೇರಿನ ಹೊರತಕ್ಕೂ ಮತ್ತು ಕೂದಲು ತೆಗೆಯುವುದಕ್ಕೂ ಬಹಳ ಒಳ್ಳೆಯದು ಕ್ರಯ ೨ ಆಣೆ.
೩. ವಾತನಿವಾರಣ ತೈಲವು ಕ್ರಯ ೪ ಆಣೆ.
೪. ಹೊಟ್ಟೆನೋವಿಗೆ ಔಷಧ ಕ್ರಯ ೨ ಆಣೆ ೬ ಪೈ.
೫. ಕೆಮ್ಮಲು ರೋಗಕ್ಕೆ ಔಷಧ ೪ ಆಣೆ.
೬. ಪ್ರಣಕ್ಕೆ ಔಷಧ ೪ ಆಣೆ.
೭. ಅಜೀರ್ಣ್ಯಕರವಾದ ವೀರ್ಯಸ್ತಂಭದ ಗುಳಿಗೆ ೪ ಆಣೆ
೮. ತಲೆನೋವಿಗೆ ತೈಲವು ೨ ಆಣೆ ೬ ಪೈ.
೯. ಪ್ರಮೇಹ ನಿವಾರಣ ಭಸ್ಮವು ೮ ಆಣೆ.
೧೦. ಉಷ್ಣ ನಾಶಕಕ್ಕೆ ಮಾತ್ರೆಗಳು—ರೂ. ೧.
೧೧. ಮೂಲವ್ಯಾಧಿಗೆ ಔಷಧ—೮ ಆಣೆ.
೧೨. ಕಣ್ಣಿಗೆ ಸುರ್ಮಾ—೪ ಆಣೆ.
೧೩. ದಂತಚೂರ್ಣ—೨ ಆಣೆ ೬ ಪೈ.
೧೪. ಕೂದಲು ಬೆಳೆಯುವ ಎಣ್ಣೆ(ಖಿಂಬೋಲತೈಲ) ೪ಆ.

ವಿಳಾಸ:— ಡಿ. ಮನ್ನಾಲಾಲ್, ದಿಲ್ಲಿ ವೈದ್ಯರು, ೫. ಹಳೆ ಸಿದ್ಧಿಕಟ್ಟೆ, ಬೆಂಗಳೂರು ಸಿಟಿ.

ನಮ್ಮ ಏಜಂಟರು.
೧. ಹಾಜಿಸಾಹೇಬ್ ಮಹದಿ ಅವೆನ್ಯೂರೋಡ್ ಬೆಂಗಳೂರು ಸಿಟಿ.
೨. ಸೈಯದ್ ಉಸ್ಮಾನ್ ಅಂಡ್‌ಕೋ ದೊಡ್ಡಪೇಟೆ, ಸಿಟಿ. ಬೆಂಗಳೂರು

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ ೬-೦-೦; ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪ ಡಿಜ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು. ಟಿ ಎಲ್. ಉಪಾಧ್ಯಾಯ,

10 ಸುಗಂಧಕಾರಿ, ಮೈಸೂರು

ವೀರಶೈವ ಕನ್ಯೆಯು ಬೇಕು. 4

ಶೀಲವಂತ, ದೀಕ್ಷಾವಂತ, ಅಥವಾ ಪಂಚಮಶಾಲೆ ಸುಸ್ವರೂಪ, ಕುಲೀನ, ಸುಶೀಲ, ೧೪ ವರ್ಷದ ಮೇಲಿನ ವಯಸ್ಸಾಗಿರಬೇಕು. ಶಿಕ್ಷಣವಾಗಿ ಇದ್ದರೆ ಬಹಳ ಉತ್ತಮ. (ಪಂಚಮರಿಗೆ ದೀಕ್ಷೆಯು ಕೊಡುವೆವು) ಕನ್ಯೆಯ ಫೋಟೋ ಕಳುಹಿಸಬೇಕು.

ವರನು ಶೀಲವಂತ ಶಾಖೆಯವನು ಇದ್ದು ವಕೀಲರು ಇದ್ದಾರೆ. ಮತ್ತು ಸಿಕ್ಕಲತನದ ಉತ್ಪನ್ನ ವರ್ಷಕ್ಕೆ ೫೦೦೦ ಸಾವಿರ ಇರುತ್ತದೆ. ವಿಶೇಷ ಖುಲಾಸೆ ಪತ್ರದ್ವಾರದಿಂದ,

ಅಯ್ಯಪ್ಪ ಶೀಲವಂತ ಶುಕ್ರವಾರಪೇಟೆ
ಸೋಲಾಪುರ.

30 ಸಚಿತ್ರ ಶುಕಸಪ್ತತಿ ಕಥೆಗಳು ರೂ. ೧-೮-೦ (೩೧೨ ಪುಟ) ಟಪಾಲು ಹಾಸಲು ೪ ಆಣೆ. ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ ರೂ ೧-೮-೦. (೫೭೩ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ! ಮಾನ್ಯತೆಯು ಬೇಕಾದರೆ, ವಾಗ್ವೈಖರಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಬೇಕೆಂಬಿಚ್ಛೆಯಿದ್ದರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯಲ್ಲಾಸೆಯಿದ್ದರೆ ದಯಮಾಡಿ ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೩೦ ಪುಟಗಳಿಂದ ಕೂಡಿದ ೬೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ ೧-೪-೦ ಟಪಾಲ್ ಹಾಸಲು ೩ ಆಣೆ.

ಈಗಲೇ ಬರೆ ನಿಮ್ಮ.ನಮ್ಮಲ್ಲಿ ಇನ್ನೂ ಅನೇಕಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

ಕನ್ನಡ ಇಂಡಿಯನ್ ಪೆನಲ್ ಕೋಡ್

ಇದರಿಂದ ಮೈಸೂರ್, ಮದ್ರಾಸ್, ಬೊಂಬಾಯಿಜಿಲ್ಲಾ ಕನ್ನಡಭಾಷಾ ವಾಚಕಮಹಾಶಯರಿಗೆ ತಿಳಿಸುವದೇನೆಂದರೆ-

ಶ್ರೀಮದಿಂಡಿಯಾ ಗೌರ್ನರ್ ಜನರಲ್‌ರವರ ಅನುಮತಿ ಪ್ರಕಾರ ಸರ್ ೧೮೬೦ನೇ ಇಸವಿಯಲ್ಲಿ ಮಂಜೂರಾದ "ಇಂಡಿಯನ್ ಪೆನಲ್ ಕೋಡ್" ಎಂಬ ಆಕ್ಟನ್ನು ಈಗ ಅನೇಕ ಪಟ್ಟಿಗಳ ಟಿಪ್ಪಣಿಗಳೊಡನೆಯೂ, ಅಮೆಂಡ್‌ಮೆಂಟುಗಳೊಡನೆಯೂ ಅಂದವಾದ ಕಾಗದದಲ್ಲಿ ಸ್ಪಷ್ಟವಾದ ಅಕ್ಷರಗಳಿಂದ ಮುದ್ರಣವಾಗಿ ಮಾರಾಟಕ್ಕೆ ಸಿದ್ಧವಾಗಿದೆ. ಈ ಆಕ್ಟಿನಲ್ಲಿ ಪ್ರತಿ ಸೆಕ್ಷನಿಗೂ ಫಿರ್ಯಾದಿಗಳೂ, ಅಪರಾಧಿಗಳೂ, ಪೋಲೀಸ್ ಅಧಿಕಾರಿಗಳೂ, ಮ್ಯಾಜಿಸ್ಟ್ರೇಟರುಗಳೂ ನಡಿಸಬೇಕಾದ ಆಚರಣೆಗಳೆಂದರೆ:-ನಡೆಯುವ ಮೊಕದ್ದಮೆಯನ್ನು ಯಾವ ಕೋರ್ಟಿನಲ್ಲಿ ವಿಚಾರಣೆ ಮಾಡಬೇಕು? ವಾರಂಟಿಲ್ಲದೆ ಹಿಡಿಯಬಹುದೇ, ಹಿಡಿಯಕೂಡದೇ? ಸಮನ್ ಕೊಡತಕ್ಕದ್ದೇ, ವಾರಂಟು ಕೊಡತಕ್ಕದ್ದೇ? ಜಾಮೀನ್ ತೆಗೆದುಕೊಂಡು ಬಿಡಬಹುದೇ? ರಾಜಿಯಾಗಬಹುದೇ, ರಾಜಿಯಾಗತಕ್ಕದ್ದಲ್ಲವೇ? ಎಂಬ ತಪ್ಸೀಲುಗಳನ್ನು ವಿವರಿಸಲ್ಪಟ್ಟಿರುವುದು. ಈ ಪುಸ್ತಕವು ಸರ್ಕಾರಿ ಅಧಿಕಾರಿಗಳಿಗೂ, ಪೋಲೀಸಿನವರಿಗೂ, ಪಟೇಲ್ ಶ್ಯಾನುಭೋಗರುಗಳಿಗೂ, ವರ್ತಕರುಗಳಿಗೂ, ಜಮೀನ್ದಾರರುಗಳಿಗೂ ಇತರ ಸಮಸ್ತ ಕಸಬುದಾರರಿಗೂ, ಖುಷ್‌ಬಾಷ್ ಜನಗಳಿಗೂ ಉಪಯೋಗಕರವಾದದ್ದು.

ಈ ಪುಸ್ತಕದಲ್ಲಿ ಚೋರಿ, ಕಳವು, ದಕಾಯತಿ, ಅತಿಕ್ರಮಪ್ರವೇಶ, ಸ್ತ್ರೀಗೆ ಮಾನಭಂಗಪಡಿಸುವದು, ಸ್ತ್ರೀಯರನ್ನು ದುರಾಚಾರಕ್ಕೆಳೆಯುವದು, ಅಸಾಮಿ ಚೋರಿ, ಗಂಡನು ಹೆಂಡತಿ ೧೨ ವರುಷಗಳಿಗೆ ಕಡಮೆ ವಯಸ್ಸಿನವಳಾಗಿರುವಾಗ್ಗೆ ಸ್ತ್ರೀಸಂಗ ಮಾಡಬಹುದೇ? ಮುಂತಾದ ಮೊಕದ್ದಮೆಗಳಲ್ಲಿ ಜಡ್ಜಿಗಳು ಕೊಟ್ಟಿರತಕ್ಕ ಅಭಿಪ್ರಾಯಗಳು ಸೂಚಿಸಲ್ಪಟ್ಟಿರುವವು. ಕನ್ನಡದಲ್ಲಿ ಇದುವರೆಗೆ ಇಂಥಾ ಪುಸ್ತಕವು ಇನ್ನೆಲ್ಲಿಯೂ ಇಲ್ಲವು.

ಕ್ರಯ ಪ್ರತಿ ೧ ಕ್ಕೆ ೨ ರೂಪಾಯಿ; ಟಪಾಲ್ ಛಾರ್ಜ ೪ ಆಣೆ.

ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ. ಪುಸ್ತಕಗಳ ಕ್ರಯ ಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು.

47 ನಮ್ಮ ವಿಳಾಸ– ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ.

ಚಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು. 8

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ

ಸಂದುಗಳ ನೋವು ಮೈ ಕಾಲು ಜೊತೆತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿ ನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೩ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾಕೆ ಔಷಧಿ)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈ ಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಹೇಚಾಡಬೇಡಿರಿ. ಒಂದೇಫೊಂದು ಬುಡ್ಡಿಯು ನಿಮ್ಮಲ್ಲಿರಲಿ. ಪಾಶಿಕ್ರಿಯು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧೌಷಧವಿದೊಂದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧ ೦—೦.

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ. ಮೈಸೂರು

ನ್ಯಾಯದರ್ಪಣ. 23

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯು, ಹಿಂದೂಲಾ ವಿಷಯವಾದ ಸಮಸ್ತ ಪ್ರಾಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಫ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸ್ ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆಚರಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ವಗೈರೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯು ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರುತ್ತವೆ.

ಬೆಲೆ ರೂ. 1—8—0. ವಿ. ಪಿ. ಮೂಲ್ಯ 1—12—0.

ಎಂ. ಎಸ್. ನಂಜಪ್ಪನವರು,
ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ)ಸೀಜಿ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾಗಿದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚುಟಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜನ್ ಡಬ್ಬಿಗೆ ೨-೨-೦

ಉತ್ತಮವಾದ ನಶ್ಯದಪುಡಿ.

ಧಾತು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೩ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವೆ. ನೀವುಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,
ಗೋಪಸೆಟ್ಟಿಪುರ, ಹನೂರು ಪೋಸ್ಟ್
19 ಕೊಳ್ಳೇಗಾಲದ ತಾಲ್ಲೂಕು

೧೯೧೪ ನೆಯ ಇಸವಿ ಜೂನ್ ತಾ|| ೨೯ ರಿಂದ ೧೯೧೪ನೆಯ ಜುಲೈ ತಾ|| ೫ ರವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ ನೆಯ ಆನಂದನಾಮ ಸಂ|| ದ ಆಷಾಢ ಶು|| ಷಷ್ಠಿಯಿಂದ ಆಷಾಢ ಶು|| ತ್ರಯೋದಶಿವರೆಗಿನ ಪಂಚಾಂಗ.

ತಾ||	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ತೇದಿ ಮುಘ
29	ಸೋ	ಷ	21-45	ಪುಬ್ಬಾ	24-39	16
30	[1]ಮಂ	ಸ	16-15	ಉತ್ತ	21-7	17
1	ಬುಧ	ಅ	10-17	ಹಸ್ತ	17-10	18
2	[2]ಗುರು	ನ	4-10	ಚಿತ್ತ	53-45	19
3	[3]ಶುಕ್ರ	ಏ	51-45	ಸ್ವಾತಿ	8-50	20
4	[4]ಶನಿ	ದ್ವಾ	46 6	ವಿಶಾ	4-52	21
5	[5]ಭಾ	ತ್ರ	40-57	ಅನೂ	1-22	22

(1) ಘಂಟಾವತಾರ ವರಕಾಲಸ್ವಾಮಿಗಳ ಆರಾಧನೆ (2) ಸುದರ್ಶನಾಳ್ವಾರ್ ತಿರು|| ಪೆರಿಯಾಳ್ವಾರ್ ವೈನತೇಯರ್ ತಿರು|| (3) ಸ್ಮಾರ್ತಪ್ರಥಮೈಕಾದಶಿ, ಗೋಪದ್ಮವ್ರತಂ, (4) ವೈಷ್ಣವಪ್ರಥಮೈಕಾದಶಿ, ಶಯನದ್ವಾದಶಿ, ನಾಥಮುನಿ ತಿರು|| (5) ಪ್ರದೋಷಃ, ಮೃತ್ಯುಯೋಗಃ,

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED, M NO 214

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ವಾರ್ಷಿಕ ಚಂದಾ ೧—೨—೦ } ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈ ಘನವಥಕೃತಾವಶಾರಾ ಪಕ್ಷ್ಯಜನಹೃತ್ತಮೋಹರಾಬೇಯತಾತ್, ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಮಲಂ | ನಿಮಾತೀತ ಯಶಃಪ್ರತಾಪವಿಪುಲಂಸದ್ವೃತ್ತಮಾಲಾಕುಲಂ | ಶ್ರೀಮಂಬೆತ್ತಿಕೆಯಂಸದಾಪ್ಯೋಲೆಗೆ ಗೌರೀಶಾನುಕಂಪೋಜ್ವಲಂ { ಅಂಚೆವೆಚ್ಚ ಸೇರಿ ೧—೧೪—೦

ಸಂಪುಟ ೨೭) ಮೈಸೂರ್ ಸ್ಟಾರ್ ಸರ್ ೧೯೧೪ ನೆಯ ಇಸವಿ ಜುಲೈ ತಾರೀಖು ೬ ನೆಯ ಸೋಮವಾರ. (ಸಂಚಿಕೆ ೨೭

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಈಗತಾನೆ ಸೀಮೆಯಿಂದ ಬಂದಿರತಕ್ಕ ರಖಂವಾರ್ ಹೊಸ ಬೈಸ್ಕಲ್‌ಗಳು. 23



ಪ್ರತಿಯೊಂದು ಬೈಸ್ಕಲಿನ ಸಂಗಡಲೂ ಅತ್ಯವಶ್ಯಕವಾಗಿ ರಿಪೇರಿಮಾಡಿಕೊಳ್ಳಲು ಬೇಕಾದ ಆಯುಧಗಳೂ ಮತ್ತೂ ಆಯುಧಗಳನ್ನಿಡತಕ್ಕ ಶ್ರೇಷ್ಠತರವಾದ ಚರ್ಮದ ಚೀಲ ೧. ಗಾಳಿ ತುಂಬುವ ಪಂಪ್ ೧. ಸುಂದರವಾದ ಬೆಲ್ ೧. ಇಷ್ಟು ಸಾಮಾನುಗಳನ್ನೂ ಮುಫತ್ತು ಕೊಡಲಾಗುತ್ತೆ.

ರಾಯಲ್ ಮೇಲ್ ಬೈಸ್ಕಲ್—ಕೇಂಬ್ರಿಡ್ಜ್ ಟೈರ್, ಡನ್‌ಲಪ್‌ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೮೫-೦-೦.
ಬ್ರಿಟಾನಿಕ್ ಬೈಸ್ಕಲ್—ಡನ್‌ಲಪ್ ಟೈರ್, ಡನ್‌ಲಪ್ ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೯೦-೦-೦.
ರಾಯಲ್‌ಕಿಂಗ್ ಬೈಸ್ಕಲ್—ಕೇಂಬ್ರಿಡ್ಜ್ ಟೈರ್, ಡನ್‌ಲಪ್ ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೮೦-೦-೦.
ರಾಯಲ್ ನೈಟ್ ಬೈಸ್ಕಲ್—ಪಾಮರ್ ಟೈರ್, ಪಾಮರ್ ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೯೨-೦-೦.
ರಾಯಲ್ ಆರ್ಚರ್ ಬೈಸ್ಕಲ್—ಬುಕಾನಿಯರ್ ಟೈರ್ ಬುಕಾನಿಯರ್ ಟ್ಯೂಬ್ ಹಾಕಿದ್ದು ೩೦-೦-೦.
ಬಿ. ಎಸ್. ಎ. ಫಿಟಿಂಗ್ ಬೈಸ್ಕಲ್, ಡನ್‌ಲಪ್‌ಟೈರ್, ಡನ್‌ಲಪ್‌ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ ೧೩೫-೦-೦.

ಬೈಸ್ಕಲ್ ಬಿಡಿಸಾಮಾನುಗಳೂ ಸದಾ ನಮ್ಮಲ್ಲಿ ವಿಕ್ರಿಗೆ ಸಿದ್ಧವಾಗಿವೆ. ಬೈಸ್ಕಲ್ಲಿಗೆ ಆರ್ಡರ್‌ಮಾಡತಕ್ಕವರು ೧೦-೦-೦ ರೂಪಾಯಿ ಅಡ್ವಾನ್ಸು ಕಳುಹಿಸಬೇಕು. ಬಾಕಿ ಮೊಬಲಿಗೆ ರೈಲ್ವೆ ರಶೀದಿಯನ್ನು ವಿ.ಪಿ.ಮಾಡಲಾಗುತ್ತೆ.

"ಜುಮಲೆ" ಇದೊಂದು ಅತ್ಯಾಶ್ಚರ್ಯಕರವಾದ ಹೊಸ ಕಾದಂಬರಿ (ಬಂಗಾಳಿ ನಾವೆಲ್) ಓದುವುದಕ್ಕೆ ಕುಳಿತರೆ ಮುಗಿಸುವವರೆಗೂ ಮನಸ್ಸು ನಿಲ್ಲುವುದಿಲ್ಲಾ. ಓದುತ್ತ ಓದುತ್ತಾ ಹೊಸಹೊಸ ಭಾವಗಳು ತಲೆದೋರಿ ರೋಮಾಂಚವುಂಟಾಗುವುದು. ವಾಚಕರೆ! ಗೋರಿಯಲ್ಲಿದ್ದ ಹೆಂಗಸಿನ ಶವಕ್ಕೆ ಪ್ರತಿಯಾಗಿ ಗಂಡುಸಿನ ಶವವಿರುವುದನ್ನು ನೋಡುತ್ತಲೇ ಆಶ್ಚರ್ಯಸಮುದ್ರದಲ್ಲಿ ಮುಳುಗಿಹೋಗುವಿರಿ. ಕ್ರಯ ಪ್ರತಿ ೧ ಕ್ಕೆ ೦-೬-೦ ಪೋಸ್ಟೇಜು ೦-೨-೦.

ಹೊಸಪುಸ್ತಕಗಳು.

ವೀರಶೈವರಿಗೂ ಇತರರಿಗೂ ಸಹ ಅತ್ಯವಶ್ಯಕವೇ ಆದದ್ದು.

ಮನೋವಿಜಯ—ವೇದವೇದಾಂಗ ವೇದಾಂತ ಪುರಾಣ ಇತಿಹಾಸಾದಿಗಳಲ್ಲಿ ಬಹು ಪ್ರವೀಣರಾಗಿಯೂ ಅನೇಕ ಮತಸಿದ್ಧಾಂತದಲ್ಲಿ ಕುಶಲರಾಗಿಯೂ ಇದ್ದ ಶ್ರೀ ಗುರುಸ್ವಾಮಿಗಳವರಿಂದ ವೀರಶೈವರಿಗೂ ಅದ್ವೈತ ಮತಸ್ಥರಿಗೂ ಬಹು ಪ್ರಯೋಜನವಾಗಿರುವಂತೆ ಮನೋಹರವಾಗಿ ರಚಿಸಲ್ಪಟ್ಟಿದೆ. ಇದಕ್ಕೆ ಪರಮಪೂಜ್ಯರಾದ ಶ್ರೀ ತೋಂಟದ ಸಿದ್ಧಲಿಂಗಸ್ವಾಮಿಗಳು ಸಮಸ್ತರಿಗೂ ಸುಲಭವಾಗಿ ತಿಳಿಯುವಂತೆ ತಾತ್ಪರ್ಯವನ್ನು ಸ್ವಾರಸ್ಯವಾಗಿ ಬರೆದಿದ್ದಾರೆ. ಸರ್ವರೂ ಅತ್ಯವಶ್ಯಕ ಓದಬೇಕಾದ್ದು. ಇದರ ಕ್ರಯ ಪ್ರತಿ ೧ ಕ್ಕೆ ೦-೮-೦ ವಿ.ಪಿ. ಮೂಲಕ ೧೧ ಆಣೆ.

ಶತಕಪಂಚಕ—ಇದರಲ್ಲಿ ನಿರಂಜನಶತಕ, ಸಿದ್ಧಲಿಂಗೇಶ್ವರಶತಕ, ನಿಷ್ಕಲಶತಕ, ಉಮಾಮಹೇಶ್ವರಶತಕ, ಸಂಗಮೇಶ್ವರ ಶತಕಗಳೆಂಬ ೫ ಶತಕಗಳಿವೆ. ೪-೫ ನೇ ಶತಕಗಳು ಶಿವಪೂಜಾಕಾಲದಲ್ಲಿ ಪಾರಾಯಣಕ್ಕೆ ಯೋಗ್ಯವಾಗಿವೆ. ಈ ಗ್ರಂಥವನ್ನು ಶ್ರೀ ತೋಂಟದಾರ್ಯರು ಚೆನ್ನಾಗಿತಿಳಿಯುವಂತೆ ರಚಿಸಿರುವರು. ಇದರ ಕ್ರಯ ಪ್ರತಿ ೧ ಕ್ಕೆ ೦-೬-೦ ವಿ ಪಿ ಮೂಲ್ಯ ೦-೮-೦.

ಮುಕ್ತ್ಯಂಗನ ಕಂಠಮಾಲೆ ಮತ್ತು ಜ್ಯೋತಿರ್ಮಯಶಾಂಭವಿ ಎಂಬೀವಚನ ಗ್ರಂಥಗಳು ವೀರಶೈವಸಿದ್ಧಾಂತವನ್ನು ಸುಲಭವಾಗಿ ಅಬಾಲವೃದ್ಧರಿಗೂ ಬೋಧಿಸತಕ್ಕವುಗಳಾಗಿವೆ. ಇವೆರಡೂ ಇರುವ ಪ್ರತಿ ೧ಕ್ಕೆ ೦-೪-೦ ವಿ.ಪಿ ಮೂಲ್ಯ ೦-೬-೦.

ಶ್ರೀ ಬಸವೇಶ್ವರ ಸ್ತೋತ್ರಶತಕ–ಗುರುಬೋಧೆ, ಮನೋಬೋಧೆ, ಲಿಂಗತ್ರಿವಿಧಿ, ಶ್ರೀಬಸವೇಶ್ವರ ಸ್ತೋತ್ರ ಎಂಬೀನಾಲ್ಕು ಒಂದೇ ಪುಸ್ತಕದಲ್ಲಿ ಮುದ್ರಿತವಾಗಿವೆ. ಶಿವಪೂಜಾಕಾಲದಲ್ಲಿ ಪಾರಾಯಣಕ್ಕೆ ಯೋಗ್ಯವಾಗಿವೆ ಕ್ರಯ ಪ್ರತಿ ೧ ಕ್ಕೆ ೦-೩-೦ ವಿ.ಪಿ ಮೂಲಕ ೦-೫-೦.

ಮೇಲ್ಕಂಡ ನಾಲ್ಕು ಪುಸ್ತಕಗಳನ್ನು ಒಂದೇಸಾರಿ ತರಿಸಿಕೊಳ್ಳುವವರಿಗೆ ಟಪಾಲ್ ಖರ್ಚು ಸಹ ಸೇರಿ ೧-೧೦-೦.

ರಖಂವಾರ್ ವಾಚ್‌ಗಳ ಕ್ರಯದ ತಪ್ಸೀಲ್.

ರೋಸ್ಕೋಪ್ ಸಿಸ್ಟಂವಾಚ್ ೧ ಕ್ಕೆ ೨-೮-೦ ಗ್ಯಾರಂಟಿ ವಾಚ್ ೧ಕ್ಕೆ ೩-೮-೦, ಡಿಟೋ ನಮೂನೆ ಚಿಕ್ಕಸೈಜ್ ವಾಚ್ ೧ ಕ್ಕೆ ೪-೪-೦, ಸ್ಪೆಷಲ್ ಸರ್ವಿಸ್ ಚಿಕ್ಕ ಸೈಜ್ ವಾಚ್ ೧ ಕ್ಕೆ ೫-೪-೦, ಬರ್ಮಾ ಟೈಂಪೀಸ್ ೧ ಕ್ಕೆ ೧-೪-೦ ಡಿಟೋ ಅಲಾರಂ ಇರತಕ್ಕದ್ದು ೨-೪-೦ ಡಿಟೋ ಗಘಂಟೆಯಲ್ಲಿ ಘಂಟೆ ನಿಮಿಷ ಸೆಕೆಂಡ್ ತೋರಿಸಿ ಅಲಾರಂ ಸಹ ಇದ್ದು ತಾರೀಖು ಕೂಡ ತೋರಿಸತಕ್ಕ ದೊಡ್ಡ ಟೈಂಪೀಸ್ ೧ ಕ್ಕೆ ೩-೪-೦, ಅನಸೋನಿಯಾ "ಬಿ" ಟೈಂಪೀಸ್ ೧ ಕ್ಕೆ ೨-೮-೦.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್. ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೫—೦
ಸಟೀಕ ನಂದೀವ್ರತ	೦—೪—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್‌ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸಪುಸ್ತಕಗಳು.

142

ಬಸವರಾಜವಿಜಯಂ— ಬೆಲೆ ೧ ೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲ-ಕರಣಹಸುಗೆ-ಮಂತ್ರಗೋಪ್ಯ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ- ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸೂಕ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ—ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ ವರ್ಷದ ಚಂದಾ ೨-೮-೦.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಚಾರಕಮಂಡಲಿ, ಮೈಸೂರು.

ಪ್ರಕಟನೆ.

ಪ್ರಿಂಟಿಂಗಾಫೀಸಿನವರು ಅಗತ್ಯವಾಗಿ ಗಮನಿಸತಕ್ಕದು.

ನಮ್ಮಲ್ಲಿ ಈ ಸ್ಟಾರ್‌ಪತ್ರಿಕೆಯ ೧, ೨, ೩, ೪, ೫ ಮತ್ತು ೮ನೇ ಪುಟಗಳಲ್ಲುಪಯೋಗಿಸಲ್ಪಟ್ಟಿರುವ ಪೈಕ ಅಥವಾ ೧೨ ಪಾಯಿಂಟ್ ಅಕ್ಷರಗಳ ಮತ್ತು ಈ ಪ್ರಕಟನೆಗುಪಯೋಗಿಸಲ್ಪಟ್ಟಿರುವ ಬೂರ್ಜೈನ್‌ಮಿನಿಯನ್ ಅಥವಾ ೧೦ ಪಾಯಿಂಟ್ ಅಕ್ಷರಗಳ ಮ್ಯಾಟ್ರಿಕ್ಸುಗಳೂ, ಅವುಗಳ ಮೌಲ್ಡುಗಳೂ ಇವನ್ನು ಎರಕವೆರೆಯುವ ಯಂತ್ರವೂ ಅದಕ್ಕೆ ಸಂಬಂಧಪಟ್ಟ ಲೈನ್ ಗೇಜ್ ಪೇಪರ್‌ಗೇಜ್ ಹೈಟ್‌ಗೇಜ್ ಪ್ರೆಸ್ಸಿಂಗ್ ಟೇಬಲ್ ಕರ್ನಿಂಗ್ ಮಿಷನ್ನು ಮುಂತಾದ ಸಾಮಾಗ್ರಿಗಳೂ ಸೂಪರ್‌ರಾಯಲ್ ಸೈಜನ್ನು ಪ್ರಿಂಟ್ ಮಾಡುವ ಸಿಲಿಂಡರ್ ಮಿಷನ್ನು ಸಹ ಮಾರಾಟಕ್ಕೆ ಸಿದ್ಧವಾಗಿವೆ. ಈ ಮಿಷನ್ನಿನಲ್ಲೇ ಈ ಸ್ಟಾರ್‌ಪತ್ರಿಕೆಯು ಪ್ರಿಂಟುಮಾಡಲ್ಪಡುತ್ತಿರುವುದು. ಎರಕವೆರೆಯುವ ಮಿಷನ್ನು ಬಹಳ ಸ್ವಲ್ಪ ಕೆಲಸವನ್ನು ಮಾತ್ರ ಮಾಡಿ ಹೊಸದಾಗಿಯೇ ಯಿರುವುದು. ಇಷ್ಟವುಳ್ಳವರು ಇವುಗಳ ಬೆಲೆ ಮೊದಲಾದವನ್ನು ನಮಗೆ ಬರೆದು ತಿಳಿದುಕೊಳ್ಳಬಹುದಲ್ಲದೆ ಪ್ರತ್ಯಕ್ಷದಲ್ಲಿ ಬಂದು ನೋಡಬಹುದು.

ವೈ. ವಿರೂಪಾಕ್ಷಯ್ಯ,
ಪ್ರೊಪ್ರೈಟರ್
ಕ್ಲಾರ್ಕ್ ಪ್ರೆಸ್, ಮೈಸೂರು.

ನಿಯಮನಿರ್ಮಾಣಸಭೆಯು.

ಈ ಸಭೆಯು ಕಳೆದ ಸೋಮವಾರ ಮಧ್ಯಾಹ್ನ ೧೨ ಗಂಟೆಯಲ್ಲಿ ದಿವಾನರ ಅಧ್ಯಕ್ಷತೆಯಿಂದ ಬೆಂಗಳೂರ ಪಬ್ಲಿಕ್‌ಆಫೀಸ್ ದರ್ಬಾರ್‌ಹಾಲಿನಲ್ಲಿ ಸೇರಿದ್ದಿತು. ಆಗ್ಗೆ ಔದ್ಯೋಗಿಕ ಮತ್ತು ಅನೌದ್ಯೋಗಿಕ ಸಭಾಸದರೆಲ್ಲರೂ ಬಂದಿದ್ದರು.

ಸಭಾಕಾರ್ಯಾರಂಭದಲ್ಲಿ ದಿವಾನರು ಸಭಿಕರುಗಳನ್ನು ಕುರಿತು–೧೯೧೪–೧೫ ರ ಸಂಸ್ಥಾನದ ಆಯುವ್ಯಯದ ನಿರೀಕ್ಷಣೆಯ ಪಟ್ಟಿಯು ನಿಮಗೆ ಕೊಡಲ್ಪಡುವುದಲ್ಲದೆ ಅದನ್ನು ನೀವು ಓದಿ ಚರ್ಚಿಸಲು ಅನುಕೂಲಿಸುವಂತೆ ೨ ದಿನಗಳವಧಿಯು ಕೊಡಲ್ಪಡುವುದು. ಪ್ರತಿಯೊಂದು ಡಿಸ್ಟ್ರಿಕ್ಟಿನ ಜನರಿಗಿರತಕ್ಕ ಕೊರತೆಯನ್ನೂ, ಆಗಬೇಕಾಗಿರುವುದನ್ನೂ, ಸರ್ಕಾರದವರು ಏನನ್ನು ಮಾಡಬೇಕೆಂದು ಅವರು ಅಪೇಕ್ಷಿಸುತ್ತಾರೆಂಬುದನ್ನೂ, ಮತ್ತು ಎಷ್ಟರಮಟ್ಟಿಗೆ ಜನರು ಪರಸ್ಪರ ಸಹಾಯಮಾಡಲಿಷ್ಟವುಳ್ಳವರಾಗಿದ್ದಾರೆಂಬುದನ್ನೂ ಸಭಿಕರುಗಳು ತಿಳಿಸಿದಲ್ಲಿ ಒಳ್ಳೆಯದಾಗಿರುತ್ತದೆ. ಇದಲ್ಲದೆ ಔದ್ಯೋಗಿಕ ಸಭಿಕರುಗಳು ಸರ್ಕಾರದವರು ಮಾಡಬೇಕೆಂದಿರುವ ಕಾರ್ಯಗಳು ಎಷ್ಟರಮಟ್ಟಿಗೆ ಪುಷ್ಟವಾಗಿವೆಯೆಂಬುದನ್ನು ತಿಳಿಯಬೇಕುವುದುತ್ತಮವು. ಮಳೆಗಳು ಬಾರದೆ ಇರುವುದರಿಂದ ಒಂದುವೇಳೆ ಕ್ಷಾಮವು ಪ್ರಾಪ್ತವಾದಲ್ಲಿ ಸರ್ಕಾರದವರೇನನ್ನು ಮಾಡಬೇಕಾಗಿರುತ್ತದೆಂಬುದನ್ನೂ ಸಭಿಕರುಗಳು ಪರ್ಯಾಲೋಚಿಸಬೇಕು, ಎಂದಪ್ಪಣೆಯನ್ನು ಕೊಡಿಸಿದರು. ಮುಂದಣಮೀಟಿಂಗು ನಡೆಯುವವಿಚಾರದಲ್ಲಿ ಆಯುವ್ಯಯದ ಪಟ್ಟಿಯನ್ನೋದಿ ಚರ್ಚಿಸಲು ಹೆಚ್ಚು ಕಾಲಾವಧಿಯು ಬೇಕೆಂದು ಅನೌದ್ಯೋಗಿಕ ಸಭಿಕರುಗಳೆಲ್ಲರೂ ತಿಳಿಯಿಸಲು, ಈ ಪಟ್ಟಿಯಲ್ಲಿ ಹೊಸವಿಷಯವೇನೂ ಇಲ್ಲ, ನೀವು ನೋಡಿರುವ ಹಿಂದಣ ಪಟ್ಟಿಯಂತೆಯೇ ಇದೆ, ಆದರೆ ಸ್ವಲ್ಪ ಬದಲಾವಣೆಗಳು ಮಾತ್ರ ಇವೆ, ಎಂದು ದಿವಾನರಪ್ಪಣೆ ಕೊಡಿಸಿ, ಈ ತಾ|| ೩ಕ್ಕೆ ಸಭೆಯು ಸೇರಬೇಕೆಂಬುದಾಗಿ ತಿಳಿಸಿದರು. ಅನಂತರ ಸಭೆಯಸೆಕ್ರೆಟರಿಯವರಾದ ಮ|| ರಾಜಗೋಪಾಲಾಚಾರ್ಯರು-ಮೈಸೂರಕೋರ್ಟ್‌ಫೀರೆಗ್ಯುಲೇಷನ್ನು, ಮೈಸೂರ ಲೋಕಲ್ ಬೋರ್ಡ್‌ರೆಗ್ಯುಲೇಷನ್‌ಗಳ ಬದಲಾವಣೆಗಳ ಬಿಲ್ಲುಗಳೂ, ಪ್ರುಬೇಟ್ ಅಡ್ಮಿನಿಸ್ಟ್ರೇಷನ್‌ಬಿಲ್ಲೂ ಕೂಡ ಶ್ರೀಮನ್ಮಹಾರಾಜರವರಿಂದ ಸಮ್ಮತಿಸಲ್ಪಟ್ಟಿರುತ್ತವೆ. ಮ|| ಬಿ. ಜಿ. ಕುಮಾರಸ್ವಾಮಿನಾಯಕರು ಈ ಸಭೆಯ ಸಭಿಕರಾಗಿ ಸ್ಥಾಪನ್ನರಾಗಿದ್ದಾರೆ, ಎಂದು ಸಭಿಕರಿಗೆ ಶ್ರುತಪಡಿಸಿದರು. ಬಳಿಕ

ನಡೆದ ಪ್ರಶ್ನೋತ್ತರಗಳು.

ನಾನಾಶಾಖೆಗಳಲ್ಲಿ ವ್ಯಯವನ್ನು ಕಡಿಮೆಮಾಡಿರುವ ವಿಚಾರದಲ್ಲಿ ಮ|| ಬಿ. ನರಸಿಂಗರಾಯರ ಪ್ರಶ್ನೆ:—

೧. (a) ಜನರಲ್ ಮತ್ತು ರೆವಿನ್ಯೂಶಾಖೆಗಳ ಸೆಕ್ರೆಟರಿಯವರು ತಿಳಿಸಿರುವಂತೆ ನಾನಾಶಾಖೆಗಳಲ್ಲಿ ವೆಚ್ಚವನ್ನು ಕಡಿಮೆಮಾಡಿದನಂತರ, ಈ ಶಾಖೆಗಳಲ್ಲಿ ಯಾವ ಹೆಚ್ಚು ವೆಚ್ಚವು ಪ್ರತಿವರ್ಷಕ್ಕೂ ಅಪ್ಪಣೆಮಾಡಲ್ಪಟ್ಟಿದೆ? (b) ಈ ಶಾಖೆಗಳಲ್ಲಿ ಹೆಚ್ಚು ಕೆಲಸಗಾರರು ನಿಯಮಿಸಲ್ಪಟ್ಟಿದ್ದಲ್ಲಿ, ಇವರಲ್ಲಿ ಗೆಜೆಟೆಡ್ ಆಫೀಸರುಗಳನ್ನು, "ಗುಮಾಸ್ತೆ" ಯರನ್ನು ಮತ್ತು ಕೀಳುಕೆಲಸದವರಗಳನ್ನು ಹೆಚ್ಚಿಸಿರುವುದರ ವಿಧಾನವು ಹೇಗೆ?

ಡಿ|| ಬಿ|| ಜಿ. ಎಸ್. ಚಕ್ರವರ್ತಿಯವರ ಉತ್ತರವು:—

(a) ಮತ್ತು (b) ಈ ಪ್ರಶ್ನೆಗಳಿಗೆ ತಕ್ಕುತ್ತರವನ್ನು ಕೊಡಲು ಕೊಂಚ ಕಾಲಾವಧಿಯು ಬೇಕಾಗಿರುವುದು; ಒಂದು ಸ್ಟೇಟ್‌ಮೆಂಟು ರಚಿಸಿ ಕೊಡಲ್ಪಡುವುದು.

ಚಿಕ್ಕಬಳ್ಳಾಪುರದಲ್ಲಿ ಸೆರೆಯಿಡಲ್ಪಟ್ಟಿದ್ದುದು.

ಮ|| ನರಸಿಂಗರಾಯರ ಪ್ರಶ್ನೆ:—೨ (a) ಚಿಕ್ಕಬಳ್ಳಾಪುರದ ಅಮಲ್ದಾರರು ೯ ಜನರನ್ನು ವಿಚಾರಣೆಯಿಲ್ಲದೆ ೯ ತಿಂಗಳವರೆಗೆ ಸೆರೆಮನೆಯಲ್ಲಿಟ್ಟಿದ್ದು ಅನಂತರ ಅವರ ವಿಚಾರಣೆಯನ್ನು ನಡೆಸಿ ಬಿಟ್ಟುಬಿಟ್ಟರು. ಎಂಬಬಗೆಗೆ ಇಂಡಿಯನ್ ಪೇಟ್ರಿಯಟ್ ಪತ್ರಿಕೆಯು ೧೯೧೪ ನೆಯ ಏಪ್ರಿಲ್ ತಾ|| ೨೨ ರ ಸಂಚಿಕೆಯಲ್ಲಿರುವ ಲೇಖನವನ್ನು ಸರ್ಕಾರದವರು ಗಮನಿಸಿರುವರೆ? (b) ಅದರಲ್ಲಿ ಕಂಡಂಶವೆಲ್ಲವೂ ವಾಸ್ತವವೆ? (c) ಹಾಗಿದ್ದಲ್ಲಿ ಆ ೯ ಜನರನ್ನು ವಿಚಾರಣೆಮಾಡದೆ ೯ ತಿಂಗಳವರೆಗೆ ಸೆರೆಯಲ್ಲಿಟ್ಟಿದ್ದ ಅಧಿಕಾರಿಯ ನಡತೆಯ ವಿಚಾರದಲ್ಲಿ ಸರ್ಕಾರದವರು ಯಾವ ಕಾರ್ಯಭಾಗವನ್ನು ನಡೆಸಿರುವರೆಂಬುದನ್ನು ದಯವಿಟ್ಟು ತಿಳಿಸುವರೆ?

ಮ|| ಎಚ್. ವಿ. ನಂಜುಂಡಯ್ಯ ಸಿ. ಐ. ಇ., ಯವರ ಉತ್ತರವು:—(a) ನೀವು ಹೇಳಿದ ಲೇಖನಗಳನ್ನು ಈಗತಾನೆ ಅವಗಾಹಿಸಿದುದಾಗಿದೆ. (b) ಆ ಪತ್ರಿಕೆಗಳಲ್ಲಿ ಪ್ರಕಟವಾಗಿರುವಂತೆ ೯ ಜನರಲ್ಲಿ ೩ ಜನ ಅಪರಾಧಿಗಳು ೧೯೧೦ ನೆಯ ಮೆ ತಿಂಗಳ ಬೇರೆಬೇರೆ ತಾರೀಖುಗಳಲ್ಲಿ ಪೋಲೀಸರಿಂದ ಹಿಡಿಯಲ್ಪಟ್ಟು ೧೯೧೦ ನೆಯ ಜೂನ್ ತಾ|| ೯ ರಲ್ಲಿ ಚಿಕ್ಕಬಳ್ಳಾಪುರದ ಅಮಲ್ದಾರ್ ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟರು. ೧೯೧೪ ನೆಯ ಜನವರಿ ತಾ|| ೨೯ ರಲ್ಲಿ ಮ್ಯಾಜಿಸ್ಟ್ರೇಟರು ಇ. ಪಿ. ಸಿ. ೪೫೭–೧೯–೪೫೬ ಅಥವಾ ೪೧೧ ನೆಯ ಸೆಕ್ಷನ್ನುಗಳ ಪ್ರಕಾರ ೪ ಜನರಿಗೆ ಕಾರಾಗೃಹವಾಸದ ಶಿಕ್ಷೆಯನ್ನೂ ಅರ್ಥದಂಡವನ್ನೂ ವಿಧಿಸಿ ಉಳಿದಿಬ್ಬರನ್ನು ಬಿಟ್ಟುಬಿಟ್ಟರು. ಇದರಮೇಲೆ ಡಿ|| ಮ್ಯಾಜಿಸ್ಟ್ರೇಟರಲ್ಲಿ ಅಪೀಲಾಗಿದ್ದು ೧೯೧೪ ನೆಯ ಮಾರ್ಚಿ ತಾ|| ೯ ರಲ್ಲಿ ೪ ಜನರ ಶಿಕ್ಷೆಯು ತಪ್ಪಿಸಲ್ಪಟ್ಟಿತು. (c) ಈ ವಿವಾದದ ಕಡೆಯ ತೀರ್ಮಾನವು ಸರಿಯಾಗಿರುವ ಬಗೆಗೆ ಚೀಫ್ ಕೋರ್ಟಿನವರು ಈಚೆಗೆ ರಿಕಾರ್ಡುಗಳನ್ನು ಪರೀಕ್ಷಿಸಿ ಇದರ ವಿಚಾರದಲ್ಲಿ ವಿಶೇಷಗಮನವನ್ನು ತೆಗೆದುಕೊಳ್ಳಬೇಕಾದ ಪ್ರಮೇಯವಿಲ್ಲವೆಂದು ಅಭಿಪ್ರಾಯಪಟ್ಟಿರುವರು.

ಸರ್ಕಾರಿಪಾಠಶಾಲೆಗಳ ವಸತಿ.

ಮ|| ಬಿ. ನರಸಿಂಗರಾಯರ ಪ್ರಶ್ನೆ:—೩. (a) ಬೆಂಗಳೂರಲ್ಲಿ ಯಾವಯಾವ ಸರ್ಕಾರಿಆಫೀಸುಗಳೂ, ಪಾಠಶಾಲೆಗಳೂ ಬಾಡಿಗೆಯ ಕಟ್ಟಡಗಳಲ್ಲಿ ನಡೆಸಲ್ಪಡುತ್ತಿವೆ? (b) ಈ ಕಟ್ಟಡಗಳಿಗಾಗಿ ಪ್ರತಿತಿಂಗಳಲ್ಲೂ ಎಷ್ಟು ಬಾಡಿಗೆಯು ಕೊಡಲ್ಪಡುತ್ತಿದೆ? ಮತ್ತು ಯಾವ ಕಾಲದಿಂದ ಕೊಡಲ್ಪಡುತ್ತಿದೆ? (c) ಬೆಂಗಳೂರಲ್ಲಿ ಸರ್ಕಾರಕ್ಕೆ ಸೇರಿದ ಎಷ್ಟು ಬಂಗಲೆಗಳು ಅಥವಾ ಕಟ್ಟಡಗಳು ವಾಸಿಸಲ್ಪಡದೆ ಇವೆ?

ಡಿ|| ಬಿ|| ಚಕ್ರವರ್ತಿಯವರುತ್ತರ:—(a) ಮತ್ತು (b) ಈ ಎರಡುಪ್ರಶ್ನೆಗಳಿಗೆ ಸಮಾಧಾನಕರವಾದ ಉತ್ತರಗಳು ನಿಮ್ಮ ಮುಂದಿಡಲ್ಪಟ್ಟಿವೆ. (c) ಸರ್ಕಾರಿಯ ಕಟ್ಟಡವಾವುದೂ ವಾಸಿಸಲ್ಪಡದೆ ಬರಿಯದಾಗಿಲ್ಲವು.

ದೊಡ್ಡ ಮತ್ತು ಸಣ್ಣ ಕೆರೆಗಳು.

ಮ|| ವೆಂಕಟಶಾಮಣ್ಣನವರ ಪ್ರಶ್ನೆ:—೪. (a) ದೊಡ್ಡ ಮತ್ತು ಸಣ್ಣ ಕೆರೆಗಳ ವಿಭಜನೆಯ ವಿಚಾರದಲ್ಲಿರುವ ತಾರತಮ್ಯವೇನು? (b) ಕಳೆದ ೪ ವರ್ಷಗಳಲ್ಲಿ ಹೊಸದಾಗಿ ಕಟ್ಟಲ್ಪಟ್ಟಿರುವ–ಸರಿಪಡಿಸಲ್ಪಟ್ಟಿರುವ–ಅಥವಾ ಬೇರೆ ವಿಧವಾಗಿ ಅಭಿವೃದ್ಧಿಗೊಳಿಸಲ್ಪಟ್ಟಿರುವ ದೊಡ್ಡ ಮತ್ತು ಸಣ್ಣ ಕೆರೆಗಳೆಷ್ಟು? (c) ದೊಡ್ಡಕೆರೆಗಳಕೆಳಗೆ ವ್ಯವಸಾಯಕ್ಕೆ ಸಿದ್ಧಗೊಳಿಸಲ್ಪಡಲು ನಿರೀಕ್ಷಿತವಾಗಿದ್ದ ಭೂಮಿಯ ವಿಸ್ತೀರ್ಣವೆಷ್ಟು? ಮತ್ತು ಈಗ ಎಷ್ಟು ವಿಸ್ತೀರ್ಣದ ಪ್ರದೇಶವು ವ್ಯವಸಾಯಮಾಡಲ್ಪಡುತ್ತಿರುವುದು? (d) ಮೇಲೆ ಹೇಳಿದ ೪ ವರ್ಷಗಳಲ್ಲಿ ಹಣದ ಅಭಾವದಿಂದ ಎಷ್ಟು ಸಣ್ಣ ಕೆರೆಗಳ ಸರಿಪಡಿಸುವಿಕೆಯು ಅಥವಾ ಅಭಿವೃದ್ಧಿಯ ಕೆಲಸವು ನಿಲ್ಲಿಸಲ್ಪಟ್ಟಿರುವುದು?

ಮ|| ಎಂ. ಕಾಂತರಾಜಅರಸ್, ಸಿ. ಎಸ್. ಐ., ಯವರುತ್ತರ:—(a) ಒಂದು ವರ್ಷದಲ್ಲಿ ೩೦೦ರೂಪಾಯಿಗೆ ಮೇಲ್ಪಟ್ಟು ಉತ್ಪನ್ನವುಳ್ಳವುಗಳು ದೊಡ್ಡ (ಮೇಜರ್) ಕೆರೆಗಳೆಂದೂ, ೩೦೦ ರೂ. ಮತ್ತು ಅದಕ್ಕೆ ಕಡಿಮೆಯುಳ್ಳವುಗಳೆಲ್ಲವೂ ಚಿಕ್ಕ (ಮೈನರ್) ಕೆರೆಗಳೆಂದೂ ಗೊತ್ತುಮಾಡಲ್ಪಟ್ಟಿರುವುವು. (b) ಇದರ ಸಂಬಂಧವಾದ ವಿಷಯಗಳನ್ನು ತಿಳಿಸುವಸ್ಟೇಟ್‌ಮೆಂಟು ನಿಮ್ಮಮುಂದಿಡಲ್ಪಟ್ಟಿರುವುದು. (c) ತತ್ಸಂಬಂಧವಾದ ವಿವರಣವು ಕೂಡಲೇ ದೊರೆಯುವುದಿಲ್ಲವು; ಮತ್ತು ಅದನ್ನು ಶೇಖರಿಸಲು ಬಹಳ ಕಾಲವೂ ಶ್ರಮೆಯೂ ಹಿಡಿಯುವುವು. ಇಷ್ಟು ದೊಡ್ಡ ಲೆಕ್ಕವನ್ನು ಶೇಖರಿಸುವುದರಿಂದ ಯಾವಪ್ರಯೋಜನವೂ ಸರ್ಕಾರಕ್ಕೆ ಕಂಡುಬರುವುದಿಲ್ಲವು. ಯಾವುದಾದರೂ ಗೊತ್ತಾದ ಕೆರೆಗಳ ವಿಚಾರಕವಾದಸಂಗತಿಗಳು ದೊರಕುವಂತೆ ಬೇಕಾದರೆ ಮಾಡಲ್ಪಡುವುದು. (d) ಈ ಪ್ರಶ್ನೆಯ ಸಂಬಂಧವಾದ ಸಂಗತಿಯನ್ನು ವಿಚಾರಿಸಿ ತಿಳಿದಹೊರತು ಉತ್ತರವನ್ನು ಕೊಡುವುದು ಪ್ರಯಾಸವು.

ಪುರಾಭಿವೃದ್ಧಿ.

ಮ|| ಬಿ. ವೆಂಕಟಶಾಮಣ್ಣನವರ ಪ್ರಶ್ನೆ:—೫. (a) ಕಳೆದ ೧೦ ವರ್ಷಗಳಲ್ಲಿ ಮೈಸೂರು ಮತ್ತು ಬೆಂಗಳೂರು ಪಟ್ಟಣಗಳಭಿವೃದ್ಧಿಗಾಗಿ ಸಂಸ್ಥಾನದುತ್ಪತ್ತಿಯಿಂದೆಷ್ಟು ಹಣವು ಕೊಡಲ್ಪಟ್ಟಿರುವುದು? (b) ಇದೇ ಕಾಲಾವಧಿಯಲ್ಲಿ ಇತರ ಡಿಸ್ಟ್ರಿಕ್ಟು ಹೆಡ್‌ಕ್ವಾರ್ಟರುಗಳಿಗೆಷ್ಟು ಹಣವು ಅಪ್ಪಣೆಯಾಗಿರುವುದು?

ಮ|| ಕಾಂತರಾಜ ಅರಸಿನವರುತ್ತರ:—(a) ಮತ್ತು (b) ತತ್ಸಂಬಂಧವಾಗಿ ದೊರಕುವಷ್ಟು ವಿಷಯಗಳ ಸ್ಟೇಟ್‌ಮೆಂಟು ಸಭೆಯ ಮುಂದಿಡಲ್ಪಟ್ಟಿರುವುದು.

ಮ|| ವಿ. ಅಬ್ಬಾಯಿನಾಯುಡುಯವರು–ಮ|| ಬಿ. ಕೆ. ಗರುಡಾಚಾರರ ಪ್ರಶ್ನೆ:—೬. (a) ಹುಚ್ಚರಾಸ್ಪತ್ರೆಯ ಸೂಪರಿಂಟೆಂಡೆಂಟರಾದ ಮ|| ವಿ. ಅಬ್ಬಾಯಿನಾಯುಡುಯವರು ಪ್ರೈವೆಟ್‌ಪ್ರಾಕ್ಟೀಸನ್ನು ಮಾಡಕೂಡದೆಂದು ಸರ್ಕಾರದಪ್ಪಣೆಯಾಗಿರುವುದೆ? (b) ಹಾಗಿರುವ ಪಕ್ಷದಲ್ಲಿ ಮೇಲೆ ಕಂಡ ಅಪ್ಪಣೆಯನ್ನು ಮಾಡಲುಂಟಾದ ಆವಶ್ಯಕತೆಯ ಸಂಬಂಧವಾದ ಕಾಗದಪತ್ರಗಳನ್ನು ಸರ್ಕಾರದವರು ದಯವಿಟ್ಟು ಸಭೆಯ ಮುಂದಿಡುವರೆ? (c) ಮಿದುಳಿನಸಂಬಂಧವಾದ ರೋಗದಚಿಕಿತ್ಸೆಯಲ್ಲಿ ಒಳ್ಳೆಯ ಅನುಭವವುಳ್ಳವರು ಈ ಮೈಸೂರಿನಲ್ಲಿ ಮ|| ಅಬ್ಬಾಯಿನಾಯುಡುಯವರೊಬ್ಬರೇ ಎಂಬುದನ್ನು ಸರ್ಕಾರದವರು ತಿಳಿದಿರುವರೆ? ಮತ್ತು ಅವರು ಪ್ರೈವೆಟ್ ಪ್ರಾಕ್ಟೀಸ್ ಮಾಡಕೂಡದೆಂಬ ವಿಷಯಕವಾದ ಸರ್ಕಾರಿಯಪ್ಪಣೆಯಿಂದ ಬೆಂಗಳೂರಿನ ಅಲ್ಲದೆ ಸಂಸ್ಥಾನದ ಪ್ರಜೆಗಳಿಗೆ ಮ|| ಅಬ್ಬಾಯಿನಾಯುಡುವರಿಂದಾಗುವ ಪ್ರಯೋಜನವು ದೊರೆಯದಂತಾಗುವುದಿಲ್ಲವೆ? (d) ಈ ಅಪ್ಪಣೆಯನ್ನು ಸರ್ಕಾರದವರು ದಯವಿಟ್ಟು ಪುನರಾಲೋಚಿಸಿ ಬದಲಾಯಿಸುವರೆ?

ಮ|| ಕಾಂತರಾಜ ಅರಸಿನವರುತ್ತರ:—(a) ಅಪ್ಪಣೆಯಾಗಿರುತ್ತದೆ. (b) ಈ ಸಂಬಂಧವಾದ ಕಾಗದಪತ್ರಗಳನ್ನು ಸಭೆಯ ಮುಂದಿಡಬೇಕಾದಾವಶ್ಯಕತೆಯು ಸರ್ಕಾರದವರಿಗೆ ತೋರುವುದಿಲ್ಲವು. ಅಂತು ಸರ್ಕಾರಿಯಪ್ಪಣೆಯ ಕಾಪಿಯೊಂದು ನಿಮಗೆ ಕೊಡಲ್ಪಟ್ಟಿದೆ. (c) ಮಿದುಳಿನ ಸಂಬಂಧವಾದ ರೋಗದಚಿಕಿತ್ಸೆಯಲ್ಲಿ ಅನುಭವವನ್ನುಳ್ಳ ಇತರ ಅಧಿಕಾರಿಗಳೂ ಉದ್ಯೋಗದಲ್ಲಿರುತ್ತಾರೆ. (d) ಈ ಅಪ್ಪಣೆಯನ್ನು ಪುನರಾಲೋಚಿಸುವವಿಚಾರದಲ್ಲಿ ಸರ್ಕಾರದವರಿಗೆ ಸಾಕಾದಷ್ಟು ಕಾರಣವು ಕಂಡುಬರುವುದಿಲ್ಲವು.

ಕೋಲಾರದ ಚಿನ್ನದಗಣಿಗಳಲ್ಲಿ ಸಾರಾಯಿಯುತ್ಪತ್ತಿ.

ಮ|| ಬಿ. ಕೆ. ಗರುಡಾಚಾರರ ಪ್ರಶ್ನೆ:—೭. (a) ಚಿನ್ನದ ಗಣಿಗಳ ಪ್ರದೇಶದಲ್ಲಿ ಸ್ವದೇಶದ ಸಾರಾಯಿಯುತ್ಪನ್ನವು ಗೊತ್ತಾಗಿರುವುದಕ್ಕಿಂತ ಹೆಚ್ಚಾಗಿ ಯಾವವರ್ಷದಾಗ್ಯೂ ಆಗುತ್ತಿದೆಯೆಂಬುದನ್ನು ಸರ್ಕಾರದವರು ದಯವಿಟ್ಟು ತಿಳಿಸುವರೆ? (b) ಈ ಸ್ಥಿತಿಯು ಬಹುಕಾಲದಿಂದ ನಡೆದುಬಂದಿದ್ದಲ್ಲಿ ಇದರಿಂದ ಅಂಗಡಿಯವನಿಗೆ ನಷ್ಟವಾಗುತ್ತದೆಂಬುದನ್ನಾಗಲಿ ಅಥವಾ ಕೊಂಡುಕೊಳ್ಳುವವರು ಮೋಸಪಡಿಸಲ್ಪಡುವರೆಂಬುದನ್ನಾಗಲಿ ಸರ್ಕಾರದವರು ತಿಳಿದು ಹೇಗೆ ಬಿಟ್ಟುಕೊಟ್ಟಿರುವರೆಂಬುದನ್ನು ದಯಮಾಡಿ ತಿಳಿಸುವರೆ? (c) ಈ ಅತೃಪ್ತಿಕರವಾದ ವಿಚಾರಗಳನ್ನು ಸರಿಪಡಿಸಲು ಸರ್ಕಾರದವರು ಯೋಚಿಸಿರುವರೆ?

ಮ|| ಕಾಂತರಾಜಅರಸಿನವರುತ್ತರ:—(a) ಇದು ೧೯೦೪-೫ ರಲ್ಲಿ ದೃಷ್ಟಿಗೆ ಬಿದ್ದಿತು. (b) ಮೋಸವನ್ನು ಮಾಡದಂತೆ ನೋಡಿಕೊಳ್ಳಲು (1) ಬಲವಾದ ಕಾವಲುಗಾರರು, (2) ಕಡಿಮೆಯಾಗಿ ಅಳೆಯಲು ಸಾಧ್ಯವಿಲ್ಲದಂತೆ ಹೆಚ್ಚು ಕಟ್ಟಲೆ ಡ್ರಾಂಬಟ್ಟಲು (ಕಪ್ಪು) ಗಳು ಇಡಿಸಲ್ಪಟ್ಟಿರುವುವು (3) ಸಂಟ್ರಲ್‌ಡಿಸ್ಟಿಲರಿಯಲ್ಲಿ ಮುದ್ರೆಹಾಕಿದ ಬಾಟಲುಗಳಲ್ಲಿ ಸಾರಾಯನ್ನು ಮಾರುವಂತೆ ೨ ಅಂಗಡಿಗಳನ್ನಿಟ್ಟು ತಕ್ಕ ಬಂದೋಬಸ್ತುಮಾಡಲ್ಪಟ್ಟಿರುವುವು. ಇಂತಹಮೋಸ ನಡೆಯದಿರಲು ಬೇಕಾದಷ್ಟು ನಿರ್ಬಂಧವು ಕಲ್ಪಿಸಲ್ಪಟ್ಟಿದ್ದಾಗ್ಯೂ, ಅಲ್ಲಿಯ ಕೂಲಿಜನರ ಸ್ಥಿತಿಯಿಂದ ಸಾರಾಯಿಯನ್ನು ಮಾರುವವರು ಈ ವ್ಯಾಪಾರದಿಂದ ತಮಗೆ ನಷ್ಟವಾದರೂ ಲಕ್ಷಿಸದೆ ಆ ಕೂಲಿಕಾರರಿಗೆ ಹಣವನ್ನು ಸಾಲವಾಗಿ ಕೊಡಲೂ ಮತ್ತು ಅವರಿಗೆ ಬೇಕಾದ ಆಹಾರ್ಯಪದಾರ್ಥಗಳನ್ನೊದಗಿಸಲೂ ಈ ಸಾರಾಯಿಯ ವ್ಯಾಪಾರವನ್ನು ಕೈಕೊಳ್ಳಬೇಕೆಂಬ ಮನಸ್ಸನ್ನು ಹುಟ್ಟಿಸುವುದು. (c) ಇದರ ನಿವಾರಣೋಪಾಯವು ಮುಖ್ಯವಾಗಿ ಕಂಟ್ರಾಕ್ಟರ ಕೈಯಲ್ಲಿರುವುದು. ಅಂತು ಈ ವಿಚಾರವು ಸರ್ಕಾರದವರ ಪರ್ಯಾಲೋಚನೆಯಲ್ಲಿರುವುದು.

ಹಾಸನ—ಮಂಗಳೂರಿನ ಲೋಹಮಾರ್ಗವು.

ಮ|| ವೆಂಕಟೇಶಯ್ಯನವರ ಪ್ರಶ್ನೆ:—೮.(a) ಹಾಸನದಿಂದ ಮಂಗಳೂರಿಗೆ ಲೋಹಮಾರ್ಗವನ್ನು ಹಾಕುವ ವಿಚಾರವು ಎಷ್ಟರಮಟ್ಟಿಗೆ ನಡೆದಿರುತ್ತದೆಂಬುವನ್ನು ಸರ್ಕಾರದವರು ದಯವಿಟ್ಟು ತಿಳಿಸುವರೆ? (b) ಸರ್ಕಾರದವರು ಈ ವಿಚಾರದಲ್ಲಿ ಯಾವುದನ್ನೂ ನಿರ್ಧರಿಸುವುದಕ್ಕೆ ಪೂರ್ವವೇ ಮೀಟರ್‌ಗೇಜನ್ನು ಹಾಕುವುದರ ಉಪಯೋಗವನ್ನು ಪರ್ಯಾಲೋಚಿಸುವರೆ?

ಮ|| ಎಚ್. ವಿ ನಂಜುಂಡಯ್ಯನವರುತ್ತರ:—(a) ಈ ಸೂಚನೆಯ ವಿಚಾರವಾಗಿ ಇಂಡ್ಯಾಸರ್ಕಾರದವರ ಕೂಡ ಪತ್ರವ್ಯವಹಾರವು ನಡೆಯುತ್ತಿರುವುದು (b) ಈ ಪ್ರಶ್ನೆಯ ಭಾಗವು ಸರ್ಕಾರದ ಪರ್ಯಾಲೋಚನೆಯಲ್ಲಿದೆ.

ಚಿನ್ನದಗಣಿಗಳಲ್ಲಾದ ಏರ್‌ಬ್ಲಾಸ್ಟ್ ಎಂಬ ಅನಾಹುತವು.

ಮ|| ವೆಂಕಟೇಶಯ್ಯನವರ ಪ್ರಶ್ನೆ:—೯. (a) ಕೋಲಾರದ ಚಿನ್ನದ ಗಣಿಗಳಲ್ಲಿ ಏರ್‌ಬ್ಲಾಸ್ಟ್ ಎಂಬುದರಿಂದೀಚೆಗಾದ ಅನಾಹುತವು ಹೇಗಾಯಿತು? ಮತ್ತು ಎಷ್ಟರಮಟ್ಟಿಗಾಯಿತೆಂಬುದನ್ನೂ ಅದರಿಂದಾದ ಪ್ರಾಣನಷ್ಟವನ್ನೂ ಸರ್ಕಾರದವರು ದಯವಿಟ್ಟು ತಿಳಿಯಿಸುವರೆ? (b) ಇಂತಹ ಅನಾಹುತಗಳಾಗದಿರಲು ಸಾಮಾನ್ಯವಾಗಿ ಯಾವ ಎಚ್ಚರಿಕೆಯು ತೆಗೆದುಕೊಳ್ಳಲ್ಪಡುವುದು? (c) ಅದೇತೆರನಾದ ಅಪಾಯವು ಈಚೆಗೊಂದಾಯಿತೆ? (d) ಕಳೆದನಾಹುತವು ನಡೆದಮೇಲೆ ಪ್ರಾಣರಕ್ಷಣೆಗಾಗಿ ಎಚ್ಚರಿಕೆಯು ತೆಗೆದುಕೊಳ್ಳಲ್ಪಟ್ಟಿತೆ? ಹಾಗಿದ್ದರೆ ಅದು ಯಾವತೆರನಾದೆಚ್ಚರಿಕೆ? (e) ಇಂತಹ ಅನಾಹುತಗಳಿಗೆ ಸಿಕ್ಕಿದವರ ಕುಟುಂಬರಕ್ಷಣೆಯನ್ನು ಕಂಪನಿಯವರುನಡೆಸಿಕೊಡಲು ಅವಕಾಶವಿರುವುದೆ

ಮ|| ನಂಜುಂಡಯ್ಯನವರುತ್ತರ:—(a) ನೀವು ಹೇಳಿದ ನಾಹುತವು ೧೯೧೪ ನೆಯ ಜೂನ್ ತಾ|| ೪ ರಲ್ಲಿ ಮೈಸೂರ ಮೈನಿಂಗನಲ್ಲಿ ನಡೆದುದಾಗಿದೆ. ಇದರಲ್ಲಿ ೩ ಜನರು ಮಡಿದು ಮತ್ತೆ ೩ ಜನರು ವಿಶೇಷಾಪಾಯವನ್ನು ಹೊಂದಿದರು. ಈ ಯನಾಹುತವು, ಮೇಲುಹೊದ್ದಿಕೆಯ ೪ ಅಡಿ ಅಂಗಲದ ಬಂಡೆಯೊಡೆದುದರಿಂದಾಗಿರತಕ್ಕದು. (b) ಮೇಲುಹೊದ್ದಿಕೆಗೆ ಬಂಡೆಯಚೂರು, ಮರ ಮತ್ತು ಹಲಗೆಗಳನ್ನು ಹಾಕಿ ಭದ್ರಪಡಿಸಿರುವರು. ಈ ಅಪಾಯವು ಸಂಭವಿಸುವುದಕ್ಕೆ ಮೊದಲು ಕಲ್ಲಿನ ಆಸರೆಯಾಗಿದ್ದ ತೊಲೆಗಳು ಚೆನ್ನಾಗಿದ್ದು ಅವುಗಳಿಗೆ ಭಾರವು ಹೆಚ್ಚಾಗಿರುವ ಚಿನ್ಹೆಯು ಕಂಡುಬರಲಿಲ್ಲವು. ಇದಕ್ಕಿಂತ ಹೆಚ್ಚು ಎಚ್ಚರಿಕೆಯನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲವಾಯಿತು. (c) ಮತ್ತು (d) ಅದೇಸ್ಥಳದಲ್ಲಿ ಇದಕ್ಕೆ ಪೂರ್ವ ಯಾವಅನಾಹುತವೂ ನಡೆದಂತಿಲ್ಲವು. (e) ಅಂತಹ ನಿಯತವಾದ ವಿಧಾನವೇನೂ ಇಲ್ಲವು, ಆದರೆ ಕಂಪನಿಯವರು ಪೃಥಕ್ಕಾಗಿ ಹಾಗೆ ಅನಾಹುತದಿಂದ ಮಡಿದವರ ಅಥವಾ ಗಾಯವಡೆದವರ ವಿಚಾರದಲ್ಲಿ ಕನಿಕರಪಟ್ಟು ತಾವಾಗಿಯೇ ಸಹಾಯಮಾಡಲು ಕೆಲವುಪಾಯವನ್ನು ಕಲ್ಪಿಸಿಕೊಂಡಿರುವರು. ಈ ವಿಚಾರದಲ್ಲಿ ಕಂಪನಿಯವರೆಲ್ಲರೂ ಕ್ರಮವನ್ನನುಸರಿಸಬೇಕೆಂಬ ಬಗೆಗೆ ಸರ್ಕಾರದವರಿಗೂ ಗಣಿಗಳ ಬೋರ್ಡಿನವರಿಗೂ ಚರ್ಚೆಯು ನಡೆಯುತ್ತಿದೆ. ಮತ್ತು ಕೂಡಲೇ ಇತ್ಯರ್ಥವಾಗಬಹುದೆಂದು ನಿರೀಕ್ಷಿಸಲ್ಪಟ್ಟಿದೆ.

ವಿದ್ಯಾಭ್ಯಾಸದ ಸೌಕರ್ಯಗಳು—ಮ|| ಎಸ್. ಬಾಲಕೃಷ್ಣರಾಯರ ಪ್ರಶ್ನೆ:—೧೦ (a) ಶಿವಮೊಗ್ಗೆಯ ಕಾಲೇಜನ್ನು ಪುನಃ ಸ್ಥಾಪಿಸುವ ಬಗೆಗೆ ಯಾವೇರ್ಪಾಟಾದರೂ ಮಾಡಲ್ಪಟ್ಟಿದೆಯೆಂಬುದನ್ನು ಸರ್ಕಾರದವರು ದಯವಿಟ್ಟು ತಿಳಿಸುವರೆ? (b) ಹಾಗಿಲ್ಲದ ಪಕ್ಷದಲ್ಲಿ ಸರ್ಕಾರದವರು ಎಂದು ಪುನಃ ಸ್ಥಾಪಿಸುವುದು? (c) ಮೈಸೂರ ಸೀಮೆಯ ಅನೇಕ ವಿದ್ಯಾರ್ಥಿಗಳು ಬೊಂಬಾಯಿ ಯೂನಿವರ್ಸಿಟಿಪರೀಕ್ಷೆಗೆ ಓದುವುದು ಹೆಚ್ಚಾಗುತ್ತಿರುವುದರಿಂದ ಶಿವಮೊಗ್ಗೆಯ ಮತ್ತು ಚಿತ್ರಕಲ್‌ದುರ್ಗದ ಹೈಸ್ಕೂಲುಗಳನ್ನು ಆ ಯೂನಿವರ್ಸಿಟಿಯವರು ಪರಿಗಣಿಸುವಂತೆ ಮಾಡಿ ವಿದ್ಯಾರ್ಥಿಗಳಿಗೆ ಸೌಕರ್ಯವನ್ನು ಹೆಚ್ಚಿಸಿಕೊಡಲು ಸರ್ಕಾರದವರು ದಯವಿಟ್ಟು ಪರ್ಯಾಲೋಚಿಸುವರೆ?

ಮ|| ನಂಜುಂಡಯ್ಯನವರುತ್ತರ:—(a) (b) ಮತ್ತು (c) ಮೈಸೂರ ಸೀಮೆಗೆ ಸ್ವತಂತ್ರವಾಗಿ ಒಂದು ಯೂನಿವರ್ಸಿಟಿಯನ್ನು ಸ್ಥಾಪಿಸುವ ವಿಚಾರವು ಇತ್ಯರ್ಥವಾದ ಕೂಡಲೆ ಈ ಪ್ರಶ್ನೆಗಳು ಪರ್ಯಾಲೋಚಿಸಲ್ಪಡುವುವು.

ರೆವಿನ್ಯೂಕೋರ್ಟುಗಳಲ್ಲಾಗತಕ್ಕ ತಾಮಸವು.

ಮ|| ಬಾಲಕೃಷ್ಣರಾಯರ ಪ್ರಶ್ನೆ:—೧೧ (a) ರೆವಿನ್ಯೂಕೋರ್ಟುಗಳಲ್ಲೂ, ಉಳಿದ ಆಫೀಸುಗಳಲ್ಲೂ, ದಾವಾಗಳು, ಅಪೀಲುಗಳು ಮತ್ತು ರೆವಿನ್ಯೂವಿಷಯಕವಾದಅರ್ಜಿಗಳು ಹಾಗೂ ದರಖಾಸ್ತುಗಳು ವಿಲೆಯಾಗಲು ಬಹುಕಾಲ ಹಿಡಿಯುವುದೆಂಬುದು ಸರ್ಕಾರದವರಿಗೆ ಗೊತ್ತಿರುವುದೆ? (b) ಈ ತಾಮಸವನ್ನು ತಪ್ಪಿಸುವುದಕ್ಕಾಗಿ ರೆವಿನ್ಯೂ ವಿವಾದಗಳನ್ನು ಜುಡಿಷಿಯಲ್ ವಿವಾದಗಳಂತೆ ಇಷ್ಟು ಕಾಲದಲ್ಲಿ ಬಗೆಹರಿಸಬೇಕೆಂದೂ, ಸಾವಕಾಶಕ್ಕೆ ಕಾರಣವನ್ನು ಕೊಟ್ಟು ಕ್ಲುಪ್ತಕಾಲದಲ್ಲಿ ಲೆಕ್ಕಗಳನ್ನು ಕಳುಹಿಸಬೇಕೆಂದೂ ಗೊತ್ತುಮಾಡುವುದರಾವಶ್ಯಕತೆಯನ್ನು ಸರ್ಕಾರದವರು ಪರ್ಯಾಲೋಚಿಸುವರೆ?

ಮ|| ಕಾಂತರಾಜಅರಸಿನವರುತ್ತರ:—ಯಾವುದಾದರೂ ಗೊತ್ತಾದ ಸಂದರ್ಭವನ್ನು ತಿಳಿಸಿದಲ್ಲಿ ವಿಚಾರಮಾಡುವುದಾಗುತ್ತದೆ.

ಹೊಸಬಿಲ್ಲುಗಳು

೧೯೦೪ನೆಯ ಇಸವಿಯ ಕ್ರಿಮಿನಲ್ ಪ್ರೊಸೀಜರ್‌ಕೋಡಿನ ಬದಲಾವಣೆಯ ಬಿಲ್ಲು ಮ|| ನಂಜುಂಡಯ್ಯ ಸಿ. ಐ. ಇ., ಯವರಿಂದ ಸಭೆಯ ಮುಂದಿಡಲ್ಪಟ್ಟಿತು. ೧೯೦೨ ನೆಯ ಇಸವಿಯ ಲೋಕಲ್‌ಬೋರ್ಡ್ ರೆಗ್ಯುಲೇಷನ್ ಬದಲಾವಣೆಯ ಬಿಲ್ಲು ಮ|| ಕಾಂತರಾಜಅರಸ್ ಸಿ. ಎಸ್. ಐ, ಯವರಿಂದೋದಲ್ಪಟ್ಟು, ಮ|| ಗಳಾದ ಸಿ. ಶ್ರೀಕಂಠೇಶ್ವರಯ್ಯರ್‌ರವರು, ಕೆ. ಪಿ ಪುಟ್ಟಣ್ಣಶೆಟ್ಟರು, ಕೆ. ಆರ್. ಶ್ರೀನಿವಾಸಯ್ಯಂಗಾರರು, ಬಿ. ನರಸಿಂಗರಾಯರು ಮತ್ತು ಕಾಂತರಾಜಅರಸಿನವರು ಇವರಿಂದ ಕೂಡಿದ ಸ್ಪೆಷಲ್‌ಕಮಿಟಿಯ ಪರ್ಯಾಲೋಚನೆಗಿಡಲ್ಪಟ್ಟಿತು. ೧೯೦೪ ನೆಯ ವರ್ಷದ ಮ್ಯುನಿಸಿಪಲ್ ರೆಗ್ಯುಲೇಷನ್ ಬದಲಾವಣೆಯ ಬಿಲ್ಲು ಸಭಿಕರಿಂದ ಸಮ್ಮತಿಸಲ್ಪಟ್ಟಿತು. ೧೯೧೧ ನೆಯವರ್ಷದ ಸಿವಿಲ್‌ಪ್ರೊಸೀಜರ್‌ಕೋಡಿನಲ್ಲಿ ಆಸ್ತಿಯ ವಿಭಾಗದ ಭಾಗವನ್ನು ಬದಲಾಯಿಸುವ ಬಿಲ್ಲು ಪರ್ಯಾಲೋಚಿಸಲ್ಪಟ್ಟು ಮುಂದಣ ಮೀಟಿಂಗಿಗಿಡಲ್ಪಟ್ಟಿತು

ಅನಂತರ ಮ|| ಚಕ್ರವರ್ತಿಯವರು ೧೯೧೪–೧೫ ರ ಸಂಸ್ಥಾನದ ಆಯುವ್ಯಯದ ಲೆಕ್ಕವ (ಬಡ್ಜೆಟ್ಟ) ನ್ನು ೧|| ಗಂಟೆಯವರೆಗೋದಿದ ಮೇಲೆ ೨|| ಗಂಟೆಗೆ ಸಭೆಯು ವಿರಮಿಸಲ್ಪಟ್ಟಿತು

ಶ್ರೀಯುತ ಬಾಲಗಂಗಾಧರ ತಿಲಕರವರ ಸಂಭಾಷಣವು.

ಬೊಂಬಾಯಿಯ ಜ್ಞಾನಪ್ರಕಾಶ ಪತ್ರಿಕಾಪ್ರತಿನಿಧಿಯು ಮ|| ತಿಲಕರನ್ನು ಕಂಡು ಮಾತನಾಡಿದಾಗ್ಗೆ ಅವರು ಹೇಳಿದಭಿಪ್ರಾಯಗಳು ಈ ಕೆಳಗೆ ಕಂಡಂತೆ ಇರುತ್ತವೆ.

ನ್ಯಾ|| ದೇವಾರ್‌ರವರು ನನಗೆ ೬ ವರ್ಷಗಳ ದ್ವೀಪಾಂತರವಾಸಶಿಕ್ಷೆಯನ್ನು ವಿಧಿಸಿದ ಬಳಿಕ ನನ್ನನ್ನು ಮೋಟಾರು ಬಂಡಿಯಲ್ಲಿ ಹತ್ತಿಸಿ ಮಹಾಲಕ್ಷ್ಮೀನಿಲ್ದಾಣಕ್ಕೆ ತೆಗೆದುಕೊಂಡುಹೋದರು. ಆಗ ನನ್ನನ್ನು ಅಹಮ್ಮದಾಬಾದಿಗೆ ಸಾಗಿಸಿಕೊಂಡು ಹೋಗುವುದಕ್ಕಾಗಿಯೇ ಪ್ರತ್ಯೇಕವಾದ ಹೊಗೆಬಂಡಿಯೊಂದು ಸಿದ್ಧವಾಗಿದ್ದಿತು. ಅದರಮೇಲೆ ಕುಳ್ಳಿರಿಸಿ ನನ್ನನ್ನು ಅಹಮ್ಮದಾಬಾದಿಗೆ ಕರೆದುಕೊಂಡು ಹೋದರು. ೧೯೦೮ ನೆ ಸೆಪ್ಟಂಬರ್ ತಾ|| ೧೩ ರವರೆಗೆ ನಾನು ಅಲ್ಲೇ ಇದ್ದೆನು. ನನ್ನ ಕಠಿನಶಿಕ್ಷೆಯನ್ನು ಸಾಮಾನ್ಯಶಿಕ್ಷೆಯಾಗಿ ಮಾಡುವವರೆಗೂ ನನ್ನನ್ನು ಒಬ್ಬಾನೊಬ್ಬ ಕಠಿನಶಿಕ್ಷೆಗೊಳಪಟ್ಟ ಬಂದಿಯಂತೆಯೇ ನೋಡುತ್ತಿದ್ದರು. ಆದರೆ ಕೈಗೆ ಸರಪಣಿಗಳನ್ನು ಮಾತ್ರ ತೊಡಿಸಿರಲಿಲ್ಲ. ಅಹಮ್ಮದಾಬಾದ್ ಕಾರಾಗೃಹಕ್ಕೆ ಹೋದಮೇಲೆ ೧೦ ದಿನಗಳವರೆಗೂ ನನ್ನನ್ನು ಅಬ್ಜರ್ವೇಷನ್ನಿನಲ್ಲಿಟ್ಟಿದ್ದರು. ನನಗೆ ಯಾವಕೆಲಸವನ್ನು ಮಾಡುವುದಕ್ಕೂ ಹಚ್ಚಲಿಲ್ಲ. ಆದರೂ ನನಗೆ ಅವರು ಕೊಡುತ್ತಿದ್ದ ಆಹಾರದಿಂದ ನಾನು ೧೦ ಪೌಂಡುಗಳಷ್ಟು ತೂಕ ಕಡಿಮೆಯಾದೆನು. ಬಳಿಕ ವೈದ್ಯರ ಅಭಿಪ್ರಾಯದ ಪ್ರಕಾರ ನನಗೆ ತುಪ್ಪ ಹಾಲುಗಳನ್ನು ಆಹಾರಕ್ಕೆ ಕೊಡಲುಪಕ್ರಮಿಸಿದರು. ಕಠಿನಶಿಕ್ಷೆಯನ್ನು ಸಾಮಾನ್ಯಶಿಕ್ಷೆಯಾಗಿ ಬದಲಾಯಿಸಿದ ವರ್ತಮಾನವು ನನಗೆ ಮಾಂಡಲೆಯ ಕಾರಾಗೃಹದಲ್ಲಿ ಗೊತ್ತಾಯಿತು. ಮಾಂಡಲೆಯಲ್ಲಿ ನಾನಿದ್ದ ಮನೆಯು ೨ ಅಂತಸ್ತುಳ್ಳದು. ಅದರಲ್ಲಿ ನನ್ನ ವಶಕ್ಕೆ ೪ ಕೋಣೆಗಳನ್ನು ಬಿಟ್ಟುಕೊಟ್ಟಿದ್ದರು. ಅದು ಯುರೋಪ್ಯ ಬಂದಿಗಳಿಗಾಗಿ ಕಟ್ಟಲ್ಪಟ್ಟುದು. ಅದುಕಾರಣ, ಅದರ ಸುತ್ತಲೂ ಪ್ರಾಕಾರದ ಗೋಡೆಯಿರಲಿಲ್ಲ. ಬರಿಯ ಮರದ ಕಟಕಟೆ ಮಾತ್ರ ಇದ್ದಿತು. ನಾನಿದ್ದ ಕೋಣೆಯ ಮತ್ತು ಹೊರ ಕಟಕಟೆಯ ಬಾಗಿಲುಗಳಿಗೆ ರಾತ್ರಿಯಹೊತ್ತು ಅಗಳಿಗಳನ್ನು ಹಾಕುತ್ತಿದ್ದರು. ಮೊಟ್ಟಮೊದಲು ನನ್ನೊಡನೆ ಮಾಂಡಲೆಗೆ ಬಂದ ಒಬ್ಬ ಬ್ರಾಹ್ಮಣ ಬಂದಿಯು ನನಗೆ ಅಡುಗೆಮಾಡಿ ಹಾಕುತ್ತಿದ್ದನು ಆದರೆ ನಾನು ಅಲ್ಲಿಗೆಹೋದ ಒಂದು ತಿಂಗಳಲ್ಲಿ ಅವನ ಶಿಕ್ಷಾವಧಿಯು ಮುಗಿದುಹೋದುದರಿಂದ ಅವನು ಹೊರಟುಹೋದನು. ಬಳಿಕ ಎರೋದಾ ಕಾರಾಗೃಹದಲ್ಲಿ ಏಕಾಂತಶಿಕ್ಷೆಯನ್ನನುಭವಿಸುತ್ತಿದ್ದ ಒಬ್ಬ ಕುಲಕರಣಿಬಂದಿಯು ನನ್ನ ಅಡುಗೆಗೆ ನಿಯಮಿಸಲ್ಪಟ್ಟನು. ನಾನು ೧೯೦೮ ನೆ ಸೆಪ್ಟಂಬರ್ ತಾ|| ೨೩ ರಲ್ಲಿ ಮಾಂಡಲೆಯನ್ನು ಸೇರಿದೆನು. ಅಲ್ಲಿಂದ ೨ ವರ್ಷಗಳವರೆಗೂ ನನ್ನ ದೇಹಾರೋಗ್ಯವು ಸರಿಯಾಗಿಯೇ ಇದ್ದಿತು. ಬಳಿಕ ನನಗೆ ಅತಿಮೂತ್ರವ್ಯಾಧಿಯು ಆರಂಭಿಸಿತು. ಅದು ಬಹಳ ಪ್ರಬಲವಾಗಿದ್ದಿತು. ಹಿಂದೆ ಒಂದಾವೃತ್ತಿ ಹೀಗೆಯೇ ಅದು ಪ್ರಾಪ್ತವಾಗಿದ್ದಾಗ ತಾತ್ಯಾರ್‌ಗರ್ದೆಯವರು ಬಾರ್ಲಿ ಹಿಟ್ಟನ್ನು ಆಹಾರವಾಗಿ ಸ್ವೀಕರಿಸಬೇಕೆಂದು ಹೇಳಿದ್ದರು. ಆ ಸಂಗತಿಯನ್ನು ನಾನು ಕಾರಾಗೃಹದ ಅಧಿಕಾರಿಗೆ ತಿಳಿಯಿಸಲು, ಅವರು ಪುನಾಕ್ಕೆ ತಾ|| ಗರ್ದೆಯವರ ಹೆಸರಿಗೆ ಪತ್ರವನ್ನು ಬರೆದು ತಿಳಿದುಕೊಂಡು ಅದನ್ನೇ ಆಹಾರಕ್ಕೆ ಕೊಟ್ಟರು. ೧೪ ದಿನಗಳು ಅದನ್ನು ಸೇವಿಸುವುದರೊಳಗಾಗಿ ಆ ವ್ಯಾಧಿಯು ಸ್ವಲ್ಪ ತಗ್ಗಿತು. ಅದರಿಂದ ಅದೇ ಆಹಾರವನ್ನೇ ಇನ್ನು ಸ್ವಲ್ಪಕಾಲ ನನಗೆ ಕೊಟ್ಟರು. ತಿಂದು ಸುಮ್ಮನೆ ಕುಳಿತುಕೊಳ್ಳುತ್ತಿದ್ದುದರಿಂದ ಹೊತ್ತುಹೋಗದೆ ಇರಲಾಗಿ ಯಾವುದಾದರೂ ಕೆಲಸವನ್ನು ನನಗೆ ಹೇಳಬೇಕೆಂದು ಕಾರಾಗೃಹದವರನ್ನು ಕೇಳಿದೆನು. ಅವರು ಅದಕ್ಕೆ ಸಮ್ಮತಿಸಲಿಲ್ಲ ಅದರಮೇಲೆ ಯಾವುದಾದರೂ ಪುಸ್ತಕಗಳನ್ನಾದರೂ ಓದುವುದಕ್ಕೆ ಕೊಡಿರೆಂದು ಕೇಳಿದನು. ಅವರು ನನಗೆ ಬೇಕಾದ ಪುಸ್ತಕಗಳನ್ನು ತರಿಸಿಕೊಡುವುದಕ್ಕೆ ಮುಂದಿನವರ್ಷದ ಫೆಬ್ರವರಿ ತಿಂಗಳವರೆಗೆ ಹಿಡಿದಿತು. ನನ್ನನ್ನು ಕಾರಾಗೃಹದಲ್ಲಿ ಮೊದಲನೆ ತರಗತಿಯ ರಾಜಕೀಯಾಪರಾಧಿಯಂತೆ ಕಾಣುತ್ತಿದ್ದರು. ಕಾರಾಗೃಹಾಧಿಕಾರಿಗಳು ನನಗೆ ಯಾವವಿಧವಾದ ಕೊರತೆಯನ್ನೂ ಉಂಟುಮಾಡಲಿಲ್ಲ. ಬಹಳ ಆದರಿಸಿದರು. ನನ್ನನ್ನು ಪೋಲೀಸರು ಹಿಡಿದಾಗ ನನ್ನ ಬಳಿಯಲ್ಲಿ ೧೦ ರೂ.ಗಳು ಮಾತ್ರವೇ ಇದ್ದುವು. ಬಳಿಕ ನಾನು ಪುಣೆಯಲ್ಲಿರುವ ನನ್ನ ಬಂಧುಗಳಿಗೆ ಬರೆದು ನೂರು ರೂಪಾಯಿಗಳನ್ನು ತಂತಿಮನಿಯಾರ್ಡರಿನ ಮೂಲಕ ತರಿಸಿಕೊಂಡೆನು. ಅವನ್ನು ವೆಚ್ಚಮಾಡಿ ನನಗೆ ಬೇಕಾದ ಬಟ್ಟೆಬರೆಗಳನ್ನೂ ಇತರ ವಸ್ತುಗಳನ್ನೂ ಒದಗಿಸಿಕೊಂಡೆನು. ಕಾರಾಗೃಹದಲ್ಲಿ ನನಗೆ ಓದುವುದಕ್ಕೆ ಯಾವ ವೃತ್ತಪತ್ರಿಕೆಗಳನ್ನೂ ಕೊಡಲಿಲ್ಲ. ಯಾವುದಾದರೂ ವೃತ್ತಪತ್ರಿಕೆಗಳನ್ನು ಕೊಡಿರೆಂದು ನಾನು ಕೇಳಿದರೂ ನಿರಾಕರಿಸಿಬಿಟ್ಟರು. ಈ ೬ ವರ್ಷದ ಮಧ್ಯದಲ್ಲಿ ಲೋಕದಲ್ಲಿ ಏನೇನು ನಡೆದಿತೋ ಅದೊಂದೂ ನನಗೆ ತಿಳಿಯದು ಜಗದ್ವಿಷಯವೆಲ್ಲಾ ನನಗೆ ಅಂಧಕಾರಮಯವಾಗಿದ್ದಿತು. ದಿಲ್ಲಿದರ್ಬಾರು ಜಾರ್ಜ್ ಸಾರ್ವಭೌಮರ ಪಟ್ಟಾಭಿಷೇಕ. ಎಡ್ವರ್ಡ್‌ಚಕ್ರವರ್ತಿಯವರ ಮರಣ–ಈ ಸಂದರ್ಭಗಳಲ್ಲಿ ಮಾಂಡಲೆ ಕಾರಾಗೃಹದಲ್ಲಿದ್ದ ಕೆಲ ಬಂದಿಗಳ ಶಿಕ್ಷೆಯನ್ನು ಕಡಿಮೆಮಾಡಿದುದರಿಂದ ಆ ಸಂಗತಿಗಳಿಂದ ಮೇಲಿನ ಕಾರ್ಯಗಳು ಜರುಗಿದುವೆಂಬುದನ್ನು ನಾನು ಊಹಿಸಿಕೊಂಡೆನು. ಕಾರಾಗೃಹದಲ್ಲಿದ್ದಾಗ ೩ ತಿಂಗಳಿಗೊಂದಾವೃತ್ತಿ ನನ್ನ ಬಂಧುಗಳು ಬಂದು ನನ್ನನ್ನು ನೋಡಿಕೊಂಡು ಹೋಗಲು ಅನುಮತಿಯನ್ನು ಕೊಟ್ಟಿದ್ದರು. ಪೂನಾದಲ್ಲಿದ್ದ ನನ್ನ ಕುಟುಂಬದವರಿಗೆ ತಿಂಗಳಿಗೊಂದುಸಲ ಪತ್ರವನ್ನು ಬರೆದುಕೊಳ್ಳಲು ನನಗೆ ಅನುಮತಿಯನ್ನು ಕೊಟ್ಟಿದ್ದರು. ಅವರ ಕ್ಷೇಮಸಮಾಚಾರದ ಪತ್ರವೂ ಅದರಂತೆಯೇ ನನ್ನಲ್ಲಿಗೆ ಬರಲು ಅವಕಾಶವನ್ನು ಕೊಟ್ಟಿದ್ದರು. ಕೇಸರಿ ಪತ್ರಿಕೆಯಿಂದ ೪ ಸಾವಿರ ರೂ.ಗಳ ಹೊಣೆಯನ್ನು ತೆಗೆದುಕೊಂಡ ಸಂಗತಿಯು ನನಗೆ ಪುಣೆಗೆ ಬಂದಮೇಲೆ ತಿಳಿಯಿತು. ಹಿಂದೆ ೧೮೯೩ ನೆ ಸಂವತ್ಸರದಲ್ಲಿ ಮೊದಲು ನಾನು ಬರೆದ "ಓರಿಯನ್" ಎಂಬ ಗ್ರಂಥವು ಮುದ್ರಿಸಲ್ಪಟ್ಟಿದೆ. ಈಚೆಗೆ ಉಂಟಾದ ಬದಲಾವಣೆಯನ್ನನುಸರಿಸಿ ನಾನು ಆ ಗ್ರಂಥವನ್ನು ಪುನಃ ಈ ಸಂದರ್ಭದಲ್ಲಿ ಪರಿಷ್ಕರಿಸಿದ್ದೇನೆ. ಈ ಕಾರ್ಯವು ಸ್ವಲ್ಪ ಹೆಚ್ಚು ಕಡಿಮೆ ಪೂರ್ತಿಯಾಗಿದೆ. ಈ ಹೊಸಬದಲಾವಣೆಯ ಗ್ರಂಥಕ್ಕೆ "ವೇದವಿಷಯಗಳ ಕಾಲನಿರ್ಣಯ" (ವೇದಿಕ್‌ಕ್ರಾನಾಲಜಿ) ಎಂಬ ಹೆಸರನ್ನು ಇಡಬೇಕೆಂದಿದ್ದೇನೆ. ಮತ್ತು ಆರ್ಯರು ವಾಸಮಾಡುತ್ತಿದ್ದ ಧ್ರುವಪ್ರಾಂತದ ವಿಷಯವನ್ನು ಕುರಿತು ನಾನು ಬರೆದಿರುವ ಗ್ರಂಥವನ್ನು ಕೂಡ ಸುಧಾರಿಸಬೇಕೆಂದಿದ್ದೇನೆ. ಈ ಕೆಲಸಕ್ಕೆ ಇನ್ನೊಂದುತಿಂಗಳು ಹಿಡಿಯುವುದು. ಭಗವದ್ಗೀತೆಯನ್ನು ಕುರಿತು ಮತ್ತೊಂದು ಗ್ರಂಥವನ್ನು ರಚಿಸಿದ್ದೇನೆ. ಇದರ ಪ್ರಸ್ತಾವನೆಯೇ ೩೦೦ ಪುಟಗಳಿರುವುದು. ನಾನು ಫರ್ಗ್ಯುಸನ್ ಕಲಾಶಾಲೆಯಲ್ಲಿ ಉಪಾಧ್ಯಾಯನಾಗಿದ್ದಾಗ ಗಣಿತಶಾಸ್ತ್ರವಿಷಯಕವಾದ ಕೆಲಸಂಶಯಗಳು ನನಗೆ ಉಂಟಾಗಿದ್ದುವು. ಅದನ್ನೆಲ್ಲಾ ಪರಿಷ್ಕರಿಸಿ ಈಗ ಸ್ವಲ್ಪಭಾಗವನ್ನು ಬರೆದಿದ್ದೇನೆ. ಜ್ಯೋತಿಶ್ಶಾಸ್ತ್ರವಿಷಯವನ್ನು ಕೂಡ ಕುರಿತು ಸ್ವಲ್ಪ ಬರೆದಿದ್ದೇನೆ. ಅದು ಅಚ್ಚಾಗುವುದಕ್ಕೆ ಸ್ವಲ್ಪಕಾಲ ಹಿಡಿಯುವುದು. ನಾನು ಕಾರಾಗೃಹದಲ್ಲಿರುವಾಗ ಸ್ವಲ್ಪ ಕಾಲವನ್ನು ಜರ್ಮನಿ-ಫ್ರೆಂಚು-ಪಾಲಿಭಾಷೆಗಳನ್ನು ಕಲಿತುಕೊಳ್ಳುವುದಕ್ಕೆ ವಿನಿಯೋಗಿಸಿದೆನು. ನಾನು ಯೂರೋಪಿಗೆ ಹೊರಡುವನಾಗಿದ್ದೇನೆ ಯೆಂದು ಸುದ್ದಿ ಹುಟ್ಟಿರುವ ವಿಷಯದಲ್ಲಿ ಈಗಲೇ ಯಾವುದನ್ನೂ ದೃಢವಾಗಿ ಹೇಳಲಾರೆ. ತಾಯಿ ಮಹಾರಾಜರವರ ವ್ಯಾಜ್ಯದ ಅಪ್ಪೀಲಿನ ಸಂದರ್ಭದಲ್ಲಿ ನಾನು ಸೀಮೆಗೆ ಹೋಗಬೇಕೆಂದಿದ್ದೇನೆ. ಆರ್ಕ್ಟಿಕ್ ಹೋಮ್ ಸಂದರ್ಭದ ವಿಷಯಕ್ಕಾಗಿಯೂ ಅಲ್ಲಿಗೆ ಹೋಗಬೇಕೆಂದಿದ್ದೇನೆ. ನನ್ನ ಗ್ರಂಥದ ವಿಷಯವಾಗಿ ಭೂಗರ್ಭಶಾಸ್ತ್ರವೇತ್ತರಾದ ಪಂಡಿತರ ಸಹಾಯವು ಬೇಕಾಗಿದೆ ಆದರೆ ಇದೆಲ್ಲಾ ನನ್ನ ದೇಹಸ್ಥಿತಿಯನ್ನೂ ಮುಂದಿನ ಸಂಗತಿ ಸಂದರ್ಭಗಳನ್ನೂ ಅನುಸರಿಸಿಕೊಂಡು ನಿರ್ಧಾರಿತವಾಗತಕ್ಕದ್ದು.

ಕ್ರ್ಯಾಪ್ರೆಸ್.

ಈ ಪತ್ರಿಕೆಯ ೮-೫ ನೆಯ ಪುಟಗಳಿಗುಪಯೋಗಿಸಿರುವಂತಹ ೧೪ ಪಾಯಿಂಟ್ ಅಕ್ಷರಗಳು ನಮ್ಮಲ್ಲಿ ಕ್ರಯಕ್ಕೆ ದೊರೆಯುತ್ತವೆ. ಇಷ್ಟವುಳ್ಳವರು ಬೆಲೆ ಮೊದಲಾದ ವಿಚಾರವಾಗಿ ನಮಗೆ ಬರೆದು ತಿಳಿದುಕೊಳ್ಳಬಹುದು.

ವೈ. ವಿರೂಪಾಕ್ಷಯ್ಯ.
ಪ್ರೊಪ್ರೈಟರ್.

ಮೈಸೂರ್ ಸ್ಟಾರ್.

ಸೆ ೧೯೧೪ನೆಯ ಇಸವಿ ಜುಲೈ ತಾ|| ೬ನೆಯ ಸೋಮವಾರ.

ಆಸ್ಟ್ರಿಯಾ ಹಂಗೇರಿ ಯುವರಾಜ ದಂಪತಿಗಳ ಘೋರವಾದ ಕೊಲೆ.

ಆಸ್ಟ್ರಿಯಾ ಹಂಗೇರಿಗೆ ಮುಂದೆ ಪ್ರಭುವಾಗುವುದಕ್ಕಿದ್ದ ಆರ್ಚ್‌ಡ್ಯೂಕ್ ಫ್ರಾನ್ಸಿಸ್ ಫರ್ಡಿನಾಂಡ್‌ರವರನ್ನೂ ಅವರ ಪತ್ನಿಯನ್ನೂ ಸಹ ಕಳೆದ ತಿಂಗಳು ತಾ|| ೨೮ರಲ್ಲಿ ಸೆರಾಜೋವೋ ಎಂಬ ಪಟ್ಟಣದಲ್ಲಿ ಅರಾಜಕರು ಕೊಲೆಮಾಡಿದರೆಂಬ ದುಃಖವಾರ್ತೆಯು ಬಂದಿರುವುದು. ಯೂರೋಪು ಖಂಡದಲ್ಲಿ ಐಹಿಕಸುಖಸಂಪತ್ತಿಗಳು ಒಂದುಕಡೆ ಅಭಿವೃದ್ಧಿಗೊಳ್ಳುತ್ತಿದ್ದರೆ ಮತ್ತೊಂದುಕಡೆ ಹೀಗೆ ನರಹಾಕ್ಷಸಕೃತ್ಯಗಳು ಪ್ರಬಲಿಸುತ್ತಿರುವುದು ದುಃಖಕರವಾಗಿದೆ. ಘಾತುಕರ ದೆಸೆಯಿಂದ ಯೂರೋಪಿನ ಹಲವುಮಂದಿ ಪ್ರಭುಗಳು "ನಿತ್ಯಂಸನ್ನಿಹಿತೋಮೃತ್ಯುಃ" ಎಂಬುದರರ್ಥವನ್ನು ಅನುಭವಿಸುತ್ತಿರುತ್ತಾರೆ. ಈಗಿನ ಯುವರಾಜದಂಪತಿಗಳ ಕೊಲೆಗೆ ರಾಜಕೀಯವಿಷಯವೇ ಕಾರಣವಾಗಿರುತ್ತದೆ. ಭೂಪಾಲಕರ ರಾಜ್ಯತೃಷ್ಣೆಯು ಪ್ರಪಂಚದಲ್ಲಿ ಅನರ್ಥವನ್ನುಂಟುಮಾಡುವಷ್ಟು ಮತ್ತಾವುದೂ ಮಾಡುವುದಿಲ್ಲವೆಂದು ಹೇಳುವುದು ಅತಿಶಯೋಕ್ತಿಯಲ್ಲ. ಆಸ್ಟ್ರಿಯಾ ಪ್ರಭುತ್ವದವರು ತೋರಿಸಿದ ಅಂತಹ ರಾಜ್ಯತೃಷ್ಣೆಯೇ ಈಗಿನ ಅನರ್ಥಕ್ಕೂ ಕಾರಣವಾಯಿತು.

ಆಸ್ಟ್ರಿಯಾದವರು ಬೋಸ್ನಿಯಾ-ಹರ್ಜಗೋವಿನಾ ಎಂಬ ರಾಷ್ಟ್ರಭಾಗಗಳನ್ನು ೧೯೦೮ನೆಯ ವರ್ಷದಲ್ಲಿ ತಮ್ಮ ರಾಜ್ಯಕ್ಕೆ ಸೇರಿಸಿಕೊಂಡರು. ಬೋಸ್ನಿಯಾದಲ್ಲಿರುವ ಪ್ರಜೆಗಳಲ್ಲಿ ಮುಕ್ಕಾಲುಪಾಲೆಲ್ಲಾ ಸರ್ವಿಯಾ ಜಾತಿವರ್ಗಕ್ಕೆ ಸಂಬಂಧಪಟ್ಟವರು. ಅದುಕಾರಣ, ಇಂಥವರು ಇರುವ ರಾಷ್ಟ್ರವು ಆಸ್ಟ್ರಿಯಾಕ್ಕೆ ಸೇರಿಹೋದುದು ಸರ್ವಿಯಾಕ್ಕೆ ಸಮಾಧಾನಕರವಾಗಿಲ್ಲ. ಆದರೇನು? ವಾಗ್ದಾನಮಾಡಿದ್ದ ರಷ್ಯಾವು ಜರ್ಮನಿಯವರ ಎತ್ತುಗಡೆಯಿಂದ ಸಹಾಯಮಾಡದೆ ಹೋದುದರಿಂದ ತತ್ಕಾಲದಲ್ಲಿ ಸರ್ವಿಯಾವು ಏನನ್ನೂ ಮಾಡಲಾರದೆ ಸುಮ್ಮನಿರಬೇಕಾಯಿತು. ಆದರೆ ಸರ್ವಿಯಾಪ್ರಜೆಗಳಿಗೆ ಎಂದಿಗಾದರೊಂದುದಿನ ತಮ್ಮ ಬೋಸ್ನಿಯಾ ಜನವರ್ಗದವರೊಡನೆ ತಮಗೆ ಐಕ್ಯವಾಗುವುದೇ ಸಿದ್ಧವೆಂಬ ಆಶೆಯುಮಾತ್ರ ತಪ್ಪಿಲ್ಲ. ಸರ್ವಿಯಾ ಜನವರ್ಗದವರು ತಾವು ಏಕೀಭವಿಸಿ ತಮ್ಮ ದೇಶಾಭಿವೃದ್ಧಿಗೆ ಯತ್ನಿಸುವುದು ಈಗ ಕೊಲೆಮಾಡಲ್ಪಟ್ಟ ಡ್ಯೂಕರಿಗೆ ಒಪ್ಪಿಗೆಯಾಗಿಲ್ಲವೆಂದು ಸರ್ವಿಯನ್ನರು ತಿಳಿದಿದ್ದರು. ಈ ಡ್ಯೂಕರ ಅಪ್ಪಣೆಯಮೇರೆಗೆ ಸ್ವಲ್ಪಕಾಲದಹಿಂದೆ ಬಹುಮಂದಿ ಸರ್ವಿಯನ್ನರು ರಾಜಕೀಯ ಬಂದಿಗಳಾಗಿ ಹಿಡಿಯಲ್ಪಟ್ಟಿರುವರು. ಇವೆಲ್ಲ ಕಾರಣಗಳಿಂದಲೇ ಈಗ ಬೋಸ್ನಿಯಾ ರಾಜ್ಯಕ್ಕೆ ಸೇರಿದ ಒಬ್ಬ ಸರ್ವಿಯನ್ ವಿದ್ಯಾರ್ಥಿಯು ಈ ಘೋರವಾದ ಕೊಲೆಯನ್ನು ನಡೆಯಿಸಿರುತ್ತಾನೆ. ಆ ಕೊಲೆಯ ವಿವರಣ ಮೊದಲಾದುವುಗಳು ತಂತೀಮೂಲಕ ಕೆಳಗೆ ಕಂಡಮೇರೆ ತಿಳಿಯಬಂದಿರುವುವು.

ಈ ಡ್ಯೂಕರು ತಮ್ಮ ಪತ್ನಿಯ ಸಮೇತ ಬೋಸ್ನಿಯಾಕ್ಕೆ ಬರುವರೆಂಬ ಸುದ್ದಿಯು ಹುಟ್ಟಿದಕೂಡಲೇ ಸರ್ವಿಯಾ ದೇಶಾಭಿಮಾನಿಗಳೆಲ್ಲಾ ಸೇರಿ ಏನೋ ಉದ್ಯಮದಲ್ಲಿ ತೊಡಗಿದ್ದರು. ಮತ್ತೂ ಈ ಡ್ಯೂಕರನ್ನು ಅಲ್ಲಿಗೆ ಬರಲಾಗದೆಂದು ಕೂಡ ತಿಳಿಯಪಡಿಸಿದರು. ಡ್ಯೂಕರ ಪತ್ನಿಯು ಕೂಡ ಗಂಡನನ್ನು ಹೊರಡಬೇಡಿರೆಂದು ತಡೆದಳು. ಅವೊಂದನ್ನೂ ಲಕ್ಷ್ಯಿಸದೆ ಇವರು ಹೊರಟೇಹೊರಟರು. (ವಿನಾಶಕಾಲೇ ವಿಪರೀತಬುದ್ಧಿಃ) ಇವರು ತಾ|| ೨೮ರಲ್ಲಿ ಬೋಸ್ನಿಯಾದ ಸೆರಾಜೋವೋ ಪಟ್ಟಣಕ್ಕೆ ಹೋಗಿ, ಅಲ್ಲಿನ ಟೌನ್‌ಹಾಲಿನಲ್ಲಿ ತಮ್ಮ ಗೌರವಾರ್ಥವಾಗಿ ಏರ್ಪಡಿಸಲ್ಪಟ್ಟಿದ್ದ ಸಭೆಗೆ ತಮ್ಮ ಪತ್ನಿಯೊಡನೆ ಮೋಟಾರಿನಲ್ಲಿ ಕುಳಿತು ಹೋಗುತ್ತಿದ್ದರು. ಅವರ ಇದಿರಿಗೆ ಬೋಸ್ನಿಯಾದ ಗೌರ್‍ನರು ಕುಳಿತಿದ್ದರು. ಡ್ಯೂಕರ ಅಂಗರಕ್ಷಕರಾದ ಕೌಂಟ್ ಹೆರಾಚಿಯವರು ಬಂಡಿಯ ಪಕ್ಕದಲ್ಲಿರುವ ಹಲಗೆಯ ಮೇಲೆ ನಿಂತಿದ್ದರು. ಮತ್ತೂ ಡ್ಯೂಕರ ಪ್ರಾಣರಕ್ಷಣೆಗಾಗಿ ಇಷ್ಟೊಂದು ಜಾಗರೂಕತೆಯನ್ನು ವಹಿಸಬೇಕೋ ಎಂಬ ವಿಷಯದಲ್ಲಿ ವಿನೋದದ ಮಾತುಗಳು ಬಂಡಿಯಲ್ಲಿ ನಡೆಯುತ್ತಿದ್ದುವು. ಅಷ್ಟರಲ್ಲಿ ಏನೋ ಗುಂಡುಹಾರಿದ ಧ್ವನಿಯು ಕೇಳಿಸಿತು. ಅದು ಮುದ್ರಾಲಯವೊಂದರಲ್ಲಿದ್ದ ಅಕ್ಷರಸಂಯೋಜಕನು ಎಸೆದ ಸಿಡಿಮದ್ದಾಗಿದ್ದಿತು. ಬಂಡಿಯು ಮುಂದಕ್ಕೆ ಹೋದಮೇಲೆ ಅದು ಭೂಮಿಗೆ ಬಿದ್ದು ಒಡೆದುಹೋದುದರಿಂದ ಬಂಡಿಯಲ್ಲಿದ್ದವರಿಗೆ ಅಪಾಯವೇನೂ ಆಗಲಿಲ್ಲ. ಆದರೆ ಆ ಸ್ಥಳದಲ್ಲಿದ್ದ ಆರುಮಂದಿಗಳಿಗೂ ಡ್ಯೂಕರ ಹಿಂಗಾವಲಿನವರಿಗೂ ಏಟುಬಿದ್ದಿತು. ಬಳಿಕ ಬಂಡಿಯಹಿಂದೆ ಊರಜನರ ಗುಂಪು ಓಡುತ್ತಿದ್ದಿತು. ಅವರಲ್ಲಿದ್ದ ಒಬ್ಬ ಹೈಸ್ಕೂಲು ವಿದ್ಯಾರ್ಥಿಯು ಮುಂದಕ್ಕೆ ಸರಿದು ಬಂಡಿಯೊಳಗಿದ್ದವರ ಮೇಲೆ ತುಪಾಕಿಯನ್ನು ಹಾರಿಸಿದನು. ಅದರ ಗುಂಡುಗಳು ಯುವದಂಪತಿಗಳಿಬ್ಬರಿಗೂ ಬಿದ್ದುವು. ಕೂಡಲೇ ಅವರಿಬ್ಬರನ್ನೂ ವೈದ್ಯಶಾಲೆಗೆ ಸಾಗಿಸಿದರು. ಆದರೂ ಇಬ್ಬರೂ ಸತ್ತರು. "ಪ್ರಿಯೆ! ಮಕ್ಕಳಿಗೋಸುಗವಾದರೂ ನೀನು ಬದುಕಬೇಕು" ಎಂಬುದೇ ಡ್ಯೂಕರ ಕೊನೆಯ ಮಾತಾಗಿದ್ದಿತು. ಇತ್ತ ಸಿಡಿಮದ್ದನ್ನೆಸೆದ—ತುಪಾಕಿಯನ್ನು ಹಾರಿಸಿದ ಘಾತುಕರಿಬ್ಬರೂ ಸಿಕ್ಕಿಬಿದ್ದರು. ಪ್ರಜೆಗಳು ಅವರಿಬ್ಬರನ್ನೂ ಹಣ್ಣುಗಾಯಿಯಾಗುವಂತೆ ಹೊಡೆದು ಬಿಡದುಹಾಕಿದರು. ನೀನು ಏತಕ್ಕೆ ಹೀಗೆಮಾಡಿದೆ ಎಂದು ಕೇಳಲಾಗಿ, ವಿದ್ಯಾರ್ಥಿಯು— ನಾನು ಜಾತೀಯೈಕ್ಯವಿಷಯದಿಂದ ಪ್ರೇರಿತನಾಗಿ ಯಾವನಾದರೊಬ್ಬ ಘನವಂತನನ್ನು ಕೊಲ್ಲಬೇಕೆಂದು ಬಹುಕಾಲದಿಂದ ನೆನೆಸಿಕೊಂಡಿದ್ದೆ; ಈಗ ಕಾಲವೊದಗಿತು. ಈ ಡ್ಯೂಕರನ್ನು ಕೊಲ್ಲುವುದಕ್ಕೆ ನನಗೆ ಯಾರೂ ಸಹಾಯ ಮಾಡಿರಲಿಲ್ಲ—ಎಂದು ಹೇಳಿದನು. ಸಿಡಿಮದ್ದನ್ನೆಸೆದವನಾದರೋ— ನನಗೆ ಬೆಲ್‌ಗ್ರೇಡಿನ ರಾಜದ್ರೋಹಿಗಳು ಸಿಡಿಮದ್ದನ್ನು ಕಳುಹಿಸಿಕೊಟ್ಟಿದ್ದರು. ಅವರ ಹೆಸರು ನನಗೆ ತಿಳಿಯದು. ಇದನ್ನೆಸೆಯುವುದಕ್ಕೆ ನನಗೆ ಯಾರೂ ಸಹಾಯ ಮಾಡಲಿಲ್ಲ ಎಂದು ಹೇಳಿದನು. ಈ ಸುದ್ದಿಯು ಆಸ್ಟ್ರಿಯಾ ಚಕ್ರವರ್ತಿಯವರಾದ ೮೪ ವಯಸ್ಸಿನ ಮುಪ್ಪಿನ ಫ್ರಾನ್ಸಿಸ್ ಜೋಸೆಫ್‌ರವರಿಗೆ ತಿಳಿದಕೂಡಲೇ ಅವರು— "ಓಹೋ ಭೀಕರ! ಭೀಕರ!! ಸರ್ವನಾಶವಾಯಿತು!!! ಈ ದುಃಖವನ್ನು ಸಹಿಸುವುದು ಅಸಾಧ್ಯವು" ಎಂದು ಹೇಳಿ ಗೋಳಿಟ್ಟರು.

ಈ ಕೊಲೆಯಿಂದ ಆಸ್ಟ್ರಿಯಾ ಸರ್ವಿಯಾಗಳ ಮಧ್ಯದ ವೈಮನಸ್ಯವು ಮತ್ತಷ್ಟು ವೃದ್ಧಿಯಾಗುವುದೆಂದು ಯೋಚಿಸಲ್ಪಟ್ಟಿದೆ. ಸೆರಾಜೋವೋ ಪಟ್ಟಣದ ಪ್ರಜೆಗಳು ಸರ್ವಿಯನ್ನರಿಗೆ ವಿರುದ್ಧವಾಗಿ ಪ್ರಯತ್ನವನ್ನು ಮಾಡುತ್ತಿದ್ದಾರೆ. ಸರ್ವಿಯನ್ನರ ಕ್ಲಬ್ಬುಗಳ ಪಾಠಶಾಲೆಗಳ ಅಂಗಡಿ ಮುಂಗಟ್ಟುಗಳ ಕಿಟಕಿಗಳನ್ನೆಲ್ಲಾ ಒಡೆದುಹಾಕಿರುವರು. ಒಬ್ಬ ಹುಡುಗನು ಒಂದು ಸಿಡಿಮದ್ದನ್ನೆಸೆದನು. ಅದು ಒಬ್ಬ ಮಹಮದೀಯನಿಗೆ ತಗುಲಿತು. ಸೈನಿಕರು ಸೆರಾಜೋವೋ ಪಟ್ಟಣವನ್ನು ಕಾಯುತ್ತಾರೆ. ಜರ್ಮನಿ ಫ್ರಾನ್ಸ್ ರಷ್ಯಾದ ಪತ್ರಿಕೆಗಳು ಆಸ್ಟ್ರಿಯಾದ ನಡವಳಿಕೆಗಳು ಯೂರೋಪಿನ ಶಾಂತಿಗೆ ಬರಬರುತ್ತ ಭಂಗಕಾರಿಗಳಾಗುತ್ತಿವೆಯೆಂದೂ, ಆಸ್ಟ್ರಿಯಾವು ಶಿಥಿಲವಾಗುವ ಚಿಹ್ನಗಳು ತೋರುತ್ತಿವೆಯೆಂದೂ ಅದು ಮಾಡಿದ ಕಾರ್ಯಫಲವನ್ನು ಅದು ಅನುಭವಿಸುತ್ತಿರುವುದೆಂದೂ ಮೊದಲಾಗಿ ಆಡುತ್ತಿವೆ.

ಈ ಕೊಲೆಯ ಸುದ್ದಿಯು ಪ್ರಪಂಚಕ್ಕೆಲ್ಲಾ ಕೂಡಲೇವ್ಯಾಪಿಸಿತು. ಎಲ್ಲಾ ಪ್ರಜೆಗಳೂ ಚಕ್ರವರ್ತಿಯವರಿಗೆ ಅನುತಾಪವನ್ನು ತಿಳಿಸಿದರು. ನಮ್ಮ ಜಾರ್ಜ್ ಚಕ್ರವರ್ತಿಯವರು ತಮ್ಮ ಬಕಿಂಗ್‌ಹ್ಯಾಂ ಅರಮನೆಯಲ್ಲಿ ಆದಿನ ನೆರವೇರಬೇಕಾಗಿದ್ದ ಔತಣವನ್ನು ಇದಕ್ಕಾಗಿ ನಿಲ್ಲಿಸಿಬಿಟ್ಟರು. ಮತ್ತೂ ಲಂಡನ್ ಪಟ್ಟಣದಲ್ಲಿರುವ ಆಸ್ಟ್ರಿಯಾ ರಾಯಭಾರಿಯ ಬಳಿಗೆ ತಾವೇ ಹೋಗಿ ಡ್ಯೂಕ್ ದಂಪತಿಗಳ ಮೃತಿಯಿಂದ ತಮಗುಂಟಾದ ವಿಷಾದವನ್ನು ತಿಳಿಯಪಡಿಸಿಬಂದರು. ಅದರಂತೆ ರಾಜಕುಟುಂಬದ ಇತರರೂ ಇಂಗ್ಲಾಂಡಿನ ಮಂತ್ರಿಮಂಡಲದವರೂ, ಲಾರ್ಡ್ ಕಿಚನರ್‌ರವರೇ ಮೊದಲಾದನೇಕರೂ ನಾನಾ ಪ್ರಭುತ್ವದ ರಾಯಭಾರಿಗಳೂ ಕೂಡ ಆಸ್ಟ್ರಿಯಾ ರಾಯಭಾರಿಯ ಮನೆಗೆ ಹೋಗಿದ್ದು ತಮ್ಮ ದುಃಖವನ್ನು ನಿವೇದಿಸಿಬಂದರು. ತಾ|| ೨೮ರಿಂದ ೮ ದಿನಗಳವರೆಗೆ ಇಂಗ್ಲಾಂಡ್ ರಾಜಭವನಗಳಲ್ಲಿ ದುಃಖಚಿಹ್ನಗಳನ್ನು ಧರಿಸಿರಬೇಕೆಂದು ಅಪ್ಪಣೆಯಾಗಿರುವುದು. ಪಾರ್ಲಿಮೆಂಟಿನಲ್ಲಿ ಆಸ್ಕ್ವಿತ್‌ಮಂತ್ರಿಯವರು ಡ್ಯೂಕರ ಮರಣವಾರ್ತೆಯನ್ನು ಕುರಿತು ಮಾತನಾಡಿ ಆಸ್ಟ್ರಿಯಾ ಚಕ್ರವರ್ತಿಯವರಿಗೆ ತಮ್ಮ ಸಭೆಯ ಅನುತಾಪವನ್ನು ತಿಳಿಯಿಸುವಾಗ್ಗೆ— ಈಗ್ಗೆ ೬೦ ವರ್ಷಗಳಿಂದಲೂ ಆಸ್ಟ್ರಿಯಾ ಚಕ್ರವರ್ತಿಯವರು ನಾನಾ ದುಃಖಭಾರಗಳನ್ನೂ ರಾಜ್ಯಭಾರವನ್ನೂ ವಹಿಸಿರುವರು. ಈ ತೆರದ ಭಾರವನ್ನು ವಹಿಸಿದವರು ಮತ್ತೊಬ್ಬರಿಲ್ಲ. ಸ್ವಾರ್ಥತ್ಯಾಗದಲ್ಲೂ ಶ್ರದ್ಧೆಯಲ್ಲೂ ಆಸ್ಟ್ರಿಯಾ ಚಕ್ರವರ್ತಿಯವರು ಪ್ರಪಂಚದ ಭೂಪಾಲಕರಿಗೆಲ್ಲಾ ಮಾರ್ಗದರ್ಶಕರಾಗಿರುವರು ಎಂದು ಹೇಳಿದರು. ಭರತಖಂಡದಲ್ಲೂ ಕೂಡ ಆಂಗ್ಲಪ್ರಭುತ್ವದ ಕಾರ್ಯಾಲಯಗಳಲ್ಲಿ ತಾ|| ೨೮ರಿಂದ ೮ ದಿನಗಳವರೆಗೆ ದುಃಖಚಿಹ್ನಗಳನ್ನು ಧರಿಸಿರಬೇಕೆಂದು ಅಪ್ಪಣೆಯಾಗಿದೆ. ಮೈಸೂರಾಯರ ಭವನದಲ್ಲಿ ತಾ|| ೩೦ರ ರಾತ್ರಿ ಜರುಗಬೇಕಾಗಿದ್ದ ನಾಟ್ಯೋತ್ಸವವು ಈ ಕಾರಣದಿಂದಲೇ ನಿಲ್ಲಿಸಲ್ಪಟ್ಟಿತು.

ಸರ್ವಿಯಾಗೌರ್‍ಮೆಂಟಿನವರು ತಮ್ಮ ಅರಮನೆಗಳಲ್ಲಿ ೬ ವಾರಗಳವರೆಗೆ ದುಃಖಚಿಹ್ನಗಳನ್ನು ಧರಿಸಿರಬೇಕೆಂದು ಅಪ್ಪಣೆಮಾಡಿದ್ದಾರೆ. ಅಲ್ಲಿನ ಪ್ರಭುಗಳೂ ಸರ್ಕಾರದವರೂ ಆಸ್ಟ್ರಿಯಾ ಚಕ್ರವರ್ತಿಗೆ ತಮ್ಮ ಅನುತಾಪವನ್ನು ತಂತಿಯ ಮೂಲಕ ತಿಳಿಯಿಸಿದ್ದಾರೆ. ರಷ್ಯಾ ಚಕ್ರವರ್ತಿಯವರೂ ತಮ್ಮ ಸಹತಾಪವನ್ನು ತಿಳಿಯಿಸಿದ್ದಾರೆ.

ಈಚೆಗೆ ಶವಗಳೆರಡನ್ನೂ ಪೆಟ್ಟಿಗೆಗಳಲ್ಲಿಟ್ಟು ಪುಷ್ಪಹಾರಾದಿಗಳಿಂದಲಂಕರಿಸಿ ಸೇನಾಮರ್ಯಾದೆಯಿಂದ ಯುದ್ಧದಹಡಗಿನಮೇಲಿಟ್ಟು ವಿಯನ್ನಾ ಪಟ್ಟಣಕ್ಕೆ ತಂದರು. ಗತಿಸಿದ ಡ್ಯೂಕರ ಅಭಿಪ್ರಾಯದ ಪ್ರಕಾರ ಆರ್ಟ್‌ಸ್ಟೆಟ್ಟೆನ್ನಲ್ಲಿ ಸಮಾಧಿಕ್ರಿಯೆಯು ಶುಕ್ರವಾರದ ದಿನ ನಡೆಯಿತು.

ಒಳದೇಶದ ವೃತ್ತಾಂತಗಳು.

ಶ್ರೀಮನ್ ಮಹಾರಾಜರವರು ಮಹಾಮಾತೃಶ್ರೀಯವರೊಡನೆ ಇಷ್ಟರಲ್ಲೇ ಊಟಿಗೆ ಚಿತ್ತೈಸುವುದಾಗುಯುತ್ತೇವೆ.

ಮೂಡಿಗೆರೆ ರೇಂಜಿನಲ್ಲಿರುವ ಫಾರೆಸ್ಟ್ ಸ|| ಅ|| ಕನ್ಸರ್ವೇಟರಾದ ಮ|| ಎಂ. ಎ. ವರದಾಚಾರರು ಕುಂಸಿಯಲ್ಲಿರುವ ಮರಕೊಯ್ಯುವ ಯಂತ್ರಾಲಯದ ಮೇಲ್ವಿಚಾರಣೆಗೆ ನಿಯಮಿಸಲ್ಪಟ್ಟಿರುವರು.

ಅರಮನೆಯ ಸಿಪಾಯಿಗಳ ಭಕ್ಷಿಯರಾಗಿದ್ದ ಮಿ|| ಮೀರ್ ಮಹಮದ್ ಮೂಸಾಯವರು ಉದ್ಯೋಗದಿಂದ ನಿವೃತ್ತಿಗೊಳಿಸಲ್ಪಟ್ಟು, ಜಿಲ್ಲೋಕಚೇರಿಯ ಭಕ್ಷಿಯರಾದ ಸರದಾರ್ ಎ. ವಿ. ಸುಬ್ರಹ್ಮಣ್ಯರಾಜಅರಸಿನವರು ಸಿಪಾಯಿಗಳ ಭಕ್ಷಿಯರಾಗಿ ನಿಯಮಿಸಲ್ಪಟ್ಟಿರುವರು.

ಸಂಸ್ಥಾನದ ಮ್ಯುನಿಸಿಪಾಲಿಟಿಯವರುಗಳು ತಮ್ಮ ಎಲ್ಲೆಯಲ್ಲಿ ಸುಂಕ ಕೊಡಲ್ಪಡುವ ಪದಾರ್ಥಗಳನ್ನು ಕದ್ದು ತೆಗೆದುಕೊಂಡು ಹೋಗುವವರನ್ನು ಕಂಡು ಹಿಡಿದುಕೊಡತಕ್ಕವರಿಗೆ ಬಹುಮಾನವನ್ನು ಕೊಡಲು ತಕ್ಕವಕಾಶವನ್ನು ಕಲ್ಪಿಸಿಕೊಳ್ಳುವಂತೆ ಸರ್ಕಾರದಪ್ಪಣೆಯಾಗಿರುವುದು.

ಬೆಂಗಳೂರು ಶಾರದಾವಿಲಾಸ ಮುದ್ರಾಕ್ಷರಶಾಲೆಯಲ್ಲಿ ೧೧ ವರ್ಷದ ಒಬ್ಬ ಹುಡುಗನು ಯಂತ್ರದಲ್ಲಿ ಕಾಗದವನ್ನು ಕತ್ತರಿಸುತ್ತಿರುವಾಗ್ಗೆ ಅವನ ಕೈಬೆರಳುಗಳು ಚಾಕುವಿನ ಕೆಳಗೆ ಸಿಕ್ಕಿ ಕತ್ತರಿಸಿಹೋಗಲು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಅವನ ಹಸ್ತವೇ ಕತ್ತರಿಸಿ ಹಾಕಲ್ಪಟ್ಟಿತು.

ಬರೋಡಾ ಸಂಸ್ಥಾನದ ಗ್ರಾಮಗಳ ಆರೋಗ್ಯಾಭಿವೃದ್ಧಿಯನ್ನು ಮಾಡುವುದಕ್ಕಾಗಿ ಬೆಂಗಳೂರ ಸೆಂಟ್ರಲ್ ಜೈಲಿನಸೂಪರಿಂಟೆಂಡೆಂಟರಾದ ಡಾ|| ಪಲ್ಪುಯವರನ್ನು ಕಳುಹಿಸಿಕೊಡಬೇಕೆಂದು ಅಲ್ಲಿಯ ದಿವಾನರಾದ ಮ|| ವಿ. ಪಿ. ಮಾಧವರಾಯರು ನಮ್ಮ ಸರ್ಕಾರದವರನ್ನು ಕೇಳಿರುವುದಾಗಿ ತಿಳಿಯುತ್ತೇವೆ.

ಮೈಸೂರ ಮಹಾರಾಜಾಕಾಲೇಜಿನಲ್ಲಿ ಆನರ್ಸ್‌ಕೋರ್ಸ್ ತರಗತಿಯನ್ನೇರ್ಪಡಿಸಿ, ಅದು ಈಗ ಓರಿಯಂಟಲ್ ಲೈಬ್ರೆರಿ ಇರುವ ಕಟ್ಟಡದಲ್ಲಿ ನಡೆಯುವಂತೆಯೂ, ಲೈಬ್ರೆರಿಯನ್ನು ಕೈಗಾರಿಕೆಯ ಪಾಠಶಾಲೆಯ ಕಟ್ಟಡಕ್ಕೆ ವರ್ಗಾಯಿಸಲು ತಕ್ಕೇರ್ಪಾಟುಗಳನ್ನು ಮಾಡಲು ವಿದ್ಯಾಭ್ಯಾಸದ ಇ|| ಜನರಲ್‌ರವರು ಇಷ್ಟರಲ್ಲೇ ರಾಜಧಾನಿಗೆ ಬರುವುದಾಗಿ ತಿಳಿಯುತ್ತೇವೆ.

ಬೆಂಗಳೂರ ಮುನಸೀಫರಾದ ಮ|| ಲಕ್ಷ್ಮೀನಾರಣಪ್ಪನವರು ಕಳೆದ ತಾ|| ೩ರಲ್ಲಿ ಎತ್ತಿನ ಟಾಂಗಾ ಬಂಡಿಯಲ್ಲಿ ಕುಳಿತುಕೊಂಡು ಕೋರ್ಟಿಗೆ ಹೋಗುತ್ತಿರುವಾಗ್ಗೆ ಇದಿರಾಗಿಬರುತ್ತಿದ್ದ ಅಂಚೆಯ ಕುದುರೆ ಬಂಡಿಯು ತಾಕುಬಡಿದು ಟಾಂಗಾ ಬಂಡಿಯ ನೊಗವು ಮುರಿದುಹೋಯಿತು. ಆದರೆ ದೈವಾಧೀನದಿಂದ ಯಾರಿಗೂ ಅಪಾಯವೇನೂ ಆಗಲಿಲ್ಲವು.

ಸೀಮೆಗೆ ಹೋಗಿದ್ದ ಮಿ|| ಬೌರಿಂಗ್‌ರವರು ಹಿಂದಿರುಗಿ ಬಂದು ಕಳೆದ ತಾ|| ೩೦ ರಲ್ಲಿ ಮ|| ಬಿ. ರಾಮಸ್ವಾಮಯ್ಯನವರಿಂದ ಕೋಲಾರದ ಡಿಪ್ಯುಟಿಕಮಿಷನರುದ್ಯೋಗದ ಛಾರ್ಜನ್ನು ವಹಿಸಿಕೊಂಡರು. ಮ|| ರಾಮಸ್ವಾಮಯ್ಯನವರು ದಾವಣಗೆರೆಗೆ ವರ್ಗಪಟ್ಟಿರುವ ಮ|| ಚೊಕ್ಕಣ್ಣನವರ ಬದಲು ಕೋಲಾರದ ಚಿನ್ನದಗಣಿಗಳ ಸ್ಪೆಷಲ್‌ಮ್ಯಾಜಿಸ್ಟ್ರೇಟರಾಗಿ ಹೋಗುವರೆಂದು ತಿಳಿಯುತ್ತೇವೆ.

ರಾಜಧಾನಿಯಲ್ಲಿ ನಡೆದ ಕುದುರೆಯ ಪಂದ್ಯಗಳನ್ನು ನೋಡಲು ಉದಕಮಂಡಲದಿಂದ ಬಂದಿದ್ದ ಬರೋಡಾ ಸಂಸ್ಥಾನದ ಯುವರಾಜರು ನಮ್ಮ ಶ್ರೀಮದ್ಯುವರಾಜರೊಡನೆ ಕಳೆದ ತಾ|| ೩೦ರಲ್ಲಿ ಬೆಂಗಳೂರಿಗೆ ಪ್ರಯಾಣ ಮಾಡಿ ಅಲ್ಲಿಂದ ಆದೇ ಸಾಯಂಕಾಲ ಪ್ರಯಾಣಮಾಡಿದರು. ನಮ್ಮ ಶ್ರೀಮದ್ಯುವರಾಜರು ಈ ದಿವಸ ಬೆಂಗಳೂರಿಂದ ರಾಜಧಾನಿಗೆ ಹಿಂದಿರುಗುವುದಾಗಿ ತಿಳಿಯಬರುತ್ತದೆ.

ರೆವಿನ್ಯೂ ಕಮಿಷನರ ಅಸಿಸ್ಟೆಂಟರಾದ ಮಿ|| ನ್ಯಾಯಾಪತಿ ಮಾಧವರಾಯರು ಜ|| ಮತ್ತು ರೆ|| ಸೆಕ್ರೆಟೆರಿಯಟ್ಟಿನಲ್ಲಿ ಎಫಿಷಿಯನ್ಸಿ ಆಡಿಟ್ ಶಾಖೆಗೂ, ರಾಜಧಾನಿಯ ಮುನಸೀಫರಾದ ಮ|| ಜಿ. ಶ್ರೀನಿವಾಸಯ್ಯರವರು ಜ|| ಮತ್ತು ರೆ|| ಸ್ರೆಕೆಟರಿಯಟ್ಟಿನಲ್ಲಿ ಲೆಜಿಸ್ಲೇಟಿವ್ ಶಾಖೆಗೂ ವರ್ಗಾಯಿಸಲ್ಪಟ್ಟು, ಮಿ|| ಡಿಸೌಜಾಯವರು ಡೆಪ್ಯುಟಿ ಸೆಕ್ರೆಟರಿಯಾಗಿಯೂ, ಮ|| ಎಸ್. ಪಿ. ರಾಜಗೋಪಾಲಾಚಾರ್ಯರು ದಿವಾನರ ಬಳಿ ಅಸಿಸ್ಟೆಂಟ್ ಸೆಕ್ರೆಟರಿಯಾಗಿಯೂ ನಿಯಮಿಸಲ್ಪಟ್ಟಿರುವರು.

ನಮ್ಮ ಸರ್ಕಾರದವರಿಂದ ಗ್ವಾಲಿಯರ್ ಮಹಾರಾಜರವರು ಕ್ರಯಕ್ಕೆ ತೆಗೆದುಕೊಂಡಿರುವ ೨೦ ಆನೆಗಳು ರಾಜಧಾನಿಯಿಂದ ಬೆಂಗಳೂರಿಗೆ ರೈಲುಬಂಡಿಗಳಲ್ಲಿ ಸಾಗಿಸಲ್ಪಟ್ಟು ಅಲ್ಲಿ ಕಳೆದ ಮಂಗಳವಾರ ಚಿಕ್ಕಬಂಡಿಗಳಿಂದಿಳಿಸಲ್ಪಟ್ಟು ದೊಡ್ಡ ಬಂಡಿಗಳಿಗೆ ಹತ್ತಿಸಲ್ಪಡುವಾಗ್ಗೆ ಒಂದಾನೆಯು ಬಂಡಿಯನ್ನು ಹತ್ತಲು ಬಹಳ ತಂಟೆಯನ್ನು ಮಾಡಲು, ಉಳಿದ ಆನೆಗಳಿಂದ ಅದನ್ನು ನೂಕಿಸಿ ಬಂಡಿಗೆ ಹತ್ತಿಸುವ ಪ್ರಯತ್ನದಲ್ಲಿ ಬಹಳ ಘಾಸಿಯಾಗಿ ಕೆಳಕ್ಕೆ ಬಿದ್ದು ಕೂಡಲೇ ಪ್ರಾಣವನ್ನು ಬಿಟ್ಟಿತು. ಶವವು ಬುಧವಾರದ ಬೆಳಗಿನವರೆಗೂ ಸಾಮಾನನ್ನು ಹಾಕುವ ಜಗತಿಯಮೇಲೆ ಬಿದ್ದಿದ್ದು ಅನಂತರ ಮ್ಯುನಿಸಿಪಾಲಿಟಿಯವರಿಂದ ಹೊರಕ್ಕೆ ಸಾಗಿಸಲ್ಪಟ್ಟಿತು.

ರಾಜಧಾನಿಯಲ್ಲಿ ಸ್ಥಾಪಿತವಾಗಿರುವ ಸೇಂಟ್‌ಜಾನ್ ಆಂಬ್ಯುಲೆನ್ಸ್ ಅಸೋಸಿಯೇಷನ್ ಅಂದರೆ ಗಾಯವಡೆದ ಅಥವಾ ನಾಯಿ ಕಡಿದ ಜನರಿಗೆ ತರುಣದಲ್ಲಿ ವೈದ್ಯರಸಹಾಯವಿಲ್ಲದೆಯೇ ಗಂಡುಸರಾಗಲಿ ಹೆಂಗುಸರಾಗಲಿ ಕೂಡಲೇ ಚಿಕಿತ್ಸೆಯನ್ನು ಮಾಡುವುದನ್ನು ಕಲಿಸುವ ಸಂಘದವರು ಕಳೆದ ಶನಿವಾರ ಸಾಯಂಕಾಲ ಟೌನ್‌ಹಾಲಿನಲ್ಲಿ ಶ್ರೀಮನ್ಮಹಾರಾಜರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದರು. ಈ ಸಂಘದ ಸೆಕ್ರೆಟರಿಯವರಾದ ಸರ್ದಾರ್ ಲಕ್ಷ್ಮೀಕಾಂತರಾಜ ಅರಸಿನವರು ೧೯೧೩ನೆಯ ಜನವರಿಯಿಂದ ಈ ಜುಲೈ ವರೆಗಿನ ಕಾರ್ಯದ ವರದಿಯನ್ನೋದಿದ ಮೇಲೆ ೪೪ ವಿದ್ಯಾರ್ಥಿಗಳಿಂದ ಚಿಕಿತ್ಸಾಕ್ರಮವು ನಡೆಸಲ್ಪಟ್ಟು ಪರೀಕ್ಷೆಯಲ್ಲಿ ಉತ್ತೀರ್ಣರಾದ ೪೪ ವಿದ್ಯಾರ್ಥಿಗಳಿಗೆ ಶ್ರೀಮನ್ಮಹಾರಾಜರವರ ಹಸ್ತದಿಂದ ಯೋಗ್ಯತಾಪತ್ರ (ಸರ್ಟಿಫಿಕೇಟು) ಗಳು ದಯಪಾಲಿಸಲ್ಪಟ್ಟುವು.

ಬೆಂಗಳೂರ ಡಿಸ್ಟ್ರಿಕ್ಟ್ ಜಡ್ಜರಾದ ಮಿ|| ಪ್ಲಮರ್ ಸಾಹೇಬರು ಆಷೇವಾರದಲ್ಲಿ ದೊಡ್ಡಬಳ್ಳಾಪುರಕ್ಕೆ ಹೋಗಿದ್ದು ಅಲ್ಲಿಯ ಮುನಸೀಫ್‌ಕೋರ್ಟನ್ನೂ, ಸಬ್‌ಡಿವಿಜನಾಫೀಸರಾದ ಮ|| ಕೃಷ್ಣಸ್ವಾಮಯ್ಯಂಗಾರರು ಅಲ್ಲಿನ ಸಬ್‌ರಿಜಿಸ್ಟ್ರಾರಾಫೀಸನ್ನು ಪರೀಕ್ಷಿಸಿಕೊಂಡು ಬಂದರು. ಮತ್ತೂ ಲಿಪ್ಯನ್ವೇಷಣ ಶಾಖಾಧಿಕಾರಿಗಳಾದ ಮ||ಆರ್. ನರಸಿಂಹಾಚಾರರು ದೊಡ್ಡಬಳ್ಳಾಪುರದ ನೆರೆಹೊರೆಯಲ್ಲಿದ್ದ ಶಾಸನಗಳನ್ನೋದಿ ಸಂಗತಿಗಳನ್ನು ಗುರುತುಮಾಡಿಕೊಂಡು ಬಂದರು. ಈ ಊರಿಗೆ ದೂರದಲ್ಲಿರುವ ಕೆರೆಯಿಂದ ಕೊಳಾಯಿಯನ್ನಿಟ್ಟು ಕುಡಿಯುವ ನೀರನ್ನೊದಗಿಸುವುದಕ್ಕಾಗಿ ವರ್ತಕರುಗಳೂ ಇತರರೂ ಚಂದಾಹಣವನ್ನೆತ್ತಿ ಕೊಟ್ಟು ಉಳಿದ ಹಣವನ್ನು ಸರ್ಕಾರದಿಂದ ಹಾಕಿ ಜಾಗ್ರತೆಯಲ್ಲಿ ಕಾರ್ಯಾರಂಭಮಾಡಿಸಿ ಕೊಡಬೇಕೆಂದು ದಿವಾನರನ್ನೂ ಕೌನ್ಸಿಲ್ಲರುಗಳನ್ನೂ ಪ್ರಾರ್ಥಿಸುವುದಕ್ಕಾಗಿ ಆ ಊರಿನ ಮುಖಂಡರಾದ ಮ್ಯುನಿಸಿಪಲ್ ಕೌನ್ಸಿಲರುಗಳು ಬೆಂಗಳೂರಿಗೆ ಹೋಗಿದ್ದರು.

ರಾಜಧಾನಿಯ ಶ್ರೀಮಂತಮೋತಿಖಾನೆ ವರ್ಧಮಾನಯ್ಯನವರು ತಮ್ಮ ತಂದೆಯವರ ಹೆಸರಿನ ಮೇಲೆ ಸ್ಥಾಪಿಸಿರುವ ಜೈನ ಬೋರ್ಡಿಂಗ್ ಹೌಸ್ ಅಂದರೆ ವಿದ್ಯಾರ್ಥಿಗಳ ನಿಲಯಕ್ಕೆ ದಿವಾನರು ಮ|| ವಿಶ್ವೇಶ್ವರಯ್ಯನವರು ಮ್ಯುನಿಸಿಪಲ್ ಪ್ರೆಸಿಡೆಂಟರಾದ ಮ|| ಲಕ್ಷ್ಮಣರಾಯರ ಕೂಡ ಕಳೆದ ತಿಂಗಳ ತಾ|| ೨೭ ರಲ್ಲಿ ದಯಮಾಡಿಸಿದ್ದು ಅಲ್ಲಿಯ ಏರ್ಪಾಟನ್ನು ಪರಾಮರ್ಶಿಸಿ ಅದರಿಂದ ತಮಗುಂಟಾದ ಸಂತೋಷವನ್ನು ಸ್ಥಾಪಕರಿಗೆ ತಿಳುಹಿಸಿ ಬಂದರು. ಮ|| ವರ್ಧಮಾನಯ್ಯನವರು ಪ್ರತಿಯೊಬ್ಬ ವಿದ್ಯಾರ್ಥಿಗೂ ಕಬ್ಬಿಣದ ಮಂಚ, ಹಾಸಿಗೆ, ಕುರ್ಚಿ ಮೇಜಾಗಳನ್ನೊದಗಿಸಿಕೊಟ್ಟಿರುವುದಲ್ಲದೆ ಒಳ್ಳೆಯ ಪುಸ್ತಕಭಂಡಾರವನ್ನೇರ್ಪಡಿಸಿಕೊಟ್ಟಿರುವರು, ಮತ್ತೂ ಪ್ರತಿನಿತ್ಯದಲ್ಲಿ ಎರಡುವೇಳೆಯೂ ನಿಲಯಕ್ಕೆ ಹೋಗಿ ಭೋಜನದೇರ್ಪಾಟನ್ನೂ ವಿದ್ಯಾರ್ಥಿಗಳು ಕ್ರಮವಾಗಿ ವ್ಯಾಸಂಗಮಾಡುವುದನ್ನೂ ನೋಡಿಕೊಂಡು ಬರುವರು. ಸಣ್ಣವಯಸ್ಸಿನವರಾದ ಇವರಿಗೆ ಇಂತಹ ಧರ್ಮಬುದ್ಧಿಯು ಹುಟ್ಟಿರುವುದು ವಿಶೇಷವೇ ಸರಿ.

ರಾಜಧಾನಿಯಲ್ಲಿ ಕಳೆದ ಗುರುವಾರಸಾಯಂಕಾಲ ಪ್ರಾಯಶಃ ||ಅಂಗುಲಮಳೆಯಾಯಿತು. ಅಂದಿನಿಂದ ನಿತ್ಯದಲ್ಲು ಮೋಡವು ಮುಚ್ಚಿಕೊಂಡು ಸೋನೆಯಾಡುತ್ತಿರುವುದು. ಕಾವೇರೀ ನದಿಯಲ್ಲಿ ತಕ್ಕಮಟ್ಟಿಗೆ ಪ್ರವಾಹವು ಬಂದಿರುವುದರಿಂದ ವೈದ್ಯುತಶಕ್ತಿ ಶೇಖರಾಲಯ ಕೆಲಸಕ್ಕೆ ಅಡಚಣೆಯಿಲ್ಲದಂತಾಗಿರುವುದಲ್ಲದೆ ವ್ಯವಸಾಯಕ್ಕೂ ಕಾಲುವೆಗಳಲ್ಲಿ ನೀರು ಬಿಡಲ್ಪಡುತ್ತಿರುವುದು. ಹೋದತಿಂಗಳಲ್ಲಿ ಹೊಳೆಯಲ್ಲಿ ಸುತರಾಂ ನೀರುಕಡಿಮೆಯಾಗಿದ್ದುದರಿಂದ ಪ್ರತಿವರ್ಷದ ಜೂನ್ ತಿಂಗಳ ತಾ||೧೦ರಿಂದ ಶಿವನಸಮುದ್ರದಜಹಗೀರ್‌ದಾರ್‌ರವರಿಗೆ ವ್ಯವಸಾಯಕ್ಕಾಗಿ ನೀರು ಬಿಟ್ಟುಕೊಡಬೇಕಾಗಿರುವ ಪದ್ಧತಿಯಂತೆ ಈವೇಳೆ ಬಿಟ್ಟುಕೊಡಲಿಕ್ಕಾಗಲಿಲ್ಲವಾಗಿ ಜೂನ್ ತಾ|| ೧೦ರಿಂದ ನಿತ್ಯದಲ್ಲೂ ಆ ಜಹಗೀರ್ದಾರರಿಗೆ ನಮ್ಮ ಸರ್ಕಾರದವರು ೧೦೦೦ ರೂಪಾಯಿಗಳನ್ನು ಕೊಡಲೊಪ್ಪಿಕೊಂಡಿದ್ದರು. ಆದರೆ ತಾ|| ೨೭ರಲ್ಲಿ ನದಿಯಲ್ಲಿ ತಕ್ಕಮಟ್ಟಿಗೆ ನೀರುಬರಲಾರಂಭವಾಗಲು ಜಹಗೀರ್ದಾರ ಪ್ರದೇಶಕ್ಕೆ ನೀರನ್ನುಬಿಟ್ಟುಕೊಟ್ಟು ಹಣವನ್ನು ಕೊಡುವುದನ್ನುನಿಲ್ಲಿಸಿಬಿಟ್ಟರು.

ಮೈಸೂರು ದೇಶದಲ್ಲಿ ವೇ|| ಶಿವದೇವಶಾಸ್ತ್ರಿಗಳೆಂಬ ಮತ್ತೊಬ್ಬರು ಶಿವಕಥೆಯನ್ನು ಮಾಡುವುದರಲ್ಲಿ ಹೆಸರಾಂತಿರುವುದು ಸಂತೋಷಪ್ರದವಾಗಿದೆ. ಇವರು ಬೆಂಗಳೂರು ಮೊದಲಾದ ಕಡೆಯಲ್ಲಿ ಶಿವಕಥಾ ಕಾಲಕ್ಷೇಪಮಾಡಿ, "ನವರಸ ಶಿವಕಥಾಪಂಡಿತ" ಎಂಬ ಬಿರುದನ್ನು ಅಲ್ಲಿನ ವೀರಶೈವ ಮಹಾಜನರಿಂದ ಹೊಂದಿರುವರೆಂದು ಕೇಳಿದ್ದೆವು. ಇವರು ಮೈಸೂರಿಗೆ ಬಂದು ಹಳೇ ಅಗ್ರಹಾರದ ವರ್ತಕಮಂಡಲಿಯವರ ಪ್ರಾರ್ಥನೆಯಂತೆ ತಳೂರು ಮಠದಲ್ಲಿ ಕಳೆದ ಶುಕ್ರವಾರ ರಾತ್ರಿ ಗಿರಿಜಾಕಲ್ಯಾಣ ಕಾಲಕ್ಷೇಪವನ್ನು ಮಾಡಿದರು. ವಿದ್ವಜ್ಜನರಾದಿಯಾಗಿ ಸಾವಿರಾರು ಜನರು ಸಭೆಗೆ ಬಂದಿದ್ದರು. ಪೀಠಿಕಾಭಾಗಮೊದಲ್ಗೊಂಡು ಆದ್ಯಂತವಾಗಿ ಕಥೆಯು ರಸಪುಷ್ಟವಾಗಿದ್ದಿತು. ಶಾಸ್ತ್ರಿಗಳ ಶುದ್ಧವಾದ ವಾಣಿಯೂ, ಸಮಯೋಚಿತವಾದ ಉಪಕಥೆಗಳೂ, ಆಧಾರಶ್ಲೋಕಗಳೂ, ಕಥೆಯನ್ನು ಸಾಗಿಸುವ ರೀತಿಯೂ ಶ್ರೋತೃಗಳ ಚಿತ್ತಾಕರ್ಷಕವಾಗಿದ್ದುವು. ತಕ್ಕ ಪ್ರೋತ್ಸಾಹದಿಂದ ಇವರು ಮುಂದೆ ಉತ್ತಮವಾಗಿ ಖ್ಯಾತಿಗೊಳ್ಳಬಹುದೆಂದು ಕಾಣುತ್ತಾರೆ.

ವಿವಿಧ ವೃತ್ತಾಂತಗಳು.

ಅನಂತಪುರದಲ್ಲಿ ಸೆಷನ್ಸು ಮತ್ತೂ ಡಿಸ್ಟ್ರಿಕ್ಟ್‌ಕೋರ್ಟು ಈ ವರ್ಷದಂತ್ಯದಲ್ಲಿ ಸ್ಥಾಪಿಸಲ್ಪಡತಕ್ಕದಾಗಿದೆ.

ಮ್ಯಾಂಚೆಸ್ಟರಿನಲ್ಲಿ ಸ್ತ್ರೀಯರನ್ನು ಪೊಲೀಸಿಗೆ ಸೇರಿಸಿಕೊಳ್ಳಲು ಪರೀಕ್ಷಿಸಿ ನೋಡುತ್ತಿರುವರು. ಅಮೇರಿಕಾದ ಅನೇಕ ಪಟ್ಟಣಗಳಲ್ಲಿ ಸ್ತ್ರೀಯರು ಪೊಲೀಸಿನಲ್ಲಿ ನಿಯಮಿಸಲ್ಪಟ್ಟಿರುವರು.

ಆಲಂಫಿಯಾ ಎಂಬಲ್ಲಿ ವೆಲ್ಸ್ ಮತ್ತೂ ಬೆಲ್ ಎಂಬುವರು ಮುಷ್ಟಿಯುದ್ಧವನ್ನು ಮಾಡಿದರು. ಅದನ್ನು ನೋಡಲು ೧೦ ಸಾವಿರಜನರು ಸೇರಿದ್ದರಲ್ಲದೆ ಅದರಲ್ಲಿ ನೂರಾರುಸ್ತ್ರೀಯರಿದ್ದರು.

ಕಲ್ಕತ್ತಾ ಪಟ್ಟಣದಲ್ಲೂ ಅದರ ನೆರೆಯ ಪ್ರದೇಶದಲ್ಲೂ ೧೯೧೩ರಲ್ಲಿ ೬೩೬೬೨೮ ರೂ. ಬೆಲೆಯ ಪದಾರ್ಥಗಳು ಕಳುವಾಗಿದ್ದು ೧೭೭೪೩೬ ರೂ. ಬೆಲೆಯ ಪದಾರ್ಥಗಳು ದೊರಕಿದುವು.

ಲಾರ್ಡ್‌ಹಾರ್ಡಿಂಜ್‌ರವರು ಭರತಖಂಡದ ವೈಸ್‌ರಾಯ್ ಪದವಿಯನ್ನು ಬಿಟ್ಟ ಮೇಲೆ ಲಾರ್ಡ್ ಕಿಚನರ್‌ರವರು ವೈಸ್‌ರಾಯರಾಗಿ ನಿಯಮಿಸಲ್ಪಡುವ ಸಂಭವವಿರುವುದೆಂದು ಡೇಲಿಮೇಲ್ ಎಂಬ ಪತ್ರಿಕೆಯು ತಿಳಿಸುತ್ತದೆ.

ನೇಪಿಟಾಲಿನ ಹೋಟೇಲಿನವನೊಬ್ಬನು ಒಬ್ಬ ಹೆಂಗುಸಿನಲ್ಲಿ ಅನುರಕ್ತನಾಗಿದ್ದನು. ಇದಕ್ಕೆ ಆಕೆಯ ಜ್ಯೇಷ್ಠಳು ವಿಘ್ನವಾಗಿ ಬರಲು ಅವನು ಅವರಿಬ್ಬರನ್ನೂ ಕೊಂದು ತಾನು ಒಂದು ಕೊಳದಲ್ಲಿ ಬಿದ್ದು ಆತ್ಮಹತ್ಯೆಯನ್ನು ಮಾಡಿಕೊಂಡನು.

ಕಳೆದ ತಾ|| ೨೮ರಲ್ಲಿ ಬವೇರಿಯಾದಲ್ಲಿ ವಿಪರೀತ ಮಳೆಯಾಗಿ ವ್ಯಾಪಾರದ ಸ್ಥಳಗಳೂ ಪಾಠಶಾಲೆಗಳೂ ಬಂಗಲೆಗಳೂ ಮುಳುಗಿ ವಿಶೇಷನಷ್ಟವುಸಂಭವಿಸಿರುವುದು. ಮನೆಗಳುಮುರಿದುಹೋದುದರಿಂದ ೨೦ ಜನ ಐರೋಪ್ಯರಿಗೆ ಅಪಾಯವಾಗಿರುವುದು.

ಆಲಿಪುರದ ಜೇಲಿನಲ್ಲಿ ೧೦ ವರ್ಷ ಕಠಿಣ ಕಾರಾಗೃಹವಾಸದ ಶಿಕ್ಷೆಯನ್ನು ಅನುಭವಿಸುತ್ತಿದ್ದ ರಾಮಲಕಚಂದ್‌ಕುರ್ಮಿ ಎಂಬುವನು ತನ್ನ ಕುತ್ತಿಗೆಗೆ ಒಂದು ಹಗ್ಗವನ್ನು ಬಿಗಿದುಕೊಂಡು ಕಿಟಕಿಯ ಕಬ್ಬಿಣದ ಕಂಬಿಗೆ ನೇತುಕಟ್ಟಿ ಆತ್ಮಹತ್ಯೆಯನ್ನು ಮಾಡಿಕೊಂಡನು.

ಆನಿಬೆಸೆಂಟ್ ಅಮ್ಮನವರು ಭಾರತೀಯರ ಕೊರತೆಗಳನ್ನು ಮತ್ತೂ ಅವರನುಭವಿಸುತ್ತಿರುವ ಅನ್ಯಾಯಗಳನ್ನು ಕುರಿತು ಲಂಡನ್ನಿನಲ್ಲಿ ಹೃದಯದ್ರಾವಕವಾಗುವಂತೆ ಉಪನ್ಯಾಸವನ್ನು ಮಾಡುತ್ತಿರುವಾಗ್ಗೆ ಲಾರ್ಡ್‌ಬ್ರಾಸೆಯವರು 'ಕೇಳಿ, ಕೇಳಿ,' ಎಂದು ಕೂಗಿ ಹೇಳುತ್ತಿದ್ದರಂತೆ.

ಲಂಡನ್ ನಗರದಲ್ಲಿ ಓಲ್ಡ್‌ಕೆಂಟ್‌ರೋಡ್ ಎಂಬ ಬೀದಿಗೆ ಅಗ್ನಿಪ್ರವೇಶವಾಗಿ ಬಣ್ಣಗಳನ್ನು ಮಾಡುವ-ಬಂಡಿಗಳನ್ನು ತಯಾರಿಸುವ ಅಂಗಡಿಗಳು, ನಾಟಕಶಾಲೆಯು ಮತ್ತು ಅನೇಕ ಬಂಗಲೆಗಳು ಸುಟ್ಟು ಭಸ್ಮವಾಗಿ ೧೫೦೦೦೦೦ ರೂಪಾಯಿಗಳವರೆಗೆ ನಷ್ಟವಾಗಿರುವದು.

ದಕ್ಷಿಣಾಫ್ರಿಕಾದ ಗೌರ್ನರ್ ಜನರಲ್‌ರವರಾದ ಲಾರ್ಡ್ ಗ್ಲಾಡಸ್ಟನ್‌ರವರು ಭರತಖಂಡದ ವೈಸ್‌ರಾಯರಿಗೆ ಭಾರತೀಯರ ಕಷ್ಟನಿವಾರಣೆಯ ಬಿಲ್ಲು ಎರಡು ಯೂನಿಯನ್ ಪಾರ್ಲಿಮೆಂಟ್ ಸಭೆಗಳಿಂದಲೂ ಅನುಮೋದಿತವಾಗಿರುವುದೆಂದು ತಂತಿಯವಾರ್ತೆಯಿಂದ ತಿಳಿಸಿರುತ್ತಾರೆ.

ತಿಬೆಟ್ಟಿನ ಮಧ್ಯಪ್ರಾಂತ್ಯದಲ್ಲಿ ಮಳೆಯು ಬಾರದೆ ಆಹಾರ್ಯಪದಾರ್ಥಗಳ ಬೆಲೆಯು ದ್ವಿಗುಣವಾಗಿ ಏರಿರುವುದರಿಂದ ಕ್ಷಾಮದ ಭೀತಿಯು ವಿಶೇಷವಾಗಿದೆ. ಜಮೀನುದಾರರು ಕೂಡಿಟ್ಟಿರುವ ಧಾನ್ಯವನ್ನು ಮಾರಕಟ್ಟೆಗೆ ತಂದು ವಿಕ್ರಯಿಸುವಂತೆ ಅಪ್ಪಣೆ ಮಾಡಲು ಸರ್ಕಾರದವರು ಸೂಚಿಸಿರುವರು.

ಬಂಗಾಳಾ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಮ|| ಗಳಾದ ಎಂ. ಕೆ. ಗಂಧಿಯವರು, ಅಂಬಿಕಾಚರಣಮಜುಂದಾರ್‌ರವರು, ಮಜುರಲ್‌ಹಕ್‌ರವರು ಮತ್ತೂ ಭೂಪೇಂದ್ರನಾಥ ಬಾಸುಯವರು-ಇವರುಗಳಲ್ಲೊಬ್ಬರನ್ನು ಮುಂದಣ ಕಾಂಗ್ರೆಸ್‌ಸಭೆಯ ಅಧ್ಯಕ್ಷರನ್ನಾಗಾರಿಸಬಹುದೆಂದು ಸೂಚನೆಯನ್ನು ಕೊಟ್ಟಿರುವರು.

ದಿಲ್ಲಿಯ ಖಾಜಿ ಸರಫರಾಜ್ ಹುಸೇನ್ ಎಂಬುವರು ಕ್ಯಾಕ್ಸ್‌ಟನ್‌ಹಾಲಿನಲ್ಲಿ ಸಯ್ಯದ್ ಅಮೀರಲಿಯವರ ಅಧ್ಯಕ್ಷತೆಯಲ್ಲಿ ಇಸ್ಲಾಂ ಮತತತ್ವದಮೇಲೆ ಉಪನ್ಯಾಸವನ್ನು ಮಾಡಿದ ತರುವಾಯ ಒಬ್ಬ ಇಂಗ್ಲೀಷ ತರುಣಿಯು ಉಪನ್ಯಾಸಕರ ಪಕ್ಕದಲ್ಲಿ ನಿಂತುಕೊಂಡು ನಾನು ಇಸ್ಲಾಂಮತವನ್ನು ಅಂಗೀಕರಿಸಿರುತ್ತೇನೆಂದು ಹೇಳಿದಳು.

ಬರ್ಲಿನ್‌ಪಟ್ಟಣದ ಒಬ್ಬ ಶ್ರೀಮಂತನ ಮಗಳು ಆಕಾಶವಿಮಾನದಲ್ಲಿ ಅನೇಕವೇಳೆ ಸಂಚರಿಸುವಾಗ್ಗೆ ಆ ವೈಮಾನಿಕನಲ್ಲಿ ಅನುರಕ್ತಳಾಗಿ ಅವನನ್ನು ವಿವಾಹಮಾಡಿಕೊಳ್ಳಬೇಕೆಂದಿರುವುದನ್ನು ಅವಳ ತಂದೆತಾಯಿಗಳು ತಿಳಿದು ಅದಕ್ಕವಕಾಶವನ್ನು ಕೊಡದಿರಲು, ಆಕೆಯು ತನ್ನ ಪ್ರಿಯನೊಡನೆ ಆಕಾಶವಿಮಾನದಲ್ಲಿ ಕುಳಿತು ಪಲಾಯನವಾಗಯತ್ನಿಸಿ ಸನ್ನದ್ಧಳಾಗಿದ್ದುದನ್ನು ತಂದೆತಾಯಿಗಳು ತಿಳಿದು ಪೊಲೀಸರಿಗೆ ತಿಳುಹಿ ಅವರು ಪಲಾಯನವಾಗುವುದನ್ನು ನಿಲ್ಲಿಸಿಬಿಟ್ಟರು.

ಬೊಂಬಾಯಿನಲ್ಲಿ ಕಳೆದ ತಾ|| ೨೮ರಲ್ಲಿ ಒಂದು ಹುಚ್ಚುನಾಯಿಯು ಐರೋಪ್ಯರ ೪ ವರ್ಷದ ಹುಡುಗನನ್ನೂ ಮತ್ತು ೧೧ ವರ್ಷದ ಒಬ್ಬ ಹುಡುಗಿಯನ್ನೂ ಕಡಿದು ಮತ್ತೊಬ್ಬ ದೊಡ್ಡಮನುಷ್ಯನ ಕಾಲನ್ನುಕಚ್ಚಿತು. ಆದರೆ ಅದರಹಲ್ಲು ಆತನ ಶರಾಯಿಯ ಒಳಗಡೆ ಇಳಿದಿರಲಿಲ್ಲವಾಗಿ ಆತನಿಗೇನೂ ಅಪಾಯವಾಗಲಿಲ್ಲ. ಆ ಮಕ್ಕಳು ಕಾಸಾಲಿಗೆ ಚಿಕಿತ್ಸೆಗಾಗಿ ಕಳುಹಲ್ಪಟ್ಟಿವೆ. ಆ ನಾಯಿಯನ್ನು ಜನರು ಕಲ್ಲಿನಿಂದ ಹೊಡೆದು ಕೊಂದುಹಾಕಿಬಿಟ್ಟರು. ಮತ್ತೂ ಊರಿನಲ್ಲಿರುವ ಪೋಲಿನಾಯಿಗಳನ್ನು ವಿಷಪ್ರಯೋಗದಿಂದಸಾಯಿಸುವ ಪ್ರಯತ್ನವುನಡೆದಿದೆ.

ಖಾಂದೇಷದಲ್ಲಿ ವಿಪರೀತಮಳೆಯಾಗಿ ತಪತೀನದಿಯಲ್ಲಿ ಪ್ರವಾಹವು ಮಿತಿಮೀರಿ ಬಂದು ಅದರ ಬಾಯಿಯ ಬಳಿಯಿರುವ ಸೂರತ್‌ಪಟ್ಟಣವು ಮುಳಿಗಿಹೋಗುವುದಕ್ಕಿದ್ದುದು ಮಳೆಯು ಕೂಡಲೇ ನಿಂತುಹೋದುದರಿಂದ ತಪ್ಪಿಸಿಕೊಂಡಿತು. ನದಿಯ ಪ್ರವಾಹವು ನಿಯತವಾಗಿದ್ದುದಕ್ಕಿಂತ ೧೫ ಅಡಿ ಎತ್ತರ ಹೆಚ್ಚಾಗಿ ಬಂದಿದ್ದಿತು. ಬೀದಿಗಳೆಲ್ಲಲ್ಲಿ ನೀರು ನಿಂತು ವಿದ್ಯಾರ್ಥಿಗಳ ನಿಲಯದೊಳಕ್ಕೆ ನುಗ್ಗಲು ಅವರುಗಳು ಮೇಲಿನ ಮಾಡದಲ್ಲಿ ಹೋಗಿ ಸೇರಿಕೊಂಡರು. ಒಬ್ಬ ವಿದ್ಯಾರ್ಥಿಯು ನಿಲಯದ ಹೊರಗಡೆ ನೀರಿನ ಪ್ರವಾಹಕ್ಕೆ ಸಿಕ್ಕಿದುದರಿಂದ ಮರವನ್ನು ಹತ್ತಿ ರಾತ್ರಿಯೆಲ್ಲಾ ಅದರಮೇಲೆ ಕಾಲವನ್ನು ಕಳೆದನು. ಮಾರನೆಯ ಬೆಳಿಗ್ಗೆ ಕೆಲ ಜೈನರು ಬಂದು ಅವನನ್ನು ಮರದಿಂದಿಳಿಸಿಕೊಂಡರು. ವದ್ವಾನದಲ್ಲೂ ಪ್ರವಾಹವು ಬಹಳವಾಗಿ ಬಂದಿದ್ದರೂ ನಷ್ಟವೇನೂ ಆಗಲಿಲ್ಲವು. ವಾಕನೇರ್ ಎಂಬಲ್ಲಿ ಮಂಚುನದಿಯು ವಿಶೇಷವಾಗಿ ಪ್ರವಹಿಸಿ ತಗ್ಗುಪ್ರದೇಶಗಳಲ್ಲೆಲ್ಲಾ ನೀರು ನಿಂತಿದ್ದಿತಾದರೂ ವಿಶೇಷ ನಷ್ಟವೇನೂ ಆಗಲಿಲ್ಲವು.

ಹೊಸ ಇಂಡ್ಯಾ ಕೌನ್ಸೆಲ್ ಬಿಲ್ಲು ಈಗ ಪಾರ್ಲಿಮೆಂಟಿನ ಚರ್ಚೆಯಲ್ಲಿದೆ. ಇದರ ಪ್ರಕಾರ ಕೌನ್ಸಿಲ್ಲಿನಲ್ಲಿ ಉಪಯುಕ್ತವಾದ ಕೆಲ ಸುಧಾರಣೆಗಳು ಮಾಡಲ್ಪಟ್ಟಿವೆ. ಇದರ ಪ್ರಕಾರ ಕೌನ್ಸಿಲ್ಲಿನಲ್ಲಿ ಭಾರತೀಯ ಪ್ರತಿನಿಧಿಗಳನ್ನು ಸೇರಿಸುವುದು ಅಪಾಯಕರವಾದುದೆಂದೂ, ಇದು ೧೯೦೯ನೆ ಇಸವಿಯ ಆಕ್ಟಿಗೆ ಪೂರ್ಣವಾಗಿ ವಿರುದ್ಧವಾಗಿರುವುದರಿಂದ ಇದನ್ನು ತಳ್ಳಿಬಿಡಬೇಕೆಂದೂ ಲಾರ್ಡ್ ಕರ್ಜನ್‌ರವರು ಕೋಲಾಹಲಮಾಡುತ್ತಿದ್ದಾರೆ. ಲಾರ್ಡ್ ಕ್ರೋಮರ್‌ಯವರು ಇದುವರೆಗೆ ಪ್ರಯತ್ನಪಟ್ಟು ಅಣಿಮಾಡಿದ ಈ ಬಿಲ್ಲನ್ನು ಒತ್ತರಿಸಿಬಿಟ್ಟರೆ ಭರತಖಂಡದಿಂದ ರಾಷ್ಟ್ರೀಯಸಭಾ ಪ್ರತಿನಿಧಿಗಳಾಗಿ ಇಲ್ಲಿಯವರೆಗೆ ಬಂದಿದ್ದ ರಾಯಭಾರದವರನ್ನು ನಿರಾಶೆಗೊಳಿಸಿ ಅವರ ಮನೆಗೆ ಕಳುಹಿಸಿದಂತಾಗುವುದು. ಭರತಖಂಡದ ಅಶಾಂತಿಯನ್ನು ಉತ್ತಮವಾದ ಶಾಸನಗಳಿಂದ ನಿವಾರಿಸಬೇಕಾಗಿದೆ. ಆದುಕಾರಣ ಹಾಗೆ ಮಾಡುವುದಕ್ಕಿಂತಲೂ ಈ ಹೊಸ ಬಿಲ್ಲಿನ ವಿಷಯವನ್ನು ಚೆನ್ನಾಗಿ ವಿಚಾರಿಸುವುದಕ್ಕಾಗಿ ಒಂದು ಕಮಿಟಿಯನ್ನೇರ್ಪಡಿಸುವುದುಯುಕ್ತವೆಂದು ಹೇಳಿದರು. ಬರುವ ತಾ|| ೬ ರಲ್ಲಿ ಮತ್ತೆ ಈ ಬಿಲ್ಲಿನ ವಿಷಯವು ಪಾರ್ಲಿಮೆಂಟಿನ ಚರ್ಚೆಗೆ ಬರುವುದು. ಆಗೇನಾಗುವುದೋ ನೋಡಬೇಕು.

ಹುಬ್ಬಳ್ಳಿಯ ಅಮರಾಮಜಿ ಚೇತಜಿ ಮತ್ತೂ ಆಸಂಜಿ ವಾಣಿಜಿ ವರ್ತಕರ ವಿಳಾಸಕ್ಕೆ ಬೊಂಬಾಯಿನಿಂದ ಕಳೆದ ಏಪ್ರಿಲ್ ತಾ||೭ರಲ್ಲಿ ೬೦೦ ಸವರನ್ನುಗಳಿರುವ ಒಂದುಚೀಲವೂ ೩೫೦ ಸವರನ್ನುಗಳಿದ್ದ ಮತ್ತೊಂದು ಚೀಲವೂ ಇನ್‌ಷೂರ್ ಪಾರ್ಸಲ್ ದ್ವಾರಾ ಕಳುಹಿಸಲ್ಪಟ್ಟಿದ್ದುವು. ಹುಬ್ಬಳ್ಳಿಯ ಪೋಸ್ಟ್‌ಮಾಸ್ಟರು ಭಾಂಗಿಗಳಿರುವ ಚೀಲವನ್ನು ಒಡೆದಾಗ್ಗೆ ಒಳಗಡೆ ೩ಭಾಂಗಿಗಳಿಗೆ ಬದಲು ೧ಭಾಂಗಿಯು ಮಾತ್ರವಿದ್ದು ಪಟ್ಟಿಯು ಇಲ್ಲದಿರುವುದನ್ನು ಕಂಡು ಕೂಡಲೇ ಬೊಂಬಾಯಿನ ಪೋಸ್ಟ್‌ಮಾಸ್ಟರ್ ಜನರಲ್ಲಿಗೆ ತಿಳುಹಿದನು. ಅವರು ವಿಚಾರಿಸಿ ಅಲ್ಲಿಂದ ಕಳುಹಿದ ಭಾಂಗಿಗಳು ಮೂರೆಂದೂ, ಅಲ್ಲಿಯ ರೈಲಿನಲ್ಲೇನೂ ಮೋಸವು ನಡೆದಿಲ್ಲವೆಂದೂ ಮಧ್ಯೆ ಬಂಡಿಯಲ್ಲಿ ನಡೆದಿರಬೇಕೆಂದೂ ತಿಳುಹಿಸಿ, ಈಕೃತ್ಯವನ್ನೆಲ್ಲಾ ಕಂಡುಹಿಡಿಯಲು ಒಬ್ಬ ಅಧಿಕಾರಿಯನ್ನು ನಿಯಮಿಸಿದರು. ಅವರು ಆ ಭಾಂಗಿಗಳ ಚೀಲಗಳನ್ನು ಪರೀಕ್ಷಿಸುವಲ್ಲಿ ಅವುಗಳ ತಳದಲ್ಲಿ ಬಹು ಚಮತ್ಕಾರದಿಂದ ರಂಧ್ರವು ಕೊರೆಯಲ್ಪಟ್ಟು ಒಳಗಿದ್ದ ಸೌರನ್ನು ತೆಗೆದುಕೊಳ್ಳಲ್ಪಟ್ಟು ಪುನಃ ಮೊದಲಿನಂತೆಯೇ ಚಮತ್ಕಾರದಿಂದ ಹೊಲೆಯಲ್ಪಟ್ಟಿದ್ದುದು ಕಂಡುಬಂದಿತು. ಇದರ ಮೇಲೆ ಆ ದಿವಸ ರೈಲುಬಂಡಿಯ ಕೂಡ ಇದ್ದ ಇಬ್ಬರು ಹಿಂದುಗಾರ್ಡುಗಳನ್ನು ಪೋಲೀಸರಿಂದ ಸೆರೆಹಿಡಿಸಿ ಬಿಜಾಪುರದ ಸೆಷನ್ಸುಜಡ್ಜರ ವಿಚಾರಣೆಗೆ ಗುರಿಪಡಿಸಿರುವರು

ಪತ್ರವ್ಯವಹಾರ.

ಓಂ

ದಾವಣಗೆರೆ 'ವೀರಶೈವ ವಾರ್ಷಿಕೋಪನ್ಯಾಸ ಮಾಲೆಯ' ಸಂಘದ ಪರವಾಗಿ ಪದ್ಧತಿಯ ಮೇರೆಗೆ

ಇಲ್ಲಿನ ಶ್ರೀ ವಿರಕ್ತಮಠದಲ್ಲಿ ಶ್ರಾವಣ ಶುದ್ಧ (ತಾ||೨೪-೭-೧೪) ರಿಂದ ಒಂದು ತಿಂಗಳವರೆಗೂ ಪ್ರತಿನಿತ್ಯ ಉಪನ್ಯಾಸಗಳು ಜರುಗುವುದರಿಂದ ಇಲ್ಲಿಗೆ ಆಗಮಿಸಿ ಉಪನ್ಯಾಸಮಾಡಲವಕಾಶವಿಲ್ಲದ ಮಹಾಶಯರು ತಮ್ಮ ಉಪನ್ಯಾಸಗಳನ್ನು ತಾ|| ೨೦-೭-೧೯೧೪ ರೊಳಗಾಗಿಯೇ ಕೆಳಗಿನ ವಿಳಾಸಕ್ಕೆ ರವಾನಿಸಬೇಕು. ಉಪನ್ಯಾಸಗಳು ರಾಜಕೀಯ ವಿಷಯಗಳನ್ನೂ, ಪರಮತ ದೂಷಣೆಗಳನ್ನೂ ಒಳಕೊಂಡಿರಕೂಡದೆಂಬ ಸಂಘದ ನಿಯಮವನ್ನು ಉಪನ್ಯಾಸಕರು ಗಮನಿಸಬೇಕಾಗಿ ಕೋರಿಕೆ.

ಸೆಕ್ರೆಟರಿ

ದಾವಣಗೆರೆ, ತಾ|| ೨೯-೬-೧೪. } ವೀರಶೈವ ವಾರ್ಷಿಕೋಪನ್ಯಾಸ ಮಾಲಾ ಸಂಘ. ಶ್ರೀವಿರಕ್ತ ಮಠ.

ದೇವನಹಳ್ಳಿ ತಾಲ್ಲೂಕು ವಡಿಗೇನಹಳ್ಳಿಯ ವೃತ್ತಾಂತ.

ಕಾಲಸ್ಥಿತಿಯು ಮಳೆಯಿಲ್ಲದೆ ಭೀಕರವಾಗಿದೆ. ಇದೇ ಜೂನ್ ತಿಂಗಳು ತಾ|| ೧೯ರಲ್ಲಿ ಶ್ರೀಶಿವಗಂಗಾಸ್ವಾಮಿಗಳವರು ದಯಮಾಡಿ ೩ ದಿನವಿದ್ದು ಶಿವಾನುಭವವಿಷಯವಾಗಿ ಹೃದಯಂಗಮವಾದ ಉಪನ್ಯಾಸವನ್ನು ಮಾಡಿದರು. ಇಲ್ಲಿನ ಬ್ರಾಹ್ಮಣರೂ, ವರ್ತಕರೂ, ಅವರನ್ನು ಸತ್ಕರಿಸಿ ೨೦೦ ರೂಪಾಯಿಗಳವರೆಗೂ ಕಾಣಿಕೆಯನ್ನು ಸಮರ್ಪಿಸಿದರು. ತಾರೀಖು ೧೯ರಲ್ಲಿ ಬೆಂಗಳೂರು ಸರ್ಕಲ್ ಇನ್ಸ್‌ಪೆಕ್ಟರ್‌ಸಾಹೇಬರವರು ದಯಮಾಡಿ ಇಲ್ಲಿನ ಸ್ಕೂಲುಗಳ ಕಿಂಡರ್‌ಗಾರ್ಟನ್ ಶಿಕ್ಷಣ, ಚಿತ್ರ, ಹೆಣಿಗೆ, ಮರಗೆಲಸ, ಮಣ್ಣಿನಕೆಲಸ, ರಟ್ಟಿನಕೆಲಸ ಇವೇ ಮೊದಲಾದವುಗಳನ್ನು ಪರಾಮರ್ಶಿಸಿ ತೃಪ್ತಿಗೊಂಡರು. ತಾರೀಖು ೨೦ರಲ್ಲಿ ಶ್ರೀಮಾನ್ ನಮ್ಮ ಸಾರ್ವಭೌಮರವರ ವರ್ಧಂತಿಯ ಮಹೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲು ಪಿ. ಸರ್ಕಲ್‌ಇನ್ಸ್‌ಪೆಕ್ಟರ್

ಸಾಹೇಬರವರು ಬೇಕಾದಷ್ಟು ದ್ರವ್ಯಸಹಾಯವನ್ನು ಮಾಡಿದರು. ಊರಿನ ಸಾರಾರುವೆಂದಿ ದೊಡ್ಡಮನುಷ್ಯರೂ, ಉಪಾಧ್ಯಾಯರೂ, ಬಾಲಕ ಬಾಲಿಕೆಯರೂ, ಇವರೊಡನೆ ಸರ್ಕಲ್ ಇನ್ಸ್‌ಪೆಕ್ಟರ್ ಸಾಹೇಬರವರು ಶ್ರೀ ಸಾರ್ವಭೌಮರವರ ಚಿತ್ರಪಟವನ್ನು ಬ್ಯಾಂಡ್ ವಾದ್ಯದೊಂದಿಗೆ ಊರಲ್ಲೆಲ್ಲಾ ಮೆರವಣಿಗೆ ಮಾಡಿಸಿ, ಹೊಸ ಸ್ಕೂಲಿನ ಬಳಿಗೆ ಎಲ್ಲರೂ ಬಂದಮೇಲೆ ಬಾಲಕರಿಂದ ನಾನಾವಿಧವಾದ ಆಟಗಳನ್ನು ಆಡಿಸಿ ನೆರೆದವರಿಗೆಲ್ಲಾ ತಾವೇ ರೂಪಾಯಿಗಳನ್ನು ಬಹುಮಾನವಮಾಡಿದರು. ಇವರ ಅನ್ಯಾದೃಶವಾದ ಔದಾರ್ಯಕ್ಕೂ ಬಾಲಕರ ಮೇಲಣ ವಿಶ್ವಾಸಕ್ಕೂ ಗ್ರಾಮಸ್ಥರು ಕೃತಜ್ಞತೆಯನ್ನು ಅರ್ಪಿಸಿ, ಅತ್ಯಂತ ಸಂತೋಷಗೊಂಡರು. ಸ್ಕೂಲಿನಲ್ಲಿ ೧೫೪ ಬಾಲಕರಿರುವರೆಂತಲೂ, ದಿನೇದಿನೇ ಅಭಿವೃದ್ಧಿಸ್ಥಿತಿಗೆ ಬರುತ್ತಿರುವುದೆಂತಲೂ, ಎಲ್ಲರ ಜ್ಞಾನಾಭಿವೃದ್ಧಿಗಾಗಿ ಸ್ಕೂಲಿನಲ್ಲಿ ಒಂದು ವಾಚನಾಲಯವನ್ನು ಸ್ಥಾಪಿಸಿರುವರೆಂದೂ ಇವರ ಪ್ರಯೋಜನವನ್ನು ಸರ್ವರೂ ಪಡೆಯಬೇಕೆಂದೂ ಹೆಡ್ಮಾಸ್ಟರವರು ಹೇಳಿದಮೇಲೆ ಶ್ರೀ ಚಕ್ರವರ್ತಿಯವರ ಶ್ರೀನರ್ಜ ಮಹಾರಾಜರವರ ಶ್ರೇಯಃಪ್ರಾರ್ಥನೆಗಳು ನಡೆದ್ಪಟ್ಟವು. ಅನಂತರ ಕೃಷ್ಣಪ್ಪನವರೇ ಮೊದಲಾದವರು ದೊಡ್ಡಮನುಷ್ಯರೆಲ್ಲರನ್ನೂ ಗಂಧಪುಷ್ಪ ತಾಂಬೂಲಾದಿಗಳಿಂದ ಸತ್ಕರಿಸಿದರು. ಎಲ್ಲಾ ಸ್ಕೂಲುಗಳ ೩೦೦ ಮಂದಿ ಬಾಲಕ ಬಾಲಿಕೆಯರಿಗೆ ಲಾಡುಗಳೂ, ಬಾಳೆಹಣ್ಣುಗಳೂ, ಹಂಚಲ್ಪಟ್ಟವು. ಈ ಕಾಲದಲ್ಲಿ ಇಲ್ಲಿನ ಹೊಸಪೇದಾರ್ ದೊಡ್ಡರಾಮಯ್ಯನವರು ತಮ್ಮ ಸಿಬ್ಬಂದಿಯೊಡನೆ ಉತ್ಸವಭಾಗಗಳಾಗಿ ರಾಜಭಕ್ತಿಯನ್ನು ವ್ಯಕ್ತಗೊಳಿಸಿದರು. ಈ ಊರಿಗೆ ಒಬ್ಬ ಸೂಲಗಿತ್ತಿಯೂ ಇಂಗ್ಲೀಷ್ ಆಸ್ಪತ್ರೆಯೂ ಅತ್ಯಾವಶ್ಯಕವಾಗಿವೆ. ೫-೬ ಸಾವಿರ ಪ್ರಜೆಗಳೂ, ಸರ್ಕಾರದವರೂ, ಏಕೆ ಉದಾಸೀನರಾಗಿರುವರೋ ಗೊತ್ತಿಲ್ಲ.

ಹಾವೇರಿ.

ಈ ಹಾವೇರಿಯು ಪೂರ್ವದಲ್ಲಿ ವೀರಶೈವರ ದಟ್ಟಣೆಯ ಸ್ಥಳವಾಗಿಯೂ ತವರಮನೆಯಾಗಿಯೂ ಶ್ರೀವಿರಕ್ತ ಮಹನೀಯರ ಆಶ್ರಮಕ್ಕೆ ತಕ್ಕದ್ದಾಗಿಯೂ ಇದ್ದಸಂಗತಿಯು ಸರ್ವಶ್ರುತವದೆ ಇದು ಇಲ್ಲಿ ಇರತಕ್ಕ ಮಠ ಮುಂತಾದವುಗಳ ವ್ಯವಸ್ಥೆಯಿಂದಲೇ ತಿಳಿದುಬರುತ್ತದೆ. ಆದರೂ ಈಗ ನಮ್ಮ ಮತಕ್ಕೆ ಬಂದ ಕಾಲಚಿತ್ರವಂತೆ ಈ ಊರಿಗಾದರೂ ಹೀನಸ್ಥಿತಿಯು ಬಂದು ನಮ್ಮಗಳ ದುರದೃಷ್ಟವನ್ನು ತೋರಿಸುತ್ತಿದೆ. ಇಲ್ಲಿರತಕ್ಕ ವ್ಯಾಪಾರ ಆಚಾರ ವಿಚಾರ ಮುತ್ತು ಮಠಮಾನ್ಯಗಳಾದರೂ ಇರುವ ಸ್ಥಿತಿಯು ಬರಿಯುಳಿ ಸಕಳವಾಗಿ ಎಲ್ಲವೂ ನಾಶವಾಗಿ ಹೋಗಿವೆ. ಆದರೆ ಇಲ್ಲಿ ಇರತಕ್ಕ ವಿರಕ್ತ ಮಠಗಳಲ್ಲಿಕಿ ಶ್ರೀ ಹೊಸಮಠವೆಂಬ ವಿರಕ್ತ ಮಠವು ಅಧಿಕಾರಿಗಳ ಸಲುವಾಗಿ ಕೋರ್ಟು ಕಚೇರಿಗಳನ್ನು ಅಲೆಯುತ್ತಿರಲು, ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಸಂಸ್ಥಾನ ಚಿತ್ರದುರ್ಗ ಮಹಾಸ್ವಾಮಿಗಳು ತಮ್ಮ ಶಾಖೆಗೆ ಸಬಂಧಪಟ್ಟದ್ದೆಂದು ತಿಳಿದು, ಸದರಮಠಕ್ಕೆ ತಮ್ಮ ಸನ್ನಿಧಿಯಲ್ಲಿ ವಿದ್ಯಾಭ್ಯಾಸಮಾಡಿದ ಶ್ರೀ ಪಂಚಾಕ್ಷರಿ ದೇವರೆಂಬುವರನ್ನು ನೇಮಿಸಿ ಇಲ್ಲಿಗೆ ಕಳುಹಿಸಿ ಈಗ ೭-೬ ವರ್ಷಗಳಾಗಿರುವವು. ಸದರಿ ಶ್ರೀ ಪಂಚಾಕ್ಷರಿ ದೇವರು ತಕ್ಕಷ್ಟು ಸಂಸ್ಕೃತ ವಿದ್ಯಾಭ್ಯಾಸವನ್ನು ಮಾಡಿದವರಾಗಿಯೂ ಆಧುನಿಕ ಸುಧಾರಣೆಯನ್ನು ಬಲ್ಲವರಾಗಿಯೂ ಭಕ್ತರನ್ನು ಉದ್ಧರಿಸುವಂಥವರಾಗಿಯೂ ಇರುವದರಿಂದಾ ತಾವು ಗಮ್ಮನೆ ಮಠದಲ್ಲಿ ಹಾಗೇ ಕೊತುಕೊಳ್ಳದೆ ಶ್ರೇಷ್ಠವಾದ ಸೋಮವಾರದ ದಿವಸ ಶ್ರೀಶಿವಭಜನೆಯನ್ನೂ ಧರ್ಮಸಂಬಂಧ ವ್ಯಾಖ್ಯಾನಗಳನ್ನೂ ನಡಿಸಬೇಕೆಂದು ಶ್ರೀ ದಾವಣಗೇರಿಯ ಮೃತ್ಯುಂಜಯ ದೇವರು ನಿರೂಪಿಸಿದಂತೆ ಸ್ಥಾಪಿಸಿದ ಈ ಸಂಘಕ್ಕೆ ವೀರಶೈವ ಹಿತೋಪದೇಶಕ ಸಂಘವೆಂದು ನಾಮಕರಣ ಮಾಡಿ ಈಗ ೨ ವರ್ಷಗಳಾದವು. ಮತ್ತು ಶ್ರೀ ಮಠದಲ್ಲಿ ವೀರಶೈವವಾಚನಾಲಯವನ್ನು ಸಹ ಸ್ಥಾಪಿಸಿ ೧ ವರ್ಷವಾಯ್ತು. ಇನೆಲ್ಲವೂ ಶ್ರೀಗಳವರ ಕರುಣಾಕಟಾಕ್ಷದಿಂದ ನಿರ್ವಿಘ್ನವಾಗಿ ಸಾಗುತ್ತಿವೆ. ಮತ್ತು ನಮ್ಮಗಳ ಸುದೈವದಿಂದ ತಾ॥ ೮-೬-೧೪ನೇ ದಿವಸ ಇಲ್ಲಿಗೆ ಹಾನಗಲ್ ಶ್ರೀಗಳವರು ಅಕಸ್ಮಾತ್ ದಯಮಾಡಿಸಿದ್ದರು. ಅದೇ ದಿವಸ ಈ ಸಂಘದವರು ಮಧ್ಯಾಹ್ನ ೨ ಘಂಟೆಗೆ ವೀರಶೈವ ಧರ್ಮೋಪದೇಶಕ ಸಭೆಯನ್ನು ಕೂಡಿಸಬೇಕೆಂದು ಯೋಚಿಸಿ ಆಗಲೇ ಜಾಹೀರುಮಾಡಿದರು. ಅಪ್ರಕಾರ ಶ್ರೀ ಹಾನಗಲ್ ಶ್ರೀಗಳವರು ಮತ್ತು ಈ ಗ್ರಾಮದ ಹುಕ್ಕೇರಿ ಮಠದ ಶ್ರೀಗಳವರು ಮತ್ತು ಸಂಗಡ ಬಂದಿದ್ದ ಶ್ರೀ ಶಿವಯೋಗ ಸಾಧಕರು ಆಗಮಿಸಿದ್ದರು. ಪುರಪ್ರಮುಖರು ೬೦೦-೭೦೦ ಜನಗಳು ಬಂದಿದ್ದರು. ಪದ್ಧತಿಪ್ರಕಾರ ಈ ಸಂಘದವರು ಸುಶ್ರಾವ್ಯವಾಗಿ ಭಜನೆಮಾಡಿದನಂತರ ಸೆಕ್ರೆಟರಿಯವರಾದ ಮ॥ ಯಸ್. ಬಿ. ತಾಂಡೂರರವರು ರಿಪೋರ್ಟು ಓದಿ ಸರ್ವರಿಗೂ ತಿಳಿಸಿದರು. ಮತ್ತು ಈ ಸಭೆಗೆ ಹಾನಗಲ್ ಶ್ರೀಗಳವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಬೇಕೆಂದು ಸೂಚಿಸಿದರು. ಅದಕ್ಕೆ ಮ॥ ಸಿ. ಯಸ್. ಕಾಲಪ್ಪಗೋಳ, ಮತ್ತು ಯಸ್. ಬಸವನಹಾಳಯವರು ಅನುಮೋದಿಸಿದರು. ಸರ್ವಜನರ ಚಪ್ಪಾಳೆಯ ರಭಸದಲ್ಲಿ ಶ್ರೀಗಳವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ನಂತರ ಮ॥ ಕಾಲಪ್ಪಗೋಳರವರು ಈ ಸಭೆಯು ನೆರೆದವಿಷಯವನ್ನು ಮತ್ತು ನಮ್ಮ ಮತದ ಈಗಿರತಕ್ಕ ಹೀನಸ್ಥಿತಿಯ ವಿಷಯವನ್ನು ಇವುಗಳ ನಿವಾರಣೆಯ ಉಪಾಯವನ್ನು ಬಹಳ ಉತ್ತಮವಾಗಿ ಉಪನ್ಯಾಸವನ್ನುಮಾಡಿದರು. ಮತ್ತು ಬಂಕಾಪುರದ ಶ್ರೀ ಪಟ್ಟದದೇವರು ದೀಕ್ಷಾ ವಿಷಯವಾಗಿಯೂ ಶಿವಯೋಗಸಾಧಕರಿಬ್ಬರು ಬ್ರಹ್ಮಚರ್ಯಾಶ್ರಮದ ಮೇಲೂ ಮತ್ತು ಯೋಗದಮೇಲೂ ಚೆನ್ನಾಗಿ ಭಾಷಣಮಾಡಿದರು. ನಂತರ ಅಧ್ಯಕ್ಷರಾದ ಶ್ರೀಸ್ವಾಮಿಗಳವರು ಎಲ್ಲರ ವಿಷಯವನ್ನು ಕ್ರೋಢೀಕರಿಸಿ ಜನರ ಮನಸ್ಸು ಆನಂದವಾಗುವಂತೆ ಉಪನ್ಯಾಸಮಾಡಿದರು. ಇವರಅಸ್ಖಲಿತವಾಣಿಯೂ ಮತ್ತು ವಾಚಾಲತ್ವವೂ ಬಹಳಶ್ಲಾಘನೀಯವಾಗಿವೆ. ಮತ್ತು ಶ್ರೀಸ್ವಾಮಿಗಳವರು ರಾತ್ರಿ ೧೦ ಘಂಟೆಯವರಿಗೂ ಬೋಧಿಸಿದಾಗ್ಯೂ ಜನರ ಮನಸ್ಸಿಗೆ ಬೇಸರವೇ ಇರಲಿಲ್ಲ, ಕೇಳಬೇಕೆಂಬ ಕುತೂಹಲದಲ್ಲಿಯೇ ಇದ್ದರು. ರಾತ್ರಿ ಜಾಸ್ತಿಯಾಗಲು ಇನ್ನು ವಿಷಯಗಳಿರಲು ತಮ್ಮ ಭಾಷಣವನ್ನು ಮುಗಿಸಿದರು. ಈ ಸಭೆಯ ಕರ್ತೃಗಳಾದ ಶ್ರೀಪಂಚಾಕ್ಷರಿದೇವರು ಉಪಸಂಹಾರವನ್ನು ಮಾಡಿ, ನನಗೆ ಇಲ್ಲಿಗೆ ಪದೇಪದೇ ಬರುವಂತೆ ಈ ಸಂಘವು ಸ್ಥಿರವಾಗಿಜೀವಿಸಲೆಂದು ಅಧ್ಯಕ್ಷರು ಕೊಟ್ಟ ಆಶೀರ್ವಾದದ ವಿಷಯವಾಗಿಯೂ ಈ ಸಂಘಕ್ಕೆ ದಾವಣಗೇರಿಯ ಶ್ರೀಮೃತ್ಯುಂಜಯದೇವರುಕೊಟ್ಟ ಆಶೀರ್ವಚನಫಲವೆಂತಲೂ ಹೇಳಿ ತಮ್ಮಭಾಷಣವನ್ನು ಮಾಡಿದನಂತರ ಶ್ರೀಜಗದೀಶನತ್ರಿವಾರ ಜಯಘೋಷಮಾಡಿ ಸಭೆಯು ಬರಖಾಸ್ತು ಮಾಡಿದರು. ಪ್ರತ್ಯಕ್ಷದರ್ಶಿ.

ಶಿವಯೋಗಮಂದಿರ; ೨೨-೬-೧೯೧೪.

ಶ್ರೀ ಶಿವಯೋಗಮಂದಿರದಲ್ಲಿ ತಾ॥ ೨೨-೬-೧೯೧೪ ದಿವ ಹಿಂದುಸ್ಥಾನದ ಬಾದಶಹರಾದ ೫ನೇ ಜಾರ್ಜ ಪ್ರಭುಗಳವರ ವರ್ಧಂತಿಯುತ್ಸವವನ್ನು ನಡೆಯಿಸಿದ ವರದಿಯು. ಈ ದಿವಸ ಹಿಂದುಸ್ಥಾನದ ಬಾದಶಹರಾದ ೫ನೇ ಜಾರ್ಜದೊರೆಗಳವರ ವರ್ಧಂತಿಯುತ್ಸವವು ನಡೆಯಿತು. ಸುತ್ತುಮುತ್ತಲಿನ ಗ್ರಾಮಗಳ ಪ್ರಮುಖ ಜನರು ಕೂಡಿದ್ದರು. ಚಕ್ರವರ್ತಿ ಜಾರ್ಜ ದಂಪತಿಗಳ ಭಾವಪಟಗಳು ಶೃಂಗರಿಸಿದ ಸ್ಥಳದಲ್ಲಿ ಇಡಲ್ಪಟ್ಟಿದ್ದವು. ಮೊದಲು ಶಿವಯೋಗಮಂದಿರದ ಬಾಲಕರು (ವಿದ್ಯಾರ್ಥಿ) ಗಳು ಈಶಸ್ತುತಿಯನ್ನು ಮಾಡಿದರು ಆ ಮೇಲೆ ವ್ಯವಸ್ಥಾಪಕರಾದ ಶಿವಬಸಪ್ಪ ಮಾಗಿ ಇವರು ಈ ದಿವಸ ಸಮಾರಂಭದ ಉದ್ದೇಶವನ್ನು ಸಭಿಕರಿಗೆ ಸೂಚಿಸಿದರು. ಅನಂತರ ವಿದ್ಯಾರ್ಥಿ ಸಿದ್ಧಯ್ಯನು ಇಂಗ್ಲಂಡದ ರಾಜ್ಯವು ಬಹಳ ಪುರಾತನದ್ದು. ಇದರಷ್ಟು ಸ್ಥಿರವಾಗಿ ನೆಲೆಗೊಂಡ ರಾಜ್ಯವು ಈ ಜಗತ್ತಿನಲ್ಲಿ ಬೇರೆ ಯಾವದೂ ಇರುವುದಿಲ್ಲ. ಆದರೆ ಇಂಗ್ಲಂಡದೇಶದ ರಾಜಕುಟುಂಬವು ಅದಕ್ಕೂ ಹೆಚ್ಚು ಪುರಾತನದ್ದು ಆಗಿರುತ್ತದೆ. ಆ ಕುಟುಂಬದ ಮುಖ್ಯಸ್ಥರು ಈಗ ಜಾರ್ಜ ಬಾದಶಹರಾಗಿರುವರು. ಇವರು ಎಡ್ವರ್ಡ ಬಾದಶಹರವರ ತೆರುವಾಯ ಇಂಗ್ಲಂಡ್ ರಾಜ್ಯಕ್ಕೆ ಒಡೆಯರಾಗಿರುತ್ತಾರೆ. ಮತ್ತು ಸನ್ ೧೯೧೧ರಲ್ಲಿ ಭರತಖಂಡದಪೂರ್ವರಾಜಧಾನಿಯಾದ ದಿಲ್ಲಿಯಲ್ಲಿ ಪಟ್ಟಕ್ಕೆ ಕೂತರು. ಈ ಪ್ರಭುಗಳು ನಮ್ಮನ್ನಾಳುವವರಾದ್ದರಿಂದ ಜಗದೀಶನು ಇವರಿಗೆ ಆಯುರಾರೋಗ್ಯವನ್ನು ಕೊಡುಮಾಡಿ ಕಾಪಾಡಲೆಂದು ಪ್ರಾರ್ಥಿಸುತ್ತೇನೆ. ಎಂದು ಗಂಭೀರವಾಗಿ ಮಾತನಾಡಿದನು. ಅನಂತರ ವ್ಯವಸ್ಥಾಪಕರಾದ ಶಿವಬಸಪ್ಪ ಮಾಗಿ ಇವರ ಭಾಷಣದ ಸಾರಾಂಶವು:—ನಮ್ಮ ಬಾದಶಹರಾದ ೫ನೇ ಜಾರ್ಜದೊರೆಗಳ ಜನನವು ಸನ್ ೧೮೬೫ನೇ ಇಸವಿಯ ಜೂನ ತಿಂಗಳಲ್ಲಿ ಆಯಿತು. ಇವರ ಪ್ರಾಥಮಿಕ ಶಿಕ್ಷಣವು ಮುಗಿದಮೇಲೆ ಇವರ ತಂದೆಯವರಾದ ಎಡ್ವರ್ಡ ಬಾದಶಹರವರು ಇಂಗ್ಲಂಡರಾಜ್ಯದ ಸಾಮರ್ಥ್ಯವು ಹಡಗಪಡೆಯನ್ನೇ ಅವಲಂಬಿಸಿರುವದರಿಂದ ಆ ಹಡಗಪಡೆಯ ಅಭ್ಯಾಸವು ಅತ್ಯಂತ ಅವಶ್ಯವೆಂದು ತಿಳಿದು ಆ ಅಭ್ಯಾಸವನ್ನು ಇವರಿಗೆ ಚೆನ್ನಾಗಿ ಮಾಡಿಸಿದರು. ಇವರುಹಡಗಪಡೆಯಲ್ಲಿ ಅಭ್ಯಾಸಮಾಡುವಾಗ ಸಾಮಾನ್ಯಜನರಂತೆ ಎಲ್ಲಕೆಲಸಗಳನ್ನು ಮಾಡುತ್ತಿದ್ದರು ರಾಜಪುತ್ರರೆಂಬ ಆತ್ಮಕೆಯನ್ನು ಎಷ್ಟೂ ಲೆಕ್ಕಿಸುತ್ತಿದ್ದಿಲ್ಲ ಇವರಿಗೂ ಟಕ್ಕದ ರಾಜಕುಮಾರಿಯವರಾದ ಮೇರಿ ಮಹಾರಾಣಿಯವರಿಗೂ ಸನ್ ೧೮೯೩ನೇ ಇಸವಿಯಲ್ಲಿ ವಿವಾಹೋತ್ಸವವು ಒಳ್ಳೇವಿಜೃಂಭಣೆಯಿಂದ ಜರುಗಿತು. ಸನ್ ೧೯೦೧ನೇ ಇಸವಿಯಲ್ಲಿ ಅತ್ಯಂತ ಲೋಕಪ್ರಿಯರಾದ ವಿಕ್ಟೋರಿಯಾ ಮಹಾರಾಣಿಯವರು ಪರಲೋಕವಾಸಿಗಳಾಗಲು, ಎಡ್ವರ್ಡ್ ಬಾದಶಹರಿಗೆ ರಾಜ್ಯಪದ ಪ್ರಾಪ್ತವಾಯಿತು. ಆಗ ಈ ಜಾರ್ಜರವರಿಗೆ ಪ್ರಿನ್ಸ್ ಆಫ್ ವೇಲ್ಸ್ ಎಂಬ ಪದವಿಯುದೊರೆಯಿತು. ಸನ್ ೧೯೦೫ರಲ್ಲಿ ಜಾರ್ಜದಂಪತಿಗಳು ಹಿಂದುಸ್ಥಾನಕ್ಕೆ ಬಂದು ಇಲ್ಲಿಯ ದರ್ಶನೀಯ ಸ್ಥಳಗಳನ್ನು ನೋಡಿಕೊಂಡು ಪ್ರಜಾಹಿತ ಸಂಬಂಧದ ಮಾಹಿತಿಯನ್ನು ಪ್ರತ್ಯಕ್ಷವಾಗಿ ತಿಳಿದುಕೊಂಡಿರುವರು. ಎಡ್ವರ್ಡ ಬಾದಶಹರವರು ೧೯೧೦ರಲ್ಲಿ ಪರಲೋಕವಾಸಿಗಳಾಗಲು, ಆಗ ಈ ಜಾರ್ಜ ದೊರೆಗಳು ಬ್ರಿಟಿಷ್‌ರಾಜ್ಯದ ಅರಸರಾದರು. ೧೯೧೧ನೇ ಇಸವಿಯ ಡಿಸೆಂಬರ ತಿಂಗಳಲ್ಲಿ ಬಾದಶಹರ ರಾಜ್ಯಾರೋಹಣ ಸಮಾರಂಭವು ಬಹು ಕಾಲದಿಂದಲೂ ಪ್ರಸಿದ್ಧವಾದ ದಿಲ್ಲಿಯ ಶಹರದಲ್ಲಿ ಒಳ್ಳೇ ವಿಜೃಂಭಣೆಯಿಂದ ಜರುಗಿತು. ಆಗ ಹಿಂದುಸ್ಥಾನದ ಪ್ರಜೆಗಳ ಅನೇಕ ಮನೋರಥಗಳನ್ನು ಪೂರ್ಣಮಾಡಿದರು. ಈ ಪ್ರಕಾರವಾಗಿ ಜಾರ್ಜ ಪ್ರಭುಗಳ ಚರಿತ್ರೆಯನ್ನು ಸಭಿಕರೆಲ್ಲರಿಗೂ ತಿಳಿಯುವಂತೆ ಸರಸವಾಗಿ ಭಾಷಣಮಾಡಿದರು. ಅನಂತರ ಮಹಾಂತದೇವರು—ಸುರೇಂದ್ರಾಣಾ ಶಿಪ್ರೋರಾಜಾ ರಾಜಾಪ್ರತ್ಯಕ್ಷದೇವತಾ ಎಂದು ವಾಕ್ಯವಿರುವುದರಿಂದ ರಾಜನು ದೇವಾಂಶೀಭೂತನೆಂದು ತಿಳಿಯತಕ್ಕದ್ದು. ಆದುದರಿಂದ ಋಷಿಗಳೂ ಯೋಗಿಗಳೂ ಕೂಡ ಗೌರವಿಸಿ ಆತನಿಗೆ ಕಲ್ಯಾಣವನ್ನೇ ಇಚ್ಛಿಸುತ್ತಾರೆ. ಅದರಂತೆ ಈ ಶಿವಯೋಗಮಂದಿರದಲ್ಲಿರತಕ್ಕ ಯೋಗಸಾಧಕರಾದ ನಾವೆಲ್ಲರೂ ನಮ್ಮ ರಾಜರಾದ ಜಾರ್ಜ ಪ್ರಭುಗಳಿಗೆ ಆಯುರಾರೋಗ್ಯೈಶ್ವರ್ಯಗಳನ್ನು ಜಗದೀಶ್ವರನು ಈಯಲೆಂದು ಕೋರುತ್ತೇವೆ. ಎಂದು ಮುಂತಾಗಿ ಮಾತನಾಡಿದರು. ನಂತರ ನವಲಗುಂದದ ಬಸವಲಿಂಗದೇವರು ಬ್ರಿಟಿಷ್ ಸರಕಾರದವರುಬಹುಕಾಲದಿಂದ ಈ ಭರತಭೂಮಿಯನ್ನು ಆಳುತ್ತಿದ್ದರೂ ಯಾರೂ ಈ ದೇಶಕ್ಕೆ ಬಂದು ರಾಜ್ಯಾಭಿಷೇಕಮಾಡಿಕೊಂಡಿದ್ದಿಲ್ಲ. ಈ ನಮ್ಮ ಜಾರ್ಜ ಪ್ರಭುಗಳು, ಮಾತ್ರ ಹಿಂದುಸ್ಥಾನಕ್ಕೆ ಪೂರ್ವದಿಂದಲೂ ಪ್ರಸಿದ್ಧವಾದ ಹಸ್ತಿನಾವತಿ (ದಿಲ್ಲಿ) ಪಟ್ಟಣದಲ್ಲಿ ರಾಜ್ಯಾಭಿಷೇಕಮಾಡಿಕೊಂಡು ಈ ಭರತಭೂಮಿಯನ್ನುದ್ಧಾರಮಾಡಿದರು. ಆದುದರಿಂದ ಈ ಪುಣ್ಯಶಾಲಿಗಳಾದ ಜಾರ್ಜಪ್ರಭುಗಳಿಗೆ ಪರಮಾತ್ಮನು ಆಯುರಾರೋಗ್ಯೈಶ್ವರ್ಯವನ್ನು ಕೊಟ್ಟು ಕಾಪಾಡಲೆಂದು ಚೆನ್ನಾಗಿ ಭಾಷಣ ಮಾಡಿದರು. ಆಮೇಲೆ ವ್ಯವಸ್ಥಾಪಕರಾದ ಶಿವಬಸಪ್ಪ ಮಾಗಿ ಇವರು ಚಕ್ರವರ್ತಿ ದಂಪತಿಗಳ ಭಾವಪಟಗಳನ್ನು ಸರ್ವರಿಗೂ ತೋರಿಸಿದರು. ಮತ್ತು ಬ್ರಿಟಿಷ್ ಸರಕಾರದವರ ಆಳಿಕೆಯಿಂದ ಹಿಂದುಸ್ಥಾನದಲ್ಲಿ ಎಷ್ಟು ಅಭಿವೃದ್ಧಿಯಾಗುತ್ತ ನಡೆದಿದೆಯೆಂಬುದನ್ನೂ ವಿದ್ಯಾಕಲಾ ಕೌಶಲ್ಯಗಳಲ್ಲಿ ಭಾರತಿಯರಲ್ಲಿ ಹಿಂದುಳಿದವರನ್ನೂ ಸಹ ಹೇಗೆ ಮುಂದಕ್ಕೆ ತರುವ ಪ್ರಯತ್ನಗಳನ್ನು ಸರಕಾರದವರು ಮಾಡುತ್ತಲಿದ್ದಾರೆಂಬುದನ್ನೂ, ಸರ್ವರೂ ವಿದ್ಯಾಭ್ಯಾಸಮಾಡಿ ಸರಕಾರದವರು ಮಾಡುತ್ತಿರುವ ಹಿತಕಾರ್ಯಗಳನ್ನು ತಿಳಿದುಕೊಳ್ಳಬೇಕೆಂಬುದನ್ನೂ, ತಿಳಿಸಿ ಹೇಳಿ, ಸರ್ವರೂ ಅನನ್ಯಭಾವದಿಂದ ಬಾದಶಹ ಜಾರ್ಜ ದಂಪತಿಗಳಿಗೆ ಚಿರತರ ಆಯುರಾರೋಗ್ಯಸಂಪತ್ತನ್ನು ಅನುಗ್ರಹಿಸಲೆಂದು ಪರಮೇಶ್ವರನ ಹೆಸರಿನಿಂದ ಜಯಘೋಷ ಮಾಡಬೇಕೆಂದು ಸೂಚಿಸಿದರು. ಆ ಪ್ರಕಾರ ಎಲ್ಲರೂ ಎದ್ದುನಿಂತು ಜಯಘೋಷವನ್ನು ಮಾಡಿದರು. ವಿದ್ಯಾರ್ಥಿ ಮುಂತಾದವರೆಲ್ಲರಿಗೂ, ಮಿಠಾಯಿಗಳು ಹಂಚಲ್ಪಟ್ಟವು. ಈ ಪ್ರಸಂಗದಲ್ಲಿ ವ್ಯವಸ್ಥಾಪಕರಾದ ಶಿವಬಸಪ್ಪ ಮಾಗಿ ಇವರು ಈ ಮಂದಿರದಲ್ಲಿ ಸ್ಥಾಪಿತವಾಗಿರುವ ಪಂಚಮಜಾರ್ಜನಾಮಕಲಾಯಬ್ರರಿಗೆ ಧರ್ಮಗ್ರಂಥನಿರ್ಣಯಸಿಂಧುವೆಂಬ ಪುಸ್ತಕವನ್ನು ಕೊಳ್ಳುವ ಬಗ್ಗೆ ೨ ರೂಪಾಯಿಗಳನ್ನು ಕೊಟ್ಟರು. ಅನಂತರ ವ್ಯವಸ್ಥಾಪಕರ ಸೂಚನೆಯ ಮೇರೆಗೆ ಎಲ್ಲರೂ ಹಿಪ್‌ಹಿಪ್ ಹುರ್ರೇ ಎಂದು ಜಯಘೋಷವನ್ನು ಮಾಡಿದರು. ಆಮೇಲೆ ಸಭೆಯು ವಿಸರ್ಜನೆಯಾಯಿತು.

ಜಾಹೀರ ನೋಟೀಸು

ಇದರಿಂದ ತಿಳಿಸುವದರಲ್ಲಿ ಬರುವದೇನಂದರೆ:—ಧಾರವಾಡ ಜಿಲ್ಲಾ ಕರ್ಜಗಿ ತಾಲೂಕಿನಲ್ಲಿರುವ ದೇವಿಹೊಸೂರವೆಂಬ ಗ್ರಾಮದಲ್ಲಿ ಕನ್ನಡಭಾಷೆಯಲ್ಲಿ ಒಂದು ಒಕ್ಕಲತನದ ಶಾಲೆಯು ಆರಂಭವಾಗಿರುವದು. ಇಲ್ಲಿ ಒಕ್ಕಲಿಗರ ೧೪-೧೭ ವರ್ಷದ ವಯಸ್ಸಿನ ಹುಡುಗರನ್ನು ಸೇರಿಕೊಂಡು ಎರಡು ವರ್ಷಗಳವರೆಗೆ ಸರಕಾರೀ ಖರ್ಚಿನಿಂದ ಅಭ್ಯಾಸಮಾಡಿಸುವದರಲ್ಲಿ ಬರುವದು. ಶಾಲೆಯ ಸಂಬಂಧಿನಿಯಮಗಳನ್ನು ಈ ಮೊದಲೇ ಪ್ರಸಿದ್ಧಮಾಡಿದ್ದೇವೆ.

ಈ ಶಾಲೆಯ ಇಮಾರತು ಇನ್ನೂ ತಯಾರಾಗಿಲ್ಲವಾದುದರಿಂದ ಶಾಲೆಯು ಆರಂಭವಾಗಿರುವದಿಲ್ಲೆಂಬ ತಪ್ಪು ಸಮಜೂತಿಯಿಂದಲೂ ಇಲ್ಲಿ ಊಟದವ್ಯವಸ್ಥೆಯುಇರಲಿಕ್ಕಿಲ್ಲೆಂಬ ಭಯದಿಂದಲೂ ಚಿಕ್ಕಹುಡುಗರನ್ನು ಹೇಗೆ ಎರಡನೇಊರಲ್ಲಿಡಬೇಕೆಂಬ ಮನಸ್ಸಿನ ಸಂಕೋಚದಿಂದಲೂ ಮೊದಲು ನೋಟೀಸಿನಲ್ಲಿ ಕೊಟ್ಟ ಪ್ರಕಾರ ಮೇ॥ ೧ನೇ ತಾರೀಖಿನನಂತರ ಅರ್ಜಿಗಳನ್ನು ಹಿಡಿಯಲಿಕ್ಕಿಲ್ಲೆಂಬ ಸಮಜೂತಿಯಿಂದಲೂ, ಎಷ್ಟೋಜನರು ಅರ್ಜಿಮಾಡಬೇಕೆಂಬುದು ಮನಸ್ಸಿನಲ್ಲಿದ್ದಾಗ್ಯಾದರೂ ಅರ್ಜಿಮಾಡುವದನ್ನು ಬಿಟ್ಟಿದ್ದಾರೆಂದು ಕೇಳುತ್ತೇವೆ. ಈಗ ಶಾಲೆಯು ಸುರುವಾಗಿ ಹುಡುಗರ ಊಟದ (ಬೋರ್ಡಿಂಗಿನ) ವ್ಯವಸ್ಥೆ ಸಹ ಆರಂಭವಾಗಿದೆ. ಬ್ರಾಹ್ಮಣ ಲಿಂಗಾಯತ ಎರಡುಬೋರ್ಡಿಂಗಗಳು ಆರಂಭವಾಗಿವೆ. ಆದುದರಿಂದ ತಮ್ಮ ಮಕ್ಕಳನ್ನು ಈಶಾಲೆಗೆ ಕಳುಹಿಸಬಿಚ್ಛಿಸುವ ರೈತ ವ ವತನದಾರಗೌಡ ಕುಲಕರ್ಣಿಯರು ತೀವ್ರವಾಗಿ ತಮ್ಮ ಮಕ್ಕಳಕಡೆಯಿಂದಾ ಅರ್ಜಿಮಾಡಿಸಿದ ಪಕ್ಷದಲ್ಲಿ ಯೋಗ್ಯವಿಚಾರಮಾಡಿ ಹುಡುಗರನ್ನು ಶಾಲೆಯಲ್ಲಿತಕೊಳ್ಳುವದರಲ್ಲಿ ಬರುವದು. ಅರ್ಜಿ ಕಳುಹಿಸುವ ಮುಂದೆ ಜವಿಗಾನ ಸಂಬಂಧ ಗ್ರಾಮಸ್ಥರ ದಾಖಲೆ ವ ಶಾಲೆಯಲ್ಲಿ ಕಲಿತಸಂಬಂಧ ಶಾಲೆಯ ಹೆಡ್ಮಾಸ್ಟರ ದಾಖಲೆ ಇವೆರಡನ್ನೂ ಕಳಿಸತಕ್ಕದ್ದು ತಿಳಿಯುವದು. ತಾ॥ ೧೮-೬-೧೯೧೪

P. Gilbert Deputy, Director of Agriculture S. D. R. G. S. Dharwar.

ಕೇವಲ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

31

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ಇದೇಶ! (ಗುಣವಾಗದಿದ್ದರೆ ಹಣ ವಾಪಸ !!) ದೇಶ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗಪೀಡಿತರು, ರಕ್ತಪಿತ್ತ ಪ್ರಕೋಪವಾದವರು, ತೃಷೆಪೀಡಿತರು, ದಮ್ಮನವರು, ಕೆಮ್ಮನವರ ಕಫ, ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧ ಸಂಗಡಲೇ ರವಾನಿಸುವೆವು.

ವಿಳಾಸ:—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ, ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೊಂಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು ಕಾಪಾಡುವುದರಲ್ಲಿ ಶ್ರೇಷ್ಠವಾದ

40

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ-ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು.

ಶೀತವಾಯು-ಕೆಮ್ಮು-ನೆಗಡಿ-ದಿನಜ್ವರ-ಮೂರರಜ್ವರ ನಾಲ್ಕರಜ್ವರ- ಮಲೇರಿಯಾಜ್ವರ- ತಲೆನೋವು- ಮೈಕೈನೋವು ಮತ್ತು ಭಾರ-ಅರೋಚಕ ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣಭೇದಿ-ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಸೆಳೆತ-ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೇ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ೫೦ ಮಾತ್ರೆ ೪ ಆಣೆ. ಇವಕ್ಕೆ ಒಂದು ಇನಾಮು. ವಿ. ಪಿ. ಛಾರ್ಜು ಪ್ರತ್ಯೇಕ.

ಆಮೋದಿನಿ:— ಅಮೋಘವಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರವಮಾಡುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷ ಕೀರ್ತಿಯನ್ನು ಸಂಪಾದಿಸಿ ನಾನಾತರಹಾ ಕೆಮ್ಮು, ದಮ್ಮು, ಉಬ್ಬಸ, ವಾಂತಿ, ವಾಕರಿಕೆ, ಮಲಬಂದ, ಅಗ್ನಿಮಾಂದ್ಯ, ಪಿತ್ತಸಂಕಟ, ಅರೋಚಕ, ಬಾಯಾರಿಕೆಗಳನ್ನು ತತ್ಕ್ಷಣ ಗುಣಪಡಿಸಿ ಶರೀರಕ್ಕೆ ತೇಜಸ್ಸುಮಾಡದೆ ಧಾತುವೃದ್ಧಿಯುಂಟುಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೧೫೦ ಮಾತ್ರೆ ೪ ಆಣೆ. ಇವಕ್ಕೆ ಒಂದು ಇನಾಮು. ವಿ.ಪಿ. ಛಾರ್ಜು ಪ್ರತ್ಯೇಕ.

ವಿಳಾಸ— ಬಿ. ವಿ. ಪಂಡಿತ್, ಸದ್ವೈದ್ಯಶಾಲಾ, ನಂಜನಗೂಡು. ಮೈಸೂರ್ ಡಿ॥

41

ದೊಡ್ಡ ಕಂಪೆನಿ ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅನರ್ಘ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯೂ. ಎನ್. ಮತ್ತು ಕಂಪೆನಿ, ಬನಾರಿಸ್ ಸಿಟಿ. (ಕಾಶೀ)

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕೈಯ್ಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡ ಪಲ್ಲಕ್ಕಿ ಉತ್ಸವದ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸನತೊಳುಸಹಿತ ಆದ ಸಮಾರಂಭದ ಫೋಟೋ ೧ ಕ್ಕೆ ಕ್ರಯ ೧ ರುಪಾಯಿ

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಾಮಾದಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೋ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೋ ೧ ಕ್ಕೆ ಕ್ರಯ ಫುಲ್ಲಸೈಜು ೧ ರುಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀ ಜಗದ್ಗುರು ತೋಂಟದಾರ್ಯ ಗದಗ, ಶ್ರೀ ಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ಸತ್ಪುರುಷಮಾಲಾ, ಹಾಳಕೇರಿ ಆನಂದಸ್ವಾಮಿಯ ಫೋಟೋ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೋ ಸಿಗುತ್ತವೆ. ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ

ಹೊಸಫ್ಯಾಷನ್—ಸದ್ಗೃಹಸ್ಥರು ಗಡಿಯಾರ ಸರ್ಪಳಿಗೆ ಹಚ್ಚುವಲಾಕೇಟುಗಳೊ, ಯಿದರಲ್ಲಿ ಹಿಂದೆ ಮುಂದೆ ಇಪ್ರಕಾರ ೨ ಫೋಟೋ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ।॥, ।॥=, ೧, ೧।, ಪ್ರಕಾರ, ಮತ್ತೂ ಬೆಳ್ಳೀದು ರು ೧॥ ರೋಲ್ಡ್ ಗೋಲ್ಡು ಭಂಗಾರದ್ದು ದುರ್ಬೀಣದ ಗ್ಲಾಸದೂ ಕ್ರಯ ೨॥, ೨॥। ರೂ.

ಪರೂರಿಗೆ ಏಜಂಟರು ಬೇಕಾಗಿರುತ್ತಾರೆ ಆರ್ಡಾಣಿ ಟಿಕೇಟು ಕಳುಹಿಸಿ ಕ್ಯಾಟಲಾಕು ಬೇಕಾದವರು ತರಿಸಿಕೊಳ್ಳಿರಿ. ನಮ್ಮವಿಳಾಸ— ಗಂಗಪ್ಪಾ ಜೇರಿಗೆ. ಅರ್ಟಿಸ್ಟ್ ಸೊಲ್ಲಾಪುರ

17

11 ೫೦೦ ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರೀಮುರಬ್ಬ

ಈ ಮುರಬ್ಬಾವು "ಪಂಜಾಬ್ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂಪಾಯಿಗಳು ಬಹುಮಾನ ಕೊಡಲ್ಪಡವುದು.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯಕೋಶವು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣಪರಿಯಂತರವೂ ದುಃಖಪಡುವರು. ಈ "ಪಂಜಾಬ್ ಸಾಲಾಮಿಸ್ರೀಮುರಬ್ಬಾ" ವಿನ ಸೇವನೆಯಿಂದ—

ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಕ್ಷಣಕ್ಷಣಕ್ಕೂ ಮೂತ್ರವಾಗುತ್ತಿದ್ದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ದೂರ ನಡೆಯುವುದರಿಂದ ಮೇಲುಬ್ಬಸ ಬರುವುದು ತಲೆಯ ನೋವೂ ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರಿಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ರಕ್ತವನ್ನು ಹೆಚ್ಚಿಸಿ ವೀರ್ಯವನ್ನು ವೃದ್ಧಿಪಡಿಸುವುದರಲ್ಲಿ ಪಂಜಾಬ್ ಸಾಲಾಮಿಸ್ರೀ ಮುರಬ್ಬಾವಿನ ಹೊರತು ಇದಕ್ಕೆ ಸಮಾನವಾದ ಔಷಧವು ಬೇರೆ ಯಾವುದೂ ಇಲ್ಲವು.

ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ತಾಂಬ್ರದ ಮತ್ತು ಭಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು. ಹೊಟ್ಟೆಯಲ್ಲಿರುವ ಜ್ವರದ ಗಡ್ಡೆಯನ್ನು ನಾಶಪಡಿಸುವುದು. ಶ್ವಾಸ ಖಾಸ ರೋಗಗಳನ್ನು ನಿರ್ಮೂಲಪಡಿಸುವುದು.

ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲ್ ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗಡ್ಡೆ, ಕಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರಿ ಎಂದು ಹೇಳಿ ಮೋಸಪಡಿಸುವರು. ಈ ಮುರಬ್ಬಾವನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾಬ್ ಸಾಲಾಮಿಸ್ರಿಯೇ ಅಥವ ಬೇರೇ ತರಹಾದ್ದೇ ಎಂಬುವುದು ಚೆನ್ನಾಗಿ ತಿಳಿದು ಬರುತ್ತೆ. ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧೫ ತೋಲಾ ಮುರಬ್ಬಾವಿರುವ ಡಬ್ಬಾ ೧ಕ್ಕೆ ರೂ ೨-೦-೦; ಟಪಾಲ್ ಖರ್ಚು ನಾಲ್ಕು ಆಣೆ ಅನುಪಾನಪತ್ರಿಕೆ ಔಷಧದ ಸಂಗಡ ಇರುತ್ತೆ.

ಅತ್ಯುತ್ತಮವಾದ ವನೌಷಧಗಳು.

೧. ಧಾತುಪುಷ್ಟಿಚೂರ್ಣ— ಕ್ರಯ ೫ ಆಣೆ.
೨ ರೋಮನಾಶಕ ಮತ್ತು ವೃಶ್ಚಿಕದಂಷ್ಟ್ರ ತೈಲವು ಚೇಳಿನ ಹೊಡತಕ್ಕೂ ಮತ್ತು ಕೂದಲು ತೆಗೆಯುವುದಕ್ಕೂ ಬಹಳ ಒಳ್ಳೆಯದು ಕ್ರಯ ೨ ಆಣೆ.
೩ ವಾತನಿವಾರಣ ತೈಲವು ಕ್ರಯ ೪ ಆಣೆ.
೪ ಹೊಟ್ಟೆನೋವಿಗೆ ಔಷಧ ಕ್ರಯ ೨ ಆಣೆ ೬ ಪೈ.
೫ ಕೆಮ್ಮಲು ರೋಗಕ್ಕೆ ಔಷಧ ೪ ಆಣೆ.
೬ ವ್ರಣಕ್ಕೆ ಔಷಧ ೪ ಆಣೆ.
೭ ಆಶ್ಚರ್ಯಕರವಾದ ವೀರ್ಯಸ್ಥಂಬದ ಗುಳಿಗೆ ೪ ಆಣೆ.
೮ ತಲೆನೋವಿಗೆ ತೈಲವು ೨ ಆಣೆ ೬ ಪೈ.
೯ ಪ್ರಮೇಹ ನಿವಾರಣ ಭಸ್ಮವು—೮ ಆಣೆ.
೧೦ ಉಷ್ಣಕಾಲಕ್ಕೆ ಮಾತ್ರೆಗಳು—ರೂ. ೧.
೧೧ ಮೂಲವ್ಯಾಧಿಗೆ ಔಷಧ—೮ ಆಣೆ.
೧೨ ಕಣ್ಣಿಗೆ ಸುರ್ಮಾ—೪ ಆಣೆ.
೧೩ ದಂತಚೂರ್ಣವು—೧ ಆಣೆ ೩ ಪೈ.
೧೪ ಕೂದಲು ಬೆಳೆಯುವ ಎಣ್ಣೆ (ಒಂದೋಲಿಕ್ಸ್) ೪ಆ.

ವಿಳಾಸ:— ಡಿ. ಮನ್ನಾಲಾಲ್, ದಿಲ್ಲಿ ವೈದ್ಯರು, 5. ಹಾಜಿಸಾಹೇಬ್‌ಮಹಡಿ, ಅವೆನ್ಯೂರೋಡ್ ಬೆಂಗಳೂರು ಸಿಟಿ.

ಏಜಂಟ್:—ಡಿ. ಸೈಯದ್ ಉಸ್ಮಾನ್ ಅಂಡ್‌ಕೊ, ದೊಡ್ಡಪೇಟೆ, ಬೆಂಗಳೂರು ಸಿಟಿ.

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ ೨-೦-೦; ೫-೦-೦; ೩-೬-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪ ಟಿನ್ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು. ಟಿ. ಎಲ್. ಉಪಾಧ್ಯಾಯ,

11 ಸುಗಂಧಕಾರಿ, ಮೈಸೂರು.

ದಿ ಜನರಲ್ ಏಜನ್ಸಿ. ಮೈಸೂರು.

ಕಾದಂಬರಿಗಳು:— ಚಂದ್ರಮಾರುತ ೦-೨-೦; ಚರಿತಾಮೃತಂ ೦-೫-೦; ರಾಜಕಥಾವಲ್ಲರಿ ೦-೫-೦; ಪೀಟರಿನಚರಿತ್ರೆ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೨-೬; ಮುಕ್ತಾಸೀತೆ ೦-೫-೦; ಸಾಹಸಿಕೆ, ಕಲಾನಾಥ ೬-೮-೦; ಮುಕ್ತಾಲಕ್ಷ್ಮಿ ೦-೨-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸತ್ಯಸಂಜೀವಿನಿ ೦-೮-೦; ಕೋಹಿನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೦-೦. 42

31 ಸಚಿತ್ರ ಶುಕಸಪ್ತತಿ ಕಥೆಗಳು ರೂ. ೧-೮-೦ (೫೧೨ ಪುಟ) ಟಪಾಲು ಹಾಸಲು ೪ ಆಣೆ. ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ ರೂ ೧-೮-೦. (೫೩೬ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ! ಮಾನ್ಯತೆಯು ಬೇಕಾದರೆ, ವಾಗ್ವೈಭವಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಲಿಚ್ಛೆ ಪಟ್ಟರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯಲ್ಲಾಶೆಯಿದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೬೦ ಪುಟಗಳಿಂದ ಕೂಡಿದ ೬೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ ೧-೪-೦ ಟಪಾಲ್ ಹಾಸಲು ೩ ಆಣೆ. ಈಗಲೇ ಬರೆ ನಿಸಾ.ವ್ಮಲ್ಲಿ ಇನ್ನೂ ಅನೇಕಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

ಕನ್ನಡ ಇಂಡಿಯನ್ ಪೆನಲ್ ಕೋಡ್

ಇದರಿಂದ ಮೈಸೂರ್, ಮದ್ರಾಸ್, ಬೊಂಬಾಯಿಜಿಲ್ಲಾ ಕನ್ನಡಭಾಷಾ ವಾಚಕಮಹಾಶಯರಿಗೆ ತಿಳಿಸುವದೇನೆಂದರೆ-

ಶ್ರೀಮದಿಂಡಿಯಾ ಗೌರ್ನರ್ ಜನರಲ್‌ರವರ ಅನುಮತಿ ಪ್ರಕಾರ ಸನ್ ೧೮೬೦ನೇ ಇಸವಿಯಲ್ಲಿ ಮಂಜೂರಾದ "ಇಂಡಿಯನ್ ಪೆನಲ್ ಕೋಡ್" ಎಂಬ ಆಕ್ಟನ್ನು ಈಗ ಅನೇಕ ಜಡ್ಜಿಗಳ ಟಿಪ್ಪಣಿಗಳೊಡನೆಯೂ, ಅಮೆಂಡ್‌ಮೆಂಟುಗಳೊಡನೆಯೂ ಅಂದವಾದ ಕಾಗದದಲ್ಲಿ ಸ್ಪಷ್ಟವಾದ ಅಕ್ಷರಗಳಿಂದ ಮುದ್ರಣವಾಗಿ ಮಾರಾಟಕ್ಕೆ ಸಿದ್ಧವಾಗಿದೆ. ಈ ಆಕ್ಟಿನಲ್ಲಿ ಪ್ರತಿ ಸೆಕ್ಷನಿಗೂ ಫಿರ್ಯಾದಿಗಳೂ, ಅಪರಾಧಿಗಳೂ, ಪೋಲೀಸ್ ಅಧಿಕಾರಿಗಳೂ, ಮ್ಯಾಜಿಸ್ಟ್ರೇಟರುಗಳೂ ನಡಿಸಬೇಕಾದ ಆಚರಣೆಗಳೆಂದರೆ:- ನಡೆಯುವ ಮೊಕದ್ದಮೆಯನ್ನು ಯಾವ ಕೋರ್ಟಿನಲ್ಲಿ ವಿಚಾರಣೆ ಮಾಡಬೇಕು? ವಾರಂಟಿಲ್ಲದೆ ಹಿಡಿಯಬಹುದೇ, ಹಿಡಿಯಕೂಡದೇ? ಸಮನ್ಸ್ ಕೊಡತಕ್ಕದ್ದೇ, ವಾರಂಟು ಕೊಡತಕ್ಕದ್ದೇ? ಜಾಮೀನ್ ತೆಗೆದುಕೊಂಡು ಬಿಡಬಹುದೇ? ರಾಜಿಯಾಗಬಹುದೇ, ರಾಜಿಯಾಗತಕ್ಕದ್ದಲ್ಲವೇ? ಎಂಬ ತಪ್ಸೀಲುಗಳನ್ನು ವಿವರಿಸಲ್ಪಟ್ಟಿರುವುದು. ಈ ಪುಸ್ತಕವು ಸರ್ಕಾರಿ ಅಧಿಕಾರಿಗಳಿಗೂ, ಪೋಲೀಸಿನವರಿಗೂ, ಪಟೇಲ್ ಶ್ಯಾನುಭೋಗರುಗಳಿಗೂ, ವರ್ತಕರುಗಳಿಗೂ, ಜಮೀನ್‌ದಾರರುಗಳಿಗೂ ಇತರ ಸಮಸ್ತ ಕಸಬುದಾರರಿಗೂ, ಖುಷ್‌ಬಾಷ್ ಜನಗಳಿಗೂ ಉಪಯೋಗಕರವಾದದ್ದು.

ಈ ಪುಸ್ತಕದಲ್ಲಿ ಚೋರಿ, ಕಳವು, ಡಕಾಯತಿ, ಅತಿಕ್ರಮಪ್ರವೇಶ, ಸ್ತ್ರೀಗೆ ಮಾನಭಂಗಪಡಿಸುವದು, ಸ್ತ್ರೀಯರನ್ನು ದುರಾಚಾರಕ್ಕೆಳೆಯುವದು, ಆಸಾಮಿ ಚೋರಿ, ಗಂಡನು ಹೆಂಡತಿ ೧೨ ವರುಷಗಳಿಗೆ ಕಡಮೇ ವಯಸ್ಸಿನವಳಾಗಿರುವಾಗ್ಗೆ ಸ್ತ್ರೀಸಂಗ ಮಾಡಬಹುದೇ? ಮುಂತಾದ ಮೊಕದ್ದಮೆಗಳಲ್ಲಿ ಜಡ್ಜಿಗಳು ಕೊಟ್ಟಿರತಕ್ಕ ಅಭಿಪ್ರಾಯಗಳು ಸೂಚಿಸಲ್ಪಟ್ಟಿರುವವು. ಕನ್ನಡದಲ್ಲಿ ಇದುವರೆಗೆ ಇಂಥಾ ಪುಸ್ತಕವು ಇನ್ನೆಲ್ಲಿಯೂ ಇಲ್ಲವು.

ಕ್ರಯ ಪ್ರತಿ ೧ ಕ್ಕೆ ೨ ರೂಪಾಯಿ; ಟಪಾಲ್ ಛಾರ್ಜ್ ೪ ಆಣೆ.

ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ. ಪುಸ್ತಕಗಳ ಕ್ರಯ ಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು.

48 ನಮ್ಮ ವಿಳಾಸ— ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಸ್ ಪಬ್ಲಿಷರ್ಸ್, ಬೆಂಗಳೂರು ಸಿಟಿ.

ಪಾಶ್ಚ್ಯಾದ ವೆಂಕಟಾಚಲ ಪಂಡಿತರ ಬಿಡ್ಡಾ ಷಧಗಳು. 9

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊಡೆತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನ ಚ್ಚು ಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ— ೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾಔಷಧಿ)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈ ಮಾರಿಕೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸಿಕೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇಒಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತವಿದೊಂದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧-೦-೦.

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ. ಮೈಸೂರು

ನ್ಯಾಯದರ್ಪಣ. 24

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯು, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಫ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸುಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆಚರಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ವಗೈರೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯು ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರುತ್ತವೆ.

ಬೆಲೆ ರೂ. 1—8—0. ವಿ. ಪಿ. ಮೂಲಕ 1—12—0.

ಎಂ. ಎಸ್. ನಂಜಪ್ಪನವರು,

ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ)ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾಗಿದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚುಟಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜನ್ ಡಬ್ಬಿಗೆ ೨-೨-೦

ಉತ್ತಮವಾದ ನಶ್ಯದಪುಡಿ.

ಧಾತು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವವೆ. ನೀವು ಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,

ಗೋಪಸೆಟ್ಟಿಪುರ, ಹನೂರು ಪೋಸ್ಟ್

20 ಕೊಳ್ಳೇಗಾಲದ ತಾಲ್ಲೂಕು

೧೯೧೪ ನೇಯ ಇಸವಿ ಜುಲೈ ತಾ॥ ೬ ರಿಂದ ೧೯೧೪ನೇಯ ಜುಲೈ ತಾ॥ ೧೨ರವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ ನೇಯ ಆನಂದನಾಮ ಸಂ॥ ದ ಆಷಾಢ ಶು॥ ಚತುರ್ದಶಿಯಿಂದ ಆಷಾಢ ಬ॥ ಪಂಚಮಿವರೆಗಿನ ಪಂಚಾಂಗ.

ತಾ॥	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ತೇದಿ ಮಿಥು
6	(1) ಸೋ	ಚ	36-27	ಮೂಲ	55-59	23
7	(2) ಮಂ	ಪೌ	33-14	ಪೂಷಾ	54-42	24
8	ಬುಧ	ಪಾ	30-48	ಉತ್ತಾಷಾ	54-31	25
9	(3) ಗುರು	ಬಿ	29-34	ಶ್ರವಣ	55-32	26
10	(4) ಶುಕ್ರ	ತ	29-35	ಧನಿಷ್ಠ	57-56	27
11	ಶನಿ	ಚ	30-52	ಶ	60-	28
12	(5) ಭಾ	ಪಂ	33-24	ಶ	2-4	29

(1) ಶ್ರೀರಂಗದಲ್ಲಿ ತಿರುಪ್ಪಾವಾಡೆ, (2) ಬ್ರಹ್ಮಸಾವರ್ಣಿಮನು:, ಶ್ರೀನಿವಾಸಬ್ರಹ್ಮತಂತ್ರ ಪರಕಾಲಸ್ವಾಮಿಗಳ ತಿರು॥ (3) ಮೇಲುಕೋಟೆಯಲ್ಲಿ ಮಹಾಭಿಷೇಕ: ಮತ್ತು ಕಲ್ಯಾಣೋತ್ಸವ:, ವೇದಾಂತ ಬ್ರಹ್ಮತಂತ್ರ ಪರಕಾಲಸ್ವಾಮಿಗಳಾರಾಧನೆ, (4) ಸಂಕಟಹರಚತುರ್ಥಿ, (5) ಟೀಕಾಚಾರ್ಯಪುಣ್ಯದಿನ,

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED M NO 124

ಮೈಸೂರ್ ✱ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ವಾರ್ಷಿಕ ಚಂದಾ ೧-೦-೦ } ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈ ಘನಪಥಕೃತಾವತಾರಾ ಪಕ್ಷ್ಯಜನಹೃತ್ತಮೋಹರಾಜೀಯಾತ್! ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ! ಸಿಮಾತೀತ ಯಶಃಪ್ರತಾಪವಿಪುಲಂಸದ್ವೃತ್ತಮಾಲಾಕುಲಂ | ಪ್ರೇಮಂಬಿತ್ತಿಸಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ! { ಅಂಚೆವೆಚ್ಚ ಸೇರಿ ೧-೧೪-೦

REGISTERED. M NO 124

ಸಂಪುಟ ೨೩) ಮೈಸೂರ್ ಸ್ಟಾರ್ ಸೆ ೧೯೧೪ ನೇಯ ಇಸವಿ ಜುಲೈ ತಾರೀಖು ೧೩ ನೇಯ ಸೋಮವಾರ. (ಸಂಚಿಕೆ ೨೮

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಸುಂದರವಾದ ಹೊಸನಮೂನೆ ದೊಡ್ಡ ಘಡಿಯಾರಗಳು.

24

ಪ್ರಖ್ಯಾತಿಹೊಂದಿದ ಅಮೆರಿಕಾದೇಶದ ಅಸೋಸಿಯಾ ಕಂಪೆನಿಯವರಿಂದ ತಯಾರಿಸಲ್ಪಟ್ಟ ಖಾತ್ರಿಯಾದ ಮತ್ತು ಬಹಳದಿವಸ ಬಾಳಿಕೆಬರತಕ್ಕಂಥ ಕ್ಲಾಕ್‌ಗಳು ಇವೇ ಹೊರ್ತು ಬೇರೆ ಅಲ್ಲಾ.



ಈಪಕ್ಕದ ಚಿತ್ರದಲ್ಲಿ ಕಾಣಿಸಿರುವ ಗೋಡೆಗೆ ತಗುಲಿಸುವ ಘಂಟೆ, ಅರ್ಧಘಂಟೆ ಹೊಡೆಯುವ ಘಡಿಯಾರ ಒಂದಕ್ಕೆ ೧೨-೮-೦ ರೂ. ಘಂಟೆ ಅರ್ಧಘಂಟೆ ಹೊಡೆದು ಅಲಾರಂ ಸಹಾ ಇರತಕ್ಕ ಘಡಿಯಾರ ಒಂದಕ್ಕೆ ೧೩-೪-೦ ರೂ. ಈ ಘಡಿಯಾರಗಳು ಮಜಬೂತಾದ ಯಂತ್ರೋಪಕರಣಗಳಿಂದಲೂ ಮೇಲ್ಭಾಗದಲ್ಲಿ ನಕಾಸಿನ ಕೆತ್ತನೆಯಿಂದಲೂ ನೋಡುವುದಕ್ಕೆ ಅಂದವಾಗಿಯೂ ಬಹಳ ದಿವಸ ಬಾಳಿಕೆ ಬರತಕ್ಕವುಗಳಾಗಿವೆ. ಈ ಘಡಿಯಾರಕ್ಕೆ ಆರ್ಡರ್ ಮಾಡತಕ್ಕವರು ೫ ರೂಪಾಯಿ ಅಡ್ವಾನ್ಸು ಕಳಿಸಬೇಕು. ಬಾಕೀ ಮೊಬಲಿಗ್ಗೆ ರೈಲ್ವೆ ರಶೀದಿಯನ್ನು ವಿ. ಪಿ. ಮಾಡಲಾಗುತ್ತೆ. ರೈಲ್ವೆ ಛಾರ್ಜ್ ಅಲಾಯಿದಾ.

ಸಿಕ್ಕಿದ ಹಾರ್ಮೋನಿಯಂಗಳನ್ನು ಕ್ರಯಕ್ಕೆ ತೆಗೆದುಕೊಂಡು ನಿಮ್ಮ ಹಣವನ್ನು ಯಾಕೆ ವ್ಯರ್ಥಮಾಡಿಕೊಳ್ಳುವಿರಿ.

ನಮ್ಮಲ್ಲಿ ವಿಕರಿಗೆ ಸಿದ್ಧವಾಗಿರುವ "ಮೋಹನ್‌ಫ್ಲೂಟ್ಸ್" (M. Mohen flute) ಮತ್ತೂ "ಮೋಸ್ಲೆಂಫ್ಲೂಟ್" (Moslem flute) ಹಾರ್ಮೋನಿಯಂಗಳನ್ನು ನಮ್ಮಿಂದ ತರಿಸಿಕೊಂಡು ಪರೀಕ್ಷಿಸಿರಿ ಈ ಹಾರ್ಮೋನಿಯಂಗಳು ಅನೇಕದಿವಸ ಬಾಳಿಕೆಬರುವಂತೆ ಬಹಳಮಜಬೂತಾದ ಸಾಮಾನುಗಳಿಂದ ಪ್ರಖ್ಯಾತರಾದ ಕಾರೇಗಾರರಿಂದ ತಯಾರಿಸಲ್ಪಟ್ಟಿವೆ. ಒಂದು ಸಾರಿ ನಮ್ಮಿಂದ ತರಿಸಿ ಪರಿಕ್ಷಿಸಿದಲ್ಲಿ ಇದರ ಬಂದೋಬಸ್ತು ಬಾಳ್ವಿಕೆ ಸಹ ತಮಗೇ ವ್ಯಕ್ತವಾಗುತ್ತೆ.





ನಂ ೧ ಒಂದು ಸೆಟ್‌ರೀಡ್ಸ್ ಉಳ್ಳದ್ದು (Moslem flute) ಹಾರ್ಮೋನಿಯಂ ೧ ಕ್ಕೆ ೩೫-೦-೦ ರೂ.

ನಂ ೨. ಒಂದು ಸೆಟ್‌ರೀಡ್ಸ್ ಉಳ್ಳದ್ದು (M. Mohen flute) ಹಾರ್ಮೋನಿಯಂ ೧ ಕ್ಕೆ ೩೨-೮-೦ ರೂ.

ನಂ ೩. ಡಿಟೋ ನಮೂನೆಯಲ್ಲಿ ಅತ್ಯುತ್ತಮವಾದದ್ದು (M. Mohen flute) ೧ ಕ್ಕೆ ೪೨-೮-೦ ರೂ.

ನಂ ೪. ಡಬ್ಬಲ್‌ರೀಡ್ಸ್ ಉಳ್ಳದ್ದು (Moslem flute) ಹಾರ್ಮೋನಿಯಂ ೧ ಕ್ಕೆ ೪೩-೮-೦ ರೂ.

ನಂ ೫. ಡಬ್ಬಲ್‌ರೀಡ್ಸ್ ಉಳ್ಳದ್ದು (M. Mohen flute) ಹಾರ್ಮೋನಿಯಂ ೧ ಕ್ಕೆ ೫೨-೮-೦ ರೂ.

ಈ ಹಾರ್ಮೋನಿಯಂಗಳ ಪೈಕಿ ಯಾವದಕ್ಕೆ ಆರ್ಡರ್ ಕೊಟ್ಟರೂಕೂಡ ೫ ರೂಪಾಯಿ ಅಡ್ವಾನ್ಸ ಕಳಿಸಬೇಕು ಬಾಕೀಮೊಬಲಿಗ್ಗೆ ರೈಲ್ವೇರಶೀದಿಯನ್ನು ವಿ. ಪಿ ಮೂಲಕ ರವಾನಿಸುತ್ತೇವೆ.

ನೆಪ್ಚೂನ್‌ಫೌಂಟನ್‌ಪೆನ್‌ಗಳು. NEPTUNE FOUNTAIN PENS.

ಈ ಫೌಂಟನ್‌ಪೆನ್‌ಗಳು ಅದರ ಖರೀದಿಗೆ ತಕ್ಕಂತೆ ೪ ವರುಷಗಳಲಾಗಾಯ್ತು ಹತ್ತು ವರುಷಗಳವರಿಗೆ ಬಾಳಿಕೆ ಬರತಕ್ಕವುಗಳಾಗಿವೆ.

ನಂ ೨೦೦. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಕ್ರಯ ೧ ಕ್ಕೆ ೧—೧೪—೦.

ನಂ ೨೫. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಉತ್ತಮವಾದದ್ದು ಕ್ರಯ ೧ ಕ್ಕೆ ೨—೧೦—೦

ನಂ ೨೧೦. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಅತ್ಯುತ್ತಮವಾದದ್ದು ಕ್ರಯ ೧ ಕ್ಕೆ ೪—೨—೦.

ಮೇಲ್ಕಂಡ ಯಾವನಮೂನೆ ಫೌಂಟನ್‌ಪೆನ್‌ಗಳನ್ನು ತರಿಸಿಕೊಂಡರೂ ಅದರ ಜೊತೆಯಲ್ಲಿ ಪೆನ್ ಇಡತಕ್ಕ ಪೆಟ್ಟಿ ೧. ಜೇಬಿಗೆ ತಗಲಿಸತಕ್ಕ ಕ್ಲಿಪ್ ೧. ಶಾಯಿಹಾಕುವ ಗಾಜಿನ ಟ್ಯೂಬ್ ೧. ಶಾಯಿತುಂಬುವವಿಧ ಪ್ರಿಂಟಾಗಿರತಕ್ಕ ಚೀಟಿ ೧ ನ್ನೂ ಸಹ ರವಾನಿಸಲಾಗುತ್ತೆ.

ರಖಂವಾರ್ ವಾಚ್ ಸರಪಣಿಗಳು.



ಈ ಪಕ್ಕದ ಚಿತ್ರದಲ್ಲಿ ಕಾಣಿಸಿರುವ ನಮೂನೆ ಅಚ್ಚಬೆಳ್ಳಿಯ ವಾಚ್ ಸರಪಣಿ ಯಾವ ರಖಂ ಬೇಕಾದರೂ ಕ್ರಯ ೧ಕ್ಕೆ ೩—೪—೦ ಮೇಲ್ಕಂಡ ರಖಂಮಿನಲ್ಲಿ ನಿಕ್ಕಲ್‌ಬೆಳ್ಳಿ ಸರಪಣಿ ಕ್ರಯ ೧ ಕ್ಕೆ ೦—೧೨—೦.

ಅಚ್ಚಬೆಳ್ಳೀ ಕೊರಳ ಸರಪಣಿ ಬಹಳ ನಾಜೋಕಾಗಿ ತಯಾರಿಸಿದ್ದು ೧ ಕ್ಕೆ ೧—೪—೦.

೧೮ ಕ್ಯಾರೆಟ್ಟು ಚಿನ್ನದ ಸರಪಣಿ ೧ ಕ್ಕೆ ೫—೮—೦.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲಚರಿತ್ರೆ	೦—೫—೦
ಸಟೀಕ ನಂದೀವ್ರತ	೦—೪—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸ ಪುಸ್ತಕಗಳು.

143

ಬಸವರಾಜವಿಜಯಂ— ಬೆಲೆ ೧ ೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧ ೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸೂಕ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ ವರ್ಷದ ಚಂದಾ ೨-೮-೦.

ಎಸ್. ಆರ್. ಕರಿಬಸವಶಾಸ್ತ್ರಿ,

ಗ್ರಂಥಪ್ರಕಾಶಕಮಂಡಲಿ, ಮೈಸೂರು.

ಪ್ರಕಟನೆ.

ಪ್ರಿಂಟಿಂಗಾಫೀಸಿನವರು ಅಗತ್ಯವಾಗಿ ಗಮನಿಸತಕ್ಕದು.

ನಮ್ಮಲ್ಲಿ ಈ ಸ್ಟಾರ್‌ಪತ್ರಿಕೆಯ ೧, ೨, ೩, ೬, ೭ ಮತ್ತೂ ೮ನೇ ಪುಟಗಳಲ್ಲುಪಯೋಗಿಸಲ್ಪಟ್ಟಿರುವ ಪೈಕ ಅಥವಾ ೧೨ ಪಾಯಿಂಟ್ ಅಕ್ಷರಗಳ ಮತ್ತೂ ಈ ಪ್ರಕಟನೆಗುಪಯೋಗಿಸಲ್ಪಟ್ಟಿರುವ ಟೂಲ್ಮೈನ್‌ಮಿನಿಯನ್ ಅಥವಾ ೧೪ ಪಾಯಿಂಟ್ ಅಕ್ಷರಗಳ ಮ್ಯಾಟ್ರಿಕ್ಸುಗಳೂ, ಅವುಗಳ ಮೌಲ್ಡುಗಳೂ ಇವನ್ನು ಎರಕವೆರೆಯುವ ಯಂತ್ರವೂ ಅದಕ್ಕೆ ಸಂಬಂಧಪಟ್ಟ ಲೈನ್ ಗೇಜ್ ಪೇಪರ್‌ಗೇಜ್ ಹೈಟ್‌ಗೇಜ್ ಡ್ರೆಸ್ಸಿಂಗ್‌ಟೇಬಲ್ ಕರ್ನಿಂಗ್ ಮಿಷನ್ನು ಮುಂತಾದ ಸಾಮಾಗ್ರಿಗಳೂ ಸೂಪರ್‌ರಾಯಲ್ ಸೈಜನ್ನು ಪ್ರಿಂಟ್ ಮಾಡುವ ಸಿಲಿಂಡರ್ ಮಿಷನ್ನು ಸಹ ಮಾರಾಟಕ್ಕೆ ಸಿದ್ಧವಾಗಿವೆ. ಈ ಮಿಷನ್ನಿನಲ್ಲೇ ಈ ಸ್ಟಾರ್‌ಪತ್ರಿಕೆಯು ಪ್ರಿಂಟುಮಾಡಲ್ಪಡುತ್ತಿರುವುದು. ಎರಕವೆರೆಯುವ ಮಿಷನ್ನು ಬಹಳ ಸ್ವಲ್ಪ ಕೆಲಸವನ್ನು ಮಾತ್ರ ಮಾಡಿ ಹೊಸದಾಗಿಯೇ ಯಿರುವುದು. ಇಷ್ಟವುಳ್ಳವರು ಇವುಗಳ ಬೆಲೆ ಮೊದಲಾದವನ್ನು ನಮಗೆ ಬರೆದು ತಿಳಿದುಕೊಳ್ಳಬಹುದಲ್ಲದೆ ಪ್ರತ್ಯಕ್ಷವಲ್ಲಿ ಬಂದು ನೋಡಬಹುದು.

ವೈ. ವಿರೂಪಾಕ್ಷಯ್ಯ,
ಪ್ರೊಪ್ರೈಟರ್
ಕ್ಯಾರ್ಕ್ ಪ್ರೆಸ್, ಮೈಸೂರು.

ಸಂಘದಭಿವೃದ್ಧಿ ಸಮಾಜದ ಮೀಟಿಂಗು ಹೊಸದುರ್ಗದ ತಾಲ್ಲೂಕು ಆಲಗಟ್ಟೆಗ್ರಾಮ.

ಈ ಸಮಾಜದ ಮೀಟಿಂಗ್ ನಡವಳಿಕೆಗಳನ್ನು ಪ್ರಜಾಹಿತೈಷಿಗಳಾದ ನಮ್ಮ ತಾಲ್ಲೂಕ್ ಅಮಲ್ದಾರರವರು ಮಿ॥ ಕೆ. ಶ್ರೀನಿವಾಸರಾವ್ ಬಿ. ಎ. ಯವರು ತಾರೀಖು ೨೩-೪-೧೪ ರಲ್ಲಿ ಈ ಗ್ರಾಮಕ್ಕೆ ಮುಕ್ಕಾಂ ಮಾಡಿದ್ದಾಗ್ಯೆ ಬೋಧಿಸಿ ಏರ್ಪಡಿಸಿಕೊಟ್ಟ ಮೇರೆ ತಾರೀಖು ೧೫-೬-೧೪ರಲ್ಲಿ ಈ ಮೀಟಿಂಗ್ ಜರಗಬೇಕಾದುದು ಆ ದಿವಸ ಬೆಳಗೂರು ಶ್ರೀಪ್ರಸನ್ನರಾಮೇಶ್ವರ ಕೋ ಆಪ್‌ರೇಟಿವ್ ಸೊಸೈಟಿ ಅನ್ ಲಿಮಿಟೆಡ್ ಸಂಘದವರು ನಮ್ಮಗಳ ಕೋರಿಕೆಯಂತೆ ದಯಮಾಡಿಸಿ ಸ್ಪೆಷಲ್‌ಮೀಟಿಂಗ್ ನಡಿಸಿದ್ದರಿಂದ ಈ ಸಂಘದಭಿವೃದ್ಧಿ ಸಂಘದ ಮೀಟಿಂಗ್ ನಡೆಯುವುದನ್ನು ನಿಲ್ಲಿಸಿದ್ದು, ತಾರೀಖು ೨೯-೬-೧೪ ನೆ ಸೋಮವಾರದದಿವಸ ಮಧ್ಯಾಹ್ನ ಬಹಿರಂಗವಾದ ಶ್ರೀಬಸವೇಶ್ವರ ದೇವಸ್ಥಾನದಲ್ಲಿ ಈ ಸಮಾಜದವರ ಪ್ರೋಗ್ರಾಂ ಮೇರೆ ಗ್ರಾಮದ ಸಮಸ್ತ ಕೋಂವಾರು ರೈತಮಂಡಲಿಯವರು ಏಕಮತ್ಯಸಂತೋಷಚಿತ್ತದಿಂದ ಸರ್ವರೂ ಸಭಾಲಂಕೃತರಾಗಿ ಸೇರಿದ್ದರು. ಈ ಸಮಾಜಕ್ಕೆ ಮಿ॥ ಯಂ. ಡಿ. ಗಡದಯ್ಯನವರನ್ನು ಪ್ರಸಿಡೆಂಟರನ್ನಾಗಿಯೂ, ಎ. ಹೆಚ್ ಆರ್. ಚೆನ್ನಬಸವಾರಾಧ್ಯಸ್ವಾಮಿಯವರನ್ನು ಸೆಕ್ರಟರಿಯವರನ್ನಾಗಿಯೂ, ಕೆ. ಎಮ್. ಮಹಾದೇವಯ್ಯನವರನ್ನು ಟ್ರಜರರನ್ನಾಗಿಯೂ, ಮ॥ ರಾ॥ ಪಟೇಲರಾದ ಕೆ ಚೆನ್ನಬಸವೇಗೌಡರು, ಶ್ಯಾ॥ ಗುಮಾಸ್ತೆ ಯಂ. ಜಿ. ವೆಂಕಣ್ಣಯ್ಯನವರು, ಕೆ. ಹುಚ್ಚಪ್ಪನವರು, ಬಿ. ಮರಿಯಪ್ಪನವರು, ಪಟೇಲರ ತಮ್ಮ ಕಲ್ಲಿಂಗಪ್ಪನವರು, ಹೆಚ್. ಕಾಡಸಿದ್ಧಪ್ಪನವರು, ಪಂಚಾಂಗದ ಮಲ್ಲಪ್ಪನವರು, ಕೆ. ಚಿಕ್ಕಣ್ಣಾಚಾರಿಯವರು, ಶಿ ಮೋಲಪ್ಪನವರು, ಮಠದ ಚೆನ್ನಬಸವಯ್ಯನವರು, ಮರುಳಯ್ಯನವರು, ಜಿ. ಶಂಬಣ್ಣನವರು, ಟಿ. ದೊಡ್ಡಕಲ್ಲಿಗೌಡರು, ಕಲ್ಲಿಂಗಪ್ಪನವರು, ಕೆ. ಚಿಕ್ಕಕಲ್ಲಪ್ಪನವರು, ಕೆಲವರು ಇತ್ಯಾದಿಯವರಲ್ಲಿ ಪಂಚಾಯಿತದಾರರನ್ನಾಗಿ ಮೆಂಬರರನ್ನಾಗಿಯೂ ನೇಮಿಸಲ್ಪಟ್ಟಿರುತ್ತಾರೆ. ಈ ದಿವಸದ ಮೀಟಿಂಗ್‌ನಲ್ಲಿ ಕೆ. ಚೆನ್ನಬಸವೆಗೌಡರು ಸಹಾಯಕ ಪ್ರಸಿಡೆಂಟರಾಗಿಯೂ ಮಾಡಲ್ಪಟ್ಟು ಸೆಕ್ರಟರಿಯವರಾದ ಮಿ॥ ಚೆನ್ನಬಸವಾರಾಧ್ಯಸ್ವಾಮಿಯವರು ರೈತಮಂಡಲಿಯವರಿಗೆ ಹೃದಯಂಗಮವಾಗುವಂತೆ ಈ ಸಮಾಜದಿಂದುಂಟಾಗುವ ಪ್ರಯೋಜನಾಂಶಗಳನ್ನೂ ನಮ್ಮಗಳ ಏಳಿಗೆಗಾಗಿ ನಮ್ಮ ಮಹಾರಾಜರವರ ಗೌರ್ನಮೆಂಟಿನವರು ಪ್ರಯತ್ನಬದ್ಧರಾಗಿ ಏರ್ಪಡಿಸುತ್ತಿರುವ ತಾರೀಖು ೩-೨-೧೪ ನೇ ಮರ್ಕ್ಯೂರಿಯ ಸರ್ಕಾರದವರ ಹುಕುಂಸುಗತಿಗಳನ್ನೂ ವಿವರವಾಗಿ ಉಪನ್ಯಾಸದ ಮೂಲಕ ಓದಿ ತಿಳಿಸಿದರು. ಈ ಸಮಾಜ ದಂಥವುಗಳನ್ನೇರ್ಪಡಿಸಿಕೊಳ್ಳುವದಕ್ಕೆ ಮೂಲವಿದ್ಯಾಭ್ಯಾಸವೇ ಪ್ರಾಮುಖ್ಯವಾದುದೆಂದು ಮೊದಲಾಗಿ ನೀತಿವಚನ ಗ್ರಂಥೋಕ್ತಿಗಳಿಂದ ಶ್ಯಾನುಭೋಗ್ ಗು॥ ವೆಂಕಣ್ಣಯ್ಯನವರು ಚಿ॥ ಶಾ॥ ಕಂದಿಕೆರೆ ರೇವಣ್ಣನಮಠದ ಹಾಲುಮತದ ಸಾಹುಕಾರ್‌ವೀರ್ ಕೆ. ಎಸ್. ರೇವಣ್ಣಯ್ಯನವರು ಮಾಜಿ ಸ್ಕೂಲ್ ಮಾಸ್ಟರ್ ಇವರು ಸಹ ಭಾಷಣಮಾಡಿದರು. ಇದಾದನಂತರ ಈ ಮೀಟಿಂಗ್‌ನಲ್ಲಿ ಚರ್ಚಿಸಿ ಬ್ಯಾಸಾಗಬೇಕಾದ ಸಬ್‌ಜೆಕ್ಟ್‌ಗಳನ್ನು ಸೆಕ್ರಟರಿಯವರು ವಿವರಿಸಿದನಂತರ ಮೆಂಬರುಗಳೆಲ್ಲಾ ಚರ್ಚಿಸಿ ಈ ಗ್ರಾಮಕ್ಕೆ ಬಾಲಕಬಾಲಕಿಯರ ವಿದ್ಯಾಭ್ಯಾಸಕ್ಕೆ ಪ್ರೈವೇಟ್‌ಸ್ಕೂಲ್ ಸಹ ಇಲ್ಲದೆ ಇರೋಣದರಿಂದ ಗ್ರಾಮಸ್ಥರ ಸಹಾಯವಾಗಿ ಮಿ॥ ಚೆನ್ನಬಸವಾರಾಧ್ಯಸ್ವಾಮಿಯವರು ವಿದ್ಯಾಭ್ಯಾಸದ ಇಲಾಖಾಸಾಹೇಬರವರಿಗೆ ಅರ್ಜಿಮೂಲಕ ಕೇಳಿಕೊಂಡಿದ್ದನ್ನು ನಡೆಸಿ ಸ್ಕೂಲ್ ಏರ್ಪಡಿಸಲಿಕ್ಕೆ ಆರ್ಡರ್ ತರಿಸಿರುತ್ತಾರಲ್ಲದೆ ಪ್ರಸ್ತುತ ಸ್ಕೂಲ್‌ಮನೆಯನ್ನು ಗ್ರಾಮಸ್ಥರು ತಯಾರಿಸುವವರೆಗೂ ಸ್ಕೂಲ್‌ನಡೆಸಲು ಮಾಸ್ಟರವರು ಬಂದಾಕ್ಷಣ ತಮ್ಮ ವಾಸದಮನೆಯನ್ನೇ ಬಿಟ್ಟುಕೊಡುವದಕ್ಕೆ ಬದ್ಧರಾಗಿರುವುದರಿಂದ ಈ ಗ್ರಾಮಸಮಾಜದವರು ಇವರ ಪರೋಪಕಾರಬುದ್ಧಿಗಾಗಿ ಕೃತಜ್ಞತೆಯನ್ನು ತೋರ್ಪಡಿಸಿ, ಈ ಸಂವತ್ಸರದೊಳಗಾಗಿ ಗ್ರಾಮದಲ್ಲಿ ಬಹಿರಂಗದ ಅನುಕೂಲವಾದ ಜಾಗದಲ್ಲಿ ಸ್ಕೂಲ್‌ಮನೆ ತಯಾರಿಸಿ ಕೊಡುವದಕ್ಕೆ ೨೦೦ ರೂಪಾಯಿ ಅಂದಾಜ್‌ಮಾಡಿ ಕಟ್ಟಡದ ವರ್ಕ್ ತಯಾರಿಸಲು ತೀರ್ಮಾನಿಸಿಕೊಂಡಿರುತ್ತಾರೆ. ಮತ್ತು ಗ್ರಾಮದ ಕಲ್ಲೇಶ್ವರ ದೇವಸ್ಥಾನದ ಪೂರ್ವಭಾಗದಲ್ಲಿ ಗ್ರಾಮಸ್ಥರು ಏರ್ಪಡಿಸಿರುವ ಸಾಲ್‌ಸೂಪಿ ಬಳಿ ಒಂದು ಭಾವಿ ತೆಗಿಸಿ ಕಲ್ಲುಕಟ್ಟಡ ಮಾಡಿಸಲು ೩೦೦ ರೂಪಾಯಿ ಅಂದಾಜ್ ಮಾಡಿ ಈ ಮೊಬಲಗಿನಲ್ಲಿ ಅರ್ಧಭಾಗ ಮೊಬಲಗನ್ನು ಗ್ರಾಮಸ್ಥರಿಂದ ವಸೂಲ್‌ತೆಗೆದು ಈ ತಾರೀಖು ಲಗಾಯ್ತು ನಾಲ್ಕು ತಿಂಗಳೊಳಗೆ ತಾಲ್ಲೂಕ್ ಟ್ರಜರಿಗೆ ಜಮಾಮಾಡಿಸಿ, ಬಾಕಿ ಸಹಾಯವನ್ನು ಸರ್ಕಾರದವರನ್ನು ಕೇಳಿಕೊಳ್ಳಬೇಕೆಂದು ತೀರ್ಮಾನಿಸಿಕೊಂಡಿರುತ್ತಾರೆ. ಮತ್ತು ಗ್ರಾಮದ ಶುಭೇಕರ ನಾದಿಕಾರ್ಯಗಳನೂ ದೇಶೀಯವಾರ್ತಾಪತ್ರಿಕೆಗಳನ್ನೂ ಧರ್ಮನೀತಿಬೋಧಾರ್ಹವಾದ ಪುರಾಣೇತಿಹಾಸಗಳನ್ನೂ ಕೇಳಲು ವಾರಕ್ಕೆ ಅರ್ಧದಿವಸದಂತೆ ಪ್ರತಿಸೋಮವಾರವೂ ಸರ್ವರೂ ಈದೇವಸ್ಥಾನಕ್ಕೆ ಸೇರಬೇಕೆಂದೂ, ಮತ್ತು ಈಗಾ ಮಕ್ಕೆ ಹಾಲಿ ಮೈಸೂರ್‌ಸ್ಟಾರ್‌ಪತ್ರಿಕೆ, ವೃತ್ತಾಂತಪತ್ರಿಕೆ, ಧಾರವಾಡದ ವೀರಶೈವಧರ್ಮತರಂಗಿಣಿ, ಕೋಆಪರೇಟಿವ್ ಸೊಸೈಟಿ ಬುಲ್‌ಟಿನ್ ಬರುತ್ತಾ ಇರುವದರ ಜೊತೆಗೆ ಒಕ್ಕಲಿಗರಪತ್ರಿಕೆ, ಧಾರ್ವಾಡದಲ್ಲಿ ಹೊರಡಿಸುವ ಚಂದ್ರೋದಯ, ಸಾಧ್ವೀಪತ್ರಿಕೆ, ಮೈಸೂರ್ ಸರ್ಕಾರಿಗೆಜೆಟ್, ರೆವಿನ್ಯೂಗೆಜೆಟ್, ಸರ್ವಜನಹಿತೋಪಕಾರಿಣಿ ಈ ವಗೈರೆ ಪತ್ರಿಕೆಗಳನ್ನು ತರಿಸಬೇಕೆಂದು ಸೆಕ್ರಟರಿಯವರು ವಿವರಿಸಿ ಸೂಚಿಸಿದ ಮೇರೆ ಪ್ರಸಿಡೆಂಟರು, ಮೆಂಬರರು, ಸಮ್ಮತಿಸಿದನಂತರ ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದ್ದೂರ್‌ರವರಿಗೂ, ಶ್ರೀಮದ್ಯುವರಾಜ ಬಹದ್ದೂರ್‌ರವರಿಗೂ, ಪ್ರಧಾನಶಿರೋಮಣಿಗಳಾದ ದಿವಾನ್‌ಸಾಹೇಬರವರಿಗೂ, ನಮ್ಮ ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರ್‌ಸಾಹೇಬರವರಿಗೂ ಶ್ರೇಯಃಪ್ರಾರ್ಥನೆಯನ್ನು ಕೋರಿ ಶ್ರೀಬಸವೇಶ್ವರ ದೇವರಿಗೆ ಮಂಗಳಾರ್ಚನೆಯಿಂದ ಮೀಟಿಂಗ್ ಬರಖಾಸ್ತು ಮಾಡಿಸಿದರು. ಪತ್ರವಿಸ್ತಾರಕ್ಕೆ ಕ್ಷಮೆಕೇಳುತ್ತೇನೆ

ಪ್ರತ್ಯಕ್ಷದರ್ಶಿ.

ತಾ॥ ೩೦-೬-೧೪ ಆಲಗಟ್ಟೆಗ್ರಾಮ. } ಬಿ. ಮರುಳಪ್ಪಗೌಡ ಕೋಆಪ್‌ರೇಟಿವ್‌ಸೊಸೈಟಿ ಷೇರ್‌ದಾರ್ ಮತ್ತು ಚಂದಾದಾರ್

ಗೋವುಗಳನ್ನು ಕಂಡು ಕನಿಕರಗೊಂಡ ಒಬ್ಬರು ತಾಲ್ಲೂಕು ಅಮಲ್ದಾರರವರು.

ಹೆಗ್ಗಡದೇವನಕೋಟೆ ತಾ॥ ಅಮಲ್ದಾರ್ ಮ॥ ರಾ॥ ಎಂ. ಎನ್ ಶ್ರೀನಿವಾಸಯ್ಯಂಗಾರ್‌ರವರು ತಾಲ್ಲೋಕು ಸರಹದ್ದು ದಕ್ಷಿಣಭಾಗದ ಜಂಗಲುಪ್ರಾಂತ್ಯಸಂಚಾರ ದಯಮಾಡಿಸಿ ತಾ॥ ೧೩-೬-೧೯೧೪ ರಲ್ಲಿ ಹಾದನೂರು ಬಡಗಲ್ಪುರದಲ್ಲಿ ಮೊಕ್ಕಾಂಮಾಡಿದ್ದು, ಅಲ್ಲಿನ ಮುಖಂಡರಾದ ಸಾಹುಕಾರ್ ಲಿಂಗೇಗೌಡರು ಹೇಳಿದ ಪ್ರಜಾಸೌಕರ್ಯದ ಕಾರ್ಯಗಳನ್ನೆಲ್ಲಾ ತಿಳಿದುಕೊಂಡು ತಾ॥೧೮ರ ಪ್ರಾತಃಕಾಲ ಎತ್ತಗದ ಮಠದಲ್ಲಿ ಮೊಕ್ಕಾಂಮಾಡಿದರು. ಶ್ರೀ॥ ಮೈ॥ ಶ್ರೀ॥ ಅ॥ ಮಿ॥ ಕ॥ ಶ್ರೀ॥ ವೇ॥ ದೊಡ್ಡರಾಮಾರಾಧ್ಯ ಸ್ವಾಮಿಗಳವರೂ ಮತ್ತೂ ಚಿಕ್ಕರಾಮಾರಾಧ್ಯ ಸ್ವಾಮಿಗಳವರೂ ಇನ್ನೂ ಗ್ರಾಮಸ್ಥರೂ ಸಹ ಸೇರಿ ಮ॥ ರಾ॥ ಅಮಲ್ದಾರರವರ ಕುಶಲ ಪ್ರಶ್ನೆಗಳನ್ನು ಮಾಡಿ, ಈ ಗ್ರಾಮದಲ್ಲಿ ಕೀಳ್ಜನರಿಗೆ ಕುಡಿಯುವುದಕ್ಕೆ ನೀರಿಲ್ಲದ್ದರಿಂದ ದಿಟೋ ಜನರ ಪ್ರಾರ್ಥನೆ ಮೇರೆ" ಅಯ್ಯೋ ಪಾಪ ಎಷ್ಟು ತೊಂದರೆಯಾಗಿದೆ,, ಎಂದುಕೊಂಡು, ಅಗಲಿ ಒಂದು ಭಾವಿ ತೆಗಿಸುತ್ತೇವೆ ಎಂದು ಉತ್ತರವನ್ನು ಕೊಟ್ಟರು. ಇನ್ನೂ ಒಂದೆರಡು ಅರ್ಜಿಯನ್ನು ಓದಿಸಿ ಕೇಳುತ್ತಿದ್ದು, ಮಧ್ಯಾಹ್ನ ೩ ಘಂಟೆಯ ಮೇಲೆ ಚೆನ್ನಗುಂಡಿಯವರು ಗ್ರಾಮಕಟ್ಟೆಗೆ ಅರ್ಜಿ ಕೊಟ್ಟದ್ದನ್ನು ಪರಾಮರ್ಶಿಸಿ, ಮರಳಿ ಶ್ರೀ ಮಠದಲ್ಲಿಯೇ ಮೊಕ್ಕಾಂ ಮಾಡಿದರು. ತಾ॥ ೧೯ ರ ದಿನ ಗ್ರಾಮ ಕಟ್ಟಿನ ದರಖಾಸ್ತು ಜಾಗದ ಬಳಿ ದಯಮಾಡಿ ಚೆನ್ನಗುಂಡಿ ಗ್ರಾಮಸ್ಥರನ್ನು ಬರಮಾಡಿಕೊಂಡು, ನೀವು ಶ್ಯಾನುಭೋಗರ ಗುತ್ತಿಗೇ ಜಮೀನನ್ನೇ ಮಾಡಿಕೊಂಡಿದ್ದರೆ ನೀವು ಉದ್ಧಾರವಾಗುವುದು ಹೇಗೆ ? ನಿಮ್ಮ ವೃತ್ತಿಯು ಚೆನ್ನಾಗಿಲ್ಲವೆಂದು ಅವರಿಗೆ ಬುದ್ಧಿ ಹೇಳಿ, ಕೆಲವು ಎಕರೆ ಜಮೀನುಗಳನ್ನು ಹರಾಜು ಮಾಡಿಸಿ ಸುಲಭವಾಗಿಯೇ ರೈತರಿಂದ ಹಣ ಕಟ್ಟಿಸಿ ಇರಸಾಲಿಗೆ ಕೊಟ್ಟರು. ಈ ಚೆನ್ನಗುಂಡಿ ಗ್ರಾಮಸ್ಥರು ಕೆಳೆದ ೫-೬-ವರ್ಷಗಳಿಂದಲೂ ದರಖಾಸ್ತು ಮಂಜೂರಾಗಲಿಲ್ಲವೆಂತ ಪರಿತಪಿಸುತ್ತಿದ್ದದ್ದನ್ನು ದೀನದಯಾಳುಗಳಾದ ಅಮಲ್ದಾರರವರು ತಪ್ಪಿಸಿ ಕುಡಿಯುವ ನೀರಿನ ಒಂದು ಭಾವಿಯನ್ನು ಸರ್ಕಾರದ ಸಹಾಯದಿಂದ ತೆಗಿಸಿಕೊಡುವಂತೆ ಹುಕುಂಮಾಡಿದುದರಿಂದ ಅವರಿಗೆ ಪ್ರಜೆಗಳಮೇಲಿನ ಪ್ರೀತಿ ವಿಶ್ವಾಸಗಳೆಷ್ಟಿರುತ್ತದೆಂದು ಸರ್ವರು ಕೊಂಡಾಡಿದರು. ಈ ಸರಹದ್ದಿನ ಮಳೆಬೆಳೆಗಳ ವಿಚಾರವನ್ನು ಎತ್ತಗದಮಠದ ಆಚಾರವಿಚಾರಣೆ ಸ್ವಾಮಿಗಳವರಿಂದಲೂ ಮತ್ತೂ ರೂಬರೂಬೂ ಸಹ ಪರೀಕ್ಷಿಸಿಕೊಂಡು ಈ ದಿವಸ ಸಾಯಂಕಾಲಕ್ಕೆ ಚಿಕ್ಕಬರಗಿ ಗ್ರಾಮದ ಮೊಕ್ಕಾಂ ಮಾಡಿದರು. ಈ ವರ್ಷ ಪಶುಗಳಿಗೆ ಹುಲ್ಲೂ ನೀರು ಸಹ ದೊರೆಯದೆ ತುಂಬಾ ಅಭಾವವಾಗಿ ಮಳೆಯೂ ನಡಸದೆ ವ್ಯವಸಾಯಕ್ಕೂ ಪ್ರಾಣಿಗಳ ಮೇವಿಗೂ ತುಂಬಾ ಅಭಾವವಾಗಿರುವುದು ಸರ್ವರಿಗೂ ತಿಳಿದ ವಿಷಯವಾಗಿದೆಯಷ್ಟೆ. ಈ ಸಾರಿ ದನಗಳಿಗೆ ಎಲ್ಲಾ ಪ್ರಾಂತ್ಯದಲ್ಲಿ" ಕಾಲು ಬಾಯಿಜ್ವರ ,, ಎಂಬ ರೋಗವು ವ್ಯಾಪಿಸಿ ಅನಿರ್ವಚನೀಯವಾದ ತೊಂದರೆಯಾಗಿರುವುದು. ಈಗ ನಂಜನಗೂಡು ತಾ॥ ಹೆಗ್ಗಡದೇವನಕೋಟೆ ತಾ॥ ಗ್ರಾಮಾಂತರಗಳ ಪ್ರತಿ ರೈತರ ದನಗಳೂ ಮೇವು ನೀರಿಗೋಸ್ಕರ ಚಿಕ್ಕಬರಗಿಯಲ್ಲಿ ಸುಮಾರು ೭-೮ ಸಾವಿರ ದೊಡ ಬರಗಿಯಲ್ಲಿ ೨-೩ ಸಾವಿರ ಕುರುಬಾಗಾಲ ಆಲನಹಳ್ಳಿ ಮಾಳಗಲ್ಲಿ ೧-೨ ಸಾವಿರ ಕಲ್ಲರೆಹಟ್ಟಿಯಲ್ಲಿ ೧-೨ ಸಾವಿರ ಈ ರೀತಿಯಾಗಿ ಸುಮಾರು ೧೮-೧೫ ಸಾವಿರ ದನಗಳು ಇರುತ್ತವೆ. ಇವೆಲ್ಲಾ ೧-೨ಮೈಲಿ ಪ್ರದೇಶದ ಬಂದೇಸರಹದ್ದಿನಲ್ಲಿರುತ್ತವೆ. ಆ ಕಾಡಿನಲ್ಲಿದ್ದ ಸೊಪ್ಪು ಸೆದೆಗಳೆಲ್ಲಾ ಆಗಿಹೋಯಿತು ಹುಲ್ಲಿನ ಪ್ರಸ್ತಾಪವೇ ಇಲ್ಲ ಇವುಗಳಲ್ಲದೆ ಅಮೃತಮಹಲ್ ದನಗಳು ಒಂದು ಸಾವಿರದ ಮೇಲೆಯೇ ಅದೇ ಸ್ಥಳದಲ್ಲಿರುತ್ತವೆ ಗಾಳಿ ಜೋರಾಗಿ ಬೀಸುವುದರಿಂದಲೂ ಬೈಲುರೊಪ್ಪದಲ್ಲಿಯೇ ದನಗಳು ಬೀಳುವುದರಿಂದಲೂ ಅಲ್ಲೂ ಮೇವಿಲ್ಲದಿರುವುದರಿಂದಲೂ ದನಗಳು ಬಡಕಾಗಿ ರೊಪ್ಪದಲ್ಲಿಯೇ ಏಳಲಾರದೆ ಬಹು ದನಗಳು ಬಿದ್ದು ಒದ್ದಾಡುತ್ತಲೂ, ದಿನಕ್ಕೆ ಸುಮಾರು ೧೦-೧೫ ದನಗಳು ಸಾಯುತ್ತಲೂ ಇರುವವು. ಮಾದಿಗರು ಕೊಂಡುಕೊಳ್ಳಲು ಬಹು ಜನರು ನಾನು ಮುಂದು ತಾನು ಮುಂದು ಎಂದು ತಿರುಗುತ್ತಿರುವರು. ಈ ಮಧ್ಯೆ ಫಾರೆಸ್ಟ್ ಇಲಾಖೆಯವರು ಕೆಲವು ರಾಸುಗಳಿಗೆ ಬಾಲತೆರುಗೆಯನ್ನು ತೆಗೆದುಕೊಂಡು ರಸೀದಿಕೊಟ್ಟಿರುವರು. ಈ ವಿಪರೀತವನ್ನೆಲ್ಲಾ ಅಮಲ್ದಾರರವರು ಕಣ್ಣಾರನೋಡಿ ಕನಿಕರಗೊಂಡು ಅಶ್ರುಜಲತುಂಬಿರಲು ಪ್ರತಿಯೊಬ್ಬ ಮಾಲೀಕನನ್ನೂ ಬಳಿಗೆ ಕರೆಸಿ, ದನಗಳು ಗ್ರಾಮ ಇವುಗಳನ್ನೆಲ್ಲಾ ಪಟ್ಟಿ ಮಾಡಿಕೊಂಡು ಫಾರೆಸ್ಟ್ ಇಲಾಖೆಯವರು ಕೊಟ್ಟಿದ್ದ ರಸೀದಿಗಳನ್ನು ಈಸಿಕೊಂಡು ಇಲ್ಲಿಂದ ಮುಂದೆ ಯಾರು ಕೇಳಿದಾಗ್ಯೂ" ಬಾಲಕೆರುಗೆ ,, ಯನ್ನು ಕೊಡಬೇಡಿ; ನಾನು ಖುದ್ದುಸರ್ಕಾರಕ್ಕೆ ಬರೆದು ತೆರುಗೆಯನ್ನು ಮಾಫ್ ಮಾಡಿಸುವುದಲ್ಲದೆ ತೆಗೆದುಕೊಂಡಿರುವ ಮೊಬಲಗನ್ನು ವಾಪಸ್ ಕೊಡಿಸಿಕೊಡುತ್ತೇನೆಂದು ಅಪ್ಪಣೆ ಕೊಡಿಸಿದರು. ಇದಲ್ಲದೆ ಇನ್ನೂ ಮಟಕೆರೆ ಬಂಕವಾಡಿ ಮೊದಲಾದ ಪ್ರಾಂತ್ಯದಲ್ಲಿರುವ ದನಗಳನ್ನೂ ನೋಡಿಕೊಂಡು ದಯಮಾಡಿಸಲು ತಾ॥ ೨೦-೬-೧೯೧೪ ನೇ ದಿವಸ ಹಿರೇಹಳ್ಳಿ ಮೇಲೆ ಸವಾರಿ ದಯಮಾಡಿಸಿತು. ಪತ್ರಕರ್ತರೇ ! ಲೇಖನವಿಸ್ತಾರಕ್ಕೆ ಕ್ಷಮಿಸಿರಲಿ ಈ ಸರಹದ್ದು ಇಷ್ಟು ಭೀಕರಸ್ಥಿತಿಯಲ್ಲಿ ಯಾವಾಗ್ಗೂ ಇರಲಿಲ್ಲ ಸ್ವಲ್ಪಸ್ವಲ್ಪ ಬಿತ್ತಿದ್ದ ರಾಗಿ ಎಳ್ಳು ಪೈರೆಲ್ಲಾ ಒಣಗಿಹೋಯಿತು ಜನಗಳು ಬಿದಿರುಮೆಳೆಯಲ್ಲಿ ಉದುರುವ" ಕಟ್ಟೆಭತ್ತ ,, ಎಂಬುದನ್ನು ತಂದು ಜೀವಿಸುತ್ತಾ ಇರುತ್ತಾರೆ. ಅರುವತ್ತು ವರ್ಷಕೊಂದುಕಟ್ಟೆ ಎಪ್ಪತ್ತು ವರ್ಷಕೊಂದು ಎಟ್ಟೆ ಎಂಬ ತಮ್ಮ ಹಿರಿಯರು ಹೇಳುತ್ತಿದ್ದ ವಾಕ್ಯವನ್ನು ನೆನಸಿ ಭೀಕರಪಡುತ್ತಿದ್ದಾರೆ. ಇಲ್ಲಿ ಜನಗಳ ಆಹಾರಸಾಮಗ್ರಿಗಳನ್ನು ಪ್ರತಿಯೊಬ್ಬರಿಗೂ ಹಂಚಿದರೆ ಸರಾಸರಿ ಇನ್ನು ೨ ತಿಂಗಳು ಜೀವಿಸಬಲ್ಲರು. ಗದ್ದೆಯನ್ನಾದರೂ ಹೋಗಿ ವಾರ ಫಸಲು ಮಾಡೋಣವೆಂದರೆ ಕಾಲ್ವೆಯಲ್ಲಿ ನೀರನ್ನೇ ಬಿಟ್ಟಿಲ್ಲ. ಎತ್ತಿಗೆ ಹಾಕುವುದಕ್ಕೆ ಹುಲ್ಲೇ ಇಲ್ಲ ಆದುದರಿಂದ ಕೆಳಗಕ್ಕೂ ಮೇಲಕ್ಕೂ ರೈತರು ನೋಡುತ್ತ ಕುಳಿತಿರುತ್ತಾರೆ. ಆದುದರಿಂದ ಘನ ಸರ್ಕಾರದವರು ಅದರಲ್ಲೂ ಸದಾ ಪ್ರಜಾಹಿತಚಿಂತನೆಯಲ್ಲಿರುವ ಘನವನ್ನು ಹೊಂದಿದ ನಮ್ಮ ಸಂಸ್ಥಾನದ ಮಂತ್ರಿ ವರ್ಯರಾದ ಎಂ. ವಿಶ್ವೇಶ್ವರಯ್ಯನವರು ಹೆಗ್ಗಡದೇವನಕೋಟೆ ತಾ॥ ಕಂದಲಿಕೆ ಮತ್ತು ಸರಗೂರು ಹೋಬಳಿಗಳ ಗ್ರಾಮಾಂತರಗಳಿಗೆ ಗಮನಕೊಟ್ಟು ಕ್ಷಾಮಭೀತಿ ಪರಿಹಾರದ ಏರ್ಪಾಟನ್ನು ಮಾಡುವರೆಂದು ನಂಬಿದ್ದೇವೆ.

ನಿವಾಸಿ.

೨೨-೬-೧೪.

ವಿದೇಶವಿಶೇಷವಾರ್ತೆಗಳು.

ಆಸ್ಟ್ರಿಯಾ ಯುವರಾಜದಂಪತಿಗಳ ಶವಗಳನ್ನು ಡ್ಯಾನ್ಯೂಬ್‌ನದೀತೀರದಲ್ಲಿರುವ ಬೆಟ್ಟದಮೇಲೆ ಇರುವ ಆರ್ಟ್‌ಸ್ಟೆಟ್ ಎಂಬ ಭವನದ ಆವರಣದಲ್ಲಿರುವ ದೇವಾಲಯ ಭೂಮಿಯಲ್ಲಿ ಕಳೆದ ತಾ॥ ೪ ನೇಯ ಭಾನುವಾರ ಭೂಸ್ಥಾಪಿತವಾಡಿದರು.

...ರಭಿಕರಿರುವ ಆಲೋಚಕ ಸಂಘವೊಂದನ್ನು ಏರ್ಪಡಿಸುವುದಕ್ಕೂ, ಇಂಡ್ಯಾ ಆಫೀಸಿನ ಕೆಲಸವನ್ನು ಚುರುಕಾಗಿ ನಡೆಯಿಸುವುದಕ್ಕೂ, ಅವಶ್ಯಕವಾದಾಗ ತಕ್ಕ ಮಾರ್ಪುಗಳನ್ನು ಮಾಡಿಕೊಳ್ಳುವದಕ್ಕೂ, ಅನುಕೂಲವಾಗುವಂತೆ ಈಗಿನ ಮಾರ್ಪುಗಳನ್ನು ಮಾಡಿದ್ದೇನೆ ಎಂದು ತಿಳಿಯಿಸಿರುತ್ತಾರೆ.

ಸರ್ ಶೌರೀಂದ್ರ ಮೋಹನ ...

...ರ್ಯದಲ್ಲೂ ಶ್ರದ್ಧೆಯನ್ನು ವಹಿಸಿರುವರು. ಈ ಕಾರಣದಿಂದ ಇಂಡ್ಯಾ ಆಫೀಸಿನವರಿಗೂ ಇಂಡ್ಯಾ ಪ್ರಭುತ್ವದವರಿಗೂ ಸಖ್ಯತೆಯು ಏರ್ಪಡುವುದಿಲ್ಲ. ಆದುದರಿಂದ ಸ್ವಲ್ಪ ಸುಂದಿ...

...ರಾಗಗಳಿಂದ ವಿರಚಿಸಿ, ವಂಗಭಾಷೆಗೆ ಪರಿವರ್ತಿಸಿ ದೇಶದಲ್ಲೆಲ್ಲಾ ಪ್ರಕಟಿಸಿದರು. ಇಂಡ್ಯಾ ಸರ್ಕಾರದವರ ಕೋರಿಕೆಯ ಮೇರೆ " ಆರ ಹಿಂದೂಸ್ತುತಿಗಳು " ಎಂಬ ಹೆಸರಿನಿಂದ...

ಒಂದು ಗ್ರಂಥವನ್ನೂ, ೨೩ ಸ್ವರಗಳನ್ನು ಹುಟ್ಟಿಸುವ ವಾದ್ಯೋಪಕರಣವನ್ನೂ ನಿರ್ಮಿಸಿ, ಅದನ್ನು ೧೮೭೩ ರಲ್ಲಿ ನಡೆದ ಮಹಾಪ್ರದರ್ಶನಕ್ಕೆ ಕಳುಹಿಸಿಕೊಟ್ಟಿದ್ದರು.

ಬಳಿಕ ಅದೇ ೧೮೭೩ ನೆ ನವಂಬರ್ ತಿಂಗಳಲ್ಲಿ ಆಕ್ಸ್‌ಫರ್ಡಿನ ವಿಶ್ವವಿದ್ಯಾಲಯದವರು ಇವರಿಗೆ " ಸಂಗೀತವಿಶಾರದ (ಡಾಕ್ಟರ್ ಆಫ್‌ಮ್ಯೂಜಿಕ್) ಎಂಬ ಬಿರುದನ್ನು ಕೊಟ್ಟ... ಬಿರುದನ್ನು ಹೊಂದುವುದಕ್ಕೆ ಭಾರತೀಯರಲ್ಲಿ ಇ...ಮೊದಲನೆಯವರು. ಸಾಧಾರಣವಾಗಿ ಇಂಥ ಬಿರುದ...ಕೊಳ್ಳತಕ್ಕವರು ತಾವೇ ಪ್ರತ್ಯಕ್ಷವಾಗಿ ಆ ಪ...ಹೋಗಿ ಪರಿಗ್ರಹಿಸಬೇಕು. ಆದರೆ ಈ ಶೌರೀಂ...ಜನರು ತಾವು ಅಲ್ಲಿಗೆ ಹೋಗದೆಯೇ ತಾವಿದ್ದ ಸ್ಥ...ದು ಬಂದು ಇವರಿಗೆ ಕೊಡಲ್ಪಡುವಂತೆ ಮಾಡಿ...ಹೀಗೆ ಅಸಾಧಾರಣಗೌರವವನ್ನು ಪಡೆದರು. ...ಸಂಗೀತಶಾಸ್ತ್ರದ ಅಸಾಧಾರಣ ಪ್ರಜ್ಞೆಯನ್ನು ...ಗೌರ್ನಮೆಂಟಿನವರು ಗಮನಿಸಿ, ೧೮೮೦ನೆಯ ವರ್ಷ...ರಿಗೆ " ಸಿ. ಐ. ಇ." ಎಂಬ ಬಿರುದನ್ನೂ, ರಾಜಾ...ಶಸ್ತಿಯನ್ನೂ ಕೊಟ್ಟು ಗೌರವಿಸಿದರು. ೧೮೮೬ನೆ...ವಿಕ್ಟೋರಿಯಾ ಮಹಾರಾಜ್ಞಿಯವರು ಇವರಿ...” ಎಂಬ ಬಿರುದನ್ನಿತ್ತು ಆ ಪದಕವನ್ನು ಇವರ...ಸ್ವಹಸ್ತದಿಂದಲಂಕರಿಸಬೇಕೆಂದು ಅಪೇಕ್ಷಿಸಿದ...ಇವರು ತತ್ಕಾಲದಲ್ಲಿದ್ದಂತಹ ಸಮುದ್ರಯಾನ...ವಾದ ಪೂರ್ವಾಚಾರಕ್ಕೆ ಬದ್ಧರಾಗಿದ್ದುದರಿಂದ...ದನ್ನಿಗೆ ಹೋಗಿ ಚಕ್ರವರ್ತಿಯವರ ಇಷ್ಟವನ್ನು...ಲಾರದೆಹೋದರು. ಮತ್ತೂ ಕ್ರೈಸ್ತಜಗದ್ಗುರು...ನೆ ಲಿಯೋರವರು ಇವರಿಗೆ " ಆರ್ಡರ್‌ಆಫ್‌ದಿ...ಸ್ಟರ್ " ಎಂಬ ಗೌರವಪದವಿಯಿಂದ ಇವರನ್ನು...ಬೇಕೆಂದು ತಮ್ಮ ರೋಮ್‌ನಗರಕ್ಕೆ ಇವರನ್ನು...ರು. ಆದರೆ ಮೇಲೆಕಂಡ ಆಚಾರಪರತೆಯಿಂ...ನ್ನ ಕೂಡ ಇವರು ಅಂಗೀಕರಿಸಲಾರದೆ ಹೋ...ಇಂಡ್ಯಾಸರ್ಕಾರದವರು ಇವರನ್ನು ಕಲ್ಕತ್ತಾ ಪಟ್ಟಣದ...ಸ್ಥಾಪಕ ನ್ಯಾಯಾಧಿಪತಿಯನ್ನಾಗಿಯೂ, ಕಲ್ಕ...ವಿದ್ಯಾಲಯದ " ಫೆಲ್ಲೋ " ವನ್ನಾಗಿಯೂ, ಪ...ರು. ಇದೇಅಲ್ಲದೆ ವೈಸ್ರಾಯರ ಮನೆಗೆ ಆಗಾಗವಾಗಿ ಹೋಗುವ–ಮತ್ತೂ ಯಾವುದೊಂದು...ರ್ಬಗೂ ಪ್ರತ್ಯಕ್ಷವಾಗಿ ಹೋಗಬೇಕಾದ ನಿ...ಗಾಗದ-ಆಯುಧಧರಮೇತರಾದ ಸೇವಕರನ್ನು...ದಲ್ಲಿಟ್ಟುಕೊಳ್ಳುವ–ಮತ್ತೂ ಸ್ವಂತವಾಗಿ...ಂಗಗಳನ್ನು ಇಟ್ಟುಕೊಳ್ಳುವ–ಇವೇ ಮೊದ...ಅಧಿಕಾರಗಳನ್ನು ಇವರಿಗೆ ಕೊಟ್ಟು ಗೌರ...

...ಸಂಗೀತವಿದ್ಯೆಯಲ್ಲಿ ಪೂರ್ಣಾಭಿಮಾನವಿದ್ದುದ...ಕಲೆಗಳಲ್ಲೂ ಅಭಿರುಚಿಯಿದ್ದಿತು. ರತ್ನ...ಇವರಿಗೆ ತುಂಬಾ ನೈಪುಣ್ಯವಿದ್ದಿತು. ಅದರಿಂ...ವಿಷಯಕವಾದ " ಮಣಿಮಾಲಾ " ಎಂಬ...ರಚಿಸಿದ್ದರು. ಸರ್ಕಾರದ ಪಕ್ಷದಿಂದ ರಚಿ...ಕೆಲವು ಗರ್ಭಶಾಸ್ತ್ರಗ್ರಂಥಗಳಲ್ಲಿ ಇವರ...ಗ್ರಂಥದ ಕೆಲವು ವಚನಗಳು ಆಧಾರಾರ್ಥ...ಸಲ್ಪಟ್ಟಿರುವುದರಿಂದಲೇ ಇವರಿಗೆ ಆ ಶಾಸ್ತ್ರ...ಜ್ಞಾನದ ಮಹತ್ವವು ಗೊತ್ತಾಗುವುದು. ...ರಿಗೆ ಲೋಹ ವಸ್ತು ತತ್ವಜ್ಞಾನವೂ ಚೆ...ದನ್ನು ಅವರಿಂದ ರಚಿತವಾಗಿರುವ " ಧಾ... ಎಂಬ ಗ್ರಂಥವು ನಿರೂಪಿಸುತ್ತಿರುವುದು. ಇ...ಗಳ ವಿಷಯಕವಾದ ಅನೇಕ ಸೂಕ್ಷ್ಮವರೀ...ವು ಚೆನ್ನಾಗಿ ಮಾಡಲ್ಪಟ್ಟಿದೆ. ಈ ಗ್ರಂಥವು...ಕೊಂಡಾಡಲ್ಪಟ್ಟಿದೆ. ಮತ್ತೂ ಅಶ್ವಶಾಸ್ತ್ರ...ದ ಸಂಸ್ಕೃತಗ್ರಂಥಗಳ ಅಭಿಪ್ರಾಯವನ್ನೆತ್ತಿ...ಹೃದಯ " ಎಂಬ ಹೆಸರಿನಿಂದ ಒಂದು ಗ್ರಂಥ...ಆ ವಿಷಯಕವಾದ ತಮ್ಮ ನೈಪುಣ್ಯವನ್ನೂ...ರುವರು. ಇದಲ್ಲದೆ ಕೆಲವು ಕಾಲ ಮೃಗಗ...ಗಳನ್ನೂ ಗುಂಪುಕೂಡಿಸಿ ಸಲಹಿ, ಜಂತುಶಾ...ನ್ನು ಚೆನ್ನಾಗಿ ಅಭ್ಯಾಸಮಾಡಿದರು. ಆ...ನ್ನು ಕೇಳಿದ ಮಾತ್ರದಿಂದಲೇ ಇವರು ಆ...ಕ್ಷಿಗಳ ಅಂತರ್ಜಾತಿಭೇದಗಳನ್ನೆಲ್ಲಾ ಹೇ...

...ರಲ್ಲಿ " ಸರ್ " ಎಂಬ ಬಿರುದನ್ನು ಹೊಂದಿದವರೇ ಮೊದಲನೆಯವರು. ಅನ್ಯದೇಶಗಳ...ದೊರೆತಿದ್ದಷ್ಟು ಬಿರುದುಗಳೂ ಗೌರವಗ...ಭಾರತೀಯನಿಗೂ ಬಂದಿರಲಿಲ್ಲವೆನ್ನುವುದ...ಯೋಗ್ಯತೆಯು ಎಷ್ಟು ಅಸಾಧಾರಣವೆಂಬು...ಅದು ಪ್ರಸಿದ್ಧ ಸಂಗೀತ ಶಾಸ್ತ್ರಜ್ಞರಾಗಿದ್ದ ಹಿಂದಿನ ಅಯೋಧ್ಯಾನವಾಬರು ಇವರನ್ನು ತಮ್ಮ ಅರಮನೆಗೆ ಬರಮಾಡಿಕೊಂಡು, ಇವರ ಗಾನರಸ ಪ್ರಾವೀಣ್ಯದಿಂದ ಉಂಟಾದ ಸಂತೋಷವನ್ನು ತಡೆಯಲಾರದೆ ಎ...

ಪ್ರಕಟನೆ.
ಪ್ರಿಂಟಿಂಗಾಫೀಸಿನವರು ಅಗತ್ಯವಾಗಿ ಗಮನಿಸತಕ್ಕದು.

ನಮ್ಮಲ್ಲಿ ಈ ಸ್ಟಾರ್ ಪತ್ರಿಕೆಯ ೧, ೨, ೫, ೬, ೭ ಮತ್ತೂ ೮ನೇ ಪುಟಗಳಲ್ಲುಪಯೋಗಿಸಲ್ಪಟ್ಟಿರುವ ಪೈಕ ಅಥವಾ ೧೨ ಪಾಯಿಂಟ್ ಅಕ್ಷರಗಳ ಮತ್ತೂ ಈ ಪ್ರಕಟನೆಗುಪಯೋಗಿಸಲ್ಪಟ್ಟಿರುವ ಬೂರ್ಲೈನ್ ವಿನಿಯನ್ ಅಥವಾ ೧೮ ಪಾಯಿಂಟ್ ಅಕ್ಷರಗಳ ಮ… ಟ್ರಿಕ್ಸ್‌ಗಳೂ, ಅವುಗಳ ಮೌಲ್ಡುಗಳೂ ಇವನ್ನು … ರಕವೆರೆಯುವ ಯಂತ್ರವೂ ಅದಕ್ಕೆ ಸಂಬಂಧ… ಲೈನ್ ಗೇಜ್ ಪೇಪರ್ ಗೇಜ್ ಹೈಟ್ ಗೇಜ್ ಡ್ರೆಸ್ಸಿ… ಗ್ ಟೇಬಲ್ ಕರ್ನಿಂಗ್ ಮಿಷನ್ನು ಮುಂತಾದ … ಮಾಗ್ರಿಗಳೂ ಸೂಪರ್ ರಾಯಲ್ ಸೈಜನ್ನು ಪ್ರಿಂ… ಮಾಡುವ ಸಿಲಿಂಡರ್ ಮಿಷನ್ನು ಸಹ ಮಾರಾಟ… ಸಿದ್ಧವಾಗಿವೆ. ಈ ಮಿಷನ್ನಿನಲ್ಲೇ ಈ ಸ್ಟಾರ್ ಪ… ಕೆಯು ಪ್ರಿಂಟುಮಾಡಲ್ಪಡುತ್ತಿರುವುದು. ಎರಕ… ಯುವ ಮಿಷನ್ನು ಬಹಳ ಸ್ವಲ್ಪ ಕೆಲಸವನ್ನು … ತ್ರ ಮಾಡಿ ಹೊಸದಾಗಿಯೇ ಯಿರುವುದು. ಇಷ್ಟ… ಳ್ಳವರು ಇವುಗಳ ಬೆಲೆ ಮೊದಲಾದವನ್ನು ನಮಗೆ … ರೆದು ತಿಳಿದುಕೊಳ್ಳಬಹುದಲ್ಲದೆ ಪ್ರತ್ಯಕ್ಷದಲ್ಲಿ ಬ… ನೋಡಬಹುದು.

ವೈ. ವಿರೂಪಾಕ್ಷಯ್ಯ,
ಪ್ರೊಪ್ರೈಟ…
ಕ್ವೀನ್ ಪ್ರೆಸ್, ಮೈಸೂ…

ಸಂಪದಭಿವೃದ್ಧಿ ಸಮಾಜದ ಮೀಟಿಂಗು ಹೊಸದುರ್ಗದ ತಾಲ್ಲೂಕು ಆಲಗಟ್ಟೆಗ್ರಾಮ.

ಈ ಸಮಾಜದ ಮೀಟಿಂಗ್ ನಡವಳಿಕೆಗಳನ್ನು ಹಿತೈಷಿಗಳಾದ ನಮ್ಮ ತಾಲ್ಲೂಕ್ ಅಮಲ್ದಾರರವರ ಕೆ. ಶ್ರೀನಿವಾಸರಾವ್ ಬಿ. ಎ. ಯವರು ತಾರೀಖು ೧೮ ರಲ್ಲಿ ಈ ಗ್ರಾಮಕ್ಕೆ ಮುಕ್ಕಾಂ ಮಾಡಿದಾಗ್ಯೆ ಬೆ… ಏರ್ಪಡಿಸಿಕೊಟ್ಟ ಮೇರೆ ತಾರೀಖು ೧೫-೬-೧೮ರಲ್ಲಿ … ಟಿಂಗ್ ಜರಗಬೇಕಾದುದು ಆ ದಿವಸ ಬೆಲಗೂರು ಸನ್ನರಾಮೇಶ್ವರ ಕೊ ಆಪರೇಟಿವ್ ಸೊಸೈಟಿ ಮಿಟಿತ್ ಸಂಘದವರು ನಮ್ಮಗಳ ಕೋರಿಕೆಯಂ… ಮಾಡಿಸಿ ಸ್ಪೆಷಲ್ ಮೀಟಿಂಗ್ ನಡಿಸಿದ್ದರಿಂದ ಈ ಸ… ವೃದ್ಧಿ ಸಂಘದ ಮೀಟಿಂಗ್ ನಡೆಯುವುದನ್ನು ನಿಲ್ಲಿಸಿ… ರೀಖು ೨೯-೬-೧೮ ನೆ ಸೋಮವಾರದದಿವಸ ಮಧ… ಹಿರಂಗವಾದ ಶ್ರೀಬಸವೇಶ್ವರ ದೇವಸ್ಥಾನದಲ್ಲಿ ಈ… ದವರ ಪ್ರೋಗ್ರಾಂ ಮೇರೆ ಗ್ರಾಮದ ಸಮಸ್ತ ಕೊ… ರೈತಮಂಡಲಿಯವರು ಏಕಮತ್ಯಸಂತೋಷಚಿತ್ತ… ರ್ವರೂ ಸಭಾಲಂಕೃತರಾಗಿ ಸೇರಿದ್ದರು. ಈ ಸ… ಮಿ॥ ಯಂ. ಡಿ. ಗಡದಯ್ಯನವರನ್ನು ಪ್ರಸಿಡೆಂ… ಯೂ, ಎ. ಹೆಚ್. ಆರ್. ಚನ್ನಬಸವಾರಾಧ್ಯ… ವರನ್ನು ಸೆಕ್ರಿಟರಿಯವರನ್ನಾಗಿಯೂ, ಕೆ. ಎಮ್… ದೇವಯ್ಯನವರನ್ನು ಟ್ರಿಜರರನ್ನಾಗಿಯೂ, ಮ… ಟೀಲರಾದ ಕೆ ಚನ್ನಬಸವೇಗೌಡರು, ಶ್ಯಾ… ಯಂ. ಜಿ. ವೆಂಕಣ್ಣಯ್ಯನವರು, ಕೆ. ಹುಚ್ಚ… ಬಿ. ಮರಿಯಪ್ಪನವರು, ಪಾಟೀಲರ ತಮ್ಮ ಕಲ್ಲೆ… ವರು, ಹೆಚ್. ಕಾಡಸಿದ್ದಪ್ಪನವರು, ಪಂಚಾಂಗ… ನವರು, ಕೆ. ಚಿಕ್ಕಣ್ಣಾಚಾರಿಯವರು, ಶಿ ಮೋ… ಮಠದ ಚನ್ನಬಸವಯ್ಯನವರು, ಮರುಳೆಯ್ಯ… ಶಂಬಣ್ಣನವರು, ಟಿ. ದೊಡ್ಡಕಲ್ಲೆಗೌಡರು, ಕ… ವರು, ಕೆ. ಚಿಕ್ಕಕಲ್ಲಪ್ಪನವರು, ಕೆಲವರು ಇ… ರಲ್ಲಿ ಪಂಚಾಯಿತನಾರರನ್ನಾಗಿ ಮೆಂಬರರ… ನೇಮಿಸಲ್ಪಟ್ಟಿರುತ್ತಾರೆ. ಈ ದಿವಸದ ಮಿ… ಕೆ. ಚನ್ನಬಸವೇಗೌಡರು ಸಹಾಯಕ ಪ… ಯೂ ಮಾಡಲ್ಪಟ್ಟು ಸೆಕ್ರಿಟರಿಯವರಾದ … ಸವಾರಾಧ್ಯಸ್ವಾಮಿಯವರು ರೈತಮಂಡಲಿ… ದಯಂಗಮವಾಗುವಂತೆ ಈ ಸಮಾಜದಿಂದು … ಯೋಜನಾಂಶಗಳನ್ನೂ ನಮ್ಮಗಳ ಏಳಿಗೆ … ಮಹಾರಾಜರವರ ಗೌರ್ನಮೆಂಟಿನವರು … ದರರಾಗಿ ಏರ್ಪಡಿಸುತ್ತಿರುವ ತಾರೀಖು ೩-… ರ್ಯ್ಕಂನ ಸರ್ಕಾರದವರ ಹುಕುಂಸಂಗತಿಗಳನ… ಉಪನ್ಯಾಸದ ಮೂಲಕ ಓದಿ ತಿಳಿಸಿದರು. … ದಂಥವುಗಳನ್ನೇರ್ಪಡಿಸಿಕೊಳ್ಳುವದಕ್ಕೆ ಮು… ವೇ ಪ್ರಾಮುಖ್ಯವಾದುದೆಂದು ಮೊದಲಾಗಿ ನೀತಿವಚನ ಗ್ರಂಥೋಕ್ತಿಗಳಿಂದ ಶ್ಯಾನುಭೋಗ್ ಗು॥ ವೆಂಕಣ್ಣಯ್ಯನವರು ಚಿ॥ ಶಾ॥ ಕಂದಿಕೆರೆ ರೇವಣ್ಣನಮಠದ ಹಾಲುಮಠದ ಸಾಹುಂತವರೇರ್ ಕೆ. ಎಸ್. ರೇವಣ್ಣಯ್ಯನವರು ಮಾಜಿ…

ಸ್ಕೂಲ್ ಮಾಸ್ಟರ್ ಇವರು ಸಹ ಭಾಷಣಮಾಡಿದರು ಇದಾದನಂತರ ಈ ಮೀಟಿಂಗ್‌ನಲ್ಲಿ ಚರ್ಚಿಸಿ ಪ್ಯಾಸಾಗಬೇಕಾದ ಸಬ್‌ಜೆಕ್ಟ್‌ಗಳನ್ನು ಸೆಕ್ರಿಟರಿಯವರು ವಿವರಿಸಿದನಂತರ ಮೆಂಬರುಗಳೆಲ್ಲಾ ಚರ್ಚಿಸಿ ಈ ಗ್ರಾಮಕ್ಕೆ ಬಾಲಕಬಾಲಕಿಯರ ವಿದ್ಯಾಭ್ಯಾಸಕ್ಕೆ ಪ್ರೈವೇಟ್ ಸ್ಕೂಲ್ ಸ… ಇಲ್ಲದೆ ಇರೋಣದರಿಂದ ಗ್ರಾಮಸ್ಥರ ಪರವಾಗಿ ಮಿ… ದ್ದದ್ದನ್ನು … ಕ್ಕಾಂ ಮಾಡಿದರು. ತಾ॥ ೯ ರ ದಿನ ಗ್ರಾಮ ಕಟ್ಟೆನ ದರಖಾಸ್ತು ಜಾಗದ ಬಳಿ ದಯಮಾಡಿ ಚನ್ನಗುಂಡಿ ಗ್ರಾಮಸ್ಥರನ್ನು ಬರಮಾಡಿಕೊಂಡು, ನೀವು ಶ್ಯಾನುಭೋಗರ ಗುತ್ತಿ…

…ಗೇ ಜಮೀನನ್ನೇ ಮಾಡಿಕೊಂಡಿದ್ದರೆ ನೀವು ಉದ್ಧಾರವಾಗುವುದು ಹೇಗೆ ? ನಿಮ್ಮ ವೃತ್ತಿಯು ಚನ್ನಾಗಿಲ್ಲವೆಂದು ಅವರಿಗೆ ಬುದ್ಧಿ ಹೇಳಿ, ಕೆಲವು ಎಕರೆ ಜಮೀನುಗಳನ್ನು ಹರಾಜು ಮಾಡಿಸಿ ಸುಲಭವಾಗಿಯೇ ರೈತರಿಂದ ಹಣ ಕಟ್ಟಿಸಿ ಇರಸಾಲಿಗೆ ಕೊಟ್ಟರು. ಈ ಚನ್ನಗುಂಡಿ ಗ್ರಾಮಸ್ಥರು ಕಳೆದ ೫-೬-ವರ್ಷಗಳಿಂದಲೂ ದರಖಾಸ್ತು ಮಂಜೂರಾಗಲಿಲ್ಲವೆಂತ ಪರಿತಪಿಸುತ್ತಿದ್ದದ್ದನ್ನು ದೀನದಯಾಳುಗಳಾದ ಅ… ಗಮನಕೊಟ್ಟು ಕ್ಷಾಮಭೀತಿ ಪರಿಹಾರದ ಏರ್ಪಾಟನ್ನು ಮಾಡುವರೆಂದು ನಂಬಿದ್ದೇವೆ. ನಿವಾಸಿ.

೨೨-೬-೧೮.

…ment to this issue.

ವಿದೇಶವಿಶೇಷವಾರ್ತೆಗಳು.

ಆಸ್ಟ್ರಿಯಾ ಮಾಯುವರಾಜದಂಪತಿಗಳ ಶವಗಳನ್ನು ಡಾನ್ಯೂಬ್ ನದೀತೀರದಲ್ಲಿರುವ ಪೆಟ್ಟದಮೇಲೆ ಇರುವ ಆರ್ಟ್‌ಸ್ಟೆಟ್ ಎಂಬ ಭವನದ ಆವರಣದಲ್ಲಿರುವ ದೇವಾಲಯದ ಭೂಮಿಯಲ್ಲಿ ಕಳೆದ ತಾ॥ ೫ ನೆಯ ಭಾನುವಾರ ಭೂಸ್ಥಾಪಿತವಮಾಡಿದರು.

ಗತಿಸಿದ ಜೋಸೆಫ್ ಚೇಂಬರ್ಲೇನರವರು.

ಜೋಸೆಫ್ ಚೇಂಬರ್ಲೇನ್ ಎಂಬ ಆಂಗ್ಲಪ ಹಿರಿಯರು ಮಹೋನ್ನಯದಿಂದ ಅಸ್ವಸ್ಥರಾಗಿದ್ದು ಕಳೆದ ತಾ॥ ೩ ರಲ್ಲಿ ಲಂಡನ್‌ಪಟ್ಟಣದೊಳಗೆ ತಮ್ಮ ೭೮ ನೆಯ ವಯಸ್ಸಿನಲ್ಲಿ ಮೃತರಾದರು. ಈ ಮಹನೀಯರು ಕಳೆದ ಅರ್ಧಶತಮಾನದಿಂದಲೂ ಆಂಗ್ಲಪ್ರಭುತ್ವದ ಶ್ರೇಯಸ್ಸಿಗಾಗಿ ಸ್ವಾರ್ಥತ್ಯಾಗಪೂರ್ವಕವಾಗಿ ಧೈರ್ಯಸ್ಥೈರ್ಯೋತ್ಸಾಹಗಳಿಂದ ಆಚರಿಸಿದ ಕಾರ್ಯಗಳು ಅದ್ವಿತೀಯವಾಗಿರುವುವು. ಪ್ರಪಂಚದಮೇಲಣ ಸಕಲ ರಾಜನೀತಿ ವಿಶಾರದರೂ, ಮುಖ್ಯಮುಖ್ಯಪತ್ರಿಕೆಗಳೂ ಸಹ ಭಿನ್ನಾಭಿಪ್ರಾಯವಿಲ್ಲದೆ ಇವರ ಯೋಗ್ಯತಾಂಶವನ್ನು ಈಗ ಹೇಳಿಕೊಂಡು ಅವರ ಮೃತಿಗಾಗಿ ದುಃಖವನ್ನು ತೋರಿಸಿರುವುವು. ಇವರ ಗೌರವಾರ್ಥವಾಗಿ ಆಂಗ್ಲಪ್ರಭುತ್ವದ ಪಾರ್ಲಿಮೆಂಟುಗಳೆರಡೂ ಒಂದೊಂದುದಿನ ಮುಚ್ಚಲ್ಪಟ್ಟಿದ್ದುವು. ಪ್ರಜಾನಾಯಕರಲ್ಲಿ ಅಗ್ರೇಸರೆನಿಸಿಕೊಂಡಿದ್ದ ಇವರ ಮೃತಿಯನ್ನು ಕೇಳಿ ಅನುತಾಪಸೂಚಕವಾದ ಪತ್ರಗಳೂ ತಂತೀವಾರ್ತೆಗಳೂ ಸಹ ಅವರ ಮಕ್ಕಳಾದ ಆಸ್ಟಿನ್ ಚೇಂಬರ್ಲೇನರವರ ಹೆಸರಿಗೆ ಸಮ್ರಾಟ್‌ಸಾರ್ವಭೌಮರೇ ಮೊದಲಾದ ಅನೇಕ ಪ್ರಭುಗಳಿಂದಲೂ ಇತರ ಮಹಾಜನರಿಂದಲೂ ಅಮಿತವಾಗಿ ಬಂದಿರುವುವು. ಆಂಗ್ಲಮಂತ್ರೀಶ್ವರರು ಕಾಮನ್ಸ್‌ಸಭೆಯಲ್ಲಿ ಇವರ ಗುಣಾನುವಾದ ಮಾತುವಾಗ ನಂಬುಗೆಯಲ್ಲೂ ಧೈರ್ಯದಲ್ಲೂ ಚೇಂಬರ್ಲೇನರವರನ್ನು ಮೀರಿದವರಿಲ್ಲ; ಕಳೆದ ೩೦ ವರ್ಷಗಳಲ್ಲಿ ಚೇಂಬರ್ಲೇನರವರ ಸಂಬಂಧವನ್ನು ಹೊಂದದೆಯಿದ್ದ ರಾಜಕಾರ್ಯವಿಶೇಷಗಳೊಂದೂ ಇಲ್ಲ ಎಂದು ಹೇಳಿರುವರು. ಇವರ ಮೃತಿಯಿಂದ ಆಂಗ್ಲರಾಜ್ಯಕ್ಕೆ ಅತಿಶಯವಾದ ನಷ್ಟವುಂಟಾಯಿತೆಂದು ಹೇಳಲ್ಪಡುತ್ತಿದೆ. ಇಂತಹ ದೇಶಾಭಿಮಾನಿಯು ಇನ್ನೆಂದಿಗೆ ಹುಟ್ಟುವನೋ ಎಂದು ಪತ್ರಿಕೆಗಳು ವಿಲಾಪಿಸಿರುತ್ತಿವೆ. ಇವರ ಕೋರಿಕೆಯ ಪ್ರಕಾರ ಇವರ ಶವಸಂಸ್ಕಾರವು ವಿಜೃಂಭಣೆಯಿಲ್ಲದೆ ಏಕಾಂತತರವಾಗಿ ಬರ್ಮಿಂಗ್‌ಹ್ಯಾಂ ಪಟ್ಟಣದಲ್ಲಿ ಕಳೆದ ಸೋಮವಾರ ನಡೆಯಿಸಲ್ಪಟ್ಟಿತು. ಈ ಮಹನೀಯರ ಜೀವಿತಚರಿತ್ರವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಬೇಕೆಂದಿರುವೆವು.

ಇಂಡಿಯಾ ಕೌನ್ಸಿಲ್ ಬಿಲ್ಲು.

ಪಾರ್ಲಿಮೆಂಟಿನ ಚರ್ಚೆಗೆ ಹೊಸದಾಗಿ ಬಂದಿರುವ ಈ ಬಿಲ್ಲಿನ ವಿಷಯವಾಗಿ ಲಾರ್ಡ್ ಕರ್ಜನರವರು ಪ್ರತಿರೋಧಿಗಳಾಗಿರುವರೆಂಬ ಸಂಗತಿಯನ್ನು ಹಿಂದೆ ತಿಳಿಸಿರುವೆವಷ್ಟೆ. ಅದಕ್ಕೆ ಉತ್ತರರೂಪವಾಗಿ, ಹಿಂದೆ ಅ॥ ಸ್ಟೇಟ್ ಸೆಕ್ರೆಟರಿಯವರಾಗಿದ್ದು ನಮ್ಮ ದೇಶಕ್ಕೆ ಬಂದು ಪ್ರತ್ಯಕ್ಷವಾಗಿ ಇಲ್ಲಿನ ಸ್ಥಿತಿಗತಿಗಳನ್ನು ನೋಡಿ ಹೋಗಿರುವವರಾದ ಮಾಂಟಗೂ ರವರು ಟೈಮ್ಸ್ ಪತ್ರಿಕೆಗೆ ಒಂದು ಲೇಖನವನ್ನು ಬರೆದು ಪ್ರಕಟಿಸಿರುವರು. ಅದರಲ್ಲಿನ ಮುಖ್ಯಾಭಿಪ್ರಾಯವೇನೆಂದರೆ « ಈ ಬಿಲ್ಲನ್ನು ಅಣಿಮಾಡುವುದಕ್ಕೆ ನಾನು ಕೃಷಿಮಾಡಿದ್ದೇನೆ. ಪೂರ್ವದಲ್ಲಿದ್ದ ಪದ್ಧತಿಯನ್ನು ಅನ್ಯಾಯವಾಗಿ ತೊಡೆದುಬಿಡಬೇಕೆಂದೇ ಆಗಲಿ, ನನ್ನ ಅಭಿಮಾನವನ್ನೇ ಕೊನೆಗಾಣಿಸಿಕೊಳ್ಳಬೇಕೆಂದೇ ಆಗಲಿ ಈಗಿನ ಮಾರ್ಪನ್ನು ಕೌನ್ಸಿಲ್ಲಿನಲ್ಲಿ ಉಂಟುಮಾಡಿರುವುದಿಲ್ಲ. ಈ ಕೌನ್ಸಿಲಿನ ವಿಧಿಗಳನ್ನು ಏರ್ಪಡಿಸಿ ಇಲ್ಲಿಗೆ ೬೦ ವರ್ಷಗಳಾಗಿರುವುವು. ಅದುಕಾರಣ ಆ ವಿಧಾನಗಳು ಬಹಳ ಪುರಾತನವಾದುವುಗಳು. ಈಗಿನ ಸ್ಥಿತಿಗತಿಗೆ ಅವು ತಕ್ಕವಾಗಿರುವುದಿಲ್ಲ. ಈಗಿನ ಕಾಲಕ್ಕೆ ಸರಿಹೋಗುವಂಥ ವಿಧಾನಗಳಿರಬೇಕೆಂಬುದಕ್ಕಾಗಿಯೇ ಈಗಿನ ಮಾರ್ಪುಗಳನ್ನು ಮಾಡಿದೆಯೇ ಹೊರತು ಮತ್ತೇನೂ ಅಲ್ಲ. ಭರತಖಂಡದ ಪರಿಪಾಲಕಶಖೆಯವರಿಗೂ, ಇಲ್ಲಿನ ಇಂಡಿಯಾ ಆಫೀಸಿನವರಿಗೂ ಅನ್ಯೋನ್ಯತೆಯಿಲ್ಲದೆ ಬಹು ಪ್ರಮಾದಕರವಾಗಿದೆ. ಈ ಪ್ರಮಾದವು, ಸ್ಟೇಟ್‌ಸೆಕ್ರೆಟರಿಯವರಿಗೆ ಇಂಡಿಯಾಪ್ರಭುತ್ವದವರು ಮಾಡಿದ ಕಾರ್ಯಗಳನ್ನು ವಿಮರ್ಶಿಸುವುದಕ್ಕೂ ನವೀನಪದ್ಧತಿಗಳನ್ನು ಏರ್ಪಡಿಸುವುದಕ್ಕೂ ಇರುವ ಅಧಿಕಾರದಿಂದ ಬರುವುದಿಲ್ಲ. ಇಂಡಿಯಾ ಕೌನ್ಸಿಲ್ಲಿನಲ್ಲಿರುವ ಸಭ್ಯರು ಭರತಖಂಡದಲ್ಲಿ ಬಹುಕಾಲ ವಾಸಿಸುವವರಿಂದ ಅವರ ಬುದ್ಧಿಯು ಯಾವಾಗಲೂ ಸ್ವಲ್ಪ ಕಾರ್ಯದಲ್ಲೂ ಕೂಡ ಶ್ರದ್ಧೆಯನ್ನು ವಹಿಸಬೇಕೆಂಬ ಕುತೂಹಲವನ್ನು ಹೊಂದಿರುವುದು. ಆದುದರಿಂದ ಅವರು ಯಾವಾಗಲೂ ಭರತಖಂಡದ ಪರಿಪಾಲನೆಗೆ ಸಂಬಂಧಿಸಿದ ಸ್ವಲ್ಪ ಕಾರ್ಯದಲ್ಲೂ ಶ್ರದ್ಧೆಯನ್ನು ವಹಿಸಿರುವರು. ಈ ಕಾರಣದಿಂದ ಇಂಡಿಯಾ ಆಫೀಸಿನವರಿಗೂ ಇಂಡಿಯಾ ಪ್ರಭುತ್ವದವರಿಗೂ ಸಖ್ಯತೆಯು ಏರ್ಪಡುವುದಿಲ್ಲ. ಆದುದರಿಂದ ಸ್ವಲ್ಪ ಮುಂದಭಿಕರಿಸಿರುವ ಆಲೋಚಕ ಸಂಘವೊಂದನ್ನು ಏರ್ಪಡಿಸುವುದಕ್ಕೂ, ಇಂಡಿಯಾ ಆಫೀಸಿನ ಕೆಲಸವನ್ನು ಚುರುಕಾಗಿ ನಡೆಯಿಸುವುದಕ್ಕೂ, ಅವಶ್ಯಕವಾದಾಗ ತಕ್ಕಮಾರ್ಪುಗಳನ್ನು ಮಾಡಿಕೊಳ್ಳುವುದಕ್ಕೂ, ಅನುಕೂಲವಾಗುವಂತೆ ಈಗಿನ ಮಾರ್ಪುಗಳನ್ನು ಮಾಡಿದ್ದೇನೆ ಎಂದು ತಿಳಿಸುಸಿರುತ್ತಾರೆ.

ಸರ್ ಶೌರೀಂದ್ರಮೋಹನ ಠಾಕೂರ್‌ರವರ ಸಂಕ್ಷಿಪ್ತ ಜೀವಿತಚರಿತ್ರವು.

ಭರತಖಂಡದ ಒಂದಾನೊಂದು ಜೀವರತ್ನದಂತಿದ್ದ ರಾಜಾ ಸರ್ ಶೌರೀಂದ್ರಮೋಹನ ಠಾಕೂರ್ ಕೆ. ಟಿ. ಸಿ. ಐ. ಇ. ಯವರು ಕಳೆದ ಜೂನ್ ತಾ॥ ೫ ರಲ್ಲಿ ಸ್ವರ್ಗಸ್ಥರಾದರೆಂಬ ವಿಷಯವನ್ನು ಈ ಹಿಂದೆ ನಾವು ತಿಳಿಯಿಸಿರುವೆವಷ್ಟೆ. ಈ ಮಹನೀಯರ ಪುಣ್ಯಮಯವಾದ ಜೀವಿತಚರಿತ್ರವನ್ನು ಇಲ್ಲಿ ಸಂಕ್ಷೇಪವಾಗಿ ಬರೆದು ನಮ್ಮವರಿಗೆ ಆದರ್ಶಗೊಳಿಸುತ್ತೇವೆ.

ಕವಿಕುಲಶೇಖರರೆನಿಸಿಕೊಂಡು ಜಗದ್ವಿಖ್ಯಾತರಾಗಿರುವ ರವೀಂದ್ರನಾಥ ಠಾಕೂರ್‌ರವರ ಸಂತತಿಗೇ ಈ ನಮ್ಮ ಚರಿತ್ರನಾಯಕರೂ ಸೇರಿದವರು. ಇವರು ಕೀರ್ತಿಶೇಷರಾದ ಹರಕುಮಾರ ಠಾಕೂರ್‌ರವರ ದ್ವಿತೀಯಪುತ್ರರು. ೧೮೪೦ ನೆಯ ವರ್ಷದಲ್ಲಿ ಇವರು ಕಲ್ಕತ್ತಾಪಟ್ಟಣದಲ್ಲಿ ಜನಿಸಿದರು. ಕೀರ್ತಿಶೇಷರಾದ ತಮ್ಮ ಅಣ್ಣಂದಿರು ಮಹಾರಾಜಬಹದ್ದೂರ್ ಸರ್ ಜ್ಯೋತೀಂದ್ರಮೋಹನ ಠಾಕೂರ್‌ರವರಂತೆಯೇ ಇವರೂ ಕೂಡ ಕಲ್ಕತ್ತಾದ ಹಿಂದೂಕಾಲೇಜಿನಲ್ಲಿ ವಿದ್ಯಾಭ್ಯಾಸವನ್ನು ಮಾಡಿದರು. ಸಣ್ಣವಯಸ್ಸಿನಲ್ಲೇ ಇವರ ಪ್ರಜ್ಞಾವೈಭವವು ಪ್ರಕಾಶವಾಗುತ್ತಿದ್ದಿತು. ಇವರು ತಮ್ಮ ೧೪ ನೆಯ ವಯಸ್ಸಿನಲ್ಲೇ ವಂಗಭಾಷೆಯೊಳಗೆ ಭೂಗೋಳಗ್ರಂಥವೊಂದನ್ನು ರಚಿಸಿದರು. ೧೫ನೆಯ ವಯಸ್ಸಿನಲ್ಲಿ ಮುಕ್ತಾವಳಿ ಎಂಬ ಸ್ವತಂತ್ರನಾಟಕವೊಂದನ್ನು ರಚಿಸಿದರು. ಮತ್ತೂ ಆ ಚಿಕ್ಕ ವಯಸ್ಸಿನಲ್ಲಿಯೇ ಸಂಸ್ಕೃತವನ್ನು ಕೂಡ ಕಲಿತು, ಕಾಳಿದಾಸನ ಮಾಳವಿಕಾಗ್ನಿಮಿತ್ರವೆಂಬ ಗ್ರಂಥವನ್ನು ತಮ್ಮ ಭಾಷೆಯಲ್ಲಿ ಬರೆದರು. ಇವರಿಗೆ ಸಂಗೀತವು ಅಭಿಮಾನವಿದ್ಯೆಯಾಗಿದ್ದಿತು. ಅದನ್ನು ಇವರು ತಮ್ಮ ೧೬ ನೆಯ ವಯಸ್ಸಿನಲ್ಲಿ ಲಕ್ಷ್ಮೀಪ್ರಸಾದ–ಕ್ಷೇತ್ರಮೋಹನಗೋಸ್ವಾಮಿ–ಎಂಬ ಪ್ರಸಿದ್ಧರಾದ ಇಬ್ಬರು ದೇಶೀಯಸಂಗೀತ ಪಂಡಿತರಿಂದ ಕಲಿಯಲಾರಂಭಿಸಿದರು. ಮತ್ತು ಜರ್ಮನಿಯ ಒಬ್ಬ ಸಂಗೀತಶಾಸ್ತ್ರಜ್ಞನಿಂದ ಪಾಶ್ಚಾತ್ಯ ಸಂಗೀತವಿದ್ಯೆಯನ್ನೂ ಅಭ್ಯಾಸಮಾಡಿದರು. ಬಳಿಕ ಸಂಗೀತಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥಗಳನ್ನೆಲ್ಲಾ ಶೇಖರಿಸಲು ಪ್ರಯತ್ನಿಸಿ, ಇಂಗ್ಲೆಂಡಿನಿಂದ ಕೆಲ ಮೂಲಗ್ರಂಥಗಳನ್ನೂ, ಕಾಶಿ–ಕಾಶ್ಮೀರ–ನೇಪಾಳ–ಮೊದಲಾದ ಸ್ಥಲಗಳಿಂದ ಪ್ರಾಚೀನವಾದ ಸಂಗೀತಶಾಸ್ತ್ರದ ಸಂಸ್ಕೃತಗ್ರಂಥಗಳ ಅನೇಕ ತಾಳಪತ್ರಿಗಳನ್ನೂ ತರಿಸಿಕೊಂಡು, ತಮ್ಮ ಮನೆಯಲ್ಲಿ ಭರತಖಂಡದ ಯಾರಲ್ಲೂ ಇಲ್ಲದಿರುವಂತಹ ಸಂಗೀತಶಾಸ್ತ್ರಭಾಂಡಾಗಾರವನ್ನು ಸ್ಥಾಪಿಸಿದರು. ಬಳಿಕ ೧೮೭೧ ನೆಯ ವರ್ಷದಲ್ಲಿ ಇವರು ಒಂದು ಸಂಗೀತವಿದ್ಯಾಲಯವನ್ನೂ, ೧೮೮೧ ನೆಯ ವರ್ಷದಲ್ಲಿ ಒಂದು ವಂಗದೇಶ ಸಂಗೀತಶಾಲೆಯನ್ನೂ ಸ್ಥಾಪಿಸಿ, ಅವನ್ನು ತಮ್ಮ ಅಧ್ಯಕ್ಷತೆಯ ಕೆಳಗೆ ಬಹುಕಾಲ ಪೋಷಿಸಿದರು. ಇವೆರಡು ವಿದ್ಯಾಲಯಗಳ ಮೂಲಕವಾಗಿಯೂ ಇವರು ಅನೇಕ ಸಂಗೀತಗ್ರಂಥಗಳನ್ನು ರಚಿಯಿಸಿ, ಪ್ರಕಟಪಡಿಸಿ, ಜನರಿಗೆ ಬೆಲೆಯಿಲ್ಲದೆಯೇ ಹಂಚಿಸಿ, ಭಾರತೀಯ ಸಂಗೀತಶಾಸ್ತ್ರದ ಮಹತ್ತ್ವವನ್ನು ವಿಸ್ತರಪಡಿಸಿ, ಬಹುಕಾಲದಿಂದಲೂ ಭರತಖಂಡದಲ್ಲಿ ಉನ್ನತಜಾತೀಯರಿಂದ ಅಶ್ರದ್ಧೆಗೊಳಿಸಲ್ಪಟ್ಟಿದ್ದ ಈ ಶಾಸ್ತ್ರದಲ್ಲಿ ಎಲ್ಲರಿಗೂ ಅಭಿರುಚಿ ಹುಟ್ಟುವಂತೆ ಮಾಡಿದರು. ಇವರು ಉಪಪಾದಿಸಿದ ಹಿಂದೂಸಂಗೀತ ಸಂಜ್ಞಾಪದ್ಧತಿಯು ದೇಶದಲ್ಲೆಲ್ಲಾ ಅವಲಂಬಿಸಲ್ಪಟ್ಟಿತು. ಕೀರ್ತಿಶೇಷರಾದ ಎಡ್ವರ್ಡ್‌ಚಕ್ರವರ್ತಿಯವರು ೧೮೭೫ ನೆಯ ವರ್ಷದಲ್ಲಿ ಭರತಖಂಡಕ್ಕೆ ಬಂದಿದ್ದಾಗ್ಗೆ ಅವರ ಮುಂದೆ ಹಾಡಲ್ಪಟ್ಟ ಬಂಗಾಳಿದೇಶೀಯ ಗೀತವನ್ನು ರಚಿಸಿದವರು ಇವರೇ. ಆಗ ಆಂಗ್ಲಭಾಷೆಯಲ್ಲಿ ಹಾಡಲ್ಪಟ್ಟ ಸ್ವಾಗತಗೀತಕ್ಕೆ ಸ್ವರಕ್ರಮವನ್ನು ಏರ್ಪಡಿಸಿದವರೂ ಇವರೇ. ೧೮೮೧ನೆಯ ವರ್ಷದ ಫೆಬ್ರವರಿ ತಾ॥ ೧೨ ರಲ್ಲಿ ಇವರು ಸಂಸ್ಕೃತಕವಿಸಮಯ ಸಿದ್ಧವಾದ ನವರಸಗಳಿಗೆ ಉದಾಹರಣವಾಗಿ ಕೆಲ ಗೀತೆಗಳನ್ನು ರಚಿಸಿ ಹಾಡಿದರು. ಆ ಸಮಯದಲ್ಲಿ ಇವರ ಹಾಡುಗಾರಿಕೆಯನ್ನು ಕೇಳುವುದಕ್ಕಾಗಿ ಠಾಕೂರ್ ವಂಶದ ಭವನದಲ್ಲಿ ಪದೇಪದೇ ಸಭೆಗಳು ದಟ್ಟವಾದ ಜನಸ್ತೋಮದಿಂದ ಕೂಡಿ ನಡೆಯುತ್ತಿದ್ದುವು.

ಲಂಡನ್‌ಪಟ್ಟಣದಲ್ಲಿರುವ ಆಂಗ್ಲಜಾತೀಯ ಗೀತಾಸಂಘದವರು ಬಂದು ಕೇಳಿಕೊಂಡ ಮೇರೆಗೆ ಇವರು ಆಂಗ್ಲಜಾತೀಯ ಗೀತೆಯನ್ನು ಆಂಗ್ಲರಾಜರ ಮೇಲೆ ೧೨ ಬೇರೆಬೇರೆ ರಾಗಗಳಿಂದ ವಿರಚಿಸಿ, ವಂಗಭಾಷೆಗೆ ಪರಿವರ್ತಿಸಿ ದೇಶದಲ್ಲೆಲ್ಲಾ ಪ್ರಕಟಿಸಿದರು. ಇಂಡಿಯಾ ಸರ್ಕಾರದವರ ಕೋರಿಕೆಯ ಮೇರೆಗೆ « ೬೮ ಹಿಂದೂಶ್ರುತಿಗಳು " ಎಂಬ ಹೆಸರಿನಿಂದ ಒಂದು ಗ್ರಂಥವನ್ನೂ, ೨೨ ಸ್ವರಗಳನ್ನು ಹುಟ್ಟಿರುವ ವಾದ್ಯೋಪಕರಣವನ್ನೂ ನಿರ್ಮಿಸಿ, ಅದನ್ನು ೧೮೮೩ ರಲ್ಲಿ ನಡೆದ ಮಹಾಪ್ರದರ್ಶನಕ್ಕೆ ಕಳುಹಿಸಿಕೊಟ್ಟಿದ್ದರು.

ಬಳಿಕ ಅದೇ ೧೮೮೩ ನೆ ನವಂಬರ್ ತಿಂಗಳಲ್ಲಿ ಆಕ್ಸ್‌ಫರ್ಡಿನ ವಿಶ್ವವಿದ್ಯಾಲಯದವರು ಇವರಿಗೆ « ಸಂಗೀತವಿಶಾರದ (ಡಾಕ್ಟರ್ ಆಫ್ ಮ್ಯೂಜಿಕ್) ಎಂಬ ಬಿರುದನ್ನು ಕೊಟ್ಟರು. ಈ ಬಿರುದನ್ನು ಹೊಂದುವುದಕ್ಕೆ ಭಾರತೀಯರಲ್ಲಿ ಇವರೇ ಮೊದಲನೆಯವರು. ಸಾಧಾರಣವಾಗಿ ಇಂಥ ಬಿರುದನ್ನು ಪಡೆದುಕೊಳ್ಳತಕ್ಕವರು ತಾವೇ ಪ್ರತ್ಯಕ್ಷವಾಗಿ ಆ ಪಟ್ಟಣಕ್ಕೆ ಹೋಗಿ ಪರಿಗ್ರಹಿಸಬೇಕು. ಆದರೆ ಈ ಶೌರೀಂದ್ರಮೋಹನರು ತಾವು ಅಲ್ಲಿಗೆ ಹೋಗದೆಯೇ ತಾವಿದ್ದ ಸ್ಥಲಕ್ಕೇ ಅದು ಬಂದು ಇವರಿಗೆ ಕೊಡಲ್ಪಡುವಂತೆ ಮಾಡಿಕೊಂಡು ಹೀಗೆ ಅಸಾಧಾರಣಗೌರವವನ್ನು ಪಡೆದರು. ಇವರ ಸಂಗೀತಶಾಸ್ತ್ರದ ಅಸಾಧಾರಣ ಪ್ರಜ್ಞೆಯನ್ನು ಇಂಡಿಯಾಗೌರ್ನಮೆಂಟಿನವರು ಗಮನಿಸಿ, ೧೮೮೦ನೆಯ ವರ್ಷದಲ್ಲಿ ಇವರಿಗೆ « ಸಿ. ಐ. ಇ." ಎಂಬ ಬಿರುದನ್ನೂ, ರಾಜಾ ಎಂಬ ಪ್ರಶಸ್ತಿಯನ್ನೂ ಕೊಟ್ಟು ಗೌರವಿಸಿದರು. ೧೮೯೮ನೆ ವರ್ಷದಲ್ಲಿ ವಿಕ್ಟೋರಿಯಾ ಮಹಾರಾಜ್ಞಿಯವರು ಇವರಿಗೆ « ಸರ್ " ಎಂಬ ಬಿರುದನ್ನಿತ್ತು ಆ ಪದಕವನ್ನು ಇವರ ಕೊರಳಿಗೆ ಸ್ವಹಸ್ತದಿಂದಲಂಕರಿಸಬೇಕೆಂದು ಅಪೇಕ್ಷಿಸಿದರು. ಆದರೆ ಇವರು ತತ್ಕಾಲದಲ್ಲಿದ್ದಂತಹ ಸಮುದ್ರಯಾನನಿಷೇಧರೂಪವಾದ ಪೂರ್ವಾಚಾರಕ್ಕೆ ಬದ್ಧರಾಗಿದ್ದುದರಿಂದ ತಾವೇ ಲಂಡನ್ನಿಗೆ ಹೋಗಿ ಚಕ್ರವರ್ತಿಯವರ ಇಷ್ಟವನ್ನು ನೆರವೇರಿಸಲಾರದೆಹೋದರು. ಮತ್ತೂ ಕ್ರೈಸ್ತಜಗದ್ಗುರುವಾದ ೧೩ ನೆ ಲಿಯೋರವರು ಇವರಿಗೆ « ಆರ್ಡರ್ ಆಫ್ ದಿ ಗೋಲ್ಡನ್ ಸ್ಪರ್" ಎಂಬ ಗೌರವಪದವಿಯಿಂದ ಇವರನ್ನು ಸನ್ಮಾನಿಸಬೇಕೆಂದು ತಮ್ಮ ರೋಮ್‌ನಗರಕ್ಕೆ ಇವರನ್ನು ಆಹ್ವಾನಿಸಿದರು. ಆದರೆ ಮೇಲೆಕಂಡ ಆಚಾರಪರತೆಯಿಂದಲೇ ಅದನ್ನು ಕೂಡ ಇವರು ಅಂಗೀಕರಿಸಲಾರದೆ ಹೋದರು. ಇಂಡಿಯಾಸರ್ಕಾರದವರು ಇವರನ್ನು ಕಲ್ಕತ್ತಾಪಟ್ಟಣದ ಶಾಂತಿಸ್ಥಾಪಕ ನ್ಯಾಯಾಧಿಪತಿಯನ್ನಾಗಿಯೂ, ಕಲ್ಕತ್ತಾವಿಶ್ವವಿದ್ಯಾಲಯದ « ಫೆಲೋ " ವನ್ನಾಗಿಯೂ, ಏರ್ಪಡಿಸಿದರು. ಇದೇ ಅಲ್ಲದೆ ವೈಸ್ರಾಯರ ಮನೆಗೆ ಆಗಾಗ್ಗೆ ಅಂತರಂಗವಾಗಿ ಹೋಗುವ–ಮತ್ತೂ ಯಾವುದೊಂದು ಸಿವಿಲ್‌ಕೋರ್ಟಿಗೂ ಪ್ರತ್ಯಕ್ಷವಾಗಿ ಹೋಗಬೇಕಾದ ನಿರ್ಬಂಧಕ್ಕೊಳಗಾಗದ–ಆಯುಧಸಮೇತರಾದ ಸೇವಕರನ್ನು ತಮ್ಮ ಬಳಿಯಲ್ಲಿಟ್ಟುಕೊಳ್ಳುವ–ಮತ್ತೂ ಸ್ವಂತವಾಗಿ ಎರಡು ಫಿರಂಗಿಗಳನ್ನು ಇಟ್ಟುಕೊಳ್ಳುವ–ಇವೇ ಮೊದಲಾದ ಕೆಲವು ಅಧಿಕಾರಗಳನ್ನು ಇವರಿಗೆ ಕೊಟ್ಟು ಗೌರವಿಸಿದ್ದರು.

ಇವರಿಗೆ ಸಂಗೀತವಿದ್ಯೆಯಲ್ಲಿ ಪೂರ್ಣಾಭಿಮಾನವಿದ್ದುದಲ್ಲದೆ, ಇತರ ಕಳೆಗಳಲ್ಲೂ ಕೂಡ ಅಭಿರುಚಿಯಿದ್ದಿತು. ರತ್ನಪರೀಕ್ಷೆಯಲ್ಲಿ ಇವರಿಗೆ ತುಂಬಾ ನೈಪುಣ್ಯವಿದ್ದಿತು. ಅದರಿಂದಲೇ ಆ ಶಾಸ್ತ್ರವಿಷಯಕವಾದ « ಮಣಿಮಾಲಾ " ಎಂಬ ಗ್ರಂಥವನ್ನು ರಚಿಸಿದ್ದರು. ಸರ್ಕಾರದ ಪಕ್ಷದಿಂದ ರಚಿತವಾಗಿರುವ ಕೆಲಭೂಗರ್ಭಶಾಸ್ತ್ರಗ್ರಂಥಗಳಲ್ಲಿ ಇವರ ಮಣಿಮಾಲಾ ಗ್ರಂಥದ ಕೆಲವು ವಚನಗಳು ಆಧಾರಾರ್ಥವಾಗಿ ನಿರೂಪಿಸಲ್ಪಟ್ಟಿರುವುದರಿಂದಲೇ ಇವರಿಗೆ ಆ ಶಾಸ್ತ್ರವಿಷಯದಲ್ಲಿದ್ದ ಜ್ಞಾನದ ಮಹತ್ತ್ವವು ಗೊತ್ತಾಗುವುದು. ಮತ್ತೂ ಇವರಿಗೆ ಲೋಹ ಶಾಸ್ತ್ರ ತತ್ತ್ವಜ್ಞಾನವೂ ಚೆನ್ನಾಗಿದ್ದಿತೆಂಬುದನ್ನು ಅವರಿಂದ ರಚಿತವಾಗಿರುವ « ಧಾತುಮಾಲಾ " ಎಂಬ ಗ್ರಂಥವು ನಿರೂಪಿಸುತ್ತಿರುವುದು. ಇದರಲ್ಲಿ ಲೋಹಗಳ ವಿಷಯಕವಾದ ಅನೇಕ ಸೂಕ್ಷ್ಮಪರೀಕ್ಷೆಗಳ ವಿಚಾರವು ಚೆನ್ನಾಗಿ ಮಾಡಲ್ಪಟ್ಟಿದೆ. ಈ ಗ್ರಂಥವು ಸರ್ವರಿಂದಲೂ ಕೊಂಡಾಡಲ್ಪಟ್ಟಿದೆ. ಮತ್ತೂ ಅಶ್ವಶಾಸ್ತ್ರವಿಷಯಕವಾದ ಸಂಸ್ಕೃತಗ್ರಂಥಗಳ ಅಭಿಪ್ರಾಯವನ್ನೆತ್ತಿ ಇವರು « ಅಶ್ವಹೃದಯ " ಎಂಬ ಹೆಸರಿನಿಂದ ಒಂದು ಗ್ರಂಥವನ್ನು ರಚಿಸಿ ಆ ವಿಷಯಕವಾದ ತಮ್ಮ ನೈಪುಣ್ಯವನ್ನೂ ವ್ಯಕ್ತಗೊಳಿಸಿರುವರು. ಇದಲ್ಲದೆ ಕೆಲವು ಕಾಲ ಮೃಗಗಳನ್ನೂ ಪಕ್ಷಿಗಳನ್ನೂ ಗುಂಪುಕೂಡಿಸಿ ಸಲಹಿ, ಜಂತುಶಾಸ್ತ್ರವಿಷಯವನ್ನು ಚೆನ್ನಾಗಿ ಅಭ್ಯಾಸಮಾಡಿದರು. ಆಯಾ ಸ್ವರಗಳನ್ನು ಕೇಳಿದ ಮಾತ್ರದಿಂದಲೇ ಇವರು ಆಯಾ ಮೃಗಪಕ್ಷಿಗಳ ಅಂತರ್ಜಾತಿಭೇದಗಳನ್ನೆಲ್ಲಾ ಹೇಳುತ್ತಿದ್ದರಂತೆ.

ಬಂಗಾಳಿ ಜನರಲ್ಲಿ « ಸರ್ " ಎಂಬ ಬಿರುದನ್ನು ಹೊಂದಿದವರಲ್ಲೆಲ್ಲಾ ಇವರೇ ಮೊದಲನೆಯವರು. ಅನ್ಯದೇಶಗಳವರಿಂದ ಇವರಿಗೆ ದೊರೆತಿದ್ದಷ್ಟು ಬಿರುದುಗಳೂ ಗೌರವಗಳೂ ಮತ್ತಿನ್ನಾವ ಭಾರತೀಯನಿಗೂ ಬಂದಿರಲಿಲ್ಲವೆನ್ನುವುದರಿಂದಲೇ ಇವರ ಯೋಗ್ಯತೆಯು ಎಷ್ಟು ಅಸಾಧಾರಣವೆಂಬುದು ಗೊತ್ತಾಗುವುದು. ಪ್ರಸಿದ್ಧ ಸಂಗೀತ ಶಾಸ್ತ್ರಜ್ಞರಾಗಿದ್ದ ಹಿಂದಿನ ಅಯೋಧ್ಯಾನವಾಬರು ಇವರನ್ನು ತಮ್ಮ ಭವನಕ್ಕೆ ಬರಮಾಡಿಕೊಂಡು, ಇವರ ಗಾನರಸ ಪ್ರಾವೀಣ್ಯದಿಂದ ಉಂಟಾದ ಸಂತೋಷವನ್ನು ತಡೆಕೊಳ್ಳಲಾರದೆ ಎ…

ದ್ದು ಆಲಿಂಗಿಸಿಕೊಂಡು, ಬೆಳ್ಳಿಯ ಮಣಿಗಳ ಕಂಠಹಾರವೊಂದನ್ನು ಕೊರಳಿಗೆ ಹಾಕಿ, ಕಣ್ಣಿನ ತುಂಬಾ ನೀರು ತುಂಬಿಕೊಂಡು "ನನ್ನ ಸದ್ಯದಸ್ಥಿತಿಯಲ್ಲಿ ನಿಮಗೆ ಅರ್ಹವಾದ ಸಂಭಾವನೆಯಿಂದ ಅಲಂಕರಿಸುವುದಕ್ಕೆ ನನಗೆ ಶಕ್ತಿಯಿಲ್ಲದೆಹೋಯಿತು" ಎಂದು ಹೇಳಿ ಗೌರವಿಸಿದರಂತೆ.

ಈ ಕಾರಣದಿಂದ ಮೋಹನರಿಗೆ ತಮ್ಮ ಜೀವಿತಕಾಲದಲ್ಲಿ ಎಷ್ಟೋ ಕಷ್ಟಗಳು ಒದಗಿದರೂ ತಮ್ಮ ಸಂಗೀತಶಾಸ್ತ್ರದ ವಿಷಯದಲ್ಲೂ ತಾವು ಸ್ಥಾಪಿಸಿದ ಕಲಾಶಾಲೆಗಳ ವಿಷಯದಲ್ಲಿಯೂ ತಮಗಿದ್ದ ಅಭಿಮಾನವನ್ನು ಸ್ವಲ್ಪವೂ ಬಿಡಲಿಲ್ಲವು. ಇಂತಹ ಮಹನೀಯರಿಂದಲೇ ಪ್ರಾಚೀನಭಾರತಗೌರವವು ಈಗಲೂ ಅಷ್ಟಿಷ್ಟು ಕಾಪಾಡಲ್ಪಡುತ್ತಿರುವುದು.

ಇಂಥ ಪುತ್ರರತ್ನವೊಂದನ್ನು ಭಾರತಮಾತೆಯು ಕಳೆದುಕೊಂಡಳೆಂಬುದನ್ನು ಕೇಳಿ ಯಾವ ದೇಶೀಯ ಬಾಂಧವನು ತಾನೇ ವ್ಯಸನಪಡುವುದಿಲ್ಲ?

ಮೈಸೂರ್ ಸ್ಟಾರ್.

ಸನ್ ೧೯೧೫ನೆಯ ಇಸವಿ ಜುಲೈ ತಾ|| ೧೫ ನೆಯ ಸೋಮವಾರ.

ಮೈಸೂರ ನಿಯಮನಿರ್ಮಾಣಸಭೆ.

ಸಾಂಕುಶಪ್ರಭುತ್ವವಿದ್ದಲ್ಲಿ ಪ್ರಜಾಮತಕ್ಕೆ ಗೌರವವಿರುವುದು. ಪ್ರಜಾಭಿಪ್ರಾಯವು ಪುರಸ್ಕರಿಸಲ್ಪಡುವೆಡೆಯಲ್ಲಿ ರಾಜ್ಯಕ್ಷೇಮವು ಸ್ವತಸ್ಸಿದ್ಧವಾಗುವುದು. 'ಆಳಿಸುವುದಕ್ಕೆ ಮಾತ್ರ ಪ್ರಜೆಗಳು; ಆಳುವುದಕ್ಕೆ ಮಾತ್ರ ಪ್ರಭುಗಳು'-ಎಂಬ ನ್ಯಾಯವಿರುವ ಕಡೆಯಲ್ಲಿ ರಾಜ್ಯನೀತಿಯು ಕಲುಷಿತವಾಗಿ ರಾಜ್ಯಕ್ಕೆ ಅಶ್ರೇಯಸ್ಸು ಕಾಲಿಕ್ಕುವುದು. ಆಂಗ್ಲಪ್ರಭುತ್ವದ ಸ್ಥಿರತೆಗೆ ಸಾಂಕುಶತ್ವದ ಹದಿಯೇ ಮುಖ್ಯಾಧಾರವಾಗಿರುವುದು. ಅದನ್ನನುಸರಿಸಿಯೇ ನಮ್ಮ ಪ್ರಭುತ್ವದವರು ರಾಜಕೀಯ ವ್ಯವಹಾರದಲ್ಲಿ ಪ್ರಜೆಗಳಿಗೆ ಹೆಚ್ಚು ಪ್ರವೇಶವನ್ನು ಉಂಟುಮಾಡಿಕೊಟ್ಟು, ಅವರಿಂದ ಯುಕ್ತವಾಗಿ ದೊರೆಯುವ ಸೂಚನೆಗಳನ್ನೂ, ಸಹಾಯಗಳನ್ನೂ ತಮ್ಮ ರಾಜ್ಯಕಾರ್ಯನಿರ್ವಾಹದಲ್ಲಿ ಉಪಯೋಗಿಸಿಕೊಳ್ಳುವುದನ್ನು ದಿನಕ್ರಮೇಣ ಹೆಚ್ಚಿಸುತ್ತಿದ್ದಾರೆ. ಪ್ರಜಾಪ್ರತಿನಿಧಿಸಭೆಯ ಮೇಲೆ ನಿಯಮನಿರ್ಮಾಣಸಭೆಯನ್ನೇರ್ಪಡಿಸಿದುದೂ, ಆ ಸಭೆಯಲ್ಲಿ ಪ್ರಜಾಪ್ರತಿನಿಧಿಗಳ ಸಂಖ್ಯೆಯನ್ನು ಹೆಚ್ಚಿಸಿದುದೂ, ಅವರಿಗೆ ರಾಜ್ಯದಾಡಳಿತದ ಮೇಲೂ, ಸರ್ಕಾರದ ಆದಾಯವ್ಯಯಗಳ ಮೇಲೂ ಚರ್ಚಿಸುವ ಅವಕಾಶವನ್ನಿತ್ತುದೂ ಸಹ ಮೇಲೆಕಂಡ ವಿಷಯಕ್ಕೆ ಉದಾಹರಣೆಯಾಗಿವೆ. ಇಂಥ ವರದಾನಗಳನ್ನು ಪ್ರಜಾಪ್ರತಿನಿಧಿಗಳು ಸಾಧ್ಯವಾದಮಟ್ಟಿಗೂ ಸಫಲಗೊಳಿಸುತ್ತಿರುವುದನ್ನು ಕಂಡು ನಾವು ಸಂತೋಷಿಸುವೆವು. ನಿಯಮನಿರ್ಮಾಣಸಭೆಯಲ್ಲಿ ಅನ್ಯಾವಕೆಲಸವೂ ಇಲ್ಲದೆ ಬರಿಯ ಶಾಸನಗಳ ನಿರ್ಮಾಣವೇ ಇರುತ್ತಿದ್ದರೆ, ಆ ವಿಧಿಗಳ ಭಾರವು ಪ್ರಜೆಗಳಿಗೆ ಅತ್ಯಂತ ದುರ್ಭರವಾಗುವಷ್ಟು ರಾಶಿಯಾಗುತ್ತಿದ್ದಿತು. ಅಧಿಪತ್ಯಗಳ ನಿಯಮನಿರ್ಮಾಣಸಭೆಗಳಂತೆ ನಮ್ಮ ಸಂಸ್ಥಾನದ ಸಭೆಯಲ್ಲೂ ರಾಜಕೀಯ ವ್ಯವಹಾರದ ಊಹಾಪೋಹಗಳನ್ನು ಮಾಡಲು ಅವಕಾಶವಿತ್ತುದು ದೇಶಕ್ಷೇಮಕ್ಕೆ ಅತ್ಯಂತಸಾಧಕವಾಯಿತು. ಆದರೆ ಆಂಗ್ಲಪ್ರಭುತ್ವದ ಆ ಸಭೆಗಳಲ್ಲಿ ಪ್ರಜಾಮತಕ್ಕೆ ತಕ್ಕಷ್ಟು ಪುರಸ್ಕಾರವಿಲ್ಲದೆ ಹೋಗುತ್ತಿರುವುದೆಂಬ ಅಪಪ್ರಥೆಯನ್ನು ನಮ್ಮ ಸ್ವದೇಶೀಯ ಸರ್ಕಾರದವರೂ ಹೊತ್ತುಕೊಳ್ಳದೆ ಇರಬೇಕೆಂಬುದೇ ನಮ್ಮ ಪ್ರಾರ್ಥನೆಯಾಗಿದೆ. ಈ ಸಲದ ನಿಯಮನಿರ್ಮಾಣಸಭೆಯ ನಡೆವಳಿಕೆಗಳು ಎಷ್ಟು ಉಪಯುಕ್ತವಾಗಿವೆಯೆಂಬುದನ್ನು ಪ್ರಜಾವರ್ಗಕ್ಕೆ ತಿಳಿಯಪಡಿಸುವುದಕ್ಕಾಗಿಯೇ ಕಳೆದವಾರದ ಮತ್ತೂ ಈ ವಾರದ ಸಂಚಿಕೆಗಳಲ್ಲಿ ಆ ಸಭೆಯಲ್ಲಿನ ಚರ್ಚಾಂಶಗಳನ್ನು ವಿವರಿಸಿರುತ್ತೇವೆ. ವಾಚಕರು ಲಕ್ಷ್ಯಕೊಟ್ಟು ಇವುಗಳನ್ನು ಓದುವವರಾಗಲೆಂದು ಕೋರುತ್ತೇವೆ.

ನಿಯಮನಿರ್ಮಾಣಸಭೆಯಲ್ಲಿ ಆಯವ್ಯಯದ ಲೆಕ್ಕದ ಮೇಲೆ ನಡೆದ ಚರ್ಚೆಯು.

ಮ|| ಬಿ. ಕೆ. ಗರುಡಾಚಾರರು:—ಆಯವ್ಯಯದ ಲೆಕ್ಕವನ್ನು ಕುರಿತು ಚರ್ಚಿಸುವ ಸೌಲಭ್ಯವು ಈ ನಿಯಮನಿರ್ಮಾಣಸಭೆಗೆ ದೊರೆತಿರುವುದಕ್ಕೆ ಇದೇ ಮೊದಲು. ಇಂತಹ ಸಮಯದಲ್ಲಿ ಆಯವ್ಯಯಭಾಗಗಳಲ್ಲಿ ಹೇಳಿರತಕ್ಕ ವಿಷಯಗಳನ್ನು ಚೆನ್ನಾಗಿ ಮನದಟ್ಟು ಮಾಡಿಕೊಂಡು, ಅದರಲ್ಲಿ ಕಂಡುಬರುವ ಗುಣದೋಷಗಳನ್ನು ಕುರಿತು ಚರ್ಚಿಸಬೇಕೆಂದು ಇಚ್ಛಿಸುತ್ತೇನೆ. ಆದರೆ ಆ ವಿಸ್ತಾರವಾದ ಸಂಖ್ಯೆಗಳನ್ನು ನೋಡಿ ತಿಳಿದುಕೊಳ್ಳಲು ನಮಗೆ ಕೊಟ್ಟಿದ್ದ ೧ ವಾರದವಧಿಯು ಸಾಲದು. ೨-೩ ವಾರಗಳ ಅವಧಿಯಾದರೂ ಕೊಡಲ್ಪಟ್ಟಿದ್ದಲ್ಲಿ ಈಗ ನಮಗೆ ಲಭ್ಯವಾಗಿರುವ ಸೌಲಭ್ಯಕ್ಕೆ ತಕ್ಕ ಪ್ರಯೋಜನವಾಗುವುದೆಂಬುದನ್ನು ನನ್ನ ಜತೆಯ ಸಭ್ಯರೂ, ಸರ್ಕಾರದವರೂ ಅನುಮೋದಿಸುವರೆಂದು ನಾನು ದೃಢವಾಗಿರುತ್ತೇನೆ. ಈ ಆಯವ್ಯಯದ ಲೆಕ್ಕದ ವಿಚಾರದಲ್ಲಿ ತಕ್ಕ ದಾಖಲೆಗಳನ್ನು ನೋಡಲು ಬೆಂಗಳೂರಲ್ಲಿ ಬಹಿರಂಗವಾದ ಪುಸ್ತಕಭಾಂಡಾಗಾರಗಳಿಲ್ಲದಿರುವುದು ಮತ್ತೊಂದು ತೊಂದರೆಯಾಗಿರುವುದರಿಂದ, ಕೌನ್ಸಿಲ್ ಮಂದಿರದಲ್ಲಿ ಒಂದು ಒಳ್ಳೆಯಪುಸ್ತಕಭಾಂಡಾಗಾರವನ್ನು ಸರ್ಕಾರದವರು ಕೂಡಲೇ ಸ್ಥಾಪಿಸಿ, ಈಗಿರುವ ತೊಂದರೆಯನ್ನು ನಿವಾರಿಸಬೇಕೆಂದು ಸೂಚಿಸುವುದು ಅಪ್ರಕೃತ ವೆನಿಸದು.

ಭೂಕಂದಾಯ:—ನಾನಾವಿಧವಿಂದಾದ ಉತ್ಪತ್ತಿಗಳಲ್ಲೆಲ್ಲಾ ಭೂಮಿಯಿಂದಾಗುವ ಉತ್ಪತ್ತಿಯೇ ಮೊದಲನೆಯದಾಗಿದೆ. ಇದು ನನಗೆ ಹೊಸದಾಗಿ ಕಂಡುಬರುವ ಬೀಜವಾಗದಿರುವುದಿಲ್ಲವೆಂಬುದು ನಿಮ್ಮ ಪ್ರಶ್ನೆಯಭಾಗವಾಗಿದೆ. ನಮ್ಮ ಮೈಸೂರ ಸೀಮೆಯ ವ್ಯವಸಾಯ ಉತ್ಪತ್ತಿಯ ಸ್ಥಿತಿಯಂತೂ ಬಹು ಕಡಿಮೆಯಾಗಿರುವುದೆಂಬುದು ಚೆನ್ನಾಗಿ ಗೊತ್ತೇ ಇದೆ. ಅದುಕಾರಣ ಭೂಕಂದಾಯದ ಹೊರೆಯು ಕಡಿಮೆಮಾಡಲ್ಪಡಬೇಕೆಂದು ನನಗೆ ತೋರುವುದಲ್ಲದೆ ಸರ್ಕಾರದವರು ಈ ಪ್ರಶ್ನೆಯ ಭಾಗವನ್ನು ಚೆನ್ನಾಗಿ ಪರಿಶೀಲಿಸಬೇಕೆಂದಿಚ್ಛಿಸುತ್ತೇನೆ. ಮತ್ತೂ ಹೆಚ್ಚು ಉತ್ಪನ್ನವುಳ್ಳ ಮತ್ತೊಂದು ಶಾಖೆಯು ಮಾದಕ ಪದಾರ್ಥಗಳಾಗಿವೆ. ಇದರುತ್ಪತ್ತಿಯು ವರ್ಷಂಪ್ರತಿವರ್ಷದಲ್ಲಿ ಮಿತಿಮೀರಿ ಹೆಚ್ಚುತ್ತಿದೆ. ಈ ಶಾಖೆಯಲ್ಲಿ ೧೯೧೫-೧೬ ರಲ್ಲಿನ ಉತ್ಪತ್ತಿಯು ೫೬೦೦೦೦೦ ರೂ.ಗಳಾಗುವುದೆಂದು ನಿರೀಕ್ಷಿತವಾಗಿರುವುದು. ಸಂಸ್ಥಾನದ ಒಟ್ಟುಪ್ರಜಾಸಂಖ್ಯೆಯು ೫೮೦೬೧೯೩ ಇರುವುದು. ಕುಡಿತಮಕ್ಕಿನ್ನವನ್ನು ಜನಸಂಖ್ಯೆಗೆ ಹೋಲಿಸಿದರೆ ನಮ್ಮ ಸೀಮೆಯಲ್ಲಿ ತಲೆಯೊಂದಕ್ಕೆ ೧೫|| ಆಣೆಯಂತೆ ಬೀಳುವುದು. ಮದ್ರಾಸಾಧಿಪತ್ಯದಲ್ಲಿ ಪ್ರಾಯಶಃ ೧೦-೧೨ ಆಣೆಯಂತೆ ಬೀಳುವುದು. ಇದು ಭಯಂಕರವಾದುದಲ್ಲವೆ? ಇದು, ಯಾವುದೊಂದು ಬ್ರಿಟಿಷ್‌ಪ್ರಾಂತದಲ್ಲಿರುವುದಕ್ಕಿಂತಲೂ ಅಥವಾ ಭರತಖಂಡದ ಪ್ರತಿಯೊಂದು ಭಾಗದಲ್ಲಿರುವುದಕ್ಕಿಂತಲೂ ಬಹಳ ಅಧಿಕವಾಗಿರುತ್ತದೆ. ಇಂತಹಸ್ಥಿತಿಯು ನಾಗರಿಕವಾದ ಸರ್ಕಾರದಲ್ಲಿ ಮುಖ್ಯವಾಗಿ ದೇಶೀಯಸರ್ಕಾರದಲ್ಲಿ ಇರುವುದು ಬಹಳ ಪರಿತಾಪಕರವು. ಈ ಮದ್ಯವು ಬಡವರಾದ ಸ್ವದೇಶೀಯರ ಮನೆಬಾಗಿಲಬಳಿಗೆ ನಾನಾವಿಧವಾಗಿ ತರಲ್ಪಟ್ಟು ಆಸೆಹುಟ್ಟಿಸುತ್ತಿರುವಾಗ್ಗೆ ಜನರು ಅದರ ಪಾನಾಸಕ್ತರಾಗುವುದೇನೂ ಆಶ್ಚರ್ಯವಲ್ಲವು. ಈ ಭಾಗದುತ್ಪತ್ತಿಯು ೧೯೧೧-೧೨ನೆಯ ವರ್ಷದಿಂದ ಮಿತಿಮೀರುತ್ತಿರುವುದನ್ನು ನಮ್ಮ ಕೋಶಾಧಿಕಾರಿಗಳು ಚೆನ್ನಾಗಿ ವಿವರಿಸಿ ಹೇಳಲು ಪ್ರಯತ್ನಪಟ್ಟಿರುವರಾದರೂ, ಈ ಕುಡಿತದಭ್ಯಾಸವು ಜನಸಾಮಾನ್ಯದಲ್ಲಿ ಹೆಚ್ಚುತ್ತಿರುವುದರಿಂದ ಅದರುತ್ಪನ್ನವು ಹೆಚ್ಚಿರುತ್ತದೆಂಬುದರ ಕಾರಣವು ಅವರಿಗೂ ಅನುಮಾನದಲ್ಲಿದೆ. ಅಂತೂ ಮದ್ಯದಂಗಡಿಗಳ ಸಂಖ್ಯೆಯು ಕಡಿಮೆಮಾಡಲ್ಪಡುತ್ತಿರುವುದು ತೃಪ್ತಿಕರವಾಗಿದೆ ಯೆಂದು ಅವರು ತಿಳಿಸಿರುವರು. ಅದರ ನಿರೋಧನಕ್ಕೆ ಇದೊಂದುಪಾಯವೇ ಸಾಲದು. ಯಾವಭಾಗದಲ್ಲಿ ಅಂಗಡಿಗಳ ಸಂಖ್ಯೆಯು ಕಡಿಮೆಮಾಡಲ್ಪಟ್ಟಿದೆಯೆಂಬುದು ಗೊತ್ತಾಗಿಲ್ಲವು. ಪ್ರತಿಯೊಂದು ಪಟ್ಟಣದ ಮತ್ತೂ ಗ್ರಾಮಗಳಲ್ಲಿನ ಅಂಗಡಿಗಳ ಸಂಖ್ಯೆಯು ಕಡಿಮೆಮಾಡಲ್ಪಟ್ಟಲ್ಲಿ ಆಗ ಅದರ ಪ್ರಯೋಜನವು ಕಂಡುಬರುವುದು. ಇದಲ್ಲದೆ ನಿತ್ಯದಲ್ಲೂ ಅಂಗಡಿಗಳಲ್ಲಿ ಮಾದಕದ್ರವ್ಯವನ್ನು ಮಾರುವ ಕಾಲದವಧಿಯನ್ನು ಕಡಿಮೆಮಾಡುವ ವಿಚಾರವು ಸಹ ಪರ್ಯಾಲೋಚಿಸಲ್ಪಡತಕ್ಕುದಾಗಿದೆ. ದೇಶೀಯಸಾರಾಯನ್ನು ಬಹಳ ಸ್ವಲ್ಪ ಪ್ರದೇಶದಲ್ಲಿ ಸಾಧ್ಯವಾದಷ್ಟುಕಡಿಮೆ ಪರಿಮಿತಿಯಿಂದ ಇಳಿಸಲು ಕಂಟ್ರಾಕ್ಟು ಕೊಡಲ್ಪಡಬೇಕು. ಇಂತಹ ಬಲವತ್ತರವಾದ ಉಪಾಯಗಳು ಕಠಿನವಾಗಿ ಅನುಷ್ಠಾನಕ್ಕೆ ತರಲ್ಪಟ್ಟಲ್ಲಿ ಕೆಲವರ್ಷಗಳಲ್ಲಿ ಸಾರ್ಥಕವಾದ ಫಲವಾಗದೆ ಇರುವುದಿಲ್ಲವು. ತಮ್ಮ ಪ್ರಜೆಗಳ ಕ್ಷೀಣತೆಗೆ ಕಾರಣವಾದ ಈ ಪದಾರ್ಥವನ್ನು ಯಥೇಚ್ಛವಾಗಿ ದೊರೆಯದಂತೆ ಮಾಡಿ ಕೆಲಕಾಲದಲ್ಲಿ ಅದರ ಮಾರಾಟವನ್ನೇ ತೆಗೆದುಬಿಟ್ಟು ಪ್ರಜೆಗಳ ಸಾಂಪತ್ತಿಕ ನೈತಿಕಸ್ಥಿತಿಗಳ ಅಭಿವೃದ್ಧಿಗೆ ಮಾರ್ಗವನ್ನು ತೋರಿಸಿಕೊಡಬೇಕೆಂಬುದು ನಮ್ಮ ಸರ್ಕಾರದವರ ಸಂಕಲ್ಪವಾಗಿರಬೇಕು. ನಮ್ಮ ಸರ್ಕಾರದವರು ಮನೋಧೈರ್ಯದಿಂದ ತಮ್ಮ ಉತ್ಪತ್ತಿಯಮಾರ್ಗಗಳಲ್ಲಿ ಈ ವಿಧವಾದುತ್ಪನ್ನವನ್ನು ಕಾಲಕ್ರಮೇಣ ತಪ್ಪಿಸಿ ತಮ್ಮ ಪ್ರಜೆಗಳ ನೀತಿಯನ್ನೂ ದೇಹಶಕ್ತಿಯನ್ನೂ ಹೆಚ್ಚಿಸಬೇಕಾಗಿದೆ.

ಅಡವಿಯುತ್ಪತ್ತಿ:—ಹೆಚ್ಚು ಉತ್ಪತ್ತಿಯ ಭಾಗಗಳಲ್ಲಿ ಕಾಡಿನುತ್ಪತ್ತಿಯು ೩ ನೆಯದಾಗಿದೆ. ಇದರಲ್ಲಿ ನೂರಕ್ಕೆ ೭೦ ರಂತೆ ಗಂಧದಮರದಿಂದ ಲಾಭವಾಗಿರುವುದು. ಇದರ ಬೆಲೆಯಾದರೊ ಪ್ರತಿ ವರ್ಷದಲ್ಲೂ ಏರುತ್ತಿದೆ. ಹುಲ್ಲುಗಾವಲಿನ ಮತ್ತು ಇತರ ಗಣಿಗಳ ಉತ್ಪತ್ತಿಗಳ ಹೊರತಾಗಿ ಪ್ರತಿವರ್ಷದಲ್ಲಿ ೧೦೦೦೦೦೦ ರೂ. ಉತ್ಪನ್ನವಾಗುವುದೆಂದು ನಿರೀಕ್ಷಿತವಾಗಿದೆ. ಕಳೆದ ವರ್ಷಗಳುತ್ಪತ್ತಿಗಳಿಗೆ ಹೋಲಿಸಿದಲ್ಲಿ ಇದು ೩ ಲಕ್ಷರೂ.ನಷ್ಟು ಹೆಚ್ಚಿರುವುದು. ಹೀಗೆ ಹೆಚ್ಚಿರುವುದಕ್ಕೆ ಸೆಕ್ರಿಟರಿಯವರು ಯಾವಕಾರಣವನ್ನೂ ತಿಳಿಸಲಿಲ್ಲವು. ಈ ಅರಣ್ಯಶಾಖೆಗಾಗಿ ಆಗುವ ವೆಚ್ಚವು ಬಹಳವಾಗಿ ಹೆಚ್ಚಿರುತ್ತದೆ. ಹೇಗೆಂದರೆ-೩೫೦೦ ಚದರಮೈಲಿಗಳ ಅರಣ್ಯಪ್ರದೇಶಕ್ಕೆ ೮ ಲಕ್ಷ ರೂ. ಅಥವಾ ಒಂದು ಚದರಮೈಲಿಗೆ ೨೨೦ ರೂ. ನಂತೆ ವೆಚ್ಚವಾಗಿದೆ. ಮದರಾಸಾಧಿಪತ್ಯದಲ್ಲಾದರೊ ಒಂದು ಚದರಮೈಲಿ ವಿಸ್ತೀರ್ಣದ ಕಾಡಿಗೆ ೧೫೦ ರೂ. ನಂತೆ ವೆಚ್ಚವಾಗುವುದು. ಅದುಕಾರಣ ಪುನರ್ವಿಮರ್ಶೆಯಿಂದ ವೆಚ್ಚವು ಕಡಮೆಮಾಡಲ್ಪಡಬೇಕೆಂಬುದು ನನ್ನ ಅಭಿಪ್ರಾಯವು.

ವಿದ್ಯಾಭ್ಯಾಸ:—ಈ ವರ್ಷದ ಆಯವ್ಯಯದ ಲೆಕ್ಕದಲ್ಲಿ ವಿದ್ಯಾಭಿವೃದ್ಧಿಗಾಗಿ ಹೆಚ್ಚು ಹಣದ ವ್ಯಯಕ್ಕವಕಾಶವು ಕಲ್ಪಿಸಲ್ಪಟ್ಟಿರುವುದಾದರೂ ಇದು ಕಾಲೇಜುಗಳಲ್ಲಿನ ವಿದ್ಯಾಭಿವೃದ್ಧಿಗೆ ಇನ್ನೂ ಸಾಲುವುದಿಲ್ಲವೆಂದು ನನಗೆ ತೋರುತ್ತದೆ. ಕಳೆದವರ್ಷ ನಮ್ಮ ೨ ಕಾಲೇಜುಗಳಲ್ಲಿಯೂ ಇಂಟರ್ಮೀಡಿಯೆಟ್ ತರಗತಿಗಳಿಗೆ ಹೆಚ್ಚು ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಸ್ಥಳಸಾಲದೆಹೋದುದರಿಂದುಂಟಾದ ತೊಂದರೆಯು ಸರ್ಕಾರದವರ ಗಮನಕ್ಕೆ ತರಲ್ಪಟ್ಟಾಗ್ಯೂ, ಈ ವರ್ಷದ ಬಡ್ಜೆಟ್ಟಿನಲ್ಲಿ ಯಾವ ಪರಿಹಾರವೂ ಕಲ್ಪಿಸಲ್ಪಟ್ಟಿಲ್ಲವು. ಈ ವರ್ಷವೂ ಅದೇವಿಧವಾದ ತೊಂದರೆಯುಂಟಾಗಿರುವುದರಿಂದ ವಿದ್ಯಾರ್ಥಿಗಳತಂದೆತಾಯಿಗಳೂ, ಪೋಷಕರೂ ಸರ್ಕಾರದವರಲ್ಲಿ ಬಿನ್ನಯಿಸಿಕೊಳ್ಳುವ ಬಗೆಗೆ ಒಂದು ದೊಡ್ಡ ಸಭೆಯನ್ನು ಕೂಡಿಸಿದ್ದರು. ಅದುಕಾರಣ ಸರ್ಕಾರದವರು ಎರಡುಕಾಲೇಜುಗಳಲ್ಲೂ ಈಗಿರತಕ್ಕ ಸ್ಥಾನಗಳಿರದಷ್ಟನ್ನು ಹೆಚ್ಚಿಸಬೇಕೆಂಬುದು ನಮ್ಮ ಪೇಕ್ಷೆಯು.

ಆರೋಗ್ಯವು:—ಆರೋಗ್ಯರಕ್ಷಣಶಾಖೆಯ ವ್ಯಯಕ್ಕಾಗಿ ೧.೬೨ ಲಕ್ಷ ರೂ. ಗೊತ್ತುಮಾಡಲ್ಪಟ್ಟಿದೆಯಾದರೂ ಇದು ಇನ್ನೂ ಸಾಲುವುದಿಲ್ಲವಾದಪ್ರಯುಕ್ತ ಸರ್ಕಾರದವರು ಪುನರ್ವಿಮರ್ಶೆಮಾಡಬೇಕಾಗಿದೆ. ವ್ಯವಸಾಯದ ತರುವಾಯ ಜನರ ಆರೋಗ್ಯದ ರಕ್ಷಣಭಾಗವು ಮುಖ್ಯವಾದುದರಿಂದ ವ್ಯವಸಾಯಾಭಿವೃದ್ಧಿಯಂತೆ ಇದೂ ಅಭಿವೃದ್ಧಿಗೊಳಿಸಲ್ಪಡಬೇಕು. ಈ ಆರೋಗ್ಯ ರಕ್ಷಣಭಾಗವನ್ನು ವೈದ್ಯಭಾಗದೊಡನೆ ಈಗಿನಂತೆ ಸೇರಿಸದೆ ಪ್ರತ್ಯೇಕವಾಗಿ ಮಾಡಿ ಅದಕ್ಕಾಗಿ ಇನ್ನೂ ಹೆಚ್ಚುವ್ಯಯವನ್ನು ಮಾಡಲು ಅವಕಾಶವು ಕಲ್ಪಿಸಲ್ಪಡಬೇಕು.

ಲೋಹಮಾರ್ಗಗಳು:—ಇದರ ಲೆಕ್ಕವು ಎಂ. ಅಂಡ್ ಎಸ್. ಎಂ. ರೈಲ್ವೆ ಕಂಪೆನಿಯವರಿಂದ ಕೊಡಲ್ಪಟ್ಟುದಾಗಿರಬೇಕೆಂದು ನಾನು ನಂಬುತ್ತೇನೆ. ಇದನ್ನು ಸರ್ಕಾರದವರು ಸ್ವತಃ ನೋಡಿರುವರೋ ಇಲ್ಲವೋ ತಿಳಿಯದು. ಬೆಂಗಳೂರು ಮೈಸೂರುಗಳ ಮಧ್ಯದ ಮಾರ್ಗವು ವರ್ಷೇವರ್ಷೆ ಬಹಳ ಪ್ರಾಮುಖ್ಯವನ್ನು ಹೊಂದುತ್ತ ಅಲ್ಲಿನ ಪ್ರಯಾಣಿಕರ ಮತ್ತೂ ಸಾಮಗ್ರಿಗಳಮೂಲಕವಾದ ಉತ್ಪನ್ನವು ಹೆಚ್ಚುತ್ತಿದೆ. ಈ ಶಾಖೆಯ ಉತ್ಪನ್ನಕ್ಕೆ ಆಧಾರಭೂತವಾದ ೩ನೆಯತರಗತಿಯ ಪ್ರಯಾಣಿಕರಿಗೆಪ್ರಯಾಣಕಾಲದಲ್ಲಿ ಬಹಳತೊಂದರೆಯಿರುವುದು. ಇದಕ್ಕೆ ಕಾರಣವನ್ನು ವಿಚಾರಿಸಿದಲ್ಲಿ ೩ನೆಯ ತರಗತಿಯ ಬಂಡಿಗಳು ಸಾಕಾದಷ್ಟು ಇರುವುದಿಲ್ಲವೆಂದು ಹೇಳುವರು. ಇಲ್ಲಿ ಉಪಯೋಗದಲ್ಲಿರುವ ಬಂಡಿಗಳ ಸಂಖ್ಯೆಯನ್ನು ಭರತಖಂಡದ ಇತರ ಕಡೆಯಲ್ಲಿರುವವುಗಳಿಗೆ ಹೋಲಿಸಿದಲ್ಲಿ ಬಹಳ ಕಡಿಮೆಯಾಗಿರುವುದು. ಅದುಕಾರಣ ಹೆಚ್ಚು ಬಂಡಿಗಳ ನಿರ್ಮಾಣಕ್ಕೆ ಈ ವರ್ಷದ ಆಯವ್ಯಯದ ಲೆಕ್ಕದಲ್ಲಿ ಅವಕಾಶವು ಕಲ್ಪಿಸಲ್ಪಡುವುದಾವಶ್ಯಕವು. ಅಲ್ಲದೆ ಮೈಸೂರು—ಬೆಂಗಳೂರುಗಳ ಮಧ್ಯದಮಾರ್ಗವು ಚೆನ್ನಾಗಿ ಹಾಕಲ್ಪಟ್ಟಿಲ್ಲವಾದುದರಿಂದ ಬಂಡಿಗಳು ಜಾಗ್ರತೆಯಲ್ಲಿ ತಿರುಗಾಡಲು ಕಷ್ಟವಾಗಿರುವ ಪ್ರಯುಕ್ತ, ಪ್ರತಿವರ್ಷದಲ್ಲೂ ಕೊಂಚಕೊಂಚ ಭಾಗವನ್ನು ಸರಿಪಡಿಸಲು ಸರ್ಕಾರದವರು ತಕ್ಕೇರ್ಪಾಟನ್ನು ಮಾಡಿ ಈ ವರ್ಷದ ಲೆಕ್ಕದಲ್ಲಿ ಅದಕ್ಕವಕಾಶವನ್ನು ಕಲ್ಪಿಸಬೇಕು.

ಕೆರೆಗಳು:—ಸರ್ಕಾರದವರು ಸಂಸ್ಥಾನದಲ್ಲಿಯ ಸಣ್ಣಕೆರೆಗಳಭಿವೃದ್ಧಿಯವಿಚಾರದಲ್ಲಿ ತಕ್ಕಷ್ಟು ಗಮನವನ್ನು ಕೊಡುತ್ತಿಲ್ಲವು. ಈ ಸಣ್ಣಕೆರೆಗಳ ಕೆಳಗಿರುವ ಭೂಮಿಗಳ ವಿಸ್ತೀರ್ಣವು ಪ್ರಾಯಶಃ ದೊಡ್ಡಕೆರೆಗಳ ಕೆಳಗಿರುವ ಭೂಮಿಗಳಷ್ಟೇ ಆಗುವುದು. (೩೭೮೧೨ ಮತ್ತು ೩೮೮೩೦೨ ಎಕರೆಗಳು) ಅಲ್ಲದೆ ಅವುಗಳುತ್ಪನ್ನವೂ ತಕ್ಕಮಟ್ಟಿಗೆ ಸಮನಾಗುವುದು. ಸರ್ಕಾರದವರು ಈಚೆಗೆ ದೊಡ್ಡ ನೀರಾವರಿ ಕೆಲಸಗಳಿಗೆ ಹೆಚ್ಚುಧನವ್ಯಯವನ್ನು ಮಾಡಿ, ಸಣ್ಣಕೆರೆಗಳ ಅಭಿವೃದ್ಧಿಗೆ ಬಹಳ ಸ್ವಲ್ಪ ಹಣವನ್ನು ವ್ಯಯಮಾಡುವರು. ಇದರಿಂದ ಸರ್ಕಾರದವರ ಈ ರೀತಿಯು ಚೆನ್ನಾಗಿಲ್ಲವು. ಏಕೆಂದರೆ—ಸಣ್ಣಕೆರೆಗಳು ಸಂಸ್ಥಾನದಲ್ಲೆಲ್ಲಾ ಹರಡಿಕೊಂಡು ಜನರು ವಾಸಿಸುವ ಸ್ಥಳದಲ್ಲೆಲ್ಲಾ ಪ್ರಯೋಜನಕರವಾಗಿರುವುವು. ಮಾರಿಕಣಿವೆ, ಕನ್ನಂಬಾಡಿ ಮೊದಲಾದ ಸ್ಥಳಗಳ ದೊಡ್ಡ ನೀರಾವರಿ ಕೆಲಸಗಳು ಸಂಸ್ಥಾನದ ಕೊಂಚಭಾಗಕ್ಕೂ ಮತ್ತು ಧೈರ್ಯಶಾಲಿಗಳೂ ದೊಡ್ಡ ವ್ಯಾಪಾರ ಮಾಡತಕ್ಕವರೂ ಆದ ಪರದೇಶದವರಿಗೂ ಪ್ರಯೋಜನಕಾರಿಯಾಗಿರುವುವು. ಸರ್ಕಾರದವರು ಈ ವಿಚಾರವನ್ನು ಚೆನ್ನಾಗಿ ಪರಿಶೀಲಿಸಿ ಕೂಡಲೆ ಎಲ್ಲ ಸಣ್ಣಕೆರೆಗಳ ಪುನರುದ್ಧಾರವನ್ನು ಮಾಡಿಸಿ ಸಂಸ್ಥಾನದ ಎಲ್ಲಾಭಾಗದ ಪ್ರಜೆಗಳ ಕೃತಜ್ಞತೆಗೆ ಪಾತ್ರರಾಗುವರೆಂದು ನಾನು ನೆನಸುತ್ತೇನೆ. ಪ್ರತಿವರ್ಷದಲ್ಲೂ ದೊಡ್ಡ ಕಾರ್ಯಗಳಿಗಾಗಿ ಹೆಚ್ಚು ಹಣವು ತೆಗೆದಿಡಲ್ಪಡುವುದರಲ್ಲಿ ಬಹಳ ಹಣವು ವ್ಯಯವಾಗದೆ ಉಳಿಯುವುದು. ೧೯೧೨-೧೩ ರಲ್ಲಿ ೩೫ ಲಕ್ಷ ರೂ. ಕಳೆದ ವರ್ಷದಲ್ಲಿ ೩೮ ಲಕ್ಷ ರೂ. ಗಳು ವ್ಯಯವಾಗದೆ ಉಳಿದಿದ್ದುವು. ಇದು ದೊಡ್ಡಕಾರ್ಯಗಳನ್ನು ಕೈಕೊಳ್ಳುವುದರ ಫಲವಾಗಿದೆಯೆಂದು ನನಗೆ ತೋರುತ್ತದೆ. ಅದುಕಾರಣ ಸರ್ಕಾರದವರು ಸಣ್ಣ ಕೆರೆಗಳ ಪುನರುದ್ಧಾರಕ್ಕಾಗಿ ತಕ್ಕ ಧನವ್ಯಯಕ್ಕವಕಾಶವನ್ನು ಕಲ್ಪಿಸಿಕೊಟ್ಟಿದ್ದಲ್ಲಿ ಇಷ್ಟು ಹೊತ್ತಿಗೆ ಅವು ತಕ್ಕಫಲವನ್ನು ಕೊಡುತ್ತಿದ್ದುವು.

ಅಲ್ಪಸ್ವಲ್ಪ ಬೆಳೆಯಾದುದಕ್ಕಾಗಿ ಕಂದಾಯವನ್ನು ಮನ್ನಿಸುವುದು:—ಮ||ಚಕ್ರವರ್ತಿಯವರು ೧೯೧೩-೧೪ರಲ್ಲಿ ರಾಗಿ ಬೆಳೆಯು ೭ ಆಣೆಯಿಂದ ೧೬ ಆಣೆಯವರೆಗೂ, ಬತ್ತದಬೆಳೆಯು ೭|| ಆಣೆಯಿಂದ ೧೪ ಆಣೆಯವರೆಗೂ ಆಗಿರುವುದೆಂದು ಒಪ್ಪಿಕೊಂಡಿರುತ್ತಾರೆ. ಈ ಸಂಸ್ಥಾನಕ್ಕೆ ಮುಖ್ಯ ಆಧಾರವಾದ ಈ ಎರಡು ಬೆಳಸುಗಳೂ ಸರಾಸರಿ ೮|| ಆಣೆ ಮತ್ತು ೧೧ ಆಣೆಯಾಗಿರುವುದೆಂದು ತಿಳುಹಲ್ಪಟ್ಟಿದೆ. ಇಂತಹ ಸ್ಥಿತಿಯು ಸಮರ್ಪಕವಾಗಿದೆಯೆಂದು ಹೇಗೆ ಹೇಳಲ್ಪಟ್ಟಿರುವುದೋ ಅದು ಆಶ್ಚರ್ಯವಾಗಿದೆ. ಬೆಳಸು ಇಷ್ಟು ಹೀನವಾಗಿದ್ದರೂ ಕಂದಾಯವು ಪೂರ್ತಿಯಾಗಿ ತೆಗೆದುಕೊಳ್ಳಲ್ಪಟ್ಟಿರುವುದು. ಇನ್ನೆಂತಹ ಸಂದರ್ಭದಲ್ಲಿ ಸರ್ಕಾರದವರು ಕಂದಾಯವನ್ನು ಮನ್ನಿಸಿಕೊಡುವರೆಂಬುದು ತಿಳಿಯಲಿಲ್ಲವು ೭|| ಮತ್ತು ೭ ಆಣೆಗಳ ಬೆಳೆಯಾಗಿರುವುದು ಬಹಳ ಕಡಿಮೆಯಾಗಿರುವುದರಿಂದ ಅಂಥ ಸಂದರ್ಭದಲ್ಲಿ ಕಂದಾಯವನ್ನು ಮನ್ನಿಸತಕ್ಕುದು ನ್ಯಾಯವಾಗಿದೆಯೆಂದು

ನನಗೆ ತೋರುವುದು. ಈ ವರ್ಷವಾದರೊ ಋತುಮಾನದ ಸ್ಥಿತಿಯು ೧೯೧೪-೧೫ನೆಯ ವರ್ಷಕ್ಕಿಂತ ಬಹಳ ಹೀನವಾಗಿರುವುದರಿಂದ ಕಂದಾಯವನ್ನು ಮನ್ನಿಸಲು ಆಯವ್ಯಯದ ಲೆಕ್ಕದಲ್ಲಿ ಕೆಲ ಪರಿಹಾರವನ್ನು ಕಲ್ಪಿಸುವುದು ಆವಶ್ಯಕವಾಗಿದೆ.

ಕ್ಷಾಮವು:—ಈ ೧೯೧೫ನೆಯ ವರ್ಷದಲ್ಲಿ ಬೇಸಗೆಕಾಲದ (ಮಾರ್ಚಿಯಿಂದ ಮೇ ವರೆಗಿನ) ಮಳೆಗಳು ಸಂಪೂರ್ಣವಾಗಿ ಬಾರದೆ ಜುಲೈ ೨ ನೆಯ ವಾರದ ಈ ದಿವಸದಲ್ಲೂ ಹಿಂಗಾರುಮಳೆಯ ನಿರೀಕ್ಷಣೆಯಲ್ಲಿ ಆಕಾಶವನ್ನು ನೋಡುತ್ತಲಿದ್ದೇವೆ. ಹೀಗೆಯೇ ಈ ವರ್ಷದ ಸ್ಥಿತಿಯು ಅನುಕೂಲವಾಗಿಲ್ಲದೆ ಇದ್ದರೆ ಈಗಾಗಲೇ ಏರಿರುವ ಆಹಾರಪದಾರ್ಥಗಳ ಬೆಲೆಯು ಇನ್ನೂ ಸಂಭವವಿರುವುದರಿಂದ ಕ್ಷಾಮವು ಇದಿರುನೋಡುತ್ತಿದೆಯೆಂದು ಹೆಚ್ಚು ಧಾರಾಳವಾಗಿ ಹೇಳಬಹುದು.

ಸಂಪದಭ್ಯುದಯಸಮಾಜವು:—ಈ ಸಮಾಜಕಾರ್ಯಕ್ಕಾಗಿ ಮಾಡಲ್ಪಡುತ್ತಿರುವ ವ್ಯಯವು ಮಿತಿಮೀರಿ ಹೆಚ್ಚುತ್ತಿದೆ. ಈ ಸಮಾಜದ ಮೂರು ಶಾಖೆಗಳೂ ವ್ಯಯಭಾಗವನ್ನು ಕೊಂಚ ಕಡಿಮೆಮಾಡಿದ್ದಾಗ್ಯೂ ಅದನ್ನನುಸರಿಸದೆ ಬಾಲ್ಯಾವಸ್ಥೆಯಲ್ಲಿರುವ ಈಶಾಖೆಗೆಮುಖ್ಯವಾಗಿ ಸರ್ಕಾರದವರು ತಮ್ಮ ದಾನಹಸ್ತವನ್ನಿತ್ತಿರುವಂತೆ ತೋರುತ್ತದೆ. ಈ ಭಾಗದಲ್ಲಿ ಮಾಡಲ್ಪಡುವವ್ಯಯವನ್ನು ಚೆನ್ನಾಗಿಪರಿಶೋಧಿಸಿ ಕಡಿಮೆಮಾಡಬೇಕೆಂಬುದು ನನ್ನಭಿಮತವು.

ವಿದ್ಯಾಭ್ಯಾಸ ಶಾಖೆಯವರು ಪರ್ಯಾಲೋಚನೆಯಲ್ಲಿಟ್ಟುಕೊಂಡಿದ್ದ ಅನೇಕ ವಿಶೇಷ ವಿಷಯಗಳನ್ನು ಪೂರ್ತಿಗೊಳಿಸಿ ತಮ್ಮ ಸೂಚನೆಯನ್ನು ಸರ್ಕಾರಕ್ಕೆ ಕೊಟ್ಟಿರುವರು. ವ್ಯವಸಾಯದ ಮತ್ತು ಕೈಗಾರಿಕೆಯ ಶಾಖೆಗಳು ಈ ವರ್ಷದ ಬಡ್ಜೆಟ್ಟಿನಲ್ಲಿ ಮುಖ್ಯವಾದ ಬಾಬುಗಳಕೂಡ ಸೇರಿಸಲ್ಪಟ್ಟು ಸಮರ್ಥರಾದ ಅಧಿಕಾರಿಗಳ ಮೇಲ್ವಿಚಾರಣೆಗೊಳಪಡಿಸಲ್ಪಟ್ಟಿರುವುದರಿಂದ, ಈ ವಿಚಾರಕವಾದ ಎರಡು ಬೇರೆಬೇರೆ ಸಮಾಜಗಳು ಆ ಶಾಖೆಗಳಕೂಡ ಸೇರಿಸಲ್ಪಟ್ಟರೆ ಬಹಳ ಹಣವು ಉಳಿಯುವುದು. ಮತ್ತೂ ಈ ಹಣವನ್ನು ಶಾಶ್ವತವಾದ ಅಭಿವೃದ್ಧಿಕಾರ್ಯಗಳಿಗುಪಯೋಗಿಸಬಹುದು.

ಕೈಗಾರಿಕೆಯ ಮತ್ತು ವ್ಯಾಪಾರದ ಶಾಖೆಯು:—ಈ ಶಾಖೆಗೆ ಬಹಳಹಣವು ವ್ಯಯವಾಗುತ್ತಿರುವುದು. ಮೈಸೂರಿನಂತಹ ಸಣ್ಣಸಂಸ್ಥಾನಕ್ಕೆ ಹೆಚ್ಚು ಸಂಬಳದ ಡೈರೆಕ್ಟರಿರುವುದು ಬಹಳ ಭಾರವು. ಮದ್ರಾಸಾಧಿಪತ್ಯದಲ್ಲಿರುವ ಇದೇಶಾಖೆಯ ವೆಚ್ಚಕ್ಕೆ ಇಲ್ಲಿನದನ್ನು ಹೋಲಿಸಿದುದೆಯಾದರೆ ಇದು ಮಿತಿಮೀರಿರುತ್ತದೆ.

ಜುಡಿಷಿಯಲ್ ಮತ್ತು ಎಕ್ಸಿಕ್ಯುಟಿವ್ ಉದ್ಯೋಗಗಳನ್ನು ಬೇರ್ಪಡಿಸುವುದು:—ಈವಿಚಾರವು ಸರ್ಕಾರದವರ ಪರ್ಯಾಲೋಚನೆಗೆ ಅನೇಕವೇಳೆ ತರಲ್ಪಟ್ಟು, ಇದಕ್ಕೆ ಅವರು ತಮ್ಮ ಸಾನುಭೂತಿಯನ್ನು ತೋರಿಸಿರುವರೆಂದು ಹೇಳಲು ಹರ್ಷವಾಗುತ್ತದೆ. ನೆರೆಯ ಮದ್ರಾಸಾಧಿಪತ್ಯದಲ್ಲಿಯ ಒಂದು ಸಣ್ಣ ತಾಲ್ಲೂಕಿನ ವಿಸ್ತೀರ್ಣವು ೬೫೦ ಚದರ ಮೈಲಿಗೆ ಕಡಿಮೆಯಿಲ್ಲವು. ನಮ್ಮ ಸೀಮೆಯಲ್ಲಾದರೊ ಸಣ್ಣತಾಲ್ಲೋಕುಗಳ ವಿಸ್ತೀರ್ಣವು ಸರಾಸರಿ ೨೦೦ ಚದರಮೈಲಿಯಿರುವುದು. ಇದಕ್ಕುದಾಹರಣೆಯಾಗಿ-ಮದ್ರಾಸಾಧಿಪತ್ಯದಲ್ಲಿ ಹೊಸೂರು ೧೧೫೦ ಚದರಮೈಲಿ, ಕೃಷ್ಣಗಿರಿ ೬೫೦ ಚದರಮೈಲಿ ಇರುವುವು. ನಮ್ಮ ಸೀಮೆಯಲ್ಲಿ ಆನೆಕಲ್ಲು ೧೫೦೦? ಚದರಮೈಲಿಯಿರುವುದು. ನಮ್ಮ ಈಗಿನ ೨ ತಾಲ್ಲೂಕುಗಳನ್ನೊಟ್ಟುಗೂಡಿಸಿ ರೆವಿನ್ಯು ಕೆಲಸಕ್ಕಾಗಿ ಒಬ್ಬ ಅಮಲ್ದಾರರನ್ನೂ, ಕ್ರಿಮಿನಲ್ ಕೆಲಸಕ್ಕಾಗಿ ಒಬ್ಬ ಸಬ್‌ಮ್ಯಾಜಿಸ್ಟ್ರೇಟರನ್ನು ನಿಯಮಿಸಿದಲ್ಲಿ ಈ ದೇಶದ ಆಡಳಿತಕ್ಕೇನೂ ಕುಂದಾಗುವುದಿಲ್ಲವು. ಹೀಗೆ ಮಾಡುವುದರಿಂದ ಯಾವುದೊಂದೂ ಹೆಚ್ಚುವ್ಯಯವಿಲ್ಲದೆ ಬಹಳ ದಿನದಿಂದ ನಿರೀಕ್ಷಿಸುತ್ತಿರುವ ಈ ಸುಧಾರಣೆಯು ನೆರವೇರುವುದು. ಈಗಲಾದರೊ ಅಮಲ್ದಾರರು ತಾಲ್ಲೋಕಿನಲ್ಲೆಲ್ಲಾ ಜನರ ಕ್ಷೇಮಾಭಿವೃದ್ಧಿಯ ಕಾರ್ಯವನ್ನು ನೋಡಿಕೊಳ್ಳಲು ಹೊರಗೆ ಸಂಚರಿಸಬೇಕಾಗಿರುವುದಾದರೂ ಕ್ರಿಮಿನಲ್ ಕೆಲಸಗಳಿಗಾಗಿ ಪದೇಪದೆ ಹೆಡ್‌ಕ್ವಾರ್ಟರ್‌ಗೆ ಬರಬೇಕಾಗುವುದು. ಬಹುದಿನಗಳಿಂದ ನಿರೀಕ್ಷಿತವಾದ ಮತ್ತೂ ಅತ್ಯಾವಶ್ಯಕವಾದ ಈ ಸುಧಾರಣೆಯನ್ನು ಸರ್ಕಾರದವರು ಅನುಕೂಲವಾಗಿ ಪರ್ಯಾಲೋಚಿಸುವರೆಂದು ನಿರೀಕ್ಷಿಸಲ್ಪಟ್ಟಿದೆ.

ಆಯವ್ಯಯದ ಲೆಕ್ಕವು ಈಗ ಇಂಗ್ಲೀಷ್ ಭಾಷೆಯಲ್ಲಿ ಪ್ರಕಟಗೊಳಿಸಲ್ಪಡುತ್ತಿರುವುದು. ಕಂದಾಯವನ್ನು ತೆರುವವರಲ್ಲಿ ಇಂಗ್ಲೀಷ್ ಬಲ್ಲವರಿಗಿಂತ ಕನ್ನಡವನ್ನರಿತವರೇ ಬಹಳ ಹೆಚ್ಚಾಗಿರುವುದರಿಂದ ಬಹಳ ಅನನುಕೂಲವಾಗಿರುತ್ತದೆ. ಅದುಕಾರಣ ಬರೋಡಾದಲ್ಲಿ ಬಡ್ಜೆಟ್ಟು ಮರಾಟಿಭಾಷೆಯಲ್ಲೂ ಇತರ ದೇಶೀಯ ಸಂಸ್ಥಾನಗಳಲ್ಲಿ ದೇಶೀಯ ಭಾಷೆಯಲ್ಲೂ ಪ್ರಕಟಿಸಲ್ಪಡುವಂತೆ ಈದೇಶದಲ್ಲೂ ಕನ್ನಡದಲ್ಲಿಪ್ರಕಟಿಸಲ್ಪಟ್ಟರೆ ಕನ್ನಡವನ್ನು ಬಲ್ಲವರಲ್ಲಿ ಬಹುಜನರು ಸಂಸ್ಥಾನದಸ್ಥಿತಿಯನ್ನು ತಿಳಿಸುವ ಆಯವ್ಯಯ ವಿಚಾರದಲ್ಲಿ ಶ್ರದ್ಧೆಯನ್ನು ವಹಿಸಲವಕಾಶವಾಗುವುದು.

ಅನೇಕ ಭಾಗಗಳಲ್ಲಿ ಸುಧಾರಣೆಯನ್ನೂ ಮಾರ್ಪಾಟನ್ನೂ ಮಾಡಬಹುದೆಂಬ ನಿರೀಕ್ಷಣೆಯಿಂದ ಮೇಲೆಕಂಡ ನನ್ನ ಅಭಿಪ್ರಾಯಗಳನ್ನು ತಿಳಿಸಿರುವೆನೇ ಹೊರತು ಈಗಿರತಕ್ಕವುಗಳನ್ನು ಖಂಡಿಸಬೇಕೆಂಬ ಅಭಿಪ್ರಾಯದಿಂದಲ್ಲವೆಂದು ತಿಳಿಯಬೇಕಾಗಿ ಪ್ರಾರ್ಥಿಸುತ್ತೇನೆ.

ಇದೇ ವಿಷಯವಾಗಿ ಇನ್ನೂ ಕೆಲ ಸಭಿಕರು ಯುಕ್ತಿಯುಕ್ತವಾದ ಭಾಷಣಗಳನ್ನು ಮಾಡಿ ಸೂಚಿಸಿದರು.

ಅಧ್ಯಕ್ಷರಾದ ದಿವಾನರ ಉಪಸಂಹಾರದ ಭಾಷಣದ ಸಾರಾಂಶವು.

ಕಾಡುಗಳ ಮತ್ತೂ ಮಾದಕಪದಾರ್ಥಗಳ ಶಾಖೆಗಳುತ್ಪನ್ನವೂ, ವಿದ್ಯಾಭ್ಯಾಸದ ಶಾಖೆಯ ವೆಚ್ಚವೂ ಹೆಚ್ಚಿರುವುವು. ಮತ್ತೂ ಈವರೆಗೆ ಕೊರತೆಪಡುತ್ತಿದ್ದ ಅನೇಕ ಶಾಖೆಗಳಲ್ಲಿ ಕೆಲಸಗಾರರನ್ನೂ ಉಳಿದ ಸಲಕರಣೆಗಳನ್ನೂ ಅನುಕೂಲಪಡಿಸಿ ಕೊಡಲ್ಪಟ್ಟುದು ಈ ಬಡ್ಜೆಟ್ಟಿನಲ್ಲಿ ಮುಖ್ಯಾಂಶಗಳಾಗಿವೆ. ಲೋಹಮಾರ್ಗ-ನೀರಾವರಿ-ಮತ್ತೂ ಇತರ ಪ್ರಮುಖವಾದ ಕಾರ್ಯಗಳಿಗಾಗಿ ಅಧಿಕವೂ ಅಭೂತಪೂರ್ವವೂ ಆದ ೯೫ ಲಕ್ಷ ರೂ. ಗಳನ್ನು ವ್ಯಯಮಾಡಲು ಅವಕಾಶ ಕಲ್ಪಿಸಲ್ಪಟ್ಟಿರುವುದು ಅತ್ಯಂತ ಮುಖ್ಯವಾದ ವಿಷಯವಾಗಿದೆ. ಬೆಂಗಳೂರು ದಂಡಿನುತ್ಪನ್ನದಲ್ಲಿ ನಮಗೆ ಬರಬೇಕಾದ ೪೩ ಲಕ್ಷ ರೂ. ಗಳಲ್ಲಿ ಕಳೆದ ವರ್ಷ ೩೦ ಲಕ್ಷ ರೂ. ಬಂದಿತು. ಮತ್ತೂ ಉಳಿದ ೧೩ ಲಕ್ಷ ರೂ. ಈ ವರ್ಷ ಕೊಡಲ್ಪಡತಕ್ಕುದಾಗಿದೆ. ಬೆಂಗಳೂರು ದಂಡಿನ ಉತ್ಪನ್ನದಲ್ಲಿ ಹೆಚ್ಚಾಗುಳಿದಭಾಗವು ಮೈಸೂರ ದರ್ಬಾರಿನವರಿಗೆ ಸಲ್ಲತಕ್ಕುದೆಂಬುದನ್ನು ಇಂಡಿಯಾ ಸರ್ಕಾರದವರು ಪರಿಗಣಿಸಿ ನಮಗೆ ಬರಬೇಕಾದುದನ್ನು ಕೊಡಿಸಿಕೊಟ್ಟುದಕ್ಕಾಗಿ ನಾವು ಅವರಿಗೆ ಕೃತಜ್ಞರಾಗಿರುತ್ತೇವೆ. ದಂಡಿನ ಅಭಿವೃದ್ಧಿಯ ವಿಚಾರದಲ್ಲಿ ನಾವು ಶ್ರದ್ಧೆಯುಳ್ಳವರಾಗಿ, ಅಲ್ಲಿಗೆ ದೀಪ ಮತ್ತೂ ಕುಡಿಯುವ ನೀರಿನ ವಿಚಾರಗಳಲ್ಲಿ ಹಿಂದೆ ಸಹಾಯಮಾಡಿದಂತೆ ಈಗಲೂ ಮಾಡಬೇಕಾಗಿದೆ. ಈಗ ನಡೆಯುತ್ತಿರುವ ಸಂಸ್ಥಾನದ ಸಂಪದಭಿವೃದ್ಧಿಕಾರ್ಯಗಳಲ್ಲಿ ಕನ್ನಂಬಾಡಿಯ ಜಲಾಶಯನಿರ್ಮಾಣವು ಮುಖ್ಯವಾದುದು. ವೃಥಾ ಸಮುದ್ರಕ್ಕೆ ಹೋಗಿ ಬೀಳುತ್ತಿದ್ದ ಕಾವೇರಿಯ ನೀರನ್ನು ತಡೆದು ಶೇಖರಿಸುವುದಕ್ಕಾಗಿ ಈ ಕಾರ್ಯಗಳು ಕೈಕೊಳ್ಳಲ್ಪಟ್ಟಿವೆ. ನದಿಯ ತಳದಲ್ಲಿ ಕಟ್ಟಲ್ಪಡುತ್ತಿದ್ದ ಹದಿಯ ಕೆಲಸವು ಈಗ ಮುಗಿದು ಉಳಿದ ಕೆಲಸಗಳು ಬಹಳ ಸಮರ್ಪಕವಾಗಿ ನಡೆಯುತ್ತಿವೆ

ಲೋಹಮಾರ್ಗಗಳ ವಿಚಾರದಲ್ಲಿ ಮೈಸೂರಿನಿಂದ ಅರಸೀಕೆರೆಗೆ ಹಾಕಲ್ಪಡುವ ಮಾರ್ಗದ ಕೆಲಸವು ನಡೆಯುತ್ತಿದೆ. ಅಲ್ಲದೆ ನಂಜನಗೂಡಿನಿಂದ ಈರೋಡಿಗೂ ಮತ್ತೂ ಹಾಸನದಿಂದ ಮಂಗಳೂರಿಗೂ ಹಾಕಲ್ಪಡಲು ಯೋಚಿಸಲ್ಪಟ್ಟಿರುವ ಮಾರ್ಗಗಳ ವಿಚಾರವಾಗಿ ಇಂಡಿಯಾ ಸರ್ಕಾರದವರ ಕೂಡ ಪತ್ರವ್ಯವಹಾರವು ನಡೆಯುತ್ತಿದೆ. ಲೋಹಮಾರ್ಗಕಲ್ಪನೆಯ ಕೆಲಸವು ಬಹಳ ನಿಧಾನವಾಗಿ ನಡೆಯುತ್ತಿದೆಯೆಂದು ಒಂದು ಸುಳ್ಳುಸುದ್ದಿಯು ಹುಟ್ಟಿ ವೃತ್ತಪತ್ರಿಕೆಗಳಲ್ಲಿ ಪ್ರಕಟಗೊಳ್ಳುತ್ತಿದೆ. ಲೋಹಮಾರ್ಗ ಕಲ್ಪನೆಯ ಕೆಲಸವು ಈಗಿಗಿಂತಲೂ ಜಾಗ್ರತೆಯಾಗಿ ಹಿಂದೆ ಯಾವಾಗ ನಡೆಯುತ್ತಿದ್ದಿತೆಂಬುದನ್ನು ಈ ಲೋಹಮಾರ್ಗದ ಚರಿತ್ರೆಯ ಯಾವಭಾಗದಲ್ಲೂ ನಾನು ಕಾಣೆನು.

ಕಾಡುಗಳುತ್ಪನ್ನವು ಈಚೆಗೆ ಹೆಚ್ಚಿರುವುದು. ಮತ್ತು ಇನ್ನೂ ಹೆಚ್ಚಬಲ್ಲುದೆಂದು ತಿಳಿಯುತ್ತೇನೆ. ಕೈಗಾರಿಕೆಯ ಕಾರ್ಯಗಳಿಗೆ ಕಾಡಿನಲ್ಲುತ್ಪನ್ನವಾಗುವ ಆವಾವ ಪದಾರ್ಥಗಳು ಉಪಯೋಗಕ್ಕೆ ಬರುವುವೆಂಬುದನ್ನು ಕಂಡುಹಿಡಿಯುವುದಕ್ಕಾಗಿಯೇ ಇಬ್ಬರು ಅಧಿಕಾರಿಗಳು ನಿಯಮಿಸಲ್ಪಟ್ಟಿರುವರು. ನಮ್ಮ ಕಾಡುಗಳ ಅನೇಕ ಭಾಗಗಳು ಈವರೆಗೆ ಮನುಷ್ಯನ ಹಸ್ತಸ್ಪರ್ಶವಿಲ್ಲದೆಯೇ ಇವೆ. ಇವುಗಳಿಗೆ ಉಪಹತಿಯಿಲ್ಲದಂತೆ ಉತ್ಪನ್ನವನ್ನು ಹೆಚ್ಚಿಸಲವಕಾಶವಿರುವುದು. ಮ|| ಮುತ್ತಣ್ಣನವರು ಕಳೆದ ೧೨ ವರುಷಗಳಿಂದಲೂ ಒಳ್ಳೆಯ ಸಮರ್ಥತೆಯಿಂದಲೂ, ಮರ್ಯಾದೆಯಿಂದಲೂ ಫಾರೆಸ್ಟುಗಳ ಕನ್‌ಸರ್ವೇಟರಾಗಿದ್ದು ೧ ವಾರದಕೆಳಗೆ ಉದ್ಯೋಗದಿಂದ ನಿವೃತ್ತರಾದರು. ಇವರು ಈ ಶಾಖೆಯಲ್ಲಿ ಮಾಡಿದ ಸುಧಾರಣೆಗಳಿಂದ ಸರ್ಕಾರಕ್ಕೆ ಉತ್ಪನ್ನವು ಹೆಚ್ಚಾಗಿ ಬರುವಂತಾಗಿರುವುದಲ್ಲದೆ ಕಾಡುಗಳು ಸಂಸ್ಥಾನದ ಬೆಲೆಬಾಳುವ ಆಸ್ತಿಯಾಗಿರುವುವು. ಸಾಂಪತ್ತಿಕಾಭಿವೃದ್ಧಿಯ ಕಾರ್ಯಗಳನ್ನು ಮಾಡುವುದಲ್ಲದೆ ಜನರ ಸ್ಥಿತಿಯನ್ನು ಉತ್ತಮಪಡಿಸುವುದರಲ್ಲಿ ಅಭಿರುಚಿಯುಳ್ಳವರಾಗಿರುವೆವು. ಕಳೆದ ೪-೫ ವರ್ಷಗಳಿಂದ ವಿದ್ಯಾಭ್ಯಾಸದ ಖರ್ಚನ್ನು ಇಂಡ್ಯಾ ಸರ್ಕಾರದವರ ಮೇಲುಪಜ್ಞೆಯನ್ನನುಸರಿಸಿ ದ್ವಿಗುಣವಾಗಿ ಹೆಚ್ಚಿಸಿರುತ್ತೇವೆ. ವ್ಯವಸಾಯದ ಶಾಖೆಯ ವೆಚ್ಚವು ದ್ವಿಗುಣವಾಗಿದೆ. ರೇಷ್ಮೆ ವ್ಯವಸಾಯಾಭಿವೃದ್ಧಿಗಾಗಿ ತಕ್ಕ ಶೋಧನೆಗಾರಂಭವಾಗಿರುತ್ತದೆ. ಜನರಿಗೆ ನೂತನೋದ್ಯೋಗವನ್ನು ಕಲ್ಪಿಸಿಕೊಡಲು ಕೈಗಾರಿಕೆಯ ಮತ್ತೂ ವ್ಯಾಪಾರದ ಶಾಖೆಯು ಹೊಸದಾಗಿ ಏರ್ಪಡಿಸಲ್ಪಟ್ಟಿರುವುದು. ಮಕ್ಕಳಿಗೆ ಪಾಠಶಾಲೆಗಳಲ್ಲಿ ವಿಷಯಗಳನ್ನು ಬೋಧಿಸುವುದು ಮತ್ತೂ ಸಂಘಗಳದ್ವಾರಾ ಜನರಲ್ಲಿ ವ್ಯವಹಾರದಲ್ಲಿರುವ ವ್ಯಾಪಾರದ ಶಕ್ತಿಯನ್ನು ಪುಷ್ಟಿಗೊಳಿಸುವುದು ನಮ್ಮ ಉದ್ದೇಶವಾಗಿರುತ್ತದೆ.

ಹಿಂದೆ ನಡೆದಿರುವ ಸಂಸ್ಥಾನದ ಸಾಹಸಕಾರ್ಯಗಳಿಂದಲೂ ಖಜಗಳಿಂದಲೂ ೩೦ ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚಾಗಿಯೇ ಖರ್ಚುಹೋಗುತ ಮಿಗುವುದು. ಈ ಹೆಚ್ಚು ಉತ್ಪನ್ನವನ್ನೂ ಹಿಂದೆ ಶೇಖರವಾಗಿರುವ ಹಣವನ್ನೂ ಹೊಸಕಾರ್ಯಗಳಿಗುಪಯೋಗಿಸಿ ಸ್ಥಿರವಾದ ಆಸ್ತಿಯನ್ನೇರ್ಪಡಿಸುತ ಹೋಗುವೆವು. ಲೋಹಮಾರ್ಗಗಳ ಮತ್ತೂ ನೀರಾವರಿಯ ಕೆಲಸಗಳನ್ನು ಹಣವನ್ನು ಸಾಲವಾಗಿ ತೆಗೆಯದೆಯೇ ನಡೆಸಬಲ್ಲೆವು. ಗ್ರಾಮಾಂತರದ ಜನಗಳ ಮತ್ತೂ ಮಲೆನಾಡು ಪ್ರಾಂತದವರ ಸಾಂಪತ್ತಿಕ-ಸಾಮಾಜಿಕಸ್ಥಿತಿಯನ್ನು ವೃದ್ಧಿಗೊಳಿಸಲು ಹೆಚ್ಚುಗಟ್ಟಲೆಯ ಉಪಾಯಗಳನ್ನು ಕಲ್ಪಿಸಿರುವೆವು. ಪಾಠಶಾಲೆಗಳಿಗೆ ಹೋಗತಕ್ಕ ಜನರ ಸಂಖ್ಯೆಯನ್ನು ಇನ್ನು ೩ ವರ್ಷಗಳಲ್ಲಿ ದ್ವಿಗುಣವಾಗಿ ಮಾಡಲು ಸಾಧಕವಾಗುವಂತೆ ಧನವ್ಯಯಮಾಡಿ ಅದಕ್ಕೆ ತಕ್ಕೇರ್ಪಾಟುಗಳು ಮಾಡಲ್ಪಡುವುವೆಂದು ಮ||ಶಾಮರಾಯರು ಮೊದಲೇ ತಮ್ಮಗಳಿಗೆ ತಿಳಿಸಿರುವರು. ಬಾಲವಿದ್ಯಾಭಿವೃದ್ಧಿಗಾಗಿ ಕೆಲದಿನಗಳಕೆಳಗೆ ೩ ಲಕ್ಷ ರೂಪಾಯಿಗಳು ಶ್ರೀಮನ್ಮಹಾರಾಜರವರಿಂದ ದಯಪಾಲಿಸಲ್ಪಟ್ಟಿರುವುದು.

ನಮ್ಮಾದೇಶವು ಅಭಿವೃದ್ಧಿಯಲ್ಲಿದೆ; ಹೆಸರು ಚೆನ್ನಾಗಿದೆ; ಮತ್ತೂ ಉತ್ಪತ್ತಿಯು ಜನರ ಒಳ್ಳೆಯುಪಯೋಗಕ್ಕಾಗಿ ವಿನಿಯೋಗಿಸಲ್ಪಡುತ್ತಿದೆ. ಆದರೆ ನಾವು ಪೂರ್ವಕ್ಕಿಂತಲೂ ಉತ್ತಮವಾಗಿದ್ದರೂ ನಮ್ಮ ಜನರ ಸ್ಥಿತಿಯು ಮಾತ್ರ ತೃಪ್ತಿಕರವಾಗಿದೆಯೆಂದು ಹೇಳಲಿಕ್ಕಾಗುವುದಿಲ್ಲ. ಕೆಲ ವಾರಗಳ ಕೆಳಗೆ ಒಂದು ಸಭೆಯಲ್ಲಿ ಮೈಸೂರುಸೀಮೆಯ ಸ್ಥಿತಿಯನ್ನು ಕಾನಡಾ ಮತ್ತೂ ಆಸ್ಟ್ರೇಲಿಯಾದೇಶಗಳ (ಈ ಮೂರರ ಪ್ರಜಾಸಂಖ್ಯೆಯು ಪ್ರಾಯಶಃ ಒಂದೇಸಮವಾಗಿರುವುದರಿಂದ) ಸ್ಥಿತಿಯೊಡನೆ ಹೋಲಿಸಿದ್ದೆನು. ಆದರೆ ಆಸ್ಟ್ರೇಲಿಯಾದುತ್ಪನ್ನವು ಈ ಸೀಮೆಯ ೧೦ ರಷ್ಟೂ, ಕಾನಡಾದುದು ೨೦ ರಷ್ಟು ಹೆಚ್ಚಾಗಿರುವುದು. ಇಲ್ಲಿಯ ಋತುಮಾನದ ಅನಾನುಕೂಲ್ಯವೂ, ಜನರ ಮೌಢ್ಯವೂ ತೊಂದರೆಯ ಭಾಗಗಳಾಗಿವೆ. ಕಳೆದವರ್ಷದ ಮಳೆಯು ಬಹಳ ಅಸಮರ್ಪಕವಾಗಿದ್ದಿತು. ಈ ವರ್ಷವಾದರೊ ನಿಧಾನವಾಗಿರುವುದು. ಜನರು ಸಾಮಾನ್ಯವಾದ ಅನುಕೂಲತೆಯಿಂದಲೂ ಜೀವನದಿಂದಲೂ ತೃಪ್ತರಾಗಿರಬೇಕಾಗಿದೆ. ಇದರಿಂದ ಬಡವರು ಕ್ಷಾಮದಚಿಹ್ನೆಯು ತೋರಿದಕೂಡಲೇ ಕಷ್ಟಕ್ಕೆ ಗುರಿಯಾಗಬೇಕಾಗುತ್ತದೆ. ರೈತಜನರ ತೊಂದರೆಯ ಸ್ಥಿತಿಯನ್ನು ತಪ್ಪಿಸಲು ನೀರನ್ನು ಶೇಖರಿಸಲು ಯತ್ನಿಸಬೇಕು. ಸಂಸ್ಥಾನದ ಜನರಲ್ಲಿ ಶೇಕಡ ೨೦ರ ಮೇಲೆಯೇ ತಮ್ಮ ಜೀವನಕ್ಕೆ ಬೇಸಾಯವನ್ನೇ ನಂಬಿಕೊಂಡಿರುವರು. ಮತ್ತೂ ಋತುಮಾನದ ಗುಣವು ವ್ಯತ್ಯಸ್ತವಾಗಿರುವುದರಿಂದ ಅವರ ಬೇಸಾಯವು ಬಹಳ ಹೀನವಾಗಿರುವುದು. ನಿಷ್ಪ್ರಯೋಜನವಾಗಿ ಹೋಗುವ ನೀರು ದೊಡ್ಡ ಜಲಾಶಯಗಳಲ್ಲಿ ಶೇಖರಿಸಲ್ಪಟ್ಟಲ್ಲಿ ವರ್ಷದಲ್ಲೆಲ್ಲಾ ಬೆಳೆಗೆ ಅನುಕೂಲಿಸುವುದು. ಇಂತಹ ಕಲ್ಪನೆಗಳಿಂದ ಈ ದೇಶದ ಜನರಿಗೆ ಎಲ್ಲಾ ಋತುಗಳಲ್ಲೂ ಕೆಲಸವು ದೊರಕುವುದಲ್ಲದೆ ಕ್ಷಾಮಬಾಧೆಯಿಂದ ದೂರರಾಗಬಹುದು. ಸಣ್ಣ ಕೆರೆಗಳುದ್ಧರಣದವಿಚಾರದಲ್ಲಿ ಬಹುವಾಗಿ ಪ್ರಸ್ತಾಪಿಸಲ್ಪಟ್ಟಿತು. ಇವು ಜನರಿಗೆ ಅತ್ಯಂತ ಪ್ರಯೋಜನಕರವಾಗಿದ್ದರೂ ಇವನ್ನು ಸರಿಪಡಿಸಲು ಬಹಳ ಹಣವಾಗಬೇಕಾಗಿರುವುದರಿಂದ ಸರ್ಕಾರದವರಿಂದ ಮಾಡಲು ಸಾಧ್ಯವಿಲ್ಲವು. ಜನರು ಸ್ವಸಹಾಯದಿಂದ ಹಳೆಯ ಕೆರೆಗಳನ್ನು ಸರಿಪಡಿಸಿಕೊಂಡು ಹೊಸವನ್ನು ಕಟ್ಟುವುದಾದರೆ ಸರ್ಕಾರದವರು ಅವಶ್ಯಕವಿದ್ದಾಗ್ಗೆ ಒಂದು ಭಾಗದ ಹಣವನ್ನು ಸಹಾಯಮಾಡುವರು. ಜನರು ಬೇಸಾಯವಿಲ್ಲದವೇಳೆಯಲ್ಲಿ ಬೇರೆ ಕೆಲಸಗಳನ್ನು ಮಾಡಿ ತಮ್ಮ ಜೀವನವನ್ನು ಕಲ್ಪಿಸಿಕೊಳ್ಳುವಂತೆ ಮಾಡುವುದು ೨ ನೆಯುಪಾಯವು. ಮತ್ತೂ ಜನರು ತಮ್ಮ ಈಗಿನ ಕೀಳುಸ್ಥಿತಿಯು ಹೋಗಿ ಉತ್ತಮಸ್ಥಿತಿಗೆ ಬರುವ ಮಾರ್ಗವನ್ನು ತಿಳಿದುಕೊಳ್ಳಲನುಕೂಲಿಸುವಂತೆ ಅವರಿಗೆ ವಿದ್ಯೆಯನ್ನೂ ವ್ಯಾಪಾರರೀತಿಯನ್ನೂ ಕಲಿಸಿಕೊಡುವುದು ೪ ನೆಯುಪಾಯವು. ನಮ್ಮ ಸಂಪದಭ್ಯುದಯಸಮಾಜದ ಕಾರ್ಯವನ್ನು ಕೆಲವರು ಖಂಡಿಸುತ್ತಿರುವರು. ಇದನ್ನು ನಾಗರಿಕದೇಶದವರ ಉದಾಹರಣೆಯನ್ನನುಸರಿಸಿ ಮಾಡುತ್ತಿದ್ದೇವೆ. ನಮ್ಮುಪಾಯಗಳು ಇನ್ನೂ ಪುಷ್ಟವಾಗುವುದಕ್ಕೆ ಪೂರ್ವ ಅವುಗಳ ಫಲಿತಾಂಶವನ್ನು ಹೇಳಲಾಗುವುದಿಲ್ಲವು. ಒಂದು ಸಸಿಯು ಬೇರುಬಿಡುತ್ತಿರುವುದನ್ನು ತೋರಿಸಲು ಅದನ್ನು ಕೀಳಲಿಕ್ಕಾಗುವುದಿಲ್ಲವು. ಮುಖ್ಯವಾದ ಫಲಗಳನ್ನು ಹೊಂದಲು ಕೆಲ ವರ್ಷಗಳಾಗಬೇಕು. ಅದುಕಾರಣ, ಆವರೆಗೂ ಜನರು ಸಾವಧಾನಚಿತ್ತದಿಂದ ನಿರೀಕ್ಷಿಸಿ ನಮ್ಮ ಕಾರ್ಯಗಳಲ್ಲಿ ಸಹಾಯಕರಾಗಬೇಕೆಂದಪೇಕ್ಷಿಸುತ್ತೇವೆ. ಸಂಪದಭ್ಯುದಯ ಕಾರ್ಯಗಳಿಗಾಗಿ ಒಂದು ವರ್ಷದಲ್ಲಿ ೩ ಲಕ್ಷ ರೂ. ಗಳ ಪ್ರಕಾರ ೫ ವರ್ಷಕಾಲ ವ್ಯಯಮಾಡಬೇಕೆಂದಿರುವೆವು. ಜನರು ನಮ್ಮಂತೆಯೇ ಬರುವವರೆಗೂ ಯಾವ ಸ್ಥಿರವಾದ ಕಾರ್ಯವನ್ನೂ ಮಾಡಲಾಗುವುದಿಲ್ಲವಾದ ಪ್ರಯುಕ್ತ ಅವರನ್ನು ಬರಮಾಡಿಕೊಳ್ಳುವ ಪ್ರಯತ್ನದಿಂದ ದೇಶಕ್ಕಾವಶ್ಯಕವಾಗಿರುವಷ್ಟು ಕಾರ್ಯವನ್ನು ನಾವು ಮಾಡುತ್ತಿಲ್ಲವು. ನೀವೂ ಜನರ ಮುಂದಾಳುಗಳೂ ಜನರಿಗೆ ಬೋಧಿಸಿ, ಅವರಿಗೆ ಸಹಾಯಕರಾಗಿರುವುದಲ್ಲದೆ, ಸರ್ಕಾರದವರುದ್ದೇಶ ಕರ್ತವ್ಯ ಮತ್ತೂ ನೀತಿಗಳನ್ನು ಜನರಿಗೆ ಚೆನ್ನಾಗಿ ತಿಳಿಯಹೇಳಬೇಕೆಂದು ಇಚ್ಛಿಸುತ್ತೇವೆ. ಈ ವೇಳೆಯಲ್ಲಿ ಎಂತಹ ಆಕ್ಷೇಪವೂ ಇತರ ಮುಂದುವರಿದ ದೇಶಗಳಿಗೆ ಯುಕ್ತವಾಗಿದ್ದರೂ, ವೃದ್ಧಾಚಾರವನ್ನು ಕಟ್ಟಿಕೊಂಡಿರುವ ಈ ದೇಶೀಯರಲ್ಲಿ ಪೂರ್ವದಂತೆಯೇ ನಡೆಯುವ ಬುದ್ಧಿಯನ್ನು ದೃಢಪಡಿಸಿ ನಮ್ಮ ಸುಧಾರಣಾಕಾರ್ಯವನ್ನು ಕಠಿನವಾಗಿ ಮಾಡುವುದು. ಜನರಲ್ಲಿ ಸಂಪಾದನೆಯನ್ನು ಮಾಡುವ ಮತ್ತೂ ಕಂದಾಯದ ಭಾರವನ್ನು ಹೊರುವ ಶಕ್ತಿಯು ಹೆಚ್ಚಿದಂತೆ ಸಂಸ್ಥಾನದ ಆದಾಯವೂ ಹೆಚ್ಚುವುದು. ಇಂತಹ ಶಕ್ತಿಯನ್ನು ಹೆಚ್ಚಿಸುವುದಕ್ಕಾಗಿ ಜನರೂ, ಅವರ ಮುಖಂಡರೂ ತಮ್ಮುಪಯೋಗಕ್ಕಾಗಿ ಮಾಡಲ್ಪಟ್ಟಿರುವ ಕಾರ್ಯಗಳಿಗೆ ನೆರವಾಗಬೇಕಲ್ಲದೆ ನಮ್ಮ ಜನರಲ್ಲಿ ಕೈಗಾರಿಕೆ-ಮಿತವ್ಯಯ-ಸ್ವಸಹಾಯ ಮತ್ತೂ ಪರಸ್ಪರ ಸಹಾಯ-ಈ ಗುಣಗಳು ಅಭಿವೃದ್ಧಿಯಾಗುವಂತೆ ಪ್ರತಿಯೊಬ್ಬರೂ ಪ್ರಯತ್ನಿಸಬೇಕು.

ಪತ್ರವ್ಯವಹಾರ.

ತುರುವೆಕೆರೆ.

ಮಳೆಯಿಲ್ಲದೆ ಪೈರು ಒಣಗಿಹೋಗುತ್ತಾ ಇವೆ. ರೈತರೆ ಗಾಬರಿಯಿಂದ ಮಳೆಯನ್ನು ಇದಿರುನೋಡುತ್ತಾ ಇದ್ದಾರೆ. ಈ ಸಲ ಚಕ್ರವರ್ತಿಗಳವರ ವರ್ಧಂತಿಮಹೋತ್ಸವವು ಇಲ್ಲಿನ ಎ. ವಿ ಸ್ಕೂಲ್ ಕಟ್ಟಡದಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು. ನಮ್ಮ ಅಮಲ್ದಾರರು ಮಿ|| ಎ. ಸಿ. ಸೀತಾರಾಮಯ್ಯನವರು ಖುದ್ದು ನಿಂತು ಸ್ಕೂಲ್ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು [illegible] ವಿ.

ವಿ. ಸ್ಕೂಲ್ ಮೈದಾನದಲ್ಲಿ ಆಟಪಾಟಗಳನ್ನು ಏರ್ಪಡಿಸಿ, ಗೆದ್ದವರಿಗೆ ಅವರವರಯೋಗ್ಯತಾನುಸಾರಬಹುಮಾನಗಳನ್ನು [illegible]

ಸಿದ್ಧಲಿಂಗಶೆಟ್ಟರು ೨, ಬೂತನಕೆರೆ ಕೆಟ್ಟು ಸಿದ್ಧಲಿಂಗಶೆಟ್ಟರು ೨, ಯಜಮಾನರು ನಂಜುಂಡಶೆಟ್ಟರು ೧, ಸುಬ್ಬಣ್ಣನವರು ೨, [illegible]

ತ್ರೀಗಳನ್ನು ಕಳಿಸುವುದು ಅಗತ್ಯಕಾಣುವುದಿಲ್ಲ. ಹಾಗು ತಮ್ಮತಮ್ಮ ಪ್ರಾಂತ್ಯಗಳಲ್ಲಿ ಸಮಾಜಸುಧಾರಣೆ ಮಾಡಿದ ಮುಖ್ಯಸಂಗತಿಗಳನ್ನು ಬೇರೆಮನ್ನರು ತಮ್ಮ [illegible]

[illegible]

ಈಗತಾನೇ ಅಚ್ಚಾದ ಪುಸ್ತಕವು.

(ರೇವಣಸಿದ್ಧೇಶ್ವರಪುರಾಣಂ.)

[illegible]

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಜಾಹೀರನೋಟೀಸು

[illegible]

ಂಗಾಯತ ಎರಡುಬೋರ್ಡಿಂಗಗಳು ಆರಂಭವಾಗಿವೆ [illegible] ದರಿಂದ ತಮ್ಮ ಮಕ್ಕಳನ್ನು ಈಶಾಲೆಗೆ ಕಳುಹಿಸಬಿಚ್ಛೆ [illegible] ರೈತ ವ ವತನದಾರಗೌಡ ಕುಲಕರ್ಣಿಯವರು [illegible]

P. Gilbert Deputy, Director of Agriculture S. D. R. G. S. Dharwar.

ಶುದ್ಧ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

82

[illegible]

ಶ್ರೀಕರಕಸ್ತೂರಿಮಾತ್ರೆ

[illegible]

ಆಮೋದಿನಿ:— [illegible]

ಸುವಾದುವುದರಲ್ಲಿ ಶ್ರೇಷ್ಠವಾದುದೆಂದು ಆ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೧೪೦ ಮಾತ್ರೆ ೪ ಆಣೆ. ಇದಕ್ಕೆ ಒಂದು ಇನಾಮು. ವಿ.ಪಿ. ಛಾರ್ಜ ಪ್ರತ್ಯೇಕ.

ವಿಳಾಸ— ಬಿ. ವಿ. ಪಂಡಿತ್,
ಸದ್ವೈದ್ಯಶಾಲಾ, [illegible]

42

[illegible]

ವಿಳಾಸ— ಎಸ್. ಯು. ಎನ್. ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

ಶ್ರೀಜಗದ್ಗುರು

[illegible]

ಬ್ರಸೀಸವೇಶ್ವರ

[illegible]

12 ೫೦೦ ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದಸಾಲಾಮಿಸ್ರೀಮುರಬ್ಬ

ಈ ಮುರಬ್ಬಾವು "ಪಂಜಾಬ್ ಸಾಲಾಮಿಸ್ರಿ" ಅಲ್ಲವೆಂದು [illegible]

[illegible]

ಏಜಂಟ್:— [illegible]

ಊದುಬತ್ತಿಗಳು.

ವಿಧವಿಧವಾದ ಊದುಬತ್ತಿಗಳು ಸೇರು ೧ ಕ್ಕೆ ೨-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಜವಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪ ಟಿನ್ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು. ಟಿ. ಎಲ್. ಉಪಾಧ್ಯಾಯ,

12 ಸುಗಂಧಕಾರಿ, ಮೈಸೂರು.

ದಿ ಜನರಲ್ ಏಜನ್ಸಿ, ಮೈಸೂರು.

ಕಾದಂಬರಿಗಳು:— ಚಂಡಮಾರುತ ೦-೨-೦; ಚರಿತಾಮೃತಂ ೦-೫-೦; ರಾಜಕಥಾವಲ್ಲರಿ ೦-೫-೦; ಸೀಟರಿನಚರಿತ್ರೆ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೨-೬; ಸೀತೆ ೦-೫-೦; ಸಾಹಸಿಕ, ಕಲಾನಾಥ ೦-೮-೦; ಮಹಾಲಕ್ಷ್ಮಿ ೦-೨-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸತ್ಯಸಂಜೀವಿನಿ ೦-೮-೦; ಕೊಹಿನೂರು ೦-೧೨-೦; ಆನಂದನಂದ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೨-೦. 43

32 ಸಚಿತ್ರ ಶುಕಸಪ್ತತಿ ಕಥೆಗಳು ರೂ. ೧-೮-೦ (೫೧೨ ಪುಟ) ಟಪಾಲು ಹಾಸಲು ೪ ಆಣೆ. ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ ರೂ ೧-೮-೦. (೫೩೬ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ! ಮಾನ್ಯತೆಯು ಬೇಕಾದರೆ, ವಾಗ್ವೈಖರಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಬೇಕೆಂಬ ಇಚ್ಛೆಯಿದ್ದರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯಲ್ಲಾಸೆಯಿದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೬೦ ಪುಟಗಳಿಂದ ಕೂಡಿದ ೬೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ ೧-೪-೦ ಟಪಾಲ್ ಹಾಸಲು ೩ ಆಣೆ. ಈಗಲೇ ಬರೆ ನಿಮ್ಮಲ್ಲಿ ಇನ್ನೂ ಅನೇಕಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

ಕನ್ನಡ ಇಂಡಿಯನ್ ಪೆನಲ್ ಕೋಡ್

ಇದರಿಂದ ಮೈಸೂರ್, ಮದ್ರಾಸ್, ಬೊಂಬಾಯಿಜಿಲ್ಲಾ ಕನ್ನಡಭಾಷಾ ವಾಚಕಮಹಾಶಯರಿಗೆ ತಿಳಿಸುವದೇನೆಂದರೆ-ಶ್ರೀಮದಿಂಡಿಯಾ ಗೌರ್ನರ್ ಜನರಲ್‌ರವರ ಅನುಮತಿ ಪ್ರಕಾರ ಸರ್ ೧೮೬೦ನೇ ಇಸವಿಯಲ್ಲಿ ಮಂಜೂರಾದ "ಇಂಡಿಯನ್ ಪೆನಲ್ ಕೋಡ್" ಎಂಬ ಆಕ್ಟನ್ನು ಈಗ ಅನೇಕ ಜಡ್ಜಿಗಳ ಟಿಪ್ಪಣಿಗಳೊಡನೆಯೂ, ಅಮೆಂಡ್‌ಮೆಂಟುಗಳೊಡನೆಯೂ ಅಂದವಾದ ಕಾಗದದಲ್ಲಿ ಸ್ಪುಟವಾದ ಅಕ್ಷರಗಳಿಂದ ಮುದ್ರಣವಾಗಿ ಮಾರಾಟಕ್ಕೆ ಸಿದ್ಧವಾಗಿದೆ. ಈ ಆಕ್ಟಿನಲ್ಲಿ ಪ್ರತಿ ಸೆಕ್ಷನಿಗೂ ಫಿರ್ಯಾದಿಗಳೂ, ಅಪರಾಧಿಗಳೂ, ಪೋಲೀಸ್ ಅಧಿಕಾರಿಗಳೂ, ಮ್ಯಾಜಿಸ್ಟ್ರೇಟರುಗಳೂ ನಡಿಸಬೇಕಾದ ಆಚರಣೆಗಳೆಂದರೆ:-ನಡೆಯುವ ಮೊಕದ್ದಮೆಯನ್ನು ಯಾವ ಕೋರ್ಟಿನಲ್ಲಿ ವಿಚಾರಣೆ ಮಾಡಬೇಕು? ವಾರಂಟಿಲ್ಲದೆ ಹಿಡಿಯಬಹುದೇ, ಹಿಡಿಯಕೂಡದೇ? ಸಮನ್ ಕೊಡತಕ್ಕದ್ದೇ, ವಾರಂಟು ಕೊಡತಕ್ಕದ್ದೇ? ಜಾಮೀನ್ ತೆಗೆದುಕೊಂಡು ಬಿಡಬಹುದೇ? ರಾಜಿಯಾಗಬಹುದೇ, ರಾಜಿಯಾಗತಕ್ಕದ್ದಲ್ಲವೇ? ಎಂಬ ತಪ್ಸೀಲುಗಳನ್ನು ವಿವರಿಸಲ್ಪಟ್ಟಿರುವುದು. ಈ ಪುಸ್ತಕವು ಸರ್ಕಾರಿ ಅಧಿಕಾರಿಗಳಿಗೂ, ಪೋಲೀಸಿನವರಿಗೂ, ಪಟೇಲ್ ಶ್ಯಾನುಭೋಗರುಗಳಿಗೂ, ವರ್ತಕರುಗಳಿಗೂ, ಜಮೀನ್‌ದಾರರುಗಳಿಗೂ ಇತರ ಸಮಸ್ತ ಕಸಬುದಾರರಿಗೂ, ಖುಷ್‌ಬಾಷ್ ಜನಗಳಿಗೂ ಉಪಯೋಗಕರವಾದದ್ದು.

ಈ ಪುಸ್ತಕದಲ್ಲಿ ಚೋರಿ, ಕಳವು, ದಗಾಯತಿ, ಅತಿಕ್ರಮಪ್ರವೇಶ, ಸ್ತ್ರೀಗೆ ಮಾನಭಂಗಪಡಿಸುವದು, ಸ್ತ್ರೀಯರನ್ನು ದುರಾಚಾರಕ್ಕೆಳೆಯುವದು, ಅಸಾಮಿ ಚೋರಿ, ಗಂಡನು ಹೆಂಡತಿ ೧೨ ವರುಷಗಳಿಗೆ ಕಡಮೆ ವಯಸ್ಸಿನವಳಾಗಿರುವಾಗ್ಗೆ ಸ್ತ್ರೀಸಂಗ ಮಾಡಬಹುದೇ? ಮುಂತಾದ ಮೊಕದ್ದಮೆಗಳಲ್ಲಿ ಜಡ್ಜಿಗಳು ಕೊಟ್ಟಿರತಕ್ಕ ಅಭಿಪ್ರಾಯಗಳು ಸೂಚಿಸಲ್ಪಟ್ಟಿರುವವು. ಕನ್ನಡದಲ್ಲಿ ಇದುವರೆಗೆ ಇಂಥಾ ಪುಸ್ತಕವು ಇನ್ನೆಲ್ಲಿಯೂ ಇಲ್ಲವು.

ಕ್ರಯ ಪ್ರತಿ ೧ ಕ್ಕೆ ೨ ರೂಪಾಯಿ; ಟಪಾಲ್ ಛಾರ್ಜ್ ೪ ಆಣೆ.

ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ... ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ. ಪುಸ್ತಕಗಳ ಕ್ರಯ ಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು.

49 ನಮ್ಮ ವಿಳಾಸ– ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಸಪ್ಲೈಯರ್, ಬೆಂಗಳೂರು ಸಿಟಿ.

ಸಾಕ್ಷಿದ ವೆಂಕಟರಾಮ ... ಔಷಧಗಳು

10

ಗೋಕಾಮಯುಚರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲಿ



ಸಂದುಗಳ ನೋವು ಮೈ ಕಾಲು ಊತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುಟ್ಟುಶೂಲಿ, ಮಕ್ಕಳ ಎಳವು, ಜ್ವರ, ನ ... ರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ರೋಗಕ್ಕೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾಕ್ಕೆ ಮದ್ದು)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ವ್ಯಾಧಿಯು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಕೂಡಲೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಬೇಕಾದೀತೆಂದು ಒಂದೇ ಬುದ್ದಿಯು ನಿಮ್ಮಲ್ಲಿರಲಿ. ಮನೆಗೆ ... ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತವಿದೆಂಬುದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುದ್ದಿಯ ಬೆಲೆ ೧ ...

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ. ಮೈಸೂರು

ನ್ಯಾಯದರ್ಪಣ.

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯೂ, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಫ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸ್ ... ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆ... ಚೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ವಗೈರೆ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯೂ ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರುತ್ತವೆ.

ಬೆಲೆ ರೂ. 1—8—0. ವಿ. ಪಿ. ಮೂಲ್ಯ 1—12—0

ಎಂ. ಎಸ್. ನಂಜಪ್ಪನವರು,

ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ) ... ಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾ... ತಲೆ ನೋಯುವುದು, ತಲೆಯಲ್ಲಿ ನೀ... ತುಂಬಿ ಧಿಮ್ಮೆನ್ನುವುದು, ಈ ಯಾವು... ಗಿದರೂ ತಪ್ಪದೆ ಗುಣವಾಗುತ್ತದೆ. ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ... ಟಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರ... ರೆ ವಾಸನೆಯು ಘುಮಘುಮಿಸುತ್ತದೆ. ೧ ಡಬ್ಬಿಯ ಬೆಲೆ ... ಆಣೆ. ೧ ಡಜನ್ ಡಬ್ಬಿಗೆ ೨-೨-೦

ಉತ್ತಮವಾದ ನಶ್ಯದಪುಡಿ.

ಘಾಟು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತದೆ. ಮೂಗಿನ... ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣ... ನಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾ... ತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿ... ೧೦ ಆಣೆ ೫ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು ನಾಲಿಗೆ ಅರೋಚಕಗಳು ಹೋಗುವೆ. ನೀವುಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸು... ವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,

ಗೋಪನಸೆಟ್ಟಿಪುರ, ಹನೂರು ಪೋಸ್ಟ್

21 ಕೊಳ್ಳೇಗಾಲದ ತಾಲ್ಲೂಕು.

೧೯೧೪ ನೆಯ ಇಸವಿ ಜುಲೈ ತಾ॥ ೧೩ರಿಂದ ೧೯೧೪ನೆಯ ಜುಲೈ ತಾ॥ ೧೯ರವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ ನೆಯ ಆನಂದನಾಮ ಸಂ॥ ದ ಆಷಾಢ ಶು॥ ಷಷ್ಠಿಯಿಂದ ಆಷಾಢ ಬ॥ ಏಕಾದಶಿವರೆಗಿನ ಪಂಚಾಂಗ.

ತಾ॥	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ತೇದಿ ಮಿಥು
13	ಸೋ	ಷ	36-57	ಪೂಭಾ	6-46	30
14	[1] ಮಂ	ಸಪ್ತ	41-22	ಉಭಾ	12-25	31
15	[2] ಬುಧ	ಅ	46-25	ರೇವತಿ	18-42	32
16	[3] ಗುರು	ನವ	51-32	ಅಶ್ವಿನಿ	25-16	1
17	[4] ಶುಕ್ರ	ದಶ	56-15	ಭರಣಿ	31-45	2
18	ಶನಿ	ಏಕಾ	60-	ಕೃತ್ತಿ	37-37	3
19	[5] ಭಾ	ಏಕಾ	0-5	ರೋಹಿ	42-40	4

(1) ಮೇಲುಕೋಟೆಯಲ್ಲಿ ಕೃಷ್ಣರಾಜಮುಡೀ ಉತ್ಸವಃ, (2) ಶ್ರೀಚಾಮುಂಡೇಶ್ವರೀ ಜನ್ಮೋತ್ಸವಃ, (3) ದಕ್ಷಿಣಾಯನಪುಣ್ಯಕಾಲಃ, (4) ಆಡಿಶುಕ್ರವಾರ ಮೇಲುಕೋಟೆಯಲ್ಲಿ ಕೃಷ್ಣರಾಜಮುಡೀರಥಃ, (5) ಸರ್ವೈಕಾದಶೀ,

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED M NO 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ವಾರ್ಷಿಕ ಚಂದಾ ೧-೦-೦ } ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈ ಘನಪಥಕೃತಾವತಾರಾ ಪಕ್ಷಪಕ್ಷನಿಹೃತ್ತಮೋಹರಾಜೀಯಾತ್, ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಕೋಲ ನಾಕಲಿತಸಾದ್ಗುಣ್ಯಾಲವಾಲಂಮಲಂ| ನಿಪಾತೀತ ಯಶಃಪ್ರತಾಪವಿಪುಲಂಸದ್ವೃತ್ತಮಾಲಾಕುಲಂ | ಶ್ರೇಯಂಬೆತ್ತಿಳಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ| { ಅಂಚೆವೆಚ್ಚ ಸೇರಿ ೧-೧೪-೦

REGISTERED M NO 124

ಸಂಪುಟ ೨೩) ಮೈಸೂರ್ ಸ್ಟಾರ್ ಸರ್ ೧೯೧೪ ನೆಯ ಇಸವಿ ಜುಲೈ ತಾರೀಖು ೨೦ ನೆಯ ಸೋಮವಾರ. (ಸಂಚಿಕೆ ೨೯

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಸುಂದರವಾದ ಹೊಸನಮೂನೆ ದೊಡ್ಡ ಘಡಿಯಾರಗಳು.

25

ಪ್ರಖ್ಯಾತಿಹೊಂದಿದ ಅಮೆರಿಕಾದೇಶದ ಅನ್‌ಸೋನಿಯಾ ಕಂಪೆನಿಯವರಿಂದ ತಯಾರಿಸಲ್ಪಟ್ಟ ಖಾತ್ರಿಯಾದ ಮತ್ತು ಬಹಳದಿವಸ ಬಾಳಿಕೆಬರತಕ್ಕಂಥ ಕ್ಲಾಕ್‌ಗಳು ಇವೇ ಹೊರ್ತು ಬೇರೆ ಅಲ್ಲಾ.



ಈಪಕ್ಕದ ಚಿತ್ರದಲ್ಲಿ ಕಾಣಿಸಿರುವ ಗೋಡೆಗೆ ತಗುಲಿಸುವ ಘಂಟಿ, ಅರ್ಧಘಂಟಿ ಹೊಡೆಯುವ ಘಡಿಯಾರ ಒಂದಕ್ಕೆ ೧೨-೮-೦ ರೂ. ಘಂಟಿ ಅರ್ಧಘಂಟಿ ಹೊಡೆದು ಅಲಾರಂ ಸಹಾ ಬರತಕ್ಕ ಘಡಿಯಾರ ಒಂದಕ್ಕೆ ೧೩-೪-೦ ರೂ. ಈ ಘಡಿಯಾರಗಳು ಮಜಬೂತಾದ ಯಂತ್ರೋಪಕರಣಗಳಿಂದಲೂ ಮೇಲ್ಭಾಗದಲ್ಲಿ ನಕಾಸಿನ ಕೆತ್ತನೆಯಿಂದಲೂ ನೋಡುವುದಕ್ಕೆ ಅಂದವಾಗಿಯೂ ಬಹಳ ದಿವಸ ಬಾಳಿಕೆ ಬರತಕ್ಕವುಗಳಾಗಿವೆ. ಈ ಘಡಿಯಾರಕ್ಕೆ ಆರ್ಡರ್ ಮಾಡತಕ್ಕವರು ೫ ರೂಪಾಯಿ ಅಡ್ವಾನ್ಸ್ ಕಳಿಸಬೇಕು. ಬಾಕೀ ಮೊಬಲಿಗ್ಗೆ ರೈಲ್ವೆ ರಶೀದಿಯನ್ನು ವಿ. ಪಿ. ಮಾಡಲಾಗುತ್ತೆ. ರೈಲ್ವೆ ಛಾರ್ಜ್ ಅಲಾಯಿದಾ

ಸಿಕ್ಕಿದ ಹಾರ್ಮೋನಿಯಂಗಳನ್ನು ಕ್ರಯಕ್ಕೆ ತೆಗೆದುಕೊಂಡು ನಿಮ್ಮ ಹಣವನ್ನು ಯಾಕೆ ವ್ಯರ್ಥಮಾಡಿಕೊಳ್ಳುವಿರಿ.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ "ಮೋಹನ್‌ಫ್ಲೂಟ್ಸ್" (M. Mohen flute) ಮತ್ತು "ಮೋಸ್ಲೆಂಫ್ಲೂಟ್" (Moslem flute) ಹಾರ್ಮೋನಿಯಂಗಳನ್ನು ನಮ್ಮಿಂದ ತರಿಸಿಕೊಂಡು ಪರೀಕ್ಷಿಸಿರಿ ಈ ಹಾರ್ಮೋನಿಯಂಗಳು ಅನೇಕದಿವಸ ಬಾಳಿಕೆಬರುವಂತೆ ಬಹಳ ಮಜಬೂತಾದ ಸಾಮಾನುಗಳಿಂದ ಪ್ರಖ್ಯಾತರಾದ ಕಾರೀಗಾರರಿಂದ ತಯಾರಿಸಲ್ಪಟ್ಟಿವೆ. ಒಂದು ಸಾರಿ ನಮ್ಮಿಂದ ತರಿಸಿದರೆ ಇದರಲ್ಲಿ ಇರುವ ಬಂದೋಬಸ್ತು ಬಾಳ್ವಿಕೆ ಸಹ ತಮಗೇ ವ್ಯಕ್ತವಾಗುತ್ತೆ.

ನಂ ೧ ಒಂದು ಸೆಟ್‌ರೀಡ್ಸ್ ಉಳ್ಳದ್ದು (Moslem flute) ಹಾರ್ಮೋನಿಯಂ ೧ ಕ್ಕೆ ೩೫-೦-೦ ರೂ.

ನಂ ೨. ಒಂದು ಸೆಟ್‌ರೀಡ್ಸ್ ಉಳ್ಳದ್ದು (M. Mohen flute) ಹಾರ್ಮೋನಿಯಂ ೧ ಕ್ಕೆ ೩೨-೮-೦ ರೂ.

ನಂ ೩. ಡಿಟ್ಟೋ ನಮೂನೆಯಲ್ಲಿ ಅತ್ಯುತ್ತಮವಾದದ್ದು (M. Mohen flute) ೧ ಕ್ಕೆ ೪೦-೮-೦ ರೂ.

ನಂ ೪. ಡಬ್ಬಲ್‌ರೀಡ್ಸ್ ಉಳ್ಳದ್ದು (Moslem flute) ಹಾರ್ಮೋನಿಯಂ ೧ ಕ್ಕೆ ೪೩-೮-೦ ರೂ.

ನಂ ೫. ಡಬ್ಬಲ್‌ರೀಡ್ಸ್ ಉಳ್ಳದ್ದು (M. Mohen flute) ಹಾರ್ಮೋನಿಯಂ ೧ ಕ್ಕೆ ೫೦-೮-೦ ರೂ.

ಈ ಹಾರ್ಮೋನಿಯಂಗಳ ಪೈಕಿ ಯಾವದಕ್ಕೆ ಆರ್ಡರ್ ಕೊಡ್ಬರೂ ಕೂಡ ೫ ರೂಪಾಯಿ ಅಡ್ವಾನ್ಸ್ ಕಳಿಸಬೇಕು ಬಾಕೀಮೊಬಲಿಗ್ಗೆ ರೈಲ್ವೇರಶೀದಿಯನ್ನು ವಿ. ಪಿ ಮೂಲ್ಯ ರವಾನಿಸುತ್ತೇವೆ.

ನೆಪ್ಚೂನ್‌ಪೌಂಟನ್‌ಪೆನ್‌ಗಳು. NEPTUNE FOUNTAIN PENS·

ಈ ಫೌಂಟನ್‌ಪೆನ್‌ಗಳು ಅದರ ಖರೀದಿಗೆ ತಕ್ಕಂತೆ ೪ ವರುಷಗಳಲ್ಲಾಗಾಯ್ತು ಹತ್ತು ವರುಷಗಳವರಿಗೆ ಬಾಳಿಕೆ ಬರತಕ್ಕವುಗಳಾಗಿವೆ.

ನಂ ೨೦೦. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಕ್ರಯ ೧ ಕ್ಕೆ ೧-೧೪-೦.

ನಂ ೨೦೫ ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಉತ್ತಮವಾದದ್ದು ಕ್ರಯ ೧ ಕ್ಕೆ ೨-೧೦-೦

ನಂ ೨೧೦. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಅತ್ಯುತ್ತಮವಾದದ್ದು ಕ್ರಯ ೧ ಕ್ಕೆ ೪-೨-೦.

ಮೇಲ್ಕಂಡ ಯಾವನಮೂನೆ ಫೌಂಟನ್‌ಪೆನ್‌ಗಳನ್ನು ತರಿಸಿಕೊಂಡರೂ ಅದರ ಜೊತೆಯಲ್ಲಿ ಪೆನ್ ಇಡತಕ್ಕ ಪೆಟ್ಟಿಗೆ. ಜೇಬಿಗೆ ತಗಲಿಸತಕ್ಕ ಕ್ಲಿಪ್ ೧. ಶಾಯಿಹಾಕುವ ಗಾಜಿನ ಟ್ಯೂಬ್ ೧. ಶಾಯಿತುಂಬುವವಿಧ ಪ್ರಿಂಟಾಗಿರತಕ್ಕ ಚೀಟಿ ೧ ನ್ನೂ ಸಹ ರವಾನಿಸಲಾಗುತ್ತೆ

ರಖಂವಾರ್ ವಾಚ್ ಸರಪಣಿಗಳು.



ಈ ಪಕ್ಕದ ಚಿತ್ರದಲ್ಲಿ ಕಾಣಿಸಿರುವ ನಮೂನೆ ಅಚ್ಚಬೆಳ್ಳಿಯ ವಾಚ್ ಸರಪಣಿ ಯಾವ ರಖಂ ಬೇಕಾದರೂ ಕ್ರಯ ೧ಕ್ಕೆ ೩-೪-೦ ಮೇಲ್ಕಂಡ ರಖಂವಿನ್ನಲ್ಲಿ ನಿಕ್ಕಲ್‌ಬೆಳ್ಳಿ ಸರಪಣಿ ಕ್ರಯ ೧ ಕ್ಕೆ ೦-೧೨-೦.

ಅಚ್ಚಬೆಳ್ಳೀ ಕೊರಳ ಸರಪಣಿ ಬಹಳ ನಾಜೋಕಾಗಿ ತಯಾರಿಸಿದ್ದು ೧ ಕ್ಕೆ ೧-೪-೦.

೧೮ ಕ್ಯಾರಟ್ಟು ಚಿನ್ನದ ಸರಪಣಿ ೧ ಕ್ಕೆ ೫-೮-೦.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧-೦-೦
ವರವಾದಿಗಜಾಂಕುಶತಾರಾವಳಿ	೦-೮-೦
ಶಿವಪೂಜಾವಿಧಿಃ	೦-೮-೦
ಚಾರುಶೀಲೆಚರಿತ್ರೆ	೦-೫-೦
ಸಟೀಕ ನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೬-೦
ವಿವೇಕಮಂಜರಿ [೨ನೆಯ ಭಾಗ]	೦-೩-೦
ವ್ರತಪಂಚಕ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆಯವೆಚ್ಚ ಬೇರೆ.

ಬೋಧಪುಸ್ತಕಗಳು.

144

ಬಸವರಾಜವಿಜಯಂ.— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ಬೆಲೆ ೧-೮-೦ ದ್ವಿತೀಯ ಮುದ್ರಣ ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಮಂತ್ರಗೋಪ್ಯ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡ ಗ್ರಂಥ.

ವೀರಶೈವ ಧರ್ಮಶಿರೋಮಣಿಃ.— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦ ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶಿವಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸೂಕ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ ವರ್ಷದ ಚಂದಾ ೨-೮-೦,

ಎಂ. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕಮಂಡಲಿ, ಮೈಸೂರು.

ಪ್ರಕಟನೆ.

ಪ್ರಿಂಟಿಂಗಾಫೀಸಿನವರು ಅಗತ್ಯವಾಗಿ ಗಮನಿಸತಕ್ಕದು.

ನಮ್ಮಲ್ಲಿ ಈ ಸ್ಟಾರ್‌ಪತ್ರಿಕೆಯ ೧, ೨, ೩, ೬, ೭ ಮತ್ತೂ ೮ನೇ ಪುಟಗಳಲ್ಲುಪಯೋಗಿಸಲ್ಪಟ್ಟಿರುವ ಪೈಕ ಅಥವಾ ೧೨ ಪಾಯಿಂಟ್ ಅಕ್ಷರಗಳ ಮತ್ತೂ ಈ ಪ್ರಕಟನೆಗುಪಯೋಗಿಸಲ್ಪಟ್ಟಿರುವ ಬೂರ್ಜೈಸ್ ಮಿನಿಯನ್ ಅಥವಾ ೧೪ ಪಾಯಿಂಟ್ ಅಕ್ಷರಗಳ ಮ್ಯಾಟ್ರಿಕ್ಸುಗಳೂ, ಅವುಗಳ ಮೌಲ್ಡುಗಳೂ ಇವನ್ನು ಎರಕವೆರೆಯುವ ಯಂತ್ರವೂ ಅದಕ್ಕೆ ಸಂಬಂಧಪಟ್ಟ ಲೈನ್ ಗೇಜ್ ಪೇಪರ್‌ಗೇಜ್ ಹೈಟ್‌ಗೇಜ್ ಡ್ರೆಸ್ಸಿಂಗ್ ಟೇಬಲ್ ಕರ್ನಿಂಗ್ ಮಿಷನ್ನು ಮುಂತಾದ ಸಾಮಾಗ್ರಿಗಳೂ ಸೂಪರ್‌ರಾಯಲ್ ಸೈಜನ್ನು ಪ್ರಿಂಟ್ ಮಾಡುವ ಸಿಲಿಂಡರ್ ಮಿಷನ್ನು ಸಹ ಮಾರಾಟಕ್ಕೆ ಸಿದ್ಧವಾಗಿವೆ. ಈ ಮಿಷನ್ನಿನಲ್ಲೇ ಈ ಸ್ಟಾರ್‌ಪತ್ರಿಕೆಯು ಪ್ರಿಂಟುಮಾಡಲ್ಪಡುತ್ತಿರುವುದು. ಎರಕವೆರೆಯುವ ಮಿಷನ್ನು ಬಹಳ ಸ್ವಲ್ಪ ಕೆಲಸವನ್ನು ಮಾತ್ರ ಮಾಡಿ ಹೊಸದಾಗಿಯೇ ಇರುವುದು. ಇಷ್ಟವುಳ್ಳವರು ಇವುಗಳ ಬೆಲೆ ಮೊದಲಾದವನ್ನು ನಮಗೆ ಬರೆದು ತಿಳಿದುಕೊಳ್ಳಬಹುದಲ್ಲದೆ ಪ್ರತ್ಯಕ್ಷವಲ್ಲಿ ಬಂದು ನೋಡಬಹುದು.

ವೈ. ವಿರೂಪಾಕ್ಷಯ್ಯ,
ಪ್ರೊಪ್ರೈಟರ್
ಕರ್ನಾಟಕ ಪ್ರೆಸ್, ಮೈಸೂರು.

ಕಿತ್ತೂರು.

ತಾ|| ೩-೭-೧೪ ನೇ ದಿವಸ ರಾ|| ಸಾ|| ಕಲೋಳಿಗಿ ಮಾಮಲೇದಾರ ತಾ|| ಸಂಪಗಾವ ಇವರು ಇಲ್ಲಿಯ ಕನ್ನಡ ೧ನೇ ನಂಬರ ಶಾಲೆಗೆ ಬಂದಾಗ, ಇಲ್ಲಿಯ ವಿದ್ಯಾರ್ಥಿಗಳು ಅವರ ಪ್ರೀತ್ಯರ್ಥವಾಗಿ ಧ್ರುವಚರಿತ್ರೆಯ ಪ್ರಯೋಗವನ್ನು ಪಾತ್ರಾನುರೂಪವಾಗಿ ಮಾಡಿತೋರಿಸಿದರು. ಈ ಪ್ರಯೋಗವನ್ನು ನೋಡಲಿಕ್ಕೆ ಇಲ್ಲಿಯ ವೆ|| ಫೌಜದಾರಸಾಹೇಬರೂ, ಸ್ಕೂಲ ಕಮಿಟಿಯವರೂ, ಪುರಪ್ರಮುಖರೂ, ವೆ|| ಭೀಮರಾವ ದೇವದಾಂತಿ ತಾಲೂಕ ಲೋ. ಬೋ. ಮೆಂಬರ, ಅಣ್ಣಾರಾವ ಕುಲಕರಣಿ ಬೆಳವಾಡಿ ತಾಲೂಕ ಲೋ. ಬೋ. ಮೆಂಬರ ಮೊದಲಾದ ಮುಖಂಡರೂ ದಯಮಾಡಿಸಿದ್ದರು. ಗ್ರಾಮಸ್ಥರು ಮೊದಲೇ ಹಾಜರಿದ್ದರು. ಪ್ರಯೋಗವು ಪ್ರೇಕ್ಷಣೀಯವಾಗಿದ್ದಿತು. ಪ್ರಯೋಗವನ್ನು ಕಂಡು ರಾ|| ಸಾ|| ಮಾಮಲೇದಾರ ಮೊದಲಾದವರು ವಿದ್ಯಾರ್ಥಿಗಳ ಪ್ರಯೋಗದ ಉಪಕರಣಕ್ಕಾಗಿ ಇನಾಮು ಕೊಟ್ಟವರ ಹೆಸರುಗಳು— ರಾ|| ಸಾ|| ವಿರೂಪಾಕ್ಷಪ್ಪಾ ಅಣ್ಣಾ ಕಲೋಳಿಗಿ ಮಾಮಲೇದಾರ ತಾ|| ಸಂಪಗಾವ ೧೦ ರೂ. ವೆ|| ವೆಂಕಟೇಶಬಾಪೂಜಿ ಬಂಡ ಪೋಲೀಸ್ ಸಬ್‌ಇನ್ಸ್‌ಪೆಕ್ಟರ ಕಿತ್ತೂರ ೫ರೂ. ವೆ|| ರಾ|| ಅಣ್ಣಾರಾವ ಕುಲಕರಣಿ ಬೆಳವಡಿ ತಾಲೂಕ ಲೋ. ಬೋ. ಮೆಂಬರ ೩ ರೂ. ವೆ|| ರಾ|| ಚನ್ನಬಸಪ್ಪಾ ಗುರುಸಿದ್ಧಪ್ಪಾ ಹಂಚಿನಮನೆ ಸಾ|| ಮಲ್ಲಾಪುರ ೧೦ ರೂ. ಈ ಪ್ರಕಾರ ೨೮ ರೂ.ಗಳು ರೋಕಬಂದಿರುವವು. ಇದಲ್ಲದೆ ರಾ|| ರಾ|| ಚನವೀರಪ್ಪಾ ಬಾವಿ ಇವರು ಶಾಲೆಗೆ ಒಂದು ಪಿಯಾನೋಪೆಟ್ಟಿಗೆಯನ್ನು ತರಿಸಲಿಕ್ಕೆ ಹೆಡ್‌ಮಾಸ್ತರರ ಕೈಯಲ್ಲಿ ೫೦ ರೂ. ಕೊಡುತ್ತೇವೆಂದು ರಾ|| ಸಾ|| ಮಾಮಲೇದಾರರ ಸಮಕ್ಷಮಪಚನ ಕೊಟ್ಟಪ್ರಕಾರ ಸದರೀ ರೂಪಾಯಿ ರೋಖಕೊಟ್ಟರು. ಸದರೀ ವಿದ್ಯಾರ್ಥಿಗಳು ಮಾಡಿದ ಪ್ರಯೋಗವನ್ನು ಕಂಡು ಸಂತೋಷವನ್ನು ಹೊಂದಿ ರಾವಸಾಹೇಬ ಮಾಮಲೇದಾರರೂ ಅಣ್ಣಾರಾವ ಬೆಳವಾಡಿ ಇವರೂ ತಮ್ಮ ಆನಂದೋದ್ಗಾರಗಳನ್ನು ವ್ಯಾಖ್ಯಾನರೂಪವಾಗಿ ವ್ಯಕ್ತಗೊಳಿಸಿದರು. ಉದಾರಮತಿಯಿಂದ ಸಂಭಾವನೆಕೊಟ್ಟು ವಿದ್ಯಾರ್ಥಿಗಳಿಗೆ ಉತ್ತೇಜನವಿತ್ತದ್ದು ಅವರಿಗೆ ಭೂಷಣವೇ ಸರಿ. ಎಲ್ಲರೂ ಈ ಮಹಾರಾಯರ ಅನುಕರಣಮಾಡಲೆಂದು ಹಾರೈಸುವ ತಮ್ಮ ಚಂದಾದಾರ.

ತುಮಕೂರು ತಾ|| ಹೊನ್ನುಡಿಕೆ.

ಕಳೆದ ಏಪ್ರಿಲ್ ತಾ|| ೨೧ರಲ್ಲು ತುಂಕೂರು ತಾ|| ಅಮಲ್ದಾರ್ ಎಂ. ಎಸ್. ರಾಮಚಂದ್ರರಾವ್ ಎಸ್ಕ್ವಯರ್ ಬಿ. ಎ. ಯವರು ಈ ಗ್ರಾಮಕ್ಕೆ ದಯಮಾಡಿಸಿ ಗ|| ಬಾಯ್ಸ್ ಸ್ಕೂಲ್ ಕಟ್ಟಡದಲ್ಲಿ ಗ್ರಾಮದ ಸುಮಾರು ೮೦ ಜನಗಳನ್ನು ಸಭೆ ಸೇರಿಸಿ ಪತ್ರಿಕೆಗಳ ಉಪಯೋಗವನ್ನು ವಿವರಿಸಿ ತಿಳಿಸಿ ಕೊಟ್ಟುದರ ಮೇಲೆ ವಾಚಕಶಾಲೆಯನ್ನು ಏರ್ಪಡಿಸುವುದು ಅತ್ಯವಶ್ಯವೆಂದು ಸಭಿಕರು ತೀರ್ಮಾನಿಸಿ, ಅದಕ್ಕೆ ಸುಮಾರು ೫೦ ರೂಪಾಯಿಗಳವರೆಗೆ ಚಂದಾಪಟ್ಟಿಯನ್ನು ತಯಾರಿಸಿದರು. [illegible] ಈ ಶಾಲೆಗೆ [illegible] ರಾ|| [illegible] ಎಸ್. ಸೀ [illegible] ಯವ [illegible] ನೆಂಬ [illegible] ಈ ಶಾಲೆಯ ಬ್ರಾರಂ [illegible] ಕಟ್ಟ [illegible] ನಡೆಸಲ್ಪಟ್ಟಿತು. [illegible] ಅಲಂಕರಿಸಲ್ಪಟ್ಟಿತ್ತು, [illegible] ಮನುಷ್ಯರು [illegible] ಗ್ರಾಮಗಳ ಪಟೇಲ [illegible] ಮುಖಂಡರುಗಳಿಂದ [illegible] ನೆರೆದಿತು. ಅಮಲ್ದಾರರವರು [illegible] ಅಲಂಕರಿಸಿದ ಕೂಡಲೆ [illegible] ರೀಡಿಂಗ್‌ರೂಮಿನ [illegible] ಹೆಡ್ಮಾಸ್ಟರವರು ವಾಚಕಶಾಲೆಯ ವಿಷಯವಾಗಿ ಉಪನ್ಯಾಸಿಸಿದರು. ಈ ಉಪನ್ಯಾಸವು [illegible] ವಾಗಿತ್ತು. ಅನಂತರ ಅಧ್ಯಕ್ಷರು ಈ ವಿಷಯವಾಗಿ [illegible] ನಡಿಸಿದರು. ಆ ಮೇಲೆ ಶಾರದಾ ಪೂಜೆಯೂ, ಮಹಾರಾಜರವರ ಶ್ರೇಯಃಪ್ರಾರ್ಥನೆಯೂ ನಡಿಸಲ್ಪಟ್ಟವು. ಸಭಿಕರಿಗೆ ಗಂಧ ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟು ಜಯಧ್ವನಿಯಿಂದ ಸಭೆ ಮುಕ್ತಾಯವಾಯಿತು. ಜನಗಳ ಅಜ್ಞಾನವನ್ನು ಹೋಗಲಾಡಿಸುವ ರೀಡಿಂಗ್‌ರೂಮನ್ನು ನಿರ್ಮಿಸಿದ ನಮ್ಮ ಅಮಲ್ದಾರರವರಿಗೆ ಭಗವಂತನು ಮಂಗಳವನ್ನುಂಟುಮಾಡಲೆಂದು ಬೇಡುತ್ತೇನೆ. ಪ್ರತ್ಯಕ್ಷದರ್ಶಿ.

ಹಂಪಸಾಗರದ ವರ್ತಮಾನ.

ಬಳ್ಳಾರಿ ಜಿಲ್ಲಾ ಹೂವಿನಹಡಗಲಿ ತಾಲೂಕಿನಲ್ಲಿ ಹಂಪಸಾಗರ ಗ್ರಾಮವು ಸುಮಾರು ೩ ಸಾವಿರ ನಿವಾಸಿಗಳುಳ್ಳ ದೊಡ್ಡ ಗ್ರಾಮವಾಗಿರುತ್ತದೆ. ಇಲ್ಲಿ ಹರವನಹಳ್ಳಿ ರೇಂಜಿಗೆ ಒಳಪಟ್ಟ ಕೊಟ್ಟೂರಪೇಟೆ ತಾಲೂಕು ಬೋರ್ಡಿನವರ ಮ್ಯಾನೇಜಿಮೆಂಟಿನ ಕೆಳಗೆ ಒಂದು ಬೋರ್ಡ್ ಎಲಿಮೆಂಟರಿ ಸ್ಕೂಲು ಸ್ಥಾಪಿಸಲ್ಪಟ್ಟಿದೆ. ಸದರಿ ಸ್ಕೂಲು ಈಗ ೫-೬ ವತ್ಸರಗಳ ಕೆಳಗೆ ಅಷ್ಟು ವೃದ್ಧಿಯಲ್ಲಿ ಇರಲಿಲ್ಲ. ಸುಮಾರು ೩೦-೫೦ ಬಾಲಕರಿದ್ದು ಒಬ್ಬರೇ ಉಪಾಧ್ಯಾಯರಿದ್ದರು. ಈಗ ಶಾಲೆಯ ಮುಖ್ಯೋಪಾಧ್ಯಾಯರಾಗಿ ಇಟ್ಟಿಗಿಮಠದ ಶಿವಯ್ಯನವರು ಇರುತ್ತಾರೆ. ಇವರು ನಾರ್ಮಲ್ ಟ್ರೇನಿಂಗಿನಲ್ಲಿ ತೇರ್ಗಡೆಹೊಂದಿ ಪೂರ್ಣಸರ್ಟಿಫಿಕೇಟು ಪಡೆದಿರುತ್ತಾರೆ. ಇವರು ಈಗ್ರಾಮದ ಜನರಿಗೆ ವಿದ್ಯಾಭಿವೃದ್ಧಿಯಲ್ಲಿ ಬಹಳ ಉತ್ತೇಜನಕೊಟ್ಟು ತಾವೂ, ಕೇವಲಶ್ರಮ ತೆಗೆದುಕೊಂಡು ಶಾಲೆಯಲ್ಲಿ ಬಾಲಕರ ಸಂಖ್ಯೆಯನ್ನು ಬಹಳ ಹೆಚ್ಚಿಸಿರುತ್ತಾರೆ. ಈಗ ಸುಮಾರು ಪಾಠಶಾಲೆಯಲ್ಲಿ ೧೨೦ ಬಾಲಕರಿಗಿಂತ ಹೆಚ್ಚು ಇರುತ್ತಾರೆ. ಕೆಲ ಬಾಲಕಿಯರು ಕೂಡಾ ಇರುತ್ತಾರೆ. ಈಗ ಒಳ್ಳೆಯ ವೃದ್ಧಿಯಲ್ಲಿರುತ್ತದೆ. ನಾಲ್ಕು ಜನ ಉಪಾಧ್ಯಾಯರು ಇರುತ್ತಾರೆ. ಆದಾಗ್ಯೂ ಬಾಲಕರ ಸ್ಟಾಂಡರ್ಡುಗಳಿಗೆ ತಕ್ಕಷ್ಟು ಉಪಾಧ್ಯಾಯರ ಸಂಖ್ಯೆ ಸಾಲದು. ಶಾಲೆಯ ಮೇಲ್ವಿಚಾರಣೆಯ ಅಧಿಕಾರಿಗಳು ಈ ವಿಷಯದಲ್ಲಿ ಜಾಗ್ರತೆಯಾಗಿ ಗಮನಕೊಟ್ಟು ಇನ್ನೊಬ್ಬ ಉಪಾಧ್ಯಾಯರನ್ನು ನೇಮಿಸುವುದರಲ್ಲಿ ಮನಕೊಡಬೇಕೆಂದು ನನ್ನ ಸೂಚನೆ ಇರುತ್ತದೆ. ಟೀಚರ್ಸ್ ಅಸೋಷಿಯೇಷನ್ನಿಗೆ ಇದು ಒಂದು ಮುಖ್ಯ ಸೆಂಟರ್ ಆಗಿರುತ್ತದೆ. ಆದಕಾರಣ ಇದೇ ಜೂನ್‌ತಿಂಗಳು ೨೨ ನೆ ತೇದಿಯಲ್ಲಿ ಉಪಾಧ್ಯಾಯರ ಸಂಘ ಕೂಡುವದು ಇದ್ದು, ಆ ಪ್ರಕಾರ ಇಂದಿನದಿನ ಮಧ್ಯಾಹ್ನ ಸಭೆಕೂಡಿತ್ತು. ಸದರಿ ಸಭೆಯಕೆಲಸ ತೀರಿದನಂತರ ಇಂದಿನಶುಭದಿನವೇ ಶ್ರೀಮನ್‌ಮಹಾರಾಜ ಇಂಡಿಯಾ ಚಕ್ರವರ್ತಿಯವರಾದ ಪಂಚಮಜಾರ್ಜ್‌ರವರವರ್ಷವರ್ಧಂತಿಯುತ್ಸವವಾಗಿ ಇದ್ದಪ್ರಯುಕ್ತ ಈ ಶಾಲೆಯಮುಖ್ಯೋಪಾಧ್ಯಾಯರಾದ ಇಟ್ಟಿಗಿಮಠದ ಶಿವಯ್ಯನವರು ತಮ್ಮ ವಾಸಸ್ಥಾನದಿಂದ ಎಲ್ಲಾ ಬಾಲಕರನ್ನು ಕೂಡಿಸಿಕೊಂಡು ಶ್ರೀಮಜ್ಜಾರ್ಜಮಹಾರಾಜರವರ ಧ್ವಜಪತಾಕೆಗಳನ್ನು ಹಿಡಿಸಿಕೊಂಡು ಜಯಘೋಷವನ್ನು ಮಾಡುತ್ತಾ ಶಾಲೆಯ ಬಾಗಿಲಿನಲ್ಲಿ ಸ್ಥಾಪಿಸಿದರು. ಮತ್ತು ಪುರದ ಮುಖ್ಯಜನರನ್ನು ಕರಿಸಿಕೊಂಡು ಇದುವರೆಗೆ ಶ್ರೀಮನ್ಮಹಾರಾಜ ಚಕ್ರವರ್ತಿಯವರ ಪಟವನ್ನು ಇಟ್ಟು ಅಲಂಕರಿಸಲ್ಪಟ್ಟ ಶಾಲೆಯ ಹಾಲಿನಲ್ಲಿ ಎಲ್ಲರೂ ಪ್ರವೇಶಮಾಡಿದರು. ಅಗ್ಗಿಬನ್ನಿಕಲ್ಲುಗ್ರಾಮದ ನಿವಾಸಿಗಳಾದ ವೆ|| ರಾ|| ವೀರಾಪುರದ ಪರಮೇಶ್ವರಪ್ಪನವರು ಕೂಡಾ ಬಂದಿದ್ದರು. ಇವರಿಗೆ ಅಗ್ರಾಸನವು ಕೊಡಲ್ಪಟ್ಟಿತು. ತರುವಾಯ ಅಗ್ರಾಸನಪತಿಯ ಅನುಮತಿಪ್ರಕಾರ ಶ್ರೀಮನ್‌ಚಕ್ರವರ್ತಿಯವರ ಜನ್ಮದಿನದ ಉತ್ಸಾಹವು ಒಂದರಹಿಂದೊಂದು ಜರುಗಿಸಲ್ಪಟ್ಟಿತು. ಈ ಶಾಲೆಯ ಪ್ರಥಮೋಪಾಧ್ಯಾಯರಾದ ಮುದಕವಿಮಠದಯ್ಯನವರು ಶ್ರೀಮಚ್ಚಕ್ರವರ್ತಿಯವರ ಪ್ರಜಾವಾತ್ಸಲ್ಯ ರಾಜ್ಯಪರಿಪಾಲನನೀತಿಗಳನ್ನು ಕುರಿತು ಮತ್ತು ಸಕಲಜನರ ವಿದ್ಯಾಭ್ಯಾಸಕ್ಕೋಸ್ಕರ ಬಹು ಉದಾರಮನಸಿನಿಂದ ಮಾಡುವ ದೊಡ್ಡ ಖರ್ಚುಗಳು ಕುರಿತನ್ನು ಉಪನ್ಯಾಸ ಮಾಡಿದರು. ತದನಂತರ ಮಹಾರಾಜ್ಞಿ ಚಕ್ರವರ್ತಿಯವರ ಪರವಾದ ಮಂಗಳದ ಹಾಡುಗಳನ್ನು ಬಾಲಕರಿಂದ ಹಾಡಿಸಿ ಬಾಲಕರಿಗೆ ಫಲಾಹಾರ ಮಿಠಾಯಿಗಳನ್ನು ಹಂಚಿದರು. ಆಮೇಲೆ ಈ ಶಾಲೆಗೆ ಸರಿಯಾದ ಘಡಿಯಾರವು ಇಲ್ಲದೆ ಇರುವದು ಕೊರತೆಯೆಂದು ಅಗ್ರಾಸನಪತಿಗಳಾದ ಶ್ರೀಮಂತ ವೀರಾಪುರದ ಪರಮೇಶ್ವರಪ್ಪನವರು ತಿಳಿದು ಆ ಕೂಡಲೆ ಈ ಪಾಠಶಾಲೆಗಾಗಿ ತಮ್ಮ ಸ್ವಂತ ಖರ್ಚಿನಿಂದ ಸುಮಾರು ೧೫ ರೂಪಾಯಿಗಳ ಕಿಮ್ಮತ್ತು ಬಾಳುವ ಒಂದು ದೊಡ್ಡ ಘಡಿಯಾರವನ್ನು ತರಿಸಿಕೊಡುವದಾಗಿ ಸಭೆಯಲ್ಲಿ ವಾಗ್ದಾನಮಾಡಿ ಸಭೆಮುಗಿಸಿದರು. ಮರುದಿನ ತಮ್ಮ ವಾಗ್ದಾನಪ್ರಕಾರ ದೊಡ್ಡ ಘಡಿಯಾರವನ್ನು ತರಿಸಿಕೊಟ್ಟು ಸ್ಕೂಲು ಹಾಲಿನಲ್ಲಿ ಇಡಿಸಿರುತ್ತಾರೆ. ವಿದ್ಯಾಭ್ಯಾಸಕ್ಕಾಗಿ ಉತ್ತೇಜನಕೊಟ್ಟ ಈ ದೊಡ್ಡಮಹನೀಯರಿಗೆ ಭಗವಂತನು ಆಯುರಾರೋಗ್ಯ ಅಶ್ವರ್ಯ ಸಂತಾನ ಅಭಿವೃದ್ಧಿಗಳಂ ಮಾಡಲೆಂದು ಪ್ರಾರ್ಥನೆಗೈಯುತ್ತಾ ನನ್ನ ಲೇಖನವನ್ನು ಮುಗಿಸುತ್ತೇನೆ. ಪ್ರೇಕ್ಷಕ.

ಚಿತ್ರದುರ್ಗದ ಶ್ರೀಮನ್ನಿರಂಜನ ಜಗದ್ಗುರು ಮುರುಘರಾಜೇಂದ್ರಮಹಾಸ್ವಾಮಿಗಳವರ ಶ್ರೀಮದ್ವೀರಶೈವಾನಂದಾಶ್ರಮ, ತಿಪಟೂರು.

ಈ ಆಶ್ರಮದಲ್ಲಿ ತಾರೀಖು ೧೮-೬-೧೪ ನೇ ಗುರುವಾರ ಮಧ್ಯಾಹ್ನ ೧|| ಘಂಟೆ (ಕನ್ಯಾಲಗ್ನ) ಸಮಯದೊಳಗೆ ತಿಪಟೂರು ತಾಲ್ಲೂಕು ನೊಣವಿನಕೆರೆ ಶ್ರೀಮತ್ಸೋಮೆಕಟ್ಟೆ ಶಿವಾನುಭವ ಚರಮೂರ್ತಿಗಳಾದ ಶ್ರೀಮತ್ಕರಿವೃಷಭದೇಶಿಕೇಂದ್ರಮಹಾಸ್ವಾಮಿಗಳವರ ಹಸ್ತಕಮಲದಿಂದ ಸಂಸ್ಕೃತಪಾಠಶಾಲಾ ಸ್ಥಾಪನಕಾರ್ಯವು ಅತಿವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಈ ಮಹೋತ್ಸವಕಾರ್ಯಕ್ಕಾಗಿ ದಾವಣಗೆರೆ ವಿರಕ್ತಮಠದ ಶ್ರೀಮನ್ನಿರಂಜನಮೂರ್ತಿಗಳಾದ ಮೃತ್ಯುಂಜಯಸ್ವಾಮಿಗಳವರು, ಮತ್ತು ದಾವಣಗೆರೆ ಧನುರ್ಧಾರಿಪತ್ರಿಕಾಕರ್ತರಾದ ವೆ|| ಎಂ. ಮಂಜಪ್ಪನವರು, ಬೆಂಗಳೂರು ತುಮಕೂರು ಮೊದಲಾದ ಡಿಸ್ಟ್ರಿಕ್ಟಿನ ಅನೇಕ ದೊಡ್ಡದೊಡ್ಡ ಪುರಪ್ರಮುಖರೆಲ್ಲರೂ ದಯಮಾಡಿಸಿದ್ದರು. ನೊಣವಿನಕೆರೆ ಶ್ರೀ|| ಗಳವರು ತಿಪಟೂರು ವಗೈರೆ ಪ್ರಾಂತ್ಯದ ವೀರಶೈವರ ಪ್ರಾರ್ಥನೆಯನ್ನು ಕೈಕೊಂಡು, ನೀಲಕಂಠಾಶ್ರಮದ ಆವರಣದೊಳಗೆ ನಿರ್ಮಿತವಾಗಿದ್ದ ಅಲಂಕಾರವಾದ ಭವನಕ್ಕೆ ಮಂಗಳವಾದ್ಯರವದೊಡನೆ ಬಿಜಯಮಾಡಿಸಿ ಸುಮುಹೂರ್ತದಲ್ಲಿ ಪಾಠಶಾಲೆಯ ಕವಾಟವಂ ವಿಸ್ತರಿಸಿ, ಭದ್ರಪೀಠದಲ್ಲಿ ಮಂಡಿಸಿದ ಕೂಡಲೆ ಮಾಗಡಿಯಿಂದ ಬಂದಿದ್ದ ವೇ|| ವೀರಪ್ಪಶಾಸ್ತ್ರಿಗಳೇ ಮುಂತಾದ ಅಧ್ಯಾಪಕರಿಂದ ಸ್ವಸ್ತಿಪೂರಿತವಾದ ವೇದಘೋಷವು ನಡೆಯಿತು. ಅನಂತರ ಶ್ರೀ|| ಗಳವರು ಮಾತೃಭಾಷೆಯಾದ ಸಂಸ್ಕೃತವಿದ್ಯೆಯು ಇಹಸುಖಕ್ಕೂ ಪರಮೋಕ್ಷಾಲಂಬವೆನಿಸುವ ಬ್ರಹ್ಮಸಾಕ್ಷಾತ್ಕಾರಕ್ಕೂ ಸಹ ಮೂಲಾಧಾರವಾದುದೆಂತಲೂ, ಇಂಥ ವಿದ್ಯಾಬಲದಿಂದಲೇ ಹಿಂದಿನ ಮಹನೀಯರು ದೇವತಾಪ್ರಸನ್ನತ್ವದಿಂದ ಚಿರಸುಖಸಾಮ್ರಾಜ್ಯವನ್ನನುಭವಿಸಿದರೆಂತಲೂ, ಈ ವಿದ್ಯೆಯು ವಿನಾ ಸ್ವಮತಾಚರಣೆ, ಸ್ವಸ್ವರೂಪಜ್ಞಾನ, ಇವುಗಳು ಸಿದ್ಧಿಯಾಗದೆ ಮತಾಭಿವೃದ್ಧಿಗೆ ಮಾರ್ಗವಿಲ್ಲವೆಂತಲೂ ಅಪ್ಪಣೆಮಾಡಿ, ಇದರ ಪುರೋವೃದ್ಧಿಸೂಚನೆಗಾಗಿ ೫೦೦ ರೂಪಾಯಿಗಳನ್ನು ಅನುಗ್ರಹಿಸಿದರು ಈ ಪ್ರಕರಣವು ಅಶೇಷವೀರಶೈವಸಮುದಾಯಕ್ಕೆ ಪರಮಾನಂದವನ್ನೂ, ಉಳಿದ ಮಹನೀಯರುಗಳಿಗೆ ಮೇಲ್ಪಂಕ್ತಿಯನ್ನೂ ಉಂಟುಮಾಡಿತು. ಈ ಆಶ್ರಮದ ಕಾರ್ಯಗಳಿಗೆ ತಮ್ಮ ತನುಮನೋಧನಾದಿಗಳನ್ನು ಸಮರ್ಪಿಸಿ, ಕಂಕಣಬದ್ಧರಾಗಿ ನಿಂತಿರುವ ಈ ಊರು ಮ|| ಗಳಾದ ಗು|| ಕೊಟ್ಟೂರಯ್ಯನವರು, ಮ್ಯಾನೇಜರ್ ಬಸಪ್ಪನವರು, [illegible] ರುವುಕೊಂಡಿ ಚನ್ನಬಸಪ್ಪನವರು, ಪಲ್ಲಾಗಟ್ಟ ಸಣ್ಣ ಚನ್ನವೀರಪ್ಪನವರು, ಷಾವು ಬಸವಣ್ಣನವರು, ಇನ್ನೂ ಮುಂತಾದ ಈ ಊರು ವೀರಶೈವರು, ಮತ್ತು ಮಾಗಡಿ ಲಾಯರ್ ನಂಜುಂಡಪ್ಪನವರು, ಹೊನ್ನುಡಿಕೆ ಯಜಮಾನ ಹೊನ್ನಶೆಟ್ಟರವರ ರುದ್ರಯ್ಯನವರು, ಮೊದಲಾದ ಪರಸ್ಥಳದ ಮಹನೀಯರುಗಳು ನೊಣವಿನಕೆರೆ ಶ್ರೀ|| ಗಳವರ ಶಾಂತಿದಾಂತಿ ಔದಾರ್ಯ ಇವುಗಳನ್ನು ಕೊಂಡಾಡಿ, ಈ ಮಹಾಸ್ವಾಮಿಗಳವರು ಯಾವಾಗಲೂ ಈ ಆಶ್ರಮದ ಸಕಲಕಾರ್ಯಗಳಿಗೆ ಸಹಾಯಭೂತರಾಗಿರಬೇಕೆಂದು ಪ್ರಾರ್ಥಿಸಿ, ಶ್ರೀ|| ಗಳವರ ಆಶೀರ್ವಾದವನ್ನು ಕೈಕೊಂಡನಂತರ, ಪುಣ್ಯಾಹ ನಾಂದ್ಯಾದಿ ಪ್ರಮಥಗಣಪೂಜೆ ಅಗ್ನಿಕಾರ್ಯ ಮತ್ತು ಶ್ರೀಗುರುಪೂಜಾ ಮುಂತಾದ ಸತ್ಕರ್ಮಗಳು ವಿಧ್ಯುಕ್ತವಾಗಿ ವೀರಪ್ಪಶಾಸ್ತ್ರಿಗಳವರಿಂದ ನೆರವೇರಿಸಲ್ಪಟ್ಟು, ಕೂಡಲೆ ಹಾಜರಿದ್ದ ವೀರಶೈವಬಾಲಕರಿಗೆ ಅಧ್ಯಾಪಕರಿಂದ ಸಾಹಿತ್ಯಪಾಠವು ಬೋಧಿಸಲಾಯ್ತು. ಆಮೇಲೆ ಅಶೇಷ ವೀರಶೈವಭಕ್ತಮಾಹೇಶ್ವರಸಮುದಾಯಕ್ಕೆ ಭೋಜನಾದಿಗಳು ನಡೆಸಲ್ಪಟ್ಟವು. ಆ ಕಾಲಕ್ಕೆ ಸರಿಯಾಗಿ ಬೆಟ್ಟದಪುರದ ಮಠದ ಚರಮೂರ್ತಿಗಳಾದ ಶ್ರೀ|| ಚಿಕ್ಕವೀರ ದೇಶಿಕೇಂದ್ರ ಮಹಾಸ್ವಾಮಿಗಳವರು ಆಶೀರ್ವಾದರೂಪವಾಗಿ ಕೆಲವು ಮೊಬಲಗನ್ನು ಮಣಿಯಾರ್ಡರ ಮೂಲಕ ಕಳುಹಿಸಿಕೊಟ್ಟಿದ್ದುದಲ್ಲದೆ ಈ ಆಶ್ರಮದ ಅಭಿವೃದ್ಧಿವಿಷಯವಾಗಿ ತಮಗಿರುವ ಕುತೂಹಲವನ್ನು ಪತ್ರಿಕಾಮೂಲಕ ಅಪ್ಪಣೆಕೊಡಿಸಿರುತ್ತಾರಲ್ಲದೆ ಮುಂದೆ ಈ ಪಾಠಶಾಲೆಯ ಮೂಲಧನಕ್ಕಾಗಿ ದ್ರವ್ಯಶೇಖರಗೊಳಿಸುವ ವಿಷಯದಲ್ಲಿ ಕಂಕಣಬದ್ಧರಾಗಿರುತ್ತಾರೆ. ಮಾರನೇದಿವಸ (ತಾ|| ೧೯-೬-೧೪ ನೆ ಶುಕ್ರವಾರ) ಈ ಪಾಠಶಾಲೆಯ ಮುಂಭಾಗದಲ್ಲಿ ಅಲಂಕರಿಸಲ್ಪಟ್ಟಿದ್ದ ಚಪ್ಪರದಲ್ಲಿ ಸ್ಥಳಾಧಿಕಾರಿಗಳೇ ಮುಂತಾದ ಸಕಲಮತಸ್ಥರೊಂದಿಗೆ ಕೂಡಿಕೊಂಡಿದ್ದ ವೀರಶೈವಸಭೆಯು ಜಗತ್ತಿಗೆ ಐಕಮತ್ಯವನ್ನು ತೋರಿಸುವ ಸ್ಥಿತಿಯಲ್ಲಿತ್ತು. ಈ ದಿವಸದ ಸಭೆಯಲ್ಲಿ ಪಂಡಿತವರ್ಯರಾದ ವೇದಮೂರ್ತಿಗಳಾದ ಅಜ್ಜಂಪುರದ ಹಿರೀಮಠದ ಉಮಾಪತಿಶಾಸ್ತ್ರಿಗಳವರು ಸಂಸ್ಕೃತವಿದ್ಯಾವಿಷಯದಲ್ಲಿ ಮಾಡಿದ ಭಾಷಣವು ಸರ್ವರ ಮನಸ್ಸಿಗೂ ಅತ್ಯಾನಂದವನ್ನುಂಟುಮಾಡಿತು. ಇವರ ಪಾಂಡಿತ್ಯವು ಕೇವಲ ಅಪೂರ್ವವಾದದ್ದು. ಧನುರ್ಧಾರಿಪತ್ರಿಕಾ ಎಡಿಟರವರು ಮತ್ತು ಹೊನ್ನುಡಿಕೆಯ ಯಜಮಾನ ರುದ್ರಯ್ಯನವರು ಸಹ ಅನೇಕವಿಷಯಗಳನ್ನು ಕುರಿತು ಮಾಡಿದ ಭಾಷಣಗಳು ಕೇವಲ ಮಂಜುಳವಾಗಿದ್ದವು. ಅನಂತರ ಬ್ರಿಟಿಷ್‌ಸಾಮ್ರಾಜ್ಯದ ಸರ್ಕಾರದವರಿಗೂ, ಮತ್ತು ನಮ್ಮನ್ನಾಳುವ ಮೈಸೂರು ಶ್ರೀಮನ್ಮಹಾರಾಜ ಕೃಷ್ಣರಾಜಒಡೆಯರ್ ಬಹದ್ದೂರರವರಿಗೂ ಸಹ ಶ್ರೇಯಃಪ್ರಾರ್ಥನೆಯನ್ನು ಮಾಡಿದನಂತರ ಫಲ, ಪುಷ್ಪ, ಗಂಧ, ತಾಂಬೂಲಾದಿಗಳಿಂದ ಸಭಿಕರನ್ನು ತೃಪ್ತಿಪಡಿಸಿ ಜಯರವದೊಡನೆ ಸಭೆಯು ಮುಕ್ತಾಯ ಹೊಂದಿತು.

ತಾ|| ೨೦-೬-೧೪ ನೇ ಇಸವಿ, ತಿಪಟೂರು. } S. L. Nunjundappa, ಸೆಕ್ರಟರಿ

ನೊಣ.

ಈ ಪ್ರಾಣಿಯಲ್ಲಿ ೬-೭ ಜಾತಿಗಳಿವೆ. ಆದರೆ ಭರತಖಂಡದಲ್ಲಿ ಮುಖ್ಯವಾಗಿಯೂ ವಿಶೇಷವಾಗಿಯೂ ಇರತಕ್ಕವು ಯಾವುವೆಂದರೆ—ಜನರು ವಾಸಮಾಡತಕ್ಕ ಕಡೆಗಳಲ್ಲಿ ವಾಸಮಾಡತಕ್ಕವುಗಳೇ ಆಗಿರುತ್ತವೆ. ಸಾಧಾರಣವಾಗಿ ಮನೆಗಳಲ್ಲಿ ಹಗಲೆಲ್ಲಾ ಹಾರಾಡುವ ನೊಣಗಳ ಗುರುತನ್ನು ಎಲ್ಲರೂ ಬಲ್ಲರು. ಇದನ್ನು ಇಂಗ್ಲಿಷಿನಲ್ಲಿ "Musca domestica Sub Sp determinata walker" ಎಂದು ಕರೆಯುವರು. ಇದರ ವರ್ಣನೆಯೇನೆಂದರೆ— ಮೇಲೆಲ್ಲಾ ಬಿಳಿಯಬಣ್ಣದ ಸಣ್ಣಸಣ್ಣ ಕೂದಲು ತುಂಬಿರುವುದು. ಶರೀರದ ಬಣ್ಣವು ಕಪ್ಪು. ತಲೆಯು ಬಿಳಿಯಬಣ್ಣದ್ದು. ಮುಖವು ಅಗಲವಾದುದು. ತೆರೆದು ಚಾಚಿರುವ ಕಣ್ಣುಗಳುಳ್ಳದು. ಸ್ಪರ್ಶೇಂದ್ರಿಯವು (feeter) ಕಪ್ಪುಬಣ್ಣದ್ದು. ಎದೆಯ ಮೇಲೆ ನಾಲ್ಕು ಕಪ್ಪು ಪಟ್ಟೆಗಳಿರುವುದು. ಹೊಟ್ಟೆಯ ಇಕ್ಕೆಲದಲ್ಲೂ ಹಳದಿಯ ಮಿಶ್ರವಾದ ಬೂದು ಮಚ್ಚೆಯಿರುವುದು. ಇದರ ರೆಕ್ಕೆಯಲ್ಲಿ ರಕ್ತನಾಳವು ಒಂದು ದೊಡ್ಡ ಕೋಣಕ್ಕೆ ಬಗ್ಗಿರುವುದು. ಕಾಲುಗಳು ಕಪ್ಪು.

ಈ ಪ್ರಾಣಿಯು ಮುಖ್ಯವಾಗಿ ಸಸ್ಯಾದಿಗಳನ್ನು ಭಕ್ಷಿಸುವುದು. ಮಾಂಸಾಹಾರಿಯಲ್ಲ. ಕಸ, ಚಿಂದಿಕಾಗದ, ಕೊಳೆಬಟ್ಟೆ, ತೇವವಾಗಿರುವ ಆಹಾರಪದಾರ್ಥ, ಕದ, ಕಿಟಗಿ, ಕತ್ತಲೆಯಜಾಗ, ಶೇಕವಾಗಿರುವ ಕೋಣೆ ಇವೆಲ್ಲಕ್ಕಿಂತಲೂ ವಿಗಿಲಾಗಿ ಪಾಯಖಾನೆಯ ಸ್ಥಳ ಈ ಎಡೆಗಳು ಇದಕ್ಕೆ ಪ್ರಿಯವಾದ ವಾಸಸ್ಥಲವು. ಈ ಪ್ರಾಣಿಯು ಚಳಿಯನ್ನು ಸಹಿಸುವುದಿಲ್ಲ. ಚಳಿಗಾಲದಲ್ಲಿ ಇವುಗಳಲ್ಲಿ ಕೆಲವು ಶೇಕವಾಗಿರುವ ಸ್ಥಳವನ್ನು ಸೇರಿಕೊಂಡಿದ್ದು ಮೊಟ್ಟೆಗಳನ್ನಿಟ್ಟು, ಅನಂತರ ಸಾಯುವುವು. ಉಳಿದುವುಗಳೆಲ್ಲವೂ ಚಳಿಯನ್ನು ತಡೆಯದೆ ಪ್ರಾಣಬಿಡುವುವು. ಈ ಮೊಟ್ಟೆಗಳೆಲ್ಲವೂ ೧೫-೨೦ ದಿನಗಳಲ್ಲಿ ನೊಣಗಳ ಸ್ವರೂಪವನ್ನು ಪಡೆದು ತಂಡತಂಡವಾಗಿ ಸಾವಿರಗಟ್ಟಲೆ ಹೊರಡುವುವು [ದೃಷ್ಟಾಂತ:—ಒಂದು ವಿಸ್ತಾರವಾದ ಗಾಜಿನ ಅಥವಾ ಇನ್ನಾವುದಾದರೊಂದು ಪಾತ್ರೆಯಲ್ಲಿ ಒಂದು ಚೂರುರೊಟ್ಟಿಯನ್ನು ೨-೩ ನೊಣಗಳನ್ನು ಇಟ್ಟು ಒಂದು ಬಟ್ಟೆಯಿಂದ ಆಪಾತ್ರೆಯ ಬಾಯನ್ನು ಮುಚ್ಚಿಟ್ಟದ್ದರೆ, ೧೫-೨೦ ದಿನಗಳಲ್ಲಿ ೫೦೦-೬೦೦ ನೊಣಗಳು ಕಾಣಬರುವುವು] ಪ್ರತಿ ಬೇಸಗೆಯ ಕಾಲದಲ್ಲೂ ಇವುಗಳು ಕೋಟ್ಯಂತರವಾಗಿ ಹಾರಾಡುತ್ತಿರುವುವು. ಇದರ ಅಭಿವೃದ್ಧಿಗೆ ಜಲಮಲ ವಿಸರ್ಜನೆಯ ಸ್ಥಳಗಳು, ಕಸವನ್ನು ಬಿಸಾಡುವ ಸ್ಥಳ, ತಿಪ್ಪೆಯಗುಂಡಿ, ಕುದುರೆಲಾಯ, ದನಗಳ ಕೊಟ್ಟಿಗೆ, ರೋಗಿಗಳನ್ನು ಇಟ್ಟಿರುವ ಸ್ಥಳ, ಮತ್ತು ಊಟದ ಮನೆ ಇವುಗಳು ಸಹಾಯಕವಾದ ಸ್ಥಳಗಳಾಗಿರುತ್ತವೆ.

ಈ ಪ್ರಾಣಿಗಳಿಂದ ಮನುಷ್ಯನಿಗೆ ಸಂಭವಿಸುವ ಅನರ್ಥದ ಬಗೆ—ಹೇಗೆಂದರೆ ಈ ಜಾತಿಯ ನೊಣಗಳು ಕಡಿಯುವುದಿಲ್ಲ. ಇವುಗಳ ಕಾಲು, ರೆಕ್ಕೆ, ಬಾಯಿ ಇವುಗಳಮೇಲೆ ಒಂದುವಿಧದ ಅಂಟಿರುವುದು. ಅದುಕಾರಣ ಇವು ಯಾವ ಪ್ರದೇಶ ಅಥವಾ ಪದಾರ್ಥಗಳಮೇಲೆ ಕುಳಿತುಕೊಳ್ಳುವುವೋ ಅಲ್ಲಿರುವ ಕಶ್ಮಲದ ಅಣುಗಳು ಆ ಅಂಟಿನ ಮೂಲಕ ಅವುಗಳ ದೇಹದಲ್ಲಿ ತಗುಲಿರುವುವು. ಅಂಥ ನೊಣಗಳು ಮನುಷ್ಯರ ಕೈ, ಬಾಯಿಮೇಲಾಗಲಿ, ಆಹಾರಪದಾರ್ಥಗಳಮೇಲಾಗಲಿ ಕುಳಿತುಕೊಂಡಾಗ, ಅವುಗಳಲ್ಲಿದ್ದ ಅಣುಗಳು ಮನುಷ್ಯರಿಗೆ ವ್ಯಾಪಿಸುವುವು. ಈ ನೊಣಗಳು ಸಾಂಕ್ರಾಮಿಕ ಜಾಡ್ಯಗಳ ಹರಡುವಿಕೆಗೆ ಅತ್ಯಂತ ಸಹಾಯಕಾರಿಗಳು. ವಿಷಮಶೀತಜ್ವರ, ಕಾಲರಾ, ಪ್ಲೇಗು, ಮೊದಲಾದ ಸಾಂಕ್ರಾಮಿಕರೋಗಗಳು ಪ್ರಾಪ್ತವಾಗಿರುವಜನರ ಮಲಮೂತ್ರಾದಿಗಳ ಮೇಲೆ ಕುಳಿತಿದ್ದು, ಅಲ್ಲಿಂದ ಉಳಿದ ಕಡೆಗೆ ಹಾರಿ, ತಮ್ಮ ಕಾಲುಗಳಲ್ಲಿಅಂಟಿದ್ದ ಆ ಮಲಮೂತ್ರಗಳಲ್ಲಿರುವ ರೋಗಾಣುಗಳನ್ನು ಇತರರ ಆಹಾರ್ಯಪದಾರ್ಥಗಳಮೇಲೆ ಕುಳಿತಾಗ ಅವಕ್ಕೆ ಸೇರಿಸಿ, ಹೀಗೆ ತಾವು ಕುಳಿತಾಡಿದ ಕಡೆಗೆಲ್ಲಾ ರೋಗವನ್ನು ಹಬ್ಬಿಸುವುವು. ನೊಣಗಳು ತಮ್ಮ ಆಹಾರದೊಡನೆ ಈ ರೋಗದ ಕ್ರಿಮಿಗಳನ್ನು ಭಕ್ಷಿಸಿದರೆ ಆ ನೊಣಗಳಿಗೆ ಯಾವ ಅಪಾಯವೂ ಆಗದೆ, ಕ್ರಿಮಿಗಳು ಮಾತ್ರ ನೊಣಗಳ ಮಲದಲ್ಲಿ ಯಥಾವತ್ತಾಗಿ ಹೊರಬೀಳುವುವೆಂದು ಶಾಸ್ತ್ರಜ್ಞರಿಂದ ಗೊತ್ತುಮಾಡಲ್ಪಟ್ಟಿದೆ. ಅದುಕಾರಣ ನೊಣಗಳ ಶರೀರದ ಸಂಪರ್ಕದಿಂದಲೂ ಮತ್ತು ಅವುಗಳ ಮಲಸಂಪರ್ಕದಿಂದಲೂ ಸಹ ಮನುಷ್ಯನಿಗೆ ರೋಗಗಳು ಸಂಭವಿಸಲು ಅವಕಾಶವಿದೆ. ಈ ಕಾರಣದಿಂದ ಯುದ್ಧಗಳ ಕಾಲದಲ್ಲಿ ಸೈನಿಕರ ಬಿಡಾರಗಳಲ್ಲಿ ಅನೇಕವೇಳೆ ಸಾಂಕ್ರಾಮಿಕರೋಗಗಳು ಸಂಭವಿಸಿವೆ. ಉದಾಹರಣೆ:—ದಕ್ಷಿಣ ಆಫ್ರಿಕಾದ ಕಳೆದ ಯುದ್ಧದಲ್ಲಿ ಟೈಫಾಯಿಡ್ ರೋಗದ ಅನರ್ಥವು ವಿಪರೀತವಾಗಿ ಸಂಭವಿಸಿತು. ಬೇಸಗೆಯ ಕಾಲದಲ್ಲಿ ಸಣ್ಣ ಮಕ್ಕಳು ಹೊಟ್ಟೆ ಕಳೆತದ ಬೇನೆಯಿಂದಲೇ ವಿಶೇಷವಾಗಿ ಸಾಯುವುವು. ಇದಕ್ಕೆ ಕಾರಣಗಳು ನೊಣಗಳ ಸಂಪರ್ಕವೆಂಬುದು ಅನೇಕರಿಗೆ ತಿಳಿದಿರುವುದಿಲ್ಲ.

ಇದನ್ನೆಲ್ಲಾ ವಿಚಾರಮಾಡಿದರೆ ನೊಣವು ಹಾವು ಚೇಳುಗಳು ಮಾಡುವ ಅನರ್ಥಕ್ಕಿಂತಲೂ ಎಷ್ಟು ಭೀಕರವಾದ ಅನರ್ಥವನ್ನು ಮಾಡತಕ್ಕ ಪ್ರಾಣಿಯೆಂಬುದು ಚೆನ್ನಾಗಿ ಗೊತ್ತಾಗುವುದು. ಅದುಕಾರಣ ನೊಣಗಳ ಹಾವಳಿಯು ಉದಾಸೀನಮಾಡಲ್ಪಡತಕ್ಕದ್ದಲ್ಲ.

ಇವುಗಳ ಪರಿಹಾರಕ್ರಮವು ಹೇಗೆಂದರೆ—ಪಾಯಖಾನೆಯ ಸ್ಥಳವನ್ನು ಅಡುಗೆಮನೆಯಿಂದ ಬಹಳದೂರದಲ್ಲಿ ಏರ್ಪಡಿಸಬೇಕು. ಅಡುಗೆಯ ಮನೆಯ ಕಿಟಕಿಗಳಿಗೆ ತಂತಿಯ ಜಾಲರಿಯನ್ನು ಹಾಕಿಸಬೇಕು. ಮತ್ತು ಗಾಳಿ ಬಿಸಿಲು ವಿಶೇಷವಾಗಿ ಅಡುಗೆಮನೆಯೊಳಗೆ ಬರಲು ಅವಕಾಶವಿಡಬೇಕು. ಊಟದ ಮನೆಯ ನೆಲವನ್ನು ಚೊಕ್ಕಟವಾಗಿ ಶುಭ್ರವಾದ ನೀರಿನಿಂದ ತೊಳೆಯಬೇಕು. ಪಾಕಮಾಡಲ್ಪಟ್ಟ ಪದಾರ್ಥಗಳನ್ನು ನೊಣದ ಸಂಪರ್ಕಕ್ಕೆ ಅವಕಾಶವಿಲ್ಲದಂತೆ ಮುಚ್ಚಿಡಬೇಕು. ಊಟದೆಲೆಗಳನ್ನು ಚೆನ್ನಾಗಿ ನೀರಿನಿಂದ ತೊಳೆದನಂತರ ಉಪಯೋಗಿಸಬೇಕು. ದನಗಳ ಕೊಟ್ಟಿಗೆಯನ್ನು ವಾಸಸ್ಥಳಕ್ಕೆ ದೂರದಲ್ಲಿಡಬೇಕು. ಹೊರಗಿನಿಂದ ಬಂದ ದನಗಳು ವಾಸಸ್ಥಳದ ಮೂಲಕ ಕೊಟ್ಟಿಗೆಗೆ ಹೋಗುವುದನ್ನು ತಪ್ಪಿಸಬೇಕು. ಊರಿನ ಹೊರಗೆ ಗೊಬ್ಬರವನ್ನು ಶೇಖರಿಸಬೇಕು. ಮನೆಗಳ ಹಿಂಭಾಗದಲ್ಲಿ ತಿಪ್ಪೆಗಳನ್ನು ಕೂಡಿಸುವುದನ್ನು ಸರ್ಕಾರದವರು ಅತ್ಯಂತ ಕಠಿನವಾದ ವಿಧಿಯಿಂದ ತಪ್ಪಿಸಬೇಕು. ಮಕ್ಕಳಿಗೆ ಮಧುರ ಪದಾರ್ಥಗಳನ್ನು ತಿನ್ನಿಸಿದರೆ ಅವುಗಳ ಬಾಯಿಯನ್ನು ನೀರಿನಿಂದ ಚೊಕ್ಕಟವಾಗಿ ತೊಳೆಯಬೇಕು. ರೋಗಿಗಳನ್ನು ಇಟ್ಟಿರುವ ಕೋಣೆಗಳನ್ನು ಚೊಕ್ಕಟವಾಗಿಡಬೇಕು. ರೋಗಿಯ ಬಟ್ಟೆಗಳನ್ನು ತಾಮಸಮಾಡದೆ ಶುಚೀಕರಿಸಬೇಕು. ಮತ್ತೂ ಮಲಮೂತ್ರಗಳನ್ನು ತತ್‌ಕ್ಷಣದಲ್ಲಿಯೇ ಹೊರಗೆ ದೂರ ಸಾಗಿಸಬೇಕು. ನೊಣಗಳ ಸಂಪರ್ಕಕ್ಕೆ ಅವಕಾಶ ಕೊಡಬಾರದು. ನೊಣಗಳು ನಿರಪರಾಧಿಯಾದುವು; ಅವುಗಳನ್ನು ಕೊಲ್ಲಬಾರದೆಂಬ ತಪ್ಪು ತಿಳಿವಳಿಕೆಯನ್ನು ಹೋಗಲಾಡಿಸಿ ಅವುಗಳ ನಾಶಕ್ಕೆ ಎಲ್ಲ ವಿಧದ ಪ್ರಯತ್ನವನ್ನೂ ಮಾಡಬೇಕು.

ವೈ. ವಿಶ್ವನಾಥಯ್ಯ,
L. M. & S.

ಗ್ರಂಥಸ್ವೀಕಾರ, ಮತ್ತೂ ಅಭಿಪ್ರಾಯನಿವೇದನ.

ಈ ಕೆಳಗೆ ಕಂಡ ಗ್ರಂಥವನ್ನು ನಾವು ಆದರದಿಂದ ಸ್ವೀಕರಿಸಿರುತ್ತೇವೆ.

"ವಿದ್ಯಾರ್ಥಿಕರಭೂಷಣ"

ಈಗಿನ ಮೈಸೂರು ವಿದ್ಯಾಭ್ಯಾಸ ಶಾಖಾ ಮುಖ್ಯಾಧಿಕಾರಿಗಳ ಅಪ್ಪಣೆಯ ಮೇರೆಗೆ ಮ|| ಎಂ. ವೆಂಕಟಕೃಷ್ಣಯ್ಯನವರು ಈ ಗ್ರಂಥವನ್ನು ರಚಿಸಿದ್ದಾರೆ. ಅಂಗ್ಲಭಾಷೆಯಲ್ಲಿರುವ "ಸ್ಟೂಡೆಂಟ್ಸ್‌ಮ್ಯಾನ್ಯುಯಲ್" ಎಂಬ ಗ್ರಂಥದ ಆಧಾರದಮೇಲೆ ಇದು ಬರೆಯಲ್ಪಟ್ಟಿದೆ. ಇದರಲ್ಲಿ ವಿದ್ಯಾರ್ಥಿಗಳು ತಮ್ಮ ಅಭ್ಯಾಸಕ್ರಮದಲ್ಲಿ ಅನುಸರಿಸಬೇಕಾದ ನಿಯಮಗಳು ಎಂದರೆ—ಜಿತೇಂದ್ರಿಯತ್ವ-ಮನಸ್ಸ್ಥಿರತೆ-ಸತ್ಸಹವಾಸ-ವಿಧೇಯತೆ-ಕಾಲಕ್ಲೃಪ್ತಿ-ಉದ್ಯೋಗತತ್ಪರತೆ ವ್ಯಾಸಂಗಕ್ರಮ-ದೇಹವ್ಯಾಯಾಮ-ಸಹನೆ-ಸದ್ಗ್ರಂಥಾಲೋಚನೆ-ಆಹಾರನಿದ್ರಾವಸನಾದಿಕ್ಲೃಪ್ತಿ-ಮೊದಲಾದುವುಗಳು ಶ್ಲಾಘ್ಯವಾಗಿ ಬರೆಯಲ್ಪಟ್ಟಿವೆ. ಆಯಾವಿಷಯಕ್ಕೆ ತಕ್ಕಂತೆ ಕೊಡಲ್ಪಟ್ಟಿರುವ ಸ್ವದೇಶ ವಿದೇಶದ ಮಹನೀಯರ ಚರಿತ್ರೋದಾಹರಣಗಳು ಹೃದಯಂಗಮವಾಗಿವೆ. ಇದುಅನ್ಯಗ್ರಂಥಾಧಾರದಿಂದ ಬರೆಯಲ್ಪಟ್ಟುದೆಂದು ಹೇಳಲ್ಪಟ್ಟಿದ್ದರೂ ಇದರ ರೀತಿಯು ಕನ್ನಡದಲ್ಲೇ ಹೊಸದಾಗಿ ಬರೆದ ಮೂಲಗ್ರಂಥದಂತೆ ಶೋಭಿಸುತ್ತಿದೆ. ಭಾಷಾಶೈಲಿಯು ಶುದ್ಧವಾಗಿಯೂ ಗಂಭೀರವಾಗಿಯೂ ಇದೆ. ಮುಖ್ಯವಾಗಿ ಈ ಗ್ರಂಥದಲ್ಲಿರುವ ಉಪಯುಕ್ತವಾದ ವಿಷಯಗಳು ಶಾಲೆಯಲ್ಲಿ ಓದುವ ಬಾಲ ಬಾಲಿಕೆಯರಿಗೆ ಮಾತ್ರವೇ ಅಲ್ಲದೆ ಅವರನ್ನು ಹೆತ್ತಿರುವ ಅಥವಾ ಪೋಷಿಸುವ ಸರ್ವರಿಗೂ ಓದಲರ್ಹವಾಗಿರುತ್ತವೆ. ಏಕೆಂದರೆ—ವಿದ್ಯಾರ್ಥಿತ್ವವು ಸರ್ವರಿಗೂ ಜನ್ಮಾರಭ್ಯ ದೇಹಾಂತವಾಗಿಯೂ ಒಂದಿಲ್ಲಒಂದು ತೆರದಲ್ಲಿದ್ದೇ ಇರುವುದು. ಇಂಥ ಶ್ರೇಷ್ಠವಾದಗ್ರಂಥವು ಕನ್ನಡಿಗರ ಹಿತಕ್ಕಾಗಿ ಲಭ್ಯವಾದುದು ಸಂತೋಷಕರವು. ಕನ್ನಡ ನಾಡಿನವರೂ, ಮತ್ತೂ ಪ್ರಭುತ್ವದವರೂ ಇದಕ್ಕೆ ಪ್ರೋತ್ಸಾಹಕೊಟ್ಟು, ಗ್ರಂಥಕರ್ತರು ಸಂಕಲ್ಪಿಸಿರುವ ಇದರ ೨-೩ ನೆಯ ಭಾಗಗಳೂ ಬೇಗನೆ ಪ್ರಕಟಗೊಳ್ಳಲು ಅವಕಾಶವನ್ನುಂಟು ಮಾಡಲೆಂದು ಕೋರುತ್ತೇವೆ. ಇದರ ಬೆಲೆ ೮ ಆಣೆ.

"ಸದ್ಬೋಧಸಂಗ್ರಹ"

ಇದು ಬಾಗೆವಾಡಿಯ ಶಾಲಾ ಪ್ರಥಮೋಪಾಧ್ಯಾಯರಾದ ಮ|| ಕಲೋಗಣೇಶ ವಿಜಾಪೂರಕರರವರಿಂದ ಬರೆಯಲ್ಪಟ್ಟು ಬೆಳಗಾಂವಿನ ಮ|| ನಾಗೇಶವಾಸುದೇವ ಗುಣಾಜಿ ಬಿ. ಎ. ಎಲ್ ಎಲ್. ಬಿಯವರಿಂದ ಪ್ರಕಾಶಿಸಲ್ಪಟ್ಟಿದೆ. ಅರ್ವಾಚೀನತಪಸ್ವಿಗಳಲ್ಲಿ ಪ್ರಸಿದ್ಧರಾದ ಶ್ರೀರಾಮಕೃಷ್ಣ ಪರಮಹಂಸರ ದಿವ್ಯಸೂಕ್ತಿಗಳು ೩೪೫ ಸಂಗ್ರಹಿಸಿ ಇದರಲ್ಲಿ ಮುದ್ರಿಸಲ್ಪಟ್ಟಿವೆ. ಆದಿಯಲ್ಲಿ ಶ್ರೀ ಪರಮಹಂಸರ ಸಂಕ್ಷಿಪ್ತಜೀವಿತಚರಿತ್ರವೂ ಅವರ ಭಾವಚಿತ್ರವೂ ಸೇರಿವೆ. ಮುದ್ರಣವೂ ಕಾಗದವೂ ಉತ್ತಮವಾಗಿವೆ. ಶ್ರೀರಾಮಕೃಷ್ಣರು ಪ್ರತ್ಯಕ್ಷ ಭಗವದನುಗ್ರಹಕ್ಕೆ ಪಾತ್ರರಾದ ಜೀವನ್ಮುಕ್ತರಾಗಿದ್ದರು. ಅವರ ಉಪದೇಶವಾಕ್ಯಗಳು ಪ್ರತಿಯೊಂದೂ ಅಚುಂಬಿತವಾದ ಲೌಕಿಕೋದಾಹರಣೆಯಿಂದ ಶ್ರೋತೃಗಳ ಮನಸ್ಸನ್ನು ತಣ್ಣಗೊಳಿಸುತ್ತಿರುವುವು ಅದುಕಾರಣವೇ ಅವು ನಾನಾಭಾಷೆಗಳಿಗೆ ಪರಿವರ್ತಿಸಲ್ಪಟ್ಟಿರುವುವು. ಕನ್ನಡದಲ್ಲೂ ಪರಮಾರ್ಥ—ವಿವೇಕೋದಯ— ಈ ಪತ್ರಿಕೆಗಳಲ್ಲಿ ಕೆಲಸೂಕ್ತಿಗಳು ಪ್ರಕಟಿಸಲ್ಪಡುತ್ತಿದ್ದುವು ಆದರೆ ಒಂದು ಗ್ರಂಥದಲ್ಲೇ ಹೀಗೆ ಸಂಗ್ರಹಿಸಿ ಪ್ರಕಟಮಾಡಿ ಕನ್ನಡಿಗರಿಗೆ ಉಪಕಾರಮಾಡಿದ ಶ್ರೇಯಸ್ಸು ಈ ಗ್ರಂಥಕರ್ತರಿಗೇ ಲಭಿಸಿರುವುದು. ಇದರಲ್ಲಿನ ಭಾಷೆಯು ಚಿತ್ತರೀಯವಾಗಿರುತ್ತ ವ್ಯಾಕರಣ ನಿಯಮಗಳನ್ನು ಅಲ್ಲಲ್ಲಿಗೆ ಬಿಟ್ಟಿದ್ದರೂ, ಭಾವದಕಡೆಗೆ ದೃಷ್ಟಿಯಿಟ್ಟರೆ ಅದು ಗಣಿಸತಕ್ಕ ದೋಷವಾಗಿರುವುದಿಲ್ಲ. ಕನ್ನಡಿಗರೆಲ್ಲರಿಗೂ ಇದು ಓದಲರ್ಹವಾದ ಸದ್ಗ್ರಂಥವಾಗಿರುತ್ತದೆ. ಬೆಲೆ ೧ ರೂ.

"ರಾಜಶೇಖರಚರಿತ್ರೆ"

ಸಮಾಜಸಂಸ್ಕರಣದಲ್ಲಿ ಬದ್ಧದೀಕ್ಷಿತರಾಗಿ ಆಧುನಿಕಾಂಧ್ರಗ್ರಂಥಕಾರರಲ್ಲಿ ಹೆಸರಾಂತವರಾದ ಕಂದುಕೂರಿ ರಾ|| ವೀರೇಶಲಿಂಗಂ ಪಂತುಲುಯವರ ಗ್ರಂಥಮಾಲಿಗಳೊಳಗೆ ಒಂದಾದ ಈಗ್ರಂಥವು ಮ|| ಬೆಳ್ಳಾವೆ ಸೋಮನಾಥಯ್ಯನವರಿಂದ ಕನ್ನಡಕ್ಕೆ ಪರಿವರ್ತಿಸಲ್ಪಟ್ಟು ೧೯೧೫ ನೆಯ ವರ್ಷದಲ್ಲೇ ಪ್ರಥಮಮುದ್ರಣಗೊಂಡಿದ್ದು, ಈಗ ದ್ವಿತೀಯಮುದ್ರಣದಿಂದಸಿದ್ಧವಾಗಿರುತ್ತಿದೆ. ಹಿಂದೂಸಮಾಜದಲ್ಲಿರುವ ಮೂಢಾಚರಣೆಗಳ ದೋಷಗಳನ್ನು ಸ್ವದೇಶೀಯರ ಗಮನಕ್ಕೆ ತಂದು, ಅದರ ಸುಧಾರಣೆಯ ಬುದ್ಧಿಯನ್ನು ಅವರಲ್ಲಿ ಹುಟ್ಟಿಸಬೇಕೆಂಬುದೇ ಮೂಲಗ್ರಂಥಕರ್ತರ ಈದೃಶವಾದ ಗ್ರಂಥರಚನೆಯಲ್ಲಿ ಹೇತುವಾಗಿರುತ್ತದೆ. ಅದನ್ನನುಸರಿಸಿಯೇ ಈ ಗ್ರಂಥದಲ್ಲೂ ರಾಜಶೇಖರನೆಂಬ ಒಬ್ಬ ಸದ್ಗೃಹಸ್ಥನ ಕುಟುಂಬಚರಿತ್ರೆ ವ್ಯಾಜದಿಂದ ಹಿಂದೂಸಮಾಜದ ಪರಿಸ್ಥಿತಿಯ ವರ್ಣನವು ಚಿತ್ತಾಕರ್ಷಕವಾಗುವಂತೆ ಒಳ್ಳೆಯ ಶೈಲಿಯಲ್ಲಿ ಬರೆಯಲ್ಪಟ್ಟಿರುವುದು. ಮೈಸೂರು ಬೊಂಬಾಯಿಸರ್ಕಾರಗಳ ವಿದ್ಯಾಶಾಖೆಯವರು ಈ ಗ್ರಂಥಕ್ಕೆ ಪ್ರೋತ್ಸಾಹ ಕೊಟ್ಟಿರುವರು. ಕನ್ನಡಿಗರಿಗೆ ಪಠನೀಯವಾಗಿರುವ ಈ ಗ್ರಂಥವು ಉತ್ತಮವಾದ ಕಾಗದದಮೇಲೆ ಸ್ಫುಟವಾಗಿ ಮುದ್ರಿತವಾಗಿರುತ್ತದೆ. ಬೆಲೆ ೧ ರೂಪಾಯಿ.

"ಜಾನಕೀಪರಿಣಯನಾಟಕಂ"

ಚಂದ್ರಹಾಸಾಭ್ಯುದಯವೆಂಬ ಗ್ರಂಥವನ್ನು ಹಸ್ತುಕರೂಪವಾಗಿ ಬರೆದು ಈ ಮೊದಲೇ ಕನ್ನಡಿಗರಿಗೆ ಪರಿಚಿತರಾಗಿ

ರುವ ಮ|| ಎಚ್. ವೆಂಕಟರಾಯುಕವಿಗಳು ಸಂಸ್ಕೃತದಲ್ಲಿದ್ದ ಜಾನಕೀಪರಿಣಯವೆಂಬ ನಾಟಕವನ್ನು ಕನ್ನಡಕ್ಕೆ ಪರಿವರ್ತಿಸಿರುವುದೇ ಈ ಗ್ರಂಥವಾಗಿರುತ್ತದೆ. ಹಳಗನ್ನಡದ ಪದಗಳನ್ನು ಉಪಯೋಗಿಸಿ, ಪ್ರಾಚೀನಕವಿತ್ವದಂತೆ ಸಲಕ್ಷಣವಾಗಿ ಕಂದವೃತ್ತಾದಿಗಳನ್ನು ರಚಿಸಲು ಪ್ರವೃತ್ತರಾದ ಈಗಿನ ಕವಿಗಳಲ್ಲಿ ಹೆಸರಾಗಿರುವ ಮ|| ರಾಯರು ಸಂಸ್ಕೃತ ಗ್ರಂಥಾಭಿಪ್ರಾಯವನ್ನು ಸ್ವಭಾಷೆಯಲ್ಲಿ ತತ್ರಾಪಿ ಛಂದೋಬದ್ಧವಾದ ಪದ್ಯಗಳಲ್ಲಿ ಅಚ್ಚೊತ್ತಿದಂತೆ ಇಳಿಸಿರುವುದು ಶ್ಲಾಘನೀಯವಾಗಿದೆ. ಪ್ರೌಢಶಾಲೆಗಳಲ್ಲಿ ಪಠನೀಯಗ್ರಂಥವಾಗಿಡಲು ಇದು ಅರ್ಹವಾಗಿದೆ. ಗುಣಕ್ಕೆ ತಕ್ಕ ಪ್ರೋತ್ಸಾಹವಿಲ್ಲದಿರುವುದು ಕನ್ನಡನಾಡಿನ ಮಹಿಮೆಯೆಂಬುದನ್ನು, ಇದರ ಮುದ್ರಣಾಲಂಕೃತಿಯಲ್ಲಿ ತೋರಿಬರುತ್ತಿರುವ ಕನಿಷ್ಠತೆಯು ವ್ಯಕ್ತಪಡಿಸುತ್ತಿದೆ. ಬೆಂಗಳೂರ ಗೌರೀನಿಲಯಮುದ್ರಾಲಯಕಾರ್ಯಕರ್ತೃಗಳಾದರೂ ಇದರ ಯೋಗ್ಯತೆಯನ್ನರಿತು ಪ್ರತಿಫಲಾಪೇಕ್ಷೆಯಿಲ್ಲದೆ ಮುದ್ರಣಮಾಡಿಕೊಟ್ಟು, ತಮ್ಮ ಭಾಷಾಭಿಮಾನವನ್ನು ವ್ಯಕ್ತಪಡಿಸಿರುವುದು ಸ್ತುತ್ಯವು. ಇದರ ಬೆಲೆ ೧೨ ಆಣೆಯನ್ನಿಟ್ಟಿರುವುದು ಗ್ರಂಥದ ಯೋಗ್ಯತೆಗೆ ಹೆಚ್ಚಲ್ಲವಾದರೂ ಅದರಲ್ಲರ್ಧದಷ್ಟು ಬೆಲೆಯನ್ನಿಟ್ಟಿದ್ದರೆ ಗ್ರಂಥವು ಬೇಗನೆ ದ್ವಿತೀಯಮುದ್ರಣಕ್ಕೆ ಸಿದ್ಧವಾಗಬಹುದಾಗಿದ್ದಿತು. ಏಕೆಂದರೆ—ಜನರಲ್ಲಿ ಗುಣಕ್ಕಿಂತಲೂ ಧನದಮೇಲೆ ಗಮನವು ಹೆಚ್ಚು.

"ನೀತಿಬೋಧಾಮೃತಸಾರ"

ಇದನ್ನು ಬೆಂಗಳೂರಿನ ಮ|| ಜೇರಿಗೆ ಬಸವಲಿಂಗಪ್ಪನವರು ರಘುಟಾರಿಟಪದಿಂದ ರಚಿಸಿದ್ದಾರೆ. ಗ್ರಂಥರಚನೋದ್ಯೋಗದಲ್ಲಿ ವಿಶೇಷ ಕುತೂಹಲವುಳ್ಳ ಇವರಿಗೆ ಛಂದೋಬದ್ಧವಾದ ಗ್ರಂಥಗಳ ಕಡೆಗೆ ಇದೇ ಮೊದಲನೆಯ ಹೆಜ್ಜೆಯು. ಇದರಲ್ಲಿ ಸರ್ವಮತಸಾಮಾನ್ಯವಾದ ನೀತಿವಚನಗಳು ಲಲಿತವಾದ ಸರಣಿಯಲ್ಲಿ ಹೇಳಲ್ಪಟ್ಟಿವೆ. ಇದರ ಬೆಲೆ ೨ ಆಣೆ.

ಮೈಸೂರ್ ಸ್ಟಾರ್.

ಸಂ ೧೯೧೪ನೆಯ ಜುಲೈ ತಾ|| ೨೦ನೆಯ ಸೋಮವಾರ.

ಲಾರ್ಡ್ ಹಾರ್ಡಿಂಜ್ ಪತ್ನಿಯವರ ಮೃತ್ಯು.

ನಮ್ಮ ಪ್ರಿಯ ವೈಸ್ರಾಯರಾದ ಲಾರ್ಡ್ ಹಾರ್ಡಿಂಜ್‌ರವರ ಧರ್ಮಪತ್ನಿಯವರು ಕಳೆದ ತಾ|| ೧೧ನೆಯ ಶನಿವಾರ ಸೀಮೆಯಲ್ಲಿ ವಿಧಿವಶರಾದರೆಂಬ ಆಕಸ್ಮಿಕವಾದ ದುಃಖದ ಸುದ್ದಿಯನ್ನು ತಿಳಿಯಿಸಲು ನಾವು ಅತ್ಯಂತವಾಗಿ ವಿಷಾದಿಸುತ್ತೇವೆ. ಇವರನ್ನೂ ಇವರ ತಾಯಿಯವರನ್ನೂ ಹಾರ್ಡಿಂಜ್‌ಪ್ರಭುಗಳು ಕಳೆದ ಮಾರ್ಚಿ ತಾ|| ೨೧ ರಲ್ಲಿ ಸೀಮೆಗೆ ಕಳುಹಿಸಿಕೊಟ್ಟರು. ಆಗ್ಗೆ ತಾವೇ ಬೊಂಬಾಯಿಯವರೆಗೆ ಹೋಗಿದ್ದು ಸ್ವಲ್ಪದೂರ ಹಡಗಿನಲ್ಲಿಯೂ ಕುಳಿತು ಸಾಗಗಳುಹಿಸಿ ಬಂದರು. ಅಂದೇ ಆ ಜಾಯಾಪತಿಗಳ ಕಡೆಯ ಸಂದರ್ಶನವಾಗಿ ಪರಿಣಮಿಸುವುದೆಂಬ ವಿಧಿವಿಲಾಸವನ್ನು ಯಾರೂ ನಿರೀಕ್ಷಿಸಿರಲಿಲ್ಲ! ಈ ಮಧ್ಯೆ ಹಾರ್ಡಿಂಜ್ ಪ್ರಭ್ವಿಯವರಿಗೆ ದೇಹದಲ್ಲಿ ಅಸ್ವಾಸ್ಥ್ಯವುಂಟಾಗಿದ್ದಿತೆಂಬುದೂ ಅದಕ್ಕಾಗಿ ಶಸ್ತ್ರಚಿಕಿತ್ಸೆಯನ್ನು ಮಾಡಬೇಕಾಯಿತೆಂಬುದೂ ಜುಲೈ ತಾ|| ೯ ರಲ್ಲಿ ಸಿಮ್ಲಾದಿಂದ ಬಂದ ತಂತ್ರೀವಾರ್ತೆಯಿಂದ ಈ ದೇಶೀಯರಿಗೆ ಗೊತ್ತಾಯಿತು. ಆ ದಿನದ ರಾತ್ರಿ ವೈಸ್ರಾಯರ ಭವನದಲ್ಲಿ ನಡೆಯಬೇಕಾಗಿದ್ದ ಔತಣವು, ಆಕೆಯವರ ದೇಹಸ್ಥಿತಿಯ ಸುದ್ದಿಯನ್ನು ಕೇಳಿದ ಕಾರಣದಿಂದಲೇ ನಿಲ್ಲಿಸಲ್ಪಟ್ಟಿತು. ಮರುದಿನ ತಾ|| ೧೦ ರಲ್ಲಿ ಬಂದ ಸುದ್ದಿಯಿಂದ ಆಕೆಯವರಿಗೆ ಶಸ್ತ್ರಚಿಕಿತ್ಸೆಯು ಜರುಗಿದ ಬಳಿಕ ರಾತ್ರಿ ಸುಖವಾಗಿ ನಿದ್ರೆಬಂದಿತೆಂದೂ ಅವರ ಸ್ಥಿತಿಗತಿಗಳು ತೃಪ್ತಿಕರವಾಗಿವೆಯೆಂದೂ ತಿಳಿಯಿಸಲ್ಪಟ್ಟಿದ್ದಿತು. ಆದರೆ ಆ ಸ್ಥಿತಿಯು ಹೆಚ್ಚುಕಾಲ ಇರಲಿಲ್ಲ. ಶನಿವಾರ ಬೆಳಗಿನಿಂದಲೂ ಅಸ್ವಸ್ಥತೆಯು ಹೆಚ್ಚುವುದಕ್ಕಾರಂಭಿಸಲು, ಆ ದಿನ ಮಧ್ಯಾಹ್ನಾನಂತರ ೪|| ಗಂಟೆಗೆ ಪಂಚತ್ವವನ್ನೈದಿದರು. ಅವರ ಶವವನ್ನು ಉಪಚಾರ ಭವನದಿಂದ ಲಂಡನ್ ಪಟ್ಟಣದಲ್ಲಿರುವ ಅವರ ಸಹೋದರಿಯರ ಮನೆಗೆ ಸಾಗಿಸಿ ಇಟ್ಟಿದ್ದರು. ಲಾರ್ಡ್ ಹಾರ್ಡಿಂಜ್‌ರವರ ಸಹೋದರರಾದ ಕೌಂಟ್ ಹಾರ್ಡಿಂಜ್‌ರವರ ವಾಸಸ್ಥಲವಾದ ಕೆಂಟ್ ಜಿಲ್ಲೆಗೆ ಸೇರಿದ ಪೆನ್‌ಷರ್ಸ್ಟ್‌ನಲ್ಲಿರುವ ಚರ್ಚಿನಲ್ಲಿ ಶವಸಮಾಧಿಕ್ರಿಯೆಯು ಕಳೆದ ತಾ|| ೧೫ ನೆ ಬುಧವಾರದದಿವಸ ನೆರವೇರಿತು.

ಈ ಮಹಾಸತಿಯ ಮರಣವಾರ್ತೆಯು ಭರತಖಂಡವನ್ನೆಲ್ಲಾ ಅಗಾಧವಾದ ದುಃಖಸಮುದ್ರದಲ್ಲಿ ಮುಳುಗಿಸಿದೆ. ಪ್ರತಿಯೊಂದು ಪಟ್ಟಣದಲ್ಲೂ ದುಃಖಪ್ರದರ್ಶನಸಭೆಗಳು ಕೂಡಿಸಲ್ಪಟ್ಟು ಅವರ ಪತಿಯವರಾದ ವೈಸ್‌ರಾಯರಿಗೆ ಅನುತಾಪವಾರ್ತೆಗಳು ಕಳುಹಿಸಲ್ಪಟ್ಟು ಬರುತ್ತಲೂ ಇವೆ. ಕೀರ್ತಿಶೇಷರಾದ ವಿಕ್ಟೋರಿಯಾಚಕ್ರವರ್ತಿನಿಯವರ ಮತ್ತು ಎಡ್ವರ್ಡ್ ಸಾರ್ವಭೌಮರ ಮರಣಕಾಲಗಳನ್ನು ಬಿಟ್ಟರೆ ಮತ್ತಾವಕಾಲದಲ್ಲೂ ಇನ್ನಾರ ಮೃತಿಗಾಗಿಯೂ ಭಾರತೀಯರು ಹೀಗೆ ಸರ್ವತ್ರ ನಿರ್ವ್ಯಾಜದುಃಖಪ್ರದರ್ಶನಮಾಡಿದುದಿಲ್ಲ. ಇದರಿಂದಲೇ ಲೇಡಿಹಾರ್ಡಿಂಜ್‌ರವರು ಭಾರತೀಯರಿಂದ ಎಷ್ಟುಮಟ್ಟಿಗೆ ಮಾತೃವತ್ ಪ್ರೀತಿಸಲ್ಪಟ್ಟಿದ್ದರೆಂಬ ಸಂಗತಿಯು ವ್ಯಕ್ತವಾಗುತ್ತಿರುವುದು. ಇದುವರೆಗೆ ಹಿಂದೆ ಬಂದಿದ್ದ ವೈಸ್‌ರಾಯರೊಳಗೆ ನಮ್ಮ ಲಾರ್ಡ್ ಹಾರ್ಡಿಂಜ್‌ರಷ್ಟು ಪ್ರಜಾಪ್ರೀತಿಯನ್ನು ಸಂಪಾದಿಸಿದವರು ಒಬ್ಬಿಬ್ಬರು ಇದ್ದಿರಬಹುದು. ಆದರೆ ಅವರುಗಳ ಪತ್ನಿಯರಲ್ಲಿ ಲೇಡಿಹಾರ್ಡಿಂಜ್‌ರವರಷ್ಟು ಪ್ರಜಾನುಕಂಪವನ್ನು ಹೊಂದಿ ಅವರಿಂದ ಪ್ರೀತಿಸಲ್ಪಟ್ಟಿದ್ದವರು ಮತ್ತಾರೂ ಇರಲಿಲ್ಲವೆಂದು ಹೇಳುವುದು ಅತಿಶಯೋಕ್ತಿಯಲ್ಲ. ದಿಲ್ಲಿಯಲ್ಲಿ ಲಾರ್ಡ್‌ಹಾರ್ಡಿಂಜ್‌ರವರ ಮೇಲೆ ಸಿಡಿಮದ್ದು ಪ್ರಯೋಗಿಸಲ್ಪಟ್ಟಾಗ ಇವರು ತೋರಿಸಿದ ಮಾನಸೋನ್ನತಿಯೂ, ಕರ್ತವ್ಯಜಾಗರೂಕತೆಯೂ, ಸಹನೆಯೂ ಜಗತ್ತನ್ನೆಲ್ಲಾ ಬೆರಗುಗೊಳಿಸಿತು. ತಾವು ಅಸಮವಾದ ಧೈರ್ಯವನ್ನು ತಾಳಿ, ತಮ್ಮ ಪತಿಯನ್ನು ತಕ್ಕ ರೀತಿಯಿಂದ ಉಪಚರಿಸಿ, ಸತಿಯರು ಪತಿಗೆ ವಿಷಮಕಾಲದಲ್ಲಿ ಹೇಗೆ ನೆರವಾಗಿ ತಮ್ಮ ಅರ್ಧಾಂಗಿನೀತ್ವವನ್ನು ಸಾರ್ಥಕಪಡಿಸಬೇಕೆಂಬುದನ್ನು ಸ್ತ್ರೀಲೋಕಕ್ಕೆಲ್ಲಾ ಸ್ವೋದಾಹರಣೆಯಿಂದ ತೋರಿಸಿಕೊಟ್ಟು, ಭಾರತಮಹಿಳೆಯರಿಂದೆಲ್ಲಾ ಸನ್ಮಾನಿತೆಯರಾದರು. ಬಳಿಕ ಮುಂದಿನವರ್ಷದಲ್ಲಿ ಭಾರತೀಯರೆಲ್ಲಾ ತಮ್ಮ ಪತಿಯವರ ವರ್ಷವರ್ಧಂತ್ಯುತ್ಸವವನ್ನು ಮಾಡಬೇಕೆಂದು ಪ್ರಯತ್ನಿಸಿದಾಗ, ಭರತಖಂಡದ ಸರ್ವ ಬಾಲಬಾಲಿಕೆಯರಿಗೂ ಆಟ ಊಟ ಮೊದಲಾದುವುಗಳಿಂದ ಸಂತೋಷಪಡಿಸಲು ಏರ್ಪಡಿಸಿ, ಸ್ಮರಣೀಯರಾದರು. ಈ ದೇಶದ ನಾರೀಕುಲವು ಪಡುತ್ತಿರುವ ದುರವಸ್ಥೆಯನ್ನು ಕಂಡು ಮರುಗಿ, ಅವರ ಉದ್ಧಾರಕ್ಕಾಗಿ ದಿಲ್ಲೀನಗರದಲ್ಲಿ ಒಂದು ದೊಡ್ಡ ವೈದ್ಯವಿದ್ಯಾಲಯವನ್ನು ಕಟ್ಟಿಸಲು ಪ್ರಯತ್ನಮಾಡಿದರು. ಮತ್ತೂ ಯಾವಾಗಲೂ ತಮ್ಮ ಪತಿಯ ಉತ್ತಮಾದರ್ಶಗಳಲ್ಲೆಲ್ಲಾ ಸಹಚಾರಿಣಿಯಾಗಿದ್ದುಕೊಂಡು, ಅವರಿಗೆ ಎಲ್ಲಪ್ರಯತ್ನಗಳಲ್ಲೂ ಪ್ರೋತ್ಸಾಹಿಸುತ್ತಿದ್ದರು. ಇವರ ಉತ್ತಮದಾಂಪತ್ಯಯೋಗವು ಭಾರತೀಯರಿಗೆ ಇನ್ನೂ ಕೆಲಕಾಲ ವಿಶೇಷಹಿತವನ್ನು ಮಾಡಲು ಸಾಧಕವಾಗಿದ್ದಿತು. ಉದಾರಮತಿಯಾಗಿದ್ದ ಈ ಮಹಾಭಾಗೆಯ ಮೃತಿಯಿಂದ ಅವರ ಪ್ರಿಯಪತಿಗೆ ಮಾತ್ರವೇ ಅತಿಶಯವಾದ ನಷ್ಟವುಂಟಾಗಲಿಲ್ಲ. ಭರತಖಂಡಕ್ಕೇ ವಿಶೇಷವಾದ ನಷ್ಟವುಂಟಾಯಿತೆಂಬುದು ನಿಜವು. ಇದು ನಮ್ಮ ದುರ್ದೈವಫಲವು. ಈ ಕಾರಣದಿಂದಲೇ ಭರತಖಂಡವು ತನ್ನ ಸಹಸ್ರ ನೇತ್ರಗಳಿಂದಲೂ ಕಣ್ಣೀರುಗಳನ್ನು ಸುರಿಸುತ್ತಿರುವಂತೆ ಈ ದೇಶದ ಸಕಲ ವೃತ್ತಪತ್ರಿಕೆಗಳಲ್ಲೂ ಅನುತಾಪೋಕ್ತಿಗಳು ಉಕ್ಕೇರಿ ಸುರಿಯುತ್ತಿರುವುವು. ಪತ್ನಿಯನ್ನು ಸ್ವದೇಶಕ್ಕೆ ಕಳುಹಿಸುವಾಗ ಮೊನ್ನೆತಾನೇ ಬೊಂಬಾಯಿ ಪುರನಿವಾಸಿಗಳು ವೈಸ್‌ರಾಯರಿಗೆ ಒಂದು ವಿಜ್ಞಾಪನಪತ್ರಿಕೆಯನ್ನೊಪ್ಪಿಸಿದಾಗ್ಗೆ, ದಿಲ್ಲಿಯ ಸಿಡಿಮದ್ದಿನ ಪ್ರಸಂಗವನ್ನು ಅದರಲ್ಲಿ ಸೂಚಿಸಿರಲು, ಅದಕ್ಕೆ ಇವರು ಉತ್ತರವನ್ನು ಕೊಡುವಾಗ್ಗೆ "ಅಂಥ ಸಂಭವವುಂಟಾಗದಿದ್ದಲ್ಲಿ ಭಾರತೀಯರಿಗೆ ನನ್ನ ಮೇಲಿರುವ ನಿರ್ವ್ಯಾಜವಾದ ಪ್ರೇಮವು ಹೊರಪಡಲು ಅಷ್ಟು ಅವಕಾಶವಿರುತ್ತಿರಲಿಲ್ಲ." ಎಂದು ಉತ್ತರ ಕೊಟ್ಟಿದ್ದರು. ಈಗ ಇವರಿಗೆ ಉಂಟಾದ ಅರ್ಧಾಂಗಿಯ ವಿಯೋಗದುಃಖದಲ್ಲಿ ಭರತಖಂಡವೆಲ್ಲವೂ ತನ್ನ ಮಾತೆಯನ್ನೇ ಕಳೆದುಕೊಂಡರೆ ಹೇಗೋ ಹಾಗೆ ಅಳುತ್ತಿರುವ ದುಃಖೋಕ್ತಿಗಳೂ ತೋರಿಸುತ್ತಿರುವ ಸಹಾನುಭೂತಿಯೂ ಸಹ ಅವರ ಮನೋದುಃಖವನ್ನು ತಕ್ಕಮಟ್ಟಿಗೆ ಶಾಂತಿಗೊಳಿಸದೆ ಇರಲಾರವು. ಕೃತಜ್ಞವಾದ ಭರತಖಂಡವು ಈ ನಮ್ಮ ವೈಸ್ರಾಯರನ್ನೇ ಇನ್ನೂ ೨-೩ ವರ್ಷಗಳ ಕಾಲ ಇದೇ ಕೆಲಸದಲ್ಲಿರಿಸುವಂತೆ ಮಾಡಿಕೊಳ್ಳಬೇಕೆಂದು ಪ್ರಯತ್ನಿಸುತ್ತಿರುವಲ್ಲಿ, ಈ ಮಧ್ಯೆ ಅವರಿಗೆ ಪತ್ನೀವಿಯೋಗದುಃಖವು ಪ್ರಾಪ್ತವಾಯಿತು. ಆದರೂ ನಿರ್ವ್ಯಾಜವಾದ ಭಾರತೀಯರ ನಿರ್ಮಲಪ್ರೀತಿಯೂ, ಸಹಾನುಭೂತಿಯೂ ಅವರ ಚಿತ್ತಕ್ಕೆ ಸ್ಥೈರ್ಯವನ್ನು ಕೊಟ್ಟು, ಸದ್ಯದ ವಿಯೋಗದುಃಖದ ಪ್ರವಾಹದಿಂದುದ್ಧರಿಸಿ, ಇನ್ನು ಕೆಲಕಾಲ ನಮ್ಮ ಮಧ್ಯದಲ್ಲಿದ್ದುಕೊಂಡು, ದೇಶಹಿತಕಾರ್ಯಗಳನ್ನು ಮಾಡುವಲ್ಲಿ ಪೂರ್ವದಂತೆಯೇ ಸಾನುಕಂಪಭಾವವನ್ನು ಹುಟ್ಟಿಸದೆ ಇರಲಾರದೆಂದು ಭಾವಿಸುತ್ತೇವೆ.

ಸ್ವರ್ಗಸ್ಥರಾದ ಈ ಪುಣ್ಯಚರಿತೆಯರು ತಮ್ಮ ಪತಿಯವರೊಡನೆ ಕಳೆದವರ್ಷ ನಮ್ಮ ಮೈಸೂರಿಗೆ ದಯೆಮಾಡಿಸಿದ್ದಾಗ ಅವರ ಕೃಪಾರಸಾಲವಾಲವಾದ ಮುಖಬಿಂಬವನ್ನು ಅನೇಕರು ಸಂದರ್ಶಿಸಿ ಸಂತೋಷಪಟ್ಟಿರುತ್ತಾರೆ. ನಮ್ಮ ವಾಚಕರೆಲ್ಲರಿಗೂ ಅವರ ಸಂದರ್ಶನವನ್ನುಂಟುಮಾಡಿಕೊಡುವುದಕ್ಕಾಗಿ ಅವರ ಭಾವಚಿತ್ರವನ್ನು ಈ ಸಂಚಿಕೆಯಲ್ಲಿ ಮುದ್ರಿಸಿರುತ್ತೇವೆ.

ಚಕ್ರವರ್ತಿದಂಪತಿಗಳೂ, ಅವರ ಕುಟುಂಬದವರೂ, ಸೀಮೆಯ ಅನಂತಮಂದಿ ಸ್ನೇಹಿತರೂ ಈ ದೇಶದ ಸಹಸ್ರಾರು ಪ್ರಮುಖರೂ, ಸಂಘಗಳವರೂ ಸ್ವದೇಶ ವಿದೇಶದ ವರ್ತಮಾನಪತ್ರಿಕೆಗಳೂ ಸಹ ವೈಸ್ರಾಯರಿಗೆ ತಮ್ಮತಮ್ಮ ಅನುತಾಪೋಕ್ತಿಗಳನ್ನು ನಿವೇದಿಸಿದ್ದಾರೆ. ಎಲ್ಲ ಸರ್ಕಾರಗಳಲ್ಲೂ ಸ್ವದೇಶಸಂಸ್ಥಾನಗಳಲ್ಲೂ ಕೋರ್ಟುಕಚೇರಿಗಳಿಗೆಲ್ಲಾ ದುಃಖಪ್ರದರ್ಶನಾರ್ಥವಾಗಿ ಒಂದೊಂದುದಿನದ ವಿರಾಮವು ಕೊಡಲ್ಪಟ್ಟಿದ್ದಿತು. ಚಿರಕೃತಜ್ಞತಾಬದ್ಧವಾದ ನಮ್ಮ ಮೈಸೂರು ಸಂಸ್ಥಾನದಲ್ಲೂ ಕೂಡ ಕಳೆದ ಮಂಗಳವಾರ ಇಲ್ಲಿನ ಶಾಲೆಗಳಿಗೆಲ್ಲಾ ವಿಶ್ರಾಂತಿಯು ಕೊಡಲ್ಪಟ್ಟಿದ್ದಿತು. ಭರತಖಂಡದ ಸರ್ವದೇವಾಲಯಗಳಲ್ಲೂ ಗತಿಸಿದವರ ಸದ್ಗತಿಗಾಗಿ ದೈವಪ್ರಾರ್ಥನೆಗಳು ನಡೆಯಿಸಲ್ಪಟ್ಟುವು. ನಮ್ಮ ರಾಜಧಾನಿಯ ಮತ್ತು ಬೆಂಗಳೂರಿನ ಪೌರಕಾರ್ಯನಿರ್ವಾಹಕ ಸಂಘದವರು ಸಭೆಗೂಡಿ, ವೈಸ್ರಾಯರಿಗೆ ತಮ್ಮ ಅನುತಾಪವನ್ನು ತಿಳಿಯಪಡಿಸಿದರು. ಸದ್ಗುಣಮಣಿಯಾದ ಸಹಧರ್ಮಿಣಿಯೊಡನೆ ಕೂಡಿಕೊಂಡು ವೈಸ್ರಾಯರು ಇನ್ನೂ ವಿಶೇಷವಾದ ಪ್ರೇಮದಿಂದ ರಾಜ್ಯಪಾಲನೆ ಮಾಡುವುದನ್ನು ನೋಡುವ ಯೋಗವು ಭರತಖಂಡಕ್ಕಿಲ್ಲವಾಯಿತು. ವಿಧಿವಿಲಾಸವು ದುರ್ಲಂಘ್ಯವಾದುದು. ಪುರುಷಾಗ್ರಣಿಗಳಾದ ನಮ್ಮ ಪ್ರಿಯ ವೈಸ್ರಾಯರಿಗೂ ಅವರ ಪುತ್ರರತ್ನಗಳಿಬ್ಬರಿಗೂ ಪುತ್ರೀರತ್ನವೊಂದಕ್ಕೂ ಈಗ ಸಂಭವಿಸಿದ ವಿಯೋಗದುಃಖವನ್ನು ಸೈರಿಸಿಕೊಳ್ಳುವ ಧೈರ್ಯವನ್ನು ಜಗದೀಶನು ಅನುಗ್ರಹಿಸಲೆಂದು ಕೋರಿ ಈ ಮೂಲಕ ಮೈಸೂರು ದೇಶೀಯರೊಡನೆ ನಮ್ಮ ಅನುತಾಪೋಕ್ತಿಯನ್ನು ನಿವೇದಿಸುತ್ತೇವೆ.

ವೈಸ್ರಾಯರ ಉತ್ತರ.

ಭಾರತೀಯರು ಪತ್ನೀವಿಯೋಗದುಃಖಶಮನಾರ್ಥವಾಗಿ ತಮಗೆ ಕಳುಹಿಸಿದ ಸಾನುಭೂತಿಯ ವಾರ್ತೆಗಳಿಗಾಗಿ ವೈಸ್ರಾಯರು ಈ ಕೆಳಗೆ ಕಂಡಮೇರೆ ತಮ್ಮ ಉತ್ತರವನ್ನು ದಯೆಪಾಲಿಸಿರುತ್ತಾರೆ. ಇದರಿಂದ ಅವರು ಎಂಥ ದುಃಖಾಗ್ನಿ ಮಧ್ಯದಲ್ಲಿದ್ದರೂ ಅವರ ಮನಸ್ಸು ಎಷ್ಟು ಶಾಂತವೂ ನಿರ್ಮಲವೂ ಆಗಿರುವುದೆಂಬುದು ವ್ಯಕ್ತವಾಗಿರುವುದು. ಅವರ ಉತ್ತರವೇನೆಂದರೆ:—ಸರ್ವಜ್ಞನೂ ಸರ್ವಶಕ್ತನೂ ಆದ ಪರಮೇಶ್ವರನು ನನ್ನ ಪ್ರಿಯಪತ್ನಿಗೆ ಶಾಶ್ವತವಾದ ವಿಶ್ರಾಂತಿಯನ್ನಿತ್ತು ನನ್ನನ್ನೂ ನನ್ನ ಕುಟುಂಬದವರನ್ನೂ ಆಕೆಯ ವಿಯೋಗದಿಂದುಂಟಾದ ದುರ್ಭರ ಚಿಂತೆಗೂ ದುಃಖಕ್ಕೂ ಗುರಿಮಾಡಬೇಕೆಂಬುದು ಆತನ ಸಂಕಲ್ಪವಾಗಿದ್ದಿತು. ಭರತಖಂಡದಲ್ಲಿರುವ ಎಲ್ಲಾ ಮತಜಾತಿಯವರೂ ಸಹ ತಮಗೆ ಲೇಡಿ ಹಾರ್ಡಿಂಜ್‌ರವರ ವಿಷಯದಲ್ಲಿದ್ದ ಯಥಾರ್ಥಪ್ರೀತಿಯನ್ನು ವಿಶದಪಡಿಸಿ ನನಗೆ ಕಳುಹಿಸಿರುವ ಅಮಿತವಾದ ದುಃಖೋಪಶಾಮಕ ತಂತ್ರೀವಾರ್ತೆಗಳಿಗಾಗಿಯೂ, ಅಪಾರವಾದ ದುಃಖದಲ್ಲಿ ಮುಳುಗಿರುವ ನನ್ನಮೇಲೂ ನನ್ನ ಕುಟುಂಬದವರಮೇಲೂ ಅವರು ತೋರಿಸಿದ ಅವಿರಳವಾದ ಸಾನುಭೂತಿಗಾಗಿಯೂ ನನ್ನ ಕೃತಜ್ಞತೆಯನ್ನು ತಿಳಿಯಪಡಿಸುತ್ತೇನೆ. ಈಕೆಯ ಮೃತಿಯಿಂದ, ಮನಃಪೂರ್ವಕವಾಗಿ ನನ್ನಲ್ಲಿ ತತ್ಪರಳಾಗಿದ್ದ ಪತ್ನಿಯನ್ನೂ, ಅತ್ಯಂತೋದಾರಶೀಲೆಯಾದ ಸಹಧರ್ಮಿಣಿಯನ್ನೂ ನಾನು ಕಳೆದುಕೊಂಡವನಾದೆನು. ಭಾರತೀಯರಾದರೊ, ತಮ್ಮನ್ನು ಅತ್ಯಂತವಾಗಿ ಪ್ರೀತಿಸುತ್ತಿದ್ದ ಒಬ್ಬ ಸುಮಿತ್ರಳನ್ನು ಕಳೆದುಕೊಂಡವರಾದರು. ಭರತಖಂಡದಮೇಲೂ ಅದರಲ್ಲಿರುವ ಸಕಲ ಪ್ರಜೆಗಳ ಮೇಲೂ, ಸ್ತ್ರೀಯರಮೇಲೂ, ಮಕ್ಕಳಮೇಲೂ, ಬಡವರಮೇಲೂ, ಪೀಡಿತರಮೇಲೂ ಆಕೆಗೆ ಬಹಳ ಕನಿಕರವಿದ್ದಿತು. ಆಕೆಯು ತನ್ನ ಶಾಶ್ವತಸ್ಥಾನವನ್ನೈದಿದವಳಾದರೂ ಆಕೆಗೆ ಭರತಖಂಡದಮೇಲಿದ್ದ ಅನುರಾಗವು ಅನೇಕ ಶುಭಪರಂಪರೆಗಳಿಗೆ ಕಾರಣವಾಗುವುದೆಂಬುದು ನಿಶ್ಚಯವು.

ಉತ್ತರ ಕ್ರಿಯೆ.

ಸೀಮೆಯಲ್ಲಿ ನಡೆದ ಲೇಡಿ ಹಾರ್ಡಿಂಜ್‌ರವರ ಅಪರಕ್ರಿಯೆಯ ಕಾಲಕ್ಕೆ ಅಲೆಗ್ಸಾಂಡ್ರಿಯಾ ಮಹಾಮಾತೃಶ್ರೀಯವರ ಪ್ರತಿನಿಧಿ, ಚಕ್ರವರ್ತಿ ದಂಪತಿಗಳ ಪ್ರತಿನಿಧಿಯಾಗಿ ಲಾರ್ಡ್ ಕ್ರ್ಯೂರವರು, ಮುಖ್ಯಮಂತ್ರಿ ಆಸ್ಕ್ವಿತ್ ದಂಪತಿಗಳು, ಲಾರ್ಡ್ ಕರ್ಜನ್‌ರವರು, ಲಾರ್ಡ್ ಆಂಪ್ಥಿಲ್‌ರವರು, ಸರ್ ಗ್ರೈಫೀಡ್ ಉಡ್ ವಿಲ್ಸನ್‌ರವರು ಮೊದಲಾದ ಅನೇಕ ಮಹನೀಯರು ಬಂದಿದ್ದರು. ಅನೇಕಮಂದಿ ಹಿಂದೂ ವಿದ್ಯಾರ್ಥಿಗಳೂ ಹೋಗಿದ್ದರು.

ಕುರುವಿಜಯ.

ಈ ಪತ್ರಿಕೆಯು ಹುಟ್ಟಿ ೩ ತಿಂಗಳಾಯಿತು. ಇದರ ಹೆಸರಿನ ಅರ್ಥವೇನೆಂದು ನಾವು ಒಂದಾವೃತ್ತಿ ಕೇಳಿ ೩ ತಿಂಗಳಿಗೆ ಬಂದಿತು. ಪತ್ರಸಂಪಾದಕರು ಮೊನ್ನೆತಾನೇ ಅದರ ಅರ್ಥವನ್ನು ಲೋಕಹಿತಾರ್ಥವಾಗಿ ಬಿಚ್ಚಿದ್ದಾರೆ. ಈ ಸಂದರ್ಭದಲ್ಲಿ ಇವರು ಪಾಣಿನೀಯಶಾಸ್ತ್ರಪಾಂಡಿತ್ಯವನ್ನು ತೋರಿಸುವುದಕ್ಕೆ ಹೊರಟು ಒಂದು ಕಾಲಮ್ಮನ್ನು ಪೂರೈಸಿದ್ದಾರೆ. ಇಷ್ಟು ಮಾತ್ರಕ್ಕೇ ಕಾಲುಕಾಲಂ ಶುದ್ಧಾಶುದ್ಧ ಪತ್ರಿಕೆಯನ್ನು ಬೇರೆ ಕೊಡಬೇಕಾಗಿ ಬಂದಿತು. ಇದರಮೇಲೆ ಅದನ್ನು ಯಾರಕೈಯಿಂದಲೋ ಬರೆಯಿಸಿರುವರೆಂದು ಇತರರು ತಿಳಿದುಕೊಳ್ಳಬಾರದೆಂದೋ ಏನೋ ಅದರ ಕೆಳಗೆ "ಎಡಿಟರ್" ಎಂದು ಬರೆದು ಬಲಪಡಿಸಿದ್ದಾರೆ.

ಸಿದ್ಧವಾದ ಅರ್ಥವುಳ್ಳ ಹೆಸರನ್ನು ಇವರು ಪತ್ರಿಕೆಗೆ ಇಟ್ಟಿದ್ದರೆ, ಅದನ್ನು ಹೇಳುವುದಕ್ಕೆ ಇಷ್ಟುಕಾಲವೇತಕ್ಕೆ? ಇಷ್ಟಾ

ದರೂ ಇವರು ವ್ಯಾಕರಣ ಸೂತ್ರ ಸಾಹಾಯ್ಯದಿಂದ ಸಾಧಿಸಿರುವುದೇನು? ಕುರುಶಬ್ದವು ದೇಶವಾಚಕವೆಂಬುದು ಮಾತ್ರವೇ ಆಗಿರುತ್ತದೆ. ಹಾಗೆ ಅದನ್ನು ದೇಶವಾಚಕವೆಂದು ಹೇಳುವುದರಲ್ಲಿ ಅಭ್ಯಂತರವಿಲ್ಲ. ಅದು ದೇಶವಾಚಕವಾದರೂ ಕುರುವೆಂಬ ಒಂದು ವಿಭಕ್ತದೇಶದ ಹೆಸರಾಗುವುದೇ ಹೊರತು ಭರತಖಂಡದ ಹೆಸರಲ್ಲ. "ಕುರುಮಗಧಮಲಯಾಳನೇಪಾಳಪಾಂಚಾಲಚೋಳಕುಂತಳ ಪಾರಿಯಾತ್ರಕಾಶ್ಮೀರ....." ಎಂದು ಮೊದಲಾದ ೫೬ ದೇಶಗಳ ಸಮೂಹದಲ್ಲಿ ಸೇರಿದ ಒಂದಾನೊಂದು ದೇಶದ ಹೆಸರಾಗಿ ಇದು ಪ್ರಯೋಗಿಸಲ್ಪಟ್ಟಿರುವ ಉದಾಹರಣೆಗಳು ಅನಂತವಾಗಿರುವುವು. ಭರತಖಂಡವಾದ್ಯಂತಕ್ಕೂ "ಕುರು" ಎಂಬ ಹೆಸರಿರುವುದಪ್ರಸಿದ್ಧವು. ಕುರುವೆಂಬ ಕ್ಷತ್ರಿಯಸಾರ್ವಭೌಮನು ಆಳಿದುದರಿಂದ ಭರತಖಂಡಕ್ಕೆ "ಕುರು" ಎಂದು ನಾಮಕರಣಮಾಡುವ ಸಾಹಸಕ್ಕೆ ಈ ಸಂಪಾದಕರು ಬಿದ್ದಿದ್ದಾರೆ. ಹರಿಶ್ಚಂದ್ರಾದಿ ಷಟ್ಚಕ್ರವರ್ತಿಗಳ ಸಾಲಿನಲ್ಲಿ ಕುರುವಿನ ಹೆಸರಿಲ್ಲ. ಹರಿಶ್ಚಂದ್ರಾದಿಗಳ ಹೆಸರೇ ಈ ದೇಶಕ್ಕಿಲ್ಲದಿರುವಾಗ ಕುರುವಿನ ಹೆಸರನ್ನು ಈ ದೇಶಕ್ಕೆ ಹೇಗೆ ಕಟ್ಟಬಹುದು? ಹಿಂದಿನ ಮಾತು ಹಾಗಿರಲಿ. ಈಗ ಪ್ರತ್ಯಕ್ಷವಾಗಿಯೇ ಜಾರ್ಜ್ ಸಾರ್ವಭೌಮರು ಭರತಖಂಡವನ್ನೆಲ್ಲಾ ಆಳುತ್ತಿರುವರಷ್ಟೆ; ಆ ಮಾತ್ರದಿಂದ ಇದನ್ನು ಜಾರ್ಜ್ ದೇಶವೆಂದು ಹೇಳಿದರೆ ಭರತಖಂಡವೆಂದು ಯಾರಾದರೂ ಅರ್ಥಮಾಡಿಕೊಳ್ಳುವರೆ? ಇವರು ಕಷ್ಟಪಟ್ಟು ಹೀಗೆ ಅರ್ಥಮಾಡಿರುವುದನ್ನು ನೋಡಿದರೆ ಒಂದು ಕಥೆಯು ಸ್ಮರಣೆಗೆ ಬರುತ್ತದೆ.—ಒಬ್ಬ ವಿದ್ಯಾರ್ಥಿಯು ಇತರರನ್ನು ನೋಡಿ ತಾನು ಕವಿತೆಯನ್ನು ಮಾಡಬೇಕೆಂದು ಮೂರು ದಿನಗಳವರೆಗೆ ಮುಲುಕಿ "ಇತ್ಯಪುಲುಕೂಯಂಗ-ಕೋನಂಗುಹೇರಂಗ" ಎಂಬ ಪಂಕ್ತಿಯನ್ನು ಸೇರಿಸಿದ್ದನು. ಅಷ್ಟರಲ್ಲಿ ಉಪಾಧ್ಯಾಯರು ಆಕಡೆಗೆ ಬಂದು, ಇದೇನೆಂದು ಕೇಳುವಲ್ಲಿ "ವಸಂತಋತುವರ್ಣನಪರವಾದ ಕವಿತೆ" ಎಂದು ಹೇಳಿ ತೋರಿಸಿದನು. ಎಷ್ಟುಹೊತ್ತುನೋಡಿದರೂ ಗುರುಗಳಿಗೆ ಅದರ ಅರ್ಥವಾಗಲಿಲ್ಲ. ಇದರರ್ಥವೇನೆಂದು ಅವನನ್ನೇ ಕೇಳಲು, "ಕವಿತ್ವವನ್ನೇನೋ ಮಾಡಿದ್ದೇನೆ. ನಾಳೆ ನಾಡಿದ್ದರಲ್ಲಿ ಅರ್ಥವನ್ನಿಡಬೇಕಾಗಿದೆ." ಎಂದು ಹೇಳಿದನು. ಗುರುಗಳು ಹುಸಿನಗೆನಗುತ್ತ ಹೊರಟುಹೋಗಿ, ೩ ನೆಯ ದಿನ ಬಂದು "ಏನು ಅರ್ಥಮಾಡಿದೆ" ಎಂದು ಕೇಳುವಲ್ಲಿ— "ಇತ್ಯಪುಲು ಕೂಯಂಗ=ಕೋಗಿಲೆಗಳು ಕೂಗುತ್ತಿರಲು, (ಕೋಕಿಲಾಃಪಿಕ ಇತ್ಯಪೀತ್ಯಮರಃ) ಕೋನಂಗುಡೇರಂಗ=ಮನ್ಮಥನು ಉಬ್ಬೇರುತ್ತಿರಲು, (ಕಂದರ್ಪೋದರ್ಪಕೋನಂಗ ಇತ್ಯಮರಃ) ಎಂದು ಹೇಳುವುದಕ್ಕಾರಂಭಿಸಿದನು. ಗುರುಗಳು ತಲೆತಲೆಬಡಿದುಕೊಂಡು, "ನಿನ್ನ ಕವಿತೆಗೂ ಅರ್ಥಕ್ಕೂ ಬೆಂಕಿಯಿಕ್ಕಿತು." ಎಂದು ಹೇಳಿಕೊಂಡು ದಾರಿಹಿಡಿದುಕೊಂಡು ಹೋದರಂತೆ.

ಈ ಸಂಪಾದಕರು ಭರತಖಂಡದ ವಿಜಯಾರ್ಥವಾಗಿಯೇ ಪತ್ರವನ್ನು ಹೊರಡಿಸಿದ್ದರೆ ಅಪ್ರಸಿದ್ಧವಾದ ಹೆಸರನ್ನು ಭರತಖಂಡಕ್ಕೆ ಕಟ್ಟಿ ದ್ರಾವಿಡಪ್ರಾಣಾಯಾಮದಂತೆ ಇಷ್ಟು ಕಷ್ಟಪಡಬೇಕಾದುದೇಕೆ? "ಭಾರತವಿಜಯ" ಎಂದು ವಿತಕ್ಕಿಡಬಾರದಾಗಿದ್ದಿತು? ಅದುಕಾರಣ, ಉದ್ದೇಶವು ಇದಾಗಿರಲಿಲ್ಲವೆಂದು ಹೇಳಬೇಕಾಗುತ್ತದೆ. ಈಗಲೂ ಈ ನಾಮಕರಣದ ನಿಜೋದ್ದೇಶವೇನೆಂಬುದನ್ನು ತಿಳಿಸಿದರೆ, ತಕ್ಕ ಹೆಸರನ್ನಿಡುವುದಕ್ಕೆಯಾರಾದರೂ ಪರೋಪಕಾರಿಗಳು ತಿಳಿಯಿಸಿಕೊಟ್ಟಾರು. ಮತ್ತು ಇವರು ತಮ್ಮ ವ್ಯಾಕರಣಪಾಂಡಿತ್ಯದರ್ಪಣವನ್ನು ಇತರರಮುಖಕ್ಕೆ ಹಿಡಿಯುವುದಕ್ಕೆ ಪ್ರತಿಯಾಗಿ ತಮ್ಮ ಮುಖವನ್ನೇ ನೋಡಿಕೊಂಡರೆ ತಮ್ಮ ಪತ್ರಿಕಾವಾಚಕರು ಉಪಕೃತರಾದಾರು.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರು ಸರ್ ಲೆಸ್ಲಿ ಮಿಲ್ಲರ್, ಕೆ, ಟಿ, ಯವರನ್ನು ತಾ|| ೨೦ ರಾರಭ್ಯ ಚೀಫ್‌ಜಡ್ಜರನ್ನಾಗಿ ನಿಯಮಿಸಿರುವರು.

ಅರಮನೆಯ ಪಕ್ಕದಲ್ಲಿ ಕೋಟೆಯೊಳಗಿರುವ ವರಾಹಸ್ವಾಮಿ ದೇವಾಲಯದ ಧ್ವಜಸ್ತಂಭವು ಮೊನ್ನೆಯ ವಾರದಲ್ಲಿ ಮುರಿದುಬಿದ್ದಿತೆಂದು ಕೇಳಿದೆವು.

೨ ನೆಯ ಕೌನ್ಸಿಲರ್ ಸರ್ದಾರ್ ಕಾಂತರಾಜ ಅರಸ್, ಸಿ. ಎಸ್. ಐ. ಯವರು ಕಳೆದ ಶುಕ್ರವಾರ ರಾಜಧಾನಿಗೆ ಬಂದಿದ್ದು ನಿನ್ನೆಯದಿನ ಬೆಂಗಳೂರಿಗೆ ಪ್ರಯಾಣಮಾಡಿದರು.

ರಾಜಧಾನಿಯಲ್ಲಿ ಕಳೆದ ವಾರ ತುಂತುರುಮಳೆಯೂ ಇಲ್ಲ. ಗಾಳಿಹೆಚ್ಚು, ದಕ್ಷಿಣಭಾಗದಲ್ಲಿ ಇಲಿಗಳು ಸಾಯುವುದಕ್ಕೆ ಆರಂಭವಾಗಿದೆ. ೧-೨ ಪ್ಲೇಗುಮರಣಗಳಾದುವೆಂದು ಕೇಳುತ್ತೇವೆ.

ಕಾವೇರೀ ನದಿಯಲ್ಲಿ ತಕ್ಕಮಟ್ಟಿಗೆ ಪ್ರವಾಹವು ಬಂದಿರುವುದರಿಂದ ಕನ್ನಂಬಾಡಿಯಲ್ಲಿ ಕಟ್ಟಲ್ಪಡುತ್ತಿರುವ ಕಟ್ಟೆಯ ಹದಿಯಲ್ಲಿ ೨-೩ ಕಡೆಯಲ್ಲಿ ಕೊಂಚ ರಂಧ್ರಗಳು ಬಿದ್ದಿರುವುದರ ಮೇಲೆ ಚೀಫ್ ಇಂಜನಿಯರಾದ ಮ|| ಕರ್ಪೂರ ಶ್ರೀನಿವಾಸರಾಯರು ಹೋಗಿ ನೋಡಿಕೊಂಡು ಬಂದರು.

ಮದ್ರಾಸ್ ಗೌರ್ನರವರು ಕಳೆದ ಸೋಮವಾರ ತಮ್ಮ ಬಳ್ಳಾರಿ ಜಿಲ್ಲೆಯ ಸಂಚಾರವನ್ನು ಮುಗಿಸಿಕೊಂಡು ಬೆಂಗಳೂರಿಗೆ ಬಂದು ಅಲ್ಲಿ ರೆಸಿಡೆಂಟರ ಆತಿಥ್ಯದಲ್ಲಿದ್ದು, ದಿ|| ಬ|| ಪುಟ್ಟಣ್ಣಸೆಟ್ಟರ ಮುಖೇನ ನೋಡತಕ್ಕ ಸ್ಥಲಗಳನ್ನೆಲ್ಲಾ ನೋಡಿ ಆ ರಾತ್ರಿಯೇ ಮುಂದಕ್ಕೆ ಪ್ರಯಾಣಮಾಡಿದರು.

ಧಾರವಾಡದ ಚಂದ್ರೋದಯ ಪತ್ರಿಕೆಯು ಕಳೆದ ಮೂರುವಾರುಗಳಿಂದ ಆಂಗ್ಲಕರ್ನಾಟಕ ಭಾಷೆಗಳೆರಡರಲ್ಲೂ ಪ್ರತಿಸೋಮವಾರ ಹೊರಡುತ್ತಲಿದೆ. ಮುದ್ರಣವೂ ಕಾಗದವೂ ವಿಷಯವಿಚಾರಗಳೂ ಸುಮುಖವಾಗಿವೆ. ತನ್ನ ಹೆಸರಿಗೆ ತಕ್ಕಂತೆ ಈ ನಮ್ಮ ಬಂಧುವು ಲೋಕಾಹ್ಲಾದಕವಾಗಿ ಪರಿಣಮಿಸಲೆಂದು ಕೋರುವೆವು.

ರಾಜಧಾನಿಯ ಟೋಲ್‌ಗೇಟಿನ ಸುಂಕದ ಬಗೆಯು ಈಸಲ ಬೇರೆಬೇರೆ ಹರಾಜುಮಾಡಲ್ಪಟ್ಟುದರಲ್ಲಿ ೨೩ ಸಾವಿರ ರೂ. ಗಳವರೆಗೆ ಆಗಿದ್ದು, ಮರಳಿ ಒಟ್ಟು ಹರಾಜುಮಾಡಿಸಲ್ಪಟ್ಟುದರಲ್ಲಿ ೨೫ ಸಾವಿರ ರೂ. ಗಳಾದುವೆಂದು ಕೇಳಿದೆವು. ದರಗಳನ್ನು ಹೆಚ್ಚಿಸಿ ಈ ಬಾಬನ್ನು ೫೦ ಸಾವಿರ ರೂ. ಗಳವರೆಗೆ ಮಾಡಬೇಕೆಂದು ಮ್ಯುನಿಸಿಪಲ್ ಅಧಿಕಾರಿಗಳ ಯೋಚನೆಯಲ್ಲಿದೆಯೆಂದು ಕೇಳುತ್ತೇವೆ.

ನಮ್ಮ ಸಂಸ್ಥಾನದಲ್ಲಿ ಬಹುಕಾಲ ಸೆಷನ್ಸ್ ಜಡ್ಜರಾಗಿದ್ದು ೧೯೧೨ ರಲ್ಲಿ ಉದ್ಯೋಗದಿಂದ ನಿವೃತ್ತರಾಗಿದ್ದ ಮ|| ಬಿ. ತಿರುಮಲಾಚಾರ್‌ರವರು ಕಳೆದ ಗುರುವಾರ ರಾತ್ರಿ ೧೧ ಗಂಟೆಯ ಸಮಯದಲ್ಲಿ ರಾಜಧಾನಿಯಲ್ಲಿರುವ ಸ್ವಗೃಹದಲ್ಲಿ ವಿಧಿವಶರಾದರೆಂದು ತಿಳುಹಲು ವಿಷಾದವಾಗುತ್ತದೆ. ಇವರಿಗೆ ಮರಣಕಾಲದಲ್ಲಿ ೬೭ ವರ್ಷ ವಯಸ್ಸಾಗಿದ್ದಿತು. ಮತ್ತೂ ನಾಲ್ವರು ಗಂಡುಮಕ್ಕಳೂ ಮೂವರು ಹೆಣ್ಣುಮಕ್ಕಳೂ ಇರುವರು.

ಮೈಸೂರು ಗೌರ್ನಮೆಂಟಿನವರು ನೀರಾವರಿ ಕೆಲಸಗಳ ಮೇಲ್ವಿಚಾರಣೆಗಾಗಿಯೇ ಒಬ್ಬ ಅಧಿಕಾರಿಯನ್ನು ನಿಯಮಿಸಿ, ಅದಕ್ಕಾಗಿ ಒಂದು ಶಾಖೆಯನ್ನು ಪ್ರತ್ಯೇಕವಾಗಿ ಏರ್ಪಡಿಸಿರುವರೆಂದು ಕೇಳುತ್ತೇವೆ. ಮುಖ್ಯವಾದ ಈ ಕಾರ್ಯಕ್ಕೆ ಇಂಥ ಏರ್ಪಾಟನ್ನು ಮಾಡಿದುದು ಉತ್ತಮವಾಯಿತು. ಈ ಏರ್ಪಾಟಿನಿಂದಲಾದರೂ ಕಾಲ್ವೆ ಕೆರೆಗಳ ನೀರು ಸರಪರಾಜು ರಿಪೇರಿ ಮೊದಲಾದ ವಿಷಯಗಳಲ್ಲಿ ಪ್ರಜೆಗಳ ದೂರು ತಪ್ಪಿಹೋಗುವಂತಾದೀತೆಂದು ನಿರೀಕ್ಷಿಸುತ್ತೇವೆ.

ರಾಜಧಾನಿಯ ಮುನಸೀಫರಾದ ಮ|| ಜೆ. ಶ್ರೀನಿವಾಸಯ್ಯರ್‌ರವರು ಅಸಿಸ್ಟೆಂಟ್ ಕಮಿಷನರಾಗಿ ನಿಯಮಿಸಲ್ಪಟ್ಟು ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯಟ್ಟಿಗೆ ತೆಗೆದುಕೊಳ್ಳಲ್ಪಟ್ಟಿರುವುದರಿಂದ ಕೋಲಾರದ ಗೋಲ್ಡ್‌ಫೀಲ್ಡಿನಲ್ಲಿ ಮುನಸೀಫರಾಗಿರುವ ಮ|| ಡಿ. ಕೆ. ರಾಮರಾಯರನ್ನು ರಾಜಧಾನಿಗೂ, ದೊಡ್ಡಬಳ್ಳಾಪುರದ ಮುನಸೀಫರಾದ ಮ|| ಪಿ. ಮಹಾದೇವಯ್ಯನವರನ್ನು ಕೋಲಾರದ ಗೋಲ್ಡ್‌ಫೀಲ್ಡಿಗೂ ವರ್ಗಾಯಿಸಿರುವುದಾಗಿ ಕೇಳುತ್ತೇವೆ.

ಬೆಂಗಳೂರಿನಿಂದ ಕರ್ನಾಟಕವೆಂಬ ಪತ್ರವು ಆಂಗ್ಲಭಾಷೆಯಲ್ಲಿ ವಾರಕ್ಕೆರಡುಸಲದಂತೆ ಹೊರಡಿಸಲ್ಪಡುತ್ತಿದ್ದಿತು. ಕಳೆದ ತಿಂಗಳಿಂದ ಅದನ್ನು ಕನ್ನಡದಲ್ಲೂ ಹೊರಡಿಸಲು ಅದರ ಕರ್ತರು ಏರ್ಪಡಿಸಿದ್ದಾರೆ. ತಾತ್ಕಾಲಿಕ ರಾಜಕೀಯಾದಿ ವಿಷಯಗಳನ್ನು ಕುರಿತು ಸಯುಕ್ತಿಕವಾಗಿ ಪ್ರತಿಪಾದಿಸುತ್ತಿರುವ ಈ ನಮ್ಮ ಬಂಧುವು ಚಿರಕಾಲ ದೇಶಸೇವೆಯನ್ನು ಮಾಡಲೆಂದೂ ದೇಶೀಯರು ಪ್ರೋತ್ಸಾಹಿಸಲೆಂದೂ ಕೋರುವೆವು. ಸದ್ಯಃ ಕನ್ನಡದಲ್ಲಿ ವಾರಕ್ಕೆರಡುಸಲ ಹೊರಡುವ ಪತ್ರಿಕೆಯು ಇದರ ಹೊರತು ಮತ್ತೊಂದಿಲ್ಲ.

ಅಸಿಸ್ಟೆಂಟ್ ಸರ್ಜನ್‌ರುಗಳಾದ ಡಿ. ಎಸ್. ಕೆ. ಹನುಮಂತರಾಯರು ವಿಕ್ಟೋರಿಯಾ ಆಸ್ಪತ್ರೆಯಿಂದ ಡಾ|| ಡೇವಿಡ್‌ರವರು ಬರುವವರೆಗೆ ಕೋಲಾರದ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಾಗಿಯೂ, ಡಾ|| ಡಬ್ಲ್ಯು. ಶ್ರೀನಿವಾಸಯ್ಯಂಗಾರರು ಕೋಲಾರದಿಂದ ಬೆಂಗಳೂರು ಹುಚ್ಚರಾಸ್ಪತ್ರೆಯ ಮತ್ತು ಮೆಡಿಕಲ್ ಸ್ಟೋರ್ಸ್ಸಿನ ಸೂಪರಿಂಟೆಂಡೆಂಟರಾಗಿಯೂ, ಡಾ|| ಡಿ. ಎಸ್. ಡೇವಿಡ್‌ರವರು ಕಡೂರಿಂದ ಕೋಲಾರದ ಡಿಸ್ಟ್ರಿಕ್ಟ್ ಮೆಡಿಕಲಾಫೀಸರಾಗಿಯೂ, ಡಾ|| ವಿ. ಅಬ್ಬಯ್ಯನಾಯಿಡುಯವರು ಹುಚ್ಚರಾಸ್ಪತ್ರೆಯಿಂದ ಕಡೂರು ಡಿಸ್ಟ್ರಿಕ್ಟ್ ಮೆಡಿಕಲಾಫೀಸರಾಗಿಯೂ ವರ್ಗಾಯಿಸಲ್ಪಟ್ಟಿರುವರು.

ನಂಜನಗೂಡು ಶ್ರೀಕಂಠೇಶ್ವರಸ್ವಾಮಿಗೆ ಇಗೇ ಆಷಾಢಮಾಸದಲ್ಲಿ ಗಿರಿಜಾಕಲ್ಯಾಣಮಹೋತ್ಸವವು ಪ್ರತಿವರ್ಷವೂ ನಡೆಯುವಂತೆ ಈಸಲವೂ ನಡೆದು, ತದಂಗವಾಗಿ ಪ್ಲವೋತ್ಸವವು ಕಪಿನೀನದಿಯಲ್ಲಿ ೩ ದಿನಗಳು ನಡೆಯಬೇಕಾಗಿದ್ದಂತೆ ಶನಿವಾರ ರಾತ್ರಿ ನಡೆದು, ಭಾನುವಾರ ರಾತ್ರಿ ಉತ್ಸವವು ಆರಂಭಗೊಂಡ ಸ್ವಲ್ಪಹೊತ್ತಿನೊಳಗೇ ತೆಪ್ಪವು ಮಗುಚಿಕೊಂಡು ಸರ್ವಾಭರಣಾಲಂಕಾರ ಸಮೇತವಾಗಿ ಉತ್ಸವಮೂರ್ತಿಯೂ ತೆಪ್ಪವೂ ೩-೪ ಆಳುದ್ದದ ನೀರಿನಲ್ಲಿ ಮುಳುಗಿತು. ತೆಪ್ಪದಮೇಲಿದ್ದ ಅರ್ಚಕರು ಮೊದಲಾದ ೨೦ ಮಂದಿಗಳವರೆಗಿನವರೆಲ್ಲರೂ ನೀರಿನಲ್ಲಿ ಈಸುಬಿದ್ದು ದಡವನ್ನು ಸೇರಿದರು. ಒಬ್ಬ ಬೆಸ್ತನೂ ಅವನ ಮೂರುಮಂದಿ ಗಂಡುಮಕ್ಕಳೂ, ಒಬ್ಬ ಉಪ್ಪಲಿಗನೂ ಮಾತ್ರ ನೀರಿನಲ್ಲಿ ಮುಳುಗಿ ಸತ್ತರು. ಮರುದಿನ ಬೆಳಗಿನ ೮ ಗಂಟೆಗೆ ಮೂರ್ತಿಯನ್ನು ಹೊರತೆಗೆದರು. ಆಭರಣಗಳೆಲ್ಲವೂ ದೊರೆದುವು. ಒಂದು ರತ್ನವೂ ಒಂದು ಚಿನ್ನದ ಕೋರೆಯೂ ಮಾತ್ರ ಸಿಕ್ಕಿಲ್ಲವೆಂದು ಕೇಳುತ್ತೇವೆ.

ಚೀಫ್‌ಕೋರ್ಟಿನ ರೆಜಿಸ್ಟ್ರಾರರಾದ ಮ|| ಎ. ಎ. ರಾಜರತ್ನಮೊದಲಿಯಾರರು ಕಳೆದ ಗುರುವಾರದ ದಿವಸ ಕೋರ್ಟಿಗೆ ಹೋಗಿ ಕೆಲಸಮಾಡಿಕೊಂಡುಬಂದು ಶುಕ್ರವಾರ ಬೆಳಿಗ್ಗೆ ವಾಯುವಿಹಾರಕ್ಕೆ ಹೋಗಿದ್ದು ಮ|| ಸತ್ಯರಾಜಶೆಟ್ಟರ ಕೂಡ ಮಾತನಾಡುತ್ತಿರುವಾಗ್ಗೆ ಆಕಸ್ಮಿಕವಾಗಿ ಸ್ಮೃತಿತಪ್ಪಲು, ಕೂಡಲೇ ಅವರ ಮನೆಗೊಯ್ಯಲ್ಪಟ್ಟು ಎಷ್ಟುಪಚರಿಸಿದಾಗ್ಯೂ ಸ್ಮೃತಿಯನ್ನು ಹೊಂದದೆ ಸ್ವಲ್ಪಹೊತ್ತಿನಲ್ಲಿ ಕಾಲಾಧೀನರಾದರೆಂದು ತಿಳುಹಲು ಅತ್ಯಂತ ವ್ಯಸನವಾಗುತ್ತದೆ. ಇವರಿಗೆ ೫೨ ವರ್ಷ ವಯಸ್ಸಾಗಿದ್ದಿತು. ಇವರು ಬಹಳ ನಿಧಾನಿಗಳೆಂದೂ ದಯಾಶಾಲಿಗಳೆಂದೂ ಹೆಸರ್ಪಡೆದು ಎಲ್ಲಜನರ ಪ್ರೀತಿಗೌರವಕ್ಕೆ ಪಾತ್ರರಾಗಿದ್ದರು. ಇವರು ಈ ಸೀಮೆಗೆ ಬರುವುದಕ್ಕೆ ಮೊದಲು ಮದ್ರಾಸಿನಲ್ಲಿ ಅಟರ್ನಿ ಅಟ್ ಲಾಯವರಾಗಿ ೮ ವರ್ಷಗಳವರೆಗೆ ವಕೀಲಿಯನ್ನು ನಡೆಸುತ್ತಿದ್ದು ೧೮೯೪ರಲ್ಲಿ ಚೀಫ್‌ಕೋರ್ಟಿನ ಡೆಪ್ಯುಟಿ ರೆಜಿಸ್ಟ್ರಾರರಾಗಿ ನಿಯಮಿಸಲ್ಪಟ್ಟು, ೧೮೯೫ರಲ್ಲಿ ಚೀಫ್‌ರೆಜಿಸ್ಟ್ರಾರರಾಗಿ ಅಭಿವೃದ್ಧಿಗೊಳಿಸಲ್ಪಟ್ಟರು. ಅನೇಕವೇಳೆ ಬೆಂಗಳೂರು ಆಕ್ಟಿಂಗ್ ಸೆಷನ್ಸ್ ಜಡ್ಜರಾಗಿದ್ದರು.

ಇಂಡಿಯಾದೇಶದ ಯಾವ ಯೂನಿವರ್ಸಿಟಿಯಲ್ಲಾಗಲಿ, ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾದವರು ೧೦ ವರ್ಷಗಳಮೇಲೆ, ಯಾವ ಭೂ ಸ್ವತ್ತು ಇಲ್ಲದಿದ್ದರೂ ಪ್ರಜಾಪ್ರತಿನಿಧಿಸಭೆಗೆ ಮೆಂಬರಾಗಿ ಚುನಾಯಿಸಲ್ಪಡಬಹುದೆಂತಲೂ, ಹೀಗೆ ಚುನಾಯಿಸಲ್ಪಡುವ ತಾಲ್ಲೂಕಿನಲ್ಲಿ ಅವರು ೩ ವರ್ಷಕಾಲ ವಾಸಸ್ಥರಾಗಿರಬೇಕೆಂತಲೂ, ಸಭೆಯಲ್ಲಿ ಚರ್ಚಿಸಲ್ಪಡುವ ಸಂಸ್ಥಾನಾ ಮಳಿಯ ಮತ್ತು ಸ್ಥಳೀಯ ವಿಷಯಗಳೆರಡೂ ಸೇರಿ ೬೫-೬೫ ವಿಷಯಗಳನ್ನು ಮಾತ್ರ ಬೆಂಗಳೂರು ಮತ್ತು ಮೈಸೂರು ಡಿಸ್ಟ್ರಿಕ್ಟುಗಳವರೂ, ಡಿಸ್ಟ್ರಿಕ್ಟು ಒಂದಕ್ಕೆ ೫೦ ರಂತೆ ಉಳಿದ ಡಿಸ್ಟ್ರಿಕ್ಟಿನವರೂ ವಿಷಯಗಳನ್ನು ತರಬಹುದೆಂತಲೂ, ಈ ವಿಷಯಗಳ ಚುನಾವಣೆಯು ಡಿಸ್ಟ್ರಿಕ್ಟುಗಳಲ್ಲಿ ನಡೆಯುವ ಸಭೆಗಳಲ್ಲಿ ಮೆಂಬರುಗಳ 'ಓಟು' ಗಳ ಮೂಲಕ ತೀರ್ಮಾನಿಸಲ್ಪಡಬೇಕೆಂತಲೂ, ಆಯಾ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರು ಈ ರೀತಿಯಲ್ಲಿ ಆರಿಸಿ ಕಳುಹಿಸಿದ ವಿಷಯಗಳನ್ನು ಮುಖ್ಯವಾದುದು, ಸಾಮಾನ್ಯವಾದುದು ಎಂದು ಸರ್ಕಾರದವರು ಎರಡು ಬಗೆಯಾಗಿ ವಿಂಗಡಿಸುವರೆಂತಲೂ, ಮುಖ್ಯ ವಿಷಯಗಳ ಚರ್ಚೆಗೆ ೧೫ ನಿಮಿಷವೂ, ಸಾಮಾನ್ಯವಿಷಯಗಳ ಚರ್ಚೆಗೆ ೫ ನಿಮಿಷವೂ ಕೊಡಲ್ಪಡುವುದೆಂತಲೂ, ಸಭಾಧ್ಯಕ್ಷರು ಉತ್ತರ ಹೇಳಿದ ಬಳಿಕ ಚರ್ಚೆಗಳು ನಡೆಯಕೂಡದೆಂತಲೂ ಸರ್ಕಾರದವರು ಹುಕುಂ ಅಪ್ಪಣೆಮಾಡಿದ್ದಾರೆ.

ವರ್ತಮಾನಸಂಗ್ರಹವು.

ಲೇಡಿ ಹಾರ್ಡಿಂಜ್‌ರವರ ಅಂತ್ಯಕ್ರಿಯೆಗಳು ಬುಧವಾರ ನಡೆದುದರಿಂದ ಆ ಸಮಯದಲ್ಲಿ ಸರ್ಕಾರದ ಕಾರ್ಯಾಲಯಗಳೆಲ್ಲವೂ ಮುಚ್ಚಲ್ಪಟ್ಟಿದ್ದು ಆ ಮಧ್ಯಾಹ್ನ ದೇವಾಲಯಗಳಲ್ಲಿ ಪ್ರಾರ್ಥನೆಯನ್ನು ಜರುಗಿಸಿ, ದುಃಖಸೂಚಕವಾಗಿ ಧ್ವಜಪತಾಕೆಗಳೆಲ್ಲಾ ಇಳಿಯಿಸಲ್ಪಟ್ಟಿರಬೇಕೆಂದು ಇಂಡ್ಯಾಪ್ರಭುತ್ವದವರು ಆಯಾ ಪ್ರಾಂತಿಕ ಸರ್ಕಾರಗಳಿಗೆಲ್ಲಾ ತಿಳಿಯಪಡಿಸಿದ್ದರು.

ಬೊಂಬಾಯಿ ಸರ್ಕಾರದವರು ಸ್ಕೂಲ್‌ಫೈನಲ್ ಪರೀಕ್ಷೆಯ ವಿಷಯವಾಗಿ ಗೆಜೆಟ್ಟಿನಲ್ಲಿ ಹೀಗೆ ಪ್ರಕಟಿಸಿದ್ದಾರೆ:—೧೯೧೬ ನೆಯ ವರ್ಷದಿಂದ ಈ ಪರೀಕ್ಷೆಯು ನವಂಬರು ತಿಂಗಳಲ್ಲಿ ತಪ್ಪಿ ಮಾರ್ಚಿ ತಿಂಗಳಲ್ಲಿ ನಡೆಯುವುದು. ೧೯೧೫ ನೆ ಮಾರ್ಚಿ ತಿಂಗಳಲ್ಲಿ ಸಪ್ಲಿಮೆಂಟರಿ ಪರೀಕ್ಷೆಯು ನಡೆಯುವುದು. ೧೯೧೪ ನೆ ವರ್ಷದಲ್ಲಿ ತಪ್ಪಿಹೋಗಿರುವವರು ಮಾರ್ಚಿ ತಿಂಗಳ ಪರೀಕ್ಷೆಗೆ ಹೋಗಬಹುದು. ೧೯೧೪ ನೆ ವರ್ಷದಲ್ಲಿ ತಕ್ಕಷ್ಟು ವಯಸ್ಸಾಗದೆ ಇದ್ದಕಾರಣದಿಂದ ಪರೀಕ್ಷೆಗೆ ಹೋಗಲಾರದೆ ಇದ್ದವರು ೧೯೧೫ ನೆಯ ಆಗಸ್ಟ್ ತಿಂಗಳಿಗೆ ಯುಕ್ತವಯಸ್ಸು ಉಂಟಾಗಿದ್ದಲ್ಲಿ ಅವರೂ ಈ ಸಪ್ಲಿಮೆಂಟರಿ ಪರೀಕ್ಷೆಗೆ ಹೋಗಬಹುದು. ಈ ಪರೀಕ್ಷೆಗೆ ೧೯೧೪ ನೆ ವರ್ಷದಲ್ಲಿ ಏರ್ಪಟ್ಟಿದ್ದ ಪುಸ್ತಕಗಳೇ ಪಠನೀಯಗ್ರಂಥಗಳಾಗಿರುವುವು.

ಸ್ವೀಕಾರ.

ಕೈ|| ವೈ. ವೀರಸಂಗಪ್ಪನವರ ಜ್ಞಾಪಕಾರ್ಥವಾಗಿ ಅಗ್ರಹಾರ ಬೆಲಧಬಗೆಗೆ ಹಾಗಲವಾಡಿ ಮ|| ಪಟೇಲ್ ಸಿದ್ಧರಾಮಪ್ಪನವರ ಪುತ್ರರ ವಿವಾಹದಲ್ಲಿ ೧ ರೂ. ಶಿರಾ ತಾ|| ಅಗಳಿಯೆಂಬ ಗ್ರಾಮದಲ್ಲಿ ನಡೆದ ವಿವಾಹದಲ್ಲಿ ಮೊದಲೂರು ಊಕೇದ ಮಠದ ಶ್ರೀಪಟ್ಟದಸ್ವಾಮಿಗಳ ಮೂಲಕ ೧ ರೂ. ಹೊನ್ನುಡಿಕೆ ಮ|| ಯಜಮಾನ್ ಹೊನ್ನಸೆಟ್ಟಪ್ಪನವರ ೩ ನೆಯ ಮಕ್ಕಳ ವಿವಾಹದಲ್ಲಿ ೧ ರೂ. ಹೊನ್ನುಡಿಕೆ ಮ|| ವೀರಭದ್ರಸೆಟ್ಟರ ಮಗಳ ಲಗ್ನದಲ್ಲಿ ತುಮಕೂರು ಷಾಪ್ ಮ|| ರೇವಣ್ಣನವರ ಸೂಚನೆಯ ಮೇರೆಗೆ ೧ ರೂ. ಗುಬ್ಬಿ ತಾ|| ಪುರಗ್ರಾಮದ ಶ್ರೀ ಸಂಪಿಗೆಮಠದ ಚೆನ್ನಬಸವಾರಾಧ್ಯರ ಪುತ್ರಿಯ ಲಗ್ನದಲ್ಲಿ ನೊಣವಿನಕೆರೆ ಸೋಮಕಟ್ಟೆ ಮಠದ ಶ್ರೀಕರಿವೃಷಭೇಂದ್ರ ಸ್ವಾಮಿಗಳಪ್ಪಣೆಯಂತೆಯೂ ೧೫ೂ ಬೆಳಗೋಡು ಮ|| ಬೆ. ಸಿದ್ವೀರಸೆಟ್ಟರ ಮನೆಯ ೧ ರೂ. ತುಮಕೂರು ಮಂಡಿ ಮ|| ಟಿ. ಆರ್ ರೇವಣ್ಣನ ಲಗ್ನದಲ್ಲಿ ಪಗಿಂಡ ಆಲೂರಲ್ಲಿ ನಡೆದ ವಿವಾಹದಲ್ಲಿ ೪ ಆಣೆ ಈ ಪ್ರಕಾರ ನಮಗೆ ಸಂದಿರುತ್ತವೆ. [ಪ. ಪ್ರ]

ಪತ್ರವ್ಯವಹಾರಕರಿಗೆ ಸೂಚನೆ.

ನಾವೆಷ್ಟು ವಿಧವಾಗಿ ಎಚ್ಚರಿಸಿದ್ದಾಗ್ಯೂ ಜನಸಾಮಾನ್ಯಕ್ಕುಪಯೋಗವಿಲ್ಲದ ವಿಷಯಗಳನ್ನು ತಮಗೆ ಬೇಕಾದಕಡೆ ಹಚ್ಚಿಸುವುದಕ್ಕಾಗಿ ಪುಟಗಟ್ಟಲೆಯಾಗಿಯೂ, ಅಸ್ಪಷ್ಟವಾಗಿಯೂ ಅಸಂಬದ್ಧವಾಗಿಯೂ ಲೇಖನಗಳನ್ನು ಅನೇಕ

ರು ಬರೆಯುತ್ತಿರುವದರಿಂದ ಇತಃಪರ ಅಂತಹ ಲೇಖನಗಳಿಗೆ ಸುತರಾಂ ಲಕ್ಷ್ಯವು ಕೊಡಲ್ಪಡದೆ ಜನಸಾಮಾನ್ಯಕ್ಕೆ ಉಪಯುಕ್ತವಾದವಿಷಯಗಳು ಬಹುಸಂಕ್ಷೇಪವಾಗಿಯೂ, ಸ್ಪಷ್ಟವಾಗಿಯೂ ಬರೆಯಲ್ಪಟ್ಟು ಪ್ರತಿ ಮಂಗಳವಾರ ಅಥವಾ ಬುಧವಾರದೊಳಗೆ ನಮಗೆ ತಲುಪಿದ ಲೇಖನಗಳು ಮಾತ್ರ ಪ್ರಕಟಗೊಳಿಸಲ್ಪಡುವವು. ವೀರಶೈವ ವಿದ್ಯಾಭಿವೃದ್ಧಿ ಫಂಡಿಗಾಗಲಿ ಅಥವಾ ಶಿವಯೋಗಮಂದಿರಕ್ಕಾಗಲಿ ಹಣವು ಕಳುಹಲ್ಪಟ್ಟಿರುವ ವಿಚಾರವು ಫಂಡಿನ ಸೆಕ್ರೆಟರಿ ಮತ್ತೂ ಮಂದಿರದ ವ್ಯವಸ್ಥಾಪಕರುಗಳಿಂದ ಬಂದ ವಿನಾ ಈ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವದಿಲ್ಲವು. ಮತ್ತೂ ಫಂಡಿನ ಹಣವನ್ನು ಸೆಕ್ರೆಟರಿಯವರಲ್ಲಿಗೆ ಕಳುಹಬೇಕಲ್ಲದೆ ನಮ್ಮಲ್ಲಿಗೆ ಕಳುಹಲಾಗದು. [ಸ ಸ.]

ಸು ಮ ದಾ ಖ ರ.

ಕಳೆದ ತಾ॥ ೨೦ ರಲ್ಲಿನಮ್ಮ ಪರಮಪ್ರಭು ಲಾರ್ಡ್‌ಹಾರ್ಡಿಂಜ್‌ರವರ ಜನ್ಮೋತ್ಸವವು ಬಹಳ ವಿಜೃಂಭಣೆಯಿಂದ ಜರುಗಿತು. ಶಾಲೆಯನ್ನೂ ಬೀದಿಗಳನ್ನೂ ತಳಿರ್ತೋರಣಗಳಿಂದಲೂ ಪುಷ್ಪಮಾಲೆಗಳಿಂದಲೂ ಶೃಂಗರಿಸಿದ್ದರು. ಎರಡು ಘಂಟೆಗೆ ಊರ ಪ್ರಮುಖಜನರೂ ರೈತಜನರೂ ಕೂಡಿದರು. ಆವೇಳೆ ಅನೇಕ ಮಂಗಳವಾದ್ಯಗಳೊಡನೆ ಪರಮಪ್ರಭು ಜಾರ್ಜ ಬಾದಶಹರವರ ಹಾಗೂ ಲಾರ್ಡಹಾರ್ಡಿಂಜರವರ ಫೋಟೋಗಳನ್ನು ಮೆರೆಸುತ್ತ ಆಗಸೆಯುಹತ್ತರ ಗಿಡಗಳನ್ನು ಹಚ್ಚಿ ತಿರುಗಿ ಶಾಲೆಗೆ ಬಂದರು. ಅಧ್ಯಕ್ಷತೆಯನ್ನು ಇಲ್ಲಿಯ ಪಾಟೀಲರಾದ ಗಿರಿಗೌಡಪ್ಪಾ ಪಾಟೀಲ ಇವರು ವಹಿಸಿದರು. ಆವೇಳೆ ವಿದ್ಯಾರ್ಥಿಗಳು ಬಾದಶಹರವರ ಹಾಗೂ ಗವ್ಹರ್ನರ್ ಜನರಲ್‌ರವರಸ್ತುತಿ ಪರವಾದಪದಗಳನ್ನು ಅಂದರು. ತರುವಾಯ ಇಲ್ಲಿಯ ಹೆಡ್‌ಮಾಸ್ಟರ ಮ॥ಸಂಜೀವ ಇವರು ಇಂಗ್ಲೀಷ ಸಾಮ್ರಾಜ್ಯದಿಂದ ಪ್ರಜೆಗಳಿಗೆ ಆಗುವ ಲಾಭಗಳನ್ನು ವಿವರಿಸಿ, ನಾವೆಲ್ಲರೂ ರಾಜನಿಷ್ಠರಾಗಿರುವದು ಆದ್ಯಕರ್ತವ್ಯವೆಂದು ಹೇಳಿದರು. ಆವೇಳೆ ಸಂಗೊಳ್ಳಿ ಇವರು ವಿದ್ಯಾಸಂಬಂಧದಿಂದಲೂ ಸ್ತ್ರೀ ಶಿಕ್ಷಣಸಂಬಂಧದಿಂದಲೂ ಹೇಳಿದರು. ತರುವಾಯ ಅಧ್ಯಕ್ಷರ ಭಾಷಣವಾಗಿ ವಿದ್ಯಾರ್ಥಿಗಳ ಉತ್ತೇಜನಾರ್ಥವಾಗಿ ಬೇಡರಹುಡುಗರಿಗೆ ಟೊಪ್ಪಿಗೆಗಳನ್ನೂ ಯಾವತ್ತೂ ಹುಡುಗರಿಗೆ ಮಿಠಾಯಿಯನ್ನೂ ಹಂಚಿದರು. ೭ ನೇ ಈಯತ್ತೆಯ ಒಬ್ಬ ವಿದ್ಯಾರ್ಥಿಯು ಪಾಟೀಲರವರು ಸಿಂಗಲ್‌ಬಾರ ಕೊಟ್ಟ ಉಪಕಾರವನ್ನು ನೆನೆಯಿಸಲು, ಅವರು ಮಾಲ ಕಂಬವನ್ನೂ, ಕೆಲವು ಜೋಡುಲೋಡುಗಳನ್ನೂ ಕೊಡಲು ವಾಗ್ದಾನಮಾಡಿದರು. ಇವರು ಉದಾರಮನಸ್ಸಿನವರು ಇದ್ದು ಕೋ ಆಪರೇಟಿವ್ ಕ್ರೆಡಿಟ್‌ಸೊಸೈಟಿಯ ಚೇರಮನ್ನರಿದ್ದು ಯಾವ ಕಲ್ಯಾಣದ ಕೆಲಸದಲ್ಲಿಯೂ ತತ್ಪರರಿರುವರು. ಆವೇಳೆ ಗಂಧಪುಷ್ಪತಾಂಬೂಲ ವಿನಿಯೋಗವಾದ ಬಳಿಕ ಸಭೆಯು ವಿಸರ್ಜನೆಯಾಯಿತು.

ಓರ್ವಪ್ರೇಕ್ಷಕ,

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರಘರಾಜೇಂದ್ರ ಮಹಾಸ್ವಾಮಿನಾಂ॥

ಶ್ರೀಮಚ್ಚಿನ್ಮೂಲಾದ್ರಿಬೃಹನ್ಮಠ ಮಹಾ॥ ॥ ಸಂಸ್ಥಾನ ಕಛೇರಿಯಿಂದ

ಸಮಸ್ತ ವೀರಶೈವ ಮಹಾಜನಗಳಿಗೆ ಸೂಚಿಸುವದೇನಂದರೆ:—ಶ್ರೀ ಖಾಸಸ್ವಾರಿಯು ಮುಂಬಾಯಿ ಮತ್ತು ಮೊಗಲಾಯಿ ಇಲಾಖೆಗಳಲ್ಲಿ ವಿಜಯಂಗೈದು ಅನೇಕ ರಾಜಮಹಾರಾಜರುಗಳಿಂದಲೂ, ಅಧಿಕಾರಿವರ್ಗದವರಿಂದಲೂ ಅರ್ಪಿಸಲ್ಪಟ್ಟ ಬಹುಮಾನಗಳನ್ನಂಗೀಕರಿಸಿ ಅನೇಕ ಭಕ್ತಸಂದೋಹದ ಕಪ್ಪಕಾಣಿಕೆಯಂ ಸ್ವೀಕರಿಸಿ ಅವರನ್ನು ದರ್ಶನಾಶೀರ್ವಾದಗಳಿಂದ ಪುನೀತರನ್ನಾಗಿ ಮಾಡುತ್ತಿರುವುದು ಸರ್ವಶ್ರುತವಾಗಿರುವುದಷ್ಟೆ. ಆದರೆ ಈಚೆಗೆ ಮೈಸೂರ್ ಇಲಾಖ ಮತ್ತು ಧಾರ್ವಾಡ, ಕಾರವಾರ ಜಿಲ್ಲೆಗಳ ಬಹುಭಾಗದ ವೀರಶೈವ ಪ್ರಮುಖರಿಂದ ಶ್ರೀ ಖಾಸಸ್ವಾರಿಯು ತಮ್ಮ ಪ್ರಾಂತಗಳಿಗೆ ದಯಮಾಡಿಸಬೇಕೆಂದು ಬಿನ್ನಹಪತ್ರಗಳು ಬಂದಿರುವುದರಿಂದಲೂ ಮತ್ತೆ ಮಹಾರಾಷ್ಟ್ರದೇಶದಲ್ಲಿ ಶ್ರೀಮತ್ ಶಾಹು ಛತ್ರಪತಿ ಮಹಾರಾಜ ಇಲಾಖಾ ಕರವೀರ (ಕೊಲ್ಹಾಪೂರ್) ಸರ್ಕಾರ್ ಇವರ ಉದಾರಾಶ್ರಯದಿಂದ ಕೊಲ್ಹಾಪೂರ್ ರಾಜಧಾನಿಯಲ್ಲಿ ಸ್ಥಾಪನಮಾಡಿಸಲ್ಪಟ್ಟಿರುವ ಮಹಾ॥ ॥ ಸಂಸ್ಥಾನದ ಶಾಖಾ ಮಠಕ್ಕೆ ಕಾಶೀಕ್ಷೇತ್ರವಾಸಿಗಳಾಗಿದ್ದ ಗುರುಸಿದ್ಧ ದೇಶಿಕೇಂದ್ರ ಇವರಿಗೆ ಅಧಿಕಾರವನ್ನು ದಯಪಾಲಿಸಿದ ಬಾಬತು ಸಾಂಗವಾಗಬೇಕಾಗಿರುವ ಮಹಾಗಣಾರಾಧನೆಯ ಉತ್ಸವಗಳನ್ನೂ ಇದೇ ಆನಂದ ಸಂವತ್ಸರದ ಶ್ರಾವಣದಕೊನೆಯೊಳಗಾಗಿ ಪೂರೈಸಬೇಕಾಗಿರುವುದರಿಂದಲೂ, ತುರ್ತ ಮಧ್ಯಪ್ರಾಂತ ಮತ್ತು ವರಾಡಪ್ರಾಂತಗಳ ಸರ್ಕ್ಯೂಟ್ ನಿಲ್ಲಿಸಿ, ಇಲ್ಲಿಂದ ಸೊಲ್ಲಾಪೂರ್‌ಮಾರ್ಗವಾಗಿ ಸೀದಾ ಕೊಲ್ಹಾಪುರಕ್ಕೆ ದಯಮಾಡಿಸಿ, ಅಲ್ಲಿಯ ಕಾರ್ಯಗಳನ್ನು ನೆರವೇರಿಸಿ, ಅನಂತರ ಧಾರ್ವಾಡ ಮಾರ್ಗವಾಗಿ ಆಶ್ವೀಜಮಾಸಕ್ಕೆ ಗದಗ ಅಥವಾ ಲಕ್ಷ್ಮೇಶ್ವರ ತಾಲ್ಲೋಕಿಗೆ ಚಿತ್ತೈಸಿ ಅಲ್ಲಿ ದಸರಾಮಹೋತ್ಸವವನ್ನು ಸಾಂಗಗೊಳಿಸಿ, ತರುವಾಯ ಚಿತ್ರದುರ್ಗದ ಬೃಹನ್ಮಠ ಮಹಾ॥ ॥ ಸಂಸ್ಥಾನಕ್ಕೆ ದಯಮಾಡಿಸುವುದಾಗಿ ಅಪ್ಪಣೆಯಾಗಿದೆ. ಮತ್ತು ಕೊಲ್ಹಾಪೂರ್ ರಾಜಧಾನಿಯಲ್ಲಿ ನಡೆಯುವ ಗಣಾರಾಧನಾದಿಮಹೋತ್ಸವಗಳ ಮುಹೂರ್ತವು ನಿಶ್ಚಯವಾದ ಕೂಡಲೆ ಸೂಚಿಸುವುದರಲ್ಲಿ ಬರುವುದು.

ಸೋಲ್ಹಾಂ ನಳೇಗಾವ, ತಾ॥ ೧೯-೬-೧೯೧೮ } ಚನ್ನಬಸವಯ್ಯ ಹೇಮಗಿರಿ ಮಠ ಕಾರ್ಯಭಾರಿ.

ವಾಗ್ಭೂಷಣಕರ್ತರ ತಪ್ಪು.

ಆಯ್ಯಾ ಸಂಪಾದಕರೇ! ವಾಗ್ಭೂಷಣವೆಂಬ ಮಾಸಪತ್ರಿಕೆಯು ಧಾರವಾಡದಲ್ಲಿ ಹುಟ್ಟುತ್ತಿರುವುದು ಬಹು ಜನರಿಗೆ ಗೊತ್ತುಂಟು ಆ ಪತ್ರಿಕೆಯ ನಡೆಯುವ ವರ್ಷದ ಮಾರ್ಚ ಮತ್ತೂ ಏಪ್ರಿಲ ತಿಂಗಳುಗಳ ಸಂಚಿಕೆ ೪-೫ ಸಂಪುಟ ೧೯ ನೇದರಲ್ಲಿ "ಭಾರತೀಯ ವಿದುಷಿಯರು" ಎಂಬ ಲೇಖನವನ್ನು ಬರೆದಿರುವರು. ಆ ಲೇಖದ ೩೩ ನೇ ಪಾನಿನಲ್ಲಿ ಕೆಳಗೆ ಬರೆದಂತೆ ಬರೆಯಲ್ಪಟ್ಟಿದೆ. ನೀಲಮ್ಮ, ಬಿಜ್ಜಳದೇವಿ, ಕಾಳವ್ವೆ, ಮಹಾದೇವಿಅಕ್ಕ, (೧೭) ಇವರು ವಿಜಾಪುರದಂತೆ ಧರ್ಮಮಾರ್ಗದಲ್ಲಿ ಪ್ರಸಿದ್ಧಿಯನ್ನು ಪಡೆದವರೂ ವಿದುಷಿಯರೂ ಆದ ವೀರಶೈವಮತದ ಸ್ತ್ರೀಯರು ಅನೇಕರು ಆಗಿಹೋಗಿರುವರು, ಅವರಲ್ಲಿ ವೀರಶೈವ ಮತ ಸ್ಥಾಪಕನಾದ ಶ್ರೀಬಸವೇಶ್ವರನ ಧರ್ಮಪತ್ನಿಯಾದ ನೀಲಲೋಚನೆ ಇಲ್ಲವೆ ನೀಲಮ್ಮ ಎಂಬುವಳು. ಒಬ್ಬಳು ಈಕೆಯು ಬಿಜ್ಜಳರಾಜನ ಪ್ರಸಿದ್ಧ ಮಂತ್ರಿಯಾದ ಬಲದೇವನ ತಮ್ಮನಾದ ಸಿದ್ಧಣ್ಣ ಮಂತ್ರಿಯ ಮಗಳು. ಮಂತ್ರಿಕುಟುಂಬಕ್ಕೆ ಸೇರಿದವಳಾಗಿ ಕೇವಲ ಶ್ರೀಮಂತಿಕೆಯ ವಿಲಾಸದಲ್ಲಿ ಹೊತ್ತುಗಳೆಯದೆ ಉಪಯುಕ್ತವಾದ ಜ್ಞಾನವನ್ನು ಸಂಪಾದಿಸಿದಳು. "ಪ್ರಸಾದಸಂಪಾದನೆ" "ಕಾಲಜ್ಞಾನ" ಎಂಬ ಎರಡು ಗ್ರಂಥಗಳನ್ನು ರಚಿಸಿರುವಳು. ಮತಗುರುವಿನ ಮಡದಿಯಾದುದರಿಂದ ಈಕೆಯನ್ನು ಕೇವಲ ವೀರಶೈವರೇ ಪೂಜಿಸುವರೆಂಬಂತಿಲ್ಲ; ವಿದ್ಯಾವತಿಯಾದುದರಿಂದ ಈಕೆಯು ಎಲ್ಲರ ಮನ್ನಣೆಗೂ ತಕ್ಕವಳಾಗಿರುವಳು."

ಮೇಲೆ ಬರೆದಂತೆ ಲೇಖನಕೊಟ್ಟು ನಮ್ಮ ವೀರಶೈವ ಮತದ ವಿದುಷಿಯರ ವಿದ್ವತ್ತನ್ನು ಪ್ರಕಟಿಸಿದ್ದಕ್ಕಾಗಿ ಎಲ್ಲ ವೀರಶೈವರೂ ವಾಗ್ಭೂಷಣಕರ್ತರ ಉಪಕಾರ ಸ್ಮರಿಸತಕ್ಕದ್ದೇ ಸರಿ. ಆದರೆ ಇದೇ ಲೇಖನದಲ್ಲಿ ವೀರಶೈವ ಮತ ಸ್ಥಾಪಕನಾದ ಶ್ರೀಬಸವೇಶ್ವರನ ಮತ್ತೂ ಮತಗುರುವಿನ ಮಡದಿಯಾದುದರಿಂದ ಎಂಬ ಈ ಎರಡು ವಾಕ್ಯಗಳನ್ನು ಏನು ಕಾರಣ ಉಪಯೋಗಿಸುವರೋ ತಿಳಿಯದು. ಶ್ರೀಬಸವೇಶ್ವರನು ಮತಸ್ಥಾಪಕನಲ್ಲೆಂಬದು ಸರ್ವಶ್ರುತವದೆ ಈ ಸಂಗತಿಯನ್ನು ತಿಳಿಯದುದರಿಂದ ಈ ಪ್ರಕಾರ ಬರೆದಿರಬಹುದು. ಒಂದುವೇಳೆ ನಮ್ಮ ವೀರಶೈವಮತದ ನಿಂದೆಮಾಡಬೇಕೆಂದು ಇವರ ಇಚ್ಛೆಯಿದ್ದರೆ, ಇವರು ನಮ್ಮ ಮತದ ವಿದುಷಿಯರ ವಿಷಯವನ್ನೇ ಎಂದೂ ಬರೆಯುತ್ತಿದ್ದಿಲ್ಲ. ಅಂದಬಳಿಕ ಮೇಲೆ ಕಾಣಿಸಿದ ಮಾಸಪತ್ರಿಕೆಯ ಕರ್ತರಿಗೆ ಬಸವೇಶ್ವರನು ವೀರಶೈವ ಮತಸ್ಥಾಪಕನೂ ಅಲ್ಲ, ಮತಗುರುವೂ ಅಲ್ಲ, ಎಂಬುದು ಗೊತ್ತಿಲ್ಲವೆಂದು ಕಂಡುಬಂದುದರಿಂದ ಅವರಿಗೆ ವೀರಶೈವಧರ್ಮವು ಬಹು ಪ್ರಾಚೀನಕಾಲದಿಂದ ನಡೆದುಬಂದದ್ದೆಂತಲೂ ಬಸವೇಶ್ವರನು ಮತಸ್ಥಾಪಕನಲ್ಲೆಂತಲೂ ತಿಳಿಯುವಹಾಗೆ ಸ್ಪಷ್ಟವಾದ ಕೆಲವು ಕಾರಣಗಳನ್ನು ಕೆಳಗೆ ವಿವರಿಸುತ್ತೇನೆ.

೧. ನಿಜಗುಣಶಿವಯೋಗಿ ಎಂಬವರು ಬಸವೇಶ್ವರನಿಗಿಂತಲೂ (೨೦೦) ವರ್ಷಗಳ ಪೂರ್ವದಲ್ಲಿಯೇ ಆಗಿಹೋಗಿರುವರು. ಇವರು ಬಸವೇಶ್ವರನಿಗಿಂತಲೂ ಪೂರ್ವದವರೆನ್ನಲಿಕ್ಕೆ ಅನೇಕ ಪ್ರಮಾಣಗಳುಂಟು. ಅವುಗಳಲ್ಲೊಂದೆರಡನ್ನು ಇದರಡಿಯಲ್ಲಿ ವಿವರಿಸುವೆನು. ಶ್ರೀಬಸವೇಶ್ವರನು ತನ್ನ ವಚನದಲ್ಲಿ ಮೇಲೆ ಬರೆದ ಶಿವಯೋಗಿಗಳನ್ನು ಹೊಗಳಿರುತ್ತಾನೆ. ಆದರೆ ನಿಜಗುಣರು ತಾವು ರಚಿಸಿದ ಆರು ಗ್ರಂಥಗಳಲ್ಲಿಯೂ ಬಸವೇಶ್ವರನ ವಿಷಯಕ್ಕೆ ಬರೆದಿರುವದಿಲ್ಲ. ಅಂದಬಳಿಕ ಇವರು ಬಸವೇಶ್ವರನಿಗಿಂತಲೂ ಪೂರ್ವಿಕರೆಂದೆನ್ನಲಿಕ್ಕೆ ಅಡ್ಡಿಯಿಲ್ಲ. ಇವರು ಬರೆದ ಗ್ರಂಥಗಳೊಳಗೆ ವಿವೇಕಚಿಂತಾಮಣಿ ಎಂಬ ಗ್ರಂಥವು ಒಂದಾಗಿದೆ. ಈ ಗ್ರಂಥದ ಎರಡನೇ ಪ್ರಕರಣದಲ್ಲಿ ವೀರಶೈವಮತದ ಲಕ್ಷಣ ಮುಂತಾದುದನ್ನು ಬರೆದಿರುತ್ತಾರೆ. ಬಸವೇಶ್ವರನೇ ಈ ವೀರಶೈವ ಮತಸ್ಥಾಪಕನಾಗಿದ್ದರೆ ಬಸವೇಶ್ವರನಿಗಿಂತಲೂ ಪೂರ್ವಿಕರಾದ ನಿಜಗುಣಶಿವಯೋಗಿಯವರು ಈ ಮತದ ವಿಷಯಕ್ಕೆ ಎಂದೂ ಉಲ್ಲೇಖಿಸುತ್ತಿದ್ದಿಲ್ಲ. ಆದಕಾರಣ ಈ ಮತವು ಬಸವೇಶ್ವರನಿಗಿಂತಲೂ ಪೂರ್ವದ್ದೆಂದು ಸ್ಪಷ್ಟವಾಗುತ್ತದೆ. ೨. ಮೋಹಬ್ಬಾನ ಫ್ಲೀಟಸಾಹೇಬರು ಕರ್ನಾಟಕ ರಾಜವಂಶಾವಳಿ ಎಂಬ ಪುಸ್ತಕದಲ್ಲಿ ಬಿಜ್ಜಳನು ಕಲ್ಯಾಣದ ಪುರದ ಚಾಲುಕ್ಯರ ದಳವಾಯಿಯಿದ್ದು ಶಿವಭಕ್ತರ ಸಹಾಯದಿಂದಲೇ ಚಾಲುಕ್ಯರ ಅರಸನಾದ ೩ನೇ ತೈಲಪನನ್ನು ಪಟ್ಟದಿಂದ ತಳ್ಳಿ ಸನ್ ೧೧೬೦ ರಿಂದ ೧೧೬೮ ರ ವರೆಗೆ ರಾಜ್ಯವಾಳಿದನೆಂದು ಬರೆದಿರುತ್ತಾರೆ. ಈ ಬಿಜ್ಜಳನು ರಾಜನಾದಮೇಲೆ ಬಲದೇವನೆಂಬವನು ಮಂತ್ರಿಯಾದನು. ಇವನು ಸತ್ತನಂತರ ಬಸವೇಶ್ವರನು ಬಿಜ್ಜಳನ ಮಂತ್ರಿಯಾದನೆಂದು ಪ್ರಸಿದ್ಧವಿದೆ. ಬಿಜ್ಜಳನು ಶಿವಭಕ್ತರ ಸಹಾಯದಿಂದಲೇ ಚಾಲುಕ್ಯರ ರಾಜ್ಯವನ್ನು ಅಪಹರಿಸಿದನೆಂದಬಳಿಕ ಬಸವೇಶ್ವರನಿಗಿಂತಲೂ ಪೂರ್ವದಲ್ಲಿ ಶಿವಭಕ್ತರಿದ್ದರೆಂಬುವದು ಸಿದ್ಧವಾಗುತ್ತದೆ. ದೇವರದಾಸಿಮಯ್ಯ ಎಂಬುವರು ಪಶ್ಚಿಮ ಚಾಲುಕ್ಯ ಅರಸನಾದ ೩ನೇ ಜಯಸಿಂಹ (ಜೇಶಿಂಗ) ಇವನ ಕಾಲದಲ್ಲಿ ಅಂದರೆ ಶಕೆ ೯೪೦ ರಿಂದ ೯೬೪ರವರೆಗೆ ಇದ್ದರೆಂದೂ, ಈ ಜಯಸಿಂಹನ ಹೆಂಡತಿಯಾದ ಸುಗ್ಗಾದೇವಿಯು ತನ್ನ ಗುರುವಾದ ದೇವರ ದಾಸಿಮಯ್ಯನವರ ಕಡೆಯಿಂದ ಜೈನರನ್ನು ಪರಾಭವಗೊಳಿಸಿ ತನ್ನ ಗಂಡನಿಗೆ ವೀರಶೈವಮತದ ದೀಕ್ಷೆಯನ್ನು ಕೊಡಿಸಿ ಲಿಂಗವಂತನನ್ನಾಗಿ ಮಾಡಿಸಿದಳೆಂದೂ ಬರೆದಿರುತ್ತಾರೆ. ಎಂದಬಳಿಕ ಬಸವೇಶ್ವರನಿಗಿಂತಲೂ ಪೂರ್ವದಲ್ಲಿಯೇ ವೀರಶೈವಮತವಿತ್ತೆಂದು ವ್ಯಕ್ತವಾಗುತ್ತದೆ. ೩. ಮೆಹರ್ಬಾನ್ ರೈಸ್‌ಸಾಹೇಬರು ಮೈಸೂರ ಪ್ರಾಂತದೊಳಗಿನ ಶಿಲಾಲೇಖವೆಂಬ ಗ್ರಂಥವನ್ನು ಬರೆದಿರುವರು. ಅದರೊಳಗೆ ಕೆಳಗೆ ಬರೆದಂತೆ ಬರೆದಿರುತ್ತಾರೆ. ಬಿಳ್ಳೀಗಾವಿಯಲ್ಲಿ ೧ ಹಿರೇಮಠ, ೨ ಪಂಚಲಿಂಗನ ಮಠ, ೩ ತ್ರಿಪುರಾಂತಕಮಠ, ೪ ವಾಮಶಕ್ತಿಯ ಮಠ, ೫ ಕೋಡಿಯ ಮಠ, ಎಂಬ ಐದು ಮಠಗಳಿದ್ದವೆಂದು ಬರೆದಿದೆ. ಇದೇ ಪುಸ್ತಕದ ೧೨೨ ನೇ ಪಾನಿನಲ್ಲಿ ಮೊದಲಿನ ಮೂರು ಮಠಗಳೊಳಗಿನ ಆಚಾರ್ಯರು ಕ್ರಮವಾಗಿ ೧ ಮಾಳಿಗೆ ಮಧುಕೇಶ್ವರ, ೨ ಸರ್ವೇಶ್ವರ ಪಂಡಿತ ದೇವ, ೩ ಜ್ಞಾನಶಕ್ತಿದೇವ ಎಂಬುವರು ಇಸ್ವಿ ಸನ್ ೧೦೫೪ರಲ್ಲಿ ಇದ್ದರೆಂದೂ, ಸನ್ ೧೧೧೨ರಲ್ಲಿ ಈ ಮಠಗಳ ಅಧಿಪತಿಗಳು ಕ್ರಮವಾಗಿ ೧ ಶಾಂತಶಿವಪಂಡಿತ ೨ ಶಕ್ತಿಪಂಡಿತ ೩ ಕ್ರಿಯಾಶಕ್ತಿಪಂಡಿತ ಎಂಬವರಿದ್ದರೆಂದೂ ಇದೇ ಪುಸ್ತಕದ ೪೨ನೇ ಪುಟದಲ್ಲಿ ಬರೆದಿರುತ್ತಾರೆ. ಮತ್ತು ೯೧ನೇ ಪಾನಿನಲ್ಲಿ ೪ ನೇ ವಾಮಶಕ್ತಿಯ ಮಠದಲ್ಲಿ ಸೋಮೇಶ್ವರಯ್ಯ ವಿದ್ಯಾಭರಣಯ್ಯ, ಎಂಬ ಆಚಾರ್ಯರು ಸನ್ ೧೧೯೫ ರಲ್ಲಿ ಇದ್ದರೆಂದು ಬರೆದಿರುತ್ತಾರೆ. ಈ ಲೇಖಗಳಿಂದ ಬಸವೇಶ್ವರನಿಗಿಂತ ಪೂರ್ವದಲ್ಲಿಯೇ ವೀರಶೈವಮತವಿತ್ತೆಂದು ಸಿದ್ಧವಾಗುತ್ತದೆ. ಮೇಲೆ ಬರೆದ ಮಠಗಳ ಹೊರ್ತು ಶ್ರೀಕಂಠಶಿವಯೋಗಿಗಳ ಚರಿತ್ರವು ಎಂಬನೇ ಶಿಲಾಲೇಖದಲ್ಲಿ ಕೊಟ್ಟಿರುವದೆಂದು ಬರೆಯುತ್ತಾರೆ. ಅದು ಹೇಗೆಂದರೆ—ಶ್ರೀಕಂಠಶಿವಯೋಗಿಗಳು ಯಾವಾಗಲೂ ಎದೆಯಮೇಲೆ ಲಿಂಗವನ್ನು ಧರಿಸುತ್ತಿದ್ದರೆಂದೂ ಈ ಯೋಗೀಶ್ವರರ ಕಂಠವು ಸದಾ ವೇದವಾಕ್ಯದಿಂದ ತುಂಬಿದ್ದುದರಿಂದ ಈ ಹೆಸರು ಅವರಿಗೆ ಬಂದಿರುವದೆಂದೂ ಇವರು ಶಾಸ್ತ್ರದಲ್ಲಿ ನಿಪುಣರಿದ್ದರೆಂದೂ ತರ್ಕಶಾಸ್ತ್ರದಲ್ಲಿ ನಿಷ್ಣಾತರಿದ್ದರೆಂದೂ ಬರೆದಿದೆ. ಇವರ ಶಿಷ್ಯ ಸೋಮೇಶ್ವರಯ್ಯ ಹಾಗು ಈತನ ಶಿಷ್ಯ ಮಲ್ಲಿಕಾರ್ಜುನಾಚಾರ್ಯ ಎಂಬವರಿಬ್ಬರು ಪ್ರಸಿದ್ಧ ಕವಿಗಳಾಗಿದ್ದರು. ಇವರು ತಮ್ಮ ಗುರುಗಳ ಸನ್ಮಾನಾರ್ಥವಾಗಿ ಈ ಶಿಲಾಶಾಸನವನ್ನು ಸನ್ ೧೦೬೩ ರಲ್ಲಿ ಬರೆಸಿರುವರೆಂದು ಉಲ್ಲೇಖವದೆ. ಇದರ ಮೇಲಿಂದ ವೀರಶೈವಮತವು ಬಸವೇಶ್ವರನಿಗಿಂತಲೂ ಪೂರ್ವದ್ದೆಂದು ವ್ಯಕ್ತವಾಗುತ್ತದೆ.

ಚಿತ್ರದುರ್ಗದಲ್ಲಿ ಸಿಕ್ಕಿದ ಶಿಲಾಲೇಖವೊಂದು ಸನ್ ೧೦೬೩ ರಲ್ಲಿ ಬರೆಯಲ್ಪಟ್ಟದ್ದು ಅದರಲ್ಲಿ ಚೋಳಯ್ಯ ರಾಮಯ್ಯ ಇವರು—ಶುದ್ಧ ಗೋತ್ರೀಯರಾದ ಸುಜನಮಿತ್ರರಾದ ಲೋಕವಿಖ್ಯಾತರಾದ ಮಾಹೇಶ್ವರರಿಗೆ ಅಗ್ರಹಾರಕೊಟ್ಟರೆಂಬದಾಗಿ ಬರೆದಿರುತ್ತದೆ. ಈ ಮಾಹೇಶ್ವರರೆಂಬ ವಿಶೇಷಣವು ಶಬ್ದದಮೇಲಿಂದ ಬಸವೇಶ್ವರನಿಗಿಂತಲೂ ಪೂರ್ವದಲ್ಲಿ ವೀರಶೈವಮತವಿದ್ದಂತಾಯಿತು. ೩ನೇ ಶಿಲಾಲೇಖನದಲ್ಲಿ ಶ್ರೇಷ್ಠ (ಶೆಟ್ಟಿ) ಗಳ ಹೆಸರುಗಳು ಬರೆಯಲ್ಪಟ್ಟವೆ. ಅವುಗಳೊಳಗಿನ ನಾಲ್ಕೈದು ಹೆಸರುಗಳನ್ನು ಇದರಡಿಯಲ್ಲಿ ಬರೆಯುವೆವು. ಅವಾವೆಂದೊಡೆ-ಮಾಚಶೆಟ್ಟಿ, ಮಾಣಿಕಶೆಟ್ಟಿ, ಮಹಾದೇವಶೆಟ್ಟಿ, ಸೋವಿಶೆಟ್ಟಿ, ಇತ್ಯಾದಿ-ಹೆಸರುಗಳು ಇರುವವಲ್ಲದೆ ಇವರು ವೀರಬಣಜಿಗ ಈ ಪಥದ ರಕ್ಷಣೆ ಮಾಡುವವರು ಎಂದು ಬರೆದಿರುತ್ತದೆ. ಈ ವೀರಬಣಜಿಗರು ಅಂದರೆ ಲಿಂಗವಂತರೊಳಗಿನ ಶ್ರೇಷ್ಠವರ್ಗದ ಲಿಂಗಬಣಜಿಗರು ಎಂದು ಮೆಹರ್ಬಾನ ರೈಸ್ ಸಾಹೇಬರು ತಮ್ಮ ಪುಸ್ತಕದ ೨೩ನೇ ಪಾನಿನಲ್ಲಿ ಬರೆದಿರುತ್ತಾರೆ. ಈ ಮೇಲೆ ಬರೆದ ನಾಲ್ಕು ಕಾರಣಗಳಿಂದ ಬಸವೇಶ್ವರನಗಿಂತಲೂ ಪೂರ್ವದಲ್ಲಿ ನಮ್ಮ ವೀರಶೈವ ಮತವಿತ್ತೆಂದು ವಿದಿತವಾಗುತ್ತದೆ. ೪. ಪಂಡಿತ ಆರ್. ಎಸ್. ವೇದಾಚಲಂ ಎಂಬವರು ಕ್ರಿಶ್ಚಿಯನ್ ಕಾಲೇಜ್ ಮ್ಯಾಗಜೀನ್ ಎಂಬ ಪತ್ರಿಕೆಯಲ್ಲಿ ಮಾಣಿಕ್ಯವಾಚಗರ್ ಎಂಬಶರಣರು ವೀರಶೈವರು ಇದ್ದರೆಂದು ಬರೆದಿರುತ್ತಾರೆ. ಈ ಶರಣರೇ ಕ್ರಿ॥ ಶಕದ ೩ ನೇ ಶತಮಾನದಲ್ಲಿ ಅಂದರೆ ಸುಮಾರು ೧೬೦೦ ವರ್ಷಗಳ ಪೂರ್ವ "ಮಹಾಮಹಿಮರಾದ ಶಿವಶರಣರಾಗಿಯೂ ತಮಿಳ ಭಾಷೆಯಲ್ಲಿ ಉತ್ತಮ ತರಗತಿಗೆ ಸೇರಿದ ಗ್ರಂಥಕರ್ತರಾಗಿಯೂ" ಇದ್ದರೆಂದು ತಿಳಿಯುತ್ತದೆ. ಹಾಗೂ ಇವರು ಬರೆದಿರುವ ತಿರುರಾಜಗಂ ಎಂಬ ಪುಸ್ತಕವನ್ನು ತಮಿಳು ದೇಶದ ವೀರಶೈವರೆಲ್ಲರೂ ಅತ್ಯಾದರದಿಂದ ಓದುತ್ತಾರೆ. ಈ ಮೇಲೆ ಬರೆದ ವೇದಾಚಲಂಪಂಡಿತರು ಬರೆದಿರುವುದನ್ನು ಸಹ ನೋಡಿದರೂ ಬಸವೇಶ್ವರನಿಗಿಂತಲೂ ಮೊದಲೇ ವೀರಶೈವಮತವಿತ್ತೆಂದು ಸಿದ್ಧವಾಗುತ್ತದೆ. ಈ ಮೇಲೆ ಬರೆದ ಯಾವತ್ತು ಕಾರಣಗಳಿಂದ ಶ್ರೀಬಸವೇಶ್ವರನು ಮತಸ್ಥಾಪಕನೂ ಅಲ್ಲ ಮತಗುರುವೂ ಅಲ್ಲ ಎಂತಲೂ ಬಸವೇಶ್ವರನಿಗಿಂತ ಪೂರ್ವದಲ್ಲಿ ಬಹುದಿವಸಗಳಿಂದ ವೀರಶೈವಮತವು ನಡೆಯುತ್ತ ಬಂದಿರುವುದೆಂತಲೂ ನನಗೆ ತಿಳಿದಷ್ಟುಮಟ್ಟಿಗೆ ಸಿದ್ಧಮಾಡಿ ತೋರಿಸಿರುತ್ತೇನೆ. ಆದುದರಿಂದ ವಾಗ್ಭೂಷಣಕರ್ತರು ತಮಗೆ ತಿಳಿಯದೇಯಿದ್ದರೆ ಮೇಲೆ ವಿವರಿಸಿದ ಸಂಗತಿಗಳನ್ನು ತಿಳಿದುಕೊಂಡು ತಮ್ಮ ಮಾಸಪತ್ರಿಕೆಯಲ್ಲಾದ ತಪ್ಪನ್ನು ತಿದ್ದುವರೆಂದು ತುಂಬಾ ನಂಬಿದ್ದೇನೆ.

ಸಂಪಗಾವ, ತಾ॥ ೧೧-೩-೧೮. } ಓರ್ವಸಮಾಜ ಸೇವಕ

ಮತ್ತೊಂದು ನೂತನಗ್ರಂಥ.

ಸಟಿಪ್ಪಣ ಸಿದ್ಧಾಂತಶಿಖಾಮಣಿ.

ಇದು ಶ್ರೀರೇಣುಕಾಚಾರ್ಯರು ಅಗಸ್ತ್ಯರಿಗೆ ಉಪದೇಶಿಸಿದ ವೀರಶೈವ ಸಿದ್ಧಾಂತಶಾಸ್ತ್ರವು, ಪ್ರತಿಯೊಬ್ಬ ವೀರಶೈವನೂ ಮುಕ್ತನಾಗುವುದಕ್ಕೆ ಜನ್ಮದಿಯಿಂದ ಕಡೆಯವರೆಗೆ ಆಚರಿಸಬೇಕಾದ ಧರ್ಮಕರ್ಮಗಳು ಇದರಲ್ಲಿ ನಿರೂಪಿತವಾಗಿವೆ. ಮೂಲಗ್ರಂಥಕ್ಕೆ ವೇದಾಗಮ ಪುರಾಣಾದಿವಚನಗಳ ಆಧಾರದಿಂದ ಕೂಡಿದ ಕನ್ನಡ ಟಿಪ್ಪಣವು ವಿಸ್ತಾರವಾಗಿ ಬರೆಯಲ್ಪಟ್ಟು ಉತ್ತಮವಾದ ಕಾಗದದಲ್ಲಿ ಅಚ್ಚುಮಾಡಿಸಲ್ಪಟ್ಟಿದೆ. ಸರ್ವರಿಗೂ ಸಂಗ್ರಾಹ್ಯವಾದ ಈ ಪುಸ್ತಕವು ೩೩೪ ಪುಟಗಳುಳ್ಳ ದೊಡ್ಡ ಗ್ರಂಥವಾಗಿದ್ದರೂ, ಸ್ವಮತಸ್ಥರ ಹಿತಾರ್ಥವಾಗಿ ಬೆಲೆಯು ಕಡಿಮೆಯಾಗಿಡಲ್ಪಟ್ಟಿದೆ. ವಿ. ಪಿ, ಮೂಲಕ ಅಂಚೆಯ ವೆಚ್ಚ ಸೇರಿ ೧-೪-೦.

ಎಸ್. ಆರ್ ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಈಗತಾನೇ ಅಚ್ಚಾದ ಪುಸ್ತಕವು.

(ರೇವಣಸಿದ್ಧೇಶ್ವರಪುರಾಣಂ.)

ವೇದಾಗಮಾಬಸಿದ್ಧವಾದ ವೀರಶೈವ ಮತವನ್ನು ಭೂತಲದಲ್ಲಿ ಪ್ರತಿಷ್ಠಾಪಿಸಿದ ಶ್ರೀ ರೇಣುಕಾಚಾರ್ಯರ ಚರಿತ್ರರೂಪವಾದ ಈ ಗ್ರಂಥವು ಬೊಮ್ಮರಸಕವಿಯಿಂದ ಷಟ್ಪದೀಕಾವ್ಯವಾಗಿ ರಚಿಸಲ್ಪಟ್ಟಿರುವುದು. ಶ್ರೀಮದಾಚಾರ್ಯರು ಭೂತಲದಲ್ಲಿ ನಡೆಯಿಸಿದ ಮಹತ್ಕಾರ್ಯಗಳು ಇದರಲ್ಲಿ ನಿರೂಪಿತವಾಗಿವೆ. ಕವಿತೆಯು ಹೃದಯಂಗಮವಾಗಿದೆ. ಪ್ರತಿಯೊಂದುಪದಕ್ಕೊ ಒಂದೊಂದು ಪಙ್ಕ್ತಿಯಾಗಿ ಬಿಡಿಬಿಡಿಸಿ ಉತ್ತಮವಾದ ಗ್ಲೇಸ್ ಕಾಗದದಮೇಲೆ ಸುಂದರವಾದ ಅಕ್ಷರಗಳಿಂದ ಶುದ್ಧವಾಗಿ ಮುದ್ರಿತವಾಗಿದೆ. ೧೩ ಸಂಧಿಗಳುಳ್ಳ ಈ ಗ್ರಂಥದ ಬೆಲೆ ವಿ. ಪಿ. ಮೂಲಕ ಅಂಚೆಯ ವೆಚ್ಚವೂ ಸೇರಿ ೧೨ ಆಣೆಗಳು.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಜಾಹೀರ ನೋಟೀಸು.

4

ಇದರಿಂದ ತಿಳಿಸುವದರಲ್ಲಿ ಬರುವದೇನಂದರೆ:—ಧಾರವಾಡ ಜಿಲ್ಲಾ ಕರ್ಜಗಿ ತಾಲೂಕಿನಲ್ಲಿರುವ ದೇವಿಹೊಸೂರವೆಂಬ ಗ್ರಾಮದಲ್ಲಿ ಕನ್ನಡಭಾಷೆಯಲ್ಲಿ ಒಂದು ಒಕ್ಕಲತನದ ಶಾಲೆಯು ಆರಂಭವಾಗಿರುವದು. ಇಲ್ಲಿ ಒಕ್ಕಲಿಗರ೧೪-೧೭ ವರ್ಷದ ವಯಸ್ಸಿನ ಹುಡುಗರನ್ನು ಕರಕೊಂಡು ಎರಡು ವರ್ಷಗಳವರೆಗೆ ಸರಕಾರೀ ಖರ್ಚಿನಿಂದ ಅಭ್ಯಾಸಮಾಡಿಸುವದರಲ್ಲಿ ಬರುವದು. ಶಾಲೆಯ ಸಂಬಂಧನಿಯಮಗಳನ್ನು ಈ ಮೊದಲೇ ಪ್ರಸಿದ್ಧಮಾಡಿದ್ದೇವೆ.

ಈ ಶಾಲೆಯ ಇಮಾರತು ಇನ್ನೂ ತಯಾರಾಗಿಲ್ಲವಾದುದರಿಂದ ಶಾಲೆಯು ಆರಂಭವಾಗಿರುವದಿಲ್ಲೆಂಬ ತಪ್ಪು ಸಮಜೂತಿಯಿಂದಲೂ ಇಲ್ಲಿ ಊಟದವ್ಯವಸ್ಥೆಯು ಇರಲಿಕ್ಕಿಲ್ಲೆಂಬ ತಿಳುವಳಿಕೆಯಿಂದಲೂ ಚಿಕ್ಕಹುಡುಗರನ್ನು ಹೇಗೆ ಎರಡನೇಊರಲ್ಲಿ ಇಡಬೇಕೆಂಬ ಮನಸ್ಸಿನ ಸಂಕೋಚದಿಂದಲೂ ಮೊದಲು ನೋಟೀಸಿನಲ್ಲಿ ಕೊಟ್ಟ ಪ್ರಕಾರ ಮೇ॥ ೧ ನೇ ತಾರೀಖನನಂತರ ಅರ್ಜಿಗಳನ್ನು ಹಿಡಿಯಲಿಕ್ಕಿಲ್ಲೆಂಬ ಸಮಜೂತಿಯಿಂದಲೂ, ಕೆಲವು ಜನರು ಅರ್ಜಿಮಾಡಬೇಕೆಂಬುದು ಮನಸ್ಸಿನಲ್ಲಿದ್ದಾಗ್ಯೂ ಅರ್ಜಿಮಾಡುವದನ್ನು ಬಿಟ್ಟಿದ್ದಾರೆಂದು ಕೇಳುತ್ತೇವೆ. ಈಗ ಶಾಲೆಯು ಸುರುವಾಗಿ ಹುಡುಗರ ಊಟದ (ಬೋರ್ಡಿಂಗಿನ) ವ್ಯವಸ್ಥೆ ಸಹ ಆರಂಭವಾಗಿದೆ. ಬ್ರಾಹ್ಮಣ ವ ಲಿಂಗಾಯತ ಎರಡುಬೋರ್ಡಿಂಗಗಳು ಆರಂಭವಾಗಿವೆ. ಆದುದರಿಂದ ತಮ್ಮ ಮಕ್ಕಳನ್ನು ಈಶಾಲೆಗೆ ಕಳುಹಿಸಬಿಚ್ಛಿಸುವ ರೈತ ವ ವತನದಾರಗೌಡ ಕುಲಕರ್ಣಿಯರು ತೀವ್ರವಾಗಿ ತಮ್ಮ ಮಕ್ಕಳಕಡೆಯಿಂದಾ ಅರ್ಜಿಮಾಡಿಸಿದ ಪಕ್ಷದಲ್ಲಿ ಯೋಗ್ಯವಿಚಾರಮಾಡಿ ಹುಡುಗರನ್ನು ಶಾಲೆಯಲ್ಲಿ ತಕ್ಕೊಳ್ಳುವದರಲ್ಲಿ ಬರುವದು. ಅರ್ಜಿಕಳುಹಿಸುವ ಮುಂದೆ ಜಮೀನ ಸಂಬಂಧ ಗ್ರಾಮಸ್ಥರ ದಾಖಲೆ ವ ಶಾಲೆಯಲ್ಲಿ ಕಲಿತಸಂಬಂಧ ಶಾಲೆಯ ಹೆಡ್ಮಾಸ್ತರ ದಾಖಲೆ ಇವೆರಡನ್ನೂ ಕಳಿಸತಕ್ಕದ್ದು ತಿಳಿಯುವದು. ತಾ॥ ೧೪-೩-೧೯೧೮

P. Gilbert Deputy, Director of
Agriculture S. D. R. G. S. Dharwar

ಫಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

33

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗಪುಳ್ಳವರು, ರಕ್ತಪುದ್ರೇಕವಾದವರು, ತೃಷೆಪುಳ್ಳವರು, ದಮ್ಮಿನವರು, ಕೆಮ್ಮಿನವರ ಕಫ, ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿನ್ಮತು ೪೦ ತೋಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ:—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೊಂಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು

42 ಕಾಪಾಡುವುದರಲ್ಲಿ ಶ್ರೇಷ್ಠತಮವಾದ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ-ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು.

ಶೀತವಾಯು-ಕೆಮ್ಮು-ನೆಗಡಿ-ದಿನಜ್ವರ-ಮೂರರಜ್ವರ ನಾಲ್ಕರಜ್ವರ- ಮಲೇರಿಯಾಜ್ವರ- ತಲೆನೋವು- ಮೈಕೈನೋವು ಮತ್ತು ಭಾರ-ಅರೋಚಕ ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣ ಭೇದಿ-ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಶೆಳತ-ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ೫೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ. ಪಿ. ಛಾರ್ಜು ಪ್ರತ್ಯೇಕ.

ಆಮೋದಿನಿ:— ಅಮೋಘವಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರಮಾಡುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷ ಕೀರ್ತಿಯನ್ನು ಸಂಪಾದಿಸಿ ನಾನಾತರಹಾ ಕೆಮ್ಮು, ದಮ್ಮು ಉಬ್ಬಸ, ವಾಂತಿ, ವಾಕರಿಗೆ, ಮಲಬಂಧ, ಅಗ್ನಿಮಾಂದ್ಯ, ಪಿತ್ತಸಂಕಟ, ಅರೋಚಕ, ಬಾಯಾರಿಕೆಗಳನ್ನು ತಕ್ಷಣ ಗುಣಪಡಿಸಿ ಶರೀರಕ್ಕೆ ತೀಕ್ಷ್ಣ ಮಾಡಿದೆ ಧಾತುಪುಷ್ಟಿಯುಂಟುಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೧೨೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ.ಪಿ. ಛಾರ್ಜು ಪ್ರತ್ಯೇಕ.

ವಿಳಾಸ— ಬಿ. ವಿ. ಪಂಡಿತ್,
ಸದ್ವೈದ್ಯಶಾಲಾ, ನಂಜನಗೂಡು,
ಮೈಸೂರ್ ಸ್ಟೇಟ್

43

ದೊಡ್ಡ ಕಂಪೆನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯು. ಎನ್. ಮತ್ತು ಕಂಪೆನಿ,
ಬನಾರಸ್ ಸಿಟಿ. (ಕಾಶೀ)

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕೆಯ್ಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡ ಪಲ್ಲಕ್ಕಿ ಉತ್ಸವದ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಹಾಪುರದಲ್ಲಿ ವ್ಯಾಸನತೊಳಗುಸಹಿತ ಆದ ಸಮಾರಂಭದ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಾಮಾದಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೊ ಕ್ರಯ ೧ ಕ್ಕೆ ೧ ರೂಪಾಯಿ, ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೊ ೧ ಕ್ಕೆ ಕ್ರಯ ಫುಲ್ಲಸೈಜು ೧ ರುಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀ ಜಗದ್ಗುರು ತೋಂಟದಾರ್ಯ ಗದಗ, ಶ್ರೀ ಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ಸತ್ಪುರುಷಮಾಲಾ, ಹಾಳಕೇರಿ ಆನಂದಸ್ವಾಮಿಯ ಫೋಟೊ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೊ ಸಿಗುತ್ತವೆ. ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ

ಹೊಸಫ್ಯಾಷನ್—ಸಭ್ಯಗೃಹಸ್ಥರು ಗಡಿಯಾರ ಸರ್ಪಳಿಗೆ ಹಚ್ಚುವ ಲಾಕೇಟುಗಳೂ, ಯಿದರಲ್ಲಿ ಹಿಂದೆ ಮುಂದೆ ಇಪ್ರಕಾರ ೨ ಫೋಟೊ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ॥, ॥।=, ೧, ೧।, ಪ್ರಕಾರ, ಮತ್ತೂ ಬೆಳ್ಳಿಯದು ರು ೧॥ ರೋಲ್ಡ್ ಗೋಲ್ಡ ಭಂಗಾರದ್ದು ದುರ್ಬಿಣದ ಗ್ಲಾಸದೂ ಕ್ರಯ ೨॥, ೨॥। ರೂ.

ಪರಊರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ಧಾಣೆ ಟಿಕೀಟು ಕಳುಹಿಸಿ ಕ್ಯಾಟಲಾಕು ಬೇಕಾದವರು ತರಿಸಿಕೊಳ್ಳಿರಿ.

19 ನಮ್ಮವಿಳಾಸ— ಗಂಗಪ್ಪಾ ಹೇರಿಕೆ,
ಆರ್ಟಿಸ್ಟ, ಸೊಲ್ಲಾಪುರ

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ ೦-೦-೨ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪ ಟಿ೯ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು. ಟಿ. ಎಲ್. ಉಪಾಧ್ಯಾಯ,

ಸುಗಂಧಶಾರಿ, ಮೈಸೂರು.

13

ದಿ ಜನರಲ್ ಏಜನ್ಸಿ, ಮೈಸೂರು.

ಕಾದಂಬರಿಗಳು:— ತಿಂಡಿನಾಲಿಂತ ೦-೨-೦; ಚರಿತಾವ್ರತಂ ೦-೫-೦; ರಾಜಗ್‍ಥಾವಲ್ಲರಿ ೦-೫-೦; ಪೀಟರಿನಚರಿತೆ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೨-೩; ಸೀತೆ ೦-೫-೦; ಸಾಹಸಿಕೆ, ಕಲಾನಾಥ ೧-೮-೦; ಮಹಾಲಕ್ಷ್ಮಿ ೦-೨-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಆನಂದಸ್ವಸಂಜೀವಿನಿ ೦-೮-೦; ಕೋಹಿನೂರು ೦-೧೨-೦; ಸೀತಾವನವಾಸ ಧವುತ ೧-೦-೦; ರಾಧಾರಾಣಿ ೦-೩-೦; ೦-೧೨-೦; ರಮನ ೦-೧೨-೦. 44

33 ಸಚಿತ್ರ ಶುಕಸಪ್ತತಿ ಕಥೆಗಳು ರೂ. ೧-೮-೦ (೫೧೦ ಪುಟ) ಟಪಾಲು ಹಾಸಲು ೪ ಆಣೆ.

ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ ರೂ ೧-೮-೦. (೫೭೩ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ! ಮಾನ್ಯತೆಯು ಬೇಕಾದರೆ, ವಾಗ್ವೈಖರಿಯೊಳಪ್ಪವಿದ್ದರೆ, ಲೋಕರೀತಿಯು ನ್ನು ತಿಳಿಯಬೇಕೆಂದಿದ್ದರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಚಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯುಳ್ಳವರಾಗಬೇಕೆಂದಿದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೩೦ ಪುಟಗಳಿಂದ ಕೂಡಿದ ೩೪ ಕಥೆಗಳುಳ್ಳ ಸೊಗಸಾದ ದೈಂಡಿನ ಪುಸ್ತಕವಾಗಿದೆ. ಬೆಲೆ ರೂ ೧-೪-೦ ಟಪಾಲ್ ಹಾಸಲು ೩ ಆಣೆ. ಈಗಲೇ ಬರೆ ನಿಮ್ಮಲ್ಲಿ ಇನ್ನೂ ಅನೇಕ ಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

ಕನ್ನಡ ಇಂಡಿಯನ್ ಪೆನಲ್ ಕೋಡ್

ಇದರಿಂದ ಮೈಸೂರ್, ಮದ್ರಾಸ್, ಬೊಂಬಾಯಿಜಿಲ್ಲಾ ಕನ್ನಡಭಾಷಾ ವಾಚಕಮಹಾಶಯರಿಗೆ ತಿಳಿಸುವದೇನೆಂದರೆ— ಶ್ರೀಮದಿಂಡಿಯಾ ಗವರ್ನರ್ ಜನರಲ್‌ರವರ ಅನುಮತಿ ಪ್ರಕಾರ ಸ ೧೮೬೦ನೇ ಇಸವಿಯಲ್ಲಿ ಜಾರಿಯಾದ "ಇಂಡಿಯನ್ ಪೆನಲ್ ಕೋಡ್" ಎಂಬ ಆಕ್ಟನ್ನು ಈಗ ಅನೇಕ ಜಡ್ಜಿಗಳ ಟಿಪ್ಪಣಿಗಳೊಡನೆಯೂ, ಅಮೆಂಡ್‌ಮೆಂಟುಗಳೊಡನೆಯೂ ಅಂದವಾದ ಕಾಗದದಲ್ಲಿ ಸ್ಪಷ್ಟವಾದ ಅಕ್ಷರಗಳಿಂದ ಮುದ್ರಣವಾಗಿ ಮಾರಾಟಕ್ಕೆ ಸಿದ್ಧವಾಗಿದೆ. ಈ ಆಕ್ಟನಲ್ಲಿ ಪ್ರತಿ ಸೆಕ್ಷನಿಗೂ ಫಿರ್ಯಾದಿಗಳೂ, ಅಪರಾಧಿಗಳೂ, ಪೋಲೀಸ್ ಅಧಿಕಾರಿಗಳೂ, ಮ್ಯಾಜಿಸ್ಟ್ರೇಟರುಗಳೂ ನಡಿಸಬೇಕಾದ ಆಚರಣೆಗಳೆಂದರೆ: ನಡೆಯುವ ಮೊಕದ್ದಮೆಯನ್ನು ಯಾವ ಕೋರ್ಟಿನಲ್ಲಿ ವಿಚಾರಣೆ ಮಾಡಬೇಕು? ವಾರಂಟಿಲ್ಲದೆ ಹಿಡಿಯಬಹುದೇ, ಹಿಡಿಯಕೂಡದೇ? ಸಮನ್ ಕೊಡತಕ್ಕದ್ದೇ, ವಾರಂಟು ಕೊಡತಕ್ಕದ್ದೇ? ಜಾಮೀನು ತೆಗೆದುಕೊಂಡು ಬಿಡಬಹುದೇ? ರಾಜಿಯಾಗಬಹುದೇ, ರಾಜಿಯಾಗತಕ್ಕದ್ದಲ್ಲವೇ? ಎಂಬ ತಖ್ತೆಲುಗಳನ್ನು ವಿವರಿಸಲ್ಪಟ್ಟಿರುವದು. ಈ ಪುಸ್ತಕವು ಸರ್ಕಾರಿ ಅಧಿಕಾರಿಗಳಿಗೂ, ಪೋಲೀಸಿನವರಿಗೂ, ಪಟೇಲ್ ಶ್ಯಾನುಭೋಗರುಗಳಿಗೂ, ವರ್ತಕರುಗಳಿಗೂ, ಜಮೀನ್‌ದಾರರುಗಳಿಗೂ ಇತರ ಸಮಸ್ತ ಕಸುಬುದಾರರಿಗೂ, ಬುಷ್‌ಬಾಷ್ ಜನಗಳಿಗೂ ಉಪಯೋಗಕರವಾದದ್ದು.

ಈ ಪುಸ್ತಕದಲ್ಲಿ ಚೋರಿ, ಕಳವು, ದರೋಡೆ, ಅತಿಕ್ರಮಪ್ರವೇಶ, ಸ್ತ್ರೀಗೆ ಮಾನಭಂಗಪಡಿಸುವದು, ಸ್ತ್ರೀಯರನ್ನು ದುರಾಚಾರಕ್ಕೆ ಕರೆಯುವದು, ಅಸಾಮಿ ಚೋರಿ, ಗಂಡನು ಹೆಂಡತಿ ೧೨ ವರುಷಗಳಿಗೆ ಕಡಮೆ ವಯಸ್ಸಿನವಳಾಗಿರುವಾಗ್ಗೆ ಸ್ತ್ರೀಸಂಗ ಮಾಡಬಹುದೇ? ಮುಂತಾದ ಮೊಕದ್ದಮೆಗಳಲ್ಲಿ ಜಡ್ಜಿಗಳು ಕೊಟ್ಟಿರತಕ್ಕ ಅಭಿಪ್ರಾಯಗಳು ಸೂಚಿಸಲ್ಪಟ್ಟಿರುವವು. ಕನ್ನಡದಲ್ಲಿ ಇದುವರೆಗೆ ಇಂಥಾ ಪುಸ್ತಕವು ಇನ್ನೆಲ್ಲಿಯೂ ಇಲ್ಲವು.

ಕ್ರಯ ಪ್ರತಿ ೧ ಕ್ಕೆ ೨ ರೂಪಾಯಿ; ಟಪಾಲ್ ಛಾರ್ಜ್ ೪ ಆಣೆ.

ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ. ಪುಸ್ತಕಗಳ ಕ್ರಯ ಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು.

50 ನಮ್ಮ ವಿಳಾಸ— ಎಂ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಸ್ ಪಬ್ಲಿಷರ್ಸ್, ಬೆಂಗಳೂರು ಸಿಟಿ.

ಪಾಳ್ಯದ ಮಂಕಟಾಚಲ ಪಂಡಿತರ ಸಿದ್ಧೌಷಧಗಳು 11

ಲೋಕಾಮುಯಪರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೋತ (ಬಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಬಾಣಂತಿಶೂಲೆ, ಮಕ್ಕಳ ಎಳವು, ಜ್ವರ, ನ ಚ್ಚುಕ್ಕರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾಕೆ ಮದ್ದು)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇಒಂದು ಬುದ್ದಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತವಿದೊಂದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುದ್ದಿಯ ಬೆಲೆ ೧ ೦—೦.

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ. ಮೈಸೂರು

ನ್ಯಾಯದರ್ಪಣ. 26

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯೂ, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಫ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸೂ, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆಚರಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ವಗೈರೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯೂ ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರುತ್ತವೆ.

ಬೆಲೆ ರೂ. 1—8—0. ವಿ. ಪಿ. ಮೂಲ್ಯ 1—12—0.

ಎಂ. ಎಸ್. ನಂಜಪ್ಪನವರು,

ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ) ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುವಾಗಿದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡಕಿಲ್ಲ ಒಂದು ಚುಟಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ ೧ ಡಬ್ಬಿಗೆ ೪ ಆಣೆ. ೧ ಡಜನ ಡಬ್ಬಿಗೆ ೨—೨—೦

ಉತ್ತಮವಾದ ನಶ್ಯದಪುಡಿ.

ಘಾಟು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೫೦ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೆಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು ನಾಲಿಗೆ ಅರೋಚಕಗಳು ಹೋಗುವವು. ನೀವು ಉಪಯೋಗಿಸುವ ಬರೀ ಹೊಗೆಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೆಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ ಡಬ್ಬಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,

ಗೋಪಸೆಟ್ಟಿಪುರ, ಹನೂರು ಪೋಸ್ಟ್

ಕೊಳ್ಳೇಗಾಲದ ತಾಲ್ಲೂಕು

22

೧೯೧೪ ನೆಯ ಇಸವಿ ಜುಲೈ ತಾ|| ೨೦ರಿಂದ ೧೯೧೪ನೆ ಜುಲೈ ತಾ|| ೨೬ರವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ನೆಯ ಆನಂದನಾಮ ಸಂ|| ದ ಆಷಾಢ ಬ|| ದ್ವಾದಶಿಯಿಂದ ಶ್ರಾವಣ ಶು|| ತದಿಗೆವರೆಗಿನ ಪಂಚಾಂಗ.

ತಾ||	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.
20	1 ಸೋ	ದ್ವಾ	3-3	ಮೃಗ	46-44
21	2 ಮಂ	ತ್ರ	4-50	ಆರ್ದ್ರಾ	49-20
22	3 ಬುಧ	ಚ	5-22	ಪುನ	50-43
23	4 ಗುರು	ಅ	4-40	ಪುಷ್ಯ	50-54
24	5 ಶುಕ್ರ	ಪಾ	2-42	ಆಶ್ಲೇ	57-15
25	6 ಶನಿ	ಬಿದಿ	56 5	ಮಖ	47-53
26	7 ಭಾ	ತದಿ	51-9	ಪುಬ್ಬಾ	45-1

(1) ಪ್ರದೋಷಃ, (2) ಮಾಸಶಿವರಾತ್ರಿಃ, (3) ತ್ರಭೀಮಾಮಾವಾಸ್ಯಾ, ಜ್ಯೋತಿಸ್ತಂಭವ್ರತಂ, (4) ತಸಿದ್ಧಿಯೋಗಃ, (5) ಆದಿಶುಕ್ರವಾರ ವ್ಯತೀಪಾತ... ರಂಜಾನ್ ಚಂ ೧, (6) ಸಂಪದ್ಗೌರೀವ್ರತಂ, ಶ್ರಾವಣ ವಾರ, ಶ್ರೀನಿವಾಸಬ್ರಹ್ಮತಂತ್ರಪರಕಾಲಸ್ವಾಮಿಗಳ ... ಧನೆ. (7) ನಾಗರಚತುರ್ಥಿ, ಶೋತಾದ್ರಿಸ್ವಾಮಿಗಳ ...

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಪ್ರಕಟಿಸಲ್ಪಟ್ಟು ಮುದ್ರಿಸಲ್ಪಟ್ಟಿತು.

REGISTERED M. NO 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ವಾರ್ಷಿಕ ಚಂದಾ ೧—೦—೦

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈ ಘನಪಥಕೃತಾವತಾರಾ ಪ್ರತ್ಯಹ ಸದ್ವೃತ್ತವೋಹರಾಜೀಯತಾತ್,
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ, ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಮಲಂ
ಶಿವನಾತೀತ ಯಶಃಪ್ರತಾಪವಿಪುಲಂಸದ್ವೃತ್ತಮಾಲಾಕುಲಂ। ಶ್ರೀಮಂಬೆಟ್ಟಿಳೆಯುಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ॥

ಅಂಚೆವೆಚ್ಚ ಸೇರಿ ೧—೮—೦

ಸಂಪುಟ ೨೩) ಮೈಸೂರ್ ಸ್ಟಾರ್ ಸ೯ ೧೯೧೪ ನೆಯ ಇಸವಿ ಜುಲೈ ತಾರೀಖು ೨೦ ನೆಯ ಸೋಮವಾರ. (ಸಂಚಿಕೆ ೩೦

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಸುಂದರವಾದ ಹೊಸನಮೂನೆ ದೊಡ್ಡ ಘಡಿಯಾರಗಳು.

26

ಪ್ರಖ್ಯಾತಿಹೊಂದಿದ ಅಮೆರಿಕಾದೇಶದ ಅನ್‌ಸೋನಿಯಾ ಕಂಪೆನಿಯವರಿಂದ ತಯಾರಿಸಲ್ಪಟ್ಟ ಖಾತ್ರಿಯಾದ ಮತ್ತು ಬಹಳದಿವಸ ಬಾಳಿಕೆಬರತಕಂಥ ಕ್ಲಾಕ್‌ಗಳು ಇವೇ ಹೊರ್ತು ಬೇರೆ ಅಲ್ಲಾ.

ಈ ಪಕ್ಕದ ಚಿತ್ರದಲ್ಲಿ ಕಾಣಿಸಿರುವ ಗೋಡೆಗೆ ತಗುಲಿಸುವ ಘಂಟೆ, ಅರ್ಧ ಘಂಟೆ ಹೊಡೆಯುವ ಘಡಿಯಾರ ಒಂದಕ್ಕೆ ೧೨-೮-೦ ರೂ. ಘಂಟೆ ಅರ್ಧಘಂಟೆ ಹೊಡೆದು ಅಲಾರಂ ಸಹಾ ಇರತಕ್ಕ ಘಡಿಯಾರ ಒಂದಕ್ಕೆ ೧೩-೪-೧ ರೂ. ಈ ಘಡಿಯಾರಗಳು ಮಜಬೂತಾದ ಯಂತ್ರೋಪಕರಣಗಳಿಂದಲೂ ಮೇಲ್ಬಾಗದಲ್ಲಿ ನಕಾಸಿನ ಕೆತ್ತನೆಯಿಂದಲೂ ನೋಡುವುದಕ್ಕೆ ಅಂದವಾಗಿಯೂ ಬಹಳ ದಿವಸ ಬಾಳಿಕೆ ಬರತಕ್ಕವುಗಳಾಗಿವೆ. ಈ ಘಡಿಯಾರಕ್ಕೆ ಆರ್‌ಡರ್ ಮಾಡತಕ್ಕವರು ೫ ರೂಪಾಯಿ ಅಡ್ವಾನ್ಸು ಕಳಿಸಬೇಕು. ಬಾಕೀ ಮೊಬಲಿಗ್ಯೆ ರೈಲ್ವೆ ರಶೀದಿಯನ್ನು ವಿ. ಪಿ. ಮಾಡಲಾಗುತ್ತೆ. ರೈಲ್ವೆ ಛಾರ್ಜ್ ಅಲಾಯಿದಾ

ಸಿಕ್ಕಿದ ಹಾರ್ಮೋನಿಯಂಗಳನ್ನು ಕ್ರಯಕ್ಕೆ ತೆಗೆದುಕೊಂಡು ನಿಮ್ಮ ಹಣವನ್ನು ಯಾಕೆ ವ್ಯರ್ಥಮಾಡಿಕೊಳ್ಳುವಿರಿ.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ "ಮೋಹನ್‌ಫ್ಲೂಟ್ಸ್" (M. Mohen flute) ಮತ್ತೂ "ಮೋಸ್ಲಂಫ್ಲೂಟ್" (Moslem flute) ಹಾರ್ಮೋನಿಯಂಗಳನ್ನು ನಮ್ಮಿಂದ ತರಿಸಿಕೊಂಡು ಪರೀಕ್ಷಿಸಿರಿ ಈ ಹಾರ್ಮೋನಿಯಂಗಳು ಅನೇಕದಿವಸ ಬಾಳಿಕೆಬರುವಂತೆ ಬಹಳಮಜಬೂತಾದ ಸಾಮಾನುಗಳಿಂದ ಪ್ರಖ್ಯಾತರಾದ ಕಾರೇಗಾರರಿಂದ ತಯಾರಿಸಲ್‌ಪಟ್ಟಿವೆ. ಒಂದು ಸಾರಿ ನಮ್ಮಿಂದ ತರಿಸಿ ಪರಿಕ್ಷಿಸಿದಲ್ಲಿ ಇದರ ಬಂದೋಬಸ್ತು ಬಾಳ್ವಿಕೆ ಸಹ ತಮಗೇ ವ್ಯಕ್ತವಾಗುತ್ತೆ.



ನಂ ೧ ಒಂದು ಸೆಟ್‌ರೀಡ್ಸ್ ಉಳ್ಳದ್ದು (Moslem flute) ಹಾರ್ಮೋನಿಯಂ ೧ ಕ್ಕೆ ೩೫-೦-೦ ರೂ.

ನಂ ೨. ಒಂದು ಸೆಟ್‌ರೀಡ್ಸ್ ಉಳ್ಳದ್ದು (M. Mohen flute) ಹಾರ್ಮೋನಿಯಂ ೧ ಕ್ಕೆ ೩೭-೮-೦ ರೂ.

ನಂ ೩. ಡಿಟೋ ನಮೂನೆಯಲ್ಲಿ ಅತ್ಯುತ್ತಮವಾದದ್ದು (M. Mohen flute) ೧ ಕ್ಕೆ ೪೨-೮-೦ ರೂ.

ನಂ ೪. ಡಬ್ಬಲ್‌ರೀಡ್ಸ್ ಉಳ್ಳದ್ದು (Moslem flute) ಹಾರ್ಮೋನಿಯಂ ೧ ಕ್ಕೆ ೪೭-೮-೦ ರೂ.

ನಂ ೫. ಡಬ್ಬಲ್‌ರೀಡ್ಸ್ ಉಳ್ಳದ್ದು (M. Mohen flute) ಹಾರ್ಮೋನಿಯಂ ೧ ಕ್ಕೆ ೫೨-೮-೦ ರೂ.

ಈ ಹಾರ್ಮೋನಿಯಂಗಳ ಪೈಕಿ ಯಾವದಕ್ಕೆ ಆರ್‌ಡರ್ ಕೊಟ್ಟರೂಕೂಡ ೫ ರೂಪಾಯಿ ಅಡ್ವಾನ್ಸ ಕಳಿಸಬೇಕು ಬಾಕೀಮೊಬಲಿಗ್ಯೆ ರೈಲ್ವೇರಶೀದಿಯನ್ನು ವಿ. ಪಿ. ಮೂಲ್ಯ ರವಾನಿಸುತ್ತೇವೆ.

ನೆಪ್ಚೂನ್‌ಫೌಂಟನ್‌ಪೆನ್‌ಗಳು. NEPTUNE FOUNTAIN PENS.

ಈ ಫೌಂಟನ್‌ಪೆನ್‌ಗಳು ಅದರ ಖರೀದಿಗೆ ತಕ್ಕಂತೆ ೪ ವರುಷಗಳಲಾಗಾಯ್ತು ಹತ್ತು ವರುಷಗಳವರಿಗೆ ಬಾಳಿಕೆ ಬರತಕ್ಕವುಗಳಾಗಿವೆ.

ನಂ ೬೦೦. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಕ್ರಯ ೧ ಕ್ಕೆ ೧—೧೪—೦.

ನಂ ೨೦೫. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಉತ್ತಮವಾದದ್ದು ಕ್ರಯ ೧ ಕ್ಕೆ ೨—೧೦—೦

ನಂ ೨೧೦. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಅತ್ಯುತ್ತಮವಾದದ್ದು ಕ್ರಯ ೧ ಕ್ಕೆ ೪—೨—೦.

ಮೇಲ್ಕಂಡ ಯಾವನಮೂನೆ ಫೌಂಟನ್‌ಪೆನ್‌ಗಳನ್ನು ತರಿಸಿಕೊಂಡರೂ ಅದರ ಜೊತೆಯಲ್ಲಿ ಪೆನ್ ಇಡತಕ್ಕ ಪೆಟ್ಟಿಗೆ ೧. ಜೇಬಿಗೆ ತಗಲಿಸತಕ್ಕ ಕ್ಲಿಪ್ ೧. ಶಾಯಿಹಾಕುವ ಗಾಜಿನ ಟ್ಯೂಬ್ ೧. ಶಾಯಿತುಂಬುವವಿಧ ಪ್ರಿಂಟಾಗಿರತಕ್ಕ ಚೀಟಿ ೧ ನ್ನೂ ಸಹ ರವಾನಿಸಲಾಗುತ್ತೆ.

ರಖಂವಾರ್ ವಾಚ್ ಸರಪಣಿಗಳು.



ಈ ಪಕ್ಕದ ಚಿತ್ರದಲ್ಲಿ ಕಾಣಿಸಿರುವ ನಮೂನೆ ಅಚ್ಚಬೆಳ್ಳಿಯ ವಾಚ್ ಸರಪಣಿ ಯಾವ ರಖಂ ಬೇಕಾದರೂ ಕ್ರಯ ೧ಕ್ಕೆ ೩—೪—೦ ಮೇಲ್ಕಂಡ ರಖಂವ್ಮಿನಲ್ಲಿ ನಿಕ್ಕಲ್‌ಬೆಳ್ಳಿ ಸರಪಣಿ ಕ್ರಯ ೧ ಕ್ಕೆ ೦—೧೨—೦.

ಅಚ್ಚಬೆಳ್ಳೀ ಕೊರಳ ಸರಪಣಿ ಬಹಳ ನಾಜೋಕಾಗಿ ತಯಾರಿಸಿದ್ದು ೧ ಕ್ಕೆ ೧—೪—೧.

೧೮ ಕ್ಯಾರೆಟ್ಟು ಚಿನ್ನದ ಸರಪಣಿ ೧ ಕ್ಕೆ ೫—೮—೦.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್. ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೫—೦
ಸಟೀಕ ಸಂಜೀವ್ರತ	೦—೪—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್‌ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ

ಹೊಸಪುಸ್ತಕಗಳು.

145

ಬಸವರಾಜವಿಜಯಂ— ಬೆಲೆ ೧ ೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧ ೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦ ೨ ನೆ ಪ್ರಕರಣಕ್ಕೆ ೧ ರೂ ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ- ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸುತ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ ವರ್ಷದ ಚಂದಾ ೨-೮-೦.

ಎಂ. ಆರ್. ಕರಿಬಸವಶಾಸ್ತ್ರಿ,

ಗ್ರಂಥಪ್ರಕಾಶಕಮಂಡಲಿ, ಮೈಸೂರು.

ಪ್ರಕಟನೆ.

ಪ್ರಿಂಟಿಂಗಾಫೀಸಿನವರು ಅಗತ್ಯವಾಗಿ ಗಮನಿಸತಕ್ಕದು.

ನಮ್ಮಲ್ಲಿ ಈ ಸ್ಟಾರ್‌ಪತ್ರಿಕೆಯ ೧, ೨, ೩, ೬, ೭ ಮತ್ತು ೮ನೇ ಪುಟಗಳಲ್ಲುಪಯೋಗಿಸಲ್ಪಟ್ಟಿರುವ ಪೈಕ ಅಥವಾ ೧೨ ಪಾಯಿಂಟ್ ಅಕ್ಷರಗಳ ಮತ್ತು ಈ ಪ್ರಕಟನೆಗುಪಯೋಗಿಸಲ್ಪಟ್ಟಿರುವ ಟೂಲೈನ್‌ಮಿನಿಯನ್ ಅಥವಾ ೧೪ ಪಾಯಿಂಟ್ ಅಕ್ಷರಗಳ ಮ್ಯಾಟ್ರಿಕ್ಸುಗಳೂ, ಅವುಗಳ ಮೌಲ್ಡುಗಳೂ ಇವನ್ನು ಎರಕವೆರೆಯುವ ಯಂತ್ರವೂ ಅದಕ್ಕೆ ಸಂಬಂಧಪಟ್ಟ ಲೈನ್ ಗೇಜ್ ಪೇಪರ್‌ಗೇಜ್ ಹೈಟ್‌ಗೇಜ್ ಡ್ರೆಸ್ಸಿಂಗ್‌ಟೇಬಲ್ ಕರ್ನಿಂಗ್ ಮಿಷನ್ನು ಮುಂತಾದ ಸಾಮಾಗ್ರಿಗಳೂ ಸೂಪರ್‌ರಾಯಲ್ ಸೈಜನ್ನು ಪ್ರಿಂಟ್ ಮಾಡುವ ಸಿಲಿಂಡರ್ ಮಿಷನ್ನು ಸಹ ಮಾರಾಟಕ್ಕೆ ಸಿದ್ಧವಾಗಿವೆ. ಈ ಮಿಷನ್ನಿನಲ್ಲೇ ಈ ಸ್ಟಾರ್‌ಪತ್ರಿಕೆಯು ಪ್ರಿಂಟುಮಾಡಲ್ಪಡುತ್ತಿರುವುದು. ಎರಕವೆರೆಯುವ ಮಿಷನ್ನು ಬಹಳ ಸ್ವಲ್ಪ ಕೆಲಸವನ್ನು ಮಾತ್ರ ಮಾಡಿ ಹೊಸದಾಗಿಯೇ ಯಿರುವುದು. ಇಷ್ಟವುಳ್ಳವರು ಇವುಗಳ ಬೆಲೆ ಮೊದಲಾದವನ್ನು ನಮಗೆ ಬರೆದು ತಿಳಿದುಕೊಳ್ಳಬಹುದಲ್ಲದೆ ಪ್ರತ್ಯಕ್ಷವಲ್ಲಿ ಬಂದು ನೋಡಬಹುದು.

ವೈ. ವಿರೂಪಾಕ್ಷಯ್ಯ,
ಪ್ರೊಪ್ರೈಟರ್
ಕಾರ್ಯ ಪ್ರೆಸ್, ಮೈಸೂರು.

ಕೆಲ್ಲೋನ್‌ಪೇಟೆ ಸಬ್‌ತಾಲ್ಲೂಕು, ಬಿಡದಿ.

ಹೋದವರ್ಷ ಈ ಗ್ರಾಮದ ಸುತ್ತಮುತ್ತಲೂ ಮಳೆ ಇಲ್ಲದೆ ಬೆಳೆಯಾಗದೆ ಹೋಯಿತು. ಈಸಲವಾದರೋ ಮಳೆಬರುತ್ತದೆಂದು ನಿರೀಕ್ಷಿಸಿದಾಗ್ಯೂ ಈವರೆಗೂ ಬರದೆ ನಿನ್ನೆ ದಿವಸತಾನೇ ಕೊಂಚ ಸೋನೆಮಳೆ ಆಯಿತು. ಪ್ರಜೆಗಳೆಲ್ಲರೂ ಮಳೆ ಬೀಳದ್ದರಿಂದ ಆಕಾಶವನ್ನೇ ಇದಿರುನೋಡುತ್ತ ತಹತಹಪಡುತ್ತಾ ಇರುತ್ತಾರೆ. ಮುಖ್ಯವಾಗಿ ನಮ್ಮ ಕಡೆ ಕುಷ್ಕಿಬೆಳೆಯೇ ವಿಶೇಷ. ಇಲ್ಲಿಗೆ ಎಲ್ಲೂ ಜಲಾಶ್ರಯವಾದ ಭಾರಿ ಕೆರೆಗಳಿಲ್ಲ, ಈ ಊರಿಗೆ ಆಸರೆಯಾಗಿ ಒಂದು ಸಣ್ಣನದಿಯೂ ೨-೩ ಸರ್ಕಾರಿ ಬಾವಿಗಳೂ ಇರುತ್ತವಲ್ಲದೆ ಗ್ರಾಮದಲ್ಲಿ ಸುಮಾರು ಸ್ವಂತ ೧೦೦ ಬಾವಿಗಳಿರುತ್ತವೆ. ಇವುಗಳಲ್ಲೆಲ್ಲಾ ಜಲವೇ ಇಲ್ಲದೆ ನೀರಿಗೆ ತುಂಬಾ ಶ್ರಮವಾಗಿರುತ್ತದೆ. ಸರ್ಕಾರಿ ಬಾವಿಗಳಲ್ಲಂತೂ ಜಲವೇ ಇಲ್ಲ. ಎಲ್ಲಿಯೋ ಅಲ್ಪಸ್ವಲ್ಪ ಬಂದಲ್ಲಿ ೨-೩ ಮನೆಗಳಿಗೆ ಸಾಕಾಗುವುದೇ ಇಲ್ಲ. ಇಂತಹದರಲ್ಲಿ ಸಾವಿರಾರುಪ್ರಜೆಗಳು ಇರತಕ್ಕ ಈ ಗ್ರಾಮಕ್ಕೆ ನೀರಿನಕಷ್ಟವೆಷ್ಟೆಂಬುದನ್ನು ಹೇಳತೀರದು. ನದಿಯಲ್ಲಿ ನೋಡೋಣವೆಂದರೆ—ಈ ಊರಿನ ರೈಲ್ವೆ ಟ್ಯಾಂಕ್ಕುಗಳಲ್ಲಿ ನೀರಿಲ್ಲದ್ದರಿಂದ ರೈಲ್ವೆ ಕಂಪನಿಯವರು ತೊರೆಯಲ್ಲಿಯೇ ಪಂಪುಹಾಕಿ ಹೋದವರ್ಷದಿಂದಲೂ ನೀರನ್ನು ರೈಲ್‌ಗಳಿಗೆಲ್ಲಾ ಸಪ್ಲೈಮಾಡುತ್ತಾ ಇರುವುದರಿಂದ ನದಿಯಲ್ಲಿ ಒಂದು ಆಳುದ್ದ ತೋಡಿದರೂ ನೀರು ಸಿಕ್ಕುವುದು ದುರ್ಲಭ. ಈ ನಮ್ಮ ಊರಿನಲ್ಲಿ ಮಳೆಗಾಲದಲ್ಲಿ ವೃಥಾ ಹರಿದುಹೋಗತಕ್ಕ ನದಿಗೆ ಅಡ್ಡಲಾಗಿ ಕಟ್ಟಿ ಹಾಕಿ ನೆಲ್ಲಿಗುಡ್ಡೆ ಕೆರೆ ಎಂಬದಾಗಿ ಕಟ್ಟಬೇಕೆಂದು ಸ್ಯಾಂಕ್ಷನ್ ಆಗಿ ಸರ್ವೆ ಕೆಲಸವೆಲ್ಲಾ ಪೂರೈಸಿ ಏನುಕಾರಣದಿಂದಲೋ ರಿಲೀಫ್ ಕಾಮಗಾರಿಗೆಂದು ಅದನ್ನು ರಿಜರ್ವ್ ಮಾಡಿದ್ದರು. ಅದನ್ನು ಹಾಗೆಯೇ ಮೂಲೆಗೆಹಾಕದೆ ಕಟ್ಟಿಸಿಕೊಟ್ಟು ನಮ್ಮಗಳನ್ನು ಕಾಪಾಡಬೇಕೆಂದು ಇಲ್ಲಿನ ಪ್ರಜೆಗಳು ಆಗಾಗ್ಯೆ ಗೌರ್ನ್‌ಮೆಂಟಿನವರನ್ನು ಪ್ರಾರ್ಥಿಸುತ್ತಲೇ ಇದ್ದರು. ಮೇಲ್ಕಂಡ ಕೆರೆಯನ್ನು ನಮ್ಮ ಲೇಟ್ ದಿವಾನರಾದ ಸರ್ ಪಿ. ಎನ್. ಕೃಷ್ಣಮೂರ್ತಿಗಳವರು ಸಹ ದಯಮಾಡಿಸಿ ಪರಾಂಬರಿಸಿಕೊಂಡು ಹೋದರಲ್ಲದೆ ಇನ್ನೂ ಅನೇಕರು ಬಂದು ನೋಡಿಕೊಂಡು ಹೋದಾಗ್ಯೂ ಕೆರೆಯನ್ನು ಕಟ್ಟಿಸದೇ ಹೋದುದರಿಂದ ಹೋದವರ್ಷ ಈ ಊರಿನ ಪ್ರಮುಖರೆಲ್ಲರೂ ಮುಂದಾಳುಗಳಾಗಿ ಹೋಗಿ ನಮ್ಮ ದಿವಾನರವರಾದ ಎಂ. ವಿಶ್ವೇಶ್ವರಯ್ಯ ಬಿ. ಎ. ಸಿ. ಐ. ಇ, ಯವರನ್ನು ಕಂಡು ಈ ಪ್ರಾಂತ್ಯ ಮಳೆಹೋಗಿ ಜನರಿಗೆ ಉಂಟಾಗಿರುವ ಕಷ್ಟನಷ್ಟಗಳನ್ನು ಅರಿಕೆಮಾಡಿ ಇಂಥ ಕ್ಷಾಮದಲ್ಲಾದರೂ ಕೆರೆ ಕಟ್ಟಿಸಿಕೊಟ್ಟು ನಮ್ಮಗಳನ್ನು ಕಾಪಾಡಬೇಕೆಂದು ಬೇಡಿಕೊಂಡದ್ದರಮೇಲೆ ಕ್ಷಿಪ್ರದಲ್ಲಿಯೇ ವ್ಯವಹರಿಸುತ್ತೇವೆಂದು ವಾಗ್ದಾನಮಾಡಿದರು. ಈಚೆಗೆ ವ್ಯವಸಾಯಕ್ಕೆ ಮಾತ್ರ ಅನುಕೂಲವಾಗುವಷ್ಟು ಮಳೆ ಬಿದ್ದಮಾತ್ರಕ್ಕೇನೆ ನಮ್ಮ ಊರಿನ ಮುಂದಾಳುಗಳು ತೃಪ್ತರಾಗಿ ತಟಸ್ಥರಾದರು. ಈ ಸಂವತ್ಸರವಾದರೂ ಇನ್ನೂ ಮಳೆ ಆಗದೆ ಕ್ಷಾಮಬಾಧೆ ತಲೆದೋರಿದಾಗ್ಯೂ ಊರಿನ ಪ್ರಮುಖರು ಸುಮ್ಮನೆ ಇರುವುದು ತುಂಬಾ ಶೋಚನೀಯವಾಗಿದೆ. ಇವರು ಹೀಗೆ ನಿರುತ್ಸಾಹಿಗಳಾಗಿದ್ದಾಗ್ಯೂ ಸರ್ಕಾರಿಗೆ ದಯಮಾಡಿಸಿದ್ದ ನಮ್ಮ ಸಬ್ ಡಿ॥ ಆಫೀಸರಾದ ಜ॥ ಸಯ್ಯದ್ ತಾಹಿರ್ ನಮ್ಮ ಸಬ್ ಡಿ॥ ಆಫೀಸರಾದ ಜ॥ ಸಯ್ಯದ್ ತಾಹಿರ್ ಸಾಹೇಬರವರು ಮತ್ತು ನಮ್ಮ ಅಮಲ್ದಾರ್‌ರವರಾದ ಮ॥ ಕಾಮರಾಯರು ಸಹ ಬಂದಿದ್ದಾಗ್ಯೆ ದನಗಳಿಗೆ ಮೇವು ನೀರೂ ಸಹ ಇಲ್ಲದೆ ದಿನ ೧ ಕ್ಕೆ ೫೦-೬೦ ರಾಸುಗಳು ಸಾಯುತ್ತಾ ಇರುವುದನ್ನೂ ಮತ್ತು ಹುಲ್ಲು ಸಿಕ್ಕದುದರಿಂದ ಮಾರ್ಗದ ಇಕ್ಕೆಲಗಳಲ್ಲಿಯೂ ಮತ್ತು ರೈತರಭೂಮಿಗಳಲ್ಲಿಯೂ ಇರುವ ಮರಗಳ ಸೊಪ್ಪನ್ನು ದನಕರುಗಳ ಪೋಷಣೆಗಾಗಿ ಕಡಿಸಿರುವುದನ್ನೂ ಮತ್ತು ರೂ.ಗೆ ೧೧-೧೨ ಸೇರು ರಾಗಿ ಸಿಕ್ಕದಿರುವುದನ್ನೂ ನೀರಿನ ಅಭಾವವನ್ನು ಸಹ ಕಣ್ಣಾರ ನೋಡಿದ್ದಲ್ಲದೆ ಪ್ರಜೆಗಳ ಅಹವಾಲನ್ನು ಸಹ ಕೇಳಿ ನಿಮಗೆಲ್ಲಾ ತಕಾವಿ ಸಾಲವನ್ನು ಕೊಡುವಂತೆ ಮಾಡಿ ನಿಮ್ಮಗಳನ್ನು ಉಳಿಸುವ ಏರ್ಪಾಡನ್ನು ಮಾಡುತ್ತೇವಲ್ಲದೆ, ನಿಮ್ಮ ಪ್ರಾರ್ಥನೆಯಂತೆ ಕೆರೆ ಸಹ ಕಟ್ಟಿಸಿ ನಿಮಗೆ ರಿಲೀಫ್ ಕಾಮಗಾರಿಯನ್ನೊದಗಿಸಿಕೊಡುತ್ತೇವೆಂದು ಅವರ ಸುತ್ತಮುತ್ತ ನೆರೆದಿದ್ದ ಪ್ರಜಾಸ್ತೋಮಕ್ಕೆ ವಾಗ್ದಾನಮಾಡಿ ಹೋದರು. ಅದರಂತೆ ೪-೫ ದಿವಸಕ್ಕೇನೇ ನಮ್ಮ ಅಮಲ್ದಾರ್ ಸಾಹೇಬರವರು ಇಲ್ಲಿಗೆ ದಯಮಾಡಿಸಿ ತಂಡತಂಡವಾಗಿ ಬರುವ ಜನಸ್ತೋಮಕ್ಕೆಲ್ಲಾ ಮುನಾಸಬು ತಕಾವಿಕೊಡಲು ಅವರುಗಳಿಂದ ಬರೆಸಿಕೊಳ್ಳುತ್ತಾ ರೂಪಾಯಿಗಳು ಸಾಲವೆಂದು ಹೇಳುವವರಿಗೆ ಇನ್ನೂ ಈ ತಿಂಗಳು ಮಳೆ ಬರದೇಯಿದ್ದಲ್ಲಿ ಇದೇರೀತಿ ಮುಂದೆಯೂ ಕೊಡಿಸುತ್ತೇವೆಂದು ನಾನು ಮುಂದು ತಾನು ಮುಂದು ಎಂದು ಬರುವ ಜನಸ್ತೋಮಕ್ಕೆಲ್ಲಾ ಸಂಜಾಯಿಷಿ ಹೇಳುತ್ತಾ ತಮ್ಮ ದಯಾಳುತ್ವವನ್ನು ತೋರಿಸುತ್ತ ಇರುವುದು ಸಂತೋಷಕರವಾಗಿದೆ. ಅಲ್ಲದೆ ಗ್ರಾಮಾಂತರಗಳಮೇಲೂ ಸಹ ದಯಮಾಡಿಸಿ ತಕಾವಿ ಕೊಡುತ್ತಾ ಇರುತ್ತಾರೆ. ಈ ತಕಾವಿಯನ್ನು ಭೂಮಿ ಇರುವವರಿಗೆ ಮಾತ್ರ ಕೊಡುತ್ತಾರಾದುದರಿಂದ ಮನೆಮಠಗಳಿಲ್ಲದ ನಿರ್ಗತಿಕರಿಗೆ ಕೊಡುವವರು ಯಾರು? ಆದುದರಿಂದ ನಮ್ಮ ದಯಾಳುಗಳಾದ ದಿವಾನಸಾಹೇಬರು ಹೋದವರ್ಷ ನಮ್ಮ ಊರಿನವರ ಪ್ರಾರ್ಥನೆಯ ಮೇಲೆ ವಾಗ್ದಾನಮಾಡಿದ್ದಂತೆ ರಿಲೀಫ್ ಕಾಮಗಾರಿಗಾಗಿ ಮೇಲ್ಕಂಡ ನೆಲ್ಲಿಗುಡ್ಡೆ ಕೆರೆಯನ್ನು ಕಟ್ಟಿಸಿದಲ್ಲಿ ಎಲ್ಲಾ ಬಡಪ್ರಜೆಗಳೂ ಈ ದುರ್ಭಿಕ್ಷಕಾಲದಲ್ಲಿ ಹೊಟ್ಟೆ ಹೊರೆದುಕೊಳ್ಳುತ್ತಾರಲ್ಲದೆ ಮುಂದೆ ಇಂಥ ಕ್ಷಾಮಬಾಧೆಗೆ ಸಿಕ್ಕಲಾರರೆಂತಲೂ ಈ ಕೆರೆ ಕಟ್ಟುವುದರಿಂದ ಸಾವಿರಾರು ಎಕರೆ ತರಿ ಸಾಗುವಳಿ ಆಗಿ ಗೌರ್ನ್‌ಮೆಂಟಿಗೆ ತುಂಬಾ ಉತ್ಪತ್ತಿ ಬರುತ್ತದೆಂತಲೂ ಯೋಚಿಸತಕ್ಕದ್ದಿದೆ. ಅಲ್ಲದೆ ಈ ದಿವಸ ನಮ್ಮ ಡಿ॥ ಡೆಪ್ಯುಟಿಕಮಿಷನರ್ ಮ॥ ಡಿ. ಕೆ. ಭಾಂಡಿಸಾಹೇಬರು ಸಹ ದಯಮಾಡಿಸಿ ಇಲ್ಲಿನ ಸ್ಥಿತಿಗತಿಗಳನ್ನು ಪರಾಂಬರಿಸಿದರಲ್ಲದೆ ಇಲ್ಲಿಗೆ ¼ ಮೈಲಿ ಫಾಸಲೆಯಲ್ಲಿ ಕಟ್ಟಹಾಕುವ ಕೆರೆಯ ಬೈಲನ್ನು ಸಹ ಪರಾಂಬರಿಸಿಕೊಂಡು ಬಂದರು. ಫಲಿತಾಂಶವು ನಿರೀಕ್ಷಿಸಲ್‌ಪಡಬೇಕಾಗಿದೆ. ಹೆತ್ತ ತಾಯಿಯು ತನ್ನ ಮಗುವು ರೋದನಮಾಡಿದಹೊರ್ತು ಹಾಲು ಎರೆಯಲ್ಲವಾದುದರಿಂದ ಈ ಊರಿನ ಪ್ರಮುಖರೆಲ್ಲರೂ ಸೇರಿ [illegible] ಶ್ರೀಮನ್ಮಹಾರಾಜರವರ ಮತ್ತು ಅವರ ದಿವಾನರವರ ಅವಗಾಹನೆಗೆ ತಂದು ಕೆರೆಯಕೆಲಸವನ್ನಾರಂಭಮಾಡುವಂತೆ ಮಾಡಿಸಿದಲ್ಲಿ ಪ್ರಜೆಗಳೂ ಮತ್ತು ಜಾನ್‌ವಾರುಗಳು ಸಹ ಬದುಕಿಕೊಳ್ಳುತ್ತವಲ್ಲದೆ ಶ್ರೀಮನ್ಮಹಾರಾಜರವರಿಗೆ ತುಂಬಾ ಪುಣ್ಯವೂ, ಕೀರ್ತಿಯೂ ಲಭಿಸುತ್ತಲ್ಲದೆ ದಿವಾನಸಾಹೇಬರವರಿಗೂ ಸಹ ಲಭಿಸುತ್ತೆಂದು ಬೇಡುತ್ತೇನೆ.

ದೀನಪ್ರಜಾಭಿಮಾನಿ

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಭೆಯ ವಾರ್ಷಿಕ ಜನರಲ್ ಕಮಿಟಿ ಮೀಟಿಂಗು, ೧೯೧೪ ನೇ ಮೇ ತಿಂಗಳು ೨೦ ನೇ ತಾರೀಖು ಸಾಯಂಕಾಲ ೫ ಘಂಟೆಯಲ್ಲಿ ರಾವ್ ಬಹದ್ದೂರ್ ಧರ್ಮಪ್ರವೃತ್ತ ಗುಬ್ಬಿ ತೋಟದಪ್ಪನವರ ಧರ್ಮಸತ್ರದ ಮಹಡಿಯಲ್ಲಿ ಮ॥ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರವರ ಅಧ್ಯಕ್ಷತೆಯಲ್ಲಿ ಸೇರಿ ನಡೆಸಿದ ಪ್ರೊಸಿಡಿಂಗ್ಸ್:—

ಹಾಜರಿದ್ದ ಮೆಂಬರುಗಳು.

ಮ॥ ರಾ॥ ಗಳಾದ (೧) ದಿವಾನ್ ಬಹದ್ದೂರ್, ರಾಜಸಭಾಭೂಷಣ, ಕೆ. ಪಿ. ಪುಟ್ಟಣ್ಣಶೆಟ್ಟರು (ಪ್ರೆಸಿಡೆಂಟ್) (೨) ಡಾಕ್ಟರ್ ಟಿ ಎಸ್. ನಂಜಪ್ಪನವರು, M. B. C. M. (ವೈಸ್‌ಪ್ರೆಸಿಡೆಂಟ್) (೩) ಎಚ್. ಕೆ. ವೀರಬಸವಯ್ಯನವರು B. A. B. L. (ಸೆಕ್ರಟರಿ) (೪) ಶೆಟ್ಟರ ಸಿದ್ಧಬಸವಶೆಟ್ಟರು (೫) ಶೆಟ್ಟರ ವೀರಭದ್ರಶೆಟ್ಟರು (೬) ಯಜಮಾನ್ ಬಸಪ್ಪನವರು (೭) ಆರ್. ಪುಟ್ಟಣ್ಣನವರು, B. A. B. L. (೮) ಎಮ್. ಬಸವಯ್ಯನವರು, B. A B. L. (೯) ಜಿ. ರುದ್ರಪ್ಪನವರು, B. A. Bar-at-law, (೧೦) ಜಿ. ಮಲ್ಲಿಕಾರ್ಜುನಯ್ಯನವರು B. A. (೧೧) ಶಂಕರಣ್ಣನವರ ಶಿವಪ್ಪನವರು (೧೨) ಗ್ರಂದಿಗೆ ಅಂಗಡಿ ಪಾಪಣ್ಣನವರು (ಟ್ರೆಜರರ್) (೧೩) ಎಲೆ ಸಿದ್ಧಲಿಂಗಪ್ಪಶೆಟ್ಟರು, (೧೪) ಜಿ. ಸಿದ್ದವೀರಪ್ಪನವರು, (೧೫) ಜಿ ಎಸ್. ಶಿವರಾತ್ರಪ್ಪನವರು, (೧೬) ಬಿ. ಜಿ ಬಸವಲಿಂಗಪ್ಪನವರು, (೧೭) ಜಿ. ಕೆ. ರುದ್ರಾರ್ಯರು (ಅಸಿಸ್ಟೆಂಟ್ ಸೆಕ್ರಟರಿ) (೧೮) ಆಬ್ಕಾರಿ ರುದ್ರಪ್ಪನವರ ಗಂಗಪ್ಪನವರು (೧೯) ಮೊಣಕಾಲ್ಮುರು ಭಾರಿ ಸಣ್ಣರುದ್ರಪ್ಪನವರು (೨೦) ಭಕ್ಷಿ ಪುಟ್ಟಶ್ಯಾಮಪ್ಪನವರು, (೨೧) ಗ್ರಾಂ ಶ್ರೀಕಂಠಪ್ಪನವರ ವೀರಭದ್ರಪ್ಪನವರು, (೨೨) ಶಾಂತವೀರಪ್ಪನವರ ಬುಳ್ಳಪ್ಪನವರು, (೨೩) ಶೃಂಗೇರಿ ಅಪ್ಪಯ್ಯಣ್ಣನವರು.

I. ೧೯೧೩ ನೇ ಎಪ್ರಿಲ್ ತಾ॥ ೨೩ ರಲ್ಲಿ ನಡೆದ ವಾರ್ಷಿಕ ಜನರಲ್ ಕಮಿಟಿಯು ಮತ್ತು ೧೯೧೩ ನೇ ಜುಲೈ ೧೫ ರಲ್ಲಿ ನಡೆದ ಸ್ಪೆಷಲ್ ಜನರಲ್ ಕಮಿಟಿಯ ಪ್ರೊಸಿಡಿಂಗ್ಸ್‌ಗಳು ಓದಿ ಅನುಮೋದಿಸಲ್ಪಟ್ಟವು.

II. ತಾ॥ ೨೮-೪-೧೯೧೩ ರಿಂದ ತಾ॥ ೨೦-೫-೧೯೧೪ ರವರೆಗಿನ ಜಮಾ ಖರ್ಚು ಲೆಕ್ಕಗಳು ಓದಲ್ಪಟ್ಟು ಮಂಜೂರು ಮಾಡಲ್ಪಟ್ಟವು.

ಜಮಾ.

ತಾ॥ ೨೮-೪-೧೯೧೩ ರಲ್ಲಿ ಗು॥ ಸಿಲ್ಕು ಮುಜಕೂರಿಗೆ ಜಮಾ:—

ಮ॥ ಜಿ. ಪಾಪಣ್ಣನವರಲ್ಲಿ	೫೦-೦-೦.
,, ಜಿ. ಶಾಂತವೀರಪ್ಪನವರಲ್ಲಿ	३೦-೯-೦.
,, ಎಚ್. ಕೆ. ವೀರಬಸವಯ್ಯನವರಲ್ಲಿ (ಸೆಕ್ರಟರಿ)	೫೧೫-೩-೫.
ಜುಮ್ಲಾ...	೫೯೫-೧೨-೫.

೧. ವಿವಾಹ ಮೊದಲಾದವುಗಳಿಂದಬಂದದ್ದು ೬೬೩-೨-೦ ೨. ಮೇ॥ ಹುಣಸಮಾರ್ನಹಳ್ಳಿ ಮಠದ ಶ್ರೀ ಪಟ್ಟಾಧ್ಯಕ್ಷ ನಂಜೇಸ್ವಾಮಿಗಳಿಂದ ಬೆಂಗಳೂರಲ್ಲಿ ನಡೆದ ೨ನೇ ಶ್ರೀಮದ್ವೀರಶೈವಮಹಾ ಸಭಾಕಾಲದಲ್ಲಿ ಲೇಟ್ ಚನ್ನಬಸವಒಡೆಯರವರು ವಾಗ್ದಾನಮಾಡಿದಮೊಬಲಗು ಬಂದದ್ದು ೫೦೦-೦-೦ ೩. ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳಿಂದ ೨ ಜನ ವಿದ್ಯಾರ್ಥಿಗಳ ವೇತನಕ್ಕಾಗಿ ಬಂದದ್ದು ೫೦-೦-೦. ೪. ದಾವಣಗೆರೆ ವೀರಶೈವ ಫಂಡಿನಿಂದ ೨ ಜನ ವಿದ್ಯಾರ್ಥಿಗಳ ವೇತನಕ್ಕಾಗಿ ಬಂದದ್ದು ೨೮-೦-೦. ೫. ಬೆಂಗಳೂರು ಮೊದಲಾದ ಸ್ಥಳಗಳ ದೊಡ್ಡಮನುಷ್ಯರಿಂದ ವಿದ್ಯಾರ್ಥಿಗಳ ವೇತನಕ್ಕಾಗಿ ಚಂದಾ ವಸೂಲಾದ ಮೊಬಲಗು ಬಂದದ್ದು ೪೮-೦-೦ ೬. ೧೯೧೨-೧೩ ನೇ ಸಾಲಿನ ೧೮೦೦೦ ರೂ. ಮೂಲಧನದ ಬಡ್ಡಿಯು ಬೆಂಗಳೂರು ಡಿಸ್ಟ್ರಿಕ್ಟ್ ಟ್ರೆಜರಿಯಿಂದ ಬಂದದ್ದು ೭೨೦-೦-೦. ೭. ತಾ॥ ೫-೮-೧೯೧೦ ರಿಂದ ತಾ॥ ೫-೨-೧೯೧೪ ರವರೆಗಿನ ೨೦೦ ರೂ. ಮೂಲಧನದ ಬಡ್ಡಿಯು ಬೆಂಗಳೂರುಸಿಟಿ ಇನ್‌ಸ್ಟಿಟ್ಯೂಟ್‌ನಿಂದ ಬಂದದ್ದು ೨೮-೦-೦

ಜುಮ್ಲಾ... ೨೬೩೬-೧೪-೫

ಖರ್ಚು.

೧. ಮ್ಯಾನೇಜಿಂಗ್ ಕಮಿಟಿಯಲ್ಲಿ ಸ್ಯಾಂಕ್ಷನ್ ಆದ ಮೇರೆಗೆ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಕೊಟ್ಟದ್ದು ೬೬೬-೧೦-೦ ೨. ಬೆಂಗಳೂರು ವೀರಶೈವಾಶ್ರಮಕ್ಕೆ ಪಾತ್ರೆಗಳನ್ನು ಮಾಡಿಸಿದ ಬಗ್ಯೆ ಖರ್ಚು ४३-೧३-೮ ३. ಪ್ರಿಂಟಿಂಗ್, ಟೈಪಿಂಗ್, ಸ್ಟೇಷನರಿ ಪೋಸ್ಟೇಜು, ಮಿಶ್ರ, ಸಾದಲ್ವಾರ್ ಬಗೆಗೆ ಖರ್ಚು ೭೩-೨-೬ ೪ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳಿಂದ ದಯಪಾಲಿಸಿ ಬಂದ ಮೊಬಲಗನ್ನು ೨ ಜನ ವಿದ್ಯಾರ್ಥಿಗಳಿಗೆ ಕೊಟ್ಟದ್ದು ೫೦-೦-೦ ೫. ದಾವಣಗೆರೆ ವೀರಶೈವ ಫಂಡಿನಿಂದ ಬಂದ ಮೊಬಲಗನ್ನು ೨ ಜನ ವಿದ್ಯಾರ್ಥಿಗಳಿಗೆ ಕೊಟ್ಟದ್ದು ೨೮-೧-೦. ೬. ಬೆಂಗಳೂರು ಮೊದಲಾದ ಸ್ಥಳದ ದೊಡ್ಡಮನುಷ್ಯರಿಂದ ವಸೂಲಾದ ಚಂದಾ ಮೊಬಲಗನ್ನು ೪ ಜನ ವಿದ್ಯಾರ್ಥಿಗಳಿಗೆ ಕೊಟ್ಟದ್ದು ೪೮-೦-೦ ೭. ಬೆಂಗಳೂರು ಶ್ರೀ ಕರಿಸಿದ್ದೇಶ್ವರ ಮಠದಲ್ಲಿನ ವೀರಶೈವ ಸಂಸ್ಕೃತ ಪಾಠಶಾಲೆಗೆ ಕೊಟ್ಟದ್ದು ३೬-೦-೦. ೮ ಬೆಂಗಳೂರು ಡಿಸ್ಟ್ರಿಕ್ಟ್ ಟ್ರೆಜರಿಯಲ್ಲಿನ ಮೂಲಧನದ ಜೊತೆಗೆ ಸೇರಿಸಿದ್ದು ೧೯೪೫-೧೨-೨

ಜುಮ್ಲಾ... ೨೬೩೬-೧೪-೫

ತಾ॥ ೨೦-೫-೧೯೧೪ ರಲ್ಲಿ ಹಾಜರು ಸಿಲ್ಕು ಸೆಕ್ರಟರಿ ಮ॥ ಎಚ್. ಕೆ. ವೀರಬಸವಯ್ಯನವರಲ್ಲಿ ೬೯೧-೨-३

ಜುಮ್ಲಾ... ೨೬೩೬-೧೪-೫

ತಾ॥ ೨೦-೫-೧೯೧೪ ರಲ್ಲಿನ ಫಂಡಿನ ಮೂಲಧನ ಬೆಂಗಳೂರು ಡಿಸ್ಟ್ರಿಕ್ಟ್ ಟ್ರೆಜರಿಯಲ್ಲಿ ೧೯೦೦೦-೦-೦
ಡಿಬೆಂಚರ್ ಬಾಂಡುಗಳ ೨೦೦-೦-೦

ಜುಮ್ಲಾ... ೧೯೨೦೦-೦-೦

III. ಆಡಿಟರ್, ಮ॥ ಬಿ. ಜಿ. ಬಸವಲಿಂಗಪ್ಪನವರ ರಿಪೋರ್ಟು ಓದಲ್ಪಟ್ಟು ಅಂಗೀಕರಿಸಲ್ಪಟ್ಟಿತು.

IV. ಸೆಕ್ರಟರಿ, ಮ॥ ಎಚ್. ಕೆ. ವೀರಬಸವಯ್ಯ, ಬಿ. ಎ. ಬಿ. ಯಲ್. ಯವರಿಂದ ತಯಾರಿಸಲ್ಪಟ್ಟ ವಾರ್ಷಿಕ ರಿಪೋರ್ಟು ಓದಲ್ಪಟ್ಟು ಅಂಗೀಕರಿಸಲ್ಪಟ್ಟಿತು. ಅದನ್ನು ಮೈಸೂರು ಸ್ಟಾರ್ ಪತ್ರಿಕೆಯಲ್ಲಾಗಲಿ ಅಥವಾ ಬೇರೆ ಸಣ್ಣ ಪುಸ್ತಕದಂತೆಯಾಗಲಿ ಪ್ರಿಂಟ್‌ಮಾಡಿಸಿ ಜನರಲ್ ಕಮಿಟಿ ಮೆಂಬರುಗಳಿಗೂ ಫಂಡಿಗೆ ಸಹಾಯಮಾಡಿದವರಿಗೂ ಹಂಚುವಂತೆ ತೀರ್ಮಾನಿಸಲ್ಪಟ್ಟಿತು.

VI. ೧. ಮ॥ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರು ಪ್ರೆಸಿಡೆಂಟರಾಗಿಯೂ, ೨ ಡಾಕ್ಟರ್ ಟಿ. ಯಸ್. ನಂಜಪ್ಪನವರು, M. B. C. M. ವೈಸ್‌ಪ್ರೆಸಿಡೆಂಟರಾಗಿಯೂ, ३. ಮ॥ ಎಚ್. ಕೆ. ವೀರಬಸವಯ್ಯನವರು, B. A. B. L. ಸೆಕ್ರಟರಿಗಳಾಗಿಯೂ, ೪. ಮ॥ ಜಿ. ಪಾಪಣ್ಣನವರು ಟ್ರೆಜರರ್ ಆಗಿಯೂ ಪುನಃ ಚುನಾಯಿಸಲ್ಪಟ್ಟರು. ೫. ಮ್ಯಾನೇಜಿಂಗ್ ಕಮಿಟಿಗೆ ಈ ಕೆಳಗಿನ ದೊಡ್ಡಮನುಷ್ಯರು ಚುನಾಯಿಸಲ್ಪಟ್ಟರು.

ಮ॥ ರಾ॥ ಗಳಾದ ಆರ್. ಪುಟ್ಟಣ್ಣನವರು, B. A. B. L.
,, ,, ಶೆಟ್ಟರ ವೀರಭದ್ರಶೆಟ್ಟರು.
,, ,, ಯಜಮಾನ್ ಬಸಪ್ಪನವರು.
,, ,, ಎಂ. ಬಸವಯ್ಯ, B. A. B. L.
,, ,, ಜಿ. ರುದ್ರಪ್ಪನವರು B A Bar-at-law.
,, ,, ಪಿ. ಮಹಾದೇವಯ್ಯನವರು B. A B. L.
,, ,, ವೈ. ವಿರೂಪಾಕ್ಷಯ್ಯನವರು.
,, ,, ಶಂಕರಣ್ಣನವರ ಶಿವಪ್ಪನವರು.
,, ,, ಯು. ಯಸ್. ಕಾಳಪ್ಪನವರು.
,, ,, ಎಲೆ ಸಿದ್ಧಲಿಂಗಪ್ಪಶೆಟ್ಟರು.

೬. ಮ॥ ರಾ॥ ಗಳಾದ ಶೆಟ್ಟರಸಿದ್ಧಬಸವಶೆಟ್ಟರು, ಬಿ. ಜಿ. ಬಸವಲಿಂಗಪ್ಪನವರು ಮುಂದಿನ ವರ್ಷದ ಆಡಿಟರುಗಳಾಗಿ ಚುನಾಯಿಸಲ್ಪಟ್ಟರು. ಗೌರ್ನ್‌ಮೆಂಟ್ ಕಂಟ್ರೋಲರ್ ಆಫೀಸಿನಲ್ಲಿನ ಲಾಯಕ್ಕಾದ ಆಡಿಟರು ಫಂಡಿನ ಲೆಕ್ಕಗಳನ್ನೂ ಬುಕ್ಕುಗಳನ್ನೂ ಪರೀಕ್ಷಿಸಿ ತಮ್ಮ ಅಭಿಪ್ರಾಯವನ್ನು ಫಂಡ್ ಸಭೆಗೆ ಕೊಡುವಂತೆ ಪ್ರಾರ್ಥಿಸಿಕೊಳ್ಳಬೇಕೆಂದು ತೀರ್ಮಾನಿಸಲ್ಪಟ್ಟಿತು. ೭ ಮ॥ ರಾ॥ ಜಿ. ಕೆ. ರುದ್ರಾರ್ಯರು ಅಸಿಸ್ಟೆಂಟ್ ಸೆಕ್ರಟರಿಗಳಾಗಿ ಪುನಃ ಚುನಾಯಿಸಲ್ಪಟ್ಟರು.

VI. ೧೯೧೪ ರಲ್ಲಿನ ದಸರಾ ಪ್ರಜಾಪ್ರತಿನಿಧಿಸಭೆಗೆ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಭೆಯ ಪರವಾಗಿ ಮ॥ರಾ॥ ಎಮ್. ಬಸವಯ್ಯ B. A. B. L ರವರು ಮೆಂಬರಾಗಿ ಹೋಗಲು ಚುನಾಯಿಸಲ್ಪಟ್ಟರು.

VII. ಈ ಕೆಳಗಿನ ದೊಡ್ಡಮನುಷ್ಯರು ಜನರಲ್ ಕಮಿಟಿ ಮೆಂಬರುಗಳ ಲಿಸ್ಟಿಗೆ ಸೇರಿಸಲ್ಪಟ್ಟರು.

೧. ಮ॥ ರಾ॥ ಗಳಾದ ಕೆ. ರೇವಣ್ಣನವರು, ಸಬ್ ಅಸಿಸ್ಟೆಂಟ್ ಕನ್ಸರ್ವೇಟರ್ ಆಫ್ ಫಾರಸ್ಟ್ ಶಿಮೊಗ್ಗ. ೨. ಎಮ್. ಯನ್. ಸುಬ್ಬಣ್ಣನವರು, B. A. B. L. ಅಡ್ವೊಕೇಟ್, ಮೈಸೂರು. ३. ಜಿ. ರುದ್ರಪ್ಪನವರು, B. A. Bar-at-law ಶ್ರೀಮನ್ ದಿವಾನ್ ಸಾಹೇಬರವರ ಪ್ರೈವೇಟ್ ಅಸಿಸ್ಟೆಂಟ್ ಸೆಕ್ರಟರಿ, ಬೆಂಗಳೂರು. ೪. ತಿಪಟೂರು ಕಿತ್ತನಕೆರೆ ಸಾಹುಕಾರ್ ಲೇಟ್ ಮರುಳಪ್ಪಶೆಟ್ಟರ ಬದಲಿಗೆ ಇವರ ತಮ್ಮಂದಿರು ಶಿವಲಿಂಗಪ್ಪಶೆಟ್ಟರು. ೫. ಯಂ. ರುದ್ರಪ್ಪಯ್ಯನವರು ಸಾಹುಕಾರ್ ಗುರುಗದಹಳ್ಳಿ ತಿಪಟೂರು ತಾಲ್ಲೂಕು ೬. ದೇವನಹಳ್ಳಿ ತಾಲ್ಲೂಕು ಹುಣಸಮಾರ್ನಹಳ್ಳಿಮಠದ ಏಜಂಟ್ ಲೇಟ್ ಚನ್ನಬಸವಒಡೆಯರವರ ಬದಲಿಗೆ ಏಜಂಟ್ ಗುರುನಂಜಒಡೆಯರವರು, ೭. ಬಾರಾಮಾರ್ಗದ ಕರಿಬಸಪ್ಪನವರು, ಚೆನ್ನರಾಯಪಟ್ಟಣ. ೮. ಶ್ರೀ ಪಟ್ಟದ ರುದ್ರದೇವರು, ಮೆದಲೂರು ಉಕೀದಮಠ, ಶಿರಾ, ತುಮಕೂರು ಡಿ॥ ೯. ಯಜಮಾನ್ ಚಿಕ್ಕವೀರಪ್ಪನವರು, ರಾಮಶೆಟ್ಟಿಪೇಟೆ, ಬೆಂಗಳೂರು.

ಹನುಮಂತನ ವಿಷಯ.

ಆರ್ಯರು ಭರತಖಂಡ ಪ್ರವೇಶಮಾಡಿ ಹಿಮವತ್ಪರ್ವತಕ್ಕೂ, ವಿಂಧ್ಯಪರ್ವತಕ್ಕೂ ಮಧ್ಯೆ ಇರತಕ್ಕ ದೇಶವನ್ನೆಲ್ಲಾ ಸ್ವಾಧೀನಮಾಡಿಕೊಂಡದ್ದರಿಂದ ಅದಕ್ಕೆ "ಆರ್ಯಾವರ್ತ" ವೆಂಬ ಹೆಸರು ಬಂದಿರುತ್ತೆಂಬುದಕ್ಕೆ "ಆರ್ಯಾವರ್ತಃಪುಣ್ಯಭೂಮಿರ್ಮಧ್ಯಂವಿಂಧ್ಯಹಿಮಾಗಯೋಃ" ಎಂಬುದಾಗಿ ನಮ್ಮ ಪೂರ್ವಚರಿತ್ರೆಯಲ್ಲಿ ಹೇಳಿರುವುದೇ ಸಾಕ್ಷ್ಯವಾಗಿದೆ.

ಹೀಗಿರಲಾಗಿ ವಿಂಧ್ಯಪರ್ವತಕ್ಕೆ ದಕ್ಷಿಣದಲ್ಲಿರತಕ್ಕ ದೇಶವು ಹೇಗಿದೆಯೋ ಅದನ್ನೂ ನೋಡಿಕೊಂಡು ಸಾಧ್ಯವಾದರೆ ಆ ಪ್ರಾಂತ್ಯವನ್ನೂ ಜಯಿಸಬೇಕೆಂಬ ಯೋಚನೆಯಿಂದ ಅಗಸ್ತ್ಯರು ತಕ್ಕ ಸೈನ್ಯದೊಡನೆ ವಿಂಧ್ಯಪರ್ವತವನ್ನು ದಾಟಿ ದಕ್ಷಿಣದೇಶಕ್ಕೆ ಪ್ರವೇಶಮಾಡಲು ಆಗ್ಯೆ ಅಲ್ಲಿ ಯಾವ ಯಾವ ವಿಧದ ಜನರಿದ್ದರೆಂದರೆ—ವಿದ್ಯಾಧರರೂ, ಕಪಿಧ್ವಜರೂ, ರಾಕ್ಷಸರೂ ಎಂದು ಮೂರುವಿಧದ ಜನರಿದ್ದರೆಂತಲೂ, ಮೊದಲನೆ ವಿದ್ಯಾಧರರ ರಾಜಧಾನಿಯು, ಉತ್ತರಭಾಗದಲ್ಲಿ ರಥನೂಪುರಚಕ್ರವಾಳಪುರವೆಂಬ ಪಟ್ಟಣವಾಗಿದ್ದು ಈಗ ಅದು ರತ್ನಪೂರ್ ಎಂದು ಕರೆಯಲ್ಪಡುತ್ತಿರುವದಲ್ಲದೆ, ಆ ವಂಶದ ರಾಜರು ಈಗಲೂ ಒಬ್ಬಿಬ್ಬರು ಇರುತ್ತಲಿದ್ದಾರೆ. ಎರಡನೆ ಕಪಿಧ್ವಜರು ಅಂದರೆ—ನಮ್ಮ ಮೈಸೂರು ಮಹಾರಾಜರ ಧ್ವಜಕ್ಕೆ ಗಂಡಭೇರುಂಡ ಪಕ್ಷಿಯರೂಪದ ಗುರ್ತೂ ಇಂಗ್ಲೀಷಿನವರ ಧ್ವಜಕ್ಕೆ ಸಿಂಹರೂಪದ ಗುರ್ತೂ, ಜರ್ಮನೀದೇಶದ ಧ್ವಜಕ್ಕೆ ರಣಹದ್ದಿನ ರೂಪದ ಗುರ್ತೂ, ಹ್ಯಾಗೆ ಕೊಟ್ಟುಕೊಂಡಿರುತ್ತಲಿವೆಯೋ ಹಾಗೆ ಇವರ ಧ್ವಜಕ್ಕೆ ಕಪಿಯರೂಪದ ಗುರ್ತು ಕೊಟ್ಟುಕೊಂಡಿದ್ದದ್ದರಿಂದ ಅವರಿಗೆ ಆ ಕಾಲದಲ್ಲಿ ಕಪಿಧ್ವಜರೆಂಬ ಹೆಸರು ಬರಲು ಕಾರಣವಾಗಿದ್ದದ್ದಲ್ಲದೆ, ಇವರ ರಾಜಧಾನಿಯು ಕಿಷ್ಕಿಂಧಾಪಟ್ಟಣವಾಗಿತ್ತೆಂತಲೂ. ಅದು ಈಗ ತುಂಗಭದ್ರಾನದಿಯ ತೀರದಲ್ಲಿರುವ ಆನೆಗೊಂದಿ ಎಂಬ ಹೆಸರು ಗೊಂಡಿರುತ್ತದೆಂತಲೂ, ಮೂರನೆ ರಾಕ್ಷಸರೆಂಬುವರ ರಾಜಧಾನಿಯು ಸಿಂಹಳದ್ವೀಪದಲ್ಲಿ ಲಂಕಾಪಟ್ಟಣವೆಂಬದಾಗಿತ್ತೆಂತಲೂ, ಅವರ ರಾಜ್ಯವು ನಮ್ಮ ದಕ್ಷಿಣದೇಶದಲ್ಲಿ ಮಧುರೆಯವರೆಗೂ ವ್ಯಾಪಿಸಿತ್ತೆಂತಲೂ ತಿಳಿಯಬಂದಿದೆ.

ಇನ್ನು ಮುಖ್ಯವಾಗಿ ಹನುಮಂತನ ರೂಪದ ವಿಚಾರ ಮಾತಾಡೋಣ. ಇವನ ತಂದೆತಾಯಿಗಳು ದಕ್ಷಿಣದೇಶದಲ್ಲಿರುವ ಮಹೇಂದ್ರಪರ್ವತದಲ್ಲಿ ಅನೇಕ ಜನರೊಡನೆ ವಾಸಮಾಡುತ್ತಿದ್ದರು. ಇವನ ತಂದೆಯ ಹೆಸರು ಕೇಸರಿ. ತಾಯಿಯ ಹೆಸರು ಅಂಜನಾದೇವಿ. ಈಕೆಗೆ ಕಣ್ಣು ದೃಷ್ಟಿಯು ಚೆನ್ನಾಗಿರಲಿಲ್ಲ. ಹೀಗಿರುತ್ತಿರುವಲ್ಲಿ ಅಲ್ಲಿ ಸ್ವಲ್ಪ ಪ್ರಸಿದ್ಧನಾದ ಪವನನೆಂಬ ಹೆಸರುಳ್ಳವನೊಬ್ಬಾತನಿದ್ದನು. ಅವನಿಗೆ ಅಂಜನಾದೇವಿಯಲ್ಲಿ ಒಬ್ಬ ಮಗನು ಹುಟ್ಟಿದನು. ಅವನಿಗೆ ಆಂಜನೇಯನೆಂಬ ಹೆಸರು ಕೊಡಲ್ಪಟ್ಟಿತ್ತು. ಯಾತಕ್ಕೆಂದರೆ, "ಔರಸಃ ಕ್ಷೇತ್ರಜಶ್ಚೈವದತ್ತಃ ಕೃತ್ರಿಮಸ್ಸುತಃ" ಎಂಬ ಶಾಸ್ತ್ರಾನುಸಾರವಾಗಿ ಮದುವೆಯಾದ ಗಂಡನಿಗೆ ಹುಟ್ಟಿದ ಮಗನು ಔರಸಪುತ್ರನೆಂತಲೂ, ಅವನಲ್ಲದೆ ಅನ್ಯನಿಗೆ ಹುಟ್ಟಿದ ಮಗನಿಗೆ ಕ್ಷೇತ್ರಜಪುತ್ರನೆಂತಲೂ ಇರೋಣದರಿಂದ ಆ ಕಾಲದಲ್ಲಿ ಅಂಥವರಿಗೆಲ್ಲಾ ತಾಯಿಯ ಹೆಸರು ಕೊಡುವ ಪದ್ಧತಿ ಇತ್ತು.

ಮೇಲೆ ಹೇಳಿದಂತೆ ಕಿಷ್ಕಿಂಧಾಪಟ್ಟಣವು ನಮ್ಮಂತೆ ಮನುಷ್ಯರಾದ ಕಪಿಧ್ವಜರ ರಾಜಧಾನಿಯಾಗಿ ಇದ್ದು ಸುಗ್ರೀವನು ರಾಜ್ಯವಾಳುತ್ತಿರಲು, ಅವನ ರಾಜ್ಯವು ಆಗ್ಗೆ ಪೂರ್ವಪಶ್ಚಿಮ ಸಮುದ್ರದಲ್ಲಿರುವ ಬೊಂಬಾಯಿಗೆ ಮೇಲ್ಭಾಗದಲ್ಲಿರುವ ಹನೂನರ ದ್ವೀಪ ಅಥವಾ ಹೊನ್ನಾವರ ಯಾನೆ ಹೊನೊಲ್ ಎಂದು ಈಗ ಕರೆಯಲ್ಪಡುತ್ತಿರುವ ಭಾಗಕ್ಕೆಲ್ಲಾ ಆಂಜನೇಯನು ಅಧಿಕಾರಿಯಾಗಿ ಆ ಭಾಗದ ರಾಜ್ಯವನ್ನು ಆಳುತ್ತಿದ್ದುದರಿಂದ ಅವನಿಗೆ "ಹನುಮ" ಎಂಬ ಅಡ್ಡಹೆಸರು ಬಂದು ಇದ್ದದ್ದು ಕೊನೆಗೆ ಹನುಮ ಎಂಬುವದರಲ್ಲಿ ಪರ್ಯವಸನ್ನವಾಯಿತು.

ಈ ಆಂಜನೇಯ ಯಾನೆ ಹನುಮಂತನೆಂಬುವನಿಗೆ ಆಗ್ಯೆ ಸಿಂಹಳದ್ವೀಪದ ರಾಜನಾಗಿದ್ದ ರಾವಣನ ಸೋದರಸೊಸೆ ಅನಂಗಪುಷ್ಪೆ ಎಂಬುವಳನ್ನೂ ಸುಗ್ರೀವನ ಮಗಳು ಪದ್ಮರಾಗೆ ಎಂಬುವಳನ್ನೂ ಕೊಟ್ಟು ಮದುವೆಮಾಡಿದ್ದರು. ಆದುದರಿಂದ ಆಂಜನೇಯ ಯಾನೆ ಹನುಮಂತನ ವಂಶವು ಬೆಳೆದು ಬರಲು ಕಾರಣವಾಗಿ ಆ ವಂಶದ ರಾಜರಾದವರು ಈಗಲೂ ಒಬ್ಬರಿರುತ್ತಲಿದ್ದಾರೆ. ಅವರು ಗುಜರಾತುದೇಶದ ಪಕ್ಕದಲ್ಲಿರುವ ಕಾಠ್ಯಾವಾಡೆಂಬ ಪ್ರಾಂತ್ಯದಲ್ಲಿ ಪೋರಬಂದರ್ ಎಂಬ ದೇಶದ "ರಾಣಾ" ಅಂದರೆ ರಾಜರಾಗಿರುತ್ತಲಿದ್ದಾರೆ. ಇವರ ವಂಶಾವಳಿಯ ರಿಕಾರ್ಡನ್ನು ಗತಿಸಿದ ಎಡ್ವರ್ಡ್ ಚಕ್ರವರ್ತಿಯವರು ಇಲ್ಲಿಗೆ ಬಂದಿದ್ದಾಗ್ಯೆ ತರಿಸಿ ನೋಡಿ ಬಹಳ ಸಂತೋಷಪಟ್ಟರೆಂಬುದಕ್ಕೆ ದಾಖಲೆ ಇದೆ.

ಹೀಗೆಲ್ಲಾ ಇರೋಣದರಿಂದ ಆಂಜನೇಯ ಯಾನೆ ಹನುಮಂತನೆಂಬುವನು ಕಪಿಧ್ವಜರೆಂಬ ಮಾನುಷಜನಾಂಗಕ್ಕೆ ಸೇರಿದವನಾಗಿದ್ದಾಗ್ಯೂ ಅವನಿಗೆ ಕೋತಿಯಮುಖವೂ, ಬಾಲವೂ ಮಾಡಿರುವದು ಶುದ್ಧವಾಗಿ ಸರಿಯಲ್ಲ. ಶ್ರೀರಾಮನ ವಾಸದಲ್ಲಿರುವಾಗ್ಯೆ ರಾವಣನನ್ನು ಜಯಿಸಿ ಸೀತೆಯನ್ನು ವಾಪಸು ತರಲು ಸುಗ್ರೀವನ ಸಹಾಯವು ಮುಖ್ಯವಾಗಿ ಆಗಬೇಕಾಗಿ ಬಂದಕಾರಣ ಅವನ ರಾಜ್ಯದಲ್ಲಿ ಒಂದುಭಾಗಕ್ಕೆ ಅಧಿಕಾರಿಯಾಗಿದ್ದ ಆಂಜನೇಯ ಯಾನೆ ಹನುಮಂತನು ಬಹಳ ಸಮರ್ಥನೆನಿಸಿಕೊಂಡಿದ್ದ ಕಾರಣ ಶ್ರೀರಾಮನ ಸಹಾಯಕ್ಕೆ ಕೆಲವು ಸೈನ್ಯದೊಡನೆ ಅವನನ್ನು ಸುಗ್ರೀವನು ಕೊಟ್ಟನೇಹೊರ್ತು ಬೇರೆಅಲ್ಲ. ಹೀಗಿದ್ದಾಗ್ಯೂ ರಾಮಾಯಣದಲ್ಲಿ ಮೇಲ್ಕಂಡ ಸೈನ್ಯವನ್ನು ಕಪಿಧ್ವಜರ ಸೈನ್ಯವೆಂಬುವದಕ್ಕೆ ಬದಲಾಗಿ ಕಪಿಸೈನ್ಯವೆಂದು ಬರೆದಿರೋಣದರಿಂದ ಆಂಜನೇಯ ಯಾನೆ ಹನುಮಂತನಿಗೆ ಕೋತಿಯಮುಖವೂ, ಬಾಲವೂ ಸಾಧಾರಣ ಜನರು ಭಾವಿಸಲು ಕಾರಣವಾಯಿತು. ಇದು ಮಾತ್ರವಲ್ಲದೆ ಆಂಜನೇಯ ಯಾನೆ ಹನುಮಂತನು ಪವನನೆಂಬುವನಿಗೆ ಹುಟ್ಟಿದವನಾದ್ದರಿಂದಲೂ ಪವನನೆಂದರೆ ವಾಯು ಅಂದರೆ ಗಾಳಿಯಾದ್ದರಿಂದಲೂ ಹನುಮಂತನಿಗೆ ವಾಯುಪುತ್ರನೆಂಬ ಹೆಸರಿಟ್ಟು ಸಾಕ್ಷಾದ್ವಾಯುದೇವರೆಂತಲೂ, ಮಾರುತಿಯೆಂತಲೂ ಜನರು ಪೂಜಿಸುತ್ತಲಿದ್ದಾರೆ.

ಈಗ್ಗೆ ೫೦ ವರುಷಗಳ ಹಿಂದೆ ನಾನೊಂದಾವರ್ತಿ ದೊಡ್ಡಬಳ್ಳಾಪುರಕ್ಕೆ ಹೋಗಿದ್ದಾಗ ಅಲ್ಲಿನ ತಾಲ್ಲೂಕು ಕಚೇರಿಯ ಜುನಾರವಾರಿ ಕೆಲಸದಲ್ಲಿ ಪವನೈಯ್ಯನೆಂಬ ಒಬ್ಬ ಬ್ರಾಹ್ಮಣನಿದ್ದನು. ಅವನಿಗೆ ಪವನನೆಂಬ ಹೆಸರಿದ್ದ ಮಾತ್ರಕ್ಕೆ ಅವನನ್ನು ವಾಯುದೇವರೆಂದೆಣಿಸಬಹುದೆ? ಮುಖ್ಯ ನಮ್ಮ ಭರತಖಂಡದ ಪ್ರಾಚೀನಚರಿತ್ರೆಯು ಬಹು ಸಾಧಾರಣ ಜನಗಳಿಗೆ ತಿಳಿಯವಾದ್ದರಿಂದ ಹೀಗೆಲ್ಲಾ ನಾನಾವಿಧವಾದ ಭಾವನೆಗಳುಂಟಾಗಲು ಕಾರಣವಾಗಿದೆ, ಯತ್ನವಿಲ್ಲಾ.

ಹನುಮಂತನಿಗೆ ಕೋತಿಯಮುಖವೂ, ಬಾಲವೂ ಮಾಡಿಕೊಂಡು ಪೂಜಿಸುತ್ತಿರುವದಕ್ಕೆ ಕಾರಣ ತಿಳಿಯಲಪೇಕ್ಷೆಯಿಂದ ನಾನು ತಮಗೆ ಬರದುಕೊಂಡಿದ್ದ ಲೇಖನವನ್ನು ತಾವು ದಯವಿಟ್ಟು ಕಳೆದ ಮಾರ್ಚಿತಿಂಗಳು ತಾ॥ ३೦ ನೇ ಶುಕ್ರವಾರದ ಸಾಧ್ವಿಯಲ್ಲಿ ಪ್ರಕಟಿಸಿದ್ದದ್ದರಮೇಲೆ ಆಕ್ಷೇಪಣೆ ಮಾಡಿ ಯಾರೋ ಒಬ್ಬರು (ಎಸ್. ಎಸ್. ಆರ್.) ಎಂದು ರುಜುಹಾಕಿ ಬರೆದಿದ್ದದ್ದನ್ನೂ ಅದಕ್ಕೆ ಮುಂದಿನ ವಾರದ ಸಾಧ್ವಿಯಲ್ಲಿ ಪ್ರಕಟಿಸಿರೋಣವಾದ್ದದ್ದನ್ನೂ ನೋಡಿದೆ. ಅವರು ಯಾರೋ ದೊಡ್ಡಪಂಡಿತರಾಗಿ ಕಾಣುತ್ತಾರೆ. ಅವರಿಗೆ ಸರಿಯಾದ ಪ್ರತ್ಯುತ್ತರಕೊಡಲು ತಕ್ಕ ಯೋಗ್ಯತೆ ನನಗಿಲ್ಲದೇ ಇದ್ದರೂ, ಸ್ವಲ್ಪಮಟ್ಟಿಗಾದರೂ ಇವರಲ್ಲೇ ಪ್ರತ್ಯುತ್ತರಕೊಡಲು ಈ ಲೇಖನವೇ ಬಹಳ ಲಂಬಿಸಿ ಹೋದ್ದರಿಂದ ಇನ್ನೊಂದುವೇಳೆ ಬರೆದು ಕಳುಹಿಸುತ್ತೇನೆ.

ಸತ್ಯಾಭಿಲಾಷಿ, (ಸಾಧ್ವಿ.)

ಇಂಡ್ಯಾ ಕೌನ್ಸಿಲ್ ಬಿಲ್ಲು.

ಗೊತ್ತಾಗಿದ್ದಮೇರೆಗೆ ಈ ಬಿಲ್ಲಿನ ೨ ನೆಯ ವಾಚನವನ್ನು ಕಳೆದ ತಾ॥ ೭ ರಲ್ಲಿ ಲಾರ್ಡುಗಳ ಸಭೆಯಲ್ಲಿ ನಡೆಯಿಸಬೇಕೆಂದಾಗ ತುಂಬಾ ವಾದಾನುವಾದಗಳು ನಡೆದುವು. ಲಾರ್ಡ್ ಆಂಫ್‌ಥಿಲ್‌ರವರು—ಈ ಬಿಲ್ಲನ್ನು ತೀರ್ಮಾನಿಸುವುದಕ್ಕೆ ಇದು ಸಮಯವಲ್ಲ. ಇದು ವಿಧಿಯಾಗದಿದ್ದರೆ ಭಾರತೀಯರಿಗೆ ಆಶಾಭಂಗವೇನೂ ಆಗುವುದಿಲ್ಲ. ಇದರ ವಿಷಯದಲ್ಲಿ ಇಂಡ್ಯಾ ಪ್ರಭುತ್ವದವರ ಮತ್ತು ಅಧಿಪತ್ಯಗಳ ನಿಯಮನಿರ್ಮಾಣಸಭೆಗಳ ಪ್ರಜಾಪ್ರತಿನಿಧಿಸಂಘಗಳ ಅಭಿಪ್ರಾಯವನ್ನು ತಿಳಿಯಬೇಕಾಗಿದೆ. ಈ ಬಿಲ್ಲು, ಸೂಚನೆಯನ್ನು ಕೊಡತಕ್ಕದಾಗಿದ್ದ ಇಂಡ್ಯಾಕೌನ್ಸಿಲನ್ನು ಅಧಿಕಾರಮಾಡತಕ್ಕ ಸಂಘವನ್ನಾಗಿ ಮಾಡತಕ್ಕದಾಗಿದೆ. ಇದರಿಂದ ಇಂಡ್ಯಾಕೌನ್ಸಿಲಿಗೆ ನಿರಂಕುಶಾಧಿಕಾರವುಂಟಾಗುತ್ತದೆ. ಹಾಗಾಗುವುದರಿಂದ ಇಂಡ್ಯಾ ವೈಸ್ರಾಯರ ಮತ್ತು ಅವರ ಕೌನ್ಸಿಲಿನ ಗೌರವಕ್ಕೆ ಭಂಗವುಂಟಾಗುತ್ತದೆ. ಅದುಕಾರಣ ಆ ನಿರಂಕುಶಾಧಿಕಾರವು ಅದಕ್ಕೆ ಬರದಂತೆ ಮಾಡಬೇಕು. ಎಂದು ಹೇಳಿದರು. ಇನ್ನು ಕೆಲ ಸಭ್ಯರು ಇದರ ವಿಷಯವನ್ನು ಆಲೋಚಿಸುವುದಕ್ಕೆ ಒಂದು ಕಮಿಟಿಯನ್ನು ಮಾಡುವುದು ಒಳ್ಳೆಯದೆಂದು ಹೇಳಿದರು. ಲಾರ್ಡ್ ಮಾರ್ಲೆಯವರೂ, ಲಾರ್ಡ್ ಕ್ರ್ಯೂಯವರೂ ಸಹ ಬಿಲ್ಲಿನ ಪ್ರಯೋಜನವನ್ನು ಕುರಿತು ವಾದಿಸಿದರು. ಕಡೆಗೆ ವಾಚನಕ್ಕೆ ಸಭಿಕರ ಅನುಮತಿಯನ್ನು ಕೇಳುವಲ್ಲಿ ३೮ ಮಂದಿ ಅನುಕೂಲವಾಗಿಯೂ, ೯೬ ಮಂದಿ ವಿರುದ್ಧವಾಗಿಯೂ ಅಭಿಪ್ರಾಯ ಕೊಟ್ಟುದರಿಂದ ಅದು ವಿಧಿಯಾಗುವುದಕ್ಕಿಲ್ಲದೆ ತಿರಸ್ಕೃತವಾಯಿತು. ಮುಖ್ಯವಾಗಿ ಈ ವಿಷಯದಲ್ಲಿ ಪಾರ್ಲಿಮೆಂಟಿನೊಳಗೆ ನಡೆದ ವಾದಾನುವಾದವನ್ನೆಲ್ಲಾ ವಿಮರ್ಶಿಸಲಾಗಿ, ಇಂಡ್ಯಾ ಕೌನ್ಸಿಲ್ಲಿನ ಸುಧಾರಣೆಯು ಅನವಶ್ಯಕವೆಂದು ಯಾರೊಬ್ಬರೂ ಹೇಳಿರುವುದಿಲ್ಲ. ಸುಧಾರಣೆಯ ವಿಧಾನಗಳಲ್ಲಿ ಮತಭೇದಗಳಿರುತ್ತವೆ. ಭಾರತೀಯ ಪ್ರತಿನಿಧಿಗಳನ್ನು ಕೌನ್ಸಿಲ್ಲಿನಲ್ಲಿ ಸೇರಿಸುವ ವಿಷಯದಲ್ಲಿ ಒಬ್ಬೊಬ್ಬರ ಹೊರತು ವ್ಯತಿರೇಕಾಭಿಪ್ರಾಯವನ್ನು ಇತರರು ಕೊಟ್ಟಿರುವುದಿಲ್ಲ. ಲಾರ್ಡುಗಳು, ಈ ವಿಷಯವನ್ನು ಬೇರೆ ಕಮಿಟಿಯ ಚರ್ಚೆಗಾದರೂ ಇರಿಸದೆ ತಿರಸ್ಕರಿಸಿದುದು ಭಾರತೀಯರ ಮನಸ್ಸಿಗೆ ವಿಷಾದವನ್ನುಂಟುಮಾಡತಕ್ಕದಾಗಿದೆ. ಲಾರ್ಡ್ ಕ್ರ್ಯೂರವರು ಹಿಡಿದ ಕಾರ್ಯವನ್ನು ಬಿಡದೆ ಸರಿಯಾದ ಪ್ರಯತ್ನದಿಂದ ಸಮಯಸನ್ನಿವೇಶಗಳನ್ನರಿತು ತಕ್ಕ ಸುಧಾರಣೆಯಿಂದ ಮುಂದಾದರೂ ಇದನ್ನು ವಿಧಿಯಾಗುವಂತೆ ಮಾಡಲು ಸಾಹಸಗೊಳ್ಳದೆ ಬಿಡಲಾರರು.

ಗ್ರೋಬಲ್ ಎಂಬ ಜರ್ಮನಿದೇಶದ ಇಂಜನಿಯರು ಹೊಸದಾಗಿ ಒಂದು ವಿಮಾನವನ್ನು ನಿರ್ಮಿಸಿದ್ದಾನೆ. ಇದುವರೆಗಿನ ವಿಮಾನಗಳಂತೆ ಇದು ಸಂಚಾರಕಾಲದಲ್ಲಿ ಧ್ವನಿಮಾಡುವುದಿಲ್ಲ. ಆಕಾಶದಲ್ಲಿ ३ ಸಾವಿರ ಅಡಿಗಳ ಮೇಲಕ್ಕೆ ಏರಿದಕೂಡಲೇ ಭೂಮಿಯಲ್ಲಿದ್ದವರಿಗೆ ಇದು ಗೋಚರಿಸುವುದೇ ಇಲ್ಲ. ಈ ವಿಮಾನದ ಸುತ್ತಲೂ ಕಾಗೆಬಂಗದ ತಗಡುಗಳು ಹೊದ್ದಿಸಲ್ಪಟ್ಟಿವೆ. ವಿಮಾನದೊಳಗಿದ್ದವರು ಕದಗಳನ್ನು ತೆಗೆಯದೆಯೇ ಪಾರದರ್ಶಕವಾದ ಕಾಗೆಬಂಗದ ಕಿಟಕಿಗಳಿಂದ ಹೊರಗೆ ಜರುಗುತ್ತಿರುವ ಸಂಗತಿಯನ್ನೆಲ್ಲಾ ನೋಡಬಹುದು. ಅದುಕಾರಣವೇ ಇದಕ್ಕೆ ಬೆಂಕಿಯ ಭಯವೂ ಇಲ್ಲ. ಕಾಗೆಬಂಗದಿಂದ ಮಾಡಲ್ಪಟ್ಟಿರುವ ಕಾರಣದಿಂದಲೇ ದೂರದಲ್ಲಿದ್ದವರ ಕಣ್ಣಿಗೆ ಇದುಗೋಚರಿಸುವುದೂ ಇಲ್ಲ.

ಮೈಸೂರ್ ಸ್ಟಾರ್.

ಸ್ ೧೯೧೪ನೆಯ ಜುಲೈ ತಾ|| ೨೭ನೆಯ ಸೋಮವಾರ.

ನಂಜನಗೂಡು ತೆಪ್ಪೋತ್ಸವ.

ಕಳೆದ ಗಿರಿಜಾಕಲ್ಯಾಣೋತ್ಸವ ಸಮಯದಲ್ಲಿ ನಡೆದ ತೆಪ್ಪೋತ್ಸವಸಂಬಂಧವಾದ ಅನಾಹುತವನ್ನು ಕಂಡು ದೈವಭಕ್ತರು ವಿಧವಿಧವಾಗಿ ವ್ಯಾಖ್ಯಾನಮಾಡುತ್ತಲೂ, ಇದು ಏನೋ ಭವಿತವ್ಯವಾದ ಅನರ್ಥದ ಸೂಚಕವೆಂದು ಚಿಂತಿಸುತ್ತಲೂ ಇದ್ದಾರೆ.

ಸ್ಥೂಲಚಿತ್ತಸ್ತಥಾತ್ರಿ ಶ್ರೀದಾಂಭಿಕಃಕುನಖೇತಥಾ |
ರೋಗವಾನ್ನಧಿಕಃಕುಸ್ಥಿ ಖಲ್ವಾಟಿಸಂಗುಕಶ್ಚ ಯಃ ||
ಹೀನವ್ರಸ್ಯಾಪಸದ್ರಾಜ ಲೋಭೋಪಹತಚೇತನಃ |
ಹೀನಾಂಗಸ್ತ್ವತಿರಿಕ್ತಾಂಗೋ ನಾಸ್ತಿಕಶ್ಚ ತಿನಿಂದಕಃ ||
ಪೂಜಾಯಾಮಂತುಮುನಿಶ್ರೇಷ್ಠಾ ಯೇಚೇನೈವಾಧಿಕಾರಿಣಃ ||

ಐರ್ಲ್ಯಾಂಡ್ ಸ್ವರಾಜ್ಯವಿಧಿ.

ಐರ್ಲ್ಯಾಂಡ್ ಸ್ವರಾಜ್ಯದ ಬಿಲ್ಲು ವಿಧಿಯಾಗುವ ವಿಷಯದಲ್ಲಿ ಆಲ್ಸ್ಟರ್ ನಿವಾಸಿಗಳು ಮಾಡುತ್ತಿರುವ ಪ್ರತಿ ಘಟನವು ಸಭಾಮುಖದಲ್ಲಿ ಪ್ರಯೋಜನಕರವಾಗದೆಹೋದುದರಿಂದ ಆಯುಧಗಳ ಮೂಲಕ ಪ್ರತಿಘಟಿಸಲು ಹೆಚ್ಚಾಗಿ ಹವಣಿಸುತ್ತಲೇ ಇರುವರು. ಆಲ್ಸ್ಟರ್ ಜಿಲ್ಲೆಯವರು ೮೫೦೦೦ ಮಂದಿಯವರೆಗೆ ವಾಲಂಟಿಯರುಗಳನ್ನು ಅಣಿಮಾಡಿದ್ದರೆ, ಐರ್ಲ್ಯಾಂಡಿನ ಇತರ ಭಾಗದ ಪ್ರಜೆಗಳು ಆಲ್ಸ್ಟರಿನವರ ಮೇಲಣ ಪ್ರತಿಘಟನಕ್ಕೆ ೧೩೦೦೦೦ ವಾಲಂಟಿಯರುಗಳನ್ನು ಅಣಿಮಾಡಿರುವರು.

ಬಳಿದೇಶದ ವೃತ್ತಾಂತಗಳು.

ರ್ಜಿನಲ್ಲಿ ಮತ್ತೊಂದಪ್ಪಣೆಯಾಗುವವರೆಗೂ ನಿಯಮಿಸಲ್ಪಟ್ಟಿರುವರು.

ಕರ್ನಲ್ ಎ. ಎ. ಜೋನ್ಸ್‌ರವರು ಈಗ ನೋಡುತ್ತಿರುವ ಶ್ರೀಮತ್ ಮಹಾರಾಜರವರ ಮಿಲ್ಟರಿ ಸೆಕ್ರೆಟರಿಯುದ್ಯೋಗವು ಬರುವ ತಿಂಗಳಾರಭ್ಯದಿಂದ ತಪ್ಪಿಸಲ್ಪಟ್ಟು ಅವರು ಕುಣಿಗಲ್ ಸ್ಟಡ್ ಫಾರಮ್ಮಿನ ಡೈರೆಕ್ಟರಾಗಿಯೂ, ರಾಜಧಾನಿಯ ಗಾರ್ನಮೆಂಟ್ ಹೌಸಿನ ಮೇಲ್ವಿಚಾರಕರಾಗಿಯೂ ನಿಯಮಿಸಲ್ಪಡುವರಾಗಿ ವರ್ತಮಾನವಿದೆ.

ಯಿಂದ ಹರಿಹರಕ್ಕೂ ೩ ನೆಯ ತ|| ಮ್ಯಾಜಿಸ್ಟ್ರೇಟಧಿಕಾರದೊಡನೆ ವರ್ಗಾಯಿಸಲ್ಪಟ್ಟಿರುವರು.

ಭರತಖಂಡದ ವೃತ್ತಾಂತಗಳು.

ಸಿಂಧುನದಿಯಲ್ಲಿ ವಿಶೇಷ ಪ್ರವಾಹವು ಬಂದು ಕಾಲ್ವೆಗಳು ಕಿತ್ತು ಗದ್ದೆಗಳ ಮೇಲೆಲ್ಲಾ ನೀರುರುಳಿ ನಷ್ಟವನ್ನುಂಟುಮಾಡಿದೆ.

“ಹಕ್ಕು”ಗಳು ಅವಶ್ಯಕವಾದ ಶಾಸನಗಳಿಂದಲೂ, ಪಾಲನಸೂತ್ರಗಳಿಂದಲೂ ನೆರವೇರಿಸಲ್ಪಟ್ಟಿರುತ್ತಿವೆ. ಪಾರ್ಲಿಮೆಂಟಿನ ೨ ಸಭೆಗಳಲ್ಲೂ ಮಂತ್ರಿಗಳು ನ್ಯಾಯಬುದ್ಧಿಯಿಂದ ಉಪನ್ಯಾಸ ಮಾಡಿದರು. ಅದರಮೇಲೆ ಚರ್ಚೆಗಳು ಜರುಗಿದುವು. ದಕ್ಷಿಣಾಫ್ರಿಕಾದವರಿಗೆ ಮನಸ್ಸು ಕರಗುವಂತೆ ಮುಖ್ಯವಾಗಿ ಸಾವಿರಾರು ಮಂದಿ ಭಾರತೀಯರು ನಾನಾವಿಧದ ಪಾಡುಗಳನ್ನು ಪಟ್ಟರು. ಅದರಿಂದಲೇ ಈ ವ್ಯವಹಾರವು ಗೌರವಕರವಾದ ಪರ್ಯವಸಾನವನ್ನೈದಿತು. ಭರತಖಂಡದ ಸಾರ್ವಭೌಮಿಕ ಪ್ರಭುತ್ವಕ್ಕೂ ಶ್ರೀಮತ್ ಗೋಖಲೆಯವರೇ ಮುಂದಾಗಿದ್ದ ಭಾರತೀಯರಿಗೂ, ಮಿ|| ಆಂಡ್ರೂಸ್‌ರವರಿಗೂ ನಾವು ಕೃತಜ್ಞರಾಗಿ

ವಿದೇಶದ ವೃತ್ತಾಂತಗಳು.

ವರ್ತಕವ್ಯವಹಾರ.

ಮೊಸ್ತರ ಗುಣಕಥನವನ್ನು ಮಾಡಿದಮೇಲೆ ಹೆ! ಮಾಸ್ತರು ತಕ್ಕುತ್ತರನನ್ನು ಕೊಟ್ಟು ತನ್ನ ವಂದನೆಯನ್ನು ತಿಳಿಸಿದರು. ತರುವಾಯ ಸಭಿಕರಿಗೆ ಗಂಧ ಪುಷ್ಪಗಳು ಕೊಡಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು. ಸ್ಕೂಲ ಪಂಚರಾದ ರಾ|| ಗುರುಸಿದ್ಧಪ್ಪ ಸೀಳಿನ, ಲಿಂಗರಡ್ಡೆಪ್ಪ ಅಬ್ಬಿಗೇರಿ, ಮರಿಯಪ್ಪ ಚೆನ್ನರಡ್ಡಿ, ಗೋವಿಂದಪ್ಪ ಭಾವಿಕಟ್ಟಿ, ಇವರುಗಳು ಬಸವನಗುಡಿಯ ಒಂದುಭಾಗ ಪುಕಿಳವಾಗಿದ್ದುದನ್ನು ಸ್ಕೂಲಿನುಪಯೋಗಕ್ಕಾಗಿ ಚಂದಾ ಹಣವನ್ನೆತ್ತಿ ದುರಸ್ತುಮಾಡಿಸಿಕೊಟ್ಟಿರುವರು.

ಓರ್ವಸ್ಥಳಿಕ.

ಯಾದವಾಡ, ತಾಲೂಕ ಗೋಕಾಕ.

ಗೋಕಾಕ ತಾಲೂಕ ಯಾದವಾಡದ ಶಾಲೆಯಲ್ಲಿ ತಾ|| ೧೭-೭-೧೯೧೪ ನೇ ಇಸವಿ ದಿವಸ ಮ|| ರಾ|| ದುಂಡಪ್ಪ ಬಾನವೇಟಿ ಹೆಡ್‌ಮಾಸ್ತರ ಯಾದವಾಡ ಇವರು ಅದೇ ತಾಲ್ಲೂಕ ಪೈಕಿ ಮೂಡಲಗಿ ಶಾಲೆಗೆ ವರ್ಗವಾಗಿಹೋದ ನಿಮಿತ್ತ ಶಾಲೆಯ ಉಪಶಿಕ್ಷಕರುಗಳು ರಾ|| ರಾ|| ವಿರುಪಾಕ್ಷಪ್ಪ ಅಣ್ಣಾ ಅಥಣಿ ಇವರ ಅಧ್ಯಕ್ಷತೆಯಲ್ಲಿ ಪಾರ್ಟಿಸುಪಾರಿಯ ಸಭೆಯನ್ನು ಕೂಡಿಸಿದ್ದರು. ಸಭೆಗೆ ರಾ|| ರಾ|| ಗಳಾದ ಶಿವಲಿಂಗಪ್ಪಲಕ್ಷೆಟ್ಟಿ, ಪರಪ್ಪಲಕ್ಷೆಟ್ಟಿ, ವೀರನಗೌಡ ಪಾಟೀಲ, ಕೃಷ್ಣಾಜಿ ಇಟನಾಳ, ರಾಮರಾವ ಗಂಡಿ ಮಾಸ್ತರ ಬೆಟಗೇರೀ ವೀರಯ್ಯ ಸಾಲೀಮಠ, ಹವಾಲ್ದಾರ ಬಾಳೆಬ ಮೊದಲಾದ ಸದ್ಗೃಹಸ್ಥರು ದಯಮಾಡಿದ್ದರು. ಮೊದಲಿಗೆನೇ ಅಸಿ|| ಮಾಸ್ತರ ಮಿ. ಕುಲಕರ್ಣಿಯವರು ಸಭೆಯ ಉದ್ದೇಶವನ್ನು ಹೇಳಿ ಸದರಿ ಹೆಡ್‌ಮಾಸ್ತರರನ್ನು ಬಹಳವಾಗಿ ಗೌರವಿಸಿದರು. ಆಮೇಲೆ ೨ ನೇ ಅಸಿ|| ಮಾಸ್ತರ ಮಿ. ಬಿ. ಜಿ. ಮಠಪತಿ ಇವರು ಸದರಿ ಹೆಡ್‌ಮಾಸ್ತರನ್ನು ಬಹಳವಾಗಿ ಕೊಂಡಾಡಿ ಅವರಿಂದಾದ ಲಾಭವನ್ನು ಹೇಳಿಕೊಟ್ಟರು. ತರುವಾಯ ಅಧ್ಯಕ್ಷರು ಸದರಿಯವರ ಕೊರಳಲ್ಲಿ ಪುಷ್ಪಮಾಲೆಗಳನ್ನು ಹಾಕಿದತರುವಾಯ ವಿದ್ಯಾರ್ಥಿಗಳಿಗೆ ಮಿಠಾಯಿ ಹಂಚಲ್ಪಟ್ಟು ಸಭೆಯು ವಿಸರ್ಜನವಾಯಿತು.

ಓರ್ವಗುರುಭಕ್ತ, ಯಾದವಾಡ.

ಧರ್ಮಪ್ರಸಾರಕ ಸಂಘ, ಮಂಡಲಗೇರಿ ✓

ಶ್ರೀ ಶಿವಯೋಗಮಂದಿರದ ಪತಿಯಿಂದ ಹೊರಟ ಶಿವಕೀರ್ತನಕಾರರಾದ ಶ್ರೀಯುತ, ಶಿ|| ಚನ್ನಯ್ಯನವರು ದ್ಯಾಂಪುರ ಇವರು, ಪದ್ಧತಿಯಂತೆ ನಿಜಾಮ ಇಲಾಖೆ ಕೊಪ್ಪಳ ತಾಲ್ಲೂಕ ಮಂಡಲಗೇರಿಗೆಹೋಗಿದ್ದು ಅಲ್ಲಿ ನಿರ್ವಿಘ್ನವಾಗಿ ಶ್ರೀಶಿವಕೃಪೆಯಿಂದ ಅನೇಕ ಕೀರ್ತನೆಗಳು ಜರುಗಿದವು. ಪ್ರತಿಯೊಂದು ಕೀರ್ತನದಲ್ಲಿ ಧರ್ಮ, ನೀತಿ, ರಾಜಭಕ್ತಿ ಇವುಗಳೆಲ್ಲವೂ ಪ್ರತಿಯೊಬ್ಬರಮನಸಿನಮೇಲೆ ಬಿಂಬಿಸುವಂತೆ ಬೋಧಮಾಡಲು, ಊರೊಳಗಿನ ಸದ್ಗೃಹಸ್ಥರೆಲ್ಲ ಸಂತೋಷಭರಿತರಾದರು. ಈ ಸಂತೋಷವೆಂಬ ಜಲದಲ್ಲಿ ಧರ್ಮ ಜಾಗೃತೆಗೊಳಿಸಬೇಕೆಂಬ ಅವಲವಿಕೆಯ ಕಮಲವು ಉದ್ಭವಿಸಿ ಕಳೆದ ಸೋಮವಾರ ಈ ವಿಷಯದ ಆಲೋಚನೆಗಾಗಿ ಶ್ರೀ ವೀರಭದ್ರ ದೇವರ ಗುಡಿಯಲ್ಲಿ ... ಗೃಹಸ್ಥರೊಂದಿಗೆ ಸಭೆಯು ನೆರೆಯಿಸಲ್ಪಟ್ಟಿತು. ವೇ|| ಚನ್ನಸಂಗಶಾಸ್ತ್ರಿಗಳು ಸಿದ್ಧಾಂತದ ಬಗ್ಗೆ ಊರ ಶಾಲಾಗುರುಗಳಾದ ಶಿವರುದ್ರಯ್ಯ ಸೊಪ್ಪಿಮಠ ಇವರು ಲಿಂಗಧಾರಣವನ್ನು ಕುರಿತೂ, ಶಿ|| ಬಸವಲಿಂಗಯ್ಯನವರು ಹಿರೇಮಠ ಇವರು ವಿಭೂತಿ ರುದ್ರಾಕ್ಷ ಧಾರಣಗಳನ್ನು ಕುರಿತೂ, ಸದರಿ ಕೀರ್ತನಕಾರರುಗಳು ದ್ಯಾಂಪುರ ಚನ್ನಯ್ಯನವರು ಧರ್ಮದ ವಿಷಯವಾಗಿಯೂ ವ್ಯಾಖ್ಯಾನಗಳನ್ನು ಮಾಡಿದರು. ಬಳಿಕ ಧರ್ಮದಲ್ಲಿ ಹಿಂದುಳಿದ ನಮ್ಮ ಪ್ರಾಂತದಲ್ಲಿ ವೀರಶೈವ ಜನಾಂಗದ ಅವನತಿಯನ್ನು ಹೋಗಲಾಡಿಸುವುದಕ್ಕಾಗಿ ಒಬ್ಬ ಶಿವಧರ್ಮೋಪದೇಶಕನನ್ನು ನೇಮಿಸಿದರೆ ಅವನು ಅಲ್ಲಲ್ಲಿ ಧರ್ಮತತ್ವವನ್ನು ಪ್ರಸಾರಮಾಡಿ ಧರ್ಮಶ್ರದ್ಧೆಯನ್ನು ಹುಟ್ಟಿಸಿ ನಮ್ಮ ಧರ್ಮದೇಳ್ಗೆಯನ್ನು ಮಾಡಬಹುದೆಂಬ ಸೂಚನೆಯನ್ನು ಮ|| ರಾ|| ಗೂಳನಗೌಡ ಮುಕ್ಕೀಪಾಟೀಲ ಇವರು ಸಭೆಯ ಮುಂದೆ ತಂದರು. ಈ ಸೂಚನೆಯನ್ನು ಸಭಿಕರೆಲ್ಲ ಪರ್ಯಾಲೋಚಿಸಿ, ಈ ಗ್ರಾಮದಲ್ಲಿ ಒಂದು ಧರ್ಮ ಪ್ರಸಾರಕಸಂಸ್ಥೆಯನ್ನು ಸ್ಥಾಪಿಸಿ ಈ ಸಂಘದ ಪತಿಯಿಂದ ಒಬ್ಬ ಯೋಗ್ಯ ಧರ್ಮೋಪದೇಶಕನನ್ನು ನೇಮಿಸಬೇಕೆಂದೂ, ಆ ಧರ್ಮೋಪದೇಶಕನ ವಾರ್ಷಿಕ ವೇತನವನ್ನು ಸಂಘದಪತಿಯಿಂದ ಕೊಡಬೇಕೆಂದೂ ಪರಸ್ಪರ ಒಪ್ಪಿಕೊಂಡರು.

ಹಳ್ಳೀಕೇರಿ, ನಿಮ್ಮ ವರ್ಗಣಿದಾರ.

ಕೊಂಪಿ ತಾಲ್ಲೂಕು ವರ್ತಮಾನ.

ಈ ತಾಲ್ಲೂಕಿನಲ್ಲಿ ಇದುವರೆಗೆ ಮಳೆಯಿಲ್ಲದೆ ದನಕರುಗಳ ಮೇವಿಗೂ, ಕುಡಿಯುವ ನೀರಿಗೂ ಬಹು ತೊಂದರೆಯಾಗಿತ್ತು. ಈಗ ದೇವತಾನುಗ್ರಹದಿಂದ ಮಳೆ ಚೆನ್ನಾಗಿ ಆಗಿ ಅಲ್ಲಲ್ಲಿ ಮೇವು ಮತ್ತು ನೀರಿನ ತೊಂದರೆಯು ತಪ್ಪಿರುತ್ತದೆ, ಇದಲ್ಲದೆ ಈ ತಾಲ್ಲೂಕಿನ ಕೆಲವು ಗ್ರಾಮಗಳ ರೈತರ ಮತ್ತು ಪ್ರಯಾಣಿಕರ ಗೋಳೊಂದಿದೆ. ಅದೇನೆಂದರೆ:—ಸದರಿ ತಾಲ್ಲೂಕು ಆಯನೂರಲ್ಲಿ ಪ್ರತಿ ಬಾನುವಾರವೂ ದೊಡ್ಡ ಸಂತೆಯಾಗುತ್ತದೆ. ಈ ಸಂತೆಗೆ ಮೂರು ನಾಲ್ಕು ಸಾವಿರ ಜನರು, ಸಾವಿರಾರು ಕುರಿ, ಕೋಣ, ಎಮ್ಮೆ ಬೇಸಗೆ ಕಾಲದಲ್ಲಿ ೫೦೦-೬೦೦ ರವರೆಗೂ ಎತ್ತುಗಳು ಮೈರೆ ರಾಸುಗಳು ಮಾರಾಟಕ್ಕೆ ಬರುತ್ತವೆ. ಈ ಸಂತೆಗೆ ಬಹುದೂರದಿಂದ ಅಂದರೆ ೩೦-೪೦ ಮೈಲಿಯಿಂದಲೂ ಜನಗಳು ಬರುತ್ತಾರೆ. ಆದರೆ ಬೇಸಗೆ ಕಾಲದಲ್ಲಿ ಪ್ರಯಾಣಿಕರು ಬಹು ಕಷ್ಟನಷ್ಟದಿಂದ ಸಂತೆಗೆ ಹೋಗುತ್ತಾರೆ. ಚಳಿಗಾಲದಲ್ಲಂತು ಇವರ ಕಷ್ಟನಷ್ಟಗಳನ್ನು ಹೇಳಲೇಕೂಡದು. ಇದರವಿನಾ ಬಂಡಿಗಳು ಓಡಾಡುವುದಕ್ಕೆ ಸುತರಾಂ ಮಾರ್ಗವೇ ಇಲ್ಲ. ಸರಕು ಸಾಮಾನುಗಳನ್ನೂ ಕೆಲಗ್ರಾಮಸ್ಥರು ತಲೆಹೊರೆಯಿಂದಲೇ ಸಾಗಿಸುತ್ತಾರೆ. ಇದಕ್ಕೆ ಕಾರಣ ಸರಿಯಾದ ರಾಜಮಾರ್ಗವಿಲ್ಲದಿರುವಿಕೆಯೇ ಆಗಿರುತ್ತದೆ. ಆದುದರಿಂದ ದಯಾನಿಧಿಗಳಾದ ನಮ್ಮ ಸರ್ಕಾರದವರು ನಿಗಾ ಕೊಟ್ಟು ಶಿವಮೊಗ್ಗದಿಂದ ಶಿಕಾರಿಪುರಕ್ಕೆ ಬಿಕ್ಕೋನಹಳ್ಳಿ, ಕುಂಚೇನಹಳ್ಳಿ, ಸವಳಂಗದ ಮಾರ್ಗವಾಗಿ ಸಂತೆ ಹೋಗಿರುತ್ತದಷ್ಟೆ. ಸದರಿ ಕುಂಚೇನಹಳ್ಳಿಯಿಂದ ಕವಲೊಡೆದು ತ್ಯಾಜುವಳ್ಳಿ, ಕೊನಗವಳ್ಳಿ, ಬೆನವಳ್ಳಿ, ಪುಗಟೀಕೊಪ್ಪದ ಮಾರ್ಗವಾಗಿ ಯಲವಳ್ಳಿ ಬಳಿ ಶಿವಮೊಗ್ಗದಿಂದ ಸಾಗರಕ್ಕೆ ಆಯನೂರು ಮಾರ್ಗವಾಗಿ ಹೋಗಿರುವ ರಸ್ತೆಗೆ ಸೇರಿಸಿಬಿಟ್ಟರೆ ಸಾಕು. ಈ ಸ್ಥಳಗಳಲ್ಲಿ ಮೋರಿಗಳು ಸಹ ಸಿಕ್ಕುವಹಾಗಿಲ್ಲ. ಹೆಚ್ಚು ಲಾಗುವಾಡು ಕೂಡ ತಗಲುವಹಾಗಿಲ್ಲ ಇಂಥಾ ಸ್ಥಳಗಳಲ್ಲಿ ರಸ್ತೆಯಿಲ್ಲದಿರುವಿಕೆಯಿಂದ ಬಹು ಜನರು ಕಷ್ಟನಷ್ಟಗಳನ್ನು ಅನುಭವಿಸುತ್ತಾರೆ. ಈ ವಿಷಯವನ್ನು ನಮ್ಮ ಸರ್ಕಾರದವರು ಗಮನಕ್ಕೆ ತಂದುಕೊಂಡು ಪ್ರಜೆಗಳ ಕ್ಷೇಮವನ್ನೈರೆಗಳಿಗಾಧಾರವಾದ ಈ ರಸ್ತೆಯನ್ನು ಸ್ಥಾಪಿತಮಾಡಿದರೆ ಪ್ರಜೆಗಳು ಬೇಸಗೆ ಮಳೆಗಾಲಗಳಲ್ಲಿ ಹಗಲು, ರಾತ್ರಿ ಕೂಡ ನಿರ್ಭಯವಾಗಿ ಪ್ರಯಾಣಮಾಡಬಹುದು. ಆದರೆ ಈ ರಸ್ತೆ ಸುಮಾರು ೬-೭ ಮೈಲಿ ದೂರವಾಗಬಹುದು ಅಷ್ಟೇ. ಈ ಸ್ವಲ್ಪದೂರ ರಸ್ತೆಮಾಡಿಸುವುದರಿಂದ ಬಹು ಜನರಿಗೆ ಉಪಕಾರಮಾಡಿದಂತೆ ಆಗುತ್ತದೆ. ಪ್ರಜೆಗಳ ಪ್ರಯೋಜನಕ್ಕಾಧಾರವಾದ ಈ ರಸ್ತೆಯನ್ನು ಸ್ಥಾಪಿತಮಾಡುವುದಕ್ಕೆ ದಯಾಸಮುದ್ರರಾದ ನಮ್ಮ ಸರ್ಕಾರದವರು ಗಮನಕೊಡದಿರಲಾರರೆಂದು ನಂಬಿದ್ದೇವೆ. ಈ ಧರ್ಮಕೆಲಸಕ್ಕೆ ಸಹಾಯಮಾಡತಕ್ಕ ಮಹನೀಯರನ್ನು ಪರಮೇಶ್ವರನು ದಿವಾರಾತ್ರಿಯಲ್ಲಿ ಕಾಪಾಡಲೆಂದು ನಾವು ಹಾರೈಸುತ್ತೇವೆ. ಈ ವಿಷಯವಾಗಿ ಎಲ್ಲರೂ ಸಹಾಯಮಾಡುತ್ತಾರೆಂದ ನಾವು ನಂಬಿ ಈ ಕಷ್ಟವನ್ನು ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಿಸಿರುತ್ತೇವೆ.

ಸ್ಥಳಿಕ.

[ಸ್ಥಳಿಕರು ಈ ವಿಷಯವನ್ನು ತಮ್ಮ ತಾಲ್ಲೂಕು ಡಿಸ್ಟ್ರಿಕ್ಟ್ ಬೋರ್ಡುಗಳ ಗಮನಕ್ಕೆ ಮೊದಲು ತರುವುದು ಉತ್ತಮ.—ಪ. ಪ್ರ.]

ಸುಧಾರಣೆ.

ನವಿಮ್ಮಾನಗರ ಡಿವಿಜನ್ನಿನಲ್ಲಿ ಪ್ರಾಯಶಃ ವ್ಯವಸಾಯವೃತ್ತಿಯ ವೀರಶೈವರಲ್ಲಿ ಕನ್ಯಾಶುಲ್ಕವನ್ನು ತೆಗೆದುಕೊಳ್ಳುವ ಪದ್ಧತಿಯು ದಿನೇದಿನೇ ವೃದ್ಧಿಗೊಳ್ಳುತ್ತಲೇ ಬಂದಿದೆ. ಮೊದಮೊದಲು ಈ ಶುಲ್ಕವು ಸಾಮಾನ್ಯವಾಗಿ ೬ ವರಹ ೨೪ ರೂ. ಯಾಗಿತ್ತು, ಈಚೆಗೆ ಕ್ರಮೇಣ ೫೦, ೧೦೦, ೨೦೦, ೪೦೦ ರೂ.ನಂತೆ ದರದಲ್ಲಿ ಹೆಚ್ಚುತ್ತಾ ಬಂದು ಈಗ ೫೦೦ ರೂ.ಗೆ ನಿಂತಿದೆ. ಇದರ ಸ್ಥಿತಿಯನ್ನು ನೋಡಲಾಗಿ ಮುಂದಕ್ಕೆ ಇನ್ನೂ ಹೆಚ್ಚಬಹುದಾಗಿದೆ. ಇದರಿಂದುಂಟಾಗುವ ಅನರ್ಥಪರಂಪರೆಗಳು ಸರ್ವಗೋಚರಂಗಳಾದುದರಿಂದ ಮತ್ತೆ ವಿವರಿಸುವುದನವಶ್ಯಕ. ಆದರೂ ಮುಖ್ಯವಾಗಿ ಬಡವರು ಜನ್ಮಾವಧಿ ವಿವಾಹವನ್ನೇ ಕಾಣದೆ ಸೊರಗುವುದೂ, ಅನೇಕರು ಹೆಚ್ಚುಸಾಲಕ್ಕೆ ಗುರಿಯಾಗಿ ಮನೆ ಮಾಲುಗಳನ್ನು ಕಳೆದುಕೊಂಡು ಪರದೇಶಿಗಳಾಗುವುದೂ, ಹಣದ ಆಸೆಗಾಗಿ ಮುದುಕನಿಗೆ ಮದುವೆಮಾಡಿಕೊಟ್ಟ ೧೦-೧೨ ವರ್ಷದ ಕಂದಮ್ಮನು ಅನಿರ್ವಚನೀಯವಾದ ವ್ಯಥೆಗೊಳಗಾಗಿ, ಅಲ್ಪಕಾಲದಲ್ಲಿಯೇ ವೈಧವ್ಯವಂ ಪಡೆದು ಭ್ರೂಣಹತ್ಯಾದಿಪಾಪಗಳಿಗೀಡಾಗುವುದೂ ಇವೇ ಮೊದಲಾದ ಅನರ್ಥಗಳುಂಟಾಗುವುವೆಂಬುದನ್ನು ಒತ್ತಿ ಹೇಳಬೇಕಾಗಿರುವುದು. ಮೊನ್ನೆ ವೈಶಾಖ, ಜ್ಯೇಷ್ಠಮಾಸಗಳಲ್ಲಿ ಹೊನ್ನಾಳೀ ತಾಲ್ಲೂಕು ಸೋಗಿಲು ಎಂಬ ಗ್ರಾಮದಲ್ಲಿ ನಡೆದ ವಿವಾಹಗಳಲ್ಲಿ ಆ ಗ್ರಾಮದ ಮ|| ರಾ|| ದೊಡ್ಡಬಸವಪ್ಪನವರ ಮಲ್ಲಪ್ಪನವರೇ ಮುಂತಾದ ಕೆಲವು ಗೃಹಸ್ಥರು ತಮಗೆ ತೋರಿಬಂದ ಕೆಲವು ಅನುಭವಗಳ ಸೂಚನೆಯಿಂದ ಮಾಂಸವಿಕ್ರಯದಿಂದ ಜೀವಿಸುವರ ಬಾಳುವೆಗೆ ರೂಪಾಂತರವಾದ ತೆರವನ್ನು ತೆಗೆದುಕೊಳ್ಳುವ ಈ ಪದ್ಧತಿಯು ಪರಮನೀಚಕೃತ್ಯವೆಂದೂ, ಖಂಡಿತವಾಗಿ ತೆಗೆದುಕೊಳ್ಳಲಾಗದೆಂದೂ ಬಲವಂತದಿಂದ ನಿಷೇಧಿಸಲು, ಅಲ್ಲಿನ ಮಠಸ್ಥರಾದ ಶ್ರೀ|| ಚಂದ್ರಶೇಖರಪ್ಪಯ್ಯನವರೂ, ಸ್ವಾ, ಮಾ|| ನವಿಲಯ್ಯನವರೂ ಈ ವಿಷಯವನ್ನು ಪುಷ್ಟೀಕರಿಸಿ ಅನೇಕ ಉದಾಹರಣೆಗಳಿಂದ ಎಂದೆಂದಿಗೂ ಇಂತಹ ದುಷ್ಕೃತ್ಯವನ್ನು ಮಾಡಕೂಡದೆಂದು ಬೋಧೆಯಾಗುವಹಾಗೆ ಒಡಂಬಡಿಸಿದ್ದರು. ಇದಕ್ಕೆ ಪ್ರತಿಫಲವಾಗಿ ಆ ಗ್ರಾಮಸ್ಥರೂ ಕೂಡ ಬೇರೆ ಊರಿನಿಂದ ನಾವು ತೆರಕೊಟ್ಟು ತಂದುಕೊಂಡರೂ ಚಿಂತೆಯಿಲ್ಲ; ನಾವು ಮಾತ್ರ ಖಂಡಿತ ತೆಗೆದುಕೊಳ್ಳುವುದಿಲ್ಲವೆಂದು ಶಪಥಪೂರ್ವಕವಾಗಿ ಕಟ್ಟುಮಾಡಿಕೊಂಡರು. ಇದು ತುಂಬಾ ಸಂತೋಷಕರವೇ ಸರಿ. ಇವರಂತೆಯೇ ಇತರಗ್ರಾಮದವರೂ ಈ ರೂಲ್ಸನ್ನು ಜಾರಿಗೆ ತರುವುದು ಒಳ್ಳೆಯದಾಗಿ ತೋರುತ್ತದೆ. ಏತಕ್ಕೆಂದರೆ-ಈಗೀಗ ಬಂಗಾಳದೇಶದಲ್ಲಿ ಆರಂಭವಾಗಿರುವ ಕನ್ನೆಯರ ಆತ್ಮವಿಘಾತರೂಪವಾದ ಪ್ರಚಂಡಮಾರುತವು ದೈವಗತಿವಿಚಿತ್ರ್ಯದಿಂದ ಕಾಲಕ್ರಮೇಣ ಈ ದೇಶದ ನಿರ್ಗತಿಕರಾದ ನಮ್ಮ ತರುಣರ ಕಡೆಗೆ ಎಲ್ಲಿ ತನ್ನ ವಕ್ರದೃಷ್ಟಿಯನ್ನು ತಿರುಗಿಸಿಬಿಡುವುದೋ ಎಂದು ಶಂಕೆಯುಂಟಾಗುತ್ತಿದೆ. ಆದುದರಿಂದ ನಮ್ಮಾಬಾಂಧವರು ಇನ್ನಾದರೂ ವಿಚಾರದಿಂದ ಈ ಕಡೆಗೆ ಚೆನ್ನಾಗಿ ಲಕ್ಷ್ಯಕೊಟ್ಟು, ಪ್ರಬಲಿಸುವುದರಲ್ಲೇ ಇರುವ ಅಸಹ್ಯಕರವಾದ ಈ ಪದ್ಧತಿಯನ್ನು ಸಾಧ್ಯವಾದಷ್ಟು ಕಡಮೆಮಾಡುತ್ತಾ ಬಂದು, ಕೊನೆಗೆ ನಿರ್ನಾಮಗೊಳಿಸುವುದರ ಮೂಲಕ ಸ್ವಜನಗಳ ಪುರೋವೃದ್ಧಿಯನ್ನು ತಂದುಕೊಂಡಾರೆಂದು ನಂಬುತ್ತೇನೆ. ಇದೂಅಲ್ಲದೆ ನಮ್ಮ ಜನಾಂಗದಲ್ಲಿ ಕಾರಣಾಂತರದಿಂದ ಮೂಢತನವು ಹೆಚ್ಚುತ್ತಾ ಬಂದು, ವಿಧ್ಯುಕ್ತವಲ್ಲದ ಭವಿಜನಗಳಲ್ಲಿರುವಂತಹ ವಿವಾಹಪದ್ಧತಿಯೇ ಇನ್ನೂ ಅಲ್ಲಲ್ಲಿ ಆಚರಣೆಯಲ್ಲಿರುವುದು ಸರಿಯಷ್ಟೆ! ಸದರಿ ಸೋಗಿಲುಗ್ರಾಮದಲ್ಲಿ ನಡೆದ ವಿವಾಹಗಳಲ್ಲಿ ಕಾರ್ಯಸ್ಥರು, ತಮ್ಮ ನಡೆದು ಬಂದಿರುವ ಭವಿಪದ್ಧತಿಯಂತೆಯೇ ವಿವಾಹವು ಜರುಗಬೇಕೆಂದು ಮೊಂಡುಹಿಡಿಯಲು ಸದರಿ ಶ್ರೀ|| ಗಳವರೂ ಮಹಾಪ್ರಯಾಸದಿಂದ ಬೋಧಿಸಿ ಅವರ ಮನಸ್ಸನ್ನು ತಿದ್ದಿ ೭-೮ ವಿವಾಹಗಳನ್ನೂ ವಿಧ್ಯುಕ್ತವಾಗಿಯೇ ಜರುಗಿಸಿದರು. ಇವರ ಪ್ರಯಾಸವು ಸ್ತುತ್ಯವಾದುದು. ಇತರಕಡೆಯ ಮಠಸ್ಥರೂ, ಇತ್ತಕಡೆಗೆ ಚೆನ್ನಾಗಿ ಲಕ್ಷ್ಯಕೊಡಬೇಕೆಂದು ಕೋರುತ್ತೇನೆ.

ಒಬ್ಬ ಪ್ರತ್ಯಕ್ಷದರ್ಶಿ.

ತಾ|| ೩-೭-೧೯೧೪ ಸೋಗಿಲು

ಗುಬ್ಬಿ ತಾಲ್ಲೋಕು ನಿಟ್ಟೂರು ಸಮ್ಮತು ಪುರದಗ್ರಾಮದಲ್ಲಿ ವಾಸಮಾಡುವ ಸಂಪಿಗೆ ಶ್ರೀ|| ಮಠದ ಚನ್ನಬಸವಾರಾಧ್ಯರ ಕುಮಾರಿ ಪಾರ್ವತಮ್ಮನನ್ನು ಭೇರ್‍ಯದ ವಿಘ್ನಗುತ್ತಿಮಠದ ವೇದಮೂರ್ತಿ ಸಿದ್ಧಲಿಂಗದೇವರ ಕುಮಾರರು ಸಾಲಿಂಗಸ್ವಾರ್‍ಯರಿಗೆ ಕೊಟ್ಟು ೧೧-೬-೧೯೧೪ ನೆ ಜ್ಯೇಷ್ಠ ಬ|| ೩ ಗುರುವಾರ ನಡೆದ ವಿವಾಹಲಗ್ನಕ್ಕೆ ನೊಣವಿನಕೆರೆ ಶ್ರೀಮತ್ಕ್ರೋಮೆಕಟ್ಟೆಮಠದ ಶಿವಾನುಭವಚರಮೂರ್ತಿಗಳಾದ ಶ್ರೀಕರಿವೃಷಭೇಂದ್ರ ಮಹಾಸ್ವಾಮಿಗಳವರ ಪಾದಸ್ವಾರಿಯೂದಯಮಾಡಿ ಆ ವಿವಾಹಗೃಹದಲ್ಲಿ ನೆರೆದಿದ್ದ ಭಕ್ತಮಾಹೇಶ್ವರ ಸಮುದಾಯದಲ್ಲಿ ಪೂಜ್ಯಪಾದರಾದ ಶ್ರೀಗಳವರ ಅಪ್ಪಣೆಯಂತೆ ಹೊನ್ನುಡಿಕೆ ಯಜಮಾನ ರುದ್ರಯ್ಯನವರು ಆ ಸಭೆಯನ್ನು ಕುರಿತು ವಿಜ್ಞಾಪಿಸಿದ ಸಾರಾಂಶ—

ಸಭಿಕರಾದ ಭಕ್ತಮಾಹೇಶ್ವರ ಮಹಾಪುರುಷರೇ! ಭೂಲೋಕದಲ್ಲಿ ಶಿವಭಕ್ತಿಯನ್ನು ಉದ್ಧಾರಮಾಡಲು ಅವತರಿಸಿದ್ದ ಕೈಲಾಸವಾಸಿ ವೈ. ವೀರಸಂಗಪ್ಪನವರ ಪುಣ್ಯೋದಯಭಾಗ್ಯವನ್ನು ಇಂಡ್ಯಾವಾಸಿಗಳಾದ ೩೫ ಲಕ್ಷ ವೀರಶೈವರಿಗೆಲ್ಲಾ ಭಾಗಮಾಡಿಕೊಟ್ಟು ನಮ್ಮೆಲ್ಲರಿಗೂ ಜ್ಞಾನೋದಯ ವಾಗುವಂತೆ ನಮ್ಮ ಪುರಾತನ ಆರ್ಯಶಿರೋಮಣಿಗಳಿಂದುಕ್ತವಾದ ಪರಮೇಶ್ವರಪ್ರಣೀತ,ವೇದವೇದಾಗಮಾದಿ ಪ್ರಮಾಣ್ಯಗಳನ್ನೇ ನಮ್ಮೆಲ್ಲರಿಗೂ ಬೋಧಿಸುವುದಕ್ಕೆ ಶ್ರೀಮದ್ರೇಣುಕಾಚಾರ್ಯನೋ ಎಂಬಂತೆ ಅನ್ಯರ ಆಕ್ಷೇಪಗಳಂ ನಿರ್ಮೂಲನಂಗೈದು ಸ್ವಮತಸಿದ್ಧಾಂತಮಂ ಮಾಡಿದರೆಂಬುದು ಪ್ರತ್ಯಕ್ಷಪ್ರಮಾಣವಾಗಿ ಪ್ರತಿಯೊಂದು ಸಭೆಗಳಲ್ಲೂ ಪ್ರಕಾಶಮಾನವಾಗಿರುವುದು ವೈದಿಕಶಿರೋಮಣಿಗಳೂ, ಅಧ್ಯಯನ ಸಂಪನ್ನರೂ,ಮತತ್ವವಿಚಾರವಿಶಾರದರಾದ ಪಂಡಿತರಿಂದೊಪ್ಪುವ ಈ ಮಹಾಭಾಗ್ಯವನ್ನುಂಟುಮಾಡಿದ ಆ ಮಹಾಪುರುಷರು ತಮ್ಮ ತನುಮನೋಧನಗಳನ್ನು ತಮ್ಮ ಪತ್ನೀಪುತ್ರಾದಿಗಳಿಗೆಕೊಡದೆ ಮತದಸೇವೆಗೋಸ್ಕರಕೊಟ್ಟು ಮತೋದ್ಧಾರಮಾಡಿದ ಕೈ|| ವೈ. ವೀರಸಂಗಪ್ಪನವರನ್ನು ನಮಗುಂಟಾಗಿರುವ ಈ ಶುಭಸಮದಲ್ಲಿ ಜ್ಞಾಪಕಮಾಡಿದವರು ಪಿತಾಪುತ್ರರಾದಿಯಾಗಿ ಇಹಪರಗಳಿಗೆ ಅಧಿಕಾರಿಗಳಾಗುತ್ತಾರೆ. ಶ್ರೀಮದ್ರೇಣುಕಾಚಾರ್ಯವರ್ಯರಿಂದ ಸ್ಥಾಪಿತವಾದೀ ಮತಕ್ಕೆ ಘೋರಾಂಧಕಾರಪ್ರಾಪ್ತವಾಗಿರಲಾಗಿ ತನ್ನಿಂದ ಸ್ಥಾಪಿತವಾದ ಮತಕ್ಕೆ ಉಂಟಾಗಿರುವ ಮಾಲಿನ್ಯವನ್ನು ನಿರ್ಮೂಲಮಾಡಲು ಆ ಆಚಾರ್ಯರೇ ಅವತರಿಸಿ ವೈ. ವೀರಸಂಗಪ್ಪನಾಮಧೇಯದಿಂ ಮತದ ಅಂಧಕಾರವನ್ನು ಚಂಪ್ರೋಪಮಾನರಾಗಿ ದೂರೀಕರಿಸಿದ ಆ ಮಹಾಪುರುಷರನ್ನು, ಶ್ರೀಮದ್ರೇಣುಕಾಚಾರ್ಯರ ಪಾದಗಳಿಗೂ ಶ್ರೀಮನ್ನಿರಂಜನ ಜಗದ್ಗುರು ಷಟ್ಸ್ಥಲ ಪೀಠಗಳಿಗೂ ಅಗ್ರತಾಂಬೂಲವನ್ನು ಹೇಗೆ ಭಕ್ತಿಭಾವದಿಂದ ಸಮರ್ಪಿಸಬೇಕೋ ಹಾಗೆಯೇ ವೈ. ವೀರಸಂಗಪ್ಪನವರಿಂದ ಸ್ಥಾಪಿತವಾಗಿ ಮತಸೇವೆಯಲ್ಲೇ ತೊಡಗಿ ಇಂಡ್ಯಾ ಭೂಭಾಗದಲ್ಲಿ ಪ್ರಸಿದ್ಧಿಹೊಂದಿರುವ ಸ್ಟಾರ್ ಪತ್ರಿಕೆಯು ಚಿರಜೀವಿಯಾಗಿರಬೇಕೆಂಬ ಸದುದ್ದೇಶದಿಂದ ವೀರಶೈವಮತಸಂಭವರೆಲ್ಲರೂ ತಮ್ಮ ಗೃಹಗಳಲ್ಲಿ ನಡೆಯುವ ವಿವಾಹ-ದೀಕ್ಷಾ-ಗರ್ಭಾಧಾನ ಮೊದಲಾದ ಕರ್ಮಗಳಲ್ಲಿ ಶಕ್ತ್ಯನುಸಾರ ೧ ರೂ. ಗೆ ಕಡಿಮೆಯಿಲ್ಲದೆ ಉದಾರಚಿತ್ತದಿಂದ ಕೊಡತಕ್ಕ ಬಗೆಗೆ ಆಯಾಯ ಪ್ರದೇಶದ ಲಿಂಗಾಯತ ಪ್ರಮುಖರು ಕಾರ್ಯಕರ್ತೃಗಳಿಗೆ ಬೋಧಿಸಿ ಅಗ್ರತಾಂಬೂಲದ ಕಾಣಿಕೆಯನ್ನು ತೆಗೆಸಿ ಆ ಮೊಬಲಗನ್ನು ಸ್ಟಾರಾಫೀಸಿಗೆ ರವಾನಿಸಲು ಈ ಸಭೆಯನ್ನಲಂಕರಿಸಿರುವ ಸ್ಥಲಪರಸ್ಥಲದ ಭಕ್ತಬಂಧುಗಳು ಮಾಹೇಶ್ವರ ಗುರುವರ್ಗದವರು ವೇ|| ಗಳಾದ ವೈದಿಕವಂಡಲಿಯವರು ಸಹ ತಮ್ಮ ಪ್ರದೇಶಗಳಲ್ಲಿ ಆಚರಿಸುವ ಹಾಗೆ ಸರ್ವತ್ರ ಪ್ರಚಾರಪಡಿಸಬೇಕೆಂದು ಪ್ರಾರ್ಥಿಸುತ್ತೇನೆ. ಈ ಮಹಾಪುರುಷರಾದ ಮೈಸೂರು ಯಜಮಾನರ ಪ್ರೇರಣೆಯೇ ಶ್ರೀಮದ್ವೀರಶೈವ ಮಹಾಸಭೆಗಳಾಗಿ ಬಹುಭಾಗದಲ್ಲಿ ವೃದ್ಧಿಹೊಂದುತ್ತಿರುವ ಆ ಸಭೆಯವರ ಅಪ್ಪಣೆಯಂತೆ ಪ್ರತಿಗೃಹಗಳಲ್ಲಿ ನಡೆಯುವ ಶುಭಕಾರ್ಯಗಳಲ್ಲಿ ೨ ರೂ. ಗೆ ಕಡಿಮೆಯಿಲ್ಲದೆ ಶಕ್ತ್ಯನುಸಾರ ಮೈಸೂರು ಎಜ್ಯುಕೇಷನ ಫಂಡಿಗೆ ಕಾಣಿಕೆಯನ್ನು ರವಾನಿಸುವುದು ನಮ್ಮ ಪ್ರಾವಿನ್ಸಿನಲ್ಲಿ ಜಾರಿಗೆ ಬಂದಿರುವಂತೆ ಆ ಕಾಣಿಕೆಯನ್ನು ಸಭಾ ಸೆಕ್ರೆಟರಿಗಳವರ ವಶಕ್ಕೆ ಪಾವತಿಯಾಗುವಂತೆ ಕಾಣಿಕೆಯನ್ನು ಸಭಾಧ್ಯಕ್ಷರಾದ ಶ್ರೀ ಗುರುಮೂರ್ತಿಗಳವರು ಅಪ್ಪಣೆಕೊಡಬೇಕೆಂದು ಬೇಡಿಕೊಳ್ಳುತ್ತೇನೆ. ಆ ಕೂಡಲೇ ಶ್ರೀ ನೊಣವಿನಕೆರೆ ಚರವರ್ಯ ಗುರುಮೂರ್ತಿಗಳವರ ಅಪ್ಪಣೆಯ ಪ್ರಕಾರ ವಿವಾಹಕರ್ತೃಗಳಾದ ಚನ್ನಬಸವಾರಾಧ್ಯರು ಉಭಯಪಕ್ಷದವರಿಂದಲೂ ಕಾಣಿಕೆಗಳನ್ನು ತೆಗೆಸಿ ಮನಿಯಾರ್ಡರ್ ಮೂಲಕ ರವಾನಿಸಲು ಹೊನ್ನುಡಿಕೆಯ ಯಜಮಾನ ರುದ್ರಯ್ಯನವರ ವಶಕ್ಕೆ ೩ ರೂ. ೨ ಆಣೆಯು ಸಭೆಯವರ ಅಪ್ಪಣೆಯ ಪ್ರಕಾರ ಕೊಡಲ್ಪಟ್ಟಿತು.

ತಿಬಟೂರು ಮ|| ರಾ|| ಸಿದ್ಧಘಟ್ಟದ ನಂಜುಂಡಪ್ಪನವರ ಉಪನ್ಯಾಸ—“ ಹಾಲಿ ತಿಬಟೂರಿನಲ್ಲಿ ಶ್ರೀಮನ್ಮಹಾ ನಿರಂಜನ ಜಗದ್ಗುರು ಪೀಠದ ಅಪ್ಪಣೆಯಂತೆ ಶ್ರೀಮದ್ವೀರಶೈವಾನಂದಾಶ್ರಮದ ಸಂಸ್ಕೃತ ಪಾಠಶಾಲಾ ಫಂಡಿಗೆ ತುಮಕೂರು—ಹಾಸನ—ಚಿಕ್ಕಮಗಳೂರು ಈ ಮೂರು ಸ್ಥಳಗಳಿಂದ ವಿದ್ಯಾಭ್ಯಾಸಂಗಕ್ಕೆ ಬರತಕ್ಕ ಮಾಹೇಶ್ವರ ವಟುಗಳ ಉಪಯೋಗಕ್ಕಾಗಿ ಫಂಡು ಶೇಖರಿಸುವುದು ಪವಿತ್ರ ಧರ್ಮವಾಗಿರುವುದರಿಂದ ಈ ಸಂಸ್ಕೃತಪಾಠಶಾಲೆಯು ಶ್ರೀಮನ್ನಿರಂಜನ ಜಗದ್ಗುರು ಮಹಾಪೀಠದ ಪೋಷ್ಯವರ್ಗಕ್ಕೆ ಸೇರಿ ತಿಬಟೂರುಶ್ಯಾಟ ವೀರಶೈವ ಶ್ರೀಮಂತರ ಉದಾರ ಸಹಾಯಕೊಳ್ಳಿಪಟ್ಟು ಶುಕ್ಲಪಕ್ಷದ ಬಿದಿಗೆಯ ಚಂದ್ರನಂತೆ ವೃದ್ಧಿಹೊಂದಲು ಶ್ರೀ ಜಗದ್ಗುರು ಪೀಠದ ಕೃಪಾನುಗ್ರಹವೇ ಮೂಲಭೂತವಾಗಿರುವ ಕಾರಣ ಈ ಪಾಠಶಾಲಾ ಕಟ್ಟಡವು ಭಾರೀ ಕಟ್ಟಡವಾಗಿಯೂ ಶಾಲಾಸ್ಥಾಪನಾ ವಿಷಯದಲ್ಲಿ ತನುಮನಧನಗಳನ್ನು ಸೂರೆಗೊಡುವ ಶ್ರೀಮಂತರೇ ಈ ಕಾರ್ಯಕ್ಕೆ ಕೈಹಾಕಿರುವುದರಿಂದ ಈ ಪಾಠಶಾಲೆಯು ಚಿರಜೀವಿಯಾಗಿಯೂ ಇರಲು ಈ ವಿದ್ಯಾದಾನವನ್ನು ಉದಾರಭಾವದಿಂದ ಕೈಕೊಂಡ ಮಹಾಶಯರೆಲ್ಲರಿಗೂ ಶ್ರೀಮನ್ನಿರಂಜನ ಮುರುಘರಾಜೇಂದ್ರ ಮಹಾಪೀಠದ ಕೃಪೆಯು ಪೂರ್ಣವಾಗಿ ಭಕ್ತಿಜ್ಞಾನ ವೈರಾಗ್ಯಸೋಪಾನಗಳು ಲಭಿಸಲೆಂದು ಸದಾಶಿವಮೂರ್ತಿಯನ್ನು ವಂದಿಸುತ್ತೇನೆ.” ಈ ವಿಜ್ಞಾಪನೆಯನ್ನು ಮ|| ನಂಜುಂಡಪ್ಪನವರು ಕೃತಪಡಿಸಿದನಂತರ ತಿಬಟೂರು ವೀರಶೈವಾನಂದಾಶ್ರಮದ ಸಂಸ್ಕೃತಪಾಠಶಾಲೆಗೆ ೨ ರೂ. ಫಂಡು ಕೊಡಬೇಕೆಂದು ಸಭಾಧ್ಯಕ್ಷರಾದ ಶ್ರೀ ನೊಣವಿನಕೆರೆ ಮಹಾಸ್ವಾಮಿಗಳ ಅಪ್ಪಣೆಯಾದಪ್ರಕಾರ ಲಗ್ನಕರ್ತೃಗಳಿಂದ ೨ ರೂ. ಫಂಡು ತೆಗೆಸಿ ರವಾನೆ ಬಗೆಗೆ ಲಾಯರ್ ನಂಜುಂಡಪ್ಪನವರ ವಶಕ್ಕೆ ಕೊಡಲ್ಪಟ್ಟು ಪೂರ್ವಾಚಾರಪದ್ಧತಿಯಂತೆ ಗಂಧಪುಷ್ಪಾಹಾರ ಅಗ್ರತಾಂಬೂಲ ಸಭಾತಾಂಬೂಲಗಳು ನಡೆದು ಜಯನಮಃಪಾರ್ವತೀಪತೇ ಹರಹರ ಮಹಾದೇವ ಎಂಬ ಶಬ್ದದೊಡನೆ ಸಭೆಯು ವಿರಮಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ -೦-೦-೨ ೪-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪ ಟಿನ್ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು. ಟಿ. ಎಲ್. ಉಪಾಧ್ಯಾಯ,

14 ಸುಗಂಧಶಾಲಿ, ಮೈಸೂರು.

ದಿ ಜನರಲ್ ಏಜೆನ್ಸಿ, ಮೈಸೂರು.

ಕಾದಂಬರಿಗಳು:—ಚಂಡಮಾರುತ ೦-೨-೦; ಚರಿತಾಮೃತಂ ೦-೪-೦; ರಾಜಕಥಾವಲ್ಲರಿ ೦-೪-೦; ಪೀಟರಿನ ಚರಿತ್ರೆ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೨-೬; ಸೀತೆ ೦-೪-೦; ಸಾಹಸಿಕೆ, ಕೈಲಾಸನಾಥ ೦-೮-೦; ಮಹಾಲಕ್ಷ್ಮಿ ೦-೨-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸತ್ಯಸಂಜೀವಿನಿ ೦-೮-೦; ಕೋಹಿನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೨-೦. 45

ಶುಕ್ತ ವನಸ್ಪತಿಯಿಂದಲೇ ತಯಾರಿಸಿದ
ಧಾತುಪೌಷ್ಟಿಕ ಲೇಹವು.

34

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ನೋಡಿ! (ಗುಣವಾಗದಿದ್ದರೆ ಹಣ ಪರತ !!) ನೋಡಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪ್ರಕೋಪವಾದವರು, ತೃಷೆಯುಳ್ಳವರು, ದಮ್ಮಿನವರು, ಕೆಮ್ಮಿನವರ ಕಫ, ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ,ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರಿತಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ:—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,

ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೋಂಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು

43 ಕಾಪಾಡುವುದರಲ್ಲಿ ಶ್ರೇಷ್ಠತಮವಾದ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ-ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು.

ಶೀತವಾಯು-ಕೆಮ್ಮು-ನೆಗಡಿ-ದಿನಜ್ವರ-ಮೂರರಜ್ವರ ನಾಲ್ಕರಜ್ವರ- ಮಲೇರಿಯಾಜ್ವರ- ತಲೆನೋವು- ಮೈಕೈನೋವು ಮತ್ತು ಭಾರ-ಅಲೋಚಕ ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣ ಭೇದಿ-ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಸೆಳೆತ-ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ೫೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ. ಪಿ. ಛಾರ್ಜು ಪ್ರತ್ಯೇಕ.

ಆಮೋದಿನಿ:— ಅಮೋಘವಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರಮಾಡುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷ ಕೀರ್ತಿಯನ್ನು ಸಂಪಾದಿಸಿ ನಾನಾತರಹಾ ಕೆಮ್ಮು, ದಮ್ಮು, ಉಬ್ಬಸ, ವಾಂತಿ, ವಾಕರಿಗೆ, ಮಲಬಂಧ, ಅಗ್ನಿಮಾಂದ್ಯ, ಪಿತ್ತಸಂಕಟ, ಅರೋಚಕ, ಬಾಯಾರಿಕೆಗಳನ್ನು ತತ್ಷಣ ಗುಣಪಡಿಸಿ ಶರೀರಕ್ಕೆ ತೀಕ್ಷ್ಣಮಾಡದೆ ಧಾತುವೃದ್ಧಿಯುಂಟುಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೧೫೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ.ಪಿ. ಛಾರ್ಜು ಪ್ರತ್ಯೇಕ.

ವಿಳಾಸ— ಬಿ. ವಿ. ಪಂಡಿತ್,

ಸದ್ವೈದ್ಯಶಾಲಾ, ನಂಜನಗೂಡು.

ಮೈಸೂರ್ ಡಿ

44

ದೊಡ್ಡ ಕಂಪೆನಿ ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯೂ. ಎನ್. ಮತ್ತು ಕಂಪೆನಿ,

ಬನಾರಿಸ್ ಸಿಟಿ. (ಕಾಶೀ)

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕಯ್ಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡ ಪಲ್ಲಕ್ಕಿ ಉತ್ಸವದ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಹಾಪುರದಲ್ಲಿ ವ್ಯಾಸನತೊಳಸಹಿತ ಆದ ಸಮಾರಂಭದ ಫೋಟೋ ೧ ಕ್ಕೆ ಕ್ರಯ ೧ ರುಪಾಯಿ

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಾಮಾದಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲಸೈಜು ಬಣ್ಣದ್ದು ೧|| ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೋ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೋ ೧ ಕ್ಕೆ ಕ್ರಯ ಫುಲ್ಲಸೈಜು ೧ ರುಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀ ಜಗದ್ಗುರು ತೋಂಟದಾರ್ಯ ಗದಗ, ಶ್ರೀ ಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ಸತ್ಪುರುಷಮಾಲಾ, ಹಾಳಕೇರಿ ಆನಂದಸ್ವಾಮಿಯ ಫೋಟೋ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪಿ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೋ ಸಿಗುತ್ತವೆ. ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ

ಹೊಸಫ್ಯಾಷನ್—ಸದ್ಗೃಹಸ್ಥರು ಗಡಿಯಾರ ಸರ್ಪಳಿಗೆ ಹಚ್ಚುವ ಲಾಕೇಟುಗಳೂ, ಯಿದರಲ್ಲಿ ಹಿಂದೆ ಮುಂದೆ ಇ ಪ್ರಕಾರ ೨ ಫೋಟೋ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ||, |||=, ೧, ೧|, ಪ್ರಕಾರ, ಮತ್ತು ಬೆಳ್ಳೀದು ರು ೧|| ಕೋಟ್ ಗೋಲ್ಡು ಭಂಗಾರದ್ದು ದುರ್ಬೀಣದ ಗ್ಲಾಸದೂ ಕ್ರಯ ೨||, ೨||| ರೂ.

ಪರೂರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ಧಾಣೆ ಟಿಕೀಟು ಕಳುಹಿಸಿ ಕ್ಯಾಟಲಾಕು ಬೇಕಾದವರು ತರಿಸಿಕೊಳ್ಳಿರಿ. ಸದ್ಯವಿಳಾಸ— ಗಂಗಪ್ಪಾ ಹೇರಿಕೆ,

20 ಅಟಿಸ್ಟ ಸೊಲ್ಲಾಪುರ

ಈಗತಾನೇ ಅಚ್ಚಾದ ಪುಸ್ತಕವು.

(ರೇವಣಸಿದ್ಧೇಶ್ವರಪುರಾಣಂ.)

ವೇದಾಗಮವೂಡಿಸಿದ್ಧವಾದ ವೀರಶೈವ ಮತವನ್ನು ಭೂತಲದಲ್ಲಿ ಪ್ರತಿಷ್ಠಾಪಿಸಿದ ಶ್ರೀ ರೇಣುಕಾಚಾರ್ಯರ ಚರಿತ್ರರೂಪವಾದ ಈ ಗ್ರಂಥವು ಬೊಮ್ಮರಸಕವಿಯಿಂದ ಷಟ್ಪದೀಕಾವ್ಯವಾಗಿ ರಚಿಸಲ್ಪಟ್ಟಿರುವುದು. ಶ್ರೀಮದಾಚಾರ್ಯರು ಭೂತಲದಲ್ಲಿ ನಡೆಯಿಸಿದ ಮಹತ್ಕಾರ್ಯಗಳು ಇದರಲ್ಲಿ ನಿರೂಪಿತವಾಗಿವೆ. ಕವಿತೆಯು ಹೃದಯಂಗಮವಾಗಿದೆ. ಪ್ರತಿಯೊಂದು ಪಾದಕ್ಕೂ ಒಂದೊಂದು ಪಙ್ತಿಯಾಗಿ ಬಿಡಿಬಿಡಿಸಿ ಉತ್ತಮವಾದ ಗ್ಲೇಸ್ ಕಾಗದದಮೇಲೆ ಸುಂದರವಾದ ಅಕ್ಷರಗಳಿಂದ ಶುದ್ಧವಾಗಿ ಮುದ್ರಿತವಾಗಿದೆ. ೧೩ ಸಂಧಿಗಳುಳ್ಳ ಈ ಗ್ರಂಥದ ಬೆಲೆ ವಿ. ಪಿ. ಮೂಲಕ ಅಂಚೆಯ ವೆಚ್ಚವೂ ಸೇರಿ ೧೨ ಆಣೆಗಳು

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮತ್ತೊಂದು ನೂತನಗ್ರಂಥ.

ಚೆನ್ನಬಸವಸಿದ್ಧಾಂತಶಿಖಾಮಣಿ.

ಇದು ಶ್ರೀರೇಣುಕಾಚಾರ್ಯರು ಅಗಸ್ತ್ಯರಿಗೆ ಉಪದೇಶಿಸಿದ ವೀರಶೈವ ಸಿದ್ಧಾಂತಶಾಸ್ತ್ರವು. ಪ್ರತಿಯೊಬ್ಬ ವೀರಶೈವನೂ ಮುಕ್ತನಾಗುವುದಕ್ಕೆ ಜನ್ಮಾದಿಯಿಂದ ಕಡೆಯವರೆಗೆ ಆಚರಿಸಬೇಕಾದ ಧರ್ಮಕರ್ಮಗಳು ಇದರಲ್ಲಿ ನಿರೂಪಿತವಾಗಿವೆ. ಮೂಲಗ್ರಂಥಕ್ಕೆ ವೇದಾಗಮ ಪುರಾಣಾದಿವಚನಗಳ ಆಧಾರದಿಂದ ಕೂಡಿದ ಕನ್ನಡ ಟಿಪ್ಪಣಿಯು ವಿಸ್ತಾರವಾಗಿ ಬರೆಯಲ್ಪಟ್ಟು ಉತ್ತಮವಾದ ಕಾಗದದಲ್ಲಿ ಅಚ್ಚುಮಾಡಿಸಲ್ಪಟ್ಟಿದೆ. ಸರ್ವರಿಗೂ ಸಂಗ್ರಾಹ್ಯವಾದ ಈ ಪುಸ್ತಕವು ೩೨೪ ಪುಟಗಳುಳ್ಳ ದೊಡ್ಡ ಗ್ರಂಥವಾಗಿದ್ದರೂ, ಸ್ವಮತಸ್ಥರ ಹಿತಾರ್ಥವಾಗಿ ಬೆಲೆಯು ಕಡಿಮೆಯಾಗಿಡಲ್ಪಟ್ಟಿದೆ. ವಿ. ಪಿ. ಮೂಲಕ ಅಂಚೆಯ ವೆಚ್ಚವೂಸೇರಿ ೧-೮-೦.

ಎಸ್. ಆರ್. ಕರಿಬಸವಶಾಸ್ತ್ರಿ.
ಗ್ರಂಥಪ್ರಸಾರಕಮಂಡಲಿ, ಮೈಸೂರು.

ನ್ಯಾಯದರ್ಪಣ. 27

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯೂ, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ: ಮುನಸಿಫ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸೂ, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆಚರಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ವಗೈರೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯೂ ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ನಾಮೂದರಿಗಳೂ ಅಡಗಿರುತ್ತವೆ.

ಬೆಲೆ ರೂ. 1—8—0. ವಿ. ಪಿ. ಮೂಲ್ಯ 1—12—0.

ಎಂ. ಎಸ್. ನಂಜಪ್ಪನವರು,
ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

34 ಸಚಿತ್ರ ಶುಕಸಪ್ತತಿ ಕಥೆಗಳು ರೂ. ೧-೮-೦ (೫೧೨ ಪುಟ) ಟಪಾಲು ಹಾಸಲು ೪ ಆಣೆ. ಸಚಿತ್ರ ಬಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ ರೂ. ೧-೮-೦. (೫೩೩ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ! ನೂತನತೆಯು ಬೇಕಾದರೆ, ವಾಗ್ವೈಖರಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಲಿಚ್ಛೆಪಟ್ಟರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯಲ್ಲಾಸೆಯಿದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೬೦ ಪುಟಗಳಿಂದ ಕೂಡಿದ ೬೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ ೧-೪-೦ ಟಪಾಲ್ ಹಾಸಲು ೩ ಆಣೆ. ಈಗಲೇ ಬರೆ ನಿಮ್ಮ. ನಮ್ಮಲ್ಲಿ ಇನ್ನೂ ಅನೇಕಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

ಸಾಲಾಮಿಸ್ರಿಯು ಕಾಬೂಲ್ ದೇಶದಲ್ಲಿ ಪೌಂಡು ೧ ಕ್ಕೆ ೧-೧೦-೦ ಇತ್ತು ಈಗ ಪೌಂಡು ೧ಕ್ಕೆ ೩-೪-೦ ಆಗಿದೆ. ಆದ್ದರಿಂದ ಇದರಕ್ರಯ ೨-೦-೦ ರೂಪಾಯಿ ಮಾಡಿರುತ್ತೆ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾ" ವಿನ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ದೂರ ನಡೆಯುವುದರಿಂದ ಮೇಲುಬ್ಬಸ ಬರುವುದೂ, ತಲೆಯು ನೋವೂ ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು ಹಳೇ ತಲೆ ನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಸೇಖರಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು. ಈ ಪಂಜಾಬ್ ಸಾಲಾಮಿಸ್ರಿಯು ಮುರಬ್ಬಾಕ್ಕೆ ತಾಂಬ್ರದ ಮತ್ತು ಬಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು.

ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂ. ಬಹುಮಾನವಾಗಿ ಕೊಡಲ್ಪಡುವುದು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನದಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧ಕ್ಕೆ ರೂ. ೨-೦-೦. ಟಪ್ಪಾಲ್‌ಖರ್ಚು ಬೇರೆ. ಅನುಪಾನಪತ್ರಿಕೆ ಔಷಧದಸಂಗಡ ಇರುತ್ತೆ.

ಡಿ. ಮನ್ನಾಲಾಲ್, 5 ಹಾಜಿ ಸಾಹೇಬ್ ಮಹಡಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ನಮ್ಮ ಏಜಂಟರು-ಡಿ. ಸೈಯದ್ ಉಸ್ಮಾನ್ ಅಂಡ್ ಕೊ. ದೊಡ್ಡಪೇಟೆ, ಬೆಂಗಳೂರು ಸಿಟಿ.

ಶಾಸ್ತ್ರೀಯ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು 12

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊಡೆತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಂಜು ಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ರೋಂಗಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಸೀಸೆಗೆ ೪ ಆಣೆ; ೫ ಸೀಸೆ ೧ ಸೀಸೆ ಹೆಚ್ಚು, ೧ ರಿಂದ ೧೨ ಸೀಸೆವರೆಗೆ ಪೋಸ್ಟೇಜು ೪ ಆಣೆ

ವೈಶ್ವಾನರಾಸವ (ಕಾಲರಾಕೆ ಮದ್ದು.)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಸಹಾಯಮಾಡಲೆಂದು ಒಂದೇ ಒಂದು ಬುದ್ದಿಯು ನಿಮ್ಮಲ್ಲಿರಲಿ ಮತ್ತೊಂದು ಸಹಾಯವನ್ನು ಅಪೇಕ್ಷಿಸದೆ ರೋಗಿಯನ್ನು ಬೇಗನೆ ಗುಣಪಡಿಸುವ ಸಿದ್ಧೌಷಧವಿದೊಂದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುದ್ದಿಯ ಬೆಲೆ ೧ ... ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ. ಮೈಸೂರು

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ) ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾಗಿದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚುಟಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜನ್ ಡಬ್ಬಿಗೆ ೨-೨-೦

ಉತ್ತಮವಾದ ನಶ್ಯದಪುಡಿ.

ಧಾತು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವೆ. ನೀವುಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,
ಗೋಪಸೆಟ್ಟಿಪುರ, ಹನೂರು ಪೋಸ್ಟ್
23 ಕೊಳ್ಳೇಗಾಲದ ತಾಲ್ಲೂಕು.

೧೮೯೪ ನೆಯ ಇಸವಿ ಜುಲೈ ತಾ॥ ೨೭ರಿಂದ ೧೮೯೪ನೆಯ ಆಗಸ್ಟ್ ತಾ॥ ೨ರವರೆಗೆ ಸಲ್ಲುವ ಶಾಲೀವಾಹನಶಕ ೧೮೧೬ ನೆಯ ಆನಂದನಾಮ ಸಂ॥ ದ ಶ್ರಾವಣ ಶು॥ ಪಂಚಮಿಯಿಂದ ಶ್ರಾವಣ ಶು॥ ಏಕಾದಶಿವರೆಗಿನ ಪಂಚಾಂಗ.

ತಾ॥	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ಶ್ರೀದಿ ಕಟಕ
27	1 ಸೋ	ಪಂ	45-32	ಉತ್ತ	41-31	12
28	2 ಮಂ	ಷ	37-37	ಹಸ್ತ	37-37	13
29	ಬುಧ	ಸಪ್ತ	33-23	ಚಿತ್ತ	33-15	14
30	3 ಗುರು	ಅಷ್ಟ	27-8	ಸ್ವಾತಿ	29-12	15
31	4 ಶುಕ್ರ	ನವ	21-4	ವಿಶಾಖ	25-5	16
1	5 ಶನಿ	ದಶ	15 27	ಅನೂ	21-30	17
2	6 ಭಾ	ಏಕಾ	10-18	ಜ್ಯೇಷ್ಠ	18-27	18

(1) ಗರುಡಪಂಚಮಿ, ಚಿತ್ರಸೇವಿಮಾವ್ರತಂ, ವೇದಾಂತ ಬ್ರಹ್ಮತಂತ್ರಪರಕಾಲಸ್ವಾಮಿಗಳ ತಿರುನಕ್ಷತ್ರಂ, (2) ಮಂಗಳಗೌರೀವ್ರತಂ, (3) ಅಷ್ಟಮೀತಿಥಿ, (4) ಆದಿಶುಕ್ರವಾರ, ಶ್ರೀರಂಗನಾಥ ಬ್ರಹ್ಮತಂತ್ರ ಪರಕಾಲಸ್ವಾಮಿಗಳಾರಾಧನೆ, (5) ಶ್ರಾವಣಶನಿವಾರ, (6) ಸರ್ವೈಕಾದಶೀ, ಪದಿನಟ್ಟಾಂಪೆರುಕ್,

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED. No 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ವಾರ್ಷಿಕ ಚಂದಾ ೧—೦—೦ } ಪವಹಿಶೋರಪುರೀತಾರಾ ಪರಮಧಿಗತರಾಜಮಂಡಲಹಿತೈ ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್, ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ, ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ। ಸೀಮಾತೀತ ಯಶಃಪ್ರತಾಪವಿಪುಲಂಸದ್ವೃತ್ತಮಾಲಾಕುಲಂ। ಪ್ರೇಮಂವೆತ್ತಿಳೆಯುಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ। { ಅಂಚೆವೆಚ್ಚ ಸೇರಿ ೧—೧೪—೦

ಸಂಪುಟ ೩) ಮೈಸೂರ್ ಸ್ಟಾರ್ ಸೆ॥ ೧೮೯೪ ನೆಯ ಇಸವಿ ಆಗಸ್ಟ್ ತಾರೀಖು ೬ ನೆಯ ಸೋಮವಾರ. (ಸಂಚಿಕೆ ೩೧

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಸುಂದರವಾದ ಹೊಸನಮೂನೆ ದೊಡ್ಡ ಘಡಿಯಾರಗಳು.

27

ಪ್ರಖ್ಯಾತಿಹೊಂದಿದ ಅಮೆರಿಕಾದೇಶದ ಅನ್‌ಸೋನಿಯಾ ಕಂಪೆನಿಯವರಿಂದ ತಯಾರಿಸಲ್ಪಟ್ಟ ಖಾತ್ರಿಯಾದ ಮತ್ತು ಬಹಳದಿವಸ ಬಾಳಿಕೆಬರತಕ್ಕಂಥ ಕ್ಲಾಕ್‌ಗಳು ಇನ್ನೇ ಹೊರ್ತು ಬೇರೆ ಅಲ್ಲಾ.



ಈಪಕ್ಕದ ಚಿತ್ರದಲ್ಲಿ ಕಾಣಿಸಿರುವ ಗೋಡೆಗೆ ತಗುಲಿಸುವ ಘಂಟೆ, ಅರ್ಧಘಂಟೆ ಹೊಡೆಯುವ ಘಡಿಯಾರ ಒಂದಕ್ಕೆ ೧೨-೮-೦ ರೂ. ಘಂಟೆ ಅರ್ಧಘಂಟೆ ಹೊಡೆದು ಅಲಾರಂ ಸಹಾ ಇರತಕ್ಕ ಘಡಿಯಾರ ಒಂದಕ್ಕೆ ೧೩-೪-೦ ರೂ. ಈ ಘಡಿಯಾರಗಳು ಮಜಬೂತಾದ ಯಂತ್ರೋಪಕರಣಗಳಿಂದಲೂ ಮೇಲ್ಭಾಗದಲ್ಲಿ ನಕಾಸಿನ ಕೆತ್ತನೆಯಿಂದಲೂ ನೋಡುವುದಕ್ಕೆ ಅಂದವಾಗಿಯೂ ಬಹಳ ದಿವಸ ಬಾಳಿಕೆ ಬರತಕ್ಕವುಗಳಾಗಿವೆ. ಈ ಘಡಿಯಾರಕ್ಕೆ ಆರ್ಡರ್ ಮಾಡತಕ್ಕವರು ೫ ರೂಪಾಯಿ ಅಡ್ವಾನ್ಸು ಕಳಿಸಬೇಕು. ಬಾಕೀ ಮೊಬಲಿಗ್ಗೆ ರೈಲ್ವೆ ರಶೀದಿಯನ್ನು ವಿ. ಪಿ. ಮಾಡಲಾಗುತ್ತೆ. ರೈಲ್ವೆ ಛಾರ್ಜು ಅಲಾಯಿದಾ

ಸಿಕ್ಕಿದ ಹಾರ್ಮೋನಿಯಂಗಳನ್ನು ಕ್ರಯಕ್ಕೆ ತೆಗೆದುಕೊಂಡು ನಿಮ್ಮ ಹಣವನ್ನು ಯಾಕೆ ವ್ಯರ್ಥಮಾಡಿಕೊಳ್ಳುವಿರಿ.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ "ಮೋಹನ್‌ಫ್ಲೂಟ್ಸ್" (M. Mohen flute) ಮತ್ತೂ "ಮೋಸ್ಲೆಂಫ್ಲೂಟ್" (Moslem flute) ಹಾರ್ಮೋನಿಯಂಗಳನ್ನು ನಮ್ಮಿಂದ ತರಿಸಿಕೊಂಡು ಪರೀಕ್ಷಿಸಿರಿ ಈ ಹಾರ್ಮೋನಿಯಂಗಳು ಅನೇಕದಿವಸ ಬಾಳಿಕೆಬರುವಂತೆ ಬಹಳಮಜಬೂತಾದ ಸಾಮಾನುಗಳಿಂದ ಪ್ರಖ್ಯಾತರಾದ ಕಾರೀಗಾರರಿಂದ ತಯಾರಿಸಲ್ಪಟ್ಟಿವೆ. ಒಂದು ಸಾರಿ ನಮ್ಮಿಂದ ತರಿಸಿ ಪರೀಕ್ಷಿಸಿದಲ್ಲಿ ಇದರ ಬಂದೋಬಸ್ತು ಬಾಳ್ವಿಕೆ ಸಹ ತಮಗೇ ವ್ಯಕ್ತವಾಗುತ್ತೆ.

ನಂ ೧ ಒಂದು ಸೆಟ್‌ರೀಡ್ಸ್ ಉಳ್ಳದ್ದು (Moslem flute) ಹಾರ್ಮೋನಿಯಂ ೧ ಕ್ಕೆ ೩೫-೦-೦ ರೂ.

ನಂ ೨. ಒಂದು ಸೆಟ್‌ರೀಡ್ಸ್ ಉಳ್ಳದ್ದು (M. Mohen flute) ಹಾರ್ಮೋನಿಯಂ ೧ ಕ್ಕೆ ೩೭-೮-೦ ರೂ.

ನಂ ೩. ಡಿಟೋ ನಮೂನೆಯಲ್ಲಿ ಅತ್ಯುತ್ತಮವಾದದ್ದು (M. Mohen flute) ೧ ಕ್ಕೆ ೪೨-೮-೦ ರೂ.

ನಂ ೪. ಡಬ್ಬಲ್‌ರೀಡ್ಸ್ ಉಳ್ಳದ್ದು (Moslem flute) ಹಾರ್ಮೋನಿಯಂ ೧ ಕ್ಕೆ ೪೭-೮-೦ ರೂ.

ನಂ ೫. ಡಬ್ಬಲ್‌ರೀಡ್ಸ್ ಉಳ್ಳದ್ದು (M. Mohen flute) ಹಾರ್ಮೋನಿಯಂ ೧ ಕ್ಕೆ ೫೨-೮-೦ ರೂ.

ಈ ಹಾರ್ಮೋನಿಯಂಗಳ ಪೈಕಿ ಯಾವದಕ್ಕೆ ಆರ್ಡರ್ ಕೊಟ್ಟರೂ ಕೂಡ ೫ ರೂಪಾಯಿ ಅಡ್ವಾನ್ಸು ಕಳಿಸಬೇಕು ಬಾಕೀಮೊಬಲಿಗ್ಗೆ ರೈಲ್ವೇರಶೀದಿಯನ್ನು ವಿ. ಪಿ. ಮೂಲ್ಯ ರವಾನಿಸುತ್ತೇವೆ.

ನೆಪ್ಚೂನ್‌ಫೌಂಟನ್‌ಪೆನ್‌ಗಳು. NEPTUNE FOUNTAIN PENS.

ಈ ಫೌಂಟನ್‌ಪೆನ್‌ಗಳು ಅದರ ಖರೀದಿಗೆ ತಕ್ಕಂತೆ ೪ ವರುಷಗಳಲಾಗಾಯ್ತು ಹತ್ತು ವರುಷಗಳವರಿಗೆ ಬಾಳಿಕೆ ಬರತಕ್ಕವುಗಳಾಗಿವೆ.

ನಂ ೨೦೧. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಕ್ರಯ ೧ ಕ್ಕೆ ೧—೧೪—೦.

ನಂ ೨೦೫. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಉತ್ತಮವಾದದ್ದು ಕ್ರಯ ೧ ಕ್ಕೆ ೨—೧೦—೦.

ನಂ ೨೧೧. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಅತ್ಯುತ್ತಮವಾದದ್ದು ಕ್ರಯ ೧ ಕ್ಕೆ ೪—೨—೦.

ಮೇಲ್ಕಂಡ ಯಾವನಮೂನೆ ಫೌಂಟನ್‌ಪೆನ್‌ಗಳನ್ನು ತರಿಸಿಕೊಂಡರೂ ಅದರ ಜೊತೆಯಲ್ಲಿ ಪೆನ್ ಇಡತಕ್ಕ ಪೆಟ್ಟಿಗೆ ೧. ಜೇಬಿಗೆ ತಗಲಿಸತಕ್ಕ ಕ್ಲಿಪ್ ೧. ಶಾಯಿಹಾಕುವ ಗಾಜಿನ ಟ್ಯೂಬ್ ೧. ಶಾಯಿತುಂಬುವವಿಧ ಪ್ರಿಂಟಾಗಿರತಕ್ಕ ಚೀಟಿ ೧ ನ್ನೂ ಸಹ ರವಾನಿಸಲಾಗುತ್ತೆ

ರಖಂವಾರ್ ವಾಚ್ ಸರಪಣಿಗಳು.



ಈ ಪಕ್ಕದ ಚಿತ್ರದಲ್ಲಿ ಕಾಣಿಸಿರುವ ನಮೂನೆ ಅಚ್ಚಬೆಳ್ಳಿಯ ವಾಚ್ ಸರಪಣಿ ಯಾವ ರಖಂ ಬೇಕಾದರೂ ಕ್ರಯ ೧ಕ್ಕೆ ೩—೪—೦ ಮೇಲ್ಕಂಡ ರಖಂಮ್ಮಿನಲ್ಲಿ ನಿಕ್ಕಲ್‌ಬೆಳ್ಳಿ ಸರಪಣಿ ಕ್ರಯ ೧ ಕ್ಕೆ ೦—೧೨—೦.

ಅಚ್ಚಬೆಳ್ಳೀ ಕೊರಳ ಸರಪಣಿ ಬಹಳ ನಾಜೋಕಾಗಿ ತಯಾರಿಸಿದ್ದು ೧ ಕ್ಕೆ ೧—೪—೦.

೧೮ ಕ್ಯಾರೆಟ್ ಚಿನ್ನದ ಸರಪಣಿ ೧ ಕ್ಕೆ ೫—೮—೦.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್. ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರಮಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೫—೦
ಸಟೀಕ ನಂದೀವ್ರತ	೦—೪—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸಪುಸ್ತಕಗಳು.

146

ಬಸವರಾಜವಿಜಯಂ— ಬೆಲೆ ೧-೪-೦. ಬಾಲಕರೂ ಕೂಡ ಸುಲಭವಾಗಿ ಓದಿಕೊಳ್ಳುವಂತೆ ಹಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧ ೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸೂಕ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ ವರ್ಷದ ಚಂದಾ ೨-೮-೦.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಪ್ರಕಟನೆ.

ಪ್ರಿಂಟಿಂಗಾಫೀಸಿನವರು ಅಗತ್ಯವಾಗಿ ಗಮನಿಸತಕ್ಕದು.

ನಮ್ಮಲ್ಲಿ ಈ ಸ್ಟಾರ್‌ಪತ್ರಿಕೆಯ ೧, ೨, ೩, ೬, ೭ ಮತ್ತೂ ೮ನೇ ಪುಟಗಳಲ್ಲುಪಯೋಗಿಸಲ್ಪಟ್ಟಿರುವ ಪೈಕ ಅಥವಾ ೧೨ ಪಾಯಿಂಟ್ ಅಕ್ಷರಗಳ ಮತ್ತೂ ಈ ಪ್ರಕಟನೆಗುಪಯೋಗಿಸಲ್ಪಟ್ಟಿರುವ ಟೂಲೈನ್‌ಮಿನಿಯನ್ ಅಥವಾ ೧೪ ಪಾಯಿಂಟ್ ಅಕ್ಷರಗಳ ಮ್ಯಾಟ್ರಿಕ್ಸುಗಳೂ, ಅವುಗಳ ಮೌಲ್ಡುಗಳೂ ಇವನ್ನು ಎರಕವೆರೆಯುವ ಯಂತ್ರವೂ ಅದಕ್ಕೆ ಸಂಬಂಧಪಟ್ಟ ಲೈನ್ ಗೇಜ್ ಪೇಪರ್‌ಗೇಜ್ ಹೈಟ್‌ಗೇಜ್ ಡ್ರೆಸ್ಸಿಂಗ್‌ಟೇಬಲ್ ಕರ್ನಿಂಗ್ ಮಿಷನ್ನು ಮುಂತಾದ ಸಾಮಾಗ್ರಿಗಳೂ ಸೂಪರ್‌ರಾಯಲ್ ಸೈಜನ್ನು ಪ್ರಿಂಟ್ ಮಾಡುವ ಸಿಲಿಂಡರ್ ಮಿಷನ್ನು ಸಹ ಮಾರಾಟಕ್ಕೆ ಸಿದ್ಧವಾಗಿವೆ. ಈ ಮಿಷನ್ನಿನಲ್ಲೇ ಈ ಸ್ಟಾರ್‌ಪತ್ರಿಕೆಯು ಪ್ರಿಂಟುಮಾಡಲ್ಪಡುತ್ತಿರುವುದು. ಎರಕವೆರೆಯುವ ಮಿಷನ್ನು ಬಹಳ ಸ್ವಲ್ಪ ಕೆಲಸವನ್ನು ಮಾತ್ರ ಮಾಡಿ ಹೊಸದಾಗಿಯೇ ಯಿರುವುದು. ಇಷ್ಟವುಳ್ಳವರು ಇವುಗಳ ಬೆಲೆ ಮೊದಲಾದವನ್ನು ನಮಗೆ ಬರೆದು ತಿಳಿದುಕೊಳ್ಳಬಹುದಲ್ಲದೆ ಪ್ರತ್ಯಕ್ಷದಲ್ಲಿ ಬಂದು ನೋಡಬಹುದು.

ವೈ. ವಿರೂಪಾಕ್ಷಯ್ಯ,
ಪ್ರೊಪ್ರೈಟರ್
ಕ್ರಾನಿಕಲ್ ಪ್ರೆಸ್, ಮೈಸೂರು.

ಈರುಳ್ಳಿ ವ್ಯವಸಾಯ.

ಅಗೆಗಳಲ್ಲಿ ಬಿತ್ತನೆಹಾಕಿ ನಂತರ ಸಸಿಗಳನ್ನು ನಾಟಿಹಾಕುವದು ಎಲ್ಲಿಯೂ ವಾಡಿಕೆ. ಆದರೆ ದೊಡ್ಡ ಪ್ರದೇಶಗಳಲ್ಲಿ ಈರುಳ್ಳಿಯನ್ನು ಬೆಳೆಯುವಾಗ ಕೂರಿಗೆಯಿಂದ ಬಿತ್ತನೆ ಹಾಕುವದು ಒಳ್ಳೇದು. ಒಂದು ಕೂರಿಗೆಯಿಂದ ಮತ್ತೊಂದು ಕೂರಿಗೆಗೆ ಸುಮಾರು ೧೨ ಅಂಗುಲ ಅಂತರ ಇರಬೇಕು. ಮತ್ತು ಒಂದು ಬಿತ್ತನೆಯಿಂದ ಮತ್ತೊಂದು ಬಿತ್ತನೆಗೆ ಮೂರು ಅಂಗುಲ ಅಂತರ ಇರಬೇಕು. ಹೀಗೆ ಮಾಡುವುದರಿಂದ ಎಕರೆ ಒಂದಕ್ಕೆ ೧೦ ಪೌಂಡು ಬಿತ್ತನೆ ಬೇಕಾಗುತ್ತದೆ. ಅನಂತರ ಸಸಿಗಳನ್ನು ಹರತೆ ಹೊಡೆದು ಹಕ್ಕಲು ಮಾಡಬೇಕು. ಸಸಿಗಳ ಬೇರು ನೆಲದಲ್ಲಿ ಊರಿರಬೇಕು. ಆದರೆ ಗಡ್ಡೆಯು ತಾಣಾವಹಾಗೆ ಇದ್ದರೂ ಇರಬಹುದು.

ಸಸಿಗಳು ಬೆಳವಣಿಗೆಯನ್ನು ಹೊಂದುತ್ತಿರುವಾಗ ಇವುಗಳ ಸುತ್ತಮುತ್ತ ಇರುವ ಕಳೆಗಳನ್ನು ಕಿತ್ತು ನಾಶಪಡಿಸಬೇಕು. ಬೇರುಗಳನ್ನು ಮಾತ್ರ ನೆಲದಲ್ಲಿ ಮುಚ್ಚಿಡಬೇಕು. ಬಿತ್ತನೆಯನ್ನು ಆಳದಲ್ಲಿ ಇಡದೆ ಮೇಲೆಯೇ ಸಪ್ಪು ಮುಚ್ಚಬೇಕು. ಹೀಗೆ ಮಾಡದೆ ಇದ್ದರೆ ಮೊಳಕೆ ಬರುವದು ಕಷ್ಟವಾಗುತ್ತದೆ. ಮತ್ತು ಮೊಳಕೆಯಿಂದ ಸಸಿಗಳು ಹುಲುಸಾಗಿ ಬೆಳೆದು ಗಡ್ಡೆಯು ಹುಲುಸಾಗುವುದಕ್ಕೆ ಅವಕಾಶವಿರುವುದಿಲ್ಲ.

ಬಿತ್ತನೆ ಬೀಜಗಳು ಸಾಧಾರಣವಾಗಿ ಹೊಸ ಬೀಜಗಳೇ ಆಗಿರಬೇಕು. ಹಳೇ ಬೀಜಗಳನ್ನು ನೆಟ್ಟರೆ ಮೊಳಕೆಯೇ ಬರುವದಿಲ್ಲ. ಬೀಜಗಳನ್ನು ಹೊರಗಿನಿಂದ ತರಿಸುವ ಸಂದರ್ಭದಲ್ಲಿ ಟಿನ್ನುಗಳಲ್ಲಿ ತುಂಬಿ ಗಾಳಿ ಪ್ರವೇಶವಿಲ್ಲದಹಾಗೆ ಬಿಗಿಯಾಗಿ ಮುಚ್ಚಿ ತರಿಸಬೇಕು.

ಬಿತ್ತನೆ ಹಾಕಿದ ಒಂದು ವಾರದಲ್ಲಿ ಮೊಳಕೆಗಳು ಏಳುತ್ತವೆ. ಮತ್ತು ೧೨೦ ರಿಂದ ೧೯೦ ದಿನಗಳಲ್ಲಿ ಫಸಲು ಪಕ್ವವಾಗುತ್ತದೆ. ಮೇಲಿನ ಗರಿಗಳು ಒಣಗುತ್ತಾ ಬಂದಾಗ ಫಸಲು ಕಟಾವಿಗೆ ಬಂದಿದೆ ಎಂದು ತಿಳಿಯತಕ್ಕದ್ದು. ಫಸಲನ್ನು ಪಕ್ವವಾದ ಒಡನೆಯೆ ಕಟಾವು ಮಾಡಬೇಕು. ಹೀಗೆ ಮಾಡದಿದ್ದರೆ ಭೂಮಿಯಲ್ಲಿರುವ ತನುವಿನಿಂದ ಹೊಸಮೊಳಕೆಗಳು ಉಂಟಾಗಿ ಗಡ್ಡೆಯ ಗುಣವು ಕೆಡುತ್ತದೆ. ಮತ್ತು ಭೂಮಿಯನ್ನು ಅಗೆದು ಗಡ್ಡೆಯನ್ನು ತೆಗೆಯುವುದೂ ಕಷ್ಟವಾಗುತ್ತದೆ.

ಮಧ್ಯಪ್ರಾಂತದ ಹೈನದಮನೆಗಳು.

ಹೈನದ ಮನೆಗಳು ಉಜ್ಜೀವಿಸಬೇಕಾದರೆ ಮೂರು ಅಂಶಗಳು ಮುಖ್ಯವಾಗಿರಬೇಕು ಯಾವುವೆಂದರೆ:—ತರಬೇತಾದ ಕಸುಬುದಾರರು, ಹಾಲು ಕರೆಯತಕ್ಕ ಜಾತಿ ಹಸುಗಳು, ಮತ್ತು ಹಸಿಮೇವು. ಈ ದೇಶದಲ್ಲಿ ಗೋಲಿ ಎಂಬುವ ಜನಗಳು ಈ ಕಸುಬಿನಿಂದ ಜೀವನ ಮಾಡುತ್ತಾರೆ. ಜಾತಿ ಹಸುಗಳನ್ನು ಕೊಂಡುಕೊಂಡು ಒಳ್ಳೇಮೇವು ಹಾಕಿ ಕರಾವು ಹೆಚ್ಚುಮಾಡಿ ಜನಗಳಿಗೆ ಒಳ್ಳೇಹಾಲು ಕೊಡೋಣವೆಂಬ ಅಭಿಪ್ರಾಯವೇ ಈ ಜನಗಳಿಗೆ ಇರುವುದಿಲ್ಲ. ಹಾಲಿಗೆ ನೀರನ್ನು ಸೇರಿಸಿ ಹೆಚ್ಚು ಲಾಭವನ್ನು ಪಡೆಯಬೇಕೆಂಬುವದೇ ಇವರ ತಾತ್ಪರ್ಯ. ಮೋಸಾಭಿಪ್ರಾಯ ಮತ್ತು ಅಜ್ಞಾನವೇ ಇದಕ್ಕೆ ಮುಖ್ಯಕಾರಣ. ಹಸುವಿನ ಜಾತಿಯನ್ನು ಉತ್ತಮಪಡಿಸುವುದರಿಂದಲೂ ಒಳ್ಳೇಮೇವು ಹಾಕುವುದರಿಂದಲೂ ಕೊಡಿದಮಟ್ಟಿಗೆ ಕರಾವು ಹೆಚ್ಚಿಸಬಹುದಲ್ಲದೆ ರುಚಿಯಾದ ಹಾಲನ್ನು ಒದಗಿಸಬಹುದು. ಇದು ಈ ಜನಗಳಿಗೆ ಸಾಧ್ಯವಲ್ಲ. ಆದುದರಿಂದ ಈ ದೇಶದ ವ್ಯವಸಾಯದ ಲಾಖೆಯವರು ಟಲಿಂಕೇರಿ ಎಂಬ ಸ್ಥಳದಲ್ಲಿ ಒಂದು ಹೊಸ ಹೈನದ ಮನೆಯನ್ನು ಏರ್ಪಡಿಸಿರುತ್ತಾರೆ. ಆರ್ಸ್ಸಿಜಾತಿಯ ಹಸುಗಳನ್ನೂ ಮತ್ತು ಸ್ಕಾಟ್ಲೆಂಡ್‌ದೇಶದ ಐಯುರ್‌ಷೇರ್ ಜಾತಿ ಹಸುಗಳನ್ನೂ ಇಟ್ಟಿರುತ್ತಾರೆ. ಇವುಗಳು ಒಳ್ಳೇ ಜಾತಿ ಹಸುಗಳೇ ಆದಾಗ್ಯೂ ಕರಾವಿಗೆ ಡೆಲ್ಲಿ ಎಮ್ಮೆಗಳಷ್ಟು ಉತ್ತಮವಾದವು ಯಾವದೂ ಇರುವುದಿಲ್ಲ. ಇವುಗಳು ಈ ದೇಶಕ್ಕೆ ಒಗ್ಗಿರುತ್ತವೆಯಲ್ಲದೆ ಮೇವು ಸರಿಯಾಗಿ ಹಾಕಿದರೆ ಒಂದಕ್ಕೆ ಒಂದೂ ಕಾಲಿನಷ್ಟು ಹಾಲು ಹೆಚ್ಚಾಗಿ ಕರೆಯುತ್ತವೆ. ಟಲಿಂಕೇರಿ ಡೈರಿಯಲ್ಲಿ ಇಟ್ಟಿರುವ ಕರಾವು ಎಮ್ಮೆ ಮತ್ತು ಹಸುಗಳಿಗೆ ಒಂದು ವರ್ಷಕ್ಕೆ ತಗಲಿದ ಖರ್ಚು ಮತ್ತು ಅವುಗಳಿಂದ ಉಂಟಾದ ಸಂಪಾದನೆ ಇವುಗಳನ್ನು ಈ ಕೆಳಗಿನ ಪಟ್ಟಿಯಿಂದ ಅರಿಯಬಹುದು.

	ಖರ್ಚು.	ಆದಾಯ.	ಲಾಭ. ಅಥವಾ ನಷ್ಟ.
೧೦೦ ಡೆಲ್ಲಿಎಮ್ಮೆಗಳಿಗೆ	೧೦೪೮೩.	೧೨೩೦೦.	೧೯೧೩ ರೂ. ಲಾಭ.
೧೦೦ ಮಧ್ಯಪ್ರಾಂತ್ಯದ ಎಮ್ಮೆಗಳಿಗೆ	೯೦೫೦.	೯೯೩೫.	೮೮೫ ರೂ. ಲಾಭ.
೧೦೦ ಆರ್ಸ್ಸಿ ಹಸುಗಳಿಗೆ	೩೪೮೨.	೩೩೩೧	೧೫೩ ರೂ. ಲಾಭ.

ಆದುದರಿಂದ ಲಾಗವದು ಜಾಸ್ತಿಯಾದಾಗ್ಯೂ ಒಳ್ಳೇ ಎಮ್ಮೆಗಳನ್ನು ಇಡುವುದು ಲಾಭಕರವೆನ್ನುವುದು ವ್ಯಕ್ತಪಡುತ್ತದೆ. ಡೆಲ್ಲಿ ಎಮ್ಮೆಗಳು ನೂರನ್ನು ದೇಶೀಯ ಎಮ್ಮೆಗಳು ನೂರನ್ನು ಇಟ್ಟು, ಶೇಕಡಾ ೮ ಮತ್ತು ೩॥ ರೂ. ಪ್ರಕಾರ ನಿವ್ವಳ ಆದಾಯ ಹೊಂದಬಹುದು. ಆರ್ಸ್ಸಿ ಹಸುಗಳನ್ನು ಇಡುವುದರಲ್ಲಿ ನಷ್ಟವುಂಟಾಗುತ್ತದೆ. ಈ ದೇಶದ ಕವಾಡಿಗರು ಹಸುಗಳು ಎಮ್ಮೆಗಳು ಎರಡನ್ನೂ ಇಟ್ಟುಕೊಂಡಿರುವದರಿಂದ ಖರ್ಚು ಕಳೆದು ಲಾಭ ಸಂಪಾದಿಸುವುದು ಕಷ್ಟಸಾಧ್ಯ. ಡೆಲ್ಲಿ ಎಮ್ಮೆಗೆ ಒಂದಕ್ಕೆ ೧೨೦ ರೂ. ಬೆಲೆಯಾಗುತ್ತದೆ. ದೇಶೀಯ ಎಮ್ಮೆಗೆ ೯೦ ರೂ. ಆಗುತ್ತದೆ.

ಹೈನದ ಮನೆಗಳನ್ನು ಪರಸ್ಪರ ಸಂಘದಹಾಗೆ ಏರ್ಪಡಿಸಿ ನಡಿಸಬಹುದು. ಆದರೆ ಇದು ಕಷ್ಟಸಾಧ್ಯ. ಸ್ವಂತವಾಗಿ ನಡೆಸುವದೇ ಲಾಭಕರ. ಯಾಕೆಂದರೆ—ಇಲ್ಲಿನ ಕವಾಡಿಗರಲ್ಲಿ ಒಳ್ಳೇ ಕರೆಯುವ ಹಸುಗಳಿಲ್ಲ. ಮತ್ತು ಕೊಂಡುಕೊಳ್ಳುವುದಕ್ಕೆ ಹಣವಿಲ್ಲ. ಮೇವು ಮುಂತಾದುದನ್ನು ಹೊಸತರಹ ಕ್ರಮಗಳಲ್ಲಿ ನಡಿಸಲು ವಿಚಾರಜ್ಞಾನವು ಸಾಲದು. ಮತ್ತು ಮೋಸಾಭಿಪ್ರಾಯವು ಬಹಳಮಟ್ಟಿಗೆ ಇರುವದರಿಂದ ಉಸ್ತುವಾರಿ ಖರ್ಚು ಬಹಳ ತಗಲುತ್ತದೆ. ಆದುದರಿಂದ ಸರ್ಕಾರಿ ಹೈನದಮನೆಯು ಜೊತೆಗೆ ಒಂದು ಕವಾಡಿಗರ ಪರಸ್ಪರ ಸಹಾಯ ಸಂಘವನ್ನು ಹಾಲು ಸಪ್ಲೈ ಮಾಡಲಿಕ್ಕೆ ಏರ್ಪಡಿಸಿರುತ್ತಾರೆ. ಇವರ ರಾಸುಗಳನ್ನು ಸರ್ಕಾರಿ ಉಸ್ತುವಾರಿಯಲ್ಲಿಯೇ ಇಟ್ಟುಕೊಂಡು ಇವರಿಗೆ ಮೇವು ಮುಂತಾದುದನ್ನು ಸುಲಭ ಖರೀದಿಗೆ ಕೊಟ್ಟು ಹಾಲು ಮಾತ್ರ ಕೊಡುವಹಾಗೆ ಏರ್ಪಡಿಸಿರುತ್ತಾರೆ. ಹಾಲನ್ನು ಒಟ್ಟಿಗೆ ಒಬ್ಬ ಸಾಹುಕಾರನಿಗೆ ಕೊಟ್ಟು ಬಿಡುತ್ತಾರೆ. ಆತನು ಮನೆಗಳಿಗೆ ಸರಬರಾಜು ಮಾಡುತ್ತಾನೆ. ಈ ಏರ್ಪಾಡು ಸರ್ಕಾರಿ ಉಸ್ತುವಾರಿ ಇಲ್ಲದೆ ನಡೆಯುವದು ಬಹಳ ಕಷ್ಟ. ಸೊಸೈಟಿಯ ಕಾನೂನುಗಳಿಗೆ ಒಳಪಟ್ಟು ನಡೆದುಕೊಳ್ಳುವದರಿಂದ ಮೋಸಕೃತ್ಯಗಳನ್ನು ಬಿಟ್ಟು ಒಳ್ಳೇ ನಡತೆ ಕಲಿಯಬಹುದಲ್ಲದೆ ಹೈನದ ಕಾರ್ಖಾನೆಗಳನ್ನು ಲಾಭಕರವಾಗಿಯೂ ಪ್ರಯೋಜನಕರವಾಗಿಯೂ ಆಗುವಹಾಗೆ ಮಾಡಬಹುದು.

ರೆ. ವಿ

ತೆಪ್ಪೋತ್ಸವ.

ನಂಜನಗೂಡಿನಲ್ಲಿ ಪ್ರವಾಹದೊಳಗೆ ನಂಜುಂಡೇಶ್ವರಮೂರ್ತಿಯು ಜಲಾಧಿವಾಸಗೊಂಡಿದ್ದ ಸಂಗತಿಯು ಪ್ರಸಿದ್ಧವಷ್ಟೆ. ಇದಕ್ಕೆ ಕಾರಣವನ್ನು ಅನೇಕರು ಅನೇಕತರವಾಗಿ ಆಡಿಕೊಳ್ಳುತ್ತಾರೆಂಬುವದು ನಿಜ. ಸಾಮಾನ್ಯವಾಗಿ ತೆಪ್ಪಗಳೂ ಹರಿಗೋಲುಗಳೂ ಯಾವಾಗಲಾದರೊಂದಾವೃತ್ತಿ ಮುಳುಗಿಹೋಗುವಸುದ್ದಿಯನ್ನು ಕೇಳುತ್ತಿರುವುದುಂಟಷ್ಟೆ. ಅಂಥ ಸಮಯಗಳಲ್ಲಿ ಯಾರೋ ಸೂತಕದವರು ಅಲ್ಲಿ ಕುಳಿತಿದ್ದರೆ ಹೀಗಾಗುವುದುಂಟೆಂದು ಜನರು ಹೇಳಿಕೊಳ್ಳುವುದನ್ನೂ, ಅದು ಅನುಭವಸಿದ್ಧವಾದುದೆಂದು ಸಾಧಿಸಲ್ಪಡುವುದನ್ನೂ ಬಹುಜನರು ಬಲ್ಲರು. ಈಗಲೂ ಅಂಥ ಮುಟ್ಟುಚಟ್ಟೋ ಇತರ ವಿಧವಾದ ಹೊಲೆತನವೋ ಏನೋ ಸಂಭವಿಸಿರಬಹುದೆಂದು ಕೆಲವರು ಆಡಿಕೊಳ್ಳುತ್ತಿದ್ದಾರೆ. ಕಲಿದೋಷವನ್ನೂ ಜನರಲ್ಲಿರುವ ಪಾಪಾಧಿಕ್ಯವನ್ನೂ ನೋಡಲಾರದೆ ಸ್ವಾಮಿಯು ನೀರಿನಲ್ಲಿ ಮುಳುಗಿಕೊಂಡನೆಂದು ಇನ್ನು ಕೆಲರು ಕಾರಣವನ್ನು ಹೇಳುತ್ತಾರೆ. ಇದರಿಂದಲಾದರೂ ದೇವಾಲಯದಲ್ಲಿ ಸುವ್ಯವಸ್ಥೆಯುಂಟಾಗುವಂತೆ ಮಾಡಲು ಸರ್ಕಾರದವರನ್ನು ಎಚ್ಚರಿಸುವುದಕ್ಕಾಗಿಯೇ ಜಗನ್ನಾಟಕ ಸೂತ್ರಧಾರಿಯಾದ ಸ್ವಾಮಿಯು ಹೀಗೆ ಮಾಡಿದನೆಂದು ಇನ್ನು ಕೆಲವರು ಆಡುತ್ತಿದ್ದಾರೆ. ಈ ಎಲ್ಲ ಮಾತುಗಳಲ್ಲೂ ಅಷ್ಟಷ್ಟು ತಥ್ಯಾಂಶವಿದ್ದರೂ ಇರಬಹುದು. ನನಗೆ ತೋರುವುದೇನಂದರೆ—ಭಕ್ತಿಪರೀಕ್ಷಾರ್ಥವಾಗಿಯೇ ಈಶ್ವರನಿಂದ ಇಂಥ ಕಾರ್ಯವು ನಡೆಯಿಸಲ್ಪಟ್ಟಿರಬೇಕು. ನಿಜಭಕ್ತರಿಗೆ ದೈವವೇ ಪ್ರಾಣವಾಗಿರುವುದು. ಈಗ ನಡೆದ ವಿಪತ್ಸಮಯದಲ್ಲಿ ಯಾರಲ್ಲೂ ಅಂಥ ಭಕ್ತಿಯು ಗೋಚರಿಸಲಿಲ್ಲ. ದೈವದಪಾಡು ದೈವಕ್ಕಾಗಲಿ ಎಂದು ಅರ್ಚಕರು ಮೊದಲಾದವರೆಲ್ಲಾ ಕಾಲಿಗೆ ಬುದ್ಧಿ ಹೇಳಿದರು. ನನ್ನ ಸ್ವಾಮಿಯು ಮುಳುಗಿದಮೇಲೆ ನಾನಿದ್ದು ಪ್ರಯೋಜನವೇನೆಂದು ಸ್ವಾಮಿಯನ್ನು ಬಿಡಲಾರದೆ ಕುಳಿತವನು ಒಬ್ಬನೂ ಇರಲಿಲ್ಲ. ನಿಜಭಕ್ತರ ಭಕ್ತಿಯನ್ನು ಪರೀಕ್ಷಿಸಿ, ಬಿಂಬದಲ್ಲೇ ಪ್ರತ್ಯಕ್ಷನಾಗಿ ಜಗದೀಶನು ಇಷ್ಟಾರ್ಥವನ್ನು ಕೊಟ್ಟಿರುವ ಸಂಗತಿಗಳನ್ನು ನಮ್ಮ ಇತಿಹಾಸ ಪುರಾಣಾದಿಗಳಲ್ಲಿ ಅನೇಕವಾಗಿ ನೋಡುತ್ತಿದ್ದೇವೆ ಮತ್ತು ಕೇಳುತ್ತಿದ್ದೇವೆ. ಆಗೊಬ್ಬ ಜಗದೀಶ್ವರ, ಈಗೊಬ್ಬ ಜಗದೀಶ್ವರನಾಗಿರುವನೆ? ಅಥವಾ ಆತನಿಗೆ ಆಗಿದ್ದ ಯೌವನವು ಈಗ ಮುಪ್ಪಿಗೆ ಬಂದಿದೆಯೆ? ಅಥವಾ ಆಗಿದ್ದ ಭಕ್ತವಾತ್ಸಲ್ಯವು ಈಗ ಕಡಿಮೆಯಾಗಿದೆಯೆ? ಅದಾವುದೂ ಸಂಭವಿಸತಕ್ಕದಲ್ಲ, ಮತ್ತೇನೆಂದರೆ—"ಭಾವೇಹಿವಿದ್ಯತೇದೈವಸ್ತಸ್ಮಾದ್ಭಾವೋಹಿಕಾರಣಂ" ಎಂಬಂತೆ ಭಕ್ತರ ಭಾವದಲ್ಲೇ ದೈವವಿರುವುದು. ಭಾವಿಸಿದಂತೆ ದೈವವು ಪ್ರಸನ್ನವಾಗುವುದು. ಹಿಂದೆ ಪ್ರಸಿದ್ಧರಾದ ಅನೇಕ ಭಕ್ತರುಗಳ ಚರಿತ್ರದಲ್ಲಿ ಈಶ್ವರನು ಪ್ರತ್ಯಕ್ಷನಾಗಿರುವುದಕ್ಕೆ ಭಾವಕರ ಅನುಪಮವಾದ ನಿಜಭಕ್ತಿಯೇ ಕಾರಣವಾಗಿತ್ತೆಂಬುದು ಸುಸ್ಪಷ್ಟವಾಗಿ ಗೊತ್ತಾಗುವುದು. ದೀಪದ ಕಲಿಯಾರೆಂಬ ಒಬ್ಬ ಭಕ್ತನು ಅರಣ್ಯದಲ್ಲಿನ ಹಾಳು ದೇವಾಲಯದಲ್ಲಿದ್ದ ಶಿವಲಿಂಗವನ್ನು ನೋಡಿ ಈ ನಮ್ಮ ಶಿವನು ಒಬ್ಬಂಟಿಗನಾಗಿದ್ದಾನಲ್ಲ! ಅನೇಕರಾಕ್ಷಸರೂ, ಕಾಲಕಾಮಾದಿಗಳೂ ಇವನ ವೈರಿಗಳಾಗಿರುವರಲ್ಲಾ! ಹೊತ್ತು ಸಾಧಿಸಿ ಅವರೆಲ್ಲಾ ಬಂದು ಇವನನ್ನು ಪ್ರಹರಿಸಿದರೆ ಒಬ್ಬಂಟಿಗನಾದ ಈತನ ಗತಿಯೇನು? ಎಂದು ಯೋಚಿಸಿ, ಕಾತರಪಟ್ಟು ಕೋಟೆ ಕೊತ್ತಲಗಳನ್ನು ಕಟ್ಟಿಸಿ, ಕಾವಲಿಟ್ಟು, ಕಡೆಗೆ ತಾನೇ ಕಾವಲಿದ್ದು, ಬೆಳಕಿಗಾಗಿ ತನ್ನ ಜಡೆಯನ್ನು ಉರಿಯಿಸಿ, ಅಂತ್ಯದಲ್ಲಿ ದಯಾಮಯನಾದ ಶಿವನ ಸಾಕ್ಷಾತ್ಕಾರವನ್ನು ಪಡೆದುಕೊಳ್ಳಲಿಲ್ಲವೆ? ಶಿವನಿಗೆ ತಾಯಿಯಾರೂ ಇಲ್ಲವೆಂದು ಮರುಕಗೊಂಡು ಆತನಿಗೆ ತಾನೇ ತಾಯಿಯಾಗಿ ಸಲಹುವೆನೆಂದು ಯತ್ನಿಸಿದ ಅಮ್ಮವ್ವೆಯ ಭಕ್ತಿಗೆ ಶಂಕರನು ಮೆಚ್ಚಿ ತಾನು ನಿಜವಾದ ಮಗುವೇ ಆಗಿ ಅವಳಭಕ್ತಿರಸಾಮೃತವನ್ನು ಸವಿಯಲಿಲ್ಲವೆ? ಪರಶಿವನು ವಿಷವನ್ನು ಕುಡಿದು ಅದನ್ನು ಕಂಠದಲ್ಲಿ ನಿಲ್ಲಿಸಿಕೊಂಡಿರುವನು. ಅದು ಯಾವಾಗ ಹೊಟ್ಟೆಗಿಳಿದು ಶಿವನನ್ನು ಕೊಂದುಬಿಡುವುದೋ ಎಂದು ಭಯಪಟ್ಟು ಆತನ ಮೃತ್ಯುವನ್ನು ಕಣ್ಣಿನಲ್ಲಿನೋಡುವುದಕ್ಕಿಂತಲು ತನ್ನ ಪ್ರಾಣವನ್ನು ನೀಗಿಕೊಳ್ಳುವುದೇ ಲೇಸೆಂದು ಶಿರಚ್ಛೇದನೆಗೆ ಪ್ರಯತ್ನಿಸಿದ ರುದ್ರಪಶುಪತಿಗಳಿಗೆ ಶಿವನು ಪ್ರತ್ಯಕ್ಷನಾಗಲಿಲ್ಲವೆ? ಇಂಥ ಮುಗ್ಧಭಕ್ತರ ದಿವ್ಯಚರಿತ್ರಗಳು ಅನಂತವಾಗಿರುವುದಿಲ್ಲವೆ? ಆ ಪುರಾತನ ಭಕ್ತರ ಪ್ರತಿಮೆಗಳೆಲ್ಲಾ ಅದೇ ನಂಜನಗೂಡಿನ ದೇವಾಲಯದಲ್ಲೇ ಭಕ್ತಿಭಾಗ್ಯದ ಸ್ಮಾರಕವಾಗಿರುವಂತೆ ಪ್ರತಿಷ್ಠಾಪಿಸಲ್ಪಟ್ಟಿರುವುದಿಲ್ಲವೆ? ನಂಜುಂಡೇಶ್ವರನು ಪ್ರವಾಹದಲ್ಲಿ ಮುಳುಗಿಹೋಗುತ್ತಿರುವಾಗ ಜತೆಯಲ್ಲಿದ್ದವರಾರಿಗೂ ಶಿವನು ತಮ್ಮ ಪ್ರಾಣಕ್ಕಿಂತಲೂ ದೊಡ್ಡವನೆಂಬ ಭಾವವು ಇರಲಿಲ್ಲ. ಅಂಥ ಭಕ್ತನು ಯಾವನೊಬ್ಬನಿದ್ದರೂ, ಅವನೊಬ್ಬನ ಮೇಲಣ ಕೃಪೆಯಿಂದಲೇ ಜಗದೀಶನು ಈ ಅನಾಹುತಕ್ಕೆ ಎಂದಿಗೂ ಎಡೆಗೊಡುತ್ತಿರಲಿಲ್ಲ. ನಿಜಭಕ್ತಿಯಿಲ್ಲದವರ ಪೂಜೆಯನ್ನೂ ಉತ್ಸವಾಡಂಬರವನ್ನೂ ಡಾಂಭಿಕೋಪಚಾರವನ್ನೂ ಕಟ್ಟಿಕೊಂಡು ಅವನಿಗೇನು? ಇಂಥವರ ಕೈಯಲ್ಲಿ ಸಿಕ್ಕಿ ಕಟ್ಟಾಟ ಎಳೆದಾಟಗಳನ್ನು ಮಾಡಿಸಿಕೊಳ್ಳುವುದಕ್ಕಿಂತಲು ತನ್ನ ಒಂದಾನೊಂದು ಮೂರ್ತಿಯಾದ ಜಲತತ್ತ್ವದಲ್ಲಿ ತನ್ನ ಸಕಲ ಮೂರ್ತಿಯನ್ನು ಹುದುಗಿಸಿದನು. ಇದು ಲೋಕದ ಎಚ್ಚರಿಕೆಗಾಗಿಯೇ ಹೊರತು ಇದರಿಂದ ಶಿವನಿಗಾದ ಅನಾಹುತವೇನೂ ಇಲ್ಲ. ಪೃಥಿವಿ ಅಪ್ಪುತೇಜಸ್ಸು ಮೊದಲಾದವುಗಳೆಲ್ಲಾ ಈಶ್ವರನ ಅಷ್ಟತನುಗಳೇ ಆಗಿವೆ. ಜೀವನು ಲೋಹಮಯವಾದ ಒಂದು ಬಿಂಬದಲ್ಲಿರುವುದು ಅವನಿಗೆ ಹೇಗೋ ಜಲದಲ್ಲಿರುವುದು ಅವನಿಗೆ ಹಾಗೆಯೇ. ಆದರೆ ಇಂಥ ಅನಾಹುತಗಳಿಂದ ದೇವತಾಸೇವಕರು ಎಚ್ಚತ್ತುಕೊಳ್ಳಬೇಕಾದ್ದೊಂದೇ ಮುಖ್ಯಫಲ. ಅದನ್ನು ಬಿಟ್ಟು ಎದ್ದರೆ ಶಾಂತಿ, ಬಿದ್ದರೆ ಶಾಂತಿಗಳ ಪಟ್ಟಿಯನ್ನು ತೋರಿಸಿ, ಅದರಿಂದಲೂ ಅಷ್ಟು ತುಷ್ಟಿಶಾಂತಿಯಾಗುವುದು ಮಾತ್ರ ಫಲವಾದರೆ, ಕಡೆಗೆ ದೈವಾಗ್ರಹವು ಯಾವ ಅನರ್ಥವನ್ನು ಮಾಡುವುದೋ ಅದನ್ನು ಯಾರು ಹೇಳಬಲ್ಲರು!

ಭಕ್ತಿಭಾಗ್ಯ

ಹಿಂದೂಸ್ಥಾನದಲ್ಲಿ ಪೂರ್ವಕಾಲದಿಂದಲೇ ಜ್ಯೋತಿಶ್ಶಾಸ್ತ್ರದ ಮೇಲೆ ಪೂರ್ಣ ನಂಬಿಕೆ ಇತ್ತೆಂಬುದನ್ನು ಕುರಿತು "ಇಂಡಿಯನ್ ಡೇಲಿ ಟೆಲಿಗ್ರಾಫ್" ಎಂಬ ಪತ್ರಿಕೆಯಲ್ಲಿ ಈ ಕೆಳಗಿನ ವೃತ್ತಾಂತವು ಪ್ರಕಟಿಸಲ್ಪಟ್ಟಿರುವುದು. ಇದರ ನಿಜತ್ವವನ್ನು ಪಶ್ಚಿಮ ಹಿಂದೂಸ್ಥಾನದ ಒಂದು ರಾಜ್ಯಕ್ಕೆ ರೆಸಿಡೆಂಟರಾಗಿದ್ದ ಕರ್ನಲ್ ಮೆಡೋಸ್ ಟೈಲರವರು ದೃಢಪಡಿಸಿರುತ್ತಾರೆ. ಟೈಲರವರು ರೆಸಿಡೆಂಟರಾಗಿದ್ದ ರಾಜ್ಯದ ಅರಸನು ಮೈನರನಾಗಿದ್ದನು. ಈ ಮೈನರನಾದ ಅರಸನು ತನ್ನ ೨೧ ನೇ ವಯಸ್ಸಿನಲ್ಲಿ ಸಾಯುವನೆಂತ ಆ ರಾಜಕುಟುಂಬದ ಪುರೋಹಿತನು ರಾಜರ ಜಾತಕ ನೋಡಿ ಟೈಲರರಿಗೆ ತಿಳಿಸಿದನು. ಈ ಗುಟ್ಟು ಪುರೋಹಿತನಿಗಲ್ಲದೆ ಇತರರಿಗಾರಿಗೂ ಗೊತ್ತಿಲ್ಲದ್ದರಿಂದ ಟೈಲರರು ಜಾತಕವನ್ನು ಕಾಗದದಲ್ಲಿ ಬರೆಯಿಸಿ, ತನ್ನ ಖಾಸಗಿ ಪೆಟ್ಟಿಗೆಯಲ್ಲಿ ಭದ್ರವಾಗಿಟ್ಟು, ಈ ಭವಿಷ್ಯತ್ತನ್ನು ಮನುಷ್ಯರಾದವರಿಂದ ಹೇಳುವುದು ಅಸಾಧ್ಯವೆಂದು ಹೇಳಿದರು. ಪುರೋಹಿತನು ರಾಜನು ಹೇಗೂ ೨೧ ನೇ ವಯಸ್ಸಿನಲ್ಲಿ ಸಾಯುತ್ತಾನೆಂಬುದು ನಿಜ ಎಂದು ಹೇಳಿದನು. ಪುರೋಹಿತನು ರಾಜನಿಗೆ ಹೇಳಿದ ವಯಸ್ಸು ಬಂದಾಗ ೧೮೫೭ ನೇ ಇಸವಿಯಲ್ಲಿ ದಂಗೆ ಎದ್ದಿತು. ಈ ದಂಗೆಗೆ ರಾಜನು ಸೇರಿದ್ದಾನೆಂಬದಾಗಿ ರುಜುವಾತಾಗಿ ರಾಜನಿಗೆ ಮರಣದಂಡನೆಯು ವಿಧಿಸಲ್ಪಟ್ಟಿತು. ರೆಸಿಡೆಂಟರೂ ಪುರೋಹಿತನೂ ಒಟ್ಟುಕೂಡಿ ಜಾತಕ ಫಲವನ್ನು ನಿರ್ಧರಿಸಿದರು. ಆದರೆ ರೆಸಿಡೆಂಟರು ರಾಜನ ಮರಣದಂಡನೆಯನ್ನು ತಪ್ಪಿಸುವುದಕ್ಕೆ ತನ್ನಿಂದಾದಷ್ಟು ಪ್ರಯತ್ನ ಮಾಡುವೆನೆಂದು ನಿರ್ಧರಿಸಿ, ಈ ವಿಷಯವನ್ನು ಮೇಲಧಿಕಾರಿಗಳಿಗೆ ಅಪೀಲು ಮಾಡಿ, ರಾಜನ ಮರಣ ಶಿಕ್ಷೆಯನ್ನು ತಪ್ಪಿಸಿ, ಮದ್ರಾಸಿನ ಕೋಟೆಯಲ್ಲಿ ರಾಜನನ್ನು ಬಂದಿಯಾಗಿರಿಸುವ ಹುಕುಮನ್ನು ತರಿಸಿ, ರಾಜನನ್ನು ಇಂಗ್ಲಿಷ್ ಆಫೀಸರರ ಬಂದೋಬಸ್ತಿನಲ್ಲಿ ಮದ್ರಾಸಿಗೆ ಕಳುಹಿಸಿದರು. ಒಂದು ದಿನದ ದಾರಿ ನಡೆದು ಸಾಯಂಕಾಲ ಒಂದು ಕಡೆಯಲ್ಲಿ ತಂಗಿದಾಗ ಈ ಆಫೀಸರರು ರಾಜನನ್ನು ಏಕಾಂತವಾಗಿ ಬಿಟ್ಟು ಕುರ್ಚಿಯ ಮೇಲೆ ತಮ್ಮ ರಿವಾಲ್ವರನ್ನು ಮರೆತುಬಿಟ್ಟು ಹೊರಗೆಹೋದರು. ಕೂಡಲೇ ಗುಂಡಿನಶಬ್ದವು ಹೊರಗೆ ಕೇಳಿಸಿತು. ಆಫೀಸರರು ಒಳಗೆ ಬಂದು ನೋಡಿದಾಗ ರಾಜನು ಸತ್ತುಬಿದ್ದಿದ್ದನು. ಜಾತಕದಲ್ಲಿ ನಮೂದಿದ್ದ ದಿನದಲ್ಲಿಯೇ ರಾಜನ ಈ ಸ್ವಘಾತವು ನಡೆಯಿತು.

"ಮಾಜಿಗುಲಾಮ" ಎಂಬ ಹೆಸರಿನಿಂದ ಸ್ವದೇಶಾಭಿಮಾನಿ ಪತ್ರಿಕೆಗೆ ಒಬ್ಬ ಲೇಖಕರು ಬರೆದಿರುವ ಈ ಲೇಖನವನ್ನು "ಹೋಟೇಲಿನ" ಉಪಾಸಕರೆಲ್ಲರೂ ಅವಶ್ಯಕವಾಗಿ ಓದಬೇಕಾಗಿದೆ.

ಕಾಫಿ ಹೋಟೇಲುಗಳಲ್ಲಿ ಖಾದ್ಯಗಳನ್ನು ಮಾಡುವುದಕ್ಕೆ ನೇಮಕಪಡುವ ನೌಕರರು ಸಾಧಾರಣವಾಗಿ ಮದುವೆಯಾಗದ ತರುಣರು; ಅಥವಾ ಹೆಂಡತಿಯನ್ನು ಕಳಕೊಂಡ ವಿಧುರರು. ಇವರಲ್ಲಿ ಬಹುಮಂದಿ ದುರ್ನಡತೆಯಿಂದ ಅವಾಚ್ಯವ್ಯಾಧಿಗಳನ್ನು ಸಂಪಾದಿಸಿಕೊಂಡವರು. ರೋಗಾಕ್ರಾಂತ ಭಾಗವನ್ನು ಆಗಾಗ್ಗೆ ತುರಿಸಿಕೊಂಡು ನಂಜು ತಾಗಿದ ಬೆರಳುಗಳನ್ನು ತೊಳೆಯದೆ ತಿಂಡಿಗಳನ್ನು ತಯಾರಿಸುತ್ತಾರೆ.

ಕೆಲಸ ಮಾಡುವಾಗ ತಂಬಾಕಿನ ಬೀಡಿ ಬಾಯಿಯಲ್ಲಿ ಉಂಟೇ ಉಂಟು. ಬೀಡಿ ಮುಗಿದು ಬರುತ್ತಲೇ ಬಾಯಿಯಲ್ಲಿ ಉಳಿದ ಸಣ್ಣ ತುಂಡನ್ನು ಕೈಯಿಂದ ತೆಗೆದು ಬಿಸಾಡಿ ಎಂಜಲಿನ ಬೆರಳುಗಳನ್ನು ತೊಳೆಯದೆ ಖಾದ್ಯಗಳನ್ನು ಮಾಡುತ್ತಾರೆ.

ಚಾ ಮತ್ತು ಕಾಫಿಯನ್ನು ಸೋಸುವುದಕ್ಕೆ ಕೊಳಕು ಬಟ್ಟೆಯನ್ನು ಉಪಯೋಗಿಸುತ್ತಾರೆ. ಅದು ಕೂಡ ಸಮೀಪಕ್ಕಿಲ್ಲದಿದ್ದರೆ ಲಂಗೋಟಿ ಯಾನೆ ಕೋವಣದಲ್ಲಿ ಚಾ ಮತ್ತು ಕಾಫಿಯನ್ನು ಬಸಿಯುತ್ತಾರೆ.

ಕಪ್ಪುಗಳಿಗೆ ತುಟಿಗಳನ್ನು ತಾಗಿಸಿ ಕುಡಿಯುವದರಿಂದ ಕಪ್ಪುಗಳ ಅಂಚಿನಲ್ಲಿ ಎಂಜಲು ತಗಲಿ ದುರ್ವಾಸನೆ ಬರುತ್ತದೆ. ಕಪ್ಪುಗಳನ್ನು ಚೆನ್ನಾಗಿ ತೊಳೆಯುವುದಿಲ್ಲ. ಎಂಜಲಿನಲ್ಲಿದ್ದ ರೋಗಗಳ ಜರ್ಮ್ಸ್ ಎಂಬ ಜಂತುಗಳು ಕಪ್ಪುಗಳ ಅಂಚಿನಲ್ಲಿ ಅಂಟಿಕೊಂಡಿರುವುದರಿಂದ ರೋಗಗ್ರಸ್ತ ಜನರ ಎಂಜಲು ತಾಗಿದ ಕಪ್ಪುಗಳಿಂದ ಕುಡಿಯುವವರಿಗೆ ಕ್ಷಯ, ಫರಂಗಿ, ಮದಕರಿ ಮೊದಲಾದ ವ್ಯಾಧಿಗಳು ಹಿಡಿಯುವ ಸಂಭವವುಂಟಾಗುತ್ತದೆ.

ತುಪ್ಪ ಮತ್ತು ಎಣ್ಣೆಯ ಪಾತ್ರೆಗಳಲ್ಲಿ ಎಕ್ಕಲೆ ಅಥವಾ ಇಲಿಮರಿಗಳು ಬಿದ್ದರೆ ಅವುಗಳನ್ನು ತೆಗೆದು ಬಿಸಾಡಿ ಅದೇ ತುಪ್ಪವನ್ನೂ ಎಣ್ಣೆಯನ್ನೂ ಖಾದ್ಯಗಳಿಗೆ ಉಪಯೋಗಿಸುತ್ತಾರೆ.

ಹಾಲನ್ನು ಬೆಂಕಿ ಮೇಲಿಟ್ಟು ಚೆನ್ನಾಗಿ ಕಾಯಿಸದೆ ಉಪಯೋಗಿಸುವುದರಿಂದ ರೋಗಗಳುಂಟಾಗುತ್ತವೆ. ಪಶುಗಳನ್ನು ಪರೀಕ್ಷಿಸದೆ, ವಿವಿಧ ಕಡೆಗಳಿಂದ ಕ್ರಯಕ್ಕೆ ತಂದ ಹಾಲನ್ನು ಚೆನ್ನಾಗಿ ಕಾಯಿಸದೆ ಚಾ, ಕಾಫಿ, ಕೋಕೊ ಮೊದಲಾದುವುಗಳಿಗೆ ಹಾಕುತ್ತಾರೆ.

ಅಂಗಡಿಯಲ್ಲೇ ಕೂತು ತಿನ್ನುವಂಥಾದ್ದು ಮರ್ಯಾದೆಗೆ ಹಾನಿಕರವು. ನೀತಿಗೆ ವಿರೋಧವಾದದ್ದು, ಹಣವಂತನಾಗಲೀ ದರಿದ್ರನಾಗಲೀ ನಾಲಿಗೆಯ ರುಚಿಗೆ ಗುಲಾಮನಾಗಿ ಮನೆಯಲ್ಲಿದ್ದ ಹೆಂಡತಿ ಮಕ್ಕಳು ಮೊದಲಾದವರನ್ನು ಮರೆತು, ಹೋಟೇಲಿನಲ್ಲಿ ಕೂತು, ತನ್ನ ಹೊಟ್ಟೆಯನ್ನೇ ತುಂಬಿಕೊಳ್ಳುವುದು ಪಶುಸ್ವಭಾವವನ್ನು ತೋರಿಸುತ್ತದೆ.

ಕಾಫಿ ಹೋಟೇಲುಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತದೆ. ಇದು ಜನಪದದ ಕ್ಷೇಮವೃದ್ಧಿಗೆ ಹಾನಿಕರವು. ವಿದ್ಯಾರ್ಥಿಗಳಂತೂ ಹೆತ್ತವರ ಕಷ್ಟಗಳನ್ನು ಮರೆತು ಚಾ ಕಾಫಿಗೆ ಗುಲಾಮರಾಗಿ ಹೋಟೇಲುಗಳಲ್ಲಿ ಕಾಯಂ ಗಿರಾಕಿಗಳಾಗುತ್ತಾರೆ. ನಾಲಿಗೆ ರುಚಿಯ ಸಂಬಂಧ ಹೋಟೇಲಿನವರ ಹತ್ತರ ಸಾಲ ಮಾಡುತ್ತಾರೆ. ಸರಕಾರದವರು ಕಾಫಿ ಹೋಟೇಲುಗಾರರ ವರ್ಗವಹಿಗವನ್ನು ಪರಿಶೋಧಿಸಿದರೆ ಪ್ರತಿ ಹತ್ತು ಗಿರಾಕಿಗಳಲ್ಲಿ ೮ ಶಾಲಾ ವಿದ್ಯಾರ್ಥಿಗಳೆಂತೆ ತೋರುವುದು.

ನಾನು ಸ್ವತಃ ಕಾಫಿ ಹೋಟೇಲಿನ ಕಾಯಂ ಗಿರಾಕಿಯಾಗಿದ್ದೆ. ಕಾಫಿ ಹೋಟೇಲನ್ನು ಸಂದರ್ಶಿಸಿದುದರಿಂದ ಅಭ್ಯಾಸದ ಫಲವಾಗಿ ಪ್ರತಿದಿನವೂ ಕಾಫಿ ಕುಡಿಯುವ ಸಮಯ ಬರುತ್ತಲೇ ಕಣ್ಣಿಗೆ ಕಾಣದ ಪಾಶಗಳಿಂದ ನನ್ನ ಮನಸ್ಸು ಹೋಟೇಲುಕಡೆಗೆ ಎಳೆಯುತ್ತಿತ್ತು. ಬಿಲ್ಲರವರು ಇಟ್ಟ ಶೇಂದಿ ಅಂಗಡಿಗಳೂ ಬ್ರಾಹ್ಮಣರು ಇಟ್ಟ ಕಾಫಿ ಹೋಟೇಲುಗಳೂ ಏಕಪ್ರಕಾರವಾಗಿ ಜನರ ಸ್ಥಿತಿಮತಿಯನ್ನು ಕೆಡಿಸುವ ಸಂಸ್ಥೆಗಳಾಗಿ ನನಗೆ ಕಾಣುತ್ತವೆ. ಶೇಂದಿ ಅಂಗಡಿಗಳನ್ನು ಸಂದರ್ಶಿಸುವ ಕೀಳು ಜಾತಿಯವರೂ, ಕಾಫಿ ಹೋಟೇಲುಗಳನ್ನು ಸಂದರ್ಶಿಸುವ ಮೇಲು ಜಾತಿಯವರೂ, ನಾಲಿಗೆ ರುಚಿಯ ಗುಲಾಮತನದ ಮಟ್ಟಿಗೆ ಒಂದೇ ಜಾತಿಯ ಹೊಲೆಯರಾಗಿ ನನಗೆ ತೋರುತ್ತಾರೆ.

ವಿದ್ಯಾರ್ಥಿಗಳನ್ನು ಕುರಿತು ಅನಿಬೆಸೆಂಟಮ್ಮನವರ ಸದುಪದೇಶವು.

ದೇಹಬಲರಕ್ಷಣೆ—ಬಾಲಕರು ವಿದ್ಯಾರ್ಥಿದಶೆಯಲ್ಲಿರುವಾಗಲೇ ಗರಡಿ ಮೊದಲಾದುವುಗಳನ್ನು ಸ್ಥಾಪಿಸಿಕೊಂಡು ದೇಹಶಕ್ತಿವರ್ಧನಕ್ಕಾಗಿ ಪಾಟುಪಡುತ್ತಿರಬೇಕು. ಈ ದೇಶದಲ್ಲಿ ಪುರುಷರಿಗೆ ಎಷ್ಟು ದಾರ್ಢ್ಯವಿರುವುದೋ ಸ್ತ್ರೀಯರ ದೇಹದಲ್ಲಿ ಅಷ್ಟು ದಾರ್ಢ್ಯವಿರುವುದಿಲ್ಲ. ಬಾಲಕರ ಶರೀರವು ಹೊರವಾಗಿ ಬಳೆಯುವುದಕ್ಕೆ ೧೪ ವರ್ಷ ವಯಸ್ಸು ಬಹಳ ಅನುಕೂಲವಾದುದು. ಬಾಲಕರಲ್ಲಿ ಸರಿಯಾದ ಅಂಗಪುಷ್ಟಿ ವಿರಬೇಕಾದರೆ ಅವರು ಮಿತಾಹಾರಿಗಳಾಗಿರಬೇಕು. ಅವರು ಒರಟಾದ ಹಾಸುಗೆಗಳ ಮೇಲೆ ಮಲಗಬೇಕು, ದೇಹಾರೋಗ್ಯಕ್ಕೂ ನೈರ್ಮಲ್ಯಕ್ಕೂ ಸಾಧಕವಾದ ವಿಧಾನಗಳನ್ನವಲಂಬಿಸಬೇಕು, ಎಂದು ಮನುಸ್ಮೃತಿಯಲ್ಲಿ ಹೇಳಲ್ಪಟ್ಟಿರುವುದು. ಭರತಖಂಡದಲ್ಲಿ ಅನಾದಿಯಾಗಿ ಬಂದಿರುವ ಗರಡಿಗಳಲ್ಲಿನ ವ್ಯಾಯಾಮಗಳನ್ನೇ ಸ್ವೀಡನ್‌ದೇಶದವರು ನೋಡಿ, ಅದಕ್ಕೆ ಇಂಗ್ಲೀಷು ಹೆಸರನ್ನು ಕಟ್ಟಿದರು. ನಿಮ್ಮ ಗರಡಿಗಳಲ್ಲಿ ವ್ಯಾಯಾಮಗಳನ್ನು ಮಾಡುವುದಕ್ಕೆ ನಿಮ್ಮ ದೇಹಗಳೇ ಸಾಧನಗಳು. ಎಲ್ಲ ನೋಡಿದರೂ ನಿಮ್ಮ ಅಂಗಸಾಧನೆಗೆ ತಕ್ಕ ಗರಡಿಗಳು ನಿಮ್ಮ ದೇಶದ ಎಲ್ಲ ಕಡೆಯಲ್ಲೂ ಉಪಯೋಗಕರವಾಗಿರುವುವು. ನಿಮಗೆ ವಿನೋದಕರವಾದ ಆಟವು ಬೇಕಾದರೆ ಕ್ರಿಕೆಟ್ ಎಂಬ ಚೆಂಡಿನಾಟವಿರುವುದು. ಆ ಆಟವು ನೀತಿಪ್ರದಾಯಕವಾಗಿಯೂ ಜಿತೇಂದ್ರಿಯತ್ವಕ್ಕೆ ಸಾಧಕವಾಗಿಯೂ ಇರುವುದು. "ವ್ಯಾಯಾಮಧಾರಣೆಯಿಂದ ಆರೋಗ್ಯವೃದ್ಧಿಯಾಗುವುದು. ಯೋಚನಾಶಕ್ತಿ ಹೆಚ್ಚುವುದು. ಒಳ್ಳೆ ನಡವಳಿಕೆಯು ಲಭಿಸುವುದು." ಎಂದು ಲಂಡನ್ನಿನ ಕೌಂಟಿಕೌನ್ಸಿಲಿನ ಡಾಕ್ಟರವರು ಉದಾಹರಣಸಮೇತವಾಗಿ ಹೇಳಿರುವರು. ವ್ಯಾಯಾಮಧಾರಣ ಪದ್ಧತಿಯು ಈ ದೇಶದಲ್ಲಿ ಪೂರ್ವಕಾಲದೊಳಗೆ ಬಹಳವಾಗಿದ್ದಿತು. ಈಗ ಅದು ಕ್ಷೀಣಿಸಿದೆ. ಆ ಪದ್ಧತಿಯನ್ನು ಈಗ ಪಾಶ್ಚಾತ್ಯರು ಅಭ್ಯಸಿಸುವುದಕ್ಕಾರಂಭಿಸಿದ್ದಾರೆ. ಕ್ರಿಕೆಟ್ಟಿನಿಂದಲೂ, ವ್ಯಾಯಾಮಧಾರಣ ಪದ್ಧತಿಯಿಂದಲೂ ಇನ್ನೇತರದ ಬೇರೆಬೇರೆ ಅಭ್ಯಾಸಗಳಿಂದಲೂ ಬಾಲಕರು ಜಿತೇಂದ್ರಿಯರೂ, ಧೈರ್ಯಶಾಲಿಗಳೂ, ಯುಕ್ತಾಯುಕ್ತವಿಮರ್ಶನಸಮರ್ಥರೂ ಆಗಿ, ಪರಸ್ಪರ ಸಹಾಯ್ಯಪದ್ಧತಿಯನ್ನು ಸಂಪೂರ್ಣವಾಗಿ ವ್ಯವಹಾರಕ್ಕೆ ತರಬಲ್ಲವರಾಗುತ್ತಾರೆ. ಆದುದರಿಂದಲೇ "ಶರೀರಮಾದ್ಯಂ ಖಲುಧರ್ಮಸಾಧನಂ" ಎಂದು ಹೇಳಲ್ಪಟ್ಟಿದೆ.

ಮದುವೆ-ಬಾಲಬಾಲಿಕೆಯರು ಸಣ್ಣ ವಯಸ್ಸಿನಲ್ಲಿರುವಾಗಲೇ ಮದುವೆಯಾಗಕೂಡದು. ಬಾಲ್ಯವಿವಾಹವನ್ನು ಮಾಡುವುದಕ್ಕೆ ಮನುಧರ್ಮಶಾಸ್ತ್ರವು ಅವಕಾಶವನ್ನು ಕೊಟ್ಟಿದೆ. ಬಾಲ್ಯವಿವಾಹವು ಉತ್ತಮವಾದುದೆಂದು ಸಾಧಿಸತಕ್ಕವರು ಈ ಧರ್ಮಶಾಸ್ತ್ರವನ್ನೇ ಪ್ರಮಾಣವಾಗಿ ತೆಗೆದುಕೊಳ್ಳುವರು. ಆದರೆ ಬಾಲಕರು ಬ್ರಹ್ಮಚರ್ಯಾಶ್ರಮದಲ್ಲಿ ಅನುಸರಿಸಬೇಕಾದ ಧರ್ಮಗಳನ್ನು ಕುರಿತು ಈ ಶಾಸ್ತ್ರದಲ್ಲಿ ಹೇಳಲ್ಪಟ್ಟಿರುವ ವಚನಗಳನ್ನು ಮಾತ್ರ ಅವರು ಕಿವಿಗೆ ಹಾಕಿಕೊಳ್ಳದಿರುವುದೇಕೋ ಕಾಣೆನು. ಬಾಲ್ಯದಲ್ಲೇ ಗೃಹಸ್ಥಾಶ್ರಮಧರ್ಮಗಳನ್ನು ಹೊಂದಿದವರಾದರೆ ಬಾಲಕರಿಗೆ ವಿದ್ಯಾಭ್ಯಾಸಕ್ಕೆ ಭಂಗಬರುವುದೊಂದೇ ಅಲ್ಲದೆ ಅವರ ಶರೀರಪಾಟವವೂ ಕೂಡ ಕ್ಷೀಣಿಸಿಹೋಗುವುದು. ಮಾತಾಪಿತೃಗಳ ಮಾತನ್ನು ಉಲ್ಲಂಘಿಸುವುದು ಮಕ್ಕಳಿಗೆ ಧರ್ಮವಲ್ಲವಾದರೂ ಬಾಲ್ಯವಿವಾಹ ವಿಷಯದಲ್ಲಿ ತಾಯ್ತಂದೆಗಳು ಬಲಾತ್ಕಾರ ಮಾಡಿ ಹೇಳಿದರೂ, ನಮಗೆ ಈಗಲೇ ಮದುವೆಯು ಬೇಕಿಲ್ಲವೆಂದು ಸಣ್ಣವಯಸ್ಸಿನ ಬಾಲಕರು ಆ ವಿಷಯದಲ್ಲಿ ತಾಯ್ತಂದೆಗಳ ಮಾತನ್ನು ಮೀರಬಹುದೆಂದು ನನಗೆ ತೋರುತ್ತದೆ. ಏಕೆಂದರೆ—ಈ ಬಾಲ್ಯವಿವಾಹದಪದ್ಧತಿಯನ್ನು ನಿರೋಧಿಸುವುದು ಒಂದೆರಡು ಕುಟುಂಬಗಳ ಕ್ಷೇಮಕ್ಕೆ ಮಾತ್ರವೇ ಸಾಧಕವಲ್ಲ. ಇದು ಜಾತಿಗೆ ಜಾತಿಯನ್ನೇ ಕಾಪಾಡಬಲ್ಲುದು. ಅತ್ಯಂತ ಬಾಲ್ಯದಲ್ಲೇ ಮದುವೆಯಾಗಿ ಮಕ್ಕಳ ತಂದೆಯಾಗುವುದು ಸ್ವಭಾವಕ್ಕೆ ವಿರುದ್ಧವಾದುದಲ್ಲದೆ ಮನುಧರ್ಮಶಾಸ್ತ್ರಕ್ಕೇ ಪ್ರತ್ಯಕ್ಷವಿರುದ್ಧವಾಗಿರುತ್ತದೆ. ಜನಪರಿಗಣಿತಿಯ ಲೆಕ್ಕವನ್ನು ಪರಿಶೀಲಿಸಿದರೆ ಈ ದೇಶದಲ್ಲಿ ಬಾಲವಿತಂತುಗಳು ಎಷ್ಟು ಹೆಚ್ಚಿರುವರೆಂಬುದೂ, ೧೨ ವರ್ಷ ಮೊದಲುಗೊಂಡು ೨೫ ವರ್ಷಗಳೊಳಗಿನ ವಯಸ್ಸಿನ ಹೆಂಗುಸರು ಮಕ್ಕಳ ತಾಯಂದಿರಾಗಿ ಎಷ್ಟುಮಂದಿ ಅಕಾಲಮೃತಿಯನ್ನು ಹೊಂದಿರುವರೆಂಬುದೂ ಸ್ಪಷ್ಟವಾಗುವುದು. ಇವನ್ನೆಲ್ಲಾ ವಿಚಾರಮಾಡಿ ಪರಿಹಾರೋಪಾಯವನ್ನು ಗಮನಿಸಬೇಕು. ಬಾಲಿಕೆಯರು ೧೩–೧೪ ವರ್ಷ ವಯಸ್ಸಿನವರಾದಾಗ ಬೊಂಬೆಗಳನ್ನು ಎತ್ತಿಕೊಂಡು ಮುದ್ದಾಡಲರ್ಹರಾದವರೆ? ಅಥವಾ ಎಳೆ ಮಕ್ಕಳನ್ನು ಎತ್ತಿಕೊಂಡು ಸಂಸಾರತಾಪತ್ರಯವನ್ನು ನಿರ್ವಹಿಸಲರ್ಹರಾದವರೆ? ಎಂಬುದನ್ನು ವಿಚಾರಮಾಡಬೇಕು. ದೇಹಸ್ವಭಾವವನ್ನು ವಿಚಾರಮಾಡಿದರೆ ಬಾಲಿಕೆಯರಿಗೆ ೧೬ ವರ್ಷಗಳಿಗೆ ಮುಂಚೆ ಮದುವೆಮಾಡಕೂಡದೆಂದೇ ಗೊತ್ತಾಗುವುದು. ವ್ಯವಹಾರಾದಿಗಳಲ್ಲಿ ಪುರುಷರಿಗೆ ಪ್ರಾಪ್ತವಯಸ್ಸು ೧೮ ವರ್ಷಗಳು ತುಂಬಿದಮೇಲೆಯೇ ಉಂಟಾಗುವುದೆಂದು ರಾಜಶಾಸನವು ಮಾಡಲ್ಪಟ್ಟಿರುವಾಗ, ಬಾಲಿಕೆಯರು ತಮ್ಮ ದೇಹವನ್ನು ಇತರರಿಗೆ ಒಪ್ಪಿಸುವುದನ್ನಂಗೀಕರಿಸುವುದಕ್ಕೆ ೧೬ ವರ್ಷಗಳ ಪರಿಮಿತಿಯಾದರೂ ಇರಬೇಕಾದುದು ತಪ್ಪೆ? "ಆಸ್ತಿಗಳಿಗಿಂತಲೂ ದೇಹಗಳು ಕೋಟಿಪಾಲು ಶ್ರೇಷ್ಠವಾದುವಲ್ಲವೆ?" ಎಂದು ನಿಯಮನಿರ್ಮಾಣಸಭಿಕರು ಮೈಸೂರ್ ರಾಯರನ್ನು ಒಂದಾನೊಂದು ವೇಳೆ ಕೇಳಲು, ಬಾಲ್ಯವಿವಾಹವನ್ನು ಮಾಡುತ್ತಿರುವ ಪದ್ಧತಿಯು ನಿಮ್ಮಲ್ಲಿರುವುದರಿಂದ, ಅಂಗೀಕಾರವನ್ನು ಕೊಡುವುದಕ್ಕೆ ತಕ್ಕ ವಯಸ್ಸು ೧೩ ರನ್ನಾಗಿ ನಿರ್ಣಯಿಸಬಹುದೆಂದು ಸರ್ಕಾರದವರು ಉತ್ತರಕೊಟ್ಟರು. ಇಂಥ ಉತ್ತರವನ್ನು ಅವರು ಕೊಡಬೇಕಾದರೆ ಅತಿಬಾಲ್ಯವಿವಾಹಗಳೇ ಅವರಿಗೆ ಆಧಾರಗಳಾಗಿದ್ದುವಲ್ಲವೆ? ಮದುವೆಯನ್ನು ಮಾಡಿಕೊಂಡು ಸುಖವಾಗಿರುವುದಕ್ಕೆ ನಮಗೆ ಭಗವಂತನು ೩ ಮಾರ್ಗಗಳನ್ನು ಅನುಗ್ರಹಿಸಿದ್ದಾನೆ. ಜ್ಞಾನಿಗಳಾದ ಮಹನೀಯರು ಸಿದ್ಧಾಂತಿಸಿರುವ ಶಾಸ್ತ್ರಗಳ ಪ್ರಕಾರ ನಡೆದುಕೊಳ್ಳುವುದು ಮೊದಲನೆಯದು. ತಪ್ಪನ್ನು ಮಾಡುವ ಸ್ವಭಾವವುಳ್ಳ ಮಾನುಷರಿಂದನಿರ್ಮಿತವಾದ ಶಾಸ್ತ್ರಗಳಿಗಿಂತ ಎಂದಿಗೂ ವ್ಯತ್ಯಸ್ತವಾಗದಿರುವ ಸ್ವಾಭಾವಿಕತತ್ತ್ವಕ್ಕೆ ಅನುಗುಣವಾದ—ನಾನಾರ್ಥಕಲ್ಪನೆಗೆ ಎಡೆಗೊಡದ—ಪಂಡಿತರ ಅಭಿಪ್ರಾಯಗಳಂತೆ ನಡೆದುಕೊಳ್ಳುವುದು ೨ನೆಯದು. ಮನುಷನಿರ್ಮಿತವಾದ ಶಾಸ್ತ್ರಗಳಿಗೆ ಪಂಡಿತರ ಅಭಿಪ್ರಾಯಗಳು ಭಿನ್ನವಾಗಿರುವುದರಿಂದ ಆ ವಿಷಯದಲ್ಲಿ ನನ್ನ ಅಭಿಪ್ರಾಯವನ್ನು ಹೇಳಲಾರೆನು. ಪಂಡಿತರು ಬಾಲ್ಯವಿವಾಹವನ್ನನುಮೋದಿಸಿದರೆ, ಭಿನ್ನವಾದಗಳಿಗೆ ಎಡೆಗುಡುವ ಮಾನುಷನಿರ್ಮಿತಶಾಸ್ತ್ರಗಳನ್ನವಲಂಬಿಸುವುದಕ್ಕಿಂತ ಭಗವತ್ಪ್ರೇರಿತಗಳಾದ ಸ್ವಭಾವಸಿದ್ಧಶಾಸ್ತ್ರಗಳನ್ನು ಅನುಸರಿಸಿ ನಡೆದುಕೊಳ್ಳುವುದೇ ಉತ್ತಮವು. ಬಾಲಕರು ೨೪–೨೫ ವರ್ಷ ವಯಸ್ಸು ಬಂದಾಗ ಮದುವೆಮಾಡಿಕೊಳ್ಳಬಹುದು. ಹಾಗೆಯೇ ಬಾಲಿಕೆಯರಿಗುಕೂಡ ಯುಕ್ತವಯಸ್ಸು ಬರುವವರೆಗೂ ಮದುವೆಮಾಡದಿರುವುದೇ ಮೇಲು. ಮೈಸೂರು ಮಹಾರಾಜರವರು "ಮದುವೆಯಾಗಿರುವ ಬಾಲಿಕೆಯರು ಪಾಠಶಾಲೆಗಳಿಗೇ ಆಗಲಿ ಕಲಾಶಾಲೆಗಳಿಗೇ ಆಗಲಿ ಸೇರಿ ಓದಕೂಡದು" ಎಂದು ನಿಬಂಧನೆಯನ್ನು ಮಾಡಲು ಅವಕಾಶವಿದೆ. ಕಾಶಿಯಲ್ಲಿ ಸ್ಥಾಪಿಸಲ್ಪಟ್ಟಿರುವ ಹಿಂದೂಕಲಾಶಾಲೆಯಲ್ಲಿ ಇಂಥ ನಿಬಂಧನೆಯನ್ನು ನಾನು ಏರ್ಪಡಿಸಿರುತ್ತೇನೆ. "ಮದುವೆಯಾಗಿರುವ ಬಾಲಬಾಲಿಕೆಯರನ್ನು ನಿಮ್ಮ ಪಾಠಶಾಲೆಗಳಿಗೆ ಸೇರಿಸಿ ಪರೋಕ್ಷಪೂರ್ವದಿಂದ ಬಾಲ್ಯವಿವಾಹಕ್ಕೆ ನೀವೇ ಸಹಾಯಕಾರಿಗಳಾಗಿರುವಾಗ, ಭಾರತೀಯರು ಅತಿಬಾಲ್ಯವಿವಾಹವನ್ನು ಮಾಡುತ್ತಿರುವರೆಂದು ನೀವು ನಿಂದಿಸುವುದೇತಕ್ಕೆ?" ಎಂದು ನಾನು ಪಾದರಿಗಳನ್ನು ಹಲವುಬಾರಿ ಆಕ್ಷೇಪಿಸುತ್ತಿದ್ದೆನು. ಶಾಲೆಗಳಲ್ಲಿ ಈ ನಿರ್ಬಂಧಪದ್ಧತಿಯನ್ನು ಭಾರತೀಯ ರಾಜರುಗೆ

ಳು ಏರ್ಪಡಿಸಿದರೆ ಭರತಖಂಡವು ಸವಿಾಚೀನವಾಗುವುದು. ವಿದ್ಯಾಭ್ಯಾಸವು ಮುಗಿದಮೇಲೆ ಬಾಲಕರು ಗೃಹಸ್ಥರಾಗಬೇಕೆಂದು ಮನುಧರ್ಮಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ. ಬೇರೆ ತೆರದಿಂದ ಈ ವಿಷಯದಲ್ಲಿ ಸಂಘಸಂಸ್ಕರಣವನ್ನು ಮಾಡಬೇಕೆಂದು ನಾನು ಕೋರುವುದಿಲ್ಲ. ಮತ್ತೇನೆಂದರೆ—ನಾನು ಧರ್ಮಶಾಸ್ತ್ರವನ್ನನುಸರಿಸಿಯೇ ಈ ಕಾಲದಲ್ಲಿ ಈ ವಿಷಯದಲ್ಲಿ ಪ್ರಜೆಗಳು ನಡೆದುಕೊಳ್ಳಬೇಕೆಂದು ಕೋರುತ್ತೇನೆ.

ಸಜ್ಜನ

ಮೈಸೂರ್ ಸ್ಟಾರ್.

೧೯೧೪ನೆಯ ಆಗಸ್ಟ್ ತಾ|| ೩ನೆಯ ಸೋಮವಾರ.

ಯುದ್ಧಾಗ್ನಿಸ್ಫೋಟವು.

ಈಗ ಯುದ್ಧವೆಂಬುದು ಭಾರತೀಯರಿಗೆ ಶ್ರವಣೇಂದ್ರಿಯ ವಿಷಯಮಾತ್ರವಾಗಿರುವುದರಿಂದ, ಅದರ ಘೋರವಿಪತ್ತುಗಳ ಸಂಪರ್ಕವೇ ಇವರಿಗಿರುವುದಿಲ್ಲ. ಇತ್ತೀಚೆಗೆ ನಡೆದ ದಕ್ಷಿಣಾಫ್ರಿಕಾ, ರಷ್ಯಾ ಜಪಾನ್, ಬಾಲ್ಕನ್ ಈ ಯುದ್ಧಗಳ ವಾರ್ತೆಗಳು ಪುರಾಣಗಳ ಕಥೆಗಳಂತೆ ಭಾರತೀಯರಿಂದ ಕೇಳಲ್ಪಟ್ಟಿರುವುವು. ಯುದ್ಧವು ಸಂಭವಿಸಿದ ದೇಶಗಳ ಪರಿಣಾಮವು ಬೆಂಕಿಬಿದ್ದ ಕಾಡುಗಳ ಅವಸ್ಥೆಗೆ ಸಮನಾಗುವುದೆಂಬ ವಿಷಯವನ್ನು ತಿಳಿದಾಗ, ಅಂಥ ವಿಪತ್ತನ್ನು ನಮಗೆ ತಪ್ಪಿಸಿ, ಸುಖಶಾಂತಿಗಳನ್ನು ಒದಗಿಸಿಕೊಟ್ಟಿರುವ ಆಂಗ್ಲಸಾಮ್ರಾಜ್ಯಕ್ಕೆ ನಾವು ಎಷ್ಟು ಕೃತಜ್ಞರಾಗಿರಬೇಕೋ ಅದು ಗೊತ್ತಾಗುವುದು.

ಯೂರೋಪುಖಂಡದಲ್ಲಿನ ಪ್ರಭುಗಳಲ್ಲಿ ಪರಸ್ಪರವಾಗಿ ಮೇಲೆ ವಿಶ್ವಾಸಗಳು ತೋರಿಬರುತ್ತಿದ್ದರೂ, ಪ್ರತಿಯೊಬ್ಬರೂ ಹೆಚ್ಚಿಸುತ್ತಿರುವ ಸೇನಾಸಾಧನಗಳು ಪರಸ್ಪರ ವಿಘಾತಪ್ರಯತ್ನವನ್ನೇ ಸೂಚಿಸುತ್ತಿರುವುವು. ಈ ಕಾರಣದಿಂದ ಪ್ರತಿಯೊಂದು ರಾಷ್ಟ್ರವೂ ಅಗ್ನಿಪರ್ವತದಂತೆ ಯಾವ ಕಾಲದಲ್ಲಿ ಸ್ಫೋಟಗೊಂಡು, ವಿನಾಶಹೇತುವಾದ ಯುದ್ಧಾಗ್ನಿವೃಷ್ಟಿಯನ್ನು ಸುರಿಸುವುದೋ ಎಂಬುದನ್ನು ಊಹಿಸಲಿಕ್ಕಿಲ್ಲವಾಗಿದೆ. ಕಳೆದ ವಾರದಿಂದ ಬರುತ್ತಿರುವ ತಂತಿವಾರ್ತೆಗಳು ಒಂದಾನೊಂದು ಯುದ್ಧದ ಭೀಕರ ಪ್ರಳಯದ ಸೂಚಕಗಳಾಗಿರುತ್ತವೆ. ಇದು ಆಸ್ಟ್ರಿಯಾಹಂಗೇರಿಗೂ ಸರ್ವಿಯಾದವರಿಗೂ ಸಂಭವಿಸಿದ ಕಾಳಗವಾಗಿದೆ. ಇವರೀರ್ವರಲ್ಲಿ ಮನಸ್ತಾಪವುಂಟಾಗುವುದಕ್ಕೆ ಕಾರಣವೇನೆಂಬುದನ್ನು ನಾವು ಹಿಂದೆ ಸ್ವಲ್ಪ ಪ್ರಸ್ತಾಪಿಸಿರುತ್ತೇವೆ. ಆಸ್ಟ್ರಿಯಾ ಯುವರಾಜರನ್ನು ಸರ್ವಿಯಾಜಾತಿವರ್ಗದವರು ಸೆರಾಜೇವೋ ಪಟ್ಟಣದಲ್ಲಿ ಕೊಂದುದರಿಂದ ಈ ಅಂತಸ್ತಾಪವು ಮಿತಿಮೀರಿ, ಯುದ್ಧರೂಪದ ಪರಿಣಾಮವನ್ನು ಈಗ ತಂದಿಟ್ಟಿರುವುದು. ಆದರೆ ಆಸ್ಟ್ರಿಯಾದ ಮುಂದೆ ಸರ್ವಿಯಾವು ಹಸ್ತಿಮಶಕನ್ಯಾಯದಲ್ಲಿದೆ. ಇದರಮೇಲೆ ಅದು ತುರ್ಕಿ ಬಾಲ್ಕನ್ ಯುದ್ಧದಲ್ಲಿ ತುರ್ಕಿಯವರಮೇಲೆ ತನ್ನ ಯಾವಚ್ಛಕ್ತಿಯನ್ನೂ ವಿನಿಯೋಗಿಸಿ ಕಾವಾಗಿ ಕೈಕಾಲು ಸೋತು ನಿಂತಿದೆ. ಇಂಥಹ ರಾಷ್ಟ್ರದಮೇಲೆ ಪ್ರಬಲವಾದ ಆಸ್ಟ್ರಿಯಾವು ಹಟತೊಟ್ಟು ಯುದ್ಧಕ್ಕೆ ನಿಂತರೆ ಸರ್ವಿಯಾವು ತಾಳಿಕೊಳ್ಳುವುದು ಅಸಾಧ್ಯವೇಸರಿ. ಹೀಗಿರುವಲ್ಲಿ ಆಸ್ಟ್ರಿಯಾ ಚಕ್ರವರ್ತಿಯವರು ನೊನ್ನೆಯ ವಾರದೊಳಗೆ ಒಂದು ಭಯಪ್ರದವಾದ ಸಂದೇಶವನ್ನು ಸರ್ವಿಯಾಕ್ಕೆ ಕಳುಹಿದರು. ಅದರಲ್ಲಿ—'ಆಸ್ಟ್ರಿಯಾಕ್ಕೆ ವಿರುದ್ಧವಾಗಿ ಸರ್ವಿಯಾದಲ್ಲಿ ನಡೆಯುತ್ತಿರುವ ಪ್ರಕಟನಗಳನ್ನು ನಿಂದಿಸಿ, ಅದರ ಮೂಲಕವಾಗಿ ತಮಗೆ ಉಂಟಾದ ಪಶ್ಚಾತ್ತಾಪವನ್ನು ಸರ್ವಿಯಾದವರು ಪ್ರಕಟಿಸಬೇಕು. ಆಸ್ಟ್ರಿಯಾ ಯುವರಾಜರನ್ನು ಕೊಲೆಮಾಡಿದವರನ್ನೂ ಅದಕ್ಕೆ ಸಹಾಯಕರಾಗಿದ್ದವರನ್ನೂ ವಿಚಾರಣೆಮಾಡಿ ತಕ್ಕಹಾಗೆ ದಂಡಿಸಬೇಕು. ವಿಚಾರಮಾಡತಕ್ಕ ಸಂಘದಲ್ಲಿ ಆಸ್ಟ್ರಿಯಾ ಪ್ರತಿನಿಧಿಯು ಇರಬೇಕು. ಆಸ್ಟ್ರಿಯಾದವರು ಹೇಳುವ ಉದ್ಯೋಗಸ್ಥರನ್ನು ಅಧಿಕಾರದಿಂದ ತೆಗೆದುಹಾಕಬೇಕು. ಪಾಠಶಾಲೆಗಳಲ್ಲಿ ಆಸ್ಟ್ರಿಯಾಕ್ಕೆ ವಿರುದ್ಧವಾಗಿ ಹೇಳಲ್ಪಡುವ ಬೋಧೆಗಳನ್ನು ನಿಲ್ಲಿಸಬೇಕು. ಆಸ್ಟ್ರಿಯಾದವರು ಕೊಡುವ ಉದ್ಯೋಗಸ್ಥರ ಸಹಾಯ್ಯವನ್ನು ಸರ್ವಿಯಾದವರು ಅಂಗೀಕರಿಸಬೇಕು. ಇದಕ್ಕೆ ೪೮ ಗಂಟೆಗಳೊಳಗಾಗಿ ಉತ್ತರವನ್ನು ಕೊಡಬೇಕು; ಇಲ್ಲದಿದ್ದರೆ ಯುದ್ಧಕ್ಕೆ ಸಿದ್ಧರಾಗಬೇಕು.' ಎಂಬ ನಿಯಮಗಳು ಬರೆಯಲ್ಪಟ್ಟಿದ್ದುವು. ಈ ಸಂದೇಶವು ಸರ್ವಿಯಾಕ್ಕೆ ಸಿಡಿಲೆರಗಿದಂತೆಯೇ ಆಗಿ, ಅದು ದಿಗುಕಾಡಿಹೋಯಿತು. ಉತ್ತರವನ್ನು ಕೊಡುವುದಕ್ಕೆ ಇನ್ನಷ್ಟು ಕಾಲವ್ಯವಧಿಯನ್ನು ಹೆಚ್ಚಿಸಿಕೊಡಬೇಕೆಂದು ಕೇಳಿಕೊಂಡಿತು. ತಸ್ಮಾತ್ಪರಿಂದಲೂ ಕೇಳಿಸಿತು. ಆಸ್ಟ್ರಿಯಾವು ಒಪ್ಪಲಿಲ್ಲ. ಕಡೆಗೆ ೧-೨ ವಿಷಯಗಳ ಹೊರತು ಉಳಿದ ನಿಯಮಗಳಿಗೆಲ್ಲಾ ಬದ್ಧವಾಗಿ ನಡೆಯಲು ಸರ್ವಿಯಾವು ಒಪ್ಪಿಕೊಂಡಿತು. ಅದು ಆಸ್ಟ್ರೀಲಿಯಾಕ್ಕೆ ತೃಪ್ತಿಕರವಾಗಲಿಲ್ಲ. ಈ ವಿಷಯದಲ್ಲಿ ಯಾರ ಮಧ್ಯಸ್ತಿಕೆಯೂ ಆಸ್ಟ್ರಿಯಾಕ್ಕೆ ಬೇಡವಾಯಿತು. ಅದು ರಣದುಂದುಭಿಯನ್ನು ಹೊಡೆದೇಹೊಡೆಯಿತು. ಯುದ್ಧಕಾಲದ ಪೂರ್ವಾಂಗಕ್ರಿಯೆಗಳೆಲ್ಲವೂ ನಡೆದುಹೋದುವು. ಆಸ್ಟ್ರಿಯಾದಲ್ಲಿ ಯುದ್ಧಕಾಲಿಕ ಶಾಸನವು ಸಾರಲ್ಪಟ್ಟಿತು. ಅವರವರ ರಾಯಭಾರಿಗಳು ಸ್ವದೇಶಗಳಿಗೆ ಹೊರಟುಹೋದರು. ಸೇನಾಸನ್ನಾಹವು ಎರಡುಕಡೆಯೂ ನಡೆದೂನಡೆಯುತ್ತಲೂ ಇರುವುದು. ಸರ್ವಿಯಾವು ತನ್ನ ರಾಜಧಾನಿಯನ್ನು ಬೆಲ್ಗ್ರೇಡ್ ನಗರದಿಂದ ಕ್ರಾಗಜೇವಾಕ್ಸಿಗೆ ಬದಲಾಯಿಸಿತು. ಸಂಪೂರ್ಣವಾಗಿ ಆತ್ಮಗೌರವವನ್ನು ಕಳೆದುಕೊಳ್ಳಲಾರದೆ ಕ್ಷಾತ್ರಧರ್ಮವನ್ನು ಹಿಡಿದು ಯುದ್ಧಕ್ಕೆ ಸನ್ನದ್ಧವಾಯಿತು.

ಕಳೆದ ತಾ|| ೨೮ ರ ಬೆಳಿಗ್ಗೆ ಆಸ್ಟ್ರಿಯಾವೇ ಮೊದಲು ಯುದ್ಧಾರಂಭವನ್ನು ಮಾಡಿತೆಂದು ಗೊತ್ತಾಗಿದೆ. ಆಸ್ಟ್ರಿಯಾದ ಸೇನೆಯು ಸರ್ವಿಯಾ ರಾಜಧಾನಿಯ ಮೇಲೆ ಫಿರಂಗಿಗಳನ್ನು ಹಾರಿಸಿ, ಆ ಪಟ್ಟಣದಲ್ಲಿದ್ದ ಸೇನೆಯನ್ನೆಲ್ಲಾ ಹೊರಕ್ಕೆ ಹೊರಡಿಸಲು ಬಲಾತ್ಕರಿಸಿತು. ಆಯುಧಗಳನ್ನೂ ಮದ್ದು ಗುಂಡುಗಳನ್ನೂ ತೆಗೆದುಕೊಂಡು ಹೋಗುತ್ತಿದ್ದ ಸರ್ವಿಯನ್ನರ ೨ ಹಡಗುಗಳನ್ನು ಆಸ್ಟ್ರಿಯಾಸೈನ್ಯವು ಹಿಡಿದುಕೊಂಡಿತು.

ಈ ಯುದ್ಧಾಗ್ನಿಯು ಆಸ್ಟ್ರಿಯಾಸರ್ವಿಯಾದವರಲ್ಲಿ ಮಾತ್ರವೇ ಪರ್ಯವಸನ್ನವಾಗದೆ, ಇನ್ನಾವ ದೊಡ್ಡ ರಾಜ್ಯದವರೊಡನಾದರೂ ಸಂಬಂಧಗೊಳ್ಳುವುದಾದರೆ, ಯುರೋಪುಖಂಡವೇ ಇಬ್ಭಾಗವಾಗಿ ಕಾದಾಡಬೇಕಾಗುವುದು. ಆಗ ಅಭೂತಪೂರ್ವವಾದ ಮಹಾವಿಪತ್ತು ಆ ಖಂಡಕ್ಕೇ ಸಂಭವಿಸುವುದರಲ್ಲಿ ಲೇಶವೂ ಸಂಶಯವಿಲ್ಲ. ಸರ್ವಿಯನ್ನರ ಕಡೆಗೆ ರಷ್ಯನ್ನರ ಬೆಂಬಲವು ಪೂರ್ಣವಾಗಿದೆ. ರಷ್ಯಾವು ಅತ್ತಸೇರುವುದಾದರೆ, ಜರ್ಮನಿಯು ಆಸ್ಟ್ರಿಯಾಕ್ಕೆ ಸಹಾಯ ಮಾಡುತ್ತದೆ. ಇಟಲಿಯು ತಾನು ಆಸ್ಟ್ರಿಯಾಕ್ಕೆ ಸಹಾಯಕವಾಗಿರುವೆನೆಂದು ಆಗಲೇ ಮುಕ್ತಕಂಠವಾಗಿ ತಿಳಿಯಿಸಿಬಿಟ್ಟಿದೆ. ಹೀಗಾದರೆ ಜರ್ಮನಿಯಮೇಲೆ ಬದ್ಧವೈರವಾದ ಫ್ರಾನ್ಸು ಸರ್ವಿಯಾದ ಕಡೆಗೆ ನಿಲ್ಲುವುದು ಸಹಜವಾಗಿದೆ. ಇಷ್ಟಾದಮೇಲೆ ಇಂಗ್ಲೆಂಡು ಸುಮ್ಮನಿರಲಾದೀತೆ? ಯೂರೋಪುಖಂಡವೇ ವಿಭಾಗವಾಗಿ ನಿಂತುಕೊಂಡು ಕಾದಾಡುವ ಹೊತ್ತುಬಂದರೆ ಮಹಾ ಪ್ರಳಯವೇ ಸಂಭವಿಸುವುದು. ಇಷ್ಟುಮಟ್ಟಿಗೆ ಯುದ್ಧಾಗ್ನಿಯನ್ನು ಹಬ್ಬಿಸುವುದು ಸರ್ವನಾಶಕ್ಕೆ ಕಾರಣವಾಗುವುದರಿಂದ ಇದನ್ನು ಇಷ್ಟರಲ್ಲೇ ತಣ್ಣಗೆ ಮಾಡಬೇಕೆಂಬ ಪ್ರಯತ್ನಗಳು ನಡೆಯುತ್ತಿವೆ. ವಿದೇಶಾಂಗ ಮಂತ್ರಿಯು ಇದರ ಶಾಂತಿಗಾಗಿ ಅನ್ಯಪ್ರಬಲ ರಾಷ್ಟ್ರದವರೊಡನೆಲ್ಲಾ ಪತ್ರವ್ಯವಹಾರವನ್ನು ನಡೆಯುಸುತ್ತಿದ್ದಾರೆ. ಮುಖ್ಯದೇಶಗಳ ಪ್ರತಿನಿಧಿಗಳೆಲ್ಲಾ ಕಲೆತು ಈಗಿನ ವಿಷಯದಲ್ಲಿ ಆಸ್ಟ್ರಿಯಾ ಸರ್ವಿಯಾದವರಿಗೆ ಸಂಧಿಯನ್ನು ಮಾಡಿಸಿಬಿಡಬೇಕೆಂದೋ ಅಥವಾ ಆಸ್ಟ್ರಿಯಾ ಸರ್ವಿಯಾದವರಲ್ಲಿ ಮಾತ್ರವೇ ಯುದ್ಧವು ಪರ್ಯವಸನ್ನವಾಗುವಂತೆ ಮಾಡಬೇಕೆಂದೋ ಯೋಚಿಸಿದ್ದಾರೆ. ರಷ್ಯಾದವರೂ ಜರ್ಮನಿಯವರೂ, ಫ್ರಾನ್ಸಿನವರೂ, ಅದಕ್ಕೆ ಒಪ್ಪಿಗೆಯನ್ನು ತೋರಿಸಿದ್ದಾರೆ. ಅಂತರುದ್ದೇಶಗಳು ಹೇಗಿವೆಯೋ ತಿಳಿಯಲಿಲ್ಲವು. ಜರ್ಮನಿಯ ರಷ್ಯಾದ ಪ್ರಭುಗಳೂ ಫ್ರಾನ್ಸಿನ ಅಧ್ಯಕ್ಷರೂ ಬೇರೆಬೇರೆಕಡೆ ಸಂಚಾರದಲ್ಲಿದ್ದವರು ಈಗಿನ ಸ್ಥಿತಿಯನ್ನು ಕಂಡು ಎಲ್ಲರೂ ತಮ್ಮ ತಮ್ಮ ರಾಜಧಾನಿಗಳನ್ನು ಸೇರಿದರು. ಸರ್ವರೂ ತಮ್ಮ ತಮ್ಮ ಸೇನಾಸಿದ್ಧತೆಗೆ ಆಜ್ಞೆಮಾಡಿದರು. ಈಗ ಯೂರೋಪಿನ ಎಲ್ಲರಾಜ್ಯದ ಸೇನೆಗಳೂ ಕತ್ತಿಗಳನ್ನು ಮಸೆಯುತ್ತಿವೆ. ಹಡಗುಗಳೆಲ್ಲ ಇದ್ದಲು ಬೆಂಕಿಯನ್ನು ಹಾಕಿ ಹೊಗೆ ಯೆಬ್ಬಿಸಿದ್ದಾರೆ. ಭಟರುಗಳು ಬಾಹುಸ್ಫಾಲನಗಳನ್ನು ಮಾಡುತ್ತಿದ್ದಾರೆ. ದೈವಸಂಕಲ್ಪವು ಹೇಗಿದೆಯೋ ಗೊತ್ತಾಗಲಿಲ್ಲ. ಈಗಾಗಲೇ ಯುದ್ಧಾಗ್ನಿಯ ವಿಪತ್ತಿನ ಸೇಕವು ಪ್ರಪಂಚದಲ್ಲೆಲ್ಲಾ ಹಬ್ಬುವ ಚಿಹ್ನಗಳು ತೋರಿವೆ. ಆಸ್ಟ್ರಿಯಾಪಟ್ಟಣಗಳಲ್ಲಿ ಆಹಾರ್ಯಪದಾರ್ಥಗಳ ಬೆಲೆಯು ೧ಕ್ಕೆ ೫೦ರಷ್ಟು ಹೆಚ್ಚುಹೋಗಿದೆ. ಎಲ್ಲ ದೇಶಗಳಲ್ಲೂ ಪ್ರಜೆಗಳು ಬ್ಯಾಂಕುಗಳಿಗೆ ನೋಟುಗಳನ್ನು ಹಿಂದಿರುಗಿಸಿಕೊಟ್ಟು ಚಿನ್ನದ ನಾಣ್ಯಗಳನ್ನು ಕೇಳುತ್ತಿದ್ದಾರೆ. ಬ್ಯಾಂಕುಗಳನೇಕವು ಮುಚ್ಚಲ್ಪಟ್ಟಿವೆ. ಲಂಡನ್ನಿನಲ್ಲೂ ಗ್ಲಾಸ್ಗೋವಿನಲ್ಲೂ ೮-೧೦ ಮಂದಿ ಧನಿಕರು ದಿವಾಳಿಯಾದರು. ವ್ಯಾಪಾರಗಳು ಕಟ್ಟಾಗುತ್ತಿವೆ. ಜರ್ಮನಿಯವರೂ ರಷ್ಯಾದವರೂ ತಮ್ಮ ತಮ್ಮ ಗಡಿಗಳಲ್ಲಿನ ಲೋಹಮಾರ್ಗಗಳ ನಿಲ್ದಾಣವನ್ನೆಲ್ಲಾ ಪ್ರಯಾಣಿಕರಿಂದ ಅದ್ದಿಗೊಳಿಸಿ, ಸೇನಾಶಾಖೆಯ ವಶಪಡಿಸಿಕೊಂಡಿದ್ದಾರೆ. ನಮ್ಮ ಭರತಖಂಡದಲ್ಲೂ ಇದರ ಸೇಕವು ತಟ್ಟದೆ ಬಿಟ್ಟಿಲ್ಲ. ಇಲ್ಲಿನ ಬೊಂಬಾಯಿ ಕಲ್ಕತ್ತಾ ಕರಾಚಿಪಟ್ಟಣಗಳಲ್ಲೂ ವ್ಯಾಪಾರವು ಮುಂದವಾಗಿದೆ. ಗೌರ್ನಮೆಂಟು ಪತ್ರಗಳ ಬೆಲೆಯು ಇಳಿದುಹೋಗಿದೆ. ಬೊಂಬಾಯಿಯಲ್ಲಿ ಸರ್ಕಾರಿಪತ್ರಗಳ ಬೆಲೆಯು ೧೦೦ ಕ್ಕೆ ೯೫-೨-೦ ಅಷ್ಟಕ್ಕೆ ಇಳಿದುಹೋಗಿದೆ. ಕರಾಚಿಯಿಂದ ಯೂರೋಪುಖಂಡಕ್ಕೆ ಪ್ರಯಾಣಿಕರನ್ನೇ ಕಳುಹಿಸುತ್ತಿಲ್ಲ; ವರ್ತಕರು ಅಧೈರ್ಯದಲ್ಲಿದ್ದಾರೆ.

ಭಗವತ್ಕಾರುಣ್ಯದಿಂದ ಭವಿತವ್ಯವಾದ ಮಹಾವಿಪತ್ತು ತೊಲಗಿ, ಬೇಗನೆ ಶಾಂತಿಯು ವಾರ್ತೆಯು ಬರಲೆಂದು ಶಾಂತಿಪ್ರಿಯರೆಲ್ಲರೂ ಕೋರುತ್ತಿರುವರು.

ಬೊಂಬಾಯಿ ನಿಯಮನಿರ್ಮಾಣಸಭೆ.

ಇದು ಪೂನಾ ಪಟ್ಟಣದಲ್ಲಿ ಕಳೆದ ತಾ|| ೨೭ನೆಯ ಸೋಮವಾರ ಮಧ್ಯಾಹ್ನ ಬೊಂಬಾಯಿ ಗೌರ್ನರಾದ ಲಾರ್ಡ್ ವೆಲ್ಲಿಂಗ್ಟನ್‌ರವರ ಅಧ್ಯಕ್ಷತೆಯಿಂದ ನೆರವೇರಿತು. ಮೊಟ್ಟಮೊದಲು ಸಭಾಧ್ಯಕ್ಷರು ಭಾಷಣಮಾಡುವಾಗ ಹಾರ್ಡಿಂಜ್ ಪ್ರಭ್ವಿಯವರ ಮೃತಿಯನ್ನು ಕುರಿತು ದುಃಖಪ್ರದರ್ಶನಮಾಡುತ್ತ, ಈ ಮೃತಿಯು ಭಾರತೀಯರೆಲ್ಲರಿಗೂ ಉಂಟುಮಾಡಿರುವ ದುಃಖಕ್ಕಿಂತಲೂ ನನಗೆ ವಿಪರೀತವಾದ ವ್ಯಸನವನ್ನುಂಟುಮಾಡಿದೆ. ಏಕೆಂದರೆ:—ಕೆಲದಿನಗಳ ಕೆಳಗೆ ಆಕೆಯವರು ಲಂಡನ್ನಿಗೆ ಹೊರಟಾಗ ಅವರನ್ನು ಅತ್ಯುತ್ಸಾಹದಿಂದ ಸಾಗಕಳುಹಿದುದಲ್ಲದೆ, ಆಕೆಯವರು ಶರೀರಸ್ವಸ್ಥತೆಯನ್ನು ಪಡೆದು ಸಂಪೂರ್ಣಾರೋಗ್ಯದಿಂದ ಭರತಖಂಡಕ್ಕೆ ಬಂದು ಪತಿಯೊಡನೆ ಕೂಡಿ ಭಾರತೀಯರ ಕ್ಷೇಮಕ್ಕಾಗಿ ಪಾಟುಪಡುವರೆಂದು ಪ್ರೋತ್ಸಾಹಕ ವಚನಗಳನ್ನಾಡಿ ನಾವು ಕಳುಹಿದೆವು. ಆದರೆ ನಮ್ಮ ಆಶೆಯು ನಿರಾಶೆಯಾಯಿತು. ನಾವು ಒಂದನ್ನೆಣಿಸಿದರೆ, ಭಗವಂತನು ಒಂದನ್ನೆಣಿಸಿದನು. ಜಗದೀಶನು ಆಕೆಯವರ ಆತ್ಮಕ್ಕೆ ಶಾಶ್ವತಸುಖವನ್ನೀಯಲಿ. ಆಕೆಯವರ ಮೃತಿಯ ದುಃಖವು ನಮಗೇ ದುರ್ಭರವಾಗಿರುವಾಗ ಅವರ ಪತಿಯವರಿಗೆ ಇನ್ನೆಷ್ಟುದುಃಖವನ್ನುಂಟುಮಾಡಿರಬಹುದು! ಅದನ್ನು ಧೈರ್ಯದಿಂದ ಸೈರಿಸಿಕೊಂಡು ಭರತಖಂಡವನ್ನು ಪರಿಪಾಲಿಸುವಂತೆ ಜಗದೀಶನು ಅನುಗ್ರಹಿಸಬೇಕು, ಎಂದು ಅಪ್ಪಣೆಕೊಡಿಸಿದರು. ಬಳಿಕ ಸಭೆಯ ಸಾನುಭೂತಿಯನ್ನು ವೈಸ್ರಾಯರಿಗೆ ತಿಳಿಯಿಸಬೇಕೆಂಬ ತೀರ್ಮಾನವನ್ನು ಸರ್ ಫಿರೋಜ್‌ಷಾಮೇಥಾರವರು ಸೂಚಿಸಿದರು. ಅದನ್ನು ಸರ್ ಇಬ್ರಾಹಿಂ ರಹಿಮತುಲ್ಲಾರವರು ಪುಷ್ಟೀಕರಿಸಿದರು. ಬಳಿಕ ಸಭ್ಯರೆಲ್ಲರೂ ಎದ್ದು ನಿಂತು ಅದಕ್ಕೆ ತಮ್ಮಸಮ್ಮತಿಯನ್ನಿತ್ತರು.

ಬಳಿಕ ಬಜೆಟ್ ವಿಷಯಕವಾದ ಚರ್ಚೆ ನಡೆಯಿತು. ಜಿಲ್ಲೆಯ ಮುಖ್ಯಪಟ್ಟಣಗಳಲ್ಲಿ ಅಧಿಕಾರಿಗಳ ವಸತಿಗೃಹಗಳನ್ನು ಸರ್ಕಾರದವರೇ ಸ್ವಂತವಾಗಿ ಕಟ್ಟಿಸುವುದರಿಂದ ಕಂಟ್ರಾಕ್ಟರುಗಳ ಉದ್ಯೋಗಕ್ಕೆ ಭಂಗವುಂಟಾಗುತ್ತಿರುವುದೆಂದು ಡಿ|| ಗಾಡಬೋಲೆ‌ರವರು ಉಪವಾದಿಸಿದರು. ಪಾಠಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳ ಆರೋಗ್ಯವನ್ನು ಪರೀಕ್ಷಿಸುವ ಏರ್ಪಾಟನ್ನು ಗೌರ್ನಮೆಂಟಿನವರು ಮಾಡಿಸಬೇಕೆಂದು ಡಾಕ್ಟರ್ ಡ್ಮಾಚಿಯವರು ಸೂಚಿಸಿದರು. ಬೊಂಬಾಯಿಯಲ್ಲಿ ಸ್ತ್ರೀಯರಿಗಾಗಿಯೇ ಪ್ರತ್ಯೇಕ ಕಲಾಶಾಲೆಯೊಂದನ್ನು ಸ್ಥಾಪಿಸುವುದು ಅವಶ್ಯಕವೆಂಬ ವಿಷಯವನ್ನು ಆ|| ಫಜುಲ್‌ಬಾಯಿರವರು ಪ್ರಾರ್ಥಿಸಿದರು. ಪೂನಾ ಪಟ್ಟಣದಿಂದ ಕರ್ಕಿಯವರೆಗೆ ಮುಸಾನದಿಯಮೇಲೆ ಸೇತುವನ್ನು ಕಟ್ಟುವುದಕ್ಕೆ ಸರ್ಕಾರದವರು ೮೦೦೦೦ ರೂ. ಗಳನ್ನು ಅಪ್ಪಣೆಮಾಡಿದುದಕ್ಕಾಗಿ ವಂದನೆಯನ್ನು ಆ|| ಕಾಮತ್‌ರವರು ನಿವೇದಿಸಿದರು. ಇಂಡ್ಯಾ ಗೌರ್ನಮೆಂಟಿನವರು ವಿದ್ಯಾಭಿವೃದ್ಧಿಗಾಗಿ ಅಪ್ಪಣೆಮಾಡಿರುವ ಹಣದಲ್ಲಿ ವೆಚ್ಚವಾಗಿ ಉಳಿದ ಹಣದಿಂದ ಬೊಂಬಾಯಿ ಕರ್ನಾಟಕದಲ್ಲಿ ಒಂದು ಕಾಲೇಜನ್ನು ಕಟ್ಟಿಸಬೇಕೆಂದೂ, ಬೆಳಗಾಂಜಿಲ್ಲೆಯಲ್ಲಿ ವಿದ್ಯಾರ್ಥಿಗಳ ಫೀಜನ್ನು ಕಡಿಮೆ ಮಾಡಿಸಬೇಕೆಂದೂ ಆ|| ಬೆಳವಿಯವರು ಕೋರಿದರು. ಹೀಗೆಯೇ ಅನೇಕ ಪ್ರಶ್ನೆಗಳು ಸಭಿಕರಿಂದ ಮಾಡಲ್ಪಟ್ಟುವು. ಮರುದಿನವೂ ಸಭೆಯು ಕೂಡಿದ್ದಿತು. ಆಗ ಮ್ಯುನ್ಸಿಪಲ್ ಆಕ್ಟಿನ ಸುಧಾರಣೆಯ ವಿಷಯಕವಾದ ಬಿಲ್ಲಿನ ಚರ್ಚೆಯು ಬಹಳ ನಡೆಯಿತು. ಡಿಸ್ಟ್ರಿಕ್ಟ್ ಮ್ಯುನ್ಸಿಪಾಲಿಟಿಗಳ ಎಕ್ಸಿಕ್ಯುಟೀವ್ ಅಧಿಕಾರವನ್ನು ತಪ್ಪಿಸಬೇಕೆಂತಲೂ, ಕಮಿಷನರುಗಳಿಗೆ ಸಂಬಳವನ್ನು ಏರ್ಪಡಿಸಬೇಕೆಂತಲೂ ಆ ಬಿಲ್ಲಿನಲ್ಲಿ ಸೂಚಿಸಲ್ಪಟ್ಟಿದ್ದಿತು. ಈ ಎರಡು ವಿಷಯಗಳಮೇಲೆ ಹೆಚ್ಚು ಚರ್ಚೆಯಾಯಿತು. ಕಮಿಷನರುಗಳಿಗೆ ಸಂಬಳವನ್ನು ಗೊತ್ತುಮಾಡಿದರೆ ಮ್ಯುನ್ಸಿಪಲ್ ಪರಿಪಾಲನೆಗೆ ಹೆಚ್ಚು ಶಕ್ತಿಯುಂಟಾಗುವುದೆಂದು ಕೆಲ ಸಭಿಕರು ವಾದಿಸಿದರು.

ಮೈಸೂರು ಸೀಮೆಯಲ್ಲಿ ಹುಲ್ಲು ನೀರಿನೇರ್ಪಾಟು.

ಕಾಲಸ್ಥಿತಿಯ ಅನನುಕೂಲತೆಯಿಂದ ಸಂಸ್ಥಾನದ ಕೆಲಭಾಗಗಳಲ್ಲಿ ಹುಲ್ಲಿಗೂ ಕುಡಿಯುವ ನೀರಿಗೂ ಅಭಾವವಾಗಿರುವುದರಮೇಲೆ ಸರ್ಕಾರದವರು ಈ ಮುಂದಿನೇರ್ಪಾಟನ್ನು ಮಾಡಿರುವರು:—ಫಾರೆಸ್ಟುಗಳ ಕನ್ಸರ್ವೇಟರು ಈ ಕೂಡಲೆ ಮೈಸೂರು, ಕಡೂರು, ಮತ್ತೂ ಶಿವಮೊಗ್ಗ ಡಿಸ್ಟ್ರಿಕ್ಟುಗಳಲ್ಲಿ ಒಣಗಿದ ಹುಲ್ಲನ್ನು ಶೇಖರಿಸಲು ತಕ್ಕೇರ್ಪಾಟನ್ನಿಡತಕ್ಕದು. ಮೈಸೂರ ಡಿ|| ನಲ್ಲಿ ಶೇಖರಿಸಲ್ಪಟ್ಟ ಹುಲ್ಲು ಆ ಡಿ|| ನಲ್ಲಿ ಹುಲ್ಲಿಗೆ ಅಭಾವವಾಗಿರುವ ತಾಲ್ಲೂಕುಗಳಿಗೂ, ಕಡೂರು ಮತ್ತೂ ಶಿವಮೊಗ್ಗ ಡಿ|| ಗಳಲ್ಲಿ ಶೇಖರಿಸಲ್ಪಟ್ಟ ಹುಲ್ಲು ಬೆಂಗಳೂರು, ಕೋಲಾರ ಮತ್ತೂ ಚಿತ್ರಕಲ್‌ದುರ್ಗ ಡಿ|| ಗಳಿಗೂ ಒದಗಿಸಲ್ಪಡತಕ್ಕದು. ಕನ್ಸರ್ವೇಟರು ಪರೀಕ್ಷಾರ್ಥವಾಗಿ ಸದ್ಯದಲ್ಲಿ ಪ್ರಾಯಶಃ ೩ ಟನ್ನಿನಷ್ಟು ಹುಲ್ಲನ್ನು ಪ್ರತಿಯೊಂದು ಡಿ|| ಗೂ ಕಳುಹಿಸುವುದು. ಮತ್ತೂ ಪ್ರತಿ ಡಿ|| ಕಮಿಷನರುಗಳು ತಮಗೆ ಬೇಕಾದಷ್ಟು ಹುಲ್ಲನ್ನು ಆಗಾಗ್ಗೆ ಕನ್ಸರ್ವೇಟರಿಗೆ ಬರೆದು ತರಿಸಿಕೊಳ್ಳುವುದು. ಈ ಏರ್ಪಾಟಿನ ವೆಚ್ಚಕ್ಕಾಗಿ ಕನ್ಸರ್ವೇಟರಿಗೆ ೩೦೦೦ ರೂ. ಕೊಡಲ್ಪಟ್ಟಿದೆ. ಡಿ|| ಕಮಿಷನರುಗಳು ತಮ್ಮ ತಮ್ಮ ಡಿ|| ಗಳಲ್ಲಿ ಹುಲ್ಲು ಅವಶ್ಯಕವಾಗಿರುವ ತಾಲ್ಲೂಕುಗಳಿಗೆ ಕನ್ಸರ್ವೇಟರಿಂದ ಒದಗಿಸಲ್ಪಟ್ಟ ಹುಲ್ಲನ್ನು ಹಂಚಿಕೊಡಲು ಅನುಕೂಲವಾದ ೩ ಸ್ಥಳಗಳನ್ನು ಗೊತ್ತುಮಾಡುವುದು. ಡೆಪ್ಯುಟಿಕಮಿಷನರುಗಳು ಈ ಹುಲ್ಲನ್ನು ಕಂಟ್ರಾಕ್ಟರುಗಳ ಮೂಲಕ ಜನರಿಗೊದಗಿಸಿಕೊಡುವ ಏರ್ಪಾಟನ್ನು ಮಾಡಿ ಸರ್ಕಾರದವರ ತಿಳಿವಳಿಕೆಗಾಗಿ ವರದಿಯನ್ನು ಮಾಡತಕ್ಕದು. ಈ ಏರ್ಪಾಟಲ್ಲದೆ ಡೆಪ್ಯುಟಿಕಮಿಷನರುಗಳು ಆವಶ್ಯಕವಾದ ವೇಳೆಯಲ್ಲಿ ಹುಲ್ಲನ್ನು ಜನರಿಗೊದಗಿಸುವುದಕ್ಕಾಗಿ ಕೊಂಡುಕೊಳ್ಳಲು ಹಣವನ್ನು ಮುಂಗಡವಾಗಿ ಡೆ|| ಕಮಿಷನರುಗಳಿಗೆ ಕೊಡಲು ರೆವಿನ್ಯೂ ಕಮಿಷನರಿಗಧಿಕಾರವು ಕೊಡಲ್ಪಟ್ಟಿರುವುದು. ಸದ್ಯದಲ್ಲಿ ಪ್ರತಿಯೊಂದು ಡಿ|| ನಲ್ಲೂ ೩ ಅನುಕೂಲವಾದ ಸ್ಥಳಗಳಲ್ಲಿ ಹುಲ್ಲಿನ ಕೋಠಿಗಳನ್ನಿಡಬೇಕು. ಇದಕ್ಕಾಗಿ ಕಂಟ್ರೋಲರವರು ರೆ||ಕಮಿಷನರಿಗೆ ೧೦೦೦೦ ರೂ.ಗಳನ್ನು ಕೊಡುವರು. ಡೆ|| ಕಮಿಷನರುಗಳು ಆವಶ್ಯಕ ಬಿದ್ದಂತೆ ಒಳಗೆರೆಗಳಲ್ಲಿ ವ್ಯವಸಾಯವನ್ನು ಮುಖ್ಯವಾಗಿ ಮೇವಿನ ಬೆಳಸನ್ನಿಡಲು ಕೊಡಬಹುದು. ಬೆಂಗಳೂರು, ಕೋಲಾರ, ತುಮಕೂರು ಮತ್ತೂ ಚಿತ್ರಕಲ್‌ದುರ್ಗ ಡಿ|| ಗಳಲ್ಲಿ ಒಳಗೆರೆಗಳಲ್ಲೂ, ನಾಲೆಗಳಲ್ಲೂ ಕುಡಿಯುವ ನೀರಿನ ಬಾವಿಗಳನ್ನು ಅನಿತ್ಯವಾಗಿ ತೋಡಿಸಲು ಜನರಲ್ ಲೋಕಲ್‌ಫಂಡುಗಳಿಂದ ೪೦೦೦೦ ರೂ. ಗಳನ್ನು ಕೊಡಲಪ್ಪಣೆಯಾಗಿದೆ. ರೆ|| ಕಮಿಷನರು ಈ ಹಣದಲ್ಲಿ ಡಿ|| ಗಳಿಗೆ ಒಂದೊಂದಕ್ಕೆ ೧೦೦೦೦ ರೂ.ಗಳವರೆಗೆ ಹಂಚಿಕೊಟ್ಟು ಈ ಸಂದರ್ಭವನ್ನು ಸರ್ಕಾರಕ್ಕೆ ತಿಳಿಸಬೇಕು. ಡೆ|| ಕಮಿಷನರುಗಳು ಗ್ರಾಮದಲ್ಲಿ ನಡೆಯಬೇಕಾದ ಕೆಲಸಗಳು ನಡೆದಿರುವುದನ್ನು ಪರೀಕ್ಷಿಸಿ ಕೂಲಿಗಾರರಿಗೆ ಕೆಲಸಗಳನ್ನು ಕೊಡಲು ಸಿದ್ಧಪಡಿಸಿಕೊಂಡಿರತಕ್ಕದು. ಮರಹಮತ್‌ಶಾಖೆಯ ಚೀಫ್ ಇಂಜನಿಯರೂ ಮತ್ತೂ ಲೋಹಮಾರ್ಗದ ಇಂಜನಿಯರ್ ಚೀಫ್‌ರವರೂ ಜನರಿಗೆ ಕೆಲಸವುದೊರೆಯುವ ಸ್ಥಳಗಳನ್ನು ಡೆ|| ಕಮಿಷನರುಗಳಿಗೆ ತಿಳಿಸುತ್ತಿರಬೇಕು.

ಕ್ಷಾಮದ ಭೀತಿಯನ್ನು ಕಡಿಮೆಮಾಡುವುದಕ್ಕಾಗಿ ಗೌರ್ನಮೆಂಟಿನವರು ಪಟ್ಟಿರುವ ಈ ಸದುದ್ದೇಶವನ್ನು ಆಯಾಸ್ಥಳಿ ಕೋದ್ಯೋಗಿಗಳು ನಿಜವಾದ ಪ್ರಾಣಿದಯೆಯಿಂದ ಸಾರ್ಥಕಗೊಳಿಸುವವರಾಗಲೆಂದೂ ಆಯಾ ಸ್ಥಳದಲ್ಲಿ ಪ್ರಜೆಗಳಿಗೂ ಪಶುಗಳಿಗೂ ಇರುವ ಸಹಜವಾದ ಕಷ್ಟಗಳನ್ನು ಮೇಲ್ಪಟ್ಟವರ ಗಮನಕ್ಕೆ ತಂದು ತಕ್ಕ ಸಹಾಯಗಳನ್ನು ಒದಗಿಸಿಕೊಡುತ್ತಾ ಬರಲೆಂದೂ ಕೋರುವೆವು.

ಒಳದೇಶದ ವೃತ್ತಾಂತಗಳು.

ಲಿಪ್ಯನ್ವೇಷಣ ಶಾಖಾಧಿಪತಿಗಳಾದ ಮ|| ಆರ್. ನರಸಿಂಹಾಚಾರ್, ಎಂ. ಎ., ಯವರ ಸಂಬಳವು ೪೫೦ ರಿಂದ ೬೫೦ ರೂ.ಗೆ ಹೆಚ್ಚಿಸಲ್ಪಟ್ಟಿರುವುದೆಂದರಿಯುತ್ತೇವೆ.

ಕಡೂರು ಡಿ|| ಮೆಡಿಕಲಾಫೀಸರಾದ ಡಾ|| ಜಿ. ಡೇವಿಡ್‌ರವರು ಸೀಮೆಗೆ ಹೋಗಿ ಹೆಚ್ಚು ವಿದ್ಯಾಪ್ರಶಸ್ತಿಯನ್ನು ಪಡೆದುಕೊಂಡು ಬರಲು ೩ ತಿಂಗಳ ರಜವನ್ನು ಪಡೆದುಕೊಂಡಿರುವರು.

ಮೈಸೂರ ಸೀಮೆಯ ಎಲ್ಲಭಾಗದಲ್ಲೂ ಕಳೆದ ೫ ವರ್ಷಗಳಿಂದ ಯಾವಯಾವಧಾನ್ಯಗಳೆಷ್ಟೆಷ್ಟು ಬೆಳೆಯಲ್ಪಟ್ಟಿರುವುವೆಂಬುದನ್ನು ಗೊತ್ತುಮಾಡಿ ವರದಿಮಾಡತಕ್ಕದೆಂದು ವ್ಯವಸಾಯಶಾಖೆಯವರನ್ನು ಸರ್ಕಾರದವರು ಕೇಳಿರುವರು.

ಕಾನಕಾನಹಳ್ಳಿ ತಾ|| ಅಮಲ್ದಾರ್ ಮ|| ಚಕ್ರಪಾಣಯ್ಯಂಗಾರರು ಆಕ್ಟಿಂಗ್ ಅ|| ಕಮಿಷನರಾಗಿ ನಿಯಮಿಸಲ್ಪಟ್ಟು ಜ|| ಮತ್ತು ರೆ| ಸೆಕ್ರಿಟೆರಿಯಟ್ಟಿನಲ್ಲಿ ಮ|| ರಾಮಚಂದ್ರರಾಯರು ಬರುವವರೆಗೆ ಆಫಿಸಿಯೇಟಿಂಗ್ ಅ|| ಸೆಕ್ರಿಟೆರಿಯಾಗಿ ನಿಯಮಿಸಲ್ಪಟ್ಟಿರುವರು.

ಕೋಲಾರದಿಂದ ಶ್ರೀನಿವಾಸಪುರಕ್ಕೆ ಲೈಟ್‌ರೈಲ್ವೆಯನ್ನು ಹಾಕಲು ಆರಂಭವಾಗಿರುವುದು. ಇದು ಇಲ್ಲಿಂದ ಚಿಕ್ಕಬಳ್ಳಾಪುರಕ್ಕೂ ಮುಂದುವರಿಸಲ್ಪಡುವುದು. ಕೋಲಾರದಲ್ಲಿ ೧೧೦೦೦ ರೂ. ವೆಚ್ಚದಿಂದ ಕಟ್ಟಲ್ಪಡುತ್ತಿದ್ದ ಬಾಲಿಕಾಪಾಠಶಾಲೆಯ ಕೆಲಸವೆಲ್ಲವೂ ಮುಗಿದಿರುವುದು.

ರಾಜಧಾನಿಯ ದೇವಾಂಗದ ಅಣ್ಣೂರಂಗಯ್ಯನು ಹೆಂಡತಿಯನ್ನು ವಿಷಪ್ರಯೋಗದಿಂದ ಕೊಂದ ಅಪರಾಧಕ್ಕಾಗಿ ಸೆಷನ್ಸು ಜಡ್ಜರಿಂದ ಯಾವಜ್ಜೀವ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಲ್ಪಟ್ಟುದರ ಮೇಲೆ ಚೀಫ್‌ಕೋರ್ಟಿಗಪೀಲನ್ನು ಮಾಡಿಕೊಂಡಿರುವಲ್ಲಿ ಕೆಳಕೋರ್ಟಿನ ತೀರ್ಪೇ ಸ್ಥಿರವಾಯಿತು.

ಬೆಂಗಳೂರು ದಂಡಿನಲ್ಲಿ ಕಳೆದ ಗುರುವಾರ ಚಾರ್ಲೆಸ್ ಓಲರ್‌ಹೆಡ್ ಎಂಬುವರು ಸ್ವಾರಿಮಾಡುತ್ತಿದ್ದ ಮೋಟಾರು ಬೈಸಿಕಲ್ಲು ಇಳಿಮೇಡಿನಲ್ಲಿ ಮುಂದಾಗಿ ಹೋಗುತ್ತಿದ್ದ ಮೋಟಾರುಕಾರಿಗೆ ತಾಕುಬಡಿದು ಸಾಹೇಬರು ಕೆಳಗೆಬಿದ್ದು, ಅವರ ತೊಡೆ ಮೊಳಕಾಲುಗಳಿಗೆ ತುಂಬಾ ಪೆಟ್ಟುಬಿದ್ದು ಮೂರ್ಛಿತರಾಗಿದ್ದರು. ಕೂಡಲೆ ಅವರು ಮನೆಗೊಯ್ಯಲ್ಪಟ್ಟು ಉಪಚರಿಸುವಲ್ಲಿ ಗುಣಮುಖವಾಗಿರುವುದು.

ಮೈಸೂರ ಸಂಸ್ಥಾನಕ್ಕೇ ಒಂದು ಸ್ವತಂತ್ರ ಸರ್ವಕಲಾಶಾಲೆ ಅಂದರೆ—ಯೂನಿವರ್ಸಿಟಿಯನ್ನು ಸ್ಥಾಪಿಸುವುದರ ಸಾಧಕಬಾಧಕಗಳನ್ನು ಪರ್ಯಾಲೋಚಿಸಲು ದಿವಾನರು, ಕೌನ್ಸಿಲರುಗಳು, ವಿದ್ಯಾಭ್ಯಾಸ ಶಾಖೆಯ ಸೆಕ್ರೆಟರಿಯವರು, ವಿದ್ಯಾಭ್ಯಾಸದ ಇ|| ಜನರಲ್‌ರವರು ಕಾಲೇಜುಗಳ ಮುಖ್ಯೋಪಾಧ್ಯಾಯರುಗಳು ಸಹ ಕಳೆದ ತಾ|| ೨೮ ರಲ್ಲಿ ಬೆಂಗಳೂರಲ್ಲಿ ಸಭೆ ಸೇರಿದ್ದರು. ಹಿಂದೆ ಇ|| ಜನರಲ್‌ರವರಾಗಿದ್ದ ಮಿ|| ಬಾಬಾಸಾಹೇಬರೂ ಈ ಸಭೆಗೆ ಬರಮಾಡಲ್ಪಟ್ಟಿದ್ದರೆಂದು ಕೇಳುತ್ತೇವೆ.

ರಾಜಧಾನಿಯ ದೊಡ್ಡಪೇಟೆಯಲ್ಲಿ ಮ|| ಸುಬ್ರಾಯಸೆಟ್ಟರ ಮನೆಯ ಸವಿಾಪದಲ್ಲಿ ಕಳೆದ ತಾ|| ೩೦ ರ ಬೆಳಿಗ್ಗೆ ೧೧ ಗಂಟೆಯ ಸಮಯದಲ್ಲಿ ಒಂದು ಕುದುರೆ ಬಂಡಿಗೆ ಕಟ್ಟಿದ್ದ ಕುದುರೆಯು ಕೋಪೋದ್ರಿಕ್ತವಾಗಿ ಓಡಲಿಕ್ಕಾರಂಭಿಸಿ, ಸಾರಥಿಯೆಷ್ಟು ಲಗಾಮನ್ನು ಎಳೆದು ಹಿಡಿದಾಗ್ಯೂ ನಿಲ್ಲದೆ ಮಾರ್ಗದ ಪಕ್ಕಕ್ಕೆ ರಭಸದಿಂದ ನುಗ್ಗುವಾಗ್ಗೆ ಹಿಂದೆ ಯಳಂದೂರ ಜಹಗೀರ್ದಾರರಾಫೀಸಿನ ಮ್ಯಾನೇಜರಾಗಿದ್ದ ಮ|| ವೆಂಕಟರಾಯರ ಮೇಲೆ ಬಂಡಿಯು ಹರಿದಿತು. ಇದರಿಂದ ಅವರ ತೊಡೆಯ ಮೂಳೆಯು ಮುರಿದುಹೋಗಿ ಅವರು ಜನರಲ್ ಆಸ್ಪತ್ರೆಯ ಚಿಕಿತ್ಸೆಯಲ್ಲಿರುವರು.

ನಮ್ಮ ವಿದ್ಯಾಶಾಖೆಯವರು ಹೈಸ್ಕೂಲು ಮೊದಲಾದ ಶಾಲೆಗಳ ೬, ೫, ೪ ಮೊದಲಾದ ತರಗತಿಗಳಿಗೆ ಪ್ರಾರಂಭದಲ್ಲಿ ಕೆಲವು ಪುಸ್ತಕಗಳನ್ನು ಟೆಕ್ಸ್ಟ್ ಬುಕ್ಕಾಗಿಟ್ಟಿದ್ದು ಅನಂತರ ಅವನ್ನು ಬದಲಾಯಿಸುತ್ತಿರುವುದರಿಂದ, ಅವುಗಳನ್ನು ಮೊದಲು ಕೊಂಡಿದ್ದ ವಿದ್ಯಾರ್ಥಿಗಳ ನಷ್ಟ ಮತ್ತು ತೊಂದರೆಗಳಿಗೂ ಆ ಪುಸ್ತಕಗಳನ್ನು ಮಾರಾಟಕ್ಕೆ ತರಿಸಿರುವ ವ್ಯಾಪಾರಿಗಳ ನಷ್ಟಕ್ಕೂ ಆ ಗ್ರಂಥಕರ್ತರ ಮನೋವ್ಯಥೆಗೂ ಕಾರಣವಾಗಿರುತ್ತದೆಂಬ ದೂರು ಬಹುವಾಗಿರುವುದರಿಂದ ವಿದ್ಯಾಶಾಖೆಯವರು ಇತಃಪರಃ ಈ ರೀತಿ ಒಂದಾವೃತ್ತಿ ಗೊತ್ತುಮಾಡಿದ ಟೆಕ್ಸ್ಟ್ ಪುಸ್ತಕಗಳನ್ನು ಮರಳಿ ಬದಲಾಯಿಸುವುದಕ್ಕೆ ಬದಲು ಮೊದಲೇ ಪರಿಶೀಲಿಸಿ ಗೊತ್ತುಮಾಡುವುದು ಯುಕ್ತವಾಗಿದೆ.

ರಾಜಧಾನಿಗೆ ಧಾರವಾಡ ಡಿ|| ಕುರ್ತುಕೋಟಿಯಿಂದ ಬಂದಿರುವ ವೇ|| ಭಾಗವತ ನಾರಾಯಣಶಾಸ್ತ್ರಿಗಳು ಇಲ್ಲಿಯ ಕೆಲಕಡೆ ಭಕ್ತಿಪ್ರದವಾದ ಕೀರ್ತನೆಗಳನ್ನು ಮಾಡಿ ಶ್ರೋತೃಜನಗಳ ಮನಸ್ಸಿಗೆ ಆನಂದವನ್ನುಂಟುಮಾಡಿ ಸಂಭಾವನೆಯನ್ನು ಹೊಂದಿರುವರಲ್ಲದೆ, ಕೀರ್ತನಸಪ್ತಾಹ ಎಂಬಭಿಧಾನದಿಂದ ಭಾಗವತ ಭಾರತ ರಾಮಾಯಣ ಮೊದಲಾದವುಗಳ ಉತ್ತರುಕಥಾಭಾಗಗಳನ್ನು ಕಳೆದತಾ|| ೨೯ರಿಂದ ಶ್ರೀತ್ರಿನಯನ ದೇವಸ್ಥಾನದಲ್ಲಿ ಸಂಕೀರ್ತನಮಾಡಲುಪಕ್ರಮಿಸಿರುವರು. ಶ್ರೋತೃಜನವೃಂದವು ವಿಶೇಷವಾಗಿದ್ದು ಭಾಗವತರ ಕೀರ್ತನದಿಂದ ಸಂತುಷ್ಟಿಯನ್ನು ಹೊಂದುತ್ತಿರುವರು. ಕೀರ್ತನಸಮಾಪ್ತಿಯಲ್ಲಿ ಇವರಿಗೆ ಯೋಗ್ಯವಾದ ಬಹುಮಾನವನ್ನು ಮಾಡಲು ತಕ್ಕೇರ್ಪಾಟು ನಡೆಯುತ್ತಿರುವುದಾಗಿ ತಿಳಿಯುತ್ತೇವೆ.

ರಾಜಧಾನಿಯಲ್ಲಿ ಕಳೆದ ಶುಕ್ರವಾರ ಒಂದು ಹದ ಮಳೆಯು ಚೆನ್ನಾಗಾಯಿತು. ಇದರಿಂದ ನಿಂತಿರುವ ಪೈರಿಗೆ ಬಹಳ ಮಟ್ಟಿಗೆ ಅನುಕೂಲವಾಗಿರುವುದು. ಕಳೆದವಾರ ಅಲ್ಲಿಲ್ಲಿ ೩-೪ ಜನ ಪ್ಲೇಗಿನಿಂದಲೂ ವಾಂತಿಭೇದಿ ರೋಗದಿಂದಲೂ ಸತ್ತರು. ವಾಂತಿಭೇದಿ ರೋಗವು ತಲೆದೋರಿರುವುದರಿಂದ ಬಾವಿನೀರನ್ನು ಕುಡಿಯುವುದಕ್ಕಾಗಲಿ ಮತ್ತಾವುದಕ್ಕಾಗಲಿ ಖಂಡಿತವಾಗಿಯೂ ಉಪಯೋಗಿಸಬಾರದೆಂದು ಇಲ್ಲಿಯ ಹೆಲ್ತಾಫೀಸರು ಎಚ್ಚರಿಸಿರುತ್ತಾರೆ. ಸಾಹುಕಾರ್ ಬಸಮಯ್ಯನವರು ಗುಂಟೂರಿನಿಂದ ಅಕ್ಕಿಯನ್ನು ವಿಶೇಷವಾಗಿ ತರಿಸಿ ರೂ. ೧ಕ್ಕೆ ೭ ಸೇರಿನಂತೆಯೂ, ರಾಗಿಯನ್ನು ೧೩|| ಸೇರಿನಂತೆಯೂ ಮಾರಿಸುತ್ತಿರುವುದರಿಂದ ಬಡಬಗ್ಗರು ಕೊಂಡುಕೊಳ್ಳಲು ಆತುರದಿಂದ ನುಗ್ಗುತ್ತಿರುವರಲ್ಲದೆ ಸಾಹುಕಾರರ ಉಪಕಾರವನ್ನು ಸ್ಮರಿಸುತ್ತಿರುವರು. ಇದರಂತೆಯೇ ಸಂಪನ್ನರಾದ ಇತರ ವರ್ತಕರೂ ಮಾಡುವುದಾದರೆ ಬಡವರ ಕಷ್ಟವು ಬಹುಮಟ್ಟಿಗೆ ನಿವಾರಿತವಾಗುವುದರಲ್ಲಿ ಸಂದೇಹವಿಲ್ಲವು.

ರಾಜಧಾನಿಯ ಒಂದನೆಯ ಮುನಸೀಫರಾಗಿದ್ದ ಮ|| ಜಿ. ಶ್ರೀನಿವಾಸಯ್ಯರ್‌ರವರು, ಅ|| ಕಮಿಷನರಾಗಿ ನಿಯಮಿಸಲ್ಪಟ್ಟು ಜ|| ಮತ್ತೂ ರೆವಿನ್ಯೂಸೆಕ್ರೆಟರಿಯಟ್ಟಿಗೆ ವರ್ಗಾಯಿಸಲ್ಪಟ್ಟಿರುವುದರಿಂದ, ಮೂನಸೀಫರುಗಳಾದ ಮ|| ಡಿ ಕೆ. ರಾಮರಾಯರು ಚನ್ನಪಟಣಗಳಿಂದ ೧ ನೆಯ ಮುನಸೀಫರಾಗಿ ರಾಜಧಾನಿಗೂ, ಮ|| ಪಿ. ಮಹಾದೇವಯ್ಯನವರು ದೊಡ್ಡಬಳ್ಳಾಪುರದಿಂದ ಚನ್ನದ ಗಣಿಗಳಿಗೂ, ಮ|| ಎಚ್. ಕೆ. ಶ್ರೀನಿವಾಸರಾಯರು ಹೊಳೆನರಸೀಪುರದಿಂದ ದೊಡ್ಡಬಳ್ಳಾಪುರಕ್ಕೂ ವರ್ಗಾಯಿಸಲ್ಪಟ್ಟು ಬೆಂಗಳೂರಲ್ಲಿ ಅಡ್ವೋಕೇಟರಾಗಿದ್ದ ಮ|| ಎಚ್. ಕೆ. ವೀರಬಸವಯ್ಯನವರು ಹೊಳೆನರಸೀಪುರದ ಮುನಸೀಫರಾಗಿಯೂ, ಸಾಗರದ ಮುನಸೀಫರಾದ ಮ|| ಬಿ. ರಾಘವಾಚಾರರು ೨೦ ದಿನಗಳ ರಜದಮೇಲಿರುವುದರಿಂದ ಅವರು ಬರುವವರೆಗೆ ಶಿವಮೊಗ್ಗೆ ಡಿಸ್ಟ್ರಿಕ್ಟ್ ಕೋರ್ಟಿನ ಹೆಡ್‌ಮುನಷಿಯರಾದ ಮ|| ಎಸ್. ರಾಮಚಂದ್ರಶಾಸ್ತ್ರಿಗಳು ಸಾಗರದ ಆಕ್ಟಿಂಗ್ ಮುನಸೀಫರಾಗಿಯೂ ನಿಯಮಿಸಲ್ಪಟ್ಟಿರುವರು.

ಭರತಖಂಡದ ವೃತ್ತಾಂತಗಳು.

ಕಾಶ್ಮೀರದೇಶದಲ್ಲಿ ಅತಿವೃಷ್ಟಿಯು ಆಗುತ್ತಲೇ ಇದೆ. ಅನೇಕ ಮಾರ್ಗಗಳು ಕೆಟ್ಟುಹೋಗಿವೆ. ಪ್ರಯಾಣಿಕರಿಗೆ ಬಹಳ ತೊಂದರೆಯಾಗಿದೆ.

ಗಂಜಿಕೋಟೆ ಸುಬ್ರಹ್ಮಣ್ಯಜೋಯಿಸರು ದಕ್ಷಿಣದೇಶದಲ್ಲಿ ಜುಲೈ ತಿಂಗಳಕಡೆಯಿಂದಲೂ, ಆಗಸ್ಟ್ ಸೆಪ್ಟಂಬರ್ ತಿಂಗಳಲ್ಲೂ ಆಗಾಗ್ಗೆ ಚೆನ್ನಾಗಿ ಮಳೆಯಾಗುವುದೆಂದು ಗಣಿತದಿಂದ ಪರಿಶೋಧಿಸಿ ಪ್ರಕಟಿಸಿದ್ದಾರೆ.

ಸಿಂಧು ದೇಶದ ಉತ್ತರಭಾಗದಲ್ಲಿ ಕಳೆದವಾರ ವಿಪರೀತವಾಗಿ ಬಿಸಿಲುಕಾಯುತ್ತಿದ್ದಿತು. ಅದರ ಬೇಗೆಯನ್ನು ಸೈರಿಸಲಾರದೆ ಅನೇಕ ಜನರು ಸತ್ತರು. ಬಂಡಿಗೆ ಕಟ್ಟಿದ್ದ ಕುದುರೆಗಳು ಹಾಗೆಹಾಗೆಯೇ ಪ್ರಾಣಬಿಟ್ಟುವು.

ಬಹುಮೂತ್ರವ್ಯಾಧಿಪರಿಶೋಧನೆಗಾಗಿ ಮದ್ರಾಸ್ ಗೌರ್ನಮೆಂಟಿನವರ ವಶಕ್ಕೆ ೫೦ ಸಾವಿರ ರೂ. ಗಳನ್ನು ದಾನಮಾಡಿದ ಮಹನೀಯರು ಶ್ರೀ ಪಿಠಾಪುರದ ಮಹಾರಾಜರೆಂದು ಕೇಳಿ ಅವರ ಜೀವಕಾರುಣ್ಯವನ್ನು ಕುರಿತು ಅಭಿನಂದಿಸುತ್ತೇವೆ.

ಹಿಂದೂ ವಿಶ್ವವಿದ್ಯಾಲಯವು ಗೌರ್ನಮೆಂಟ್ ವಿದ್ಯಾಪೀಠದಂತೆಯೇ ನಡೆಯಿಸಲ್ಪಡಲು ಸರ್ಕಾರದಭಿಪ್ರಾಯವಾಗಿರುವುದರಿಂದ, ಆದರಂತೆ ಇದನ್ನು ನಡೆಯಿಸುವುದಕ್ಕಿಂತಲೂ ಈಪ್ರಯತ್ನವನ್ನೇ ಬಿಟ್ಟುಕೊಡುವುದೊಳ್ಳೆಯದೆಂದು ದೇಶಾಭಿಮಾನಿಗಳು ಸೂಚಿಸುತ್ತಿದ್ದಾರೆ.

ಮನ್ಮಾಡಿನಿಂದ ಹೈದರಾಬಾದಿನಕಡೆಗೆ ಹೋಗುವ ಲೋಹಮಾರ್ಗದಲ್ಲಿ ಪೂರ್ಣಾನದಿಯಲ್ಲಿ ವಿಪರೀತ ವೃಷ್ಟಿಯಿಂದ ಪ್ರವಾಹವು ಹೆಚ್ಚಿ, ಸೇತುವು ಕಿತ್ತುಹೋಗಿ, ಹೊಗೆಬಂಡಿಯಮೇಲಿನ ಪ್ರಯಾಣಿಕರು ಹೊಳೆಯಹತ್ತಿರ ಇಳಿಸಲ್ಪಟ್ಟು ದೋಣಿಯಮೇಲೆ ಸಾಗಿಸಲ್ಪಡುತ್ತಿರುವರು.

ನೌಷಿರಾದ ಬಳಿಯಲ್ಲಿ ಅಕೋರಾದ ಹತ್ತಿರ ಕೆಲ ಮಹಮ್ಮದೀಯರು ಮದುವೆಗಾಗಿ ಹೋಗುತ್ತಾ ನದಿಯನ್ನು ದಾಟುತ್ತಿರಲು ಅವರು ಕುಳಿತಿದ್ದ ಮೂರು ದೋಣಿಗಳಲ್ಲಿ ಒಂದು ನಡುಹೊಳೆಯಲ್ಲಿ ತಲೆಕೆಳಗಾಗಲು ೩೧ ಮಂದಿಗಳು ಸತ್ತರು. ಅವರಲ್ಲಿ ಮದುವೆಯ ಹೆಣ್ಣೂ ಸೇರಿದ್ದಿತು.

ಬೊಂಬಾಯಿಯ ಜನರಲ್ ಪೋಸ್ಟಾಫೀಸಿನಲ್ಲಿ ಬಾಂಗಿಗುನ್ನು ಅಡಕಿರುವ ಕೋಣೆಯಲ್ಲಿ ಒಂದು ಬಾಂಗಿಯು ಸಿಡಿದಳುರಿಯುವುದಕ್ಕಾರಂಭಿಸಿತು. ಅದು ಉತ್ತರಹಿಂದೂಸ್ಥಾನದಿಂದ ಬಂದಿದ್ದಿತಂತೆ. ಅದು ಬೇರೆ ಕಡೆ ಇಡಲ್ಪಟ್ಟಿಲ್ಲದಿದ್ದರೆ ಬಹಳ ಅನರ್ಥವಾಗುತ್ತಿದ್ದಿತು. ಈಗ ಅದರ ಸಂಬಂಧದಲ್ಲಿ ಅಪರಾಧಪರಿಶೋಧನಶಾಖೆಯ ಪೋಲೀಸರು ವಿಚಾರ ನಡೆಯಿಸುತ್ತಿದ್ದಾರೆ.

ಪಂಜಾಬಿನ ಪ್ರಾಂತದಲ್ಲಿ ವಿಪರೀತ ವೃಷ್ಟಿಯಾಗಿದೆ. ಇದರಿಂದ ಅಲ್ಲಿನ ಲೆ|| ಗೌರ್ನರವರೇ ಡಾಲ್‌ಹೌಸಿ ಪಟ್ಟಣದ ಹತ್ತಿರ ತೊಂದರೆ ಪಡಬೇಕಾಯಿತು. ಮಾರ್ಗಗಳಲ್ಲಿ ದೊಡ್ಡದೊಡ್ಡ ಹಳ್ಳಕೊಳ್ಳಗಳು ಬಿದ್ದಿರುವುದರಿಂದ ಅವರು ಕೆಲ ಸುತ್ತಿನ ಸಂಚಾರವನ್ನೂ ಕೂಡ ನಿಲ್ಲಿಸಿಬಿಡಬೇಕಾಯಿತು. ಲಾಹೋರಿನಲ್ಲಿ ಕಳೆದ ತಾ|| ೨೩ ರಲ್ಲಿ ಅಖಂಡವಾಗಿ ೨೪ ಗಂಟೆಗಳ ಕಾಲ ಮಳೆಯಾಯಿತು.

ಬೆಳಗಾಂ ಜಿಲ್ಲೆಗೆ ಸೇರಿದ ಗೋಕಾಕಿನ ಹತ್ತಿರ ಘಟಪ್ರಭಾನದಿಯನ್ನು ಕೆಲರು ಪ್ರಯಾಣಿಕರು ದೋಣಿಯಮೇಲೆ ದಾಟುತ್ತಿರುವಾಗ ದೋಣಿಯು ಮುಳುಗಿ ೮ ಮಂದಿ ಸತ್ತರು. ೩೦ ಮಂದಿ ಕಾಪಾಡಲ್ಪಟ್ಟರು. ಆ ಸುತ್ತಿನಲ್ಲಿ ಮಳೆಯು ಹೆಚ್ಚಿಗೆಯಿಂದ ಪ್ರವಾಹಗಳು ವಿಶೇಷವಾಗಿ ಬಂದಿವೆ. ಊರುಕೇರಿಗಳಲ್ಲೆಲ್ಲಾ ನೀರು ತುಂಬಿ ಹಲವರು ನಿಲ್ಲಲು ವಸತಿಯಿಲ್ಲದೆ ಪೇಚಾಡುತ್ತಿದ್ದಾರೆ.

ಕಲ್ಕತ್ತಾಕ್ಕೆ ಸೇರಿದ ಹೌರಾದ ಹತ್ತಿರ ಗಂಗಾನದಿಗೆ ಈಗ ಒಂದು ತೇಲಾಡುವ ಸೇತುವಿರುವಿದು. ಅದನ್ನು ವಾರಕ್ಕೊಂದು ದಿನ ಬಿಚ್ಚಿ ಹೋಗಬರುವ ಹಡಗುಗಳ ಪ್ರಯಾಣಕ್ಕೆ ಅನುಕೂಲಮಾಡಿ, ಮರಳಿ ಸೇರಿಸಿ ಕಟ್ಟಿಬಿಡುವರು. ಈಗ ಅದೇ ಸ್ಥಳದಲ್ಲಿ ಒಂದು ಸ್ಥಿರವಾದ ಬಲು ದೊಡ್ಡ ಸೇತುವನ್ನು ಕಟ್ಟಲು ತೀರ್ಮಾನಿಸಿರುವರು. ಇದಕ್ಕೆ ಒಂದು ಕೋಟಿ ರೂ. ಗಳು ಮುಟ್ಟುವುವು. ಇದಕ್ಕಾಗಿ ಅಲ್ಲಿನ ಮ್ಯುನ್ಸಿಪಾಲಿಟಿಯವರಲ್ಲಿ ೧೦ ಲಕ್ಷ ರೂ. ಗಳಿರುವುವು. ಉಳಿದ ಹಣವನ್ನು ಸಾಲ ಮಾಡುವರು. ಅದನ್ನು ತೀರಿಸುವುದಕ್ಕಾಗಿ ಪ್ರಜೆಗಳಮೇಲೆ ಹೆಚ್ಚು ತೆರಿಗೆಯ ಭಾರವನ್ನು ಹೊರಿಸುವುದು ಸರ್ಕಾರಕ್ಕೆ ಇಷ್ಟವಿಲ್ಲವಾದ ಪ್ರಯುಕ್ತ, ವರ್ಷ ೧ ಕ್ಕೆ ಸೇತುವಿನಮೇಲೆ ಸಾಗುವ ಸಾಮಾನುಗಳಿಂದ ೨ ಲಕ್ಷ, ಗೌರ್ನಮೆಂಟಿನವರಿಂದ ೧ ಲಕ್ಷ, ಟ್ರಾಂಬಂಡಿಗಳ ಓಡಾಟದಿಂದ |ಲಕ್ಷ, ಪೋರ್ಟ್‌ಕಮಿಷನರಿಂದ ||| ಲಕ್ಷ, ಪ್ರಯಾಣಿಕರಿಂದ ||| ಲಕ್ಷ, ಮ್ಯುನ್ಸಿಪಲ್ ಗ್ರಾಂಟು ೩೦ ಸಾವಿರ, ಕಲ್ಕತ್ತಾ ಕಾರ್ಪೋರೇಷನ್ ಗ್ರಾಂಟು || ಲಕ್ಷ, ಒಟ್ಟು ೬೬೫೦೦೦ ರೂ. ಗಳನ್ನು ವರ್ಷ ೧ ಕ್ಕೆ ಸೇರಿಸಿ ಸಾಲವನ್ನು ತೀರಿಸುತ್ತಾ ಬರಬೇಕೆಂದು ನಿರ್ಣಯಿಸಿದ್ದಾರೆ.

ಪುಣೆಗೂ ಬೊಂಬಾಯಿಗೂ ಮಧ್ಯದಲ್ಲಿ ಲೋಹಮಾರ್ಗವು ಬೆಟ್ಟಸಾಲುಗಳನ್ನು ಹಾದುಹೋಗಿದೆ. ಕೆಲಕಡೆ ಬೆಟ್ಟದೊಳಗೆ ಮಾಡಿರುವ ಸುರಂಗದ ಗುಹೆಗಳಲ್ಲಿ ಬಂಡಿಗಳು ಹಾದುಹೋಗುತ್ತವೆ. ಈ ಸ್ಥಲದಲ್ಲಿರುವ ಬೆಟ್ಟವೊಂದರಿಂದ ಸ್ವಲ್ಪಭಾಗವು ಕಳಚಿಬಿದ್ದಿತು. ಪಶ್ಚಿಮದ ಕಣಿವೆಗಳಿಂದ ಮೊನ್ನೆ ತಾ|| ೨೫ ರಲ್ಲಿ ಪೂನಾ ಬೊಂಬಾಯಿಯ ಪ್ಯಾಸೆಂಜರ್ ಟ್ರೇನು ಹೋಗುತ್ತಿರುವಾಗ ದೊಡ್ಡ ಗುಂಡುಗಳು ೨-೩ ನೇ ತರಗತಿಯ ಪ್ರಯಾಣಿಕರು ಕುಳಿತಿದ್ದ ೨ ಬಂಡಿಗಳ ಮೇಲೆ ಬಿದ್ದುವು. ಒಂದೊಂದು ಕಲ್ಲುಗಳು ಒಂದು ಟನ್ನಿನಷ್ಟು ತೂಕವಿದ್ದವು. ೨ ಬಂಡಿಗಳಿಗೂ ಅದರಿಂದ ಬಹಳ ನಷ್ಟವಾಯಿತು. ಬಂಡರಮೇಲಣ ಟಾಪು ಮುರಿದುಹೋಗಿ ಪ್ರಯಾಣಿಕರಮೇಲೆ ಕಲ್ಲುಬಿದ್ದಿತು. ಇಬ್ಬರು ಪ್ರಯಾಣಿಕರಿಗೆ ಬಹಳ ಏಟುಬಿದ್ದಿತು. ಒಬ್ಬನ ಕಾಲು ಸಂಪೂರ್ಣವಾಗಿ ಮುರಿದುಹೋಯಿತು. ಇದರಿಂದ ಪ್ರಯಾಣಿಕರಿಗೆ ತುಂಬಾ ಭಯವುಂಟಾಯಿತು. ಆದರೆ ಆಪತ್ಕಾಲದಲ್ಲಿ ಸೆಳೆಯುವ ತಂತಿಯನ್ನು ಯಾರೂ ಸೆಳೆಯಲಿಲ್ಲ. ಆದುಕಾರಣ ಬಂಡಿಯು ಮುಂದಣ ಕರ್ಜತ್ ನಿಲ್ದಾಣಕ್ಕೆ ಹೋಗಿ ನಿಲ್ಲುವವರೆಗೂ ಈ ಯಾಪತ್ತು ಬಂಡಿಯ ಗಾರ್ಡು ಮೊದಲಾದಯಾರಿಗೂ ತಿಳಿಯಲಿಲ್ಲ.

ವಿದೇಶದ ವೃತ್ತಾಂತಗಳು.

ಚೀನಾದೇಶದಲ್ಲಿ ಭಿಕ್ಷುಕರಮೇಲೆ ತೆರುಗೆಯು ವಿಧಿಸಲ್ಪಟ್ಟಿರುವುದು. ಅವರು ಮನಸ್ಸುಬಂದಕಡೆ ಭಿಕ್ಷೆಯನ್ನೆತ್ತಕೂಡದು. ಅಪ್ಪಣೆ ಪಡೆದ ಜಿಲ್ಲೆಗಳಲ್ಲಿ ಮಾತ್ರವೇ ಯಾಚಿಸಬೇಕು.

ಹೊಂಡತನಕ್ಕೆ ನಿಂತಿದ್ದ ಕಾಮಾಗಟಾಮಾರು ಎಂಬ ಹಡಗು ಕಳೆದ ತಾ|| ೨೩ ರಲ್ಲಿ ಕಾನಡಾ ಸರ್ಕಾರದವರಿಂದ ಅದರಲ್ಲಿದ್ದ ಪ್ರಯಾಣಿಕರ ಸಮೇತ ಹಿಂದಕ್ಕೆ ಬಲಾತ್ಕಾರವಾಗಿ ಹೊರಡಿಸಲ್ಪಟ್ಟಿತು.

ಆಸ್ಟ್ರಿಯಾದೇಶದಲ್ಲಿ ದೊಡ್ಡ ಬಿರುಗಾಳಿ ಮಳೆಯಾಗಿ ೨೦ ಲಕ್ಷ ಫ್ರಾಂಕುಗಳ ಬೆಲೆಬಾಳುವ ಆಸ್ತಿಗಳು ಹಾಳಾದುವು. ೭ ಮಂದಿ ಸತ್ತರು. ೩೭ ಮಂದಿಗೆ ಏಟುಬಿದ್ದಿತು. ಡಾನ್ಯೂಬ್ ನದಿಯಲ್ಲಿದ್ದ ದೋಣಿಗಳಿಗೆಲ್ಲಾ ನಷ್ಟವು ಸಂಭವಿಸಿತು.

ಕಾನಡಾಕ್ಕೆ ಸೇರಿದ ವಾಂಕೋವರ್ ಎಂಬ ಪಟ್ಟಣದಲ್ಲಿ ಒಬ್ಬ ಹೆಂಗುಸು ಪ್ರತಿದಿನವೂ ಮನೆಗೆಲಸಮಾಡುವಲ್ಲಿ ಎಷ್ಟು ತಿರುಗಾಟಮಾಡುತ್ತಿರುವೆನೆಂಬುದನ್ನು ನಿರ್ಣಯಿಸುವುದಕ್ಕಾಗಿ ಮೀಟರ್ ಎಂಬ ಅಳತೆಯ ಯಂತ್ರವನ್ನಿಟ್ಟುಕೊಂಡು ಪರೀಕ್ಷಿಸುವಲ್ಲಿ ಒಂದು ತಿಂಗಳ ಕಾಲದಲ್ಲಿ ೪೦೦ ಮೈಲಿಗಳನ್ನು ನಡೆದಿರುವಂತೆ ಗೊತ್ತಾಯಿತಂತೆ.

ಅಲ್ಬರ್ಟ ದೇಶದಲ್ಲಿ ಒಬ್ಬ ರೈತನು ಸೂಕ್ಷ್ಮದರ್ಶಕ ಯಂತ್ರ ಸಹಾಯದಿಂದ ಅದ್ಭುತವಾದ ಚಿತ್ರಕೆಲಸವೊಂದನ್ನು ಮಾಡಿರುವನು. ಒಂದು ಗೋದುವೆಯ ಕಾಳಿನಮೇಲೆ ಹುಬ್ರೂ ಭಾಷೆಯಲ್ಲಿ ೩೦೦ ಅಕ್ಷರಗಳುಳ್ಳ ವಿಜ್ಞಾಪನ ಪತ್ರವನ್ನು ರಚಿಸಿ ಕನಾಟ್ ಪ್ರಭುಗಳಿಗೆ ಅರ್ಪಿಸಿರುವನು. ಇದನ್ನು ಸೂಕ್ಷ್ಮದರ್ಶಕ ಯಂತ್ರಸಹಾಯದಿಂದಲ್ಲದೆ ನೋಡಿ ಓದುವುದಕ್ಕೆ ಯಾರಿಗೂ ಸಾಧ್ಯವಲ್ಲವು.

ಳು ನಿರ್ಬಂಧಿಸಿದರೆ(?) ಭರತಖಂಡವು ಸರ್ವನಾಶವಾಗುವುದು(?). ವಿದ್ಯಾಭ್ಯಾಸವು ಮುಗಿದಮೇಲೆ ಬಾಲಕರು ಗೃಹಸ್ಥರಾಗಬೇಕೆಂದು ಮನುಧರ್ಮಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ. ಸರಿ(?) ತೆರದಿಂದ ಈ ವಿಷಯದಲ್ಲಿ ಸಂಘಸಂಸ್ಕರಣವನ್ನು ಮಾಡಬೇಕೆಂದು ನಾನು ಕೋರುವುದಿಲ್ಲ. ಮತ್ತೇನೆಂದರೆ—ಮನುಧರ್ಮಶಾಸ್ತ್ರವನ್ನನುಸರಿಸಿಯೇ ಈ ಕಾಲದಲ್ಲಿ ಈ ವಿಷಯದಲ್ಲಿ ಪ್ರಜೆಗಳು ನಡೆದುಕೊಳ್ಳಬೇಕೆಂದು ಕೋರುತ್ತೇನೆ.

ಸನೇಸ(?)

ಮೈಸೂರ್ ಸ್ಟಾರ್.

೧೯೧೪ನೆಯ ಆಗಸ್ಟ್ ತಾ|| ೩ನೆಯ ಸೋಮವಾರ.

ಯುದ್ಧಾಗ್ನಿಸ್ಫೋಟವು.

ಈಗ ಯುದ್ಧವೆಂಬುದು ಭಾರತೀಯರಿಗೆ ಶ್ರವಣೇಂದ್ರಿಯ ವಿಷಯಮಾತ್ರವಾಗಿರುವುದರಿಂದ, ಅದರ ಘೋರವಿಪತ್ತುಗಳ ಸಂಪರ್ಕವೇ ಇವರಿಗಿರುವುದಿಲ್ಲ. ಇತ್ತೀಚೆಗೆ ನಡೆದ ದಕ್ಷಿಣಾಫ್ರಿಕಾ, ರಷ್ಯಾ ಜಪಾನ್, ಬಾಲ್ಕನ್ ಈ ಯುದ್ಧಗಳ ವಾರ್ತೆಗಳು ಪುರಾಣಗಳ ಕಥೆಗಳಂತೆ ಭಾರತೀಯರಿಂದ ಕೇಳಲ್ಪಟ್ಟಿರುವುವು. ಯುದ್ಧವು ಸಂಭವಿಸಿದ ದೇಶಗಳ ಪರಿಣಾಮವು ಚಿಂತಿಸಿದ್ದ ಕಾಡುಗಳ ಅವಸ್ಥೆಗೆ ಸಮನಾಗುವುದೆಂಬ ವಿಷಯವನ್ನು ತಿಳಿದಾಗ, ಅಂಥ ವಿಪತ್ತನ್ನು ನಮಗೆ ತಪ್ಪಿಸಿ, ಸುಖಶಾಂತಿಗಳನ್ನು ಒದಗಿಸಿಕೊಟ್ಟಿರುವ ಆಂಗ್ಲಸಾಮ್ರಾಜ್ಯಕ್ಕೆ ನಾವು ಎಷ್ಟು ಕೃತಜ್ಞರಾಗಿರಬೇಕೋ ಅದು ಗೊತ್ತಾಗುವುದು.

ಯೂರೋಪುಖಂಡದಲ್ಲಿನ ಪ್ರಭುಗಳಲ್ಲಿ ಪರಸ್ಪರವಾಗಿ ಮೇಲೆ ವಿಶ್ವಾಸಗಳು ತೋರಿಬರುತ್ತಿದ್ದರೂ, ಪ್ರತಿಯೊಬ್ಬರೂ ಹೆಚ್ಚಿಸುತ್ತಿರುವ ಸೇನಾಸಾಧನಗಳು ಪರಸ್ಪರ ವಿಘಾತಪ್ರಯತ್ನವನ್ನೇ ಸೂಚಿಸುತ್ತಿರುವುವು. ಈ ಕಾರಣದಿಂದ ಪ್ರತಿಯೊಂದು ರಾಷ್ಟ್ರವೂ ಅಗ್ನಿಪರ್ವತದಂತೆ ಯಾವ ಕಾಲದಲ್ಲಿ ಸ್ಫೋಟಗೊಂಡು, ವಿನಾಶಹೇತುವಾದ ಯುದ್ಧಾಗ್ನಿವೃಷ್ಟಿಯನ್ನು ಸುರಿಸುವುದೋ ಎಂಬುದನ್ನು ಊಹಿಸಲಿಕ್ಕಿಲ್ಲವಾಗಿದೆ. ಕಳೆದ ವಾರದಿಂದ ಬರುತ್ತಿರುವ ತಂತ್ರೀವಾರ್ತೆಗಳು ಒಂದಾನೊಂದು ಯುದ್ಧದ ಭೀಕರ ಪ್ರಳಯದ ಸೂಚಕಗಳಾಗಿರುತ್ತವೆ. ಇದು ಆಸ್ಟ್ರಿಯಾ ಹಂಗೇರಿಗೂ ಸರ್ವಿಯಾದವರಿಗೂ ಸಂಭವಿಸಿದ ಕಾಳಗವಾಗಿದೆ. ಇವರೀರ್ವರಲ್ಲಿ ಮನಸ್ತಾಪವುಂಟಾಗುವುದಕ್ಕೆ ಕಾರಣವೇನೆಂಬುದನ್ನು ನಾವು ಹಿಂದೆ ಸ್ವಲ್ಪ ಪ್ರಸ್ತಾಪಿಸಿರುತ್ತೇವೆ. ಆಸ್ಟ್ರಿಯಾ ಯುವರಾಜರನ್ನು ಸರ್ವಿಯಾಜಾತಿವರ್ಗದವರು ಸೆರಾಜೀವೋ ಪಟ್ಟಣದಲ್ಲಿ ಕೊಂದುದರಿಂದ ಈ ಅಂತಃಸ್ತಾಪವು ಮಿತಿಮೀರಿ, ಯುದ್ಧರೂಪದ ಪರಿಣಾಮವನ್ನು ಈಗ ತಂದಿಟ್ಟಿರುವುದು. ಆದರೆ ಆಸ್ಟ್ರಿಯಾದ ಮುಂದೆ ಸರ್ವಿಯಾವು ಹಸ್ತಿಮಶಕನ್ಯಾಯದಲ್ಲಿದೆ. ಇದರಮೇಲೆ ಅದು ತುರ್ಕಿ ಬಾಲ್ಕನ್ ಯುದ್ಧದಲ್ಲಿ ತುರ್ಕಿಯವರಮೇಲೆ ತನ್ನ ಯಾವಚ್ಛಕ್ತಿಯನ್ನೂ ವಿನಿಯೋಗಿಸಿ ಕಾವಾಗಿ(?) ಕೈಕಾಲು ಸೋತು ನಿಂತಿದೆ. ಇಂತಹ ರಾಷ್ಟ್ರದಮೇಲೆ ಪ್ರಬಲವಾದ ಆಸ್ಟ್ರಿಯಾವು ಹಟತೊಟ್ಟು ಯುದ್ಧಕ್ಕೆ ನಿಂತರೆ ಸರ್ವಿಯಾವು ತಾಳಿಕೊಳ್ಳುವುದು ಅಸಾಧ್ಯವೇಸರಿ. ಹೀಗಿರುವಲ್ಲಿ ಆಸ್ಟ್ರಿಯಾ ಚಕ್ರವರ್ತಿಯವರು ಮೊನ್ನೆಯ ವಾರದೊಳಗೆ ಒಂದು ಭಯಪ್ರದವಾದ ಸಂದೇಶವನ್ನು ಸರ್ವಿಯಾಕ್ಕೆ ಕಳುಹಿದರು. ಅದರಲ್ಲಿ—ಆಸ್ಟ್ರಿಯಾಕ್ಕೆ ವಿರುದ್ಧವಾಗಿ ಸರ್ವಿಯಾದಲ್ಲಿ ನಡೆಯುತ್ತಿರುವ ಪ್ರಕಟನಗಳನ್ನು ಖಂಡಿಸಿ, ಅದರ ಮೂಲಕವಾಗಿ ತಮಗೆ ಉಂಟಾದ ಪಶ್ಚಾತ್ತಾಪವನ್ನು ಸರ್ವಿಯಾದವರು ಪ್ರಕಟಿಸಬೇಕು. ಆಸ್ಟ್ರಿಯಾ ಯುವರಾಜರನ್ನು ಕೊಲೆಮಾಡಿದವರನ್ನೂ ಅದಕ್ಕೆ ಸಹಾಯಕರಾಗಿದ್ದವರನ್ನೂ ವಿಚಾರಣೆಮಾಡಿ ತಕ್ಕಹಾಗೆ ದಂಡಿಸಬೇಕು. ವಿಚಾರಮಾಡತಕ್ಕ ಸಂಘದಲ್ಲಿ ಆಸ್ಟ್ರಿಯಾ ಪ್ರತಿನಿಧಿಯು ಇರಬೇಕು. ಆಸ್ಟ್ರಿಯಾದವರು ಹೇಳುವ ಉದ್ಯೋಗಸ್ಥರನ್ನು ಅಧಿಕಾರದಿಂದ ತೆಗೆದುಹಾಕಬೇಕು. ಪಾಠಶಾಲೆಗಳಲ್ಲಿ ಆಸ್ಟ್ರಿಯಾಕ್ಕೆ ವಿರುದ್ಧವಾಗಿ ಹೇಳಲ್ಪಡುವ ಬೋಧೆಗಳನ್ನು ನಿಲ್ಲಿಸಬೇಕು. ಆಸ್ಟ್ರಿಯಾದವರು ಕೊಡುವ ಉದ್ಯೋಗಸ್ಥರ ಸಹಾಯ್ಯವನ್ನು ಸರ್ವಿಯಾದವರು ಅಂಗೀಕರಿಸಬೇಕು. ಇದಕ್ಕೆ ೪೮ ಗಂಟೆಗಳೊಳಗಾಗಿ ಉತ್ತರವನ್ನು ಕೊಡಬೇಕು ; ಇಲ್ಲದಿದ್ದರೆ ಯುದ್ಧಕ್ಕೆ ಸಿದ್ಧರಾಗಬೇಕು.' ಎಂಬ ನಿಯಮಗಳು ಬರೆಯಲ್ಪಟ್ಟಿದ್ದುವು. ಈ ಸಂದೇಶವು ಸರ್ವಿಯಾಕ್ಕೆ ಸಿಡಿಲೆರಗಿದಂತೆಯೇ ಆಗಿ, ಅದು ಮಿಸುಕಾಡಿಹೋಯಿತು. ಉತ್ತರವನ್ನು ಕೊಡುವುದಕ್ಕೆ ಇನ್ನಷ್ಟು ಕಾಲವ್ಯವಧಿಯನ್ನು ಹೆಚ್ಚಿಸಿಕೊಡಬೇಕೆಂದು ಕೇಳಿಕೊಂಡಿತು. ತನ್ನಾಪ್ತರಿಂದಲೂ ಕೇಳಿಸಿತು. ಆಸ್ಟ್ರಿಯಾವು ಒಪ್ಪಲಿಲ್ಲ. ಕಡೆಗೆ ೧-೨ ವಿಷಯಗಳ ಹೊರತು ಉಳಿದ ನಿಯಮಗಳಿಗೆಲ್ಲಾ ಬದ್ಧವಾಗಿ ನಡೆಯಲು ಸರ್ವಿಯಾವು ಒಪ್ಪಿಕೊಂಡಿತು. ಅದು ಆಸ್ಟ್ರೀಲಿಯಾಕ್ಕೆ ತೃಪ್ತಿಕರವಾಗಲಿಲ್ಲ. ಈ ವಿಷಯದಲ್ಲಿ ಯಾರ ಮಧ್ಯಸ್ತಿಕೆಯೂ ಆಸ್ಟ್ರಿಯಾಕ್ಕೆ ಬೇಡವಾಯಿತು. ಅದು ರಣದುಂದುಭಿಯನ್ನು ಹೊಡೆದೇಹೊಡೆಯಿತು. ಯುದ್ಧಕಾಲದ ಪೂರ್ವಾಂಗಕ್ರಿಯೆಗಳೆಲ್ಲವೂ ನಡೆದುಹೋದುವು. ಆಸ್ಟ್ರಿಯಾದಲ್ಲಿ ಯುದ್ಧಕಾಲಿಕ ಶಾಸನವು ಸಾರಲ್ಪಟ್ಟಿತು. ಅವರವರ ರಾಯಭಾರಿಗಳು ಸ್ವದೇಶಗಳಿಗೆ ಹೊರಟುಹೋದರು. ಸೇನಾಸನ್ನಾಹವು ಎರಡುಕಡೆಯೂ ನಡೆದೂನಡೆಯುತ್ತಲೂ ಇರುವುದು. ಸರ್ವಿಯಾವು ತನ್ನ ರಾಜಧಾನಿಯನ್ನು ಬೆಲ್ಗ್ರೇಡ್ ನಗರದಿಂದ ಕ್ರಾಗ್‌ಜೇವಾಕ್ಸಿಗೆ ಬದಲಾಯಿಸಿತು. ಸಂಪೂರ್ಣವಾಗಿ ಆತ್ಮಗೌರವವನ್ನು ಕಳೆದುಕೊಳ್ಳಲಾರದೆ ಕ್ಷಾತ್ರಧರ್ಮವನ್ನು ಹಿಡಿದು ಯುದ್ಧಕ್ಕೆ ಸನ್ನದ್ಧವಾಯಿತು.

ಕಳೆದ ತಾ|| ೨೮ ರ ಬೆಳಿಗ್ಗೆ ಆಸ್ಟ್ರಿಯಾವೇ ಮೊದಲು ಯುದ್ಧಾರಂಭವನ್ನು ಮಾಡಿತೆಂದು ಗೊತ್ತಾಗಿದೆ. ಆಸ್ಟ್ರಿಯಾದ ಸೇನೆಯು ಸರ್ವಿಯಾ ರಾಜಧಾನಿಯ ಮೇಲೆ ಫಿರಂಗಿಗಳನ್ನು ಹಾರಿಸಿ, ಆ ಪಟ್ಟಣದಲ್ಲಿದ್ದ ಸೇನೆಯನ್ನೆಲ್ಲಾ ಹೊರಕ್ಕೆ ಹೊರಡಿಸಲು ಬಲಾತ್ಕರಿಸಿತು. ಆಯುಧಗಳನ್ನೂ ಮದ್ದುಗುಂಡುಗಳನ್ನೂ ತೆಗೆದುಕೊಂಡು ಹೋಗುತ್ತಿದ್ದ ಸರ್ವಿಯನ್ನರ ೨ ಹಡಗುಗಳನ್ನು ಆಸ್ಟ್ರಿಯಾಸೈನ್ಯವು ಹಿಡಿದುಕೊಂಡಿತು.

ಈ ಯುದ್ಧಾಗ್ನಿಯು ಆಸ್ಟ್ರಿಯಾಸರ್ವಿಯಾದವರಲ್ಲಿ ಮಾತ್ರವೇ ಪರ್ಯವಸನ್ನವಾಗದೆ, ಇನ್ನಾವ ದೊಡ್ಡ ರಾಜ್ಯದವರೊಡನಾದರೂ ಸಂಬಂಧಗೊಳ್ಳುವುದಾದರೆ, ಯುರೋಪುಖಂಡವೇ ಇಬ್ಭಾಗವಾಗಿ ಕಾದಾಡಬೇಕಾಗುವುದು. ಆಗ ಅಭೂತಪೂರ್ವವಾದ ಮಹಾವಿಪತ್ತು ಆ ಖಂಡಕ್ಕೇ ಸಂಭವಿಸುವುದರಲ್ಲಿ ಲೇಶವೂ ಸಂಶಯವಿಲ್ಲ. ಸರ್ವಿಯನ್ನರ ಕಡೆಗೆ ರಷ್ಯನ್ನರ ಬೆಂಬಲವು ಪೂರ್ಣವಾಗಿದೆ. ರಷ್ಯಾವು ಅಸ್ತ್ರಸೇರುವುದಾದರೆ, ಜರ್ಮನಿಯು ಆಸ್ಟ್ರಿಯಾಕ್ಕೆ ಸಹಾಯ ಮಾಡುತ್ತದೆ. ಇಟಲಿಯು ತಾನು ಆಸ್ಟ್ರಿಯಾಕ್ಕೆ ಸಹಾಯಕವಾಗಿರುವೆನೆಂದು ಆಗಲೇ ಮುಕ್ತಕಂಠವಾಗಿ ತಿಳಿಯಪಡಿಸಿಬಿಟ್ಟಿದೆ. ಹೀಗಾದರೆ ಜರ್ಮನಿಯಮೇಲೆ ಬದ್ಧವೈರವಾದ ಫ್ರಾನ್ಸು ಸರ್ವಿಯಾದ ಕಡೆಗೆ ನಿಲ್ಲುವುದು ಸಹಜವಾಗಿದೆ. ಇಷ್ಟಾದಮೇಲೆ ಇಂಗ್ಲೆಂಡು ಸುಮ್ಮನಿರಲಾದೀತೆ? ಯೂರೋಪುಖಂಡವೇ ವಿಭಾಗವಾಗಿ ನಿಂತುಕೊಂಡು ಕಾದಾಡುವ ಹೊತ್ತುಬಂದರೆ ಮಹಾ ಪ್ರಳಯವೇ ಸಂಭವಿಸುವುದು. ಇಷ್ಟುಮಟ್ಟಿಗೆ ಯುದ್ಧಾಗ್ನಿಯನ್ನು ಹಬ್ಬಿಸುವುದು ಸರ್ವನಾಶಕ್ಕೆ ಕಾರಣವಾಗುವುದರಿಂದ ಇದನ್ನು ಇಷ್ಟರಲ್ಲೇ ತಣ್ಣಗೆ ಮಾಡಬೇಕೆಂಬ ಪ್ರಯತ್ನಗಳು ನಡೆಯುತ್ತಿವೆ. ವಿದೇಶಾಂಗ ಮಂತ್ರಿಯು ಇದರ ಶಾಂತಿಗಾಗಿ ಅನ್ಯಪ್ರಬಲ ರಾಷ್ಟ್ರದವರೊಡನೆಲ್ಲಾ ಪತ್ರವ್ಯವಹಾರವನ್ನು ನಡೆಯಿಸುತ್ತಿದ್ದಾರೆ. ಮುಖ್ಯದೇಶಗಳ ಪ್ರತಿನಿಧಿಗಳೆಲ್ಲಾ ಕಲೆತು ಈಗಿನ ವಿಷಯದಲ್ಲಿ ಆಸ್ಟ್ರಿಯಾ ಸರ್ವಿಯಾದವರಿಗೆ ಸಂಧಿಯನ್ನು ಮಾಡಿಸಿಬಿಡಬೇಕೆಂದೋ ಅಥವಾ ಆಸ್ಟ್ರಿಯಾ ಸರ್ವಿಯಾದವರಲ್ಲಿ ಮಾತ್ರವೇ ಯುದ್ಧವು ಪರ್ಯವಸನ್ನವಾಗುವಂತೆ ಮಾಡಬೇಕೆಂದೋ ಯೋಚಿಸಿದ್ದಾರೆ. ರಷ್ಯಾದವರೂ ಜರ್ಮನಿಯವರೂ, ಫ್ರಾನ್ಸಿನವರೂ, ಅದಕ್ಕೆ ಒಪ್ಪಿಗೆಯನ್ನು ತೋರಿಸಿದ್ದಾರೆ. ಅಂತರುದ್ದೇಶಗಳು ಹೇಗಿವೆಯೋ ತಿಳಿಯಲಿಲ್ಲವು. ಜರ್ಮನಿಯ ರಷ್ಯಾದ ಪ್ರಭುಗಳೂ ಫ್ರಾನ್ಸಿನ ಅಧ್ಯಕ್ಷರೂ ಬೇರೆಬೇರೆಕಡೆ ಸಂಚಾರದಲ್ಲಿದ್ದವರು ಈಗಿನ ಸ್ಥಿತಿಯನ್ನು ಕಂಡು ಎಲ್ಲರೂ ತಮ್ಮ ತಮ್ಮ ರಾಜಧಾನಿಗಳನ್ನು ಸೇರಿದರು. ಸರ್ವರೂ ತಮ್ಮ ತಮ್ಮ ಸೇನಾಸಿದ್ಧತೆಗೆ ಅಜ್ಞೆಮಾಡಿದರು. ಈಗ ಯೂರೋಪಿನ ಎಲ್ಲರಾಜ್ಯದ ಸೇನೆಗಳೂ ಕತ್ತಿಗಳನ್ನು ಮಸೆಯುತ್ತಿವೆ. ಹಡಗುಗಳಿಗೆಲ್ಲ ಇದ್ದಲು ಬೆಂಕಿಯನ್ನು ಹಾಕಿ ಹೊಗೆ ಯೆಬ್ಬಿಸಿದ್ದಾರೆ. ಭಟರುಗಳು ಬಾಹುಸ್ಫಾಲನಗಳನ್ನು ಮಾಡುತ್ತಿದ್ದಾರೆ. ದೈವಸಂಕಲ್ಪವು ಹೇಗಿದೆಯೋ ಗೊತ್ತಾಗಲಿಲ್ಲ. ಈಗಾಗಲೇ ಯುದ್ಧಾಗ್ನಿಯ ವಿಪತ್ತಿನ ಸೇಕವು ಪ್ರಪಂಚದಲ್ಲೆಲ್ಲಾ ಹಬ್ಬುವ ಚಿಹ್ನೆಗಳು ತೋರಿವೆ. ಆಸ್ಟ್ರಿಯಾಪಟ್ಟಣಗಳಲ್ಲಿ ಆಹಾರ್ಯಪದಾರ್ಥಗಳ ಬೆಲೆಯು ೧ಕ್ಕೆ ೫೦ರಷ್ಟು ಹೆಚ್ಚು ಹೋಗಿದೆ. ಎಲ್ಲ ದೇಶಗಳಲ್ಲೂ ಪ್ರಜೆಗಳು ಬ್ಯಾಂಕುಗಳಿಗೆ ನೋಟುಗಳನ್ನು ಹಿಂದಿರುಗಿಸಿಕೊಟ್ಟು ಚಿನ್ನದ ನಾಣ್ಯಗಳನ್ನು ಕೇಳುತ್ತಿದ್ದಾರೆ. ಬ್ಯಾಂಕುಗಳನೇಕವು ಮುಚ್ಚಲ್ಪಟ್ಟಿವೆ. ಲಂಡನ್ನಿನಲ್ಲೂ ಗ್ಲಾಸ್ಗೋವಿನಲ್ಲೂ ೮-೧೦ ಮಂದಿ ಧನಿಕರು ದಿವಾಳಿಯಾದರು. ವ್ಯಾಪಾರಗಳು ಕಟ್ಟಾಗುತ್ತಿವೆ. ಜರ್ಮನಿಯವರೂ ರಷ್ಯಾದವರೂ ತಮ್ಮ ತಮ್ಮ ಗಡಿಗಳಲ್ಲಿನ ಲೋಹಮಾರ್ಗಗಳ ನಿಲ್ದಾಣವನ್ನೆಲ್ಲಾ ಪ್ರಯಾಣಿಕರಿಂದ ಅಡ್ಡಿಗೊಳಿಸಿ, ಸೇನಾಶಾಖೆಯ ವಶಪಡಿಸಿಕೊಂಡಿದ್ದಾರೆ. ನಮ್ಮ ಭರತಖಂಡದಲ್ಲೂ ಇದರ ಸೇಕವು ತಟ್ಟದೆ ಬಿಟ್ಟಿಲ್ಲ. ಇಲ್ಲಿನ ಬೊಂಬಾಯಿ ಕಲ್ಕತ್ತಾ ಕರಾಚಿಪಟ್ಟಣಗಳಲ್ಲೂ ವ್ಯಾಪಾರವು ಮಂದವಾಗಿದೆ. ಗೌರ್ನಮೆಂಟು ಪತ್ರಗಳ ಬೆಲೆಯು ಇಳಿದುಹೋಗಿದೆ. ಬೊಂಬಾಯಿಯಲ್ಲಿ ಸರ್ಕಾರಿಪತ್ರಗಳ ಬೆಲೆಯು ೧೦೦ ಕ್ಕೆ ೯೫-೩-೦ ಅಷ್ಟಕ್ಕೆ ಇಳಿದುಹೋಗಿದೆ. ಕರಾಚಿಯಿಂದ ಯೂರೋಪುಖಂಡಕ್ಕೆ ಪ್ರಯಾಣಿಕರನ್ನೇ ಕಳುಹಿಸುತ್ತಿಲ್ಲ; ವರ್ತಕರು ಅಧೈರ್ಯದಲ್ಲಿದ್ದಾರೆ.

ಭಗವತ್ಕಾರುಣ್ಯದಿಂದ ಭವಿತವ್ಯವಾದ ಮಹಾವಿಪತ್ತು ತೊಲಗಿ, ಬೇಗನೆ ಶಾಂತಿಯ ವಾರ್ತೆಯು ಬರಲೆಂದು ಶಾಂತಿಪ್ರಿಯರೆಲ್ಲರೂ ಕೋರುತ್ತಿರುವರು.

ಬೊಂಬಾಯಿ ನಿಯಮನಿರ್ಮಾಣಸಭೆ.

ಇದು ಪೂನಾ ಪಟ್ಟಣದಲ್ಲಿ ಕಳೆದ ತಾ|| ೨೭ನೆಯ ಸೋಮವಾರ ಮಧ್ಯಾಹ್ನ ಬೊಂಬಾಯಿ ಗೌರ್ನರಾದ ಲಾರ್ಡ್ ವಿಲ್ಲಿಂಗ್ಡನ್‌ರವರ ಅಧ್ಯಕ್ಷತೆಯಿಂದ ನೆರವೇರಿತು. ಮೊಟ್ಟಮೊದಲು ಸಭಾಧ್ಯಕ್ಷರು ಭಾಷಣಮಾಡುವಾಗ ಹಾರ್ಡಿಂಜ್ ಪ್ರಭ್ವಿಯವರ ಮೃತಿಯನ್ನು ಕುರಿತು ದುಃಖಪ್ರದರ್ಶನಮಾಡುತ್ತ, ಈ ಮೃತಿಯು ಭಾರತೀಯರೆಲ್ಲರಿಗೂ ಉಂಟುಮಾಡಿರುವ ದುಃಖಕ್ಕಿಂತಲೂ ನನಗೆ ವಿಪರೀತವಾದ ವ್ಯಸನವನ್ನುಂಟುಮಾಡಿದೆ. ಏಕೆಂದರೆ:—ಕೆಲದಿನಗಳ ಕೆಳಗೆ ಆಕೆಯವರು ಲಂಡನ್ನಿಗೆ ಹೊರಟಾಗ ಅವರನ್ನು ಅತ್ಯುತ್ಸಾಹದಿಂದ ಸಾಗಕಳುಹಿದುದಲ್ಲದೆ, ಆಕೆಯವರು ಶರೀರಸ್ವಸ್ಥತೆಯನ್ನು ಪಡೆದು ಸಂಪೂರ್ಣಾರೋಗ್ಯದಿಂದ ಭರತಖಂಡಕ್ಕೆ ಬಂದು ಪತಿಯೊಡನೆ ಕೂಡಿ ಭಾರತೀಯರ ಕ್ಷೇಮಕ್ಕಾಗಿ ಪಾಟುಪಡುವರೆಂದು ಪ್ರೋತ್ಸಾಹಕ ವಚನಗಳನ್ನಾಡಿ ನಾವು ಕಳುಹಿದೆವು. ಆದರೆ ನಮ್ಮ ಆಶೆಯು ನಿರಾಶೆಯಾಯಿತು. ನಾವು ಒಂದನ್ನೆಣಿಸಿದರೆ, ಭಗವಂತನು ಒಂದನ್ನೆಣಿಸಿದನು. ಜಗದೀಶನು ಆಕೆಯವರ ಆತ್ಮಕ್ಕೆ ಶಾಶ್ವತಸುಖವನ್ನೀಯಲಿ. ಆಕೆಯವರ ಮೃತಿಯ ದುಃಖವು ನಮಗೇ ದುರ್ಭರವಾಗಿರುವಾಗ ಅವರ ಪತಿಯವರಿಗೆ ಇನ್ನೆಷ್ಟು ದುಃಖವನ್ನುಂಟುಮಾಡಿರಬಹುದು! ಅದನ್ನು ಧೈರ್ಯದಿಂದ ಸೈರಿಸಿಕೊಂಡು ಭರತಖಂಡವನ್ನು ಪರಿಪಾಲಿಸುವಂತೆ ಜಗದೀಶನು ಅನುಗ್ರಹಿಸಬೇಕು, ಎಂದು ಅಪ್ಪಣೆಕೊಡಿಸಿದರು. ಬಳಿಕ ಸಭೆಯ ಸಾನುಭೂತಿಯನ್ನು ವೈಸ್ರಾಯರಿಗೆ ತಿಳಿಯಿಸಬೇಕೆಂಬ ತೀರ್ಮಾನವನ್ನು ಸರ್ ಫಿರೋಜ್‌ಷಾಮೇಥಾರವರು ಸೂಚಿಸಿದರು. ಅದನ್ನು ಸರ್ ಇಬ್ರಾಹಿಂ ರಹಿಮತುಲ್ಲಾರವರು ಪುಷ್ಟೀಕರಿಸಿದರು. ಬಳಿಕ ಸಭ್ಯರೆಲ್ಲರೂ ಎದ್ದು ನಿಂತು ಅದಕ್ಕೆ ತಮ್ಮ ಸುಮತಿಯನ್ನಿತ್ತರು.

ಬಳಿಕ ಬಜೆಟ್ ವಿಷಯಕವಾದ ಚರ್ಚೆ ನಡೆಯಿತು. ಜಿಲ್ಲೆಯ ಮುಖ್ಯಪಟ್ಟಣಗಳಲ್ಲಿ ಅಧಿಕಾರಿಗಳ ವಸತಿಗೃಹಗಳನ್ನು ಸರ್ಕಾರದವರೇ ಸ್ವಂತವಾಗಿ ಕಟ್ಟಿಸುವುದರಿಂದ ಕಂಟ್ರಾಕ್ಟರುಗಳ ಉದ್ಯೋಗಕ್ಕೆ ಭಂಗವುಂಟಾಗುತ್ತಿರುವುದೆಂದು ಡಿ|| ಗಾಡ್‌ಬೋಲ್‌ರವರು ಉಪಪಾದಿಸಿದರು. ಪಾಠಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳ ಆರೋಗ್ಯವನ್ನು ಪರೀಕ್ಷಿಸುವ ಏರ್ಪಾಟನ್ನು ಗೌರ್ನಮೆಂಟಿನವರು ಮಾಡಿಸಬೇಕೆಂದು ಡಾಕ್ಟರ್ ಡ್ಯಾಬೆಯವರು ಸೂಚಿಸಿದರು. ಬೊಂಬಾಯಿಯಲ್ಲಿ ಸ್ತ್ರೀಯರಿಗಾಗಿಯೇ ಪ್ರತ್ಯೇಕ ಕಲಾಶಾಲೆಯೊಂದನ್ನು ಸ್ಥಾಪಿಸುವುದು ಆವಶ್ಯಕವೆಂಬ ವಿಷಯವನ್ನು ಅ|| ಫಜುಲ್‌ಬಾಯಿರವರು ಪ್ರಾರ್ಥಿಸಿದರು. ಪೂನಾ ಪಟ್ಟಣದಿಂದ ಕರ್ಕಿಯವರೆಗೆ ಮುಸಾನದಿಯಮೇಲೆ ಸೇತುವನ್ನು ಕಟ್ಟುವುದಕ್ಕೆ ಸರ್ಕಾರದವರು ೮೦೦೦೦ ರೂ. ಗಳನ್ನು ಅಪ್ಪಣೆಮಾಡಿದುದಕ್ಕಾಗಿ ವಂದನೆಯನ್ನು ಅ|| ಕಾಮತ್‌ರವರು ನಿವೇದಿಸಿದರು. ಇಂಡ್ಯಾ ಗೌರ್ನಮೆಂಟಿನವರು ವಿದ್ಯಾಭಿವೃದ್ಧಿಗಾಗಿ ಅಪ್ಪಣೆಮಾಡಿರುವ ಹಣದಲ್ಲಿ ವೆಚ್ಚವಾಗಿ ಉಳಿದ ಹಣದಿಂದ ಬೊಂಬಾಯಿ ಕರ್ನಾಟಕದಲ್ಲಿ ಒಂದು ಕಾಲೇಜನ್ನು ಕಟ್ಟಿಸಬೇಕೆಂದೂ, ಬೆಳಗಾಂಜಿಲ್ಲೆಯಲ್ಲಿ ವಿದ್ಯಾರ್ಥಿಗಳಫೀಜನ್ನು ಕಡಿಮೆ ಮಾಡಿಸಬೇಕೆಂದೂ ಅ|| ಬೆಳವಿಯವರು ಕೋರಿದರು. ಹೀಗೆಯೇ ಅನೇಕ ಪ್ರಶ್ನೆಗಳು ಸಭಿಕರಿಂದ ಮಾಡಲ್ಪಟ್ಟುವು. ಮರುದಿನವೂ ಸಭೆಯು ಕೂಡಿದ್ದಿತು. ಆಗ ಮ್ಯುನ್ಸಿಪಲ್ ಆಕ್ಟಿನ ಸುಧಾರಣೆಯ ವಿಷಯಕವಾದ ಬಿಲ್ಲಿನ ಚರ್ಚೆಯು ಬಹಳ ನಡೆಯಿತು. ಡಿಸ್ಟ್ರಿಕ್ಟ್ ಮ್ಯುನ್ಸಿಪಾಲಿಟಿಗಳ ಎಕ್ಸಿಕ್ಯುಟೀವ್ ಅಧಿಕಾರವನ್ನು ತಪ್ಪಿಸಬೇಕೆಂತಲೂ, ಕಮಿಷನರುಗಳಿಗೆ ಸಂಬಳವನ್ನು ಏರ್ಪಡಿಸಬೇಕೆಂತಲೂ ಆ ಬಿಲ್ಲಿನಲ್ಲಿ ಸೂಚಿಸಲ್ಪಟ್ಟಿದ್ದಿತು. ಈ ಎರಡು ವಿಷಯಗಳಮೇಲೆ ಹೆಚ್ಚು ಚರ್ಚೆಯಾಯಿತು. ಕಮಿಷನರುಗಳಿಗೆ ಸಂಬಳವನ್ನು ಗೊತ್ತುಮಾಡಿದರೆ ಮ್ಯುನ್ಸಿಪಲ್ ಪರಿಪಾಲನೆಗೆ ಹೆಚ್ಚು ಶಕ್ತಿಯುಂಟಾಗುವುದೆಂದು ಕೆಲ ಸಭಿಕರು ವಾದಿಸಿದರು.

ಮೈಸೂರು ಸೀಮೆಯಲ್ಲಿ ಹುಲ್ಲು ನೀರಿನೇರ್ಪಾಟು.

ಕಾಲಸ್ಥಿತಿಯ ಅನನುಕೂಲತೆಯಿಂದ ಸಂಸ್ಥಾನದ ಕೆಲಭಾಗಗಳಲ್ಲಿ ಹುಲ್ಲಿಗೂ ಕುಡಿಯುವ ನೀರಿಗೂ ಅಭಾವವಾಗಿರುವುದರಮೇಲೆ ಸರ್ಕಾರದವರು ಈ ಮುಂದಿನೇರ್ಪಾಟನ್ನು ಮಾಡಿರುವರು:—ಫಾರೆಸ್ಟುಗಳ ಕನ್ಸರ್ವೇಟರು ಈ ಕೂಡಲೆ ಮೈಸೂರು, ಕಡೂರು, ಮತ್ತೂ ಶಿವಮೊಗ್ಗ ಡಿಸ್ಟ್ರಿಕ್ಟುಗಳಲ್ಲಿ ಒಣಗಿದ ಹುಲ್ಲನ್ನು ಶೇಖರಿಸಲು ತಕ್ಕೇರ್ಪಾಟನ್ನಿಡತಕ್ಕದು. ಮೈಸೂರ ಡಿ|| ನಲ್ಲಿ ಶೇಖರಿಸಲ್ಪಟ್ಟ ಹುಲ್ಲು ಆ ಡಿ|| ನಲ್ಲಿ ಹುಲ್ಲಿಗೆ ಅಭಾವವಾಗಿರುವ ತಾಲ್ಲೂಕುಗಳಿಗೂ, ಕಡೂರು ಮತ್ತೂ ಶಿವಮೊಗ್ಗ ಡಿ|| ಗಳಲ್ಲಿ ಶೇಖರಿಸಲ್ಪಟ್ಟ ಹುಲ್ಲು ಬೆಂಗಳೂರು, ಕೋಲಾರ ಮತ್ತೂ ಚಿತ್ರಕಲ್‌ದುರ್ಗ ಡಿ|| ಗಳಿಗೂ ಒದಗಿಸಲ್ಪಡತಕ್ಕದು. ಕನ್ಸರ್ವೇಟರು ಪರೀಕ್ಷಾರ್ಥವಾಗಿ ಸದ್ಯದಲ್ಲಿ ಪ್ರಾಯಶಃ ೩ ಟನ್ನಿನಷ್ಟು ಹುಲ್ಲನ್ನು ಪ್ರತಿಯೊಂದು ಡಿ|| ಗೂ ಕಳುಹಿಸುವುದು. ಮತ್ತೂ ಪ್ರತಿ ಡಿ|| ಕಮಿಷನರುಗಳು ತಮಗೆ ಬೇಕಾದಷ್ಟು ಹುಲ್ಲನ್ನು ಆಗಾಗ್ಗೆ ಕನ್ಸರ್ವೇಟರಿಗೆ ಬರೆದು ತರಿಸಿಕೊಳ್ಳುವುದು. ಈ ಏರ್ಪಾಟಿನ ವೆಚ್ಚಕ್ಕಾಗಿ ಕನ್ಸರ್ವೇಟರಿಗೆ ೩೦೦೦ ರೂ. ಕೊಡಲ್ಪಟ್ಟಿದೆ. ಡಿ|| ಕಮಿಷನರುಗಳು ತಮ್ಮ ತಮ್ಮ ಡಿ|| ಗಳಲ್ಲಿ ಹುಲ್ಲು ಆವಶ್ಯಕವಾಗಿರುವ ತಾಲ್ಲೂಕುಗಳಿಗೆ ಕನ್ಸರ್ವೇಟರಿಂದ ಒದಗಿಸಲ್ಪಟ್ಟ ಹುಲ್ಲನ್ನು ಹಂಚಿಕೊಡಲು ಅನುಕೂಲವಾದ ೩ ಸ್ಥಳಗಳನ್ನು ಗೊತ್ತುಮಾಡುವುದು. ಡೆಪ್ಯುಟಿಕಮಿಷನರುಗಳು ಈ ಹುಲ್ಲನ್ನು ಕಂಟ್ರಾಕ್ಟರುಗಳ ಮೂಲಕ ಜನರಿಗೊದಗಿಸಿಕೊಡುವ ಏರ್ಪಾಟನ್ನು ಮಾಡಿ ಸರ್ಕಾರದವರ ತಿಳುವಳಿಕೆಗಾಗಿ ವರದಿಯನ್ನು ಮಾಡತಕ್ಕದು. ಈ ಏರ್ಪಾಟಲ್ಲದೆ ಡೆಪ್ಯುಟಿಕಮಿಷನರುಗಳು ಆವಶ್ಯಕವಾದ ವೇಳೆಯಲ್ಲಿ ಹುಲ್ಲನ್ನು ಜನರಿಗೊದಗಿಸುವುದಕ್ಕಾಗಿ ಕೊಂಡುಕೊಳ್ಳಲು ಹಣವನ್ನು ಮುಂಗಡವಾಗಿ ಡೆ|| ಕಮಿಷನರುಗಳಿಗೆ ಕೊಡಲು ರೆವಿನ್ಯೂ ಕಮಿಷನರಿಗಧಿಕಾರವು ಕೊಡಲ್ಪಟ್ಟಿರುವುದು. ಸದ್ಯದಲ್ಲಿ ಪ್ರತಿಯೊಂದು ಡಿ|| ನಲ್ಲೂ ೩ ಅನುಕೂಲವಾದ ಸ್ಥಳಗಳಲ್ಲಿ ಹುಲ್ಲಿನ ಕೋಠಿಗಳನ್ನಿಡಬೇಕು. ಇದಕ್ಕಾಗಿ ಕಂಟ್ರೋಲರವರು ರೆ|| ಕಮಿಷನರಿಗೆ ೧೦೦೦೦ ರೂ.ಗಳನ್ನು ಕೊಡುವರು. ಡೆ|| ಕಮಿಷನರುಗಳು ಆವಶ್ಯಕ ಬಿದ್ದಂತೆ ಒಳಗೆರೆಗಳಲ್ಲಿ ವ್ಯವಸಾಯವನ್ನು ಮುಖ್ಯವಾಗಿ ಮೇವಿನ ಬೆಳಸನ್ನಿಡಲು ಕೊಡಬಹುದು. ಬೆಂಗಳೂರು, ಕೋಲಾರ, ತುಮಕೂರು ಮತ್ತೂ ಚಿತ್ರಕಲ್‌ದುರ್ಗ ಡಿ|| ಗಳಲ್ಲಿ ಒಳಗೆರೆಗಳಲ್ಲೂ, ನಾಲೆಗಳಲ್ಲೂ ಕುಡಿಯುವ ನೀರಿನ ಬಾವಿಗಳನ್ನು ಅನಿತ್ಯವಾಗಿ ತೋಡಿಸಲು ಜನರಲ್ ಲೋಕಲ್‌ಫಂಡುಗಳಿಂದ ೪೦೦೦೦ ರೂ. ಗಳನ್ನು ಕೊಡಲಪ್ಪಣೆಯಾಗಿದೆ. ರೆ|| ಕಮಿಷನರು ಈ ಹಣದಲ್ಲಿ ಡಿ|| ಗಳಿಗೆ ಒಂದೊಂದಕ್ಕೆ ೧೦೦೦೦ ರೂ.ಗಳವರೆಗೆ ಹಂಚಿಕೊಟ್ಟು ಈ ಸಂದರ್ಭವನ್ನು ಸರ್ಕಾರಕ್ಕೆ ತಿಳಿಸಬೇಕು. ಡೆ|| ಕಮಿಷನರುಗಳು ಗ್ರಾಮದಲ್ಲಿ ನಡೆಯಬೇಕಾದ ಕೆಲಸಗಳು ನಡೆದಿರುವುದನ್ನು ಪರೀಕ್ಷಿಸಿ ಕೂಲಿಗಾರರಿಗೆ ಕೆಲಸಗಳನ್ನು ಕೊಡಲು ಸಿದ್ಧಪಡಿಸಿಕೊಂಡಿರತಕ್ಕದು. ಮರಮತ್‌ಶಾಖೆಯ ಚೀಫ್‌ಇಂಜನಿಯರೂ ಮತ್ತೂ ಲೋಹಮಾರ್ಗದ ಇಂಜನಿಯರ್ ಚೀಫ್‌ರವರೂ ಜನರಿಗೆ ಕೆಲಸವುದೊರೆಯುವ ಸ್ಥಳಗಳನ್ನು ಡೆ|| ಕಮಿಷನರುಗಳಿಗೆ ತಿಳಿಸುತ್ತಿರಬೇಕು.

ಕ್ಷಾಮದ ಭೀತಿಯನ್ನು ಕಡಿಮೆಮಾಡುವುದಕ್ಕಾಗಿ ಗೌರ್ನಮೆಂಟಿನವರು ಪಟ್ಟಿರುವ ಈ ಸದುದ್ದೇಶವನ್ನು ಆಯಾಸ್ಥಳದ ಉದ್ಯೋಗಿಗಳು ನಿಜವಾದ ಪ್ರಾಣಿದಯೆಯಿಂದ ಸಾರ್ಥಕಗೊಳಿಸುವವರಾಗಲೆಂದೂ ಆಯಾ ಸ್ಥಳದಲ್ಲಿ ಪ್ರಜೆಗಳಿಗೂ ಪಶುಗಳಿಗೂ ಇರುವ ಸಹಜವಾದ ಕಷ್ಟಗಳನ್ನು ಮೇಲ್ಪಟ್ಟವರ ಗಮನಕ್ಕೆ ತಂದು ತಕ್ಕ ಸಹಾಯಗಳನ್ನು ಒದಗಿಸಿಕೊಡುತ್ತಾ ಬರಲೆಂದೂ ಕೋರುವೆವು.

ಒಳದೇಶದ ವೃತ್ತಾಂತಗಳು.

ಲಿಪ್ಯನ್ವೇಷಣ ಶಾಖಾಧಿಪತಿಗಳಾದ ಮ|| ಆರ್. ನರಸಿಂಹಾಚಾರ್, ಎಂ. ಎ., ಯವರ ಸಂಬಳವು ೪೫೦ ರಿಂದ ೬೫೦ ರೂ.ಗೆ ಹೆಚ್ಚಿಸಲ್ಪಟ್ಟಿರುವುದೆಂದರಿಯುತ್ತೇವೆ.

ಕಡೂರು ಡಿ|| ಮೆಡಿಕಲಾಫೀಸರಾದ ಡಾ|| ಜಿ. ಡೇವಿಡ್‌ರವರು ಸೀಮೆಗೆ ಹೋಗಿ ಹೆಚ್ಚು ವಿದ್ಯಾಪ್ರಶಸ್ತಿಯನ್ನು ಪಡೆದುಕೊಂಡು ಬರಲು ೩ ತಿಂಗಳ ರಜವನ್ನು ಪಡೆದುಕೊಂಡಿರುವರು.

ಮೈಸೂರ ಸೀಮೆಯ ಎಲ್ಲಭಾಗದಲ್ಲೂ ಕಳೆದ ೫ ವರ್ಷಗಳಿಂದ ಯಾವಯಾವಧಾನ್ಯಗಳೆಷ್ಟೆಷ್ಟು ಬೆಳೆಯಲ್ಪಟ್ಟಿರುವುವೆಂಬುದನ್ನು ಗೊತ್ತುಮಾಡಿ ವರದಿಮಾಡತಕ್ಕದೆಂದು ವ್ಯವಸಾಯಶಾಖೆಯವರನ್ನು ಸರ್ಕಾರದವರು ಕೇಳಿರುವರು.

ಕಾನಕಾನಹಳ್ಳಿ ತಾ|| ಅಮಲ್ದಾರ್ ಮ|| ಚಕ್ರಪಾಣಿಯ್ಯಂಗಾರರು ಆಕ್ಟಿಂಗ್ ಅ|| ಕಮಿಷನರಾಗಿ ನಿಯಮಿಸಲ್ಪಟ್ಟು ಜ|| ಮತ್ತು ರೆ|| ಸೆಕ್ರೆಟರಿಯಟ್ಟಿನಲ್ಲಿ ಮ|| ರಾಮಚಂದ್ರರಾಯರು ಬರುವವರೆಗೆ ಅಫಿಷಿಯೇಟಿಂಗ್ ಅ|| ಸೆಕ್ರೆಟರಿಯಾಗಿ ನಿಯಮಿಸಲ್ಪಟ್ಟಿರುವರು.

ಕೋಲಾರದಿಂದ ಶ್ರೀನಿವಾಸಪುರಕ್ಕೆ ಲೈಟ್‌ರೈಲ್ವೆಯನ್ನು ಹಾಕಲು ಆರಂಭವಾಗಿರುವುದು. ಇದು ಇಲ್ಲಿಂದ ಚಿಕ್ಕಬಳ್ಳಾಪುರಕ್ಕೂ ಮುಂದುವರಿಸಲ್ಪಡುವುದು. ಕೋಲಾರದಲ್ಲಿ ೧೧೦೦೦ ರೂ. ವೆಚ್ಚದಿಂದ ಕಟ್ಟಲ್ಪಡುತ್ತಿದ್ದ ಬಾಲಿಕಾಪಾಠಶಾಲೆಯ ಕೆಲಸವೆಲ್ಲವೂ ಮುಗಿದಿರುವುದು.

ರಾಜಧಾನಿಯ ದೇವಾಂಗದ ಅಣೂರಂಗಯ್ಯನು ಹೆಂಡತಿಯನ್ನು ವಿಷಪ್ರಯೋಗದಿಂದ ಕೊಂದ ಅಪರಾಧಕ್ಕಾಗಿ ಸೆಷನ್ಸು ಜಡ್ಜರಿಂದ ಯಾವಜ್ಜೀವ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಲ್ಪಟ್ಟಿದರ ಮೇಲೆ ಚೀಫ್‌ಕೋರ್ಟಿಗಪೀಲನ್ನು ಮಾಡಿಕೊಂಡಿರುವಲ್ಲಿ ಕೆಳಕೋರ್ಟಿನ ತೀರ್ಪೇ ಸ್ಥಿರವಾಯಿತು.

ಬೆಂಗಳೂರು ದಂಡಿನಲ್ಲಿ ಕಳೆದ ಗುರುವಾರ ಚಾರ್ಲೆಸ್ ಓಲರ್‌ಹೆಡ್ ಎಂಬುವರು ಸ್ವಾರಿಮಾಡುತ್ತಿದ್ದ ಮೋಟಾರು ಬೈಸಿಕಲ್ಲು ಇಳಿಮೇಡಿನಲ್ಲಿ ಮುಂದಾಗಿ ಹೋಗುತ್ತಿದ್ದ ಮೋಟಾರುಕಾರಿಗೆ ತಾಕುಬಡಿದು ಸಾಹೇಬರು ಕೆಳಗೆಬಿದ್ದು ಅವರ ತೊಡೆ ಮೊಳಕಾಲುಗಳಿಗೆ ತುಂಬಾ ಪೆಟ್ಟುಬಿದ್ದು ಮೂರ್ಛಿತರಾಗಿದ್ದರು. ಕೂಡಲೆ ಅವರು ಮನೆಗೊಯ್ಯಲ್ಪಟ್ಟು ಉಪಚರಿಸುವಲ್ಲಿ ಗುಣಮುಖವಾಗಿರುವುದು.

ಮೈಸೂರ ಸಂಸ್ಥಾನಕ್ಕೇ ಒಂದು ಸ್ವತಂತ್ರ ಸರ್ವಕಲಾಶಾಲೆ ಅಂದರೆ—ಯೂನಿವರ್ಸಿಟಿಯನ್ನು ಸ್ಥಾಪಿಸುವುದರ ಸಾಧಕಬಾಧಕಗಳನ್ನು ಪರ್ಯಾಲೋಚಿಸಲು ದಿವಾನರು, ಕೌನ್ಸಿಲರುಗಳು, ವಿದ್ಯಾಭ್ಯಾಸ ಶಾಖೆಯ ಸೆಕ್ರೆಟರಿಯವರು, ವಿದ್ಯಾಭ್ಯಾಸದ ಇ|| ಜನರಲ್‌ರವರು ಕಾಲೇಜುಗಳ ಮುಖ್ಯೋಪಾಧ್ಯಾಯರುಗಳು ಸಹ ಕಳೆದ ತಾ|| ೨೮ ರಲ್ಲಿ ಬೆಂಗಳೂರಲ್ಲಿ ಸಭೆ ಸೇರಿದ್ದರು. ಹಿಂದೆ ಇ|| ಜನರಲ್‌ರವರಾಗಿದ್ದ ಮಿ|| ಬಾಬಾಸಾಹೇಬರೂ ಈ ಸಭೆಗೆ ಬರಮಾಡಲ್ಪಟ್ಟಿದ್ದರೆಂದು ಕೇಳುತ್ತೇವೆ.

ರಾಜಧಾನಿಯ ದೊಡ್ಡಪೇಟೆಯಲ್ಲಿ ಮ|| ಸುಬ್ರಾಯಸೆಟ್ಟರ ಮನೆಯ ಸಮೀಪದಲ್ಲಿ ಕಳೆದ ತಾ|| ೩೦ ರ ಬೆಳಿಗ್ಗೆ ೧೧ ಗಂಟೆಯ ಸಮಯದಲ್ಲಿ ಒಂದು ಕುದುರೆ ಬಂಡಿಗೆ ಕಟ್ಟಿದ್ದ ಕುದುರೆಯು ಕೋಪೋದ್ರಿಕ್ತವಾಗಿ ಓಡಲಿಕ್ಕಾರಂಭಿಸಿ, ಸಾರಥಿಯೆಷ್ಟು ಲಗಾಮನ್ನು ಎಳೆದು ಹಿಡಿದಾಗ್ಯೂ ನಿಲ್ಲದೆ ಮಾರ್ಗದ ಪಕ್ಕಕ್ಕೆ ರಭಸದಿಂದ ನುಗ್ಗುವಾಗ್ಗೆ ಹಿಂದೆ ಯಳಂದೂರ ಜಹಗೀರ್ದಾರರಾಫೀಸಿನ ಮ್ಯಾನೇಜರಾಗಿದ್ದ ಮ|| ವೆಂಕಟರಾಯರ ಮೇಲೆ ಬಂಡಿಯು ಹರಿದಿತು. ಇದರಿಂದ ಅವರ ತೊಡೆಯ ಮೂಳೆಯು ಮುರಿದುಹೋಗಿ ಅವರು ಜನರಲ್ ಆಸ್ಪತ್ರೆಯ ಚಿಕಿತ್ಸೆಯಲ್ಲಿರುವರು.

ನಮ್ಮ ವಿದ್ಯಾಶಾಖೆಯವರು ಹೈಸ್ಕೂಲು ಮೊದಲಾದ ಶಾಲೆಗಳ ೬, ೫, ೪ ಮೊದಲಾದ ತರಗತಿಗಳಿಗೆ ಪ್ರಾರಂಭದಲ್ಲಿ ಕೆಲವು ಪುಸ್ತಕಗಳನ್ನು ಟೆಕ್ಸ್ಟ್ ಬುಕ್ಕಾಗಿಟ್ಟಿದ್ದು ಅನಂತರ ಅವನ್ನು ಬದಲಾಯಿಸುತ್ತಿರುವುದರಿಂದ, ಅವುಗಳನ್ನು ಮೊದಲು ಕೊಂಡಿದ್ದ ವಿದ್ಯಾರ್ಥಿಗಳ ನಷ್ಟ ಮತ್ತು ತೊಂದರೆಗಳಿಗೂ ಆ ಪುಸ್ತಕಗಳನ್ನು ಮಾರಾಟಕ್ಕೆ ತರಿಸಿರುವ ವ್ಯಾಪಾರಿಗಳ ನಷ್ಟಕ್ಕೂ ಆ ಗ್ರಂಥಕರ್ತರ ಮನೋವ್ಯಥೆಗೂ ಕಾರಣವಾಗಿರುತ್ತದೆಂಬ ದೂರು ಬಹುವಾಗಿರುವುದರಿಂದ ವಿದ್ಯಾಶಾಖೆಯವರು ಇತಃಪರಃ ಈ ರೀತಿ ಒಂದಾವೃತ್ತಿ ಗೊತ್ತುಮಾಡಿದ ಟೆಕ್ಸ್ಟ್ ಪುಸ್ತಕಗಳನ್ನು ಮರಳಿ ಬದಲಾಯಿಸುವುದಕ್ಕೆ ಬದಲು ಮೊದಲೇ ಪರಿಶೀಲಿಸಿ ಗೊತ್ತಮಾಡುವುದು ಯುಕ್ತವಾಗಿದೆ.

ರಾಜಧಾನಿಗೆ ಧಾರವಾಡ ಡಿ|| ಕುರ್ತುಕೋಟಿಯಿಂದ ಬಂದಿರುವ ವೇ|| ಭಾಗವತ ನಾರಾಯಣಶಾಸ್ತ್ರಿಗಳು ಇಲ್ಲಿಯ ಕೆಲಕಡೆ ಭಕ್ತಿಪ್ರದವಾದ ಕೀರ್ತನಗಳನ್ನು ಮಾಡಿ ಶ್ರೋತೃಜನಗಳ ಮನಸ್ಸಿಗೆ ಆನಂದವನ್ನುಂಟುಮಾಡಿ ಸಂಭಾವನೆಯನ್ನು ಹೊಂದಿರುವರಲ್ಲದೆ, ಕೀರ್ತನಸಪ್ತಾಹ ಎಂಬಭಿಧಾನದಿಂದ ಭಾಗವತ ಭಾರತ ರಾಮಾಯಣ ಮೊದಲಾದವುಗಳ ಉತ್ತರುಕಥಾಭಾಗಗಳನ್ನು ಕಳೆದತಾ|| ೨೮ರಿಂದ ಶ್ರೀತ್ರಿನಯನ ದೇವಸ್ಥಾನದಲ್ಲಿ ಸಂಕೀರ್ತನಮಾಡಲುಪಕ್ರಮಿಸಿರುವರು. ಶ್ರೋತೃಜನವೃಂದವು ವಿಶೇಷವಾಗಿದ್ದು ಭಾಗವತರ ಕೀರ್ತನದಿಂದ ಸಂತುಷ್ಟಿಯನ್ನು ಹೊಂದುತ್ತಿರುವರು. ಕೀರ್ತನಸಮಾಪ್ತಿಯಲ್ಲಿ ಇವರಿಗೆ ಯೋಗ್ಯವಾದ ಬಹುಮಾನವನ್ನು ಮಾಡಲು ತಕ್ಕೇರ್ಪಾಟು ನಡೆಯುತ್ತಿರುವುದಾಗಿ ತಿಳಿಯುತ್ತೇವೆ.

ರಾಜಧಾನಿಯಲ್ಲಿ ಕಳೆದ ಶುಕ್ರವಾರ ಒಂದು ಹದ ಮಳೆಯು ಚೆನ್ನಾಗಾಯಿತು. ಇದರಿಂದ ನಿಂತಿರುವ ಪೈರಿಗೆ ಬಹಳ ಮಟ್ಟಿಗೆ ಅನುಕೂಲವಾಗಿರುವುದು. ಕಳೆದವಾರ ಅಲ್ಲಿಲ್ಲಿ ೩-೪ ಜನ ಪ್ಲೇಗಿನಿಂದಲೂ ವಾಂತಿಭೇದಿ ರೋಗದಿಂದಲೂ ಸತ್ತರು. ವಾಂತಿಭೇದಿ ರೋಗವು ತಲೆದೋರಿರುವುದರಿಂದ ಬಾವಿನೀರನ್ನು ಕುಡಿಯುವುದಕ್ಕಾಗಲಿ ಮತ್ತಾವುದಕ್ಕಾಗಲಿ ಖಂಡಿತವಾಗಿಯೂ ಉಪಯೋಗಿಸಬಾರದೆಂದು ಇಲ್ಲಿಯ ಹೆಲ್ತಾಫೀಸರು ಎಚ್ಚರಿಸಿರುತ್ತಾರೆ. ಸಾಹುಕಾರ್ ಬಸುಮಯ್ಯನವರು ಗುಂಟೂರಿನಿಂದ ಅಕ್ಕಿಯನ್ನು ವಿಶೇಷವಾಗಿ ತರಿಸಿ ರೂ. ೧ಕ್ಕೆ ೭ ಸೇರಿನಂತೆಯೂ, ರಾಗಿಯನ್ನು ೧೩|| ಸೇರಿನಂತೆಯೂ ಮಾರಿಸುತ್ತಿರುವುದರಿಂದ ಬಡಬಗ್ಗರು ಕೊಂಡುಕೊಳ್ಳಲು ಆತುರರಿದು ನುಗ್ಗುತ್ತಿರುವರಲ್ಲದೆ ಸಾಹುಕಾರರ ಉಪಕಾರವನ್ನು ಸ್ಮರಿಸುತ್ತಿರುವರು. ಇದರಂತೆಯೇ ಸಂಪನ್ನರಾದ ಇತರ ವರ್ತಕರೂ ಮಾಡುವುದಾದರೆ ಬಡವರ ಕಷ್ಟವು ಬಹುಮಟ್ಟಿಗೆ ನಿವಾರಿತವಾಗುವುದರಲ್ಲಿ ಸಂದೇಹವಿಲ್ಲವು.

ರಾಜಧಾನಿಯ ಒಂದನೆಯ ಮುನಸೀಫರಾಗಿದ್ದ ಮ|| ಜಿ. ಶ್ರೀನಿವಾಸಯ್ಯರ್‌ರವರು, ಅ|| ಕಮಿಷನರಾಗಿ ನಿಯಮಿಸಲ್ಪಟ್ಟು ಜ|| ಮತ್ತೂ ರೆವಿನ್ಯೂಸೆಕ್ರೆಟರಿಯಟ್ಟಿಗೆ ವರ್ಗಾಯಿಸಲ್ಪಟ್ಟಿರುವುದರಿಂದ, ಮುನಸೀಫರುಗಳಾದ ಮ|| ಡಿ ಕೆ. ರಾಮರಾಯರು ಚಿನ್ನದಗಣಿಗಳಿಂದ ೧ ನೆಯ ಮುನಸೀಫರಾಗಿ ರಾಜಧಾನಿಗೂ, ವಿ|| ಪಿ. ಮಹಾದೇವಯ್ಯನವರು ದೊಡ್ಡಬಳ್ಳಾಪುರದಿಂದ ಚಿನ್ನದ ಗಣಿಗಳಿಗೂ, ಮ|| ಎಚ್. ಕೆ. ಶ್ರೀನಿವಾಸರಾಯರು ಹೊಳೆನರಸೀಪುರದಿಂದ ದೊಡ್ಡಬಳ್ಳಾಪುರಕ್ಕೂ ವರ್ಗಾಯಿಸಲ್ಪಟ್ಟು ಬೆಂಗಳೂರಲ್ಲಿ ಅಡ್ವೋಕೇಟರಾಗಿದ್ದ ಮ|| ಎಚ್. ಕೆ. ವೀರಬಸವಯ್ಯನವರು ಹೊಳೆನರಸೀಪುರದ ಮುನಸೀಫರಾಗಿಯೂ, ಸಾಗರದ ಮುನಸೀಫರಾದ ಮ|| ಬಿ. ರಾಘವಾಚಾರರು ೨೦ ದಿನಗಳ ರಜದಮೇಲಿರುವುದರಿಂದ ಅವರು ಬರುವವರೆಗೆ ಶಿವಮೊಗ್ಗೆ ಡಿಸ್ಟ್ರಿಕ್ಟ್ ಕೋರ್ಟಿನ ಹೆಡ್‌ಮುನಷಿಯರಾದ ಮ|| ಎಸ್. ರಾಮಚಂದ್ರಶಾಸ್ತ್ರಿಗಳು ಸಾಗರದ ಆಕ್ಟಿಂಗ್ ಮುನಸೀಫರಾಗಿಯೂ ನಿಯಮಿಸಲ್ಪಟ್ಟಿರುವರು.

ಭರತಖಂಡದ ವೃತ್ತಾಂತಗಳು.

ಕಾಶ್ಮೀರದೇಶದಲ್ಲಿ ಅತಿವೃಷ್ಟಿಯು ಆಗುತ್ತಲೇ ಇದೆ. ಅನೇಕ ಮಾರ್ಗಗಳು ಕೆಟ್ಟುಹೋಗಿವೆ. ಪ್ರಯಾಣಿಕರಿಗೆ ಬಹಳ ತೊಂದರೆಯಾಗಿದೆ.

ಗಂಜಿಕೋಟೆ ಸುಬ್ರಹ್ಮಣ್ಯಜೋಯಿಸರು ದಕ್ಷಿಣದೇಶದಲ್ಲಿ ಜುಲೈ ತಿಂಗಳಕಡೆಯಿಂದಲೂ, ಆಗಸ್ಟ್ ಸೆಪ್ಟಂಬರ್ ತಿಂಗಳಲ್ಲೂ ಆಗಾಗ್ಗೆ ಚೆನ್ನಾಗಿ ಮಳೆಯಾಗುವುದೆಂದು ಗಣಿತದಿಂದ ಪರಿಶೋಧಿಸಿ ಪ್ರಕಟಿಸಿದ್ದಾರೆ.

ಸಿಂಧು ದೇಶದ ಉತ್ತರಭಾಗದಲ್ಲಿ ಕಳೆದವಾರ ವಿಪರೀತವಾಗಿ ಬಿಸಿಲುಕಾಯುತ್ತಿದ್ದಿತು. ಅದರ ಬೇಗೆಯನ್ನು ಸೈರಿಸಲಾರದೆ ಅನೇಕ ಜನರು ಸತ್ತರು. ಬಂಡಿಗೆ ಕಟ್ಟಿದ್ದ ಕುದುರೆಗಳು ಹಾಗೆಹಾಗೆಯೇ ಪ್ರಾಣಬಿಟ್ಟುವು.

ಬಹುಮೂತ್ರವ್ಯಾಧಿಪರಿಶೋಧನೆಗಾಗಿ ಮದ್ರಾಸ್ ಗೌರ್ನಮೆಂಟಿನವರ ವಶಕ್ಕೆ ೫೦ ಸಾವಿರ ರೂ. ಗಳನ್ನು ದಾನಮಾಡಿದ ಮಹನೀಯರು ಶ್ರೀ ಪಿಠಾಪುರದ ಮಹಾರಾಜರೆಂದು ಕೇಳಿ ಅವರ ಜೀವಕಾರುಣ್ಯವನ್ನು ಕುರಿತು ಅಭಿನಂದಿಸುತ್ತೇವೆ.

ಹಿಂದೂ ವಿಶ್ವವಿದ್ಯಾಲಯವು ಗೌರ್ನಮೆಂಟ್ ವಿದ್ಯಾಪೀಠದಂತೆಯೇ ನಡೆಯಿಸಲ್ಪಡಲು ಸರ್ಕಾರದಭಿಪ್ರಾಯವಾಗಿರುವುದರಿಂದ, ಆದರಂತೆ ಇದನ್ನು ನಡೆಯಿಸುವುದಕ್ಕಿಂತಲೂ ಈ ಪ್ರಯತ್ನವನ್ನೇ ಬಿಟ್ಟುಕೊಡುವುದೊಳ್ಳೆಯದೆಂದು ದೇಶಾಭಿಮಾನಿಗಳು ಸೂಚಿಸುತ್ತಿದ್ದಾರೆ.

ಮನ್ಮಾಡಿನಿಂದ(?) ಹೈದರಾಬಾದಿನಕಡೆಗೆ ಹೋಗುವ ಲೋಹಮಾರ್ಗದಲ್ಲಿ ಪೂರ್ಣಾನದಿಯಲ್ಲಿ ವಿಪರೀತ ವೃಷ್ಟಿಯಿಂದ ಪ್ರವಾಹವು ಹೆಚ್ಚಿ, ಸೇತುವು ಕಿತ್ತುಹೋಗಿ, ಹೊಗೆಬಂಡಿಯಮೇಲಿನ ಪ್ರಯಾಣಿಕರು ಹೊಳೆಯಹತ್ತಿರ ಇಳಿಸಲ್ಪಟ್ಟು ದೋಣಿಯಮೇಲೆ ಸಾಗಿಸಲ್ಪಡುತ್ತಿರುವರು.

ನೌಶಿರಾದ(?) ಬಳಿಯಲ್ಲಿ ಅಕೋರಾದ ಹತ್ತಿರ ಕೆಲ ಮಹಮ್ಮದೀಯರು ಮದುವೆಗಾಗಿ ಹೋಗುತ್ತಾ ನದಿಯನ್ನು ದಾಟುತ್ತಿರಲು ಅವರು ಕುಳಿತಿದ್ದ ಮೂರು ದೋಣಿಗಳಲ್ಲಿ ಒಂದು ನಡುಹೊಳೆಯಲ್ಲಿ ತಲೆಕೆಳಗಾಗಲು ೩೧ ಮಂದಿಗಳು ಸತ್ತರು. ಅವರಲ್ಲಿ ಮದುವೆಯ ಹೆಣ್ಣೂ ಸೇರಿದ್ದಿತು.

ಬೊಂಬಾಯಿಯ ಜನರಲ್ ಪೋಸ್ಟಾಫೀಸಿನಲ್ಲಿ ಚಾಂಗಿಗುನ್ನು ಅಡಕಿರುವ ಕೋಣೆಯಲ್ಲಿ ಒಂದು ಚಾಂಗಿಯು ಸಿಡಿದಳರಿಯುವುದಕ್ಕಾರಂಭಿಸಿತು. ಅದು ಉತ್ತರಹಿಂದೂಸ್ಥಾನದಿಂದ ಬಂದಿದ್ದಿತಂತೆ. ಅದು ಬೇರೆ ಕಡೆ ಇಡಲ್ಪಟ್ಟಿಲ್ಲದಿದ್ದರೆ ಬಹಳ ಅನರ್ಥವಾಗುತ್ತಿದ್ದಿತು. ಈಗ ಅದರ ಸಂಬಂಧದಲ್ಲಿ ಅಪರಾಧಪರಿಶೋಧನಶಾಖೆಯ ಪೋಲೀಸರು ವಿಚಾರ ನಡೆಯಿಸುತ್ತಿದ್ದಾರೆ.

ಪಂಜಾಬಿನ ಪ್ರಾಂತದಲ್ಲಿ ವಿಪರೀತ ವೃಷ್ಟಿಯಾಗಿದೆ. ಇದರಿಂದ ಅಲ್ಲಿನ ಲೆ|| ಗೌರ್ನರವರೇ ಡಾಲ್‌ಹೌಸಿ ಪಟ್ಟಣದ ಹತ್ತಿರ ತೊಂದರೆ ಪಡಬೇಕಾಯಿತು. ಮಾರ್ಗಗಳಲ್ಲಿ ದೊಡ್ಡದೊಡ್ಡ ಹಳ್ಳಕೊಳ್ಳಗಳು ಬಿದ್ದಿರುವುದರಿಂದ ಅವರು ಕೆಲ ಸುತ್ತಿನ ಸಂಚಾರವನ್ನೂ ಕೂಡ ನಿಲ್ಲಿಸಿಬಿಡಬೇಕಾಯಿತು. ಲಾಹೋರಿನಲ್ಲಿ ಕಳೆದ ತಾ|| ೨೩ ರಲ್ಲಿ ಅಖಂಡವಾಗಿ ೨೪ ಗಂಟೆಗಳ ಕಾಲ ಮಳೆಯಾಯಿತು.

ಬೆಳಗಾಂ ಜಿಲ್ಲೆಗೆ ಸೇರಿದ ಗೋಕಾಕಿನ ಹತ್ತಿರ ಘಟಪ್ರಭಾನದಿಯನ್ನು ಕೆಲರು ಪ್ರಯಾಣಿಕರು ದೋಣಿಯಮೇಲೆ ದಾಟುತ್ತಿರುವಾಗ ದೋಣಿಯು ಮುಳುಗಿ ೮ ಮಂದಿ ಸತ್ತರು. ೩೦ ಮಂದಿ ಕಾಪಾಡಲ್ಪಟ್ಟರು. ಆ ಸುತ್ತಿನಲ್ಲಿ ಮಳೆಯ ಹೆಚ್ಚಿಗೆಯಿಂದ ಪ್ರವಾಹಗಳು ವಿಶೇಷವಾಗಿ ಬಂದಿವೆ. ಊರುಕೇರಿಗಳೆಲ್ಲಾ ನೀರು ತುಂಬಿ ಹಲವರು ನಿಲ್ಲಲು ವಸತಿಯಿಲ್ಲದೆ ಪೇಚಾಡುತ್ತಿದ್ದಾರೆ.

ಕಲ್ಕತ್ತಾಕ್ಕೆ ಸೇರಿದ ಹೌರಾದ ಹತ್ತಿರ ಗಂಗಾನದಿಗೆ ಈಗ ಒಂದು ತೇಲಾಡುವ ಸೇತುವಿರುವಿದು. ಅದನ್ನು ವಾರಕ್ಕೊಂದು ದಿನ ಬಿಚ್ಚಿ ಹೋಗಬರುವ ಹಡಗುಗಳ ಪ್ರಯಾಣಕ್ಕೆ ಅನುಕೂಲಮಾಡಿ, ಮರಳಿ ಸೇರಿಸಿ ಕಟ್ಟಿಬಿಡುವರು. ಈಗ ಅದೇ ಸ್ಥಲದಲ್ಲಿ ಒಂದು ಸ್ಥಿರವಾದ ಬಲು ದೊಡ್ಡ ಸೇತುವನ್ನು ಕಟ್ಟಲು ತೀರ್ಮಾನಿಸಿರುವರು. ಇದಕ್ಕೆ ಒಂದು ಕೋಟಿ ರೂ. ಗಳು ಮುಟ್ಟುವುವು. ಇದಕ್ಕಾಗಿ ಅಲ್ಲಿನ ಮ್ಯುನ್ಸಿಪಾಲಿಟಿಯವರಲ್ಲಿ ೧೦ ಲಕ್ಷ ರೂ. ಗಳಿರುವುವು. ಉಳಿದ ಹಣವನ್ನು ಸಾಲ ಮಾಡುವರು. ಅದನ್ನು ತೀರಿಸುವುದಕ್ಕಾಗಿ ಪ್ರಜೆಗಳಮೇಲೆ ಹೆಚ್ಚು ತೆರಿಗೆಯ ಭಾರವನ್ನು ಹೊರಿಸುವುದು ಸರ್ಕಾರಕ್ಕೆ ಇಷ್ಟವಿಲ್ಲವಾದ ಪ್ರಯುಕ್ತ, ವರ್ಷ ೧ ಕ್ಕೆ ಸೇತುವಿನಮೇಲೆ ಸಾಗುವ ಸಾಮಾನುಗಳಿಂದ ೨ ಲಕ್ಷ, ಗೌರ್ನಮೆಂಟಿನವರಿಂದ ೧ ಲಕ್ಷ, ಟ್ರಾಂಬಂಡಿಗಳ ಓಡಾಟದಿಂದ | ಲಕ್ಷ, ಪೋರ್ಟ್‌ಕಮಿಷನರಿಂದ ||| ಲಕ್ಷ, ಪ್ರಯಾಣಿಕರಿಂದ ||| ಲಕ್ಷ, ಮ್ಯುನ್ಸಿಪಲ್ ಗ್ರಾಂಟು ೩೦ ಸಾವಿರ, ಕಲ್ಕತ್ತಾ ಕಾರ್ಪೊರೇಷನ್ ಗ್ರಾಂಟು || ಲಕ್ಷ, ಒಟ್ಟು ೬೭೫೦೦೦ ರೂ. ಗಳನ್ನು ವರ್ಷ ೧ ಕ್ಕೆ ಸೇರಿಸಿ ಸಾಲವನ್ನು ತೀರಿಸುತ್ತಾ ಬರಬೇಕೆಂದು ನಿರ್ಣಯಿಸಿದ್ದಾರೆ.

ಪೂನೆಗೂ ಬೊಂಬಾಯಿಗೂ ಮಧ್ಯದಲ್ಲಿ ಲೋಹಮಾರ್ಗವು ಬೆಟ್ಟಸಾಲುಗಳನ್ನು ಹಾದುಹೋಗಿದೆ. ಕೆಲಕಡೆ ಬೆಟ್ಟದೊಳಗೆ ಮಾಡಿರುವ ಸುರಂಗದ ಗುಹೆಗಳಲ್ಲಿ ಬಂಡಿಗಳು ಹಾದುಹೋಗುತ್ತವೆ. ಈ ಸ್ಥಲದಲ್ಲಿರುವ ಬೆಟ್ಟವೊಂದರಿಂದ ಸ್ವಲ್ಪಭಾಗವು ಕಳಚಿಬಿದ್ದಿತು. ಪಶ್ಚಿಮದ ಕಣಿವೆಗಳಿಂದ ಮೊನ್ನೆ ತಾ|| ೨೫ ರಲ್ಲಿ ಪೂನಾ ಬೊಂಬಾಯಿಯ ಪ್ಯಾಸೆಂಜರ್ ಟ್ರೇನು ಹೋಗುತ್ತಿರುವಾಗ ದೊಡ್ಡ ಗುಂಡುಗಳು ೨-೩ ನೇ ತರಗತಿಯ ಪ್ರಯಾಣಿಕರು ಕುಳಿತಿದ್ದ ೨ ಬಂಡಿಗಳ ಮೇಲೆ ಬಿದ್ದುವು. ಒಂದೊಂದು ಕಲ್ಲುಗಳು ಒಂದು ಟನ್ನಿನಷ್ಟು ತೂಕವಿದ್ದುವು. ೨ ಬಂಡಿಗಳಿಗೂ ಅದರಿಂದ ಬಹಳ ನಷ್ಟವಾಯಿತು. ಒಂದರಮೇಲಣ ಟಾಪು ಮುರಿದುಹೋಗಿ ಪ್ರಯಾಣಿಕರಮೇಲೆ ಕಲ್ಲುಬಿದ್ದಿತು. ಇಬ್ಬರು ಪ್ರಯಾಣಿಕರಿಗೆ ಬಹಳ ಪೆಟ್ಟುಬಿದ್ದಿತು. ಒಬ್ಬನ ಕಾಲು ಸಂಪೂರ್ಣವಾಗಿ ಮುರಿದುಹೋಯಿತು. ಇದರಿಂದ ಪ್ರಯಾಣಿಕರಿಗೆ ತುಂಬಾ ಭಯವುಂಟಾಯಿತು. ಆದರೆ ಆಪತ್ಕಾಲದಲ್ಲಿ ಸೆಳೆಯುವ ತಂತಿಯನ್ನು ಯಾರೂ ಸೆಳೆಯಲಿಲ್ಲ. ಅದುಕಾರಣ ಬಂಡಿಯು ಮುಂದಣ ಕರ್ಜತ್ ನಿಲ್ದಾಣಕ್ಕೆ ಹೋಗಿ ನಿಲ್ಲುವವರೆಗೂ ಈ ಆಪತ್ತು ಬಂಡಿಯ ಗಾರ್ಡು ಮೊದಲಾದವರಿಗೂ ತಿಳಿಯಲಿಲ್ಲ.

ವಿದೇಶದ ವೃತ್ತಾಂತಗಳು.

ಚೀನಾದೇಶದಲ್ಲಿ ಭಿಕ್ಷುಕರಮೇಲೆ ತೆರಿಗೆಯು ವಿಧಿಸಲ್ಪಟ್ಟಿರುವುದು. ಅವರು ಮನಸ್ಸುಬಂದಕಡೆ ಭಿಕ್ಷೆಯನ್ನೆತ್ತಕೂಡದು. ಅಪ್ಪಣೆ ಪಡೆದ ಜಿಲ್ಲೆಗಳಲ್ಲಿ ಮಾತ್ರವೇ ಯಾಚಿಸಬೇಕು.

ಹೊಂಡತನಕ್ಕೆ ನಿಂತಿದ್ದ ಕಾಮಾಗಟಾಮಾರು ಎಂಬ ಹಡಗು ಕಳೆದ ತಾ|| ೨೩ ರಲ್ಲಿ ಕಾನಡಾ ಸರ್ಕಾರದವರಿಂದ ಅದರಲ್ಲಿದ್ದ ಪ್ರಯಾಣಿಕರ ಸಮೇತ ಹಿಂದಕ್ಕೆ ಬಲಾತ್ಕಾರವಾಗಿ ಹೊರಡಿಸಲ್ಪಟ್ಟಿತು.

ಆಸ್ಟ್ರಿಯಾದೇಶದಲ್ಲಿ ದೊಡ್ಡ ಬಿರುಗಾಳಿ ಮಳೆಯಾಗಿ ೨೦ ಲಕ್ಷ ಫ್ರಾಂಕುಗಳ ಬೆಲೆಬಾಳುವ ಆಸ್ತಿಗಳು ಹಾಳಾದುವು. ೭ ಮಂದಿ ಸತ್ತರು. ೩೭ ಮಂದಿಗೆ ಪೆಟ್ಟುಬಿದ್ದಿತು. ಡಾನ್ಯೂಬ್ ನದಿಯಲ್ಲಿದ್ದ ದೋಣಿಗಳಿಗೆಲ್ಲಾ ನಷ್ಟವು ಸಂಭವಿಸಿತು.

ಕಾನಡಾಕ್ಕೆ ಸೇರಿದ ವಾಂಕೋವರ್ ಎಂಬ ಪಟ್ಟಣದಲ್ಲಿ ಒಬ್ಬ ಹೆಂಗುಸು ಪ್ರತಿದಿನವೂ ಮನೆಗೆಲಸಮಾಡುವಲ್ಲಿ ಎಷ್ಟು ತಿರುಗಾಟಮಾಡುತ್ತಿರುವೆನೆಂಬುದನ್ನು ನಿರ್ಣಯಿಸುವುದಕ್ಕಾಗಿ ಮೀಟರ್ ಎಂಬ ಅಳತೆಯ ಯಂತ್ರವನ್ನಿಟ್ಟುಕೊಂಡು ಪರೀಕ್ಷಿಸುವಲ್ಲಿ ಒಂದು ತಿಂಗಳ ಕಾಲದಲ್ಲಿ ೪೦೦ ಮೈಲಿಗಳನ್ನು ನಡೆದಿರುವಂತೆ ಗೊತ್ತಾಯಿತಂತೆ.

ಆಲ್ಬರ್ಟ ದೇಶದಲ್ಲಿ ಒಬ್ಬ ರೈತನು ಸೂಕ್ಷ್ಮದರ್ಶಕ ಯಂತ್ರ ಸಹಾಯದಿಂದ ಅದ್ಭುತವಾದ ಚಿತ್ರಕೆಲಸವೊಂದನ್ನು ಮಾಡಿರುವನು. ಒಂದು ಗೋದುವೆಯ ಕಾಳಿನಮೇಲೆ ಹುಬ್ರೂ ಭಾಷೆಯಲ್ಲಿ ೩೦೦ ಅಕ್ಷರಗಳುಳ್ಳ ವಿಜ್ಞಾಪನ ಪತ್ರವನ್ನು ರಚಿಸಿ ಕನಾಟ್ ಪ್ರಭುಗಳಿಗೆ ಅರ್ಪಿಸಿರುವನು. ಇದನ್ನು ಸೂಕ್ಷ್ಮದರ್ಶಕ ಯಂತ್ರಸಹಾಯದಿಂದಲ್ಲದೆ ನೋಡಿ ಓದುವುದಕ್ಕೆ ಯಾರಿಗೂ ಸಾಧ್ಯವಲ್ಲವು.

ಮುಂಬೈ ಕರ್ನಾಟಕದ ವಾರ್ತೆಯು.

ಧಾರವಾಡ:—೧೦-೧೫ ದಿವಸಗಳಿಂದ ಮಳೆಯು ಬಿಡುವಿಲ್ಲದೆ ಒಂದೇಸಮನಾಗಿ ಹೊಯ್ಯುತ್ತಿದ್ದದರಿಂದ ನೂರಾರು ಮನೆಗಳು ಬಿದ್ದುಹೋಗಿ ಎಲ್ಲಕಡೆಯೂ ಅದರ ಸುದ್ದಿಯೇ ಆಗಿದೆ. ಕೆಲಗೇರಿ ಕೆರೆಯು ತುಂಬಿ ಕೋಡಿ ಹರಿಯುತ್ತಿರುವುದು. ನೀರಿನ ಕೊರತೆಯು ತಪ್ಪಿದುದರಿಂದ ನಳಗಳಲ್ಲಿ ನೀರು ೧೨ ಗಂಟೆಯ ಕಾಲ ಬಿಡಲ್ಪಡುವುದೆಂದು ನಿರೀಕ್ಷಿಸಲ್ಪಟ್ಟಿದೆ. ರೋಗಾದಿಗಳೇನೂ ಇಲ್ಲವು, ಹಲಗೇರಿ ಕೆರೆಯು ತುಂಬಲಿಕ್ಕೆ ಬಂದಿದೆ. ಇದರ ಪೂರ್ವದಿಕ್ಕಿನ ವಾಯುಬಿರುಕು ಬಿಟ್ಟಿರುವುದರಿಂದ ಕೆರೆಗೆ ಇನ್ನು ೨ ಮೊಳ ನೀರು ಬಂದಲ್ಲಿ ಏರಿಯೊಡೆದು ಕೆರೆ ಕೆಳಗಿನ ಮನೆಗಳಿಗೆ ಹಾನಿಯುಂಟಾಗುವುದು. ಇಲ್ಲಿಯ ದೀಪದಕಡ್ಡಿ ಕಾರ್ಖಾನೆಯ ರಾ॥ ರಾಮರಾವ ಅಳಗವಾಡಿ ಇವರ ನಾದಿನಿಯರಾದ ಶ್ರೀಮತಿ ಮಥುರಾಬಾಯಿ ಉಜಗಾವಕರ ಇವರು ಎಲ್. ಎಂ. ಅಂಡ್ ಯಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು.

ಹುಬ್ಬಳ್ಳಿಯಲ್ಲಿ ಅರಳೆಯ ದಾರಣೆಯು ಏರಿರುವುದರಿಂದ ಮಾಲು ದೊರೆಯದೆ ಕೊಳ್ಳುವ ಜನರ ನೋಲಾಟ ಬಹಳವಾಗಿದೆ.

ಗರಗದಲ್ಲಿ ನಡೆದಿರುವ ಕೊಲೆಯ ವಿಚಾರಣೆಗಾಗಿ ಪೋಲೀಸು ಸೂಪರಿಂಟೆಂಡೆಂಟರು ಅಲ್ಲಿಗೆ ಹೋಗಿರುತ್ತಾರೆ.

ಈ ವಾರದಲ್ಲಿ ಈ ಪ್ರಾಂತದಲ್ಲಿ ೩-೪ ಪ್ಲೇಗಿನ ಮರಣವಾದ ವಾರ್ತೆಯಿದೆ.

ಮಲೆನಾಡಿನ ಕಡೆಗೆ ಮಳೆಯು ಬಹಳ ಚೆನ್ನಾಗಾಗಿದೆ. ಬೈಲುಸೀಮೆಯ ಜನರು ಮಳೆಯಿಲ್ಲದೆ ಗೋಳಾಡುತ್ತಿದ್ದರು. ಆದರೆ ಎಲ್ಲಕಡೆಯೂ ಮಳೆ ಯಾಗಿದೆ.

ಧಾರವಾಡದ ಲಿಂಗಾಯತ ವಿದ್ಯಾವರ್ಧಕ ಫಂಡಿನವರು ಆನರಬಲ್ ಮಿ॥ ಕಾರ್ಟರ್ ಸಾಹೇಬರ ಅರ್ಧಾಕೃತಿಯ ಪ್ರತಿಮೆಯನ್ನು ಅಲ್ಲಿಯ ಲಿಂಗಾಯತ ವಿದ್ಯಾಭವನದಲ್ಲಿ ಸ್ಥಾಪಿಸಲು ಚಂದಾಹಣವನ್ನೆತ್ತಲುಪಕ್ರಮಿಸಿರುವರು. ಧಾರವಾಡದ ಜಿಲ್ಲೆಯಲ್ಲಿ ೧೦೦ ರೂ. ಸಂಬಳದಮೇಲೆ ಇಬ್ಬರು ಪೋಲೀಸು ಸಬ್‌ಇನ್ಸ್‌ಪೆಕ್ಟರರನ್ನು ನೇಮಿಸಿಕೊಳ್ಳಲಪ್ಪಣೆಯಾಗಿರುವ ಪ್ರಕಾರ ಬಿಜಾಪುರದ ವಕೀಲರು ಮಿ॥ ಮುಂಡೆವಾಡಿಯವರು ನೇಮಿತರಾಗಿರುವರು. ಕಲೆಕ್ಟರ್ ಮಿ॥ ವೇಲ್ಸ್ ಸಾಹೇಬರು ರಾಣಿಬೆನ್ನೂರಿಗೆ ತಾ॥ ೨೯ ರಲ್ಲಿ ಹೋಗಿದ್ದು ವತನದಾರ ಕುಲಕರ್ಣಿಯವರುಗಳ ಸಂಬಂಧವಾಗಿ ಕೆಲ ವಿಚಾರಣೆಗಳನ್ನು ಮಾಡಿಕೊಂಡು ಮಾರನೆಯದಿನ ಹಿಂದಿರುಗಿ ದಯಮಾಡಿದರು.

ಪತ್ರವ್ಯವಹಾರಕರಿಗೆ ಸೂಚನೆ

ನಾವೆಷ್ಟು ವಿಧವಾಗಿ ಎಚ್ಚರಿಸಿದ್ದಾಗ್ಯೂ ಜನಸಾಮಾನ್ಯಕ್ಕುಪಯೋಗವಿಲ್ಲದ ವಿಷಯಗಳನ್ನು ತಮಗೆ ಬೇಕಾದವರ ಮೆಚ್ಚಿಸುವುದಕ್ಕಾಗಿ ಪುಟಗಟ್ಟಲೆಯಾಗಿಯೂ, ಅಸ್ಪಷ್ಟವಾಗಿಯೂ ಅಸಮಂಜಸವಾಗಿಯೂ ಲೇಖನವನ್ನು ಲೇಖರು ಬರೆಯುತ್ತಿರುವುದರಿಂದ ಇತ್ತೀಚೆಗೆ ಅಂತಹ ಲೇಖನಗಳಿಗೆ ಸುತರಾಂ ಲಕ್ಷ್ಯವು ಕೊಡಲ್ಪಡದು. ಜನಸಾಮಾನ್ಯಕ್ಕೆ ಉಪಯುಕ್ತವಾದವಿಷಯಗಳು ಬಹುಸಂಕ್ಷೇಪವಾಗಿಯೂ, ಸ್ಪಷ್ಟವಾಗಿಯೂ ಬರೆಯಲ್ಪಟ್ಟು ಪ್ರತಿಮಂಗಳವಾರದೊಳಗೆ ಸೇರುವಂತೆ ಕಳುಹಲ್ಪಟ್ಟರೆ ಪ್ರಕಟಗೊಳಿಸ[illegible]ವು. ವೀರಶೈವ ವಿದ್ಯಾಭಿವೃದ್ಧಿ ಫಂಡಿಗಾಗಲಿ ಅಥವಾ ಶಿವಯೋಗ ಮಂದಿರಕ್ಕಾಗಲಿ ಹಣವು ಕಳುಹಲ್ಪಟ್ಟಿರುವ ವಿಚಾರವು ಫಂಡಿನ ಸೆಕ್ರೆಟರಿ ಮತ್ತೂ ಮಂದಿರದ ವ್ಯವಸ್ಥಾಪಕರುಗಳಿಂದ ಬಂದ ವಿನಾ ಈ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವು. ಮತ್ತೂ ಫಂಡಿನ ಹಣವನ್ನು ಸೆಕ್ರೆಟರಿಯವರಲ್ಲಿಗೆ ಕಳುಹಬೇಕಲ್ಲದೆ ನಮ್ಮಲ್ಲಿಗೆ ಕಳುಹಲಾಗದು. [ಪ. ಪ್ರ.]

ಪತ್ರವ್ಯವಹಾರ.

ಅಣ್ಣಿಗೇರಿ.

ನಮ್ಮ ಅತ್ಯಂತ ಲೋಕಪ್ರಿಯ ವ್ಹಾಯಿಸರಾಯರವರಾದ ನೇಕನಾಮದಾರ ಲಾರ್ಡ ಹಾರ್ಡಿಂಜ ದೊರೆಗಳವರ ಪ್ರಿಯಪತ್ನಿಯವರಾದ ಲೇಡೀಹಾರ್ಡಿಂಜ್‌ರವರ ಅತ್ಯಂತ ಖೇದಕಾರವೂ, ಅಕಾಲಿಕವೂ, ಆಕಸ್ಮಿಕವೂ ಆದ ಮರಣದಿಂದ ತಮಗುಂಟಾಗಿದ್ದ ಅನಿರ್ವಚನೀಯವಾದ ದುಃಖವನ್ನು ಪ್ರದರ್ಶಿಸಲು ತಾ॥ ೨೧-೭-೧೪ ನೆಯ ದಿವಸ ಸಾಯಂಕಾಲದ ೬ ಕ್ಕೆ ಸರಕಾರೀ ಶಾಲೆಯಲ್ಲಿ ಈ ಗ್ರಾಮ ನಿವಾಸಿಗಳದೊಂದು ಮಹಾಸಭೆಯು ಡಿ. ಲೋ. ಬೋ. ಮೆಂಬರ ಮಿ. ರಾಘವೇಂದ್ರರಾವ ಇನಾಮತಿ ಇವರ ಅಧ್ಯಕ್ಷತೆಯ ಕೆಳಗೆ ನೆರೆದಿತ್ತು. ಆ ಸಭೆಗೆ ಮಿ. ಶೇಷಗಿರಿರಾವ ಮುದೇಸಾಯಿ ಮಿ. ಕಾಜಿ ಮುಂತಾದವರು ಬಂದಿದ್ದರು. ದುಃಖಪ್ರದರ್ಶಕ ಠರಾವನ್ನು ಸರ್ವಾನುಮತದಿಂದ ನೇಕನಾಮದಾರ ವ್ಹಾಯಿಸರಾಯರವರಾದ ಲಾರ್ಡ ಹಾರ್ಡಿಂಜ ದೊರೆಗಳವರ ಸನ್ನಿಧಿಗೆ ಆ ದೊರೆಗಳವರ ಪ್ರಾಯವ್ಹೇಟ ಸೆಕ್ರೆಟರಿ ಸಾ॥ ಬಾ॥ ರವರ ದ್ವಾರವಾಗಿ ತಂತಿಯಿಂದ ಕಳುಹಿಸಲ್ಪಟ್ಟಿತು.

ತಮ್ಮಸೇವಕ

A. R. Galagali.

ಶ್ರೀವಿಶ್ವಬ್ರಾಹ್ಮಣ ಪ್ರಥಮ ಮಹಾಸಭಾ,

ದಾವಣಗೆರೆ.

ಈ ಮುಂಚೆ ಪ್ರಸಿದ್ಧಪತ್ರಿಕೆಗಳ ಮೂಲಕ ಪ್ರಕಟವಾದ ಮೇರೆ ಇದೇ ಜುಲೈ ಮಾಹೆ ತಾ॥ ೩ ನೇ ಶುಕ್ರವಾರದಲ್ಲಿ ಶ್ರೀ ಕಾಳಿಕಾಂಬಮಂದಿರದ ಮುಂಭಾಗದಲ್ಲಿ ಈ ವಿಶ್ವಬ್ರಾಹ್ಮಣ ಮಹಾಸಭೆಯು ನೆರೆದಿತ್ತು. ಈ ಮಹಾಸಭೆಗೆ ಕಡೂರು, ತುಮಕೂರು, ಶಿವಮೊಗ್ಗ, ಚಿತ್ರದುರ್ಗ, ತರೀಕೆರೆ, ಬೀರೂರು, ಹರಿಹರ, ರಾಣಿಬೆನ್ನೂರು, ಹಾವೇರಿ, ಮುಂತಾದ ಪ್ರಾಂತ್ಯದ ಸ್ವಮತೀಯ ಮಹಾಜನಂಗಳು ಬಿತ್ತೈಸಿದ್ದುದಲ್ಲದೆ, ಸ್ಥಳಾಧಿಕಾರಿಗಳಾದ ಅಮಲ್ದಾರ್ ಮೆ॥ ಕೆ॥ ವೇದಾಂತಯ್ಯಂಗಾರ್, ಬಿ ಎ ಯವರು, ಪೋಲೀಸ್, ಇನ್‌ಸ್ಪೆಕ್ಟರ್, ಮೆ॥ ಟಿ ಎಸ್ ನಾಗೇಶರಾಯರು, ಮತ್ತು ಶ್ರೀಮಂತರಾದ ತಿರುಕಪ್ಪನವರ ಮಠದ ವೇ॥ ಷಡಾಕ್ಷರಪ್ಪಯ್ಯನವರು, ಪಂಡಿತಾಗ್ರೇಸರರಾದ ತೆಲಗಿ ಮಠದ ವೇ॥ ಚಂದ್ರಶೇಖರ ಶಾಸ್ತ್ರಿಗಳವರು, ಧನುರ್ಧಾರಿ ಸಂಪಾದಕರಾದ ಮ॥ ರಾ॥ ಶ್ರೀ. ಎಂ. ಮಂಜಪ್ಪನವರು, ಅಣಜಿಯಿಂದ ಗುಡಹಾಳು ಪ॥ ಶಾನುಭೋಗ್ ಮ॥ ರಾ॥ ಶ್ರೀ. ಎ. ಪಿ. ಸಿದ್ಧಲಿಂಗಪ್ಪನವರು ಮೊದಲಾದ ಇತರ ಮತೀಯ ಮಹನೀಯರೂ ದಯಮಾಡಿಸಿದ್ದರು. ಮೊದಲು ಸ್ವಾಗತಸಂಘಾಧ್ಯಕ್ಷರಾದ ಮ॥ ರಾ॥ ಶ್ರೀ. ಧರ್ಮತ್ರಗಾವಿ ಅಂಬಣ್ಣನವರ ಭಾಷಣವು ಓದಲ್ಪಟ್ಟಿತು. ತರುವಾಯ ಅಮಲ್ದಾರ್ ಸಾಹೇಬರು, ಸರ್ವಜನಾಂಗದವರೂ ತಮ್ಮಸಮಾಜದ ಪುರೋವೃದ್ಧಿಗೂ ವಿದ್ಯಾಭಿವೃದ್ಧಿಗಾಗಿಯೂ ಪ್ರಯತ್ನ ಮಾಡುವದು ಯುಕ್ತವಾದುದೆಂತಲೂ, ವೀರಶೈವರು ಮತ್ತು ಒಕ್ಕಲಿಗರು ಮುಂತಾದ ಸಮಾಜದವರ ಮೇಲ್ಪಂತಿ ಅನುಸರಿಸಿ ಈ ಕಾರ್ಯ ಕೈಗೊಂಡದ್ದಕ್ಕೆ ಸಂತೋಷಿಸಬೇಕಾಗಿದೆ ಎಂತಲೂ ನೀವು ಹಿಡಿದ ಈ ಮಹಾಕಾರ್ಯವನ್ನು ತುಂಬಾ ಹಿತಕಾಂಕ್ಷೆಯಿಂದ ಪೂರೈಸಿರಿ ಎಂಬುದಾಗಿಯೂ ಅಪ್ಪಣೆಗೊಡಿಸಿದ ತರುವಾಯ ವೇ॥ ಪಂಡಿತ ಚಂದ್ರಶೇಖರಶಾಸ್ತ್ರಿಗಳು, ಐಕಮತ್ಯದ ಮಹತ್ವವನ್ನು ಪ್ರತಿಯೊಬ್ಬ ಸಭಿಕರಿಗೂ ಮನನವಾಗುವಂತೆ ಬೋಧಿಸಿದ್ದಲ್ಲದೆ ಹಿಡಿದ ಈಕಾರ್ಯದಲ್ಲಿ ಸರ್ವರೂ ಏಕಮನಸ್ಸಿಂದ ವರ್ತಿಸಿ, ಕೊನೆಗಾಣಿಸಿ, ಕೀರ್ತಿಯುತರಾಗಿರೆಂದು ಬಹು ಸರಸವಾಗಿ ಅಪ್ಪಣೆ ಕೊಡಿಸಿದರು. ತರುವಾಯ ಗಂಧಪುಷ್ಪ ತಾಂಬೂಲಗಳು ಹಂಚಲ್ಪಟ್ಟು ಸಭೆಯು ತೆರವಾಯಿತು. ನಂತರ ಸಬ್‌ಜಕ್ಟ್ ಕಮಿಟಿಯಲ್ಲಿ ನಿರ್ಣಯವಾದ ಮೇರೆಗೆ ಸಾಯಂಕಾಲ ಪುನಃ ಸಭೆಯು ಸೇರಿತು. ಸರ್ವಾನುಮತದಿಂದ ತರೀಕೆರೆಯಲ್ಲಿರುವ ಮ॥ ರಾ॥ ಶ್ರೀ ಹಾಸನದ ಮೂರ್ತ್ಯಪ್ಪಾಚಾರ್ಯರು ಅಧ್ಯಕ್ಷರಸ್ಥಾನವನ್ನು ಅಲಂಕರಿಸಿದ ತರುವಾಯ, ಸಮಾಜದ ಧರ್ಮ ಮತ್ತು ವಿದ್ಯಾಭಿವೃದ್ಧಿಗೆ ಅವಶ್ಯಕವಾದ ವಿಷಯಗಳನ್ನು ಕುರಿತು, ಸರ್ವರಿಗೂ ಆನಂದವಾಗುವಂತೆ ಭಾಷಣ ಮಾಡಿದರು. ಬಳಿಕ ಮ॥ ರಾ॥ ಶ್ರೀ. ಕಡೂರು ವೀರಪ್ಪಾಚಾರ್ಯರು ಧರ್ಮಣ ನಾಯ್ಕನದುರ್ಗದ ಭುಜಂಗಾಚಾರ್ಯರು, ದಾವಣಗೆರೆ ಗುರುಪ್ಪಾಚಾರ್ಯರು, ಹೊಳಲ್ಕೆರೆ ನಂಜುಂಡಾಚಾರ್ಯರು, ವಿದ್ಯೆ, ವಿಶ್ವಬ್ರಾಹ್ಮಣ ಸಮಾಜಸ್ಥಿತಿ, ಧರ್ಮ ಮುಂತಾದ ಅತ್ಯಂತೋಪಯುಕ್ತವಾದ ವಿಷಯಗಳ ಮೇಲೆ ಭಾಷಣಗಳನ್ನು ಮಾಡಿದರು. ಅನಂತರ ಮ॥ ರಾ॥ ಅಣಜಿ ಎ. ಪಿ. ಸಿದ್ಧಲಿಂಗಪ್ಪನವರು, ಈ ವಿಶ್ವಬ್ರಾಹ್ಮಣ ಸಮಾಜದವರು ಪ್ರತಿಯೊಂದು ವರ್ಷವೂ ಒಂದೊಂದು ಭಾಗದಲ್ಲಿ ಈರೀತಿ ಸಭಾ ಸೇರುವಂತೆ ಮಾಡುವದರಿಂದ ಆಗುವ ಲಾಭವನ್ನೂ ಮತ್ತು ಈ ಸಮಾಜದ ವಿದ್ಯಾಭಿವೃದ್ಧಿಗಾಗಿ ಒಂದು ದ್ರವ್ಯನಿಧಿ ಶೇಖರಿಸ ವುದು ಯುಕ್ತವಾದುದೆಂದೂ ಹೇಳಿದ ತರುವಾಯ, ಮ॥ ರಾ॥ ಶ್ರೀ ಧನುರ್ಧಾರಿ ಸಂಪಾದಕರೂ, ಮತ್ತು ಪಂಡಿತ ವೇ॥ ಚಂದ್ರಶೇಖರಶಾಸ್ತ್ರಿಗಳವರು ಸಹ ಇದೇ ವಿಷಯವನ್ನು ಸರ್ವರಮನದಲ್ಲಿ ನೆಟ್ಟು ಘಟ್ಟಿಯಾಗಿ ನಿಲ್ಲುವಂತೆ ಅನೇಕ ದೃಷ್ಟಾಂತಗಳೊಡನೆಯೂ ಕೇಳುವವರಿಗೆ ಇಂಪಾಗಿಯೂ ಸರ್ವರ ಮನಸ್ಸಿಗೆ ಸೊಂಪಾಗುವಂತೆಯೂ ಭಾಷಣಮಾಡಿದರು. ಆಕೂಡಲೆ, ಅಧ್ಯಕ್ಷ ಮಹಾಶಯರು, ಮತ್ತು ಶ್ರೀಮಂತರಾದ ಬೀರೂರು ಮ॥ ರಾ॥ ದೊಡ್ಡರುದ್ರಪ್ಪನವರೇ ಮುಂತಾದ ಪ್ರಮುಖರುಕೊಡಲೊಪ್ಪಿದ ಚಂದಾಪಟ್ಟಿಯು ೫೭೮ರೂ ವರೆಗೆ (ಐನೂರ ಎಪ್ಪತ್ತೆಂಟು) ಗೆ ಏರಿತು. ಪುಷ್ಪತಾಂಬೂಲಾದಿಗಳು ಸಭಿಕರಿಗೆ ಹಂಚಲ್ಪಟ್ಟು ಸಭೆಯು ಕೆಲಸವು ಪೂರೈಸಿತು. ತಾರೀಖು ೪ ನೇ ಶನಿವಾರ ಸಾಯಂಕಾಲದಲ್ಲಿ ಚಿಕ್ಕಗಂಗಳ ಮಠದ ಸರ್ವಾಧಿಕಾರಿಗಳಾದ ಶ್ರೀ ಕಾಳಹಸ್ತಿ ಸ್ವಾಮಿಗಳವರ ಅಗ್ರಾಸನದಲ್ಲಿ ಡಿಟೊ ಮಠದ ಏಜಂಟರವರಾದ ಶ್ರೀ ನೀಲಕಂಠಸ್ವಾಮಿಗಳವರ ಪ್ರೋತ್ಸಾಹದಿಂದ ಸಭೆಸೇರಿ ಧಾರ್ಮಿಕ ವಿಷಯಗಳು ಚರ್ಚೆಸಲ್ಪಟ್ಟವು. ಅಲ್ಲದೆ ಮಠಾಭಿಮಾನಿಗಳಾದ ಚಿಕ್ಕಗಂಗಳದ ಶ್ರೀಗಳವರು ಮಹಾಸಭೆಯವರು ಏರ್ಪಡಿಸಿರುವ ವಿದ್ಯಾವರ್ಧಕ ಫಂಡಿಗೆ ಧನಸಹಾಯ ಸ್ವಹಸ್ತದಿಂದಲೂ ಮತ್ತು ಶಿಷ್ಯಮಂಡಲಿಯಿಂದಲೂ ಮಾಡಿಸುತ್ತೇವೆ ಎಂಬುದಾಗಿ ಅಭಯವನ್ನಿತ್ತು, ಸಭಾಕಾರ್ಯವನ್ನು ಪೂರೈಸಿದರು. ಈ ಮಹಾಸಭೆಗೆ ಅಭಿಮಾನದಿಂದ ದಯಮಾಡಿಸಿ ತಮ್ಮ ಶಿಷ್ಯಮಂಡಲಿಯವರು ಕೈಕೊಂಡ ಕಾರ್ಯದಲ್ಲಿ ಭಾಗಿಗಳಾಗಿದ್ದು ಪೂರೈಸಿದ ಗುರುಶ್ರೇಷ್ಠರಾದ ಚಿಕ್ಕಗಂಗಳ ಮಠದ ಶ್ರೀಗಳವರಿಗೂ ಮತ್ತು ಬಹದ್ದೂರ ಶಟ್ಟಿಮೂರು ಜೀವದ ಮಠದ ಶ್ರೀಗಳವರಿಗೂ ವಿಶ್ವಬ್ರಾಹ್ಮಣ ಮಂಡಲಿಯವರು ಕೃತಜ್ಞತೆ ತೋರಿಸದೆ ಇರಲಾರರು. ಈ ಮಹಾಕಾರ್ಯದಲ್ಲಿ ಮುಂದಾಳುಗಳಾಗಿದ್ದು ದೇಹಶ್ರಮ, ಅರ್ಥಶ್ರಮ ನೋಡದೆ ಹಿಡಿದ ಕೆಲಸವನ್ನು ಕೊನೆಗಾಣಿಸಿದ ಸ್ವಾಗತಸಂಘಾಧ್ಯಕ್ಷರಾದ ಅಂಬಣ್ಣನವರು, ಮಹಾಸಭೆಯ ಸೆಕ್ರೆಟರಿಯವರಾದ ಐರಣಿ ರಾಚೋಟಪ್ಪನವರು, ಮತ್ತು ಮಲ್ಲಪುರದ ನಾಗಲಿಂಗಾಚಾರ್ಯರು, ಬಸಪ್ಪನವರು, ವೀರಪ್ಪನವರು, ಶಿವಸಪ್ಪನವರು, ಶಂಕರಪ್ಪನವರು, ಮುಂತಾದ ಪ್ರಮುಖರು ಕೀರ್ತಿಗೆ ಭಾಜನರಾದುದಕ್ಕೋಸ್ಕರ ಆನಂದಿಸತಕ್ಕದ್ದಾಗಿದೆ.

ಎ. ಪಿ. ಯಸ್.

ಪ್ರತ್ಯಕ್ಷದರ್ಶಿ.

ದಕ್ಷಿಣ ಕನರಾ ಜಿಲ್ಲೆಯ ಜಡ್ಜರ ಕೋರ್ಟಿನಲ್ಲಿ ಒಬ್ಬ ಹೆಂಡತಿಯು ತನ್ನ ಪತಿಯ ಮರಣಶಾಸನದ ಪ್ರಕಾರ ಪಡೆದ ಆಸ್ತಿಯ ಬಾಧ್ಯತೆಯನ್ನು, ತನ್ನ ಗಂಡನು ಸತ್ತನಂತರ ತಾನು ವ್ಯಭಿಚಾರವೃತ್ತಿಗೆ ಬಿದ್ದುದರಿಂದ ಕಳೆದುಕೊಳ್ಳುವಳೆಂದು ತೀರ್ಮಾನಿಸಲ್ಪಟ್ಟಿದ್ದಿತು. ಆದರೆ ಮದ್ರಾಸು ಹೈಕೋರ್ಟಿನವರು ಈ ಸಂದರ್ಭದಲ್ಲಿ ಆಕೆಯ ನಡತೆಯು ಕೆಟ್ಟದ್ದೋ ಒಳ್ಳೆಯದೋ ಎಂದು ವಿಚಾರಮಾಡುವುದಕ್ಕೆ ಕೋರ್ಟಿಗೆ ಅಧಿಕಾರವಿಲ್ಲವೆಂದೂ ಪತಿಯ ಮರಣಶಾಸನದಂತೆ ವಿತಂತುವಿಗೆ ಆಸ್ತಿಯ ಅಧಿಕಾರವಿರುವುದೆಂದೂ ತೀರ್ಮಾನಿಸಿದರು.

ನೂತನ ಪಾಠಶಾಲಾ.

ರಾಯಚೂರು ತಾಲ್ಲೂಕಿಗೆ ಸೇರಿದ ಕೃಷ್ಣಾನದಿಯ ಮಧ್ಯದಲ್ಲಿ ರಾಮಗಡ್ಡೆ ಎಂಬ ಸುಕ್ಷೇತ್ರವೊಂದುಂಟು. ಪ್ರಭುವಿನಪರಾವತಾರರೆನಿಸಿದ ಶ್ರೀ ಸಿದ್ಧಲಿಂಗಸ್ವಾಮಿಗಳೆಂಬ ಶಿವಯೋಗಿಗಳು ಈ ಕ್ಷೇತ್ರದಲ್ಲಿ ಕೆಲವುಕಾಲ ಅನುಷ್ಠಾನವಂ ಮಾಡಿ ನೂರಾರು ವರ್ಷಗಳಾಚೆಗೆ ನೀರಡಗುಂಭದ ಪಚ್ಚಿಮಾದ್ರಿ ಮಠದಲ್ಲಿ ಶಿವೈಕ್ಯರಾದರು. ಅವರ ಕರಕಂಜಸಂಜಾತ ಶ್ರೀ ಚೋಳೇಂದ್ರಸ್ವಾಮಿಗಳು ಘನವೈರಾಗ್ಯಸಂಪನ್ನರಾಗಿ ಇದೇ ಕ್ಷೇತ್ರದಲ್ಲಿ ಮಠವಂ ಕಟ್ಟಿ ಅನುಷ್ಠಾನವಂ ಮಾಡಿಕೊಂಡಿದ್ದು ಶಿವಸಮಾಧಿಗತರಾಗಿರುವರು. ಇವರ ಮಹಿಮಾತಿಶಯವು ಈ ಪ್ರಾಂತದ ಸಕಲಜಾತಿಯವರಲ್ಲಿ ಈಗಲೂ ಶ್ಲಾಘನೀಯವಾಗಿ ವರ್ತಿಸುತ್ತಿದೆ. ಗತ ಸಂ॥ ರದ ಮಾಘ ಬ॥ ೧೪ ಶಿವರಾತ್ರಿಗೆ ಪದ್ಧತಿಯಂತೆ ಸಹಸ್ರಜನ ಭಕ್ತಮಾಹೇಶ್ವರರೂ ಅನೇಕ ಪ್ರಮುಖರೂ ಬಂದಿದ್ದರು. ಆ ದಿನ ಸಾಯಂಕಾಲಾನಂತರ ಶಿವಪೂಜಾದಿಸಮಾರಂಭಗಳು ನಡೆದ ಬಳಿಕ ಸಂಗೀತ ಕೀರ್ತನಕಾರರ ಗಾನವಾಕ್ಸರಣಿಗಳಿಂದ ಎಲ್ಲಾ ಶ್ರೋತೃಗಳಿಗೂ ಜಾಗರಣವು ಚೆನ್ನಾಗಿ ಜರುಗಿತು, ಮತ್ತು ಮರುದಿನ ಸಾಯಂಕಾಲಕ್ಕೆ ಏತನ್ಮಠಾಧೀಶರಾದ ಶ್ರೀ ಸಿದ್ಧಲಿಂಗಸ್ವಾಮಿಗಳ ಸಂಮುಖದಲ್ಲಿ ಸಭೆಗೂಡಿದ್ದು, ಮತತತ್ವ ಮತಪುರೋಭಿವೃದ್ಧಿ ಕಾರ್ಯಗಳನ್ನು ಕುರಿತು ಉಪನ್ಯಾಸಕರು ಚೆನ್ನಾಗಿ ಚರ್ಚಿಸಿದ ಬಳಿಕ ಕೆಲವು ವರ್ಷಗಳ ಕೆಳಗೆ ವೀರಶೈವ ಮತೋದ್ಧಾರಕರಾಗಿ ಗತಿಸಿರುವವರ ಈಗ ಅಲ್ಲಲ್ಲಿರುವ ಮಹಾತ್ಮರ ಚರಿತ್ರಗಳು ಪಂಡಿತರಿಂದ ವರ್ಣಿಸಲ್ಪಟ್ಟು ಮತಹಿತೈಷಿಗಳಾದ ಸ್ಟಾರ್‌ಪತ್ರಿಕಾಕರ್ತರಿಗೆ ಸಕಲರೂ ಚಂದಾದಾರರಾಗುತ್ತ ಸಹಾಯವನ್ನುಂಟುಮಾಡುವುದು ಈಗಿನ ನವನಾಗರಿಕ ಪದ್ಧತಿಗೆ ಸರಿಯಾದುದೆಂದು ವಿಸ್ತರಿಸಿ ಸದರಿ ಮಠಕ್ಕೂ ಪತ್ರಿಕೆಯು ಬರುವಂತೆ ಏರ್ಪಡಿಸಲ್ಪಟ್ಟಿತು. ತರುವಾಯ ಅಧ್ಯಕ್ಷರಾಗಿದ್ದ ಶ್ರೀ ಸಿದ್ಧಲಿಂಗಸ್ವಾಮಿಗಳು ತಮ್ಮ ಮಠದಲ್ಲಿ ಮಾಹೇಶ್ವರವಟುಗಳ ವಿದ್ಯಾಭ್ಯಾಸಕ್ಕಾಗಿ ಸಂಸ್ಕೃತಶಾಲೆಯೊಂದನ್ನೇರ್ಪಡಿಸಬೇಕೆಂಬ ಸಂಪೂರ್ಣಾಭಿಪ್ರಾಯವನ್ನು ವ್ಯಕ್ತಪಡಿಸಿದರು. ಕೂಡಲೇ ಸದಭಿಮಾನಿಗಳೆಲ್ಲರೂ ಈ ಕ್ಷೇತ್ರದಲ್ಲಿ ವಿದ್ಯಾವರ್ಧನಕಾರ್ಯವು ಅತ್ಯವಶ್ಯಕವಾಗಿ ನಡೆಯತಕ್ಕದ್ದೆಂದು ಒಪ್ಪಿ, ನಿರಾತಂಕವಾಗಿ ಜರುಗಬೇಕೆಂಬ ಬಗ್ಗೆ ಧನರಾಶಿಯನ್ನು ಕೂಡಿಸಲು ಅನುಗುಣವಾಗಿ ತಮ್ಮ ಉದಾರ ಮನಸ್ಸಿನಿಂದ ಧನವನ್ನು ಕೊಡಲೊಪ್ಪಿ ಹಸ್ತದಿಂದ ಲಿಖಿಸಿದರು. ಇದಲ್ಲದೆ ಸತ್ಕುಲಪ್ರಸೂತರ ಲೋಕೋತ್ತರೌದಾರ್ಯದಿಂದ ಇನ್ನು ಕೆಲವು ಮಾಸಗಳಲ್ಲಿ ಧನರಾಶಿಯು ಕ್ರಮವಾಗಿ ಕೂಡಿದ ಬಳಿಕ ಶಾಲಾಕಾರ್ಯವು ನಡೆಯಬೇಕಾಗಿದ್ದರೂ ಸದರಿ ಶ್ರೀಗಳವರು ಕೂಡಲೇ ಜರುಗಬೇಕೆಂಬ ಕುತೂಹಲವುಳ್ಳವರಾಗಿ ಶಾಲೆಗೂ ವಿದ್ಯಾರ್ಥಿಗಳ ಭೋಜನಕ್ಕೂ ಪ್ರತ್ಯೇಕವಾಗಿ ಮೂರುತಿಂಗಳಲ್ಲಿಯೇ ಅಂದವಾಗಿ ಕಟ್ಟಡವಂ ಮಾಡಿಸಿದ್ದಾರೆ. ವಿದ್ಯಾರಂಭೋತ್ಸವವು ನಡೆಯಲು ನಿಶ್ಚೈಸಿದ ಪ್ರಕಾರ ಇದೇ ಆನಂದವತ್ಸರದ ಜ್ಯೇಷ್ಠ ಬ॥ ೩ ಗುರುವಾರ ೧೦ ಘಂಟೆಗೆ ತಳಿರುತೋರಣಗಳಿಂದಲಂಕರಿಸಲ್ಪಟ್ಟ ಶಾಲಾಮಂದಿರದಲ್ಲಿ ಶ್ರೀಗಳವರು ಸಿಂಹಾಸನಾ-

ಸೀನರಾಗಿರಲು, ಸನ್ನಿಧಿಯಲ್ಲಿ ಶಾಲಾಧ್ಯಾಪಕರಾದ ವೇ॥ ...ಶಾಲಾ ಮತೀಯ ಬಸವಶಾಸ್ತ್ರಿಗಳು ಗಣಪತಿ ಸರಸ್ವತಿಯರ ವಿಧ್ಯುಕ್ತಪೂಜಾನಂತರ ವಿದ್ಯಾರ್ಥಿಗಳಿಗೆ ವಿದ್ಯಾರಂಭವಂ ಗೈಸಿದರು. ತರುವಾಯ ಶ್ರೀ ಚೋಳೇಂದ್ರಸ್ವಾಮಿಗಳನ್ನು ಕುರಿತು ರಚಿಸಿದ ಶಾರ್ದೂಲವಿಕ್ರೀಡಿತವೃತ್ತ.

ಶ್ರೀಮಚ್ಚಂದ್ರಧರಸ್ವರೂಪನಮಲಾಮ್ನಾಯಾಂತಬೋ
ಧ[illegible]ಪರಂ । ಕಾಮಕ್ರೋಧಮುಖಾರಿಲೋಪ ನುಪಮಾತೀ
[illegible]ತಾಪಂಮಲಂ ॥ ಧೀಮತ್ಪುಂಗವನುತ್ಯಸದ್ಗುಣಕಲಾ
[illegible]ಲಿಕಮ್ಮಂಸದಾ । ರಾಮಕ್ಷೇತ್ರಮಠಾಂತರಾಳ ವಿಲ
[illegible]ಚೋಳೇಂದ್ರಯೋಗೀಶ್ವರಂ ॥೧॥
[illegible]॥ ಆಮಂಕಲಿಮಲನಾಶಕ ।
ನಾಮಂವರವೀರಶೈವವಾರ್ಧಿಶಶಾಂಕಂ ॥
ಆಮಂಭಕ್ತೇಷ್ಟಪ್ರದ ।
ನಾಮವರಚೋಳೇಂದ್ರಯತಿಯನುತಿಪೆಂ ಧನ್ಯಂ ॥೨॥

ಈ ಎರಡು ಪದ್ಯಗಳನ್ನು ಮಧುರಸ್ವರದಿಂದ ಹೇಳಲು ನೆರೆದಿದ್ದ ಭಕ್ತಮಾಹೇಶ್ವರರು ಆನಂದವಂ ಪ್ರದರ್ಶಿಸಿದರು. ಆವೇಳೆ ಶ್ರೀಪಾದಸನ್ನಿಧಿಯಲ್ಲಿ ಸಕಲರಿಗೂ ತಾಂಬೂಲವನಿತ್ತು ಜಯನಮಃ ಪಾರ್ವತೀಪತೇ ಎಂಬ ಮಂಗಳರವದೊಡನೆ ಸಭೆಯು ವಿರಮಿಸಲ್ಪಟ್ಟಿತು. ಈ ಶಾಲಾವೃದ್ಧಿಯ ಕಾರ್ಯವನ್ನು ಸ್ಟಾರ್ ಪತ್ರಿಕಾಮುಖೇನ ಆಗಾಗ್ಗೆ ಮತಾಭಿಮಾನಿಗಳಿಗೆಲ್ಲರಿಗೂ ತಿಳಿಸೋಣವಾಗುತ್ತದೆ. ಏತನ್ಮಹಾಕಾರ್ಯವನ್ನು ನಡೆಯಿಸಲು ಸಿದ್ಧರಾಗಿದ್ದ ಶ್ರೀಗಳವರಿಗೂ ಸಹಾಯಕರಾದ ಸಭ್ಯರಿಗೂ ಶ್ರೀಚೋಳೇಂದ್ರಸ್ವಾಮಿಯು ಆಯುರಾರೋಗ್ಯಗಳ ನಿತ್ತು ಕಾಪಾಡಲೆಂದು ಕೋರುವ ವಿದ್ಯಾಭಿಮಾನಿ.

ಸದರಿ ಪಾಠಶಾಲಾವೃದ್ಧಿಯ ಫಂಡಿಗಾಗಿ ಉದಾರಿಗಳು ಕೊಡಲೊಪ್ಪಿದ ದ್ರವ್ಯದ ವಿವರ.

ಜೇಗರಕಲ್ಲು ಗ್ರಾ॥ ರಂಗಣ್ಣನವರು ೫೦೦ ರೂ. ಗಂಜ್ಜಿ ಗ್ರಾ॥ ಭೀಮಣ್ಣನವರು ೫೦೦ ರಾಯಚೂರು ಬಳಿ ಮಹಾದೇವಪ್ಪನವರು ೫೦೦ ಹರಿಷಿಣಗಿ ಗ್ರಾ॥ ಹಂಪಣ್ಣನವರು ೪೦೦ ಇಟ್ಟಿಗಿ ಗ್ರಾ॥ ಅಮರಪ್ಪಚಂದ್ರರಾಯರು ೪೦೦ ಮುಡಮಾಲಿ ಗ್ರಾ॥ ನರಸಿಂಗಪ್ಪನವರು ೨೦೦ ವಡ್ಲೂರು ಶಂಕರಪ್ಪನವರು ೧೫೦ ರಾಯಚೂರು ಸಾಲಿಮಠದ ವೇ॥ ವೀರಯ್ಯನವರು ೧೫೦ ಕೊಡ್ಲೂರಲ್ಲಿ ಕಡಬೂರ ರಾಮಣ್ಣನವರು ೧೦೦ ಮುದಗಲ್ಲು ಮಠದ ಶ್ರೀ॥ ವೀರಸಂಗಪ್ಪನವರು ೧೦೦ ಪುಲಮಾಮಡಿ ಕಡಿಚೂರು ಬಸಪ್ಪನವರು ೧೦೦ ಪುಲಮಾಮಡಿ ಸ್ವಂತ ಸದಾಶಿವಪ್ಪನವರು ೧೦೦ ನಾರಾಯಣಪೇಟೆ ಮಳಿಕೇಡ ಬಸವಪ್ಪನವರು ೧೦೦ ನಾರಾಯಣಪೇಟೆ ಬಿಬ್ಬಳ್ಳಿ ಶ್ರೀಮತಿರಾಚಮ್ಮನವರು ೧೦೦ ವೆಂಕಟಾಪುರದ ದಡ್ಡಿ ತಿಪ್ಪಣ್ಣನವರು ೫೦ ವೆಂಕಟಾಪುರದ ಯರಡರೊಟ್ಟಿ ಗುರಪ್ಪನವರು ೫೦ ಕೊತ್ತೂರು ಲಿಂಗರಡ್ಡಿ ಹನುಮಪ್ಪನರಸಪ್ಪ ಗೌಡರು ೫೦ ಸಗ್ಗಯಕುಂಟಿ ಧರಣಿಮರಿಸೂಗಪ್ಪನವರು ೫೦ ವೆಂಕಟಾಪುರದ ರುದ್ರಯ್ಯನವರು ೫೦ ವೆಂಕಟಾಪುರದ ನೀಲಗಲ್ಲು ಬಸವಪ್ಪನವರು ೪೦ ರಾಯಚೂರು ಬಾಗವಾನರ ಸಿದ್ಧರಾಮಪ್ಪನವರು ೩೫ ಪುಲಮಾಮಡಿ ಶಿ॥ ರುಮಾಲರಾಚಯ್ಯನವರು ೩೫ ನಾರಾಯಣಪೇಟೆ ಕಡಿಚೂರು ವೀರಣ್ಣನವರು ೩೫ ರಾಯಚೂರು ಶಿ॥ ಶಿವಕಥಾ ಗಡ್ಡೆಯ್ಯನವರು ೩೫ ನಾರಾಯಣಪೇಟೆ ಮೈಲಾಪುರದ ಚಂದ್ರಪ್ಪನವರು ೩೫ ಬೊಮ್ಮನಹಾಳ ಆವಟಿ ನಾಗಪ್ಪನವರು ೩೫ ವೆಂಕಟಾಪುರದ ಬಳ್ಳಾರಿ ಕೃಷ್ಣಪ್ಪನವರು ೩೫ ಪುಲಮಾಮಿಡಿ ಲಿಂಗಯ್ಯನವರು ೩೫ ಆಲಂಪಲ್ಲಿ ಮ॥ ರಾಚೋಟಪ್ಪನವರು ೧೫ ವೆಂಕಟಾಪುರದ ಗ್ರಾ॥ ವಿರುಪಣ್ಣನವರು ೧೫ ನಾರಾಯಣಪೇಟೆ ನಂದಿ ಸಿದ್ಧರಾಮಪ್ಪನವರು ೧೫ ನಾರಾಯಣಪೇಟೆ ಎಲಿಗಾರ ಸಿದ್ಧಪ್ಪನವರು ೧೫ ಕೊಲ್ಲಂಪಲ್ಲಿ ಸೆಟ್ಟಿ ವೀರಪ್ಪನವರು ೧೫ ಜೇಗರಕಲ್ಲು ಮಠದ ಶ್ರೀ॥ ರಾಚಯ್ಯನವರು ೧೫ ವೆಂಕಟಾಪುರದ ಗೂಡು ಬಾಯಿಯವರು ೧೫ ವೆಂಕಟಾಪುರದ ಬಳ್ಳಾರಿ ವಿರುಪಣ್ಣನವರು ೧೫ ನಾರಾಯಣಪೇಟೆ ಕಲ್ಯಾಣಿ ರಾಮಯ್ಯನವರು ೧೦ ನಾರಾಯಣಪೇಟೆ ಆನೂರ ಶಿವಲಿಂಗಪ್ಪನವರು ೧೦ ರೂ. ಇನ್ನುಮೇಲೆ ದ್ರವ್ಯಸಾಹಾಯ್ಯಮಾಡುವವರ ಹೆಸರುಗಳು ಕೆಲವು ಮಾಸಗಳಲ್ಲಿ ತಿಳುಹಿಸಲ್ಪಡುತ್ತವೆ.

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ -೦-೨ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗರೊಟ್ಟು ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪ ಡಬ್ಬಿ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು. ಟಿ. ಎಲ್. ಉಪಾಧ್ಯಾಯ,

15 ಸುಗಂಧಶಾಲಾ, ಮೈಸೂರು.

ದಿ ಜನರಲ್ ಏಜನ್ಸಿ, ಮೈಸೂರು.

ಕಾದಂಬರಿಗಳು:— ಚಂಡಮಾರುತ ೦-೨-೦; ಚರಿತಾಮೃತಂ ೦-೫-೦; ರಾಜಕಥಾವಲ್ಲರಿ ೦-೫-೦; ಪೀಟರಿನಚರಿತ್ರೆ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೨-೬; ಸೀತೆ ೦-೫-೦; ಸಾಹಸಿಕೆ, ಕಲಾನಾಥ ೦-೮-೦; ಮಹಾಲಕ್ಷ್ಮಿ ೦-೨-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸತ್ಯಸಂಜೀವಿನಿ ೦-೮-೦; ಕೊಹಿನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೨-೦. 46

ಫಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

35

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಮರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪುದ್ರೇಕವಾದವರು, ತೃಷೆವುಳ್ಳವರು, ದಮ್ಮಿನವರು, ಕೆಮ್ಮಿನವರ ಕಫು, ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವವರು, ಸ್ನೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲಿ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತ್ತು ೪೦ ತೋಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಪೋಸ್ಟಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ:—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೋಂಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು ಕಾಪಾಡುವುದರಲ್ಲಿ ಶ್ರೇಷ್ಠವಾದ

44

ಶ್ರೀಕೇರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ—ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕೇರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು.

ಶೀತವಾಯು-ಕೆಮ್ಮು-ನೆಗಡಿ-ದಿನಜ್ವರ-ಮೂರರಜ್ವರ ನಾಲ್ಕರಜ್ವರ- ಮಲೇರಿಯಾಜ್ವರ- ತಲೆನೋವು- ಮೈಕೈನೋವು ಮತ್ತು ಭಾರ-ಅರೋಚಕ ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣಭೇದಿ-ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಸೆಳೆತ ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ೫೦ ಮಾತ್ರೆ ೪ ಆಣೆ. ಇದಕ್ಕೆ ಒಂದು ಇನಾಮು. ವಿ. ಪಿ. ಛಾರ್ಜು ಪ್ರತ್ಯೇಕ.

ಆಮೋದಿನಿ:— ಅಮೋಘವಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರಮಾಡುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷ ಕೀರ್ತಿಯನ್ನು ಸಂಪಾದಿಸಿ ನಾನಾತರಹಾ ಕೆಮ್ಮು, ದಮ್ಮು, ಉಬ್ಬಸ, ಶಾಂತಿ, ವಾಕರಿಕೆ, ಮಲಬಂಧ, ಅಗ್ನಿಮಾಂದ್ಯ, ಪಿತ್ತಸಂಕಟ, ಅರೋಚಕ, ಬಾಯಾರಿಕೆಗಳನ್ನು ತಕ್ಷಣ ಗುಣಪಡಿಸಿ [illegible] ಧಾತುವೃದ್ಧಿಯು-
ಕುಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೫೦ ಮಾತ್ರೆ ೪ ಆಣೆ. ಇದಕ್ಕೆ ಒಂದು ಇನಾಮು. ವಿ.ಪಿ. ಛಾರ್ಜು ಪ್ರತ್ಯೇಕ.

ವಿಳಾಸ— ಬಿ. ವಿ. ಪಂಡಿತ್,
ಸದ್ವೈದ್ಯಶಾಲಾ, ನಂಜನಗೂಡು,
ಮೈಸೂರ್ ರಿ॥

45

ದೊಡ್ಡ ಕಂಪೆನಿ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟಿ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯು. ಎನ್. ಮತ್ತು ಕಂಪೆನಿ,
ಬನಾರಿಸ್ ಸಿಟಿ. (ಕಾಶೀ)

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕೆಯ್ಯಿಂದ ಬಣ್ಣ ಕೊಟ್ಟಿರುವ ಫೋಟೊ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡ ಪಲ್ಲಕ್ಕಿ ಉತ್ಸವದ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸನತೊಳಸಹಿತ ಆದ ಸಮಾರಂಭದ ಫೋಟೊ ೧ ಕ್ಕೆ ಕ್ರಯ ೧ ರುಪಾಯಿ

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಾಮಾದಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೊ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೊ ೧ ಕ್ಕೆ ಕ್ರಯ ಫುಲ್ಲಸೈಜು ೧ ರುಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀ ಜಗದ್ಗುರು ತೋಂಟದಾರ್ಯ ಗದಗ, ಶ್ರೀ ಜಗದ್ಗುರು ಮೂರುಸಾವಿರ ಹುಬ್ಬಳ್ಳಿ. ಶ್ರೀ ವೀರಶೈವ ಸತ್ಪುರುಷಮಾಲಾ, ಹಾಳಕೇರಿ ಆನಂದಸ್ವಾಮಿಯ ಫೋಟೊ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೊ ಸಿಗುತ್ತವೆ. ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ

ಹೊಸಫ್ಯಾಷನ್—ಸಭ್ಯಗೃಹಸ್ಥರು ಗಡಿಯಾರ ಸರ್ಪಳಿಗೆ ಹಚ್ಚುವ ಲಾಕೇಟುಗಳೂ, ಯಿದರಲ್ಲಿ ಹಿಂದೆ ಮುಂದೆ ಇಪ್ಪಕಾರ ೨ ಫೋಟೊ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ॥, ।॥=, ೧, ೧।, ಪ್ರಕಾರ, ಮತ್ತೂ ಬೆಳ್ಳೀದು ರು ೧॥ ಕೋಲ್ಡ್ ಗೋಲ್ಡ್ ಭಂಗಾರದ್ದು ದುರ್ಬೀನದ ಗ್ಲಾಸದೂ ಕ್ರಯ ೨॥, ೨॥। ರೂ.

ಪರೂರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ಧಾಣೆ ಟಿಕೀಟು ಕಳುಹಿಸಿ ಕ್ಯಾಟಲಾಕು ಬೇಕಾದವರು ತರಿಸಿಕೊಳ್ಳಿರಿ. ವ್ಯವಸ್ಥಾಪಕ— ಗಂಗಪ್ಪಾ [illegible],

31 [illegible] ಸೊಲ್ಲಾಪುರ।

ಈಗತಾನೇ ಅಚ್ಚಾದ ಪುಸ್ತಕವು.
(ರೇವಣಸಿದ್ಧೇಶ್ವರಪುರಾಣಂ.)

ವೀರಶೈವಮತಪ್ರತಿಷ್ಠಾಪನಾಚಾರ್ಯರಾದ ಶ್ರೀ ರೇಣುಕಾಚಾರ್ಯರ ಚರಿತ್ರೆಯನ್ನು ಸವಿಸ್ತಾರವಾಗಿ ರಚಿಸಲ್ಪಟ್ಟಿರುವುದು. ... ಈ ಗ್ರಂಥವು ಬೆಲೆ ವಿ. ಪಿ. ಮೂಲಕ ಅಂಚೆಯ ವೆಚ್ಚವು ಸೇರಿ ೧.೦ ಆಣೆಗಳು.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾರಕಮಂಡಲಿ, ಮೈಸೂರು.

3

ಮತ್ತೊಂದು ನೂತನಗ್ರಂಥ.
ಷಟ್‍ಸ್ಥಲ ಸಿದ್ಧಾಂತಚಿಂತಾಮಣಿ.

ಇದು ಶ್ರೀರೇಣುಕಾಚಾರ್ಯರು ಅಗಸ್ತ್ಯರಿಗೆ ಉಪದೇಶಿಸಿದ ವೀರಶೈವ ಸಿದ್ಧಾಂತಶಾಸ್ತ್ರವು. ... ವಿ. ಪಿ. ಮೂಲಕ ಅಂಚೆಯ ವೆಚ್ಚವು ಸೇರಿ ೦-೪-೦.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾರಕಮಂಡಲಿ, ಮೈಸೂರು.

2

ನ್ಯಾಯದರ್ಪಣ. 28

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯೂ, ಹಿಂದೂಲಾ ವಿಷಯವಾದ ಸಮಸ್ತ ವ್ಯವಹಾರಗಳೂ ... ಅರ್ಜಿಗಳ ಮಾದರಿಗಳೂ ಅಡಗಿರುತ್ತವೆ.

ಬೆಲೆ ರೂ. 1—8—0. ವಿ. ಪಿ. ಮೂಲ್ಯ 1—12—0.

ಎಂ. ಎಸ್. ನಂಜಪ್ಪನವರು,
ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

35 ಸಚಿತ್ರ ಕುಶಲವೃತ್ತಿ ಕಥೆಗಳು ಸಚಿತ್ರ ಛತ್ರಪತಿ ಶಿವಾಜಿ ಚರಿತ್ರೆ

ಸಚಿತ್ರ ವಿದ್ಯಾಮಂಜರೀಕಥೆಗಳು

ವಾಚಕ ಮಹಾಶಯರುಗಳೇ! ... ಈ ವಿದ್ಯಾಮಂಜರೀಕಥೆಗಳನ್ನು ಓದಿರಿ. ... ಬೆಲೆ ರೂ. ೦-೮-೦ ಟಪಾಲ್ ಖರ್ಚು ೩ ಆಣೆ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

2

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ "ಪಂಜಾಬ್ ಸಾಲಾಮಿಸ್ರಿ ಮುರಬ್ಬಾ" ವಿನ ಸೇವನೆಯಿಂದ ವೀರ್ಯವು ವೃದ್ಧಿಯಾಗುವುದು ...

ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂ. ಬಹುಮಾನವಾಗಿ ಕೊಡಲ್ಪಡುವುದು.

ಡಿ. ಪನ್ನಾಲಾಲ್, 5 ಹಾಜಿ ಸಾಹೇಬ್ ಬೀದಿ, ಅವೆನ್ಯೂರೋಡ್, ಬೆಂಗಳೂರು ಸಿಟಿ.
ನನ್ನ ಏಜಂಟರುಗಳು, ... ಬೆಂಗಳೂರು ಸಿಟಿ.

13



ಶ್ರೀ ಕಾಮಧೇನು ಕಸ್ತೂರಿ ಮಾತ್ರೆ.— ...

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ... ೧ ಡಬ್ಬಿಯ ಬೆಲೆ ೩ ಆಣೆ. ೧ ಡಜನ್ ಡಬ್ಬಿಗೆ ೨-೦-೦

ಉತ್ತಮವಾದ ನಶ್ಯದಪುಡಿ.

... ೧ ಡಬ್ಬಿಗೆ ೩ ಆಣೆ. ಒಂದು ಡಜನ್ ಡಬ್ಬಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,
ಗೋಪಸೆಟ್ಟಿಪುರ, ಹನೂರು ಪೋಸ್ಟ್,
24 ಕೊಳ್ಳೇಗಾಲದ ತಾಲ್ಲೂಕು.

೧೯೧೪ ನೆಯ ಇಸವಿ ಆಗಸ್ಟ್ ತಾ॥ ೩ ರಿಂದ ೧೯೧೪ ನೆಯ ಆಗಸ್ಟ್ ತಾ॥ ೯ ರವರೆಗೆ ಸಲ್ಲುವ ಶಾಲೀವಾಹನಶಕೆ ೧೮೩೬ ನೆಯ ಆನಂದನಾಮ ಸಂ॥ ದ ಶ್ರಾವಣ ಶು॥ ದ್ವಾದಶಿಯಿಂದ ಶ್ರಾವಣ ಬ॥ ತದಿಗೆವರೆಗಿನ ಪಂಚಾಂಗ.

ತಾ॥	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ಸೌರ ಕಟಕ
3	[1] ಸೋ	ದ್ವಾ	5-55	ಮೂಲ	16-7	19
4	[2] ಮಂ	ತ್ರ	2-26	ಪೂಷಾ	56-58	20
5	[3] ಬುಧ	ಪೌ	58-4	ಉತ್ರಾಷಾ	14-22	21
6	[4] ಗುರು	ಪಾ	58-3	ಶ್ರವಣ	15-8	22
7	[5] ಶುಕ್ರ	ಬಿದಿ	59-13	ಧನಿಷ್ಟ	17-12	23
8	[6] ಶನಿ	ತದಿ	60-	ಶತಭಿಷ	20-26	24
9	[7] ಭಾ	ತದಿ	2-12	ಪೂಭಾ	24-54	25

(1) ಪ್ರದೋಷಃ. (2) ಮಂಗಳಗೌರೀವ್ರತಂ. (3) ಯಜುರುಪಾಕರ್ಮ, ಆಳವಂದಾರ್ ತಿರುನ॥ (4) ಋಗ್ವೇದೋಪಾಕರ್ಮ, ಗಾಯತ್ರೀಜಪಃ, ಹಯಗ್ರೀವಜಯಂತೀ. (5) ಆದಿಶುಕ್ರವಾರ, ರಾಘವೇಂದ್ರಸ್ವಾಮಿಗಳ ಪುಣ್ಯದಿನ. (6) ಶ್ರಾವಣಶನಿವಾರ. (7) ಸಂಕಟಹರ ಚತುರ್ಥೀ.

ಮೈಸೂರ್ ವೈ. ನರಸಿಂಹ ಅಯ್ಯಂಗಾರವರಿಂದ "ಸ್ಟಾರ್" ಮುದ್ರಾಕ್ಷರಶಾಲೆಯಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED, M. NO 124

ಮೈಸೂರ್ ಸ್ಟಾರ್

ಪ್ರತಿಭಾನುವಾರ ಪ್ರಕಟಿಸಲ್ಪಡುವುದು.

ವಾರ್ಷಿಕ ಚಂದಾ ೧—೦—೦ | ... | ಅಂಚೆವೆಚ್ಚ ಸೇರಿ ೧—೧೪—

ಸಂಪುಟ ೨೦) ಮೈಸೂರ್ ಸ್ಟಾರ್ ಸೋ ೧೯೧೪ ನೆಯ ಇಸವಿ ಆಗಸ್ಟ್ ತಾರೀಖು ೯ ನೆಯ ಭಾನುವಾರ. (ಸಂಚಿಕೆ ೩೦

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜ ಮೊಹಲ್ಲಾ, ಮೈಸೂರು.

ಸುಂದರವಾದ ಹೊಸನಮೂನೆ ದೊಡ್ಡ ಗಡಿಯಾರಗಳು.

28

ಪ್ರಖ್ಯಾತಿಹೊಂದಿದ ಅಮೇರಿಕಾದೇಶದ ಅನ್ಸೋನಿಯಾ ಕಂಪೆನಿಯವರಿಂದ ತಯಾರಿಸಲ್ಪಟ್ಟ ಖಾತ್ರಿಯಾದ ಮತ್ತು ಬಹಳದಿವಸ ಬಾಳಿಕೆಬರತಕ್ಕಂಥ ಕ್ಲಾಕ್‌ಗಳು ಇನ್ನೇ ಹೊರ್ಟು ಬಿಟ್ಟಿವೆ.



ಈ ಪಕ್ಕದ ಚಿತ್ರದಲ್ಲಿ ಕಾಣಿಸಿರುವ ಗೋಡೆಗೆ ತಗುಲಿಸುವ ಘಂಟೆ, ಅರ್ಧಘಂಟೆ ಜೊತೆಯುಳ್ಳ ಘಡಿಯಾರ ಒಂದಕ್ಕೆ ೧೦-೮-೦ ರೂ. ...

ಸಿಕ್ಕಿದ ಹಾರ್ಮೋನಿಯಂಗಳನ್ನು ಕ್ರಯಕ್ಕೆ ತೆಗೆದುಕೊಂಡು ನಿಮ್ಮ ಹಣವನ್ನು ಯಾಕೆ ವ್ಯರ್ಥಮಾಡಿಕೊಳ್ಳುವಿರಿ.

ನಮ್ಮಲ್ಲಿ ವಿಕರಿಗೆ ಸಿದ್ಧವಾಗಿರುವ "ಮೋಹನ್ ಫ್ಲೂಟ್" (M. Mohen flute) ಮತ್ತು "ಮೋಸ್ಲೆಂಫ್ಲೂಟ್" (Moslem flute) ಹಾರ್ಮೋನಿಯಂಗಳನ್ನು ...



ನಂ ೧. ಒಂದು ಸೆಟ್‌ರೀಡ್ಸ್ ಉಳ್ಳದ್ದು (Moslem flute) ಹಾರ್ಮೋನಿಯಂ ೧ ಕ್ಕೆ ೩೩-೦-೦ ರೂ.

ನಂ ೨. ಒಂದು ಸೆಟ್‌ರೀಡ್ಸ್ ಉಳ್ಳದ್ದು (M. Mohen flute) ಹಾರ್ಮೋನಿಯಂ ೧ ಕ್ಕೆ ೩೭-೮-೦ ರೂ.

ನಂ ೩. ಡಿಟೋ ಸಮೂನೆಯಲ್ಲಿ ಅತ್ಯುತ್ತಮವಾದದ್ದು (M. Mohen flute) ೧ ಕ್ಕೆ ೪೦-೦-೦ ರೂ.

ನಂ ೪. ಡಬ್ಬಲ್‌ರೀಡ್ಸ್ ಉಳ್ಳದ್ದು (Moslem flute) ಹಾರ್ಮೋನಿಯಂ ೧ ಕ್ಕೆ ೪೩-೮-೦ ರೂ.

ನಂ ೫. ಡಬ್ಬಲ್‌ರೀಡ್ಸ್ ಉಳ್ಳದ್ದು (M. Mohen flute) ಹಾರ್ಮೋನಿಯಂ ೧ ಕ್ಕೆ ೫೨-೮-೦ ರೂ.

ಈ ಹಾರ್ಮೋನಿಯಂಗಳ ಪೈಕಿ ಯಾವದಕ್ಕೆ ಆರ್ಡರ್ ಕೊಟ್ಟರೂ ಕೂಡ ೫ ರೂಪಾಯಿ ಅಡ್ವಾನ್ಸ್ ಕಳಿಸಬೇಕು. ಬಾಕೀ ಮೊಬಲಿಗ್ಗೆ ರೈಲ್ವೇರಶೀದಿಯನ್ನು ವಿ. ಪಿ. ಮೂಲಕ ರವಾನಿಸುತ್ತೇವೆ.

ನೆಪ್ಚೂನ್ ಫೌಂಟನ್ ಪೆನ್‌ಗಳು. NEPTUNE FOUNTAIN PENS.

ಈ ಫೌಂಟನ್‌ಪೆನ್‌ಗಳು ಅದರ ಖರೀದಿಗೆ ತಕ್ಕಂತೆ ೪ ವರುಷಗಳಲ್ಲಾಗಾಯ್ತು ಹತ್ತು ವರುಷಗಳವರಿಗೆ ಬಾಳಿಕೆ ಬರತಕ್ಕವುಗಳಾಗಿವೆ.

ನಂ ೨೦೧. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಕ್ರಯ ೧ ಕ್ಕೆ ೧—೧೪—೦.

ನಂ ೨೧೫. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಉತ್ತಮವಾದದ್ದು ಕ್ರಯ ೧ ಕ್ಕೆ ೨—೧೦—೦.

ನಂ ೨೧೧. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಅತ್ಯುತ್ತಮವಾದದ್ದು ಕ್ರಯ ೧ ಕ್ಕೆ ೪—೨—೦.

ಮೇಲ್ಕಂಡ ಯಾವನಮೂನೆ ಫೌಂಟನ್‌ಪೆನ್‌ಗಳನ್ನು ತರಿಸಿಕೊಂಡರೂ ಅದರ ಜೊತೆಯಲ್ಲಿ ಪೆನ್ ಇಡತಕ್ಕ ಪೆಟ್ಟಿಗೆ ೧. ಜೇಬಿಗೆ ತಗಲಿಸತಕ್ಕ ಕ್ಲಿಪ್ ೧. ಶಾಯಿಹಾಕುವ ಗಾಜಿನ ಟ್ಯೂಬ್ ೧. ಶಾಯಿತುಂಬುವವಿಧ ಪ್ರಿಂಟಾಗಿರತಕ್ಕ ಚೀಟಿ ೧ ನ್ನು ಸಹ ರವಾನಿಸಲಾಗುತ್ತೆ.

ರಬಿಂವಾರ್ ವಾಚ್ ಸರಪಣಿಗಳು.

ಈ ಪಕ್ಕದ ಚಿತ್ರದಲ್ಲಿ ಕಾಣಿಸಿರುವ ನಮೂನೆ ಅಚ್ಚಬೆಳ್ಳಿಯ ವಾಚ್ ಸರಪಣಿ ಯಾವ ರಬಿಂ ಬೇಕಾದರೂ ಕ್ರಯ ೧ ಕ್ಕೆ ೩—೮— ಮೇಲ್ಕಂಡ ರಬಿಂಮ್ಯಗಳಲ್ಲಿ ನಿಕ್ಕಲ್‌ಬೆಳ್ಳಿ ಸರಪಣಿ ಕ್ರಯ ೧ ಕ್ಕೆ ೦—೧೦—೦.

ಅಚ್ಚಬೆಳ್ಳಿ ಕೊರಳ ಸರಪಣಿ ಬಹಳ ನಾಜೋಕಾಗಿ ತಯಾರಿಸಿದ್ದು ೧ ಕ್ಕೆ ೧—೮—೦.

೧೮ ಕ್ಯಾರಟ್ಟು ಚಿನ್ನದ ಸರಪಣಿ ೧ ಕ್ಕೆ ೧೯—೮—೦.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರಮಾಪ್ತಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿ	೦—೮—೦
ಚಾರುಶೀಲೆಚರಿತ್ರೆ	೦—೫—೦
ಸಟೀಕ ನಂದೀವ್ರತ	೦—೪—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್‍ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸ ಪುಸ್ತಕಗಳು.

147

ಬಸವರಾಜವಿಜಯಂ— ಬೆಲೆ ೧ ರೂ. ...

ಚೆನ್ನಬಸವೇಶವಿಜಯಂ— ಬೆಲೆ ೦-೪-೦ ದ್ವಿತೀಯ ಮುದ್ರಣವು ...

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೦ ಆಣೆ. ...

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦ ...

ವೀರಶೈವ ಧರ್ಮಶಿರೋಮಣಿ— ಬೆಲೆ ೧-೩-೦ ...

ಸಂಚಸ್ತೋತ್ರ— ಬೆಲೆ ೧ ರೂ. ...

ಪಂಡಿತಾರಾಧ್ಯಚರಿತ್ರಂ— ...

ಸೌಂದರಪುರಾಣಂ— ೧-೨-೦; ಸಟೀಕ ತತ್ವಪ್ರಕಾಶ ೩ ಆಣೆ; ಸಟೀಕ ಶತಸೂತ್ರರತ್ನ ೩ ಆಣೆ; ... ಸಟೀಕ ವ್ರತಪಂಚಕ ೧೦ ಆಣೆ; ... ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ ವಾರ್ಷಿಕ ಚಂದಾ ೨-೮-೦.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾರಕಮಂಡಲಿ, ಮೈಸೂರು.

ಈಗತಾನೇ ಅಚ್ಚಾದ ಪುಸ್ತಕವು.

(ರೇವಣಸಿದ್ಧೇಶ್ವರಪುರಾಣಂ.)

ವೇದಾಗಮಪ್ರಸಿದ್ಧವಾದ ವೀರಶೈವ ಮತವನ್ನು ಭೂತಲದಲ್ಲಿ ಪ್ರತಿಷ್ಠಾಪಿಸಿದ ಶ್ರೀ ರೇಣುಕಾಚಾರ್ಯರ ಚರಿತ್ರರೂಪವಾದ ಈ ಗ್ರಂಥವು ಬೊಮ್ಮರಸಕವಿಯಿಂದ ಷಟ್ಪದೀಕಾವ್ಯವಾಗಿ ರಚಿಸಲ್ಪಟ್ಟಿರುವುದು. ಶ್ರೀಮದಾಚಾರ್ಯರು ಭೂತಲದಲ್ಲಿ ನಡೆಯಿಸಿದ ಮಹತ್ಕಾರ್ಯಗಳು ಇದರಲ್ಲಿ ನಿರೂಪಿತವಾಗಿವೆ. ಕವಿತೆಯು ಹೃದಯಂಗಮವಾಗಿದೆ. ಪ್ರತಿಯೊಂದು ಪದಕ್ಕೂ ಒಂದೊಂದು ಪಚ್ಛೆಯಾಗಿ ಬಿಡಿಬಿಡಿಸಿ ಉತ್ತಮವಾದ ಗ್ಲೇಸ್ ಕಾಗದದಮೇಲೆ ಸುಂದರವಾದ ಅಕ್ಷರಗಳಿಂದ ಶುದ್ಧವಾಗಿ ಮುದ್ರಿತವಾಗಿದೆ. ೧೩ ಸಂಧಿಗಳುಳ್ಳ ಈ ಗ್ರಂಥದ ಬೆಲೆ ವಿ. ಪಿ. ಮೂಲಕ ಅಂಚೆಯ ವೆಚ್ಚವೂ ಸೇರಿ ೧೨ ಆಣೆಗಳು

ಎಸ್. ಆರ್. ಕರಿಬಸವಶಾಸ್ತ್ರಿ,

3 ಗ್ರಂಥಪ್ರಕಾರಕಮಂಡಲಿ, ಮೈಸೂರು.

ಮತ್ತೊಂದು ನೂತನಗ್ರಂಥ.

ಸಟಿಪ್ಪಣ ಸಿದ್ಧಾಂತಶಿಖಾಮಣಿ.

ಇದು ಶ್ರೀರೇಣುಕಾಚಾರ್ಯರು ಅಗಸ್ತ್ಯರಿಗೆ ಉಪದೇಶಿಸಿದ ವೀರಶೈವ ಸಿದ್ಧಾಂತಶಾಸ್ತ್ರವು. ಪ್ರತಿಯೊಬ್ಬ ವೀರಶೈವನೂ ಮುಕ್ತನಾಗುವುದಕ್ಕೆ ಜನ್ಮಾದಿಯಿಂದ ಕಡೆಯವರೆಗೆ ಆಚರಿಸಬೇಕಾದ ಧರ್ಮಕರ್ಮಗಳು ಇದರಲ್ಲಿ ನಿರೂಪಿತವಾಗಿವೆ. ಮೂಲ ಗ್ರಂಥಕ್ಕೆ ವೇದಾಗಮ ಪುರಾಣಾದಿವಚನಗಳ ಆಧಾರದಿಂದ ಕೂಡಿದ ಕನ್ನಡ ಟಿಪ್ಪಣವು ವಿಸ್ತಾರವಾಗಿ ಬರೆಯಲ್ಪಟ್ಟು ಉತ್ತಮವಾದ ಕಾಗದದಲ್ಲಿ ಅಚ್ಚುಮಾಡಿಸಲ್ಪಟ್ಟಿದೆ. ಸರ್ವರಿಗೂ ಸಂಗ್ರಾಹ್ಯವಾದ ಈ ಪುಸ್ತಕವು ೩೦೪ ಪುಟಗಳುಳ್ಳ ದೊಡ್ಡ ಗ್ರಂಥವಾಗಿದ್ದರೂ, ಸ್ವಮತಸ್ಥರ ಹಿತಾರ್ಥವಾಗಿ ಬೆಲೆಯು ಕಡಿಮೆಯಾಗಿಡಲ್ಪಟ್ಟಿದೆ. ವಿ. ಪಿ. ಮೂಲಕ ಅಂಚೆಯ ವೆಚ್ಚವುಸೇರಿ ೧-೮-೦.

ಎಸ್. ಆರ್. ಕರಿಬಸವಶಾಸ್ತ್ರಿ,

2 ಗ್ರಂಥಪ್ರಕಾರಕಮಂಡಲಿ, ಮೈಸೂರು.

35 ಸಚಿತ್ರ ಶುಕಸಪ್ತತಿ ಕಥೆಗಳು ರೂ. ೧-೮-೦ (೪೧೦ ಪುಟ) — ಅಂಚೆಯ ಖರ್ಚು ೪ ಆಣೆ. — ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ ರೂ. ೧-೮-೦. (೪೩೩ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ! ಮಾನ್ಯತೆಯು ಬೇಕಾದರೆ, ವಾಗ್ವೈಖರಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಬೇಕೆಂದಿದ್ದರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯುಳ್ಳಾತನಾಗಬೇಕೆಂಬುದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೩೦ ಪುಟಗಳಿಂದ ಕೂಡಿದ ೬೨ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ ೧-೮-೦ ಟಪಾಲ್ ಹಾಸಲು ೩ ಆಣೆ. ಈಗಲೇ ಬರೆ ನಿಮ್ಮಲ್ಲಿ ಇನ್ನೂ ಅನೇಕಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

ಸಾಲಾಮಿಸ್ರಿಯು ಕಾಬೂಲ್ ದೇಶದಲ್ಲಿ ಪೌಂಡು ೧ ಕ್ಕೆ ೧-೧೦-೦ ಇತ್ತು ಈಗ ಪೌಂಡು ೧ಕ್ಕೆ ೩-೪-೦ ಆಗಿದೆ. ಅದ್ದರಿಂದ ಇದರಕ್ರಯ ೨-೦೦ ರೂಪಾಯಿ ಮಾಡಿರುತ್ತೆ 2

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾ" ವಿನ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯುವಾದರೂ, ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ದೂರ ನಡೆಯುವುದರಿಂದ ಮೇಲುಬ್ಬಸ ಬರುವುದೂ, ತಲೆಯು ನೋವೂ ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು ಹಳೇ ಹಳೆ ನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಸೇಬರಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು. ಈ ಪಂಜಾಬ್ ಸಾಲಾಮಿಸ್ರಿಯು ಮುರಬ್ಬಕ್ಕೆ ತಾಂಬ್ರದ ಮತ್ತು ಬಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು.

ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂ. ಬಹುಮಾನವಾಗಿ ಕೊಡಲ್ಪಡುವುದು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನದಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧ಕ್ಕೆ ರೂ. ೨-೦-೦. ಟಪ್ಪಾಲ್ ಖರ್ಚು ಬೇರೆ. ಅನುಭಾನಪತ್ರಿಕೆ ಬಿಡುವದಸಂಗತ ಇರುತ್ತೆ.

ಡಿ. ಪನ್ನಾಲಾಲ್, 5 ಹಾಜಿ ಸಾಹೇಬ್ ಮಹಡಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ನಮ್ಮ ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೊ. ದೊಡ್ಡಪೇಟೆ, ಬೆಂಗಳೂರು ಸಿಟಿ.

[illegible] 13



ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ಶೀಕು, ಉತ್ತಮವಾದ ಕಸ್ತೂರಿ ಮೊದಲಾದ ಬೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂಧುಗಳ ನೋವು ಕೈ ಕಾಲು ಜೋತ (ಬಾವು), ನೈಪಮುಳೆ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಬಾಣಂತಿ ಎಳವು, ಜ್ವರ, ನ ಚ್ಚುಜ್ವರ, ಕ್ಷಯತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೬ ಕುಪ್ಪಿ ೧ ಕುಪ್ಪಿ ಹೆಚ್ಚು. ೧ ರಿಂದ ೧೦ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

[illegible] (ಶೂಲದ ಕಷಾಯ)

ಮಂಡಲಭೇದಿ, (ಶೂಲರೋಗ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರ[illegible] ಸಂಜೀವನವಾಗಿದೆ. ಕೈವಿಟ್ಟರೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಸುಖವಾಗಿ ಕಕ್ಕಸ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವಾಗುತ್ತದೆ. ಸಮಯದಲ್ಲಿ ಕೇಳಬೇಕೆಂಬಿರಿ [illegible] ನಿಮ್ಮಲ್ಲಿಇರಲಿ ಮತ್ತೊಂದು [illegible] ನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧ ಔಷಧಿಯೆಂಬೆ.

[illegible] ಇರುವುದು. ಒಂದು ಬಾಟ್ಲುವಿನ ಬೆಲೆ ೧ [illegible]

ಟಪಾಲ್ ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ. ಮೈಸೂರು

ನ್ಯಾಯದರ್ಪಣ. 28

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯೂ, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಫ್ ಕೋರ್ಟಿನ ಕಾನೂನೂ ಮತ್ತು ರೋಲ್ಲ ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಅಕ್ಕಿ ಚೆಯಲ್ಲಿರತಕ್ಕ ನಾನಾವಿಧಗಳಾದ ದಸ್ತಾವೇಜು ಪತ್ರಿಕೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯೂ ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರುತ್ತವೆ.

ಬೆಲೆ ರೂ 1—8—0. ವಿ. ಪಿ. ಮೂಲಕ 1—12—0.

ಎಂ. ಎಸ್. ನಂಜಪ್ಪನವರು,

ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ) ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಭಿಮ್ಮೆನ್ನುವುದು, ಈ ಯಾವುವಾಗಿದರೂ ತಪ್ಪದೆ ಗುಣವಾಗುತ್ತದೆ. ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚಿಟಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜನ್ ಡಬ್ಬಿಗೆ ೨-೨-೦

ಉತ್ತಮವಾದ ನಶ್ಯದಪುಡಿ.

ಥಾಯಿ ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೬ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವವು. ನೀವು ಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೧-೧೪-೦ ಟಪಾಲ್ ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,

ಗೋಪಸೆಟ್ಟಿಪುರ, ಹನೂರು ಪೋಸ್ಟ್

24 ಕೊಳ್ಳೇಗಾಲದ ತಾಲ್ಲೂಕು

೧೯೧೪ ನೆಯ ಇಸವಿ ಅಗಸ್ಟ್ ತಾ॥ ೩ ರಿಂದ ೧೯೧೪ ನೆಯ ಅಗಸ್ಟ್ ತಾ॥ ೯ ರವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ ನೆಯ ಆನಂದನಾಮ ಸಂ॥ ದ ಶ್ರಾವಣ ಶು॥ ದ್ವಾದಶಿಯಿಂದ ಶ್ರಾವಣ ಬ॥ ತದಿಗೆವರೆಗಿನ ಪಂಚಾಂಗ.

ತಾ॥	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ಸೌರ ಕಟಕ
3	[1]ಸೋ	ದ್ವಾ	5-55	ಮೂಲ	16-7	19
4	[2]ಮಂ	ತ್ರ	2-26	ಊಷಾ	56-58	20
5	[3]ಬುಧ	ಪೌ	58-4	ಉತ್ತ್ರಾಷಾ	14-22	21
6	[4]ಗುರು	ಪಾ	58-3	ಶ್ರವಣ	15-8	22
7	[5]ಶುಕ್ರ	ಬಿದಿ	59-13	ಧನಿಷ್ಠ	17-12	23
8	[6]ಶನಿ	ತದಿ	60-	ಶತಭಿಷ	20-26	24
9	[7]ಭಾ	ತದಿ	2-12	ಪೂಭಾ	24-54	25

(1) ಪ್ರದೋಷ. (2) ಮಂಗಳಗೌರೀವ್ರತಂ. (3) ಯಜುರುಪಾಕರ್ಮ, ಆಳವಂದಾರ್ ತಿರುನ॥ (4) ಋಗ್ವೇದೋಪಾಕರ್ಮ, ಗಾಯತ್ರೀಜಪ, ಹಯಗ್ರೀವಜಯಂತೀ. (5) ರವಿಕಶುಕ್ರವಾರ, ರಾಘವೇಂದ್ರಸ್ವಾಮಿಗಳ ಪುಣ್ಯದಿನ. (6) ಶ್ರಾವಣಶನಿವಾರ. (7) ಸಂಕಟಹರ ಚತುರ್ಥಿ.

ಮೈಸೂರ್ ವೈ. ನಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED M NO 124

ಮೈಸೂರ್ ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು

ವಾರ್ಷಿಕ ಚಂದಾ ೧-೦-೦ } ದವಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈ ಘನಪತಕೃತಾವನಾಲಾ ಪಶ್ಚಿಮ ನೃಪತ್ವಮೋಹಕರಾಜೇಯಾತ್! ಶ್ರೀಮತ್ಕೃಷ್ಣನೃಪಾಲನುತ್ತಮಶೀಲಾಲೋಲಂಸುಧೀಪುಂಗವ, ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂ ಪರಂ! ಸಿಮಾತೀತ ಯಶಃಪ್ರತಾಪವಿಪುಲಂ ಸದ್ವೃತ್ತವಾಲಾಕುಲಂ । ಶ್ರೀಮಂಚೆತ್ತಿಳೆಯಂಸದಾಪ್ರೋರೆಗೆ ಗೌರೀಕಾನುಕಂಪೋಜ್ವಲಂ { ಅಂಚೆವೆಚ್ಚ ಸೇರಿ ೧-೧೪-

ಸಂಪುಟ ೨೩) ಮೈಸೂರ್ ಸ್ಟಾರ್ ಸೆ ೧೯೧೪ ನೆಯ ಇಸವಿ ಅಗಸ್ಟ್ ತಾರೀಖು ೯ ನೆಯ ಭಾನುವಾರ. (ಸಂಚಿಕೆ ೩೦

REGISTERED, M NO 124

ಎಂ. ಎಸ್. ಸಿದ್ಧಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜ ಮೊಹಲ್ಲಾ, ಮೈಸೂರು.

ಸುಂದರವಾದ ಹೊಸನಮೂನೆ ದೊಡ್ಡ ಘಡಿಯಾರಗಳು.

28

ಪ್ರಖ್ಯಾತಿಹೊಂದಿದ ಅಮೆರಿಕಾದೇಶದ ಅನ್ಸೋನಿಯಾ ಕಂಪೆನಿಯವರಿಂದ ತಯಾರಿಸಲ್ಪಟ್ಟ ಖಾತ್ರಿಯಾದ ಮತ್ತು ಬಹಳದಿವಸ ಬಾಳಿಕೆಬರತಕ್ಕಂಥ ಕ್ಲಾಕ್‌ಗಳು ಇನೇ ಹೊತ್ತು ಬೇರೆ ಅಲ್ಲಾ.



ಈಪಕ್ಕದ ಚಿತ್ರದಲ್ಲಿ ಕಾಣಿಸಿರುವ ಗೋಡೆಗೆ ತಗುಲಿಸುವ ಘಂಟೆ, ಅರ್ಧಘಂಟೆ ಹೊಡೆಯುವ ಘಡಿಯಾರ ಒಂದಕ್ಕೆ ೧೭-೮-೦ ರೂ. ಘಂಟೆ ಅರ್ಧಘಂಟೆ ಹೊಡೆದು ಅಲಾರಂ ಸಹಾ ಕರೆಯತಕ್ಕ ಘಡಿಯಾರ ಒಂದಕ್ಕೆ ೧೩-೪-೦ ರೂ. ಈ ಘಡಿಯಾರಗಳು ಮಜಬೂತಾದ ಯಂತ್ರೋಪಕರಣಗಳಿಂದಲೂ ಮೇಲ್ಭಾಗದಲ್ಲಿ ವಿಕಾಸಿನ ಕೆತ್ತನೆಯಿಂದಲೂ ನೋಡುವುದಕ್ಕೆ ಅಂದವಾಗಿಯೂ ಬಹಳ ದಿವಸ ಬಾಳಿಕೆ ಬರತಕ್ಕವುಗಳಾಗಿವೆ. ಈ ಘಡಿಯಾರಕ್ಕೆ ಆರ್ಡರ್ ಮಾಡತಕ್ಕವರು ೬ ರೂಪಾಯಿ ಅಡ್ವಾನ್ಸ್ ಕಳಿಸಬೇಕು. ಬಾಕೀ ಮೊಬಲಿಗ್ಯೆ ರೈಲ್ವೆ ರಶೀದಿಯನ್ನು ವಿ. ಪಿ. ಮಾಡಲಾಗುತ್ತೆ. ರೈಲ್ವೆ ಛಾರ್ಜು ಅಲಾಯಿದಾ

ಸಿಕ್ಕಿದ ಹಾರ್ಮೋನಿಯಂಗಳನ್ನು ಕ್ರಯಕ್ಕೆ ತೆಗೆದುಕೊಂಡು ನಿಮ್ಮ ಹಣವನ್ನು ಯಾಕೆ ವ್ಯರ್ಥಮಾಡಿಕೊಳ್ಳುವಿರಿ.

ನಮ್ಮಲ್ಲಿ ವಿಕರಿಗೆ ಸಿದ್ಧವಾಗಿರುವ "ಮೋಹನ್ ಫ್ಲೂಟ್ಸ್" (M. Mohen flute) ಮತ್ತು "ಮೋಸ್ಲಂಫ್ಲೂಟ್" (Moslem flute) ಹಾರ್ಮೋನಿಯಂಗಳನ್ನು ನಮ್ಮಿಂದ ತರಿಸಿಕೊಂಡು ಪರೀಕ್ಷಿಸಿರಿ ಈ ಹಾರ್ಮೋನಿಯಂಗಳು ಅನೇಕದಿವಸ ಬಾಳಿಕೆಬರುವಂತೆ ಬಹಳಮಜಬೂತಾದ ಸಾಮಾನುಗಳಿಂದ ಪ್ರಖ್ಯಾತರಾದ ಕಾರೀಗಾರರಿಂದ ತಯಾರಿಸಲ್ಪಟ್ಟಿವೆ. ಒಂದು ಸಾರಿ ನಮ್ಮಿಂದ ತರಿಸಿ ಪರೀಕ್ಷಿಸಿದಲ್ಲಿ ಇದರ ಬಂದೋಬಸ್ತು ಬಾಳ್ವಿಕೆ ಸಹ ತಮಗೇ ವ್ಯಕ್ತವಾಗುತ್ತೆ.



ನಂ ೧ ಒಂದು ಸೆಟ್‌ರೀಡ್ಸ್ ಉಳ್ಳದ್ದು (Moslem flute) ಹಾರ್ಮೋನಿಯಂ ೧ ಕ್ಕೆ ೩೫-೦-೦ ರೂ.

ನಂ ೨. ಒಂದು ಸೆಟ್‌ರೀಡ್ಸ್ ಉಳ್ಳದ್ದು (M. Mohen flute) ಹಾರ್ಮೋನಿಯಂ ೧ ಕ್ಕೆ ೩೨-೮-೦ ರೂ.

ನಂ ೩. ಡಿಟೋ ನಮೂನೆಯಲ್ಲಿ ಅತ್ಯುತ್ತಮವಾದದ್ದು (M· Mohen flute) ೧ ಕ್ಕೆ ೪೨-೮-೦ ರೂ.

ನಂ ೪. ಡಬ್ಬಲ್‌ರೀಡ್ಸ್ ಉಳ್ಳದ್ದು (Moslem flute) ಹಾರ್ಮೋನಿಯಂ ೧ ಕ್ಕೆ ೪೨-೮-೦ ರೂ.

ನಂ ೫. ಡಬ್ಬಲ್‌ರೀಡ್ಸ್ ಉಳ್ಳದ್ದು (M. Mohen flute) ಹಾರ್ಮೋನಿಯಂ ೧ ಕ್ಕೆ ೫೨-೮-೦ ರೂ.

ಈ ಹಾರ್ಮೋನಿಯಂಗಳ ಪೈಕಿ ಯಾವದಕ್ಕೆ ಆರ್ಡರ್ ಕೊಟ್ಟರೂಕೂಡ ೬ ರೂಪಾಯಿ ಅಡ್ವಾನ್ಸ್ ಕಳಿಸಬೇಕು ಬಾಕೀಮೊಬಲಿಗ್ಯೆ ರೈಲ್ವೇರಶೀದಿಯನ್ನು ವಿ. ಪಿ. ಮೂಲಕ ರವಾನಿಸುತ್ತೇವೆ.



ನೆಪ್ಚೂನ್‌ಫೌಂಟನ್‌ಪೆನ್‌ಗಳು. NEPTUNE FOUNTAIN PENS·

ಈ ಫೌಂಟನ್‌ಪೆನ್‌ಗಳು ಅದರ ಖರೀದಿಗೆ ತಕ್ಕಂತೆ ೪ ವರುಷಗಳಲಾಗಾಯ್ತು ಹತ್ತು ವರುಷಗಳವರಿಗೆ ಬಾಳಿಕೆ ಬರತಕ್ಕವುಗಳಾಗಿವೆ.

ನಂ ೨೦೧. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಕ್ರಯ ೧ ಕ್ಕೆ ೧—೧೪—೦.

ನಂ ೨೦೫. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಉತ್ತಮವಾದದ್ದು ಕ್ರಯ ೧ ಕ್ಕೆ ೨—೧೦—೦

ನಂ ೨೧೧. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಅತ್ಯುತ್ತಮವಾದದ್ದು ಕ್ರಯ ೧ ಕ್ಕೆ ೪—೨—೦.

ಮೇಲ್ಕಂಡ ಯಾವನಮೂನೆ ಫೌಂಟನ್‌ಪೆನ್‌ಗಳನ್ನು ತರಿಸಿಕೊಂಡರೂ ಅದರ ಜೊತೆಯಲ್ಲಿ ಪೆನ್ ಇಡತಕ್ಕ ಪೆಟ್ಟಿಗೆ ೧. ಜೇಬಿಗೆ ತಗಲಿಸತಕ್ಕ ಕ್ಲಿಪ್ ೧. ಶಾಯಿಹಾಕುವ ಗಾಜಿನ ಟ್ಯೂಬ್ ೧. ಶಾಯಿಹಾಕುವವಿಧ ಪ್ರಿಂಟಾಗಿರತಕ್ಕ ಚೀಟಿ ೧ ನ್ನು ಸಹ ರವಾನಿಸಲಾಗುತ್ತೆ.

ರಖಂವಾರ್ ವಾಚ್ ಸರಪಣಿಗಳು.

ಈ ಪಕ್ಕದ ಚಿತ್ರದಲ್ಲಿ ಕಾಣಿಸಿರುವ ನಮೂನೆ ಅಚ್ಚಬೆಳ್ಳಿಯ ವಾಚ್ ಸರಪಣಿ ಯಾವ ರಖಂ ಬೇಕಾದರೂ ಕ್ರಯ ೧ಕ್ಕೆ ೩—೪— ಮೇಲ್ಕಂಡ ರಖಂವ್ಮಿನಲ್ಲಿ ನಿಕ್ಕಲ್‌ಬೆಳ್ಳಿ ಸರಪಣಿ ಕ್ರಯ ೧ ಕ್ಕೆ ೦—೧೨—೦.

ಅಚ್ಚಬೆಳ್ಳೀ ಕೊರಳ ಸರಪಣಿ ಬಹಳ ನಾಜೋಕಾಗಿ ತಯಾರಿಸಿದ್ದು ೧ ಕ್ಕೆ ೧—೪—೦.

೧೮ ಕ್ಯಾರಟ್ಟು ಚಿನ್ನದ ಸರಪಣಿ ೧ ಕ್ಕೆ ೫—೮—೦.

ವಿಳಾಸ— ಎಂ. ಎಸ್. ಸಿದ್ಧಪ್ಪ ಅಂಡ್ ಬ್ರದರ್ಸ್. ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧-೦-೦
ಪದವಾಣಿಗಜಾಂಕುಶತಾರಾವಳಿ	೦-೮-೦
ಶಿವಪೂಜಾವಿಧಿ	೦-೮-೦
ಚಾರುಶೀಲೆಚರಿತ್ರೆ	೦-೫-೦
ಸಟೀಕ ನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೬-೦
ವಿವೇಕಮಂಜರಿ [೨ನೆಯ ಭಾಗ]	೦-೩-೦
ವ್ರತಪಂಚಕ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆಯವೆಚ್ಚ ಬೇರೆ.

ಹೊಸಪುಸ್ತಕಗಳು.

147

ಬಸವರಾಜವಿಜಯಂ— ಬೆಲೆ ೧ ೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೇಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸುಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧ ೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ

ವೀರಶೈವ ಧರ್ಮಶಿರೋಮಣಿ.— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ ೧ ನೆ ಪ್ರಕರಣಕ್ಕೆ ೧-೩-೦ ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶಿವಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸೂಕ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ ವರ್ಷದ ಚಂದಾ ೨-೮-೦.

ಎಸ್. ಆರ್. ಕರಿಬಸವಶಾಸ್ತ್ರಿ,

ಗ್ರಂಥಪ್ರಕಾರಕಮಂಡಲಿ, ಮೈಸೂರು.

ಪ್ರ ಕ ಟ ನೆ.

ಪ್ರಿಂಟಿಂಗಾಫೀಸಿನವರು ಅಗತ್ಯವಾಗಿ ಗಮನಿಸತಕ್ಕದು.

ನಮ್ಮಲ್ಲಿ ಈ ಸ್ಟಾರ್‌ಪತ್ರಿಕೆಯ ೧, ೨, ೩, ೪, ೫ ಮತ್ತೂ ೮ನೇ ಪುಟಗಳಲ್ಲುಪಯೋಗಿಸಲ್ಪಟ್ಟಿರುವ ಪೈಕ ಅಥವಾ ೧೨ ಪಾಯಿಂಟ್ ಅಕ್ಷರಗಳ ಮತ್ತೂ ಈ ಪ್ರಕಟನೆಗುಪಯೋಗಿಸಲ್ಪಟ್ಟಿರುವ ಬೂರ್ಜೈಸ್‌ಮಿನಿಯನ್ ಅಥವಾ ೧೮ ಪಾಯಿಂಟ್ ಅಕ್ಷರಗಳ ಮ್ಯಾಟ್ರಿಕ್ಸುಗಳೂ, ಅವುಗಳ ಮೌಲ್ಡುಗಳೂ ಇವನ್ನು ಎರಕವರೆಯುವ ಯಂತ್ರವೂ ಅದಕ್ಕೆ ಸಂಬಂಧಪಟ್ಟ ಲೈನ್ ಗೇಜ್ ಪೇಪರ್‌ಗೇಜ್ ಹೈಟ್‌ಗೇಜ್ ಡ್ರೆಸ್ಸಿಂಗ್‌ಟೇಬಲ್ ಕರ್ನಿಂಗ್ ಮಿಷನ್ನು ಮುಂತಾದ ಸಾಮಾಗ್ರಿಗಳೂ ಸೂಪರ್‌ರಾಯಲ್ ಸೈಜನ್ನು ಪ್ರಿಂಟ್ ಮಾಡುವ ಸಿಲಿಂಡರ್ ಮಿಷನ್ನು ಸಹ ಮಾರಾಟಕ್ಕೆ ಸಿದ್ಧವಾಗಿವೆ. ಈ ಮಿಷನ್ನಿನಲ್ಲೇ ಈ ಸ್ಟಾರ್‌ಪತ್ರಿಕೆಯು ಪ್ರಿಂಟುಮಾಡಲ್ಪಡುತ್ತಿರುವುದು. ಎರಕವರೆಯುವ ಮಿಷನ್ನು ಬಹಳ ಸ್ವಲ್ಪ ಕೆಲಸವನ್ನು ಮಾತ್ರ ಮಾಡಿ ಹೊಸದಾಗಿಯೇ ಯಿರುವುದು. ಇಷ್ಟವುಳ್ಳವರು ಇವುಗಳ ಬೆಲೆ ಮೊದಲಾದವನ್ನು ನಮಗೆ ಬರೆದು ತಿಳಿದುಕೊಳ್ಳಬಹುದಲ್ಲದೆ ಪ್ರತ್ಯಕ್ಷದಲ್ಲಿ ಬಂದು ನೋಡಬಹುದು.

ವೈ. ವಿರೂಪಾಕ್ಷಯ್ಯ,
ಪ್ರೊಪ್ರೈಟರ್
ಕಾರ್ಕ್ ಪ್ರೆಸ್, ಮೈಸೂರು.

ಗ್ರಾಮಾಭಿವೃದ್ಧಿಗೆ ಬೇಕಾದ ಕಟ್ಟಳೆಗಳು. ಗ್ರಾಮನಿವಾಸಿಗಳೆಲ್ಲರೂ ಆಚರಿಸಲು ಯತ್ನಿಸಬೇಕಾದ ಕ ಟ್ಟ ಳೆ ಗ ಳು.

ನಿರುದ್ಯೋಗಿಯಾಗಿ ಒಬ್ಬನೂ ಇರಕೂಡದು.

1. "ಉದ್ಯೋಗಃ ಪುರುಷಲಕ್ಷಣಂ" ಎಂದು ಶಾಸ್ತ್ರವು ಸಾರುತ್ತದೆ. ನಿರುದ್ಯೋಗಿಗಳು ಗ್ರಾಮದಲ್ಲಿ ಎಷ್ಟೆಷ್ಟು ಕಡಮೆಯಾಗುವರೋ ಅಷ್ಟಷ್ಟೂ ಆ ಗ್ರಾಮದ ಸಂಪತ್ತು ಹೆಚ್ಚುತ್ತದೆ.

ತನ್ನ ಮನೆ ಜನರೂ ತನ್ನ ಊರಿನ ಜನರೂ ಅವರವರ ಯೋಗ್ಯತಾನುಸಾರವಾಗಿ ಯಾವುದಾದರೂ ಒಂದು ಉಪಯೋಗವಾದ ಕೆಲಸವನ್ನು ಮಾಡುತ್ತಲೇ ಇರುವಂತೆ ಪ್ರತಿಯೊಬ್ಬರೂ ನೋಡಿಕೊಳ್ಳಬೇಕು. ಒಬ್ಬೊಬ್ಬರೂ ಹೀಗೆ ಮಾಡಿದರೆ ಎಲ್ಲರಿಗೂ ಲಾಭಕರ.

ಪ್ರತಿಯೊಬ್ಬನೂ ತಾನು ವಹಿಸಿರುವ ಕೆಲಸವನ್ನು ಮತ್ತೊಬ್ಬರಿಂದ ಹೇಳಿಸಿಕೊಳ್ಳದೆಯೇ ಶಕ್ತ್ಯನುಸಾರವಾಗಿ ಶ್ರದ್ಧೆಯಿಂದ ಜರುಗಿಸುವುದು ತನಗೆ ಭೂಷಣವೆಂದು ತಿಳಿಯಬೇಕು.

ಕೆಲಸದ ಪರಿಮಾಣ ಮುಂತಾದುವು.

2. ಪ್ರತಿಯೊಬ್ಬನೂ ಪ್ರತಿದಿನವೂ ೬ ಘಂಟೆಗಳಿಂದ ೯ ಘಂಟೆಗಳ ವರೆಗೆ ಕೆಲಸಮಾಡಬೇಕು. ಮೇಲ್ವಿಚಾರಣೆ ಇರಲಿ, ಇಲ್ಲದಿರಲಿ, ತನ್ನ ಕೆಲಸವನ್ನು ನಿಲ್ಲಿಸದೆಯೂ ಒಂದೇ ಮನಸ್ಸಾಗಿಯೂ ಮಾಡುವುದನ್ನು ಕಲಿಯಬೇಕು.

ಸಹಕಾರಿಯಾದ ಇತರ ಕಸುಬುಗಳು.

3. ಮಳೆ ಹುಯ್ದರೇನೆ ಬೆಳೆಯಾಗುವ ನಮ್ಮ ದೇಶದಲ್ಲಿ ಬೇಸಾಯಗಾರರು ತಮ್ಮ ಆರಂಭದ ಜತೆಗೆ ಬೇರೆಯೊಂದು ಕಸುಬನ್ನು ಕಲಿತು ಆಚರಣೆಯಲ್ಲಿಟ್ಟುಕೊಂಡಿರಲೇ ಬೇಕು. ಹಾಗೆ ಮಾಡಿದರೆ ಬರಗಾಲದಲ್ಲಿ ಇದು ಇವರಿಗೆ ಸಹಾಯವಾಗುವುದು.

ವಿದ್ಯಾಭ್ಯಾಸ ಮತ್ತು ಕೈನಿಪುಣತೆ.

4 ಎಲ್ಲಾ ವಿಧವಾದ ಅಭಿವೃದ್ಧಿಗೂ ವಿದ್ಯಾಭ್ಯಾಸವೇ ಬೇರಾಗಿದೆ.

ಹೆಣ್ಣು ಹುಡುಗರಾಗಲೀ ಗಂಡು ಹುಡುಗರಾಗಲೀ ಪ್ರತಿಯೊಬ್ಬರೂ ಲೆಕ್ಕವನ್ನೂ ಓದುಬರಹಗಳನ್ನೂ ಕಲಿಯಲೇಬೇಕು. ವಿದ್ಯವನ್ನು ಕಲಿಯುವುದಕ್ಕೆ ಕಾಲವು ಮೀರಿತೆಂದು ವಯಸ್ಸಾದವರು ಸುಮ್ಮನಿರಬಾರದು. ಓದು ಬರಹದ ಜತೆಗೆ ಯಾವುದಾದರೂ ಒಂದು ಕಸುಬಿನಲ್ಲಿ ಕೈನಿಪುಣತೆಯನ್ನು ಪ್ರತಿಯೊಬ್ಬನೂ ಸಂಪಾದಿಸಿಕೊಳ್ಳಬೇಕು.

ಕೆಲಸದಲ್ಲಿ ಮಮತೆ.

5. ಕೆಲಸದಲ್ಲಿ ಮಮತೆ ಹುಟ್ಟುವಂತೆಯೂ ನಿರತರಾಗಿರುವಂತೆಯೂ ಹುಡುಗರಿಗೆ ಚಿಕ್ಕಂದಿನಿಂದಲೂ ಕಲಿಸಬೇಕು. ಆಯಾ ದಿವಸದ ಕೆಲಸವು ಮುಗಿದಮೇಲೆ ಗುಂಪಾಗಿ ಸೇರಿ ಆಟವಾಡುವಂತೆ ಮಕ್ಕಳನ್ನು ಪ್ರೋತ್ಸಾಹಿಸಬೇಕು. ಸಾಧನೆಯಿಂದ ಶರೀರಕ್ಕೆ ಬಲ ಹೆಚ್ಚುವುದು.

ಮಿತವ್ಯಯ ಇಡುವುದು.

6 ಗ್ರಾಮಗಳಲ್ಲಿ ಪ್ರತಿ ಸಂಸಾರಿಯೂ ಧನವನ್ನಾಗಲೀ ಧಾನ್ಯವನ್ನಾಗಲೀ ತನ್ನ ಸಂಸಾರಕ್ಕೆ ಎರಡು ವರ್ಷಕ್ಕಾಗುವಷ್ಟಾದರೂ ಕೇಮದವಾಡಿ ಇಡಬೇಕು.

ಪ್ರತಿಯೊಬ್ಬ ಸಂಸಾರಿಯೂ ಇಟ್ಟಿಗೆಯಿಂದಲಾಗಲಿ ಕಲ್ಲಿನಿಂದಲಾಗಲಿ ತನ್ನ ವಾಸಕ್ಕೆ ಒಂದು ಅನುಕೂಲವಾದ ಮನೆಯನ್ನು ಸಂಪಾದಿಸಿಕೊಳ್ಳಲು ಪ್ರಯತ್ನಿಸಬೇಕು.

ನಂಬಿಕೆಯನ್ನು ಉಳಿಸಿಕೊಂಡು ಕಾರ್ಯನಿರ್ವಹಿಸುವುದು.

7. ಕ್ಲಿಷ್ಟವಾದ ಪಾಯದೆಯಲ್ಲಿ ಕೈಗೊಂಡ ಕೆಲಸವನ್ನು ಪೂರೈಸಿಕೊಟ್ಟು ತನ್ನ ಮಾತನ್ನು ಉಳಿಸಿಕೊಳ್ಳಬೇಕು.

ಮಿತವ್ಯಯ.

8. ಆದಾಯ ವೆಚ್ಚಗಳ ಲೆಕ್ಕವನ್ನಿಡಬೇಕು. ಸಂಪಾದಿಸಿದ್ದನ್ನೆಲ್ಲಾ ಖರ್ಚುಮಾಡಿಬಿಡದೆ ಸಾಧ್ಯವಾದಷ್ಟನ್ನು ಉಳಿಸಬೇಕು. ಲಾಭವಿಲ್ಲದ ಕೆಲಸಕ್ಕೆ ಸಾಲ ಮಾಡಬಾರದು. ದುಂದುವೆಚ್ಚ ಮಾಡಬಾರದು. ಮುಖ್ಯವಾಗಿ ಮದುವೆ ಮುಂಜಿ ಮುಂತಾದ ಶುಭಕಾರ್ಯಗಳಲ್ಲೂ ಶ್ರಾದ್ಧಾದಿ ಕರ್ಮಗಳಲ್ಲೂ ಮಿತಿಮೀರಿ ವೆಚ್ಚ ಮಾಡಲೇಬಾರದು.

ಮಿತವಾಗಿ ಖರ್ಚುಮಾಡಿ, ಉಳಿಸಿದ ಹಣವನ್ನು ಲಾಭಕರವಾದ ಬಾಬುಗಳಲ್ಲಿ ವಿನಿಯೋಗಿಸುವುದೇ ಐಶ್ವರ್ಯವಂತನಾಗುವುದಕ್ಕೆ ದಾರಿಯು.

ಏಕಮತ್ಯ ಮತ್ತು ಅನ್ಯೋನ್ಯಸಹಾಯ.

9 ಈಗಿನ ಕಾಲದಲ್ಲಿ ಏಕಮತ್ಯವೂ ಪರಸ್ಪರ ಸಹಾಯವೂ ಇಲ್ಲದೆ ದೊಡ್ಡ ದೊಡ್ಡ ಕೆಲಸಗಳಾವುವೂ ಸಾಧ್ಯಗಳಾಗಲಾರವು. ಒಂದೇಮನಸ್ಸಿನಿಂದ ಅನೇಕರು ಸೇರಿ ಒಗ್ಗಟ್ಟಾಗಿ ಕೆಲಸಮಾಡಬೇಕು.

ಪ್ರತಿಯೊಬ್ಬನೂ ತನ್ನ ತನ್ನ ದಾರಿಯನ್ನೇ ಹಿಡಿದುಕೊಂಡು ಹೋಗುವುದಾದರೆ ದೇಶವು ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಾಗುವುದಿಲ್ಲ.

ಒಟ್ಟು ಗ್ರಾಮಕ್ಕೇನೆ ಉಪಯೋಗಕರವಾದ ಕೆಲಸದಲ್ಲಿ ಆ ಗ್ರಾಮಸ್ಥರು ಪರಸ್ಪರ ವೈಮನಸ್ಯಗಳನ್ನು ತೊರೆದು ಒಟ್ಟಾಗಿ ಸೇರಿ ಕೆಲಸವನ್ನು ನಿರ್ವಹಿಸಬೇಕು.

ಗ್ರಾಮಸ್ಥರಲ್ಲಿ ಹೆಚ್ಚಾದ ಜನರು ಒಂದು ಒಳ್ಳೆಯ ಕೆಲಸದ ವಿಚಾರದಲ್ಲಿ ಹೀಗೆಯೇ ನಡೆಯತಕ್ಕದೆಂದು ನಿರ್ಧರಿಸಿದರೆ ತಾನೂ ಅದರಂತೆಯೇ ನಡೆದುಕೊಳ್ಳಬೇಕು.

ಕಕ್ಷಿ ವ್ಯಾಜ್ಯಗಳು ಮತ್ತು ತಕರಾರುಗಳು.

ಗ್ರಾಮದಲ್ಲಿ ಪರಸ್ಪರ ವಿರೋಧಗಳೂ ವ್ಯಾಜ್ಯಗಳೂ ಹುಟ್ಟಿದರೆ ಇಬ್ಬರಿಗೂ ಕಷ್ಟನಷ್ಟಗಳು ಉಂಟಾಗುತ್ತವೆ. ಕಡೆಗೆ ಉಭಯತ್ರರೂ ಕೆಟ್ಟುಹೋಗುವುದೂ ಉಂಟು.

ಗ್ರಾಮಸ್ಥರ ವ್ಯಾಜ್ಯಗಳೆಲ್ಲವೂ ಸಾಧ್ಯವಾದ ಮಟ್ಟಿಗೆ ಗ್ರಾಮದಲ್ಲಿಯೇ ಫೈಸಲಾಗುವಂತೆ ಮಾಡಿಕೊಳ್ಳಬೇಕು. ಅವಶ್ಯಕವಿದ್ದಲ್ಲಿ ಪಂಚಾಯಿತರನ್ನು ಏರ್ಪಡಿಸಿಕೊಳ್ಳಬೇಕು.

ಶಿಕ್ಷಣ.

10 ಅನೇಕರು ಸೇರಿ ಮಾಡುವ ಕೆಲಸವು ನೆರವೇರಬೇಕಾದರೆ ಎಲ್ಲರೂ ಒಂದು ಕಟ್ಟಿಗೆ ಒಳಗಾಗಬೇಕು. ತನ್ನ ಮೇಲ್ಪಟ್ಟವರಿಗೆ ವಿಧೇಯನಾಗಿರುವುದನ್ನೂ ತನ್ನ ಕೈಕೆಳಗಿನವರನ್ನು ತನ್ನ ಹತೋಟಿಯಲ್ಲಿಟ್ಟುಕೊಂಡಿರುವುದನ್ನೂ ಕಲಿತುಕೊಳ್ಳಬೇಕು.

ಚಾತುರ್ಯ ಮತ್ತು ವಿನಯ.

11. ಯಾವ ಕೆಲಸ ನೆರವೇರಬೇಕಾದರೂ ಚಾತುರ್ಯವೂ ವಿನಯವೂ ಆವಶ್ಯಕ. ಯಾವಾಗಲೂ ಸಂತೋಷಿಯಾಗಿದ್ದುಕೊಂಡು ಇತರರೊಡನೆ ಮರ್ಯಾದೆಯಿಂದ ಮಾತನಾಡಬೇಕು.

ಲೋಕವ್ಯವಹಾರದ ತಿಳವಳಿಕೆ.

12 ನೆರೆಹೊರೆಗಳ ಸಮಾಚಾರಗಳನ್ನು ತಿಳಿಯುತ್ತಿರಬೇಕು. ದೇಶಾಂತರಗಳಲ್ಲಿ ನಡೆಯುವ ಸಮಾಚಾರಗಳನ್ನೂ ಸಾಧ್ಯವಾದ ಮಟ್ಟಿಗೆ ತಿಳಿಯುತ್ತಿರಬೇಕು. ಇತರರನ್ನು ಕಂಡಾಗಲೂ ಪ್ರಯಾಣ ಮಾಡುವಾಗಲೂ ಹೊಸ ಹೊಸ ಸಂಗತಿಗಳನ್ನು ಗ್ರಹಿಸುತ್ತಿರಬೇಕು. ವರ್ತಮಾನ ಪತ್ರಿಕೆಗಳನ್ನು ಸ್ವತಃ ಓದುವುದರಿಂದ ಅಥವಾ ಓದಿಸಿ ಕೇಳುವುದರಿಂದ ಲೋಕದ ಸಮಾಚಾರಗಳನ್ನು ತಿಳಿದುಕೊಳ್ಳಬಹುದು. ನಮಗಿಂತಲೂ ಹೆಚ್ಚು ನಾಗರಿಕ ಸ್ಥಿತಿಯುಳ್ಳರುವ ದೇಶದ ಜನರು ಹೇಗೆ ಬಾಳುತ್ತಾರೆ, ಹೇಗೆ ಕೆಲಸ ಮಾಡುತ್ತಾರೆ, ಅವರ ನಡತೆ ಹೇಗಿದೆ, ಇದೆಲ್ಲವನ್ನೂ ತಿಳಿದುಕೊಂಡು ಅವರ ಸುಗುಣಗಳನ್ನು ಶ್ರದ್ಧೆಯಿಂದ ಆಚರಿಸಬೇಕು.

ಗ್ರಾಮಾರೋಗ್ಯ ನಿಯಮಗಳು. ಆರೋಗ್ಯರಕ್ಷಣಾ ವಿಧಿ. ಗ್ರಾಮನಿವಾಸಿಗಳೆಲ್ಲರೂ ಆಚರಿಸಬೇಕಾದ ವಿಧಿಗಳು.

ನೈರ್ಮಲ್ಯ.

1. ಸ್ನಾನಮಾಡಿ ಮೈಯನ್ನು ಚೊಕ್ಕಟವಾಗಿ ಇಟ್ಟುಕೊಳ್ಳಬೇಕು, ಬಟ್ಟೆಗಳನ್ನು ಚೊಕ್ಕಟವಾಗಿ ಒಗೆದು ಉಪಯೋಗಿಸಬೇಕು.

ತನ್ನ ಮನೆಯವರೂ ತನ್ನ ಮಾತನ್ನು ಮೀರದೇ ಇರತಕ್ಕ ಇತರರೂ ಸಹಾ ಈ ಪ್ರಕಾರ ಸ್ನಾನಮಾಡಿ, ಒಗೆದ ಮಡಿ ಬಟ್ಟೆಯನ್ನು ಹಾಕಿಕೊಳ್ಳಬೇಕೆಂದು ಎಲ್ಲರಿಗೂ ಒತ್ತಿ ಹೇಳಬೇಕು.

ಹಾಸಿಗೆ ಹೊದ್ದಿಕೆಗಳನ್ನೂ, ನೀರಿಗೆ ಹಾಕದ ಇತರ ಬಟ್ಟೆಬರೆಗಳನ್ನೂ ಪದೇಪದೆ ಬಿಸಿಲಿಗೆ ಹಾಕುತ್ತಿರಬೇಕು.

ನೀರು.

2. ಕುಡಿಯುವ ನೀರನ್ನು ಸಾಧ್ಯವಾದಮಟ್ಟಿಗೂ ಚೊಕ್ಕಟವಾದ ಬಾವಿಗಳಿಂದಲೋ ಚಿಲುಮೆಗಳಿಂದಲೋ ತರಿಸಬೇಕು.

ಸೀನೀರಿನ ಕೆರೆ, ಬಾವಿ, ಕೊಳ ಮತ್ತು ಇತರ ಜಲಾಶ್ರಯಗಳು, ಇವುಗಳಲ್ಲಿ ನೀರು ಕೆಡಿಸದಂತೆ ನೋಡಿಕೊಳ್ಳಬೇಕು.

ಎಲೆಗಳು ಅಥವಾ ಇತರ ಕೊಳೆಯುವ ಪದಾರ್ಥಗಳು ಆ ನೀರಿಗೆ ಸೇರದಹಾಗೆ ನೋಡಿಕೊಳ್ಳಬೇಕು. ಅದರಲ್ಲಿ ಪಾತ್ರೆಯನ್ನು ತೊಳೆಯಬಾರದು, ಬಟ್ಟೆಯನ್ನು ಒಗೆಯಬಾರದು.

ದನಕರುಗಳ ನೀರಿಗೆ ಪ್ರತ್ಯೇಕವಾದ ಏರ್ಪಾಡನ್ನು ಮಾಡಿಕೊಳ್ಳಬೇಕು.

ಆಹಾರ.

ಆರೋಗ್ಯಕರವಲ್ಲದ, ಸುಲಭದಲ್ಲಿ ಜೀರ್ಣವಾಗದ ಮತ್ತು ಚೆನ್ನಾಗಿ ಬೇಯದೆ ಇರುವ ಆಹಾರವನ್ನು ಸೇವಿಸಬಾರದು.

ವಸ್ತ್ರಗಳು.

3. ಮಂಡಿಮುಚ್ಚುವ ಮಟ್ಟಿಗಾದರೂ ಮೈತುಂಬ ಬಟ್ಟೆ ಹಾಕಿಕೊಳ್ಳಬೇಕು. ಚಳಿಗಾಲದಲ್ಲಿ ಬೆಚ್ಚಗಿರುವ ಬಟ್ಟೆಗಳನ್ನು ಹಾಕಿಕೊಳ್ಳಬೇಕು. ಬೇಸಗೆಯಲ್ಲಿಯೂ ಮಳೆಯಲ್ಲಿಯೂ ಬಿಸಿಲಿಗೂ ಮಳೆಗೂ ಬರೀ ತಲೆ ಬಿಟ್ಟುಕೊಂಡು ಕೆಲಸ ಮಾಡಬಾರದು.

ಆರೋಗ್ಯಕರವಾದ ಮನೆಗಳು.

4 ಎತ್ತರವಾಗಿರುವ ಮತ್ತು ತೇವವಿಲ್ಲದ ಜಾಗದಲ್ಲಿ ಕ್ರಮವಾದ ಪಾಯಹಾಕಿ ಮನೆ ಕಟ್ಟಬೇಕು. ನೀರು ನಿಲ್ಲುವ ಕಡೆಯಲ್ಲಾಗಲಿ ಹಳ್ಳದ ಸಮೀಪದಲ್ಲಾಗಲಿ ಗದ್ದೆಯ ಹತ್ತಿರವಾಗಲಿ ಮನೆ ಕಟ್ಟಬಾರದು.

ಗಾಳಿಯು ಧಾರಾಳವಾಗಿ ಒಳಗೆಲ್ಲಾ ಬೀಸುವಂತೆ ಮನೆಗೆ ಸಾಕಾದಷ್ಟು ಬಾಗಿಲುಗಳೂ ಕಿಟಕಿಗಳೂ ಇರಬೇಕು

ಮನೆಯ ಪದಾರ್ಥಗಳನ್ನು ಅವವುಗಳ ಸ್ಥಳಗಳಲ್ಲಿ ಇಟ್ಟಿರಬೇಕು. ಅವುಗಳ ಮೇಲೆ ಸೇರುವ ಧೂಳನ್ನು ಪದೇ ಪದೆ ಚೆನ್ನಾಗಿ ಒರಸುತ್ತಿರಬೇಕು. ಮೂಲೆಮೂಲೆಗಳಲ್ಲಿ ಕಸವು ಕೊಂಚವೂ ಸೇರಿರಕೂಡದು.

ಮನೆಯಲ್ಲಾಗಲೀ ಮನೆಯ ಸಮೀಪದಲ್ಲಾಗಲೀ ಯಾವ ಪದಾರ್ಥವೂ ಕೊಳೆಯದಂತೆ ನೋಡಿಕೊಳ್ಳಬೇಕು.

ದನದ ಕೊಟ್ಟಿಗೆಗಳು.

5. ದನ ಕುರಿ ಮುಂತಾದುವುಗಳನ್ನು ಬೇರೆ ಕೊಟ್ಟಿಗೆಗಳಲ್ಲಿ ಕಟ್ಟಬೇಕು. ಅವುಗಳು ವಾಸದ ಮನೆಗೆ ಸ್ವಲ್ಪ ದೂರವಾಗಿರಬೇಕು. ಕೊಟ್ಟಿಗೆಯ ನೆಲವನ್ನು ತೇವವಿಲ್ಲದೆ ಚೊಕ್ಕಟವಾಗಿಟ್ಟಿರಬೇಕು.

ಗಂಜಳವು ಒಂದು ಗುಂಡಿಗೆ ಹರಿದುಹೋಗುವಂತೆ ಇರಬೇಕು. ಅದನ್ನು ಗೊಬ್ಬರಕ್ಕಾಗಿ ಉಪಯೋಗಿಸಬೇಕು. ತಿಪ್ಪೆಯನ್ನು ಗುಂಡಿಗೆ ಹಾಕಿ ವಾರಕ್ಕೊಂದಾವರ್ತಿ ಹೊಸ ಮಣ್ಣನ್ನೋ ತರಗೆಲೆಯನ್ನೋ ಅದರಮೇಲೆ ಹರಡುತ್ತ ಬರಬೇಕು.

ಕಸ ಕ್ರಿಮಿಕೀಟ ಮುಂತಾದುವುಗಳು.

6 ಮನೆಯೊಳಗೇ ಆಗಲಿ ಸಮೀಪದಲ್ಲೇ ಆಗಲಿ ಕಸ, ಬೂದಿ, ಎಂಜಲು ಮುಂತಾದುವು ಸೇರಕೂಡದು. ಮನಸ್ಸು ಬಂದಂತೆ ಬೀದಿಯಲ್ಲಿಯೇ ಆಗಲಿ ಜನರು ತಿರುಗಾಡುವ ಇತರ ಸ್ಥಳಗಳಲ್ಲಿಯೇ ಆಗಲಿ ಅವುಗಳನ್ನು ಬಿಸಾಡಕೂಡದು. ಅವುಗಳಿಗಾಗಿ ಏರ್ಪಡಿಸಿದ ಜಾಗಗಳಲ್ಲಿ ಅವನ್ನು ಹಾಕಿ ಆಗಾಗ ಅವುಗಳನ್ನು ಹೊರಗೆ ಸಾಗಿಸುತ್ತಿರಬೇಕು

ಸೊಳ್ಳೆ, ಹುಳು, ಹುಪ್ಪಟೆ, ನೊಣಗಳು ಸೇರದಂತೆ ಮನೆಯನ್ನು ಒಳಗೂ ಹೊರಗೂ ಚೊಕ್ಕಟವಾಗಿ ಇಟ್ಟುಕೊಳ್ಳಬೇಕು.

ಕಕ್ಕಸುಗಳು

7. ಕಕ್ಕಸುಗಳಿಲ್ಲದ ಕಡೆ ಜನರು ಊರಿಂದಾಚೆ ದೂರವಾಗಿ ಹೋಗಬೇಕು ಬೀದಿಗಳಲ್ಲಿಯೇ ಆಗಲಿ, ಜನರು ಓಡಾಡುವ ಕಡೆಗಳಲ್ಲಿಯೇ ಆಗಲಿ, ಮನೆಗೆ ನೂರು ಗಜಗಳಿಗೆ ಕಡಮೆಯಾಗಿರುವ ಯಾವ ಪ್ರದೇಶದಲ್ಲಿಯೇ ಆಗಲಿ ಜನರು ಹೇಸಿಗೆಯನ್ನು ಮಾಡಕೂಡದು. ಕಕ್ಕಸಿಗಾಗಿ ಆಳವಾದ ಹಳ್ಳಗಳನ್ನು ಉಪಯೋಗಿಸುವ ದುರ್ಚಾಲನ್ನು ಒಡನೆಯೇ ಬಿಡಬೇಕು. ಮಲವಿಸರ್ಜನೆಯನ್ನು ಮಾಡಿದಾಗ, ಮುಚ್ಚಿ ಹೋಗುವಂತೆ ಅದರಮೇಲೆ ಒಣಗಿದ ಮಣ್ಣನ್ನೋ ಬೂದಿಯನ್ನೋ ಹಾಕಬೇಕು.

ಬಚ್ಚಲನೀರು

8. ಬಚ್ಚಲನೀರು ಮನೆಯೊಳಗೇ ಆಗಲಿ ಹೊರಗೇ ಆಗಲಿ ನೆಲದಲ್ಲಿ ಇಂಗಬಾರದು. ಚರಂಡಿಗಳು ಕಟ್ಟದೆಯೇ ಇರುವ ಊರುಗಳಲ್ಲಿ ಬಚ್ಚಲ ನೀರಿಗಾಗಿ ಎರಡಡಿಗಳಿಗಿಂತಲೂ ಆಳವಿಲ್ಲದ ಗಾರೆಯ ತೊಟ್ಟಿಗಳನ್ನಾಗಲೀ ಪಾತ್ರೆಗಳನ್ನಾಗಲೀ ಏರ್ಪಡಿಸಿಕೊಂಡು ಅವುಗಳಿಂದ ಆ ನೀರನ್ನು ವಾರಕ್ಕೊಂದಾವರ್ತಿಯಾದರೂ ದೂರವಾದ ಸ್ಥಳಕ್ಕೆ ಸಾಗಿಸಬೇಕು.

ಅನೇಕ ಗ್ರಾಮಗಳಲ್ಲಿ ಬಚ್ಚಲ ನೀರನ್ನು ತೊಟ್ಟಿಗಳಿಂದ ಸಾಗಿಸುವುದು ಜಾತಿಪದ್ಧತಿಗೆ ವಿರುದ್ಧವೆಂದು ಜನರು ಹಿಂಜರಿಯುವುದೂ ಉಂಟು. ಅಂಥ ಸ್ಥಳಗಳಲ್ಲಿ ಅದಕ್ಕಾಗಿ ಪ್ರತ್ಯೇಕವಾದ ಏರ್ಪಾಡನ್ನು ಮಾಡಬೇಕು

ಖಾಲಿ ಜಾಗಗಳು.

9, ಸಣ್ಣ ಗ್ರಾಮವಾದರೆ ಅದಕ್ಕೆ ಒಂದು ಫರ್ಲಾಂಗು (೨೨೦ ಗಜ) ದೊಡ್ಡ ಗ್ರಾಮವಾದರೆ ಅದಕ್ಕೆ ಎರಡು ಫರ್ಲಾಂಗು (ಕಾಲುಮೈಲಿ) ಫಾಸಲೆಯೊಳಗಿರುವ ಖಾಲಿ ಜಾಗಗಳಲ್ಲಿ ಜೌಗೇರದಂತೆಯೂ ಪೊದೆಗಳು ಬೆಳೆಯದಂತೆಯೂ ನೋಡಿಕೊಳ್ಳಬೇಕು.

ಮೇಲ್ಕಂಡ ಫಾಸಲೆಯಲ್ಲಿಯೂ ಗ್ರಾಮದೊಳಗೂ ಇರುವ ಗುಂಡಿಗಳಲ್ಲಿಯೂ ತಗ್ಗುಪ್ರದೇಶಗಳಲ್ಲಿಯೂ ನಿಲ್ಲುವ ನೀರನ್ನು ಹೊರಗೆ ಹರಿದುಹೋಗುವಂತೆ ಮಾಡಬೇಕು ಅಥವಾ ಅವುಗಳನ್ನು ಮಣ್ಣಿನಿಂದ ಮುಚ್ಚಬೇಕು

ರಸ್ತೆಗಳು.

10. ರಸ್ತೆಗಳಿಗೆ ಜಲ್ಲಿ, ಮರಳು ಅಥವಾ ಗ್ರಾವಲ್ಲು, ಇವುಗಳನ್ನು ಹಾಕಿ, ಚೆನ್ನಾಗಿ ತಯಾರು ಮಾಡಬೇಕು. ಪಕ್ಕಗಳಲ್ಲಿ ಕಲ್ಲುಚಪ್ಪಡಿಯಿಂದಲಾಗಲಿ ಇಟ್ಟಿಗೆ ಗಾರೆಯಿಂದಲಾಗಲಿ ಚರಂಡಿಯನ್ನು ಚೆನ್ನಾಗಿ ಕಟ್ಟಬೇಕು

ಮುಂದೆ ಬರಬಹುದಾದ ಅಪಾಯಗಳಿಂದ ತಪ್ಪಿಸಿಕೊಳ್ಳುವ ಉಪಾಯಗಳು.

11 ಹಲಗೆಯಮೇಲೆ, ಇಲ್ಲವೆ ಮಂಚದಮೇಲೆ, ಎಂತೂ ನೆಲಕ್ಕೆ ಸ್ವಲ್ಪ ಎತ್ತರದಲ್ಲಿಯೇ ಮಲಗಬೇಕು. ಗಾಳಿ ಚೆನ್ನಾಗಿ ಬೀಸದೆ ಇರುವ ಕಡೆಯಲ್ಲಾಗಲಿ, ಜನರ ಸಂದಣಿಯಲ್ಲಾಗಲಿ ಮಲಗಬಾರದು.

ಮನೆಯಲ್ಲಿ ನೆಲದಮೇಲಾಗಲಿ, ಗೋಡೆಯಮೇಲಾಗಲಿ ಎಂದಿಗೂ ಉಗುಳಬಾರದು.

ತಕ್ಕಮಟ್ಟಿಗೆ ದಿನಾಗಲೂ ಅಂಗಸಾಧನೆಯನ್ನು ಮಾಡಬೇಕು. ಆದಷ್ಟುಹೊತ್ತು ನಿರ್ಮಲವಾದ ಗಾಳಿಯಿರುವ ಬೈಲಿನಲ್ಲಿ ಕಾಲವನ್ನು ಕಳೆಯಬೇಕು.

ಅಂಟುರೋಗಗಳು.

12. ಸಿಡುಬು ಏಳದಂತೆ ಸಿಡುಬನ್ನು ಹಾಕಿಸಿಕೊಳ್ಳಬೇಕು. ಇಲಿ ಬಿದ್ದಕೂಡಲೆ ಮನೆಯನ್ನು ಬಿಟ್ಟು ಪ್ಲೇಗಿನ ಬಾಧೆಯಿಂದ ತಪ್ಪಿಸಿಕೊಳ್ಳಬಹುದು. ಬಿಸಿಯಾದ ಊಟವನ್ನು ಮಾಡಿ ಮರಳಿಸಿದ ನೀರನ್ನು ಕುಡಿಯುವುದರಿಂದ ವಾಂತಿಭೇದಿರೋಗದ ಸೋಂಕನ್ನು ತಪ್ಪಿಸಿಕೊಳ್ಳಬಹುದು. ಸೊಳ್ಳೆಗಳು ಸೇರದಹಾಗೂ ನೆಲಕ್ಕೆ ಜೌಗು ಏರದಹಾಗೂ ನೋಡಿಕೊಂಡರೆ ಚಳಿಜ್ವರದಿಂದ ತಪ್ಪಿಸಿಕೊಳ್ಳಬಹುದು. ಬಂದ ಜ್ವರವನ್ನು ವಾಸಿಮಾಡಿಕೊಳ್ಳುವುದಕ್ಕೆ ಕ್ವಿನೀನನ್ನು ಉಪಯೋಗಿಸಬೇಕು.

ಯುದ್ಧಾಗ್ನಿಯು ಯೂರೋಪುಖಂಡವನ್ನೇ ವ್ಯಾಪಿಸುವಂತಿದೆ.

ಈಗಿನ ಯುದ್ಧಾರಂಭದ ಮೂಲಕಾರಣವನ್ನು ಇಲ್ಲಿ ಮೊದಲು ಪ್ರಸ್ತಾಪಿಸಿ, ಬಳಿಕ ಅಂದಂದಿನ ಮುಖ್ಯವಾರ್ತೆಗಳನ್ನು ತಿಳಿಯಿಸುತ್ತ ಬರಬೇಕೆಂದಿದ್ದೇವೆ.

ಆಸ್ಟ್ರಿಯಾಕ್ಕೂ ತುರ್ಕಿಗೂ ಮಧ್ಯದಲ್ಲಿ ಸಮುದ್ರತೀರಕ್ಕೆಸೇರಿ ಬೋಸ್ನಿಯಾ-ಹರ್ಜಗೋವಿನಾ-ಎಂಬ ೨ಚಿಕ್ಕ ರಾಷ್ಟ್ರಗಳು ಇರುತ್ತವೆ. ಇವು ೧೮೭೮ ನೆಯ ವರ್ಷದ ವರೆಗೂ ತುರ್ಕಿ ಪ್ರಭುತ್ವಕ್ಕೆ ಒಳಪಟ್ಟಿದ್ದುವು. ಈ ರಾಷ್ಟ್ರಗಳ ಜನರು ಸ್ಲಾವುಜಾತಿಯವರು. ಇವರುಗಳು ತುರ್ಕಿಯ ಪರಿಪಾಲನ ಹಿಂಸೆಯಿಂದ ತಪ್ಪಿಸಿಕೊಂಡು ಬಾಳಬೇಕೆಂದು ಎಷ್ಟೋ ಪ್ರಯತ್ನಗಳನ್ನು ಮಾಡಿದುವು. ಆದರೆ ತುರ್ಕಿಯವರು ಅದನ್ನು ನಡೆಯಗೊಡಲಿಲ್ಲ. ಕಡೆಗೆ ೧೮೭೮ ನೆಯ ವರ್ಷದಲ್ಲಿ ಯೂರೋಪ್ಯರಾಷ್ಟ್ರಗಳ ಸಂಬಂಧದಿಂದಲೂ, ಬರ್ಲಿನ್ನಲ್ಲಿ ಜರುಗಿದ ಸಂಧಿಯಿಂದಲೂ, ಆ ಎರಡು ಚಿಕ್ಕರಾಷ್ಟ್ರಗಳೂ ತುರ್ಕಿ ಪ್ರಭುತ್ವದಿಂದ ಕಳೆದುಕೊಂಡುವು. ಆದರೇನು? ಅಲ್ಲಿನವರು ಅಪೇಕ್ಷಿಸುತ್ತಿದ್ದ ಸ್ವಾತಂತ್ರ್ಯದ ಬಾಳು ಅವರಿಗೆ ಲಭಿಸಲಿಲ್ಲ. ತುರ್ಕಿಯ ಇಗುಕಿನಿಂದ ಬಿಡಿಸಿಕೊಂಡ ಬಳಿಕ ಅವರು ಆಸ್ಟ್ರಿಯಾದ ಹಿಡಿತಕ್ಕೆ ಸಿಕ್ಕಿದ್ದರು. ಇವೆರಡು ರಾಷ್ಟ್ರಗಳನ್ನೂ ಒಂದುಮಾಡಿ ಆಸ್ಟ್ರಿಯಾದವರು ಅವನ್ನು ತಮ್ಮಾಧೀನಪಡಿಸಿಕೊಂಡರು. ಈ ಏರ್ಪಾಟಿನಿಂದ ಬೋಸ್ನಿಯಾ-ಹರ್ಜಗೋವಿನಾದ ಪ್ರಜೆಗಳು ಮರಳಿ ಆಸ್ಟ್ರಿಯಾದ ಬಂಧನದಿಂದ ತಾವು ತಪ್ಪಿಸಿಕೊಳ್ಳಬೇಕೆಂದು ಸಾಹಸಪಟ್ಟರು. ಆದರೂ ಸಫಲವಾಗಲಿಲ್ಲ. ಇದರಿಂದ ಅವರಮೇಲೆ ಆಸ್ಟ್ರಿಯಾಪ್ರಭುತ್ವವು ಬೇಗ ಹೆಚ್ಚು ಹಿಂಸೆಪಡಿಸುವುದಕ್ಕೆ ಅವಕಾಶವಾಯಿತು. ಹೀಗೆ ೩೦ ವರ್ಷಗಳ ಕಾಲದಿಂದ ಅವರು ದಾಸ್ಯದಫಲವನ್ನು ಅನುಭವಿಸುತ್ತಲೇ ಬಂದರು. ಆದರೂ ತಮಗಾಗಿರುವ ಪರಾಭವವನ್ನು ಅವರು ಮರೆಯಲಿಲ್ಲ. ಪದೇಪದೇ ಆಸ್ಟ್ರಿಯಾದವರಿಗೆ ಶ್ರಮವನ್ನು ಕೊಡುತ್ತಲೇ ಬಂದರು ಆಸ್ಟ್ರಿಯಾದವರಿಗೆ ರಾಜ್ಯವಿಸ್ತಾರ ತೃಷ್ಣೆಯು ಬಲು ಹೆಚ್ಚು. ಅದರಿಂದ ಅವರು ಮೇಲ್ಕಂಡ ೨ ರಾಷ್ಟ್ರಗಳನ್ನೂ ತಮ್ಮ ರಾಜ್ಯಕ್ಕೇ ಸೇರಿಸಿಕೊಂಡುಬಿಟ್ಟರು. ಇದರಿಂದ ಅವುಗಳ ಸ್ಲಾವು ಜಾತಿಯಜನರಿಗೆ ಜಾತಿಮೂಲಕವಾದ ದ್ವೇಷವು ಬಹಳ ಹೆಚ್ಚಿತು. ಹೀಗಿರುವಲ್ಲಿ ಮೊನ್ನೆತಾನೇ ನಡೆದು ಮುಗಿದ ಬಾಲ್ಕನ್‌ಯುದ್ಧವು ಪ್ರಾಪ್ತವಾಯಿತು. ಅದರ ಪರ್ಯವಸಾನದಲ್ಲಿ, ಸರ್ವಿಯಾವು ತನಗೆ ಎಲ್ಲೂ ಒಂದು ಸಮುದ್ರತೀರದ ರೇವೆಯು ಇಲ್ಲದಿರುವುದರಿಂದ ಅಡ್ರಿಯಾಟಿಕ್ ಸಮುದ್ರತೀರದಲ್ಲಿದ್ದ ಒಂದು ರೇವೆಯನ್ನು ಸಂಪಾದಿಸಿಕೊಳ್ಳಬೇಕೆಂದು ತುರ್ಕಿಯವರೊಡನೆ ಆಲೋಚನೆಯನ್ನು ನಡೆಸುತ್ತಿದ್ದಿತು. ಅದು ಸಫಲವಾಗಿದ್ದರೆ ಸರ್ವಿಯಾಕ್ಕೆ ಇದ್ದ ಕೊರತೆಯು ನಿವಾರಿತವಾಗುತ್ತಿದ್ದಿತು. ಆದರಿಂದ ಆಸ್ಟ್ರಿಯಾಕ್ಕೆ ಪಕ್ಕದಲ್ಲೇ ಒಂದು ಇದಿರುಶೂಲವು ಮೂಡಿದಂತೆ ಆಗುತ್ತಿದ್ದಿತು. ಅದುಕಾರಣ, ಆಸ್ಟ್ರಿಯಾವು ಸರ್ವಿಯಾದ ಆ ಪ್ರಯತ್ನವನ್ನು ಸಾಗಗೊಡಿಸದಂತೆಮಾಡಲು ತನ್ನ ಸರ್ವಶಕ್ತಿಯನ್ನೂ ವಿನಿಯೋಗಿಸಿತು. ಅದರಿಂದ ಸರ್ವಿಯಾಕ್ಕೆ ಎಂದೆಂದಿಗೂ ಮರೆಯದಂತಹ ಆಶಾಭಂಗವಾಯಿತು ಆಗಿನಿಂದ ಸರ್ವಿಯಾಕ್ಕೆ,ಮೊದಲಿನಿಂದಲೂ ತನ್ನ ಪುರೋವೃದ್ಧಿಗೆ ವಿಘ್ನಮಾಡುತ್ತಲಿರುವ ಆಸ್ಟ್ರಿಯಾದಮೇಲೆ ಮಿತಿಮೀರಿದ ರೋಷವುಂಟಾಗಿರುವುದು. ಆ ರೋಷದ ಫಲವೇ ಸೆರಾಜೋವೋನಲ್ಲಿ ನಡೆದ ಆಸ್ಟ್ರಿಯಾ ಯುವರಾಜದಂಪತಿಗಳ ಹತ್ಯೆಯಾಗಿ ಪರಿಣಮಿಸಿತು. ಸರ್ವಿಯಾ-ಆಸ್ಟ್ರಿಯಾಗಳ ಬಲವು ಪರಸ್ಪರಸಮನಾದುದಲ್ಲ. ಆಸ್ಟ್ರಿಯಾವು ತುಂಬಾ ಬಲಾಢ್ಯವಾದುದು. ಹೀಗಿರುತ್ತ ಸರ್ವಿಯಾವು ನಡೆಯಿಸಿದ ರಹಸ್ಯಕೂಟದಿಂದ ಇಂಥ ಪ್ರತೀಕಾರವು ತನಗೆ ಉಂಟಾದುದನ್ನು ಕಂಡು ಆಸ್ಟ್ರಿಯಾವು ಮಿಾಸೆಯನ್ನು ಕೀಳಿಸಿಕೊಂಡ ಸಿಹ್ಮದಂತೆ ಬಲು ಕೆರಳಿಬಿಟ್ಟಿರುವುದು. ಅದರಿಂದಲೇ "೪೮ ಗಂಟೆಯ ಹೊತ್ತಿನೊಳಗಾಗಿ ನಾವು ಹೇಳಿದಂತೆ ನಡೆದುಕೊಳ್ಳಬೇಕು, ಇಲ್ಲದಿದ್ದರೆ ಯುದ್ಧಕ್ಕೆ ನಿಲ್ಲಬೇಕು" ಎಂದು ಆಸ್ಟ್ರಿಯಾವು ಸರ್ವಿಯಾಕ್ಕೆ ಸಂದೇಶವನ್ನು ಕಳುಹಿಸಿತು.

ಈಗ ಅವರೀರ್ವರಿಗೇನೋ ಯುದ್ಧಾರಂಭವಾಗಿ ನಡೆಯುತ್ತಿರುವುದು. ಇದು ಅವರೀರ್ವರಲ್ಲೇ ಮುಗಿದುಹೋದರೆ ಅಷ್ಟೇನೂ ಗಣ್ಯವಾದ ಮಹಾಯುದ್ಧವಾಗುವುದಿಲ್ಲ. ಆದರೆ ಅದರ ಸ್ಥಿತಿಯು ಹಾಗಿಲ್ಲ. ಜಾತಿಮೂಲದಿಂದಲೂ, ಪೂರ್ವವೈರದಿಂದಲೂ ಈ ಯುದ್ಧವು ಕಾಳ್ಗಿಚ್ಚಿನಂತೆ ಇತರ ಮಹಾದೇಶಗಳಿಗೆಲ್ಲಾ ಹಬ್ಬುವಂತಿದೆ. ಏಕೆಂದರೆ— ಸರ್ವಿಯಾದವರಜೂ ರಷ್ಯಾದವರದೂ ಒಂದುಜಾತಿ. ಆದುದರಿಂದ ಸರ್ವಿಯಾಕ್ಕೆ ಸಹಾಯಮಾಡಲು ರಷ್ಯನರು ಸಿದ್ಧರಾಗಿದ್ದಾರೆ. ಆಸ್ಟ್ರಿಯಾದವರದೂ ಜರ್ಮನಿಯವರದೂ ಒಂದುಜಾತಿ. ಅದರಿಂದ ಜರ್ಮನಿಯವರು ಆಸ್ಟ್ರಿಯಾಕ್ಕೆ ಸಹಾಯಮಾಡಲು ಸಿದ್ಧರಾಗಿದ್ದಾರೆ. ಇದರಮೇಲೆ ಜರ್ಮನಿಯವರಿಗೂ ಫ್ರಾನ್ಸಿನವರಿಗೂ ಚಿರಕಾಲಿಕವಾದಬದ್ಧವೈರ; ತಮಗೆ ಜರ್ಮನಿಯವರಿಂದ ಆಗಿರುವ ಪರಾಭವದ ಮುಯ್ಯನ್ನು ತೀರಿಸಿಕೊಳ್ಳುವುದಕ್ಕಾಗಿ ಫ್ರಾನ್ಸು ಹೊಂಚುಹಾಕಿಕೊಂಡೇ ಇದೆ. ರಷ್ಯಾ ಜರ್ಮನಿಗಳ ಬಲವು ಹೆಚ್ಚಿಹೋಗುವಾಗ್ಗೆ ಇಂಗ್ಲೆಂಡು ತಾನು ತಟಸ್ಥವಾಗಿರಲಾರದು ಈ ಪ್ರಬಲರಾಷ್ಟ್ರಗಳೊಂದೊಂದಕ್ಕೂ ಪರರ ಏಳ್ಗೆಯು ಸಹನವಾಗುವುದಿಲ್ಲ. ತಕ್ಕಡಿಯಲ್ಲಿ ತೂಗಿದಂತೆ ಅವರವರ ರಾಜ್ಯವಿಸ್ತಾರ ಏರಬೇಕೇ ಹೊರತು ಯಾರಿಗಾದರೊಬ್ಬರಿಗೆ ಸ್ವಲ್ಪ ಹೆಚ್ಚಾದರೂ ಇತರರು ಸುಮ್ಮನಿರುವರಲ್ಲ. ಈ ಕಾರಣದಿಂದ ಇಂಗ್ಲೆಂಡೂ ಕತ್ತಿಯನ್ನು ಹಿಡಿಯಲೇಬೇಕಾಗುವುದು. ಇಂಥ ಸ್ಥಿತಿಯು ಒದಗಿದರೆ ಅದರ ಫಲವನ್ನು ಪ್ರಪಂಚವೇ ಅನುಭವಿಸಬೇಕಾಗಿ ಬರುವುದು. ಅದುಕಾರಣ, ಈಗಿನ ಯೂರೋಪುಖಂಡದ ದೈನಿಕವಾರ್ತೆಗಳು ಜಗತ್ತಿನವರಿಂದೆಲ್ಲಾ ಅತ್ಯಂತ ಭಯಕುತೂಹಲಗಳಿಂದ ನಿರೀಕ್ಷಿಸಲ್ಪಡುತ್ತಿವೆ.

ದಕ್ಷಿಣಾಫ್ರಿಕಾದಲ್ಲಿ ಸರ್ ಜ್ಯೂಲಿಯಸ್ ವರ್ನರ್ ಎಂಬ ಶ್ರೀಮಂತನು ಕಾಲವಾದನು. ಇವನಾಸ್ತಿಯು ೫೫೦೦೦೦೦೦ ರೂಪಾಯಿಗಳ ಬೆಲೆಯಾಗುವುದೆಂದು ಪ್ರಥಮತಃ ನಿರೀಕ್ಷಿಸಲ್ಪಟ್ಟಿದ್ದುದು, ಈಗ ೧೩೫೦೦೦೦೦೦ ರೂಪಾಯಿಗಳ ಬೆಲೆ ಬಾಳುವುದೆಂದು ಗೊತ್ತಾಗಿರುವುದು. ದಕ್ಷಿಣಾಫ್ರಿಕಾದಲ್ಲಿ ಇಂತಹ ಅಪಾರವಾದ ಆಸ್ತಿಯು ಮತ್ತಾರಿಗೂ ಇರುವುದಿಲ್ಲವು.

ಈ ಯುದ್ಧದಲ್ಲಿ ಸೇರಬಹುದಾದ ಯೂರೋಪಿನ ಪ್ರಬಲರಾಷ್ಟ್ರಗಳ ಸೈನ್ಯಶಕ್ತಿಯು ಈ ಕೆಳಗಣ ವಿವರಣೆಯಿಂದ ಗೊತ್ತಾಗುವುದು.

	ಯುದ್ಧದ ದೊಡ್ಡ ಹಡಗುಗಳು	ಸಣ್ಣ ಯುದ್ಧದ ಹಡಗುಗಳನ್ನು ನಾಶಮಾಡುವ ಹಡಗುಗಳು	ನೀರಿನೊಳಗಿನ ಹಡಗುಗಳು	ಭೂಸೈನ್ಯ ಶಾಂತಕಾಲದಲ್ಲಿ	ಯುದ್ಧಕಾಲದಲ್ಲಿ	ಆಕಾಶ ವಿಮಾನಗಳು
ಇಂಗ್ಲೆಂಡಿಗೆ	೭೨	೧೯೪	೧೮೪	೨೫೪೦೦೦	೩೮೦೦೦೦	೧೫೦
ಫ್ರಾನ್ಸಿಗೆ	೩೨	೧೯೯	೧೧೫	೭೩೦೦೦೦	೪೦೦೦೦೦೦	೭೫೦
ರಷ್ಯಾಕ್ಕೆ	೮	೨೭	೧೪೨	೧೨೦೦೦೦೦	೪೫೦೦೦೦೦	೩೦೦
ಜರ್ಮನಿಗೆ	೩೯	೧೪೬	೪೩	೮೧೭೦೦೦	೫೪೦೦೦೦೦	೩೫೦
ಆಸ್ಟ್ರಿಯಾಕ್ಕೆ	೧೬	೭೪	೧೨	೩೯೬೦೦೦	೨೫೦೦೦೦೦	೧೫೦
ಇಟಲಿಗೆ	೧೧	೧೦೪	೩೩	೨೯೧೦೦೦	೨೦೦೦೦೦೦	೨೦೦
ಸರ್ವಿಯಾಕ್ಕೆ (ಇದಕ್ಕೆ ಸಮುದ್ರತೀರವಿಲ್ಲದಿರುವುದರಿಂದ ಜಲಸೈನ್ಯವಿಲ್ಲ.)				೩೬೦೦೦	೨೦೦೦೦೦	

ಮೇಲೆ ಕಂಡ ವಿವರಣದಿಂದ ಇಂಗ್ಲೆಂಡಿನ ಜಲಸೈನ್ಯವು ಪ್ರಪಂಚದಲ್ಲಿ ಅನುಪಮವಾದುದೆಂದು ವ್ಯಕ್ತವಾಗುತ್ತದೆ. ಆದರೆ ಭೂಸೈನ್ಯದಲ್ಲಿ ಅದನ್ನು ಮೀರಿಸಿದ ರಾಜ್ಯಗಳು ಇರುತ್ತವೆ. ಮತ್ತೂ ಈಗಿನಕಾಲದಲ್ಲಿ ಆಕಾಶವಿಮಾನಗಳ ಮೂಲಕವಾದ ಯುದ್ಧಸಾಧನಗಳು ರೂಢಿಗೆ ಬಂದಿವೆ. ಇಂಥ ವಿಮಾನಗಳಲ್ಲಿ ಮದ್ದು ಗುಂಡುಗಳನ್ನಿಟ್ಟುಕೊಂಡು ಕ್ಷಣಕಾಲದಲ್ಲಿ ಪುರಗ್ರಾಮಗಳನ್ನೂ ಸೇನಾವ್ಯೂಹವನ್ನೂ ಸಿಡಿಮದ್ದಿನ ಏಟಿನಿಂದ ಪುಡಿಪುಡಿಮಾಡುವ ಸಾಹಸವು ಪ್ರಬಲಿಸಿದೆ. ಇಂಥ ಆಕಾಶವಿಮಾನಗಳು, ಜರ್ಮನಿಗೂ ಫ್ರಾನ್ಸಿಗೂ ರಷ್ಯಾಕ್ಕೂ ಇರುವಷ್ಟು ಇಂಗ್ಲೆಂಡಿಗೆ ಇರುವುದಿಲ್ಲ ಇವೆಲ್ಲ ವಿದ್ಯಮಾನಗಳನ್ನು ನೋಡಿದರೆ ಪ್ರಬಲರಾಷ್ಟ್ರಗಳಲ್ಲಿ ಒಂದರ ಬಲವನ್ನು ಮತ್ತೊಂದು ಬೇರೊಂದು ಬಲದಿಂದ ಮೀರುತ್ತಲಿವೆ. ಆದರೆ ಯುದ್ಧಪ್ರಸಕ್ತಿ ಬಂದಾಗ ಈ ಬಲಾಬಲಗಳನ್ನು ಜಯಾಪಜಯವು ಅನುಸರಿಸಿರುತ್ತದೆಂದು ಹೇಳಲಾಗುವುದಿಲ್ಲ. ದೈವಾನುಗ್ರಹವಿದ್ದಕಡೆ ಜಯಲಕ್ಷ್ಮಿಯು ಮಾಲೆಯನ್ನು ಹಾಕುವಳೆಂಬುದು ಹಿಂದಿನ ರಷ್ಯಾ ಜಪಾನ್ ಯುದ್ಧದಲ್ಲಿ ಎಲ್ಲರ ನಿದರ್ಶನಕ್ಕೂ ಬಂದಿರುತ್ತದೆ.

ಪ್ರಕೃತದಲ್ಲಿ ಯೂರೋಪಿನೊಳಗೆ ರಣಭೇರಿಯು ದುಮುದುಮಿಸುತ್ತಿದೆ. ಅತ್ತ ಆಸ್ಟ್ರಿಯಾದವರು ಸರ್ವಿಯಾದ ಪೂರ್ವದ ರಾಜಧಾನಿಯಾಗಿದ್ದ ಬೆಲ್‌ಗ್ರೇಡಿಗೆ ಫಿರಂಗಿಯನ್ನು ಹೊಡೆದು ಪಟ್ಟಣದ ಅನೇಕ ಭಾಗಗಳನ್ನು ಸುಟ್ಟರು ಆ ಪಟ್ಟಣದ ಬಳಿಯಲ್ಲಿದ್ದ ಡೆನ್ಯೂಬ್‌ನದಿಯನ್ನು ದಾಟಿದರು. ಸೆಮೆಂಡ್ರಿಯಾದ ಬಳಿಯಲ್ಲಿ ದೊಡ್ಡ ಯುದ್ಧವಾಯಿತು. ಆಸ್ಟ್ರಿಯಾದವರು ಮುಂದುಮುಂದಕ್ಕೆ ಸಾಗಿಹೋಗುತ್ತಿದ್ದಾರೆಂದು ವರ್ತಮಾನವಿದೆ. ಈ ಮಧ್ಯೆ ರಷ್ಯಾವೂ ಜರ್ಮನಿಯೂ ಫ್ರಾನ್ಸೂ ಸಹ ಯುದ್ಧಸನ್ನಾಹವನ್ನು ಮಾಡಲುಪಕ್ರಮಿಸಿದುವು. ರಷ್ಯನರು ಸೇನೆಯನ್ನೆಲ್ಲಾ ಒಟ್ಟುಗೂಡಿಸುವುದಕ್ಕುಪಕ್ರಮಿಸಿದುದು ಜರ್ಮನಿಯವರಿಗೆ ಕೋಪೋದ್ರೇಕವನ್ನುಂಟುಮಾಡಿತು ಜರ್ಮನರು ತಾವು ಆಸ್ಟ್ರಿಯಾ ಸರ್ವಿಯಾದವರಿಗೆ ಮಧ್ಯಸ್ತಿಕೆಮಾಡುತ್ತೇವೆಂದು ಮೇಲೆಮೇಲೆ ಹೇಳುತ್ತಿದ್ದರು. ಮತ್ತೂ ತಾವು ಹೀಗೆ ಪ್ರಯತ್ನಿಸುತ್ತಿರುವಾಗ ರಷ್ಯಾವು ಸೇನೆಯನ್ನು ಹೆಚ್ಚಿಸುತ್ತಿರುವುದು ಅನ್ಯಾಯವೆಂದು ಹೇಳಿ, ಹಾಗಾದರೆ ತಾವೂ ಸೇನೆಯನ್ನು ಸಿದ್ಧಪಡಿಸುತ್ತೇವೆಂದರು. ಮತ್ತೂ ರಷ್ಯನ್ನರಿಗೂ ಫ್ರಾನ್ಸಿನವರಿಗೂ ಸಹ ಜರ್ಮನ್ ಪ್ರಭುತ್ವದವರು ತಂತಿಯಮೂಲಕ ನೀವುಗಳು ಸೇನೆಯನ್ನು ಕೂಡಿಸುತ್ತಿರುವುದೇತಕ್ಕೆ? ಕೂಡಲೇ ಇದಕ್ಕೆ ಉತ್ತರವನ್ನು ಕೊಡಬೇಕೆಂದು ಕೇಳಿದರು. ಅದಕ್ಕಾಗಿ ಅವರು ಕೊಟ್ಟಿದ್ದ ಕಾಲದ ವ್ಯವಧಿಯೊಳಗಾಗಿ ಅವರಿಬ್ಬರಿಂದಲೂ ಜರ್ಮನಿಗೆ ಉತ್ತರವು ಬರಲಿಲ್ಲ. ಆದರೆ ಫ್ರಾನ್ಸಿನ ಮಂತ್ರಿಯವರು ಪ್ಯಾರಿಸ್ಸಿನಲ್ಲಿರುವ ಜರ್ಮನ್‌ರಾಯಭಾರಿಯೊಡನೆ ಮಾತನಾಡುವಾಗ—ಮೊದಲು ಜರ್ಮನಿಯವರು ಮಾಡುತ್ತಿರುವ ಸೇನಾಸಿದ್ಧತೆಯನ್ನು ಕಂಡಬಳಿಕವೇ ನಾವು ಜಾಗ್ರತೆಗೊಂಡು ಸೇನೆಯನ್ನು ಕೂಡಿಸಬೇಕಾಯಿತು. ಫ್ರಾನ್ಸಿಗೆ ಶಾಂತಿಯೇ ಬೇಕಾದುದು. ಆದಕಾರಣವೇ ನಾವು ಪಾರ್ಲಿಮೆಂಟಿನಲ್ಲೂ ಕೂಡ ಯುದ್ಧವಿಷಯವನ್ನು ಆಲೋಚಿಸಿಯೇ ಇರಲಿಲ್ಲ" ಎಂದು ಹೇಳಿದರಂತೆ.

ಕಳೆದ ತಾ|| ೩೧ ರಲ್ಲಿ ಜರ್ಮನಿಯೊಳಗೆ ಯುದ್ಧಕಾಲಿಕ ಶಾಸನವು ಸಾರಲ್ಪಟ್ಟಿತು. ರಾಜಧಾನಿಯ ವಾರ್ತೆಗಳನ್ನು ತಂತ್ರಿಯದ್ವಾರಾ ಹೊರಕ್ಕೆ ತಿಳಿಯಪಡಿಸಕೂಡದೆಂದು ಕಟ್ಟುಮಾಡಿದರು. ಆಹಾರ್ಯಪದಾರ್ಥಗಳನ್ನೆಲ್ಲಾ ಸ್ವದೇಶದಿಂದ ಹೊರಕ್ಕೆ ಸಾಗಿಸಕೂಡದೆಂದು ಕಟ್ಟುಮಾಡಿದರು. ದೇಶದ ಲೋಹಮಾರ್ಗ, ಅಂಚೆ, ತಂತಿ ಈ ಶಾಖೆಯ ಕೆಲಸಗಳೆಲ್ಲಾ ಸೈನ್ಯಶಾಖೆಯ ಅಧಿಕಾರಕ್ಕೆ ಒಳಪಡಿಸಲ್ಪಟ್ಟುವು. ಜರ್ಮನ್ ಚಕ್ರವರ್ತಿಯವರು ರಷ್ಯಾಕ್ಕೂ, ಫ್ರಾನ್ಸಿಗೂ ಯುದ್ಧಸಂದೇಶವನ್ನು ಕಳಿಯಿಸಿರುವರೆಂದು ಆಗಸ್ಟ್ ತಾ|| ೧ರ ತಂತ್ರಿಯು ತಿಳಿಯಿಸಿತು. ಜರ್ಮನ್ ಚಕ್ರವರ್ತಿಯವರು ರಾಜಧಾನಿಯಲ್ಲಿ ಉಪನ್ಯಾಸಮಾಡುವಾಗ—"ಜರ್ಮನಿಯಮೇಲೆ ಮಬ್ಬುಕವಿದಿದೆ. ನಾವು ಕೈಗೆ ಕತ್ತಿಯನ್ನು ತೆಗೆದುಕೊಳ್ಳದಿದ್ದರೆ ನಿರ್ವಾಹವಿಲ್ಲ. ಸಂಧಿಪ್ರಸ್ತಾಪವು ಸಫಲವಾಗದಿರುವಾಗ ಆಯುಧ ಧಾರಣೆಯಿಂದಲೇ ನಮ್ಮ ಗೌರವವುಳಿಯಬೇಕು. ಯುದ್ಧದಲ್ಲಿ ಅಪರಿಮಿತ ಪರಿತ್ಯಾಗವನ್ನು ಮಾಡಬೇಕಾಗಿದೆ. ಜರ್ಮನಿಯನ್ನು ಕೆಣಕುವುದರ ಫಲವೇನೆಂಬುದನ್ನು ನಮ್ಮ ಶತ್ರುಗಳಿಗೆ ತಿಳಿಯಿಸಿಕೊಡಬೇಕಾಗಿದೆ. ನಮ್ಮ ಸೈನ್ಯಕ್ಕೆ ಬೆಂಬಲವಾಗಿರಲೆಂದು ಭಗವಂತನನ್ನು ಪ್ರಾರ್ಥಿಸುತ್ತೇನೆ" ಎಂದು ಹೇಳಿದರು. ಪ್ರಜೆಗಳೆಲ್ಲಾ ಉತ್ಸಾಹಧ್ವನಿಯಿಂದ ಗಗನತಟವನ್ನು ತುಂಬಿಸಿದರು. ಜರ್ಮನಿಯ ಕಡೆಯ ರಾಯಭಾರಿಯು ರಷ್ಯಾದಿಂದ ಸ್ವದೇಶಕ್ಕೆ ಬಂದುಬಿಟ್ಟನು. ತಾ|| ೧ರಲ್ಲಿ ಜರ್ಮನಿಯು ರಷ್ಯದಮೇಲೆ ತಾನು ಯುದ್ಧಮಾಡುವುದನ್ನು ಪ್ರಕಟಿಸಿತು. ಉಭಯದೇಶದ ಎಲ್ಲೆಯ ಪ್ರಾಂತದಲ್ಲಿ ಉಭಯಸೇನೆಯ ಚಕಮಕಿಗೆ ತಾ|| ೨ ರಲ್ಲಿ ಆರಂಭವಾಯಿತು. ಮೊದಲೇ ರಷ್ಯನ್ನರು ಜರ್ಮನಿ ಸೈನಿಕರಮೇಲೆ ಫಿರಂಗಿಗಳನ್ನು ಹಾರಿಸಿದರೆಂದೂ, ಅದರಮೇಲೆ ಇವರು ಫಿರಂಗಿಗಳನ್ನು ಶತ್ರುಗಳಮೇಲೆ ಹಾರಿಸಿದರೆಂದೂ ಹೇಳಲ್ಪಡುತ್ತಿದೆ. ಜರ್ಮನಿದೇಶಕ್ಕೆ ಅನ್ಯದೇಶಗಳಿಂದ ಹೊಗೆಬಂಡಿಗಳು ಹೋಗಿ ಬರುವುದಕ್ಕೂ ಕಟ್ಟಾಗಿರುವುದು. ಚೀನಾದ ರಾಜಧಾನಿಯಲ್ಲಿದ್ದ ಜರ್ಮನಿಯವರೂ ಕೂಡ ಅದನ್ನು ಬಿಟ್ಟು ಬಂದುಬಿಟ್ಟಿದ್ದಾರೆ. ಜರ್ಮನಿಯ ಸೇನೆಯು ಕ್ರೆಡಿ ಎಂಬಸ್ಥಳದಲ್ಲಿ ಫ್ರಾನ್ಸ್ ದೇಶದವರೊಡನೆ ಯುದ್ಧಕ್ಕೆ ಬಿದ್ದಿರುತದೆ. ಮತ್ತು ಫ್ರಾನ್ಸಿನ ಬಂದಾನೊಂದು ಪಟ್ಟಣವಾದ ಲಾಂಗುವೀಗೆ ಹೋಗುತ್ತಿರುವುದೆಂದು ೨ ನೇ ತಾ|| ನ ತಂತ್ರಿಯು ಹೇಳುತ್ತದೆ. ೧ ಲಕ್ಷ ಜರ್ಮನ್ ಸೈನಿಕರು ಲುಕ್ಸೆಂಬರ್ಗ್ ರಾಷ್ಟ್ರದ ಮಾರ್ಗವಾಗಿ ಫ್ರಾನ್ಸಿನ ಎಲ್ಲೆಯಲ್ಲಿ ನುಗ್ಗುತ್ತಿರುವರೆಂದು ಮತ್ತೊಂದುವಾರ್ತೆ ಬಂದಿರುವುದು. ಲುಕ್ಸೆಂಬರ್ಗ್ ಪಟ್ಟಣದ ತುಂಬ ಜರ್ಮನ್ ಸೈನಿಕರೇ ತುಂಬಿಕೊಂಡಿರುವರು. ಅಲ್ಲಿನ ರೇಲ್ವೆ ಸೇತುವನ್ನೂ ಇವರು ವಶಪಡಿಸಿಕೊಂಡಿರುವರು. ಇವನ್ನೆಲ್ಲಾ ಆ ಸಂಸ್ಥಾನಾಧೀಶನು (ಈ ಸಂಸ್ಥಾನವು ಒಬ್ಬ ಡಚೆಸ್ಸಿಯ ಆಳಿಕೆಯಲ್ಲಿ ಸ್ವತಂತ್ರವಾಗಿದೆ) ಕಂಡು ಇದು ಅಯುಕ್ತವೆಂದು ಹೇಳಲು, ಜರ್ಮನಿಯವರು-ಈ ಸಂಸ್ಥಾನಕ್ಕೆ ನಾವು ಯಾವ ಕೇಡನ್ನೂ ಮಾಡುವುದಿಲ್ಲವೆಂತಲೂ, ಒಂದುವೇಳೆ ಕೇಡಾದರೆ ಆ ನಷ್ಟವನ್ನೆಲ್ಲಾ ನಾವು ಕಟ್ಟಿಕೊಡುತ್ತೇವೆಂತಲೂ, ಹಿಂದಾಗಿರುವ ಒಡಂಬಡಿಕೆಯ ಪ್ರಕಾರ ಯುದ್ಧಸಮಯದಲ್ಲಿ ನೀವು ಯಾವ ಪಕ್ಷವನ್ನೂ ಸೇರದೆ ತಟಸ್ಥರಾಗಿರಬೇಕೆಂತಲೂ, ಲೋಹಮಾರ್ಗಗಳು ನಮ್ಮ ಸ್ವಂತದುವಾದುದರಿಂದ ನಮ್ಮ ಇಷ್ಟಬಂದಂತೆ ಮಾಡಿಕೊಳ್ಳುತ್ತೇವೆಂತಲೂ ಉತ್ತರಕೊಟ್ಟರು.

ತಾ|| ೧ ರಲ್ಲಿ ಫ್ರಾನ್ಸಿನ ರಾಜಧಾನಿಯಾದ ಪ್ಯಾರಿಸ್ಸಿನಲ್ಲಿ ಸೇನಾಸಿದ್ಧತೆಗೆ ಆರಂಭವಾಯಿತು. ಆ ಸುದ್ದಿಯು ಹರಡಿದ ಕೂಡಲೇ ಅಲ್ಲಿದ್ದ ಇತರ ದೇಶೀಯರೆಲ್ಲಾ ಊರನ್ನು ಬಿಟ್ಟು ಹೊರಡಲುಪಕ್ರಮಿಸಿದರು. ಇದರಿಂದ ಬಂಡಿ ಬಾಡಿಗೆಗಳು ಒಂದಕ್ಕೆ ಹತ್ತರಷ್ಟಾದುವು. ಕೂಲಿಗಳೆಲ್ಲಾ ಸೇನೆಗೆ ಸೇರಿಕೊಂಡುದರಿಂದ ಕೂಲಿಗಾರರೇ ಸಿಕ್ಕದೆ ಹೋದರು. ಪ್ರಜೆಗಳೆಲ್ಲಾ ಯುದ್ಧೋತ್ಸವದಿಂದ ಪರಿಪೂರ್ಣರಾದರು. ಆ ರಾತ್ರಿ ೧೨ ಗಂಟೆಯಮೇಲೆ ೨೪ ಗಂಟೆಯ ಕಾಲದೊಳಗಾಗಿ ಸೈನಿಕರೆಲ್ಲಾ ಅವರವರ ಪಟಾಲಮ್ಮಿಗೆ ಬಂದು ಸೇರಿಕೊಳ್ಳಬೇಕೆಂಬ ದೊಡ್ಡ ದೊಡ್ಡ ಪ್ರಕಟನಪತ್ರಿಕೆಗಳು ಊರಿನಲ್ಲೆಲ್ಲಾ ಗೋಡೆಗಳಮೇಲೆ ಅಂಟಿಸಲ್ಪಟ್ಟವು. ಸ್ವದೇಶದಿಂದ ಆಹಾರ್ಯವಸ್ತುಗಳನ್ನು ಇನ್ನೆಲ್ಲಿಗೂ ಕಳುಹಿಸಕೂಡದೆಂದು ಅಪ್ಪಣೆಯಾಯಿತು. ಅಷ್ಟರೊಳಗಾಗಿ ಜರ್ಮನಿಯವರು ಫ್ರಾನ್ಸಿನ ಎಲ್ಲೆಯೊಳಗೆ ಅವಾಂತರವನ್ನು ಮಾಡುತ್ತಿದ್ದುದರಿಂದ ಇದು ಅನ್ಯಾಯವೆಂದು ಫ್ರಾನ್ಸಿನವರು ಪ್ರಕಟಿಸಿದರು. ಫ್ರಾನ್ಸಿನ ಅಧ್ಯಕ್ಷರು ತಮ್ಮ ದೇಶೀಯರಿಗಾಗಿ ತಾ|| ೧ ರಲ್ಲಿ ಕೊಟ್ಟ ಪ್ರಕಟನೆಯಲ್ಲಿ:—"ನಮ್ಮ ದೇಶದರಕ್ಷಣೆಗಾಗಿ ನಾವು ಸೇನೆಯನ್ನು ಕೂಡಿಸಬೇಕಾಗಿದೆ. ಸೇನೆಯನ್ನು ನಾವು ಕೂಡಿಸುವುದು ಯುದ್ಧಕ್ಕೋಸುಗವಲ್ಲ; ಈಗಿನ ಸ್ಥಿತಿಗತಿಗಳನ್ನು ಅನುಸರಿಸಿ ನಮ್ಮ ದೇಶಕ್ಕೆ ಯಾವ ವಿಪತ್ತೂ ಒದಗದಂತೆ ಮಾಡಿಕೊಳ್ಳುವುದಕ್ಕಾಗಿ ಹೀಗೆ ಸೇನೆಯನ್ನು ಕೂಡಿಸಿಕೊಳ್ಳುವುದು ಒಳ್ಳೇದು. ನಾವು ಸ್ವಸಂರಕ್ಷಣೆಯನ್ನು ಮಾಡಿಕೊಂಡು, ಆಸ್ಟ್ರಿಯಾ ಸರ್ವಿಯಾದವರ ಮನಸ್ತಾಪವನ್ನು ಶಾಂತಿಗೊಳಿಸುವುದಕ್ಕೆ ಪ್ರಯತ್ನಿಸಬೇಕಾಗಿದೆ. ನಮ್ಮ ಪ್ರಯತ್ನಗಳಿಂದ ಪ್ರಯೋಜನವುಂಟಾಗಬಹುದೆಂಬ ಆಸೆಯು ಇನ್ನೂ ಇದೆ. ಆದುದರಿಂದ ಈ ಸಮಯದಲ್ಲಿ ಫ್ರಾನ್ಸ್ ದೇಶೀಯರೆಲ್ಲರೂ ತೊಂದರೆಪಡದೆ ಶಾಂತಸ್ವಭಾವದಿಂದ ದೇಶಸೇವೆಯನ್ನು ಮಾಡುವುದಕ್ಕೆ ಸಿದ್ಧರಾಗಿರಬೇಕೆಂದು ಕೋರುತ್ತೇನೆ" ಎಂದು ತಿಳಿಯಪಡಿಸಿದರು. ಪ್ರಜೆಗಳು ತಾ|| ೨ ರಲ್ಲಿ ಅತ್ಯುತ್ಸಾಹದಿಂದ ಇರುವಾಗ ಇಟಲಿಯವರೂ ಅವರೊಡನೆ ಕಲೆತು ಸಂತೋಷಧ್ವನಿಗಳನ್ನು ಮಾಡುತ್ತಿದ್ದರು.

ಅತ್ತ ರಷ್ಯಾಸೇನೆಯು ಬಯಲ್ಲಾದ ಹತ್ತಿರ ಜರ್ಮನಿದೇಶದ ಮೇಲೆ ಬಿದ್ದಿತೆಂದು ತಾ|| ೨ರ ವಾರ್ತೆಯು ತಿಳಿಸಿತು.

ಒಬ್ಬ ಫ್ರೆಂಚ್ ವೈಮಾನಿಕನು ಜರ್ಮನಿಗೆ ಸೇರಿದ ನೂರೆನ್‌ಬರ್ಗ್ ಎಂಬ ಪಟ್ಟಣದ ಮೇಲೆ ಸಿಡಿಮದ್ದನ್ನು ಹಾಕಿದನು. ಇದರ ಮೇಲೆ ಜರ್ಮನಿಯವರು-ಫ್ರಾನ್ಸಿನವರು ನಮ್ಮ ದೇಶದ ಮೇಲೆ ಯುದ್ಧಕ್ಕೆ ಬರುತ್ತೇವೆಂದು ಪ್ರಕಟಿಸದೇನೆಯೇ ನಮ್ಮ ಪಟ್ಟಣದ ಮೇಲೆ ಸಿಡಿಮದ್ದನ್ನು ಹಾಕಿರುವುದು ಯುಕ್ತವಲ್ಲವೆಂದು ಅವರ ನಡತೆಯನ್ನು ಖಂಡಿಸಿದರು. ಅದಕ್ಕೆ ಫ್ರಾನ್ಸಿನವರು—"ಆಸ್ಟ್ರಿಯಾ ರಷ್ಯಾದೇಶಗಳವರು ಸಂಧಿಯನ್ನು ಮಾಡಿಕೊಳ್ಳಲು ಸಿದ್ಧರಾಗಿದ್ದಾರೆ; ಈ ಸಮಯದಲ್ಲಿ ಯುದ್ಧಕ್ಕೆ ಬರುತ್ತೇನೆಂದು ಮುಂದಾಗಿ ಪ್ರಕಟಿಸದೇನೆಯೇ ಜರ್ಮನಿಯವರು ಫ್ರಾನ್ಸಿನ ಮೇಲೆ ಬಿದ್ದಿರುವರು. ಆದುದರಿಂದ ತಪ್ಪೆಲ್ಲಾ ಜರ್ಮನಿಯವರ ಮೇಲೇ ಇರುವುದು. ಮತ್ತು ಯುದ್ಧಸಮಯದಲ್ಲಿ ಯಾವ ದೇಶದವರೂ ಲುಕ್ಸೆಂಬರ್ಗನ್ನು ಆಕ್ರಮಿಸಿಕೊಳ್ಳಕೂಡದೆಂದು ಲಂಡನ್ ಪಟ್ಟಣದ ಒಡಂಬಡಿಕೆಯಲ್ಲಿರುವಾಗ, ಜರ್ಮನಿಯವರು ಈಗ ಅದನ್ನು ಭಂಗಪಡಿಸಿದ್ದಾರೆ. ಫ್ರೆಂಚು—ಜರ್ಮನ್ ಸೈನಿಕರಿಗೆ ವ್ಯರ್ಥವಾದ ಕಾದಾಟವಾಗುವುದು ಯುಕ್ತವಲ್ಲವೆಂಬ ಕಾರಣದಿಂದಲೇ ಫ್ರೆಂಚಿನವರು ತಮ್ಮ ಸೇನೆಯನ್ನು ಜರ್ಮನ್-ಫ್ರಾನ್ಸುಗಳ ಎಲ್ಲೆಯಿಂದ ೫ಮೈಲಿ ಹಿಂದಕ್ಕೆ ಕರೆಯಿಸಿಕೊಂಡುಬಿಟ್ಟಿದ್ದಾರೆ. ಈ ಸಂಗತಿಯನ್ನು ಪ್ರಪಂಚವೆಲ್ಲಾ ತಿಳಿದಿರಬೇಕು" ಎಂದು ಹೇಳಿ ತಮ್ಮ ಶಾಂತಪ್ರವರ್ತನೆಯನ್ನು ವ್ಯಕ್ತಪಡಿಸಿ ಜರ್ಮನಿಯ ಕುಟಿಲತೆಯನ್ನು ಹೊರಗೆಡಹಿದ್ದಾರೆ. ಲಾಂಗ್ವೀ ಹತ್ತಿರ ಜರ್ಮನಿಯ ಸೈನಿಕರು ಫ್ರೆಂಚರ ದೇಶವನ್ನು ನುಗ್ಗಿ ಆ ಸೈನಿಕರ ಮೇಲೆ ಯುದ್ಧಮಾಡಿದುದರಲ್ಲಿ ಜರ್ಮನಿಯವರ ಇಬ್ಬರು ಸೇನಾಧಿಕಾರಿಗಳು ಸತ್ತರು. ಈಚೆಗೆ ರಷ್ಯಾದ ಸೇನೆಯು ಅನೇಕ ಮುಖವಾಗಿ ತಮ್ಮ ಎಲ್ಲೆಯನ್ನು ದಾಟಿ ಜರ್ಮನಿದೇಶಕ್ಕೆ ನುಗ್ಗಿದೆಯೆಂದು ವರ್ತಮಾನ ಬಂದಿದೆ. ರಷ್ಯಾ ರಾಜಧಾನಿಯಿಂದ ಲಂಡನ್ ಟೈಮ್ಸ್ ಪತ್ರಿಕೆಗೆ ಬಂದಿರುವ ವಾರ್ತೆಯಲ್ಲಿ ಸದ್ಯಃ ರಷ್ಯನ್ನರ ಕಡೆ ೪೦ ಲಕ್ಷ ಸೈನ್ಯವು ಯುದ್ಧಕ್ಕೆ ಸಿದ್ಧವಾಗುವುದು ಎಂದು ಗೊತ್ತಾಗುತ್ತದೆ.

ಇಟಲಿಯು ಇದಕ್ಕೆ ಮುಂಚೆ ಆಸ್ಟ್ರಿಯಾದಕಡೆಗೆ ಸಹಾಯಕವಾಗಿರುವುದೆಂದು ಹೇಳಲ್ಪಡುತ್ತಿದ್ದಿತು. ಈಗಲಾದರೊ ಅದು ತಟಸ್ಥವಾಗಿರುವುದೆಂದು ಪ್ರಕಟವಾಗಿದೆ. ಇಟಲಿಯ ರಾಯಭಾರಿಯು ಜರ್ಮನಿಯ ರಾಯಭಾರಿಯೊಡನೆ ಮಾತನಾಡುವಾಗ—"ನಾವೂ ನೀವೂ ಆಸ್ಟ್ರಿಯಾದವರೂ ಇದಕ್ಕೆ ಹಿಂದೆಮಾಡಿಕೊಂಡಿರುವ ಒಡಂಬಡಿಕೆಯಲ್ಲಿ-ಇತರ ರಾಷ್ಟ್ರದವರು ಮುತ್ತಿ ಬಂದಾಗ ಪರಸ್ಪರ ಸಹಾಯಮಾಡಬೇಕೆಂಬ ನಿಯಮವು ಕಾಣಿಸಲ್ಪಟ್ಟಿರುವುದೇ ಹೊರತು, ಇತರರಮೇಲೆ ದಂಡೆತ್ತಿ ಹೋದಾಗ ಸಹಾಯಮಾಡಬೇಕೆಂದಿರುವುದಿಲ್ಲ. ಈಗಲಾದರೊ ಆಸ್ಟ್ರಿಯಾದವರು ಸರ್ವಿಯಾದಮೇಲೆ ದಂಡೆತ್ತಿಹೋಗಿರುವರು. ಆದರಿಂದ ಈ ಯುದ್ಧದಲ್ಲಿ ನಾವಾಗಿ ಯುದ್ಧಕ್ಕೆ ಹೋಗಿರುವುದಾದರಾಗಲಿ, ಇಟಲಿಯವರು ಸಹಾಯಮಾಡಬೇಕಾದುದಿಲ್ಲ" ಎಂದು ಹೇಳಿದನಂತೆ. ಇಟಲಿ-ಆಸ್ಟ್ರಿಯಾಗಳಿಗೆ ಮೇಲೆಮೇಲೆ ವಿಶ್ವಾಸವಿರುವುದೇ ಹೊರತು ಅಂತಶ್ಶುದ್ಧಿಯಿರುವುದಿಲ್ಲ. ಆಸ್ಟ್ರಿಯದ ಪುರೋವೃದ್ಧಿಯು ಇಟಲಿಗೆ ಸೈರಣೆಯನ್ನುಂಟುಮಾಡುವುದಿಲ್ಲ. ಈಗಿನ ತಾಟಸ್ಥ್ಯನಿರೂಪಣಕ್ಕೆ ಇದೇ ಕಾರಣವಾಗಿರುತ್ತದೆ.

ಈಚೆಗೆ ಸ್ವಿಟ್ಜರ್ಲೆಂಡ್, ಸ್ವೀಡನ್ ಈ ಚಿಕ್ಕ ಚಿಕ್ಕ ರಾಜ್ಯಗಳವರು ಕೂಡ ಸೇನಾಸನ್ನಾಹಮಾಡುತ್ತಲಿರುವರೆಂದು ಸುದ್ದಿ ಬಂದಿದೆ.

ಹೀಗೆ ಯೂರೋಪುಖಂಡದಲ್ಲಿ ಕಾಳ್ಕಿಚ್ಚಿನಂತೆ ಕಲಹಾಗ್ನಿ ಸ್ಫೋಟವಾಗುತ್ತಿರುವಾಗ ಇಂಗ್ಲೆಂಡು ಸುಮ್ಮನಿರುವುದೇ? ಹಾಗಿರುವುದು ಅದರ ಕೀರ್ತಿಪ್ರತಿಷ್ಠೆಗಳಿಗೂ ಸ್ವಸ್ಥಿತೆಗೂ ಸಾರ್ಥಕವಲ್ಲ. ಸುತ್ತಲೂ ಬೇಗೆಯು ಹತ್ತಿರುವಾಗ ಆಂಗ್ಲಸಾಮ್ರಾಜ್ಯಕ್ಕೆ ಶಾಂತಿಸೌಖ್ಯಗಳೆಲ್ಲುಂಟು? ಜರ್ಮನಿಯು ಯುದ್ಧಕ್ಕೆ ಕಾಲ್ಕೆರೆದುಕೊಂಡು ಮಾಯೋಪಾಯಗಳನ್ನು ಮಾಡಿ ರಷ್ಯಾದಮೇಲೂ, ಫ್ರಾನ್ಸಿನಮೇಲೂ ಬಿದ್ದಿರುವಾಗ ನೆರೆಮನೆಗೆ ಬೆಂಕಿ ಬಿದ್ದಂತಾಗಿರುವುದು. ಹೀಗಿರುವಾಗ ಮಗ್ಗುಲಮನೆಯವರಂತಿರುವ ಇಂಗ್ಲೆಂಡಿನವರು ಸುಮ್ಮನಿರಲಾದೀತೆ? ಅವರು ತಮ್ಮ ಮಿತ್ರರಾಜ್ಯರಕ್ಷಣೆಗೂ, ಯೂರೋಪಿನಲ್ಲುಂಟಾಗಿರುವ ದ್ವೇಷದ ಪ್ರತಿಕ್ರಿಯೆಗೂ, ತಮ್ಮ ಸಾಮ್ರಾಜ್ಯಪೌರುಷದ ರಕ್ಷಣೆಗೂ ಸಾಹಸಮಾಡಿಯೇ ತೀರಬೇಕಾಗಿರುವುದು. ಆಸ್ಟ್ರಿಯಾ ಸರ್ವಿಯಾಗಳಲ್ಲಿ ಯುದ್ಧಪ್ರಕಟನವಾಗುವ ಕಾಲದಿಂದಲೂ ಆಂಗ್ಲರಾಜ್ಯದ ವಿದೇಶಾಂಗ ಮಂತ್ರಿಯವರಾದ ಸರ್ ಎಡ್ವರ್ಡ್ ಗ್ರೇರವರು, ಪ್ರಬಲರಾಷ್ಟ್ರಗಳವರೆಲ್ಲ ಏಕೀಭವಿಸಿ ಸಭೆಗೂಡಿ ಅವರವರ ಮನಸ್ತಾಪವನ್ನು ಹೋಗಲಾಡಿಸಿ ಯೂರೋಪಿನ ಶಾಂತಿಯನ್ನು ಕಾಪಾಡಬೇಕೆಂದು ಬಹಳ ಸಾಹಸಮಾಡಿದರು. ಆವೊಂದೂ ನಡೆಯಲಿಲ್ಲ. ಸರ್ ಎಡ್ವರ್ಡ್‌ಗ್ರೇರವರು ಕಾಮನ್ಸ್ ಸಭೆಯೊಳಗೆ ಪ್ರಕೃತಸ್ಥಿತಿಯನ್ನು ಕುರಿತು ಮಾತನಾಡುವಾಗ ಬಹು ಗಂಭೀರವೂ, ದೀರ್ಘವೂ ಆದಭಾಷಣವನ್ನು ಮಾಡಿದರು. ಆಂಗ್ಲಪ್ರಭುತ್ವದವರು ಮನಃಪೂರ್ವಕವಾಗಿ ಶಾಂತಿಯನ್ನು ಕೋರಿ ಮೊದಲಿಂದಲೂ ಎಷ್ಟು ಸಾಹಸಪಟ್ಟರೋ ಅದನ್ನೆಲ್ಲಾ ವಿವರಿಸುವಾಗ—"ನಾವು ಇಂಗ್ಲೆಂಡಿನ ಕ್ಷೇಮಕ್ಕೆಮಾತ್ರವೇ ಅಲ್ಲದೆ ಯೂರೋಪಿನ ಶಾಂತಿಕ್ಷೇಮಗಳಿಗೂ ಸಹ ಶ್ರಮಪಟ್ಟಿರುವೆವು. ಆದರೆ ಈಗ ಕ್ಷಣಕ್ಷಣಕ್ಕೆ ಒಂದೊಂದು ತೆರದ ಸುದ್ದಿಯು ಬರುತಿದೆ. ಆದುದರಿಂದ ಯೂರೋಪಿನ ಭವಿತವ್ಯತೆಯು ಹೇಗಿದೆಯೋ ಹೇಳುವುದಕ್ಕಾಗುವುದಿಲ್ಲ. ಈಗ ಯೂರೋಪಿನಲ್ಲಿ ಯುದ್ಧವನ್ನು ಇಲ್ಲದಂತೆ ಮಾಡಿ ಶಾಂತಿಯನ್ನು ನಿಲ್ಲಿಸುವುದು ಅಸಾಧ್ಯ. ರಷ್ಯಾದವರೂ, ಜರ್ಮನಿಯವರೂ ಪರಸ್ಪರ ಯುದ್ಧಪ್ರಕಟನೆ ಮಾಡಿದ್ದಾರೆ. ಹಿಂದೆ ಬಾಲ್ಕನ್ ಯುದ್ಧಸಂದರ್ಭದಲ್ಲಿ ಪ್ರಯತ್ನಪಟ್ಟು ಯುದ್ಧವನ್ನು ನಿಲ್ಲಿಸಿ ಶಾಂತಿಯನ್ನು ಸ್ಥಾಪಿಸಲು ನಾವು ಪಾಡುಪಟ್ಟೆವು. ಆಗ ಯೂರೋಪುಖಂಡದ ಇತರ ಪ್ರಭುತ್ವದವರೆಲ್ಲಾ ನಮಗೆ ಸಹಾಯಮಾಡಿದರು. ಅದರಿಂದಲೇ ನಮ್ಮ ಪ್ರಯತ್ನವು ಸಫಲವಾಯಿತು. ಆಗಲೂ ಯೂರೋಪಿನ ರಾಷ್ಟ್ರಗಳವರೊಳಗೆ ಪರಸ್ಪರ ವೈಷಮ್ಯವಿದ್ದಿತು. ಆದರೂ ಅವರು ಅದನ್ನೆಲ್ಲಾ ಒಂದುಕಡೆಗಿಟ್ಟು ಶಾಂತಿಸ್ಥಾಪನೆಗೆ ಮನಗೊಟ್ಟರು. ವೈಷಮ್ಯವೃದ್ಧಿಗಾಗಿ ಪಾಡುಪಡಲಿಲ್ಲ. ಅದರಿಂದಲೇ ಶಾಂತಿಯುಂಟಾಯಿತು. ಈಗ ಅಂತಹ ಸ್ಥಿತಿಯಿಲ್ಲ; ಏಕೆಂದರೆ—ತಕ್ಕಷ್ಟು ಕಾಲವ್ಯವಧಿಯೂ ಇಲ್ಲ. ಮತ್ತೂ ಕೆಲ ಪ್ರಭುತ್ವದವರು ಸಮಾಧಾನಪ್ರಯತ್ನಕ್ಕೆ ಭಂಗವನ್ನು ತರಲು ಬಹಳ ಚುರುಕಾಗಿ ಕೆಲಸಮಾಡುತ್ತಿದ್ದಾರೆ. ಅದುಕಾರಣ, ಶಾಂತಿಸ್ಥಾಪನೆಗಾಗಿ ಮಾಡಿದ ಪ್ರಯತ್ನಗಳೆಲ್ಲಾ ನಿಷ್ಫಲವಾದುವು. ಈ ಸಂಗತಿಯು ಎಲ್ಲರಿಗೂ ಗೊತ್ತಿದೆ. ಈಗ ಯೂರೋಪಿನಲ್ಲಿ ಉಂಟಾಗಿರುವ ಮಹಾವಿಪತ್ತು ಬ್ರಿಟನ್ನಿಗೇ ಉಂಟಾಗಿರುವುದೆಂತಲೂ, ಬ್ರಿಟನ್ನಿನ ಗೌರವಕ್ಕೆ ಭಂಗಕಾರಿಯಾಗಿದೆಯೆಂತಲೂ ಈ ಸಭೆಯವರು ಗಣಿಸಬೇಕೆಂಬುದು ನನ್ನಭಿಪ್ರಾಯವು. ಕಳೆದವಾರದಲ್ಲೆಲ್ಲಾ ಶಾಂತಿಸ್ಥಾಪನೆಗಾಗಿ ಇಂಗ್ಲೆಂಡು ಎಷ್ಟೊಂದು ಸಾಹಸಪಟ್ಟಿತೋ ಅದು ಆ ಸಂಬಂಧವಾದ ಕಾಗದಗಳನ್ನುನೋಡಿದರೆ ನಿಮಗೆಲ್ಲಾ ಗೊತ್ತಾಗುವುದು. ಯೂರೋಪುಖಂಡವು ತೊಂದರೆಯಲ್ಲಿ ಸಿಕ್ಕಿದಾಗ ಅದನ್ನು ಬಗೆಹರಿಸುವುದಕ್ಕೆ ೨ ಪಕ್ಷಗಳಿರುವುವು. ಫ್ರಾನ್ಸು-ರಷ್ಯಾ-ಇಂಗ್ಲೆಂಡುಗಳು ಒಂದುಪಕ್ಷಕ್ಕೂ, ಇಟಲಿ-ಜರ್ಮನಿ-ಆಸ್ಟ್ರಿಯಾಗಳು ಒಂದುಪಕ್ಷಕ್ಕೂ ಇರುವುವು. ಇಂಗ್ಲೆಂಡು-ರಷ್ಯಾ-ಫ್ರಾನ್ಸುಗಳಿಗೆ ಕೇವಲ ಪರಿಚಯವಿರುವುದೇಹೊರತು, ಇಟಲಿ-ಜರ್ಮನಿ ಆಸ್ಟ್ರಿಯಾಗಳಿಗೆ ಇರುವಂತಹ ಸಂಬಂಧವಿರುವುದಿಲ್ಲ. ಸದ್ಯಃ ಫ್ರಾನ್ಸಿಗೆ ಯುದ್ಧವು ಬೇಕಾಗಿರಲಿಲ್ಲ. ಈಗಿನ ಆಸ್ಟ್ರಿಯಾ ಸರ್ವಿಯಾ ಯುದ್ಧಗಳಲ್ಲಿ ತಾನು ಸಂಬಂಧಿಸಬಾರದೆಂಬುದಕ್ಕಾಗಿ ಅದು ಅನೇಕ ಪ್ರಯತ್ನಗಳನ್ನು ಮಾಡಿತು. ಆದರೆ ರಷ್ಯಾಕ್ಕೂ ಫ್ರಾನ್ಸಿಗೂ ಇರುವ ಸ್ನೇಹಸಂಬಂಧದಿಂದ ಫ್ರಾನ್ಸು ಈಗಿನ ಕಲಹದಲ್ಲಿ ಸಂಬಂಧಿಸಬೇಕಾಯಿತು. ಆದರೆ ಅವರೀರ್ವರ ಸ್ನೇಹದಿಂದ ನಮಗೇನೂ ಸಂಬಂಧವಿಲ್ಲ. ಅವೆರಡು ದೇಶಗಳು ಯಾವ ಒಡಂಬಡಿಕೆಯ ಮೇರೆ ಸ್ನೇಹವನ್ನು ಮಾಡಿಕೊಂಡಿರುವುವೋ ಅದೂಕೂಡ ನಮಗೆ ತಿಳಿಯದು. ಫ್ರಾನ್ಸಿನವರೊಡನೆ ನಮಗೆ ಅನೇಕ ವರ್ಷಗಳಿಂದ ಸಖ್ಯವಿದೆ. ಚಿರಕಾಲಿಕವಾಗಿ ಇವೆರಡು ದೇಶಗಳಿಗೂ ಇದ್ದ ವೈರವು ಬಹುದಿನಗಳ ಹಿಂದೆ ತಪ್ಪಿಹೋಗಿ ಸ್ನೇಹವುಂಟಾಗಿರುವುದು ಪ್ರಜೆಗಳಿಗೆ ತೃಪ್ತಿಕರವಾಗಿದೆ. ಈ ಸ್ನೇಹವು ೨ ರಾಷ್ಟ್ರಗಳ ಪ್ರಜೆಗಳಿಗೂ ಅಂಗೀಕಾರವಾಗಿದೆ. ಈ ಸ್ನೇಹದಿಂದಲೇ ಇವೆರಡು ರಾಷ್ಟ್ರಗಳೂ ಪರಸ್ಪರ ಸಹಾಯ ಹೊಂದತಕ್ಕುವುಗಳಾಗಿವೆ. ಈಗ ಫ್ರಾನ್ಸಿನ ಯುದ್ಧದ ಹಡಗುಗಳೆಲ್ಲಾ ಮಧ್ಯಧರಾಸಮುದ್ರದಲ್ಲಿ ಸೇರಿರುವುದರಿಂದ ಫ್ರಾನ್ಸಿನ ಪಶ್ಚಿಮೋತ್ತರಸೀಮೆಗಳಲ್ಲಿ ರಕ್ಷಣೆಯೇ ಇಲ್ಲವಾಗಿದೆ. ಇಂಥ ಕಾಲದಲ್ಲಿ ಪರರಾಷ್ಟ್ರದ ಹಡಗುಗಳೇನಾದರೂ ಆ ಭಾಗಗಳಿಗೆ ಬಂದು ಮುತ್ತಿಗೆಹಾಕಿ ಯುದ್ಧಮಾಡಲುಪಕ್ರಮಿಸಿದರೆ, ಅದನ್ನು ನಾವು ಕಣ್ಣಾರ ನೋಡುತ್ತಿದ್ದರೂ ಕೈಕಟ್ಟಿಕೊಂಡು ಸುಮ್ಮನೆ ಕುಳಿತಿರಲಾಗುವುದೆ? ಹಾಗೆ ಮಾಡುವುದು ಧರ್ಮವಲ್ಲವೆಂಬುದು ನನ್ನಭಿಪ್ರಾಯವು. ಈ ದೇಶೀಯರ ಅಭಿಪ್ರಾಯವೆಲ್ಲಾ ಹೀಗೆಯೇ ಇರುವುದೆಂದು ನಂಬುತ್ತೇನೆ" ಎಂದು ಹೇಳಿದರು. ಮಂತ್ರಿಸಭೆಯವರು ಯುದ್ಧದಲ್ಲಿ ತಾವು ಅಂಗವಾಗಬೇಕೆಂದೇ ನಿರ್ಧರಿಸಿದರು. ಐರ್ಲೆಂಡ್ ಸ್ವರಾಜ್ಯಸಂಬಂಧವಾಗಿ ಒಳಗೊಳಗೆ ಉಂಟಾಗಿದ್ದ ಭಿನ್ನಾಭಿಪ್ರಾಯಗಳನ್ನೆಲ್ಲಾ ಅಲ್ಲಿನ ಪ್ರಜೆಗಳು ಒಂದು ಕಡೆಗಿಟ್ಟು ಸರ್ವರೂ ಏಕಮತ್ಯದಿಂದ ರಣೋತ್ಸಾಹವನ್ನು ತೋರಿಸಿರುವರು. ಸ್ವಾತಂತ್ರ್ಯವಾದಿನಿಯರಾದ ಸ್ತ್ರೀಯರು ಸಹ ದೇಶಾಭಿಮಾನಪ್ರೇರಣೆಯಿಂದ ತಮ್ಮ ಹಾವಳಿಯನ್ನು ನಿಲ್ಲಿಸಿರುವರು. ತಾ|| ೩ ರಲ್ಲಿ ಬಂಕಿಂಗ್‌ಹ್ಯಾಂ ಅರಮನೆಯ ಮುಂದೆ ಅನೇಕಪ್ರಜೆಗಳು ಉತ್ಸಾಹದಿಂದ ಕೂಡಿ, "ಭಗವಂತನು ಗ್ರೇಟ್‌ಬ್ರಿಟನ್ನನ್ನೂ ರಾಜರನ್ನೂ ಪರಿಪಾಲಿಸಲಿ" ಎಂದು ಘೋಷಮಾಡುತ್ತಲಿದ್ದರು. ಪ್ರಭುದಂಪತಿಗಳು ಇದನ್ನು ಕೇಳಿ, ಮಾಡದಮೇಲಣ ವಸಾರೆಗೆ ಬಂದು ನಿಂತು ದರ್ಶನವನ್ನಿತ್ತರು. ಆಗ ಪ್ರಜೆಗಳೆಲ್ಲಾ ಆನಂದಘೋಷಗಳನ್ನು ಮಾಡಿದರು. ಮಧ್ಯಧರಾಸಮುದ್ರದಲ್ಲಿದ್ದ ಆಂಗ್ಲರ ಯುದ್ಧದ ಹಡಗುಗಳು ಯುದ್ಧಸನ್ನದ್ಧವಾಗಿ ಹೊರಟುವು. ಆಂಗ್ಲಪತ್ರಿಕೆಗಳೆಲ್ಲಾ ಯುದ್ಧವನ್ನು ಮಾಡಿಯೇ ತೀರಬೇಕೆಂದು ಸೂಚಿಸಿದುವು.

ಹೀಗೆ ಇಂಗ್ಲೆಂಡು ಯುದ್ಧಕ್ಕೆ ಅಣಿಯಾಗಲು, ಅದರ ಅಧಿನಿವೇಶಗಳಾದ ರಾಷ್ಟ್ರಗಳೆಲ್ಲವೂ ತಮ್ಮ ತಮ್ಮ ಯೋಗ್ಯತೆಗೆ ತಕ್ಕಂತೆ ಸೇನಾಸಹಾಯವನ್ನು ಮಾಡಲು ತಿಳಿಯಿಸಿಕೊಂಡಿರುತ್ತವೆ. ಇಂಡ್ಯಾ ಸರ್ಕಾರದವರೂ ಅದೇ ಅಭಿಪ್ರಾಯವನ್ನು ತಿಳಿಯಪಡಿಸಿಕೊಂಡಿದ್ದಾರೆ. ಭರತಖಂಡದಲ್ಲಿ ಸರ್ಕಾರದವರು ಮುಂಜಾಗ್ರತೆಯಿಂದ ಬೇಕಾದ ಏರ್ಪಾಟುಗಳನ್ನೆಲ್ಲಾ ಮಾಡುತ್ತಿದ್ದಾರೆ. ಸಮುದ್ರದ ಮೇಲಣ ಸಂಚಾರದಲ್ಲಿ ಬಹಳ ಕಟ್ಟುನಿಟ್ಟಾಗಿದೆ. ಬೊಂಬಾಯಿ ತೀರದ ಅಧಿಕಾರಿಗಳ ಅಪ್ಪಣೆಯಿಲ್ಲದೆ ಯಾವ ಹಡಗೂ ದಡವನ್ನು ಬಿಟ್ಟು ಹೊರಡಕೂಡದೆಂದೂ, ಯಾರು ಹೊರಟರೆ ಫಿರಂಗಿಯಿಂದ ಹೊಡೆಯಲ್ಪಡುವುವೆಂದೂ, ಅಪ್ಪಣೆಮಾಡಲ್ಪಟ್ಟಿದೆ. ಅದರಂತೆ ರಂಗೂನಿನಲ್ಲಿಯೂ ಕರಾಚಿಯಲ್ಲೂ ಕಟ್ಟುಗಳ ಏರ್ಪಾಟಾಗಿದೆ. ಕರಾಚಿಗೆ ಯಾವ ಹಡಗೂ ಹಗಲು ಹೊತ್ತೇ ಬರುವುದೊಳ್ಳೆಯದೆಂದು ಏರ್ಪಡಿಸಿದ್ದಾರೆ. ಸಮುದ್ರ ಮಧ್ಯದಲ್ಲಿ ವಿದೇಶದ ಹಡಗುಗಳ ಉಪದ್ರವವುಂಟಾಗಬಹುದೆಂಬ ಕಾರಣದಿಂದ ಅಲ್ಲಿಂದ ಸೀಮೆಗೆ ಪ್ರಯಾಣಮಾಡುವವರಿಗೆ ಎಚ್ಚರಿಕೆಯು ಹೇಳಲ್ಪಟ್ಟಿದೆ. ಈಗ ಸಮುದ್ರಯಾನವೇ ಭಯಪ್ರದವಾಗಿ ನಿಂತಿದೆ. ಸೀಮೆಯಲ್ಲಿ ಎಲ್ಲರಾಷ್ಟ್ರಗಳಲ್ಲೂ ವ್ಯಾಪಾರಕ್ಕೆ ಕಟ್ಟಾಟವಾಗಿದೆ. ನಮ್ಮ ಭರತಖಂಡದಲ್ಲೂ ವ್ಯಾಪಾರಕ್ಕೆ ತುಂಬಾ ನಷ್ಟವು ಸಂಭವಿಸುವಂತಾಗಿರುವುದು. ಬೊಂಬಾಯಿ ಕಲ್ಕತ್ತಾ ಕರಾಚಿ ಮೊದಲಾದ ಪಟ್ಟಣಗಳ ದೊಡ್ಡದೊಡ್ಡ ವರ್ತಕರೆಲ್ಲಾ ಚಿಂತಾಮಗ್ನರಾಗಿದ್ದಾರೆ. ಪ್ರಜೆಗಳು ನೋಟುಗಳನ್ನು ಕೊಟ್ಟು ಚಿನ್ನ ಬೆಳ್ಳಿಯ ನಾಣ್ಯಗಳನ್ನು ಖಜಾನೆಗಳಿಂದ ಪಡೆದುಕೊಳ್ಳುತ್ತಿದ್ದಾರೆ. ಸೀಮೆಯಿಂದ ಇಲ್ಲಿಗೂ ಇಲ್ಲಿಂದ ಸೀಮೆಗೂ ಹೋಗಿ ಬರುವ ತಂತ್ರೀವಾರ್ತೆಗಳನ್ನೆಲ್ಲಾ ಸರ್ಕಾರದವರು ಪರೀಕ್ಷಿಸಿ ಕಳುಹಿಸುತ್ತಿದ್ದಾರೆ. ಈ ನಿರ್ಬಂಧಗಳಿಂದ ಸೀಮೆಯ ತಂತ್ರೀವಾರ್ತೆಗಳು ಬಹಳ ಸಾವಕಾಶವಾಗಿ ಬರುತ್ತಲೂ, ಕೆಲ ಸಮಯದಲ್ಲಿ ಒಂದೊಂದುದಿನ ಯುದ್ಧಸಂಬಂಧದ ವಾರ್ತೆಗಳೇ ಬರದೆ ಕಟ್ಟಾಗುತ್ತಲೂ ಇವೆ. ಭರತಖಂಡದ ಹತ್ತಿರವಿರುವ ಯುದ್ಧನಾವೆಗಳೆಲ್ಲಾ ಸೀಮೆಗೆ ಬರಹೇಳಲ್ಪಟ್ಟಿವೆಯಂತೆ. ರಜಾದಮೇಲೆ ಸ್ವದೇಶಕ್ಕೆ ಹೋಗಿರುವ ಸರ್ಕಾರದಧಿಕಾರಿಗಳೆಲ್ಲಾ ಕೂಡಲೇ ಕೆಲಸದಮೇಲೆ ಭರತಖಂಡಕ್ಕೆ ಬಂದುಬಿಡಬೇಕೆಂದು ಅಪ್ಪಣೆಯಾಗಿದೆ.

ಈಚೆಗೆ ನಡೆದಿರುವ ಯುದ್ಧದ ವಾರ್ತೆಗಳು ಸಾಂಗವಾಗಿ ಬರುತ್ತಲಿಲ್ಲ. ಕೆಲವು ಪರಸ್ಪರ ವಿರುದ್ಧವಾಗಿವೆ. ಜರ್ಮನಿಯವರು ರಷ್ಯಾಕ್ಕೆ ಸೇರಿದ ಏಲಾಂಡ್ ದ್ವೀಪವನ್ನು ವಶಪಡಿಸಿಕೊಂಡರೆಂದು ಸುದ್ದಿ ಬಂದಿದೆ. ಜರ್ಮನಿಯವರು ಫ್ರೆಂಚಿನ ಮೇಲೆ ನುಗ್ಗಬೇಕಾದರೆ, ಬೆಲ್ಜಿಯಮ್ಮಿನಮೇಲೆ ಹಾದು ಹೋಗಬೇಕಾಗಿರುತ್ತದೆ. ಅದಕ್ಕೆ ಆ ದೇಶದವರು ದಾರಿ ಕೊಡಬೇಕಾಗಿದೆ. ಅವರು ದಾರಿ ಕೊಡದಿದ್ದರೆ ಜರ್ಮನಿಯವರಿಗೆ ಬಹಳ ತೊಂದರೆ. ಅದುಕಾರಣ, ಜರ್ಮನಿಯವರು ಬೆಲ್ಜಿಯಮ್ಮಿನವರನ್ನು ಕುರಿತು-ನೀವು ನಮ್ಮ ಸ್ನೇಹದಲ್ಲಿರಬೇಕೆಂದು ತಿಳಿಯಿಸಿ, ಅದಕ್ಕೆ ಕಳೆದ ಸೋಮವಾರದೊಳಗೆ ಉತ್ತರವನ್ನು ತಿಳಿಯಿಸಬೇಕೆಂದು ಕೇಳಿದರು. ಅದಕ್ಕೆ ಅವರು ಒಪ್ಪಲಿಲ್ಲ. ಈ ಯುದ್ಧದಲ್ಲಿ ನಾವು ತಟಸ್ಥರಾಗಿರುತ್ತೇವೆಂದು ತಿಳಿಸಿದರು. ಇದರಮೇಲೆ ಜರ್ಮನಿಯು ಬೆಲ್ಜಿಯಮ್ಮಿನಮೇಲೂ ಯುದ್ಧಪ್ರಕಟನೆಯನ್ನು ಮಾಡಿತು. ಅದುಕಾರಣ, ಬೆಲ್ಜಿಯಂದೇಶವೂ ಯುದ್ಧಸನ್ನಾಹವನ್ನು ಮಾಡುತ್ತಿದೆ. ಅಂತೂ ಈಗಿನ ಮಹಾಸಂಗ್ರಾಮಕ್ಕೆಲ್ಲಾ ಜರ್ಮನಿಯ ಅಹಂಭಾವವೇ ಮೂಲವೆಂದು ಗೊತ್ತಾಗಿದೆ.

ಚಕ್ರವರ್ತಿಯವರಿಗೂ, ಜರ್ಮನಿಗೂ ಯುದ್ಧಾರಂಭವಾಗಿರುವುದು. ವೈಸ್ರಾಯರು ಭರತಖಂಡದ ಸೇನೆಯಾವಶ್ಯಕತೆಯು ಬಿದ್ದಲ್ಲಿ ವಾಲಂಟಿಯರ ಸೇನೆಯನ್ನು ಪೂರ್ತಿಯಾಗಾಗಲಿ ಅಥವಾ ಅದರೊಂದುಭಾಗವಾಗಲಿ ಸೇನಾಕಾರ್ಯಕ್ಕೆ ಅಪೇಕ್ಷಿಸಬಹುದು. ಕರಾಚಿ, ಬೊಂಬಾಯಿ, ಕಲ್ಕತ್ತಾ ಮತ್ತೂ ರಂಗೂನ್ ಈ ರೇವುಪಟ್ಟಣಗಳಲ್ಲಿ ಸಂರಕ್ಷಣಾರ್ಥವಾಗಿರುವ ಸೇನೆಯ ಕಮಾಂಡರುಗಳ ಅಪ್ಪಣೆಯಂತೆ ಆ ಸ್ಥಳಗಳ ವಾಲಂಟಿಯರ್ ಎಲೆಕ್ಟ್ರಿಕ್ ಇಂಜನಿಯರುಗಳು ನಡೆದುಕೊಳ್ಳತಕ್ಕದು. ಎಲ್ಲಾ ಯೂರೋಪ್ಯರೂ ವಾಲಂಟಿಯರುಗಳಾಗಿ ಸೇನೆಗೆ ಸೇರಬೇಕು. ಸೇನಾಸಾಮಗ್ರಿಯ ಉಗ್ರಾಣಕ್ಕೆ ಸಂಬಂಧಪಟ್ಟ ಡೇರಾಗಳು, ಒಂದೇವಿಧವಾದ ಉಡುಪುಗಳು, ಮೋಜಾಗಳು, ಲಗಾಮುಗಳು ಮತ್ತು ಇತರ ಸಾಮಗ್ರಿಗಳೂ, ರೈಲ್ವೆ ಟೆಲಿಗ್ರಾಫು ಮತ್ತು ಟೆಲಿಫೋನುಗಳಿಗೆ ಸಂಬಂಧಪಟ್ಟ ತಂತಿ ಮೊದಲಾದ ಸಾಮಗ್ರಿಗಳೂ, ಅವುಗಳನ್ನು ಕಟ್ಟುವ ಮತ್ತು ಕತ್ತರಿಸುವ ಸಾಮಗ್ರಿಗಳೂ, ವೇಲ್ಸ್ ಕಲ್ಲಿದ್ದಲೂ-ಇವುಗಳನ್ನೂ ಭರತಖಂಡದಿಂದ ಹೊರಕ್ಕೆ ಸಾಗಿಸಕೂಡದು. ಭರತಖಂಡದ ಸೇನೆಯು ಇಂಗ್ಲೆಂಡಿಗೆ ಕಳುಹಲ್ಪಡುವ ಸಂದರ್ಭವೊದಗಬಹುದಾದುದರಿಂದ ಈಗ ರಜದಮೇಲೆ ಇಂಗ್ಲೆಂಡಿಗೆ ಹೋಗಿರುವ ಬ್ರಿಟಿಷ್ ಮತ್ತು ಇಂಡ್ಯಾದ ಸೇನಾಧಿಕಾರಿಗಳು ಭರತಖಂಡಕ್ಕೆ ಹಿಂದಿರುಗಿ ಬಂದುಬಿಡಬೇಕು. ಎಂದು ಇಂಡ್ಯಾ ಗೆಜೆಟ್ಟಿನ ವಿಶೇಷ ಪತ್ರಿಕೆಯಲ್ಲಿ ತಿಳುಹಲ್ಪಟ್ಟಿರುವುದು.

ಭಾರತೀಯರು ಯಾವಾಗಲೂ ರಾಜಭಕ್ತಿಯುತರಾಗಿರುವರಲ್ಲದೆ ಚಕ್ರಾಧಿಪತ್ಯದ ಸಂರಕ್ಷಣೆಗಾಗಿ ಬೇಕಾದ ಸಹಾಯವನ್ನು ಮಾಡಲು ಸಿದ್ಧರಾಗಿರುವರೆಂದು ವೈಸರಾಯರು ಸಾಮ್ರಾಜ್ಯಸರ್ಕಾರಕ್ಕೆ ತಿಳುಹಿಸಿರುವುದರಮೇಲೆ ಬಂಗಾಳಿ ಪತ್ರಿಕೆಯು "ಸರ್ಕಾರದ ವಿಚಾರದಲ್ಲಿ ನಮಗೆ ಭಿನ್ನಾಭಿಪ್ರಾಯವಿರಬಹುದು, ಆದರೆ ಜರ್ಮನಿ ಅಥವಾ ಇತರ ಶತ್ರುಗಳು ಪ್ರತಿಭಟಿಸಿರುವಾಗ್ಗೆ ನಾವು ಭಾರತೀಯರು ನಮ್ಮ ವ್ಯತ್ಯಾಸಗಳನ್ನು ಮರೆತು ನಮ್ಮ ಪುರೋಭಿವೃದ್ಧಿಗೆ ಆಧಾರವಾಗಿರುವ ಪ್ರಬಲ ಚಕ್ರಾಧಿಪತ್ಯದ ರಕ್ಷಣೆಗಾಗಿ ನಮಗೆ ಸಾಧ್ಯವಾದ ಸಾಹ್ಯವನ್ನೆಲ್ಲಾ ಸಮರ್ಪಿಸುತ್ತೇವೆ. ದುರದೃಷ್ಟವಶಾತ್ ಅಂತಹ ಆವಶ್ಯಕತೆಯು ಪ್ರಾಪ್ತವಾದಲ್ಲಿ ಭಾರತೀಯರು ತಮ್ಮ ಭಕ್ತಿಯನ್ನು ಕಾರ್ಯರೂಪವಾಗಿ ವ್ಯಕ್ತಗೊಳಿಸಲಿಚ್ಛಿಸುವರು." ಎಂದೂ, ಅಮೃತಬಜಾರ್ ಪತ್ರಿಕೆಯು—"ಭಾರತೀಯರ ರಾಜಭಕ್ತಿ ವಿಚಾರದಲ್ಲಿ ಇಂಗ್ಲೆಂಡು ಪೂರ್ಣವಾದ ನಂಬುಗೆಯನ್ನಿಟ್ಟಿರಲಿ." ಎಂದೂ ಬರೆದಿರುವುದಲ್ಲದೆ ಇತರ ಪತ್ರಿಕೆಗಳೂ ಅದೇ ಅಭಿಪ್ರಾಯವನ್ನು ಪಟ್ಟಿರುವುವು.

ತಾ|| ೬ ರ ತಂತ್ರೀವಾರ್ತೆಯು.

ಜರ್ಮನಿಯು ಬೆಲಿಜಿಯಂ ಮಾರ್ಗವಾಗಿ ಹಾದುಹೋಗುವಲ್ಲಿ ಅನಿರೀಕ್ಷಿತವಾದ ಕಷ್ಟವನ್ನನುಭವಿಸುತ್ತಿದೆ. ಬೆಲ್ಜಿಯಂ ಸೇನೆಯು ಬಹು ಶೌರ್ಯದಿಂದ ಪ್ರತಿಭಟಿಸಿ ನಿಂತಿರುವುದರಿಂದ ಜರ್ಮನಿಯು ಲೀಗನ್ನು ಮುತ್ತಿಗೆ ಹಾಕುವಲ್ಲಿ ಹಿಮ್ಮೆಟ್ಟೋಡಿಸಲ್ಪಟ್ಟಿತು. ಅಭೂತಪೂರ್ವವಾದ ವಾಯುಮಂಡಲದ ಯುದ್ಧವಾರಂಭವಾಗಿರುವುದು. ಒಬ್ಬ ಬೆಲ್ಜಿಯಮ್ಮಿನ ಆಕಾಶ ವೈಮಾನಿಕನು ಜರ್ಮನಿಯ ವಿಮಾನವನ್ನು ಎರಡು ಪಾಲಾಗಿ ಸೀಳಿ ಅದರೊಳಗಿದ್ದವರನ್ನು ಕೊಂದನು, ಮತ್ತೂ ತಾನು ಮಾತ್ರ ವಿಮಾನವನ್ನು ನಡೆಸುತ್ತಿದ್ದನು. ಡಚ್ ದೇಶದ ಮೇಲೆ ಜರ್ಮನಿಯು ಬಿದ್ದು ಪಟ್ಟಣಗಳಿಗೆ ಬೆಂಕಿಯನ್ನು ಹೊತ್ತಿಸಿತು. ಅದುಕಾರಣ ಡಚ್ಚಿನವರು ತಮ್ಮ ರಾಜ್ಯದ ಒಂದುಭಾಗದಲ್ಲಿ ಯುದ್ಧಾರಂಭವಾಗಿದೆಯೆಂದು ಪ್ರಕಟಿಸಿರುವರು. ಗ್ರೇಟ್ ಬ್ರಿಟನ್ನು ಒಂದು ಜರ್ಮನಿಯ ಹಡಗನ್ನು ಮುಳುಗಿಸಿರುವುದಲ್ಲದೆ, ಫ್ರಾನ್ಸಿನವರೊಡನೆ ಬಹಳ ಬೆಲೆಯ ಪದಾರ್ಥವೂ ವರ್ತಕರೂ ಇದ್ದ ಜರ್ಮನಿಯ ಹಡಗನ್ನು ಸೆರೆಹಿಡಿಸಿರುತ್ತದೆ. ಉಲ್ವಿಚ್ಚಿನ ಬಳಿ ಮೂರು ಜನ ಜರ್ಮನಿಯ ಗೂಢಚಾರರು ಸೆರೆಹಿಡಿಯಲ್ಪಟ್ಟರು. ಮಂತ್ರಿಯಾದ ಆಸ್ಕ್ವಿತ್‌ರವರ ಬದಲು ಲಾರ್ಡ್ ಕಿಚನರ್‌ರವರು ಯುದ್ಧದ ಸ್ಟೇಟ್ ಸೆಕ್ರೆಟರಿಯವರಾಗಿರುವರು. ರಷ್ಯಾ-ಜರ್ಮನಿ ಎಲ್ಲೆಯಲ್ಲಿ ಬಡಿದಾಟವಾಗಿ ಜರ್ಮನಿಯ ಸೇನೆಯು ಹಿಮ್ಮೆಟ್ಟಿ ಹೋಗುವಾಗ್ಗೆ ಮಾರ್ಗದಲ್ಲಿ ಸಿಕ್ಕಿದ ಗ್ರಾಮಗಳನ್ನೆಲ್ಲಾ ಸುಟ್ಟುಬಿಟ್ಟಿತು. ಜರ್ಮನಿಯ ಯುದ್ಧನಾವೆಗಳು ಅಲ್ಜೀರಿಯಾದಲ್ಲಿ ಕೋಟೆಕೊತ್ತಲುಗಳಿಂದ ಭದ್ರವಾಗಿರುವ ಪಟ್ಟಣಗಳನ್ನು ನಾಶಪಡಿಸಿರುತ್ತವೆ. ಆದರೆ ಫ್ರಾನ್ಸು ಜರ್ಮನಿಯ ೧ ಕ್ರೂಯಿಜರನ್ನು ಮುಳುಗಿಸಿ ಮತ್ತೆರಡನ್ನು ಸೆರೆಹಿಡಿದಿರುತ್ತದೆ.

ಮೈಸೂರ್ ಸ್ಟಾರ್.

ಸನ್ ೧೯೧೪ ನೆಯ ಆಗಸ್ಟ್ ತಾ|| ೯ನೆಯ ಭಾನುವಾರ.

ಪತ್ರಿಕಾಸ್ವವಿಷಯವು.

ದೇಶಭಾಷಾದಿ ಸೇವೆಗಳನ್ನು ಮಾಡುತ್ತಿರುವ ಕನ್ನಡದ ವೃತ್ತಪತ್ರಿಕೆಗಳು ೧೦-೧೨ ಇವೆ. ವಾರದ ಪ್ರತಿಯೊಂದು ದಿನದಲ್ಲೂ ಕನ್ನಡಿಗರ ಹಸ್ತವನ್ನು ಅಲಂಕರಿಸಲು ಒಂದೋ ಅಥವಾ ಎರಡೋ ಪತ್ರಿಕೆಗಳಂತೆ ಇದ್ದೇ ಇವೆ. ಆದರಲ್ಲೂ ಸೋಮವಾರ ಪ್ರಕಟವಾಗುವ ವೃತ್ತಪತ್ರಿಕೆಗಳಲ್ಲಿ ಮೊದಲು "ಸ್ಟಾರ್" ಒಂದೇ ಇದ್ದಿತು. ೪ ತಿಂಗಳೀಚೆಗೆ ಕುರುವಿಜಯ-ಚಂದ್ರೋದಯ ಎಂಬ ಮತ್ತೆರಡು ಪತ್ರಿಕೆಗಳು ಆ ವಾರದಲ್ಲಿ ಪ್ರಕಟಗೊಳ್ಳುವಂತಾದುವು. ಭಾನುವಾರದ ದಿನಕ್ಕೆ ಧಾರವಾಡದ "ಲೋಕಬಂಧು"ವು ಹೊರತು ಮತ್ತೊಂದಿರಲಿಲ್ಲ. ಈ ಕಾರಣದಿಂದ ಕನ್ನಡದ ವಾಚಕರ ಉಪಯೋಗಕ್ಕಾಗಿ ಈ "ಸ್ಟಾರ್" ಪತ್ರವನ್ನು ಇನ್ನುಮುಂದೆ ಸೋಮವಾರದಿಂದ ತಪ್ಪಿಸಿ ಪ್ರತಿ ಭಾನುವಾರಪ್ರಾತಃಕಾಲವೇ ಪ್ರಕಟಿಸುವಂತೆ ಏರ್ಪಡಿಸಿ ಈ ವಾರದಿಂದ ಅದೇ ನಿಯಮವನ್ನನುಸರಿಸಿದ್ದೇವೆ.

ಇಂಗ್ಲೆಂಡ್ ಜರ್ಮನಿಗಳ ಯುದ್ಧ.

ಬೆಲ್ಜಿಯಂದೇಶವು ಯಾವಕಡೆಗೂ ಸೇರದೆ ತಟಸ್ಥವಾಗಿರಬೇಕೆಂದು ಒಂದು ಒಡಂಬಡಿಕೆಯಾಗಿದೆ. ಹಾಗೆ ಅದು ತಟಸ್ಥವಾಗಿರುವ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನೆಂದು ಇಂಗ್ಲೆಂಡಿನವರು ಫ್ರಾನ್ಸು ಜರ್ಮನಿಗಳೆರಡನ್ನೂ ಕೇಳಿದರು. ಫ್ರಾನ್ಸು ಒಪ್ಪಿ ಉತ್ತರವನ್ನು ಕೊಟ್ಟಿತು. ಜರ್ಮನಿಯು ಕಪಟೋಪಾಯವನ್ನು ಮಾಡಿತು. ನೇರವಾಗಿ ಉತ್ತರವನ್ನು ಕೊಡಲಿಲ್ಲ. ಲಂಡನ್ನಿನಲ್ಲಿರುವ ತಮ್ಮ ರಾಯಭಾರಿಯಿಂದ ಇಂಗ್ಲೆಂಡಿಗೆ ಕೆಲಸಕ್ಕೆ ಬಾರದ ಸಮಾಧಾನವನ್ನು ಹೇಳಿಸಿತು. ಇದು ಆಂಗ್ಲಪ್ರತಿಷ್ಠಾಗೌರವಗಳಿಗೆ ಯುಕ್ತವಲ್ಲವಾಗಿದ್ದುದು ಮಾತ್ರವೇ ಅಲ್ಲದೆ, ಅವರನ್ನು ಯುದ್ಧಕ್ಕೆ ನಿಲ್ಲಲು ಪ್ರೇರಿಸುವಂತೆಯೂ ಆಯಿತು. ಬೆಲ್ಜಿಯಮ್ಮಿನ ತಾಟಸ್ಥ್ಯವು ಇಂಗ್ಲೆಂಡಿಗೆ ಇಷ್ಟವಾದುದಲ್ಲದೆ ಅದರಮೇಲೆ ವಿಶ್ವಾಸವು ದೃಢವಾಗಿರುವುದು. ಜರ್ಮನಿಯವರು ಬೆಲ್ಜಿಯಮ್ಮಿಗೆ ಕಳುಹಿಸಿದ ಸಂದೇಶದಿಂದ ಬೆಲ್ಜಿಯಮ್ಮು ಯುದ್ಧಕ್ಕೆ ನಿಲ್ಲಬೇಕಾದುದಲ್ಲದೆ, ಜಾರ್ಜ್‌ಸಾರ್ವಭೌಮರಿಗೆ ಒಂದು ವಿಜ್ಞಾಪನವನ್ನು ಬರೆದುಕೊಂಡು, ಆಂಗ್ಲರ ಸ್ನೇಹಕ್ಕಾಗಿ ತನ್ನ ಕೃತಜ್ಞತೆಯನ್ನು ತಿಳಿಯಿಸಿ, ತನ್ನ ದೇಶಕ್ಕೆ ಸದ್ಯದಲ್ಲಿ ಬಂದಿರುವ ವಿಪತ್ತಿನ ಸ್ಥಿತಿಯಲ್ಲಿ ತನ್ನನ್ನು ಕಾಪಾಡಬೇಕೆಂದು ಕೇಳಿಕೊಂಡಿತು. ಈಗ ಇಂಗ್ಲೆಂಡು ಬೆಲ್ಜಿಯಮ್ಮಿನ ಈ ಪ್ರಾರ್ಥನೆಗಾಗಿಯೇ ಯುದ್ಧಕ್ಕೆ ನಿಲ್ಲಬೇಕಾಗಿಲ್ಲ. ಅದು ತಟಸ್ಥವಾಗಿದ್ದರೂ ಯುದ್ಧದಿಂದಾಗತಕ್ಕ ನಷ್ಟಕ್ಕಿಂತಲೂ ಹೆಚ್ಚಿನ ನಷ್ಟವು ಇಂಗ್ಲೆಂಡಿಗಾಗುವುದು. ಸಮುದ್ರದಮೇಲಣ ಒಡೆತನವನ್ನು ಅದು ಅಪ್ರತಿಹತವಾಗಿ ಕಾಪಾಡಿಕೊಳ್ಳದಿದ್ದರೆ ಮೂಗುಬಾಯಿಯನ್ನು ಅದಿಮಿ ಹಿಡಿಯಿಸಿಕೊಂಡವನ ಅವಸ್ಥೆಯು ಅದಕ್ಕೆ ಬರುವುದು. ಅದುಕಾರಣ, ಅದು ಈಗಿನ ಉಲ್ಲೋಲಕಲ್ಲೋಲದಲ್ಲಿ ಸುಮ್ಮನಿರಲಾಗುವುದಿಲ್ಲ. ಇವೆಲ್ಲ ಕಾರಣದಿಂದ ಮಂತ್ರಿಮಂಡಲದವರು ಯುದ್ಧವನ್ನೇ ನಿರ್ಣಯಿಸಿದರು. ಆಗಸ್ಟ್ ತಾ|| ೫ ರ ಸಾಯಂಕಾಲ ಇಂಗ್ಲೆಂಡು, ಜರ್ಮನಿಯಮೇಲೆ ಯುದ್ಧಕ್ಕೆ ಹೋಗುವುದನ್ನು ಪ್ರಕಟಪಡಿಸಿತು. ಆ ದಿನವೇ ಜರ್ಮನಿಯು ಇಂಗ್ಲೆಂಡಿನಮೇಲೆ ಯುದ್ಧಕ್ಕೆ ನಿಲ್ಲುವುದನ್ನು ಪ್ರಕಟಿಸಿತು. ಇಂಗ್ಲೆಂಡ್ ಪ್ರಜೆಗಳೆಲ್ಲರಿಗೂ ಈಗಿನ ಯುದ್ಧಪ್ರಯತ್ನವು ಸಮಾಧಾನಕರವಾಗಿರುವುದು. ಅವರು ಇಂಗ್ಲೆಂಡಿನ ಫ್ರಾನ್ಸಿನ ಪತಾಕೆಗಳನ್ನು ಹಿಡಿದುಕೊಂಡು ದೇಶೀಯಗೀತಗಳನ್ನು ಹಾಡಿಕೊಂಡು-ಬೀದಿಗಳಲ್ಲಿ ಸಂತೋಷದಿಂದ ಮೆರೆದರು. ಯುದ್ಧದ ವೆಚ್ಚದ ವಿಷಯವು ಪಾರ್ಲಿಮೆಂಟಿನ ಚರ್ಚೆಗೆ ಬಂದಾಗ ೫ ನಿಮಿಷದೊಳಗಾಗಿ ಅದಕ್ಕೆ ಒಪ್ಪಿಗೆಯು ದೊರೆಯಿತು. ೧೫೭|| ಕೋಟಿ ರೂಪಾಯಿಗಳನ್ನು ಯುದ್ಧದ ವೆಚ್ಚಕ್ಕಾಗಿ ಉಪಯೋಗಿಸಲು ನಿರ್ಧರಿಸಿದರು. ಜರ್ಮನಿಯು ೩೭೫ ಕೋಟಿ ರೂಪಾಯಿಗಳನ್ನು ವೆಚ್ಚಮಾಡಲು ಏರ್ಪಡಿಸಿಕೊಂಡಿರುವುದು.

ರಾಜಧಾನಿಯ ಜಗನ್ಮೋಹನ ಪ್ರಾಸಾದದಲ್ಲಿ ಈ ತಾ|| ೧೫ ರಲ್ಲಿ ಫಲಪುಷ್ಪ ಪ್ರದರ್ಶನವು ಜರುಗುವುದು. ಇದಕ್ಕಾಗಿ ಚಂದಾಹಣ ವೆತ್ತಲ್ಪಡುತ್ತಿರುವುದು.

ಆಹಾರ್ಯಪದಾರ್ಥಗಳ ಬೆಲೆಯೇರಿರುವುದರಿಂದ ಸರ್ಕಾರಿಯ ಕಡಿಮೆಯ ಸಂಬಳಗಾರರಿಗೆ ೧ ತಿಂಗಳು ಮಾತ್ರ ಕ್ಷಾಮದಲೋಯನ್ಸನ್ನು ಕೊಡಲಪ್ಪಣೆಯಾಗಿರುವುದರ ಮೇಲೆ ದುರ್ಭಿಕ್ಷದ ದಾರಣೆಯಲ್ಲಿ ಪದಾರ್ಥಗಳು ಮಾರಲ್ಪಡುವವರೆಗೂ ಅಲೋಯನ್ಸನ್ನು ನಡೆಸಿಕೊಡಬೇಕೆಂದು ರೆವಿನ್ಯೂಕಮಿಷನರು ಸರ್ಕಾರಕ್ಕೆ ಶಿಫಾರ್ಸು ಮಾಡಿರುವರು.

ನಿನ್ನೆಯದಿನ ರಾಜಧಾನಿಯ ನಿವಾಸಿಗಳು ಸರದಾರ್ ಕಾಂತರಾಜಅರಸಿನವರನ್ನು ಟವನ್‌ಹಾಲಿಗೆ ಬರಮಾಡಿಕೊಂಡು ಅವರಿಗೆ ಸಿ. ಎಸ್. ಐ. ಪ್ರಶಸ್ತಿಲಾಭ್ಯವಾಗಿರುವುದರಿಂದ ತಮಗುಂಟಾದ ಸಂತೋಷಾತಿಶಯವನ್ನು ಅಭಿನಂದನ ಪತ್ರಿಕೆಯನ್ನೊಪ್ಪಿಸಿ ಪ್ರದರ್ಶಿಸಿದರು.

ಜಾರ್ಜ್‌ಸಾರ್ವಭೌಮರು ತಮ್ಮ ನೌಕಾಸೇನೆಯನ್ನು ಕುರಿತು—"ನಮ್ಮ ನೌಕಾಸೇನೆಯ ಬುದ್ಧಿ ಬಲ ಘನತೆಗಳಲ್ಲಿ ನನಗೆ ತುಂಬಾ ನಂಬುಗೆಯಿರುವುದು. ಅದು ಇದುವರೆಗೆ ತುಂಬಾ ಹೆಚ್ಚಿನ ಕೀರ್ತಿಯನ್ನು ಸಂಪಾದಿಸಿರುವುದು. ಆ ಕೀರ್ತಿಗೆ ನೀವು ಮತ್ತೆ ವಿಶೇಷಚೈತನ್ಯವನ್ನುಂಟುಮಾಡಬೇಕು. ಆಂಗ್ಲಪ್ರತಾಪವನ್ನು ಇನ್ನೊಂದಾವೃತ್ತಿ ಪ್ರಪಂಚಕ್ಕೆ ತಿಳಿಯಪಡಿಸಿಕೊಡಬೇಕು" ಎಂದು ಅಪ್ಪಣೆಯಿತ್ತಿರುವರು.

ಆಂಗ್ಲ ನೌಕಾಸೇನೆಯಮೇಲೆ ಅಡ್ಮಿರಲ್ ಸರ್ ಜಾನ್ ಜೆಲಿಕೋರವರು ಸೇನಾಧಿಪತಿಯಾಗಿಯೂ, ಹಡಗುಗಳಮೇಲಣ ಉದ್ಯೋಗಿಗಳಿಗೆಲ್ಲಾ ಅಡ್ಮಿರಲ್ ಮಾರ್ಡನ್‌ರವರು ಮುಖ್ಯಾಧಿಕಾರಿಗಳಾಗಿಯೂ ಮಾಡಲ್ಪಟ್ಟಿದ್ದಾರೆ. ಸರ್ವಸೈನ್ಯವೂ ಸಿದ್ಧವಾಗಿರಬೇಕೆಂದೂ, ಪ್ರಜೆಗಳು ಅಧಿಕಾರಿಗಳ ಆಜ್ಞೆಯನ್ನು ಶಿರಸಾವಹಿಸಬೇಕೆಂದೂ ಇಂಗ್ಲೆಂಡುಸರ್ಕಾರದವರು ಗೆಜೆಟ್ಟಿನಲ್ಲಿ ಪ್ರಕಟಿಸಿದ್ದಾರೆ.

ಈಗ ಯೂರೋಪುಖಂಡದಲ್ಲಿ ಅಲ್ಲಲ್ಲಿ ಸಣ್ಣ ಪುಟ್ಟ ಯುದ್ಧಗಳು ನಡೆಯುತ್ತಿವೆ. ಆಕಾಶವಿಮಾನಗಳು ಹಾರಾಡುತ್ತಿವೆ. ಒಬ್ಬ ಫ್ರೆಂಚ್‌ವೈಮಾನಿಕನು ಜಪ್ಲಿನ್ ಎಂಬ ಜರ್ಮನ್ ವಿಮಾನವನ್ನೂ ಅದರಲ್ಲಿದ್ದ ಜನರೆಲ್ಲರನ್ನೂ ಧ್ವಂಸಮಾಡಿದನೆಂದೂ, ಲೂನ್‌ವಿಲ್ಲಿ ಎಂಬ ಪಟ್ಟಣದಮೇಲೆ ಜರ್ಮನ್‌ವೈಮಾನಿಕನು ೩ ಸಿಡಿಮದ್ದುಗಳನ್ನೆಸೆದು ಕೆಲರನ್ನು ಕೊಂದನೆಂದೂ, ಜರ್ಮನಿಯವರು ರಷ್ಯಾದ ಎಲ್ಲೆಯ ೨-೩ ಪಟ್ಟಣಗಳನ್ನು ಆಕ್ರಮಿಸಿಕೊಂಡಿರುವರೆಂದೂ ವರ್ತಮಾನ ಬಂದಿದೆ. ರಷ್ಯಾದ ಸೇನಾಸನ್ನಾಹವು ಇನ್ನು ೧-೨ ವಾರಗಳೊಳಗೆ ಮುಗಿಯಬಹುದೆಂದೂ, ತದನಂತರ ದೊಡ್ಡ ಯುದ್ಧಗಳು ಆರಂಭವಾಗುವುವೆಂದೂ ತಂತ್ರೀವಾರ್ತೆಯು ತಿಳಿಸುತ್ತದೆ. ಈಚೆಗೆ ಜರ್ಮನಿಯ ಯುದ್ಧನಾವೆಗಳು ಉತ್ತರಸಮುದ್ರಕ್ಕೆ ಪ್ರವೇಶಿಸಿವೆಯಂತೆ.

ಈ ಮಧ್ಯೆ ತುರ್ಕಿದೇಶವು ತನ್ನ ಸಂರಕ್ಷಣೆಗೆಂದು ತಾನೂ ಯುದ್ಧನಾವೆಗಳನ್ನೂ ಸೇನೆಯನ್ನೂ ಸಜ್ಜುಗೊಳಿಸುತ್ತಿದೆ. ಡಚ್ಚರೂ ಯುದ್ಧನೌಕೆಗಳನ್ನು ಅಣಿಮಾಡುತ್ತಿದ್ದಾರೆ.

ಆಂಗ್ಲ ಪ್ರಭುತ್ವವು ಯುದ್ಧಕ್ಕೆ ನಿಂತಿರುವುದರಿಂದ, ರಾಜಭಕ್ತಿಪರಿಪೂರಿತರಾದ ಭರತಖಂಡವು ಆಂಗ್ಲದೇಶದ ಸರ್ವತೋಜಯವನ್ನು ಪ್ರಾರ್ಥಿಸುತ್ತಿದೆ. ಈ ದೇಶದ ಪ್ರಭುಗಳಲ್ಲಿ ಹೈದರಾಬಾದು, ಮೈಸೂರು, ಜೋಧಪುರ, ಬಿಕನೀರು, ಕಪರ್ಥಲಾ, ಹೋಲ್ಕರ್ ಮೊದಲಾದ ಸಂಸ್ಥಾನಗಳ ಪ್ರಭುಗಳೂ, ನೇಪಾಳದವರೂ ಈ ಸಮಯದಲ್ಲಿ ಸಾಮ್ರಾಜ್ಯ ಸರ್ಕಾರಕ್ಕೆ ತಮ್ಮಿಂದಾದಷ್ಟು ಸೇನಾಸಹಾಯವನ್ನು ಮಾಡಲು ಸಿದ್ಧರಾಗಿದ್ದೇವೆಂದು ವೈಸ್ರಾಯರಿಗೆಬಿನ್ನಯಿಸಿಕೊಂಡಿದ್ದಾರೆ. ಈ ಸಮಯದಲ್ಲಿ ರಾಷ್ಟ್ರರಕ್ಷಣಾರ್ಥವಾಗಿ ಪ್ರಭುತ್ವದವರಿಗೆ ತಾವು ಯಾವ ವಿಧದಿಂದ ಸಹಾಯವನ್ನು ಮಾಡಬೇಕೆಂಬ ವಿಷಯವನ್ನು ಆಲೋಚಿಸುವುದಕ್ಕಾಗಿ ಭಾರತೀಯ ಪ್ರಮುಖರು ಕಲ್ಕತ್ತಾದಲ್ಲಿ ಸಭೆಗೂಡಿಸುವವರಾಗಿದ್ದಾರೆ. ಮತ್ತು ಕಲ್ಕತ್ತದ ಬ್ಯಾರಿಸ್ಟರುಗಳಲ್ಲಿ ಪ್ರಸಿದ್ಧರಾದ ಇ. ನಾರ್ಟನ್ ಸಿಹ್ಮ- ಜೆ. ಚೌಧರಿ ಮೊದಲಾದನೇಕರು ಈ ಸಮಯದಲ್ಲಿ ವಾಲಂಟಿಯರಾಗಿ ಸೇರಲು ಇಷ್ಟಪಡುವವರುಗಳನ್ನು ಸೇರಿಸಿಕೊಳ್ಳಲು ಪ್ರಕಟನೆಮಾಡಿದ್ದಾರೆ.

ಈ ಸಂಧಿಯ ಯಾವುದು ಹೇಗಾಗುವುದೋ ಎಂದು ಯೋಚಿಸಿ ವರ್ತಕರಲ್ಲನೇಕರು ಮುಖ್ಯವಾಗಿ ಮಾರ್ವಾಡಿಯವರು ಕಲ್ಕತ್ತ ಬೊಂಬಾಯಿ ಮೊದಲಾದ ಕಡೆಗಳಲ್ಲಿ ಕರೆನ್ಸಿ ನೋಟುಗಳನ್ನು ಖಜಾನೆಗಳಿಗೆ ಕೊಟ್ಟು ಚಿನ್ನದ ನಾಣ್ಯಗಳನ್ನು ತೆಗೆದುಕೊಂಡು ಪೌನು ೧ ಕ್ಕೆ ೧೬ ರೂಗಳ ಮೇರೆ ಮಾರಿ ಧನಸಂಪಾದನೆ ಮಾಡಿಕೊಳ್ಳುತ್ತಿದ್ದಾರೆ. ೧೫ ಸಾವಿರ ರೂಗಳ ಮೇಲೆ ನೋಟುಗಳಿಗೆ ಹಣವನ್ನು ಕೇಳುವವರಿಗೆ ಮಾತ್ರ ಚಿನ್ನದ ನಾಣ್ಯಗಳನ್ನು ಕೊಡಬೇಕೆಂದು ಸರ್ಕಾರದವರು ಅಪ್ಪಣೆ ಮಾಡಿದ್ದಾರೆ.

ಈ ಮೇಲೆಕಂಡ ವಿವರಣದಿಂದ ಅಶ್ರುತದೃಷ್ಟಪೂರ್ವವಾದ ಯುದ್ಧವು ಈಗ ಪ್ರಪಂಚದಮೇಲೆ ನಡೆಯಲುಪಕ್ರಮವಾಗಿದೆಯೆಂದು ಗೊತ್ತಾಗುತ್ತದೆ. ಈ ಮಹಾಸಂಗ್ರಾಮದಿಂದ ಅಗಣಿತವಾದ ಧನವ್ಯಯ, ಪ್ರಾಣಹಾನಿ ಮೊದಲಾದ ಅನರ್ಥಗಳು ಪ್ರಪಂಚಕ್ಕೆ ಸಂಭವಿಸುವುದರಲ್ಲಿವೆ. ಇದು ದುರ್ನಿವಾರವಾದ ದೈವೇಚ್ಛೆಯೇ ಸರಿ. ಈ ಸಮಯದಲ್ಲಿ ಭಾರತೀಯರಾದ ನಾವು ಕೋರುವುದೇನೆಂದರೆ—ಧರ್ಮಪ್ರಭುಗಳಾದ ಆಂಗ್ಲರಾಜರಿಗೆ ಸರ್ವತೋಮುಖವಾದ ಜಯವನ್ನು ಜಗದೀಶನು ಅನುಗ್ರಹಿಸಬೇಕೆಂಬುದೇ ಆಗಿರುತ್ತದೆ.

ಮುಂಬೈ ಕರ್ನಾಟಕದ ವಾರ್ತೆಯು.

ಧಾರವಾಡ:—ಮಳೆಯು ವಿರಾಮಕೊಟ್ಟಿದೆ. ಆದರೂ ಆಗಾಗ್ಗೆ ತುಂತುರುಹನಿ ಬೀಳುತ್ತಿರುವುದು. ನಿಂತಿರುವ ಪೈರು ಚೆನ್ನಾಗಿದೆ. ಮತ್ತೂ ಇದಕ್ಕೆ ಸಧ್ಯದಲ್ಲಿ ಮಳೆಯು ಬೇಕಾಗಿಲ್ಲವು. ಕಿರಾಣಿದಿನಸಿಯ ಧಾರಣೆಯು ಮಂದವಾಗಿದೆ. ಪ್ಲೇಗು ಸಾಮಾನ್ಯವಾಗಿದೆ ವಿನಾ ಇತರ ರೋಗಾದಿಗಳೇನೂ ಇಲ್ಲವು. ಮಳೆಯಾಧಿಕ್ಯದಿಂದ ಮುಚ್ಚಲ್ಪಟ್ಟಿರುವ ಶಾಲೆಗಳು ಇನ್ನೂ ತೆರೆಯಲ್ಪಟ್ಟಿಲ್ಲವು.

ಶಿರಹಟ್ಟಿಯ ವೆಂಕೋಬರಾಯರ ನಾಟಕದ ಸಂಘದವರು ಮುಂದಣತಿಂಗಳಾದಿಭಾಗದಲ್ಲಿ ಇಲ್ಲಿಗೆ ಬಂದು ಇಲ್ಲಿ ಕೆಲನಾಟಕಗಳನ್ನು ಪ್ರಯೋಗಿಸಿ ಅನಂತರ ದಸರಾಹಬ್ಬಕ್ಕಾಗಿ ಮೈಸೂರಿಗೆ ಹೋಗತಕ್ಕವರಾಗಿರುವರು. ಇಲ್ಲಿಯ ಡಿಸ್ಟ್ರಿಕ್ಟ್‌ಜಡ್ಜಿಯವರು ಬ್ಯಾಡಿಗಿಯ ಶಿವ್ಯಾಶಿವಲಿಂಗಲುಬ್ಬಾರ ಇವನು ತನ್ನ ಹೆಂಡತಿಯನ್ನು ಕೊಂದನೆಂಬಪರಾಧಕ್ಕಾಗಿ ಇವನಿಗೆ ಮರಣದಂಡನೆಯನ್ನು ವಿಧಿಸಿದ್ದರು. ಆದರೆ ಹೈಕೋರ್ಟಿಗಪೀಲಾಗಿದ್ದು ಕೊಂದುದನ್ನು ಪ್ರತ್ಯಕ್ಷವಾಗಿ ನೋಡಿದ ರುಜುವಾತು ಇಲ್ಲವೆಂಬುದರ ಮೇಲೆ ಯಾವಜ್ಜೀವಕಾರಾಗೃಹವಾಸದ ಶಿಕ್ಷೆಯು ವಿಧಿಸಲ್ಪಟ್ಟಿತು.

ಹುಬ್ಬಳ್ಳಿ:—ಇಲ್ಲಿಯ ಮ್ಯುನಿಸಿಪಾಲಿಟಿಯಲ್ಲಿ ಈವರೆಗೂ ಚೀಫ್‌ಆಫೀಸರು ನೇಮಕವಾಗಿರಲಿಲ್ಲವು. ಆದರೆ ಈಗ ಒಬ್ಬ ಒಳ್ಳೆಯ ಅನುಭವಶಾಲಿಗಳಾದ ಮಾಮಲೆದಾರರು ತಿಂಗಳೊಂದಕ್ಕೆ ೩೦೦ ರೂ. ಸಂಬಳದಮೇಲೆ ನಿಯಮಿಸಲ್ಪಡುವಂತೆ ಗೊತ್ತಾಗಿರುವುದು.

ಗದಗಿನ ಮಾಮಲೆದಾರ್ ಮಾ॥ ಕೃಷ್ಣರಾವ ಗಂಜೀ ಇವರು ಡಮಣಿ ಬಂಡಿಯಲ್ಲಿ ಕುಳಿತು ಹೋಗುತ್ತಿರುವಾಗ್ಗೆ ಬಂಡಿಯು ಬಿದ್ದು ಮಾಮಲೇದಾರರು ಘೋರಾ ಪೆಟ್ಟುಗಳನ್ನು ತಿಂದು ಚಿಕಿತ್ಸೆಯನ್ನು ಹೊಂದುತ್ತಿರುವರು.

ಈ ಕರ್ನಾಟಕ ಜಿಲ್ಲೆಗಳಿಂದ ಬಿ. ಎ. ಪರೀಕ್ಷೆಗೆ ಹೋಗಿದ್ದವರಲ್ಲಿ ೧. ಮಧ್ವರಾಮಚಂದ್ರಶೇಕರಾರ, ೨. ಬಳವಂತ ಪಾಂಡುರಂಗಮನವೋಳಿ, ೩. ರಾಮಚಂದ್ರಶಂಭೂರಾವ ಆನೀಬಂದಿ, ೪. ಸಿದ್ದಮಹಾದಪ್ಪ ಮಾಳಿ, ೫. ತ್ರಿಯಂಬಕ ಸದಾಶಿವ ನರಗುಂದಕರ, ೬. ಚೆನ್ನಬಸಪ್ಪ ಬಸಪ್ಪ ಹೂಲಿ, ೭. ವೆಂಕಟೇಶ ಶೇಷಗಿರಿರಾವ ಕೋಯಮುತ್ತೂರ, ೮. ಹಣಮಂತ ರಂಗರಾವ ಕಲೀಮ ದಿವಾಣ, ೯. ಲಕ್ಷ್ಮಣಗೋಪಾಲ ಸಬನೀಸ, ಈ ವಿದ್ಯಾರ್ಥಿಗಳು ಉತ್ತೀರ್ಣರಾಗಿರುವರು.

ವರ್ಗಾವರ್ಗಿ:—ನರಗುಂದದ ಸರ್ಕಲ್ ಇನ್ಸ್‌ಪೆಕ್ಟರ್ ಮಾ॥ ಬಾಳಾಜಿ ರಾಮಚಂದ್ರ ಭಂಡಿವಾಡ ಇವರು ಧಾರವಾಡಕ್ಕೂ, ಧಾರವಾಡದ ಸಾ॥ ಮಾ॥ ಲಕ್ಷ್ಮಣ ಬಾಳಾಜಿ ಹಂಪಸಾಗರ ಇವರು ನರಗುಂದಕ್ಕೂ ವರ್ಗಾಯಿಸಲ್ಪಟ್ಟಿರುವರು. ಆದರೆ ಬಾಳಾಜಿ ರಾಮಚಂದ್ರ ಭಂಡಿವಾಡರವರು ೩ ತಿಂಗಳ ಹಕ್ಕಿನ ರಜದಮೇಲೆ ಹೋಗಿರುವುದರಿಂದ ಅವರು ಬರುವವರೆಗೆ ಹಾನಗಲ್ ತಾ॥ ತಿಳವಳ್ಳಿ ಸಾ॥ ಇ॥ ಮಾ॥ ರಾಘವೇಂದ್ರ ಕೃಷ್ಣ ಬೆಟಗೇರಿ ಇವರು ನಿಯಮಿಸಲ್ಪಟ್ಟಿರುವರು.

ಪತ್ರವ್ಯವಹಾರಕರಿಗೆ ಸೂಚನೆ.

ನಾವೆಷ್ಟುವಿಧವಾಗಿ ಎಚ್ಚರಿಸಿದ್ದಾಗ್ಗೂ ಜನಸಾಮಾನ್ಯಕ್ಕುಪಯೋಗವಿಲ್ಲದ ವಿಷಯಗಳನ್ನು ತಮಗೆ ಬೇಕಾದವರನ್ನು ಮೆಚ್ಚಿಸುವುದಕ್ಕಾಗಿ ಪುಟಗಟ್ಟಳೆಯಾಗಿಯೂ, ಅಸ್ಪಷ್ಟವಾಗಿಯೂ ಅಸಮಂಜಸವಾಗಿಯೂ ಲೇಖನವನ್ನು ಲೇಖಕರು ಬರೆಯುತ್ತಿರುವುದರಿಂದ ಇತಃಪರ ಅಂತಹ ಲೇಖನಗಳಿಗೆ ಸುತರಾಂ ಲಕ್ಷ್ಯವು ಕೊಡಲ್ಪಡದೆ, ಜನಸಾಮಾನ್ಯಕ್ಕುಪಯುಕ್ತವಾದವಿಷಯಗಳು ಬಹುಸಂಕ್ಷೇಪವಾಗಿಯೂ. ಸ್ಪಷ್ಟವಾಗಿಯೂ ಬರೆಯಲ್ಪಟ್ಟು ಪ್ರತಿಮಂಗಳವಾರದೊಳಗೆ ಸೇರುವಂತೆ ಕಳುಹಲ್ಪಟ್ಟರೆ ಪ್ರಕಟಗೊಳಿಸಲ್ಪಡುವುವು. ವೀರಶೈವ ವಿದ್ಯಾಭಿವೃದ್ಧಿ ಫಂಡಿಗಾಗಲಿ ಅಥವಾ ಶಿವಯೋಗಮಂದಿರಕ್ಕಾಗಲಿ ಹಣವು ಕಳುಹಲ್ಪಟ್ಟಿರುವ ವಿಚಾರವು ಫಂಡಿನ ಸೆಕ್ರೆಟರಿ ಮತ್ತೂ ಮಂದಿರದ ವ್ಯವಸ್ಥಾಪಕರುಗಳಿಂದ ಬಂದ ವಿನಾ ಈ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವು. ಮತ್ತೂ ಫಂಡಿನ ಹಣವನ್ನು ಸೆಕ್ರೆಟರಿಯವರಲ್ಲಿಗೆ ಕಳುಹಬೇಕಲ್ಲದೆ ನಮ್ಮಲ್ಲಿಗೆ ಕಳುಹಲಾಗದು. [ಪ. ಪ್ರ.]

ಮೈಸೂರ ಇಲಾಖ ಚಿತ್ರದುರ್ಗದ ಡಿ॥ ಚಿತ್ರದುರ್ಗದಲ್ಲಿರುವ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಬೃಹನ್ಮಠ ಮಹಾಸ್ವಾಮಿಗಳವರ ಸನ್ನಿಧಿಗೆ

ಧಾರವಾಡ ಜಿಲ್ಲಾ ಹಾನಗಲ್ಲ ತಾ॥ ಆಲೂರು ಗ್ರಾಮದಲ್ಲಿರುವ ಶ್ರೀ ಗಿರಿರಾಜ ಸೂರ್ಯ ಸಿಂಹಾಸನದ ಅರ್ಪೇಯದಿಂದ ಅಧಿಕಾರ ವಹಿಸಿದ ವೀರಭಿಕ್ಷಾವರ್ತಿ ಮಠದ ವಾಸಿಯಾದ ಅಡಿವೆಪ್ಪಾರ್ಯ ಇವರಿಂದ ವಿಜ್ಞಾಪನ ಪೂರ್ವಕ ಅರಿಕೆ ಮಾಡಿಕೊಳ್ಳುವದೇನಂದರೆ:—

ತಮ್ಮ ಸಂಸ್ಥಾನದ ಹೆಸರಿನಿಂದ ಚನ್ನಬಸವಪ್ಪಯ್ಯ ಹೇಮಗಿರಿ ಮಠ ಕಾರಭಾರಿ ಎಂಬುವರು ತಾ॥ ೯ ನೇ ಜೂನ ತಿಂಗಳ ೧೯೧೮ ಇಸ್ವಿಯ ಲೋಕಸತ್ಪತ್ರಿಕೆಯ ಸಂಚಿಕೆಯಲ್ಲಿ ಪೀಠಕಳಶವಾಸಿ ಜಗದು ಅಪ್ಪ ಎಂಬುವರು ವೀರಶೈವ ಮತದಲ್ಲಿ ಹುಟ್ಟಿ, ಇತ್ತ ನರ್ತನ ಸಿಂದೆ ಆರ್ಯ ಸಮಾಜಕ್ಕೆ ಸೇರಿ ಅಲ್ಲಿ ಅನ್ಯೋನ್ಯಕ ವ್ಯವಹಾರವನ್ನೆಲ್ಲ ಮಾಡಿ ತಾನು ಜನಿಸಿದ ಮತದ ತಿರಸ್ಕಾರ ರೂಪವಾದ ಅನೇಕ ಪ್ರಶ್ನೆಗಳನ್ನು ಮಾಡಿರುತ್ತಾನಷ್ಟೆ ? ಅವುಗಳಿಗೆಲ್ಲ ಯಾವ ಪ್ರಮಾಣಗ್ರಂಥಗಳನ್ನ ಕಂಡು ಸಮಾಧಾನಮಾಡಿಕೊಂಡಿರುವನೋ ತಿಳಿಯದು. ಆದರೆ ಆ ಪ್ರಶ್ನೋತ್ತರಗಳನ್ನು ಪ್ರಸಿದ್ಧಪಡಿಸಬಹುದಾಗಿತ್ತು. ಹಿಂದು ಪಕ್ಷಕ್ಕೆ ಆ ಪ್ರಶ್ನೋತ್ತರಗಳನ್ನು ಶ್ರೀಸನ್ನಿಧಿ ಮಹಾಸನ್ನಿಧಿಯಿಂದ ಪ್ರಸಿದ್ಧಪಡಿಸಬಹುದಾಗಿತ್ತು. ಈಗಾದರೂ ಪ್ರಸಿದ್ಧಪಡಿಸಲು ಅಭ್ಯಂತರವಿಲ್ಲ. ಇನ್ನಾದರೂ ಪ್ರಸಿದ್ಧಪಡಿಸಬಹುದು. ಈ ವಿಷಯವು ಧಾರ್ಮಿಕ ವಿಷಯವಾದದ್ದರಿಂದ ಈ ಮತದ ಶಾಸ್ತ್ರಿಗಳನ್ನು ಎಲ್ಲಾ ಪ್ರಾಂತದ ಪ್ರಮುಖ ಜನಗಳನ್ನೂ ಒಂದುಕಡೆ ಅಂದರೆ ಪ್ರಸಿದ್ಧಿಯುಳ್ಳ ಸೊಲ್ಲಾಪುರ ಹುಬ್ಬಳ್ಳಿ ಗದಗ ಧಾರವಾಡ ದಾವಣಗೇರಿ ಮುಂತಾದ ಪಟ್ಟಣಗಳಲ್ಲಿ ಸಭೆ ಸೇರಿಸಿ ವಿಚಾರಮಾಡತಕ್ಕದ್ದಾಗಿರುತ್ತದೆ.

ಸದರಿ ವಿಷಯಕ್ಕೆ ಉತ್ತರವನ್ನು ಕೊಡದಿದ್ದರೆ ಒಪ್ಪಿದಂತಾಯಿತೆಂದು ಬರೆದಿರುವಿರಿ. ಇದಂತೂ ಕೇವಲ ಅಸಂಗತವು. ಯಾಕೆಂದರೆ—ಇದು ಕೇವಲ ಮಹತ್ವ ವಿಷಯವೆಂದು ತಾವೇ ಬರೆದಿರುವಿರಷ್ಟೆ ? ಇದಂತಿರಲಿ, ಈ ವಿಷಯವನ್ನು ತಾವು ವಿಚಾರಮಾಡುವದು ಅವಶ್ಯವಿದ್ದಲ್ಲಿ ಸದರಿ ಪ್ರಕಾರ ಸಭೆ ಕೂಡಿಸದೆ ಮಾಡಲಾರಿರೆಂದು ನಂಬಿರುತ್ತೇವೆ. ಇದಕ್ಕೆ ನಿರೂಪವು ಶೀಘ್ರ ಕೊಡಬೇಕೆಂದು ಪ್ರಾರ್ಥನೆ. ಒಂದುವೇಳೆ ಪ್ರಸಿದ್ಧ ರೀತಿಯಿಂದಲಾದರೂ ಪ್ರಕಟಿಸಬಹುದು.

ಹಾಗಾಗದೆ ಇದ್ದಲ್ಲಿ ನನ್ನಮಟ್ಟಿಗಾದರೂ ಇದಕ್ಕೆ ಉತ್ತರ ಸಿಗಬೇಕಾಗಿ ಅಪೇಕ್ಷಿಸುತ್ತೇನೆ.

ಅಡಿವಪ್ಪಾರ್ಯ, ವೀರಭಿಕ್ಷಾವರ್ತಿಮಠ
ಇಲಾಖದಾರ, ಆಲೂರು ತಾ॥
ತಾ॥ ೩೦-೭-೧೯೧೮. ಹಾನಗಲ್ಲು

ಎಂಟನೇ ಶ್ರೀಮದ್ವೀರಶೈವ ಮಹಾಸಭೆಯು

ಕಳೆದವರ್ಷ ಮಹಾಸಭೆಯು ಜರಗದೆ ಇದ್ದದ್ದು ಅನೇಕ ಅಭಿಮಾನಿಗಳಿಗೆ ಬಹಳ ಖೇದಕರವಾಗಿ ಈ ಸಾರೆಯಾದರೂ ಎಲ್ಲಾದರೂ ಸಭೆಯನ್ನು ಕೂಡಿಸಬೇಕೆಂಬ ಲವಲವಿಕೆಯಿಂದ ೩-೪ ವಾರಗಳಿಂದ ಅನೇಕ ವರ್ತಮಾನಪತ್ರಗಳಲ್ಲಿ ಲೇಖಗಳು ಬರುತ್ತಲಿವೆ. ಆ ಲೇಖದ ಉಪಯೋಗವನ್ನು ಸ್ಟ್ಯಾಂಡಿಂಗ ಕಮಿಟಿಯವರು ಮಾಡುತ್ತಾರೋ ಸುಮ್ಮನೆ ಕೂತಾರೋ ದೇವರೇ ಬಲ್ಲ. ಹೈದರಾಬಾದಿನಲ್ಲಾಗಲಿ ಅಥವಾ ನಿಜಾಮು ಇಲಾಖೆ ಪೈಕಿ ಮತ್ತಾವಸ್ಥಳದಲ್ಲಾಗಲೀ ಈಸಾರೆ ಮಹಾಸಭೆಯು ಜರುಗದಿದ್ದರೂ ಮುಂದಿನ ವರ್ಷವಾದರೂ ಜರುಗುವಂತೆ ಈಗಿಂದಲೇ ಅಲ್ಲಿಯ ಪ್ರಮುಖರು ಪ್ರಯತ್ನಮಾಡಬೇಕು. ಈಗ ಧಾರವಾಡದಲ್ಲಿ ತಯಾರಾದ ಜಗದ್ಗುರು ಹಾಲಿಕಲ್ಲಾಗಲಿ ಅಥವಾ ಕೊಲ್ಲಾಪುರದಲ್ಲಿ ತಯಾರಾದ ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರ ಮಠದಲ್ಲಾಗಲಿ ಸಭೆಯನ್ನು ಜರುಗಿಸುವದು ಯೋಗ್ಯವೆಂದು ಕಂಡುಬರುತ್ತದೆ. ಶ್ರೀಜಗದ್ಗುರು ಮುರುಘರಾಜೇಂದ್ರ ಸ್ವಾಮಿಗಳವರು ಬಾಗಲಕೋಟೆಗೆ ದಯಮಾಡಿಸಿದ ಕಾಲದಲ್ಲಿ ಕೊಲ್ಲಾಪೂರ ಮಠವು ತಯಾರಾದ ಕೂಡಲೆ ಅಲ್ಲಿ ಒಂದು ಮಹಾಸಭೆಯನ್ನು ಜರುಗಿಸುತ್ತೇವೆಂದೂ ಮತ್ತು ವೀರಶೈವ ವಿದ್ಯಾರ್ಥಿಗಳಿಗೆ ಇರಲಿಕ್ಕೆ ಅನುಕೂಲಮಾಡುತ್ತೇವೆಂದೂ ಇಲ್ಲಿಯ ಕೆಲವು ಪ್ರಮುಖರ ಮುಂದೆ ಅಪ್ಪಣೆ ಕೊಟ್ಟಿದ್ದರು. ಅಪ್ಪಣೆಯು ನೆರವೇರಿಸುವ ಸಮಯವು ಮುಗಿಯಲಿಕ್ಕೆ ಬಂದಿದೆ. ಮತ್ತು ಜಗದ್ಗುರುಗಳವರ ಸ್ವಾರಿಯು ತೀವ್ರವಾಗಿ ಕೊಲ್ಲಾಪುರಕ್ಕೆ ದಯಮಾಡಿಸುವಂತೆ ಕಂಡುಬರುತ್ತದೆ. ಸದರಿ ಮಠಕ್ಕೆ ಒಬ್ಬ ಯೋಗ್ಯವಿದ್ಯಾವಂತರಾದ ಅಧಿಕಾರಸ್ಥರನ್ನು ನೇಮಿಸುವಂತೆ ವದಂತಿ ಅದೆ. ಈ ಸಮಾರಂಭವನ್ನು ಮಹಾಸಭೆಯ ಕಾಲಕ್ಕೆ ಈ ಸಮಾರಂಭವನ್ನಾಗಲೀ ಎರಡು ಕೂಡಿ ಒಂದೇ ವೇಳೆಗೆ ಜರುಗಿಸಿದರೆ ಏಕಕಾರ್ಯದೋ ಕಾಜ ಎಂಬ ವಾಕ್ಯಕ್ಕೆ ಅನುಸರಿಸಿದಂತಾಗುವದು. ಮತ್ತು ಒಂದೇ ಈ ಸಮಾರಂಭ ಅಂದರೆ (ಅಧಿಕಾರಕೊಡು) ವುದನ್ನು ನಡೆಸಿದರೆ ಕನಿಷ್ಠ ೪-೫ ಸಾವಿರ ರೂಪಾಯಿಗಳು ಸಹಜವಾಗಿ ಖರ್ಚಾಗಬಹುದು. ಇಷ್ಟು ಖರ್ಚಿನಲ್ಲೇ ಮಹಾಸಭೆ ಮತ್ತು ಅಧಿಕಾರ ಸಮಾರಂಭ ಎರಡೂ ಕೆಲಸಗಳಾದರೆ ಭಕ್ತರಿಂದ ತಂದ ಕಾಣಿಕೆಗೆ ಯೋಗ್ಯೋಪಯೋಗವಾದಂತಾಗಿ ಈಗಿಗಿಂತಲೂ ಭಕ್ತರ ಪ್ರೇಮವು ಹೆಚ್ಚಾಗುವುದಲ್ಲದೆ ಶ್ರೀಜಗದ್ಗುರುಗಳವರ ಕೀರ್ತಿಯು ನಿರಂತರ ಉಳಿದು, ಕೊಟ್ಟ ಅಪ್ಪಣೆಯಂತೆ(ವಚನದಂತೆ) ಕೆಲಸವು ಅವಧಿಯಲ್ಲಿಬಂದು ಭಕ್ತರಿಗೆ ದಾರಿ ತೋರಿಸಿಕೊಟ್ಟಂತಾಗುವದು. ಈ ಲೇಖನಕ್ಕೆ ಒಪ್ಪಿಕೊಂಡು ಶ್ರೀ ಜಗದ್ಗುರು ಮಹಾಸ್ವಾಮಿಗಳವರು ಈ ವರ್ಷದ ಮಹಾಸಭೆಯನ್ನು ಸ್ವಂತ ಖರ್ಚಿನಿಂದ ಜರುಗಿಸಬೇಕೆಂದು ಅರಿಕೆಮಾಡಿಕೊಳ್ಳುತ್ತೇನೆ.

ಸಮಾಜಸೇವಕ

ಹಿಂದುಳಿದ ಜನರ ವಿದ್ಯಾಪ್ರೋತ್ಸಾಹ.

ಈಗ ನಮ್ಮ ಮೈಸೂರು ಸೀಮೆಯಲ್ಲಿ ವಿದ್ಯಾಭ್ಯಾಸದಲ್ಲಿ ಹಿಂದುಳಿದ ಜನಗಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂದು ಸರ್ಕಾರದವರು ಸಂಪದಭ್ಯುದಯ ಸಮಾಜವೇ ಆದಿಯಾಗಿ ಅನೇಕ ಸಮಾಜಗಳನ್ನು ಮಾಡಿ ಆ ಸಮಾಜಗಳಿಗೆ ಸಾವಿರಾರು ರೂಪಾಯಿ ಖರ್ಚು ಇಟ್ಟು ಆಚರಣೆಯಲ್ಲಿ ತಂದಿರುತ್ತಾರೆ. ಮಹಾರಾಜ ಸರ್ಕಾರದವರು ಇಷ್ಟು ಜಾಸ್ತಿ ಖರ್ಚಿನಿಂದ ಸಮಾಜಗಳನ್ನು ಮಾಡಿ ದೇಶದಮೇಲೆ ಹರಡುತ್ತಿದ್ದಾಗ್ಯೂ ಇನ್ನು ಒಂದು ಕಡೆಯಾದರೂ ಹಿಂದುಳಿದ ಜನಗಳು ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ಮನಸ್ಸು ನಿರ್ಧರಮಾಡಿಕೊಂಡಿಲ್ಲ ಆದಾಗ್ಯೂ ಸರ್ಕಾರದವರು ಇಷ್ಟು ಭಾರಿ ಖರ್ಚು ಇಟ್ಟುಕೊಂಡು ತಮ್ಮ ಕರ್ತವ್ಯವನ್ನು ಕ್ರಮೇಣ ಆಚರಣೆಗೂ ಅಭಿವೃದ್ಧಿಗೂ ತರದೆ ಇರಲಾರರು ಹೀಗಿರುತ್ತಾ ಹಿಂದುಳಿದ ಜನಗಳ ಪೈಕಿ ಹಾಲಿ ವಿದ್ಯಾವಂತರಾಗಿರುವವರಿಗೆ ಮಹಾರಾಜಾ ಸರ್ಕಾರದವರು ಜಾಸ್ತಿ ತಲುಬು ವಗೈರೆಯಿಂದ ಸರಿಯಾದ ಹುದ್ದೆಗಳನ್ನು ಕೊಡಿಸೋಣಾದಲ್ಲಿ ಹಿಂದುಳಿದ ಜನಗಳಿಗೆ ಏನು ಪ್ರೋತ್ಸಾಹವಾದೀತು ? ಚಿತ್ರದುರ್ಗ ತಾಲ್ಲೂಕು ವಡ್ಡರಪಾಳ್ಯದ ಗ್ರಾಮದಲ್ಲಿ ಒಬ್ಬರು ಸರ್ಕಾರಿ ಸ್ಕೂಲು ಮಾಸ್ತರು ಇರುತ್ತಾರೆ. ಇವರು ಜಾತಿಯಲ್ಲಿ ವಡ್ಡರು-ಇವರ ಹೆಸರು ರಾಮಬೋಯಿ. ಇವರು ಇಂಗ್ಲೀಷು ಲೋವರ್ ಸೆಕೆಂಡರಿಪರೀಕ್ಷೆಯಲ್ಲಿ ತೇರ್ಗಡೆಹೊಂದಿರುತ್ತಾರೆ ಮತ್ತು V ಫಾರಂವರೆಗೂ ಇಂಗ್ಲೀಷು ವ್ಯಾಸಂಗ ಮಾಡಿರುತ್ತಾರೆ. ಇವರು ಇಷ್ಟರಮಟ್ಟಿಗೆ ಇಂಗ್ಲೀಷು ವಿದ್ಯಾಭ್ಯಾಸಮಾಡಿರಬೇಕಾದರೆ ಎಷ್ಟು ಶ್ರಮತೆಗೆದುಕೊಂಡಿರಬೇಕು; ಸರ್ಕಾರದವರೇ ಯೋಚಿಸೋಣವಾಗಬೇಕು ? ಮೇಲು ಜಾತಿಯವರು ವ್ಯಾಸಮಾಡುವುದು ಹೆಚ್ಚಲ್ಲ. ಇಂಥ ಕೀಳು ಜಾತಿಯವರು ತಮ್ಮ ಜಾತಿಯಲ್ಲಿಯೂ ಸೀಮೆಯಲ್ಲಿ ಯಾರೊಬ್ಬರೂ ಓದಿ ವ್ಯಾಸಾಗದೆ ಇರುವಾಗ ಇವರು ಓದಿ ವ್ಯಾಸಮಾಡಿರುವದು ಅತಿಶಯವಲ್ಲವೇ ? ಇವರು ಪಾಳ್ಯದ ಸ್ಕೂಲಿಗೆ ಬಂದಮೇಲೆ ಒಬ್ಬ ವಿದ್ಯಾರ್ಥಿಗೆ ಲೋವರ್‌ಸೆಕೆಂಡರಿ ಪರೀಕ್ಷೆಮಾಡಿಸಿರುತ್ತಾರೆ. ಮತ್ತೆ ೨-೩ ಜನಗಳಿಗೆ ಇಂಗ್ಲೀಷು ವ್ಯಾಸಂಗಮಾಡಿಸುತ್ತಾ ಇದ್ದಾರೆ. ಇಂಗ್ಲೀಷಿನಲ್ಲಿ ಸಹ ಲೋವರ್‌ಸೆಕೆಂಡರಿ ಪರೀಕ್ಷೆಮಾಡಿಸುವಷ್ಟು ಚೈತನ್ಯಸ್ಥರಾಗಿರುತ್ತಾರೆ. ಇಂಥವರಿಗೆ ನಮ್ಮ ಘನತೆಯನ್ನೊಂದಿದ ಮೈಸೂರು ಸರ್ಕಾರದವರು ಜಾಸ್ತಿ ನೌಕರಿಯನ್ನು ದಯಪಾಲಿಸಿ ಉತ್ಸಾಹಶಾಲಿಗಳನ್ನಾಗಿ ಮಾಡಬೇಕಾದುದು ಕರ್ತವ್ಯವಲ್ಲವೆ ? ಇವರು ರೆವಿನ್ಯೂ ಇಲಾಖೆಯಲ್ಲಿ ಶೇಕದಾರಿ ಕೆಲಸ ಕೊಡಿಸಬೇಕೆಂಬದಾಗಿ ಹಾಲಿ ನಮ್ಮನ್ನಾಳುವ ಮೈಸೂರು ಸೀಮೆಯ ಮಂತ್ರಿವರ್ಯರಾದ ಹಜರತ್ ದಿವಾನ್ ಸಾಹೇಬ ಬಹದ್ದೂರರವರಲ್ಲಿ ಅರ್ಜಿ ಕೊಟ್ಟಿದ್ದರು. ಇವರಿಗೆ ಕೆಲಸ ಕೊಡಬೇಕೆಂಬದಾಗಿ ಹಜರತ್ ಚಿತ್ರದುರ್ಗದ ಡೆಪ್ಯುಟಿಕಮಿಷನರ್ ಸಾಹೇಬರವರಿಗೆ ಬರೆದಿರುವದಾಗಿ ವರ್ತಮಾನಕೇಳುತ್ತೇನೆ. ಹಜರತ್ ಡೆಪ್ಯುಟಿ ಕಮಿಷನರ್ ಸಾಹೇಬರವರು ಇವರಿಗೆ ತಮ್ಮ ಡಿಸ್ಟ್ರಿಕ್ಟಿನಲ್ಲಿ ಶೇಕದಾರಿ ನೌಕರಿಯನ್ನು ದಯಪಾಲಿಸಿದಲ್ಲಿ ಸದರಿ ಮೇಷ್ಟರಿಗೆ ಎಷ್ಟೋ ಪ್ರೋತ್ಸಾಹವಾದೀತು. ಮತ್ತು ಹಿಂದುಳಿದ ಕೀಳುಜಾತಿ ಜನಗಳಿಗೆ ವಿದ್ಯಾಭ್ಯಾಸಮಾಡಬೇಕೆಂಬ ಕುತೂಹಲವು ಹುಟ್ಟಿ ತಾವೂ ತಮ್ಮ ಮಕ್ಕಳೂ ಸಹ ವಿದ್ಯಾವಂತರಾಗಲು ಪ್ರಯತ್ನಮಾಡುವರಲ್ಲವೆ ? ಮತ್ತು ಸರ್ಕಾರದವರು ಆಚರಣೆಯಲ್ಲಿ ತಂದಿರುವ ಸಮಾಜಗಳಿಗೂ ಎಷ್ಟೋ ಸಹಾಯಕಾರಿಯಾದೀತಲ್ಲವೆ ? ಹಿತಚಿಂತಕ,

ಪತ್ರವ್ಯವಹಾರ.

ನೋಟೀಸು.

ಸಮಸ್ತ ವೀರಶೈವ ಮಹನೀಯರಿಗೆ ಸವಿನಯಪೂರ್ವಕವಾಗಿ ಸೂಚಿಸುವದೇನಂದರೆ—ಮನುಷ್ಯಜನ್ಮವು ಪ್ರಾಪ್ತವಾದ ಕೂಡಲೆ ಸರ್ವಭೋಗ ವಿಷಯಗಳಲ್ಲಿ ಮನಸ್ಸನ್ನು ತೊಡಗಿಸದೆ ಪರಮಪುರುಷಾರ್ಥದ ಸಿದ್ಧಿಗೋಸ್ಕರ ದೇಹಾಂತದವರೆಗೂ ಯತ್ನಿಸತಕ್ಕದ್ದು ಮುಖ್ಯಕರ್ತವ್ಯವಾಗಿದೆ. ಆದರೆ ನಮ್ಮ ಮನಃಸ್ಥೈರ್ಯವು ಅಷ್ಟು ಇಲ್ಲದ ಕಾರಣ ಮತ್ತು ಆ ಪರಮಪುರುಷಾರ್ಥದ ನಿಜಾನಂದವು ಗೊತ್ತಿಲ್ಲದಕಾರಣ ವಿಷಯಮೋಹಿಗಳಾಗಿ ದುಃಖಸಾಗರದಲ್ಲಿಯೇ ಹೊರಳಾಡುವ ಪ್ರಸಂಗವು ಪ್ರಾಪ್ತವಾಗಿದೆ. ಇಂತಹ ಕಷ್ಟವನ್ನು ಕಳೆಕೊಳ್ಳಬೇಕಾದರೆ ಸುಲಭಮಾರ್ಗವು ಯಾವುದಂದರೆ— (ಸತಾಂಹಿಸಂಗಃಸಕಲಂಪ್ರಸೂತೆ) ಎಂಬ ನೀತಿವಾಕ್ಯಾನುಸಾರವಾಗಿ ಸತ್ಪುರುಷರೊಡನೆ ಸೇವಾರೂಪನಿಮಿತ್ತದಿಂದ ಸಂಬಂಧವಂ ಬೆಳಸಿ ಪರಮಸುಖಕ್ಕೆ ಪಾತ್ರರಾಗುವದು ನಮ್ಮ ಮುಖ್ಯ ಉದ್ದೇಶವಾಗಿದೆ. ಆದರೆ ಈವಾಗ್ಗೆ ಅರಭಾಂವಿ ಶ್ರೀ ದುರದುಂಡೇಶ್ವರ ಸಂಸ್ಥಾನ ಮಠಾಧಿಕಾರಿಗಳಾದ ಶ್ರೀ ನಿರಂಜನಮಹಂತ ಮಹಾಸ್ವಾಮಿಗಳು ಪರಮಜಿತೇಂದ್ರಿಯರಾಗಿಯೂ ವೈರಾಗ್ಯಸಂಪನ್ನರಾಗಿಯೂ ಮತ್ತು ತಮ್ಮ ಸಂಸ್ಥಾನಮಠಕ್ಕೆ ಬರತಕ್ಕ ಯಾವತ್ತು ಜನರ ಅನ್ನೋದಕಗಳ ವ್ಯವಸ್ಥೆಯನ್ನು ಒಳ್ಳೇ

ವಿಜೃಂಭಣೆಯಿಂದ ನೆರವೇರಿಸತಕ್ಕವರಾಗಿಯೂ ಇರುವರಷ್ಟೆ ? ಆದರೆ ಇವರಲ್ಲಿ ವೈರಾಗ್ಯವು ಸಂಪೂರ್ಣವಾಗಿ ನೆಲೆಗೊಂಡಿರುವಕಾರಣ ತಮ್ಮ ಸದರಿ ಸಂಸ್ಥಾನಮಠದ ಅಧಿಕಾರವನ್ನು ವಿದ್ವಾಂಸನಾಗಿಯೂ, ಸದಾಚಾರಸಂಪನ್ನನಾಗಿಯೂ, ಸುವಂಶಜನಾಗಿಯೂ, ಮತ್ತು ಈ ಸಂಸ್ಥಾನಮಠದ ಸರ್ವಕಾರ್ಯಗಳನ್ನು ನೆರವೇರಿಸಿಕೊಂಡು ಹೋಗತಕ್ಕ ಸಾಧನಚತುಷ್ಟಯಸಂಪನ್ನನಾಗಿಯೂ ಇರುವ ಬ್ರಹ್ಮಚಾರಿಗೆಕೊಟ್ಟು ತಾವು ಪರ್ಣಕುಟೀರದಲ್ಲಿದ್ದುಕೊಂಡು ಶಿವಯೋಗನಿರತರಾಗಬೇಕೆಂದು ಬಹಳ ಕುತೂಹಲವುಳ್ಳವರಾಗಿರುತ್ತಾರೆ. ಆದ್ದರಿಂದ ಯೋಗ್ಯವಟುವು ಎಲ್ಲಾದರೂ ಇದ್ದರೆ ಸ್ವಾರಪತ್ರಮೂಲಕ ಅಥವಾ ಪತ್ರವ್ಯವಹಾರ ಮೂಲಕ ನಮಗೆ ಸೂಚಿಸಿ ಈ ಶಿವಯೋಗಿಗಳ ಸೇವಾದಿಂದುಂಟಾದ ಫಲಕ್ಕೆ ಪಾತ್ರರಾಗಬೇಕೆಂದು ನಮ್ಮ ಪ್ರಾರ್ಥನೆ ಇರುತ್ತದೆ.

ಶ್ರೀ ದುರದುಂಡೇಶ್ವರ ಸಂಸ್ಥಾನಮಠದ ಸರ್ವಾಧಿಕಾರಿಗಳಾದ ರಾಚೋಟಿಸ್ವಾಮಿ

ವೀರಶೈವಮಹನೀಯರೇ ! ಪ್ರತಿಯೊಂದುಪ್ರಾಣಿಯೂ ಸ್ವಹಿತದಲ್ಲಿ ಆಸಕ್ತಿಯುಳ್ಳದ್ದಾಗಿರುವದಷ್ಟೆ, ಅದರಂತೆ ಮನುಷ್ಯಪ್ರಾಣಿಯಾದರೂ ತನ್ನ ಹಿತದಲ್ಲಿಯೂ, ತನ್ನ ಬಂಧುಗಳ ಹಿತದಲ್ಲಿಯೂ, ಒಳ್ಳೇ ಸಾಹಸವುಳ್ಳದ್ದಾಗಿರುವದು. ಆದರೆ ಈಶ್ವರನು ಮನುಷ್ಯಪ್ರಾಣಿಯಲ್ಲಿ ಜ್ಞಾನವನ್ನಿಟ್ಟು ತನ್ಮೂಲಕ ಧರ್ಮಾಧರ್ಮಗಳನ್ನು ತಿಳಿಯುವ ಸಾಮರ್ಥ್ಯವನ್ನಾದರೂ ಅನುಗ್ರಹಿಸಿರುವದರಿಂದ ಇದೇ ಪ್ರಾಣಿಯು ಶ್ರೇಷ್ಠವೆನಿಸುವದು. ಆದುದರಿಂದ ಜ್ಞಾನಿಯಾದಮನುಷ್ಯನು ಪೂರ್ವಾಚಾರ್ಯರಿಂದ ಹೇಳಲ್ಪಟ್ಟ ಧರ್ಮಪ್ರತಿಪಾದಕ ಗ್ರಂಥಗಳಿಗೆ ವಿರೋಧಬಾರದಂತೆ ಆಚರಿಸತಕ್ಕದ್ದು ಮುಖ್ಯಕರ್ತವ್ಯವಾಗಿದೆ. ಪ್ರಕೃತದಲ್ಲಿ ನಮ್ಮ ವೀರಶೈವಮತದ ವಿಷಯದಲ್ಲಿ ಸ್ವಲ್ಪ ವಿಚಾರಮಾಡೋಣ—ನಮ್ಮ ಧರ್ಮಗುರುಗಳಾದ ಪಟ್ಟಾಧಿಕಾರಿಗಳು ಮೊದಲಾದವರು ಶಿಷ್ಯವರ್ಗವೆಂತಲೂ ಪುತ್ರವರ್ಗವೆಂತಲೂ ಎರಡು ಭೇದಗಳನ್ನು ಕಲ್ಪಿಸಿ, ಕೆಲವರು ಶಿಷ್ಯವರ್ಗದ ವಟುಗಳನ್ನು ಕೆಲವರು ಪುತ್ರವರ್ಗದ ವಟುಗಳನ್ನು ತಂದು ತಮ್ಮ ಅಧಿಕಾರವನ್ನು ಕೊಡುತ್ತಿರುವರು. ಈ ಉಭಯಪಕ್ಷವನ್ನು ಒಳ್ಳೇರೀತಿಯಿಂದ ವಿಚಾರಮಾಡಿ ನೋಡಿದರೆ ವಿದ್ವಾಂಸನಾದ ಸುಕುಲೋತ್ಪನ್ನನಾದ ಶಿಷ್ಯವರ್ಗದ ವಟುವಿಗ ಪಂಚರಸಮ್ಮತಿ ಪ್ರಕಾರ ತಮ್ಮ ಅಧಿಕಾರವನ್ನು ಕೊಡುವದು ಯೋಗ್ಯವಾಗಿ ಕಂಡುಬರುತ್ತದೆ. ಯಾಕೆಂದರೆ—ಈಗ ಇರತಕ್ಕ ನಮ್ಮ ಧರ್ಮಗುರುಗಳು ವಿದ್ಯಾಹೀನರಾದ ಕಾರಣ ಅವರಿಗೆ ಧರ್ಮತತ್ವಗಳು ವಿಶೇಷವಾಗಿ ಗೊತ್ತಾಗುವದಿಲ್ಲ ಮತ್ತು ಅವರಲ್ಲಿ ವೈರಾಗ್ಯವು ಸಹ ಪ್ರಾಪ್ತವಾಗಿರುವುದಿಲ್ಲದಕಾರಣ ಇತರ ಮನುಷ್ಯರಂತೆ ತಮ್ಮ ಸಹೋದರ ಮೊದಲಾದ ಆಪ್ತರಲ್ಲಿ ವಿಶೇಷಪ್ರೀತಿಯುಳ್ಳವರಾದ್ದರಿಂದ ತಮ್ಮ ಬಂಧುಗಳು ಮೂರ್ಖರಾದಾಗ್ಯೂ ಅವರಿಗೆ ತಮ್ಮ ಅಧಿಕಾರವನ್ನು ಕೊಡುತ್ತಾರೆ. ಅದರಿಂದ ನಮ್ಮ ಮತವು ಮತ್ತಿಷ್ಟು ಹಿಂದಾಗುವುದಕ್ಕೆ ಕಾರಣವಾಗುತ್ತದೆ. ಹೀಗಿರುವದರಿಂದ ಸುಜ್ಞಾನಾದ ಶಿಷ್ಯವರ್ಗದವಟುವಿಗೆ ಪಟ್ಟ ಮೊದಲಾದಅಧಿಕಾರಗಳನ್ನು ಕೊಡತಕ್ಕದ್ದು ಉಚಿತವಾಗಿರುತ್ತದೆ. ಇದನ್ನು ಯಾರು ಒಪ್ಪುವದಿಲ್ಲವೋ ಅವರು ಪ್ರತಿ ನೋಟೀಸಿನಿಂದ ತಿಳಿಸಿದಲ್ಲಿ ತಕ್ಕ ಸಮಾಧಾನಗಳನ್ನು ಕೊಡುತ್ತೇವೆ.

ಶ್ರೀ ದುರದುಂಡೇಶ್ವರಸಂಸ್ಥಾನ ಮಠದ ಸರ್ವಾಧಿಕಾರಿಗಳಾದ ರಾಚೋಟಿಸ್ವಾಮಿ.

ಈಗತಾನೇ ಅಚ್ಚಾದ ಪುಸ್ತಕವು.

(ರೇವಣಸಿದ್ಧೇಶ್ವರಪುರಾಣಂ.)

ವೇದಾಗಮಪ್ರಸಿದ್ಧವಾದ ವೀರಶೈವ ಮತವನ್ನು ಭೂತಲದಲ್ಲಿ ಪ್ರತಿಷ್ಠಾಪಿಸಿದ ಶ್ರೀ ರೇಣುಕಾಚಾರ್ಯರ ಚರಿತ್ರರೂಪವಾದ ಈ ಗ್ರಂಥವು ಬೊಮ್ಮರಸಕವಿಯಿಂದ ಷಟ್ಪದೀಕಾವ್ಯವಾಗಿ ರಚಿಸಲ್ಪಟ್ಟಿರುವುದು. ಶ್ರೀಮದಾಚಾರ್ಯರು ಭೂತಲದಲ್ಲಿ ನಡೆಯಿಸಿದ ಮಹತ್ಕಾರ್ಯಗಳು ಇದರಲ್ಲಿ ನಿರೂಪಿತವಾಗಿವೆ. ಕವಿತೆಯು ಹೃದಯಂಗಮವಾಗಿದೆ. ಪ್ರತಿಯೊಂದುಪಾದಕ್ಕೂ ಒಂದೊಂದು ಪಙ್ಕ್ತಿಯಾಗಿ ಬಿಡಿಬಿಡಿಸಿ ಉತ್ತಮವಾದ ಗ್ಲೇಸ್‌ಕಾಗದದಮೇಲೆ ಸುಂದರವಾದ ಅಕ್ಷರಗಳಿಂದ ಶುದ್ಧವಾಗಿ ಮುದ್ರಿತವಾಗಿದೆ. ೧೩ ಸಂಧಿಗಳುಳ್ಳ ಈ ಗ್ರಂಥದ ಬೆಲೆ ವಿ. ಪಿ. ಮೂಲಕ ಅಂಚೆಯ ವೆಚ್ಚವೂ ಸೇರಿ ೧೦ ಆಣೆಗಳು.

ಎಲ್. ಆರ್. ಕರಿಬಸವಶಾಸ್ತ್ರಿ,
4 ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮತ್ತೊಂದು ನೂತನಗ್ರಂಥ.

ಸಟಿಪ್ಪಣ ಸಿದ್ಧಾಂತಶಿಖಾಮಣಿ.

ಇದು ಶ್ರೀರೇಣುಕಾಚಾರ್ಯರು ಅಗಸ್ತ್ಯರಿಗೆ ಉಪದೇಶಿಸಿದ ವೀರಶೈವ ಸಿದ್ಧಾಂತಶಾಸ್ತ್ರವು, ಪ್ರತಿಯೊಬ್ಬ ವೀರಶೈವನೂ ಮುಕ್ತನಾಗುವುದಕ್ಕೆ ಜನ್ಮಾದಿಯಿಂದ ಕಡೆಯವರೆಗೆ ಆಚರಿಸಬೇಕಾದ ಧರ್ಮಕರ್ಮಗಳು ಇದರಲ್ಲಿ ನಿರೂಪಿತವಾಗಿವೆ. ಮೂಲಗ್ರಂಥಕ್ಕೆ ವೇದಾಗಮ ಪುರಾಣಾದಿವಚನಗಳ ಆಧಾರದಿಂದ ಕೂಡಿದ ಕನ್ನಡ ಟಿಪ್ಪಣವು ವಿಸ್ತಾರವಾಗಿ ಬರೆಯಲ್ಪಟ್ಟು ಉತ್ತಮವಾದ ಕಾಗದದಲ್ಲಿ ಅಚ್ಚುಮಾಡಿಸಲ್ಪಟ್ಟಿದೆ. ಸರ್ವರಿಗೂ ಸಂಗ್ರಾಹ್ಯವಾದ ಈ ಪುಸ್ತಕವು ೩೨೫ ಪುಟಗಳುಳ್ಳ ದೊಡ್ಡ ಗ್ರಂಥವಾಗಿದ್ದರೂ, ಸ್ವಮತಸ್ಥರ ಹಿತಾರ್ಥವಾಗಿ ಬೆಲೆಯು ಕಡಿಮೆಯಾಗಿಡಲ್ಪಟ್ಟಿದೆ. ವಿ. ಪಿ. ಮೂಲಕ ಅಂಚೆಯ ವೆಚ್ಚವೂಸೇರಿ ೧-೮-೦.

ಎಲ್. ಆರ್. ಕರಿಬಸವಶಾಸ್ತ್ರಿ,
3 ಗ್ರಂಥಪ್ರಸಾರಕಮಂಡಲಿ, ಮೈಸೂರು.

ಭಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

36

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪ್ರದ್ರೇಕವಾದವರು, ತೃಷೆವುಳ್ಳವರು, ದಮ್ಮಿನವರು, ಕೆಮ್ಮಿನವರ ಕಫು, ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟುಗುವ ಎಲ್ಲಾ ತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ:—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೊಂಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು
45 ಕಾಪಾಡುವುದರಲ್ಲಿ ಶ್ರೇಷ್ಠತಮವಾದ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ—ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು.

ಶೀತವಾಯು—ಕೆಮ್ಮು—ನೆಗಡಿ—ದಿನಜ್ವರ—ಮೂರರಜ್ವರ ನಾಲ್ಕರಜ್ವರ— ಮಲೇರಿಯಾಜ್ವರ— ತಲೆನೋವು— ಮೈಕೈನೋವು ಮತ್ತು ಭಾರ—ಅರೋಚಕ ಹಲ್ಲುನೋವು—ಹೊಟ್ಟೆನೋವು—ಮಲಬಂಧ—ಅಜೀರ್ಣಭೇದಿ—ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಶೆಳತ ಹೊಟ್ಟೆಉಬ್ಬರ—ಮಂದಜ್ವರ—ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ೫೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ. ಪಿ. ಛಾರ್ಜು ಪ್ರತ್ಯೇಕ.

ಅಮೋದಿನಿ:— ಅಮೋಘವಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರಮಾಡುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷ ಕೀರ್ತಿಯನ್ನು ಸಂಪಾದಿಸಿ ನಾನಾತರಹಾ ಕೆಮ್ಮು, ದಮ್ಮು ಉಬ್ಬಸ, ವಾಂತಿ, ವಾಕರಿಗೆ, ಮಲಬಂದ, ಅಗ್ನಿಮಾಂದ್ಯ, ಪಿತ್ತಸಂಕಟ, ಅರೋಚಕ, ಬಾಯಾರಿಕೆಗಳನ್ನು ತಕ್ಷಣ ಗುಣಪಡಿಸಿ ಶರೀರಕ್ಕೆ ತೀಕ್ಷ್ಣಮಾಡದೆ ಧಾತುವೃದ್ಧಿಯುಂಟುಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೧೫೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ.ಪಿ ಛಾರ್ಜ ಪ್ರತ್ಯೇಕ.

ವಿಳಾಸ— ಬಿ. ವಿ. ಪಂಡಿತ್,
ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರ್ ಡಿ॥

46

ದೊಡ್ಡ ಕಂಪೆನಿ ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೬ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯೂ. ಎನ್. ಮತ್ತು ಕಂಪೆನಿ,
ಬನಾರಿಸ್ ಸಿಟಿ. (ಕಾಶೀ)

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕೆಯ್ಯಿಂದ ಬಣ್ಣ ಕೊಟ್ಟಿರುವ ಫೋಟೊ ೧ ಕ್ಕೆ ಕ್ರಯ ೧೦ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡ ಪಲ್ಲಕ್ಕಿ ಉತ್ಸವದ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸನತೊಳುಸಹಿತ ಆದ ಸಮಾರಂಭದ ಫೋಟೊ ೧ ಕ್ಕೆ ಕ್ರಯ ೧ ರುಪಾಯಿ

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಾಮಾದಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲಸೈಜು ಬಣ್ಣದ್ದು ೧॥ ರೂ ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೦ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೊ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೊ ೧ ಕ್ಕೆ ಕ್ರಯ ಫುಲ್ಲಸೈಜು ೧ ರುಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೦ ಆಣೆ ಸಾದಾ ೮ ಆಣೆ

ಶ್ರೀ ಜಗದ್ಗುರು ತೋಂಟದಾರ್ಯ ಗದಗ, ಶ್ರೀ ಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ಸತ್ಪುರುಷಮಾಲಾ, ಹಾಳಕೇರಿ ಆನಂದಸ್ವಾಮಿಯ ಫೋಟೊ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೊ ಸಿಗುತ್ತವೆ. ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ

ಹೊಸಫ್ಯಾಷನ್— ಸಭ್ಯಗೃಹಸ್ಥರು ಗಡಿಯಾರ ಸರ್ಪಳಿಗೆ ಹಚ್ಚುವ ಲಾಕೇಟುಗಳೂ, ಯಿದರಲ್ಲಿ ಹಿಂದೆ ಮುಂದೆ ಇಪ್ಪುಕಾರ ೨ ಫೋಟೊ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ॥, ॥।=, ೧, ೧।, ಪ್ರಕಾರ, ಮತ್ತು ಬೆಳ್ಳಿಯದು ರು ೧॥ ರೋಲ್ಡ್ ಗೋಲ್ಡು ಭಂಗಾರದ್ದು ದುರ್ಬೀಣದ ಗ್ಲಾಸದೂ ಕ್ರಯ ೨॥, ೨॥। ರೂ.

ಪರೂರಿಗೆ ವಿಜಂಟರು ಬೇಕಾಗಿರುತ್ತಾರೆ ಅರ್ಧಾಣೆ ಟಿಕೀಟು ಕಳುಹಿಸಿ ಕ್ಯಾಟಲಾಕು ಬೇಕಾದವರು ತರಿಸಿಕೊಳ್ಳಿರಿ. ನಮ್ಮವಿಳಾಸ— ಗಂಗಪ್ಪಾ ಜೇರಿಗೆ.
22 ಆರ್ಟಿಸ್ಟ್ ಸೊಲ್ಲಾಪುರ

ದಿ ಜನರಲ್ ಏಜನ್ಸಿ, ಮೈಸೂರು.

ಕಾದಂಬರಿಗಳು:— ಚಂಡಮಾರುತ ೦-೨-೦; ಚರಿತಾವೃತಂ ೦-೫-೦; ರಾಜಕಥಾವಲ್ಲರಿ ೦-೫-೦; ಪಿತೃರಿನಜರಿತ್ರೆ ೦-೦-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೨-೬; ಸೀತೆ ೦-೫-೦; ಸಾಹಸಿಕೆ, ಕಲಾನಾಥ ೦-೮-೦; ಮಂಜುಲಕ್ಷ್ಮಿ ೦-೨-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸತ್ಯಸಂಜೀವಿನಿ ೦-೮-೦; ಕೊಹಿನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೨-೦. 47

ಊದುಬತ್ತಿಗಳು.

16 ವಿವಿಧವಾದ ಊದುಬತ್ತಿಗಳು ಸೇರು ೧ ಕ್ಕೆ ೦-೧೦; ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೦ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪ ಟಿನ್ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು. ಟಿ. ಎಲ್. ಉಪಾಧ್ಯಾಯರು, ಸುಗಂಧಕಾರಿ, ಮೈಸೂರು

ನ್ಯಾಯದರ್ಪಣ. 29

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯೂ, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಿಸಿಪ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸೂ, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಅಚರ ಕೊಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ಪತ್ರಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯೂ ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರುತ್ತವೆ.

ಬೆಲೆ ರೂ. 1—8—0. ವಿ. ಪಿ. ಮೂಲ್ಕ 1—12—0.

ಎಂ. ಎಸ್. ನಂಜಪ್ಪನವರು,
ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

36 ಸಚಿತ್ರ ಶುಕಸಪ್ತತಿ ಕಥೆಗಳು ರೂ. ೧-೮-೦ (೫೧೦ ಪುಟ) ಟಪಾಲು ಹಾಸಲು ೪ ಆಣೆ. ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ ರೂ. ೧-೮-೦ (೫೭೩ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ! ಮಾನ್ಯತೆಯು ಬೇಕಾದರೆ, ವಾಕ್ಚಾತುರಿಯೊಳಿಪ್ಟವಿದ್ದರೆ, ಲೋಕರೀತಿಯನ್ನು ತಿಳಿಯಬಿಚ್ಛೆಪಟ್ಟರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯುಳ್ಳಾಕೆಯಿದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೬೦ ಪುಟಗಳಿಂದ ಕೂಡಿದ ೬೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ. ೧-೪-೦ ಟಪಾಲ್ ಹಾಸಲು ೩ ಆಣೆ. ಈಗಲೇ ಬರೆ ನಿಮ್ಮಾ. ನಮ್ಮಲ್ಲಿ ಇನ್ನೂ ಅನೇಕಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸಾಲಾಮಿಸ್ರಿಯು ಕಾಬೂಲ್ ದೇಶದಲ್ಲಿ ಪೌಂಡು ೧ ಕ್ಕೆ ೧-೧೦-೦ ಇತ್ತು ಈಗ ಪೌಂಡು ೧ಕ್ಕೆ ೩-೪-೦ ಆಗಿದೆ. ಆದ್ದರಿಂದ ಇದರ ಕ್ರಯ ೨-೦ ರೂಪಾಯಿ ಮಾಡಿರುತ್ತೆ. 3

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾ" ಇನ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ದೂರ ನಡೆಯುವುದರಿಂದ ಏದುಸಿರು ಬರುವುದೂ, ತಲೆನೋವೂ ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು ಹಳೇ ತಲೆ ನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಸೇರಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು. ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ತಾಂಬ್ರದ ಮತ್ತು ಬಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು.

ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂ. ಬಹುಮಾನವಾಗಿ ಕೊಡಲ್ಪಡುವುದು.

ಹಾಗೆ ವ್ಯಕ್ತಪಡಿಸಿದರೂ ಬಹುಮಾನದಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧ಕ್ಕೆ ರೂ. ೨-೦-೦. ಟಪ್ಪಾಲ್‌ಖರ್ಚು ಬೇರೆ. ಅನುಪಾನಪತ್ರಿಕೆ ಔಷಧದಸಂಗಡ ಇರುತ್ತೆ.

ಡಿ. ಮನ್ನಾಲಾಲ್, 5 ಹಾಜಿ ಸಾಹೇಬ್ ಮುಹಡಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ

ನಮ್ಮ ಏಜಂಟರು-ಡಿ. ಸೈಯದ್ ಉಸ್ಮಾನ್ ಅಂಡ್ ಕೊ, ದೊಡ್ಡಪೇಟೆ, ಬೆಂಗಳೂರು ಸಿಟಿ.

14

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ

ಸಂದುಗಳ ನೋವು ಮೈ ಕಾಲು ಜೋಡಿಸ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಆಗ, ನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಆಯಿಲಿಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ

ವೈಶ್ವಾನರಾಸವ (ಕಾಲರಾ ಔಷಧಿ)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈ ವಿಕಾರಿಸಿಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಬೇಕಾದಕೇಡಿರಿ. ಒಂದೇಒಂದು ಬುಡ್ಡಿಯು ನಿಮ್ಮಲ್ಲಿದ್ದರೆ ಮನೆಯ ಜನರನ್ನು ಅಪೇಕ್ಷಿಸದ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧ ವೈದ್ಯನಿದ್ದಂತೆ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧ ೦ ೦

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ. ಮೈಸೂರು

ಗಂಧರಾಜ ನಸ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ)ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾಗಿದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೇಡುಕಿಲ್ಲ. ಒಂದು ಚುಟಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡರ್ಜ ಡಬ್ಬಿಗೆ ೨-೨-೦

ಉತ್ತಮವಾದ ನಶ್ಯದಪುಡಿ.

ಧಾತು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವೆ. ನೀವುಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,
ಗೋಪನಶೆಟ್ಟಿಪುರ, ಹನೂರು ಪೋಸ್ಟ್
25 ಕೊಳ್ಳೇಗಾಲದ ತಾಲ್ಲೂಕು

೧೯೧೪ ನೆಯ ಇಸವಿ ಆಗಸ್ಟ್ ತಾ॥ ೯ ರಿಂದ ೧೯೧೪ನೆಯ ಆಗಸ್ಟ್ ತಾ॥ ೧೫ರವರೆಗೆ ಸಲ್ಲುವ ಶಾಲೀವಾಹನಶಕೆ ೧೮೩೬ ನೆಯ ಆನಂದನಾಮ ಸಂ॥ ದ ಶ್ರಾವಣ ಬ॥ ತದಿಗೆಯಿಂದ ಶ್ರಾವಣ ಬ॥ ನವಮಿವರೆಗಿನ ಪಂಚಾಂಗ.

ತಾ॥	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ಶ್ರೇಡಿ ಕಟಕ
9	¹ಭಾನು	ತದಿ	2-12	ಪೂಭಾ	24-54	25
10	ಸೋ	ಚೌ	5-50	ಉತ್ತಭಾ	30-20	26
11	²ಮಂ	ಪಂ	10-12	ರೇವತಿ	36-28	27
12	³ಬುಧ	ಷಷ್ಠಿ	15-11	ಅಶ್ವಿನಿ	43-3	28
13	⁴ಗುರು	ಸಪ್ತ	20-14	ಭರಣಿ	49-34	29
14	⁵ಶುಕ್ರ	ಅಷ್ಟ	25-1	ಕೃತ್ತಿ	55-46	30
15	⁶ಶನಿ	ನವ	29-12	ರೋಹಿ	60-	31

(1) ಸಂಕಟಹರ ಚತುರ್ಥಿ. (2) ಮಂಗಳಗೌರೀವ್ರತಂ, ದಗ್ಧಯೋಗಃ. (3) ಸಪ್ತಮೀತಿಥಿಃ, ಮೃತ್ಯುಯೋಗಃ (4) ಶೂನ್ಯತಿಥಿಃ, ಜನ್ಮಾಷ್ಟಮೀ. (5) ಪಾತಾಭಾವಃ, ಕೆಲ ಅಷ್ಟಮೀತಿಥಿಃ, ಇಂದ್ರಸಾವರ್ಣಿಮನ್ವಾದಿಃ, ೧ ಡಿಶುಕ್ರವಾರ, ದಗ್ಧಯೋಗಃ (6) ಶ್ರಾವಣಶನಿವಾರ, ಶ್ರೀನಿವಾಸದೇಶಿಕೇಂದ್ರ ಬ್ರಹ್ಮ॥ ಪರಕಾಲಸ್ವಾಮಿಗಳಾರಾಧನೆ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED M NO 124

ಮೈಸೂರ್ ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು

ವಾರ್ಷಿಕ ಚಂದಾ ೧—೦—೦ } ದವಹಿಕೊರವುರೀತಾರಾ ಪರವಮಧಿಗತರಾಜವುಂಡಲಹಿತೈ ಘನಪಥಕೃತಾವತಾರಾ ಪಕ್ಷ್ಯಜನಹೃತ್ತಮೋಹರಾಜೀಯಾತ್ ! ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ, ಸ್ತೋಮಾಭೀಷ್ಟದಕೇಲ ಸಾಕಲಿತಸಾಧ್ವ್ಯಾಲವಾಲಂಪಲಂ! ನಿಮಾತೀತ ಯಶಃಪ್ರತಾಪವಿಪುಲಂಸದ್ವೃತ್ತಮಾಲಾಕುಲಂ / ಶ್ರೀಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ! { ಅಂಚೆವೆಚ್ಚ ಸೇರಿ ೧—೧೪—

REGISTERED, M NO 124

ಸಂಪುಟ ೨೩) ಮೈಸೂರ್ ಸ್ಟಾರ್ ಸನ್ ೧೯೧೪ ನೆಯ ಇಸವಿ ಆಗಸ್ಟ್ ತಾರೀಖು ೧೬ ನೆಯ ಭಾನುವಾರ (ಸಂಚಿಕೆ ೩೩

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜ ಮೊಹಲ್ಲಾ, ಮೈಸೂರು.

ಸುಂದರವಾದ ಹೊಸನಮೂನೆ ದೊಡ್ಡ ಘಡಿಯಾರಗಳು.

29

ಪ್ರಖ್ಯಾತಿಹೊಂದಿದ ಅಮೆರಿಕಾದೇಶದ ಅನ್ಸೋನಿಯಾ ಕಂಪೆನಿಯವರಿಂದ ತಯಾರಿಸಲ್ಪಟ್ಟ ಖಾತ್ರಿಯಾದ ಮತ್ತು ಬಹಳದಿವಸ ಬಾಳಿಕೆಬರತಕಂಥ ಕ್ಲಾಕ್‌ಗಳು ಇವೇ ಹೊರ್ತು ಬೇರೆ ಅಲ್ಲಾ.



ಈ ಪಕ್ಕದ ಚಿತ್ರದಲ್ಲಿ ಕಾಣಿಸಿರುವ ಗೋಡೆಗೆ ತಗುಲಿಸುವ ಘಂಟೆ, ಅರ್ಧಘಂಟೆ ಹೊಡೆಯುವ ಘಡಿಯಾರ ಒಂದಕ್ಕೆ ೧೨-೮-೦ ರೂ. ಘಂಟೆ ಅರ್ಧಘಂಟೆ ಹೊಡೆದು ಅಲಾರಂ ಸಹಾ ಇರತಕ್ಕ ಘಡಿಯಾರ ಒಂದಕ್ಕೆ ೧೩-೪-೦ ರೂ. ಈ ಘಡಿಯಾರಗಳು ಮಜಬೂತಾದ ಯಂತ್ರೋಪಕರಣಗಳಿಂದಲೂ ಮೇಲ್ಭಾಗದಲ್ಲಿ ನಕಾಸಿನ ಕೆತ್ತನೆಯಿಂದಲೂ ನೋಡುವುದಕ್ಕೆ ಅಂದವಾಗಿಯೂ ಬಹಳ ದಿವಸ ಬಾಳಿಕೆ ಬರತಕ್ಕವುಗಳಾಗಿವೆ. ಈ ಘಡಿಯಾರಕ್ಕೆ ಆರ್ಡರ್ ಮಾಡತಕ್ಕವರು ೫ ರೂಪಾಯಿ ಅಡ್ವಾನ್ಸು ಕಳಿಸಬೇಕು. ಬಾಕೀ ಮೊಬಲಿಗ್ಯೆ ರೈಲ್ವೆ ರಶೀದಿಯನ್ನು ವಿ. ಪಿ. ಮಾಡಲಾಗುತ್ತೆ. ರೈಲ್ವೆ ಛಾರ್ಜು ಅಲಾಯಿದಾ.

ಸಿಕ್ಕಿದ ಹಾರ್ಮೋನಿಯಂಗಳನ್ನು ಕ್ರಯಕ್ಕೆ ತೆಗೆದುಕೊಂಡು ನಿಮ್ಮ ಹಣವನ್ನು ಯಾಕೆ ವ್ಯರ್ಥಮಾಡಿಕೊಳ್ಳುವಿರಿ.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ "ಮೋಹನ್‌ಫ್ಲೂಟ್ಸ್" (M. Mohen flute) ಮತ್ತೂ "ಮೋಸ್ಲಂಫ್ಲೂಟ್" (Moslem flute) ಹಾರ್ಮೋನಿಯಂಗಳನ್ನು ನಮ್ಮಿಂದ ತರಿಸಿಕೊಂಡು ಪರೀಕ್ಷಿಸಿರಿ ಈ ಹಾರ್ಮೋನಿಯಂಗಳು ಅನೇಕದಿವಸ ಬಾಳಿಕೆಬರುವಂತೆ ಬಹಳಮಜಬೂತಾದ ಸಾಮಾನುಗಳಿಂದ ಪ್ರಖ್ಯಾತರಾದ ಕಾರೀಗಾರರಿಂದ ತಯಾರಿಸಲ್‌ಪಟ್ಟಿವೆ. ಒಂದು ಸಾರಿ ನಮ್ಮಿಂದ ತರಿಸಿ ಪರೀಕ್ಷಿಸಿದಲ್ಲಿ ಇದರ ಬಂದೋಬಸ್ತು ಬಾಳ್ವಿಕೆ ಸಹ ತಮಗೇ ವ್ಯಕ್ತವಾಗುತ್ತೆ.



ನಂ ೧. ಒಂದು ಸೆಟ್‌ರೀಡ್ಸ್ ಉಳ್ಳದ್ದು (Moslem flute) ಹಾರ್ಮೋನಿಯಂ ೧ ಕ್ಕೆ ೩೫-೦-೦ ರೂ.

ನಂ ೨. ಒಂದು ಸೆಟ್‌ರೀಡ್ಸ್ ಉಳ್ಳದ್ದು (M. Mohen flute) ಹಾರ್ಮೋನಿಯಂ ೧ ಕ್ಕೆ ೩೨-೮-೦ ರೂ.

ನಂ ೩. ಡಿಟೋ ನಮೂನೆಯಲ್ಲಿ ಅತ್ಯುತ್ತಮವಾದದ್ದು (M. Mohen flute) ೧ ಕ್ಕೆ ೪೨-೮-೦ ರೂ.

ನಂ ೪. ಡಬ್ಬಲ್‌ರೀಡ್ಸ್ ಉಳ್ಳದ್ದು (Moslem flute) ಹಾರ್ಮೋನಿಯಂ ೧ ಕ್ಕೆ ೪೨-೮-೦ ರೂ.

ನಂ ೫. ಡಬ್ಬಲ್‌ರೀಡ್ಸ್ ಉಳ್ಳದ್ದು (M. Mohen flute) ಹಾರ್ಮೋನಿಯಂ ೧ ಕ್ಕೆ ೫೨-೮-೦ ರೂ.

ಈ ಹಾರ್ಮೋನಿಯಂಗಳ ಪೈಕಿ ಯಾವದಕ್ಕೆ ಆರ್ಡರ್ ಕೊಟ್ಟರೂಕೂಡ ೫ ರೂಪಾಯಿ ಅಡ್ವಾನ್ಸ್ ಕಳಿಸಬೇಕು ಬಾಕೀಮೊಬಲಿಗ್ಯೆ ರೈಲ್ವೇರಶೀದಿಯನ್ನು ವಿ. ಪಿ. ಮೂಲ್ಕ ರವಾನಿಸುತ್ತೇವೆ.

ನೆಪ್ಚೂನ್‌ಫೌಂಟನ್‌ಪೆನ್‌ಗಳು. NEPTUNE FOUNTAIN PENS·

ಈ ಫೌಂಟನ್‌ಪೆನ್‌ಗಳು ಅದರ ಖರೀದಿಗೆ ತಕ್ಕಂತೆ ೪ ವರುಷಗಳಲಾಗಾಯ್ತು ಹತ್ತು ವರುಷಗಳವರೆಗೆ ಬಾಳಿಕೆ ಬರತಕ್ಕವುಗಳಾಗಿವೆ.

ನಂ ೭೦೦. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಕ್ರಯ ೧ ಕ್ಕೆ ೧—೧೪—೦.
ನಂ ೭೫೫. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಉತ್ತಮವಾದದ್ದು ಕ್ರಯ ೧ ಕ್ಕೆ ೨—೧೦—೦.
ನಂ ೭೧೦. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಅತ್ಯುತ್ತಮವಾದದ್ದು ಕ್ರಯ ೧ ಕ್ಕೆ ೪—೭—೦.

ಮೇಲ್ಕಂಡ ಯಾವನಮೂನೆ ಫೌಂಟನ್‌ಪೆನ್‌ಗಳನ್ನು ತರಿಸಿಕೊಂಡರೂ ಅದರ ಜೊತೆಯಲ್ಲಿ ಪೆನ್ ಇಡತಕ್ಕ ಪೆಟ್ಟಿ ೧. ಜೇಬಿಗೆ ತಗಲಿಸತಕ್ಕ ಕ್ಲಿಪ್ ೧. ಶಾಯಿಹಾಕುವ ಗಾಜಿನ ಟ್ಯೂಬ್ ೧. ಶಾಯಿತುಂಬುವವಿಧ ಪ್ರಿಂಟಾಗಿರತಕ್ಕ ಚೀಟಿ ೧ ನ್ನೂ ಸಹ ರವಾನಿಸಲಾಗುತ್ತೆ.

ರಖಂವಾರ್ ವಾಚ್ ಸರಪಣಿಗಳು.



ಈ ಪಕ್ಕದ ಚಿತ್ರದಲ್ಲಿ ಕಾಣಿಸಿರುವ ನಮೂನೆ ಅಚ್ಚಬೆಳ್ಳಿಯ ವಾಚ್ ಸರಪಣಿ ಯಾವ ರಖಂ ಬೇಕಾದರೂ ಕ್ರಯ ೧ಕ್ಕೆ ೩—೪—೦ ಮೇಲ್ಕಂಡ ರಖಂವಿನ್ನಲ್ಲಿ ನಿಕ್ಕಲ್‌ಬೆಳ್ಳಿ ಸರಪಣಿ ಕ್ರಯ ೧ ಕ್ಕೆ ೦—೧೨—೦.

ಅಚ್ಚಬೆಳ್ಳೀ ಕೊರಳ ಸರಪಣಿ ಬಹಳ ನಾಜೋಕಾಗಿ ತಯಾರಿಸಿದ್ದು ೧ ಕ್ಕೆ ೧—೪—೧.

೧೮ ಕ್ಯಾರಟ್ಟು ಚಿನ್ನದ ಸರಪಣಿ ೧ ಕ್ಕೆ ೫—೮—೦.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್. ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೫—೦
ಸಟೀಕ ನಂದೀವ್ರತ	೦—೪—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ

ಹೊಸಪುಸ್ತಕಗಳು

148 ಬಸವರಾಜವಿಜಯಂ— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧ ೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦ ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೦ ಆಣೆ; ಸುತ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ—ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ ವರ್ಷದ ಚಂದಾ ೨-೮-೦.

ಎ. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ದಿ ಜನರಲ್ ಏಜೆನ್ಸಿ, ಮೈಸೂರು.

ಕಾದಂಬರಿಗಳು:— ಚಂಡಮಾರುತ ೦-೨-೦; ಚರಿತಾವೃತಂ ೦-೫-೦; ರಾಜಕಥಾವಲ್ಲರಿ ೦-೫-೦; ಹೀಚರಿನಚರಿತ್ರೆ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೨-೬; ಸೀತೆ ೦-೫-೦; ಸಾಹಸಿಕೆ, ಕಲಾನಾಥ ೦-೮-೦; ಮಹಾಲಕ್ಷ್ಮಿ ೦-೭-೦; ತಾರಾಸುಂದರಿ ೦-೮-೦; ಪದ್ಮಿನಿ ೦-೭-೦; ಸತ್ಯಸಂಜೀವಿನಿ ೦-೮-೦; ಕೊಹಿನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೨-೦. 47

ಊದುಬತ್ತಿಗಳು.

ವಿವಿಧವಾದ ಊದುಬತ್ತಿಗಳು ಸೇರು ೧ ಕ್ಕೆ ೦-೧೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ಜೋಲಾ ೧ ಕ್ಕೆ ೧-೦-೦; ಜಟಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಚಾಲಗ್ರಹದೂಪ ಟಿಕ್ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು. ಟಿ ಎಲ್. ಉಪಾಧ್ಯಾಯರು,

ಸುಗಂಧಕಾರಿ,

ಮೈಸೂರು.

16

36 ಸಚಿತ್ರ ಶುಕಸಪ್ತತಿ ಕಥೆಗಳು ರೂ. ೧-೮-೦ (೫೧೨ ಪುಟ) ಟಪಾಲು ಹಾಸಲು ೪ ಆಣೆ. ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ ರೂ ೧-೮-೦. (೫೩೩ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ! ಮಾನ್ಯತೆಯು ಬೇಕಾದರೆ, ವಾಕ್ಚಾತುರ್ಯವಿರಬೇಕೆಂದಿದ್ದರೆ, ಲೋಕರೀತಿಯನ್ನು ತಿಳಿಯಬೇಕೆಂದಿದ್ದರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯುಳ್ಳಾಸೆಯಿದ್ದರೆ ದಯಮಾಡಿ ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೩೦ ಪುಟಗಳಿಂದ ಕೂಡಿದ ೬೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ. ೧-೪-೦ ಟಪಾಲ್ ಹಾಸಲು ೩ ಆಣೆ.

ಈಗಲೇ ಬರೆ ನಿಮಾ. ನಮ್ಮಲ್ಲಿ ಇನ್ನೂ ಅನೇಕ ಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸಾಲಾಮಿಸ್ರಿಯು ಕಾಬೂಲ್ ದೇಶದಲ್ಲಿ ಪೌಂಡು ೧ ಕ್ಕೆ ೧-೧೦-೦ ಇತ್ತು ಈಗ ಪೌಂಡು ೧ಕ್ಕೆ ೩-೪-೦ ಆಗಿದೆ. ಆದ್ದರಿಂದ ಇದರ ಕ್ರಯ ೭೦೦ ರೂಪಾಯಿ ಮಾಡಿರುತ್ತೆ. 3

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾ" ದ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ದೂರ ನಡೆಯುವುದರಿಂದ ಏದುಸಿರು ಬರುವುದೂ, ತಲೆನೋವೂ ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು ಹಳೇ ತಲೆನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಸೇಖರಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು. ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ತಾಂಬ್ರದ ಮತ್ತು ಬಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು.

ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂ. ಬಹುಮಾನವಾಗಿ ಕೊಡಲ್ಪಡುವುದು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನದಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧ಕ್ಕೆ ರೂ. ೭-೦-೦. ಟಪ್ಪಾಲ್‌ಖರ್ಚು ಬೇರೆ. ಅನುಪಾನಪತ್ರಿಕೆ ಔಷಧದಸಂಗಡ ಇರುತ್ತೆ.

ಡಿ. ಮನ್ನಾಲಾಲ್, 5 ಹಾಜಿ ಸಾಹೇಬ್ ಮಹಡಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ

ನಮ್ಮ ಏಜೆಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೊ, ದೊಡ್ಡಪೇಟೆ, ಬೆಂಗಳೂರು ಸಿಟಿ.

14

ಲೋಕಾಮಯಹರ ಕಸ್ತೂರಿ ಮಾತ್ರೆ.— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ



ಸಂದುಗಳ ನೋವು ಮೈ ಕಾಲು ಜೋಡಿಸ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ..., ನಪ್ಪ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಆಯಲಿಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಬ್ಬರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ— ೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈ ವಿಕಾರಿತೆಂದು ತೋರಿದಾಗಲೂ, ಅಚ್ಚ ದ್ರವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ ಪ್ರಾಣಿಯೊಂದು ಸಗಾಯವನ್ನ ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧವಸ್ತುವಿದೆಂದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧ ...

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ. ಮೈಸೂರು

ನ್ಯಾಯದರ್ಪಣ. 29

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯು, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಫ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸೂ, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆಚರಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತಾವೇಜು ಪತ್ರಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯು ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರುತ್ತವೆ.

ಬೆಲೆ ರೂ. 1 8—0. ವಿ. ಪಿ. ಮೂಲಕ 1—12—0.

ಎಂ. ಎಸ್. ನಂಜಪ್ಪನವರು,

ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ)ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆನೋಯುವುದು, ತಲೆಯಲ್ಲಿ ನೀರುತುಂಬಿ ಧಿಮ್ಮೆನ್ನುವುದು, ಈ ಯಾವುದಾಗಿದ್ದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚುಟಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜನ್ ಡಬ್ಬಿಗೆ ೨-೭-೦

ಉತ್ತಮವಾದ ನಶ್ಯದಪುಡಿ.

ಧಾತು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವೆ. ನೀವು ಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಸೆಟ್ಟಿ,

ಗೋಪಸೆಟ್ಟಿಪುರ, ಹನೂರು ಪೋಸ್ಟ್

25 ಕೊಳ್ಳೇಗಾಲದ ತಾಲ್ಲೂಕು

೧೯೧೪ ನೆಯ ಇಸವಿ ಆಗಸ್ಟ್ ತಾ॥ ೯ ರಿಂದ ೧೯೧೪ನೆಯ ಆಗಸ್ಟ್ ತಾ॥ ೧೫ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೬ ನೆಯ ಆನಂದನಾಮ ಸಂ॥ ದ ಶ್ರಾವಣ ಬ॥ ತದಿಗೆಯಿಂದ ಶ್ರಾವಣ ಬ॥ ನವಮಿವರೆಗಿನ ಪಂಚಾಂಗ.

ತಾ॥	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ಸೌರಿ ಕಟಕ
9	[1] ಭಾನು	ತದಿ	2-12	ಪೂಭಾ	24-54	25
10	ಸೋ	ಚೌ	5-50	ಉತ್ತಭಾ	30-20	26
11	[2] ಮಂ	ಪಂ	10-12	ರೇವತಿ	36-28	27
12	[3] ಬುಧ	ಷಷ್ಠಿ	15-11	ಅಶ್ವಿನಿ	43-3	28
13	[4] ಗುರು	ಸಪ್ತ	20-14	ಭರಣಿ	49-34	29
14	[5] ಶುಕ್ರ	ಅಷ್ಟ	25-1	ಕೃತ್ತಿ	55-46	30
15	[6] ಶನಿ	ನವ	29-12	ರೋಹಿ	60-	31

(1) ಸಂಕಟಹರ ಚತುರ್ಥಿ. (2) ಮಂಗಳಗೌರೀವ್ರತಂ, ದಗ್ಧಯೋಗಃ. (3) ಸಪ್ತಮೀತಿಥಿಃ, ವ್ಯತ್ಯಯೋಗಃ (4) ಶೂನ್ಯತಿಥಿಃ, ಜನ್ಮಾಷ್ಟಮೀ. (5) ಪಾತಾಭಾವಃ, ಕೆಲ ಅಷ್ಟಮೀತಿಥಿಃ, ಇಂದ್ರಸಾವರ್ಣಿಮನ್ವಾದಿಃ, ಆದಿಶುಕ್ರವಾರ, ದಗ್ಧಯೋಗಃ (6) ಶ್ರಾವಣಶನಿವಾರ, ಶ್ರೀನಿವಾಸದೇಶಿಕೇಂದ್ರ ಬ್ರಹ್ಮ॥ ಪರಕಾಲಸ್ವಾಮಿಗಳಾರಾಧನೆ.

ಮೈಸೂರಿನ ವೈ. ವಿರೂಪಾಕ್ಷಯ್ಯನವರಿಂದ ಕಾರ್ಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED M NO 124

ಮೈಸೂರ್ ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು

ವಾರ್ಷಿಕ ಚಂದಾ ೧-೦-೦ } ದವಹಿಕೋರಪುರೀತಾರಾ ಪರಮಧಿಗತರಾಜಮಂಡಲಹಿತೈ ಘನಪಥಕೃತಾವತಾರಾ ಪಕ್ಷ್ಯಜ್ಞನಹೃತ್ತಪೋಹರಾಜೇಯಾತ್ ! ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ, ಸ್ತೋಮಾಭೀಷ್ಟದಶೀಲ ಸಾಕಲಿತಸಾದ್ಗುಣ್ಯಾಲವಾಲಂಪಲಂ! ಸಿಮಾತೀತ ಯಶಃಪ್ರತಾಪವಿಪುಲಂಸದ್ವೃತ್ತಮಾಲಾಕುಲಂ । ಶ್ರೀಮಂಬೆತ್ತಿಶೆಯಂಸದಾಪೊರೆಗೆ ಗೌರೀಕಾನುಕಂಪೋಜ್ವಲಂ! { ಅಂಚೆವೆಚ್ಚ ಸೇರಿ ೧-೧೪-

REGISTERED, M NO 124

ಸಂಪುಟ ೭) ಮೈಸೂರ್ ಸ್ಟಾರ್ ಸೆಕ್ ೧೯೧೪ ನೆಯ ಇಸವಿ ಆಗಸ್ಟ್ ತಾರೀಖು ೧೬ ನೆಯ ಭಾನುವಾರ (ಸಂಚಿಕೆ ೩೩

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜ ಮೊಹಲ್ಲಾ, ಮೈಸೂರು.

ಸುಂದರವಾದ ಹೊಸನಮೂನೆ ದೊಡ್ಡ ಘಡಿಯಾರಗಳು.

29

ಪ್ರಖ್ಯಾತಿಹೊಂದಿದ ಅಮೆರಿಕಾದೇಶದ ಅನ್‌ಸೋನಿಯಾ ಕಂಪೆನಿಯವರಿಂದ ತಯಾರಿಸಲ್ಪಟ್ಟ ಖಾತ್ರಿಯಾದ ಮತ್ತು ಬಹಳದಿವಸ ಬಾಳಿಕೆಬರತಕ್ಕಂಥ ಕ್ಲಾಕ್‌ಗಳು ಇವೇ ಹೊರ್ತು ಬೇರೆ ಅಲ್ಲಾ.

ಈಪಕ್ಕದ ಚಿತ್ರದಲ್ಲಿ ಕಾಣಿಸಿರುವ ಗೋಡೆಗೆ ತಗುಲಿಸುವ ಘಂಟಿ, ಅರ್ಧಘಂಟಿ ಹೊಡೆಯುವ ಘಡಿಯಾರ ಒಂದಕ್ಕೆ ೧೭-೮-೦ ರೂ. ಘಂಟಿ ಅರ್ಧಘಂಟಿ ಹೊಡೆದು ಅಲಾರಂ ಸಹಾ ಇರತಕ್ಕ ಘಡಿಯಾರ ಒಂದಕ್ಕೆ ೧೩-೪-೦ ರೂ. ಈ ಘಡಿಯಾರಗಳು ಮಜಬೂತಾದ ಯಂತ್ರೋಪಕರಣಗಳಿಂದಲೂ ಮೇಲ್ಭಾಗದಲ್ಲಿ ನಕಾಸಿನ ಕೆತ್ತನೆಯಿಂದಲೂ ನೋಡುವುದಕ್ಕೆ ಅಂದವಾಗಿಯೂ ಬಹಳ ದಿವಸ ಬಾಳಿಕೆ ಬರತಕ್ಕವುಗಳಾಗಿವೆ. ಈ ಘಡಿಯಾರಕ್ಕೆ ಆರ್ಡರ್ ಮಾಡತಕ್ಕವರು ೫ ರೂಪಾಯಿ ಅಡ್ವಾನ್ಸು ಕಳಿಸಬೇಕು. ಬಾಕೀ ಮೊಬಲಿಗ್ಯೆ ರೈಲ್ವೆ ರಶೀದಿಯನ್ನು ವಿ. ಪಿ. ಮಾಡಲಾಗುತ್ತೆ. ರೈಲ್ವೆ ಛಾರ್ಜು ಅಲಾಯಿದಾ.

ಸಿಕ್ಕಿದ ಹಾರ್ಮೋನಿಯಂಗಳನ್ನು ಕ್ರಯಕ್ಕೆ ತೆಗೆದುಕೊಂಡು ನಿಮ್ಮ ಹಣವನ್ನು ಯಾಕೆ ವ್ಯರ್ಥಮಾಡಿಕೊಳ್ಳುವಿರಿ.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ "ಮೋಹನ್‌ಫ್ಲೂಟ್ಸ್" (M. Mohen flute) ಮತ್ತೂ "ಮೋಸ್ಲೆಂಫ್ಲೂಟ್" (Moslem flute) ಹಾರ್ಮೋನಿಯಂಗಳನ್ನು ನಮ್ಮಿಂದ ತರಿಸಿಕೊಂಡು ಪರೀಕ್ಷಿಸಿರಿ ಈ ಹಾರ್ಮೋನಿಯಂಗಳು ಅನೇಕದಿವಸ ಬಾಳಿಕೆಬರುವಂತೆ ಬಹಳಮಜಬೂತಾದ ಸಾಮಾನುಗಳಿಂದ ಪ್ರಖ್ಯಾತರಾದ ಕಾರೀಗಾರರಿಂದ ತಯಾರಿಸಲ್ಪಟ್ಟಿವೆ. ಒಂದು ಸಾರಿ ನಮ್ಮಿಂದ ತರಿಸಿ ಪರೀಕ್ಷಿಸಿದಲ್ಲಿ ಇದರ ಬಂದೋಬಸ್ತು ಬಾಳ್ವಿಕೆ ಸಹ ತಮಗೇ ವ್ಯಕ್ತವಾಗುತ್ತೆ.

ನಂ ೧. ಒಂದು ಸೆಟ್‌ರೀಡ್ಸ್ ಉಳ್ಳದ್ದು (Moslem flute) ಹಾರ್ಮೋನಿಯಂ ೧ ಕ್ಕೆ ೩೫-೦-೦ ರೂ.

ನಂ ೨. ಒಂದು ಸೆಟ್‌ರೀಡ್ಸ್ ಉಳ್ಳದ್ದು (M. Mohen flute) ಹಾರ್ಮೋನಿಯಂ ೧ ಕ್ಕೆ ೩೩-೮-೦ ರೂ.

ನಂ ೩. ಡಿಟೋ ನಮೂನೆಯಲ್ಲಿ ಅತ್ಯುತ್ತಮವಾದದ್ದು (M· Mohen flute) ೧ ಕ್ಕೆ ೪೭-೮-೦ ರೂ.

ನಂ ೪. ಡಬ್ಬಲ್‌ರೀಡ್ಸ್ ಉಳ್ಳದ್ದು (Moslem flute) ಹಾರ್ಮೋನಿಯಂ ೧ ಕ್ಕೆ ೪೩-೮-೦ ರೂ.

ನಂ ೫. ಡಬ್ಬಲ್‌ರೀಡ್ಸ್ ಉಳ್ಳದ್ದು (M. Mohen flute) ಹಾರ್ಮೋನಿಯಂ ೧ ಕ್ಕೆ ೫೭-೮-೦ ರೂ.

ಈ ಹಾರ್ಮೋನಿಯಂಗಳ ಪೈಕಿ ಯಾವದಕ್ಕೆ ಆರ್ಡರ್ ಕೊಟ್ಟರೂಕೊಡ ೫ ರೂಪಾಯಿ ಅಡ್ವಾನ್ಸು ಕಳಿಸಬೇಕು ಬಾಕೀಮೊಬಲಿಗ್ಯೆ ರೈಲ್ವೇರಶೀದಿಯನ್ನು ವಿ. ಪಿ. ಮೂಲಕ ರವಾನಿಸುತ್ತೇವೆ.

ನೆಪ್ಚೂನ್‌ಫೌಂಟನ್‌ಪೆನ್‌ಗಳು. NEPTUNE FOUNTAIN PENS·

ಈ ಫೌಂಟನ್‌ಪೆನ್‌ಗಳು ಅದರ ಖರೀದಿಗೆ ತಕ್ಕಂತೆ ೪ ವರುಷಗಳಿಂದಾಗಾಯ್ತು ಹತ್ತು ವರುಷಗಳವರಿಗೆ ಬಾಳಿಕೆ ಬರತಕ್ಕವುಗಳಾಗಿವೆ.

ನಂ ೨೦೧. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಕ್ರಯ ೧ ಕ್ಕೆ ೧—೧೪—೦.

ನಂ ೨೦೫. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಉತ್ತಮವಾದದ್ದು ಕ್ರಯ ೧ ಕ್ಕೆ ೭—೧೦—೦

ನಂ ೭೧೦. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಅತ್ಯುತ್ತಮವಾದದ್ದು ಕ್ರಯ ೧ ಕ್ಕೆ ೯—೭—೦.

ಮೇಲ್ಕಂಡ ಯಾವನಮೂನೆ ಫೌಂಟನ್‌ಪೆನ್‌ಗಳನ್ನು ತರಿಸಿಕೊಂಡರೂ ಅದರ ಜೊತೆಯಲ್ಲಿ ಪೆನ್ ಇಡತಕ್ಕ ಪೆಟ್ಟಿಗೆ ೧. ಜೇಬಿಗೆ ತಗಲಿಸತಕ್ಕ ಕ್ಲಿಪ್ ೧. ಶಾಯಿಹಾಕುವ ಗಾಜಿನ ಟ್ಯೂಬ್ ೧. ಶಾಯಿತುಂಬುವವಿಧ ಪ್ರಿಂಟಾಗಿರತಕ್ಕ ಚೀಟಿ ೧ ನ್ನೂ ಸಹ ರವಾನಿಸಲಾಗುತ್ತೆ

ರಖಂವಾರ್ ವಾಚ್ ಸರಪಣಿಗಳು.



ಈ ಪಕ್ಕದ ಚಿತ್ರದಲ್ಲಿ ಕಾಣಿಸಿರುವ ನಮೂನೆ ಅಚ್ಚಬೆಳ್ಳಿಯ ವಾಚ್ ಸರಪಣಿ ಯಾವ ರಖಂ ಬೇಕಾದರೂ ಕ್ರಯ ೧ಕ್ಕೆ ೩—೪—೦ ಮೇಲ್ಕಂಡ ರಖಂಮ್ನಿನಲ್ಲಿ ನಿಕ್ಕಲ್‌ಬೆಳ್ಳಿ ಸರಪಣಿ ಕ್ರಯ ೧ ಕ್ಕೆ ೦—೧೨—೦.

ಅಚ್ಚಬೆಳ್ಳೀ ಕೊರಳ ಸರಪಣಿ ಬಹಳ ನಾಜೋಕಾಗಿ ತಯಾರಿಸಿದ್ದು ೧ ಕ್ಕೆ ೧—೪—೧.

೧೮ ಕ್ಯಾರಟ್ಟು ಚಿನ್ನದ ಸರಪಣಿ ೧ ಕ್ಕೆ ೫—೮—೦.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್. ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೫—೦
ಸಟೀಕ ನಂದೀವ್ರತ	೦—೪—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೭ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್‌ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸ ಪುಸ್ತಕಗಳು

148

ಬಸವರಾಜವಿಜಯಂ— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧ ೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦ ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸೂಕ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ ವರ್ಷದ ಚಂದಾ ೨-೮-೦.

ಎಸ್. ಆರ್. ಕರಿಬಸವಶಾಸ್ತ್ರಿ,

ಗ್ರಂಥಪ್ರಚಾರಕಮಂಡಲಿ, ಮೈಸೂರು.

ಪ್ರಕಟನೆ.

ಪ್ರಿಂಟಿಂಗಾಫೀಸಿನವರು ಅಗತ್ಯವಾಗಿ ಗಮನಿಸತಕ್ಕದು.

ನಮ್ಮಲ್ಲಿ ಈ ಸ್ಟಾರ್ ಪತ್ರಿಕೆಯ ೧, ೨, ೩, ೬, ೭ ಮತ್ತೂ ೮ನೇ ಪುಟಗಳಲ್ಲುಪಯೋಗಿಸಲ್ಪಟ್ಟಿರುವ ಪೈಕ ಅಥವಾ ೧೨ ಪಾಯಿಂಟ್ ಅಕ್ಷರಗಳ ಮತ್ತೂ ಈ ಪ್ರಕಟನೆಗುಪಯೋಗಿಸಲ್ಪಟ್ಟಿರುವ ಬೂರ್ಜಿನ್ ಮಿನಿಯನ್ ಅಥವಾ ೧೪ ಪಾಯಿಂಟ್ ಅಕ್ಷರಗಳ ಮ್ಯಾಟ್ರಿಕ್ಸುಗಳೂ, ಅವುಗಳ ಮೌಲ್ಡುಗಳೂ ಇವನ್ನು ಎರಕವರೆಯುವ ಯಂತ್ರವೂ ಅದಕ್ಕೆ ಸಂಬಂಧಪಟ್ಟ ಲೈನ್ ಗೇಜ್ ಪೇಪರ್‌ಗೇಜ್ ಹೈಟ್‌ಗೇಜ್ ಡ್ರೆಸ್ಸಿಂಗ್ ಟೇಬಲ್ ಕರ್ನಿಂಗ್ ಮಿಷನ್ನು ಮುಂತಾದ ಸಾಮಾಗ್ರಿಗಳೂ ಸೂಪರ್‌ರಾಯಲ್ ಸೈಜನ್ನು ಪ್ರಿಂಟ್ ಮಾಡುವ ಸಿಲಿಂಡರ್ ಮಿಷನ್ನು ಸಹ ಮಾರಾಟಕ್ಕೆ ಸಿದ್ಧವಾಗಿವೆ. ಈ ಮಿಷನ್ನಿನಲ್ಲೇ ಈ ಸ್ಟಾರ್ ಪತ್ರಿಕೆಯು ಪ್ರಿಂಟುಮಾಡಲ್ಪಡುತ್ತಿರುವುದು. ಎರಕವರೆಯುವ ಮಿಷನ್ನು ಬಹಳ ಸ್ವಲ್ಪ ಕೆಲಸವನ್ನು ಮಾತ್ರ ಮಾಡಿ ಹೊಸದಾಗಿಯೇ ಇರುವುದು. ಇಷ್ಟಪಟ್ಟವರು ಇವುಗಳ ಬೆಲೆ ಮೊದಲಾದವನ್ನು ನಮಗೆ ಬರೆದು ತಿಳಿದುಕೊಳ್ಳಬಹುದಲ್ಲದೆ ಪ್ರತ್ಯಕ್ಷದಲ್ಲಿ ಬಂದು ನೋಡಬಹುದು.

ವೈ. ವಿರೂಪಾಕ್ಷಯ್ಯ,
ಪ್ರೊಪ್ರೈಟರ್
ಕ್ರಾಸ್ ಪ್ರೆಸ್, ಮೈಸೂರು.

ಯುದ್ಧವಾರ್ತೆ.

ಆಸ್ಟ್ರಿಯಾ ಮತ್ತೂ ರಷ್ಯಾ.

ಆಸ್ಟ್ರಿಯಾ ಹಂಗೇರಿಯಾವು ರಷ್ಯಾದಮೇಲೆ ಯುದ್ಧಾರಂಭಮಾಡಿರುವುದಾಗಿ ಪ್ರಕಟಿಸಿದೆ. ಸೆಂಟ್‌ಪೀಟರ್ಸ್‌ಬರ್ಗಿನಲ್ಲಿದ್ದ ಆಸ್ಟ್ರಿಯಾದ ರಾಯಭಾರಿಯು ಅಲ್ಲಿಂದ ಹೋಗಲು ಪ್ಪಣೆಯ ಚೀಟಿಯನ್ನು ಕೇಳಿರುತ್ತಾರೆ.

ರಷ್ಯಾ ಮತ್ತೂ ಜರ್ಮನಿ.

ರಷ್ಯನರ ೫೯೦೦ ಟನ್ ತೂಕವುಳ್ಳ ಸ್ಕೋಬೆಲ್ಡ್ ಎಂಬ ಯುದ್ಧದ ಕ್ರೂಜರಿಗೂ, ಜರ್ಮನರ ೩೪೪೮ ಟನ್ ತೂಕವುಳ್ಳ ಲಿಂಡೆ ಎಂಬ ಕ್ರೂಜರಿಗೂ ಚೈನಾರಾಜ್ಯದಲ್ಲಿ ಕಟ್ಟಿನಲ್ಲಿರುವ ವೀಹಾಯವೀ ಎಂಬಲ್ಲಿ ಕದನವಾಗಿ ಎರಡು ನಾವೆಗಳೂ ಮುಳುಗಿಹೋದುವು.

ಇಟಲಿಯ ಸ್ಥಿತಿಯು.

ಇಟಲಿಯ ಸರ್ಕಾರವು ಬ್ರಿಟಿಷ್ ಜನರ ವರ್ತನಕ್ಕಾಗಿ ತನ್ನ ಕೃತಜ್ಞತೆಯನ್ನು ತಿಳಿಯಿಸಿರುತ್ತದೆ. ಗ್ರೇಟ್ ಬ್ರಿಟನ್ನೂ ಮತ್ತೂ ಇಟಲಿಯೂ ಸಮಾಧಾನವನ್ನು ಪಡಿಸಲು ಬಹಳ ಸಾಹಸಪಟ್ಟಿರುತ್ತವೆ; ಮತ್ತೂ ಇಟಲಿಯು ತಾನು ತಟಸ್ಥವಾಗಿರುವೆನೆಂದು ಪ್ರಕಟಿಸಿರುತ್ತದೆ; ಇಟಲಿಯು ತನ್ನ ಸ್ನೇಹಿತರಿಗೆ ಸಹಾಯಮಾಡದಿದ್ದಲ್ಲಿ ಜರ್ಮನಿಯು ಅದರಮೇಲೆ ಯುದ್ಧಕ್ಕೆ ನಿಲ್ಲುವುದೆಂದು ಬೆದರಿಕೆಯ ಹಾಕಿರುವುದಾಗಿ ಜರ್ಮನಿಯ ಪತ್ರಿಕೆಗಳು ತಿಳಿಸುತ್ತವೆ.

ಆಸ್ಟ್ರಿಯಾ ಮತ್ತೂ ರಷ್ಯಾ.

ಆಸ್ಟ್ರಿಯಾದವರು ಡಾನ್ಯೂಬು ನದಿಯನ್ನು ದಾಟಲು ೩ ಆವೃತ್ತಿ ಪ್ರಯತ್ನಪಟ್ಟು ಹಿಮ್ಮೆಟ್ಟಿಸಲ್ಪಟ್ಟರು.

ಸ್ಪೈಯಿನು ದೇಶವು ತಾಟಸ್ಥ್ಯವನ್ನು ವಹಿಸಿರುವುದಾಗಿ ಪ್ರಕಟಿಸಿದೆ.

ಭರತಖಂಡದ ಸಹಾಯ.

ದೇಶೀಯ ಪ್ರಭುಗಳಾದ ಇಡಾರಿನ ಮಹಾರಾಜರು, ಸಚಿನ್ನಿನ ನವಾಬರು, ಪಾಲನಪುರದ ನವಾಬರು, ಕಚ್ಚಿನ ರಾವ್‌ಜಿಯವರು, ಭಾವನಗರದ ಮಹಾರಾಜರು, ಮತ್ತೂ ಲಿಂಬ್ಡಿಯ ಠಾಕೂರ್ ಸಾಹೇಬರು ತಮ್ಮ ಯಾವತ್ತು ಶಕ್ತ್ಯಾ ಸೇನಾ ಸಹಾಯವನ್ನೂ ಮಾಡಲು ಸಿದ್ಧರಾಗಿದ್ದೇವೆಂದು ಬೊಂಬಾಯಿ ಗೌರ್ನರಿಗೆ ತಿಳಿಯಿಸಿರುವರು.

ಬರೋಡಾ ಮಹಾರಾಜರವರು ತಮ್ಮ ಸ್ವಸಾಹಾಯ್ಯವನ್ನೂ ಸಂಸ್ಥಾನದ ಎಲ್ಲತೆರದ ಸಾಹಾಯ್ಯವನ್ನೂ ಮಾಡಲೊಪ್ಪಿ ಬರೆದುಕೊಂಡಿರುವರು.

ಕಲ್ಕತ್ತಾದ ಪೋಲೀಸು ಕೋರ್ಟಿನ ಪ್ಲೀಡರುಗಳು ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ದಳಪತಿತ್ವದಲ್ಲಿ ವಾಲಂಟಿಯರ ಸೇನೆಯಾಗೇರ್ಪಡಲಪ್ಪಣೆಯಾಗಬೇಕೆಂದು ಬಂಗಾಳಾ ಸರ್ಕಾರದ ಮುಖ್ಯ ಸೆಕ್ರೆಟರಿಯವರಿಗೆ ಬರೆದುಕೊಂಡಿರುವರು.

ಸೇನೆಯ ಚಲನೆಯ ವಿಚಾರದಲ್ಲಿ ಇಂಡ್ಯಾ ಸರ್ಕಾರದ ಪ್ರಕಟನೆ.

ಜರ್ಮನಿಯಮೇಲೆ ಯುದ್ಧಮಾಡುವ ವಿಚಾರವು ಈ ಬೆಗೆ ಪ್ರಕಟಗೊಂಡಿರುವುದರಿಂದಲೂ, ಸೇನೆಯ ಮತ್ತೂ ನಾವೆಗಳ ಚಲನೆಯ ವಿಚಾರವು ಬಹಳ ರಹಸ್ಯವಾಗಿರಬೇಕಾಗಿರುವುದರಿಂದಲೂ ಸರ್ಕಾರದಿಂದ ಪ್ರಕಟವಾದ ಹೊರತು ಯಾರಾದರೂ ಅವನ್ನು ಪ್ರಕಟಿಸಿದಲ್ಲಿ ಶಿಕ್ಷೆಗೆ ಗುರಿಯಾಗುವರು. ಅಲ್ಲದೆ ಬ್ರಿಟಿಷ್ ಪ್ರಜೆಗಳು ನಮ್ಮ ಶತ್ರುಗಳ ಯಾವವಿಧವಾದ ಸಂಬಂಧವನ್ನೂ ಬೆಳೆಸಕೂಡದು; ಅಂದರೆ ವ್ಯಾಪಾರವಮಾಡಕೂಡದು; ಮತ್ತೂ ಸಾಲವನ್ನು ತೆಗೆದುಕೊಳ್ಳುವುದನ್ನಾಗಲಿ ಅಥವಾ ಕೊಡುವುದನ್ನಾಗಲಿ ನಡೆಸಲಾಗದು. ಹಾಗೂ ಇಂಗ್ಲೆಂಡು ಐರ್ಲೆಂಡು ಮತ್ತೂ ಸ್ಕಾಟ್‌ಲೆಂಡುಗಳಿಂದ ಜನರ ಮತ್ತೂ ಪ್ರಾಣಿಗಳ ಆಹಾರ್ಯ ಪದಾರ್ಥಗಳನ್ನು ತರಿಸಬಾರದು.

ಬೊಂಬಾಯಿಯಲ್ಲಿ ಸುಳ್ಳುಸುದ್ದಿಗಳು.

ಇಂಗ್ಲೀಷ್ ತೀರಗಳಾಚೆ ನೌಕಾಯುದ್ಧಗಳು ನಡೆಯುತ್ತಿರುವುದಾಗಿಯೂ, ಬೊಂಬಾಯಿ ದಡದಿಂದಾಚೆ ಕೊಂಚ ದೂರದಲ್ಲಿಯೇ ಜರ್ಮನಿಯ ಕ್ರೂಜರು ಈಸ್ಟ್ ಆಫ್ರಿಕಾದಿಂದ ಬಂದಿರುವುದಾಗಿಯೂ ಪೊಳ್ಳುಸುದ್ದಿಯು ಹರಡಿರುವುದು. ಈ ಸ್ಥಳದಲ್ಲಿ ಪ್ರಬಲವಾದ ನೌಕಾಸೇನೆಯು ಕಾವಲಿರುವುದರಿಂದ ಶತ್ರುಗಳ ಹಡಗು ಬರುವುದು ಅಸಂಭವವು.

ರೂಪಾಯಿಗಾಗಿ ಜನರ ಆತುರ.

ಬೊಂಬಾಯಿನ ನೋಟಿನ ಆಫೀಸ್ ಬಳಿ ಜನರು ತಂಡತಂಡವಾಗಿ ಬಂದು ನೋಟನ್ನು ಕೊಟ್ಟು ರೂಪಾಯನ್ನು ತೆಗೆದುಕೊಳ್ಳುತ್ತಿರುವರು. ಕಳೆದ ಶುಕ್ರವಾರ ೩ ಲಕ್ಷ ರೂಪಾಯಿಗಳು ಕೊಡಲ್ಪಟ್ಟಿತು. ಸರ್ಕಾರಿಯ ಪ್ರೋನೋಟುಗಳ ಬೆಲೆಯು ರೂ. ೯೩॥ ಇಂದ ೯೩ ವರೆಗಿದೆ. ಈ ತಾ॥ ೧೩ ರಲ್ಲಿ ಬೊಂಬಾಯಿ ನಿವಾಸಿಗಳು ತಮ್ಮ ರಾಜಭಕ್ತಿಯನ್ನು ಪ್ರದರ್ಶಿಸುವ ಬಗೆಗೆ ಷರೀಫರ ಅಧ್ಯಕ್ಷತೆಯಲ್ಲಿ ಸಭೆಸೇರತಕ್ಕವರಾಗಿರುವರು.

ಆಗಾಖಾನರವರು ತಮ್ಮ ಶಿಷ್ಯಮಂಡಲಿಗೆ, ಈ ಯುದ್ಧಸಮಯದಲ್ಲಿ ಸರ್ಕಾರಕ್ಕೆ ಕೈಲಾದ ಸಹಾಯ್ಯವಮಾಡತಕ್ಕದೆಂದು ತಂತ್ರಿಯವಾರ್ತೆಯಿಂದ ತಿಳಿಸಿದುದರಮೇಲೆ ಅವರೆಲ್ಲರೂ ಸರ್ಕಾರದಪ್ಪಣೆಯಮೇರೆಗೆ ಸೇವೆಮಾಡಲು ಸಿದ್ಧರಾಗಿದ್ದೇವೆಂದು ವೈಸ್‌ರಾಯರಿಗೆ ಟೆಲಿಗ್ರಾಫ್ ಮಾಡಿರುವರು.

ಪಂಜಾಬಿನಲ್ಲಿ ಜನರೆಲ್ಲರೂ ಸಭೆಸೇರಿ ಗ್ರೇಟ್‌ಬ್ರಿಟನ್ನಿಗೆ ತಾವು ಸಹಾಯಮಾಡಲು ನಿರ್ಧರಿಸಿರುವ ವಿಚಾರವನ್ನು ತಿಳಿಸತಕ್ಕವರಾಗಿದ್ದರು. ಇಲ್ಲಿಯ ನೋಟಿನ ಆಫೀಸಿಗೆ ಜನರು ಬಂದು ನೋಟನ್ನು ಕೊಟ್ಟು ಹಣವನ್ನು ತೆಗೆದುಕೊಳ್ಳುವುದು ಹೆಚ್ಚಾಗಿದೆ. ೧-೨ ದಿನಗಳಲ್ಲಿ ೧೫೦೦೦೦ ರೂ. ಬೆಲೆಯ ಭಂಗಾರವು ಕೊಡಲ್ಪಟ್ಟಿತು. ಮಾರ್ವಾಡಿಗಳು ಒಟ್ಟಿಗೆ ೧ ಲಕ್ಷದ ೫೦ ಸಾವಿರ ರೂ. ಗೆ ಮೌಲ್ಯವುಳ್ಳ ಭಂಗಾರವನ್ನು ಕೊಂಡುಕೊಳ್ಳುವುದು ಅಧಿಕವಾಗಲು, ಕೊಡುವುದು ನಿಲ್ಲಿಸಲ್ಪಟ್ಟಿತು. ಸರ್ಕಾರಿಯ ಪ್ರೋನೋಟುಗಳಂತೆ ನೋಟುಗಳ ಬೆಲೆಯೂ ಕಡಿಮೆಯಾಗುವುದೇ ? ಎಂದು ಜನರು ಕೇಳುತ್ತಿರುವರು.

ಅನ್ಯಾಯವಾಗಿ ಆಹಾರ್ಯಪದಾರ್ಥಗಳ ಬೆಲೆಯನ್ನು ಹೆಚ್ಚಿಸುವುದನ್ನೂ, ನೋಟುಗಳ ಬಟ್ಟವನ್ನು ಹೆಚ್ಚಿಸುತ್ತಿರುವುದನ್ನೂ ತಪ್ಪಿಸುವ ಬಗೆಗೆ ತಕ್ಕ ಏರ್ಪಾಟನ್ನು ಮಾಡಲು ಬಂಗಾಳಾ ಸರ್ಕಾರದವರನ್ನು ಪ್ರಾರ್ಥಿಸಬೇಕೆಂದು ಕಲ್ಕತ್ತಾದ ವರ್ತಕಸಂಘದವರು ನಿರ್ಧರಿಸಿರುವರು. ಕಲ್ಕತ್ತಾದ ಮಾರವಾಡಿಗಳಲ್ಲನೇಕರು ಯುದ್ಧಕ್ಕೆ ಜನರೆಲ್ಲರೂ ಸನ್ನದ್ಧರಾಗಬೇಕೆಂದು ನಿರ್ಬಂಧಶಾಸನವು ತರಲ್ಪಡುವುದೆಂದು ಭಯಪಟ್ಟು ತಮ್ಮಲ್ಲಿದ್ದ ನೋಟು ಪ್ರೋನೋಟುಗಳನ್ನು ಮುರಿಸಿ ಭಂಗಾರವನ್ನು ಕೊಂಡುಕೊಂಡು ತಮ್ಮ ಹೆಂಡತಿ ಮಕ್ಕಳೊಡನೆ ಸ್ವದೇಶಕ್ಕೆ ಹೋದರು.

ಲಂಡನ್ ಆಗಸ್ಟ್ ೭.—ಇಂಗ್ಲೆಂಡಿನ ಆರ್ಥಿಕ (ಹಣದ) ಸ್ಥಿತಿಯು ತೃಪ್ತಿಕರವಾಗಿರುತ್ತದೆಂದು ಬ್ಯಾಂಕುಗಳು ತೆರೆದಮೇಲೆ ತಿಳಿದುಬಂದಿರುವುದು. ಜನರು ಭಂಗಾರವನ್ನು ಕೇಳುತ್ತಿರುವ ಸೂಚನೆಯಿಲ್ಲವು. ಮೊದಲಿನಂತೆಯೇ ವರ್ತಕತನವು ನಡೆಯುತ್ತಿರುವುದು. ಅನುಕೂಲವಾದರೆ, ನಾಳೆಯ ಬ್ಯಾಂಕಿನ ದರವು ೧೦೦ ಕ್ಕೆ ೫ ರಂತೆ ಇರುವುದು ಎಂದು ಲಾಯಿಡ್ ಜಾರ್ಜ್‌ರವರು ಕಾಮನ್ಸ್ ಸಭೆಯಲ್ಲಿ ತಿಳಿಸಿದರು.

ಪ್ರಿನ್ಸ್ ಆಫ್ ವೇಲ್ಸ್‌ರವರು ಗ್ರೆನೇಡಿಯರ್ ಗಾರ್ಡ್ ಸೇನೆಯಲ್ಲುದ್ಯೋಗಮಾಡಲು ಕಳೆದ ಸೋಮವಾರ ಸೇರಿದರು.

ವರ್ತಮಾನವನ್ನು ಕೊಡುವ ಆಫೀಸು:—ನಾವೆಯ ಮತ್ತೂ ಸೇನೆಯ ಸಂಬಂಧವಾದ ವರ್ತಮಾನವನ್ನು ತಿಳಿಯಿಸುವುದಕ್ಕಾಗಿ ಒಂದು ಸರ್ಕಾರಿಯಾಫೀಸು ಏರ್ಪಡಿಸಲ್ಪಟ್ಟಿತು.

ಬ್ರಿಟಿಷರ ಎಣ್ಣೆಯ ಹಡಗು:—೩೦೦೦ ಟನ್ನು ಸೀಮೆಯೆಣ್ಣೆಯನ್ನು ತುಂಬಿದ್ದ ಬ್ರಿಟಿಷರ ಹಡಗು ಎಲ್ಬೆ ಎಂಬಲ್ಲಿ ಬಾಂಬು ಹಾರಿಸಲ್ಪಟ್ಟು ಮುಳುಗಿಸಲ್ಪಟ್ಟಿತು.

ಆಂಗ್ಲೇಯರ ಆಹಾರ್ಯಪದಾರ್ಥಗಳು:—ಗೋಧಿಯು ಹೊರಗಿನಿಂದ ತರಿಸಲ್ಪಡದೆ ಗ್ರೇಟ್ ಬ್ರಿಟನ್ನಿನಲ್ಲೇ ೪ ತಿಂಗಳವರೆಗೂ ಸಾಕಾಗುವಷ್ಟು ದೊರಕುವುದೆಂದು ಸರ್ಕಾರದವರು ಪ್ರಕಟಿಸಿರುವರು.

ಜರ್ಮನಿಯ ವಿಶ್ರಾಂತಿಯು:— ಜರ್ಮನಿಯವರು ೨೪ ಗಂಟೆಯ ವಿಶ್ರಾಂತಿಯನ್ನು ಕೋರಿರುತ್ತಾರೆ. ಮತ್ತೂ ತಮ್ಮಕಡೆ ೫೫೦೦೦ ಅಶ್ವಸೇನೆಯಿರುವುದಾಗೊಪ್ಪಿಕೊಂಡಿರುತ್ತಾರೆ, ಎಂದು ಬೆಲ್ಜಿಯಮ್ಮಿನ ರಾಜಧಾನಿಯಾದ ಬ್ರುಸೆಲ್ಲಿನಿಂದ ವರ್ತಮಾನಬಂದಿರುವುದು.

ಕಿಚನರ್‌ರವರ ಎಚ್ಚರಿಕೆ:—ಪ್ರಜೆಗಳು ಆಯುಧಧಾರಿಗಳಾಗಿರಬೇಕೆಂದೆಚ್ಚರಿಸಿರುವರು. ಈ ಎಚ್ಚರಿಕೆಯು ಒಳ್ಳೆಯ ಪರಿಣಾಮವನ್ನುಂಟುಮಾಡಿರುವುದು. ಕೆಲವರನ್ನು ಸೇನೆಗೆ ಸೇರಿಸಿಕೊಳ್ಳಲು ಏಜನ್ಸಿಯು ಸ್ಥಾಪಿಸಲ್ಪಡುತ್ತಿರುವುದು.

ಐರ್ಲೆಂಡು ವಾಲಂಟಿಯರುಗಳು:—ಐರ್ಲೆಂಡು ವಾಲಂಟಿಯರುಗಳ ವಿಚಾರವಾಗಿ ಎಡ್ವರ್ಡ್ ಕಾರ್ಸನರು, ಎಫ್. ಇ. ಸ್ಮಿತ್‌ರವರು, ರೆಡ್ಮೆಂಡ್‌ರವರು, ಡಿಲ್ಲಾನರವರು, ಡೇರಿಪಿನುರವರು ಕಿಚನರ್‌ರವರನ್ನು ಕಂಡು ಪ್ರಸ್ತಾಪಿಸಿದರು.

ಆಸ್ಟ್ರೇಲಿಯಾದ ಸೇನಾಸಹಾಯ್ಯ:— ಆಸ್ಟ್ರೇಲಿಯಾದವರು ಕಳುಹಿದ ೩೦೦೦೦ ಮಂದಿ ಸೈನಿಕರ ಸಾಹಾಯ್ಯವನ್ನು ಸಾಮ್ರಾಜ್ಯ ಸರ್ಕಾರದವರು ಅಂಗೀಕರಿಸಿದರು.

ಜರ್ಮನಿಯವರು ಮ್ಯೂಸುನದಿಯನ್ನು ದಾಟಿದುದು.

ಬ್ರುಸಿಲ್ಸ್; ಆಗಸ್ಟ್ ತಾ॥ ೮:—ಜರ್ಮನಿಯ ಅಶ್ವಸೇನೆಯೊಂದು ಲೀಗ್‌ಪಟ್ಟಣದುತ್ತರಭಾಗದಲ್ಲಿ ಮ್ಯೂಸುನದಿಯನ್ನು ದಾಟಿತು. ಆಗ ಬೆಲ್ಜಿಯಮ್ಮಿನ ಅಶ್ವಸೇನೆಯು ಶತ್ರುಸೇನೆಯಮೇಲೆ ಬಿದ್ದು ಒಬ್ಬರನ್ನೂ ಬಿಡದೆ ನಾಶಪಡಿಸಿತು.

ಇಟಲಿ ರಾಯಭಾರಿಯ ಆಫೀಸಿನ ಬಳಿ ಜನರ ಉತ್ಸಾಹವು:—ನಿನ್ನೆಯ ದಿನ ಲಂಡನ್ನಿನಲ್ಲಿರುವ ಇಟಲಿಯ ರಾಯಭಾರಿಯ ಆಫೀಸಿನ ಬಳಿ ೫೦೦೦ ಮಂದಿ ಜನರು ಸೇರಿ ಕರತಾಳಧ್ವನಿಯನ್ನು ಮಾಡಿ ಬ್ರಿಟಿಷರ ಮತ್ತೂ ಇಟಲಿಯವರ ಪತಾಕೆಗಳನ್ನು ಹಿಡಿದು ಕೋಲಾಹಲವನ್ನು ಮಾಡಿದರು.

ಇಟಲಿಯವರು ಫ್ರಾನ್ಸು ಇಂಗ್ಲೆಂಡು ರಾಷ್ಟ್ರಗಳ ಕೂಡ ಸೇರಿದರೆಂದು ವಾರ್ತಾಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ಐರ್ಲೆಂಡು ವಾಲಂಟಿಯರುಗಳನ್ನು ಸೇನೆಗೆ ಸೇರಿಸಿಕೊಳ್ಳುವ ಭಾಗದಲ್ಲಿ ಹಾಲ್ಡೇನು ಮತ್ತೂ ಕಿಚನರ್ ಇವರುಗಳು ಸದಭಿಪ್ರಾಯಪಟ್ಟಿರುವರು.

ಪ್ರಿನ್ಸ್‌ಆಫ್‌ವೇಲ್ಸರ ಫಂಡು:—ಇವರು ಯುದ್ಧದಲ್ಲಿ ಪೆಟ್ಟುತಿಂದ ಇಂಗ್ಲಿಷ್ ಸೈನಿಕರ ಮತ್ತೂ ಅವರ ಕುಟುಂಬದ ಸಾಹಾಯ್ಯಾರ್ಥವಾಗಿ ಒಂದು ಫಂಡನ್ನೇರ್ಪಡಿಸಿ ಅದಕ್ಕೆ ತಾವೇ ಪ್ರಜರರಾಗಿರುವರು. ಈ ಫಂಡಿಗೆ ಜಾರ್ಜ್ ಪ್ರಭುಗಳು ೫೦೦೦ ಮೇರಿ ರಾಣಿಯವರು ೧೦೫೦, ಯುವರಾಜರು ೩೦೦, ಅಲೆಕ್ಸಾಂಡ್ರಾ ರಾಣಿಯವರು ೫೫೯, ಒಂದನೆಯ ಪ್ರಾಣರಕ್ಷಕ ಸೇನೆಯು ೧೮೦೦೦ ಜಾರ್ಜಿಕೋಟ್ಸ್‌ರವರು ೫೦೦೦, ಆಸ್ಟನ್‌ರವರು ೨೫೦೦೦, ರಾತ್ಸ್‌ಚೈಲ್ಡ್‌ರವರು ೧೦೦೦೦, ವಿಲಿಯಂ ಮಾರಿಸ್‌ರವರು ೧೦೦೦೦, ಸಾಲಿಸ್‌ಬರಿಯವರು ಮೊದಲಾದ ೪ ಜನರು ಪ್ರತಿಯೊಬ್ಬರೂ ೫೦೦೦, ಪೌನುಗಳ ಪ್ರಕಾರ ಚಂದಾ ಕೊಟ್ಟಿರುವರು.

ಲಂಡನ್ನಿನಲ್ಲಿರುವ ಭಾರತೀಯರು:—ಸರ್ ಮಂಚರ್ಜಿ ಭಾವನಗರಿಯವರು, ಸರ್ ಕೃಷ್ಣಗುಪ್ತರವರು, ರರ್ತ ತಾತಾಯವರು,—"ಹಿಂದೂದೇಶದ ಪರಿಪಾಲನ ವಿಚಾರದಲ್ಲಿ ದೊರೆತನದವರಿಗೂ, ನಮಗೂ ಭಿನ್ನಾಭಿಪ್ರಾಯಗಳಿದ್ದಾಗ್ಯೂ ಯುದ್ಧಸಮಯದಲ್ಲಿ ಭಾರತೀಯರೆಲ್ಲರೂ ಚಕ್ರಾಧಿಪತ್ಯಕ್ಕೆ ಸಹಾಯವನ್ನು ಮಾಡುವರು,'' ಎಂದು ಚಕ್ರವರ್ತಿಯವರಿಗರಿಕೆಯನ್ನು ಮಾಡಬೇಕಾಗಿ ಸ್ಟೇಟ್ ಸೆಕ್ರಟರಿ ಕ್ರೂಪ್ರಭುಗಳನ್ನು ಪ್ರಾರ್ಥಿಸಿದರು.

ಕಾರ್ಖ್ಯಾಲಯವು ಮುಚ್ಚಲ್ಪಟ್ಟಿತು:—ಲಂಕಾಷೈರಿನಲ್ಲಿದ್ದ ಹತ್ತಿಯ ಕಾರ್ಖ್ಯಾಲಯವು ಯುದ್ಧಕ್ಕಾಗಿ ಮುಚ್ಚಲ್ಪಟ್ಟಿತು.

ಕ್ಯಾಪ್ಟನ್‌ವೆಬ್ಸ್.—ಈವರೆಗೆ ದಕ್ಷಿಣಾಫ್ರಿಕಾದಲ್ಲಿ ಸೈನಿಕೋದ್ಯೋಗದಲ್ಲಿದ್ದ ಕ್ಯಾಪ್ಟನ್‌ವೆಬ್ಸ್‌ರವರು ಲಂಡನ್ನಿನಲ್ಲಿ ಒಂದು ಹೊಸ ಸೇನೆಯನ್ನು ಏರ್ಪಡಿಸುತ್ತಿರುವರು.

ಜರ್ಮನಿ.

ಜರ್ಮನಿಯವರ ಪರಾಕ್ರಮವು:—ಬುಧವಾರದದಿವಸ ೮೦೦೦೦ ಜರ್ಮನಿಯ ಸೇನೆಯು ಲೀಜ್‌ಪಟ್ಟಣವನ್ನು ಮುತ್ತಿಗೆಹಾಕಿತ್ತು. ಪಟ್ಟಣದೊಳಗೆ ೩೦೦೦೦ ಯುದ್ಧಭಟರಿದ್ದರು.

ಜರ್ಮನಿಯವರು ಬಿಟ್ಟುಹೋದರು:—ಲೀಜ್ ಪಟ್ಟಣದಲ್ಲಿ ನೆಮ್ಮದಿಯುಂಟಾಗಿರುವುದು. ಸದ್ಯದಲ್ಲಿ ಜರ್ಮನಿಯವರು ಬಿಟ್ಟುಹೋದರು.

ಜರ್ಮನಿ ಮತ್ತೂ ಆಸ್ಟ್ರಿಯಾದವರು ಇಟಲಿಯು ತಮ್ಮ ಕೂಡ ಸೇರಿ ಯುದ್ಧಮಾಡಬೇಕೆಂದು ನಿರ್ಬಂಧಪಡಿಸುತ್ತಿರುವುದಲ್ಲದೆ ಇದಕ್ಕಾಗಿ ಇಟಲಿಗೆ ಕೊಂಚ ದೇಶವನ್ನುಸಹ ಕೊಡುತ್ತೇವೆಂದು ಹೇಳಿದುವು. ಆದರೆ ಇಟಲಿಯು ಫ್ರಾನ್ಸಿನಮೇಲೂ, ಇಂಗ್ಲೆಂಡಿನಮೇಲೂ ಯುದ್ಧಮಾಡುವುದು ತನ್ನಪ್ರಜೆಗಳಿಗಿಷ್ಟವಿಲ್ಲವು ಎಂದುತ್ತರವನ್ನು ಕೊಟ್ಟಿತು. ನಿರ್ಬಂಧವು ಅನೇಕವಾಗಿದ್ದರೂ ಇಟಲಿಯ ಅನೇಕ ಸ್ಥಳಗಳಲ್ಲಿ ಜನರುತ್ಸಾಹವನ್ನು ಪ್ರದರ್ಶಿಸಿದರು. ಈ ಸನ್ನಾಹದಲ್ಲಿ ಜರ್ಮನಿಯವರ ಕಠಿನಪದ್ಧತಿಗೆ ವಿರೋಧವಾಗಿ ಇಟಲಿಯವರು ಮತ್ತೂ ಇಂಗ್ಲೆಂಡಿನವರು ಒಗ್ಗಟ್ಟಾಗಿರುವರು.

ಜರ್ಮನ್ ಚಕ್ರವರ್ತಿಯವರ ಪ್ರಕಟನೆಯು.

ನಾವು ಶಾಂತಿಯನ್ನು ವಹಿಸಿರುವಲ್ಲಿ ನಮ್ಮ ವಿರೋಧಿಗಳು ನಮ್ಮ ಮೇಲೆ ಬಿದ್ದರು ನವೆಮ್ಬರಮೇಲೆ ಉಳಿದ ಪ್ರಪಂಚದವರೆಲ್ಲ ಬಿದ್ದರೂ ನಾವು ಕಾದಾಡುವೆವು.

ಜರ್ಮನಿ ಬೆಲ್ಜಿಯಮ್ಮಿನ ಯುದ್ಧವು.

ಬರ್ಲಿನ್ನು, ಅಗಸ್ಟ್ ತಾ॥ ೭ —ಜರ್ಮನಿಯ ಸೇನೆಯು ಬೆಲ್ಜಿಯಂ ದೇಶದಲ್ಲಿ ಮಾಡಿದ ಕೃತ್ಯವನ್ನು ಕುರಿತು ಜರ್ಮನಿ ಚಕ್ರವರ್ತಿಯವರು ಪ್ರಕಟಿಸಿರುವುದೇನೆಂದರೆ:—ಬುಧವಾರದದಿವಸ ಜರ್ಮನಿಯ ಸೇನೆಯು ಬೆಲಜಿಯಂ ಸರಹದ್ದಿನಲ್ಲಿ ಕಾದಾಡಿದರು. ಕೆಲ ಜರ್ಮನಿಯ ಸೈನಿಕರು ಲೀಜುಪಟ್ಟಣವನ್ನು ಅತಿಧೈರ್ಯದಿಂದ ಪ್ರವೇಶಿಸಿದರು. ಪಟ್ಟಣದೊಳಗಿದ್ದ ಬೆಲ್ಜಿಯಂ ಸೇನಾನಾಯಕನನ್ನು ಹಿಡಿದುಕೊಳ್ಳಲು ಜರ್ಮನಿಯ ಅಶ್ವಸೇನೆಯವರು ಪ್ರಯತ್ನಿಸಲು, ಸೇನಾನಾಯಕನು ಓಡಿಹೋದನು. ಲೀಜ್‌ಪಟ್ಟಣದ ಕೋಟೆಯನ್ನು ಹಿಡಿದುಕೊಳ್ಳಲು ಜರ್ಮನಿಯ ಸೇನೆಯು ಪ್ರಯತ್ನಿಸಿತು. ಆದರೆ ಕೋಟೆಯು ನವೀನರೀತಿಯಿಂದ ಕಟ್ಟಲ್ಪಟ್ಟಿರುವುದರಿಂದ ಅವರ ಪ್ರಯತ್ನವು ಸಾಗಲಿಲ್ಲವು. ಜರ್ಮನಿಯ ಸೇನೆಯು ಇನ್ನೂ ಬೆಲ್ಜಿಯಂ ಸೇನೆಯೊಡನೆ ಕಾದಾಡುತ್ತಿರುವುದು. ನಾವು ಬೆಲ್ಜಿಯಂ ಕೋಟೆಯನ್ನು ಹಿಡಿಯುವೆ ಹೋದಮಾತ್ರಕ್ಕೇ ಸೇನೆಯನ್ನುಹಿಡಿಯಲಾರದೆ ಓಡಿಹೋದೆವೆಂದು ಶತ್ರುಪಕ್ಷದ ವೃತ್ತಪತ್ರಿಕೆಗಳು ಪ್ರಕಟಿಸಿದುವು. ಇಷ್ಟುಮಾತ್ರದಿಂದ ಮುಂದಾಗುವ ದೊಡ್ಡಯುದ್ಧಕ್ಕೆ ಅಪೋಹವಿಲ್ಲವು. ನಮ್ಮ ಸೇನೆಯು ಅಸಮಾನಶೌರ್ಯದಿಂದ ಕಾದಾಡುತ್ತಿರುವುದು. ಈ ರೀತಿ ಶೌರ್ಯದಿಂದ ಕಾದಾಡಿದ ಸೇನೆಯು ಬೇರೊಂದಿಲ್ಲವೆಂದು ಯುದ್ಧದ ಚರಿತ್ರೆಯಿಂದ ಕಂಡುಬರುತ್ತದೆ

ಲೀಜುಯುದ್ಧದಲ್ಲಿ ಜರ್ಮನಿಯವರು ತೋರಿಸಿದ ಪರಾಕ್ರಮವು.

ಬರ್ಲಿನ್; ಆಗಸ್ಟ್ ತಾ॥ ೮.—ಜರ್ಮನಿಯ ಸೈನಿಕರು ಲೀಜುಪಟ್ಟಣದಲ್ಲಿ ಅನುಪಮಾನಧೈರ್ಯವನ್ನು ತೋರಿಸುತ್ತಿರುವರು. ಮತ್ತೂ ೧೮೭೦ ನೆಯ ಸಂವತ್ಸರದಲ್ಲಿ ಕಾದಾಡಿದಂತೆ ಅತಿಸಾಮರ್ಥ್ಯದಿಂದ ಯುದ್ಧಮಾಡುತ್ತಿರುವರು. ಜರ್ಮನಿ ಸೈನಿಕರಲ್ಲಿ ಪೆಟ್ಟನ್ನು ತಿಂದವರಿಗಿಂತಲೂ ಸತ್ತವರೇ ಬಹಳ ಜನ.

ಜರ್ಮನಿಯವರ ಆಯುಧವು ಕಿತ್ತುಕೊಳ್ಳಲ್ಪಟ್ಟಿತು

ಲಂಡನ್ ಆಗಸ್ಟ್ ತಾ॥ ೭.—ಲಂಡನ್ನು ತೋಪರುಪಟ್ಟಣಗಳಲ್ಲಿದ್ದ ಕೆಲ ಜರ್ಮನಿಜನರ ಆಯುಧಗಳನ್ನೂ ಇತರ ಸಾಮಗ್ರಿಗಳನ್ನೂ ಇಂಗ್ಲೀಷು ಸರ್ಕಾರದವರು ಕಿತ್ತುಕೊಂಡರು. ಹಡಗಿನ ಮೇಲಿದ್ದ ಕೆಲ ಜರ್ಮನಿಯ ರಿಜರ್ವ್ ಸೈನಿಕರನ್ನು ಇಂಗ್ಲೀಷ್ ಸೈನಿಕರು ಹಿಡಿದು ಹಾರ್ಸ್‌ದಲ್ಲೂ ಇತರ ಪ್ರದೇಶಗಳಲ್ಲೂ ಸೆರೆಯಿಟ್ಟಿರುವರು.

ಬೆಲಜಿಯನರ ಧೈರ್ಯವು.

ಲಂಡನ್ ಆಗಸ್ಟ್ ತಾ॥ ೭.—ಬೆಲಜಿಯಂರನ್ನೂ ಡಚ್ಚಿನವರನ್ನೂ ಹಾಲೆಂಡು ಬೆಲಜಿಯಂದೇಶಗಳಲ್ಲಿ ಎಲ್ಲರೂ ಮೆಚ್ಚುತ್ತಿರುವರು. ಯುದ್ಧವನ್ನು ಕಣ್ಣಾರ ನೋಡಿದವರು ಬೆಲ್ಜಿಯಂಸೈನಿಕರು ಅತಿಧೈರ್ಯದಿಂದ ಕಾದಾಡಿದರೆಂದು ಹೇಳುತ್ತಿರುವರು. ಏಕೆರ್ ಎಂಬಲ್ಲಿ ಡಚ್ಚಿನವರಿಗೂ ಸೆಂಟ್‌ವಿನೆಸ್ ಎಂಬಲ್ಲಿ ಬೆಲ್ಜಿಯಂ ಅಧಿಕಾರಿಗೂ ಜರ್ಮನಿಯ ಸೈನಿಕರಲ್ಲಿ ಕೆಲರು ಸಿಕ್ಕಿಬಿದ್ದರು.

ಜರ್ಮನಿಯಲ್ಲಿ ಬ್ರಿಟಿಷ್‌ರಾಯಭಾರಿಯ ಆಫೀಸನ್ನು ಒಡೆದುಹಾಕಿದುದು.

ಬರ್ಲಿನ್ ಆಗಸ್ಟ್ ತಾ॥ ೭.—ಜರ್ಮನಿಯವರಿಗೂ, ಇಂಗ್ಲೆಂಡಿಗೂ ಯುದ್ಧವು ನಡೆಯುವುದೆಂದು ಪ್ರಕಟವಾದಾಗ ಜರ್ಮನಿಯ ಜನರು ಬ್ರಿಟಿಷ್‌ರಾಯಭಾರಿಯ ಆಫೀಸ್‌ಕಟ್ಟಡವನ್ನು ಮುತ್ತಿಗೆ ಹಾಕಿ ಬಾಗಲು ಕಿಟಕಿಗಳ ಕದವನ್ನೊಡೆದುಹಾಕಿದರು. ೪೦ ಬ್ರಿಟಿಷರು ಕೋಟೆಯೊಳಗೆ ಸೆರೆ ಇಡಲ್ಪಟ್ಟಿರುವರು.

ಲಂಡನ್ ತಾ॥ ೮.—ಜರ್ಮನಿಯ ಗೋಯಿಬೆನ್ ಮತ್ತೂ ಬ್ರೆಸಲು ಎಂಬ ಕ್ರೂಜರುಗಳು ವಾದ್ಯಮಾಡಿಕೊಂಡು ಮೆಡಿಟರೇನಿಯನ್ ಸಮುದ್ರದಲ್ಲಿ ಮೆಸಿನಾ ಎಂಬ ಸ್ಥಳವನ್ನು ಬಿಟ್ಟು ಹೊರಟವು.

ಫ್ರಾನ್ಸು ಜರ್ಮನಿ.

ಫ್ರೆಂಚಿನವರುಜರ್ಮನಿಗೆ ಸೇರಿದ ಆಲ್ಸಾಸ್‌ಲೋರೇನ್ ಎಂಬಲ್ಲಿರುವ ವಿಕ್ ಮತ್ತೂ ಮೋಯಿನ್‌ವಿಕ್ ಎಂಬ ಸಣ್ಣ ಪಟ್ಟಣಗಳನ್ನು ಸ್ವಾಧೀನಪಡಿಸಿಕೊಂಡರು.

ರಷ್ಯನರ ನಷ್ಟವು.

ರಷ್ಯನರಿಗೆ ಬಹಳ ನಷ್ಟವುಂಟಾಗಿರುವುದು. ಜರ್ಮನಿಯ ಸೇನೆಯು ಎರ್ಬಿಲ್ ಹತ್ತಿರ ಕಿಬಾರ್ಟಿಯನ್ನು ಮುತ್ತಿಗೆ ಹಾಕಿರುವುದು.

ಪಿಕಿಂಗು, ಆಗಸ್ಟ್ ತಾ॥ ೭.—ಚೀನಾರಾಜ್ಯದಲ್ಲಿ ಜರ್ಮನಿಯವರಿಗೆ ಕೆಲ ಭಾಗ ಸೇರಿರುವುದರಿಂದ ಚೀನದಲ್ಲೇನಾದರೂ ಗೊಂದಲವುಂಟಾಗಬಹುದೆಂಬ ಭಯವುಂಟಾಗಿ ಚೈನಾ ಸರ್ಕಾರದವರು ಆರೀತಿ ಆಗಗೊಡದಿರಲು ಅಮೇರಿಕಾದವರ ಸಹಾಯವನ್ನಪೇಕ್ಷಿಸಿರುವರು.

ಸಿಮ್ಲಾ, ಆಗಸ್ಟ್ ೮.—ತೇರಾಬ್ಯಾಂಕಿಗೆ ಕೊಂಚ ದೂರದಲ್ಲಿ ನೌಕಾಕದನವು ನಡೆದು ಜರ್ಮನಿಯ ನಾವೆಯು ಓಡಿಹೋಯಿತೆಂದು ವೈಸ್‌ರಾಯರಿಗೆ ವರ್ತಮಾನಬಂದಿದೆ.

ಭರತಖಂಡದಲ್ಲಿರುವ ವಿದೇಶೀಯರು.

ಸಿಮ್ಲಾ ಆಗಸ್ಟ್ ತಾ॥ ೮.—ಭರತಖಂಡಕ್ಕೆ ಹಿಂದೆ ಬಂದು ವಾಸಿಸುತ್ತಿರುವ ಮತ್ತೂ ಹೊಸದಾಗಿ ಬಂದಿರುವ ಆಸ್ಟ್ರಿಯದ ಜನರ ವಿನಾ ಇತರ ಅನ್ಯದೇಶೀಯರು ಸರ್ಕಾರದಿಂದ ನಿಯಮಿತರಾಗಿರುವ ಅಧಿಕಾರಿಗಳಿಗೆ ತಮ್ಮ ಹೆಸರು ಕುಲ ವಾಸಸ್ಥಲ ವರ್ತನ ಮೊದಲಾದವಿಷಯಗಳನ್ನು ತಿಳಿಸಬೇಕು. ಹಾಗೆ ತಿಳಿಸದಿದ್ದಲ್ಲಿ ದೇಶದಿಂದ ಹೊರಗೆ ಕಳುಹಲ್ಪಡುವರು. ಜರ್ಮನಿಯರು ಮತ್ತೂ ಆಸ್ಟ್ರಿಯನರು ಅಧಿಕಾರಪತ್ರವನ್ನು ಪಡೆಯದೆ ಸಂಚರಿಸಲಾಗದು.

ಶತ್ರುಗಳಿಗೆ ಸಂಬಂಧಪಟ್ಟ ನಿಬಂಧನೆಗಳು.

ಬೆಂಗಳೂರು ಆಗಸ್ಟ್ ತಾ॥ ೮.—ಬೆಂಗಳೂರಲ್ಲಿರುವ ಆಸ್ಟ್ರಿಯಾ, ಜರ್ಮನೀದೇಶಸ್ಥರು ತಮ್ಮತಮ್ಮ ವಿಚಾರವನ್ನು ಸೇನಾಧಿಕಾರಿಗೆ ತಿಳಿಸಬೇಕೆಂದು ಪೋಲೀಸಿನವರು ಪ್ರಕಟಿಸಿದುದರ ಮೇಲೆ ೬ ಜನರು ಅಧಿಕಾರಿಯ ಬಳಿ ಬಂದು ತಮ್ಮ ಗುರುತು ಪರಿಚಯ ಮೊದಲಾದ ಸಂಗತಿಗಳನ್ನೆಲ್ಲಾ ತಿಳುಹಿಸಿದರು. ಮತ್ತೂ ಇಂಗ್ಲೀಷರಮೇಲೆ ತಾವು ಕತ್ತಿ ಕಟ್ಟುವುದಿಲ್ಲವೆಂದೂ, ಇಂಗ್ಲೀಷ್‌ಸೇನೆಯ ಸಂಬಂಧವಾದ ಸಂಗತಿಯನ್ನು ಶತ್ರುಗಳಿಗೆ ತಿಳುಹುವುದಿಲ್ಲವೆಂದೂ ಪ್ರಮಾಣಪತ್ರಿಕೆಯನ್ನು ಬರೆದುಕೊಟ್ಟು ಬಂದರು. ಇನ್ನೊಬ್ಬ ಅನ್ಯದೇಶೀಯನು ಬರಲಿಲ್ಲವಾಗಿ ಅವನನ್ನು ಹುಡುಕಲು ಯತ್ನವು ನಡೆದಿರುವುದು.

ತಾ॥ ೧೦ ರ ತಂತೀವಾರ್ತೆಯ ಸಾರಾಂಶವು.

ಆಲ್ಸಾಸಿನಲ್ಲಿ ಫ್ರೆಂಚರಿಗೂ, ಜರ್ಮನಿಯರಿಗೂ ಭಯಂಕರವಾದ ಯುದ್ಧವು ನಡೆದು ಫ್ರೆಂಚರು ಅತಿಶಯವಾದ ಜಯವನ್ನು ಹೊಂದಿದರು. ಆಲ್ಟ್‌ಕಿರ್ಚ್ ಜಯಿಸಲ್ಪಟ್ಟಿತು. ಮತ್ತೂ ಜರ್ಮನರು ಬಂದೂಕಿನ ಸನೀನಿನಿಂದ ಭೀಕರವಾಗಿ ಹೊಡೆದಾಡಿ ಓಡಿಹೋದರು. ಫ್ರೆಂಚರು ಮುಲ್ಹೌಸನ್ನು ಸಹ ಸ್ವಾಧೀನಮಾಡಿಕೊಂಡರು. ಅಲ್ಲಿಯ ನಿವಾಸಿಗಳೆಲ್ಲರೂ ಫ್ರೆಂಚ್ ಸೇನೆಯನ್ನು ವಿಶೇಷ ಉತ್ಸಾಹದಿಂದ ಬರಮಾಡಿಕೊಂಡರು. ಫ್ರೆಂಚರು ಪಶ್ಚಿಮಾಫ್ರಿಕಾದಲ್ಲಿರುವ ಜರ್ಮನಿಯ ನಾರ್ತ್ ಟೋಗೋಲ್ಯಾಂಡ್ ಅಧಿನಿವೇಶನವನ್ನು ವಶಪಡಿಸಿಕೊಂಡರು. ಜರ್ಮನ್ ಸೈನ್ಯವು ಬೆಲ್ಜಿಯಂ ಎಲ್ಲೆಯನ್ನು ದಾಟಿ ಬರದಂತೆ ಬೆಲ್ಜಿಯಂ ಸೇನೆಯು ಅಡ್ಡಿಮಾಡಿರುವುದಲ್ಲದೆ ಸಹಾಯಕ್ಕೆ ಈಗ ಬರುತ್ತಿರುವ ಫ್ರೆಂಚ್ ಸೇನೆಯಕೂಡ ಶತ್ರುಗಳನ್ನು ಹಿಂದಕ್ಕೋಡಿಸಿರುವುದು. ಬೆಲ್ಜಿಯನ್ನರ ಸ್ಥಾನವು ಪ್ರತಿ ಗಂಟೆಯಲ್ಲೂ ಭದ್ರವಾಗುತ್ತಿರುವುದು. ಮತ್ತೂ ಫ್ರೆಂಚ್‌ಸೇನೆಯ ರೈಲ್ವೆಬಂಡಿಗಳು ಬ್ರುಸಲ್ಲನ್ನು ಹಾದು ಹೋಗುತ್ತಿರುವುವು. ಲೀಜ್ ಪಟ್ಟಣವು ಶತ್ರುಗಳಿಂದ ಮುತ್ತಿಗೆ ಹಾಕಲ್ಪಟ್ಟಿರುವುದು. ಆದರೆ ಕೋಟೆಗಳು ಮಾತ್ರ ಶತ್ರುಗಳ ವಶವಾಗದಂತೆ ಕಾಪಾಡಲ್ಪಟ್ಟಿರುವುವು.

ಜರ್ಮನಿಯು ಬೆಲ್ಜಿಯಮ್ಮಿನ ಮುಯ್ಯನ್ನು ತೀರಿಸಿಕೊಳ್ಳುವುದಾಗಿ ಹೆದರಿಸುತ್ತಿರುವುದಾದರೂ ಫ್ರೆಂಚರು ಮುಂದುವರಿದು ಬರುತ್ತಿರುವುದರಿಂದ ಜರ್ಮನಿಯು ಲುಕ್ಸೆಂಬರ್ಗನ್ನು ಬಿಟ್ಟುಕೊಡಬೇಕಾಯಿತು. ಜರ್ಮನಿಯ ಹಡಗುಗಳು ಬ್ರಿಟಿಷರ ಒಂದು ಕ್ರೂಜರು ಸ್ಕ್ವೇರ್ಡನ್ನನ್ನು ನಿನ್ನೆಯದಿನ ಹಿಡಿದಿತು. ಆದರೆ ಅದಕ್ಕೇನೂ ಅಪಾಯವಾಗಲಿಲ್ಲವು. ಇದರಲ್ಲಿ ಜರ್ಮನಿಯರ ಒಂದು ಹಡಗು ಹಾಳಾಯಿತು.

ಪ್ಯಾರಿಸ್, ಆಗಸ್ಟ್ ೮.—ಫ್ರೆಂಚ್ ಸೇನೆಯು ಆಲ್ಸಾಕಿನ ಎಲ್ಲೆಯನ್ನು ದಾಟಿ, ಆಲ್ಟ್‌ಕಿರ್ಚನಲ್ಲಿ ಭೀಕರವಾದ ಯುದ್ಧವನ್ನು ಮಾಡಿ ಆಲ್ಟ್‌ಕಿರ್ಚನ್ನು ಕಿತ್ತುಕೊಂಡಿತು. ಹಿಂದಿರುಗುತ್ತಿದ್ದ ಜರ್ಮನರನ್ನು ಮುಲ್‌ಹೌಸ್‌ವರೆಗೂ ಓಡಿಸಿಕೊಂಡು ಹೋಯಿತು. ಸೇನಾಸಮಯವು ಬಹಳ ಶ್ಲಾಘ್ಯವಾಗಿದ್ದಿತು.

ಪ್ಯಾರಿಸ್, ಆಗಸ್ಟ್ ೯—ಫ್ರೆಂಚರ ಮುಂದಾಗಿ ಹೊರಟ ಸೇನೆಯು ಶುಕ್ರವಾರ ರಾತ್ರಿಯಾಗುವಷ್ಟರಲ್ಲಿ ಆಲ್ಟ್‌ಕಿರ್ಚನ್ನು ತಲುಪಿತು. ಈ ಪಟ್ಟಣವನ್ನು ಜರ್ಮನ್ ಬಿಗೇಡು ರಕ್ಷಿಸಿಕೊಂಡಿದ್ದಿತು. ಆದರೆ ಫ್ರೆಂಚರು ಸನೀನಿನಿಂದ ಕ್ರೂರವಾಗಿ ಯುದ್ಧಮಾಡಿ ಅದನ್ನು ಸ್ವಾಧೀನಮಾಡಿಕೊಂಡರು.

ಜರ್ಮನರ ವಿಶೇಷನಷ್ಟವು.—ಜರ್ಮನರು ಸಿಕ್ಕಿದಕಡೆ ಓಡಿಹೋದರು. ಫ್ರೆಂಚರ ಅಶ್ವಸೇನೆಯು ಜರ್ಮನರನ್ನು ಹಿಂಬಾಲಿಸಿ ಬರುವಲ್ಲಿ ಜರ್ಮನಿಗೆ ಬಹಳ ನಷ್ಟವಾಯಿತು.

ಪ್ಯಾರಿಸ್, ಆಗಸ್ಟ್ ೯.—ಫ್ರೆಂಚರು ಮುಲ್ಹೌಸನ್ನು ಪ್ರವೇಶಿಸಿದರೆಂದು ಸರ್ಕಾರಿಯ ಪ್ರಕಟನೆಯಾದಾಗ ಜರ್ಮನರ ಸೀಮೆಯಲ್ಲಿ ಫ್ರೆಂಚರಿಗೆ ಜಯವಾದುದರ ಮತ್ತೂ ಆಲ್ಸಾಸು ಸ್ವಾಧೀನವಾದುದರ ಬಗೆಗೆ ಪ್ಯಾರಿಸ್ ಪಟ್ಟಣದ ಜನರಿಗೆ ವಿಶೇಷ ಸಂತೋಷವುಂಟಾಯಿತು.

ಲಂಡನ್, ಆಗಸ್ಟ್ ೯.—ಪಶ್ಚಿಮಾಫ್ರಿಕಾದಲ್ಲಿ ಬ್ರಿಟಿಷರ ಗೋಲ್ಡ್‌ಕೋಸ್ಟಿಗೂ ಫ್ರೆಂಚರ ಸ್ವಾಸ್ಥ್ಯವಾದ (ಕಾಲನಿ) ಧಾಮೆಗೂ ಮಧ್ಯೆಯಿರುವ ಜರ್ಮನಿಗೆ ಸೇರಿದ ಉತ್ತರ ಟೋಗೋಲ್ಯಾಂಡ್ ಸ್ವಾಸ್ಥ್ಯವನ್ನು ಪ್ರವೇಶಿಸಿದರೆಂದು ಸರ್ಕಾರದವರು ಪ್ರಕಟಿಸಿದ್ದಾರೆ ಈ ಸ್ವಾಸ್ಥ್ಯವು ೨೦೦೦೦ ಚದರಮೈಲಿ ವಿಸ್ತೀರ್ಣವಿದೆ. ಇಲ್ಲಿಯ ನಿವಾಸಿಗಳು ನಾನಾಬಗೆಯ ನಿಗ್ರೋಜಾತಿಗೆ ಸೇರಿದವರು.

ಫ್ರೆಂಚರ ಸ್ವಾಸ್ಥ್ಯವಾದ ಧಾಮೆಗೆ ಸೇರಿದ ಗ್ರಾಂಡ್ ಪೋಪೊ ಎಂಬಲ್ಲಿರುವ ಫ್ರೆಂಚರ ಸೇನೆಯು ಬ್ರಿಟಿಷರ ಕೂಡ ಸಂಗಡ ಸೇರಿ ಜರ್ಮನ್ ಟೋಗೋಲ್ಯಾಂಡನ್ನು ಸ್ವಾಧೀನಪಡಿಸಿಕೊಳ್ಳುತ್ತಿರುವುದು.

ಫ್ರಾನ್ಸು ಮತ್ತೂ ಆಸ್ಟ್ರಿಯಾ.

ಪ್ಯಾರಿಸ್, ತಾ॥ ೯.—ಆಸ್ಟ್ರಿಯಾದ ಸೇನೆಯು ಫ್ರೆಂಚರ ಎಲ್ಲೆಯ ಕಡೆ ಹೊರಟಿರುವುದರಿಂದ ಆಸ್ಟ್ರಿಯಾದ ಉದ್ದೇಶಗಳನ್ನು ಸಾಧ್ಯವಾದಷ್ಟು ಕೂಡಲೇ ತಿಳುಹಬೇಕೆಂದು ವಿದೇಶಾಂಗಮಂತ್ರಿಯು ಆಸ್ಟ್ರಿಯಾದ ರಾಯಭಾರಿಯನ್ನು ಕೇಳಿರುತ್ತಾನೆ.

ರಷ್ಯಾಸೇನೆಯು ಮುಂದುವರಿದುದು.—ರಷ್ಯಾಸೇನೆಯು ಮುಂದಾಗಿ ಹೊರಟಿದ್ದ ಶತ್ರುಸೇನೆಯನ್ನು ಮುಂದಟ್ಟಿಕೊಂಡು ಸ್ಟೈರ್ ಕಣಿವೆಯ ಮಾರ್ಗವಾಗಿ ಆಸ್ಟ್ರಿಯಾ ರಾಜ್ಯವನ್ನು ಪ್ರವೇಶಿತು.

ರಷ್ಯಾ ಮತ್ತೂ ಜರ್ಮನಿ.

ಸೆಂಟ್‌ಪೀಟರ್ಸ್‌ಬರ್ಗ್, ತಾ॥ ೯.—ವಿತೆಟ್‌ಬರ್ನ್ ಹತ್ತಿರ ಜರ್ಮನರಿಗೆ ೨ ದಿವಸದಲ್ಲಿ ೧೦೦ ಪ್ರಾಣನಷ್ಟವಾಯಿತೆಂದು ಸರ್ಕಾರದವರು ಪ್ರಕಟಿಸಿರುತ್ತಾರೆ.

ಗ್ರೇಟ್‌ಬ್ರಿಟನ್ ಮತ್ತೂ ಆಸ್ಟ್ರಿಯಾ.

ಲಂಡನ್ ಆಗಸ್ಟ್ ತಾ॥ ೯. ಆಸ್ಟ್ರಿಯಾದ ರಾಯಭಾರಿಯು ಇನ್ನೂ ಲಂಡನ್ನಿನಲ್ಲಿರುತ್ತಾನೆ. ಆಸ್ಟ್ರಿಯಾದಮೇಲೆ ಯುದ್ಧಮಾಡುವ ಪ್ರಸಂಗವು ಬೀಳುವವರೆಗೂ ಈ ಎರಡು ರಾಜ್ಯಗಳ ಪರಸ್ಪರಸಂಬಂಧವು ವ್ಯತ್ಯಾಸವಿಲ್ಲದಿರುವುದೆಂದು ತಿಳಿಯಲ್ಪಟ್ಟಿದೆ.

ತುರ್ಕಿಯು ಮತ್ತೂ ಯುದ್ಧವು.

ಏಥೆನ್ಸ್ ತಾ॥ ೯.—ತುರ್ಕಿಯ ಸೇನೆಯು ಬಲ್ಗೇರಿಯಾಕ್ಕೆ ಸೇರಿದ ತೆಲಿನಾಚೆನ ಬಳಿ ಕೂಡುತ್ತಿರುವುದು.

ಲಂಡನ್ ತಾ॥ ೯.—ಜರ್ಮನಿಯ ರಾಯಭಾರಿಯು ಸರ್ವಿಯವನ್ನು ಬಿಟ್ಟು ಹೊರಡಲು ಅಪ್ಪಣೆ ಚೀಟಿಯನ್ನು ಸರ್ವಿಯಾ ಸರ್ಕಾರದಿಂದ ಪಡೆದುಕೊಂಡಿರುವನು.

ಲಂಡನ್ ತಾ॥ ೮.—ಆಸ್ಟ್ರಿಯಾದ ರಾಯಭಾರಿಯು ಮಾಂಟೆನೀಗ್ರೊವನ್ನು ಬಿಟ್ಟು ಹೊರಡಲುಜರ್ಮನಿಯ ಅಪ್ಪಣೆ ಚೀಟಿಯನ್ನು ಪಡೆದುಕೊಂಡನು

ಬೆಲಜಿಯಂ ಮತ್ತೂ ಜರ್ಮನಿ.

ಬ್ರುಸಲ್ಸ್ ತಾ॥ ೯.—ನಿನ್ನೆಯದಿನ ಸಾಯಂಕಾಲ ೧೧ ಗಂಟೆಯಲ್ಲಿ ಬೆಲಜಿಯಮ್ಮಿನ ಯುದ್ಧಶಾಖೆಯ ಮಂತ್ರಿಯು:—ಬೆಲಜಿಯನ್ನರ ಸ್ಥಿತಿಯು ಪ್ರತಿಗಂಟೆಯಲ್ಲೂ ಅನುಕೂಲವಾಗುತ್ತಿದೆ, ಫ್ರೆಂಚ್ ಮತ್ತೂ ಬೆಲಜಿಯಂ ಸೈನಿಕರ ಸಾಗುವಿಕೆಯು ಒಂದೇಕ್ರಮವಾಗಿ ನಡೆಯುತ್ತಿದೆ ಎಂದು ತಿಳಿಸಿದನು.

ಬ್ರುಸಲ್ಸ್ ತಾ॥ ೯.—ಸೇನೆಯು ನಿನ್ನೆಯದಿನ ರಾತ್ರಿ ಮುತ್ತಿಗೆಹಾಕಬೇಕೆಂದು ನಿರೀಕ್ಷಿಸಿಕೊಂಡಿದ್ದಿತು ಆದರೆ ಬೆಳಗಿನವರೆಗೆ ಏನೂ ನಡೆಯಲಿಲ್ಲವು. ಜರ್ಮನಿಯು ಇತಃಪರಃ ತನ್ನ ಮುಯ್ಯನ್ನು ತೀರಿಸಿಕೊಳ್ಳುತ್ತೇನೆಂದು ಬೆಲಜಿಯಮ್ಮಿಗೆ ಬೆದರಿಸಿ ಒಂದು ಅರ್ಜಂಟ್‌ಟೆಲಿಗ್ರಾಫನ್ನು ಕೊಟ್ಟಿರುವುದು.

ಲಂಡನ್ ಆಗಸ್ಟ್ ತಾ॥ ೧೦.—ಇಂಗ್ಲೆಂಡಿನಲ್ಲಿ ಜರ್ಮನ್ ಗೂಢಚಾರರು ಬಂದಿರುವರು ಅವರು ಕುಡಿಯುವ ನೀರು ಮೊದಲಾದುವುಗಳಿಗೆ ವಿಷಪ್ರಯೋಗವಮಾಡಯತ್ನಿಸುತ್ತಿರುವರು ಎಂದು ಮೊದಲಾಗಿ ನಾನಾವಿಧವಾದ ವರ್ತಮಾನಗಳು ಹುಟ್ಟಿವೆ.

ಅಧಿನಿವೇಶಗಳು.

ಮೆಲ್‌ಬೋರ್ನ್ ಆಗಸ್ಟ್ ತಾ॥ ೧೧.—ಬ್ರಿಗೆಡಿರ್ ಜನರಲ್ ಬ್ರಿಡ್ಜಸ್‌ರವರು ಆಸ್ಟ್ರೇಲಿಯಾದ ಯುದ್ಧಸೇನೆಯ ನಾಯಕತ್ವವನ್ನು ವಹಿಸಿರುವರು.

ಲಂಡನ್ ಆಗಸ್ಟ್ ತಾ॥ ೧೦.—ಕಾನಡಾ ದೇಶಸ್ಥರು ತಮ್ಮ ಯುನೈಟೆಡ್ ಕಿಂಗಡಮ್ಮಿನ (ಇಂಗ್ಲೆಂಡ್, ಐರ್ಲೆಂಡ್ ಮತ್ತೂ ಸ್ಕಾಟ್‌ಲೆಂಡುಗಳ) ಜನರುಪಯೋಗಕ್ಕಾಗಿ ೧೦ ಲಕ್ಷ ಮೂಟೆಗಳ ಹಿಟ್ಟನ್ನು ಉಚಿತವಾಗಿ ತಮ್ಮ ಸರ್ಕಾರದವರ ಮೂಲಕ ಕೊಡಲೊಪ್ಪಿರುತ್ತಾರೆಂದು ಡ್ಯೂಕ್ ಆಫ್ ಕನಾಟರು ಮಿಶ ಹರ್ಕೋರ್ಟ್‌ರವರಿಗೆ ತಿಳಿಸಿರುತ್ತಾರೆ.

ದಕ್ಷಿಣಾಫ್ರಿಕಾದವರು ಆಲಿವಾಲ್ ನಾರ್ತ್ ಎಂಬಲ್ಲಿ ತಾ|| ೯ ರಲ್ಲಿ ಒಂದು ದೊಡ್ಡಸಭೆ ಸೇರಿದ್ದು ಆಲಿವಾಲದ ನಾರ್ತಆಫ್ರಿಕಾಂಡರುಗಳು ಬ್ರಿಟಿಷ್ ಚಕ್ರಾಧಿಪತ್ಯದ ಧ್ವಜಪತಾಕೆಯ ಸಂರಕ್ಷಣೆಗಾಗಿ ಒಂದು ತೋಟಾವು ಉಳಿಯುವವರೆಗೂ ಅಂದರೆ ಕಡೆಯವರೆಗೂ ಯುದ್ಧಮಾಡುವೆವೆಂದು ಸಂಕಲ್ಪಿಸಿಕೊಂಡರು.

ಫ್ರಾನ್ಸು ಮತ್ತು ಜರ್ಮನಿ.

ಲಂಡನ್ ಆಗಸ್ಟ್ ತಾ|| ೧೦.–ಫ್ರಾನ್ಸು ಮತ್ತು ಜರ್ಮನಿಯ ಸಂಬಂಧವು ತಪ್ಪಿರುವುದೆಂದು ಸರ್ಕಾರದಿಂದ ಪ್ರಕಟಿತವಾಗಿರುವುದು. ಈ ಎರಡುರಾಜ್ಯಗಳ ರಾಯಭಾರಿಗಳು ತಮ್ಮ ತಮ್ಮ ಸ್ಥಳಗಳಿಗೆ ಹೊರಡುವರು.

ತಾ|| ೧೦ ರ ಮಧ್ಯಾಹ್ನದಲ್ಲಿ ಬ್ರಸಲ್ಸಿನ ಸ್ಥಿತಿಯು ಸಮರ್ಪಕವಾಗಿರುತ್ತದೆ. ಫ್ರೆಂಚ್ ಸೇನೆಯು ಕ್ರಮವಾಗಿ ಮುಂದುಮುಂದಕ್ಕೆ ನಡೆಯುತ್ತಿರುವುದು. ಲೀಜಿನ ಕೋಟೆಗಳಿಗೆ ಆಹಾರ್ಯಪದಾರ್ಥಗಳೂ, ಮದ್ದುಗುಂಡುಗಳೂ ವಿಶೇಷವಾಗಿ ಒದಗಿಸಲ್ಪಟ್ಟಿರುವುವು.

ಬ್ರಸಲ್ಸ್, ತಾ|| ೧೦.–ಜರ್ಮನರು ಫ್ರೆಂಚರ ಎಲ್ಲೆಯಲ್ಲಿ ಲುಕ್ಸಂಬರ್ಗಿಗೆ ನೈಋತಿಮೂಲೆಯಲ್ಲಿರುವ ಎಸ್ಟ್ ಸರ್ ಆಲ್ಜೆಟಿ ಮಾರ್ಗವಾಗಿ ಫ್ರಾನ್ಸಿನ ಕಡೆ ಹೋಗುತ್ತಿರುವರು. ಅವರ್ಟೆ ನದಿಯ ಕಡೆ ಹೋಗುವುದನ್ನು ಬಿಟ್ಟು ಕಂದಕಗಳನ್ನು ತೆಗೆದು ತಮ್ಮ ಸ್ಥಾನಗಳನ್ನು ಭದ್ರಪಡಿಸಿಕೊಳ್ಳುತ್ತಿರುವರು.

ಜರ್ಮನರ ಹಡಗು ಎಲ್ಲಿರುವುದೆಂಬುದು ಗೋಚರವಿಲ್ಲವು. ಆದರೆ ಅದು ಬ್ರಿಟಿಷರ ಹಡಗನ್ನು ಬೆದರಿಸುತ್ತಿರುವುದಾಗಿ ವರದಿಯಾಗಿದೆ.

ಮಾಂಟಿನಿಗ್ರೊ.

ಲಂಡನ್, ತಾ|| ೧೦,—೨ ಆಸ್ಟ್ರಿಯಾದ ಕ್ರೂಜರುಗಳು ಮಾಂಟಿನಿಗ್ರೋಗೆ ಸೇರಿದ ಅಂಟಿವಾರಿಗೂ, ಅದರ ನೆರೆಯ ಪರ್ವತಗಳಿಗೂ ಫಿರಂಗಿಗಳನ್ನು ಹೊಡೆದುವು. ಈ ಪರ್ವತಗಳಿಗೆ ಅಂಟಿವೇರಿಯ ನಿವಾಸಿಗಳು ಬಂದು ಸೇರಿಕೊಂಡಿರುವರು.

ಮಾಂಟಿನೀಗ್ರೋಯವರು ಆಸ್ಟ್ರಿಯಾ ದೇಶಕ್ಕೆ ಸೇರಿದ ಸ್ಪಿಝಾ ಎಂಬುದನ್ನು ಸ್ವಾಧೀನಪಡಿಸಿಕೊಂಡಿರುವರು.

ಸರ್ವಿಯಾ ಮತ್ತು ಮೋಂಟಿನಿಗ್ರೋ ದೇಶಗಳಲ್ಲೆಲ್ಲಾ ರಷ್ಯಾ, ಫ್ರಾನ್ಸು ಮತ್ತು ಇಂಗ್ಲೆಂಡು ರಾಜ್ಯಗಳ ವಿಚಾರವಾಗಿ ಉಂಟಾಗಿರುವ ಸಂತೋಷವು ವ್ಯಕ್ತಗೊಳಿಸಲ್ಪಟ್ಟಿರುವುದು.

ಜಪಾನ್.

ಟೋಕಿಯೊ, ಆಗಸ್ಟ್ ತಾ|| ೧೦.–ಜಪಾನರ ಮೊದಲನೆಯ ಮತ್ತು ಎರಡನೆಯ ಹಡಗುಗಳು ಅಡ್ಮಿರಲ್ ದೇವಾಯವರ ನಾಯಕತ್ವದಲ್ಲಿ ಕಳುಹಿಸಲ್ಪಟ್ಟಿರುವುವು.

ಜಪಾನರು ತಮಗೂ ಆಂಗ್ಲೇಯರಿಗೂ ನಡೆದಿರುವ ಒಡಂಬಡಿಕೆಯಂತೆ ನಡೆಯಲು ಸಿದ್ಧರಾಗಿದ್ದೇವೆಂದು ಕಾಗದದ ಮುಖೇನ ತಿಳಿಸಿರುವರಲ್ಲದೆ, ಕಾರ್ಯಮುಖೇನ ಅಕ್ಷರಶಃ ನಿದರ್ಶಿಸತಕ್ಕವರಾಗಿರುವರೆಂದು ಹೇಳಬೇಕಾದುದಿಲ್ಲವು. ಬ್ರಿಟಿಷರ ಸಂರಕ್ಷಣೆಗಾಗಿ ಚೈನಾದಲ್ಲಿ ಜರ್ಮನಿಯವರಿಗೆ ಸೇರಿರುವ ಟಿಂಗ್ ಟೌಯನ್ನು ಸ್ವಾಧೀನಪಡಿಸಿಕೊಳ್ಳಬೇಕಾಗುವ ಸಂದರ್ಭವು ಬರಬಹುದು.

ಸಿಮ್ಲಾ, ಆಗಸ್ಟ್ ತಾ|| ೧೦.–ಇಂಡ್ಯಾಸರ್ಕಾರದ ಭಂಗಾರ ಮತ್ತು ರೂಪಾಯಿಗಳ ಅನುಕೂಲ್ಯವು ಚೆನ್ನಾಗಿದೆ. ಅನುಕೂಲವಾಗಿರುವ ಒಟ್ಟು ೩೧೫೦೦೦೦೦೦ ರೂ. ಬೆಲೆಯ ಭಂಗಾರದಲ್ಲಿ ಅರ್ಧವು ಭರತಖಂಡಕ್ಕೆ ಕಳುಹಲ್ಪಟ್ಟು ಉಳಿದರ್ಧವು ಇಂಗ್ಲೆಂಡಿನುಪಯೋಗಕ್ಕಿಡಲ್ಪಟ್ಟಿತು. ಮತ್ತು ನೋಟಿನ ರಿಜರ್ವಿನಿಂದ ಭಂಗಾರದ ಸ್ಟ್ಯಾಂಡರ್ಡ್ ರಿಜರ್ವಿಗೆ ೬೦೦೦೦೦೦೦ ರೂ. ಬೆಲೆಯ ಭಂಗಾರವು ಕಳುಹಿಸಲ್ಪಟ್ಟಿತು. ಅದುಕಾರಣ ಭಂಗಾರದ ರಿಜರ್ವಿನಲ್ಲಿ ಬರಿಯ ಭಂಗಾರವು ಮತ್ತು ಬೆಳ್ಳಿಯು ತುಂಬಿರುವುವು. ಸರ್ಕಾರದ ನಗದು ಶಿಲ್ಕಿನಲ್ಲಿ ೩೦ ಕೋಟಿ ರೂ. ಗಳಿಗಿಂತಲೂ ಅಧಿಕವಾಗಿದೆ. ನೋಟುಗಳು ಎಂದಿಗಿಂತಲೂ ಹೆಚ್ಚಾಗಿ ಎಂದರೆ ೩೪ ಕೋಟಿ ಇರುತ್ತದೆ.

ಬೊಂಬಾಯಿ, ಆಗಸ್ಟ್ ತಾ|| ೧೦.–ಬ್ರಿಟಿಷರು ಹಿಡಿದಿರುವ ಜರ್ಮನಿಯ ವರ್ತಕರ ವಾರ್ಟರಂ ಮತ್ತು ರಿಝೀಕ್ ಫಲ್ಸ್ ಹಡಗುಗಳಲ್ಲಿರುವ ಸಾಮಗ್ರಿಗಳನ್ನು ತೆಗೆದು ಅವನ್ನು ಸರ್ಕಾರಕ್ಕೆ ಸೇರಿಸಿಕೊಳ್ಳಲು ಅಡ್ವೊಕೇಟ್ ಜನರಲ್‌ರವರು ಬೊಂಬಾಯಿ ಹೈಕೋರ್ಟಿನಪ್ಪಣೆಯನ್ನು ಕೇಳಿರುವಲ್ಲಿ ಚೀಫ್ ಜಡ್ಜರು ಅದರಂತೆ ಅಪ್ಪಣೆಯನ್ನು ಮಾಡಿ ಈ ವಿಚಾರವನ್ನು ಸರ್ಕಾರಿಯ ಗೆಜೆಟ್ಟಿನಲ್ಲೂ, ವೃತ್ತಪತ್ರಿಕೆಗಳಲ್ಲೂ ಪ್ರಚುರಪಡಿಸುವಂತೆ ಅಪ್ಪಣೆಮಾಡಿದರು.

ಡಾಕ್ಟರ್ ಸುಹ್ರವಾರ್ಡಿಯವರು ಯುದ್ಧದಲ್ಲಿ ಗಾಯವಡೆದವರಿಗೆ ವೈದ್ಯದ ಚಿಕಿತ್ಸೆಯನ್ನು ಮಾಡಿ, ಉಪಚರಿಸಲು ಒಂದು ಸಂಘವನ್ನೇರ್ಪಡಿಸಿರುವರು. ಇದಕ್ಕೆ ಸೇರಲು ಅನೇಕ ಹಿಂದೂಮಹಮ್ಮದೀಯರೊಪ್ಪಿಕೊಂಡಿರುವರು. ಭುಕರೆಸ್ಟಿನಲ್ಲಿರುವ ಮಹಾರಾಷ್ಟ್ರಜಾತಿಯ ಡಾಕ್ಟರ್ ಮುಲ್ಜಾರ್‌ರವರು ಮತ್ತು ಐರ್ಲೆಂಡಿನಲ್ಲಿರುವ ಸುಹ್ರವಾರ್ಡಿಯವರ ತಮ್ಮಂದಿರು ಭಾರತೀಯ ವೈದ್ಯವಿದ್ಯಾರ್ಥಿಗಳನ್ನು ಸೇರಿಸುತ್ತಿರುವರು.

ಹೊಸ ವಾಲಂಟಿಯರುಗಳು.

ಕಲ್ಕತ್ತಾ, ಆಗಸ್ಟ್ ತಾ|| ೧೦.–ವಾಲಂಟಿಯರುಗಳಾಗಿ ಸೇರಲಪೇಕ್ಷಿಸಿರುವ ೩೦೦ ಜನ ಬ್ಯಾರಿಸ್ಟರುಗಳ ಹೆಸರಿನ ಪಟ್ಟಿಯು ಗೌರ್ನರಿಗೆ ಕಳುಹಲ್ಪಟ್ಟಿರುವುದು.

ಆಹಾರ್ಯಪದಾರ್ಥಗಳು.

ಕಲ್ಕತ್ತಾ, ಆಗಸ್ಟ್ ತಾ|| ೧೦.–ಕಲ್ಕತ್ತಾದ ಉತ್ತರ ಭಾಗದಲ್ಲಿ ಪೋಲೀಸರು ಎಚ್ಚರಿಸಿದಾಗ್ಯೂ ಆಹಾರ್ಯಪದಾರ್ಥಗಳ ಬೆಲೆಯು ಅನ್ಯಾಯವಾಗಿ ಹೆಚ್ಚಿಸಲ್ಪಟ್ಟಿರುವುದು. ಇವುಗಳಲ್ಲಿ ಮುಖ್ಯವಾಗಿ ಹಿಟ್ಟು, ಎಣ್ಣೆ, ಸಕ್ಕರೆ, ಉಪ್ಪು ಮತ್ತು ಹಾಲುಗಳ್ಳೆ ಇವುಗಳ ಬೆಲೆಯು ಈಚೆಗೆ ಹೆಚ್ಚಿಸಲ್ಪಟ್ಟಿದೆ. ಈ ಬೆಲೆಯ ಏರಿಕೆಗೆ ಮಧ್ಯತರಗಿಯ ಜನರೇ ಉತ್ತರವಾದಿಗಳೆಂದು ಅಂಗಡಿಯವರು ಹೇಳುತ್ತಾರೆ.

ಯುದ್ಧರಂಗದಲ್ಲಿ ಆಸ್ಪತ್ರೆ.

ಬೊಂಬಾಯಿ, ಆಗಸ್ಟ್ ತಾ|| ೧೧.—ಬೊಂಬಾಯಧಿಪತ್ಯದಿಂದ ರಣರಂಗಕ್ಕೆ ಒಂದು ಆಸ್ಪತ್ರೆಯನ್ನೇರ್ಪಡಿಸಿಕೊಡಲು ಚಂದಾ ಹಣವು ಕೂಡಿಸಲ್ಪಡುತ್ತಿರುವುದು. ಇದಕ್ಕೆ ಸರ್ ಷಪೂರ್ಜಿಯವರು ೨೦೫೦೦ ರೂ. ಸರ್ ಕವಾಸ್ಜಿ ಜಹಂಗೀರ್‌ರವರು ೨೫೦೦೦ ರೂ. ಸರ್ ಕರೀಂಬಾಯಿ ಇಬ್ರಾಹಿಂ ಅಂಡ್ ಕಂಪೆನಿಯವರು ೧೫೦೦೦ ರೂ. ಮಿ|| ಬೂಮಂಜಿ ಡಿನೆಟಿಟ್‌ರವರು ೪೪೪೪ ರೂ.ಗಳನ್ನು ವಾಗ್ದಾನಮಾಡಿರುವರು.

ಬೊಂಬಾಯಿನಲ್ಲಿ ಆಹಾರ್ಯ ಪದಾರ್ಥಗಳ ಬೆಲೆಯು ಪೂರ್ವಸ್ಥಿತಿಗಳಿರುತ್ತದೆ. ಆಹಾರ್ಯ ಪದಾರ್ಥಗಳನ್ನೊದಗಿಸುವ ಸಂಘದವರು ಈ ದಿವಸ ಸಭೆ ಸೇರಿದ್ದು ಎಲ್ಲ ವ್ಯಾಪಾರಿಗಳ ಕೂಡ ಆಲೋಚಿಸಿ ಧಾನ್ಯಗಳ ಬೆಲೆಯು ನಿರ್ಧರಿಸಲ್ಪಟ್ಟು ಸರ್ಕಾರದನುಮೋದಕ್ಕೆ ಕಳುಹಲ್ಪಟ್ಟಿತು.

ಭಾರತೀಯರ ರಾಜಭಕ್ತಿಯು.

ಲಂಡನ್, ಆಗಸ್ಟ್ ತಾ|| ೧೧.—ಇಂಗ್ಲೆಂಡಿನಲ್ಲಿ ವಾಸವಾಗಿರುವ ಮತ್ತು ಪ್ರೇಕ್ಷಕರಾಗಿ ಬಂದಿರುವ ಭಾರತೀಯರು ತಮ್ಮ ರಾಜಭಕ್ತಿಯನ್ನು ದೊರೆಗಳಿಗೆ ಅರಿಕೆಮಾಡಬೇಕೆಂದು ಲಾರ್ಡ್ ಕ್ರೂಯವರಿಗೆ ಕೊಟ್ಟ ವಿಜ್ಞಾಪನಪತ್ರಿಕೆಯಲ್ಲಿ ಹಸ್ತಾಕ್ಷರಗಳ (ರುಜುವ) ನ್ನು ಹಾಕಿರುವ ಭಾರತೀಯರೆಲ್ಲರಿಗೂ ಲಾರ್ಡ್ ಕ್ರೂಯವರು– “ಚಕ್ರಾಧಿಪತ್ಯದ ವಿಚಾರದಲ್ಲಿ ನಿಮಗಿರುವ ಮನಃಪೂರ್ವಕವಾದ ಅಭಿಮಾನವು ನನ್ನ ಮನಸ್ಸಿಗೆ ಹೊಸ್ಟೋ ಸಂತೋಷವನ್ನುಂಟುಮಾಡಿದೆ. ಮತ್ತು ನಿಮ್ಮ ಅಕುಟಿಲವಾದ ರಾಜಭಕ್ತಿಯನ್ನು ನಿಮ್ಮ ಪ್ರಾರ್ಥನೆಯ ಪ್ರಕಾರ ಚಕ್ರವರ್ತಿಯವರಿಗೆ ನಿವೇದಿಸಲು ನನಗೆ ಬಹಳ ಸಂತೋಷವಾಗುತ್ತದೆ.” ಎಂದು ತಿಳಿಸಿರುವರು.

ಜರ್ಮನಿಯ ನಾವೆಯು ಮುಳುಗಿಹೋದುದು.

ಲಂಡನ್, ತಾ|| ೧೧.—ಬ್ರಿಟಿಷರ ಬರ್ಮಿಂಗ್ಹ್ಯಾಂ ಎಂಬ ಹಡಗು ಜರ್ಮನಿಯ ಒಂದು ಸಣ್ಣ ಹಡಗನ್ನು ತಾ|| ೧೧ರಲ್ಲಿ ಮುಳುಗಿಸಿತೆಂದು ಚರ್ಚಿಲ್‌ರವರು ತಿಳಿಸುತ್ತಾರೆ.

ಬಂದಿಗಳ ವಿಮೋಚನೆಯು.

ಕಾರಾಗೃಹದ ವಾಸಿಗಳಾಗಿದ್ದ ದಂಗೆಯಕೋರರೂ, ಸ್ತ್ರೀಸ್ವಾತಂತ್ರ್ಯವಾದಿಗಳೂ ರಾಜದ್ರೋಹಾಪರಾಧದಿಂದ ಕ್ಷಮಿಸಲ್ಪಟ್ಟು ಬಿಡಲ್ಪಟ್ಟರು.

ಐರಿಷ್ ಸ್ವಚ್ಛಂದ ಸೈನಿಕರು. (ವಾಲಂಟಿಯರು.)

ಐರ್ಲೆಂಡಿನ ವಾಲಂಟಿಯರುಗಳಿಗೆ ಬೇಕಾದ ಸಾಧನಸಾಮಗ್ರಿಗಳನ್ನು ಕಿಚನರ್ ಪ್ರಭುಗಳು ಒದಗಿಸಿಕೊಡುವರೆಂದು ಆಸ್ಕ್ವಿತ್ ಮಂತ್ರಿಯವರು ರೆಡ್ಮಂಡ್‌ರವರಿಗೆ ತಿಳಿಸಿರುತ್ತಾರೆ.

ಲಂಡನ್, ಆಗಸ್ಟ್ ತಾ|| ೧೧.—ಫ್ರೆಂಚಿನವರ ಅಧೀನವಾಗಿರುವ ಆಲ್ಸೇಸಿನಲ್ಲಿ ರೈನ್ ಪ್ರಾಂತಕ್ಕೆ ಸೇರಿದ ಮುಲ್ಹೌಸೇನು ಪಟ್ಟಣದಮೇಲೆ ಜರ್ಮನಿಯ ಸೈನಿಕರು ಬಿದ್ದರು. ಈ ಪಟ್ಟಣದಲ್ಲಿ ಫ್ರೆಂಚ್ ಸೈನಿಕರಿರುವರು. ಇವರು ಶತ್ರುಗಳಮೇಲೆ ಬಿದ್ದು ಹೋರಾಡುವುದಕ್ಕೆ ಬದಲಾಗಿ ಶತ್ರುಗಳಿಗಭೇದ್ಯವಾಗಿರುವ ಸ್ಥಳದಲ್ಲಿ ಸೇರಿಕೊಂಡಿರುವರು. ಆಲ್ಸೇಸ್ ಪ್ರಾಂತದ ಮೇಲುಭಾಗವು ಇನ್ನೂ ಫ್ರೆಂಚರ ಕೈವಶದಲ್ಲೇ ಇರುವುದು.

ಜರ್ಮನಿಯ ಸೇನೆಯು.—ಲುಕ್ಸಂಬರ್ಗಿನಲ್ಲಿದ್ದ ಜರ್ಮನಿಯ ದೊಡ್ಡಸೈನ್ಯವೊಂದು ಬೆಲ್ಜಿಯಂ ಎಲ್ಲೆಕಟ್ಟಿನ ಹತ್ತಿರಕ್ಕೆ ಬಂದಿದೆ. ಮಾರ್ಚಿ, ಗೆಡೀನೆ, ಆರ್ಲನಲ್ ಹತ್ತಿರ ಜರ್ಮನಿಯ ಪದಾತಿಗಳಿರುವುದಾಗಿ ತಿಳಿಯಬಂದಿದೆ. ಈ ಪಟ್ಟಣಗಳು ಬೆಲ್ಜಿಯಂ ದೇಶದಲ್ಲಿ ಲುಕ್ಸಂಬರ್ಗ್ ಪ್ರಾಂತದಲ್ಲಿರುತ್ತವೆ.

ಪ್ಲೆರಾನ್ಸ್ ಕೋಟೆಯು ಬತೇರಿಯಮೇಲೆ ಫಿರಂಗಿಗಳನ್ನಿಟ್ಟು ಕೋಟೆಯಿಂದ ಹೊರಗೆಹೋಗುತ್ತಿದ್ದ ಫಿರಂಗಿಬಂಡಿಗಳಿಗೆ ಗುಂಡು ಹೊಡೆಯಲ್ಪಟ್ಟಿತು. ಜರ್ಮನಿಯ ಸೇನೆಯು ಮುತ್ತಿಗೆಹಾಕಿತು. ಲೀಜ್ ಪಟ್ಟಣದಲ್ಲಿ ಪ್ರತಿಯೊಬ್ಬನೂ “ಇಂಗ್ಲೀಷಿನವರು ಯಾವಾಗಬರುತ್ತಾರೆ?” ಎಂದು ಕೇಳುತ್ತಿರುವನು.

ಬೆಲ್ಜಿಯಂ-ಜರ್ಮನಿ.

ಜರ್ಮನಿಯವರ ಪ್ರಯತ್ನಭಂಗವು.— ಭಾನುವಾರ ರಾತ್ರಿ ಜರ್ಮನಿಯವರು ಲೀಜಿನಲ್ಲಿ ಸರಂಗಕೋಟೆಯಮೇಲೆ ಬಿದ್ದು ವಿಮುಖರಾದರು. ಇವರಲ್ಲಿ ೮೦೦ ಮಂದಿ ಮಡಿದರೆಂದು ಹೇಳುತ್ತಾರೆ.

ಬೆಲ್ಜಿಯಂ ಸೇನೆಯ ಪರಾಕ್ರಮವು.

ಬೆಲ್ಜಿಯಂ ಸೈನಿಕರು ಅಸಮಾನಪರಾಕ್ರಮದಿಂದ ಜರ್ಮನಿಯವರನ್ನು ಪ್ರತಿಭಟಿಸುತ್ತಿರುವರು. ಕೋಟೆಯೊಳಗಿರುವ ಬೆಲ್ಜಿಯಂ ಸೇನೆಯು ಜರ್ಮನಿಯ ಸೇನೆಯು ಹತ್ತಿರಕ್ಕೆ ಬಾರದಂತೆ ಮಾಡಲಿಕ್ಕಿಲ್ಲ. ಈ ಯುದ್ಧದಲ್ಲಿ ಬಹಳ ಸೇನೆಯು ನಷ್ಟವಾಯಿತು.

ಆಸ್ಟ್ರಿಯಾ ಸೇನೆಯು ೭ ಪ್ರದೇಶಗಳಲ್ಲಿ ಸರ್ವಿಯಾದೊಡನೆ ಯುದ್ಧಮಾಡಿರುವುದು. ಸರ್ವಿಯಾ ಸೈನಿಕರು ಗುರಿಕಟ್ಟಿ ಹೊಡೆಯುವುದರಲ್ಲಿ ಬಹಳ ಪ್ರವೀಣರಾಗಿರುವುದರಿಂದ ಆಸ್ಟ್ರಿಯಾದವರನೇಕರು ಸತ್ತರು. ಎಂದು ಸರ್ವಿಯಾ ಸರ್ಕಾರದವರು ಪ್ರಕಟಿಸಿರುವರು.

ರಷ್ಯಾ ಸೇನೆಯು ಈಗ ಬ್ರಿಸ್ಟುಲಿಟಾಸ್ಕು ಪಟ್ಟಣದ ಹತ್ತಿರ ಕೂಡಿರುತ್ತದೆ. ಈ ಪಟ್ಟಣವು ರಷ್ಯಾದಲ್ಲಿ ಒಂದು ಕೋಟೆಯ ಮಧ್ಯೆಯಿರುವುದಲ್ಲದೆ, ಜರ್ಮನಿ ಮತ್ತು ಆಸ್ಟ್ರಿಯಾ ದೇಶಗಳ ಎಲ್ಲೆಕಟ್ಟುಗಳಿಗೆ ಸಮೀಪವಾಗಿದೆ.

ಫ್ರಾನ್ಸ್-ಜರ್ಮನರ ಘೋರಯುದ್ಧವು.

ಲಂಡನ್, ಆಗಸ್ಟ್ ತಾ||೧೧.—ಕೊಂಚದಿವಸದಲ್ಲಿ ೫೦ ಸಾವಿರ ಜನರಿರುವ ೨೨ ನೆಯ ಜರ್ಮನಿಯ ಸೇನೆ ಮತ್ತು ೪೦ ಸಾವಿರ ಜನರಿರುವ ಆಸ್ಟ್ರಿಯಾಸೇನೆಗಳಿಗೂ, ೨೩ ನೆಯ ಫ್ರಾನ್ಸು ಮತ್ತು ಬೆಲ್ಜಿಯಂ ಸೈನ್ಯಗಳಿಗೂ ಆಲ್ಸೇಸಿನಲ್ಲೂ, ಬೆಲ್ಜಿಯಮ್ಮಿನಲ್ಲೂ ಘೋರಯುದ್ಧವಾಗುವುದು.

ಫ್ರಾನ್ಸ್ ಬೆಲ್ಜಿಯಂ ಸೇನೆಗಳು ಈಗಾಗಲೇ ಶತ್ರುಗಳಾದ ಜರ್ಮನಿ ಮತ್ತು ಆಸ್ಟ್ರಿಯಾದವರ ಮೇಲೆ ಬೀಳಲು ಸಿದ್ಧವಾಗಿರುವುವು.

ಬೆಲ್ಜಿಯನ್ನರಿಗೆ ಸಹಾಯಮಾಡುವುದಕ್ಕಾಗಿ ಫ್ರೆಂಚ್ ಸೇನೆಯು ಬೆಲ್ಜಿಯಮ್ಮಿಗೆ ಹೋಗಿರುವುದು.

ಬಲ್ಗೇರಿಯದವರ ಪ್ರಯತ್ನವು.—ಸರ್ವಿಯಾ ಮಾಂಟಿನಿಗ್ರೋಯವರುಗಳು ಆಸ್ಟ್ರಿಯಾದವರಿಗೆ ವಿರೋಧಿಗಳಾಗಿರುವರು. ತುರ್ಕಿಯವರು ತಮ್ಮ ಸೇನೆಯನ್ನು ಸಿದ್ಧಗೊಳಿಸುತ್ತಿರುವರು. ಈವರೆಗೂ ಇವರು ಯುದ್ಧರಂಗವನ್ನು ಪ್ರವೇಶಿಸಿದ ಹಾಗೆ ಕಂಡುಬರಲಿಲ್ಲವು. ಆದರೂ ಬಾಲ್ಕನ್ನಿನಲ್ಲಿ ಏನುನಡೆಯುತ್ತಿರುವುದೆಂಬುದು ತಿಳಿಯದು. ಬಲ್ಗೇರಿಯಾದ ಮುಖ್ಯಮಂತ್ರಿಯು—“ಈ ಯುದ್ಧದಲ್ಲಿ ಬಲ್ಗೇರಿಯಾದವರು ತಟಸ್ಥರಾಗಿರುವರಾದರೂ ತಮ್ಮ ದೇಶವನ್ನು ಇತರರು ಬಾಧಿಸದಂತೆ ಮಾಡಲು ಅವರು ಸನ್ನದ್ಧರಾಗಿರಬೇಕಾಗಿದೆ.” ಎಂದು ಪ್ರಕಟಿಸಿರುವರು.

ರೊಮೇನಿಯಾ.— ರೊಮೇನಿಯಾದವರು ತಟಸ್ಥರಾಗಿರುತ್ತಾರೆ. ಆದರೆ ದೇಶದಲ್ಲಿ ಮಾತ್ರ ಭಿನ್ನಾಭಿಪ್ರಾಯವಿರುವುದು.

ತುರ್ಕಿಯ ಯುದ್ಧದಮಂತ್ರಿಯು ೪೫೦೦೦೦೦೦ ರೂ. ಗಳನ್ನು ಸಾಲವಾಗಿ ತೆಗೆದುಕೊಳ್ಳಬಹುದೆಂದು ತುರ್ಕಿಯ ಸರ್ಕಾರವು ಪ್ರಕಟಿಸಿದೆ.

ಸಿಂಲಾ, ಆಗಸ್ಟ್ ತಾ|| ೧೩.— ಆಸ್ಟ್ರಿಯಾದ ಕೂಡ ಯುದ್ಧಮಾಡಲು ನಿರ್ಧರವಾಗಿರುವುದೆಂದು ಇಲ್ಲಿಗೆ ಅಧಿಕಾರಿಗಳಿಂದ ವರ್ತಮಾನವು ಬಂದಿರುತ್ತದೆ. ಮತ್ತು ಈ ಯುದ್ಧಪ್ರಕರಣದಿಂದ ಜರ್ಮನರು ಭರತಖಂಡದಲ್ಲಿ ಸಂಚರಿಸುವಾಗ್ಗೆ ನಿರಾಯುಧರಾಗಿರುವುದು ಮೊದಲಾದ ವಿಚಾರದಲ್ಲಿ ಕಲ್ಪಿಸಲ್ಪಟ್ಟಿರುವ ವಿಧಿಯಂತೆ ಈಗ ಶತ್ರುಗಳಾಗಿರುವ ಆಸ್ಟ್ರಿಯನರ ವಿಚಾರದಲ್ಲೂ ಕೆಲ ನಿರ್ಬಂಧವಿಧಿಯು ಇಂಡ್ಯಾ ಗೆಜೆಟ್ಟಿನ ವಿಶೇಷ ಪತ್ರಿಕೆಯಲ್ಲಿ ಪ್ರಕಟಿತವಾಗಿದೆ.

ಹೊಸ ಶಿಪಾಯಿಗಳನ್ನು ಸೇರಿಸುವುದು.

ಹೊಸದಾಗಿ ಜನರನ್ನು ಸಿಪಾಯಿಗಳನ್ನಾಗಿ ಸೇರಿಸುವ ಕಾರ್ಯವು ಚೆನ್ನಾಗಿ ನಡೆಯುತ್ತಿರುವುದು. ಅರ್ಲ್ ಕಿಚನರ ಪ್ರಾರ್ಥನೆಯ ಪ್ರಕಾರ ಕಳೆದ ಸೋಮವಾರದ ದಿವಸ ೧೨ ಗಂಟೆಯ ಕಾಲದಲ್ಲಿ ೪೭೦೦ ಜನರು ಹೊಸದಾಗಿ ಬ್ರಿಟಿಷ್ ಸೇನೆಗೆ ಸೇರಿದರೆಂದು ಸರ್ಕಾರದಿಂದ ಪ್ರಕಟಿತವಾಗಿದೆ. ಕಿಚನರ್‌ರವರು ಹೊಸ ಸೇನೆಯ ಕಾರ್ಯಕ್ರಮವನ್ನು ನಿರ್ಧರಿಸಲು ವಾಲಂಟಿಯರುಗಳ ಸಂಖ್ಯೆಯು ಸಹಾಯಕವಾಗಿದೆ.

ಅಧಿನಿವೇಶಗಳು.

ಕಾನಡಾ.

ಲಂಡನ್, ಆಗಸ್ಟ್ ತಾ|| ೧೨.—ಆಲ್ಬರ್ಟಾ ಪ್ರಾಂತವು ಮಾತೃಭೂಮಿಯಾದ ಗ್ರೇಟ್‌ಬ್ರಿಟನ್ನಿಗೆ ೫ ಲಕ್ಷ ಬುಷಲ್ ಓಟುಗೋಧಿಯನ್ನು ಕೊಟ್ಟಿರುತ್ತದೆ.

ಸೇನೆಗೆ ಸೇರುವುದು.

ಕಾನಡಾದಲ್ಲಿ ಹೊಸ ಸೇನೆಗೆ ಸಾಕಷ್ಟು ಜನರಿಗಿಂತಲೂ ಹೆಚ್ಚಾಗಿ ಸೇರಿರುವುದರಿಂದ ಈಗ ಸೇರಿಸಿಕೊಳ್ಳುವುದು ನಿಲ್ಲಿಸಲ್ಪಟ್ಟಿದೆ.

ಆಸ್ಟ್ರೇಲಿಯಾದಲ್ಲಿ ಜನರು ತಾವುತಾವಾಗಿಯೇ ಸೇನೆಗೆ ಬಂದು ಸೇರಿಕೊಳ್ಳುತ್ತಿರುವರು.

ದಕ್ಷಿಣಾಫ್ರಿಕಾ.

ಬ್ರಿಟಿಷ್ ಸಾರ್ವಭೌಮ ಸರ್ಕಾರದವರು ಯುದ್ಧಾರಂಭವಾಗಿರುವ ಪ್ರಯುಕ್ತ ದಕ್ಷಿಣಾಫ್ರಿಕಾದ ಅಧೀನ ಸರ್ಕಾರದವರ ಸೂಚನೆಯಂತೆ ಸಾರ್ವಭೌಮಸೇನೆಯನ್ನು ದಕ್ಷಿಣಾಫ್ರಿಕಾದಿಂದ ಕರೆಯಿಸಿಕೊಳ್ಳಲು ನಿರ್ಧರಿಸಿರುವರು, ಮತ್ತು ದಕ್ಷಿಣಾಫ್ರಿಕಾದ ಯೂನಿಯನ್ ಸರ್ಕಾರದವರು ತಮ್ಮ ರಾಜ್ಯರಕ್ಷಣೆಗಾಗಿ ಸಾಕಷ್ಟು ಸೇನೆಯನ್ನು ಏರ್ಪಡಿಸಿಕೊಳ್ಳಲು ಒಪ್ಪಿಕೊಂಡಿರುವರು.

೬೦೦೦ ಜರ್ಮನರು ಫಿರಂಗಿಗಳಸಮೇತ ಲೀಜ್ ಪಟ್ಟಣಕ್ಕೆ ೨೪ ಮೈಲುಗಳ ದೂರದಲ್ಲಿರುವ ಲ್ಯಾಂಡನ್ ಪಟ್ಟಣವನ್ನು ಹಿಡಿದಿರುವರು. ಈ ಪ್ರಯತ್ನಗಳೆಲ್ಲವೂ ದೊಡ್ಡ ಯುದ್ಧಕ್ಕೆ ಪೀಠಿಕೆಯಾಗಿರುವುವು.

ಲಂಡನ್, ಆಗಸ್ಟ್ ತಾ|| ೧೨.—ಬೆಲ್ಜಿಯನ್ನರು ಲ್ಯಾಂಡನ್ ಪಟ್ಟಣವನ್ನು ಪುನಃ ಸ್ವಾಧೀನಪಡಿಸಿಕೊಂಡಿರುವರು.

ಲಂಡನ್, ಆಗಸ್ಟ್ ತಾ|| ೧೨.— ಜರ್ಮನಿಯ ಸೈನಿಕರು ಲೀಜಿನಿಂದ ಬೆಲ್ಜಿಯಮ್ಮಿನ ಮಧ್ಯಭಾಗಕ್ಕೆ ಹೋಗುತ್ತಿರುವರು. ಜರ್ಮನಿಯ ಅಶ್ವಸೇನೆಯು ಮುಂದೆ ಹೋಗುತ್ತಿರುವುದು. ಮತ್ತು ಉಭಯ ಸೇನೆಯ ಮುಂಭಾಗದಲ್ಲಿ ಅಶ್ವಸೇನೆಯವರ ಕದನವು ತೀಕ್ಷ್ಣವಾಗಿ ನಡೆಯುತ್ತಿರುವುದು.

ಲಂಡನ್, ಆಗಸ್ಟ್ ತಾ|| ೧೨.— ಜರ್ಮನಿಯವರ ಮುಂದುವರಿದಿದ್ದ ಸೇನೆಯು ಹಿಂದಕ್ಕೆ ಬೀಳುತ್ತಿದೆಯೆಂದು ಬೆಲ್ಜಿಯಮ್ಮಿನ ಸರ್ಕಾರವು ತಿಳಿಸುತ್ತದೆ. ಇತರ ವರ್ತಮಾನವೇನೂ ಇಲ್ಲವು.

ಲಂಡನ್, ಆಗಸ್ಟ್ ತಾ|| ೧೨.— ಲೀಜಿನಿಂದ ಬೆಲ್ಫೋರ್ಟಿನವರೆಗಿರುವ ಎಲ್ಲ ಕೋಟೆಗಳೂ ಸುರಕ್ಷಿತವಾಗಿರುವುವೆಂದೂ ಮತ್ತು ಜರ್ಮನ್ ಸೇನೆಯ ಚಿಕ್ಕಗುಂಪುಗಳು ಮಾತ್ರ ಕತ್ತಲೆಯಲ್ಲಿ ಲೀಜ್‌ಪಟ್ಟಣವನ್ನು ಪ್ರವೇಶಿಸಿದರೆಂದು ಫ್ರೆಂಚ್ ಸರ್ಕಾರದವರು ವತ್ತಿ ತಿಳಿಸಿರುವರು.

ಫ್ರೆಂಚರ ಎಲ್ಲೆಕಟ್ಟು.

ಜರ್ಮನರ ಸೈನಿಕರ ಗುಂಪು ತಿಯೋನ್‌ವಿಲ್ಲೆ ಮತ್ತು ಲೀಜುಗಳ ಮಧ್ಯೆ ವಿಂಗಡಿಸಿಕೊಂಡು ಫ್ರಾನ್ಸಿನ ಪಶ್ಚಿಮ ಎಲ್ಲೆಕಟ್ಟಿನಲ್ಲಿರುತ್ತದೆ. ಮತ್ತು ಲೊರೇನು ಅಷ್ಟೇನೂ ಭದ್ರವಾಗಿ ಹಿಡಿಯಲ್ಪಟ್ಟಿಲ್ಲವು ಎಂದು ಸರ್ಕಾರದಿಂದ ನಿಯಮಿತವಾಗಿರುವ ವರ್ತಮಾನಸಂಘವು ತಿಳುಹುತ್ತದೆ.

ಆಲ್ಸೇಸ್.

ಲಂಡನ್, ಆಗಸ್ಟ್ ತಾ|| ೧೧.— ಆಸ್ಟ್ರಿಯಾದ ಸೇನೆಯು ಆಲ್ಸೇಸನ್ನು ಪ್ರವೇಶಿಸಿರುವುದಾಗಿ ಗೊತ್ತಾಗುತ್ತದೆ.

ಲಂಡನ್, ಆಗಸ್ಟ್ ತಾ|| ೧೨.—ಯುದ್ಧದ ವೆಚ್ಚಕ್ಕಾಗಿ ಜರ್ಮನಿಗೆ ಹಣವು ಬೇಕಾಗಿರುವುದರಿಂದ ಜನರು ಬ್ಯಾಂಕಿನಲ್ಲಿಟ್ಟಿರುವ ೭೫೦೦೦೦೦೦೦ ರೂಪಾಯಿಗಳನ್ನು ಮೊದಲು ಸಾಲವಾಗಿ ತೆಗೆದುಕೊಳ್ಳುವರು ಎಂದು ಬರ್ಲಿನ್ ಪಟ್ಟಣದಲ್ಲಿ ಪ್ರಕಟವಾಗಿದೆ.

ಲಂಡನ್, ಆಗಸ್ಟ್ ತಾ|| ೧೧.— ಜರ್ಮನಿಯ ಗೊಯಿಬೆನ್ ಮತ್ತು ಬ್ರೆಸ್‌ಲೌ ಕ್ರೂಜರುಗಳು ಡಾರ್ಡಿನೆಲ್ಸ್ ಜಲಸಂಧಿಯಲ್ಲಿ ಅವಿತುಕೊಂಡಿರುವುದಾಗಿಯೂ, ಅವುಗಳು ನಾಶಪಡಿಸಲ್ಪಡುವುದಾಗಿಯೂ ಸರ್ಕಾರದ ವರ್ತಮಾನಸಂಘದವರು ತಿಳಿಸುತ್ತಾರೆ. ಇದರಿಂದ ವ್ಯಾಪಾರಕ್ಕೆ ಕುಂದಿಲ್ಲದಂತಾಗಿರುವುದು.

ಲಂಡನ್, ಆಗಸ್ಟ್ ತಾ|| ೧೨.— ಜರ್ಮನಿಯ ಗೊಯಿಬೆನ್ ಮತ್ತು ಬ್ರೆಸ್‌ಲೌ ಕ್ರೂಜರುಗಳು ಡಾರ್ಡಿನೆಲ್ಸಿಗೆ ಬಂದು ಹೊರಗಣ ಇತರದೇಶದ ಹಡಗುಗಳನ್ನು ಹುಡುಕುತ್ತಿರುವುವು.

ಲಂಡನ್, ಆಗಸ್ಟ್ ತಾ|| ೧೨.—ಆಸ್ಟ್ರಿಯನರು ಮಾಂಟಿನಿಗ್ರೋ ಪಟ್ಟಣಕ್ಕೆ ಮುತ್ತಿಗೆ ಹಾಕಲಾರಂಭಿಸಿರುವರು.

ಮಾಂಟಿನಿಗ್ರೋದವರು ಜರ್ಮನಿಯ ರಾಯಭಾರಿಗೆ ಅಪ್ಪಣೆಯ ಚೀಟಿಯನ್ನು ಕೊಟ್ಟಿರುವರು.

ಜರ್ಮನಿಗೆ ಸೇರಿದ ಪಶ್ಚಿಮಾಫ್ರಿಕಾ.

ಲಂಡನ್, ಆಗಸ್ಟ್ ತಾ|| ೧೧.— ಒಂದು ಸಣ್ಣಹಡಗು ಕೇಪ್‌ಟವನ್ನಿಗೆ ಬಂದಿರುತ್ತದೆ, ಮತ್ತು ಜರ್ಮನಿಯವರು ಸ್ವಾಕೋಪ್‌ಮಂಡನ್ನೂ ಲೀಡರಿಟ್ಜನ್ನೂ ಬಿಟ್ಟುಹೋಗಿರುತ್ತಾರೆಂದು ತಿಳಿಸುತ್ತದೆ.

ಟೊಗೋಲ್ಯಾಂಡ್.

ಟೊಗೋಲ್ಯಾಂಡನ್ನು ಗ್ರೇಟ್ ಬ್ರಿಟನ್ನಿನವರು ಸೇರಿಸಿಕೊಂಡುದರಿಂದ ತಂತಿಯಿಲ್ಲದೆ ವರ್ತಮಾನಗಳನ್ನು ಕಳುಹುವ ಪ್ರಪಂಚದ ದೊಡ್ಡಸ್ಟೇಷನ್ನುಗಳಲ್ಲೊಂದು ಗ್ರೇಟ್‌ಬ್ರಿಟನ್ನಿಗೆ ದೊರಕಿದಂತಾಯಿತು. ಈ ಸ್ಟೇಷನ್ನಿನಿಂದ ೩೦೦೦ ಮೈಲಿ ದೂರದವರೆಗೆ ವರ್ತಮಾನವನ್ನು ಕಳುಹಬಹುದು.

ಫ್ರಾನ್ಸ್ ಮತ್ತು ಬೆಲ್ಜಿಯಂ.

ಲಂಡನ್, ಆಗಸ್ಟ್ ತಾ|| ೧೨.— ಜರ್ಮನಿಯ ೨೬ ಸೇನಾಂಗಗಳು ಈಗ ಬೆಲ್ಜಿಯಮ್ಮಿನಲ್ಲಿ ಸಿದ್ಧಗೊಳಿಸಲ್ಪಟ್ಟಿವೆಯೆಂದು ಸರ್ಕಾರಿಯ ವರ್ತಮಾನಸಂಘದವರು ತಿಳಿಸುತ್ತಾರೆ. ಜರ್ಮನ್ ಸೇನೆಯ ಗುಂಪುಗಳು ಲೀಜ್ ಮತ್ತು ಲುಕ್ಸಂಬರ್ಗ್ ಗಳ ಮಧ್ಯೆ ಒಟ್ಟುಗೂಡುತ್ತಿರುವುದಾಗಿಯೂ, ಯುದ್ಧರಂಗದ ಪೂರ್ವದಿಕ್ಕಿನ ಮುಂಭಾಗವು ಜರ್ಮನಿಯವರಿಂದ ಅಷ್ಟು ಭದ್ರವಾಗಿ ಕಾಯಲ್ಪಡುತ್ತಿಲ್ಲವೆಂದೂ ವ್ಯಕ್ತವಾಗುತ್ತದೆ.

ಹಾಲೆಂಡ್.

ಲಂಡನ್, ಆಗಸ್ಟ್ ತಾ|| ೧೩.— ಹಾಲೆಂಡಿನ ಶಾಂತಸ್ಥಿತಿಯನ್ನು ಕೆಡಿಸುವ ಪ್ರಯತ್ನವು ನಡೆದಲ್ಲಿ ತಕ್ಕ ಶಕ್ತಿಯಿಂದ ನಿಗ್ರಹಿಸಲ್ಪಡುವುದೆಂದು ಡಚ್ ಸರ್ಕಾರವು ಪ್ರಕಟಿಸಿದೆ.

ಆಸ್ಟ್ರಿಯಾ.

ಲಂಡನ್, ಆಗಸ್ ತಾ|| ೧೩.— ಮಾಂಟಿನಿಗ್ರೋಯವರು ಕ್ಯಾಟರೋ ಪಟ್ಟಣಕ್ಕೆ ಫಿರಂಗಿಯನ್ನು ಹೊಡೆಯುತ್ತಿರುವರು. [ಕ್ಯಾಟರೋ ಪಟ್ಟಣವು ಅಡ್ರಿಯಾಟಿಕ್ಕಿನಮೇಲೆ ಮಾಂಟಿನಿಗ್ರೋ ಮತ್ತು ಬೊಕ್ಕಾಡಿ ಕಾಟರೋ ಪರ್ವತಗಳ ಮಧ್ಯದಲ್ಲಿರುವ ಒಂದು ಸಣ್ಣ ಪಟ್ಟಣವಾಗಿದೆ.]

ಬೆಲ್ಜಿಯಮ್ಮಿನಲ್ಲಿರುವ ಜರ್ಮನ್ ಬಂದಿಗಳು.

ಕಲ್ಕತ್ತಾ, ಆಗಸ್ಟ್ ತಾ|| ೧೨.— ಬೆಲ್ಜಿಯಮ್ಮಿನಲ್ಲಿ ಬಂದಿ (ಖೈದಿ) ಗಳಾಗಿಡಲ್ಪಟ್ಟಿರುವ ಜರ್ಮನರು ಆಹಾರವಿಲ್ಲವೆಂದು ದೂರುತ್ತಿರುವುದಾಗಿ ಸ್ಟೇಟ್ಸ್‌ಮನ್ ಪತ್ರಿಕೆಗೆ ಬಂದ ವರ್ತಮಾನದಿಂದ ಗೊತ್ತಾಗುತ್ತದೆ.

ಜರ್ಮನಿಯ ಚಕ್ರವರ್ತಿಯಾದ ಕೇಜರನ ಜಾತಕಫಲವು.

ಈ ಚಕ್ರವರ್ತಿಯು ೧೮೫೯ ನಿಯ ಜನವರಿ ತಾ|| ೨೭ ನೆಯ ರಾತ್ರಿ ೩ ಗಂಟೆಯಲ್ಲಿ ಎಂದರೆ ಶಾಲಿವಾಹನಶಕಗತಾಬ್ದ ೧೭೮೧ ನೆಯ ಸಿದ್ಧಾರ್ಥಿ ಸಂವತ್ಸರದ ಮಕರಮಾಸ ತೇದಿ ೧೦ ಕ್ಕೆ ಸರಿಯಾದ ಪುಷ್ಯಬಹುಳ ಪಂಚಮಿ ಉತ್ತರಾನಕ್ಷತ್ರದ ಪ್ರಥಮಪಾದ ಮಿಥುನಲಗ್ನದ ಪ್ರಥಮದ್ರೇಕ್ಕಾಣದಲ್ಲಿ ಪೋಟ್ಸ್‌ಡಂ ಎಂಬಲ್ಲಿ ಜನಿಸಿದನು. ಈತನ ಜಾತಕವನ್ನು ಡಬ್ಲ್ಯು. ಓಲ್ಡ್ ಎಂಬಾತನು ೧೮೮೮ ರಲ್ಲಿ ಗುಣಿಸಿ ಅದರ ಫಲವನ್ನು ಬರೆದಿರುವುದು ಹೇಗೆಂದರೆ:—

ಶನಿಯು ದುರ್ಬಲರಾಶಿಗತನಾಗಿ, ಅತ್ಯಂತ ದುರ್ಬಲರಾಶಿಯಲ್ಲಿರುವ ರವಿಯನ್ನು ದೃಷ್ಟಿಸುತ್ತಿರುವನು. ಕುಜ ಮತ್ತು ವರುಣ (ನೆಪ್ಚ್ಯೂನ್) ಯಾಮ್ಯೋತ್ತರಲಗ್ನದಲ್ಲಿ ಒಟ್ಟುಗೂಡಿರುವರು. ಈ ಎರಡು ಗ್ರಹಗಳಿಗೆ ಸೂರ್ಯನು ಕೇಂದ್ರಾರ್ಧದಲ್ಲಿರುವನು. ಕೆಡುಕನ್ನು ಮಾಡುವ ವರುಣ (Neptune) ಕುಜ (Mars) ಮತ್ತು ಇಂದ್ರ (Uranus) ಗ್ರಹಗಳು ಪ್ರಬಲರಾಗಿರುವರು. ಮತ್ತು ಚಂದ್ರನು ಇಂದ್ರಗ್ರಹವನ್ನು ನೋಡುತ್ತಿರುವನು. ಚಕ್ರವರ್ತಿಯ ಜಾತಕವು ಬಹಳ ವಿಪತ್ಕರವಾಗಿರುವುದು. ಈತನ ಆಳಿಕೆಯಲ್ಲಿ ಜರ್ಮನಿಯ ಚಕ್ರಾಧಿಪತ್ಯವು ಹಿಂದೆ ಯಾವಾಗಲೂ ಕಾಣದಂತಹ ಬದಲಾವಣೆಗಳನ್ನು ಹೊಂದುವುದು. ಕೇಜೇರ್ ವಿಲ್‌ಹೆಲಮ್ಮನು ತನ್ನ ದುರದೃಷ್ಟದಿಸೆಯಿಂದ ತನ್ನ ರಾಜ್ಯದ ಬಹುಭಾಗವನ್ನು ಕಳೆದುಕೊಳ್ಳುವನು. ಈತನು ಯಾವಾಗಲೂ ಪ್ರಜಾನುರಾಗಿಯಾಗಿರುವುದಿಲ್ಲವು. ಕುಜಗ್ರಹವು ಯಾಮ್ಯೋತ್ತರ ಲಗ್ನದಲ್ಲಿದ್ದು ಚಕ್ರವರ್ತಿಯನ್ನು ಯಾವತ್ತು ಕಲಹದಲ್ಲಿ ತೊಡಗಿಸುವುದು, ಮತ್ತು ಸೂರ್ಯಗ್ರಹವು ಶನಿಯನ್ನು ದೃಷ್ಟಿಸುತ, ಚಕ್ರವರ್ತಿಯು ಜನಾಂಗಗಳಲ್ಲಿ ತನ್ನ ರಾಜ್ಯದರ್ಪವನ್ನು ಕಳೆದುಕೊಳ್ಳುವಂತೆ ಮಾಡುವುದು. ಚಂದ್ರಗ್ರಹವು ವಕ್ರಗತಿಯಲ್ಲಿರುವ ಇಂದ್ರಗ್ರಹವನ್ನು ದೃಷ್ಟಿಸುತ್ತಿರುವುದರಿಂದ ಚಕ್ರವರ್ತಿಯು ತನ್ನ ಪತ್ನಿಯನ್ನು ಆಕಸ್ಮಿಕವಾಗಿ ಕಳೆದುಕೊಳ್ಳುವನು. ಈತನ ರಾಜ್ಯವು ಫ್ರಾನ್ಸು ಮತ್ತು ರಷ್ಯಾ ರಾಜ್ಯಗಳ ಕೈವಶವಾಗುವುದು ಅಸಂಭವವಲ್ಲವು. ಈ ಎರಡು ರಾಜ್ಯಗಳು ಮಾತ್ರ ಜರ್ಮನ್‌ರಾಜ್ಯವನ್ನು ಸ್ವಾಧೀನಪಡಿಸಿಕೊಳ್ಳಲು ಹೋರಾಡುವುವು. ಆದರೆ ಕೇಜರನು ಅದನ್ನು ಉಳಿಸಿಕೊಳ್ಳಲಶಕ್ತನಾಗಿರುವನು. ಯೂರೋಪಿನ ರಾಜರುಗಳಲ್ಲಿ ತುರ್ಕಿಯ ಸುಲ್ತಾನಿನ ವಿನಾ ಇತರರಾರಜಾತಕವೂ ಈ ಕೇಜರನ ಜಾತಕದಷ್ಟು ಹೀನವಾಗಿಲ್ಲವು. ಕೇಜೇರನು ಮನೋವ್ಯಥೆಯಿಂದ ಆಕಸ್ಮಿಕವಾಗಿ ಸಾಯುವನು.

ಮೈಸೂರ್ ಸ್ಟಾರ್.

ಸನ್ ೧೯೧೪ ನೆಯ ಆಗಸ್ಟ್ ತಾ||೧೬ನೆಯ ಭಾನುವಾರ.

ಭರತಖಂಡದಲ್ಲುಂಟಾಗಿರುವ ಕಷ್ಟ.

ದುರ್ದೈವವಶಾತ್ ಪಶ್ಚಿಮಖಂಡದಲ್ಲಿ ಯುದ್ಧಾಗ್ನಿಯ ಬೇಗೆಯು ವ್ಯಾಪಿಸಿ ನಾನಾ ಅನರ್ಥವನ್ನುಂಟುಮಾಡುತ್ತಿದೆ. ಭರತಖಂಡವು ಮಹದಾಶ್ರಯವನ್ನು ಪಡೆದಿರುವುದರಿಂದ ಇದಕ್ಕೆ ಬಹುಶಃ ಆ ತೆರದ ಸಂಕಷ್ಟಗಳು ಒದಗುವ ಸಂಭವವಿಲ್ಲದೆ ಇದ್ದರೂ, ಇದಕ್ಕಿರುವ ಬಡತನದಲ್ಲಿ ಇಷ್ಟವಸ್ತುಗಳ ಬೆಲೆಯ ಹೆಚ್ಚಿಗೆಯಿಂದ, ಇಲ್ಲಿನ ಜನರು ತಾಪತ್ರಯದ ಬೇಗೆಯನ್ನು ವಿಶೇಷವಾಗಿ ಅನುಭವಿಸಬೇಕಾಗಿ ಬಂದಿದೆ. ಈ ದೇಶದಲ್ಲಿ ನಾಲ್ಕೆಂಟು ವರ್ಷಗಳಿಂದ ಆಹಾರ್ಯವಸ್ತುಗಳ ಬೆಲೆಯು ಏರಿರುವುದಂತೂ ಗೊತ್ತೇ ಇದೆ. ಈಗಲಾದರೊ ವಿದೇಶೀಯ ವಸ್ತುಗಳಿಗೂ ಬೆಲೆಯು ಒಂದಕ್ಕೆ ಎರಡುಮೂರರಷ್ಟು ಹೆಚ್ಚಿಹೋಗಿ, ಬಡಜನರಿಗೆ “ದುರ್ಭಿಕ್ಷದಲ್ಲಿ ಅಧಿಕಮಾಸ” ವೆಂದಂತಾಗಿದೆ. ಅನ್ಯದೇಶಗಳಿಂದ ಭರತಖಂಡಕ್ಕೆ ಬರುವ ಆವಶ್ಯಕಸಾಮಗ್ರಿಗಳಲ್ಲಿ ಜರ್ಮನಿಯ ಸಾಮಾನು ಅಗ್ಗವಾದುವುಗಳು. ಆಸ್ಟ್ರಿಯಾ ಮತ್ತು ಜಪಾನಿನ ಸಾಮಾನುಗಳೂ ಹಾಗೆಯೇ ಇದ್ದುವು. ಕಾಗದ-ಗಾಜಿನ ಸಾಮಾನು-ದೀಪದಕಡ್ಡಿ-ಸಕ್ಕರೆ ಮೊದಲಾದ ಪ್ರತಿದಿನದ ಉಪಯೋಗಕ್ಕೆಬೇಕಾದ ಈ ಸಾಮಗ್ರಿಗಳು ಈಗಿನ ಯುದ್ಧಪ್ರಸಂಗದಿಂದ, ಇಂಗ್ಲೆಂಡಿಗೆ ವಿರುದ್ಧವಾಗಿರುವ ದೇಶಗಳಿಂದ ಭರತಖಂಡಕ್ಕೆ ಬರಕೂಡದಾಗಿ ಮಾಡಲ್ಪಟ್ಟಿವೆ. ಇದರಿಂದ ಈ ದೇಶದ ಮುಖ್ಯಮುಖ್ಯ ನಗರಗಳು ಮೊದಲುಗೊಂಡು ಸಣ್ಣ ಹಳ್ಳಿಯಲ್ಲಿರುವ ವರ್ತಕರುಗಳೆಲ್ಲಾ ತಮ್ಮಲ್ಲುಳಿದಿದ್ದ ಸಾಮಾನುಗಳಿಗೆ ಬೆಲೆಯನ್ನು ಮಿತಿಮೀರಿ ಹೆಚ್ಚಿಸಿಬಿಟ್ಟಿದ್ದಾರೆ. ಈ ಕ್ರಿಯೆಯಲ್ಲಿ ವರ್ತಕರಿಗೆ ಮುಂದೆ ಪದಾರ್ಥಗಳು ಒದಗದೆ ಹೋಗುವುವೆಂಬ ಭೀತಿಯು ಸ್ವಲ್ಪವಿದ್ದರೆ ಈ ಸುಸಮಯದಲ್ಲಿ ಹೆಚ್ಚು ಲಾಭವನ್ನು ಸಂಪಾದಿಸಿಕೊಳ್ಳಬೇಕೆಂಬ ಆಸೆಯು ಮಿಗಿಲಾಗಿರುವಂತೆ ಕಾಣುತ್ತದೆ.

ಆದರೆ ನಮ್ಮ ಸಾರ್ವಭೌಮ ಪ್ರಭುತ್ವದವರು ಇದನ್ನೆಲ್ಲಾ ಯೋಚಿಸದೆ ಬಿಟ್ಟಿಲ್ಲ. ಇಂಗ್ಲೆಂಡ್ ದೇಶಕ್ಕೂ, ಅಧೀನಸ್ವಾಸ್ಥ್ಯಗಳಿಗೂ ಸಹ ಆವಶ್ಯಕವಾದ ಸಾಮಗ್ರಿಗಳನ್ನು ಒದಗಿಸುವುದಕ್ಕೆ ಬೇಕಾದ ಏರ್ಪಾಟನ್ನು ಮಾಡಿಯೂ ಮಾಡುತ್ತಲೂ ಇದ್ದಾರೆ. ಹಡಗಿನಮೇಲೆ ಸಾಗುವ ಸಾಮಾನುಗಳಿಗೆ “ಇನ್ಷ್ಯೂರ್” ಮಾಡುವ ಪದ್ಧತಿಯಲ್ಲಿ ಮಧ್ಯೆ ಅವುಗಳಿಗೆ ನಷ್ಟ ಸಂಭವಿಸಿದರೆ ೧೦೦ ರಲ್ಲಿ ೮೦ ರಷ್ಟಕ್ಕೆ ತಾವು ಹೊಣೆಗಾರರಾಗಿಯೂ, ಅವನ್ನು ಸಾಗಿಸುವ ಕಂಪೆನಿಯವರು ೨೦ ರಷ್ಟಕ್ಕೆ ಹೊಣೆಗಾರರಾಗಿಯೂ ಇರುವಂತೆ ಏರ್ಪಡಿಸಿಕೊಂಡಿದ್ದಾರೆ. ಇದರಿಂದ ಸಾಮಗ್ರಿಗಳ ಯಾತಾಯಾತವು ಸುಲಭವಾಗಿ ನಡೆಯಲು ಮಾರ್ಗವಾಗಿದೆ. ಮತ್ತು ಈಗ ಜರ್ಮನಿ-ಆಸ್ಟ್ರಿಯಾಗಳ ಸಾಮಾನುಗಳು ನಮ್ಮಲ್ಲಿಗೆ ಬರುವುದಕ್ಕೆ ತಡೆಯಾಗಿದ್ದರೂ ಉಳಿದ ಜಪಾನ್-ಇಂಗ್ಲೆಂಡು-ಫ್ರಾನ್ಸು-ಅಮೇರಿಕಾ-ನಾರ್ವೆ-ಸ್ವೀಡನ್ ಮೊದಲಾದ ಕಡೆಗಳಿಂದ ಬೇಕಾದಷ್ಟು ಸಾಮಗ್ರಿಗಳು ಭರತಖಂಡಕ್ಕೆ ಪರ್ವತದಂತೆ ಸಾಗಿ ಬರುತ್ತಲಿವೆ. ಅವು ಬರುವುದಕ್ಕೆ ನಿರಾತಂಕವನ್ನು ಸರ್ಕಾರದವರು ದಕ್ಷತೆಯಿಂದ ಏರ್ಪಡಿಸಿದ್ದಾರೆ. ಇವು ಬಂದು ಇಳಿದ ಕೂಡಲೇ ಪರದೇಶದ ವಸ್ತುಗಳ ಬೆಲೆಯು ಏರಿರಲು ಎಂದಿಗೂ ಸಾಧ್ಯವಲ್ಲ. ಅದಕ್ಕಾಗಿ ಜನರು ತತ್ತರಿಸಬೇಕಾಗಿರುವುದಿಲ್ಲ.

ಸ್ವದೇಶದ ಆಹಾರ್ಯಾದಿ ಪದಾರ್ಥಗಳ ಬೆಲೆಯ ಹೆಚ್ಚಿಗೆಯ ವಿಷಯದಲ್ಲಿ ಮಾತ್ರ ತಕ್ಕ ಏರ್ಪಾಟನ್ನು ಆಯಾ ಸ್ಥಳಿಕ ಪ್ರಭುತ್ವದವರೇ ಯಾವುದಾದರೊಂದು ರೀತಿಯಲ್ಲಿ ಮಾಡುವುದು ಅತ್ಯವಶ್ಯಕವಾಗಿದೆ. ಬೊಂಬಾಯಿ ಸರ್ಕಾರದವರು ಈ ವಿಷಯದಲ್ಲಿ ಮುಂದಾಗಿ ಪ್ರವರ್ತಿಸಿ ಒಂದು ಮೇಲ್ಪಂಕ್ತಿಯನ್ನು ಹಾಕಿದ್ದಾರೆ. ಏನೆಂದರೆ—ಪ್ರಜಾಪಕ್ಷದ ಕೆಲ ಮುಖಂಡರುಗಳ ಸಂಘವೊಂದನ್ನೇರ್ಪಡಿಸಿ, ಅವರ ಆಲೋಚನೆಯನ್ನು ತೆಗೆದುಕೊಂಡು ಧಾನ್ಯಾದಿಗಳ ಬೆಲೆಯನ್ನು ಇಷ್ಟೇ ಇಡಬೇಕೆಂದು ನಿಗದಿಮಾಡುವರು. ಅದಕ್ಕಿಂತ ಮೀರಿ ಯಾವ ವ್ಯಾಪಾರಿಯೂ ಮಾರಕೂಡದು. ಆವಶ್ಯಕವಾದ ಸಾಮಗ್ರಿಗಳನ್ನು ಹೊರಗಿನಿಂದ ತರಿಸಿ ಒದಗಿಸಲು ಸರ್ಕಾರದವರು ಸಿದ್ಧರಾಗುವರು. ಇಂಥ ಏರ್ಪಾಟನ್ನು ಪ್ರತಿಯೊಂದು ಸರ್ಕಾರದವರೂ ದರ್ಪದಿಂದ ಮಾಡುತ್ತಬಂದರೆ ಅಲ್ಲಲ್ಲಿನ ಬಡಪ್ರಜೆಗಳಿಗೆ ಬಹಳ ಉಪಕಾರವಾಗುತ್ತದೆ. ಕ್ಷಾಮದ ವಾಸನೆಯು ಬಡಿಯುತ್ತಿರುವ ನಮ್ಮ ಮೈಸೂರುದೇಶದಲ್ಲಂತೂ ಈ ಏರ್ಪಾಟನ್ನು ನಮ್ಮ ಪ್ರಜಾಪ್ರಿಯರಾದ ಸರಕಾರದವರು ಆವಶ್ಯಕವಾಗಿ ಮಾಡಬೇಕೆಂದು ಪ್ರಾರ್ಥಿಸುವೆವು.

ಒಳದೇಶದ ವೃತ್ತಾಂತಗಳು.

ನಮ್ಮ ಸರ್ಕಾರದವರು ೧|| ಲಕ್ಷ ರೂ. ವ್ಯಯದಿಂದ ಒಂದು ನೀಸದಕಡ್ಡಿಯ ಕಾರ್ಯಾಲಯವನ್ನು ಸ್ಥಾಪಿಸಲು ಯೋಚಿಸುತ್ತಿರುವುದಾಗಿ ತಿಳಿಯುತ್ತೇವೆ.

—o—

ಚೀಫ್‌ಕೋರ್ಟಿನ ರೆಜಿಸ್ಟ್ರಾರರ ಕೆಲಸವು ಅ||ಕ|| ಮ|| ಜಯರಾಮಯ್ಯನಿಗೆ ಕೊಡಲ್ಪಡಬಹುದೆಂದು ಚೀಫ್‌ಕೋರ್ಟಿನ ಜಡ್ಜಿಗಳು ಅಭಿಪ್ರಾಯಪಟ್ಟಿರುವುದಾಗಿ ತಿಳಿಯಬರುತ್ತದೆ.

—o—

ರಾಜಧಾನಿಯಲ್ಲಿ ಈಗ್ಗೆ ೧-೨ ವಾರದ ಹಿಂದೆ ಕುದುರೆಯ ಬಂಡಿಯ ಚಕ್ರಕ್ಕೆ ಸಿಕ್ಕಿ ಕಾಲನ್ನು ಮುರಿದುಕೊಂಡು ಆಸ್ಪತ್ರೆಯ ಚಿಕಿತ್ಸೆಯಲ್ಲಿದ್ದ ವೆಂಕಟರಾಯರು ವಿಧಿವಶರಾದರು.

—o—

ಬೆಂಗಳೂರಿನಲ್ಲಿರುವ ಆರಣಿ ಜಹಗೀರುದಾರರು ತಮಗೆ ವಿಧಿಸಲ್ಪಟ್ಟಿರುವ ಅರ್ಥ ದಂಡದ ವಿಚಾರದಲ್ಲಿ ಬೆಂಗಳೂರು ದಂಡಿನ ಸೆಷನ್ಸು ಜಡ್ಜರಲ್ಲಿ ಮಾಡಿದ ಅಪೀಲಿನಲ್ಲೂ ಕೆಳಕೋರ್ಟಿನ ಶಿಕ್ಷೆಯು ಸ್ಥಿರಗೊಳಿಸಲ್ಪಟ್ಟಿತು.

—o—

ಮೊದಲು ಗೊತ್ತಾಗಿದ್ದ ಪ್ರಕಾರ ರಾಜಧಾನಿಯ ಜಗನ್ಮೋಹನ ಪ್ರಾಸಾದದಲ್ಲಿ ಪುಷ್ಪಪ್ರದರ್ಶನವು ನಿನ್ನೆಯ ಸಾಯಂಕಾಲ ಶ್ರೀಮನ್ಮಹಾರಾಜರವರ ಹಸ್ತದಿಂದ ಆರಂಭಿಸಲ್ಪಟ್ಟಿತು. ಈದಿವಸ ಪ್ರೇಕ್ಷಕರು ಉಚಿತವಾಗಿ ಬಿಡಲ್ಪಡುವರು.

—o—

ರಾಜಧಾನಿಯ ನಿವಾಸಿಗಳು ಕಳೆದ ಬುಧವಾರ ಟೌನ್ ಹಾಲಿನಲ್ಲಿ ಡೆಪ್ಯುಟೀಕಮೀಷನರಧ್ಯಕ್ಷತೆಯಲ್ಲಿ ಸಭೆ ಸೇರಿದ್ದು ಯೂರೋಪಿನಲ್ಲಿ ಪ್ರಾಪ್ತವಾಗಿರುವ ಯುದ್ಧವಿಚಾರದಲ್ಲಿ ಬ್ರಿಟಿಷರಿಗೆ ತಮ್ಮ ರಾಜಭಕ್ತಿಯನ್ನು ಪ್ರದರ್ಶಿಸುವಬಗೆಗೆ ಸರದಾರ್ ಕಾಂತರಾಜಅರಸಿನವರ ಅಧ್ಯಕ್ಷತೆಯಲ್ಲಿ ಒಂದು ಮಹಾಸಭೆಯನ್ನು ಸೇರಿಸಬೇಕೆಂದು ನಿರ್ಧರಿಸಿದರು.

—o—

ರಾಜಧಾನಿಯಲ್ಲಿ ಕಳೆದ ಬುಧವಾರ ಮಧ್ಯಾಹ್ನ ಪ್ರಾಯಶಃ ||| ಅಂಗುಲ ಮಳೆಯಾಯಿತು. ಪ್ಲೇಗುಮರಣವು ಅಲ್ಲಲ್ಲಿ ಒಂದೊಂದರಂತೆ ಆಗುತ್ತಿರುವುದು. ಹೆಲ್ತಾಫೀಸರು ಇನಾಕ್ಯುಲೇಷನ್ ಮಾಡಲುಪಕ್ರಮಿಸಿರುವರು. ಡೆಂಗ್ಯುಜ್ವರದ ಹಾವಳಿಯು ಇನ್ನೂ ಕಡಮೆಯಾಗಿಲ್ಲವು. ಇತರ ರೋಗಗಳಾವುವೂ ಇಲ್ಲವು. ರಾಜಧಾನಿಯಲ್ಲಿ ರೂ. ೧ ಕ್ಕೆ ಅಕ್ಕಿಯನ್ನು ೭ ಸೇರಿನಂತೆಯೂ, ರಾಗಿಯನ್ನು ೧೪ ಸೇರಿನಂತೆಯೂ ಮಾರಿಸುತ್ತಿರುವವರು ಗತಿಸಿದ ಸಾ|| ಬಜ್ಜಣ್ಣನವರ ಪತ್ನಿಯವರಲ್ಲದೆ ಸಾ|| ಬನುಮಯ್ಯನವರಲ್ಲ. ಈಕೆಯವರು ಈ ದುರ್ಭಿಕ್ಷಕಾಲದಲ್ಲಿ ಮಾಡಿರುವ ಏರ್ಪಾಟಿನಿಂದ ಬಡಬಗ್ಗರಿಗೆ ಮಹದುಪಕಾರವಾಗಿರುವುದರಲ್ಲಿ ಸಂದೇಹವಿಲ್ಲವು. ಇವರ ಧರ್ಮಬುದ್ಧಿಯು ಶ್ಲಾಘ್ಯವಾಗಿರುತ್ತದೆ.

—o—

ಸೀನಿಯರ್ ಸರ್ಜನ್ನರಾದ ಡಾ|| ಆರ್ಮುಗಂ ಮೊದಲಿಯಾರರು ಕಳೆದವಾರ ರಾಜಧಾನಿಗೆ ದಯಮಾಡಿದ್ದು ಕೆಲ ಮಿಠಾಯಿಅಂಗಡಿಗಳನ್ನೂ ಫಲಾಹಾರಮಂದಿರಗಳನ್ನೂ ಮತ್ತೆ ಕೆಲ ಸ್ಥಳಗಳನ್ನೂ ಮಹಾರಾಣಿಯವರ ಆಸ್ಪತ್ರೆಯನ್ನೂ ಪರಾಮರಿಸಿಕೊಂಡು ದಯಮಾಡಿಸಿದರು. ಅನೇಕಕಡೆ ಕಶ್ಮಲವು ನಿತ್ಯದಲ್ಲೂ ಸಾಗಿಸಲ್ಪಡದೆ ರಾಶಿಯಾಗಿ ಬಿದ್ದು ಕೊಳೆತು ದುರ್ಗಂಧವನ್ನು ಬೀರುತ್ತಿರುವ ಕಡೆ ಇವರ ಗಮನವು ತಿರುಗಿದ್ದರೆ ಬಹಳ ಉಪಕಾರವಾಗುತ್ತಿದ್ದಿತು. ನಮ್ಮ ಹೆಲ್ತಾಫೀಸರು ಇಲ್ಲಿಗೆ ಬಂದ ತರುಣದಲ್ಲಿ ಊರಿನ ಪ್ರತಿಯೊಂದು ಭಾಗದಲ್ಲೂ ದಿನವಹಿ ಸಂಚರಿಸುತ್ತಿದ್ದಂತೆ ಈವಾಗ ಸಂಚರಿಸದಿರುವುದನ್ನು ನೋಡಿದರೆ ಅವರ ಮನಸ್ಸಿಗೆ ಏನೋ ಜುಗುಪ್ಸೆಯಾಗಿರುವಂತೆ ತೋರುತ್ತದೆ. ಇದರಿಂದ ಸಣ್ಣ ಕೆಲಸಗಾರರು ತಂತಮ್ಮ ಕೆಲಸಗಳಲ್ಲಿ ಅಶ್ರದ್ಧೆಯನ್ನು ತೋರಿಸಲು ಕಾರಣವಾಗಿರುವುದು.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರಘ ರಾಜೇಂದ್ರ ಮಹಾಸ್ವಾಮಿನಾಂ;

ಶ್ರೀಮುಚ್ಚಿನ್ಮಲಾದ್ರಿ ಬೃಹನ್ಮಠ ಮಹಾ॥ ॥ಸಂಸ್ಥಾನ ಕಛೇರಿಯಿಂದ:—

ಸಮಸ್ತ ಭಕ್ತಮಂಡಲಿಗೆ ಈ ಮೂಲಕ ತಿಳಿಸುವುದೇನಂದರೆ, ಈವರಿವಿಗೆ ಶ್ರೀಮನ್ಮಹಾಬಾಹಾಸ್ವಾಮಿಯು ಸರ್ಕ್ಯುಲರ್ ನೈಜಾಂಸ್ಯೇಟಿನಲ್ಲಿದ್ದುದರಿಂದ ನಿಮ್ಮನಿಮ್ಮ ಪಟಾಲುಗಳನ್ನು ಲಾತೂರು ಪೋಸ್ಟಿಗೆ ಬಿನ್ನೈಸಿಕೊಳ್ಳುವಂತೆ ತಿಳಿಸಿದ್ದು ಸರಿಯಷ್ಟೆ. ಆದರೆ, ಮಹಾ॥ ॥ಸಂಸ್ಥಾನಸ್ವಾಮಿಯು ಇನ್ನು ಕೆಲವು ದಿವಸಗಳಲ್ಲಿ ಕೊಲ್ಹಾಪುರಕ್ಕೆ ದಯಮಾಡಿಸತಕ್ಕವರಿರುವುದರಿಂದ ಮಹಾ॥ ॥ಸನ್ನಿಧಾನಕ್ಕೆ ಪತ್ರಗಳನ್ನು ಬಿನ್ನೈಸಿಕೊಳ್ಳತಕ್ಕವರು "ಶ್ರೀಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಥಾನ ಕೊಲ್ಹಾಪುರ್, ಪೋಸ್ಟ್, ಕೊಲ್ಹಾಪುರ್ ಸಿಟಿ" ಎಂದು ಇಂಗ್ಲೀಷಿನಲ್ಲಾಗಲಿ, ಬಾಳಬೋಧದಲ್ಲಾಗಲಿ, ಮರಾಠಿಯಲ್ಲಾಗಲೀ ವಿಳಾಸವನ್ನು ಬರೆಯಬೇಕು.

ಕೊಲ್ಹಾಪುರ, ಲೀಂಗ,} ಚೆನ್ನಬಸವಯ್ಯ, ಸಂಸ್ಥಾನಿಕರ
೭-೮-೧೯೧೪. } ಕಾರಬಾರಿ, ಚಿತ್ರದುರ್ಗ.

ಮಹಾಸಭೆಯ ಸಂಗರ.

ಮಹನೀಯರುಗಳೇ, ೭ ನೆಯ ವೀರಶೈವ ಮಹಾಸಭೆಯು ನಿರ್ವಿಘ್ನವಾಗಿ ನಡೆದು ಇಂದಿಗೆ ೧—೨ ವರ್ಷಗಳಾದರೂ ೪ ನೆಯ ವೀರಶೈವ ಮಹಾಸಭೆಯು ಸ್ಥಾಯೀ ಸಮಿತಿಯವರಿಂದ ಈಗಿನವರೆಗೆ ಈ ವಿಷಯದಲ್ಲಿ ನಮ್ಮ ಶ್ರೀ ಶಿವಮೂರ್ತಿಸ್ವಾಮಿ ಕೆಣಬುರ್ಗಿಮಠದ ಅವರು ಕೆಲವು ಸೂಚನೆಗಳನ್ನು ಪತ್ರಿಕಾಮೂಲಕ ಪ್ರಕಟಪಡಿಸಿರುವುದು ಸಮಾಜಬಾಂಧವರೆಲ್ಲರಿಗೂ ಸಂತೋಷಪ್ರದವಾದ ಸಂಗತಿಯಾಗಿದೆ. ಆದರೆ ವರ್ಷಾನುವರ್ಷಗಳಲ್ಲಿ ಸಮಾವೇಶವಾಗುವ ಮಹಾಸಭೆಯ ಕಾರ್ಯವು ನಮ್ಮ ಸಮಾಜಬಾಂಧವರು ಅಲಕ್ಷ್ಯದಿಂದ ನೋಡುವುದರಿಂದ ನಿಲ್ಲಿಸಲ್ಪಟ್ಟಿದ್ದು ಈಗ ತಾನೆ ಸಾಗುತ್ತಿರುವುದಿಲ್ಲವೆಂದು ತೋರುತ್ತಿದೆ. ಸಭೆಯ ಕಾರ್ಯವು ನಿಂತಿರುವುದು ಅಹಾ! ಸಮಾಜದ ನಿರ್ಭಾಗ್ಯವೇ! ನಿನಗೆ ಈ ದುರವಸ್ಥೆ ಏತಕ್ಕೆ? ನಿನಗೆ ನೆಲೆಯಿಲ್ಲದ ಉತ್ಸಾಹವೂ ಕುತೂಹಲವೂ ಈಗ ಎಲ್ಲಿ ಹಾರುಹೋಗಿರುವುದು? ಅಲಕ್ಷ್ಯ ದೇವತೆ ನಿನ್ನಾದರೂ ಬಂದು ಸಾಗಿಕೊಂಡಿರುವಳೇ? ಸರಿ! ಸರಿ!! ಈ ಕಾರಣದಿಂದಲೇ ನಿನಗೆ ಇಂಥಾ ಸಂಕಟ ದೊರೆತಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ಸಭೆಯ ಕಾರ್ಯವು ಸಮಾಜಬಾಂಧವರು ಇನ್ನಾದರೂ ಎಚ್ಚರಗೊಂಡು ಪ್ರಯತ್ನಪಡಬೇಕಾಗಿದೆ. ಲಕ್ಷ್ಯಕೊಡುವವರಾಗಲೆಂದು ಆಶಿಸುತ್ತೇನೆ. ಸಮಾಜವೇ! ಇಂದಿನವರೆಗೂ ನಡೆದ ಮಹಾಸಭೆಗಳು ನಮ್ಮ ವೀರಶೈವ ಜನಾಂಗದಲ್ಲಿ ಹಾಲಿಯಿರುವ ಸ್ಥಿತಿಗತಿಗಳನ್ನು ಸುಧಾರಿಸುವುದರಲ್ಲಿ ಎಷ್ಟು ಮಟ್ಟಿಗೆ ಕಾರ್ಯ ಸಾಧಕವಾಗಿರುವುವು? ಅಥವಾ ಸಮಾಜದ ಸ್ಥಿತಿಗತಿಗಳು, ಧಂಡುಗಳು, ವೀರಶೈವ ವಾಚನಾಲಯಗಳು ಈ ಸಭೆಗಳ ಮೂಲಕ ಅದೆಷ್ಟು ಸ್ಥಾಪಿತವಾಗಿರುವುವು? ಇಷ್ಟಲ್ಲದೆ ಆ ಮಹಾಸಭೆಯ ಪ್ರತಿಯೊಂದು ಅಧಿವೇಶನದಲ್ಲಿ ನಿರ್ಣಯಿಸಲ್ಪಡುವ ಗೊತ್ತುವಳಿಗಳು ಎಷ್ಟರಮಟ್ಟಿಗೆ ಕಾರ್ಯರೂಪಕ್ಕೆ ಬರುತ್ತಿವೆ? ಇವೆಲ್ಲವೂ ನಮ್ಮ ಸಮಾಜಕ್ಕೆ ಗೊತ್ತಿದೆಯೇ? ಇತರೇತರ ಮಹಾಸಭೆಗಳ ವಿಷಯದಲ್ಲಿ ಏನೆಂದು ಸಮಾಲೋಚಿಸಿ ಕರ್ತವ್ಯತತ್ಪರರಾಗಿರುವರು ಎಂಬುದನ್ನು ನೋಡಿದರೆ ಇದು ಅತ್ಯಂತ ಶೋಚನೀಯವಾದ ಸಂಗತಿ ಎನಿಸಿಕೊಳ್ಳುವುದು. ಹೀಗಾದರೆ ನಾವು ಇಲ್ಲಿಗೇನೆ ಕೃತಕೃತ್ಯರಾದಹಾಗಾಯಿತೇ? ಮುಂದೆ ಮಾಡಬೇಕಾದ ಪ್ರಯತ್ನಗಳೇನೆಂಬೂ ಇಲ್ಲವೇ? ಎಂಬುದನ್ನು ವಿಚಾರಮಾಡತೊಡಗಿದಲ್ಲಿ ಇದರ ತತ್ವವು ನಮ್ಮ ಸಮಾಜಬಾಂಧವರಿಗೆ ತಿಳಿಯದೆಹೋಗಲಾರದು. ಇನ್ನಾದರೂ ನಮ್ಮ ಸಮಾಜಬಾಂಧವರು ಎಚ್ಚತ್ತು ತಮ್ಮ ಕರ್ತವ್ಯವೇನೆಂಬುದನ್ನು ವಿಚಾರಿಸುವವರಾಗಲಿ. ಸಮಾಜಬಾಂಧವರೆ! ಇನ್ನೊಂದು ವಿಷಯವೇನೆಂದರೆ:—ಇಂದಿನವರೆಗೂ ನಡೆದ ಮಹಾಸಭೆಗಳು ತಮ್ಮೊಳಗೆ ತಾವೇ ತಿಳಿದಿರುವುದು ಸರಿಯಷ್ಟೆ! ಆದರೆ ಇಂದಿನವರೆಗೆ ತಾವು ಮಾಡಿರುವ ಸಮಾಜ ಸೇವಾಕಾರ್ಯದಲ್ಲಿ ತೊಡಗಿ ನೂರಕ್ಕೊಬ್ಬರಾದರೂ ಕರ್ತವ್ಯವನ್ನು ನೆರವೇರಿಸಿರುತ್ತಾರೆಯೇ? ನೀವು ನಿಜವಾಗಿಯೂ ಸಮಾಜೋದ್ಧಾರಕರಾಗಿರುವಿರೇ? ಹಾಗಿದ್ದ ಪಕ್ಷದಲ್ಲಿ ಮುಂದುವರಿಯುವ ಕರ್ತವ್ಯವೇನೆಂಬುದನ್ನು ತಿಳಿಸಿರುವಿರೇ? ಸ್ವಕಾರ್ಯದಲ್ಲೂ ಸೋತವರಾಗಿರುವಿರೇ!! ಸಭಾಕಾರ್ಯದಲ್ಲಿ ನೋ ನಾಡಿಕಮಂಡಲಿಯಲ್ಲಿ ನೆರವಾಗಿ ಒಂದುಕಡೆ ಸೇರಿ ಆಗಿನವರಿಗೆ ವಿಷಯಗಳನ್ನೇನೂ ಅವಲೋಕಿಸಿ ಈಚೆಗೆ ಬಂದ ಕಡೆಯಲ್ಲಿ "ರಾತ್ರಿಯಲ್ಲ ರಾಮಾಯಣವನ್ನು ಕೇಳಿ ಬೆಳಗಾದಮೇಲೆ ರಾಮನಿಗೆ ಸೀತೆ ಏನಾಗಬೇಕೆಂದು ಕೇಳಿದ ಕಥೆಯಂತೆ" ಸಾಮತಿಗನುಸಾರವಾಗಿ ವಿಷಯಗಳನ್ನೆಲ್ಲಾ ಮರೆತು ಎಂದಿನಂತೆ ಸ್ವಸ್ಥಚಿತ್ತರಾಗಿ ಕುಳಿತು ಕೊಂಡರೆ ಮಹಾಸಭೆಯು ನಡೆಯುವುದರ ಫಲವು ಕಲ್ಪಾಂತರವಾದರೂ ಕೊನೆಗಾಣುವುದೆ? ಕೊನೆಗಾಣಲಾರದು. ಪ್ರಯುಕ್ತ ನಮ್ಮ ಬಂಧುಗಳು ಸಮಾಜೋನ್ನತಿಯ ಕಡೆಗೆ ಲಕ್ಷ್ಯಕೊಟ್ಟು ಭಗೀರಥಪ್ರಯತ್ನದಂತೆ ಕಾರ್ಯವನ್ನು ಸಾಧಿಸುತ್ತಾ ಬಂದಲ್ಲಿ ಕೃಪಾಸಾಗರನಾದ ಪರಮೇಶ್ವರನ ಕೃಪೆಯಿಂದ ದೊರೆತ ಈ ಮಹಾಸಭೆಯು ಅಚಿರಕಾಲದಲ್ಲಿಯೇ ಊರ್ಜಿತವಾಗುವ ಪ್ರಸಂಗವು ಒದಗದೆ ಇರಲಾರದೆಂದು ಹಾರೈಸಿ ಈ ಲೇಖನವನ್ನು ಇಲ್ಲಿಗೆ ನಿಲ್ಲಿಸುತ್ತೇನೆ.

ಸರ್ವಸಮಾಜ ಹಿತೈಷಿ.
ಕೋನ್‌ಸಾಗರ, ನೊಳಕಾಲ್ಮುರು.

ದಾ ವ ಣ ಗೆ ರೆ.

ಈ ತಾಲೋಕಿನಲ್ಲಿ ಬಿತ್ತುವುದಕ್ಕೆ ಅನುಕೂಲವಾಗಿ ಮಳೆಯಾಗಿ ರೈತರೆಲ್ಲ ಬೀಜಗಳನ್ನು ಬಿತ್ತಿರುತ್ತಾರೆ. ದಾವಣಗೆರೆ ನಿವಾಸಿಗಳು ಬಹಳ ಪ್ರಿಯವಾಗಿ ವ್ಯಾಪಾರದಿಂದ ಬರುವ ಜೀವನವಾದುದರಿಂದ ತುಂಬಾ ಕಷ್ಟವಾಗಿರುತ್ತದೆ. ಇಲ್ಲಿನ ಅಸಿಸ್ಟೆಂಟ್ ಕಮಿಷನರಾದ ಮ॥ ನಾರಾಯಣಸ್ವಾಮಿ ರಾಯರು, ಇಲ್ಲಿಂದ ವರ್ಗವನ್ನು ಹೊಂದಿ ಹೋಗುವುದರ ಸಲುವಾಗಿ ಇಲ್ಲಿಯ ಮುನಿಸಿಪಾಲಿಟಿಯವರು, ವಿದ್ಯಾವಂತರೂ ಒಂದು ಜೊತೆ ಸಭೆಯನ್ನು ನೆರಿಸಿ ಸನ್ಮಾನಿಸಿದರು. ಈ ಸಭೆಯ ಕಡೆಯಲ್ಲಿ ಮಾರ ತಂದಿರುವ ಹೊದಲಾದ ಸುಗಂಧ ದ್ರವ್ಯಗಳಿಂದ ಸತ್ಕರಿಸಿದರು. ಆಗ ಮ॥ ಹರ್ಡೇಕರ್ ಮಂಜಪ್ಪನವರು ಸ್ವಾಗತ ಹೊತ್ತು ಇವರ ಗುಣಕಥನವನ್ನು ಮಾಡಿದರು. ಈಗಲೇ ಸಭೆಯು ಧರ್ಮಾನುಕೂಲವಾಯಿತು. ಇವರು ಬಹಳ ಶಾಂತಚಿತ್ತರು, ನಿರ್ಗರ್ವಿಗಳು, ನಿಷ್ಪಕ್ಷಪಾತಿಗಳು, ಬ್ರಾಹ್ಮಣ ಶೂದ್ರರೆಂಬ ಭೇದಭಾವವಿಲ್ಲದೆ ಸರ್ವರನ್ನೂ ಸಮಾನವಾಗಿ ನೋಡತಕ್ಕವರು. ಇಂಥ ಸದ್ಗುಣಿಗಳು ನಮ್ಮ ಗೌರ್ನಮೆಂಟಿನವರು ಇನ್ನು ಕೆಲವು ಕಾಲ ಇಲ್ಲಿಯೇ ಇಟ್ಟಿದ್ದರೆ ಸರ್ವ ಬಹಳ ಅಭಿವೃದ್ಧಿಸ್ಥಿತಿಗೆ ಬರುತ್ತಿತ್ತು. ಮುಖ್ಯವಾಗಿ ಮುನ್ಸಿಪ್ಪಾಲಿಟಿಯ ಅಧಿಕಾರಿಗಳು ಈ ತಾಲೋಕಿನ ಪ್ರಜೋದಯವೆಂಬುದರಲ್ಲಿ ಸಂದೇಹವಿಲ್ಲ. ಅದ್ಯಾಪ ಸತ್ಪುರುಷಪ್ರಿಯರು, ಸತ್ಯಾತ್ಮರು, ಆದ ಇಂಥ ಮಹನೀಯರು ಬೋಧಾರೋಪಣೆಗಳನ್ನು ಕಲ್ಪಿಸಿ ತರ್ಲೀ ಅಜ್ಞಗಳನ್ನು ಬರೆದ ನಿಜಾತ್ಮರ ಮನಸ್ಸು ಎಷ್ಟು ಕಾಠಿಣ್ಯವೆಂಬುದನ್ನು ಊಹಿಸಿನೋಡಿ. ಅಯ್ಯೋ ಪಾಪಿಗಳೇ! ನಿಮ್ಮ ಪೂರ್ವಪ್ರವರ ಬಲ್ಲೆವು. ಸತ್ಪುರುಷರನ್ನು ನೋಡಿ ಅಸತ್ಪುರುಷರೆಂದು ಹೇಳುವವರ ನಾಲಗೆ ಬಿದ್ದು ಹೋಗದಿರುವುದೇ? ಸರಿ! ನೀವು ದುರಾಚಾರಿಗಳೇ! ನೀವು ಪ್ರಜೆಗಳ ವಿಷಯದಲ್ಲಿ ಇಂತಹ ಬುದ್ಧಿಯನ್ನು ತಂದಿದ್ದರೆ ಸರಿಯೇ? ನೀವು ಎಂದಿಗೂ ಹೀಗೆ ಬರೆಯುತ್ತಿರಲಿಲ್ಲವಲ್ಲವೆ? ಇವರು ನಿಮಗೆ ಅನುಕೂಲವಾಗಿರದೆ ಪ್ರತಿಕೂಲವಾಗಿದ್ದುದೇ ತಪ್ಪಾಯಿತು. ಈಗ ಹೊಸದಾಗಿ ಬಂದಿರುವ ಅಸಿಸ್ಟೆಂಟ್ ಕಮಿಷನರ್ ಮ॥ ಬೊಕ್ಕಣ್ಣನವರಾದರೂ, ಬಹಳ ನಿಷ್ಪಕ್ಷಪಾತದಿಂದ ಸೇವೆಯನ್ನು ಮಾಡಲೆಂದು ಹಾರೈಸುತ್ತೇವೆ.

ಪ್ರಜಾಹಿತೈಷಿಗಳು.

ಆರ್ಯಸಮಾಜಪ್ರವಿಷ್ಟನನ್ನು ವೀರಶೈವನನ್ನಾಗಿ ಮಾಡುವುದು.

ಅಯ್ಯಾ! ನಿಮ್ಮ ಸ್ಟಾರ್‌ಪತ್ರದ ಜುಲೈ ತಾ॥ ೨೮ ರ ಸಂಚಿಕೆಯಲ್ಲಿ ನಿಜಾಂ ಇಲಾಖಾ ಬೀದರಕರ ನಿವಾಸಿ ದಗಡು ಅಪ್ಪ ಎಂಬುವನು ಆರ್ಯಸಮಾಜಪ್ರವಿಷ್ಟನಾಗಿದ್ದು, ಮರಳಿ ವೀರಶೈವಧರ್ಮಸ್ವೀಕಾರಾರ್ಥವಾಗಿ ಶ್ರೀ ಚಿತ್ರದುರ್ಗಸಂಸ್ಥಾನಕ್ಕೆ ಬೇಡಿಕೊಂಡಿರುವುದಾಗಿಯೂ, ಆತನನ್ನು ಪ್ರಾಯಶ್ಚಿತ್ತದ ಮೂಲಕ ವೀರಶೈವನನ್ನಾಗಿ ಮಾಡಲು ಸಂಸ್ಥಾನದವರು ಒಪ್ಪಿರುವರೆಂದೂ ... ಅಗಸ್ಟ್ ತಾ॥ ೧೦ ರೊಳಗೆ ಅದಕ್ಕೆ ಆಕ್ಷೇಪಣೆ ಇದ್ದರೆ ತಿಳಿಸಬೇಕೆಂದು ಬರೆದಿದ್ದೀರಿ ಈ ಕಾರ್ಯವು ಸರ್ವಾನುಮೋದಿತವೆಂದು ಖರೆಯಾಗಿ ಸಲ್ಲಿಸುವುದು ಎಂದೂ, ಚೆನ್ನಬಸವಣ್ಣ ದೇವರು ಮತ ಕಾರಭಾರಿ ಎಂಬುವರ ಸಹಿಯಿಂದ ಪ್ರಕಟಿಸಲ್ಪಟ್ಟ ಜಾಹೀರಪತ್ರಿಕೆಯು ಮುದ್ರಿಸಲ್ಪಟ್ಟಿದೆಯಷ್ಟೆ. ಆ ವಿಷಯದಲ್ಲಿ ನಾನು ಕೊಂಚ ಬಿನ್ನಯಿಸಬೇಕಾಗಿದೆ. ಸದ್ಯಃ ಈ ಸಂಸ್ಥಾನದ ಅಧಿಪತಿಗಳು ಸ್ವತಃ ಶಾಸ್ತ್ರಜ್ಞರಾಗಿರುತ್ತಾರೆ. ಅವರ ಸನ್ನಿಧಿಯಲ್ಲಿ ನಮ್ಮಂಥ ಅಲ್ಪಜ್ಞರು ಬಾಂಧವ್ಯವನ್ನು ತೋರಿಸಬೇಕೆಂಬುದು ಸದ್ಯದ ಪ್ರಯತ್ನದ ಲಕ್ಷ್ಯವಲ್ಲ. ಸ್ವಮತಾಭಿಮಾನ-ಮತ್ತೂ ಶಾಸ್ತ್ರಾಕ್ಷರಣ್ಯತೆ-ಇವುಗಳಿಂದ ಮನಸ್ಸಿನಲ್ಲಿ ತೋರಿದ ಸಂಶಯಗಳನ್ನು ನಿವೇದಿಸುವದಷ್ಟೇ ಈ ಲೇಖನದ ಉದ್ದೇಶವಾಗಿದೆ.

ದಗಡು ಅಪ್ಪ ಎಂಬವನು ಸಮಾಜಕ್ಕೇನೂ ಬಿನ್ನಯಿಸಿಕೊಂಡಿಲ್ಲ. ಸಂಸ್ಥಾನಕ್ಕೆ ಬಿನ್ನಯಿಸಿಕೊಂಡಿದ್ದಾನೆ. ಸಂಸ್ಥಾನದವರು ಈ ವಿಷಯವನ್ನು ಸ್ವತಃ ವಿಚಾರಿಸಿಕೊಂಡು, ಸಮಾಜದವರ ಆಕ್ಷೇಪಕ್ಕೆ ಅಸ್ಪದವಿಲ್ಲದಂತೆ ಕಾರ್ಯವನ್ನು ನಡೆಯಿಸಬಹುದಾಗಿದೆ. ಆದರೆ ಈ ಜಾಹೀರಪತ್ರದಿಂದ ಅವರು ಸಮಾಜದ ಆಕ್ಷೇಪವನ್ನು ನಿವೃತ್ತಿಮಾಡಿಕೊಳ್ಳಲಿಕ್ಕಾಗಿ ಹೀಗೆ ಮಾಡಿರಬೇಕೆಂದು ಕಾಣುತ್ತದೆ. ಅದರ ಈ ವಿಷಯದಲ್ಲಿ ವಿದ್ಯಾವಂತರಾದವರ ಮತ್ತೂ ಆಚಾರ್ಯಪಟ್ಟ ದ್ಧಕ್ಷಿತರಾದ ಪಂಚಸಿಂಹಾಸನದವರ ಅಭಿಪ್ರಾಯವನ್ನೆಲ್ಲಾ ಪಡ್ಯಗಿಸಿಕೊಳ್ಳುವುದು ಅವಶ್ಯಕವಾಗಿತ್ತು. ಏಕೆಂದರೆ—ಈ ವಿಷಯವು ಏತತ್ಕಾಲಕ್ಕೆ ಅಭೂತಪೂರ್ವವಾದದ್ದು. ಒಂದಾವೃತ್ತಿ ದಾರಿ ಹಾಕಿಬಿಟ್ಟರೆ ನಿರರ್ಗಳವಾಗಿ ನಡೆದುಕೊಂಡು ಹೋಗತಕ್ಕದ್ದಾಗಿದೆ. ಆದಕಾರಣ ಇಂಥ ವಿಷಯದಲ್ಲಿ ಸಮಾಜದ ಇತರಜನರ ತಲೆಮೇಲೆ ಇದರ ಭಾರವನ್ನೆಲ್ಲಾ ಹೇರಿ ದೆಹಲೀದೀಪನ್ಯಾಯದಿಂದ ಇಂಥ ಕೆಲಸವನ್ನು ದಾಟಿಸುವುದು ಉಪಯುಕ್ತವಾದದ್ದಲ್ಲ. ಸಮಾಜದ ಅಲ್ಪಜ್ಞಜನರಿಗಿಂತಲೂ ವಿಶೇಷಜ್ಞವೂ ಜವಾಬ್ದಾರಿಯುಳ್ಳವೂ ಆದ ಎಲ್ಲ ಸಿಂಹಾಸನಾಧಿಪತಿಗಳೂ ಶಾಸ್ತ್ರಜ್ಞರೂ ಕೂಡಿ ಇಂಥ ಮಹದ್ವಿಷಯಗಳನ್ನು ನಿರ್ಣಯಮಾಡತಕ್ಕದ್ದು ಅವಶ್ಯಕವಾಗಿರುತ್ತದೆ.

ಮತ್ತೂ ಇಂಥ ಸ್ಥೂಲವಿಷಯದ ನಿರ್ಣಯಕ್ಕೆ ಈಗ ನಿಶ್ಚಿತ್ತುಮಾಡಿರುವ ಅವಧಿಯು ಬಹಳಸ್ವಲ್ಪ. ಇದಕ್ಕೆ ೧ ವರ್ಷಕಾಲದ ಅವಧಿಯನ್ನಾದರೂ ಕೊಡಬೇಕಾಗಿತ್ತು. ಮತ್ತು ತಕ್ಕ ವಿದ್ವನ್ಮಂಡಲದ ಪರಿಷತ್ತನ್ನು ಸಂಸ್ಥಾನದವರು ಕೂಡಿಸಿ ಸ್ವಾಧ್ಯಕ್ಷತೆಯಿಂದ ವಿಚಾರಮಾಡಿ ನಿರ್ಧರಿಸಬೇಕಾಗಿತ್ತು. ಇಂಥ ಮುಖ್ಯವಿಷಯವನ್ನು ನಾಡಿಗಿಂದಷ್ಟು ಜಾಹೀರಮಾತ್ರದಿಂದ ಮುಗಿಸಿಬಿಡುವುದು ಪ್ರಶಸ್ತವಾಗಿ ಕಾಣುವುದಿಲ್ಲ. ಸಕ್ರಮವಾಗಿ ಇಂಥ ವಿಷಯವು ಕೊನೆಮುಟ್ಟದಿದ್ದರೆ ರೋಗಕ್ಕೆ ಮದ್ದಂತೆ ಆಗ ಸಮಾಜಕ್ಕೆ ಘಾತಕವಾಗುವ ಭೀತಿಯುಂಟು. ಮತ್ತೂ ಇದರ ಸಂಪೂರ್ಣ ಜವಾಬ್ದಾರಿಯು ಹೇಗೂ ಸಂಸ್ಥಾನದವರ ಮೇಲೆ ಬೀಳುವುದು ತಪ್ಪುವದಿಲ್ಲ. ಹಾಗೂ ಶಾಸ್ತ್ರ ವಿಧಿ ಲಂಘನ ಸಮಾಜದವರೆಲ್ಲರೂ ಜವಾಬ್ದಾರರಾದರೂ ಅವರಮೇಲೆಯೇ ಹೊತ್ತಿರುವರು. ಈ ವಿಷಯವನ್ನು ನನ್ನ ಅಲ್ಪಮತಿಗೆ ತಿಳಿದಷ್ಟು ವಿಷಯವನ್ನು ಇಲ್ಲಿ ನಿವೇದಿಸಿ ಈ ಲೇಖನವನ್ನು ಮುಗಿಸುತ್ತೇನೆ:—ವೀರಶೈವಶಾಸ್ತ್ರಗಳಲ್ಲಿ ಬ್ರಾಹ್ಮಣಾದಿ ಚತುರ್ವರ್ಣದವರಿಗೆ ಶಿವದೀಕ್ಷಾಸಂಸ್ಕಾರವನ್ನಿತ್ತು ಮತಪ್ರವಿಷ್ಟರನ್ನಾಗಿ ಮಾಡಿಕೊಳ್ಳಲು ಆಧಾರವುಂಟು.

ಮತ್ತೂ ಅಜ್ಞಾನದೂಕತೆಯಿಂದ ಲಿಂಗಲೋಪಾದಿಗಳಾದರೂ ಪುನರ್ಲಿಂಗಧಾರಣೆಯನ್ನು ಮಾಡಿಕೊಳ್ಳದೆ ಪ್ರಾಯಶ್ಚಿತ್ತಾಗನ್ನೇ ಮಾಡಿಕೊಳ್ಳಬೇಕೆಂದು ಕಠಿಣತರವಾದ ಶಾಸನವು ಉಂಟು.

ಆದರೆ ಶಿವಾನುಗ್ರಹದಿಂದ ವೀರಶೈವಮತದಲ್ಲೇ ಜನಿಸಿ, ಸದ್ಗುರುದತ್ತವಾಗಿ ಧರಿಸಿಕೊಂಡಿದ್ದ ಲಿಂಗವನ್ನು ಮನಃಪೂರ್ವಕವಾಗಿ ತೆಗೆದುಹಾಕಿ, ಭ್ರಷ್ಟನಾಗಿದ್ದವನಿಗೆ ಮರಳಿ ಲಿಂಗಧಾರಣೆಯನ್ನು ಮಾಡಬಹುದೆಂಬುದಕ್ಕೆ ಎಲ್ಲೂ ಶಾಸ್ತ್ರಾಧಾರವಿರುವಂತೆ ಕಂಡಿಲ್ಲ. "ಉತ್ತಮಾಂಗತಿಮಾತ್ರೇಣ ನೀಚೋಪಿ ವೃತ್ತಿರ್ವೃತಿಃ" ಎಂಬ ಪ್ರಮಾಣವಚನವು ಉತ್ತಮಮತಗಳಿಯಿಂದ ನೀಚಗತಿಯನ್ನು ಹೊಂದಿದವನನ್ನು ಅರಭುಪತಿತನೆಂದೂ ಸರ್ವಕರ್ಮಬಹಿಷ್ಕೃತನೆಂದೂ ಘಂಟಾಘೋಷವಾಗಿ ಶಾಸ್ತ್ರ ರಚನೆಯು ಸಾರುತ್ತಿರುವುದು. ಅನವಧಾನತೆಯಿಂದ ಲಿಂಗವನ್ನು ಕಳೆದುಕೊಂಡವನಿಗೇ ಪುನರ್ಲಿಂಗಧಾರಣೆಗೆ ಶಾಸ್ತ್ರಗಳು ಅವಕಾಶವನ್ನು ಕೊಡದಿರುವಾಗ, ಮನಃಪೂರ್ವಕವಾಗಿ ಲಿಂಗವನ್ನು ಬಿಸುಡಿದವನಿಗೆ ಲಿಂಗಧಾರಣೆಯನ್ನು ಹೇಗೆ ಮಾಡಬಹುದು? ಈ ವಿಷಯದಲ್ಲಿ ಬಲವಾದ ಶಾಸ್ತ್ರಾಧಾರಗಳಿದ್ದರೆ ಶ್ರೀ ಸಂಸ್ಥಾನದವರು ಮುಂದಾಗಿ ಸರ್ವರಿಗೆ ತಿಳಿಯಪಡಿಸಿದರೆ ಬಹಳ ಉಪಕಾರವಾಗುವುದು. ಅದು ನಿರಾಕ್ಷೇಪವಾಗಿದ್ದರೆ ಮುಂದಿನ ಕಾರ್ಯವನ್ನು ನಡೆಯಿಸುವುದು ಯುಕ್ತವಾಗಿ ಕಾಣುತ್ತದೆ.

ಒಬ್ಬ ಮಾಹೇಶ್ವರ.

ಈಗತಾನೇ ಅಚ್ಚಾದ ಪುಸ್ತಕವು.
(ರೇವಣಸಿದ್ಧೇಶ್ವರಪುರಾಣಂ.)

ವೇದಾಗಮಮೂಲಸಿದ್ಧವಾದ ವೀರಶೈವ ಮತವನ್ನು ಭೂತಲದಲ್ಲಿ ಪ್ರತಿಷ್ಠಾಪಿಸಿದ ಶ್ರೀ ರೇಣುಕಾಚಾರ್ಯರ ಚರಿತ್ರರೂಪವಾದ ಈ ಗ್ರಂಥವು ಬೊಮ್ಮರಸಕವಿಯಿಂದ ಷಟ್ಪದಿರೂಪವಾಗಿ ರಚಿಸಲ್ಪಟ್ಟಿರುತ್ತದೆ. ಶ್ರೀರೇಣುಕಾಚಾರ್ಯರ ಭೂತಲದಲ್ಲಿ ನಡೆಯಿಸಿದ ಮಹತ್ಕಾರ್ಯಗಳು ಇದರಲ್ಲಿ ನಿರೂಪಿತವಾಗಿವೆ. ಕವಿತೆಯು ಹೃದಯಂಗಮವಾಗಿದೆ. ಪ್ರತಿಯೊಂದು ಪಾಠಕನೂ ಒಂದೊಂದು ಪದ್ಯವನ್ನು ಬಿಡಿಬಿಡಿಸಿ ಉತ್ತಮವಾದ ಗ್ಲೇಸ್ ಕಾಗದದಮೇಲೆ ಸುಂದರವಾದ ಅಕ್ಷರಗಳಿಂದ ಅಚ್ಚುಮಾಡಿ ಮುದ್ರಿಸಲಾಗಿದೆ. ೧೬ ಸಂಧಿಗಳಲ್ಲಿ ಈ ಗ್ರಂಥದ ಬೆಲೆ ವಿ. ಪಿ. ಮೂಲಕ ಅಂಚೆಯ ವೆಚ್ಚವೂ ಸೇರಿ ೧ ಆಣೆಗಳು.

ಮತ್ತೊಂದು ನೂತನಗ್ರಂಥ.
ಸಟೀಕವೂ ಸಿದ್ಧಾಂತಶಿಖಾಮಣಿ.

ಇದು ಶ್ರೀರೇಣುಕಾಚಾರ್ಯರು ಅಗಸ್ತ್ಯರಿಗೆ ಉಪದೇಶಿಸಿದ ವೀರಶೈವ ಸಿದ್ಧಾಂತಶಾಸ್ತ್ರವು, ಪ್ರತಿಯೊಬ್ಬ ವೀರಶೈವನೂ ಮುಕ್ತಿಸಾಧಕವಾಗುವುದಕ್ಕೆ ಅನುಷ್ಠಾನದಿಂದ ಕಡೆಯವ ರೆಗೆ ಆಚರಿಸಬೇಕಾದ ಧರ್ಮಕರ್ಮಗಳು ಇದರಲ್ಲಿ ನಿರೂಪಿತವಾಗಿವೆ. ಮೂಲಗ್ರಂಥಕ್ಕೆ ವೇದಾಗಮ ಪುರಾಣಾದಿವಚನಗಳ ಆಧಾರದಿಂದ ಕೂಡಿದ ಕನ್ನಡ ಟಿಪ್ಪಣವು ವಿಸ್ತಾರವಾಗಿ ಬರೆಯಲ್ಪಟ್ಟು ಉತ್ತಮವಾದ ಕಾಗದದಲ್ಲಿ ಅಚ್ಚು ಮಾಡಿಸಲ್ಪಟ್ಟಿದೆ. ಸರ್ವರಿಗೂ ಸಂಗ್ರಾಹ್ಯವಾದ ಈ ಪುಸ್ತಕವು ೩೩೪ ಪುಟಗಳುಳ್ಳ ದೊಡ್ಡ ಗ್ರಂಥವಾಗಿದ್ದರೂ, ಸ್ವಮತಸ್ಥರ ಹಿತಾರ್ಥವಾಗಿ ಬೆಲೆಯು ಕಡಿಮೆಯಾಗಿಡಲ್ಪಟ್ಟಿದೆ. ವಿ. ಪಿ, ಮೂಲಕ ಅಂಚೆಯ ವೆಚ್ಚವೂಸೇರಿ ೧-೮-೦.

ಎಫ್. ಆರ್ ಕರಿಬಸವಶಾಸ್ತ್ರಿ,
4 ಗ್ರಂಥಪ್ರಸಾರಕಮಂಡಲಿ, ಮೈಸೂರು.

ಶಕ್ತ ವನಸ್ಪತಿಯಿಂದಲೇ ತಯಾರಿಸಿದ
ಧಾತುಪೌಷ್ಟಿಕ ಲೇಹವು. 87

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ನೋಡಿ! (ಗುಣವಾಗದಿದ್ದರೆ ಹಣ ವಾಪಸ!!) ನೋಡಿ!!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪಿತ್ತದೋಷವಾದವರು, ತೃಷೆಯುಳ್ಳವರು, ಕೆಮ್ಮು ನೆಗಡಿ ಕಫ, ಉಬ್ಬಸವಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧವಾದ ರೋಗವಿದ್ದವರು, ಧಾತುರೋಗದವರು, ಉಷ್ಣರೋಗದವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಭಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರಿತಗುಣವಾಗಿ ಶರೀರಕ್ಕೆ ನಿರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೋಲೆಯವರೆಗೆ ಬೇಕಾಗುವುದು. ರೇಟ್ಟು ೪೦ ತೋಲೆಗೆ ರೂ. ೩-೮-೦. ೮೦ ತೋಲೆಗೆ ರೂಪಾಯಿ ೬ ಬೆಲೆಯುಂಟು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ:—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲಾ ಉತ್ತರಕನ್ನಡ.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ರೋಗ ರುಜಿನಗಳ ಸ್ಥಳಗಳಲ್ಲಿಯೂ ಆರೋಗ್ಯವನ್ನು
46 ಕಾಪಾಡುವುದರಲ್ಲಿ ಶ್ರೇಷ್ಠವಾದುದು

ಶ್ರೀಕರಕಸ್ತೂರಿಮಾತ್ರೆ

ಟಿಸಿಟ್ ವೇತದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ—ಚೆನ್ನದ ರೇಕು ಮೊದಲಾದವುಗಳಿಂದ ಹರಿಹರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರಿಗೆ ಬಾಯಿ ಘಮಘಮಿಸುವಂತೆ ಮಾಡುವುವು.

ಶೀತವಾಯು—ಕೆಮ್ಮು—ನೆಗಡಿ—ದಿನಜ್ವರ—ಮೂರರಜ್ವರ ನಾಲ್ಕರಜ್ವರ— ಮಲೇರಿಯಾಜ್ವರ— ತಲೆನೋವು— ಪ್ರೈಕ್ಕೆನೋವು ಮತ್ತು ಭಾರ—ಅಜೀರ್ಣ ಹಲ್ಲುನೋವು—ಹೊಟ್ಟೆನೋವು—ಮಲಬಂಧ—ಅಜೀರ್ಣಭೇದಿ—ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕಗಳ ಸೆಳೆತ ಕೆಮ್ಮು ಜ್ವರ—ಭೇದಿ ಮುಂತಾದವುಗಳನ್ನು ನಿಂದಿಸಿಯೂ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೇ ತರಿಸುವರೆಂದು ನಾವು ಸ್ಥಿರವಾಗಿ ಹೇಳಬಲ್ಲೆವು. ೫೦ ಮಾತ್ರೆ ೩ ಆಣೆ. ವಿದಕ್ಕೆ ಒಂದು ಇನಾಮು. ವಿ. ಪಿ. ಭಾರ್ಜು ಪ್ರತ್ಯೇಕ.

ಆಮೋದಿನಿ:—ಅನೋಘವಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರವು ಡುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷ ಕೀರ್ತಿಯನ್ನು ಸಂಪಾದಿಸಿ ನಾನಾತರದ ಕೆಮ್ಮು ದಮ್ಮು ಉಬ್ಬಸ, ವಾಂತಿ, ವಾಕರಿಕೆ, ಮಲಬಂಧ, ಅಗ್ನಿಮಾಂದ್ಯ ಪಿತ್ತಸಂಕಟ, ಅರೋಚಕ, ವಾಯುವಿಕಾರಗಳೆಲ್ಲ ತಕ್ಷಣ ಗುಣಪಡಿಸಿ ದೇಹಕ್ಕೆ ಶಕ್ತಿಯನ್ನುಂಟುಮಾಡಿ ಧಾತುಪುಷ್ಟಿಯನ್ನು ಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೧೫೦ ಮಾತ್ರೆ ೩ ಆಣೆ. ಇದಕ್ಕೆ ಒಂದು ಇನಾಮು. ವಿ.ಪಿ. ಭಾರ್ಜು ಪ್ರತ್ಯೇಕ.

ವಿಳಾಸ— ಬಿ. ವಿ. ಪಂಡಿತ್,
ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರ್ ಡಿ॥

47

ದೊಡ್ಡ ರಂಪನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜನ್ನಾಥಪಾಗಟಿ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ಕ್ಯಾಟಾಗನ್ನೂ, ವಿಶ್ವೇಶ್ವರನ ೬ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯು. ಎನ್. ಮತ್ತು ಕಂಪೆನಿ,
ಬನಾರಿಸ್ ಸಿಟಿ. (ಕಾಶೀ)

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕಯ್ಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೦ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅತ್ಯಂತ ಸಲ್ಲಕ್ಕ ಉತ್ಸವದ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಹಾಪುರದ ವ್ಯಾಸನತೋಟದಹಿತ ಆದ ಸಮಾರಂಭದ ಫೋಟೋ ೧ ಕ್ಕೆ ಕ್ರಯ ೧ ರುಪಾಯಿ

ಶ್ರೀಬಸವೇಶ್ವರ

ಇವರ ಬಾಸಾ ಫೋಟೋ (ರಾಮಾರ್ವಕರ ಚಿತ್ರದಂತೆ, ಕಲ್ಬಿಕಪಲ್ಲಾ) ಕ್ರಯ ಮುಲ್ಲಸ್ಟೀಜು ಬಣ್ಣದ್ದು ೦॥ ರೂ ಸಾದಾ ೧ ರೂ ಕ್ಯಾಬಿನೆಟ್ ಸೈಜು ಬಣ್ಣದ್ದು ೧೦ ಆಣೆ ಸಾದಾ ೪ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ಪಡೆಸಿ ಶ್ರೀ ಶಿವನ ಪೂಜಿಸಮಾಡುತ್ತಿರುವ ಫೋಟೋ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೋ ೧ ಕ್ಕೆ ಕ್ರಯ ಫುಲ್ಸ್ಕೇಪು ೧ ರುಪಾಯಿ ಕ್ಯಾಬಿನೆಟ್ ಸೈಜು ಬಣ್ಣದ್ದು ೧೦ ಆಣೆ ಸಾದಾ ೪ ಆಣೆ

ಶ್ರೀ ಜಗದ್ಗುರು ತೋಂಟದಾರ್ಯ ಗದಗ, ಶ್ರೀ ಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ಸತ್ಪುರುಷಮಾಲ, ಹಾನಗಲ ಅನಂದಸ್ವಾಮಿಯವರ ಫೋಟೋ ಬಣ್ಣದ್ದು ಮತ್ತು ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದವರ ಶಿವಯೋಗಿಗಳು, ಬಳ್ಳಾರಿ ಸ್ತ್ರೀ ಸಭಾ ಪಕ್ಕರ ಫೋಟೋ ಕಿಸಿತ್ತವೆ ಫುಲ್ಸ್ಕೇಪು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೆಟ್ ಸೈಜು ೪ ಆಣೆ

ಹೊರಟ್ಯಾಪ್:—ಸದ್ಗುಸ್ಥರು ಗಡಿಯಾರ ಸರ್ವಜನಿಕೆ ಹಚ್ಚುವಲಾಕೇಟುಗಳೂ, ಯಿದರಲ್ಲಿ ಹಿಂದೆ ಮುಂದೆ ಇಪ್ರಕಾರ ೨ ಫೋಟೋ ಬೇಕಾದ ಸತ್ಪುರುಷರ ದೇವರದೂ ಹಾಕಿ ಕಳಿಸನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟಿದೂ ॥, ॥।=, ೧, ೧।, ಪ್ರಕಾರ, ಮತ್ತೂ ಬೆಳ್ಳಿದು ರು ೧॥ ರೋಲ್ಡ್ ಗೋಲ್ಡು ಭಂಗಾರದ್ದು ದರ್ಜಿನಂತ ಗ್ಲಾಸದೂ ಕ್ರಯ ೦॥, ೦॥। ರೂ.

ಪರೂರಿಗೆ ವಿಪಿಯಿಂದ ಬೇಕಾಗಿದ್ದರೆ ಅರ್ಡರ ಜೊತೆಯಲ್ಲಿ ಕಳಿಸಿ ಕ್ಯಾಟಲಾಗು ಬೇಕಾದವರು ತಿಳಿಸಿರಿ.

ಶಿವಕೃಪ. ನಮ್ಮವಿಳಾಸ— ಗಂಗಪ್ಪ ಜೇರಿಗೆ.
36 ಅರ್ಜನ್ಸ್ ಸೊಲ್ಲಾಪುರ.

ದಿ ಜನರಲ್ ಏಜೆನ್ಸಿ, ಮೈಸೂರು.

ಕಾದಂಬರಿಗಳು:— ಚಂಡಮಾರುತ ೦-೨-೦; ಚರಿತಾವೃತಂ ೦-೩-೦; ರಾಜಕಥಾವಲ್ಲರಿ ೦-೩-೦; ಪೀಟರಿನಚರಿತ್ರೆ ೦-೨-೦; ವಿಯೋಗಿನಿ ೦-೬-೦; ಉನ್ಮತ್ತೆ ೦-೨-೬; ಸೀತೆ ೦-೩-೦; ಸಾಹಸಿಕೆ, ಕಲಾನಾಥ ೦-೮-೦; ಮಹಾಲಕ್ಷ್ಮಿ ೦-೭-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸತ್ಯಸಂಜೀವಿನಿ ೦-೮-೦; ಕೊಹಿನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೬-೦; ಸೀತಾವನವಾಸ ೦-೧೨-೦; ರಜನಿ ೦-೧೨-೦. 48

ಊದಬತ್ತಿಗಳು.

17 ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ ೦-೦-೧೨; ೩-೦-೦; ೬-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪ ಟಿನ್ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು. ಟಿ. ಎಲ್. ಉಪಾಧ್ಯಾಯ,

ಸುಗಂಧಕಾರಿ,

ಮೈಸೂರು

37 ಸಚಿತ್ರ ಶುಕಸಪ್ತತಿ ಕಥೆಗಳು ರೂ. ೧-೮-೦ (೩೧೨ ಪುಟ) ಟಪಾಲು ಹಾಸಲು ೪ ಆಣೆ. ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ ರೂ ೧-೮-೦ (೩೬೩ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ! ಮಾನ್ಯತೆಯು ಬೇಕಾದರೆ, ವಾಕ್ಚಾತುರ್ಯ ಬಿಡಿಯೊಳಿಪ್ಪುವಿದ್ದರೆ, ಲೋಕರೀತಿಯನ್ನು ತಿಳಿಯಲಿಚ್ಛೆ ಪಟ್ಟರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯಲ್ಲಾ ಕೆಯಿದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೬೦ ಪುಟಗಳಿಂದ ಕೂಡಿದ ೬೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ. ೧-೪-೦ ಟಪಾಲ್ ಹಾಸಲು ೩ ಆಣೆ. ಈಗಲೇ ಬರೆ ನಿಮ್ಮಾ.ವಮ್ಮಲ್ಲಿ ಇನ್ನೂ ಅನೇಕಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸಾಲಾಮಿಸ್ರಿಯು ಕಾಬೂಲ್ ದೇಶದಲ್ಲಿ ಪೌಂಡು ೧ ಕ್ಕೆ ೧-೧೦-೦ ಇತ್ತು ಈಗ ಪೌಂಡು ೧ಕ್ಕೆ ೩-೪-೦ ಆಗಿದೆ. ಆದ್ದರಿಂದ ಇದರ ಕ್ರಯ ೨-೦೦ ರೂಪಾಯಿ ಮಾಡಿರುತ್ತೆ. 4

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾ" ವಿನ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ದೂರ ನಡೆಯುವುದರಿಂದ ಏದುಸುರು ಬರುವುದೂ, ತಲೆಯ ನೋವೂ ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು ಹಳೇ ತಲೆ ನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಸೇಖರಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು. ಈ ಪಂಜಾಬ್ ಸಾಲಾಮಿಸ್ರಿಯು ಮುರಬ್ಬಾಕ್ಕೆ ತಾಂಬ್ರದ ಮತ್ತು ಭಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು.

ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂ. ಬಹುಮಾನವಾಗಿ ಕೊಡಲ್ಪಡುವುದು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನದಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧ಕ್ಕೆ ರೂ. ೨-೦-೦. ಟಪ್ಪಾಲ್‌ಖರ್ಚು ಬೇರೆ. ಅನುಪಾನಪತ್ರಿಕೆ ಔಷಧದಸಂಗಡ ಇರುತ್ತೆ.

ಡಿ. ಮನ್ನಾಲಾಲ್, 5 ಹಾಜಿ ಸಾಹೇಬ್ ಮಹಡಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ನಮ್ಮ ಏಜಂಟರು-ಡಿ. ಸೈಯದ್ ಉಸ್ಮಾನ್ ಅಂಡ್ ಕೊ, ದೊಡ್ಡಪೇಟೆ, ಬೆಂಗಳೂರು ಸಿಟಿ.

ಶ್ರೀ ಸೀತಾರಾಘವ ವೈದ್ಯಶಾಲಾ ಸಂಬಂಧಪಟ್ಟ ಔಷಧಗಳು 15

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ



ಸಂದುಗಳ ನೋವು ಮೈ ಕಾಲು ಹೊತೆತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೦ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈ ಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇಒಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತವಿದೆಂದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧ ೦ ೦.

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ| ಸೀತಾರಾಘವ ವೈದ್ಯಶಾಲಾ. ಮೈಸೂರು

ನ್ಯಾಯದರ್ಪಣ. 30

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯು, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಫ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸೂ, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆಚರಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ವಗೈರೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯು ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿಇರುತ್ತವೆ.

ಬೆಲೆ ರೂ. 1—8—0. ವಿ. ಪಿ. ಮೂಲ್ಯ 1—12—0.

ಎಂ. ಎಸ್. ನಂಜಪ್ಪನವರು,

ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ)ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾಗಿದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚುಟಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜನ್ ಡಬ್ಬಿಗೆ ೨-೭-೦

ಉತ್ತಮವಾದ ನಶ್ಯದಪುಡಿ.

ಧಾಟು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಬೋಲ್ಲಾ ಸಿನೀ ಹೊಗೆಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವೆ. ನೀವುಉಪಯೋಗಿಸುವ ಬರೀ ಹೊಗೆಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೆಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,

ಗೋಪನಸೆಟ್ಟಿಪುರ, ಹನೂರು ಪೋಸ್ಟ್

26 ಕೊಳ್ಳೇಗಾಲದ ತಾಲ್ಲೂಕು

೧೯೧೪ ನೆಯಇಸವಿ ಆಗಸ್ಟ್ ತಾ|| ೧೬ರಿಂದ ೧೯೧೪ನೆಯ ಆಗಸ್ಟ್ ತಾ|| ೨೨ರವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ ನೆಯ ಆನಂದನಾಮ ಸಂ|| ದ ಶ್ರಾವಣ ಬ|| ದಶಮಿಯಿಂದ ಭಾದ್ರಪದ ಶು|| ಪಾಡ್ಯದವರೆಗಿನ ಪಂಚಾಂಗ.

ತಾ||	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ತೇದಿ ಸಿಂಹ
16	1 ಭಾನು	ದಶ	32- 2	ರೋಹಿ	0-38	1
17	2 ಸೋ	ಏಕಾ	34-16	ಮೃಗ	4-47	2
18	3 ಮಂ	ದ್ವಾ	34-54	ಆರಿದ್ರಾ	7-41	3
19	4 ಬುಧ	ತ್ರ	34-22	ಪುನ	9-23	4
20	5 ಗುರು	ಚತು	32-20	ಪುಷ್ಯ	9-48	5
21	6 ಶುಕ್ರ	ಅಮಾ	29-35	ಆಶ್ಲೆ	9-6	6
22	7 ಶನಿ	ಪಾ	25-32	ಮುಖಾ	7-22	7

(1) ಕರ್ಕಾಂ, ವಿಷ್ಣುಪದಪುಣ್ಯಕಾಲಃ (2) ಸರ್ವೈಕಾದಶೀ, ದಗ್ಧಯೋಗಃ. (3) ಮಂಗಳಗೌರೀವ್ರತಂ. (4) ಪ್ರದೋಷಃ, ಮಾಸಶಿವರಾತ್ರಿಃ. (5) ಅಮೃತಸಿದ್ಧಿಯೋಗಃ. (6) ಸರ್ವತ್ರಾಮಾವಾಸ್ಯಾ, ಮೃತ್ಯುಯೋಗಃ. (7) ರಕ್ಷಾಂಪ್ರಥಮಾತಿಥಿಃ, ಚಂದ್ರೋದಯಃ, ಮವ್ವಾಲ್‌ಚಂ೧

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಕೌನ್ಸೆಕ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED M NO 124

ಮೈಸೂರ್ ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು

ವಾರ್ಷಿಕ ಚಂದಾ ೧-೦-೦

ದವಹಿಕೂರವುರೀತಾರಾ ಪರಮಧಿಗತರಾಜಮಂಡಲಹಿತೈ ಘನಪಥಕೃತಾವತಾರಾ ಪಕ್ಷಜ್ಞನಹೃತ್ತಮೋಹರಾಜೀಯಾತ್!
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತಸಾಧ್ವಗ್ಯಾಲವಾಲಂವಲಂ|
ಸಿಮಾತೀತ ಯಶಃಪ್ರತಾಪವಿಪುಲಂಸದ್ವೃತ್ತಮಾಲಾಕುಲಂ | ಪ್ರೇಮಂಬಿತ್ತಿಕೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ|

ಅಂಚೆವೆಚ್ಚ ಸೇರಿ ೧-೧೪-೦

REGISTERED. NO M 124

ಸಂಪುಟ ೨೫) ಮೈಸೂರ್ ಸ್ಟಾರ್ ಸೆ ೧೯೧೪ ನೆಯ ಇಸವಿ ಆಗಸ್ಟ್ ತಾರೀಖು ೨೩ ನೆಯ ಭಾನುವಾರ. (ಸಂಚಿಕೆ ೩೪

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜ ಮೊಹಲ್ಲಾ, ಮೈಸೂರು.

ಸುಂದರವಾದ ಹೊಸನಮೂನೆ ದೊಡ್ಡ ಘಡಿಯಾರಗಳು. 30

ಪ್ರಖ್ಯಾತಿಹೊಂದಿದ ಅಮೆರಿಕಾದೇಶದ ಅನ್ಸೋನಿಯಾ ಕಂಪೆನಿಯವರಿಂದ ತಯಾರಿಸಲ್ಪಟ್ಟ ಖಾತ್ರಿಯಾದ ಮತ್ತು ಬಹಳದಿವಸ ಬಾಳಿಕೆಬರತಕ್ಕಂಥ ಕ್ಲಾಕ್‌ಗಳು ಇವೇ ಹೊರ್ತು ಬೇರೆ ಅಲ್ಲಾ.



ಈ ಪಕ್ಕದ ಚಿತ್ರದಲ್ಲಿ ಕಾಣಿಸಿರುವ ಗೋಡೆಗೆ ತಗುಲಿಸುವ ಘಂಟೆ, ಅರ್ಧ ಘಂಟೆ ಹೊಡೆಯುವ ಘಡಿಯಾರ ಒಂದಕ್ಕೆ ೧೨-೮-೦ ರೂ. ಘಂಟೆ ಅರ್ಧ ಘಂಟೆ ಹೊಡೆದು ಅಲಾರಂ ಸಹಾ ಇರತಕ್ಕ ಘಡಿಯಾರ ಒಂದಕ್ಕೆ ೧೩-೪-೦ ರೂ. ಈ ಘಡಿಯಾರಗಳು ಮಜಬೂತಾದ ಯಂತ್ರೋಪಕರಣಗಳಿಂದಲೂ ಮೇಲ್ಭಾಗದಲ್ಲಿ ನಕಾಸಿನ ಕೆತ್ತನೆಯಿಂದಲೂ ನೋಡುವುದಕ್ಕೆ ಅಂದವಾಗಿಯೂ ಬಹಳ ದಿವಸ ಬಾಳಿಕೆ ಬರತಕ್ಕವುಗಳಾಗಿವೆ. ಈ ಘಡಿಯಾರಕ್ಕೆ ಆರ್ಡರ್ ಮಾಡತಕ್ಕವರು ೫ ರೂಪಾಯಿ ಅಡ್ವಾನ್ಸು ಕಳಿಸಬೇಕು. ಬಾಕೀ ಮೊಬಲಿಗ್ಗೆ ರೈಲ್ವೆ ರಶೀದಿಯನ್ನು ವಿ. ಪಿ. ಮಾಡಲಾಗುತ್ತೆ. ರೈಲ್ವೆ ಛಾರ್ಜು ಅಲಾಯಿದಾ

ಸಿಕ್ಕಿದ ಹಾರ್ಮೋನಿಯಂಗಳನ್ನು ಕ್ರಯಕ್ಕೆ ತೆಗೆದುಕೊಂಡು ನಿಮ್ಮ ಹಣವನ್ನು ಯಾಕೆ ವ್ಯರ್ಥಮಾಡಿಕೊಳ್ಳುವಿರಿ.

ನಮ್ಮಲ್ಲಿ ವಿಕರಿಗೆ ಸಿದ್ಧವಾಗಿರುವ "ಮೋಹನ್‌ಫ್ಲೂಟ್ಸ್" (M. Mohen flute) ಮತ್ತು "ಮೋಸ್ಲಂಫ್ಲೂಟ್" (Moslem flute) ಹಾರ್ಮೋನಿಯಂಗಳನ್ನು ನಮ್ಮಿಂದ ತರಿಸಿಕೊಂಡು ಪರೀಕ್ಷಿಸಿರಿ ಈ ಹಾರ್ಮೋನಿಯಂಗಳು ಅನೇಕದಿವಸ ಬಾಳಿಕೆಬರುವಂತೆ ಬಹಳಮಜಬೂತಾದ ಸಾಮಾನುಗಳಿಂದ ಪ್ರಖ್ಯಾತರಾದ ಕಾರೀಗಾರರಿಂದ ತಯಾರಿಸಲ್ಪಟ್ಟಿವೆ. ಒಂದು ಸಾರಿ ನಮ್ಮಿಂದ ತರಿಸಿ ಪರಿಕ್ಷಿಸಿದಲ್ಲಿ ಇದರ ಬಂದೋಬಸ್ತು ಬಾಳ್ವಿಕೆ ಸಹ ತಮಗೇ ವ್ಯಕ್ತವಾಗುತ್ತೆ.

ನಂ ೧ ಒಂದು ಸೆಟ್‌ರೀಡ್ಸ್ ಉಳ್ಳದ್ದು (Moslem flute) ಹಾರ್ಮೋನಿಯಂ ೧ ಕ್ಕೆ ೩೫-೦-೦ ರೂ.

ನಂ ೨. ಒಂದು ಸೆಟ್‌ರೀಡ್ಸ್ ಉಳ್ಳದ್ದು (M. Mohen flute) ಹಾರ್ಮೋನಿಯಂ ೧ ಕ್ಕೆ ೩೭-೮-೦ ರೂ.

ನಂ ೩. ಡಿಟೋ ನಮೂನೆಯಲ್ಲಿ ಅತ್ಯುತ್ತಮವಾದದ್ದು (M. Mohen flute) ೧ ಕ್ಕೆ ೪೨ ೮-೦ ರೂ.

ನಂ ೪. ಡಬ್ಬಲ್‌ರೀಡ್ಸ್ ಉಳ್ಳದ್ದು (Moslem flute) ಹಾರ್ಮೋನಿಯಂ ೧ ಕ್ಕೆ ೪೭-೮-೦ ರೂ.

ನಂ ೫. ಡಬ್ಬಲ್‌ರೀಡ್ಸ್ ಉಳ್ಳದ್ದು (M. Mohen flute) ಹಾರ್ಮೋನಿಯಂ ೧ ಕ್ಕೆ ೫೨-೮-೦ ರೂ.

ಈ ಹಾರ್ಮೋನಿಯಂಗಳ ಪೈಕಿ ಯಾವದಕ್ಕೆ ಆರ್ಡರ್ ಕೊಟ್ಟರೂ ಕೊಡ ೫ ರೂಪಾಯಿ ಅಡ್ವಾನ್ಸು ಕಳಿಸಬೇಕು ಬಾಕೀಮೊಬಲಿಗ್ಗೆ ರೈಲ್ವೇರಶೀದಿಯನ್ನು ವಿ. ಪಿ. ಮೂಲ್ಯ ರವಾನಿಸುತ್ತೇವೆ.

ನೆಪ್ಚೂನ್‌ಫೌಂಟನ್‌ಪೆನ್‌ಗಳು. NEPTUNE FOUNTAIN PENS.

ಈ ಫೌಂಟನ್‌ಪೆನ್‌ಗಳು ಅದರ ಖರೀದಿಗೆ ತಕ್ಕಂತೆ ೪ ವರುಷಗಳಲಾಗಾಯ್ತು ಹತ್ತು ವರುಷಗಳವರೆಗೆ ಬಾಳಿಕೆ ಬರತಕ್ಕವುಗಳಾಗಿವೆ.

ನಂ ೨೦೧. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಕ್ರಯ ೧ ಕ್ಕೆ ೧—೪—೦.

ನಂ ೨೦೫. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಉತ್ತಮವಾದದ್ದು ಕ್ರಯ ೧ ಕ್ಕೆ ೨—೧೦—೦.

ನಂ ೨೧೧. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಅತ್ಯುತ್ತಮವಾದದ್ದು ಕ್ರಯ ೧ ಕ್ಕೆ ೪—೬—೦.

ಮೇಲ್ಕಂಡ ಯಾವನಮೂನೆ ಫೌಂಟನ್‌ಪೆನ್‌ಗಳನ್ನು ತರಿಸಿಕೊಂಡರೂ ಅದರ ಜೊತೆಯಲ್ಲಿ ಪೆನ್ ಇಡತಕ್ಕ ಪೆಟ್ಟಿಗೆ, ಜೇಬಿಗೆತಗಲಿಸತಕ್ಕ ಕ್ಲಿಪ್ ೧. ಶಾಯಿಹಾಕುವ ಗಾಜಿನ ಟ್ಯೂಬ್ ೧ ಶಾಯಿತುಂಬುವವಿಧ ಪ್ರಿಂಟಾಗಿರತಕ್ಕ ಚೀಟಿ೧ ನ್ನೂ ಸಹ ರವಾನಿಸಲಾಗುತ್ತೆ



ರಖಂವಾರ್ ವಾಚ್ ಸರಪಣಿಗಳು.

ಈ ಪಕ್ಕದ ಚಿತ್ರದಲ್ಲಿ ಕಾಣಿಸಿರುವ ನಮೂನೆ ಅಚ್ಚಬೆಳ್ಳಿಯ ವಾಚ್ ಸರಪಣಿ ಯಾವ ರಖಂ ಬೇಕಾದರೂ ಕ್ರಯ ೧ಕ್ಕೆ ೩—೪—೦ ಮೇಲ್ಕಂಡ ರಖಂವಿನಲ್ಲಿ ನಿಕ್ಕಲ್‌ಬೆಳ್ಳಿ ಸರಪಣಿ ಕ್ರಯ ೧ ಕ್ಕೆ ೦—೧೨—೦.

ಅಚ್ಚಬೆಳ್ಳೀ ಕೊರಳ ಸರಪಣಿ ಬಹಳ ನಾಜೋಕಾಗಿ ತಯಾರಿಸಿದ್ದು ೧ ಕ್ಕೆ ೧—೪—೦.

೧೮ ಕ್ಯಾರಟ್ಟು ಚಿನ್ನದ ಸರಪಣಿ ೧ ಕ್ಕೆ ೫—೮—೦.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್. ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರಮಾಧಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೩—೦
ಸಟೀಕ ಸಂಜೀವೃತ	೦—೪—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೨ನೆಯ ಭಾಗ]	೦—೬—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಕಂಕರೇಶ್ವರಶತಕಂ	೦—೧—೬

ಅಂಚೆಯವೆಚ್ಚ ಬೇರೆ.

ಹೊಸಪುಸ್ತಕಗಳು

149

ಬಸವರಾಜವಿಜಯಂ.— ಬೆಲೆ ೧ ೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ — ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ.— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦ ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ- ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸೂಕ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ—ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ ವರ್ಷದ ಚಂದಾ.೨-೮-೦.

ಎಸ್. ಆರ್. ಕರಿಬಸವಶಾಸ್ತ್ರಿ,

ಗ್ರಂಥಪ್ರಸಾರಕಮಂಡಲಿ, ಮೈಸೂರು.

ಪ್ರಕಟನೆ.

ಪ್ರಿಂಟಿಂಗಾಭೀಸಿನವರು ಅಗತ್ಯವಾಗಿ ಗಮನಿಸತಕ್ಕದು.

ನಮ್ಮಲ್ಲಿ ಈ ಸ್ಟಾರ್‌ಪತ್ರಿಕೆಯ ೧, ೨, ೩, ೬, ೭ ಮತ್ತೂ ೮ನೇ ಪುಟಗಳಲ್ಲುಪಯೋಗಿಸಲ್ಪಟ್ಟಿರುವ ಪೈಕ ಅಥವಾ ೧೨ ಪಾಯಿಂಟ್ ಅಕ್ಷರಗಳ ಮತ್ತೂ ಈ ಪ್ರಕಟನೆಗುಪಯೋಗಿಸಲ್ಪಟ್ಟಿರುವ ಟೂಲೈನ್ ಪಿನಿಯನ್ ಅಥವಾ ೧೪ ಪಾಯಿಂಟ್ ಅಕ್ಷರಗಳ ಮ್ಯಾಟ್ರಿಕ್ಸುಗಳೂ, ಅವುಗಳ ಮೌಲ್ಡುಗಳೂ ಇವನ್ನು ಎರಕವೆರೆಯುವ ಯಂತ್ರವೂ ಅವಕ್ಕೆ ಸಂಬಂಧಪಟ್ಟ ಲೈನ್ ಗೇಜ್ ಪೇಪರ್‌ಗೇಜ್ ಹೈಟ್‌ಗೇಜ್ ಡ್ರೆಸ್ಸಿಂಗ್‌ಟೇಬಲ್ ಕರ್ನಿಂಗ್ ಮಿಷನ್ನು ಮುಂತಾದ ಸಾಮಾಗ್ರಿಗಳೂ ಸೂಪರ್‌ರಾಯಲ್ ಸೈಜನ್ನು ಪ್ರಿಂಟ್ ಮಾಡುವ ಸಿಲಿಂಡರ್ ಮಿಷನ್ನು ಸಹ ಮಾರಾಟಕ್ಕೆ ಸಿದ್ಧವಾಗಿವೆ. ಈ ಮಿಷನ್ನಿನಲ್ಲೇ ಈ ಸ್ಟಾರ್‌ಪತ್ರಿಕೆಯು ಪ್ರಿಂಟುಮಾಡಲ್ಪಡುತ್ತಿರುವುದು. ಎರಕವೆರೆಯುವ ಮಿಷನ್ನು ಬಹಳ ಸ್ವಲ್ಪ ಕೆಲಸವನ್ನು ಮಾತ್ರ ಮಾಡಿ ಹೊಸದಾಗಿಯೇ ಇರುವುದು. ಇಷ್ಟವುಳ್ಳವರು ಇವುಗಳ ಬೆಲೆ ಮೊದಲಾದವನ್ನು ನಮಗೆ ಬರೆದು ತಿಳಿದುಕೊಳ್ಳಬಹುದಲ್ಲದೆ ಪ್ರತ್ಯಕ್ಷದಲ್ಲಿ ಬಂದು ನೋಡಬಹುದು.

ವೈ. ವಿರೂಪಾಕ್ಷಯ್ಯ,
ಪ್ರೊಪ್ರೈಟರ್
ಕ್ಯಾಕ್ಸ್ಟನ್ ಪ್ರೆಸ್, ಮೈಸೂರು.

ಆಸ್ಟ್ರಿಯಾ ಚಕ್ರವರ್ತಿಯವರು.

—:0:—

ಅಗಮಾರ್ಥಂತುದೇವಾನಾಂ ಗಮನಾರ್ಥಂತು
ರಾಕ್ಷಸಾಂ। ಕುರ್ಯಾದ್‌ಘಂಟಾರವಂಘೋರಸಂ
ಗ್ರಾಮಾಹ್ವಾನಲಾಂಛನಂ॥

ಎಂಬ ಮಂತ್ರವನ್ನು ಹೇಳಿದಂತೆ, ರಣಭೇರಿಯನ್ನು ಹೊಡೆದು ಈಗಿನ ಯೂರೋಪುಖಂಡದ ಮಹಾಘೋರ ಯುದ್ಧಕ್ಕೆ ಗಣಪತಿ ಪೂಜೆಮಾಡಿದ ಮಹಾನುಭಾವರು ಆಸ್ಟ್ರಿಯಾ ಚಕ್ರವರ್ತಿಯವರಾಗಿರುತ್ತಾರೆ. ಇವರು ಹಣ್ಣುಹಣ್ಣು ಮುದಿಕರು. ಯೂರೋಪುಖಂಡದ ಪ್ರಭುಗಳಲ್ಲಿ ಇವರಷ್ಟು ದೀರ್ಘಕಾಲ ರಾಜ್ಯಭಾರಮಾಡಿದ ಪ್ರಭುಗಳಾರೂ ಇಲ್ಲ. ಕೀರ್ತಿಶೇಷರಾದ ವಿಕ್ಟೋರಿಯಾ ಚಕ್ರವರ್ತಿನಿಯವರಿಗಿಂತಲೂ ಇವರು ಹೆಚ್ಚುಕಾಲ ರಾಜ್ಯವನ್ನಾಳಿದವರು. ಆದರೆ ಆ ಮಹಾಭಾಗ್ಯದೇವತೆಯ ರಾಜ್ಯಕಾಲವು ಜಗತ್ತಿಗೆ ಚಿರಸ್ಮರಣೀಯವೂ, ಅವರ ಬಾಳು ಸುಖಮಯವೂ ಆಗಿದ್ದರೆ, ಈ ಆಸ್ಟ್ರಿಯಾ ಚಕ್ರವರ್ತಿಯವರ ಬಾಳು ಅದಕ್ಕೆ ವ್ಯತಿರಿಕ್ತವಾಗಿದೆ. ಇವರು ಕೇವಲ ದುರದೃಷ್ಟವಂತರೆಂದು ಹೇಳಬಹುದು. ಇವರು ತಮ್ಮ ಜೀವಿತಕಾಲದಲ್ಲಿ ದುಃಖಕರ ಕಷ್ಟಗಳನ್ನೆಲ್ಲಾ ಪಟ್ಟಿರುವರು. ಇವರು ೧೮೪೮ ನೆಯ ವರ್ಷದಲ್ಲಿ ಸಿಂಹಾಸನವನ್ನೇರಿದರು. ಆಗ ಇವರ ಚಿಕ್ಕಪ್ಪಂದಿರು ರಾಜ್ಯಪರಿತ್ಯಾಗವನ್ನು ಮಾಡಬೇಕಾಯಿತು. ಬಳಿಕ ೧೮೬೪ ನೆಯ ವರ್ಷದಲ್ಲಿ ಇವರ ತಮ್ಮನಾದ ಆರ್ಚ್‌ಡ್ಯೂಕ್ ಮ್ಯಾಕ್ಸಿಮಿಲಿಯನ್ ಎಂಬಾತನು ಮೆಕ್ಸಿಕೋ ಚಕ್ರವರ್ತಿಯಾದನು. ೧೮೬೭ ನೆಯ ವರ್ಷದಲ್ಲಿ ಇವನು ಮೆಕ್ಸಿಕೋ ಪಟ್ಟಣದಲ್ಲಿ ತುಪಾಕಿಯಿಂದ ಸುಡಲ್ಪಟ್ಟನು. ಆತನ ಹೆಂಡತಿಯು ೧೮೬೮ ನೆಯ ವರ್ಷದಲ್ಲಿ ಹುಚ್ಚಿಯಾದಳು. ೧೮೮೯ ನೆಯ ವರ್ಷದಲ್ಲಿ ಈತನ ಏಕಪುತ್ರನಾಗಿದ್ದವನು ಮೃತನಾದನು. ಅವನನ್ನು ಯಾರೋ ಕೊಂದರೆಂದೂ, ಆತನೇ ಆತ್ಮಹತ್ಯವನ್ನು ಮಾಡಿಕೊಂಡನೆಂದೂ ತೆರತೆರದ ವಾರ್ತೆಯುಂಟಾಯಿತು. ಇವರ ಕುಮಾರನಾಗಿದ್ದ ಆರ್ಚ್‌ಡ್ಯೂಕ್ ಜಾನ್ ಎಂಬಾತನು ಒಬ್ಬ ಒಕ್ಕಲಗಿತ್ತಿಯನ್ನು ಮದುವೆಯಾಗಿ ಸಮುದ್ರಯಾತ್ರೆ ಹೋಗಿ ಹಿಂತಿರುಗಲಿಲ್ಲ. ಅವನ ಸುದ್ದಿಯೇ ಇಲ್ಲ. ಈ ಚಕ್ರವರ್ತಿಯವರ ಪತ್ನಿಯನ್ನು ೧೮೯೮ ರಲ್ಲಿ ಜಿನೀವಾ ಪಟ್ಟಣದಲ್ಲಿ ಕೊಲೆಗಾರರು ತುಪಾಕಿಯಿಂದ ಹೊಡೆದು ಸುಟ್ಟರು. ಇವರ ಉತ್ತರಾಧಿಕಾರಿಯಾಗಬೇಕಾಗಿದ್ದ ಯುವರಾಜನನ್ನೂ ಆತನ ಪತ್ನಿಯನ್ನೂ ಸಹ ಮೊನ್ನೆಯ ತಿಂಗಳಲ್ಲಿ ಸರಾಜೇವೋ ಪಟ್ಟಣದಲ್ಲಿ ತುಪಾಕಿಯಿಂದ ಹೊಡೆದು ಸುಟ್ಟವಿಷಯವು ಇನ್ನೂ ಹೊಸದಾಗಿಯೇ ಇದೆ. ಇಷ್ಟೊಂದು ಕುಟುಂಬ ನಷ್ಟವನ್ನು ಅನುಭವಿಸಿದ ಈ ಚಕ್ರವರ್ತಿಯವರು ಕಳೆದ ಶತಮಾನದಿಂದಲೂ ಕಾಣದಿದ್ದಂತಹ ಘೋರ ಯುದ್ಧಾಗ್ನಿಯನ್ನು ಯೂರೋಪುಖಂಡಕ್ಕೆ ಇಕ್ಕಿದರೆಂಬ ಅಪಕೀರ್ತಿಯನ್ನು ಈಗ ಹೊರೆಯುತ್ತಿರುವರು. ಈ ಚಕ್ರವರ್ತಿಯವರ ಜಾತಕವನ್ನು ಮೊನ್ನೆಯ ಸಂಚಿಕೆಯಲ್ಲಿ ಕೊಟ್ಟಿರುತ್ತೇವೆ. ಆ ದುರದೃಷ್ಟವಂತರೂ, ಈ ಚಕ್ರವರ್ತಿಯವರೂ ಒಟ್ಟಿಗೆ ಸೇರಿ ಯೂರೋಪುಖಂಡದವರೆಲ್ಲಾ ಯುದ್ಧಕ್ಕೆ ನಿಂತಿದ್ದಾರೆ. ಪರ್ಯವಸಾನವೇನೋ ಜಗದೀಶ್ವರನಿಗೇ ಗೊತ್ತು.

ಲೀಜ್ ಪಟ್ಟಣ.

ಯುದ್ಧಾಂಗಣದಲ್ಲಿ ಈವರೆಗೆ ಆಗಿರುವುದೆಲ್ಲಾ ಚಿಲ್ಲರೆ ಕಾಳಗ. ಇನ್ನು ಮೇಲೆ ದೊಡ್ಡದೊಡ್ಡ ಯುದ್ಧಗಳು ನಡೆಯುವುದರಲ್ಲಿವೆ. ಮೊಟ್ಟಮೊದಲಿನ ಘೋರಯುದ್ಧವು ಲೀಜ್ ಪಟ್ಟಣದಲ್ಲಿ ನಡೆಯುವುದರಲ್ಲಿದೆ. ಆದುಕಾರಣ ಆ ಪಟ್ಟಣದ ವಿವರಣವನ್ನು ಇಲ್ಲಿ ಕೊಡುತ್ತೇವೆ. ಇದು ಬೆಲ್ಜಿಯಂ ದೇಶಕ್ಕೆ ಸೇರಿದ ಲೀಜ್ ಪ್ರಾಂತಕ್ಕೆ ಮುಖ್ಯನಗರ. ಮ್ಯೂಸು ಎಂಬ ಹೊಳೆಯು ದಡದಮೇಲಿದೆ. ಮುಖ್ಯಮಠದ ಗುರುವು ಈ ಪಟ್ಟಣದಲ್ಲಿಯೇ ವಾಸಮಾಡುತ್ತಾನೆ. ಈಗಿನ ಕಾಲದಲ್ಲಿ ಪ್ರಸಿದ್ಧವಾಗಿರುವ ಬೆಲ್ಜಿಯಂ ದೇಶದ ಕೈಗಾರಿಕೆಗಳಿಗೆಲ್ಲಾ ಇದು ತವರುಮನೆ. ಯುದ್ಧಸಾಮಗ್ರಿಗಳನ್ನೆಲ್ಲಾ ವಿಶೇಷವಾಗಿ ಇಲ್ಲಿ ನಿರ್ಮಿಸುವರು. ಆದುಕಾರಣ, ಇಂಗ್ಲೆಂಡಿಗೆ ಸೇರಿದ ಬರ್ಮಿಂಗ್‌ಹ್ಯಾಂ ಪಟ್ಟಣವನ್ನು ಇದು ಹೋಲುತ್ತಿದೆ. ಈ ಪಟ್ಟಣವು ಹೀಗೆ ಕೈಗಾರಿಕೆಗಳಿಗೆ ಪ್ರಾಶಸ್ತ್ಯವನ್ನು ಪಡೆದುಕೊಂಡಿರುವುದಕ್ಕೂ ಇದರ ಸಂಪತ್ತಿಗೂ ಸಹ ಇದರ ಸಮೀಪದಲ್ಲಿರುವ ಕಲ್ಲಿದ್ದಲ ಗಣಿಗಳೇ ಮೂಲಭೂತಗಳು. ಈ ನಗರವು ಪ್ರಸಿದ್ಧವಾಗಿ ಪಟ್ಟಿಕೊಂಡಿದೆ. ಇದರಲ್ಲಿದ್ದ ದೊಡ್ಡ ಮಠವನ್ನು ಫ್ರೆಂಚಿನವರು ೧೭೯೪ ರಲ್ಲಿ ನಾಶಮಾಡಿದರು. ೧೮೭೭ ರಲ್ಲಿ ಹೊಸದಾಗಿ ಮಠವು ಕಟ್ಟಲ್ಪಟ್ಟಿತು. ಪಟ್ಟಣವು ರಾಜವೀಧಿಗಳಿಂದಲೂ ಉದ್ಯಾನಗಳಿಂದಲೂ ಮನೋಹರವಾಗಿದೆ. ಇಲ್ಲಿ ಒಂದು ಮಹಾ ಪ್ರಸಿದ್ಧವಾದ ಕಲಾಶಾಲೆಯೂ ಇದೆ. ಸರ್ವವಿಧದ ಕೆಲಸಗಳೂ ಇಲ್ಲಿ ಕಲಿಸಲ್ಪಡುತ್ತವೆ. ಈ ಪಟ್ಟಣಕ್ಕೆ ಉತ್ಕೃಷ್ಟವಾದ ೧೨ ಕೋಟೆಗಳಿರುವುದರಿಂದ ಶತ್ರುಗಳಿಗೆ ದುರ್ಗಮವಾಗಿದೆ. ಬಾರ್ಚಾನ್-ಎವಿಗ್ನೀ-ಫ್ಲೆರಾನ್-ಚಾಡ್‌ಫಾಂಟೇನ್-ಎಂಬೋರ್ಗ್-ಪೋಂಟಿಸ್ಸೆ ಎಂಬ ೬ ಕೋಟೆಗಳು ಪಟ್ಟಣದ ಬಲಪಕ್ಕದಲ್ಲೂ, ಲಾಂಟಿನ್-ಲಯಾರ್ಸ್-ಲಾಂಸಿನ್-ಲೋನ್ಸಿನ್-ಹೊಲೊಗ್ನೀ-ಫ್ಲೆಮಾಲ್ಲೆ-ಎಂಬ ೬ ಕೋಟೆಗಳು ಎಡಪಕ್ಕದಲ್ಲೂ ಇವೆ. ಈ ಕೋಟೆಗಳೆಲ್ಲಾ ಗಟ್ಟಿಯಾಗಿ ಸಿಮೆಂಟಿನಿಂದ ಕಟ್ಟಲ್ಪಟ್ಟಿವೆ. ಮೇಲೆ ದೊಡ್ಡದೊಡ್ಡ ಫಿರಂಗಿಗಳು ಸಾಲಾಗಿ ಇಡಲ್ಪಟ್ಟಿವೆ. ಈ ೧೨ ಕೋಟೆಗಳಿಗೂ ಮಧ್ಯಮಧ್ಯೆ ೪-೫ ಮೈಲಿಗಳ ಅಂತರವಿರುವುದು. ಈ ಕೋಟೆಗಳನ್ನು ಕಾಪಾಡುವುದಕ್ಕೆ ೨೫ ಸಾವಿರ ಸೈನ್ಯವಿರುವುದು. ಈ ಪಟ್ಟಣದಲ್ಲಿ ೧೯೧೧ ನೆಯ ಜನಪರಿಗಣತಿಯ ಪ್ರಕಾರ ೧೬೮೫೩೨ ಪ್ರಜೆಯಿದ್ದಿತು. ಇದು ಲೀಜು ಎಂಬ ಹೊಳೆಯ ದಡದಲ್ಲಿರುವುದರಿಂದ ಲೀಜು ಎಂಬ ಹೆಸರು ಇದಕ್ಕೆ ಕೊಡಲ್ಪಟ್ಟಿದೆ. ಇದು ಒಳ್ಳೆಯ ಸೇನಾಶಿಬಿರವಾಗಿದೆ.

ಆಲ್ಸೇಸ್.

ಕಳೆದ ತಾ॥ ೧೦ ನೆಯ ಸೋಮವಾರದ ದಿನ ಫ್ರಾನ್ಸಿನವರು ಈ ಪಟ್ಟಣವನ್ನು ಪ್ರವೇಶಿಸಿ ಸ್ವಾಧೀನಪಡಿಸಿಕೊಂಡರೆಂಬ ವಾರ್ತೆಯನ್ನು ಹಿಂದೆ ಪ್ರಕಟಿಸಿರುತ್ತೇವೆ. ಇದರಲ್ಲಿ ಬಂದು ಸೇರಿದ್ದ ಶತ್ರುಗಳನ್ನೆಲ್ಲಾ ಓಡಿಸಿಬಿಟ್ಟು ೧೫೦೦ ಮಂದಿ ಫ್ರೆಂಚರನ್ನು ಸೆರೆಯಾಗಿ ಹಿಡಿದಿರುತ್ತೇವೆಂದು ಜರ್ಮನಿಯವರು ಪ್ರಕಟಿಸಿರುತ್ತಾರೆ. ಆದರೆ ಫ್ರೆಂಚ್ ಪ್ರಭುತ್ವದವರು ಆಲ್ಸೇಸನ್ನು ಫ್ರೆಂಚರು ಆಕ್ರಮಿಸಿಕೊಂಡೇ ಇರುವರೆಂದು ಪ್ರಕಟಿಸಿದ್ದಾರೆ. ಈ ಪಟ್ಟಣದ ವಿಷಯವೇನೆಂದರೆ:—

೧೮೭೦ ನೆಯ ವರ್ಷದಲ್ಲಿ ಜರ್ಮನಿಗೂ ಫ್ರಾನ್ಸಿಗೂ ಯುದ್ಧವಾದಾಗ ಫ್ರಾನ್ಸು ಸೋತುಹೋಯಿತು. ಕೊನೆಯಲ್ಲಿ ಫ್ರಾನ್ಸು ಜರ್ಮನಿಗೆ ಪ್ರತಿಫಲವಾಗಿ ೩೦೦ ಕೋಟಿ ರೂ. ಗಳನ್ನೂ ಆಲ್ಸೇಸ್-ಲಾರೇನ್ ಎಂಬ ದೇಶಭಾಗವನ್ನೂ ಒಪ್ಪಿಸಿಬಿಡಬೇಕಾಯಿತು. ಅಗಿನಿಂದ ಈ ದೇಶಭಾಗಗಳು ಫ್ರಾನ್ಸಿನಿಂದ ಜರ್ಮನಿಗೆ ಸೇರಿಹೋಗಿದ್ದುವು. ಆ ಕಾಲದಿಂದಲೂ ಫ್ರಾನ್ಸು-ಜರ್ಮನಿಗಳ ಮಧ್ಯದಲ್ಲಿ ಸೇಡು ಹಗೆತನವುಂಟಾಯಿತು. ಆ ದ್ವೇಷದ ಪರಿಣಾಮವೇ ಈಗಿನ ಯುದ್ಧಕ್ಕೂ ಪ್ರಬಲಕಾರಣವೆಂದು ಹೇಳಬಹುದು. ಈ ನೂತನ ಭಾಗಗಳ ಪ್ರಜೆಗಳನ್ನು ತನ್ನವರನ್ನಾಗಿ ಮಾಡಿಕೊಳ್ಳಲು ಅಗಿನಿಂದಲೂ ಜರ್ಮನಿಯು ನಾನಾ ಪ್ರಯತ್ನಗಳನ್ನು ಮಾಡಿತು. ತನ್ನ ಭಾಷೆ-ತನ್ನ ನಡೆನುಡಿಗಳನ್ನು ಕಲಿಸುವುದಕ್ಕೆ ಮಹಾ ಸಾಹಸಗಳನ್ನು ಮಾಡಿತು. ಅದನ್ನು ಒಪ್ಪದಿದ್ದವರನ್ನು ಕ್ರೂರವಾಗಿ ಶಿಕ್ಷಿಸಿತು. ಆದರೂ ಅಲ್ಲಿನ ಪ್ರಜೆಗಳು ಮೇಲೆಮೇಲೆ ರಾಜಶಾಸನದ ಬಲಾತ್ಕಾರಕ್ಕೆ ಬಗ್ಗಿದಂತೆ ತೋರಿದರೂ ಅವರ ಅಂತರಂಗವು ಮಾತ್ರ ಮಾರ್ಪಡಲಿಲ್ಲ. ಅವರ ಸಹಾನುಭೂತಿಯು ಯಾವಾಗಲೂ ತಮ್ಮ ಮಾತೃದೇಶವಾದ ಫ್ರಾನ್ಸಿನ ಕಡೆಗೇ ಇದ್ದಿತು. ಈಗಿನ ಯುದ್ಧಾರಂಭದ ಕಾಲದಲ್ಲಿ ಫ್ರೆಂಚರು ಎಷ್ಟು ಬೇಗನೆ ತಮ್ಮ ಪಟ್ಟಣಗಳಿಗೆ ಬಂದು ತಮ್ಮನ್ನು ರಕ್ಷಿಸುವರೋ ಎಂದು ಎದುರು ನೋಡುತ್ತಿದ್ದರು. ಅವರ ಕೋರಿಕೆಯು ಕಳೆದ ತಾ॥ ೧೦ ರಲ್ಲಿ ನೆರವೇರಿತು. ಕಳೆದ ೪೪ ವರ್ಷಗಳಿಂದ ಅಗಲಿದ್ದ ತಾವುತಾವು ಪುನಸ್ಸಮಾಗಮವಾಗಿ ಸೇರಿದುದಕ್ಕಾಗಿ ಆ ದಿವಸ ಆಲ್ಸೇಸಿನಲ್ಲೂ, ಫ್ರಾನ್ಸಿನ ರಾಜಧಾನಿಯಾದ ಪ್ಯಾರಿಸ್ಸಿನಲ್ಲೂ ನಡೆದ ಆನಂದೋತ್ಸವಗಳಿಗೆ ಮಿತಿಯಿಲ್ಲವಾಯಿತು. ಈ ಆಲ್ಸೇಸ್ ಲಾರೇನು ಪ್ರಾಂತಗಳು ಫ್ರಾನ್ಸಿಗೂ ಜರ್ಮನಿಗೂ ಇರುವ ಎಲ್ಲೆಯಲ್ಲಿರುತ್ತವೆ.

ಹೆಯುಲೆನ್ ಯುದ್ಧ—ಮತ್ತೂ ಜರ್ಮನರ ಪರಾಜಯಗಳು.

ಯುದ್ಧಾರಂಭವಾಗಿ ೩ ವಾರಗಳ ನಂತರ ಕಳೆದ ತಾ॥ ೧೦ ರಲ್ಲಿ ಹೆಯುಲಿನ್ನಿನಲ್ಲಿ ಜರ್ಮನಿ-ಬೆಲ್ಜಿಯಮ್ಮುಗಳಿಗೆ ನಡೆದ ಯುದ್ಧವು ೧ ನೆಯ ದೊಡ್ಡಯುದ್ಧವಾಗಿದೆ. ಇಲ್ಲಿ ಬೆಲ್ಜಿಯಂ ಸೇನೆಯು ಕಡಿಮೆಯಾಗಿಯೂ, ಜರ್ಮನಿ ಸೇನೆಯು ಹೆಚ್ಚಾಗಿಯೂ ಇದ್ದಿತು. ಆ ದಿನ ಮಧ್ಯಾಹ್ನದಿಂದ ಸಾಯಂಕಾಲದವರೆಗೆ ಯುದ್ಧವು ನಡೆಸುವುದರಲ್ಲಿ ಜರ್ಮನರಿಗೆ ತುಂಬಾ ನಷ್ಟವಾಗಿ ಎಂದರೆ ⅓ ಭಾಗದ ಸೇನೆಯನ್ನು ಕಳೆದುಕೊಂಡು, ಅವರು ಪಲಾಯನಸೂತ್ರವನ್ನು ಓದಬೇಕಾಯಿತು. ಆಗ ಬೆಲ್ಜಿಯಂ ಸೈನಿಕರು ಸಣ್ಣರಾಜ್ಯದವರಾದರೂ ಅವರು ತೋರಿಸಿದ ಪರಾಕ್ರಮವು ಲೋಕಶ್ಲಾಘ್ಯವಾಗಿದ್ದಿತು. ಯುದ್ಧಾರಂಭವಾದಂದಿನಿಂದ ಇದುವರೆಗಿನ ಸ್ಥಿತಿಯನ್ನು ನೋಡುವಲ್ಲಿ ಜರ್ಮನಿಯವರ ಮೇಲೆ ಅಶುಭಛತ್ರವೇ ನೆಳಲು ಮಾಡಿರುವಂತೆ ಕಾಣುತ್ತಿದೆ. ಇದು ಅದರ ಭಾವಿ ಪರಿಣಾಮಕ್ಕೆ ಉತ್ಪಾತಸೂಚನೆಯಾಗಿರಬೇಕು. ಫ್ರಾನ್ಸು ಸೇನಾಸನ್ನಾಹವನ್ನು ಮಾಡಿಕೊಳ್ಳುವಷ್ಟರೊಳಗಾಗಿ ಬೆಲ್ಜಿಯಮ್ಮಿನ ಮೇಲಿಂದ ಹಾದು ಪ್ಯಾರಿಸ್ಸಿಗೆ ನುಗ್ಗಬೇಕೆಂದು ಜರ್ಮನಿಯವರು ಮಾಡಿಕೊಂಡಿದ್ದ ರಹಸ್ಯಾಲೋಚನೆಗಳಿಗೆಲ್ಲಾ ಈಗಲೇ ತಿಲತರ್ಪಣವಾದಂತಾಯಿತು. ೨-೩ ವಾರಗಳಿಂದ ಬೆಲ್ಜಿಯಮ್ಮಿನವರು ಪೂರ್ಣವಾಗಿ ಮಾಡಿದ ಸಾಹಸದಿಂದ ಈಗಿನ ಯುದ್ಧಾಂಗಣದ ಬಳಿಗೆ ಫ್ರೆಂಚರ ಮತ್ತೂ ಆಂಗ್ಲರ ಸೇನೆಗಳು ಬಂದು ಒದಗಲು ಅವಕಾಶವಾಯಿತು. ಜರ್ಮನಿಯವರ ಉದ್ದೇಶವು ನೆರವೇರಲು ಇದುವರೆಗೆ ಇದ್ದ ಅನುಕೂಲ್ಯವು ಇನ್ನು ಮುಂದೆ ಇರಲಾರದು. ಏಕೆಂದರೆ—ಇದುವರೆಗೆ ಅವರನ್ನು ಬೆಲ್ಜಿಯಮ್ಮಿನವರೊಬ್ಬರೇ ಅಲ್ಲಿ ಪ್ರತಿಭಟಿಸುತ್ತಿದ್ದರು. ಇನ್ನುಮೇಲೆ ಮೂವರಾಗುವರು, ಅದುಕಾರಣ ಇನ್ನುಮೇಲೆ ನಡೆಯುವ ಯುದ್ಧಗಳು ಪ್ರಬಲಗಳಾಗಿರುವುವು. ಲೀಜುಕೋಟೆಯ ಹತ್ತಿರ ಜರ್ಮನರು ಅನಂತ ಸಾಹಸವನ್ನು ಮಾಡಿದರೂ ಒಂದಾದರೂ ಅವರಿಗೆ ವಶವಾಗಿಲ್ಲ. ಆ ಪಟ್ಟಣದಲ್ಲಿ ಮಾತ್ರ ಕೆಲ ಸೈನಿಕರು ಪ್ರವೇಶಿಸಿರುವರು. ಮತ್ತೂ ಜರ್ಮನಿಯು ಫ್ರಾನ್ಸಿನ ಉತ್ತರದಿಕ್ಕಿನಲ್ಲಿ ಇದನ್ನು ನುಗ್ಗುವುದಕ್ಕೆ ಮಾಡಿದ ಸಾಹಸಗಳೂ ವ್ಯರ್ಥವಾದುವು. ಫ್ರಾನ್ಸಿನ ಎಲ್ಲೆಯಲ್ಲಿರುವ ಮಾಂಟ್‌ಮೆಡಿಯೆಂಬಲ್ಲಿಯೂ, ದಕ್ಷಿಣದಲ್ಲಿರುವ ಓಪಿಯರ್ನಡಿಯ ಹತ್ತಿರವೂ ಫ್ರೆಂಚರು ಜರ್ಮನಿಯವರನ್ನು ಹೊಡೆದು ನಾಶಮಾಡಿ, ಅವರ ಫಿರಂಗಿಗಳನ್ನೂ ಮದ್ದುಗುಂಡುಗಳನ್ನೂ ಸೈನಿಕರನ್ನೂ ವಶಪಡಿಸಿಕೊಂಡರು. ಅತ್ತ ಜರ್ಮನಿಯವರು ದಕ್ಷಿಣಕಡೆಗೂ ತಿರುಗಿರುವರು. ಆದರೇನು! ಅಲ್ಲೂ ಹಲವು ಹಡಗುಗಳನ್ನು ಕಳೆದುಕೊಂಡರು. ಮುಂದೆ ತುರ್ಕಿಯೂ ಜರ್ಮನಿಯಮೇಲೆ ಕೈಮಾಡುವ ಪ್ರಸಂಗ ಬರುವಂತಿದೆ. ಜಪಾನೂ ಕೂಡ ಜರ್ಮನಿಯ ಮೇಲೆ ಕತ್ತಿ ಹಿಡಿಯುವಂತಿದೆ. ಈಗ ಪ್ರಪಂಚದಲ್ಲಿರುವ ಮುಖ್ಯರಾಷ್ಟ್ರಗಳೊಳಗೆ ಇಂಗ್ಲೆಂಡು-ಫ್ರಾನ್ಸು-ರಷ್ಯಾ-ಸರ್ವಿಯಾ-ಬೆಲ್ಜಿಯಂ-ಮಾಂಟಿನಿಗ್ರೋ-ಜಪಾನು-ತುರ್ಕಿ-ಇವುಗಳು ಒಂದು ಪಕ್ಷದಲ್ಲೂ, ಜರ್ಮನಿ-ಆಸ್ಟ್ರಿಯಾ-ಇವೆರಡೇ ಒಂದು ಪಕ್ಷದಲ್ಲೂ ನಿಂತು ಕಾದಾಡುವಂತಾಗಿದೆ. ನಾರ್ವೆ-ಸ್ವೀಡನ್-ಹಾಲೆಂಡು-ಗ್ರೀಸ್-ಪೋರ್ಚುಗಲ್-ಇಟಲಿ-ಬಾಲ್ಕನ್ ರಾಷ್ಟ್ರಗಳು-ಸ್ವಿಟ್ಜರ್‌ಲ್ಯಾಂಡು-ಚೀನಾ-ಅಮೇರಿಕಾ-ಸಂಯುಕ್ತರಾಷ್ಟ್ರಗಳು-ಇವು ತಾಟಸ್ಥ್ಯವನ್ನು ವಹಿಸಿರುತ್ತವೆ. ಜರ್ಮನಿಯು ಬಹು ರಾಷ್ಟ್ರಗಳ ಹಗೆತನವನ್ನು ತಾನಾಗಿ ಉಂಟುಮಾಡಿಕೊಂಡಿದೆ. ತಮ್ಮೊಡನೆ ಯುದ್ಧಕ್ಕೆ ಬರದೆ ಹೋದ ತಮ್ಮ ಪ್ರಜೆಯಾದ ಸೋಷಿಯಲಿಸ್ಟ್ ಪಂಥದ ಪ್ರಮುಖನನ್ನು ಚಕ್ರವರ್ತಿಯು ಕೊಲ್ಲಿಸಿ, ಸ್ವಪ್ರಜೆಗಳ ವಿರೋಧವನ್ನೂ ಈಗತಾನೇ ಸಂಪಾದಿಸಿಕೊಂಡಿದ್ದಾರೆ. ಜರ್ಮನಿ ಚಕ್ರವರ್ತಿಯ ಜಾತಕವು ಅವರ ಭವಿಷ್ಯದ ನಿಮ್ನವನ್ನು ಸೂಚಿಸಿದೆ. ಇವೆಲ್ಲವುಗಳ ಪರಿಣಾಮವು ಸ್ವಲ್ಪದಿನಗಳಲ್ಲೇ ಜಗತ್ತಿಗೆ ಗೊತ್ತಾಗುವುದರಲ್ಲಿದೆ.

ಭಾರತಚಕ್ರಾಧಿಪತ್ಯದ ರಿಲೀಫ್ ಫಂಡು.

ಲಾರ್ಡ್ ಹಾರ್ಡಿಂಜ್‌ರವರ ಪ್ರಾರ್ಥನೆಯು.

ಸಿಂಲಾ, ಆಗಸ್ಟ್ ತಾ॥ ೧೩. ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಯುದ್ಧವು ಪ್ರಾಪ್ತವಾಗಿರುವುದರಿಂದ, ಚಕ್ರಾಧಿಪತ್ಯ ಸಂರಕ್ಷಣೆಗಾಗಿ ಭರತಖಂಡದಿಂದ ಸೇನೆಯನ್ನು ಕಳುಹಿಸಬೇಕಾಗಿ ಬರುವುದು ಸಂಭವನೀಯವಾಗಿದೆ. ಈ ಸೇನೆಯು ಬಹಳ ಹೊತ್ತು ನಮ್ಮ ಭರತಖಂಡದ ಧೈರ್ಯಶಾಲಿಗಳಾದ ಅನೇಕ ರೆಜಿಮೆಂಟುಗಳನ್ನೂ ಹಾಗೂ ದೇಶೀಯ ಸಂಸ್ಥಾನಾಧೀಶ್ವರರು ಕಳುಹುವ ಇಂಪೀರಿಯಲ್ ಸರ್ವಿಸ್ ಸೇನೆಗಳನ್ನೂ ಒಳಗೊಂಡಿರುವುದು. ಭರತಖಂಡದಿಂದ ಯುದ್ಧಕ್ಕೆ ಹೊರಡುವವರ ಕುಟುಂಬದ ಜೀವನಕ್ಕೆ ತೊಂದರೆಯಾಗುವುದಲ್ಲದೆ ಯುದ್ಧದಲ್ಲಿ ಮಡಿಯುವವರ ಹೆಂಡತಿಯರು ವಿಧವೆಯರಾಗಿಯೂ, ಮಕ್ಕಳು ಅನಾಥರಾಗಿಯೂ ಆಗುವ ಸಂಭವವುಂಟು. ಅದುಕಾರಣ ಒಂದು ದೊಡ್ಡ ಫಂಡು ಕೂಡಲೆ ಏರ್ಪಡಿಸಲ್ಪಡತಕ್ಕದ್ದಾಗಿದೆಯಲ್ಲದೆ, ಕೊಂಚವೂ ಆಲಸ್ಯವಿಲ್ಲದೆ ಹಣವನ್ನು ಕೂಡಿಸುವುದು ಆವಶ್ಯಕವಾಗಿದೆ. ಈ ಕಾರ್ಯಕ್ಕಾಗಿ, ನನ್ನ ಅಧ್ಯಕ್ಷತೆಯಲ್ಲಿ ಒಂದು ಸೆಂಟ್ರಲ್ ಕಮಿಟಿಯನ್ನೇರ್ಪಡಿಸಯತ್ನಿಸಲ್ಪಟ್ಟಿದೆ. ಈ ಕಮಿಟಿಗೆ ಬಂಗಾಳ, ಮದರಾಸು, ಮತ್ತೂ ಬೊಂಬಾಯಿ ಇವುಗಳ ಗೌರ್ನರುಗಳು, ಕಮ್ಯಾಂಡರ್ ಇನ್‌ಚೀಫ್‌ರವರು, ನನ್ನ ಎಗ್ಜಿಕ್ಯೂಟಿವ್ ಕೌನ್ಸಿಲಿನ ಮೆಂಬರುಗಳು, ಸ್ಥಳೀಯ ಸರ್ಕಾರಗಳ ಮುಖ್ಯಾಧಿಕಾರಿಗಳು, ಹಾಗೂ ದೇಶೀಯಸಂಸ್ಥಾನಾಧಿಪತಿಗಳಾದ ಬಿಕನೀರು, ಗ್ವಾಲಿಯರ್, ಇಡರು, ಜಯಪುರ, ಕಾಶ್ಮೀರ, ಮೈಸೂರು, ಪಾಟಿಯಾಲ, ರೀವಾ, ಉದಯಪುರ, ಇವುಗಳ ಮಹಾರಾಜರುಗಳು, ಭೋಪಾಲಿನ ಬೇಗಂರವರು, ಹೈದರಾಬಾದಿನ ನೈಜಾಂರವರು, ಜೋಧಪುರದ ಮಹಾರಾಜ ರೀಜಂಟರು, ಮತ್ತೂ ಕೋಟಾದ ಮಹಾರಾವ್‌ಯವರು, ಕಮಿಟಿ ಮೆಂಬರುಗಳಾಗಿಯೂ ನಿಯಮಿಸಲ್ಪಡುವರು. ಈ ಕಮಿಟಿಯ ಮೇಲ್ವಿಚಾರದಲ್ಲಿ ಒಂದು ಕಾರ್ಯನಿರ್ವಾಹಕ ಕಮಿಟಿಯೂ, ಎಲ್ಲ ಕಡೆಯಲ್ಲೂ ಅವರ ಶಾಖಾಕಮಿಟಿಗಳೂ ಏರ್ಪಡಿಸಲ್ಪಡುವುವು. ಭರತಖಂಡದ ಸಂಸ್ಥಾನಾಧೀಶ್ವರರುಗಳೂ, ದೊಡ್ಡಮನುಷ್ಯರುಗಳೂ, ವರ್ತಕರುಗಳೂ ಇತರ ಎಲ್ಲ ಯೂರೋಪ್ಯ ಹಾಗೂ ಭಾರತೀಯ ಜನರೂ ಯುದ್ಧದಿಂದುಂಟಾಗುವ ಎಲ್ಲ ತೊಂದರೆಗಳ ಮುಖ್ಯವಾಗಿ ಚಕ್ರಾಧಿಪತ್ಯದ ಸಂರಕ್ಷಣೆಗಾಗಿ ಯುದ್ಧದಲ್ಲಿ ಮಡಿಯುವವರ ಹಾಗೂ ಕಷ್ಟಪಡುವವರ ಕುಟುಂಬದ ಉಪಯೋಗಾರ್ಥವಾಗಿ ಅವರವರ ಶಕ್ತ್ಯನುಸಾರ ದ್ರವ್ಯಸಹಾಯ್ಯವನ್ನು ಮಾಡುವರೆಂದು ನಾನು ನಂಬಿರುತ್ತೇನೆ.

ಯುದ್ಧದ ಭವಿಷ್ಯತ್ತು.

ಪಾಶ್ಚಾತ್ಯಜ್ಯೋತಿಷ್ಕರಲ್ಲಿ ಪ್ರಬುದ್ಧರಾದ ವಿಯೋಲೆಂಟಾಲ್ ಎಂಬುವರು ಈಗಿನ ಯುದ್ಧದ ಭವಿಷ್ಯತ್ತನ್ನು ಈ ಕೆಳಗೆ ಕಂಡಂತೆ ಗಣಿತದ ಮೂಲಕ ನಿರ್ಣಯಿಸಿ ಹೇಳಿರುತ್ತಾರೆ.—"ಪಶ್ಚಿಮಾರ್ಧಗೋಳದಲ್ಲಿರುವ ಗ್ರಹಚಾರ ಸ್ಥಿತಿಯನ್ನು ಪರಿಶೀಲಿಸಿದರೆ, ಈ ಯುದ್ಧದೋಷವು ದೀರ್ಘಕಾಲಪರ್ಯಂತ ವಿಸ್ತರಿಸಿಕೊಂಡಿರುವುದೆಂದು ಹೇಳಲು ಅವಕಾಶವಿಲ್ಲ.

ಜರ್ಮನಿ.

ಜರ್ಮನಿಗೆ ಆದಿಯಲ್ಲಿ ಸ್ವಲ್ಪ ಜಯಪ್ರಾಪ್ತಿಯು ಉಂಟಾಗಬಹುದು, ಆದರೆ ಅದು ಅಷ್ಟು ಪ್ರಾಮುಖ್ಯವನ್ನೈದಲಾರದು. ದೇಶಗಳೊಳಗೆ ದ್ರವ್ಯಸಂಬಂಧವಾದ ವೈಕಲ್ಯವು ಹೆಚ್ಚು ಹಾಹಾಕಾರವನ್ನು ಹುಟ್ಟಿಸುವುದು. ಅದರಿಂದ ಈ ಯುದ್ಧಾಭಿನಿವೇಶವು ವಿರಮಿಸುವುದು. ಜರ್ಮನಿ ಪ್ರಜೆಗಳು ಅಂತಃಕಲಹದಿಂದ ತುಂಬಿಹೋಗುವರು. ಅದರಿಂದ ಆ ಸಾಮ್ರಾಜ್ಯಕ್ಕೆ ಒಳಗೂ ಹೊರಗೂ ವಿನಾಶವು ಪ್ರಾಪ್ತವಾಗುವುದು. ಈ ಕ್ಷೋಭೆಯು ಮೊದಲಿಂದಲೂ ದೊರೆತನದ ನಿರಾಕರಣೆಯು ಕಡೆಗೆ ತಿರುಗುವುದು. ಕಡೆಗೆ ರಾಜಧ್ವಂಸದಲ್ಲಿ ಪರಿಣಾಮಗೊಳ್ಳುವುದು. ಚಕ್ರವರ್ತಿಯ ಜಾತಕದಲ್ಲಿ ದುಷ್ಟಗ್ರಹಚಾರವು ವಿಶೇಷವಾಗಿದೆ.

ರಷ್ಯಾ.

ಯುದ್ಧಸಂಗಂಬಂಧಕ್ಕೆ ಅಧಿಪತಿಗಳಾದ ಗ್ರಹಗಳು ರಷ್ಯಾರಾಜ್ಯಕ್ಕೆ ಹೆಚ್ಚು ಅನುಕೂಲಗಳಾಗಿವೆ. ಫ್ರಾನ್ಸ್‌ರಾಜ್ಯಕ್ಕೆ ಹಾಗಿಲ್ಲ. ಜರ್ಮನಿಯಮೇಲೆ ಬದ್ಧದ್ವೇಷವುಳ್ಳುವುಗಳು ಈ ರಷ್ಯಾ-ಫ್ರಾನ್ಸುಗಳೆರಡೇ.

ಫ್ರಾನ್ಸು.

ಫ್ರೆಂಚ್ ಸೇನಾನಿವಹಕ್ಕೆ ಈ ತಿಂಗಳ ಕೊನೆಯಲ್ಲೂ, ಸೆಪ್ಟೆಂಬರ್ ತಿಂಗಳ ಮೊದಲ ಕೆಲದಿನಗಳಲ್ಲೂ ಸ್ವಲ್ಪ ಜೀರ್ಣತೆಯು ತಪ್ಪದು. ಆದರೆ ಬಳಿಕ ಅದಕ್ಕೆ ಉತ್ತಮವಾದ ತಾರಾಬಲವು ಪ್ರಾಪ್ತವಾಗುವುದೆಂದು ತೋರಿ ಬರುತ್ತದೆ.

ಆಸ್ಟ್ರಿಯಾ.

ಆಸ್ಟ್ರಿಯಾರಾಷ್ಟ್ರಕ್ಕೆ ಮುಂದೆ ಬಹಳ ದುರ್ದಿನಗಳಿರುವುವು. ಯೂರೋಪುರಾಷ್ಟ್ರಸಮೂಹದಲ್ಲಿ ಈ ಆಸ್ಟ್ರಿಯಾದ ತೇಜಸ್ಸು ಕ್ಷೀಣಿಸಿ ಹೋಗುವುದು.

ಇಟಲಿ.

ಇಟಲಿದೇಶವು ಪುನಃ ಶಸ್ತ್ರಪ್ರಸಂಗವನ್ನು ವಹಿಸುವುದು. ಅತಿಶಯವಾದ ಜಯವನ್ನೂ ಕೀರ್ತಿಯನ್ನೂ ವಿಸ್ತರಿಸುವುದು.

ಇಂಗ್ಲೆಂಡು.

ಇನ್ನು ಇಂಗ್ಲೆಂಡಿನ ದಶೆಯು ಹೇಗಿರುವುದೆಂದರೆ— ಈ ದೇಶಾದೃಷ್ಟವನ್ನು ರಕ್ಷಿಸುವ ಗ್ರಹಗಳೆಲ್ಲಾ ಶ್ರೇಯಃಪ್ರದಸ್ಥಾನದಲ್ಲಿವೆ. ಅನುಕೂಲಗ್ರಹವೀಕ್ಷಣೆಯು ಪೂರ್ಣವಾಗಿದೆ. ಇದುವರೆಗೆ ಕೆಟ್ಟವಾಗಿದ್ದ ನಕ್ಷತ್ರಗಳು ಕೂಡ ಈಗ ಉತ್ತಮರಾಶಿಯಲ್ಲಿ ಪ್ರವೇಶಿಸುತ್ತಿವೆ. ಇಂಗ್ಲೆಂಡು ತನ್ನ ಕೀರ್ತಿಗೌರವಗಳನ್ನೂ ಶಕ್ತಿವಿಶೇಷವನ್ನೂ ಚೆನ್ನಾಗಿ ಉಳಿಸಿಕೊಳ್ಳುವುದು.

ಭರತಖಂಡ.

ಭರತಖಂಡದ ಸಂಬಂಧವಾಗಿ ಗ್ರಹಗಳ ವಿಚಾರವನ್ನು ಪರಿಶೀಲಿಸಿದರೆ, ಈ ದೇಶದಲ್ಲಿ ಯಾವ ವಿಧವಾದ ಹೋರಾಟ ಉಂಟಾಗುವಂತೆ ಕಾಣುವುದಿಲ್ಲ.

ಈಗಿನ ಆಂದೋಳನವು ನಿಷ್ಕಾರಣವಾಗಿ ಹುಟ್ಟಿರುತ್ತದೆ. ಬೇಗನೆ ಇದೆಲ್ಲವೂ ಸ್ವಸ್ಥವಾಗುವುದು. ಯೂರೋಪಿನ ಭೂಗೋಳಚಿತ್ರದಲ್ಲಿ ರಾಷ್ಟ್ರಗಳ ಎಲ್ಲೆಯನ್ನು ವ್ಯತ್ಯಾಸಮಾಡಿ ಬರೆಯಬೇಕಾಗುವುದು. ರಷ್ಯಾ-ಫ್ರಾನ್ಸು ರಾಷ್ಟ್ರಗಳ ವೈಶಾಲ್ಯವು ವಿಸ್ತರಿಸುವುದು. ಜರ್ಮನಿ ರಾಜ್ಯವು ತನ್ನ ಮೂಲಭೂಮಿಯಲ್ಲೇ ಸ್ವಲ್ಪ ಕಳೆದುಕೊಳ್ಳುವುದು. ೪೦ ವರ್ಷಗಳ ಹಿಂದೆ ಶತ್ರುಸೇನೆಯ ಶಕ್ತಿಯಿಂದ ಹಿಡಿದುಕೊಂಡಿರುವ ಆಲ್ಸೇಸ್-ಲೋರೈನ್‌ಪಟ್ಟಣಗಳು ಮತ್ತೆ ಫ್ರೆಂಚರ ಸೊತ್ತಾಗಿ ಪರಿಣಮಿಸುವುವು. ಆಸ್ಟ್ರಿಯಾದ ಹಣೆಬರಹವು ಚೆನ್ನಾಗಿಲ್ಲ. ಈ ಯುದ್ಧರೋಗವು ನಿವಾರಿತವಾಗುವುದರೊಳಗೆ ದೇಶವೆಲ್ಲಾ ನಾನಾವಿಧವಾದ ಉಪಟಳದಿಂದ ಬೆಂತಾಗುವುದು. ಜರ್ಮನಿಗೆ ಅಪಜಯವು ತಪ್ಪದ ಫಲವು, ಅದು ಖಂಡಿತ. ಯುದ್ಧಸಂಬಂಧವಾದ ಜಾತಕಲಕ್ಷಣವನ್ನು ಪರಿಶೀಲಿಸಿದರೆ, ಸೂರ್ಯನು ತುಲಾರಾಶಿಯಿಂದ ವೃಶ್ಚಿಕರಾಶಿಯನ್ನು ಪ್ರವೇಶಿಸುವವರೆಗೂ ಶಾಂತಿಯು ಸಮನಿಸುವುದಿಲ್ಲ. ಆ ಶಾಂತಿಯೆಂಬುವುದು ಅಕ್ಟೋಬರ್ ತಿಂಗಳು ೩ ನೆಯ ವಾರದಲ್ಲಿ ಜರುಗುವುದು. ಈ ಯುದ್ಧಪ್ರಸಕ್ತಿಯು ಎಷ್ಟು ಅಕಸ್ಮಾತ್ತಾಗಿ ಉಂಟಾಯಿತೋ ಸಂಧಿನಿರ್ಧಾರಣವೂ ಕೂಡ ಅಷ್ಟು ಅಕಸ್ಮಾತ್ತಾಗಿಯೇ ಆಗುವುದು."

ಪ್ರಪಂಚದಲ್ಲಿನ ಮುಖ್ಯರಾಷ್ಟ್ರಗಳ ಯೋಗ್ಯತೆಯು.

ದೇಶಗಳ ಹೆಸರು.	ವಿಸ್ತೀರ್ಣ.	ಜನಸಂಖ್ಯೆ.	ವರಮಾನ. ಪೌ	ತಲೆಯೊಂದಕ್ಕೆ ಕಂದಾಯ; ಪೌ	ಸೈನ್ಯ.	ವೆಚ್ಚ. ಪೌ	ಯುದ್ಧದ ಹಡಗು.	ವ್ಯಾಪಾರದ ಹಡಗು ಅವುಗಳು ಹೊರಬಲ್ಲ ಭಾರ; ಟ.	ನಡೆಯುವ ವ್ಯಾಪಾರ; ಪೌ
ಆಂಗ್ಲ ಸಾಮ್ರಾಜ್ಯ	13123712	435000000	340750000					20431543	1779000000
ಆಂಗ್ಲ ದ್ವೀಪಗಳು	120651	45250000	186000000	4—2—0	413446	28220000	600	18696237	1032000000
ಭರತಖಂಡ	1773170	315000000	82000000	0—5—0	235000	18000000			287000000
ಅಮೇರಿಕಾಸಂಯುಕ್ತ ರಾಷ್ಟ್ರಗಳು	3027000	92000000	207000000	2—5—0	216000	30000000	170	5427636	738000000
ಫ್ರಾನ್ಸ್ ಸಾಮ್ರಾಜ್ಯ	5366400	98400000	209500000						
ಫ್ರಾನ್ಸ್ ದೇಶ	207100	40000000	150000000	4—15—0	1250000	36550000	340	2201116	566000000
ಜರ್ಮನ್ ಸಾಮ್ರಾಜ್ಯ	1313020	80000000							
ಜರ್ಮನ್ ದೇಶ	208780	65000000	150500000	2—8—0	2250000	60000000	350	5082061	876000000
ಇಟಲಿ ಸಾಮ್ರಾಜ್ಯ	723811	36800000							
ಇಟಲಿದೇಶ	110623	35000000	113000000	3—5—0	750000	16825541	135	1521942	222000000
ರಷ್ಯಾ	8400000	164000000	300000000	1—16—0	1630000	67289210	160	974178	268000000
ಜಪಾನ್ ಸಾಮ್ರಾಜ್ಯ	235000	65100000							
ಜಪಾನ್ ದೇಶ	140000	50000000	58000000	1—3—0	750000	19966607	170	1500014	101000000
ಆಸ್ಟ್ರಿಯಾ }	134634	29000000	128500000 }	4—6—0	380000	22193204	125	1011414	233000000
ಹಂಗೇರಿ }	125400	21000000	6500000 }						
ಬೆಲ್ಜಿಯಂ	11400	7500000	33000000	4—8—0	180000	2780550		304386	324000000
ಸರ್ವಿಯಾ	34000	5000000	5250000	1—15—0	195000	1167641			9500000
ಮಾಂಟಿನಿಗ್ರೋ	5800	500000	125000	0—11—0					450000

ಯೂರೋಪುರಾಷ್ಟ್ರಗಳಲ್ಲಿ ಪ್ರಜೆಗಳೆಲ್ಲಾ ಸೈನಿಕರಾಗಿರಬೇಕೆಂಬ ನಿರ್ಬಂಧವುಂಟು. ಆಂಗ್ಲದ್ವೀಪಗಳಲ್ಲಿ ಮಾತ್ರ ಆ ನಿರ್ಬಂಧವಿಲ್ಲ. ಈ ಕಾರಣದಿಂದ ಸೇನಾಸಂಖ್ಯೆಯು ಆಂಗ್ಲದ್ವೀಪಗಳೊಳಗೆ ಕಡಿಮೆಯಾಗಿಯೂ, ಇತರ ರಾಷ್ಟ್ರಗಳಲ್ಲಿ ಹೆಚ್ಚಾಗಿಯೂ ಇವೆ. ಆದರೆ ಯುದ್ಧಾರಂಭದಿಂದಲೂ ಇಂಗ್ಲೆಂಡಿನಲ್ಲಿ ಹೊಸ ಸೈನಿಕರು ೫ ಲಕ್ಷದವರೆಗೆ ಸಿದ್ಧಪಡಿಸಲ್ಪಡುತ್ತಿದ್ದಾರೆ. ಈ ರಾಷ್ಟ್ರಗಳಿಗಿರುವ ಯುದ್ಧನೌಕಾಸೇನೆಯ ಪ್ರಮಾಣವನ್ನು ಹಿಂದಿನ ಒಂದು ಸಂಚಿಕೆಯಲ್ಲಿ ಪ್ರಕಟಿಸಿದೆ. ಆ ಸಂಖ್ಯೆಯೊಳಗೆ ಎಲ್ಲತರದ ಯುದ್ಧನಾವೆಗಳೂ ಸೇರಿವೆ. ವ್ಯಾಪಾರದ ಹಡಗುಗಳು ನಾನಾತರವಾಗಿರುತ್ತವೆ. ೧೦೦ ಟನ್ನಿನಿಂದ ಹಿಡಿದು ೫೦ ಸಾವಿರ ಟನ್ನುಗಳ ಭಾರವನ್ನು ಹೊರುವ ಹಡಗುಗಳೂ ಇರುವುವು. ಆದರೆ ಅವೆಲ್ಲವೂ ಹೊರುವ ಒಟ್ಟುಭಾರವನ್ನು ಮೇಲಿನ ಪಟ್ಟಿಯಲ್ಲಿ ಕಾಣಿಸಿದೆ. ಮೇಲಿನ ಪಟ್ಟಿಯಲ್ಲಿನ ಆಂಗ್ಲದೇಶದ ವಿವರದಲ್ಲಿ ಅದರ ಸ್ವಾತಂತ್ರ್ಯಗಳಿಗೆ ಸೇರದ ಭೂಸೈನ್ಯ ಜಲಸೈನ್ಯಗಳನ್ನು ಸೇರಿಸಿಲ್ಲ. ಅವು ಸೇರಿದರೆ ಅದರ ಪ್ರಮಾಣವು ಇನ್ನೂ ಹಿರಿದಾಗುವುದು.

ಪ್ರಕಟನೆ.

ಪ್ರಿಂಟಿಂಗಾಫೀಸಿನವರು ಅಗತ್ಯವಾಗಿ ಗಮನಿಸತಕ್ಕದ್ದು.

ನಮ್ಮಲ್ಲಿ ಈ ಸ್ಟಾರ್‌ಪತ್ರಿಕೆಯ ೧, ೨, ೩, ೬, ೭ ಮತ್ತು ೮ನೇ ಪುಟಗಳಲ್ಲುಪಯೋಗಿಸಲ್ಪಟ್ಟಿರುವ ಪೈಕ ಅಥವಾ ೧೨ ಪಾಯಿಂಟ್ ಅಕ್ಷರಗಳ ಮತ್ತು ಈ ಪ್ರಕಟನೆಗುಪಯೋಗಿಸಲ್ಪಟ್ಟಿರುವ ಬೂರ್ಜೈಸ್‌ಮಿನಿಯನ್ ಅಥವಾ ೧೪ ಪಾಯಿಂಟ್ ಅಕ್ಷರಗಳ ಮ್ಯಾಟ್ರಿಕ್ಸುಗಳೂ, ಅವುಗಳ ಮೌಲ್ಡುಗಳೂ ಇವನ್ನು ಎರಕವೆರೆಯುವ ಯಂತ್ರವೂ ಅದಕ್ಕೆ ಸಂಬಂಧಪಟ್ಟ ಲೈನ್ ಗೇಜ್ ಪೇಪರ್‌ಗೇಜ್ ಹೈಟ್‌ಗೇಜ್ ಡ್ರೆಸ್ಸಿಂಗ್‌ಟೇಬಲ್ ಕರ್ನಿಂಗ್ ಮಿಷನ್ನು ಮುಂತಾದ ಸಾಮಾಗ್ರಿಗಳೂ ಸೂಪರ್‌ರಾಯಲ್ ಸೈಜನ್ನು ಪ್ರಿಂಟ್ ಮಾಡುವ ಸಿಲಿಂಡರ್ ಮಿಷನ್ನು ಸಹ ಮಾರಾಟಕ್ಕೆ ಸಿದ್ಧವಾಗಿವೆ. ಈ ಮಿಷನ್ನಿನಲ್ಲೇ ಈ ಸ್ಟಾರ್‌ಪತ್ರಿಕೆಯು ಪ್ರಿಂಟುಮಾಡಲ್ಪಡುತ್ತಿರುವುದು. ಎರಕವೆರೆಯುವ ಮಿಷನ್ನು ಬಹಳ ಸ್ವಲ್ಪ ಕೆಲಸವನ್ನು ಮಾತ್ರ ಮಾಡಿ ಹೊಸದಾಗಿಯೇ ಯಿರುವುದು. ಇಷ್ಟವುಳ್ಳವರು ಇವುಗಳ ಬೆಲೆ ಮೊದಲಾದವನ್ನು ನನಗೆ ಬರೆದು ತಿಳಿದುಕೊಳ್ಳಬಹುದಲ್ಲದೆ ಪ್ರತ್ಯಕ್ಷದಲ್ಲಿ ಬಂದು ನೋಡಬಹುದು.

ವೈ. ವಿರೂಪಾಕ್ಷಯ್ಯ,
ಪ್ರೊಪ್ರೈಟರ್
ಕಾರ್ಖಾ ಪ್ರೆಸ್, ಮೈಸೂರು.

ಆಸ್ಟ್ರಿಯಾ ಚಕ್ರವರ್ತಿಯವರು.

——:೦:——

ಆಗಮಾರ್ಥಂತುದೇವಾನಾಂ ಗಮನಾರ್ಥಂತು
ಸಂಪದಾಂ । ಕುರ್ಯಾದ್ ಘಂಟಾರವಂಘೋರಸಂ
ಗ್ರಾಮಾಹ್ವಾನಲಾಂಛನಂ ॥

ಎಂಬ ಮಂತ್ರವನ್ನು ಹೇಳಿದಂತೆ, ರಣಭೇರಿಯನ್ನು ಹೊಡೆದು ಈಗಿನ ಯೂರೋಪುಖಂಡದ ಮಹಾಘೋರ ಯುದ್ಧಕ್ಕೆ ಗಣಪತಿ ಪೂಜೆಮಾಡಿದ ಮಹಾನುಭಾವರು ಆಸ್ಟ್ರಿಯಾ ಚಕ್ರವರ್ತಿಯವರಾಗಿರುತ್ತಾರೆ. ಇವರು ಹಣ್ಣು ಹಣ್ಣು ಮುದಿಕರು. ಯೂರೋಪುಖಂಡದ ಪ್ರಭುಗಳಲ್ಲಿ ಇವರಷ್ಟು ದೀರ್ಘಕಾಲ ರಾಜ್ಯಭಾರಮಾಡಿದ ಪ್ರಭುಗಳಾರೂ ಇಲ್ಲ. ಕೀರ್ತಿಶೇಷರಾದ ವಿಕ್ಟೋರಿಯಾ ಚಕ್ರವರ್ತಿನಿಯವರಿಗಿಂತಲೂ ಇವರು ಹೆಚ್ಚು ಕಾಲ ರಾಜ್ಯವನ್ನಾಳಿದವರು. ಆದರೆ ಆ ಮಹಾಭಾಗ್ಯದೇವತೆಯ ರಾಜ್ಯಪಾಲನವು ಜಗತ್ತಿಗೆ ಚಿರಸ್ಮರಣೀಯವೂ, ಅವರ ಬಾಳು ಸುಖಮಯವೂ ಆಗಿದ್ದರೆ, ಈ ಆಸ್ಟ್ರಿಯಾ ಚಕ್ರವರ್ತಿಯವರ ಬಾಳು ಅದಕ್ಕೆ ವ್ಯತಿರಿಕ್ತವಾಗಿದೆ. ಇವರು ಕೇವಲ ದುರದೃಷ್ಟವಂತರೆಂದು ಹೇಳಬಹುದು. ಇವರು ತಮ್ಮ ಜೀವಿತಕಾಲದಲ್ಲಿ ಪಡಬಾರದ ಕಷ್ಟಗಳನ್ನೆಲ್ಲಾ ಪಟ್ಟಿರುವರು. ಇವರು ೧೮೪೮ ನೆಯ ವರ್ಷದಲ್ಲಿ ಸಿಂಹಾಸನವನ್ನೇರಿದರು. ಆಗ ಇವರ ಚಿಕ್ಕಪ್ಪಂದಿರು ರಾಜ್ಯಪರಿತ್ಯಾಗವನ್ನು ಮಾಡಬೇಕಾಯಿತು. ಬಳಿಕ ೧೮೬೭ ನೆಯ ವರ್ಷದಲ್ಲಿ ಇವರ ತಮ್ಮನಾದ ಲಿಡ್ವಿಗ್ ವಿಕ್ಟರ್ ಎಂಬಾತನು ಮತಿಕೆಟ್ಟು ಹುಚ್ಚನಾದನು. ೧೮೬೭ ನೆಯವರ್ಷದಲ್ಲಿ ಇವರ ಮತ್ತೊಬ್ಬ ಸಹೋದರನು ಮೆಕ್ಸಿಕೋ ಪಟ್ಟಣದಲ್ಲಿ ತುಪಾಕಿಯಿಂದ ಸುಡಲ್ಪಟ್ಟನು. ಆತನ ಹೆಂಡತಿಯು ೧೮೬೮ ನೆಯ ವರ್ಷದಲ್ಲಿ ಹುಚ್ಚಿಯಾದಳು. ೧೮೮೯ ನೆಯ ವರ್ಷದಲ್ಲಿ ಈತನ ಏಕಪುತ್ರನಾಗಿದ್ದವನು ಮೃತನಾದನು. ಅವನನ್ನು ಯಾರೋ ಕೊಂದರೆಂದೂ, ಆತನೇ ಆತ್ಮಹತ್ಯವನ್ನು ಮಾಡಿಕೊಂಡನೆಂದೂ ತೆರತೆರದ ವಾರ್ತೆಯುಂಟಾಯಿತು. ಇವರ ಕುಮಾರನಾಗಿದ್ದ ಆರ್ಚಿಡ್ಯೂಕ್ ಜಾನ್ ಎಂಬಾತನು ಒಬ್ಬ ಒಕ್ಕಲಗಿತ್ತಿಯನ್ನು ಮದುವೆಯಾಗಿ ಸಮುದ್ರಯಾತ್ರೆ ಹೊರಟು ಅತ್ತೇ ಹೋದನು. ಅವನ ಸುಖವೇ ಇಲ್ಲ. ಈ ಚಕ್ರವರ್ತಿಯವರ ಪತ್ನಿಯನ್ನು ೧೮೯೮ ರಲ್ಲಿ ಜನೀವಾ ಪಟ್ಟಣದಲ್ಲಿ ಕೊಲೆಗಾರರು ತುಪಾಕಿಯಿಂದ ಹೊಡೆದು ಸುಟ್ಟರು. ಇವರ ಉತ್ತರಾಧಿಕಾರಿಯಾಗಬೇಕಾಗಿದ್ದ ಯುವರಾಜನನ್ನೂ ಆತನ ಪತ್ನಿಯನ್ನೂ ಸಹ ಮೊನ್ನೆಯ ತಿಂಗಳಲ್ಲಿ ಸರಾಜೀವೋ ಪಟ್ಟಣದಲ್ಲಿ ತುಪಾಕಿಯಿಂದ ಹೊಡೆದು ಸುಟ್ಟ ವಿಷಯವು ಇನ್ನೂ ಹೊಸದಾಗಿಯೇ ಇದೆ. ಇಷ್ಟೊಂದು ಕುಟುಂಬ ನಷ್ಟವನ್ನು ಅನುಭವಿಸಿರುವ ಈ ಚಕ್ರವರ್ತಿಯವರು ಕಳೆದೊಂದು ಶತಮಾನದಿಂದಲೂ ಕಾಣದಿದ್ದಂತಹ ಘೋರ ಯುದ್ಧಾಗ್ನಿಯನ್ನು ಯೂರೋಪುಖಂಡಕ್ಕೆ ಇಕ್ಕಿದರೆಂಬ ಹೆಸರನ್ನೂ ಈಗ ಪಡೆದುಕೊಂಡರು. ಜರ್ಮನ ಚಕ್ರವರ್ತಿಯವರ ಜಾತಕವನ್ನು ಮೊನ್ನೆಯ ಸಂಚಿಕೆಯಲ್ಲಿ ಕೊಟ್ಟಿರುತ್ತೇವೆ. ಆ ದುರದೃಷ್ಟವಂತರೂ, ಈ ಚಕ್ರವರ್ತಿಯವರೂ ಒಟ್ಟಿಗೆ ಸೇರಿ ಯೂರೋಪುಖಂಡದಮೇಲೆಲ್ಲಾ ಯುದ್ಧಕ್ಕೆ ನಿಂತಿದ್ದಾರೆ. ಪರ್ಯವಸಾನವೇನೋ ಜಗದೀಶ್ವರನಿಗೇ ಗೊತ್ತು.

ಲೀಜ್ ಪಟ್ಟಣ.

ಯುದ್ಧಾಂಗದಲ್ಲಿ ಈವರೆಗೆ ಆಗಿರುವುದೆಲ್ಲಾ ಚಕಮಕಿಗಳು. ಇಷ್ಟರಲ್ಲೇ ದೊಡ್ಡದೊಡ್ಡ ಯುದ್ಧಗಳು ನಡೆಯುವುದರಲ್ಲಿವೆ. ಮೊಟ್ಟಮೊದಲಿನ ಘೋರಯುದ್ಧವು ಲೀಜ್ ಪಟ್ಟಣದಲ್ಲಿ ನಡೆಯುವುದರಲ್ಲಿದೆ. ಅದುಕಾರಣ ಆ ಪಟ್ಟಣದ ವಿವರಣವನ್ನು ಇಲ್ಲಿ ಕೊಡುತ್ತೇವೆ. ಇದು ಬೆಲ್ಜಿಯಂ ದೇಶಕ್ಕೆ ಸೇರಿದ ಲೀಜ್ ಪ್ರಾಂತಕ್ಕೆ ಮುಖ್ಯನಗರ. ಮ್ಯೂಸು ಎಂಬ ಹೊಳೆಯ ದಡದಮೇಲಿದೆ. ಮುಖ್ಯಮಂತ್ರದ ಗುರುವು ಈ ಪಟ್ಟಣದಲ್ಲಿಯೇ ವಾಸಮಾಡುತ್ತಾನೆ. ಈಗಿನ ಕಾಲದಲ್ಲಿ ಪ್ರಸಿದ್ಧವಾಗಿರುವ ಬೆಲ್ಜಿಯಂ ದೇಶದ ಕೈಗಾರಿಕೆಗಳಿಗೆಲ್ಲಾ ಇದು ತವರ್ಮನೆ. ಯುದ್ಧಸಾಮಗ್ರಿಗಳನ್ನೆಲ್ಲಾ ವಿಶೇಷವಾಗಿ ಇಲ್ಲಿ ನಿರ್ಮಿಸುವರು. ಅದುಕಾರಣ, ಇಂಗ್ಲೆಂಡಿಗೆ ಸೇರಿದ ಬರ್ಮಿಂಗ್‌ಹ್ಯಾಂ ಪಟ್ಟಣವನ್ನು ಇದು ಹೋಲುತ್ತಿದೆ. ಈ ಪಟ್ಟಣವು ಹೀಗೆ ಕೈಗಾರಿಕೆಗಳಿಗೆ ಪ್ರಾಶಸ್ತ್ಯವನ್ನು ಪಡೆದುಕೊಳ್ಳುವದಕ್ಕೂ ಅದರ ಸಂಪತ್ತಿಗೂ ಸಹ ಇದರ ಸಮೀಪದಲ್ಲಿರುವ ಕಲ್ಲಿದ್ದಲ ಗಣಿಗಳೇ ಮೂಲಭೂತವು. ಈ ಗಣಿಗಳು ಪಶ್ಚಿಮೋತ್ತರವಾಗಿ ಹಬ್ಬಿಕೊಂಡಿವೆ. ಇದರಕ್ಷಣೆ ದೊಡ್ಡ ಮಠವನ್ನು ಫ್ರೆಂಚರು ೧೬೪೮ ರಲ್ಲಿ ಹಾಳ್ಮಾಡಿದರು. ೧೮೧೭ ರಲ್ಲಿ ಹೊಸದಾಗಿ ಮಠವು ಕಟ್ಟಿಸಲ್ಪಟ್ಟಿತು. ಪಟ್ಟಣವು ರಾಜವೀಧಿಗಳಿಂದಲೂ ಉದ್ಯಾನಗಳಿಂದಲೂ ಮನೋಹರವಾಗಿದೆ. ಇಲ್ಲಿ ಒಂದು ಮಹಾ ಪ್ರಸಿದ್ಧವಾದ ಕಲಾಶಾಲೆಯೂ ಇದೆ. ಸರ್ವವಿಧದ ಕಲೆಗಳೂ ಇಲ್ಲಿ ಕಲಿಸಲ್ಪಡುತ್ತವೆ. ಈ ಪಟ್ಟಣಕ್ಕೆ ಉತ್ಕೃಷ್ಟವಾದ ೧೨ ಕೋಟೆಗಳಿರುವುದರಿಂದ ಶತ್ರುಗಳಿಗೆ ದುರ್ಗಮವಾಗಿದೆ. ಬಾರ್ಚನ್-ಎವಿಗ್ನೆ-ಪ್ಲೆರಾ-ಚೌಡುಫಾಂಟೇನ್-ಎಂಬೋರ್ಗ-ಗೋಣಸೆಲ್ಲೀಸ್ ಎಂಬ ೬ ಕೋಟೆಗಳು ಪಟ್ಟಣದ ಬಲಪಕ್ಕದಲ್ಲೂ, ಪಾಂಟಿಸ್ಸೆ-ಲಯರ್ಸ-ಲಾಂಟಿನ್-ಲೋನ್ಸಿನ್-ಹೊಲೊಗ್ನೇ-ಫ್ಲೆಮಲ್ಲೆ-ಎಂಬ ೬ ಕೋಟೆಗಳು ಎಡಪಕ್ಕದಲ್ಲೂ ಇವೆ. ಈ ಕೋಟೆಗಳೆಲ್ಲಾ ಗಟ್ಟಿಯಾಗಿ ಸಿಮೆಂಟಿನಿಂದ ಕಟ್ಟಲ್ಪಟ್ಟಿವೆ. ಮೇಲೆ ದೊಡ್ಡದೊಡ್ಡ ಫಿರಂಗಿಗಳು ಸಾಲಾಗಿ ಇಡಲ್ಪಟ್ಟಿವೆ. ಈ ೧೨ ಕೋಟೆಗಳಿಗೂ ಮಧ್ಯಮಧ್ಯೆ ೪-೫ ಮೈಲಿಗಳ ಅಂತರವಿರುವುದು. ಈ ಕೋಟೆಗಳನ್ನು ಕಾಪಾಡುವುದಕ್ಕೆ ೨೫ ಸಾವಿರ ಸೈನ್ಯವಿರುವುದು. ಈ ಪಟ್ಟಣದಲ್ಲಿ ೧೯೦೪ ನೆಯ ಜನಪರಿಗಣಿತಿಯ ಪ್ರಕಾರ ೧೬೮೫೭೨ ಪ್ರಜೆ ಇದ್ದಿತು. ಇದು ಲೀಜು ಎಂಬ ಹೊಳೆಯ ದಡದಲ್ಲಿರುವುದರಿಂದ ಲೀಜು ಎಂಬ ಹೆಸರು ಇದಕ್ಕೆ ಕೊಡಲ್ಪಟ್ಟಿದೆ. ಇದು ಒಳ್ಳೆಯ ಸೇನಾಶಿಬಿರವಾಗಿದೆ.

ಆಲ್ಸೇಸ್.

ಕಳೆದ ತಾ|| ೧೦ ನೆಯ ಸೋಮವಾರದ ದಿನ ಫ್ರಾನ್ಸಿನವರು ಈ ಪಟ್ಟಣವನ್ನು ಪ್ರವೇಶಿಸಿ ಸ್ವಾಧೀನಪಡಿಸಿಕೊಂಡರೆಂಬ ವಾರ್ತೆಯನ್ನು ಹಿಂದೆ ಪ್ರಕಟಿಸಿರುತ್ತೇವೆ. ಇದರಲ್ಲಿ ಬಂದು ಸೇರಿದ್ದ ಶತ್ರುಗಳನ್ನೆಲ್ಲಾ ಓಡಿಸಿಬಿಟ್ಟು ೬೫೦ ಮಂದಿ ಫ್ರೆಂಚರನ್ನು ಸೆರೆಯಾಗಿ ಹಿಡಿದಿರುತ್ತೇವೆಂದು ಜರ್ಮನಿಯವರು ಪ್ರಕಟಿಸಿರುತ್ತಾರೆ. ಆದರೆ ಫ್ರೆಂಚ್ ಪ್ರಭುತ್ವದವರು ಆಲ್ಸೇಸನ್ನು ಫ್ರೆಂಚರು ಆಕ್ರಮಿಸಿಕೊಂಡೇ ಇರುವರೆಂದು ಪ್ರಕಟಿಸಿದ್ದಾರೆ. ಈ ಪಟ್ಟಣದ ವಿಷಯವೇನೆಂದರೆ:—

೧೮೭೦ ನೆಯ ವರ್ಷದಲ್ಲಿ ಜರ್ಮನಿಗೂ ಫ್ರಾನ್ಸಿಗೂ ಯುದ್ಧವಾದಾಗ ಫ್ರಾನ್ಸು ಸೋತುಹೋಯಿತು. ಕೊನೆಯಲ್ಲಿ ಫ್ರಾನ್ಸು ಜರ್ಮನಿಗೆ ಪ್ರತಿಫಲವಾಗಿ ೩೦೦ ಕೋಟಿ ರೂ. ಗಳನ್ನೂ ಆಲ್ಸೇಸ್-ಲಾರೇನ್ ಎಂಬ ದೇಶಭಾಗವನ್ನೂ ಒಪ್ಪಿಸಿಬಿಡಬೇಕಾಯಿತು. ಆಗಿನಿಂದ ಈ ದೇಶಭಾಗಗಳು ಫ್ರಾನ್ಸಿನಿಂದ ಜರ್ಮನಿಗೆ ಸೇರಿಹೋಗಿದ್ದುವು. ಆ ಕಾಲದಿಂದಲೂ ಫ್ರಾನ್ಸು-ಜರ್ಮನಿಗಳ ಮಧ್ಯದಲ್ಲಿ ಕೆಡು ಹಗೆತನವುಂಟಾಯಿತು. ಆ ದ್ವೇಷದ ಪರಿಣಾಮವೇ ಈಗಿನ ಯುದ್ಧಕ್ಕೂ ಪ್ರಬಲಕಾರಣವೆಂದು ಹೇಳಬಹುದು. ಈ ನೂತನ ಭಾಗಗಳ ಪ್ರಜೆಗಳನ್ನು ತನ್ನವರನ್ನಾಗಿ ಮಾಡಿಕೊಳ್ಳಲು ಆಗಿನಿಂದಲೂ ಜರ್ಮನಿಯು ನಾನಾ ಪ್ರಯತ್ನಗಳನ್ನು ಮಾಡಿತು. ತನ್ನ ಭಾಷೆ-ತನ್ನ ನಡೆನುಡಿಗಳನ್ನು ಕಲಿಸುವುದಕ್ಕೆ ಮಹಾ ಸಾಹಸಗಳನ್ನು ಮಾಡಿತು. ಅದನ್ನಂಗೀಕರಿಸದೆ ಇದ್ದವರನ್ನು ಕ್ರೂರವಾಗಿ ಶಿಕ್ಷಿಸಿತು. ಆದರೂ ಅಲ್ಲಿನ ಪ್ರಜೆಗಳು ಮೇಲಿಮೇಲೆ ರಾಜಶಾಸನದ ಬಲಾತ್ಕಾರಕ್ಕೆ ಬಗ್ಗಬೇಕಾಯಿತೇ ಹೊರತು ಅವರ ಅಂತರಂಗವು ಅತ್ತ ಮಣಿದುದಿಲ್ಲ. ಅವರ ಪಕ್ಷವು ಯಾವಾಗಲೂ ತಮ್ಮಮಾತೃದೇಶವಾದ ಫ್ರಾನ್ಸಿನಕಡೆಗೇ ಇದ್ದಿತು. ಈಗಿನ ಯುದ್ಧಾರಂಭವಾದಕೂಡಲೇ ಫ್ರೆಂಚರು ಎಷ್ಟು ಹೊತ್ತಿಗೆ ತಮ್ಮ ಪಟ್ಟಣಗಳಿಗೆ ಬಂದು ದರ್ಶನವನ್ನಿತ್ತು ತಮ್ಮನ್ನು ಕೃತಾರ್ಥರನ್ನಾಗಿ ಮಾಡುವರೋ ಎಂದು ನಿರೀಕ್ಷಿಸುತ್ತಿದ್ದರು. ಅವರ ಕೋರಿಕೆಯು ಕಳೆದ ತಾ|| ೧೦ ರಲ್ಲಿ ನೆರವೇರಿತು. ಕಳೆದ ೪೪ ವರ್ಷಗಳಿಂದ ಅಗಲಿದ್ದ ತಾವುತಾವು ಪುನಸ್ಸಮಾಗಮಗೊಂಡುದಕ್ಕಾಗಿ ಆ ದಿವಸ ಆಲ್ಸೇಸ್ಸಿನಲ್ಲೂ, ಫ್ರಾನ್ಸಿನ ರಾಜಧಾನಿಯಾದ ಪ್ಯಾರಿಸ್ಸಿನಲ್ಲೂ ನಡೆದ ಆನಂದೋತ್ಸವಗಳಿಗೆ ಮಿತಿಯಿಲ್ಲವಾಯಿತು. ಈ ಆಲ್ಸೇಸ್ ಲಾರೇನ್ಸ್ ಪ್ರಾಂತಗಳು ಫ್ರಾನ್ಸಿಗೂ ಜರ್ಮನಿಗೂ ಇರುವ ಎಲ್ಲೆಯಲ್ಲಿರುತ್ತವೆ.

ಹೆಯಿಲೆನ್ ಯುದ್ಧ—ಮತ್ತು ಜರ್ಮನರ ಪರಾಜಯಗಳು.

ಯುದ್ಧಾರಂಭವಾಗಿ ೩ ವಾರಗಳ ನಂತರ ಕಳೆದ ತಾ|| ೧೦ ರಲ್ಲಿ ಹೆಯಲಿನ್ನಿನಲ್ಲಿ ಜರ್ಮನಿ-ಬೆಲ್ಜಿಯಮ್ಮುಗಳಿಗೆ ನಡೆದ ಯುದ್ಧವು ೧ ನೆಯ ದೊಡ್ಡಯುದ್ಧವಾಗಿದೆ. ಇಲ್ಲಿ ಬೆಲ್ಜಿಯಂ ಸೇನೆಯು ಕಡಿಮೆಯಾಗಿಯೂ, ಜರ್ಮನಿ ಸೇನೆಯು ಹೆಚ್ಚಾಗಿಯೂ ಇದ್ದಿತು. ಆ ದಿನ ಮಧ್ಯಾಹ್ನದಿಂದ ಸಾಯಂಕಾಲದವರೆಗೆ ಯುದ್ಧವು ನಡೆದುದರಲ್ಲಿ ಜರ್ಮನರಿಗೆ ತುಂಬಾ ನಷ್ಟವಾಗಿ ಎಂದರೆ ⅓ ಭಾಗದ ಸೇನೆಯನ್ನು ಕಳೆದುಕೊಂಡು, ಅವರು ಪಲಾಯನಸೂತ್ರವನ್ನು ಓದಬೇಕಾಯಿತು. ಆಗ ಬೆಲ್ಜಿಯಂ ಸೈನಿಕರು ಸಣ್ಣ ರಾಜ್ಯದವರಾದರೂ ಅವರು ತೋರಿಸಿದ ಪರಾಕ್ರಮವು ಲೋಕಶ್ಲಾಘ್ಯವಾಗಿದ್ದಿತು. ಯುದ್ಧಾರಂಭವಾದಂದಿನಿಂದ ಇದುವರೆಗಿನ ಸ್ಥಿತಿಯನ್ನು ನೋಡುವಲ್ಲಿ ಜರ್ಮನಿಯವರ ಮೇಲೆ ಅಶುಭಛತ್ರವೇ ನೆಳಲು ಮಾಡಿರುವಂತೆ ಕಾಣುತ್ತಿದೆ. ಇದು ಅದರ ಭಾವಿ ಪರಿಣಾಮಕ್ಕೆ ಉತ್ಪಾತಸೂಚನೆಯಾಗಿರಬೇಕು. ಫ್ರಾನ್ಸು ಸೇನಾಸನ್ನಾಹವನ್ನು ಮಾಡಿಕೊಳ್ಳುವಷ್ಟರೊಳಗಾಗಿ ಬೆಲ್ಜಿಯಮ್ಮಿನ ಮೇಲಿಂದ ಹಾದು ಪ್ಯಾರಿಸ್ಸಿಗೆ ನುಗ್ಗಬೇಕೆಂದು ಜರ್ಮನಿಯವರು ಮಾಡಿಕೊಂಡಿದ್ದ ರಹಸ್ಯಾಲೋಚನೆಗಳೆಲ್ಲಾ ಈಗಲೇ ತಿಲತರ್ಪಣವಾದಂತಾಯಿತು. ೨-೩ ವಾರಗಳಿಂದ ಬೆಲ್ಜಿಯಮ್ಮಿನವರು ಪೂರ್ಣವಾಗಿ ಮಾಡಿದ ಸಾಹಸದಿಂದ ಈಗಿನ ಯುದ್ಧಾಂಗಣದ ಬಳಿಗೆ ಫ್ರೆಂಚರ ಮತ್ತು ಆಂಗ್ಲರ ಸೇನೆಗಳು ಬಂದು ಒದಗಲು ಅವಕಾಶವಾಯಿತು. ಜರ್ಮನಿಯವರ ಉದ್ದೇಶವು ನೆರವೇರಲು ಇದುವರೆಗೆ ಇದ್ದ ಸೌಕರ್ಯವು ಇನ್ನು ಮುಂದೆ ಇರಲಾರದು. ಏಕೆಂದರೆ—ಇದುವರೆಗೆ ಅವರನ್ನು ಬೆಲ್ಜಿಯಮ್ಮಿನವರೊಬ್ಬರೇ ಅಲ್ಲಿ ಪ್ರತಿಭಟಿಸುತ್ತಿದ್ದರು. ಇನ್ನುಮೇಲೆ ಮೂವರಾಗುವರು, ಅದುಕಾರಣ ಇನ್ನುಮೇಲೆ ನಡೆಯುವ ಯುದ್ಧಗಳು ಪ್ರಬಲಗಳಾಗಿರುವುವು. ಲೀಜುಕೋಟೆಯ ಹತ್ತಿರ ಜರ್ಮನರು ಅನಂತ ಸಾಹಸವನ್ನು ಮಾಡಿದರೂ ಒಂದಾದರೂ ಅವರಿಗೆ ವಶವಾಗಿಲ್ಲ. ಆ ಪಟ್ಟಣದಲ್ಲಿ ಮಾತ್ರ ಕೆಲ ಸೈನಿಕರು ಪ್ರವೇಶಿಸಿರುವರು. ಮತ್ತು ಜರ್ಮನಿಯು ಫ್ರಾನ್ಸಿನ ಉತ್ತರದಿಕ್ಕಿನಲ್ಲಿ ಇದನ್ನು ನುಗ್ಗುವುದಕ್ಕೆ ಮಾಡಿದ ಸಾಹಸಗಳೂ ವ್ಯರ್ಥವಾದುವು. ಫ್ರಾನ್ಸಿನ ಎಲ್ಲೆಯಲ್ಲಿರುವ ಮಾಂಟುಮೆಡಿಯೆಂಬಲ್ಲಿಯೂ, ದಕ್ಷಿಣದಲ್ಲಿರುವ ಓಥಿಯರ್‌ವಿಲ್ಲೆಯ ಹತ್ತಿರವೂ ಫ್ರೆಂಚರು ಜರ್ಮನಿಯವರನ್ನು ಹೊಡೆದು ನಾಶಮಾಡಿ, ಅವರ ಫಿರಂಗಿಗಳನ್ನೂ ಮದ್ದುಗುಂಡುಗಳನ್ನೂ ಸೈನಿಕರನ್ನೂ ವಶಪಡಿಸಿಕೊಂಡರು. ಅತ್ತ ಜರ್ಮನಿಯವರು ರಷ್ಯಾದಕಡೆಗೂ ತಿರುಗಿರುವರು. ಆದರೇನು! ಅಲ್ಲೂ ಹಲವು ಹಡಗುಗಳನ್ನು ಕಳೆದುಕೊಂಡರು. ಮುಂದೆ ತುರ್ಕಿಯೂ ಜರ್ಮನಿಯಮೇಲೆ ಕೈಮಾಡುವ ಪ್ರಸಂಗ ಬರುವಂತಿದೆ. ಜಪಾನೂ ಕೂಡ ಜರ್ಮನಿಯ ಮೇಲೆ ಕತ್ತಿ ಹಿಡಿಯುವಂತಿದೆ. ಈಗ ಪ್ರಪಂಚದಲ್ಲಿರುವ ಮುಖ್ಯರಾಷ್ಟ್ರಗಳೊಳಗೆ ಇಂಗ್ಲೆಂಡು-ಫ್ರಾನ್ಸು-ರಷ್ಯಾ-ಸರ್ವಿಯಾ-ಬೆಲ್ಜಿಯಂ-ಮಾಂಟಿನಿಗ್ರೋ-ಜಪಾನು-ತುರ್ಕಿ-ಇವುಗಳು ಒಂದು ಪಕ್ಷದಲ್ಲೂ, ಜರ್ಮನಿ-ಆಸ್ಟ್ರಿಯಾ-ಇವೆರಡೇ ಒಂದುಪಕ್ಷದಲ್ಲೂ ನಿಂತು ಕಾದಾಡುವಂತಾಗಿದೆ. ನಾರ್ವೆ-ಸ್ವೀಡನ್-ಓಲಾಂಡು-ಸ್ಪೈಯಿನ್-ಪೋರ್ಚುಗಲ್-ಇಟಲಿ-ಬಾಲ್ಕನ್‌ರಾಷ್ಟ್ರಗಳು-ಸ್ವಿಟ್‌ಜರ್‌ಲ್ಯಾಂಡು-ಚೀನಾ-ಅಮೇರಿಕಾ-ಸಂಯುಕ್ತರಾಷ್ಟ್ರಗಳು-ಇವು ತಾಟಸ್ಥ್ಯವನ್ನು ವಹಿಸಿರುತ್ತವೆ. ಜರ್ಮನಿಯು ಬಹು ರಾಷ್ಟ್ರಗಳ ಹಗೆತನವನ್ನು ತಾನಾಗಿ ಉಂಟುಮಾಡಿಕೊಂಡಿದೆ. ತನ್ನೊಡನೆ ಯುದ್ಧಕ್ಕೆ ಬರದೆ ಹೋದ ತನ್ನ ಪ್ರಜೆಯಾದ ಸೋಷಿಯಾಲಿಸ್ಟ್ ಪಂಥದ ಪ್ರಮುಖನನ್ನು ಚಕ್ರವರ್ತಿಯು ಕೊಲ್ಲಿಸಿ, ಸ್ವಪ್ರಜೆಗಳ ವಿರೋಧವನ್ನೂ ಈಗತಾನೇ ಸಂಪಾದಿಸಿಕೊಂಡಿದ್ದಾರೆ. ಜರ್ಮನಿ ಚಕ್ರವರ್ತಿಯ ಜಾತಕವು ಅವರ ಭವಿಷ್ಯದ ನಿಷ್ಟವನ್ನು ಸೂಚಿಸಿದೆ. ಇವೆಲ್ಲವುಗಳ ಪರಿಣಾಮಫಲವು ಸ್ವಲ್ಪದಿನಗಳಲ್ಲಿ ಜಗತ್ತಿಗೆ ಗೊತ್ತಾಗುವುದರಲ್ಲಿದೆ.

ಭಾರತಚಕ್ರಾಧಿಪತ್ಯದ ರಿಲೀಫ್ ಫಂಡು.

ಲಾರ್ಡ್ ಹಾರ್ಡಿಂಜ್‌ರವರ ಪ್ರಾರ್ಥನೆಯು.

ಸಿಂಲಾ, ಆಗಸ್ಟ್ ತಾ|| ೧೬. ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಯುದ್ಧವು ಪ್ರಾಪ್ತವಾಗಿರುವುದರಿಂದ, ಚಕ್ರಾಧಿಪತ್ಯದ ಸಂರಕ್ಷಣೆಗಾಗಿ ಭರತಖಂಡದಿಂದ ಸೇನೆಯನ್ನು ಕಳುಹಲು ಅಣಿಮಾಡಲ್ಪಡುತ್ತಿದೆ. ಈ ಸೇನೆಯು ಬಹಳ ದೊಡ್ಡದಾಗಿದ್ದು ನಮ್ಮ ಭರತಖಂಡದ ಧೈರ್ಯಶಾಲಿಗಳಾದ ಅನೇಕ ರಿಜಿಮೆಂಟುಗಳನ್ನೂ ಹಾಗೂ ದೇಶೀಯ ಸಂಸ್ಥಾನಾಧೀಶ್ವರರು ಕಳುಹುವ ಇಂಪೀರಿಯಲ್ ಸರ್ವಿಸ್ ಸೇನೆಗಳನ್ನೂ ಒಳಗೊಂಡಿರುವುದು. ಭರತಖಂಡದಿಂದ ಯುದ್ಧಕ್ಕೆ ಹೊರಡುವವರ ಕುಟುಂಬದ ಜೀವನಕ್ಕೆ ತೊಂದರೆಯಾಗುವುದಲ್ಲದೆ ಯುದ್ಧದಲ್ಲಿ ಮಡಿಯುವವರ ಹೆಂಡತಿಯರು ವಿಧವೆಯರಾಗಿಯೂ, ಮಕ್ಕಳು ಅನಾಥರಾಗಿಯೂ ಆಗುವ ಸಂಭವವುಂಟು. ಅದುಕಾರಣ ಒಂದು ದೊಡ್ಡ ಫಂಡು ಕೂಡಲೆ ಏರ್ಪಡಿಸಲ್ಪಡತಕ್ಕದಾಗಿದೆಯಲ್ಲದೆ, ಕೊಂಚವೂ ಆಲಸ್ಯವಿಲ್ಲದೆ ಹಣವನ್ನು ಕೂಡಿಸುವುದು ಆವಶ್ಯಕವಾಗಿದೆ. ಈ ಕಾರ್ಯಕ್ಕಾಗಿ, ನನ್ನ ಅಧ್ಯಕ್ಷತೆಯಲ್ಲಿ ಒಂದು ಸೆಂಟ್ರಲ್ ಕಮಿಟಿಯನ್ನೇರ್ಪಡಿಸಯತ್ನಿಸಲ್ಪಟ್ಟಿದೆ. ಈ ಕಮಿಟಿಗೆ ಬಂಗಾಳ, ಮದ್ರಾಸು, ಮತ್ತು ಬೊಂಬಾಯಿ ಇವುಗಳ ಗೌರ್ನರುಗಳು, ಕಮ್ಯಾಂಡರ್ ಇನ್‌ಚೀಫ್‌ರವರು, ನನ್ನ ಎಗ್ಜಿಕ್ಯೂಟಿವ್ ಕೌನ್ಸಿಲಿನ ಮೆಂಬರುಗಳು, ಸ್ಥಳೀಯ ಸರ್ಕಾರಗಳ ಮುಖ್ಯಾಧಿಕಾರಿಗಳು, ಹಾಗೂ ದೇಶೀಯಸಂಸ್ಥಾನಾಧಿಪತಿಗಳಾದ ಬಿಕನೀರು, ಗ್ವಾಲಿಯರ್, ಇಂದೂರು, ಜಯಪುರ, ಕಾಶ್ಮೀರ, ಮೈಸೂರು, ಪಾಟಿಯಾಲ, ರೀವಾ, ಉದಯಪುರ, ಇವುಗಳ ಮಹಾರಾಜರುಗಳು, ಭೂಪಾಲಿನ ಬೇಗಂರವರು, ಹೈದಾರಬಾದಿನ ನೈಜಾಂರವರು, ಜೋಧಪುರದ ಮಹಾರಾಜ ರೀಜಂಟರು, ಮತ್ತು ಕೋಟಾದ ಮಹಾರಾವ್‌ಯವರು, ಕಮಿಟಿ ಮೆಂಬರುಗಳಾಗಿಯೂ ನಿಯಮಿಸಲ್ಪಡುವರು. ಈ ಕಮಿಟಿಯು ಮೇಲ್ವಿಚಾರ ಯಲ್ಲಿ ಒಂದು ಕಾರ್ಯನಿರ್ವಾಹಕ ಕಮಿಟಿಯೂ, ಎಲ್ಲ ಕಡೆಯಲ್ಲೂ ಅದರ ಶಾಖಾ ಕಮಿಟಿಗಳೂ ಏರ್ಪಡಿಸಲ್ಪಡುವುವು. ಭರತಖಂಡದ ಸಂಸ್ಥಾನಾಧೀಶ್ವರರುಗಳೂ, ದೊಡ್ಡಮನುಷ್ಯರುಗಳೂ, ವರ್ತಕರುಗಳೂ ಇತರ ಎಲ್ಲ ಯೂರೋಪ್ಯ ಹಾಗೂ ಭಾರತೀಯ ಜನರೂ ಯುದ್ಧದಿಂದುಂಟಾಗುವ ಎಲ್ಲ ತೊಂದರೆಗಳ ಮುಖ್ಯವಾಗಿ ಚಕ್ರಾಧಿಪತ್ಯದ ಸಂರಕ್ಷಣೆಗಾಗಿ ಯುದ್ಧದಲ್ಲಿ ಮಡಿಯುವವರ ಹಾಗೂ ಕಷ್ಟಪಡುವವರ ಕುಟುಂಬದ ಉಪಯೋಗಾರ್ಥವಾಗಿ ಅವರವರ ಶಕ್ತ್ಯನುಸಾರ ದ್ರವ್ಯ ಸಾಹಾಯ್ಯವನ್ನು ಮಾಡುವರೆಂದು ನಾನು ನಂಬಿರುತ್ತೇನೆ.

ಯುದ್ಧದ ಭವಿಷ್ಯತ್ತು.

ಪಾಶ್ಚಾತ್ಯಜ್ಯೋತಿಷ್ಕರಲ್ಲಿ ಒಬ್ಬರಾದ ಖಿಯೋಕೆಂಡಾಲ್ ಎಂಬುವರು ಈಗಿನ ಯುದ್ಧದ ಭವಿಷ್ಯತ್ತನ್ನು ಈ ಕೆಳಗೆ ಕಂಡಂತೆ ಗಣಿತದ ಮೂಲಕ ನಿರ್ಣಯಿಸಿ ಹೇಳಿರುತ್ತಾರೆ.—"ಪಶ್ಚಿಮಾರ್ಧಗೋಳಕ್ಕಿರುವ ಗ್ರಹಚಾರಸ್ಥಿತಿಯನ್ನು ಪರಿಶೀಲಿಸಿದರೆ, ಈ ಯುದ್ಧದೋಷವು ದೀರ್ಘಕಾಲಪರ್ಯಂತ ವಿಸ್ತರಿಸಿಕೊಂಡಿರುವುದೆಂದು ಹೇಳಲು ಅವಕಾಶವಿಲ್ಲ.

ಜರ್ಮನಿ.

ಜರ್ಮನಿಗೆ ಆದಿಯಲ್ಲಿ ಸ್ವಲ್ಪ ಜಯಪ್ರಾಪ್ತಿಯು ಉಂಟಾಗಬಹುದು, ಆದರೆ ಅದು ಅಷ್ಟು ಪ್ರಾಮುಖ್ಯವನ್ನೈದಲಾರದು. ದೇಶಗಳೊಳಗೆ ದ್ರವ್ಯಸಂಬಂಧವಾದ ವೈಕಲ್ಯವು ಹೆಚ್ಚಿ ಹಾಹಾಕಾರವನ್ನು ಹುಟ್ಟಿಸುವುದು. ಅದರಿಂದ ಈ ಯುದ್ಧಾಭಿನಿವೇಶವು ವಿರಮಿಸುವುದು. ಜರ್ಮನಿ ಪ್ರಜೆಗಳು ಅಂತಃಕಲಹದಿಂದ ತುಂಬಿಹೋಗುವರು. ಅದರಿಂದ ಆ ಸಾಮ್ರಾಜ್ಯಕ್ಕೆ ಒಳಗೂ ಹೊರಗೂ ವಿನಾಶವು ಪ್ರಾಪ್ತವಾಗುವುದು. ಈ ಕ್ಷೋಭೆಯು ಮೊದಲಿಂದಲೂ ದೊರೆತನದ ನಿರಾಕರಣೆಯ ಕಡೆಗೆ ತಿರುಗುವುದು. ಕಡೆಗೆ ರಾಜಧ್ವಂಸದಲ್ಲಿ ಪರಿಣಾಮಗೊಳ್ಳುವುದು. ಚಕ್ರವರ್ತಿಯ ಜಾತಕದಲ್ಲಿ ದುಷ್ಟಗ್ರಹಚಾರವು ವಿಶೇಷವಾಗಿದೆ.

ರಷ್ಯಾ.

ಯುದ್ಧಸಂಬಂಧಕ್ಕೆ ಅಧಿಪತಿಗಳಾದ ಗ್ರಹಗಳು ರಷ್ಯಾರಾಜ್ಯಕ್ಕೆ ಹೆಚ್ಚು ಅನುಕೂಲಗಳಾಗಿವೆ. ಫ್ರಾನ್ಸ್‌ರಾಜ್ಯಕ್ಕೆ ಹಾಗಿಲ್ಲ. ಜರ್ಮನಿಯಮೇಲೆ ಬದ್ಧದ್ವೇಷವುಳ್ಳವುಗಳು ಈ ರಷ್ಯಾ-ಫ್ರಾನ್ಸುಗಳೆರಡೇ.

ಫ್ರಾನ್ಸು.

ಫ್ರೆಂಚ್ ಸೇನಾನಿವಹಕ್ಕೆ ಈ ತಿಂಗಳ ಕೊನೆಯಲ್ಲೂ, ಸೆಪ್ಟೆಂಬರ್ ತಿಂಗಳ ಮೊದಲ ಕೆಲದಿನಗಳಲ್ಲೂ ಸ್ವಲ್ಪ ಜೀರ್ಣತೆಯು ತಪ್ಪದು. ಆದರೆ ಬಳಿಕ ಅದಕ್ಕೆ ಉತ್ತಮವಾದ ತಾರಾಬಲವು ಪ್ರಾಪ್ತವಾಗುವುದೆಂದು ತೋರಿ ಬರುತ್ತದೆ.

ಆಸ್ಟ್ರಿಯಾ.

ಆಸ್ಟ್ರಿಯಾರಾಷ್ಟ್ರಕ್ಕೆ ಮುಂದೆ ಬಹಳ ದುರ್ದಿನಗಳಿರುವುವು. ಯೂರೋಪುರಾಷ್ಟ್ರಸಮೂಹದಲ್ಲಿ ಈ ಆಸ್ಟ್ರಿಯಾದ ತೇಜಸ್ಸು ಕ್ಷೀಣಿಸಿ ಹೋಗುವುದು.

ಇಟಲಿ.

ಇಟಲಿದೇಶವು ಪುನಃ ಶಸ್ತ್ರಪ್ರಸಂಗವನ್ನು ವಹಿಸುವುದು. ಅತಿಶಯವಾದ ಜಯವನ್ನೂ ಕೀರ್ತಿಯನ್ನೂ ವಿಸ್ತರಿಸುವುದು.

ಇಂಗ್ಲೆಂಡು.

ಇನ್ನು ಇಂಗ್ಲೆಂಡಿನ ದಶೆಯು ಹೇಗಿರುವುದೆಂದರೆ— ಈ ದೇಶಾದೃಷ್ಟವನ್ನು ರಕ್ಷಿಸುವ ಗ್ರಹಗಳೆಲ್ಲಾ ಶ್ರೇಯಃಪ್ರದಸ್ಥಾನದಲ್ಲಿವೆ. ಅನುಕೂಲಗ್ರಹವೀಕ್ಷಣೆಯು ಪೂರ್ಣವಾಗಿದೆ. ಇದುವರೆಗೆ ಕೆಟ್ಟವಾಗಿದ್ದ ನಕ್ಷತ್ರಗಳು ಕೂಡ ಈಗ ಉತ್ತಮರಾಶಿಯಲ್ಲಿ ಪ್ರವೇಶಿಸುತ್ತಿವೆ. ಇಂಗ್ಲೆಂಡು ತನ್ನ ಕೀರ್ತಿಗೌರವಗಳನ್ನೂ ಶಕ್ತಿವಿಶೇಷವನ್ನೂ ಚೆನ್ನಾಗಿ ಉಳಿಸಿಕೊಳ್ಳುವುದು.

ಭರತಖಂಡ.

ಭರತಖಂಡದ ಸಂಬಂಧವಾಗಿ ಗ್ರಹಗಳ ವಿಚಾರವನ್ನು ಪರಿಶೀಲಿಸಿದರೆ, ಈ ದೇಶದಲ್ಲಿ ಯಾವ ವಿಧವಾದ ಮಾರ್ಪು ಉಂಟಾಗುವಂತೆ ಕಾಣುವುದಿಲ್ಲ.

ಈಗಿನ ಆಂದೋಳನವು ನಿಷ್ಕಾರಣವಾಗಿ ಹುಟ್ಟಿರುತ್ತದೆ. ಬೇಗನೆ ಇದೆಲ್ಲವೂ ವ್ಯವಸ್ಥಿತವಾಗುವುದು. ಯೂರೋಪಿನ ಭೂಗೋಳಚಿತ್ರದಲ್ಲಿ ರಾಷ್ಟ್ರಗಳ ಎಲ್ಲೆಯನ್ನು ವ್ಯತ್ಯಾಸಮಾಡಿ ಬರೆಯಬೇಕಾಗುವುದು. ರಷ್ಯಾ-ಫ್ರಾನ್ಸು ರಾಷ್ಟ್ರಗಳ ವೈಶಾಲ್ಯವು ವಿಸ್ತರಿಸುವುದು. ಜರ್ಮನಿ ರಾಜ್ಯವು ತನ್ನ ಮೂಲಭೂಮಿಯಲ್ಲೇ ಸ್ವಲ್ಪ ಕಳೆದುಕೊಳ್ಳುವುದು. ೪೦ ವರ್ಷಗಳ ಹಿಂದೆ ಕತ್ತಿಮೊನೆಯ ಶಕ್ತಿಯಿಂದ ಹಿಡಿದುಕೊಂಡಿರುವ ಆಲ್ಸೇಸ್ಸು-ಲೋರೈನ್‌ಪಟ್ಟಣಗಳು ಮತ್ತೆ ಫ್ರೆಂಚರ ಸೊತ್ತಾಗಿ ಪರಿಣಮಿಸುವುವು. ಆಸ್ಟ್ರಿಯದ ಹಣೆಬರಹವು ಚೆನ್ನಾಗಿಲ್ಲ. ಈ ಯುದ್ಧರೋಗವು ನಿವಾರಿತವಾಗುವುದರೊಳಗೆ ದೇಶವೆಲ್ಲಾ ನಾನಾವಿಧವಾದ ಉಪಟಲದಿಂದ ಬೆಂಡಾಗುವುದು. ಜರ್ಮನಿಗೆ ಅಪಜಯವು ತಪ್ಪದ ಫಲವು, ಅದು ಖಂಡಿತ. ಯುದ್ಧಸಂಬಂಧವಾದ ಜಾತಕಲಕ್ಷಣವನ್ನು ಪರಿಶೀಲಿಸಿದರೆ, ಸೂರ್ಯನು ತುಲಾರಾಶಿಯಿಂದ ವೃಶ್ಚಿಕರಾಶಿಯನ್ನು ಪ್ರವೇಶಿಸುವವರೆಗೂ ಶಾಂತಿಯು ಸಮನಿಸುವುದಿಲ್ಲ. ಆ ಶಾಂತಿಯೆಂಬುವುದು ಅಕ್ಟೋಬರ್ ತಿಂಗಳು ೩ ನೆಯ ವಾರದಲ್ಲಿ ಜರುಗುವುದು. ಈ ಯುದ್ಧಪ್ರಸಕ್ತಿಯು ಎಷ್ಟು ಅಕಸ್ಮಾತ್ತಾಗಿ ಉಂಟಾಯಿತೋ ಸಂಧಿನಿರ್ಧಾರಣವೂ ಕೂಡ ಅಷ್ಟು ಅಕಸ್ಮಾತ್ತಾಗಿಯೇ ಆಗುವುದು."

ಪ್ರಪಂಚದಲ್ಲಿನ ಮುಖ್ಯರಾಷ್ಟ್ರಗಳ ಯೋಗ್ಯತೆಯು.

ದೇಶಗಳ ಹೆಸರು.	ವಿಸ್ತೀರ್ಣ.	ಜನಸಂಖ್ಯೆ.	ವರಮಾನ. ಪೌಂ	ತಲೆಯೊಂದಕ್ಕೆ ಕಂದಾಯ; ಪೌಂ	ಸೈನ್ಯ.	ವೆಚ್ಚ. ಪೌಂ	ಯುದ್ಧದ ಹಡಗು.	ವ್ಯಾಪಾರದ ಹಡಗು ಅವುಗಳು ಹೊರಬಲ್ಲ ಭಾರ; ಟನ್.	ನಡೆಯುವ ವ್ಯಾಪಾರ; ಪೌಂ
ಆಂಗ್ಲ ಸಾಮ್ರಾಜ್ಯ	13123712	435000000	340750000					20431543	1779000000
ಆಂಗ್ಲದ್ವೀಪಗಳು	120651	45250000	186000000	4—2—0	413446	28220000	600	18696237	1032000000
ಭರತಖಂಡ	1773170	315000000	82000000	0—5—0	236600	18000000			287000000
ಅಮೇರಿಕಾಸಂಯುಕ್ತ ರಾಷ್ಟ್ರಗಳು	3027000	92000000	207000000	2—5—0	216000	30000000	170	5427636	738000000
ಫ್ರಾನ್ಸುಸಾಮ್ರಾಜ್ಯ	5366400	98400000	200500000						
ಫ್ರಾನ್ಸುದೇಶ	207100	40000000	190000000	4—15—0	1250000	36550000	340	2201116	566000000
ಜರ್ಮನ್‌ಸಾಮ್ರಾಜ್ಯ	1313020	80000000							
ಜರ್ಮನ್‌ದೇಶ	208780	65000000	150500000	2—8—0	2250000	60000000	350	5082061	876000000
ಇಟಲಿ ಸಾಮ್ರಾಜ್ಯ	723811	36800000							
ಇಟಲಿದೇಶ	110623	35000000	114000000	3—5—0	750000	16825541	135	1521942	222000000
ರಷ್ಯಾ	8400000	164000000	300000000	1—16—0	1630000	67200210	160	974178	268000000
ಜಪಾನ್ ಸಾಮ್ರಾಜ್ಯ	235900	65100000							
ಜಪಾನ್ ದೇಶ	140000	50000000	58000000	1—3—0	750000	9966607	170	1500014	101600000
ಆಸ್ಟ್ರಿಯಾ }	134634	29000000	128500000 }	4—6—0	800000	22193204	125	1011414	233000000
ಹಂಗೇರಿ }	125400	21000000	6500000 }						
ಬೆಲ್ಜಿಯಂ	11400	7500000	33000000	4—8—0	180000	2790550		304386	324000000
ಸರ್ವಿಯಾ	34000	5000000	5250000	1—15—0	195000	1167641			9500000
ಮಾಂಟಿನಿಗ್ರೋ	5800	500000	125000	0—11—0					450000

ಯೂರೋಪ್ಯರಾಷ್ಟ್ರಗಳಲ್ಲಿ ಪ್ರಜೆಗಳೆಲ್ಲಾ ಸೈನಿಕರಾಗಿರಬೇಕೆಂಬ ನಿರ್ಬಂಧವುಂಟು. ಆಂಗ್ಲದ್ವೀಪಗಳಲ್ಲಿ ಮಾತ್ರ ಆ ನಿರ್ಬಂಧವಿಲ್ಲ. ಈ ಕಾರಣದಿಂದ ಸೇನಾಸಂಖ್ಯೆಯು ಆಂಗ್ಲದ್ವೀಪಗಳೊಳಗೆ ಕಡಿಮೆಯಾಗಿಯೂ, ಇತರ ರಾಷ್ಟ್ರಗಳಲ್ಲಿ ಹೆಚ್ಚಾಗಿಯೂ ಇವೆ. ಆದರೆ ಯುದ್ಧಾರಂಭದಿಂದಲೂ ಇಂಗ್ಲಾಂಡಿನಲ್ಲಿ ಹೊಸ ಸೈನಿಕರು ೫ ಲಕ್ಷದವರೆಗೆ ಸಿದ್ಧಪಡಿಸಲ್ಪಡುತ್ತಿದ್ದಾರೆ. ಈ ರಾಷ್ಟ್ರಗಳಿಗಿರುವ ಯುದ್ಧನೌಕಾಸೇನೆಯ ಪ್ರಮಾಣವನ್ನು ಹಿಂದಿನ ಒಂದು ಸಂಚಿಕೆಯಲ್ಲಿ ಪ್ರಕಟಿಸಿದೆ. ಆ ಸಂಖ್ಯೆಯೊಳಗೆ ಎಲ್ಲತರದ ಯುದ್ಧನಾವೆಗಳೂ ಸೇರಿವೆ. ವ್ಯಾಪಾರದ ಹಡಗುಗಳು ನಾನಾತರವಾಗಿರುತ್ತವೆ. ೧೦೦ ಟನ್ನಿನಿಂದ ಹಿಡಿದು ೫೦ ಸಾವಿರ ಟನ್ನುಗಳ ಭಾರವನ್ನು ಹೊರುವ ಹಡಗುಗಳೂ ಇರುವುವು. ಆದರೆ ಅವೆಲ್ಲವೂ ಹೊರುವ ಒಟ್ಟುಭಾರವನ್ನು ಮೇಲಿನ ಪಟ್ಟಿಯಲ್ಲಿ ಕಾಣಿಸಿದೆ. ಮೇಲೆಕಂಡ ಪಟ್ಟಿಯಲ್ಲಿನ ಆಂಗ್ಲದೇಶದ ವಿವರಣದಲ್ಲಿ ಅದರ ಸ್ವಾಧೀನ್ಯಗಳಿಗೆ ಸೇರಿದ ಭೂಸೈನ್ಯ ಜಲಸೈನ್ಯಗಳನ್ನು ಸೇರಿಸಿಲ್ಲ. ಅವೂ ಸೇರಿದರೆ ಅದರ ಪ್ರಮಾಣವು ಇನ್ನೂ ಮಿಗಿಲಾಗುವುದು.

ಸಂ ೩೪ ಸಂಪು- ೨೭.

ಯುದ್ಧದ ಭವಿಷ್ಯತ್ತು.

ಪಾಶ್ಚಾತ್ಯಜ್ಯೋತಿಷ್ಕರಲ್ಲಿ ಒಬ್ಬರಾದ ಲಿಯೋಕೆಂಡಾಲ್ ಎಂಬುವರು ಈಗಿನ ಯುದ್ಧದ ಭವಿಷ್ಯತ್ತನ್ನು ಈಕೆಳಗೆ ಕಂಡಂತೆ ಗುಣಿತದ ಮೂಲಕ ನಿರ್ಣಯಿಸಿ ಹೇಳಿರುತ್ತಾರೆ—“ ಪಶ್ಚಿಮಾರ್ಧಗೋಳಕ್ಕಿರುವ ಗ್ರಹಚಾರ ಸ್ಥಿತಿಯನ್ನು ಪರಿಶೀಲಿಸಿದರೆ, ಈ ಯುದ್ಧದೋಷವು ದೀರ್ಘಕಾಲ ಪರ್ಯಂತ ವಿಸ್ತರಿಸಿಕೊಂಡಿರುವುದೆಂದು ಹೇಳಲು ಅವಕಾಶವಿಲ್ಲ.

ಜರ್ಮನಿ

ಜರ್ಮನಿಗೆ ಆದಿಯಲ್ಲಿ ಸ್ವಲ್ಪ ಜಯಪ್ರಾಪ್ತಿಯು ಉಂಟಾಗಬಹುದು, ಆದರೆ ಅದು ಅಷ್ಟು ಪ್ರಾಮುಖ್ಯವನ್ನೈದಲಾರದು. ದೇಶದೊಳಗೆ ದ್ರವ್ಯಸಂಬಂಧವಾದ ವೈಕಲ್ಯವು ಹೆಚ್ಚು ಹಾಹಾಕಾರವನ್ನು ಹುಟ್ಟಿಸುವುದು. ಆದರಿಂದ ಈ ಯುದ್ಧಾಭಿನಿವೇಶವು ವಿರಮಿಸುವುದು. ಜರ್ಮನಿ ಪ್ರಜೆಗಳು ಅಂತಃಕಲಹದಿಂದ ತುಂಬಿಹೋಗುವರು. ಆದರಿಂದ ಈ ಸಾಮ್ರಾಜ್ಯಕ್ಕೆ ಒಳಗೂ ಹೊರಗೂ ವಿನಾಶವು ಪ್ರಾಪ್ತವಾಗುವುದು. ಈ ಕ್ಷೋಭೆಯು ಮೊದಲಿಂದಲೂ ದೊರೆತನದ ನಿರಾಕರಣೆಯ ಕಡೆಗೆ ತಿರುಗುವುದು. ಕಡೆಗೆ ರಾಜಧ್ವಂಸನದಲ್ಲಿ ಪರಿಣಾಮಗೊಳ್ಳುವುದು. ಚಕ್ರವರ್ತಿಯ ಜಾತಕದಲ್ಲಿ ದುಷ್ಟಗ್ರಹಚಾರವು ವಿಶೇಷವಾಗಿದೆ.

ರಷ್ಯಾ.

ಯುದ್ಧಸಂರಂಭಕ್ಕೆ ಅಧಿಪತಿಗಳಾದ ಗ್ರಹಗಳು ರಷ್ಯಾರಾಜ್ಯಕ್ಕೆ ಹೆಚ್ಚು ಅನುಕೂಲಗಳಾಗಿವೆ. ಫ್ರಾನ್ಸ್‌ರಾಜ್ಯಕ್ಕೆ ಹಾಗಿಲ್ಲ. ಜರ್ಮನಿಯಮೇಲೆ ಬದ್ಧದ್ವೇಷವುಳ್ಳವುಗಳು ಈ ರಷ್ಯಾ-ಫ್ರಾನ್ಸುಗಳೆರಡೇ.

ಫ್ರಾನ್ಸು.

ಫ್ರೆಂಚ್ ಸೇನಾಪಿವಹಕ್ಕೆ ಈ ತಿಂಗಳ ಕೊನೆಯಲ್ಲೂ, ಸೆಪ್ಟಂಬರ್ ತಿಂಗಳ ಮೊದಲ ಕೆಲದಿನಗಳಲ್ಲೂ ಸ್ವಲ್ಪ ಜೀರ್ಣತೆಯು ತಪ್ಪದು. ಆದರೆ ಬಳಿಕ ಅದಕ್ಕೆ ಉತ್ತಮವಾದ ತಾರಾಬಲವು ಪ್ರಾಪ್ತವಾಗುವುದೆಂದು ತೋರಿ ಬರುತ್ತದೆ.

ಆಸ್ಟ್ರಿಯಾ.

ಆಸ್ಟ್ರಿಯಾರಾಷ್ಟ್ರಕ್ಕೆ ಮುಂದೆ ಬಹಳ ದುರ್ದಿನಗಳಿರುವುವು. ಯೂರೋಪುರಾಷ್ಟ್ರ ಸಮೂಹದಲ್ಲಿ ಈ ಆಸ್ಟ್ರಿಯಾದ ತೇಜಸ್ಸು ಕ್ಷೀಣಿಸಿ ಹೋಗುವುದು.

ಇಟಲಿ.

ಇಟಲಿದೇಶವು ಪುನಃ ಶಸ್ತ್ರಪ್ರಸಂಗವನ್ನು ವಹಿಸುವುದು. ಅತಿಶಯವಾದ ಜಯವನ್ನೂ ಕೀರ್ತಿಯನ್ನೂ ವಿಸ್ತರಿಸುವುದು.

ಇಂಗ್ಲೆಂಡು.

ಇನ್ನು ಇಂಗ್ಲೆಂಡಿನ ದಶೆಯು ಹೇಗಿರುವುದೆಂದರೆ—ಈ ದೇಶಾದೃಷ್ಟವನ್ನು ರಕ್ಷಿಸುವ ಗ್ರಹಗಳೆಲ್ಲಾ ಶ್ರೇಯಃಪ್ರದಸ್ಥಾನದಲ್ಲಿವೆ. ಅನುಕೂಲಗ್ರಹ ವೀಕ್ಷಣೆಯು ಪೂರ್ಣವಾಗಿದೆ. ಇದುವರೆಗೆ ಕೆಟ್ಟವಾಗಿದ್ದ ನಕ್ಷತ್ರಗಳೂ ಕೂಡ ಈಗ ಉತ್ತಮರಾಶಿಯಲ್ಲಿ ಪ್ರವೇಶಿಸುತ್ತಿವೆ. ಇಂಗ್ಲೆಂಡು ತನ್ನ ಕೀರ್ತಿಗೌರವಗಳನ್ನೂ ಶಕ್ತಿವಿಶೇಷವನ್ನೂ ಚೆನ್ನಾಗಿ ಉಳಿಸಿಕೊಳ್ಳುವುದು.

ಭರತಖಂಡ.

ಭರತಖಂಡದ ಸಂಬಂಧವಾಗಿ ಗ್ರಹಗಳ ವಿಚಾರವನ್ನು ಪರಿಶೀಲಿಸಿದರೆ, ಈ ದೇಶದಲ್ಲಿ ಯಾವ ವಿಧವಾದ ಮಾರ್ಪೂ ಉಂಟಾಗುವಂತೆ ಕಾಣುವುದಿಲ್ಲ.

ಈಗಿನ ಆಂದೋಳನವು ನಿಷ್ಕಾರಣವಾಗಿ ಹುಟ್ಟಿರುತ್ತದೆ. ಬೇಗನೆ ಇವೆಲ್ಲವೂ ವ್ಯವಸ್ಥಿತವಾಗುವುದು. ಯೂರೋಪಿನ ಭೂಗೋಳ ಚಿತ್ರದಲ್ಲಿ ರಾಷ್ಟ್ರಗಳ ಎಲ್ಲೆಯನ್ನು ವ್ಯತ್ಯಾಸಮಾಡಿ ಬರೆಯಬೇಕಾಗುವುದು. ರಷ್ಯಾ—ಫ್ರಾನ್ಸು—ರಾಷ್ಟ್ರಗಳ ವೈಶಾಲ್ಯವು ವಿಸ್ತರಿಸುವುದು. ಜರ್ಮನಿರಾಜ್ಯವು ತನ್ನ ಮೂಲಭೂಮಿಯಲ್ಲೇ ಸ್ವಲ್ಪ ಕಳೆದುಕೊಳ್ಳುವುದು. ೪೦ ವರ್ಷಗಳ ಹಿಂದೆ ಕತ್ತಿಮೊನೆಯ ಶಕ್ತಿಯಿಂದ ಹಿಡಿದುಕೊಂಡಿರುವ ಆಲ್ಸೆಸ್ಸು—ಲೋರೈನ್ ಪಟ್ಟಣಗಳು ಮತ್ತೆ ಫ್ರೆಂಚರ ಸೊತ್ತಾಗಿ ಪರಿಣಮಿಸುವುವು. ಆಸ್ಟ್ರಿಯಾದ ಹಣೆಬರಹವು ಚೆನ್ನಾಗಿಲ್ಲ. ಈ ಯುದ್ಧರೋಗವು ನಿವಾರಿತವಾಗುವುದರೊಳಗೆ ದೇಶವೆಲ್ಲಾ ನಾನಾವಿಧವಾದ ಉಪಟಲದಿಂದ ಬೆಂಡಾಗುವುದು. ಜರ್ಮನಿಗೆ ಅಪಜಯವು ತಪ್ಪದ ಫಲವು, ಅದು ಖಂಡಿತ. ಯುದ್ಧಸಂಬಂಧವಾದ ಜಾತಕಲಕ್ಷಣವನ್ನು ಪರಿಶೀಲಿಸಿದರೆ, ಸೂರ್ಯನು ತುಲಾರಾಶಿಯಿಂದ ವೃಶ್ಚಿಕರಾಶಿಯನ್ನು ಪ್ರವೇಶಿಸುವವರೆಗೂ ಶಾಂತಿಯು ಸಮನಿಸುವುದಿಲ್ಲ. ಆ ಶಾಂತಿಯೆಂಬುವುದು ಆಕ್ಟೋಬರ್ ತಿಂಗಳು ೩ ನೆಯ ವಾರದಲ್ಲಿ ಜರುಗುವುದು. ಈ ಯುದ್ಧಪ್ರಸಕ್ತಿಯು ಎಷ್ಟು ಆಕಸ್ಮಾತ್ತಾಗಿ ಉಂಟಾಯಿತೋ ಸಂಧಿನಿರ್ಧಾರಣವೂ ಕೂಡ ಅಷ್ಟು ಆಕಸ್ಮಾತ್ತಾಗಿಯೇ ಆಗುವುದು.”

೧೮೫೪ ರಿಂದೀಚೆಗೆ ನಡೆದ ಮುಖ್ಯಯುದ್ಧಗಳಲ್ಲಾದ ಪ್ರಾಣ ಧನ ನಷ್ಟಗಳು:—

ಯುದ್ಧ	ಇಸವಿ	ಪ್ರಾಣನಷ್ಟ	ದ್ರವ್ಯನಷ್ಟ ರೂ.
ಕ್ರಿಮಿಯನ್	೧೮೫೪	೭೮೫೦೦೦	೫೧೦೦೦೦೦೦೦೦
ಇಟಲಿಯನ್	೧೮೫೯	೪೫೦೦೦	೯೦೦೦೦೦೦೦೦
ಸ್ಲೆಸ್‌ವಿಗ್ ಹಾಲ್‌ಸ್ಟೀನ್	೧೮೬೪	೩೫೦೦	೧೦೫೦೦೦೦೦೦
ಅಮೇರಿಕದ ಸಿವಿಲ್‌ಯುದ್ಧ	೧೮೬೧-೫	...	...
ಉತ್ತರದ ಸೈನ್ಯ	...	೨೮೧೦೦೦	೧೪೧೦೦೦೦೦೦೦೦
ದಕ್ಷಿಣದ ಸೈನ್ಯ	...	೫೧೯೦೦೦	೬೯೦೦೦೦೦೦೦೦
ಪ್ರಷ್ಯಾ-ಆಸ್ಟ್ರಿಯಾ-ಇಟಲಿ	೧೮೬೬	೪೫೦೦೦	೯೯೦೦೦೦೦೦೦
ಫ್ರಾನ್ಸ್-ಜರ್ಮನಿ	೧೮೭೦-೧	೮೫೩೦೦೦	೬೬೬೦೦೦೦೦೦೦
			ಗಾಯವಡೆದವರು ಸೇರಿ
ತುರ್ಕಿ-ರಷ್ಯಾ	೧೮೭೭	...	೧೫೩೦೦೦೦೦೦೦
			ರಷ್ಯಾಕ್ಕೆ ಮಾತ್ರ
ಚೈನಾ-ಜಪಾನ್	೧೮೯೪	...	೩೦೦೦೦೦೦೦೦
			ಜಪಾನರಿಗೆ ಮಾತ್ರ
ಸ್ಪೇನ್-ಅಮೇರಿಕಾ	೧೮೯೮	...	೩೮೮೫೦೦೦೦೦೦
ಸೌತ್ ಆಫ್ರಿಕಾ	೧೮೯೯-೧೯೦೨	೬೮೭೦೦	೪೦೫೦೦೦೦೦೦೦
ರಷ್ಯಾ-ಜಪಾನ್	೧೯೦೪-೫	೪೮೫೦೦೦	೭೫೪೫೦೦೦೦೦೦

ಕಳೆದ ಬಾಲ್ಕನ್ ಯುದ್ಧದಲ್ಲಿ

ಬಲ್ಗೇರಿಯಾ	...	140000	1350000000
ಸರ್ವಿಯಾ	...	70000	750000000
ಗ್ರೀಸ್	...	30000	375000000
ಮಾಂಟಿನಿಗ್ರೊ	...	8000	15000000
ತುರ್ಕಿ	...	100000	1200000000

೧೮೭೦ರಲ್ಲಿ ನಡೆದ ಯುದ್ಧದಲ್ಲಿ ಜರ್ಮನಿಗೆ ತಲೆಯೊಂದಕ್ಕೆ ೪॥ ರೂ. ನಂತೆ ನಿತ್ಯದಲ್ಲೂ ವೆಚ್ಚವಾಗುತ್ತಿದ್ದಿತು. ಈಗಿನ ಯುದ್ಧವು ೬ ತಿಂಗಳವರೆಗೆ ನಡೆಯುವುದೆಂದಿಟ್ಟುಕೊಂಡರೆ ಜರ್ಮನರ ಕಡೆಯ ೪೦೦೦೦೦೦ ಜನರಿಗೆ ದಿನ ೧ಕ್ಕೆ ತಲೆಯೊಂದಕ್ಕೆ ೬॥ ರೂಪಾಯಿಯಂತೆ ೫೪೦೦೦೦೦೦೦೦ ರೂ. ವೆಚ್ಚವಾಗುವುದಾಗಿ ನಿರೀಕ್ಷಿಸಲ್ಪಟ್ಟಿದೆ.

ಸೂಚನೆ.

ಮಹಾಗಣೇಶನ ಹಬ್ಬದ ಉದ್ದೇಶದಿಂದ ಪದ್ಧತಿಯ ಪ್ರಕಾರ ಮುಂದಣ ತಾ॥ ೩೦—೮—೧೪ ರ “ಸ್ಟಾರ್” ಸಂಚಿಕೆಯು ಹೊರಡುವುದಿಲ್ಲವು.

ಮೈಸೂರ್ ಸ್ಟಾರ್.

ಸನ್ ೧೯೧೪ ನೆಯ ಆಗಸ್ಟ್ ತಾ॥ ೨೩ನೆಯ ಭಾನುವಾರ.

ಮಹಾಯುದ್ಧ.

ಯುದ್ಧ! ಯುದ್ಧ!! ಯುದ್ಧ!!! ಎಂಬ ಮಾತು ಪ್ರಪಂಚದಮೇಲೆಲ್ಲಾ ಒಂದೇಸಮವಾಗಿ ಎಲ್ಲರ ಬಾಯಲ್ಲೂ ತುಂಬಿದೆ. ನಮ್ಮ ಪರಿಪಾಲಕರಾದ ಆಂಗ್ಲಸಾರ್ವಭೌಮರವರು ಈಗಿನ ಯುದ್ಧದಲ್ಲಿ ಭಾಗಿಗಳಾಗಿರುವುದರಿಂದ ನಮಗೂ ಈ ಯುದ್ಧದ ಸಂಬಂಧವು ಇದ್ದಹಾಗೆಯೇ ಆಗಿದೆ. ಆಂಗ್ಲಪ್ರಭುಗಳ ವಿಜಯವೇ ನಮ್ಮ ಸುಖಶಾಂತಿಗಳಿಗೆ ಸಾಧಕವಾದುದು. ಆದುಕಾರಣ, ಈ ಯುದ್ಧದ ಕಷ್ಟಸುಖಗಳೆಲ್ಲಾ ಭಾರತೀಯರಿಗೂ ಒಂದು ವಿಧವಾಗಿ ಹೊತ್ತಿರುತ್ತವೆಯೆಂದು ಹೇಳಬಹುದು. ಈ ಕಾರಣದಿಂದಲೇ ನಮ್ಮ ದೇಶದಲ್ಲಿರುವ ಸಕಲ ಸಾಮಂತರಾಜರುಗಳೂ, ಪ್ರಜಾಪ್ರಮುಖರೂ ತಮ್ಮ ಸರ್ವಸ್ವದಿಂದಲೂ ಆಂಗ್ಲಸಾಮ್ರಾಜ್ಯಕ್ಕೆ ಸಹಾಯಮಾಡಲು ಸಿದ್ಧರಾಗಿರುವೆವೆಂದು ಶ್ರುತಪಡಿಸಿಕೊಂಡಿದ್ದಾರೆ. ಸಮಯಬಿದ್ದರೆ ಹಾಗೆ ಮಾಡಲು ಸಿದ್ಧರಾಗಿಯೂ ಇದ್ದಾರೆ. ಈ ದೇಶದಲ್ಲಿ ಸಾಮಂತರಾಜರುಗಳಿಂದ ದೊರೆಯುವ ಸೈನ್ಯ ಮೊದಲಾದುವುಗಳನ್ನು ಯುದ್ಧಾಂಗಣಕ್ಕೆ ಕಳುಹಿಸಿಕೊಡುವ ಅವಶ್ಯಕತೆ ಬೀಳದೆ ಹೋಗಲಾರದು. ಅಂಥ ಸಮಯದಲ್ಲಿ ಯುದ್ಧದಲ್ಲಿ ಹತರಾದವರ ಸಂಬಂಧಿಗಳಿಗೆ ಸಹಾಯಮಾಡುವುದೇ ಮೊದಲಾದ ಕೆಲಸಗಳಿಗಾಗಿ ಬೇಕಾದ ಹಣವನ್ನು ಶೇಖರಿಸುವುದು ಅವಶ್ಯಕವಾಗಿರುವುದರಿಂದ ನಮ್ಮ ಪ್ರಿಯತಮರಾದ ವೈಸ್‌ರಾಯರು ಒಂದು ನಿಧಿಯನ್ನು ಕೂಡಿಸಲು ಏರ್ಪಡಿಸಿದ್ದಾರೆ. ಅದಕ್ಕೆ ಸಂಬಂಧಪಟ್ಟ ಅವರ ವಿಜ್ಞಾಪನಪತ್ರಿಕೆಯನ್ನು ಈ ಪತ್ರದ ಬೇರೊಂದು ಕಡೆಯಲ್ಲಿ ಮುದ್ರಿಸಿರುತ್ತೇವೆ. ಈ ನಿಧಿಶೇಖರದ ಕಾರ್ಯದಲ್ಲಿ ವೈಸ್ರಾಯರೇ ಅಧ್ಯಕ್ಷರಾಗಿಯೂ ನಮ್ಮ ಶ್ರೀಮನ್ ಮಹಾರಾಜರವರೇ ಮೊದಲಾದ ಅನೇಕ ಪ್ರಭುಗಳು ಸಭಿಕರಾಗಿಯೂ ಮಾಡಲ್ಪಟ್ಟಿದ್ದಾರೆ. ಸಮುಚಿತವಾದ ಈ ಪ್ರಯತ್ನದಿಂದ ಲಕ್ಷಾಂತರ ರೂ. ಗಳು ಸ್ವಲ್ಪ ಕಾಲದೊಳಗಾಗಿ ಕೂಡಿಹೋಗುವುದರಲ್ಲಿ ಅಡ್ಡಿಯಿಲ್ಲ. ಭಾರತೀಯರ ನಿಸರ್ಗಸಿದ್ಧವಾದ ರಾಜಭಕ್ತಿಯು ಒರೆಯಿಕ್ಕಿದಂತೆ ಆಂಗ್ಲಪ್ರಭುತ್ವದವರಿಗೂ ಆಂಗ್ಲಪ್ರಜೆಗಳಿಗೂ ಗೊತ್ತಾಗಿ, ಎಂದಿಗೂ ಮರೆಯದಂತೆ ಅವರ ಮನಸ್ಸಿನಲ್ಲಿ ನೆಲಸುವುದಕ್ಕೆ ಈಗಿನ ಸಮಯವು ದೈವಾಯತ್ತವಾದಂತೆ ಕಾಣಿಸುತ್ತದೆ. ಅದನ್ನು ಸಫಲಗೊಳಿಸುವಂತೆ ಭಾರತೀಯರೆಲ್ಲರೂ ನಡೆಯಲು ಒಮ್ಮುಖರಾಗಿರುವುದು ಅತ್ಯಂತ ಸಂತೋಷಪ್ರದವಾಗಿದೆ.

ಕಲ್ಕತ್ತಾ ಮೊದಲಾದ ಕೆಲ ಪಟ್ಟಣಗಳಲ್ಲಿರುವ ವ್ಯಾಪಾರಿಗಳು, ವಕೀಲರುಗಳೂ ಸ್ವತಃ ಯುದ್ಧಕ್ಕೆ ಹೋಗಲು ಸಿದ್ಧರಾಗಿ ತಮ್ಮ ಅಭಿಪ್ರಾಯವನ್ನು ಗೌರ್ನಮೆಂಟಿಗೆ ಶ್ರುತಪಡಿಸಿದ್ದಾರೆ. ಈ ವಿಷಯದಲ್ಲಿ ಇವರು ತೋರಿಸಿರುವ ಸ್ವಾರ್ಥತ್ಯಾಗವೂ ರಾಜಭಕ್ತಿಯೂ ಅಭಿನಂದನೀಯವಾಗಿದೆ. ಆದರೆ ಅಪರಿಚಿತಿಯೂ ಬುದ್ಧಿಶಕ್ತಿಯಲ್ಲಿ ಕೊರತೆ, ನಿರ್ವೀರ್ಯರಾಗಿರುವ ಭಾರತೀಯರ ಮಂಡಲಿಯು ಮಹೋನ್ನತರಾದ ಶತ್ರುಸೈನಿಕರ ಮುಂದೆ ಏನನ್ನು ತಾನೇ ಮಾಡಬಲ್ಲುದು? ಇದು ಪುಸ್ತಕಗಳ ಮುಂದಿನ ಯುದ್ಧವೇ? ನ್ಯಾಯಾಧೀಶರ ಮುಂದಣ ವಾಗ್ಯುದ್ಧವೇ? ಇವರ ಲೇಖನಿಗಳ ಅಗ್ರ್ಯ ಎತ್ತಿಗೆ? ಇವರ ನಾಲ್ಗೋಳಿನ ಕದನಗಳ ವ್ಯಾಖ್ಯಾನವೇ? ಎಂದಿಗೂ ಅಲ್ಲ. ಆದು ಕಾರಣ, ಇವರು ದೇಹಾಭಿಮಾನವನ್ನು ತೊರೆದು ತೋರಿಸಬೇಕಾದ ಆ ಪ್ರತ್ಯಕ್ಷ ಸಹಾಯವನ್ನು ಮಾಡುವನೆಂಬುದಕ್ಕಿಂತಲೂ ಕುಳಿತಲ್ಲಿಯೇ ತಮ್ಮ ಆ ಅಭಿಮಾನವನ್ನೂ ರಾಜಭಕ್ತಿಯನ್ನೂ ಸ್ವಾರ್ಜಿತ ದ್ರವ್ಯವನ್ನು ಕೊಡುವುದರಲ್ಲಿ ವೈಸ್ರಾಯರು ಕಲ್ಪಿಸಿರುವ ನಿಧಿಗೆ ಒದಗಿಸಿಕೊಡಲು ಭರತಖಂಡದ ಎಲ್ಲ ವಕೀಲರುಗಳೂ ನೇಲುಸಂತೆಯನ್ನು ಪಾಕೆಕಟ್ಟಿ ನಡೆಯಿಸಿದರೆ ಸಮುಚಿತವಾಗಿರುವುದೆಂದು ಕ್ರುತಪಡಿಸುತ್ತೇವೆ.

ಭರತಖಂಡದಲ್ಲಿಯೂ ಈ ವಿಷಯದಲ್ಲಿ ತಮ್ಮ ಪ್ರಭುಗಳ ಶ್ರೇಯಸ್ಸನ್ನು ಕೋರಿ ನಾನಾವಿಧದ ಸ್ವಾರ್ಥತ್ಯಾಗವನ್ನು ಮಾಡಲು ಸಿದ್ಧರಾಗಿರುವಾಗ, ನಮ್ಮ ದೇಶದ ಅನೇಕ ವರ್ತಕರು ಸ್ವದೇಶ ಸ್ವಜನಾಭಿಮಾನವಿಲ್ಲದ ಸ್ವಾರ್ಥಪರರಾದ ವ್ಯಾಪಾರಿಗಳಾಗಿ, ಪದಾರ್ಥಗಳ ಬೆಲೆಯನ್ನು ಹೆಚ್ಚಿಸಿ, ಮಧ್ಯಮತರಗತಿಯ ಮತ್ತು ಕನಿಷ್ಠವರ್ಗದ ಜನರಿಗೆ ಬಹಳ ತೊಂದರೆಯನ್ನು ಮಾಡಿರುವ ವಿಷಯವು ಹೀನಕಾರ್ಯವಾಗಿರುತ್ತದೆ. ಸ್ವದೇಶದ ಸಾಮಗ್ರಿಗಳಿಗೆ ಈ ಯುದ್ಧದ ಸಂಬಂಧವನ್ನು ಹೇಳಿ ಬೆಲೆಯನ್ನು ಹೆಚ್ಚಿಸಲು ಕಾರಣವೇ ಇರುವುದಿಲ್ಲ. ವಿದೇಶದ ವಸ್ತುಗಳು ಬರುವುದಕ್ಕೆ ತಕ್ಕ ಏರ್ಪಾಟನ್ನು ಸಾರ್ವಭೌಮ ಸರಕಾರದವರು ಮಾಡಿರುವರು. ಒಂದು ವೇಳೆ ಈಗಿನ ಯುದ್ಧವು ೬-೮ ತಿಂಗಳೊಳಗೆ ಮುಗಿಯದೆ ದೀರ್ಘಕಾಲ್ಯವಾಗಿಟ್ಟುಕೊಂಡರೆ ಪರದೇಶವಸ್ತುಗಳಿಗೆ ಅಭಾವವುಂಟಾಗಬಹುದೇ ಹೊರತು ಇಲ್ಲದಿದ್ದರೆ ಅವುಗಳಿಗೆ ಕೊರತೆಯೇನೂ ಸಂಭವಿಸಲಾರದು. ಭರತಖಂಡದಲ್ಲೂ ಇಂಗ್ಲೆಂಡಿನಲ್ಲೂ ನಾಣ್ಯಗಳಿಗೆ ಕೊರತೆಯೇನೂ ಇಲ್ಲವೆಂದು ಸರ್ಕಾರದವರು ಪ್ರಸಿದ್ಧಿಪಡಿಸಿದ್ದಾರೆ. ಸರ್ಕಾರದಲ್ಲಿ ಸನದುಗಳ ಮತ್ತೂ ನೋಟುಗಳ ಬೆಲೆಯಲ್ಲಿ ಯಾವ ಹೆಚ್ಚು ಕಡಿಮೆಯೂ ಇಲ್ಲ. ಹೀಗಿದ್ದರೂ ಮಧ್ಯದ ವರ್ತಕರು ಜನರಿಗೆ “ಗಾಬರಿ” ಹುಟ್ಟಿಸಿ, ಸರಕುಗಳ ಬೆಲೆಯನ್ನು ಏರಿಸಿ, ನೋಟುಗಳ ಬೆಲೆಯನ್ನು ಕ್ಷೀಣಗೊಳಿಸಿ ವಂಚನೆಮಾಡುತ್ತಿರುವುದು ಅನ್ಯಾಯವಾಗಿದೆ. ಬೊಂಬಾಯಿ ಬಂಗಾಳಾ ಮೊದಲಾದ ಕಡೆಗಳಲ್ಲಿ ಸ್ಥಳಾಧಿಕಾರಿಗಳು ಪೇಟೆಗಳ ಮೇಲೆ ಹೊರಟು ವರ್ತಕರ ಈ ಅನ್ಯಾಯವನ್ನು ಸರಿಯಲ್ಲವೆಂದು ಬೋಧಿಸಿ ನಿಲ್ಲಿಸಿಬಿಟ್ಟಿದ್ದಾರೆ. ಅಲ್ಲಲ್ಲಾ ಪದಾರ್ಥಗಳ ಬೆಲೆಯು ಈಗೀಗ ಇಳಿಯುತ್ತಲೂ ಇದೆಯೆಂದು ತಂತ್ರೀವಾರ್ತೆಗಳಿಂದ ತಿಳಿಯುತ್ತದೆ. ಇಂಥ ವಿಚಾರಣೆಯನ್ನು ಎಲ್ಲ ಸರ್ಕಾರದಧಿಕಾರಿಗಳೂ ಮಾಡುವುದವಶ್ಯಕವಾಗಿದೆ. ಸರ್ಕಾರದಿಂದ ಹೇಳಿಸಿಕೊಂಡು ಬಲಾತ್ಕಾರದಿಂದ ವರ್ತಕರು ತಮ್ಮ ಆ ನ್ಯಾಯವನ್ನು ತಿದ್ದಿಕೊಳ್ಳುವುದಕ್ಕಿಂತ ತಮ್ಮ ಸಹೋದರ ಪ್ರಜೆಗಳ ಹಿತಚಿಂತನೆಯ ಕಡೆಗೆ ಗಮನವಿತ್ತು ತಾವೇ ನಡೆಸಿಕೊಂಡರೆ ಸ್ವಜನಪ್ರೀತಿಯೂ ಉಳಿವುದು; ದೇವರೂ ಮೆಚ್ಚುವನು.

ಈಗಿನ ಯುದ್ಧಕ್ಕೂ ಪೂರ್ವಕಾಲದ ಯುದ್ಧಕ್ಕೂ ಸಂಬಂಧವೇ ಇಲ್ಲ. ಆಗ ಯುದ್ಧ ಸಂಭವಿಸಿತೆಂದರೆ ಊರುಕೇರಿಯ ಜನರೆಲ್ಲಾ ಗಂಟು ಮೂಟೆ ಕಟ್ಟಿ, ಕಾಡಿನ ಪಾಲಾಗಬೇಕಾಗುತ್ತಿದ್ದಿತು. ಶತ್ರುಗಳು ನುಗ್ಗಿದ ಊರುಗಳೆಲ್ಲಾ ಸ್ಮಶಾನವಾಗುತ್ತಿದ್ದಿತು. ದೇಶವೆಲ್ಲಾ ಹಾಳಾಗುತ್ತಿದ್ದಿತು. ಈಗಿನ ಸ್ಥಿತಿಯು ಹಾಗಿಲ್ಲ; ಯುದ್ಧವು ಧರ್ಮಯುದ್ಧವಾಗಿದ್ದರೂ, ವೈರಿಗಳು ಶತ್ರುದೇಶದಲ್ಲಾದರೂ ಪ್ರಜೆಗಳಿಗೆ ಹಿಂಸೆಯನ್ನು ಕೊಡುವುದು ಅನ್ಯಾಯವೆಂದು ತಿಳಿಯಲ್ಪಟ್ಟಿದೆ. ಆದುಕಾರಣ ಯುದ್ಧಾಭಿಮಾನದೇವತೆಯು ಸವಿಯಿಂದ ಜನರಿಗೇ ಅಪ್ಪಳಿಸುವ ರೋಗಕ್ಷಾಮವೆಂಬ ದೇವತೆಗಳಿಗೆ ದೇಶವು ಒಂದುವೇಳೆ ಈಡಾಗಬಹುದೇ ಹೊರತು ಮತ್ತಾವ ಪೀಡೆಯೂ ಸಂಭವಿಸುವುದು ವಿರಳ. ನಮ್ಮ ಭರತಖಂಡದಲ್ಲಿ ಪ್ರತ್ಯಕ್ಷಯುದ್ಧವು ಇಲ್ಲದಿರುವುದರಿಂದ ಅನೇರಡರ ಹಾವಳಿಯೂ ಪ್ರವೃತ್ತವಾಗುವ ಕಾರಣಗಳು ಕಟ್ಟುವ ಸಂಭವವಿಲ್ಲ. ಆದುಕಾರಣ, ಎಲ್ಲ ವ್ಯವಹಾರಗಳನ್ನೂ ಭಾರತೀಯರು ಶಾಂತಿಯಿಂದ ನಡೆಯಿಸಿಕೊಂಡು ಹೋಗುವುದಲ್ಲದೆ ಅಭ್ಯಂತರವೇನೂ ಇಲ್ಲ.

ಈ ಯುದ್ಧದ ಪರ್ಯವಸಾನವೇನೆಂಬುದನ್ನು ಈಗಲೇ ಊಹಿಸಿ ಹೇಳುವುದು ಅಸಾಧ್ಯ. ಜಯಾಪಜಯಗಳು ದೈವಾಯತ್ತವಾಗಿದ್ದರೂ, ಉಭಯಪಕ್ಷಗಳ ಸೇನಾಬಲ, ದ್ರವ್ಯಬಲ, ಸಾಧನಸಾಮಗ್ರಿಯಬಲ, ಸೇನಾನಿಗಳ ಯುಕ್ತಿ ಸಾಹಸಬಲ—ಮೊದಲಾದುವುಗಳನ್ನು ಕೂಡ ಜಯಾಪಜಯಗಳು ಸ್ವಲ್ಪಮಟ್ಟಿಗೆ ಅನುಸರಿಸಿಕೊಂಡಿರುತ್ತವೆ ಎಂಬ ಸಿದ್ಧಾಂತವನ್ನು ಹಿಡಿದು ಹೇಳುವುದಾದರೆ, ನಮ್ಮ ಆಂಗ್ಲಪ್ರಭುತ್ವದ ಪಕ್ಷಕ್ಕೇ ಜಯವಾಗು

ವುದು ಖಂಡಿತವೆಂದು ಹೇಳಬೇಕಾಗುತ್ತದೆ. ಈ ಪಕ್ಷದಲ್ಲಿ ಇಂಗ್ಲೆಂಡು-ಫ್ರಾನ್ಸು-ರಷ್ಯಾ-ಜಪಾನ್—ಎಂಬ ದೊಡ್ಡರಾಜ್ಯಗಳು ನಾಲ್ಕು, ಬೆಲ್ಜಿಯಂ-ಸರ್ವಿಯಾ-ಮಾಂಟಿನಿಗ್ರೋ ಎಂಬ ಸಣ್ಣರಾಜ್ಯಗಳೂ ಸೇರಿರುತ್ತವೆ. ಇದಿರುಪಕ್ಷದಲ್ಲಿ ಜರ್ಮನಿ-ಆಸ್ಟ್ರಿಯಾ—ಎಂಬ ಎರಡು ದೊಡ್ಡರಾಷ್ಟ್ರಗಳು ಮಾತ್ರ ಇರುತ್ತವೆ. ಅಲ್ಲದೆ, ನ್ಯಾಯಪಕ್ಷಗಳ ಬಲವು ನಮ್ಮ ಪಕ್ಷಕ್ಕೇ ಇದೆ. ಜರ್ಮನಿಯವರು ಉದ್ಧತತನದಿಂದಲೂ ಪರರಾಷ್ಟ್ರ ಪೀಡಕತೆಯಿಂದಲೂ ಕಾಲಕ್ಕೆ ಮೊದಲು ಜಗಳವನ್ನು ತೆಗೆದು ಪ್ರಪಂಚದ ಮೇಲೆ ಮಹದನರ್ಥಕ್ಕೆ ಕಾರಣಭೂತರಾಗಿರುವುದರಿಂದ, ಅನ್ಯಾಯ-ಅಧರ್ಮಗಳು ಅವರನ್ನು ಆಶ್ರಯಿಸಿರುತ್ತವೆ. ಯುದ್ಧಾರಂಭವಾದಂದಿನಿಂದ ಇದುವರೆಗೆ ಬಂದಿರುವ ಸುದ್ದಿಗಳಲ್ಲಿ ಜರ್ಮನಿ-ಆಸ್ಟ್ರಿಯಾದವರಿಗೆ ಪರಾಜಯಗಳೂ, ಇದಿರುಪಕ್ಷದವರಿಗೆ ಜಯಗಳೂ ಆಗುತ್ತಿರುವುದು ಗೊತ್ತಾಗುವುದರಿಂದ ಜಯಲಕ್ಷ್ಮಿಯ ಒಲವು ಎತ್ತಕಡೆಗೆ ಇರುವುದೆಂಬುದು ತಿಳಿಯುತ್ತದೆ.

ಇದುವರೆಗೆ ಆದ ಯುದ್ಧಗಳಲ್ಲಿ ಸಣ್ಣಪುಟ್ಟವುಗಳೇ ಹೆಚ್ಚು. ೧-೨ ಕಡೆ ಮಾತ್ರ ೨೦ ಸಹಸ್ರದವರೆಗೆ ಸೇನೆಯು ಸೇರಿ ಕದನವಾಗಿದೆ. ಈಗ ಉಪಕ್ರಮವಾಗಿರುವ ಯುದ್ಧಗಳು ಮಹಾಸಂಗ್ರಾಮವಾಗುವುದಾಗಿರುತ್ತದೆ. ಈಗಿನ ಮಹಾಘೋರಯುದ್ಧದ ಸ್ಥಳವು ಜರ್ಮನಿ-ಫ್ರಾನ್ಸುಗಳ ಎಲ್ಲೆಯಲ್ಲಿರುತ್ತದೆ. ಇಂಗ್ಲೆಂಡು-ಫ್ರಾನ್ಸುಗಳ ಸೇನೆಯು ಆ ಯುದ್ಧಾಂಗಣಕ್ಕೆ ಬಂದು, ಸೇರುವುದಕ್ಕೆ ಇಷ್ಟುಕಾಲ ಹಿಡಿಯಿತು. ಅಷ್ಟರೊಳಗಾಗಿ ಜರ್ಮನಿಯವರು ಲಕ್ಸೆಂಬರ್-ಬೆಲ್ಜಿಯಮ್ಮುಗಳ ಮೇಲೆ ಹಾದು ಫ್ರಾನ್ಸಿಗೆ ನುಗ್ಗಿ ಪ್ಯಾರಿಸ್‌ಪಟ್ಟಣಕ್ಕೆ ಮುತ್ತಿಗೆಹಾಕಬೇಕೆಂದು ಉದ್ದೇಶಮಾಡಿಕೊಂಡಿದ್ದರು. ಅದಕ್ಕಾಗಿ ೧೧ ಲಕ್ಷ ಸೇನೆಯನ್ನು ಆ ಕಡೆಗೆ ನುಗ್ಗಿಸಬೇಕೆಂದು ಯೋಚಿಸಿದ್ದರು. ಆದರೆ ಬೆಲ್ಜಿಯಮ್ಮಿನವರು ತಮ್ಮ ದೇಶದ ಎಲ್ಲೆಯಲ್ಲೇ ಜರ್ಮನಿಗೆ ಪ್ರತಿಭಟಿಸಿ, ಅವರ ಉದ್ದೇಶವನ್ನು ನಿಷ್ಫಲಗೊಳಿಸಿದ ಹೋದುದು ಜರ್ಮನಿಗೆ ತನ್ನ ಬಲವನ್ನು ತಾನೇ ಕಡಿದುಕೊಂಡಂತೆ ಮಾಡಿತು. ಈಗಲಾದರೋ ಫ್ರಾನ್ಸು-ಇಂಗ್ಲೆಂಡು ಸೇನೆಗಳು ಒದಗಿಬಿಟ್ಟಿವೆ. ಇನ್ನು ಜರ್ಮನಿಯವರ ಕಷ್ಟವು ಬಹಳ ಹೆಚ್ಚಾಗುವಂತಾಯಿತು. ಅವರು ಪಶ್ಚಿಮದಲ್ಲಿ ಫ್ರಾನ್ಸು-ಇಂಗ್ಲೆಂಡುಗಳನ್ನೂ, ಪೂರ್ವದಲ್ಲಿ ರಷ್ಯನರನ್ನೂ ಏಕಕಾಲದಲ್ಲಿ ಯುದ್ಧಮಾಡಬೇಕಾಗಿದೆ. ಇದುವರೆಗೆ ಕಳೆದ ೪೦ ವರ್ಷಗಳಿಂದಲೂ ಜರ್ಮನಿಯವರು ಸೇನಾಬಲ-ನೌಕಾಬಲ-ಶಸ್ತ್ರಗಳಿಕೆ-ಮೊದಲಾದುವುಗಳಲ್ಲಿ ಬಹಳ ಉನ್ನತಿಯನ್ನು ಹೊಂದಿರುವರೆಂದು ಭಾವಿಸಲ್ಪಟ್ಟಿದ್ದರು. ಅವರ ಭೂಸೇನೆಯ ಪ್ರಬಲತೆಯು ಅದ್ವಿತೀಯವೆಂದು ಹೇಳಲ್ಪಡುತ್ತಿದ್ದಿತು. ಅವರ ಆಕಾಶವಿಮಾನಗಳು ಎಲ್ಲರಿಗಿಂತಲೂ ಮಿಗಿಲಾದವೆಂಬ ಪ್ರತೀತಿಯಿದ್ದಿತು. ಆದರೆ ಭೂಯುದ್ಧ-ಆಕಾಶಯುದ್ಧಗಳಲ್ಲಿ ಜರ್ಮನಿಯವರು ಇದುವರೆಗೂ ತಮ್ಮ ಆ ಹೆಸರುವಾಸಿಯನ್ನು ಉಳಿಸಿಕೊಂಡಂತೆ ಕಾಣಲಿಲ್ಲ. ಅನೇಕಕಡೆಗಳಲ್ಲಿ ಹಲವುಕಡೆ ಪರಾಜಯವೇ ಸಂಭವಿಸಿದೆ. ಇನ್ನು ಜಲಯುದ್ಧದ ಫಲವು ಹೇಗೋ ನೋಡಬೇಕು. ಇದುವರೆಗೂ ಅದು ಕ್ರಮವಾಗಿ ನಡೆದ ಸುದ್ದಿಯು ಬಂದಿಲ್ಲ. ಜರ್ಮನಿಯವರಿಗೆ ಜಲಯುದ್ಧವೆಂಬುದು ಅತ್ಯಂತನೂತನವಾದುದು. ಇಂಗ್ಲೆಂಡಿನವರಿಗೋ ಕಳೆದ ೫೦೦ ವರ್ಷಗಳಿಂದ ಅತಿಶಯವಾದ ಪ್ರಾವೀಣ್ಯವು ದೊರೆಕೊಂಡಿದೆ. ಅದರಲ್ಲಿ ಇಂಗ್ಲೆಂಡಿಗೆ ಸರಿದೂಗುವರು ಯಾರೂ ಇಲ್ಲ. ಮಿಗಿಲಾದವರೆಂದು ಹೇಳಬಹುದು. ಜರ್ಮನಿಯವರ ಭೂಸ್ಯಾರಾಕಾರ ಯುದ್ಧಕೌಶಲ್ಯವೇ ನೂಕಿ ಮಟ್ಟಾಗುತ್ತಿರುವಾಗ ನೂತನವಾಗಿ ಕಲಿತಿರುವ ಜಲಯುದ್ಧದ ಫಲವನ್ನು ಹೇಳುವುದೇನಿದೆ? ಅಂತೂ ೧-೨ ವಾರಗಳೊಳಗೆ ಅವರ ಪುಣ್ಯಾವೂ ಗೊತ್ತಾದೀತು.

ಒಂದು ಶತಮಾನದಿಂದ ಹಿಂದೆ ಇಂಗ್ಲೆಂಡು-ಫ್ರಾನ್ಸುಗಳಿಗೆ ಕದನವಿದ್ದಿತು. ಈಚೆಗೆ ಅದು ತಗ್ಗುತ್ತ ಬಂದು, ಗತಿಸಿದ ಎಡ್ವರ್ಡ್ ಚಕ್ರವರ್ತಿಗಳ ಕಾಲದಲ್ಲಿ ಎರಡು ದೇಶದಲ್ಲಿ ಮೈತ್ರಿಯು ಹೆಪ್ಪುಗಟ್ಟಿತು. ಈಗಿನ ಜಾರ್ಜ್‌ಸಾರ್ವಭೌಮರ ಕಾಲದಲ್ಲಿ ಅದು ಮತ್ತಷ್ಟು ಗಟ್ಟಿಯಾಯಿತು. ಜಾರ್ಜ್ ಸಾರ್ವಭೌಮರು ಪ್ರತ್ಯಕ್ಷವಾಗಿ ಫ್ರಾನ್ಸಿಗೆ ಬೆನ್ನೆತ್ತಿ ಹೋಗಿದ್ದರು. ಅಲ್ಲಿನ ಪ್ರಜೆಗಳು ಆಗ ಅಮಿತಾನಂದವನ್ನೂ ಮೈತ್ರಿಯನ್ನೂ ವ್ಯಕ್ತಪಡಿಸಿದರು. ಆದರೆ ಇಷ್ಟುಬೇಗನೆ ಫ್ರಾನ್ಸಿನವರಿಗೆ ಇಂಗ್ಲೆಂಡು ತನ್ನ ಸ್ನೇಹಸಹಾಯಕಾರ್ಯಗಳನ್ನು ತೋರಿಸಬೇಕಾಗಿ ಬರುವುದೆಂದು ಯಾರೂ ನಿರೀಕ್ಷಿಸಿರಲಿಲ್ಲ. ಈಗಿನ ಯುದ್ಧದಲ್ಲಿ ಇಂಗ್ಲೆಂಡಿನವರು ಅಂಗವಾಗಿ ಸೇರುವುದಕ್ಕೆ ಫ್ರಾನ್ಸಿನವರಲ್ಲಿರುವ ಸ್ನೇಹವು ಪ್ರಮುಖ ಸಹ ಕಾರಣವಾಗಿದ್ದಿತು. ಇದರಿಂದ ಇಂಗ್ಲೆಂಡು ಫ್ರಾನ್ಸಿಗೆ ತಮ್ಮ ಸೈನ್ಯವನ್ನು ಸಹಾಯಕ್ಕಾಗಿ ಕಳುಹಿಸಿಕೊಡಲು, ಆ ಸೇನೆಯ ಅಧಿಪತಿಯ ವಿಷಯದಲ್ಲಿ ಫ್ರೆಂಚರು ಅಸಾಧಾರಣವಾದ ಮರ್ಯಾದೆಯನ್ನೂ ಪ್ರೀತಿಯನ್ನೂ ಸಲ್ಲಿಸಿ, ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಈಗ ಇಂಗ್ಲೆಂಡಿನವರು ಮಾಡಿದ ಸಹಾಯದಿಂದ ಫ್ರಾನ್ಸಿಗೆ ಮಾತ್ರ ಉಪಕಾರವಾಗಲಿಲ್ಲ; ಲೋಕಕ್ಕೇ ಉಪಕಾರವಾಯಿತೆಂದು ಹೇಳಬಹುದು. ಇಂಗ್ಲರು ಈ ಕೈವಾರಿಕದಿಂದ ಫ್ರೆಂಚರ ಮನಸ್ಸು ಬಹು ಧೀಕರವಾಗಿ ಊಹಿಸುವುದಕ್ಕೂ ಕೂಡದ ಶೋಭನವಾಗಿ ಹೋಗುತ್ತಿದ್ದಿತು. ಕಳೆದವಾರದ ವರ್ತಮಾನಗಳಲ್ಲಿ ಫ್ರೆಂಚರು ತಮ್ಮ ಎಲ್ಲೆಯ ಮೂಲ ಜರ್ಮನಿದೇಶದೊಳಕ್ಕೆ ನುಗ್ಗಿ ಮುಂದೆಮುಂದೆ ಸಾಗುತ್ತಾರೆಂದೂ, ಸರ್ವಿಯಾದವರು ಆಸ್ಟ್ರಿಯಾದೇಶಕ್ಕೆ ನುಗ್ಗಿ ಕೆಲ ಪಟ್ಟಣಗಳನ್ನು ವಶಪಡಿಸಿಕೊಂಡರೆಂದೂ, ಫ್ರಾನ್ಸಿನವರ ಆಕಾಶವಿಮಾನವು ಜರ್ಮನಿಯ ಆಕಾಶವಿಮಾನಗಳ ಶಾಲೆಯೊಂದಕ್ಕೆ ಸಿಡಿಗುಂಡುಗಳನ್ನು ಹಾಕಿ ಹಾಳ್ಮಾಡಿ ತಾನು ಶತ್ರುಗಳ ಗುಂಡಿನೇಟಿಗೆ ಸಿಕ್ಕದೆ ತಪ್ಪಿಸಿಕೊಂಡು ಹೋಯಿತೆಂದೂ, ಶತ್ರುಸೇನೆಯೂ, ಫ್ರಾನ್ಸು ಬೆಲ್ಜಿಯಮ್ಮುಗಳ ಸೇನೆಯೂ ಆಕ್ರಮಿಸಿಂದ ಹಿಡಿದು ಜರ್ಮನಿಯಿಂದ ತೆಗೆದಿರುವವರೆಗೆ ಎಂದರೆ ಫ್ರಾನ್ಸು ಬೆಲ್ಜಿಯಂ ಜರ್ಮನಿಗಳ ಎಲ್ಲೆಗಳೊಳಗೆ ಉತ್ತರದಿಂದ ದಕ್ಷಿಣವಾಗಿ ೩೫೦ ಮೈಲಿಗಳ ದೂರ ವ್ಯಾಪಿಸಿಕೊಂಡು ನಿಂತಿದೆಯೆಂದೂ, ಅದಕ್ಕೆ ಇದಿರಾಗಿ ಶತ್ರುಸೈನ್ಯವು ಆನೆಯಾಗುತ್ತಿದೆಯೆಂದೂ ಗೊತ್ತಾಗಿದೆ. ರಷ್ಯನರು ಸೇನಾಸನ್ನಾಹವನ್ನು ಮಾಡಿಕೊಂಡು ಜರ್ಮನಿಯ ಈಶಾನ್ಯಭಾಗದಿಂದ ಆ ದೇಶಕ್ಕೆ ನುಗ್ಗಿಬರುತ್ತಿದ್ದಾರೆಂದೂ ತಿಳಿಯುವುದು. ಈ ವಾರದಲ್ಲಿ ಮಹಾಸಂಗ್ರಾಮವಾರ್ತೆಗಳು ಬರುವವೆಂದು ನಿರೀಕ್ಷಿಸಿಗೆಯಿದೆ.

ಮಳೆ ಹೊಳೆಗಳಿಂದಾಗಿರುವ ವಿಪರೀತನಷ್ಟ.

ನಮ್ಮ ದೇಶದಲ್ಲಿ ಈ ಸಲ ಮಳೆ ಕಡಿಮೆಯಾಗಿದ್ದರೂ ನಮ್ಮ ನೆರೆದೇಶಗಳಲ್ಲಿ ಕಳೆದೆರಡು ವಾರಗಳಲ್ಲಿ ವಿಶೇಷವಾದ ಮಳೆಯಾಗಿದೆ. ಈ ಹೆಚ್ಚು ಮಳೆಯಿಂದ ಬೊಂಬಾಯಿ ಅಧಿಕೃತದ ಬೆಳಗಾಂ-ಧಾರವಾಡ ಬಿಜಾಪುರ ಜಿಲ್ಲೆಗಳಲ್ಲೂ ಮದ್ರಾಸು ಅಧಿಕೃತದ ಉತ್ತರದ ಜಿಲ್ಲೆಗಳಲ್ಲೂ ವಿಪರೀತನಷ್ಟಗಳುಂಟಾಗಿರುವುದಾಗಿ ಹೃದಯವಿದ್ರಾವಕವಾದ ಸುದ್ದಿಗಳು ಆತ್ಮೀಯ ಪತ್ರಿಕೆಗಳಲ್ಲಿ ಅನೇಕವಾಗಿ ಮುದ್ರಿತವಾಗಿದೆ. ಧಾರವಾಡದಲ್ಲಿ ವರ್ಷ ೧ಕ್ಕೆ ಸರಾಸರಿ ೩೦ ಅಂಗುಲ ಮಳೆಯಾಗುತ್ತಿರುವಲ್ಲಿ ಈ ವರ್ಷ ೧-೧॥ ತಿಂಗಳ ಕಾಲದೊಳಗೇ ಅಷ್ಟು ಅಂಗುಲದ ಮಳೆಯಾಗಿರುವುದು. ೨ ದಿನಗಳಲ್ಲಿ ಆದ ಅತಿವೃಷ್ಟಿಯು ೭ ಅಂಗುಲ ಪ್ರಮಾಣವಾಗಿದ್ದಿತು. ಇದರಿಂದ ಅಲ್ಲಿ ಮುಕ್ಕಾಲುಪಾಲು ಮನೆಗಳು ಮುರಿದು-ಬಿದ್ದು-ಸೋರಿ ಊರು ಹಾಳಾಗುವಂತಾಯಿತು. ಸುತ್ತುಮುತ್ತಿನ ಕೆರೆಕಟ್ಟೆಗಳು ಒಡೆದು ಕೋಡಿಬಿದ್ದು ಎತ್ತನೋಡಿದರತ್ತ ನೀರೇ ಆಯಿತು. ವ್ಯವಸಾಯಕ್ಕೆ ನೀರು ಮಿತಿಮೀರಿ ಪೈರು ಹಸಿಹಾಳಾಗುವಂತಾಯಿತು. ಆ ಜಿಲ್ಲೆಯ ಮಲಪ್ರಭಾ-ವರದಾ ಮೊದಲಾದ ನದಿಗಳೂ ಚಿಕ್ಕಪುಟ್ಟ ಹಳ್ಳಗಳೂ ಕೂಡ ದಡವಿಮೀರಿ ಹರಿದು ಕೆಲವು ಹಳ್ಳಿಗಳಿಗೆ ನೀರು ನುಗ್ಗಿ ವಿಶೇಷನಾಶವನ್ನು ಮಾಡಿದೆ.

ಮಲಪ್ರಭಾನದಿಯ ದಡದಲ್ಲಿರುವ ಸಂಗೊಳ್ಳಿಯ ಊರೊಳಗೆ ಸರಾಸರಿಯಲ್ಲಿ ನೀರು ಬಂದು ಸುಮಾರು ೪೦೦-೫೦೦ ಮನೆಗಳಲ್ಲಿ ೧೫-೨೦ ಮನೆಗಳು ಹೊರತು ಉಳಿದುವೆಲ್ಲಾ ಜಲಸಮಾಧಿಗೊಂಡವು. ಊರಲ್ಲಿ ತೆಪ್ಪಗಳಾದರೂ ನೀರು ಹರಿದಿತು. ಊರಿನಲ್ಲಿದ್ದ ಕಾಳು ಕಡ್ಡಿ ಮೊದಲಾದ ಪದಾರ್ಥಗಳೆಲ್ಲಾ ಕೊಚ್ಚಿಹೋಗಿ ಜನರು ನಿರ್ಗತಿಕರಾದರು. ಇದರಂತೆ ೭-೮ ಹಳ್ಳಿಗಳು ಹಾಳಾಗಿರುವುವು. ಅತ್ತ ಬಿಜಾಪುರದ ಜಿಲ್ಲೆಯಲ್ಲಿ ಶಿವಯೋಗಮಂದಿರವು ಇರುವ ಮಲಪ್ರಭೆಯ ತೀರದಲ್ಲಿರುವ ಬಂದಪ್ಪ ಆಲೂರು ಪ್ರವಾಹದ ತುಂಬ ಆಕ್ರಮದಲ್ಲಿ ವಿಶೇಷವಾದ ಧ್ವಂಸವು ಮಾಡಿರುವುದೆಂದು ಕೇಳುತ್ತೇವೆ. ನಿಸ್ಸಂಶಯವಾಗಿ ಅಲ್ಲಿನ ಪತ್ರವ್ಯವಹಾರವು ಬಂದಿಲ್ಲದ ಕಾರಣ ತಿಳಿಯುವವರಾಗಿಲ್ಲ.

ಕೃಷ್ಣಾನದಿಯ ಮಹಾಪ್ರವಾಹದಿಂದ ಈ ವರ್ಷ ಆಗಿರುವ ಅನರ್ಥವು ಅಭೂತಪೂರ್ವವಾಗಿದೆ. ಇದರಲ್ಲಿ ೬ ಅಷ್ಟು ಬಂದ ಮಹಾಪ್ರವಾಹವು ಕಳೆದ ೬-೭ ಮೈಲಿಯಗಲದಷ್ಟು ವಿಸ್ತರಿಸಿತು. ಊರು ಕೇರಿ ಕಾಡುಗಳೆಲ್ಲಾ ಮಹಾಸಾಗರದಂತೆ ನೀರು ತುಂಬಿಕೊಂಡು, ಅನೇಕಗ್ರಾಮಗಳೂ ಕೆರೆಕಟ್ಟೆಗಳು ಒಡೆದು ಕೆಳಗಿನ ಕೆರೆಗಳು ಹಾಳಾಗಿ, ಕೃಷ್ಣಾ ಗುಂಟೂರು ಜಿಲ್ಲೆಗಳೊಳಗೆ ಮಾಡಿರುವ ಅನರ್ಥವು ಬಹಳ ಭೀಕರವಾಗಿರುವುದು. ಆ ಜಿಲ್ಲೆಗಳ ಕೆಲ ತಾಲ್ಲೂಕುಗಳ ಜನರೆಲ್ಲಾ ಮನೆ ಮಠ ದನ ಕರು ಮೊದಲಾದವುಗಳನ್ನೆಲ್ಲಾ ಕಳೆದುಕೊಂಡು ಇನ್ನು ೧ ಶತಮಾನದವರೆಗೂ ಚೇತರಿಸಿಕೊಳ್ಳಲಾರದ ಸ್ಥಿತಿಗೆ ಬಂದಿರುತ್ತಾರೆ. ಆ ವಿಪತ್ತಿನ ತಾತ್ಕಾಲಿಕ ಸಹಾಯಾರ್ಥವಾಗಿ ಪ್ರಜೆಗಳೂ ಸರ್ಕಾರದವರೂ ಪ್ರಗಣೆಯನ್ನು ಕೂಡಿಸುತ್ತಿರುವರು.

ಕುರುವಿಜಯ.

ನಾಲಿಗೆಯೆರಡೋ? ಎಡಬಿಟ್ಟಿಕೆಯೋ?

ಕುರುವಿಜಯದ ಆಗಸ್ಟ್ ತಾ॥ ೧೭ ರ ಸಂಚಿಕೆಯಲ್ಲಿ “ಅಭಿಲಾಷೆ” ಎಂಬ ಶಿರೋನಾಮದಿಂದ ಯಾರೋ ಮಹಾಶಯರು ಮಾಡಿದ ಪ್ರಶ್ನೆಗೆ ಆ ಪತ್ರಿಕಾಕರ್ತರು “ಕುರುವಿಜಯ” ಎಂಬ ಹೆಸರಿಗೆ “ಈ ಪತ್ರಿಕೆಯು ಓದುವ ಮಹಾಶಯರೆಲ್ಲರಿಗೂ ವಿಜಯವನ್ನು ಉಂಟುಮಾಡಲಿ ಎಂದು ಭಗವಂತನನ್ನು ಜಯಘೋಷದಿಂ ಪ್ರಾರ್ಥಿಸುವುದೇ ನಮ್ಮ ಪತ್ರಿಕೆಯ ಹೆಸರಿನ ವ್ಯಾಖ್ಯಾನ” ವೆಂದು ಬರೆದಿರುವರು. ಮತ್ತೂ ಮೈಸೂರ್ ಸ್ಟಾರ್-ಸಾಕ್ಷಿ, ಇವುಗಳ ಅರ್ಥವೇನೆಂದು ಕೇಳಲು ಧೈರ್ಯವಿಲ್ಲದೆ, ಆ ಹೆಸರಿನ ಅರ್ಥಕ್ಕೆ ತಕ್ಕ ಗುಣವು ಅವುಗಳಲ್ಲಿಲ್ಲವೆಂದು ದೈನ್ಯವಾದ ಮಾತುಗಳನ್ನು ಬರೆದು ಬಿಟ್ಟುಕೊಂಡಿರುವರು.

ಹೆಸರಿಗೆ ತಕ್ಕ ಗುಣವಿಲ್ಲವೆಂದು ಮಾಡುವ ಆಕ್ಷೇಪಕ್ಕೂ ಹೆಸರಿಗೆ ಅರ್ಥವೇ ಇಲ್ಲವೆಂದು ಮಾಡಲ್ಪಡುವ ಆಕ್ಷೇಪಕ್ಕೂ ವ್ಯತ್ಯಾಸವೇ ಇಲ್ಲವೆಂದು ಆ ಲೇಖಕರು ತಿಳಿದಿರುವರು. ಅದು ತಿರಲಿ. ಹಿಂದೆ ಆ ಹೆಸರಿಗೆ ಧರಖಂಡದವರ ವಿಜಯವೆಂದು ಆ ಪತ್ರಿಕೆಯವರ ಎಡಿಟರೇ ಅರ್ಥವನ್ನು ಹೇಳಿದ್ದರು. ಈಗ ಮತ್ತೊಂದು ತೆರದ ಅರ್ಥವನ್ನು ಹೇಳಿ, ಅದರ ಕೆಳಗೂ “ಮಿ” ಎಂದು ತಮ್ಮ ಹೆಸರಿನಾಕ್ಷರವನ್ನು ಹಾಕಿದ್ದಾರೆ. ಇದರಿಂದ ಒಂದು ಹೆಸರಿಗೆ ಅರ್ಥವನ್ನು ಎರಡು ತೆರನಾಗಿ ಹೇಳುವ ನಾಲಿಗೆ ಒಂದೇ ನಾಲಿಗೆಯೋ? ಅಥವಾ ಎರಡು ನಾಲಿಗೆಗಳೋ? ಇಲ್ಲವೆ ಆ ಅರ್ಥವನ್ನು ಹೇಳಿದ ಎಡಿಟರೇ ಬೇರೆ, ಈ ಅರ್ಥವನ್ನು ಹೇಳಿದ ಎಡಿಟರೇ ಬೇರೆಯೆ ಎಂದು ಭಾವಿಸಬೇಕೋ ತಿಳಿಯಲಿಲ್ಲ. ಹೋಗಲಿ. ಈಗ ಮಾಡಿರುವ ಅರ್ಥವಾದರೂ ಏನು? ವಿಜಯವನ್ನುಂಟುಮಾಡು ಎಂಬ ಅರ್ಥವು ಕೂಡ ಆ ಹೆಸರಿನಿಂದ ಆಗುವುದಿಲ್ಲ. ಹಾಗೆ ಅರ್ಥವಾಗಬೇಕಾದರೆ “ಕುರುವಿಜಯಂ” ಎಂದಿರಬೇಕಾಗಿದ್ದಿತು. ಕುರುವಿಜಯ ಎಂಬಕಡೆ ವಿಜಯ ಶಬ್ದೋತ್ತರದಲ್ಲಿ ದ್ವಿತೀಯಾಪ್ರತ್ಯಯವೇ ಇಲ್ಲದಿರುವುದರಿಂದ, ಇದು ಬಟ್ಲರ್ ಇಂಗ್ಲಿಷಿನಂತಾಯಿತು. ಆದುಕಾರಣ ಈ ಅರ್ಥವೂ ಒಪ್ಪದು. ಪತ್ರಿಕೆಯ ಎಡಿಟರು ಹೀಗೆ ಅರ್ಥವನ್ನು ಒಂದರಮೇಲೊಂದು ತೆರನಾಗಿ ಹೇಳುವುದನ್ನು ನೋಡಿದರೆ, “ಇತ್ಯಪಲುಕೂಯಂಗಾ” ಎಂಬ ಕವಿತೆಕ್ಕೆ ಅರ್ಥವನ್ನು ಹೇಳಲು ವಿದ್ಯಾರ್ಥಿಯು ತಡಕಾಡಿದುದು ಪುನಃಪುನಃ ಸ್ಮರಣೆಗೆ ಬರುತ್ತದೆ. “ಪ್ರಾಸಕರೆದ ಅರ್ಥವನ್ನು ಹೇಳಲು ಇನ್ನೆಷ್ಟು ನಾಲಿಗೆಗಳು ಮುಂದೆ ಬರುವುವೋ ನೋಡಬೇಕು.”

ಈ ನಡುವೆ ಮೈಸೂರಿನ ಮಧುರವಾಣಿಯು “ಕುರುವಿಜಯ ಎಂಬ ಕುರುಬರ ಪತ್ರಿಕೆ” ಎಂದು ಹೆಸರಿಡಲು ಪ್ರಯತ್ನವಾಗಿದೆಯೆಂದು ಇದರ ವಿಷಯವಾಗಿ ನುಡಿದಿದ್ದಿತು. ಅದು ಸುಳ್ಳೆಂದು ಈಗಿನ ವಿದ್ವಮಾನದಿಂದ ತಿಳಿಯಬೇಕಾಗಿದೆ.

ಈ ಪತ್ರಿಕೆಯ ಉದಯವೂ, ಏಳ್ಗೆಯೂ ನಮಗೆ ಸಂತೋಷಕರವೇ. ಆದರೆ ಉದ್ದೇಶಕ್ಕೆ ತಕ್ಕ ಸಾರ್ಥಕವಾದ ಹೆಸರಿಲ್ಲವಲ್ಲ! ಎಂಬುದೊಂದೇ ಅದರ ವಿಷಯದಲ್ಲಿ ನಮ್ಮ ಚಿಂತೆ. ನಿಷ್ಫಲವಾದ ವ್ಯಾಖ್ಯಾನಗಳನ್ನು ಬರೆಯುವುದಕ್ಕಿಂತಲೂ ತಕ್ಕ ತಿದ್ದುಪಾಟನ್ನು ಹೆಸರಲ್ಲಿ ಮಾಡಿಕೊಂಡರೆ ಮೇಲು.

ಒಳದೇಶದ ವೃತ್ತಾಂತಗಳು.

ಕೌನ್ಸಿಲರುಗಳೂ, ಚೀಫ್ ಇಂಜನಿಯರೂ ಶನಿವಾರದ ದಿವಸ ರಾಜಧಾನಿಗೆ ದಯಮಾಡಿಸಿದರು.

—o—

ಪರಸ್ಪರ ಸಹಾಯಸಂಘದ ೪ ನೆಯ ಅಧಿವೇಶನವು ಬರುವ ಸೆಪ್ಟಂಬರ್ ತಾ॥ ೨೨ ರಲ್ಲಿ ರಾಜಧಾನಿಯಲ್ಲಿ ನಡೆಯುವುದು.

—o—

ಚೀಫ್ ಕೋರ್ಟಿನ ಡೆಪ್ಯುಟಿ ರಿಜಿಸ್ಟ್ರಾರರಾದ ಮ॥ ಟಿ. ವೆಂಕೋಬರಾಯರು ಆಕ್ಟಿಂಗ್ ರಿಜಿಸ್ಟ್ರಾರರಾಗಿ ನಿಯಮಿಸಲ್ಪಟ್ಟಿರುವರು.

—o—

ಮೈಸೂರ ಸೀಮೆಯ ಲಾಯರುಗಳೆಲ್ಲರೂ ತಮಗೆ ಕಕ್ಷಿಗಾರರಿಂದ ಫೀಯಾಗಿ ಬರುವ ಹಣದ ಲೆಕ್ಕವನ್ನು ಮಡಗಬೇಕೆಂದು ಚೀಫ್ ಕೋರ್ಟಿನವರಪ್ಪಣೆಯಾಗಿದೆ.

—o—

ಮೈಸೂರ ಡಿಸ್ಟ್ರಿಕ್ಟ್ ಹೆಲ್ತಾಫೀಸರಾದ ಡಾ॥ ಬಿ. ಕೃಷ್ಣರಾಯರಮೇಲೆ ತರಲ್ಪಟ್ಟಿದ್ದ ಕ್ರಿಮಿನಲ್ ವಿವಾದದಲ್ಲಿ ಡಾಕ್ಟರರವರು ನಿರ್ದೋಷಿಗಳಾಗಿ ಬಿಡಲ್ಪಟ್ಟರು.

—o—

ರಾಜಧಾನಿಯಲ್ಲಿ ಮೈಸೂರುಬ್ಯಾಂಕಿನ ಶಾಖೆಯನ್ನೇರ್ಪಡಿಸಲು ಮ॥ ಸಿ. ವೆಂಕಟಾಚಾರ್ಯರೆಂಬುವರೊಪ್ಪಿಕೊಂಡು, ಕಳೆದ ತಾ॥ ೧೯ ರ ಮಧ್ಯಾಹ್ನ ರಮಾವಿಲಾಸ ಅಗ್ರಹಾರದಲ್ಲಿರುವ ಆಜಿ ಶ್ರೀನಿವಾಸಯ್ಯಂಗಾರರವರ ಮನೆಯಲ್ಲಿ ಸ್ಥಾಪಿಸಿದರು. ಇದರ ಆರಂಭೋತ್ಸವವು ಡಿ॥ ಕಮಾಪತಿರ ಮ॥ ಸುಬ್ರಹ್ಮಣ್ಯರವರ ಅಧ್ಯಕ್ಷತೆಯಲ್ಲಿ ಜರುಗಿಸಲ್ಪಟ್ಟಿತು. ಆಗ್ಯೆ ಇಲ್ಲಿಯ ವರ್ತಕರೂ, ಇತರ ದೊಡ್ಡಮನುಷ್ಯರೂ ನೆರೆದಿದ್ದರು. ದೊಡ್ಡದೊಡ್ಡ ಮುಲ್ತಾನಿ ಸೇಟುಗಳು ಮದ್ರಾಸುಬ್ಯಾಂಕು ರಾಜಧಾನಿಯಿಂದ ಹೋದಮೇಲೆ ಇಲ್ಲಿಯ ವರ್ತಕರ ಲೇವಾದೇವಿಗೆ ಬಹಳ ತೊಂದರೆಯಾಗಿದ್ದಿತು. ಮ॥ ಸಿ. ವೆಂಕಟಾಚಾರ್ಯರು ಮೈಸೂರುಬ್ಯಾಂಕಿನ ಶಾಖೆಯನ್ನು ಸ್ಥಾಪಿಸಿದುದರಿಂದ ಎಲ್ಲರಿಗೂ ಬಹಳ ಸಂತೋಷವಾಗಿರುವುದು; ಅವರ ಪ್ರಯತ್ನವು ಸಫಲವಾಗಲೆಂದು ಕೋರುತ್ತೇವೆ.

“ಗ್ರಾಮಾಭಿವೃದ್ಧಿ ಸಂಘಗಳು” ಸರ್ಕಾರಿ ಅಧಿಕಾರಿಗಳ ಪ್ರೋತ್ಸಾಹವು.

ದಾವಣಗೆರೆ ತಾಲ್ಲೂಕು ಆನಜಿ ...ಗ್ರಾಮಕ್ಕೆ ತಾರೀಖು ೧೮-೮-೧೪ ನೇ ಶುಕ್ರವಾರದ ದಿವಸ ದಾವಣಗೆರೆ ಹಾ॥ ಸಬ್ ಡಿವಿಜನ್ ಆ॥ ಸಿ. ವಿ. ಟಿ. ಚೊಕ್ಕಣ್ಣ ಅಯ್ಯಂಗಾರ್‌ರವರು, ಚಿತ್ರದುರ್ಗ ಡಿ॥ ಸ್ಯಾನಿಟರಿ ಆಫೀಸರು ಮತ್ತು ಅಮಲ್ದಾರ್ ಮ॥ ಕೆ. ವೇದಾಂತಯ್ಯಂಗಾರ್‌ರವರು [illegible] ದಯಮಾಡಿ ಗ್ರಾಮದ [illegible] “ಗ್ರಾಮಾಭಿವೃದ್ಧಿ ಸಂಘದವರ” [illegible] ಅಧಿಕಾರಿಗಳನ್ನು [illegible] ವೃದ್ಧಿ ಸಂಘದ ಮಂದಿರಕ್ಕೆ [illegible]

S.U 54 ಸಂಪುಟ- 27.

ಯುದ್ಧದ ಭವಿಷ್ಯತ್ತು.

ಪಾಶ್ಚಾತ್ಯಜ್ಯೋತಿಷ್ಕರಲ್ಲಿ ಒಬ್ಬರಾದ ಲಿಯೋಕೆಂಡಾಲ್ ಎಂಬುವರು ಈಗಿನ ಯುದ್ಧದ ಭವಿಷ್ಯತ್ತನ್ನು ಈಕೆಳಗೆ ಕಂಡಂತೆ ಗುಣಿತದ ಮೂಲಕ ನಿರ್ಣಯಿಸಿ ಹೇಳಿರುತ್ತಾರೆ—" ಪಶ್ಚಿಮಾರ್ಧಗೋಳಕ್ಕಿರುವ ಗ್ರಹಚಾರ ಸ್ಥಿತಿಯನ್ನು ಪರಿಶೀಲಿಸಿದರೆ, ಈ ಯುದ್ಧದೋಷವು ದೀರ್ಘಕಾಲ ಪರ್ಯಂತ ವಿಸ್ತರಿಸಿಕೊಂಡಿರುವುದೆಂದು ಹೇಳಲು ಅವಕಾಶವಿಲ್ಲ.

ಜರ್ಮನಿ

ಜರ್ಮನಿಗೆ ಆದಿಯಲ್ಲಿ ಸ್ವಲ್ಪ ಜಯಪ್ರಾಪ್ತಿಯು ಉಂಟಾಗಬಹುದು, ಆದರೆ ಅದು ಅಷ್ಟು ಪ್ರಾಮುಖ್ಯವನ್ನೈದಲಾರದು. ದೇಶದೊಳಗೆ ದ್ರವ್ಯಸಂಬಂಧವಾದ ವೈಕಲ್ಯವು ಹೆಚ್ಚು ಹಾಹಾಕಾರವನ್ನು ಹುಟ್ಟಿಸುವುದು. ಆದರಿಂದ ಈ ಯುದ್ಧಾಭಿನಿವೇಶವು ವಿರಮಿಸುವುದು. ಜರ್ಮನಿ ಪ್ರಜೆಗಳು ಅಂತಃಕಲಹದಿಂದ ತುಂಬಿಹೋಗುವರು. ಆದರಿಂದ ಈ ಸಾಮ್ರಾಜ್ಯಕ್ಕೆ ಒಳಗೂ ಹೊರಗೂ ವಿನಾಶವು ಪ್ರಾಪ್ತವಾಗುವುದು. ಈ ಕ್ಷೋಭೆಯು ಮೊದಲಿಂದಲೂ ಮೊರೆತನದ ನಿರಾಕರಣೆಯ ಕಡೆಗೆ ತಿರುಗುವುದು. ಕಡೆಗೆ ರಾಜಧ್ವಂಸನದಲ್ಲಿ ಪರಿಣಾಮಗೊಳ್ಳುವುದು. ಚಕ್ರವರ್ತಿಯ ಜಾತಕದಲ್ಲಿ ದುಷ್ಟಗ್ರಹಚಾರವು ವಿಶೇಷವಾಗಿದೆ.

ರಷ್ಯಾ.

ಯುದ್ಧಸಂರಂಭಕ್ಕೆ ಅಧಿಪತಿಗಳಾದ ಗ್ರಹಗಳು ರಷ್ಯಾರಾಜ್ಯಕ್ಕೆ ಹೆಚ್ಚು ಅನುಕೂಲಗಳಾಗಿವೆ. ಫ್ರಾನ್ಸ್‌ರಾಜ್ಯಕ್ಕೆ ಹಾಗಿಲ್ಲ. ಜರ್ಮನಿಯಮೇಲೆ ಬದ್ಧದ್ವೇಷವುಳ್ಳುವುಗಳು ಈ ರಷ್ಯಾ—ಫ್ರಾನ್ಸುಗಳೇ.

ಫ್ರಾನ್ಸು.

ಫ್ರೆಂಚ್ ಸೇನಾಪಿವರ್ಗಕ್ಕೆ ಈ ತಿಂಗಳ ಕೊನೆಯಲ್ಲೂ, ಸೆಪ್ಟಂಬರ್ ತಿಂಗಳ ಮೊದಲ ಕೆಲದಿನಗಳಲ್ಲೂ ಸ್ವಲ್ಪ ಜೀರ್ಣತೆಯು ತಪ್ಪದು. ಆದರೆ ಬಳಿಕ ಅದಕ್ಕೆ ಉತ್ತಮವಾದ ತಾರಾಬಲವು ಪ್ರಾಪ್ತವಾಗುವುದೆಂದು ತೋರಿ ಬರುತ್ತದೆ.

ಆಸ್ಟ್ರಿಯಾ.

ಆಸ್ಟ್ರಿಯಾರಾಷ್ಟ್ರಕ್ಕೆ ಮುಂದೆ ಬಹಳ ದುರ್ದಿನಗಳಿರುವುವು. ಯೂರೋಪುರಾಷ್ಟ್ರ ಸಮೂಹದಲ್ಲಿ ಈ ಆಸ್ಟ್ರಿಯಾದ ತೇಜಸ್ಸು ಕ್ಷೀಣಿಸಿ ಹೋಗುವುದು.

ಇಟಲಿ.

ಇಟಲಿದೇಶವು ಪುನಃ ಶಸ್ತ್ರಪ್ರಸಂಗವನ್ನು ವಹಿಸುವುದು. ಅತಿಶಯವಾದ ಜಯವನ್ನೂ ಕೀರ್ತಿಯನ್ನೂ ವಿಸ್ತರಿಸುವುದು.

ಇಂಗ್ಲೆಂಡು.

ಇನ್ನು ಇಂಗ್ಲೆಂಡಿನ ದಶೆಯು ಹೇಗಿರುವುದೆಂದರೆ—ಈ ದೇಶಾದೃಷ್ಟವನ್ನು ರಕ್ಷಿಸುವ ಗ್ರಹಗಳೆಲ್ಲಾ ಶ್ರೇಯಃಪ್ರದಸ್ಥಾನದಲ್ಲಿವೆ. ಅನುಕೂಲಗ್ರಹ ವೀಕ್ಷಣೆಯು ಪೂರ್ಣವಾಗಿದೆ. ಇದುವರೆಗೆ ಕೆಟ್ಟವಾಗಿದ್ದ ನಕ್ಷತ್ರಗಳೂ ಕೂಡ ಈಗ ಉತ್ತಮರಾಶಿಯಲ್ಲಿ ಪ್ರವೇಶಿಸುತ್ತಿವೆ. ಇಂಗ್ಲೆಂಡು ತನ್ನ ಕೀರ್ತಿಗೌರವಗಳನ್ನೂ ಶಕ್ತಿವಿಶೇಷವನ್ನೂ ಚೆನ್ನಾಗಿ ಉಳಿಸಿಕೊಳ್ಳುವುದು.

ಭರತಖಂಡ.

ಭರತಖಂಡದ ಸಂಬಂಧವಾಗಿ ಗ್ರಹಗಳ ವಿಚಾರವನ್ನು ಪರಿಶೀಲಿಸಿದರೆ, ಈ ದೇಶದಲ್ಲಿ ಯಾವ ವಿಧವಾದ ಮಾರ್ಪೂ ಉಂಟಾಗುವಂತೆ ಕಾಣುವುದಿಲ್ಲ.

ಈಗಿನ ಆಂದೋಳನವು ನಿಷ್ಕಾರಣವಾಗಿ ಹುಟ್ಟಿರುತ್ತದೆ. ಬೇಗನೆ ಇದೆಲ್ಲವೂ ವ್ಯವಸ್ಥಿತವಾಗುವುದು. ಯೂರೋಪಿನ ಭೂಗೋಳ ಚಿತ್ರದಲ್ಲಿ ರಾಷ್ಟ್ರಗಳ ಎಲ್ಲೆಯನ್ನು ವ್ಯತ್ಯಾಸಮಾಡಿ ಬರೆಯಬೇಕಾಗುವುದು. ರಷ್ಯಾ—ಫ್ರಾನ್ಸು—ರಾಷ್ಟ್ರಗಳ ವೈಶಾಲ್ಯವು ವಿಸ್ತರಿಸುವುದು. ಜರ್ಮನಿರಾಜ್ಯವು ತನ್ನ ಮೂಲಭೂಮಿಯಲ್ಲೇ ಸ್ವಲ್ಪ ಕಳೆದುಕೊಳ್ಳುವುದು. ೪೦ ವರ್ಷಗಳ ಹಿಂದೆ ಕತ್ತಿಮೊನೆಯ ಶಕ್ತಿಯಿಂದ ಹಿಡಿದುಕೊಂಡಿರುವ ಆಲ್ಸೆಸ್ಸು—ಲೋರೈನ್ ಪಟ್ಟಣಗಳು ಮತ್ತೆ ಫ್ರೆಂಚರ ಸೊತ್ತಾಗಿ ಪರಿಣಮಿಸುವುವು. ಆಸ್ಟ್ರಿಯಾದ ಹಣಬರಹವು ಚೆನ್ನಾಗಿಲ್ಲ. ಈ ಯುದ್ಧರೋಗವು ನಿವಾರಿತವಾಗುವುದರೊಳಗೆ ದೇಶವೆಲ್ಲಾ ನಾನಾವಿಧವಾದ ಉಪಟಲದಿಂದ ಬೆಂಡಾಗುವುದು. ಜರ್ಮನಿಗೆ ಅಪಜಯವು ತಪ್ಪದ ಫಲವು, ಅದು ಖಂಡಿತ. ಯುದ್ಧಸಂಬಂಧವಾದ ಜಾತಕಲಕ್ಷಣವನ್ನು ಪರಿಶೀಲಿಸಿದರೆ, ಸೂರ್ಯನು ತುಲಾರಾಶಿಯಿಂದ ವೃಶ್ಚಿಕರಾಶಿಯನ್ನು ಪ್ರವೇಶಿಸುವವರೆಗೂ ಶಾಂತಿಯು ಸಮನಿಸುವುದಿಲ್ಲ. ಆ ಶಾಂತಿಯೆಂಬುವುದು ಅಕ್ಟೋಬರ್ ತಿಂಗಳು ೩ ನೆಯ ವಾರದಲ್ಲಿ ಜರುಗುವುದು. ಈ ಯುದ್ಧಪ್ರಸಕ್ತಿಯು ಎಷ್ಟು ಆಕಸ್ಮಾತ್ತಾಗಿ ಉಂಟಾಯಿತೋ ಸಂಧಿನಿರ್ಧಾರಣವೂ ಕೂಡ ಅಷ್ಟು ಆಕಸ್ಮಾತ್ತಾಗಿಯೇ ಆಗುವುದು."

೧೮೫೪ ರಿಂದೀಚೆಗೆ ನಡೆದ ಮುಖ್ಯಯುದ್ಧಗಳಲ್ಲಾದ ಪ್ರಾಣ ಧನ ನಷ್ಟಗಳು:—

ಯುದ್ಧ	ಇಸವಿ	ಪ್ರಾಣನಷ್ಟ	ಧನನಷ್ಟ ರೂ.
ಕ್ರಿಮಿಯನ್	೧೮೫೪	೭೮೫೦೦೦	೫೧೦೦೦೦೦೦೦
ಇಟಲಿಯನ್	೧೮೫೯	೪೫೦೦೦	೧೫೦೦೦೦೦೦೦
ಸ್ಲೆಸ್ವಿಗ್ ಹಾಲ್ಸ್ಟೀನ್	೧೮೬೪	೩೫೦೦	೩೫೦೦೦೦೦೦
ಅಮೆರಿಕದ ಸಿವಿಲ್ ಯುದ್ಧ	೧೮೬೧-೫	...	...
ಉತ್ತರದ ಸ್ಟೇಟ್ಸ್	...	೨೮೧೦೦೦	೯೨೦೦೦೦೦೦೦೦
ದಕ್ಷಿಣದ ಸ್ಟೇಟ್ಸ್	...	೫೧೯೦೦೦	೪೦೦೦೦೦೦೦೦೦
ಪ್ರಷ್ಯಾ-ಆಸ್ಟ್ರಿಯಾ-ಇಟಲಿ	೧೮೬೬	೪೫೦೦೦	೩೩೦೦೦೦೦೦೦
ಫ್ರಾಂಕೋ-ಜರ್ಮನ್	೧೮೭೦-೧	೨೯೦೦೦೦	೩೧೬೦೦೦೦೦೦೦ ಗಾರಂಟಿ ಹಣ ಸೇರಿ
ರಷ್ಯ-ಟರ್ಕಿ	೧೮೭೭	...	೧೨೫೦೦೦೦೦೦೦ ರಷ್ಯದ ನಷ್ಟ
ಚೈನಾ-ಜಪಾನ್	೧೮೯೪	...	೬೦೦೦೦೦೦೦೦ ಜಪಾನಿನ ನಷ್ಟ
ಸ್ಪೇನ್-ಅಮೆರಿಕಾ	೧೮೯೮	...	೩೨೫೦೦೦೦೦೦
ಬೋಯರ್ ಆಫ್ರಿಕಾ	೧೮೯೯-೧೯೦೨	೯೦೦೦೦	೧೦೦೦೦೦೦೦೦೦
ರಷ್ಯ-ಜಪಾನ್	೧೯೦೪-೫	೫೫೫೦೦೦	೨೨೫೦೦೦೦೦೦೦

ಕಳೆದ ಬಾಲ್ಕನ್ ಯುದ್ಧದಲ್ಲಿ

ಬಲ್ಗೇರಿಯಾ ...	140000	1350000000
ಸರ್ವಿಯಾ ...	70000	750000000
ಗ್ರೀಸ್ ...	30000	375000000
ಮಾಂಟೆನಿಗ್ರೋ ...	8000	15000000
ತುರ್ಕಿ ...	100000	1200000000

೧೮೭೦ರಲ್ಲಿ ನಡೆದ ಯುದ್ಧದಲ್ಲಿ ಜರ್ಮನಿಗೆ ತಲೆಯೊಂದಕ್ಕೆ ೯|| ರೂ. ನಂತೆ ನಿತ್ಯದಲ್ಲೂ ವೆಚ್ಚವಾಗುತ್ತಿದ್ದಿತು. ಈಗಿನ ಯುದ್ಧವು ೬ ತಿಂಗಳವರೆಗೆ ನಡೆಯುವುದೆಂದಿಟ್ಟುಕೊಂಡರೆ ಜರ್ಮನರ ಕಡೆಯ ೪೦೦೦೦೦೦ ಜನರಿಗೆ ದಿನ ೧ಕ್ಕೆ ತಲೆಯೊಂದಕ್ಕೆ ೬|| ರೂಪಾಯಿಯಂತೆ ೫೪೦೦೦೦೦೦೦೦ ರೂ. ವೆಚ್ಚವಾಗುವುದಾಗಿ ನಿರೀಕ್ಷಿಸಲ್ಪಟ್ಟಿದೆ.

ಸೂಚನೆ.

ಮಹಾಗಣೇಶನ ಹಬ್ಬದ ಉದ್ದೇಶದಿಂದ ಪದ್ಧತಿಯ ಪ್ರಕಾರ ಮುಂದಣ ತಾ|| ೩೦—೮—೧೪ ರ "ಸ್ಟಾರ್" ಸಂಚಿಕೆಯು ಹೊರಡುವುದಿಲ್ಲವು.

ಮೈಸೂರ್ ಸ್ಟಾರ್.

೧೯೧೪ ನೆಯ ಆಗಸ್ಟ್ ತಾ|| ೨೩ನೆಯ ಭಾನುವಾರ.

ಮಹಾಯುದ್ಧ.

ಯುದ್ಧ! ಯುದ್ಧ!! ಯುದ್ಧ!!! ಎಂಬ ಮಾತು ಪ್ರಪಂಚದಮೇಲೆಲ್ಲಾ ಒಂದೇಸಮವಾಗಿ ಎಲ್ಲರ ಬಾಯಲ್ಲೂ ತುಂಬಿದೆ. ನಮ್ಮ ಪರಿಪಾಲಕರಾದ ಆಂಗ್ಲಸಾರ್ವಭೌಮರವರು ಈಗಿನ ಯುದ್ಧದಲ್ಲಿ ಭಾಗಿಗಳಾಗಿರುವುದರಿಂದ ನಮಗೂ ಈ ಯುದ್ಧದ ಸಂಬಂಧವು ಇದ್ದಹಾಗೆಯೇ ಆಗಿದೆ. ಆಂಗ್ಲಪ್ರಭುಗಳ ವಿಜಯವೇ ನಮ್ಮ ಸುಖಶಾಂತಿಗಳಿಗೆ ಸಾಧಕವಾದುದು. ಅದುಕಾರಣ, ಈ ಯುದ್ಧದ ಕಷ್ಟಸುಖಗಳೆಲ್ಲಾ ಭಾರತೀಯರಿಗೂ ಒಂದು ವಿಧವಾಗಿ ಹೊತ್ತಿರುತ್ತಿವೆಯೆಂದು ಹೇಳಬಹುದು. ಈ ಕಾರಣದಿಂದಲೇ ನಮ್ಮ ದೇಶದಲ್ಲಿರುವ ಸಕಲ ಸಾಮಂತರಾಜರುಗಳೂ, ಪ್ರಜಾಪ್ರಮುಖರೂ ತಮ್ಮ ಸರ್ವಸ್ವದಿಂದಲೂ ಆಂಗ್ಲಸಾಮ್ರಾಜ್ಯಕ್ಕೆ ಸಹಾಯಮಾಡಲು ಸಿದ್ಧರಾಗಿರುವೆವೆಂದು ಶ್ರುತಪಡಿಸಿಕೊಂಡಿದ್ದಾರೆ. ಸಮಯಬಿದ್ದರೆ ಹಾಗೆ ಮಾಡಲು ಸಿದ್ಧರಾಗಿಯೂ ಇದ್ದಾರೆ. ಈ ದೇಶದಲ್ಲಿ ಸಾಮಂತರಾಜರುಗಳಿಂದ ದೊರೆಯುವ ಸೈನ್ಯ ಮೊದಲಾದುವುಗಳನ್ನು ಯುದ್ಧಾಂಗಣಕ್ಕೆ ಕಳುಹಿಸಿಕೊಡುವ ಅವಶ್ಯಕತೆ ಬೀಳದೆ ಹೋಗಲಾರದು. ಅಂಥ ಸಮಯದಲ್ಲಿ ಯುದ್ಧದಲ್ಲಿ ಹತರಾದವರ ಸಂಬಂಧಿಗಳಿಗೆ ಸಹಾಯಮಾಡುವುದೇ ಮೊದಲಾದ ಕೆಲಸಗಳಿಗಾಗಿ ಬೇಕಾದ ಹಣವನ್ನು ಶೇಖರಿಸುವುದು ಅವಶ್ಯಕವಾಗಿರುವುದರಿಂದ ನಮ್ಮ ಪ್ರಿಯತಮರಾದ ವೈಸ್‌ರಾಯರು ಒಂದು ನಿಧಿಯನ್ನು ಕೂಡಿಸಲು ಏರ್ಪಡಿಸಿದ್ದಾರೆ. ಅದಕ್ಕೆ ಸಂಬಂಧಪಟ್ಟ ಅವರ ವಿಜ್ಞಾಪನಪತ್ರಿಕೆಯನ್ನು ಈ ಪತ್ರದ ಬೇರೊಂದು ಕಡೆಯಲ್ಲಿ ಮುದ್ರಿಸಿರುತ್ತೇವೆ. ಈ ನಿಧಿಶೇಖರದ ಕಾರ್ಯದಲ್ಲಿ ವೈಸ್ರಾಯರೇ ಅಧ್ಯಕ್ಷರಾಗಿಯೂ ನಮ್ಮ ಶ್ರೀಮನ್ ಮಹಾರಾಜರವರೇ ಮೊದಲಾದ ಅನೇಕ ಪ್ರಭುಗಳು ಸಭಿಕರಾಗಿಯೂ ಮಾಡಲ್ಪಟ್ಟಿದ್ದಾರೆ. ಸಮುಚಿತವಾದ ಈ ಪ್ರಯತ್ನದಿಂದ ಲಕ್ಷಾಂತರ ರೂ. ಗಳು ಸ್ವಲ್ಪ ಕಾಲದೊಳಗಾಗಿ ಕೂಡಿಹೋಗುವುದರಲ್ಲಿ ಅಡ್ಡಿಯಿಲ್ಲ. ಭಾರತೀಯರ ನಿಸರ್ಗಸಿದ್ಧವಾದ ರಾಜಭಕ್ತಿಯು ಬರೆಯಿಕ್ಕಿದಂತೆ ಆಂಗ್ಲಪ್ರಭುತ್ವದವರಿಗೂ ಆಂಗ್ಲಪ್ರಜೆಗಳಿಗೂ ಗೊತ್ತಾಗಿ, ಎಂದಿಗೂ ಮರೆಯದಂತೆ ಅವರ ಮನಸ್ಸಿನಲ್ಲಿ ನೆಲಸುವುದಕ್ಕೆ ಈಗಿನ ಸಮಯವು ದೈವಾಯತ್ತವಾದಂತೆ ಕಾಣಿಸುತ್ತದೆ. ಅದನ್ನು ಸಫಲಗೊಳಿಸುವಂತೆ ಭಾರತೀಯರೆಲ್ಲರೂ ನಡೆಯಲು ಒಮ್ಮುಖರಾಗಿರುವುದು ಅತ್ಯಂತ ಸಂತೋಷಪ್ರದವಾಗಿದೆ.

ಕಲ್ಕತ್ತಾ ಮೊದಲಾದ ಕೆಲ ಪಟ್ಟಣಗಳಲ್ಲಿರುವ ಬ್ಯಾರಿಸ್ಟರುಗಳೂ, ವಕೀಲರುಗಳೂ ಸ್ವತಃ ಯುದ್ಧಕ್ಕೆ ಹೊರಡಲು ಸಿದ್ಧರಾಗಿ ತಮ್ಮ ಅಭಿಪ್ರಾಯವನ್ನು ಗೌರ್ನಮೆಂಟಿಗೆ ಶ್ರುತಪಡಿಸಿದ್ದಾರೆ. ಈ ವಿಷಯದಲ್ಲಿ ಇವರು ತೋರಿಸಿರುವ ಸ್ವಾರ್ಥತ್ಯಾಗಪೂರ್ವಕವಾದ ರಾಜಭಕ್ತಿಯು ಅಭಿನಂದನೀಯವಾಗಿದೆ. ಆದರೆ ಅಹರ್ನಿಶಿಯೂ ಬುದ್ಧಿಕ್ಲೇಶದಲ್ಲಿ ತೊಡಗಿ, ನಿರ್ವೀರ್ಯರಾಗಿರುವ ವಕೀಲರ ಮಂಡಲಿಯು ಮಹೋನ್ಮತ್ತರಾದ ಶತ್ರುಸೈನಿಕರ ಮುಂದೆ ಏನನ್ನು ತಾನೇ ಮಾಡಬಲ್ಲುದು? ಇದು ಪುಸ್ತಕಗಳ ಮುಂದಿನ ಯುದ್ಧವೆ? ನ್ಯಾಯಾಧೀಶರ ಮುಂದಣ ವಾಗ್ಯುದ್ಧವೆ? ಇವರ ಲೇಖಿನಿಗಳು ಆಗ್ನ್ಯಸ್ತ್ರಗಳೆ? ಇವರ ನಾಲ್ಕೋಳಿನ ಕವಚಗಳು ವಜ್ರಕವಚಗಳೆ? ಎಂದಿಗೂ ಅಲ್ಲ. ಅದು ಕಾರಣ, ಇವರು ದೇಹಾಭಿಮಾನವನ್ನು ತೊರೆದು ತೋರಿಸಬೇಕಾದ ಆ ಪ್ರತ್ಯಕ್ಷ ಯುದ್ಧದ ಸಾಹಾಯ್ಯವನ್ನು ಮಾಡುವವೆಂಬುದಕ್ಕಿಂತಲೂ ಕುಳಿತಲ್ಲಿಯೇ ತಮ್ಮ ಆ ಅಭಿಮಾನವನ್ನೂ ರಾಜಭಕ್ತಿಯನ್ನೂ ಸ್ವಾರ್ಜಿತ ದ್ರವ್ಯವನ್ನು ಲೋಭವಿಲ್ಲದೆ ವೈಸ್ರಾಯರು ಕಲ್ಪಿಸಿರುವ ನಿಧಿಗೆ ಒದಗಿಸಿಕೊಡಲು ಭರತಖಂಡದ ಎಲ್ಲ ವಕೀಲರಿಗೂ ಮೇಲುಪಂಕ್ತಿಯನ್ನು ಹಾಕಿಕೊಟ್ಟು ನಡೆಯಿಸಿದರೆ ಸಮುಚಿತವಾಗಿರುವುದೆಂದು ಶ್ರುತಪಡಿಸುತ್ತೇವೆ.

ಭರತಖಂಡವೆಲ್ಲವೂ ಈ ವಿಷಮಸಮಯದಲ್ಲಿ ತಮ್ಮ ಪ್ರಭುಗಳ ಶ್ರೇಯಸ್ಸನ್ನು ಕೋರಿ ನಾನಾವಿಧದ ಸ್ವಾರ್ಥತ್ಯಾಗವನ್ನು ಮಾಡಲು ಸಿದ್ಧರಾಗಿರುವಾಗ, ನಮ್ಮ ದೇಶದ ಅನೇಕ ವರ್ತಕರು ಸ್ವದೇಶ ಸ್ವಜನಾಭಿಮಾನವಿಲ್ಲದ ಸ್ವಾರ್ಥಪರರಂತೆ ನಿಷ್ಕಾರಣವಾಗಿ, ಪದಾರ್ಥಗಳ ಬೆಲೆಯನ್ನು ಹೆಚ್ಚಿಸಿ, ಮಧ್ಯಮ ತರಗತಿಯ ಮತ್ತೂ ಕನಿಷ್ಠವರ್ಗದ ಜನರಿಗೆ ಬಹಳ ತೊಂದರೆಯನ್ನು ಮಾಡಿರುವ ವಿಷಯವು ಹೀನಕಾರ್ಯವಾಗಿರುತ್ತದೆ. ಸ್ವದೇಶದ ಸಾಮಗ್ರಿಗಳಿಗೆ ಈ ಯುದ್ಧದ ಸಂಬಂಧವನ್ನು ಹೇಳಿ ಬೆಲೆಯನ್ನು ಹೆಚ್ಚಿಸಲು ಕಾರಣವೇ ಇರುವುದಿಲ್ಲ. ವಿದೇಶವಸ್ತುಗಳು ಬರುವುದಕ್ಕೆ ತಕ್ಕೇರ್ಪಾಟನ್ನು ಸಾರ್ವಭೌಮ ಸರಕಾರದವರು ಮಾಡಿಯೂ ಮಾಡುತ್ತಲೂ ಇದ್ದಾರೆ. ಒಂದು ವೇಳೆ ಈಗಿನ ಯುದ್ಧವು ೨-೩ ತಿಂಗಳೊಳಗೆ ಮುಗಿಯದೆ ದೀರ್ಘಕಾಲ್ಯವಾಗಿಟ್ಟುಕೊಂಡರೆ ಪರದೇಶವಸ್ತುಗಳಿಗೆ ಅಭಾವವುಂಟಾಗಬಹುದೇ ಹೊರತು ಇಲ್ಲದಿದ್ದರೆ ಅವುಗಳಿಗೆ ಕೊರತೆಯೇನೂ ಸಂಭವಿಸಲಾರದು. ಭರತಖಂಡದಲ್ಲೂ ಇಂಗ್ಲೆಂಡಿನಲ್ಲೂ ನಾಣ್ಯಗಳಿಗೆ ಕೊರತೆಯೇನೂ ಇಲ್ಲವೆಂದು ಸರ್ಕಾರದವರು ಪ್ರಸಿದ್ಧಿಪಡಿಸಿದ್ದಾರೆ. ಸರ್ಕಾರದಲ್ಲಿ ಸವರನ್ನುಗಳ ಮತ್ತೂ ನೋಟುಗಳ ಬೆಲೆಯಲ್ಲಿ ಯಾವ ಹೆಚ್ಚು ಕಡಿಮೆಯೂ ಇಲ್ಲ. ಹೀಗಿದ್ದರೂ ಮಧ್ಯದ ವರ್ತಕರು ಜನರಿಗೆ "ಗಾಬರಿ" ಹುಟ್ಟಿಸಿ, ಸವರನ್ನುಗಳ ಬೆಲೆಯನ್ನು ಏರಿಸಿ, ನೋಟುಗಳ ಬೆಲೆಯನ್ನು ಕ್ಷೀಣಗೊಳಿಸಿ ವಂಚನೆಮಾಡುತ್ತಿರುವುದು ಅನ್ಯಾಯವಾಗಿದೆ. ಬೊಂಬಾಯಿ ಬಂಗಾಳಾ ಮೊದಲಾದ ಕಡೆಗಳಲ್ಲಿ ಸ್ಥಲಾಧಿಕಾರಿಗಳು ಪೇಟೆಗಳ ಮೇಲೆ ಹೊರಟು ವರ್ತಕರ ಈ ಅನ್ಯಾಯವನ್ನು ಸರಿಯಲ್ಲವೆಂದು ಬೋಧಿಸಿ ನಿಲ್ಲಿಸಿಬಿಟ್ಟಿದ್ದಾರೆ. ಅಲ್ಲೆಲ್ಲಾ ಪದಾರ್ಥಗಳ ಬೆಲೆಯು ಇಳಿದೂ ಇಳಿಯುತ್ತಲೂ ಇದೆಯೆಂದು ತಂತ್ರೀವಾರ್ತೆಗಳು ಹೇಳುತ್ತಿವೆ. ಇಂಥ ಏರ್ಪಾಟನ್ನು ಎಲ್ಲ ಸರ್ಕಾರದಧಿಕಾರಿಗಳೂ ಮಾಡುವುದವಶ್ಯಕವಾಗಿದೆ. ಸರ್ಕಾರದಿಂದ ಹೇಳಿಸಿಕೊಂಡು ಬಲಾತ್ಕಾರದಿಂದ ವರ್ತಕರು ತಮ್ಮ ಅನ್ಯಾಯವನ್ನು ತಿದ್ದಿಕೊಳ್ಳುವುದಕ್ಕಿಂತಲೂ ತಮ್ಮ ಸಹೋದರ ಪ್ರಜೆಗಳ ಹಿತಚಿಂತನೆಯ ಕಡೆಗೆ ಗಮನವಿತ್ತು ತಾವೇ ನಡೆಸಿಕೊಂಡರೆ ಸ್ವಜನಪ್ರೀತಿಯೂ ಉಳಿವುದು; ದೇವರೂ ಮೆಚ್ಚುವನು.

ಈಗಿನ ಯುದ್ಧಕ್ಕೂ ಪೂರ್ವಕಾಲದ ಯುದ್ಧಕ್ಕೂ ಸಂಬಂಧವೇ ಇಲ್ಲ. ಆಗ ಯುದ್ಧ ಸಂಭವಿಸಿತೆಂದರೆ ಊರುಕೇರಿಯ ಜನರೆಲ್ಲಾ ಗಂಟು ಮೂಟೆ ಕಟ್ಟಿ, ಕಾಡಿನ ಪಾಲಾಗಬೇಕಾಗುತ್ತಿದ್ದಿತು. ಶತ್ರುಗಳು ನುಗ್ಗಿದ ಊರುಗಳೆಲ್ಲಾ ಸ್ಮಶಾನವಾಗುತ್ತಿದ್ದಿತು. ದೇಶವೆಲ್ಲಾ ಹಾಳಾಗುತ್ತಿದ್ದಿತು. ಈಗಿನ ಸ್ಥಿತಿಯು ಹಾಗಿಲ್ಲ; ಯುದ್ಧವು ಧರ್ಮಯುದ್ಧವಲ್ಲದಿದ್ದರೂ, ವೈರಿಗಳು ಶತ್ರುದೇಶದಲ್ಲಾದರೂ ಪ್ರಜೆಗಳಿಗೆ ಹಿಂಸೆಯನ್ನು ಕೊಡುವುದು ಅನ್ಯಾಯವೆಂದು ಖಂಡಿಸಲ್ಪಟ್ಟಿದೆ. ಅದುಕಾರಣ ಯುದ್ಧಾಭಿಮಾನದೇವತೆಯ ಸಖಿಯರಂತೆ ಜತೆಗೆಕಾಲಿಕ್ಕುವ ರೋಗಕ್ಷಾಮವೆಂಬ ದೇವತೆಗಳಿಗೆ ದೇಶವು ಒಂದುವೇಳೆ ಈಡಾಗಬಹುದೇ ಹೊರತು ಮತ್ತಾವ ಪೀಡೆಯೂ ಸಂಭವಿಸುವುದು ವಿರಳ. ನಮ್ಮ ಭರತಖಂಡದಲ್ಲಿ ಪ್ರತ್ಯಕ್ಷಯುದ್ಧವು ಇಲ್ಲದಿರುವುದರಿಂದ ಅವೆರಡರ ಹಾವಳಿಯೂ ಪ್ರಕೃತದಲ್ಲಿ ನಮಗೆ ತಟ್ಟುವ ಸಂಭವವಿಲ್ಲ. ಅದುಕಾರಣ, ಎಲ್ಲ ವ್ಯವಹಾರಗಳನ್ನೂ ಭಾರತೀಯರು ಶಾಂತಿಯಿಂದ ನಡೆಯಿಸಿಕೊಂಡು ಹೋಗುವಲ್ಲಿ ಅಭ್ಯಂತರವೇನೂ ಇಲ್ಲ.

ಈ ಯುದ್ಧದ ಪರ್ಯವಸಾನವೇನೆಂಬುದನ್ನು ಈಗಲೇ ಊಹಿಸಿ ಹೇಳುವುದು ಅಸಾಧ್ಯ. ಜಯಾಪಜಯಗಳು ದೈವಾಯತ್ತವಾಗಿದ್ದರೂ, ಉಭಯಪಕ್ಷಗಳ ಸೇನಾಬಲ, ದ್ರವ್ಯಬಲ, ಸಾಧನಸಾಮಗ್ರಿಯಬಲ, ಸೇನಾನಿಗಳ ಯುಕ್ತಿಸಾಹಸಬಲ—ಮೊದಲಾದುವುಗಳನ್ನು ಕೂಡ ಜಯಾಪಜಯಗಳು ಸ್ವಲ್ಪಮಟ್ಟಿಗೆ ಅನುಸರಿಸಿಕೊಂಡಿರುತ್ತವೆ ಎಂಬ ಸಿದ್ಧಾಂತವನ್ನು ಹಿಡಿದು ಹೇಳುವುದಾದರೆ, ನಮ್ಮ ಆಂಗ್ಲಪ್ರಭುತ್ವದ ಪಕ್ಷಕ್ಕೇ ಜಯವಾಗುವುದು ಖಂಡಿತವೆಂದು ಹೇಳಬೇಕಾಗುತ್ತದೆ. ಈ ಪಕ್ಷದಲ್ಲಿ ಇಂಗ್ಲೆಂಡು-ಫ್ರಾನ್ಸು-ರಷ್ಯಾ-ಜಪಾನ್—ಎಂಬ ದೊಡ್ಡರಾಷ್ಟ್ರಗಳು ನಾಲ್ಕೂ, ಬೆಲ್ಜಿಯಂ-ಸರ್ವಿಯಾ-ಮಾಂಟಿನೀಗ್ರೋ ಎಂಬ ಸಣ್ಣರಾಷ್ಟ್ರಗಳೂ ಸೇರಿರುತ್ತಿವೆ. ಇದಿರುಪಕ್ಷದಲ್ಲಿ ಜರ್ಮನಿ-ಆಸ್ಟ್ರಿಯಾ-ಎಂಬ ಎರಡು ದೊಡ್ಡರಾಷ್ಟ್ರಗಳು ಮಾತ್ರ ಇರುತ್ತಿವೆ. ಅಲ್ಲದೆ, ನ್ಯಾಯಧರ್ಮಗಳ ಬಲವೂ ನಮ್ಮ ಪಕ್ಷಕ್ಕೇ ಇದೆ. ಜರ್ಮನಿಯವರು ಉದ್ಧತತನದಿಂದಲೂ ಪರೋತ್ಕರ್ಷಾಸಹಿಷ್ಣುತೆಯಿಂದಲೂ ಕಾಲುಕೆರೆದು ಜಗಳವನ್ನು ತೆಗೆದು ಪ್ರಪಂಚದ ಮೇಲೆ ಮಹದನರ್ಥಕ್ಕೆ ಕಾರಣಭೂತರಾಗಿರುವುದರಿಂದ, ಅನ್ಯಾಯ-ಅಧರ್ಮಗಳು ಅವರನ್ನು ಆಶ್ರಯಮಾಡಿಕೊಂಡಿವೆ. ಯುದ್ಧಾರಂಭವಾದಂದಿನಿಂದ ಇದುವರೆಗೆ ಬಂದಿರುವ ಸುದ್ದಿಗಳಲ್ಲಿ ಜರ್ಮನಿ-ಆಸ್ಟ್ರಿಯಾದವರಿಗೆ ಪರಾಜಯಗಳೂ, ಇದಿರುಪಕ್ಷದವರಿಗೆ ಜಯಗಳೂ ಆಗುತ್ತಿವೆಯೆಂದು ಗೊತ್ತಾಗಿರುವುದರಿಂದ ಜಯಲಕ್ಷ್ಮಿಯ ಒಲವು ಎತ್ತ ಕಡೆಗೆ ಇರುವುದೆಂಬುದು ತಿಳಿಯುತ್ತದೆ.

ಇದುವರೆಗೆ ಆದ ಯುದ್ಧಗಳಲ್ಲಿ ಸಣ್ಣಪುಟ್ಟವುಗಳೇ ಹೆಚ್ಚು. ೧-೨ ಕಡೆ ಮಾತ್ರ ೨೦ ಸಹಸ್ರದವರೆಗೆ ಸೇನೆಯು ಸೇರಿ ಕದನವಾಗಿದೆ. ಈಗ ಉಪಕ್ರಮವಾಗಿರುವ ಯುದ್ಧಗಳು ಮಹಾಸಂಗ್ರಾಮಗಳಾಗಿರುತ್ತಿವೆ. ಈಗಿನ ಮಹಾಭೂಯುದ್ಧದ ಸ್ಥಲವು ಜರ್ಮನಿ-ಫ್ರಾನ್ಸುಗಳ ಎಲ್ಲೆಯಲ್ಲಿರುತ್ತದೆ. ಇಂಗ್ಲೆಂಡು-ಫ್ರಾನ್ಸುಗಳ ಸೇನೆಯು ಆ ಯುದ್ಧಾಂಗಣಕ್ಕೆ ಬಂದು, ಸೇರುವುದಕ್ಕೆ ಇಷ್ಟುಕಾಲ ಹಿಡಿಯಿತು. ಇಷ್ಟರೊಳಗಾಗಿ ಜರ್ಮನಿಯವರು ಲುಕ್ಸೆಂಬರ್ಗ—ಬೆಲ್ಜಿಯಮ್ಮುಗಳ ಮೇಲೆ ಹಾದು ಫ್ರಾನ್ಸಿಗೆ ನುಗ್ಗಿ ಪ್ಯಾರಿಸ್‌ಪಟ್ಟಣಕ್ಕೆ ಮುತ್ತಿಗೆಹಾಕಬೇಕೆಂದು ಉದ್ದೇಶಮಾಡಿಕೊಂಡಿದ್ದಿತು. ಅದಕ್ಕಾಗಿ ೧೦ ಲಕ್ಷ ಸೇನೆಯನ್ನು ಆ ಕಡೆಗೆ ಹುಗಿಸಬೇಕೆಂದು ಯೋಚಿಸಿದ್ದಿತು. ಆದರೆ ಬೆಲ್ಜಿಯಮ್ಮಿನವರು ತಮ್ಮ ದೇಶದ ಎಲ್ಲೆಯಲ್ಲೇ ಜರ್ಮನಿಗೆ ಪ್ರತಿಭಟಿಸಿ, ಅವರ ಉದ್ದೇಶವನ್ನು ನಡೆಯಗೊಡಿಸದೆ ಹೋದುದು ಜರ್ಮನಿಗೆ ತನ್ನ ಬೆರಲನ್ನು ತಾನೇ ಕಡಿದುಕೊಳ್ಳುವಂತೆ ಮಾಡಿತು. ಈಗಲಾದರೊ ಫ್ರಾನ್ಸು-ಇಂಗ್ಲೆಂಡು ಸೇನೆಗಳು ಒದಗಿಬಿಟ್ಟುವು. ಇನ್ನು ಜರ್ಮನಿಯವರ ಕಷ್ಟವು ಬಹಳ ಹೆಚ್ಚಾಗುವಂತಾಯಿತು. ಅವರು ಪಶ್ಚಿಮದಲ್ಲಿ ಬೆಲ್ಜಿಯಂ-ಫ್ರಾನ್ಸು-ಇಂಗ್ಲೆಂಡುಗಳಮೇಲೂ, ಪೂರ್ವದಲ್ಲಿ ರಷ್ಯನರಮೇಲೂ ಏಕಕಾಲದಲ್ಲಿ ಯುದ್ಧಮಾಡಬೇಕಾಗಿದೆ. ಇದುವರೆಗೆ ಕಳೆದ ೩೦ ವರ್ಷಗಳಿಂದಲೂ ಜರ್ಮನಿಯವರು ಸೇನಾಬಲ-ವ್ಯಾಪಾರಬಲ-ಕೈಗಾರಿಕೆಯಬಲ—ಮೊದಲಾದುವುಗಳಲ್ಲಿ ಬಹಳ ಉನ್ನತಿಯನ್ನು ಹೊಂದಿರುವರೆಂದು ಭಾವಿಸಲ್ಪಟ್ಟಿದ್ದರು. ಅವರ ಭೂಸೇನೆಯು ಪ್ರಪಂಚದಲ್ಲಿ ಅದ್ವಿತೀಯವೆಂದು ಹೇಳಲ್ಪಡುತ್ತಿದ್ದಿತು. ಅವರ ಆಕಾಶವಿಮಾನಗಳು ಎಲ್ಲರಿಗಿಂತಲೂ ಮಿಗಿಲಾದುವೆಂಬ ಪ್ರತೀತಿಯಿದ್ದಿತು. ಆದರೆ ಭೂಯುದ್ಧ-ಆಕಾಶಯುದ್ಧದಲ್ಲಿ ಜರ್ಮನಿಯವರು ಇದುವರೆಗೂ ತಮ್ಮ ಆ ಹೆಸರುವಾಸಿಯನ್ನು ಉಳಿಯಿಸಿಕೊಂಡಂತೆ ಕಾಣಲಿಲ್ಲ. ಅವೆರಡರಲ್ಲೂ ಹಲವುಕಡೆ ಪರಾಜಯವೇ ಸಂಭವಿಸಿದೆ. ಇನ್ನು ಜಲಯುದ್ಧದ ಫಲವು ಹೇಗೋ ನೋಡಬೇಕು. ಇದುವರೆಗೂ ಅದು ಕ್ರಮವಾಗಿ ನಡೆದ ಸುದ್ದಿಯು ಬಂದಿಲ್ಲ. ಜರ್ಮನಿಯವರಿಗೆ ಜಲಯುದ್ಧವೆಂಬುದು ಅತ್ಯಂತನೂತನವು. ಇಂಗ್ಲಾಂಡಿಗಾದರೋ ಕಳೆದ ೫೦ ವರ್ಷಗಳಿಂದ ಅತಿಶಯವಾದ ಪ್ರಾವೀಣ್ಯವು ದೊರಕೊಂಡಿದೆ. ಅದರಲ್ಲಿ ಇಂಗ್ಲೆಂಡಿಗೆ ಸರಿದೂಗುವರು ಯಾರೂ ಇಲ್ಲ. ಮಿಗಿಲಾದುದೆಂದು ಹೇಳಲ್ಪಡುತ್ತಿದ್ದ ಜರ್ಮನಿಯವರ ಭೂವ್ಯಾಕಾಶ ಯುದ್ಧಕೌಶಲ್ಯವೇ ಮೂಲೆ ಮುಟ್ಟಾಗುತ್ತಿರುವಾಗ ಹೊಸದಾಗಿ ಕಲಿತಿರುವ ಜಲಯುದ್ಧದ ಫಲವನ್ನು ಹೇಳುವುದೇನಿದೆ? ಅಂತೂ ೧-೨ ವಾರಗಳೊಳಗೆ ಅದರ ಪರಿಣಾಮವೂ ಗೊತ್ತಾದೀತು.

ಒಂದು ಶತಮಾನದಿಂದ ಹಿಂದೆ ಇಂಗ್ಲೆಂಡು-ಫ್ರಾನ್ಸುಗಳಿಗೆ ಕಡುಹಗೆತನವಿದ್ದಿತು. ಈಚೆಗೆ ಅದು ತಗ್ಗುತ್ತ ಬಂದು, ಗತಿಸಿದ ಎಡ್ವರ್ಡ್‌ಚಕ್ರವರ್ತಿಗಳ ಕಾಲದಲ್ಲಿ ಅವೆರಡು ದೇಶದಲ್ಲಿ ಮೈತ್ರಿಯು ಹೆಪ್ಪುಗಟ್ಟಿತು. ಈಗಿನ ಜಾರ್ಜ್‌ಸಾರ್ವಭೌಮರ ಕಾಲದಲ್ಲಂತೂ ಅದು ಮತ್ತಷ್ಟು ಗಟ್ಟಿಯಾಯಿತು. ಜಾರ್ಜ್ ಸಾರ್ವಭೌಮರು ಪ್ರತ್ಯಕ್ಷವಾಗಿ ಫ್ರಾನ್ಸಿಗೆ ಮೊನ್ನೆತಾನೇ ಹೋಗಿದ್ದರು. ಅಲ್ಲಿನ ಪ್ರಜೆಗಳು ಆಗ ಅಮಿತಾನಂದವನ್ನೂ ಮೈತ್ರಿಯನ್ನೂ ವ್ಯಕ್ತಪಡಿಸಿದರು. ಆದರೆ ಇಷ್ಟುಬೇಗನೆ ಫ್ರಾನ್ಸಿನವರಿಗೆ ಇಂಗ್ಲೆಂಡು ತನ್ನ ಸ್ನೇಹಸಹಾನುಭೂತಿಗಳ ಫಲವನ್ನು ಕಾರ್ಯರೂಪವಾಗಿ ತೋರಿಸಬೇಕಾಗಿ ಬರುವುದೆಂದು ಯಾರೂ ನಿರೀಕ್ಷಿಸಿರಲಿಲ್ಲ. ಈಗಿನ ಯುದ್ಧದಲ್ಲಿ ಇಂಗ್ಲೆಂಡಿನವರು ಅಂಗವಾಗಿ ಸೇರುವುದಕ್ಕೆ ಫ್ರಾನ್ಸಿನವರಲ್ಲಿರುವ ಸ್ನೇಹವೂ ಬೆಲ್ಜಿಯಮ್ಮಿನವರ ವಿಷಯದಲ್ಲಿ ಪ್ರಪನ್ನೋದ್ಧರಣ ರೂಪಧರ್ಮದ ನಿರ್ವಾಹವೂ ಸಹ ಕಾರಣವಾಗಿದ್ದುವು. ಇದರಿಂದ ಇಂಗ್ಲೆಂಡು ಫ್ರಾನ್ಸಿಗೆ ತಮ್ಮ ಸೈನ್ಯವನ್ನು ಸಹಾಯಕ್ಕಾಗಿ ಕಳುಹಿಸಿಕೊಡಲು, ಆ ಸೇನೆಯ ಅಧಿಪತಿಯ ವಿಷಯದಲ್ಲಿ ಫ್ರೆಂಚುದೇಶವು ಅಸಾಧಾರಣವಾದ ಮರ್ಯಾದೆಯನ್ನೂ ಪ್ರೀತಿಯನ್ನೂ ಸಲ್ಲಿಸಿ, ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿತು. ಈಗ ಇಂಗ್ಲೆಂಡಿನವರು ಮಾಡಿದ ಸಾಹಾಯ್ಯದಿಂದ ಫ್ರಾನ್ಸಿಗೆ ಮಾತ್ರವೇ ಉಪಕಾರವಾಗಲಿಲ್ಲ; ಲೋಕಕ್ಕೇ ಉಪಕಾರವಾಯಿತೆಂದು ಭಾವಿಸಲ್ಪಟ್ಟಿದೆ. ಆಂಗ್ಲರು ಈಗ ಕೈಹಾಕದಿದ್ದರೆ ಯುದ್ಧದ ಪರಿಣಾಮವು ಬಹು ಭೀಕರವಾಗಿ ಊಹಿಸುವುದಕ್ಕೂ ಕೂಡ ಅಸಾಧ್ಯವಾಗಿ ಹೋಗುತ್ತಿದ್ದಿತು.

ಕಳೆದವಾರದ ವರ್ತಮಾನಗಳಲ್ಲಿ ಫ್ರೆಂಚರು ತಮ್ಮ ಎಲ್ಲೆಯನ್ನು ಮೀರಿ ಜರ್ಮನಿದೇಶದೊಳಕ್ಕೆ ನುಗ್ಗಿ ಮುಂದೆಮುಂದೆ ಸಾಗುತ್ತಿದ್ದಾರೆಂದೂ, ಸರ್ವಿಯಾದವರು ಆಸ್ಟ್ರಿಯಾದೇಶಕ್ಕೆ ನುಗ್ಗಿ ಕೆಲ ಪಟ್ಟಣಗಳನ್ನು ವಶಪಡಿಸಿಕೊಂಡರೆಂದೂ, ಫ್ರಾನ್ಸಿನವರ ಆಕಾಶವಿಮಾನವು ಜರ್ಮನಿಯ ಆಕಾಶವಿಮಾನಗಳ ಠಾಣ್ಯಕ್ಕೆ ಸಿಡಿಮದ್ದನ್ನು ಹಾಕಿ ಹಾಳ್ಮಾಡಿ ತಾನು ಶತ್ರುಗಳ ಗುಂಡಿನೇಟಿಗೆ ಸಿಕ್ಕದೆ ತಪ್ಪಿಸಿಕೊಂಡು ಹೋಯಿತೆಂದೂ, ಶತ್ರುಸೇನೆಯೂ, ಫ್ರಾನ್ಸು ಬೆಲ್ಜಿಯಮ್ಮುಗಳ ಸೇನೆಯೂ ಲೀಜ್ಜಿನಿಂದ ಹಿಡಿದು ಬೆಲ್‌ಫೋರ್ಡಿನವರೆಗೆ ಎಂದರೆ ಫ್ರಾನ್ಸು ಬೆಲ್ಜಿಯಂ ಜರ್ಮನಿಗಳ ಎಲ್ಲೆಗಳೊಳಗೆ ಉತ್ತರದಿಂದ ದಕ್ಷಿಣವಾಗಿ ೩೫೦ ಮೈಲಿಗಳ ದೂರ ವ್ಯಾಪಿಸಿಕೊಂಡು ನಿಂತಿವೆಯೆಂದೂ, ಅದಕ್ಕೆ ಇದಿರಾಗಿ ಶತ್ರುಸೈನ್ಯವೂ ಅಣಿಯಾಗುತ್ತಿದೆಯೆಂದೂ ಗೊತ್ತಾಗಿದೆ. ರಷ್ಯನರು ಸೇನಾಸನ್ನಾಹವನ್ನು ಮಾಡಿಕೊಂಡು ಜರ್ಮನಿಯ ಈಶಾನ್ಯಭಾಗದಿಂದ ಆ ದೇಶಕ್ಕೆ ನುಗ್ಗಿಬರುತ್ತಿದ್ದಾರೆಂದೂ ತಿಳಿಯಬಂದಿದೆ. ಈ ವಾರದಲ್ಲಿ ಮಹಾಸಂಗ್ರಾಮವಾರ್ತೆಗಳು ಬರುವವೆಂಬ ನಿರೀಕ್ಷಣೆಯಿದೆ.

ಮಳೆ ಹೊಳೆಗಳಿಂದಾಗಿರುವ ವಿಪರೀತನಷ್ಟ.

ನಮ್ಮ ದೇಶದಲ್ಲಿ ಈ ಸಲ ಮಳೆ ಕಡಿಮೆಯಾಗಿದ್ದರೂ ನಮ್ಮ ದೇಶದಸುತ್ತಲೂ ಕಳೆದೆರಡು ವಾರಗಳಲ್ಲಿ ವಿಶೇಷವಾದ ಮಳೆಯಾಗಿದೆ. ಈ ಹೆಚ್ಚು ಮಳೆಯಿಂದ ಬೊಂಬಾಯಿ ಅಧಿಸತ್ಯದ ಬೆಳಗಾಂ-ಧಾರವಾಡ ಬಿಜಾಪುರ ಜಿಲ್ಲೆಗಳಲ್ಲೂ ಮದ್ರಾಸು ಅಧಿಸತ್ಯದ ಉತ್ತರದ ಜಿಲ್ಲೆಗಳಲ್ಲೂ ವಿಪರೀತ ನಷ್ಟಗಳುಂಟಾಗಿರುವುವೆಂಬ ಹೃದಯದ್ರಾವಕವಾದ ಸುದ್ದಿಗಳು ಅತ್ತಣ ಪತ್ರಿಕೆಗಳಲ್ಲಿ ಅನಂತವಾಗಿ ಮುದ್ರಿತವಾಗಿವೆ. ಧಾರವಾಡದಲ್ಲಿ ವರ್ಷ ೧ಕ್ಕೆ ಸರಾಸರಿ ೩೦ ಅಂಗುಲ ಮಳೆಯಾಗುತ್ತಿರುವಲ್ಲಿ ಈ ವರ್ಷ ೧-೧|| ತಿಂಗಳ ಕಾಲದೊಳಗೇ ಅಷ್ಟು ಅಂಗುಲದ ಮಳೆಯಾಗಿಹೋಗಿರುವುದು. ೨ ದಿನಗಳಲ್ಲಿ ಆದ ಅಖಂಡವೃಷ್ಟಿಯು ೭ ಅಂಗುಲ ಪ್ರಮಾಣವಾಗಿದ್ದಿತು. ಇದರಿಂದ ಊರಿನಲ್ಲಿ ಮುಕ್ಕಾಲುಪಾಲು ಮನೆಗಳು ಮುರಿದು-ಬಿದ್ದು-ಸೋರಿ ಊರು ಹಾಳುಬಡಿಯುವಂತಾಯಿತು. ಸುತ್ತುಮುತ್ತಿನ ಕೆರೆಕಟ್ಟೆಗಳು ಒಡೆದು ಕೋಡಿಬಿದ್ದು ಎತ್ತನೋಡಿದರತ್ತ ನೀರೇ ಆಯಿತು. ವ್ಯವಸಾಯಕ್ಕೆ ನೀರು ಮಿತಿಮೀರಿ ಪೈರು ಪಚ್ಚೆ ಹಾಳಾಗುವಂತಾಯಿತು. ಆ ಜಿಲ್ಲೆಯ ಮಲಪ್ರಭಾ-ವರದಾ ಮೊದಲಾದ ನದಿಗಳೂ-ಚಿಕ್ಕಪುಟ್ಟ ಹಳ್ಳಗಳೂ ಕೂಡ ದಡಮೀರಿ ಹರಿದು ಕೆಲವು ಹಳ್ಳಿಗಳಲ್ಲಿ ನೀರು ನುಗ್ಗಿ ವಿಶೇಷಾನರ್ಥವನ್ನು ಮಾಡಿದೆ.

ಮಲಪ್ರಭಾನದಿಯ ದಡದಲ್ಲಿರುವ ಸಂಗೊಳ್ಳಿಯ ಊರೊಳಗೆ ನಿರಾತ್ರಿಯಲ್ಲಿ ನೀರು ತುಂಬಿ ಊರಿನ ೪೦೦-೫೦೦ ಮನೆಗಳೊಳಗೆ ೧೫-೨೦ ಮನೆಗಳ ಹೊರತು ಉಳಿದುವೆಲ್ಲಾ ಜಲಸಮಾಧಿಗೊಂಡುವು. ಊರಿನಲ್ಲಿ ತೆಪ್ಪಗಳಾಡುವಷ್ಟು ನೀರು ಹರಿದಿತು. ಊರಿನಲ್ಲಿದ್ದ ಕಾಳು ಕಡ್ಡಿ ಮೊದಲಾದ ಪದಾರ್ಥಗಳೆಲ್ಲಾ ಕೊಚ್ಚಿಹೋಗಿ ಜನರು ನಿರ್ಗತಿಕರಾದರು. ಇದರಂತೆ ೭-೮ ಹಳ್ಳಿಗಳು ಹಾಳಾಗಿರುವುವು. ಅತ್ತ ಬಿಜಾಪುರದ ಜಿಲ್ಲೆಯಲ್ಲಿ ಶಿವಯೋಗಮಂದಿರವು ಇದೇ ಮಲಪ್ರಭೆಯ ತೀರದಲ್ಲಿರುವುದರಿಂದ ಅಲ್ಲೂ ಪ್ರವಾಹವು ತುಂಬಿ, ಆಶ್ರಮದಲ್ಲಿ ವಿಶೇಷಾನರ್ಥವನ್ನು ಮಾಡಿರುವುದೆಂದು ಕೇಳುತ್ತೇವೆ. ನಿಜಸ್ಥಿತಿಯ ವಿಷಯವಾಗಿ ಅಲ್ಲಿನ ಪತ್ರವ್ಯವಹಾರವು ಬಂದಬಳಿಕ ತಿಳಿಯಿಸುವವರಾಗಿದ್ದೇವೆ.

ಕೃಷ್ಣಾನದಿಯ ಮಹಾಪ್ರವಾಹದಿಂದ ಈ ವರ್ಷ ಆಗಿರುವ ಅನರ್ಥವು ಅಭೂತಪೂರ್ವವಾಗಿದೆ. ಇದರಲ್ಲಿ ೨ ಆವೃತ್ತಿ ಬಂದ ಮಹಾಪ್ರವಾಹವು ಕೆಲಕಡೆ ೩-೪ ಮೈಲಿಯಗಲದಷ್ಟು ವಿಸ್ತರಿಸಿಕೊಂಡು ಊರು ಕೇರಿ ಕಾಡುಗಳಲ್ಲೆಲ್ಲಾ ಮಹಾಸಮುದ್ರದಂತೆ ನೀರು ತುಂಬಿಕೊಂಡು, ಅಣೆಕಟ್ಟೆಯು ಕಿತ್ತು ಕಾಲ್ವೆಗಳು ಒಡೆದು ಕೆಳಗಣ ಕೆರೆಗಳು ಹಾಳಾಗಿ, ಕೃಷ್ಣಾ ಗುಂಟೂರು ಜಿಲ್ಲೆಗಳೊಳಗೆ ಮಾಡಿರುವ ಅನರ್ಥವು ಬಹಳ ಭೀಕರವಾಗಿರುವುದು. ಆ ಜಿಲ್ಲೆಗಳ ಕೆಲ ತಾಲ್ಲೂಕುಗಳ ಬಡರೈತರು ಮನೆ ಮಠ ದನಕರು ದವಸ ಮೊದಲಾದುವುಗಳನ್ನೆಲ್ಲಾ ಕಳೆದುಕೊಂಡು ಇನ್ನು ೧ ಶತಮಾನದವರೆಗೂ ಚೇತರಿಸಿಕೊಳ್ಳಲಾರದ ಸ್ಥಿತಿಗೆ ಬಂದಿರುತ್ತಾರೆ. ಆ ವಿಪನ್ನರ ತಾತ್ಕಾಲಿಕ ಸಹಾಯಾರ್ಥವಾಗಿ ಪ್ರಜೆಗಳೂ ಸರ್ಕಾರದವರೂ ವರ್ಗಣಿಯನ್ನು ಕೂಡಿಸುತ್ತಿರುವರು.

ಕುರುವಿಜಯ.

ನಾಲಿಗೆಯೆರಡೊ? ಎಡಿಟರಿಬ್ಬರೊ?

ಕುರುವಿಜಯದ ಆಗಸ್ಟ್ ತಾ|| ೧೭ ರ ಸಂಚಿಕೆಯಲ್ಲಿ "ಅಭಿಲಾಷಿ" ಎಂಬ ಹೆಸರಿನಿಂದ ಯಾರೋ ಮತ್ತೊಮ್ಮೆ ಮಾಡಿದ ಪ್ರಶ್ನೆಗೆ ಈ ಪತ್ರಿಕಾಕರ್ತರು "ಕುರುವಿಜಯ" ಎಂಬ ಹೆಸರಿಗೆ "ಈ ಪತ್ರವನ್ನು ಓದುವ ಮಹನೀಯರೆಲ್ಲರಿಗೂ ವಿಜಯವನ್ನು ಉಂಟುಮಾಡು, ಎಂದು ಭಗವಂತನನ್ನು ಜಯಘೋಷದಿಂ ಪ್ರಾರ್ಥಿಸುವುದೇ ನಮ್ಮ ಪತ್ರಿಕೆಯ ಹೆಸರಿನ ಮುಖ್ಯಾಭಿಪ್ರಾಯ" ವೆಂದು ಬರೆದಿರುವರು. ಮತ್ತೂ ಮೈಸೂರ್‌ಸ್ಟಾರ್-ಸಾಕ್ಷಿ, ಇವುಗಳ ಅರ್ಥವೇನೆಂದು ಕೇಳಲು ಧೈರ್ಯವಿಲ್ಲದೆ, ಆ ಹೆಸರಿನ ಅರ್ಥಕ್ಕೆ ತಕ್ಕ ಗುಣವು ಅವುಗಳಲ್ಲಿಲ್ಲವೆಂದು ಧ್ವನಿಕೊಡುವ ಮಾತುಗಳನ್ನು ಬರೆದುಕೊಂಡಿರುವರು.

ಹೆಸರಿಗೆ ತಕ್ಕ ಗುಣವಿಲ್ಲವೆಂಬ ಮಾಡುವ ಆಕ್ಷೇಪಕ್ಕೂ, ಹೆಸರಿಗೆ ಅರ್ಥವೇ ಇಲ್ಲವೆಂದು ಮಾಡಲ್ಪಡುವ ಆಕ್ಷೇಪಕ್ಕೂ ವ್ಯತ್ಯಾಸವೇ ಇಲ್ಲವೆಂದು ಈ ಲೇಖಕರು ತಿಳಿದಂತಿದೆ. ಅದಂತಿರಲಿ. ಹಿಂದೆ ಈ ಹೆಸರಿಗೆ ಭರತಖಂಡದವರ ವಿಜಯವೆಂದು ಇದರ ಎಡಿಟರೇ ಅರ್ಥವನ್ನು ಹೇಳಿದ್ದರು. ಈಗ ಮತ್ತೊಂದು ತೆರದ ಅರ್ಥವನ್ನು ಹೇಳಿ, ಅದರ ಕೆಳಗೂ "ಎಡಿ" ಎಂದು ತಮ್ಮ ಹಸ್ತಾಕ್ಷರವನ್ನು ಹಾಕಿದ್ದಾರೆ. ಇದರಿಂದ ಒಂದು ಹೆಸರಿಗೆ ಅರ್ಥವನ್ನು ಎರಡು ತೆರನಾಗಿ ಹೇಳಿದುದು ಒಂದೇ ನಾಲಿಗೆಯೊ? ಅಥವಾ ಎರಡು ನಾಲಿಗೆಗಳೊ? ಇಲ್ಲವೆ ಆ ಅರ್ಥವನ್ನು ಹೇಳಿದ ಎಡಿಟರೇ ಬೇರೆ, ಈ ಅರ್ಥವನ್ನು ಹೇಳಿದ ಎಡಿಟರೇ ಬೇರೆ ಎಂದು ಭಾವಿಸಬೇಕೋ ತಿಳಿಯಲಿಲ್ಲ. ಹೋಗಲಿ. ಈಗ ಮಾಡಿರುವ ಅರ್ಥವಾದರೂ ಏನು? ವಿಜಯವನ್ನುಂಟುಮಾಡು ಎಂಬ ಅರ್ಥವು ಕೂಡ ಆ ಹೆಸರಿನಿಂದ ಆಗುವುದಿಲ್ಲ. ಹಾಗೆ ಅರ್ಥವಾಗಬೇಕಾದರೆ "ಕುರುವಿಜಯಂ" ಎಂದಿರಬೇಕಾಗಿದ್ದಿತು. ಕುರುವಿಜಯ ಎಂಬಕಡೆ ವಿಜಯ ಶಬ್ದೋತ್ತರದಲ್ಲಿ ದ್ವಿತೀಯಾಪ್ರತ್ಯಯವೇ ಇಲ್ಲದಿರುವುದರಿಂದ, ಇದು ಬಟ್ಲರ್ ಇಂಗ್ಲೀಷಿನಂತಾಯಿತು. ಅದುಕಾರಣ ಈ ಅರ್ಥವೂ ಹೊಂದುವುದಿಲ್ಲ. ಪತ್ರಿಕೆಯ ಎಡಿಟರೇ ಹೀಗೆ ಅರ್ಥವನ್ನು ಒಂದರಮೇಲೊಂದು ತೆರನಾಗಿಡುವುದಕ್ಕೆ ತಡಕಾಡುತ್ತಿರುವುದನ್ನು ನೋಡಿದರೆ, "ಇತ್ಯಪಲುಕೂಯಂಗ" ಎಂಬ ಕವಿತ್ವಕ್ಕೆ ಅರ್ಥವನ್ನಿಡಲು ವಿದ್ಯಾರ್ಥಿಯು ತಡಕಾಡಿದುದು ಪುನಃಪುನಃ ಸ್ಮರಣೆಗೆ ಬರುತ್ತಿದೆ. ಇನ್ನಾವತೆರದ ಅರ್ಥವನ್ನು ಹೇಳಲು ಇನ್ನೆಷ್ಟು ನಾಲಿಗೆಗಳು ಮುಂದೆ ಬರುವುವೋ ನೋಡಬೇಕು."

ಈ ಮಧ್ಯೆ ಮೈಸೂರಿನ ಮಧುರವಾಣಿಯು "ಕುರುವಿಜಯ ಎಂಬ ಕುರುಬರ ಪತ್ರಿಕೆ" ಎಂದು ಹೆಸರಿಡಲು ಪ್ರಯತ್ನವಾಗಿದೆಯೆಂದು ಇದರ ವಿಷಯವಾಗಿ ನುಡಿದಿದ್ದಿತು. ಅದು ಸುಳ್ಳೆಂದು ಈಗಿನ ವಿದ್ಯಮಾನದಿಂದ ತಿಳಿಯಬೇಕಾಗಿದೆ.

ಈ ಪತ್ರಿಕೆಯ ಉದಯವೂ, ಏಳ್ಗೆಯೂ ನಮಗೆ ಸಂತೋಷಕರವೇ. ಆದರೆ ಉದ್ದೇಶಕ್ಕೆ ತಕ್ಕ ಸಾರ್ಥಕವಾದ ಹೆಸರಿಲ್ಲವಲ್ಲಾ! ಎಂಬುದೊಂದೇ ಅದರ ವಿಷಯದಲ್ಲಿ ನಮ್ಮ ಚಿಂತೆ. ನಿಷ್ಫಲವಾದ ವ್ಯಾಖ್ಯಾನಗಳನ್ನು ಬಳೆಯಿಸುವುದಕ್ಕಿಂತಲೂ ತಕ್ಕ ತಿದ್ದುಪಾಟನ್ನು ಹೆಸರಿನಲ್ಲಿ ಮಾಡಿಕೊಂಡರೆ ಮೇಲು.

ಒಳದೇಶದ ವೃತ್ತಾಂತಗಳು.

ಕೌನ್ಸಿಲರುಗಳೂ, ಚೀಫ್ ಇಂಜನಿಯರೂ ಶನಿವಾರದ ದಿವಸ ರಾಜಧಾನಿಗೆ ದಯಮಾಡಿಸಿದರು.

—o—

ಪರಸ್ಪರ ಸಹಾಯಸಂಘದ ೪ ನೆಯ ಅಧಿವೇಶವು ಬರುವ ಸೆಪ್ಟಂಬರ್ ತಾ|| ೨೨ ರಲ್ಲಿ ರಾಜಧಾನಿಯಲ್ಲಿ ನಡೆಯುವುದು.

—o—

ಚೀಫ್ ಕೋರ್ಟಿನ ಡೆಪ್ಯುಟಿ ರಿಜಿಸ್ಟ್ರಾರರಾದ ಮ|| ಟಿ. ವೆಂಕೋಬರಾಯರು ಆಕ್ಟಿಂಗ್ ರಿಜಿಸ್ಟ್ರಾರರಾಗಿ ನಿಯಮಿಸಲ್ಪಟ್ಟಿರುವರು.

—o—

ಮೈಸೂರ ಸೀಮೆಯ ಲಾಯರುಗಳೆಲ್ಲರೂ ತಮಗೆ ಕಕ್ಷಿಗಾರರಿಂದ ಫೀಯಾಗಿ ಬರುವ ಹಣದ ಲೆಕ್ಕವನ್ನು ಮಡಗಬೇಕೆಂದು ಚೀಫ್ ಕೋರ್ಟಿನವರಪ್ಪಣೆಯಾಗಿದೆ.

—o—

ಮೈಸೂರ ಡಿಸ್ಟ್ರಿಕ್ಟ್ ಹೆಲ್ತಾಫೀಸರಾದ ಡಾ|| ಬಿ. ಕೃಷ್ಣರಾಯರಮೇಲೆ ತರಲ್ಪಟ್ಟಿದ್ದ ಕ್ರಿಮಿನಲ್ ವಿವಾದದಲ್ಲಿ ಡಾಕ್ಟರ್‌ರವರು ನಿರ್ದೋಷಿಗಳಾಗಿ ಬಿಡಲ್ಪಟ್ಟರು

—o—

ರಾಜಧಾನಿಯಲ್ಲಿ ಮೈಸೂರ್‌ಬ್ಯಾಂಕಿನ ಶಾಖೆಯನ್ನೇರ್ಪಡಿಸಲು ಮ|| ಸಿ. ವೆಂಕಟಾಚಾರ್ಯರೆಂಬುವರೊಪ್ಪಿಕೊಂಡು, ಕಳೆದ ತಾ|| ೧೯ ರ ಮಧ್ಯಾಹ್ನ ರಮಾವಿಲಾಸ ಅಗ್ರಹಾರದಲ್ಲಿರುವ ಆಜೆ ಶ್ರೀನಿವಾಸಯ್ಯಂಗಾರರವರ ಮನೆಯಲ್ಲಿ ಸ್ಥಾಪಿಸಿದರು. ಇದರ ಆರಂಭೋತ್ಸವವು ಡಿ|| ಕಮಿಷನರ್ ಮ|| ಸುಬ್ರಹ್ಮಣ್ಯಯ್ಯರ್‌ರವರ ಅಧ್ಯಕ್ಷತೆಯಲ್ಲಿ ಜರುಗಿಸಲ್ಪಟ್ಟಿತು. ಆಗ್ಯೆ ಇಲ್ಲಿಯ ವರ್ತಕರೂ, ಇತರ ದೊಡ್ಡಮನುಷ್ಯರೂ ದಯಮಾಡಿದ್ದರು. ದೊಡ್ಡದೊಡ್ಡ ಮುಲ್ತಾನಿ ಸೇಟುಗಳೂ ಮದ್ರಾಸುಬ್ಯಾಂಕೂ ರಾಜಧಾನಿಯಿಂದ ಹೋದಮೇಲೆ ಇಲ್ಲಿಯ ವರ್ತಕರ ಲೇವಾದೇವಿಗೆ ಬಹಳ ತೊಂದರೆಯಾಗಿದ್ದಿತು. ಮ|| ಸಿ. ವೆಂಕಟಾಚಾರ್ಯರು ಮೈಸೂರ ಬ್ಯಾಂಕಿನ ಶಾಖೆಯನ್ನು ಸ್ಥಾಪಿಸಿದುದರಿಂದ ಎಲ್ಲರಿಗೂ ಬಹಳ ಸಂತೋಷವಾಗಿರುವುದು; ಅವರ ಪ್ರಯತ್ನವು ಸಫಲವಾಗಲೆಂದು ಕೋರುತ್ತೇವೆ.

"ಗ್ರಾಮಾಭಿವೃದ್ಧಿಸಂಘವೂ" ಸರ್ಕಾರಿ ಅಧಿಕಾರಿಗಳ ಪ್ರೋತ್ಸಾಹವೂ.

ದಾವಣಗೆರೆ ತಾಲ್ಲೂಕು ಅಣಜಿ ..ಗ್ರಾಮಕ್ಕೆ ತಾರೀಖು ೧೪-೮-೧೪ ನೇ ಶುಕ್ರವಾರದ ದಿವಸ ದಾವಣಗೆರೆ ಹ|| ಸಬ್ ಡಿವಿಜನ್ ಅ|| ಕ|| ಮೆ|| ಟಿ. ಚೊಕ್ಕಣ್ಣ ಅಯ್ಯಂಗಾರ್‌ರವರು, ಚಿತ್ರದುರ್ಗ ಡಿ|| ಸ್ಯಾನಿಟರಿ ಆಫೀಸರು ಮತ್ತು ಅಮಲ್‌ದಾರ್ ಮೆ|| ಕೆ. ವೇದಾಂತಯ್ಯಂಗಾರ್ರವರೊಂದಿಗೆ ದಯಮಾಡಿ ಗ್ರಾಮದ ಇನ್ಸ್‌ಪೆಕ್ಷನ್ ಮಾಡಿದರು. "ಗ್ರಾಮಾಭಿವೃದ್ಧಿ ಸಂಘದವರು" ಮೇಲ್ಕಂಡ ಅಧಿಕಾರಿಗಳನ್ನು ತಮ್ಮ ಸಂಘದ ಮಂದಿರಕ್ಕೆ ಚಿತ್ತೈಸಿ ಪರಾಂಬರಿಸೋಣವಾಗಬೇಕಾಗಿ ಪ್ರಾರ್ಥಿಸಿಕೊಂಡೊಡನೆ ಸದರಿ ಹ|| ಅ|| ಕ|| ಸಾಹೇಬರು ತಮ್ಮ ಜತೆಗಿದ್ದ ಇತರ ಅಧಿಕಾರಿಗಳೊಂದಿಗೆ

ಬಂದು, ಸಂಘದ ರಿಪೋರ್ಟು ಮೂಲಕ ಸಂಘದ ಅಭಿವೃದ್ಧಿವಿಷಯವನ್ನೂ ವಾಚಕರಮುಂದಿರದ ವೃತ್ತಾಂತವನ್ನೂ ತಿಳಿದು ಬಹಳವಾಗಿ ಸಂತೋಷಿಸಿ ಇಂಥ ಉತ್ತಮ ಸ್ಥಿತಿಯಲ್ಲಿರುವ ಸಂಘಕ್ಕೆ ಪ್ರೋತ್ಸಾಹಿಸಲು ಸರ್ಕಾರದಿಂದ ಪ್ರಕಟವಾಗುವ ಸರ್ವ ಜನರ ಜೀವನೋಪಾಯಕ್ಕೆ ಮುಖ್ಯ ಮಾರ್ಗವಾಗಿರುವ ಒಕ್ಕಲತನವನ್ನು ಬೋಧಿಸುವ ಮೈಸೂರ್ ರೆವಿನ್ಯು ಮತ್ತು ವ್ಯವಸಾಯ ಗೆಜೆಟ್" ನ್ನು ಮುಫತ್ತಾಗಿ ರಿಜಿಸ್ಟ್ರಾರವರಿಂದ ಕೊಡುವದಾಗಿ ಅಪ್ಪಣೆ ಕೊಡಿಸಿದ್ದಲ್ಲದೆ ಅದರಂತೆ ಸಂಘದ ವಿಜಿಟರ್ಸ್ ಬುಕ್ಕಿನಲ್ಲಿ ಸ್ವಹಸ್ತದಿಂದ ಬರೆದು ಸಂಘದ ಮುಂದಾಳುಗಳು ಉತ್ಸಾಹಿತರಾಗುವಂತೆ ಬೋಧಿಸಿ ತೆರಳಿದರು. ಇದೇ ಅಲ್ಲವೆ ಪ್ರಜಾವಾತ್ಸಲ್ಯ? ಇಂಥ ಅಧಿಕಾರಿಗಳಿಗೆ ಜಾಗ್ರತೆಯಾಗಿ ಉಚ್ಚಪದವಿಯನ್ನು ಪಾಲಿಸಲಿ ಎಂಬುದಾಗಿ ಪರಮೇಶ್ವರನನ್ನು ಪ್ರಾರ್ಥಿಸುತ್ತೇವೆ.

ಎ. ಪಿ. ಎಸ್.
ಗ್ರಾ॥ ವ್ಯ. ಸ. ಮೆಂಬರ್.

ಪತ್ರವ್ಯವಹಾರ.

ನಿಜಾಂ ಇಲಾಖಾ ಗುಲ್ಬರ್ಗಾ ಡಿ॥ ಶಹಪುರ ತಾ॥ ಸೈತಿ ನಾಯಿಕಲ್ಲ ಸಂಸ್ಕೃತ ಪಾಠಶಾಲಾ.

ಈ ಪ್ರಾಂತದ ವೀರಶೈವರೆಲ್ಲರು ವಿದ್ಯೆಯಿಂದ ಹಿಂದುಳಿದು ಅಜ್ಞಾನವೆಂಬ ಕಗ್ಗತ್ತಲೆಯಲ್ಲಿ ನಿದ್ರಿಸುತ್ತಿರುವರು ಜಾಗರೂಕರಾಗದೆ ಇರುವದು ಕಂಡು ಈ ಸ್ಥಳದ ಸಮಸ್ತ ವೀರಶೈವರೂ ಪುರಪ್ರಮುಖರಾದ ಪೊ॥ಗಾ॥ ಸಂಗಣ್ಣನವರೂ ಅಜ್ಞಾನ ಪರಿಹಾರಕ್ಕೂ ಸ್ವಮತದ ಏಳ್ಗೆಗೂ ವಿದ್ಯೆಯೇ ಕಾರಣವೆಂಬದಾಗಿ ಸಂಪೂರ್ಣ ನಂಬಿ, ಶಕೆ ಸಂವತ್ಸರದ (ಆಂಧರೆ) ಪ್ರ॥ನಾ॥ಕಲಿ॥ ೯ ಯಲ್ಲಿ ಸಭೆಗೂಡಿಸಿ ವೇ॥ ವಿ ವೇ॥ ಸಿದ್ಧಲಿಂಗಸ್ವಾಮಿಗಳು ಪಂ॥ ರಾಮಾಚಾರ್ಯರು ಬಿಜಯಂಗೈಸಿದ ನಂತರ ಪರಸ್ಥಳ ವಿದ್ಯಾರ್ಥಿಗಳಿಗೆ ಅನ್ನೋದಕವನ್ನೀಯುವಂತೆ ಏರ್ಪಡಿಸಲು ಈ ಶಾಲಾ ಅಧ್ಯಾಪಕರಿಂದ ಬಸವರಾಜಶಾಸ್ತ್ರಿಗಳು ಗ್ರಾಮಪ್ರಕಾರ ವಿನಾಯಕ ಶಾರದಾ ಪೂಜೆಯಂಗೈಸಿ ಪಾಠ ಹೇಳಲಾರಂಭಿಸಿದರು. ಆಬಳಿಕ ಪಂ॥ ರಾಮಾಚಾರ್ಯರು ಸಂಸ್ಕೃತ ವಿದ್ಯೆಯಿಂದುಂಟಾಗುವ ಮಹತ್ವವನ್ನೂ ತದ್ದಾನದಿಂದುಂಟಾಗುವ ಪುಣ್ಯಪ್ರಭಾವವನ್ನೂ ಮೃದು ಮಧುರವಾದ ವಾಕ್ಯಂಗಳಿಂ ಕೇಳುವ ಜನಗಳಿಗಿಂಪಾಗುವಂತೆ ಹೇಳಿಕ್ಕೆ, ಈ ಪಾಠಶಾಲಾ ಚಿರಸ್ಥಾಯಿಯಾಗಿ ನಡೆಯುವದಕ್ಕಾಗಿ ತಮ್ಮ ಅನೇಕ ಘವಾದ ಉದಾರಾಶ್ರಯದಿಂದ ಪ್ರತಿವರ್ಷದಲ್ಲಿ ವರ್ಗಣಿ ಕೊಡುವದಕ್ಕೆ ಬಿಜೇಸ್ಪುರ ದೇ॥ ಸಿದ್ಧಪ್ಪ-ಸಾಯಿಬಣ್ಣ ಚೆಂದ್ರಾಳಿ ಜಹಗೀರದಾರ ಇವರು ೫೦ ರೂ.ಗಳು ಸಾವಿರ ಬಸವಣ್ಣನವರು ೩೦ ಶಹಪುರ ಸಾ॥ ಬಸವಣ್ಣನವರು ೨೫, ಗೂಗೆಡಿಗಿ ಮಾ॥ ಗಾ॥ ಚಂದ್ರಾಯರು ೧೫, ದೇವರ ಸೂಗೂರು ಸಾ॥ ಸೂಗೂರಪ್ಪನವರು ೧೫, ಗೋಗಿ ಮಾ॥ ಗಾ॥ ಭೀಮಣ್ಣನವರ ೧೫, ಬಿಜೆಸ್ಪುರದೊಳಗೆ ಮಾ॥ ಗಾ॥ ನಾಗಭೂಷಣಪ್ಪನವರು ೧೦, ಪೊ॥ ಗಾ॥ ಸಿದ್ಧಪ್ಪನವರು ೧೦, ಪೊ॥ ಪಾ॥ ಬಿ. ಶಂಕರಪ್ಪನವರು ೧೦, ಮಾ॥ ಗಾ॥ ಬಿ॥ ಬಸವಂತರಾಯ ವ ಶಿವಲಿಂಗಪ್ಪನವರು ೧೦, ಬಿನ್ನಾಳ ಸಿದ್ಧಲಿಂಗಪ್ಪ ವ-ತಮ್ಮಣ್ಣ ಇವರು ೧೦, ಕೊಂಕಲ ಲಿಂಗನಗೌಡರು ೧೦, ಕೊಟ್ಟಣಗಿ ಮಾ॥ ಗಾ॥ ಸಿದ್ಧಪ್ಪನವರು ೧೦, ಮುತ್ತಿಗೆ ಬಸವಪ್ಪಗೌಡರು ೧೦, ದಿಳಾರ ರುದ್ರಪ್ಪನವರ ಪುತ್ರರಾದ ಬಸವಪ್ಪನವರು ೧೦, ನೀರಡಗುಂಭ ಮಲ್ಲಿಗರ ಚನ್ನಬಸವಪ್ಪನವರು ೧೦, ತಂಗಡಗಿ ಶಾಂತವೀರಪ್ಪಗೌಡರು ೧೦, ನೀರಡಗುಂಭ ವಕೀಲ ಶಂಕರಪ್ಪನವರ ಪತ್ನಿಯರಾದ ಚನ್ನಬಸಮ್ಮ ವ ಗಂಗವ್ವ ಈ ಉಭಯರು ೧೫. ಕುಣ್ಸಿ ಮಾ॥ ಗಾ॥ ಚನ್ನಬಸವಪ್ಪನವರು ೧೦, ಶರಣಪ್ಪ ಪೊ॥ ಪಾ॥ ಇವರು ೧೦, ಕಾಮ್ಮಳ್ಳಿ ಮಾ॥ ಗಾ॥ ಭೀಮರಾಯ ವ ಸಿದ್ಧರಾಮಪ್ಪ ಈ ಉಭಯರು ೧೦, ಬೆಂಡೆಗೊಂಬಳಿ ಪೊ॥ ರುದ್ರಪ್ಪಗೌಡರು ೧೦ ರೂ, ವಾಗ್ದಾನಮಾಡಿದ್ದಾರೆ ಮುಂದೆ ಸಹಾಯ ಮಾಡುವ ಪ್ರಮುಖ ವೀರಶೈವರನ್ನು ಸ್ಟಾರಿನೊಳಗೆ ಪ್ರಸಿದ್ಧಪಡಿಸಲಾಗುವದು. ಈ ಸತ್ಕಾರ್ಯಕ್ಕೆ ಮನಸ್ಸುಕೊಟ್ಟ ಸಕಲಮಹನೀಯರಿಗೆ ಜಗದೀಶನು ಆಯುರಾರೋಗ್ಯೈಶ್ವರ್ಯಾಭಿವೃದ್ಧಿಯನ್ನೀಯಲೆಂಬದಾಗಿಯೂ ಈ ಪಾಠಶಾಲೆಯು ಚಿರಸ್ಥಾಯಿಯಾಗಿ ನಡೆಯುವಂತೆ ಮಾಡಲೆಂಬದಾಗಿಯೂ ಶ್ರೀಪರಮೇಶ್ವರನನ್ನು ಅನನ್ಯಭಾವದಿಂ ಕೋರಿ ಪ್ರಕೃತಲೇಖನವನ್ನು ಪೂರೈಸುತ್ತೇನೆ.

{ ಶಾಲಾ ವ್ಯವಸ್ಥಾಪಕ,
{ ವೀರಪ್ಪ; ಅಂಗಡಿ.

ಹಾವೇರಿ.

ಮೊನ್ನೆ ಮಂಗಳವಾರದ ಕರ್ನಾಟಕ ವೃತ್ತಪತ್ರದಲ್ಲಿ ಪ್ರಸಿದ್ಧಿಸಿದ ಧಗಡುಅಪ್ಪಾ ಉರ್ಫ ಜ್ಞಾನೇಶ್ವರ ಶರ್ಮನ ವಿಷಯವಾಗಿ ಓದಿನೋಡಲಾಯಿತು. ಆದರೆ ಕೆಲವರು ಸಹಿಸಿ ಪ್ರಸಿದ್ಧಮಾಡಿದ್ದು, ಅವನನ್ನು ತಿರಿಗಿ ವೀರಶೈವಧರ್ಮದಲ್ಲಿ ತೆಗೆದುಕೊಳ್ಳಲಿಕ್ಕೆ ಮುರಘೇಂದ್ರಸ್ವಾಮಿಗಳಿಗೆ ಅಧಿಕಾರವಿಲ್ಲವೆಂದು ಸಿದ್ಧಾಂತಮಾಡಲಿಕ್ಕೆ ಪ್ರಯತ್ನಮಾಡಿದ್ದಾರೇನೊ. ವಿನಾ ಅವರ ಸ್ವತ್ವದಾನ ಕರ್ತವ್ಯದ ಕಡೆಗೆ ಲಕ್ಷ ಕೊಟ್ಟಂತೆ ತೋರುವುದಿಲ್ಲ ಅವರ ಹೇಳಿಕೆಯಂತೆ ಪಂಚಾಚಾರ್ಯರೇ ಮಠದವರಿಕ್ಕೆ ನಮ್ಮ ಪಂಚಾಚಾರ್ಯರಲ್ಲಿ ಇರುವ ಒಕ್ಕಟ್ಟು ಆದರೂ ಕಂಡುಬರುವಂತೆ ಆದೆ. ಮತ್ತು ಇದರಲ್ಲಿ ಸನ್ಯಾಸ ಆಶ್ರಮದವರಿಗೆ ಅಧಿಕಾರವಿಲ್ಲವೆನ್ನಲಿಕ್ಕೆ ಅವರು ಜನ್ಮವೆತ್ತಿದ ಕಾರಣವೇನು? ದರ ಒಂದು ಧರ್ಮ ಜಾಗ್ರತೆ ಗೋಚರವಾಗಿ ವೈದಿಕ ಧರ್ಮದಲ್ಲಿ ಸನ್ಯಾಸ ಆಶ್ರಮಂಗಳುಂಟಾಗಿವೆ. ಮತ್ತು ದರ ಒಂದು ಸ್ವತ್ವವಾದ ಕಾರಣವನ್ನ ಯಾರುಮಾಡಿದರೂ ಅದು ಮಾನ್ಯವಾಗಲಿಕ್ಕೆ ಬೇಕು. ಇನ್ನು ಇದು ಸ್ಪಷ್ಟವಾದ ಕಾರ್ಯವಲ್ಲ ಅವನು ಅನಾಚಾರಿ ಇನ್ನು ಅವನನ್ನು ತೆಗೆದುಕೊಳ್ಳುವದರಿಂದ ಘಾತವಾಗುತ್ತದೆ ಅಂದರೆ ಧರ್ಮದವರಂತೆ ನಟಿಸಿ ಅನೇಕ ಅನಾಚಾರಗಳನ್ನು ನಡೆಸುವವರು ನಮ್ಮಲ್ಲಿ ಎಷ್ಟು ಜನರಿಲ್ಲ? ಅನಾಚಾರರೂ ವೇದ ಮುಂತಾದವುಗಳನ್ನು ಕಲಿತು ಸಾತ್ವಿಕ ಪ್ರವೃತ್ತಿಯವನು ಇರುತ್ತಾನೆ. ಮತ್ತೂ ಈಗಿನ ಕಾಲದಲ್ಲಿ ನಮ್ಮ ಅನೇಕ ಜನರು ಮತಾಂತರವಾಗಲಿಕ್ಕೆ ಇವರ ಅನುಭವದಿಂದ ಎಷ್ಟೋ ದತ್ತವಂತೆ ಆಗುತ್ತಿದೆ. ಇನ್ನು ನಮ್ಮ ಧರ್ಮದಲ್ಲಿ ತೆಗೆದುಕೊಳ್ಳಲಿಕ್ಕೆ ಬರುವಂತೆ ಇಲ್ಲವೆಂದು ಹೇಳಲಿಕ್ಕೆ, ಎಷ್ಟೋ ಕ್ರಿಶ್ಚಿಯನ್ ಮುಂತಾದವರನ್ನು ತೆಗೆದುಕೊಂಡ ಉದಾಹರಣೆಯನ್ನು ಕೊಡಬಹುದು. ಮತ್ತೂ ಪೂರ್ವದಲ್ಲಿ ಬಸವೇಶ್ವರರು ಮತವನ್ನು ಉದ್ಧರಿಸುವ ಕಾಲದಲ್ಲಿ ಈ ಪ್ರಕಾರದ ಕಟ್ಟುಗಳನ್ನು ಮಾಡಿದ್ದರೆ ನಮ್ಮವರು ಮುಂದಕ್ಕೆ ಬರುತ್ತಿದ್ದರೇ ಹೇಗೆ? ದರ ಒಬ್ಬ ಮತಸುಧಾರಕನು ಹೀನರಾಗಿ ಬಂದವರಮೇಲೆ ಅವರನ್ನು ಪುನೀತರನ್ನಾಗಿ ಮಾಡುವುದು ಕರ್ತವ್ಯಕರ್ಮವಾಗಿದೆ. ಇದು ತಪ್ಪಲ್ಲವೆಂದು ತಿಳಿಯಬೇಡಿರಿ. ಇದರಂಥ ದೊಡ್ಡ ಕಾರ್ಯ ಮತ್ತೊಂದಿಲ್ಲಾ. ಎಷ್ಟು ಜ್ಞಾನವಂತರಾದರೂ ಅದನ್ನು ಹಿಂದಕ್ಕೆ ಒತ್ತಿ ಬರೀ ಸುಧಾರಣೆಯೆಂದು ಬಡಬಡಿಸಿದ ಮಾತ್ರದಿಂದ ಸುಧಾರಣೆಯಾಗಲಾರದು. ಅವನು ಆರ್ಯಸಮಾಜವನ್ನು ಸ್ವೀಕರಿಸುವ ವೇಳೆಯಲ್ಲಿ ಅದರಮೇಲೆ ಇದ್ದ ಪ್ರೀತಿಯೇ ಈಗ ಬರಬೇಕೆಂಬುದು ಆದರೆ ಇರುತ್ತದೆ ಎಂಬುದನ್ನು ಮರೆಯಬೇಡಿರಿ. ಮನುಷ್ಯನ ಮನಸ್ಸು ತನಗೆ ಪ್ರೀತಿಯಿಲ್ಲದ ಒಡವೆಯನ್ನು ಎಂದಿಗೂ ಸ್ವೀಕರಿಸಲಾರದು. ಮತ್ತೂ ನಿಮ್ಮ ಹಳೆ ಒರಟಾದ ಕಟ್ಟುಗಳನ್ನು ಬಿಡಿರಿ "ಭೂಮಿ ಮತ್ತು ಕಾಲಚಕ್ರವು ತಿರುಗುವಂತೆ ನಿಮ್ಮ ಕೆಲವು ಆಚರಣೆಗಳನ್ನು ಬದಲಾಯಿಸಿ" ಎನ್ನುವ ಸ್ವಾಮಿ ರಾಮಕೃಷ್ಣ ಪರಮಹಂಸರ ವಾಕ್ಯದಂತೆ ನಡೆಯಿರಿ. ಅವರಿಗೆ ಅಧಿಕಾರವದೆ, ಇವರಿಗೆ ಇಲ್ಲ, ಎನ್ನುವ ಮಾತುಬಿಟ್ಟು, ನಾವು ಸರ್ವರೂ ಒಂದೇ ನಾವೆಯಲ್ಲಿ ಇದ್ದು ಅದು ಮುಳುಗುವ ವೇಳೆಯಲ್ಲಿ ಸರ್ವಪ್ರಯತ್ನಮಾಡುವಂತೆ ತಿಳಿದ ಆತ್ಮಜ್ಞಾನಿಗಳೂ ಮಠಸ್ಥರೂ ಗುರುಸ್ಥಲದವರೂ ನಿರಾಭಾರಿಗಳೂ ಎಲ್ಲರೂ ಒಕ್ಕಟ್ಟಾಗಿರಿ. ಇದೇ ಕರ್ನಾಟಕ ವೃತ್ತಪತ್ರದಲ್ಲಿ ಪ್ರಸಿದ್ಧಿಸಿದ ಯುರೋಪಖಂಡದಲ್ಲಿ ಅರ್ಮಣಿಯವರು ತಮ್ಮ ಎಷ್ಟು ಜದವಿದ್ದರೂ ಈ ವೇಳೆಯಲ್ಲಿ ತೋರಿಸಿದ ಒಕ್ಕಟ್ಟಿನ ವಹಿಮೆಯನ್ನು ನೆನೆಯಿರಿ. ಹೀಗೂ ಇವರ ವಿಷಯಕ್ಕೆ ದುರಭಿಮಾನವನ್ನು ತೋರಿಸಬೇಕೆಂದು ವಿಜ್ಞಾಪಿಸಿ ಇಲ್ಲಿಗೆ ಮುಗಿಸುವ,

ತಮ್ಮ ನಿರಭಿಮಾನಿ,

ಈಗತಾನೇ ಅಚ್ಚಾದ ಪುಸ್ತಕವು.

(ರೇವಣಸಿದ್ಧೇಶ್ವರಪುರಾಣಂ.)

ವೇದಾಗಮಾದಿಸಿದ್ಧವಾದ ವೀರಶೈವ ಮತವನ್ನು ಭೂತಲದಲ್ಲಿ ಪ್ರತಿಷ್ಠಾಪಿಸಿದ ಶ್ರೀ ರೇಣುಕಾಚಾರ್ಯರ ಚರಿತ್ರರೂಪವಾದ ಈ ಗ್ರಂಥವು ಬೊಮ್ಮರಸಕವಿಯಿಂದ ಷಟ್ಪದೀಕಾವ್ಯವಾಗಿ ರಚಿಸಲ್ಪಟ್ಟಿರುವುದು. ಶ್ರೀಮದಾಚಾರ್ಯರು ಭೂತಲದಲ್ಲಿ ನಡೆಸಿದ ಮಹತ್ಕಾರ್ಯಗಳು ಇದರಲ್ಲಿ ನಿರೂಪಿತವಾಗಿವೆ. ಕವಿತೆಯು ಹೃದಯಂಗಮವಾಗಿದೆ. ಪ್ರತಿಯೊಂದು ಪಾದಕ್ಕೂ ಒಂದೊಂದು ಪಚ್ಚೆಯಾಗಿ ಬಿಡಿಬಿಡಿಸಿ ಉತ್ತಮವಾದ ಗ್ಲೇಸ್ ಕಾಗದದಮೇಲೆ ಸುಂದರವಾದ ಅಕ್ಷರಗಳಿಂದ ಶುದ್ಧವಾಗಿ ಮುದ್ರಿತವಾಗಿದೆ. ೧೩ ಸಂಧಿಗಳುಳ್ಳ ಈ ಗ್ರಂಥದ ಬೆಲೆ ವಿ. ಪಿ. ಮೂಲಕ ಅಂಚೆಯ ವೆಚ್ಚವೂ ಸೇರಿ ೧೨ ಆಣೆಗಳು

ಮತ್ತೊಂದು ನೂತನಗ್ರಂಥ.

ಸಟಿಪ್ಪಣ ಸಿದ್ಧಾಂತಶಿಖಾಮಣಿ.

ಇದು ಶ್ರೀರೇಣುಕಾಚಾರ್ಯರು ಅಗಸ್ತ್ಯರಿಗೆ ಉಪದೇಶಿಸಿದ ವೀರಶೈವ ಸಿದ್ಧಾಂತಶಾಸ್ತ್ರವು, ಪ್ರತಿಯೊಬ್ಬ ವೀರಶೈವನೂ ಮುಕ್ತನಾಗುವುದಕ್ಕೆ ಜನ್ಮಾದಿಯಿಂದ ಕಡೆಯವರೆಗೆ ಆಚರಿಸಬೇಕಾದ ಧರ್ಮಕರ್ಮಗಳು ಇದರಲ್ಲಿ ನಿರೂಪಿತವಾಗಿವೆ. ಮೂಲಗ್ರಂಥಕ್ಕೆ ವೇದಾಗಮ ಪುರಾಣಾದಿವಚನಗಳ ಆಧಾರದಿಂದ ಕೂಡಿದ ಕನ್ನಡ ಟಿಪ್ಪಣವು ವಿಸ್ತಾರವಾಗಿ ಬರೆಯಲ್ಪಟ್ಟು ಉತ್ತಮವಾದ ಕಾಗದದಲ್ಲಿ ಅಚ್ಚುಮಾಡಿಸಲ್ಪಟ್ಟಿದೆ. ಸರ್ವರಿಗೂ ಸಂಗ್ರಾಹ್ಯವಾದ ಈ ಪುಸ್ತಕವು ೩೩೫ ಪುಟಗಳುಳ್ಳ ದೊಡ್ಡ ಗ್ರಂಥವಾಗಿದ್ದರೂ, ಸ್ವಮತಸ್ಥರ ಹಿತಾರ್ಥವಾಗಿ ಬೆಲೆಯು ಕಡಿಮೆಯಾಗಿಡಲ್ಪಟ್ಟಿದೆ. ವಿ. ಪಿ, ಮೂಲಕ ಅಂಚೆಯ ವೆಚ್ಚವೂ ಸೇರಿ ೧-೪-೦.

ಎಸ್. ಆರ್. ಕರಿಬಸವಶಾಸ್ತ್ರಿ,
5 ಗ್ರಂಥಪ್ರಸಾರಕಮಂಡಲಿ, ಮೈಸೂರು.

ಫಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

38

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯು ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗಪೀಡಿತರು, ರಕ್ತಪ್ರದೇಶವಾದವರು, ತೃಷೆಪೀಡಿತರು, ದಮ್ಮಿನವರು, ಕೆಮ್ಮಿನವರ ಕಫು, ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರಿತಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ:—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕಯ್ಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡ ಪಲ್ಲಕ್ಕಿ ಉತ್ಸವದ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ ಸೊಲ್ಲಾಪುರದಲ್ಲಿ ವ್ಯಾಸನತೋಳಿಸಹಿತ ಜದ ಸಮಾರಂಭದ ಫೋಟೋ ೧ ಕ್ಕೆ ಕ್ರಯ ೧ ರುಪಾಯಿ

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಾಮಾದಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೋ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೋ ೧ ಕ್ಕೆ ಕ್ರಯ ಫುಲ್ಲಸೈಜು ೧ ರುಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀ ಜಗದ್ಗುರು ತೋಂಟದಾರ್ಯ ಗದಗ, ಶ್ರೀ ಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ಸತ್ಪುರುಷಮಾಲಾ, ಹಾಳಕೇರಿ ಆನಂದಸ್ವಾಮಿಯ ಫೋಟೋ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೋ ಸಿಗುತ್ತವೆ. ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ

ಯೂಸಫ್ಯಾಷನ್—ಸಿಬ್ಬಸ್ವೃಸ್ಥರು ಗಡಿಯಾರ ಸರ್ಪಗೆ ಹಚ್ಚುವ ಪಾಕೀಟುಗಳೂ, ಯದರಲ್ಲಿ ಹಿಂದೆ ಮುಂದೆ ೩ ಪ್ರಕಾರ ೨ ಫೋಟೋ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ॥, ॥।=, ೧, ೧।, ಪ್ರಕಾರ, ಮತ್ತೂ ಬೆಳ್ಳಿದು ರು ೧॥ ರೋಲ್ಡ್ ಗೋಲ್ಡು ಭಂಗಾರದ್ದು ದುರ್ಬಿಣದ ಗ್ಲಾಸದೂ ಕ್ರಯ ೨॥, ೨॥। ರೂ

ಹೊರಊರಿಗೆ ವಿಪಿಂಪರು ಬೇಕಾಗಿರುತ್ತಾರೆ ಆರ್ಡರ್ ಟಿಕೀಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಕೊಳ್ಳಿರಿ. ನಮ್ಮವಿಳಾಸ— ಗಂಗಪ್ಪಾ ಜೇರಿಗೆ.
24 ಆರ್ಟಿಸ್ಟ, ಸೊಲ್ಲಾಪುರ

(ಹೊಸಪುಸ್ತಕ ೧೩೪೪ ಪುಟಗಳು) ಶ್ರೀ (ಹೊಸಪುಸ್ತಕ ೧೩೪೪ ಪುಟಗಳು)

ಬ್ರ॥ ಶ್ರೀ॥ ಬಿ. ಎ ಸುಬ್ರಹ್ಮಣ್ಯಶರ್ಮ ವಿರಚಿತವಾದ ಸುಧಾರ ಸಧಾರಾಯೆಂಬ ಕನ್ನಡ ಟೀಕಾತಾತ್ಪರ್ಯ ಗಣಿತೋದ್ಧಾರಣೆಗಳಿಂದೊಡಗೂಡಿದ

ಬೃಹಜ್ಜಾತಕಾಖ್ಯ ಹೋರಾಶಾಸ್ತ್ರವು.

ಮಾನವನು ತನ್ನ ಅದೃಷ್ಟಚಕ್ರದ ಫಲಾಫಲಗಳನ್ನು ಅರಿತು, ಮುಂದೊದಗಬಹುದಾದ ಫಲಸ್ವರೂಪವನ್ನೂ ಇತರರ ಸಹಾಯವಿಲ್ಲದೆಯೆ ತಿಳಿದುಕೊಂಡು, ದುಷ್ಫಲಗಳು ದೂರವಾಗಿ, ಸುಫಲಗಳು ಕರಗತವಾಗುವಂತೆ ಮಾಡುವಂತಹ, ಪರಿಹಾರೋಪಾಯಗಳನ್ನು ಸೂಚಿಸಬೇಕಾದರೆ, ನಮ್ಮಿಂದ ಈಗತಾನೆ ಸಂಸ್ಕೃತ ಹಿಂದಿ ಮರಾಟಿ ಭಾಷೆಗಳಿಂದ ತರ್ಜುಮೆಮಾಡಿ ಪ್ರಕಾಶಗೊಂಡ "ಸುಧಾರಸಧಾರಾ" ಎಂಬ ಕನ್ನಡ ಟೀಕಾತಾತ್ಪರ್ಯ ಉದಾಹರಣೆಗಳಿಂದ ಕೂಡಿದ ಬೃಹಜ್ಜಾತಕವೆಂಬ ಹೋರಾಶಾಸ್ತ್ರವೊಂದಲ್ಲದೆ ಮತ್ತ್ಯಾವದೂ ಸಮರ್ಥವಾಗಿಲ್ಲವು. ೧೩೪೪ ಪುಟ ೩ ಭಾಗಗಳ ಪುಸ್ತಕ ಒಂದೇ ಬೈಂಡ್ ಈ ಗ್ರಂಥರತ್ನವು ಆಬಾಲವೃದ್ಧರಾದಿಯಾಗಿ ಅಕ್ಷರವನ್ನರಿತ ಹೆಂಗಸರೂ ಸಹಾಪರರ ಸಹಾಯಾಪೇಕ್ಷೆ ಇಲ್ಲದೆ ಓದಿ ತಿಳಿಯಲು, ಅನುಕೂಲವಾಗಿರುವುದು. ಇದರೊಳಗಡಗಿರುವ ೨೮ ಪ್ರಕರಣಗಳಲ್ಲಿನ ವಿಷಯಸಂಗ್ರಹ ವೆಂತೆಂದರೆ:—೧-೨ ನೇ ಪ್ರಕರಣಗಳಲ್ಲಿ ಶಾಸ್ತ್ರಪ್ರಯೋಜನವೂ, ಜೋತಿಶಾಸ್ತ್ರದ ಪೀಠಿಕಾಭಾಗಗಳು ೩, ಸಜೀವ ನಿರ್ಜೀವವಸ್ತುಗಳ ಉತ್ಪತ್ತಿ ೪, ಗರ್ಭಧಾರಣ ಯೋಗಗಳು ೫, ಜನನಕಾಲಲಕ್ಷಣ ಮತ್ತು ಫಲ ೬, ಬಾಲಾರಿಷ್ಟವಿಚಾರ ಅವುಗಳ ನಿವಾರಣೋಪಾಯ ೭, ಆಯುರ್ದಾಯವಿಚಾರ ೮, ದಶಾಭುಕ್ತಿನಿರ್ಣಯ ೯, ಅಷ್ಟಕವರ್ಗವಿಚಾರ ೧೦, ಜೀವನೋಪಾಯವಿಚಾರ ೧೧, ರಾಜಯೋಗಸೂಚನೆ ಅವುಗಳ ಫಲವಿಚಾರ ೧೨, ೧೮೦೦ ಯೋಗಗಳ ಲಕ್ಷಣ ಮತ್ತು ಫಲ ೧೩, ಚಂದ್ರಸಂಬಂಧವಾದ ಯೋಗಗಳು ೧೪, ಒಂದಕ್ಕಿಂತಲೂ ಹೆಚ್ಚು ಗ್ರಹಗಳು ಒಂದೇಕಡೆ ಸೇರಿದರೆ ಅವುಗಳ ಫಲ ೧೫, ಸನ್ಯಾಸಯೋಗಗಳು ೧೬, ನಕ್ಷತ್ರಫಲಗಳು ೧೭, ರಾಶಿಫಲಗಳು ೧೮, ರಾಸಿಗಳ ಫಲ ಮತ್ತು ಕೇರಳಿಯೋಕ್ತ ಫಲಗಳು ೧೯, ದೃಷ್ಟಿಫಲಗಳು ೨೦, ಭಾವಲಕ್ಷಣ ಮತ್ತು ಆ ಫಲಗಳ ವಿಚಾರ ೨೧, ಕ್ಷೇತ್ರಫಲಗಳು ೨೨, ಗ್ರಹಗಳ ಅವಸ್ಥೆ ಅಷ್ಟಕವರ್ಗ ಫಲ ೨೩, ಅನಿಷ್ಟಯೋಗಗಳು ಅವುಗಳಿಂದಾಗುವ ಫಲಗಳು ೨೪, ಸ್ತ್ರೀಜಾತಕ ಅದರ ಫಲಗಳು ೨೫, ಮರಣಕಾರಣ ಅದರ ಫಲಗಳು ೨೬, ನಷ್ಟಜಾತಕ ಬರಿಯುವ ರೀತಿ ೨೭, ದ್ರೇಕ್ಕಾಣವರ್ಣನೆ ಪ್ರಶ್ನೆಗೆ ಬೇಕಾದ ಸಹಾಯವಿಷಯ ೨೮, ಅನುಕ್ರಮಣಿಕಾಸಂಗ್ರಹ ಮತ್ತು ಗ್ರಂಥಕರ್ತರ ವಂಶವರ್ಣನೆ:—

ಮೇಲೆ ಹೇಳಿರುವಂತೆ ಬರೆಯಲ್ಪಟ್ಟ ಒಂದು ಪುಸ್ತಕ ತಮ್ಮ ಬಳಿಯಲ್ಲಿದ್ದರೆ ೧೦ ಜನ ಜ್ಯೋತಿಷ್ಕರಿದ್ದರೆ ಎಷ್ಟು ಅನುಕೂಲವೋ ಅಷ್ಟು ಅನುಕೂಲ. ಇದು ಪುರುಷರಿಗೂ, ಸ್ತ್ರೀಯರಿಗೂ ಧಾರಾಳವಾಗಿ ತಿಳಿಯುವಂತೆ ಉತ್ತಮಕಾಗದದಲ್ಲಿ ಪ್ರಿಂಟ್‌ಮಾಡಿಸಿದೆ, ಈ ತಿಂಗಳು ಆಖೈರಿನೊಳಗಾಗಿ ಆರ್ಡರ್ ಕೊಡುವವರಿಗೆ ೪-೦-೦ ರೂ. ವಿ. ಪಿ. ಛಾರ್ಜು ೦-೬-೦ ಆಣೆ ನಂತರ ೫-೦-೦ ರೂ. ಜಾಗತ್ರೆ ತರಿಸಿಕೊಳ್ಳಿ ನಂತರ ಈ ಬೆಲೆಗೆ ದೊರೆಯಲಾರದು.

ಇತರಪುಸ್ತಕಗಳು.

——:೦:——

ಟೀಕಾಜೈಮಿನಿ ೯೩೦ ಪುಟ ೪-೦-೦ ರೂ. ಸಟೀಕಹರಿಕಥಾಮೃತಸಾರ ೩೪೪ ಪುಟ ೧-೪-೦ ರೂ ಕನ್ನಡದ್ವಾದಶಸ್ಕಂಧ ಭಾಗವತ ೩-೦-೦ ರೂ. ಶುಕಸಪ್ತತಿ ೭೦ ಕಥೆ ಶುದ್ಧಪ್ರತಿ ೨-೦-೦ ರೂ. ೪ ಜನ ಫಕೀರರ ಕಥೆ ೦-೮-೦. ಸಟೀಕಾಭೋಜರಾಜಚರಿತ್ರೆ ೦-೮-೦. ಇವುಗಳಲ್ಲದೆ ನಮ್ಮಲ್ಲಿ ಯಾವಾಗ್ಯೂ ಕನ್ನಡ, ಸಂಸ್ಕೃತ, ತೆಲಗು ಗ್ರಂಥಗಳು ದೊರೆಯುತ್ತೆ.

ಟಿ. ಯರ್. ಕೃಷ್ಣಯ್ಯಶೆಟ್ಟಿ, ಬುಕ್‌ಡಿಪೋ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೊಂಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು
47 ಕಾಪಾಡುವುದರಲ್ಲಿ ಶ್ರೇಷ್ಠವಾದ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ-ಚೆನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು.

ಶೀತವಾಯು—ಕೆಮ್ಮು-ನೆಗಡಿ-ದಿನಜ್ವರ-ಮೂರರಜ್ವರ ನಾಲ್ಕರಜ್ವರ- ಮಲೇರಿಯಾಜ್ವರ- ತಲೆನೋವು- ಮೈಕೈನೋವು ಮತ್ತು ಭಾರ-ಅರೋಚಕ ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣ ಭೇದಿ-ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಶೆಳತ-ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ೨೫೦ ಮಾತ್ರೆ ೪ ಆಣೆ. ಇದಕ್ಕೆ ಒಂದು ಇನಾಮು. ವಿ. ಪಿ ಛಾರ್ಜು ಪ್ರತ್ಯೇಕ.

ಆಮೋದಿನಿ:— ಅಮೋಘವಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರಮಾಡುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷ ಕೀರ್ತಿಯನ್ನು ಸಂಪಾದಿಸಿ ನಾನಾತರಹಾ ಕೆಮ್ಮು, ದಮ್ಮು ಉಬ್ಬಸ, ವಾಂತಿ, ವಾಕರಿಗೆ, ಮಲಬಂದ, ಅಗ್ನಿಮಾಂದ್ಯ, ಪಿತ್ತಸಂಕಟ, ಅರೋಚಕ, ಬಾಯಾರಿಕೆಗಳನ್ನು ತಕ್ಷಣ ಗುಣಪಡಿಸಿ ಶರೀರಕ್ಕೆ ತೀಕ್ಷ್ಣಮಾಡದೆ ಧಾತುವೃದ್ಧಿಯುಂಟುಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೧೫೦ ಮಾತ್ರೆ ೪ ಆಣೆ. ಇದಕ್ಕೆ ಒಂದು ಇನಾಮು. ವಿ.ಪಿ. ಛಾರ್ಜು ಪ್ರತ್ಯೇಕ.

ವಿಳಾಸ— ಬಿ ವಿ. ಪಂಡಿತ್,
ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರ್ ಡಿ॥

ದೊಡ್ಡ ಕಂಪೆನಿ! ಹೊಗಳುವ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರಿಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯೂ. ಎನ್. ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

ಬಹುಮಾನ ! ಶ್ರೀ. ಬಹುಮಾನ !!

ಅತ್ಯಾಶ್ಚರ್ಯಕರವಾದ ಬಹುಮಾನ.

೨೫ ಸಾವಿರ ರೂಪಾಯಿಗಳು ಹಂಚಲ್ಪಡುವವು.

ದಿವ್ಯೌಷಧ. ಬಳ್ಳಾರಿ. ಸುಪ್ರಸಿದ್ಧೌಷಧ.

ಸರ್ವಜನಮನೋಲ್ಲಾಸಿನಿ ಅಂಡ್ ಕೋ. ಇವರ

(• ನಾರಸಿಂಹಚೂರ್ಣವು •)

ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನು ಆರೋಗ್ಯಭಾಗ್ಯವನ್ನು ಬಯಸುತ್ತಾನೆ ಎಂಬುವದು ಸಹಜವಾದುದಷ್ಟೆ? ಆದರೆ ಅನೇಕ ದುರ್ವರ್ತನೆಗಳಿಂದ ಮೂಲಕಾರಣವಾದ ಧಾತುವನ್ನು ನಷ್ಟಪಡಿಸಿಕೊಂಡು ಹಲವುವಿಧ ರೋಗಗಳನ್ನು ತಂದಿಟ್ಟುಕೊಂಡಿರುವವರನೇಕರನ್ನು ಕಣ್ಣಾರ ನೋಡುತ್ತಿರುವೆವು. ಈ ನಷ್ಟಧಾತುವಿಗಾಗಿ ಅನೇಕಾನೇಕ ವೈದ್ಯರು ಹಲವುವಿಧ ಔಷಧಗಳನ್ನು ವಿಶೇಷವಾದ ಬೆಲೆಯನ್ನಿಟ್ಟು ವಿಕ್ರಯಿಸಿದರು ಪ್ರಯೋಜನವು ಮಾತ್ರ ಕಡಿಮೆಯಾಗುತ್ತಿರುವದು ವಿಷಾದಕರವಾಗಿರುವದು. ಈ ಲೋಪವನ್ನು ಹೋಗಲಾಡಿಸುವುದಕ್ಕಾಗಿ (ನಾರಸಿಂಹಚೂರ್ಣವು) ಎಂಬ ಒಂದಾನೊಂದು ಸಶಾಸ್ತ್ರೀಯವಾದ ಚೂರ್ಣವನ್ನು ಸಿದ್ಧಪಡಿಸಿರುವೆವು. ಈ ಚೂರ್ಣವನ್ನು ಒಬ್ಬ ಮನುಷ್ಯನು ೧೪ ದಿನಗಳು ಸೇವಿಸಿದರೆ ಮುದುಕತನ, ಅನೇಕತರಹೆಯ ಮೇಹರೋಗಗಳು, ಪಾಂಡುರೋಗ, ಹೀನಸ, ಹದಿನೆಂಟು ಬಗೆಯಾದ ಕುಷ್ಠಗಳು, ಎಂಟುವಿಧ ಉದರರೋಗಗಳು, ಭಗಂಧರವು, ಮೂತ್ರಕೃಛ್ರವು, ಗೃಧ್ರಸೀವಾತವು, ಕಾಮಿಲೆ, ಕ್ಷಯವು, ಮಹಾಶ್ವಾಸಗಳು, ದಾರುಣವಾದ ಬಿದುಬಗೆಯಾದ ಕಾಸಗಳು, ಎಂಭತ್ತುವಿಧಗಳಾದ ವಾತರೋಗಗಳು, ನಲವತ್ತು ಬಗೆಯಾದ ಪಿತ್ತಗಳು, ಇಪ್ಪತ್ತು ಶ್ಲೇಷ್ಮರೋಗಗಳು, ದ್ವಂದ್ವಸನ್ನಿಪಾತರೋಗಗಳು, ಮೂಲರೋಗಗಳು ಇವೇ ಮುಂತಾದ ಸಮಸ್ತ ರೋಗಗಳು ಸಿಡಿಲಿನಿಂದ ಗಿಡಗಳು ನಾಶವಾಗುವಂತೆ ನಾಶವಾಗುತ್ತಿವೆ. ಇದರ ಸೇವನೆಯಿಂದ ಚೆನ್ನದಂಥಾ ಕಾಂತಿಯು, ಸಿಹ್ಮನಂತೆ ಪರಾಕ್ರಮವು, ಕುದುರೆಯಂಥಾ ವೇಗವು, ಹಕ್ಕಿಗಳ ದೃಷ್ಟಿಯಂತೆ ದೃಷ್ಟಿಯು ಉಜ್ವಲರಾಗಿ ನೂರುಮಂದಿ ಯುವತಿಯರೊಂದಿಗೆ ಸುರತವಂ ಮಾಡುವಂಥಾ ಅತ್ಯಧಿಕ ವೀರ್ಯವೃದ್ಧಿಯುಂಟಾಗಿ ನೃಸಿಹ್ಮನಿಗೆ ಸಮಾನರಾದ ಮಕ್ಕಳನ್ನು ಹುಟ್ಟಿಸುವ ಪ್ರಬಲ ಬಲುವರುವದು. ಇದರಲ್ಲಿ ಯಾವ ವಿಧವಾದ ರಸಗಳಾಗಲಿ ಮಿಶ್ರವಾಗಿಲ್ಲ, ಇನ್ನಾವ ದೋಷಗಳೂ ಇಲ್ಲ. ನಿರ್ದುಷ್ಟವಾದದ್ದು, ಫಕ್ತವನಸ್ಪತಿಗಳಿಂದಲೇ ಸಿದ್ಧಮಾಡಿದ ದಿವ್ಯವಾದ ಔಷಧ. ಅನೇಕ ಪಂಡಿತರು, ಧನಿಕರು, ಸರ್ಟಿಫಿಕೇಟುಗಳನ್ನು ಕೊಟ್ಟಿರುವರು. ಬಳ್ಳಾರಿಯಲ್ಲಿ ಸುಪ್ರಸಿದ್ಧವೈದ್ಯರೆಂದು ಪ್ರಖ್ಯಾತಿಗೊಂಡ ವೈದ್ಯ ಕರಿವೀರಪ್ಪನವರ ಪುತ್ರರಾದ ನೇಟಿವ್ ಡಾಕ್ಟರ್ ಬಿ. ವಿ. ಸಿದ್ದಪ್ಪನವರಿಂದ ತಯಾರಿಸಲ್ಪಟ್ಟಿರುವದು.

೧೪ ದಿನ ಉಪಯೋಗಕ್ಕೆಬರುವ ಡಬ್ಬಿ ೧ ಕ್ಕೆ ಬೆಲೆ ರೂ. ೧—೧—೦.

—(ಬಹುಮಾನಗಳನ್ನು ಹಂಚುವ ವಿಧಾನ)—

೧ ಡಜನ್ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೧೦೦೦೦ ರೂ. ೬ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೬೦೦೦ ರೂ. ೩ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೪೦೦೦ ರೂ. ೨ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೩೦೦೦ ರೂ. ೧ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ೨೦೦೦ ರೂ.

48 ೧೯೧೪ ನೇ ಜುಲೈ ೧ ನೇ ತೇದಿ ಮೊದಲು ೧೯೧೫ ನೇ ಜುಲೈ ೧ ನೇ ತೇದಿವರಿಗೂ ಈ ಔಷಧವು ಒಂದು ಲಕ್ಷ ಡಬ್ಬಿಗಳು ಖರ್ಚಾದಕೂಡಲೇ ಈ ಲೆಕ್ಕವನ್ನು ಅಲ್ಲಿಗೆ ಸಂಕ್ಷೇಪಮಾಡಿ ಬಹುಮಾನಗಳನ್ನು ಹಂಚುತ್ತೇವೆ. ಒಂದುವರ್ಷದ ಮೇಲಣ ನಿಯಮಿತ ದಿನಕ್ಕೆ ಸರಿಯಾಗಿ ಒಂದು ಲಕ್ಷ ಡಬ್ಬಿಗಳು ಖರ್ಚಾಗದಿದ್ದರೆ ಮತ್ತು ವಾಯಿದೆಯನ್ನು ಹೆಚ್ಚಿಸದೆ ಎಷ್ಟು ಡಬ್ಬಿಗಳು ಖರ್ಚಾಗಿರುತ್ತವೆಯೋ ಅಷ್ಟಕ್ಕೆ ದಾಮಾಷಾ ಪ್ರಕಾರ ಆಗತಕ್ಕಷ್ಟು ಬಹುಮಾನವನ್ನು ಮಾತ್ರ ಹಂಚುತ್ತೇವೆ. ಪ್ರತಿಯೊಬ್ಬ ಮನುಷ್ಯನು ತಾನು ಕೊಡುವ ಹಣಕ್ಕೆ ಸರಿಯಾಗಿ ದಿವ್ಯೌಷಧವನ್ನು ಪಡಿಯುವದಲ್ಲದೆ ಬಹುಮಾನವನ್ನು ಸಹಾ ಹೊಂದುವದಕ್ಕೆ ಅರ್ಹನಾಗಿರುತ್ತಾನೆ ಈ ವಿಷಯದಲ್ಲಿ ತಿಲಮಾತ್ರವಾದರು ಸಂಶಯವಿಲ್ಲ. ಬಹುಮಾನದ ಮೊತ್ತವನ್ನು ನಿಷ್ಪಕ್ಷಪಾತವಾಗಿ ಒಂದೇ ಸಮವಾಗಿ ಹಂಚಲ್ಪಡುವೆವು. ಇದು ಮೋಸವಲ್ಲ, ಲಾಟರಿಯಲ್ಲ, ಯಾವ ವಿಧವಾದ ಕುಹಕತನವು ಇಲ್ಲ, ಸತ್ಯವಾಗಿ ಬಹುಮಾನವನ್ನು ಹಂಚುತ್ತೇವೆ. ಅಸೂಯಾಂಧರ ಮಾತುಗಳಿಗೆ ನಿಗಾ ಕೊಡಲಾಗದು, ಜಾಗ್ರತೆ ತರಿಸಿಕೊಳ್ಳಿರಿ. ಔಷಧದ ಗುಣವನ್ನು ಪರೀಕ್ಷಿಸಿರಿ. ಅಪೇಕ್ಷಕರು ಈ ಕೆಳಗಣ ನಮ್ಮ ಅಡ್ರೆಸ್ಸಿಗೆ ಬರೆದು ತರಿಸಿಕೊಳ್ಳಿರಿ.

ಇದರ ಅನುಪಾನ ಪತ್ರಿಕೆಯನ್ನು ಬಹುಮಾನದ ಟಿಕೀಟನ್ನು ಡಬ್ಬಿಸಂಗಡ ಕಳಿಸುವೆವು, ನಮ್ಮ ಕಂಪೆನಿಯ ಕಾಶಿ ವಿಶ್ವನಾಥ ಮಾರ್ಕು ಇಲ್ಲದ ಡಬ್ಬಿಯನ್ನು ತೆಗೆದುಕೊಳ್ಳಲಾಗದು.

ನಮ್ಮ ಅಡ್ರೆಸ್ಸು.
ಸರ್ವಜನಮನೋಲ್ಲಾಸಿನಿ ಅಂಡ್ ಕೋ ಬಳ್ಳಾರಿ.

ಬಂದು, ಸಂಘದ ರಿಪೋರ್ಟು ಮೂಲಕ ಸಂಘದ ಅಭಿವೃದ್ಧಿ ವಿಷಯವನ್ನೂ ವಾಚಕವೃಂದದವ ವೃತ್ತಾಂತವನ್ನೂ ತಿಳಿದು ಬಹಳವಾಗಿ ಸಂತೋಷಿಸಿ ಇಂಥ ಉತ್ತಮ ಸ್ಥಿತಿಯಲ್ಲಿರುವ ಸಂಘಕ್ಕೆ ಪ್ರೋತ್ಸಾಹಿಸಲು ಸರ್ಕಾರದಿಂದ ಪ್ರಕಟವಾಗುವ ಸರ್ವ ಜನರ ಜೀವನೋಪಾಯಕ್ಕೆ ಮುಖ್ಯ ಮಾರ್ಗವಾಗಿರುವ ಒಕ್ಕಲತನವನ್ನು ಬೋಧಿಸುವ "ಮೈಸೂರ್ ರಿವಿನ್ಯೂ ಮತ್ತು ವ್ಯವಸಾಯ ಗೆಜೆಟ್" ನ್ನು ಮುಫತ್ತಾಗಿ ಸರ್ಕಾರದವರಿಂದ ಕೊಡುವದಾಗಿ ಅಪ್ಪಣೆ ಕೊಡಿಸಿದ್ದಲ್ಲದೆ ಅದರಂತೆ ಸಂಘದ ವಿಜಿಟರ್ಸ್ ಬುಕ್ಕಿನಲ್ಲಿ ಸ್ವಹಸ್ತದಿಂದ ಬರೆದು ಸಂಘದ ಮುಂದಾಳುಗಳು ಉತ್ಸಾಹಿತರಾಗುವಂತೆ ಬೋಧಿಸಿ ತೆರಳಿದರು. ಇದೇ ಅಲ್ಲವೆ ಪ್ರಜಾವಾತ್ಸಲ್ಯ? ಇಂಥ ಅಧಿಕಾರಿಗಳಿಗೆ ಜಾಗ್ರತೆಯಾಗಿ ಉಚ್ಚಪದವಿಯನ್ನು ಪಾಲಿಸಲಿ ಎಂಬುದಾಗಿ ಪರಮೇಶ್ವರನನ್ನು ಪ್ರಾರ್ಥಿಸುತ್ತೇವೆ.

ಎ. ಪಿ. ಎಸ್.
ಗಾ॥ ವ್ಯ. ಸ. ಮೆಂಬರ್.

ಪತ್ರವ್ಯವಹಾರ.

ನಿಜಾಂ ಇಲಾಖಾ ಗುಲ್ಬರ್ಗಾ ಜಿ॥ ಶಹಪುರ ತಾ॥ ಮೈತ್ರಿ ನಾಯಿಕಲ್ಲ ಸಂಸ್ಕೃತ ಪಾಠಶಾಲಾ.

ಈ ರಾಜ್ಯಾಂತರ ವೀರಶೈವಾಶೀರ್ವಾದಗಳು ವಿದ್ಯೆಯಿಂದ ಹಿಂದುಳಿದು ಅಜ್ಞಾನವೆಂಬ ಕಗ್ಗತ್ತಲೆಯಲ್ಲಿ ವಿದ್ಯಾರ್ಥಿಗಳು ಜಾಗರೂಕರಾಗದೆ ಇರುವುದು ಕಂಡು ಈ ಗ್ರಾಮದ ಶ್ರೀಮಠಸ್ಥ ವೀರಶೈವರೂ ಪುರಪ್ರಮುಖರಾದ ಪೊ॥ಗಾ॥ ಸಂಗಣ್ಣನವರೂ ಅಜ್ಞಾನ ಪರಿಹಾರಕ್ಕೂ ಸ್ವಮತದ ಏಳ್ಗೆಗೂ ವಿದ್ಯೆಯೇ ಕಾರಣವೆಂಬದಾಗಿ ಸಂಪೂರ್ಣ ನಂಬಿ, ಶಕೆ ಸಂವತ್ಸರದ (ಆಂಗಿರ) ಮ್ರ॥ ಶು॥ ೯ ಯಲ್ಲಿ ಸ್ಥಾಪಿಸಿ ಮಾ॥ ವಿ॥ ವೆ॥ ಸಿದ್ಧಲಿಂಗಸ್ವಾಮಿಗಳು ಪಂ॥ ರಾಮಾಚಾರ್ಯರು ಬಿಜಯಂಗೈಸಿದ ನಂತರ ಪರಸ್ಥಳ ವಿದ್ಯಾರ್ಥಿಗಳಿಗೆ ಅನ್ನೋದಕವನ್ನೀಯುವಂತೆ ಪರ್ಯಾಪಿಸಲು ಈ ಶಾಲಾ ಅಧ್ಯಾಪಕರಾದ ಬಸವರಾಜಶಾಸ್ತ್ರಿಗಳು ಸ್ವಸುಪ್ರಕಾರ ವಿನಾಯಕ ಶಾರದಾ ಪೂಜೆಯಂಗೈಸಿ ಪಾಠ ಹೇಳಲಾರಂಭಿಸಿದರು. ಆಬಳಿಕ ಪಂ॥ ರಾಮಾಚಾರ್ಯರು ಸಂಸ್ಕೃತ ವಿದ್ಯೆಯಿಂದುಂಟಾಗುವ ಮಹತ್ವವನ್ನೂ ತದ್ದಾನದಿಂದುಂಟಾಗುವ ಪುಣ್ಯಪ್ರಭಾವವನ್ನೂ ಮೃದು ಮಧುರವಾದ ವಾಕ್ಯಂಗಳಿಂ ಕೇಳುವ ಜನಗಳಿಗಿಂಪಾಗುವಂತೆ ಹೇಳಲ್ಕೆ, ಈ ಪಾಠಶಾಲಾ ಚಿರಸ್ಥಾಯಿಯಾಗಿ ನಡೆಯುತ್ತಿದಕ್ಕಾಗಿ ತಮ್ಮ ಅನೇಕ ಘವಾದ ಉದಾರಾಶ್ರಯದಿಂದ ಪ್ರತಿವರ್ಷದಲ್ಲಿ ವರ್ಗಣಿ ಕೊಡುವದಕ್ಕೆ ಬಿಜಾಪುರದ ದೇ॥ ಸಿದ್ಧಪ್ಪ-ಶಾಯಿಬಣ್ಣ ಚಂದ್ರಾಳ ಜಹಗೀರದಾರ ಇವರು ೨೫ ರೂ.ಗಳು ಸಾವಿರ ಬಸವಣ್ಣನವರು ೨೦ ಶಹಪುರ ಸಾ॥ ಬಸವಣ್ಣನವರು ೨೫, ಗೋಂದೆಯ ಮಾ॥ ಗಾ॥ ಚಂದ್ರಾಯರು ೧೫, ದೇವರ ಸೂಗೂರು ಸಾ॥ ಸೂಗೂರಪ್ಪನವರು ೧೫, ಗೋಗಿ ಮಾ॥ ಗಾ॥ ಭೀಮಣ್ಣನವರ ೧೫, ಬಿಜಾಪುರದೊಳಗೆ ಮಾ॥ ಗಾ॥ ನಾಗನಗೌಡಪ್ಪನವರು ೧೦, ಪೊ॥ ಗಾ॥ ಸಿದ್ಧಪ್ಪನವರು ೧೦, ಪೊ॥ ಪಾ॥ ಬಿ. ಶಂಕರಪ್ಪನವರು ೧೦, ಮಾ॥ ಗಾ॥ ಬಿ॥ ಬಸವಂತರಾಯ ಪ ಶಿವಲಿಂಗಪ್ಪನವರು ೧೦, ಬಿನ್ನಾಳ ಸಿದ್ಧಲಿಂಗಪ್ಪ ಪ-ತಮ್ಮಣ್ಣ ಇವರು ೧೦, ಲೋಂಕಲ ಲಿಂಗನಗೌಡರು ೧೦, ಕೊಟ್ನೂರಗಿ ಮಾ॥ ಗಾ॥ ಸಿದ್ಧಪ್ಪನವರು ೧೦, ಮಳ್ಳಳ್ಳಿ ಬಸವಪ್ಪಗೌಡರು ೧೦, ಬಿಳಾರ ರುದ್ರಪ್ಪನವರ ಪುತ್ರರಾದ ಬಸವಪ್ಪನವರು ೧೦, ನೀರಗಗುಂಭ ಮಲ್ಲಿಗರ ಚನ್ನಬಸವಪ್ಪನವರು ೧೦, ತಂಗಡಗಿ ಶಾಂತವೀರಪ್ಪಗೌಡರು ೧೦, ನೀರಡಗುಂಭ ವಕೀಲ ಶಂಕರಪ್ಪನವರ ಪತ್ನಿಯರಾದ ಚನ್ನಬಸಮ್ಮ ವ॥ ಗಂಗಮ್ಮ ಈ ಉಭಯರು ೧೫, ಕಣ್ಣೆ ಮಾ॥ಗಾ॥ ಚನ್ನಬಸವಪ್ಪನವರು ೧೦, ಶರಣಪ್ಪ ಪೊ॥ಪಾ॥ ಇವರು ೧೦, ಕಾಮ್ಮಳ್ಳಿ ಮಾ॥ ಗಾ॥ ಭೀಮರಾಯ ವ. ಸಿದ್ಧರಾಮಪ್ಪ ಈ ಉಭಯರು ೧೦, ಬೆಂಚಿಗೊಂಬಳಿ ಪೊ॥ ರುದ್ರಪ್ಪಗೌಡರು ೧೦ ರೂ, ವಾಗ್ದಾನಮಾಡಿದ್ದಾರೆ ಮುಂದೆ ಸಹಾಯ ಮಾಡುವ ಪ್ರಮುಖ ವೀರಶೈವರನ್ನು ಸ್ಟಾರಿನೊಳಗೆ ಪ್ರಸಿದ್ಧಪಡಿಸಲಾಗುವುದು. ಈ ಸತ್ಕಾರ್ಯಕ್ಕೆ ಮನಸ್ಸುಕೊಟ್ಟ ಸಕಲಮಹನೀಯರಿಗೆ ಜಗದೀಶನು ಆಯುರಾರೋಗ್ಯೈಶ್ವರ್ಯಾಭಿವೃದ್ಧಿಯನ್ನೀಯಲೆಂಬದಾಗಿಯೂ ಈ ಪಾಠಶಾಲೆಯು ಚಿರಸ್ಥಾಯಿಯಾಗಿ ನಡೆಯುವಂತೆ ಮಾಡಲೆಂಬದಾಗಿಯೂ ಶ್ರೀಪರಮೇಶ್ವರನನ್ನು ಅನನ್ಯಭಾವದಿಂ ಕೋರಿ ಪ್ರಕೃತಲೇಖನವನ್ನು ಪೂರೈಸುತ್ತೇನೆ.

ಶಾಲಾ ವ್ಯವಸ್ಥಾಪಕ,
ವೀರಪ್ಪ; ಅಂಗಡಿ.

ಹಾವೇರಿ.

ಮೊನ್ನೆ ಮಂಗಳವಾರದ ಕರ್ನಾಟಕ ವೃತ್ತಪತ್ರದಲ್ಲಿ ಪ್ರಸಿದ್ಧಿಸಿದ ಧಗಡುಬಪ್ಪಾ ಊರ್ಜಜ್ಞಾನೇಶ್ವರ ಶರ್ಮನ ವಿಷಯವಾಗಿ ಓದಿನೋಡಲಾಯಿತು. ಆದರೆ ಕೆಲವರು ಸಹಿನಿಸಿ ಪ್ರಸಿದ್ಧಮಾಡಿದ್ದು, ಅವನನ್ನು ತಿರಿಗಿ ವೀರಶೈವಧರ್ಮದಲ್ಲಿ ತೆಗೆದುಕೊಳ್ಳಲಿಕ್ಕೆ ಮುರಘೇಂದ್ರಸ್ವಾಮಿಗಳಿಗೆ ಅಧಿಕಾರವಿಲ್ಲವೆಂದು ಸಿದ್ಧಾಂತಮಾಡಲಿಕ್ಕೆ ಪ್ರಯತ್ನಮಾಡಿದ್ದಾರೇ ವಿನಾ ಅವರ ಸ್ವತ್ವವಾದ ಕರ್ತವ್ಯದ ಕಡೆಗೆ ಲಕ್ಷ ಕೊಟ್ಟಂತೆ ತೋರುವದಿಲ್ಲ. ಅವರ ಹೇಳಿಕೆಯಂತೆ ಪಂಚಾಚಾರ್ಯರೇ ಮಾಡಲಿಕ್ಕೆ ನಮ್ಮ ಪಂಚಾಚಾರ್ಯರಲ್ಲಿ ಇದುವರೆಗೆ ಒಬ್ಬರಾದರೂ ಕಂಡುಬರುವಂತೆ ಇದೆ. ಮತ್ತು ಇದರಲ್ಲಿ ಕೃತ್ಯ ಆದರೂ ಸನ್ಯಾಸ ಆಶ್ರಮದವರಿಗೆ ಅಧಿಕಾರವಿಲ್ಲವೆನ್ನಲಿಕ್ಕೆ ಅವರು ಜನ್ಮಕೊಟ್ಟಿದ ಕಾರಣವೇನು? ದರ ಒಂದು ಧರ್ಮ ಜಾಗ್ರತೆ ಗೋಚರವಾಗಿ ವೈದಿಕ ಧರ್ಮದಲ್ಲಿ ಸನ್ಯಾಸ ಆಶ್ರಮಗಳುಂಟಾಗಿವೆ. ಮತ್ತು ದರ ಒಂದು ಸ್ವತ್ವವಾದ ಕಾರಣವನ್ನು ಯಾರಾದರೂ ಅದು ಮಾನ್ಯವಾಗಲಿಕ್ಕೆ ಬೇಕು. ಇನ್ನು ಇದು ಯೋಗ್ಯವಾದ ಕಾರ್ಯವಲ್ಲ ಅವನು ಅನಾಚಾರಿ ಇನ್ನು ಅವನನ್ನು ತೆಗೆದುಕೊಳ್ಳುವದರಿಂದ ಘಾತವಾಗುತ್ತದೆ ಅಂದರೆ ದರ್ಶನವರಂತೆ ನಡೆವ ಅನೇಕ ಅನಾಚಾರಗಳನ್ನು ನಡೆಸುವವರು ನಮ್ಮಲ್ಲಿ ಎಷ್ಟು ಜನರಿಲ್ಲ? ಅನಾದರೂ ವೇದ ಸಿದ್ಧಾಂತಾದಿಗಳನ್ನು ಕಲಿತು ನಾಸ್ತಿಕ ಸ್ವಸ್ತಿಯವನು ಇರುತ್ತಾನೆ. ಮತ್ತೂ ಈಗಿನ ಕಾಲದಲ್ಲಿ ನಮ್ಮ ಅನೇಕ ಜನರು ಮತಾಂತರವಾಗಲಿಕ್ಕೆ ಇವರ ಅನುಭವದಿಂದ ಎಷ್ಟೋ ತಡೆದಂತೆ ಆಗುತ್ತದೆ. ಇನ್ನು ನಮ್ಮ ಧರ್ಮದಲ್ಲಿ ತೆಗೆದುಕೊಳ್ಳಲಿಕ್ಕೆ ಬರುವಂತೆ ಇಲ್ಲವೆಂದು ಹೇಳಲಿಕ್ಕೆ ಎಷ್ಟೋ ಕ್ರಿಶ್ಚಿಯನ್ ಮತಾವಲಂಬಿಯವರನ್ನು ತೆಗೆದುಕೊಂಡ ಉದಾಹರಣೆಯನ್ನು ಕೊಡಬಹುದು. ಮತ್ತು ಪೂರ್ವದಲ್ಲಿ ಬಸವೇಶ್ವರರು ಮತವನ್ನು ಉದ್ಧರಮಾಡುವ ಕಾಲದಲ್ಲಿ ಈ ಪ್ರಕಾರದ ಕಟ್ಟುಗಳನ್ನು ಮಾಡಿದ್ದರೆ ನಮ್ಮವರು ಮುಂದಕ್ಕೆ ಬರುತ್ತಿದ್ದರೇ? ಬೇಗನೆ ದರ ಒಬ್ಬ ಮತಸುಧಾರಕನು ದೀನರಾಗಿ ಬಂದವರ ಮೇಲೆ ಅವರನ್ನು ಪುನೀತರನ್ನಾಗಿ ಮಾಡುವುದು ಕರ್ತವ್ಯಕರ್ಮವಾಗಿದೆ. ಇದು ಹೊಲ್ಲಕೆಂದು ತಿಳಿಯಬೇಡಿರಿ. ಇದರಂಥ ದೊಡ್ಡ ಕಾರ್ಯ ಮತ್ತೊಂದಿಲ್ಲ. ಎಷ್ಟು ಜ್ಞಾನವಂತರಾದರೂ ಅದನ್ನು ಹಿಂದಕ್ಕೆ ಒತ್ತಿ ಬರೀ ಸುಧಾರಣೆಯೆಂದು ಬಡಬಡಿಸಿದ ಮಾತ್ರದಿಂದ ಸುಧಾರಣವಾಗಲಾರದು. ಅವನು ಆರ್ಯಸಮಾಜವನ್ನು ಸ್ವೀಕರಿಸುವ ವೇಳೆಯಲ್ಲಿ ಅದರಮೇಲೆ ಇದ್ದ ಪ್ರೀತಿಯು ಈಗ ಬರಬೇಕೆಂಬದು ಆದಮೇಲೆ ಇರುತ್ತದೆ ಎಂಬುದನ್ನು ಮರೆಯಬೇಡಿರಿ. ಮನುಷ್ಯನ ಮನಸ್ಸು ತನಗೆ ಪ್ರೀತಿಯಿಲ್ಲದ ಒಡವೆಯನ್ನು ಎಂದಿಗೂ ಸ್ವೀಕರಿಸಲಾರದು. ಮತ್ತೂ ನಿಮ್ಮ ಹಳೆ ಒರಟಾದ ಕಟ್ಟುಗಳನ್ನು ಬಿಡಿರಿ "ಭೂಮಿ ಮತ್ತು ಕಾಲಚಕ್ರವು ತಿರುಗುವಂತೆ ನಿಮ್ಮ ಕೆಲವು ಆಚರಣೆಗಳನ್ನು ಬದಲಾಯಿಸಿ" ಎನ್ನುವ ಸ್ವಾಮಿ ರಾಮಕೃಷ್ಣ ಪರಮಹಂಸರ ವಾಕ್ಯದಂತೆ ನಡೆಯಿರಿ. ಅವರಿಗೆ ಅಧಿಕಾರವದೆ, ಇವರಿಗೆ ಇಲ್ಲ. ಎನ್ನುವ ಮಾತುಬಿಟ್ಟು, ನಾವು ಸರ್ವರೂ ಒಂದೇ ನಾವೆಯಲ್ಲಿ ಇದ್ದು ಅದು ಮುಳುಗುವ ವೇಳೆಯಲ್ಲಿ ಸರ್ವ ಪ್ರಯತ್ನಮಾಡುವಂತೆ ತಿಳಿದ ಆತ್ಮಜ್ಞಾನಿಗಳೂ ಮತಸ್ಥರೂ ಗುರುಸ್ಥಲದವರೂ ನಿರಾಭಾರಿಗಳೂ ಎಲ್ಲರೂ ಒಕ್ಕಟ್ಟಾಗಿರಿ. ಇದೇ ಕರ್ನಾಟಕ ವೃತ್ತಪತ್ರದಲ್ಲಿ ಪ್ರಸಿದ್ಧಿಸಿದ ಯೋರೋಪಲಯದಲ್ಲ ಅಯರ್ಲೆಂಡಿನವರು ತಮ್ಮ ಎಷ್ಟು ಜಗಳವಿದ್ದರೂ ಈ ವೇಳೆಯಲ್ಲಿ ತೋರಿಸಿದ ಒಕ್ಕಟ್ಟಿನ ಮಹಿಮೆಯನ್ನು ನೆನೆಯಿರಿ. ಜೀವನ ದ ವಿಷಯಕ್ಕೆ ದುರಭಿಮಾನವನ್ನು ತೋರಿಸಬೇಕೆಂದು ವಿಜ್ಞಾಪಿಸಿ ಇಲ್ಲಿಗೆ ಮುಗಿಸುವ,

ತಮ್ಮ ನಿರಭಿಮಾನಿ,

ಈಗತಾನೇ ಅಚ್ಚಾದ ಪುಸ್ತಕವು.

(ರೇವಣಸಿದ್ಧೇಶ್ವರಪುರಾಣಂ.)

ವೇದಾಗಮಾದಿಸಿದ್ಧವಾದ ವೀರಶೈವ ಮತವನ್ನು ಭೂತಲದಲ್ಲಿ ಪ್ರತಿಷ್ಠಾಪಿಸಿದ ಶ್ರೀ ರೇಣುಕಾಚಾರ್ಯರ ಚರಿತ್ರರೂಪವಾದ ಈ ಗ್ರಂಥವು ಬೊಮ್ಮರಸಕವಿಯಿಂದ ಷಟ್ಪದೀ ಕಾವ್ಯವಾಗಿ ರಚಿಸಲ್ಪಟ್ಟಿರುವುದು. ಶ್ರೀಮದಾಚಾರ್ಯರು ಭೂತಲದಲ್ಲಿ ನಡೆಯಿಸಿದ ಮಹತ್ಕಾರ್ಯಗಳು ಇದರಲ್ಲಿ ನಿರೂಪಿತವಾಗಿವೆ. ಕವಿತೆಯು ಹೃದಯಂಗಮವಾಗಿದೆ. ಪ್ರತಿಯೊಂದು ಪಾದಕ್ಕೂ ಒಂದೊಂದು ಪಟ್ಟಿಯಾಗಿ ಬಿಡಿಬಿಡಿಸಿ ಉತ್ತಮವಾದ ಗ್ಲೇಸ್ ಕಾಗದದಮೇಲೆ ಸುಂದರವಾದ ಅಕ್ಷರಗಳಿಂದ ಶುದ್ಧವಾಗಿ ಮುದ್ರಿತವಾಗಿದೆ. ೧೩ ಸಂಧಿಗಳುಳ್ಳ ಈ ಗ್ರಂಥದ ಬೆಲೆ ವಿ. ಪಿ. ಮೂಲಕ ಅಂಚೆಯ ವೆಚ್ಚವೂ ಸೇರಿ ೧೨ ಆಣೆಗಳು.

ಮತ್ತೊಂದು ನೂತನಗ್ರಂಥ.

ಸಟಿಪ್ಪಣಿ ಸಿದ್ಧಾಂತಶಿಖಾಮಣಿ.

ಇದು ಶ್ರೀರೇಣುಕಾಚಾರ್ಯರು ಅಗಸ್ತ್ಯರಿಗೆ ಉಪದೇಶಿಸಿದ ವೀರಶೈವ ಸಿದ್ಧಾಂತಶಾಸ್ತ್ರವು, ಪ್ರತಿಯೊಬ್ಬ ವೀರಶೈವನೂ ಮುಕ್ತನಾಗುವುದಕ್ಕೆ ಜನ್ಮಾದಿಯಿಂದ ಕಡೆಯವರೆಗೆ ಆಚರಿಸಬೇಕಾದ ಧರ್ಮಕರ್ಮಗಳು ಇದರಲ್ಲಿ ನಿರೂಪಿತವಾಗಿವೆ. ಮೂಲಗ್ರಂಥಕ್ಕೆ ವೇದಾಗಮ ಪುರಾಣಾದಿವಚನಗಳ ಆಧಾರದಿಂದ ಕೂಡಿದ ಕನ್ನಡ ಟಿಪ್ಪಣಿಯು ವಿಸ್ತಾರವಾಗಿ ಬರೆಯಲ್ಪಟ್ಟು ಉತ್ತಮವಾದ ಕಾಗದದಲ್ಲಿ ಅಚ್ಚುಮಾಡಿಸಲ್ಪಟ್ಟಿದೆ. ಸರ್ವರಿಗೂ ಸಂಗ್ರಾಹ್ಯವಾದ ಈ ಪುಸ್ತಕವು ೭೫೫ ಪುಟಗಳುಳ್ಳ ದೊಡ್ಡ ಗ್ರಂಥವಾಗಿದ್ದರೂ, ಸ್ವಮತಸ್ಥರ ಹಿತಾರ್ಥವಾಗಿ ಬೆಲೆಯು ಕಡಿಮೆಯಾಗಿಡಲ್ಪಟ್ಟಿದೆ. ವಿ. ಪಿ. ಮೂಲಕ ಅಂಚೆಯ ವೆಚ್ಚವೂ ಸೇರಿ ೧-೮-೦.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

5

ಫಕ್ತು ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

38

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯು ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ವಾಪಸ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪ್ರದ್ರೇಕವಾದವರು, ತೃಷೆಯುಳ್ಳವರು, ದಮ್ಮಿನವರು, ಕೆಮ್ಮಿನವರ ಕಫ, ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿದಂಥ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿಗುವ ಎಲ್ಲಾ ತರದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರಿತಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೊಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೊಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧ ಸಂಗಡಲೇ ರವಾನಿಸುವೆವು.

ವಿಳಾಸ:—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕಯ್ಯಿಂದ ಬಣ್ಣ ಕೊಟ್ಟಿರುವ ಫೋಟೊ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡಪಲ್ಲಕ್ಕಿ ಉತ್ಸವದ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ ಸೊಲ್ಲಾಪುರದಲ್ಲಿ ವ್ಯಾಸನತೊಳುಸಹಿತ ಜದಸನೂರಂಭದ ಫೋಟೊ ೧ ಕ್ಕೆ ಕ್ರಯ ೧ ರುಪಾಯಿ

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಾಮವಾದಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೊ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೊ ೧ ಕ್ಕೆ ಕ್ರಯ ಫುಲ್ಲಸೈಜು ೧ ರುಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀ ಜಗದ್ಗುರು ತೋಂಟದಾರ್ಯ ಗದಗ, ಶ್ರೀ ಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ಸತ್ಪುರುಷಮಾಲಾ, ಹಾಳಕೇರಿ ಅನಂದಸ್ವಾಮಿಯ ಫೋಟೊ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಸ್ಯೆರೆ ಫೋಟೊ ಸಿಗುತ್ತವೆ. ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ

ಯೂನಿಫ್ಯಾಷನ್—ಸದ್ಗೃಹಸ್ಥರು ಗಡಿಯಾರ ಸರ್ಪಿಗೆ ಹಚ್ಚುವಲಾಕೇಟುಗಳೂ, ಯದರಲ್ಲಿ ಹಿಂದೆ ಮುಂದೆ ಇಷ್ಟ ಪ್ರಕಾರ ೨ ಫೋಟೊ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದು ॥, ॥।=, ೧, ೧।, ಪ್ರಕಾರ, ಮತ್ತೂ ಬೆಳ್ಳಿಯದು ರೂ ೧॥ ರೋಲ್ಡ್ ಗೋಲ್ಡ್ ಭಂಗಾರದ್ದು ದುರ್ಬಿಣದ ಗ್ಲಾಸದ್ದು ಕ್ರಯ ೨॥, ೨॥। ರೂ

ಪೂರೂರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ಧಾ ಟಿಕೀಟು ಕಳುಹಿಸಿ ಕ್ಯಾಟಲಾಕು ಬೇಕಾದವರು ತರಿಸಿಕೊಳ್ಳಿರಿ. ನಮ್ಮವಿಳಾಸ— ಗಂಗಪ್ಪಾ ಜೇರಿಗೆ.

24 ಆರ್ಟಿಸ್ಟ್ ಸೊಲ್ಲಾಪುರ

(ಹೊಸಪುಸ್ತಕ ೧೩೪೪ ಪುಟಗಳು) ಶ್ರೀ (ಹೊಸಪುಸ್ತಕ ೧೩೪೪ ಪುಟಗಳು)

ಬ್ರ॥ ಶ್ರೀ॥ ಬಿ. ಎ. ಸುಬ್ರಹ್ಮಣ್ಯಶರ್ಮ ವಿರಚಿತವಾದ ಸುಧಾರ ಸಧಾರಾಯೆಂಬ ಕನ್ನಡ ಟೀಕಾತಾತ್ಪರ್ಯ ಗಣಿತೋದಾಹರಣೆಗಳಿಂದೊಡಗೂಡಿದ

ಬೃಹಜ್ಜಾತಕಾಖ್ಯ ಹೋರಾಶಾಸ್ತ್ರವು.

ಮಾನವನು ತನ್ನ ಅದೃಷ್ಟಚಕ್ರದ ಫಲಾಫಲಗಳನ್ನು ಅರಿತು, ಮುಂದೊದಗಬಹುದಾದ ಫಲಸ್ವರೂಪವನ್ನು ಇತರರ ಸಹಾಯವಿಲ್ಲದೆಯೆ ತಿಳಿದುಕೊಂಡು, ದುಷ್ಫಲಗಳು ದೂರವಾಗಿ, ಸುಫಲಗಳು ಕರಗತವಾಗುವಂತೆ ಮಾಡುವಂತಹ, ಪರಿಹಾರೋಪಾಯಗಳನ್ನು ಸೂಚಿಸಬೇಕಾದರೆ, ನಮ್ಮಿಂದ ಈಗತಾನೆ ಸಂಸ್ಕೃತ ಹಿಂದಿ ಮರಾಟಿ ಭಾಷೆಗಳಿಂದ ತರ್ಜುಮೆಮಾಡಿ ಪ್ರಕಾಶಗೊಂಡ "ಸುಧಾರಸಧಾರಾ" ಎಂಬ ಕನ್ನಡ ಟೀಕಾತಾತ್ಪರ್ಯ ಉದಾಹರಣೆಗಳಿಂದ ಕೂಡಿದ ಬೃಹಜ್ಜಾತಕವೆಂಬ ಹೋರಾಶಾಸ್ತ್ರವೊಂದಲ್ಲದೆ ಮತ್ತಾವುದೂ ಸಮರ್ಥವಾಗಿಲ್ಲವು. ೧೩೪೪ ಪುಟ ೩ ಭಾಗಗಳ ಪುಸ್ತಕ ಒಂದೇಬೈಂಡ್ ಈ ಗ್ರಂಥರತ್ನವು ಆಬಾಲವೃದ್ಧರಾದಿಯಾಗಿ ಅಕ್ಷರವನ್ನರಿತ ಹೆಂಗಸರೂ ಸಹಾ ಪರರ ಸಹಾಯಾಪೇಕ್ಷೆ ಇಲ್ಲದೆ ಓದಿ ತಿಳಿಯಲು, ಅನುಕೂಲವಾಗಿರುವುದು. ಇದರೊಳಗಡಗಿರುವ ೨೮ ಪ್ರಕರಣಗಳ್ಳಿನ ವಿಷಯಸಂಗ್ರಹ ವೆಂತೆಂದರೆ:—೧-೨ ನೇ ಪ್ರಕರಣಗಳಲ್ಲಿ ಶಾಸ್ತ್ರಪ್ರಯೋಜನವೂ, ಜೋತಿಶಾಸ್ತ್ರದ ಪೀಠಿಕಾಭಾಗಗಳು ೩, ಸಜೀವ ನಿರ್ಜೀವವಸ್ತುಗಳ ಉತ್ಪತ್ತಿ ೪, ಗರ್ಭಧಾರಣ ಯೋಗಗಳು ೫, ಜನನಕಾಲಲಕ್ಷಣ ಮತ್ತು ಫಲ ೬, ಬಾಲಾರಿಷ್ಟವಿಚಾರ ಅವುಗಳ ನಿವಾರಣೋಪಾಯ ೭, ಆಯುರ್ದಾಯವಿಚಾರ ೮, ದಶಾಭುಕ್ತಿನಿರ್ಣಯ ೯, ಅಷ್ಟಕವರ್ಗವಿಚಾರ ೧೦, ಜೀವನೋಪಾಯವಿಚಾರ ೧೧, ರಾಜಯೋಗಸೂಚನೆ ಅವುಗಳ ಫಲವಿಚಾರ ೧೨, ೧೮೦೦ ಯೋಗಗಳ ಲಕ್ಷಣ ಮತ್ತು ಫಲ ೧೩, ಚಂದ್ರಸಂಬಂಧವಾದ ಯೋಗಗಳು ೧೪, ಒಂದಕ್ಕಿಂತಲೂ ಹೆಚ್ಚುಗ್ರಹಗಳು ಒಂದೇಕಡೆ ಸೇರಿದರೆ ಅವುಗಳ ಫಲ ೧೫, ಸನ್ಯಾಸಯೋಗಗಳು ೧೬, ನಕ್ಷತ್ರಫಲಗಳು ೧೭, ರಾಶಿಫಲಗಳು ೧೮, ರಾಸಿಗಳ ಫಲ ಮತ್ತು ಕೇರಳಿಯೋಕ್ತ ಫಲಗಳು ೧೯, ದೃಷ್ಟಿಫಲಗಳು ೨೦, ಭಾವಲಕ್ಷಣ ಮತ್ತು ಆ ಫಲಗಳ ವಿಚಾರ ೨೧, ಕ್ಷೇತ್ರಫಲಗಳು ೨೨, ಗ್ರಹಗಳ ಅವಸ್ಥೆ ಅಷ್ಟಕವರ್ಗ ಫಲ ೨೩, ಅನಿಷ್ಟಯೋಗಗಳು ಅವುಗಳಿಂದಾಗುವ ಫಲಗಳು ೨೪, ಸ್ತ್ರೀಜಾತಕ ಅದರ ಫಲಗಳು ೨೫, ಮರಣಕಾರಣ ಅದರ ಫಲಗಳು ೨೬, ನಷ್ಟಜಾತಕ ಬರಿಯುವ ರೀತಿ ೨೭, ದ್ರೇಕ್ಕಾಣವರ್ಣನೆ ಪ್ರಶ್ನೆಗೆ ಬೇಕಾದ ಸಹಾಯವಿಷಯ ೨೮, ಅನುಕ್ರಮಣಿಕಾಸಂಗ್ರಹ ಮತ್ತು ಗ್ರಂಥಕರ್ತರ ವಂಶವರ್ಣನೆ:—

ಮೇಲೆ ಹೇಳಿರುವಂತೆ ಬರೆಯಲ್ಪಟ್ಟ ಒಂದು ಪುಸ್ತಕ ತಮ್ಮ ಬಳಿಯಲ್ಲಿದ್ದರೆ ೧೦ ಜನ ಜ್ಯೋತಿಷ್ಕರಿದ್ದರೆ ಎಷ್ಟು ಅನುಕೂಲವೋ ಅಷ್ಟು ಅನುಕೂಲ. ಇದು ಪ್ರೌಢರಿಗೂ, ಸ್ತ್ರೀಯರಿಗೂ ಧಾರಾಳವಾಗಿ ತಿಳಿಯುವಂತೆ ಉತ್ತಮಕಾಗದದಲ್ಲಿ ಪ್ರಿಂಟ್‌ಮಾಡಿಸಿಧೆ, ಈ ತಿಂಗಳು ಆಖ್ಯರಿನೊಳಗಾಗಿ ಆರ್ಡರ್ ಕೊಡುವವರಿಗೆ ೪-೦-೦ ರೂ. ವಿ. ಪಿ. ಛಾರ್ಜು ೦-೬-೦ ಆಣೆ ನಂತರ ೫-೦-೦ ರೂ. ಜಾಗತ್ರೆ ತರಿಸಿಕೊಳ್ಳಿ ನಂತರ ಈ ಬೆಲೆಗೆ ದೊರೆಯಲಾರದು.

ಇತರಪುಸ್ತಕಗಳು.

—:೦:—

ಟೀಕಾಜೈಮಿನಿ ೯೩೦ ಪುಟ ೪-೦-೦ ರೂ. ಸಟೀಕಹರಿಕಥಾಮೃತಸಾರ ೩೪೪ ಪುಟ ೧-೪-೦ ರೂ. ಕನ್ನಡದ್ವಾದಶಸ್ಕಂಧ ಭಾಗವತ ೩-೦-೦ ರೂ. ಶುಕಸಪ್ತತಿ ೭೦ ಕಥೆ ಶುದ್ಧಪ್ರತಿ ೨-೦-೦ ರೂ. ೪ ಜನ ಫಕೀಕರರ ಕಥೆ ೦-೮-೦. ಸಟೀಕಾಭೋಜರಾಜಚರಿತ್ರೆ ೦-೮-೦. ಇವುಗಳಲ್ಲದೆ ನಮ್ಮಲ್ಲಿ ಯಾವಾಗ್ಯೂ ಕನ್ನಡ, ಸಂಸ್ಕೃತ, ತೆಲಗು ಗ್ರಂಥಗಳು ದೊರೆಯುತ್ತೆ.

ಟಿ. ಯರ್. ಕೃಷ್ಣಯ್ಯಶೆಟ್ಟಿ, ಬುಕ್‌ಡಿಪೋ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೊಂಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು

47 ಕಾಪಾಡುವುದರಲ್ಲಿ ಶ್ರೇಷ್ಠವಾದ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ-ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು.

ಶೀತವಾಯು-ಕೆಮ್ಮು-ನೆಗಡಿ-ದಿನಜ್ವರ-ಮೂರರಜ್ವರ ನಾಲ್ಕರಜ್ವರ- ಮಲೇರಿಯಾಜ್ವರ- ತಲೆನೋವು- ಮೈಕೈನೋವು ಮತ್ತು ಭಾರ-ಅರೋಚಕ ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣಭೇದಿ-ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಸೆಳೆತ-ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ೩೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ. ಪಿ ಛಾರ್ಜು ಪ್ರತ್ಯೇಕ.

ಆಮೋದಿನಿ:— ಅಮೋಘವಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರಮಾಡುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷಕೀರ್ತಿಯನ್ನು ಸಂಪಾದಿಸಿ ನಾನಾತರಹಾ ಕೆಮ್ಮು, ದಮ್ಮು ಉಬ್ಬಸ, ವಾಂತಿ, ವಾಕರಿಗೆ, ಮಲಬಂದ, ಅಗ್ನಿಮಾಂದ್ಯ, ಪಿತ್ತಸಂಕಟ, ಅರೋಚಕ, ಬಾಯಾರಿಕೆಗಳನ್ನು ತಕ್ಷಣ ಗುಣಪಡಿಸಿ ಶರೀರಕ್ಕೆ ತೀಕ್ಷ್ಣಮಾಡದೆ ಧಾತುವೃದ್ಧಿಯುಂಟುಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೧೫೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ.ಪಿ. ಛಾರ್ಜು ಪ್ರತ್ಯೇಕ.

ವಿಳಾಸ— ಬಿ ವಿ. ಪಂಡಿತ್,
ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರ್ ಡಿ॥

48

ದೊಡ್ಡಕಂಪೆನಿ ! ಕೊಳ್ಳಬಹುದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯೂ. ಎನ್. ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

ಬಹುಮಾನ ! ಶ್ರೀ. ಬಹುಮಾನ !!

ಅತ್ಯಾಶ್ಚರ್ಯಕರವಾದ ಬಹುಮಾನ.

೨೫ ಸಾವಿರ ರೂಪಾಯಿಗಳು ಹಂಚಲ್ಪಡುವವು.

ದಿವ್ಯೌಷಧ. ಬಳ್ಳಾರಿ. ಸುಪ್ರಸಿದ್ಧೌಷಧ.

ಸರ್ವಜನಮನೋಲ್ಲಾಸಿನಿ ಅಂಡ್ ಕೋ. ಇವರ

(• ನಾರಸಿಂಹಚೂರ್ಣವು •)

ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನು ಆರೋಗ್ಯಭಾಗ್ಯವನ್ನು ಬಯಸುತ್ತಾನೆ ಎಂಬುವದು ಸಹಜವಾದುದಷ್ಟೆ? ಆದರೆ ಅನೇಕ ದುರ್ವ್ಯರ್ತನೆಗಳಿಂದ ಮೂಲಕಾರಣವಾದ ಧಾತುವನ್ನು ನಷ್ಟಪಡಿಸಿಕೊಂಡು ಹಲವುವಿಧ ರೋಗಗಳನ್ನು ತಂದಿಟ್ಟುಕೊಂಡಿರುವವರನೇಕರನ್ನು ಕಣ್ಣಾರ ನೋಡುತ್ತಿರುವೆವು. ಈ ನಷ್ಟಧಾತುವಿಗಾಗಿ ಅನೇಕಾನೇಕ ವೈದ್ಯರು ಹಲವುವಿಧ ಔಷಧಗಳನ್ನು ವಿಶೇಷವಾದ ಬೆಲೆಯನ್ನಿಟ್ಟು ವಿಕ್ರಯಿಸಿದರು ಪ್ರಯೋಜನವು ಮಾತ್ರ ಕಡಿಮೆಯಾಗುತ್ತಿರುವದು ವಿಷಾದಕರವಾಗಿರುವದು. ಈ ಲೋಪವನ್ನು ಹೋಗಲಾಡಿಸುವುದಕ್ಕಾಗಿ (ನಾರಸಿಂಹಚೂರ್ಣವು) ಎಂಬ ಒಂದಾನೊಂದು ಸಶಾಸ್ತ್ರೀಯವಾದ ಚೂರ್ಣವನ್ನು ಸಿದ್ಧಪಡಿಸಿರುವೆವು. ಈ ಚೂರ್ಣವನ್ನು ಒಬ್ಬ ಮನುಷ್ಯನು ೧೪ ದಿನಗಳು ಸೇವಿಸಿದರೆ ಮುದುಕತನ, ಅನೇಕತರಹೆಯ ಮೇಹರೋಗಗಳು, ಪಾಂಡುರೋಗ, ಪೀನಸ, ಹದಿನೆಂಟು ಬಗೆಯಾದ ಕುಷ್ಠಗಳು, ಎಂಟುವಿಧ ಉದರರೋಗಗಳು, ಭಗಂಧರವು, ಮೂತ್ರಕೃಛ್ರವು, ಗೃಧ್ರಸೀವಾತವು, ಕಾಮಿಲೆ, ಕ್ಷಯವು, ಮಹಾಶ್ವಾಸಗಳು, ದಾರುಣವಾದ ಐದುಬಗೆಯಾದ ಕಾಸೆಗಳು, ಎಂಭತ್ತುವಿಧಗಳಾದ ವಾತರೋಗಗಳು, ನಲವತ್ತು ಬಗೆಯಾದ ಪಿತ್ತಗಳು, ಇಪ್ಪತ್ತು ಶ್ಲೇಷ್ಮರೋಗಗಳು, ದ್ವಂದ್ವಸನ್ನಿಪಾತರೋಗಗಳು, ಮೂಲರೋಗಗಳು ಇವೇ ಮುಂತಾದ ಸಮಸ್ತ ರೋಗಗಳು ಸಿಡಿಲಿನಿಂದ ಗಿಡಗಳು ನಾಶವಾಗುವಂತೆ ನಾಶವಾಗುತ್ತಿವೆ. ಇದರ ಸೇವನೆಯಿಂದ ಚೆನ್ನದಂಥಾ ಕಾಂತಿಯು, ಸಿಹ್ಮನಂತೆ ಪರಾಕ್ರಮವು, ಕುದುರೆಯಂಥಾ ವೇಗವು, ಹಕ್ಕಿಗಳ ದೃಷ್ಟಿಯಂತೆ ದೃಷ್ಟಿಯು ಉಳ್ಳವರಾಗಿ ನೂರುಮಂದಿ ಯುವತಿಯರೊಂದಿಗೆ ಸುರತವಂ ಮಾಡುವಂಥಾ ಅತ್ಯಧಿಕ ವೀರ್ಯವೃದ್ಧಿಯುಂಟಾಗಿ ನೃಸಿಹ್ಮನಿಗೆ ಸಮಾನರಾದ ಮಕ್ಕಳನ್ನು ಹುಟ್ಟಿಸುವ ಪ್ರಬಲ ಬಲವುಳ್ಳವರು. ಇದರಲ್ಲಿ ಯಾವ ವಿಧವಾದ ರಸಗಳಾಗಲಿ ಮಿಶ್ರವಾಗಿಲ್ಲ, ಇನ್ನಾವ ದೋಷಗಳೂ ಇಲ್ಲ. ನಿರ್ದುಷ್ಟವಾದದ್ದು, ಫಕ್ತವನಸ್ಪತಿಗಳಿಂದಲೇ ಸಿದ್ಧಮಾಡಿದ ದಿವ್ಯವಾದ ಔಷಧ. ಅನೇಕ ಪಂಡಿತರು, ಧನಿಕರು, ಸರ್ಟಿಫಿಕೇಟುಗಳನ್ನು ಕೊಟ್ಟಿರುವರು. ಬಳ್ಳಾರಿಯಲ್ಲಿ ಸುಪ್ರಸಿದ್ಧವೈದ್ಯರೆಂದು ಪ್ರಖ್ಯಾತಿಗೊಂಡ ವೈದ್ಯ ಕರಿವೀರಪ್ಪನವರ ಪುತ್ರರಾದ ನೇಟಿವ್ ಡಾಕ್ಟರ್ ಬಿ. ವಿ. ಸಿದ್ಧಪ್ಪನವರಿಂದ ತಯಾರಿಸಲ್ಪಟ್ಟಿರುವದು.

೧೪ ದಿನ ಉಪಯೋಗಕ್ಕೆಬರುವ ಡಬ್ಬಿ ೧ ಕ್ಕೆ ಬೆಲೆ ರೂ. ೧—೦—೦.

—(ಬಹುಮಾನಗಳನ್ನು ಹಂಚುವ ವಿಧಾನ)—

೧ ಡಜನ್ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೧೦೦೦೦ ರೂ. ೬ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೬೦೦೦ ರೂ. ೩ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೪೦೦೦ ರೂ. ೨ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೩೦೦೦ ರೂ. ೧ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ೨೦೦೦ ರೂ.

೧೯೧೪ ನೇ ಜುಲೈ ೧ ನೇ ತೇದಿ ಮೊದಲು ೧೯೧೫ ನೇ ಜುಲೈ ೧ ನೇ ತೇದಿವರಿಗೂ ಈ ಔಷಧವು ಒಂದು ಲಕ್ಷ ಡಬ್ಬಿಗಳು ಖರ್ಚಾದಕೂಡಲೇ ಈ ಲೆಕ್ಕವನ್ನು ಅಲ್ಲಿಗೆ ಸಂಕ್ಷೇಪಮಾಡಿ ಬಹುಮಾನಗಳನ್ನು ಹಂಚುತ್ತೇವೆ. ಒಂದುಪಕ್ಷದ ಮೇಲಣ ನಿಯಮಿತ ದಿನಕ್ಕೆ ಸರಿಯಾಗಿ ಒಂದು ಲಕ್ಷ ಡಬ್ಬಿಗಳು ಖರ್ಚಾಗದಿದ್ದರೆ ಮತ್ತು ವಾಯಿದೆಯನ್ನು ಹೆಚ್ಚಿಸದೆ ಎಷ್ಟು ಡಬ್ಬಿಗಳು ಖರ್ಚಾಗಿರುತ್ತವೆಯೋ ಅಷ್ಟಕ್ಕೆ ದಾಮಾಷಾ ಪ್ರಕಾರ ಆಗತಕ್ಕಷ್ಟು ಬಹುಮಾನವನ್ನು ಮಾತ್ರ ಹಂಚುತ್ತೇವೆ. ಪ್ರತಿಯೊಬ್ಬ ಮನುಷ್ಯನು ತಾನು ಕೊಡುವ ಹಣಕ್ಕೆ ಸರಿಯಾಗಿ ದಿವ್ಯೌಷಧವನ್ನು ಪಡಿಯುವದಲ್ಲದೆ ಬಹುಮಾನವನ್ನು ಸಹಾ ಹೊಂದುವದಕ್ಕೆ ಅರ್ಹನಾಗಿರುತ್ತಾನೆ. ಈ ವಿಷಯದಲ್ಲಿ ತಿಲಮಾತ್ರವಾದರು ಸಂಶಯವಿಲ್ಲ. ಬಹುಮಾನದ ಮೊತ್ತವನ್ನು ನಿಷ್ಪಕ್ಷಪಾತವಾಗಿ ಒಂದೇ ಸಮವಾಗಿ ಹಂಚಲ್ಪಡುವೆವು. ಇದು ಮೋಸವಲ್ಲ, ಲಾಟರಿಯಲ್ಲ, ಯಾವ ವಿಧವಾದ ಕುಹಕತನವು ಇಲ್ಲ, ಸತ್ಯವಾಗಿ ಬಹುಮಾನವನ್ನು ಹಂಚುತ್ತೇವೆ. ಅಸೂಯಾಂಧರ ಮಾತುಗಳಿಗೆ ನಿಗಾ ಕೊಡಲಾಗದು, ಜಾಗ್ರತೆ ತರಿಸಿಕೊಳ್ಳಿರಿ. ಔಷಧದ ಗುಣವನ್ನು ಪರೀಕ್ಷಿಸಿರಿ. ಅಪೇಕ್ಷಕರು ಈ ಕೆಳಗಣ ನಮ್ಮ ಅಡ್ರೆಸ್ಸಿಗೆ ಬರೆದು ತರಿಸಿಕೊಳ್ಳಿರಿ.

ಇದರ ಅನುಪಾನ ಪತ್ರಿಕೆಯನ್ನು ಬಹುಮಾನದ ಟಿಕೇಟನ್ನು ಡಬ್ಬಿಸಂಗಡ ಕಳಿಸುವೆವು, ನಮ್ಮ ಕಂಪೆನಿಯ ಕಾಶಿ ವಿಶ್ವನಾಥ ಮಾರ್ಕು ಇಲ್ಲದ ಡಬ್ಬಿಯನ್ನು ತೆಗೆದುಕೊಳ್ಳಲಾಗದು.

ನಮ್ಮ ಅಡ್ರೆಸ್ಸು.
ಸರ್ವಜನಮನೋಲ್ಲಾಸಿನಿ ಅಂಡ್ ಕೋ ಬಳ್ಳಾರಿ.

ದಿ ಜನರಲ್ ಏಜನ್ಸಿ, ಮೈಸೂರು.

ಕಾದಂಬರಿಗಳು:— ಚಂದ್ರವಾರುತ ೦-೨-೦; ಚರಿತಾ ವೃತಂ ೦-೫-೦; ರಾಜಕಥಾವಲ್ಲರಿ ೧-೫-೦; ಪೀಟರಿನಚರಿತ್ರೆ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೨-೬; ಸೀತೆ ೦-೫-೦; ಸಾಹಸಿಕೆ, ಕೈಲಾಸನಾಥ ೦-೮-೦; ಮಹಾಲಕ್ಷ್ಮಿ ೦-೭-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸತ್ಯಸಂಜೀವಿನಿ ೦-೮-೦; ಕೋಹಿನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೦-೦. 49

ಊದಬತ್ತಿಗಳು.

18 ನಿರುಪಮವಾದ ಊದಬತ್ತಿಗಳು ಸೇರು ೧ ಕ್ಕೆ ೧-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೦ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹರೂಪ ಟಿಕ್ಕಿ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು. ಟಿ. ಎಲ್. ಉಪಾಧ್ಯಾಯರು,

ಸುಗಂಧಶಾಲಿ,

ಮೈಸೂರು.

38 ಸಚಿತ್ರ ಶುಕಸಪ್ತತಿ ಕಥೆಗಳು ರೂ. ೧-೮-೦ (೫೧೦ ಪುಟ) ಟಪಾಲು ಹಾಸಲು ೪ ಆಣೆ. ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ ರೂ ೧-೮-೦. (೫೩೬ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ! ಸ್ವತಂತ್ರತೆಯು ಬೇಕಾದರೆ, ಪಾಶ್ಚಿಮಾತ್ಯ ಪರಿಯೋಗಿತ್ವ ವಿದ್ದರೆ, ಲೋಕರೀತಿಯನ್ನು ತಿಳಿಯಬೇಕೆಂಬ ಪಟ್ಟರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯುಳ್ಳಾಕೆಯಿದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ ೩೩೦ ಪುಟಗಳಿಂದ ಕೂಡಿದ ೭೪ ಕಥೆಗಳುಳ್ಳ ಸೊಗಸಾದ ಬೈಂಡು ಪುಸ್ತಕವಾಗಿದೆ. ಬೆಲೆ ರೂ ೧-೪-೦ ಟಪಾಲ್ ಹಾಸಲು ೩ ಆಣೆ. ಈಗಲೇ ಬರೆ ನಿಶ್ಯ.ಮ್ಮಲ್ಲಿ ಇನ್ನೂ ಅನೇಕಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸಾಲಾಮಿಸ್ರಿಯು ಕಾಬೂಲ್ ದೇಶದಲ್ಲಿ ಪೌಂಡು ೧ ಕ್ಕೆ ೧ ೧೦-೦ ಇತ್ತು ಈಗ ಪೌಂಡು ೧ಕ್ಕೆ ೩-೪-೦ ಆಗಿದೆ. ಆದ್ದರಿಂದ ಇದರಕ್ರಯ ೨-೧೦ ರೂಪಾಯಿ ಮಾಡಿರುತ್ತೆ 5

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾ" ವಿನ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಬರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ದೂರ ನಡೆಯುವುದರಿಂದ ಏದುಸಿರು ಬರುವುದೂ, ತಲೆಯು ನೋವೂ ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಮೆದುಳಿಗೆ ಬಲವನ್ನುಂಟುಮಾಡುವುದು ಹಳೇ ತಲೆ ನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಸ್ಥಿರಪಡಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು ಈ ಪಂಜಾಬ್ ಸಾಲಾಮಿಸ್ರಿಯು ಮುರಬ್ಬಾಕ್ಕೆ ತಾಂಬ್ರದ ಮತ್ತು ಬಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು.

ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂ. ಬಹುಮಾನವಾಗಿ ಕೊಡಲ್ಪಡುವುದು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನದಹಣವನ್ನು ನಾವು ಕೊಡದೆ ನಿರಾಕರಿಸಿದುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಗುಬಹುದು. ೧ಕ್ಕೆ ರೂ. ೨-೦-೦. ಟಪ್ಪಾಲ್‌ಖರ್ಚು ಬೇರೆ. ಅನುಪಾನಪತ್ರಿಕೆ ಔಷಧದಸಂಗಡ ಇರುತ್ತೆ.

ಡಿ. ಮನ್ನಾಲಾಲ್, 5 ಹಾಜಿ ಸಾಹೇಬ್ ಮಹಡಿ, ಅ... ರೋಡ್, ಬೆಂಗಳೂರು ಸಿಟಿ.

ನಮ್ಮ ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ... ದೊಡ್ಡಪೇಟೆ, ಬೆಂಗಳೂರು ಸಿಟಿ.

... ಅಂಜಿ ಕರಣಿ ... ಪದ್ಧಗಳು 16

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ



ಸಂದುಗಳ ನೋವು ಮೈ ಕಾಲು ಜೋತೆ (ಭಾರ), ಪೈನಶುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿ ನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವು, ಜ್ವರ, ಸ ಜ್ಜ ಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ ೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೦ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈ ವಿಷಾರಿತೆಂದು ಕೋರಿದಾಗಲೂ, ಅಕ್ಷಸ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಬೇಕಾದರೇಡಿರಿ ಒಂದೇಒಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧೌಷಧವಿದೊಂದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧-೦-೦.

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ. ಮೈಸೂರು

ನ್ಯಾಯದರ್ಪಣ. 31

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯು, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಫ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸೂ, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆಚರಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ವಗೈರೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯು ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರುತ್ತವೆ.

ಬೆಲೆ ರೂ. 1—8—0. ವಿ. ಪಿ. ಮೂಲ್ಕ 1—12—0.

ಎಂ. ಎಸ್. ನಂಜಪ್ಪನವರು,

ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ)ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುವಾಗಿದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚಿಟಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘುಮಘುಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜನ್ ಡಬ್ಬಿಗೆ ೨-೨-೦

ಉತ್ತಮವಾದ ನಶ್ಯದಪುಡಿ.

ಘಾಟು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವೆ. ನೀವುಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,

ಗೋಪಸೆಟ್ಟಿಪಾಳ್ಯ, ಹನೂರು ಪೋಸ್ಟ್

27 ಕೊಳ್ಳೇಗಾಲದ ತಾಲ್ಲೂಕು

೧೯೧೪ ನೆಯ ಇಸವಿ ಆಗಸ್ಟ್ ತಾ॥ ೨೩ರಿಂದ ೧೯೧೪ನೆಯ ಆಗಸ್ಟ್ ತಾ॥ ೨೯ರವರೆಗೆ ಸಲ್ಲುವ ಶಾಲೀವಾಹನಶಕೆ ೧೮೩೬ ನೆಯ ಆನಂದನಾಮ ಸಂ॥ ದ ಭಾದ್ರಪದ ಶು॥ ಬಿದಿಗೆಯಿಂದ ಭಾದ್ರಪದ ಶು॥ ನವಮಿವರೆಗಿನ ಪಂಚಾಂಗ.

ತಾ॥	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ಸೌರಿ ಸಿಂಹ
23	1 ಭಾನು	ಬಿದಿ	20-47	ಪುಬ್ಬಾ	4-47	8
24	2 ಸೋ	ತದಿ	15-25	ಹ್ತ	1-36	9
25	3 ಮಂ	ಚೌ	9-38	ಚಿತ್ತ	53-48	10
26	4 ಬುಧ	ಪಂ	3-30	ಉಪರಿ	53-50	11
27	5 ಗುರು	ಸಪ್ತ	51-15	ವಿಶಾಖ	45-19	12
28	6 ಶುಕ್ರ	ಅಷ್ಟ	45-34	ಅನೂ	41-29	13
29	7 ಶನಿ	ನವ	40-23	ಜ್ಯೇಷ್ಠ	38-16	14

(1) ಸಿಂಹಾಂ ಕಲತಿಥಿತ್ವಯಂ, ಕಲ್ಕೀಜಯಂತೀ (2) ಕುಂಭಾಂ ಚತುರ್ಥೀತಿಥಿಃ, ಸ್ವರ್ಣಗೌರೀವ್ರತಂ, ತಾಮಸಮನ್ವಾದಿಃ, ಸಿದ್ಧಿವಿನಾಯಕವ್ರತಂ, ಸಾಮಗೋಪಾಕರ್ಮ (3) ಋಷಿಪಂಚಮೀ. (4) ರಾವೆ ಕುಲ ಅವಮಃ (5) ರಾಲ ಅಮುಕ್ತಾಭರಣಸಪ್ತಮೀ. (6) ಅಭಾವಪಾತಃ, ದೂರ್ವಾಷ್ಟಮೀ, ದಗ್ಧಯೋಗಃ. (7) ನಂದನವಮೀ, ಜ್ಯೇಷ್ಠಾಲಕ್ಷ್ಮೀ, ಸಿದ್ಧಲಕ್ಷ್ಮೀ, ಮಹಾಲಕ್ಷ್ಮೀ, ವ್ರತಾನಿ, ದಗ್ಧಯೋಗಃ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಕ್ರಾಸ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED M NO 124

ಮೈಸೂರ್ ಸ್ಟಾರ್

ಪ್ರತಿಭಾನುವಾರ ಪ್ರಕಟಿಸಲ್ಪಡುವುದು.

ವಾರ್ಷಿಕ ಚಂದಾ ೧—೦—೦ } ದಿವಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈ ಘನಪಥಕೃತಾವತಾರಾ ಪಕ್ಷ್ಯ ನಕ್ಷತ್ರಮೋಹರಾಜೀಯ ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ... ವಲಂ ಸಿಮಾತೀತ ಯಶಃಪ್ರತಾಪವಿಪುಲಂಸದ್ವೃತ್ತಮಾಲಾಕುಲಂ । ಪ್ರೇಮಂಬಿತ್ತಿ ... ಪ್ಪಲಂ { ಅಂಚೆವೆಚ್ಚ ಸೇರಿ ೧—೧೪—೦

REGISTERED, NO M 124

ಸಂಪುಟ ೨೩) ಮೈಸೂರ್ ಸ್ಟಾರ್ ಸರ್ ೧೯೧೪ ನೆಯ ಇಸವಿ ಸೆಪ್ಟೆಂಬರ್ ತಾರೀಖು ೬ ನೆಯ ಭಾನುವಾರ. (ಸಂಚಿಕೆ ೩೬

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜ ಮೊಹಲ್ಲಾ, ಮೈಸೂರು.

ಸುಂದರವಾದ ಹೊಸನಮೂನೆ ದೊಡ್ಡ ಘಡಿಯಾರಗಳು.

31

ಪ್ರಖ್ಯಾತಿಹೊಂದಿದ ಅಮೇರಿಕಾದೇಶದ ಅನ್ಸೋನಿಯಾ ಕಂಪೆನಿಯವರಿಂದ ತಯಾರಿಸಲ್ಪಟ್ಟ ಖಾತ್ರಿಯಾದ ಮತ್ತು ಬಹಳದಿವಸ ಬಾಳಿಕೆಬರತಕಂಥ ಕ್ಲಾಕ್‌ಗಳು ಇವೇ ಹೊರ್ತು ಬೇರೆ ಅಲ್ಲಾ.



ಈಪಕ್ಕದ ಚಿತ್ರದಲ್ಲಿ ಕಾಣಿಸಿರುವ ಗೋಡೆಗೆ ತಗುಲಿಸುವ ಘಂಟೆ, ಅರ್ಧ ಘಂಟೆ ಹೊಡೆಯುವ ಘಡಿಯಾರ ಒಂದಕ್ಕೆ ೧೨-೮-೦ ರೂ. ಘಂಟೆ ಅರ್ಧಘಂಟೆ ಹೊಡೆದು ಅಲಾರಂ ಸಹಾ ಇರತಕ್ಕ ಘಡಿಯಾರ ಒಂದಕ್ಕೆ ೧೩-೪-೦ ರೂ. ಈ ಘಡಿಯಾರಗಳು ಮಜಬೂತಾದ ಯಂತ್ರೋಪಕರಣಗಳಿಂದಲೂ ಮೇಲ್ಭಾಗದಲ್ಲಿ ನಕಾಸಿನ ಕೆತ್ತನೆಯಿಂದಲೂ ನೋಡುವುದಕ್ಕೆ ಅಂದವಾಗಿಯೂ ಬಹಳ ದಿವಸ ಬಾಳಿಕೆ ಬರತಕ್ಕವುಗಳಾಗಿವೆ. ಈ ಘಡಿಯಾರಕ್ಕೆ ಆರ್ಡರ್ ಮಾಡತಕ್ಕವರು ೫ ರೂಪಾಯಿ ಅಡ್ವಾನ್ಸು ಕಳಿಸಬೇಕು. ಬಾಕೀ ಮೊಬಲಿಗ್ಯೆ ರೈಲ್ವೆ ರಶೀದಿಯನ್ನು ವಿ. ಪಿ. ಮಾಡಲಾಗುತ್ತೆ. ರೈಲ್ವೆ ಛಾರ್ಜು ಅಲಾಯಿದಾ.

ಸಿಕ್ಕಿದ ಹಾರ್ಮೋನಿಯಂಗಳನ್ನು ಕ್ರಯಕ್ಕೆ ತೆಗೆದುಕೊಂಡು ನಿಮ್ಮ ಹಣವನ್ನು ಯಾಕೆ ವ್ಯರ್ಥಮಾಡಿಕೊಳ್ಳುವಿರಿ.

ನಮ್ಮಲ್ಲಿ ವಿಕರಿಗೆ ಸಿದ್ಧವಾಗಿರುವ "ಮೋಹನ್‌ಫ್ಲೂಟ್ಸ್" (M. Mohen flute) ಮತ್ತೂ "ಮೋಸ್ಲಂಫ್ಲೂಟ್" (Moslem flute) ಹಾರ್ಮೋನಿಯಂಗಳನ್ನು ನಮ್ಮಿಂದ ತರಿಸಿಕೊಂಡು ಪರೀಕ್ಷಿಸಿರಿ ಈ ಹಾರ್ಮೋನಿಯಂಗಳು ಅನೇಕದಿವಸ ಬಾಳಿಕೆಬರುವಂತೆ ಬಹಳಮಜಬೂತಾದ ಸಾಮಾನುಗಳಿಂದ ಪ್ರಖ್ಯಾತರಾದ ಕಾರೀಗಾರರಿಂದ ತಯಾರಿಸಲ್ಪಟ್ಟಿವೆ. ಒಂದು ಸಾರಿ ನಮ್ಮಿಂದ ತರಿಸಿ ಪರೀಕ್ಷಿಸಿದಲ್ಲಿ ಇದರ ಬಂದೋಬಸ್ತು ಬಾಳ್ವಿಕೆ ಸಹ ತಮಗೇ ವ್ಯಕ್ತವಾಗುತ್ತೆ.

ನಂ ೧. ಒಂದು ಸೆಟ್‌ರೀಡ್ಸ್ ಉಳ್ಳದ್ದು (Moslem flute) ಹಾರ್ಮೋನಿಯಂ ೧ ಕ್ಕೆ ೩೫-೦-೦ ರೂ.

ನಂ ೨. ಒಂದು ಸೆಟ್‌ರೀಡ್ಸ್ ಉಳ್ಳದ್ದು (M. Mohen flute) ಹಾರ್ಮೋನಿಯಂ ೧ ಕ್ಕೆ ೩೩-೮-೦ ರೂ.

ನಂ ೩. ಡಿಟೋ ನಮೂನೆಯಲ್ಲಿ ಅತ್ಯುತ್ತಮವಾದದ್ದು (M. Mohen flute) ೧ ಕ್ಕೆ ೪೭-೮-೦ ರೂ.

ನಂ ೪. ಡಬ್ಬಲ್‌ರೀಡ್ಸ್ ಉಳ್ಳದ್ದು (Moslem flute) ಹಾರ್ಮೋನಿಯಂ ೧ ಕ್ಕೆ ೪೩-೮-೦ ರೂ.

ನಂ ೫. ಡಬ್ಬಲ್‌ರೀಡ್ಸ್ ಉಳ್ಳದ್ದು (M. Mohen flute) ಹಾರ್ಮೋನಿಯಂ ೧ ಕ್ಕೆ ೫೦-೮-೦ ರೂ.

ಈ ಹಾರ್ಮೋನಿಯಂಗಳ ಪೈಕಿ ಯಾವದಕ್ಕೆ ಆರ್ಡರ್ ಕೊಟ್ಟರೂಕೂಡ ೫ ರೂಪಾಯಿ ಅಡ್ವಾನ್ಸು ಕಳಿಸಬೇಕು ಬಾಕೀಮೊಬಲಿಗ್ಯೆ ರೈಲ್ವೇರಶೀದಿಯನ್ನು ವಿ. ಪಿ. ಮೂಲ್ಕ ರವಾನಿಸುತ್ತೇವೆ.

ನೆಪ್ಚೂನ್‌ಫೌಂಟನ್‌ಪೆನ್‌ಗಳು. NEPTUNE FOUNTAIN PENS.

ಈ ಫೌಂಟನ್‌ಪೆನ್‌ಗಳು ಅದರ ಖರೀದಿಗೆ ತಕ್ಕಂತೆ ೪ ವರುಷಗಳಲಾಗಾಯ್ತು ಹತ್ತು ವರುಷಗಳವರಿಗೆ ಬಾಳಿಕೆ ಬರತಕ್ಕವುಗಳಾಗಿವೆ.

ನಂ ೨೦೧. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಕ್ರಯ ೧ ಕ್ಕೆ ೧—೧೪—೦.

ನಂ ೨೦೫. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಉತ್ತಮವಾದದ್ದು ಕ್ರಯ ೧ ಕ್ಕೆ ೨—೧೦—೦

ನಂ ೨೧೦. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಅತ್ಯುತ್ತಮವಾದದ್ದು ಕ್ರಯ ೧ ಕ್ಕೆ ೪—೨—೦.

ಮೇಲ್ಕಂಡ ಯಾವನಮೂನೆ ಫೌಂಟನ್‌ಪೆನ್‌ಗಳನ್ನು ತರಿಸಿಕೊಂಡರೂ ಅದರ ಜೊತೆಯಲ್ಲಿ ಪೆನ್ ಇಡತಕ್ಕ ಪೆಟ್ಟಿಗೆ ೧. ಜೇಬಿಗೆತಗಲಿಸತಕ್ಕ ಕ್ಲಿಪ್ ೧. ಶಾಯಿಹಾಕುವ ಗಾಜಿನ ಟ್ಯೂಬ್ ೧. ಶಾಯಿತುಂಬುವವಿಧ ಪ್ರಿಂಟಾಗಿರತಕ್ಕ ಚೀಟಿ ೧ ನ್ನೂ ಸಹ ರವಾನಿಸಲಾಗುತ್ತೆ



ರಖಂವಾರ್ ವಾಚ್ ಸರಪಣಿಗಳು.

ಈ ಪಕ್ಕದ ಚಿತ್ರದಲ್ಲಿ ಕಾಣಿಸಿರುವ ನಮೂನೆ ಅಚ್ಚಬೆಳ್ಳಿಯ ವಾಚ್ ಸರಪಣಿ ಯಾವ ರಖಂ ಬೇಕಾದರೂ ಕ್ರಯ ೧ಕ್ಕೆ ೩—೪—೦ ಮೇಲ್ಕಂಡ ರಖಂವಿನ್ನಲ್ಲಿ ನಿಕ್ಕಲ್‌ಬೆಳ್ಳಿ ಸರಪಣಿ ಕ್ರಯ ೧ ಕ್ಕೆ ೦—೧೨—೦.

ಅಚ್ಚಬೆಳ್ಳೀ ಕೊರಳ ಸರಪಣಿ ಬಹಳ ನಾಜೋಕಾಗಿ ತಯಾರಿಸಿದ್ದು ೧ ಕ್ಕೆ ೧—೪—೧.

೧೮ ಕ್ಯಾರಟ್ಟು ಚಿನ್ನದ ಸರಪಣಿ ೧ ಕ್ಕೆ ೫—೮—೦.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೫—೦
ಸಟೀಕ ನಂದೀವ್ರತ	೦—೪—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸಪುಸ್ತಕಗಳು.

150

ಬಸವರಾಜವಿಜಯಂ— ಬೆಲೆ ೧ ೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦ ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೦ ಆಣೆ; ಸುಕ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ ವರ್ಷದ ಚಂದಾ ೨-೮-೦.

ಎಸ್. ಆರ್. ಕರಿಬಸವಶಾಸ್ತ್ರಿ,

ಗ್ರಂಥಪ್ರಸಾರಕಮಂಡಲಿ, ಮೈಸೂರು.

ದಿ ಜನರಲ್ ಏಜನ್ಸಿ, ಮೈಸೂರು.

ಕಾದಂಬರಿಗಳು:— ಚಂಡವಾರುತ ೦-೨-೦; ಚರಿತಾವೃತಂ ೦-೫-೦; ರಾಜಕಥಾವಲ್ಲರಿ ೧-೫-೦; ಪೀಟರಿನಚರಿತ್ರೆ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೨-೬; ಸೀತೆ ೦-೫-೦; ಸಾಹಸಿಕೆ, ಕಲಾನಾಥ ೦-೮-೦; ಮಹಾಲಕ್ಷ್ಮಿ ೦-೬-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸತ್ಯಸಂಜೀವಿನಿ ೦-೮-೦; ಮೋಹನಾರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೦-೦. 49

ಊದಬತ್ತಿಗಳು.

18 ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ ೦-೦-೦; ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪ ಟಿನ್ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು. ಟಿ ಎಲ್. ಉಪಾಧ್ಯಾಯರು, ಸುಗಂಧಕಾರಿ, ಮೈಸೂರು.

38 ಸಚಿತ್ರ ಶುಕಸಪ್ತತಿ ಕಥೆಗಳು ರೂ. ೧-೮-೦ (೫೧೦ ಪುಟ) ಟಪಾಲು ಹಾಸಲು ೪ ಆಣೆ. ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ ರೂ ೧-೮-೦ (೫೩೬ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ! ಮಾನ್ಯತೆಯು ಬೇಕಾದರೆ, ಪಾಶ್ಚಾತ್ಯ ಬುದ್ಧಿಯೊಳಿಪ್ಪವಿದ್ದರೆ, ಲೋಕರೀತಿಯನ್ನು ತಿಳಿಯಬೇಕೆಂದಿದ್ದರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯುಳ್ಳಾಕೆಯಿದ್ದರೆ ದಯುಮಾಡಿ ಈ ವಿದ್ಯಾಮಂಜರಿಕಥೆಗಳನ್ನು ಓದಿರಿ ೩೬೦ ಪುಟಗಳಿಂದ ಕೂಡಿದ ೭೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ ೧-೪-೦ ಟಪಾಲ್ ಹಾಸಲು ೩ ಆಣೆ. ಈಗಲೇ ಬರೆ ನಿಮಾ. ನಮ್ಮಲ್ಲಿ ಇನ್ನೂ ಅನೇಕ ಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸಾಲಾಮಿಸ್ರಿಯು ಕಾಬೂಲ್ ದೇಶದಲ್ಲಿ ಪೌಂಡು ೧ ಕ್ಕೆ ೧-೧೦-೦ ಇತ್ತು ಈಗ ಪೌಂಡು ೧ಕ್ಕೆ ೩-೪-೦ ಆಗಿದೆ. ಆದ್ದರಿಂದ ಇದರ ಕ್ರಯ ೨—೦೦ ರೂಪಾಯಿ ಮಾಡಿರುತ್ತೆ. 5

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬಾ.

ಈ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾ" ವಿನ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ದೂರ ನಡೆಯುವುದರಿಂದ ನೋಬ್ಬಸ ಬರುವುದೂ, ತಲೆಯ ನೋವೂ ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು ಹಳೇ ತಲೆ ನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಸೇಖರಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು. ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ತಾಂಬ್ರದ ಮತ್ತು ಬಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು.

ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂ. ಬಹುಮಾನವಾಗಿ ಕೊಡಲ್ಪಡುವುದು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನದಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧ಕ್ಕೆ ರೂ. ೨-೦-೦. ಟಪ್ಪಾಲ್‌ಖರ್ಚು ಬೇರೆ. ಅನುಪಾನಪತ್ರಿಕೆ ಔಷಧದಸಂಗಡ ಇರುತ್ತೆ.

ಡಿ. ಮನ್ನಾಲಾಲ್, 5 ಹಾಜಿ ಸಾಹೇಬ್ ಮಹಡಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ನಮ್ಮ ಏಜಂಟರು-ಡಿ. ಸೈಯದ್ ಉಸ್ಮಾನ್ ಅಂಡ್ ಕೋ, ದೊಡ್ಡಪೇಟೆ, ಬೆಂಗಳೂರು ಸಿಟಿ.

ಶ್ರೀ ಸೀತಾರಾಮ ವೈದ್ಯಶಾಲಾ ಔಷಧಗಳು 16

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಊತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಆಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವು, ಜ್ವರ, ನಂಜು ಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ. ೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೦ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ)

ವಾಂತಿಭೇದಿ, (ಕಾಲರಾ) ಶೀತಬೇನೆ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈ ಮೀರಿತೆಂದು ಕೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಬೇಕಾದರೇಡರಿ ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಏಕಾಕ್ಷತೆವಿಲಂಬವೇ.

ಅನುಪಾನಪತ್ರವು ಔಷಧದೊಡನೆ ಇರುತ್ತದೆ. ಒಂದು ಬುಡ್ಡಿಯ ಬೆಲೆ ೧-೦-೦.

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಮ ವೈದ್ಯಶಾಲಾ. ಮೈಸೂರು

ನ್ಯಾಯದರ್ಪಣ. 31

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯೂ, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಫ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸೂ ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆಚೀಕೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ಪತ್ರಗಳಿಗೆ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯೂ ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿಇರುತ್ತವೆ.

ಬೆಲೆ ರೂ. 1—8—0. ವಿ. ಪಿ. ಮೂಲ್ಕ 1—12—0.

ಎಂ. ಎಸ್. ನಂಜಪ್ಪನವರು, ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಿಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ)ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುವಾಗಿದ್ದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚಿಟಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘುಮಘುಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜನ್ ಡಬ್ಬಿಗೆ ೨-೨-೦

ಉತ್ತಮವಾದ ನಶ್ಯದಪುಡಿ.

ಧಾತು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವೆ. ನೀವುಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ, ಗೋಪಸೆಟ್ಟಿಪಾಳ್ಯ, ಹನೂರು ಪೋಸ್ಟ್ ಕೊಳ್ಳೇಗಾಲದ ತಾಲ್ಲೂಕು

27

೧೯೧೪ ನೆಯ ಇಸವಿ ಆಗಸ್ಟ್ ತಾ|| ೨೩ರಿಂದ ೧೯೧೪ನೆಯ ಆಗಸ್ಟ್ ತಾ|| ೨೯ರವರೆಗಿರುವ ಶಾಲೀವಾಹನಶಕೆ ೧೮೩೬ ನೆಯ ಆನಂದನಾಮ ಸಂ|| ದ ಭಾದ್ರಪದ ಶು|| ಬಿದಿಗೆಯಿಂದ ಭಾದ್ರಪದ ಶು|| ನವಮಿವರೆಗಿನ ಪಂಚಾಂಗ.

ತಾ||	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ಸೌರಿ ಸಿಂಹ
23	1 ಭಾನು	ಬಿದಿ	20-47	ಪುಬ್ಬ	4-47	8
24	2 ಸೋ	ತದಿ	15-25	ಹ	1-36	9
25	3 ಮಂ	ಚೌ	9-38	ಚಿತ್ತ	53-48	10
26	4 ಬುಧ	ಪಂ	3-30	ಉಪರಿ	53-50	11
27	5 ಗುರು	ಸಪ್ತ	51-15	ವಿಶಾಖ	45-19	12
28	6 ಶುಕ್ರ	ಅಷ್ಟ	45-34	ಅನೂ	41-29	13
29	7 ಶನಿ	ನವ	40-23	ಜ್ಯೇಷ್ಠ	38-16	14

(1) ಕೇತ್ರಾಂ ಕಲತೀರ್ಥ್ವಯಂ, ಕಲ್ಕೀಜಯಂತೀ (2) ಕುಕ್ರಾಂ ಚತುರ್ಥೀತಿಥಿ, ಸ್ವರ್ಣಗೌರೀವ್ರತಂ, ತಾಮಸಮನ್ವಾದಿ, ಸಿದ್ಧಿವಿನಾಯಕವ್ರತಂ, ಸಾಮಗೋಪಾಕರ್ಮ (3) ಋಷಿಪಂಚಮೀ. (4) ರಾಪೆ ಕುಲ ಅವಮಃ (5) ರಾಲ ಅಮುಕ್ತಾಭರಣವ್ರತಂ. (6) ಅಭಾವಕಾತಿ, ದೂರ್ವಾಷ್ಟಮೀ, ದಗ್ಧಯೋಗಃ. (7) ನಂದನವಮೀ, ಜ್ಯೇಷ್ಠಾಲಕ್ಷ್ಮೀ, ಸಿದ್ಧಲಕ್ಷ್ಮೀ, ಮಹಾಲಕ್ಷ್ಮೀ, ವ್ರತಾನಿ, ದಗ್ಧಯೋಗಃ

ಮೈಸೂರ್ ಸ್ಟಾ. ನಿರಂಜನಾಶ್ರಯ್ಯನವರಿಂದ ಕ್ರಿಶ್ಚಿಯನ್ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED M NO 121

ಮೈಸೂರ್ ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

REGISTERED, NO M 124

ವಾರ್ಷಿಕ ಚಂದಾ ೧—೦—೦

ದವಹಿಶೂರವುರೀತಾರಾ ಪರವುಧಿಗತರಾಜಮಂಡಲಹಿತೈ ಘನಪಥಕೃತಾವತಾರಾ ಪಕ್ಷ್ಯಕ್ಷ ನಕ್ಷತ್ರವೋಹರಾಜೀಯ
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲವಾಕ್ಯಲಿತಸಾದ್ಗುಣ್ಯಾಲವಾಂವಲಂ|
ಸಿಮಾತೀತ ಯಶಃಪ್ರತಾಪವಿಪುಲಂಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳಿಯಂಸದಾ...

ಅಂಚೆವೆಚ್ಚ ಸೇರಿ ೧—೧೪—೦

ಸಂಪುಟ ೬೩) ಮೈಸೂರ್ ಸ್ಟಾರ್ ಸಗ ೧೯೧೪ ನೆಯ ಇಸವಿ ಸೆಪ್ಟಂಬರ್ ತಾರೀಖು ೬ ನೆಯ ಭಾನುವಾರ. (ಸಂಚಿಕೆ ೩೬

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜ ಮೊಹಲ್ಲಾ, ಮೈಸೂರು.

ಸುಂದರವಾದ ಹೊಸನಮೂನೆ ದೊಡ್ಡ ಘಡಿಯಾರಗಳು.

31

ಪ್ರಖ್ಯಾತಿಹೊಂದಿದ ಅಮೇರಿಕಾದೇಶದ ಅನ್‌ಸೋನಿಯಾ ಕಂಪೆನಿಯವರಿಂದ ತಯಾರಿಸಲ್ಪಟ್ಟ ಖಾತ್ರಿಯಾದ ಮತ್ತು ಬಹಳದಿವಸ ಬಾಳಿಕೆಬರತಕಂಥ ಕ್ಲಾಕ್‌ಗಳು ಇವೇ ಹೊರ್ತು ಬೇರೆ ಅಲ್ಲಾ.



ಈ ಪಕ್ಕದ ಚಿತ್ರದಲ್ಲಿ ಕಾಣಿಸಿರುವ ಗೋಡೆಗೆ ತಗುಲಿಸುವ ಘಂಟೆ, ಅರ್ಧಘಂಟೆ ಹೊಡೆಯುವ ಘಡಿಯಾರ ಒಂದಕ್ಕೆ ೧೨-೮-೦ ರೂ. ಘಂಟೆ ಅರ್ಧಘಂಟೆ ಹೊಡೆದು ಅಲಾರಂ ಸಹಾ ಇರತಕ್ಕ ಘಡಿಯಾರ ಒಂದಕ್ಕೆ ೧೩-೪-೦ ರೂ. ಈ ಘಡಿಯಾರಗಳು ಮಜಬೂತಾದ ಯಂತ್ರೋಪಕರಣಗಳಿಂದಲೂ ಮೇಲ್ಭಾಗದಲ್ಲಿ ನಕಾಸಿನ ಕೆತ್ತನೆಯಿಂದಲೂ ನೋಡುವುದಕ್ಕೆ ಅಂದವಾಗಿಯೂ ಬಹಳ ದಿವಸ ಬಾಳಿಕೆ ಬರತಕ್ಕವುಗಳಾಗಿವೆ. ಈ ಘಡಿಯಾರಕ್ಕೆ ಆರ್ಡರ್ ಮಾಡತಕ್ಕವರು ೫ ರೂಪಾಯಿ ಅಡ್ವಾನ್ಸ್ ಕಳಿಸಬೇಕು. ಬಾಕೀ ಮೊಬಲಿಗ್ಗೆ ರೈಲ್ವೆ ರಶೀದಿಯನ್ನು ವಿ. ಪಿ. ಮಾಡಲಾಗುತ್ತೆ. ರೈಲ್ವೆ ಛಾರ್ಜು ಅಲಾಯಿದಾ.

ಸಿಕ್ಕಿದ ಹಾರ್ಮೋನಿಯಂಗಳನ್ನು ಕ್ರಯಕ್ಕೆ ತೆಗೆದುಕೊಂಡು ನಿಮ್ಮ ಹಣವನ್ನು ಯಾಕೆ ವ್ಯರ್ಥಮಾಡಿಕೊಳ್ಳುವಿರಿ.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ "ಮೋಹನ್‌ಫ್ಲೂಟ್ಸ್" (M. Mohen flute) ಮತ್ತೂ "ಮೋಸ್ಲಂಫ್ಲೂಟ್" (Moslem flute) ಹಾರ್ಮೋನಿಯಂಗಳನ್ನು ನಮ್ಮಿಂದ ತರಿಸಿಕೊಂಡು ಪರೀಕ್ಷಿಸಿರಿ ಈ ಹಾರ್ಮೋನಿಯಂಗಳು ಅನೇಕದಿವಸ ಬಾಳಿಕೆಬರುವಂತೆ ಬಹಳಮಜಬೂತಾದ ಸಾಮಾನುಗಳಿಂದ ಪ್ರಖ್ಯಾತರಾದ ಕಾರೀಗಾರರಿಂದ ತಯಾರಿಸಲ್ಪಟ್ಟಿವೆ. ಒಂದು ಸಾರಿ ನಮ್ಮಿಂದ ತರಿಸಿ ಪರೀಕ್ಷಿಸಿದಲ್ಲಿ ಇದರ ಬಂದೋಬಸ್ತು ಬಾಳ್ವಿಕೆ ಸಹ ತಮಗೇ ವ್ಯಕ್ತವಾಗುತ್ತೆ.



ನಂ ೧. ಒಂದು ಸೆಟ್‌ರೀಡ್ಸ್ ಉಳ್ಳದ್ದು (Moslem flute) ಹಾರ್ಮೋನಿಯಂ ೧ ಕ್ಕೆ ೩೫-೦-೦ ರೂ.

ನಂ ೨. ಒಂದು ಸೆಟ್‌ರೀಡ್ಸ್ ಉಳ್ಳದ್ದು (M. Mohen flute) ಹಾರ್ಮೋನಿಯಂ ೧ ಕ್ಕೆ ೩೩-೮-೦ ರೂ.

ನಂ ೩. ಡಿಟೋ ನಮೂನೆಯಲ್ಲಿ ಅತ್ಯುತ್ತಮವಾದದ್ದು (M. Mohen flute) ೧ ಕ್ಕೆ ೪೨-೮-೦ ರೂ.

ನಂ ೪. ಡಬ್ಬಲ್‌ರೀಡ್ಸ್ ಉಳ್ಳದ್ದು (Moslem flute) ಹಾರ್ಮೋನಿಯಂ ೧ ಕ್ಕೆ ೪೩-೮-೦ ರೂ

ನಂ ೫. ಡಬ್ಬಲ್‌ರೀಡ್ಸ್ ಉಳ್ಳದ್ದು (M. Mohen flute) ಹಾರ್ಮೋನಿಯಂ ೧ ಕ್ಕೆ ೫೨-೮-೦ ರೂ.

ಈ ಹಾರ್ಮೋನಿಯಂಗಳ ಪೈಕಿ ಯಾವದಕ್ಕೆ ಆರ್ಡರ್ ಕೊಟ್ಟರೂ ಕೂಡ ೫ ರೂಪಾಯಿ ಅಡ್ವಾನ್ಸ್ ಕಳಿಸಬೇಕು ಬಾಕೀಮೊಬಲಿಗ್ಯೆ ರೈಲ್ವೇರಶೀದಿಯನ್ನು ವಿ. ಪಿ. ಮೂಲ್ಕ ರವಾನಿಸುತ್ತೇವೆ.

ನೆಪ್ಚೂನ್‌ಫೌಂಟನ್‌ಪೆನ್‌ಗಳು. NEPTUNE FOUNTAIN PENS.

ಈ ಫೌಂಟನ್‌ಪೆನ್‌ಗಳು ಅದರ ಖರೀದಿಗೆ ತಕ್ಕಂತೆ ೪ ವರುಷಗಳಲಾಗಾಯ್ತು ಹತ್ತು ವರುಷಗಳವರಿಗೆ ಬಾಳಿಕೆ ಬರತಕ್ಕವುಗಳಾಗಿವೆ.

ನಂ ೨೦೧. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಕ್ರಯ ೧ ಕ್ಕೆ ೧—೧೪—೦.

ನಂ ೨೦೫. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಉತ್ತಮವಾದದ್ದು ಕ್ರಯ ೧ ಕ್ಕೆ ೨—೧೦—೦

ನಂ ೨೧೦. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಅತ್ಯುತ್ತಮವಾದದ್ದು ಕ್ರಯ ೧ ಕ್ಕೆ ೪—೨—೦.

ಮೇಲ್ಕಂಡ ಯಾವನಮೂನೆ ಫೌಂಟನ್‌ಪೆನ್‌ಗಳನ್ನು ತರಿಸಿಕೊಂಡರೂ ಅದರ ಜೊತೆಯಲ್ಲಿ ಪೆನ್ ಇಡತಕ್ಕ ಪೆಟ್ಟಿಗೆ ೧. ಜೇಬಿಗೆ ತಗಲಿಸತಕ್ಕ ಕ್ಲಿಪ್ ೧. ಶಾಯಿಹಾಕುವ ಗಾಜಿನ ಟ್ಯೂಬ್ ೧. ಶಾಯಿತುಂಬುವವಿಧ ಪ್ರಿಂಟಾಗಿರತಕ್ಕ ಚೀಟಿ ೧ ನ್ನೂ ಸಹ ರವಾನಿಸಲಾಗುತ್ತೆ.

ರಖಂವಾರ್ ನಾಚ್ ಸರಪಣಿಗಳು.



ಈ ಪಕ್ಕದ ಚಿತ್ರದಲ್ಲಿ ಕಾಣಿಸಿರುವ ನಮೂನೆ ಅಚ್ಚಬೆಳ್ಳಿಯ ವಾಚ್ ಸರಪಣಿ ಯಾವ ರಖಂ ಬೇಕಾದರೂ ಕ್ರಯ ೧ಕ್ಕೆ ೩—೪—೦ ಮೇಲ್ಕಂಡ ರಖಂವ್ಮಿನಲ್ಲಿ ನಿಕ್ಕಲ್‌ಬೆಳ್ಳಿ ಸರಪಣಿ ಕ್ರಯ ೧ ಕ್ಕೆ ೦—೧೨—೦.

ಅಚ್ಚಬೆಳ್ಳೀ ಕೊರಳ ಸರಪಣಿ ಬಹಳ ನಾಜೋಕಾಗಿ ತಯಾರಿಸಿದ್ದು ೧ ಕ್ಕೆ ೧—೪—೦.

೧೮ ಕ್ಯಾರಟ್ಟು ಚಿನ್ನದ ಸರಪಣಿ ೧ ಕ್ಕೆ ೫—೮—೦.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೫—೦
ಸಟೀಕ ನಂದೀವ್ರತ	೦—೪—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸ ಪುಸ್ತಕಗಳು.

150

ಬಸವರಾಜವಿಜಯಂ— ಬೆಲೆ ೧ ೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಮಂತ್ರಗೋಪ್ಯ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦ ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸುಪ್ರಿ ನುಂಆಶ್ರಿತ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ ವರ್ಷದ ಚಂದಾ ೨-೮-೦.

ಎಂ. ಆರ್. ಕರಿಬಸವಶಾಸ್ತ್ರಿ, ಗ್ರಂಥಪ್ರಸಾರಕಮಂಡಲಿ, ಮೈಸೂರು.

ಪ್ರಕಟನೆ.

ಪ್ರಿಂಟಿಂಗಾಫೀಸಿನವರು ಅಗತ್ಯವಾಗಿ ಗಮನಿಸತಕ್ಕದು.

ನಮ್ಮಲ್ಲಿ ಈ ಸ್ಟಾರ್‌ಪತ್ರಿಕೆಯ ೧. ೩. ೫. ೬. ೭ ಮತ್ತೂ ೮ನೇ ಪುಟಗಳಲ್ಲುಪಯೋಗಿಸಲ್ಪಟ್ಟಿರುವ ಪೈಕ ಅಥವಾ ೧೨ ಪಾಯಿಂಟ್ ಅಕ್ಷರಗಳ ಮತ್ತೂ ಈ ಪ್ರಕಟನೆಗುಪಯೋಗಿಸಲ್ಪಟ್ಟಿರುವ ಬೂರ್ಜೈನ್ ಮಿನಿಯನ್ ಅಥವಾ ೧೪ ಪಾಯಿಂಟ್ ಅಕ್ಷರಗಳ ಮ್ಯಾಟ್ರಿಕ್ಸುಗಳೂ, ಅವುಗಳ ಮೌಲ್ಡುಗಳೂ ಇವನ್ನು ಎರಕವೆರೆಯುವ ಯಂತ್ರವೂ ಅದಕ್ಕೆ ಸಂಬಂಧಪಟ್ಟ ಲೈನ್ ಗೇಜ್ ಪೇಪರ್‌ಗೇಜ್ ಹೈಟ್‌ಗೇಜ್ ಡ್ರೆಸ್ಸಿಂಗ್ ಟೇಬಲ್ ಕರ್ನಿಂಗ್ ಮಿಷನ್ನು ಮುಂತಾದ ಸಾಮಾಗ್ರಿಗಳೂ ಸೂಪರ್‌ರಾಯಲ್ ಸೈಜನ್ನು ಪ್ರಿಂಟ್ ಮಾಡುವ ಸಿಲಿಂಡರ್ ಮಿಷನ್ನು ಸಹ ಮಾರಾಟಕ್ಕೆ ಸಿದ್ಧವಾಗಿವೆ. ಈ ಮಿಷನ್ನಿನಲ್ಲೇ ಈ ಸ್ಟಾರ್‌ಪತ್ರಿಕೆಯು ಪ್ರಿಂಟುಮಾಡಲ್ಪಡುತ್ತಿರುವುದು. ಎರಕವೆರೆಯುವ ಮಿಷನ್ನು ಬಹಳ ಸ್ವಲ್ಪ ಕೆಲಸವನ್ನು ಮಾತ್ರ ಮಾಡಿ ಹೊಸದಾಗಿಯೇ ಯಿರುವುದು. ಇಷ್ಟವುಳ್ಳವರು ಇವುಗಳ ಬೆಲೆ ಮೊದಲಾದವನ್ನು ನಮಗೆ ಬರೆದು ತಿಳಿದುಕೊಳ್ಳಬಹುದಲ್ಲದೆ ಪ್ರತ್ಯಕ್ಷದಲ್ಲಿ ಬಂದು ನೋಡಬಹುದು.

ವೈ. ವಿರೂಪಾಕ್ಷಯ್ಯ,
ಪ್ರೊಪ್ರೈಟರ್
ಕ್ಯಾಕ್ಸ್ಟನ್ ಪ್ರೆಸ್, ಮೈಸೂರು.

ವಿದ್ಯಾರ್ಥಿಗಳ ತಾಯಿ ತಂದೆಗಳು ನವೀನ ಪಾಠಕ್ರಮಗಳನ್ನು ಪರಾಮರ್ಶಿಸಲು ಏರ್ಪಡಿಸಿದ್ದ ಒಂದು ಸಂತೋಷಕೂಟವು.

ದೊಡ್ಡಬಳ್ಳಾಪುರದ ಪಟ್ಟಣದ ಪ್ರಜಾಸಂಖ್ಯೆಯು ೭-೮ ಸಾವಿರ ಮಾತ್ರವೇ ಆಗಿದ್ದರೂ ಇಲ್ಲಿಯ ಸ್ಕೂಲುಗಳಲ್ಲೆಲ್ಲಾ ಸೇರಿ ಸುಮಾರು ಒಂದು ಸಾವಿರ ವಿದ್ಯಾರ್ಥಿಗಳು ವಿದ್ಯೆಯನ್ನು ಕಲಿಯುತ್ತಿರುವುದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದ ಸಂಗತಿಯೇ ಆಗಿರುತ್ತದೆ. ಈ ಅಂಶವನ್ನು ಪುರಸ್ಕರಿಸಿಯೇ ಬಲಾತ್ಕಾರ ವಿದ್ಯಾಭ್ಯಾಸದ ಕಾನೂನನ್ನು ಈ ಊರಿನಲ್ಲಿಯೂ ಜಾರಿಗೆ ತರತಕ್ಕದ್ದೆಂದು ಸರ್ಕಾರದವರು ಅಪ್ಪಣೆ ದಯಪಾಲಿಸಿರುವುದು. ಈ ರೀತಿ ಇಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವು ವಿಶೇಷ ಪ್ರಾಚುರ್ಯದಲ್ಲಿರುವುದನ್ನು ಕಂಡು ಸುತ್ತುಮುತ್ತಣ ಗ್ರಾಮಾಂತರದವರೂ ಸಹ ಇಲ್ಲಿಯ ಸ್ಕೂಲುಗಳಲ್ಲಿ ನಡೆಯುತ್ತಿರುವ ನವೀನ ಪಾಠಕ್ರಮಗಳನ್ನು ಪರಾಮರ್ಶಿಸುವುದರ ಮೂಲಕ ತಮ್ಮ ತಮ್ಮ ಗ್ರಾಮಗಳಲ್ಲಿ ವಿದ್ಯೆಯನ್ನು ಹೆಚ್ಚು ಹೆಚ್ಚಾಗಿ ಹರಡುತ್ತಾ ಬರುವ ವಿಷಯದಲ್ಲಿ ಪ್ರಯತ್ನಶೀಲರಾಗಲು ಪ್ರೋತ್ಸಾಹವುಂಟಾಗಲೆಂಬ ಮುಖ್ಯೋದ್ದೇಶದೊಡನೆ ಇಲ್ಲಿ ಕಳೆದ ಬುಧವಾರ ಒಂದು ವಿದ್ಯಾಭ್ಯಾಸದ ಪ್ರದರ್ಶನವು ನಡಿಸಲ್ಪಟ್ಟಿತು. ಇದನ್ನು ತೃಪ್ತಿಕರವಾಗಿಯೂ, ಸಾಂಗವಾಗಿಯೂ ನೆರವೇರಿಸುವವಿಚಾರದಲ್ಲಿ ವಿದ್ಯಾಭ್ಯಾಸದ ಇಲಾಖೆಯ ಮುಖ್ಯಾಧಿಕಾರಿಗಳಿಂದ ಪ್ರೇರಿತರಾಗಿ ಈ ಪ್ರಾಂತ್ಯದ ಉಪಾಧ್ಯಾಯರುಗಳೆಲ್ಲಾ ಆದರ್ಶಪ್ರಾಯರಾಗಿಯೂ, ವಿಶೇಷ ಸರ್ವಿಸ್‌ದಾರರಾಗಿಯೂ ಇರುವ ಇಲ್ಲಿಯ ಎ. ವಿ. ಸ್ಕೂಲ್ ಹೆಡ್‌ಮಾಸ್ಟರ್ ಡಿ. ಕೊಂಗಾಡಿಯಪ್ಪನವರು ಮುಂದಾಳುಗಳಾಗಿದ್ದರು. ಇದೇ ಸ್ಕೂಲಿನ ಅಸಿಸ್ಟೆಂಟ್ ಮಾಸ್ಟರುಗಳೂ, ಇತರ ಎಲ್ಲ ಸ್ಕೂಲಿನ ಮಾಸ್ಟರುಗಳೂ ಇವರ ಸಹಾಯಕರಾಗಿದ್ದುದಲ್ಲದೆ, ಈ ಊರಿನ ಅಮಲ್ದಾರರು, ಮುನ್ಸೀಫರು ಮೊದಲಾದ ಸ್ಥಳೀಯಾಧಿಕಾರಿಗಳೂ, ಅಡ್ವೋಕೇಟರು, ಮ್ಯುನಿಸಿಪಲ್ ಕೌನ್ಸಿಲರು ಮುಂತಾದ ಪ್ರಮುಖರೂ ಸೇರಿ ಒಂದು ಕಮಿಟಿಯನ್ನೇರ್ಪಡಿಸಿಕೊಂಡಿದ್ದುದರಿಂದ ಸಕಲ ಕಾರ್ಯಗಳೂ ಬಹಳ ವಿತರಣೆಯಿಂದ ನಡೆಯಲು ಅನುಕೂಲವಾಯಿತು.

ಇಲ್ಲಿನ ಎ. ವಿ. ಸ್ಕೂಲ್ ಕಟ್ಟಡದಲ್ಲಿ ಏರ್ಪಡಿಸಿದ್ದ ವಿದ್ಯಾಭ್ಯಾಸದ ಪ್ರದರ್ಶನದಲ್ಲಿ ಈ ಊರಿನ ಎಲ್ಲ ಸ್ಕೂಲುಗಳ ವಿದ್ಯಾರ್ಥಿಗಳ ಮತ್ತೂ ವಿದ್ಯಾರ್ಥಿನಿಯರ ರಟ್ಟಿನ ಕೆಲಸ, ಬರವಣಿಗೆ, ಚಿತ್ರದಕೆಲಸ, ಮರಗೆಲಸ, ಬೆತ್ತದ ಹೆಣಿಗೆ, ನೆಯಿಗೆ ಮುಂತಾದ ಕೈಗಾರಿಕೆಯ ಕೆಲಸ ಇವುಗಳು ಮಾತ್ರವೇ ಅಲ್ಲದೆ ಬೇರೆ ಸ್ಕೂಲುಗಳ ಕೆಲಸಗಳೂ ಪ್ರದರ್ಶಿಸಲ್ಪಟ್ಟಿದ್ದುವು. ಬೆಂಗಳೂರು ತಾತಾಸಿಲ್ಕ್ ಫಾರಂ ಎಂಬ ರೇಷ್ಮೆಕಾರ್ಖಾನೆಯ ಮ್ಯಾನೇಜರ್ ಮಿ॥ ಜಾರ್ಕ್‌ರ್ಸರವರು ರೇಷ್ಮೆಯಗೂಡು, ಬಟ್ಟೆ ಮುಂತಾದುವುಗಳನ್ನೂ, ಮೆಕ್ಯಾನಿಕಲ್ ಇಂಜಿನಿಯರಿಂಗ್ ಸ್ಕೂಲ್‌ಪ್ರಿನ್ಸಿಪಲರಾದ ಮಿ॥ ಎಲ್. ವಿ. ಶೆಟ್ಟರವರು ತಮ್ಮ ಸ್ಕೂಲಿನಲ್ಲಿ ನಡೆಯುವ ಕಬ್ಬಿಣ ಮತ್ತೂ ಮರಗೆಲಸದ ಮಾದರಿಗಳನ್ನೂ, ಮೈಸೂರು ಟ್ರೈನಿಂಗ್ ಕಾಲೇಜ್ ಪ್ರಿನ್ಸಿಪಲರಾದ ಮಿ॥ ಡಿ. ವೆಂಕಟರಾಮಯ್ಯನವರೂ, ಅದೇ ಕಾಲೇಜಿನ ಕಿಂಡರ್‌ಗಾರ್ಟನ್ ಸೆಕ್ಷನ್ ಸೂಪರಿಂಟೆಂಡೆಂಟ್ ಮಿ॥ ಎಂ. ವೆಂಕಟಸುಬ್ಬಯ್ಯನವರೂ ತಮ್ಮ ವಿದ್ಯಾರ್ಥಿಗಳು ಮಾಡಿದ್ದ ಕಿಂಡರ್‌ಗಾರ್ಟನ್ ಮುಂತಾದುವುಕ್ಕೆ ಸಂಬಂಧಪಟ್ಟಸಾಮಗ್ರಿಗಳನ್ನೂ ಪ್ರದರ್ಶಿಸಿದ್ದರು. ಅಲ್ಲದೆ ಬೆಂಗಳೂರು ಹೈಸ್ಕೂಲಿನಲ್ಲಿ ಸೈನ್ಸ್ ಎಂಬ ಶಾಸ್ತ್ರಬೋಧಕರಾದ ಮಿ॥ ಅನಂತಪದ್ಮನಾಭಯ್ಯರವರೂ, ಮಿ॥ ನಾರಾಯಣಮೂರ್ತಿಯವರೂ ತಮ್ಮ ಸ್ಕೂಲಿನ ಕೆಲವು ವಿದ್ಯಾರ್ಥಿಗಳನ್ನು ಕರೆದುಕೊಂಡು ಬಂದು ಶಾಸ್ತ್ರಪಾಠಗಳಲ್ಲಿ ಕೆಲವು ಮುಖ್ಯಾಂಶಗಳನ್ನು ನಿದರ್ಶನಪೂರ್ವಕವಾಗಿ ಬೋಧಿಸುತ್ತಿದ್ದುದು ಅನೇಕರಿಗೆ ಕೌತುಕವನ್ನು ಹುಟ್ಟಿಸುವದಾಗಿತ್ತು. ಇಷ್ಟೇ ಅಲ್ಲದೆ ಸ್ಲಾಯ್ಡ್ ಸೂಪರ್‌ವೈಜರ್ ಮಿ॥ ಡಿ. ಆದಿನಾರಣಯ್ಯನವರಿಂದ ಸ್ಲಾಯ್ಡ್ ವಿದ್ಯೆಗೆ ಸಂಬಂಧಪಟ್ಟ ಸಾಮಗ್ರಿಗಳೂ, ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್‌ಜನರಲ್ ಸಾಹೇಬರ ಆಫೀಸಿನಿಂದ ವಿಲಾಯತಿಯ ಸ್ಕೂಲುಗಳಿಗೆ ಸಂಬಂಧಪಟ್ಟ ವಿದ್ಯಾಭ್ಯಾಸದಸಾಮಗ್ರಿಗಳೂ ಬಂದಿದ್ದುವು. ಮತ್ತೂ ಇದೇ ತಾಲ್ಲೂಕಿಗೆ ಸೇರಿದ ಗ್ರಾಮಾಂತರದ ಸ್ಕೂಲುಗಳವರೂ, ಬೆಂಗಳೂರು ಚಾಮರಾಜಪೇಟೆ ಗರಲ್ಸ್‌ಸ್ಕೂಲು, ಮಾಡಲ್‌ಇನ್ಫೆಂಟ್ ಸ್ಕೂಲು, ಯಲಹಂಕ, ದೇವನಹಳ್ಳಿ, ಗುಡಿಬಂಡೆ, ಗೌರಿಬಿದನೂರು ಶ್ರೀನಿವಾಸಪುರ, ತ್ಯಾಮಗೊಂಡ್ಲು, ಕ್ಲೋಸ್‌ಪೇಟೆ, ಚಿಕ್ಕಬಳ್ಳಾಪುರ, ಮಲ್ಲೇಶ್ವರ, ಆನೆಕಲ್ಲು, ನೆಲಮಂಗಲ, ವಡಿಗೇನಹಳ್ಳಿ, ಹಿಂದೂಪುರದ ತಾಲ್ಲೂಕ್ ಬೋರ್ಡ್ ಸ್ಕೂಲು ಈ ಮುಂತಾದ ಸ್ಕೂಲುಗಳವರೂ ಸಾಮಗ್ರಿಗಳನ್ನು ಪ್ರದರ್ಶಿಸಿದ್ದರು. ಮಿ॥ ಬಿ ಎಲ್. ಲಕ್ಷ್ಮಣರಾಯರೆಂಬುವರು ಎಲೆಕ್ಟ್ರಿಕ್ ದೀಪ, ಎಲೆಕ್ಟ್ರಿಕ್ ಬೆಲ್ ಮುಂತಾದ ವಿದ್ಯುಚ್ಛಕ್ತಿಯ ಸಾಮಗ್ರಿಗಳನ್ನು ಎಲ್ಲರಿಗೂ ಪ್ರದರ್ಶಿಸಿ ವಿವರಿಸುತ್ತಿದ್ದರು. ಇವುಗಳೆಲ್ಲವೂ ವಿದ್ಯಾನಿದರ್ಶಕಗಳಾಗಿಯೂ ಹಸ್ತಕೌಶಲ್ಯಪ್ರದರ್ಶಕಗಳಾಗಿಯೂ ಇದ್ದುವಲ್ಲದೆ ಪೂರ್ವಕಾಲದ ಹಳೆಯ ತರಹೆಯ ವಿದ್ಯಾಭ್ಯಾಸಕ್ಕೂ ಈಗಿನಕಾಲದ ವಿದ್ಯಾಭ್ಯಾಸಕ್ಕೂ ಇರತಕ್ಕ ತಾರತಮ್ಯಗಳನ್ನು ಪ್ರದರ್ಶಿಸಲು ಸಾಧಕಗಳಾಗಿದ್ದುವು.

ಪ್ರಾತಃಕಾಲ ೯ ಘಂಟೆಯ ಟ್ರೈನಿನಲ್ಲಿ ಬೆಂಗಳೂರಿನಿಂದ ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್‌ಜನರಲ್ ರಾವ್ ಬಹದ್ದೂರ್ ಮಿ॥ ಎಂ. ಶಾಮರಾಯರವರೂ, ಡೆಪ್ಯುಟಿಇನ್ಸ್‌ಪೆಕ್ಟರ್ ಜನರಲ್ ಮಿ॥ ಸಿ. ಕೃಷ್ಣರಾಯರವರೂ, ಸರ್ಕಲ್ ಇನ್ಸ್‌ಪೆಕ್ಟರ್ ಮಿ॥ ಬಿ. ದಾಸಪ್ಪನವರೂ, ಡೆಪ್ಯುಟಿ ಇನ್ಸ್‌ಪೆಕ್ಟರ್ ಮಿ॥ ಟಿ. ವಿ. ಕೃಷ್ಣರಾಯರವರೂ, ಆನರರಿ ಬೆಂಚ್ ಮೇಜಿಸ್ಟ್ರೇಟ್ ಮಿ॥ ಡಿ. ಆದೆಪ್ಪನವರೂ ದಯಮಾಡಿಸಿದ್ದರು. ಅವರುಗಳನ್ನು ಊರಿನ ಪ್ರಮುಖರೆಲ್ಲರೂ ಸೇರಿ ಉಚಿತಮರ್ಯಾದೆಯೊಡನೆ ಇದಿರುಗೊಂಡನಂತರ, ಎ. ವಿ. ಸ್ಕೂಲಿನ ಇದಿರಿನಲ್ಲಿ ಅಲಂಕರಿಸಿದ್ದ ಚಪ್ಪರದ ಬಳಿ ಗರಲ್ಸ್‌ಸ್ಕೂಲಿನ ವಿದ್ಯಾರ್ಥಿನಿಯರೂ. ಎ. ವಿ. ಸ್ಕೂಲ್ ಹಿಂದೂಸ್ತಾನಿ ಸ್ಕೂಲುಗಳ ವಿದ್ಯಾರ್ಥಿಗಳೂ ಸಹ ಸೇರಿ ಸ್ವಾಗತಪೂರ್ವಕವಾಗಿ ಬರಮಾಡಿಕೊಂಡರು. ಅವರುಗಳೂ ಅದುವರೆಗೆ ಅಲ್ಲಿ ವಿಶೇಷವಾಗಿ ನೆರೆದಿದ್ದ ಊರಿನ ಪ್ರಮುಖರೂ ಸ್ಕೂಲಿನೊಳಗೆ ಏರ್ಪಡಿಸಲ್ಪಟ್ಟಿದ್ದ ಪ್ರದರ್ಶನವನ್ನು ಆಮೂಲಾಗ್ರವಾಗಿ ಪರಾಮರ್ಶಿಸಿದನಂತರ ವಿದ್ಯಾರ್ಥಿಗಳೂ, ವಿದ್ಯಾರ್ಥಿನಿಯರೂ ಮಾಡಿ ತೋರಿಸಿದ ಅಭಿನಯಗೀತ, ಕಿಂಡರ್ ಗಾರ್ಟನ್ ಆಟ, ಡ್ರಿಲ್, ಡಂಬ್‌ಬೆಲ್ಸ್‌ಸಾಧನೆ, ಗಣಿತ, ವ್ಯವಸಾಯ ಮುಂತಾದ ಪಾಠಗಳ ಬೋಧನಾಕ್ರಮ ಇವುಗಳನ್ನೆಲ್ಲಾ ಪರಾಮರ್ಶಿಸಿ ಭೋಜನಕ್ಕೆ ತೆರಳಿದರು.

ಮಧ್ಯಾಹ್ನ ೧ ಘಂಟೆಯ ಟ್ರೈನಲ್ಲಿ ಬೆಂಗಳೂರಿನಿಂದ ಮಹಾರಾಜಶ್ರೀಯವರುಗಳಾದ ಹೈಸ್ಕೂಲ್ ಹೆಡ್‌ಮಾಸ್ಟರು, ವಿ. ಸುಬ್ರಹ್ಮಣ್ಯಯ್ಯರವರೂ, ಅಡ್ವೋಕೇಟ್ ಡಿ. ವೆಂಕಟರಾಮಯ್ಯನವರೂ, ಲೆಜಿಸ್ಲೇಟಿವ್ ಕೌನ್ಸಿಲ್‌ಮೆಂಬರ್ ಬಿ. ಕೆ. ಗರುಡಾಚಾರ್ಯರವರೂ, ಕಮರ್ಶಿಯಲ್ ಅಸೋಸಿಯೇಷನ್ ಸೆಕ್ರೆಟರಿ ಕೆ. ಎಸ್. ಕೃಷ್ಣಅಯ್ಯರವರೂ, ರಾಮಚಂದ್ರರಾವ್ ಸಿಂಧಿಯವರೂ, ದಿವಾನ್‌ಸಾಹೇಬರವರ ಕ್ಲಾರ್ಕ್ ಬಿ. ಸಿ. ಸುಬ್ಬರಾಯಪ್ಪನವರೂ, ದೇವನಹಳ್ಳಿಯಿಂದ ಮೋಟಾರಿನಲ್ಲಿ ಡೆಪ್ಯುಟಿಕಮಿಷನರ್ ಮಿ॥ ಚಾಂಡಿರಾಹೇಬರೂ ದಯಮಾಡಿಸಿದರು.

ಸಾಯಂಕಾಲ ೪ ಘಂಟೆಯವರೆಗೂ ಈ ಊರಿನವರೂ ಪರಸ್ಥಳದವರೂ, ಆಬಾಲಸ್ತ್ರೀವೃದ್ಧರಾದಿಯಾಗಿ ಸರ್ವರೂ ಪ್ರದರ್ಶನವನ್ನು ನೋಡಿ ದಣಿದರು. ಅನಂತರ ಸ್ಕೂಲು ಬಳಿ ಪ್ರಮುಖರಾದವರ ಭಾವಚಿತ್ರವು ತೆಗೆಯಲ್ಪಟ್ಟಿತು. ಆಮೇಲೆ ಸ್ಕೂಲಿನಲ್ಲಿ ಸಭೆಯು ಪ್ರಾರಂಭವಾಯಿತು. ರಾವ್ ಬಹದ್ದೂರ್ ಮಿ॥ ಎಂ. ಶಾಮರಾಯರವರು ಅಗ್ರಾಸನವನ್ನು ವಹಿಸಿದ್ದರು. ಪ್ರೋಗ್ರಾಮಿನಂತೆ ಸುಮಾರು ಎರಡು ಘಂಟೆಗಳ ಕಾಲ ಕಾರ್ಯಗಳೆಲ್ಲವೂ ಸಾಂಗವಾಗಿ ನಡೆದುವು. ವಿದ್ಯಾರ್ಥಿಗಳ, ಮತ್ತೂ ವಿದ್ಯಾರ್ಥಿನಿಯರ ಕುಶಲಪ್ರಶ್ನೆ, ಸಂಭಾಷಣೆ, ಕಂಠಪಾಠ, ನಾಟಕಾಭಿನಯ ಮುಂತಾದುವುಗಳೆಲ್ಲವೂ ಆನಂದದಾಯಕಗಳಾಗಿದ್ದುವು ಮೂವರು ಪಂಡಿತಮಹನೀಯರುಗಳು ಕನ್ನಡದಲ್ಲಿಯೂ ಸಂಸ್ಕೃತದಲ್ಲಿಯೂ ಸಭಾಧ್ಯಕ್ಷರವರ ಪರವಾಗಿ ರಚಿಸಿ ಓದಿ ಹೇಳಿದ ಕವನಗಳು ಶ್ಲಾಘ್ಯತರಗಳಾಗಿದ್ದುವು. ಇವೆಲ್ಲವೂ ಮುಗಿದನಂತರ ಡೆಪ್ಯುಟಿಇನ್ಸ್‌ಪೆಕ್ಟರ್‌ಜನರಲ್ ಮಿ॥ ಸಿ. ಕೃಷ್ಣರಾಯರವರು ವಿದ್ಯಾವಿಚಾರದಲ್ಲಿ ಸ್ವಾರಸ್ಯಕರವಾದ ಒಂದು ಉಪನ್ಯಾಸವನ್ನು ಅಪ್ಪಣೆಮಾಡಿಸಿದರು. ಇದರಲ್ಲಿ ಅವರು ಪೂರ್ವಕಾಲದ ವಿದ್ಯಾಭ್ಯಾಸಕ್ಕೂ ಈಗಿನ ಕಾಲದ ವಿದ್ಯಾಭ್ಯಾಸಕ್ಕೂ ಇರತಕ್ಕ ತಾರತಮ್ಯಗಳನ್ನು ವಿವರಿಸಿದುದಲ್ಲದೆ ನಾಗರಿಕತೆಯು ಉನ್ನತಸ್ಥಾನದಲ್ಲಿರುವ ದೇಶಗಳೊಡನೆ ಹೋಲಿಸಿ ನೋಡುವುದರಿಂದ ನಮ್ಮ ದೇಶದಲ್ಲಿ ವಿದ್ಯಾಭ್ಯಾಸವು ವಿಶೇಷ ಹಿಂದುಳಿದಿದೆ ಎಂಬುದು ವಿಶದವಾಗುವುದೆಂತಲೂ, ಸಮಸ್ತರೂ ವಿದ್ಯಾರ್ಜನೆಗಾಗಿ ತಕ್ಕ ಸನ್ನಾಹಗಳನ್ನು ಮಾಡುತ್ತಾ ಬಂದಲ್ಲದೆ ಈ ದೇಶೀಯರು ಅಭಿವೃದ್ಧಿಗೆ ಬರುವುದು ಸಾಧ್ಯವಾಗಲಾರದೆಂತಲೂ ವಿಶದವಾಗಿ ಉಪನ್ಯಾಸಮಾಡಿದರು. ಮಿ॥ ಅಡ್ವೋಕೇಟ್ ವೆಂಕಟರಾಮಯ್ಯನವರು ಸಹ ಮಿ॥ ಕೃಷ್ಣರಾಯರ ಉಪನ್ಯಾಸವನ್ನೇ ಪುಷ್ಟೀಕರಿಸಿ ಯುಕ್ತಿಯುಕ್ತವಾದ ಭಾಷಣವನ್ನು ಮಾಡಿದರು. ಅನಂತರ ಅಧ್ಯಕ್ಷಸ್ಥಾನವನ್ನಲಂಕರಿಸಿದ್ದ ರಾವ್ ಬಹದ್ದೂರ್ ಮಿ॥ ಎಂ. ಶಾಮರಾಯರವರು ಪ್ರದರ್ಶನ ಮುಂತಾದುವುಗಳೆನ್ನಲ್ಲ ತೃಪ್ತಿಕರವಾಗಿ ಏರ್ಪಡಿಸಿದ್ದ ಹೆಡ್‌ಮಾಸ್ಟರ್ ಮಿ॥ ಡಿ. ಕೊಂಗಾಡಿಯಪ್ಪನವರನ್ನೂ, ಕಮಿಟಿಮೆಂಬರುಗಳನ್ನೂ ಶ್ಲಾಘಿಸಿ, ಸರ್ಕಾರದವರು ಬಲಾತ್ಕಾರ ವಿದ್ಯಾಭ್ಯಾಸದ ಕಾನೂನನ್ನು ಈ ಊರಿನಲ್ಲಿ ಜಾರಿಗೆ ತರಬಹುದೆಂದು ಅಪ್ಪಣೆ ಮಾಡಿದರೂ, ಅದರ ನಿಯಮಗಳನ್ನು ಇಲ್ಲಿ ಜಾರಿಗೆ ತರಬೇಕಾದ ಪ್ರಮೇಯವೇ ಬಾರದಂತೆ ಸರ್ವರೂ ತಮ್ಮ ಮಕ್ಕಳನ್ನು ತಾವಾಗಿಯೇ ವಿದ್ಯಾವಂತರನ್ನಾಗಿ ಮಾಡಿ ವಿದ್ಯೆಯ ಫಲಗಳನ್ನು ಪಡೆಯುವವರಾಗಬೇಕೆಂತಲೂ, ಸರ್ಕಾರದವರು ಈಗಾಗಲೇ ಬಾಲವಿದ್ಯಾಭ್ಯಾಸಕ್ಕಾಗಿ ೫॥ ಲಕ್ಷ ರೂಪಾಯಿ ಮಂಜೂರು ಮಾಡಿರುವರೆಂತಲೂ, ಇನ್ನೂ ಹೆಚ್ಚಾಗಿ ಬೇಕಾದರೂ ಮಂಜೂರುಮಾಡಲು ಸಿದ್ಧರಾಗಿರುವರೆಂತಲೂ, ಈಗಿನ ಕಾಲದ ವಿದ್ಯಾಭ್ಯಾಸವು ಮಕ್ಕಳಿಗೆ ಆಟದೋಪಾದಿಯಲ್ಲಿ ಕಲಿಸಲ್ಪಡುವುದೆಂತಲೂ ಸರ್ವಜನ ಹೃದಯಂಗಮವಾದ ಭಾಷಣವನ್ನು ಮಾಡಿದರು. ಅನಂತರ ಅಡ್ವೋಕೇಟ್ ಮಿ॥ ರಾಜಗೋಪಾಲಯ್ಯಂಗಾರ್ಯರೂ, ಮ್ಯುನಿಸಿಪಲ್ ಕೌನ್ಸಿಲರ್ ಮಿ॥ ಆಲಂಪಲ್ಲಿ ವೆಂಕಟನಾರಾಯಣಯ್ಯನವರೂ ಊರಿನ ಜನರ ಪರವಾಗಿ ಸಭಾಧ್ಯಕ್ಷರವರಿಗೆ ವಂದನೆಗಳನ್ನು ಸಮರ್ಪಿಸಿದರು. ಗಂಧಪುಷ್ಪಗಳ ವಿನಿಯೋಗಾನಂತರ ಶ್ರೀಮಹಾರಾಜರವರ ಶ್ರೇಯಃಪ್ರಾರ್ಥನೆ, ಮಂಗಳ ಮುಂತಾದುವುಗಳು ನಡೆದು ಸಭೆಯು ಮುಕ್ತಾಯವಾಯಿತು. ಬೆಂಗಳೂರಿಂದ ದಯಮಾಡಿಸಿದ್ದವರೆಲ್ಲರೂ ರಾತ್ರಿಯ ಟ್ರೈನಿನಲ್ಲಿ ಹಿಂದಿರುಗಿದರು.

ಪ್ರದರ್ಶನವನ್ನು ನೋಡಲು ಈ ಊರಿನವರೂ, ಸುತ್ತಮುತ್ತಣ ಗ್ರಾಮಾಂತರದವರೂ ಇನ್ನೂ ಪ್ರತಿದಿನವೂ ವಿಶೇಷವಾಗಿ ಬರುತ್ತಲೇ ಇರುವರು. ಇದರಿಂದ ಇಲ್ಲಿಯವರೆಲ್ಲರಿಗೂ ವಿದ್ಯೆಯ ವಿಚಾರದಲ್ಲಿ ವಿಶೇಷವಾದ ಆಸಕ್ತಿಯು ಹುಟ್ಟುವಂತಾಗಿರುತ್ತದೆ.

ಯುದ್ಧವಾರ್ತೆ.

ಯುದ್ಧವು ಪ್ರಬಲಿಸುತ್ತ ಬರುವುದರಿಂದ ಅದರ ಸಂಬಂಧವಾದ ವಾರ್ತೆಗಳೂ ವಿಸ್ತರಿಸುತ್ತಿವೆ. ಈಗಿನ ಯುದ್ಧವು ಒಂದೊಂದು ಭಾಗದಲ್ಲಿ ನಡೆಯದೆ ಹಲವುಕಡೆಗಳಲ್ಲಿ ಭೂಜಲಾಕಾಶಗಳಲ್ಲಿ ನಡೆಯುತ್ತಿರುವುದರಿಂದ ವಿಪುಲವಾಗಿರುವ ಆ ಯುದ್ಧದ ಸಂಬಂಧದ ವಾರ್ತೆಗಳನ್ನೆಲ್ಲಾ ವಾರಪತ್ರಿಕೆಯಲ್ಲಿ ಸಾಂಗವಾಗಿ ಬರೆಯುವುದು ಅಸಾಧ್ಯವಾದುದರಿಂದ, ಕಳೆದೆರಡು ವಾರಗಳಲ್ಲಿ ನಡೆದಿರುವ ಸಂಗ್ರಾಮವಾರ್ತೆಗಳಲ್ಲಿ ಮುಖ್ಯಮುಖ್ಯವಾದುವುಗಳನ್ನು ಶೇಖರಿಸಿ ಬರೆದಿರುತ್ತೇವೆ.

ಆಗಸ್ಟ್ ತಾ॥ ೨೨.

ಬೆಲ್ಜಿಯಮ್ಮಿನ ರಾಜಧಾನಿಯಾದ ಬ್ರುಸಲ್ಸ್‌ಪಟ್ಟಣವನ್ನು ಜರ್ಮನಿಯವರು ಹಿಡಿದುಕೊಂಡರು. ಆದರೆ ಹೀಗೆ ಹಿಡಿದುಕೊಂಡುದರಲ್ಲಿ ಜರ್ಮನಿಯವರ ಶೌರ್ಯಪ್ರತಾಪಗಳೇನೂ ಕಾರಣವಲ್ಲ; ಬೆಲ್ಜಿಯಮ್ಮಿನ ಪ್ರಭುತ್ವದವರು ಸುರಕ್ಷಿತವಲ್ಲದ ಆ ಪಟ್ಟಣವನ್ನು ತಾವಾಗಿ ತ್ಯಜಿಸಿ, ಅದಕ್ಕೆ ಮುಂಚೆಯೇ ಆಂಟ್‌ವರ್ಪ್ ಎಂಬ ಸುರಕ್ಷಿತವಾದ ಪಟ್ಟಣಕ್ಕೆ ಹೋಗಿ ನೆಲಸಿ, ಅದನ್ನು ರಾಜಧಾನಿಯನ್ನಾಗಿ ಮಾಡಿಕೊಂಡರು. ಬ್ರುಸಲ್ಸನ್ನು ಜರ್ಮನಿಯವರು ಹಿಡಿದುಕೊಂಡಾಗ ಆಯುಧಪ್ರಸಕ್ತಿಯೇ ಇರಲಿಲ್ಲ. ಪೋಲೀಸಾಳುಗಳು ಕೂಡ ನಿರಾಯುಧರಾಗಿ ಬೆಲ್ಜಿಯಮ್ಮಿನವರಿಂದಲೇ ಮಾಡಲ್ಪಟ್ಟಿದ್ದರು. ಬೆಲ್ಜಿಯಮ್ಮಿನವರು ಹೀಗೆ ಮುಂದಾಲೋಚನೆಯಿಂದ

ಮಾಡಿದುದು ಒಂದುವಿಶೇಷವಾದ ಸಮರೋಪಾಯರಹಸ್ಯವೆಂದು ವಿಚಕ್ಷಣರಿಂದ ಭಾವಿಸಲ್ಪಟ್ಟಿದೆ. ಅದುಕಾರಣ ಇದರಲ್ಲಿ ಬೆಲ್ಜಿಯಮ್ಮಿನವರ ಪರಾಜಯವೇನೂ ಇಲ್ಲ. ಅತ್ತ ರಷ್ಯಾದವರು ಜರ್ಮನಿದೇಶದೊಳಕ್ಕೆ ನುಗ್ಗಿ ೩ ದಿನಗಳವರೆಗೆ ಹೋರಾಡಿ ಲೀಕ್ ಎಂಬ ಪಟ್ಟಣವನ್ನು ಹಿಡಿದುಕೊಂಡರು.

ತಾ॥ ೨೩.

ಮಹಾನದೀ ಪ್ರವಾಹದಂತೆ ಸಾಗಿಬರುತ್ತಿರುವ ಜರ್ಮನ್ ಸೇನೆಯು ಬ್ರುಸಲ್ಸ್‌ಪಟ್ಟಣವನ್ನು ಹಿಡಿದುಕೊಂಡ ಬಳಿಕ ಅಲ್ಲಿಂದ ಹೊರಟು ಬ್ರುಸಲ್ಸಿಗೆ ೩೦ ಮೈಲಿ ದೂರದಲ್ಲಿರುವ ಆಲಸ್ಟ್–ಪೆಟರ್ಸ್ ಎಂಬ ಇನ್ನೆರಡು ಪಟ್ಟಣಗಳನ್ನೂ (ಇವೂ ಬೆಲ್ಜಿಯಮ್ಮಿನವು) ಹಿಡಿದುಕೊಂಡರು. ಮತ್ತೂ ಉತ್ತರಸಮುದ್ರತೀರದಲ್ಲಿರುವ ಆಸ್ಟೆಂಡ್ ಎಂಬ ಮುಖ್ಯಪಟ್ಟಣವನ್ನೂ ಘೆಂಟ್ ಎಂಬ ಪಟ್ಟಣವನ್ನೂ ಸಹ ಹಿಡಿದುಕೊಂಡರು. ಜರ್ಮನಿಯವರು ತಾವು ಆಕ್ರಮಿಸಿಕೊಂಡ ಬ್ರುಸಲ್ಸ್‌ಪಟ್ಟಣದಲ್ಲೂ, ಲೀಜ್‌ಪಟ್ಟಣದಲ್ಲೂ ದುಂಡಾವರ್ತಿಯನ್ನು ನಡೆಯಿಸುತ್ತಿರುವರು. ತಮ್ಮ ಯುದ್ಧದ ವೆಚ್ಚಕ್ಕಾಗಿ ಬ್ರುಸಲ್ಸ್‌ಪಟ್ಟಣದವರು ೧೦೦ ಲಕ್ಷ ರೂಗಳನ್ನೂ, ಲೀಜ್‌ಪಟ್ಟಣದವರು ೩೦ ಲಕ್ಷ ರೂ.ಗಳನ್ನೂ ಕೊಡಬೇಕೆಂದು ಹಿಂಸಿಸಿ, ಬಲಾತ್ಕಾರದಿಂದ ಸುಲಿದುಕೊಂಡರು. ಜರ್ಮನ್ ಸೇನಾ ಶಿಬಿರದಮೇಲೆ ಒಬ್ಬ ಫ್ರೆಂಚ್‌ವೈಮಾನಿಕನು ರಾತ್ರಿಯಹೊತ್ತು ಸಿಡಿಮದ್ದುಗಳನ್ನಿಟ್ಟನು. ಅಷ್ಟರಲ್ಲಿ ಸೈನಿಕರಲ್ಲಿ ಗದ್ದಲವೆದ್ದಿತು. ಶಿಬಿರದಲ್ಲಿದ್ದ ದೀಪಗಳನ್ನೆಲ್ಲಾ ಆರಿಸಿಬಿಟ್ಟರು. (ಇದರಿಂದ ವೈಮಾನಿಕರಿಗೆ ಶಿಬಿರದ ಗುರುತ್ತು ಹತ್ತಬಾರದೆಂಬುದೇ ಅವರ ಉದ್ದೇಶ) ಬಳಿಕ ಜರ್ಮನಿಯವರು ಆಕಾಶಮುಖವಾಗಿ ಫಿರಂಗಿಗಳನ್ನು ಹಾರಿಸಿದರು. ವೈಮಾನಿಕರು ತಪ್ಪಿಸಿಕೊಂಡು ಹೋದರು. ಇದುವರೆಗೆ ನಡೆದಿರುವ ಆಕಾಶವಿಮಾನಗಳ ಸಾಹಸಗಳು ಅಷ್ಟೇನೂ ಫಲಪ್ರದವಾದಂತೆ ಕಾಣಲಿಲ್ಲ. ಇವುಗಳು ಉದಯಿಸಿದಾಗ ಇವುಗಳ ಲಾಭವು ಯುದ್ಧಸಮಯದಲ್ಲಿ ಎಷ್ಟುಮಟ್ಟಿಗೆ ಆಗುವುದೆಂದು ಭೀತಿಪ್ರದವಾಗಿ ಹೇಳಲ್ಪಡುತ್ತಿದ್ದಿತೋ ಅವೆಲ್ಲವೂ ಈಗಿನ ವಿದ್ಯಮಾನದಿಂದ ಉತ್ಪ್ರೇಕ್ಷೆಯೆಂದು ಭಾವಿಸುವಂತಾಗಿದೆಯೇ ಹೊರತು ವಿಮಾನಗಳಿಂದ ಅಭೂತಪೂರ್ವವಾದ ಅನರ್ಥಗಳೇನೂ ಸಂಭವಿಸಿರುವಂತೆ ಗೊತ್ತಾಗುವುದಿಲ್ಲ.

ಪೂರ್ವದೇಶದಲ್ಲೂ ಯುದ್ಧ.

ಇದುವರೆಗೆ ಪಶ್ಚಿಮದೇಶದಲ್ಲೇ ಯುದ್ಧಭೇರಿಯು ಧ್ವನಿಮಾಡುತ್ತಿದ್ದಿತು. ಆಗಸ್ಟ್ ತಾ॥ ೨೩ ರಲ್ಲಿ ಪೂರ್ವದೇಶದ ಶೂರಾಗ್ರೇಸರವಾದ ಜಪಾನ್‌ದೇಶವು ಕೂಡ ಜರ್ಮನಿಯ ಮೇಲೆ ಯುದ್ಧವನ್ನು ಸಾರಿ ರಣಭೇರಿಯನ್ನು ಹೊಡೆದಿತು. ಪೂರ್ವಸಮುದ್ರದಲ್ಲಿ ಶಾಂತಿರಕ್ಷಣೆಗಾಗಿ ಇಂಗ್ಲಾಂಡಿಗೂ ಜಪಾನಿಗೂ ಸಂಧಿಯು ನಡೆದಿರುವುದು. ಈಗ ಜರ್ಮನಿಯವರು ಪೂರ್ವಸಮುದ್ರದಲ್ಲಿ ತಮಗೆ ಸೇರಿರುವ ಕಿಯೋಚೋನಿನ ಬಳಿಯಲ್ಲಿ ಯುದ್ಧಸನ್ನಾಹವನ್ನು ಮಾಡುತ್ತಿರುವರೆಂದು ಗೊತ್ತಾದುದರಿಂದ, ಇದನ್ನು ನಿಲ್ಲಿಸಬೇಕೆಂದೂ, ಇದು ಶಾಂತಿಗೆ ಭಂಗಕಾರಿಯೆಂದೂ, ನಿಮ್ಮ ಯುದ್ಧದ ಹಡಗುಗಳು ಪೂರ್ವಸಮುದ್ರದಲ್ಲಿ ನಮ್ಮ ಮತ್ತೂ ನಮ್ಮ ಮಿತ್ರರ ವ್ಯಾಪಾರಕ್ಕೆ ಭಂಗಪಡಿಸುತ್ತಿರುವುವೆಂದೂ ಹೇಳಿ ಆ ವಿಷಯವಾಗಿ ಜಪಾನಿನವರು ಜರ್ಮನಿಗೆ ಅಂತ್ಯಸಂದೇಶವನ್ನು ಕಳುಹಿಸಿದರು. ಅದಕ್ಕೆ ಜರ್ಮನಿಯಿಂದ ಉತ್ತರವು ಬರಲಿಲ್ಲ. ಅದುಕಾರಣ, ಅವರು ಜರ್ಮನಿಯ ಮೇಲೆ ಯುದ್ಧಮಾಡುವುದನ್ನು ಪ್ರಕಟಿಸಿದರು.

ಬೆಲ್ಜಿಯಮ್ಮಿನವರು ಸಣ್ಣ ದೇಶದವರಾದರೂ ಅವರು ಜರ್ಮನಿಯಂಥ ಮಹಾದೇಶದ ಅಗಣಿತವಾದ ಸೇನೆಗೆ ಪ್ರತಿಭಟಿಸಿ ನಿಂದು ಲೋಕಾಶ್ಚರ್ಯಕರವಾದ ಶೌರ್ಯಧೈರ್ಯಗಳನ್ನು ತೋರಿಸಿ ಹೆಣಗಾಡಿದುದರಿಂದ, ಇಂಗ್ಲೆಂಡು ಫ್ರಾನ್ಸು ರಷ್ಯಾದೇಶಗಳು ಸೇನೆಯನ್ನು ಅಣಿಮಾಡಿಕೊಳ್ಳುವುದಕ್ಕೆ ಆಸ್ಪದವಾದುದಲ್ಲದೆ ಜರ್ಮನಿಯವರ ಆಶೋತ್ತರದ ಸಂಕಲ್ಪವೆಲ್ಲಾ ಬದಲಾಯಿಸಿ ಹೋಗುವಂತಾಯಿತು. ಮತ್ತೂ ಈ ಯುದ್ಧದಿಂದ ಬೆಲ್ಜಿಯಮ್ಮಿಗೆ ಬಹಳ ನಷ್ಟವೂ ಸಂಭವಿಸಿತು. ಇದನ್ನೆಲ್ಲಾ ಫ್ರಾನ್ಸು ಪರಿಭಾವಿಸಿ, "ನೀವು ಪಡುತ್ತಿರುವ ಕಷ್ಟಗಳು ನಮಗೆ ತುಂಬಾ ವಿಷಾದವನ್ನುಂಟುಮಾಡಿವೆ. ಫ್ರಾನ್ಸಿಗೂ ಬೆಲ್ಜಿಯಮ್ಮಿಗೂ ಅವಿಭಾಜ್ಯವಾದ ರಕ್ತಸಂಬಂಧವಿದೆ, ಬೆಲ್ಜಿಯಂ ದೇಶದಲ್ಲಿ ಜರ್ಮನಿಯ ಒಂದು ತಲೆಯಾದರೂ ಇಲ್ಲದಿರುವಂತೆ ಹೊಡೆದೋಡಿಸಿ, ಬೆಲ್ಜಿಯಮ್ಮನ್ನು ಶತ್ರುಗಳ ಬಾಧೆಯಿಂದ ತಪ್ಪಿಸಲು ಫ್ರಾನ್ಸಿನವರು ಶಪಥಮಾಡಿಕೊಂಡಿದ್ದಾರೆ." ಎಂದು ಫ್ರಾನ್ಸಿನ ಪ್ರಭುತ್ವದವರು ಬೆಲ್ಜಿಯಮ್ಮಿನವರಿಗೆ ತಿಳಿಯಿಸಿ ಅಭಯದಾನ ಮಾಡಿದರು ಮತ್ತೂ ಯುದ್ಧದ ವೆಚ್ಚಕ್ಕಾಗಿ ೧೯ ಕೋಟಿ ರೂ.ಗಳನ್ನು ಸಾಲಕೊಟ್ಟರು.

ಜರ್ಮನಿಯವರು ಲೀಜ್‌ಪಟ್ಟಣಕ್ಕೆ ದಕ್ಷಿಣದಲ್ಲಿರುವ ನಾಮೂರ್ ಕೋಟೆಯಮೇಲೆ ಫಿರಂಗಿಗಳನ್ನು ಹಾರಿಸುತ್ತ ಮೂಜ್‌ನದಿಯನ್ನು ದಾಟಿ ಬೆಲ್ಜಿಯಮ್ಮನ್ನು ಪ್ರವೇಶಿಸುತ್ತಿರುವುವು. ಲೀಜ್‌ಕೋಟೆಯೂ ನಾಮೂರ್‌ಕೋಟೆಯೂ ಇಲ್ಲಿನವರೆಗೆ ಜರ್ಮನಿಯ ವಶವಾಗಲಿಲ್ಲ. ಅತ್ತ ರಷ್ಯಾದವರು ಜರ್ಮನಿದೇಶಕ್ಕೆ ನುಗ್ಗಿ ಗಂಬಿನ್ನೆನ್ ಜಿಲ್ಲಾದ ಮೇಲೆ ಬಿದ್ದು ಜರ್ಮನಿಯ ೧೪ ನೆ ಪಟಾಲಮ್ಮಿನೊಡನೆ ಸೆಣಸಾಡಿದರು. ರಷ್ಯಾದ ಅಶ್ವಸೇನೆಯು ಜರ್ಮನಿಯ ೬ ಫಿರಂಗಿಗಳನ್ನು ಹಿಡಿದುಕೊಂಡಿತು. ಮತ್ತೂ ರಷ್ಯಾಸೇನೆಯು ತಾ॥ ೨೦ ರಲ್ಲಿ ಬ್ರುಚ್ಚೆನದಿಯನ್ನು ದಾಟಿ ಆಸ್ಟ್ರಿಯಾಕ್ಕೆ ನುಗ್ಗಿತು. ರಷ್ಯನ್‌ವೈಮಾನಿಕರು ಜರ್ಮನ್‌ರಾಜ್ಯಕ್ಕೆ ಸೇರಿದ ಪೂರ್ವಪ್ರಷ್ಯಾದಲ್ಲಿರುವ ಸೇನಾಶಿಬಿರದ ಮೇಲೆ ಸಿಡಿಮದ್ದನ್ನು ಹಾಕಿದರು. ಮತ್ತೂ ರಷ್ಯನ್‌ಸೇನೆಯು ಜರ್ಮನಿದೇಶದ ಗಂಬಿನನ್ ಪಟ್ಟಣದ ಬಳಿಯಲ್ಲಿ ಘೋರಯುದ್ಧವನ್ನು ಮಾಡಿ ಜರ್ಮನಿಯವರ ಕೆಲ ಫಿರಂಗಿಗಳನ್ನೂ ಬಹುಜನ ಜರ್ಮನ್‌ಸೈನಿಕರನ್ನೂ ಹಿಡಿದುಕೊಂಡಿತು ಮತ್ತೂ ಆಸ್ಟ್ರಿಯಾದೇಶದ ಗೆಲಿಸಿಯಾ ಜಿಲ್ಲೆಯಲ್ಲಿ ನುಗ್ಗಿ ಕ್ರಾನ್ಸಿ ಎಂಬಲ್ಲಿ ಆಸ್ಟ್ರಿಯಾದವರ ಮೇಲೆ ಕಾದಾಡಿ ಜಯಶೀಲರಾದರು. ಇಲ್ಲಿ ನಡೆದ ಕಾಳಗದಲ್ಲಿ ಶತ್ರುಪಕ್ಷಕ್ಕೆ ಬಹಳ ನಷ್ಟವಾಯಿತು. ೬ ಮಂದಿ ಸೇನಾಧಿಕಾರಿಗಳೂ ೧೫೦೦ ಮಂದಿ ಸೈನಿಕರೂ ರಷ್ಯನ್ನರಿಗೆ ಸೆರೆ ಸಿಕ್ಕಿದರು. ಮತ್ತೊಂದುಕಡೆ ಸರ್ವಿಯಾದವರೂ ಆಸ್ಟ್ರಿಯಾಕ್ಕೆ ನುಗ್ಗಿ ಲಾಂಗ್ನಿಟ್ಜದ ಹತ್ತಿರ ೪ ದಿನಗಳವರೆಗೆ ಆಸ್ಟ್ರಿಯಾದವರ ಮೇಲೆ ಭಯಂಕರವಾಗಿ ಕಾದು ಸಂಪೂರ್ಣವಾಗಿ ಜಯಶೀಲರಾದರು. ಮತ್ತೂ ಡ್ರೀನಾನದಿಯನ್ನು ದಾಟಿ ಆಸ್ಟ್ರಿಯಾದ ಸೇನೆಯನ್ನೆಲ್ಲಾ ಸದೆಬಡಿದು ಓಡಿಸಿದರು. ಆಗ ಉಭಯಪಕ್ಷದಲ್ಲೂ ಬಹಳ ಜನ ಸತ್ತರು. ಸರ್ವಿಯಾದವರು ಸಾವಿರಾರು ಮಂದಿ ಆಸ್ಟ್ರಿಯಾದವರನ್ನು ಸೆರೆಹಿಡಿದರು.

ಜರ್ಮನಿಕಡೆಯ ಆಕಾಶವಿಮಾನಗಳು ರೈನ್‌ನದಿಯ ತೀರದಲ್ಲಿ ಮೇಲಕ್ಕೆ ಹಾರಿ ಶತ್ರುಗಳ ಸೇನೆಯ ಚಲನವಲನವನ್ನು ನೋಡುತ್ತಿದ್ದುವು. ಈ ವಿಮಾನದ ನೆಳಲಿನ ಗುರ್ತನ್ನು ಕಂಡು ಶತ್ರುಗಳು ಮೇಲಕ್ಕೆ ಫಿರಂಗಿಗುಂಡುಗಳನ್ನು ಹಾರಿಸಿದರು. ರಷ್ಯನರ ವಿಮಾನಗಳು ಪೂರ್ವದೇಶದಲ್ಲಿರುವ ಜರ್ಮನಿಯ ಸೇನೆಗಳ ಗುಡಾರದ ಮೇಲೆ ಸಿಡಿಮದ್ದುಗಳನ್ನು ಹಾರಿಸಿದುವು. ಆದರೆ ಈ ವಿಮಾನಗಳ ಸಾಹಸದಿಂದಾದ ನಷ್ಟವು ಹೇಳಿಕೊಳ್ಳುವಷ್ಟು ಅದ್ಭುತವಾಗಿಲ್ಲ.

ತಾ॥ ೨೪.

ಜರ್ಮನಿಯವರು ಉತ್ತರಸಮುದ್ರದೊಳಗೆ ಮನಸ್ವಿಯಾಗಿ ಸಿಡಿಮದ್ದುಗಳನ್ನು ಇಟ್ಟಿರುವರು. ಇದರಿಂದ ಯುದ್ಧದ ಹಡಗುಗಳಿಗೇ ಅಲ್ಲದೆ ತಟಸ್ಥವಾಗಿರುವ ದೇಶಗಳ ವ್ಯಾಪಾರದ ಹಡಗುಗಳ ಸಂಚಾರಕ್ಕೂ ಕೂಡ ವಿಘ್ನವಾಗಿ ಅವರ ನಷ್ಟಕ್ಕೆಲ್ಲಾ ಜರ್ಮನಿಯು ಗುರಿಯಾಗಬೇಕಾಗಿದೆ.

ಜರ್ಮನಿಯವರು ಬ್ರುಸೆಲ್ಸನ್ನು ಆಕ್ರಮಿಸಿದಾಗ ಅವರ ಕಡೆಯ ೪೦ ಸಾವಿರ ಸೇನೆಯು ಮುಂದೆ ವಾದ್ಯಗಳನ್ನು ಘೋರ್ಗರೆಯಿಸುತ್ತ ಮಹಾನಂದದಿಂದ ನುಗ್ಗಿತು. ಅಶ್ವಸೇನೆಯೂ, ಕಾಲ್ಬಲವೂ, ತುಪಾಕಿಗಳನ್ನು ಹಿಡಿದು ಕುಳಿತಿದ್ದ ಸೈನಿಕರಿಂದ ತುಂಬಿದ ನೂರು ಮೋಟಾರು ಬಂಡಿಗಳೂ ಸೈನಿಕರನ್ನು ತುಂಬಿಕೊಂಡಿರುವ ಹೊಗೆಬಂಡಿಗಳೂ ನುಗ್ಗಿಬಂದುವು. ಈ ಸೇನೆಯು ಅಲ್ಲಿದ್ದ ಮೋಟಾರು ಮೊದಲಾದುವುಗಳನ್ನು ಹಿಡಿದು ಅಲ್ಲಿಂದ ಮುಂದಕ್ಕೆ ಆಸ್ಟೆಂಡ್ ಜೀಬರ್ಗಜ್ ನಗರಗಳಿಗೆ ಸಾಗಿದುವು. ಫ್ರಾನ್ಸಿಗೆ ನುಗ್ಗಬೇಕೆಂಬುದು ಇವುಗಳ ಉದ್ದೇಶ.

ಫ್ರಾನ್ಸಿನವರು ಇದಕ್ಕೆಮುಂಚೆಯೇ ಲೋರೈನ್‌ಪ್ರಾಂತವನ್ನು ಜರ್ಮನಿಯವರಿಂದ ಕಸುಕೊಂಡರಷ್ಟೆ. ಈಗ ಮರಳಿ ಅದನ್ನು ಜರ್ಮನಿಯವರು ಹಿಡಿದುಕೊಳ್ಳಬೇಕೆಂದು ಫ್ರಾನ್ಸಿನವರಮೇಲೆ ಯುದ್ಧವನ್ನು ಹೂಡಿದರು. ಮೊದಲು ಫ್ರೆಂಚರ ಸೇನೆಯ ಮುಂಭಾಗದಮೇಲೆ ಜರ್ಮನಿಯ ಅನೇಕ ಪಟಾಲಮ್ಮುಗಳು ಬಿದ್ದುವು. ಫ್ರೆಂಚುಸೇನೆಗಿಂತ ಜರ್ಮನ್ ಸೇನೆಯೇ ಹೆಚ್ಚಾಗಿದ್ದಿತು. ಅಲ್ಲಿ ೬ ದಿನಗಳವರೆಗೆ ಅವಿಚ್ಛಿನ್ನವಾಗಿ ಎರಡು ಪಕ್ಷದವರೂ ಭೀಕರ ಯುದ್ಧವನ್ನು ಮಾಡಿದರು. ಎಡಭಾಗದ ಫ್ರೆಂಚು ಸೈನ್ಯವು ಹಿಂದಾಗಿ ನಾನ್ಸಿ ಕಡೆಗೆ ತೆರಳಿತು. ಬಲಭಾಗದ ಸೈನ್ಯವು ಬಲವಾದ ಸ್ಥಾನವನ್ನು ಹಿಡಿದುನಿಂತಿತು. ಮುಲ್‌ಹೌಸಿನ ಹತ್ತಿರ ೨ ಪಕ್ಷದವರಿಗೂ ನಡೆದ ಯುದ್ಧದಲ್ಲಿ ಫ್ರೆಂಚರು ಜರ್ಮನರನ್ನು ಸೋಲಿಸಿ, ಅದನ್ನು ಸ್ವಾಧೀನಪಡಿಸಿಕೊಂಡರು. ಆಗ ಜರ್ಮನರ ೨೪ ಫಿರಂಗಿಗಳೂ, ೧೦೦೦ ಮಂದಿ ಸೈನಿಕರೂ ಫ್ರೆಂಚರಿಗೆ ಸಿಕ್ಕಿದರು ಆಗ ಭಯಂಕರವಾಗಿ ನಡೆದ ಸನೀನಿನ ಯುದ್ಧದಲ್ಲಿ ಜರ್ಮನರು ಬಹಳ ಸೋತು, ರೈನ್ ನದಿಯಕಡೆಗೆ ಓಡಿಹೋದರು. ಫ್ರೆಂಚರಿಗೆ ಆಲ್ಸೆಸ್ಸಿನಲ್ಲೆಲ್ಲಾ ಸಂಪೂರ್ಣವಾದ ಜಯವುಂಟಾದಂತಾಯಿತು.

ಬೆಲ್ಜಿಯಮ್ಮಿಗೆ ಸೇರಿದ ಷಾರ್ಲೆರಾಯಿ ಜಿಲ್ಲೆಯಲ್ಲಿ ಫ್ರೆಂಚರಿಗೂ ಜರ್ಮನಿಯವರಿಗೂ ಹಲವುಕಡೆ ಯುದ್ಧಗಳಾದುವು.

ಫ್ರೆಂಚರ ನೌಕಾಸೇನೆಯು ಮೊಂಟಿನಿಗ್ರೋದವರೊಡನೆ ಕೂಡಿ ಆಸ್ಟ್ರಿಯಾ ರಾಜ್ಯಕ್ಕೆ ಸೇರಿದ ಕಟ್ಟಾರೊ ಎಂಬ ಪಟ್ಟಣವನ್ನು ಮುತ್ತಿಗೆ ಹಾಕಿತು.

ಸರ್ವಿಯಾದವರು ಆಸ್ಟ್ರಿಯಾದ ಮೊದಲನೆ ಸೈನ್ಯವನ್ನೆಲ್ಲಾ ಧ್ವಂಸಮಾಡಿಬಿಟ್ಟುದರಿಂದ ಅದು ೨ ನೇ ಸೈನ್ಯವನ್ನು ಅಣಿಮಾಡುತ್ತಿದೆ. ಇದುವರೆಗೆ ಸರ್ವಿಯಾಕ್ಕೆ ಸಂಪೂರ್ಣ ಜಯವು ಲಭಿಸಿದೆ. ಮತ್ತೂ ಆಸ್ಟ್ರಿಯಾದಲ್ಲಿ ಮುಂದು ಮುಂದಕ್ಕೆ ನುಗ್ಗಿಹೋಗುತ್ತಿದೆ. ರಷ್ಯಾ ಸೇನೆಯು ಜರ್ಮನಿಗೆ ಸೇರಿದ ಗುಂಬಿನ್ನೆನನ ಹತ್ತಿರ ಜಯವನ್ನು ಪಡೆದ ಬಳಿಕ ಇನ್ಸ್ಟರ್‌ಬರ್ಗ್-ಗೋಲ್ಡಾಪು ಎಂಬ ಪಟ್ಟಣವನ್ನು ಆಕ್ರಮಿಸಿಕೊಂಡಿತು ಅನೇಕ ಫಿರಂಗಿಗಳೂ ಸೈನಿಕರೂ ರಷ್ಯನರಿಗೆ ಸಿಕ್ಕಿಬಿದ್ದರು ಇದರಿಂದ ಪೂರ್ವಪ್ರಷ್ಯಾದಲ್ಲಿನ ಕೆಲವು ಪ್ರದೇಶಗಳೆಲ್ಲಾ ರಷ್ಯನರಿಗೆ ವಶವಾಯಿತು. ಜರ್ಮನಿಯು ಪಶ್ಚಿಮದ ಕಡೆಗೆ ವಿಶೇಷ ಸೈನ್ಯವನ್ನು ಕಳುಹಿಸಿರುವುದರಿಂದ ಪೂರ್ವದಿಕ್ಕಿನಿಂದ ಮಹತ್ತಾಗಿ ಜರ್ಮನಿಗೆ ನುಗ್ಗುತ್ತಿರುವ ರಷ್ಯಾದ ಸೈನ್ಯವನ್ನು ಇದಿರಿಸಲು ಅಸಮರ್ಥವಾಗಿದೆ. ಅದುಕಾರಣವೇ ರಷ್ಯನರು ಅಪ್ರತಿಹತರಾಗಿ ಜರ್ಮನಿಯ ಪೂರ್ವಭಾಗಗಳನ್ನು ಆಕ್ರಮಿಸುತ್ತಲಿದ್ದಾರೆ. ಜಲಯುದ್ಧದಲ್ಲಿ ಫ್ರೆಂಚರ ೧ ಯುದ್ಧದ ಹಡಗು ಆಸ್ಟ್ರಿಯಾದ ಯುದ್ಧದ ಹಡಗೊಂದನ್ನು ಮುಳುಗಿಸಿಬಿಟ್ಟಿತು. ಜರ್ಮನರ ನೌಕಾಸೇನೆಯವರು ೩೩೫೦ ಟನ್ನುಗಳ ತೂಕದ ಇಂಗ್ಲೀಷರ ಹಯೋತ್ಸ್ ಎಂಬ ಹಡಗನ್ನೂ, ವಿಂಚೆಸ್ಟರ್ ಪಟ್ಟಣವೆಂಬ ಹಡಗನ್ನೂ-ಮುಳುಗಿಸಿಬಿಟ್ಟಿತು. ಫ್ರೆಂಚರ ನೌಕಾಸೇನೆಯು ಆಸ್ಟ್ರಿಯಾದ ಯುದ್ಧದ ಹಡಗಿನಮೇಲೆ ಹಠಾತ್ತಾಗಿ ಬಿದ್ದಿತು. ಫ್ರೆಂಚರ ಗುಂಡು ಶತ್ರುಗಳ ಹಡಗಿಗೆ ಬಿದ್ದುದರಿಂದ ಅದು ಸುಟ್ಟು ಮುಳುಗಿಹೋಯಿತು. ಇಟಲಿಯವರು ನೌಕಾಸೇನೆಯನ್ನು ಅಣಿಮಾಡುತ್ತಿದ್ದಾರೆ. ಆಡ್ರಿಯಾಟಿಕ್ ಸಮುದ್ರದಲ್ಲಿ ಇಂಗ್ಲೆಂಡು ಫ್ರಾನ್ಸುದೇಶಗಳ ಯುದ್ಧದ ಹಡಗುಗಳು ಬರುವುದಕ್ಕೆ ಇಟಲಿಯವರು ಅವಕಾಶವನ್ನು ಕೊಟ್ಟರೆಂಬ ಕಾರಣದಿಂದ ಇಟಲಿಯಮೇಲೆ ಆಸ್ಟ್ರಿಯಾಕ್ಕೆ ದ್ವೇಷವು ಮಿತಿಮೀರಿ ಉಂಟಾಗಿದೆ. ಸ್ವಲ್ಪದಿನಗಳೊಳಗೆ ಇಟಲಿಯು ಇಂಗ್ಲಾಂಡಿನ ಪಕ್ಷಕ್ಕೆ ಸೇರಿ ಯುದ್ಧಮಾಡುವುದೆಂಬ ಸುದ್ದಿಯುಂಟಾಗಿದೆ. ಉತ್ತರಸಮುದ್ರದಲ್ಲಿ ಜರ್ಮನಿಯವರು ಇಟ್ಟಿದ್ದ ಸಿಡಿಮದ್ದಿಗೆ ಬಡಿದು ಡೆನ್ಮಾರ್ಕಿನ ಮತ್ತೂ ನಾರ್ವೆಯ ವ್ಯಾಪಾರದ ಹಡಗುಗಳೆರಡು ಮುಳುಗಿಹೋದುವು. ಆಸ್ಟ್ರಿಯಾದವರು ತಮ್ಮ ದೇಶದಲ್ಲಿ ಆಯುಧವನ್ನು ಹಿಡಿಯಬಲ್ಲ ಬೇಸಾಯಗಾರರು ಮೊದಲಾದವರೆಲ್ಲಾ ಸೇನೆಗೆ ಸೇರಬಹುದೆಂದು ಪ್ರಕಟಿಸಿ ಹೀಗೆ ಸೇನೆಯನ್ನು ಕೂಡಿಸುತ್ತಿದ್ದಾರೆ.

ತಾ॥ ೨೫.

ಆಂಗ್ಲರ ಸ್ವಾಸ್ಥ್ಯವಾದ ಕಾನತಾದಿಂದ ಇಂಗ್ಲೀಷರ ಸಹಾಯಾರ್ಥವಾಗಿ ೧ ಲಕ್ಷ ಸೇನೆಯನ್ನು ಕಳುಹಿಸಲು ವಾಗ್ದಾನವಾಗಿದೆ. ಮತ್ತೂ ೩೦೦ ಕೋಟಿ ರೂ.ಗಳನ್ನು ಯುದ್ಧದ ವೆಚ್ಚಕ್ಕೆ ಸಾಲವಾಗಿ ಕೊಡಲು ಸಿದ್ಧಮಾಡುತ್ತಿದೆ. ೪೦ ಲಕ್ಷ ಪೌಂಡ್ ಹಾಲಿನ ಹಳಿಯನ್ನು ಕಳುಹಿಸಲು ವಾಗ್ದಾನಮಾಡಿದೆ. ಬೆಲ್ಜಿಯಮ್ಮಿನಲ್ಲಿ ತಾ॥ ೨೧ ರಿಂದ ಜರ್ಮನಿಯವರ ಮೇಲೆ ಫ್ರಾನ್ಸು-ಇಂಗ್ಲೆಂಡು-ಬೆಲ್ಜಿಯಂ-ಈ ದೇಶತ್ರಯದವರು ಹಲವುಕಡೆ ತುಮುಲಯುದ್ಧವನ್ನು ನಡೆಯಿಸಲಾರಂಭವಾಯಿತು. ಮಾನ್ಸೀ–ನಾಮೂರ್ ಪಟ್ಟಣಗಳ ಮಧ್ಯದಲ್ಲಿ ಫ್ರೆಂಚರೂ ಬೆಲ್ಜಿಯಮ್ಮಿನವರೂ ಒಂದು ಪಕ್ಷದಲ್ಲೂ, ಜರ್ಮನರು ಒಂದು ಪಕ್ಷದಲ್ಲೂ ಸೇರಿ ಘೋರ ಯುದ್ಧವನ್ನಾರಂಭಿಸಿದರು. ಅಲ್ಲೊಂದುಕಡೆಯಲ್ಲೇ ಜರ್ಮನರ ೩ ಪಟಾಲಮ್ಮುಗಳಿದ್ದುವು. ಇದಿರುಪಕ್ಷದಲ್ಲೂ ಅಷ್ಟೇ ಸೇನೆಯಿದ್ದಿತು. ಅಲ್ಲಿನ ಪರ್ಯವಸಾನವನ್ನು ಯೂರೋಪುಖಂಡವೆಲ್ಲಾ ಆತುರದಿಂದಕೇಳುತ್ತಿರುವುದು. ಅಲ್ಲಿನ ಯುದ್ಧವು ಕೆಲದಿನಗಳವರೆಗೆ ನಡೆಯುವುದೆಂದು ಯುದ್ಧಕಲಾಪ್ರವೀಣರು ಹೇಳುತ್ತಿರುವರು. ಪೂರ್ವದಿಂದ ಪಶ್ಚಿಮಕ್ಕೆ ಫ್ರಾನ್ಸಿನೊಳಗೆ ಜರ್ಮನರು ಸಂದುದೊರಕಿದ ಕಡೆಯಲ್ಲೆಲ್ಲಾ ನುಗ್ಗುತ್ತಿದ್ದಾರೆ. ನಾಮೂರು ಕೋಟೆಯಿಂದ ಹಿಡಿದು ದಕ್ಷಿಣದಲ್ಲಿರುವ ಗಿವೆಟ್ ಪಟ್ಟಣದವರೆಗೂ ಇಂಗ್ಲೆಂಡು ಫ್ರಾನ್ಸ್-ಬೆಲ್ಜಿಯಂ ಸೇನೆಗಳು ತ್ರಿಕೋಣಾಕಾರವಾಗಿ ವ್ಯೂಹರಚನೆಯನ್ನು ಮಾಡಿಕೊಂಡು ಎತ್ತಣಿಂದ ಶತ್ರುಗಳು ಬಂದರೂ ಇರುಕಿನಲ್ಲಿ ಸಿಕ್ಕಿಸಿಕೊಂಡು ಧ್ವಂಸಮಾಡಬೇಕೆಂದು ಅಣಿಯಾಗಿದ್ದುವು. ಬೆಲ್ಜಿಯಮ್ಮಿನ ದಕ್ಷಿಣಭಾಗದ ಮಾನ್ಸ್- ಷಾರ್ಲರಾಯಿ- ನಾಮೂರು- ಈ ಪ್ರಾಂತದಲ್ಲೂ ಲೀಜಿನಹತ್ತಿರವೂ ಸೇರಿ ಜರ್ಮನಿ ಸೇನೆಯು ೫ ಲಕ್ಷದವರೆಗೆ ಯುದ್ಧಕ್ಕೆ ನಿಂತಿರುವುದೆಂದು ಊಹಿಸಲ್ಪಟ್ಟಿದ್ದಿತು. ಇದನ್ನು ಇದಿರಿಸುವುದಕ್ಕೆ ಅದರ ದಕ್ಷಿಣದಲ್ಲಿ ಫ್ರಾನ್ಸಿನ ಸೈನ್ಯವು ಮಾಬರ್ಗಿನಿಂದ ಹಿಡಿದು ಗಿವೇಟಿನವರೆಗೆ ವ್ಯಾಪಿಸಿಕೊಂಡಿದ್ದಿತು. ಉತ್ತರದಲ್ಲಿ ನಾಮೂರಿನ ಕೋಟೆಯ ಮುಂದಿನ ಕೆಲವು ಭಾಗವನ್ನು ಜರ್ಮನಿಯವರು ತಾ॥ ೨೪ ರಲ್ಲಿ ಹಿಡಿದುಕೊಂಡರು. ಲೀಜಿನಲ್ಲೂ ೧–೨ ಕೋಟೆಗಳನ್ನು ಮಾತ್ರ ಹಿಡಿದುಕೊಂಡರು. ಆದರೂ ಅವೆರಡು ಕಡೆಯೂ ಎಲ್ಲ ಕೋಟೆಗಳೂ ಶತ್ರುಗಳ ಅಧೀನವಾಗಲಿಲ್ಲ. ಬೆಲ್ಜಿಯಮ್ಮಿನಲ್ಲಿ ಲೀಜಿನಿಂದ ದಕ್ಷಿಣಕ್ಕೆ ೫೦ ಮೈಲಿಗಳ ದೂರದವರೆಗೂ ಎಲ್ಲ ಸ್ಥಲವೂ ಭೀಕರವಾದ ಕುರುಕ್ಷೇತ್ರವಾಗಿ ಯುದ್ಧವು ನಡೆಯುತ್ತಿರುವುದು. ಬೆಲ್ಜಿಯಂ ಪ್ರಭುತ್ವದವರು ಆಂಟ್‌ವರ್ಪನ್ನು ರಾಜಧಾನಿಮಾಡಿಕೊಂಡಿರುವರಷ್ಟೆ. ಅದರ ಸುತ್ತುಮುತ್ತ ಒಬ್ಬ ಜರ್ಮನ್‌ಸೈನಿಕನೂ ಇರದಂತೆ ಅಟ್ಟಿಬಿಟ್ಟಿರುವರು. ಈಗ

ಸೈನಿಕರನ್ನು ಸೆರೆಯಾಗಿ ಹಿಡಿದಿರುವರು. ಈ ಆಂಟ್‌ವರ್ಪ್ ಪಟ್ಟಣವು ಸೇನಾವ್ಯೂಹದ ಮಧ್ಯದಲ್ಲಿದೆ. ಆ ಪಟ್ಟಣವನ್ನು ನುಗ್ಗುವುದೆಂದರೆ ಕಿಚ್ಚಿನಮಧ್ಯಕ್ಕೆ ನುಗ್ಗುವಂತಿರುತ್ತದೆ. ಆ ನಗರದ ಸುತ್ತಲೂ ಬೆಲ್ಜಿಯಮ್ಮಿನವರು ಶತ್ರುಗಳಿಗೆ ಮಾರಣಹೋಮವನ್ನು ಮಾಡುವುದಕ್ಕಾಗಿ ಮದ್ದಿನ ಸುರಂಗಗಳನ್ನಿಟ್ಟಿದ್ದಾರೆ. ಜರ್ಮನಿಯವರು ಆ ಪಟ್ಟಣದ ದಾರಿಗೇ ಹೋಗದೆ ಅತ್ತತ್ತಲೇ ಹೋಗುತ್ತಿದ್ದಾರೆ. ಜರ್ಮನಿದೇಶದ ಸ್ಟ್ರಾಸ್‌ಬರ್ಗಿನಿಂದ ಫ್ರಾನ್ಸ್ ದೇಶದೊಳಕ್ಕೆ ನುಗ್ಗುತ್ತಿದ್ದ ಜರ್ಮನಿಯ ಜಪ್ಲಿನ್ ವಿಮಾನದ ಮೇಲೆ ಬೋರ್ಕ್‌ವಿಲ್ಲಿಯ ಹತ್ತಿರ ಫ್ರೆಂಚರು ಫಿರಂಗಿಯನ್ನು ಹಾರಿಸಿ ಸುಟ್ಟು ಕೆಡಹಿಬಿಟ್ಟರು.

ರಷ್ಯಾದವರು ಜರ್ಮನಿಯ ಜೋಹಾನ್ಸ್‌ಬರ್ಗ್-ಆರ್ಟೆಲ್ಸ್‌ಬರ್ಗ್-ಎಲ್ಲೆನ್‌ಬರ್ಗ್-ಸೋಲ್ಡಾವ್-ಈ ಪಟ್ಟಣಗಳನ್ನು ಹಿಡಿದುಕೊಂಡರು. ನೈಡೆನ್ಸ್‌ಬರ್ಗ್ ಎಂಬ ಪಟ್ಟಣವನ್ನು ಜರ್ಮನಿಯವರೇ ಸುಟ್ಟು ಹಾಳ್ಮಾಡಿ ಓಡಿಹೋದರು.

ರಷ್ಯಾದವರು ಲಿಕ್ ಪಟ್ಟಣಕ್ಕೆ ಪಶ್ಚಿಮದಲ್ಲಿ ೩೦ ಮೈಲಿ ದೂರದಲ್ಲಿರುವ ಆರಿಸ್ ನಗರವನ್ನು ಹಿಡಿದುಕೊಂಡರು. ಸರ್ವಿಯಾದವರು ಲಾಟ್ಜಾ-ಲೆಸ್ನಿಟ್ಜಾ-ಸಾಬಾಟ್ಜ ಎಂಬ ಪಟ್ಟಣಗಳ ಪ್ರಾಂತದ ಭೂಮಿಗಳನ್ನೆಲ್ಲಾ ಹಿಡಿದುಕೊಂಡು, ಅಲ್ಲಿದ್ದ ಶತ್ರು ಜನರನ್ನೆಲ್ಲಾ ಹೊರಕ್ಕೆ ಓಡಿಸಿಬಿಟ್ಟರು ಮತ್ತೂ ಸರ್ವಿಯಾದ ಅಶ್ವಸೈನಿಕರು ಆಸ್ಟ್ರಿಯನ್ ಪಟಾಲಮ್ಮೊಂದನ್ನು ಓಡಿಸಿ ೪ ಯಂತ್ರದ ಫಿರಂಗಿಗಳನ್ನೂ ೧೦ ಸಾಮಾನ್ಯ ಫಿರಂಗಿಗಳನ್ನೂ ಶತ್ರುಗಳಿಂದ ಕಿತ್ತುಕೊಂಡರು. ಲಾಟ್ಜಾ ಬಳಿಯಲ್ಲಿ ಆದ ಯುದ್ಧದಲ್ಲಿ ಸರ್ವಿಯನ್ನರು ಶತ್ರುಗಳ ಪಕ್ಷದ ೪॥ ಸಾವಿರ ಸೈನಿಕರನ್ನೂ ೫೩ ಫಿರಂಗಿಗಳನ್ನೂ ಯಂತ್ರದ ಕೆಲಫಿರಂಗಿಗಳನ್ನೂ ಇನ್ನೂ ಅನೇಕ ಮದ್ದು ಗುಂಡು ಬಂಡಿ ತುಪಾಕಿ ಮೊದಲಾದ ಸಾಮಗ್ರಿಗಳನ್ನೂ ವಶಪಡಿಸಿಕೊಂಡರು.

ತಾ॥ ೨೬.

ಫ್ರಾನ್ಸು-ಇಂಗ್ಲಾಂಡು-ಬೆಲ್ಜಿಯಂ ಸೇನೆಗಳು ಫ್ರಾನ್ಸುದೇಶದ ಬಡಗಲು ಎಲ್ಲೆಯಲ್ಲಿ ಸುರಕ್ಷಿತವಾದ ಸ್ಥಲಕ್ಕೆ ಸೇರಿ ಸಜ್ಜಾಗಿ ನಿಂತುವು. ನಿರೀಕ್ಷಣೆ ಮಾಡುತ್ತಿದ್ದ ಮಹಾ ಯುದ್ಧಕ್ಕೆ ತಾ॥೨೩ ರಲ್ಲಿ ಆರಂಭವಾಯಿತು. ಜರ್ಮನರು ಸಂದು ಸಿಕ್ಕಿದಲ್ಲೆಲ್ಲಾ ನುಗ್ಗುವುದಕ್ಕೆ ಯತ್ನಿಸಿದರು. ಚಾರ್ಲರಾಯಿ ಹತ್ತಿರ ಮಹಾ ಸಂಗ್ರಾಮಕ್ಕೆ ಮೊದಲಾಯಿತು. ಫ್ರಾನ್ಸಿನ ಅಶ್ವಸೇನೆಯು ಜರ್ಮನಿಯ ಅಶ್ವಸೇನೆಯನ್ನು ಪ್ರತಿಭಟಿಸಿತು. ಸಮಜೋಡಿಯಾಗಿ ಎರಡುಕಡೆಯವರೂ ಬಾಹಾಬಾಹಿ ಯುದ್ಧವನ್ನು ಮಾಡಿದರು. ಆಂಗ್ಲಸೇನೆಯು ಅತಿ ಮುಖ್ಯವಾದ ಕಾರ್ಯದಲ್ಲಿ ತೊಡಗಿ ಶತ್ರುಗಳ ಮೇಲೆ ಬಲವಾಗಿ ಹೋರಾಡಿತು. ಜರ್ಮನಿಯವರು ಅಂಡರ್ಲ್ಯೂಸ್ ಬ್ಯೂಮೆಟ್ ಎಂಬ ಪಟ್ಟಣಗಳನ್ನು ಹಿಡಿದುಕೊಳ್ಳಲು ಯತ್ನಿಸಿದರು. ಆದರೆ ಇದಿರು ಪಕ್ಷದವರು ಹೊಡೆದೋಡಿಸಿಬಿಟ್ಟರು. ನಾಮೂರ್ ಎಂಬ ಪಟ್ಟಣವನ್ನು ಜರ್ಮನಿಯವರು ಮುತ್ತಿದರು. ಸೇಂಬರ್ ಹೊಳೆಯ ದಡದಲ್ಲಿ ಭಯಂಕರವಾದ ತುಪಾಕಿಗಳ ಯುದ್ಧವು ನಡೆಯಿತು. ಭಾನುವಾರದವರೆಗೂ ಜರ್ಮನಿಯವರು ಎತ್ತ ತಲೆ ಯಿಕ್ಕಿದರೂ ಅಲ್ಲಿ ಇದಿರು ಪಕ್ಷವು ಪ್ರತಿಭಟಿಸಿ ಹಿಂದಕ್ಕಟ್ಟುತ್ತಲೇ ಇದ್ದಿತು. ಸೇಂಬರ್ ನದಿ ತೀರದಲ್ಲಿ ಭಯಂಕರವಾದ ಕಾಳಗವಾದಮೇಲೆ ಇಂಗ್ಲೀಷ್ ಫ್ರೆಂಚ್ ಸೇನೆಗಳನ್ನು ಹಿಂದಕ್ಕೆ ತಿರುಗುವಂತೆ ಅವುಗಳ ನಾಯಕರು ಆಜ್ಞಾಪಿಸಿದರು. ಈ ಮಹಾಯುದ್ಧದಲ್ಲಿ ಆಂಗ್ಲರ ಕಡೆಯಲ್ಲಿ ೨೦೦೦ ಜನರ ವರೆಗೆ ಮಡಿದರು, ಅಥವಾ ಗಾಯಗೊಂಡರು. ಜರ್ಮನ್ ಸೇನೆಯಲ್ಲಿಯೂ ಬಹಳ ನಷ್ಟವು ಸಂಭವಿಸಿತು. ಜರ್ಮನ್ ಸೈನ್ಯವು ಫ್ರಾನ್ಸ್‌ದೇಶದ ನಾನ್ಸಿಪಟ್ಟಣದ ಮೇಲೆ ನಾಲ್ಕಾವೃತ್ತಿ ಬಿದ್ದರು. ಫ್ರಾನ್ಸ್ ಸೈನ್ಯವು ಕೂಡ ಅವರಮೇಲೆ ಬಿದ್ದು ಧ್ವಂಸಮಾಡಿತು. ಆಂಟ್‌ವರ್ಪಿನಲ್ಲಿದ್ದ ಬೆಲ್ಜಿಯಂ ಸೇನೆಯು ಹೊರಬಿದ್ದು ಅಕಸ್ಮಾತ್ತಾಗಿ ಜರ್ಮನಿಯವರ ಮೇಲೆ ಬಿದ್ದು ಅವರ ೩ ಪಟಾಲಮ್ಮುಗಳನ್ನು ಮೇಸ್ಲೈನ್ಸ್ ಪ್ರಾಂತದಿಂದ ವಿಲ್ವಾರ್ಡಿಯ ಕಡೆಗೆ ೧೦ ಮೈಲಿಗಳ ವರೆಗೆ ಅಟ್ಟಿಕೊಂಡು ಹೋದರು. ಜರ್ಮನಿಯವರು ಬೆಲ್ಜಿಯಮ್ಮಿನ ರಾಜಧಾನಿಯಾದ ಅಂಟ್ವರ್ಪಿನ ಮೇಲೆ ಸುರಾತ್ರಿಯಲ್ಲಿ ವಾಯುವಿಮಾನದಿಂದ ೮ ಸಿಡಿಮದ್ದುಗಳನ್ನು ಹಾಕಿದರು. ಒಂದು ಅರಮನೆಯ ಹತ್ತಿರ ಬಿದ್ದು ೧-೨ ಮನೆಗಳು ಸುಟ್ಟು ಕೆಲಪ್ರಾಣಹಾನಿಯಾಯಿತು. ಬೆಲ್ಜಿಯಂ ಸೈನಿಕರು ವಿಮಾನದಮೇಲೆ ಗುಂಡನ್ನು ಹಾರಿಸಿ ಅದನ್ನು ಕೆಳಕ್ಕೆ ಕೆಡಹಿದರು. ಅದರಲ್ಲಿದ್ದ ಶತ್ರುಗಳನ್ನು ಹಿಡಿದರು. ಲೀಜ್ ಕೋಟೆಯಲ್ಲಿ ೧ ರ ಹೊರತು ಉಳಿದ ೧೧ ಕೋಟೆಗಳೂ ಶತ್ರುಗಳೊಡನೆ ಹೋರಾಡುತ್ತಲೇ ಇರುವುವು. ಆ ಒಂದುಕೋಟೆಯು ಸಹ ಒಳ್ಳೆಯ ಸ್ಥಿತಿಯಲ್ಲಿಲ್ಲ. ಛಿನ್ನಭಿನ್ನವಾಗಿ ಬಿದ್ದುಹೋಗಿದೆ. ಒಂದುವೇಳೆ ಲೀಜ್ ಕೋಟೆಗಳೆಲ್ಲಾ ಶತ್ರುಗಳಿಗೆ ವಶವಾಗಿ ಹೋಗುವ ಸಂದರ್ಭದಲ್ಲಿ ಎಲ್ಲಕೋಟೆಗಳನ್ನೂ ಬುಡಮುಟ್ಟ ಉರುಳಿಸಿ ಶತ್ರುಗಳಿಗೆ ಬರಿಯ ಪಾಳನ್ನು ಬಿಡುತ್ತೇವೆಂಬುದು ಬೆಲ್ಜಿಯಮ್ಮಿನವರ ಶಪಥವಾಗಿದೆ. ಲೀಜ್ ಕೋಟೆಯ ಹತ್ತಿರ ನಡೆದ ಯುದ್ಧದಲ್ಲಿ ಯುದ್ಧಾಂಗಣವೆಲ್ಲಾ ಹೆಣಗಳಿಂದ ನಿಬಿಡೀಕೃತವಾಗಿದ್ದಿತು. ಅವುಗಳ ರಾಶಿಯಲ್ಲಿ ಬೆಲ್ಜಿಯಂ ಸೇನಾಧಿಪತಿಯೊಬ್ಬನು ಪ್ರಾಣಾಂತಿಕಸ್ಥಿತಿಯಲ್ಲಿ ಬಿದ್ದು ನರಳುತ್ತಿದ್ದನು. ಅವನನ್ನು ಶತ್ರುಗಳು ಹಿಡಿದಾಗ ಜರ್ಮನ್ ಸೈನ್ಯಾಧಿಪತಿಯು ಆ ಬೆಲ್ಜಿಯಂ ಸೇನಾನಿಯ ಧೈರ್ಯಸ್ಥೈರ್ಯಾದಿಗಳನ್ನು ಕೊಂಡಾಡಿ ಆತನ ಆಯುಧವನ್ನು ಮರಳಿ ಆತನಿಗೆ ಕೊಟ್ಟು ಗೌರವಿಸಿದನು. ಪೂರ್ವ ಪ್ರಷ್ಯಾದಲ್ಲಿ ರಷ್ಯನರು ಜರ್ಮನಿಯವರನ್ನು ಅಟ್ಟುತ್ತ ದೇಶದೊಳಕ್ಕೆ ನುಗ್ಗಿನುಗ್ಗಿ ಬರುತ್ತಿದ್ದಾರೆ. ಇಟಲಿಯವರು ತಮ್ಮ ತಾಟಸ್ಥ್ಯವನ್ನು ಕಾಯ್ದುಕೊಳ್ಳುವುದಕ್ಕೆಂದು ಸೇನೆಯನ್ನು ಕೂಡಿಸಲು ತೊಡಗಿದರು. ಆಸ್ಟ್ರಿಯನ್ನರು ತಮ್ಮ ೬೦ ಸಾವಿರ ಸೇನೆಯನ್ನು ಇಟಲಿಯ ಎಲ್ಲೆಯಲ್ಲಿ ಯುದ್ಧಕ್ಕೆ ಅಣಿಮಾಡುತ್ತಿದ್ದಾರೆ.

ತಾ॥ ೨೭.

ಇಂಗ್ಲೀಷ್ ಮತ್ತೂ ಆಫ್ರಿಕಾ ಸೈನ್ಯಗಳು ಜರ್ಮನಿಯ ಇಂಪೀರಿಯಲ್ ಗಾರ್ಡ್ ಸೇನೆಯಮೇಲೆ ಯುದ್ಧಮಾಡಿ ಶತ್ರುಗಳಿಗೆ ಬಹಳ ನಷ್ಟವನ್ನುಂಟುಮಾಡಿದರು. ಜರ್ಮನರ ಕಡೆಯ ಸೇನೆಯ ಅಧಿಪತಿಯಾಗಿದ್ದ ಫ್ರೆಡರಿಕ್ ಲಿಯೋಪಾಲ್ಡ್ ಎಂಬ ಸಾಮಂತ ರಾಜಕುಮಾರನು ಅಂದಿನ ಯುದ್ಧದಲ್ಲಿ ಮೃತನಾದನು. ದಕ್ಷಿಣದಲ್ಲಿ ನಡೆದ ಯುದ್ಧದಲ್ಲಿ ಜರ್ಮನರು ಫ್ರಾನ್ಸಿಗೆ ಸೇರಿದ ಲ್ಯೂನ್‌ವಿಲ್ಲಿ ಎಂಬ ಕೋಟೆಯನ್ನು ಹಿಡಿದುಕೊಂಡರು. ಅಂಟ್‌ವರ್ಪಿನಹತ್ತಿರವೂ ನಾಮೂರಿನಹತ್ತಿರವೂ, ಬೆಲ್ಜಿಯಮ್ಮಿನವರ ಮೇಲೂ, ಮೆರ್ಟ್ಜ್ ಮಾನ್ಸ್ ಪಟ್ಟಣಗಳ ಹತ್ತಿರ ಇಂಗ್ಲೀಷ್-ಆಫ್ರಿಕಾ ಪಟಾಲಮ್ಮುಗಳ ಮೇಲೂ, ಲ್ಯೂನ್‌ವಿಲ್ಲಿ ಮತ್ತೂ ಅಲ್ಸೇಸ್-ಲೋರೈನ್ ಪ್ರಾಂತಗಳಲ್ಲಿ ಫ್ರಾನ್ಸಿನಮೇಲೂ ಜರ್ಮನಿಯು ಅತ್ಯಂತ ತೀಕ್ಷ್ಣವಾದ ಯುದ್ಧವನ್ನು ಮಾಡಿತು. ಮಾನ್ಸ್ ಪಟ್ಟಣದ ದಕ್ಷಿಣದಲ್ಲಿ ಆದ ಯುದ್ಧದಲ್ಲಿ ಆಂಗ್ಲಸೇನೆಗೆ ಎಷ್ಟು ವಿಶೇಷ ನಷ್ಟವಾಯಿತೋ ಅದಕ್ಕಿಂತ ಮಿಗಿಲಾಗಿಯೇ ಜರ್ಮನಿಗೆ ನಷ್ಟವಾಯಿತು. ಜರ್ಮನ್ ದೇಶದಲ್ಲಿ ೧೬ ವರ್ಷಕ್ಕೆ ಮೇಲ್ಪಟ್ಟು ೧೯ ವರ್ಷದೊಳಗಿನ ಯುವಕರಿಗೆಲ್ಲಾ ಸೈನಿಕ ಶಿಕ್ಷಣವು ಈಗ ಮಾಡಿಸಲ್ಪಡುತ್ತಿದೆ. ಜಪಾನಿನವರ ದಂಡಯಾತ್ರೆಯನ್ನು ಕಠಿನತರವಾಗಿ ನಿರೋಧಿಸುವುದಕ್ಕೆ ನಿಮ್ಮ ಶಕ್ತಿಸಾಹಸಗಳನ್ನೆಲ್ಲಾ ತೋರಿಸಬೇಕೆಂದು ಜರ್ಮನ್ ಚಕ್ರವರ್ತಿಯು ಚೀನಾದ ಸಿಂಗ್ಟೋ ನಗರದಲ್ಲಿರುವ ತಮ್ಮ ಸೈನಿಕರಿಗೆ ಆಜ್ಞೆಯನ್ನು ಕಳುಹಿಸಿರುವರು. ಶತ್ರುಗಳ ಹಡಗಿಗೆ ಪಟ್ಟಣದ ಗುರುತ್ತ ಕಾಣಬಾರದೆಂದು ಸಿಂಗ್ಟೋನಗರದಲ್ಲಿದ್ದ ಎತ್ತರವಾದ ಕಟ್ಟಡಗಳನ್ನೆಲ್ಲಾ ಜರ್ಮನಿಯವರು ಉರುಳಿಸಿಬಿಟ್ಟರು. ರೇಲ್ವೆ ಸೇತುಗಳನ್ನು ಹಾಳ್ಮಾಡಿಬಿಟ್ಟರು. ತಮ್ಮ ಪ್ರದೇಶದಲ್ಲಿದ್ದ ಚೀನಾದ ಗ್ರಾಮಗಳನ್ನೆಲ್ಲಾ ಧ್ವಂಸಮಾಡಿದರು. ಜಪಾನರ ಯುದ್ಧದ ಹಡಗುಗಳು ದಂಡಯಾತ್ರೆ ಹೊರಟು ಪೆಸಿಫಿಕ್ ಸಾಗರದಲ್ಲಿರುವ ಜರ್ಮನಿಯವರ ಸ್ವಾಸ್ಥ್ಯವಾದ ಕಿಯೋಚೂನನ್ನು ಹಿಡಿಯಲು ಪ್ರಯತ್ನಿಸಿರುವವು. ಸಿಂಗ್ಟೋವಿನ ಮೇಲೆ ಗುಂಡುಗಳನ್ನು ಹಾರಿಸುತ್ತಿರುವುವು.

ಜರ್ಮನರು ಬೆಲ್ಜಿಯಮ್ಮಿನಲ್ಲಿ ೫ ಕೋಟೆಗಳನ್ನು ಹಿಡಿದುಕೊಂಡರು. ಇನ್ನು ನಾಲ್ಕು ವಶವಾಗಲಿಲ್ಲ. ಮಾಲಿನ್ಸ್ ಪಟ್ಟಣದಮೇಲೆ ಫಿರಂಗಿಗಳನ್ನು ಹಾರಿಸಿ ದೇವಾಲಯವನ್ನೂ ೨೦೦ ಮನೆಗಳನ್ನೂ ಹಾಳ್ಮಾಡಿದರು. ಆಷ್ಟರಲ್ಲಿ ಬೆಲ್ಜಿಯಂ ಸೈನಿಕರು ಇದಿರಾಗಿ ಗುಂಡಿನ ಮಳೆಯನ್ನು ಸುರಿಯಿಸಿ ಹಿಂದಕ್ಕೋಡಿಸಿದರು. ಎರಡು ಪಕ್ಷದಲ್ಲೂ ಬಹಳ ಪ್ರಾಣಹಾನಿಯಾಯಿತು. ಜರ್ಮನರು ತಾವು ವಶಪಡಿಸಿಕೊಂಡ ಬೆಲ್ಜಿಯಂ ದೇಶಭಾಗಗಳಮೇಲೆ ತಮ್ಮ ಕಡೆಯ ಗೌರ್ನರನ್ನು ಅಧಿಕಾರಿಯಾಗಿ ನಿಯಮಿಸುತ್ತಿದ್ದಾರೆ.

ತಾ॥ ೨೮.

ಬೆಲ್ಜಿಯಮ್ಮಿಗೆ ಸೇರಿದ ಮಾನ್ಸಿನಹತ್ತಿರ ನಡೆದ ಯುದ್ಧದಲ್ಲಿ ಜರ್ಮನಿಯವರು ಪೂರ್ಣಸಮರ್ಥರಾದವರನ್ನೇ ಇಂಗ್ಲೀಷ್ ಸೈನ್ಯದಮೇಲೆ ನುಗ್ಗಿಸಿದರು. ಅವರು ಹಿಂದುಮುಂದು ನೋಡದೆ ಅಗ್ನಿವೃಷ್ಟಿಯನ್ನು ಸುರಿಸುತ್ತಾ ಕಾದಾಡಿದರು. ಆದರೂ ಇಂಗ್ಲೀಷು ಸೈನ್ಯವು ಒಂದುಹೆಜ್ಜೆಯನ್ನೂ ಹಿಂದಕ್ಕಿಡದೆ ಶತ್ರುಗಳನ್ನು ಫಿರಂಗಿ ತುಪಾಕಿ ಗುಂಡುಗಳಿಂದ ಹೊಡೆದು ಕೊಂದು, ಉಳಿದವರನ್ನು ಹಿಂದಕ್ಕೋಡಿಸುತ್ತಿದ್ದರು. ಕಡೆಗೆ ಆಂಗ್ಲರ ಫಿರಂಗಿಗಳ ಏಟಿಗೆ ಜರ್ಮನರು ಮುಖವಿಕ್ಕಲಾರದೆ ಪಲಾಯನಗೊಂಡರು. ಈ ಯುದ್ಧವು ಶನಿವಾರದೊಳಗಿನಿಂದ ಸೋಮವಾರದ ರಾತ್ರಿಯವರೆಗೂ ಅವಿಚ್ಛಿನ್ನವಾಗಿ ನಡೆಯಿತು. ಅಲ್ಲಿ ಇಂಗ್ಲೀಷ್ ಸೈನ್ಯವು ತೋರಿಸಿದ ಧೈರ್ಯಶೌರ್ಯಗಳು ಸರ್ವತ್ರ ಕೊಂಡಾಡಲ್ಪಡುತ್ತಿವೆ. ತಾ॥ ೨೬ ರ ರಾತ್ರಿ ಜರ್ಮನಿಯವರ ವಿಮಾನವೊಂದು ಮರಳಿ ಆಂಟ್‌ವರ್ಪಿನಮೇಲೆ ಸಿಡಿಮದ್ದನ್ನು ಹಾಕಲು ಪ್ರಯತ್ನಿಸಿತು. ಬೆಲ್ಜಿಯಮ್ಮಿನವರು ಜಾಗರೂಕರಾಗಿದ್ದುದರಿಂದ ವಿಫಲವಾಯಿತು. ಜರ್ಮನಿಯವರ ವಾಯುವಿಮಾನಗಳ ನಿರ್ಮಾಣಕನಾದ ಜಪ್ಲಿನ್ನು ತಾನೇ ಯುದ್ಧಾಂಗಣಕ್ಕೆ ಹೋಗಿ, ವಿಮಾನಗಳ ಮೇಲಣ ನಾಯಕತ್ವವನ್ನು ವಹಿಸಲು ಸರ್ಕಾರದ ಅಪ್ಪಣೆಯನ್ನು ಪಡೆದಿರುವನು. ಈತನಿಗೆ ಈಗ ೭೪ ವರ್ಷ. ಬೆಲ್ಜಿಯಮ್ಮಿನವರು ಜರ್ಮನರನ್ನು ಬ್ರಸೆಲ್ಸಿನ ಮತ್ತೂ ಮಾಲಿನ್ಸಿನ ಕಡೆಗೆ ಸಾಗಿಸಬೇಕೆಂದು ಮಾಡಿದ ಹಂಚಿಕೆಯು ಅಪೇಕ್ಷಿತದಂತೆ ಫಲಿಸಿತು. ಅದುಕಾರಣ, ಅವರು ಸಂತುಷ್ಟರಾಗಿದ್ದಾರೆ. ಈಗ ಜರ್ಮನರು ಸತ್ತಿರುವ ಶತ್ರುತ್ರಯದ ಮಧ್ಯದಲ್ಲಿ ಸಿಕ್ಕಿ ಬಿದ್ದಂತಾಗಿದ್ದಾರೆ. ಯುದ್ಧಾರಂಭದಿಂದ ಇದುವರೆಗೆ ಬೆಲ್ಜಿಯಮ್ಮಿನವರಲ್ಲಿ ೧೦ ಸಾವಿರಮಂದಿ ಹತರಾಗಿರುವರೆಂದು ಲೆಕ್ಕವಾಗಿದೆ. ಲೋರೈನ್ ಪ್ರಾಂತದಲ್ಲಿ ಜರ್ಮನಿಯ ಆಟವೇನೂ ಸಾಗಲಿಲ್ಲ. ಅಲ್ಸೇಸಿನಲ್ಲಿ ಇನ್ನೇನೂ ಕೆಲಸವಿಲ್ಲವೆಂದು ಅಲ್ಲಿದ್ದ ಹೆಚ್ಚು ಸೈನ್ಯವನ್ನು ಫ್ರಾನ್ಸಿನವರು ಹಿಂದಕ್ಕೆ ಕರೆಯಿಸಿಕೊಂಡರು. ಚಾರ್ಲರಾಯಿಯನ್ನು ಫ್ರೆಂಚರು ಮರಳಿ ಜರ್ಮನರಿಂದ ಕಸುಕೊಂಡರು. ಫ್ರಾನ್ಸಿಗೆ ಪೂರ್ವದಲ್ಲಿ ನಾನ್ಸಿ ಹತ್ತಿರ ಜರ್ಮನರಿಗೂ ಫ್ರಾನ್ಸಿನವರಿಗೂ ನಡೆದ ಮಹಾಯುದ್ಧದಲ್ಲಿ ಜರ್ಮನರ ಕಡೆ ವಿಶೇಷ ನಷ್ಟವಾಯಿತು. ಕೆಲಕಡೆ ೧॥ ಸಾವಿರ ಜನಕ್ಕಿಂತ ಹೆಚ್ಚಾಗಿಯೇ ಸುತ್ತುಬಿದ್ದಿದ್ದರು. ಒಂದು ಕಂದಕದಲ್ಲಿದ್ದವರೆಲ್ಲರೂ ಸತ್ತಿದ್ದರು. ಅವರ ಹೆಣಗಳು ಒಂದನ್ನೊಂದು ಒರಗಿ ಹಾಗೆಹಾಗೆಯೇ ನಿಂತಿದ್ದುವು. ನಾನ್ಸಿ ಹತ್ತಿರ ಜರ್ಮನರ ೭೦೦೦ ಹೆಣಗಳು ಕಂಡುಬಂದುವಂತೆ. ರಷ್ಯಾದವರು ಜರ್ಮನಿಯ ಪೂರ್ವಭಾಗದಲ್ಲಿ ೪೦ ಮೈಲಿಗಳವರೆಗೆನುಗ್ಗಿ ಅಲ್ಲಿನ ಪುರಗ್ರಾಮಗಳನ್ನೆಲ್ಲಾ ವಶಪಡಿಸಿಕೊಂಡರು. ಮಹಾಪ್ರವಾಹದಂತೆ ಸೈನ್ಯವು ನುಗ್ಗಿ ಬರುತ್ತಲೇ ಇದೆ. ಇದಿರಾದವರನ್ನು ಹುಲ್ಲುಕಡ್ಡಿಯಂತೆ ಕಡಿದೊಟ್ಟುತ್ತಿದ್ದಾರೆ. ಆಲ್ಲೆನ್‌ಸ್ಟೀನ್ ಎಂಬ ಪಟ್ಟಣಕ್ಕೆ ೩೧ ಮೈಲಿ ದೂರದಲ್ಲಿರುವ ರಾತ್‌ಪ್ಲೇನ್ ಎಂಬ ರೇಲ್ವೆಯ ಕೂಟಸ್ಥಾನವನ್ನಾಕ್ರಮಿಸಿಕೊಂಡರು. ಜರ್ಮನಿಯ ಮುಖ್ಯನಗರದಕಡೆಗೆ ಸಾಗಬೇಕೆಂಬುದು ಅವರ ಉದ್ದೇಶ. ಈಗ ರಷ್ಯನರ ಸೇನೆಯು ೪೦ ಲಕ್ಷದವರೆಗೆ ಜರ್ಮನಿ ಆಸ್ಟ್ರಿಯಾಗಳ ಮೇಲೆ ನುಗ್ಗಿ ಬರುತ್ತಿದೆ. ಇಂಗ್ಲೀಷರ ನೌಕಾಸೇನೆಯು ಜರ್ಮನಿಗೆ ಸೇರಿದ ಆಸ್ಟೆಂಡ್ ಎಂಬ ಒಂದು ರೇವುಪಟ್ಟಣವನ್ನೂ ಅದರ ಪ್ರಾಂತವನ್ನೂ ಆಕ್ರಮಿಸಿಕೊಂಡಿರುವುದು. ಜರ್ಮನರ ನೌಕಾಸೇನೆಯು ಉತ್ತರದಲ್ಲಿರುವ ಕೀಲು ಕಾಲ್ವೆಯಲ್ಲಿದೆ. ಅವು ಹೇಲಿಗೋಲ್ಯಾಂಡಿನ ಬಳಿಯಲ್ಲಿ ಸಮುದ್ರತೀರಗಳನ್ನು ಕಾಯ್ದುಕೊಂಡಿವೆ. ಆಫ್ರಿಕಾಖಂಡದಲ್ಲಿರುವ ಜರ್ಮನಿಗೆ ಸೇರಿದ ಟೋಗೋಲ್ಯಾಂಡ್ ಪ್ರದೇಶವನ್ನು ಇಂಗ್ಲೀಷರು ವಶಪಡಿಸಿಕೊಂಡರು. ಹೈಫ್ಲೈಯರ್ ಎಂಬ ಇಂಗ್ಲೀಷರ ಹಡಗು ಕೇಯಿಜರ್ ವಿಲ್‌ಹೆಲ್ಮ್‌ಡರ್ ಗ್ರೋಸೆ ಎಂಬ ಜರ್ಮನ್ ಹಡಗನ್ನು ಮುಳುಗಿಸಿಬಿಟ್ಟಿತು. ರಷ್ಯಾಸೈನಿಕರು ಆಸ್ಟ್ರಿಯಾದೇಶದ ಗಿಲೀಷಿಯಾ ಜಿಲ್ಲೆಯಲ್ಲಿರುವ ಟಾರ್ನಪಾಲ್ ಪಟ್ಟಣವನ್ನು ಆಕ್ರಮಿಸಿಕೊಂಡು, ಅಲ್ಲಿಂದ ಸೀಸ್ಟರ್ ನದಿಯನ್ನು ದಾಟಿ, ದೇಶದೊಳಕ್ಕೆ ನುಗ್ಗುತ್ತಿದ್ದಾರೆ. ಅವರನ್ನು ಆಸ್ಟ್ರಿಯನ್ನರ ೩ ಪಟಾಲಮುಗಳು ಪ್ರತಿಭಟಿಸಿ ಕಾದಾಡುತ್ತಿವೆ.

ತಾ॥ ೨೯.

ಕಾನಡಾ ಸ್ವಾಸ್ಥ್ಯದವರು ಇನ್ನೊಂದು ಲಕ್ಷ ಸೇನೆಯನ್ನು ಇಂಗ್ಲೀಷರಿಗೆ ಸಹಾಯವಾಗಿ ಕಳುಹಿಸಲು ಯೋಚಿಸಿರುವರು.

ಬೆಲ್ಜಿಯಮ್ಮಿನವರು ಆಂಗ್ಲಪ್ರಭುತ್ವದವರ ಅನುಮತಿಯ ಮೇರೆ ಇನ್ನು ಮುಂದೆ ವಿಜಿತರ ಸೇನೆಗೆ ಸಹಾಯಕರಾಗಿದ್ದುಕೊಂಡು ಶತ್ರುಗಳ ಮೇಲೆ ಯುದ್ಧಮಾಡದೆ, ತಮ್ಮ ದೇಶದ ಸಂರಕ್ಷಣೆಯ ಸಂಬಂಧದ ಯುದ್ಧವನ್ನು ಮಾತ್ರ ನಡೆಯಿಸಲು ನಿರ್ಧರಿಸಿದರು.

ತಾ॥ ೨೨ ರಿಂದ ೬ ದಿನಗಳವರೆಗೂ ಜರ್ಮನರು ವೀರಾವೇಶದಿಂದ ಹಲವುಕಡೆ ಹೋರಾಡಿ ಎಲ್ಲಿಯೂ ಮುಂದಕ್ಕೆ ನುಗ್ಗಲು ಸಮರ್ಥರಾಗದೆ, ಹಿಮ್ಮೆಟ್ಟಿ ಬಹಳ ನಷ್ಟವನ್ನನುಭವಿಸಿದರು. ಫ್ರೆಂಚರು ನಾನ್ಸೀ-ವಾಸ್ಜೆಸ್‌ಗಳಿಗೆ ಮಧ್ಯಪ್ರದೇಶದಲ್ಲಿ ಮುಂದುಮುಂದಕ್ಕೆ ಸಾಗುತ್ತಿದ್ದಾರೆ. ಆದರೆ ಇವರನ್ನು ಶತ್ರುಗಳು ಎಲ್ಲೂ ತಡೆಗಟ್ಟಿಲ್ಲ. ನಾಮೂರಿನಲ್ಲಿದ್ದ ಬೆಲ್ಜಿಯಂಸೇನೆಯು ಒಂದು ಫ್ರೆಂಚರ ಪಟಾಲಮ್ಮಿನ ಸಹಾಯದಿಂದ ಆಂಗ್ಲರ ಶಿಬಿರವನ್ನು ಬಂದು ಸೇರಿತು. ಜರ್ಮನಿಯವರ ಹಾವಳಿಯಿಂದ ಮನೆ ಮಠಗಳನ್ನು ಕಳೆದುಕೊಂಡು ನಿರ್ಗತಿಕರಾಗಿರುವ ಬೆಲ್ಜಿಯಮ್ಮಿನವರು ಗುಂಪುಗುಂಪಾಗಿ ಪ್ಯಾರಿಸ್ಸಿಗೆ ಬರುತ್ತಿದ್ದಾರೆ. ಅವರಲ್ಲಿ ಹೆಂಗುಸರೂ ಮಕ್ಕಳುಗಳೂ ಕಷ್ಟಗಳಿಂದ ಬಲುಬಳಲಿದ್ದಾರೆ. ಅವರಲ್ಲಿ ಬಹುಜನರು ಜರ್ಮನಿಯವರ ಕಾಲುಕೆಳಗೆ ಸಿಕ್ಕಿ ತಮ್ಮ ಎಷ್ಟೋ ಮಕ್ಕಳು ಸತ್ತವೆಂದು ಹೇಳಿಕೊಂಡಿದ್ದಾರೆ. ಇವರಲ್ಲಿ ಬಹುಜನರು ಧನಿಕರಾದರೂ ಪೂರ್ಣರಿಕ್ತರಂತೆ ಕಾಣಬರುತ್ತಿದ್ದಾರೆ. ಇವರು ಜೀವನನಿರ್ವಾಹಕ್ಕಾಗಿ ಪಶ್ಚಿಮದೇಶಗಳಿಗೆ ಕಳುಹಲ್ಪಡುವುದರಲ್ಲಿದ್ದಾರೆ. ಕಳೆದ ೩ ದಿನಗಳಲ್ಲಿ ಇಂಗ್ಲೀಷರೂ, ಫ್ರೆಂಚರೂ ಮಾಡಿದ ಯುಕ್ತಿ-ಸಾಹಸ-ಧೈರ್ಯಶೌರ್ಯಪೂರ್ಣವಾದ ಯುದ್ಧಗಳಿಗಾಗಿ ಅವರ ಸೇನಾನಿಗಳು ಪರಸ್ಪರವಾಗಿ ಸ್ತೋತ್ರಮಾಡುತ್ತಿದ್ದಾರೆ.

ಜರ್ಮನರು ತಾವು ಶತ್ರುಗಳಿಗೆ ಪಟ್ಟಣವನ್ನು ಬಿಟ್ಟುಬಿಡಬೇಕಾಗಿ ಬಂದಾಗ ಅವುಗಳಿಗೆ ಬೆಂಕಿಯಿಕ್ಕಿ ಹಾಳುಮಾಡುತ್ತಲೂ, ಶತ್ರುಗಳ ಗ್ರಾಮವನ್ನು ಹಿಡಿದಾಗ ಸೂರೆಮಾಡಿ ಹೆಂಗುಸರನ್ನು ಕೆಡಿಸಿ, ನಾನಾವಿಧವಾಗಿ ಹಿಂಸಿಸುತ್ತಲೂ ಇದ್ದಾರೆ. ಶತ್ರುಗಳ ಮೇಲೆ ಯುದ್ಧಮಾಡುವಾಗ ರಣನೀತಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಾರೆ. ಅವರು ಗುರಿಕಟ್ಟಿ ಹೊಡೆಯುವುದು ಜಾಣ್ಮೆಯುಳ್ಳುದಾಗಿಲ್ಲದಿದ್ದರೂ ರಾತ್ರಿಯಹೊತ್ತು ತುಪಾಕಿಗಳಲ್ಲಿ ಚರೆಗಳನ್ನು ತುಂಬಿ ಶತ್ರುಗಳ ಮೇಲೆ ಭಯಂಕರವಾಗಿ ಪ್ರಯೋಗಿಸುತ್ತಿದ್ದಾರೆ ಎಂಬ ವಾರ್ತೆಗಳು ಹಬ್ಬಿಕೊಂಡಿವೆ. ರಣರಂಗದಲ್ಲಿರುವ ಆಂಗ್ಲಸೈನಿಕನೊಬ್ಬನು ತನ್ನವರಿಗೆ ಬರೆದಿರುವ ಕಾಗದದಲ್ಲಿ ಹೀಗೆ ತಿಳಿಯಿಸಿದ್ದಾನೆ—"ಜರ್ಮನರು ಕ್ರೂರರಾಕ್ಷಸರು, ಅವರು ಕಠಿನವಾಗಿ ಹೋರಾಡುತ್ತಾರೆ. ಆದರೆ ಅವರ ಗುರಿಹಿಡಿಯುವಿಕೆಯು ಚೆನ್ನಾಗಿಲ್ಲ; ನಮ್ಮವರು ಹಿಡಿಯುವ ಗುರಿಯು ಚೆನ್ನಾಗಿದೆ. ನಮ್ಮಮೇಲೆ ಬಿದ್ದ ಜರ್ಮನಿಯವರನ್ನೆಲ್ಲಾ ನಾವು ಓಡಿಸಿದೆವು. ಆದರೆ ಮತ್ತೆ ಸಾವಿರಾರು ಗಟ್ಟಲೆ ಬಂದು ಬಿದ್ದರು. ಆಗಿನ ಸ್ಥಿತಿಯು ಬಹಳ ಭಯೋತ್ಪಾದಕವಾದುದು. ವರ್ಣಿಸಿ ಬರೆಯಲು ಸಾಧ್ಯವಲ್ಲ ; ಕಣ್ಣಿನಿಂದಲೇ ನೋಡಿ ತಿಳಿಯಬೇಕು." ಎಂಬುದಾಗಿ

ಸರ್ವಿಯಾದವರು ಗುಂಪುಗುಂಪಾಗಿ ಆಸ್ಟ್ರಿಯಾಕ್ಕೆ ನುಗ್ಗಿ ದಕ್ಷಿಣ ಬೋಸ್ನಿಯಾದಲ್ಲಿ ಯುದ್ಧಕಾರ್ಯಕ್ಕೆ ತಮಗೆ ಸುರಕ್ಷಿತವಾಗಿರುವ ಸ್ಥಲವನ್ನು ಹಿಡಿದುಕೊಂಡು ಕುಳಿತಿದ್ದಾರೆ

ರಷ್ಯಾದವರು ಕೋಯಿನಿಂಗ್ಸ್‌ಬರ್ಗ್ ಎಂಬುದನ್ನೂ ಟಿಲ್ಸಿಟ್ ಪಟ್ಟಣವನ್ನೂ ಪೂರ್ಣವಾಗಿ ಹಿಡಿದುಕೊಂಡರು. ಪೂರ್ವಪ್ರಷ್ಯಾದಲ್ಲಿ ಜರ್ಮನಿಯವರ ೧೦೦ ಫಿರಂಗಿಗಳನ್ನು ರಷ್ಯನ್ನರು ಹಿಡಿದುಕೊಂಡುದು ನಿಜವಾಗಿದೆ. ರಷ್ಯಾದವರು ಆಸ್ಟ್ರಿಯಾದೊಳಕ್ಕೆ ನುಗ್ಗಿ ಇದುವರೆಗೆ ಅಲ್ಲಿನ ೧೦ ನೆಯ ೧ ಭಾಗ ಸೈನ್ಯವನ್ನು ಹಾಳುಮಾಡಿರುವರು.

ಪೋರ್ಚುಗಲ್ಲಿನ ಹಿಂದಿನ ರಾಜನು ಇಂಗ್ಲೆಂಡಿನ ಕಡೆ ಸೇರಿ ಯುದ್ಧ ಮಾಡಲು ತನ್ನ ಕಡೆಯವರಿಗೆ ಪ್ರೋತ್ಸಾಹಿಸಿ ಕಾಗದ

ನಾವು ಅವರೊಡನೆ ಕೂಡಿ ಯುದ್ಧಮಾಡುತ್ತಾ ೨ ದೊಡ್ಡ ಕಾರ್ಯಗಳನ್ನು ನೆರವೇರಿಸುತ್ತಿದ್ದೇವೆ. ೧ ನೆಯದು-ಸಣ್ಣ ಸಣ್ಣ ರಾಷ್ಟ್ರಗಳ ಸ್ವಾತಂತ್ರ್ಯವನ್ನು ಕಾಪಾಡುವುದು. ೨ ನೆಯದು ಜಾತಿಗಳ ಪರಸ್ಪರ ಧರ್ಮಕ್ಕೆ ಭಂಗ ಬರದಂತೆ ಕಾಪಾಡುವುದು.

ಬಳಿಕ ಐರ್ಲಾಂಡಿನ ಬೋನರ್‌ಲಾರವರು ಅದನ್ನೇ ಪುಷ್ಟೀಕರಿಸಿ ಮಾತನಾಡುವಾಗ-ಬೆಲ್ಜಿಯಮ್ಮಿನವರ ಧೈರ್ಯಸ್ಥೈರ್ಯ ಪರಾಕ್ರಮಗಳು ಪ್ರಪಂಚವನ್ನೇ ಆಶ್ಚರ್ಯ ಸಮುದ್ರದಲ್ಲಿ ಮುಳುಗಿಸಿವೆ. ನಾವು ಬೆಲ್ಜಿಯಂ ಸೈನಿಕರನ್ನು ಮಾತ್ರವೇ ಶ್ಲಾಘಿಸತಕ್ಕುದಲ್ಲ ; ಬೆಲ್ಜಿಯಂ ದೇಶದ ಪ್ರತಿಯೊಬ್ಬ ಪ್ರಜೆಯನ್ನೂ ಶ್ಲಾಘಿಸಬೇಕು. ಏಕೆಂದರೆ-ಅವರೆಲ್ಲರೂ ಯುದ್ಧದಿಂದ ಉಂಟಾಗುತ್ತಿರುವ ನಷ್ಟ ಕಷ್ಟಗಳನ್ನೆಲ್ಲಾ ಶಾಂತಿಯಿಂದ ಸೈರಿಸುತ್ತಿದ್ದಾರೆ. ಇಂಗ್ಲಾಂಡು ಏತಕ್ಕೆ ಯುದ್ಧಮಾಡಬೇಕಾಗಿತ್ತು ಎಂದು ಆಕ್ಷೇಪಿಸತಕ್ಕವರು ನಮ್ಮಲ್ಲಿ ಕೆಲರು ಇರಬಹುದು. ಈಗ ಬೆಲ್ಜಿಯಮ್ಮಿನವರು ಅನುಭವಿಸುತ್ತಿರುವ ದುರವಸ್ಥೆಗಳನ್ನು ಅವರು ಕೇಳುತ್ತಿರುವುದರಿಂದ ಇಂಗ್ಲೆಂಡು ಯುದ್ಧಕ್ಕೆ ನಿಂತುದು ಎಷ್ಟು ನ್ಯಾಯವೆಂಬುದು ಅವರಿಗೇ ತಿಳಿಯದೆಹೋಗದು. ಬೆಲ್ಜಿಯಮ್ಮು ಸಕಲ ಪ್ರಪಂಚದಿಂದಲೂ ಗೌರವಿಸಲ್ಪಡತಕ್ಕುದಾಗಿದೆ. ಅದು ಸಣ್ಣ ರಾಷ್ಟ್ರವಾದರೂ ಅದು ಮಾಡಿದ ಘನತರವಾದ ಕಾರ್ಯವು ನಮಗೂ ಮಾರ್ಗದರ್ಶಕವಾಗಿರುವುದಲ್ಲದೆ ನಮ್ಮನ್ನು ದೊಡ್ಡ ಋಣಿಗಳನ್ನಾಗಿ ಮಾಡಿರುವುದು. ಅವರ ಋಣವನ್ನು ನಾವು ಹೊತ್ತುಕೊಂಡೆವು. ಈ ಯುದ್ಧವು ಬೆಲ್ಜಿಯಮ್ಮಿಗೆ ಎಷ್ಟು ಉಪದ್ರವವನ್ನುಂಟುಮಾಡುವುದೋ ನಮಗೂ ಅಷ್ಟೇ ಉಪದ್ರವಕಾರಿಯು. ಇದನ್ನು ನಮ್ಮವರು ಇದುವರೆಗೂ ಚೆನ್ನಾಗಿ ಗ್ರಹಿಸಿದಂತೆ ಕಾಣುವುದಿಲ್ಲ. ಈಗಲಾದರೂ ಗ್ರಹಿಸಬೇಕು. ನಮ್ಮ ಯಾವಚ್ಛಕ್ತಿ ಸಾಹಸಗಳನ್ನೂ ಉಪಯೋಗಿಸಿ, ಈಗಿನ ಯುದ್ಧದಲ್ಲಿ ನಮಗೆ ಜಯವುಂಟಾಗುವಂತೆ ಮಾಡಿ ಅದನ್ನು ಮುಗಿಸಬೇಕು.

ಬಳಿಕ ಐರ್ಲಾಂಡಿನ ರೆಡ್ಮಂಡ್‌ರವರು ಮಾತನಾಡುವಾಗ-ಬೆಲ್ಜಿಯಂನವರ ಸ್ವಾತಂತ್ರ್ಯ ರಕ್ಷಣೆಗಾಗಿ ರಕ್ತವನ್ನೂ ಪ್ರಾಣವನ್ನೂ ಧಾರೆಯೆರೆದುಕೊಡಲು ನಮ್ಮಲ್ಲಿ ಅನೇಕರು ಸಿದ್ಧರಾಗಿರುವರೆಂದು ನಾನು ಹೆಚ್ಚಳಪಡುತ್ತೇನೆ. ಆದರೆ ಬೆಲ್ಜಿಯಮ್ಮಿನವರು ತಮ್ಮ ಸ್ವಾತಂತ್ರ್ಯ ರಕ್ಷಣೆಗಾಗಿ ಶತ್ರುಗಳ ಮೇಲೆ ಪ್ರತಿಭಟಿಸಿ ಪಡುತ್ತಿರುವ ನಷ್ಟ ಕಷ್ಟಗಳನ್ನು ನೋಡಿ ಐರ್ಲಾಂಡು ಪ್ರಜೆಗಳ ಮನಸ್ಸು ಕರಗಿ ನೀರಾಗುತ್ತಿದೆ. ಬೆಲ್ಜಿಯಂನವರ ಶೌರ್ಯಧೈರ್ಯಗಳು ಐರ್ಲಂಡಿನವರಿಗಿಂತಲೂ ಮಿಗಿಲಾಗಿ ಪ್ರಪಂಚದ ಮತ್ತಾವ ಭಾಗವನ್ನೂ ಮೆಚ್ಚಿಸಿರುವುದಿಲ್ಲ. ಆ ಬೆಲ್ಜಿಯಮ್ಮಿನವರಿಗೆ ಸಹಾಯ ಮಾಡುವುದಕ್ಕಾಗಿ ಐರ್ಲಂಡ್ ಪ್ರಜೆಗಳು ಎಷ್ಟು ಕಷ್ಟನಷ್ಟವನ್ನಾದರೂ ವಹಿಸಲು ಸಿದ್ಧರಾಗಿರುವರು.

ಬೆಲ್ಜಿಯಮ್ಮಿನವರಿಗೆ ಇಂಗ್ಲೆಂಡಿನವರು ಸ್ವಲ್ಪ ಹಣವನ್ನು ಸಾಲವಾಗಿ ಕೊಟ್ಟು ಸಹಾಯ ಮಾಡುವುದರಲ್ಲಿದ್ದಾರೆಂದು ನಾನು ಪತ್ರಿಕೆಗಳಲ್ಲಿ ಓದಿದೆನು. ಆದರೆ ಆ ಹಣವನ್ನು ಅವರಿಗೆ ಸಾಲವಾಗಿ ಕೊಡಕೂಡದು. ಬಹುಮಾನವಾಗಿ ಕೊಡಬೇಕೆಂಬುದು ನನ್ನ ಅಭಿಮತವು, ಎಂದರು. ಆಗ ಸಭಿಕರೆಲ್ಲಾ ವಿಶೇಷವಾಗಿ ಕರತಾಳವನ್ನು ಮಾಡಿ ಆ ಮಾತಿಗೆ ತಮ್ಮ ಅನುಮತಿಯನ್ನು ತೋರಿಸಿದರು.

ತಾ॥ ೩೦-೩೧.

ಉತ್ತರಸಮುದ್ರದಲ್ಲಿರುವ ಹೆಲಿಗೋಲ್ಯಾಂಡ್ ದ್ವೀಪದ ಬಳಿಯಲ್ಲಿದ್ದ ಜರ್ಮನರ ಹಡಗುಗಳಮೇಲೆ ಆಂಗ್ಲೇಯರು ನೌಕಾಯುದ್ಧವನ್ನು ನಡೆಯಿಸಿದರು. ಶತ್ರುಗಳ ಹಡಗುಗಳಮೇಲೆ ತಮ್ಮ ಹಡಗುಗಳ ಮೇಲಿನ ಫಿರಂಗಿಗಳಿಂದ ಗುಂಡಿನ ಮಳೆಯನ್ನು ಸುರಿಸಿದರು. ಜರ್ಮನಿಯವರ ೨ ಡಿಸ್ಟ್ರಾಯರುಗಳೂ (ಯುದ್ಧದ ಹಡಗುಗಳನ್ನು ಮುಳುಗಿಸುವ ಸಣ್ಣ ಹಡಗುಗಳು) ಮೂರು ಕ್ರೂಸರ್ ಎಂಬ ಹಡಗುಗಳೂ ಮುಳುಗಿಸಲ್ಪಟ್ಟುವು. ಅನೇಕ ಹಡಗುಗಳಿಗೆ ನಷ್ಟವನ್ನುಂಟುಮಾಡಿದರು. ಇನ್ನೊಂದು ಹಡಗು ಏಟನ್ನು ತಿಂದು ಮುಳುಗಿ ಹೋಗುವ ಅವಸ್ಥೆಯಲ್ಲಿ ತಪ್ಪಿಸಿಕೊಂಡು ಓಡಿಹೋಯಿತು. ಆಸ್ಥಲದಲ್ಲಿ ನೀರಿನೊಳಗೆ ಜರ್ಮನರು ಸಿಡಿಮದ್ದನ್ನು ಇಟ್ಟಿದ್ದರೂ ಇಂಗ್ಲೀಷರ ಹಡಗುಗಳು ಅವನ್ನು ಲಕ್ಷ್ಯಮಾಡದೆ ಅವುಗಳ ಅಪಾಯಕ್ಕೂ ಗುರಿಯಾಗದೆ, ಶತ್ರುಗಳ ಸೈನ್ಯದ ಮೇಲೆ ಬಿದ್ದು ನಷ್ಟಪಡಿಸಿ ತಾವು ಯಕ್ಕಿಂಚಿತ್ ನಷ್ಟವನ್ನು ಮಾತ್ರ ಹೊಂದಿ ಜಯಶೀಲವಾದುವು. ಜರ್ಮನ್ ಹಡಗುಗಳ ಮೇಲಿದ್ದ ಅನೇಕ ಮಂದಿಗಳು ಸತ್ತರು. ಇವರಲ್ಲಿ ನೌಕಾಧಿಪತಿಯೂ ಒಬ್ಬನಾಗಿದ್ದನು. ಈ ಯುದ್ಧದಲ್ಲಿ ಏಟು ತಿಂದ ಮತ್ತೂ ಸೆರೆಯಾಳುಗಳಾಗಿ ಸಿಕ್ಕಿದ ೨೦೦ ಮಂದಿ ಜರ್ಮನರನ್ನು ಇಂಗ್ಲೀಷ್ ಹಡಗಿನವರು ನೋರ್ ಪಟ್ಟಣಕ್ಕೆ ತಂದು ಸೇರಿಸಿದರು. ಈ ಯುದ್ಧದಲ್ಲಿ ಇಂಗ್ಲೀಷರ ಕಡೆ ೬೯ ಮಂದಿ ಸತ್ತರು. ಅವರಲ್ಲಿ ಇಬ್ಬರು ಲೆಫ್ಟನೆಂಟಿದ್ದರು. ೩೫ ಮಂದಿಗೆ ಏಟುತಗುಲಿರುವುದು. ಉತ್ತರಸಮುದ್ರದಲ್ಲಿ ಶತ್ರುಗಳು ಹೂಳಿರುವ ಸಿಡಿಮದ್ದುಗಳನ್ನು ತೆಗೆದುಹಾಕುವ ಕೆಲಸವನ್ನು ಮಾಡುತ್ತಿದ್ದ ೨ ಇಂಗ್ಲೀಷರ ಹಡಗುಗಳು ಮದ್ದಿಗೆ ಬಡಿದು ಮುಳುಗಿಹೋದುವು. ಅದರಲ್ಲಿದ್ದವರಲ್ಲಿ ೫ ಮಂದಿಗಳು ಅಗೋಚರರಾದರು. ೮ ಮಂದಿಗೆ ಏಟುಬಿದ್ದಿರುವುದು. ತಾ॥ ೨೩ ರಿಂದ ೨೬ ವರೆಗೆ ೩ ದಿನ ನಡೆದ ಮಹಾಯುದ್ಧದ ವರ್ಣನೆಯು ತಂತ್ರೀವಾರ್ತೆಗಳ ಮೂಲಕ ಅನಂತವಾಗಿ ಬಂದಿದೆ. ಅದರಲ್ಲಿ ಫ್ರೆಂಚರೂ ಆಂಗ್ಲರೂ ತೋರಿಸಿರುವ ಪರಾಕ್ರಮವು ಅತ್ಯದ್ಭುತವಾಗಿದೆ. ತಾ॥ ೨೬ ರಲ್ಲಿ ಸೆಂಟ್ರಸಿಲ್ ಎಂಬ ಪಟ್ಟಣದಲ್ಲಿ ಜರ್ಮನ್ ಸೈನಿಕರು ಒಂದು ಇಕ್ಕಟ್ಟಾದ ಬೀದಿಯಲ್ಲಿ ನುಗ್ಗಿ ಹೋಗುತ್ತಿರುವಾಗ ಇಂಗ್ಲೀಷರು ಫಿರಂಗಿಗಳನ್ನು ಹಾರಿಸಿದರು. ಆಗ ಮಹಾ ಸಂಕ್ಷೋಭೆಯು ಹುಟ್ಟಿತು. ಕಡೆಯಲ್ಲಿ ನೋಡುವಾಗ್ಗೆ ಆ ಪಟ್ಟಣದ ಬೀದಿಗಳಲ್ಲಿ ೮೦೦-೯೦೦ ಮಂದಿ ಜರ್ಮನ್ ಸೈನಿಕರು ಸತ್ತೋ ಏಟುತಿಂದೋ ಬಿದ್ದಿರುವುದು ಗೋಚರಿಸಿತು.

ಅತ್ತ ರಷ್ಯನ್ನರು ಪೂರ್ವ ಪ್ರಷ್ಯಾದಲ್ಲಿ ಪ್ರತಿಯೊಂದು ಕಡೆಯಲ್ಲೂ ಶತ್ರುಗಳನ್ನು ಧ್ವಂಸಮಾಡಿ ಮುಂದುಮುಂದಕ್ಕೆ ನುಗ್ಗಿ ಸಿಕ್ಕಿದ ಕೋಟೆಗಳನ್ನೂ ಪಟ್ಟಣಗಳನ್ನೂ ಲೋಹಮಾರ್ಗಗಳನ್ನೂ ವಶಪಡಿಸಿಕೊಳ್ಳುತ್ತ ಬಂದಿದ್ದಾರೆ. ಇದುವರೆಗೇ ಅವರಿಗೆ ಶತ್ರುಗಳ ೧೦೦ ಫಿರಂಗಿಗಳು ವಶವಾದುವು ಮತ್ತೂ ಲೆಂಬರ್ಗಿನ ಹತ್ತಿರ ಆಸ್ಟ್ರಿಯನ್‌ಸೇನೆಯ ಮೇಲೆ ಬಿದ್ದು ಕಾದಾಡಿ ೪೦೦೦ ಮಂದಿಗಳನ್ನು ಬಂದಿಗಳನ್ನಾಗಿ ಹಿಡಿದು ೧೩ ಫಿರಂಗಿಗಳನ್ನು ಸ್ವಾಧೀನಪಡಿಸಿಕೊಂಡುದಲ್ಲದೆ ಹಂಗೇರಿಯ ಸೈನ್ಯವನ್ನೆಲ್ಲಾ ಮುತ್ತಿಗೆ ಹಾಕಿ ವಶಪಡಿಸಿಕೊಂಡಿತು. ಪೂರ್ವದಲ್ಲಿ ರಷ್ಯನರ ಏಟು ಬಲವಾದುದರಿಂದ ಇದಕ್ಕೆ ಮೊದಲೇ ಉತ್ತರದಲ್ಲಿ ಕೀಲ್ಸಿನ ಹತ್ತಿರ ಆಸ್ಟ್ರಿಯಾದ ಸೈನ್ಯವೆಲ್ಲಾ ಪೂರ್ವಕ್ಕಿರುವ ತಮ್ಮ ಸೇನೆಗೆ ಸಹಾಯಮಾಡುವುದಕ್ಕಾಗಿ ಬರುತ್ತಿದೆ. ಪೂರ್ವದಲ್ಲಿ ರಷ್ಯನರು ಪಾಟ್‌ಗೇಜ್ ಹತ್ತಿರ ಆಸ್ಟ್ರಿಯನ್ನರ ಮೇಲೆ ಮಾಡಿದ ಯುದ್ಧದಲ್ಲಿ ೩೦೦೦ ಮಂದಿ ಶತ್ರುಸೈನಿಕರನ್ನು ಕೊಂದಿರುವರು. ಜ್ಲೋಟಾಲಿಪಾ-ಪೋಡಹೇಸ್-ಎಂಬ ಕಡೆಗಳಲ್ಲೂ ರಷ್ಯನರೇ ಜಯಶೀಲರಾದರು. ಸರ್ವಿಯನ್ನರೂ ಕೂಡ ಆಸ್ಟ್ರಿಯನ್ನರನ್ನು ಪಟ್ಟಿಗೆ ತರುತ್ತಿದ್ದಾರೆ. ಎಲ್ಲೆಲ್ಲೂ ಅವರೇ ಜಯಶೀಲರಾಗಿ ಆಸ್ಟ್ರಿಯನ್ನರ ವಶದಲ್ಲಿದ್ದ ಹರ್ಜಗೋವಿನಾ-ಬೋಸ್ನಿಯಾ ಭಾಗಗಳನ್ನು ವಶಪಡಿಸಿಕೊಂಡಿದ್ದಾರೆ. ಪೋಲ್ಯಾಂಡಿನಲ್ಲಿ ಮಾಲ್ವಾ ಪಟ್ಟಣದ ಮೇಲೆ ಜರ್ಮನಿಯ ಒಂದು ವಿಮಾನವು ಸಿಡಿಮದ್ದನ್ನಿಡಲು ಅದನ್ನು ರಷ್ಯಾದವರು ಫಿರಂಗಿಗಳಿಂದ ಹೊಡೆದು ಅದರಲ್ಲಿದ್ದ ೨ ಫಿರಂಗಿಗಳನ್ನೂ ಸಿಡಿಮದ್ದನ್ನೂ ೮ ಜನರನ್ನೂ ಸ್ವಾಧೀನಪಡಿಸಿಕೊಂಡರು. ಪೂರ್ವಭಾಗದಲ್ಲಿ ರಷ್ಯನರು ಅಪ್ರತಿಹತವಾಗಿ ತಮ್ಮ ದೇಶಕ್ಕೆ ತ್ವರೆಯಿಂದ ನುಗ್ಗಿ ಧ್ವಂಸಮಾಡುತ್ತ ಬರುತ್ತಿರುವುದರಿಂದ ಜರ್ಮನರು ಅತ್ತಕಡೆಗೆ ಸೇನೆಯನ್ನು ಬಲಪಡಿಸಬೇಕಾಗಿದೆ. ಏಕೆಂದರೆ :— ಈಗಾಗಲೇ ಜರ್ಮನಿಯೊಳಕ್ಕೆ ೫೦ ಮೈಲಿಗಳ ದೂರ ನುಗ್ಗಿಬಂದಿದ್ದಾರೆ. ರಾಜಧಾನಿಯಾದ ಬರ್ಲಿನ್ ಪಟ್ಟಣವು ಇನ್ನೂ ೩೦೦ ಮೈಲಿ ದೂರದಲ್ಲಿದೆ. ಈಗಲೇ ಅವರು ಶತ್ರುಗಳನ್ನು ತಡೆಯದಿದ್ದರೆ ಅವರು ರಾಜಧಾನಿಯನ್ನೇ ಮುತ್ತಬಹುದು. ಜರ್ಮನಿಯವರು ಇದುವರೆಗೆ ಫ್ರಾನ್ಸಿನ ಕಡೆ ಗಮನವಿತ್ತು ಪಶ್ಚಿಮಕ್ಕೇ ೧೧ ಲಕ್ಷದವರೆಗೆ ಸೈನ್ಯವನ್ನು ಕಳುಹಿದ್ದರು. ಈಗ ಈ ಕಡೆಯಲ್ಲಿ ಉಳಿದಿರುವ ಸೈನ್ಯವನ್ನು ಅತ್ತಕಡೆಗೆ ಕರೆಯಿಸಿಕೊಳ್ಳಬೇಕಾಗಿ ಬಂದಿತು. ಅದಕ್ಕಾಗಿ ಅವರು ಬೆಲ್ಜಿಯಮ್ಮಿನಲ್ಲಿದ್ದ ತಮ್ಮ ಸೇನೆಯನ್ನು ೧೬೦ ಹೊಗೆಬಂಡಿಗಳಲ್ಲಿ ತುಂಬಿಸಿ ತಾ॥ ೨೮ ನೆಯ ರಾತ್ರಿಯಲ್ಲಿ ಹಿಂದಕ್ಕೆ ಕರೆಯಿಸಿಕೊಂಡಿದ್ದಾರೆ. ಈಗ ಆಂಟ್ವರ್ಪ್ ಮತ್ತೂ ಲಿಂಬರ್ಗ್ ಪ್ರಾಂತಗಳಲ್ಲಿ ಒಬ್ಬ ಜರ್ಮನ್ ಸೈನಿಕನೂ ಇಲ್ಲವೆಂದು ಬೆಲ್ಜಿಯಂ ಸರ್ಕಾರದವರು ಪ್ರಕಟಿಸಿದ್ದಾರೆ. ಬ್ರಸೆಲ್ಸಿನಲ್ಲಿ ಮಾತ್ರ ಕೆಲ ಜರ್ಮನ್ ಸೈನಿಕರುಮಾತ್ರ ಇದ್ದಾರೆ. ದಕ್ಷಿಣದಲ್ಲಿ ಫ್ರೆಂಚರ ಮತ್ತೂ ಮಾಂಟಿನೀಗ್ರೋದವರ ಸೇನೆಯು ಆಸ್ಟ್ರಿಯಾದ ಕಟಾರೋ ತೀರಪಟ್ಟಣವನ್ನು ಮುತ್ತಿ ತಾ॥ ೨೮ರಲ್ಲಿ ೬ಗಂಟೆಗಳ ಕಾಲ ಫಿರಂಗಿಗಳಿಂದ ಹೊಡೆದು ೨ ಕೋಟೆಗಳನ್ನು ಧ್ವಂಸಮಾಡಿದರು. ಆಸ್ಟ್ರಿಯಾದ ಯುದ್ಧದ ಹಡಗುಗಳು ಕೆಲವು ಶತ್ರುಗಳ ಮೇಲೆ ನುಗ್ಗುವುದಕ್ಕೆ ಪ್ರಯತ್ನಿಸಿದುವು, ಆದರೆ ಸಾಧ್ಯವಾಗದೆ ಹಿಂದಕ್ಕೆ ಹೋದುವು. ಇಂಗ್ಲೀಷ್ ಪ್ರಭುತ್ವದವರು ಇದುವರೆಗೆ ನಡೆಯಿಸಿದ ಯುದ್ಧದಲ್ಲಿ ಅವರಕಡೆ ೫-೬ ಸಾವಿರ ಜನರು ಸತ್ತೋ ಅಥವಾ ಏಟು ತಿಂದೋ ನಷ್ಟಪಟ್ಟಿರುತ್ತಾರೆ. ಕಳೆದುಹೋದವರ ಸ್ಥಾನಕ್ಕೆಲ್ಲಾ ಹೊಸ ಹೊಸ ಜನರನ್ನು ಕಳುಹಿಸಿ ಭರ್ತಿಮಾಡುತ್ತಿದ್ದಾರೆ. ಆಯುಧಾದಿ ಸಾಮಗ್ರಿಗಳನ್ನು ಕೂಡ ಕೊರತೆಯಿಲ್ಲದಂತೆ ಒದಗಿಸಿಕೊಡುತ್ತಿದ್ದಾರೆ. ಕಳೆದ ತಾ॥ ೨೮ ರಲ್ಲಿ ಲಂಡನ್ನಿನಲ್ಲಿ ಕೂಡಿದ್ದ ಲಾರ್ಡುಗಳ ಸಭೆಯಲ್ಲಿ ಸರ್ವಸೇನಾಧಿಪತಿಗಳಾದ ಅರ್ಲ್ ಕಿಚನರ್‌ರವರು-ಫ್ರಾನ್ಸಿನಲ್ಲಿರುವ ಆಂಗ್ಲಸೇನೆಗೆ ಸಹಾಯವಾಗಿ ಇನ್ನೆರಡು ಡಿವಿಜನ್ ಸೇನೆಗಳನ್ನೂ, ಭರತಖಂಡದಿಂದ ಒಂದು ಅಶ್ವಸೇನೆಯನ್ನೂ ಕಳುಹಿಸುವೆವೆಂದೂ, ಇವುಗಳಲ್ಲಿ ಮೊದಲನೆಯ ಡಿವಿಜನ್ನು ದಾರಿಯಲ್ಲಿ ಹೋಗುತ್ತಿದೆಯೆಂದೂ ಹೇಳಿದರು. ಬಳಿಕ ಇಂಡಿಯಾ ಸ್ಟೇಟ್‌ಸೆಕ್ರೆಟರಿ ಕ್ರೂಪ್ರಭುಗಳು ಯೆದ್ದುನಿಂತು ಭರತಖಂಡದ ಸೇನಾವಿಷಯವನ್ನು ಕುರಿತು ಮಾತನಾಡುವಾಗ್ಗೆ- ಆಂಗ್ಲಸೇನೆಯ ಜತೆಗೆ ಭಾರತದೇಶೀಯರೂ ಕೂಡ ರಣರಂಗಕ್ಕೆ ಹೋಗುವರೆಂಬ ಕಾರಣದಿಂದ ಆ ದೇಶದಲ್ಲೆಲ್ಲಾ ಅಸದೃಶವಾದ ಉತ್ಸಾಹವೂ ರಾಜಭಕ್ತಿಯೂ ಕಾಣಬರುತ್ತಿವೆ. ಫ್ರಾನ್ಸಿನವರು ತಮಗೆ ಒಳಪಟ್ಟ ಆಫ್ರಿಕನರನ್ನು ಕರೆದುಕೊಂಡು ಹೋಗಿ ಯುದ್ಧವನ್ನು ಮಾಡಿಸುತ್ತಿರುವರೆಂಬ ಸಂಗತಿಯು ಭಾರತೀಯರಿಗೆ ಗೊತ್ತುಂಟು. ಆದುದರಿಂದ ಈಗ ಹಿಂದೂ ಸೈನಿಕರನ್ನು ನಾವು ಯುದ್ಧಕ್ಕೆ ಕಳುಹದಿದ್ದರೆ ಆ ದೇಶೀಯರಿಗೆ ಬಹಳ ಆಶಾಭಂಗವಾಗುವುದು. ಆದುದರಿಂದ ಯುದ್ಧವಿದ್ಯೆಯಲ್ಲಿ ಶಿಕ್ಷಿತರೂ, ಸಮರ್ಥರೂ, ಧೈರ್ಯಶಾಲಿಗಳೂ ಆದವರನ್ನು ಭರತಖಂಡದಿಂದ ಕಳುಹಿಸುತ್ತಿದ್ದೇವೆ. ಇವರು ತಮ್ಮ ಶೌರ್ಯಧೈರ್ಯಗಳನ್ನು ವ್ಯಕ್ತಗೊಳಿಸುವರೆಂಬುದಕ್ಕೆ ಸಂಶಯವಿಲ್ಲ. ಹೀಗೆ ನಾವು ಬಹಳ ಸೈನ್ಯವನ್ನು ಕಳುಹಿಸಿದ್ದೇವೆ. ಭರತಖಂಡದ ಎಲ್ಲೆಗಳನ್ನೆಲ್ಲಾ ಸಂರಕ್ಷಿಸಿಕೊಳ್ಳುವುದಕ್ಕೆ ತಕ್ಕಷ್ಟು ಸೈನ್ಯವು ಬೇರೆ ಯಿದೆ. ಇದಲ್ಲದೆ ಈಗ ಭರತಖಂಡದಲ್ಲಿರುವ ಸಕಲ ಮತಜಾತಿಗಳವರೂ ತೋರಿಸುತ್ತಿರುವ ರಾಜಭಕ್ತಿಯನ್ನು ನೋಡಿದರೆ ಆ ದೇಶದಲ್ಲಿ ಯಾವವಿಧದ ಕಲ್ಲೋಲವಾದರೂ ಹುಟ್ಟೀತೆಂದು ಹೇಳುವುದಕ್ಕೆ ಅವಕಾಶವಿಲ್ಲ-ಎಂದು ಹೇಳಿದರು. ಇದರಿಂದ ನಮ್ಮ ದೇಶೀಯ ಸೈನ್ಯವೂ ಈಗ ಯುದ್ಧಾಂಗಣಕ್ಕೆ ಹೋಗಿ ಸೇರಿಯೋ ಸೇರುವುದರಲ್ಲೋ ಇದೆಯೆಂದು ಹೇಳಬಹುದು.

ಸೆಪ್ಟೆಂಬರ್ ತಾ॥ ೧-೨-೩.

ಬೆಲ್ಜಿಯಮ್ಮಿನ ಈಶಾನ್ಯದಿಕ್ಕಿನಿಂದ ಕೆಲ ಜರ್ಮನ್ ಸೈನ್ಯವು ಹೊರಟುಹೋದರೂ ಫ್ರಾನ್ಸ್‌ದೇಶದ ಎಲ್ಲೆಯಲ್ಲೂ ಆ ದೇಶದೊಳಗೂ ಇನ್ನೂ ೧೦-೧೨ ಲಕ್ಷಕ್ಕೆ ಕಡಿಮೆಯಿಲ್ಲದಷ್ಟು ಜರ್ಮನ್ ಸೈನ್ಯವಿದೆಯೆಂದು ಊಹಿಸಲ್ಪಟ್ಟಿದೆ. ಫ್ರಾನ್ಸ್ ರಾಜಧಾನಿಯಾದ ಪ್ಯಾರಿಸ್ಸಿನ ಉತ್ತರದಲ್ಲಿ ೧೦೦ ಮೈಲಿಯೊಳಗಿರುವ ಅಮಿಯೇಜ್ ಪಟ್ಟಣದ ವರೆಗೂ ಜರ್ಮನ್ ಸೈನ್ಯಗಳು ನುಗ್ಗಿಬಂದಿವೆ. ಪ್ಯಾರಿಸ್ ಪಟ್ಟಣದ ಉತ್ತರದಲ್ಲೂ ಫ್ರಾನ್ಸಿನ ಪೂರ್ವದ ಎಲ್ಲೆಗಳಲ್ಲೂ ೨೦ ಲಕ್ಷಕ್ಕೆ ಮೀರಿ ಫ್ರೆಂಚರ ಸೈನ್ಯವಿದೆ. ಆಂಗ್ಲಸೇನೆಯು ಬೆಲ್ಜಿಯಮ್ಮಿನ ಪಶ್ಚಿಮದಲ್ಲೂ ಫ್ರಾನ್ಸಿನ ಎಲ್ಲೆಯಲ್ಲೂ ಸುರಕ್ಷಿತವಾದ ಸ್ಥಳದಲ್ಲಿದೆ. ಜರ್ಮನ್ ಚಕ್ರವರ್ತಿಯು ತಮ್ಮ ಸೈನಿಕರಿಗೆಲ್ಲಾ ಯುದ್ಧದಲ್ಲಿ ಜಯಶೀಲರಾಗಬೇಕು ; ಇಲ್ಲವೆ ಪ್ರಾಣವನ್ನೊಪ್ಪಿಸಬೇಕು ಎಂದು ಪ್ರೋತ್ಸಾಹಿಸಿರುವುದರಿಂದ ಅವರ ಸೇನೆಯು ಬಹಳ ವೀರಾವೇಶದಿಂದ ಕಾಯುತ್ತಿದೆ. ಆಗಸ್ಟ್ ತಾ॥ ೨೩ರಿಂದ ೨೯ರ ವರೆಗೆ ಮಾನ್ಸ್ ಮೊದಲಾದ ಕಡೆ ನಡೆದ ಮಹಾ ಭೂಯುದ್ಧಗಳ ಮತ್ತೂ ಉತ್ತರ ಸಮುದ್ರದಲ್ಲಿ ಹೆಲಿಗೋಲ್ಯಾಂಡ್ ದ್ವೀಪದ ಬಳಿಯಲ್ಲಿ ನಡೆದ ಜಲಯುದ್ಧದ ವಿವರಣವು ಬಹು ಭಯಾನಕವಾಗಿ ಪ್ರಕಟಗೊಂಡಿದೆ. ಎಲ್ಲ ಪಕ್ಷಕ್ಕೂ ಆಗಿರುವ ನಷ್ಟವು ಸಾಮಾನ್ಯವಾಗಿಲ್ಲ. ಅದರಲ್ಲಿ ಜರ್ಮನರ ನಷ್ಟವೇ ಹೆಚ್ಚು. ಆ ಜಲಯುದ್ಧದಲ್ಲಂತೂ ಜರ್ಮನರು ಸೋತು ಬಹಳ ನಷ್ಟಪಟ್ಟರು.

ಈಗ ಮರಳಿ ಅಮಿಯಜ್ ಪ್ರಾಂತದಲ್ಲಿರುವ ಇಂಗ್ಲೀಷ್ ಫ್ರಾನ್ಸ್ ಸೇನೆಗಳ ಮೇಲೆ ಜರ್ಮನಿಯು ಘೋರಯುದ್ಧವನ್ನು ಮಾಡುತ್ತಿರುವಂತಿದೆ. ಇಷ್ಟರಲ್ಲೇ ಜರ್ಮನಿಯವರು ಪ್ಯಾರಿಸ್ಸನ್ನು ಮುತ್ತಬಹುದೆಂದು ಯೋಚಿಸಿ, ಅಲ್ಲಿ ತಕ್ಕ ಸನ್ನಾಹಗಳು ನಡೆಯುತ್ತಿವೆ. ಒಂದು ಜರ್ಮನ್ ಯುದ್ಧವಿಮಾನವು ಆ ಪಟ್ಟಣದ ಮೇಲೆ ಸಿಡಿಮದ್ದನ್ನು ಹಾಕಿತು. ಪಟ್ಟಣವು ಶಾಂತವಾಗಿದ್ದರೂ ಪುರವಾಸಿಗಳು ಜರ್ಮನರ ಮೇಲೆ ಪರಮಾಗ್ರಹವುಳ್ಳವರಾಗಿದ್ದಾರೆ. ಜರ್ಮನರು ಈಗ ನಿರಾಶಾಸಾಹಸವನ್ನು ಮಾಡುತ್ತಿದ್ದಾರೆ. ಶತ್ರುಗಳಿಗೆ ತಮ್ಮ ಕಡೆಯವರು ಸಿಕ್ಕಿಹೋಗುವರೆಂದು ತೋರಿದಾಗ ತಮ್ಮವರನ್ನು ತಾವೇ ಕೊಂದುಬಿಡುತ್ತಿದ್ದಾರೆ. ಹೆಲಿಗೋಲ್ಯಾಂಡ್ ಬಳಿಯಲ್ಲಿ ಸಮುದ್ರದಲ್ಲಿ ಮುಳುಗಿಹೋಗುತ್ತಿದ್ದವರನ್ನು ಇಂಗ್ಲೀಷರು ರಕ್ಷಿಸುವುದಕ್ಕೆ ಪ್ರಯತ್ನಿಸುತ್ತಿರಲು ಅದನ್ನು ಜರ್ಮನಿಯವರು ತಡೆದು, ತಮ್ಮ ಕಡೆಯ ಅನೇಕರನ್ನು ತಾವೇ ತುಪಾಕಿಯಿಂದ ಹೊಡೆದು ಕೊಂದರು. ಫ್ರೆಂಚರು ಚಾರ್ಲ್ವಿಲ್ಲ್ ಎಂಬ ಕಡೆಯಲ್ಲಿ ಒಳ್ಳೆಯ ಪಟ್ಟಿಗೆ ಜರ್ಮನಿಯವರನ್ನು ಸಿಕ್ಕಿಸಿಕೊಂಡು ಅಸಂಖ್ಯಾಕವಾಗಿ ಅವರ ಸೈನ್ಯವನ್ನು ಕೊಂದು ೧೮೭೦ನೆಯ ಇಸವಿ ಯುದ್ಧದಲ್ಲಿ ತಮಗೆ ಜರ್ಮನಿಯವರು ಮಾಡಿದ್ದ ನಷ್ಟಕ್ಕೆ ತಕ್ಕ ಮುಯ್ಯನ್ನು ಈಗ ಭಯಂಕರವಾಗಿ ನೆರವೇರಿಸಿ ತುಷ್ಟಿಪಟ್ಟರು. ಪೂರ್ವ ೧೮೭೦ನೆಯ ಇಸವಿಯಲ್ಲೂ ಇವರೀರ್ವರಿಗೂ ಅಲ್ಲೇ ಯುದ್ಧವಾಗಿದ್ದಿತು. ಈ ಪಟ್ಟಣವು ಫ್ರೆಂಚರದು. ಬೆಲ್ಜಿಯಂದೇಶದಿಂದ ಇಲ್ಲಿಗೆ ಬರುವಾಗ ಮ್ಯೂಸ್ ನದಿಯನ್ನು ದಾಟಿ ಬರಬೇಕು. ಹಾಗೆ ಬರುವಾಗ್ಗೆ ಇದರ ಮೇಲೆ ಇರುವ ೭ ಸೇತುಗಳಲ್ಲಿ ಎಲ್ಲವನ್ನೂ ಫ್ರೆಂಚರು ಮುರಿದುಹಾಕಿ ೩ ಸೇತುಗಳನ್ನು ಮಾತ್ರ ಬಿಟ್ಟಿದ್ದರು. ಅದರ ಮೇಲಿಂದ ಹಾದು ಜರ್ಮನ್ ಸೇನೆಯು ಚಾರ್ಲ್ವಿಲ್ಲಿಗೆ ಬಂದಕೂಡಲೇ ಮೊದಲೇ ಅಣಿಮಾಡಿ ಹೂತಿದ್ದ ಸುರಂಗದ ಮದ್ದಿನಿಂದ ಆ ೩ ಸೇತುಗಳನ್ನು ಕೆಡಹಿಬಿಟ್ಟರು. ಅದರಿಂದ ಜರ್ಮನರು ಹಿಂದಕ್ಕೆ ಓಡಿಹೋಗಲು ಮಾರ್ಗತಪ್ಪಿದವರಾಗಿ ಬೋನಿನಲ್ಲಿ ಕೂಡಿದ ಇಲಿಗಳಂತೆ ಸಿಕ್ಕಿಬಿದ್ದರು. ಆಗ ಫ್ರೆಂಚರು ಅವರ ಮೇಲೆ ಫಿರಂಗಿಗುಂಡುಗಳನ್ನು ಅವಿಚ್ಛಿನ್ನವಾಗಿ ಸುರಿಸಿ ವರ್ಣಿಸಲಾಗದಷ್ಟು ನಷ್ಟವನ್ನುಂಟುಮಾಡಿ ಹೆಣದ ರಾಶಿಯನ್ನು ಬೀಳಿಸಿದರು. ಕೋರ್‌ರಾಯಿ ಎಂಬಲ್ಲಿ ನಡೆದ ಜರ್ಮನ್ ಫ್ರೆಂಚರ ಯುದ್ಧದಲ್ಲಿ ಫ್ರೆಂಚರು ಜರ್ಮನ್ ಚಕ್ರವರ್ತಿಯ ಚಿಕ್ಕಪ್ಪನ ಮಗನಾದ ಸ್ಕೈರ್ನ್ ಪ್ರಭುವನ್ನು ಹಿಡಿದುಕೊಂಡು ಆತನ ಕತ್ತಿಯನ್ನೂ ಕಿರೀಟವನ್ನೂ ಕಳಚಿಕೊಂಡಿರುವರು. ಮರಳಿ ಚಾರ್ಲ್ವಿಲ್ಲಿಗೆ ಉತ್ತರದಲ್ಲಿ ಯುದ್ಧವಾರಂಭವಾಯಿತು. ಎಡಗಡೆಯಲ್ಲಿ ಶತ್ರುಪಕ್ಷಕ್ಕೆ ಸೋಲಾಯಿತು. ಮಧ್ಯಭಾಗದಲ್ಲಿ ಜಯಾಪಜಯಗಳು ಎರಡುಪಕ್ಷಕ್ಕೂ ಸಮನಾದುವು. ಶತ್ರುಗಳು ಮರಳಿ ಮ್ಯೂಸು ನದಿಯನ್ನು ದಾಟುವುದಕ್ಕೆ ಪ್ರಯತ್ನಿಸಿದರು. ಆದರೆ ಇಂಗ್ಲೀಷ್ ಫ್ರೆಂಚ್ ಸೈನ್ಯಗಳು ಅವಕಾಶ ಕೊಡಲಿಲ್ಲ. ಜರ್ಮನ್ ಕಡೆಯ ಆಗಿನ ಯುದ್ಧದಲ್ಲಿ ಬಹಳ ನಷ್ಟವಾಯಿತು ಈಚೆಗೆ ಜರ್ಮನರು ಚಾರ್ಲ್ವಿಲ್ಲಿಗೆ ಉತ್ತರದಲ್ಲಿರುವ ರಾಕ್ರಾಯಿ ಪಟ್ಟಣದ ಮೇಲಿಂದ ಮುಂದಕ್ಕೆ ಸಾಗುತ್ತಿವೆ. ಆಂಗ್ಲಸೇನೆಯು ಶತ್ರುಗಳ ಸುತ್ತುವಿಕೆಗೆ ಈಡಾಗದಂತೆ ಅಣಿಯಾದ ಬೇರೆ ಸ್ಥಳಕ್ಕೆ ಮರಳಿ ನಿಂತಿವೆ. ಗಿವೆಟ್ಟಿನ ಕಡೆಯಿಂದ ಜರ್ಮನ್ ಸೇನೆಗೆ ಮುಂದೆ ನುಗ್ಗಲು ಫ್ರಾನ್ಸ್ ಇಂಗ್ಲೆಂಡು ಸೇನೆಗಳು ಅವಕಾಶವನ್ನು ಕೊಟ್ಟವು. ಈಗ ಪ್ಯಾರಿಸ್ ಪಟ್ಟಣದ ಕೋಟೆಯಿಂದ ಸುತ್ತಲೂ ಹೊಡೆಯಲು ಅಡ್ಡಿಯಾಗುವಂತೆ ಎತ್ತರಿಸಿದ್ದ ದೊಡ್ಡ ದೊಡ್ಡ ಪ್ರಾಸಾದಗಳನ್ನೆಲ್ಲಾ ಫ್ರೆಂಚರು ಒಡೆದುಹಾಕಿದ್ದಾರೆ. ಆ ಪಟ್ಟಣದ ರಕ್ಷಣೋಪಾಯಗಳೆಲ್ಲಾ ಸಾಂಗವಾಗಿರುತ್ತವೆ. ಅಡಿಗಡಿಗೂ ಇಂಗ್ಲೀಷ್ ಫ್ರೆಂಚ್ ಸೈನ್ಯಗಳು ಅಡ್ಡಿಮಾಡುತ್ತಿದ್ದರೂ ಸಾವಿರಗಟ್ಟಲೆಯಾಗಿ ತಮ್ಮ ಕಡೆ ಪ್ರಾಣಹಾನಿಗಳೂ ಇತರವಿಧವಾದ ನಷ್ಟಗಳೂ ಸಂಭವಿಸುತ್ತಿದ್ದರೂ, ಜರ್ಮನರು ಅವೊಂದನ್ನೂ ಲಕ್ಷಿಸದೆ ಬೆಲ್ಜಿಯಮ್ಮಿನ ಬಹು

ಸೈನಿಕರನ್ನು ಸೆರೆಯಾಗಿ ಹಿಡಿದಿರುವರು. ಈ ಆಂಟ್‌ವರ್ಪ್ ಪಟ್ಟಣವು ಸೇನಾವ್ಯೂಹದ ಮಧ್ಯದಲ್ಲಿದೆ. ಆ ಪಟ್ಟಣವನ್ನು ನುಗ್ಗುವುದೆಂದರೆ ಕಿಚ್ಚಿನೊಳಕ್ಕೆ ನುಗ್ಗುವಂತಿರುತ್ತದೆ. ಆ ನಗರದ ಸುತ್ತಲೂ ಬೆಲ್ಜಿಯಮ್ಮಿನವರು ಶತ್ರುಗಳಿಗೆ ಮಾರಣಹೋಮವನ್ನು ಮಾಡುವುದಕ್ಕಾಗಿ ಮದ್ದಿನ ಸುರಂಗಗಳನ್ನಿಟ್ಟಿದ್ದಾರೆ. ಜರ್ಮನಿಯವರು ಆ ಪಟ್ಟಣದ ದಾರಿಗೇ ಹೋಗದೆ ಅತ್ತತ್ತಲೇ ಹೋಗುತ್ತಿದ್ದಾರೆ. ಜರ್ಮನಿದೇಶದ ಸ್ಟ್ರಾಸ್‌ಬರ್ಗಿನಿಂದ ಫ್ರಾನ್ಸ್ ದೇಶದೊಳಕ್ಕೆ ನುಗ್ಗುತ್ತಿದ್ದ ಜರ್ಮನಿಯ ಜಪ್ಲಿನ್ ವಿಮಾನದ ಮೇಲೆ ಬೋರ್ಡ್ ವಿಲ್ಲಿಯ ಹತ್ತಿರ ಫ್ರೆಂಚರು ಫಿರಂಗಿಯನ್ನು ಹಾರಿಸಿ ಸುಟ್ಟು ಕೆಡಹಿಬಿಟ್ಟರು.

ರಷ್ಯಾದವರು ಜರ್ಮನಿಯ ಜೋಹಾನ್ಸ್‌ಬರ್ಗ್–ಆರ್ಟೆಲ್ಸ್‌ಬರ್ಗ್–ಎಲ್ಡ್‌ಬರ್ಗ್–ಸೋಲಾಡ್–ಈ ಪಟ್ಟಣಗಳನ್ನು ಹಿಡಿದುಕೊಂಡರು. ನೈಡೆನ್ಸ್‌ಬರ್ಗ್ ಎಂಬ ಪಟ್ಟಣವನ್ನು ಜರ್ಮನಿಯವರೇ ಸುಟ್ಟು ಹಾಳ್ಮಾಡಿ ಓಡಿಹೋದರು.

ರಷ್ಯಾದವರು ಲಿಕ್ ಪಟ್ಟಣಕ್ಕೆ ಪಶ್ಚಿಮದಲ್ಲಿ ೨೦ ಮೈಲಿ ದೂರದಲ್ಲಿರುವ ಆಲಿಸ್ ನಗರವನ್ನು ಹಿಡಿದುಕೊಂಡರು. ಸರ್ವಿಯಾದವರು ಲಾಟ್ಸಾ–ಲೆಸ್ನಿಟ್ಸಾ–ಸಾಬಾಟ್ಸ್ ಎಂಬ ಪಟ್ಟಣಗಳ ಪ್ರಾಂತದ ಭೂಮಿಗಳನ್ನೆಲ್ಲಾ ಹಿಡಿದುಕೊಂಡು, ಅಲ್ಲಿದ್ದ ಶತ್ರು ಜನರನ್ನೆಲ್ಲಾ ಹೊರಕ್ಕೆ ಓಡಿಸಿಬಿಟ್ಟರು ಮತ್ತೂ ಸರ್ವಿಯಾದ ಅಶ್ವಸೈನಿಕರು ಆಸ್ಟ್ರಿಯನ್ ಪಟಾಲಮ್ಮೊಂದನ್ನು ಓಡಿಸಿ ೪ ಯಂತ್ರದ ಫಿರಂಗಿಗಳನ್ನೂ ೧೦ ಸಾಮಾನ್ಯ ಫಿರಂಗಿಗಳನ್ನೂ ಶತ್ರುಗಳಿಂದ ಕಿತ್ತುಕೊಂಡರು. ಶಾಬಟ್ಸಾ ಬಳಿಯಲ್ಲಿ ಆದ ಯುದ್ಧದಲ್ಲಿ ಸರ್ವಿಯನ್ನರು ಶತ್ರುಗಳ ಪಕ್ಷದ ೪|| ಸಾವಿರ ಸೈನಿಕರನ್ನೂ ೫೩ ಫಿರಂಗಿಗಳನ್ನೂ ಯಂತ್ರದ ಕೆಲಫಿರಂಗಿಗಳನ್ನೂ ಇನ್ನೂ ಅನೇಕ ಮದ್ದು ಗುಂಡು ಬಂದಿ ತುಪಾಕಿ ಮೊದಲಾದ ಸಾಮಗ್ರಿಗಳನ್ನೂ ವಶಪಡಿಸಿಕೊಂಡರು.

ತಾ|| ೨೬.

ಫ್ರಾನ್ಸು–ಇಂಗ್ಲಾಂಡು–ಬೆಲ್ಜಿಯಂ ಸೇನೆಗಳು ಫ್ರಾನ್ಸ್ ದೇಶದ ಬಡಗಲು ಎಲ್ಲೆಯಲ್ಲಿ ಸುರಕ್ಷಿತವಾದ ಸ್ಥಳಕ್ಕೆ ಸೇರಿ ಸಜ್ಜಾಗಿ ನಿಂತುವು. ನಿರೀಕ್ಷಣೆ ಮಾಡುತ್ತಿದ್ದ ಮಹಾ ಯುದ್ಧಕ್ಕೆ ತಾ|| ೨೩ ರಲ್ಲಿ ಆರಂಭವಾಯಿತು. ಜರ್ಮನರು ಸಂದು ಸಿಕ್ಕಿದಲ್ಲೆಲ್ಲಾ ನುಗ್ಗುವುದಕ್ಕೆ ಯತ್ನಿಸಿದರು. ಶಾರ್ಲರಾಯಿ ಹತ್ತಿರ ಮಹಾ ಸಂಗ್ರಾಮಕ್ಕೆ ಮೊದಲಾಯಿತು. ಫ್ರಾನ್ಸಿನ ಅಶ್ವಸೇನೆಯು ಜರ್ಮನಿಯ ಅಶ್ವಸೇನೆಯನ್ನು ಪ್ರತಿಭಟಿಸಿತು. ಸಮಜೋಡಿಯಾಗಿ ಎರಡುಕಡೆಯವರೂ ಬಾಹಾಬಾಹಿ ಯುದ್ಧವನ್ನು ಮಾಡಿದರು. ಆಂಗ್ಲಸೇನೆಯು ಅತಿ ಮುಖ್ಯವಾದ ಕಾರ್ಯದಲ್ಲಿ ತೊಡಗಿ ಶತ್ರುಗಳ ಮೇಲೆ ಬಲವಾಗಿ ಹೋರಾಡಿತು. ಜರ್ಮನಿಯವರು ಅಂಡರ್ಲೂಸ್ ಬ್ಲೂಮೆಟ್ ಎಂಬ ಪಟ್ಟಣಗಳನ್ನು ಹಿಡಿದುಕೊಳ್ಳಲು ಯತ್ನಿಸಿದರು. ಆದರೆ ಇದಿರು ಪಕ್ಷದವರು ಹೊಡೆದೋಡಿಸಿಬಿಟ್ಟರು. ಜಾಮುರ್ ಎಂಬ ಪಟ್ಟಣವನ್ನು ಜರ್ಮನಿಯವರು ಮುತ್ತಿದರು. ಸೇಂಬರ್ ಹೊಳೆಯ ದಡದಲ್ಲಿ ಭಯಂಕರವಾದ ತುಪಾಕಿಗಳ ಯುದ್ಧವು ನಡೆದಿತು. ಭಾನುವಾರದವರೆಗೂ ಜರ್ಮನಿಯವರು ಎತ್ತ ತಲೆ ಯಿಕ್ಕಿದರೂ ಅಲ್ಲಿ ಇದಿರು ಪಕ್ಷವು ಪ್ರತಿಭಟಿಸಿ ಹಿಂದಕ್ಕಟ್ಟುತ್ತಲೇ ಇದ್ದಿತು. ಸೇಂಬರ್ ನದಿ ತೀರದಲ್ಲಿ ಭಯಂಕರವಾದ ಕಾಳಗವಾದಮೇಲೆ ಇಂಗ್ಲೀಷ್ ಫ್ರೆಂಚ್ ಸೇನೆಗಳನ್ನು ಹಿಂದಕ್ಕೆ ತಿರುಗುವಂತೆ ಅವುಗಳ ನಾಯಕರು ಆಜ್ಞಾಪಿಸಿದರು. ಈ ಮಹಾಯುದ್ಧದಲ್ಲಿ ಆಂಗ್ಲರ ಕಡೆಯಲ್ಲಿ ೨೦೦೦ ಜನರ ಪಡೆಗೆ ನಷ್ಟರು, ಅಥವಾ ಗಾಯಗೊಂಡರು. ಜರ್ಮನ್ ಸೇನೆಯಲ್ಲಿಯೂ ಬಹಳ ನಷ್ಟವು ಸಂಭವಿಸಿತು. ಜರ್ಮನ್ ಸೈನ್ಯವು ಫ್ರಾನ್ಸ್‌ದೇಶದ ನಾನ್ಸಿ ಪಟ್ಟಣದ ಮೇಲೆ ನಾಲ್ಕಾವೃತ್ತಿ ಬಿದ್ದರು. ಫ್ರಾನ್ಸ್ ಸೈನ್ಯವು ಕೂಡ ಅವರಮೇಲೆ ಬಿದ್ದು ಧ್ವಂಸಮಾಡಿತು. ಆಂಟ್‌ವರ್ಪಿನಲ್ಲಿದ್ದ ಬೆಲ್ಜಿಯಂ ಸೇನೆಯು ಹೊರಬಿದ್ದು ಅಕಸ್ಮಾತ್ತಾಗಿ ಜರ್ಮನಿಯವರ ಮೇಲೆ ಬಿದ್ದು ಅವರ ೩ ಪಟಾಲಮ್ಮುಗಳನ್ನು ಮೇಸ್ಸೈನ್ಸ್ ಪ್ರಾಂತದಿಂದ ವಿಲ್ವೋರ್ಡಿಯ ಕಡೆಗೆ ೧೦ ಮೈಲಿಗಳ ವರೆಗೆ ಅಟ್ಟಿಕೊಂಡು ಹೋದರು. ಜರ್ಮನಿಯವರು ಬೆಲ್ಜಿಯಮ್ಮಿನ ರಾಜಧಾನಿಯಾದ ಆಂಟ್ವರ್ಪಿನ ಮೇಲೆ ಸುರಾತ್ರಿಯಲ್ಲಿ ವಾಯುವಿಮಾನದಿಂದ ೮ ಸಿಡಿಮದ್ದುಗಳನ್ನು ಹಾಕಿದರು. ಒಂದು ಅರಮನೆಯ ಹತ್ತಿರ ಬಿದ್ದು ೧–೨ ಮನೆಗಳು ಸುಟ್ಟು ಕೆಲಪ್ರಾಣಹಾನಿಯಾಯಿತು. ಬೆಲ್ಜಿಯಂ ಸೈನಿಕರು ವಿಮಾನದಮೇಲೆ ಗುಂಡನ್ನು ಹಾರಿಸಿ ಅದನ್ನು ಕೆಳಕ್ಕೆ ಕೆಡಹಿದರು. ಅದರಲ್ಲಿದ್ದ ಶತ್ರುಗಳನ್ನು ಹಿಡಿದರು. ಲೀಜ್ ಕೋಟೆಯಲ್ಲಿ ೧ ರ ಹೊರತು ಉಳಿದ ೧೧ ಕೋಟೆಗಳೂ ಶತ್ರುಗಳೊಡನೆ ಹೋರಾಡುತ್ತಲೇ ಇರುವುವು. ಆ ಒಂದುಕೋಟೆಯು ಸಹ ಒಳ್ಳೆಯ ಸ್ಥಿತಿಯಲ್ಲಿಲ್ಲ. ಛಿನ್ನಭಿನ್ನವಾಗಿ ಬಿದ್ದುಹೋಗಿದೆ. ಒಂದುವೇಳೆ ಲೀಜ್ ಕೋಟೆಗಳೆಲ್ಲಾ ಶತ್ರುಗಳಿಗೆ ವಶವಾಗಿ ಹೋಗುವ ಸಂದರ್ಭದಲ್ಲಿ ಎಲ್ಲಕೋಟೆಗಳನ್ನೂ ಬುಡಮುಟ್ಟ ಉರುಳಿಸಿ ಶತ್ರುಗಳಿಗೆ ಬರಿಯ ಪಾಳನ್ನು ಬಿಡುತ್ತೇವೆಂಬುದು ಬೆಲ್ಜಿಯಮ್ಮಿನವರ ಶಪಥವಾಗಿದೆ. ಲೀಜ್ ಕೋಟೆಯ ಹತ್ತಿರ ನಡೆದ ಯುದ್ಧದಲ್ಲಿ ಯುದ್ಧಾಂಗಣವೆಲ್ಲಾ ಹೆಣಗಳಿಂದ ನಿಬಿಡೀಕೃತವಾಗಿದ್ದಿತು. ಅವುಗಳ ರಾಶಿಯಲ್ಲಿ ಬೆಲ್ಜಿಯಂ ಸೇನಾಧಿಪತಿಯೊಬ್ಬನು ಪ್ರಾಣಾಂತಿಕಸ್ಥಿತಿಯಲ್ಲಿ ಬಿದ್ದು ನರಳುತ್ತಿದ್ದನು. ಅವನನ್ನು ಶತ್ರುಗಳು ಹಿಡಿದಾಗ ಜರ್ಮನ್ ಸೈನ್ಯಾಧಿಪತಿಯು ಆ ಬೆಲ್ಜಿಯಂ ಸೇನಾನಿಯ ಧೈರ್ಯಸ್ಥೈರ್ಯಾದಿಗಳನ್ನು ಕೊಂಡಾಡಿ ಆತನ ಆಯುಧವನ್ನು ಮರಳಿ ಆತನಿಗೆ ಕೊಟ್ಟು ಗೌರವಿಸಿದನು. ಪೂರ್ವ ಪ್ರಷ್ಯಾದಲ್ಲಿ ರಷ್ಯನರು ಜರ್ಮನಿಯವರನ್ನು ಅಟ್ಟುತ್ತ ದೇಶದೊಳಕ್ಕೆ ನುಗ್ಗಿನುಗ್ಗಿ ಬರುತ್ತಿದ್ದಾರೆ. ಇಟಲಿಯವರು ತಮ್ಮ ತಾಟಸ್ಥ್ಯವನ್ನು ಕಾಯ್ದುಕೊಳ್ಳುವುದಕ್ಕೆಂದು ಸೇನೆಯನ್ನು ಕೂಡಿಸಲು ತೊಡಗಿದರು. ಆಸ್ಟ್ರಿಯನ್ನರು ತಮ್ಮ ೬೦ ಸಾವಿರ ಸೇನೆಯನ್ನು ಇಟಲಿಯ ಎಲ್ಲೆಯಲ್ಲಿ ಯುದ್ಧಕ್ಕೆ ಅಣಿಮಾಡುತ್ತಿದ್ದಾರೆ.

ತಾ|| ೨೭.

ಇಂಗ್ಲೀಷ್ ಮತ್ತೂ ಆಫ್ರಿಕಾ ಸೈನ್ಯಗಳು ಜರ್ಮನಿಯ ಇಂಪೀರಿಯಲ್ ಗಾರ್ಡ್ ಸೇನೆಯಮೇಲೆ ಯುದ್ಧಮಾಡಿ ಶತ್ರುಗಳಿಗೆ ಬಹಳ ನಷ್ಟವನ್ನುಂಟುಮಾಡಿದರು. ಜರ್ಮನರ ಕಡೆಯ ಸೇನೆಯ ಅಧಿಪತಿಯಾಗಿದ್ದ ಫ್ರೆಡರಿಕ್ ಲಿಯೋಪಾಲ್ಡ್ ಎಂಬ ಸಾಮಂತ ರಾಜಕುಮಾರನು ಅಂದಿನ ಯುದ್ಧದಲ್ಲಿ ಮೃತನಾದನು. ದಕ್ಷಿಣದಲ್ಲಿ ನಡೆದ ಯುದ್ಧದಲ್ಲಿ ಜರ್ಮನರು ಫ್ರಾನ್ಸಿಗೆ ಸೇರಿದ ಲ್ಯೂನ್‌ವಿಲ್ಲಿ ಎಂಬ ಕೋಟೆಯನ್ನು ಹಿಡಿದುಕೊಂಡರು. ಆಂಟ್‌ವರ್ಪಿನಹತ್ತಿರವೂ ನಾಮೂರಿನಹತ್ತಿರವೂ, ಬೆಲ್ಜಿಯಮ್ಮಿನವರ ಮೇಲೂ, ವೆರ್ಸ್ಟ್ ಮಾನ್ಸ್ ಪಟ್ಟಣಗಳ ಹತ್ತಿರ ಇಂಗ್ಲೀಷ್–ಆಫ್ರಿಕಾ ಪಟಾಲಮ್ಮುಗಳ ಮೇಲೂ, ಲೂನ್‌ವಿಲ್ಲಿ ಮತ್ತೂ ಆಲ್ಸೆಸ್–ಲೋರೈನ್ ಪ್ರಾಂತಗಳಲ್ಲಿ ಫ್ರಾನ್ಸಿನಮೇಲೂ ಜರ್ಮನಿಯು ಅತ್ಯಂತ ತೀಕ್ಷ್ಣವಾದ ಯುದ್ಧವನ್ನು ಮಾಡಿತು. ಮಾನ್ಸ್ ಪಟ್ಟಣದ ದಕ್ಷಿಣದಲ್ಲಿ ಆದ ಯುದ್ಧದಲ್ಲಿ ಆಂಗ್ಲಸೇನೆಗೆ ಎಷ್ಟು ವಿಶೇಷ ನಷ್ಟವಾಯಿತೋ ಅದಕ್ಕಿಂತ ಮಿಗಿಲಾಗಿಯೇ ಜರ್ಮನಿಗೆ ನಷ್ಟವಾಯಿತು. ಜರ್ಮನ್ ದೇಶದಲ್ಲಿ ೧೬ ವರ್ಷಕ್ಕೆ ಮೇಲ್ಪಟ್ಟು ೧೯ ವರ್ಷದೊಳಗಿನ ಯುವಕರಿಗೆಲ್ಲಾ ಸೈನಿಕ ಶಿಕ್ಷಣವು ಈಗ ಮಾಡಿಸಲ್ಪಡುತ್ತಿದೆ. ಜಪಾನಿನವರ ದಂಡಯಾತ್ರೆಯನ್ನು ಕಠಿನತರವಾಗಿ ವಿರೋಧಿಸುವುದಕ್ಕೆ ನಿಮ್ಮ ಶಕ್ತಿಸಾಹಸಗಳನ್ನೆಲ್ಲಾ ತೋರಿಸಬೇಕೆಂದು ಜರ್ಮನ್ ಚಕ್ರವರ್ತಿಯು ಚೀನಾದ ಸಿಂಗ್ಟೋ ನಗರದಲ್ಲಿರುವ ತಮ್ಮ ಸೈನಿಕರಿಗೆ ಆಜ್ಞೆಯನ್ನು ಕಳುಹಿಸಿರುವರು. ಶತ್ರುಗಳ ಹಡಗಿಗೆ ಪಟ್ಟಣದ ಗುರುತು ಕಾಣಬಾರದೆಂದು ಸಿಂಗ್ಟೋನಗರದಲ್ಲಿದ್ದ ಎತ್ತರವಾದ ಕಟ್ಟಡಗಳನ್ನೆಲ್ಲಾ ಜರ್ಮನಿಯವರು ಉರುಳಿಸಿಬಿಟ್ಟರು. ರೇಲ್ವೆ ಸೇತುಗಳನ್ನು ಹಾಳ್ಮಾಡಿಬಿಟ್ಟರು. ತಮ್ಮ ಪ್ರದೇಶದಲ್ಲಿದ್ದ ಚೀನಾದ ಗ್ರಾಮಗಳನ್ನೆಲ್ಲಾ ಧ್ವಂಸಮಾಡಿದರು. ಜಪಾನರ ಯುದ್ಧದ ಹಡಗುಗಳು ದಂಡಯಾತ್ರೆ ಹೊರಟು ಪೆಸಿಫಿಕ್ ಸಾಗರದಲ್ಲಿರುವ ಜರ್ಮನಿಯವರ ಸ್ವಾಸ್ಥ್ಯವಾದ ಕಿಯೋಚೌನನ್ನು ಹಿಡಿಯಲು ಪ್ರಯತ್ನಿಸಿರುವವು. ಸಿಂಗ್ಟೋವಿನ ಮೇಲೆ ಗುಂಡುಗಳನ್ನು ಹಾರಿಸುತ್ತಿರುವುವು.

ಜರ್ಮನರು ಬೆಲ್ಜಿಯಮ್ಮಿನಲ್ಲಿ ೫ ಕೋಟೆಗಳನ್ನು ಹಿಡಿದುಕೊಂಡರು. ಇನ್ನು ನಾಲ್ಕು ವಶವಾಗಲಿಲ್ಲ. ಮಾಲಿನ್ಸ್ ಪಟ್ಟಣದಮೇಲೆ ಫಿರಂಗಿಗಳನ್ನು ಹಾರಿಸಿ ದೇವಾಲಯವನ್ನೂ ೨೦೦ ಮನೆಗಳನ್ನೂ ಹಾಳ್ಮಾಡಿದರು. ಅಷ್ಟರಲ್ಲಿ ಬೆಲ್ಜಿಯಂ ಸೈನಿಕರು ಇದಿರಾಗಿ ಗುಂಡಿನ ಮಳೆಯನ್ನು ಸುರಿಯಿಸಿ ಹಿಂದಕ್ಕೋಡಿಸಿದರು. ಎರಡು ಪಕ್ಷದಲ್ಲೂ ಬಹಳ ಪ್ರಾಣಹಾನಿಯಾಯಿತು. ಜರ್ಮನರು ತಾವು ವಶಪಡಿಸಿಕೊಂಡ ಬೆಲ್ಜಿಯಂ ದೇಶಭಾಗಗಳಮೇಲೆ ತಮ್ಮ ಕಡೆಯ ಗೌರ್ನರನ್ನು ಅಧಿಕಾರಿಯಾಗಿ ನಿಯಮಿಸುತ್ತಿದ್ದಾರೆ.

ತಾ|| ೨೮.

ಬೆಲ್ಜಿಯಮ್ಮಿಗೆ ಸೇರಿದ ಮಾನ್ಸಿನಹತ್ತಿರ ನಡೆದ ಯುದ್ಧದಲ್ಲಿ ಜರ್ಮನಿಯವರು ಪೂರ್ಣಸಮರ್ಥರಾದವರನ್ನೇ ಇಂಗ್ಲೀಷ್ ಸೈನ್ಯದಮೇಲೆ ನುಗ್ಗಿಸಿದರು. ಅವರು ಹಿಂದುಮುಂದು ನೋಡದೆ ಅಗ್ನಿವೃಷ್ಟಿಯನ್ನು ಸುರಿಸುತ್ತಾ ಕಾದಾಡಿದರು. ಆದರೂ ಇಂಗ್ಲೀಷು ಸೈನ್ಯವು ಒಂದುಹಜ್ಜೆಯನ್ನೂ ಹಿಂದಕ್ಕಿಡದೆ ಶತ್ರುಗಳನ್ನು ಫಿರಂಗಿ ತುಪಾಕಿ ಗುಂಡುಗಳಿಂದ ಹೊಡೆದು ಕೊಂದು, ಉಳಿದವರನ್ನು ಹಿಂದಕ್ಕೋಡಿಸುತ್ತಿದ್ದರು. ಕಡೆಗೆ ಆಂಗ್ಲರ ಫಿರಂಗಿಗಳ ಏಟಿಗೆ ಜರ್ಮನರು ಮುಖವಿಕ್ಕಲಾರದೆ ಪಲಾಯನಗೊಂಡರು. ಈ ಯುದ್ಧವು ಶನಿವಾರದೊಳಗಿನಿಂದ ಸೋಮವಾರದ ರಾತ್ರಿಯವರೆಗೂ ಅವಿಚ್ಛಿನ್ನವಾಗಿ ನಡೆದಿತು. ಅಲ್ಲಿ ಇಂಗ್ಲೀಷ್ ಸೈನ್ಯವು ತೋರಿಸಿದ ಧೈರ್ಯಶೌರ್ಯಗಳು ಸರ್ವತ್ರ ಕೊಂಡಾಡಲ್ಪಡುತ್ತಿವೆ. ತಾ|| ೨೬ ರ ರಾತ್ರಿ ಜರ್ಮನಿಯವರ ವಿಮಾನವೊಂದು ಮರಳಿ ಆಂಟ್‌ವರ್ಪಿನಮೇಲೆ ಸಿಡಿಮದ್ದನ್ನು ಹಾಕಲು ಪ್ರಯತ್ನಿಸಿತು. ಬೆಲ್ಜಿಯಮ್ಮಿನವರು ಜಾಗರೂಕರಾಗಿದ್ದುದರಿಂದ ವಿಫಲವಾಯಿತು. ಜರ್ಮನಿಯವರ ವಾಯುವಿಮಾನಗಳ ನಿರ್ಮಾಣಕನಾದ ಜಪ್ಲಿನ್ನು ತಾನೇ ಯುದ್ಧಾಂಗಣಕ್ಕೆ ಹೋಗಿ, ವಿಮಾನಗಳ ಮೇಲಣ ನಾಯಕತ್ವವನ್ನು ವಹಿಸಲು ಸರ್ಕಾರದ ಅಪ್ಪಣೆಯನ್ನು ಪಡೆದಿರುವನು. ಈತನಿಗೆ ಈಗ ೭೮ ವರ್ಷ. ಬೆಲ್ಜಿಯಮ್ಮಿನವರು ಜರ್ಮನರನ್ನು ಬ್ರಸೆಲ್ಸಿನ ಮತ್ತೂ ಮಾಲಿನ್ಸಿನ ಕಡೆಗೆ ಸಾಗಿಸಬೇಕೆಂದು ಮಾಡಿದ ಹಂಚಿಕೆಯು ಅವರಿಷ್ಟದಂತೆ ಫಲಿಸಿತು. ಅದುಕಾರಣ, ಅವರು ಸಂತುಷ್ಟರಾಗಿದ್ದಾರೆ. ಈಗ ಜರ್ಮನರು ಸತ್ತಿರುವ ಶತ್ರುತ್ರಯದ ಮಧ್ಯದಲ್ಲಿ ಸಿಕ್ಕಿ ಬದ್ಧಂತಾಗಿದ್ದಾರೆ. ಯುದ್ಧಾರಂಭದಿಂದ ಇದುವರೆಗೆ ಬೆಲ್ಜಿಯಮ್ಮಿನವರಲ್ಲಿ ೧೦ ಸಾವಿರಮಂದಿ ಹತರಾಗಿರುವರೆಂದು ಲೆಕ್ಕವಾಗಿದೆ. ಲೋರೈನ್ ಪ್ರಾಂತದಲ್ಲಿ ಜರ್ಮನಿಯ ಆಟವೇನೂ ಸಾಗಲಿಲ್ಲ. ಆಲ್ಸೆಸ್ಸಿನಲ್ಲಿ ಇನ್ನೇನೂ ಕೆಲಸವಿಲ್ಲವೆಂದು ಅಲ್ಲಿದ್ದ ಹೆಚ್ಚು ಸೈನ್ಯವನ್ನು ಫ್ರಾನ್ಸಿನವರು ಹಿಂದಕ್ಕೆ ಕರೆಯಿಸಿಕೊಂಡರು. ಶಾರ್ಲರಾಯಿಯನ್ನು ಫ್ರೆಂಚರು ಮರಳಿ ಜರ್ಮನರಿಂದ ಕಸುಕೊಂಡರು. ಫ್ರಾನ್ಸಿಗೆ ಪೂರ್ವದಲ್ಲಿ ನಾನ್ಸಿ ಹತ್ತಿರ ಜರ್ಮನರಿಗೂ ಫ್ರಾನ್ಸಿನವರಿಗೂ ನಡೆದ ಮಹಾಯುದ್ಧದಲ್ಲಿ ಜರ್ಮನರ ಕಡೆ ವಿಶೇಷ ನಷ್ಟವಾಯಿತು. ಕೆಲಕಡೆ ೧|| ಸಾವಿರ ಜನಕ್ಕಿಂತ ಹೆಚ್ಚಾಗಿಯೇ ಸತ್ತುಬಿದ್ದಿದ್ದರು. ಒಂದು ಕಂದಕದಲ್ಲಿದ್ದವರೆಲ್ಲರೂ ಸತ್ತಿದ್ದರು. ಅವರ ಹೆಣಗಳು ಒಂದನ್ನೊಂದು ಒರಗಿದಾಗೆಹಾಗೆಯೇ ನಿಂತಿದ್ದುವು. ನಾನ್ಸಿಹತ್ತಿರ ಜರ್ಮನರ ೭೦೦೦ ಹೆಣಗಳು ಕಂಡುಬಂದುವಂತೆ. ರಷ್ಯಾದವರು ಜರ್ಮನಿಯಪೂರ್ವಭಾಗದಲ್ಲಿ ೪೦ ಮೈಲಿಗಳವರೆಗಿನುಗ್ಗಿ ಅಲ್ಲಿನ ಪುರಗ್ರಾಮಗಳನ್ನೆಲ್ಲಾ ವಶಪಡಿಸಿಕೊಂಡರು. ಮಹಾಪ್ರವಾಹದಂತೆ ಸೈನ್ಯವು ನುಗ್ಗಿ ಬರುತ್ತಲೇ ಇದೆ. ಇದಿರಾದವರನ್ನು ಹುಲ್ಲುಕಡ್ಡಿಯಂತೆ ಕಡಿದೊಷ್ಪುತ್ತಿದ್ದಾರೆ. ಆಲೆನ್‌ಸ್ಟೈನ್ ಎಂಬ ಪಟ್ಟಣಕ್ಕೆ ೫೧ ಮೈಲಿ ದೂರದಲ್ಲಿರುವ ರಾತ್‌ಪ್ಲೀನ್ ಎಂಬ ರೇಲ್ವೆಯ ಕೂಟಸ್ಥಾನವನ್ನಾಕ್ರಮಿಸಿಕೊಂಡರು. ಜರ್ಮನಿಯ ಮುಖ್ಯನಗರದಕಡೆಗೆ ಸಾಗಬೇಕೆಂಬುದು ಅವರ ಉದ್ದೇಶ. ಈಗ ರಷ್ಯನರ ಸೇನೆಯು ೪೦ ಲಕ್ಷದವರೆಗೆ ಜರ್ಮನಿ ಆಸ್ಟ್ರಿಯಾಗಳ ಮೇಲೆ ನುಗ್ಗಿ ಬರುತ್ತಿದೆ. ಇಂಗ್ಲೀಷರ ನೌಕಾಸೇನೆಯು ಜರ್ಮನಿಗೆ ಸೇರಿದ ಆಸ್ಟೆಂಡ್ ಎಂಬ ಒಂದು ರೇವುಪಟ್ಟಣವನ್ನೂ ಅದರ ಪ್ರಾಂತವನ್ನೂ ಆಕ್ರಮಿಸಿಕೊಂಡಿರುವುದು. ಜರ್ಮನರ ನೌಕಾಸೇನೆಯು ಉತ್ತರದಲ್ಲಿರುವ ಕೀಲು ಕಾಲ್ವೆಯಲ್ಲಿದೆ. ಅವು ಹೆಲಿಗೋಲ್ಯಾಂಡಿನ ಬಳಿಯಲ್ಲಿ ಸಮುದ್ರತೀರಗಳನ್ನು ಕಾಯ್ದುಕೊಂಡಿವೆ. ಆಫ್ರಿಕಾಖಂಡದಲ್ಲಿರುವ ಜರ್ಮನಿಗೆ ಸೇರಿದ ಟೋಗೋಲ್ಯಾಂಡ್ ಪ್ರದೇಶವನ್ನು ಇಂಗ್ಲೀಷರು ವಶಪಡಿಸಿಕೊಂಡರು. ಹೈಫ್ಲಯರ್ ಎಂಬ ಇಂಗ್ಲೀಷರ ಹಡಗು ಕೇಯಿಜರ್ ವಿಲ್‌ಹೆಲಿಂಡರ್ ಗ್ರೋಸೆ ಎಂಬ ಜರ್ಮನ್ ಹಡಗನ್ನು ಮುಳುಗಿಸಿಬಿಟ್ಟಿತು. ರಷ್ಯಾಸೈನಿಕರು ಆಸ್ಟ್ರಿಯಾದೇಶದ ಗಲೀಷಿಯಾ ಜಿಲ್ಲೆಯಲ್ಲಿರುವ ಟಾರ್ನಪಾಲ್ ಪಟ್ಟಣವನ್ನು ಆಕ್ರಮಿಸಿಕೊಂಡು, ಅಲ್ಲಿಂದ ನೀಸ್ಟರ್ ನದಿಯನ್ನು ದಾಟಿ, ದೇಶದೊಳಕ್ಕೆ ನುಗ್ಗುತ್ತಿದ್ದಾರೆ. ಅವರನ್ನು ಆಸ್ಟ್ರಿಯನ್ನರ ೩ ಪಟಾಲಮುಗಳು ಪ್ರತಿಭಟಿಸಿ ಕಾದಾಡುತ್ತಿವೆ.

ತಾ|| ೨೯.

ಕಾನಡಾ ಸ್ವಾಸ್ಥ್ಯದವರು ಇನ್ನೊಂದು ಲಕ್ಷ ಸೇನೆಯನ್ನು ಇಂಗ್ಲೀಷರಿಗೆ ಸಹಾಯವಾಗಿ ಕಳುಹಿಸಲು ಯೋಚಿಸಿರುವರು.

ಬೆಲ್ಜಿಯಮ್ಮಿನವರು ಆಂಗ್ಲಪ್ರಭುತ್ವದವರ ಅನುಮತಿಯ ಮೇರೆ ಇನ್ನು ಮುಂದೆ ವಿಜಿತರ ಸೇನೆಗೆ ಸಹಾಯಕರಾಗಿದ್ದುಕೊಂಡು ಶತ್ರುಗಳ ಮೇಲೆ ಯುದ್ಧಮಾಡದೆ, ತಮ್ಮ ದೇಶದ ಸಂರಕ್ಷಣೆಯ ಸಂಬಂಧದ ಯುದ್ಧವನ್ನು ಮಾತ್ರ ನಡೆಯಿಸಲು ನಿರ್ಧರಿಸಿದರು.

ತಾ|| ೨೨ ರಿಂದ ೬ ದಿನಗಳವರೆಗೂ ಜರ್ಮನರು ವೀರಾವೇಶದಿಂದ ಹಲವುಕಡೆ ಹೋರಾಡಿ ಎಲ್ಲಿಯೂ ಮುಂದಕ್ಕೆ ನುಗ್ಗಲು ಸಮರ್ಥರಾಗದೆ, ಜಿಮ್ಮಟ್ಟ ಬಹಳ ನಷ್ಟವನ್ನನುಭವಿಸಿದರು. ಫ್ರೆಂಚರು ನಾನ್ಸಿ–ವಾಸ್ಗೇಸ್‌ಗಳಿಗೆ ಮಧ್ಯಪ್ರದೇಶದಲ್ಲಿ ಮುಂದುಮುಂದಕ್ಕೆ ಸಾಗುತ್ತಿದ್ದಾರೆ. ಆದರೆ ಇವರನ್ನು ಶತ್ರುಗಳು ಎಲ್ಲೂ ತಡೆಗಟ್ಟಲಿಲ್ಲ. ನಾಮೂರಿನಲ್ಲಿದ್ದ ಬೆಲ್ಜಿಯಂಸೇನೆಯು ಒಂದು ಫ್ರೆಂಚರ ಪಟಾಲಮ್ಮಿನ ಸಹಾಯದಿಂದ ಆಂಗ್ಲರ ಶಿಬಿರವನ್ನು ಬಂದು ಸೇರಿತು. ಜರ್ಮನಿಯವರ ಹಾವಳಿಯಿಂದ ಮನೆ ಮಠಗಳನ್ನು ಕಳೆದುಕೊಂಡು ನಿರ್ಗತಿಕರಾಗಿರುವ ಬೆಲ್ಜಿಯಮ್ಮಿನವರು ಗುಂಪುಗುಂಪಾಗಿ ಪ್ಯಾರಿಸ್ಸಿಗೆ ಬರುತ್ತಿದ್ದಾರೆ. ಅವರಲ್ಲಿ ಹೆಂಗುಸರೂ ಮಕ್ಕಳುಗಳೂ ಕಷ್ಟಗಳಿಂದ ಬಲುಬಳಲಿದ್ದಾರೆ. ಅವರಲ್ಲಿ ಬಹುಜನರು ಜರ್ಮನಿಯವರ ಕಾಲುಕೆಳಗೆ ಸಿಕ್ಕಿ ತಮ್ಮ ಎಷ್ಟೋ ಮಕ್ಕಳು ಸತ್ತವೆಂದು ಹೇಳಿಕೊಂಡಿದ್ದಾರೆ. ಇವರಲ್ಲಿ ಬಹುಜನರು ಧನಿಕರಾದರೂ ಪೂರ್ಣರಿಕ್ತರಂತೆ ಕಾಣಬರುತ್ತಿದ್ದಾರೆ. ಇವರು ಜೀವನನಿರ್ವಾಹಕ್ಕಾಗಿ ಪಶ್ಚಿಮದೇಶಗಳಿಗೆ ಕಳುಹಲ್ಪಡುವುದರಲ್ಲಿದ್ದಾರೆ. ಕಳೆದ ೩ ದಿನಗಳಲ್ಲಿ ಇಂಗ್ಲೀಷರೂ, ಫ್ರೆಂಚರೂ ಮಾಡಿದ ಯುಕ್ತಿ–ಸಾಹಸ–ಧೈರ್ಯಶೌರ್ಯಪೂರ್ಣವಾದ ಯುದ್ಧಗಳಿಗಾಗಿ ಅವರ ಸೇನಾನಿಗಳು ಪರಸ್ಪರವಾಗಿ ಸ್ತೋತ್ರಮಾಡುತ್ತಿದ್ದಾರೆ.

ಜರ್ಮನರು ತಾವು ಶತ್ರುಗಳಿಗೆ ಪಟ್ಟಣವನ್ನು ಬಿಟ್ಟುಬಿಡಬೇಕಾಗಿ ಬಂದಾಗ ಅವುಗಳಿಗೆ ಬೆಂಕಿಯಿಕ್ಕಿ ಹಾಳುಮಾಡುತ್ತಲೂ, ಶತ್ರುಗಳ ಗ್ರಾಮವನ್ನು ಹಿಡಿದಾಗ ಸೂರೆಮಾಡಿ ಹೆಂಗುಸರನ್ನು ಕೆಡಿಸಿ, ನಾನಾವಿಧವಾಗಿ ಹಿಂಸಿಸುತ್ತಲೂ ಇದ್ದಾರೆ. ಶತ್ರುಗಳ ಮೇಲೆ ಯುದ್ಧಮಾಡುವಾಗ ರಣನೀತಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಾರೆ. ಅವರು ಗುರಿಕಟ್ಟಿ ಹೊಡೆಯುವುದು ಜಾಣ್ಮೆಯುಳ್ಳದಾಗಿಲ್ಲದಿದ್ದರೂ ರಾತ್ರಿಯಹೊತ್ತು ತುಪಾಕಿಗಳಲ್ಲಿ ಚರೆಗಳನ್ನು ತುಂಬಿ ಶತ್ರುಗಳ ಮೇಲೆ ಭಯಂಕರವಾಗಿ ಪ್ರಯೋಗಿಸುತ್ತಿದ್ದಾರೆ ಎಂಬ ವಾರ್ತೆಗಳು ಹಬ್ಬಿಕೊಂಡಿವೆ. ರಣರಂಗದಲ್ಲಿರುವ ಆಂಗ್ಲಸೈನಿಕನೊಬ್ಬನು ತನ್ನವರಿಗೆ ಬರೆದಿರುವ ಕಾಗದದಲ್ಲಿ ಹೀಗೆ ತಿಳಿಯಿಸಿದ್ದಾನೆ—"ಜರ್ಮನರು ಕ್ರೂರರಾಕ್ಷಸರು, ಅವರು ಕಠಿನವಾಗಿ ಹೋರಾಡುತ್ತಾರೆ. ಆದರೆ ಅವರ ಗುರಿಹಿಡಿಯುವಿಕೆಯು ಚೆನ್ನಾಗಿಲ್ಲ; ನಮ್ಮವರು ಹಿಡಿಯುವ ಗುರಿಯು ಚೆನ್ನಾಗಿದೆ. ನಮ್ಮಮೇಲೆ ಬಿದ್ದ ಜರ್ಮನಿಯವರನ್ನೆಲ್ಲಾ ನಾವು ಓಡಿಸಿದೆವು. ಆದರೆ ಮತ್ತೆ ಸಾವಿರಾರು ಗಟ್ಟಲೆ ಬಂದು ಬಿದ್ದರು. ಆಗಿನ ಸ್ಥಿತಿಯು ಬಹಳ ಭಯೋತ್ಪಾದಕವಾದುದು. ವರ್ಣಿಸಿ ಬರೆಯಲು ಸಾಧ್ಯವಲ್ಲ ; ಕಣ್ಣಿನಿಂದಲೇ ನೋಡಿ ತಿಳಿಯಬೇಕು." ಎಂಬುದಾಗಿ

ಸರ್ವಿಯಾದವರು ಗುಂಪುಗುಂಪಾಗಿ ಆಸ್ಟ್ರಿಯಾಕ್ಕೆ ನುಗ್ಗಿ ದಕ್ಷಿಣ ಬೋಸ್ನಿಯಾದಲ್ಲಿ ಯುದ್ಧಕಾರ್ಯಕ್ಕೆ ತಮಗೆ ಸುರಕ್ಷಿತವಾಗಿರುವ ಸ್ಥಳವನ್ನು ಹಿಡಿದುಕೊಂಡು ಕುಳಿತಿದ್ದಾರೆ

ರಷ್ಯಾದವರು ಕೋಯಿನಿಂಗ್ಸ್‌ಬರ್ಗ್ ಎಂಬುದನ್ನೂ ಟಿಲ್ಸಿಟ್ ಪಟ್ಟಣವನ್ನೂ ಪೂರ್ಣವಾಗಿ ಹಿಡಿದುಕೊಂಡರು. ಪೂರ್ವಪ್ರಷ್ಯಾದಲ್ಲಿ ಜರ್ಮನಿಯವರ ೧೦೦ ಫಿರಂಗಿಗಳನ್ನು ರಷ್ಯನ್ನರು ಹಿಡಿದುಕೊಂಡುದು ನಿಜವಾಗಿದೆ. ರಷ್ಯಾದವರು ಆಸ್ಟ್ರಿಯಾದೊಳಕ್ಕೆ ನುಗ್ಗಿ ಇದುವರೆಗೆ ಅಲ್ಲಿನ ೧೦ ನೆಯ ೧ ಭಾಗ ಸೈನ್ಯವನ್ನು ಹಾಳುಮಾಡಿರುವರು.

ಪೋರ್ಚುಗಲ್ಲಿನ ಹಿಂದಿನ ರಾಜನು ಇಂಗ್ಲೆಂಡಿನ ಕಡೆ ಸೇರಿ ಯುದ್ಧ ಮಾಡಲು ತನ್ನ ಕಡೆಯವರಿಗೆ ಪ್ರೋತ್ಸಾಹಿಸಿ ಕಾಗದ

ನಾವು ಅವರೊಡನೆ ಕೂಡಿ ಯುದ್ಧಮಾಡುತ್ತಾ ೨ ದೊಡ್ಡ ಕಾರ್ಯಗಳನ್ನು ನೆರವೇರಿಸುತ್ತಿದ್ದೇವೆ.— ೧ ನೆಯದು–ಸಣ್ಣಸಣ್ಣ ರಾಷ್ಟ್ರಗಳ ಸ್ವಾತಂತ್ರ್ಯವನ್ನು ಕಾಪಾಡುವುದು. ೨ ನೆಯದು ಜಾತಿಗಳ ಪರಸ್ಪರ ಧರ್ಮಕ್ಕೆ ಭಂಗ ಬರದಂತೆ ಕಾಪಾಡುವುದು.

ಬಳಿಕ ಐರ್ಲಾಂಡಿನ ಬೋನರ್‌ಲಾರವರು ಅದನ್ನೇ ಪುಷ್ಟೀಕರಿಸಿ ಮಾತನಾಡುವಾಗ–ಬೆಲ್ಜಿಯಮ್ಮಿನವರ ಧೈರ್ಯಸ್ಥೈರ್ಯ ಪರಾಕ್ರಮಗಳು ಪ್ರಪಂಚವನ್ನೇ ಆಶ್ಚರ್ಯ ಸಮುದ್ರದಲ್ಲಿ ಮುಳುಗಿಸಿವೆ. ನಾವು ಬೆಲ್ಜಿಯಂ ಸೈನಿಕರನ್ನು ಮಾತ್ರವೇ ಶ್ಲಾಘಿಸತಕ್ಕುದಲ್ಲ ; ಬೆಲ್ಜಿಯಂ ದೇಶದ ಪ್ರತಿಯೊಬ್ಬ ಪ್ರಜೆಯನ್ನೂ ಶ್ಲಾಘಿಸಬೇಕು. ಏಕೆಂದರೆ-ಅವರೆಲ್ಲರೂ ಯುದ್ಧದಿಂದ ಉಂಟಾಗುತ್ತಿರುವ ನಷ್ಟ ಕಷ್ಟಗಳನ್ನೆಲ್ಲಾ ಶಾಂತಿಯಿಂದ ಸೈರಿಸುತ್ತಿದ್ದಾರೆ. ಇಂಗ್ಲಾಂಡು ಏತಕ್ಕೆ ಯುದ್ಧಮಾಡಬೇಕಾಗಿತ್ತು ಎಂದು ಆಕ್ಷೇಪಿಸತಕ್ಕವರು ನಮ್ಮಲ್ಲಿ ಕೆಲರು ಇರಬಹುದು. ಈಗ ಬೆಲ್ಜಿಯಮ್ಮಿನವರು ಅನುಭವಿಸುತ್ತಿರುವ ದುರವಸ್ಥೆಗಳನ್ನು ಅವರು ಕೇಳುತ್ತಿರುವುದರಿಂದ ಇಂಗ್ಲೆಂಡು ಯುದ್ಧಕ್ಕೆ ನಿಂತುದು ಎಷ್ಟು ನ್ಯಾಯವೆಂಬುದು ಅವರಿಗೇ ತಿಳಿಯದೆಹೋಗದು. ಬೆಲ್ಜಿಯಮ್ಮು ಸಕಲ ಪ್ರಪಂಚದಿಂದಲೂ ಗೌರವಿಸಲ್ಪಡತಕ್ಕುದಾಗಿದೆ. ಅದು ಸಣ್ಣ ರಾಷ್ಟ್ರವಾದರೂ ಅದು ಮಾಡಿದ ಘನತರವಾದ ಕಾರ್ಯವು ನಮಗೂ ಮಾರ್ಗದರ್ಶಕವಾಗಿರುವುದಲ್ಲದೆ ನಮ್ಮನ್ನು ದೊಡ್ಡ ಋಣಿಗಳನ್ನಾಗಿ ಮಾಡಿರುವುದು. ಅವರ ಋಣವನ್ನು ನಾವು ಹೊತ್ತುಕೊಂಡೆವು. ಈ ಯುದ್ಧವು ಬೆಲ್ಜಿಯಮ್ಮಿಗೆ ಎಷ್ಟು ಉಪದ್ರವವನ್ನುಂಟುಮಾಡುವುದೋ ನಮಗೂ ಅಷ್ಟೇ ಉಪದ್ರವಕಾರಿಯು. ಇದನ್ನು ನಮ್ಮವರು ಇದುವರೆಗೂ ಚೆನ್ನಾಗಿ ಗ್ರಹಿಸಿದಂತೆ ಕಾಣುವುದಿಲ್ಲ. ಈಗಲಾದರೂ ಗ್ರಹಿಸಬೇಕು. ನಮ್ಮ ಯಾವಚ್ಛಕ್ತಿ ಸಾಹಸಗಳನ್ನೂ ಉಪಯೋಗಿಸಿ, ಈಗಿನ ಯುದ್ಧದಲ್ಲಿ ನಮಗೆ ಜಯವುಂಟಾಗುವಂತೆ ಮಾಡಿ ಅದನ್ನು ಮುಗಿಸಬೇಕು.

ಬಳಿಕ ಐರ್ಲಾಂಡಿನ ರೆಡ್ಮಂಡ್‌ರವರು ಮಾತನಾಡುವಾಗ–ಬೆಲ್ಜಿಯಂನವರ ಸ್ವಾತಂತ್ರ್ಯ ರಕ್ಷಣೆಗಾಗಿ ರಕ್ತವನ್ನೂ ಪ್ರಾಣವನ್ನೂ ಧಾರೆಯೆರೆದುಕೊಡಲು ನಮ್ಮಲ್ಲಿ ಅನೇಕರು ಸಿದ್ಧರಾಗಿರುವರೆಂದು ನಾನು ಹೆಚ್ಚಳಪಡುತ್ತೇನೆ. ಆದರೆ ಬೆಲ್ಜಿಯಮ್ಮಿನವರು ತಮ್ಮ ಸ್ವಾತಂತ್ರ್ಯ ರಕ್ಷಣೆಗಾಗಿ ಶತ್ರುಗಳ ಮೇಲೆ ಪ್ರತಿಭಟಿಸಿ ಪಡುತ್ತಿರುವ ನಷ್ಟ ಕಷ್ಟಗಳನ್ನು ನೋಡಿ ಐರ್ಲಾಂಡು ಪ್ರಜೆಗಳ ಮನಸ್ಸು ಕರಗಿ ನೀರಾಗುತ್ತಿದೆ. ಬೆಲ್ಜಿಯಂನವರ ಶೌರ್ಯಧೈರ್ಯಗಳು ಐರ್ಲಂಡಿನವರಿಗಿಂತಲೂ ಮಿಗಿಲಾಗಿ ಪ್ರಪಂಚದ ಮತ್ತಾವ ಭಾಗವನ್ನೂ ಮೆಚ್ಚಿಸಿರುವುದಿಲ್ಲ. ಆ ಬೆಲ್ಜಿಯಮ್ಮಿನವರಿಗೆ ಸಹಾಯ ಮಾಡುವುದಕ್ಕಾಗಿ ಐರ್ಲಂಡ್ ಪ್ರಜೆಗಳು ಎಷ್ಟು ಕಷ್ಟನಷ್ಟವನ್ನಾದರೂ ವಹಿಸಲು ಸಿದ್ಧರಾಗಿರುವರು.

ಬೆಲ್ಜಿಯಮ್ಮಿನವರಿಗೆ ಇಂಗ್ಲಂಡಿನವರು ಸ್ವಲ್ಪ ಹಣವನ್ನು ಸಾಲವಾಗಿ ಕೊಟ್ಟು ಸಹಾಯ ಮಾಡುವುದರಲ್ಲಿದ್ದಾರೆಂದು ನಾನು ಪತ್ರಿಕೆಗಳಲ್ಲಿ ಓದಿದೆನು. ಆದರೆ ಆ ಹಣವನ್ನು ಅವರಿಗೆ ಸಾಲವಾಗಿ ಕೊಡಕೂಡದು. ಬಹುಮಾನವಾಗಿ ಕೊಡಬೇಕೆಂಬುದು ನನ್ನ ಅಭಿಮತವು, ಎಂದರು. ಆಗ ಸಭಿಕರೆಲ್ಲಾ ವಿಶೇಷವಾಗಿ ಕರತಾಳವನ್ನು ಮಾಡಿ ಆ ಮಾತಿಗೆ ತಮ್ಮ ಅನುಮತಿಯನ್ನು ತೋರಿಸಿದರು.

ತಾ|| ೩೦–೩೧.

ಉತ್ತರಸಮುದ್ರದಲ್ಲಿರುವ ಹೆಲಿಗೋಲ್ಯಾಂಡ್ ದ್ವೀಪದ ಬಳಿಯಲ್ಲಿದ್ದ ಜರ್ಮನರ ಹಡಗುಗಳಮೇಲೆ ಆಂಗ್ಲೇಯರು ನೌಕಾಯುದ್ಧವನ್ನು ನಡೆಯಿಸಿದರು. ಶತ್ರುಗಳ ಹಡಗುಗಳಮೇಲೆ ತಮ್ಮ ಹಡಗುಗಳ ಮೇಲಿನ ಫಿರಂಗಿಗಳಿಂದ ಗುಂಡಿನ ಮಳೆಯನ್ನು ಸುರಿಸಿದರು. ಜರ್ಮನಿಯವರ ೨ ಡಿಸ್ಟ್ರಾಯ್ಲರುಗಳೂ (ಯುದ್ಧದ ಹಡಗುಗಳನ್ನು ಮುಳುಗಿಸುವ ಸಣ್ಣ ಹಡಗುಗಳು) ಮೂರು ಕ್ರೂಸರ್ ಎಂಬ ಹಡಗುಗಳೂ ಮುಳುಗಿಸಲ್ಪಟ್ಟುವು. ಅನೇಕ ಹಡಗುಗಳಿಗೆ ನಷ್ಟವನ್ನುಂಟುಮಾಡಿದರು. ಇನ್ನೊಂದು ಹಡಗು ಏಟನ್ನು ತಿಂದು ಮುಳುಗಿ ಹೋಗುವ ಅವಸ್ಥೆಯಲ್ಲಿ ತಪ್ಪಿಸಿಕೊಂಡು ಓಡಿಹೋಯಿತು. ಆಸ್ಥಳದಲ್ಲಿ ನೀರಿನೊಳಗೆ ಜರ್ಮನರು ಸಿಡಿಮದ್ದನ್ನು ಇಟ್ಟಿದ್ದರೂ ಇಂಗ್ಲೀಷರ ಹಡಗುಗಳು ಅವನ್ನು ಲಕ್ಷ್ಯಮಾಡದೆ ಅವುಗಳ ಅಪಾಯಕ್ಕೂ ಗುರಿಯಾಗದೆ, ಶತ್ರುಗಳ ಸೈನ್ಯದ ಮೇಲೆ ಬಿದ್ದು ನಷ್ಟಪಡಿಸಿ ತಾವು ಯಕ್ಕಿಂಚಿತ್ ನಷ್ಟವನ್ನು ಮಾತ್ರ ಹೊಂದಿ ಜಯಶೀಲವಾದುವು. ಜರ್ಮನ್ ಹಡಗುಗಳ ಮೇಲಿದ್ದ ಅನೇಕ ಮಂದಿಗಳು ಸತ್ತರು. ಇವರಲ್ಲಿ ನೌಕಾಧಿಪತಿಯೂ ಒಬ್ಬನಾಗಿದ್ದನು. ಈ ಯುದ್ಧದಲ್ಲಿ ಏಟು ತಿಂದ ಮತ್ತೂ ಸೆರೆಯಾಳುಗಳಾಗಿ ಸಿಕ್ಕಿದ ೨೦೦ ಮಂದಿ ಜರ್ಮನರನ್ನು ಇಂಗ್ಲೀಷ್ ಹಡಗಿನವರು ನೋರ್ ಪಟ್ಟಣಕ್ಕೆ ತಂದು ಸೇರಿಸಿದರು. ಈ ಯುದ್ಧದಲ್ಲಿ ಇಂಗ್ಲೀಷರ ಕಡೆ ೭೯ ಮಂದಿ ಸತ್ತರು. ಅವರಲ್ಲಿ ಇಬ್ಬರು ಲೆಫ್ಟಿನೆಂಟರಿದ್ದರು. ೩೫ ಮಂದಿಗೆ ಏಟುತಗುಲಿರುವುದು. ಉತ್ತರಸಮುದ್ರದಲ್ಲಿ ಶತ್ರುಗಳು ಹೂಳಿರುವ ಸಿಡಿಮದ್ದುಗಳನ್ನು ತೆಗೆದುಹಾಕುವ ಕೆಲಸವನ್ನು ಮಾಡುತ್ತಿದ್ದ ೨ ಇಂಗ್ಲೀಷರ ಹಡಗುಗಳು ಮದ್ದಿಗೆ ಬಡಿದು ಮುಳುಗಿಹೋದುವು. ಅದರಲ್ಲಿದ್ದವರಲ್ಲಿ ೫ ಮಂದಿಗಳು ಆಗೋಚರರಾದರು. ೮ ಮಂದಿಗೆ ಏಟುಬಿದ್ದಿರುವುದು. ತಾ|| ೨೩ ರಿಂದ ೨೬ ವರೆಗೆ ೩ ದಿನ ನಡೆದ ಮಹಾಯುದ್ಧದ ವರ್ಣನೆಯು ತಂತ್ರೀವಾರ್ತೆಗಳ ಮೂಲಕ ಅನಂತವಾಗಿ ಬಂದಿದೆ. ಅದರಲ್ಲಿ ಫ್ರೆಂಚರೂ ಆಂಗ್ಲರೂ ತೋರಿಸಿರುವ ಪರಾಕ್ರಮವು ಅತ್ಯದ್ಭುತವಾಗಿದೆ. ತಾ|| ೨೬ ರಲ್ಲಿ ಹೆಂಟ್ರಿಸಿಲ್ ಎಂಬ ಪಟ್ಟಣದಲ್ಲಿ ಜರ್ಮನ್ ಸೈನಿಕರು ಒಂದು ಇಕ್ಕಟ್ಟಾದ ಬೀದಿಯಲ್ಲಿ ನುಗ್ಗಿ ಹೋಗುತ್ತಿರುವಾಗ ಇಂಗ್ಲೀಷರು ಫಿರಂಗಿಗಳನ್ನು ಹಾರಿಸಿದರು. ಆಗ ಮಹಾ ಸಂಕ್ಷೋಭೆಯು ಹುಟ್ಟಿತು. ಕಡೆಯಲ್ಲಿ ನೋಡುವಾಗ್ಗೆ ಆ ಪಟ್ಟಣದ ಬೀದಿಗಳಲ್ಲಿ ೮೦೦–೯೦೦ ಮಂದಿ ಜರ್ಮನ್ ಸೈನಿಕರು ಸತ್ತೋ ಏಟುತಿಂದೋ ಬಿದ್ದಿರುವುದು ಗೋಚರಿಸಿತು.

ಅತ್ತ ರಷ್ಯನ್ನರು ಪೂರ್ವ ಪ್ರಷ್ಯಾದಲ್ಲಿ ಪ್ರತಿಯೊಂದು ಕಡೆಯಲ್ಲೂ ಶತ್ರುಗಳನ್ನು ಧ್ವಂಸಮಾಡಿ ಮುಂದುಮುಂದಕ್ಕೆ ನುಗ್ಗಿ ಸಿಕ್ಕಿದ ಕೋಟೆಗಳನ್ನೂ ಪಟ್ಟಣಗಳನ್ನೂ ಲೋಹಮಾರ್ಗಗಳನ್ನೂ ವಶಪಡಿಸಿಕೊಳ್ಳುತ್ತ ಬಂದಿದ್ದಾರೆ. ಇದುವರೆಗೇ ಅವರಿಗೆ ಶತ್ರುಗಳ ೧೦೦ ಫಿರಂಗಿಗಳು ವಶವಾದುವು. ಮತ್ತೂ ಲೆಂಬರ್ಗಿನ ಹತ್ತಿರ ಆಸ್ಟ್ರಿಯನ್ ಸೇನೆಯ ಮೇಲೆ ಬಿದ್ದು ಕಾದಾಡಿ ೮೦೦೦ ಮಂದಿಗಳನ್ನು ಬಂದಿಗಳನ್ನಾಗಿ ಹಿಡಿದು ೧೩ ಫಿರಂಗಿಗಳನ್ನು ಸ್ವಾಧೀನಪಡಿಸಿಕೊಂಡುದಲ್ಲದೆ ಹಂಗೇರಿಯ ಸೈನ್ಯವನ್ನೆಲ್ಲಾ ಮುತ್ತಿಗೆ ಹಾಕಿ ವಶಪಡಿಸಿಕೊಂಡಿತು. ಪೂರ್ವದಲ್ಲಿ ರಷ್ಯನರ ಏಟು ಬಲವಾದುದರಿಂದ ಇದಕ್ಕೆ ಮೊದಲೇ ಉತ್ತರದಲ್ಲಿ ಕೀಲ್ಸಿನ ಹತ್ತಿರ ಆಸ್ಟ್ರಿಯಾದ ಸೈನ್ಯವೆಲ್ಲಾ ಪೂರ್ವಕ್ಕಿರುವ ತಮ್ಮ ಸೇನೆಗೆ ಸಹಾಯಮಾಡುವುದಕ್ಕಾಗಿ ಬರುತ್ತಿದೆ. ಪೂರ್ವದಲ್ಲಿ ರಷ್ಯನರು ಪಾಟ್‌ಗೇಜ್ ಹತ್ತಿರ ಆಸ್ಟ್ರಿಯನ್ನರ ಮೇಲೆ ಮಾಡಿದ ಯುದ್ಧದಲ್ಲಿ ೩೦೦೦ ಮಂದಿ ಶತ್ರುಸೈನಿಕರನ್ನು ಕೊಂದಿರುವರು. ಜ್ಲೋಟಾಲಿಪಾ–ಹೋಡಾಚೌಫ್–ಎಂಬ ಕಡೆಗಳಲ್ಲೂ ರಷ್ಯನರೇ ಜಯಶೀಲರಾದರು. ಸರ್ವಿಯನ್ನರೂ ಕೂಡ ಆಸ್ಟ್ರಿಯನ್ನರನ್ನು ಹಣ್ಣಿಗೆ ತರುತ್ತಿದ್ದಾರೆ. ಎಲ್ಲೆಲ್ಲೂ ಅವರೇ ಜಯಶೀಲರಾಗಿ ಆಸ್ಟ್ರಿಯನ್ನರ ವಶದಲ್ಲಿದ್ದ ಹರ್ಜಗೋವಿನಾ–ಬೋಸ್ನಿಯಾ ಭಾಗಗಳನ್ನು ವಶಪಡಿಸಿಕೊಂಡಿದ್ದಾರೆ. ಪೋಲ್ಯಾಂಡಿನಲ್ಲಿ ಮೂಲಾವ್ ಪಟ್ಟಣದ ಮೇಲೆ ಜರ್ಮನಿಯ ಒಂದು ವಿಮಾನವು ಸಿಡಿಮದ್ದನ್ನಿಡಲು ಅದನ್ನು ರಷ್ಯಾದವರು ಫಿರಂಗಿಗಳಿಂದ ಹೊಡೆದು ಅದರಲ್ಲಿದ್ದ ೨ ಫಿರಂಗಿಗಳನ್ನೂ ಸಿಡಿಮದ್ದನ್ನೂ ೮ ಜನರನ್ನೂ ಸ್ವಾಧೀನಪಡಿಸಿಕೊಂಡರು. ಪೂರ್ವಭಾಗದಲ್ಲಿ ರಷ್ಯನರು ಅಪ್ರತಿಹತವಾಗಿ ತಮ್ಮ ದೇಶಕ್ಕೆ ತ್ವರೆಯಿಂದ ನುಗ್ಗಿ ಧ್ವಂಸಮಾಡುತ್ತ ಬರುತ್ತಿರುವುದರಿಂದ ಜರ್ಮನರು ಅತ್ತಕಡೆಗೆ ಸೇನೆಯನ್ನು ಬಲಪಡಿಸಬೇಕಾಗಿದೆ. ಏಕೆಂದರೆ :— ಈಗಾಗಲೇ ಜರ್ಮನಿಯೊಳಕ್ಕೆ ೫೦ ಮೈಲಿಗಳ ದೂರ ನುಗ್ಗಿಬಂದಿದ್ದಾರೆ. ರಾಜಧಾನಿಯಾದ ಬರ್ಲಿನ್ ಪಟ್ಟಣವು ಇನ್ನೂ ೩೦೦ ಮೈಲಿ ದೂರದಲ್ಲಿದೆ. ಈಗಲೇ ಅವರು ಶತ್ರುಗಳನ್ನು ತಡೆಯದಿದ್ದರೆ ಅವರು ರಾಜಧಾನಿಯನ್ನೇ ಮುತ್ತಬಹುದು. ಜರ್ಮನಿಯವರು ಇದುವರೆಗೆ ಫ್ರಾನ್ಸಿನ ಕಡೆ ಗಮನವಿತ್ತು ಪಶ್ಚಿಮಕ್ಕೇ ೧೦ ಲಕ್ಷದವರೆಗೆ ಸೈನ್ಯವನ್ನು ಕಳುಹಿದ್ದರು. ಈಗ ಈ ಕಡೆಯಲ್ಲಿ ಉಳಿದಿರುವ ಸೈನ್ಯವನ್ನು ಅತ್ತಕಡೆಗೆ ಕರೆಯಿಸಿಕೊಳ್ಳಬೇಕಾಗಿ ಬಂದಿತು. ಅದಕ್ಕಾಗಿ ಅವರು ಬೆಲ್ಜಿಯಮ್ಮಿನಲ್ಲಿದ್ದ ತಮ್ಮ ಸೇನೆಯನ್ನು ೧೬೦ ಹೊಗೆಬಂಡಿಗಳಲ್ಲಿ ತುಂಬಿಸಿ ತಾ|| ೨೮ ನೆಯ ರಾತ್ರಿಯಲ್ಲಿ ಹಿಂದಕ್ಕೆ ಕರೆಯಿಸಿಕೊಂಡಿದ್ದಾರೆ. ಈಗ ಆಂಟ್ವರ್ಪ್ ಮತ್ತೂ ಲಿಂಬರ್ಗ್ ಪ್ರಾಂತಗಳಲ್ಲಿ ಒಬ್ಬ ಜರ್ಮನ್ ಸೈನಿಕನೂ ಇಲ್ಲವೆಂದು ಬೆಲ್ಜಿಯಂ ಸರ್ಕಾರದವರು ಪ್ರಕಟಿಸಿದ್ದಾರೆ. ಬ್ರಸಲ್ಸಿನಲ್ಲಿ ಮಾತ್ರ ಕೆಲ ಜರ್ಮನ್ ಸೈನಿಕರುಮಾತ್ರ ಇದ್ದಾರೆ. ದಕ್ಷಿಣದಲ್ಲಿ ಫ್ರೆಂಚರ ಮತ್ತೂ ಮಾಂಟೆನೀಗ್ರೋದವರಸೇನೆಯು ಆಸ್ಟ್ರಿಯಾದ ಕಟಾರೋ ತೀರಪಟ್ಟಣವದನ್ನು ಮುತ್ತಿ ತಾ|| ೨೮ರಲ್ಲಿ ೬ಗಂಟೆಗಳ ಕಾಲ ಫಿರಂಗಿಗಳಿಂದ ಹೊಡೆದು ೨ ಕೋಟೆಗಳನ್ನು ಧ್ವಂಸಮಾಡಿದರು. ಆಸ್ಟ್ರಿಯಾದ ಯುದ್ಧದ ಹಡಗುಗಳು ಕೆಲವು ಶತ್ರುಗಳ ಮೇಲೆ ನುಗ್ಗುವುದಕ್ಕೆ ಪ್ರಯತ್ನಿಸಿದುವು, ಆದರೆ ಸಾಧ್ಯವಾಗದೆ ಹಿಂದಕ್ಕೆ ಹೋದುವು. ಇಂಗ್ಲೀಷ್ ಪ್ರಭುತ್ವದವರು ಇದುವರೆಗೆ ನಡೆಯಿಸಿದ ಯುದ್ಧದಲ್ಲಿ ಅವರಕಡೆ ೫–೬ ಸಾವಿರ ಜನರು ಸತ್ತೋ ಅಥವಾ ಏಟುತಿಂದೋ ನಷ್ಟಪಟ್ಟಿರುತ್ತಾರೆ. ಕಳೆದುಹೋದವರ ಸ್ಥಾನಕ್ಕೆಲ್ಲಾ ಹೊಸ ಹೊಸ ಜನರನ್ನು ಕಳುಹಿಸಿ ಭರ್ತಿಮಾಡುತ್ತಿದ್ದಾರೆ. ಆಯುಧಾದಿ ಸಾಮಗ್ರಿಗಳನ್ನು ಕೂಡ ಕೊರತೆಯಿಲ್ಲದಂತೆ ಒದಗಿಸಿಕೊಡುತ್ತಿದ್ದಾರೆ. ಕಳೆದ ತಾ|| ೨೮ ರಲ್ಲಿ ಲಂಡನ್ನಿನಲ್ಲಿ ಕೂಡಿದ್ದ ಲಾರ್ಡುಗಳ ಸಭೆಯಲ್ಲಿ ಸರ್ವಸೇನಾಧಿಪತಿಗಳಾದ ಅರ್ಲ್ ಕಿಚನರ್‌ರವರು–ಫ್ರಾನ್ಸಿನಲ್ಲಿರುವ ಆಂಗ್ಲಸೇನೆಗೆ ಸಹಾಯವಾಗಿ ಇನ್ನೆರಡು ಡಿವಿಜನ್ ಸೇನೆಗಳನ್ನೂ, ಭರತಖಂಡದಿಂದ ಒಂದು ಅಶ್ವಸೇನೆಯನ್ನೂ ಕಳುಹಿಸುವೆವೆಂದೂ, ಇವುಗಳಲ್ಲಿ ಮೊದಲನೆಯ ಡಿವಿಜನ್ನು ದಾರಿಯಲ್ಲಿ ಹೋಗುತ್ತಿದೆಯೆಂದೂ ಹೇಳಿದರು. ಬಳಿಕ ಇಂಡಿಯಾ ಸ್ಟೇಟ್‌ಸೆಕ್ರೆಟರಿ ಕ್ರೂಪ್ರಭುಗಳು ಯೆದ್ದುನಿಂತು ಭರತಖಂಡದ ಸೇನಾವಿಷಯವನ್ನು ಕುರಿತು ಮಾತನಾಡುವಾಗ್ಗೆ– ಆಂಗ್ಲಸೇನೆಯ ಜತೆಗೆ ಭಾರತದೇಶೀಯರೂ ಕೂಡ ರಣರಂಗಕ್ಕೆ ಹೋಗುವರೆಂಬ ಕಾರಣದಿಂದ ಆ ದೇಶದಲ್ಲೆಲ್ಲಾ ಅಸದೃಶವಾದ ಉತ್ಸಾಹವೂ ರಾಜಭಕ್ತಿಯೂ ಕಾಣಬರುತ್ತಿವೆ. ಫ್ರಾನ್ಸಿನವರು ತಮಗೆ ಒಳಪಟ್ಟ ಆಫ್ರಿಕನರನ್ನು ಕರೆದುಕೊಂಡು ಹೋಗಿ ಯುದ್ಧವನ್ನು ಮಾಡಿಸುತ್ತಿರುವರೆಂಬ ಸಂಗತಿಯು ಭಾರತೀಯರಿಗೆ ಗೊತ್ತುಂಟು. ಆದುದರಿಂದ ಈಗ ಹಿಂದೂ ಸೈನಿಕರನ್ನು ನಾವು ಯುದ್ಧಕ್ಕೆ ಕಳುಹದಿದ್ದರೆ ಆ ದೇಶೀಯರಿಗೆ ಬಹಳ ಆಶಾಭಂಗವಾಗುವುದು. ಆದುದರಿಂದ ಯುದ್ಧವಿದ್ಯೆಯಲ್ಲಿ ಶಿಕ್ಷಿತರೂ, ಸಮರ್ಥರೂ, ಧೈರ್ಯಶಾಲಿಗಳೂ ಆದವರನ್ನು ಭರತಖಂಡದಿಂದ ಕಳುಹಿಸುತ್ತಿದ್ದೇವೆ. ಇವರು ತಮ್ಮ ಶೌರ್ಯಧೈರ್ಯಗಳನ್ನು ವ್ಯಕ್ತಗೊಳಿಸುವರೆಂಬುದಕ್ಕೆ ಸಂಶಯವಿಲ್ಲ. ಹೀಗೆ ನಾವು ಬಹಳ ಸೈನ್ಯವನ್ನು ಕಳುಹಿಸಿದ್ದೇವೆ. ಭರತಖಂಡದ ಎಲ್ಲೆಗಳನ್ನೆಲ್ಲಾ ಸಂರಕ್ಷಿಸಿಕೊಳ್ಳುವುದಕ್ಕೆ ತಕ್ಕಷ್ಟು ಸೈನ್ಯವು ಬೇರೆ ಯಿದೆ. ಇದಲ್ಲದೆ ಈಗ ಭರತಖಂಡದಲ್ಲಿರುವ ಸಕಲ ಮತಜಾತಿಗಳವರೂ ತೋರಿಸುತ್ತಿರುವ ರಾಜಭಕ್ತಿಯನ್ನು ನೋಡಿದರೆ ಆ ದೇಶದಲ್ಲಿ ಯಾವವಿಧದ ಕಲ್ಲೋಲವಾದರೂ ಹುಟ್ಟೀತೆಂದು ಹೇಳುವುದಕ್ಕೆ ಅವಕಾಶವಿಲ್ಲ–ಎಂದು ಹೇಳಿದರು. ಇದರಿಂದ ನಮ್ಮ ದೇಶೀಯ ಸೈನ್ಯವೂ ಈಗ ಯುದ್ಧಾಂಗಣಕ್ಕೆ ಹೋಗಿ ಸೇರಿಯೋ ಸೇರುವುದರಲ್ಲೋ ಇದೆಯೆಂದು ಹೇಳಬಹುದು.

ಸೆಪ್ಟೆಂಬರ್ ತಾ|| ೧–೨–೩.

ಬೆಲ್ಜಿಯಮ್ಮಿನ ಈಶಾನ್ಯದಿಕ್ಕಿನಿಂದ ಕೆಲ ಜರ್ಮನ್ ಸೈನ್ಯವು ಹೊರಟುಹೋದರೂ ಫ್ರಾನ್ಸ್‌ದೇಶದ ಎಲ್ಲೆಯಲ್ಲೂ ಆ ದೇಶದೊಳಗೂ ಇನ್ನೂ ೧೦–೧೨ ಲಕ್ಷಕ್ಕೆ ಕಡಿಮೆಯಿಲ್ಲದಷ್ಟು ಜರ್ಮನ್ ಸೈನ್ಯವಿದೆಯೆಂದು ಊಹಿಸಲ್ಪಟ್ಟಿದೆ. ಫ್ರಾನ್ಸ್ ರಾಜಧಾನಿಯಾದ ಪ್ಯಾರಿಸ್ಸಿನ ಉತ್ತರದಲ್ಲಿ ೧೦೦ ಮೈಲಿಯೊಳಗಿರುವ ಅಮಿಯೇಜ್ ಪಟ್ಟಣದ ವರೆಗೂ ಜರ್ಮನ್ ಸೈನ್ಯಗಳು ನುಗ್ಗಿಬಂದಿವೆ. ಪ್ಯಾರಿಸ್ ಪಟ್ಟಣದ ಉತ್ತರದಲ್ಲೂ ಫ್ರಾನ್ಸಿನ ಪೂರ್ವದ ಎಲ್ಲೆಗಳಲ್ಲೂ ೨೦ ಲಕ್ಷಕ್ಕೆ ಮೀರಿ ಫ್ರೆಂಚರ ಸೈನ್ಯವಿದೆ. ಆಂಗ್ಲಸೇನೆಯು ಬೆಲ್ಜಿಯಮ್ಮಿನ ಪಶ್ಚಿಮದಲ್ಲೂ ಫ್ರಾನ್ಸಿನ ಎಲ್ಲೆಯಲ್ಲೂ ಸುರಕ್ಷಿತವಾದ ಸ್ಥಳದಲ್ಲಿದೆ. ಜರ್ಮನ್ ಚಕ್ರವರ್ತಿಯು ತಮ್ಮ ಸೈನಿಕರಿಗೆಲ್ಲಾ ಯುದ್ಧದಲ್ಲಿ ಜಯಶೀಲರಾಗಬೇಕು ; ಇಲ್ಲವೆ ಪ್ರಾಣವನ್ನೊಪ್ಪಿಸಬೇಕು ಎಂದು ಪ್ರೋತ್ಸಾಹಿಸಿರುವುದರಿಂದ ಅವರ ಸೇನೆಯು ಬಹಳ ವೀರಾವೇಶದಿಂದ ಕಾದುತ್ತಿದೆ. ಆಗಸ್ಟ್ ತಾ|| ೨೩ರಿಂದ ೨೯ರ ವರೆಗೆ ಮಾನ್ಸ್ ಮೊದಲಾದ ಕಡೆ ನಡೆದ ಮಹಾ ಭೂಯುದ್ಧಗಳ ಮತ್ತೂ ಉತ್ತರ ಸಮುದ್ರದಲ್ಲಿ ಹೆಲಿಗೋಲ್ಯಾಂಡ್ ದ್ವೀಪದ ಬಳಿಯಲ್ಲಿ ನಡೆದ ಜಲಯುದ್ಧದ ವಿವರಣವು ಬಹು ಭಯಾನಕವಾಗಿ ಪ್ರಕಟಗೊಂಡಿವೆ. ಎಲ್ಲ ಪಕ್ಷಕ್ಕೂ ಆಗಿರುವ ನಷ್ಟವು ಸಾಮಾನ್ಯವಾಗಿಲ್ಲ. ಅದರಲ್ಲಿ ಜರ್ಮನರ ನಷ್ಟವೇ ಹೆಚ್ಚು. ಆ ಜಲಯುದ್ಧದಲ್ಲಂತೂ ಜರ್ಮನರು ಸೋತು ಬಹಳ ನಷ್ಟಪಟ್ಟರು.

ಈಗ ಮರಳಿ ಅಮಿಯಜ್ ಪ್ರಾಂತದಲ್ಲಿರುವ ಇಂಗ್ಲೀಷ್ ಫ್ರಾನ್ಸ್ ಸೇನೆಗಳ ಮೇಲೆ ಜರ್ಮನಿಯು ಘೋರಯುದ್ಧವನ್ನು ಮಾಡುತ್ತಿರುವಂತಿದೆ. ಇಷ್ಟರಲ್ಲೇ ಜರ್ಮನಿಯವರು ಪ್ಯಾರಿಸ್ಸನ್ನು ಮುತ್ತಬಹುದೆಂದು ಯೋಚಿಸಿ, ಅಲ್ಲಿ ತಕ್ಕ ಸನ್ನಾಹಗಳು ನಡೆಯುತ್ತಿವೆ. ಒಂದು ಜರ್ಮನ್ ಯುದ್ಧವಿಮಾನವು ಆ ಪಟ್ಟಣದ ಮೇಲೆ ಸಿಡಿಮದ್ದನ್ನು ಹಾಕಿತು. ಪಟ್ಟಣವು ಶಾಂತವಾಗಿದ್ದರೂ ಪುರನಿವಾಸಿಗಳು ಜರ್ಮನರ ಮೇಲೆ ಪರಮಾಗ್ರಹವುಳ್ಳವರಾಗಿದ್ದಾರೆ. ಜರ್ಮನರು ಈಗ ನಿರಾಶಾಸಾಹಸವನ್ನು ಮಾಡುತ್ತಿದ್ದಾರೆ. ಶತ್ರುಗಳಿಗೆ ತಮ್ಮ ಕಡೆಯವರು ಸಿಕ್ಕಿಹೋಗುವರೆಂದು ತೋರಿದಾಗ ತಮ್ಮವರನ್ನು ತಾವೇ ಕೊಂದುಬಿಡುತ್ತಿದ್ದಾರೆ. ಹೆಲಿಗೋಲ್ಯಾಂಡ್ ಬಳಿಯಲ್ಲಿ ಸಮುದ್ರದಲ್ಲಿ ಮುಳುಗಿ ಹೋಗುತ್ತಿದ್ದವರನ್ನು ಇಂಗ್ಲೀಷರು ರಕ್ಷಿಸುವುದಕ್ಕೆ ಪ್ರಯತ್ನಿಸುತ್ತಿರಲು ಅದನ್ನು ಜರ್ಮನಿಯವರು ತಡೆದು, ತಮ್ಮ ಕಡೆಯ ಅನೇಕರನ್ನು ತಾವೇ ತುಪಾಕಿಯಿಂದ ಹೊಡೆದು ಕೊಂದರು. ಫ್ರೆಂಚರು ಚಾರ್ಲ್‌ವಿಲ್ಲೆ ಎಂಬ ಕಡೆಯಲ್ಲಿ ಒಳ್ಳೆಯ ಪಟ್ಟಿಗೆ ಜರ್ಮನಿಯವರನ್ನು ಸಿಕ್ಕಿಸಿಕೊಂಡು ಅಸಂಖ್ಯಾಕವಾಗಿ ಅವರ ಸೈನ್ಯವನ್ನು ಕೊಂದು ೧೮೭೦ನೆಯ ಇಸವಿ ಯುದ್ಧದಲ್ಲಿ ತಮಗೆ ಜರ್ಮನಿಯವರು ಮಾಡಿದ್ದ ನಷ್ಟಕ್ಕೆ ತಕ್ಕ ಮುಯ್ಯನ್ನು ಈಗ ಭಯಂಕರವಾಗಿ ನೆರವೇರಿಸಿ ತೃಪ್ತಿಪಟ್ಟರು. ಪೂರ್ವ ೧೮೭೦ನೆಯ ಇಸವಿಯಲ್ಲೂ ಇವರೀರ್ವರಿಗೂ ಅಲ್ಲೇ ಯುದ್ಧವಾಗಿದ್ದಿತು. ಈ ಪಟ್ಟಣವು ಫ್ರೆಂಚರದು. ಬೆಲ್ಜಿಯಂದೇಶದಿಂದ ಇಲ್ಲಿಗೆ ಬರುವಾಗ ಮ್ಯೂಸ್ ನದಿಯನ್ನು ದಾಟಿ ಬರಬೇಕು. ಹಾಗೆ ಬರುವಾಗ್ಗೆ ಇದರ ಮೇಲೆ ಇರುವ ೨೫ ಸೇತುಗಳಲ್ಲಿ ಎಲ್ಲವನ್ನೂ ಫ್ರೆಂಚರು ಮುರಿದುಹಾಕಿ ೩ ಸೇತುಗಳನ್ನು ಮಾತ್ರ ಬಿಟ್ಟಿದ್ದರು. ಅದರ ಮೇಲಿಂದ ಹಾದು ಜರ್ಮನ್ ಸೇನೆಯು ಚಾರ್ಲ್‌ವಿಲ್ಲಿಗೆ ಬಂದಕೂಡಲೇ ಮೊದಲೇ ಅಣಿಮಾಡಿ ಹೂತಿದ್ದ ಸುರಂಗದ ಮದ್ದಿನಿಂದ ಆ ೩ ಸೇತುಗಳನ್ನು ಕೆಡಹಿಬಿಟ್ಟರು. ಅದರಿಂದ ಜರ್ಮನರು ಹಿಂದಕ್ಕೆ ಓಡಿಹೋಗಲು ಮಾರ್ಗತಪ್ಪಿದವರಾಗಿ ಬೋನಿನಲ್ಲಿ ಕೂಡಿದ ಇಲಿಗಳಂತೆ ಸಿಕ್ಕಿಬಿದ್ದರು. ಆಗ ಫ್ರೆಂಚರು ಅವರ ಮೇಲೆ ಫಿರಂಗಿಗುಂಡುಗಳನ್ನು ಅವಿಚ್ಛಿನ್ನವಾಗಿ ಸುರಿಸಿ ವರ್ಣಿಸಲಾಗದಷ್ಟು ನಷ್ಟವನ್ನುಂಟುಮಾಡಿ ಹೆಣದ ರಾಶಿಯನ್ನು ಬೀಳಿಸಿದರು. ಕೋಚ್‌ರಾಯಿ ಎಂಬಲ್ಲಿ ನಡೆದ ಜರ್ಮನ್ ಫ್ರೆಂಚರ ಯುದ್ಧದಲ್ಲಿ ಫ್ರೆಂಚರು ಜರ್ಮನ್ ಚಕ್ರವರ್ತಿಯ ಚಿಕ್ಕಪ್ಪನ ಮಗನಾದ ಸ್ಕೀನ್ ಪ್ರಭುವನ್ನು ಹಿಡಿದುಕೊಂಡು ಆತನ ಕತ್ತಿಯನ್ನೂ ಕಿರೀಟವನ್ನೂ ಕಳಚಿಕೊಂಡಿರುವರು. ಮರಳಿ ಚಾರ್ಲ್‌ವಿಲ್ಲಿಗೆ ಉತ್ತರದಲ್ಲಿ ಯುದ್ಧವಾರಂಭವಾಯಿತು. ಎಡಗಡೆಯಲ್ಲಿ ಶತ್ರುಪಕ್ಷಕ್ಕೆ ಸೋಲಾಯಿತು. ಮಧ್ಯಭಾಗದಲ್ಲಿ ಜಯಾಪಜಯಗಳು ಎರಡುಪಕ್ಷಕ್ಕೂ ಸಮನಾದುವು. ಶತ್ರುಗಳು ಮರಳಿ ಮ್ಯೂಸು ನದಿಯನ್ನು ದಾಟುವುದಕ್ಕೆ ಪ್ರಯತ್ನಿಸಿದರು. ಆದರೆ ಇಂಗ್ಲೀಷ್ ಫ್ರೆಂಚ್ ಸೈನ್ಯಗಳು ಅವಕಾಶ ಕೊಡಲಿಲ್ಲ. ಜರ್ಮನ್ ಕಡೆಯ ಆಗಿನ ಯುದ್ಧದಲ್ಲಿ ಬಹಳ ನಷ್ಟವಾಯಿತು ಈಚೆಗೆ ಜರ್ಮನರು ಚಾರ್ಲ್‌ವಿಲ್ಲಿಗೆ ಉತ್ತರದಲ್ಲಿರುವ ರಾಕ್ರಾಯಿ ಪಟ್ಟಣದ ಮೇಲಿಂದ ಮುಂದಕ್ಕೆ ಸಾಗುತ್ತಿವೆ. ಆಂಗ್ಲಸೇನೆಯು ಶತ್ರುಗಳ ಸುತ್ತುವಿಕೆಗೆ ಈಡಾಗದಂತೆ ಅಣಿಯಾದ ಬೇರೆ ಸ್ಥಳಕ್ಕೆ ಮರಳಿ ನಿಂತಿವೆ. ಗಿವೆಟ್ಟಿನ ಕಡೆಯಿಂದ ಜರ್ಮನ್ ಸೇನೆಗೆ ಮುಂದೆ ನುಗ್ಗಲು ಫ್ರಾನ್ಸ್ ಇಂಗ್ಲೆಂಡು ಸೇನೆಗಳು ಅವಕಾಶವನ್ನು ಕೊಟ್ಟವು. ಈಗ ಪ್ಯಾರಿಸ್ ಪಟ್ಟಣದ ಕೋಟೆಯಿಂದ ಸುತ್ತಲೂ ಹೊಡೆಯಲು ಅಡ್ಡಿಯಾಗುವಂತೆ ಎತ್ತರಿಸಿದ್ದ ದೊಡ್ಡ ದೊಡ್ಡ ಪ್ರಾಸಾದಗಳನ್ನೆಲ್ಲಾ ಫ್ರೆಂಚರು ಒಡೆದುಹಾಕಿದ್ದಾರೆ. ಆ ಪಟ್ಟಣದ ರಕ್ಷಣೋಪಾಯಗಳೆಲ್ಲಾ ಸಾಂಗವಾಗಿರುತ್ತವೆ. ಅಡಿಗಡಿಗೂ ಇಂಗ್ಲೀಷ್ ಫ್ರೆಂಚ್ ಸೈನ್ಯಗಳು ಅಡ್ಡಿಮಾಡುತ್ತಿದ್ದರೂ ಸಾವಿರಗಟ್ಟಲೆಯಾಗಿ ತಮ್ಮ ಕಡೆ ಪ್ರಾಣಹಾನಿಗಳೂ ಇತರವಿಧವಾದ ನಷ್ಟಗಳೂ ಸಂಭವಿಸುತ್ತಿದ್ದರೂ, ಜರ್ಮನರು ಅವೊಂದನ್ನೂ ಲಕ್ಷಿಸದೆ ಬೆಲ್ಜಿಯಮ್ಮಿನ ಬಹು

ಭಾಗವನ್ನೆಲ್ಲಾ ಹಿಡಿದುಕೊಂಡು, ದಕ್ಷಿಣ ದಿಕ್ಕು ಬಿವಾಗಿ ಫ್ರಾನ್ಸಿಗೂ ಕೆಲದೂರ ನುಗ್ಗಿರುವುದನ್ನು ನೋಡಿದರೆ ಅವರ ವೀರಾವೇಶವೂ, ಅಂತ್ಯಪ್ರತಿಜ್ಞೆಯೂ ಎಷ್ಟು ಭೀಕರವಾಗಿದೆಯೆಂಬುದೂ, ಸೇನಾಬಲವೆಷ್ಟೆಂಬುದೂ ಗೊತ್ತಾಗುವುದು. ಆದರೇನು? ಇದುವರೆಗೆ ಅವರಿಗಾಗಿರುವ ನಷ್ಟಗಳನ್ನು ನೋಡಿದರೆ ಅವರಿಗಾಗಿರುವ ಜಯವು ಅತ್ಯಲ್ಪವೆಂದೇ ಹೇಳಬಹುದು. ಜರ್ಮನರು ಹೀಗೆ ದಕ್ಷಿಣದಿಕ್ಕಿಗೆ ಫ್ರಾನ್ಸಿನಕಡೆ ಗಮನವಿಟ್ಟು ನುಗ್ಗುತ್ತಿರುವುದೇ ಹೆಚ್ಚು. ಬೆಲ್ಜಿಯಮ್ಮಿನ ಪಶ್ಚಿಮಕ್ಕೆ ಇಂಗ್ಲೀಷು ಸಮುದ್ರದಕಡೆಗೆ ಅವರ ಸಾಹಸವೇನೂ ನಡೆದಿಲ್ಲ. ತೀರಪಟ್ಟಣವೊಂದಕ್ಕೆ ಕೆಲ ಸೈನಿಕರು ತಲೆಯಿಕ್ಕಿರಲು, ಇಂಗ್ಲೀಷ್ ಸೇನೆಯು ಹೊಡೆದು ಅಟ್ಟಿಬಿಟ್ಟಿತು.

ಜರ್ಮನಿಯ ಸೇನೆಯು ಬರಗೆಟ್ಟ ಪಿಶಾಚಗಳಂತೆ ಬೆಲ್ಜಿಯಮ್ಮಿನಲ್ಲಿ ಹಾವಳಿಯನ್ನು ಮಾಡುತ್ತಿರುವುದಾಗಿ ಗೊತ್ತಾಗುತ್ತದೆ. ಅವರು ಬ್ರಸೆಲ್ಸ್ ನಗರದಲ್ಲಿ ಜನರಿಗೆ ಹಿಂಸೆಕೊಟ್ಟು ಹಣವನ್ನು ಸುಲಿದುಕೊಂಡುದರಿಂದ ಅಲ್ಲಿ ಕ್ಷಾಮವುಂಟಾಗಿದೆ. ಜರ್ಮನ್ ಸೈನಿಕರಿಗೆ ಆ ಪಟ್ಟಣದವರು ಪ್ರತಿದಿನವೂ ೪೦೦ ಸಾರಾಯಿ ಸೀಸೆಗಳನ್ನೂ ೪೦ ಸಾವಿರ ಪೌನ್ಡು ಮಾಂಸವನ್ನೂ ಒದಗಿಸಬೇಕಾಗಿದೆಯಂತೆ. ಆ ಪಟ್ಟಣದ ರೊಟ್ಟಿಯ ವ್ಯಾಪಾರಿಗಳೆಲ್ಲಾ ಪ್ರತಿದಿನವೂ ಇವರಿಗೆ ೭೦ ಸಾವಿರ ಪೌನ್ಡು ರೊಟ್ಟಿಗಳನ್ನು ಒಪ್ಪಿಸಬೇಕಂತೆ.

ಅತ್ತ ಪೂರ್ವಪ್ರಷ್ಯಾದಲ್ಲಿ ಜರ್ಮನರಿಗೂ ರಷ್ಯನರಿಗೂ ಯುದ್ಧವು ನಡೆಯುತ್ತಲೇ ಇದೆ. ಮತ್ತೊಂದುಕಡೆ ರಷ್ಯನರು ಆಸ್ಟ್ರಿಯಾವನ್ನು ನುಗ್ಗಿ ಯುದ್ಧಮಾಡುತ್ತಲೇ ಇದ್ದಾರೆ. ಜಪಾನಿನವರು ಕಿಯಾಚೋವನ್ನು ಆಕ್ರಮಿಸಿ ಅದಕ್ಕೆ ಹೊರಗಿನ ಸಂಚಾರಸಂಬಂಧವನ್ನೆಲ್ಲಾ ತಪ್ಪಿಸಿಬಿಟ್ಟಿದ್ದಾರೆ. ಆಂಗ್ಲರ ಸ್ವಾಸ್ಥ್ಯವಾದ ನ್ಯೂಜಿಲ್ಯಾಂಡಿನವರು ತಮ್ಮ ಸೇನೆಯನ್ನು ಜರ್ಮನಿಯವರ ಸಾಮೋವ ದ್ವೀಪಗಳಲ್ಲಿನ ಒಂದು ಪಟ್ಟಣವನ್ನು ವಶಪಡಿಸಿಕೊಂಡಿರುವರು. ಈ ದ್ವೀಪವು ಆಸ್ಟ್ರೇಲಿಯಾಕ್ಕೂ ಏಷ್ಯಾಕ್ಕೂ ಮಧ್ಯದಲ್ಲಿದೆ.

ಫ್ರೆಂಚರ ವಿಮಾನಗಳು ಯುದ್ಧರಂಗದಲ್ಲಿ ಕೆಲಸಮಾಡುತ್ತಿರುವುವು. ಅವರ ಒಂದು ವಿಮಾನದ ಸಾಹಸದಿಂದ ಜರ್ಮನಿಯ ಅಶ್ವಸೇನೆಯೊಂದು ಫ್ರೆಂಚರ ಅಧೀನವಾಗುವಂತಾಯಿತು. ಇನ್ನೊಂದು ಫ್ರೆಂಚ್ ವಿಮಾನವು ಜರ್ಮನಿಯ ಸೇನಾವ್ಯೂಹದಮೇಲೆ ಹೋಗಿದ್ದು ಬೇಗನೆ ಅವರೇಟಿನಿಂದ ತಪ್ಪಿಸಿಕೊಂಡು ಓಡಿಹೋಯಿತು. ಜರ್ಮನಿಯ ವಿಮಾನದವರು ಪ್ಯಾರಿಸ್ಸಿನಮೇಲೆ ಮತ್ತೊಂದಾವೃತ್ತಿ ಸಿಡಿಮದ್ದನ್ನು ಇಟ್ಟು ಕೆಲ ಸ್ತ್ರೀಯರನ್ನು ಕೊಂದಿತು. ಮತ್ತೂ ಆಂಟ್‌ವರ್ಪಿನಮೇಲೂ ಇನ್ನೊಂದು ಜರ್ಮನ್ ವಿಮಾನವು ಹಾರಾಡುತ್ತಿದ್ದು ಏಟಿಗೆ ಸಿಕ್ಕದೆ ತಪ್ಪಿಸಿಕೊಂಡುಬಂದಿತು.

ಸೆಪ್ಟೆಂಬರ್ ತಾ|| ೪.

ಗ್ಯಾಲೆಂಬಿ ಸಮೀಪದಲ್ಲಿದ್ದ ರಷ್ಯಾದವರ ೩ ಪಟಾಲಮ್ಮುಗಳ ಮೇಲೆ ಜರ್ಮನಿ ಸೇನೆಯು ಬಿದ್ದು ಕಾಳಗಮಾಡಿದಾಗ ರಷ್ಯನರ ಕಡೆ ಸತ್ತವರಲ್ಲಿ ಸೇನಾನಾಯಕನಾದ ಸಾಂಸೋನಾಫ್ ಎಂಬುವನೂ ಒಬ್ಬನು. ರಷ್ಯನರು ಮರಳಿ ಜರ್ಮನಿಯವರ ಮೇಲೆ ಯುದ್ಧಕ್ಕೆ ಸನ್ನಾಹಮಾಡಿದ್ದಾರೆ.

ಜಪಾನ್ ಸೈನಿಕರು ಕಿಯಾಚೂವಿನಲ್ಲಿದ್ದ ೭ ದ್ವೀಪಗಳನ್ನೂ ಆಗಲೇ ಆಕ್ರಮಿಸಿಕೊಂಡರು. ಆ ಪ್ರಾಂತದ ಸಮುದ್ರದೊಳಗೆ ಜರ್ಮನಿಯವರಿಂದ [illegible] ಬಿಟ್ಟಿದ್ದ ಸಾವಿರಾರು ಸಿಡಿಮದ್ದುಗಳನ್ನೂ ತೆಗೆದು [illegible].

ಲೆಂಬರ್ಗಿಗೆ ೧೦ ಮೈಲಿ ದೂರದಲ್ಲಿ ರಷ್ಯಾಕ್ಕೂ ಆಸ್ಟ್ರಿಯಾಕ್ಕೂ ನಡೆಯುತ್ತಿದ್ದ ಯುದ್ಧವು ತಾ|| ೧ ರಲ್ಲಿ ಮುಗಿದಿತು. ರಷ್ಯಾದವರು ಆಸ್ಟ್ರಿಯನ್ನರ ಮೂರು ಪಟಾಲಮ್ಮುಗಳನ್ನೋಡಿಸಿದರು. ೩ ಕಡೆಯ ಸೇನೆಯಲ್ಲೂ ಬಹಳ ನಷ್ಟವು ಸಂಭವಿಸಿತು. ಆಸ್ಟ್ರಿಯನ್ನರ ೧೫೦ ಫಿರಂಗಿಗಳನ್ನು ರಷ್ಯನ್ನರು ಹಿಡಿದುಕೊಂಡರು.

ಪೂರ್ವ ಪ್ರಷ್ಯಾಕ್ಕೆ ಜರ್ಮನಿಯ ಸೇನೆಯು ಹೆಚ್ಚಾಗಿ ಒದಗಿದುದರಿಂದಲೂ, ಅವರ ದೊಡ್ಡದೊಡ್ಡ ಫಿರಂಗಿಯ ಏಟುಗಳು ಬಲವಾದುದರಿಂದಲೂ ರಷ್ಯನರು ಹಿಮ್ಮೆಟ್ಟುವಂತಾಯಿತು. ಆದರಮೇಲೆ ರಷ್ಯನರೂ ಸೇನೆಯನ್ನು ಬಲಪಡಿಸಿರುವರು.

ಫ್ರಾನ್ಸ್ ದೇಶದ ರಾಜಧಾನಿಯನ್ನು ಪ್ಯಾರಿಸ್ಸಿನಿಂದ ಬೋರ್ಡಿಯೋ ಪಟ್ಟಣಕ್ಕೆ ಬದಲಾಯಿಸಿರುವರೆಂದು ಹೊಸಸುದ್ದಿಯು ಬಂದಿದೆ. ಈ ಪಟ್ಟಣವು ಆ ದೇಶದ ದಕ್ಷಿಣದ ಕಡೆಯ ನೈಋತ್ಯಮೂಲೆಯಲ್ಲಿ ಸಮುದ್ರದ ಸಮೀಪದೊಳಗಿದೆ.

ಜರ್ಮನಿಯವರು ಬ್ರಸೆಲ್ಸಿನ ಕೋಟೆಯನ್ನೆಲ್ಲಾ ಬಲಪಡಿಸಿ, ಆ ಪ್ರಾಂತದಲ್ಲಿರುವ ಆಂಗ್ಲಸೇನೆಯೆಲ್ಲವೂ ೨೪ ಗಂಟೆಯೊಳಗಾಗಿ ದೇಶವನ್ನು ಬಿಟ್ಟು ಹೋಗಬೇಕೆಂದು ಪ್ರಕಟಿಸಿದ್ದಾರೆ.

ರಷ್ಯಾದವರು ಆಸ್ಟ್ರಿಯಾದವರ ೧೫ನೆಯ ಪಟಾಲಮ್ಮನ್ನು ಲೆಂಬರ್ಗಿಗೆ ಪೂರ್ವದಲ್ಲಿರುವ ಲಾಕ್‌ಜೋಪಟ್ಟಣದ ಬಳಿಯಲ್ಲಿ ಓಡಿಸಿ ೧೦೦ ಮಂದಿ ಸೇನಾಧಿಕಾರಿಗಳನ್ನೂ ೫೦೦೦ ಮಂದಿ ಸೈನಿಕರನ್ನೂ ೩೦ ಫಿರಂಗಿಗಳನ್ನೂ ೭೫ ಧ್ವಜಪಟಗಳನ್ನೂ ವಶಪಡಿಸಿಕೊಂಡಿರುವರು ಎಂದು ಪ್ರಕಟವಾಗಿದೆ. ಮತ್ತೂ ಶತ್ರುಗಳಿಗೆ ದುರ್ಗಮವೆಂದು ಎಣಿಸಲ್ಪಟ್ಟಿದ್ದ ನಿಲಾಲಿಪಾದ ಬಳಿಯಲ್ಲಿ ನಾವು ಯುದ್ಧವನ್ನು ಮಾಡಿ, ಆಸ್ಟ್ರಿಯಾದ ೪೭೦೦ ಸೈನಿಕರನ್ನು ಕೊಂದೆವು. ಅನೇಕ ಧ್ವಜಪಟಗಳನ್ನೂ ೩೨ ಫಿರಂಗಿಗಳನ್ನೂ ಹಲವುಮಂದಿ ಸೈನಿಕರನ್ನೂ ಒಬ್ಬ ಸೇನಾಧಿಪತಿಯನ್ನೂ ಹಿಡಿದುಕೊಂಡೆವು. ವಾರ್ಸಾಜಿಲ್ಲೆಯಲ್ಲಿ ೫ ಫಿರಂಗಿಗಳನ್ನೂ ೧೦೦೦ ಮಂದಿ ಸೈನಿಕರನ್ನೂ ಹಿಡಿದುಕೊಂಡೆವು ಎಂದು ರಷ್ಯನರು ಪ್ರಕಟಿಸಿದ್ದಾರೆ.

ಜರ್ಮನಿಯವರು ಇದುವರೆಗಿನ ಯುದ್ಧಪದ್ಧತಿಯನ್ನು ಬಿಟ್ಟು, ದೂರದಲ್ಲಿ ನಿಂತು ಇಂಗ್ಲೀಷರ ಅಶ್ವಸೇನೆಯಮೇಲೆ ಫಿರಂಗಿಯ ಮತ್ತೂ ತುಪಾಕಿಯ ಗುಂಡುಗಳನ್ನು ಹಾರಿಸಿ ಯುದ್ಧಮಾಡಲುಪಕ್ರಮಿಸಿದ್ದಾರೆ. ಜರ್ಮನಿಯವರಿಗೆ ಆಗಲೇ ಯುದ್ಧವಿಷಯದಲ್ಲಿ ಬೇಸರಹುಟ್ಟಿ ಎಂದಿಗೆ ಇದು ಮುಗಿಯುವುದೋ ಎಂಬ ಚಿಂತೆಯಿಂದ ಯುದ್ಧಮಾಡುತ್ತಿರುವರಂತೆ. ಜರ್ಮನ್ ಆಕಾಶವಿಮಾನಗಳು ಆಂಟ್‌ವರ್ಪಿನ ಮೇಲೆ ಪುನಃಪುನಃ ಸಿಡಿಮದ್ದುಗಳನ್ನು ಎಸೆಯುತ್ತಿರುವುವು. ಇದರಿಂದ ೬೦ ಮನೆಗಳು ಹಾಳಾದುವು. ಆ ವಿಮಾನವನ್ನು ಬೆಲ್ಜಿಯಮ್ಮಿನವರು ಫಿರಂಗಿಗಳಿಂದ ಹೊಡೆಯಲಾಗಿ ವಿಮಾನದಿಂದ ೯ ಸಿಡಿಮದ್ದುಗಳನ್ನಿಟ್ಟರು. ಆ ಮದ್ದಿನ ಗೋಳಗಳಲ್ಲಿದ್ದ ವಸ್ತುಗಳು ಬಹಳ ಉಪದ್ರವಕರವಾದ ಗಾಯಗಳನ್ನು ಮಾಡತಕ್ಕುವಾಗಿದ್ದುವು. ಅವು ಫ್ರಾನ್ಸಿನ ಪ್ರಸಿದ್ಧರಾದ ಕಳ್ಳರ ಗುಂಪಿನವರು ಉಪಯೋಗಿಸಿದಂಥ ಭೀಕರವಾದ ಸಿಡಿಮದ್ದನ್ನು ಹೋಲುತಿದ್ದುವು. ಜರ್ಮನಿಯವರು ಈಗ ಬೆಲ್ಜಿಯಮ್ ದೇಶದಲ್ಲಿರುವ ಹಳೆಯ ಸೇನೆಯನ್ನೆಲ್ಲಾ ತೆಗೆದು ಬ್ರಸೆಲ್ಸ್‌ಪಟ್ಟಣದ ರಕ್ಷಣೆಗಾಗಿಯೇ ೯೦ ಸಾವಿರ ಹೊಸಸೈನ್ಯವನ್ನು ತರಿಸುವುದಕ್ಕೆ ಏರ್ಪಡಿಸಿರುವರು. ಜರ್ಮನ್‌ಸೈನ್ಯವು ಪ್ಯಾರಿಸ್ಸಿನ ಕಡೆಗೆ ಬರುತ್ತಿರುವುವು. ಇದುವರೆಗೇ ಅಲಸಿಹೋಗಿರುವ ಈ ಸೈನ್ಯವು ಆ ಪಟ್ಟಣದ ಸುತ್ತಲೂ ೭೦ ಮೈಲಿಗಳ ವೈಶಾಲ್ಯವುಳ್ಳ ಕೋಟೆಗಳನ್ನು ಜಯಿಸಲಾರದೆಂದು ಊಹಿಸಲ್ಪಡುತ್ತಿದೆ. ಪ್ಯಾರಿಸ್ ಪಟ್ಟಣದಲ್ಲಿರುವ ಹೆಂಗುಸರು ಮಕ್ಕಳುಗಳು ಅವರವರ ನೆಂಟರುಗಳಿರುವ ಬೇರೆಬೇರೆ ಊರುಗಳಿಗೆ ಹೊರಟುಹೋಗುವುದು ಒಳ್ಳೆಯದೆಂದು ಆ ಸರ್ಕಾರದವರು ಪ್ರಕಟಿಸಿದ್ದಾರೆ. ಪ್ಯಾರಿಸ್‌ಪಟ್ಟಣದ ಮೇಲೆ ಆಕಾಶದಲ್ಲಿ ತಾ|| ೩ ರೊಳಗೆ ಭಯಂಕರವಾದ ವಿಮಾನಯುದ್ಧವು ಜರ್ಮನಿಯವರಿಗೂ ಫ್ರೆಂಚರಿಗೂ ನಡೆದಿತು. ಮೇಲೆ ಸಿಡಿಮದ್ದನ್ನೆಸೆಯುತ್ತಿದ್ದ ೩ ಜರ್ಮನ್ ವಿಮಾನಗಳ ಮೇಲೆ ಬೀಳುವುದಕ್ಕೆ ಫ್ರೆಂಚ್‌ವಿಮಾನಗಳು ಹಾರಿದುವು. ಅಷ್ಟರಲ್ಲಿ ಶತ್ರುಗಳ ವಿಮಾನಗಳು ತಪ್ಪಿಸಿಕೊಂಡು ಹೋದುವು. ಇನ್ನೊಂದು ವಿಮಾನದ ಮೇಲೆ ಫ್ರೆಂಚರು ಫಿರಂಗಿಗಳನ್ನು ಹಾರಿಸಲು, ಅದರಲ್ಲಿದ್ದ ಜರ್ಮನರಿಬ್ಬರು ಸತ್ತರು.

ಯುದ್ಧಸಂಬಂಧಿ ದೇಶವಾರ್ತೆಗಳು.

ಕೆನಡಾದೇಶಕ್ಕೆ ಸೇರಿದ ಆಲ್‌ಬರ್ಟಾಜಿಲ್ಲೆಯವರು ೩೦ ಸಾವಿರ ಚೀಲಗಳ ಓಟು ಧಾನ್ಯವನ್ನೂ ಕೆಬೆಕ್‌ಜಿಲ್ಲೆಯವರು ೪೦ ಲಕ್ಷ ಪೌನ್ ಜುನ್ನನ್ನೂ ಇಂಗ್ಲೀಷ್ ಸೇನೆಗೆ ಕಳುಹಿಸಿಕೊಡುತ್ತೇವೆಂದು ತಿಳಿಯಿಸಿದ್ದಾರೆ.

ಮಾರಿಷಸ್ ದ್ವೀಪದವರು ನೌಕಾಸೇನೆಗಾಗಿ ೩೦ ಲಕ್ಷ ಪೌನ್ ಸಕ್ಕರೆಯನ್ನು ಸಹಾಯಮಾಡಿದ್ದಾರೆ.

ಸೀಮೆಯಲ್ಲಿ ಕಾಗದಕ್ಕ ದುರ್ಭಿಕ್ಷ ಬಂದಿರುವುದರಿಂದ ವೃತ್ತಪತ್ರಿಕೆಗಳು ಚಿಕ್ಕಚಿಕ್ಕಾಕೃತಿಯಲ್ಲಿ ಹೊರಡುತ್ತಿವೆ. ಭರತಖಂಡದಲ್ಲೂ ಕಾಗದದ ಬೆಲೆಯು ಹೆಚ್ಚಿಕೊಂಡಿದೆ.

ಇಂಗ್ಲೀಷ್ ಸೇನೆಯಲ್ಲಿ ಲೆಫ್ಟಿನೆಂಟಾಗಿ ಬಂದಿದ್ದ ಹಾರ್ಡಿಂಜರವರಿಗೆ ಏಟುಬಿದ್ದು ಗಾಯವಾಗಿದೆ. ಇವರು ನಮ್ಮ ವೈಸ್ರಾಯರ ಕುಮಾರರು.

ಆಂಗ್ಲಪ್ರಭುತ್ವದವರಲ್ಲಿ ಒಟ್ಟು ೨ ಕೋಟಿ ಟನ್ನುಗಳ ಭಾರದ ಸರಕುಗಳನ್ನು ತುಂಬುವಷ್ಟು ಹಡಗುಗಳಿವೆ. ಇವುಗಳಲ್ಲಿ ೩೦ ಸಾವಿರ ಟನ್ನುಗಳ ಸಾಮಾನನ್ನು ತುಂಬುವಷ್ಟು ಹಡಗುಗಳನ್ನು ಮಾತ್ರ ಶತ್ರುಗಳು ಹಿಡಿದುಕೊಂಡಿದ್ದಾರೆ. ಇಂಗ್ಲೀಷರು ಶತ್ರುಗಳ ಪಕ್ಷದ ೨೬೦ ಹಡಗುಗಳನ್ನು ಇದುವರೆಗೆ ಹಿಡಿದುಕೊಂಡಿದ್ದಾರೆ.

ಆಹಾರ್ಯಪದಾರ್ಥಗಳ ಬೆಲೆಯು ಏರಿರುವುದರಿಂದ ಅರಮನೆಯ ಕೆಲಸಗಾರರಲ್ಲಿ ತಿಂಗಳಿಗೆ ೫ ರೂ. ಸಂಬಳದವರೆಗಿರುವವರಿಗೆ ೨ ರೂ. ಮತ್ತು ೫ ರೂ. ಮೇಲೆ ೮ ರೂ. ಒಳಗಿರುವವರಿಗೆ ೧ ರೂ. ಸಂಬಳವೂ ಹೆಚ್ಚಾಗಿ ಕೊಡಲ್ಪಡುವಂತೇರ್ಪಾಟಾಗಿದೆ. ಅಲ್ಲದೆ ಇಲ್ಲಿಯ ಕೆಲಸಗಾರರ ಉಪಯೋಗಾರ್ಥವಾಗಿ ಒಂದು ಪರಸ್ಪರ ಸಹಾಯಬ್ಯಾಂಕು ಸ್ಥಾಪಿಸಲ್ಪಡುವುದಾಗಾಲೋಚಿಸಲ್ಪಟ್ಟಿರುವುದು.

ಕಳೆದ ತಾ|| ೨ರಲ್ಲಿ ರಾಜಧಾನಿಯ ಹಳ್ಳದಬೀದಿಯಲ್ಲಿ ಒಂದು ಹಾಳುಭಾವಿಯೊಳಕ್ಕೆ ಆಗತಾನೇ ಜನಿಸಿದ್ದ ಮಗುವನ್ನು ಯಾರೋ ದುರಾತ್ಮರು ಬಿಸಾಡಿದ್ದರು. ಪೋಲೀಸರು ಈ ಸಂದರ್ಭವನ್ನು ತಿಳಿದು ಮಗುವನ್ನು ಬಾವಿಯಿಂದ ಹೊರಗೆ ತೆಗೆದು ನೋಡುವಲ್ಲಿ ನಿರ್ಜೀವವಾಗಿದ್ದಿತು. ಈ ಅಮಾನುಷಕೃತ್ಯವನ್ನು ಮಾಡಿದವರನ್ನು ಪೋಲೀಸರು ಕಂಡುಹಿಡಿಯಲೆತ್ನಿಸಿರುವರು.

ರಾಜಧಾನಿಯಲ್ಲಿ ಸಾಹುಕಾರ್ ಚನ್ನಯ್ಯನವರು ನೂತನವಾಗಿ ೩೦,೦೦೦ ರೂ. ಗಳ ವ್ಯಯದಿಂದ ಕಟ್ಟಿಸುತ್ತಿರುವ ಕುಂಚಿಟಿಗರಪಾಠಶಾಲಾ ಕಟ್ಟಡಕ್ಕೆ ತಾ|| ೨ರಲ್ಲಿ ಶಾಸನಕಲ್ಲನ್ನು ಹಾಕುವುದಕ್ಕಾಗಿ ಶ್ರೀಮನ್ಮಹಾರಾಜರವರ ಸ್ವಾರಿಯು ಕಳೆದ ಬುಧವಾರ ಬೆಂಗಳೂರಿಂದ ಮೋಟಾರುಬಂಡಿಯಲ್ಲಿ ಚಿತ್ತೈಸಿತು. ರಾಣಿವಾಸದವರು ಅದರ ಹಿಂದಣದಿವಸ ದಯಮಾಡಿಸಿದರು. ಶ್ರೀಮನ್ ಮಹಾರಾಜರವರು, ಪದ್ಧತಿಯ ಪ್ರಕಾರ ಪೌರ್ಣಮಿ ಸೇವೆಗಾಗಿ ಕಳೆದ ಶುಕ್ರವಾರ ನಂಜನಗೂಡಿಗೆ ದಯಮಾಡಿಸಿದ್ದರು.

ವಿದೇಶಯಾತ್ರೆಯಲ್ಲಿದ್ದ ಬರೋಡಾ ಮಹಾರಾಜರು ಫ್ರಾನ್ಸಿನಲ್ಲೂ ಅವರ ಪತ್ನಿಯವರು ಆಸ್ಟ್ರಿಯಾದೇಶದಲ್ಲೂ ಬೇರೆಬೇರೆಯಾಗಿದ್ದರು. ಈ ಮಧ್ಯೆ ಯುದ್ಧವು ಹುಟ್ಟಿದುದರಿಂದ ಜರ್ಮನಿಯಲ್ಲಿದ್ದ ಪತ್ನಿಯನ್ನು ಕರೆಯಿಸಿಕೊಳ್ಳುವುದು ಕಷ್ಟವಾಗಿ ಅದಕ್ಕಾಗಿ ತಮ್ಮ ಏಡಿಕಾಂಗನ್ನು ಮಹಾರಾಜರು ಏರ್ಪಡಿಸಿ ಕಳುಹಿಸಿ ಕೊಟ್ಟಿರಲು ಈಗ ಸ್ವಿಟ್ಜರ್‌ಲ್ಯಾಂಡಿಗೆ ಸುರಕ್ಷಿತವಾಗಿ ಬಂದು ತಲುಪಿದ್ದಾರೆ.

ಆಸ್ಟ್ರಿಯಾಕ್ಕೆ ಸಾರಾಯಿಭಟ್ಟಿಗಾಗಿ ಭರತಖಂಡದಿಂದ ಪ್ರತಿವರ್ಷವೂ ಬಹಳ ಅಕ್ಕಿಯು ಸಾಗಿ ಹೋಗುತ್ತಿದ್ದಿತು. ಈಗ ಅದು ನಿಂತುಹೋದುದರಿಂದ ಈ ವರ್ಷ ಇಲ್ಲಿನ ಅಕ್ಕಿಗೆ ಬೆಲೆಯು ಕಡಿಮೆಯಾಗಬಹುದೆಂದು ಊಹಿಸಲ್ಪಟ್ಟಿದೆ.

ಈ ವರ್ಷ ವಿದೇಶಗಳಿಗೆ ಹತ್ತಿಯು ಸಾಗಿಹೋಗುವುದು ಅಸಂಭವವಾದುದರಿಂದ ಹತ್ತಿಯ ಬೆಳಸನ್ನು ಮಾಡುವವರಿಗೆ ಲಾಭವಿಲ್ಲವೆಂತಲೂ ಅದಕ್ಕೆ ಬದಲಾಗಿ ಜೋಳ-ಗೋಧಿ ಮೊದಲಾದ ಬೆಳಸನ್ನು ಮಾಡುವುದು ಬೇಸಾಯಗಾರರಿಗೆ ಕ್ಷೇಮವೆಂತಲೂ ಸರ್ಕಾರದವರು ಎಚ್ಚರಿಸಿದ್ದಾರೆ.

ಲಾಹೋರಿನಲ್ಲಿ ಕಳೆದ ಬಕ್ರೀದ್ ಹಬ್ಬದ ದಿವಸ ೩೦ ಸಾವಿರ ಮಹಮ್ಮದೀಯರು ಒಂದೆಡೆಯಲ್ಲಿ ಕೂಡಿ ಆಂಗ್ಲರ ಜಯಕ್ಕಾಗಿ ದೈವಪ್ರಾರ್ಥನೆಮಾಡಿದರು.

ಸಂಯುಕ್ತರಾಷ್ಟ್ರದ ಸ್ತ್ರೀಯರೂ, ಬೊಂಬಾಯಿಯ ಸ್ತ್ರೀಯರೂ ಸಹ ಆಂಗ್ಲಸೈನಿಕರಿಗಾಗಿ ಉಡುಪುಗಳನ್ನು ಹೊಲೆದು ಕಳುಹಿಸಿಕೊಡಲು ಏರ್ಪಡಿಸಿಕೊಂಡಿದ್ದಾರೆ.

ವಿನಾಯಕಚೌತಿಸಂಬಂಧದಲ್ಲಿ ಕೂಡಿದ್ದ ಸಭೆಯಲ್ಲಿ ಶ್ರೀಯುತ ತಿಲಕರು ಭಾಷಣಮಾಡುವಾಗ್ಗೆ-ಈ ಸಮಯದಲ್ಲಿ ನಾವೆಲ್ಲರೂ ಆಂಗ್ಲಪ್ರಭುತ್ವಕ್ಕೆ ಸಹಾಯಮಾಡಬೇಕು. ಭೀಕರ ಕೃತ್ಯವನ್ನು ಆಚರಿಸಬೇಕೆಂದು ನಾನು ಯಾವಾಗಲೂ ಪ್ರಜೆಗಳಿಗೆ ಬೋಧಿಸಿದುದಿಲ್ಲ. ಪರಿಪಾಲನೆಯ ರೀತಿಯ ವಿಷಯವಾಗಿ ನನಗೂ ಪ್ರಭುತ್ವದವರಿಗೂ ಅಭಿಪ್ರಾಯಭೇದವಿದೆ. ಆದರೆ ಭರತಖಂಡದಲ್ಲಿ ಆಂಗ್ಲಪ್ರಭುತ್ವವನ್ನು ಸಂಪೂರ್ಣವಾಗಿ ನಾಶಮಾಡಬೇಕೆಂಬುದು ನಾನು ಯಾವಾಗಲೂ ಕೋರಿದುದಿಲ್ಲ. ನಾವುಗಳು ಭೇದವನ್ನೆಲ್ಲಾ ಬಿಟ್ಟು ಪ್ರಭುತ್ವದವರಿಗೆ ಮನಃಪೂರ್ವಕವಾಗಿ ಸಹಾಯಮಾಡಲು ನಾವು ಸಿದ್ಧರಾಗಿರುವೆವೆಂಬ ನಂಬುಗೆಯನ್ನು ಅವರಿಗೆ ನಾವು ಹುಟ್ಟಿಸಬೇಕು. ಈ ದೇಶದೊಡನೆ ಆಂಗ್ಲರ ಸಂಬಂಧವಿರುವುದು ಭಾರತೀಯರ ಲಾಭಕ್ಕೆ ಅತ್ಯವಶ್ಯಕವು" ಎಂದು ಹೇಳಿದರು.

ಕಲ್ಕತ್ತಾದ ಭಾರತೀಯ ಸ್ವಯಂಸೇವಕರನ್ನು ಸೈನಿಕರ ಆದರೋಪಚಾರ ಕೃತ್ಯಗಳಿಗೆ ಸೇರಿಸಿಕೊಳ್ಳುವಲ್ಲಿ ಬಂಗಾಳಾ ಗೌರ್ನರಾದ ಲಾರ್ಡ್‌ಕಾರ್ಮಿಕೇಲ್‌ರವರು ಒಪ್ಪಿ, ಇಂಡ್ಯಾಸರ್ಕಾರಕ್ಕೆ ತಿಳಿಯಿಸಿರುವಲ್ಲಿ, ಅವರು ಅವಶ್ಯಕವಿಲ್ಲವೆಂದು ತಿಳಿಯಿಸಿದುದರಿಂದ ಜನರಲ್ಲಿ ಆಶಾಭಂಗವಾಗಿದೆ.

ಪೂರ್ವಆಫ್ರಿಕಾದಲ್ಲಿರುವ ಭಾರತೀಯರ ಸ್ವಾಸ್ಥ್ಯದಲ್ಲಿ ಕೆಲ ಭಾರತೀಯರಿದ್ದಾರೆ. ಈಗ ಜರ್ಮನರು ಆ ಭಾರತೀಯರು ಸರ್ವಸ್ವವನ್ನೂ ಸುಲಿದುಕೊಂಡು ಉಟ್ಟ ಬಟ್ಟೆಯಲ್ಲಿ ಅವರನ್ನು ದೇಶದಿಂದ ಹೊರಕ್ಕೆ ಹೊರಡಿಸಿರುವರೆಂದೂ, ಆ ಭಾರತೀಯರು ಕೈಯಲ್ಲಿ ಕಾಸಿಲ್ಲದೆ ಹೊಡಬಾಳುಪಡುತ್ತಿರುವರೆಂದೂ ಬೊಂಬಾಯಿಗೆ ವಾರ್ತೆಬಂದಿದೆ.

ಜರ್ಮನಿ ಆಸ್ಟ್ರಿಯಾ ದೇಶಗಳಿಂದ ಆಂಗ್ಲರ ದೇಶಗಳಿಗೆ ಯಾವಯಾವ ಪದಾರ್ಥಗಳು ವಿಶೇಷವಾಗಿ ಮಾರಾಟವಾಗಿ ಬರುತ್ತಿದ್ದುವೋ, ಅವುಗಳ ಬೆಲೆ ಎಷ್ಟೆಷ್ಟಿದ್ದಿತೋ ಅದನ್ನೆಲ್ಲಾ ತಿಳಿದುಕೊಂಡು ಆ ಪದಾರ್ಥಗಳನ್ನೆಲ್ಲಾ ಆಂಗ್ಲದೇಶದಲ್ಲೇ ಇನ್ನು ಮುಂದೆ ನಿರ್ಮಿಸಿ ಪ್ರಪಂಚದಲ್ಲಿ ಮಾರಾಟಮಾಡಿಸಿ, ಜರ್ಮನ್ ಆಸ್ಟ್ರಿಯಾಗಳ ವ್ಯಾಪಾರವನ್ನು ಹಾಳ್ಮಾಡಬೇಕೆಂದು ಆಂಗ್ಲವರ್ತಕ ಸಂಘದವರು ಪ್ರಯತ್ನಿಸಿದ್ದಾರೆ.

ಬಂಗಾಳಾ ಅಸ್ಸಾಂರಾಷ್ಟ್ರಗಳಲ್ಲಿರುವ ತೇಯಲೆ ತೋಟಗಾರರೂ, ವರ್ತಕರೂ ಸಹ ಯುದ್ಧಮಾಡುತ್ತಿರುವ ಇಂಗ್ಲೀಷ್ ಸೈನಿಕರ ಉಪಯೋಗಕ್ಕೋಸುಗ ಬೇಕಾದಷ್ಟು ಸೊಪ್ಪನ್ನು ಕಳುಹಿಸಿಕೊಡಲು ವಾಗ್ದಾನಮಾಡಿದ್ದಾರೆ.

ಬಂಗಾಳಾದ ಬ್ಯಾರಿಸ್ಟರುಗಳು ವಕೀಲರು-ಮೊದಲಾದವರು ಸ್ವಯಂ ಸೇವಕರಾಗಿ ಯುದ್ಧದಲ್ಲಿ ಯಾವ ಕೆಲಸವನ್ನಾದರೂ ಮಾಡುತ್ತೇವೆಂದು ಸರ್ಕಾರಕ್ಕೆ ತಿಳಿಯಿಸಿಕೊಂಡಿದ್ದರು. ಅವಶ್ಯಕವಿಲ್ಲವೆಂದು ಸರ್ಕಾರದವರು ಉತ್ತರಕೊಟ್ಟರು.

ಭರತಖಂಡದಿಂದ ಯುದ್ಧಕ್ಕೆ ಹೋಗಿರುವ ಜಿ. ಎ. ಸಿ. ಎಂಬ ಪಟಾಲಮ್ಮಿನಲ್ಲಿ ಸೇರಿ ಕೆಲಸಮಾಡಲು ಕೂಚ್‌ಬಿಹಾರಿನ ಜಿತೇಂದ್ರಕುಮಾರ ಮಹಾರಾಜರವರು ನಿಯುಕ್ತರಾಗಿರುವರು.

ಕ್ರೈಸ್ತ ಜಗದ್ಗುರುವಾದ ಪೋಪ್‌ರವರು ಈಗಿನ ಯುದ್ಧವು ಆರಂಭಗೊಳ್ಳದಂತೆ ಮಾಡಲು ಮಹಾ ಪ್ರಯತ್ನಪಟ್ಟರು. ಆದರೂ ಫಲಿಸಲಿಲ್ಲ. ಆ ಮನೋವ್ಯಥೆಯಿಂದಲೇ ಕಳೆದ ತಿಂಗಳು ತಾ|| ೨೦ರಲ್ಲಿ ಅವರು ಮೃತರಾದರು. ಸಾಯುವಾಗ್ಗೆ "ಈಗ ನಡೆಯುತ್ತಿರುವ ಯೂರೋಪುಖಂಡದ ಯುದ್ಧದಲ್ಲಿ ಸಂಭವಿಸುವ ಕಷ್ಟಗಳನ್ನು ಕಣ್ಣಾರ ನೋಡದೆಯಿರುವಂತೆ ಭಗವಂತನು ನನಗೆ ಕೃಪೆಮಾಡಿದನು." ಎಂದು ಅಂತ್ಯೋಕ್ತಿಯನ್ನಾಡಿದರಂತೆ. ಮತ್ತೂ ಪೂರ್ವದ ಪೋಪರುಗಳು ಇಂಥ ಕಾಲಗಳಲ್ಲಿ ನರಹತ್ಯಗಳನ್ನು ನಿಲ್ಲಿಸಬಲ್ಲವರಾಗಿದ್ದರು. ಈಗ ನಾನೇನನ್ನೂ ಮಾಡಲಾರದವನಾಗಿದ್ದೇನೆ. ಎಂದು ಬಹಳ ಧೈನ್ಯದಿಂದ ನುಡಿದರಂತೆ. ಹೊಸಜಗದ್ಗುರುಗಳನ್ನು ಕಳೆದ ತಾ|| ೩ರಲ್ಲಿ ಆರಿಸಿ ನಿಯಮಿಸಿದರು.

ಬರೆದಿರುವನು. ಮತ್ತೂ ಆ ವಿಷಯವನ್ನು ಜಾರ್ಜ್‌ಪ್ರಭುಗಳಿಗೂ ತಿಳಿಸಿರುವನು.

ಡಚ್ ಪ್ರಭುತ್ವದವರು ತಮ್ಮ ತಾಟಸ್ಥ್ಯ ರಕ್ಷಣೆಗಾಗಿಯೆಂದು ಸೇನಾಸನ್ನಾಹವನ್ನು ಮಾಡಲು ಪಾರ್ಲಿಮೆಂಟಿನಲ್ಲಿ ಧನವ್ಯಯದ ನಿರ್ಧಾರವನ್ನು ಮಾಡಿರುವರು.

ಜಪಾನಿನವರು ತಮ್ಮ ಯುದ್ಧದ ಏರ್ಪಾಟುಗಳನ್ನೂ ಸೇನೆಯ ಚಲನವನ್ನೂ ಬಹಳ ಗೂಢವಾಗಿ ನಡೆಯಿಸುತ್ತಿರುವರು.

ಆಗಸ್ಟ್ ತಾ|| ೨೯ ರಲ್ಲಿ ಇಂಗ್ಲೀಷ್‌ಸೇನೆಯು ೭೦೦ ಮಂದಿ ಟೋರ್ನೇಯಿ ಬಳಿಯಲ್ಲಿ ನಿಂತಿರುವಾಗ ಜರ್ಮನರ ೫ ಸಾವಿರ ಸೇನೆಯು ಅಕಸ್ಮಾತ್ ಮೇಲೆ ಬೀಳಲು, ಅವರೊಡನೆ ಹೋರಾಡಿ, ಅನೇಕರನ್ನು ಕೊಂದು ಉಳಿದ ೩೦೦ ಮಂದಿ ಇಂಗ್ಲೀಷ್ ಸೈನಿಕರು ಕಂಬ್ರ್ಯಗೆ ತೆರಳಿದರು. ಹಲವು ಮಂದಿಗಳು ಅಲ್ಲಿ ಗಾಯಗೊಂಡರು. ಕೆಲರು ಸತ್ತರು.

ಜರ್ಮನರು ಬೆಲ್ಜಿಯಮ್ಮಿಗೆ ಸೇರಿದ ಲೋವೈನ್ ಪಟ್ಟಣವನ್ನು ಹಿಡಿದುಕೊಂಡ ಮೇಲೆ, ಅಲ್ಲಿನ ಪ್ರಜೆಗಳು ಬೇಡಬೇಡವೆಂದು ಬೇಡಿಕೊಂಡರೂ ಲಕ್ಷ್ಯಮಾಡದೆ ಅವರನ್ನೆಲ್ಲಾ ಸೆರೆಹಿಡಿದು ಹೆಂಗುಸರನ್ನೆಲ್ಲಾ ಹೊಗೆ ಬಂಡಿಯಮೇಲೆ ಎಲ್ಲಿಗೋ ಸಾಗಿಸಿ, ಆ ಪಟ್ಟಣದಲ್ಲಿದ್ದ ದೇವಾಲಯಗಳು-ವಿದ್ಯಾಶಾಲೆಗಳು-ಪುಸ್ತಕಾಲಯಗಳು ಮೊದಲಾದುವುಗಳೊಡನೆ ಪಟ್ಟಣವನ್ನೆಲ್ಲಾ ಸುಟ್ಟು ಹಾಳ್ಮಾಡಿದರು. ಅನೇಕ ಪ್ರಸಿದ್ಧಪುರುಷರನ್ನು ಕೊಂದುಬಿಟ್ಟರು. ಅನೇಕ ವಿದ್ವಾಂಸರಿಗೆ ನೆಲೆನೆಲೆಯಾಗಿದ್ದ-೪೫ ಸಾವಿರ ಪ್ರಜಾಸಂಖ್ಯೆಯುಳ್ಳದಾಗಿದ್ದ-ಆ ಪಟ್ಟಣವು ಈಗ ಭಸ್ಮಾವಶೇಷವಾಗಿರುವುದು. ಈ ಲೋವೈನ್ ಪಟ್ಟಣದ ಪ್ರಜೆಗಳು ತಮ್ಮ ಮೇಲೆ ಗುಂಡನ್ನು ಹಾರಿಸಿದರೆಂಬ ಕಾರಣವನ್ನು ಹೇಳಿಕೊಂಡು ಜರ್ಮನಿಯವರು ಈ ನರರಾಕ್ಷಸ ಕೃತ್ಯವನ್ನು ಮಾಡಿದ್ದಾರೆ. ಅದರ ನಿಜಸ್ಥಿತಿಯೇನೆಂದರೆ— ಆ ಪಟ್ಟಣದಲ್ಲಿ ಜರ್ಮನರೇ ರಾತ್ರಿಯಹೊತ್ತು ಹೊರಗಿದ್ದ ಜರ್ಮನ್ ಸೇನೆಯನ್ನು ಶತ್ರುಸೈನ್ಯವೆಂದು ತಿಳಿದು ಗುಂಡು ಹೊಡೆದಿದ್ದರಂತೆ.

ಜಲಯುದ್ಧ.

ಕೇಯಿಜರ್ ವಿಲ್‌ಹೆಲಂ ಎಂಬ ಜರ್ಮನ್‌ಯುದ್ಧದ ಹಡಗನ್ನು ಹೈಫ್ಲಯರ್ ಎಂಬ ಇಂಗ್ಲೀಷರ ಹಡಗು ಮುಳುಗಿಸಿದ ವಿಷಯವನ್ನು ಕುರಿತು ಪಾರ್ಲಿಮೆಂಟಿನಲ್ಲಿ ನೌಕಾಸೇನಾಂಗ ಮಂತ್ರಿಯವರಾದ ಮಿಸ್ಟರ್ ಚರ್ಚಿಲ್‌ರವರು ಮಾತನಾಡುವಾಗ್ಗೆ ಆ ಜರ್ಮನರ ಹಡಗಿನಲ್ಲಿ ೧೦ ಫಿರಂಗಿಗಳಿದ್ದುವೆಂದೂ, ಅದು ಗುಡ್‌ಹೋಪ್ ಭೂಶಿರವನ್ನು ಬಳಸಿ ಬರುತ್ತಿದ್ದ ಹಡಗುಗಳನ್ನೆಲ್ಲಾ ಹಿಂಸೆಪಡಿಸುತ್ತಿದ್ದಿತೆಂದೂ, ಅದು ಮುಳುಗಿಹೋಗುವುದರೊಳಗಾಗಿ ಅದರಲ್ಲಿದ್ದವರೆಲ್ಲಾ ಇಳಿಯಿಸಲ್ಪಟ್ಟರೆಂದೂ, ನಮ್ಮ ಹೈಫ್ಲೈಯರ್‌ನಲ್ಲಿದ್ದವರಲ್ಲಿ ಒಬ್ಬನು ಸತ್ತು ೫ ಮಂದಿ ಗಾಯಗೊಂಡರೆಂದೂ ಹೇಳಿದರು. ಈ ಶತ್ರುಗಳ ಹಡಗು ಮುಳುಗಿಸಲ್ಪಟ್ಟುದರಿಂದ ಆ ಮಾರ್ಗದಲ್ಲಿ ವ್ಯಾಪಾರವು ನಿರಾತಂಕವಾಗಿ ನಡೆಯಲು ಬಹಳ ಸಹಾಯವಾಯಿತು.

ಜರ್ಮನಿಯವರು ೧೯೧೧ ನೆಯ ವರ್ಷದಲ್ಲಿ ೯೧ ಸಾವಿರ ರೂ. ಮುಟ್ಟಿಸಿ ಕಟ್ಟಿಸಿದ್ದ ೪|| ಸಾವಿರ ಟನ್ನುಗಳ ಭಾರದ ೩ ನೆ ತರಗತಿಯ ಮ್ಯಾಗ್ಡಿಬರ್ಗ್ ಎಂಬ ಯುದ್ಧದ ಹಡಗು ಮಂಜು ಕವಿದಿದ್ದುದರಿಂದ ದಡವನ್ನು ಕಾಣದೆ ಓಸ್ಲೋಮದ್ವೀಪದ ಬಳಿಯಲ್ಲಿ ದಡಕ್ಕೆ ಕಚ್ಚಿತು. ಸಮೀಪದಲ್ಲೇ ರಷ್ಯನರ ಯುದ್ಧದ ಹಡಗುಗಳಿದ್ದುವು. ಅವು ಅದರ ಮೇಲೆ ಗುಂಡನ್ನು ಹಾರಿಸಿದುವು. ಒಳಗಿದ್ದವರಲ್ಲಿ ೧೭ ಮಂದಿ ಸತ್ತರು; ೨೨ ಮಂದಿಗೆ ಗಾಯವಾಯಿತು; ೮೫ ಮಂದಿ ಕಾಣಿಸದೆ ಹೋದರು. ಅವರಲ್ಲಿ ಹಡಗಿನ ಕ್ಯಾಪ್ಟನ್ನೂ ಒಬ್ಬನು. ಹಡಗು ಧ್ವಂಸವಾಯಿತು.

ತಾ|| ೨೭ರ ಸಾಯಂಕಾಲ ಲಂಡನ್ನಿನಲ್ಲಿ ಕಾಮನ್ಸ್ ಮಹಾಸಭೆಯು ಸೇರಿದ್ದಾಗ ಮುಖ್ಯ ಮಂತ್ರಿ ಆಸ್ಕ್ವಿತ್‌ರವರು ಪ್ರಕೃತದ ಯುದ್ಧ ವಿಷಯವನ್ನು ಕುರಿತು ಮಾತನಾಡುವಾಗ-ಬೆಲ್ಜಿಯಮ್ಮಿನವರು ಆತ್ಮಗೌರವರಕ್ಷಣೆಗಾಗಿ ಸರ್ವನಾಶವಾದರೂ ಸರಿಯೆಂದು ಆಶ್ಚರ್ಯಕರವಾಗಿ ಯುದ್ಧನಡೆಯಿಸುತ್ತಿರುವುದನ್ನು ಕುರಿತು ಶ್ಲಾಘನೋಕ್ತಿಗಳನ್ನಾಡುವಲ್ಲಿ ಹೇಳಿದುದೇನೆಂದರೆ-ಕಳೆದ ಕೆಲವು ವಾರಗಳಿಂದ ಬೆಲ್ಜಿಯಮ್ಮಿನವರೂ ಅದರ ಪ್ರಭುಗಳೂ ತಮ್ಮ ಸ್ವಾತಂತ್ರ್ಯವನ್ನು ಉಳುಹಿಕೊಳ್ಳುವುದಕ್ಕಾಗಿ ಧೈರ್ಯಸ್ಥೈರ್ಯಗಳಿಂದ ಯುದ್ಧಮಾಡಿದ ರೀತಿಯಲ್ಲಿ ಇದುವರೆಗೆ ಯಾರೂ ಹೋರಾಡಿರುವುದಿಲ್ಲ. ಶತ್ರುಗಳು ಹಠಾತ್ತಾಗಿ ತಮ್ಮ ದೇಶದ ಮೇಲೆ ಬಿದ್ದು ಪಟ್ಟಣಗಳನ್ನೂ ಹಳ್ಳಿಗಳನ್ನೂ ಹಾಳ್ಮಾಡಿ ಆಸ್ತಿಗಳನ್ನು ದೋಚಿಕೊಂಡು, ಪ್ರಜೆಗಳನ್ನು ಹಿಂಸೆಪಡಿಸುತ್ತಿರುವರೆಂಬ ಅಂಜಿಕೆಯಿಂದಲಾದರೂ ಹಿಂದೆಗೆಯದೆ ಅಚಲವಾದ ಧೈರ್ಯದಿಂದ ಬೆಲ್ಜಿಯನ್ನರು ತಮಗೆ ಎಷ್ಟೋಭಾಗ ಹೆಚ್ಚಿನದಾಗಿದ್ದ ಜರ್ಮನ್ ಸೇನೆಯಮೇಲೆ ಯುದ್ಧಕ್ಕೆ ನಿಂತರು. ತೆರೆತೆರೆಗಳಂತೆ ತಮ್ಮ ದೇಶದಮೇಲೆ ಬಂದು ಬೀಳುತ್ತಿದ್ದ ಶತ್ರುಸೇನೆಗೆ ನುಗ್ಗಲು ಅವಕಾಶ ಕೊಡದೆ ತಡೆದರು. ಲೀಜು ಕೋಟೆಯನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಅವರು ತೋರಿಸಿದ ಪರಾಕ್ರಮವು ಸ್ವಾತಂತ್ರ್ಯರಕ್ಷಣ ಚರಿತ್ರದಲ್ಲಿ ಆವೇಶವನ್ನು ಹುಟ್ಟಿಸುವ ಒಂದು ದೊಡ್ಡ ವಿಷಯವಾಗಿ ಪರಿಗಣಿಸಲ್ಪಡುವಂತಾಯಿತು. ಬೆಲ್ಜಿಯಮ್ಮು ಶಾಶ್ವತವಾದ ಕೀರ್ತಿಯನ್ನು ಸಂಪಾದಿಸಿತು. ಸ್ವಾತಂತ್ರ್ಯ ರಕ್ಷಣೆಗಾಗಿ ತಮ್ಮ ಸೌಖ್ಯವನ್ನೂ ಕ್ಷೇಮವನ್ನೂ ಧಾರೆಯೆರೆಯುವ ಮಾನವರ ಕೀರ್ತಿಯು ಆಚಂದ್ರಾರ್ಕವಾಗಿ ನಿಲ್ಲುವುದು. ನಮಗೆ ಬೆಲ್ಜಿಯಮ್ಮಿನವರು ಸ್ನೇಹಿತರಾಗಿರುವದಕ್ಕಾಗಿ ನಾವು ಹೆಮ್ಮೆಪಡುವಂತಾಗಿದೆ. ನಾವು ಮನಃಪೂರ್ವವಾಗಿ ಅವರಿಗೆ ಸಾಹಾಯ್ಯಮಾಡುತ್ತಿದ್ದೇವೆ. ಆದೇನೆಂದರೆ-

[ಸಪ್ಲಿಮೆಂಟನ್ನು ನೋಡಿರಿ.]

ಮೈಸೂರ್ ಸ್ಟಾರ್.

ಸನ್ ೧೯೧೪ ನೆಯ ಸೆಪ್ಟೆಂಬರ್ ತಾ|| ೬ನೆಯ ಭಾನುವಾರ.

ಸತ್ಪಾತ್ರ ಸಹಾಯ.

ಈಗಿನ ಯುದ್ಧಕ್ಕೆ ಮಹಾವ್ಯಾಪ್ತಿಯನ್ನುಂಟುಮಾಡಿದುದು ಜರ್ಮನ್ ಪ್ರಭುತ್ವವಾಗಿರುತ್ತದೆ. ಆಶ್ರಿತರಕ್ಷಣೆ, ದೀನಜನೋದ್ಧರಣೆ, ಮಿತ್ರಸಹಾಯ ಲೋಕಶಾಂತಿಸ್ಥಾಪನೆ-ಈ ರೂಪವಾದ ಸದ್ಧರ್ಮಗಳ ಅನುಷ್ಠಾನಕ್ಕಾಗಿ ಆಂಗ್ಲಪ್ರಭುತ್ವದವರು ಯುದ್ಧಕಾರ್ಯ ಪ್ರವರ್ತಕರಾಗಬೇಕಾಯಿತು. ವೀರಾವೇಶದಿಂದ ದೇಹದ ಸ್ಮೃತಿಯನ್ನು ಕೂಡ ತಪ್ಪಿಸತಕ್ಕ ಯುದ್ಧಾಂಗಣದಲ್ಲಿಯೂ ಕೂಡ ಆಂಗ್ಲಪ್ರಭುತ್ವದ ಸೈನಿಕರು ಆಚರಿಸುತ್ತಿರುವ ನೀತಿಬದ್ಧಕೃತ್ಯಗಳನ್ನೂ, ನಿರಾಯುಧರಾದ-ನಿರಪರಾಧಿಗಳಾದ-ಪ್ರಜೆಗಳ ಮೇಲೂ ಕೂಡ ಜರ್ಮನಿಯವರು ತೋರಿಸುತ್ತಿರುವ ಕ್ರೂರಮೃಗ ಸಹಜವಾದ ದೌರ್ಜನ್ಯಗಳನ್ನೂ, ನಾವು ಯುದ್ಧವಾರ್ತಾತರಂಗಗಳ ಮೂಲಕವಾಗಿ ಕೇಳಿದರೆ, ಆಂಗ್ಲಪ್ರಭುತ್ವಕ್ಕೆ ನಾವು ಅಧೀನವಾಗಿರುವಂತೆ ಮಾಡಿರುವ ಭಗವಂತನ ಉಪಕಾರವನ್ನು ಎಷ್ಟು ಸ್ಮರಿಸಿದರೂ ತೀರದು. ಸ್ವತಃ ಜರ್ಮನ್ ಪ್ರಜೆಗಳೇ ಈಗಿನ ಅವರ ಪ್ರಭುತ್ವದವರು ತೀಟೆಚಗಳನ್ನು ತೆಗೆದು ದೇಶದ ಸರ್ವಾನರ್ಥಕ್ಕೆ ಮೂಲರಾಗಿರುವುದನ್ನು ಕಂಡು ಶಪಿಸುತ್ತಿರುವರು. ಹೀಗಿರುವಲ್ಲಿ, ಅಂಥ ಪ್ರಭುತ್ವವನ್ನು ನಿರ್ಮೂಲವಾಗಲೆಂದು ಲೋಕವೆಲ್ಲಾ ಕೋರುವುದರಲ್ಲಿ ಆಶ್ಚರ್ಯವೇನು? ಆಂಗ್ಲರ ಪರಿಪಾಲನೆಯಿಂದ ಸುಖಶಾಂತಿಗಳನ್ನು ಪಡೆದು ಕೃತಜ್ಞತಾಬದ್ಧರಾಗಿರುವ ಭಾರತೀಯರಂತು ಸರ್ವಾವಸ್ಥೆಗಳಲ್ಲೂ ಆಂಗ್ಲರ ನಿರುಪಾಧಿಕಜಯಲಾಭವನ್ನೂ ಶತ್ರುಗಳ ನಿಶ್ಶೇಷಕ್ಷಯವನ್ನೂ ವಿಶೇಷತಃ ಸಂಪ್ರಾರ್ಥಿಸುವುದು ಸಂಪೂರ್ಣವಾಗಿ ಸಹಜವಾಗಿರುವುದು.

ಭರತಖಂಡವು ಈಗ ತನ್ನ ರಾಜನಿಷ್ಠೆಯನ್ನು ತೋರಿ ಅಚ್ಯುತವಾದ ಸಾಮ್ರಾಜ್ಯದ ಪ್ರೀತಿಪ್ರಸಾದವನ್ನು ಗಳಿಸುವುದಕ್ಕೆ ಇದು ಮಹಾ ಪರ್ವದಂಥ ಪುಣ್ಯಸಮಯವು. ಆ ಗೋಪಾಲಭೂಪಾಲ ಪರ್ಯಂತವಾಗಿ ತಂತಮ್ಮ ಯಥಾಶಕ್ತಿ ಸಹಾಯಗಳನ್ನು ಸಾಮ್ರಾಜ್ಯಪ್ರಭುತ್ವಕ್ಕೆ ಈಗ ಅರ್ಪಿಸಬೇಕು. ಹಾಗೆ ಮಾಡಲು ಭರತಖಂಡವು ಸ್ವಲ್ಪವೂ ಹಿಂದೆಗೆಯುವುದಿಲ್ಲವೆಂಬ ಚಿಹ್ನೆಯು ಇದುವರೆಗೆ ನಡೆದಿರುವ ವಾಗ್ದಾನಗಳಿಂದಲೂ ಅರ್ಪಣೆಗಳಿಂದಲೂ ವ್ಯಕ್ತವಾಗಿರುವುದು ಅತ್ಯಂತ ಸಂತೋಷಪ್ರದವಾಗಿದೆ.

ಭರತಖಂಡದ ಸಾಮಂತರಾಜರುಗಳು ನಾನಾ ಸಂಘದವರು, ಸ್ಥಾನಿಕ ಪ್ರಭುತ್ವದವರು, ಪಾಳೆಯಗಾರರು, ಜಮೀನ್‌ದಾರರು, ಸ್ತ್ರೀಯರು, ಶಾಲಾ ವಿದ್ಯಾರ್ಥಿಗಳು ಮೊದಲಾದವರೆಲ್ಲಾ ಹುರುಪಿನಿಂದ ತಮ್ಮ ಕೈಲಾದ ಸಹಾಯ ಮಾಡುವುದಕ್ಕೆ ಸಿದ್ಧರಾಗಿರುವುದನ್ನು ಕೇಳಿ ಅನ್ಯದೇಶೀಯರೆಲ್ಲರೂ ಆಶ್ಚರ್ಯಪಡುತ್ತಿರುವರು. ಬಲಿ-ಶಿಬಿ-ಕರ್ಣ ಮೊದಲಾದ ಮಹಾದಾನಿಗಳು ಅವತರಿಸಿದ ಭಾರತಪುಣ್ಯಭೂಮಿಯ ಜನರಲ್ಲಿ ಇಂಥ ಸತ್ಪಾತ್ರದಾತೃತ್ವವನ್ನು ಕಾಣುವುದು ಆಶ್ಚರ್ಯವೇನೂ ಅಲ್ಲ. ಉಚಿತವಾದ ಪಾತ್ರದಲ್ಲಿ ದಾನಮಾಡುವ ಗುಣವು ಭಾರತೀಯರ ರಕ್ತದಲ್ಲೇ ಅಂಟಿಬಂದಿದೆ. ತಾನು ಗಳಿಸಿದ ಒಂದು ಸೆರೆಯನ್ನದಲ್ಲಿ ಬೇಡಿದವನಿಗೆ ತದರ್ಧವನ್ನು ಕೊಟ್ಟು ತೃಪ್ತಿಪಡಿಸುವ ನಿಜವಿತರಣಗುಣವನ್ನು ಹೊತ್ತುಹೊತ್ತಿಗೆ ತಿರಿಸೆಯನ್ನೆತ್ತುವ ಸಾಮಾನ್ಯಜನರಲ್ಲೂ ಕೂಡ ಕಾಣಬಹುದು.

ವಿಚಾರಮಾಡಿ ನೋಡಿದರೆ ಆಂಗ್ಲಸಾಮ್ರಾಜ್ಯದ ಸ್ಥಿರತೆಯಿಂದ ಭರತಖಂಡದ ಪರಿಪಾಲನೆಯು ನಿಷ್ಕಂಟಕವಾಗಿರುವುದು. ಆನಿಷ್ಕಂಟಕತ್ವದಿಂದ ದೇಶಶಾಂತಿಯೂ ಅದರಿಂದ ಸಕಲ ಪ್ರಜಾಸೌಖ್ಯಸಮೃದ್ಧಿಯೂ ಉಂಟಾಗಿರುವುದು. ಇನ್ನೂ ಅಧಿಕವಾದ ಶ್ರೇಯಸ್ಸು ಅದರಿಂದಲೇ ಉಂಟಾಗಬೇಕಾಗಿರುವುದು. ಆದುಕಾರಣ ಆಂಗ್ಲ ಸಾಮ್ರಾಜ್ಯದ ಜಯವೂ ಸ್ಥಿರತೆಯೂ ಭಾರತೀಯರ ಸ್ವಲಾಭವೇ ಹೊರತು ಬೇರೊಂದಲ್ಲ. ಹೀಗಿರುವಾಗ ಈಗಿನ ವಿಷಮಸಮಯದಲ್ಲಿ ಕೈಲಾದ ಸಹಾಯವನ್ನು ಪ್ರತಿಯೊಬ್ಬ ಭಾರತೀಯನೂ ಮಾಡುವುದರಿಂದ ತನ್ನನಿಜವಾದ ರಾಜನಿಷ್ಠೆಯನ್ನೂ, ಸ್ವದೇಶಹಿತವನ್ನೂ, ಸ್ವಸೌಖ್ಯವನ್ನೂ ನೆರವೇರಿಸಿಕೊಡುವ ಒಂದಾನೊಂದು ಅತ್ಯಂತ ಸತ್ಪಾತ್ರದಾನವನ್ನೇ ಮಾಡಿದವನಾಗುವನು. ಇಂಥ ದಾನದ ಪುಣ್ಯಫಲವನ್ನು ಪ್ರತಿಯೊಬ್ಬ ಭಾರತೀಯನೂ ಪಡೆದುಕೊಳ್ಳಲು, ಅನುಕೂಲಿಸುವಂತೆ ನಮ್ಮ ಸರ್ವಪ್ರಿಯ ವೈಸ್ರಾಯರಾದ ಲಾರ್ಡ್ ಹಾರ್ಡಿಂಜ್‌ರವರು ಒಂದು ನಿಧಿಯನ್ನು ಸ್ಥಾಪಿಸಿಕೊಟ್ಟಿರುವುದಕ್ಕಾಗಿ ನಾವು ಕೃತಜ್ಞತೆಯಿಂದ ವಂದಿಸಿ ನಮ್ಮ ಯಥಾಶಕ್ತಿ ಸಹಾಯವನ್ನು ಆ ನಿಧಿಗೆ ಮಾಡುವುದು ಪವಿತ್ರವಾದಕರ್ತವ್ಯವು.

ಯುದ್ಧ ಸಮಯದಲ್ಲಿ ಎಷ್ಟು ಕೋಟಿಗಟ್ಟಲೆ ಧನವು ಒದಗಿದರೂ ಸಾಲದು. ಯುದ್ಧದಲ್ಲಿ ಮಡಿದವರ ಕುಟುಂಬದ ರಕ್ಷಣೆ—ಏಟುತಿಂದು ಗಾಯಗೊಂಡವರ ಚಿಕಿತ್ಸೆ, ಉಪಚಾರ, ಸೈನಿಕರನ್ನು ಸಾಗಿಸುವುದು, ಅವರ ಉಡುಪು ಆಹಾರ ಮೊದಲಾದವುಗಳನ್ನೊದಗಿಸುವುದು, ಇತ್ಯಾದಿಯಾಗಿ ಅನಂತವಿಧದ ವೆಚ್ಚಗಳಿರುವುವು. ಇಂಗ್ಲೆಂಡು ಸರ್ಕಾರದವರು ಈಗಿನ ಯುದ್ಧಕ್ಕೆ ನೂರಾರು ಕೋಟಿಗಟ್ಟಲೆಯ ರೂ. ಗಳನ್ನು ಬೊಕ್ಕಸದಿಂದ ವ್ಯಯಮಾಡುತ್ತಿರುವರು. ಅದೂ ಸಾಲದು. ನಮ್ಮ ಯುವಚಕ್ರವರ್ತಿಯವರು ಇಂಗ್ಲಾಂಡಿನಲ್ಲಿ ಒಂದು ಸಹಾಯಕನಿಧಿಯನ್ನು ಸ್ಥಾಪಿಸಿರುವರು. ಅದು ಆಗಲೇ ೩೦ ಕೋಟಿಗಳ ಮೇಲೆಯೇ ಆಗಿರುವುದು. ಅದರ ಮೇಲೆ ಆಂಗ್ಲಸ್ವಾಸ್ಥ್ಯಗಳೆಲ್ಲಾ ಅತಿಶಯವಾಗಿ ಧನಾದಿಸಹಾಯವನ್ನು ಮಾಡುತ್ತಿರುವುವು. ಅವೆಲ್ಲಾ ಸೈನಿಕರುಗಳ ಹಿತಕ್ಕೆ ಉಪಯೋಗಿಸಲ್ಪಡುತ್ತಿವೆ. ನಮ್ಮ ಭರತಖಂಡದಿಂದಲೂ ಸಹ ಕೆಲವು ಸೇನೆಗಳು ಕಳುಹಲ್ಪಟ್ಟೂ ಕೆಲವು ಕಳುಹಲ್ಪಡುವುದರಲ್ಲೂ ಇವೆ. ಹೀಗೆ ಇಲ್ಲಿಂದ ಯುದ್ಧಕ್ಕೆ ಹೋಗುವ ಭಾರತೀಯ ಸೈನಿಕರ ಮತ್ತು ಇಂಗ್ಲೀಷ್‌ಸೈನಿಕರ ಕುಟುಂಬಿಕರಿಗೆ ಸಹಾಯಮಾಡುವುದಕ್ಕೂ, ಈಗಿನ ಯುದ್ಧಪ್ರಕರಣದಿಂದ ವ್ಯಾಪಾರಕ್ಕೆ ದಕ್ಕೆಬಿಡಿದು ಬೆಲೆಗಳು ಹೆಚ್ಚಿಹೋಗಿರುವುದರಿಂದಲೂ ಅನೇಕರು ತಮ್ಮ ತಮ್ಮ ಉದ್ಯೋಗಗಳನ್ನು ಕಳೆದುಕೊಂಡಿರುವುದರಿಂದಲೂ ಜೀವನಕ್ಕಿಲ್ಲದೆ ತಾಪತ್ರಯಪಡತಕ್ಕವರಿಗೆ ಸಹಾಯ ಮಾಡುವುದಕ್ಕೂ, ಯುದ್ಧಕ್ಕೆ ಹೋದ ಸೈನಿಕರು ನಷ್ಟವಾಗುವುದೇ ಮೊದಲಾದ ಕಾರಣಗಳಿಂದ ನಿರಾಶ್ರಿತರಾದ ಅವರ ಸಂಬಂಧಿಗಳ ರಕ್ಷಣೆಗಾಗಿಯೂ ಸಹ ನಮ್ಮ ವೈಸ್ರಾಯರು ಜಾರ್ಜ್ ಸಾರ್ವಭೌಮರ ಅನುಮತಿಯ ಮೇರೆ "ಇಂಪೀರಿಯಲ್ ಇಂಡಿಯನ್ ರಿಲೀಫ್ ಫಂಡ್" ಎಂಬ ಹೆಸರಿಂದ ಸಹಾಯಕ ನಿಧಿಯನ್ನು ಸ್ಥಾಪಿಸಿರುವರು. ಆದುಕಾರಣ, ಈ ನಿಧಿಗೆ ಸಹಾಯಮಾಡಿದವರು ತಮ್ಮ ರಾಜಭಕ್ತಿಯನ್ನು ನಿವೇದಿಸುವ ವ್ಯಾಜದಿಂದ ಸ್ವಭಾಂಧವರನ್ನು ಸಂರಕ್ಷಿಸಿದ ವಿಶೇಷ ಪುಣ್ಯಕ್ಕೆ ಭಾಗಿಗಳಾಗುವರು.

ಈ ನಿಧಿಗೆ ಭರತಖಂಡದ ಕೆಲ ಸಾಮಂತರಾಜರು ಲಕ್ಷಗಟ್ಟಲೆಯಾಗಿಯೂ ಸಾವಿರಗಟ್ಟಲೆಯಾಗಿಯೂ ಯಥಾಶಕ್ತಿ ಸಹಾಯ ಮಾಡಿಯೂ ಮಾಡುತ್ತಲೂ ಇರುವರು. ಪ್ರತಿಯೊಂದು ಅಧಿಪತ್ಯಗಳ ಗೌರ್ನರುಗಳೂ ಇದರ ಶಾಖಾನಿಧಿಗಳನ್ನು ಸ್ಥಾಪಿಸಿರುವರು. ಅಲ್ಲೆಲ್ಲಾ ಒಂದೊಂದುಕಡೆಗೆ ಆಗಲೇ ೮-೧೦ ಲಕ್ಷದಷ್ಟು ಕೂಡಿರುವುದು. ಎಲ್ಲಾ ಜಿಲ್ಲೆಗಳಲ್ಲೂ ನಗರಗ್ರಾಮಗಳಲ್ಲೂ ಈ ನಿಧಿಗಾಗಿ ಹಣವನ್ನು ಕೂಡಿಸುವ ಪ್ರಯತ್ನವು ನಡೆಯುತ್ತಿರುವುದು.

ಮೈಸೂರು ಸಂಸ್ಥಾನದ ಸಹಾಯ.

೫೦ ಲಕ್ಷ ರೂ. ಗಳನ್ನು ಶ್ರೀಮನ್ಮಹಾರಾಜರು ದಾನಮಾಡಿದರು.

ಭರತಖಂಡದ ಯಾವುದೊಂದು ಸಂಸ್ಥಾನದ ಪ್ರಭುಗಳೂ ಮಾಡದೆ ಇರುವಂತಹ ವಿಶೇಷದ್ರವ್ಯವನ್ನು (ಎಂದರೆ ½ ಕೋಟಿ ರೂ.) ಗಳನ್ನು ನಮ್ಮ ಶ್ರೀಮನ್ಮಹಾರಾಜರವರು ಹೆಚ್ಚುಗಟ್ಟಲೆಯ ಸಹಾಯದ್ರವ್ಯವಾಗಿ ವೈಸ್ರಾಯರ ಬಳಿಗೆ ಕಳುಹಿಸಿದುದಲ್ಲದೆ, ಅವರು ಸ್ಥಾಪಿಸಿರುವ ನಿಧಿಗೆ ಎಲ್ಲರಂತೆ ೨ ಲಕ್ಷ ರೂ. ಗಳನ್ನು ಬೇರೆ ಕೊಟ್ಟಿರುವರು. ಕಳೆದುಹೋಗಿದ್ದ ಮೈಸೂರು ರಾಜ್ಯವನ್ನು ಆಂಗ್ಲಪ್ರಭುತ್ವದವರು ಭುಜಬಲದಿಂದಾರ್ಜಿಸಿ, ನಿಜವಾದ ಬಾಧ್ಯಸ್ಥರಾದ ಮೈಸೂರು ರಾಜವಂಶೀಯರಿಗೆ ಅರ್ಪಿಸಿದುದರ ಸಾರ್ಥಕತೆಯನ್ನು ಇದುವರೆಗೇ ಮೈಸೂರು ಪ್ರಭುತ್ವದವರು ಅನಂತವೇಳೆ ಸಾಮ್ರಾಜ್ಯ ಸರ್ಕಾರಕ್ಕೆ ನಿದರ್ಶನಮಾಡಿ ಕೊಟ್ಟಿರುವರು. ಈಗ ಮಾಡಿದ ಮಹೌದಾರ್ಯವು ರಸ್ಸರವಾದ ಸಹಾಯವಂತೂ ಕೃತಜ್ಞತೆಯ ಪರಾಕಾಷ್ಠ ವೆನಿಸಿಕೊಂಡಂತಾಗಿರುವುದು. ಈ ವಿಷಯದಲ್ಲಿ ಶ್ರೀಮನ್ಮಹಾರಾಜರು ಸಂಸ್ಥಾನದ ಗೌರವವನ್ನು ಇತರ ಸಂಸ್ಥಾನಗಳೆಲ್ಲಕ್ಕಿಂತಲೂ ವಿಶಿಷ್ಟತರವೆನಿಸಿದುದಕ್ಕಾಗಿ ಆಂಗ್ಲಪ್ರಭುತ್ವದವರು ಎಷ್ಟು ಸಂತೋಷಿಸಿರಬಹುದೋ ಅದಕ್ಕಿಮ್ಮಡಿಯಾಗಿ ದೇಶದ ಪ್ರಜೆಗಳು ಸಂತೋಷಿಸದೆ ಇರಲಾರರು.

ಮೈಸೂರು ದೇಶದಲ್ಲಿ ಶ್ರೀಮನ್ಮಹಾರಾಜರವರ ಅನುಮತಿಯನ್ನು ಪಡೆದು ಬ್ರಿಟಿಷ್ ರೆಸಿಡೆಂಟರ ಅಧ್ಯಕ್ಷತೆಯಲ್ಲಿ ಮೇಲೆ ಕಂಡ ನಿಧಿಯನ್ನು ಕೂಡಿಸುವ ಉಪಸಂಘವೊಂದು ಸ್ಥಾಪಿಸಲ್ಪಟ್ಟಿರುವುದು: ಇದಕ್ಕೆ ಕೊಡಗೂ ಸೇರಿರುವುದು. ನಮ್ಮ ಸಂಸ್ಥಾನದ ದಿವಾನರೂ, ಬೆಂಗಳೂರು ಸೈನ್ಯದ ಬ್ರಿಗೇಡ್ ಕಮಾಂಡಿಂಗ್ ಜನರಲ್ ಆಫೀಸರೂ ಉಪಾಧ್ಯಕ್ಷರಾಗಿರುವರು. ಖಾನ್ ಬಹದೂರ್ ಅಬ್ದುಲ್ ರಹಿಮಾನ್‌ರವರು, ರಾ|| ಬ|| ಅಣ್ಣಾಸಾಮಿ ಮೊದಲಾರರು, ಪಿ. ಎ. ಬಾರ್ಟನ್‌ರವರು, ಎ. ಆರ್. ಕಾಕ್ಸ್‌ರವರು, ಎಂ. ಕಾಂತರಾಜಅರಸಿನವರು, ಸರ್. ಮಿಲ್ಲರ್‌ರವರು, ಎಚ್. ವಿ. ನಂಜುಂಡಯ್ಯನವರು, ಮಿಾರ್. ಹಂಸಾಹುಸೇನ್‌ರವರು, ದಿ|| ಬ|| ಕೆ. ಪುಟ್ಟಣ್ಣಶೆಟ್ಟರು, ಕರ್ನಲ್ ಎ. ಇ. ಬೇಟ್‌ರವರು ಮೆಂಬರುಗಳಾಗಿರುವರು. ಅಸಿಸ್ಟೆಂಟ್ ರೆಸಿಡೆಂಟರಾದ ಪಿ. ಬಿ. ವಾರ್ಬರ್ಟನ್‌ರವರೂ, ಮಹಾರಾಜರ ಹುಜೂರು ಸೆಕ್ರೆಟರಿಯವರಾದ ಮಿರ್ಜಾ ಮಹಮ್ಮದ್ ಇಸ್ಮಯಿಲ್‌ರವರೂ ಸಹ ಆನರರಿ ಸೆಕ್ರೆಟರಿಗಳಾಗಿರುವರು. ಬೆಂಗಳೂರಿನಲ್ಲಿರುವ ಮದ್ರಾಸ್ ಬ್ಯಾಂಕಿನ ಏಜಂಟರಾದ ಎಚ್. ಎನ್. ಕಾಲಿಯರ್‌ರವರು ಮಾನನೀಯ ಕೋಶಾಧಿಕಾರಿಗಳಾಗಿರುವರು.

ಬೆಂಗಳೂರಿನಲ್ಲೂ ಮೈಸೂರಿನಲ್ಲೂ ಸಹ ಬೇರೆಬೇರೆ ಉಪಸಂಘಗಳು ಸ್ಥಾಪಿಸಲ್ಪಟ್ಟಿವೆ. ಇದರಂತೆ ಎಲ್ಲಾ ಡಿಸ್ಟ್ರಿಕ್ಟು ಮುಖ್ಯಸ್ಥಲಗಳಲ್ಲೂ ಸಂಘಗಳು ಸ್ಥಾಪಿಸಲ್ಪಡಬೇಕು. ಮತ್ತೂ ನಮ್ಮ ಶ್ರೀಮನ್ಮಹಾರಾಜರು ತೋರಿಸಿ ಕೊಟ್ಟಿರುವ ರಾಜನಿಷ್ಠಾ ಭೂತದಯೆಗಳ ಮೇಲುಪಂತಿಯನ್ನನುಸರಿಸಿ ನಮ್ಮ ಸಂಸ್ಥಾನದ ಎಲ್ಲಭಾಗದ ಪ್ರಮುಖರೂ ಈ ಕಾರ್ಯದಲ್ಲಿ ಮುಂದಾಗಿ ಆಯಾ ಸ್ಥಲಾಧಿಕಾರಿಗಳು ಏರ್ಪಡಿಸಬಹುದಾದ ಸಂಘಗಳಲ್ಲಿ ಸೇರಿ ಜನರು ಸಂತೋಷಪೂರ್ವಕವಾಗಿ ಕೊಡಬಹುದಾದ ವರ್ಗಣಿಹಣವನ್ನು ಜತೆಮಾಡಿ ಸ್ಥಲಿಕಸಂಘಗಳಿಂದ ಬೆಂಗಳೂರಿನಲ್ಲಿರುವ ಮುಖ್ಯಸಂಘಕ್ಕೆ ಕಳುಹಿಸುವ ಏರ್ಪಾಟನ್ನು ಮಾಡುವವರಾಗಲೆಂದು ಕೋರುತ್ತೇವೆ.

ಭಾಗವನ್ನೆಲ್ಲಾ ಹಿಡಿದುಕೊಂಡು, ದಕ್ಷಿಣ ದಿಙ್ಮುಖವಾಗಿ ಫ್ರಾನ್ಸಿಗೂ ಕೆಲದೂರ ನುಗ್ಗಿರುವುದನ್ನು ನೋಡಿದರೆ ಅವರ ವೀರಾವೇಶವೂ, ಅಂತ್ಯಪ್ರತಿಜ್ಞೆಯೂ ಎಷ್ಟು ಭೀಕರವಾಗಿದೆಯೆಂಬುದೂ, ಸೇನಾಬಲವೆಷ್ಟೆಂಬುದೂ ಗೊತ್ತಾಗುವುದು. ಆದರೇನು? ಇದುವರೆಗೆ ಅವರಿಗಾಗಿರುವ ನಷ್ಟಗಳನ್ನು ನೋಡಿದರೆ ಅವರಿಗಾಗಿರುವ ಜಯವು ಅತ್ಯಲ್ಪವೆಂದೇ ಹೇಳಬಹುದು. ಜರ್ಮನರು ಹೀಗೆ ದಕ್ಷಿಣದಿಕ್ಕಿಗೆ ಫ್ರಾನ್ಸಿನಕಡೆ ಗಮನವಿಟ್ಟು ನುಗ್ಗುತ್ತಿರುವುದೇ ಹೆಚ್ಚು. ಬೆಲ್ಜಿಯಮ್ಮಿನ ಪಶ್ಚಿಮಕ್ಕೆ ಇಂಗ್ಲೀಷು ಸಮುದ್ರದಕಡೆಗೆ ಅವರ ಸಾಹಸವೇನೂ ನಡೆದಿಲ್ಲ. ತೀರಪಟ್ಟಣವೊಂದಕ್ಕೆ ಕೆಲ ಸೈನಿಕರು ತಲೆಯಿಕ್ಕಿರಲು, ಇಂಗ್ಲೀಷ್ ಸೇನೆಯು ಹೊಡೆದು ಅಟ್ಟಿಬಿಟ್ಟಿತು.

ಜರ್ಮನಿಯ ಸೇನೆಯು ಬರಗೆಟ್ಟ ಪಿಶಾಚಗಳಂತೆ ಬೆಲ್ಜಿಯಮ್ಮಿನಲ್ಲಿ ಹಾವಳಿಯನ್ನು ಮಾಡುತ್ತಿರುವುದಾಗಿ ಗೊತ್ತಾಗುತ್ತದೆ. ಅವರು ಬ್ರಸೆಲ್ಸ್ ನಗರದಲ್ಲಿ ಜನರಿಗೆ ಹಿಂಸೆಕೊಟ್ಟು ಹಣವನ್ನು ಸುಲಿದುಕೊಂಡುದರಿಂದ ಅಲ್ಲಿ ಕ್ಷಾಮವುಂಟಾಗಿದೆ. ಜರ್ಮನ್ ಸೈನಿಕರಿಗೆ ಆ ಪಟ್ಟಣದವರು ಪ್ರತಿದಿನವೂ ೪೦೦ ಸಾರಾಯಿ ಸೀಸೆಗಳನ್ನೂ ೪೦ ಸಾವಿರ ಪೌನ್ಡು ಮಾಂಸವನ್ನೂ ಒದಗಿಸಬೇಕಾಗಿದೆಯಂತೆ. ಆ ಪಟ್ಟಣದ ರೊಟ್ಟಿಯ ವ್ಯಾಪಾರಿಗಳೆಲ್ಲಾ ಪ್ರತಿದಿನವೂ ಇವರಿಗೆ ೨೦ ಸಾವಿರ ಪೌಂಡು ರೊಟ್ಟಿಗಳನ್ನು ಒಪ್ಪಿಸಬೇಕಂತೆ.

ಅತ್ತ ಪೂರ್ವಪ್ರಷ್ಯಾದಲ್ಲಿ ಜರ್ಮನರಿಗೂ ರಷ್ಯನರಿಗೂ ಯುದ್ಧವು ನಡೆಯುತ್ತಲೇ ಇದೆ. ಮತ್ತೊಂದುಕಡೆ ರಷ್ಯನರು ಆಸ್ಟ್ರಿಯಾವನ್ನು ನುಗ್ಗಿ ಯುದ್ಧಮಾಡುತ್ತಲೇ ಇದ್ದಾರೆ. ಜಪಾನಿನವರು ಕಿಯಾಚೋವನ್ನು ಆಕ್ರಮಿಸಿ ಅದಕ್ಕೆ ಹೊರಗಿನ ಸಂಚಾರಸಂಬಂಧವನ್ನೆಲ್ಲಾ ತಪ್ಪಿಸಿಬಿಟ್ಟಿದ್ದಾರೆ. ಆಂಗ್ಲರ ಸ್ವಾಸ್ಥ್ಯವಾದ ನ್ಯೂಜಿಲ್ಯಾಂಡಿನವರು ತಮ್ಮ ಸೇನೆಯನ್ನು ಜರ್ಮನಿಯವರ ಸಾಮೋಸ ದ್ವೀಪಗಳಲ್ಲಿನ ಒಂದು ಪಟ್ಟಣವನ್ನು ವಶಪಡಿಸಿಕೊಂಡಿರುವರು. ಈ ದ್ವೀಪವು ಆಸ್ಟ್ರೇಲಿಯಾಕ್ಕೂ ಏಷ್ಯಾಕ್ಕೂ ಮಧ್ಯದಲ್ಲಿದೆ.

ಫ್ರೆಂಚರ ವಿಮಾನಗಳು ಯುದ್ಧರಂಗದಲ್ಲಿ ಕೆಲಸಮಾಡುತ್ತಿರುವುವು. ಅವರ ಒಂದು ವಿಮಾನದ ಸಾಹಸದಿಂದ ಜರ್ಮನಿಯ ಅಶ್ವಸೇನೆಯೊಂದು ಫ್ರೆಂಚರ ಅಧೀನವಾಗುವಂತಾಯಿತು. ಇನ್ನೊಂದು ಫ್ರೆಂಚ್ ವಿಮಾನವು ಜರ್ಮನಿಯ ಸೇನಾವ್ಯೂಹದಮೇಲೆ ಹೋಗಿದ್ದು ಬೇಗನೆ ಅವರೇಟಿನಿಂದ ತಪ್ಪಿಸಿಕೊಂಡು ಓಡಿಹೋಯಿತು. ಜರ್ಮನಿಯ ವಿಮಾನದವರು ಪ್ಯಾರಿಸ್ಸಿನಮೇಲೆ ಮತ್ತೊಂದಾವೃತ್ತಿ ಸಿಡಿಮದ್ದನ್ನು ಇಟ್ಟು ಕೆಲ ಸ್ತ್ರೀಯರನ್ನು ಕೊಂದಿತು. ಮತ್ತೂ ಆಂಟ್‌ವರ್ಪಿನಮೇಲೂ ಇನ್ನೊಂದು ಜರ್ಮನ್ ವಿಮಾನವು ಹಾರಾಡುತ್ತಿದ್ದು ಏಟಿಗೆ ಸಿಕ್ಕದೆ ತಪ್ಪಿಸಿಕೊಂಡುಬಂದಿತು.

ಸೆಪ್ಟೆಂಬರ್ ತಾ|| ೪.

ಗ್ಯಾಡೆಂಜಿ ಸಮೀಪದಲ್ಲಿದ್ದ ರಷ್ಯಾದವರ ೨ ಪಟಾಲಮ್ಮುಗಳ ಮೇಲೆ ಜರ್ಮನಿ ಸೇನೆಯು ಬಿದ್ದು ಕಾಳಗಮಾಡಿದಾಗ ರಷ್ಯನರ ಕಡೆ ಸತ್ತವರಲ್ಲಿ ಸೇನಾನಾಯಕನಾದ ಸಾಂಸೋನಾಫ್ ಎಂಬುವನೂ ಒಬ್ಬನು. ರಷ್ಯನರು ಮರುಳಿ ಜರ್ಮನಿಯವರ ಮೇಲೆ ಯುದ್ಧಕ್ಕೆ ಸನ್ನಾಹಮಾಡಿದ್ದಾರೆ.

ಜಪಾನ್ ಸೈನಿಕರು ಕಿಯಾಚೂವಿನಲ್ಲಿದ್ದ ೭ ದ್ವೀಪಗಳನ್ನೂ ಆಗಲೇ ಆಕ್ರಮಿಸಿಕೊಂಡರು. ಆ ಪ್ರಾಂತದ ಸಮುದ್ರದೊಳಗೆ ಜರ್ಮನಿಯವರಿಂದ ಹೂಳಲ್ಪಟ್ಟಿದ್ದ ಸಾವಿರಾರು ಸಿಡಿಮದ್ದುಗಳನ್ನೂ ತೆಗೆದು ಹಾಕಿದರು.

ಲೆಂಬರ್ಗಿಗೆ ೧೦ ಮೈಲಿ ದೂರದಲ್ಲಿ ರಷ್ಯಾಕ್ಕೂ ಆಸ್ಟ್ರಿಯಾಕ್ಕೂ ನಡೆಯುತ್ತಿದ್ದ ಯುದ್ಧವು ತಾ|| ೧ ರಲ್ಲಿ ಮುಗಿದಿತು. ರಷ್ಯಾದವರು ಆಸ್ಟ್ರಿಯನ್ನರ ಮೂರು ಪಟಾಲಮ್ಮುಗಳನ್ನೋಡಿಸಿದರು. ೨ ಕಡೆಯ ಸೇನೆಯಲ್ಲೂ ಬಹಳ ನಷ್ಟವು ಸಂಭವಿಸಿತು. ಆಸ್ಟ್ರಿಯನ್ನರ ೧೫೦ ಫಿರಂಗಿಗಳನ್ನು ರಷ್ಯನ್ನರು ಹಿಡಿದುಕೊಂಡರು.

ಪೂರ್ವ ಪ್ರಷ್ಯಾಕ್ಕೆ ಜರ್ಮನಿಯ ಸೇನೆಯು ಹೆಚ್ಚಾಗಿ ಒದಗಿದುದರಿಂದಲೂ, ಅವರ ದೊಡ್ಡದೊಡ್ಡ ಫಿರಂಗಿಯ ಏಟುಗಳು ಬಲವಾದುದರಿಂದಲೂ ರಷ್ಯನರು ಹಿನ್ನಿಟ್ಟುವಂತಾಯಿತು. ಆದರಮೇಲೆ ರಷ್ಯನರೂ ಸೇನೆಯನ್ನು ಬಲಪಡಿಸಿರುವರು.

ಫ್ರಾನ್ಸ್ ದೇಶದ ರಾಜಧಾನಿಯನ್ನು ಪ್ಯಾರಿಸ್ಸಿನಿಂದ ಬೋರ್ಡಿಯೋ ಪಟ್ಟಣಕ್ಕೆ ಬದಲಾಯಿಸಿರುವರೆಂದು ಹೊಸಸುದ್ದಿಯು ಬಂದಿದೆ. ಈ ಪಟ್ಟಣವು ಆ ದೇಶದ ದಕ್ಷಿಣದ ಕಡೆಯ ನೈಋತ್ಯಮೂಲೆಯಲ್ಲಿ ಸಮುದ್ರದ ಸಮೀಪದೊಳಗಿದೆ.

ಜರ್ಮನಿಯವರು ಬ್ರಸೆಲ್ಸಿನ ಕೋಟೆಯನ್ನೆಲ್ಲಾ ಬಲಪಡಿಸಿ, ಆ ಪ್ರಾಂತದಲ್ಲಿರುವ ಆಂಗ್ಲಸೇನೆಯೆಲ್ಲವೂ ೨೪ ಗಂಟೆಯೊಳಗಾಗಿ ದೇಶವನ್ನು ಬಿಟ್ಟು ಹೋಗಬೇಕೆಂದು ಪ್ರಕಟಿಸಿದ್ದಾರೆ.

ರಷ್ಯಾದವರು ಆಸ್ಟ್ರಿಯಾದವರ ೧೫ನೆಯ ಪಟಾಲಮ್ಮನ್ನು ಲೆಂಬರ್ಗಿಗೆ ಪೂರ್ವದಲ್ಲಿರುವ ಲಾಕ್‌ಜೋಪಟ್ಟಣದ ಬಳಿಯಲ್ಲಿ ಓಡಿಸಿ ೧೦೦ ಮಂದಿ ಸೇನಾಧಿಕಾರಿಗಳನ್ನೂ ೫೦೦೦ ಮಂದಿ ಸೈನಿಕರನ್ನೂ ೩೦ ಫಿರಂಗಿಗಳನ್ನೂ ೭೫ ಧ್ವಜಪಟಗಳನ್ನೂ ವಶಪಡಿಸಿಕೊಂಡಿರುವರು ಎಂದು ಪ್ರಕಟವಾಗಿದೆ. ಮತ್ತೂ ಶತ್ರುಗಳಿಗೆ ದುರ್ಗಮವೆಂದು ಎಣಿಸಲ್ಪಟ್ಟಿದ್ದ ಸಿಲಾಲಿಪಾದ ಬಳಿಯಲ್ಲಿ ನಾವು ಯುದ್ಧವನ್ನು ಮಾಡಿ, ಆಸ್ಟ್ರಿಯಾದ ೪೨೦೦ ಸೈನಿಕರನ್ನು ಕೊಂದೆವು. ಅನೇಕ ಧ್ವಜಪಟಗಳನ್ನೂ ೩೨ ಫಿರಂಗಿಗಳನ್ನೂ ಹಲವುಮಂದಿ ಸೈನಿಕರನ್ನೂ ಒಬ್ಬ ಸೇನಾಧಿಪತಿಯನ್ನೂ ಹಿಡಿದುಕೊಂಡೆವು. ವಾರ್ಸಾಜಿಲ್ಲೆಯಲ್ಲಿ ೪ ಫಿರಂಗಿಗಳನ್ನೂ ೧೦೦೦ ಮಂದಿ ಸೈನಿಕರನ್ನೂ ಹಿಡಿದುಕೊಂಡೆವು ಎಂದು ರಷ್ಯನರು ಪ್ರಕಟಿಸಿದ್ದಾರೆ.

ಜರ್ಮನಿಯವರು ಇದುವರೆಗಿನ ಯುದ್ಧಪದ್ಧತಿಯನ್ನು ಬಿಟ್ಟು, ದೂರದಲ್ಲಿ ನಿಂತು ಇಂಗ್ಲೀಷರ ಅಶ್ವಸೇನೆಯಮೇಲೆ ಫಿರಂಗಿಯ ಮತ್ತೂ ತುಪಾಕಿಯ ಗುಂಡುಗಳನ್ನು ಹಾರಿಸಿ ಯುದ್ಧಮಾಡಲುಪಕ್ರಮಿಸಿದ್ದಾರೆ. ಜರ್ಮನಿಯವರಿಗೆ ಆಗಲೇ ಯುದ್ಧವಿಷಯದಲ್ಲಿ ಬೇಸರಹುಟ್ಟಿ ಎಂದಿಗೆ ಇದು ಮುಗಿಯುವುದೋ ಎಂಬ ಚಿಂತೆಯಿಂದ ಯುದ್ಧಮಾಡುತ್ತಿರುವರಂತೆ. ಜರ್ಮನ್ ಆಕಾಶವಿಮಾನಗಳು ಆಂಟ್‌ವರ್ಪಿನ ಮೇಲೆ ಪುನಃಪುನಃ ಸಿಡಿಮದ್ದುಗಳನ್ನು ಇಡುತ್ತಿರುವುವು. ಇದರಿಂದ ೬೦ ಮನೆಗಳು ಹಾಳಾದುವು. ಆ ವಿಮಾನವನ್ನು ಬೆಲ್ಜಿಯಮ್ಮಿನವರು ಫಿರಂಗಿಗಳಿಂದ ಹೊಡೆಯಲಾಗಿ ವಿಮಾನದಿಂದ ೯ ಸಿಡಿಮದ್ದುಗಳನ್ನಿಟ್ಟರು. ಆ ಮದ್ದಿನ ಗೋಳಗಳಲ್ಲಿದ್ದ ವಸ್ತುಗಳು ಬಹಳ ಉಪದ್ರವಕರವಾದ ಗಾಯಗಳನ್ನು ಮಾಡತಕ್ಕುವಾಗಿದ್ದುವು. ಅವು ಫ್ರಾನ್ಸಿನ ಪ್ರಸಿದ್ಧರಾದ ಕಳ್ಳರ ಗುಂಪಿನವರು ಉಪಯೋಗಿಸಿದಂಥ ಭೀಕರವಾದ ಸಿಡಿಮದ್ದನ್ನು ಹೋಲುತಿದ್ದುವು. ಜರ್ಮನಿಯವರು ಈಗ ಬೆಲ್ಜಿಯಮ್ ದೇಶದಲ್ಲಿರುವ ಹಳೆಯ ಸೇನೆಯನ್ನೆಲ್ಲಾ ತೆಗೆದು ಬ್ರಸಲ್ಸ್‌ಪಟ್ಟಣದ ರಕ್ಷಣೆಗಾಗಿಯೇ ೯೦ ಸಾವಿರ ಹೊಸಸೈನ್ಯವನ್ನು ತುಂಬುವುದಕ್ಕೆ ಏರ್ಪಡಿಸಿರುವರು. ಜರ್ಮನ್‌ಸೈನ್ಯವು ಪ್ಯಾರಿಸ್ಸಿನ ಕಡೆಗೆ ಬರುತ್ತಿರುವುವು. ಇದುವರೆಗೇ ಅಲಸಿಹೋಗಿರುವ ಈ ಸೈನ್ಯವು ಆ ಪಟ್ಟಣದ ಸುತ್ತಲೂ ೬೦ ಮೈಲುಗಳ ವೈಶಾಲ್ಯವುಳ್ಳ ಕೋಟೆಗಳನ್ನು ಜಯಿಸಲಾರದೆಂದು ಊಹಿಸಲ್ಪಡುತ್ತಿದೆ. ಪ್ಯಾರಿಸ್ ಪಟ್ಟಣದಲ್ಲಿರುವ ಹೆಂಗುಸರು ಮಕ್ಕಳುಗಳು ಅವರವರ ನೆಂಟರುಗಳಿರುವ ಬೇರೆಬೇರೆ ಊರುಗಳಿಗೆ ಹೊರಟುಹೋಗುವುದು ಒಳ್ಳೆಯದೆಂದು ಆ ಸರ್ಕಾರದವರು ಪ್ರಕಟಿಸಿದ್ದಾರೆ. ಪ್ಯಾರಿಸ್‌ಪಟ್ಟಣದ ಮೇಲೆ ಆಕಾಶದಲ್ಲಿ ತಾ|| ೩ ರೊಳಗೆ ಭಯಂಕರವಾದ ವಿಮಾನಯುದ್ಧವು ಜರ್ಮನಿಯವರಿಗೂ ಫ್ರೆಂಚರಿಗೂ ನಡೆದಿತು. ಮೇಲೆ ಸಿಡಿಮದ್ದನ್ನೆಸೆಯುತ್ತಿದ್ದ ೨ ಜರ್ಮನ್ ವಿಮಾನಗಳ ಮೇಲೆ ಬೀಳುವುದಕ್ಕೆ ಫ್ರೆಂಚ್‌ವಿಮಾನಗಳು ಹಾರಿದುವು. ಅಷ್ಟರಲ್ಲಿ ಶತ್ರುಗಳ ವಿಮಾನಗಳು ತಪ್ಪಿಸಿಕೊಂಡು ಹೋದುವು. ಇನ್ನೊಂದು ವಿಮಾನದ ಮೇಲೆ ಫ್ರೆಂಚರು ಫಿರಂಗಿಗಳನ್ನು ಹಾರಿಸಲು, ಅದರಲ್ಲಿದ್ದ ಜರ್ಮನರಿಬ್ಬರು ಸತ್ತರು.

ಯುದ್ಧಸಂಬಂಧಿ ದೇಶವಾರ್ತೆಗಳು.

ಕೆನಡಾದೇಶಕ್ಕೆ ಸೇರಿದ ಅಲ್‌ಬರ್ಟಾಜಿಲ್ಲೆಯವರು ೨೦ ಸಾವಿರ ಡಬ್ಬಿಗಳ ಓಟು ಧಾನ್ಯವನ್ನೂ ಕೆಬಿಕ್‌ಜಿಲ್ಲೆಯವರು ೪೦ ಲಕ್ಷ ಪೌಂಡ್ ಜುಸ್ನನ್ನೂ ಇಂಗ್ಲೀಷ್ ಸೇನೆಗೆ ಕಳುಹಿಸಿಕೊಡುತ್ತೇವೆಂದು ತಿಳಿಯಿಸಿದ್ದಾರೆ.

ಮಾರಿಷಸ್ ದ್ವೀಪದವರು ನೌಕಾಸೇನೆಗಾಗಿ ೨೦ ಲಕ್ಷ ಪೌಂಡ್ ಸಕ್ಕರೆಯನ್ನು ಸಹಾಯಮಾಡಿದ್ದಾರೆ.

ಸೀಮೆಯಲ್ಲಿ ಕಾಗದಕ್ಕೆ ದುರ್ಭಿಕ್ಷಬಂದಿರುವುದರಿಂದ ವೃತ್ತಪತ್ರಿಕೆಗಳು ಚಿಕ್ಕಚಿಕ್ಕಾಕೃತಿಯಲ್ಲಿ ಹೊರಡುತ್ತಿವೆ. ಭರತಖಂಡದಲ್ಲೂ ಕಾಗದದ ಬೆಲೆಯು ಹೆಚ್ಚಿಕೊಂಡಿದೆ.

ಇಂಗ್ಲೀಷ್ ಸೇನೆಯಲ್ಲಿ ಲೆಫ್ಟಿನೆಂಟಾಗಿ ಬಂದಿದ್ದ ಹಾರ್ಡಿಂಜರವರಿಗೆ ಏಟುಬಿದ್ದು ಗಾಯವಾಗಿದೆ. ಇವರು ನಮ್ಮ ವೈಸ್ರಾಯರ ಕುಮಾರರು.

ಆಂಗ್ಲಪ್ರಭುತ್ವದವರಲ್ಲಿ ಒಟ್ಟು ೨ ಕೋಟಿ ಟನ್ನುಗಳ ಭಾರದ ಸರಕುಗಳನ್ನು ತುಂಬುವಷ್ಟು ಹಡಗುಗಳಿವೆ. ಇವುಗಳಲ್ಲಿ ೩೦ ಸಾವಿರ ಟನ್ನುಗಳ ಸಾಮಾನನ್ನು ತುಂಬುವಷ್ಟು ಹಡಗುಗಳನ್ನು ಮಾತ್ರ ಶತ್ರುಗಳು ಹಿಡಿದುಕೊಂಡಿದ್ದಾರೆ. ಇಂಗ್ಲೀಷರು ಶತ್ರುಗಳ ಪಕ್ಷದ ೩೬೦ ಹಡಗುಗಳನ್ನು ಇದುವರೆಗೆ ಹಿಡಿದುಕೊಂಡಿದ್ದಾರೆ.

ಆಹಾರ್ಯಪದಾರ್ಥಗಳ ಬೆಲೆಯು ಏರಿರುವುದರಿಂದ ಅರಮನೆಯ ಕೆಲಸಗಾರರಲ್ಲಿ ತಿಂಗಳಿಗೆ ೫ ರೂ. ಸಂಬಳದವರೆಗಿರುವವರಿಗೆ ೨ ರೂ. ಮತ್ತು ೫ ರೂ. ಮೇಲೆ ೮ ರೂ. ಒಳಗಿರುವವರಿಗೆ ೧ ರೂ. ಸಂಬಳವೂ ಹೆಚ್ಚಾಗಿ ಕೊಡಲ್ಪಡುವಂತೇರ್ಪಾಟಾಗಿದೆ. ಅಲ್ಲದೆ ಇಲ್ಲಿಯ ಕೆಲಸಗಾರರ ಉಪಯೋಗಾರ್ಥವಾಗಿ ಒಂದು ಪರಸ್ಪರ ಸಹಾಯಬ್ಯಾಂಕು ಸ್ಥಾಪಿಸಲ್ಪಡುವುದಾಗಾಲೋಚಿಸಲ್ಪಟ್ಟಿರುವುದು.

ಕಳೆದ ತಾ|| ೨ರಲ್ಲಿ ರಾಜಧಾನಿಯ ಹಳ್ಳದಬೀದಿಯಲ್ಲಿ ಒಂದು ಹಾಳುಭಾವಿಯೊಳಕ್ಕೆ ಆಗತಾನೇ ಜನಿಸಿದ್ದ ಮಗುವನ್ನು ಯಾರೋ ದುರಾತ್ಮರು ಬಿಸಾಡಿದ್ದರು. ಪೋಲೀಸರು ಈ ಸಂದರ್ಭವನ್ನು ತಿಳಿದು ಮಗುವನ್ನು ಬಾವಿಯಿಂದ ಹೊರಗೆ ತೆಗೆದು ನೋಡುವಲ್ಲಿ ನಿರ್ಜೀವವಾಗಿದ್ದಿತು. ಈ ಅಮಾನುಷಕೃತ್ಯವನ್ನು ಮಾಡಿದವರನ್ನು ಪೋಲೀಸರು ಕಂಡುಹಿಡಿಯಲೆತ್ನಿಸಿರುವರು.

ರಾಜಧಾನಿಯಲ್ಲಿ ಸಾಹುಕಾರ್ ಚನ್ನಯ್ಯನವರು ನೂತನವಾಗಿ ೩೦,೦೦೦ ರೂ. ಗಳ ವ್ಯಯದಿಂದ ಕಟ್ಟಿಸುತ್ತಿರುವ ಕುಂಚಿಟಿಗರಪಾಠಶಾಲಾ ಕಟ್ಟಡಕ್ಕೆ ತಾ|| ೨ರಲ್ಲಿ ಶಾಸನಕಲ್ಲನ್ನು ಹಾಕುವುದಕ್ಕಾಗಿ ಶ್ರೀಮನ್ಮಹಾರಾಜರವರ ಸ್ವಾರಿಯು ಕಳೆದ ಬುಧವಾರ ಬೆಂಗಳೂರಿಂದ ಮೋಟಾರುಬಂಡಿಯಲ್ಲಿ ಚಿತ್ತೈಸಿತು. ರಾಣಿವಾಸದವರು ಅದರ ಹಿಂದಣದಿವಸ ದಯಮಾಡಿಸಿದರು. ಶ್ರೀಮನ್ ಮಹಾರಾಜರವರ, ಪದ್ಧತಿಯ ಪ್ರಕಾರ ಪೌರ್ಣಮಿ ಸೇವೆಗಾಗಿ ಕಳೆದ ಶುಕ್ರವಾರ ನಂಜನಗೂಡಿಗೆ ದಯಮಾಡಿಸಿದ್ದರು.

ವಿದೇಶಯಾತ್ರೆಯಲ್ಲಿದ್ದ ಬರೋಡಾ ಮಹಾರಾಜರು ಫ್ರಾನ್ಸಿನಲ್ಲೂ ಅವರ ಪತ್ನಿಯವರು ಆಸ್ಟ್ರಿಯಾದೇಶದಲ್ಲೂ ಬೇರೆಬೇರೆಯಾಗಿದ್ದರು. ಈ ಮಧ್ಯೆ ಯುದ್ಧವು ಹುಟ್ಟಿದುದರಿಂದ ಜರ್ಮನಿಯಲ್ಲಿದ್ದ ಪತ್ನಿಯನ್ನು ಕರೆಯಿಸಿಕೊಳ್ಳುವುದು ಕಷ್ಟವಾಗಿ ಅದಕ್ಕಾಗಿ ತಮ್ಮ ಎಡಿಕಾಂಗನ್ನು ಮಹಾರಾಜರು ಏರ್ಪಡಿಸಿ ಕಳುಹಿಸಿಕೊಟ್ಟಿರಲು ಈಗ ಸ್ವಿಟ್ಜರ್‌ಲ್ಯಾಂಡಿಗೆ ಸುರಕ್ಷಿತವಾಗಿ ಬಂದು ತಲುಪಿದ್ದಾರೆ.

ಆಸ್ಟ್ರಿಯಾಕ್ಕೆ ಸಾರಾಯಿಭಟ್ಟಿಗಾಗಿ ಭರತಖಂಡದಿಂದ ಪ್ರತಿವರ್ಷವೂ ಬಹಳ ಅಕ್ಕಿಯು ಸಾಗಿ ಹೋಗುತ್ತಿದ್ದಿತು. ಈಗ ಅದು ನಿಂತುಹೋದುದರಿಂದ ಈ ವರ್ಷ ಇಲ್ಲಿನ ಅಕ್ಕಿಗೆ ಬೆಲೆಯು ಕಡಿಮೆಯಾಗಬಹುದೆಂದು ಊಹಿಸಲ್ಪಟ್ಟಿದೆ.

ಈ ವರ್ಷ ವಿದೇಶಗಳಿಗೆ ಹತ್ತಿಯು ಸಾಗಿಹೋಗುವುದು ಅಸಂಭವವಾದುದರಿಂದ ಹತ್ತಿಯ ಬೆಳಸನ್ನು ಮಾಡುವವರಿಗೆ ಲಾಭವಿಲ್ಲವೆಂತಲೂ ಅದಕ್ಕೆ ಬದಲಾಗಿ ಜೋಳ–ಗೋಧಿ ಮೊದಲಾದ ಬೆಳಸನ್ನು ಮಾಡುವುದು ಬೇಸಾಯಗಾರರಿಗೆ ಕ್ಷೇಮವೆಂತಲೂ ಸರ್ಕಾರದವರು ಎಚ್ಚರಿಸಿದ್ದಾರೆ.

ಲಾಹೋರಿನಲ್ಲಿ ಕಳೆದ ಬಕ್ರೀದ್ ಹಬ್ಬದ ದಿವಸ ೩೦ ಸಾವಿರ ಮಹಮ್ಮದೀಯರು ಒಂದೆಡೆಯಲ್ಲಿ ಕೂಡಿ ಆಂಗ್ಲರ ಜಯಕ್ಕಾಗಿ ದೈವಪ್ರಾರ್ಥನೆಮಾಡಿದರು.

ಸಂಯುಕ್ತರಾಷ್ಟ್ರದ ಸ್ತ್ರೀಯರೂ, ಬೊಂಬಾಯಿಯ ಸ್ತ್ರೀಯರೂ ಸಹ ಆಂಗ್ಲಸೈನಿಕರಿಗಾಗಿ ಉಡುಪುಗಳನ್ನು ಹೊಲೆದು ಕಳುಹಿಸಿಕೊಡಲು ಏರ್ಪಡಿಸಿಕೊಂಡಿದ್ದಾರೆ.

ವಿನಾಯಕಚೌತಿಸಂಬಂಧದಲ್ಲಿ ಕೂಡಿದ್ದ ಸಭೆಯಲ್ಲಿ ಶ್ರೀಯುತ ತಿಲಕರು ಭಾಷಣಮಾಡುವಾಗ್ಗೆ–ಈ ಸಮಯದಲ್ಲಿ ನಾವೆಲ್ಲರೂ ಆಂಗ್ಲಪ್ರಭುತ್ವಕ್ಕೆ ಸಹಾಯಮಾಡಬೇಕು. ಭೀಕರ ಕೃತ್ಯವನ್ನು ಆಚರಿಸಬೇಕೆಂದು ನಾನು ಯಾವಾಗಲೂ ಪ್ರಜೆಗಳಿಗೆ ಬೋಧಿಸಿದುದಿಲ್ಲ. ಪರಿಪಾಲನೆಯ ರೀತಿಯ ವಿಷಯವಾಗಿ ನನಗೂ ಪ್ರಭುತ್ವದವರಿಗೂ ಅಭಿಪ್ರಾಯಭೇದವಿದೆ. ಆದರೆ ಭರತಖಂಡದಲ್ಲಿ ಆಂಗ್ಲಪ್ರಭುತ್ವವನ್ನು ಸಂಪೂರ್ಣವಾಗಿ ನಾಶಮಾಡಬೇಕೆಂಬುದು ನಾನು ಯಾವಾಗಲೂ ಕೋರಿದುದಿಲ್ಲ. ನಾವುಗಳು ಭೇದವನ್ನೆಲ್ಲಾ ಬಿಟ್ಟು ಪ್ರಭುತ್ವದವರಿಗೆ ಮನಃಪೂರ್ವಕವಾಗಿ ಸಹಾಯಮಾಡಲು ನಾವು ಸಿದ್ಧರಾಗಿರುವೆವೆಂಬ ನಂಬಿಗೆಯನ್ನು ಅವರಿಗೆ ನಾವು ಹುಟ್ಟಿಸಬೇಕು. ಈ ದೇಶದೊಡನೆ ಆಂಗ್ಲರ ಸಂಬಂಧವಿರುವುದು ಭಾರತೀಯರ ಲಾಭಕ್ಕೆ ಅತ್ಯವಶ್ಯಕವು'' ಎಂದು ಹೇಳಿದರು.

ಕಲ್ಕತ್ತಾದ ಭಾರತೀಯ ಸ್ವಯಂಸೇವಕರನ್ನು ಸೈನಿಕರ ಆದರೋಪಚಾರ ಕೃತ್ಯಗಳಿಗೆ ಸೇರಿಸಿಕೊಳ್ಳುವಲ್ಲಿ ಬಂಗಾಳಾ ಗೌರ್ನರಾದ ಲಾರ್ಡ್‌ಕಾರ್ಮೈಕೇಲ್‌ರವರು ಒಪ್ಪಿ, ಇಂಡ್ಯಾಸರ್ಕಾರಕ್ಕೆ ತಿಳಿಯಿಸಿರುವಲ್ಲಿ, ಅವರು ಅವಶ್ಯಕವಿಲ್ಲವೆಂದು ತಿಳಿಯಿಸಿದುದರಿಂದ ಜನರಲ್ಲಿ ಆಶಾಭಂಗವಾಗಿದೆ.

ಪೂರ್ವಆಫ್ರಿಕಾದಲ್ಲಿರುವ ಭಾರತೀಯರ ಸ್ವಾಸ್ಥ್ಯದಲ್ಲಿ ಕೆಲ ಭಾರತೀಯರಿದ್ದಾರೆ. ಈಗ ಜರ್ಮನರು ಆ ಭಾರತೀಯರು ಸರ್ವಸ್ವವನ್ನೂ ಸುಲಿದುಕೊಂಡು ಉಟ್ಟ ಬಟ್ಟೆಯಲ್ಲಿ ಅವರನ್ನು ದೇಶದಿಂದ ಹೊರಕ್ಕೆ ಹೊರಡಿಸಿರುವರೆಂದೂ, ಆ ಭಾರತೀಯರು ಕೈಯಲ್ಲಿ ಕಾಸಿಲ್ಲದೆ ಹೊಡಬಾಳುಪಡುತ್ತಿರುವರೆಂದೂ ಬೊಂಬಾಯಿಗೆ ವಾರ್ತೆಬಂದಿದೆ.

ಜರ್ಮನಿ ಆಸ್ಟ್ರಿಯಾ ದೇಶಗಳಿಂದ ಆಂಗ್ಲರ ದೇಶಗಳಿಗೆ ಯಾವಯಾವ ಪದಾರ್ಥಗಳು ವಿಶೇಷವಾಗಿ ಮಾರಾಟವಾಗಿ ಬರುತ್ತಿದ್ದುವೋ, ಅವುಗಳ ಬೆಲೆ ಎಷ್ಟೆಷ್ಟಿದ್ದಿತೋ ಅದನ್ನೆಲ್ಲಾ ತಿಳಿದುಕೊಂಡು ಆ ಪದಾರ್ಥಗಳನ್ನೆಲ್ಲಾ ಆಂಗ್ಲದೇಶದಲ್ಲೇ ಇನ್ನು ಮುಂದೆ ನಿರ್ಮಿಸಿ ಪ್ರಪಂಚದಲ್ಲಿ ಮಾರಾಟಮಾಡಿಸಿ, ಜರ್ಮನ್ ಆಸ್ಟ್ರಿಯಾಗಳ ವ್ಯಾಪಾರವನ್ನು ಹಾಳ್ಮಾಡಬೇಕೆಂದು ಆಂಗ್ಲವರ್ತಕ ಸಂಘದವರು ಪ್ರಯತ್ನಿಸಿದ್ದಾರೆ.

ಬಂಗಾಳಾ ಅಸ್ಸಾಂರಾಷ್ಟ್ರಗಳಲ್ಲಿರುವ ತೇಯಲೆ ತೋಟಗಾರರೂ, ವರ್ತಕರೂ ಸಹ ಯುದ್ಧಮಾಡುತ್ತಿರುವ ಇಂಗ್ಲೀಷ್ ಸೈನಿಕರ ಉಪಯೋಗಕ್ಕೋಸುಗ ಬೇಕಾದಷ್ಟು ಸೊಪ್ಪನ್ನು ಕಳುಹಿಸಿಕೊಡಲು ವಾಗ್ದಾನಮಾಡಿದ್ದಾರೆ.

ಬಂಗಾಳಾದ ಬ್ಯಾರಿಸ್ಟರುಗಳು ವಕೀಲರು–ಮೊದಲಾದವರು ಸ್ವಯಂ ಸೇವಕರಾಗಿ ಯುದ್ಧದಲ್ಲಿ ಯಾವ ಕೆಲಸವನ್ನಾದರೂ ಮಾಡುತ್ತೇವೆಂದು ಸರ್ಕಾರಕ್ಕೆ ತಿಳಿಯಿಸಿಕೊಂಡಿದ್ದರು. ಅವಶ್ಯಕವಿಲ್ಲವೆಂದು ಸರ್ಕಾರದವರು ಉತ್ತರಕೊಟ್ಟರು.

ಭರತಖಂಡದಿಂದ ಯುದ್ಧಕ್ಕೆ ಹೋಗಿರುವ ಜಿ. ಎ. ಸಿ. ಎಂಬ ಪಟಾಲಮ್ಮಿನಲ್ಲಿ ಸೇರಿ ಕೆಲಸಮಾಡಲು ಕುಚ್‌ಬಿಹಾರಿನ ಜಿತೇಂದ್ರಕುಮಾರ ಮಹಾರಾಜರವರು ನಿಯುಕ್ತರಾಗಿರುವರು.

ಕ್ರೈಸ್ತ ಜಗದ್ಗುರುವಾದ ಪೋಪ್‌ರವರು ಈಗಿನ ಯುದ್ಧವು ಆರಂಭಗೊಳ್ಳದಂತೆ ಮಾಡಲು ಮಹಾ ಪ್ರಯತ್ನಪಟ್ಟರು. ಆದರೂ ಫಲಿಸಲಿಲ್ಲ. ಆ ಮನೋವ್ಯಥೆಯಿಂದಲೇ ಕಳೆದ ತಿಂಗಳು ತಾ|| ೨೦ರಲ್ಲಿ ಅವರು ಮೃತರಾದರು. ಸಾಯುವಾಗ್ಗೆ ,, ಈಗ ನಡೆಯುತ್ತಿರುವ ಯೂರೋಪುಖಂಡದ ಯುದ್ಧದಲ್ಲಿ ಸಂಭವಿಸುವ ಕಷ್ಟಗಳನ್ನು ಕಣ್ಣಾರ ನೋಡದೆಯಿರುವಂತೆ ಭಗವಂತನು ನನಗೆ ಕೃಪೆಮಾಡಿದನು.'' ಎಂದು ಅಂತ್ಯೋಕ್ತಿಯನ್ನಾಡಿದರಂತೆ. ಮತ್ತೂ ಪೂರ್ವದ ಪೋಪರುಗಳು ಇಂಥ ಕಾಲಗಳಲ್ಲಿ ನರಹತ್ಯಗಳನ್ನು ನಿಲ್ಲಿಸಬಲ್ಲವರಾಗಿದ್ದರು. ಈಗ ನಾನೇನನ್ನೂ ಮಾಡಲಾರದವನಾಗಿದ್ದೇನೆ. ಎಂದು ಬಹಳ ಧೈನ್ಯದಿಂದ ನುಡಿದರಂತೆ. ಹೊಸಜಗದ್ಗುರುಗಳನ್ನು ಕಳೆದ ತಾ|| ೯ರಲ್ಲಿ ಆರಿಸಿ ನಿಯಮಿಸಿದರು.

ಬರೆದಿರುವನು. ಮತ್ತೂ ಆ ವಿಷಯವನ್ನು ಜಾರ್ಜ್‌ಪ್ರಭುಗಳಿಗೂ ತಿಳಿಸಿರುವನು.

ಡಚ್ ಪ್ರಭುತ್ವದವರು ತಮ್ಮ ತಾಟಸ್ಥ್ಯ ರಕ್ಷಣೆಗಾಗಿಯೆಂದು ಸೇನಾಸನ್ನಾಹವನ್ನು ಮಾಡಲು ಪಾರ್ಲಿಮೆಂಟಿನಲ್ಲಿ ಧನವ್ಯಯದ ನಿರ್ಧಾರವನ್ನು ಮಾಡಿರುವರು.

ಜಪಾನಿನವರು ತಮ್ಮ ಯುದ್ಧದ ಏರ್ಪಾಟುಗಳನ್ನೂ ಸೇನೆಯ ಚಲನವನ್ನೂ ಬಹಳ ಗೋಪ್ಯವಾಗಿ ನಡೆಯಿಸುತ್ತಿರುವರು.

ಆಗಸ್ಟ್ ತಾ|| ೨೯ ರಲ್ಲಿ ಇಂಗ್ಲೀಷ್‌ಸೇನೆಯು ೨೦೦ ಮಂದಿ ಟೋರ್ನೇಯಿ ಬಳಿಯಲ್ಲಿ ನಿಂತಿರುವಾಗ ಜರ್ಮನರ ೫ ಸಾವಿರ ಸೇನೆಯು ಆಕಸ್ಮಾತ್ ಮೇಲೆ ಬೀಳಲು, ಅವರೊಡನೆ ಹೋರಾಡಿ, ಅನೇಕರನ್ನು ಕೊಂದು ಉಳಿದ ೩೦೦ ಮಂದಿ ಇಂಗ್ಲೀಷ್ ಸೈನಿಕರು ಕಂಬ್ರೈಗೆ ತೆರಳಿದರು. ಹಲವು ಮಂದಿಗಳು ಅಲ್ಲಿ ಗಾಯಗೊಂಡರು. ಕೆಲರು ಸತ್ತರು.

ಜರ್ಮನರು ಬೆಲ್ಜಿಯಮ್ಮಿಗೆ ಸೇರಿದ ಲೋವೈನ್ ಪಟ್ಟಣವನ್ನು ಹಿಡಿದುಕೊಂಡ ಮೇಲೆ, ಅಲ್ಲಿನ ಪ್ರಜೆಗಳು ಬೇಡಬೇಡವೆಂದು ಬೇಡಿಕೊಂಡರೂ ಲಕ್ಷ್ಯಮಾಡದೆ ಅವರನ್ನೆಲ್ಲಾ ಸೆರೆಹಿಡಿದು ಹೆಂಗುಸರನ್ನೆಲ್ಲಾ ಹೊಗೆ ಬಂಡಿಯಮೇಲೆ ಎಲ್ಲಿಗೋ ಸಾಗಿಸಿ, ಆ ಪಟ್ಟಣದಲ್ಲಿದ್ದ ದೇವಾಲಯಗಳು–ವಿದ್ಯಾಶಾಲೆಗಳು–ಪುಸ್ತಕಾಲಯಗಳು ಮೊದಲಾದುವುಗಳೊಡನೆ ಪಟ್ಟಣವನ್ನೆಲ್ಲಾ ಸುಟ್ಟು ಹಾಳ್ಮಾಡಿದರು. ಅನೇಕ ಪ್ರಸಿದ್ಧಪುರುಷರನ್ನು ಕೊಂದುಬಿಟ್ಟರು. ಅನೇಕ ವಿದ್ವಾಂಸರಿಗೆ ನೆಲೆಮನೆಯಾಗಿದ್ದ–೪೫ ಸಾವಿರ ಪ್ರಜಾಸಂಖ್ಯೆಯುಳ್ಳದಾಗಿದ್ದ–ಆ ಪಟ್ಟಣವು ಈಗ ಭಸ್ಮಾವಶೇಷವಾಗಿರುವುದು. ಈ ಲೋವೈನ್ ಪಟ್ಟಣದ ಪ್ರಜೆಗಳು ತಮ್ಮ ಮೇಲೆ ಗುಂಡನ್ನು ಹಾರಿಸಿದರೆಂಬ ಕಾರಣವನ್ನು ಹೇಳಿಕೊಂಡು ಜರ್ಮನಿಯವರು ಈ ನರರಾಕ್ಷಸ ಕೃತ್ಯವನ್ನು ಮಾಡಿದ್ದಾರೆ. ಅದರ ನಿಜಸ್ಥಿತಿಯೇನೆಂದರೆ— ಆ ಪಟ್ಟಣದಲ್ಲಿ ಜರ್ಮನರೇ ರಾತ್ರಿಯಹೊತ್ತು ಹೊರಗಿದ್ದ ಜರ್ಮನ್ ಸೇನೆಯನ್ನು ಶತ್ರುಸೈನ್ಯವೆಂದು ತಿಳಿದು ಗುಂಡು ಹೊಡೆದಿದ್ದರಂತೆ.

ಜಲಯುದ್ಧ,

ಕೇಯಿಜರ್ ವಿಲ್‌ಹೆಲಂ ಎಂಬ ಜರ್ಮನ್‌ಯುದ್ಧದ ಹಡಗನ್ನು ಹೈಫ್ಲೈಯರ್ ಎಂಬ ಇಂಗ್ಲೀಷರ ಹಡಗು ಮುಳುಗಿಸಿದ ವಿಷಯವನ್ನು ಕುರಿತು ಪಾರ್ಲಿಮೆಂಟಿನಲ್ಲಿ ನೌಕಾಸೇನಾಂಗ ಮಂತ್ರಿಯವರಾದ ಮಿಸ್ಟರ್ ಚರ್ಚಿಲ್‌ರವರು ಮಾತನಾಡುವಾಗ್ಗೆ ಆ ಜರ್ಮನರ ಹಡಗಿನಲ್ಲಿ ೧೦ ಫಿರಂಗಿಗಳಿದ್ದುವೆಂದೂ, ಅದು ಗುಡ್‌ಹೋಪ್ ಭೂಶಿರವನ್ನು ಬಳಸಿ ಬರುತ್ತಿದ್ದ ಹಡಗುಗಳನ್ನೆಲ್ಲಾ ಹಿಂಸೆಪಡಿಸುತ್ತಿದ್ದಿತೆಂದೂ, ಅದು ಮುಳುಗಿಹೋಗುವುದರೊಳಗಾಗಿ ಅದರಲ್ಲಿದ್ದವರೆಲ್ಲಾ ಇಳಿಯಿಸಲ್ಪಟ್ಟರೆಂದೂ, ನಮ್ಮ ಹೈಫ್ಲೈಯರ್‌ನಲ್ಲಿದ್ದವರಲ್ಲಿ ಒಬ್ಬನು ಸತ್ತು ೫ ಮಂದಿ ಗಾಯಗೊಂಡರೆಂದೂ ಹೇಳಿದರು. ಈ ಶತ್ರುಗಳ ಹಡಗು ಮುಳುಗಿಸಲ್ಪಟ್ಟುದರಿಂದ ಆ ಮಾರ್ಗದಲ್ಲಿ ವ್ಯಾಪಾರವು ನಿರಾತಂಕವಾಗಿ ನಡೆಯಲು ಬಹಳ ಸಹಾಯವಾಯಿತು.

ಜರ್ಮನಿಯವರು ೧೯೧೧ ನೆಯ ವರ್ಷದಲ್ಲಿ ೯೧ ಸಾವಿರ ರೂ. ಮುಟ್ಟಿಸಿ ಕಟ್ಟಿಸಿದ್ದ ೪|| ಸಾವಿರ ಟನ್ನುಗಳ ಭಾರದ ೩ನೆ ತರಗತಿಯ ಮ್ಯಾಗ್ಡಬರ್ಗ್ ಎಂಬ ಯುದ್ಧದ ಹಡಗು ಮಂಜುಕವಿದಿದ್ದುದರಿಂದ ದಡವನ್ನು ಕಾಣದೆ ಎಸ್ಥೋಮುದ್ವೀಪದ ಬಳಿಯಲ್ಲಿ ದಡಕ್ಕೆ ಕಚ್ಚಿತು. ಸಮೀಪದಲ್ಲೇ ರಷ್ಯನರ ಯುದ್ಧದ ಹಡಗುಗಳಿದ್ದುವು. ಅವು ಅದರ ಮೇಲೆ ಗುಂಡನ್ನು ಹಾರಿಸಿದುವು. ಒಳಗಿದ್ದವರಲ್ಲಿ ೧೭ ಮಂದಿ ಸತ್ತರು; ೨೨ ಮಂದಿಗೆ ಗಾಯವಾಯಿತು; ೮೫ ಮಂದಿ ಕಾಣಿಸದೆ ಹೋದರು. ಅವರಲ್ಲಿ ಹಡಗಿನ ಕ್ಯಾಪ್ಟನ್ನೂ ಒಬ್ಬನು. ಹಡಗು ಧ್ವಂಸವಾಯಿತು.

ತಾ|| ೨೭ ರ ಸಾಯಂಕಾಲ ಲಂಡನ್ನಿನಲ್ಲಿ ಕಾಮನ್ಸ್ ಮಹಾಸಭೆಯು ಸೇರಿದ್ದಾಗ ಮುಖ್ಯ ಮಂತ್ರಿ ಆಸ್ಕ್ವಿತ್‌ರವರು ಪ್ರಕೃತದ ಯುದ್ಧ ವಿಷಯವನ್ನು ಕುರಿತು ಮಾತನಾಡುವಾಗ–ಬೆಲ್ಜಿಯಮ್ಮಿನವರು ಆತ್ಮಗೌರವರಕ್ಷಣೆಗಾಗಿ ಸರ್ವನಾಶವಾದರೂ ಸರಿಯೆಂದು ಆಶ್ಚರ್ಯಕರವಾಗಿ ಯುದ್ಧನಡೆಯಿಸುತ್ತಿರುವುದನ್ನು ಕುರಿತು ಶ್ಲಾಘನೋಕ್ತಿಗಳನ್ನಾಡುವಲ್ಲಿ ಹೇಳಿದುದೇನೆಂದರೆ-ಕಳೆದ ಕೆಲವು ವಾರಗಳಿಂದ ಬೆಲ್ಜಿಯಮ್ಮಿನವರೂ ಅದರ ಪ್ರಭುಗಳೂ ತಮ್ಮ ಸ್ವಾತಂತ್ರ್ಯವನ್ನು ಉಳುಹಿಕೊಳ್ಳುವುದಕ್ಕಾಗಿ ಧೈರ್ಯಸ್ಥೈರ್ಯಗಳಿಂದ ಯುದ್ಧಮಾಡಿದ ರೀತಿಯಲ್ಲಿ ಇದುವರೆಗೆ ಯಾರೂ ಹೋರಾಡಿರುವುದಿಲ್ಲ. ಶತ್ರುಗಳು ಹಠಾತ್ತಾಗಿ ತಮ್ಮ ದೇಶದ ಮೇಲೆ ಬಿದ್ದು ಪಟ್ಟಣಗಳನ್ನೂ ಹಳ್ಳಿಗಳನ್ನೂ ಹಾಳ್ಮಾಡಿ ಆಸ್ತಿಗಳನ್ನು ದೋಚಿಕೊಂಡು, ಪ್ರಜೆಗಳನ್ನು ಹಿಂಸೆಪಡಿಸುತ್ತಿರುವರೆಂಬ ಅಂಜಿಕೆಯಿಂದಲಾದರೂ ಹಿಂದೆಗೆಯದೆ ಅಚಲವಾದ ಧೈರ್ಯದಿಂದ ಬೆಲ್ಜಿಯನ್ನರು ತಮಗೆ ಎಷ್ಟೋಭಾಗ ಹೆಚ್ಚಿನದಾಗಿದ್ದ ಜರ್ಮನ್ ಸೇನೆಯಮೇಲೆ ಯುದ್ಧಕ್ಕೆ ನಿಂತರು. ತೆರೆತೆರೆಗಳಂತೆ ತಮ್ಮ ದೇಶದಮೇಲೆ ಬಂದು ಬೀಳುತ್ತಿದ್ದ ಶತ್ರುಸೇನೆಗೆ ನುಗ್ಗಲು ಅವಕಾಶ ಕೊಡದೆ ತಡೆದರು. ಲೀಜು ಕೋಟೆಯನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಅವರು ತೋರಿಸಿದ ಪರಾಕ್ರಮವು ಸ್ವಾತಂತ್ರ್ಯರಕ್ಷಣ ಚರಿತ್ರದಲ್ಲಿ ಆವೇಶವನ್ನು ಹುಟ್ಟಿಸುವ ಒಂದು ದೊಡ್ಡ ವಿಷಯವಾಗಿ ಪರಿಗಣಿಸಲ್ಪಡುವಂತಾಯಿತು. ಬೆಲ್ಜಿಯಮ್ಮು ಶಾಶ್ವತವಾದ ಕೀರ್ತಿಯನ್ನು ಸಂಪಾದಿಸಿತು. ಸ್ವಾತಂತ್ರ್ಯ ರಕ್ಷಣೆಗಾಗಿ ತಮ್ಮ ಸೌಖ್ಯವನ್ನೂ ಕ್ಷೇಮವನ್ನೂ ಧಾರೆಯೆರೆಯುವ ಮಾನವರ ಕೀರ್ತಿಯು ಆಚಂದ್ರಾರ್ಕವಾಗಿ ನಿಲ್ಲುವುದು. ನಮಗೆ ಬೆಲ್ಜಿಯಮ್ಮಿನವರು ಸ್ನೇಹಿತರಾಗಿರುವುದಕ್ಕಾಗಿ ನಾವು ಹೆಮ್ಮೆಪಡುವಂತಾಗಿದೆ. ನಾವು ಮನಃಪೂರ್ವಕವಾಗಿ ಅವರಿಗೆ ಸಾಹಾಯ್ಯಮಾಡುತ್ತಿದ್ದೇವೆ. ಅದೇನೆಂದರೆ–

[ಸಪ್ಲಿಮೆಂಟನ್ನು ನೋಡಿರಿ.]

ಮೈಸೂರ್ ಸ್ಟಾರ್.

೧೯೧೪ ನೆಯ ಸೆಪ್ಟೆಂಬರ್ ತಾ|| ೬ನೆಯ ಭಾನುವಾರ.

ಸತ್ಪಾತ್ರ ಸಹಾಯ.

ಈಗಿನ ಯುದ್ಧಕ್ಕೆ ಮಹಾವ್ಯಾಪ್ತಿಯನ್ನುಂಟುಮಾಡಿದುದು ಜರ್ಮನ್ ಪ್ರಭುತ್ವವಾಗಿರುತ್ತದೆ. ಆಶ್ರಿತರಕ್ಷಣೆ, ದೀನಜನೋದ್ಧರಣೆ, ಮಿತ್ರಸಹಾಯ ಲೋಕಶಾಂತಿಸ್ಥಾಪನೆ–ಈ ರೂಪವಾದ ಸದ್ಧರ್ಮಗಳ ಅನುಷ್ಠಾನಕ್ಕಾಗಿ ಆಂಗ್ಲಪ್ರಭುತ್ವದವರು ಯುದ್ಧಕಾರ್ಯ ಪ್ರವರ್ತಕರಾಗಬೇಕಾಯಿತು. ವೀರಾವೇಶದಿಂದ ದೇಹದ ಸ್ಮೃತಿಯನ್ನು ಕೂಡ ತಪ್ಪಿಸತಕ್ಕ ಯುದ್ಧಾಂಗಣದಲ್ಲಿಯೂ ಕೂಡ ಆಂಗ್ಲಪ್ರಭುತ್ವದ ಸೈನಿಕರು ಆಚರಿಸುತ್ತಿರುವ ನೀತಿಬದ್ಧಕೃತ್ಯಗಳನ್ನೂ, ನಿರಾಯುಧರಾದ-ನಿರಪರಾಧಿಗಳಾದ-ಪ್ರಜೆಗಳ ಮೇಲೂ ಕೂಡ ಜರ್ಮನಿಯವರು ತೋರಿಸುತ್ತಿರುವ ಕ್ರೂರಮೃಗ ಸಹಜವಾದ ದೌರ್ಜನ್ಯಗಳನ್ನೂ ನಾವು ಯುದ್ಧವಾರ್ತಾತರಂಗಗಳ ಮೂಲಕವಾಗಿ ಕೇಳಿದರೆ, ಆಂಗ್ಲಪ್ರಭುತ್ವಕ್ಕೆ ನಾವು ಅಧೀನವಾಗಿರುವಂತೆ ಮಾಡಿರುವ ಭಗವಂತನ ಉಪಕಾರವನ್ನು ಎಷ್ಟುಸ್ಮರಿಸಿದರೂ ತೀರದು. ಸ್ವತಃ ಜರ್ಮನ್‌ಪ್ರಜೆಗಳೇ ಈಗಿನ ಅವರ ಪ್ರಭುತ್ವದವರು ತೀಟೆಚಗಳವನ್ನು ತೆಗೆದು ದೇಶದ ಸರ್ವಾನರ್ಥಕ್ಕೆ ಮೂಲರಾಗಿರುವುದನ್ನು ಕಂಡು ಕಸಿಸುತ್ತಿರುವರು. ಹೀಗಿರುವಲ್ಲಿ, ಅಂಥ ಪ್ರಭುತ್ವವನ್ನು ನಿರ್ಮೂಲವಾಗಲೆಂದು ಲೋಕವೆಲ್ಲಾ ಕೋರುವುದರಲ್ಲಿ ಆಶ್ಚರ್ಯವೇನು? ಆಂಗ್ಲರ ಪರಿಪಾಲನೆಯಿಂದ ಸುಖಶಾಂತಿಗಳನ್ನು ಪಡೆದು ಕೃತಜ್ಞತಾಬದ್ಧರಾಗಿರುವ ಭಾರತೀಯರಂತು ಸರ್ವಾವಸ್ಥೆಗಳಲ್ಲೂ ಆಂಗ್ಲರ ನಿರುಪಾಧಿಕಜಯಲಾಭವನ್ನೂ ಶತ್ರುಗಳ ನಿಶ್ಶೇಷಕ್ಷಯವನ್ನೂ ವಿಶೇಷತಃ ಸಂಪ್ರಾರ್ಥಿಸುವುದು ಸಂಪೂರ್ಣವಾಗಿ ಸಹಜವಾಗಿರುವುದು.

ಭರತಖಂಡವು ಈಗ ತನ್ನ ರಾಜನಿಷ್ಠೆಯನ್ನು ತೋರಿ ಅಚ್ಯುತವಾದ ಸಾಮ್ರಾಜ್ಯದ ಪ್ರೀತಿಪ್ರಸಾದವನ್ನು ಗಳಿಸುವುದಕ್ಕೆ ಇದು ಮಹಾ ಪರ್ವದಂಥ ಪುಣ್ಯಸಮಯವು. ಆಗೋಪಾಲಭೂಪಾಲ ಪರ್ಯಂತವಾಗಿ ತಂತಮ್ಮ ಯಥಾಶಕ್ತಿ ಸಹಾಯಗಳನ್ನು ಸಾಮ್ರಾಜ್ಯಪ್ರಭುತ್ವಕ್ಕೆ ಈಗ ಅರ್ಪಿಸಬೇಕು. ಹಾಗೆ ಮಾಡಲು ಭರತಖಂಡವು ಸ್ವಲ್ಪವೂ ಹಿಂದೆಗೆಯುವುದಿಲ್ಲವೆಂಬ ಚಿಹ್ನೆಯು ಇದುವರೆಗೆ ನಡೆದಿರುವ ವಾಗ್ದಾನಗಳಿಂದಲೂ ಅರ್ಪಣೆಗಳಿಂದಲೂ ವ್ಯಕ್ತವಾಗಿರುವುದು ಅತ್ಯಂತ ಸಂತೋಷಪ್ರದವಾಗಿದೆ.

ಭರತಖಂಡದ ಸಾಮಂತರಾಜರುಗಳು ನಾನಾ ಸಂಘದವರು, ಸ್ಥಾನಿಕ ಪ್ರಭುತ್ವದವರು, ಪಾಳೆಯಗಾರರು, ಜಮೀನ್‌ದಾರರು, ಸ್ತ್ರೀಯರು, ಶಾಲಾ ವಿದ್ಯಾರ್ಥಿಗಳು ಮೊದಲಾದವರೆಲ್ಲಾ ಹುರುಪಿನಿಂದ ತಮ್ಮ ಕೈಲಾದ ಸಹಾಯ ಮಾಡುವುದಕ್ಕೆ ಸಿದ್ಧರಾಗಿರುವುದನ್ನು ಕೇಳಿ ಅನ್ಯದೇಶೀಯರೆಲ್ಲರೂ ಆಶ್ಚರ್ಯಪಡುತ್ತಿರುವರು. ಬಲಿ-ಶಿಬಿ-ಕರ್ಣ ಮೊದಲಾದ ಮಹಾದಾನಿಗಳು ಅವತರಿಸಿದ ಭಾರತಪುಣ್ಯಭೂಮಿಯ ಜನರಲ್ಲಿ ಇಂಥ ಸತ್ಪಾತ್ರದಾತೃತ್ವವನ್ನು ಕಾಣುವುದು ಆಶ್ಚರ್ಯವೇನೂ ಅಲ್ಲ. ಉಚಿತವಾದ ಪಾತ್ರದಲ್ಲಿ ದಾನಮಾಡುವ ಗುಣವು ಭಾರತೀಯರ ರಕ್ತದಲ್ಲೇ ಅಂಟಿಬಂದಿದೆ. ತಾನು ಗಳಿಸಿದ ಒಂದು ಸೆರೆಯನ್ನದಲ್ಲಿ ಬೇಡಿದವನಿಗೆ ತದರ್ಧವನ್ನು ಕೊಟ್ಟು ತೃಪ್ತಿಪಡಿಸುವ ನಿಜವಿತರಣಗುಣವನ್ನು ಹೊತ್ತುಹೊತ್ತಿಗೆ ತಿರಿಸೆಯನ್ನೆತ್ತುವ ಸಾಮಾನ್ಯಜನರಲ್ಲೂ ಕೂಡ ಕಾಣಬಹುದು.

ವಿಚಾರಮಾಡಿ ನೋಡಿದರೆ ಆಂಗ್ಲಸಾಮ್ರಾಜ್ಯದ ಸ್ಥಿರತೆಯಿಂದ ಭರತಖಂಡದ ಪರಿಪಾಲನೆಯು ನಿಷ್ಕಂಟಕವಾಗಿರುವುದು. ಆನಿಷ್ಕಂಟಕತ್ವದಿಂದ ದೇಶಶಾಂತಿಯೂ ಅದರಿಂದ ಸಕಲಪ್ರಜಾಸೌಖ್ಯಸಮೃದ್ಧಿಯೂ ಉಂಟಾಗಿರುವುದು. ಇನ್ನೂ ಅಧಿಕವಾದ ಶ್ರೇಯಸ್ಸು ಅದರಿಂದಲೇ ಉಂಟಾಗಬೇಕಾಗಿರುವುದು. ಅದುಕಾರಣ ಆಂಗ್ಲಸಾಮ್ರಾಜ್ಯದ ಜಯವೂ ಸ್ಥಿರತೆಯೂ ಭಾರತೀಯರ ಸ್ವಲಾಭವೇ ಹೊರತು ಬೇರೊಂದಲ್ಲ. ಹೀಗಿರುವಾಗ ಈಗಿನ ವಿಷಮಸಮಯದಲ್ಲಿ ಕೈಲಾದ ಸಹಾಯವನ್ನು ಪ್ರತಿಯೊಬ್ಬ ಭಾರತೀಯನೂ ಮಾಡುವುದರಿಂದ ತನ್ನನಿಜವಾದ ರಾಜನಿಷ್ಠೆಯನ್ನೂ, ಸ್ವದೇಶಹಿತವನ್ನೂ, ಸ್ವಸೌಖ್ಯವನ್ನೂ ನೆರವೇರಿಸಿಕೊಡುವ ಒಂದಾನೊಂದು ಅತ್ಯಂತ ಸತ್ಪಾತ್ರದಾನವನ್ನೇ ಮಾಡಿದವನಾಗುವನು. ಇಂಥ ದಾನದ ಪುಣ್ಯಫಲವನ್ನು ಪ್ರತಿಯೊಬ್ಬ ಭಾರತೀಯನೂ ಪಡೆದುಕೊಳ್ಳಲು, ಅನುಕೂಲಿಸುವಂತೆ ನಮ್ಮ ಸರ್ವಪ್ರಿಯ ವೈಸ್ರಾಯರಾದ ಲಾರ್ಡ್ ಹಾರ್ಡಿಂಜ್‌ರವರು ಒಂದು ನಿಧಿಯನ್ನು ಸ್ಥಾಪಿಸಿಕೊಟ್ಟಿರುವುದಕ್ಕಾಗಿ ನಾವು ಕೃತಜ್ಞತೆಯಿಂದ ವಂದಿಸಿ ನಮ್ಮ ಯಥಾಶಕ್ತಿ ಸಹಾಯವನ್ನು ಆ ನಿಧಿಗೆ ಮಾಡುವುದು ಪವಿತ್ರವಾದಕರ್ತವ್ಯವು.

ಯುದ್ಧ ಸಮಯದಲ್ಲಿ ಎಷ್ಟು ಕೋಟಿಗಟ್ಟಲೆ ಧನವು ಒದಗಿದರೂ ಸಾಲದು. ಯುದ್ಧದಲ್ಲಿ ಮಡಿದವರ ಕುಟುಂಬದ ರಕ್ಷಣೆ—ಏಟುತಿಂದು ಗಾಯಗೊಂಡವರ ಚಿಕಿತ್ಸೆ, ಉಪಚಾರ, ಸೈನಿಕರನ್ನು ಸಾಗಿಸುವುದು, ಅವರ ಉಡುಪು ಆಹಾರ ಮೊದಲಾದವುಗಳನ್ನೊದಗಿಸುವುದು, ಇತ್ಯಾದಿಯಾಗಿ ಅನಂತವಿಧದ ವೆಚ್ಚಗಳಿರುವುವು. ಇಂಗ್ಲೆಂಡು ಸರ್ಕಾರದವರು ಈಗಿನ ಯುದ್ಧಕ್ಕೆ ನೂರಾರು ಕೋಟಿಗಟ್ಟಲೆಯ ರೂ. ಗಳನ್ನು ಬೊಕ್ಕಸದಿಂದ ವ್ಯಯಮಾಡುತ್ತಿರುವರು. ಅದೂ ಸಾಲದು. ನಮ್ಮ ಯುವಚಕ್ರವರ್ತಿಯವರು ಇಂಗ್ಲಾಂಡಿನಲ್ಲಿ ಒಂದು ಸಹಾಯಕನಿಧಿಯನ್ನು ಸ್ಥಾಪಿಸಿರುವರು. ಅದು ಆಗಲೇ ೩೦ ಕೋಟಿಗಳ ಮೇಲೆಯೇ ಆಗಿರುವುದು. ಅದರ ಮೇಲೆ ಆಂಗ್ಲಸ್ವಾಸ್ಥ್ಯಗಳೆಲ್ಲಾ ಅತಿಶಯವಾಗಿ ಧನಾದಿಸಹಾಯವನ್ನು ಮಾಡುತ್ತಿರುವುವು. ಅವೆಲ್ಲಾ ಸೈನಿಕರುಗಳ ಹಿತಕ್ಕೆ ಉಪಯೋಗಿಸಲ್ಪಡುತ್ತಿವೆ. ನಮ್ಮ ಭರತಖಂಡದಿಂದಲೂ ಸಹ ಕೆಲವು ಸೇನೆಗಳು ಕಳುಹಲ್ಪಟ್ಟೂ ಕೆಲವು ಕಳುಹಲ್ಪಡುವುದರಲ್ಲೂ ಇವೆ. ಹೀಗೆ ಇಲ್ಲಿಂದ ಯುದ್ಧಕ್ಕೆ ಹೋಗುವ ಭಾರತೀಯ ಸೈನಿಕರ ಮತ್ತು ಇಂಗ್ಲೀಷ್‌ಸೈನಿಕರ ಕುಟುಂಬಿಕರಿಗೆ ಸಹಾಯಮಾಡುವುದಕ್ಕೂ, ಈಗಿನ ಯುದ್ಧಪ್ರಕರಣದಿಂದ ವ್ಯಾಪಾರಕ್ಕೆ ದಕ್ಕೆಬಿದ್ದು ಬೆಲೆಗಳು ಹೆಚ್ಚಿಹೋಗಿರುವುದರಿಂದಲೂ ಅನೇಕರು ತಮ್ಮ ತಮ್ಮ ಉದ್ಯೋಗಗಳನ್ನು ಕಳೆದುಕೊಂಡಿರುವುದರಿಂದಲೂ ಜೀವನಕ್ಕಿಲ್ಲದೆ ತಾಪತ್ರಯಪಡತಕ್ಕವರಿಗೆ ಸಹಾಯ ಮಾಡುವುದಕ್ಕೂ, ಯುದ್ಧಕ್ಕೆ ಹೋದ ಸೈನಿಕರು ನಷ್ಟವಾಗುವುದೇ ಮೊದಲಾದ ಕಾರಣಗಳಿಂದ ನಿರಾಶ್ರಿತರಾದ ಅವರ ಸಂಬಂಧಿಗಳ ರಕ್ಷಣೆಗಾಗಿಯೂ ಸಹ ನಮ್ಮ ವೈಸ್ರಾಯರು ಜಾರ್ಜ್ ಸಾರ್ವಭೌಮರ ಅನುಮತಿಯ ಮೇರೆ ,, ಇಂಪೀರಿಯಲ್ ಇಂಡಿಯನ್ ರಿಲೀಫ್ ಫಂಡ್ '' ಎಂಬ ಹೆಸರಿಂದ ಸಹಾಯಕ ನಿಧಿಯನ್ನು ಸ್ಥಾಪಿಸಿರುವರು. ಅದು ಕಾರಣ, ಈ ನಿಧಿಗೆ ಸಹಾಯಮಾಡಿದವರು ತಮ್ಮ ರಾಜಭಕ್ತಿಯನ್ನು ನಿವೇದಿಸುವ ವ್ಯಾಜದಿಂದ ಸ್ವಭಾಂಧವರನ್ನು ಸಂರಕ್ಷಿಸಿದ ವಿಶೇಷ ಪುಣ್ಯಕ್ಕೆ ಭಾಗಿಗಳಾಗುವರು.

ಈ ನಿಧಿಗೆ ಭರತಖಂಡದ ಕೆಲ ಸಾಮಂತರಾಜರು ಲಕ್ಷಗಟ್ಟಲೆಯಾಗಿಯೂ ಸಾವಿರಗಟ್ಟಲೆಯಾಗಿಯೂ ಯಥಾಶಕ್ತಿ ಸಹಾಯ ಮಾಡಿಯೂ ಮಾಡುತ್ತಲೂ ಇರುವರು. ಪ್ರತಿಯೊಂದು ಅಧಿಪತ್ಯಗಳ ಗೌರ್ನರುಗಳೂ ಇದರ ಶಾಖಾನಿಧಿಗಳನ್ನು ಸ್ಥಾಪಿಸಿರುವರು. ಅಲ್ಲಲ್ಲಾ ಒಂದೊಂದುಕಡೆಗೆ ಆಗಲೇ ೮-೧೦ ಲಕ್ಷದಷ್ಟು ಕೂಡಿರುವುದು. ಎಲ್ಲಾ ಜಿಲ್ಲೆಗಳಲ್ಲೂ ನಗರಗ್ರಾಮಗಳಲ್ಲೂ ಈ ನಿಧಿಗಾಗಿ ಹಣವನ್ನು ಕೂಡಿಸುವ ಪ್ರಯತ್ನವು ನಡೆಯುತ್ತಿರುವುದು.

ಮೈಸೂರು ಸಂಸ್ಥಾನದ ಸಹಾಯ.

೫೦ ಲಕ್ಷ ರೂ. ಗಳನ್ನು ಶ್ರೀಮನ್ಮಹಾರಾಜರು ದಾನಮಾಡಿದರು.

ಭರತಖಂಡದ ಯಾವುದೊಂದು ಸಂಸ್ಥಾನದ ಪ್ರಭುಗಳೂ ಮಾಡದೆ ಇರುವಂತಹ ವಿಶೇಷದ್ರವ್ಯವನ್ನು (ಎಂದರೆ || ಕೋಟಿ ರೂ.) ಗಳನ್ನು ನಮ್ಮ ಶ್ರೀಮನ್ಮಹಾರಾಜರವರು ಹೆಚ್ಚುಗಟ್ಟಲೆಯ ಸಹಾಯದ್ರವ್ಯವಾಗಿ ವೈಸ್ರಾಯರ ಬಳಿಗೆ ಕಳುಹಿಸಿದುದಲ್ಲದೆ, ಅವರು ಸ್ಥಾಪಿಸಿರುವ ನಿಧಿಗೆ ಎಲ್ಲರಂತೆ ೨ ಲಕ್ಷ ರೂ. ಗಳನ್ನು ಬೇರೆ ಕೊಟ್ಟಿರುವರು. ಕಳೆದುಹೋಗಿದ್ದ ಮೈಸೂರು ರಾಜ್ಯವನ್ನು ಆಂಗ್ಲಪ್ರಭುತ್ವದವರು ಭುಜಬಲದಿಂದಾರ್ಜಿಸಿ, ನಿಜವಾದ ಬಾಧ್ಯಸ್ಥರಾದ ಮೈಸೂರು ರಾಜವಂಶೀಯರಿಗೆ ಅರ್ಪಿಸಿದುದರ ಸಾರ್ಥಕತೆಯನ್ನು ಇದುವರೆಗೇ ಮೈಸೂರು ಪ್ರಭುತ್ವದವರು ಅನಂತವೇಳೆ ಸಾಮ್ರಾಜ್ಯ ಸರ್ಕಾರಕ್ಕೆ ನಿದರ್ಶನಮಾಡಿ ಕೊಟ್ಟಿರುವರು. ಈಗ ಮಾಡಿದ ಮಹೌದಾರ್ಯಪುರಸ್ಸರವಾದ ಸಹಾಯವಂತೂ ಕೃತಜ್ಞತೆಯ ಪರಾಕಾಷ್ಠವೆನಿಸಿಕೊಂಡಂತಾಗಿರುವುದು. ಈ ವಿಷಯದಲ್ಲಿ ಶ್ರೀಮನ್ಮಹಾರಾಜರು ಸಂಸ್ಥಾನದ ಗೌರವವನ್ನು ಇತರ ಸಂಸ್ಥಾನಗಳೆಲ್ಲಕ್ಕಿಂತಲೂ ವಿಶಿಷ್ಟತರವೆನಿಸಿದುದಕ್ಕಾಗಿ ಆಂಗ್ಲಪ್ರಭುತ್ವದವರು ಎಷ್ಟು ಸಂತೋಷಿಸಿರಬಹುದೋ ಅದಕ್ಕಿಮ್ಮಡಿಯಾಗಿ ದೇಶದ ಪ್ರಜೆಗಳು ಸಂತೋಷಿಸದೆ ಇರಲಾರರು.

ಮೈಸೂರು ದೇಶದಲ್ಲಿ ಶ್ರೀಮನ್ಮಹಾರಾಜರವರ ಅನುಮತಿಯನ್ನು ಪಡೆದು ಬ್ರಿಟಿಷ್ ರೆಸಿಡೆಂಟರ ಅಧ್ಯಕ್ಷತೆಯಲ್ಲಿ ಮೇಲೆ ಕಂಡ ನಿಧಿಯನ್ನು ಕೂಡಿಸುವ ಉಪಸಂಘವೊಂದು ಸ್ಥಾಪಿಸಲ್ಪಟ್ಟಿರುವುದು: ಇದಕ್ಕೆ ಕೊಡಗೂ ಸೇರಿರುವುದು. ನಮ್ಮ ಸಂಸ್ಥಾನದ ದಿವಾನರೂ, ಬೆಂಗಳೂರು ಸೈನ್ಯದ ಬ್ರಿಗೇಡ್ ಕಮಾಂಡಿಂಗ್ ಜನರಲ್ ಆಫೀಸರೂ ಉಪಾಧ್ಯಕ್ಷರಾಗಿರುವರು. ಖಾನ್ ಬಹದೂರ್ ಅಬ್ದುಲ್ ರಹಿಮಾನ್‌ರವರು, ರಾ|| ಬ|| ಅಣ್ಣಾಸಾಮಿ ಮೊದಲಾರರು, ಪಿ. ಎ. ಬಾರ್ಟನ್‌ರವರು, ಎ. ಆರ್. ಕಾಕ್ಸ್‌ರವರು, ಎಂ. ಕಾಂತರಾಜಅರಸಿನವರು, ಸರ್. ಮಿಲ್ಲರ್ ರವರು, ಎಚ್. ವಿ. ನಂಜುಂಡಯ್ಯನವರು, ಮಿರಾರ್. ಹಂಸಾ ಹುಸೇನ್‌ರವರು, ದಿ|| ಬ|| ಕೆ. ಪುಟ್ಟಣ್ಣಶೆಟ್ಟರು, ಕರ್ನಲ್ ಎ. ಇ. ಟೇಟ್‌ರವರು ಮೆಂಬರುಗಳಾಗಿರುವರು. ಅಸಿಸ್ಟೆಂಟ್ ರೆಸಿಡೆಂಟರಾದ ಪಿ. ಬಿ. ವಾರ್ಬರ್ಟನ್‌ರರವೂ, ಮಹಾರಾಜರ ಹುಜೂರು ಸೆಕ್ರೆಟರಿಯವರಾದ ಮಿರ್ಜಾ ಮಹಮ್ಮದ್ ಇಸ್ಮೆಯಿಲ್‌ರವರೂ ಸಹ ಆನರರಿ ಸೆಕ್ರೆಟರಿಗಳಾಗಿರುವರು. ಬೆಂಗಳೂರಿನಲ್ಲಿರುವ ಮದ್ರಾಸ್ ಬ್ಯಾಂಕಿನ ಏಜಂಟರಾದ ಎಚ್. ಎಫ್. ಕಾಲಿಯರ್‌ರವರು ಮಾನನೀಯ ಕೋಶಾಧಿಕಾರಿಗಳಾಗಿರುವರು.

ಬೆಂಗಳೂರಿನಲ್ಲೂ ಮೈಸೂರಿನಲ್ಲೂ ಸಹ ಬೇರೆಬೇರೆ ಉಪಸಂಘಗಳು ಸ್ಥಾಪಿಸಲ್ಪಟ್ಟಿವೆ. ಇದರಂತೆ ಎಲ್ಲಾ ಡಿಸ್ಟ್ರಿಕ್ಟು ಮುಖ್ಯಸ್ಥಲಗಳಲ್ಲೂ ಸಂಘಗಳು ಸ್ಥಾಪಿಸಲ್ಪಡಬೇಕು. ಮತ್ತೂ ನಮ್ಮ ಶ್ರೀಮನ್ಮಹಾರಾಜರು ತೋರಿಸಿ ಕೊಟ್ಟಿರುವ ರಾಜನಿಷ್ಠಾ ಭೂತದಯೆಗಳ ಮೇಲುಪಂತಿಯನ್ನನುಸರಿಸಿ ನಮ್ಮ ಸಂಸ್ಥಾನದ ಎಲ್ಲಭಾಗದ ಪ್ರಮುಖರೂ ಈ ಕಾರ್ಯದಲ್ಲಿ ಮುಂದಾಗಿ ಆಯಾ ಸ್ಥಲಾಧಿಕಾರಿಗಳು ಏರ್ಪಡಿಸಬಹುದಾದ ಸಂಘಗಳಲ್ಲಿ ಸೇರಿ ಜನರು ಸಂತೋಷಪೂರ್ವಕವಾಗಿ ಕೊಡಬಹುದಾದ ವರ್ಗಣಿಹಣವನ್ನು ಜತೆಮಾಡಿ ಸ್ಥಲಿಕಸಂಘಗಳಿಂದ ಬೆಂಗಳೂರಿನಲ್ಲಿರುವ ಮುಖ್ಯಸಂಘಕ್ಕೆ ಕಳುಹಿಸುವ ಏರ್ಪಾಟನ್ನು ಮಾಡುವವರಾಗಲೆಂದು ಕೋರುತ್ತೇವೆ.

ಹುಣಸೂರು ತಾ॥ ಹಳ್ಳಿಕೆರೆ:- ಇದುವರೆಗೆ ಮಳೆಯಿಲ್ಲದೆ ಪೈರು ಪಚ್ಚೆಗಳೆಲ್ಲಾ ಒಣಗುತ್ತಾ ಇತ್ತು. ದನಕರುಗಳ ಮೇವಿಗೂ ಕುಡಿಯುವ ನೀರಿಗೂ ಬಹು ತೊಂದರೆಯಾಗಿತ್ತು. ಶ್ರೀ ಪರಮೇಶ್ವರನ ಅನುಗ್ರಹದಿಂದ ಈಗ್ಗೆ ಸುಮಾರು ೨೦ ದಿವಸದಿಂದಲೂ ಮಳೆ ತಕ್ಕಮಟ್ಟಿಗೆ ಆಗಿ ಅಲ್ಲಲ್ಲಿ ದನಗಳಿಗೆ ಮೇವು ಮತ್ತು ಹಳ್ಳ ಕೊಳ್ಳಗಳಲ್ಲಿ ನೀರು ಬಂದಿರುತ್ತದೆ. ಈ ಗ್ರಾಮದಲ್ಲಿ ಕುಡಿಯುವುದಕ್ಕೆ ನೀರಿಗೆ ತುಂಬ ತೊಂದರೆಯಾಗಿದೆ. ಜನಗಳು ಹೊಲಗಳ ವ್ಯವಸಾಯವನ್ನು ಬಹಳ ಸಂತೋಷದಿಂದ ನಡಿಸುತ್ತಾರೆ. ಇಲ್ಲಿ ಕಾರುಬೆಳಸು ಬಹಳ ಚೆನ್ನಾಗಿದೆ. ಈ ಗ್ರಾಮದಲ್ಲಿ ಕುಡಿಯುವ ನೀರಿಗೆ ಇಷ್ಟು ತೊಂದರೆಯಾಗಿರುವದಲ್ಲದೆ ಭಾವಿಗೆ ಹೋಗತಕ್ಕ ಓಣಿ ಮತ್ತು ಊರಸುತ್ತ ಹೇಸಿಗೆ ತಿಪ್ಪೆ, ಗ್ರಾಮದ ಬೀದಿಗಳ ಬೆರಂಡಿ ರಿಪೇರಿ ಇವುಗಳು ನಡೆಯದೆ ಇರುವದರಿಂದ ಈ ಗ್ರಾಮದಲ್ಲಿ ಹವ ಚನ್ನಾಗಿಲ್ಲದೆ ಮಕ್ಕಳು ಮರಿಗಳಿಗೆಲ್ಲಾ ಬಾಯಿಲೆ ವಿಪರೀತವಾಗಿದೆ. ಗ್ರಾಮದ ಪಟೇಲರಿಗೆ ಇದರ ವಿಷಯದಲ್ಲಿ ಮನಸ್ಸೇ ಇಲ್ಲ. ನಮ್ಮ ಸರ್ಕಾರದವರಾದರೂ ಈ ವಿಷಯದಲ್ಲಿ ನಿಗಾ ಇಟ್ಟು ಇಂಥ ತೊಂದರೆಗಳನ್ನು ತಪ್ಪಿಸದೆ ಇರಲಾರರೆಂದು ಪ್ರಾರ್ಥಿಸುತ್ತೇನೆ.

ಗ್ರಾಮನಿವಾಸಿ,

೮ ನೆಯ ವೀರಶೈವ ಮಹಾಸಭೆಯು.

ಕೆಲ ವಾರಗಳ ಹಿಂದೆ ತಮ್ಮ ಸುಂದರವಾದ ಪತ್ರಿಕೆಯಲ್ಲಿ ಮಹಾಸಭೆಯ ಬಗ್ಗೆ ಕೆಲವು ಸೂಚನೆಗಳನ್ನು ಕೊಟ್ಟಂದಿನಿಂದ ಇಂಥಲ್ಲಿಯೇ ಈ ಸಭೆಯು ಕೂಡಿಸಬೇಕೆಂದು ಇನ್ನೂ ನಿಶ್ಚಯಾತ್ಮಕವಾಗಿ ತಿಳಿಯದಿದ್ದಾಗ್ಯೂ ನಮ್ಮ ವೀರಶೈವ ಸ್ಟ್ಯಾಂಡಿಂಗ್ ಕಮಿಟಿಯ ಚೇರ್ಮನ್ನರಾದ ರಾ॥ ಬ॥ ಶಾಂತವೀರಪ್ಪ ಮೆಣಸಿನಕಾಯಿ ಧಾರವಾಡ ಇವರು ಮೈಸೂರು ಪ್ರಾಂತದ ಮತ್ತೂ ನಿಜಾಂ ಇಲಾಖೆಯ ವೀರಶೈವ ಮುಂದಾಳುಗಳಿಗೆ ವಿನಂತಿಪತ್ರಗಳನ್ನು ಬರೆದಿದ್ದು ಅವರಿಂದ ಉತ್ತರದ ದಾರಿಯನ್ನು ನೋಡುತ್ತಿರುವುದಾಗಿ ತಿಳಿದು ಸಂತೋಷವೆನಿಸುವುದು. ಒಂದುವೇಳೆ ಅವರಿಂದ ಇಷ್ಟಾರ್ಥ ಕಾರ್ಯವು ಕೈಗೂಡದಂತಿದ್ದರೆ ಈ ಸಾರೆ ೮ ನೆಯ ಸಭೆಯನ್ನು ಹೊಸಪದ್ಧತಿಯಂತೆ ಧಾರವಾಡದ ಶ್ರೀ ಜಗದ್ಗುರು ಮುರುಘರಾಜೇಂದ್ರ ಟೌನಹಾಲಿನಲ್ಲಿ ಕೂಡಿಸುವ ಏರ್ಪಾಟನ್ನು ಮಾಡುವರೆಂದು ಕೋರುತ್ತೇನೆ. ಅದಕ್ಕೆ ಧಾರವಾಡದ ವೀರಶೈವ ಮಹಾಜನರು ಒಕ್ಕಟ್ಟಿನಿಂದ ಅನುಕೂಲಿಸುವರೆಂದು ಭಾವಿಸುವೆನು. ಸ್ಟ್ಯಾಂಡಿಂಗ್ ಕಮಿಟಿಯ ಚೇರ್‌ಮನ್ನರಿಗೂ ಸಬ್ಜೆಕ್ಟ್ ಕಮಿಟಿಯ ಮೆಂಬರರಿಗೂ ಮಾಡಿಕೊಳ್ಳುವ ಇನ್ನೊಂದು ವಿನಂತಿಯೇನೆಂದರೆ- ಸಭೆಯಮುಂದೆ ಬರತಕ್ಕ ಮಹತ್ವದ ವಿಷಯಗಳನ್ನು ಮೊದಲಿಗೇ ಗೊತ್ತುಪಡಿಸಿ ಆ ಆ ವಿಷಯಗಳನ್ನು ನಮ್ಮ ಸಮಾಜದಲ್ಲಿರುವ ಅನುಭವಿಕರ ಕಡೆಗೆ ಒಂದೊಂದು ವಿಷಯಗಳನ್ನು ಮೊದಲಿಗೆ ತಿಳಿಸಿ ಆ ಆ ವಿಷಯಗಳ ಮೇಲೆ ತಮ್ಮತಮ್ಮ ಸ್ವಾನುಭವವನ್ನೂ ಸೂಚನೆಗಳನ್ನೂ ಸವಿಸ್ತಾರವಾಗಿ ಬರೆಯಲಿಕ್ಕೆ ಅವರಿಗೆ ವಿಜ್ಞಾಪನೆಯನ್ನು ಮಾಡಿಕೊಳ್ಳಬೇಕು. ಸಾರಾಸಾರ ವಿಚಾರವುಳ್ಳ ಅನುಭವಿಕರಿಂದ ಬರೆಸಿ ತಂದ ವಿಷಯಗಳನ್ನು ಸಬ್‌ಜೆಕ್ಟ್ ಕಮಿಟಿಯವರು ಓದಿಕೊಂಡು ನೋಡಿ ಅವುಗಳನ್ನು ಪ್ರಿಂಟುಮಾಡಿಸಿ ಸಭೆಯ ಮೊದಲನೆಯ ದಿವಸವೇ ಅವುಗಳನ್ನು ಸಭಾಸದರಿಗೆ ಹಂಚಬೇಕು. ಅದರಿಂದ ವ್ಯರ್ಥ ವೇಳೆಯು ವ್ಯಾಖ್ಯಾನಕೊಡುವುದರಲ್ಲಿ ಖರ್ಚಾಗದೆ ಉಳಿದ ವೇಳೆಯನ್ನು ಸಬ್‌ಜೆಕ್ಟ್ ಕಮಿಟಿಯವರಿಂದ ಆ ಆ ವಿಷಯಗಳನ್ನು ಚರ್ಚಿಸಿ ಠರಾವುಗಳನ್ನು ಪಾಸುಮಾಡಿ ರಿಪೋರ್ಟುಗಳನ್ನು ಛಾಪಿಸಿ ಆ ಆ ಜನರಿಗೆ ತಿಳಿಸಿ ಅಮಲಿನಲ್ಲಿ ತರುವುದಕ್ಕೆ ಪ್ರಯತ್ನಿಸುವ ಬಗೆಗೆ ಬೇಡಿಕೊಳ್ಳಬೇಕು.

ಉದಾಹರಣಾರ್ಥ— ಧರ್ಮದಲ್ಲಿ ಸುಧಾರಣೆಯೇನಾದರೂ ಮಾಡುವುದಿದ್ದಲ್ಲಿ ಉತ್ತಮ ಅನುಭವಿಕ ಸ್ವಾಮಿಗಳ ಕಡೆಗೆ ಆ ವಿಷಯವನ್ನು ತಿಳಿಸಿ ರಿಪೋರ್ಟು ತಯಾರಿಸಬೇಕು. ಅದರಂತೆ ಒಕ್ಕಲತನ, ವ್ಯಾಪಾರ, ಶಿಕ್ಷಣ, ಸಂಘಶಕ್ತಿ, ಗ್ರಾಮಗಳ ಸ್ವಚ್ಛತೆ, ಸರಕಾರದವರಿಗೆ ನಮ್ಮಿಂದಾಗತಕ್ಕ ಸಹಾಯ, ಅವರಿಂದ ನಾವು ಪಡೆಯತಕ್ಕ ಸೂಚನೆಗಳು ಮುಂತಾದ ವಿಷಯಗಳನ್ನು ಬೇರೆಬೇರೆಯಾಗಿ ಅನುಭವಿಕರಿಂದ ಬರೆಸಬೇಕು. ಅಂದರೆ ಈ ಹೊತ್ತಿನವರೆಗೆ ಅನೇಕ ಜನ ನಮ್ಮ ಬಾಂಧವರು ಅನೇಕ ರೀತಿ ವಿದ್ಯಾ ಸಂಪಾದಿಸಿ ಪಡೆದ ಅನುಭವಾಮೃತವನ್ನು ಉಳಿದ ಜನರಿಗೆ ದಾನಮಾಡಲು ಬಹಳ ಅನುಕೂಲವಾಗುವದಲ್ಲದೆ ಬಲ್ಲವರು ಅಜ್ಞರಿಗೆ ಕೊಟ್ಟ ಉಪದೇಶದ ಫಲವು ಅವರಿಗೆ ಸಿಕ್ಕು ಸಹಜವಾಗಿ ರಾಜಸೇವೆ ಧರ್ಮಸೇವೆ ಸಮಾಜಸೇವೆ ಮಾಡಿದ ಪುಣ್ಯಬರುವದು. ನಮ್ಮ ಭಾರತಭೂಮಾತೆಯು ಮೊದಲಿನವ್ಯಾಪಾರವೂ ಕಲಾಕೌಶಲ್ಯವೂ, ಈಗಿನ ಅದರ ಶೋಚನೀಯಸ್ಥಿತಿಯೂ ಅದನ್ನು ತಪ್ಪಿಸಿ ಮೊದಲಿನ ರೂಪಕ್ಕೆ ತರುವದಕ್ಕೆ ನಾವು ಮಾಡುವ ಕೆಲಸವೂ, ಸರಕಾರದವರು ಮಾಡುವ ಪ್ರಯತ್ನವೂ ಸ್ವಲ್ಪ ವಿಚಾರಮಾಡತಕ್ಕ ಸಂಗತಿಯಾಗಿದೆ. ಹಿಂದೂಸ್ಥಾನವು ಮೂರುಕಡೆಯಿಂದ ಸಮುದ್ರದಿಂದ ಕಟ್ಟಲ್ಪಟ್ಟಾಗ್ಯೂ ೧೯-೧೯ ಲಕ್ಷ ಚೌರಸ ಮೈಲು ಪ್ರದೇಶವಿದ್ದು, ಇಲ್ಲಿ ಮೊದಲಿಗೆ ಬಂಗಾರ, ಬೆಳ್ಳಿ, ತಾಮ್ರ, ಹಿತ್ತಾಳೆ, ಸೀಸ, ಸರ್ವಪ್ರಕಾರದ ಹರಳು, ಎಣ್ಣೆ, ಅರಳೆ, ಕಬ್ಬಿಣ, ಉಕ್ಕು, ಮುತ್ತು, ಮಾಣಿಕ ಮುಂತಾದ ರಾಜರಾಜರಿಂದ ಬಡಬಗ್ಗರವರೆಗೆ ಬೇಕಾಗುವಂಥ ಸರ್ವಪ್ರಕಾರದ ಜಿನಸುಗಳು ತನ್ನಿಂದ ತಾನೇ ಈಶನಿರ್ಮಿತ ಎಂದಂತೆ ಇದ್ದು ತನ್ನನ್ನು ತಾನು ಚೆನ್ನಾಗಿ ಸಂರಕ್ಷಣ ಮಾಡುವದಲ್ಲದೆ ಹೊರಗಿನ ದೇಶಗಳಿಗೂ ಅನೇಕ ಬಗೆಯಿಂದ ಸಹಾಯಮಾಡಲನುವಾದ ದೇಶವು ಈ ಜಗತ್ತಿನಲ್ಲಿ ಇದೊಂದೇ ಆಗದಿದ್ದರೂ ಇದರಂಥ ಸ್ಥಳಗಳು ಪೃಥ್ವಿಯಮೇಲೆ ಒಂದೆರಡಾದರೂ ಸಿಗುವವೋ ಇಲ್ಲವೋ ಎಂಬ ಸಂಶಯವು ಸಹಸ್ರಾವಧಿ ವರ್ಷಗಳಿಂದ ಸಿದ್ಧವಾಗಿರುವದು. ಜಗತ್ತಿನ ಇತಿಹಾಸವನ್ನು ನೋಡಿದರೆ ೧೬೦೦ ವರ್ಷಗಳ ಹಿಂದೆ ದಿಲ್ಲಿಯಲ್ಲಿ ಮಾಡಿಟ್ಟ ಒಂದು ಕಬ್ಬಿಣದ ಕಂಬದ ಮೇಲಿಂದಲೇ ನಮ್ಮ ಜನರ ಕೈಗಾರಿಕೆಯು ಎಷ್ಟು ಘನತೆಗೇರಿತ್ತೆಂಬುದು ಸಹಜ ತಿಳಿಯುವಂತಿದೆ. ಆ ಕಂಬವು ಮಳೆ ಚಳಿ ಬಿಸಿಲುಗಳ ಬಾಲಾಧಾಗಳನ್ನು ಇತ್ತು, ಅದು ಜಂಗು ಸಹಾ ತಿಂದಿಲ್ಲ, ಇದರಂಥ ಕಂಬಗಳು ಯುರೋಪುಖಂಡದಲ್ಲಿಯೂ ಸಹಾ ಕೆಲವು ವರ್ಷಗಳಾಚೆಗೆ ಆಗುವಂತಿದ್ದಿಲ್ಲ. ಅಂದರೆ ನಮ್ಮ ಜನರು ಲೋಹವನ್ನು ಕರಗಿಸುವ ಭಟ್ಟಿಗಳನ್ನೂ ಸಹ ಮಾಡಿದ್ದರೆಂಬಂತಾಯಿತು. ಅದರಂತೆ ತರತರದ ದಾಗೀನೆಗಳು ಗಾಜಿನ ಮಣ್ಣಿನ ಸಾಮಾನುಗಳು ಶಿಲ್ಪಶಾಸ್ತ್ರ ವಸ್ತ್ರವೈರೆ ಪೂರ್ಣಬಲ್ಲವರಿದ್ದರು. ಅದೇ ಹಿಂದುಸ್ಥಾನವು ೨೦ನೇ ಶತಮಾನದಲ್ಲಿ ಯಾವ ಸ್ಥಿತಿಗೆ ಬಂದಿದೆ ನೀವೇ ನೋಡಿರಿ. ನಮ್ಮ ಜನರಲ್ಲಿ ಆಲಸ್ಯವುಸೇರಿ, ಸಂಘಶಕ್ತಿಯ ಲಾಭವನ್ನೂ ವಿಶ್ವಾಸವನ್ನೂ ವ್ಯಾಪಾರದಲ್ಲಿರಬೇಕಾದ ಮಹತ್ವಾಕಾಂಕ್ಷೆಯನ್ನೂ ಮರೆತು ಹರಿವದ್ದೇ ಹಳ್ಳವು ನಿಂತದ್ದೇ ತೀರ್ಥವೆಂದು ಅಲ್ಪದಲ್ಲಿ ಸಂತೋಷಿಗಳಾಗಿ, ತಮ್ಮತಮ್ಮೊಳಗಿನ ಜಾತಿಪಂಗಡಗಳಲ್ಲಿ ಒಳಭೇದಗಳನ್ನು ಹುಟ್ಟಿಸಿ, ವ್ಯಾಪಾರವನ್ನು ಪರರಾಷ್ಟ್ರದವರಿಗೆ ಕಚ್ಚಾಮಾಲಿನ ರೂಪದಿಂದ ಕೊಟ್ಟು, ಅವರಿಂದ ಈಗ ಕೋಟ್ಯಾವಧಿ ರೂಪಾಯಿಯ ಪದಾರ್ಥವನ್ನು ತರಿಸಿಕೊಳ್ಳುತ್ತ ಕೂತಿರುವದನ್ನು ನೋಡಿ ನಮ್ಮ ದಯಾಳು ಸರಕಾರದವರು ಆ ವ್ಯಾಪಾರದ ಪುನರುಜ್ಜೀವನವನ್ನು ಮಾಡುವದಕ್ಕಾಗಿ ನಡುಕಟ್ಟಿ ನಿಂತಿರುವರು. ಅದಕ್ಕೆ ಮಾದರಿಯಾಗಿ ಕೋ ಅಪರೇಟಿವ್ ಕ್ರೆಡಿಟ್ ಸೊಸಾಯಿಟಿಗಳೂ ಒಕ್ಕಲತನದ ಸುಧಾರಣೆಗಳೂ ಈಗ ಪ್ರತ್ಯಕ್ಷವಾಗಿವೆ. ಒಂದು ಎಕರೆ ಭೂಮಿಯಲ್ಲಿ ಹಿಂದುಸ್ಥಾನದಲ್ಲಿ ೩೩ ಮಣ ಅಕ್ಕಿ ಬೆಳೆದರೆ ಪರದೇಶದಲ್ಲಿ ೯೦ ಮಣ ಬೆಳೆಯುವದು. ಅದರಂತೆ ಗೋಧಿ ೨೪ ಮಣ ಇಲ್ಲಿ ಬೆಳೆದಲ್ಲಿ ಅಲ್ಲಿ ೬೧ ಮಣ ಬೆಳೆಯುವರು. ಇಂಥ ಅನೇಕ ಪ್ರಕಾರದ ಸುಧಾರಣೆಗಳು ನಮಗೆ ಬ್ರಿಟಿಷ್ ಸರಕಾರದಿಂದಲೇ ಸಿಗುವವಾದುದರಿಂದ ನೀವು ಮೊದಲು ಪ್ರಯತ್ನಮಾಡಿ ವಿದ್ಯೆಯನ್ನು ನಮ್ಮ ಮಕ್ಕಳಿಗೆ ಕಲಿಸಬೇಕು. ಸಂಘಶಕ್ತಿಗಳನ್ನೂ ವಿಶ್ವಾಸವನ್ನೂ ಬೆಳಸಬೇಕು. ತರತರದ ಹೊಸಹೊಸ ಶೋಧನಗಳನ್ನು ಮಾಡಬೇಕು. ಆಯಾ ಪ್ರದೇಶಗಳಲ್ಲಿ ಹೆಚ್ಚಿಗೆ ಶಾಲೆಗಳನ್ನೂ ಒಕ್ಕಲತನದ ಶಾಲೆಗಳನ್ನೂ ಸ್ಥಾಪಿಸಲು ವರ್ಗಣಿಮಾಡಿ ಸರಕಾರದ ಕಡೆಗೆ ವಿನಂತಿ ಮಾಡಿಕೊಳ್ಳಬೇಕು. ಈ ಪ್ರಕಾರ ನಾವು ನಮ್ಮ ಧರ್ಮದಿಂದಲೂ ವ್ಯಾಪಾರದಿಂದಲೂ ವಿದ್ಯೆಯಿಂದಲೂ ಕಲಾಕೌಶಲ್ಯ ಶಿಲ್ಪಶಾಸ್ತ್ರ ಮಂತ್ರಗಳಿಂದಲೂ ಮುಂದೊರೆಯುವುದಕ್ಕೆ ಪ್ರಯತ್ನಮಾಡುವುದೇ ನಮ್ಮ ಆದ್ಯಕರ್ತವ್ಯವಾಗಿರುವದರಿಂದ ಪ್ರತಿವರ್ಷ ಇಂಥ ಸಭೆಗಳು ದೊಡ್ಡ ದೊಡ್ಡ ನಗರಗಳಲ್ಲಿಯೂ ಉಪಸಭೆಗಳು ಸಣ್ಣಸಣ್ಣ ಗ್ರಾಮಗಳಲ್ಲಿಯೂ ನೆರೆದು ರಾಷ್ಟ್ರವೇ ಸರ್ವರೀತಿಯಿಂದ ಉದಯಕ್ಕೆ ಬರುವಂಥ ವಿಷಯಗಳನ್ನು ಚರ್ಚಿಸಿ, ಸ್ವಮತ ಪರಮತಸ್ಥರಿಂದಲೂ ಮತ್ತು ನಮ್ಮನ್ನಾಳುವ ರಾಜರಿಂದಲೂ ಸಹಾನುಭೂತಿಯನ್ನು ಪಡೆದು ಒಕ್ಕಟ್ಟಿನಿಂದಲೂ ಪ್ರೀತಿಯಿಂದಲೂ ವಿಶ್ವಾಸದಿಂದಲೂ ಧರ್ಮಜಾಗೃತಿ, ವ್ಯಾಪಾರವೃದ್ಧಿ, ವಿದ್ಯಾಭಿವೃದ್ಧಿ, ಆಯುಷ್ಯವೃದ್ಧಿಗಳನ್ನು ಪಡೆಯುವುದೇ ಪ್ರತಿಯೊಬ್ಬ ನಾಗರಿಕನ ಕರ್ತವ್ಯಕರ್ಮವಾಗಿರುವುದರಿಂದಲೇ ಇಂಥ ಸಭೆಗಳ ಮುಖಾಂತರ ಈ ಮಹತ್ವದ ವಿಷಯಗಳನ್ನು ಚರ್ಚಿಸುವುದಕ್ಕಾಗಿಯೇ ಸಭೆಯ ಆವಶ್ಯಕತೆಯನ್ನು ನಮ್ಮ ಪ್ರಿಯಬಾಂಧವರಿಗೆ ತಿಳಿಸುವ ಕುತೂಹಲವು. ಸುಜ್ಞರು ಇದರ ಮರ್ಮವನ್ನು ಕೂಡಲೇ ಕಂಡು ಹಿಡಿಯುವುದರಲ್ಲಿ ಆಶ್ಚರ್ಯವೇನು? ಕಾರಣ ವೀರಶೈವಮುಖಂಡರು ತೀವ್ರವೇ ಇದಕ್ಕೆ ಗಮನವನ್ನಿತ್ತು ಮುಂದಿನ ಕಾರ್ಯವನ್ನು ಪ್ರಾರಂಭಿಸುವರೆಂದು ಆಶಿಸುವೆನು.

ಗೋಕಾಕಫಾಲ್ಸ್, ಶಿವಮೂರ್ತಿಸ್ವಾಮಿ,
೨೧-೮-೧೯೧೪. ಕಣಬರಗಿಮಠ.

ಪ್ರಕಟನೆ.

ಸುಲಭ. ಚಾತುರ್ಯ. ಮಾಸಪತ್ರಿಕೆ.

ಈ ಮಾಸಪತ್ರಿಕೆಯು ಹಾಸ್ಯವಿನೋದ ರಸಗಳಿಂದಲೂ, ಚಮತ್ಕಾರವಾದ ಇತರ ಲೇಖನಗಳಿಂದಲೂ, ಹಾಸ್ಯಲಹರಿಯಿಂದಲೂ ಕೂಡಿರುತ್ತೆ. ವಿದ್ಯಾರ್ಥಿಗಳಿಗೂ, ಹೆಣ್ಣುಮಕ್ಕಳಿಗೂ ಮನೋರಂಜಕವಾದದ್ದು. ಇದರಲ್ಲಿ ದೇಶದ ವೃತ್ತಾಂತಗಳೂ ತಿಳಿಯುತ್ತೆ. ಇದರ ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ಸ್ತ್ರೀಯರಿಗೂ, ವಿದ್ಯಾರ್ಥಿಗಳಿಗೂ ೬ ಆಣೆ ಮಾತ್ರ. ಇತರರಿಗೆ ೧೦ ಆಣೆಗಳು.

ವಿಳಾಸ:— ಮ್ಯಾನೇಜರ್ "ಚಾತುರ್ಯ" ಚಾಮರಾಜಪೇಟೆ, ಬೆಂಗಳೂರು ಸಿಟಿ

ಈಗತಾನೇ ಅಚ್ಚಾದ ಪುಸ್ತಕವು.
(ರೇವಣಸಿದ್ಧೇಶ್ವರಪುರಾಣಂ.)

ವೇದಾಗಮಪ್ರಸಿದ್ಧವಾದ ವೀರಶೈವ ಮತವನ್ನು ಭೂತಲದಲ್ಲಿ ಪ್ರತಿಷ್ಠಾಪಿಸಿದ ಶ್ರೀ ರೇಣುಕಾಚಾರ್ಯರ ಚರಿತ್ರರೂಪವಾದ ಈ ಗ್ರಂಥವು ಬೊಮ್ಮರಸಕವಿಯಿಂದ ಷಟ್ಪದೀಕಾವ್ಯವಾಗಿ ರಚಿಸಲ್ಪಟ್ಟಿರುವುದು. ಶ್ರೀಮದಾಚಾರ್ಯರು ಭೂತಲದಲ್ಲಿ ನಡೆಯಿಸಿದ ಮಹತ್ಕಾರ್ಯಗಳು ಇದರಲ್ಲಿ ನಿರೂಪಿತವಾಗಿವೆ. ಕವಿತೆಯು ಹೃದಯಂಗಮವಾಗಿದೆ. ಪ್ರತಿಯೊಂದುಪಾದಕ್ಕೂ ಒಂದೊಂದು ಪಙ್ಕ್ತಿಯಾಗಿ ಬಿಡಿಬಿಡಿಸಿ ಉತ್ತಮವಾದ ಗ್ಲೇಸ್ ಕಾಗದದಮೇಲೆ ಸುಂದರವಾದ ಅಕ್ಷರಗಳಿಂದ ಶುದ್ಧವಾಗಿ ಮುದ್ರಿತವಾಗಿದೆ. ೧೩ ಸಂಧಿಗಳುಳ್ಳ ಈ ಗ್ರಂಥದ ಬೆಲೆ ವಿ. ಪಿ. ಮೂಲಕ ಅಂಚೆಯ ವೆಚ್ಚವೂ ಸೇರಿ ೧೨ ಆಣೆಗಳು.

ಮತ್ತೊಂದು ನೂತನಗ್ರಂಥ.
ಸಟಿಪ್ಪಣಿ ಸಿದ್ಧಾಂತಶಿಖಾಮಣಿ.

ಇದು ಶ್ರೀರೇಣುಕಾಚಾರ್ಯರು ಅಗಸ್ತ್ಯರಿಗೆ ಉಪದೇಶಿಸಿದ ವೀರಶೈವ ಸಿದ್ಧಾಂತಶಾಸ್ತ್ರವು, ಪ್ರತಿಯೊಬ್ಬ ವೀರಶೈವನೂ ಮುಕ್ತನಾಗುವುದಕ್ಕೆ ಜನ್ಮಾದಿಯಿಂದ ಕಡೆಯವರೆಗೆ ಆಚರಿಸಬೇಕಾದ ಧರ್ಮಕರ್ಮಗಳು ಇದರಲ್ಲಿ ನಿರೂಪಿತವಾಗಿವೆ. ಮೂಲಗ್ರಂಥಕ್ಕೆ ವೇದಾಗಮ ಪುರಾಣಾದಿವಚನಗಳ ಆಧಾರದಿಂದ ಕೂಡಿದ ಕನ್ನಡ ಟಿಪ್ಪಣವು ವಿಸ್ತಾರವಾಗಿ ಬರೆಯಲ್ಪಟ್ಟು ಉತ್ತಮವಾದ ಕಾಗದದಲ್ಲಿ ಅಚ್ಚುಮಾಡಿಸಲ್ಪಟ್ಟಿದೆ. ಸರ್ವರಿಗೂ ಸಂಗ್ರಾಹ್ಯವಾದ ಈ ಪುಸ್ತಕವು ೩೩೪ ಪುಟಗಳುಳ್ಳ ದೊಡ್ಡ ಗ್ರಂಥವಾಗಿದ್ದರೂ, ಸ್ವಮತಸ್ಥರ ಹಿತಾರ್ಥವಾಗಿ ಬೆಲೆಯು ಕಡಿಮೆಯಾಗಿಡಲ್ಪಟ್ಟಿದೆ. ವಿ. ಪಿ, ಮೂಲಕ ಅಂಚೆಯ ವೆಚ್ಚವೂಸೇರಿ ೧-೮-೦.

ಎಫ್. ಆರ್ ಕರಿಬಸವಶಾಸ್ತ್ರಿ,
6 ಗ್ರಂಥಪ್ರಸಾರಕಮಂಡಲಿ, ಮೈಸೂರು.

ಫಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

39

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ವಪತ!!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪಿತ್ತದೋಷವಾದವರು, ತೃಷೆವುಳ್ಳವರು, ದಮ್ಮಿನವರು, ಕೆಮ್ಮಿನವರ ಕಫ, ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟುಗುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲಿ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನಿರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲಿಗೆ ರೂ. ೩-೮-೦. ೮೦ ತೊಲಿಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧ ಸಂಗಡಲೇ ರವಾನಿಸುವೆವು.

ವಿಳಾಸ:—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ, ಕೋಟ್ ಬಸವಾಪಿ, ಜಿಲ್ಲಾ ಉತ್ತರಕನಡಾ.

(ಹೊಸಪುಸ್ತಕ ೧೩೪೪ ಪುಟಗಳು) ಶ್ರೀ (ಹೊಸಪುಸ್ತಕ ೧೩೪೪ ಪುಟಗಳು)

ಬ್ರ॥ ಶ್ರೀ॥ ಬಿ. ವಿ. ಸುಬ್ರಹ್ಮಣ್ಯಶರ್ಮ ವಿರಚಿತವಾದ ಸುಧಾರ ಸಧಾರಾಯೆಂಬ ಕನ್ನಡ ಟೀಕಾತಾತ್ಪರ್ಯ ಗಣಿತೋದ್ಧಾರಣೆಗಳಿಂದೊಡಗೂಡಿದ

2

ಬೃಹಜ್ಜಾತಕಾಖ್ಯ ಹೋರಾಶಾಸ್ತ್ರವು.

ಮಾನವನು ತನ್ನ ಅದೃಷ್ಟಚಕ್ರದ ಫಲಾಫಲಗಳನ್ನು ಅರಿತು, ಮುಂದೊದಗಬಹುದಾದ ಫಲಸ್ವರೂಪವನ್ನು ಇತರರ ಸಹಾಯವಿಲ್ಲದೆಯೆ ತಿಳಿದುಕೊಂಡು, ದುಷ್ಫಲಗಳು ದೂರವಾಗಿ, ಸುಫಲಗಳು ಕರಗತವಾಗುವಂತೆ ಮಾಡುವಂತಹ, ಪರಿಹಾರೋಪಾಯಗಳನ್ನು ಸೂಚಿಸಬೇಕಾದರೆ, ನಮ್ಮಿಂದ ಈಗತಾನೆ ಸಂಸ್ಕೃತ ಹಿಂದಿ ಮರಾಟಿ ಭಾಷೆಗಳಿಂದ ತರ್ಜುಮೆಮಾಡಿ ಪ್ರಕಾಶಗೊಂಡ "ಸುಧಾರಸಧಾರಾ" ಎಂಬ ಕನ್ನಡ ಟೀಕಾತಾತ್ಪರ್ಯ ಉದಾಹರಣೆಗಳಿಂದ ಕೂಡಿದ ಬೃಹಜ್ಜಾತಕವೆಂಬ ಹೋರಾಶಾಸ್ತ್ರವೊಂದಲ್ಲದೆ ಮತ್ತ್ಯಾವದೂ ಸಮರ್ಥವಾಗಿಲ್ಲವು. ೧೩೪೪ ಪುಟ ೩ ಭಾಗಗಳ ಪುಸ್ತಕ ಒಂದೇಬೈಂಡ್ ಈ ಗ್ರಂಥರತ್ನವು ಆಬಾಲವೃದ್ಧರಾದಿಯಾಗಿ ಅಕ್ಷರವನ್ನರಿತ ಹೆಂಗಸರೂ ಸಹಾಪರರ ಸಹಾಯಾಪೇಕ್ಷೆ ಇಲ್ಲದೆ ಓದಿ ತಿಳಿಯಲು, ಅನುಕೂಲವಾಗಿರುವುದು. ಇದರೊಳಗಡಗಿರುವ ೨೮ ಪ್ರಕರಣಗಳಲ್ಲಿನ ವಿಷಯಸಂಗ್ರಹ ವೆಂತೆಂದರೆ:—೧-೨ ನೇ ಪ್ರಕರಣಗಳಲ್ಲಿ ಶಾಸ್ತ್ರಪ್ರಯೋಜನವೂ, ಜೋತಿಶಾಸ್ತ್ರದ ಪೀಠಿಕಾಭಾಗಗಳು ೩, ಸಜೀವ ನಿರ್ಜೀವವಸ್ತುಗಳ ಉತ್ಪತ್ತಿ ೪, ಗರ್ಭಧಾರಣ ಯೋಗಗಳು ೫, ಜನನಕಾಲಲಕ್ಷಣ ಮತ್ತು ಫಲ ೬, ಬಾಲಾರಿಷ್ಟವಿಚಾರ ಅವುಗಳ ನಿವಾರಣೋಪಾಯ ೭, ಆಯುರ್ದಾಯವಿಚಾರ ೮, ದಶಾಭುಕ್ತಿನಿರ್ಣಯ ೯, ಅಷ್ಟಕವರ್ಗವಿಚಾರ ೧೦, ಜೀವನೋಪಾಯವಿಚಾರ ೧೧, ರಾಜಯೋಗಸೂಚನೆ ಅವುಗಳ ಫಲವಿಚಾರ ೧೨, ೧೮೦೦ ಯೋಗಗಳ ಲಕ್ಷಣ ಮತ್ತು ಫಲ ೧೩, ಚಂದ್ರಸಂಬಂಧವಾದ ಯೋಗಗಳು ೧೪, ಒಂದಕ್ಕಿಂತಲೂ ಹೆಚ್ಚು ಗ್ರಹಗಳು ಒಂದೇಕಡೆ ಸೇರಿದರೆ ಅವುಗಳ ಫಲ ೧೫, ಸನ್ಯಾಸಯೋಗಗಳು ೧೬, ನಕ್ಷತ್ರಫಲಗಳು ೧೭, ರಾಶಿಫಲಗಳು ೧೮, ರಾಸಿಗಳ ಫಲ ಮತ್ತು ಕೇರಳಿಯೋಕ್ತ ಫಲಗಳು ೧೯, ದೃಷ್ಟಿಫಲಗಳು ೨೦, ಭಾವಲಕ್ಷಣ ಮತ್ತು ಆ ಫಲಗಳ ವಿಚಾರ ೨೧, ಕ್ಷೇತ್ರಫಲಗಳು ೨೨, ಗ್ರಹಗಳ ಅವಸ್ಥೆ ಅಷ್ಟಕವರ್ಗ ಫಲ ೨೩, ಅನಿಷ್ಟಯೋಗಗಳು ಅವುಗಳಿಂದಾಗುವ ಫಲಗಳು ೨೪, ಸ್ತ್ರೀಜಾತಕ ಅದರ ಫಲಗಳು ೨೫, ಮರಣಕಾರಣ ಅದರ ಫಲಗಳು ೨೬, ನಷ್ಟಜಾತಕ ಬರಿಯುವ ರೀತಿ ೨೭, ದ್ರೇಕ್ಕಾಣವರ್ಣನೆ ಪ್ರಶ್ನೆಗೆ ಬೇಕಾದ ಸಹಾಯವಿಷಯ ೨೮, ಅನುಕ್ರಮಣಿಕಾಸಂಗ್ರಹ ಮತ್ತು ಗ್ರಂಥಕರ್ತರ ವಂಶವರ್ಣನೆ:—

ಮೇಲೆ ಹೇಳಿರುವಂತೆ ಬರೆಯಲ್ಪಟ್ಟ ಒಂದು ಪುಸ್ತಕ ತಮ್ಮ ಬಳಿಯಲ್ಲಿದ್ದರೆ ೧೦ ಜನ ಜ್ಯೋತಿಷ್ಕರಿದ್ದರೆ ಎಷ್ಟು ಅನುಕೂಲವೋ ಅಷ್ಟು ಲನುಕೂಲ. ಇದು ಪ್ರೌಢರಿಗೂ, ಸ್ತ್ರೀಯರಿಗೂ ಧಾರಾಳವಾಗಿ ತಿಳಿಯುವಂತೆ ಉತ್ತಮಕಾಗದದಲ್ಲಿ ಪ್ರಿಂಟ್‌ಮಾಡಿಸಿದೆ, ಈ ತಿಂಗಳು ಆಖೈರಿನೊಳಗಾಗಿ ಆರ್ಡರ್ ಕೊಡುವವರಿಗೆ ೪-೦-೦ ರೂ. ವಿ ಪಿ. ಛಾರ್ಜು ೦-೩-೦ ಆಣೆ ನಂತರ ೫-೦-೦ ರೂ ಜಾಗತ್ರೆ ತರಿಸಿಕೊಳ್ಳಿ ನಂತರ ಈ ಬೆಲೆಗೆ ದೊರೆಯಲಾರದು.

ಇತರಪುಸ್ತಕಗಳು.

ಟೀಕಾಜೈಮುನಿ ೯೩೦ ಪುಟ ೪-೦-೦ ರೂ. ಸಟೀಕಹರಿಕಥಾಮೃತಸಾರ ೩೪೪ ಪುಟ ೧-೪-೦ ರೂ. ಕನ್ನಡದ್ವಾದಶಸ್ಕಂಧ ಭಾಗವತ ೩-೦-೦ ರೂ. ಶುಕಸಪ್ತತಿ ೭೦ ಕಥೆ ಶುದ್ಧಪ್ರತಿ ೨-೦-೦ ರೂ. ೪ ಜನ ಫಕೀರರ ಕಥೆ ೦-೮-೦. ಸಟೀಕಾಭೋಜರಾಜಚರಿತ್ರೆ ೦-೮-೧. ಇವುಗಳಲ್ಲದೆ ನಮ್ಮಲ್ಲಿ ಯಾವಾಗ್ಯೂ ಕನ್ನಡ, ಸಂಸ್ಕೃತ, ತೆಲಗು ಗ್ರಂಥಗಳು ದೊರೆಯುತ್ತೆ.

ಟಿ. ಯಂ. ಕೃಷ್ಣಯ್ಯಶೆಟ್ಟಿ, ಬುಕ್‌ಡಿಪೋ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ
ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೊಂ
ಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು
48 ಕಾಪಾಡುವುದರಲ್ಲಿ ಶ್ರೇಷ್ಠವೆನಿಸಿವಾದ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ-ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು.

ಶೀತವಾಯು-ಕೆಮ್ಮು-ನೆಗಡಿ-ದಿನಜ್ವರ-ಮೂರರಜ್ವರ ನಾಲ್ಕರಜ್ವರ- ಮಲೇರಿಯಾಜ್ವರ- ತಲೆನೋವು- ಮೈಕೈನೋವು ಮತ್ತು ಭಾರ-ಅರೋಚಕ ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣಭೇದಿ-ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಸೆಳೆತ-ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ೫೦ ಮಾತ್ರೆ ೪ ಆಣೆ. ಇದಕ್ಕೆ ಒಂದು ಇನಾಮು. ವಿ ಪಿ ಛಾರ್ಜು ಪ್ರತ್ಯೇಕ.

ಆಮೋದಿನಿ:— ಅಮೋಘವಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರಮಾಡುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷ ಕೀರ್ತಿಯನ್ನು ಸಂಪಾದಿಸಿ ನಾನಾತರಹಾ ಕೆಮ್ಮು, ದಮ್ಮು ಉಬ್ಬಸ, ವಾಂತಿ, ವಾಕರಿಗೆ, ಮಲಬಂದ, ಅಗ್ನಿಮಾಂದ್ಯ, ಪಿತ್ತಸಂಕಟ, ಅರೋಚಕ, ಬಾಯಾರಿಕೆಗಳನ್ನು ತಕ್ಷಣ ಗುಣಪಡಿಸಿ ಶರೀರಕ್ಕೆ ಶೀತ್ಯಮಾಡದೆ ಧಾತುವೃದ್ಧಿಯುಂಟುಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೧೫೦ ಮಾತ್ರೆ ೪ ಆಣೆ. ಇದಕ್ಕೆ ಒಂದು ಇನಾಮು. ವಿ.ಪಿ. ಛಾರ್ಜು ಪ್ರತ್ಯೇಕ.

ವಿಳಾಸ— ಬಿ ವಿ. ಪಂಡಿತ್,
ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರ್ ಡಿ॥

49

ದೊಡ್ಡಕಂಪನಿ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿರುವೆವು.

ವಿಳಾಸ— ಎಸ್. ಯೂ. ಎನ್. ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

ಬಹುಮಾನ ! ಶ್ರೀ. ಬಹುಮಾನ !!

ಅತ್ಯಾಶ್ಚರ್ಯಕರವಾದ ಬಹುಮಾನ.
೫೫ ಸಾವಿರ ರೂಪಾಯಿಗಳು ಹಂಚಲ್ಪಡುವೆವು.

ದಿವ್ಯಾಷಧ. ಬಳ್ಳಾರಿ. ಸುಪ್ರಸಿದ್ಧಾಷಧ.
ಸರ್ವಜನಮನೋಲ್ಲಾಸಿನಿ ಅಂಡ್ ಕೋ. ಇವರ
(• ನಾರಸಿಂಹಚೂರ್ಣವು •)

2

ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನು ಆರೋಗ್ಯಭಾಗ್ಯವನ್ನು ಬಯಸುತ್ತಾನೆ ಎಂಬುವದು ಸಹಜವಾದುದಷ್ಟೆ? ಆದರೆ ಅನೇಕ ದುರ್ವ್ಯರ್ತನೆಗಳಿಂದ ಮೂಲಕಾರಣವಾದ ಧಾತುವನ್ನು ನಷ್ಟಪಡಿಸಿಕೊಂಡು ಹಲವುವಿಧ ರೋಗಗಳನ್ನು ತಂದಿಟ್ಟುಕೊಂಡಿರುವವರನೇಕರನ್ನು ಕಣ್ಣಾರ ನೋಡುತ್ತಿರುವೆವು. ಈ ನಷ್ಟಧಾತುವಿಗಾಗಿ ಅನೇಕಾನೇಕ ವೈದ್ಯರು ಹಲವುವಿಧ ಔಷಧಗಳನ್ನು ವಿಶೇಷವಾದ ಬೆಲೆಯನ್ನಿಟ್ಟು ವಿಕ್ರಯಿಸಿದರು ಪ್ರಯೋಜನವು ಮಾತ್ರ ಕಡಿಮೆಯಾಗುತ್ತಿರುವದು ವಿಷಾದಕರವಾಗಿರುವದು. ಈ ಲೋಪವನ್ನು ಹೋಗಲಾಡಿಸುವುದಕ್ಕಾಗಿ (ನಾರಸಿಂಹಚೂರ್ಣವು) ಎಂಬ ಒಂದಾನೊಂದು ಸಶಾಸ್ತ್ರೀಯವಾದ ಚೂರ್ಣವನ್ನು ಸಿದ್ಧಪಡಿಸಿರುವೆವು. ಈ ಚೂರ್ಣವನ್ನು ಒಬ್ಬ ಮನುಷ್ಯನು ೧೪ ದಿನಗಳು ಸೇವಿಸಿದರೆ ಮುದುಕತನ, ಅನೇಕತರಹದ ಮೇಹರೋಗಗಳು, ಪಾಂಡುರೋಗ, ಪೀನಸ, ಹದಿನೆಂಟು ಬಗೆಯಾದ ಕುಷ್ಠಗಳು, ಎಂಟುವಿಧ ಉದರರೋಗಗಳು, ಭಗಂಧರವು, ಮೂತ್ರಕೃಛ್ರವು, ಗೃಧ್ರಸೀವಾತವು, ಕಾಮಿಲೆ, ಕ್ಷಯವು, ಮಹಾಶ್ವಾಸಗಳು, ದಾರುಣವಾದ ಐದುಬಗೆಯಾದ ಕಾಸೆಗಳು, ಎಂಭತ್ತುವಿಧಗಳಾದ ವಾತರೋಗಗಳು, ನಲವತ್ತು ಬಗೆಯಾದ ಪಿತ್ತಗಳು, ಇಪ್ಪತ್ತು ಶ್ಲೇಷ್ಮರೋಗಗಳು, ದ್ವಂದ್ವಸನ್ನಿಪಾತರೋಗಗಳು, ಮೂಲರೋಗಗಳು ಇವೇ ಮುಂತಾದ ಸಮಸ್ತ ರೋಗಗಳು ಸಿಡಿಲಿನಿಂದ ಗಿಡಗಳು ನಾಶವಾಗುವಂತೆ ನಾಶವಾಗುತ್ತಿವೆ. ಇದರ ಸೇವನೆಯಿಂದ ಚಿನ್ನದಂಥಾ ಕಾಂತಿಯು, ಸಿಂಹದಂತೆ ಪರಾಕ್ರಮವು, ಕುದುರೆಯಂಥಾ ವೇಗವು, ಹಕ್ಕಿಗಳ ದೃಷ್ಟಿಯಂತೆ ದೃಷ್ಟಿಯು ಉಳ್ಳವರಾಗಿ ನೂರುಮಂದಿ ಯುವತಿಯರೊಂದಿಗೆ ಸುರತವಂ ಮಾಡುವಂಥಾ ಅತ್ಯಧಿಕ ವೀರ್ಯವೃದ್ಧಿಯುಂಟಾಗಿ ನೃಸಿಹ್ಮನಿಗೆ ಸಮಾನರಾದ ಮಕ್ಕಳನ್ನು ಹುಟ್ಟಿಸುವ ಪ್ರಬಲ ಬಲವುರುವದು. ಇದರಲ್ಲಿ ಯಾವ ವಿಧವಾದ ರಸಗಳಾಗಲಿ ಮಿಶ್ರವಾಗಿಲ್ಲ, ಇನ್ನಾವ ದೋಷಗಳೂ ಇಲ್ಲ. ನಿರ್ದುಷ್ಟವಾದದ್ದು, ಫಕ್ತವನಸ್ಪತಿಗಳಿಂದಲೇ ಸಿದ್ಧಮಾಡಿದ ದಿವ್ಯವಾದ ಔಷಧ. ಅನೇಕ ಪಂಡಿತರು, ಧನಿಕರು, ಸರ್ಟಿಫಿಕೇಟುಗಳನ್ನು ಕೊಟ್ಟಿರುವರು. ಬಳ್ಳಾರಿಯಲ್ಲಿ ಸುಪ್ರಸಿದ್ಧವೈದ್ಯರೆಂದು ಪ್ರಖ್ಯಾತಿಗೊಂಡ ವೈದ್ಯ ಕರಿವೀರಪ್ಪನವರ ಪುತ್ರರಾದ ನೇಟಿವ್ ಡಾಕ್ಟರ್ ಬಿ. ವಿ. ಸಿದ್ದಪ್ಪನವರಿಂದ ತಯಾರಿಸಲ್ಪಟ್ಟಿರುವದು.

೧೪ ದಿನ ಉಪಯೋಗಕ್ಕೆಬರುವ ಡಬ್ಬಿ ೧ಕ್ಕೆ ಬೆಲೆ ರೂ. ೧—೦—೦.

—(ಬಹುಮಾನಗಳನ್ನು ಹಂಚುವ ವಿಧಾನ)—

೧ ಡಜನ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೧೦೦೦೦ ರೂ. ೬ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೬೧೦೦ ರೂ. ೩ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೪೦೦೦ ರೂ. ೨ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೩೦೦೦ ರೂ. ೧ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ೨೦೦೦ ರೂ.

೧೯೧೪ ನೇ ಜುಲೈ ೧ ನೇ ತೇದಿ ಮೊದಲು ೧೯೧೫ ನೇ ಜುಲೈ ೧ ನೇ ತೇದಿವರಿಗೂ ಈ ಔಷಧವು ಒಂದು ಲಕ್ಷ ಡಬ್ಬಿಗಳು ಖರ್ಚಾದಕೂಡಲೇ ಈ ಲೆಕ್ಕವನ್ನು ಅಲ್ಲಿಗೆ ಸಂಕ್ಷೇಪಮಾಡಿ ಬಹುಮಾನಗಳನ್ನು ಹಂಚುತ್ತೇವೆ. ಒಂದುಪಕ್ಷದ ಮೇಲಣ ನಿಯಮಿತ ದಿನಕ್ಕೆ ಸರಿಯಾಗಿ ಒಂದು ಲಕ್ಷ ಡಬ್ಬಿಗಳು ಖರ್ಚಾಗದಿದ್ದರೆ ಮತ್ತು ವಾಯಿದೆಯನ್ನು ಹೆಚ್ಚಿಸದೆ ಎಷ್ಟು ಡಬ್ಬಿಗಳು ಖರ್ಚಾಗಿರುತ್ತವೆಯೋ ಅಷ್ಟಕ್ಕೆ ದಾಮಾಷಾ ಪ್ರಕಾರ ಆಗತಕ್ಕಷ್ಟು ಬಹುಮಾನವನ್ನು ಮಾತ್ರ ಹಂಚುತ್ತೇವೆ. ಪ್ರತಿಯೊಬ್ಬ ಮನುಷ್ಯನು ತಾನು ಕೊಡುವ ಹಣಕ್ಕೆ ಸರಿಯಾಗಿ ದಿವ್ಯೌಷಧವನ್ನು ಪಡೆಯುವದಲ್ಲದೆ ಬಹುಮಾನವನ್ನು ಸಹಾ ಹೊಂದುವದಕ್ಕೆ ಅರ್ಹನಾಗಿರುತ್ತಾನೆ. ಈ ವಿಷಯದಲ್ಲಿ ತಿಲಮಾತ್ರವಾದರು ಸಂಶಯವಿಲ್ಲ. ಬಹುಮಾನದ ಮೊತ್ತವನ್ನು ನಿಷ್ಪಕ್ಷಪಾತವಾಗಿ ಒಂದೇ ಸಮವಾಗಿ ಹಂಚಲ್ಪಡುವೆವು. ಇದು ಮೋಸವಲ್ಲ, ಲಾಟರಿಯಲ್ಲ, ಯಾವ ವಿಧವಾದ ಕುಹಕತನವು ಇಲ್ಲ, ಸತ್ಯವಾಗಿ ಬಹುಮಾನವನ್ನು ಹಂಚುತ್ತೇವೆ. ಅಸೂಯಾಂಧರ ಮಾತುಗಳಿಗೆ ನಿಗಾ ಕೊಡಲಾಗದು, ಜಾಗ್ರತೆ ತರಿಸಿಕೊಳ್ಳಿರಿ. ಔಷಧದ ಗುಣವನ್ನು ಪರೀಕ್ಷಿಸಿರಿ. ಅಪೇಕ್ಷಕರು ಈ ಕೆಳಗಣ ನಮ್ಮ ಅಡ್ರೆಸ್ಸಿಗೆ ಬರೆದು ತರಿಸಿಕೊಳ್ಳಿರಿ.

ಇದರ ಅನುಪಾನ ಪತ್ರಿಕೆಯನ್ನು ಬಹುಮಾನದ ಟಿಕೀಟನ್ನು ಡಬ್ಬಿಸಂಗಡ ಕಳಿಸುವೆವು. ನಮ್ಮ ಕಂಪೆನಿಯ ಕಾಶಿವಿಶ್ವನಾಥ ಮಾರ್ಕು ಇಲ್ಲದ ಡಬ್ಬಿಯನ್ನು ತೆಗೆದುಕೊಳ್ಳಲಾಗದು. ನಮ್ಮ ಅಡ್ರೆಸ್ಸು

ಸರ್ವಜನಮನೋಲ್ಲಾಸಿನಿ ಅಂಡ್ ಕೋ. ಬಳ್ಳಾರಿ.

ದಿ ಜನರಲ್ ಏಜನ್ಸಿ, ಮೈಸೂರು.

ಕಾದಂಬರಿಗಳು:— ಚಂಡಮಾರುತ ೦-೨-೦; ಚರಿತಾವೃತಂ ೦-೫-೦; ರಾಜಕಥಾವಲ್ಲರಿ ೦-೫-೦; ಪೀಟರಿನ ಚರಿತ್ರೆ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೨-೬; ಸೀತೆ ೦-೫-೦; ಸುಹಾಸಿನಿ, ಕಲಾನಾಥ ೦-೮-೦; ಮಹಾಲಕ್ಷ್ಮಿ ೦-೨-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸತ್ಯಸಂಜೀವಿನಿ ೦-೮-೦; ಕೊಹಿನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೨-೦. 50

ಊದುಬತ್ತಿಗಳು.

ವಿಧವಿಧವಾದ ಊದುಬತ್ತಿಗಳು ಸೇರು ೧ ಕ್ಕೆ ೧-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಜವಾಜಿ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪ ಟಿನ್ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು. ಟಿ. ಎಲ್. ಉಪಾಧ್ಯಾಯ,
ಸುಗಂಧಕಾರಿ,
ಮೈಸೂರು
19

39 ಸಚಿತ್ರ ಶುಕಸಪ್ತತಿ ಕಥೆಗಳು ರೂ. ೧-೮-೦ (೫೧೨ ಪುಟ) ಟಪಾಲು ಹಾಸಲು ೪ ಆಣೆ. ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ ರೂ ೧-೮-೦. (೫೩೬ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ! ಮಾನ್ಯತೆಯು ಬೇಕಾದರೆ, ವಾಗ್ವೈಭವವಿರಬೇಕೆಂಬ ಇಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಬೇಕೆಂಬ ಇಚ್ಛೆ ಇದ್ದರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯಲ್ಲಾಸೆಯಿದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೩೦ ಪುಟಗಳಿಂದ ಕೂಡಿದ ೬೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ. ೧-೪-೦ ಟಪಾಲ್ ಹಾಸಲು ೩ ಆಣೆ. ಈಗಲೇ ಬರೆ ನಿಮ್ಮಾ.ನಮ್ಮಲ್ಲಿ ಇನ್ನೂ ಅನೇಕ ಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.
ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸಾಲಾಮಿಸ್ರಿಯು ಕಾಬೂಲ್ ದೇಶದಲ್ಲಿ ಪೌಂಡು ೧ ಕ್ಕೆ ೧-೧೦-೦ ಇತ್ತು ಈಗ ಪೌಂಡು ೧ಕ್ಕೆ ೩-೪-೦ ಆಗಿದೆ. ಆದ್ದರಿಂದ ಇದರಕ್ರಯ ೨-೧೦ ರೂಪಾಯಿ ಮಾಡಿರುತ್ತೆ. 6

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬಾ.

ಈ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾ" ದಿನ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ದೂರ ನಡೆಯುವುದರಿಂದ ಮೇಲುಬ್ಬಸ ಬರುವುದೂ, ತಲೆಯು ನೋವೂ ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು ಹಳೇ ತಲೆ ನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಸೇಖರಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು ಈ ಪಂಜಾಬ್ ಸಾಲಾಮಿಸ್ರಿಯು ಮುರಬ್ಬಾಕ್ಕೆ ತಾಂಬ್ರದ ಮತ್ತು ಬಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು.

ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ
೫೦೦ ರೂ. ಬಹುಮಾನವಾಗಿ ಕೊಡಲ್ಪಡುವುದು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನದಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧ಕ್ಕೆ ರೂ. ೨-೦-೦. ಟಪ್ಪಾಲ್‌ಖರ್ಚು ಬೇರೆ. ಅನುಪಾನಪತ್ರಿಕೆ ಔಷಧದಸಂಗಡ ಇರುತ್ತೆ.
ಡಿ. ಮನ್ನಾಲಾಲ್, 5 ಹಾಜಿ ಸಾಹೇಬ್ ಮಹಡಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ.
ನಮ್ಮ ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೊ, ದೊಡ್ಡಪೇಟೆ, ಬೆಂಗಳೂರು ಸಿಟಿ.

ಸಾರ್ವದೇಶಿಕ ಪಂಡಿತ ... ಕಥೆಗಳು 17

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂಧುಗಳ ನೋವು ಮೈ ಕಾಲು ಹೊಡೆತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ— ೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೦ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈ ಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತವಿದೊಂದೇ.
ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧ . .
ಟಪಾಲ್‌ಖರ್ಚು ಬೇರೆ.
ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ. ಮೈಸೂರು

ನ್ಯಾಯದರ್ಪಣ. 32

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯೂ, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಫ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸೂ, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆಚರಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ವಗೈರೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯೂ ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರುತ್ತವೆ.
ಬೆಲೆ ರೂ. 1—8—0. ವಿ. ಪಿ. ಮೂಲ್ಯ 1—12—0.
ಎಂ. ಎಸ್. ನಂಜಪ್ಪನವರು,
ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ) ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾಗಿದ್ದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚುಟಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜನ್ ಡಬ್ಬಿಗೆ ೨-೭-೦

ಉತ್ತಮವಾದ ನಶ್ಯದಪುಡಿ.

ಘಾಟು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವುವು. ನೀವುಉಪಯೋಗಿಸುವ ಬರೀ ಹೊಗೇಸೊಪ್ಪಿಗೆಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.
ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,
ಗೋಪಸೆಟ್ಟಿಪುರ, ಹನೂರು ಪೋಸ್ಟ್
28 ಕೊಳ್ಳೇಗಾಲದ ತಾಲ್ಲೂಕು.

೧೯೧೪ ನೆಯಇಸವಿ ಸೆಪ್ಟಂಬರ್ ತಾ॥ ೬ರಿಂದ ೧೯೧೪ನೆಯ ಸೆಪ್ಟಂಬರ್ ತಾ॥ ೧೨ರವರೆಗೆಸಲ್ಲುವ ಶಾಲಿವಾಹನಶಕ ೧೮೩೬ನೆಯ ಆನಂದನಾಮ ಸಂ॥ ದ ಭಾದ್ರಪದ ಬ॥ ಬಿದಿಗೆಯಿಂದ ಭಾದ್ರಪದ ಬ॥ ಅಷ್ಟಮಿವರೆಗಿನ ಪಂಚಾಂಗ.

ತಾ॥	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ಸೌರಸಿಂಹ
6	1 ಭಾನು	ಬಿದಿ	35-58	ಉತ್ತರಾಭಾ	48-3	22
7	2 ಸೋ	ತದಿ	40-27	ರೇವತಿ	54-4	23
8	3 ಮಂ	ಚೌ	45-32	ಅಶ್ವಿನಿ	60-	24
9	4 ಬುಧ	ಪಂ	50-47	ಅಶ್ವಿನಿ	0-42	25
10	5 ಗುರು	ಷಷ್ಠಿ	55-48	ಭರಣಿ	7-3	26
11	ಶುಕ್ರ	ಸಪ್ತ	60-	ಕೃತ್ತಿ	13-23	27
12	6 ಶನಿ	ಅಷ್ಟ	60-	ರೋಹಿ	18-46	28

(1) ಕುವೆ, ಪ್ರೇತದ್ವಿತೀಯಾ. (2) ಬೃಹದ್ಗೌರೀವ್ರತಂ. (3) ರವೆ, ಸಂಕಷ್ಟಹರ ೪, ದೇವಮಹಾಲಯಃ, ಅಮೃತಸಿದ್ಧಿಯೋಗಃ. (4) ಮಹಾಭರಣೀ, ಮತ್ಸ್ಯಯೋಗಃ, ಚಾಮರಾಜಮಹಾರಾಜರ ೫೨ನೇ ಜನ್ಮವರ್ಧಂತೀ. (5) ದಗ್ಧಯೋಗಃ, ಶ್ರೀಪ್ರಸನ್ನ ಕೃಷ್ಣಸ್ವಾಮಿ ರಥಃ. (6) ಸರ್ವತ್ರಶ್ರೀಕೃಷ್ಣಜಯಂತೀ, ಅಮೃತಸಿದ್ಧಿಯೋಗಃ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಕೌಸ್ತುಭ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED, NO M 124

ಮೈಸೂರ್ ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು

ವಾರ್ಷಿಕ ಚಂದಾ ೧-೦-೦ } ದವಹಿಕೂರವುರೀತಾರಾ ಪರಮಧಿಗತರಾಜಮಂಡಲಹಿತ್ಯೈ ಘನಪಥಕೃತಾವತಾರಾ ಪಶ್ಯಜ್ಞನಹೃತ್ತಮೋಹರಾಜೀಯಾತ್! ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ, ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ! ಸಿಮಾತೀತ ಯಶಃಪ್ರತಾಪವಿಪುಲಂಸದ್ವೃತ್ತಮಾಲಾಕುಲಂ। ಪ್ರೇಮಂಬೆತ್ತಿ ಕಿಯುಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ! { ಅಂಚೆವೆಚ್ಚ ಸೇರಿ ೧-೧೪-೦

REGISTERED, NO M 124

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜ ಮೊಹಲ್ಲಾ, ಮೈಸೂರು.

ಸುಂದರವಾದ ಹೊಸನಮೂನೆ ದೊಡ್ಡ ಘಡಿಯಾರಗಳು.

32

ಪ್ರಖ್ಯಾತಿಹೊಂದಿದ ಅಮೆರಿಕಾದೇಶದ ಅನ್ಸೋನಿಯಾ ಕಂಪೆನಿಯವರಿಂದ ತಯಾರಿಸಲ್ಪಟ್ಟ ಖಾತ್ರಿಯಾದ ಮತ್ತು ಬಹಳದಿವಸ ಬಾಳಿಕೆಬರತಕ್ಕಂಥ ಕ್ಲಾಕ್‌ಗಳು ಇವೇ ಹೊರತು ಬೇರೆ ಅಲ್ಲಾ.

ಈ ಪಕ್ಕದ ಚಿತ್ರದಲ್ಲಿ ಕಾಣಿಸಿರುವ ಗೋಡೆಗೆ ತಗುಲಿಸುವ ಘಂಟೆ, ಅರ್ಧಘಂಟೆ ಹೊಡೆಯುವ ಘಡಿಯಾರ ಒಂದಕ್ಕೆ ೧೨-೮-೦ ರೂ. ಘಂಟೆ ಅರ್ಧಘಂಟೆ ಹೊಡೆದು ಅಲಾರಂ ಸಹಾ ಇರತಕ್ಕ ಘಡಿಯಾರ ಒಂದಕ್ಕೆ ೧೩-೪-೦ ರೂ. ಈ ಘಡಿಯಾರಗಳು ಮಜಬೂತಾದ ಯಂತ್ರೋಪಕರಣಗಳಿಂದಲೂ ಮೇಲ್ಭಾಗದಲ್ಲಿ ನಕಾಸಿನ ಕೆತ್ತನೆಯಿಂದಲೂ ನೋಡುವುದಕ್ಕೆ ಅಂದವಾಗಿಯೂ ಬಹಳ ದಿವಸ ಬಾಳಿಕೆ ಬರತಕ್ಕವುಗಳಾಗಿವೆ. ಈ ಘಡಿಯಾರಕ್ಕೆ ಆರ್ಡರ್ ಮಾಡತಕ್ಕವರು ೫ ರೂಪಾಯಿ ಅಡ್ವಾನ್ಸು ಕಳಿಸಬೇಕು. ಬಾಕೀ ಮೊಬಲಿಗ್ಗೆ ರೈಲ್ವೆ ರಶೀದಿಯನ್ನು ವಿ. ಪಿ. ಮಾಡಲಾಗುತ್ತೆ. ರೈಲ್ವೆ ಛಾರ್ಜು ಅಲಾಯಿದಾ.

ಸಿಕ್ಕಿದ ಹಾರ್ಮೋನಿಯಂಗಳನ್ನು ಕ್ರಯಕ್ಕೆ ತೆಗೆದುಕೊಂಡು ನಿಮ್ಮ ಹಣವನ್ನು ಯಾಕೆ ವ್ಯರ್ಥಮಾಡಿಕೊಳ್ಳುವಿರಿ.

ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ "ಮೋಹನ್‌ಫ್ಲೂಟ್" (M. Mohen flute) ಮತ್ತೂ "ಮೋಸ್ಲೆಂಫ್ಲೂಟ್" (Moslem flute) ಹಾರ್ಮೋನಿಯಂಗಳನ್ನು ನಮ್ಮಿಂದ ತರಿಸಿಕೊಂಡು ಪರೀಕ್ಷಿಸಿರಿ ಈ ಹಾರ್ಮೋನಿಯಂಗಳು ಅನೇಕದಿವಸ ಬಾಳಿಕೆಬರುವಂತೆ ಬಹಳಮಜಬೂತಾದ ಸಾಮಾನುಗಳಿಂದ ಪ್ರಖ್ಯಾತರಾದ ಕಾರೇಗಾರರಿಂದ ತಯಾರಿಸಲ್ಪಟ್ಟಿವೆ. ಒಂದು ಸಾರಿ ನಮ್ಮಿಂದ ತರಿಸಿ ಪರೀಕ್ಷಿಸಿದಲ್ಲಿ ಇದರ ಬಂದೋಬಸ್ತು ಬಾಳ್ವಿಕೆ ಸಹ ತಮಗೇ ವ್ಯಕ್ತವಾಗುತ್ತೆ.

ನಂ ೧ ಒಂದು ಸೆಟ್‌ರೀಡ್ಸ್ ಉಳ್ಳದ್ದು (Moslem flute) ಹಾರ್ಮೋನಿಯಂ ೧ ಕ್ಕೆ ೩೫-೦-೦ ರೂ.
ನಂ ೨. ಒಂದು ಸೆಟ್‌ರೀಡ್ಸ್ ಉಳ್ಳದ್ದು (M. Mohen flute) ಹಾರ್ಮೋನಿಯಂ ೧ ಕ್ಕೆ ೩೩-೮-೦ ರೂ.
ನಂ ೩. ಡಿಟೋ ನಮೂನೆಯಲ್ಲಿ ಅತ್ಯುತ್ತಮವಾದದ್ದು (M. Mohen flute) ೧ ಕ್ಕೆ ೪೨-೮-೦ ರೂ.
ನಂ ೪. ಡಬ್ಬಲ್‌ರೀಡ್ಸ್ ಉಳ್ಳದ್ದು (Moslem flute) ಹಾರ್ಮೋನಿಯಂ ೧ ಕ್ಕೆ ೪೩-೮-೦ ರೂ.
ನಂ ೫. ಡಬ್ಬಲ್‌ರೀಡ್ಸ್ ಉಳ್ಳದ್ದು (M. Mohen flute) ಹಾರ್ಮೋನಿಯಂ ೧ ಕ್ಕೆ ೫೨-೮-೦ ರೂ.

ಈ ಹಾರ್ಮೋನಿಯಂಗಳ ಪೈಕಿ ಯಾವದಕ್ಕೆ ಆರ್ಡರ್ ಕೊಟ್ಟರೂ ಕೊಡ ೫ ರೂಪಾಯಿ ಅಡ್ವಾನ್ಸು ಕಳಿಸಬೇಕು ಬಾಕೀಮೊಬಲಿಗ್ಗೆ ರೈಲ್ವೇರಶೀದಿಯನ್ನು ವಿ. ಪಿ ಮೂಲ್ಯ ರವಾನಿಸುತ್ತೇವೆ.

ನೆಪ್ಚೂನ್‌ಫೌಂಟನ್‌ಪೆನ್‌ಗಳು. NEPTUNE FOUNTAIN PENS.

ಈ ಫೌಂಟನ್‌ಪೆನ್‌ಗಳು ಅದರ ಖರೀದಿಗೆ ತಕ್ಕಂತೆ ೪ ವರುಷಗಳಲಾಗಾಯ್ತು ಹತ್ತು ವರುಷಗಳವರೆಗೆ ಬಾಳಿಕೆ ಬರತಕ್ಕವುಗಳಾಗಿವೆ.

ನಂ ೨೦೦. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಕ್ರಯ ೧ ಕ್ಕೆ ೧—೧೪—೦.
ನಂ ೨೦೫. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಉತ್ತಮವಾದದ್ದು ಕ್ರಯ ೧ ಕ್ಕೆ ೨—೧೦—೦
ನಂ ೨೧೦. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಅತ್ಯುತ್ತಮವಾದದ್ದು ಕ್ರಯ ೧ ಕ್ಕೆ ೪—೭—೦.

ಮೇಲ್ಕಂಡ ಯಾತನಮೂನೆ ಫೌಂಟನ್‌ಪೆನ್‌ಗಳನ್ನು ತರಿಸಿಕೊಂಡರೂ ಅದರ ಜೊತೆಯಲ್ಲಿ ಪೆನ್ ಇಡತಕ್ಕ ಪೆಟ್ಟಿಗೆ ೧. ಜೇಬಿಗೆ ತಗಲಿಸತಕ್ಕ ಕ್ಲಿಪ್ ೧. ಶಾಯಿಹಾಕುವ ಗಾಜಿನ ಟ್ಯೂಬ್ ೧. ಶಾಯಿತುಂಬುವವಿಧ ಪ್ರಿಂಟಾಗಿರತಕ್ಕ ಚೀಟಿ ೧ ನ್ನೂ ಸಹ ರವಾನಿಸಲಾಗುತ್ತೆ.

ರಖಂವಾರ್ ವಾಚ್ ಸರಪಣಿಗಳು.



ಈ ಪಕ್ಕದ ಚಿತ್ರದಲ್ಲಿ ಕಾಣಿಸಿರುವ ನಮೂನೆ ಅಚ್ಚಬೆಳ್ಳಿಯ ವಾಚ್ ಸರಪಣಿ ಯಾವ ರಖಂ ಬೇಕಾದರೂ ಕ್ರಯ ೧ಕ್ಕೆ ೩—೪—೦ ಮೇಲ್ಕಂಡ ರಖಂವಿನ್ನಲ್ಲಿ ನಿಕ್ಕಲ್‌ಬೆಳ್ಳಿ ಸರಪಣಿ ಕ್ರಯ ೧ ಕ್ಕೆ ೦—೧೨—೦.

ಅಚ್ಚಬೆಳ್ಳೀ ಕೊರಳ ಸರಪಣಿ ಬಹಳ ನಾಜೋಕಾಗಿ ತಯಾರಿಸಿದ್ದು ೧ ಕ್ಕೆ ೧—೪—೧.

೧೮ ಕ್ಯಾರಟ್ಟು ಚಿನ್ನದ ಸರಪಣಿ ೧ ಕ್ಕೆ ೫—೮—೦.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್. ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧-೦-೦
ವರಪಾದಿಗಜಾಂಕುಶತಾರಾವಳಿ	೦-೮-೦
ಶಿವಪೂಜಾವಿಧಿಃ	೦-೮-೦
ಚಾರುಶೀಲೆಚರಿತ್ರೆ	೦-೫-೦
ಸಟೀಕ ನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೬-೦
ವಿವೇಕಮಂಜರಿ [೨ನೆಯ ಭಾಗ]	೦-೩-೦
ವ್ರತಪಂಚಕ	೦-೨-೦
ಷಟ್‌ಸ್ಥಲವಿದ್ಯಾ (ಮುಕ್ತಿಸಾಧನ)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆಯವೆಚ್ಚ ಬೇರೆ.

ಹೊಸಪುಸ್ತಕಗಳು.

151

ಬಸವರಾಜವಿಜಯಂ— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲಸಾಮರಸ್ಯದಿಂದ ನಿರೂಪಿತವಾಗಿದೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸೂಕ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ ವರ್ಷದ ಚಂದಾ ೨-೮-೦.

ಎ. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕಮಂಡಲಿ, ಮೈಸೂರು.

ಪ್ರಕಟನೆ.
ಪ್ರಿಂಟಿಂಗಾಫೀಸಿನವರು ಅಗತ್ಯವಾಗಿ ಗಮನಿಸತಕ್ಕದು.

ನಮ್ಮಲ್ಲಿ ಈ ಸ್ಟಾರ್‌ಪತ್ರಿಕೆಯ ೧, ೨, ೩, ೪, ೭ ಮತ್ತು ೮ನೇ ಪುಟಗಳಲ್ಲುಪಯೋಗಿಸಲ್ಪಟ್ಟಿರುವ ಪೈಕ ಅಥವಾ ೧೨ ಪಾಯಿಂಟ್ ಅಕ್ಷರಗಳ ಮತ್ತು ಈ ಪ್ರಕಟನೆಗುಪಯೋಗಿಸಲ್ಪಟ್ಟಿರುವ ಟೂಲೈನ್‌ಮಿನಿಯನ್ ಅಥವಾ ೧೪ ಪಾಯಿಂಟ್ ಅಕ್ಷರಗಳ ಮ್ಯಾಟ್ರಿಕ್ಸುಗಳೂ, ಅವುಗಳ ಮೌಲ್ಡುಗಳೂ ಇವನ್ನು ಎರಕವೆರೆಯುವ ಯಂತ್ರವೂ ಅದಕ್ಕೆ ಸಂಬಂಧಪಟ್ಟ ಲೈನ್ ಗೇಜ್ ಪೇಪರ್‌ಗೇಜ್ ಹೈಟ್‌ಗೇಜ್ ಡ್ರೆಸ್ಸಿಂಗ್‌ಟೇಬಲ್ ಕರ್ನಿಂಗ್ ಮಿಷನ್ನು ಮುಂತಾದ ಸಾಮಾಗ್ರಿಗಳೂ ಸೂಪರ್‌ರಾಯಲ್ ಸೈಜನ್ನು ಪ್ರಿಂಟ್ ಮಾಡುವ ಸಿಲಿಂಡರ್ ಮಿಷನ್ನು ಸಹ ಮಾರಾಟಕ್ಕೆ ಸಿದ್ಧವಾಗಿವೆ. ಈ ಮಿಷನ್ನಿನಲ್ಲೇ ಈ ಸ್ಟಾರ್‌ಪತ್ರಿಕೆಯು ಪ್ರಿಂಟುಮಾಡಲ್ಪಡುತ್ತಿರುವುದು. ಎರಕವೆರೆಯುವ ಮಿಷನ್ನು ಬಹಳ ಸ್ವಲ್ಪ ಕೆಲಸವನ್ನು ಮಾತ್ರ ಮಾಡಿ ಹೊಸದಾಗಿಯೇ ಇರುವುದು. ಇಷ್ಟವುಳ್ಳವರು ಇವುಗಳ ಬೆಲೆ ಮೊದಲಾದವನ್ನು ನಮಗೆ ಬರೆದು ತಿಳಿದುಕೊಳ್ಳಬಹುದಲ್ಲದೆ ಪ್ರತ್ಯಕ್ಷದಲ್ಲಿ ಬಂದು ನೋಡಬಹುದು.

ವೈ. ವಿರೂಪಾಕ್ಷಯ್ಯ,
ಪ್ರೊಪ್ರೈಟರ್
ಕ್ರಾಸ್ ಪ್ರೆಸ್, ಮೈಸೂರು.

ವೀರಶೈವ ಸ್ಟೂಡೆಂಟ್ಸ್ ಹೋಂ; ಚಿಕ್ಕಮಗಳೂರು

ಇದರ ಕಾರ್ಯವು ಕಳೆದ ಜನವರಿಯಲ್ಲಿಯೇ ಆರಂಭಗೊಂಡು ಈವರೆಗೂ ಮುಕ್ಕಾಲು ಭಾಗ ಕೆಲಸವೆಲ್ಲ ಪೂರೈಸುತ್ತಾ ಬಂದಿರುವುದು. ಅಲ್ಪವಾಗಿ ಆರಂಭಿಸಿದ ಇದರ ಕಾರ್ಯವು ಈಗ ಅಗಾಧವಾಗಿ ಪರಿಣಮಿಸಿರುವುದು, ಮೊದಲು ೨೩ ಸಾವಿರ ರೂಪಾಯಿಗಳ ಒಂದು ಕಟ್ಟಡವೂ ೧೦-೧೫ ಸಾವಿರ ರೂಪಾಯಿಗಳ ಒಂದು ಸಹಾಯನಿಧಿಯೂ ಕಲ್ಪಿಸಲ್ಪಟ್ಟು ಈ ಪ್ರಾಂತ್ಯದ ನಮ್ಮ ಸಮಾಜದ ತರುಣವಿದ್ಯಾರ್ಥಿಗಳಿಗೆ ವಿದ್ಯಾಸುಧಾರಣೆಯನ್ನು ಕೊಡಲು ಸಂಕಲ್ಪಿಸಿತ್ತು. ಈ ವಿಷಯವು ಇಲ್ಲಿನ ಶ್ರೀ. ಬ್ಲ. ಸಿ. ಶ್ರೀನಿವಾಸರಾಯರವರ ಪರಾಂಬರಿಕೆಗೆ ಬಂದು ನಮ್ಮನ್ನಾಳುವ ಆ ಮಹಾಸ್ವಾಮಿಯವರ ಅಂತಃಕರಣ ಪೂರಿತವಾದ ಅಭಿಧಾನವನ್ನು ಪಡೆದುಕೊಂಡಿತು. ಅನಂತರ ಇದರ ಉತ್ಪಾದಕರಾದ ಶ್ರೀ ಚಂದ್ರಶೇಖರಸ್ವಾಮಿಗಳವರಿಗೂ ಸಮಾಜದವರಿಗೂ ಮತ್ತಷ್ಟು ಪ್ರೋತ್ಸಾಹನವುಂಟಾಗಿ ಕಾರ್ಯಾರಂಭಗೊಂಡು ೧೮ ಸಾವಿರ ರೂಪಾಯಿಗಳ ಕಟ್ಟಡದ ಪ್ಲಾನ್ ತಯಾರಾಗಿ ಬಂತು. ಈ ಪ್ಲಾನಿಗನುಸಾರವಾಗಿ ತಯಾರುಮಾಡುವುದರಿಂದ ತಮಗೆ ನಷ್ಟವಾಗುತ್ತೆಂದು ಕಂಟ್ರಾಕ್ಟದಾರರು ವಹಿಸಿಕೊಳ್ಳಲಿಲ್ಲ. ಅದರಮೇಲೆ ಇದನ್ನು ಸ್ವತಃ ತಯಾರ್ಮಾಡಿಸಬೇಕೆಂದು ಸಂಕಲ್ಪಿಸಿ ಪ್ರೆಸಿಡೆಂಟರೇ (ಇದರ ಉತ್ಪಾದಕರು) ವಿಶಿಷ್ಟ ಜವಾಬ್ದಾರಿಯನ್ನೂ ವಹಿಸಿಕೊಂಡರು. ಈಚೆಗೆ ಅಡಿಗೆ ಮನೆ ಸ್ನಾನದಮನೆ ಮುಂಭಾಗದ ಮಹಡಿ ಮುಂತಾದ ಸುಮಾರು ೩-೪ ಸಾವಿರ ರೂಪಾಯಿನ ಕೆಲಸಗಳು ಅಂದಾಜು ಪ್ಲಾನ್ ಮೇರೆ ಆಯ್ತು. ಕಟ್ಟಡವೆಲ್ಲಾ ಪೂರ್ತಿಯಾಗಿ ಕೊನೆಗಾಣಲು ಕನಿಷ್ಠಪಕ್ಷ ೩೦ ಸಾವಿರ ರೂಪಾಯಿಗಳಾದರೂ ಬೇಕಾಗುವುದು. ಈಗಾಗಲೇ ಸುಮಾರು ೨೦ ಸಾವಿರ ರೂಪಾಯಿಗಳ ಮೇಲೆ ಖರ್ಚಾಗಿರುವುದು ನಾವು ಡಿಪಾಜಿಟ್ ಮಾಡಿದ ೬ ಸಾವಿರ ರೂಪಾಯಿಗಳೂ, ಶ್ರೀಗಳವರು ಸಂಚಾರ ಮಾಡಿ ಎತ್ತಿದ ೬ ಸಾವಿರ ರೂಪಾಯಿಗಳೂ, ಖರ್ಚಾಗಿ ಹೋದುದಲ್ಲದೆ. ಇಲ್ಲಿನ ಮಾರ್ವಾಡಿ ಸಾಹುಕಾರರಲ್ಲಿಯೂ ಇತರರಲ್ಲಿಯೂ ಸುಮಾರು ೮-೧೦ ಸಾವಿರ ರೂಪಾಯಿಗಳ ವರೆಗೂ ಕೈಗಡಮಾಡಿ ಅವರತಗಾದೆಯ ತೊಂದರೆಯಾಗಿರುವುದು. ಗೌರ್ನಮೆಂಟಿನಿಂದ ಸ್ಯಾಂಕ್ಷನ್‌ಆಗಿರುವ ೪ ಸಾವಿರ ರೂಪಾಯಿಗಳು ಈವರೆಗೂ ಮುಂಜೂರಾಗಿ ಬರದೆ, ತುಂಬಾ ತೊಂದರೆಯಾಗಿರುವುದು, ಅಲ್ಲದೆ ಸಂ ೧ ನೆ ಕೌನ್ಸಿಲ್‌ಸಾಹೇಬರವರ ಮತ್ತು ವಿ॥ ಶಾಖೆಯ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರ ಸ್ವಾರಿಯು ಇಲ್ಲಿಗೆ ದಯಮಾಡಿಸಿ ಹೋಂ ಪರಾಂಬರಿಸಿ ಮಜಬೂತಿಯಾ ರಚನೆ ವಿಷಯದಲ್ಲಿ ತುಂಬಾ ಸಂತೋಷಪಟ್ಟುಕೊಂಡು ವಾಪಸ್ ಚಿತ್ತೈಸಿರುವಾಗ್ಗೆ ಪ್ರೆಸಿಡೆಂಟರವರು ಈಹೋಮಿಗೆ ಮುಂದೆ ೨೦ ಸಾವಿರ ರೂಪಾಯಿಗಳ ವರೆಗಾದರೂ ಕೊಡಿಸಿಕೊಡಬೇಕಾಗಿ ಕೇಳಿಕೊಂಡಿರುವರು. ಪ್ರಕೃತದ ಯುದ್ಧ ಸಂದರ್ಭದಲ್ಲಿ ಅದರ ಪರ್ಯವಸಾನವೇನಾಗುತ್ತದೋ ಎಂದು ಮತ್ತಷ್ಟು ವ್ಯಸನವುಂಟಾಗಿರುವುದು. ಕೆಳಗಿನವರಿಗೆ ವೃತ್ತಿಗಳಾಗಲಿ ಪರಸ್ಪರ ಸಹಾಯವಿಲ್ಲದೆ ಇಂತಹ ಹೋನ್ನತಿಯ ಕಾರ್ಯಗಳನ್ನು ನಡೆಸುವುದು ಬಹು ಕಷ್ಟಸಾಧ್ಯವು. ಈ ಹೋಂ ಮುಂದೆ ಚಿರಸ್ಥಾಯಿಯಾಗಬೇಕಾದರೆ ಕನಿಷ್ಠಪಕ್ಷ ೪೦ ಸಾವಿರ ರೂಪಾಯಿಗಳ ವರೆಗಾದರೂ ಡಿಪಾಜಿಟ್ ಮಾಡಬೇಕಾಗಿರುವುದು. ಈ ಪ್ರಾಂತದ ನಮ್ಮ ಸಮಾಜದ ಬಾಂಧವರಾದರೋ ಅಷ್ಟು ಪುಷ್ಟರೂ ಅಲ್ಲ. ಮತ್ತು ಅಷ್ಟು ವಿದ್ಯಾವಂತರಾದ ವಿವೇಚನೆಯುಳ್ಳವರೂ ಅಲ್ಲ. ಇಂತಹವರಲ್ಲಿ ಈ ಮಹಾಕಾರ್ಯವನ್ನು ದೇವರು ಎಷ್ಟರಮಟ್ಟಿಗೆ ನೆರವೇರಿಸುತ್ತಾನೆಯೋ ತಿಳಿಯದು. ಸದ್ಯಕ್ಕೆ ಇದರ ಮುಖ್ಯಭಾರವೆಲ್ಲಾ ರಾ॥ ರಾಯರ ತಲೆಯಮೇಲೆ ಬಿದ್ದಿರುವುದು. ಈ ಮಹಾನುಭಾವರ ಅಭಿಮಾನವು ನಮಗೆ ಆ ಮಹಾಪುರುಷನಾದ ಬಸವೇಶನ ನೆನಪು ಮಾಡುತ್ತಿರುವುದು. ಪ್ರಕೃತದ ಈ ಅನನುಕೂಲಗಳೆಲ್ಲವೂ ಶ್ರೀ ಮಠದವರ ಪರಾಂಬರಿಕೆಗೆ ಬಂದುದರಿಂದ ಮೇಲ್ವಿಚಾರಣೆ ವಗೈರೆ ನೋಡಿಕೊಳ್ಳಲು ಚಿರಪಟ್ಟಾಧ್ಯಕ್ಷ ಶ್ರೀ ಚನ್ನಬಸವದೇಶೀಕೇಂದ್ರ ಸ್ವಾಮಿಗಳವರು ಜಂಪಾಲಿಪುರಿ ಶ್ರೀ ಮಠಕ್ಕೆ ದಯಮಾಡಿಸಿರುವುದಾಗಿ ತಿಳಿಯಿತು. ಹ್ಯಾಗೂ ಆನಮ್ಮ ಘನತೆಯನ್ನು ಹೊಂದಿದ ಪ್ರಭುವರರು ಸ್ಪರ್ಶಮಾಡಿದ ಸ್ಥಳವು ...ಪಡೆವಾಸ್ತವ್ಯ... ಇದರಿಂದ ಅನೇಕರು ನಂಬಿ ನಿರೀಕ್ಷಿಸುತ್ತಿರುವರು.

ವಿದ್ಯಾಭಿಮಾನಿ.

ರಾಜಧಾನಿಯ ಕುಂಚಿಟಿಗರ ಪಾಠಶಾಲಾ ಶಿಲಾಪ್ರತಿಷ್ಠೆಯ ಸಮಯದಲ್ಲಿ ಅರ್ಪಿಸಲ್ಪಟ್ಟ ವಿಜ್ಞಾಪನ ಮತ್ತು ಪ್ರತ್ಯುತ್ತರ.

ಆಳುವ ಮಹಾಸ್ವಾಮಿಯವರಾದ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ. ಯವರ ಮಹಾ ಸನ್ನಿಧಾನದಲ್ಲಿ.

ಮಹಾಸ್ವಾಮಿ.

ನಮ್ಮ ಕುಂಚಿಟಿಗರು ಕೇವಲ ಅನಕ್ಷರಸ್ಥರಾದ ವ್ಯಾಪಾರಿಗಳಾಗಿ ಇರುವುದರಿಂದ ನಮ್ಮ ಜಾತಿಯ ಬಾಲಕರಿಗೆ ಕೊಂಚ ವಿದ್ಯಾಭ್ಯಾಸ ಮಾಡಿಸಿ ಅದರೊಡನೆ ಕೈಗಾರಿಕೆ ಮತ್ತು ವ್ಯಾಪಾರವು ಸೇರಿದರೆ ಅನುಕೂಲವೆಂದು ತಿಳಿದು ನಮ್ಮ ಜಾತಿಯ ಹುಡುಗರಿಗೂ ಮತ್ತು ಎಲ್ಲಾ ಮತಸ್ಥರ ಹುಡುಗರಿಗೂ ಸಹ ಫೀಜು ಇಲ್ಲದೇನೆ ಮುಫತ್ತಾಗಿ ವಿದ್ಯಾದಾನ ಮಾಡಿಸಬೇಕೆಂಬ ಉದ್ದೇಶದಿಂದ ೧೯೦೮ ನೇ ಇಸವಿಯಲ್ಲಿ ಒಂದು ಸ್ಕೂಲನ್ನು ಪ್ರಾರಂಭಿಸಿ ಆ ಲಾಗಾಯ್ತು ೧೯೧೦ ನೇ ಇಸವಿ ಜೂನ್ ಮಾಹೆವರಿವಿಗೆ ಎಲ್ಲಾ ಮತಸ್ಥರ ಹುಡುಗರಿಗೂ ಮುಫತ್ತಾಗಿಯೇ ವಿದ್ಯಾಭ್ಯಾಸವಾಗುತ್ತಿತ್ತು. ಆದರೆ ೧೯೧೦ ನೇ ಇಸವಿಯಲ್ಲಿ ಲೇಟ್ ಇನ್ಸ್‌ಪೆಕ್ಟರ್ ಜನರಲ್ ವಿಯರ್ ಸಾಹೇಬರು ಸ್ಕೂಲ್ ಇನ್ಸ್‌ಪೆಕ್ಷನ್ ಮಾಡಿ ಎಲ್ಲರಿಗೂ ಮುಫತ್ತಾಗಿ ಪಾಠ ಹೇಳುವುದರಿಂದ ಇತರ ಎಲ್ಲಾ ಸ್ಕೂಲ್‌ಗಳೂ ಹೀನಸ್ಥಿತಿಗೆ ಬರಲು ಕಾರಣವಾಗುವದಾಗಿಯೂ ಫೀಜುಗಳನ್ನು ವಸೂಲ್ಮಾಡಬೇಕೆಂಬದಾಗಿಯೂ ಅಪ್ಪಣೆ ಕೊಡಿಸಿದ್ದರಮೇಲೆ ನಮ್ಮ ಕುಂಚಿಟಿಗರ ಹುಡುಗರಿಗೂ ಮತ್ತು ಕೇವಲ ಬಡವರಾಗಿರತಕ್ಕ ಇತರ ಎಲ್ಲಾ ಮತಸ್ಥರ ಹುಡುಗರಿಗೂ ಸಹ ಫೀಜು ಮಜಾ ಮಾಡಿ ಇದುವರಿವಿಗೂ ಸ್ಕೂಲನ್ನು ನಡಿಸಿಕೊಂಡು ಬರುತ್ತಾ ಇದೆ. ಮಹಾಸ್ವಾಮಿ.

ಈಗ ಈ ಪಾಠಶಾಲೆಯಲ್ಲಿ ೯ ತರಗತಿಗಳಿವೆ. ಕುಂಚಿಟಿಗರು ೩೦, ಬ್ರಾಹ್ಮಣರು ೮೨, ಮಹಮ್ಮದೀಯರು ೩, ಕ್ಷತ್ರಿಯರು ೧, ವೈಶ್ಯರು ೬, ಲಿಂಗಾಯಿತರು ೧೩, ಜೈನರು ೨, ಒಕ್ಕಲಿಗರು ೧೦, ಇತರರು ೩೪, ಒಟ್ಟು ೧೮೫ ಮಂದಿ ವಿದ್ಯಾರ್ಥಿಗಳು ಓದುತ್ತಿದ್ದಾರೆ. ಈ ಪಾಠಶಾಲೆಯಲ್ಲಿ ಇಂಗ್ಲೀಷ್ ಕನ್ನಡ ಸಂಸ್ಕೃತ ಪಾಠಗಳು ನಡೆಯುತ್ತಾ ಇವೆ. ಅಲ್ಲದೆ ಈ ವರುಷದಲ್ಲಿ ಹೊಸದಾಗಿ ಕಿಂಡರ್‌ಗಾರ್ಟೆನ್ ಸಿಸ್ಟಂ ಪ್ರಕಾರ ಡ್ರಾಯಿಂಗ್, ಕಾರ್ಡ್‌ಬೋರ್ಡ್ ವರ್ಕ್, ಪೇಪರ್ ಫೋಲ್ಡಿಂಗ್ ವಗೈರೆ ಕಲಿಸುತ್ತಾ ಇದೆ.

ಈ ಪಾಠಶಾಲೆಯಿಂದ ೧೯೧೧ ನೇ ಇಸವಿ ಲಾಗಾಯ್ತು ಇಂಗ್ಲೀಷ್ ಲೋವರ್‌ಸೆಕೆಂಡರಿ ಪರೀಕ್ಷೆಗೆ ಬಾಲಕರನ್ನು ಕಳುಹಿಸುತ್ತಾ ಇದೆ. ಆ ವರುಷದಲ್ಲಿ ಎಂಟು ಮಂದಿ ವಿದ್ಯಾರ್ಥಿಗಳು ಪರೀಕ್ಷೆಗೆ ಹೋಗಿ ಎಲ್ಲರೂ ತೇರ್ಗಡೆಯನ್ನು ಹೊಂದಿದರು.

ಈಚೆಗೆ ಮೂರು ವರುಷಗಳಿಂದ ೨೩ ಹುಡುಗರು ಪರೀಕ್ಷೆಗೆ ಹೋಗಿ ಇದ್ದು ಆ ಪೈಕಿ ೧೩ ಹುಡುಗರು ತೇರ್ಗಡೆಯನ್ನು ಹೊಂದಿದರು. ಈ ಪೈಕಿ ನಮ್ಮ ಕುಂಚಿಟಿಗರಲ್ಲಿ ಪರೀಕ್ಷೆಗೆ ಹೋಗಿದ್ದ ೩ ಮಂದಿ ವಿದ್ಯಾರ್ಥಿಗಳು ತೇರ್ಗಡೆಯನ್ನು ಹೊಂದಿರುತ್ತಾರೆ. ಇವರುಗಳಲ್ಲದೆ ಮಂಡ್ಯದ ತಾ॥ ಹಳ್ಳಿಯಿಂದ ಚಿಕ್ಕನಿಂಗೇಗೌಡ ಎಂಬ ವಿದ್ಯಾರ್ಥಿಯು ೧೯೧೦ ನೇ ಇಸವಿಯಲ್ಲಿ ಈ ಪಾಠಶಾಲೆಗೆ ಸೇರಿ ಇಂಗ್ಲೀಷ್ ಓದಲು ಪ್ರಾರಂಭಿಸಿ ಎರಡೇ ವರುಷಗಳಲ್ಲಿ ಅಂದರೆ ೧೯೧೨ನೇ ಇಸವಿಯಲ್ಲಿ ಲೋವರ್‌ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿರುತ್ತಾನೆ. ಈ ಪಾಠಶಾಲೆಯಿಂದ ತೇರ್ಗಡೆಯಾಗಿ ಹೋಗಿರತಕ್ಕ ವಿದ್ಯಾರ್ಥಿಗಳು ಈಗ ಹೈಸ್ಕೂಲ್‌ಗಳಲ್ಲೂ ಮತ್ತು ಕಾಲೇಜ್ ಇಂಟರ್‌ಮೀಡಿಯೆಟ್ ತರಗತಿಗಳಲ್ಲೂ ಓದುತ್ತಿದ್ದಾರೆ ಮಹಾಸ್ವಾಮಿ.

ಸ್ಥಳಸಂಕೋಚದಿಂದ ಸ್ಕೂಲಿಗೆ ಬರತಕ್ಕ ಹುಡುಗರುಗಳನ್ನು ಸೇರಿಸಿಕೊಳ್ಳಲು ಅವಕಾಶವಿಲ್ಲದ ಕಾರಣ ಒಂದು ವಿಸ್ತಾರವಾದ ಕಟ್ಟಡವನ್ನು ಕಟ್ಟಬೇಕೆಂದು ಯೋಚಿಸಿ ಮಹಾಸ್ವಾಮಿಯವರಲ್ಲಿ ಪ್ರಾರ್ಥಿಸಿಕೊಂಡಿದ್ದಕ್ಕೆ ಮಹಾಸ್ವಾಮಿಯವರು ಅನುಗ್ರಹಿಸಿ ಮಧ್ಯರಾಷ್ಟ್ರವಾದ ಈ ಸ್ಥಳವನ್ನು ದಯಪಾಲಿಸೋಣವಾಯಿತು. ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರು ಅನುಗ್ರಹಿಸಿ ತಯಾರ್ಮಾಡಿಸಿ ಕೊಟ್ಟ ಪ್ಲಾನನ್ನು ಮಹಾಸ್ವಾಮಿಯವರು ಪರಾಂಬರಿಸಿ ಒಪ್ಪಿಕೊಟ್ಟು ಇರುವ ಪ್ಲಾನ್ ಪ್ರಕಾರ (೩೦,೦೦೦) ಮೂವತ್ತು ಸಾವಿರ ರೂಪಾಯಿಗಳಲ್ಲಿ ಈ ಕಟ್ಟಡವನ್ನು ಕಟ್ಟಿಸುತ್ತಾ ಇದ್ದೇನೆ ಮಹಾಸ್ವಾಮಿ.

ಸಾಧಾರಣಮನುಷ್ಯನಾದ ನನ್ನ ಪ್ರಾರ್ಥನೆಯನ್ನು ಮಹಾಸ್ವಾಮಿಯವರು ಅಂಗೀಕರಿಸಿ ಈ ಕಟ್ಟಡಕ್ಕೆ ಶಿಲಾಶಾಸನಪ್ರತಿಷ್ಠೆಯನ್ನು ತಮ್ಮ ಸ್ವಹಸ್ತದಿಂದ ಮಾಡುವುದಕ್ಕೆ ಅನುಗ್ರಹಿಸಿ ಈದಿನ ದಯಮಾಡಿಸಿರುವುದರಿಂದ ನನ್ನ ಜನ್ಮವು ಸಾರ್ಥಕವಾಯಿತೆಂದು ಮನಃಪೂರ್ವಕವಾಗಿ ಅತ್ಯಂತ ಭಕ್ತಿಯಿಂದ ಅರಿಕೆ ಮಾಡಿಕೊಳ್ಳುತ್ತೇನೆ ಮಹಾಸ್ವಾಮಿ.

ಈ ಕಟ್ಟಡದ ಪ್ರಾರಂಭೋತ್ಸವಕ್ಕೆ ಮಹಾಸ್ವಾಮಿಯವರ ಪಾದಸ್ಪರ್ಶವಾಗಿ ಇರುವದ್ದರಿಂದ ಈ ಕಟ್ಟಡವು ಶಾಶ್ವತವಾಗಿ ಅನೇಕ ಜನ ವಿದ್ಯಾರ್ಥಿಗಳಿಗೆ ಉಪಕಾರವಾಗುತ್ತೆಂದು ನಾನು ದೃಢವಾಗಿ ನಂಬಿಕೊಂಡು ಇದ್ದೇನೆ ಮಹಾಸ್ವಾಮಿ.

ಈ ಕಟ್ಟಡವು ಕಟ್ಟಿ ಪೂರೈಸಿದ ನಂತರ ಈ ಪಾಠಶಾಲೆಯು ಸಾರೋದ್ಧಾರವಾಗಿ ನಡೆಯುವಂತೆ ತಕ್ಕಷ್ಟು ಫಂಡು ಸಹ ಇಟ್ಟು ನಡಿಸಬೇಕೆಂದು ಆಲೋಚಿಸಿ ಇರುತ್ತೇನೆ. ನಾನು ಈಶ್ವರಪ್ರೀತ್ಯರ್ಥವಾಗಿ ಮೇಲ್ಕಂಡ ಕಾರ್ಯಗಳನ್ನು ಮಾಡುತ್ತಾ ಇರುವದರಿಂದ ಇದು ಸಾರೋದ್ಧಾರವಾಗಿ ನಡೆಯುವಂತೆ ಮಹಾಸ್ವಾಮಿಯವರು ಅನುಗ್ರಹಿಸಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇನೆ ಮಹಾಸ್ವಾಮಿ.

ಶ್ರೀಮನ್ಮಹಾರಾಜರವರು ಅಪ್ಪಣೆಕೊಡಿಸಿದ್ದು:—

ಶ್ರೀಮನ್ಮಹಾರಾಜರವರು ಸಭಿಕರನ್ನು ಕುರಿತು ಅಪ್ಪಣೆಕೊಡಿಸಿದ ಪ್ರತ್ಯುತ್ತರವೇನೆಂದರೆ—

ಸಭ್ಯರೇ,—ಈ ಪಾಠಶಾಲೆಯ ಚರಿತ್ರವು ಬಹಳ ಹೃದಯಂಗಮವಾಗಿದೆ. ಇದು ಸ್ಥಾಪಕರ ಲೋಕಹಿತಬುದ್ಧಿಯಿಂದ ಕುಂಚಿಟಿಗರ ಸಮುದಾಯದ ಪ್ರಯೋಜನಕ್ಕೋಸ್ಕರ ಅಲ್ಪವಾಗಿ ಅಂಕುರಿಸಿ, ಕಳೆದ ಆರು ವರ್ಷಗಳಲ್ಲಿ ಬೆಳೆದು ಅಭಿವೃದ್ಧಿಯನ್ನು ಹೊಂದಿ, ಈಗ ಈ ನಗರದ ಎಲ್ಲಾ ಸಮುದಾಯದ ವಿದ್ಯಾರ್ಥಿಗಳಿಗೂ ಪ್ರಯೋಜನಕರವಾದ ಪ್ರಮುಖ ವಿದ್ಯಾಲಯವಾಗಿ ಪರಿಣಮಿಸಿದೆ. ಸರ್ಕಾರದ ಅಧಿಕಾರಿಗಳಲ್ಲದ ನಗರವಾಸಿಗಳು ಒಂದು ಪಾಠಶಾಲೆಯನ್ನು ಸ್ಥಾಪಿಸುವುದಕ್ಕೆ ಮಾತ್ರವಲ್ಲದೆ ಅದಕ್ಕೆ ಬೇಕಾದ ಕಟ್ಟಡವನ್ನು ಕಟ್ಟಿಸಿಕೊಡುವುದಕ್ಕೂ, ಅದು ಸಾರೋದ್ಧಾರವಾಗಿ ನಡೆಯಲು ತಕ್ಕ ಭಿತ್ತಿಯನ್ನು ಕಲ್ಪಿಸುವದಕ್ಕೂ ಮುಂದಾಳುಗಳಾಗಿ ಬರುವದನ್ನು ನೋಡುವುದು ಸ್ವಲ್ಪಮಟ್ಟಿಗೆ ಅಪೂರ್ವವೆಂದೇ ಹೇಳಬಹುದು. ಮಿ॥ ಬನುಮಯ್ಯನವರಂಥ ಜನೋಪಕಾರಿಗಳು ವಿದ್ಯೆಯನ್ನು ಅಭಿವೃದ್ಧಿಪಡಿಸುವ ಮಹಾ ಕಾರ್ಯದಲ್ಲಿ ನಮ್ಮ ಸರ್ಕಾರಕ್ಕೆ ಸಹಕಾರಿಗಳಾಗಿ ಮಾಡುವ ಉದಾರಪ್ರಯತ್ನಗಳನ್ನು ನಾವು ವಿಶೇಷವಾಗಿ ಅಭಿನಂದಿಸುತ್ತೇವೆ. ಈ ದಿವಸದ ಸಮಾರಂಭದಲ್ಲಿ ಅಗ್ರಾಸನವನ್ನು ವಹಿಸುವದು ನಮಗೆ ಬಹಳ ಸಂತೋಷಕರವಾಗಿದೆ. ಮಿ॥ ಬನುಮಯ್ಯನವರ ಉತ್ಕೃಷ್ಟವಾದ ನಿದರ್ಶನವನ್ನು ಇತರರೂ ಅನುಸರಿಸುವರೆಂದು ನಂಬಿದೇವೆ. ನಾವು ಈ ಅಸ್ತಿಭಾರದ ಶಿಲಾಪ್ರತಿಷ್ಠೆಯನ್ನು ಮಾಡುವ ಈ ಸಮಯದಲ್ಲಿ ಈ ಪಾಠಶಾಲೆಯು ಪ್ರಯೋಜನಕಾರಿಯಾಗಿ ಚಿರಕಾಲ ನೆಲಸಿ, ಸ್ಥಾಪಕರ ಹೆಸರನ್ನು ಅನೇಕ ಸಂತತಿಗಳ ವರೆಗೂ ಶಾಶ್ವತಗೊಳಿಸಲಿ ಎಂದು ಕೋರುತ್ತೇವೆ.

ಭವಿಷ್ಯತ್ಸೂಚನೆ.

“ಚೆರ್‌ಮಾನ್” ಎಂಬ ಜ್ಯೋತಿಷ್ಕರು ಗುಣಿಸಿ ಎಷ್ಟೋ ಕಾಲಕ್ಕೆ ಹಿಂದೆಯೇ ಹೇಳಿರುವ ಭವಿಷ್ಯತ್ತು ಈಗ ಪ್ರಕಟಿತವಾಗಿರುವುದು.

ಅಪರಪ್ರಕಾರ— ಈ ವರ್ಷದಲ್ಲಿ ಜರ್ಮನಿಯವರು ಅನಾಮಧೇಯರಾಗುವರು. ೧೮೮೫ ನೆಯ ವರ್ಷದಲ್ಲಿ ಚೆ

ನಾದ ಬಳಿಯಲ್ಲಿ ಇವರಿಗೆ ಅಪಜಯವುಂಟಾಗುವುದೆಂದು ಈ ಜ್ಯೋತಿಷ್ಕರೇ ನುಡಿದಿದ್ದರು. ೨ನೆಯ ವಿಲಿಯಂರವರು ಜರ್ಮನಿಸಿಂಹಾಸನಕ್ಕೆ ಕೊನೆಯವರೆಂತಲೂ, ೧೮೪೯ ನೆಯ ವರ್ಷದಲ್ಲಿ ಮೊದಲನೆಯ ವಿಲಿಯಂನು ಒಬ್ಬಾನೊಬ್ಬ ಪ್ರಸಿದ್ಧ ಭವಿಷ್ಯದ್ವಾದಿಯನ್ನು ಪ್ರಶ್ನೆಮಾಡಿದಾಗ, ಆತನು ೧೮೬೧ನೆಯ ವರ್ಷದಲ್ಲಿ ಮೊದಲನೆಯ ವಿಲಿಯಂನು ಸಿಂಹಾಸನವನ್ನೇರುವನೆಂಬುದಾಗಿಯೂ, ೧೮೭೧ ನೆಯ ವರ್ಷದಲ್ಲಿ ಜರ್ಮನಿರಾಜ್ಯವು ಸ್ಥಾಪಿಸಲ್ಪಡುವುವೆಂಬುದಾಗಿಯೂ, ಆತನು ೧೮೮೮ ನೆಯ ವರ್ಷದಲ್ಲಿ ಮೃತನಾಗುವನೆಂಬದಾಗಿಯೂ, ೧೯೧೪ ನೆಯ ವರ್ಷದಲ್ಲಿ ಜರ್ಮನಿರಾಜ್ಯಕ್ಕೆ ಅಂತ್ಯವುಂಟಾಗುವುದೆಂಬುದಾಗಿಯೂ ಹೇಳಿದ್ದನು. ಆ ಭವಿಷ್ಯತ್ತಿನ ಪ್ರಕಾರ ಮೊದಲನೆಯ ಮೂರು ಭವಿಷ್ಯತ್ತುಗಳೂ ಹೇಳಿದ್ದಂತೆಯೇ ನಡೆದಿರುವುವು ಕೊನೆಯ ಭವಿಷ್ಯತ್ತಿನ ಫಲವು ನಿರೀಕ್ಷಣೀಯವಾಗಿರುವುದು.

“ಕೌಂಟ್‌ಲಿಯೋ ಟಾಲ್‌ಸ್ಟಾಯಿ” ಎಂಬ ರಷ್ಯಾದೇಶದ ದೊಡ್ಡ ವೇದಾಂತಿಯು ತಾನು ಮೃತನಾಗುವುದಕ್ಕೆ ಸ್ವಲ್ಪದಿನ ಮುಂಚಿತವಾಗಿ ರಷ್ಯಾಚಕ್ರವರ್ತಿಯವರಿಗೆ ಒಂದು ಪತ್ರವನ್ನು ಬರೆದಿದ್ದನು. ಅವರು ಅದನ್ನು ಜರ್ಮನಿಚಕ್ರವರ್ತಿಯವರಿಗೂ ಇಂಗ್ಲೆಂಡ್‌ಪ್ರಭುಗಳಿಗೂ ಸಹ ಕಳುಹಿಸಿದ್ದರು. ಆ ಪತ್ರಿಕೆಯಲ್ಲಿದ್ದ ಅಭಿಪ್ರಾಯವೇನೆಂದರೆ—

ನಾನು ಈಗ ಹೇಳಬೇಕೆಂದಿರುವ ವಿಷಯಗಳು ಸರ್ವರಿಗೂ ಸಂಬಂಧಿಸಿರುತ್ತವೆ. ಇವು ಬೇಗನೆ ನೆರವೇರುವುವು. ಅದೃಷ್ಟಸಮುದ್ರದಲ್ಲಿ ನನಗೊಬ್ಬ ಸ್ತ್ರೀಯು ಗೋಚರಿಸುತ್ತಿರುವಳು. ಈಕೆಯ ಮುಖವಿಕಾಸವನ್ನು ಕಂಡು ಅನೇಕ ರಾಷ್ಟ್ರದವರು ಬುದ್ಧಿಭ್ರಾಂತರಾಗಿ ಈಕೆಯ ಸಮೀಪವನ್ನೈದುವರು. ಆದರೆ ಆಕೆಯು ಇವರನ್ನು ಆಟಪಾಟಗಳಲ್ಲಿ ಮುಳುಗಿಸಿಬಿಡುವಳು. ಆಕೆಯು ಅಲಂಕರಿಸಿಕೊಂಡಿರುವ ವಜ್ರವೈಡೂರ್ಯಾದಿಗಳನ್ನು ನೋಡಿದರೆ ಆಕೆಯನ್ನು “ವಾಣಿಜ್ಯತೃಷ್ಣಾದೇವತೆ” ಎಂದು ಹೇಳಬಹುದು. ಆಕೆಯ ಸೌಂದರ್ಯವನ್ನು ನೋಡಿ ಯಾರುತಾನೇ ಮೋಹಿತರಾಗುವುದಿಲ್ಲ? ಬಾ ಎಂದು ಯಾರುತಾನೇ ಕರೆಯುವುದಿಲ್ಲ? ಆದರೆ ಆಕೆಯು ಹಜ್ಜೆಯಿಟ್ಟ ಪ್ರದೇಶವೆಲ್ಲಾ ದಗ್ಧವಾಗುವುದು. ಅಲ್ಲೆಲ್ಲಾ ಗೋಳೇಗೋಳು. ಆಕೆಯ ಉಸುರು ವ್ಯಾಪಿಸಿದೆಡೆಯಲ್ಲೆಲ್ಲಾ ನೀಚವ್ಯಾಪಾರಗಳೇ ಹುಟ್ಟುವುವು. ಈ ತ್ರಿಲೋಕಸುಂದರಿಯ ನೋಟವು ವಿಷಸಮಾನವು. ಲೋಕವನ್ನೆಲ್ಲಾ ನಾಶಗೊಳಿಸುವ ದೊಡ್ಡ ದೀವಟಿಗೆಗಳನ್ನು ತಾನು ಹೋದ ಕಡೆಗೆಲ್ಲಾ ತೆಗೆದುಕೊಂಡು ಹೋಗುವಳು. ಈ ದೀವಟಿಗೆಗಳಲ್ಲಿ ಯುದ್ಧವೆಂಬುದೊಂದು. ಮತ್ತೊಂದು ದುರಭಿಮಾನವು, ಮೋಸಗಾರತನವು, ಮತ್ತೊಂದು ಅಶಾಸ್ತ್ರೀಯಸಂಪ್ರದಾಯಗಳಿಗೆಲ್ಲಾ ಮೂಲಕಾರಣವಾದ ಶಾಸನವು. ೧೯೧೨ ನೆಯ ವರ್ಷದಲ್ಲಿ ಯೂರೋಪು ಖಂಡದ ಆಗ್ನೇಯಭಾಗದಲ್ಲಿ ಮೊದಲನೆಯ ದೀವಟಿಗೆಯಿಂದ ಮಹಾಗ್ನಿಯು ಪ್ರಜ್ವಲಿತವಾಗುವುದು. ೧೯೧೩ ನೆಯ ವರ್ಷದಲ್ಲಿ ಅದು ಮಹೋಪದ್ರವಕಾರಿಯಾಗಿ ಪರಿಣಮಿಸಿ ಧ್ವಂಸವಾಗುವುದು. ಯೂರೋಪುಖಂಡದಲ್ಲೆಲ್ಲಾ ಅಗ್ನಿಜ್ವಾಲೆಗಳು ವ್ಯಾಪಿಸುವುವು; ರಕ್ತಪ್ರವಾಹಗಳು ಮಡುಗಟ್ಟಿ ಹರಿಯುವುವು; ರಣರಂಗದ ಘೋಷಗಳೇ ಕೇಳಬರುವುವು. ೧೯೧೫ ನೆಯ ವರ್ಷದ ಸುಮಾರಿನಲ್ಲಿ ರಕ್ತಪ್ರವಾಹದಿಂದ ಕೂಡಿದ ಈ ರಂಗಸ್ಥಳಕ್ಕೆ ಒಬ್ಬ ಆಶ್ಚರ್ಯಕರನಾದ ಪುರುಷನು ಪ್ರವೇಶಿಸುವನು. ಈತನು ಯುದ್ಧನೀತಿಯಲ್ಲಿ ಅಷ್ಟೊಂದು ಶಿಕ್ಷಿತನಲ್ಲ; ಗ್ರಂಥಕರ್ತನೂ, ವ್ಯವಹಾರದಕ್ಷನೂ, ಆತನು ಇಷ್ಟರೊಳಗೇ ಹುಟ್ಟಿ ಬೆಳೆಯುತ್ತಿದ್ದಾನೆ. ಈತನು ೧೯೨೫ ನೆಯ ವರ್ಷದವರೆಗೆ ಯೂರೋಪಿನಲ್ಲಿ ಬಹು ಪ್ರದೇಶಗಳನ್ನು ಸ್ವಾಧೀನಪಡಿಸಿಕೊಳ್ಳುವನು. ಇದು ದೈವಪ್ರೇರಿತವು. ಈಶ್ವರೋದ್ದಿಷ್ಟವಾದ ಕಾರ್ಯವಾಗಿರುವುದು. ಅಷ್ಟರಲ್ಲಿ ಪೂರ್ವಾರ್ಧಗೋಳದ ರಾಜ್ಯಾಂಗದಲ್ಲಿ ನೂತನಶಕಾರಂಭವಾಗುವುದು. ಸಾಮ್ರಾಜ್ಯವೂ ಇಲ್ಲ, ರಾಷ್ಟ್ರಗಳೂ ಇಲ್ಲ. ಜಗತ್ತೆಲ್ಲಾ ಸಂಪೂರ್ಣವಾದ ಒಂದು ಮಹಾಸಂಯುಕ್ತಜಾತಿಯಾಗಿ ಏರ್ಪಡುವುದು. ಬಳಿಕ—೧೯೨೫ ರಲ್ಲಿ ಮತಾಭಿಪ್ರಾಯಗಳು ವ್ಯತ್ಯಸ್ತವಾಗುವುವು. ಮತಾಧಿಕಾರವು ಅಳಿಸಿಹೋಗುವುದು. ನೀತಿಯು ಕ್ಷೀಣಿಸುವುದು ಆಗ ಮರಳಿ ಸಕಲಸಂಸ್ಕರಣವೂ ಆರಂಭಿಸುವುದು. ಇದು ಅದ್ವೈತದ ಹದಿಯನ್ನು ಸ್ಥಾಪಿಸುವುದು. ಜೀವಾತ್ಮರ ವಿಚಾರ ವಿಷಯಕವಾದ ಅಭಿಪ್ರಾಯಗಳು ನೂತನ ವಿಕಾಸವನ್ನೊಂದಿ, ಲೋಕದಲ್ಲಿ ಧರ್ಮವು ಪ್ರತಿಪಾದಿಸಲ್ಪಡುವುದು. ಪ್ರತಿಯೊಂದು ದೇಶದಲ್ಲೂ ರಾಜಕೀ-ಧಾರ್ಮಿಕ-ಕಲ್ಲೋಲಗಳು ಪ್ರಜೆಗಳ ಆಧ್ಯಾತ್ಮಿಕ ಜೀವನವನ್ನು ನಿರ್ಮೂಲಗೊಳಿಸಿರುವುವು ಆದರೂ ಈ ಎರಡರಿಂದ ಜ್ಞಾನವು ವೃದ್ಧಿಗೊಳ್ಳುತ್ತಲೇ ಇದೆ. ಅಸ್ತಾಚಲದಲ್ಲಿ ಸೂರ್ಯನು ಮುಳುಗುವಾಗ ಮೆಲ್ಲಮೆಲ್ಲನೆ ಆ ದಿವ್ಯಜ್ಯೋತಿಯೆಲ್ಲವೂ ಕ್ಷೀಣಿಸಿ ಹೋಗುವಹಾಗೆ ಈ ಪ್ರಪಂಚ ನಾಟಕವು ಮುಗಿದುಹೋಗುವುದು. ಮರಳಿ ಆ ವಾಣಿಜ್ಯ ತೃಷ್ಣಾದೇವತೆಯು ಒಂದು ಸಂಜ್ಞಾಮಾತ್ರದಿಂದ ನವೀನಚರಿತ್ರವು ಪ್ರಾರಂಭಗೊಳ್ಳುವುದು.

ಯುದ್ಧಾರಂಭಕಾಲಕ್ಕೆ ಮುಂಚೆಯೇ ನಮ್ಮ ದೇಶದ ಜ್ಯೋತಿಷ್ಕರೊಬ್ಬರು ಈ ವರ್ಷದ ಗ್ರಹಣಗಳೆರಡೂ ವಾರದ್ವಯಕಾಲದಲ್ಲಿ ಕೂಡಿ ಬಂದಿರುವ ಯೋಗವನ್ನು ನೋಡಿ. ಇಂಥ ಯೋಗವು ಹಿಂದೆ ಭಾರತಯುದ್ಧಕಾಲಕ್ಕೆ ಸಂಭವಿಸಿದ್ದಿತೆಂದೂ, ಈಗ ಅದೇ ತೆರದ ಯೋಗ ವಿರುವುದರಿಂದ ಜಗತ್ತಿನಲ್ಲಿ ಮಹಾನರ್ಥಕಾರಿಯಾಗುವುದೆಂದೂ ಹೇಳಿದ್ದ ಸಂಗತಿಯು ಪ್ರಕಟಿತವಾಗಿದ್ದಿತು. ಈ ಕೆಳಗಿನ ಸಂಗತಿಯು ಅದೇ ವಿಷಯವನ್ನು ಸಮರ್ಥಿಸುತ್ತ ಮಂಗಳೂರ ಸ್ವದೇಶಾಭಿಮಾನಪತ್ರದಲ್ಲಿ ಪ್ರಕಟಿಸಲ್ಪಟ್ಟಿರುವುದು.

ಈಗಿನ ಯುದ್ಧಕಾಲದ ಗ್ರಹಸ್ಥಿತಿಯು ಭಾರತ ಯುದ್ಧಕಾಲದ ಗ್ರಹಸ್ಥಿತಿಯಂತೆಯೇ ಇರುವುದು.

ಒಬ್ಬ ಗಣಿತಜ್ಞರು ಈಗಿನ ಯುದ್ಧಕಾಲದ ಗ್ರಹಸ್ಥಿತಿಯನ್ನು ಗುಣಿಸಿ ನೋಡಿ ಇಂಥ ಗ್ರಹಸ್ಥಿತಿಯು ಭಾರತಯುದ್ಧಕಾಲದ ಗ್ರಹಸ್ಥಿತಿಯಂತೆಯೇ ಇರುವುದೆಂದು ಈ ರೀತಿ ಬರೆದಿರುವರು:—

“ಮಘಾಸ್ವಂಗಾರಕೋ ವಕ್ರ ಶ್ರವಣೇಚ ಬೃಹಸ್ಪತಿಃ ॥ ಭಗಂ ನಕ್ಷತ್ರಮಾಕ್ರಮ್ಯ ಸೂರ್ಯಪುತ್ರೇಣ ಪೀಡ್ಯತೆ ॥೧॥ ಚಂದ್ರ ಸೂರ್ಯೌ ಉಭೌಗ್ರಸ್ತಾವೇಕಾಹ್ನ ಹಿತ್ರಯೋದಶ ॥” ಮಘಾ ನಕ್ಷತ್ರದಿಂದ ಉತ್ತರೆ ವರೆಗೆ ಅಂಗಾರಕನು ಸಂಚರಿಸುವಾಗ್ಗೆ ಶನಿಯ ದೃಷ್ಟಿ ಆತನ ಮೇಲಿದ್ದರೆ ಮತ್ತು ಆ ಕಾಲದಲ್ಲಿ ಶ್ರವಣ ನಕ್ಷತ್ರದಲ್ಲಿ ವಕ್ರನಾಗಿ ಬೃಹಸ್ಪತಿಯು ಬಂದ ಪಕ್ಷದಲ್ಲಿ, ಒಂದೇವಾರದಲ್ಲಿ ಎರಡು ಗ್ರಹಣಗಳು ಪ್ರಾಪ್ತವಾಗಿ ಈ ಎರಡು ಗ್ರಹಣಗಳ ನಡುವೆ ೧೩ ದಿನಗಳಿದ್ದರೆ ಲೋಕದಲ್ಲಿ ಭೀಕರವಾದಂಥ ಯುದ್ಧವು ಪ್ರಾಪ್ತನಾಗಿ ಬಹಳ ನಷ್ಟವುಂಟಾಗುವುದು. ಈ ರೀತಿ ಭಾರತಪರ್ವದ ಅಧ್ಯಾಯದಲ್ಲಿರುವ ಶ್ಲೋಕದ ಅರ್ಥವನ್ನು ನೋಡಿಕೊಂಡು ಈಗಿನ ಗ್ರಹಸ್ಥಿತಿಯನ್ನು ನೋಡಿದಲ್ಲಿ ಮೇಲಣ ಶ್ಲೋಕದಲ್ಲಿ ವಿವರಿಸಿದ ಗ್ರಹಸ್ಥಿತಿಯೇ ಈಗಿನ ಯುದ್ಧಕಾಲದಲ್ಲಿರುವದೆಂತ ಸಿದ್ಧಾಂತ ಮಾಡಿ ಹೇಳಿರುವರು. ಶುಕ್ರವಾರ ಸೂರ್ಯಗ್ರಹಣವಿತ್ತು. ಇದೇ ಶುಕ್ರವಾರ ಅಂದರೆ ಸೂರ್ಯಗ್ರಹಣದ ೧೩ ದಿವಸಗಳಲ್ಲಿ ಚಂದ್ರಗ್ರಹಣವಿರುವುದು. ಆದ್ದರಿಂದ ಈ ಯುದ್ಧವು ಬಹಳಮಟ್ಟಿಗೆ ಭಾರತಯುದ್ಧಕ್ಕೆ ಸಮಾನವಾಗಿದೆ.

ಯುದ್ಧರಂಗದಲ್ಲಿ ಯೋಧಧರ್ಮ—ಸಾಧುಧರ್ಮಗಳು.

ಯುದ್ಧರಂಗದ ಸ್ವರೂಪವನ್ನು ನೋಡುವುದು ಹಾಗಿರಲಿ, ಅದರ ವಿವರಣವನ್ನು ಕೇಳಿದ ಮಾತ್ರದಿಂದಲೇ ಮನಸ್ಸಿನಲ್ಲಿ ನಾನಾವಿಕಾರಗಳುಂಟಾಗುವುವು. ಪ್ರತ್ಯಕ್ಷವಾಗಿ ಅಲ್ಲಿ ನಿಂತವರಿಗಂತು ದೇಹಸ್ಮೃತಿಯೇ ಇಲ್ಲದಂಥ ವೀರಾವೇಶ ಕೋಪಕೌರ್ಯಾದಿಗಳು ಮೂರ್ತೀಭವಿಸಿರುವುದು ಸಹಜವು. “ದಂಡಿನಲ್ಲಿ ಸೋದರಮಾವನೇ” ಎಂಬ ಗಾಧೆಯಂತೆ ಇದಿರಾದವನು ಯಾರಾಗಿದ್ದರೂ ಇರಿಯುವುದೇ ಅಲ್ಲಿನ ಲಕ್ಷ್ಯವಾಗಿರುವುದು. ಹೀಗಿದ್ದರೂ ಅಂತಹ ಭೀಕರಸ್ಮಶಾನದಲ್ಲೂ ಸರ್ವಲೋಕಾಭ್ಯುದಯಮಾನವಾದ ಸಾಧುಧರ್ಮವು ನಲಿದಾಡುತ್ತಿರುವುದೆಂದು ಕೇಳಿದರೆ ಯಾರಿಗೆತಾನೇ ರೋಮಾಂಚವಾಗುವುದಿಲ್ಲ? ಆ ಸಂಗತಿಯೇನೆಂದರೆ—ಈಗ ಜರ್ಮನಿ-ಫ್ರಾನ್ಸು-ಇಂಗ್ಲೆಂಡುಗಳ ಸೇನೆಗಳು ಒಂದೆಡೆಯಲ್ಲಿ ಕೂಡಿ ವೀರಾವೇಶದಿಂದ ಹೋರಾಡುತ್ತಿರುವುವಷ್ಟೆ. ಈ ಯುದ್ಧದಲ್ಲಿ ಎಷ್ಟೋಯೋಧರು ಕೈಕಾಲು ಮುಖ ಮೊದಲಾದಂಗಗಳಲ್ಲಿ ಗಾಯಗೊಂಡೋ ಅಥವಾ ಅವುಗಳನ್ನು ಕಳೆದುಕೊಂಡೋ ಪ್ರಾಣಾಪಾಯಸ್ಥಿತಿಯಲ್ಲಿ ಬಿದ್ದು ಹೋಗುತ್ತಿರುವರು. ಇಂಥವರನ್ನೆಲ್ಲಾ ಆದರಿಸಿ ಚಿಕಿತ್ಸೆಮಾಡುವ ಕಾರ್ಯವು ಯುದ್ಧಕಾಲದಲ್ಲಿನ ಒಂದು ಮಹತ್ತರವಾದ ಕಾರ್ಯವಾಗಿರುತ್ತದೆ ಇಂಥ ಅಸ್ವಸ್ಥರಾದ ಹತಶೇಷರಿಗೆಲ್ಲಾ ಸೇವೆಯನ್ನು ಮಾಡುವುದಕ್ಕೂ ಔಷಧಗಳನ್ನು ಕೊಡುವುದಕ್ಕೂ ಅನೇಕಾನೇಕರು ಪುಣ್ಯಜನ ಅಲ್ಲಿರುತ್ತಾರೆ. ಇವರೆಲ್ಲರೂ ಕೇವಲ ಧರ್ಮಚಿಂತನ ಪರಾಯಣರು. ತಮ್ಮ ತನುಮನೋಧನಗಳಲ್ಲೆಲ್ಲಾ ನಿಸ್ಪೃಹರಾಗಿ ಪರಹಿತವೇ ಪುರುಷಾರ್ಥವೆಂದು ತಿಳಿದುಕೊಂಡಿರತಕ್ಕ ಪರಮಸಾಧುಗಳು ಇವರಲ್ಲಿ ವೈದ್ಯರುಗಳು ಅತ್ಯಂತ ಮುಖ್ಯರು ಈ ವೈದ್ಯರೂ ಉಪಚಾರಕರೂ ಸಹ ಯುದ್ಧಾಂಗಣದಲ್ಲಿ ಹತಾಹತಶೇಷರಾಗಿರುವ ಜನರನ್ನು ಉಪಚರಿಸುವಲ್ಲಿ ಶತ್ರುಮಿತ್ರಭಾವವನ್ನು ಸಂಪೂರ್ಣವಾಗಿ ಪರಿತ್ಯಜಿಸಿರುವರು, ಸ್ವಪಕ್ಷದವರೆಂದರೆ ಅವರಮೇಲೆ ವಿಶೇಷಾಭಿಮಾನವನ್ನೂ, ವಿಪಕ್ಷದವರೆಂದರೆ ಅಲ್ಪಾಭಿಮಾನ ಅಥವಾ ದ್ವೇಷಗಳನ್ನೂ ಲೇಶಮಾತ್ರವೂ ಹೊಂದತಕ್ಕವರಲ್ಲ ನಾನಾವಿಧವಾದ ಅಪಾಯಗಳಿಗೆಗುರಿಯಾಗಿರುವ ಯಾವಪಕ್ಷದ ಯೋಧರನ್ನಾದರೂ ಮಾನವಜಾತಿಗೆ ಸೇರಿದ ತಮ್ಮ ಸಹೋದರ ಪ್ರಾಣಿಗಳೇ ಎಂದು ತ್ರಿಕರಣಪೂರ್ವಕವಾಗಿ ತಿಳಿದು ಔಷಧೋಪಚಾರಗಳನ್ನು ಮಾಡುತ್ತಿರುವರು. ಇದು ಎಷ್ಟು ಶ್ಲಾಘನೀಯವಾದ ಸದ್ಧರ್ಮ! ಇದನ್ನಾಚರಿಸುವ ಮಹನೀಯರ ನಡತೆಗಿಂತ ನೇಷಾಂಬರದ ಕಪಟಸನ್ಯಾಸಿಗಳ ಧರ್ಮವು ಸಮ್ಮಾನನೀಯವಾದುದೆ? ವೇಷಮಾತ್ರದಿಂದ ನಾವು ಪೂಜ್ಯರೆಂದು ಹೆಮ್ಮೆಪಡುವ ಮಾಯಾವಿಗಳು ಈ ಸಾಧುವೃತ್ತವನ್ನು ಕೇಳಿ ನಾಚಿಕೆಪಡಬೇಕಲ್ಲವೆ? ಯುದ್ಧಾಂಗಣದಲ್ಲಿ ಜರ್ಮನಿಯ ವೈದ್ಯರೂ ಆಂಗ್ಲವೈದ್ಯರೂ ಪರಸ್ಪರ ಅವಶ್ಯಕವಾದ ಔಷಧಗಳನ್ನು ಕೊಟ್ಟೂ ತೆಗೆದುಕೊಂಡೂ ಉಪಯೋಗಿಸುತ್ತಿರುವರು. ಅದೇ ಜರ್ಮನ್ ಆಂಗ್ಲಯೋಧರು ಆಯುಧಧಾರಿಗಳಾಗಿ ಅದೇ ರಂಗದಲ್ಲಿ ಒಂದು ಕಡೆ ಪರಸ್ಪರ ಪ್ರಾಣವನ್ನು ತೆಗೆದುಕೊಳ್ಳಲು ಹರಿದಾಡುತ್ತಿರುವರು. ಅವರೇ ಅಕಸ್ಮಾತ್ ವಿಕಲಾಂಗರಾಗಿ ಅಥವಾ ಗಾಯಗೊಂಡು ಬಿದ್ದರೆ, ತಮ್ಮ ಶತ್ರುಪಕ್ಷದ ವೈದ್ಯರಿಂದಲೂ ಸಹ ಸ್ವಪಕ್ಷದ ತಾಯ್ತಂದೆಗಳಿಂದಲೋಪಾದಿಯಲ್ಲಿ ಔಷಧೋಪಚಾರಗಳನ್ನು ಮಾಡಿಸಿಕೊಳ್ಳುತ್ತಿರುವರು. ಇದೇ ಅಲ್ಲವೆ ಮಾನವತ್ವವನ್ನು ಸಕಲ ಪ್ರಾಣಿಕೋಟಿಯಲ್ಲೂ ಶ್ರೇಷ್ಠವಾದುದನ್ನಾಗಿಸುವ ಸಾಧುಧರ್ಮವೆಂಬುದು? ಈ ಉದಾತ್ತಧರ್ಮವು ಮಾನವಲೋಕದಲ್ಲೆಲ್ಲಾ ಹೆಚ್ಚು ಹೆಚ್ಚು ವ್ಯಾಪಿಸುತ್ತ ಬಂದಂತೆ ಲೋಕವು ಸ್ವರ್ಗಮಯವಾಗುತ್ತ ಬರುವುದು. ಇದು ಕ್ಷೀಣಿಸುತ್ತ ಬಂದಂತೆ ಈ ಲೋಕವೇ ನರಕಲೋಕವಾಗುವುದು.

ಸರ್ವಿಯಾ ಸೈನ್ಯಾಧಿಪತಿ “ಪಟ್ನಿಕ್” ರವರು.

ಯುದ್ಧದಲ್ಲಿ ಜಯವನ್ನು ಪಡೆವುದಕ್ಕೆ ಇರುವ ಲೌಕಿಕಕಾರಣಗಳಲ್ಲಿ, ಅತ್ಯಂತ ಸಮರ್ಥನಾದ ಸೈನ್ಯಾಧಿಪತಿ ಇರುವುದೊಂದು ಮುಖ್ಯಕಾರಣವು. ಸರ್ವಿಯಾದೇಶವು ಬಹಳ ಚಿಕ್ಕದಾಗಿದ್ದರೂ, ಅದು ಕಳೆದ ಬಾಲ್ಕನ್ ತುರ್ಕಿ ಯುದ್ಧಸಮಯದಲ್ಲೂ ಈಗಿನ ಆಸ್ಟ್ರಿಯನ್ನರ ಮೇಲಣಯುದ್ಧದಲ್ಲೂ ಆಶ್ಚರ್ಯಕರವಾದ ಜಯಗಳನ್ನು ಪಡೆದು ಮೂರ್ತಿ ಚಿಕ್ಕದಾಗಿದ್ದರೂ ಕೀರ್ತಿ ದೊಡ್ಡದು ಎಂಬ ಗಾಧೆಯಂತೆ ಹೆಸರುವಾಸಿಗೆ ಬರುತ್ತಿರುವುದಕ್ಕೆ ಅದರ ಸರ್ವಸೈನ್ಯಾಧಿಪತಿಯಾದ ಪಟ್ನಿಕ್‌ರವರ ಯುಕ್ತಿಸಾಮರ್ಥ್ಯ ಸಾಹಸಗಳೇ ಬಹು ದೂರದವರೆಗೆ ಕಾರಣಗಳೆಂದು ಹೇಳಲ್ಪಡುತ್ತಿವೆ. ಸರ್ವಿಯಾದೇಶವು ತುರ್ಕಿ ಬಾಲ್ಕನ್ ಯುದ್ಧಕ್ಕೆ ಮುಂಚೆ ೧೮ ಡಿಸ್ಟ್ರಿಕ್ಟುಗಳೂ ೧೮೬೫೦ ಚದರ ಮೈಲಿಗಳ ವೈಶಾಲ್ಯವೂ ೨೯೧೧೭೦೦ ಪ್ರಜೆಗಳೂ ಉಳ್ಳುದಾಗಿದ್ದಿತು. ಆ ಯುದ್ಧ ಮುಗಿದಬಳಿಕ ಏರ್ಪಟ್ಟ ದೇಶವಿಸ್ತಾರದಿಂದ ೩೦ ಡಿಸ್ಟ್ರಿಕ್ಟುಗಳೂ, ೩೩೩೩೧ ಚದರಮೈಲಿಗಳ ವೈಶಾಲ್ಯವೂ, ೪೫೪೭೩೧೫ ಪ್ರಜಾಸಂಖ್ಯೆಯೂ ಉಳ್ಳುದಾಗಿರುವುದು. ಹೀಗೆ ಪ್ರಬಲಿಸುತ್ತಿರುವ ಈ ದೇಶದ ಸರ್ವ ಸೈನ್ಯಾಧಿಪತಿಯಾದ ಪಟ್ನಿಕ್‌ರವರು ಈಗ ೬೦ ವರ್ಷಕ್ಕೆ ಮೀರಿದ ವಯಸ್ಸಿನವರಾಗಿರುವರು. ಅವರು ದಕ್ಷಿಣಸರ್ವಿಯಾದಲ್ಲಿ ಜನಿಸಿದರು. ತನ್ನ ಜೀವಿತಕಾಲದಲ್ಲಿ ಬಹುದಿವಸಗಳನ್ನು ಸೋಲ್ಜರ್‌ತನದಲ್ಲೇ ಕಳೆದಿರುವರು. ತನ್ನ ಚಿಕ್ಕಂದಿನಲ್ಲೇ ಇವರು ಸೆಂಟ್‌ಪೀಟರ್ಸ್‌ಬರ್ಗಿನಲ್ಲಿರುವ ಸೈನ್ಯಶಿಕ್ಷಣ ಪಾಠಶಾಲೆಗೆ ಸೇರಿ ಅಭ್ಯಾಸಮಾಡಿ, ಅಲ್ಲಿಂದ ಫ್ರಾನ್ಸಿಗೆ ಹೋಗಿ, ಅಲ್ಲಿ ನಾನಾವಿದ್ಯೆಗಳನ್ನು ಕಲಿಸುವ ಪಾಠಶಾಲೆಯಲ್ಲಿ ಬಹುಕಾಲ ಅಭ್ಯಾಸಮಾಡಿ, ಕಡೆಗೆ ಸ್ವದೇಶವನ್ನು ಸೇರಿ, ಸೈನಿಕೋದ್ಯೋಗವನ್ನು ಸಂಪಾದಿಸಿ, ಅಲ್ಲಿ ಹೆಸರುಪಡೆದು ಅಧಿಕಾರವನ್ನು ವಹಿಸಿ, ಸೇನಾಶಾಖೆಯಲ್ಲಿ ನಾನಾ ನವೀನ ಸಂಸ್ಕರಣಗಳನ್ನು ಮಾಡಿ, ಅಲ್ಲಿನ ಸೈನಿಕರನ್ನು ಚೆನ್ನಾಗಿ ತಿದ್ದಿ, ಸೇನಾಬಲವನ್ನು ಬಹಳವಾಗಿ ವೃದ್ಧಿಮಾಡಿದರು. ಈ ಸೈನ್ಯಾಧಿಪತಿಯು ಯಾವಾಗಲೂ ಅನ್ಯದೇಶಗಳ ಸೈನಿಕಪದ್ಧತಿಯನ್ನೆಲ್ಲಾ ಚೆನ್ನಾಗಿ ಗಮನಿಸುವ ಸ್ವಭಾವವುಳ್ಳವನು, ಈ ಕಾರಣದಿಂದ ಈತನು ಫ್ರಾನ್ಸು-ರಷ್ಯಾ-ಜರ್ಮನಿ-ಈ ದೇಶಗಳಿಗೆಲ್ಲಾ ಪ್ರತ್ಯಕ್ಷವಾಗಿ ಹೋಗಿ, ಅಲ್ಲಿನ ಸೇನಾವಿನ್ಯಾಸ ರೀತಿಗಳನ್ನೆಲ್ಲಾ ಚೆನ್ನಾಗಿ ಪರಿಶೀಲಿಸಿ, ಅಲ್ಲಲ್ಲಿ ತನ್ನ ಬುದ್ಧಿಗೆ ಉತ್ತಮವೆಂದು ತೋರಿದ ರೀತಿಯನ್ನೆಲ್ಲಾ ಸಂಗ್ರಹಿಸಿ ತಂದು ತನ್ನ ದೇಶದ ಸೈನ್ಯಕ್ಕೆ ಕಲಿಸಿ, ಅದನ್ನು ಸಂಖ್ಯೆಯಲ್ಲಿ ಚಿಕ್ಕದಾಗಿದ್ದರೂ ಬಲಾಢ್ಯವೆನಿಸಿರುವನು. ಈತನು ೫ ಭಾಷೆಗಳನ್ನು ಬಲ್ಲವನು. ಎಲ್ಲ ಭಾಷೆಗಳಲ್ಲೂ ಧಾರಾಳವಾಗಿ ಮಾತನಾಡಬಲ್ಲವನು. ಸೈನ್ಯವಿಷಯಕವಾದ ಚರಿತ್ರಗಳಲ್ಲೂ ಯೂರೋಪ್ಯ ಸಾಹಿತ್ಯಗಳಲ್ಲೂ ಹೆಚ್ಚು ಪಾಂಡಿತ್ಯವುಳ್ಳವನು. ಈತನು ಮಿತಭಾಷಿಯು. ಸಭಾಂಗಣದಲ್ಲಿ ಬಹಿರಂಗಸಭೆಗಳೊಳಗೆ ಈತನು ಭಾಷಣಮಾಡುವುದು ಅತ್ಯಂತ ವಿರಳ. ರಾಜಕೀಯ ವ್ಯವಹಾರಗಳಲ್ಲಿ ಪ್ರವೇಶವನ್ನೇ ಹೊಂದುವವನಲ್ಲ. ಸೇನಾಸಂಬಂಧವಾದ ಕಾರ್ಯಗಳನ್ನು ವಿಧಿವಿಧಾನ ಪೂರ್ವಕವಾಗಿ ನಿರ್ವರ್ತಿಸುವುದರಲ್ಲಿ ಅತ್ಯಂತ ತೃಪ್ತಿಪಡತಕ್ಕವನು. ಈತನಮೇಲೆ ಆ ದೇಶದಲ್ಲಿ ಸರ್ಕಾರಿ ಅಧಿಕಾರಿಗಳೂ ತದಿತರ ಪ್ರಜಾಪ್ರಮುಖರೂ ಹೆಚ್ಚು ಗೌರವವನ್ನಿಟ್ಟುಕೊಂಡಿರುವರು ಈತನು ಸರ್ವ ಸೈನ್ಯಾಧಿಪತಿಯಾಗಿರಲು ಸಂಪೂರ್ಣವಾಗಿ ತಕ್ಕವನೆಂದು ಅನೇಕರವರೆಲ್ಲರೂ ತುಂಬಾ ನಂಬಿರುವರು.

ಈತನ ಕಾಲದಲ್ಲಿ ಸರ್ವಿಯಾದೇಶದೊಳಗೆ ಪ್ರತಿಯೊಬ್ಬ ಪುರುಷನೂ ತನ್ನ ೨೧ ನೆಯ ವಯಸ್ಸಿನಿಂದ ೪೫ ನೆಯ ವಯಸ್ಸಿನವರೆಗೂ ಸೇನೆಯಲ್ಲಿ ಸೇರಿರಬೇಕೆಂಬ ನಿರ್ಬಂಧವಿಧಿಯು ಏರ್ಪಡಿಸಲ್ಪಟ್ಟಿತು. ಆ ವಯಸ್ಸು ಮೀರಿದ ಬಳಿಕ ಯಾವುದಾದರೊಂದು ಸಂದರ್ಭದಲ್ಲಿ ದೇಶದವರೆಲ್ಲರೂ ಸೇರಿ ಶತ್ರುಗಳಮೇಲೆ ಯುದ್ಧಮಾಡಬೇಕಾಗಿ ಬಂದಾಗ ಹೆಚ್ಚು ವಯಸ್ಸು ಮೀರಿದವರೂ ಸಹ ಸೇನೆಗೆ ಸೇರಿ ಕೆಲಸ ಮಾಡಬೇಕಾಗಿರುವುದು. ಈಗಿನ ಸರ್ವಿಯನ್ ಸೈನ್ಯವು ಹಿಂದಿನ ತುರ್ಕಿ ಬಾಲ್ಕನ್ ಯುದ್ಧದಲ್ಲಿ ೧ ವರ್ಷ ಹೋರಾಡಿರುವುದರಿಂದ ಎಷ್ಟೋ ಅನುಭವವುಳ್ಳದಾಗಿರುವ ಕಾರಣ, ತಾತ್ಕಾಲಿಕವಾಗಿ ಅವಸರದಿಂದ ಸೇರಿಸಲ್ಪಡುವ ಇತರ ದೇಶದ ಸಾಮಾನ್ಯಸೇನೆಗಿಂತಲೂ ಎಷ್ಟೋ ಉತ್ತಮವಾಗಿರುವುದು. ಮತ್ತು ಕೈಯಲ್ಲಿ ತುಪಾಕಿಯನ್ನು ಹಿಡಿಯಬಲ್ಲ ಪ್ರತಿಯೊಬ್ಬ ಸರ್ವಿಯನ್ ಸ್ತ್ರೀಯೂ (ಮುಖ್ಯವಾಗಿ ಬಿಕ್ಕಲುತನಕ್ಕೆ ಸೇರಿದವರು) ಬಾಲ್ಕನ್ ಯುದ್ಧವು ನಡೆದ ಬಳಿಕ ಸ್ವಲ್ಪಮಟ್ಟಿಗೆ ಸೇನಾಶಿಕ್ಷಣವನ್ನು ಪಡೆದಿರುವರು. ಯುದ್ಧವು ಪ್ರಾಪ್ತವಾಗಿ ತಮ್ಮ ಗಂಡಸರು ಮಕ್ಕಳೆಲ್ಲಾ ರಣರಂಗಕ್ಕೆ ಹೋದಾಗ ಈ ಹೆಂಗುಸರುಗಳೇ ತಮ್ಮ ಸ್ಥಲವನ್ನೂ ಆಸ್ತಿಗಳನ್ನೂ ಶತ್ರುಗಳಿಂದ ರಕ್ಷಣೆಮಾಡಿಕೊಳ್ಳಲು ಸಮರ್ಥರಾಗಿರಬೇಕೆಂಬುದೇ ಈ ಏರ್ಪಾಟಿನ ಉದ್ದೇಶವು. ಸಹಜ ಧೈರ್ಯಸಂಪನ್ನರಾದ ಆ ಸ್ತ್ರೀಯರು ಬಲುಬೇಗನೆ ಕವಾತಿನಲ್ಲಿ ನಿಪುಣೆಯರಾಗಿ, ಗುರಿತಪ್ಪದೆ ತುಪಾಕಿಯನ್ನು ಪ್ರಯೋಗಿಸುವಲ್ಲೂ ಸಮರ್ಥೆಯರಾಗಿರುವರು. ಈಗಿನ ಯುದ್ಧಚರಿತ್ರದಲ್ಲಿ ಆ ಸ್ತ್ರೀಯರ ಪ್ರಶಂಸೆಯು, ಬಂದರೂ ಬರಬಹುದು. ಈ ಕೀರ್ತಿಯೆಲ್ಲಾ ಜನರಲ್ ಪಟ್ನಿಕ್‌ರವರ ಚರಿತ್ರಕ್ಕೆ ಅಲಂಕಾರಭೂತವಾದುದು.

ಈ ಜನರಲ್ ಪಟ್ನಿಕ್‌ರವರ ಪ್ರಸಿದ್ಧಿಯು ಪಶ್ಚಿಮ ಯೂರೋಪುಖಂಡದಲ್ಲಿ ಅಷ್ಟೇನೂ ಇಲ್ಲದಿದ್ದರೂ ಈಗಿನ ಸೇನಾಧಿಪತಿಗಳೆಲ್ಲೆಲ್ಲಾ ಅತ್ಯಂತ ಸಮರ್ಥರೆಂದು ಹೆಸರನ್ನು ಪಡೆದುಕೊಳ್ಳುತ್ತಿದ್ದಾರೆ. ೧೯೧೨ ನೆಯ ವರ್ಷದಲ್ಲಿ ತುರ್ಕಿಯವರ ಮೇಲೂ, ಬಳಿಕ ಬಲ್ಗೇರಿಯಾದವರಮೇಲೂ, ಸರ್ವಿಯನ್ನರು ಕಾದಾಡಿ ಸುಲಭವಾಗಿಯೂ ತ್ವರಿತವಾಗಿಯೂ ಜಯವನ್ನು ಪಡೆದುಕೊಂಡುದಕ್ಕೆ ಈತನ ಯುಕ್ತಿಸಾಮರ್ಥ್ಯಗಳೂ ಬಲವೂ ಕಾರಣವಾಗಿದ್ದುದರಿಂದ ಇಂಥ ಸೇನಾನಿಯನ್ನು ಹೇಗಾದರೂ ನಾವು ಹಿಡಿದುಬಿಟ್ಟರೆ ತಮ್ಮ ಕಾರ್ಯಕ್ಕೆ ಜಯವಾಗುವುದೆಂದು ತಿಳಿದು, ಈಗಿನ ಯುದ್ಧದಲ್ಲಿ ಆಸ್ಟ್ರಿಯನ್ನರು ಮೊಟ್ಟಮೊದಲೇ ನಾನಾ ತಂತ್ರದಿಂದ ಒಂದುದಿನ ಅಪರರಾತ್ರಿಯಲ್ಲಿ ಹಿಡಿದುಕೊಂಡು ಬಿಟ್ಟರು. ಇದುವರೆಗೆ ಎಷ್ಟೋ ಯುದ್ಧಗಳು ನಡೆದಿವೆ. ಆದರೆ ಯುದ್ಧೋಪಕ್ರಮದಲ್ಲೇ ಒಂದು ಕಡೆಯ ಸರ್ವಸೇನಾಧಿಪತಿಯು ಮತ್ತೊಂದು ಪಕ್ಷದವರಿಗೆ ಸಿಕ್ಕಿಹೋದುದು ಯುದ್ಧಚರಿತ್ರದಲ್ಲೆಲ್ಲಿಯೂ ಕಂಡುಬರುವುದಿಲ್ಲ. ಹೀಗೆ ಜನರಲ್ ಪಟ್ನಿಕ್‌ರವರು ತಮ್ಮ ಕಡೆಯವರಿಗೆ ಸಿಕ್ಕಿಹೋದರೆಂಬ ಸುದ್ದಿಯು ಆಸ್ಟ್ರಿಯಾ ಚಕ್ರವರ್ತಿಯವರಿಗೆ ತಿಳಿಯಬರಲು, ಹೀಗೆ ಮಾಡಿದುದರಿಂದ ಶತ್ರುಪಕ್ಷಕ್ಕೆ ಮಹಾನರ್ಥವನ್ನುಂಟುಮಾಡಿದಂತಾಗಿರುವುದೆಂಬುದು ಅವರಿಗೆ ಗೊತ್ತಾದರೂ, ಈ ಸಂದರ್ಭದಲ್ಲಿ ತಮ್ಮ ಕಡೆಯ ಅಧಿಕಾರಿಗಳು ಮಾಡಿದ ಅಕ್ರಮಗಳು ಮೊದಲಾದುವುಗಳೆಲ್ಲಾ ಆಸ್ಟ್ರಿಯಾ-ಹಂಗೇರಿ ಎಲ್ಲೆಯಲ್ಲಿರುವ ಸ್ಲಾವ್ ಜನಗಳಿಗೆ ತಿಳಿದರೆ ಮತ್ತಷ್ಟು ಅವರ ಅಂತರ್ಗತವಾದ ದ್ವೇಷಭಾವಗಳು ಉಜ್ವಲಿಸಲಾಸ್ಪದವಾಗುವುದೆಂದು ತಿಳಿದೋ ಏನೋ ಅವರು ಈ ಸೇನಾಧಿಪತಿಯನ್ನು ಬಿಟ್ಟುಬಿಡುವುದಕ್ಕೆ ಆಜ್ಞಾಪಿಸಿದರು. ಈ ಜನರಲ್ ಪಟ್ನಿಕ್‌ರವರನ್ನು ಆಸ್ಟ್ರಿಯಾ ಚಕ್ರವರ್ತಿಯವರು ಹಿಂದೆ ತುರ್ಕಿ ಬಾಲ್ಕನ್ ಯುದ್ಧ ಸಮಯದಲ್ಲಿ ಒಂದಾವೃತ್ತಿ ಒಂದು ನಿಲ್ದಾಣದ ಬಳಿಯಲ್ಲಿ ಅಕಸ್ಮಾತ್ ಸಾಧಿಸಿ ಮಾತನಾಡಿರುವರು. ಆಗ್ಗೆ ಈ ಸೇನಾಧಿಪತಿಯ ಯೋಗ್ಯತಾಂಶಗಳನ್ನೆಲ್ಲಾ ಪ್ರತ್ಯಕ್ಷವಾಗಿ ಸ್ವಲ್ಪಸಂಭಾಷಣದಲ್ಲೇ ಅವರು ಅರಿದು ಮೆಚ್ಚಿಕೊಂಡಿರುವರು. ಈಗ ಸರ್ವಿಯನ್ನರು ಆಸ್ಟ್ರಿಯನ್ನರನ್ನು ಮಿಸುಕಾಡದಂತೆ ಮಾಡಿಕೊಳ್ಳಿಸಿರುವುದರ ಕೀರ್ತಿಯೂ ಈ ಜನರಲ್ ಪಟ್ನಿಕ್‌ರವರ ಭಾಗಕ್ಕೇ ಬಂದಿರುವುದು.

ಮೈಸೂರ್ ಸ್ಟಾರ್.

೧೯೧೪ ನೆಯ ಸೆಪ್ಟೆಂಬರ್ ತಾ|| ೧೩ನೆಯ ಭಾನುವಾರ.

ಸಾರ್ವಭೌಮರ ಸಂದೇಶವು.

ಕಳೆದ ತಾ|| ೮ ರಲ್ಲಿ ಸಿಮ್ಲಾ ಪಟ್ಟಣದೊಳಗೆ ನೂತನವಾಗಿ ನಿರ್ಮಿಸಲ್ಪಟ್ಟಿರುವ ಸಭಾಮಂದಿರದೊಳಗೆ ಸಾಮ್ರಾಜ್ಯಶಾಸನಸಭೆಯು ಕೂಡಿದ್ದಾಗ, ಶ್ರೀಮಜ್ಜಾರ್ಜ್ ಸಾರ್ವಭೌಮರಿಂದ ಭಾರತೀಯ ಪ್ರಭುಗಳಿಗೂ ಪ್ರಜೆಗಳಿಗೂ ಸಹ ಬರೆದು ಕಳುಹಲ್ಪಟ್ಟಿದ್ದ ಸಂದೇಶಪತ್ರಿಕೆಯು ವೈಸ್ರಾಯರಿಂದ ಓದಲ್ಪಟ್ಟಿತು. ಅದರಭಿಪ್ರಾಯವೇನೆಂದರೆ:—

ಜಗತ್ತಿನ ನಾಗರಿಕಾಭಿವೃದ್ಧಿಯನ್ನೂ ಶಾಂತಿಯನ್ನೂ ನಾಶಮಾಡಬೇಕೆಂಬುದಾಗಿ ಪೂರ್ವದಲ್ಲಿ ಯಾರೂ ಮಾಡದಿದ್ದಂತಹ ಪ್ರಯತ್ನವನ್ನು ಈಗ ನಮ್ಮ ಶತ್ರುಗಳು ಮಾಡುತ್ತಿದ್ದಾರೆ. ಶತ್ರುಗಳ ಆ ಪ್ರಯತ್ನವನ್ನು ಸಾಗಗೊಡದೆಯಿರುವುದಕ್ಕೂ ಬ್ರಿಟಿಷ್ ದ್ವೀಪಗಳಲ್ಲಿರುವ ಪ್ರಜೆಗಳೂ, ಕೆನಡಾ-ಆಸ್ಟ್ರೇಲಿಯಾ-ಇಂಡ್ಯಾ-ದಕ್ಷಿಣಾಫ್ರಿಕಾ, ಮೊದಲಾದ ದೇಶಗಳ ಪ್ರಜೆಗಳೂ, ಅವರು-ಇವರೆಂಬ ಭೇದವಿಲ್ಲದೆ ಆಂಗ್ಲಸಾಮ್ರಾಜ್ಯಕ್ಕೆ ಸೇರಿದ ಸಕಲ ಪ್ರಜೆಗಳೂ ಸಹ ಒಂದೇ ಮನಸ್ಸಿನಿಂದ ಒಂದು ಕಾರ್ಯವನ್ನು ಸಾಧಿಸಬೇಕೆಂಬ ಉದ್ದೇಶದಿಂದ ನಿಂತಿದ್ದಾರೆ. ಆಪತ್ಕರವಾದ ಈ ಯುದ್ಧವು ನಾನು ಕೋರಿ ಬರಮಾಡಿಕೊಂಡುದಲ್ಲ. ನಾನು ಯಾವಾಗಲೂ ಶಾಂತಿಪಕ್ಷವನ್ನೇ ಹಿಡಿದು ವಾದಿಸಿದೆನು. ನನ್ನ ಸಾಮ್ರಾಜ್ಯಕ್ಕೆ ಯಾವ ಸಂಬಂಧವೂ ಇಲ್ಲದ ಈ ಯುದ್ಧವು ನಡೆಯದೇ ಇರುವಂತೆ ಮಾಡುವುದಕ್ಕೂ, ಯುದ್ಧಕ್ಕೆ ನಿಂತವರ ವೈಷಮ್ಯಗಳನ್ನು ಹೋಗಲಾಡಿಸುವುದಕ್ಕೂ ಸಹ ನನ್ನ ಮಂತ್ರಿಗಳು ಅನೇಕವಿಧವಾಗಿ ಪ್ರಯತ್ನ ಮಾಡಿದರು. ಬೆಲ್ಜಿಯಂದೇಶದ ತಾಟಸ್ಥ್ಯಕ್ಕೆ ಭಂಗವುಂಟಾಗುತ್ತಿರುವಾಗಲೂ, ಆ ದೇಶದ ಪಟ್ಟಣಗಳು ನಾಶವಾಗುತ್ತಿರುವಾಗಲೂ, ಫ್ರೆಂಚ್ ಜಾತಿಯ ಪ್ರಾಣವು ಹೋಗುವುದಕ್ಕೆ ಸಿದ್ಧವಾಗಿರುವಾಗಲೂ, ನಮ್ಮ ವಾಗ್ದಾನಗಳನ್ನೂ ಅಭಯದಾನಗಳನ್ನೂ ಬಿತ್ತರಿಸಿಬಿಟ್ಟು, ಇದರಲ್ಲಿ ಸಂಬಂಧವನ್ನು ಹೊಂದದೆ ದೂರವಾಗಿದ್ದ ಪಕ್ಷದಲ್ಲಿ ನನ್ನ ಗೌರವವು ನೀರಿನ ಪಾಲಾಗುತ್ತಿದ್ದಿತು. ಸಾಮ್ರಾಜ್ಯದ ಮತ್ತು ಮಾನವಕೋಟಿಯ ಸ್ವಾತಂತ್ರ್ಯವನ್ನು ಬೂದಿಯ ಪಾಲುಮಾಡಲು ಶತ್ರುಗಳಿಗೆ ನಾವು ಒಪ್ಪಿಸಿದವರಾಗುತ್ತಿದ್ದೆವು. ಆದುಕಾರಣ, ಹಾಗೆ ಮಾಡಗೊಡಬಾರದೆಂದು ನಾನು ನಿಶ್ಚಯಿಸಿಕೊಂಡೆನು.

ನನ್ನ ನಿಶ್ಚಯಕ್ಕೆ ಸಾಮ್ರಾಜ್ಯದ ಸಕಲಭಾಗದವರೂ ಸಹಾಯಕರಾಗಿದ್ದರು. ಇದು ನನಗೆ ಬಹಳಸಂತೋಷವನ್ನುಂಟುಮಾಡಿತು. ಗೌರ್ನಮೆಂಟಿನವರು ಇತರರೊಡನೆ ಮಾಡಿಕೊಂಡ ಒಡಂಬಡಿಕೆಗಳಮೇಲೆ ವಿಶ್ವಾಸವೂ, ಪ್ರಭುತ್ವದವರು ಮಾಡಿದ ವಾಗ್ದಾನಗಳನ್ನು ಪ್ರಜೆಗಳೂ, ಪ್ರಜೆಗಳು ಮಾಡಿದ ವಾಗ್ದಾನಗಳನ್ನು ಪ್ರಭುತ್ವದವರೂ ಸಹ ಗೌರವಿಸುವುದೂ, ಇಂಡ್ಯಾ ಇಂಗ್ಲೆಂಡ್ ದೇಶಗಳಲ್ಲಿನ ಪ್ರಭುತ್ವಕ್ಕೂ ಪ್ರಜೆಗಳಿಗೂ ಸಹ ಪಾರಂಪರ್ಯವಾಗಿ ನಡೆದುಬರುತ್ತಿರುವ ಆಚಾರವಾಗಿದೆ. ಆಂಗ್ಲಸಾಮ್ರಾಜ್ಯದ ಐಕ್ಯಕ್ಕೆ ಭಂಗವುಂಟಾಗದಿರುವಂತೆ ಮಾಡುವುದಕ್ಕಾಗಿ ಪ್ರಜೆಗಳು ಹಲವುಬಾರಿ ಸಹಾಯವನ್ನು ಮಾಡಿರುತ್ತಾರೆ. ಆದರೆ ಈ ಸಮಯದಲ್ಲಿ ಆಂಗ್ಲಪ್ರಜೆಗಳೂ, ಭಾರತೀಯರೂ ಸಹ ನನ್ನ ಪ್ರಭುತ್ವದಮೇಲೆ ಅತ್ಯಂತಭಕ್ತಿಯನ್ನು ತೋರಿಸಿದರು. ಭರತಖಂಡದ ರಾಜರುಗಳು ಸಾಮ್ರಾಜ್ಯರಕ್ಷಣೆಗಾಗಿ ತಮ್ಮ ದ್ರವ್ಯವನ್ನೂ ಪ್ರಾಣಗಳನ್ನೂ ಧಾರೆಯೆರೆಯುವೆವೆಂದು ತಿಳಿಯಿಸಿರುವುದು ಅಸದೃಶವಾಗಿದೆ. ಇದು ನನಗೆ ಪರಮಾನಂದವನ್ನುಂಟುಮಾಡಿದೆ.

ಈ ಯುದ್ಧದಲ್ಲಿ ಭಾರತೀಯರು ತಾವೂ ಕೂಡ ಸೇರಿ ಯುದ್ಧಮಾಡುತ್ತೇವೆಂದು ಏಕಕಂಠದಿಂದ ನುಡಿದರು. ಇದು ನನಗೆ ಹೇಳಲಾಗದಷ್ಟು ಸಂತೋಷವನ್ನುಂಟುಮಾಡಿದೆ. ನನ್ನ ಮೇಲೆ ಭರತಖಂಡದ ಪ್ರಜೆಗಳಿಗೂ ನನಗೆ ಅವರಮೇಲೂ ಇರುವ ಭಕ್ತಿಪ್ರೇಮಗಳು ದೃಢತರವಾಗಿವೆ. ನಾನು ದಿಲ್ಲಿ ಪಟ್ಟಣದಲ್ಲಿ ಪಟ್ಟಾಭಿಷಿಕ್ತನಾಗಿ ಸ್ವದೇಶಕ್ಕೆ ಬಂದಬಳಿಕ, ಭಾರತೀಯರು ತಮಗೆ ಆಂಗ್ಲಪ್ರಜೆಗಳಮೇಲೆ ಪ್ರೇಮಭಾವವೂ ಸ್ನೇಹವೂ ಇರುವುದೆಂದು ೧೯೧೨ ನೆಯ ವರ್ಷದ ಫೆಬ್ರುವರಿ ತಿಂಗಳಲ್ಲಿ ಈ ದೇಶದ ಪ್ರಜೆಗಳಿಗೋಸುಗ ಒಂದು ಸಂದೇಶವನ್ನು ಕಳುಹಿದೆನು. ಅದನ್ನು ನಾನು ಸ್ಮರಣೆಗೆ ತಂದುಕೊಳ್ಳುತ್ತೇನೆ. ಆ ಸಂದೇಶದಲ್ಲಿ ಭರತಖಂಡದ ಪುರೋಭಾಗ್ಯವೂ ಆಂಗ್ಲದ್ವೀಪಗಳ ಪುರೋಭಾಗ್ಯವೂ ಪರಸ್ಪರ ಅಗಲಿಹೋಗಲು ಅವಕಾಶವಿಲ್ಲದಂತೆ ಬಂಧಿಸಲ್ಪಟ್ಟಿವೆಯೆಂದು ತಿಳಿಯಿಸಲ್ಪಟ್ಟಿರುವುದು. ಈಗಿನ ವಿಷಮ ಸಮಯದಲ್ಲಿ ಆ ಮಾತುಗಳ ಸಂಪೂರ್ಣಫಲವು ವ್ಯಕ್ತವಾಗುತ್ತಿದೆ. ಎಲ್ಲ ಮಾತುಗಳನ್ನೂ ನೀವು ನುಡಿದಂತೆಯೇ ಆಚರಿಸುವವರಾಗಿರುತ್ತೀರಿ.''

ಮೇಲಿನ ಅಮೃತವಚನಗಳು, ನಮ್ಮ ಸಾರ್ವಭೌಮರು ಭಾರತಪ್ರಜೆಗಳಮೇಲೆ ಎಷ್ಟುಮಟ್ಟಿನ ದಯಾಂತಃಕರಣವನ್ನಿಟ್ಟಿರುವರೆಂಬುದನ್ನೂ, ಈಗಿನ ಕಾಲದಲ್ಲಿ ಭಾರತೀಯರು ತೋರಿಸಿದ ರಾಜನಿಷ್ಠೆಯು ಹಿಂದಿನ ಎಲ್ಲ ಸಂದರ್ಭಗಳಲ್ಲಿ ತೋರಿಸಿರುವ ರಾಜನಿಷ್ಠೆಗೂ ಮಿಗಿಲಾಗಿದ್ದು, ಪ್ರಭುಗಳ ಮನಸ್ಸನ್ನು ಎಷ್ಟುಮಟ್ಟಿಗೆ ತೃಪ್ತಿಪಡಿಸಿರುವುದೆಂಬುದನ್ನೂ ನಿದರ್ಶನಪಡಿಸಿರುತ್ತದೆ. ಇಂಥ ಸಂದೇಶವನ್ನು ನಮ್ಮ ಸಾರ್ವಭೌಮರು ಕಳುಹಿಸಿರುವುದಕ್ಕಾಗಿ ಭಾರತೀಯರೆಲ್ಲರೂ ಕೃತಜ್ಞರಾಗಿರುವರು.

ಯುದ್ಧವಾರ್ತೆ.

ಕಳೆದ ವಾರದಲ್ಲಿ ಯುದ್ಧರಂಗದಿಂದ ಬಂದ ವರ್ತಮಾನಗಳು ಹೆಚ್ಚಾಗಿಲ್ಲ. ಆದರೂ ಅಲ್ಲಿನ ಕಾರ್ಯಗಳೇನೂ ತಟಸ್ಥವಾಗಿಲ್ಲ. ಒಂದೊಂದು ಕಡೆ ಆಗುವ ಜಯಾಪಜಯಗಳಿಗೆ ಉಭಯಪಕ್ಷದವರೂ ಎಷ್ಟೋ ಸನ್ನಾಹಗಳನ್ನೂ ಕಾಲವನ್ನೂ ವಿನಿಯೋಗಿಸಬೇಕಾಗುವುದು. ಒಂದೊಂದು ಕಡೆಯ ಮಹಾ ಯುದ್ಧಗಳು ಮುಗಿಯುವವರೆಗೂ ತತ್ಸಂಬಂಧವಾದ ಪರಿಣಾಮದ ಸುದ್ದಿಗಳು ಬರುವಂತಿರುವುದಿಲ್ಲ. ಇದಲ್ಲದೆ ಯುದ್ಧದ ವಿವರಣೆಗಳೆಲ್ಲವೂ ಹೊರಕ್ಕೆ ಬರುವುದು ಸಾಧ್ಯವಲ್ಲ. ಬರುವ ವರ್ತಮಾನಗಳೂ ಕೂಡ ಪರಿಶೋಧಿತವಾಗಿ ಬರುತ್ತಿರುವುವು. ೧೮ ದಿನಗಳಲ್ಲಿ ಕೌರವಪಾಂಡವರಿಗೆ ನಡೆದ ಯುದ್ಧವನ್ನೇ ವ್ಯಾಸಮಹರ್ಷಿಗಳು ನೂರಾ ಲಕ್ಷ ಗ್ರಂಥವಾಗಿಬರೆದಿರುವಾಗ್ಗೆ ಆಗಿನ ಸೈನ್ಯಕ್ಕೆ ಒಂದಕ್ಕೆ ನಾಲ್ಕರಷ್ಟಾಗಿ ತಿಂಗಳುಗಟ್ಟಲೆ ನಡೆಯುತ್ತಿರುವ ಈಗಿನ ಯುದ್ಧದ ವಿವರಣವನ್ನು ಉತ್ಪ್ರೇಕ್ಷೆಯಿಲ್ಲದೆ ಬರೆವುದಕ್ಕೂ ೪-೬ ಲಕ್ಷ ಗ್ರಂಥಗಳಾದರೆ ಸಾಕಾದೀತೋ ಇಲ್ಲವೋ ಆದರೂ ತಂತ್ರಿಯಮೂಲಕ ಬರುವ ಸಂಗ್ರಹವಾದ ವಾರ್ತೆಗಳಿಂದಲೇ ಯುದ್ಧದ ಭೀಕರ ಸ್ವರೂಪವನ್ನು ಅರಿತುಕೊಂಡು, ಇದ್ದುದರಲ್ಲಿ ತೃಪ್ತರಾಗಬೇಕಾಗಿರುವುದು.

ಪಶ್ಚಿಮರಂಗ.

ಸೆಪ್ಟೆಂಬರ್ ತಾ|| ೧ ರಿಂದ ಉಭಯಪಕ್ಷದವರೂ ಅದುವರೆಗೂ ತಂತಮ್ಮ ಕಡೆಗಳಲ್ಲಿ ನಷ್ಟವಾಗಿದ್ದ ಸೈನಿಕರ ಸ್ಥಲಕ್ಕೆ ಹೊಸಬರನ್ನು ಭರ್ತಿಮಾಡಿಕೊಂಡರು. ಅದುವರೆಗೆ ಆದ ಯುದ್ಧದಲ್ಲಿ ಇಂಗ್ಲೀಷರ ಕಡೆ ೧೫೧೫೧ ಮಂದಿ ನಷ್ಟವಾಗಿರುವರೆಂದೂ ಇವರಲ್ಲಿ ಅಧಿಕಾರಿಗಳೊಳಗೆ ಸತ್ತವರು ೬೩ ಮಂದಿ, ಗಾಯಗೊಂಡವರು, ೧೬೨೦ ಮಂದಿ, ಗೊತ್ತಿಲ್ಲದೆ ಹೋಗಿರುವವರು ೨೫೦ ಮಂದಿ, ಸೈನಿಕರೊಳಗೆ ಸತ್ತವರು ೨೦೨ ಮಂದಿ, ಗಾಯಗೊಂಡವರು ೧೦೬೧ ಮಂದಿ, ಗೊತ್ತಿಲ್ಲದೆ ಹೋಗಿರುವವರು ೧೩೪೦೩ ಮಂದಿಗಳು.

ಇಂಗ್ಲೀಷರ ಕಡೆ ಹೀಗೆ ನಷ್ಟವಾದ ೧೫ ಸಾವಿರ ಚಿಲ್ಲರೆ ಸೈನ್ಯಕ್ಕೆ ಪ್ರತಿಯಾಗಿ ೧೯ ಸಾವಿರ ಸೈನ್ಯವನ್ನು ಅಸ್ಥಲಕ್ಕೆ ಮರಳಿ ಕಳುಹಿಸಿಕೊಟ್ಟಿದ್ದಾರೆ. ಈಗ ಯುದ್ಧಾಂಗಣದಲ್ಲಿ ಇಂಗ್ಲೀಷರ ಕಡೆಯ ಸೈನ್ಯವು ೨ ಲಕ್ಷಕ್ಕೆ ಮೇಲ್ಪಟ್ಟಿದೆ. ಫ್ರಾನ್ಸಿನ ಕಡೆಯ ಸೈನ್ಯವೂ ಇದಕ್ಕೆ ಮಿಗಿಲಾಗಿಯೇ ನಷ್ಟವಾಗಿದೆಯೆಂದು ಕಾಣುತ್ತದೆ. ಆದರೆ ಅದರ ವಿವರಣವು ಬಂದಿಲ್ಲ. ಜರ್ಮನರಕಡೆ ಬೆಲ್ಜಿಯಂ ಫ್ರಾನ್ಸ್ ಯುದ್ಧಾಂಗಣದಲ್ಲಿ ೬೨ ಸಾವಿರ ಜನರವರೆಗೆ ನಷ್ಟಗೊಂಡಿರುವರೆಂದು ತಕ್ಕ ಗುರುತುಗಳಿಂದ ಊಹಿಸಲ್ಪಟ್ಟಿದೆ.

ಈಚೆಗೆ ಇಂಗ್ಲೀಷ್ ಫ್ರೆಂಚ್ ಸೇನೆಗಳೆರಡೂ ಶತ್ರುಪಕ್ಷದವರನ್ನು ದಕ್ಷಿಣಕ್ಕೆ ನುಗ್ಗಗೊಡಿಸದೆ ಪ್ಯಾರಿಸ್ಸಿನ ಉತ್ತರಭಾಗದಲ್ಲೂ ಈಶಾನ್ಯಭಾಗದಲ್ಲೂ ಹಜ್ಜೆಹಜ್ಜೆಗೆ ತಡೆದು ಹಿಮ್ಮೆಟ್ಟಿಸುತ್ತಬಂದಿರುವರು.

ಫ್ರಾನ್ಸ್ ದೇಶದ ಈಶಾನ್ಯ ಮೂಲೆಯಿಂದ ನುಗ್ಗಿ ಲುಕ್ಸೆಂಬರ್ಗಿಗೆ ಹೋಗಬೇಕೆಂದು ಜರ್ಮನರು ಮಾಡಿದ ಪ್ರಯತ್ನವನ್ನು ಪ್ರತಿಪಕ್ಷದವರು ಸಾಗಗೊಡಲಿಲ್ಲ. ಪ್ಯಾರಿಸ್ ಪಟ್ಟಣಕ್ಕೆ ಸಮೀಪದಲ್ಲಿರುವ ಮಾರ್ನ್ ನದಿಯ ದಡದಲ್ಲಿರುವ ಮೋವು ಎಂಬ ಸ್ಥಲದಲ್ಲಿ ಜರ್ಮನರಿಗೆ ತುಂಬಾ ಅಪಜಯವಾಯಿತು. ಅಲ್ಲಿನ ಒಂದೇ ಒಂದು ಹಳ್ಳದಲ್ಲಿ ೬೦೦ ಜರ್ಮನರ ಹೆಣಗಳು ಬಿದ್ದಿದ್ದುವು. ಅಲ್ಲಿ ಅವರಿಗೆ ಆದ ನಷ್ಟವು ಅಪರಿಮಿತವಾಗಿರಬೇಕು. ಮತ್ತು ಪೂರ್ವದಲ್ಲಿ ವಿಟ್ರಿಲ ಫ್ರಾಂಕಾಯಿ ಎಂಬೆಡೆಗಳಲ್ಲೂ ಯುದ್ಧವಾಗಿ ಜರ್ಮನರನ್ನು ಹಿಮ್ಮೆಟ್ಟಿಸಿರುವರು. ರಹೀಂಪಟ್ಟಣ-ವರ್ಡನ್ ಪಟ್ಟಣಗಳ ಮಧ್ಯದ ಭಾಗದಲ್ಲೆಲ್ಲಾ ಹಲವುಕಡೆ ಉಭಯಪಕ್ಷಕ್ಕೂ ಭೀಕರ ಯುದ್ಧಗಳಾಗಿರುವುವು. ಇಲ್ಲೂ ಇಂಗ್ಲೀಷ್ ಫ್ರೆಂಚ್ ಸೈನ್ಯಗಳೇ ಜಯಶಾಲಿಗಳಾದುವು. ಇಲ್ಲಿ ಯುದ್ಧದಲ್ಲಿ ಉಭಯಪಕ್ಷದವರ ಸೇನೆಗಳೂ ೭|| ಲಕ್ಷದವರೆಗೆ ಸೇರಿದ್ದುವೆಂದು ಸುದ್ದಿ ಬಂದಿದೆ. ಈ ಸ್ಥಲದಲ್ಲಿ ಕಳೆದ ತಾ|| ೭ ರಲ್ಲಿ ನಡೆದ ಯುದ್ಧವು ಅದುವರೆಗಿನ ಹಿಂದಿನ ಎಲ್ಲ ಯುದ್ಧಗಳಿಗಿಂತಲೂ ದೊಡ್ಡದಾಗಿದ್ದಿತು. ಜರ್ಮನರು ಸೆಪ್ಟೆಂಬರ್ ತಾ|| ೧ ರ ವರೆಗೆ ಕಾಂಪೈನ್ ಜಿಲ್ಲೆಯಲ್ಲಿ ವಿರಾಮವಿಲ್ಲದೆ ಯುದ್ಧಮಾಡಿ ಮುಂದುವರಿಯಲಾರದೆಹೋದರು. ಅಲ್ಲಿ ಶತ್ರುಗಳ ೧೦ ಫಿರಂಗಿಗಳು ಇಂಗ್ಲೆಂಡ್ ಸೇನೆಗೆ ಸಿಕ್ಕಿದುವು.

ಜರ್ಮನಿಯವರು ಈಚೆಗೆ ಪ್ಯಾರಿಸ್ಸಿನ ಹಾದಿಯನ್ನು ಬಿಟ್ಟು ಇಂಗ್ಲೀಷ್ ಫ್ರೆಂಚ್ ಸೇನೆಗಳ ಬಲಭಾಗದಿಂದ ಸುತ್ತಿ ಅವರನ್ನು ಮುತ್ತಬೇಕೆಂದು ಪ್ರಯತ್ನಿಸಿದರು. ಅದಕ್ಕೆ ಇದಿರುಪಕ್ಷದವರು ಚೆನ್ನಾಗಿ ಭಂಗವನ್ನು ಮಾಡಿದರು. ಜರ್ಮನಿಯವರು ಮಾಬೆಜಿಸ್ ಪಟ್ಟಣದಮೇಲೆ ಫಿರಂಗಿಗಳನ್ನು ಹೊಡೆದರು. ಆದರೂ ಅದು ಸ್ವಾಧೀನವಾಗಲಿಲ್ಲ. ಆದುದರಿಂದ ಅವರು ಕಾಂಪೈನ್-ಸೆನ್ಲಿಸ್ ಜಿಲ್ಲಾಗಳನ್ನು ಬಿಟ್ಟು ಹಿಂದಕ್ಕೆ ಹೋಗುವವರಾದರು. ಈ ಕಾಂಪೈನ್ ಜಿಲ್ಲೆಯಲ್ಲಿ ೩೦ ಸಾವಿರ ಎಕರೆಯಷ್ಟು ವಿಸ್ತಾರವಾದ ಮಹಾರಣ್ಯವಿರುವುದು. ಇದರಲ್ಲಿ ಜರ್ಮನಿಯ ಸೈನ್ಯವು ವ್ಯೂಹರಚನೆಯನ್ನು ಮಾಡಿ ಅಡಗಿಕೊಂಡಿದ್ದಿತು. ಇದಕ್ಕೆ ಇಂಗ್ಲೀಷ್ ಸೇನೆಯು ಬೆಂಕಿಯಿಕ್ಕಿ ಸುಟ್ಟುಬಿಟ್ಟಿತು. ಇದನ್ನು ಅನ್ಯಾಯವಾಯಿತೆಂದು ಫ್ರೆಂಚರು ಭಾವಿಸುತ್ತಿದ್ದರೂ ಆ ಅರಣ್ಯ ದಹನದಲ್ಲಿ ಜರ್ಮನರ ಬಹುಸೈನ್ಯವು ಸುಟ್ಟುಹೋಯಿತು. ಉಳಿದವರೆಲ್ಲಾ ಓಡಿಹೋಗಬೇಕಾಯಿತು.

ಈ ಕಾಂಪೈನ್ ಯುದ್ಧದಲ್ಲಿ ಏಟುತಿಂದು ಲಂಡನ್ನಿಗೆ ಹಿಂದಿರುಗಿ ಹೋಗಿರುವ ಸೈನಿಕರು ಆ ಯುದ್ಧವನ್ನು ವಿವರಿಸಿ ಹೇಳಿರುವುದು ಹೇಗೆಂದರೆ-ಈ ಯುದ್ಧವು ೭ ಗಂಟೆಯ ಹೊತ್ತು ಜರುಗಿತು. ಕಾಂಪೈನ್ ಅರಣ್ಯದೊಳಗಿಂದ ಜರ್ಮನರು ಪ್ರವಾಹದಂತೆ ಬಂದು ಸಮೀಪದಲ್ಲಿದ್ದ ಬೆಟ್ಟದಮೇಲೆ ಹತ್ತಿ ಅದನ್ನು ವಶಪಡಿಸಿಕೊಂಡು, ಫಿರಂಗಿಗಳನ್ನು ಅಣಿಮಾಡಿ ನಿಂತರು. ಅವರ ಅಶ್ವಸೇನೆಯು ಆಂಗ್ಲರಕಡೆಯ ಐರಿಷ್ ಸೈನಿಕರಮೇಲೆ ತುಪಾಕಿಗಳನ್ನು ಹಾರಿಸಿದರು. ಅದಕ್ಕೆ ಐರಿಷ್ ಸೈನಿಕರು ಹೆದರದೆ ಪ್ರತಿಭಟಿಸಿ, ಶತ್ರುಗಳನ್ನು ಮುಂದಕ್ಕೆ ಬರಗೊಡಿಸದೆ ಯುದ್ಧಮಾಡಿದರು. ಈಮಧ್ಯದಲ್ಲಿ ಆಂಗ್ಲರ ಕಾಲ್ಬಲವೂ ಜರ್ಮನರ ಅಶ್ವಸೇನೆಯೂ ಕಲೆತುಹೋಗಿ ತುಮುಲ ಯುದ್ಧವಾಯಿತು. ಒಬ್ಬರಮೇಲೊಬ್ಬರು ತುಪಾಕಿಗಳಿಂದ ಹೊಡೆದಾಡುತ್ತಿದ್ದರು. ಸ್ವಲ್ಪ ಹೊತ್ತಿನಮೇಲೆ ಜರ್ಮನರ ಅಶ್ವಸೇನೆಯು ಓಡಿಹೋಯಿತು. ಅವರಲ್ಲಿ ಬಹುಜನರು ಸತ್ತರು. ಈ ಯುದ್ಧವನ್ನು ಜರ್ಮನರ ಕಾಲ್ಬಲವು ದೂರದಲ್ಲಿ ನಿಂತು ನೋಡುತ್ತಿದ್ದಿತು. ಅಷ್ಟರಲ್ಲಿ ಆಂಗ್ಲಸೇನೆಯು ಮುಂದಕ್ಕೆ ಹೋಯಿತು. ಇವರನ್ನು ತಡೆಯುವುದಕ್ಕಾಗಿ ಜರ್ಮನರು ಅಗ್ನಿವರ್ಷವನ್ನು ಕರೆದರು. ಆದರೂ ಆಂಗ್ಲಸೈನ್ಯವು ಲಕ್ಷ್ಯಮಾಡದೆ, ಜರ್ಮನಿಯವರು ಫಿರಂಗಿಗಳನ್ನಿಟ್ಟುಕೊಂಡಿದ್ದ ಸ್ಥಲಕ್ಕೆ ನುಗ್ಗಿ ಕಡಿದಾಡಿ ಅವರ ೧೦ ಫಿರಂಗಿಗಳನ್ನು ವಶಪಡಿಸಿಕೊಂಡರು. ಹಿಡಿದ ಫಿರಂಗಿಗಳ ಸಮೇತ ಆಂಗ್ಲಸೈನಿಕರು ಪರಮಾನಂದದಿಂದ ಹುಚ್ಚು ಹಿಡಿದವರಂತೆ ಕೇಕೆಹಾಕುತ್ತ ಓಡಿದರು.

ಫ್ರಾನ್ಸಿನಲ್ಲಿ ನಡೆದ ಯುದ್ಧಗಳೆಲ್ಲ ಆ ವಾರದಲ್ಲಿ ೬೦ ಮೈಲಿಗಳ ಸ್ಥಲದಲ್ಲಿ ವ್ಯಾಪಿಸಿದ್ದಿತೆಂದು ಆ ಸರ್ಕಾರದವರು ಪ್ರಕಟಿಸಿದ್ದಾರೆ. ಜರ್ಮನರು ಫ್ರಾನ್ಸಿನ ಹಾದಿಯನ್ನು ಆಕಸ್ಮಿಕವಾಗಿ ಬಿಟ್ಟು ಲುಕ್ಸೆಂಬರ್ಗಿನಲ್ಲಿರುವ ತಮ್ಮ ಸೇನೆಯೊಡನೆ ಕೂಡಿಕೊಳ್ಳಲು ಪ್ರಯತ್ನಿಸಿರುವುದೆಂಬುದನ್ನು ಇಂಗ್ಲಿಷ್ ಫ್ರೆಂಚ್ ಸೈನ್ಯಗಳು ಊಹಿಸಿ, ಅತ್ತಕಡೆಗೆ ತಾವೂ ನುಗ್ಗಿ, ಕಾದಾಡಿ ಆ ಎರಡೂ ಕಲೆಯದಂತೆ ಮಾಡಿದರು. ಫ್ರಾನ್ಸಿನವರು ಜರ್ಮನರ ೬೦ ನೇ ನಂಬರ್ ಸೈನ್ಯದವರಿಂದ ಕಿತ್ತುಕೊಂಡ ಬಿರುದಿನ ಧ್ವಜವನ್ನು ಫ್ರಾನ್ಸ್ ಪ್ರೆಸಿಡೆಂಟ್ ಪಾಂಕೇರ್‌ರವರಿಗೆ ಒಪ್ಪಿಸಿದರು.

ಕಳೆದ ತಾ|| ೭ರಲ್ಲಿ ಫಿರಂಗಿಗಳ ಸಹಾಯವನ್ನು ಹೊಂದಿದ್ದ ಜರ್ಮನಿಯವರ ೨ ಅಶ್ವಸೈನ್ಯಗಳನ್ನು ಫ್ರಾನ್ಸಿನವರು ೧೯ ಮೈಲಿಗಳವರೆಗೆ ಅಟ್ಟಿಕೊಂಡು ಹೋಗಿ ಅವರ ಕಡೆಯ ೯ ಫಿರಂಗಿಗಳನ್ನೂ ಬಹು ಮಂದಿ ಸೈನಿಕರನ್ನೂ ಹಿಡಿದುಕೊಂಡರು. ಪ್ಯಾರಿಸ್ಸಿಗೆ ಉತ್ತರದಲ್ಲಿ ೨೦ ಮೈಲಿಗಳಿಂದಾಚೆ ಪೆರ್ಸಿ-ಸರ್-ಓಯಿಚ್ ಲಾಫೆರೆ-ಚಾಂಪೆನಾಯಿಸ್ ವಿಟ್ರಿಲಾ ಫ್ರಾಂಕಾಯಿಸ್ ಪಟ್ಟಣಗಳ ಮತ್ತು ಅರ್ಗೋನಿ ಕಾಡುಗಳ ಬಳಿಯಲ್ಲಿ ೪-೬ ದಿನಗಳು ಎರಡು ಪಕ್ಷಕ್ಕೂ ಬಲವತ್ತರವಾದ ಯುದ್ಧಗಳು ಅವಿಚ್ಛಿನ್ನವಾಗಿ ನಡೆದಿರುವುವು. ಹಲವುಕಡೆ ನಮ್ಮ ಪಕ್ಷದವರಿಗೆ ವಿಶೇಷ ಜಯವಾಗಿರುವುದು. ಉತ್ತರದಲ್ಲಿ ಈ ಮೊದಲೇ ಜರ್ಮನರು ಹಿಡಿದುಕೊಂಡಿದ್ದ ಮಾಂಡಬೆಟ್ಟವನ್ನೂ ಪೊರ್ನಾ ಕಣಿವೆಯನ್ನು ಸಹ ಇಂಗ್ಲೀಷ್ ಫ್ರೆಂಚ್ ಸೇನೆಗಳು ವಶಪಡಿಸಿಕೊಂಡುವು. ಜರ್ಮನರು ದಕ್ಷಿಣಾಭಿಮುಖವಾಗಿ ಪ್ಯಾರಿಸ್ಸಿನ ಕಡೆ ಬರುತ್ತಿರುವಾಗ ಅವರ ಕಡೆ ಮದ್ದುಗುಂಡುಗಳೂ ಆಹಾರ ಸಾಮಗ್ರಿಗಳೂ ಮುಗಿದುಹೋಗಿರುವುವೆಂಬ ಸಂದರ್ಭವನ್ನು ತಿಳಿದುಕೊಂಡು ನಮ್ಮ ಕಡೆಯ ಸೈನ್ಯಗಳು ಅವರಮೇಲೆ ಬಿದ್ದು ಕೊಂದುವೆಂದೂ, ಇವರನ್ನು ತಪ್ಪಿಸಿಕೊಂಡು ಓಡುವ ಭರದಲ್ಲಿ ಗಾಯಗೊಂಡ ಮನುಷ್ಯರನ್ನೂ ಅನೇಕ ಫಿರಂಗಿ ಬಂಡಿಗಳನ್ನೂ ಬಿಟ್ಟು ಜರ್ಮನರು ಓಡಿಹೋದರೆಂದೂ ಪ್ರಕಟವಾಗಿದೆ. ಈಗ ಪ್ಯಾರಿಸ್‌ಪಟ್ಟಣದಲ್ಲಿ ೨೦ಲಕ್ಷ ಪ್ರಜೆಗಳಿದ್ದಾರೆ. ೧೩ ಲಕ್ಷ ಜನರ ವರೆಗೆ ಹೊರಟುಹೋಗಿದ್ದಾರೆ. ತಾ||೮ ರಿಂದೀಚೆಗೆ ಜರ್ಮನ್ ಸೇನೆಯು ಉತ್ತರಕ್ಕೆ ಮುಖವಾಗಿ ಹಿಂದಕ್ಕೇ ಹೋಗುತ್ತಿರುವುದೆಂದು ಸುದ್ದಿ ಬಂದಿರುವುದು. ಎಡಪಕ್ಷದಲ್ಲಿದ್ದ ಇಂಗ್ಲೀಷ್ ಸೇನೆಯೂ, ಪ್ಯಾರಿಸ್ ಪಟ್ಟಣದಿಂದ ಕಳುಹಲ್ಪಟ್ಟ ಫ್ರಾನ್ಸ್ ಸೇನೆಯೂ ಸಹ ಮುಂದುಮುಂದಕ್ಕೆ ಹೋಗುತ್ತಿವೆ. ಹೀಗೆ ಹೋಗುತ್ತಿರುವ ಜರ್ಮನ್ ಸೈನ್ಯವು ತಮ್ಮ ಸಂಚಾರಕ್ಕೆ ಆಣಿಯಾದ ಮಾರ್ಗವನ್ನು ರಕ್ಷಿಸಿಕೊಳ್ಳಲು ಪ್ರಯತ್ನಮಾಡುತ್ತಿರುವಾಗ, ಇಂಗ್ಲಿಷ್ ಫ್ರೆಂಚ್ ಸೇನೆಗಳು ಅವರಮೇಲೆ ಬಿದ್ದು ಘೋರಯುದ್ಧವನ್ನು ಮಾಡಿದುವು. ಮರಳಿ ಇವರು ಮಾರ್ನೆನದಿಯ ಪಕ್ಕದಲ್ಲೂ ಕೂಡ ಶತ್ರುಗಳ ಮೇಲೆ ಬಿದ್ದು ಕಾದಾಡಿದರು.

ಜರ್ಮನರು.

ತಾ|| ೫ ರಲ್ಲಿ ಫ್ರಾನ್ಸ್ ದೇಶಕ್ಕೆ ಸೇರಿದ ಲಿಲ್ಲಿ ಪಟ್ಟಣದ ಪ್ರಜೆಗಳನ್ನು ತಮಗೆ ೧೨ ಕೋಟಿ ರೂ. ಗಳನ್ನು ಕೊಡಬೇಕೆಂದು ಬಲಾತ್ಕರಿಸುತ್ತಿದ್ದವರು ತಾ|| ೬ ರಲ್ಲಿ ಲಿಲ್ಲಿ ವಾಲನ್‌ಸೀನ್ಸ್ ಮೊದಲಾದ ಪಟ್ಟಣ ಪ್ರದೇಶಗಳಲ್ಲಿದ್ದ ಸೈನ್ಯವೆಲ್ಲಾ ಅವಸರದಲ್ಲಿ ಹಿಂದೆರಳಿಹೋಗಿರುತ್ತವೆ ಅತ್ತ ಬೆಲ್ಜಿಯಮ್ಮಿನ ಪಶ್ಚಿಮದಲ್ಲಿ ಆಂಟವರ್ಪಿಗೂ ಘೆಂಟಿಗೂ ಮಧ್ಯದಲ್ಲಿರುವ ಲೋಹಮಾರ್ಗವನ್ನು ಜರ್ಮನರು ನಾಶಮಾಡಿರುವರು. ಅದೇರೀತಿಯಲ್ಲಿ ಆಂಟವರ್ಪಿಗೂ ಅಸ್ಟೆಂಡಿಗೂ ಮಧ್ಯದಲ್ಲಿರುವ ಮಾರ್ಗವನ್ನು ಹಾಳ್ಮಾಡಬೇಕೆಂದು ಜರ್ಮನರು ಪ್ರಯತ್ನಿಸಿರುವಲ್ಲಿ ಬೆಲ್ಜಿಯಮ್ಮಿನವರು ಸಮುದ್ರದ ಅಡ್ಡಗಟ್ಟೆಯನ್ನು ಕಿತ್ತು ಅಲ್ಲೆಸ್ಸಿನ ವಾಯುವ್ಯಮೂಲೆಯಿಂದ ದೇಶದಮೇಲೆ ಸಮುದ್ರದ ನೀರು ಉರುಳುವಂತೆ ಮಾಡಿ ಜರ್ಮನ್ ಸೈನ್ಯವನ್ನು ಅದರಲ್ಲಿ ಮುಳುಗಿಸಿದರು. ಜರ್ಮನರು ಆತ್ಮರಕ್ಷಣೆಯಲ್ಲೂ ಫಿರಂಗಿಬಂಡಿಗಳನ್ನು ನೀರಿನಲ್ಲಿ ಸಾಗಿಸುವುದರಲ್ಲೂ ತೊಂದರೆಪಡುತ್ತಿರುವಾಗ ಆಂಟ್‌ವರ್ಪ್‌ಕೋಟೆಯಿಂದ ಬೆಲ್ಜಿಯಂ ಸೈನ್ಯವು ಶತ್ರುಗಳ ಮೇಲೆ ಗುಂಡಿನ ಮಳೆಯನ್ನು ಕರೆದು ಬಹಳ ನಷ್ಟವನ್ನುಂಟುಮಾಡಿತು. ಇಂಥ ವಿಪತ್ತನ್ನು ಬೆಲ್ಜಿಯಮ್ಮಿನವರು ಇಷ್ಟು ಸಾಹಸದಿಂದ ಮಾಡುವರೆಂದು ಜರ್ಮನರು ಸ್ವಪ್ನದಲ್ಲೂ ಯೋಚಿಸಿರಲಿಲ್ಲ. ಈ ಮಾಲಿನ್ಸಿನ ಬಳಿಯಲ್ಲಿ ದೊಡ್ಡ ಯುದ್ಧವು ನಡೆದು ಜರ್ಮನರ ಕಡೆ ೩೦ ಸಾವಿರ ಸೈನ್ಯವು ನಷ್ಟವಾಗಿ ಉಳಿದವರು ನೋಯಿಯಾಗಿ ಬ್ರಸಲ್ಸಿನ ಕಡೆಗೆ ಓಡಿದರೆಂದು ಆಂಟ್‌ವರ್ಪಿನಲ್ಲಿ ಪ್ರಕಟಿಸಲ್ಪಟ್ಟಿರುವುದು. ಮಾಲೈನ್ಸ್ ಪಟ್ಟಣದಮೇಲೆ ಜರ್ಮನರು ಫಿರಂಗಿಗಳನ್ನು ಹೊಡೆದಾಗ ಅಲ್ಲಿದ್ದ ದೇವಾಲಯದಲ್ಲಿನ ಬಹು ಭಾಗವು ಹಾಳಾಯಿತು. ಅದರಲ್ಲಿದ್ದ ಸುಪ್ರಸಿದ್ಧವಾದ ಚಿತ್ರಪಟಗಳು ಅದಕ್ಕೆ ಮೊದಲೇ ಆಂಟ್‌ವರ್ಪಿಗೆ ಸಾಗಿಸಲ್ಪಟ್ಟಿದ್ದುದರಿಂದ ಅವು ನಷ್ಟವಾಗಲಿಲ್ಲ. ಇದೇ ಸಂದರ್ಭದಲ್ಲಿ ಆ ದಂಡಿಗೆ ಸಮೀಪದಲ್ಲಿ ಡಿನಾಂಟ್ ಪಟ್ಟಣದವರು ಹತ್ತಿರದ ಕೋಟೆಯಿಂದ ತಮ್ಮಮೇಲೆ ಗುಂಡನ್ನು ಹೊಡೆದರೆಂಬ ನೆಪವನ್ನು ಮಾಡಿ ಜರ್ಮನರು ಆ ಪಟ್ಟಣದ ಮೇಲೆ ಫಿರಂಗಿಗುಂಡುಗಳನ್ನು ಹಾರಿಸಿ ನಾಶಮಾಡಿದರು. ಆ ಊರನ್ನು ನುಗ್ಗಿ ಸೂರೆಮಾಡಿದ ನೂರಾರು ಮಂದಿ ಪುರನಿವಾಸಿಗಳನ್ನು ತುಪಾಕಿಗಳಿಂದ ಸುಟ್ಟರು. ಪ್ರಮುಖರಾದ ನೂರು ಮಂದಿಗಳನ್ನು ಬಹಿರಂಗಸ್ಥಲದಲ್ಲಿ ಉರುಲು ಹಾಕಿ ಕೊಂದರು. ಅಲ್ಲಿನ ನ್ಯಾಷನಲ್ ಬ್ಯಾಂಕಿನಲ್ಲಿರುವ ಹಣವನ್ನೆಲ್ಲಾ ಕೊಡಬೇಕೆಂದು ಕೇಳಿ, ಮ್ಯಾನೇಜರು ಅದನ್ನು ಕೊಡದಿರಲು ಅವನನ್ನೂ ಅವನ ಇಬ್ಬರು ಮಕ್ಕಳನ್ನೂ ತುಪಾಕಿಯಿಂದ ಸುಟ್ಟುಬಿಟ್ಟರು. ಬೆಲ್ಜಿಯಮ್ಮಿನ ಲೋಹಮಾರ್ಗಗಳಮೇಲೆ ಜರ್ಮನರು ತಮ್ಮ ನೌಕಾಸೇನೆಯನ್ನು ಕಾವಲಿಟ್ಟು ಲೀಜುಪಟ್ಟಣದ ಪ್ರಜೆಗಳಾರೂ ಹೊರಕ್ಕೆ ೩ ದಿನಗಳ ವರೆಗೆ ಬರಲಾಗದೆಂದು ಕಟ್ಟುಮಾಡಿರುವುದರಿಂದ ಜರ್ಮನರು ಇತರರಿಗೆ ಅರಿಯದಂತೆ ತಮ್ಮ ಸೇನೆಯನ್ನು ಸ್ವದೇಶಕ್ಕೆ ಸಾಗಿಸುತ್ತಿರಬಹುದೆಂದು ಊಹಿಸಲ್ಪಡುತ್ತಿದೆ.

ಪೂರ್ವರಂಗ.

ಅತ್ತ ರಷ್ಯನ್ನರು ಆಸ್ಟ್ರಿಯಾದಲ್ಲಿನ ಲೂರ್ಟಿ ಪ್ರಾಂತದಲ್ಲಿ ಆಸ್ಟ್ರಿಯನ್ ಸೈನಿಕನೊಬ್ಬನೂ ಇಲ್ಲದಂತೆ ಮಾಡಿರುವರು. ೭೦೦೦ ಮಂದಿಗಳನ್ನು ಸೆರೆಹಿಡಿದರು. ಇದುವರೆಗೆ ರಷ್ಯನ್ನರು ಆಸ್ಟ್ರಿಯಾದಲ್ಲಿ ಗೆದ್ದಿರುವ ಗಲೀಸಿಯಾ ಭಾಗಕ್ಕೆಲ್ಲಾ ಬಬ್ಬ ಗೌರ್ನರ್‌ಜನರಲ್ಲನ್ನು ನೇಮಿಸಿ ಪ್ರತ್ಯೇಕ ರಾಷ್ಟ್ರವನ್ನಾಗಿ ಮಾಡಿರುವರು. ೭ದಿನಗಳ ವರೆಗೆ ಕಾದಾಡಿ ಲೆಂಬರ್ಗ್ ಪಟ್ಟಣವನ್ನು ವಶಮಾಡಿಕೊಂಡರು. ಮುಂದೆಮುಂದೆ ಆಸ್ಟ್ರಿಯಾಕ್ಕೆ ನುಗ್ಗಿ ಹೋಗುತ್ತಲೇ ಇದ್ದಾರೆ. ಲೆಂಬರ್ಗಿಗೆ ದಕ್ಷಿಣದಲ್ಲಿ ೨೦ ಮೈಲಿ ದೂರದಲ್ಲಿರುವ ಮಿಕೊಲಜಾಫ್ ಎಂಬ ಕೋಟೆಯನ್ನೂ ಹಿಡಿದುಕೊಂಡರು. ಅಲ್ಲಿ ೧ ವರ್ಷದವರೆಗೆ ಸಾಕಾಗುವಷ್ಟು ಆಹಾರಸಾಮಗ್ರಿಗಳು ದೊರೆದುವು. ಲೆಂಬರ್ಗಿಗೆ ಪಶ್ಚಿಮೋತ್ತರದ ಮೂಲೆಯಲ್ಲಿ ೩೨ ಮೈಲಿಗಳ ದೂರದಲ್ಲಿರುವ ರವರಾಸ್ಕಾ ಎಂಬ ರೈಲ್ವೆಜಂಕ್ಷನ್ನು ಕೂಡ ರಷ್ಯನರ ವಶವಾಯಿತು. ಆಸ್ಟ್ರಿಯನ್ನರ ಪಟಾಲಂ ಪಟಾಲಂಗಳೇ ಹೊಟ್ಟೆಗಿಲ್ಲದೆಯೂ ಧೈರ್ಯದಿಂದ ನಿಂತು ಕಾದಾಡಲಾರದೆಯೂ ರಷ್ಯನ್ನರಿಗೆ ಶರಣಾಗತರಾಗಿ ಬಂದಿಗಳಾಗುತ್ತಿದ್ದಾರೆ. ಆಸ್ಟ್ರಿಯಾದ ರಾಜಧಾನಿಯಾದ ವಿಯನ್ನಾದಲ್ಲಿ ಪ್ರಜೆಗಳನ್ನೆಲ್ಲಾ ಸೇನೆಗೆ ಬಲಾತ್ಕಾರದಿಂದ ಕಳುಹಿಸುತ್ತಿದ್ದಾರೆ. ಅವರು ಹೋಗುವುದಕ್ಕೆ ಮುಷ್ಕರಮಾಡುತ್ತಿದ್ದಾರೆ. ಅವರಲ್ಲಿ ಮುಖಂಡರನ್ನು ಸರ್ಕಾರದವರು ತುಪಾಕಿಯಿಂದ ಹೊಡೆಯಿಸಿ ಕೊಲ್ಲಿಸುತ್ತಿದ್ದಾರೆ. ಈ ಮಧ್ಯೆ ಆಸ್ಟ್ರಿಯಾ ಚಕ್ರವರ್ತಿಯು ಮೃತರಾದರೆಂದೂ, ಪ್ರಕಟವಾದರೆ ದೇಶದಲ್ಲಿ ಅಲ್ಲೋಲವಾಗುವುದೆಂದು ಆ ವಿಷಯವನ್ನು ಮುಚ್ಚಿಕೊಂಡಿರುವರೆಂದೂ ಲಂಡನ್ ಮೊದಲಾದ ಕಡೆಗಳಲ್ಲಿ ಸುದ್ದಿಹುಟ್ಟಿರುವುದೆಂದು ತಾ|| ೮ ರ ತಂತ್ರೀವಾರ್ತೆಯು ಹೇಳಿರುವುದು. ಆಸ್ಟ್ರಿಯಾದ ಸೈನ್ಯದಲ್ಲಿ ಭೇದಿಯರೋಗವು ಹೆಚ್ಚಿರುವುದು. ಜರ್ಮನಿಯವರು ಆಸ್ಟ್ರಿಯಾಕ್ಕೆ ಸಹಾಯಮಾಡಬೇಕೆಂದು ಸೇನೆಯನ್ನು ಕಳುಹಿಸಿದ್ದರು. ಅದನ್ನು ರಷ್ಯನರು ವಿಶ್ಚುಲ ನದಿಯಬಳಿಯಲ್ಲಿ ಪ್ರತಿಭಟಿಸಿ ಘೋರವಾಗಿ ಕಾದಾಡುತ್ತಿರುವರು. ರಷ್ಯಾಸೈನ್ಯವು ಕಾರ್ಪೇತಿಯೆಂಬ ಕಣಿವೆಗಳಲ್ಲಿ ನುಗ್ಗಿ ಆಸ್ಟ್ರಿಯಾದ ಮಧ್ಯಭಾಗಕ್ಕೆ ಸೇರುತ್ತಿರುವುವು. ಚಿಕ್ಕದಾದ ಮಾಂಟಿನೀಗ್ರೋ ದೇಶದ ಸೈನ್ಯವು ಆಸ್ಟ್ರಿಯಾಕ್ಕೆ ಸೇರಿದ್ದ ಹೆರ್ಜೆಗೋವಿನಾದ ೨ ಪಟ್ಟಣಗಳನ್ನು ವಶಪಡಿಸಿಕೊಂಡಿತು. ಜರ್ಮನಿಯ ಸಹಾಯಕಸೈನ್ಯವು ಬರುವುದೆಂದು ನಂಬಿ, ಅದು ಬರುವುದು ಸಾವಕಾಶವಾಗಿ ತಾನು ಮುಂದಾಗಿ ಯುದ್ಧಕ್ಕೆ ತಕ್ಕಷ್ಟು ಸಿದ್ಧತೆಯನ್ನು ಹೊಂದಿರಲಿಲ್ಲವಾದುದರಿಂದ ಆಸ್ಟ್ರಿಯಾವು ಅತ್ಯಧಿಕವಾದ ಪರಾಜಯನಷ್ಟಗಳನ್ನು ಹೊಂದುತ್ತಿರುವುದೆಂದು ಹೇಳಲ್ಪಡುತ್ತಿದೆ. ರಷ್ಯಾಕ್ಕೆ ಸೇರಿದ ಪೋಲಾಂಡ್ ದೇಶದಮೇಲೆ ಜರ್ಮನಿಯವರು ಒಂದು ಯುದ್ಧವಿಮಾನವನ್ನು ಕಳುಹಿಸಿದ್ದರು. ಅದು ಸೀರಾಡ್ಜ್ ಪಟ್ಟಣದ ಮೇಲೆ ಹಾರಾಡುತ್ತಿರುವಾಗ ರಷ್ಯಾದವರು ಗುಂಡುಹೊಡೆದು ಇಳಿಯಿಸಿ ಹಿಡಿದುಕೊಂಡರು. ಅದರಲ್ಲಿ ಕೆಲ ಮದ್ದುಗುಂಡುಗಳೂ, ಭೂಚಿತ್ರಗಳೂ ದೊರೆದಿರುವುವು. ೨ಲಮಂದಿ ಸೈನಿಕರೂ ಇಬ್ಬರು ಅಧಿಕಾರಿಗಳೂ ಸಹ ಸಿಕ್ಕಿದರು.

ಇಟಲಿಯ ಪ್ರಭುತ್ವವು ಕೂಡದೆಂದು ತಡೆದರೂ ಅವರ ಸೈನಿಕರು ತಾವಾಗಿ ಉತ್ಸಾಹಗೊಂಡು ಸರ್ವಿಯಾದ ಕಡೆಗೆ ಸೇರಿ ಯುದ್ಧ ಮಾಡಲು ಹೊರಟಿರುವರು. ಆಸ್ಟ್ರಿಯಾದಲ್ಲಿ ಅನೇಕ ಇಟಾಲಿಯನ್ನರು ಪ್ರಭುತ್ವದ ಮೇಲೆ ತಿರುಗಿಬಿದ್ದರೆಂಬ ಕಾರಣದಿಂದ ಅವರನ್ನು ವಿಚಾರಣೆಯಿಲ್ಲದೆ ಕೊಂದಕಾರಣ ಆಸ್ಟ್ರಿಯಾದವರ ಮೇಲೆ ಇಟಲಿಯವರಿಗೂ ಬಹಳ ಕೋಪವುಂಟಾಗಿದೆ.

ಫ್ರೆಂಚರಿಗೆ ಯಾವಾಗಲೋ ಅಧೀನವಾಗಿದ್ದ ಸಿರಿಯಾದೇಶದ ಮಾರೋನೈಟರೆಂಬ ಕಪ್ಪುಜನರು ತಮ್ಮ ಕೃತಜ್ಞತಾಪ್ರದರ್ಶನಕ್ಕಾಗಿ ಈ ಸಮಯದಲ್ಲಿ ಫ್ರಾನ್ಸಿನಕಡೆ ಸೇರಿ ಯುದ್ಧಮಾಡಲು ಬರುತ್ತೇವೆಂದು ತಿಳಿಯಿಸಿಕೊಂಡಿರುವರಂತೆ. ಇವರು ಆಫ್ರಿಕಾದ ಉತ್ತರಭಾಗದಲ್ಲಿರುವರು. ಶಾಂತಿಯ ಪ್ರಯತ್ನವು ನಡೆಯುತ್ತಿರುವುದೆಂಬ ಗಾಳಿಸುದ್ದಿಯು ಬೇರೆ ಹುಟ್ಟಿರುವುದು. ಒಂದುವೇಳೆ ಒಡಂಬಡಿಕೆಯ ಸಮಯಬಂದರೆ ಈಗ ಒಂದಾಗಿ ಕಾಯುತ್ತಿರುವ ಮಿತ್ರಮಂಡಲಿಯವರು ಒಟ್ಟಿಗೆ ಆಲೋಚಿಸದಲ್ಲದೆ ಯಾರೊಬ್ಬರೂ ಸ್ವತಂತ್ರವಾಗಿ ಒಡಂಬಡಿಕೆಗೆ ಎರಗಬಾರದೆಂದು ಅವರವರಲ್ಲಿ ಒಪ್ಪಂದವನ್ನು ಮಾಡಿಕೊಂಡರು.

ವಿಮಾನಗಳು.

ಇಂಗ್ಲೀಷರು ಯುದ್ಧಾಂಗಣಕ್ಕೆ ಕಳುಹಿಕೊಟ್ಟಿರುವ ೩೬ ವಿಮಾನಗಳು ಸುರಕ್ಷಿತವಾಗಿ ಸೇರಿರುವುವು. ಫ್ರಾನ್ಸಿನ ವೈಮಾನಿಕರು ಚಿಕ್ಕಚಿಕ್ಕ ಉಕ್ಕಿನ ಅಲಗಿನ ಬಾಣಗಳನ್ನು ವಿಮಾನಗಳಿಂದ ಶತ್ರುಗಳ ಮೇಲೆ ಗುರಿತಪ್ಪದೆ ಹೊಡೆಯುವ ಪದ್ಧತಿಯನ್ನು ಸಾಗಿಸುತ್ತಿದ್ದಾರೆ. ಈ ಯುದ್ಧವು ಜರ್ಮನಿಯ ವಿಮಾನಿಕರಿಗೂ ಫ್ರೆಂಚರ ವಿಮಾನಿಕರಿಗೂ ಹಲವುಕಡೆ ನಡೆಯುತ್ತಿರುವುದು. ಜರ್ಮನ್ನರ ಒಂದು ಆಕಾಶವಿಮಾನವು ಉತ್ತರಸಮುದ್ರದಲ್ಲಿ ಹಾರ್ವಿಚ್ಚಿಗೆ ೬೦ ಮೈಲಿಗಳ ದೂರದಲ್ಲಿ ಆಂಗ್ಲರ ಯುದ್ಧನಾವೆಗಳಿರುವ ಸ್ಥಲವನ್ನು ಕಂಡುಹಿಡಿಯಲು ಪ್ರಯತ್ನಿಸಿ, ಯಂತ್ರ ಕೆಟ್ಟು ಸಮುದ್ರದ ಮೇಲೆ ೨೦ ಗಂಟೆಗಳ ಹೊತ್ತಿನಿಂದ ತೇಲಾಡುತ್ತಿರಲು ಇಂಗ್ಲೀಷರ ಒಂದು ಸಣ್ಣಯುದ್ಧದ ಹಡಗು ಆ ವಿಮಾನದಲ್ಲಿದ್ದವನನ್ನು ಹೊರಕ್ಕೆ ಹೊರಡಿಸಿ ಸೆರೆಯಾಗಿ ಹಿಡಿದು, ವಿಮಾನವನ್ನು ನೀರಿನಲ್ಲಿ ಮುಳುಗಿಸಿಬಿಟ್ಟಿತು.

ಜರ್ಮನರ ೨ ಜಪ್ಪಲಿನ್ ವಿಮಾನಗಳು ಸಿಂಗ್ನೊ ಬಳಿಯಲ್ಲಿದ್ದ ಜರ್ಮನರ ತಂತ್ರಿಯಿಲ್ಲದೆ ವಾರ್ತೆ ಕಳುಹಿಸುವ ತಾಣದಮೇಲೂ, ಸೇನಾ ಶಿಬಿರದಮೇಲೂ ಸಿಡಿಮದ್ದನ್ನಿಟ್ಟು ಶತ್ರುಗಳಿಂದ ಗುಂಡಿನೇಟನ್ನು ತಿಂದೂ ತಪ್ಪಿಸಿಕೊಂಡು ಬಂದುವು. ಫಾರ್ ಪ್ಲೈರ್ ಎಂಬ ಇಂಗ್ಲೀಷರ ಲೈಟ್‌ಕ್ರೂಜರ್ ಯುದ್ಧದ ಹಡಗು, ಪೂರ್ವತೀರದಲ್ಲಿ ನೀರಿನೊಳಗೆ ಶತ್ರುಗಳಿಂದ ಜಿಡಲ್ಪಟ್ಟಿದ್ದ ಸಿಡಿಮದ್ದಿಗೆ ಬಡಿದು ಹಾಳಾಗಿ ಮುಳುಗಿಹೋಯಿತು. ಅದರಲ್ಲಿನ ನಾವಿಕರಲ್ಲಿ ೪ ಮಂದಿಗಳು ಸತ್ತರು. ೧೩ ಮಂದಿಗೆ ಗಾಯವಾಯಿತು. ೨೪೩ ಮಂದಿ ಗೊತ್ತಿಲ್ಲದೆ ಹೋಗಿದ್ದಾರೆ. ವಿಲ್ಸನ್‌ಕಂಪೆನಿಯವರ ಒಂದು ವ್ಯಾಪಾರದ ಹಡಗು ಸಿಡಿಮದ್ದಿಗೆ ಬಡಿದು ಮುಳುಗಿಹೋಯಿತು. ಆಂಗ್ಲ ಸರ್ಕಾರದವರು ಬರುವ ಜನವರಿಯ ಹೊತ್ತಿಗೆ ಸಿದ್ಧವಾಗುವಂಥ ಒಂದು ನೂತನ ನೌಕಾಸೇನೆಯನ್ನು ಈಗಿನಿಂದಲೂ ಸಿದ್ಧಪಡಿಸುತ್ತಿದ್ದಾರೆ.

ಈಗಿನ ಯುದ್ಧಪ್ರಸಕ್ತಿಯಲ್ಲಿ ಭಾರತೀಯರಾದ ಬಹುಶಃ ೭೦೦ ಮಂದಿ ಸಂಸ್ಥಾನಾಧೀಶರುಗಳು ಬೇರೆಬೇರೆ ಸಂಘಗಳವರು ಮೊದಲಾಗಿ ಸಾಮ್ರಾಜ್ಯಪ್ರಭುತ್ವಕ್ಕೆ ನಾನಾವಿಧದ ಸಹಾಯಗಳನ್ನು ಮಾಡಲೂ ಮಾಡಿಯೂ ಇರುವ ಸಂಗತಿಗಳನ್ನೆಲ್ಲಾ ಕುರಿತು ವೈಸ್ರಾಯರು ಕಳುಹಿಕೊಟ್ಟಿದ್ದ ವಿವರಣದ ಪಟ್ಟಿಯು ಕಳೆದ ತಾ|| ೯ ರಲ್ಲಿ ಪಾರ್ಲಿಮೆಂಟ್ ಸಭೆಯೊಳಗೆ ಓದಲ್ಪಟ್ಟಿತು. ಅದರಲ್ಲಿ ನಮ್ಮ ಶ್ರೀಮನ್ಮಹಾರಾಜರು ಕೊಟ್ಟ ೫೦ ಲಕ್ಷ ರೂ. ನ ಸಂಗತಿಯೂ ಕಾಣಿಸಲ್ಪಟ್ಟಿದ್ದಿತು. ಸಭಿಕರು ಭಾರತೀಯರ ಈ ದೃಢವಾದ ವಿಶೇಷ ರಾಜಭಕ್ತಿ ಪ್ರೋತ್ಸಾಹಗಳನ್ನು ಕೇಳುತ್ತ ಕೇಳುತ್ತ ಪದೇಪದೇ ಕರತಾಡನಗಳನ್ನು ಮಾಡಿ ತಮ್ಮ ಅಭಿನಂದನಗಳನ್ನು ವ್ಯಕ್ತಪಡಿಸಿದರು. ತಾ|| ೧೦ ನೇ ದಿನದ ಲಾರ್ಡ್ ಸಭೆಯಲ್ಲಿ ಲಾರ್ಡ್ ಕ್ರೂರನರೇ ಮೊದಲಾದವರು ಭಾರತೀಯರು ತೋರಿಸಿರುವ ರಾಜಭಕ್ತಿಯು ಇತರ ಸ್ವಾಸ್ಥ್ಯಗಳವರ ರಾಜಭಕ್ತಿಗೆಲ್ಲಕ್ಕಿಂತಲೂ ಮಿಗಿಲಾದುದೆಂದು ಮೊದಲಾಗಿ ಅಭಿನಂದಿಸಿರುವರು.

ಜರ್ಮನ್ ಚಕ್ರವರ್ತಿಯವರು ಇದುವರೆಗೆ ಫ್ರಾನ್ಸಿಗೆ ಸೇರಿದ ನಾನ್ಸಿ ಪಟ್ಟಣದಲ್ಲಿದ್ದು ಈಗ ಜರ್ಮನಿ ಎಲ್ಲೆಯಲ್ಲಿರುವ ಮೆಟ್ಜ್ ಪಟ್ಟಣಕ್ಕೆ ಹೋದರು. ಈಗ ಫ್ರಾನ್ಸಿನಿಂದ ಹಿಂದೆಗೆದು ಹೋಗಿರುವ ೬೦ ಸಾವಿರ ಜರ್ಮನ್ ಸೈನ್ಯಕ್ಕೆ ಪ್ರತಿಯಾದ ಮತ್ತೆ ೬೦ ಸಾವಿರ ಸೈನ್ಯವು ಹೊಸದಾಗಿ ಫ್ರಾನ್ಸಿಗೆ ಬಲಭಾಗದ ಸೈನ್ಯಕ್ಕೆ ಸಹಾಯಕವಾಗಿ ಬೆಲ್ಜಿಯಂ ದೇಶದಮೇಲಿಂದ ಬೇಗಬೇಗನೆ ಬರುತ್ತಿದ್ದಾರೆಂದು ವರ್ತಮಾನವಿದೆ. ಯುದ್ಧಕ್ಕಾಗಿ ಜರ್ಮನಿಯವರು ೭೫ ಕೋಟಿ ರೂ. ಗಳ ಸಾಲವನ್ನು ಮಾಡಲು ಯತ್ನಿಸಿದ್ದಾರೆ. ಜರ್ಮನ್ ಚಕ್ರವರ್ತಿಯವರು ತುರ್ಕಿ ಸುಲ್ತಾನರನ್ನು ಕುರಿತು "ವಿಜ್ಞಾನ ಪ್ರಪಂಚದಲ್ಲಿ ಜರ್ಮನಿಗಿರುವ ಗೌರವಸ್ಥಾನಕ್ಕೆ ಭಂಗವುಂಟಾಗದಿರುವಂತೆ ಮಾಡಲು ನೀವು ನಮ್ಮ ಪಕ್ಷಕ್ಕೆ ಸೇರಿ ಯುದ್ಧವನ್ನು ಮಾಡಬೇಕಾಗಿದೆ.'' ಎಂದು ಬೇಡಿಕೊಳ್ಳಲು, ಸುಲ್ತಾನರು-ನೀವು ಉಂಟುಮಾಡುವ ಭ್ರಾಂತಿಗೆ ನಾನು ಈಡಾಗುವವನಲ್ಲ; ನೀವು ಮಾಡುತ್ತಿರುವ ಘೋರ ಕೃತ್ಯಗಳನ್ನು ನಾಗರಿಕ ಪ್ರಪಂಚವೆಲ್ಲವೂ ದೂಷಿಸುತ್ತಿದೆ. ಅದು ದೂಷಿಸಲ್ಪಡತಕ್ಕದ್ದೇ ಸರಿ ಎಂದು ನನ್ನಭಿಪ್ರಾಯವು. ಘೋರತನವನ್ನಾಚರಿಸಿ ಪ್ರಪಂಚದನಿಂದೆಗೆ ಪಾತ್ರರಾಗಿರುವ ನಿಮ್ಮೊಡನೆ ಸಂಗವನ್ನುಂಟುಮಾಡಿಕೊಳ್ಳುವುದು ನನ್ನ ಉದ್ದೇಶವಲ್ಲ.'' ಎಂದು ಉತ್ತರವನ್ನು ಕೊಟ್ಟಿರುವರೆಂಬ ಸುದ್ದಿಯು ಅಮೇರಿಕಾಕ್ಕೆ ಬಂದಿರುವುದೆಂದು ಅಲ್ಲಿನ ಪತ್ರವ್ಯವಹಾರಕನೊಬ್ಬನು ಲಂಡನ್ನಿನ ಡೇಲಿ ಟೆಲಿಗ್ರಾಫ್ ಪತ್ರಿಕೆಗೆ ಬರೆದಿದ್ದಾನೆ.

ಶ್ರೀಮನ್ಮಹಾರಾಜರವರ ಸ್ವಾರಿಯು ಉದಕಮಂಡಲಕ್ಕೆ ಚಿತ್ತೈಸಿದ್ದು ಗುರುವಾರ ರಾಜಧಾನಿಗೆ ಹಿಂದಿರುಗಿ ದಯಮಾಡಿಸುವುದಾಗಿ ತಿಳಿಯುತ್ತೇವೆ.

ರಾಜಧಾನಿಯಲ್ಲಿ ಪ್ಲೇಗುರೋಗವು ಈವೇಳೆ ಏಕಕಾಲದಲ್ಲಿ ಎಲ್ಲಕಡೆಯೂ ವ್ಯಾಪಿಸಿ, ನಿತ್ಯದಲ್ಲೂ ೩-೪ ಜನರನ್ನು ಆಹುತಿಗೊಳ್ಳುತ್ತಿದೆ. ಡಾ|| ಜಗನ್ನಾಥರವರು ಬೆಳಗಿನ ವೇಳೆಯಲ್ಲಿ ಊರಿನಲ್ಲೆಲ್ಲಾ ಸಂಚರಿಸಿ ಜನರಿಗೆ ಇನಾಕ್ಯುಲೇಷನನ್ನು ಮಾಡುತ್ತಿರುವರು. ಕಳೆದ ತಾ|| ೧೦ ರ ಸಾಯಂಕಾಲ ಇಲ್ಲಿ ಅರ್ಧ ಅಂಗುಲದಮೇಲೆಯೇ ಮಳೆಯಾಯಿತು. ಇದರಂತೆ ಎಲ್ಲ ಕಡೆಯೂ ಆಗಿದ್ದರೆ ನಿಂತಿರುವ ರಾಗಿ ಮೊದಲಾದ ಪೈರುಗಳಿಗೆ ಮಹೋಪಕಾರವಾಗಿ ದಿನಸಿಯ ಧಾರಣೆಯು ಇಳಿಯಲವಕಾಶಗುವುದು.

ರಾಜಗುರುಗಳಾದ ಶ್ರೀ ಪರಕಾಲಸ್ವಾಮಿಗಳು ಶೋಥೆಯ ರೋಗಗ್ರಸ್ತರಾಗಿ ವೀರಸಗೆರೆ ಆಸ್ಪತ್ರೆಯ ಡಾಕ್ಟರರಾದ ಕೃಷ್ಣಯ್ಯಂಗಾರರ ಚಿಕಿತ್ಸೆಯಲ್ಲಿರುವರು. ಮಹಾರಾಜರವರೂ ಮಹಾಮಾತೃಶ್ರೀಯವರೂ ಶ್ರೀಗಳ ದರ್ಶನವನ್ನು ತೆಗೆದುಕೊಂಡು ಬಂದರು. ಇವರಿಗೆ ಈಗ ೭೨ ವರ್ಷ ವಯಸ್ಸಾಗಿದೆ.

ಈ ವರ್ಷ ದಶರಾಮಹೋತ್ಸವವು ಬರುವ ಭಾನುವಾರದ ದಿವಸವಾರಂಭಗೊಂಡು ತಾ|| ೨೯ ನೆಯ ಮಂಗಳವಾರ ಮುಕ್ತಾಯವಾಗುವುದು.

ಪತ್ರವ್ಯವಹಾರ

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು
ಮುರುಘರಾಜೇಂದ್ರ ಮಹಾಸ್ವಾಮಿ
ಶ್ರೀಮಚ್ಚಿನ್ಮೂಲಾದ್ರಿ ಬೃಹನ್ಮಠ
ಮಹಾ|| ಸಂಸ್ಥಾನ ಕಛೇರಿಯಿಂದ
ತಾ|| ೮-೯-೧೯೧೪ ರಲ್ಲಿ ಮೈಸೂರು ಸ್ಟಾರ್‌ಪತ್ರಿಕೆ
ಯಲ್ಲಿ ಪ್ರಕಟಿಸು ... (last line illegible)

ಶೀಘ್ರವಾಗಿ ಅಭಿಪ್ರಾಯಗಳು ಬರಲೆಂದು ನಿರ್ದೇಶಿಸಿ ಪ್ರಕಟಿಸಲ್ಪಟ್ಟಿತ್ತಷ್ಟೆ. ಆ ವಿಷಯದಮೇಲೆ ನಾನಾ ವಿಧವಾದ ಅಭಿಪ್ರಾಯಗಳು ಅರಿಕೆಯಾಗಲ್ಪಟ್ಟವು. ಈ ವಿಷಯದಲ್ಲಿ ಪ್ರಕೃತ ಜಾಹಿರ್‌ಪಡಿಸುವುದೇನೆಂದರೆ, "ಸ್ವಧರ್ಮೇ ನಿಧನಂಶ್ರೇಯಃ ಪರಧರ್ಮೋಭಯಾವಹಃ" ಎಂಬ ಶಾಸ್ತ್ರೋಕ್ತಿಯನ್ನು ಸರ್ವರಿಗೂ ಪುನಃಪುನಃ ಸ್ಮರಣೆಗೆ ತರುವುದಕ್ಕೋಸ್ಕರ ಸ್ವಧರ್ಮವನ್ನು ತ್ಯಜಿಸಿ ಆರ್ಯಸಮಾಜಕ್ಕೆ ಸೇರಿ ಅಲ್ಲಿಯೂ ತನಗೆ ಸುಖದೋರದೆ ಪಶ್ಚಾತ್ತಾಪಗೊಳ್ಳುವ ವಿಷಯವು ಎಲ್ಲರ ಗಮನಕ್ಕೆ ಬರಲೆಂಬುದೇ ಮಹಾ ಸಂಸ್ಥಾನದ ಉದ್ದೇಶವಾಗಿದೆ.

ಮೊಕ್ಕಾಂ ಕೊಲ್ಲಾಪೂರ್
ಚೆನ್ನಬಸವಯ್ಯ ಹೇಮಗಿರಿಮಠ
ಕಾರಭಾರಿ ಸಂಸ್ಥಾನ; ಚಿತ್ರದುರ್ಗ.

ಇಂಡಿ.

ತಮ್ಮ ಸುಂದರತರವಾದ ಪತ್ರದಲ್ಲಿ ರಾಜನಿಷ್ಠರಾದ ವಿಜಾಪುರಜಿಲ್ಲಾ ಇಂಡಿತಾಲೂಕಿನ ಜನರು ಈ ತಾಲ್ಲೂಕಿನ ಅಧಿಕಾರಿಗಳಾದ ಮೆ|| ಮಾಮಲೇದಾರ ಸಾಹೇಬರವರ ಆಮಂತ್ರಣದ ಮೇಲೆ ತಾರೀಖು ೨೯-೮-೧೪ ನೇ ದಿವಸ ತಾಲೂಕ ಕಚೇರಿಯ ಮುಂದಿನ ಭವ್ಯಪಟಾಂಗಣದಲ್ಲಿ ನೆರೆದು "ಇಂಪೀರಿಯಲ್ ಇಂಡಿಯನ್ ರಿಲೀಫ್‌ಫಂಡಿಗೆ" ತನುಮನ ಧನಗಳೊಂದಿಗೆ ಸಹಾಯ ಮಾಡುವ ಉತ್ಸುಕತೆಯಿಂದ ಕೂಡಿ ತಮ್ಮ ಸ್ವಸಂತೋಷದಿಂದ ಧನಸಹಾಯಮಾಡುವದಕ್ಕಾಗಿಯೂ; ರಾಜನಿಷ್ಠೆಯನ್ನು ತೋರಿಸುವದಕ್ಕಾಗಿಯೂ ತಾಲೂಕ ಕಮೀಟಿಯನ್ನು ಸ್ಥಾಪಿಸುವದಕ್ಕಾಗಿಯೂ ಸಭೆಯಲ್ಲಿ ಮಾಡಿದ ಕಾರ್ಯಕ್ರಮದ ವಿವರದ ಸಂಗತಿಯನ್ನು ಮುದ್ರಿಸಬೇಕೆಂದು ಕೋರುತ್ತೇನೆ.

ವಿವರಣೆ.

ಇಂಡಿತಾಲೂಕು ವಿಜಾಪುರ ಡಿಸ್ಟ್ರಿಕ್ಟಿನಲ್ಲಿ ತೀರ ಉತ್ತರಕ್ಕೆ ಇದ್ದು ಈ ತಾ|| ಭೂಮಿಯು ಉತ್ಕೃಷ್ಟವಾಗಿರದೆ ಮೊರಡಿ, ಗರಸ ನೆಲವಿದ್ದು, ವೇಳೆ ವೇಳೆಗೆ ಮಳೆಯಾದರೆ ಮಾತ್ರ ತಕ್ಕಮಟ್ಟಿಗೆ ಬೆಳೆ ಆಗುವುದು. ಜನರ ಸಾಂಪತ್ತಿಕ ಸ್ಥಿತಿಯಾದರೂ ಉಳಿದ ಕಡೆಗಿಂತ ಕನಿಷ್ಠವಾಗಿದೆ. ಈಗ ಮೂರುವರ್ಷಗಳಾರಭ್ಯ ಅನಾವೃಷ್ಟಿಯ ಮೂಲಕ ದುಷ್ಕಾಳಬಿದ್ದು ಜನರ ಸ್ಥಿತಿಯು ಬಡತನದ್ದಾಗಿದ್ದರೂ, ಈ ನಮ್ಮ ದಯಾಳು ಆಂಗ್ಲ ಸಾರ್ವಭೌಮರು ಯುರೋಪಖಂಡದ ಮಹಾಯುದ್ಧದಲ್ಲಿ ತೊಡಗಿದರಿಂದ ಈ ಸಾರ್ವಭೌಮರ ಆಳಿಕೆಯಿಂದ ತಮಗುಂಟಾದ ಕಲ್ಯಾಣವನ್ನು ಲಕ್ಷ್ಯಕ್ಕೆ ತಂದು ತಮ್ಮ ವಿಚಾರಗಳನ್ನು ಬದಿಗೊತ್ತಿ ರಾಜನಿಷ್ಠೆಯನ್ನು ತೋರಿಸುವ ಉತ್ಸುಕತೆಯಿಂದ ಅಧ್ಯಕ್ಷರಾದ ಮೆ|| ಒಡೆಯರ ಮಾಮಲೇದಾರ್ ಸಾಹೇಬರ ಅಪ್ಪಣೆಯಾದಕೂಡಲೆ ಪಟಾಂಗಣದಲ್ಲಿ ೨೦೦೦ ದವರೆಗೆ ಜನರು ಕೂಡಿದರು. ಇದರಲ್ಲಿ ಇಂಡೀ ತಾಲೂಕದಲ್ಲಿರುವ ಎಲ್ಲಗ್ರಾಮಗಳ ಪತಿಯಿಂದ ಆಯಾಗ್ರಾಮದ ಪ್ರಮುಖ ಜನರೆಂದರೆ, ಜಾಹಗೀರದಾರ, ದೇಸಾಯಿ, ದೇಶಪಾಂಡೆ, ನಾಡಗೌಡ, ಗೌಡ, ಕುಲಕರ್ಣಿ, ಶೇಟಸಾಹುಕಾರ, ಮತ್ತು ಒಕ್ಕಲತನ ಮಾಡುವ ರೈತ ವ್ಯಾಪಾರಿಗಳು ಕೂಡಿದ್ದಲ್ಲದೆ ತಾಲ್ಲೂಕಿನಲ್ಲಿರುವ ಎಲ್ಲ ಡಿಪಾರ್ಟಮೆಂಟಿನ ಸಣ್ಣ ದೊಡ್ಡ ಅಧಿಕಾರಿಗಳು ಕೂಡಿದ್ದರಿಂದ ಈ ತಾಲೂಕ ಕಮಿಟಿಗೆ ಇಂಗ್ಲಿಷ ಸರಕಾರದ ದೆಸೆಯಿಂದ ಬೇಕಾದ ಸಹಾಯಮಾಡುವ ಹುರುಪು ಬಂದಿತ್ತೆನ್ನುವಿಕ್ಕೆ ತಿಲಮಾತ್ರ ಸಂದೇಹವಿಲ್ಲ.

ಇದರಲ್ಲಿ ಮೊದಲಿಗೆ ಕನ್ನಡಶಾಲೆಯ ವಿದ್ಯಾರ್ಥಿಗಳು ನಮ್ಮ ಸಾರ್ವಭೌಮರಿಗೆ ಜಯವಾಗಲೆಂಬ ಬಗ್ಗೆ ಪ್ರಾರ್ಥನಾರೂಪದ ದೇವರ ಸ್ತುತಿಯ ಪದ್ಯವನ್ನು ಸುಸ್ವರದಿಂದ ಅಂದಬಳಿಕ ಪಬ್ಲಿಕ್‌ವರ್ಕ್ಸ್ ಡಿ|| ಮೆಂಟ ಅಧಿಕಾರಿಗಳಾದ ಮೆ|| ತಲಾಠಿಸಾಹೇಬರು ಪಾರಫಂಡಿಗೆ ನಾವೆಲ್ಲರೂ ನಮ್ಮ ಶಕ್ತ್ಯನುಸಾರವಾಗಿ, ಸಹಾಯಮಾಡಿ ರಾಜನಿಷ್ಠೆಯನ್ನು ತೋರಿಸುವದಕ್ಕೂ ವರ್ಗಣಿಯನ್ನು ಕೂಡಿಸುವದಕ್ಕೂ ತಾಲೂಕ ಕಮಿಟಿಯನ್ನು ಸ್ಥಾಪಿಸುವ ಬಗ್ಗೆ ಆವೇಶಯುಕ್ತ ಭಾಷಣವನ್ನು ಇಂಗ್ಲಿಷದಲ್ಲಿ ಮಾಡಿದ ಬಳಿಕ ಮೆ|| ಒಡೆಯರ ಮಾಮಲೇದಾರ ಸಾಹೇಬರವರನ್ನು ಈ ಕಮಿಟಿಯ ಅಧ್ಯಕ್ಷರನ್ನಾಗಿ ಆರಿಸಿದರು. ಇದಕ್ಕೆ ಮೆ|| ಲೋಕೊರ ಪೋಲೀಸ ಇ|| ಸಾಹೇಬರವರು ಸರ್ವಾನುಮತಿಯಿಂದ ತಮ್ಮ ಅನುಮೋದನವನ್ನು ಕೊಟ್ಟಬಳಿಕ ಎಲ್ಲರ ಒಪ್ಪಿಗೆಯೊಂದಿಗೆ ಟಾಳಿಗಳ ಗಡಣದಿಂದ ಮೆ|| ಒಡೆಯರ (ತಾಲೂಕ ಮಾಮಲೇದಾರ) ಸಾಹೇಬರವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ ನಂತರ ರಾ|| ಅಣ್ಣಾರಾವ ಹುನಗುಂದ ಇವರನ್ನು ಉಪಾಧ್ಯಕ್ಷರನ್ನಾಗಿಯೂ, ರಾ|| ಚೆನ್ನಮುಳಗುಂದ ಇವರನ್ನು ಟ್ರಿಝರರನ್ನಾಗಿಯೂ ಆರಿಸಿದ ಬಳಿಕ ಉಳಿದ ಪ್ರಮುಖ ಜನರನ್ನು ಮೆಂಬರರನ್ನಾಗಿ ಆರಿಸಿದರು. ಅದರಂತೆ ಪ್ರತಿಯೊಂದು ಗ್ರಾಮದ ಕಮಿಟಿದಾರರನ್ನು ಆರಿಸೋಣವಾಯಿತು ಅವರ ಕರ್ತವ್ಯಗಳು ಸೂಚಿಸಲ್ಪಟ್ಟವು.

(೧) ನಂತರ ಇಂಡಿ ತಾ|| ಶಾಲೆಯ ಹೆಡ್ಮಾಸ್ತರರು ಯುರೋಪದಲ್ಲಿ ಒದಗಿದ ಮಹಾಯುದ್ಧ ಸಂದರ್ಭವನ್ನು ತಿಳಿಸಿ ನಮ್ಮ ಸಾರ್ವಭೌಮರು ಐಕ್ಯತೆ, ಸ್ವತಂತ್ರತೆ, ನ್ಯಾಯ, ಮುಂತಾದವುಗಳನ್ನು ಕಾಯ್ದುಕೊಳ್ಳುವದಕ್ಕಾಗಿ ತಮ್ಮ ಪ್ರತಿಕಕ್ಷಿಗಳಾದ ಜರ್ಮನ್ನರಕೂಡ ಕಾಳಗ ಕೈಕೊಂಡಿರುವುದು ನ್ಯಾಯವಾಗಿದೆ. ಬ್ರಿಟಿಷರ ಏಕಚಕ್ರಾಧಿಪತ್ಯದ ಪ್ರಜೆಗಳಾದ ನಾವೆಲ್ಲರೂ ನಮ್ಮ ಸಾರ್ವಭೌಮರಿಗೆ ಸಹಾಯಮಾಡಿದರೆ ನಮ್ಮ ಸ್ವಂತ ಕಲ್ಯಾಣವಲ್ಲದೆ ಇಡೀ ಹಿಂದೂದೇಶದ ಕಲ್ಯಾಣವಾಗುವದರಿಂದ ನಮ್ಮ ಪ್ರಪಂಚದ ಕೆಲಸವನ್ನು ಬದಿಗೊತ್ತಿ ನಮ್ಮ ಸರ್ಕಾರಕ್ಕೆ ಸಹಾಯಮಾಡಿದರೆ, ಪುಣ್ಯದ ಕೆಲಸಮಾಡಿದಂತೆ ಆಗುತ್ತದೆಂಬ ಬಗ್ಗೆ ಜನರ ಮನಸ್ಸಿನಲ್ಲಿ ಬಿಂಬಿಸುವಂತೆ ಆವೇಶಪೂರ್ಣ ಮತ್ತೂ ಎಲ್ಲ ರೀತಿಯಿಂದ ಪರಿಪೂರ್ಣತವಾದ ನಿಬಂಧವನ್ನು ಓದಿ ತೋರಿಸಿದ ಬಳಿಕ ಉರ್ದು ಶಾಲೆಯ ಮಾಸ್ತರರಾದರೂ ಇದರಂತೆ ಉರ್ದುಭಾಷೆಯ ನಿಬಂಧವನ್ನು ಓದಿದರು. ಮೆ|| ಶಾ|| ಸೀತಾರಾಮಶಾಸ್ತ್ರಿ ಅಗರಖೇಡ ಇವರು ಮರಾಠಿಭಾಷೆಯಿಂದ ನಮ್ಮ ಸಾರ್ವಭೌಮರಿಗೆ ಈಗಿನ ಪ್ರಸಂಗದಲ್ಲಿ ಸಹಾಯಮಾಡುವುದು ಯೋಗ್ಯವಾದುದೆಂಬ ಬಗೆಗೆ ಶಾಸ್ತ್ರಯುಕ್ತವಾದ ಭಾಷಣಮಾಡಿ ಜನರ ಮನದಲ್ಲಿ ಹುರಿದುಂಬಿಸಿದ ಬಳಿಕ ತಾಲ್ಲೂಕ ಕಮಿಟಿಯ ಅಧ್ಯಕ್ಷರಾಗಿ ಮೆ|| ಮಾಮಲೇದಾರ (ಒಡೆಯರ) ಇವರು ಈ ಕಮಿಟಿಯ ಉದ್ದೇಶ ಮತ್ತೂ ನಾವು ಸರ್ಕಾರಕ್ಕೆ ಮಾಡತಕ್ಕ ಸಹಾಯದಿಂದಾಗುವ ಲಾಭ ಹಾಗೂ ನಮ್ಮ ಆಂಗ್ಲ ಪ್ರಭುತ್ವದವರಿಂದ ಹಿಂದೂ ಜನರಿಗುಂಟಾದ ಕಲ್ಯಾಣದ ವಿಷಯಕ್ಕೆ ಅಸ್ಖಲಿತವಾದ ಭಾಷಣವನ್ನು ಸುಮಾರು ಒಂದು ತಾಸು ಮಾಡಿದ ಬಳಿಕ ಕೂಡಿದ ಜನಸಮೂಹಕ್ಕೆ ಅವರ ಭಾಷಣದಿಂದ ಒಂದು ತರದ ಉತ್ತೇಜನಹುಟ್ಟಿ ತಾಲ್ಲೂಕಿನ ಯಾವತ್ತು ಪ್ರಮುಖ ಜನರು ತಮ್ಮ ಸ್ವಸಂತೋಷದಿಂದ ಊರ ಫಂಡಿಗೆ ಧನಸಹಾಯಮಾಡುವ ಆತುರತೆಯಿಂದ ಅಧ್ಯಕ್ಷರ ಸ್ಥಳಕ್ಕೆ ಬಂದು ತಾವೇ ಯಾದಿಯಲ್ಲಿ ಹಣದ ಅಂಕಿ ಹಾಕಿ, ತಮ್ಮ ಹೆಸರನ್ನು ನಮೂದಿಸಿ ಸಹಿ ಮಾಡಿ ತಮ್ಮತಮ್ಮ ಊರಲ್ಲಿರುವ ಉಳಿದ ಜನರಿಗಾದರೂ ಸಹಾಯಮಾಡುವ ಬಗೆಗೆ ಯತ್ನಮಾಡುತ್ತೇವೆಂದು ವಿನಂತಿ ಮಾಡಿಕೊಂಡರು. ಇದರಮೇಲಿಂದ ನಮ್ಮ ಆಂಗ್ಲಸಾರ್ವಭೌಮರ ಆಳಿಕೆಯ ವಿಷಯಕ್ಕೆ ಯಾವ ತರದ ಪ್ರೀತಿ ಮತ್ತೂ ದೃಢವಾದ ರಾಜನಿಷ್ಠೆ ಇರುತ್ತದೆಂಬುದು ಸಹಜ ವ್ಯಕ್ತವಾಗುತ್ತದೆ.

(೩) ಮೇಲೆ ವಿವರಿಸಿದಂತೆ ಯಾವತ್ತು ಪ್ರಜೆಗಳು ತಂತಮ್ಮ ಶಕ್ತಿವಿಚಾರಿ ಸ್ವಸಂತೋಷದಿಂದ ಧನಸಹಾಯ ಮಾಡುವ ಅಭಿವಚನಕೊಟ್ಟು ಯಾದಿಯಲ್ಲಿ ಹಣದ ಅಂಕಿಯನ್ನು ವ್ಯಕ್ತಪಡಿಸಿದ ಬಳಿಕ ದೊಡ್ಡದೊಡ್ಡ ಸರಕಾರಿ ಅಧಿಕಾರಸ್ಥರೆಂದರೆ— (೧) ಮೆಜಿಸ್ಟ್ರೇಟ ಮಾಮಲೇದಾರ ಸಾ|| ಒಡೆಯರ, (೨) ಮೆ|| ಪೋಲೀಸ ಇ|| ಲೋಕೊರ (೩) ಮೆ|| ಪ|| ಡಿ|| ಅಧಿಕಾರಿಗಳಾದ ತಲಾಠಿ ಸಾ||, ತಾವು ತಮ್ಮ ೧ ತಿಂಗಳ ಪೂರ್ಣ ಸಂಬಳ ಕೊಡುವ ಬಗೆಗೆ ಅಭಿವಚನಕೊಟ್ಟು ಲಿಸ್ಟಿನಲ್ಲಿ ಹಣದ ಅಂಕಿಯನ್ನು ಹಾಕಿದರು. ಉಳಿದ ಎಲ್ಲ ಡಿಪಾರ್ಟಮೆಂಟಿನ ಸಣ್ಣ ಕಾಮದಾರರು ಸ್ವಸಂತೋಷದಿಂದ ಅರ್ಧಸಂಬಳ ಕೊಡಲೊಡಂಬಟ್ಟು ಅವರೂ ಲಿಸ್ಟಿಗೆ ಸಹಿಮಾಡಿದರು. ಇದೆಲ್ಲ ಕೂಡಿದರೆ ಸುಮಾರು ೩-೪ ಸಾವಿರ ರೂ. ವರೆಗೆ ಅಂದಿನ ಹಣವು ಕೂಡಿದಂತಾಯಿತು. ಪೆನಶನದಾರರೂ ಕಡಿಮೆ ನೌಕರರೂ ಸಹ ತಮ್ಮ ಪಗಾರದಲ್ಲಿ ೪ ನೆಯ ಒಂದು ಭಾಗವನ್ನು ಕೊಡಲೊಪ್ಪಿದರು. ಈ ಪ್ರಕಾರ ಯುದ್ಧದ ಫಂಡಿಗೆ ಸಹಾಯ ಮಾಡುವ ಸಭೆಯ ಕಾರ್ಯವು ಒಳ್ಳೇ ವಿಜೃಂಭಣೆಯಿಂದ ಹಗಲು ೪ ಘಂಟೆಯಿಂದ ರಾತ್ರಿ ೧೦ ಘಂಟೆವರೆಗೆ ಸಾಗಿ ಕಡೆಗೆ ಶಾಲೆಯ ಹುಡುಗರಿಂದ ರಾಷ್ಟ್ರಗೀತವಾದ ಬಳಿಕ ಸಾರ್ವಭೌಮರ ತ್ರಿವಾರ ಜಯಘೋಷವಾಗಿ ಸಭೆಯ ಕಾರ್ಯವು ಮುಗಿಯಿತು. ಇದರಂತೆ ಇಂಡೀ ತಾಲೂಕಿನ ಸ್ತ್ರೀಯರ ಸಮೂಹವು ಸಭೆಗೂಡಿ ಸಹಾನುಭೂತಿಯನ್ನು ತೋರಿಸುವರೆಂದು ಆಶೆಯುದೆ.

ಸಂಪೂರ್ಣ ೧ ತಿಂಗಳ ಪಗಾರ ವರ್ಗಣಿಕೊಟ್ಟ ಸರ್ಕಾರಿ ಕಾಮದಾರರ ವಿವರಾ :— (೧) ಇಂಡಿ ತಾ|| ಮಾಮಲೆದಾರ್ ಮಿ|| ಎಸ್ ಕೆ. ಒಡೆಯರ್‌ರವರು ೧೫೦ ರೂ, (೨) ಇಂಡಿ ಪಿ|| ಡಬ್ಲ್ಯು|| ಡಿ|| ಸೂಪರ್‌ವೈಜರ್ ಮಿ|| ಎಸ್ ಡಿ ತಾಳಿಕೋಟಿಯವರು ೭೦ ರೂ, (೩) ಪೊಲೀಸ್ ಇನ್ಸ್‌ಪೆಕ್ಟರ್ ಮಿ|| ಚನ್ನಪ್ಪ ಫಕೀರಪ್ಪ ಇವರು ೧೫೦ ರೂ,

ಪೆನಶನರ— ಮೆ|| ಅಂಬಾಲಾಲ ಚಂದಸಾ ಜಹಗೀರ್ದಾರ ತಿಳಿಹಳ್ಳಿ ೫೦ ರೂ.

ವರ್ಗಣಿ ಕೊಟ್ಟ ಖಾಸಗಿ ಜನರ ಹೆಸರು— ಮಾ|| ಗಳಾದ (೧) ಗಣಪತ ಕೊಳೇಕರ ೧೦೧ ರೂ, (೨) ಗುರುರಾವ ನಾಡಗೌಡ ನಿಂಬಾಳ ೧೫೦ ರೂ, (೩) ರಾಮಚಂದ್ರ ಆನಂದ ನಾಡಗೌಡ ನಿಂಬಾಳ ೭೫೧ ರೂ, (೪) ಶ್ರೀನಿವಾಸರಾವ ದೇಶಪಾಂಡೆ ಇಂಡಿ ೧೦೦ ರೂ, (೫) ಮಲಕನಗೌಡಾ ಪಾಟೀಲ ಅಥರ್ಗಾ ೫೦ ರೂ, (೬) ಶಿವಪ್ಪ ಪಾಟೀಲ ಸಾಲೋಟಗಿ ೭೫ ರೂ, (೭) ರಾವಜಿ ಪಾನಾಚಂದ ಇಂಡಿ ೧೦೦ ರೂ, (೮) ಗುರುರಾವ ಪಟ್ಟನೊಬ್ಬತ್ತ್ಯರ ಕೊಟ್ನಗಾಳ ೧೭೫ ರೂ, (೯) ಕಸ್ತೂರಚಂದ ದೋಶಿ ಇಂಡಿ ೨೦೦ ರೂ, (೧೦) ನರಸೋ ಕೊಳೇಕರ ಇಂಡಿ ೨೦೦ ರೂ, (೧೧) ಹಿರಾಚಂದ ಪಾನಾಚಂದ ಇಂಡಿ ೧೦೦ ರೂ, (೧೨) ಬಾಬಾಚಾರ್ಯ ಜಹಗೀರ್ದಾರ ಬಳ್ಳೊಳ್ಳಿ ೧೦೦ ರೂ, (೧೩) ರಾಮಚಂದ ಫುಲಚಂದ ಇಂಡಿ ೫೦ ರೂ, (೧೪) ತಾತಾಚಾರ್ಯ ಅಗರಖೇಡ ೭೫ ರೂ, (೧೫) ಹಣಮಂತಪ್ಪ ತಡವಲಗ ೧೦೦ ರೂ, (೧೬) ಪಕ್ಕೀರಪ್ಪ ತಡವಲಗ ೭೫ ರೂ, (೧೭) ಬಾಪುಗೌಡ ಶಿರಸ್ಯಾಡ ೫೦ ರೂ, (೧೮) ಗೋವಿಂದ್ರಾವ ಗುಂದವಾರ್ ೫೦ ರೂ, (೧೯) ವ್ಯಾಸರಾಮಾಚಾರ್ಯ ಝಳಕಿ ೧೦೦ ರೂ, (೨೦) ವೀರಚಂದ ನಿಂಬರಿಗಿ ೧೦೦ ರೂ, (೨೧) ಬಾಳಪ್ಪ ಜಾಗಪ್ಪ ನಿಂಬರಿಗಿ ೫೦ ರೂ, (೨೨) ಬಳವಂತ ಕುಲಕರ್ಣಿ ಜಿಗಜಿವಾಣಿ ೬೦ ರೂ, (೨೩) ಹಾಜಿಲಾಲ ಇಂಡಿ ೫೦ ರೂ, (೨೪) ಉಸ್ಮಾನಸಾ ಇಂಡಿ ೫೦ ರೂ, (೨೫) ಅಣ್ಣಾರಾವ ಪಾಟೀಲ ಇಂಡಿ ೧೦೦ ರೂ. ಸಭೆಯ ಓರ್ವಪ್ರೇಕ್ಷಕ.

ಈಗತಾನೇ ಅಚ್ಚಾದ ಪುಸ್ತಕವು.

(ರೇವಣಸಿದ್ಧೇಶ್ವರಪುರಾಣಂ.)

ವೇದಾಗಮಾದಿಸಿದ್ಧವಾದ ವೀರಶೈವ ಮತವನ್ನು ಭೂತಲದಲ್ಲಿ ಪ್ರತಿಷ್ಠಾಪಿಸಿದ ಶ್ರೀ ರೇಣುಕಾಚಾರ್ಯರ ಚರಿತ್ರರೂಪವಾದ ಈ ಗ್ರಂಥವು ಬೊಮ್ಮರಸಕವಿಯಿಂದ ಷಟ್ಪದೀಕಾವ್ಯವಾಗಿ ರಚಿಸಲ್ಪಟ್ಟಿರುವುದು. ಶ್ರೀಮದಾಚಾರ್ಯರು ಭೂತಲದಲ್ಲಿ ನಡೆಯಿಸಿದ ಮಹತ್ಕಾರ್ಯಗಳು ಇದರಲ್ಲಿ ನಿರೂಪಿತವಾಗಿವೆ. ಕವಿತೆಯು ಹೃದಯಂಗಮವಾಗಿದೆ. ಪ್ರತಿಯೊಂದು ಪದಕ್ಕೂ ಒಂದೊಂದು ಪಜ್ಜೆಯಾಗಿ ಬಿಡಿಬಿಡಿಸಿ ಉತ್ತಮವಾದ ಗ್ಲೇಸ್‌ಕಾಗದದಮೇಲೆ ಸುಂದರವಾದ ಅಕ್ಷರಗಳಿಂದ ಶುದ್ಧವಾಗಿ ಮುದ್ರಿತವಾಗಿದೆ. ೧೩ ಸಂಧಿಗಳುಳ್ಳ ಈ ಗ್ರಂಥದ ಬೆಲೆ ವಿ. ಪಿ. ಮೂಲಕ ಅಂಚೆಯ ವೆಚ್ಚವೂ ಸೇರಿ ೧೨ ಆಣೆಗಳು.

ಮತ್ತೊಂದು ನೂತನಗ್ರಂಥ.

ಸಟಿಪ್ಪಣ ಸಿದ್ಧಾಂತಶಿಖಾಮಣಿ.

ಇದು ಶ್ರೀರೇಣುಕಾಚಾರ್ಯರು ಅಗಸ್ತ್ಯರಿಗೆ ಉಪದೇಶಿಸಿದ ವೀರಶೈವ ಸಿದ್ಧಾಂತಶಾಸ್ತ್ರವು, ಪ್ರತಿಯೊಬ್ಬ ವೀರಶೈವನೂ ಮುಕ್ತನಾಗುವುದಕ್ಕೆ ಜನ್ಮಾದಿಯಿಂದ ಕಡೆಯವರೆಗೆ ಆಚರಿಸಬೇಕಾದ ಧರ್ಮಕರ್ಮಗಳು ಇದರಲ್ಲಿ ನಿರೂಪಿತವಾಗಿವೆ. ಮೂಲಗ್ರಂಥಕ್ಕೆ ವೇದಾಗಮ ಪುರಾಣಾದಿವಚನಗಳ ಆಧಾರದಿಂದ ಕೂಡಿದ ಕನ್ನಡ ಟಿಪ್ಪಣವು ವಿಸ್ತಾರವಾಗಿ ಬರೆಯಲ್ಪಟ್ಟು ಉತ್ತಮವಾದ ಕಾಗದದಲ್ಲಿ ಅಚ್ಚುಮಾಡಿಸಲ್ಪಟ್ಟಿದೆ. ಸರ್ವರಿಗೂ ಸಂಗ್ರಾಹ್ಯವಾದ ಈ ಪುಸ್ತಕವು ೩೩೫ ಪುಟಗಳುಳ್ಳ ದೊಡ್ಡ ಗ್ರಂಥವಾಗಿದ್ದರೂ, ಸ್ವಮತಸ್ಥರ ಹಿತಾರ್ಥವಾಗಿ ಬೆಲೆಯು ಕಡಿಮೆಯಾಗಿಡಲ್ಪಟ್ಟಿದೆ. ವಿ. ಪಿ, ಮೂಲಕ ಅಂಚೆಯ ವೆಚ್ಚವೂಸೇರಿ ೧-೮-೦.

ಎಸ್. ಆರ್ ಕರಿಬಸವಶಾಸ್ತ್ರಿ,
7 ಗ್ರಂಥಪ್ರಸಾರಕಮಂಡಲಿ, ಮೈಸೂರು.

ಘಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

40

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪ್ರಕೋಪವಾದವರು, ತೃಷೆವುಳ್ಳವರು, ದಮ್ಮಿನವರು, ಕೆಮ್ಮಿನವರ ಕಫು, ಉಂಟಾದವರು, ಮೂಲವ್ಯಾಧಿಯುವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟುಗುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ:— **ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,**
ಶಿರ್ಸಿ, ಬನವಾಸಿ, ಜಿಲ್ಲಾ ಉತ್ತರಕನಡಾ.

(ಹೊಸಪುಸ್ತಕ ೧೩೪೪ ಪುಟಗಳು) ಶ್ರೀ (ಹೊಸಪುಸ್ತಕ ೧೩೪೪ ಪುಟಗಳು)

ಬ್ರ|| ಶ್ರೀ|| ಬಿ. ವಿ. ಸುಬ್ರಹ್ಮಣ್ಯಶರ್ಮವಿರಚಿತವಾದ ಸುಧಾರ ಸಧಾರಾಯೆಂಬ ಕನ್ನಡ ಟೀಕಾತಾತ್ಪರ್ಯ ಗಣಿತೋದ್ಧಾರಣೆಗಳಿಂದೊಡಗೂಡಿದ

ಬೃಹಜ್ಜಾತಕಾಖ್ಯ ಹೋರಾಶಾಸ್ತ್ರವು.

4

ಮಾನವನು ತನ್ನ ಅದೃಷ್ಟಚಕ್ರದ ಫಲಾಫಲಗಳನ್ನು ಅರಿತು, ಮುಂದೊದಗಬಹುದಾದ ಫಲಸ್ವರೂಪವನ್ನು ಇತರರ ಸಹಾಯವಿಲ್ಲದೆಯೇ ತಿಳಿದುಕೊಂಡು, ದುಷ್ಫಲಗಳು ದೂರವಾಗಿ, ಸುಫಲಗಳು ಕರಗತವಾಗುವಂತೆ ಮಾಡುವಂತಹ, ಪರಿಹಾರೋಪಾಯಗಳನ್ನು ಸೂಚಿಸಬೇಕಾದರೆ, ನಮ್ಮಿಂದ ಈಗತಾನೆ ಸಂಸ್ಕೃತ ಹಿಂದಿ ಮರಾಟಿ ಭಾಷೆಗಳಿಂದ ತರ್ಜುಮೆಮಾಡಿ ಪ್ರಕಾಶಗೊಂಡ "ಸುಧಾರಸಧಾರಾ" ಎಂಬ ಕನ್ನಡ ಟೀಕಾತಾತ್ಪರ್ಯ ಉದಾಹರಣೆಗಳಿಂದ ಕೂಡಿದ ಬೃಹಜ್ಜಾತಕವೆಂಬ ಹೋರಾಶಾಸ್ತ್ರ ವೊಂದಲ್ಲದೆ ಮತ್ತಾವುದೂ ಸಮರ್ಥವಾಗಿಲ್ಲವು. ೧೩೪೪ ಪುಟ ೩ ಭಾಗಗಳ ಪುಸ್ತಕ ಒಂದೇ ಬೈಂಡ್ ಈ ಗ್ರಂಥರತ್ನವು ಆಬಾಲವೃದ್ಧರಾದಿಯಾಗಿ ಅಕ್ಷರವನ್ನರಿತ ಹೆಂಗಸರೂ ಸಹಾ ಪರರ ಸಹಾಯಾಪೇಕ್ಷೆ ಇಲ್ಲದೆ ಓದಿ ತಿಳಿಯಲು, ಅನುಕೂಲವಾಗಿರುವುದು. ಇದರೊಳಗಡಗಿರುವ ೨೮ ಪ್ರಕರಣಗಳ್ಲಲಿನ ವಿಷಯಸಂಗ್ರಹ ವೆಂತೆಂದರೆ:—೧-೨ ನೇ ಪ್ರಕರಣಗಳಲ್ಲಿ ಶಾಸ್ತ್ರಪ್ರಯೋಜನವೂ, ಜೋತಿಶಾಸ್ತ್ರದ ಹೋರಾಭಾಗಗಳು ೩, ಸಜೀವ ನಿರ್ಜೀವವಸ್ತುಗಳ ಉತ್ಪತ್ತಿ ೪, ಗರ್ಭಧಾರಣ ಯೋಗಗಳು ೫, ಜನನಕಾಲಲಕ್ಷಣ ಮತ್ತು ಫಲ ೬, ಬಾಲಾರಿಷ್ಟವಿಚಾರ ಅವುಗಳ ನಿವಾರಣೋಪಾಯ ೭, ಆಯುರ್ದಾಯವಿಚಾರ ೮, ದಶಾಭುಕ್ತಿನಿರ್ಣಯ ೯, ಅಷ್ಟಕವರ್ಗವಿಚಾರ ೧೦, ಜೀವನೋಪಾಯವಿಚಾರ ೧೧, ರಾಜಯೋಗಸೂಚನೆ ಅವುಗಳ ಫಲವಿಚಾರ ೧೨, ೧೮೦೦ ಯೋಗಗಳ ಲಕ್ಷಣ ಮತ್ತು ಫಲ ೧೩, ಚಂದ್ರಸಂಬಂಧವಾದ ಯೋಗಗಳು ೧೪, ಎರಡಕ್ಕಿಂತಲೂ ಹೆಚ್ಚು ಗ್ರಹಗಳು ಒಂದೇಕಡೆ ಸೇರಿದರೆ ಅವುಗಳ ಫಲ ೧೫, ಸನ್ಯಾಸಯೋಗಗಳು ೧೬, ನಕ್ಷತ್ರಫಲಗಳು ೧೭, ರಾಶಿಫಲಗಳು ೧೮, ರಾಶಿಗಳ ಫಲ ಮತ್ತು ಕೇರಳಿಯೋಕ್ತ ಫಲಗಳು ೧೯, ದೃಷ್ಟಿಫಲಗಳು ೨೦, ಭಾವಲಕ್ಷಣ ಮತ್ತು ಆ ಫಲಗಳ ವಿಚಾರ ೨೧, ಕ್ಷೇತ್ರಫಲಗಳು ೨೨, ಗ್ರಹಗಳ ಅವಸ್ಥೆ ಅಷ್ಟಕವರ್ಗ ಫಲ ೨೩, ಅನಿಷ್ಟಯೋಗಗಳು ಅವುಗಳಿಂದಾಗುವ ಫಲಗಳು ೨೪, ಸ್ತ್ರೀಜಾತಕ ಅದರ ಫಲಗಳು ೨೫, ಮರಣಕಾರಣ ಅದರ ಫಲಗಳು ೨೬, ನಷ್ಟಜಾತಕ ಬರಿಯುವ ರೀತಿ ೨೭, ದ್ರೇಕ್ಕಾಣವರ್ಣನೆ ಪ್ರಶ್ನೆಗೆ ಬೇಕಾದ ಸಹಾಯವಿಷಯ ೨೮, ಅನುಕ್ರಮಣಿಕಾಸಂಗ್ರಹ ಮತ್ತು ಗ್ರಂಥಕರ್ತರ ವಂಶವರ್ಣನೆ:—

ಮೇಲೆ ಹೇಳಿರುವಂತೆ ಬರೆಯಲ್ಪಟ್ಟ ಒಂದು ಪುಸ್ತಕ ತಮ್ಮ ಬಳಿಯಲ್ಲಿದ್ದರೆ ೧೦ ಜನ ಜ್ಯೋತಿಷ್ಕರಿದ್ದರೆ ಎಷ್ಟು ಅನುಕೂಲವೋ ಅಷ್ಟು ಅನುಕೂಲ. ಇದು ಪಾತ್ರಿಧರಿಗೂ, ಸ್ತ್ರೀಯರಿಗೂ ಧಾರಾಳವಾಗಿ ತಿಳಿಯುವಂತೆ ಉತ್ತಮ ಕಾಗದದಲ್ಲಿ ಪ್ರಿಂಟ್‌ಮಾಡಿಸಿದೆ, ಈ ತಿಂಗಳು ಆಖೈರಿನೊಳಗಾಗಿ ಆರ್ಡರ್ ಕೊಡುವವರಿಗೆ ೪-೦-೦ ರೂ. ವಿ ಪಿ. ಛಾರ್ಜು ೦-೬-೦ ಆಣೆ ನಂತರ ೫-೦-೦ ರೂ ಜಾಗ್ರತೆ ತರಿಸಿಕೊಳ್ಳಿ ನಂತರ ಈ ಬೆಲೆಗೆ ದೊರೆಯಲಾರದು.

ಇತರಪುಸ್ತಕಗಳು.

——:೦:——

ಟೀಕಾಜೈಮಿನಿ ೯೩೦ ಪುಟ ೪-೦-೦ ರೂ. ಸಟೀಕಹರಿಕಥಾಮೃತಸಾರ ೩೪೪ ಪುಟ ೧-೪-೦ ರೂ. ಕನ್ನಡದ್ವಾದಶಸ್ಕಂಧ ಭಾಗವತ ೩-೦-೦ ರೂ. ಶುಕಸಪ್ತತಿ ೭೦ ಕಥೆ ಶುದ್ಧಪ್ರತಿ ೨-೦-೦ ರೂ. ೪ ಜನ ಫಕೀರರ ಕಥೆ ೦-೮-೦. ಸಟೀಕಾಭೋಜರಾಜಚರಿತ್ರೆ ೦-೮-೦. ಇವುಗಳಲ್ಲದೆ ನಮ್ಮಲ್ಲಿ ಯಾವಾಗ್ಯೂ ಕನ್ನಡ, ಸಂಸ್ಕೃತ, ತೆಲಗು ಗ್ರಂಥಗಳು ದೊರೆಯುತ್ತೆ.

ಟಿ. ಯರ್. ಕೃಷ್ಣಯ್ಯಶೆಟ್ಟಿ, ಬುಕ್‌ಡಿಪೋ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ
ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ರೋಂ
ಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು
49 ಕಾಪಾಡುವುದರಲ್ಲಿ ಶ್ರೇಷ್ಠವಾದ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ-ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘುಮಘುಮಿಸುವಂತೆ ಮಾಡುವುವು.

ಶೀತವಾಯು-ಕೆಮ್ಮು-ನೆಗಡಿ-ದಿನಜ್ವರ-ಮೂರರಜ್ವರ-ನಾಲ್ಕರಜ್ವರ-ಮಲೇರಿಯಾಜ್ವರ-ತಲೆನೋವು-ಮೈಕೈನೋವು ಮತ್ತು ಭಾರ-ಅರೋಚಕ ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣಭೇದಿ-ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಶೆಳತ-ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ೭೫೦ ಮಾತ್ರೆ ೪ ಆಣೆ. ಇದಕ್ಕೆ ಒಂದು ಇನಾಮು. ವಿ. ಪಿ ಛಾರ್ಜು ಪ್ರತ್ಯೇಕ.

ಆಮೋದಿನಿ:— ಅಮೋಘವಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರಮಾಡುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷ ಕೀರ್ತಿಯನ್ನು ಸಂಪಾದಿಸಿ ನಾನಾತರಹಾ ಕೆಮ್ಮು, ದಮ್ಮು ಉಬ್ಬಸ, ವಾಂತಿ, ನಾಕರಿಗೆ, ಮಲಬಂದ, ಅಗ್ನಿಮಾಂದ್ಯ, ಪಿತ್ತಸಂಕಟ, ಅರೋಚಕ, ಬಾಯಾರಿಕೆಗಳನ್ನು ತಕ್ಷಣ ಗುಣಪಡಿಸಿ ಶರೀರಕ್ಕೆ ತೀಕ್ಷ್ಣಮಾಡದೆ ಧಾತುವೃದ್ಧಿಯುಂಟುಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೧೫೦ ಮಾತ್ರೆ ೪ ಆಣೆ. ಇದಕ್ಕೆ ಒಂದು ಇನಾಮು. ವಿ.ಪಿ. ಛಾರ್ಜು ಪ್ರತ್ಯೇಕ.

ವಿಳಾಸ— ಬಿ ವಿ. ಪಂಡಿತ್,
ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರ್ ಡಿ||

50

ದೊಡ್ಡ ಕಂಪೆನಿ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರಿಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯೂ. ಎನ್. ಮತ್ತು ಕಂಪೆನಿ,
ಬನಾರಿಸ್ ಸಿಟಿ. (ಕಾಶೀ)

ಬಹುಮಾನ ! ಶ್ರೀ. ಬಹುಮಾನ !!

ಅತ್ಯಾಶ್ಚರ್ಯಕರವಾದ ಬಹುಮಾನ.

೨೫ ಸಾವಿರ ರೂಪಾಯಿಗಳು ಹಂಚಲ್ಪಡುವವು

ದಿವ್ಯಾಷಧ ಬಳ್ಳಾರಿ. ಸುಪ್ರಸಿದ್ಧಾಷಧ ಸರ್ವಜನಮನೋಲ್ಲಾಸಿನಿ ಅಂಡ್ ಕೋ. ಇವರ

(• ನಾರಸಿಂಹಚೂರ್ಣವು •)

3

ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನು ಆರೋಗ್ಯಭಾಗ್ಯವನ್ನು ಬಯಸುತ್ತಾನೆ ಎಂಬುವದು ಸಹಜವಾದುದಷ್ಟೆ? ಆದರೆ ಅನೇಕ ದುರ್ವರ್ತನೆಗಳಿಂದ ಮೂಲಕಾರಣವಾದ ಧಾತುವನ್ನು ನಷ್ಟಪಡಿಸಿಕೊಂಡು ಹಲವುವಿಧ ರೋಗಗಳನ್ನು ತಂದಿಟ್ಟುಕೊಂಡಿರುವವರನೇಕರನ್ನು ಕಣ್ಣಾರ ನೋಡುತ್ತಿರುವೆವು. ಈ ನಷ್ಟಧಾತುವಿಗಾಗಿ ಅನೇಕಾನೇಕ ವೈದ್ಯರು ಹಲವುವಿಧ ಔಷಧಗಳನ್ನು ವಿಶೇಷವಾದ ಬೆಲೆಯನ್ನಿಟ್ಟು ವಿಕ್ರಯಿಸಿದರು ಪ್ರಯೋಜನವು ಮಾತ್ರ ಕಡಿಮೆಯಾಗುತ್ತಿರುವದು ವಿಷಾದಕರವಾಗಿರುವದು. ಈ ಲೋಪವನ್ನು ಹೋಗಲಾಡಿಸುವುದಕ್ಕಾಗಿ (ನಾರಸಿಂಹಚೂರ್ಣವು) ಎಂಬ ಒಂದಾನೊಂದು ಸಶಾಸ್ತ್ರೀಯವಾದ ಚೂರ್ಣವನ್ನು ಸಿದ್ಧಪಡಿಸಿರುವೆವು. ಈ ಚೂರ್ಣವನ್ನು ಒಬ್ಬ ಮನುಷ್ಯನು ೧೪ ದಿನಗಳು ಸೇವಿಸಿದರೆ ಮುಪ್ಪುತನ, ಅನೇಕತರದ ಮೇಹರೋಗಗಳು, ಪಾಂಡುರೋಗ, ಪೀನಸ, ಹದಿನೆಂಟುಬಗೆಯಾದ ಕುಷ್ಠಗಳು, ಎಂಟುವಿಧ ಉದರರೋಗಗಳು, ಭಗಂಧರವು, ಮೂತ್ರಕೃಛ್ರವು, ಗೃಧ್ರಸೀವಾತವು, ಕಾಮಿಲೆ, ಕ್ಷಯವು, ಮಹಾಶ್ವಾಸಗಳು, ದಾರುಣವಾದ ಐದುಬಗೆಯಾದ ಕಾಸೆಗಳು, ಎಂಭತ್ತುವಿಧಗಳಾದ ವಾತರೋಗಗಳು, ನಲವತ್ತು ಬಗೆಯಾದ ಪಿತ್ತಗಳು, ಇಪ್ಪತ್ತು ಶ್ಲೇಷ್ಮರೋಗಗಳು, ದ್ವಂದ್ವಸನ್ನಿಪಾತರೋಗಗಳು, ಮೂಲರೋಗಗಳು ಇವೇ ಮುಂತಾದ ಸಮಸ್ತ ರೋಗಗಳು ಸಿಡಿಲಿನಿಂದ ಗಿಡಗಳು ನಾಶವಾಗುವಂತೆ ನಾಶವಾಗುತ್ತಿವೆ. ಇದರ ಸೇವನೆಯಿಂದ ಚಿನ್ನದಂಥಾ ಕಾಂತಿಯು, ಸಿಹ್ಮನಂತೆ ಪರಾಕ್ರಮವು, ಕುದುರೆಯಂಥಾ ವೇಗವು, ಹಕ್ಕಿಗಳ ದೃಷ್ಟಿಯಂತೆ ದೃಷ್ಟಿಯು ಉಳ್ಳವರಾಗಿ ನೂರುಮಂದಿ ಯುವತಿಯರೊಂದಿಗೆ ಸುರತವಂ ಮಾಡುವಂಥಾ ಅತ್ಯಧಿಕ ವೀರ್ಯವೃದ್ಧಿಯುಂಟಾಗಿ ನೃಸಿಹ್ಮನಿಗೆ ಸಮಾನರಾದ ಮಕ್ಕಳನ್ನು ಹುಟ್ಟಿಸುವ ಪ್ರಬಲ ಬಲಬರುವದು. ಇದರಲ್ಲಿ ಯಾವ ವಿಧವಾದ ರಸಗಳಾಗಲಿ ಮಿಶ್ರವಾಗಿಲ್ಲ, ಇನ್ನಾವ ದೋಷಗಳೂ ಇಲ್ಲ. ನಿರ್ದುಷ್ಟವಾದದ್ದು, ಘಕ್ತವನಸ್ಪತಿಗಳಿಂದಲೇ ಸಿದ್ಧಮಾಡಿದ ದಿವ್ಯವಾದ ಔಷಧ. ಅನೇಕ ಪಂಡಿತರು, ಧನಿಕರು, ಸರ್ಟಿಫಿಕೇಟುಗಳನ್ನು ಕೊಟ್ಟಿರುವರು. ಬಳ್ಳಾರಿಯಲ್ಲಿ ಸುಪ್ರಸಿದ್ಧ ವೈದ್ಯರೆಂದು ಪ್ರಖ್ಯಾತಿಗೊಂಡ ವೈದ್ಯ ಕರಿವೀರಪ್ಪನವರ ಪುತ್ರರಾದ ನೇಟಿವ್ ಡಾಕ್ಟರ್ ಬಿ. ವಿ. ಸಿದ್ದಪ್ಪನವರಿಂದ ತಯಾರಿಸಲ್ಪಟ್ಟಿರುವದು.

೧೪ ದಿನ ಉಪಯೋಗಕ್ಕೆಬರುವ ಡಬ್ಬಿ ೧ ಕ್ಕೆ ಬೆಲೆ ರೂ. ೧—೦—೦

—(ಬಹುಮಾನಗಳನ್ನು ಹಂಚುವ ವಿಧಾನ)—

೧ ಡಜನ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೧೦೦೦೦ ರೂ. ೬ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೬೦೦೦ ರೂ. ೩ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೪೦೦೦ ರೂ ೨ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೩೦೦೦ ರೂ. ೧ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ೨೦೦೦ ರೂ.

50 ೧೯೧೪ ನೇ ಜುಲೈ ೧ ನೇ ತೇದಿ ಮೊದಲು ೧೯೧೫ ನೇ ಜುಲೈ ೧ ನೇ ತೇದಿವರಿಗೂ ಈ ಔಷಧವು ಒಂದು ಲಕ್ಷ ಡಬ್ಬಿಗಳು ಖರ್ಚಾದಕೂಡಲೇ ಈ ಲೆಕ್ಕವನ್ನು ಅಲ್ಲಿಗೆ ಸಂಕ್ಷೇಪಮಾಡಿ ಬಹುಮಾನಗಳನ್ನು ಹಂಚುತ್ತೇವೆ. ಒಂದುಪಕ್ಷದ ಮೇಲಣ ನಿಯಮಿತ ದಿನಕ್ಕೆ ಸರಿಯಾಗಿ ಒಂದು ಲಕ್ಷ ಡಬ್ಬಿಗಳು ಖರ್ಚಾಗದಿದ್ದರೆ ಮತ್ತು ವಾಯಿದೆಯನ್ನು ಹೆಚ್ಚಿಸದೆ ಎಷ್ಟು ಡಬ್ಬಿಗಳು ಖರ್ಚಾಗಿರುತ್ತವೆಯೋ ಅಷ್ಟಕ್ಕೆ ದಾಮಾಷಾ ಪ್ರಕಾರ, ಆಗತಕ್ಕಷ್ಟು ಬಹುಮಾನವನ್ನು ಮಾತ್ರ ಹಂಚುತ್ತೇವೆ. ಪ್ರತಿಯೊಬ್ಬ ಮನುಷ್ಯನು ತಾನು ಕೊಡುವ ಹಣಕ್ಕೆ ಸರಿಯಾಗಿ ದಿವ್ಯೌಷಧವನ್ನು ಪಡಿಯುವದಲ್ಲದೆ ಬಹುಮಾನವನ್ನು ಸಹಾ ಹೊಂದುವದಕ್ಕೆ ಅರ್ಹನಾಗಿರುತ್ತಾನೆ. ಈ ವಿಷಯದಲ್ಲಿ ತಿಲಮಾತ್ರವಾದರು ಸಂಶಯವಿಲ್ಲ. ಬಹುಮಾನದ ಮೊತ್ತವನ್ನು ನಿಷ್ಪಕ್ಷಪಾತವಾಗಿ ಒಂದೇ ಸಮವಾಗಿ ಹಂಚಲ್ಪಡುವೆವು. ಇದು ಮೋಸವಲ್ಲ, ಲಾಟರಿಯಲ್ಲ, ಯಾವ ವಿಧವಾದ ಕುಹಕತನವು ಇಲ್ಲ, ಸತ್ಯವಾಗಿ ಬಹುಮಾನವನ್ನು ಹಂಚುತ್ತೇವೆ. ಅಸೂಯಾಂಧರ ಮಾತುಗಳಿಗೆ ನಿಗಾ ಕೊಡಲಾಗದು, ಜಾಗ್ರತೆ ತರಿಸಿಕೊಳ್ಳಿರಿ. ಔಷಧದ ಗುಣವನ್ನು ಪರೀಕ್ಷಿಸಿರಿ. ಅಪೇಕ್ಷಕರು ಈ ಕೆಳಗಣ ನಮ್ಮ ಅಡ್ರೆಸ್ಸಿಗೆ ಬರೆದು ತರಿಸಿಕೊಳ್ಳಿರಿ.

ಇದರ ಅನುಪಾನ ಪತ್ರಿಕೆಯನ್ನು ಬಹುಮಾನದ ಟಿಕೀಟನ್ನು ಡಬ್ಬಿಸಂಗಡ ಕಳಿಸುವೆವು, ನಮ್ಮ ಕಂಪೆನಿಯ ಕಾಶಿ ವಿಶ್ವನಾಥ ಮಾರ್ಕು ಇಲ್ಲದ ಡಬ್ಬಿಯನ್ನು ತೆಗೆದುಕೊಳ್ಳಲಾಗದು.

ನಮ್ಮ ಅಡ್ರೆಸ್ಸು,
ಸರ್ವಜನಮನೋಲ್ಲಾಸಿನಿ ಅಂಡ್ ಕೋ. ಬಳ್ಳಾರಿ.

ದಿ ಜನರಲ್ ಏಜೆನ್ಸಿ, ಮೈಸೂರು.

ಕಾದಂಬರಿಗಳು :— ಚಂದ್ರವಾರುತ ೦-೨-೦; ಚರಿತಾವ್ರತಂ ೦-೫-೦; ರಾಜಕಥಾವಲ್ಲರಿ ೦-೫-೦; ಪೀಠರಿನಚರಿತ್ರೆ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೨-೬; ಸೀತೆ ೦-೫-೦; ಸಾಹಸಿಕೆ, ಕಲಾನಾಥ ೦-೮-೦; ಮಹಾಲಕ್ಷ್ಮಿ ೦-೨-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸತ್ಯಸಂಜೀವಿನಿ ೦-೮-೦; ಕೊಹಿನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೨-೦. 51

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ ೧-೦-೦, ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲೆ ೧ ಕ್ಕೆ ೧-೦-೦; ಜವಗಂಧ ತೊಲೆ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪ ಟಿನ್ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು. ಟಿ ಎಲ್. ಉಪಾಧ್ಯಾಯರು,

ಸುಗಂಧಕಾರಿ,

ಮೈಸೂರು. 20

40 ಸಚಿತ್ರ ಶುಕಸಪ್ತತಿ ಕಥೆಗಳು ರೂ. ೧-೮-೦ (೫೧೨ ಪುಟ) — ಟಪಾಲು ಹಾಸಲು ೪ ಆಣೆ. — ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ ರೂ ೧-೮-೦. (೫೭೬ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ! ಮಾನ್ಯತೆಯು ಬೇಕಾದರೆ, ವಾಕ್ಚಾತುರಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಲಿಚ್ಛೆಪಟ್ಟರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯುಲ್ಲಾಸವಿದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೬೦ ಪುಟಗಳಿಂದ ಕೂಡಿದ ೬೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ ೧-೪-೦ ಟಪಾಲ್ ಹಾಸಲು ೩ ಆಣೆ. ಈಗಲೇ ಬರೆ ನಿಮ್ಮ ನಮ್ಮಲ್ಲಿ ಇನ್ನೂ ಅನೇಕಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸಾಲಾಮಿಸ್ರಿಯು ಕಾಬೂಲ್ ದೇಶದಲ್ಲಿ ಪೌಂಡು ೧ ಕ್ಕೆ ೧-೧೦-೦ ಇತ್ತು ಈಗ ಪೌಂಡು ೧ಕ್ಕೆ ೩-೪-೦ ಆಗಿದೆ. ಆದ್ದರಿಂದ ಇದರಕ್ರಯ ೨-೦೦ ರೂಪಾಯಿ ಮಾಡಿರುತ್ತೆ. 7

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬಾ.

ಈ “ಪಂಜಾಬ್ ಸಾಲಾಮಿಸ್ರೀ ಮುರಬ್ಬಾ” ದ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ದೂರ ನಡೆಯುವುದರಿಂದ ಏದುಸಿರು ಬರುವುದರೂ, ತಲೆಯು ನೋವೂ ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು ಹಳೇ ತಲೆ ನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಸೇರಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು. ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ತಾಂಬ್ರದ ಮತ್ತು ಬಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು.

ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂ. ಬಹುಮಾನವಾಗಿ ಕೊಡಲ್ಪಡುವುದು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನದಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧ಕ್ಕೆ ರೂ. ೨-೦-೦. ಟಪ್ಪಾಲ್ ಖರ್ಚು ಬೇರೆ. ಅನುಪಾನಪತ್ರಿಕೆ ಔಷಧದಸಂಗಡ ಇರುತ್ತೆ.

ಡಿ. ಮನ್ನಾಲಾಲ್, 5 ಹಾಜಿ ಸಾಹೇಬ್ ಮಹಡಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ನಮ್ಮ ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೊ, ದೊಡ್ಡಪೇಟೆ, ಬೆಂಗಳೂರು ಸಿಟಿ.

ವೈದ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು 18



ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊಡೆತ (ಬಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ. ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ— ೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೦ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ.)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈ ಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಹೇಡಾಡಬೇಡಿರಿ. ಒಂದೇಹೊಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತವಿದೊಂದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧ • •

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ. ಮೈಸೂರು

ನ್ಯಾಯದರ್ಪಣ. 33

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯೂ, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಫ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸೂ, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆಚರಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ವಗೈರೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯೂ ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರುತ್ತವೆ.

ಬೆಲೆ ರೂ. 1—8—0. ವಿ. ಪಿ. ಮೂಲಕ 1—12—0.

ಎಂ. ಎಸ್. ನಂಜಪ್ಪನವರು,

ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ) ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾಗಿದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚಿಟಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘುಮಘುಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜನ್ ಡಬ್ಬಿಗೆ ೨-೨-೦

ಉತ್ತಮವಾದ ನಶ್ಯದಪುಡಿ.

ಧಾತು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವೆ. ನೀವುಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,

ಗೋಪಸೆಟ್ಟಿಪಾಳ್ಯ, ಹನೂರು ಪೋಸ್ಟ್

29 ಕೊಳ್ಳೇಗಾಲದ ತಾಲ್ಲೂಕು.

೧೯೧೪ನೆಯ ಇಸವಿ ಸೆಪ್ಟಂಬರ್ ತಾ॥ ೧೩ರಿಂದ ೧೯೧೪ನೆಯ ಸೆಪ್ಟಂಬರ್ ತಾ॥ ೧೯ರವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ನೆಯ ಆನಂದನಾಮ ಸಂ॥ದ ಭಾದ್ರಪದ ಬ॥ ಅಷ್ಟಮಿಯಿಂದ ಭಾದ್ರಪದ ಬ॥ ಅಮಾವಾಸ್ಯದವರೆಗಿನ ಪಂಚಾಂಗ.

ತಾ॥	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ತೇ॥ ಪಿ.
13	[1] ಭಾನು	ಅಷ್ಟ	3-0	ಮೃಗ	23-10	29
14	[2] ಸೋ	ನವ	5-3	ಆರಿದ್ರಾ	26-27	30
15	ಮಂ	ದಶ	5-50	ಪುನ	28-22	31
16	[3] ಬುಧ	ಏಕಾ	5-19	ಪುಷ್ಯ	29-6	1
17	[4] ಗುರು	ದ್ವಾ	3-17	ಆಶ್ಲೇ	28-39	2
18	[5] ಶುಕ್ರ	ತ್ರ	0 49	ಉಪರಿ	56-40	3
19	[6] ಶನಿ	ಅಮಾ	2-40	ಪುಬ್ಬಾ	24-41	4

(1) ಶಕಾಂ, ಅವಿಧವಾನವಮೀ, ಶಿಕ್ಯೋತ್ಸವ (2) ಹರಿಹರದಲ್ಲಿ, ಕಾಂತರಾಜೇಅರಸಿನವರ ವರ್ಧಂತಿ (3) ಸರ್ವತ್ರೈಕಾದಶೀ, ಷಡಶೀತಿಪುಣ್ಯಕಾಲಃ. (4) ... ದೋಷಃ, ಕಲಿಯುಗಾದಿಃ. (5) ಶಕ್ರಾಂ ಅವಮಃ, ಘಾತಚತುರ್ದಶೀ, ಮಾಸಶಿವರಾತ್ರಿಃ (6) ಸರ್ವತ್ರಮಹಾಲಯಾಮಾವಾಸ್ಯಾ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಶ್ರೀಕೃಷ್ಣನಿಳೆ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED, NO M 124

ಮೈಸೂರ್ ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುತ್ತದೆ.

ವಾರ್ಷಿಕ ಚಂದಾ ೧-೦-೦

ಮಹಿಶೂರಪುರೀತಾರಾ ಪರಮಾಭಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಪರಂ
ನಿಮಾತೀತ ಯಶಃಪ್ರತಾಪವಿಪುಲಂಸದ್ವೃತ್ತಮಾಲಾಕುಲಂ । ಪ್ರೇಮಂಬಿತ್ತಿಳೆಯಂಸದಾಪೊರೆಗೆ ಗೌರೀಕಾನುಕಂಪೋಜ್ವಲಂ ।

ಅಂಚೆವೆಚ್ಚ ಸೇರಿ ೧-೧೪-೦

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜ ಮೊಹಲ್ಲಾ, ಮೈಸೂರು.

ಈಗತಾನೇ ಸೀಮೆಯಿಂದ ಬಂದಿರತಕ್ಕ ರಖಂವಾರ್ ವಾಚ್‌ಗಳ ಕ್ರಯದಪಟ್ಟಿ. 33



೧ ರಾಸ್ಕೋಪ್ ಸಿಸಸ್ಟಂಪೇಟೆಂಟ್‌ಸ್ವಿಸ್‌ಮೇಡ್‌ವಾಚ್	೧ ಕ್ಕೆ	೨-೮-೦
೨ ಗರ್ಟೈಂ ರೈಲ್ವೇ ರೆಗ್ಯುಲೇಟರ್ ವಾಚ್	೧ ಕ್ಕೆ	೩-೮-೦
೩ ಡಿಟೋ ನಮೂನೆ ಚಿಕ್ಕಸೈಜ್ ವಾಚ್	೧ ಕ್ಕೆ	೪-೪-೦
೪ ಡಿಟೋ ಚಿಕ್ಕಸೈಜ್ ಸ್ಪೆಷಲ್ ಸರ್ವೀಸ್‌ವಾಚ್	೧ ಕ್ಕೆ	೫-೮-೦
೪ ಪರ್ಟಲ್‌ವೆರ್ ಟ್ರುಸ್ ವಾಚೆಂಬ ಅತ್ಯುತ್ತಮವಾದ ಲೀವರ್ ವಾಚ್	೧ ಕ್ಕೆ	೮-೧೨-೦
೫ ಡಿಟೋ ನಮೂನೆ ಕೆಂಪುಗಳನ್ನು ಕೆತ್ತಿರುವ ವಾಚ್	೧ ಕ್ಕೆ	೯-೪-೦
೬ ಪೀಕಾಕ್ ವಾಚೆಂಬ ತೆಳುವಾದ ಮತ್ತೂ ಗ್ಯಾರೆಂಟಿಯಾದ ವಾಚ್ (ಸಾವಿರಾರು ವಿಕ್ರಯ)	೧ ಕ್ಕೆ	೧೦-೮-೦
೭ ವಾರಕೊಂದಾವರ್ತಿ ಬೀಗಕೊಡುವ ನಿಕ್ಕಲ್ ಬೆಳ್ಳೀಕೇಸ್ ವಾಚ್	೧ ಕ್ಕೆ	೧೦-೮-೦
೮ ಡಿಟೋ ನಮೂನೆಯಲ್ಲಿ ಅಚ್ಚಬೆಳ್ಳೀಕೇಸಿನ ಚಿಕ್ಕ ಸೈಜ್ ವಾಚ್	೧ ಕ್ಕೆ	೧೫-೪-೦
೯ ೩೦ ಘಂಟೆಗೆ ಒಂದಾವರ್ತಿ ಬೀಗಕೊಡುವ ದೊಡ್ಡ ಬರ್ಮಾಟೈಂಪೀಸ್	೧ ಕ್ಕೆ	೧-೪-೦
೧೦ ಡಿಟೋ ನಮೂನೆ ಅಲಾರಂ ಟೈಂಪೀಸ್	೧ ಕ್ಕೆ	೨-೪-೦
೧೧ ಡಿಟೋ ನಮೂನೆಯಲ್ಲಿ ಘಂಟೆ ನಿಮಿಷ ಸೆಕೆಂಡ್ ತೋರಿಸಿ ಅಲಾರಂ ಇದ್ದು ತಾರೀಖು ಸಹ ತೋರಿಸುವ ದೊಡ್ಡ ಟೈಂಪೀಸ್	೧ ಕ್ಕೆ	೩-೪-೦
೧೨ ಖಾತ್ರಿಯಾದ ಅನ್‌ಸೋನಿಯಾ “ಬಿ” ಟೈಂಪೀಸ್	೧ ಕ್ಕೆ	೨-೮-೦
೧೩ ಡಿಟೋ ಕಂಪೆನಿಯ ಅಲಾರಂಟೈಂಪೀಸ್ (ಬಹಳಮಜಬೂತಾದ್ದು) (ಸಾವಿರಾರುವಿಕ್ರಯ)	೧ ಕ್ಕೆ	೩-೮-೦
೧೪ ಅನ್‌ಸೋನಿಯಾ ಕಂಪೆನಿಯಲ್ಲಿ ತಯಾರಾದ ಘಂಟೆ, ಅರ್ಧಘಂಟೆ ಹೊಡೆದು ಅಲಾರಂ ಇರತಕ್ಕ ದೊಡ್ಡಟೈಂಪೀಸ್ (ಅನೇಕಜನ ವಿದ್ಯಾರ್ಥಿಗಳು ಇದನ್ನೇ ಉಪಯೋಗಿಸುತ್ತಲಿದ್ದಾರೆ)	೧ ಕ್ಕೆ	೬-೧೨-೦
೧೫ ಘಂಟೆ, ಅರ್ಧಘಂಟೆ ಹೊಡೆಯುವ ಕ್ಯಾರೇಜ್ ಕ್ಲಾಕೆಂಬ ಟೇಬಲ್ ಘಡಿಯಾರ	೧ ಕ್ಕೆ	೪-೧೨-೦
೧೬ ಡಿಟೋ ನಮೂನೆಯಲ್ಲಿ ಘಂಟೆ, ಅರ್ಧಘಂಟೆಹೊಡೆದು ಅಲಾರಂ ಸಹ ಇರತಕ್ಕ ಕ್ಲಾಕ್	೧ ಕ್ಕೆ	೫-೪-೦
೧೭ ಡಿಟೋ ನಮೂನೆಯಲ್ಲಿ ಘಂಟೆಹೊಡೆಯುವದಕ್ಕೆ ಪ್ರತಿಯಾಗಿ ಗಾನಹಾಡುವ ಕ್ಲಾಕ್	೧ ಕ್ಕೆ	೫-೮-೦
೧೮ ಡಿಟೋ ನಮೂನೆಯಲ್ಲಿ ತಾವಿಷ್ಟಪಟ್ಟ ಟೈಂಮಿಗೆ ಕಾಲುಘಂಟೆಕಾಲ ಕರ್ನಾನಂದವಾಗುವಂತೆ ಮೃದುಮಧುರ ಗಾನಮಾಡತಕ್ಕ ಕ್ಲಾಕ್	೧ ಕ್ಕೆ	೫-೮-೦
೧೯ ಅನ್‌ಸೋನಿಯಾ ಕಂಪೆನಿಯ ಲಿವರ್ ಕ್ಲಾಕೆಂಬ ಗೋಡೆಗೆ ತಗಲಿಸುವ (೮ ಮೂಲೆಯ) ಅಷ್ಟಕೋಣಾಕೃತಿಯ ಚಿಕ್ಕಸೈಜ್ ಕ್ಲಾಕ್	೧ ಕ್ಕೆ	೬-೮-೦

ವೆಸ್ಟೆಂಡ್‌ಕಂಪೆನಿ ವಾಚ್‌ಗಳನ್ನು ಲಾಟ್‌ಲಾಟಾಗಿ ತರಿಸಿ ಬೊಂಬೈನಲ್ಲಿ ವೆಸ್ಟೆಂಡ್‌ಕಂಪೆನಿಯವರು ಕೊಡುವ ಬೆಲೆಗೆ ಇಲ್ಲಿ ನಾವು ಕೊಡುತ್ತಲಿದ್ದೇವೆ.

೨೦ ವೆಸ್ಟೆಂಡ್ ಕಂಪೆನಿಯ ಡಸ್ಟ್ ವಾಚ್	೧ ಕ್ಕೆ	೩-೮-೦
೨೧ ಡಿಟೋ ನಮೂನೆ ಚಿಕ್ಕ ಸೈಜ್ ವಾಚ್	೧ ಕ್ಕೆ	೮-೪-೦
೨೨ ವೆಸ್ಟೆಂಡ್‌ಕಂಪೆನಿಯ ಮ್ಯಾಚಲೆಸ್ ವಾಚ್	೧ ಕ್ಕೆ	೧೦-೦-೦
೨೩ ಡಿಟೋ ನಮೂನೆ ಚಿಕ್ಕ ಸೈಜ್ ವಾಚ್	೧ ಕ್ಕೆ	೧೧-೧-೦
೨೪ ಡಿಟೋ ನಮೂನೆಯಲ್ಲಿ ಬಹಳ ತೆಳುವಾದ ಅಂದವಾದ ವಾಚ್	೧ ಕ್ಕೆ	೧೧-೦-೦
೨೫ ಡಿಟೋ ತಳುವಾದ ವಾಚಿನಲ್ಲಿ ಚಿಕ್ಕ ಸೈಜ್ ವಾಚ್	೧ ಕ್ಕೆ	೧೨-೦-೦
೨೬ ಡಿಟೋ ನಮೂನೆಯಲ್ಲಿ ೮ ಕೆಂಪುಗಳನ್ನು ಕೆತ್ತಿ ಬಂದೋಬಸ್ತಾದ ಯಂತ್ರೋಪಕರಣಗಳಿಂದ ಕೂಡಿದ ವಾಚ್	೧ ಕ್ಕೆ	೧೪-೧೨-೦
೨೭ ಕ್ವೀನ್ ಆನೀವಾಚೆಂಬ ಸುಂದರವಾದ ಚಿಕ್ಕಸೈಜ್ ವಾಚ್	೧ ಕ್ಕೆ	೧೨-೦-೦
೨೮ ಬರ್ಮಾ ವಾಚ್ (ಅನೇಕರು ಇದನ್ನು ಉಪಯೋಗಿಸುತ್ತಲಿದ್ದಾರೆ)	೧ ಕ್ಕೆ	೧೫-೦-೦
೨೯ ಕ್ವೀನ್ ಆನೀವಾಚಿನಲ್ಲಿ ರೋಲ್ಡ್ ಗೋಲ್ಡ್ ಕೇಸಿನ ಚಿಕ್ಕ ಸೈಜ್ ವಾಚ್	೧ ಕ್ಕೆ	೨೫-೦-೦

ರಖಂವಾರ್ ವಾಚ್ ಸರಪಣಿಗಳು.

ನಿಕ್ಕಲ್ ಬೆಳ್ಳಿಯ ವಾಚ್‌ಸರಪಣಿ	೧ ಕ್ಕೆ	೦-೧೨-೦
ಅಚ್ಚಬೆಳ್ಳಿಯ ಜೇಬಿನ ವಾಚ್‌ಸರಪಣಿ	೧ ಕ್ಕೆ	೩-೪-೦
ಅಚ್ಚಬೆಳ್ಳಿಯ ಕೊರಳಸರಪಣಿ	೧ ಕ್ಕೆ	೧-೪-೦
೧೮ ಕ್ಯಾರಟ್ ಚಿನ್ನದ ವಾಚ್‌ಸರಪಣಿ	೧ ಕ್ಕೆ	೫-೮-೦
ವಾಚಿನ ಸರಪಣಿ ತುದಿಯಲ್ಲಿ ಹಾಕುವ ಅಚ್ಚಬೆಳ್ಳಿಯ ಶಾಶ್ವತವಾದ ಕ್ಯಾಲೆಂಡರ್ ಅಂದರೆ ಎಷ್ಟು ವರುಷಗಳ ವರಿಗಾದರೂ ತಾರೀಖು ನೋಡಬಹುದಾದ ಕ್ಯಾಲೆಂಡರ್ ಎಂದೆಂದಿಗೂಕೆಡತಕ್ಕದ್ದಲ್ಲಾ	೧ ಕ್ಕೆ	೧-೧೨-೦
ಡಿಟೋ ನಮೂನೆಯಲ್ಲಿ ೧೮ ಕ್ಯಾರಟ್ ಚಿನ್ನದಿಂದ ತಯಾರಿಸಿದ್ದು	೧ ಕ್ಕೆ	೩-೪-೦

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ಒಂದುಸಾರಿ ಶಾಯಿತುಂಬಿದರೆ ೧೦,೦೦೦ ಶಬ್ಧಗಳನ್ನು ಬರೆಯಬಹುದಾದ ಲೇಖಣಿಗಳು.

ಪ್ರತಿಯೊಂದಕ್ಕೂ ೧೪ ಕ್ಯಾರಟ್ ಚಿನ್ನದ ನಿಬ್ಬುಹಾಕಿದೆ

ನೆಪ್ಚೂನ್ ೨೦೦ ನೇ ನಂ. ಪೆನ್	೧ ಕ್ಕೆ	೧-೧೪-೦
ನೆಪ್ಚೂನ್ ೨೦೫ ನೇ ನಂ. ಪೆನ್	೧ ಕ್ಕೆ	೨-೧೦-೦
ನೆಪ್ಚೂನ್ ೨೧೦ ನೇ ನಂ. ಪೆನ್	೧ ಕ್ಕೆ	೪-೨-೦

ಪ್ರತಿಯೊಂದು ಪೆನ್ ತರಿಸಿ ಕೊಳ್ಳುವರಿಗೂ ೪ ಪದಾರ್ಥಗಳನ್ನು ಮುಫತ್ತಾಗಿ ರವಾನಿಸುತ್ತೇವೆ.

೧ ಪೆನ್‌ಗಳನ್ನಿಡತಕ್ಕ ಸುಂದರವಾದ ಪೆಟ್ಟಿಗೆ ೧.
೨ ಪೆನ್ನಿಗೆ ಶಾಯಿಹಾಕುವ ಗಾಜಿನಕೊಳವೆ ೧.
೩ ಪೆನ್‌ಗಳನ್ನು ಕ್ಲೀನ್‌ಮಾಡುವ ವಿಧಾನ ಮತ್ತೂ ಶಾಯಿಹಾಕುವ ವಿಧಾನ ಪ್ರಿಂಟಾಗಿರುವ ಚೀಟಿ ೧.
೪ ಪೆನನ್ನು ಜೇಬಿಗೆತಗಲಿಸುವ ಸುಂದರವಾದ ಕ್ಲಿಪ್ ೧.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧-೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಶಿವಪೂಜಾವಿಧಿಃ	೦-೮-೦
ಚಾರುಶೀಲೆಚರಿತ್ರೆ	೦-೫-೦
ಸಟೀಕ ನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೬-೦
ವಿವೇಕಮಂಜರಿ [೨ನೆಯ ಭಾಗ]	೦-೩-೦
ವ್ರತಪಂಚಕ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆಯವೆಚ್ಚ ಬೇರೆ.

ಹೊಸಪುಸ್ತಕಗಳು.

152

ಬಸವರಾಜವಿಜಯಂ— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ-ಮೊದಲಾದ ವಿಷಯುಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸೂಕ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ ವರ್ಷದ ಚಂದಾ ೨-೮-೦.

ಎಸ್. ಆರ್. ಕರಿಬಸವಶಾಸ್ತ್ರಿ,

ಗ್ರಂಥಪ್ರಕಾಶಕಮಂಡಲಿ, ಮೈಸೂರು.

ಪ್ಲೇಗುರೋಗವು ಮತ್ತೂ ಇದರ ನಿವಾರಣೆ.

ಈ ರೋಗವು ಒಂದು ವಿಧದ ಕೀಟ (Bacillus Pestis) ದಿಂದ ಹುಟ್ಟುವುದು. ಇದು ರೋಗಿಯಿಂದ ಮತ್ತೊಬ್ಬ ಮನುಷ್ಯನಿಗೆ ತಾನಾಗಿ ಹಬ್ಬುವುದಿಲ್ಲ. ಹಾಗೆ ನಡೆಯುವುದು ನ್ಯೂಮೋನಿಕ್ ಪ್ಲೇಗಿನಲ್ಲಿ (Pneumonic Plague) ಮಾತ್ರ. ಇದರ ಪ್ರಸಾರಕ್ಕೆ ಇಲಿಗಳ ಮೈಮೇಲೆ ವಾಸಮಾಡುವ ಚಿಗಟಗಳೇ ಕಾರಣ. ಬೆಕ್ಕುಗಳ ನಾಯಿಗಳ ಮತ್ತೂ ಮನುಷ್ಯರ ಮೈಮೇಲೆ ವಾಸಮಾಡುವ ಚಿಗಟಗಳೂ ಇವೆ. ಆದರೆ ಇವುಗಳಾವುವೂ ಪ್ಲೇಗುರೋಗವನ್ನು ಹಬ್ಬಿಸುವಂತೆ ಇನ್ನೂ ಕಂಡುಬಂದಿಲ್ಲ. ಆದುದರಿಂದ ಜನರು ಇಲಿಗಳಧ್ವಂಸನಕ್ಕೂ ಮತ್ತೂ ಅದರ ಚಿಗಟಗಳನಾಶಕ್ಕೂ ಗಮನಕೊಡಬೇಕು. ಇಲಿಗಳನ್ನು ಕೊಂದನಂತರ ಆ ಸತ್ತ ಇಲಿಗಳನ್ನು ಹಾಗೆಯೇ ಬಿಸುಡಬಾರದು. ಅವುಗಳ ಮೈಮೇಲಿರುವ ಚಿಗಟಗಳು ಅವನ್ನು ಬಿಟ್ಟು ಬೇರೆಕಡೆಗೆ ಹೊರಡುವುವು. ಇದರಿಂದ ಇಲಿಯನ್ನು ಕೊಂದೂ ಪ್ರಯೋಜನವಿಲ್ಲದಂತಾಗುವುದು. ಅದುಕಾರಣ, ಹಾಗೆ ಕೊಲ್ಲಲ್ಪಟ್ಟ ಇಲಿಗಳಮೇಲೆ ಸೀಮೆಎಣ್ಣೆಯನ್ನು ಸುರಿಯಬೇಕು. ಇಲ್ಲದಿದ್ದಲ್ಲಿ ಕೊಂಚ ಒಣ ಹುಲ್ಲನ್ನು ಅದರಮೇಲೆ ಹಾಕಿ ಬೆಂಕಿಯಿಂದ ಹೊತ್ತಿಸಬೇಕು. ಹೀಗೆ ಮಾಡುವುದರಿಂದ ಚಿಗಟಗಳು ಸಾಯುವುವು. ಹೀಗೆ ಮಾಡಲು ಕೆಲರು ಅಸಹ್ಯಗೊಳ್ಳಬಹುದು. ಈ ಅಲ್ಪ ಪ್ರಾಣಿಗಿಂತಲೂ ಮಾನುಷ ಪ್ರಾಣಿಯು ಹೆಚ್ಚಿನದೆಂದು ತಿಳಿದವರು ಹಿಂದೆಗೆಯುವುದಿಲ್ಲ. ನೆಲವನ್ನು ಗುಡಿಸಿ ಚೊಕ್ಕಟಮಾಡುವುದೊಂದರಿಂದಲೇ ಚಿಗಟಗಳು ಹೋಗುವುದಿಲ್ಲ. ಇವುಗಳನ್ನು ದ್ರಾವಕಮೂಲಕವಾಗಲಿ ಬೆಂಕಿಯ ಮೂಲಕವಾಗಲಿ ಸುಡಬೇಕು. ಒಣಬೆರಣಿ ಅಥವಾ ಒಣ ಹುಲ್ಲನ್ನು ಕೆಳಗೆ ನೆಲದಮೇಲೆ ಹರಡಿ ಬೆಂಕಿಯನ್ನು ಹೊತ್ತಿಸಬೇಕು. ಹೀಗೆ ಸುಡುವಕಾಲದಲ್ಲಿ ಕೋಣೆಗಳ ಬಾಗಿಲು ಕಿಟಕಿಗಳನ್ನು ಮುಚ್ಚಿರಬೇಕು. ಮತ್ತೂ ಒಳಗಡೆ ಯಾರೂ ನಿಲ್ಲಬಾರದು. ಇಲ್ಲವಾದಲ್ಲಿ ಸೇಕವನ್ನು ತಡೆಯಲಾರದೆ ಚಿಗಟಗಳು ಹೊರಹೊರಡಲು ಪ್ರಯತ್ನಮಾಡುವುವು. ಆ ವೇಳೆಯಲ್ಲಿ ನಿಂತವರಬಟ್ಟೆಗಳಿಗೆತಗುಲಿ ಬದುಕಿಕೊಳ್ಳುವುವು. ಇದೂ ಇಲ್ಲದಿದ್ದಲ್ಲಿ ಫಿನೈಲಿನ ನೀರನ್ನು ನೆಲಕ್ಕೆ ಎರಚಬಹುದು. ನೆಲಗಳಮೇಲೆ ಮತ್ತೂ ಎರಡುಅಡಿ ಎತ್ತರದವರೆಗೂ ಸಾಮಾನುಗಳನ್ನು ಇಡುವುದನ್ನು ತಪ್ಪಿಸಿದಲ್ಲಿ ಚಿಗಟಗಳ ವಾಸಕ್ಕೆ ಅವಕಾಶವಾಗುವುದಿಲ್ಲ. ಏತಕ್ಕೆಂದರೆ, ಚಿಗಟಗಳು ನೆಲದಮೇಲೆ ಎರಡು ಅಡಿ ಎತ್ತರಕಿಂತಲೂ ಹೆಚ್ಚಿಗೆ ಹಾರಲಾರವು.

ಇನಾಕ್ಯುಲೇಷನ್:— ಪ್ಲೇಗುಕೀಟಗಳನ್ನು ಲೆಕ್ಕವಿಲ್ಲದಷ್ಟು ಬೆಳಸಿ, ಅವನ್ನು ಕೊಂದು, ಅವುಗಳಿಂದ ಸಾರವನ್ನು ತೆಗೆದು, ಅದಕ್ಕೆ ಅಲ್ಪವಾಗಿ ಕಾರ್ಬಾಲಿಕ್ ದ್ರಾವಕವನ್ನು ಸೇರಿಸುವುದರಿಂದ ಶುದ್ಧಿಮಾಡುವುದು. ಈ ಸಾರವನ್ನೇ ವ್ಯಾಕ್ಸಿನ್ (Vaccine) ಎಂದು ಕರೆಯುವುದು. ಇದನ್ನು ಶರೀರದೊಳಕ್ಕೆ ಪಿಚಕಾರಿಯಿಂದ ಸೇರಿಸುವ ಕ್ರಮಕ್ಕೆ ಇನಾಕ್ಯುಲೇಷನ್ ಎಂದು ಕರೆಯುವುದು. ಇನಾಕ್ಯುಲೇಷನ್ ಮಾಡಿಸಿಕೊಂಡ ತರುವಾಯ ೪-೬ ಗಂಟೆಗಳ ವರೆಗೆ ಕೊಂಚ ಜ್ವರ ಬರುವುದು. ಹೀಗೆ ಜ್ವರ ಬರುವದು ಅವಶ್ಯಕ. ಚುಚ್ಚಿಸಿಕೊಂಡ ಜಾಗದಲ್ಲಿ ಚರ್ಮವು ಕೆಂಪುತೋರಿ ಕೊಂಚ ಊದುಕೊಳ್ಳಬಹುದು. ಊರು ಹೆಚ್ಚಿದಲ್ಲಿ ಬಿಸಿನೀರಿನ ಸೇಕವನ್ನು ಕೊಡಬೇಕು. ಜ್ವರವುಹೆಚ್ಚಾದಲ್ಲಿ ಬೆವರುಹುಟ್ಟಿಸುವ (Diaphoretic) ಔಷಧವನ್ನು ತೆಗೆದುಕೊಳ್ಳಬೇಕು. ಈ ರೋಗವು ಸಣ್ಣ (ಮೂರು ವರ್ಷಕ್ಕೆ ಕಡಿಮೆ ವಯಸ್ಸಿನ) ಮಕ್ಕಳಿಗೆ ತಗಲುವುದು ಅಪರೂಪ. ಯೌವನಸ್ಥರಿಗೆ ವಿಶೇಷವಾಗಿ ತಗಲುವುದು. ಬಾಣಂತಿಯರಿಗೆ ಇದರ ಕಾಟ ವಿಪರೀತ. ಅದುಕಾರಣ ಗರ್ಭಿಣಿಯರಿಗೆ ಇನಾಕ್ಯುಲೇಷನ್ ಮಾಡಿರುವುದು ಅತ್ಯವಶ್ಯಕ. ಇದರಿಂದ ಅವರಿಗೆ ಯಾವ ಕೇಡೂ ಉಂಟಾಗುವುದಿಲ್ಲ. ಗರ್ಭವನ್ನು ಧರಿಸಿ ೭ ತಿಂಗಳು ತುಂಬದಿದ್ದರೆ ಸಾಧಾರಣ ಸ್ತ್ರೀಯರಿಗೆ ಮಾಡುವಂತೆ ಇನಾಕ್ಯುಲೇಷನ್ ಮಾಡಬೇಕು. ೭ ತಿಂಗಳು ಮೀರಿದ್ದರೆ ಬಾರಿಗೆ ಅರ್ಧ ಡೋಸಿನಂತೆ ೪ ದಿನಗಳ ಅವಕಾಶ ಬಿಟ್ಟು ಎರಡು ಬಾರಿ ಇನಾಕ್ಯುಲೇಷನ್ ಮಾಡಬೇಕು. ಗರ್ಭಿಣಿಸ್ತ್ರೀಯರಿಗೆ ಇನಾಕ್ಯುಲೇಷನ್ ಮಾಡಿಸುವುದರಿಂದ ಅಕಾಲಪ್ರಸವವಾಗುವುದೆಂಬ ಭೀತಿಯನ್ನು ತೊಲಗಿಸಬೇಕು. ಇಂಥ ಸಂದರ್ಭವು ಇದುವರೆಗೂ ಕಂಡುಬಂದಿಲ್ಲ. ಇನಾಕ್ಯುಲೇಷನಿನ ಉಪಯೋಗವನ್ನರಿತ ನಾಗರಿಕ ಜನರೆಲ್ಲರೂ ತಾವಾಗಿಯೇ ಪ್ಲೇಗು ತಲೆದೋರಿದ ಕಾಲದಲ್ಲಿ ಇನಾಕ್ಯುಲೇಷನ್ ಮಾಡಿಸಿಕೊಳ್ಳಲು ವೈದ್ಯರಲ್ಲಿ ಹೋಗಬೇಕು. ಈ ಜನರು ತಮ್ಮ ನೆರೆಯಬಂಧುಗಳಿಗೂ ಪ್ರೋತ್ಸಾಹಿಸಿ ಇನಾಕ್ಯುಲೇಷನ್ ಮಾಡಿಸಿದಲ್ಲಿ ಉಭಯಥಾಪಿ ಅನುಕೂಲವಾಗುವುದು, ಮತ್ತೂ ಸರಕಾರದವರ ಉದ್ದೇಶವನ್ನೂ ನೆರವೇರಿಸಿದಂತಾಗುವುದು.

ಸರ್ಕಾರದವರು ಸೋಂಕು ತಗಲಿದ ಸ್ಥಳವನ್ನು ಬಿಟ್ಟು ಬೇರೊಂದೆಡೆಗೆ ಹೋಗಿ ವಾಸಮಾಡತಕ್ಕವರಿಗೆ ಅನುಕೂಲಸ್ಥಳವನ್ನು ಏರ್ಪಡಿಸಿ ಕೊಡಬೇಕಾದುದು ಅತ್ಯವಶ್ಯಕವು. ಊರಹೊರಗೆ ಕೆಲ ಷೆಡ್ಡುಗಳನ್ನು ಕಟ್ಟಿಸಿ ಅಲ್ಲಿ ಜನರ ವಾಸಕ್ಕೆ ಸ್ಥಳ ತೋರಿಸಿದರೆ ಸಾಕಾಗದು. ಏಕೆಂದರೆ—ಈವರೆಗೂ ಅನೇಕ ಮಂದಿ ಹೋಗಿ ವಾಸಮಾಡಿ ಮಲೇರಿಯಾ ಜ್ವರ ಸಂಕಟದನೆ ನಾಡಿ ಬಹು ಕಷ್ಟದಿಂದ ಊರಿಗೆ ಹಿಂತಿರುಗಿ ಬಂದಿರುವರು. ಈ ವಿಧವನ್ನು ತಪ್ಪಿಸಿ ಆರೋಗ್ಯಕರವಾದ-ಮತ್ತೂ ಸ್ವಚ್ಛವಾದ-ಕುಡಿಯುವ ನೀರಿಗೆ ಅಭಾವವಿಲ್ಲದ-ಸ್ಥಳವನ್ನು ಗೊತ್ತುಮಾಡಿ, ಅಲ್ಲಿ ವಾಸಸ್ಥಳಗಳನ್ನೇರ್ಪಡಿಸಿದರೆ ಜನರಿಗೆ ಸರ್ಕಾರದವರು ನಿಜವಾದ ಸಹಾಯವನ್ನು ಕೊಟ್ಟಂತಾಗುವುದು. ನಾನಾ ವಿಧದಲ್ಲಿ ಲಕ್ಷಾಂತರ ರೂಪಾಯಿಗಳನ್ನು ವೆಚ್ಚಮಾಡುತ್ತಿರುವಾಗ್ಗೆ ಜನರ ಆರೋಗ್ಯ ಸಂರಕ್ಷಣೆಗಾಗಿ ದೇಶದ ಒಟ್ಟು ಆದಾಯದಲ್ಲಿ ಹತ್ತರ ಒಂದು ಭಾಗವನ್ನಾದರೂ ವ್ಯಯಮಾಡಿದರೆ ದುಂದು ವೆಚ್ಚವಾಗಲಾರದು. ಅಂತೂ ಆರೋಗ್ಯವಿಚಾರದಲ್ಲಿ ಸರ್ಕಾರದವರು ಇನ್ನೂ ಹೆಚ್ಚು ಗಮನಿಸುವುದು ಅವಶ್ಯಕ.

ವೈ. ವಿಶ್ವನಾಥಯ್ಯ L.M & S.

ಮಹಮ್ಮದೀಯರಾಷ್ಟ್ರವೂ ಗೋಮಾಂಸಭಕ್ಷಣವೂ.

"ನಾನು ಒಬ್ಬ ಬಡ ಅಫಘಾನ ಮುಸಾಫರ (ಪ್ರಯಾಣಿಕ) ನು. ಇಂದಿಗೆ ೯ ವರ್ಷಗಳಿಂದಲೂ ಅಫಘಾನಸ್ಥಾನ ಮುಂತಾದ ಪ್ರಾಂತ್ಯಗಳಲ್ಲಿ ಸಂಚರಿಸುತ್ತಿರುವೆನು. ನಾಲ್ಕು ವರ್ಷಕಾಲ ಏಷಿಯಾ ಮೈನರಿನ ಕೇಂದ್ರಸ್ಥಾನವಾದ ದಮಾಸ್ಕಸ್‌ನಲ್ಲಿ ಸಂಚಾರಮಾಡುತ್ತಿದ್ದೆನು. ಆಗ, ಆ ನಗರಕ್ಕೆಲ್ಲ ಗೋಮಾಂಸವನ್ನು ಮಾರುವ ಒಂದೇ ಒಂದು ಅಂಗಡಿಯು ನನ್ನ ದೃಷ್ಟಿಗೆ ಗೋಚರವಾಯಿತು. ಅದು, ಅಲ್ಲಿ "ನಾಕಟೇ" ಎಂಬೊಂದು ಪೇಟೆಬೀದಿಯಲ್ಲಿರುವುದು. ಅಲ್ಲಿ ವ್ಯಾಪಾರಮಾಡತಕ್ಕ ಗಿರಾಕಿಗಳು ಎಹುದೀ ಮತ್ತೂ ಕ್ರಿಶ್ಚಿಯನ್ ಜಾತಿಯವರಾಗಿರುವರು. ಶಾಮು (ಏಷಿಯಾಟಿಕ್ ಮತ್ತೂ ತುರಕಸ್ಥಾನ) ದ ಆವ ಮುಸ್ಲಮಾನನೂ ಆ ಅಂಗಡಿಯಲ್ಲಿ ಗೋಮಾಂಸವನ್ನು ಕೊಂಡುಕೊಳ್ಳುವುದೂ ಇಲ್ಲ, ತಿನ್ನುವುದೂ ಇಲ್ಲ, ಮುಖ್ಯವಾಗಿ, ಇಸ್ಲಾಮಿಯಾ ರಾಷ್ಟ್ರದ ರಾಜಧಾನಿಗಳಾದ ಇಸ್ತಾಂಬುಲ್, ಅನಾಕೊಲ್ ಮುಂತಾದ ನಗರಗಳಲ್ಲಿ ನಾನು ವಾಸಮಾಡಿರುವೆನು. ಅಲ್ಲಿಯೂ ಪರೀಕ್ಷೆಮಾಡಿ ನೋಡಿದಾಗ, ಎಹುದೀ ಮತ್ತೂ ಕ್ರಿಶ್ಚಿಯನ್ ಜನರು ವಿನಾ ಮತ್ತಾರೂ ಗೋಮಾಂಸ ಭಕ್ಷಕರಾಗಿಲ್ಲವೆಂದು ತಿಳಿದುಬಂದಿರುವುದು; ಮತ್ತೆ, ಆಂಗ್ಲಾನುಕರಣೇಚ್ಛುಗಳಾದ ಕೆಲ ಮುಸಲಮಾನರು ಮಾತ್ರ ಗೋಮಾಂಸಭಕ್ಷಣವನ್ನಿಚ್ಛಿಸುವಂತೆ ಕಂಡುಬರುವುದು.

"ಮಿಸರ ದೇಶದಲ್ಲಿ ಅತ್ಯಂತ ಮಹತ್ವವುಳ್ಳದೂ ಇತಿಹಾಸದಲ್ಲಿ ಹೆಸರುಗೊಂಡುದೂ ಆದ ಕೈರೊ (Cairo) ಪಟ್ಟಣವಿರುವುದು. ಅಲ್ಲಿಯ ಜನಸಂಖ್ಯೆ ೧೨ ಲಕ್ಷ; ಅಲ್ಲಿ ಗೋಮಾಂಸವನ್ನು ವಿಕ್ರಯಿಸುವ ನಾಲ್ಕೈದು ಅಂಗಡಿಗಳಿದ್ದರೂ, ಎಹುದಿ ಮತ್ತೂ ಕ್ರಿಶ್ಚಿಯನ್ನರು ಮಾತ್ರ ಅಲ್ಲಿಯ ಗಿರಾಕಿಗಳಾಗಿರುವರು. ನಾನು ಅಲ್ಲಿ ಇದ್ದಕಾಲದಲ್ಲಿ ಆವ ಮುಸಲಮಾನನೂ ಒಂದು ಪಾವಾದರೂ ಗೋಮಾಂಸವನ್ನು ಕೊಂಡೊಯ್ದುದು ನನಗೆ ಗೋಚರವಾಗಲಿಲ್ಲ.

"ಅಫಘಾನಸ್ಥಾನದಲ್ಲಿ ಗೋಮಾಂಸವನ್ನು ತಿನ್ನತಕ್ಕ ಕೆಲ ಜನರಿರುವರು. ಆದರೆ ಅವರು ಕೇವಲ ಕನಿಷ್ಠವರ್ಗದಲ್ಲಿ ಗಣಿಸಲ್ಪಟ್ಟಿರುವರು. ನಾನು ಇರಾನಿಗೆ ಹೋಗಿರಲಿಲ್ಲವಾದರೂ, ಅಲ್ಲಿನ ವಿಷಯವನ್ನು ಅನುಸಂಧಾನಮಾಡಿ ನೋಡಿದಾಗ, ಇರಾನರು ಗೋಮಾಂಸಭಕ್ಷಕರಾಗಿರುವ ಸಂಭವವು ತೋರ್ಬರಲಿಲ್ಲ. ಏಷಿಯಾ ಮೈನರ್, ತುರ್ಕಸ್ಥಾನ (ಬುಖಾರಾ) ಮುಂತಾದ ಸ್ಥಳಗಳಲ್ಲಿಯೂ ಗೋವಧೆಯಾಗುವುದೇ ಇಲ್ಲ. ಆದರೆ ಯೂರೋಪಿನಲ್ಲಿ ಬಾಲ್ಕನ್ ನಗರವನ್ನೂ ನೋಡಿರುವೆನು. ಅಲ್ಲಿ ಖಾದ್ಯಾಹಾರಗಳೆಲ್ಲದರಲ್ಲಿಯೂ ಗೋಮಾಂಸವೇ ಉತ್ತಮವಾದುದೆಂದೆಣಿಸಲ್ಪಟ್ಟಿರುವುದು, ಮತ್ತೂ ಇತರ ಕಸಬಿನ ಅಂಗಡಿಗಳಲ್ಲಿ ಕೊಲ್ಲಲ್ಪಟ್ಟ ಹಸುವಿನ ಅಥವಾ ಎತ್ತಿನ ಬೇರೆ ದೇಹವಿಭಾಗಗಳು ನೇತಾಡುವುದನ್ನು ನೋಡಬಹುದು!

"ಅಫಘಾನಸ್ಥಾನದ ಪ್ರಕೃತದ ಬಾದಷಹಾರವರು, ಹಿಂದೂಸ್ಥಾನದಲ್ಲಿ ಸಂಚಾರಾರ್ಥವಾಗಿ ಹೊರಟು ದೇಹಳೀ (ಡಿಲ್ಲಿ) ನಗರದಲ್ಲಿಳಿದಿದ್ದಾಗ, ಇದೇ ಇಜಹಾ, ದ ದಿನ ಗೋವಿನ ಬದಲಾಗಿ ಕುರಿಯ ಬಲಿಯನ್ನು ಕೊಡುವುದೆಂಬದಾಗಿ ಅವರು ತಮ್ಮ ಜನಾಂಗದವರಿಗೆ ದೃಢೋಕ್ತಿಯಿಂದಲೂ, ಪ್ರೇಮಪೂರ್ವಕವಾಗಿಯೂ, ಉಪದೇಶಮಾಡಿದುದು, ನಮ್ಮ ದೇಶದ ಎಲ್ಲ ವೃತ್ತಪತ್ರಗಳ ಮೂಲಕ ಆಗ ಎಲ್ಲೆಲ್ಲಿಯೂ ಪ್ರಚಾರವಾಗಿ, ಅಪರ ಪ್ರಶಂಸೆಗಾಗಿದೆ. ಆಗಿನಿಂದಲೂ, ನಾನು ಈ ವಿಷಯವನ್ನು ಕೇವಲ ಜಾಗರೂಕತೆಯಿಂದಲೂ, ಧರ್ಮವೇಷದಿಂದಲೂ ಪರೀಕ್ಷಿಸುತ್ತಿರುವುದರಿಂದ ತಿಳಿದುಬಂದಿರುವುದೇನೆಂದರೆ,— ಮುಸಲಮಾನ ರಾಷ್ಟ್ರದ ಮುಸಲಮಾನರಲ್ಲಿ ಗೋಮಾಂಸ ಭಕ್ಷಣಪದ್ಧತಿ ಇಲ್ಲ.—

ಈ ವಿಷಯವಾಗಿ ನಾನು ಅನೇಕ ವಿದ್ವಜ್ಜನರಲ್ಲಿಯೂ, ಬುದ್ಧಿವಂತರಲ್ಲಿಯೂ, ವಾದವಿವಾದ ಮಾಡಿರುವೆನು. ಒಂದು ದಿನ ಒಬ್ಬ ವಿದ್ವಾಂಸನು, ಗೋಮಾಂಸ ಭಕ್ಷಣ ವಿಷಯದಲ್ಲಿ, ನಾನು ಕೇಳಿದ ಪ್ರಶ್ನೆಗೆ ಕೊಟ್ಟ ಉತ್ತರವು:— "ಗೋಮಾಂಸವು ರೋಗವನ್ನುಂಟುಮಾಡುವುದು; ಗೋಘೃತವು ಔಷಧಿಯಾಗಿರುವುದು; ಗೋದುಗ್ಧವು ಆಯುರ್ವರ್ಧಕವಾಗಿರುವುದು., ಅದಕ್ಕೆ ನಾನು "ಹಿಂದೂಸ್ಥಾನದಲ್ಲಿ ಗೋವಧೆಯೂ, ಗೋಮಾಂಸ ಭಕ್ಷಣವೂ, ಧರ್ಮವಿಹಿತವಾದುದೆಂದು, ಅಲ್ಲಿಯ ಮುಸಲಮಾನರೇತಕ್ಕೆ ತಿಳಿದುಕೊಂಡಿರುವರು?" ಎಂದು ಕೇಳಲು, ಆತನು "ಹಿಂದೂ ಮುಸಲ್ಮಾನರ ಪರಸ್ಪರ ದ್ವೇಷಕ್ಕೆ ಇದೇ ಕಾರಣವಾಗಿರುವುದು. ಇದರಲ್ಲಿ ಧರ್ಮದ ಸಂಬಂಧವೇನೇನೂ ಇಲ್ಲ. ಪೂರ್ವದ ಪಂಡಿತರೂ ಮತ್ತೂ ಮಹಮ್ಮದೀಯ ಮುಲ್ಲಾಗಳೂ ಪರಸ್ಪರ ದೋಷವನ್ನಾರೋಪಿಸಿ, ಪರಸ್ಪರ ವೇದನೆಯನ್ನುಂಟುಮಾಡುವುದರಲ್ಲಿ ಪ್ರವೃತ್ತಿಸುತ್ತಿದ್ದರು. ಪ್ರಕೃತ, ಉಭಯತ್ರರಲ್ಲಿ ವೈಮನಸ್ಸುಂಟಾಗುವ, ಘಾತಕವೂ, ಹೃದಯ ದ್ರಾವಕವೂ ಆದ ಕೆಲಸವನ್ನು ಮಾಡಕೂಡದೆಂಬುದೇ ಎಲ್ಲ ಮಹಮ್ಮದೀಯ ರಾಷ್ಟ್ರಗಳ ಉದ್ದೇಶವಾಗಿರುವುದು." ಎಂದು ಹೇಳಿದನು. ಅಫಘಾನ ಬಾದಷಹಾರವರ ಭಾಷಣಕ್ಕೂ ಇದೇ ಬೀಜವಾಗಿರುವುದು.

"ಮಹಮ್ಮದೀಯ ಧರ್ಮಾವತಾರವು ಅರಬ್ಬಿಸ್ಥಾನದಲ್ಲಿ ಆಗಿರುವುದರಿಂದ, ಅಲ್ಲಿಯ ಪದ್ಧತಿಗಳು, ಅರಬ್ಬಿಸ್ಥಾನದಲ್ಲಿಯ ಮುಸಲಮಾನರಿಗೆ ವಿಶೇಷವಾಗಿ ಗೊತ್ತಿರಬೇಕು. ನನ್ನ ಶೋಧನೆಯಲ್ಲಿಯೂ, ಕೇಳಿಕೆಯಲ್ಲಿಯೂ, ನಾನು ನೋಡಿರುವುದರಿಂದಲೂ, ತಿಳಿದು ಬಂದಿರುವುದೇನೆಂದರೆ:— (೧) ಗೋಮಾಂಸವು ರೋಗಕಾರಕವಾದುದು. (೨) ಮಹಮ್ಮದೀಯ ಧರ್ಮದಲ್ಲಿಯ ಕಟ್ಟಳೆಯಂತೆ, ಸತ್ಪುರುಷನು ಗೋಮಾಂಸ ಭಕ್ಷಕನನ್ನು ಸ್ಪರ್ಶಿಸುವುದಿಲ್ಲ.—ಹಿಂದೂಸ್ಥಾನದಲ್ಲಿ ನಾನು ಕೆಲಕಾಲ ಸಂಚರಿಸಿರುವೆನು. ಮುಸಲಮಾನ ರೋಗಿಗೆ ಹಕೀಮರು ಗೋಮಾಂಸವನ್ನು ತಿನ್ನಕೂಡದೆಂಬದಾಗಿ ಉಪದೇಶ ಮಾಡುವರು. ಔಷಧಕ್ಕೆ ಗೋಘೃತವನ್ನಾಗಲಿ, ಗೋದುಗ್ಧವನ್ನಾಗಲಿ ಅನುಪಾನವಾಗಿ ಹೇಳುವರೆಂಬುದು ನನ್ನ ಅನುಭವಕ್ಕೆ ಬಂದಿರುವುದು. ಪೂರ್ವ ದೇಶಗಳಲ್ಲಿ ಕೃಷಿ ಕಾರ್ಯಗಳೆಲ್ಲ ಗೋವತ್ಸಗಳನ್ನೇ ಅವಲಂಬಿಸಿರುವುವು; ಮತ್ತೂ ಸಾಧಾರಣವಾಗಿ ಎಲ್ಲ ಜನರೂ ಹಸುವಿನ ಹಾಲು ತುಪ್ಪವನ್ನು ವಿಶೇಷವಾಗಿ ತಿನ್ನುವರು ಈ ದೃಷ್ಟಿಯಿಂದ ಪೂರ್ವದೇಶದ ಮುಸಲಮಾನರು ಗೋಪಾಲನೆಯನ್ನು ಮಾಡಬೇಕು. ಗೋಮಾಂಸ ಭಕ್ಷಣಕ್ಕಿಂತಲೂ, ಇದು ಹೆಚ್ಚು ಲಾಭಕರವಾದುದರಿಂದ, ಗೋವೃಷಭ ಪಾಲಕರಾರೂ, ಉಪಯುಕ್ತವಾದ ದನಕರುಗಳನ್ನು ಕೊಲ್ಲುವುದರಲ್ಲುದ್ಯುಕ್ತರಾಗುವುದಿಲ್ಲ. ಹಸು, ಎತ್ತು, ಒಂಟೆ ಮೊದಲಾದ ಸಾಧುಪ್ರಾಣಿಗಳು ಬಲಹೀನವಾಗಿ ಮರಣೋನ್ಮುಖವಾಗಿದ್ದರೆ, ಅವುಗಳನ್ನು ಕೊಂದು ತಿನ್ನುವ ಪದ್ಧತಿಯು ಮುಸಲಮಾನರಲ್ಲಿರುವುದು. ಹಾಗಾದರೆ, ಮುಸಲ್ಮಾನ ಸಹೋದರರಾ! ವೈದ್ಯಶಾಸ್ತ್ರದಲ್ಲಿ ಭಕ್ಷಣಾರ್ಹವಾದುದಲ್ಲವೆಂದು ಪ್ರತಿಪಾದಿತವಾದ ಗೋಮಾಂಸವು ದುರ್ಬಲನಾದ ರೋಗಿಗೆ ಕಿಂಚಿತ್ತಾದರೂ ಒಳ್ಳೆಯದನ್ನು ಮಾಡಬಲ್ಲುದೆ? ಎಂಬುದನ್ನು ಊಹಿಸಿ ತಿಳಿಯಲಾರಿರಾ?

"ಆದರೆ ಮುಸಲಮಾನರಾದ ನಾವು ಸುರಾಪಾನಮಾಡುವುದರಲ್ಲಿಯೂ, ಪರಸ್ತ್ರೀ ಗಮನಮಾಡುವುದರಲ್ಲಿಯೂ, ಪರಸ್ಪರ ದ್ವೇಷಮಾಡುವುದರಲ್ಲಿಯೂ ನಮ್ಮ ಸರ್ವ ಶಕ್ತಿಯನ್ನು ಉಪಯೋಗಿಸುತ್ತಿರುವುದು ಎಷ್ಟು ವಿಷಾದಕರವಾದ ವಿಚಾರ! ಒಂದು ಸಾಮಾನ್ಯವಾದ ಹಸುವನ್ನು ಬಲಿಯಾಗರ್ಪಿಸುವುದೆಂದರೆ, ಮೂಲಾರ್ಥತಃ, ಅನ್ಯರ ಅಂತಃಕರಣದಲ್ಲಿ ಶೋಕಸಾಗರತರಂಗಗಳನ್ನೆಬ್ಬಿಸುವುದೆಂಬುದೇ ಹೊರತು, ಬೇರೆ ಉದ್ದೇಶವಿಲ್ಲ. ಪ್ರತಿವರ್ಷವೂ, ಇಂತಹ ಬಲಿಯನ್ನರ್ಪಿಸಿ ನಮ್ಮ ದೇಶಬಾಂಧವರಲ್ಲಿ ಕಲಹವನ್ನು ಬೆಳಸುವುದರಲ್ಲಿ ಪ್ರವೃತ್ತರಾಗಿರುವೆವು; ಮತ್ತೆ ಪರಸ್ಪರ ಅಂತಃಕರಣದಲ್ಲಿ ವೈರತ್ವದ ಬೀಜವನ್ನು ಬಿತ್ತುತ್ತಿರುವೆವು—ಈಗ, ಇವೆಲ್ಲವನ್ನೂ ವರ್ಜಿಸಿ, ಕರಗಳನ್ನು ಜೋಡಿಸಿಕೊಂಡು ಪರಮೇಶ್ವರನು ನಮಗೆ ಕ್ಷಮೆಯನ್ನೀಯುವಂತೆಯೂ, ಇಂತಹ ಪವಿತ್ರ ಕರ್ತವ್ಯದಕ್ಷರೂ, ಧರ್ಮಸಂರಕ್ಷಕರೂ, ಆದ ನಮ್ಮ ಅಫಘಾನಸ್ಥಾನದ ಬಾದಷಹಾರವರು ದೀರ್ಘಕಾಲ ರಾಜ್ಯವನ್ನಾಳುತ್ತ, ನಮ್ಮ ಧರ್ಮಮಾರ್ಗದರ್ಶಕರಾಗಿರುವಂತೆಯೂ ಪ್ರಾರ್ಥಿಸುವೆ.

"ಒಬ್ಬ ಅಫಘಾನಮುಸಾಫರ"

ಪತ್ರಕರ್ತ ಮಹಾಶಯ, ಅಫಘಾನಸ್ಥಾನದಲ್ಲಿಯ "ಸುರಾಜುಲ್ ಅಖಬಾರ್" ಎಂಬ ಫಾರಸಿ ವೃತ್ತಪತ್ರದಲ್ಲಿ ಒಬ್ಬ ಅಫಘಾನ ಮುಸಾಫರನು ಮೇಲೆಕಂಡ ಪತ್ರವನ್ನು ಪ್ರಸಿದ್ಧಪಡಿಸಿರುವನು. ಇದರಿಂದ, ಗೋಹತ್ಯದ ಮತ್ತೂ ಗೋಮಾಂಸ ಭಕ್ಷಣೆಯ ಸಂಬಂಧವಾಗಿ ಹಿಂದೂಸ್ಥಾನದ ಹೊರಗಿನ ಮಹಮ್ಮದೀಯರಲ್ಲಿ ಪ್ರಚಲಿತವಾಗಿರುವ ಮತವೇನಿದೆ ಎಂಬುದು, ನಮ್ಮ ಕರ್ಣಾಟಕ ಸಹೋದರರಿಗೆ ತಿಳಿಯುವಂತಿದೆ. ಆದುದರಿಂದ ಆ ಪತ್ರದ ಸಾರಾಂಶವನ್ನು ನಾನು ಒಂದು ಪತ್ರದಿಂದ ಪರಿವರ್ತನಮಾಡಿ, ತಮ್ಮ ಬಳಿಗೆ ಕಳುಹಿಸಿರುವೆನು. ಇದನ್ನು ತಮ್ಮ ಪತ್ರದಲ್ಲಿ ಪ್ರಕಟಿಸಿ, ತನ್ಮೂಲಕ ಭಾರತಮಾತೆಯ ಪುತ್ರರೆಂಬಹೆಸರನ್ನು ಸಾರ್ಥಕಗೊಳಿಸುವ ಇತರ ಪತ್ರಕರ್ತರೂ ತಮ್ಮ ಪತ್ರಗಳಲ್ಲಿ ಪ್ರಸಿದ್ಧಗೊಳಿಸಿ, ನಮ್ಮ ಭಾರತಭೂಮಿಯ ಮಹಮ್ಮದೀಯ ಸಹೋದರರಿಗೆ, ಅವರ ಧರ್ಮದ ಸತ್ಯವಾದವನ್ನು ತಿಳಿಯಗೊಳಿಸುವಂತೆ ಮಾಡಬೇಕೆಂದು ಪ್ರಾರ್ಥಿಸುವ,

ಡಿ. ಕೆ. ಭಾರದ್ವಾಜ.

ಯುದ್ಧವಾರ್ತೆ.

(ಪಶ್ಚಿಮರಂಗ)

ಇಂಗ್ಲೀಷ್ ಫ್ರಾನ್ಸ್ ಸೇನೆಗಳಿಗಾದ ಮಹಾಜಯ.

ಸೆಪ್ಟಂಬರ್ ತಾ॥೧೦ ರಿಂದ ನಾಲ್ಕು ದಿನಗಳ ವರೆಗೆ ನಡೆದ ಯುದ್ಧವು ಬಹು ಭಯಂಕರವಾಗಿದ್ದಿತು. ಈ ಯುದ್ಧವು ಪ್ಯಾರಿಸ್ಸಿನ ವಾಯುವ್ಯದ ಮೂಲೆಯಿಂದಹಿಡಿದು ಉತ್ತರ ಈಶಾನ್ಯ ಪೂರ್ವ ಆಗ್ನೇಯ—ಈ ದಿಕ್ಕುಗಳ ವರೆಗೂ ಇರುವ ಎಲ್ಲ ಸ್ಥಲಗಳಲ್ಲೂ ಎಂದರೆ ೧೬೦ ಮೈಲಿಗಳ ಪ್ರದೇಶದಲ್ಲಿ ೭-೮ ಲಕ್ಷ ಸೈನ್ಯವು ಕೂಡಿ ನಡೆದಿತು. ಇದರ ಪರಿಣಾಮವು ಮಿತ್ರ ಸೈನ್ಯಗಳಿಗೆ ವಿಶೇಷವಾದ ಜಯವೂ ಶತ್ರುಸೈನ್ಯಕ್ಕೆ ಅಪರಿಮಿತವಾದ ನಷ್ಟ ಪರಾಜಯಗಳೂ ಆಗಿರುತ್ತವೆ. ಜರ್ಮನ್ ಚಕ್ರವರ್ತಿಯವರು ಈ ಯುದ್ಧವಾಗುವ ಸಮಯದಲ್ಲಿ ಮಗ್ಗುಲ ಲುಕ್ಸೆಂಬರ್ಗಿನಲ್ಲೇ ಇದ್ದರು. ರಾತ್ರಿ ಹೊತ್ತು ಅವರ ವಾಸ ಸ್ಥಲದಮೇಲೆ ಆಕಾಶವಿಮಾನಗಳು ಕಾವಲಾಗಿರುತ್ತಿದ್ದವು. ಜರ್ಮನ್ ಸೈನ್ಯವು ಪ್ಯಾರಿಸ್ಸಿಗೆ ಮುತ್ತುವ ಹಾದಿಯನ್ನು ಬಿಟ್ಟು, ಪೂರ್ವಕ್ಕೆಹೋಗಿ ಲುಕ್ಸೆಂಬರ್ಗಿನಲ್ಲಿರುವ ತಮ್ಮ ಮೂಲಸೈನ್ಯದೊಡನೆ ಸೇರಬೇಕೆಂಬ ಯೋಚನೆಯಲ್ಲಿರುವಂತೆ ಕಾಣುವುದೆಂದು ಹಿಂದೆ ನಾವು ತಿಳಿಯಸಿದ್ದೆವಷ್ಟೆ. ಅವರ ಆ ಪ್ರಯತ್ನವನ್ನು ಇಂಗ್ಲೀಷ್ ಫ್ರೆಂಚ್ ಸೈನ್ಯಗಳೆರಡೂ ಸಾಗಗೊಡಲಿಲ್ಲ. ಈ ಸಂದರ್ಭದಲ್ಲೇ ಉಭಯಪಕ್ಷದವರಿಗೂ ಈ ಸ್ಥಲಗಳಲ್ಲಿ ಅಗಾಧವಾದ ಯುದ್ಧವು ನಡೆದಿರುವುದು. ಈ ಯುದ್ಧಾರಂಭಸಮಯದಲ್ಲಿ ಜರ್ಮನಿಯ ಒಬ್ಬ ದಳವಾಯಿಯು ತಮ್ಮ ಸೈನಿಕರನ್ನು ಕುರಿತು— "ಈ ನಡೆಯುತ್ತಿರುವ ಯುದ್ಧದ ಪರಿಣಾಮವೇ ಮುಂದಣ ನಮ್ಮ ಸ್ಥಿತಿಗತಿಗಳನ್ನು ನಿರ್ಧರಿಸಲಿಕ್ಕಿರುವುದರಿಂದ ಪ್ರಾಣವಿರುವವರೆಗೂ ನೀವುಗಳು ಹೋರಾಡಬೇಕು." ಎಂದು ಆಜ್ಞಾಪತ್ರಿಕೆಯನ್ನು ಕೊಟ್ಟಿದ್ದನು.

ಸೆಪ್ಟಂಬರ್ ತಾ॥ ೮ ರಲ್ಲಿ ಫ್ರೆಂಚರ ದಳವಾಯಿಯಾದ ಜನರಲ್ ಜಾಫ್ರೆಯವರು ತಮ್ಮ ಸೇನೆಯನ್ನು ಕುರಿತು ಹೀಗೆ ಆಜ್ಞೆಯನ್ನು ಪತ್ರಿಕಾಮೂಲಕ ತಿಳಿಸಿದ್ದರು—"ನಮ್ಮ ದೇಶದ ಕ್ಷೇಮವು ಈ ಯುದ್ಧವನ್ನು ಆಧಾರಮಾಡಿಕೊಂಡಿದೆ ಆದುದರಿಂದ ಈ ಯುದ್ಧವನ್ನು ಆರಂಭಿಸುವುದಕ್ಕೆ ಮೊದಲೇನಾನು ನಿಮಗೆ ಇದು ಹಿಂದುಮುಂದು ನೋಡತಕ್ಕ ಸಮಯವಲ್ಲವೆಂದು ಎಚ್ಚರಿಸುವವನಾಗಿದ್ದೇನೆ. ನೀವು ಶತ್ರುಗಳನ್ನು ಇದಿರಿಸಿ ಹಿಂದಕ್ಕೆ ಅಟ್ಟುವ ವಿಷಯದಲ್ಲಿ ನಿಮ್ಮ ಶಕ್ತಿ ಸಾಹಸಗಳನ್ನೆಲ್ಲಾ ಪ್ರಯೋಗಿಸಬೇಕು. ಶತ್ರುಗಳನ್ನು ಹಿಮ್ಮೆಟ್ಟಿಸಿ ಮುಂದಕ್ಕೆ ಸಾಗಿ ಹೋಗಲಾರದ ಸೇನೆಯು ಯಾತಕ್ಕೂ ಬಂದುದಲ್ಲ. ಶತ್ರುಗಳು ನಿಮ್ಮನ್ನು ಹಿಂದಕ್ಕೆ ದೂಡದಂತೆ ನಿಮ್ಮನ್ನು ನೀವು ಕಾಪಾಡಿಕೊಳ್ಳಬೇಕು. ಶತ್ರುಗಳಿಗೆ ಹೆದರಿ ತಲೆತಪ್ಪಿಸಿಕೊಂಡು ಓಡಿಹೋಗಿ ಹಿಂದಕ್ಕೆ ಬರುವುದಕ್ಕಿಂತಲೂ ಅವರೊಡನೆ ಕಾದಾಡಿ ಪ್ರಾಣವನ್ನು ಕಳೆದುಕೊಳ್ಳುವುದು ಲೇಸು; ಈಗಿನ ಯುದ್ಧದಲ್ಲಿ ನಮ್ಮಸೇನೆಗಳು ಓಡಿಹೋಗಿ ಹಿಂದಿರುಗಿ ಬರುವಪಕ್ಷದಲ್ಲಿ ಎಷ್ಟು ಮಾತ್ರವೂ ಅದನ್ನೊಪ್ಪಲಾರೆವು" ಎಂಬುವಾಗಿ. ಮತ್ತೂ ಮಿತ್ರಸೈನ್ಯವು ಜಯಶೀಲವಾಗಿ ವಿಟ್ರಿ ಫ್ರಾಯಿಂಕ್‌ಪಟ್ಟಣಗಳನ್ನು ಹಿಡಿದುಕೊಂಡಬಳಿಕ, ೮ ನೇ ನಂ॥ ಜರ್ಮನ್ ಸೈನ್ಯಾಧಿಕಾರಿಯು ಅಲ್ಲಿ ವಾಸವಾಗಿದ್ದ ಮನೆಗೆ ಫ್ರೆಂಚ್ ಸೈನ್ಯವು ನುಗ್ಗಿದಾಗ ಅಲ್ಲಿ ಸಿಕ್ಕಿದ ಒಂದು ಕಾಗದವು, ಸೆಪ್ಟಂಬರ್ ತಾ॥ ೮ ರಲ್ಲಿ ಆ ಜರ್ಮನಿ ಸೇನೆಯ ಅಧಿಪತಿಯು ಸೈನಿಕರಿಗೆ ಕೊಟ್ಟ ಆಜ್ಞೆಯ ಪತ್ರವಾಗಿದ್ದಿತು. ಅದರಲ್ಲಿ ಹೀಗೆ ಕಾಣಿಸಲ್ಪಟ್ಟಿದ್ದಿತು.—"ನಮ್ಮ ಪ್ರಯತ್ನಗಳು ಫಲಿಸಿವೆ. ನಾವು ಫ್ರೆಂಚ್ ಸೈನ್ಯವನ್ನು ಹಿಂದಕ್ಕೆ ದೂಡಿ, ಅವರು ಯುದ್ಧವನ್ನು ಮಾಡಬಾರದೆಂದು ಸಂಕಲ್ಪಿಸಿಕೊಂಡಿದ್ದರೂ ನಿರ್ವಾಹವಿಲ್ಲದೆ ಯುದ್ಧಕ್ಕೆ ನಿಲ್ಲುವಂತೆ ಮಾಡಿರುವೆವು. ನಾಳೆಯ ಯುದ್ಧದಲ್ಲಿ ಯಾವುದಾದರೊಂದು ಪರಿಷ್ಕಾರವಾಗುವುದು. ಆದುದರಿಂದ ಪ್ಯಾರಿಸ್ಸಿನಿಂದ ವರ್ಡನ್ನಿನ ವರೆಗಿರುವ ಜರ್ಮನ್ ಸೈನ್ಯವೆಲ್ಲವೂ ನಾಳೆ ದಿನ ಯುದ್ಧಮಾಡಬೇಕು. ಜರ್ಮನ್‌ದೇಶದ ಕ್ಷೇಮವನ್ನೂ ಗೌರವವನ್ನೂ ಕಾಪಾಡುವುದಕ್ಕೆ ಪ್ರತಿಯೊಬ್ಬ ಸೈನಿಕನೂ ಪ್ರತಿಯೊಬ್ಬ ಅಧಿಕಾರಿಯೂ ಸಹ ಇದುವರೆಗೆ ಮಾಡಿದ ಯುದ್ಧದಿಂದ ಉಂಟಾಗಿರುವ ಅಲಸ್ಯವನ್ನು ಲಕ್ಷಿಸದೆ ಹಿಂದುಮುಂದು ನೋಡದೆ ದೇಹದಲ್ಲಿ ಪ್ರಾಣವಿರುವವರೆಗೂ ಧೈರ್ಯದಿಂದ ಹೋರಾಡುವಿರೆಂದು ನಂಬುತ್ತೇನೆ. ನಾಳೆದಿನದ ಯುದ್ಧವು ಅಷ್ಟು ಪ್ರಮುಖವಾಗಿದೆ" ಎಂದಿದ್ದಿತು. ಇದನ್ನೆಲ್ಲಾ ನೋಡಿದರೆ ಈ ಯುದ್ಧವನ್ನು ಎಷ್ಟುಮಟ್ಟಿಗೆ ಪ್ರಮುಖವಾದುದೆಂದು ಉಭಯಪಕ್ಷದವರೂ ನಿರ್ಧರಿಸಿ ಎಷ್ಟು ಸನ್ನಾಹಗಳನ್ನು ಮಾಡಿದ್ದರೆಂಬುದು ಗೊತ್ತಾಗುವುದು. ಇಂಥ ಅಣಿಯಾಗಿದ್ದ ಮಹಾಯುದ್ಧಕ್ಕೆ ಇದುವರೆಗೆ ಆದ ಯಾವ ಯುದ್ಧವೂ ಹೋಲತಕ್ಕುದಾಗಿರಲಿಲ್ಲವೆಂದು ಹೇಳಬಹುದಾಗಿದೆ.

ಈ ಯುದ್ಧವಿಷಯಕವಾಗಿ ವಾರ್ತಾ ಸಂಘದವರು ಹೀಗೆ ಪ್ರಕಟಿಸಿದ್ದಾರೆ:—

ಸೆಪ್ಟಂಬರ್ ತಾ॥ ೬ ರಲ್ಲಿ ಬಲಭಾಗದಲ್ಲಿದ್ದ ಜರ್ಮನ್ ಸೈನ್ಯಗಳು ದಕ್ಷಿಣದಿಕ್ಕಿನಲ್ಲಿರುವ ಕಲೋಮಿಯರ್ಸಿನ (ಇದು ಪ್ಯಾರಿಸ್ ಪಟ್ಟಣದ ಪೂರ್ವಕ್ಕೆ ಬಹುಶಃ ೩೫ ಮೈಲಿಗಳ ದೂರದಲ್ಲಿದೆ) ವರೆಗೂ ಬಂದುವು. ಜರ್ಮನರ ಅಶ್ವಸೇನೆಯು ನೋಜೆಂಟ್‌ಪರ್—ಮಾರ್ನೆನದಿಯವರೆಗೂ (ಇವು ಪ್ಯಾರಿಸ್ಸಿಗೆ ಉತ್ತರದಲ್ಲಿವೆ.) ಬಂದಿತು. ಜ್ಹಾರ್ನದಿಯ ಪಶ್ಚಿಮ ಭಾಗದಿಂದ ಇಂಗ್ಲೀಷು ಸೈನ್ಯವೂ, ಪ್ಯಾರಿಸ್ಸಿನಿಂದ ಫ್ರೆಂಚ್ ಸೈನ್ಯವೂ ಹೊರಕ್ಕೆ ಬರಬಹುದೆಂದು ನಿರೀಕ್ಷಿಸಿ ಕೊಂಡಿದ್ದ ಜರ್ಮನ್‌ಸೈನ್ಯಗಳು ಅಡ್ಡವಾಗಿದ್ದುದರಿಂದ ಕಾಲೋಮಿಯರ್ಸ್- ನೋಜೆಂಟ್‌ಪರ್- ಮಾರ್ನೆ ಇವುಗಳವರೆಗೂ ಜರ್ಮನ್ ಸೇನೆಯು ವ್ಯಾಪಿಸಿಕೊಂಡರೂ, ಅದು ನಮ್ಮ ಪಕ್ಷದವರಿಗೆ ಗೊತ್ತಾಗಲಿಲ್ಲ. ಶತ್ರುಸೇನೆಗಳಲ್ಲಿ ಕೆಲವು ದಕ್ಷಿಣಮುಖವಾಗಿ ಹೊರಟುದರಿಂದ ಬಲಗಡೆಯಲ್ಲಿದ್ದ ಇಂಗ್ಲೀಷ್ ಸೈನ್ಯವು ಒಳ್ಳೆಯ ವಿಪತ್ತಿನಲ್ಲಿ ಸಿಕ್ಕಿದ್ದಿತು. ಈ ಸ್ಥಿತಿಯನ್ನು ಫ್ರೆಂಚ್ ಸೈನ್ಯವು ತಿಳಿದು ಫ್ರೆಂಚ್ ಇಂಗ್ಲೀಷ್ ಸೈನ್ಯಗಳೆರಡೂ ಸೆಪ್ಟಂಬರ್ ತಾ॥ ೮ ರಲ್ಲಿ ಬಲಗಡೆಯಲ್ಲಿದ್ದ ಜರ್ಮನಿ ಸೈನ್ಯದಮೇಲೆ ಬಿದ್ದುವು. ಕಲೋಮಿಯರ್ಸ್- ಮಾರ್ನೆಗಳ ಸಮೀಪಕ್ಕೆ ಬಂದು ಅಡ್ಡಲಾಗಿ ಸೇನೆಯನ್ನು ಕಾಣಗೊಡಿಸದಂತೆ ಮಾಡಿದ್ದ ಜರ್ಮನ್‌ಸೈನ್ಯದ ಮೇಲೆ ಪ್ಯಾರಿಸ್ ಪಟ್ಟಣವನ್ನು ರಕ್ಷಿಸಿಕೊಂಡಿದ್ದ ಫ್ರೆಂಚ್ ಸೇನೆಯು ಬಂದು ಬಿದ್ದಿತು. ಆಗ ನಾಟಿಲ್ ಹಾಡಿಸ್- ಮಾರ್ಕ್ಸ್- ಈ ಪಟ್ಟಣಗಳ ಹತ್ತಿರ ಜರ್ಮನಿ-ಫ್ರೆಂಚ್‌ಸೇನೆಗಳಿಗೆ ಭೀಕರವಾದ ಯುದ್ಧವಾಯಿತು. ಬಲಗಡೆಯಲ್ಲಿದ್ದ ಜರ್ಮನಿಯ ಮತ್ತೊಂದು ದೊಡ್ಡ ಸೇನೆಯಮೇಲೆ ಇದುವರೆಗೆ ಪ್ಯಾರಿಸ್ಸಿನ ಉತ್ತರದಲ್ಲಿದ್ದು ಬಳಿಕ ಪೂರ್ವಭಾಗವನ್ನು ಕಾಪಾಡಿಕೊಂಡಿದ್ದ ಇಂಗ್ಲೀಷ್‌ಸೇನೆಯೂ ಫ್ರೆಂಚ್‌ಸೇನೆಯೂ ಕೂಡಿ ಬಂದಿದ್ದುವು ಈ ಸ್ಥಲದಲ್ಲಿ ಇಂಗ್ಲೀಷ್ ಫ್ರೆಂಚ್‌ಸೈನ್ಯಗಳೆರಡೂ ಸಂಪೂರ್ಣವಾದ ಜಯವನ್ನು ಹೊಂದಿದುವು.

ಪಕ್ಕದಲ್ಲಿದ್ದ ಜರ್ಮನ್ ಸೈನ್ಯವು ಮುರೋವಿನ ವರೆಗೂ ಹಿಂದಕ್ಕೆ ದೂಡಲ್ಪಟ್ಟಿದೆ. ಈ ಮುರೋವಿನ ಬಳಿಯಲ್ಲಿ ಜರ್ಮನ್ ಸೇನೆಯು ನಿಂತು ಇಂಗ್ಲೀಷ್ ಸೈನ್ಯದೊಡನೆ ಭಯಂಕರವಾಗಿ ಕಾದಾಡಿತು. ಆಗ ಫ್ರೆಂಚ್ ಸೇನೆಯು ಬಂದು ಪ್ರತಿಭಟಿಸಿತು. ಅಲ್ಲಿನ ಜರ್ಮನ್ ಸೇನೆಯು ದೊಡ್ಡದಾಗಿದ್ದರೂ ತಮ್ಮ ಮೇಲೆ ಬೀಳುತ್ತಿರುವ ಶತ್ರು ಸೈನ್ಯವನ್ನು ಹಿಂದಕ್ಕೆ ದೂಡಲಾರದೆ ಹೋಯಿತು. ಶತ್ರುಸೇನೆಗಳನ್ನು ಗ್ರಾಂಡ್ ಮೋರಿನ್-ಪೆಟಿಟ್- ಮೋರಿನ್ ನದಿ ಇವುಗಳ ಕಡೆಗೆ ಬರಗೊಡಿಸದಂತೆ ಮಾಡಬೇಕೆಂದು ಬಲಪಕ್ಕದಲ್ಲಿದ್ದ ಜರ್ಮನ್‌ಸೇನೆಯು ಎಷ್ಟೋ ವಿಧವಾದ ಪ್ರಯತ್ನಗಳನ್ನು ಮಾಡಿದರೂ ಅದರಾಟವು ಸಾಗಲಿಲ್ಲ. ಇಂಗ್ಲೀಷ್ ಫ್ರೆಂಚ್ ಸೇನೆಗಳು ಜರ್ಮನ್‌ಸೈನ್ಯವನ್ನು ಗ್ರಾಂಡ್‌ಮೋರಿನ್- ಪೇಟಿಟ್ ಮೋರಿನ್ ನದಿಗಳನ್ನು ದಾಟಿ ಆಚೆಗೆ ಹೋಗುವಂತೆ ಮಾಡಿಬಿಟ್ಟು ಬಲಪಕ್ಕದಲ್ಲಿದ್ದ ಜರ್ಮನ್‌ಸೈನ್ಯವನ್ನು ಧ್ವಂಸಮಾಡಲು ಸಿದ್ಧವಾಗಿದ್ದುವು. ಎಡಪಕ್ಕದಲ್ಲಿದ್ದ ಇಂಗ್ಲೀಷ್ ಫ್ರೆಂಚ್‌ಸೇನೆಗಳು, ಜರ್ಮನಿಯ ದೊಡ್ಡ ಸೇನೆಯ ಮುಂಭಾಗದಲ್ಲಿದ್ದ ಒಂದು ಸಣ್ಣ ಸೈನ್ಯವನ್ನು ಹೊಡೆದೋಡಿಸಿದುದರಿಂದ ಬಲಪಕ್ಕದಲ್ಲಿದ್ದ ಜರ್ಮನ್‌ಸೈನ್ಯವು ತಾ॥೧೦ ರಲ್ಲಿ ಮಾರ್ನೆನದಿಯನ್ನು ದಾಟಿ ಓಡಿಹೋಯಿತು. ಕೆಲ ಇಂಗ್ಲೀಷ್ ಸೇನೆಗಳೂ ಎಡಪಕ್ಕದಲ್ಲಿದ್ದ ಕೆಲ ಫ್ರೆಂಚ್‌ಸೈನ್ಯಗಳೂ ಕೂಡ ಛಾಟೋ-ಮತ್ತೂ ತೈರಿಗಳ ಬಳಿಯಲ್ಲಿ ತಾವೂ ಮಾರ್ನೆನದಿಯನ್ನು ದಾಟಿದುವು ಇವು ಅಟ್ಟಿಕೊಂಡು ಹೋಗುತ್ತಿದ್ದುದರಿಂದ ತಾ॥೧೦-೧೧ ರಿಂದಲೂ ಜರ್ಮನ್‌ಸೇನೆಗಳು ಈಶಾನ್ಯಮೂಲೆಯಿಂದ ನುಗ್ಗಿರಿವ್ವಿಸಿಗೆ ಪಶ್ಚಿಮದಲ್ಲಿರುವ ಸೋಯಿಸನ್ಸ್ ಪಟ್ಟಣದಕಡೆಗೆ ಹೋಗಬೇಕಾಗಿಬಂದಿತು. ಈಚೆಗೆ ಅವರು ಆ ಪಟ್ಟಣನ್ನೂ ಬಿಟ್ಟುಹೋಗುತ್ತಿದ್ದಾರೆಂದು ತಿಳಿಯಬಂದಿತು. ಬಲಪಕ್ಕದ ಜರ್ಮನ್ ಸೈನ್ಯದ ಅವಸ್ಥೆಯು ಹೀಗಾಗಲಾಗಿ ಮಧ್ಯದಲ್ಲಿದ್ದ ಜರ್ಮನ್‌ಸೈನ್ಯಕ್ಕೂ ಪೂರ್ವದಲ್ಲಿದ್ದ ಫ್ರೆಂಚ್‌ಸೈನ್ಯಕ್ಕೂ ಯುದ್ಧವಾಯಿತು. ಮಧ್ಯದಲ್ಲಿದ್ದ ಜರ್ಮನ್‌ಸೈನ್ಯವು ವಿಟ್ರಿಯವರೆಗೂ ಬಂದಿತು. ಮಾರ್ನೆನದಿಯಿಂದಮ್ಯೂಜ್ ನದಿಯವರೆಗೂ ಮಧ್ಯದಲ್ಲಿ ವ್ಯಾಪಿಸಿಕೊಂಡಿದ್ದಫ್ರೆಂಚ್ ಸೈನ್ಯಗಳು ಆ ಶತ್ರುಸೈನ್ಯವನ್ನು ಆರ್ಗೋನೆ ಕಾಡುಗಳ ವರೆಗೂ ಹೊಡೆದೋಡಿಸಿದುವು. ಆಗ ಮೂರನೆ ನಂ॥ ಫ್ರೆಂಚ್ ಸೇನೆಯು ಜರ್ಮನಿಯವರ ೧೬೦ ಫಿರಂಗಿಗಳನ್ನು ಹಿಡಿದುಕೊಂಡಿತು. ಆದುದರಿಂದ ಎತ್ತ ನೋಡಿದರೂ ಜರ್ಮನ್ ಸೈನ್ಯಗಳು ಮ್ಯೂಜ್ ನದಿಯ ಪಶ್ಚಿಮದಿಕ್ಕಿಗೇ ಓಡಿಹೋಗಲಾರಂಭಿಸಿದುವು. ಆಗ ಜರ್ಮನರು ಚೆನ್ನಾಗಿ ಧೈರ್ಯಗೆಟ್ಟುದಲ್ಲದೆ ಅನೇಕ ಮಂದಿ ಸೈನಿಕರನ್ನೂ ಬಹಳ ಫಿರಂಗಿಗಳನ್ನೂ ಕಳೆದುಕೊಂಡರು.

ಇದೇ ವಿಷಯವನ್ನು ಫ್ರೆಂಚ್ ಗೌರ್ನಮೆಂಟಿನವರೂ ಸಾಂಗವಾಗಿ ಹಿಗೆಯೇ ಪ್ರಕಟಿಸಿರುವುದಲ್ಲದೆ ನಮ್ಮ ಸೇನೆಗೆ ಬಲಪಕ್ಕದಲ್ಲಿ ಜರ್ಮನ್‌ಸೇನೆಗಳು ನಾನ್ಸಿಪ್ರಾಂತವನ್ನು ಕೊಡ ಬಿಟ್ಟು ಈದಿನ ಹಿಂದಕ್ಕೆ ಹೋಗುತ್ತಲಿವೆಯೆಂದು ತಾ॥ ೧೩ ರಲ್ಲಿ ಪ್ರಕಟಿಸಿದ್ದಾರೆ. ಮತ್ತೂ ನಮ್ಮ ಸೇನೆಗಳು ಮರಳಿ ಲ್ಯೂನವಿಲ್ಲೆಯನ್ನು (ಇದು ಜರ್ಮನಿಯವರಿಂದ ಈ ಮೊದಲೇ ಹಿಡಿದುಕೊಳ್ಳಲ್ಪಟ್ಟಿದ್ದ ಫ್ರೆಂಚರ ಕೋಟೆ) ಹಿಡಿದುಕೊಂಡುವು. ನಮ್ಮ ಸೇನೆಗಳು ಸ್ವಲ್ಪವೂ ವಿಶ್ರಾಂತಿಯಿಲ್ಲದೆ ೫ ದಿನಗಳಿಂದಲೂ ಕಾದಾಡಿದುದರಿಂದ ಬಳಲಿಹೋಗಿದ್ದರೂ, ಬೇಗಬೇಗನೆ ಹಿಂದೆಗೆದು ಜರ್ಮನ್ ಸೇನೆಗಳುಹಠಾತ್ತಾಗಿ ಫ್ರಾನ್ಸ್‌ದೇಶವನ್ನು ಬಿಟ್ಟು ಹೋಗುತ್ತಿವೆ. ಜರ್ಮನ್‌ಸೇನೆಯು ಬೀಡುಬಿಟ್ಟಿದ್ದ ಸ್ಥಲದಲ್ಲಿಮಾಂಟ್‌ಮಿರೇಯಿಲ್ ಬಳಿಯ ಭೂಚಿತ್ರಗಳೂ, ಸೈನ್ಯಶಾಖೆಯ ಸಂಬಂಧವಾದ ಕಾಗದಪತ್ರಗಳು ಮೊದಲಾದುವೂ ಬಿದ್ದಿದ್ದುವು. ಶತ್ರು ಸೇನೆಗಳು ಹಿಂದಿರುಗಿ ಹೋದ ಮಾರ್ಗದಲ್ಲಿ ಎಲ್ಲಿ ನೋಡಿದರೂ ತುಪಾಕಿಗಳು ಫಿರಂಗಿಗಳು ಮದ್ದುಗುಂಡು ಮೊದಲಾದ ಸಾಮಾನುಗಳು, ಬಿಟ್ಟು ಹೋಗಲ್ಪಟ್ಟಿರುವುವು. ಪ್ರೊಮೆಂಟಿಯರ್ಸಿನ ಬಳಿಯಲ್ಲಿ ಹೀಗೆ ಬಿಟ್ಟುಹೋಗಿರುವ ಸಾಮಗ್ರಿಗಳು ವಿಶೇಷವಾಗಿದ್ದುವು. ಇಂಗ್ಲೀಷ್ ಫ್ರೆಂಚ್ ಸೇನೆಗಳೊಳಗೆ ಸೆರೆಸಿಕ್ಕಿದ ಜರ್ಮನ್‌ಸೈನಿಕರು ಬಹಳ ಬಳಲಿಕೆ ಹಾರವಿಲ್ಲದೆ ತೊಂದರೆ ಪಟ್ಟಿದ್ದರು. ನಮಗೆ ಸಿಕ್ಕಿರುವಶತ್ರುಗಳ ಕುದುರೆಗಳು ಸಹ ಹಾಗೆಯೇ ಬಳಲಿರುವುವು.

ಈಗ ನಡೆಯುತ್ತಿರುವ ಯುದ್ಧಗಳಲ್ಲೆಲ್ಲಾ ಈ ಯುದ್ಧವೇ ಅತ್ಯಂತ ಮಹತ್ತರವಾಗಿದ್ದಿತು ಇದರಲ್ಲಿ ತಾವು ಪರಾಜಿತರಾದೆವೆಂದು ಜರ್ಮನಿ ಸರ್ಕಾರದವರೇ ಒಪ್ಪಿಕೊಂಡಿದ್ದಾರೆ ಈ ಯುದ್ಧದಲ್ಲಿ ಫ್ರೆಂಚರು ಜರ್ಮನಿಯವರ ಒಂದು ಬಿರುದಿನ ಧ್ವಜವನ್ನು ಹಿಡಿದುಕೊಂಡು ಪ್ಯಾರಿಸ್ಸಿನಲ್ಲಿಟ್ಟರು ಇದನು ಫ್ರೆಂಚ್ ಸೈನಿಕರು ಹಿಡಿದುಕೊಂಡು ಬರುತ್ತಿರುವಾಗ ಫ್ರೆಂಚ್ ಪ್ರಜೆಗಳೆಲ್ಲಾ ಸಂತೋಷಧ್ವನಿಯನ್ನು ಮಾಡುತ್ತಿದ್ದರು. ಆಗ ಅನೇಕ ಫ್ರೆಂಚ್ ಸೈನಿಕರು ಇಂಗ್ಲೀಷ್ ಸೈನಿಕರನ್ನು ತಮ್ಮ ಹೆಗಲಿನಮೇಲೆ ಕುಳ್ಳಿರಿಸಿಕೊಂಡು ಸಂತೋಷದಿಂದ ಹೋಗುತ್ತಿದ್ದರು. ತಾ॥ ೧೦-೧೨ ಈ ಎರಡು ದಿನಗಳಲ್ಲಿ ನಡೆದ ಯುದ್ಧದಲ್ಲಿ ಜರ್ಮನಿಯ ೬೦೦೦ ಮಂದಿ ಸೈನಿಕರೂ ೧೫ ಫಿರಂಗಿಗಳೂ ನಮ್ಮವರ ಪರವಶವಾದುವು ತಾ॥ ೧೨ವರೆಗೆ ಫ್ರೆಂಚರ ೩ನೇ ನಂಬರ್ ಸೈನಿಕರೇ ಶತ್ರುಪಕ್ಷದ ಒಟ್ಟು ೧೬೦ ಫಿರಂಗಿಗಳನ್ನು ಹಿಡಿದು ಕೊಂಡಿದ್ದರೆಂದು ಪ್ರಕಟಿತವಾಗಿದೆ. ಫ್ರೆಂಚ್ ಮುಖ್ಯ ಸೈನ್ಯಾಧಿಪತಿ ಜಾಫ್ರೆಯವರು ತಾ॥ ೧೩ ರಲ್ಲಿ ಕೊಟ್ಟಿರುವ ತಂತ್ರೀವಾರ್ತೆಯಲ್ಲಿ- ನಮಗೆ ಸಂಪೂರ್ಣವಾದ ಜಯವುಂಟಾಗುತ್ತಿದೆ. ಎಲ್ಲಿ ನೋಡಿದರೂ ಶತ್ರುಗಳ ಸೇನೆಯು ಹಿಂದಕ್ಕೆ ಓಡಿಹೋಗುತ್ತಿದೆ. ಹೋಗುವಾಗ ಯುದ್ಧಸಾಮಗ್ರಿಗಳನ್ನೂ ತಮ್ಮ ಬಂಡಿಗಳನ್ನೂ ಬಿಟ್ಟು ಹೋಗುತ್ತಲಿದ್ದಾರೆ. ನಮ್ಮ ಸೇನೆಗಳು ಜಯವನ್ನು ಹೊಂದಿದೆವೆಂಬ ಸಂತೋಷದಿಂದ ಶತ್ರುಗಳನ್ನು ಬೆನ್ನಂಟಿ ಓಡಿಸುತ್ತಿವೆ. ಇಂಗ್ಲೀಷ್ ಫ್ರೆಂಚ್ ಸೇನೆಗಳ ಧೈರ್ಯವೂ ಸಹಸವೂ ಪ್ರಶಂಸನೀಯವಾಗಿವೆ. ಫ್ರೆಂಚ್ ಸರ್ಕಾರದವರು ತಮ್ಮ ಸೇನೆಯ ಸಾಮರ್ಥ್ಯವನ್ನು ನೋಡಿ ಗರ್ವಪಡಬಹುದಾಗಿದೆ " ಎಂದು ತಿಳಿಸಿದ್ದಾರೆ. ಜರ್ಮನಿಯ ಚಕ್ರವರ್ತಿಯವರ ೨-೩ ನೇ ಮಕ್ಕಳಾದ ಎತಾಲ್ಬರ್ಟಯುವರಾಜನೂ, ಫ್ರೆಡರಿಕ್ ವಿಲಿಯಂ-ಎಂಬ ಯುವರಾಜನೂ ಸಹ ಏಟುತಿಂದು ಬ್ರುಸೆಲ್ಸಿನ ವೈದ್ಯಾಲಯದಲ್ಲಿ ಚಿಕಿತ್ಸೆಗೊಳ್ಳುತ್ತಿದ್ದು ಮೃತರಾದರೆಂದು ಆಸ್ಟೆಂಡಿನಿಂದ ತಂತ್ರೀವಾರ್ತೆಯು ಬಂದಿರುವುದೆಂದು ಲಂಡನ್ನಿನ ತಾ॥ ೧೩ ರ ತಂತ್ರೀವಾರ್ತೆಯಿಂದ ಗೊತ್ತಾಗುವುದು

ಜರ್ಮನಿಯವರು ಬಿಟ್ಟುಹೋದ ಪ್ರದೇಶಗಳಲ್ಲಿನ ಪಟ್ಟಣಗಳನ್ನೂ ಹೊಗೆಬಂಡಿಯ ನಿಲ್ದಾಣಗಳನ್ನೂ ಮಿತ್ರಸೈನ್ಯದವರು ವಶಪಡಿಸಿಕೊಂಡಿದ್ದಾರೆ. ಇತ್ತ ನಾನ್ಸಿಯ ಪ್ರಾಂತದಲ್ಲಾದ ಯುದ್ಧದಲ್ಲಿ ೨೦ ಸಾವಿರ ಜನವೂ, ಲ್ಯೂನವಿಲ್ಲೆಯ ಬಳಿಯಲ್ಲಾದ ಯುದ್ಧದಲ್ಲಿ ೧೦ ಸಾವಿರ ಮಂದಿಯೂ ಜರ್ಮನರ ಕಡೆ ನಷ್ಟರಾಗಿರುವರೆಂದು ಪ್ರಕಟವಾಗಿದೆ. ಏಟುತಿಂದು ಪ್ಯಾರಿಸ್ಸಿನ ವೈದ್ಯಾಲಯದಲ್ಲಿದ್ದು ಮೃತರಾದ ಜರ್ಮನ್ ಸೈನಿಕರ ಹೊಟ್ಟೆಯನ್ನು ಕೊಯ್ದು ವೈದ್ಯರು ಪರೀಕ್ಷಿಸಿದಾಗ ಹತ್ತಿದ ಮಣ್ಣೂ ಕೂಡ ಹೋಗದಿರುವ ಬೀಟ್ ಎಂಬ ಹಸಿಯ ಗಡ್ಡೆಗಳ ಚೂರು ಕಂಡುಬಂದುವು ಇದರಿಂದ ಜರ್ಮನ್ ಸೈನಿಕರು ತಕ್ಕ ಆಹಾರವಿಲ್ಲದೆ ಎಷ್ಟು ತಾಪತ್ರಯ ಪಟ್ಟಿರುವರೆಂಬುದು ಗೊತ್ತಾಗುವುದು. ಜರ್ಮನಿಯವರು ಈಗ ಹೀಗೆ ಅಪಜಯಹೊಂದಿದೆವೆಂಬ ಸಂಗತಿಯನ್ನು ಅವರು ತಮ್ಮ ರಾಜಧಾನಿಯಲ್ಲಿ ಪ್ರಕಟಿಸದೆ ಮುಚ್ಚಿಕೊಂಡಿದ್ದರೂ, ಪ್ರಜೆಗಳಿಗೆ ಹೇಗೋ ತಿಳಿದು, ಅವರ ಉತ್ಸಾಹವು ಕುಗ್ಗಿಹೋಗಿದೆ. ಮ್ಯೂನಿಚ್ ಪಟ್ಟಣದಲ್ಲಿ ಪ್ರಜೆಗಳು ಅಸಮಾಧಾನದಿಂದ ಪ್ರಭುತ್ವದವರಮೇಲೆ ತಿರುಗಿ ಬೀಳುವರೆಂಬ ಭಯವುಂಟಾಗಿದೆಯಂತೆ. ಜರ್ಮನರು ಈ ಯುದ್ಧದಲ್ಲಿ ಸಡೆ

ಯಿಸಿದ ಕ್ರೂರತನಗಳು ಪ್ರಪಂಚದವರಮನಸ್ಸನ್ನೆಲ್ಲಾ ಕೆಡಿಸಿವೆ. ಅವರು ಅಮೇರಿಕಾದಲ್ಲಿ ಸಾಲವನ್ನು ತೆಗೆಯಬೇಕೆಂದು ಪ್ರಯತ್ನಿಸಲು, ಅಲ್ಲಿನ ಬ್ಯಾಂಕಿನವರೊಬ್ಬರೂ ಸಾಲ ಕೊಡದೆ ತಿರಸ್ಕರಿಸಿಬಿಟ್ಟಿರುವರು. ಪ್ಯಾರಿಸ್ಸಿಗೆ ಈಶಾನ್ಯದಕಡೆಗಿರುವ ಪೂರ್ವಭಾಗದ ಜರ್ಮನಿ ಸೇನೆಯು ಇಂಗ್ಲೀಷ್ ಸೇನೆಯನ್ನು ಎಯ್‌ಸೇನ್ ನದಿಯನ್ನು ದಾಟಿಬರದಂತೆ ಅಡ್ಡಿಮಾಡಿ ಬಲವಾದ ಯುದ್ಧವನ್ನು ಮಾಡಿತು. ಅದರಿಂದ ನದಿಯನ್ನು ದಾಟುವುದು ಇಂಗ್ಲೀಷ್ ಸೈನ್ಯಕ್ಕೆ ಬಹಳ ಕಷ್ಟವಾಯಿತು. ಆದರೂ ಸಾಯಂಕಾಲದ ಹೊತ್ತಿಗೆ ನದಿಯನ್ನು ದಾಟಿ ಆಚೆ ದಡದಲ್ಲಿರುವ ರೇವುಗಳನ್ನೆಲ್ಲಾ ಸ್ವಾಧೀನಪಡಿಸಿಕೊಂಡರು. ಈ ಇಂಗ್ಲೀಷ್ ಸೇನೆಯ ಎಡಬಲಪಕ್ಕಗಳೆರಡರಲ್ಲೂ ಇದ್ದ ಫ್ರೆಂಚ್ ಸೇನೆಗೂ ಇದೇ ತೆರದ ಅಡ್ಡಿಯು ಶತ್ರುಗಳಿಂದ ಮಾಡಲ್ಪಟ್ಟರೂ ಅವರೂ ಸಾಹಸದಿಂದ ದಾಟಿಹೋದರು. ಶತ್ರುಪಕ್ಷದ ಹಲವರನ್ನು ಬಂದಿಗಳಾಗಿ ಹಿಡಿದರು. ಜರ್ಮನ್ ಯುವರಾಜನ ಅಧಿಪತ್ಯದಲ್ಲಿರುವ ಸೇನೆಗಳನ್ನು ಹಿಂದಕ್ಕೆ ಅಟ್ಟಿದರು. ಈಗ ಆ ಸೇನೆಯ ಮುಖ್ಯ ಶಿಬಿರವನ್ನು ಜರ್ಮನರು ಆ ನದೀತೀರದಲ್ಲಿದ್ದ ಮಿಸಿಸೋಲ್ಪಿನಿಂದ ಮಾಂಟ್‌ಫಾಂಕಿಗೆ ಬದಲಾಯಿಸಿದ್ದಾರೆ. ಪ್ಯಾರಿಸ್ಸಿಗೆ ದಕ್ಷಿಣದ ಮೂಲೆಯಲ್ಲಿರುವ ಬಟ್ರಿಯಾಸ್ ಎಂಬ ಕೋಟೆಯನ್ನು ಜರ್ಮನರು ಕೆಲದಿನಗಳಿಂದ ಮುತ್ತಿಗೆ ಹಾಕಿದ್ದರು. ಆ ಸೇನೆಯಮೇಲೆ ಇಂಗ್ಲೀಷ್ ಫ್ರೆಂಚ್ ಸೇನೆಗಳು ಬಿದ್ದು ಕಾದಾಡಿ ಕೋಟೆಯನ್ನು ಬಿಡುಗಡೆಮಾಡಿದರು. ಲೊರೈನ್ ಪ್ರಾಂತದಲ್ಲಿ ಶತ್ರುಗಳನ್ನು ನಮ್ಮ ಸೇನೆಗಳು ಅಟ್ಟಿಕೊಂಡುಹೋಗುತ್ತಿವೆ.

ಜರ್ಮನರು ಹಿಡಿದುಕೊಂಡಿದ್ದ ಫ್ರಾನ್ಸಿನ ರೀಮ್ಸ್ ಪಟ್ಟಣವನ್ನೂ ಅಮಿಯಾನ್ಸ್ ಪಟ್ಟಣವನ್ನೂ ಮರಳಿ ಫ್ರೆಂಚ್ ಇಂಗ್ಲೀಷ್ ಸೇನೆಗಳು ಹಿಡಿದುಕೊಂಡುವು. ಆಗ ೬೦೦ ಮಂದಿ ಜರ್ಮನರೂ ೧೨ ಫಿರಂಗಿಗಳೂ ಕೂಡ ಇವರಿಗೆ ಸಿಕ್ಕಿದುವು. ಆ ಪ್ರಾಂತದಲ್ಲಿ ಈಗ ಹೆಚ್ಚು ಮಳೆಯಾಗುತ್ತಿರುವುದರಿಂದ ಸೈನಿಕರ ಪ್ರಯಾಣಾದಿಗಳಿಗೆ ತೊಂದರೆಯಾಗಿದೆ.

ಕೆಲಫಿರಂಗಿಗಳ ಸೇನೆಯಿಂದ ಕೂಡಿದ್ದ ೩೦೦೦ ಜರ್ಮನ್ ಅಶ್ವಸೈನಿಕರಮೇಲೆ ೧೦೦೦ ಫ್ರೆಂಚರ ಅಶ್ವಸೇನೆಯು ಪೋಪೆರಿಂಘೆಯ ಬಳಿಯಲ್ಲಿ (ಇದು ಬೆಲ್ಜಿಯಮ್ಮಿನಲ್ಲಿದೆ) ಬಿದ್ದು, ೨ ಗಂಟೆಗಳ ಕಾಲ ಯುದ್ಧಮಾಡಿ, ಜರ್ಮನರ ೧೨೦ ಮಂದಿಗಳನ್ನೂ ಫಿರಂಗಿಯಿಟ್ಟಿದ್ದ ಕೆಲ ಮೋಟರ್‌ಬಂಡಿಗಳನ್ನೂ ಮದ್ದುಗುಂಡು ಮೊದಲಾದ ಸಾಮಾನುಗಳನ್ನು ಹಿಡಿದುಕೊಂಡರು. ಇವರಕಡೆ ೩೦ ಮಂದಿ ನಷ್ಟವಾದರು.

ಈಗ ಫ್ರಾನ್ಸಿನಲ್ಲಿ ವರ್ಡನ್ನಿನಿಂದ ಹಿಡಿದು ಟೂಲುವರೆಗಿರುವ ಭೂಭಾಗವೆಲ್ಲಾ ಫ್ರೆಂಚರ ಅಧೀನದಲ್ಲಿದೆ. ಊರುಕೇರಿಯನ್ನು ಬಿಟ್ಟುಹೋಗಿದ್ದ ಜನರೆಲ್ಲಾ ಬಂದು ಸೇರುತ್ತಿದ್ದಾರೆ. ದಕ್ಷಿಣಪೂರ್ವಗಳಲ್ಲಿರುವ ಜರ್ಮನ್ ಯುವರಾಜರ ಸೇನೆಗಳಿಗೆ ಉತ್ತರಕ್ಕೆ ಹೋಗಲೂ ಮೆಟ್ಜನ್ನಾಗಲಿ ಲುಕ್ಸೆಂಬರ್ಗನ್ನಾಗಲಿ ಸೇರುವುದೂ ಅಸಾಧ್ಯವಾದಂತಿದೆ. ಜರ್ಮನ್ ಸೇನೆಗಳು ತಪ್ಪಿಸಿಕೊಂಡುಹೋಗುವುದಕ್ಕೆ ಲಾಂಗ್ವಿಯ ಹೊರತು ಮತ್ತಾವಮಾರ್ಗವೂ ಇಲ್ಲದಂತಾಗಿದೆ.

ರಷ್ಯಾ ಗೌರ್ನಮೆಂಟಿನವರು ಮಾಡಿರುವ ಪ್ರಕಟನೆಯನ್ನು ನೋಡಿದರೆ ಜರ್ಮನಿಯವರು ಇದುವರೆಗೆ ಫ್ರಾನ್ಸಿನಲ್ಲಿ ತಮ್ಮ ಸೈನ್ಯವನ್ನು ಬಲುಬೇಗನೆ ಪೂರ್ವಪ್ರಷ್ಯಾದಕಡೆಗೆ ಸಾಗಿಸುತ್ತಿರುವಂತೆ ಕಾಣುತ್ತದೆ. ಅಲ್ಲಿದ್ದ ೧೦ ಸಾವಿರ ಆಸ್ಟ್ರಿಯ ಸೇನೆಯನ್ನು ರಷ್ಯನರು ಓಡಿಸಿಬಿಟ್ಟಿದ್ದರು. ಆಗಸ್ಟ್ ತಾ|| ೨೮ ರಿಂದಲೂ ಪಶ್ಚಿಮದಿಂದ ಪೂರ್ವಕ್ಕೆ ಜರ್ಮನ್ ಸೇನೆಗಳು ಬರುತ್ತಲೇ ಇವೆಯಂತೆ. ಈಗ ಜರ್ಮನ್ ಸೇನೆಗೂ ರಷ್ಯಾಸೇನೆಗೂ ಪೂರ್ವಪ್ರಷ್ಯಾದಲ್ಲಿ ದೊಡ್ಡ ದೊಡ್ಡ ಯುದ್ಧಗಳಾಗುತ್ತಿವೆ.

ಬೆಲ್ಜಿಯಂ.

ಬೆಲ್ಜಿಯಮ್ಮಿನ ಸೇನೆಯು ಆಂಟ್‌ವರ್ಪಿನಿಂದ ಈಚೆಗೆ ಹೊರಟು ಫ್ರಾನ್ಸಿಗೆ ನುಗ್ಗುತ್ತಿದ್ದ ಜರ್ಮನಿಯ ೩-೯ ನೆ ನಂಬರುಗಳ ಸೇನಾನಿವಹದಮೇಲೆ ಬಿದ್ದು ಕಠಿನವಾಗಿ ಹೋರಾಡಿ ಹಿಂದಕ್ಕೆ ಹೋಗುವಂತೆ ಮಾಡಿತು. ಈ ಸಮಯದಲ್ಲಿ ಅವರು ತೋರಿಸಿದ ಶೌರ್ಯವು ಶ್ಲಾಘನೀಯವಾಗಿದ್ದಿತು. ಮತ್ತೂ ಲೋರೈನಿಗೂ ಬ್ರಸಲ್ಸಿಗೂ ಮಧ್ಯದಲ್ಲಿರುವ ಕಾರ್ಟರ್‌ಬರ್ಗ್ ಎಂಬ ಪಟ್ಟಣವನ್ನು ಆಕ್ರಮಿಸಿಕೊಂಡಿದ್ದ ಜರ್ಮನಿ ಸೈನ್ಯವನ್ನು ಬೆಲ್ಜಿಯಂ ಸೈನ್ಯವು ಇಬ್ಭಾಗಮಾಡಿತು. ಆಂಟ್ವರ್ಪಿಗೆ ನೈಋತ್ಯದ ಮೂಲೆಯಲ್ಲೂ ಬಲವಾದ ಯುದ್ಧವನ್ನು ಮಾಡಿ ಶತ್ರುಗಳ ಕಡೆಯಲ್ಲಿ ವಿಶೇಷ ನಷ್ಟವನ್ನುಂಟುಮಾಡಿ ಬೆಲ್ಜಿಯಂ ಸೇನೆಯು ಆಂಟ್‌ವರ್ಪ್ ಕೋಟೆಯೊಳಕ್ಕೆ ಸೇರಿಕೊಂಡಿತು. ಈ ಮಧ್ಯೆ ಜರ್ಮನಿಯ ವಾಂಡರ್‌ಗಾಲ್ಟ್ಜ್ ಎಂಬ ಸೈನ್ಯಾಧಿಪತಿಯು ಆಂಟ್‌ವರ್ಪ್ ನಗರಕ್ಕೆ ಹೋಗಿ, ಕೆಲವೊಪ್ಪಂದಪ್ರಕಾರ ಸಂಧಿಮಾಡಿಕೊಳ್ಳಲು ಆ ಪ್ರಭುತ್ವದವರನ್ನು ಕೇಳಿದನು. ಆದರೆ ಬೆಲ್ಜಿಯಂ ಸರ್ಕಾರದವರು ಒಪ್ಪಿಕೊಳ್ಳಲಿಲ್ಲ.

(ಪೂರ್ವರಂಗ)

ರಷ್ಯಾ-ಆಸ್ಟ್ರಿಯಾ.

ಲೆಂಬರ್ಗಿಗೆ ಪಶ್ಚಿಮದಲ್ಲೂ ಉತ್ತರಭಾಗದಲ್ಲೂ ರಷ್ಯನರು ಆಸ್ಟ್ರಿಯನ್ನರನ್ನು ಓಡಿಸಿ ದೊಡ್ಡ ಜಯವನ್ನು ಹೊಂದಿದರು. ಅಲ್ಲಿ ೨೦೦ ಮಂದಿ ಸೇನಾಧಿಕಾರಿಗಳೂ ೩೦ ಸಾವಿರ ಮಂದಿ ಸೈನಿಕರೂ ರಷ್ಯನರ ಸೆರೆಯಾಳುಗಳಾಗಿ ಸಿಕ್ಕಿದರು. ನೂರಾರು ಫಿರಂಗಿಗಳೂ ರಷ್ಯನ್ನರಿಗೆ ದೊರೆದುವು. ಆ ಭಾಗದಲ್ಲಿ ರಷ್ಯನ್ನರಿಗೆ ಆಗಿರುವ ಜಯದಲ್ಲಿ ಒಟ್ಟಿಗೆ ಆಸ್ಟ್ರಿಯಾದವರ ಮೊದಲ ಸೈನ್ಯದಲ್ಲಿ ೩೦೦ ಮಂದಿ ಉದ್ಯೋಗಿಗಳೂ, ೨೮ ಸಾವಿರ ಸೈನಿಕರೂ, ೪೦೦ ಫಿರಂಗಿಗಳೂ ನಷ್ಟವಾದುವು. ೨ನೆಯ ಸೈನ್ಯದಲ್ಲಿ ೫೦೦ ಮಂದಿ ಅಧಿಕಾರಿಗಳೂ, ೭೦ ಸಾವಿರ ಸೈನಿಕರೂ, ನಷ್ಟವಾದರು. ಒಟ್ಟು ೧ ಲಕ್ಷ ಆಸ್ಟ್ರಿಯಾ ಸೈನಿಕರು ರಷ್ಯನರ ಸೆರೆಗೆ ಸಿಕ್ಕಿರುವರೆಂದು ಒಂದು ವಾರ್ತೆ ಬಂದಿರುವುದು. ಈಗ ರಷ್ಯನರು ಆಸ್ಟ್ರಿಯದ ಸೇನೆಗಳನ್ನು ಹಿಂದಕ್ಕಟ್ಟುತ್ತ ಹೋಗಿ ಸೇನ್ ನದಿಯನ್ನು ದಾಟಿ, ರವಾಸಾದ ಬಳಿಯಲ್ಲಿ ೩೦ ಫಿರಂಗಿಗಳನ್ನೂ ೮ ಸಾವಿರಮಂದಿ ಸೈನಿಕರನ್ನೂ ಹಿಡಿದುಕೊಂಡಿರುವರು. ಮುಂದೆ ಹಾಗೆಯೇ ಯುದ್ಧಮಾಡಿಕೊಂಡುಹೋಗುತ್ತ ಜರೋಸ್ಲಾವ್ ಎಂಬ ಪಟ್ಟಣವನ್ನು ಒಂದು ಫಿರಂಗಿಯನ್ನು ಕೂಡ ಹಾರಿಸುವ ಅವಶ್ಯಕತೆಯೇ ಇಲ್ಲದೆ ಹಿಡಿದುಕೊಂಡಿರುವರು. ರಷ್ಯನರು ಆಸ್ಟ್ರಿಯಾದ ರಾಜಧಾನಿಯಾದ ವಿಯನ್ನಾದ ಕಡೆಗೆ ನುಗ್ಗುವುದರಲ್ಲಿದ್ದಾರೆ. ಈಮಧ್ಯೆ ಜರ್ಮನಿಯವರು ಆಸ್ಟ್ರಿಯಾಕ್ಕೆ ಸಹಾಯಮಾಡಲು ತಮ್ಮ ಸೈನ್ಯವನ್ನು ಕಳುಹಿಕೊಟ್ಟರು. ಗೆಲೀಷಿಯಾ ಜಿಲ್ಲೆಯಲ್ಲಿ ರಷ್ಯನ್ನರು ೧೭ ದಿನಗಳಿಂದಲೂ ಅಖಂಡವಾಗಿ ಯುದ್ಧವನ್ನು ನಡೆಯಿಸಿದರು. ಅಲ್ಲಿ ಆಸ್ಟ್ರಿಯಾಸೈನ್ಯವು ೧೦ ಲಕ್ಷದವರೆಗಿದ್ದಿತು. ೩|| ಸಾವಿರ ಫಿರಂಗಿಗಳಿದ್ದುವು. ಅಲ್ಲಿ ರಷ್ಯನ್ನರಿಗೆ ಸಂಪೂರ್ಣ ಜಯವಾದುದರಿಂದ ಆ ಭಾಗದ ಯುದ್ಧವು ಕೊನೆಮುಟ್ಟಿದಂತಾಗಿದೆ. ರಷ್ಯಾದೇಶದ ಪತ್ರಿಕೆಗಳು ಈ ಭಾಗದಲ್ಲಿ ತಮಗುಂಟಾದ ಜಯದಿಂದ ಆನಂದೋದ್ಗಾರವನ್ನು ಮಾಡುತ್ತ ಇಷ್ಟರಲ್ಲೇ ಆಸ್ಟ್ರಿಯಾ ಹಂಗೇರಿ ರಾಜ್ಯವು ನಿರ್ಮೂಲವಾಗಿ ಹೋಗುವುದರಲ್ಲಿದೆಯೆಂದು ಉದ್ಘೋಷಿಸುತ್ತಿವೆ.

ಸರ್ವಿಯಾ.

ಸರ್ವಿಯಾಸೇನೆಗಳು ಕೂಡ ಆಸ್ಟ್ರಿಯಾದ ಸೇನೆಗಳನ್ನು ಹೊಡೆದು ಓಡಿಸಿ ಜಯಶೀಲವಾಗುತ್ತಿವೆ. ಸೇಮ್ಲಿನ್ ಎಂಬ ಪಟ್ಟಣದ ಪ್ರಜೆಗಳು (ಇದು ಆಸ್ಟ್ರಿಯಾಕ್ಕೆ ಸೇರಿದ್ದು) ಸರ್ವಿಯನ್ನರ ಜಯವನ್ನು ಕಂಡು ಸಂತೋಷಿಸುತ್ತಿದ್ದಾರೆ.

ತಾ|| ೧೫ನೆ ತಂತ್ರಿವಾರ್ತೆಯ ಮೇರೆ ಸರ್ವಿಯಾದವರು ಬೋಸ್ನಿಯಾಕ್ಕೆ ಸೇರಿದ ಸೇವೆ-ಡ್ರಿನಾ ನದಿಗಳ ಸಂಗಮಸ್ಥಳದಲ್ಲಿ ಆಸ್ಟ್ರಿಯಾದವರ ಮೇಲೆ ಭಯಂಕರವಾದ ಯುದ್ಧವನ್ನು ಮಾಡಿ ೯೦ ಸಾವಿರ ಸೈನಿಕರನ್ನೂ ಬಹಳ ಫಿರಂಗಿಗಳನ್ನೂ ಹಿಡಿದುಕೊಂಡು ದೊಡ್ಡ ದಿಗ್ವಿಜಯವನ್ನು ಹೊಂದಿರುವರೆಂದು ಗೊತ್ತಾಗುತ್ತದೆ. ಈ ಸ್ಥಳದಲ್ಲಿ ನದಿಯನ್ನು ದಾಟಗೊಡಿಸದಂತೆ ಆಸ್ಟ್ರಿಯಾದವರು ಸರ್ವಿಯಾದವರಿಗೆ ಅಡ್ಡಲಾಗಿ ಬಹುದೂರ ತಮ್ಮ ಸೈನ್ಯಗಳನ್ನು ವಿಶೇಷವಾಗಿ ನಿಲ್ಲಿಸಿದ್ದರು. ಮತ್ತು ಆ ನದಿಯನ್ನು ದಾಟಿ ತಾವೇ ಸರ್ವಿಯಾದೊಳಕ್ಕೆ ನುಗ್ಗಬೇಕೆಂದು ಪ್ರಯತ್ನಿಸಿದ್ದರು. ಇವರ ಸಂಕಲ್ಪವೆಲ್ಲಾ ಭಂಗವಾದುದಲ್ಲದೆ ಬಹಳ ನಷ್ಟವೂ ಆಯಿತು. ಇಲ್ಲಿ ಸರ್ವಿಯನ್ನರು ಫಿರಂಗಿಗಳಿಂದ ಗುಂಡಿನ ಮಳೆಯನ್ನು ಬಹುಬಲವಾಗಿ ಸುರಿಸಿ ಶತ್ರುಪಕ್ಷವನ್ನು ಧ್ವಂಸಮಾಡಿರುವರು. ಮತ್ತು ಮುಂದಕ್ಕೆ ಸರಿದು ಹಂಗೇರಿಗೆ ಸೇರಿದ ಬೋಸ್ನಿಯಾ ಜಿಲ್ಲೆಯಲ್ಲಿರುವ ವಿಸ್‌ಗ್ರೇಡ್ ನಗರವನ್ನು ಆಕ್ರಮಿಸಿಕೊಂಡರು. ಮುಂದೆ ಇವರು ಹಂಗೇರಿಯ ರಾಜಧಾನಿಯಾದ ಬುಡಾಪೆಸ್ಟಿಗೂ ಬರುವರೋ ಏನೋ ಎಂಬ ಭಯದಿಂದ ಆ ಮಧ್ಯಮಾರ್ಗಗಳ ಸೇತು ಮೊದಲಾದುವುಗಳನ್ನೆಲ್ಲಾ ಹಾಳ್ಮಾಡುತ್ತಿದ್ದಾರೆ. ಈ ಭಾಗದಲ್ಲಿ ೧|| ಲಕ್ಷ ಸರ್ವಿಯನ್ ಸೈನಿಕರು ಮುಂದೆಮುಂದೆ ನುಗ್ಗಿಹೋಗುತ್ತಿದ್ದಾರೆ. ಈ ಸರ್ವಿಯಾ ಸೈನ್ಯದಲ್ಲಿ ಮಾಂಟಿನೀಗ್ರೋ ಸೈನ್ಯವೂ ಸೇರಿಕೊಂಡಿದೆ.

ಜಲಸೇನೆ.

ಇಂಗ್ಲೀಷ್ ನೌಕಾಸೇನೆಗಳು ಉತ್ತರ ಸಮುದ್ರದಲ್ಲಿ ಹೆಲಿಗೋಲ್ಯಾಂಡಿನ ಪ್ರಾಂತ್ಯದಲ್ಲೆಲ್ಲಾ ಬೇಕಾದಷ್ಟು ಪರಿಶೋಧನೆ ಮಾಡಿ ಬಂದುವು. ಒಂದಾದರೂ ಜರ್ಮನರ ಹಡಗು ಅಲ್ಲಿರಲಿಲ್ಲ. ಅಲ್ಲಿದ್ದ ಜರ್ಮನ್ ಹಡಗುಗಳೆಲ್ಲಾ ಎಲ್ಲಿಗೆ ಹೋಗಿರುವುವೋ ತಿಳಿಯಲಿಲ್ಲ.

ಅಟ್ಲಾಂಟಿಕ್ ಸಮುದ್ರದಲ್ಲಿ ೬ ಸಾವಿರ ಟನ್ ಕಲ್ಲಿದ್ದಲನ್ನು ತುಂಬಿಕೊಂಡು ಹೋಗುತ್ತಿದ್ದ ಜರ್ಮನ್ ಹಡಗೊಂದನ್ನು ವಿಂಡಿಕೇಟೀವ್ ಎಂಬ ಇಂಗ್ಲಿಷ್ ಹಡಗು ಹಿಡಿದುಕೊಂಡಿತು. ಮತ್ತು ಬೇಥಾನಿಯೊ ಎಂಬ ಜರ್ಮನ್ ಸ್ಟೀಮರನ್ನು ಒಂದು ಇಂಗ್ಲೀಷ್ ಹಡಗು ಹಿಡಿದು ಜಮೈಕಾದ್ವೀಪದಲ್ಲಿರುವ ಕಿಂಗ್ಸ್‌ಟೌನಿನ ರೇವಿಗೆ ಸೇರಿಸಿತು. ಅದರಲ್ಲಿದ್ದ ೪೦೦ ಮಂದಿಗಳನ್ನು ಬಂದಿಗಳನ್ನಾಗಿ ಹಿಡಿದಿರುವರು.

ಸಮುದ್ರವನ್ನು ಶೋಧಿಸುತ್ತಿದ್ದ ಇಂಗ್ಲಿಷರ ಒಂದು ಸಬ್‌ಮೆರೈನು (ನೀರಿನಲ್ಲೇ ಮುಳುಗಿಹೋಗತಕ್ಕ ಸಣ್ಣ ಹಡಗು) ನೀರಿನ ಮೇಲ್ಗಡೆ ಏಳಲು ಅದರ ಮೇಲೆ ಫಿರಂಗಿಗಳ ಗುಂಡಿನೇಟು ಬಿದ್ದಿತು. ಆಗ ತಟ್ಟನೆ ಹಡಗು ಒಳಕ್ಕೆ ಮುಳುಗಿಕೊಂಡು, ೪ ಗಂಟೆಗಳ ಮೇಲೆ ಗಾಳಿಗೋಸುಗ ಮೇಲಕ್ಕೆದ್ದಿತು. ಕೂಡಲೇ ಮತ್ತೆ ಅದರ ಕೊಳವೆಗಳ ಮೇಲೆ ಗುಂಡಿನೇಟು ಬಿದ್ದಿತು. ಅದರಿಂದ ಬಿದ್ದ ತೂತನ್ನು ಮುಚ್ಚಿ ಮರಳಿ ನೀರಿನಲ್ಲಿ ಮುಳುಗಿದ್ದು ಕತ್ತಲೆಯಾದ ಬಳಿಕ ತಪ್ಪಿಸಿಕೊಂಡು ಬಂದರು. ಈ ಹಡಗು ನೀರಿನಲ್ಲಿ ಮುಳುಗಿದ್ದಾಗ ಒಳಗಿದ್ದ ಜನರು ವಿನೋದಕ್ಕಾಗಿ ಜೂಜಾಟವನ್ನು ಆಡುತ್ತಿದ್ದರಂತೆ.

ಆಸ್ಟ್ರೇಲಿಯನ್ನರ ನೌಕಾಸೇನೆಯು ಜರ್ಮನಿಯವರಿಗೆ ಸೇರಿದ್ದ ಹರ್ಬರ್ಟ್‌ಷೈರಿಗೆ ಹೋಗಿ ಇಂಗ್ಲಿಷ್ ಧ್ವಜವನ್ನು ಸ್ಥಾಪಿಸಿದರು. ಆಗ ಶತ್ರುಗಳಾರೂ ತಡೆಯಲಿಲ್ಲ. ಶತ್ರುಗಳಿಗೆ ತಿಳಿಯಬರದಂತೆಯೇ ಈ ಕೆಲಸವಾಯಿತು. ಅಲ್ಲಿದ್ದ ಮಾರ್ಕೊನಿವಾರ್ತಾನಿಲಯವನ್ನು ಧ್ವಂಸಮಾಡಲು ಪ್ರಯತ್ನಿಸಿದಾಗ ಶತ್ರುಗಳು ಮೇಲೆಬಿದ್ದರು. ಜರ್ಮನಿಯವರು ಕಂದಕಗಳಲ್ಲಿ ಅಡಗಿದ್ದು ಕಾದಾಡಿದರು. ಆದರೂ ಪರಾಜಿತರಾಗಿ ಅವರ ನಾಯಕನ ಸಮೇತ ಶರಣಾಗತರಾದರು. ಆಸ್ಟ್ರೇಲಿಯಾ ಸೈನಿಕರು ತಮ್ಮ ಫಿರಂಗಿಗಳನ್ನು ದಡದಲ್ಲೇರಿಸಿ ಶತ್ರುಗಳ ಕಚೇರಿ ಮೊದಲಾದುವುಗಳನ್ನು ಸ್ವಾಧೀನ ಪಡಿಸಿಕೊಂಡರು.

ಸೆಪ್ಟೆಂಬರ್ ತಾ|| ೧೩ರಲ್ಲಿ ನಮ್ಮ ಹೇಲಾ ಎಂಬ ಹಡಗನ್ನು ಶತ್ರುಗಳು ಮುಳುಗಿಸಿರುವರೆಂದು ಜರ್ಮನರು ಪ್ರಕಟಿಸಿದ್ದಾರೆ.

ಜರ್ಮನಿಯು ಶತ್ರುಗಳನ್ನು ಹೆಚ್ಚಿಸಿಕೊಳ್ಳುತ್ತಿರುವುದು.

ಜರ್ಮನಿಯವರು ಚೀನಾದಲ್ಲಿರುವ ತಮ್ಮ ರಾಯಭಾರಿಯಿಂದ ಚೀನಾಪ್ರಭುತ್ವದವರಿಗೆ—“ನೀವು ಜಪಾನ್ ಸೈನ್ಯವನ್ನು ನಿಮ್ಮ ದೇಶಕ್ಕೆ ಸೇರಿದ ಕಿಯಾಚೂವಿಗೆ ಬರಗೊಡಿಸಿ ನಿಮ್ಮ ತಟಸ್ಥಭಾವವನ್ನು ಕೆಡಿಸಿಕೊಳ್ಳುತ್ತಿದ್ದೀರಿ. ಇದಕ್ಕೆ ಪ್ರತಿಫಲವಾಗಿ ನಿಮ್ಮಿಂದ ನಮ್ಮ ಪ್ರಭುತ್ವದವರು ಕೆಲವು ಹಣವನ್ನು ಪಡೆದುಕೊಳ್ಳುವುದಕ್ಕೂ ನಿಮ್ಮ ಮೇಲೆ ತಕ್ಕ ಚರ್ಯೆಯನ್ನು ಜರುಗಿಸುವುದಕ್ಕೂ ಅಧಿಕಾರ ಹೊಂದಿದ್ದಾರೆ” ಎಂದು ತಿಳಿಯಪಡಿಸಿ, ಈ ಬೆದರಿಕೆಯಿಂದ ಚೀನಾದ ವೈರವನ್ನು ಸಂಪಾದಿಸಿಕೊಂಡರು.

ಜಪಾನ್—ಜರ್ಮನಿ ಯುದ್ಧ.

ಜಪಾನಿನ ಅಶ್ವಸೇನೆಯು ಚೀನಾದಲ್ಲಿ ಜರ್ಮನಿಗೆ ಸೇರಿರುವ ಕಿಯಾಚೂವಿನಲ್ಲಿರುವ ಸಿಮೋನ್ ಎಂಬ ಪಟ್ಟಣವನ್ನು ಹಿಡಿದುಕೊಂಡಿತು. ಇಲ್ಲಿ ಉಭಯ ಪಕ್ಷದವರಿಗೂ ೧ ಚಿಕ್ಕ ಯುದ್ಧವಾಯಿತು. ಜಪಾನಿನ ಸೇನೆಯೆಲ್ಲಾ ಕಿಯಾಚೂರೇವೆಯನ್ನು ಸೇರಿರುವುದೆಂದು ಗೊತ್ತಾಗಿದೆ.

ರೊಮೇನಿಯ—ಮತ್ತು—ಇಟಲಿ.

ನಾವೂ ನೀವೂ ಜತೆಯಾಗಿ ಆಸ್ಟ್ರಿಯಾದಮೇಲೆ ಯುದ್ಧಕ್ಕೆ ಹೋಗೋಣವೆಂದು ರೊಮೇನಿಯಾವು ಇಟಲಿಯನ್ನು ಪ್ರೋತ್ಸಾಹಪಡಿಸುತ್ತಿರುವುದು. ರೋಮೇನಿಯಾ ರಾಜಧಾನಿಯಾದ ಬುಖಾರೆಸ್ಟ್ ಪಟ್ಟಣದ ಜನರು ಅರಮನೆಯ ಮುಂದೆ ಕೂಡಿ ರಷ್ಯಾದವರ ಮೇಲೆ ತಮಗಿರುವ ಸ್ನೇಹವನ್ನು ವ್ಯಕ್ತಪಡಿಸುತ್ತ ಉತ್ಸವ ಮಾಡಿದರು. ಆಫ್ರಿಕಾ ಖಂಡದ ಸೋಮಾಲಿಲ್ಯಾಂಡಿನಲ್ಲಿದ್ದ “ಪೈಮಾಂಟ್” ಎಂಬ ತಮ್ಮ ಯುದ್ಧದ ಹಡಗನ್ನು ವೆನ್ನಿಸ್ ಪಟ್ಟಣಕ್ಕೆ ಬರಮಾಡಿಕೊಳ್ಳಲು ಇಟಲಿ ಸರ್ಕಾರದವರು ಅಪ್ಪಣೆಮಾಡಿದ್ದಾರೆ. ಅಂತೂ ಇಂತು ಆಸ್ಟ್ರಿಯಾವು ಉಳಿಯುವಂತೆ ಕಾಣಲಿಲ್ಲ.

ಯುದ್ಧಸಂಬಂಧಿ ದೇಶವಾರ್ತೆಗಳು.

ಇಂಗ್ಲೆಂಡಿಗೆ ಶಾಶ್ವತವಾಗಿರುವ ಸೈನ್ಯವಲ್ಲದೆಯೇ ಯುದ್ಧಾರಂಭವಾದೀಚೆಗೆ ಹೊಸದಾಗಿ ಸೈನಿಕರಾಗಿ ಸೇರಿಸಲ್ಪಟ್ಟಿರುವವರು ೪೩೯೦೦೦ ಮಂದಿಗಳು. ಇನ್ನೂ ೫ ಲಕ್ಷ ಮಂದಿಯನ್ನು ಹೀಗೆ ಸೇರಿಸಿದರೆ ೧೨ ಲಕ್ಷ ಸೈನ್ಯವನ್ನು ನಾವು ರಣರಂಗಕ್ಕೆ ಕಳುಹಿಸಬಹುದೆಂದು ಮಂತ್ರಿವರ್ಯರು ಪಾರ್ಲಿಮೆಂಟಿನಲ್ಲಿ ಹೇಳಿದರು. ಆ ೫ ಲಕ್ಷವನ್ನು ಮತ್ತೆ ಸೇರಿಸಲು ಪಾರ್ಲಿಮೆಂಟಿನವರು ಒಪ್ಪಿದರು. ಇದಲ್ಲದೆ ಸ್ವಾಸ್ಥ್ಯಗಳಿಂದಲೂ ಭರತಖಂಡದಿಂದಲೂ ಕಳುಹಲ್ಪಡುವ ಸೈನ್ಯವು ಬೇರೆಯಾಗಿರುವುದು.

ಗ್ಲಾಸ್ಗೋಪಟ್ಟಣದಲ್ಲಿ ಹೊಸಸೇನೆಗೆ ಜನರನ್ನು ಸೇರಿಸುವುದಕ್ಕಾಗಿ ಕೂಡಿದ ಸಭೆಯಲ್ಲಿ ಲಾರ್ಡ್ ಕರ್ಜನ್‌ರವರು ಉಪನ್ಯಾಸಮಾಡುವಾಗ, ಭರತಖಂಡದಿಂದ ಮಾಡಲ್ಪಟ್ಟ ಸಹಾಯವನ್ನು ಕುರಿತು ನಮ್ಮ ವೈಸ್ರಾಯರು ಬರೆದು ಕಳುಹಿದ್ದ ಸಂದೇಶವನ್ನು ಕುರಿತು ಶ್ಲಾಘನೆಮಾಡಿ, ಭಾರತೀಯ ಸೈನ್ಯವನ್ನು ಹೊಗಳುವಾಗ—“ಹಿಂದೂದೇಶದ ಸೈನ್ಯವು ಮೃತ್ಯುವನ್ನಾದರೂ ಇದಿರಿಸಿ ಹೋರಾಡಬಲ್ಲುದೆಂದು ನಾನು ತಿಳಿಯುತ್ತೇನೆ. ಬಂಗಾಳದ ಪಟಾಲಮು ಬರ್ಲಿನ್ ನಗರದ ಬೀದಿಗಳಲ್ಲಿ ತಿರುಗಾಡುವುದನ್ನೂ, ಘೂರ್ಖಾ ಸಿಪಾಯಿಗಳು ಪಾಟ್ಸ್‌ಡಂ ಪಟ್ಟಣದ ಉದ್ಯಾನದಲ್ಲಿ ವಿಶ್ರಾಂತಿಗೊಳ್ಳುತ್ತಿರುವುದನ್ನೂ ನೋಡಬೇಕೆಂದು ನಾನು ಇಚ್ಛೈಸುತ್ತೇನೆ.”—ಎಂದರು. (ಈ ಪಟ್ಟಣಗಳೆರಡೂ ಜರ್ಮನಿಗೆ ಸೇರಿದುವು.)

ದಕ್ಷಿಣಾಫ್ರಿಕಾ ಯೂನಿಯನ್ ಪ್ರಭುತ್ವದವರಿಗೆ ಆಂಗ್ಲಸಾಮ್ರಾಜ್ಯದವರು ೭೦ ಲಕ್ಷ ಪೌನುಗಳ ಸಾಲವನ್ನು ಕೊಟ್ಟಿದ್ದರು. ಆ ಸರ್ಕಾರದವರು ಈಗ ತಮ್ಮ ರಾಜಭಕ್ತಿಯನ್ನು ತೋರಿಸಲು, ಯುದ್ಧಮಾಡುತ್ತಿರುವ ಸೈನಿಕರಿಗೆ ಆವಶ್ಯಕವಾದ ಹೊಗೆಬತ್ತಿ-ಬ್ರಾಂದಿ ಮೊದಲಾದ ವಸ್ತುಗಳನ್ನು ಉಚಿತವಾಗಿ ಒದಗಿಸಿಕೊಡಬೇಕೆಂದು ಯೋಚಿಸಿದ್ದಾರೆ.

ಆಸ್ಟ್ರೇಲಿಯಾದ ಮಂತ್ರಿಮಂಡಲದವರೆಲ್ಲಾ ರಾಜೀನಾಮೆಕೊಟ್ಟರು. ಹೊಸಮಂತ್ರಿಗಳು ಏರ್ಪಡುವುದರಲ್ಲಿದ್ದಾರೆ.

ಚೀನಾಕ್ಕೆ ಸೇರಿ ಜರ್ಮನಿಯವರ ಅಧೀನದಲ್ಲಿರುವ ಸಿಂಗ್‌ಟೌವಿನಲ್ಲಿ ಮಳೆಯಿಂದ ವಿಪರೀತ ಪ್ರವಾಹ ಬಂದಿದೆ. ಆ ಪ್ರಾಂತದ ಗ್ರಾಮಗಳೆಲ್ಲಾ ಜಲಮಯವಾಗಿವೆ. ಆದುದರಿಂದ ಜಪಾನರಿಗೆ ಅದರ ಮುತ್ತಿಗೆಯನ್ನು ನಡೆಯಿಸಲು ಅವಕಾಶ ತಪ್ಪಿದೆ.

ಆಸ್ಟ್ರೇಲಿಯಾದವರು ಇಂಗ್ಲೆಂಡಿಗೆ ಇದುವರೆಗೆ ಕಳುಹಿಸಿಕೊಟ್ಟಿರುವ ಸೈನ್ಯವಲ್ಲದೆ ಮತ್ತೆ ೧೦ ಸಾವಿರ ಸೈನ್ಯವನ್ನು ಕಳುಹಿಸುವುದರಲ್ಲಿದ್ದಾರೆ.

ನೌಕಾಸೇನಾಂಗ ಮಂತ್ರಿಯವರಾದ ಚರ್ಚಿಲ್‌ರವರು ಪಾರ್ಲಿಮೆಂಟಿನಲ್ಲಿ ಮಾತನಾಡುವಾಗ ಇಂಗ್ಲೆಂಡು ಇನ್ನೊಂದುವರ್ಷ ಕಾಲದೊಳಗಾಗಿ ದೊಡ್ಡ ಯುದ್ಧನಾವೆಗಳನ್ನು ಜರ್ಮನಿಗಿಂತ ೨ ರಷ್ಟನ್ನೂ ಸಣ್ಣನಾವೆಗಳನ್ನು ೪ ರಷ್ಟನ್ನೂ ಹೆಚ್ಚಿಸುವುದು ಎಂದು ಸೂಚಿಸಿದರು.

ಫ್ರಾನ್ಸಿನವರು ಜರ್ಮನಿಯವರಮೇಲೆ ಜಯಶೀಲರಾದುದಕ್ಕಾಗಿ ಅಲ್ಲಿನ ಪ್ರೆಸಿಡೆಂಟರಾದ ಪಾಯಿನ್‌ಕೇರವರಿಗೆ ರಷ್ಯಾ ಚಕ್ರವರ್ತಿಯವರು ತಮ್ಮ ಸಂತೋಷಾಭಿನಂದನಗಳನ್ನು ತಂತ್ರಿಯ ದ್ವಾರಾ ತಿಳಿಯಿಸಿದರು. ಅದಕ್ಕೆ ಪ್ರತಿಯಾಗಿ ಪಾಯಿನ್‌ಕೇರ್‌ರವರು ರಷ್ಯಾ ಚಕ್ರವರ್ತಿಯವರಿಗೆ, ಗೆಲೀಷಯಾದಲ್ಲಿ ರಷ್ಯಾ ಸೈನಿಕರು ಆಸ್ಟ್ರಿಯಾ ಸೈನ್ಯವನ್ನು ಸೋಲಿಸಿ ಜಯವನ್ನು ಪಡೆದುದಕ್ಕಾಗಿ ತಮ್ಮ ಸಂತೋಷವನ್ನು ತಿಳಿಯಿಸಿದುದಲ್ಲದೆ, ಮುಂದೆನಡೆಯುವ ಯುದ್ಧಗಳಲ್ಲೂ ಹಾಗೆಯೇ ಜಯವನ್ನು ಹೊಂದುವಿರೆಂದು ನಂಬುತ್ತೇನೆಂದೂ ಫ್ರಾನ್ಸುದೇಶವು ತನ್ನ ಶಕ್ತಿಯನ್ನೆಲ್ಲಾ ಉಪಯೋಗಿಸಿ ಯುದ್ಧಮಾಡುವುದಕ್ಕೆ ಸಿದ್ಧವಾಗಿರುವುದೆಂದೂ ಉತ್ತರಕೊಟ್ಟಿರುವರು.

ಕ್ರಾಸ್ನಿಕ್ ಬಳಿಯಲ್ಲಿ ರಷ್ಯಾದವರು ಆಸ್ಟ್ರಿಯಾದವರನ್ನು ೬೨ ಮೈಲಿಗಳ ದೂರ ಓಡಿಸಿದಾಗ್ಗೆ ಜರ್ಮನಿಯವರು ಸಹಾಯಕ್ಕೆ ಬಂದರು. ಅವರ ೩೨ ಫಿರಂಗಿಗಳು ಶತ್ರುಗಳಿಗೆ ಸಿಕ್ಕಿಹೋದರೂ ಜರ್ಮನಿಯವರು ಧೈರ್ಯದಿಂದ ಹೋರಾಡುತ್ತ ಹಿಂದಕ್ಕೆ ಹೋದರು. ಆಸ್ಟ್ರಿಯಾದವರು ಜರ್ಮನಿಯವರನ್ನು ಮುಂಚಾಚೆ ತಲೆತಪ್ಪಿಸಿಕೊಂಡುಹೋದರು. ‘ತಮ್ಮನ್ನು ಸಹಾಯಕ್ಕೆ ಕೋರಿದ ಆಸ್ಟ್ರಿಯಾದವರು ನಮ್ಮ ಸೇನೆಯನ್ನು ಹೀಗೆ ಬಿಟ್ಟುಬಿಟ್ಟು ವಿಶ್ವಾಸಘಾತಮಾಡಿ ಗೌರವಹೀನವಾದ ಕಾರ್ಯವನ್ನು ಮಾಡಬಹುದೆ? ಎಂದು ಜರ್ಮನಿಯು ಆಸ್ಟ್ರಿಯಾದಮೇಲೆ ಆಗ್ರಹಗೊಂಡಿದೆಯಂತೆ.

ಇದುವರೆಗೆ ಇಂಗ್ಲೀಷರುಹಿಡಿದುಕೊಂಡಿರುವ ೧೬೦೦ ಮಂದಿ ಜರ್ಮನ್ ಬಂದಿಗಳು ಇಂಗ್ಲೆಂಡಿಗೆ ತರಲ್ಪಟ್ಟಿದ್ದಾರೆ.

ದಕ್ಷಿಣಾಫ್ರಿಕಾದಲ್ಲಿರುವ ಇಂಗ್ಲೀಷ್ ಸೇನೆಯು ಓರಂಬಾಡ್ ಎಂಬ ಪಟ್ಟಣಕ್ಕೆ ದಕ್ಷಿಣದಲ್ಲಿ ಸೈನಿಕರಿಗೆ ಅನುಕೂಲವಾದ ರಾಮನ್ಸ್ ಪಟ್ಟಣವನ್ನು ಜರ್ಮನರಮೇಲೆ ಯುದ್ಧಮಾಡಿ ಹಿಡಿದುಕೊಂಡಿತು. ಇದು ಜರ್ಮನರದು ಮತ್ತೂ ಆರೇಂಜ್‌ನದಿಯಮೇಲಿರುವ ಒಂದು ಬೆಟ್ಟದಮೇಲಿದ್ದ ಜರ್ಮನ್ ಸೈನ್ಯವನ್ನು ಥಕ್ಕನೆ ಇಂಗ್ಲೀಷ್ ಸೇನೆಯು ಮುತ್ತಿಗೆಹಾಕಿ ಎಲ್ಲರನ್ನೂ ಹಿಡಿದುಕೊಂಡಿತು.

ಮೈಸೂರ್ ಸ್ಟಾರ್.

ಸನ್ ೧೯೧೪ ನೆಯ ಸೆಪ್ಟಂಬರ್ ತಾ|| ೨೦ನೆಯ ಭಾನುವಾರ.

ಜರ್ಮನರ ಯುದ್ಧದ ಹಡಗು ಬಂಗಾಳಾಕೊಲ್ಲಿಗೆ ಬಂದುದು.

ಸಾಹಸಶಾಲಿಯಾದ ಜರ್ಮನ್ ನಾವಿಕನೊಬ್ಬನು “ಎಮ್ಡೆನ್” ಎಂಬ ಯುದ್ಧದ ಹಡಗನ್ನು ಬಂಗಾಳಾಕೊಲ್ಲಿಗೆ ಸಾಗಿಸಿಕೊಂಡುಬಂದು ವ್ಯಾಪಾರದ ಕೆಲ ಹಡಗುಗಳನ್ನು ಕಳೆದ ವಾರದಲ್ಲಿ ಮುಳುಗಿಸಿದನೆಂಬ ಸುದ್ದಿಯು ಆಶ್ಚರ್ಯವನ್ನು ಮಾಡಿರುವುದು. ಭರತಖಂಡಕ್ಕೆ ಪಶ್ಚಿಮದಕ್ಷಿಣದಿಕ್ಕುಗಳಿಂದ ಜರ್ಮನರ ಹಡಗುಗಳು ಬರುವುದು ಸಾಧ್ಯವಲ್ಲ. ಅದುಕಾರಣ ಈ ಹಡಗು ಚೀನಾದ ಕಡೆಯಿಂದ ಪೂರ್ವಮಾರ್ಗವಾಗಿ ಬಂದಿರಬೇಕು. ಈ ಯುದ್ಧದಹಡಗಿನಜತೆಗೆ ಮಾರ್ಕೊಮಾನಿಯಾ ಎಂಬ ಮತ್ತೊಂದು ಹಡಗುಕೂಡ ಕಲ್ಲಿದ್ದಲು ಮೊದಲಾದ ಸಾಮಗ್ರಿಗಳನ್ನು ಹೊತ್ತುಕೊಂಡುಬಂದಿದ್ದಿತು.

ಕಳೆದ ತಾ|| ೧೦ ರಲ್ಲಿ ಇವು ಪುರಿ (ಜಗನ್ನಾಥದ) ನೇರದಲ್ಲಿ ಸಮುದ್ರದೊಳಗೆ ಬೆಳಗಿನ ೯ ಗಂಟೆಗೆ ಕಾಣಿಸಿಕೊಂಡುವು. ಬಂಗಾಳಾಕೊಲ್ಲಿಯಲ್ಲಿ ತಂತ್ರಿಯಿಲ್ಲದ ವಾರ್ತೆಗಳು ಹೋಗಿಬರುವ ದಾರಿಗೆ ಅಡ್ಡಲಾಗಿ ಈ ಎಮ್ಡೆನ್ ಹಡಗು ನಿಂತುಕೊಂಡು, ಹಡಗುಗಳ ಸಂಚಾರಕ್ರಮವನ್ನೆಲ್ಲಾ ತಿಳಿದುಕೊಂಡಿತು. ಬಳಿಕ ತಾ|| ೧೩ ರವರೆಗೆ ಅದು ೫ ಹಡಗುಗಳನ್ನು ಮುಳುಗಿಸಿತು. ಮುಳುಗಿದುವುಗಳಲ್ಲಿ ಇಂಡಸ್-ಲೋವೆಟ್ ಎಂಬಿವುಗಳೆರಡೂ ಇಂಗ್ಲೀಷ್ ಸರ್ಕಾರಕ್ಕೆ ಸೇರಿದುವು. ಇವು ಬರಿಯದಾಗಿದ್ದು, ಬೊಂಬಾಯಿಗೆ ಹೋಗುತ್ತಿದ್ದುವು. ಕಿಲ್ಲಿನ್ ಎಂಬ ಹಡಗು ಕಲ್ಲಿದ್ದಲನ್ನು ತುಂಬಿಕೊಂಡು ಕೊಲಂಬೋವಿಗೆ ಹೋಗುತ್ತಿದ್ದಿತು. ಟ್ರಬ್ರೋಕ್ ಎಂಬುದೂ ಸಹ ಕಲ್ಲಿದ್ದಲನ್ನು ತುಂಬಿಕೊಂಡು ಕಲ್ಕತ್ತಾಕ್ಕೆ ಹೋಗುತ್ತಿದ್ದಿತು. ಡಿಪ್ಲೊಮಾಟ್ ಎಂಬುದು ೪೦ ಸಾವಿರ ತೇಯೆಲೆಯ ಡಬ್ಬಾಗಳನ್ನು ತುಂಬಿಕೊಂಡು ಸೀಮೆಗೆ ಹೋಗುತ್ತಿದ್ದಿತು. ೧೧-೧೨-೧೩ನೆ ತಾರೀಖುಗಳಲ್ಲಿ ಜರ್ಮನ್ ಹಡಗು ಈ ಹಡಗುಗಳನ್ನೆಲ್ಲಾ ತಡೆದು ನಿಲ್ಲಿಸಿ ಫಿರಂಗಿ ಗುಂಡುಗಳನ್ನು ಹೊಡೆದು ಮುಳುಗಿಸಿಬಿಟ್ಟಿತು. ಅವುಗಳಲ್ಲಿದ್ದ ಜನರನ್ನು ಮೊದಲೇ ಇಳಿಯಿಸಿ, ಕಾಬಿಂಗಾ ಎಂಬ ಹಡಗಿನಮೇಲೆ ಹತ್ತಿಸಿ ಕಲ್ಕತ್ತಾಕ್ಕೆ ಕಳುಹಿಸಿಬಿಟ್ಟಿತು. ಬಳಿಕ ಲೊರೆಡನೋಸ್ ಎಂಬ ಇಟಾಲಿಯನ್ನರ ಹಡಗೊಂದನ್ನು ಓಡಿಸಿಕೊಂಡುಹೋಗಿ ಹಿಡಿದಿದ್ದು ಬಿಟ್ಟುಬಿಟ್ಟಿತು. ಮತ್ತೂ ರಷ್ಯನರ ಹಡಗೊಂದನ್ನು ಅಟ್ಟಿಕೊಂಡುಹೋಯಿತು. ಅದರ ಗತಿಯೇನಾಯಿತೋ ಗೊತ್ತಾಗಿಲ್ಲ. ಕಾಬಿಂಗಾದ ಮೇಲೆ ಬಂದು ಕಲ್ಕತ್ತಾಕ್ಕೆ ಸೇರಿದ ಜನರು ಆಗ ನಡೆದ ಸಂಗತಿಗಳನ್ನೆಲ್ಲಾ ವಿವರವಾಗಿ ತಿಳಿಯಿಸಿದ್ದಾರೆ. ಅವರನ್ನೆಲ್ಲಾ ಜರ್ಮನರು ಚೆನ್ನಾಗಿಯೇ ಆದರಿಸಿದರಂತೆ.

ಹೀಗೆ ಜರ್ಮನರ ಹಡಗು ಯಾರ ಕಣ್ಣಿಗೂ ಬೀಳದಂತೆ ಇಷ್ಟುದೂರ ಭರತಖಂಡಕ್ಕೆ ಬಂದು ಮಾಡಿರುವ ಸಾಹಸವು ಸಾಮಾನ್ಯವಾದುದಲ್ಲ. ಜರ್ಮನರ ಅಸಾಧಾರಣಸಾಹಸಕ್ಕೆ ಇದೊಂದು ದೃಷ್ಟಾಂತವಾಯಿತು. ಆದರೇನು? ಭರತಖಂಡದ ಯಾವುದೊಂದು ರೇವಿಗೂ ಬಂದು ತನ್ನ ಪೌರುಷವನ್ನು ತೋರಿಸುವ ಎಡೆಯು ಇದಕ್ಕಿಲ್ಲವಾಯಿತು. ಹಾಗೆ ತೋರಿಸಿದ್ದರೆ ಅದಕ್ಕೆ ಜಲಸಮಾಧಿಯು ಆಗಲೇ ಆಗಿಹೋಗುತಿದ್ದಿತು. ಈಗಲೂ ಇಂಗ್ಲೀಷರ ಯುದ್ಧದ ಹಡಗುಗಳು ಆ ಜರ್ಮನ್ ಹಡಗುಗಳನ್ನು ಕಡಕಿಕೊಂಡು ಹೋಗಿವೆ. ಅದ ಪರ್ಯವಸಾನವು ಇಷ್ಟರಲ್ಲೇ ಹೊರಬೀಳಬಹುದು.

ಈಗ ಇಷ್ಟುಮಟ್ಟಿಗೆ ಬಂಗಾಳಾ ಕೊಲ್ಲಿಯಲ್ಲಿ ಶತ್ರುಗಳು ಬೆದರಿಕೆಯನ್ನು ಹಾಕುವುದಕ್ಕಾದರೂ ಆಸ್ಪದವಾದುದನ್ನು ನೋಡಿದರೆ ಅಲ್ಲಿ ನಮ್ಮ ಸರ್ಕಾರದವರ ಕಾವಲು ಸಂಪೂರ್ಣವಾಗಿರಲಿಲ್ಲವೆಂದು ಕಾಣುತ್ತದೆ. ಈಗುಂಟಾದ ಶತ್ರುಗಳ ಹಾವಳಿಯು ಭರತಖಂಡದ ಸರ್ಕಾರದವರನ್ನು ತುಂಬಾ ಜಾಗರೂಕರಾಗಿರುವಂತೆ ಮಾಡಲು ಸಾಧಕವಾಯಿತೆನ್ನಬಹುದು.

ಭರತಖಂಡದಲ್ಲಿ ಸದ್ಯಃ ಶತ್ರುಗಳ ಗುಂಡಿನೇಟಿನ ಸದ್ದು ಕೇಳಿಸಲ್ಪಡುವ ಸಂಭವವಿಲ್ಲವೆಂದು ಉಂಟಾಗಿದ್ದ ನಿಶ್ಚಿಂತತೆಗೆ ಇದು ಭಂಗಕಾರಿಯಾಗಿಮಾತ್ರ ಪರಿಣಮಿಸಿತು. ಆದರೂ ನಮ್ಮ ಪಾಲಕರು ನಮ್ಮ ದೇಶರಕ್ಷಣೆಗೆ ಔದಾಸೀನ್ಯವಿಲ್ಲದೆ ಹೆಚ್ಚು ಗಮನವನ್ನು ಕೊಡಬೇಕಾಗಿಬಂದುದರಿಂದ ನಮ್ಮ ಕ್ಷೇಮಕ್ಕೆ ಮತ್ತಷ್ಟು ಸಾಧಕವಾಯಿತು.

ಪ್ಯಾರಿಸ್ ಪಟ್ಟಣ.

ಇದು ಫ್ರಾನ್ಸ್‌ದೇಶದ ರಾಜಧಾನಿಯು. ಇದು ಭೂಲೋಕದ ಅಮರಾವತಿಯೇ ಸರಿ. ಪ್ರಪಂಚದಲ್ಲಿ ವೈಶಾಲ್ಯದೊಳಗೂ ಜನಸಂಖ್ಯೆಯೊಳಗೂ ಲಂಡನ್ ಪಟ್ಟಣವು ದೊಡ್ಡದಾಗಿದ್ದರೂ ಈ ಪ್ಯಾರಿಸ್ ಪಟ್ಟಣವನ್ನು ಸರಿಹೋಲುವಂಥ ನಗರವು ಪ್ರಪಂಚದಲ್ಲಿ ಮತ್ತೊಂದಿಲ್ಲ. ಈ ಪಟ್ಟಣದಲ್ಲಿ ವಾಸವಾಗಿರುವ ಜನರ ಸಂಖ್ಯೆಯು ೩೬೪೯೨೬೪. ಇದು ಅಭೇದ್ಯವಾದ ಉತ್ತಮದುರ್ಗದಿಂದ ಸಂರಕ್ಷಿಸಲ್ಪಟ್ಟಿದೆ. ಈ ಕೋಟೆಯು ೫೪ ಕೋಟಿ ರೂ. ಗಳ ವೆಚ್ಚದಿಂದ ಕಟ್ಟಲ್ಪಟ್ಟಿದೆ. ೯೪ ಬುರುಜುಗಳನ್ನು ಹೊಂದಿರುವ ಈ ಕೋಟೆಯ ಗೋಡೆಯು ಪಟ್ಟಣದ ಸುತ್ತಲೂ ಇದೆ. ಈ ಗೋಡೆಯ ಮಂದವು ೧೯ ಅಡಿ. ಎತ್ತರವು ೪೧ ಅಡಿ. ಇದರಲ್ಲಿ ೧೭ ಕೋಟೆಗಳು ಉನ್ನತವಾದ ಸ್ಥಾನಗಳಲ್ಲಿದ್ದು ೧ ಸಾವಿರ ಫಿರಂಗಿಗಳು ಅವುಗಳ ಮೇಲೆ ಇಡಲ್ಪಟ್ಟು ಪಟ್ಟಣವನ್ನು ಕಾಪಾಡುತ್ತಿರುವುವು. ಈ ಕೋಟೆಯ ಮಗ್ಗುಲಲ್ಲಿ ೧೬ ಗಜಗಳ ಅಗಲದ ಕಂದಕವು ಪಟ್ಟಣದ ಶ್ರೀಯ ಒಡ್ಯಾಣದಂತೆ ಸುತ್ತಲೂ ಆವರಿಸಿಕೊಂಡಿದೆ. ಈ ಕೋಟೆಗಳೆಲ್ಲಾ ಆವರಿಸಿಕೊಂಡಿರುವ ಪ್ರದೇಶದ ಒಟ್ಟು ವೈಶಾಲ್ಯವು ೪೦೦ ಚದರಮೈಲಿಗಳಾಗುವುವು. ಶ್ರೇಷ್ಠರಾದ ೫೦ ಸಾವಿರ ಸೈನಿಕರು ಯಾವಾಗಲೂ ಕೋಟೆಯಲ್ಲಿ ವಾಸವಾಗಿರುವರು.

ಈ ಶ್ರೇಷ್ಠ ಪಟ್ಟಣವನ್ನು ಒಂದಾವೃತ್ತಿ ಸಂದರ್ಶಿಸಿದವರು ತಮ್ಮ ತಮ್ಮ ಜೀವಾಂತವಾಗಿ ಅದನ್ನು ಮರೆಯಲಾರರು. ಸೀನ್ ಎಂಬ ನದಿಯು ಪ್ಯಾರಿಸ್ ಪಟ್ಟಣದ ನಡುವೆ ಹರಿಯುತ್ತಿರುವುದರಿಂದ ಆ ಪಟ್ಟಣಕ್ಕೆ ಅತುಲವಾದ ಸೌಂದರ್ಯವು ಉಂಟಾಗಿದೆ. ಈ ಪಟ್ಟಣವನ್ನು ಸಂದರ್ಶಿಸಿದ ರಾಜರು, ಕವಿಗಳು ಗ್ರಂಥಕರ್ತರು, ವರ್ತಕಶ್ರೇಷ್ಠರು, ಕಲಾವಿದರು ಮೊದಲಾದ ಯಾರೊಬ್ಬರೂ ತಮ್ಮ ಜೀವಿತಕಾಲದ ಶೇಷವನ್ನೆಲ್ಲಾ ಈ ನಗರದಲ್ಲೇ ಕಳೆಯಬೇಕೆಂದು ಆಸೆಪಡದೆ ಹೋಗುವುದಿಲ್ಲ. ಈ ಪಟ್ಟಣವನ್ನು ನವರತ್ನಖಚಿತ ಸುವರ್ಣಾಭರಣಕ್ಕೆ ಹೋಲಿಸಬಹುದು. ಇಲ್ಲಿರುವ ವರಸೆಯಾದ ಪ್ರಾಸಾದಪಂಕ್ತಿಗಳ ವೈಭವವೂ ಮಧ್ಯೆಮಧ್ಯೆಯಿರುವ ಉಪವನರಾಜಿಗಳ ಸೊಂಪೂ, ಬೀದಿಗಳ ಸೌಂದರ್ಯವೂ, ಅಲ್ಲಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಪ್ರತಿಮೆಗಳ ಸೊಗಸೂ, ಇವೆಲ್ಲಕ್ಕೂ ಮಿಗಿಲಾಗಿ ಅಲಂಕೃತರಾಗಿ ಸಂಚರಿಸುತ್ತಿರುವ ಸ್ತ್ರೀಪುರುಷರ ವಿಲಾಸವೂ—ಇವೆಲ್ಲವೂ ಸೇರಿ, ಆ ಪಟ್ಟಣವನ್ನು ಜಗತ್ತಿನ ಸಕಲ ಭೋಗಭಾಗ್ಯಗಳ ತವರೂರೆನಿಸಿರುವುವು. ಆದುದರಿಂದ ಒಬ್ಬಾನೊಬ್ಬ ಭಾರತೀಯನು ಇವನ್ನು ನೋಡಿ ಇದು “ತಾಜಮಹಲ್” ಎಂದು ಹೇಳಿರುವನು. (ಎಂದರೆ ದೇದೀಪ್ಯಮಾನವಾಗಿ ಹೊಳೆಯುತ್ತಿರುವ ಪ್ರಾಸಾದವೆಂದು ಅರ್ಥವು) ನಮ್ಮ ಪುರಾಣಗಳಲ್ಲಿ ವರ್ಣಿಸಲ್ಪಟ್ಟಿರುವ ಅಮರಾವತಿಯಂತೆಯೇ ಇದರ ಸೌಂದರ್ಯಸಂಪತ್ತಿಗಳು ವಿರಾಜಿಸುತ್ತಿರುವ ಕಾರಣ, ಇದು ಜಗತ್ತನ್ನೆಲ್ಲಾ ದಿಗ್ಭ್ರಮೆಗೊಳಿಸುವ ಮೋಹಿನೀವೇಷದಂತೆ ಒಪ್ಪುತ್ತಿರುವುದು. ಇದು ಪ್ರಪಂಚದ ಎಲ್ಲಪಟ್ಟಣಗಳಿಗಿಂತಲೂ ಧನಸಂಪತ್ತಿನಲ್ಲಿ ಮುಂದಾದುದೆಂದು ಹೇಳಬಹುದು. ಇಲ್ಲಿನ “ಬ್ಯಾಂಕ್ ಆಫ್ ಫ್ರಾನ್ಸ್” ಎಂಬ ಧನಾಗಾರದಲ್ಲಿ ೨೮೫ ಕೋಟಿ ರೂ. ಗಳು ಸುರಕ್ಷಿತ ಧನವಾಗಿರುವುವು. ಇದು ಇಂಗ್ಲೆಂಡ್-ಜರ್ಮನಿ-ಇಟಲಿ-ಆಸ್ಟ್ರಿಯಾ ಬ್ಯಾಂಕುಗಳಲ್ಲಿರುವ ರಿಜರ್ವ್ ಫಂಡೆಲ್ಲವನ್ನೂ ಕೂಡಿಸಿದರೆ ಆಗುವ ಮೊತ್ತಕ್ಕಿಂತಲೂ ಹೆಚ್ಚಿನದಾಗುವುದೆಂಬುದನ್ನು ಗಮನಿಸಿದರೆ ಇದರ ಭಾಗ್ಯವೆಷ್ಟೆಂಬುದು ಗೊತ್ತಾಗುವುದು. ಸಕಲ ರಾಷ್ಟ್ರದವರಿಗೂ ಸುರಕ್ಷಿತ ಧನವನ್ನಿಡಲು ಈ ಪ್ಯಾರಿಸ್ಸೇ ಮುಖ್ಯಸ್ಥಲವಾಗಿರುವುದು. ಮಾನುಷದೇಹದಲ್ಲಿ ಹೃದಯವು ಹೇಗೆ ಮುಖ್ಯಸ್ಥಾನವಾಗಿರುವುದೋ ಹಾಗೆ ಈ ಪ್ರಪಂಚಕ್ಕೆಲ್ಲ ಈ ಪ್ಯಾರಿಸ್ಸೇ ವರ್ತಕತನಕ್ಕೆ ಪ್ರಾಧಾನ್ಯವನ್ನು ವಹಿಸಿರುತ್ತದೆ. ಈ ಪ್ಯಾರಿಸ್ಸಿನಲ್ಲಿ ಬಡ್ಡಿಯು ನೂರಕ್ಕೆ ಮೂರರಂತೆ ಇರುತ್ತದೆ. ಈ ದರವು ಯಾವಾಗಲೂ ವ್ಯತ್ಯಸ್ತವಾಗುವುದಿಲ್ಲ. ಪ್ಯಾರಿಸ್ಸು ಇತರ ದೇಶದವರಿಗೆ ತಾನು ಸಾಲವನ್ನು ಕೊಡುತ್ತಿರುವುದೇ ಹೊರತು ಇತರರಿಂದ ಯಾವಾಗಲೂ ತಾನು ಸಾಲವನ್ನು ತಂದರಿಯದು. ಅಮೇರಿಕಾದಲ್ಲಿ ಹೊಸದಾಗಿ ನಿರ್ಮಿಸಲ್ಪಟ್ಟ ಪನಾಮಾಕಾಲುವೆಯನ್ನು ಮಾಡಿದಾಗ ಅಲ್ಲಿನ ಯುನೈಟೆಡ್ ಸ್ಟೇಟ್ಸಿನವರು ಫಿಲಿಪೈನ್‌ದ್ವೀಪಗಳ ಸಂಬಂಧದಲ್ಲಿ ಅದಕ್ಕೆ ಕೊಡಬೇಕಾದ ೧೨ ಕೋಟಿ ರೂ.ಗಳನ್ನೂ, ಸ್ಪೈಯಿನ್‌ದೇಶದವರು ಕೊಡಬೇಕಾದ ೬ ಕೋಟಿ ರೂ.ಗಳನ್ನೂ, ಈ ಪ್ಯಾರಿಸ್‌ಪಟ್ಟಣವೇ ಸಾಲವಾಗಿ ಕೊಟ್ಟು ತನ್ನ ಸಿರಿವಂತಿಗೆಯನ್ನು ವ್ಯಕ್ತಪಡಿಸಿತು. ಪ್ಯಾರಿಸ್ಸಿನ ಬ್ಯಾಂಕುಗಳಲ್ಲಿ ವರ್ಷ ೧ಕ್ಕೆ ೭೫೫೦೦೦೦೦೦೦೦ ರೂ.ಗಳ ವ್ಯವಹಾರವು ನಡೆಯುತ್ತಿದೆಯೆಂಬುದನ್ನು ಕೇಳಿ ಯಾರುತಾನೇ ಆಶ್ಚರ್ಯಪಡುವುದಿಲ್ಲ? ಇಂಥ ಪಟ್ಟಣದಮೇಲೆ ಜರ್ಮನರಂಥ ಅಸೂಯಾಳುಗಳ ಕಣ್ಣುಬಿದ್ದಿದ್ದುದೇನಾಶ್ಚರ್ಯ?

ಒಳದೇಶದ ವೃತ್ತಾಂತಗಳು.

ರಾಜಧಾನಿಯಲ್ಲಿ ಶುಕ್ರವಾರ ರಾತ್ರಿ ಕೊಂಚ ಮಳೆಯಾಯಿತು. ದಕ್ಷಿಣಭಾಗದಲ್ಲಿ ಮೋಡವು ಬಹಳವಾಗಿ ಕವಿದುಕೊಂಡು ಮಿಂಚುತ್ತಿದ್ದಿತು. ನಂಜನಗೂಡು ಗುಂಡ್ಲುಪೇಟೆ ಮೊದಲಾದ ಪ್ರಾಂತಗಳಲ್ಲಿ ಮಳೆಯಾಗಿದೆಯೆಂದು ಸುದ್ದಿಯೂ ಬಂದಿರುವುದು.

ಸಂಪದಭ್ಯುದಯ ಸಮಾಜದ ೪ ನೆಯ ಅಧಿವೇಶನವು ರಾಜಧಾನಿಯ ಟವನ್‌ಹಾಲಿನಲ್ಲಿ ಈ ತಾ|| ೨೨ ನೆಯ ಮಂಗಳವಾರ ಶ್ರೀಮದ್ಯುವರಾಜರವರಿಂದಾರಂಭಿಸಲ್ಪಟ್ಟು ಸರದಾರ್ ಕಾಂತರಾಜಅರಸಿನವರ ಅಧ್ಯಕ್ಷತೆಯಲ್ಲಿ ತಾ|| ೨೩ ಮತ್ತೂ ೨೪ ರ ವರೆಗೆ ನಡೆಯುವುದು.

ದಸರಾ ಕೈಗಾರಿಕೆಯ ಮತ್ತೂ ವ್ಯವಸಾಯದ ವಸ್ತುಪ್ರದರ್ಶನವು ನಾಳೆಯದಿನ ಮಧ್ಯಾಹ್ನ ಶ್ರೀಮದ್ಯುವರಾಜರವರ ಹಸ್ತದಿಂದ ಆರಂಭಿಸಲ್ಪಡುವುದು. ಆ ಸಮಯದಲ್ಲಿ ಈ ಪ್ರದರ್ಶನದ ಕಮಿಟಿಯ ಚೇರ್ಮನ್ನರಾದ ಸರದಾರ್ ಕಾಂತರಾಜಅರಸಿನವರು ವಿಜ್ಞಾಪನಪತ್ರಿಕೆಯನ್ನೋದಿ ಒಪ್ಪಿಸಿದಮೇಲೆ ಯುವರಾಜರು ತಕ್ಕುತ್ತರವನ್ನು ದಯಪಾಲಿಸುವರು.

ದಸರಾಮಹೋತ್ಸವಕ್ಕಾಗಿ ದಿವಾನರೂ ಕೌನ್ಸಿಲರುಗಳೂ ನಿನ್ನೆಯದಿನ ರಾಜಧಾನಿಗೆ ದಯಮಾಡಿಸಿದರು. ಉಳಿದ ಅಧಿಕಾರಿಗಳೂ ಆಹೂತರಾದ ದೊಡ್ಡಮನುಷ್ಯರುಗಳೂ ಪ್ರಜಾಪ್ರತಿನಿಧಿಗಳೂ ಇನ್ನಮೇಲೆ ಬರುವರು. ಈ ವೇಳೆ ರಾಜಧಾನಿಯಲ್ಲಿ ಪ್ಲೇಗು ಕೊಂಚ ಉಲ್ಬಣಸ್ಥಿತಿಯಲ್ಲಿರುವುದರಿಂದಲೂ, ಸಂಸ್ಥಾನದ ಬಹುಭಾಗದಲ್ಲಿ ಮಳೆಯು ಬಾರದೆ ಜನರ ಸ್ಥಿತಿಯು ಸಮರ್ಪಕವಾಗಿಲ್ಲದಿರುವುದರಿಂದಲೂ ಮಹೋತ್ಸವಕ್ಕೆ ಹೆಚ್ಚು ಜನರು ಬರುವ ಸಂಭವವಿಲ್ಲವು.

ಚೆನ್ನಪಟ್ಟಣದಲ್ಲಿ ಕಳೆದ ಫೆಬ್ರುವರಿ ತಾ|| ೧೧ ನೆಯ ರಾತ್ರಿ ನರಸಿಂಹಯ್ಯನೆಂಬುವನೂ ಮತ್ತಿಬ್ಬರೂ ಅಲ್ಲಿಯ ಅಪ್ರಮೇಯಸೆಟ್ಟರ ಜವಳಿಯಂಗಡಿಯ ಬೀಗವನ್ನು ಮುರಿದು ಕಳುವನ್ನು ಮಾಡಿದರೆಂಬಪರಾಧಕ್ಕಾಗಿ ಸಬ್‌ಡಿವಿಜನ್ ಮ್ಯಾಜಿಸ್ಟ್ರೇಟರಲ್ಲಿ ೬ ತಿಂಗಳ ಕಠಿಣಕಾರಾಗೃಹವಾಸದ ಶಿಕ್ಷೆಗೆ ಗುರಿಯಾಗಿದ್ದು ಚೀಫ್‌ಕೋರ್ಟಿಗಪೀಲನ್ನು ಮಾಡಿರುವಲ್ಲಿ ಕಳೆದ ತಾ|| ೧೭ರಲ್ಲಿ ಜಸ್ಟಿಸ್ ಚಂದ್ರಶೇಖರಯ್ಯರ್‌ರವರು ವಿಚಾರಿಸಿ ಫಿರ್ಯಾದಿಯ ಪರ ೧೧ನೆಯ ಸಾಕ್ಷಿಯು ೨ ನೆಯಪರಾಧಿಯನ್ನುಳಿಸುವುದಕ್ಕಾಗಿ ನರಸಿಂಹಯ್ಯನ ಮೇಲೆ ವಿರುದ್ಧವಾಗಿ ವಾಙ್ಮೂಲವನ್ನು ಹೇಳಿರುತ್ತಾನೆ. ಅವನು ಕೃತ್ಯವನ್ನು ನಡೆಸಿರುವುದು ಅನುಮಾನವೆಂಬುದರಮೇಲೆ ನಿರ್ದೋಷಿಯನ್ನಾಗಿ ಮನ್ನಿಸಿಬಿಟ್ಟರು.

ಮೈಸೂರು-ಶ್ರೀರಂಗಪಟ್ಟಣದ ಮಾರ್ಗದಲ್ಲಿ ೮೨ ನೆಯ ಮೈಲಿಕಲ್ಲಿನಿಂದ ರಾಜಧಾನಿಯ ರೇಸ್‌ಕೋರ್ಸಿನವರೆಗೆ ೬ಮೈಲಿಯ ದೂರ ೧|| ಗಂಟೆಯ ಕಾಲದಲ್ಲೋಡುವ ಪಂದ್ಯವು ಬರುವ ಅಕ್ಟೋಬರ್ ತಾ|| ೧ನೆಯ ಗುರುವಾರ ಮಧ್ಯಾಹ್ನ ೨ ಗಂಟೆಯಲ್ಲಿ ನಡೆಯುವುದಾಗಿ ಗೊತ್ತುಮಾಡಲ್ಪಟ್ಟಿದೆ. ಈ ಓಡುವ ಪಂದ್ಯದಲ್ಲಿ ಮೊದಲಾದವನಿಗೆ ಒಂದು ಬೆಳ್ಳಿಯ ಬಟ್ಟಲೂ ೭೫ ರೂಪಾಯಿಗಳೂ, ಎರಡನೆಯವನಿಗೆ ೫೦ ರೂಪಾಯಿಗಳೂ, ಮೂರನೆಯವನಿಗೆ ೨೫ ರೂಪಾಯಿಗಳೂ ಬಹುಮಾನಿಸಲ್ಪಡುವುವು. ಈ ಪಂದ್ಯಕ್ಕೆ ಯಾರು ಬೇಕಿದ್ದರೂ ಸೇರಬಹುದು. ಅದುಕಾರಣ ಇಷ್ಟವುಳ್ಳವರು ತಮ್ಮ ಹೆಸರುಗಳನ್ನು ಈ ಸೆಪ್ಟಂಬರ್ ತಾ|| ೨೫ ರೊಳಗೆ ಈ ಪಂದ್ಯದ ಆನರರಿ ಸೆಕ್ರೆಟರಿಯವರಾದ ಸರದಾರ್ ಎಂ. ಗೋಪಾಲರಾಜ ಅರಸಿನವರಿಗೆ ತಿಳಿಸಿಕೊಳ್ಳುವುದು.

ಈ ದಿವಸ ಶ್ರೀಮನ್ ಮಹಾರಾಜರವರು ಪ್ರಾತಃಕಾಲದಲ್ಲಿ ಅಭ್ಯಂಜನಸ್ನಾನವನ್ನು ಮಾಡಿ ಇಷ್ಟದೇವತಾರ್ಚನೆಯನ್ನು ತೀರಿಸಿಕೊಂಡು ಸರ್ವಾಲಂಕಾರಭೂಷಿತರಾಗಿ ತಮ್ಮಂತೆಯೇ ಅಲಂಕೃತರಾದ ಸಹೋದರರಾದ ಕಂಠೀರವ ನರಸಿಂಹರಾಜ ಒಡೆಯರವರ ಸಂಗಡ ಸಭಾಂಗಣಕ್ಕೆ ಚಿತ್ತೈಸಿ ಸ್ವಸ್ತಿವಾಚನ ವಾಸ್ತುಪೂಜೆಗಳನ್ನು ತೀರಿಸಿಕೊಂಡು ಸಿಂಹಾಸನವನ್ನು ಪೂಜಿಸಿ ಒಂಭತ್ತು ಗಂಟೆಗೆ ಸಲ್ಲುವ ತುಲಾಲಗ್ನದಲ್ಲಿ ಸಿಂಹಾಸನಾರೋಹಣವನ್ನು ಮಾಡುವರು. ಯುವರಾಜರು ಪಕ್ಕದಲ್ಲಿ ಭಂಗಾರದ ಪೀಠದಮೇಲೆ ಮಂಡಿಸುವರು. ಪಟ್ಟದಾನೆ ಕುದುರೆಗಳು ರಾಜಮರ್ಯಾದೆಯಿಂದ ಕೆರೆಯಬಳಿಗೆ ಹೋಗಿ ಬರುವುವು. ಸಭಿಕರ ನಜರ್‌ಮುಜರೆಯೂ, ಚತುರಂಗಸೇನೆಯ ಮುಜರೆಯೂ ನಡೆದು ಸಭಿಕರಿಗೆ ಪುಷ್ಪಮಾಲಿಕೆ ತಾಂಬೂಲವಿನಿಯೋಗದಿಂದ ಸಭೆಯು ವಿಸರ್ಜಿಸಲ್ಪಟ್ಟು ಸಾಯಂಕಾಲ ೬ ಗಂಟೆಗೆ ಯಥಾಪ್ರಕಾರ ದರ್ಬಾರು ನಡೆದು ಮುಜರೆಯೂ, ಕುಸ್ತಿಗಳೂ, ಪಟಾವರ್ಸೆಗಳೂ, ಅಂಗಸಾಧನೆಗಳೂ, ಮದ್ದಿನ ವಿನೋದವೂ ನಡೆಯುವುವು. ಇದರಂತೆ ಬರುವ ಸೋಮವಾರದವರೆಗೂ ಪ್ರತಿ ಸಾಯಂಕಾಲದಲ್ಲೂ ನಡೆಯುವುದು.

ಪತ್ರವ್ಯವಹಾರ

ಬೀರೂರು.

ಕಾಲಸ್ಥಿತಿಯು ಚೆನ್ನಾಗಿದೆ. ಮಳೆಯು ಚೆನ್ನಾಗಿ ಬಂಗತುವುದಲ್ಲದೆ ಈ ಗ್ರಾಮಕ್ಕೆ ಮುಖ್ಯವಾದ ದೇವನಕೆರೆಯು ತುಂಬಿ ಇನ್ನು ಒಂದು ಅಡಿ ನೀರು ಬಂದರೆ ಕೋಡಿ ಬೀಳುವುದರಲ್ಲಿದೆ. ಈ ಊರಿನ ಶ್ರೀ ಹಚ್ಚೆಮಠದಲ್ಲಿ ಇಲ್ಲಿನ ವೀರಶೈವರು ಶ್ರೀಮತ್‌ಪ್ರಣವ ಸ್ವರೂಪಿಗಳಾದಂಥ ಸಂತೆಬೆ

ಸ್ವಾಮಿಗಳು ಶ್ರೀಗಳವರಿಂದ ಶ್ರಾವಣಮಾಸದಲ್ಲಿ ಅಷ್ಟಾವರ್ಣಪ್ರಕಾಶಿಕೆಯೆಂಬ ಪುರಾಣವನ್ನು ಹೇಳಿಸಿ ಸಮಾಪ್ತಿಯದಿನ ಊರಿನ ವೀರಶೈವರಿಗೆಲ್ಲಾ ಮಹಾಗಣಾರಾಧನೆಯನ್ನು ನಡೆಯಿಸಿದರು. ಸಾಯಂಕಾಲ ಮಹಾಮಂಗಳಾರತಿ ಆಗುವ ಕಾಲದಲ್ಲಿ ಟಿ ಎಸ್. ಆರ್. ರುದ್ರಯ್ಯ ಯಾನೆ ಪುಟ್ಟಶಾಮಯ್ಯನವರು ವೀರಶೈವಮತದ ಸ್ವರೂಪವಿಷಯದಲ್ಲೂ ಎಂ. ವಿ. ಮರುಳಸಿದ್ಧಯ್ಯನವರು ವೀರಶೈವಮತದ ಸನಾತನತ್ವದ ವಿಷಯದಲ್ಲೂ ಪ್ರೈ॥ ಸ್ಕೂಲ್‌ನ ಮಾ॥ ಆರ್. ಎಮ್. ಕರಿಸಿದ್ಧಯ್ಯನವರು ಪುರಾಣಶ್ರವಣದಿಂದಾಗುವ ಫಲದ ವಿಷಯದಲ್ಲಿಯೂ ಸಪ್ರಮಾಣವಾಗಿ ಭಾಷಣಮಾಡಿದರು. ಅನಂತರ ಗ್ರಾಮದ ಮುಖ್ಯದೇವರಾದ ಶ್ರೀ ವೀರಭದ್ರಸ್ವಾಮಿಯುತ್ಸವವೂ ಪಲ್ಲಕ್ಕಿಯಲ್ಲಿರಿಸಲ್ಪಟ್ಟಿದ್ದ ಪುರಾಣದವುತ್ಸವವೂ ಸಹ ವಾದ್ಯವೈಭವಂಗಳಿಂದ ಊರಿನ ಮುಖ್ಯಬೀದಿಗಳಲ್ಲೆಲ್ಲಾ ಮೆರವಣಿಗೆಯಾಗಿ ಶ್ರೀಮಠಕ್ಕೆ ಬಿಜಯಂಗೈಸಿತು.

೬-೯-೧೯೧೪. ಪ್ರತ್ಯಕ್ಷದರ್ಶಿ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಭೆಯ ಮ್ಯಾನೇಜಿಂಗ್ ಕಮಿಟಿಯು ಸನ್ ೧೯೧೪ ನೇ ಆಗಸ್ಟ್ ತಾ॥ ೧ ನೇ ಶನಿವಾರ ಸಾಯಂಕಾಲ ೫ ಗಂಟೆಯಲ್ಲಿ ರಾವ್ ಬಹದ್ದೂರ್ ಧರ್ಮ ಪ್ರವರ್ತಕ ಗುಬ್ಬಿ ತೋಟದಪ್ಪನವರ ಧರ್ಮಸತ್ರದ ಮಹಡಿಯಲ್ಲಿ ಮೆ॥ ದಿವಾನ್‌ಬಹದ್ದೂರ್ ರಾಜಸಭಾ ಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರವರ ಅಧ್ಯಕ್ಷತೆಯಲ್ಲಿ ಸೇರಿ ನಡೆಸಿದ ಪ್ರೊಸಿಡಿಂಗ್ಸ್—

ಹಾಜರಿದ್ದ ಮೆಂಬರುಗಳು:—

(೧) ಮ॥ ರಾ॥ ಗಳಾದ ದಿವಾನ್ ಬಹದ್ದೂರ್ ರಾಜಸಭಾ ಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರು (ಪ್ರೆಸಿಡೆಂಟ್) ೨. ಡಾಕ್ಟರ್ ಟಿ. ಯಸ್ ನಂಜಪ್ಪನವರು M. B. C. M. (ವೈಸ್‌ಪ್ರೆಸಿಡೆಂಟ್) ೩. ಎಚ್ ಕೆ ವೀರಬಸವಯ್ಯನವರು B. A. BL. (ಸೆಕ್ರಟರಿ) ೪. ಶೆಟ್ಟರ ವೀರಭದ್ರಶೆಟ್ಟರು ೫. ಮುಜಮ್ದಾರ್ ಬಸಪ್ಪನವರು ೬. ಎಮ್ ಬಸವಯ್ಯನವರು B. A. B. L. ೭. ಜಿ. ರುದ್ರಪ್ಪನವರು B. A. Bar-at-law ೮. ಪಿ. ಮಹಾದೇವಯ್ಯನವರು B. A. B. L. ೯. ಮುಸ್. ಶಿವಪ್ಪನವರು. ೧೦ ಆರ್. ಚಾಮಣ್ಣನವರು (ಟ್ರಜರರ್) ೧೧. ಎಲ್. ಸಿದ್ಧಲಿಂಗಪ್ಪಶೆಟ್ಟರು ೧೨ ಮು. ಮುಸ್ ಕಾಳಪ್ಪನವರು ೧೩ ಜಿ. ಕೆ. ರುದ್ರಾರ್ಯರು (ಅಸಿಸ್ಟೆಂಟ್ ಸೆಕ್ರಟರಿ)

ಸನ್ ೧೯೧೪ ನೇ ಮೆ ತಿಂಗಳು ೨೦ ನೇ ತಾ॥ ನಡೆದ ಜನರಲ್ ಕಮಿಟಿ ಮೀಟಿಂಗಿನ ಮಿನಿಟುಗಳು ಓದಲ್ಪಟ್ಟು ಒಪ್ಪಲ್ಪಟ್ಟವು.

ತಾ॥ ೨೧-೫-೧೯೧೪ ರಿಂದ ತಾ॥ ೧-೮-೧೯೧೪ ವರೆಗಿನ ಜಮಾ ಖರ್ಚು ಲೆಕ್ಕಗಳು ಓದಲ್ಪಟ್ಟು ಮಂಜೂರು ಮಾಡಲ್ಪಟ್ಟವು.

ಸೆಕ್ರಟರಿಯವರಿಂದ ತಯಾರಿಸಲ್ಪಟ್ಟ ತಾ॥ ೧-೭-೧೯೧೩ ರಿಂದ ತಾ॥ ೩೦-೬-೧೯೧೪ ರ ವರೆಗಿನ ವಾರ್ಷಿಕ ಜಮಾಖರ್ಚಿನ ರಿಪೋರ್ಟು ಓದಲ್ಪಟ್ಟು ಮಂಜೂರುಮಾಡಲ್ಪಟ್ಟಿತು

ದಸರಾ ಪ್ರಜಾಪ್ರತಿನಿಧಿ ಸಭೆಯ ಕಾಲದಲ್ಲಿ ಶ್ರೀಮದ್ದಿವಾನ್‌ಸಾಹೇಬರವರಿಗೆ ಪ್ರತಿವರ್ಷವೂ ಅಡ್ರೆಸ್ಸನ್ನು ಒಪ್ಪಿಸುವ ಅವಶ್ಯಕತೆ ಕಾಣುವುದಿಲ್ಲವೆಂದು ತೀರ್ಮಾನಿಸಲ್ಪಟ್ಟಿತು.

ಸೆಕ್ರಟರಿಯವರ ಹತ್ತಿರವಿರುವ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಭೆಯ ಹಾಜರುಸಿಲ್ಕು ಮೊಬಲಗನ್ನು ಮೈಸೂರು ಬ್ಯಾಂಕಿನಲ್ಲಿ ಕರೆಂಟ್ ಡಿಪಾಜಿಟ್ಟಾಗಿ ಟ್ರಜರರಾದ ಮೆ॥ ಆರ್. ಚಾಮಣ್ಣನವರ ಹೆಸರಿನಲ್ಲಿ ಫಂಡ್ ಸಭೆಯ ಪರವಾಗಿ ಇಡಿಸಲ್ಪಟ್ಟು ಟ್ರಜರರ ಮೂಲಕ ಸೆಕ್ರಟರಿಯವರು ಮೊಬಲಗನ್ನು ಬೇಕಾದಾಗ ಆಗಾಗ್ಗೆ ತರಿಸಿಕೊಳ್ಳುವಂತೆ ತೀರ್ಮಾನಿಸಲ್ಪಟ್ಟಿತು.

ಜನರಲ್ ಕಮಿಟಿ ಮೀಟಿಂಗಿನಲ್ಲಿ ಒಬ್ಬ ಸೆಕ್ರಟರಿಯವರು ಚುನಾಯಿಸಲ್ಪಡುವವರೆಗೂ ಅಸಿಸ್ಟೆಂಟ್ ಸೆಕ್ರಟರಿಯವರಾಗಿದ್ದ ಮೆ॥ ಜಿ. ಕೆ. ರುದ್ರಾರ್ಯರು ಸೆಕ್ರಟರಿಯವರ ಕೆಲಸಗಳನ್ನು ಪ್ರೆಸಿಡೆಂಟರವರ ಅಪ್ಪಣೆ ಪ್ರಕಾರ ನಡಿಸತಕ್ಕದ್ದೆಂದು ತೀರ್ಮಾನಿಸಲ್ಪಟ್ಟಿತು.

ಮೆ॥ ಎಚ್. ಕೆ. ವೀರಬಸವಯ್ಯ ಬಿ. ಎ. ಬಿ. ಎಲ್ ರವರು ಆನರರಿ ಸೆಕ್ರಟರಿಗಳಾಗಿ ಪೂರ್ಣಶ್ರದ್ಧೆವಹಿಸಿ ಕೆಲಸಮಾಡಿದ್ದಕ್ಕಾಗಿ ಅವರಿಗೆ ವಂದನೆಯನ್ನು ಅರ್ಪಿಸಬೇಕೆಂದು ತೀರ್ಮಾನಿಸಲ್ಪಟ್ಟಿತು ಸದರಿ ಮೆ॥ ವೀರಬಸವಯ್ಯನವರಿಗೆ ಮುನಿಸೀಫ್ ಕೆಲಸವಾದದ್ದಕ್ಕಾಗಿ ಕಮಿಟಿಯವರು ಈ ಸಂದರ್ಭದಲ್ಲಿ ಅಭಿನಂದನವನ್ನು ಒಪ್ಪಿಸಿ ಮುಂದೆ ಅವರಿಗೆ ಶ್ರೇಯೋಭಿವೃದ್ಧಿಯಾಗಲೆಂದು ಹಾರೈಸಿರುತ್ತಾರೆ.

ಸನ್ ೧೯೧೪-೧೫ ನೇ ಸಾಲಿಗೆ ೮ ತಿಂಗಳಿಗೆ ಈ ಕೆಳಗೆ ನಮೂದಿಸಿರುವ ವಿದ್ಯಾರ್ಥಿಗಳಿಗೆ ಮಾಹೆಯಾನಾ ಇಷ್ಟಿಷ್ಟು ವಿದ್ಯಾರ್ಥಿವೇತನವನ್ನು ಕೊಡಬೇಕೆಂದು ತೀರ್ಮಾನಿಸಲ್ಪಟ್ಟಿತು. ಸೀನಿಯರ್ ಇಂಟರ್‌ಮೀಡಿಯೆಟ್ ತರಗತಿಯಲ್ಲೋದುವ ೩ ಜನ ವಿದ್ಯಾರ್ಥಿಗಳಿಗೆ ಪ್ರತಿಒಬ್ಬನಿಗೂ ೬ ರೂ ಪ್ರಕಾರ; ಜೂನಿಯರ್ ಇಂಟರ್‌ಮೀಡಿಯಟ್ ತರಗತಿಯಲ್ಲೋದುವ ೩ ಜನ ವಿದ್ಯಾರ್ಥಿಗಳಿಗೆ ಪ್ರತಿಒಬ್ಬನಿಗೆ ೬ ರೂ. ಪ್ರಕಾರ, ೪ ಜನಗಳಿಗೆ ೨ ರೂ. ಪ್ರಕಾರ; ಬೊಂಬಾಯಿನಲ್ಲಿ ಎಲೆಕ್ಟ್ರಿಕ್ ಇಂಜನಿಯರಿಂಗ್ ಸ್ಕೂಲಿನಲ್ಲೋದುವ ಒಬ್ಬನಿಗೆ ೬ ರೂ; ಪೂನಾ ಕಾಲೇಜಿನಲ್ಲೋದುವ ಒಬ್ಬನಿಗೆ ೬ ರೂ; ೬ ನೆಯ ಫಾರಮ್ಮಿನಲ್ಲೋದುವ ೩ ಜನ ವಿದ್ಯಾರ್ಥಿಗಳಲ್ಲಿ ಒಬ್ಬನಿಗೆ ೪ ರೂ. ಪ್ರಕಾರ ಒಬ್ಬನಿಗೆ ೩॥ ರೂ, ಪ್ರಕಾರ ೪ ಜನರಿಗೆ ೨ ರೂ. ಪ್ರಕಾರ, ಒಬ್ಬನಿಗೆ ೧ ರೂ. ಪ್ರಕಾರ; ೫ ನೆಯ ಫಾರಮ್ಮಿನಲ್ಲೋದುವವರಲ್ಲಿ ಒಬ್ಬನಿಗೆ ೩ ರೂ. ಪ್ರಕಾರ, ಇಬ್ಬರಿಗೆ ೨ ರೂ. ಪ್ರಕಾರ ೫ ಜನರಿಗೆ ೧ ರೂ. ಪ್ರಕಾರ; ೪ ನೆಯ ಫಾರಮ್ಮಿನಲ್ಲೋದುವ ವಿದ್ಯಾರ್ಥಿಗಳಲ್ಲಿ ೨ ರೂ. ಪ್ರಕಾರ ೫ ಜನರಿಗೆ, ೧ ರೂ. ಪ್ರಕಾರ ೩ ಜನರಿಗೆ ೮ ಆಣೆ ಪ್ರಕಾರ ಇಬ್ಬರಿಗೆ.

ಶ್ರಾವಣೋತ್ಸವವು.

ರಾಮಗಚ್ಚೆಯ ವಿರಕ್ತಮಠದಲ್ಲಿ ಶ್ರಾವಣಶುದ್ಧ ೧ ಆರಭ್ಯ ನಿತ್ಯ ಮಹಾಶಾದಪೂಜಾ ತದಂಗವಾದ ಗಣತೃಪ್ತಿ ಮುಂತಾದ ಸಮಾರಂಭಗಳೊಡನೆ ಶ್ರೀ ತೋಟದ ಸಿದ್ಧೇಶ್ವರಪುರಾಣ ಶ್ರವಣಕಾರ್ಯವು ನಡೆದಿದ್ದು ಭಾದ್ರಪದ ಶುದ್ಧದಲ್ಲಿ ಅನೇಕ ಭಕ್ತಮಾಹೇಶ್ವರರ ತರ್ಪಣಾದಿಗಳಿಂದ ಮಂಗಲಾರಾಧನೆಯು ನೆರವೇರಿಸಲ್ಪಟ್ಟಿತು. ಇದಕ್ಕೆ ಒಂದುದಿನ ಹಿಂದೆ ಭಾದ್ರಪದ ಶುದ್ಧ ಮಂಗಳವಾರ ಉದಯಕ್ಕೆ ಭವ್ಯವಾದ ಶಾಲಾಮಂದಿರದಲ್ಲಿ ಶ್ರೀ ವಿನಾಯಕ ಪೂಜೆಯು ನಡೆದಿದ್ದಿತು. ಈ ಶಾಲಾಭಿವೃದ್ಧಿಯು ಫಂಡು ದಿನೇದಿನೇ ಕೂಡಬೇಕಾದುದು ಮುಖ್ಯವಿಷಯವಾದ ಕಾರಣ, ವೀರಶೈವ ಮತಾಭಿಮಾನಿಗಳಾದ ಸಜ್ಜನರು ತಮ್ಮ ಗೃಹದಲ್ಲಿ ಅಥವಾ ತಮ್ಮ ಪರಿಚಯದವರಲ್ಲಿ ಆಗುವ ವಿವಾಹ ಮೊದಲಾದ ಶುಭಕಾರ್ಯಗಳಲ್ಲಿ ಯಥಾಶಕ್ತಿ ಹಣವನ್ನು ತೆಗೆದು ಮಠದ ಶ್ರೀಗಳವರ ಕಡೆ ಕಳುಹಬೇಕೆಂದು ನಿರ್ಣಯಿಸಲ್ಪಟ್ಟಿದೆ ಈ ನಿಯಮವನ್ನನುಸರಿಸಿ ತಮ್ಮ ಉದಾರಗುಣವನ್ನು ಪ್ರಕಟಿಸಿದ ಸಜ್ಜನರನ್ನು ಕೆಳಗೆ ವಿವರಿಸಿದ್ದೇವೆ. ಇದರ ಸಂಬಂಧವಾದ ಪ್ರಕಟನ ಪತ್ರಿಕೆಗಳು ಕೆಲವು ತಾಲ್ಲೂಕುಗಳಲ್ಲಿ ಹಂಚಲ್ಪಟ್ಟು ಗ್ರಾಮಗ್ರಾಮಗಳಲ್ಲಿ ಪ್ರೋತ್ಸಾಹಕರನ್ನು ನಿಯಮಿಸುತಕ್ಕ ಕಾರ್ಯವು ಈ ಮಾಸದಿಂದ ಜರುಗುತ್ತಿದೆ. ಈ ಮಠದ ಸಕಲ ಕಾರ್ಯಗಳಲ್ಲೂ ರಾಯಚೂರು ಮ॥ ರಾ॥ ಮಾನಸಗಲ್ಲು ಕಾಜನಗೌಡರು ಬಹು ಭಕ್ತಿಯಿಂದ ಸಾಹಸೌದಾರ್ಯಗುಣಗಳನ್ನು ತೋರಿಸಲು ಮುಂದಾಳುಗಳಾಗಿರುವರಲ್ಲದೆ ಮುದಗಲ್ಲಿ ದೇಶಮುಖರಟ್ಟು ಮುಕ್ತ್ಯಾರದಾರರಾದ ಮ॥ ರಾ॥ ರಾಮರಾಯರೂ ಅದೇ ಪದ್ಧತಿಯನ್ನನುಸರಿಸಿದ್ದಾರೆ. ಪ್ರತಿಯೊಬ್ಬ ವಿದ್ಯಾಭಿಮಾನಿಗಳು ಸದರಿ ಕಾರ್ಯದಲ್ಲಿ ಲಕ್ಷವಿಟ್ಟು ಸಾಹಾಯ್ಯ ವಿಶೇಷದಿಂದ ಕೀರ್ತಿಸಂಪಾದಕರಾಗಬೇಕೆಂದು ಸವಿನಯಪ್ರಾರ್ಥನೆಯುಂಟು. ಇದಲ್ಲದೆ ವಿತನ್ನಕಾಧೀಶರಾದ ಶ್ರೀ ಸಿದ್ಧಲಿಂಗಮಹಾಸ್ವಾಮಿಗಳು ಅಸದೃಶ ವೈರಾಗ್ಯಸಂಪನ್ನರಾಗಿ ದೇಶಪರ್ಯಟನದಲ್ಲಿ ಕಾಲಕಳೆಯುತ್ತಿದ್ದು ಈಗೀಗ ವಿದ್ಯಾಮಹತ್ವದ ಕಡೆಗೆ ಚಿತ್ತವಿಟ್ಟು ಕಾಯಕಶ್ರಮವನ್ನೆಣಿಸದೆ ಹಗಲಿರುಳು ಪ್ರಯತ್ನಮಾಡುವುದನ್ನು ನೋಡಿದರೆ ವೀರಶೈವರ ಪುಣ್ಯಪ್ರಭಾವವೆಂದು ತಿಳಿಯಬೇಕಾಗಿದೆ. ಕೃಷ್ಣಾನದಿಯ ಪ್ರವಾಹವು ಈ ಸಂವತ್ಸರದಲ್ಲಿ ಹೆಚ್ಚಾಗಿ ಸಮೀಪದ ಹಳ್ಳಿಗಳಿಗೆ ತಕ್ಕಷ್ಟು ಅಪಾಯವನ್ನುಂಟುಮಾಡಿದ್ದರೂ ದ್ವೀಪಮಧ್ಯದಲ್ಲಿ ಉನ್ನತಸ್ಥಾನದಲ್ಲಿರುವ ಈ ಮಠಕ್ಕೆ ಪ್ರವಾಹದ ನೂಂಕದೆ ಆವ ಅಪಾಯವೂ ಸಂಭವಿಸಲಿಲ್ಲ. ಈ ಕ್ಷೇತ್ರದಲ್ಲಿ ಶಿವೈಕ್ಯರಾಗಿದ್ದ ಶ್ರೀ ಚೋಳೇಂದ್ರಸ್ವಾಮಿಗಳು ಆಶ್ರಿತರಲ್ಲಿ ತಮ್ಮ ತಪಸ್ಸಿದ್ಧಿಯನ್ನು ನಿರಂಕುಶವಾಗಿ ಪ್ರಕಟಿಸಲೆಂದು ಬಯಸುವ—

ಪ್ರತ್ಯಕ್ಷದರ್ಶಿ.

ಈ ಸಂವತ್ಸರದಾಚಿಯಿಂದ ಫಂಡಿಗೆ ಸಹಾಯಕರಾದವರು.

ಮಡಿಲ್ಲರು ಚನವೀರಪ್ಪನವರು ೧೦೦ ರೂ. ಮಾನ್ವಿ ಈಡಿಗರ ತಿಪ್ಪನಗೌಡರ ಮಗ ನರಸನಗೌಡರು ೧೦೦, ಯಾತಗಿರಿ ಲಿಂಗೇರಿ ಕೋನಪ್ಪನವರು ೩೫, ಯಾತಗಿರಿ ಪಳ್ಳಿ ಕಡ್ಲಪ್ಪನವರು ೩೫, ಕೊಡ್ಲೂರು ಪೊ॥ ಗೌ॥ ತಿಪ್ಪಣ್ಣನವರು ೫೦, ಊಟಕೂರು ರಾಚಪ್ಪನವರು ೫೦, ಯಾತಗಿರಿ ಉಂಡೇಕಾರ ಅಯ್ಯಪ್ಪನವರು ೩೦, ಬಾಡದಮಾರದ ಸಂಗಪ್ಪನವರು ೨೫, ಪುಲಮಾಮಡಿ ಚಿಂದಿ ಭದ್ರಪ್ಪನವರು ೨೫, ರಾಯಚೂರು ಸರಾಪರಪ್ಪನವರು ೨೫, ಮಸ್ಕಲ್ ಮೇ॥ ಸಾ॥ ಬಸಲಿಂಗಪ್ಪನವರು ೨೫, ಗಚ್ಚಿನ ಅಯ್ಯಾಸಾನಿ ೨೫, ರಾಯಚೂರು ಮಲ್ಲಾಬಾದಿ ಚನಬಸವಯ್ಯನವರು ೨೧, ರಾಯಚೂರು ಗಾಳಿ ಬಸವಯ್ಯನವರು ೨೧, ರಾಯಚೂರು ಕಾಗ್ಗಿ ಸಿದ್ಧಪ್ಪನವರು ೨೧, ರಾಯಚೂರು ಗೊಂಬಿ ಸಿದ್ಧಲಿಂಗಯ್ಯನವರು ೧೫, ಕೊತ್ತಪಲ್ಲಿ ಬೋಳಪ್ಪನವರು ೧೫, ಹೊಸೂರು ಹಿರೇಮಠದ ಅಂನದಾನಯ್ಯನವರು ೧೦ ರೂ.

ಶ್ರಾವಣಮಾಸದ ಗಣಾರಾಧನ ಕಾಲದಲ್ಲಿ ಯಥಾಶಕ್ತಿ ಹಣವನ್ನು ಕೊಟ್ಟವರು:— ಯಾತಗಿರಿ ಮದ್ದಿನ ಸಿದ್ಧಪ್ಪನವರು ೧ ರೂ. ಲಿಂಗೇರಿ ಕೋನಪ್ಪನವರು ೧, ಉಂಡೇಕಾರ ಚನ್ನಪ್ಪನವರು ೧, ಅರಿಣಿ ಬಸವಪ್ಪನವರು ೧, ಪಳ್ಳಿ ಕಡ್ಲಪ್ಪನವರು ೧, ಮದ್ದಿನ ದುಂಡಪ್ಪನವರು ೧, ಕೊಟ್ಟದಿಗಿ ಶರಣಪ್ಪನವರು ೧, ಕುಣ್ಸಿ ಗೌ॥ ಚನಬಸಪ್ಪನವರು ೧, ಕೊಡ್ಲೂರಲ್ಲಿ ಕಡಬೂರ ರಾಮಲಿಂಗಪ್ಪನವರು ೧, ರಾಯಚೂರು ಮಾನಸಗಲ್ಲು ಕಾಜನಗೌಡರು ೨, ಸದರಿಯವರು ಮತ್ತೊಮ್ಮೆ ೨, ರಾಯಚೂರು ಗೊಂಬೆಯವರ ಗುಡಿಯ ಆರಾಧನೆಯಲ್ಲಿ ೨, ರಾಯಚೂರು ಗಚ್ಚಿನ ಆಯ್ಯಾಸಾನಿಯು ೧, ರಾಯಚೂರು ಕಾಮನಕಟ್ಟೆ ಭಜನಾರಾಧನೆಯಲ್ಲಿ ೧ ರೂ. ಶಾಲಾಮಂದಿರಕ್ಕೆ ಬಂದು ಕಾರ್ಯಕ್ರಮವನ್ನರಿತು ಹಣವನ್ನು ಕೊಟ್ಟ ಉದಾರಿಗಳು:— ನೀಲಗಲ್ಲು ಶಿವಲಿಂಗಪ್ಪಗೌಡರು ೧ ರೂ. ಮೊಕ್ತಲಿ ಗಿರ್ಮ ತಮ್ಮಣ್ಣನವರು ೫, ರಾಯಚೂರು ಬಂಡೆಯಮೇಲುಮನೆ ಬಸವಪ್ಪನವರು ೫. ಬಿಚ್ಚಾಲಿ ಲಿಂಗಯ್ಯನವರು ೨, ಪೂಲುದಿನ್ನಿ ಬಸವಯ್ಯನವರು ೨ ರೂ.

ಮಠದ ಶ್ರೀಗಳವರು ಫಂಡಿಗೆ ಬರೆದಿರುವ ಹಣವನ್ನು ವಸೂಲುಮಾಡಿ ಮುಂದಿನ ಸದ್ವ್ಯವಸ್ಥೆಯನ್ನು ಮಾಡಲು ಪ್ರಕ್ರಮಿಸಿದ್ದಾರೆ. ಉಳಿದ ಮಹಾಶಯರು ಇತ್ತ ಗಮನಿಸತಕ್ಕದ್ದು

ರೇವಣಸಿದ್ಧೇಶ್ವರಪುರಾಣಂ.

ವೇದಾಗಮಾದಿಸಿದ್ಧವಾದ ವೀರಶೈವ ಮತವನ್ನು ಭೂತಲದಲ್ಲಿ ಪ್ರತಿಷ್ಠಾಪಿಸಿದ ಶ್ರೀ ರೇಣುಕಾಚಾರ್ಯರ ಚರಿತ್ರರೂಪವಾದ ಈ ಗ್ರಂಥವು ಬೊಮ್ಮರಸಕವಿಯಿಂದ ಷಟ್ಪದೀಕಾವ್ಯವಾಗಿ ರಚಿಸಲ್ಪಟ್ಟಿರುವುದು. ಶ್ರೀಮದಾಚಾರ್ಯರು ಭೂತಲದಲ್ಲಿ ನಡೆಯಿಸಿದ ಮಹತ್ಕಾರ್ಯಗಳು ಇದರಲ್ಲಿ ನಿರೂಪಿತವಾಗಿವೆ. ಕವಿತೆಯು ಹೃದಯಂಗಮವಾಗಿದೆ. ಪ್ರತಿಯೊಂದುಪಾದಕ್ಕೂ ಒಂದೊಂದು ಪಙ್ತ್ಯಾಗಿ ಬಿಡಿಬಿಡಿಸಿ ಉತ್ತಮವಾದ ಗ್ಲೇಸ್‌ಕಾಗದದಮೇಲೆ ಸುಂದರವಾದ ಅಕ್ಷರಗಳಿಂದ ಶುದ್ಧವಾಗಿ ಮುದ್ರಿತವಾಗಿದೆ. ೧೩ ಸಂಧಿಗಳುಳ್ಳ ಈ ಗ್ರಂಥದ ಬೆಲೆ ವಿ. ಪಿ. ಮೂಲಕ ಅಂಚೆಯ ವೆಚ್ಚವೂ ಸೇರಿ ೧೨ ಆಣೆಗಳು.

ಸಟಿಪ್ಪಣ ಸಿದ್ಧಾಂತಶಿಖಾಮಣಿ.

ಇದು ಶ್ರೀರೇಣುಕಾಚಾರ್ಯರು ಅಗಸ್ತ್ಯರಿಗೆ ಉಪದೇಶಿಸಿದ ವೀರಶೈವ ಸಿದ್ಧಾಂತಶಾಸ್ತ್ರವು, ಪ್ರತಿಯೊಬ್ಬ ವೀರಶೈವನೂ ಮುಕ್ತನಾಗುವುದಕ್ಕೆ ಜನ್ಮಾದಿಯಿಂದ ಕಡೆಯವರೆಗೆ ಆಚರಿಸಬೇಕಾದ ಧರ್ಮಕರ್ಮಗಳು ಇದರಲ್ಲಿ ನಿರೂಪಿತವಾಗಿವೆ. ಮೂಲಗ್ರಂಥಕ್ಕೆ ವೇದಾಗಮ ಪುರಾಣಾದಿವಚನಗಳ ಆಧಾರದಿಂದ ಕೂಡಿದ ಕನ್ನಡ ಟಿಪ್ಪಣವು ವಿಸ್ತಾರವಾಗಿ ಬರೆಯಲ್ಪಟ್ಟು ಉತ್ತಮವಾದ ಕಾಗದದಲ್ಲಿ ಅಚ್ಚುಮಾಡಿಸಲ್ಪಟ್ಟಿದೆ. ಸರ್ವರಿಗೂ ಸಂಗ್ರಾಹ್ಯವಾದ ಈ ಪುಸ್ತಕವು ೩೩೫ ಪುಟಗಳುಳ್ಳ ದೊಡ್ಡ ಗ್ರಂಥವಾಗಿದ್ದರೂ, ಸ್ವಮತಸ್ಥರ ಹಿತಾರ್ಥವಾಗಿ ಬೆಲೆಯು ಕಡಿಮೆಯಾಗಿಡಲ್ಪಟ್ಟಿದೆ. ವಿ. ಪಿ, ಮೂಲಕ ಅಂಚೆಯ ವೆಚ್ಚವೂಸೇರಿ ೧-೮-೦.

ಎಸ್. ಆರ್ ಕರಿಬಸವಶಾಸ್ತ್ರಿ,

8 ಗ್ರಂಥಪ್ರಸಾರಕಮಂಡಲಿ, ಮೈಸೂರು.

ಭಕ್ತ ವನಸ್ಪಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

41

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪ್ರಮೇಹವಾದವರು, ತೃಷೆವುಳ್ಳವರು, ದಮ್ಮಿನವರು, ಕೆಮ್ಮಿನವರ ಕಫು, ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ,ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟುಗುವ ಎಲ್ಲಾ ತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೋಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ೩-೮-೦. ೮೦ ತೋಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ:— ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,

ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನ್ನಡ.

(ಹೊಸಪುಸ್ತಕ ೧೩೪೪ ಪುಟಗಳು) ಶ್ರೀ (ಹೊಸಪುಸ್ತಕ ೧೩೪೪ ಪುಟಗಳು)

ಬ್ರ॥ ಶ್ರೀ॥ ಬಿ. ವಿ. ಸುಬ್ರಹ್ಮಣ್ಯಶರ್ಮವಿರಚಿತವಾದ ಸುಧಾರ ಸಧಾರಾಯೆಂಬ ಕನ್ನಡ ಟೀಕಾತಾತ್ಪರ್ಯ ಗಣಿತೋದ್ಧಾರಣೆಗಳಿಂದೊಡಗೂಡಿದ

4

ಬೃಹಜ್ಜಾತಕಾಖ್ಯ ಹೋರಾಶಾಸ್ತ್ರವು.

ಮಾನವನು ತನ್ನ ಅದೃಷ್ಟಚಕ್ರದ ಫಲಾಫಲಗಳನ್ನು ಅರಿತು, ಮುಂದೊದಗಬಹುದಾದ ಫಲಸ್ವರೂಪವನ್ನು ಇತರರ ಸಹಾಯವಿಲ್ಲದೆಯೆ ತಿಳಿದುಕೊಂಡು, ದುಷ್ಫಲಗಳು ದೂರವಾಗಿ, ಸುಫಲಗಳು ಕರಗತವಾಗುವಂತೆ ಮಾಡುವಂತಹ, ಪರಿಹಾರೋಪಾಯಗಳನ್ನು ಸೂಚಿಸಬೇಕಾದರೆ, ನಮ್ಮಿಂದ ಈಗತಾನೆ ಸಂಸ್ಕೃತ ಹಿಂದಿ ಮರಾಟಿ ಭಾಷೆಗಳಿಂದ ತರ್ಜುಮೆಮಾಡಿ ಪ್ರಕಾಶಗೊಂಡ "ಸುಧಾರಸಧಾರಾ" ಎಂಬ ಕನ್ನಡ ಟೀಕಾತಾತ್ಪರ್ಯ ಉದಾಹರಣೆಗಳಿಂದ ಕೂಡಿದ ಬೃಹಜ್ಜಾತಕವೆಂಬ ಹೋರಾಶಾಸ್ತ್ರವೊಂದಲ್ಲದೆ ಮತ್ತಾವುದೂ ಸಮರ್ಥವಾಗಿಲ್ಲವು. ೧೩೪೪ ಪುಟ ೩ ಭಾಗಗಳ ಪುಸ್ತಕ ಒಂದೇಬೈಂಡ್ ಈ ಗ್ರಂಥರತ್ನವು ಆಬಾಲವೃದ್ಧರಾದಿಯಾಗಿ ಅಕ್ಷರವನ್ನರಿತ ಹೆಂಗಸರೂ ಸಹಾಪರರ ಸಹಾಯಾಪೇಕ್ಷೆ ಇಲ್ಲದೆ ಓದಿ ತಿಳಿಯಲು, ಅನುಕೂಲವಾಗಿರುವುದು. ಇದರೊಳಗಡಗಿರುವ ೨೮ ಪ್ರಕರಣಗಳಲ್ಲಿನ ವಿಷಯಸಂಗ್ರಹ ವೆಂತೆಂದರೆ:— ೧-೨ ನೇ ಪ್ರಕರಣಗಳಲ್ಲಿ ಶಾಸ್ತ್ರಪ್ರಯೋಜನವೂ, ಜ್ಯೋತಿಶ್ಶಾಸ್ತ್ರದ ಹೋರಾಭಾಗಗಳು ೩, ಸಜೀವ ನಿರ್ಜೀವವಸ್ತುಗಳ ಉತ್ಪತ್ತಿ ೪, ಗರ್ಭಧಾರಣ ಯೋಗಗಳು ೫, ಜನನಕಾಲಲಕ್ಷಣ ಮತ್ತು ಫಲ ೬, ಬಾಲಾರಿಷ್ಟವಿಚಾರ ಅವುಗಳ ನಿವಾರಣೋಪಾಯ ೭, ಆಯುರ್ದಾಯವಿಚಾರ ೮, ದಶಾಭುಕ್ತಿನಿರ್ಣಯ ೯, ಅಷ್ಟಕವರ್ಗವಿಚಾರ ೧೦, ಜೀವನೋಪಾಯವಿಚಾರ ೧೧, ರಾಜಯೋಗಸೂಚನೆ ಅವುಗಳ ಫಲವಿಚಾರ ೧೨, ೧೮೦೦ ಯೋಗಗಳ ಲಕ್ಷಣ ಮತ್ತು ಫಲ ೧೩, ಚಂದ್ರಸಂಬಂಧವಾದ ಯೋಗಗಳು ೧೪, ಒಂದಕ್ಕಿಂತಲೂ ಹೆಚ್ಚು ಗ್ರಹಗಳು ಒಂದೇಕಡೆ ಸೇರಿದರೆ ಅವುಗಳ ಫಲ ೧೫, ಸನ್ಯಾಸಯೋಗಗಳು ೧೬, ನಕ್ಷತ್ರಫಲಗಳು ೧೭, ರಾಶಿಫಲಗಳು ೧೮, ರಾಸಿಗಳ ಫಲ ಮತ್ತು ಕೇರಳಿಯೋಕ್ತ ಫಲಗಳು ೧೯, ದೃಷ್ಟಿಫಲಗಳು ೨೦, ಭಾವಲಕ್ಷಣ ಮತ್ತು ಆ ಫಲಗಳ ವಿಚಾರ ೨೧, ಕ್ಷೇತ್ರಫಲಗಳು ೨೨, ಗ್ರಹಗಳ ಅವಸ್ಥೆ ಅಷ್ಟಕವರ್ಗ ಫಲ ೨೩, ಅನಿಷ್ಟಯೋಗಗಳು ಅವುಗಳಿಂದಾಗುವ ಫಲಗಳು ೨೪, ಸ್ತ್ರೀಜಾತಕ ಅದರ ಫಲಗಳು ೨೫, ಮರಣಕಾರಣ ಅದರ ಫಲಗಳು ೨೬, ನಷ್ಟಜಾತಕ ಬರಿಯುವ ರೀತಿ ೨೭, ದ್ರೇಕ್ಕಾಣವರ್ಣನೆ ಪ್ರಶ್ನೆಗೆ ಬೇಕಾದ ಸಹಾಯವಿಷಯ ೨೮, ಅನುಕ್ರಮಣಿಕಾಸಂಗ್ರಹ ಮತ್ತು ಗ್ರಂಥಕರ್ತರ ವಂಶವರ್ಣನೆ:—

ಮೇಲೆ ಹೇಳಿರುವಂತೆ ಬರೆಯಲ್ಪಟ್ಟ ಒಂದು ಪುಸ್ತಕ ತಮ್ಮ ಬಳಿಯಲ್ಲಿದ್ದರೆ ೧೦ ಜನ ಜ್ಯೋತಿಷ್ಕರಿದ್ದರೆ ಎಷ್ಟು ಅನುಕೂಲವೋ ಅಷ್ಟು ಅನುಕೂಲ. ಇದು ಪ್ರೌಢರಿಗೂ, ಸ್ತ್ರೀಯರಿಗೂ ಧಾರಾಳವಾಗಿ ತಿಳಿಯುವಂತೆ ಉತ್ತಮಕಾಗದದಲ್ಲಿ ಪ್ರಿಂಟ್‌ಮಾಡಿಸಿಧೆ, ಈ ತಿಂಗಳು ಆಖೈರಿನೊಳಗಾಗಿ ಆರ್ಡರ್ ಕೊಡುವವರಿಗೆ ೪-೦-೦ ರೂ. ವಿ. ಪಿ. ಛಾರ್ಜ ೦-೬-೦ ಆಣೆ ನಂತರ ೫-೦-೦ ರೂ ಜಾಗತೆ, ತರಿಸಿಕೊಳ್ಳಿ ನಂತರ ಈ ಬೆಲೆಗೆ ದೊರೆಯಲಾರದು.

ಇತರಪುಸ್ತಕಗಳು.

—:೦:—

ಟೀಕಾಜೈಮಿನಿ ೯೩೦ ಪುಟ ೪-೦-೦ ರೂ. ಸಟೀಕಹರಿಕಥಾಮೃತಸಾರ ೩೪೪ ಪುಟ ೧-೪-೦ ರೂ. ಕನ್ನಡದ್ವಾದಶಸ್ಕಂಧ ಭಾಗವತ ೩-೧-೦ ರೂ. ಶುಕಸಪ್ತತಿ ೭೦ ಕಥೆ ಶುದ್ಧಪ್ರತಿ ೨-೦-೦ ರೂ. ೪ ಜನ ಪಕೀರರ ಕಥೆ ೦-೮-೦. ಸಟೀಕಾಭೋಜರಾಜಚರಿತ್ರೆ ೦-೮-೧. ಇವುಗಳಲ್ಲದೆ ನಮ್ಮಲ್ಲಿ ಯಾವ್ದಾಗ್ಯೂ ಕನ್ನಡ, ಸಂಸ್ಕೃತ, ತೆಲಗು ಗ್ರಂಥಗಳು ದೊರೆಯುತ್ತೆ.

ಟಿ ಯಸ್. ಕೃಷ್ಣಯ್ಯಶೆಟ್ಟಿ, ಬುಕ್‌ಡಿಪೋ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೊಂಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು

50 ಕಾಪಾಡುವುದರಲ್ಲಿ ಶ್ರೇಷ್ಠತಮವಾದ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ—ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘುಮಘುಮಿಸುವಂತೆ ಮಾಡುವುವು.

ಶೀತವಾಯು—ಕೆಮ್ಮು—ನೆಗಡಿ—ದಿನಜ್ವರ—ಮೂರರಜ್ವರ ನಾಲ್ಕರಜ್ವರ— ಮಲೇರಿಯಾಜ್ವರ— ತಲೆನೋವು— ಮೈಕೈನೋವು ಮತ್ತು ಭಾರ—ಅರೋಚಕ ಹಲ್ಲುನೋವು—ಹೊಟ್ಟೆನೋವು—ಮಲಬಂಧ—ಅಜೀರ್ಣಭೇದಿ—ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಸೆಳೆತ—ಹೊಟ್ಟೆಯುಬ್ಬರ—ಮಂದಜ್ವರ—ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ೩೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ. ಪಿ ಛಾರ್ಜು ಪ್ರತ್ಯೇಕ.

ಆಮೋದಿನಿ:— ಅಮೋಘವಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರಮಾಡುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷ ಕೀರ್ತಿಯನ್ನು ಸಂಪಾದಿಸಿ ನಾನಾತರಹಾ ಕೆಮ್ಮು, ದಮ್ಮು, ಶ್ವಾಸ, ವಾಂತಿ, ವಾಕರಿಕೆ, ಮಲಬಂದ, ಅಗ್ನಿಮಾಂದ್ಯ, ಸಂಕಟ, ಅರೋಚಕ, ಬಾಯಾರಿಕೆಗಳನ್ನು ತತ್ಷಣ ನಿವರಿಸಿ ಶರೀರಕ್ಕೆ ತೀಕ್ಷ್ಣಹೊರಡೆ ಧಾತುವೃದ್ಧಿಯುಂಟುಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೧೫೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ.ಪಿ. ಛಾರ್ಜು ಪ್ರತ್ಯೇಕ.

ವಿಳಾಸ— ಬಿ ವಿ. ಪಂಡಿತ್,

ಸದ್ವೈದ್ಯಶಾಲಾ, ನಂಜನಗೂಡು.

ಮೈಸೂರ್ ಡಿ॥

ದೊಡ್ಡಕಂಪೆನಿ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯು. ಎನ್. ಮತ್ತು ಕಂಪೆನಿ,

ಬನಾರಿಸ್ ಸಿಟಿ. (ಕಾಶೀ)

ಬಹುಮಾನ ! ಶ್ರೀ. ಬಹುಮಾನ !!

ಅತ್ಯಾಶ್ಚರ್ಯಕರವಾದ ಬಹುಮಾನ.

೫೦ ಸಾವಿರ ರೂಪಾಯಿಗಳು ಹಂಚಲ್ಪಡುವವು.

ದಿವ್ಯೌಷಧ. ಬಳ್ಳಾರಿ. ಸುಪ್ರಸಿದ್ಧೌಷಧ.

ಸರ್ವಜನಮನೋಲ್ಲಾಸಿನಿ ಅಂಡ್ ಕೋ. ಇವರ

(• ನಾರಸಿಂಹಚೂರ್ಣವು •)

4

ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನು ಆರೋಗ್ಯಭಾಗ್ಯವನ್ನು ಬಯಸುತ್ತಾನೆ ಎಂಬುವದು ಸಹಜವಾದುದಷ್ಟೆ? ಆದರೆ ಅನೇಕ ದುರ್ವ್ಯರ್ತನೆಗಳಿಂದ ಮೂಲಕಾರಣವಾದ ಧಾತುವನ್ನು ನಷ್ಟಪಡಿಸಿಕೊಂಡು ಹಲವುವಿಧ ರೋಗಗಳನ್ನು ತಂದಿಟ್ಟುಕೊಂಡಿರುವವರನೇಕರನ್ನು ಕಣ್ಣಾರ ನೋಡುತ್ತಿರುವೆವು. ಈ ನಷ್ಟಧಾತುವಿಗಾಗಿ ಅನೇಕಾನೇಕ ವೈದ್ಯರು ಹಲವುವಿಧ ಔಷಧಗಳನ್ನು ವಿಶೇಷವಾದ ಬೆಲೆಯನ್ನಿಟ್ಟು ವಿಕ್ರಯಿಸಿದರು ಪ್ರಯೋಜನವು ಮಾತ್ರ ಕಡಿಮೆಯಾಗುತ್ತಿರುವದು ವಿಷಾದಕರವಾಗಿರುವದು. ಈ ಲೋಪವನ್ನು ಹೋಗಲಾಡಿಸುವುದಕ್ಕಾಗಿ (ನಾರಸಿಂಹಚೂರ್ಣವು) ಎಂಬ ಒಂದಾನೊಂದು ಸಶಾಸ್ತ್ರೀಯವಾದ ಚೂರ್ಣವನ್ನು ಸಿದ್ಧಪಡಿಸಿರುವೆವು. ಈ ಚೂರ್ಣವನ್ನು ಒಬ್ಬ ಮನುಷ್ಯನು ೧೪ ದಿನಗಳು ಸೇವಿಸಿದರೆ ಮುದುಕತನ, ಅನೇಕತರಹೆಯ ಮೇಹರೋಗಗಳು, ಪಾಂಡುರೋಗ, ಪೀನಸ, ಹದಿನೆಂಟು ಬಗೆಯಾದ ಕುಷ್ಠಗಳು, ಎಂಟುವಿಧ ಉದರರೋಗಗಳು, ಭಗಂಧರವು, ಮೂತ್ರಕೃಛ್ರವು, ಗೃಧ್ರಸೀವಾತವು, ಕಾಮಿಲೆ, ಹೃಯವು, ಮಹಾಶ್ವಾಸಗಳು, ದಾರುಣವಾದ ಐದುಬಗೆಯಾದ ಕಾಸಗಳು, ಎಂಭತ್ತುವಿಧಗಳಾದ ವಾತರೋಗಗಳು, ನಲವತ್ತು ಬಗೆಯಾದ ಪಿತ್ತಗಳು, ಇಪ್ಪತ್ತು ಶ್ಲೇಷ್ಮರೋಗಗಳು, ದ್ವಂದ್ವಸನ್ನಿಪಾತರೋಗಗಳು, ಮೂಲರೋಗಗಳು ಇವೇ ಮುಂತಾದ ಸಮಸ್ತ ರೋಗಗಳು ಸಿಡಿಲಿನಿಂದ ಗಿಡಗಳು ನಾಶವಾಗುವಂತೆ ನಾಶವಾಗುತ್ತಿವೆ. ಇದರ ಸೇವನೆಯಿಂದ ಚಿನ್ನದಂಥಾ ಕಾಂತಿಯು, ಸಿಹ್ಮನಂತೆ ಪರಾಕ್ರಮವು, ಕುದುರೆಯಂಥಾ ವೇಗವು, ಹಕ್ಕಿಗಳ ದೃಷ್ಟಿಯಂತೆ ದೃಷ್ಟಿಯು ಉಳ್ಳವರಾಗಿ ನೂರುಮಂದಿ ಯುವತಿಯರೊಂದಿಗೆ ಸುರತವಂ ಮಾಡುವಂಥಾ ಅತ್ಯಧಿಕ ವೀರ್ಯವೃದ್ಧಿಯುಂಟಾಗಿ ನೃಸಿಹ್ಮನಿಗೆ ಸಮಾನರಾದ ಮಕ್ಕಳನ್ನು ಹುಟ್ಟಿಸುವ ಪ್ರಬಲ ಬಲಬರುವದು. ಇದರಲ್ಲಿ ಯಾವ ವಿಧವಾದ ರಸಗಳಾಗಲಿ ಮಿಶ್ರವಾಗಿಲ್ಲ, ಇನ್ನಾವ ದೋಷಗಳೂ ಇಲ್ಲ. ನಿರ್ದುಷ್ಟವಾದದ್ದು, ಭಕ್ತವನಸ್ಪತಿಗಳಿಂದಲೇ ಸಿದ್ಧಮಾಡಿದ ದಿವ್ಯವಾದ ಔಷಧ. ಅನೇಕ ಪಂಡಿತರು, ಧನಿಕರು, ಸರ್ಟಿಫಿಕೇಟುಗಳನ್ನು ಕೊಟ್ಟಿರುವರು. ಬಳ್ಳಾರಿಯಲ್ಲಿ ಸುಪ್ರಸಿದ್ಧವೈದ್ಯರೆಂದು ಪ್ರಖ್ಯಾತಿಗೊಂಡ ವೈದ್ಯ ಕರಿವೀರಪ್ಪನವರ ಪುತ್ರರಾದ ನೇಟಿವ್ ಡಾಕ್ಟರ್ ಬಿ. ವಿ. ಸಿದ್ದಪ್ಪನವರಿಂದ ತಯಾರಿಸಲ್ಪಟ್ಟಿರುವದು.

೧೪ ದಿನ ಉಪಯೋಗಕ್ಕೆಬರುವ ಡಬ್ಬಿ ೧ಕ್ಕೆ ಬೆಲೆ ರೂ. ೧—೦—೦.

—(ಬಹುಮಾನಗಳನ್ನು ಹಂಚುವ ವಿಧಾನ)—

೧ ಧರ್ಜ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೧೦೦೦೦ ರೂ. ೬ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೬೦೦೦ ರೂ. ೩ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೪೦೦೦ ರೂ. ೨ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೩೦೦೦ ರೂ. ೧ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ೨೦೦೦ ರೂ.

೧೯೧೪ ನೇ ಜುಲೈ ೧ ನೇ ತೇದಿ ಮೊದಲು ೧೯೧೫ ನೇ ಜುಲೈ ೧ ನೇ ತೇದಿವರಿಗೂ ಈ ಔಷಧವು ಒಂದು ಲಕ್ಷ ಡಬ್ಬಿಗಳು ಖರ್ಚಾದಕೂಡಲೇ ಈ ಲೆಕ್ಕವನ್ನು ಅಲ್ಲಿಗೆ ಸಂಕ್ಷೇಪಮಾಡಿ ಬಹುಮಾನಗಳನ್ನು ಹಂಚುತ್ತೇವೆ. ಒಂದುಪಕ್ಷದ ಮೇಲಣ ನಿಯಮಿತ ದಿನಕ್ಕೆ ಸರಿಯಾಗಿ ಒಂದು ಲಕ್ಷ ಡಬ್ಬಿಗಳು ಖರ್ಚಾಗದಿದ್ದರೆ ಮತ್ತು ವಾಯಿದೆಯನ್ನು ಹೆಚ್ಚಿಸದೆ ಎಷ್ಟು ಡಬ್ಬಿಗಳು ಖರ್ಚಾಗಿರುತ್ತವೆಯೋ ಅಷ್ಟಕ್ಕೆ ದಾಮಾಷಾ ಪ್ರಕಾರ ಆಗತಕ್ಕಷ್ಟು ಬಹುಮಾನವನ್ನು ಮಾತ್ರ ಹಂಚುತ್ತೇವೆ. ಪ್ರತಿಯೊಬ್ಬ ಮನುಷ್ಯನು ತಾನು ಕೊಡುವ ಹಣಕ್ಕೆ ಸರಿಯಾಗಿ ದಿವ್ಯೌಷಧವನ್ನು ಪಡಿಯುವದಲ್ಲದೆ ಬಹುಮಾನವನ್ನು ಸಹಾ ಹೊಂದುವದಕ್ಕೆ ಅರ್ಹನಾಗಿರುತ್ತಾನೆ. ಈ ವಿಷಯದಲ್ಲಿ ತಿಲಮಾತ್ರವಾದರು ಸಂಶಯವಿಲ್ಲ. ಬಹುಮಾನದ ಮೊತ್ತವನ್ನು ನಿಷ್ಪಕ್ಷಪಾತವಾಗಿ ಒಂದೇ ಸಮವಾಗಿ ಹಂಚಲ್ಪಡುವೆವು. ಇದು ಮೋಸವಲ್ಲ, ಆಟರಿಯಲ್ಲ, ಯಾವ ವಿಧವಾದ ಕುಹಕತನವು ಇಲ್ಲ, ಸತ್ಯವಾಗಿ ಬಹುಮಾನವನ್ನು ಹಂಚುತ್ತೇವೆ. ಅಸೂಯಾಂಧರ ಮಾತುಗಳಿಗೆ ನಿಗಾ ಕೊಡಲಾಗದು, ಜಾಗ್ರತೆ ತರಿಸಿಕೊಳ್ಳಿರಿ. ಔಷಧದ ಗುಣವನ್ನು ಪರೀಕ್ಷಿಸಿರಿ. ಅಪೇಕ್ಷಕರು ಈ ಕೆಳಗಣ ನಮ್ಮ ಅಡ್ರೆಸ್ಸಿಗೆ ಬರೆದು ತರಿಸಿಕೊಳ್ಳಿರಿ.

ಇದರ ಅನುಪಾನ ಪತ್ರಿಕೆಯನ್ನು ಬಹುಮಾನದ ಟಿಕೀಟನ್ನು ಡಬ್ಬಿಸಂಗಡ ಕಳಿಸುವೆವು, ನಮ್ಮ ಕಂಪೆನಿಯ ಕಾಶಿ ವಿಶ್ವನಾಥ ಮಾರ್ಕು ಇಲ್ಲದ ಡಬ್ಬಿಯನ್ನು ತೆಗೆದುಕೊಳ್ಳಲಾಗದು.

ನಮ್ಮ ಅಡ್ರೆಸ್ಸು

ಸರ್ವಜನಮನೋಲ್ಲಾಸಿನಿ ಅಂಡ್ ಕೋ. ಬಳ್ಳಾರಿ:

ದಿ ಜನರಲ್ ಏಜೆಸ್ಸಿ, ಮೈಸೂರು.

ಕಾದಂಬರಿಗಳು :— ಚಂಡಮಾರುತ ೦-೨-೦; ಚರಿತಾವೃತಂ ೦-೫-೦; ರಾಜಕಥಾವಲ್ಲರಿ ೦-೫-೦; ಪೀಟರಿನಚರಿತ್ರೆ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೨-೬; ಸೀತೆ ೦-೫-೦; ಸಾಹಸಿಕೆ, ಕಲಾನಾಥ ೦-೮-೦; ಮಹಾಲಕ್ಷ್ಮಿ ೦-೨-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸತ್ಯಸಂಜೀವಿನಿ ೦-೮-೦; ಕೊಹಿನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೨-೦. 52

ಊದಬತ್ತಿಗಳು.

21 ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ ೦-೦-೨ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪ ಟಿನ್ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು. ಟಿ. ಎಲ್. ಉಪಾಧ್ಯಾಯ,
ಸುಗಂಧಕಾರಿ,
ಮೈಸೂರು.

41 ಸಚಿತ್ರ ಶುಕಸಪ್ತತಿ ಕಥೆಗಳು ರೂ. ೧-೮-೦ (೫೧೨ ಪುಟ) ಟಪಾಲು ಹಾಸಲು ೪ ಆಣೆ. ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ ರೂ ೧-೮-೦. (೫೩೬ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ! ಮಾನ್ಯತೆಯು ಬೇಕಾದರೆ, ವಾಗ್ವೈಖರಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಬಿಚ್ಛೈಪಟ್ಟರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯುಲ್ಲಾಸವಿದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೬೦ ಪುಟಗಳಿಂದ ಕೂಡಿದ ೬೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ ೧-೪-೦ ಟಪಾಲ್ ಹಾಸಲು ೩ ಆಣೆ. ಈಗಲೇ ಬರೆ ನಿಮ್ಮಾ.ವಲ್ಲಿ ಇನ್ನೂ ಅನೇಕ ಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.
ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸಾಲಾಮಿಸ್ರಿಯು ಕಾಬೂಲ್ ದೇಶದಲ್ಲಿ ಪೌಂಡು ೧ ಕ್ಕೆ ೧-೧೦-೦ ಇತ್ತು ಈಗ ಪೌಂಡು ೧ಕ್ಕೆ ೩-೪-೦ ಆಗಿದೆ. ಆದ್ದರಿಂದ ಇದರಕ್ರಯ ೨-೦೦ ರೂಪಾಯಿ ಮಾಡಿರುತ್ತೆ. 8

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬಾ.

ಈ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾ" ಇನ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ದೂರ ನಡೆಯುವುದರಿಂದ ಮೇಲುಬ್ಬಸ ಬರುವುದೂ, ತಲೆಯು ನೋವೂ ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು ಹಳೇ ತಲೆ ನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಸೇಖರಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು. ಈ ಪಂಜಾಬ್ ಸಾಲಾಮಿಸ್ರಿಯು ಮುರಬ್ಬಾಕ್ಕೆ ತಾಂಬ್ರದ ಮತ್ತು ಬಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು.

ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ
೫೦೦ ರೂ. ಬಹುಮಾನವಾಗಿ ಕೊಡಲ್ಪಡುವುದು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನದಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧ಕ್ಕೆ ರೂ. ೨-೦-೦. ಟಪ್ಪಾಲ್ ಖರ್ಚು ಬೇರೆ. ಅನುಪಾನಪತ್ರಿಕೆ ಔಷಧದಸಂಗಡ ಇರುತ್ತೆ.
ಡಿ. ಮನ್ನಾಲಾಲ್, 5 ಹಾಜಿ ಸಾಹೇಬ್ ಮಹಡಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ.
ನಮ್ಮ ಏಜಂಟರು-ಡಿ. ಸೈಯದ್ ಉಸ್ಮಾನ್ ಅಂಡ್ ಕೊ, ದೊಡ್ಡಪೇಟೆ, ಬೆಂಗಳೂರು ಸಿಟಿ.

ಬಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು 19

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲಿ

ಸಂಧುಗಳ ನೋವು ಮೈ ಕಾಲು ಜೊತೆ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಬಸುರುಶೂಲಿ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ.)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇಒಂದು ಬುಡ್ಡಿಯು ನಿಮ್ಮಲ್ಲಿರಲಿ. ದುಡ್ಡಿಂದು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧೌಷಧವೊಂದೇ.
ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧ ೦-೦
ಟಪಾಲ್ ಖರ್ಚು ಬೇರೆ.
ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ. ಮೈಸೂರು

ನ್ಯಾಯದರ್ಪಣ. 34

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯು, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಫ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸು, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆಚರಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ವಗೈರೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯು ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿಇರುತ್ತವೆ.
ಬೆಲೆ ರೂ. 1—8—0. ವಿ. ಪಿ. ಮೂಲ್ಯ 1—12—0.
ಎಂ. ಎಸ್. ನಂಜಪ್ಪನವರು,
ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ)ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾಗಿದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚುಟಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘುಮುಘುಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜನ್ ಡಬ್ಬಿಗೆ ೨-೨-೦

ಉತ್ತಮವಾದ ನಶ್ಯದಪುಡಿ.

ಧಾಟು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲಿ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವೆ. ನೀವುಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಬಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.
ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,
ಗೋಪಸೆಟ್ಟಿಪುರ, ಹನೂರು ಪೋಸ್ಟ್
30 ಕೊಳ್ಳೇಗಾಲದ ತಾಲ್ಲೂಕು.

೧೯೧೪ ನೆಯ ಇಸವಿ ಸೆಪ್ಟಂಬರ್ ತಾ॥ ೨೦ರಿಂದ ೧೯೧೪ನೆಯ ಸೆಪ್ಟಂಬರ್ ತಾ॥ ೨೬ರವರೆಗೆಸಲ್ಲುವ ಶಾಲೀವಾಹನಶಕ ೧೮೩೬ ನೆಯ ಆನಂದನಾಮ ಸಂ॥ ದ ಆಶ್ವಯುಜ ಶು॥ ಪಾಡ್ಯದಿಂದ ಆಶ್ವಯುಜ ಶು॥ ಸಪ್ತಮಿವರೆಗಿನ ಪಂಚಾಂಗ.

ತಾ॥	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	[illegible]
20	1 ಭಾನು	ಪಾಡ್ಯ	47-18	ಪ್ರ	21-32	5
21	2 ಸೋ	ಬಿದಿ	41-26	ಹಸ್ತ	17-49	6
22	ಮಂ	ತದಿ	35-19	ಚಿತ್ತ	13-45	7
23	3 ಬುಧ	ಚೌ	29-13	ಸ್ವಾತಿ	9-33	8
24	4 ಗುರು	ಪಂ	23-14	ವಿಶಾಖ	5-25	9
25	5 ಶುಕ್ರ	ಷಷ್ಠಿ	17-40	ಅನೂ	1-34	10
26	6 ಶನಿ	ಸಪ್ತ	12-38	ಮೂಲ	55-10	11

(1) ರಕ್ತಾಂ, ಕಲ, ನವರಾತ್ರಾರಂಭಃ, ಜಯಲಕ್ಷ್ಮೀವ್ರತಂ. (2) ಚಂದ್ರೋದಯಃ, ಜಿಲಾಜ್ ಚಂ ೧, ಲಕ್ಷ್ಮೀಕಾಂತರಾಜೇಅರಸಿನವರ ವರ್ಧಂತೀ. (3) ರಾವೆ, ಚತುರ್ಥೀತಿಥಿಃ. (4) ಕುಲ, ರಾಲ, ತಿಥಿದ್ವಯಂ, ಉಪಾಂಗಲಲಿತಾವ್ರ. (5) ಸಪ್ತವಿಷಾತಿಥಿಃ. (6) ಕಾಳರಾತ್ರಿಃ, ಮಹಿಷಾಸುರಸಂಹಾರಃ, ಗಜಗೌರೀವ್ರತಂ, ಸರಸ್ವತೀ...

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ... ಕೃಷ್ಣಸ್ಟಾರ್ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED, NO M 121

ಮೈಸೂರ್ ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ವಾರ್ಷಿಕ ಚಂದಾ ೧-೦-೦ } ಮಹಿಶೂರಪುರೀತಾರಾ ಪರನುಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಕ್ಷ್ಯಜ್ಞನಹೃತ್ತಮೋಹರಾಜೇಯಾತ್! ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ! ಸಿಮಾತೀತ ಯಶಃಪ್ರತಾಪವಿಪುಲಂಸದ್ವೃತ್ತಮಾಲಾಕುಲಂ | ಪ್ರೇಮಂಬಿತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ! { ಅಂಚೆವೆಚ್ಚ ಸೇರಿ ೧-೧೪-೦

REGISTERED, NO M 124

ಸಂಪುಟ ೨೩) ಮೈಸೂರ್ ಸ್ಟಾರ್ ಸನ್ ೧೯೧೪ ನೆಯ ಇಸವಿ ಸೆಪ್ಟಂಬರ್ ತಾರೀಖು ೨೭ನೆಯ ಭಾನುವಾರ. (ಸಂಚಿಕೆ ೩೯

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜ ಮೊಹಲ್ಲಾ, ಮೈಸೂರು.

ಈಗತಾನೇ ಸೀಮೆಯಿಂದ ಬಂದಿರತಕ್ಕ ರೆಖಂವಾರ್ ವಾಚ್‌ಗಳ ಕ್ರಯದಪಟ್ಟಿ. 34



೧	ರಾಸ್ಕೋಪ್ ಸಿಸಸ್ಟಂಪೇಟೆಂಟ್‌ಸ್ವಿಸ್‌ಮೇಡ್‌ವಾಚ್	೧ ಕ್ಕೆ	೨-೮-೦
೨	ಗ್ರ್ಯಾಂ ರೈಲ್ವೇ ರೆಗ್ಯುಲೇಟರ್ ವಾಚ್	೧ ಕ್ಕೆ	೩-೮-೦
೩	ಡಿಟೋ ನಮೂನೆ ಚಿಕ್ಕಸೈಜ್ ವಾಚ್	೧ ಕ್ಕೆ	೪-೪-೦
೪	ಡಿಟೋ ಚಿಕ್ಕಸೈಜ್ ಸ್ಪೆಷಲ್ ಸರ್ವೀಸ್‌ವಾಚ್	೧ ಕ್ಕೆ	೫-೮-೦
೪	ಜರ್ಟಲ್‌ವೆರ್. ಡ್ರುರ್ ವಾಚೆಂಬ ಅತ್ಯುತ್ತಮವಾದ ಲೀವರ್ ವಾಚ್	೧ ಕ್ಕೆ	೮-೧೨-೦
೫	ಡಿಟೋ ನಮೂನೆ ಕೆಂಪುಗಳನ್ನು ಕೆತ್ತಿರುವ ವಾಚ್	೧ ಕ್ಕೆ	೯-೪-೦
೬	ಪೀಕಾಕ್ ವಾಚೆಂಬ ತೆಳುವಾದ ಮತ್ತೂ ಗ್ಯಾರೆಂಟಿಯಾದ ವಾಚ್ (ಸಾವಿರಾರು ವಿಕ್ರಯ)	೧ ಕ್ಕೆ	೧೦-೮-೦
೭	ವಾರಕೊಂದಾವರ್ತಿ ಬೀಗಕೊಡುವ ನಿಕ್ಕಲ್ ಬೆಳ್ಳೀಕೇಸ್ ವಾಚ್	೧ ಕ್ಕೆ	೧೦-೮-೦
೮	ಡಿಟೋ ನಮೂನೆಯಲ್ಲಿ ಅಚ್ಚಬೆಳ್ಳೀಕೇಸಿನ ಚಿಕ್ಕ ಸೈಜ್ ವಾಚ್	೧ ಕ್ಕೆ	೧೫-೪-೦
೯	೩೦ ಘಂಟೆಗೆ ಒಂದಾವರ್ತಿ ಬೀಗಕೊಡುವ ದೊಡ್ಡ ಬರ್ಮಾಟೈಂಪೀಸ್	೧ ಕ್ಕೆ	೧-೪-೦
೧೦	ಡಿಟೋ ನಮೂನೆ ಅಲಾರಂ ಟೈಂಪೀಸ್	೧ ಕ್ಕೆ	೨-೪-೦
೧೧	ಡಿಟೋ ನಮೂನೆಯಲ್ಲಿ ಘಂಟೆ ನಿಮುಷ ಸೆಕೆಂಡ್ ತೋರಿಸಿ ಅಲಾರಂ ಇದ್ದು ತಾರೀಖು ಸಹ ತೋರಿಸುವ ದೊಡ್ಡ ಟೈಂಪೀಸ್	೧ ಕ್ಕೆ	೩-೪-೦
೧೨	ಖಾತ್ರಿಯಾದ ಅನ್‌ಸೋನಿಯಾ "ಬಿ" ಟೈಂಪೀಸ್	೧ ಕ್ಕೆ	೨-೮-೦
೧೩	ಡಿಟೋ ಕಂಪೆನಿಯ ಅಲಾರಂಟೈಂಪೀಸ್ (ಬಹಳಮಜಬೂತಾದ್ದು) (ಸಾವಿರಾರುವಿಕ್ರಯ)	೧ ಕ್ಕೆ	೩-೮-೦
೧೪	ಅನ್‌ಸೋನಿಯಾ ಕಂಪೆನಿಯಲ್ಲಿ ತಯಾರಾದ ಘಂಟೆ, ಅರ್ಧಘಂಟೆ ಹೊಡೆದು ಅಲಾರಂ ಇರತಕ್ಕ ದೊಡ್ಡಟೈಂಪೀಸ್ (ಅನೇಕಜನ ವಿದ್ಯಾರ್ಥಿಗಳು ಇದನ್ನೇ ಉಪಯೋಗಿಸುತ್ತಲಿದ್ದಾರೆ)	೧ ಕ್ಕೆ	೬-೧೨-೦
೧೫	ಘಂಟೆ, ಅರ್ಧ ಘಂಟೆ ಹೊಡೆಯುವ ಕ್ಯಾರೇಜ್ ಕ್ಲಾಕೆಂಬ ಟೇಬಲ್ ಘಡಿಯಾರ	೧ ಕ್ಕೆ	೪-೧೨-೦
೧೬	ಡಿಟೋ ನಮೂನೆಯಲ್ಲಿ ಘಂಟೆ, ಅರ್ಧಘಂಟೆಹೊಡೆದು ಅಲಾರಂ ಸಹ ಇರತಕ್ಕ ಕ್ಲಾಕ್	೧ ಕ್ಕೆ	೫-೪-೦
೧೭	ಡಿಟೋ ನಮೂನೆಯಲ್ಲಿ ಘಂಟೆಹೊಡೆಯುವದಕ್ಕೆ ಪ್ರತಿಯಾಗಿ ಗಾನಹಾಡುವ ಕ್ಲಾಕ್	೧ ಕ್ಕೆ	೫-೮-೦
೧೮	ಡಿಟೋ ನಮೂನೆಯಲ್ಲಿ ತಾವಿಷ್ಟಪಟ್ಟ ಟೈಂಮಿಗೆ ಕಾಲುಘಂಟೆಕಾಲ ಕರ್ಣಾನಂದವಾಗುವಂತೆ ಮೃದುಮಧುರ ಗಾನಮಾಡತಕ್ಕ ಕ್ಲಾಕ್	೧ ಕ್ಕೆ	೫-೮-೦
೧೯	ಅನ್‌ಸೋನಿಯಾ ಕಂಪೆನಿಯ ಲಿವರ್ ಕ್ಲಾಕೆಂಬ ಗೋಡೆಗೆ ತಗಲಿಸುವ (೮ ಮೂಲೆಯ) ಅಷ್ಟಕೋಣಾಕೃತಿಯ ಚಿಕ್ಕಸೈಜ್ ಕ್ಲಾಕ್	೧ ಕ್ಕೆ	೬-೮-೦

ವೆಸ್ಟೆಂಡ್‌ಕಂಪೆನಿ ವಾಚ್‌ಗಳನ್ನು ಲಾಟ್‌ಲಾಟಾಗಿ ತರಿಸಿ ಬೊಂಬೈನಲ್ಲಿ ವೆಸ್ಟೆಂಡ್‌ಕಂಪೆನಿಯವರು ಕೊಡುವ ಬೆಲೆಗೆ ಇಲ್ಲಿ ನಾವು ಕೊಡುತ್ತಲಿದ್ದೇವೆ.

೨೦	ವೆಸ್ಟೆಂಡ್ ಕಂಪೆನಿಯ ಡಸ್ಟ್ ವಾಚ್	೧ ಕ್ಕೆ	೩-೮-೦
೨೧	ಡಿಟೋ ನಮೂನೆ ಚಿಕ್ಕ ಸೈಜ್ ವಾಚ್	೧ ಕ್ಕೆ	೮-೪-೦
೨೨	ವೆಸ್ಟೆಂಡ್‌ಕಂಪೆನಿಯ ಮ್ಯಾಚಲೆಸ್ ವಾಚ್	೧ ಕ್ಕೆ	೧೦-೦-೦
೨೩	ಡಿಟೋ ನಮೂನೆ ಚಿಕ್ಕ ಸೈಜ್ ವಾಚ್	೧ ಕ್ಕೆ	೧೧-೦-೦
೨೪	ಡಿಟೋ ನಮೂನೆಯಲ್ಲಿ ಬಹಳ ತೆಳುವಾದ ಅಂದವಾದ ವಾಚ್	೧ ಕ್ಕೆ	೧೧-೦-೦
೨೫	ಡಿಟೋ ತೆಳುವಾದ ವಾಚಿನಲ್ಲಿ ಚಿಕ್ಕ ಸೈಜ್ ವಾಚ್	೧ ಕ್ಕೆ	೧೨-೦-೦
೨೬	ಡಿಟೋ ನಮೂನೆಯಲ್ಲಿ ೮ ಕೆಂಪುಗಳನ್ನು ಕೆತ್ತಿ ಬಂದೋಬಸ್ತಾದ ಯಂತ್ರೋಪಕರಣಗಳಿಂದ ಕೂಡಿದ ವಾಚ್	೧ ಕ್ಕೆ	೧೪-೧೨-೦
೨೭	ಕ್ವೀನ್ ಆನೀವಾಚೆಂಬ ಸುಂದರವಾದ ಚಿಕ್ಕಸೈಜ್ ವಾಚ್	೧ ಕ್ಕೆ	೧೨ ೦-೦
೨೮	ಬರ್ಮಾ ವಾಚ್ (ಅನೇಕರು ಇದನ್ನು ಉಪಯೋಗಿಸುತ್ತಲಿದ್ದಾರೆ)	೧ ಕ್ಕೆ	೧೫-೦-೦
೨೯	ಕ್ವೀನ್ ಆನೀವಾಚಿನಲ್ಲಿ ರೋಲ್ಡ್ ಗೋಲ್ಡ್ ಕೇಸಿನ ಚಿಕ್ಕ ಸೈಜ್ ವಾಚ್	೧ ಕ್ಕೆ	೨೫-೦-೦

ರಖಂವಾರ್ ವಾಚ್ ಸರಪಣಿಗಳು.

ನಿಕ್ಕಲ್ ಬೆಳ್ಳಿಯ ವಾಚ್‌ಸರಪಣಿ	೧ ಕ್ಕೆ	೦-೧೨-೦
ಅಚ್ಚಬೆಳ್ಳಿಯ ಜೇಬಿನ ವಾಚ್‌ಸರಪಣಿ	೧ ಕ್ಕೆ	೩-೪-೦
ಅಚ್ಚಬೆಳ್ಳಿಯ ಕೊರಳಸರಪಣಿ	೧ ಕ್ಕೆ	೧-೪-೦
೧೮ ಕ್ಯಾರಟ್ ಚಿನ್ನದ ವಾಚ್‌ಸರಪಣಿ	೧ ಕ್ಕೆ	೫-೮-೦
ವಾಚಿನ ಸರಪಣಿ ತುದಿಯಲ್ಲಿ ಹಾಕುವ ಅಚ್ಚಬೆಳ್ಳಿಯ ಶಾಶ್ವತವಾದ ಕ್ಯಾಲೆಂಡರ್ ಅಂದರೆ ಎಷ್ಟು ವರುಷಗಳ ವರಿಗಾದರೂ ತಾರೀಖು ನೋಡಬಹುದಾದ ಕ್ಯಾಲೆಂಡರ್ ಎಂದೆಂದಿಗೂಕೆಡತಕ್ಕದ್ದಲ್ಲಾ	೧ ಕ್ಕೆ	೧-೧೨-೦
ಡಿಟೋ ನಮೂನೆಯಲ್ಲಿ ೧೮ ಕ್ಯಾರಟ್ಟು ಚಿನ್ನದಿಂದ ತಯಾರಿಸಿದ್ದು	೧ ಕ್ಕೆ	೩-೪-೦

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ಒಂದುಸಾರಿ ಶಾಯಿತುಂಬಿದರೆ ೧೦,೦೦೦ ಶಬ್ದಗಳನ್ನು ಬರೆಯಬಹುದಾದ ಲೇಖಣಿಗಳು.

ಪ್ರತಿಯೊಂದಕ್ಕೂ ೧೪ ಕ್ಯಾರಟ್ಟು ಚಿನ್ನದ ನಿಬ್ಬು ಹಾಕಿದೆ.

ನೆಪ್ಚೂನ್ ೨೦೦ ನೇ ನಂ. ಪೆನ್	೧ ಕ್ಕೆ	೧-೧೪-೦
ನೆಪ್ಚೂನ್ ೨೫ ನೇ ನಂ. ಪೆನ್	೧ ಕ್ಕೆ	೨-೧೦-೦
ನೆಪ್ಚೂನ್ ೨೧೦ ನೇ ನಂ. ಪೆನ್	೧ ಕ್ಕೆ	೪-೨-೦

ಪ್ರತಿಯೊಂದು ಪೆನ್‌ತರಿಸಿ ಕೊಳ್ಳುವರಿಗೂ ೪ ಪದಾರ್ಥಗಳನ್ನು ಮುಫತ್ತಾಗಿ ರವಾನಿಸುತ್ತೇವೆ
೧ ಪೆನ್‌ಗಳನ್ನಿಡತಕ್ಕ ಸುಂದರವಾದ ಪೆಟ್ಟಿಗೆ ೧.
೨ ಪೆನ್ನಿಗೆ ಶಾಯಿಹಾಕುವ ಗಾಜಿನಕೊಳವೆ ೧.
೩ ಪೆನ್‌ಗಳನ್ನು ಕ್ಲೀನ್‌ಮಾಡುವ ವಿಧಾನ ಮತ್ತೂ ಶಾಯಿಹಾಕುವ ವಿಧಾನ ಪ್ರಿಂಟಾಗಿರುವ ಚೀಟಿ ೧.
೪ ಪೆನ್ನನ್ನು ಜೇಬಿಗೆತಗಲಿಸುವ ಸುಂದರವಾದ ಕ್ಲಿಪ್ ೧.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್. ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧-೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಶಿವಪೂಜಾವಿಧಿಃ	೦-೮-೦
ಚಾರುಶೀಲೆಚರಿತ್ರೆ	೦-೫-೦
ಸಟೀಕ ನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೬-೦
ವಿವೇಕಮಂಜರಿ [೨ನೆಯ ಭಾಗ]	೦-೩-೦
ವ್ರತಪಂಚಕ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆಯವೆಚ್ಚ ಬೇರೆ.

ಹೊಸಪುಸ್ತಕಗಳು.

153

ಬಸವರಾಜವಿಜಯಂ— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೇಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸುತ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ ವರ್ಷದ ಚಂದಾ ೨-೮-೦.

ಎಚ್. ಆರ್. ಕರಿಬಸಶಾಸ್ತ್ರಿ,
ಗ್ರಂಥಪ್ರಕಾಶಕರು, ಮೈಸೂರು.

ಮೈಸೂರುಸೀಮೆಯ ಪರಸ್ಪರಸಹಾಯ ಸಮ್ಮೇಳನದ ಚತುರ್ಥವರ್ಷ ಸಮಾರಂಭಕಾಲದಲ್ಲಿ ಶ್ರೀಮದ್ಯುವರಾಜರವರು ಅಪ್ಪಣೆಕೊಡಿಸಿದ ಭಾಷಣ.

ನಾರಾಯಣಯ್ಯಂಗಾರ್ಯರೇ, ಕಾಂತರಾಜ ಅರಸಿನವರೇ, ಸಭಿಕರೇ !

ಈಸಭೆಯನ್ನು ಸಮಾರಂಭಮಾಡಲು ಅಪ್ಪಣೆಕೊಡಿಸಬೇಕೆಂದು ಕೇಳುವ ನಿಮ್ಮ ಉಪನ್ಯಾಸಕ್ಕಾಗಿ ಸಂತೋಷಿಸುತ್ತೇವೆ. ನಮ್ಮ ದೇಶದ ಏಳಿಗೆಗೆ ಇದು ಬಹಳ ಸಹಕಾರಿಯಾಗಿರುವುದರಿಂದ ನಿಮ್ಮ ಕೋರಿಕೆಯನ್ನು ನಾವು ಅಂಗೀಕರಿಸುವೆವು.

ನಮ್ಮ ಸೀಮೆಯಲ್ಲಿ ಈ ಸಮ್ಮೇಳನಗಳು ಆರಂಭವಾಗಿ ಈಗತಾನೇ ಮೂರುವರ್ಷಗಳಾದುವು. ಇಷ್ಟರಲ್ಲಿಯೇ ಇವು ಎಷ್ಟೋ ಉಚ್ಛ್ರಾಯಸ್ಥಿತಿಗೆ ಬಂದಿವೆ. ಮೊದಲನೆಯ ಸಮ್ಮೇಳನದಲ್ಲಿ ಸಭಿಕರುತೋರಿಸಿದ ಉತ್ಸಾಹವೂ, ದೃಢಸಂಕಲ್ಪವೂ, ಅಭಿವೃದ್ಧಿ ಹೊಂದುವುದರಲ್ಲಿ ಅವರಿಗಿದ್ದ ಆತುರವೂ ನಮಗೆ ಇನ್ನೂ ಚೆನ್ನಾಗಿ ಜ್ಞಾಪಕವಿದೆ. ಆದುದರಿಂದ ಈ ಪರಸ್ಪರಸಹಾಯಕ್ರಮವು ಈಬಗೆ ಬಹುವಾಗಿ ಪ್ರಸರಿಸಿರುವುದರಲ್ಲಿ ಏನು ಆಶ್ಚರ್ಯ ? ಈ ಅಭಿವೃದ್ಧಿಯನ್ನುಂಟುಮಾಡುವುದರಲ್ಲಿ ನಮ್ಮ ಬುದ್ಧಿವಾದವೂ, ಪ್ರೋತ್ಸಾಹವೂ ನಿಮಗೆ ಪ್ರಯೋಜನವಾಯಿತೆಂದು ಕೇಳಿ ತುಂಬ ಸಂತೋಷಪಡುತ್ತೇವೆ. ಮೂರು ವರ್ಷಗಳ ಹಿಂದೆ ನಿಮ್ಮಲ್ಲಿ ೧೮೦ ಸಂಘಗಳೂ, ೧೧೦೭೨ ಮೆಂಬರುಗಳೂ ೩೯೭೬೪೯ ರೂ. ಬಂಡವಾಳವೂ, ಒಟ್ಟು ಲೇವಾದೇವಿಯು ೩೮೯೮೯೫ ರೂ.ಗಳೂ ಇದ್ದುವು. ಈಗ ನಿಮ್ಮ ಅಭಿವೃದ್ಧಿಯು ನಾಲ್ಕರಷ್ಟು ಹೆಚ್ಚಿದೆ. ಈಗ ೬೮೩ ಸಂಘಗಳೂ, ೪೦೫೦೦ ಜನ ಮೆಂಬರುಗಳೂ, ೨೧೪೫೩೪೦ ರೂಪಾಯಿಗಳ ಬಂಡವಾಳವೂ, ೯೬೨೯೫೭ ರೂಪಾಯಿಗಳ ಲೇವಾದೇವಿಯೂ ಆಗಿರುತ್ತದೆ. ನಿಮ್ಮಗಳ ಉತ್ಸಾಹ, ನಿಪುಣತೆ, ಕಾರ್ಯಸಾಧಕತೆ, ಕುತೂಹಲಗಳಿಲ್ಲದಿದ್ದರೆ ಈ ಅಭಿವೃದ್ಧಿಗೆ ಅವಕಾಶವೇ ಇಲ್ಲದೆ ಹೋಗುತ್ತಿದ್ದಿತು.

ಅನ್ಯೋನ್ಯಸಹಾಯಪದ್ಧತಿಯು ಇಂಡಿಯದಲ್ಲಿ ೧೯೦೪ನೆಯ ವರ್ಷದಲ್ಲಿ ಆರಂಭವಾಯಿತು. ಅದರ ಅಭಿವೃದ್ಧಿಯ ವಿಷಯವಾಗಿ ಈ ವರ್ಷ ಜುಲೈ ತಿಂಗಳಲ್ಲಿ ಇಂಡಿಯ ಸರಕಾರದವರು ಒಂದು ರೆಸೊಲ್ಯೂಷನನ್ನು ಮಾಡಿದ್ದಾರೆ; ಅದನ್ನು ತಾವೆಲ್ಲರೂ ಓದಿರಬಹುದು. ಆ ರೆಸೊಲ್ಯೂಷನಿನಲ್ಲಿ ಒಂದು ಮುಖ್ಯಾಂಶವೇನೆಂದರೆ:—ಪರಸ್ಪರ ಸಹಾಯಪದ್ಧತಿಯು ಇಂಡಿಯ ದೇಶದಲ್ಲಿ ಬಹಳ ಶೀಘ್ರವಾಗಿ ಏಳಿಗೆಗೆ ಬಂದಿತೆಂಬುದು. ಜರ್ಮನಿಯ ರಾಜ್ಯದಲ್ಲಿ ೩೦ ವರ್ಷಗಳು ಪ್ರಯಾಸಪಟ್ಟುದಕ್ಕೆ ೩೦ ಸಂಘಗಳು ಮಾತ್ರ ಏರ್ಪಾಡಾದುವು. ಯೂರೋಪಿನ ಇತರ ರಾಜ್ಯಗಳಲ್ಲಿ ಕೂಡ ಈ ಪದ್ಧತಿಯು ಇದಕ್ಕಿಂತ ಬೇಗ ನೆಲೆಗೊಳ್ಳಲಿಲ್ಲ. ಆದರೆ ಇಂಡಿಯಾದೇಶದಲ್ಲಿ ಈ ಹತ್ತು ವರ್ಷಗಳೊಳಗೆ ೧೫೯೦೦ ಸಂಘಗಳಾಗಿವೆ. ಇನ್ನೂ ಇತೋಪ್ಯತಿಶಯವಾಗಿ ಮುಂದೆ ವೃದ್ಧಿಯನ್ನು ಹೊಂದಲು ಸಾಕಾದಷ್ಟು ಚಿಹ್ನೆಗಳೆಲ್ಲಾ ಇವೆ.

ಪರಸ್ಪರಸಹಾಯಪದ್ಧತಿಯಲ್ಲಿ ಮೈಸೂರು ರಾಜ್ಯವು ಇಂಡಿಯಾದಲ್ಲೇನೂ ಹಿಂದಾಗಿಲ್ಲ. ಕೆಲವು ವಿಷಯಗಳಲ್ಲಿ ಬ್ರಿಟಿಷ್ ಇಂಡಿಯಾದ ಸೀಮೆಗಳಿಗಿಂತ ಬಹಳ ಮುಂದಾಗಿರುವುದೆಂದೇ ಹೇಳಬೇಕು. ನಮ್ಮ ಸೀಮೆಯಲ್ಲಿ ೧೪೦ ಜನರಿಗೆ ಒಬ್ಬನು ಅನ್ಯೋನ್ಯಸಹಾಯಸಂಘದ ಮೆಂಬರಾಗಿದ್ದಾನೆ. ಬ್ರಿಟಿಷ್ ಇಂಡಿಯಾದಲ್ಲಿಯೋ ಎಂದರೆ ೪೦೦ ಜನರಿಗೆ ಒಬ್ಬಮೆಂಬರು. ೬೦೦೦೦೦೦ ಪ್ರಜೆಗಳಿರುವ ಈ ನಮ್ಮ ರಾಜ್ಯದಲ್ಲಿ ೬೮೩ ಸಂಘಗಳೂ, ೪೦೦೦೦ ಮೆಂಬರುಗಳೂ ಇದ್ದಾರೆ. ೪ ಕೋಟಿ ಜನಸಂಖ್ಯೆಯುಳ್ಳ ಮದರಾಸು ಆಧಿಪತ್ಯದಲ್ಲಿ ೧೩೦೦ ಸಂಘಗಳೂ, ೧ ಲಕ್ಷ ಮೆಂಬರುಗಳೂ ಮಾತ್ರ ಇರುತ್ತಾರೆ. ೨ ಕೋಟಿ ೬೦ ಲಕ್ಷ ಪ್ರಜೆಗಳಿರುವ ಬೊಂಬಾಯಿಆಧಿಪತ್ಯದಲ್ಲಿ ೬೦೮ ಸಂಘಗಳೂ ೬೩,೦೦೦ ಮೆಂಬರುಗಳೂ ಇರುತ್ತಿದ್ದಾರೆ. ಇಂಡಿಯಾದೇಶದ ಆಶ್ರಿತಸಂಸ್ಥಾನಗಳೊಡನೆ ಹೋಲಿಸಿ ನೋಡಿದರೆ ನಮ್ಮ ರಾಜ್ಯವೇ ಬಹು ಸುಲಭವಾಗಿ ಮೊದಲನೆಯದಾಗುತ್ತದೆ. ಬರೋಡ ದೇಶದಲ್ಲಿ ಈ ಪದ್ಧತಿಯು ಸ್ವಲ್ಪ ಅಭಿವೃದ್ಧಿಗೆ ಬಂದಿದೆ. ಆದರೂ ಕೂಡ ಅಲ್ಲಿ ೨೫೫ ಸಂಘಗಳೂ, ೩೦೦೦ ಮೆಂಬರುಗಳೂ ಮಾತ್ರ ಇರುತ್ತಾರೆ. ಹೈದರಾಬಾದು-ಅನಂತಶಯನ ಸಂಸ್ಥಾನಗಳಲ್ಲಿ ಈಗತಾನೇ ಪರಸ್ಪರಸಹಾಯದ ಕಾನೂನನ್ನು ಏರ್ಪಡಿಸುವ ಮತ್ತು ರಿಜಿಸ್ಟ್ರಾರುಗಳನ್ನು ನೇಮಕಮಾಡುವ ಪ್ರಯತ್ನಗಳು ನಡೆಯುತ್ತಿವೆ.

ಪರಸ್ಪರಸಹಾಯವು ನಮ್ಮ ರಾಜ್ಯದಲ್ಲಿ ಈರೀತಿ ಏಳಿಗೆಗೆ ಬಂದಿದ್ದರೂ ಒಂದು ವಿಚಾರದಲ್ಲಿ ಮಾತ್ರ ಮೈಸೂರು ರಾಜ್ಯವು ಹಿಂದೂಸ್ಥಾನದ ಇತರ ರಾಜ್ಯಗಳಿಗಿಂತ ಹಿಂದಾಗಿರುವುದು. ೪೦,೫೦೦ ಜನ ಮೆಂಬರುಗಳಿಗೆ ನೀವು ೨೧೪೫,೩೪೦ ರೂಪಾಯಿಗಳ ಬಂಡವಾಳವಿಟ್ಟುಕೊಂಡಿದ್ದೀರಿ. ಎಂದರೆ ಒಬ್ಬ ಮೆಂಬರಿಗೆ ವರ್ಷವೊಂದಕ್ಕೆ ಸುಮಾರು ೫೩ ರೂಪಾಯಿಗಳ ಸಾಲಕೊಡಿಸುವುದಕ್ಕೆ ಅನುಕೂಲಪಡಿಸಿದಹಾಗಾಯಿತು. ಬ್ರಿಟಿಷ್ ಇಂಡಿಯಾದಲ್ಲಿಯೋ ಎಂದರೆ ೧೦೦ ರೂಪಾಯಿಗಳ ಸಾಲದೊರೆಯುವ ಅನುಕೂಲಗಳಿವೆ. ಇದು ನಮ್ಮಲ್ಲಿ ಹಣ ಕಡಮೆಯಾದುದರಿಂದ ಅಲ್ಲ. ಬಹುಶಃ ನಮ್ಮ ಹೆಚ್ಚು ಜಾಗರೂಕತೆಯಿಂದಲೇ ಆಗಿದೆ. ಕೆಲವರ್ಷಗಳೂ ಶಿಕ್ಷೆ ಹೊಂದುವ ಮತ್ತೂ ಪರೀಕ್ಷಿಸಿ ನೋಡುವ ಕಾಲವಾಗಿದ್ದಿತೆಂದು ನೀವು ಯೋಚಿಸಿರುವುದು ಸರಿ. ಆದುದರಿಂದಲೇ ನೀವು ನಿಮ್ಮ ಸ್ಥಳಗಳಲ್ಲಿಯೇ ಹಣವನ್ನು ಕೂಡಿಸಿ ಬಂಡವಾಳ ಮಾಡಿಕೊಂಡು ಹೊರಗಿನಿಂದ ಸಾಲತರದೆ ತೃಪ್ತರಾಗಿದ್ದೀರಿ. ಇದು ಬಹಳ ಒಳ್ಳೆಯದೆಂದು ಇಂಡಿಯಾ ಸರಕಾರದವರೂ ಒಪ್ಪಿದ್ದಾರೆ. ಅವರ ಗ್ರಾಮಾಂತರದ ಸಂಘಗಳಲ್ಲಿ ಮೆಂಬರುಗಳು ಕೊಟ್ಟ ಷೇರೂ ಇಟ್ಟ ಡಿಪಾಜಿಟ್ಟೂ ಒಟ್ಟು ಬಂಡವಾಳದಲ್ಲಿ ನೂರಕ್ಕೆ ೨೩ ರಷ್ಟು ಆಗಿದೆ. ಈ ರಾಜ್ಯದಲ್ಲಿಯಾದರೋ ಇವೆರಡೂ ಸೇರಿ ನೂರಕ್ಕೆ ಸುಮಾರು ೫೧ ರಷ್ಟು ಆಗಿರುತ್ತದೆ. ಆದುದರಿಂದಲೇ ನಮ್ಮ ಸ್ಥಿತಿಯು ಅವರ ಸ್ಥಿತಿಗಿಂತ ಹೆಚ್ಚು ಸಮರ್ಪಕವಾಗಿದೆ. ಆದರೆ ನಮ್ಮ ಸಂಘಗಳು ಸ್ವಂತ ಹಣವನ್ನಿಟ್ಟುಕೊಂಡು ಕೆಲಸಮಾಡುವುದನ್ನು ತಿಳಿದುಕೊಂಡಿರುವುದರಿಂದ ಹೊರಗಿನಿಂದ ಇನ್ನೂ ಸಾಲಗಳನ್ನು ತಂದು ಹೆಚ್ಚು ಆಡಳಿತಗಳನ್ನು ನಡೆಸುವ ಯೋಗ್ಯತೆಯನ್ನು ಸಂಪಾದಿಸಿಕೊಂಡಿವೆ. ಹಾಗೆ ಸೆಂಟ್ರಲ್ ಬ್ಯಾಂಕುಗಳಿಂದಲೂ ಯೂನಿಯನ್‌ಗಳಿಂದಲೂ ನಿಮ್ಮ ಸಂಘಗಳಿಗೆ ಹಣವೊದಗಿಸಿ ನಿಮ್ಮ ಮೆಂಬರುಗಳಿಗೆ ಇನ್ನೂ ಹೆಚ್ಚು ಪ್ರಯೋಜನ ವುಂಟಾಗುವಂತೆ ಮಾಡುವುದಕ್ಕೆ ಇದು ಸಕಾಲವಾಗಿದೆ.

ನಿಮ್ಮ ಸಂಘಗಳು ಹೆಚ್ಚಾಗಿ ಅಭಿವೃದ್ಧಿಹೊಂದುವುದಕ್ಕೆ ಅತ್ಯವಶ್ಯಕವಾದ ಒಂದು ವಿಷಯವು ತಿಳಿಸತಕ್ಕದಿರುತ್ತದೆ. ನಿಮ್ಮ ಮೆಂಬರುಗಳಲ್ಲಿ ಮುಕ್ಕಾಲುಮೂರುವೀಸ ಪಾಲಿನವರೆಲ್ಲ ವ್ಯವಸಾಯಗಾರರು. ಅವರೆಲ್ಲರೂ ಪ್ರಾಯಶಃ ಬೆಲ್ಲರೆ ಸಾಹುಕಾರರಲ್ಲಿ ಸಾಲಗಾರರಾಗಿದ್ದಾರೆ. ಮೊದಲು ನೀವು ಅವರ ಹಳೆಯ ಸಾಲಗಳನ್ನು ತೀರಿಸಿದ ಹೊರತು, ಅವರಿಗೆ ಏನೇ ಆದಾಯಗಳನ್ನು ಕೊಟ್ಟರೂ, ಎಷ್ಟೇ ರಿಯಾಯತಿಗಳನ್ನು ತೋರಿಸಿದರೂ, ಎಂಥ ಅನುಕೂಲಗಳನ್ನು ಒದಗಿಸಿಕೊಟ್ಟರೂ ಅದರಿಂದ ಅವರಿಗೆ ತಕ್ಕ ಪ್ರಯೋಜನವಾಗುವುದಿಲ್ಲ. ಹಿಂದಣ ಸಾಲ ತೀರಿಸಿಕೊಳ್ಳುವ ವಿಷಯದಲ್ಲಿ ನೀವು ಈಗಾಗಲೇ ಸ್ವಲ್ಪ ಕಾರ್ಯಮಾಡಿದ್ದೀರಿ. ಸಂಘವೊಂದಕ್ಕೆ ೧೦೦೦ ರೂಪಾಯಿನಿಂದ ೨೦,೦೦೦ ರೂಪಾಯಿಗಳ ವರೆಗೆ ಹೊರಗಿನಿಂದ ಸಾಲ ತಂದು ೮೦ ಸಂಘಗಳು ೪,೫೦,೦೦೦ ರೂಪಾಯಿಗಳ ವರೆಗೆ ಮೆಂಬರುಗಳ ಸಾಲವನ್ನು ತೀರಿಸಿಕೊಟ್ಟಿವೆ. ಇದು ಸಾಲದು. ಇನ್ನೂ ಸುಮಾರು ೪೦೦ ಸಂಘಗಳು ಈ ವಿಷಯದಲ್ಲಿ ಏನನ್ನೂ ಮಾಡದೆ ಸುಮ್ಮನಿವೆ. ಅವುಗಳೂ ಮೆಂಬರುಗಳ ಹಳೆಯ ಸಾಲ ತೀರಿಸುವುದಕ್ಕೆ ಜಾಗ್ರತೆಯಾಗಿಯೇ ಪ್ರಯತ್ನಪಡುತ್ತವೆಯೆಂದು ನಂಬುತ್ತೇವೆ. ಮೈಸೂರು ಸರಕಾರದವರು ಜನರ ಹುಟ್ಟುವಳಿಯನ್ನು ಹೆಚ್ಚಿಸುವುದಕ್ಕಾಗಿ ಬಹುವಾಗಿ ಯತ್ನಮಾಡುತ್ತಿರುವುದು ನಿಮಗೆ ತಿಳಿದೇ ಇದೆ. ಅವರ ಈ ಪ್ರಯತ್ನದಲ್ಲಿ ಜನರು ತುಂಬ ಉತ್ಸಾಹಿಗಳಾಗಿದ್ದಾರೆ. ಎಷ್ಟೋ ಕಡೆಗಳಲ್ಲಿ ಒಗ್ಗಟ್ಟಾಗಿ ಬಂಡವಾಳ ಹೊಂದಿಸಿಕೊಂಡು ಯಂತ್ರಗಳನ್ನಿಟ್ಟು ಹೊಸ ಕೈಗಾರಿಗಳನ್ನು ಏರ್ಪಡಿಸಬೇಕೆಂದಿದ್ದಾರೆ. ಇವು ಸಾಧಾರಣವಾಗಿ ಜಾಯಿಂಟ್ ಸ್ಟಾಕ್ ಕಂಪನಿಗಳಾಗಿರಬೇಕು. ಇವುಗಳನ್ನು ಕೂಡ ಪರಸ್ಪರಸಹಾಯ ಸಂಘಗಳನ್ನಾಗಿ ಮಾಡಿಸಿಕೊಡಬೇಕೆಂದು ಕೇಳುತ್ತಾರೆ. ಇದು ಏನೋ ನಿಮ್ಮ ಸಂಘಗಳಲ್ಲಿ ಜನರಿಗಿರುವ ನಂಬಿಕೆಯನ್ನು ತೋರಿಸುತ್ತದೆ. ಆದರೆ ಈ ವಿಷಯದಲ್ಲಿ ಸ್ವಲ್ಪ ಎಚ್ಚರಿಕೆಯು ಅವಶ್ಯಕವಾದುದು. ಸಾಧಾರಣವಾಗಿ ಲಕ್ಷಾಂತರ ರೂಪಾಯಿಗಳ ಬಂಡವಾಳನ್ನು ಒದಗಿಸುವುದೂ, ಯಂತ್ರಗಳಲ್ಲಿ ಕೆಲಸ ನಡೆಸುವುದೂ ಸುಲಭಸಾಧ್ಯವಲ್ಲ. ಇವುಗಳಲ್ಲಿ ನಷ್ಟಕ್ಕೆ ಅವಕಾಶವುಂಟು. ಇವುಗಳನ್ನು ಅನ್ಯೋನ್ಯಸಹಾಯಪದ್ಧತಿಯ ಮೇರೆ ನಡೆಸುವುದು ಈಗ ಅಷ್ಟು ಉಚಿತವಾಗಿ ಕಾಣುವುದಿಲ್ಲ. ಯಾವ ಉದ್ದೇಶವನ್ನು ಅಂಗೀಕರಿಸಿದರೂ, ಯಾವ ಕೆಲಸವನ್ನು ಕೈಕೊಂಡರೂ, ಯಾವ ಕೈಗಾರಿಕೆಯನ್ನು ಏರ್ಪಡಿಸಿದರೂ, ಆ ಉದ್ದೇಶಕ್ಕೂ, ಆ ಕೆಲಸಕ್ಕೂ, ಆ ಕೈಗಾರಿಕೆಗೂ ಯೋಗ್ಯತೆಯುಳ್ಳ ಪ್ರತಿಯೊಬ್ಬನೂ ಮೆಂಬರಾಗಬಹುದೆಂಬುದೂ, ಆ ಮೆಂಬರು ತಾನು ಗಿರಾಕಿಯನ್ನು ಒದಗಿಸಿಕೊಟ್ಟಿರುವ ಮಟ್ಟಿಗೆ ಲಾಭಸಿಕ್ಕಬೇಕೆಂದು ಬಯಸುವುದೂ ಪರಸ್ಪರಸಹಾಯದ ಮುಖ್ಯತತ್ವಗಳಾಗಿವೆ. ಎಂದರೆ ಲೇವಾದೇವಿಯ ಸಂಘಗಳುಸಾಲವನ್ನು ಅಪೇಕ್ಷಿಸುವವರ ಅನುಕೂಲಕ್ಕೇ ಹೊರತು ಹಣವನ್ನು ಹೆಚ್ಚು ಬಡ್ಡಿಗೆಕೊಟ್ಟು ಸಂಪಾದನೆ ಮಾಡಬೇಕೆಂದಿರುವವರಿಗೆ ಅಲ್ಲ; ವ್ಯಾಪಾರಸಂಘಗಳು ತಮ್ಮ ಮೆಂಬರುಗಳಿಗೆ ಸುಲಭಕ್ರಯಕ್ಕೆ ಸಾಮಾನುಗಳನ್ನು ಒದಗಿಸುವುದಕ್ಕೇ ಹೊರತು ಬಂಡವಾಳವನ್ನಿಟ್ಟ ದೊಡ್ಡವರಿಗೆ ಹೆಚ್ಚು ಲಾಭ ಸಂಪಾದಿಸುವುದಕ್ಕೆ ಅಲ್ಲ; ಈ ಮುಖ್ಯತತ್ವಕ್ಕೆ ಗಮನ ಕೊಡದಿದ್ದರೆ ಪರಸ್ಪರ ಸಹಾಯವಾಗುವುದಿಲ್ಲ; ಜಾಯಿಂಟ್ ಸ್ಟಾಕ್ ಕಂಪನಿಯಾಗಬಹುದು. ಆದರೆ ಈ ವಿಷಯವು ಪರಸ್ಪರಸಹಾಯದ ಮೂಲಕ ನಮ್ಮ ದೇಶದ ಹೆಚ್ಚು ದ್ರವ್ಯಾರ್ಜನೆಗೆ ಕುಂದಕ ಮಾಡಲಾರದು. ನಿಮ್ಮ ದೇಶವಾತ್ಸಲ್ಯವನ್ನೂ, ಆತುರವನ್ನೂ, ಬುದ್ಧಿವಂತಿಕೆಯನ್ನೂ, ದೊಡ್ಡ ಕೆಲಸ ನಡೆಸುವ ಶಕ್ತಿಯನ್ನೂ, ಉತ್ಸಾಹವನ್ನೂ ವ್ಯಕ್ತಪಡಿಸುವುದಕ್ಕೆ ಒಂದು ಮುಖ್ಯವಾದ ಮಾರ್ಗವಿರುವುದು. ಪರಸ್ಪರ ಸಹಾಯಪದ್ಧತಿಯ ಮೇರೆ ವ್ಯವಸಾಯವನ್ನೂ ತತ್ಸಂಬಂಧವಾದ ಕೈಗಾರಿಕೆಗಳನ್ನೂ ಅಭಿವೃದ್ಧಿಪಡಿಸಬಹುದು. ಈ ವಿಷಯವನ್ನು ವಿಸ್ತರಿಸಿ ಹೇಳಬೇಕಾದುದಿಲ್ಲ. ವ್ಯವಸಾಯಸಂಬಂಧವಾದ ಪ್ರತಿಯೊಂದು ಕಸಬೂ ಪರಸ್ಪರ ಸಹಾಯಸಂಘಗಳಿಂದ ನಡೆಯಬಹುದು. ವ್ಯವಸಾಯ ಮತ್ತು ಪರಸ್ಪರ ಸಹಾಯಗಳ ಸಮ್ಮೇಳನದಿಂದಲೇ ಈಗ ಯೂರೋಪಿನಲ್ಲಿರುವ ರೈತರೆಲ್ಲರೂ ಪುಷ್ಟರಾಗಿದ್ದಾರೆ. ಕೈಗಾರಿಕೆಯಲ್ಲಿಯೂ ಹೀಗೆಯೇ ಸಣ್ಣ ಸಣ್ಣ ಕೈಗಾರಿಕೆಗಳಿಗಾಗಿ ಅನೇಕ ಸಂಘಗಳನ್ನು ಮಾಡಬಹುದು.

ನೀವು ನಿಮ್ಮ ಅಡ್ರೆಸ್ಸಿನಲ್ಲಿ ಕೆಲವು ವಿಷಯಗಳನ್ನು ತಿಳಿಸಿದ್ದೀರಿ. ಆ ವಿಷಯಗಳಲ್ಲಿ ನಮ್ಮ ಅಭಿಪ್ರಾಯವನ್ನು ಈಗಲೇ ಹೇಳಬೇಕೆಂದು ನಿರೀಕ್ಷಿಸುವಂತೆ ಕಾಣಬರುವುದಿಲ್ಲ. ಅನ್ಯೋನ್ಯ ಸಹಾಯಪದ್ಧತಿಯು ನಮ್ಮ ಜನರ ಬುದ್ಧಿಕುಶಲತೆಯ ಏಳಿಗೆಗೂ ಧನಾಭಿವೃದ್ಧಿಗೂ ಬಹಳ ಪ್ರಯೋಜನಕಾರಿಯಾದುದು. ಆದುದರಿಂದ ಸರಕಾರದವರು ಎಷ್ಟೋ ನಿಗೇವಾನಿಯಿಂದ ಸಿಬ್ಬಂದಿಯಿಟ್ಟು ಇದನ್ನು ಪ್ರೋತ್ಸಾಹಿಸುತ್ತಿರುವರು. ಮುಂದೆಕೂಡ ಇದರ ಅಭಿವೃದ್ಧಿಗೆ ಬೇಕಾದ ಸಲಕರಣೆಗಳನ್ನು ಧಾರಾಳವಾಗಿ ಒದಗಿಸಿಕೊಡುತ್ತಾರೆ.

ಅನ್ಯೋನ್ಯ ಸಹಾಯಪದ್ಧತಿಯಲ್ಲಿ ನೀವು ಸ್ವಲ್ಪ ಮುಂದಾಗಿರುವುದರಿಂದ ಕರ್ತವ್ಯಗಳನ್ನು ನಡೆಸುವುದಕ್ಕೂ ಜವಾಬ್ದಾರಿಗಳನ್ನು ವಹಿಸುವುದಕ್ಕೂ ಪ್ರಾರಂಭಿಸಬೇಕೆಂದಿರುವುದನ್ನು ಕೇಳಿ ನಾವು ತುಂಬಾ ಸಂತೋಷಪಡುತ್ತೇವೆ. ಏತಕ್ಕೆಂದರೆ—ಪರಸ್ಪರ ಸಹಾಯಪದ್ಧತಿಯು ಸರ್ಕಾರದ ಹೆಚ್ಚಾದ ಅವಲಂಬನದ ಮೇಲೆ ನಿಲ್ಲದೆ ಸ್ವಸಹಾಯದ ಮೇಲೆಯೂ ಸ್ವಸಾಮರ್ಥ್ಯದ ಮೇಲೆಯೂ ನಿಲ್ಲುವುದು ನ್ಯಾಯವಾಗಿಯೇ ಇದೆ. ನಿಮ್ಮ ಈಗಿನ ಸ್ಥಿತಿಯಲ್ಲಿ ಹಣವನ್ನು ಒದಗಿಸಿಕೊಳ್ಳುವುದಕ್ಕೂ ಸೊಸೈಟಿಗಳ ತನಿಖೆಯನ್ನು ಮಾಡುವುದಕ್ಕೂ ಯೂನಿಯನ್ನುಗಳನ್ನು ಏರ್ಪಡಿಸುವುದು ಬಹು ಪ್ರಯೋಜನಕರವಾಗಿಯೂ ಅತ್ಯವಶ್ಯಕವಾಗಿಯೂ ಇರುವುದು. ಅವುಗಳು ಒಂದುಕಡೆ ಗ್ರಾಮಪರಸ್ಪರ ಸಹಾಯಸಂಘಗಳನ್ನೂ, ಮತ್ತೊಂದುಕಡೆ ಸೆಂಟ್ರಲ್ ಬ್ಯಾಂಕುಗಳನ್ನೂ ಸೇರಿಸುತ್ತವೆ. ಯೂನಿಯನ್ನಿನ ಆಡಳಿತದ ವ್ಯಾಪ್ತಿಯು ಒಂದೆರಡು ತಾಲ್ಲೋಕುಗಳಿಗೆ ಮಾತ್ರ ಕ್ಲಿಪ್ತವಾಗಿರುವುದರಿಂದ ತನ್ನೊಡನೆ ಸೇರಿಕೊಂಡಿರುವ ಸಂಘಗಳ ಆಡಳಿತಗಳ ಸ್ಥಿತಿಯನ್ನು ಅದು ತಿಳಿಯಬಲ್ಲುದು. ಆಗಾಗ ತನಿಖೆಮಾಡುವುದರಿಂದ ಅಲ್ಲಿಯೇ ತಪ್ಪುಗಳನ್ನೆಲ್ಲಾ ಸರಿಪಡಿಸಿ, ಸೆಂಟ್ರಲ್‌ಬ್ಯಾಂಕುಗಳ ಪರವಾಗಿ ಸಂಘಗಳ ಆಡಳಿತಗಳನ್ನು ಪರಾಂಬರಿಸುತ್ತ, ಅವುಗಳಿಗೆ ಹಿತಕರವಾದ ಸಲಹೆಗಳನ್ನು ಹೇಳಬಹುದು. ಘಡುಗಳ ವಿಚಾರದಲ್ಲಿ ಸ್ವಭಾವವಾಗಿಯೇ ಯೂನಿಯನ್ನಿನ ಸ್ಥಿತಿಯು ಗ್ರಾಮಸಂಘದ ಸ್ಥಿತಿಗಿಂತಲೂ ಚೆನ್ನಾಗಿ ಇದೆ. ಆದುದರಿಂದ ಅದು ತನಗೆ ಬೇಕಾದಷ್ಟು ಬಂಡವಾಳವನ್ನು ತಾಲ್ಲೋಕಿನಲ್ಲಿಯೇ ಆಕರ್ಷಿಸುತ್ತದೆ. ತನ್ನಲ್ಲಿ ಇರುವ ಹಣಕ್ಕಿಂತ ಹೆಚ್ಚಾಗಿ ಹಣಕ್ಕೆ ತಗಾದೆ ಬಂದರೆ ಯೂನಿಯನ್ನು ಸೆಂಟ್ರಲ್ ಬ್ಯಾಂಕಿನಿಂದ ಬೇಕಾದಷ್ಟು ಹಣವನ್ನು ಸಾಲ ತೆಗೆದುಕೊಳ್ಳಬಹುದು.

ಎರಡು ಮೂರು ವರ್ಷಗಳಿಂದ ಸಮ್ಮೇಳನವನ್ನು ನಡೆಸುವ ನಿಮ್ಮ ಪದ್ಧತಿಯು ಶ್ಲಾಘ್ಯವಾದುದು; ಈಗ ಸೇರಿರುವಂತೆ ಪ್ರತಿವರ್ಷವೂ ನಮ್ಮ ದೇಶದ ಒಟ್ಟು ಸಮ್ಮೇಳನವು ನಡೆಯಬೇಕೆಂದು ಹಿಂದೆಯೇ ನಾವು ಸೂಚಿಸಿದ್ದೆವು. ಅಷ್ಟೇಸಾಲದು ಈ ಸಮ್ಮೇಳನದ ಕಾರ್ಯಗಳಿಗೆ ಒತ್ತಾಸೆ ಮಾಡುವುದಕ್ಕಾಗಿ ನೀವು ತಾಲ್ಲೋಕುಗಳಲ್ಲಿಯೂ ಡಿಸ್ಟ್ರಿಕ್ಟುಗಳಲ್ಲಿಯೂ ಸಮ್ಮೇಳನಗಳನ್ನು ನಡೆಸಬೇಕು. ಈ ವಿಷಯದಲ್ಲಿ ನೀವು ಶ್ರಮಪಟ್ಟು ಕೆಲಸಮಾಡಿ ವಿಶೇಷವಾಗಿ ಅಭಿವೃದ್ಧಿಯನ್ನು ತೋರಿಸುತ್ತೀರೆಂದು ನಿರೀಕ್ಷಿಸುತ್ತೇವೆ.

ಈ ನಿಮ್ಮ ಕೆಲಸದ ಪಟ್ಟಿಯಲ್ಲಿ ಕಾಣುವ ಇತರ ವಿಷಯಗಳನ್ನು ವಿವರಿಸುವುದಕ್ಕೆ ಅವಕಾಶವಿಲ್ಲ. ಅವುಗಳನ್ನೆಲ್ಲಾ ಗಣ್ಯರೂ ನಿಪುಣರೂ ಆದ ನಿಮ್ಮ ಅಧ್ಯಕ್ಷರೊಡನೆ ಸಂಕೋಚಪಡದೆ ಆಮೂಲಾಗ್ರವಾಗಿ ಚರ್ಚಿಸಿ ಫಲಕಾರಿಗಳಾದ ತೀರ್ಮಾನಗಳನ್ನು ಮಾಡುತ್ತೀರೆಂದು ನಂಬಿದ್ದೇವೆ. ನಿಮ್ಮ ಕಾರ್ಯಗಳಲ್ಲಿ ನಮಗಿರುವ ಅಭಿಮಾನವನ್ನು ತೋರಿಸುವುದಕ್ಕೂ, ನೀವು ಚರ್ಚಿಸುವುದಕ್ಕೆ ಇಟ್ಟುಕೊಂಡಿರುವ ವಿಷಯಗಳಲ್ಲಿ ಕೆಲವು ಅಭಿಪ್ರಾಯಗಳನ್ನು ಸೂಚಿಸುವುದಕ್ಕೂ ನಾವು ತುಂಬ ಸಂತೋಷಪಡುತ್ತೇವೆ. ಈ ಸಮ್ಮೇಳನಕ್ಕೆ ನಿಮಗೆಲ್ಲರಿಗೂ ಶುಭಾಗಮನವನ್ನು ಬಯಸುತ್ತೇವೆ. ನಿಮ್ಮ ಕಾರ್ಯಗಳಿಗೆಲ್ಲಾ ಮಂಗಳವುಂಟಾಗಲಿ.

ಯುದ್ಧವಾರ್ತೆ.

ಸಂಧಿಪ್ರಯತ್ನ.

ಯುದ್ಧಕಾಲದಲ್ಲಿ ಮುಖ್ಯವಾದ ಸಹಾಯವು ದುಡ್ಡಿನದು. ಅಪರಿಮಿತವಾದ ಸೈನ್ಯಸಹಾಯವಿದ್ದರೂ ಧನಾಭಾವವಾದರೆ ಆ ಸೈನ್ಯವೇ ವಿಪತ್ಕರವಾಗುವುದು. ಸದ್ಯಃ ಜರ್ಮನಿಗೆ ದುಡ್ಡಿನಬರವು ಬರುವಂತಿದೆ; ಸಾಲವು ಅನ್ಯದೇಶಗಳಲ್ಲಿ ಹುಟ್ಟುವುದು ಸಂಶಯವಾಗಿದೆ. ಸ್ವದೇಶದ ಜನರು ಸರ್ಕಾರಿ ಬ್ಯಾಂಕುಗಳಲ್ಲಿ ಹಾಕಿದ್ದ ಬಹಳ ಹಣವನ್ನು ಆಗಲೇ ಆ ಗೌರ್ನ್ಮೆಂಟಿನವರು ಉಪಯೋಗಿಸಿಕೊಂಡುಬಿಟ್ಟರು. ಧನಾಭಾವದಿಂದಲೇ ಒಂದುವೇಳೆ ಜರ್ಮನರು ಬೇಗನೆ ಸಂಧಿಗೆ ಸಿದ್ಧರಾದರೂ ಆಗಬಹುದು. ಇಂಗ್ಲೆಂಡಿಗಾದರೋ ದುಡ್ಡಿನ ಕೊರತೆಯು ಸ್ವಲ್ಪವಾದರೂ ಇಲ್ಲ. ಇದೊಂದು ತಿಂಗಳಲ್ಲೇ ಆ ಸರ್ಕಾರದವರು ೯೦ ಕೋಟಿ ರೂಪಾಯಿಗಳನ್ನು ಜತೆಮಾಡಿರುವರು. ಬೇಕು ಅಂದರೆ ಸೇಕಡ ೩½ ರ ಬಡ್ಡಿಯಮೇರೆ ಬೇಕಾದಷ್ಟು ಹಣವು ಅವರಿಗೆ ಸಾಲವಾಗಿ ದೊರೆಯುವಂತಿದೆ.

ತಟಸ್ಥರಾಷ್ಟ್ರಗಳಲ್ಲಿ ಸಂಧಿ ವಿಷಯದಲ್ಲಿ ಅಮೇರಿಕಾದ ಅಧ್ಯಕ್ಷರೇ ಮುಂದಾಗಿ ನಿಲ್ಲತಕ್ಕವರಾಗಿದ್ದಾರೆ. ಆದರೆ ಯುದ್ಧಮಾಡುತ್ತಿರುವವರಲ್ಲಿ ಯಾವಪಕ್ಷದವರಾದರೂ ಹಣ್ಣಾಗಿ ಬಂದು ತಾವಾಗಿ ಸಂಧಿಮಾಡಿಸಿರೆಂದು ಕೇಳಿಕೊಳ್ಳುವವರೆಗೂ ತಾವು ಏನನ್ನೂ ಮಾಡುವುದು ಉಚಿತವಲ್ಲವೆಂದು ಪ್ರೆಸಿಡೆಂಟ್ ವಿಲ್‌ಸನ್‌ರವರು ಅಭಿಪ್ರಾಯಪಟ್ಟಿದ್ದಾರೆ. ಮಿತ್ರಮಂಡಲಿಯವರಿಗೂ ಸಂಧಿಮಾಡಿಕೊಳ್ಳಲಿಷ್ಟವು ಇರುವಹಾಗಿಲ್ಲ. ಪದೇಪದೇ ಇಂಥ ಹಿಂಸೆಯನ್ನು ಕೊಡಬಹುದಾದ-ಉನ್ಮತ್ತವಾದ ಜರ್ಮನಿಯನ್ನು ಇನ್ನೆಂದಿಗೂ ತಲೆಯೆತ್ತದಂತೆ ಮಾಡಲು ಈಗಿರುವಂಥ ತಮ್ಮ ಪಕ್ಷದ ಒಗ್ಗಟ್ಟು ಮುಂದೆ ಸಂಭವಿಸುವುದು ಅಸಾಧ್ಯವಾದುದರಿಂದ, ಈಗಲೇ ಆ ಪ್ರಬಲಶತ್ರುವನ್ನು ಸಂಪೂರ್ಣವಾಗಿ ಕಾದು ಅಣಗಿಸಿಬಿಡಬೇಕೆಂಬುದು ಇವರ ಸಂಕಲ್ಪವಾಗಿರುತ್ತದೆ. ಇಂಗ್ಲೀಷ್ ಕೋಶಾಧ್ಯಕ್ಷರು ಒಂದು ಸಮಯದಲ್ಲಿ ಮಾತನಾಡುವಾಗ್ಗೆ “ಯೂರೋಪಿಗೆಲ್ಲಾ ಜರ್ಮನಿಯವರು ಭಯಕಾರಿಗಳಾಗಿದ್ದಾರೆ. ಅವರನ್ನು ಉನ್ನತಸ್ಥಾನದಿಂದ ನಾವು ಕೆಳಕ್ಕೆ ಜಗ್ಗಿಬೀಳಿಸುತ್ತಿದ್ದೇವೆ. ಅವರನ್ನು ನಾವು ಸೋಲಿಸಲಾರೆವೆಂದು ಅವರು ತಿಳಿದುಕೊಂಡಿದ್ದರು. ಅವರನ್ನು ಸೋಲಿಸುವುದು ಅಷ್ಟು ಸುಲಭವಲ್ಲ; ಬಹಳಕಾಲ ಬೇಕು. ಆದರೂ ಕೊನೆಗೆ ಸೋಲಿಸಿ ಜಯಶೀಲರಾಗಿಯೇ ಆಗುವೆವು” ಎಂದು ಹೇಳಿದರು.

ಅಮೇರಿಕಾದ ವಾಷಿಂಗ್‌ಟನ್ ಪಟ್ಟಣದಲ್ಲಿರುವ ಜರ್ಮನ್ ರಾಯಭಾರಿಯು ಸಂಧಿವಿಷಯವಾಗಿ ಮಾತನಾಡುವಾಗ “ಈ ಯುದ್ಧದಲ್ಲಿ ಯಾರಿಗೂ ಜಯವಾಗಲಿಲ್ಲವೆಂದು ಒಪ್ಪಿಕೊಳ್ಳುವ ವಿಷಯದಲ್ಲಿ ಜರ್ಮನರು ಇಷ್ಟವುಳ್ಳವರಾಗಿದ್ದಾರೆ. ಯೂರೋಪಿನಲ್ಲಿ ಜರ್ಮನಿ ದೇಶವನ್ನು ಛಿನ್ನಭಿನ್ನಗೊಳಿಸದೆ ಇರುವುದಕ್ಕಾಗಿ ಸಮ್ಮತಿಪಡುವುದಾದರೆ ಜರ್ಮನರು ಸಂಧಿಮಾಡಿಕೊಳ್ಳಲು ಇಷ್ಟವುಳ್ಳವರಾಗಿದ್ದಾರೆ” ಎಂದು ಹೇಳಿದನು. ಇದರಿಂದ ಜರ್ಮನರಿಗೆ ಈಗಲೇ ಕೃತಕಾರ್ಯದ ಫಲವು ಗೊತ್ತಾಗಿದೆಯೆಂಬುದು ವ್ಯಕ್ತವಾಗಿರುವುದು. ಅದುಕಾರಣ, ಈಗ್ಗೆ ಅವರಿಗೆ ಬಿಟ್ಟರೆ ಸಾಕೆನಿಸಿ ಹೋಗಿರುವುದು. ಆಸ್ಟ್ರಿಯಾ ಸರ್ವಿಯಾಕ್ಕೆ ಒಂದುವೇಳೆ ಸಂಧಿಯಾಗುವ ಹೊತ್ತು ಬಂದರೂ, ನಾವು ಇಂಗ್ಲೆಂಡು-ರಷ್ಯ-ಫ್ರಾನ್ಸಿನವರ ಅನುಮತಿ ಪಡೆಯದೆಯೇ ಅದನ್ನು ನೆರವೇರಿಸುವವರಾಗಿಲ್ಲವೆಂದು ಸರ್ವಿಯಾ ಗೌರ್ನಮೆಂಟಿನವರು ಪ್ರಕಟಿಸಿದ್ದಾರೆ.

ಪಶ್ಚಿಮರಂಗ.

ಏಸ್ನೇನದಿಯ ಹತ್ತಿರ ಇಂಗ್ಲೀಷ್ ಫ್ರೆಂಚ್ ಸೇನೆಗಳು ಹೊಳೆಯನ್ನು ದಾಟಲು ಪ್ರಯತ್ನಿಸಿದಾಗ ಶತ್ರುಗಳು ಬಹು ಭೀಕರವಾಗಿ ತಡೆದು ಬೆಂಕಿಯಮಳೆಯನ್ನುಕರೆಯುತ್ತಾ ಕಾದಾಡಿದರು. ಫಿರಂಗಿಗಳ ಗುಂಡುಗಳು ಒಂದೇಸಮನೆ ಇದಿರಾಗಿ ಭರ್‌ಭರನೆ ಬರುತ್ತಿದ್ದುವು. ಆದರೂ ಒಂದುರಾತ್ರಿಯಲ್ಲಿ ಇಂಗ್ಲೀಷ್ ಇಂಜನಿಯರುಗಳು ಹೊಳೆಗೆ ೩ ಕಡೆಯಲ್ಲಿ ಸೇತುಗಳನ್ನು ಕಟ್ಟಿದರು. ಅವುಗಳಮೇಲೆ ಇಂಗ್ಲೀಷರ ಮೂರು ಪಟಾಲಮುಗಳು ಆಚೆಗೆ ದಾಟಿಹೋದುವು.

ಏಸ್ನೇನದಿಯ ಉತ್ತರದಲ್ಲಿ ಬೆಟ್ಟಗಳಮೇಲೆ ಜರ್ಮನರ ಬಲವಾದ ಸೈನ್ಯವುಸೇರಿ ತಮ್ಮ ಠಾಣ್ಯಗಳನ್ನು ಬಹಳ ಬಲಪಡಿಸಿಕೊಂಡಿದ್ದಾರೆ. ಮಧ್ಯರಂಗದಲ್ಲಿ ತಾತ್ಕಾಲಿಕವಾದ ಕಂದಕ ಕೋಟೆಗಳನ್ನೆಲ್ಲಾ ದೃಢತರವಾಗಿ ನಿರ್ಮಿಸಿಕೊಂಡಿದ್ದಾರೆ. ಅದಕ್ಕೆ ಇದಿರಾಗಿ ಇಂಗ್ಲೀಷ್ ಫ್ರೆಂಚ್‌ಸೈನ್ಯಗಳು ಸ್ವಸ್ಥಾನವನ್ನು ಬಲಪಡಿಸಿಕೊಳ್ಳುತ್ತಿವೆ. ಈ ಸ್ಥಲದಲ್ಲೂ ಅತ್ಯಂತ ಭಯಂಕರವಾದ ಗೊಡ್ಡಯುದ್ಧವು ನಡೆಯುವುದರಲ್ಲಿದೆ. ಮಧ್ಯೇ ಮಧ್ಯೆ ಆಗಾಗ್ಗೆ ಸಣ್ಣ ಸಣ್ಣ ಯುದ್ಧಗಳು ನಡೆಯುತ್ತಲೇ ಇವೆ.

ಏಸ್ನೇನದಿಯನ್ನು ದಾಟಿ ಫ್ರಾನ್ಸಿಗೆ ನುಗ್ಗಬೇಕೆಂದು ಜರ್ಮನ್‌ಸೇನೆಯು ಅತಿರಭಸದಿಂದ ಬರುತ್ತಿದ್ದಿತು. ನದಿಯ ಸೇತುವನ್ನು ಹಾಳ್ಮಾಡಿಬಿಟ್ಟರೆ ಅವರ ಆಗಮನಕ್ಕೆ ತಡೆಕಟ್ಟಿದಂತಾಗುವುದೆಂದು ಈ ಪಕ್ಷದವರು ಆಲೋಚಿಸಿ, ಥಟ್ಟನೆ ಆಸೇತುವನ್ನು ಹಾಳ್ಮಾಡುವಕೆಲಸದಲ್ಲಿ ೧೨ ಮಂದಿ ಇಂಗ್ಲೀಷ್ ಇಂಜನಿಯರು ತೊಡಗಿದರು. ಜರ್ಮನರಾದರೋ ಫಿರಂಗಿಗುಂಡುಗಳನ್ನು ಮಳೆ ಸುರಿದಂತೆ ಕರೆಯುತ್ತಿದ್ದರು. ತುಪಾಕಿಗುಂಡುಗಳನ್ನೂ ಹಾರಿಸುತ್ತಲೇ ಜರ್ಮನರು ಸೇತುವಿನಬಳಿಗೆ ಬರುವುದರೊಳಗಾಗಿ ಒಬ್ಬ ಇಂಜನೀಯರು ಸೇತುಗಳಕೆಳಗೆ ಹುಗಿದಿದ್ದ ಸಿಡಿಮದ್ದಿನಗಣೆಗೆ ಬೆಂಕಿಯನ್ನುತೋರಿಸಿ ಓಡಿಬಂದನು. ಕೂಡಲೆ ಸೇತುವು ಧ್ವಂಸವಾಗಿ ಬಿದ್ದುಹೋಯಿತು. ಆದರೆ ಬೆಂಕಿಕಾಣಿಸಿದ ಇಂಜನೀಯರೂ ಕೂಡ ಶತ್ರುಗಳ ಗುಂಡಿನೇಟಿನಿಂದ ಸತ್ತುಬಿದ್ದನು. ಆಕಾರ್ಯದಲ್ಲಿ ತೊಡಗಿದ್ದ ೧೨ಮಂದಿ ಇಂಜನೀಯರಲ್ಲಿ ೧೧ ಜನಗಳು ಸತ್ತರು. ಒಬ್ಬನು ಜರ್ಮನರ ಸೆರೆಯಾಳಾಗಿರುವನಂತೆ.

ಜರ್ಮನರು ಟರ್ಮಾಂಡ್ ಎಂಬ ಪಟ್ಟಣಕ್ಕೆ ಮೂರನೆಯಾವೃತ್ತಿ ಫಿರಂಗಿಗಳನ್ನುಹಾರಿಸಿ ಸಂಪೂರ್ಣವಾಗಿ ಅದನ್ನು ನಾಶಮಾಡಿದರು. ರೀಮ್ಸ್‌ಪಟ್ಟಣದಲ್ಲಿರುವ ಪ್ರಸಿದ್ಧವಾದ ಶಿಲ್ಪವೈಚಿತ್ರ್ಯವುಳ್ಳ ದೇವಾಲಯವನ್ನೂ ಕೂಡ ಫಿರಂಗಿಗಳ ಹೊಡೆತದಿಂದ ಧ್ವಂಸಮಾಡಿದರು. ಮತ್ತೂ ಪ್ಯಾರಿಸ್‌ಪಟ್ಟಣಕ್ಕೂ ಸಮುದ್ರತೀರಕ್ಕೂ ಇರುವ ಸಂಚಾರಸಂಬಂಧವನ್ನು ತಪ್ಪಿಸಿಬಿಡಬೇಕೆಂಬ ಉದ್ದೇಶದಿಂದ ರೂಸಿಗೆ ಸಮೀಪದ ರೇಲ್ವೆಸೇತುವನ್ನು ಹಾಳ್ಮಾಡಬೇಕೆಂದು ಯೋಚಿಸಿ, ಫ್ರೆಂಚ್‌ಉದ್ಯೋಗಿಗಳಂತೆ ಕೆಲ ಜರ್ಮನ್‌ಸೈನಿಕರು ವೇಷವನ್ನುಧರಿಸಿ ಮೋಟಾರುಬಂಡಿಗಳಲ್ಲಿ ಕುಳಿತು ಹೋಗಿದ್ದರು. ಆದರೆ ಫ್ರೆಂಚ್‌ಸೈನಿಕರು ಸಂಶಯಪಟ್ಟು ಅವರನ್ನೆಲ್ಲಾ ಸೆರೆಹಿಡಿದರು.

ಜರ್ಮನರು ಈಚೆಗೆ ಹೊಸ ಹೊಸ ಸೇನೆಗಳನ್ನು ಫ್ರಾನ್ಸಿಗೆ ತರಿಸುತ್ತಿದ್ದಾರೆ. ಮೋಟಾರುಬಂಡಿಗಳಮೇಲೆ ಬಹುಬೇಗನೆ ಸೈನ್ಯಗಳು ಸಾಗಿಬರುತ್ತಿವೆ.

೨೬ ಮಂದಿ ಇಂಗ್ಲೀಷ್ ಸೋಲ್ಜರ್ ಗಳು ೩|| ಸಾವಿರ ಜರ್ಮನರನ್ನು ಒಂದುಕಡೆ ಸೋಲಿಸಿದ ವಿಷಯವಾಗಿ ಬೆಲ್ಜಿಯಂ ಸೈನಿಕನೊಬ್ಬನು ಬರೆದಿರುವುದೇನೆಂದರೆ:—ಬೆಲ್ಜಿಯಂ ದೇಶಕ್ಕೆ ಸೇರಿದ ಮೊನ್ಸಿನ ಹತ್ತಿರದಿಂದ ಹೊರಟ ಇಂಗ್ಲಿಷ್ ಸೈನಿಕರು ಕೇಟ್‌ಗೂನು ಎಂಬ ಗ್ರಾಮದ ಹತ್ತಿರ ಹೊಲದಲ್ಲಿ ಹಳ್ಳವನ್ನು ತೋಡಿಕೊಂಡು ಅಡಗಿಕೊಂಡಿದ್ದರು. ಅಷ್ಟರಲ್ಲಿ ಜರ್ಮನ್ ಸೇನೆಯು ಆಬಳಿಗೆ ಬಂದಿತು. ಕೂಡಲೇ ಇಂಗ್ಲೀಷ್ ಸೈನಿಕರು ಒಂದೇ ಏಟಿಗೆ ಬಹಳ ಫಿರಂಗಿಗಳನ್ನು ಹಾರಿಸಿದರು. ಜರ್ಮನ್ ಸೈನಿಕರು ರಾಶಿಯಾಗಿ ಸತ್ತುಬಿದ್ದರು. ಸತ್ತವರು ಹೋಗುತ ಉಳಿದವರು ಫಿರಂಗಿಗಳಿದ್ದಕಡೆಗೆ ಹೋಗಿ ನೋಡುವಲ್ಲಿ ಅಲ್ಲಿ ಫಿರಂಗಿಗಳು ಮಾತ್ರ ಇದ್ದುವು. ಇಂಗ್ಲಿಷ್ ಸೋಲ್ಜರುಗಳೆಲ್ಲಾ ತಪ್ಪಿಸಿಕೊಂಡು ಹೊರಟುಹೋಗಿದ್ದರು.

ಈಚೆಗೆ ಜರ್ಮನ್ ಸೈನಿಕರು ತಾವಾಗಿ ಶತ್ರುಗಳಮೇಲೆ ಬೀಳುವ ರಭಸವೆಲ್ಲಾ ನಿಂತುಹೋಗಿದೆ. ಅವರು ತಾವು ನಿಂತ ಸ್ಥಲವನ್ನು ಗಟ್ಟಿಮಾಡಿಕೊಂಡು ಆತ್ಮರಕ್ಷಣೆಯಲ್ಲಿ ಹೆಚ್ಚು ನಿರತರಾಗಿ ಶತ್ರುಗಳು ತಮ್ಮ ಮೇಲೆ ಬಿದ್ದಾಗ ಕಾದಾಡುವ ಹಂಚಿಕೆಯಲ್ಲಿದ್ದಾರೆ.

ಜರ್ಮನರು ಫ್ರಾನ್ಸಿನಲ್ಲಿರುವ ಸೆನ್ಲಿಸ್ ಎಂಬ ಪಟ್ಟಣವನ್ನು ಹಿಂದೆ ಹಿಡಿದುಕೊಂಡಿದ್ದು ಈಚೆಗೆ ಬಿಟ್ಟುಹೋದರು. ಆ ಪಟ್ಟಣವು ಅವರ ಅಧೀನದಲ್ಲಿ ೧೦ ದಿನಗಳು ಮಾತ್ರ ಇದ್ದಿತು. ಅಷ್ಟರಲ್ಲಿ ಅದನ್ನೆಲ್ಲಾ ಅವರು ಧ್ವಂಸಮಾಡಿದರು. ಪಟ್ಟಣದ ಅಧಿಕಾರಿಯಾದ ಮೆಯರನ್ನೂ ಇನ್ನಿಬ್ಬರು ಅಧಿಕಾರಿಗಳನ್ನೂ ಒಂದು ಹೋಟಲಿನ ಇದಿರಿಗೆ ನಿಲ್ಲಿಸಿ ಗುಂಡುಹೊಡೆದು ಕೊಂದರು. ಊರಿನಲ್ಲಿದ್ದ ಸಾರಾಯಿಅಂಗಡಿಗಳಿಗೆಲ್ಲಾ ನುಗ್ಗಿ ಬೇಕಾದಷ್ಟು ಕುಡಿದು ಬರಿದಾದ ಸೀಸೆಗಳನ್ನು ಬೀದಿಗೆ ಎಸೆದು ಊರಿನಲ್ಲೆಲ್ಲಾ ಅವಾಂತರ ಮಾಡಿದರು. ರಾತ್ರಿಯಹೊತ್ತು ಕೆಲ ಫ್ರೆಂಚ್‌ಸೈನಿಕರು ಬಂಡಿಗಳಮೇಲೆ ಬಂದು ಹಾವಳಿಮಾಡುತ್ತಿದ್ದ ಜರ್ಮನರಲ್ಲಿ ಕೆಲರನ್ನು ಕೊಂದು ಕೆಲರನ್ನು ಸೆರೆಹಿಡಿದರು.

ಜರ್ಮನರು ಬೆಲ್ಜಿಯಮ್ಮಿನವರಮೇಲೆ ಯುದ್ಧದ ವೆಚ್ಚಕ್ಕೆಂದು ೪೫ ಕೋಟಿ ರೂಗಳ ವರಿಯನ್ನು ಹೇರಿದ್ದರು. ಇದರಲ್ಲಿ ಎಷ್ಟು ವಸೂಲಾಯಿತೋ ಗೊತ್ತಿಲ್ಲ.

ಬ್ರಸೆಲ್ಸಿಗೂ ಆಂಟ್‌ವರ್ಪಿಗೂ ಮಧ್ಯದಲ್ಲಿದ್ದ ವಿಲಾಸ್ಟ ನದಿಯ ಸೇತುವನ್ನು ಜರ್ಮನರು ಹಾಳ್ಮಾಡಿ, ಆವೆರಡುಪಟ್ಟಣಗಳ ಸಂಚಾರಸಂಬಂಧವನ್ನು ತಪ್ಪಿಸಿಬಿಟ್ಟಿದ್ದಾರೆ.

ಜರ್ಮನರು ಬೆಲ್ಜಿಯಮ್ಮಿನಲ್ಲಿ ಲೋವೈನಿನ ಉತ್ತರದೊಳಗೆ ಅರ್ಧಚಂದ್ರಾಕಾರವಾಗಿ ಶಿಬಿರವನ್ನು ಮಾಡಿಕೊಂಡು ಅದಕ್ಕೆ ಬಲವಾದ ಕಂದಕ ಕೋಟೆಗಳನ್ನು ಏರ್ಪಡಿಸಿಕೊಂಡು ಮೇಲೆ ಬಲವಾದ ಫಿರಂಗಿಗಳನ್ನಿಟ್ಟು ಸ್ಥಾನಬಲವನ್ನು ಚೆನ್ನಾಗಿ ಮಾಡಿಕೊಂಡಿದ್ದಾರೆ. ಯಾವಾಗ ಸಾಧಿಸಿ ಜರ್ಮನರು ತಮ್ಮ ಮೇಲೆ ಬೀಳುವರೋ ಎಂಬುದನ್ನು ನಿರೀಕ್ಷಿಸುತ್ತ, ಕಟ್ಟಕಡೆಗೆ ದೇಶದ ಮೇಲೆಲ್ಲಾ ಸಮುದ್ರದ ಜಲವನ್ನು ಹರಿಯಬಿಟ್ಟು ಮತ್ತೊಂದು ಸಲ ಶತ್ರುಗಳಿಗೆ ಜಲಸಮಾಧಿಯನ್ನು ಮಾಡಬೇಕೆಂದು ಬೆಲ್ಜಿಯಮ್ಮಿನವರು ಸನ್ನಾಹಮಾಡಿಕೊಂಡಿದ್ದಾರೆ.

ಜರ್ಮನರು ಲೋವೈನ್ ಪಟ್ಟಣದಲ್ಲಿ ಪುಸ್ತಕಭಾಂಡಾರ ಮೊದಲಾದುವನ್ನು ಸುಟ್ಟು ಮಾಡಿದ ಕೃತ್ಯಕ್ಕಿಂತಲೂ ರೀಮ್ಸ್ ಪಟ್ಟಣದ ಪ್ರಾಚೀನ ದೇವಾಲಯವನ್ನು ಧ್ವಂಸಮಾಡಿದ ಅನರ್ಥವು ಬಹಳ ಕ್ರೂರವೆಂದು ತಿಳಿಯಲ್ಪಟ್ಟಿದೆ. ಈ ದೇವಾಲಯವು ಮತವಿಷಯದಲ್ಲೂ, ಶಿಲ್ಪರಚನೆಯ ಆಧಿಕ್ಯದಲ್ಲೂ, ಹೆಸರಾದುದು. ಇದರಲ್ಲಿ ಬಹಳ ಆಶ್ಚರ್ಯಕರವಾದ ವಸ್ತುಗಳೂ ಬಹಳ ಧನಕನಕಗಳೂ ಸಹ ಇದ್ದುವು. ಇಂಗ್ಲೆಂಡಿಗೆ ವೆಸ್ಟ್‌ಮಿನಿಸ್ಟರ್ ಆಬೆ ಎಂಬ ದೇವಾಲಯವು ಹೇಗೆ ಪ್ರಸಿದ್ಧವೋ ಹಾಗೆ ಇದು ಫ್ರಾನ್ಸಿಗೆ ಪ್ರಸಿದ್ಧ ಪುರಾತನ ದೇವಾಲಯವಾಗಿದ್ದಿತು. ಈಗ ಈ ದೇವಾಲಯದ ಮೋಟುಗೋಡೆಗಳು ಮಾತ್ರ ನಿಂತಿವೆ.

ಸ್ಯಾಕ್ಸನಿಯಲ್ಲಿ ಯುದ್ಧಾಂಗಮಂತ್ರಿಯಾಗಿದ್ದ ಜನರಲ್ ವಾನ್‌ಹಾಸ್ಸೆನ್‌ರವರ ಸೇನಾಧಿಪತ್ಯದಿಂದ ಒಂದು ಅಶ್ವಸೇನೆಯನ್ನು ಜರ್ಮನರು ಫ್ರಾನ್ಸಿಗೆ ಕಳುಹಿಸಿದ್ದರು. ಇದು ಬಹಳ ಪರಾಜಯವನ್ನು ಹೊಂದಿ ಅಬಂಧುರವಾಗಿಹೋಯಿತು. ಇದರ ಮೇಲಿನ ಆ ಸೇನಾಧಿಪತಿಯನ್ನು ಮೊದಲನೆಯ ಆತನ ಉದ್ಯೋಗಕ್ಕೆ ಕಳುಹಿಸಿಬಿಟ್ಟರು. ಈ ಸ್ಯಾಕ್ಸನಿ ಅಶ್ವಸೇನೆಯನ್ನು ಲೋರೈನ್ ಪ್ರಾಂತದಿಂದ ಕರೆಯಿಸಿಕೊಂಡು ಪೂರ್ವರಂಗಕ್ಕೆ ರಷ್ಯನರಮೇಲೆ ಆಸ್ಟ್ರಿಯಾದಪಕ್ಷದಲ್ಲಿ ಕಾದುವುದಕ್ಕೆ ಈಗ ಕಳುಹಿಸಿರುವರು.

ಇಂಗ್ಲೆಂಡು.

ಕಳೆದ ತಾ|| ೧೮ ರಲ್ಲಿ ಪಾರ್ಲಿಮೆಂಟು ಸೇರಿದ್ದಾಗ ಚಕ್ರವರ್ತಿಯವರು ದಯಮಾಡಿಸಿ, ಸದ್ಯದ ಯುದ್ಧದಲ್ಲಿ ಇಂಗ್ಲೀಷನವರು ನ್ಯಾಯಧರ್ಮ ರಕ್ಷಣಾರ್ಥವಾಗಿ ಪ್ರವರ್ತಿಸಿರುವುದನ್ನೂ, ಆಂಗ್ಲಸಾಮ್ರಾಜ್ಯದವರೆಲ್ಲಾ ಒಮ್ಮನಸ್ಸಿನಿಂದ ಅದರಲ್ಲಿ ಸಹಾಯಭೂತರಾಗಿರುವುದನ್ನೂ ಕುರಿತು ಭಾಷಣಮಾಡಿ, ಸಭೆಯನ್ನು ಮುಕ್ತಾಯಗೊಳಿಸಿದರು. ಮುಂದೆ ಅಕ್ಟೋಬರ್ ತಾ|| ೨೭ ಕ್ಕೆ ಸಭೆಯು ತೆರೆಯಲ್ಪಡಲು ಗೊತ್ತಾಯಿತು. ಸಭಿಕರೆಲ್ಲಾ ನಿಂತು ರಾಷ್ಟ್ರಗೀತವನ್ನು ಅತ್ಯಾನಂದದಿಂದ ಹಾಡಿ ಕರತಾಳಗಳನ್ನು ಮಾಡಿದರು.

ಇಂಡ್ಯಾದೇಶವು ಈ ಸಮಯದಲ್ಲಿ ತೋರಿಸಿದ ರಾಜಭಕ್ತಿಯು ಅನ್ಯಾದೃಶವಾದುದೆಂದು ಪ್ರಪಂಚವೇ ಹೊಗಳುತ್ತಿದೆ. ಸೀಮೆಯ ಆಂಗ್ಲಪತ್ರಿಕೆಗಳೆಲ್ಲಾ ಶ್ಲಾಘಿಸಿವೆ. ಪಾರ್ಲಿಮೆಂಟಿನಲ್ಲೂ ಕೂಡ ಮಂತ್ರಿಮಂಡಲದವರು ಕೊಂಡಾಡಿದರು. ಬೋನರ್‌ಲಾರವರು ಈ ಸಂಬಂಧವಾಗಿ ಮಾತನಾಡುವಾಗ್ಗೆ “ಇಂಡ್ಯಾದವರು ತೋರಿಸಿದ ಸಾಮ್ರಾಜ್ಯಭಕ್ತಿ ವಿಷಯವು ಈ ದೇಶದವರ ಮನಸ್ಸನ್ನು ಸೆಳೆದಂತೆ ಮತ್ತಾವುದೂ ಸೆಳೆಯಲಿಲ್ಲ. ಹಿಂದೂ ಸೈನಿಕರು ತಮ್ಮ ಜತೆಯಲ್ಲಿ ಯುದ್ಧಮಾಡುವುದಕ್ಕೆ ಬರುತ್ತಿರುವರೆಂದು ಇಂಗ್ಲೀಷ್ ಸೈನಿಕರು ಉಬ್ಬುತ್ತಿದ್ದಾರೆ. ಭಾರತೀಯರನ್ನು ಸಹಾಯಮಾಡಿರೆಂದು ನಾವು ಬಲಾತ್ಕರಿಸಲಿಲ್ಲ; ಆದರೂ ಅವರು ಸಂತೋಷದಿಂದ ಸಹಾಯಮಾಡುತ್ತಿದ್ದಾರೆ” ಎನ್ನಲು, ಸಭಿಕರೆಲ್ಲಾ ಕರತಾಳಗಳನ್ನು ವಿಪರೀತವಾಗಿ ಮಾಡಿದರು.

ನಮ್ಮ ಯುವಚಕ್ರವರ್ತಿಯವರು ತಾವು ಯುದ್ಧಕ್ಕೆ ಹೊರಡಲು ಕುತೂಹಲಗೊಂಡು ಲಾರ್ಡ್ ಕಿಚನರ್‌ರವರಿಗೆ ತಿಳಿಯಪಡಿಸಲು, ಇನ್ನೂ ಯುದ್ಧದ ಶಿಕ್ಷಣವು ಪೂರ್ಣವಾಗಿಲ್ಲದಿರುವುದರಿಂದ ಹೊರಡುವುದು ತರವಲ್ಲವೆಂದು ಹೇಳಿ ನಿಲ್ಲಿಸಿಬಿಟ್ಟರು.

ಭರತಖಂಡದಿಂದ ಯುದ್ಧಕ್ಕಾಗಿ ಕಳುಹಿಸಲ್ಪಡುವ ಸೈನ್ಯದ ಉದ್ಯೋಗಿಗಳ ಸಂಬಳವನ್ನು ಇಂಡ್ಯಾ ಸರ್ಕಾರದ ಬೊಕ್ಕಸದಿಂದಲೇ ಕೊಡಲ್ಪಡಲು ನಿರ್ಣೀತವಾಯಿತು. ಸಾಮ್ರಾಜ್ಯಶಾಸನ ಸಭೆಯವರೇ ಹಾಗೆ ಮಾಡಲು ನಿರ್ಣಯಿಸಿಕೊಂಡಿದ್ದರು.

ಈಗಿನ ಬೊಂಬಾಯಿ ಗೌರ್ನರಾದ ಲಾರ್ಡ್ ವೆಲ್ಲಿಂಗ್ಡನ್‌ರವರ ಹಿರಿಯ ಮಕ್ಕಳಾದ ಲೆಫ್ಟನೆಂಟ್ ಆನರಬಲ್ ಗೆರಾಲ್ಡ್ ಫ್ರೀಮ್ಯಾನ್ ಥಾಮಸ್‌ರವರು ಕೋಲ್ಡ್‌ಸ್ಟ್ರೀಮ್ ಪಟಾಲಮ್ಮಿನಿಂದ ಯುದ್ಧಕ್ಕೆ ಹೋಗಿದ್ದರು. ಇವರು ಎಲ್ಲಿದ್ದಾರೆಂಬುದು ಇದುವರೆಗೂ ಗೊತ್ತಾಗಿಲ್ಲ.

ಜಲಯುದ್ಧ

ಬಾಲ್ಟಿಕ್‌ಸಮುದ್ರದಲ್ಲಿ ಪ್ರಯಾಣಿಕರ ರಷ್ಯನ್ ಹಡಗುಗಳನ್ನು ಜರ್ಮನರ ಯುದ್ಧದಹಡಗುಗಳು ಹಿಡಿಸಿಕೊಂಡು ಹೋದುವು. ಆಗೆ ಎರಡುಪಕ್ಷದವರಿಗೂ ಯುದ್ಧವಾಯಿತು. ಆದ ನಷ್ಟವು ಸ್ಪಷ್ಟವಾಗಿಲ್ಲ.

ಇಂಗ್ಲೀಷ್‌ಕಾಲ್ವೆಯಲ್ಲಿ ಇಂಗ್ಲೀಷರ ಫಿಸ್ಗಾರ್ಡ್ ಎಂಬ ಹಳೆಯತರದ ಯುದ್ಧದಹಡಗು ಬಿರುಗಾಳಿ ಮಳೆಯಬಡಿತದಿಂದ ಮುಳುಗಿಹೋಯಿತು. ಇದರಲ್ಲಿದ್ದವರಲ್ಲಿ ೨೧ ಮಂದಿ ಸತ್ತರು. ೪೩ ಮಂದಿ ಬದುಕಿದರು.

ಆಸ್ಟ್ರೇಲಿಯಾದ ಒಂದು ಸಬ್‌ಮೆರೈನು ನೀರಿನೊಳಗಿನ ಬೆಟ್ಟಕ್ಕೆ ಬಡಿದೋ ಏನೋ ಅದರೊಳಗಿದ್ದ ೩೮ ಮಂದಿಗಳ ಸಮೇತ ಮುಳುಗಿಹೋಯಿತು. ಇಂಗ್ಲೀಷರ ಕಾರ್ಮೇನಿಯಾ ಎಂಬ ಕ್ರೂಜರಿಗೂ ಕೇಪ್‌ಟ್ರಫಾಲ್‌ಗರ್ ಎಂಬ ಜರ್ಮನರ ಹೊಸ ಕ್ರೂಜರಿಗೂ ಅಮೇರಿಕಾದ ದಕ್ಷಿಣತೀರದಲ್ಲಿ ೧|| ಗಂಟೆಯಹೊತ್ತು ಯುದ್ಧವು ನಡೆದು ಕಡೆಗೆ ಜರ್ಮನರ ಹಡಗು ಮುಳುಗಿಹೋಯಿತು. ಅದರಲ್ಲಿದ್ದು ಸತ್ತವರವಿನಾ ಉಳಿದವರನ್ನು ಒಂದು ಕಲ್ಲಿದ್ದಲ ಹಡಗು ಸಾಗಿಸಿತಂದಿತು. ಕಾರ್ಮೇನಿಯಾ ಹಡಗಿನಲ್ಲಿ ೯ ಮಂದಿ ಸತ್ತರು. ೨೬ ಮಂದಿಗೆ ಗಾಯವಾಯಿತು.

ಪೂರ್ವಆಫ್ರಿಕಾದ ಜಾಂಜಿಬಾರಿನಲ್ಲಿ ನಿಂತಿದ್ದ ಇಂಗ್ಲೀಷರ ೩ನೇ ತರಗತಿಯ ಯುದ್ಧದಹಡಗು ಪೆಗ್ಸಸ್‌ಎಂಬುದನ್ನು ಕೊಯಿಂಗ್ಸ್‌ಬರ್ಗ್ ಎಂಬ ಜರ್ಮನರ ಹೊಸಯುದ್ಧದ ಹಡಗು ಮೇಲೆಬಿದ್ದು ಹೊಡೆದು ಪೂರ್ಣವಾಗಿ ಶಿಥಿಲಗೊಳಿಸಿತು. ಅದರಲ್ಲಿದ್ದವರಲ್ಲಿ ೨೫ ಮಂದಿ ಸತ್ತರು; ೮೦ ಮಂದಿಗೆ ಗಾಯವಾಯಿತು. ಈ ಇಂಗ್ಲೀಷರ ಹಡಗು ಆಸ್ಥಲದಲ್ಲಿದ್ದ ಜರ್ಮನರ ೧-೨ ಪಟ್ಟಣಗಳನ್ನು ನಾಶಮಾಡಿದ್ದಿತು. ಬಳಿಕ ಇಲ್ಲಿ ಲಂಗರ್‌ಹಾಕಿ ನಿಂತುಕೊಂಡು ತನ್ನ ಯಂತ್ರಸಾಮಗ್ರಿಗಳನ್ನು ಸರಿಪಡಿಸಿಕೊಳ್ಳುತ್ತಿದ್ದಿತು.

ಫಿರಂಗಿಗಳುಳ್ಳ ಇಂಗ್ಲೀಷರ ಡ್ವಾರ್ಫ್ ಎಂಬ ಹಡಗನ್ನು ಜರ್ಮನರ ಒಂದು ಹಡಗು ಮುಳುಗಿಸಬೇಕೆಂದು ಯತ್ನಿಸಿ ನಿಷ್ಫಲಗೊಂಡಿತು. ಅದನ್ನು ಇಂಗ್ಲೀಷ್ ಹಡಗಿನವರು ಹಿಡಿದುಕೊಂಡರು. ಅಷ್ಟರಲ್ಲಿ ಮತ್ತೊಂದು ಜರ್ಮನ್‌ಹಡಗು ಬಂದು ಡ್ವಾರ್ಫ್‌ಹಡಗಿನಮೇಲೆ ಬಿದ್ದು ಬಡಿದಾಡಿತು. ಜರ್ಮನ್‌ಹಡಗು ಸ್ವಲ್ಪ ಶಿಥಿಲವಾಯಿತು. ಅದರಲ್ಲಿದ್ದ ೧೪ ಮಂದಿಗಳು ಸತ್ತರು. ಇನ್ನು ೨೨ ಮಂದಿಗಳು ಏನಾದರೋ ತಿಳಿಯಲಿಲ್ಲ.

ಬಂಗಾಳಾಕೊಲ್ಲಿಯಲ್ಲಿ ೫-೬ ಹಡಗುಗಳನ್ನು ಮುಳುಗಿಸಿದ ಎಮ್ಡನ್ ಎಂಬ ಜರ್ಮನರಹಡಗು ಜಾವಾದ್ವೀಪದಿಂದ ಸಂಡಾ ದ್ವೀಪಗಳಿಗೆ ಬಂದು ಅಲ್ಲಿ ಕೆಲಕಾಲ ನಿಂತಿದ್ದು, ಸುಮಾತ್ರಾ-ನಿಕೋಬಾರ್-ಅಂಡಮಾನ್ ದ್ವೀಪಗಳಮೇಲಿಂದ ಬಂಗಾಳಾಕೊಲ್ಲಿಗೆ ಬಂದಿತೆಂದು ಗೊತ್ತಾಗುತ್ತದೆ.

ಪೂರ್ವರಂಗ.

ಗೆಲೀಷಿಯಾದಲ್ಲಿ ರಷ್ಯನರಮೇಲೆ ಯುದ್ಧಮಾಡುತ್ತಿರುವ ಆಸ್ಟ್ರಿಯಾದವರಿಗೆ ಸಹಾಯಕರಾಗಿ ಹೋದ ಜರ್ಮನ್ ಸೈನಿಕರಲ್ಲಿ ೫ ಸಾವಿರಮಂದಿಗಳು ರಷ್ಯನರ ಬಂದಿಗಳಾಗಿ ಸಿಕ್ಕಿಬಿದ್ದರು.

ಲೆಂಬರ್ಗ್‌ನಲ್ಲಿ ಯುದ್ಧವಾದಂದಿನಿಂದ ಇದುವರೆಗೆ ಆಸ್ಟ್ರಿಯನ್ನರಕಡೆ ೨|| ಲಕ್ಷ ಸೈನ್ಯವು (ಏಟುತಿಂದು ಅಥವಾ ಸತ್ತು) ನಷ್ಟವಾಗಿರುವರು; ೪೦೦ ಫಿರಂಗಿಗಳು ರಷ್ಯನ್ನರಿಗೆ ಸಿಕ್ಕಿವೆ.

ಜರ್ಮನರನ್ನು ಹಲವುಕಡೆ ರಷ್ಯನ್ನರು ತಡೆದು ಹಿಮ್ಮೆಟ್ಟಿಸುತ್ತಿದ್ದಾರೆ. ನೀಸ್ಟರ್ ನದಿಯಲ್ಲಿ ಆಸ್ಟ್ರಿಯಾ ಜರ್ಮನ್ ಸೈನಿಕರ ಹೆಣಗಳು ತುಂಬಿಹೋಗಿ ನೀರುಹೋಗುವುದಕ್ಕೆ ತಡೆಯಾಗಿ ಹೊಳೆಯ ನೀರು ದಡದಮೇಲೆ ಹರಿದಿತಂತೆ. ದಡದಮೇಲೆ ನೂರಾರು ಎಕರೆ ಭೂಮಿಗಳಲ್ಲಿ ಎಷ್ಟೋ ಹೆಣಗಳೂ ಆಯುಧಗಳೂ ಉಡುಪುಗಳೂ ದಿಕ್ಕಾಬಟ್ಟೆ ಬಿದ್ದಿರುವುವಂತೆ. ಯಜಮಾನನಿಲ್ಲದೆ ಏಟು ತಿಂದಿರುವ ಕುದುರೆಗಳು ಹುಚ್ಚರಂತೆ ಅರಚಿ ಹೊರಲಾಡುತ್ತಿರುವುವಂತೆ.

ರಷ್ಯಾ ಸೈನಿಕರು ಜರ್ಮನ್-ಆಸ್ಟ್ರಿಯಾ ಸೈನಿಕರಿಂದ ಕಸುಕೊಂಡ ಫಿರಂಗಿಗಳನ್ನು ಆ ಶತ್ರುಗಳಮೇಲೆಯೇ ಉಪಯೋಗಿಸುವುದರಲ್ಲಿರುವರು. ಟುರೋವಿಸ್ಕಿನ ಬಳಿಯಲ್ಲಿ ರಷ್ಯನ್ನರಿಗೆ ಸಿಕ್ಕಿದ ೩೮ ಫಿರಂಗಿಗಳ ಮೇಲೆ ಜರ್ಮನ್ ಚಕ್ರವರ್ತಿಯ ಹೆಸರ ಅಕ್ಷರಗಳು ಕೆತ್ತಲ್ಪಟ್ಟಿದ್ದುವು.

ಹಲವು ಕಡೆ ರಷ್ಯಾದ ಅಶ್ವಸೈನಿಕರು ತಮಗಿಂತ ಸಂಖ್ಯೆಯಲ್ಲಿ ೪-೫ ರಷ್ಟು ಹೆಚ್ಚಾಗಿದ್ದ ಶತ್ರುಸೈನ್ಯದಮೇಲೆ ಹೋರಾಡಿ ಜಯಶೀಲರಾಗಿದ್ದಾರೆ. ಈಚೆಗೆ ರಷ್ಯನರು ಆಸ್ಟ್ರಿಯಾದ ನೆನಿಯವಾ-ಸಾಂಬರ್-ಎಂಬಲ್ಲಿನ ಕೋಟೆಗಳನ್ನು ಹಿಡಿದುಕೊಂಡರು. ಜೆರೋಸ್ಲಾವು ಎಂಬ ಪಟ್ಟಣವನ್ನು ಗುಂಡಿನೇಟಿನಿಂದ ಸುಟ್ಟುಬಿಟ್ಟರು.

ಸರ್ವಿಯಾ ಮಾಂಟಿನಿಗ್ರೋ ಸೈನ್ಯಗಳು ಬೋಸ್ನಿಯಾ ದೇಶದ ಗೊರಾಜೀ ಪಟ್ಟಣವನ್ನು ಹಿಡಿದಾಗ ಪುರಜನರು ಇವರನ್ನು ಕಂಡು ಬಹಳ ಸಂತೋಷಿಸಿದರು. ಇಷ್ಟರಲ್ಲೇ ಈ ಸೈನ್ಯಗಳು ಸೆರಾಜೀವೋ ಪಟ್ಟಣಕ್ಕೆ ನುಗ್ಗುವುದರಲ್ಲಿರುವುವು. ಈ ಸೇನೆಯ ದಳವಾಯಿಯಾಗಿರುವ ಸರ್ವಿಯಾ ಯುವರಾಜನಿಗೆ ಗುಂಡಿನೇಟಿನಿಂದ ದೊಡ್ಡಗಾಯವಾಗಿರುವುದು.

ಜಪಾನ್.

ಜಪಾನ್ ಸೈನಿಕರು ಕಿಯಾಚೂ ಪಟ್ಟಣದ ರೇಲ್ವೆ ನಿಲ್ದಾಣವನ್ನು ಹಿಡಿದುಕೊಂಡರು.

ಮೈಸೂರ್ ಸ್ಟಾರ್.

೧೯೧೪ ನೆಯ ಸೆಪ್ಟಂಬರ್ ತಾ|| ೨೭ನೆಯ ಭಾನುವಾರ.

ಪರಸ್ಪರ ಸಹಾಯಸಂಘಗಳ ಮಹಾಸಭೆ.

ಈ ಸಭೆಯ ೪ನೆಯ ಅಧಿವೇಶನವು ಕಳೆದ ತಾ|| ೨೨ರಲ್ಲಿ ಆರಂಭಿಸಲ್ಪಟ್ಟು ೩ ದಿನಗಳ ವರೆಗೆ ನಡೆದಿತು. ಈ ಸಭಾಧ್ಯಕ್ಷತೆಯು ಸರದಾರ್ ಎಂ. ಕಾಂತರಾಜೇ ಅರಸ್, ಬಿ. ಎ. ಸಿ.ಎಸ್.ಐ., ರವರಿಗೆ ವಹಿಸಲ್ಪಟ್ಟಿದ್ದಿತು. ಸಭೆಗಾಗಿ ಟೌನ್ ಹಾಲು ಹೊರಗೂ ಒಳಗೂ ಧ್ವಜಪತಾಕ ತೋರಣಗಳಿಂದ ಅಲಂಕೃತವಾಗಿದ್ದಿತು. ಉನ್ನತವಾದ ಜಗತಿಯ ಮೇಲೆ ಶ್ರೀಮದ್ಯುವರಾಜರವರಿಗೂ-ದಿವಾನರು-ಕೌನ್ಸಿಲರು ಮೊದಲಾದವರಿಗೂ ರಾಜಬಂಧುಗಳೇ ಮೊದಲಾದ ಕೆಲ ಪ್ರಮುಖರಿಗೂ ಆಸನಗಳು ಏರ್ಪಡಿಸಲ್ಪಟ್ಟಿದ್ದುವು. [illegible] ಜನರವರ ಸ್ಥಳಗಳನ್ನು ಅಲಂಕರಿಸಿದ್ದರು. ಎಲ್ಲ ಡಿಸ್ಟ್ರಿಕ್ಟುಗಳಿಂದಲೂ ಸಂಘಗಳ ಪ್ರತಿನಿಧಿಗಳಾಗಿ ಬಂದವರೂ, ಕೆಲ ಅಧಿಕಾರಿಗಳು ಪುರಪ್ರಮುಖರು ವಕೀಲರುಗಳು ಮೊದಲಾದವರೂ ಮುಂಗಡೆಯ ಕುರ್ಚಿಗಳ ಮೇಲೆ ಕುಳಿತಿದ್ದರು.

ಪರಸ್ಪರ ಸಹಾಯಕ ಸಂಘಗಳ ರಿಜಿಸ್ಟ್ರಾರರಾದ ಮ|| ಎಂ. ಎ. ನಾರಣಯ್ಯಂಗಾರರು ಶ್ರೀಮದ್ಯುವರಾಜರವರನ್ನು ಕುರಿತು ಒಂದು ವಿಜ್ಞಾಪನಾಪತ್ರವನ್ನು ಆಂಗ್ಲಭಾಷೆಯಲ್ಲಿ ಓದಿದರು. ಅದರಲ್ಲಿ-ಈ ಮಹಾಸಭೆಯನ್ನು ಪ್ರಥಮತಃ ೧೯೧೧ನೆ ಇಸವಿಯಲ್ಲಿ ತಾವೇ ಆರಂಭಿಸಿ, ಈ ಸಂಘಾಭಿವೃದ್ಧಿಗಾಗಿ ಬುದ್ಧಿವಾದಗಳನ್ನು ಅಪ್ಪಣೆಕೊಡಿಸಿರುತ್ತೀರೆಂತಲೂ ಈಚೆಗೆ ಇವುಗಳ ಕಾರ್ಯವು ವೃದ್ಧಿಗೊಳ್ಳುತ್ತ ಬಂದಿದೆಯೆಂತಲೂ, ಮುಂದೆ ಈ ಶಾಖೆಯ ಕೆಲಸವನ್ನು ತಮ್ಮ ಪೋಷ್ಯವರ್ಗಕ್ಕೆ ಸೇರಿಸಿಕೊಳ್ಳಬೇಕೆಂತಲೂ, ಈ ಮಹಾಸಭೆಯ ಆರಂಭಮಹೋತ್ಸವವನ್ನು ತಾವು ನೆರವೇರಿಸಬೇಕೆಂತಲೂ ಪ್ರಾರ್ಥಿಸಲ್ಪಟ್ಟಿದ್ದಿತು.

ಬಳಿಕ ಮ|| ಅಯ್ಯಂಗಾರರು ಶ್ರೀಮಾನ್ ಕಾಂತರಾಜೇ ಅರಸಿನವರಿಗೂ ಒಂದು ವಿಜ್ಞಾಪನ ಪತ್ರವನ್ನು ಓದಿ ಅರ್ಪಿಸಿದರು. ಅದರಲ್ಲಿ-ಅವರಿಗಿರುವ ಪ್ರಜಾವಾತ್ಸಲ್ಯವನ್ನೂ, ಸರ್ಕಾರದ ಕಾರ್ಯದ ಅನುಭವಾದಿ ವಿಷಯವನ್ನೂ ಘನತೆಯನ್ನೂ ವಿವರಿಸಿ, ಈ ಸಭೆಗೆ ಅವರು ಅಧ್ಯಕ್ಷರಾಗುವುದರಿಂದ ಸಂಘಗಳಿಗಾಗುವ ಪ್ರಯೋಜನಾಂಶವನ್ನು ಹಾರೈಸಿ, ಅವರು ಅಧ್ಯಕ್ಷತೆಯನ್ನು ಅಂಗೀಕರಿಸಬೇಕೆಂದು ಪ್ರಾರ್ಥಿಸಲ್ಪಟ್ಟಿದ್ದಿತು.

ಬಳಿಕ ಶ್ರೀಮದ್ಯುವರಾಜರು ತಮ್ಮ ಯುಕ್ತಿಯುಕ್ತವೂ ಬೋಧಪ್ರದವೂ ಆದ ಪ್ರಾರಂಭೋಪನ್ಯಾಸವನ್ನು ಆಂಗ್ಲಭಾಷೆಯಲ್ಲಿ ಮಾಡಿದರು. ಅದರ ಕನ್ನಡದ ಪರಿವರ್ತನವು ಸಂಘಗಳ ರಿಜಿಸ್ಟ್ರಾರರಿಂದ ಓದಲ್ಪಟ್ಟಿತು. (ಅದನ್ನು ಈ ಪತ್ರದ ಬೇರೊಂದು ಕಡೆಯಲ್ಲಿ ಮುದ್ರಿಸಿರುತ್ತೇವೆ.) ಸಭಾಧ್ಯಕ್ಷರಾದ ಸರ್ದಾರ್ ಕಾಂತರಾಜ ಅರಸಿನವರು ತಮ್ಮ ಉಪನ್ಯಾಸವನ್ನು ಆಂಗ್ಲಭಾಷೆಯಲ್ಲಿ ಮಾಡಿದರು. ಅದು ಪ್ರೌಢವಾಗಿಯೂ ವಿಚಾರಪರಿಪ್ಲುತವಾಗಿಯೂ ದೀರ್ಘವಾಗಿಯೂ ಇದ್ದಿತು. ಅದರ ಭಾಷಾಂತರವು ಒಬ್ಬ ಪ್ರತಿನಿಧಿಗಳಿಂದ ಓದಲ್ಪಟ್ಟಿತು. (ಅದರ ಕೆಲಭಾಗಗಳನ್ನು ಈ ಪತ್ರದ ಬೇರೆಕಡೆಯಲ್ಲಿ ಮುದ್ರಿಸಿದ್ದೇವೆ.) ತದನಂತರ ಶ್ರೀಮದ್ಯುವರಾಜರ ಮತ್ತೂ ಸಭಾಧ್ಯಕ್ಷರ ಶ್ರೇಯಃಪ್ರಾರ್ಥನಾರೂಪವಾದ- ಮತ್ತು ಪರಸ್ಪರ ಸಹಾಯಪ್ರಯೋಜನ ವಿಷಯಕವಾದ ಕೆಲಕವಿತೆಗಳು ಹೇಳಲ್ಪಟ್ಟುವು. ಅನಂತರ ಪ್ರತಿನಿಧಿಗಳಲ್ಲಿ ಕೆಲರು ಪರಸ್ಪರ ಸಹಾಯಸಂಘಗಳ ಕರ್ತವ್ಯದ ವಿಷಯದಲ್ಲಿ ಉಪಯುಕ್ತವಾದ ಸೂಚನೆಗಳುಳ್ಳ ಬೇರೆ ಬೇರೆ ಭಾಷಣಗಳನ್ನು ಮಾಡಿದರು. ಎಲ್ಲವೂ ಶ್ಲಾಘ್ಯವಾಗಿದ್ದುವು. ಬಳಿಕ ಶ್ರೀಮದ್ಯುವರಾಜರಿಗೂ, ಸರ್ದಾರ್ ಕಾಂತರಾಜ ಅರಸಿನವರು ದಿವಾನರು ಮೊದಲಾದವರಿಗೂ ಪುಷ್ಪಹಾರಗುಚ್ಛಾದಿಗಳು ಅರ್ಪಿಸಲ್ಪಟ್ಟುವು. ತಾ|| ೨೩-೨೪ ರಲ್ಲೂ ಸಭಾಕಾರ್ಯಗಳು ವಿಸ್ತಾರವಾಗಿ ನಡೆದು ಉಪಯುಕ್ತವಾದ ಸ್ಥೂಲಸೂಕ್ಷ್ಮ ವಿಷಯಗಳು ಚರ್ಚಿಸಲ್ಪಟ್ಟು ನಿರ್ಧಾರಗಳು ಮಾಡಲ್ಪಟ್ಟುವು.

ಈ ಸಭೆಯಲ್ಲಿ ನಡೆದ ಅನ್ಯಂತವಾದ ಚರ್ಚೆಗಳು ಪರಸ್ಪರ ಸಹಾಯಕ ಸಂಘಗಳ ನಿರ್ವಾಹವಿಷಯದಲ್ಲಿ ನಮ್ಮ ದೇಶೀಯರಿಗೆ ಉಂಟಾಗಿರುವ ಜ್ಞಾನವಿಶೇಷವನ್ನು ವ್ಯಕ್ತಪಡಿಸುತ್ತಿದ್ದುವು. ನಮ್ಮ ಸಂಸ್ಥಾನದಲ್ಲಿ ಈ ಸಂಘಗಳ ಸ್ಥಾಪನೆಗೆ ಆರಂಭವಾಗಿ ೮-೯ ವರ್ಷಗಳಾಗಿದ್ದರೂ ಈ ಅವಧಿಯೊಳಗೆ ಸ್ಥಾಪಿತವಾಗಿರುವ ಸಂಘಗಳ ಸಂಖ್ಯೆಯು ೫೪೩, ಸಭಿಕರ ಸಂಖ್ಯೆ ೪೦|| ಸಾವಿರ, ಬಂಡವಾಳ ೨೧|| ಲಕ್ಷ; ನಡೆದಿರುವ "ಲೇವಾದೇವಿ" ೯೭ ಲಕ್ಷ, ಸುರಕ್ಷಿತಧನ ೫೭ ಸಾವಿರದವರೆಗೂ ಆಗಿರುವುದು. ತತ್ರಾಪಿ ಕಳೆದ ೩ ವರ್ಷಗಳಲ್ಲಿ ಈ ಎಲ್ಲವಿಷಯಗಳಲ್ಲೂ ಕಂಡಿರುವ ವಿಶೇಷವಾದ ಅಭಿವೃದ್ಧಿಗಳು ಭರತಖಂಡದಲ್ಲಿನ ಇತರ ಭಾಗಗಳಿಗಿಂತಲೂ ಈ ವಿಷಯದಲ್ಲಿ ಮೈಸೂರು ಸಂಸ್ಥಾನವನ್ನು ಮುಂದಾದುದೆನಿಸಿ ಕೀರ್ತಿಪ್ರತಿಷ್ಠೆಯನ್ನುಂಟುಮಾಡಿವೆ. ಅಭ್ಯುದಯಕ್ಕೆ ಈ ಸಂಘಗಳ ರಿಜಿಸ್ಟ್ರಾರರಾದ ಮ|| ನಾರಣಯ್ಯಂಗಾರರ ಅನ್ಯವಹಿತವಾದ ಮುತವರ್ಜಿಯೂ ಅಭಿಮಾನವೂ ಕಾರ್ಯದಕ್ಷತೆಯೂ ವಿಶೇಷತಃ ಕಾರಣವಾಗಿದ್ದುದರಿಂದ ಅವರು ಈ ಕೀರ್ತಿಯ ಬಹ್ವಂಶಕ್ಕೆ ಭಾಜನರಾಗಿ ಅಭಿನಂದನೀಯರಾಗಿರುತ್ತಾರೆ. ತಕ್ಕ ಮುತುವರ್ಜಿಯಿಂದಲೂ ದೇಶಾಭಿಮಾನದಿಂದಲೂ ಪ್ರೇರಣೆಮಾಡತಕ್ಕ ಮುಂದಾಳುಗಳು ಅಣಿಯಾದರೆ, ಮೈಸೂರಿನ ಪ್ರಜೆಗಳು ಗುಣಕಂಡ ಕಾರ್ಯಗಳಲ್ಲಿ ಎಲ್ಲರಿಗಿಂತಲೂ ಮುಂದಾಗಿ ಅಡಿಯಿಟ್ಟು, ತಮಗೂ ದೇಶಕ್ಕೂ ಕೀರ್ತಿಪ್ರದವಾದ ಕಾರ್ಯಗಳನ್ನು ಸಾಧಿಸುವುದರಲ್ಲಿ ಎಷ್ಟು ಉತ್ಸಾಹವುಳ್ಳವರಾಗಿದ್ದಾರೆಂಬುದಕ್ಕೆ ಈ ಸಂಘಗಳ ಸಂಬಂಧದ ಕಾರ್ಯವು ಒಳ್ಳೆಯ ದೃಷ್ಟಾಂತವಾಗಿದೆ. ಭರತಖಂಡಕ್ಕೆ ಈಗಿನ ರೀತಿಯ ಪರಸ್ಪರ ಸಹಾಯಕಸಂಘಗಳಿಂದ ಪರಿಣಾಮದಲ್ಲಿ ಲಾಭವುಂಟೆ ? ಎಂಬ ವಿಷಯದಲ್ಲಿ ಪ್ರಮುಖರಾದ ದೇಶಾಭಿಮಾನಿಗಳೂ ಪಂಡಿತರೂ ಆದ ಕೆಲರು ಸಂಶಯಪಡುತ್ತಿದ್ದಾರೆ. ಆದರೆ, ಶ್ರೀಮದ್ಯುವರಾಜರೂ, ಸಭಾಧ್ಯಕ್ಷರೂ ಸಹ ತಮ್ಮ ಭಾಷಣಗಳಲ್ಲಿ ಅಪ್ಪಣೆಕೊಡಿಸಿರುವಂತೆ ಈ ಸಂಘದ ಕಾರ್ಯಗಳನ್ನು ನೆರವೇರಿಸುವವರು ಸ್ವಲಾಭಕ್ಕೆ ಈ ಸಂಘಗಳು ಸಾಧನವೆಂಬುದನ್ನು ಲಕ್ಷ್ಯವನ್ನಾಗಿಸದೆ, ನೆರೆಹೊರೆಯ ರಿಕ್ತರಾದ ಕರ್ಷಕ-ಶಿಲ್ಪಿಕ-ವ್ಯಾಪಾರಿಕ-ಕೂಲಿಕಾರ-ಮೊದಲಾದ ಪ್ರಜೆಗಳ ಉದ್ಧಾರಾರ್ಥವಾದುದೆಂಬುದನ್ನು ಸದಾ ಸ್ಮರಿಸುತ್ತ ಕಾರ್ಯಮಾಡುವುವಾದರೆ, ದೇಶವನ್ನೇ ಮೇಲ್ಮೆಗೆ ತರಲು ಸಾಧಕವಾದ ಸಾಂಪತ್ತಿಕಪಾಠಶಾಲೆಗಳಾಗಿ ಈ ಸಂಘಗಳು ಪರಿಣಮಿಸಬಹುದು. ಮುಖ್ಯವಾಗಿ ಈ ಸಂಘಗಳು ಜನರ ಸೋಂಬೇರಿತನವನ್ನು ಮತ್ತಷ್ಟು ಹೆಚ್ಚಿಸಲೂ ಸಾಧಕವಾಗಬಾರದು. ಉಚಿತವಾದ ಪಾತ್ರಗಳಿಗೆ ಧನಸಾಹಾಯ್ಯವನ್ನು ಒದಗಿಸದೆಯೂ ಹೋಗಬಾರದು. ಆ ರೀತಿಯಲ್ಲಿ ಕಾರ್ಯಮಾಡಲು ಶಕ್ತವಾಗಿ ಹಬ್ಬುತ್ತ ಬರುವುದಾದರೆ ಅಧಿಕವ್ಯಯದಿಂದ ತಾನೇತಾನಾಗಿ ವಿಜೃಂಭಿಸುತ್ತಿರುವ ಸಂಪದಭ್ಯುದಯ ಸಮಾಜಕ್ಕಿಂತಲೂ ಪ್ರಶಸ್ತವಾದ ಫಲವನ್ನು ದೇಶಕ್ಕೆ ಸೌಮ್ಯವಾಗಿ ಉಂಟುಮಾಡಿಕೊಡಲು ಸಾಧಕವಾಗಿ ಪರಿಣಮಿಸಬಹುದು. ಸಂಖ್ಯೆಯಲ್ಲಿ ಬಹುಬೇಗನೆ ಈ ಸಂಘಗಳು ಹೆಚ್ಚಿದಂತೆಯೇ ಗಮನೀಯವಾದ ಪ್ರಯೋಜನವನ್ನು ದೇಶಮಧ್ಯದಲ್ಲಿ ಉಂಟುಮಾಡಿದುವೆಂಬ ಖ್ಯಾತಿಯನ್ನೂ ಪಡೆದುಕೊಳ್ಳುವಂತಾಗಲೆಂದು ಹಾರಯಿಸುವೆವು.

ಮದ್ರಾಸಿಗೆ ಗುಂಡಿನೇಟು.

"ಎಮ್ಡೆನ್" ಎಂಬ ಜರ್ಮನರ ಯುದ್ಧದ ಹಡಗು ಬಂದು ಬಂಗಾಳಾಕೊಳ್ಳಿಯಲ್ಲಿ ಹಾವಳಿಮಾಡುತ್ತಿರುವುದೆಂಬ ಸಂಗತಿಯನ್ನು ಕಳೆದವಾರದಲ್ಲಿ ತಿಳಿಯಿಸಿದ್ದೆವಷ್ಟೆ. ಇದರ ಪೌರುಷವು ವ್ಯಾಪಾರದ ಹಡಗುಗಳನ್ನು ಮುಳುಗಿಸುವುದರಲ್ಲೇ ಪರ್ಯವಸನ್ನವಾಗದೆ ಮದ್ರಾಸ್ ಪಟ್ಟಣಕ್ಕೆ ಗುಂಡನ್ನು ಹೊಡೆದು ಸ್ವಲ್ಪ ಅನರ್ಥವನ್ನು ಮಾಡುವವರೆಗೂ ಮುಟ್ಟಿರುವುದೆಂದು ಈ ವಾರದ ತಂತ್ರೀವಾರ್ತೆಗಳಿಂದ ಗೊತ್ತಾಗಿದೆ.

ಕಳೆದ ತಾ|| ೨೨ ರ ರಾತ್ರಿ ಅದು ಮದ್ರಾಸುಪಟ್ಟಣದ ಸೇರದಲ್ಲಿ ಸಮುದ್ರದಲ್ಲಿ ವಿಹರಿಸುತ್ತಿದ್ದಿತು. ಅದು ಆ ಕಡೆಗೆ ಬಂದಿದೆಯೆಂಬ ಸಂಗತಿಯು ಇಂಡ್ಯಾಗೌರ್ನಮೆಂಟಿನಿಂದ ಮದ್ರಾಸು ಸೈನ್ಯಶಾಖೆಯವರಿಗೆ ತಂತ್ರೀವಾರ್ತೆಯಿಂದ ತಿಳಿಯಿಸಲ್ಪಡಲು, ಅವರು ಎಚ್ಚರುಗೊಂಡು ಸಮುದ್ರದ ಕಡೆಗೆ ಫಿರಂಗಿಗಳನ್ನು ಎತ್ತಿಕಟ್ಟಿ ಮುಂದಣ ಕೆಲಸಗಳನ್ನು ಮಾಡಬೇಕೆನ್ನುವಷ್ಟರಲ್ಲಿ ಅದಿನ ರಾ|| ೯|| ಗಂಟೆಗೆ ಸಮುದ್ರದ ಕಡೆಯಿಂದ ಕೋಟೆಯ ಕಡೆಗೂ "ಹಾರ್ಬರಿನ" ಕಡೆಗೂ ಫಿರಂಗಿಗಳ ಏಟು ಬೀಳಲಾರಂಭವಾಯಿತು. ಈ ಸದ್ದು ಊರಿನಲ್ಲೆಲ್ಲಾ ಭೀತಿಯನ್ನೂ ಗದ್ದಲವನ್ನೂ ಹುಟ್ಟಿಸಿತು. ಫಿರಂಗಿ ಗುಂಡುಗಳ ಶಬ್ದವು ಕೇಳಿದ ಸ್ವಲ್ಪಹೊತ್ತಿಗೇ ಒಂದು ಮಹಾಪ್ರಕಾಶವು ಉಂಟಾಯಿತು. ಗುಂಡುಗಳು ಹಡಗಿನ ಮೇಲಿನ ಫಿರಂಗಿಗಳಿಂದ ಹೊಡೆಯಲ್ಪಟ್ಟುವು. ಬಹುಶಃ ೧೦-೧೨ ಗುಂಡುಗಳು ಹೊಡೆಯಲ್ಪಡುವುದರೊಳಗೇ ಮದ್ರಾಸು ತೀರದಿಂದಲೂ ಕೋಟೆಯಿಂದಲೂ ಅತ್ತಕಡೆಗೆ ಫಿರಂಗಿಗಳು ಹಾರಿಸಲ್ಪಡಲು ಉಪಕ್ರಮವಾಯಿತು. ಆಗ ಶತ್ರುಗಳ ಹಡಗು ತನ್ನ ದೀಪವನ್ನು ಆರಿಸಿಬಿಟ್ಟು ಮಾಯವಾಗಿ ಹೊರಟುಹೋಯಿತು. ಕೋಟೆಯಿಂದ ಹೊಡೆದ ಗುಂಡುಗಳು ಅದಕ್ಕೆ ತಗುಲಿತೋ ಇಲ್ಲವೋ ಗೊತ್ತಾಗಲಿಲ್ಲ. ಈ ದೌರ್ಜನ್ಯವನ್ನು "ಎಮ್ಡೆನ್" ಎಂಬ ಹಡಗೇ ಮಾಡಿರಬೇಕೆಂದು ನಿಸ್ಸಂಶಯವಾಗಿ ಊಹಿಸಲ್ಪಟ್ಟಿದೆ.

ಇದು ಹೊಡೆದ ಗುಂಡಿನೇಟಿನಿಂದ ಸಮುದ್ರತೀರದಲ್ಲಿದ್ದ ಬರ್ಮಾ ಆಯಿಲ್ ಕಂಪೆನಿಯವರ ಸೀಮೆಯೆಣ್ಣೆ ಟ್ಯಾಂಕ್ (ತೊಟ್ಟಿ) ಗಳೆರಡು ಹೊತ್ತಿಕೊಂಡು ಸುಟ್ಟುಹೋದುವು. ಇದರಿಂದ ೫ ಲಕ್ಷ ರೂ. ಗಳ ವರೆಗೆ ಕಂಪೆನಿಯವರಿಗೆ ನಷ್ಟವಾಗಿರುವುದು. ಹಾರ್ಬರಿನಲ್ಲಿ ಕಾವಲಿದ್ದ ಇಬ್ಬರು ಪೊಲೀಸರು ಗುಂಡಿನೇಟಿನಿಂದ ಸತ್ತರು. ಸೀಮೆಯೆಣ್ಣೆ ತೊಟ್ಟಿಗಳ ಹತ್ತಿರ ಮಲಗಿದ್ದ ಮಹಮ್ಮದೀಯನೊಬ್ಬನು ಅಲ್ಲೇ ದೀರ್ಘನಿದ್ರೆಮಾಡಿದ್ದನು. ದಡದಲ್ಲಿದ್ದ ಒಂದು ಹಡಗಿನ ಕೆಲಸಗಾರರಲ್ಲಿ ಒಬ್ಬ ಯೂರೋಪ್ಯನು ಸತ್ತನು, ಮತ್ತೆ ನಾಲ್ಕುಮಂದಿಗೆ ಏಟು ತಗುಲಿದ್ದು ಅವರಲ್ಲಿ ಮೂವರು ಮರುದಿನ ಮಧ್ಯಾಹ್ನ ಸತ್ತರು. ಒಬ್ಬ ವಾಲಂಟಿಯರು ಸಮುದ್ರತೀರದಲ್ಲಿ ಹೋಗುತ್ತಿರುವಾಗ ಅವನ ಬಳಿಯಲ್ಲಿ ಒಂದು ಗುಂಡು ಹಾರಿಬಂದು ಒಡೆದಿತು. ಅವನ ಮೈಗೆ ಲೋಹದ ಚೂರುಗಳು ಬಡಿದು ಗಾಯವಾಗಿ ವೈದ್ಯಶಾಲೆಗೆ ಸಾಗಿಸಲ್ಪಟ್ಟನು. ಹಾರ್ಬರಿನಲ್ಲಿ ಇನ್ನು ನಾಲ್ವರಿಗೆ ಏಟುತಗುಲಿ ವೈದ್ಯಶಾಲೆಯಲ್ಲಿ ಅಂತ್ಯಾವಸ್ಥೆಯಲ್ಲಿರುವರು.

ಚೂಳೆ ಎಂಬ ಭಾಗದಲ್ಲಿ ಕೂಲಿಗಾರರಾದ ಮೂವರು ಹೆಂಗುಸರು ಮಾರ್ಗದಲ್ಲಿ ನಿಂತಿರಲು, ಹಾರಿದ ಗುಂಡಿನ ಚೂರುಗಳು ಅವರಿಗೆ ಬಡಿದು ಬಾಯಿಂದಲೂ ತಲೆಯಿಂದಲೂ ರಕ್ತವು ಹೊರಡಲು, ಕೂಡಲೇ ಅವರು ಊರಿಗೆ ಅವರಲ್ಲೊಬ್ಬಳು ಪ್ರಯಾಣಮಾಡುತ್ತ ದಾರಿಯಲ್ಲಿ ಸತ್ತರು.

ಎಲಿಫೆಂಟಾಗೇಟಿನ ಹತ್ತಿರ ಒಂದು ಸಂದಿನಲ್ಲಿ ಹೊಸದಾಗಿ ಕಟ್ಟುತ್ತಿದ್ದ ಮಾಡಿಮನೆಗೆ ಗುಂಡುಬಡಿದು ಅದು ಕುಸಿದು ಹೋಯಿತು. ಬೆಳಗಾದ ಮೇಲೆ ನೋಡುವಲ್ಲಿ ಆ ಬೀದಿಯಲ್ಲೆಲ್ಲಾ ಕಬ್ಬಿಣದ ತುಂಡುಗಳು ಕಾಣುತ್ತಿದ್ದುವು. ಹೈಕೋರ್ಟಿನ ಪ್ರಾಕಾರದ ಗೋಡೆಗೆ ಏಟುಬಡಿದು ಸ್ವಲ್ಪ ಬಿದ್ದುಹೋಗಿರುವುದು. ಕಟ್ಟಡದ ಶಿಖರದಲ್ಲಿ ಉತ್ತರಭಾಗವೂ, ಒಳಗಡೆ ಕೆಲಕಡೆ ಇಟ್ಟಿಗೆಗಳೂ ಜಾರಿ ಬಿದ್ದುಹೋಗಿರುವುವು. ಸೆಷನ್ ಕೋರ್ಟಿನ ಉತ್ತರಭಾಗದ ಗೋಡೆಗೆ ಏಟುಬಿದ್ದು ಶಿಥಿಲವಾಗಿರುವುದು. ಜನರಲ್ ಆಸ್ಪತ್ರೆಯಲ್ಲಿ ಒಂದು ಗುಂಡು ಬಿದ್ದಿದ್ದುದು ಬೆಳಗ್ಗೆ ಗೋಚರಿಸಿತು. ಅದು ೮|| ಪೌಂಡುಗಳ ಭಾರವಿದ್ದಿತು. ಕಾರಾಗೃಹದಲ್ಲೂ ಒಂದು ಗುಂಡು ಬಿದ್ದಿದ್ದಿತೆಂದು ವಾರ್ತೆಯಿದೆ. ಟವನ್ ಪೊಲೀಸು ಕೋರ್ಟಿಗೂ ಏಟುಬಿದ್ದಿದೆ. ಒಬ್ಬ ಪೊಲೀಸಿನವನ ಹೆಣವು ಸಮುದ್ರತೀರದಲ್ಲಿ ತೇಲುತ್ತಿದ್ದಿತು. ಹಳೆಯ ಲೈಟ್ ಹೌಸಿನ ಅಡಿಯ ಕಡಪಾಕಲ್ಲುಗಳೆಲ್ಲಾ ಒಡೆದುಹೋಗಿವೆ. ಟೆಲಿಗ್ರಾಫ್ ಆಫೀಸು-ನ್ಯಾಷನಲ್ ಬ್ಯಾಂಕು-ಫೆಂಥೋಮ್ ಚರ್ಚು-ಮೊದಲಾದ ಕೆಲ ಕಟ್ಟಡಗಳಿಗೂ ಏಟುಬಿದ್ದಿದೆ. ಸಮುದ್ರತೀರದ ಸಾಲಿನ ಮನೆಗಳಿಗೇ ಅಲ್ಲದೆ ಊರೊಳಗಿನ ಕೆಲ ಕಟ್ಟಡಗಳಿಗೂ ಏಟುಬಿದ್ದಿದೆ. ಆದ ಅನರ್ಥವು ಇಷ್ಟು ಆದಮಾತ್ರವಾಗಿದ್ದರೂ ಪಟ್ಟಣದಲ್ಲಿನ ಜನರೊಳಗೆ ಉಂಟಾದ ಗದ್ದಲವು ಅಪಾರವಾಗಿರುವುದು. ಸಾವಿರಾರುಗಟ್ಟಲೆಯಾಗಿ ಜನರು ಊರನ್ನು ಬಿಟ್ಟು ಹೊಗೆಬಂಡಿಗಳ ಮೇಲೂ, ಕಾಲುದಾರಿಗಳ ಮೇಲೂ ಮರುದಿನದಿಂದಲೂ ಪ್ರಯಾಣಮಾಡುತ್ತಿರುವರು. ಏಟುಬಿದ್ದ ಮರುದಿನ ಊರ ಜನರೆಲ್ಲಾ ಸಮುದ್ರತೀರದಲ್ಲೆಲ್ಲಾ ನಡೆದ ವಿದ್ಯಮಾನವನ್ನು ನೋಡುತ್ತ ಆಶ್ಚರ್ಯಪಡುತ್ತಿದ್ದರು. ಸರ್ಕಾರದವರು ಹಾರ್ಬರಿನ ಬಳಿಗೆ ಜನರೊಬ್ಬರನ್ನೂ ಬರಗೊಡಿಸದೆ ಅಶ್ವಸೇನೆಯನ್ನೂ ಪೊಲೀಸರನ್ನೂ ಕಾವಲಿಟ್ಟರು.

ಯುದ್ಧದ ಸುದ್ದಿಗಳನ್ನು ವಾರ್ತಾಪತ್ರಿಕೆಗಳಿಂದಲೇ ಕೇಳಿ ಆಶ್ಚರ್ಯಪಡುತ್ತಿದ್ದ ನಮ್ಮ ದೇಶದ ಜನರಿಗೆ ಹೀಗೆ ಪ್ರತ್ಯಕ್ಷವಾದ ಗುಂಡಿನೇಟು ಬಿದ್ದ ಸಂಗತಿಯು ಬಹಳ ಭಯವನ್ನುಂಟುಮಾಡುವುದು ಆಶ್ಚರ್ಯವಲ್ಲ. ಆದರೆ ಎಮ್ಡೆನ್ನಿನ ಈ ಹಾವಳಿಯು, ದೀಪದಮುಂದಣ ಪತಂಗದ ಹುಳುವಿನ ಹಾರಾಟದಂತೆ ಕ್ಷಣಿಕವಾಗಿರುತ್ತದೆ. ಇಷ್ಟರಲ್ಲೇ ಇದಕ್ಕೆ ಜಲಸಮಾಧಿಯು ನಮ್ಮ ಸಾರ್ವಭೌಮರ ನೌಕಾಸೇನೆಯಿಂದ ಮಾಡಲ್ಪಡದೆ ತಪ್ಪುವುದಿಲ್ಲ. ಈಗಾಗಲೇ ಎಮ್ಡೆನ್ ಹಡಗನ್ನು ಆಂಗ್ಲರ ಮತ್ತು ಜಪಾನರ ಯುದ್ಧದ ಹಡಗುಗಳು ಅಟ್ಟಿಕೊಂಡು ಹೋಗುತ್ತಿವೆ. ಎಮ್ಡೆನ್ ಹಡಗು ಗಂಟೆಗೆ ೨೫ ಮೈಲಿಗಳಂತೆ ನೀರಿನಲ್ಲಿ ಬಹು ವೇಗದಿಂದ ಸಾಗಿಹೋಗತಕ್ಕದಾಗಿದೆ. ಅದು ಧೈರ್ಯದಿಂದ ನಿಂತು ಯುದ್ಧಮಾಡುವಷ್ಟು ಸಾಮರ್ಥ್ಯವುಳ್ಳದಲ್ಲ. ಕಳ್ಳತನದಿಂದ ಹಗಲುಹೊತ್ತು ಎಲ್ಲೋ ದೂರದಲ್ಲಿ ಅಡಗಿದ್ದು ರಾತ್ರಿಯ ಕತ್ತಲಸಮಯದಲ್ಲಿ ಹೀಗೆ ಹಾವಳಿಮಾಡುತ್ತಿದೆ. ಅಂತೂ ಇದರ ಪಟಿಂಗತನವು ಪೂರ್ವಸಮುದ್ರತೀರದ ಪ್ರಜೆಗಳಲ್ಲಿ ನಾನಾತರದ ಭೀತಿಯನ್ನೇನೋ ಹುಟ್ಟಿಸಿದೆ. ಇದನ್ನು ಬೇಗನೆ ಧ್ವಂಸಪಡಿಸಿ ಪ್ರಜೆಗಳ ಮನಸ್ಸಿಗೆ ಶಾಂತಿಯನ್ನು ಸಮರ್ಥವಾದ ನಮ್ಮ ಸಾರ್ವಭೌಮಸರ್ಕಾರವು ಉಂಟುಮಾಡಬೇಕಾಗಿರುವುದು.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರ ಕೃಪೆಯಿಂದ ಪ್ರತಿವರ್ಷದಲ್ಲೂ ಜರುಗುವ ಕುಸ್ತಿಯ ಪಂದ್ಯಗಳು ಈಸಲ ಅಕ್ಟೋಬರ್ ತಾ|| ೧೨ ರಿಂದ ಆರಂಭವಾಗುವುವು. ಅದುಕಾರಣ ಕುಸ್ತಿಮಾಡಲಪೇಕ್ಷೆಯುಳ್ಳ ಸಂಸ್ಥಾನದ ಎಲ್ಲಗರುಡಿಯ ಜನಗಳೂ ತಮ್ಮಗಳ ಹೆಸರುಗಳನ್ನು ಗರುಡಿಯ ವಸ್ತಾದರ ಮೂಲಕ ಈ ಪಂದ್ಯಗಳ ಸೆಕ್ರೆಟರಿಯವರಾದ ಸರದಾರ್ ಗೋಪಾಲರಾಜೇ ಅರಸಿನವರಿಗೆ ಅಕ್ಟೋಬರ್ ತಾ|| ೧ ರೊಳಗೆ ಬರೆದು ಕಳುಹತಕ್ಕದ್ದು.

ಶ್ರೀಮದ್ಯುವರಾಜರು ಕಳೆದ ತಾ|| ೨೪ ರ ಮಧ್ಯಾಹ್ನ ಪರಸ್ಪರಸಹಾಯಸಂಘದ ಮಹಾಸಭೆಯ ಪ್ರತಿನಿಧಿಗಳನ್ನೂ ಪ್ರೇಕ್ಷಕರನ್ನೂ ಇತರ ಅಧಿಕಾರಿಗಳನ್ನೂ ಪ್ರಾಣಿಪ್ರದರ್ಶನಾಲಯಕ್ಕೆ ಬರಮಾಡಿಕೊಂಡು ಒಂದು ವನವಿಹಾರೋತ್ಸವವನ್ನು ನಡೆಯಿಸಿ ಸಂಗೀತ ಬ್ಯಾಂಡು ಮೊದಲಾದ ವಾದ್ಯಗಳ ಶ್ರವಣದಿಂದಲೂ, ಅಲ್ಪಾಹಾರಗಳಿಂದಲೂ ತೃಪ್ತಿಗೊಳಿಸಿದರು. ಈ ಸಂದರ್ಭದಲ್ಲಿ ಯುವರಾಜರು ಪ್ರತಿನಿಧಿಗಳಕೂಡ ಅವರವರ ಸ್ಥಳದ ವಿದ್ಯಮಾನಗಳ ವಿಚಾರವಾಗಿ ಪ್ರಸ್ತಾಪಿಸುತ್ತಿದ್ದರು.

ದಸರಾ ಕೈಗಾರಿಕೆಯ ಮತ್ತು ವ್ಯವಸಾಯ ವಸ್ತುಪ್ರದರ್ಶನವು ಕಳೆದ ಶುಕ್ರವಾರ ಸಾಯಂಕಾಲ ೪|| ಗಂಟೆಯಲ್ಲಿ ಶ್ರೀಮದ್ಯುವರಾಜರವರಿಂದ ಆರಂಭಿಸಲ್ಪಟ್ಟಿತು. ಆ ಸಮಯದಲ್ಲಿ ಪ್ರದರ್ಶನದ ಕಮಿಟಿಯ ಚೇರ್ಮನ್ ರಾದ ಸರದಾರ್ ಕಾಂತರಾಜ ಅರಸಿನವರು ಒಂದು ವಿಜ್ಞಾಪನಾಪತ್ರಿಕೆಯನ್ನು ಓದಿ ಒಪ್ಪಿಸಿದಮೇಲೆ ಶ್ರೀಯವರು ತಮ್ಮುತ್ತರವನ್ನು ದಯಪಾಲಿಸಿ ವಸ್ತುಗಳಿಟ್ಟಿದ್ದ ಕೊಠಡಿಗಳಿಗೆ ದಯಮಾಡಿ ಎಲ್ಲ ಪದಾರ್ಥಗಳನ್ನು ಪರಾಮರ್ಶಿಸಿಕೊಂಡು ದಯಮಾಡಿಸಿದರು. ಈ ವೇಳೆ ಸ್ಥಳದ ಕೈಗಾರಿಕೆಯ ಮತ್ತೂ ಬೇಸಾಯಪದಾರ್ಥಗಳು ವಿಶೇಷವಾಗಿ ಬಂದಿಲ್ಲವಾದರೂ, ಯಂತ್ರಸಾಮಗ್ರಿಗಳು ಮಾತ್ರ ಎಂದಿಗಿಂತಲೂ ಅಧಿಕವಾಗಿ ಪ್ರದರ್ಶಿಸಲ್ಪಟ್ಟಿರುವುವು.

ಪರಸ್ಪರ ಸಹಾಯಕಸಂಘ ಮಹಾಸಭೆಯ ಅಧ್ಯಕ್ಷರಭಾಷಣದ ಕೆಲಭಾಗಗಳು.

ವ್ಯವಸಾಯ ಉತ್ಪತ್ತಿ.

ಅನ್ಯೋನ್ಯ ಸಹಾಯಸಂಘಗಳ ಮುಖ್ಯವಾದ ಕೆಲಸವು ಯಾವುದೆಂಬುವುದನ್ನು ಯೋಚಿಸಿ ಅದನ್ನು ನಡೆಸಬೇಕಾಗಿರುತ್ತದೆ. ಉಳುವ ವಿಧಾನವನ್ನೂ ಮತ್ತು ಬಡರೈತನ ಸ್ಥಿತಿಯನ್ನೂ ಉತ್ತಮಸ್ಥಿತಿಗೆ ತರಬೇಕಾಗಿರುತ್ತದೆ. ವ್ಯರ್ಥವಾಗಿ ಕೂಡಿಟ್ಟಿದ್ದ ಹಣವು ಈಚಿಗೆ ಬಂದು ನಿರೀಕ್ಷಿತಕಾಲಕ್ಕೆ ಮೊದಲೇ ರೈತರ ಸಾಲವನ್ನು ತೀರಿಸುವುದೇನೋ ನಿಶ್ಚಯ. ಆದರೆ ವ್ಯವಸಾಯವಿಧಾನವು ಪೂರ್ವಸ್ಥಿತಿಯಲ್ಲಿಯೇ ಇರುತ್ತದೆ. ಅನ್ಯೋನ್ಯ ಸಹಾಯ ಸಂಘಗಳ ವಿಧಾನಗಳು ಒಳ್ಳೇ ನೇಗಿಲುಗಳನ್ನು ಕೊಂಡು ಕೊಟ್ಟು, ಆರೋಗ್ಯವಾದ ರಾಸುಗಳ ಜೀವವನ್ನು ವಿಮೆಮಾಡಿ, ಉತ್ಕೃಷ್ಟವಾದ ಬಿತ್ತವನ್ನು ಒದಗಿಸಬೇಕಾಗಿರುತ್ತದೆ. ಈ ಮಾರ್ಗದಲ್ಲಿ ಕೆಲಸಮಾಡುವುದನ್ನು ಕುತೂಹಲದಿಂದ ಎದುರುನೋಡಬೇಕಾಗಿರುತ್ತದೆ. ನಮ್ಮ ಬಂಡವಾಳವು ಎಂದು ವ್ಯವಸಾಯಾಭಿವೃದ್ಧಿಗೆ ಉಪಯೋಗಿಸಲ್ಪಡುವುದೋ, ಆ ದಿವಸವನ್ನು ಎಲ್ಲರೂ ಸಂತೋಷದಿಂದ ಹಾರೈಸುವರು. ಪ್ರತಿಯೊಂದು ಹಳ್ಳಿಗೂ ಸರ್ಕಾರದ ವ್ಯವಸಾಯಪರೀಕ್ಷಾಕ್ಷೇತ್ರದಿಂದ ಯಾವ ಕಾಲಕ್ಕೆ ಶ್ರೇಷ್ಠವಾದ ಬಿತ್ತವು ಬರುವುದೋ, ಯಾವಕಾಲಕ್ಕೆ ಹೆಚ್ಚಾಗಿ ಬೆಲೆಬೀಳದೆ ಗೊಬ್ಬರವು ದೊರೆಯುವಂತೆ ಆಗುವುದೋ ಮತ್ತು ಉತ್ಸಾಹಶಾಲಿಗಳಾದ ಭಾರಿ ಜಮೀನುದಾರರು ತಮ್ಮ ಸುತ್ತುಮುತ್ತಲೂ ಇರತಕ್ಕ ಬಡರೈತರಿಗೆ ಎಂದು ಹೊಸದಾಗಿ ಕಂಡುಹಿಡಿದ ವ್ಯವಸಾಯ ಸಾಧನಗಳ ಪ್ರಯೋಜನವನ್ನು ತೋರಿಸುವರೋ, ಅಂದು ಭೂಗುಣದಲ್ಲಿ ಹಿಂದೂಸ್ಥಾನದ ಯಾವದೇಶಕ್ಕೂ ಕಮ್ಮಿಯಲ್ಲದ ನಮ್ಮ ಮೈಸೂರು ದೇಶದ ಕೀರ್ತಿ ಸಂಪತ್ತುಗಳನ್ನು ಪುನರುಜ್ಜೀವಿಸಿದಂತೆ ಆಗುತ್ತದೆ. ನೀರಾವರಿಯ ಅನುಕೂಲತೆಗಳು ಇಲ್ಲದೆ ಇಲ್ಲ. ಆದರೆ ಅನ್ಯೋನ್ಯಸಹಾಯವಿಲ್ಲದೇ ಇರೋಣದರಿಂದ ಅವುಗಳ ಪ್ರಯೋಜನಗಳನ್ನು ಹೊಂದದಿರಲು ಕಾರಣವಾಗಿರುತ್ತದೆ.

ಮೈಸೂರಿಗಿಂತಲೂ ಕಡಿಮೆ ಸೌಕರ್ಯಗಳನ್ನುಳ್ಳ ಇತರ ದೇಶಗಳಲ್ಲಿ, ಪರಸ್ಪರ ಸಹಾಯವು ವ್ಯವಸಾಯಾಭಿವೃದ್ಧಿಗೆ ಎಷ್ಟೋ ಸಹಕಾರಿಯಾಗಿರುವಲ್ಲಿ, ನಾವು ಇದುವರೆಗೂ ಈ ವಿಚಾರದಲ್ಲಿ ಗಣನೆಗೆ ಬರುವ ಯಾವ ಕೆಲಸವನ್ನೂ ಮಾಡದಿರುವುದು ಬಹಳ ಶೋಚನೀಯವಾಗಿದೆ. ಡೆನ್ಮಾರ್ಕ್ ಮತ್ತು ಐರ್ಲೆಂಡ್ ಇವೆರಡೂ ಈಗ ಕೆಲವುವರ್ಷಗಳಿಂದೀಚೆಗೆ ಪರಸ್ಪರಸಹಾಯದ ಬಲದಿಂದ ಸಂಪೂರ್ಣವಾಗಿ ಬದಲಾಯಿಸಿಹೋಗಿವೆ. ನಾವಾದರೋ, ಒಂಭತ್ತುವರ್ಷಗಳಿಂದ ಇದೇಕೆಲಸ ಮಾಡುತ್ತಿದ್ದಾಗ್ಯೂ, ಈ ವ್ಯವಸಾಯಭಾಗಕ್ಕೆ ಗಮನಕೊಟ್ಟು ಅದನ್ನು ತಕ್ಕಷ್ಟು ಬದಲಾಯಿಸಿಕೊಂಡು ಇರುವುದಿಲ್ಲ. ವ್ಯವಸಾಯದ ಇಲಾಖೆಯವರು ಕಾರ್ಯೋದ್ಯುಕ್ತರಾಗಿರುವರು. ಇವರು ಅನುಮೋದಿಸುವ ಯಂತ್ರಸಾಧನಗಳನ್ನೂ, ಇವರು ಸೂಚಿಸಿರುವ ಗೊಬ್ಬರಗಳನ್ನೂ ಜನರು ಮೋಹಿಸುವಂತೆ ಸಂಘಗಳು ಮಾಡುವವಾದರೆ ಅವರ ಶ್ರಮವು ಫಲಕಾರಿಯಾಗುವುದು. ಸಂಬಂಧಪಟ್ಟ ಇಲಾಖೆಯವರೆಲ್ಲರೂ ಜನರೊಂದಿಗೆ ಸೇರಿ ಇವರಲ್ಲಿ ಕೇವಲ ಆಧುನಿಕ ಮಾರ್ಗೈಕ ಪಕ್ಷಪಾತಿಗಳಾಗಿರುವವರಿಗೆ ನವೀನ ಮಾರ್ಗ ಮತ್ತು ಸಾಧನಗಳ ಉಪಯೋಗದಿಂದಾಗುವ ಪ್ರಯೋಜನಗಳನ್ನು ಪಡೆಯುವಂತೆ ಮಾಡಲು ಈಗಲೇ ಸಕಾಲವಾಗಿರುವುದು. ಡೆನ್ಮಾರ್ಕಿನಲ್ಲಿ ಪರಸ್ಪರ ಸಹಾಯದ ಉತ್ಕೀರ್ಣತೆಯು, ಬಡತನ ಮತ್ತು ಭಗ್ನಮನೋರಥತ್ವದ ಸದ್ಯಃಫಲವೆಂದು ಹೇಳಿರುವುದು. ನಾವೇನೂ ಈಗೆ ಬಹಳ ಪುಷ್ಟರಾಗಿಲ್ಲ. ಈ ಅಲ್ಪವೃಷ್ಟಿಯೂ, ನಿರುದ್ಯೋಗಿಗಳಾದ ರೈತರೂ ಇನ್ನೂ ಹೀಗೆಯೇ ಇದ್ದರೆ, ನಾವು ಮತ್ತಷ್ಟು ಹೀನಸ್ಥಿತಿಗೆ ಬರುವೆವು. ನಮ್ಮ ರೈತನನ್ನು ಉಪಾಯದಿಂದ ಎಚ್ಚರಗೊಳಿಸಬೇಕು. ಇವನನ್ನು ಎಚ್ಚರಿಸಬೇಕಾದರೆ, ಇವನಿರುವಲ್ಲಿಯೇ ದೃಷ್ಟಾಂತ ಕೊಡುವುದರಿಂದಲ್ಲದೆ ಬೇರೆ ಯಾವುದರಿಂದಲೂ ಆಗಲಾರದು. ಇದನ್ನು ಹಳ್ಳಿಹಳ್ಳಿಯಲ್ಲಿಯೂ ವಿಶೇಷ ದ್ರವ್ಯ ಮತ್ತು ಕಾಲವ್ಯಯದಿಂದ ಮಾಡಬೇಕೆಂದರೆ ಸರ್ಕಾರದವರಿಗೆ ಸಾಧ್ಯವಾಗದೇ ಹೋಗಬಹುದು. ಇಂಥಾ ಸಂದರ್ಭದಲ್ಲಿತಾನೇ ದೊಡ್ಡ ಭೂಸ್ಥಿತಿಯೂ, ನಾಗರಿಕತೆಯೂ ಉಳ್ಳ ಜಮೀನ್ದಾರರು ಪ್ರವರ್ತಿಸಿ, ರೈತರನ್ನು ವಿವೇಕಿಗಳನ್ನಾಗಿ ಮಾಡಬೇಕೆಂದು ಸರ್ಕಾರದವರು ಕೈಕೊಂಡಿರುವ ಪ್ರಯತ್ನದಲ್ಲಿ ಅವರೊಡನೆ ಸಹಾಯಕರಾಗಿ ವ್ಯವಸಾಯಾಭಿವೃದ್ಧಿಯಲ್ಲಿ ಉತ್ಸಾಹವನ್ನು ಹುಟ್ಟಿಸಲು ತಕ್ಕ ಸಮಯವಾಗಿರುತ್ತದೆ.

ಉದ್ಯೋಗಾಸಕ್ತಿ.

ಪಾಶ್ಚಾತ್ಯದೇಶಗಳಲ್ಲಿ ಉದ್ಯೋಗಾಸಕ್ತಿಯು ಜನಾಂಗದ ಕೋಶಾಭಿವೃದ್ಧಿಗೆ ಎಷ್ಟುಮಟ್ಟಿಗೆ ಅವಶ್ಯಕವಾಗಿರುವದೆಂಬುದನ್ನೂ ಅಂಥಾ ಸಾಹಸಕಾರ್ಯಗಳಿಗೆ ಮೂಲಧನವು ತಡೆಯಿಲ್ಲದೆ ಬರುತ್ತಿರುವುದನ್ನು ನೋಡಿ ತಿಳಿಯಬಹುದು. ಆದುದರಿಂದಲೇ ಜಾಯಿಂಟ್‌ಸ್ಟಾಕ್‌ಪ್ರವರ್ತನೆಗಳ ವಿಚಾರವೊಂದರಲ್ಲಿ ವಿನಾ ಮಿಕ್ಕವುಗಳಲ್ಲಿ ಪರಸ್ಪರ ಸಹಾಯಕಭಾಗದ ಆಡಳಿತವ್ಯಾಪ್ತಿಯು ಬಹಳ ಕಮ್ಮಿಯಾಗಿರುತ್ತದೆ. ಇಂಥಾ ಸಂದರ್ಭಗಳಲ್ಲಿ ಭೃತ್ಯನಿಗೂ ಸ್ವಾಮಿಗೂ ಇರುವ ವೈಷಮ್ಯದಿಂದ ಭೃತ್ಯನನ್ನು ಚಿಕ್ಕುಗಡೆಮಾಡುವ ಸಂಗತಿಯಲ್ಲಿ ಮಾತ್ರ ಪರಸ್ಪರಸಹಾಯವೆಂಬುದು ನಿವೃತ್ತಿಗೆ ಬರುವುದು. ಅನೇಕ "ಕಾರ್ಖಾನೆ ಸಂಘಗಳಲ್ಲಿ," ಪ್ರಾಪಂಚಿಕೈಶ್ವರ್ಯಗಳಲ್ಲಿ ಸರ್ವರಿಗೂ ಸಮಭಾಗತ್ವವಿರುವುದೆಂಬ ಭಾವನೆಯು ಸ್ವಲ್ಪವಿರುವುದು. ಕೆಲಸಗಾರನು, ತಾನು ಮಾಡುವ ಕಾರ್ಯದಿಂದ ತನಗೂ ಲಾಭವಾಗಬೇಕು ಮತ್ತು ತನ್ನ ಯಜಮಾನನಿಗೂ ಲಾಭವಾಗಬೇಕು ಎಂದು ತಿಳಿಯಬೇಕಾದದ್ದು, ಅಂದರೆ-ನಿಯಮಿತರೂ ತಾನೇ ನಿಯಮಕರೂ ತಾನೇ ಎಂಬ ಅಭಿಪ್ರಾಯವುಳ್ಳವನಾಗುವುದು—ಪಾಶ್ಚಾತ್ಯರಲ್ಲಿಯೂ ಕೂಡ ಅಪರೂಪವಾಗಿರುವಲ್ಲಿ, ನಮ್ಮ ದೇಶೀಯರಿಗೆ ಇದು ಅವಗಾಹನೆಗೆ ಬರುವುದಾಗಿ ತೋರುವುದಿಲ್ಲ.

ದೊಡ್ಡದೊಡ್ಡ ಕೈಕಾರಿಕೆಗಳ ವಿಚಾರದಲ್ಲಿ ನಾವಿನ್ನೂ ಬಾಲ್ಯಾವಸ್ಥೆಯಲ್ಲಿಯೇ ಇದ್ದೇವೆ. ಸರ್ಕಾರದವರೂ ಪ್ರಜೆಗಳು ಸಹ ಇವುಗಳು ಸ್ಥಾಪನೆಯಾಗುವುದನ್ನೇ ಕುತೂಹಲದಿಂದ ಕಾದಿರುವರು. ಮೂಲಧನಕ್ಕೆ ಸಾಹಸಕಾರ್ಯಗಳಲ್ಲೆಲ್ಲಾ ಅಪಾಯಗಳಿದ್ದೇ ಇರುವುವೆಂಬುದು ನಿಮ್ಮೆಲ್ಲರಿಗೂ ತಿಳಿದೇ ಇರುವುದು. ಮಹನೀಯರೇ, ಮಿತವಿಲ್ಲದ ಜವಾಬ್ದಾರಿ ಸಂಘಗಳನ್ನು ಏರ್ಪಡಿಸಿಕೊಳ್ಳುವಾಗ್ಯೆ ಪ್ರಾರಂಭದಲ್ಲಿ ಎಷ್ಟು ಅಪಾಯಗಳಿಗೆ ನೀವುಗಳು ಎದುರಾಗಬೇಕಾಗುತ್ತೆಂಬುದನ್ನು ನೀವೇಯೋಚಿಸಿರಿ.

ಎಲ್ಲೆಲ್ಲಿ ಯಾವಯಾವ ತರಹೆಯ ಮತ್ತು ಯಾವ ಯಾವ ಸ್ಥಿತಿಯ ಕೈಗಾರಿಕೆಗಳು ಸಾಧ್ಯವೋ ಅವುಗಳನ್ನೆಲ್ಲಾ ಇಲ್ಲಿಯೂ ಆರಂಭಿಸಬೇಕೆಂಬುದು ನಮ್ಮ ಅಭಿಪ್ರಾಯವಲ್ಲ. ಆದರೆ ನಮ್ಮಲ್ಲಿರುವುದನ್ನೇ ನಾವು ವೃದ್ಧಿಗೊಳಿಸುವುದರಲ್ಲಿ, ಅನ್ಯಮತಾವಲಂಬಿಯು ಆ ಮತಧರ್ಮಾಚರಣೆಯಲ್ಲಿ ಪ್ರಥಮತಃ ಎಷ್ಟು ಕುತೂಹಲವುಳ್ಳವನೆಂದು ಲೋಕವಾರ್ತೆ ಇರುವುದೋ ಅಷ್ಟು ಉತ್ಸಾಹದೊಡನೆ ನೀವು ಪ್ರವರ್ತಿಸಿ ಸಹಾಯಮಾಡುವುದನ್ನು ನಾವು ಕೋರುವೆವು. ದುರ್ಭಿಕ್ಷಕಾಲದಲ್ಲಿ. ಯಾವ ವೃತ್ತಿಗಳು ಶಿಲ್ಪಿಗೆ ಮುಖ್ಯಾವಲಂಬನವೆಂದು ಅನಾದಿಯಿಂದ ಪ್ರಸಿದ್ಧವಾಗಿದೆಯೋ, ಅಂಥಾ ಸಣ್ಣಸಣ್ಣ ಉದ್ಯೋಗಗಳಿಗೆ ನಿಮ್ಮ ನಿಮ್ಮ ನೆರೆಯಲ್ಲಿ ನೀವು ಉತ್ತೇಜನವನ್ನು ಕೊಡಬಹುದು. ಇಂಥಾ ಉದ್ಯೋಗಗಳಿಗೆ ಎಷ್ಟು ದ್ರವ್ಯಸಹಾಯ ಮತ್ತು ಪಾರಿಭಾಷಿಕ ಪಾಂಡಿತ್ಯಸಹಾಯ ಬೇಕಾಗಿರುವುದು ಎಂಬುದನ್ನು ಪರಿಶೋಧಿಸಿ ನೀವು ಕೈಗಾರಿಕೆಯಿಲಾಖೆಯವರಿಗೆ ಸಲಹೆಕೊಡಬಹುದು. ನಮ್ಮ ದೇಶದಲ್ಲಿ ಕೈಗಾರಿಕೆ ಸ್ಥಿತಿಯನ್ನು ಸರ್ಕಾರಿಯಾಗಿ ಅಜಮಾಯಿಷಿ ಮಾಡುವುದೇನೋ ಒಳ್ಳೇದು. ಅದು ಒಂದು ವಿಧದಲ್ಲಿ ಉಪಯುಕ್ತವೇ. ಆದರೆ ಪ್ರಜೆಗಳಿಗೆ ಅವರ ಐಶ್ವರ್ಯಾಭಿವೃದ್ಧಿಗೆ ಯಾವ ಮಾರ್ಗವೆಂಬುದನ್ನು ಅವರಲ್ಲೇ ಯಾರಾದರೂ ತಿಳಿಸಿದರೆ, ಅವರು ಅದನ್ನು ಆತ್ಯಾದರದಿಂದ ಸ್ವೀಕರಿಸುವರು. ಪರಸ್ಪರ ಸಹಾಯದ ಇಲಾಖೆಯು ಇದಕ್ಕಿಂತಲೂ ಅಧಿಕ ಪಾರಿಭಾಷಿಕವಾದ ವ್ಯವಸಾಯ ಮತ್ತು ಕೈಗಾರಿಕೆ ಇಲಾಖೆಗಳೊಡನೆ ಹೆಚ್ಚು ಹೆಚ್ಚಾಗಿ ಸಂಬಂಧಬೆಳಸುತ್ತಿರುವುದು ಬಹಳ ತೃಪ್ತಿಕರವಾಗಿರುವುದು. ಯಾವ ಇಲಾಖೆಯೇ ಆಗಲಿ ಅದು ಪ್ರತ್ಯೇಕವಾಗಿದ್ದರೆ ಹೆಚ್ಚು ಕೆಲಸವನ್ನೇನೂ ಮಾಡಲಾರದು.

ನೇಗೆಯು ಬಹುದಿನಗಳಿಂದಲೂ ನಮ್ಮಲ್ಲಿರುವ ವೃತ್ತಿಯಾದ್ದರಿಂದ, ಉತ್ತಮತರದ ಕೈಮಗ್ಗದ ನೇಗೆಯನ್ನು ವೃದ್ಧಿಗೊಳಿಸಲು ಸಂಘಗಳನ್ನು ಏರ್ಪಡಿಸುವುದರಲ್ಲಿ ನೀವೆಲ್ಲರೂ ಆಸಕ್ತರಾಗಬಹುದು. ಈ ಉದ್ದೇಶದಿಂದ ನಮ್ಮ ದೇಶದಲ್ಲಿ ಮುಂಚಿತವಾಗಿಯೇ ಸ್ಥಾಪಿತವಾಗಿರುವ ಸಂಘಗಳಲ್ಲಿ ನಡೆದಿರುವ ಕೆಲಸಗಳ ರಿಪೋರ್ಟು, ಬಹು ಪ್ರೋತ್ಸಾಹಕರವಾಗಿರುವುದು. ಹೀಗೆಯೇ ಈ ಪ್ರವರ್ತನೆಯಲ್ಲಿ ಸರಿಯಾಗಿ ಹೊಕ್ಕರೆ, ಉತ್ಪತ್ತಿಯು ಹೆಚ್ಚುವುದರಲ್ಲಿಯೂ, ಕಾಲವು ಕೂಡಿಬರುವುದರಲ್ಲಿಯೂ, ನೇಗೆಯವನ ಸ್ಥಿತಿಯು ಉತ್ತಮವಾಗುವುದರಲ್ಲಿಯೂ ಸಂದೇಹವಿಲ್ಲ. ಮಿತವ್ಯಯವು ಪ್ರಯೋಜನಕಾರಿ ಮತ್ತು ಅವಶ್ಯಕವೆಂಬ ತಿಳುವಳಿಕೆಯು ಪರಸ್ಪರ ಸಹಾಯವನ್ನು ಹಿಂಬಾಲಿಸಿಯೇ ಇರುವುದು. ಆದರೂ ಪರಸ್ಪರಸಹಾಯತತ್ವದಿಂದ ಬೋಧಿತವಾಗುವ ಸ್ತೋತ್ರಾರ್ಹವಾದ ಮುಖ್ಯತತ್ವಗಳು ಚೆನ್ನಾಗಿ ನಾಟುವಂತೆ ಮಾಡುವುದು ಇಂಥ ಸಂಘಸ್ಥಾಪಕರ ಕರ್ತವ್ಯವಾಗಿರುವುದು.

ನೇಗೆಯವನ ಸ್ಥಿತಿಯು ಎಷ್ಟು ಶೋಚನೀಯವೋ, ಪಾದರಕ್ಷೆಗಳನ್ನು ಮಾಡುವ ಮಾದಿಗನ ಸ್ಥಿತಿಯೂ ಕೂಡಾ ಅಷ್ಟೇ ಶೋಚನೀಯವಾಗಿರುವುದು. ಪಾದರಕ್ಷೆಗೆ ದಿನೇದಿನೇ ವೃದ್ಧಿಯಾಗುತ್ತಿರುವ ಗಿರಾಕಿಗಳಿಗೆ ಒದಗಿಸುವುದಕ್ಕೋಸ್ಕರ ಆ ಕಸಬನ್ನು ಅವರಿಗೆ ಕಲಿಸುವಂಥಾ ಸಂಘಗಳು, ಜನರ ಪ್ರಯೋಜನಕ್ಕಾಗಿ ಮಾತ್ರವೇ ಅಲ್ಲದೆ, ಯಾರು ಮಧ್ಯಪಾನಚಾಪಲ್ಯದಿಂದ ಕೆಲವು ಸಮಯಗಳಲ್ಲಿ ತಾನು ಮಾಡಿದ ಸರಕನ್ನೇ ಹೀನಬೆಲೆಗೆ ಮಾರಬೇಕಾಗಿ ಬರುತ್ತದೆಯೋ, ಅಂಥಾ ಮೋಚಿಯವನ ಪ್ರಯೋಜನಕ್ಕೂ ಅವಶ್ಯಕವಾಗಿರುವುವು. ಪರಸ್ಪರಸಹಾಯಸಂಘಗಳ ಹಿತಕರವಾದ ವ್ಯಾಪನೆಗೊಳಗಾದ ಜನಸಮುದಾಯದಲ್ಲಿ, ಆಗಲೇ ಉಂಟಾಗಿರುವ ಸೌಶೀಲ್ಯವನ್ನು ಕುರಿತು ಶ್ರೀಮದಿಂಡಿಯಾಸರ್ಕಾರದವರು ಈಚೆಗೆ ಪ್ರಸಿದ್ಧಪಡಿಸಿರುವ ತೀರ್ಮಾನದಲ್ಲಿ ವಿಶದವಾಗಿ ಪ್ರಸ್ತಾಪಿಸಿರುವರು. ಆದರೆ ಇತರ ಪ್ರದೇಶಗಳಲ್ಲಿ ಈತತ್ವದ ಕ್ಷಿಪ್ರಫಲಗಳಾಗಿ ತೋರಿಬರುವ ಆತ್ಮನಿಗ್ರಹ, ತೃಪ್ತಿ ಮತ್ತು ಮಿತವ್ಯಯಬುದ್ಧಿ ಇವುಗಳು ಸಂಪೂರ್ಣವಾಗಿ ಗೋಚರಕ್ಕೆ ಬರಲು ಇನ್ನೂ ಸ್ವಲ್ಪಕಾಲ ನಿರೀಕ್ಷಿಸಬೇಕಾಗಿರುವುದು.

ಪದಾರ್ಥಗಳನ್ನು ಉತ್ಪತ್ತಿಮಾಡುವುದಕ್ಕೆ ಸೇರತಕ್ಕದ್ದು, ಆದರಲ್ಲೂ ಸಣ್ಣಸಣ್ಣ ಪದಾರ್ಥಗಳ ಉತ್ಪತ್ತಿಗಾಗಿ ಒಟ್ಟುಕೂಡುವುದು ಒಬ್ಬನೇ ನಿಂತು ಮಾಡುವ ಕೆಲಸಕ್ಕಿಂತ ಪ್ರಯೋಜನಕಾರಿಯಾಗಿರುವುದರಿಂದ, ಇಂಥವುಗಳಲ್ಲಿಯೇ ನಾವು ನಮ್ಮ ಕೆಲಸವನ್ನು ಪ್ರಾರಂಭಿಸಬೇಕು. ಯಾವ ಪದಾರ್ಥಗಳಿಗೆ ಹೆಚ್ಚು ಪರಾತವಿಲ್ಲದಿರುವುದೋ ಅಂಥಾವುಗಳನ್ನು ನಾವು ಹೆಚ್ಚಾಗಿ ತಯಾರು ಮಾಡದೆ ಹೇಗೆ ತಡೆಯಬಹುದೋ, ಹಾಗೆಯೇ ಹೊಸವಿಧಾನಗಳನ್ನು ಅವಲಂಬಿಸುವುದರಿಂದ ಪದಾರ್ಥಗಳನ್ನು ಹೆಚ್ಚಾಗಿ ತಯಾರಿಸಬಹುದು. ಇಂಡಿಯಾದೇಶದಲ್ಲಿ ಕೃಷಿಕನು ಎಷ್ಟುರಿಕ್ತನೋ, ಶಿಲ್ಪಿಯೂ ಅಷ್ಟೇರಿಕ್ತನಾಗಿರುವನು. ಇವನನ್ನು ಉತ್ತಮಸ್ಥಿತಿಗೆ ತರಲು ಸಂಘವೇ ಸಮರ್ಥವು. ಪ್ರಾರಂಭದಲ್ಲಿ ಆಡಳಿತವು ಕೆಲವರ ಅಧೀನವೇ. ಆದರೆ ಕಾರ್ಯನಿರ್ವಾಹಕ ಮೂಲತತ್ವಗಳನ್ನು ಕಾರ್ಖಾನೆಗಾರರಿಗೆ ಕಲಿಸದೆ ಅವರನ್ನು ಸುಮ್ಮನೆ ಬಿಟ್ಟುಬಿಟ್ಟರೆ ನಮ್ಮ ಉದ್ದೇಶ್ಯವು ನೆರವೇರಲಾರದು.

ಕಟ್ಟಡದ ಸಂಘಗಳು.

ಕಟ್ಟಡದ ಪರಸ್ಪರ ಸಹಾಯಸಂಘಗಳು ನಮ್ಮ ದೇಶದಲ್ಲಿ ಒಂದು ವಿಶೇಷ ಸಂಗತಿಯಾಗಿರುವುದು. ಆದರೆ ಇದಕ್ಕೂ ಬಡವರಿಗೆ ಮನೆಗಳನ್ನು ಕಲ್ಪಿಸಬೇಕೆಂಬ ದೊಡ್ಡ ವಿಷಯಕ್ಕೂ ಬಹಳ ಸಂಬಂಧವಿರುವುದರಿಂದ ಇದನ್ನು ಇಲ್ಲಿ ಸ್ವಲ್ಪಮಟ್ಟಿಗೆ ತಿಳಿಸಬೇಕಾದುದು ಅವಶ್ಯಕವು. ಇದು ಮನೇಕಟ್ಟಿಸುವವರಿಗೆ ಬಂಡವಾಳ ಒದಗಿಸಿಕೊಡಲು ಜವಾಬ್ದಾರರಾಗುವುದಕ್ಕಾಗಿ ಏರ್ಪಟ್ಟ ಸಂಘಮಾತ್ರವೆ ಎನ್ನುವುದಾದರೆ, ಲೇವಾದೇವಿಯು ಅಂತಸ್ತನ್ನು ಬಿಟ್ಟು ಬಹಳ ಮುಂದೆ ಹೋದಂತಾಗುವುದಿಲ್ಲ. ಆದರೆ ಅವುಗಳ ಅಂಕಿತದಿಂದ ಸೂಚಿತವಾಗುವ ಮೇರಿಗೆ, ಮನೆಕಟ್ಟುವ ಕೆಲಸಗಾರರೆಲ್ಲರೂ ಒಂದು ಸಂಘ ಅಥವಾ ಸಂಘಸಮುದಾಯವನ್ನು ಮಾಡಿಕೊಂಡು ತಮ್ಮ ವಾಸಕ್ಕಾಗಿ ಬಹಳ ಜನಸಾಂದ್ರತೆಯುಳ್ಳ ಪ್ರದೇಶಗಳಲ್ಲಿ ಆರೋಗ್ಯಸೂತ್ರಾನುಸಾರವಾಗಿ ಅನೇಕ ಮನೆಗಳನ್ನು ವಾಸಯೋಗ್ಯಗಳಾಗಿ ಕಟ್ಟಿಕೊಂಡಿವಾರೆಂದು ಅರ್ಥವಾಗುವುದಾದರೆ ಇದು ಸ್ತೋತ್ರಾರ್ಹವೇ ಸರಿ. ಅಂಟುಜಾಡ್ಯಗಳ ಭಯವಿಲ್ಲದೆ ಬಡಜನರು ವಾಸಮಾಡಲು ಯೋಗ್ಯವಾದ ಮನೆಗಳು ಮುಂದೆ ಅನೇಕವಾಗಿ ವೃದ್ಧಿಯಾಗುವವೆಂಬುದಕ್ಕೆ ಇದು ಶುಭಸೂಚನೆಯೇ ಹೌದು. ಆದುದರಿಂದ ಇದಕ್ಕೆ ನಾವು ತಕ್ಕಷ್ಟು ಗಮನಕೊಡಲಾಗುವುದು. ಇದರ ಅರ್ಥವೇನೆಂದರೆ ಉತ್ಪನ್ನಮಾಡಿದವನೇ ಅಂದರೆ ಮನೆಯನ್ನು ಕಟ್ಟಿದವನೇ ಆ ಪ್ರಾಂತ್ಯದಲ್ಲಿ ವಾಡಿಕೆಯಾಗಿರುವ ಬಾಡಿಗೆ ಕೊಟ್ಟುಕೊಂಡು ಅಲ್ಲಿ ವಾಸಮಾಡುತ್ತಾ ಇರುವಕಾರಣ ಸಂಘಕ್ಕೆಬರುವ ಒಟ್ಟುಲಾಭವು ಡಿವಿಡೆಂಡ್ ಯಾನೆ [illegible] ರೂಪದಲ್ಲಿ, ಆ ಮನೆಯನ್ನು ಅನುಭವಿಸುವವನಾದ ತನಗೇ ವಾಪಸುಬರುತ್ತದೆ. ಈ ಮಾರ್ಗದಲ್ಲಿ ಪ್ರವರ್ತಿಸದೇ ದೊಡ್ಡ ದೊಡ್ಡ ಮ್ಯುನಿಸಿಪಾಲಿಟಿಗಳಲ್ಲಿ ಮನೆ ಕಟ್ಟುವ ಉದ್ಯೋಗದಿಂದ ದಿನಗೂಲಿ ಕೆಲಸದಿಂದ ಜೀವನ ಮಾಡುವವರಿಗೆ ಸುಲಭ ಬಡ್ಡಿಯಿಂದ ಬಂಡವಾಳ ಒದಗಿಸಿಕೊಡುತ್ತಾ ಇದ್ದಲ್ಲಿ ಇಂಥಾ ಪದ್ಧತಿಯನ್ನು ಎಷ್ಟುಬೇಗ ನಿಲ್ಲಿಸಿದರೆ ಅಷ್ಟು ಮೇಲು. ಪರಸ್ಪರಸಹಾಯದ ಮುಖ್ಯತತ್ವಕ್ಕೂ ಇದಕ್ಕೂ ಪರಸ್ಪರ ವಿರುದ್ಧವಾದಕಾರಣ ಕಟ್ಟಡಕಟ್ಟುವ ಸಂಘಗಳಲ್ಲಿ ಅವುಗಳ ಮೆಂಬರುಗಳಿಗೆ ಅವಶ್ಯಕವಿದ್ದಹಾಗೆಲ್ಲ ಅವರ ಅಂತಸ್ತಿಗೂ ಅವರ ಕುಟುಂಬನಿವಾಸಕ್ಕೂ ತಕ್ಕಂತೆ ಸಾಲವನ್ನು ಕೊಡುವರೆಂದು ನಂಬಿರುತ್ತೆ.

ಕಟ್ಟಡ ಕಟ್ಟುವ ಸಂಘಗಳ ಆಡಳಿತವನ್ನು ನಡೆಸಲು ಆದರಉಳ್ಳವರು ನಿಮ್ಮಲ್ಲಿ ಅನೇಕರಿರುವುದರಿಂದ ಅಂಥಾವರಿಗೆ ಸೂಚಿಸುವ ಒಂದಂಶವಿರುವುದು. ಅದೇನಂದರೆ ಜಾಗಗಳನ್ನು ಕೊಂಡುಕೊಂಡು ಅವುಗಳಲ್ಲಿ ತಾವೇ ಮನೆಕಟ್ಟಿ ಅವುಗಳನ್ನು ಮೆಂಬರುಗಳ ವಾಸಕ್ಕೆ ಕೊಡಬೇಕು. ಹೀಗೆ ಮಾಡೋಣದರಿಂದ ಈಗ ದಿನೇದಿನೇ ಜನಸಮುದಾಯವು ವೃದ್ಧಿಯಾಗುತ್ತಿರುವ ವ್ಯಾಪಾರಸ್ಥಳಗಳಲ್ಲಿ ವಾಸದ ಮನೆಗಳಿಗಿರುವ ಕ್ಷೋಭೆಯನ್ನು ಬಹಳ ಮಟ್ಟಿಗೆ ಅಡಗಿಸಬಹುದು. ಪಟ್ಟಣಗಳ ಮತ್ತೂ ಗ್ರಾಮಗಳ ಆರೋಗ್ಯಸ್ಥಿತಿಯು ನಿಮ್ಮಿಂದ ಕ್ರಮಪಡಿಸಲ್ಪಡಬೇಕಾಗಿರುವುದು. ಪಟ್ಟಣಗಳು ಮತ್ತೂ ನಗರಗಳು ಕೈಗಾರಿಕೆಗಳ ಅಭಿವೃದ್ಧಿಯಿಂದ ವಿಸ್ತಾರವಾದ ಹಾಗೆಲ್ಲಾ ಅವಕ್ಕೆ ನಿಮ್ಮ ಅಚಲವಾದ ಗಮನವನ್ನು ಕೊಡಬೇಕಾಗಿರುತ್ತದೆ.

ಹುಣಸೂರು ತಾ॥ ಹಳ್ಳಕೆರೆ:— ಈ ಊರಲ್ಲಿ ಲೋಕರಕ್ಷಕನ ಅನುಗ್ರಹದಿಂದ ಕೊಂಚ ಮಳೆಯಾಗಿ ಹೊಲಗಳಲ್ಲಿ ತಕ್ಕಮಟ್ಟಿಗೆ ಬೆಳೆ ಅನುಕೂಲವಾಯಿತು. ಪುನಃ ಮಳೆ ಹಿಂದಾದ್ದಕ್ಕೆ ಜನರು ಚಿಂತೆಪಡುತ್ತಾರೆ. ಕೆರೆ ಕಟ್ಟೆಗೆ ನೀರು ಬಂದಿಲ್ಲ. ಈ ಊರಲ್ಲಿರುವ ನೆಲಭಾವಿಗಳಲ್ಲಿ ಸುತರಾಂ ನೀರಿಲ್ಲದೆ ದನಕರುಗಳಿಗೂ, ಜನಗಳಿಗೂ ಹೆಚ್ಚು ಕಷ್ಟವಾಗಿದೆ. ಧಾರಣವಾಸಿಗಳು ಇಳಿದಿಲ್ಲ. ಅಕ್ಕಿ ರೂ ಗೆ ೫। ಸೇರು ರಾಗಿ ರೂ.ಗೆ ೧೦॥ ಸೇರು ಕೊಡುತ್ತಾರೆ. ನಮ್ಮ ಸರ್ಕಾರದವರು ಏರ್ಪಡಿಸಿರುವ ಸೇರುಗಳು ಬಟ್ಟುಗಳು ಇನ್ನೂ ಈ ಹಳ್ಳಿಗಳಲ್ಲಿ ಜಾರಿಗೆ ಬಂದಿಲ್ಲ. ಮನೆಮನೆಗಳಲ್ಲಿ ಅನೇಕಜನ ಹೆಂಗಸರು ತಮ್ಮ ಸೇರು ಅಚ್ಚೇರು ಇವುಗಳನ್ನು ಇಟ್ಟುಕೊಂಡು ತಿಳಿಯದ ಜನಗಳಿಗೆ ಮೋಸಪಡಿಸುತ್ತಾರಲ್ಲದೆ ಈ ಪ್ರಾಂತ್ಯ ಕಳ್ಳರ ಅವಾಂತರ ಎಲ್ಲರಿಗೂ ಭೀತಿಯನ್ನುಂಟುಮಾಡುತ್ತದೆ. ಈಗ್ಗೆ ಸ್ವಲ್ಪ ದಿವಸದಲ್ಲಿ ಈ ಗ್ರಾಮದ ಒಬ್ಬ ಬಡರೈತನ ಮನೆಯಲ್ಲಿ ಯಾರೋ ದುರಾತ್ಮರು ೫೫ ರೂಪಾಯಿಗಳನ್ನು ಕಳುವುಮಾಡಿದರು. ಅದು ಪತ್ತೆ ಇಲ್ಲ. ರಾತ್ರಿ ಕಾಲದಲ್ಲಿ ಮನೆಗಳ ಮೇಲೆ ಕಲ್ಲುಗಳು ಲೆಕ್ಕವಿಲ್ಲದಷ್ಟು ಸುರಿಯುತ್ತಿವೆ. ಈ ಗ್ರಾಮಕ್ಕೆ ಹೊರಗಣಿಂದ ಅನೇಕಜನ ಮೋಸಗಾರರು ವೇಷಧಾರಿಗಳಾಗಿ ನಾವು ತಿರುಕರು ನಾವು ಪರದೇಶಿಗಳು ಎಂದು ಇಂತ ಬಣ್ಣಬಣ್ಣ ಗ್ರಾಮಾಂತರಗಳಿಗೆ ತಾತ್ಪರ್ಯವಾಗಿ ಬರುತ್ತಾ ಹೋಗುತ್ತಾ ಇದ್ದಾರೆ. ಹೀಗಿದ್ದರೂ ಈ ಗ್ರಾಮದಲ್ಲಿರುವ ಪೋಲೀಸ್‌ಪಟೇಲರೇ ಆಗಲಿ ಗ್ರಾಮದ ತೋಟಿಯೇ ಆಗಲಿ ಹೊರಗಣಿಂದ ಬರತಕ್ಕ ಪರದೇಸಿಗರ ಕ್ಷೇಮವನ್ನೇ ವಿಚಾರಿಸುವುದಿಲ್ಲ. ರಾತ್ರಿ ಕಾವಲಂತು ಸುತರಾಂ ನಿಂತುಹೋಗಿದೆ. ಹೊಲಗಳಲ್ಲಿ ರಾತ್ರಿಕಾಲದಲ್ಲಿ ರಾಗಿ ತೆನೆಗಳನ್ನೇ ಅಪಹರಿಸಿಕೊಂಡು ಹೋಗುತ್ತಾರೆ. ಈ ವಿಚಾರದಲ್ಲಿ ನಮ್ಮ ತಾ॥ ಅಧಿಕಾರಿಗಳು ಸರಿಪಡಿಸುತ್ತಾರೆಂದು ನಂಬಿದ್ದೇನೆ. ಈ ಗ್ರಾಮಕ್ಕೆ ಸುಮಾರು ೧ ಮೈಲಿ ದೂರದಲ್ಲಿರುವ ಹೊಸಹಳ್ಳಿ ಗ್ರಾಮಕ್ಕೆ ಮಾರಿಹುಣ್ಣು ಎಂಬ ರೋಗವು ವ್ಯಾಪಿಸಿ ಸುಮಾರು ೧ ತಿಂಗಳಾದಾಗ್ಯೂ ರೋಗ ಬಿಡುಗಡೆ ಇಲ್ಲದೆ ಸುಮಾರು ೧೦-೧೨ ಬಾಲಕರು ಮರಣ ಹೊಂದಿರುತ್ತಾರೆ. ಈ ಪ್ರಾಂತ್ಯ ದೇಶಿಸಂಬಂಧಿಗಳು ದಯಮಾಡಿಸಿ ಹುಡುಗರಿಗೆ ಸಿಡುಬನ್ನು ಹಾಕಿದ್ದರೆ ಇಷ್ಟು ನಷ್ಟಕ್ಕೆ ಗುರಿಯಾಗುತ್ತಿರಲಿಲ್ಲವೆಂದು ಹೇಳಬೇಕಾಗಿದೆ. ನಮ್ಮನ್ನಾಳುವ ಮಹಾರಾಜ ಸರ್ಕಾರದವರು ತಮ್ಮ ತರ್ಫ ಒಂದು ಭಾವಿಯನ್ನು ತೆಗೆಸಿ ಹಳ್ಳಕೆರೆ ಗ್ರಾಮದವರು ಕುಡಿಯುವ ನೀರಿಗಾಗಿ ತೊಂದರೆಪಡುತ್ತಿರುವುದನ್ನು ತಪ್ಪಿಸಿ ಮಹದುಪಕಾರವನ್ನು ಮಾಡಬೇಕೆಂದು ಸರ್ವರು ಬೇಡಿಕೊಳ್ಳುತ್ತೇವೆ.

ಸ್ಥಳಿಕ.

ಧಾರವಾಡಜಿಲ್ಲಾ ತಾ॥ ಹಿರೇಕೆರೂರಲ್ಲಿ ಜರಗಿದ ಶ್ರೀಮದ್ವೀರಶೈವ ಸಭೆಯು.

ಪೇಟೆಯ ಹೊರಭಾಗದಲ್ಲಿ ಬಹುನೂತನವಾಗಿ ಕಟ್ಟಲ್ಪಟ್ಟ ಶ್ರೀಮದ್ವೀರಶೈವವೈದಿಕಪಾಠಶಾಲೆಯಿಂದ ಸಮೀಪವಾದ ಶ್ರೀ ವೃಷಭೇಶ್ವರದೇವಾಲಯದಲ್ಲಿ ಇದೇ ಶ್ರಾವಣ ಬ॥ ೧೪ ಗುರುವಾರಲಾಗಾಯಿತು ಭಾದ್ರಪದ ಶುದ್ಧ ೧೫ ವರೆಗೆ ಶ್ರೀ ಪ್ರಭುಲಿಂಗಲೀಲೆಯೆಂಬ ಪುರಾಣವು ಚಿಕ್ಕಜಂಬೂರ ಶ್ರೀ ನಿರಂಜನ ಪೂಜ್ಯಪಾದರ ಮುಖೇನ ಜರಗಿಸಲ್ಪಟ್ಟಿತು. ಬ॥ ೧ ರಿಂದ ೪ ರ ವರೆಗೆ ಶ್ರೀಗುರುಪಾದ ಪೂಜಾವಿನಿಯೋಗವೂ ಶ್ರೀರುದ್ರಾಭಿಷೇಕವೂ ವೇದೋಕ್ತಪ್ರಕಾರ ಹಿರೇಮಠದ ವೇ॥ ವೀರಭದ್ರಶಾಸ್ತ್ರಿಗಳವರಿಂದ ಸಾಂಗವಾಗಿ ನೆರವೇರಿಸಲ್ಪಟ್ಟಿತು. ಬ॥ ೫ ರ ಪ್ರಾತಃಕಾಲದಿಂದ ಶ್ರೀಗುರುಗಳ ಕಾರ್ಯವು ಪೂರ್ತಿಯಾದುದಕ್ಕೆ ಈ ದಿವಸ ಗಣಾರಾಧನೆಯು ನೆರವೇರಿಸಲ್ಪಟ್ಟಿತು. ಬ॥ ೬ ದಿವಸ ಪೇಟೆಯಲ್ಲಿ ಸದರೀ ಚಿಕ್ಕಜಂಬೂರ ಶ್ರೀಗಳವರನ್ನು ಪಲ್ಲಕ್ಕಿಯಲ್ಲಿ ಮೂರ್ತಗೊಳಿಸಿ ಪೇಟೆಯ ತಳಿರುತೋರಣಾದಿಗಳಿಂದ ವಿರಾಜಮಾನವಾದ ಬೀದಿಗಳಲ್ಲಿ ಅತಿ ವಿಜೃಂಭಣೆಯಿಂದ ಉತ್ಸವವು ನೆರವೇರಿಸಲ್ಪಟ್ಟು, ಸರ್ವರಿಗೂ ಅನ್ನ ಸಂತರ್ಪಣೆಯು ಚನ್ನಾಗಿ ನಡೆಯಿತು. ಮಧ್ಯಾಹ್ನದ ೪ ಘಂಟೆಯಲ್ಲಿ ಸಭೆಯು ಮಹಾಪೂಜ್ಯಪಾದರ ಅಧ್ಯಕ್ಷತೆಯಿಂದ ಕೂಡಿಸಲ್ಪಟ್ಟಿತು. ಈ ಸಭೆಗೆ ರಾ॥ ಸಾ॥ ಮಾಮಲೇದಾರರೂ ಸಿರಸ್ತೆದಾರರೂ ಮಣೇನಪುರದ ವೇ॥ ರುದ್ರಶಾಸ್ತ್ರಿಗಳೂ ಹಕ್ಕೂರ ಹಿರೇಮಠದ ಬ್ರ॥ ಶ್ರೀ॥ ಸಿದ್ಧಾಂತಿ ಓಂಕಾರಶಾಸ್ತ್ರಿಗಳೂ ವಿದ್ವಾಂಸರೂ ಶ್ರೀಮಂತರೂ ವರ್ತಕರೂ ಇನ್ನೂ ಮುಂತಾದವರೂ ಆಗಮಿಸಿದ್ದರು. ಮಹಾಪೂಜ್ಯಪಾದರವರ ಆಜ್ಞಾನುಸಾರವಾಗಿ ಹಕ್ಕೂರ ಹಿರೇಮಠದ ಸಿದ್ಧಾಂತಿ ಓಂಕಾರಶಾಸ್ತ್ರಿಗಳು ಆಚಾರ, ಮಣೇನಪುರದ ವೇ॥ ರುದ್ರಪ್ಪಶಾಸ್ತ್ರಿಗಳು ಗುರುಲಿಂಗಜಂಗಮ ಈ ವಿಷಯಗಳನ್ನು ಕುರಿತು ಸರಸವಾಗಿ ಹೇಳಿದ್ದಲ್ಲದೆ ಮಂಗಲದಿಂದ ಪೂರೈಸಿದರು. ಇದೇ ಊರ ಹಿರೇಮಠದ ವೇ॥ ವೀರಭದ್ರಶಾಸ್ತ್ರಿಗಳು ಏಕಮತ್ಯವಿಷಯದಲ್ಲೂ ದೂದಿಹಳ್ಳಿ ರುದ್ರಪ್ಪನವರು ಭಕ್ತಿವಿಷಯದಲ್ಲೂ ವೈದಿಕಪಾಠಶಾಲಾ ವಿದ್ಯಾರ್ಥಿಯಾದ ರೇವಣಾರ್ಯನು ವಿದ್ಯಾವಿಷಯದಲ್ಲೂ ಮ॥ ಗುರುಶಾಂತಪ್ಪ ಹಳಕಟ್ಟಿ ಸಂಘಾರಣೆವಿಷಯದಲ್ಲೂ ಮ॥ ಚನ್ನವೀರಪ್ಪಾ ನೇಮತಿ ಭಕ್ತಿವಿಷಯದಲ್ಲೂ ಮ॥ ಹಳ್ಳೀ ವೀರಭದ್ರಪ್ಪನವರು ಸದ್ವರ್ತನದ ವಿಷಯದಲ್ಲೂ, ವೀರಭದ್ರಪ್ಪಾ ಜೋಳದ ಪುರುಷಾರ್ಥದ ವೃಕ್ತಿ ನಾಲ್ಕನೆಯದಾದ ಮೋಕ್ಷದವಿಷಯದಲ್ಲೂ ಚನ್ನಬಸಪ್ಪಾ ಕಾಳಗೇರ ಗುರುವೇ ಅಧಿಕವೆಂಬ ವಿಷಯದಲ್ಲೂ ಉಪನ್ಯಾಸಗಳನ್ನು ಜರಗಿಸಿದ ನಂತರ ಚಿಕ್ಕಜಂಬೂರ ಶ್ರೀ॥ ಗಳವರು ವೀರಶೈವ ಸರ್ವೋತ್ಕರ್ಷದ ವಿಷಯವನ್ನು ಸರ್ವರ ಮನಸ್ಸಿನಲ್ಲಿ ಬಿಂಬಿಸುವಂತೆ ಸರಸವಾಗಿ ಭಾಷಣವನ್ನು ನಡೆಯಿಸಿದ ತರುವಾಯ ಕಾರ್ಯಗಳನ್ನು ಮಂಗಲ ಪುಷ್ಪಾಂಜಲಿ ಜಯಘೋಷದೊಡನೆ ಪೂರೈಸಿದರು.

ಓರ್ವ ಧರ್ಮಾಭಿಮಾನಿ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಭೆಗೆ ತಾ॥ ೨-೫-೧೯೧೪ ರಿಂದ ತಾ॥ ೧೨-೬-೧೪ ರವರೆಗೆ ಜಮಾಬಂದ ವೊಬಲಗಿನತಪ್ಸೀಲ್.

---

೧. ಮ॥ ರಾ॥ ಗಳಾದ ಅಣಜಿ ಶ್ಯಾನುಬೋಗ ಎ. ಜಿ. ಸಿದ್ಧಲಿಂಗಪ್ಪನವರ ಮೂಲಕ ಅಣಜಿ ಗ್ರಾಮದ ನಾಗದಪಟ್ಟಿ ಚನ್ನಪ್ಪನವರಿಂದ ಇವರ ಪುತ್ರಿಯ ವಿವಾಹಕಾಲದಲ್ಲಿ ತೆಗೆದಬಾಬ್ತು ಜಮ ೨-೦-೦, ೨. ತುಮಕೂರು ತಾ॥ ಕ್ಯಾತ್ಸಂದ್ರದ ಜ. ಅಂ. ಕೆ. ಯಸ್. ವೀರಭದ್ರಪ್ಪನವರ ಮೂಲಕ ಇವರ ಲಗ್ನದಲ್ಲಿ ಇವರಿಂದ ೨ ರೂ ವಧುವಿನಕಡೆ ಗುಬ್ಬಿ ಸೊ॥ ವೀರಭದ್ರಪ್ಪನವರಿಂದ ೧ ರೂ. ಒಟ್ಟು ೩-೦-೦ ೩. ದೇವನಹಳ್ಳಿ ತಾ॥ ಹುಣಸಮಾರ್ನಹಳ್ಳಿ ಮಠದ ವಿಜಂಟ್ ಗುರುನಂಜಪ್ಪದೇವರವರ ಮೂಲಕ ದೊಡ್ಡಬಳ್ಳಾಪುರದಲ್ಲಿ ಸಾಹುಕಾರ್ ರುದ್ರಪ್ಪನವರ ಮನೆಯಲ್ಲಿ ನಡೆದ ಲಗ್ನಗಳಲ್ಲಿ ತೆಗೆದುದು ಜಮ ೫-೦-೦, ೪. ಚಿಕ್ಕಮಗಳೂರು ಡಿಸ್ಟ್ರಿಕ್ಟ್ ಸಿರಸ್ತೆದಾರ್ ಮ॥ ಬಿ. ಮಲ್ಲಿಕಾರ್ಜುನಯ್ಯನವರಿಂದ ಇವರು ಮಹಾ ಸಭಾಕಾಲದಲ್ಲಿ ವಾಗ್ದಾನ ಮಾಡಿದ್ದ ವೊಬಲಗಿನಪೈಕಿಗಾಗಿ ಬಂದದ್ದು ಜಮ ೧೦-೦-೦ ೫. ಮೈಸೂರು ಸ್ಟಾರ್‌ಆಫೀಸ್ ಮೂಲಕ ಶಿಕಾರಿಪುರದ ತಾ॥ ಹಿತ್ತಲಗ್ರಾಮದ ಮಾದ್ರಹಳ್ಳಿ ಪಟೇಲ್ ಹುಂಡಿ ಪುಟ್ಟಮಲ್ಲಪ್ಪನವರ ಮಕ್ಕಳು ಮಲ್ಲಪ್ಪ ಸಂಗಪ್ಪ ಇವರ ವಿವಾಹಕಾಲದಲ್ಲಿ ತೆಗೆದ ಬಾಬ್ತು ೨ ರೂ, ಸೊರಬ ತಾ॥ ತುಡನೀರು ಗ್ರಾಮದಲ್ಲಿ ಸೊರಬದ ಮುರುಘಾಮಠದ ಬಸವಯ್ಯನವರ ಜ್ಯೇಷ್ಠಪುತ್ರ ಮುರುಘಯ್ಯನಿಗೆ ತುಡನೀರು ಶಿವರುದ್ರಪ್ಪಯ್ಯನವರ ಪುತ್ರಿ ಮುರುಘಮ್ಮನನ್ನು ಕೊಟ್ಟು ನಡಿಸಿದ ಲಗ್ನದಲ್ಲಿ ವಧೂವರರ ಕಡೆಯಿಂದ ತೆಗೆಸಿ ಶಿವಮೊಗ್ಗ ತಾ॥ ಬೆಳವಳ್ಳಿ ವಿ. ಇ. ಸ್ಕೂಲ್‌ಮಾಸ್ಟರ್. ಎಸ್. ಪ್ರಭಯ್ಯನವರ ಬಳಿ ಕೊಟ್ಟಿದ್ದ ಬಾಬ್ತು ೩ ರೂ., ತರಿಕೆರೆಯಲ್ಲಿರುವ ತಿಪ್ಪೆಮನೆ ಬಿ. ಚಂದ್ರಪ್ಪನವರ ಮಕ್ಕಳ ಲಗ್ನದಲ್ಲಿ ತೆಗೆದ ಬಾಬ್ತು ೫ ರೂ, ಜುಮ್ಲ ೧೦ ರೂ.ಗೆ ಮಣಿಆರ್ಡರ್ ಕಮಿಷನ್ ವಜಾ ಜಾತಾ ಬಂದದ್ದು ೯-೧೪-೦ ೬. ಮೈಸೂರು ಸ್ಟಾರ್‌ಆಫೀಸ್ ಮೂಲಕ ಜಗಳೂರು ತಾ॥ ಹಿರೆಅರಕೇರಿ ಗ್ರಾಮದ ಗೌಡರು ಭೋಗಪ್ಪನವರ ಮಕ್ಕಳ ಲಗ್ನದಲ್ಲಿ ಬಿಳಿಚೋಡು ಶೆಟ್ಟರು ಕಲಿವೀರಪ್ಪನವರ ವಶ ಬಂದಿದ್ದ ೪ ರೂ.ಗೆ ಮಣಿಆರ್ಡರ್ ಕಮಿಷನ್ ವಜಾ ಜಾತಾ ಬಂದದ್ದು ೩-೧೫-೦, ೭. ಹೆಗ್ಗಡದೇವನಕೋಟೆ ತಾ॥ ಹಡಗೂರು ಎ. ವಿ ಸ್ಕೂಲ್ ಅಸಿಸ್ಟೆಂಟ್ ಮಾಸ್ತರು ಕೆ. ಸುಬ್ಬಣ್ಣನವರ ಮೂಲಕ ಸರಗೂರು ಭೋಗಮಲ್ಲಯ್ಯನವರ ವಿವಾಹಕಾಲದಲ್ಲಿ ತೆಗದ ಬಾಬ್ತು ೨ ರೂ., ಸರಗೂರು ಚಿಕ್ಕವೀರಯ್ಯನವರ ಮಗಳ ಲಗ್ನದಲ್ಲಿ ತೆಗೆದ ಬಾಬ್ತು ೧ ರೂ., ಜುಮ್ಲ ೩-೦-೦, ೮. ಗುಬ್ಬಿ ಶೆಟ್ಟರು ಕೃಷ್ಣಶೆಟ್ರು ಯಜಮಾನ್ ರೇವಣ್ಣನವರು ಇವರ ಮೂಲಕ ಗುಬ್ಬಿ ಶಿವರಾತ್ರಿ ಶಿವರಾತ್ರಪ್ಪನವರ ಮನೆಯ ಲಗ್ನದಲ್ಲಿ ತೆಗದ ಬಾಬ್ತು ೫ ರೂ, ಗುಬ್ಬಿ ಜೇಡಿ ಬಸಪ್ಪನವರ ಮಗನ ಲಗ್ನದಲ್ಲಿ ತೆಗೆದ ಬಾಬ್ತು ೩ ರೂ. ಜುಮ್ಲ ಜಮ ೮-೦-೦ ೯. ಬೆಂಗಳೂರು ಅರಳೇಪೇಟೆ ದೇಶದಶೆಟ್ಟರು ಬಸವಲಿಂಗಶೆಟ್ಟರ ಮೂಲಕ ಬೆಂಗಳೂರು ಕಂಟೋನ್ಮೆಂಟಿನಲ್ಲಿರುವ ಮುನಿಯಪ್ಪನವರ ಪುತ್ರ ಮುದ್ದುರಾಜಪ್ಪನವರ ಲಗ್ನದಲ್ಲಿ ವಧೂವರರ ಕಡೆಯಿಂದ ಬಂದದ್ದು ೨-೦-೦, ೧೦. ಬೆಂಗಳೂರು ನರಗುಂದದೇವರ ಮಠದ ಶ್ರೀ ಕರಿಬಸವಸ್ವಾಮಿಗಳ ಮೂಲಕ ಹೊಸಕೋಟೆ ಚಟ್ಟಿ ಬಸಪ್ಪನವರಿಂದ ಇವರ ತಮ್ಮನಮಗ ಕರಿಬಸಪ್ಪನವರ ಲಗ್ನದಲ್ಲಿ ತೆಗದ ಬಾಬ್ತು ಜಮ ೫-೦-೦, ೧೧. ಚಿತ್ರದುರ್ಗ ಪ್ಲೀಡರ್ ಸಿ ಸಿದ್ಧನಂಜಪ್ಪನವರ ಮೂಲಕ ಶ್ಯಾಬೆಗೆರೆ ಮುರಿಗಪ್ಪನವರ ಮಕ್ಕಳು ಮಲ್ಲಪ್ಪ ಮತ್ತು ಹೂವಿಕಂಟಿ ಗೌಡ ಗುರುಲಿಂಗಪ್ಪನವರ ಮಕ್ಕಳು ಮುರಿಗಪ್ಪ ಇವರ ಲಗ್ನದಲ್ಲಿ ತೆಗೆದ ಬಾಬ್ತು ೩ ರೂ., ಕಳಶದ ಯಡೆಕಾಸು ರೂ. ೧-೩-೦ ಜುಮ್ಲ ಜಮ ೪-೩-೦

೧. ಮ॥ ರಾ॥ ಗಳಾದ ದಾವಣಗೆರೆ ಹಿರಿಮಠದ ರುದ್ರಶಾಸ್ತ್ರಿಗಳ ಮೂಲಕ ಹರಿಹರ ತಾ॥ ಮುದಹದಡಿ ಹಂಜಿಗಿಮಠದ ಮಹದೇವಪ್ಪನವರ ಮಗಳ ಲಗ್ನದಲ್ಲಿ ತೆಗೆದ ಬಾಬ್ತು ೫ ರೂ., ಮುದಹದಡಿ ಹಂಜಿಗಿ ಮಠದ ಗುರುಸಿದ್ಧಪ್ಪಯ್ಯನವರಿಂದ ೨ ರೂ., ದಾವಣಗೆರೆ ತಾ॥ ಹೆಬ್ಬಾಳು ಮಠದ ಮುರಿಗಪ್ಪಯ್ಯನವರಿಂದ ೪ ರೂ., ಜುಮ್ಲ ೧೧ ರೂ. ೨. ಮಂಜರಾಬಾದು ತಾ॥ ಬೆಳಗೋಡು ಹೋಬಳಿ ಬಾಳ್ಳು ದ್ಯಾವೇಗೌಡರ ಮಕ್ಕಳು ಗುರುವೇಗೌಡರು ಕೆ. ಮಲ್ಲೇಗೌಡರು ಇವರಿಂದ ಬಾಳ್ಳು ಗುರುವೇಗೌಡರ ೩ ನೇ ಲಗ್ನದಲ್ಲಿ ತೆಗೆದ ಬಾಬ್ತು ೩-೦-೦, ೩ ಮಂಜರಾಬಾದು ತಾ॥ ಬೆಳಗೋಡು ಹೋಬಳಿ ಬಾಲ್ಕಮಠದ ಬಸವಯ್ಯನವರ ಲಗ್ನದಲ್ಲಿ ತೆಗೆದ ಬಾಬ್ತು ೩-೦-೦ ೪. ಮಂಜರಾಬಾದು ತಾ॥ ಬೆಳಗೋಡು ಹೋಬಳಿ ಬಳ್ಳು ಕಡದರವಳ್ಳಿ ಪಟೇಲ್ ಸಿದ್ದೆಗೌಡರ ಮೂಲಕ ಬೇಲೂರು ತಾ॥ ಕಡದರವಳ್ಳಿ ಪಟೇಲ್ ಸಿದ್ದೆಗೌಡರ ಪುತ್ರ ಲಗ್ನದಲ್ಲಿ ತೆಗೆದ ಬಾಬ್ತು ೧-೦-೦, ೫ ಬೆಳಗೋಡು ಪೋಸ್ಟ್ ಕೆಸಗೋಡು ಸಂತೆಗೌಡರು ಬಾಳ್ಳು ಮಲ್ಲೇಗೌಡರು ಇವರ ಮೂಲಕ ಬೇಲೂರು ತಾ॥ ಕೆಸಗೋಡು ಸಂಕೇಗೌಡರ ಪುತ್ರ ಲಗ್ನದಲ್ಲಿ ತೆಗದ ಬಾಬ್ತು ೨-೦-೦, ೬. ಬೆಳಗೋಡು ಪೋಸ್ಟ್ ಹಬ್ಬಗದ ಮಲ್ಲೇಗೌಡರು ಬಾಳ್ಳು ಮಲ್ಲೇಗೌಡರು ಇವರ ಮೂಲಕ ಮಂಜರಾಬಾದ್ ತಾ॥ ಮಲ್ಲೇನಹಳ್ಳಿಗ್ರಾಮದ ಕಾಫಿಪ್ಲಾಂಟರ್ ಹಿರೀಗೌಡರ ಮಗಳು ಮಲ್ಲಮ್ಮನ ಮಗ ಮಲ್ಲೇಗೌಡರ ಲಗ್ನದಲ್ಲಿ ತೆಗೆದ ಬಾಬ್ತು ೪-೦-೦, ೭. ಬೆಳಗೋಡುಪೋಸ್ಟ್ ಬಾಳ್ಳು ಮಲ್ಲೇಗೌಡರು ಬೆಳಮು ಚನ್ನಬಸವೇಗೌಡರು ಇವರ ಮೂಲಕ ಬೆಳಮು ಚನ್ನಬಸವೇಗೌಡರ ಮನೆ ಲಗ್ನದಲ್ಲಿ ತೆಗೆದ ಬಾಬ್ತು ೨-೦-೦ ೮. ಬೆಂಗಳೂರು ಅರಳೇಪೇಟೆ ದೇಶದ ಬಸವಲಿಂಗಶೆಟ್ಟರ ಮೂಲಕ ಬೆಂಗಳೂರು ಕಂಟೋನ್ಮೆಂಟ್ ಗಂದಿಗೆಅಂಗಡಿ ವಿಷಕಂಠಪ್ಪನವರ ಮನೆ ಲಗ್ನದಲ್ಲಿ ತೆಗೆದ ಬಾಬ್ತು ೧-೦-೦ ೯. ತುಮಕೂರು ಮಂಡಿ ಟಿ. ಸಿ. ರೇವಣ್ಣನವರ ಮೂಲಕ ಗುಬ್ಬಿಗಟ್ಟಿ ಬಾಳಪ್ಪನವರ ಮಗನ ಲಗ್ನದಲ್ಲಿ ವಧೂವರರ ಕಡೆಯಿಂದ ತೆಗೆದ ಬಾಬ್ತು ೨ ರೂ., ತೂಕದ ವೀರಪ್ಪನವರ ಮಗಳ ಲಗ್ನದಲ್ಲಿ ವಧೂವರರ ಕಡೆಯಿಂದ ತೆಗದ ಬಾಬ್ತು ೨-೧೦-೦, ಜುಮ್ಲ ರೂ. ೪-೧-೦ (ಇದರ ಜೊತೆಯಲ್ಲಿ ಕೈ. ವೈ. ವೀರಸಂಗಪ್ಪನವರ ಸ್ಮರಣಾರ್ಥವಾಗಿ ಅಗ್ರಹಾರ ಬೂಲಕ್ಕೆಂದು ತೆಗೆದು ಕಳುಹಿಸಿದ್ದ ೪ಆಣೆಯನ್ನು ಸ್ಟಾರ್‌ಆಫೀಸಿಗೆ ಕಳುಹಿಸಿರುತ್ತೆ.) ೧೦ ತುಮಕೂರು ಮಂಡಿ ಸಿ. ಟಿ. ರೇವಣ್ಣನವರ ಮೂಲಕ ತುಮಕೂರಲ್ಲಿ ನಡೆದ ಕ್ಲೋಸ್‌ಪೇಟೆ ಸಿದ್ಧಲಿಂಗಪ್ಪನವರ ಲಗ್ನದಲ್ಲಿ ತೆಗದ ಬಾಬ್ತು ೨-೦-೦ ೧೧. ಕೃಷ್ಣರಾಜಪೇಟೆ ತಾ॥ ಬೂಕನಕೆರೆ ಮಠದ ಚನ್ನಪ್ಪಶಾಸ್ತ್ರಿಗಳ ಮೂಲಕ ಕೃಷ್ಣರಾಜಪೇಟೆ ಕಸಬಾ ಶೆಟ್ಟರ ನಂಜುಂಡಶೆಟ್ಟರ ಮಗ ಸಿದ್ಧಲಿಂಗಯ್ಯನವರ ನಿಷೇಕಪ್ರಸ್ತದಲ್ಲಿ ತೆಗೆದ ಬಾಬ್ತು ೧-೦-೦, ೧೨. ಕೊಳ್ಳೇಗಾಲದ ಸಾಹುಕಾರ್ ಜೆ. ಪಿ. ಮಲ್ಲಪ್ಪನವರಿಂದ ಇವರ ತಮ್ಮ ಷಣ್ಮುಖಯ್ಯನವರ ಲಗ್ನದಲ್ಲಿ ತೆಗೆದ ಬಾಬ್ತು ೫-೦-೦, ೧೩. ಮೈಸೂರ್ ಸ್ಟಾರ್‌ಆಫೀಸ್ ಮೂಲಕ ಜಗಳೂರು ತಾ॥ ಬಿಳಿಚೋಡು ಶೆಟ್ಟರು ಕಲವೀರಪ್ಪನವರಿಂದ ಜಗಳೂರು ತಾ॥ ಮದ್ದೇರಹಳ್ಳಿ ಬೊರಾಪುರದ ಸಿದ್ಧಲಿಂಗಪ್ಪನವರ ಮಕ್ಕಳು ಮಹದೇವಪ್ಪನವರಿಗೆ ಕೋಗುಂಡೆ ಮುದ್ದಾಪುರದ ಬಸಪ್ಪನವರ ಮಗಳನ್ನು ಕೊಟ್ಟುನಡಿಸಿದ ವಿವಾಹದಲ್ಲಿ ತೆಗೆದ ಬಾಬ್ತು ೩-೧೫-೦, ೧೪ ಮೈಸೂರುಸ್ಟಾರ್ ಆಫೀಸ್ ಮೂಲಕ ಶಿಕಾರಿಪುರ ತಾ॥ ಗ್ರಾಮದ ಪ. ಆರಾಧ್ಯ ಮಠದ ನಾಗಲಿಂಗಪ್ಪಯ್ಯನವರಿಂದ ಗ್ರಾಮದ ಹಿರೇಮಠದ ತೋಟಪ್ಪಯ್ಯನವರ ಪುತ್ರ ಸಂಗಪ್ಪಯ್ಯನವರಿಗೆ ಗ್ರಾಮದ ಮಗಳಗೇರಿಮಠದ ವೀರಬಸವಯ್ಯನವರ ಪುತ್ರಿ ಗಂಗಮ್ಮನನ್ನು ಕೊಟ್ಟು ನಡಿಸಿದ ವಿವಾಹದಲ್ಲಿ ತೆಗೆದ ಬಾಬ್ತು ೪-೧೫-೦.

೧. ಮ॥ ರಾ॥ ಗಳಾದ ಬೆಂಗಳೂರು ಗಂದಿಗೆ ಅಂಗಡಿ ನಿಜಪ್ಪರು ಗಂಗಾಧರಪ್ಪನವರು ತಮ್ಮ ವಿಲ್‌ಪತ್ರದಲ್ಲಿ ೫೦ ರೂಪಾಯನ್ನು ಫಂಡುಸಭೆಗೆ ಕೊಡುವಂತೆಯೂ ಅದರ ಬಡ್ಡಿಯಾಂಶದಿಂದ ಬರುವದರಲ್ಲಿ ಒಬ್ಬ ವಿದ್ಯಾರ್ಥಿಗೆ ಅವರ ಹೆಸರಿನಮೇಲೆ ವಿದ್ಯಾರ್ಥಿವೇತನ ಕೊಡುವಂತೆಯೂ ಬರದ ಪ್ರಕಾರ ಬೆಂಗಳೂರು ಸಬ್‌ಜಡ್ಜಿಯವರ ಕೋರ್ಟುಮೂಲಕ ಜಮಾ ಬಂದದ್ದು ೫೦-೦-೦, ೨ ತುರುವೆಕೆರೆಶೆಟ್ಟರ ವೀರಶೆಟ್ಟರ ಅಡವಿ ರುದ್ರಯ್ಯನವರಿಂದ ಜಮಾಬಂದದ್ದು ೨-೦-೦ ೩. ಚಿಕ್ಕಮಗಳೂರು ತಾ॥ ಮೆಣಸಿನ ಮಲ್ಲೇದೇವರಹಳ್ಳಿ ಶ್ರೀ ಕಲ್ಲನಾಥಸ್ವಾಮಿಗಳಿಂದ ಮೇ. ಜಿ. ಶಾಂತವೀರಪ್ಪ, ಬಿ ಎ. ಯವರ ಮೂಲಕ ಜಮಾ ಬಂದದ್ದು ೨೦ ೦-೦ ೪. ಮೈಸೂರು ದೊಡ್ಡಪೇಟೆ ಬಳೆ ಹುಚ್ಚವೀರಪ್ಪನವರಿಂದ ಇವರ ಮಗನ ಮತ್ತು ಇವರ ಸೋದರಳಿಯನ ವಿವಾಹಕಾಲದಲ್ಲಿ ತೆಗದ ಬಾಬ್ತು ಮೈಸೂರ್ ಸ್ಟಾರ್‌ಆಫೀಸ್ ಮೂಲಕ ಬಂದದ್ದು ೨-೦-೦.

ಜಿ ಕೆ. ರುದ್ರಾರ್ಯ, ಅಸಿಸ್ಟೆಂಟ್ ಸೆಕ್ರಟರಿ.
ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್‌ಸಭೆ
ಬೆಂಗಳೂರು.

ರೇವಣಸಿದ್ಧೇಶ್ವರಪುರಾಣಂ.

ವೇದಾಗಮಾದಿಸಿದ್ಧವಾದ ವೀರಶೈವ ಮತವನ್ನು ಭೂತಲದಲ್ಲಿ ಪ್ರತಿಷ್ಠಾಪಿಸಿದ ಶ್ರೀ ರೇಣುಕಾಚಾರ್ಯರ ಚರಿತ್ರರೂಪವಾದ ಈ ಗ್ರಂಥವು ದೊಮ್ಮರಸಕವಿಯಿಂದ ಷಟ್ಪದೀಕಾವ್ಯವಾಗಿ ರಚಿಸಲ್ಪಟ್ಟಿರುವುದು. ಶ್ರೀಮದಾಚಾರ್ಯರು ಭೂತಲದಲ್ಲಿ ನಡೆಯಿಸಿದ ಮಹತ್ಕಾರ್ಯಗಳು ಇದರಲ್ಲಿ ನಿರೂಪಿತವಾಗಿವೆ. ಕವಿತೆಯು ಹೃದಯಂಗಮವಾಗಿದೆ. ಪ್ರತಿಯೊಂದುಪಾದಕ್ಕೂ ಒಂದೊಂದು ಪಙ್ಕ್ತಿಯಾಗಿ ಬಿಡಿಬಿಡಿಸಿ ಉತ್ತಮವಾದ ಗ್ಲೇಸ್‌ಕಾಗದದಮೇಲೆ ಸುಂದರವಾದ ಅಕ್ಷರಗಳಿಂದ ಶುದ್ಧವಾಗಿ ಮುದ್ರಿತವಾಗಿದೆ. ೧೩ ಸಂಧಿಗಳುಳ್ಳ ಈ ಗ್ರಂಥದ ಬೆಲೆ ವಿ. ಪಿ. ಮೂಲಕ ಅಂಚೆಯ ವೆಚ್ಚವೂ ಸೇರಿ ೧೨ ಆಣೆಗಳು.

ಸಟಿಪ್ಪಣ ಸಿದ್ಧಾಂತಶಿಖಾಮಣಿ.

ಇದು ಶ್ರೀರೇಣುಕಾಚಾರ್ಯರು ಅಗಸ್ತ್ಯರಿಗೆ ಉಪದೇಶಿಸಿದ ವೀರಶೈವ ಸಿದ್ಧಾಂತಶಾಸ್ತ್ರವು, ಪ್ರತಿಯೊಬ್ಬ ವೀರಶೈವನೂ ಮುಕ್ತನಾಗುವುದಕ್ಕೆ ಜನ್ಮಾದಿಯಿಂದ ಕಡೆಯವರೆಗೆ ಆಚರಿಸಬೇಕಾದ ಧರ್ಮಕರ್ಮಗಳು ಇದರಲ್ಲಿ ನಿರೂಪಿತವಾಗಿವೆ. ಮೂಲಗ್ರಂಥಕ್ಕೆ ವೇದಾಗಮ ಪುರಾಣಾದಿವಚನಗಳ ಆಧಾರದಿಂದ ಕೂಡಿದ ಕನ್ನಡ ಟಿಪ್ಪಣವು ವಿಸ್ತಾರವಾಗಿ ಬರೆಯಲ್ಪಟ್ಟು ಉತ್ತಮವಾದ ಕಾಗದದಲ್ಲಿ ಅಚ್ಚುಮಾಡಿಸಲ್ಪಟ್ಟಿದೆ. ಸರ್ವರಿಗೂ ಸಂಗ್ರಾಹ್ಯವಾದ ಈ ಪುಸ್ತಕವು ೩೩೫ ಪುಟಗಳುಳ್ಳ ದೊಡ್ಡ ಗ್ರಂಥವಾಗಿದ್ದರೂ, ಸ್ವಮತಸ್ಥರ ಹಿತಾರ್ಥವಾಗಿ ಬೆಲೆಯು ಕಡಿಮೆಯಾಗಿಡಲ್ಪಟ್ಟಿದೆ. ವಿ. ಪಿ, ಮೂಲಕ ಅಂಚೆಯ ವೆಚ್ಚವೂಸೇರಿ ೧-೮-೦.

ಎಸ್. ಆರ್ ಕರಿಬಸವಶಾಸ್ತ್ರಿ,
9 ಗ್ರಂಥಪ್ರಸಾರಕಮಂಡಲಿ, ಮೈಸೂರು.

ಕೇವಲ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

42

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪ್ರಕೋಪವಾದವರು, ತೃಷೆಯುಳ್ಳವರು, ದಮ್ಮಿನವರು, ಕೆಮ್ಮಿನವರ ಕಫ, ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಚಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರಿತಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೊಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೊಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ:—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ. ಜಿಲ್ಲ ಉತ್ತರಕನಡಾ.

೧೯೧೫ ನೆಯ ಇಸವಿಯ ಸೀತಾರಾಘವ ಪಾಕೆಟ್ ಡೈರಿಗಳು ಮಾರಾಟಕ್ಕೆ ಸಿದ್ಧವಾಗಿವೆ.



ನಂ ೧.	ಸಾದಾಡೈರಿಗೆ	೦—೪—೦
ನಂ ೨.	ಫ್ಲಾಪ್ ಡೈರಿಗೆ	೦—೬—೦
ನಂ ೩.	ಸಾದಾ ದೊಡ್ಡಡೈರಿಗೆ	೦—೬—೦
ನಂ ೪.	ಫ್ಲಾಪ್ ಡೈರಿಗೆ	೦—೮—೦

ಒಂದೇಆವೃತ್ತಿ ೧೨ ಡೈರಿಯನ್ನು ಕೊಂಡುಕೊಳ್ಳುವವರಿಗೆ ೧ ಡೈರಿಯು ಹೆಚ್ಚು ದೊರೆಯುವುದಲ್ಲದೆ ವ್ಯಾಪಾರಿಗೆ ವಿಶೇಷ ಡಿಸ್ಕೌಂಟು ಕೊಡಲ್ಪಡುವುದು. ಬೇಕಾದವರು ಈ ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಿ.

ಸೀತಾರಾಘವವೈದ್ಯಶಾಲಾ,
ಲಕ್ಷ್ಮೀವಿಲಾಸರೋಡು ಮೈಸೂರು.

(ಹೊಸಪುಸ್ತಕ ೧೩೪೪ ಪುಟಗಳು) ಶ್ರೀ (ಹೊಸಪುಸ್ತಕ ೧೩೪೪ ಪುಟಗಳು)

ಬ್ರ॥ ಶ್ರೀ॥ ಬಿ. ಎ. ಸುಬ್ರಹ್ಮಣ್ಯಶರ್ಮವಿರಚಿತವಾದ ಸುಧಾರ ಸಧಾರಾಯೆಂಬ ಕನ್ನಡ ಟೀಕಾತಾತ್ಪರ್ಯ ಗಣಿತೋದ್ಧಾರಣೆಗಳಿಂದೊಡಗೂಡಿದ

5

ಬೃಹಜ್ಜಾತಕಾಖ್ಯ ಹೋರಾಶಾಸ್ತ್ರಮ್.

ಮಾನವನು ತನ್ನ ಅದೃಷ್ಟಚಕ್ರದ ಫಲಾಫಲಗಳನ್ನು ಅರಿತು, ಮುಂದೊದಗಬಹುದಾದ ಫಲಸ್ವರೂಪವನ್ನೂ ಇತರರ ಸಹಾಯವಿಲ್ಲದೆಯೆ ತಿಳಿದುಕೊಂಡು, ದುಷ್ಫಲಗಳು ದೂರವಾಗಿ, ಸುಫಲಗಳು ಕರಗತವಾಗುವಂತೆ ಮಾಡುವಂತಹ, ಪರಿಹಾರೋಪಾಯಗಳನ್ನು ಸೂಚಿಸಬೇಕಾದರೆ, ನಮ್ಮಿಂದ ಈಗತಾನೆ ಸಂಸ್ಕೃತ ಹಿಂದಿ ಮರಾಟಿ ಭಾಷೆಗಳಿಂದ ತರ್ಜುಮೆಮಾಡಿ ಪ್ರಕಾಶಗೊಂಡ "ಸುಧಾರಸಧಾರಾ" ಎಂಬ ಕನ್ನಡ ಟೀಕಾತಾತ್ಪರ್ಯ ಉದಾಹರಣೆಗಳಿಂದ ಕೂಡಿದ ಬೃಹಜ್ಜಾತಕವೆಂಬ ಹೋರಾಶಾಸ್ತ್ರ ಹೊರತಲ್ಲದೆ ಮತ್ತಾವುದೂ ಸಮರ್ಥವಾಗಿಲ್ಲವು. ೧೩೪೪ ಪುಟ ೩ ಭಾಗಗಳ ಪುಸ್ತಕ ಒಂದೇಬೈಂಡ್ ಈ ಗ್ರಂಥರತ್ನವು ಆಬಾಲವೃದ್ಧರಾದಿಯಾಗಿ ಅಕ್ಷರವನ್ನರಿತ ಹೆಂಗಸರೂ ಸಹಾ ಪರರ ಸಹಾಯಾಪೇಕ್ಷೆ ಇಲ್ಲದೆ ಓದಿ ತಿಳಿಯಲು, ಅನುಕೂಲವಾಗಿರುವುದು. ಇದರೊಳಗಡಗಿರುವ ೨೮ ಪ್ರಕರಣಗಳ್ಲಿನ ವಿಷಯಸಂಗ್ರಹ ವೆಂತೆಂದರೆ:—೧-೨ ನೇ ಪ್ರಕರಣಗಳಲ್ಲಿ ಶಾಸ್ತ್ರಪ್ರಯೋಜನವೂ, ಜೋತಿಶಾಸ್ತ್ರದ ಪೀಠಿಕಾಭಾಗಗಳು ೩, ಸಜೀವ ನಿರ್ಜೀವವಸ್ತುಗಳ ಉತ್ಪತ್ತಿ ೪, ಗರ್ಭಧಾರಣ ಯೋಗಗಳು ೫, ಜನನಕಾಲಲಕ್ಷಣ ಮತ್ತು ಫಲ ೬, ಬಾಲಾರಿಷ್ಟವಿಚಾರ ಅವುಗಳ ನಿವಾರಣೋಪಾಯ ೭, ಆಯುರ್ದಾಯವಿಚಾರ ೮, ದಶಾಭುಕ್ತಿನಿರ್ಣಯ ೯, ಅಷ್ಟಕವರ್ಗವಿಚಾರ ೧೦, ಜೀವನೋಪಾಯವಿಚಾರ ೧೧, ರಾಜಯೋಗಸೂಚನೆ ಅವುಗಳ ಫಲವಿಚಾರ ೧೨, ೧೮೦೦ ಯೋಗಗಳ ಲಕ್ಷಣ ಮತ್ತು ಫಲ ೧೩, ಚಂದ್ರಸಂಬಂಧವಾದ ಯೋಗಗಳು ೧೪, ಒಂದಕ್ಕಿಂತಲೂ ಹೆಚ್ಚು ಗ್ರಹಗಳು ಒಂದೇಕಡೆ ಸೇರಿದರೆ ಅವುಗಳ ಫಲ ೧೫, ಸನ್ಯಾಸಯೋಗಗಳು ೧೬, ನಕ್ಷತ್ರಫಲಗಳು ೧೭, ರಾಶಿಫಲಗಳು ೧೮, ರಾಸಿಗಳ ಫಲ ಮತ್ತು ಕೇರಳಿಯೋಕ್ತ ಫಲಗಳು ೧೯, ದೃಷ್ಟಿಫಲಗಳು ೨೦, ಭಾವಲಕ್ಷಣ ಮತ್ತು ಆ ಫಲಗಳ ವಿಚಾರ ೨೧, ಕ್ಷೇತ್ರಫಲಗಳು ೨೨, ಗ್ರಹಗಳ ಅವಸ್ಥೆ ಅಷ್ಟಕವರ್ಗ ಫಲ ೨೩, ಅನಿಷ್ಟಯೋಗಗಳು ಅವುಗಳಿಂದಾಗುವ ಫಲಗಳು ೨೪, ಸ್ತ್ರೀಜಾತಕ ಅದರ ಫಲಗಳು ೨೫, ಮರಣಕಾರಣ ಅದರ ಫಲಗಳು ೨೬, ನಷ್ಟಜಾತಕ ಬರಿಯುವ ರೀತಿ ೨೭, ದ್ರೇಕ್ಕಾಣವರ್ಣನೆ ಪ್ರಶ್ನೆಗೆ ಬೇಕಾದ ಸಹಾಯವಿಷಯ ೨೮, ಅನುಕ್ರಮಣಿಕಾಸಂಗ್ರಹ ಮತ್ತು ಗ್ರಂಥಕರ್ತರ ವಂಶವರ್ಣನೆ:—

ಮೇಲೆ ಹೇಳಿರುವಂತೆ ಬರೆಯಲ್ಪಟ್ಟ ಒಂದು ಪುಸ್ತಕ ತಮ್ಮ ಬಳಿಯಲ್ಲಿದ್ದರೆ ೧೦ ಜನ ಜ್ಯೋತಿಷ್ಕರಿದ್ದರೆ ಎಷ್ಟು ಅನುಕೂಲವೋ ಅಷ್ಟು ಲನುಕೂಲ. ಇದು ಪ್ರೌಢರಿಗೂ, ಸ್ತ್ರೀಯರಿಗೂ ಧಾರಾಳವಾಗಿ ತಿಳಿಯುವಂತೆ ಉತ್ತಮಕಾಗದದಲ್ಲಿ ಪ್ರಿಂಟ್‌ಮಾಡಿಸಿದೆ, ಈ ತಿಂಗಳು ಆಖೈರಿನೊಳಗಾಗಿ ಆರ್ಡರ್ ಕೊಡುವವರಿಗೆ ೪-೦-೦ ರೂ. ವಿ. ಪಿ. ಛಾರ್ಜ ೦-೬-೦ ಆಣೆ ನಂತರ ೫-೦-೦ ರೂ. ಜಾಗತೆ ತರಿಸಿಕೊಳ್ಳಿ ನಂತರ ಈ ಬೆಲೆಗೆ ದೊರೆಯಲಾರದು.

ಇತರಪುಸ್ತಕಗಳು.

—:೦:—

ಟೀಕಾಜೈಮಿನಿ ೯೩೦ ಪುಟ ೪-೦-೦ ರೂ. ಸಟೀಕಹರಿಕಥಾಮೃತಸಾರ ೩೪೪ ಪುಟ ೧-೪-೦ ರೂ. ಕನ್ನಡದ್ವಾದಶಸ್ಕಂಧ ಭಾಗವತ ೩-೦-೦ ರೂ. ಶುಕಸಪ್ತತಿ ೭೦ ಕಥೆ ಶುದ್ಧಪ್ರತಿ ೨-೦-೦ ರೂ. ೪ ಜನ ಫಕೀರರ ಕಥೆ ೦-೮-೦. ಸಟೀಕಾಭೋಜರಾಜಚರಿತ್ರೆ ೦-೮-೦. ಇವುಗಳಲ್ಲದೆ ನಮ್ಮಲ್ಲಿ ಯಾವಾಗ್ಯೂ ಕನ್ನಡ, ಸಂಸ್ಕೃತ, ತೆಲಗು ಗ್ರಂಥಗಳು ದೊರೆಯುತ್ತೆ.

ಟಿ. ಯಮ್. ಕೃಷ್ಣಯ್ಯಶೆಟ್ಟಿ, ಬುಕ್‌ಡಿಪೋ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೊಂಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು
51 ಕಾಪಾಡುವುದರಲ್ಲಿ ಶ್ರೇಷ್ಠತಮವಾದ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ-ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು.

ಶೀತವಾಯು-ಕೆಮ್ಮು-ನೆಗಡಿ-ದಿನಜ್ವರ-ಮೂರರಜ್ವರ ನಾಲ್ಕರಜ್ವರ- ಮಲೇರಿಯಾಜ್ವರ- ತಲೆನೋವು- ಮೈಕೈನೋವು ಮತ್ತು ಭಾರ-ಅರೋಚಕ ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣಭೇದಿ-ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಸೆಳತ-ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೇ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ೫೦ ಮಾತ್ರೆ ೪ ಆಣೆ. ಇದಕ್ಕೆ ಒಂದು ಇನಾಮು. ವಿ. ಪಿ ಛಾರ್ಜ ಪ್ರತ್ಯೇಕ.

ಆಮೋದಿನಿ:— ಅಮೋಘವಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರವಾಡುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷ ಕೀರ್ತಿಯನ್ನು ಸಂಪಾದಿಸಿ ನಾನಾತರದ ಕೆಮ್ಮು, ದಮ್ಮು ಉಬ್ಬಸ, ವಾಂತಿ, ವಾಕರಿಕೆ, ಮಲಬಂಧ, ಅಗ್ನಿಮಾಂದ್ಯ, ಪಿತ್ತಸಂಕಟ, ಅರೋಚಕ, ಬಾಯಾರಿಕೆಗಳನ್ನು ತತ್ಕ್ಷಣ ಗುಣಪಡಿಸಿ ಕಳಕಳಿ ತೇಜಸ್ಸು ಮೂಡಿಕೆ ಧಾತುವೃದ್ಧಿಯುಂಟುಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೧೫೦ ಮಾತ್ರೆ ೪ ಆಣೆ. ಇದಕ್ಕೆ ಒಂದು ಇನಾಮು. ವಿ.ಪಿ. ಛಾರ್ಜ ಪ್ರತ್ಯೇಕ.

ವಿಳಾಸ— ಬಿ. ವಿ. ಪಂಡಿತ್,
ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರ್ ಡಿ॥

52

ದೊಡ್ಡ ಕಂಪೆನಿ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯು. ಎನ್. ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

ದಿ ಜನರಲ್ ಏಜೆನ್ಸಿ, ಮೈಸೂರು.

ಕಾದಂಬರಿಗಳು :— ಚಂದನಾರಾಣಿ ೧—೦; ಚರಿತಾ
ಮೃತಂ ೦-೧೨-೦; ರಾಜಕಥಾವಳಿ ೦-೧೨-೦; ಪೀಚುರಿನಚ
ತ್ರೈರಿ ೦-೮-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೬-೦;
ಸೀತೆ ೦-೧೨-೦; ಸಾಹಸಿಕೆ, ಕಲಾನಾಥ ೦-೪-೦; ನುನಾ
ಲಕ್ಷ್ಮಿ ೦-೬-೦; ತಾರಾಸುಂದರಿ ೦-೪-೦; ಸನ್ಮಿನಿ ೦-೫-೦;
ಸತ್ಯಸಂಜೀವಿನಿ ೦-೪-೦; ಕೊಹಿನೂರು ೦-೧೦-೦; ಅನಂ
ದಮಠ ೧-೦-೦; ರಾಘವಾರಾಣಿ ೦-೩-೦; ಸೀತಾನವನಾಕ
೧-೧೨-೦; ರಜನಿ ೦-೧೨-೦. 53

22 ಊದುಬತ್ತಿಗಳು.

ವಿಧವಿಧವಾದ ಊದುಬತ್ತಿಗಳು ಸೇರು ೧ ಕ್ಕೆ ೧-೦-೦ ೨-೦-೦; ೨-೮-೦; ೩-೦-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೦ ಆಣೆ ದಶಾಂಗಧೂಪ ೧ ಕ್ಕೆ ೮ ಆಣೆ ಧೂಪದಗಟ್ಟಿ ೧ ಕ್ಕೆ ೦-೪ ಜೆ ಬಾಲ್ಗಿಂಡುವ ಬಿಂಸಿ ೧ ಕ್ಕೆ ೪ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು. ಟಿ. ಎಲ್. ಉಪಾಧ್ಯಾಯ, ಸುಗಂಧಕಾರಿ, ಮೈಸೂರು.

ನ್ಯಾಯದರ್ಪಣ. 35

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯೂ ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಿಸಿಪ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸೂ, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಅಚರ ಕೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ಪತ್ರಿಕೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯೂ ಕೋರ್ಟು ಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರು ತ್ತವೆ. ಬೆಲೆ ರೂ. 1-8-0. ವಿ. ಪಿ. ಮೂಲ್ಯ 1-12-0.
ಎಂ. ಎಸ್. ನಂಜಪ್ಪನವರು, ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

42 ಸಚಿತ್ರ ಶುಕಸಪ್ತತಿ ಕಥೆಗಳು ರೂ. ೧-೪-೦ (೫೧೦ ಪುಟ) ಅಂಚೆ ಖರ್ಚು ೪ ಆಣೆ. ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ ರೂ. ೧-೪-೦ (೪೭೩ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ! ನಾವ್ಯಾರಿಯೂ ಬೇಕಾದರೆ, ವಾಸ್ತವಿಕರಿಯೋ, ವಿದ್ವತ್ತೆ, ಲೋಕರೀತಿಯು ನ್ನು ತಿಳಿಯಬೇಕಿದ್ದರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನು ಪೇಕ್ಷಿಸಿದರೆ, ಉತ್ಸಾಹಕ್ಕಸ್ಸಿದಂತಲ್ಲಾಸ್ಪಿದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೩೦ ಪುಟಗಳುಳ್ಳ ಕೂಡಿರ ಚಿತ್ರ ಕತೆಗಳುಳ್ಳ ಲೇಗಲಾಗ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ. ೧-೪-೦ ಅಂಚೆ ಖರ್ಚು ೩ ಆಣೆ. ಈಗಲೇ ಬೇಗ ನಿರಾಸ್ಸಲ್ಲಿ ಇನ್ನೂ ಅನೇಕಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.
ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಕಾಲಾಮಿಸ್ರಿಯು ಕಾಬೂಲ್ ದೇಶದಲ್ಲಿ ಪೌಂಡು ೧ ಕ್ಕೆ ೧-೦-೦ ಇದ್ದು ಈಗ ಪೌಂಡು ೧ಕ್ಕೆ ೩-೮-೦ ಆಗಿದೆ. ಆದ್ದರಿಂದ ಇದರಕ್ರಯ ೬-೦-೦ ರೂಪಾಯಿ ಮಾಡಿರುತ್ತೆ. 9

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬಾ.

ಈ "ಪಂಜಾಬ್ ಸಾಲಾಮಿಸ್ರಿ ಮುರಬ್ಬಾ" ವಿನ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಬರಿಯುತ್ತಿದ್ದರೂ, ಮೂತ್ರವಿಂದಿಗೆ ವೀರ್ಯವು ಹರಿಯುತ್ತಿದ್ದರೂ, ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕಡಿಮೆಯಾಗಿದ್ದರೂ, ದೂರ ನಡೆಯುವುದರಿಂದ ಬೇಲಬುದ್ಧಿ ಬರುವುದೂ, ತಲೆಯು ನೋವು ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮಿದುಳಿಗೆ ಬಲವನ್ನುಂಟುಮಾಡುವುದು ಹಳೇ ತಲೆ ನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಬೇಯಿಸುವುದು, ಸೊಂಟದ ನೋವು ಸ್ವಪ್ನ ಮಾತ್ರವು ಇರಲಾರದು. ಈ ಪಂಜಾಬ್ ಸಾಲಾಮಿಸ್ರಿ ಮುರಬ್ಬಾಕ್ಕೆ ತಾಂಬ್ರದ ಮತ್ತು ಭಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು.

ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂ. ಬಹುಮಾನವಾಗಿ ಕೊಡಲ್ಪಡುವುದು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನದಹಣವನ್ನು ನಾವು ಕೊಡದೆ ನಿರಾಕರಿಸಿದ್ದುದಾದರೆ ಸರ್ಕಾರದ ಮೂಲಕ ನನ್ನಿಂದ ವಸೂಲುಮಾಡಬಹುದು. ೧ಕ್ಕೆ ರೂ. ೬-೦-೦. ಪೋಸ್ಟ್‌ಖರ್ಚು ಬೇರೆ. ಅನುಮಾನವಿದ್ದರೆ ಔಷಧದರಂಗದ ಇರುತ್ತೆ.
ಡಿ. ಮನ್ನಾಲಾಲ್, 5 ಹಾಜಿ ಸಾಹೇಬ್ ಮಹಡಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ.
ನಮ್ಮ ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೊ., ದೊಡ್ಡಪೇಟೆ, ಬೆಂಗಳೂರು ಸಿಟಿ.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸ) ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಭಿಮ್ಮೆನ್ನುವುದು, ಈ ಯಾವುದಾಗಿದ್ದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮಿದುಳಿಗಾಗಲಿ ಕೇಡುಕಿಲ್ಲ. ಒಂದು ಡಬ್ಬಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯೂ ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜನ್ ಡಬ್ಬಿಗೆ ೨-೮-೦

ಉತ್ತಮವಾದ ನಶ್ಯದಪುಡಿ.

ಧಾತು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೦ ತೊಲೆ ತೂಕದ ಸೀಸೆ ೧೦ ಆಣೆ ೫ ಸೀಸೆಗೆ ೨-೮-೦

ಮುಖೋಲ್ಲಾಸಿನೀ ಹೊಗೆಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು ನಾಲಿಗೆ ಅರೋಚಕಗಳು ಹೋಗುವುವು. ನೀವುಉಪಯೋಗಿಸುವ ಬರೀ ಹೊಗೆಸೊಪ್ಪಿಗೆ ಬದಲಾಗಿ ಏಲಕ್ಕಿ, ಲವಂಗ, ಕರ್ಪೂರಕದ ವಾಸನೆಗಳಿಂದ ಮೆರೆಯುವ ಈ ಹೊಗೆಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗೆ ೧-೧೪-೦ ಪೋಸ್ಟೇಜ್ ಬೇರೆ.
ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ, ಗೋಪನಶೆಟ್ಟಿಪುರ, ಹನೂರು ಪೋಸ್ಟ್, ಕೊಳ್ಳೇಗಾಲದ ತಾಲ್ಲೂಕು.

31

ಪಾಳ್ಯದವೆಂಕಟಾಚಲಪಂಡಿತರಸಿದ್ಧೌಷಧಗಳು. 20



ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಜವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೊತೆಗ (ಬಾತ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಇಗ್ಗಿನ ನೋವು, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತವೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಜೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿ ಪಡಿಸುತ್ತವೆ. ಸ್ತ್ರೀಯರ ಋತುಶೂಲೆ, ಮಕ್ಕಳ ಕೆಮ್ಮು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತವೆ. ಇವನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ. ೩೦ ಮಾತ್ರೆಗಳುಳ್ಳ ಕುಪ್ಪಿಗೆ ೮ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು; ೧ ರಿಂದ ೧೦ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈ ವಿಜಾರಿಕೆಯಿಂದು ತೋರಿದಾಗಲೂ, ಅಶಕ್ತಿಯಾಗಿದ್ದಾಗಲೂ ರೋಗದವರಿಗೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮ್ ಸೇರಿಲ್ಲ. ಹೊಟ್ಟೆಯುಬ್ಬರಿಸಿದೆ, ಮೂತ್ರವು ಕಟ್ಟಿದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಬೇಕಾಗಬಹುದೆಂದು ಹಿಂದೆಯೇ ಕೊಂಡು ಇಟ್ಟುಕೊಳ್ಳುವುದು ನಿಮ್ಮಲ್ಲಿರುವ ದುಃಖೋಂದು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಷಧವಿದಾಗಿದೆ.
ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧೦ ಆಣೆ.
ಪೋಸ್ಟ್‌ಖರ್ಚು ಬೇರೆ.
ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

೧೯೧೪ ನೆಯ ಇಸವಿ ಸೆಪ್ಟೆಂಬರ್ ತಾ|| ೨೭ರಿಂದ ೧೯೧೪ ಯ ಅಕ್ಟೋಬರ್ ತಾ|| ೩ ರ ವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೬ ನೆಯ ಆನಂದನಾಮ ಸಂ|| ರ ಆಶ್ವಯುಜ ಶು|| ಅಷ್ಟಮಿಯಿಂದ ಆಶ್ವಯುಜ ಶು|| ಚತುರ್ದಶಿ ವರೆಗೆ ಪಂಚಾಂಗ.

ತಾ||	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ಕರ
27	೧ ಭಾನು	ಅಷ್ಟ	8-14	ಪೂಷಾ	53-12	1
28	೨ ಸೋ	ನವ	4-49	ಉಷಾ	52-17	1
29	೩ ಮಂ	ದಶ	2-28	ಶ್ರವಣ	52-38	1
30	೪ ಬುಧ	ಏಕಾ	1-9	ಧನಿಷ್ಠ	53-52	1
1	೫ ಗುರು	ದ್ವಾ	1-7	ಶತಭಿಷ	56-39	1
2	೬ ಶುಕ್ರ	ತ್ರ	2-25	ಪೂಭಾ	60-	
3	೭ ಶನಿ	ಚತು	4-58	ಪೂಭಾ	0-59	1

(1) ದುರ್ಗಾಷ್ಟಮಿ, ತಿರುಪತಿ ವೆಂಕಟಾಚಲಸ್ವಾಮಿ ರಥಃ. (2) ಸ್ವಾಯಂಭುವಮನ್ವಾದಿ, ಮಹಾನವಮಿ, ಆಯುಧಾದಿಪೂಜಾ, ಅವಲುದೇವತಾಪೂಜಾ, ಶ್ರವಣೋಪೋಷಣ. (3) ವಿಜಯದಶಮಿ, ಹಯಗ್ರೀವಜಯಂತಿ, ಮೃತ್ಯುಯೋಗಃ. (8) ವಿಜಯದಶಮಿ, ಶಮೀಪೂಜಾ, ವೆಂಕಟೇಶಜಯಂತಿ, ವೇದಾಂತಾಚಾರ್ಯ ತಿರುನಕ್ಷತ್ರಂ. (4) ಸರ್ವತ್ರೈಕಾದಶೀ. (5) ರಾತ್ರಿ ಕುವಿ, ರಂ, ಪ್ರದೋಷಃ, ಗೋದ್ವಾದಶೀ.

ಮೈಸೂರ್ ಸ್ಟಾರ್ ಪ್ರೆ. ವಿಜಯಾತ್ಮಜ್ಯೋತಿಷದಿಂದ ಶ್ರೀರಾಮ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED, NO M 124

ಮೈಸೂರ್ ಸ್ಟಾರ್

REGISTERED, NO M 124

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು

ವಾರ್ಷಿಕ ಚಂದಾ ೧—೦—೦

ಅಂಚೆವೆಚ್ಚ ಸೇರಿ ೧—೦—೮

ಸಂಪುಟ ೨೫. ಮೈಸೂರ್ ಸ್ಟಾರ್ ೧೯೧೪ ನೆಯ ಇಸವಿ ಅಕ್ಟೋಬರ್ ತಾರೀಖು ೪ನೆಯ ಭಾನುವಾರ (ಸಂಚಿಕೆ ೪೦)

ಮೈಸೂರಿನಲ್ಲಿ ಸೇರಿದ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮೈಸೂರು ಸಂಸ್ಥಾನದ ದಿವಾನ್‌ರವರು ಮಾಡಿದ ಉಪನ್ಯಾಸದ ಮುಖ್ಯಭಾಗಗಳು.

ಮಹಾಶಯರೇ,

ಶ್ರೀಮನ್ಮಹಾರಾಜ ರಾಜಶ್ರೀರವರ ಅಪ್ಪಣೆಯನುಸಾರವಾಗಿ ದಸರಾ ಪ್ರಜಾಪ್ರತಿನಿಧಿಗಳ ಈ ಸಭೆಯನ್ನು ತೆರೆಯುವುದಕ್ಕೆ ಸಂತೋಷಪಡುತ್ತೇನೆ. ಕಳೆದ ಸರ್ಕಾರೀ ವರ್ಷದಲ್ಲಿ ನಡೆದ ಸಂಸ್ಥಾನದ ಆಡಳಿತಗಳ ವಿಷಯವನ್ನೂ, ಶ್ರೀಮನ್ಮಹಾರಾಜರವರ ಪ್ರಜೆಗಳ ಪುರೋಭಿವೃದ್ಧಿಗಾಗಿ ಈಗ ಕೈಗೊಂಡಿರುವ ಮತ್ತು ಮುಂದೆ ಕೈಗೊಳ್ಳಬೇಕೆಂದಿರುವ ವಿಷಯಗಳನ್ನೂ ತಮ್ಮಗಳಿಗೆ ತಿಳಿಯಪಡಿಸುವುದಕ್ಕಾಗಿ ನಾವು ಉದ್ಯುಕ್ತರಾಗಿದ್ದೇವೆ.

ಯುದ್ಧ.

ಪ್ರಕೃತದಲ್ಲಿ ಎಲ್ಲರ ಮನಸ್ಸನ್ನೆಳೆಯುವ ಇತರ ಭಾವನೆಗಳನ್ನು ಮರೆಯಿಸಿ ಪರಮಮುಖ್ಯವೆನಿಸಿಕೊಂಡಿರುವ, ಯುರೋಪಿನ ಖಂಡವನ್ನು ಅದ್ಭುತವಾಗಿ ಅಲ್ಲೋಲಕಲ್ಲೋಲವನ್ನು ಮಾಡುತ್ತಿರುವ ಪ್ರಳಯಯುದ್ಧವಾಗಿದೆ. ಸಂಚಾರ ಸಮಾಚಾರ ಸಾಧನಗಳು ಹೆಚ್ಚಿರುವುದರಿಂದ, ಈ ಯುದ್ಧದ ಪರಿಣಾಮವು ಪ್ರಪಂಚದ ನಾನಾ ಭಾಗಗಳಲ್ಲಿ ವಾಸಮಾಡುವ ಸಕಲ ಜನರ ಅನುಭವಕ್ಕೂ ಬಂದಿರುತ್ತದೆ. ಬ್ರಿಟಿಷ್ ಚಕ್ರಾಧಿಪತ್ಯದ ಒಂದುಭಾಗವಾಗಿರುವುದರಿಂದ ಇಂಡಿಯಾ ದೇಶವು ಯುದ್ಧದಲ್ಲಿ ವಿಶೇಷ ಸಂಬಂಧವನ್ನು ಪಡೆದಿರುತ್ತದೆ. ಇಂಥಾ ಯುದ್ಧಕಾಲದಲ್ಲಿಯೂ ಕೂಡ ವಿಶೇಷ ಕಳವಳಕ್ಕಾಗಲಿ ಚಿಂತೋದ್ವೇಗಕ್ಕಾಗಲಿ ಅವಕಾಶವಿಲ್ಲದಂತೆ ಯಥಾಪ್ರಕಾರವಾಗಿ ನಾವು ನಮ್ಮ ನಿತ್ಯಕರ್ಮವನ್ನು ನಡೆಸಿಕೊಂಡು ಬರುತ್ತಿರುವುದಕ್ಕೆ ಬ್ರಿಟಿಷ್ ಚಕ್ರಾಧಿಪತ್ಯದ ಪ್ರಬಲವಾದ ನಾವಿಕಬಲವೂ ಬ್ರಿಟಿಷರವರ ರಾಜ್ಯಭಾರಕ್ರಮದ ಕಟ್ಟುನಿಟ್ಟುಗಳ ವಿಚಕ್ಷಣೆಯೂ ಕಾರಣಗಳಾಗಿರುತ್ತವೆ. ಈ ಯುದ್ಧವು ಬ್ರಿಟಿಷ್ ಇಂಡಿಯಾದೇಶದಲ್ಲಿನ ಸಾರ್ವಭೌಮರ ಪ್ರಜೆಗಳನ್ನು ಸ್ವಾಮಿದ್ರೋಹಿಭಾವದಲ್ಲಿ ನೋಡಲಿಂತ ಕೇವಲ ಸಮಾನನೀತಿಗಳನ್ನಾಗಿ ಮಾಡಿದೆ. ಮತ್ತು ರಾಜರುಗಳಿಗೂ, ಪ್ರಜೆಗಳಿಗೂ, ಸಾಮ್ರಾಜ್ಯಕ್ಕೂ, ಸಾಮಂತರಾಜ್ಯಗಳಿಗೂ, ಮನೋಭಾವ ಸನ್ನಿವೇಶವನ್ನೂ, ಕ್ರಮಲಾಭದ ಏಕರೂಪತೆಯೂ ಈಗಿರುವಷ್ಟು ಹಿಂದೆ ಯಾವ ಕಾಲದಲ್ಲಿಯೂ ಇದ್ದಂತೆ ತಿಳಿದುಬರಲಿಲ್ಲ.

ಒಂದು ಸಾಮಂತರಾಜ್ಯವಾಗಿರುವುದರಿಂದ ನಾವೂ ನಮ್ಮ ಕರ್ತವ್ಯವನ್ನು ನೆರವೇರಿಸಲು ಪ್ರಯತ್ನಪಟ್ಟಿದ್ದೇವೆ. ಶ್ರೀಮನ್ಮಹಾರಾಜರವರು ತಮ್ಮ ಸೈನ್ಯಗಳನ್ನೂ, ತಮ್ಮ ಸಂಸ್ಥಾನದ ಸರ್ವಸ್ವವನ್ನೂ, ಸ್ವಲ್ಪವು ಹಿಂದೆಗೆಯದೆ ಸಾರ್ವಭೌಮರ ಸರ್ಕಾರದವರ ಅಧೀನಕ್ಕೆ ಒಪ್ಪಿಸಿರುತ್ತಾರೆ. ಶ್ರೀಮನ್ಮಹಾರಾಜರವರು ಈಗ ಯುರೋಪ್ ಖಂಡದಲ್ಲಿ ಚಕ್ರಾಧಿಪತ್ಯದ ಪರವಾಗಿ ಯುದ್ಧಮಾಡುತ್ತಿರುವ ಇಂಡಿಯಾ ದೇಶದ ಸೈನ್ಯದ ಖರ್ಚಿಗಾಗಿ ಐವತ್ತುಲಕ್ಷ ರೂಪಾಯಿ ದೊಡ್ಡಮೊಬಲಗನ್ನು ಕೊಟ್ಟಿರುತ್ತಾರೆ.

ಕಾಲಸ್ಥಿತಿ.

ಯುದ್ಧ ವಿಷಯದನಂತರದಲ್ಲಿ ನಾವು ವಿಚಾರಮಾಡಬೇಕಾಗಿರುವುದು ಕಾಲಸ್ಥಿತಿಗೆ ಸಂಬಂಧಪಟ್ಟದ್ದಾಗಿರುತ್ತದೆ. ಹೋದವರ್ಷದಲ್ಲಿ ಮಳೆಯ ಕೊರತೆಯು ಎಲ್ಲಾ ಕಡೆಗಳಲ್ಲಿಯೂ ಸಮವಾಗಿ ಇರಲಿಲ್ಲ. ತದನಂತರ ಪ್ರಾರಂಭದಲ್ಲಿ ಮಳೆ ಸರಿಯಾಗಿ ಬಿದ್ದಿತು. ಜೂನ್ ಮಾಹೆಯಿಂದ ಅಕ್ಟೋಬರ್ ವರೆಗೆ ಸಂದ ಐದುತಿಂಗಳ ಮಳೆಗಾಲದಲ್ಲಿ, ಬೆಂಗಳೂರಿನಲ್ಲಿ ಒಟ್ಟು 19.38 ಇಂಚು ಮಳೆಯಾಯಿತು. ಅದರ ಹಿಂದಿನ ವರ್ಷದಲ್ಲಿ 27.09 ಇಂಚು ಮಳೆಯಾಯಿತು. ಸಂಸ್ಥಾನದಲ್ಲೆಲ್ಲಾ ಸರಾಸರಿ 29.25 ಇಂಚು ಮಳೆ ಬಿದ್ದಿತು.—ಎಂದರೆ ಸರಾಸರಿ ದೀರ್ಘಕಾಲದ ಮಳೆಗಿಂತಲೂ 10.32 ಇಂಚು ಮಳೆ ಕಡಿಮೆಯಾಯಿತು. ವಿಶೇಷವಾಗಿ ಬಿದ್ದ ಮುಂಗಾರುಮಳೆಯು ದೀರ್ಘಕಾಲದವರೆಗೂ ಎಂದರೆ ಸೆಪ್ಟೆಂಬರ್ ವರೆಗೂ ಬರಲಿಲ್ಲ. ಹಿಂಗಾರುಮಳೆ ಮಾತ್ರ ನಮಗೆ ಅಕ್ಟೋಬರ್ ಆದಿಭಾಗದಲ್ಲಿ ಕೆಲವು ದಿನಗಳ ಮಟ್ಟಿಗೆ ಒದಗಿತು. ಈ ಐದು ತಿಂಗಳುಗಳಲ್ಲಿಯೂ ಬಿದ್ದ ಮಳೆಯಿಂದ ವಿಶೇಷ ಪ್ರಯೋಜನವೇನೋ ಆಯಿತು. ಆದರೆ ಅಕ್ಟೋಬರ್ ಮಾಹೆಯ ಮೊದಲನೇ ವಾರದ ಳೆಯೇ ಹಿಂಗಾರು ಮಳೆಯು ತಟ್ಟನೆ ನಿಂತುಹೋದುದರಿಂದ ಇದರ ಪ್ರಯೋಜನಕ್ಕೆ ಸ್ವಲ್ಪಮಟ್ಟಿಗೆ ಕುಂದಕವಾಯಿತು.

ಇದರಿಂದ ರಾಗಿ ಬೆಳೆಯ ವಿಸ್ತೀರ್ಣವು ಕಡಿಮೆಯಾಗಿ, ಹುರುಳಿ ಬೆಳೆಯು ವಿಸ್ತೀರ್ಣವು ಹೆಚ್ಚಿತು. ಈ ಎರಡರ ಸ್ಥಿತಿಯೂ ಬೆಳೆಯೂ ಚೆನ್ನಾಗಿ ಆಗಲಿಲ್ಲ. ಕೆರೆಗಳಿಗೆ ಯಾವಾಗಲೂ ಬರುವಂತೆ ನೀರು ಬರಲಿಲ್ಲ. ಮೈದಾನ ಪ್ರಾಂತದಲ್ಲಿ ಬಹುತ್ರದ ಬೆಳೆಗೆ ಬಾಧಕವುಂಟಾಯಿತು. ಆದರೆ, ವಿಶೇಷವಾಗಿ ಬಹುತ್ರದ ಬೆಳೆ ಬಾಗಿದ ದುಡಿತವು. ಮತ್ತು ಮೈಸೂರು ಡಿಸ್ಟ್ರಿಕ್ಟಿನ ಮುಖ್ಯ ಪ್ರದೇಶಗಳಲ್ಲಿ ಬತ್ತದ ಬೆಳೆ ಅತ್ಯುತ್ತಮವಾಗಿದ್ದಿತು. ಮಲೆನಾಡಿನ ಅಡಕೆ ಬೆಳೆ ಚೆನ್ನಾಗಿ ಇದ್ದಿತು.

ಈ ವರ್ಷದಲ್ಲಿಯೂ ಮಳೆಯು ಸುರುವಾಗಿ ಬಂದಂತೆ ಕಾಣಲಿಲ್ಲ. ಸಾಧಾರಣವಾಗಿ ಬರುವ ಮುಂಗಾರುಮಳೆಯು ಬಿಳಿಕಾಣಬರಲೇ ಇಲ್ಲ. ಎಲ್ಲಾ ಕಡೆಯೂ ಬೆಳೆಯು ಇಲ್ಲ. ಮಲೆನಾಡಿನಲ್ಲಿ ಬಿದ್ದ ಮಳೆಯೂ ಕೂಡ ಜೂನ್ ತಿಂಗಳಲ್ಲಿ 2.59 ಇಂಚು ಮಳೆಯೂ, ಜುಲೈ ತಿಂಗಳಲ್ಲಿ 13.33 ಇಂಚು ಮಳೆಯೂ ಆಯಿತು. ಸರಾಸರಿ ಆ ತಿಂಗಳುಗಳಲ್ಲಿ 1.51 ಇಂಚು, 10.25 ಇಂಚು ಮಳೆಯಾಗಬೇಕಾಗಿತ್ತು. ಆದರೆ ಮೈದಾನ ಪ್ರದೇಶಗಳಲ್ಲಿ ಸದರಿ ತಿಂಗಳುಗಳಲ್ಲಿ ಕ್ರಮವಾಗಿ ಸರಾಸರಿ 3.99 ಇಂಚು, 3.61 ಇಂಚು ಮಳೆಯಾಗಬೇಕಾಗಿರುವಲ್ಲಿ, 0.72 ಇಂಚು, 2.35 ಇಂಚು, ಈ ರೀತಿಗೆ ಆಯಿತು. ಆಗಸ್ಟ್ ತಿಂಗಳಲ್ಲಿ ಅನುಕೂಲವಾಗಿ ಮಳೆಯಾದುದರಿಂದ, ಕಾಲಸ್ಥಿತಿಯು ಸ್ವಲ್ಪಮಟ್ಟಿಗೆ ಉತ್ತಮವಾಯಿತು. ಆದರೆ ಅನೇಕ ಪ್ರದೇಶಗಳಲ್ಲಿ ಸೈರು ಇನ್ನೂ ಬಿತ್ತನೆಯಾಗಿರುವುದರಿಂದ, ಮುಂದೆ ಕೆಲವು ವಾರಗಳಲ್ಲಿ ಬೀಳುವ ಮಳೆಯನ್ನು ನೋಡಿಕೊಂಡು ಸ್ಥಿತಿಯು ತಿಳಿಯಬೇಕಾಗಿದೆ. ಒಟ್ಟಿನಲ್ಲಿ ಸ್ಥಿತಿ ಆತಂಕಕರವಾಗಿಲ್ಲ.

ಧಾರಣೆಗಳು.

ಜಾಗ್ರತೆಯಾಗಿ ಸರಕುಗಳು ಸಾಗಲು ಅನುಕೂಲವಿರುವುದರಿಂದಲೂ, ದೇಶಾಂತರಗಳ ಸ್ಥಿತಿಗಳು ಬದಲಾಯಿಸುತ್ತಿರುವುದರಿಂದಲೂ, ಕೆಲವು ವರ್ಷಗಳಿಂದೀಚೆಗೆ ಧಾರಣೆಗಳು ಏರುತ್ತಿವೆ. ಕಳೆದ ಎರಡು ಋತುಗಳಲ್ಲಿಯೂ ಮಳೆ ಕಡಿಮೆಯಾದ ಕಾರಣ ಈ ಧಾರಣೆಗಳು ಕ್ರಮವಾಗಿ ಏರುತ್ತಲಿದ್ದವು. ಈಗ ವಿಪರೀತವಾಗಿವೆ. ಇದರಿಂದ ಬಡವರು ಕಷ್ಟಕ್ಕೊಳಗಾಗಿ, ಕಸುಬುಗಾರರೂ, ಕೂಲಿಯವರು ಕಷ್ಟ ಪಡುವಂತಾಗಿರುತ್ತದೆ. ಧಾನ್ಯಕ್ಕೆ ಒಳ್ಳೇ ಬೆಲೆ ದೊರೆಯುತ್ತಿರುವುದರಿಂದ ವ್ಯವಸಾಯಗಾರರಿಗೆ ಲಾಭವುಂಟಾಗಿರುತ್ತದೆ. ಆದರೆ ಕೈಸೇರುವ ಹಣವು ಸಾಲಗಳಿಗೆ ಹೋಗುತ್ತಿದ್ದು, ಬೆಳೆ ಸ್ವಲ್ಪವಾದ ಕಾರಣ ಕಂದಾಯಕ್ಕೆ ಬಡವರ ಕಷ್ಟ ಹೆಚ್ಚಾಗಿರುತ್ತದೆ.

ಕಷ್ಟನಿವಾರಣೋಪಾಯಗಳು.

ಈಗಿನ ಸ್ಥಿತಿಯ ನಿವಾರಣೆಗೆ ತಮಗೆ ಸಾಧ್ಯವಾದ ಎಲ್ಲಾ ಉಪಾಯಗಳನ್ನೂ ಸರ್ಕಾರದವರು ಮಾಡುತ್ತಿದ್ದಾರೆ. ಕೆರೆಯ ಅಂಗಳಗಳನ್ನು ಸಾಗುವಳಿಗೆ ಕೊಡಿಸುವ ಏರ್ಪಾಟು ಮಾಡಿರುತ್ತದೆ. ಕಸುಬುದಾರರ ಸರ್ಕಾರದ ಕಟ್ಟಡಗಳನ್ನು ಸರಿಯಿಸುವ ಕೆಲಸಗಳನ್ನು ನಡೆಸುವುದಕ್ಕೆ ಏರ್ಪಾಟಾಗಿದೆ. ದನಗಳ ಮೇವಿಗಾಗಿ ಸಂಸ್ಥಾನದ ಕಾವಲುಗಳನ್ನು ಬಿಟ್ಟುಕೊಡಲಾಗಿದೆ. ಬೇಸಾಯಗಾರರಿಗೆ ಸಾಲ ಕೊಡುವುದಕ್ಕೂ, ಬೀಜದ ವಿತರಣೆಗೂ, ಕಂದಾಯ ಬಾಕಿ ವಸೂಲನ್ನು ಮುಂದಕ್ಕೆ ಹಾಕುವುದಕ್ಕೂ, ಆಜ್ಞೆಗಳನ್ನು ಕೊಡುವುದಕ್ಕಾಗಿ ಕೆಲವು ಅಧಿಕಾರಗಳನ್ನು ಕೊಡಲ್ಪಟ್ಟಿವೆ. ಭಾರೀ ಹಣವನ್ನು ಮಂಜೂರುಮಾಡಿದೆ.

ಈ ಸಂಬಂಧದಲ್ಲಿ ಗ್ರಾಮಾಂತರಗಳಲ್ಲಿ ಬರುಗಳನ್ನು ಒದಗಿಸಿರುವ ಕಾಮಗಾರಿಯನ್ನು ಸತ್ವರದಿಂದ ನಡೆಯುವಂತೆ ಮಾಡಲು ಯಾಗಿ ಪಂಚಕರ್ಮಗಾರರಿಗೆ ನಿರ್ದೇಶವಿದೆ. ಇವುಗಳಲ್ಲದೆ ಕೃಷಿಕರಿಗೆ ತಮ್ಮ ಪಟ್ಟಿಯನ್ನು ಪೂರ್ವಮಟ್ಟಕ್ಕೆ ಗುಣವಾಗುವಂತೆ ಆಗಿದೆ. ಅನೇಕ ಗ್ರಾಮಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಸಿದ್ಧರಾಗಿರುವುದರಿಂದಲೂ, ಪಬ್ಲಿಕ್ ವರ್ಕ್ಸ್ ಮತ್ತು ರೈಲ್ವೆ ಇಲಾಖೆಗಳಲ್ಲಿ ಕೆಲವು ಭಾರಿ ಕಾಮಗಾರಿಗಳಿಗೆ ಹಣವು ಮಂಜೂರಾಗಿರುವುದರಿಂದಲೂ ಸುಮಾರು ಈ ಕೆಲಸಗಳು ಸಂಸ್ಥಾನದಲ್ಲಿ ಎಲ್ಲಲ್ಲಿ ನಡೆಯುತ್ತಿರುವುದರಿಂದಲೂ, ಕೆಲಸಕ್ಕೆ ಸೇರಬೇಕೆನ್ನುವ ಜನರಿಗೆ ಕೆಲಸವು ದೊರೆಯುವಂತೆ ಅವಕಾಶವಾಗಿದೆ. ಈ ವರ್ಷ ಪೂರಾ ಹೇಗೋ ಅದು ನಮಗೆ ಇನ್ನು ಸ್ವಲ್ಪಕಾಲದಲ್ಲಿ ತಿಳಿಯುವುದು.

(ಆಕ ಮೈಸೂರಿಗೆ ಲಾರ್ಡ್ ಹಾರ್ಡಿಂಜ್‌ರವರು ದಯಮಾಡಿಸಿದ್ದಾಗ ಅವರನ್ನು ಸತ್ಕರಿಸಿದ ಸಡಗರವೂ, ಅವರ ಪತ್ನಿಯವರ ಮೃತಿಯಿಂದ ಉಂಟಾದ ದುಃಖ, ಮೈಸೂರು ಸಂಸ್ಥಾನಕ್ಕೂ ಸಾರ್ವಭೌಮ ಸರ್ಕಾರಕ್ಕೂ ಹಿಂದೆ ನಡೆದಿದ್ದ ಕರಾರನ್ನು ಗೌರವತರವಾದ ರೀತಿಯಲ್ಲಿ ಬದಲಾಯಿಸಿರುವುದೂ, ಈ ಸಂಗತಿಗಳು ತಿಳಿಸಲ್ಪಟ್ಟಿರುವುವು. ಸ. ಪ್ರ.)

ಸಾರ್ವಜನಿಕ ಸಭೆಯಲ್ಲಿ ಬದಲಾವಣೆಗಳು.

ಶ್ರೀಮನ್ಮಹಾರಾಜರವರಿಂದ ಮಂಜೂರ್ ಮಾಡಲ್ಪಟ್ಟ ಹೊಸನಿಬಂಧನೆಗಳಲ್ಲಿ ತನಗೆ ತಿಳಿಸಲ್ಪಟ್ಟ ನ್ಯಾಯವಿಧಾಯಕ ಸಭೆಯ ಸಂಬಂಧವಾದ ಬದಲಾವಣೆಗಳನ್ನು ಸಂಪೂರ್ಣವಾಗಿ ಜಾರಿಗೆ ತರಲಾಗಿರುತ್ತದೆ. ಈ ಸಭೆಯಿಂದ ಚುನಾಯಿಸಲ್ಪಟ್ಟ ನಾಲ್ಕುಜನ ಮೆಂಬರುಗಳನ್ನೂ, ಡಿಸ್ಟ್ರಿಕ್ಟುಗಳಿಂದ ಚುನಾಯಿಸಲ್ಪಟ್ಟ ನಾಲ್ಕುಜನ ಮೆಂಬರುಗಳನ್ನೂ ನಿಯಮಿಸಿಕೊಳ್ಳತಕ್ಕ ವಿಷಯವೂ. ಸರ್ಕಾರೀ ಆಡಳಿತಗಳನ್ನು ಕುರಿತು ಸವಾಲುಗಳನ್ನು ಒಳ್ಳೆ ಪ್ರಶ್ನೆಗಳನ್ನು ಕೇಳುವ ಹಕ್ಕೂ, ಬಜೆಟ್ಟನ್ನು ಚರ್ಚಿಸತಕ್ಕ ಹಕ್ಕೂ ನಮಗೆ ಸಹ ಬದಲಾವಣೆಗಳಲ್ಲಿ ಸೇರಿರುತ್ತವೆ.

ಈ ರೀತಿ ವಿಸ್ತರಿಸಲ್ಪಟ್ಟ ಸಭೆಯು ಕಳೆದ ವರ್ಷದಲ್ಲಿ ಮೂರಾವರ್ತಿ ಸೇರಿತು, ಮತ್ತು ಈ ಸಂಸ್ಥಾನದ ಬಜೆಟ್ಟನ್ನು ಫೈನಾನ್ಷಲ್ ಸೆಕ್ರೆಟರಿಯವರ ವಿವರಣೆಯೊಡನೆ ಕಳೆದ ಜೂನ್ ಮಾಹೆಯಲ್ಲಿ ಸದರಿ ಸಭೆಯ ಮುಂದೆ ಚರ್ಚೆಗೆ ತರಲಾಯಿತು. ಜೂನ್ ವರೆಯ ತಾರೀಖಿನಲ್ಲಿ ಚರ್ಚೆಯು ನಡೆಯಿತು. ಅದರಲ್ಲಿ ಸ್ವಲ್ಪ ಹೆಚ್ಚುಕಡಿಮೆ, ಸರ್ಕಾರೀ ಉದ್ಯೋಗಸ್ಥರಲ್ಲದ ಈಗಿನ ಮೆಂಬರುಗಳೆಲ್ಲರೂ ಭಾಗಿಗಳಾಗಿದ್ದರು.

ಎಕ್ಸಿಕ್ಯುಟಿವ್ ಕೌನ್ಸಿಲ್ ಮತ್ತು ಶ್ರೀಯುವರಾಜರು.

ಎಕ್ಸ್ಟ್ರಾನಲ್ ಮೆಂಬರ್ ಪದವಿಗೆ ಬಂದುದು.

ಶ್ರೀಮದ್ಯುವರಾಜರವರನ್ನು ಒಬ್ಬ ಎಕ್ಸ್ಟ್ರಾರ್ಡಿನರಿ ಮೆಂಬರಾಗಿ ನಿಯಮಿಸಿರುವುದರಿಂದ, ಎಕ್ಸಿಕ್ಯುಟಿವ್ ಕೌನ್ಸಿಲಿನ ಮೆಂಬರುಗಳ ಸಂಖ್ಯೆಯನ್ನು ಐದರಿಂದ ನೂರಕ್ಕೆ ಹೆಚ್ಚಿಸಲಾಯಿತು. ತನಗೆ ತಿಳಿದಂತೆ ಶ್ರೀಮದ್ಯುವರಾಜರವರು ಕೆಲವುಕಾಲದಿಂದ ಸೆಕ್ರೆಟೇರಿಯಟ್‌ಗಳಲ್ಲಿ ಕೆಲಸ ಮಾಡಿದರು. ಆದರೆ, ಅವರ ಪ್ರಕ್ರಿಯೆಗೆ ಆ ಅಧಿಕಾರದಲ್ಲಿ ಅನುಕೂಲವು ಸಾಲದುದರಿಂದ ಅಂತರಾರ್ಹ ಶ್ರೀಮನ್ ಮಹಾರಾಜರವರು, ಶ್ರೀಮದ್ಯುವರಾಜರು ಯುರೋಪ್ ದೇಶಗಳಲ್ಲಿ ಸಂಚಾರಮಾಡಿಕೊಂಡು ಹಿಂದಕ್ಕೆ ಬಂದೊಡನೆ ಅವರನ್ನು ಕೌನ್ಸಿಲಿಗೆ ಒಬ್ಬ ಎಕ್ಸ್ಟ್ರಾಡಿನರಿ ಮೆಂಬರನ್ನಾಗಿ ನೇಮಿಸಿದರು. ಶ್ರೀಮದ್ಯುವರಾಜರು ಈಗ ಆ ಉನ್ನತ ಪದವಿಯನ್ನು ಸುಮಾರು ಆರು ತಿಂಗಳುಗಳಿಂದ ವಹಿಸಿರುತ್ತಾರೆ. ಅವರು ನೂತನ ಕಾರ್ಯದ ಕ್ರಮಗಳನ್ನು ನಾವು ನೂತನತಕ್ಕ ದೃಷ್ಟಿಯಿಂದ, ಸರ್ಕಾರ್ಯೋಗ್ಯತೆಯನ್ನೂ ಅವರ ಸವಿನಯ ಚತುರತೆಯನ್ನೂ, ತಮ್ಮ ಬಳಿಗೆ ಸರ್ಕಾರ ಕೆಲಸಗಳ ಬರುವ ವಿಷಯಗಳನ್ನು ವಿಮರ್ಶೆ ಮಾಡುವುದರಲ್ಲಿ ತೋರುವ ಯುಕ್ತಿಕುಶಲತೆಯನ್ನೂ ಅಭಿಮಾನ ಸಂತೋಷಗಳಿಂದ ನಾನು ಈ ಕೌನ್ಸಿಲಿನಲ್ಲಿ ಆಶ್ಚರ್ಯವನ್ನು ತೋರ್ಪಡಿಸುವ ಪಕ್ಷಪಾತಿ.

ಈ ವರ್ಷದ ರಾಜ್ಯಾಡಳಿತದ ಮುಖ್ಯವಿಷಯಗಳು.

ಸರ್ಕಾರೀ ಆಡಳಿತದ ಆಡಳಿತಗಳನ್ನು ಫೈನಾನ್ಷಲ್ ಇಲಾಖೆಯಿಂದ ಆರಂಭಿಸಿ, ಒಂದೊಂದಾಗಿ ಸಂಗ್ರಹರೂಪದಲ್ಲಿ ಈಗ ತಿಳಿಸುತ್ತೇನೆ.

ಫೈನಾನ್ಷಲ್ ಇಲಾಖೆ.

ತಮಗೆಲ್ಲಾ ತಿಳಿದಿರುವಂತೆ ಶ್ರೀಮನ್ ಮಹಾರಾಜರ ಸರ್ಕಾರದ 1913—14 ನೆಯ ವರ್ಷದ ಫೈನಾನ್ಷಲ್ ಸರ್ವೆ ಅಂದಾಜು ಪಟ್ಟಿಯನ್ನು ಕುರಿತು ನ್ಯಾಯವಿಧಾಯಕ ಸಭೆಯಲ್ಲಿ ಕಳೆದ ಜುಲೈ ತಿಂಗಳಲ್ಲಿ ಚರ್ಚೆ ನಡೆದಿರುತ್ತದೆ.

1913—14 ನೆಯ ವರ್ಷದ ತಿದ್ದುಪಡಿಯಾದ ಅಂದಾಜುಗಳು.

ತಿದ್ದುಪಡಿಯಾದ ಅಂದಾಜಿನ ಮೇರೆಗೆ 1913—14 ನೆಯ ವರ್ಷದ ವರಮಾನವು 317.30 ಲಕ್ಷ ರೂಪಾಯಿಯೂ, ಆ ವರ್ಷದ ಖರ್ಚು 237.23 ಲಕ್ಷ ರೂಪಾಯಿಯೂ ಆಗಿರುವುದರಿಂದ, ನಿವ್ವಳ 80.07 ಲಕ್ಷ ರೂಪಾಯಿ ಉಳಿಕೆಯಾದಂತೆ ಆಯಿತು. ಇದರಲ್ಲಿ ಸಿವಿಲ್ ಮತ್ತು ಮಿಲಿಟರಿ ಸ್ಪೇಷಲ್ ನಿಂದ ಸರನ್ನರು ವನ್ನು ಹುಟ್ಟಿದ ಬಾಬಿನಲ್ಲಿ ಬಂದ 30 ಲಕ್ಷ ರೂಪಾಯಿಯನ್ನು ವಜಾಮಾಡಿದರೆ, ಇದರ ಕಾರಣ ರುವ ನೇರಿಗೆ ಈ ವರ್ಷದ ಜಮಾಖರ್ಚು ಖಾತಾ 50.07 ಲಕ್ಷ ರೂಪಾಯಿ ಉಳಿದಂತೆ ಆಯಿತು :—

ದಿ ಜನರಲ್ ಏಜನ್ಸಿ, ಮೈಸೂರು.

ಕಾದಂಬರಿಗಳು:— ಚಂದ್ರಮಾರುತ ೦-೧೦-೦; ಚರಿತಾವೃತಂ ೦-೪-೦; ರಾಜಕಥಾವಳ್ಳಿರಿ ೦-೪-೦; ಪ್ರೀತಿರಿನಚತ್ರಿರಿ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೨-೦; ಸೀತೆ ೦-೪-೦; ಸಾಹಸಿಕೆ, ಕಲಾನಾಥ ೦-೮-೦; ಮನಾಲಕ್ಷ್ಮೀ ೦-೬-೦; ತಾರಾಸುಂದರಿ ೦-೮-೦; ಸ್ವಪ್ನಿನಿ ೦-೧೦-೦; ಸತ್ಯಸಂಜೀವಿನಿ ೦-೮-೦; ಕೊಹಿನೂರು ೦-೧೦-೦; ಆನಂದಮಠ ೦-೧೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೦-೦; ರಜನಿ ೦-೧೦-೦. 53

ಊದುಬತ್ತಿಗಳು.

ವಿಧವಿಧವಾದ ಊದುಬತ್ತಿಗಳು ಸೇರು ೧ ಕ್ಕೆ ೦-೧೦-೦ ೯-೦-೦; ೩-೦-೦; ೨-೮-೦; ೧-೮-೦; ಕಸ್ತೂರಿ ವಿಲ್ಲೆ ತೋಲಾ ೧ ಕ್ಕೆ ೧-೦-೦; ಸುಗಂಧ ತೋಲಾ ೧ ಕ್ಕೆ ೧೦ ಆಣೆ ದಶಾಂಗಧೂಪ್ಪ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೦೫ ಆಣೆ ಬಾಂಗ್ಲದಜಾನ ಟಿನ್ ೧ ಕ್ಕೆ ೧ ಆಣೆ. ಅಪೇಕ್ಷಿಸುವುದವರು ತರಿಸಿಕೊಳ್ಳಬಹುದು. ಟಿ. ಎಲ್. ಉಪಾಧ್ಯಾಯ, ಸುಗಂಧಕಾರಿ, ಮೈಸೂರು. 22

ನ್ಯಾಯದರ್ಪಣ. 35

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯು, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸೀಫ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸೂ, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆಚರಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ಪತ್ರಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯು ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರುತ್ತವೆ. ಬೆಲೆ ರೂ. 1-8-0. ವಿ. ಪಿ. ಮೂಲ್ಯ 1-12-0.

ಎಂ. ಎಸ್. ನಂಜಪ್ಪನವರು, ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

42 ಸಚಿತ್ರ ಶುಕಸಪ್ತತಿ ಕಥೆಗಳು ರೂ. ೦-೮-೦ (೪೦೦ ಪುಟ) ಟಪಾಲು ಖರ್ಚು ೪ ಆಣೆ. ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ ರೂ ೦-೮-೦. (೪೭೩ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ! ಮಾನ್ಯತೆಯು ಬೇಕಾದರೆ, ವಾಕ್ಚಾತುರ್ಯವು ಬೇಕಾದರೆ, ಲೋಕರೀತಿಯನ್ನು ತಿಳಿಯಬೇಕಾದರೆ, ನೀತಿಯು ಅವಶ್ಯವಿದ್ದರೆ, ಧರ್ಮಸತ್ಯಗಳ ಸ್ಥಿತಿಯನ್ನು ಕೇಳಬೇಕಾದರೆ, ... ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ... ಬೆಲೆ ರೂ. ೦-೮-೦ ಟಪಾಲ್ ಖರ್ಚು ೩ ಆಣೆ. ... ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸಾಲಾಮಿಸ್ರಿಯು ಕಾಬೂಲ್ ದೇಶದಲ್ಲಿ ಪೌಂಡು ೧ ಕ್ಕೆ ೧೦-೦-೦ ಇತ್ತು ಈಗ ಪೌಂಡು ೧ಕ್ಕೆ ೩-೮-೦ ಆಗಿದೆ. ಆದ್ದರಿಂದ ಇದರಕ್ರಯ ೨-೦-೦ ರೂಪಾಯಿ ಮಾಡಿರುತ್ತೆ. 9

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾ" ವಿನ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ... [illegible]

ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂ. ಬಹುಮಾನವಾಗಿ ಕೊಡಲ್ಪಡುವುದು.

... ಡಿ. ಮನ್ನಾಲಾಲ್, 5 ಹಾಜಿ ಬಾಷೀರ್ ಮಹಡಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ. ನಮ್ಮ ಏಜಂಟರು—ಡಿ. ಸ್ಟೆಯಿಡ್ ಉಸ್ಮಾನ್ ಅಂಡ್ ಕೊ, ದೊಡ್ಡಪೇಟೆ, ಬೆಂಗಳೂರು ಸಿಟಿ.

ಪಾಲ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು. 20

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ... [illegible]



ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ... [illegible]

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಗಂಧರಾಜ ನಸ್ಯದಪುಡಿ.

ಈ ಪುಡಿಯನ್ನು ಸಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸ) ... ತಲೆನೋಯುವುದು, ... ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ... ೧ ಡಬ್ಬಿಯು ಬೆಲೆ ೪ ಆಣೆ. ೧ ಡಜನ್ ಡಬ್ಬಿಗೆ ೨-೦-೦

ಉತ್ತಮವಾದ ನಶ್ಯದಪುಡಿ.

... ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ, ಗೋಪನಹಳ್ಳಿಯವರು, ಹನೂರು ಪೋಸ್ಟ್, ಕೊಳ್ಳೇಗಾಲದ ತಾಲ್ಲೂಕು. 31

೧೯೧೪ ನೆಯ ಇಸವಿ ಸೆಪ್ಟೆಂಬರ್ ತಾ|| ೨೭ರಿಂದ ೧೯೧೪ ಯ ಅಕ್ಟೋಬರ್ ತಾ|| ೩ ರ ವರೆಗೆ ಸಲ್ಲುವ ಶಾಲೀವಾಹನ ಶಕ ೧೮೩೬ ನೆಯ ಆನಂದನಾಮ ಸಂ|| ರ ಆಶ್ವಯುಜ ... ಪಂಚಾಂಗ.

ತಾ	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	[illegible]
27	೧ ಭಾನು	ಅಷ್ಟ	8-14	ಪೂಷಾ	53-12	[illegible]
28	೨ ಸೋ	ನವ	4-49	ಉಷಾ	52-17	[illegible]
29	೩ ಮಂ	ದಶ	2-28	ಶ್ರವಣ	52-33	[illegible]
30	೪ ಬುಧ	ಏಕಾ	1-9	ಧನಿಷ್ಠ	53-52	[illegible]
1	೫ ಗುರು	ದ್ವಾ	1-7	ಶತಭಿಷ	56-39	[illegible]
2	ಶುಕ್ರ	ತ್ರ	2-25	ಪೂಭಾ	60-	[illegible]
3	ಶನಿ	ಚತು	4-58	ಪೂಭಾ	0-59	[illegible]

(1) ದುರ್ಗಾಷ್ಟಮೀ, ತಿರುಪತಿ ವೆಂಕಟಾಚಲಸ್ವಾಮಿ ರಥ. (2) ಸ್ವಾಯಂಭುವಮನ್ವಾದಿ, ಮಹಾನವಮಿ ... (3) ವಿಜಯದಶಮಿ ... (4) ಸರ್ವತ್ರೈಕಾದಶೀ. (5) ... ಪ್ರದೋಷ ...

ಮೈಸೂರ್ ಸ್ಟಾರ್ ... ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED, NO M 124

ಮೈಸೂರ್ ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು

ವಾರ್ಷಿಕ ಚಂದಾ ೧-೦-೦ ... ಅಂಚೆವೆಚ್ಚ ಸೇರಿ ೧-೦೪-೦

ಸಂಪುಟ ೧೮) ಮೈಸೂರ್ ಸ್ಟಾರ್ ೧೯೧೪ ನೆಯ ಇಸವಿ ಅಕ್ಟೋಬರ್ ತಾರೀಖು ೪ನೆಯ ಭಾನುವಾರ. (ಸಂಚಿಕೆ ೩೯)

ಮೈಸೂರಿನಲ್ಲಿ ಸೇರಿದ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮೈಸೂರು ಸಂಸ್ಥಾನದ ದಿವಾನರವರು ಮಾಡಿದ ಉಪನ್ಯಾಸದ ಮುಖ್ಯಭಾಗಗಳು.

ಮಹಾಶಯರೇ,

ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹಾದ್ದೂರರ ಆಜ್ಞಾನುಸಾರವಾಗಿ ದಸರಾ ಪ್ರಜಾಪ್ರತಿನಿಧಿಗಳ ಈ ಮೂವತ್ತೊಂದನೆಯ ಸಭೆಗೆ ತಮ್ಮಗಳನ್ನು ಆದರಪೂರ್ವಕವಾಗಿ ಬರಮಾಡಿಕೊಂಡು, ... [illegible]

ಯುದ್ಧ.

ಪ್ರಸ್ತುತದಲ್ಲಿ ಎಲ್ಲರ ಮನಸ್ಸಿನಲ್ಲಿಯೂ ಇತರ ಭಾವನೆಗಳನ್ನು ಮರೆಯಿಸಿ ... [illegible]

ಕಾಲಸ್ಥಿತಿ.

ಯುದ್ಧ ವಿಷಯಾನಂತರದಲ್ಲಿ ನಾವು ವಿಚಾರಮಾಡಬೇಕಾಗಿರುವುದು ಕಾಲಸ್ಥಿತಿಗೆ ಸಂಬಂಧಪಟ್ಟದ್ದಾಗಿರುತ್ತದೆ. ... ಸರಾಸರಿ 19.38 ಇಂಚು ... 27.09 ... 29.25 ... 10.32 ... [illegible]

ಇದರಿಂದ ರಾಗಿ ಬೆಳೆಯ ವಿಸ್ತೀರ್ಣವು ಕಡಿಮೆಯಾಗಿ, ... [illegible] ... 2.59 ... 13.33 ... 4.51 ... 10.25 ... 2.22 ... 3.61 ... 0.72 ... 2.58 ... [illegible]

ಧಾರಣೆನಿಲವರಿಗಳು.

ಜಾಗ್ರತೆಯಾಗಿ ಸರಕುಗಳು ಸಾಗಲು ಅವಕಾಶವಿರುವುದರಿಂದಲೂ, ... [illegible]

ಕಷ್ಟನಿವಾರಣೋಪಾಯಗಳು.

ಈಗಿನ ಸ್ಥಿತಿಯು ನಿವಾರಣೆಗೆ ಸಾಧ್ಯವಾದ ಎಲ್ಲಾ ಏರ್ಪಾಡುಗಳನ್ನೂ ಸರ್ಕಾರದವರು ಮಾಡಿರುತ್ತಾರೆ. ... [illegible] ... 1914-15 ... [illegible]

(ಬಳಿಕ ಮೈಸೂರಿಗೆ ಲಾರ್ಡ್ ಹಾರ್ಡಿಂಜ್‌ರವರು ದಯಮಾಡಿಸಿದ್ದಾಗ ... [illegible]) ... ಸಂಗತಿಗಳು ತಿಳಿಸಲ್ಪಟ್ಟಿರುವುವು. ಪ. ಪ್ರ.)

ನ್ಯಾಯವಿಧಾಯಕ ಸಭೆಯಲ್ಲಿ ಬದಲಾವಣೆಗಳು.

ಶ್ರೀಮನ್ಮಹಾರಾಜರವರಿಂದ ಮಂಜೂರ್ ಮಾಡಲ್ಪಟ್ಟ ಹೊಸದರ್ಖಾಸ್ತಿನಲ್ಲಿ ತಮಗೆ ತಿಳಿಸಲ್ಪಟ್ಟ ನ್ಯಾಯವಿಧಾಯಕಸಭೆಯ ಸಂಬಂಧವಾದ ಬದಲಾವಣೆಗಳನ್ನು ಸಂಪೂರ್ಣವಾಗಿ ಜಾರಿಗೆ ತರಲಾಗಿರುತ್ತದೆ. ... [illegible]

ಎಗ್ಸಿಕ್ಯುಟಿವ್ ಕೌನ್ಸಿಲ್ ಮತ್ತು ಶ್ರೀಮದ್ಯುವರಾಜರು ಎಕ್ಸ್ಟ್ರಾಸ್ ಮೆಂಬರ್ ಪದವಿಗೆ ಬಂದದ್ದು.

ಶ್ರೀಮದ್ಯುವರಾಜರವರನ್ನು ಒಬ್ಬ ಎಕ್ಸ್ಟ್ರಾಸ್ ಮೆಂಬರನಾಗಿ ನಿಯಮಿಸಿದ್ದರಿಂದ, ... [illegible]

ಈ ವರ್ಷದ ರಾಜ್ಯಾಡಳಿತದ ಮುಖ್ಯವಿಷಯಗಳು.

ಸರ್ಕಾರ್ ಇಲಾಖೆಗಳ ಆಡಳಿತಗಳನ್ನು ಫೈನಾನ್ಸ್ ಇಲಾಖೆಯಿಂದ ಆರಂಭಿಸಿ, ಸಂಕ್ಷೇಪವಾಗಿ ಸಂಗ್ರಹರೂಪದಲ್ಲಿ ಈಗ ತಿಳಿಸುತ್ತೇನೆ.

ಫೈನಾನ್ಷಲ್ ಇಲಾಖೆ.

ತಮಗೆಲ್ಲಾ ತಿಳಿದಿರುವಂತೆ ಶ್ರೀಮನ್ಮಹಾರಾಜರವರ ಸರ್ಕಾರದ 1914-15 ನೆಯ ವರ್ಷದ ಫೈನಾನ್ಷಲ್ ಸ್ಟೇಟ್ಮೆಂಟ್ ... ಜುಲೈ ತಿಂಗಳಲ್ಲಿ ಚರ್ಚೆ ನಡೆದಿರುತ್ತದೆ.

1913-14 ನೆಯ ವರ್ಷದ ತಿದ್ದುಪಾಟಾದ ಅಂದಾಜುಗಳು.

ತಿದ್ದುಪಾಟಾದ ಅಂದಾಜಿನ ಪ್ರಕಾರ 1913-14 ನೆಯ ವರ್ಷದ ವರಮಾನ 317.30 ಲಕ್ಷ ರೂಪಾಯಿಯೂ, ಆ ವರ್ಷದ ಖರ್ಚು 237.23 ಲಕ್ಷ ರೂಪಾಯಿಯೂ ಆಗಿರುವುದರಿಂದ, ಮಿಗತೆ 80.07 ಲಕ್ಷ ರೂಪಾಯಿ ಉಳಿತಾಯವಾಯಿತು. ... 30 ಲಕ್ಷ ರೂಪಾಯಿಯನ್ನು ... 50.07 ಲಕ್ಷ ರೂಪಾಯಿ ಉಳಿದಂತೆ ಆಯಿತು :—

CONTINUED

IN

NEXT ROLL

END

END